Regd. No. M. 3618

Licence No 31
Licensed to Post without Prepayment

ನವಯುಗ

Vol.33 No 18 7-1-1954 ವರ್ಷ ೩೩ ವಾರ ೧೮

ಪಂಚಾಯತುಗಳ ಆಡಳಿತ

ಗ್ರಾಮ ಪಂಚಾಯತುಗಳ ಮೂಲಕ ಹಳ್ಳಿಗಳಲ್ಲಿ ಸುವ್ಯವಸ್ಥೆಯನ್ನು ನೆಲೆಗೊಳಿಸಿ ಶಾಂತಿ ಹಾಗೂ ಸುಖದಿಂದ ಜನರೆಲ್ಲ ಜೀವನ ನಡೆಸಲು ಅನುಕೂಲವಾಗುವಂತೆ ಉಚಿತವಾದ ಸೌಕರ್ಯಗಳನ್ನು ಒದಗಿಸಿ ಕೊಡುವ ಪದ್ಧತಿ ಭಾರತಕ್ಕೆ ಚಿರಪರಿಚಿತವಾಗಿರುತ್ತದೆ. ಉತ್ತಮವಾದ ರಾಜ್ಯ ಪದ್ಧತಿಯಲ್ಲಿ ಹಳ್ಳಿಗಳೇ ಪ್ರಾಮುಖ್ಯವಾದ ಘಟಕಗಳಾಗಿದ್ದು ಅಲ್ಲಿ ಕೆಲಸ ಮಾಡುವ ಗ್ರಾಮ ಪಂಚಾಯತುಗಳೇ ರಾಷ್ಟ್ರದ ನಿಜವಾದ ನೆಲಗಟ್ಟಾಗುತ್ತವೆ. ಪ್ರಜಾಪ್ರಭುತ್ವ ಪದ್ಧತಿಯನ್ನು ಸ್ವೀಕರಿಸುವ ಭಾರತದಲ್ಲಿ ಕೂಡ ಆಡಳಿತದ ವಿಕೇಂದ್ರೀಕರಣವನ್ನು ಪುರಸ್ಕರಿಸುವ ಗ್ರಾಮ ಪಂಚಾಯತುಗಳು ಹೆಚ್ಚುಹೆಚ್ಚಾಗಿ ಜನಪ್ರಿಯವಾಗುತ್ತಿರುವುದು ಸಹಜ. ಆಡಳಿತದ ಶಿಷ್ಟ ಸ್ಥಾನದಲ್ಲಿರುವ ಮಹನೀಯರು ಈ ಅಂಶವನ್ನು ಚೆನ್ನಾಗಿ ಮನವರಿಕೆ ಮಾಡಿಕೊಂಡಿದ್ದು, ಸ್ಥಾನಿಕ ಸ್ವರಾಜ್ಯದ ಸಂಕೇತದಂತಿರುವ ಸಂಸ್ಥೆಗಳ ಯೋಗಕ್ಷೇಮವನ್ನು ಚೆನ್ನಾಗಿ ನೋಡಿಕೊಂಡು, ಅವುಗಳಿಗೆ ತಕ್ಕ ಮಾರ್ಗದರ್ಶನವನ್ನು ನೀಡಲು ಪ್ರತ್ಯೇಕ ಇಲಾಖೆಯೊಂದನ್ನೆ ಸರಕಾರದಲ್ಲಿ ತೆರೆದಿರುವರು.

ಪಂಚ ವಾರ್ಷಿಕ ಯೋಜನೆಯಂಥ ರಾಷ್ಟ್ರೀಯ ಅಭಿವೃದ್ಧಿಯ ಕೆಲಸಗಳನ್ನು ಕೈಗೊಂಡು ಭಾರತದ ಏಳಿಗೆಯನ್ನು ಸಾಧಿಸಲು ಸರಕಾರವು ಪ್ರಯತ್ನಶೀಲವಾಗಿರುವ ಈ ಗಳಿಗೆಯಲ್ಲಿ—ಪ್ರತಿಯೊಂದು ಹಳ್ಳಿಯಲ್ಲೂ ಪುನಾರಚನೆಯ ಚಟುವಟಿಕೆಗಳು ನಡೆಯುವಂತೆ ನೋಡಿಕೊಳ್ಳುವುದು ಸೂಕ್ತವಾಗಿರುತ್ತದೆ. ಯೋಜನಾ ಆಯೋಗ ಜನಪದ ಅಭಿವೃದ್ಧಿಯೋಜನೆ; ರಾಷ್ಟ್ರೀಯ ವಿಸ್ತರಣಾ ಸೌಕರ್ಯ ಮುಂತಾದವುಗಳಿಂದ ಹಳ್ಳಿಗಳಲ್ಲಿ ನವಚೈತನ್ಯ ಹಾಗೂ ಜಾಗೃತಿಗಳು ಉಂಟಾಗುವಂತೆ ಒತ್ತಾಸೆ ನೀಡಿದೆ ಇದರ ಫಲಿತಾಂಶವು ಒಳಿತನ್ನು ತರಬೇಕಾದರೆ ಹಳ್ಳಿಗಳಲ್ಲಿ ಕೆಲಸಮಾಡುವ ಗ್ರಾಮಪಂಚಾಯತುಗಳು ಅಧಿಕವೇಗದಿಂದ ತಮ್ಮ ಚಟುವಟಿಕೆಗಳನ್ನು ವಿಧಾಯಕ ಮಾರ್ಗದಲ್ಲಿ ಮುಂದೊತ್ತುವುದು ಅಗತ್ಯ. ಯೋಜನಾ ಆಯೋಗವಾಗಲಿ ಸರಕಾರವಾಗಲಿ, ಹಳ್ಳಿಗಳ ಉದ್ಧಾರದ ಕಾರ್ಯಕ್ರಮಗಳನ್ನು ಕೈಗೊಳ್ಳುವಾಗ ಆ ವಿಶಿಷ್ಟ ಹಳ್ಳಿಯ ಜನರ ಮನಸ್ಸನ್ನು ಹದಗೊಳಿಸುವುದಕ್ಕೋಸ್ಕರ ಅಲ್ಲಿ ಕೆಲಸ ಮಾಡುವ ಗ್ರಾಮ ಪಂಚಾಯತುಗಳ ನೆರವನ್ನು ಪಡೆಯುವುದು ಒಳಿತು. ಹೀಗೆ ಮಾಡಿದ ಪಕ್ಷದಲ್ಲಿ ಹಳ್ಳಿಯ ಪರಿಸ್ಥಿತಿಯನ್ನು ನಿಜಾರ್ಥದಲ್ಲಿ ಉತ್ತಮಗೊಳಿಸುವಂತೆ ಯೋಜನೆಯನ್ನು ಪರಿಷ್ಕರಿಸಲು ಅವಕಾಶ ದೊರೆಯುತ್ತದೆ; ಮತ್ತು ಆ ಯೋಜನೆಯ ವಿಷಯದಲ್ಲಿ ವಿಶೇಷವಾದ ಪ್ರಚಾರವೂ ನಡೆದು ಜನತಾ ಸಹಕಾರ ಉಚಿತ ಪ್ರಮಾಣದಲ್ಲಿ ದೊರೆಯುವ ಭರವಸೆಯುಂಟಾಗುತ್ತದೆ.

ಭಾರತದ ಐದು ಲಕ್ಷ ಹಳ್ಳಿಗಳಲ್ಲಿಯೂ ಗ್ರಾಮ ಪಂಚಾಯತುಗಳು ದಕ್ಷತೆಯಿಂದ ಕೆಲಸ ಮಾಡಿ, ಪ್ರತಿಯೊಂದು ಹಳ್ಳಿಯೂ ಆವಶ್ಯಕ ವಸ್ತು ಹಾಗೂ ವಿಷಯಗಳಲ್ಲಿ ಸಂಪೂರ್ಣ ಸ್ವಾವಲಂಬಿಯಾದ ಪರಿಸ್ಥಿತಿಯನ್ನು ನಿರ್ಮಿಸಬೇಕೆಂದು ಮಹಾತ್ಮಾಗಾಂಧೀಜಿಯವರು ಪ್ರಯತ್ನಿಸಿದ್ದರು. ಈ ಗುರಿಯನ್ನು ಇಟ್ಟುಕೊಂಡು ನಮ್ಮ ಸರಕಾರಗಳು ಕೆಲಸವನ್ನು ಪ್ರಾರಂಭ ಮಾಡಿದ್ದರೂ, ಈ ಸ್ಥಳೀಯ ಸಂಸ್ಥೆಗಳಿಂದ ಅಪೇಕ್ಷಿತ ಪ್ರಮಾಣದಲ್ಲಿ ಹಲವೋ ಫಲಿತಾಂಶಗಳು ಒದಗಿಬರುವುದು ಇನ್ನೂ ಬಾಕಿ ಇರುತ್ತದೆ. ನಮ್ಮ ಮದ್ರಾಸು ರಾಜ್ಯದಲ್ಲಿ ಈಗ ಆರು ಸಾವಿರ ಗ್ರಾಮ ಪಂಚಾಯತುಗಳು ಕೆಲಸ ಮಾಡುತಿದ್ದರೂ ಇನ್ನೂ ಒಂಭತ್ತು ಸಾವಿರ ಹಳ್ಳಿಗಳಲ್ಲಿ ಗ್ರಾಮ ಪಂಚಾಯತುಗಳ ಸ್ಥಾಪನೆಯೇ ಆಗಿಲ್ಲ. ಹಳ್ಳಿಯ ಜನರಿಗೆ ಗ್ರಾಮ ಪಂಚಾಯತುಗಳ ಕುರಿತು ಆಸ್ಥೆ ಹುಟ್ಟಿಲ್ಲವೋ ಅಥವಾ ಸರಕಾರದ ಕಡೆಯಿಂದ ಉತ್ತೇಜನ ದೊರೆತಿಲ್ಲವೋ—ಅಂತೂ ಹೆಚ್ಚಿನ ಹಳ್ಳಿಗಳು ತಾವೇ ರಚಿಸಿದ ಪಂಚಾಯತುಗಳ ಮೂಲಕ ಸ್ಥಳೀಯ ಆಡಳಿತೆಯನ್ನು ನಡೆಸಿಕೊಳ್ಳುವ ಉತ್ತಮ ಸೌಲಭ್ಯದಿಂದ ವಂಚಿತವಾಗಿರುತ್ತವೆ. ಇಂಥ ಹಳ್ಳಿಗಳಲ್ಲಿ ವಿಧಾಯಕ ಕಾರ್ಯಕರ್ತರು ಸ್ವಯಂಪ್ರೇರಣೆಯಿಂದ ಹಳ್ಳಿಯ ವರ್ಚಸ್ವಿ ಜನರ ತಿಳುವಳಿಕೆಯನ್ನು ಜಾಗೃತಗೊಳಿಸಿ, ಪ್ರಜಾ ಪ್ರಭುತ್ವದ ಇಟ್ಟಿಗೆಗಳೆಂದು ಕರೆಯಲ್ಪಡುವ ಪಂಚಾಯತುಗಳ ಸ್ಥಾಪನೆಗೆ ಹೆಣಗಬೇಕಾದುದು ಕರ್ತವ್ಯ. ಗ್ರಾಮದಲ್ಲಿರುವ ವಿದ್ಯಾವಂತರೂ ಅನುಭವಿಗಳೂ ಪಂಚಾಯತುಗಳು ಹಳ್ಳಿಯ ಏಳಿಗೆಯಲ್ಲಿ ನಿರ್ವಹಿಸುವ ಕೆಲಸಗಳ ಮಹತ್ವವನ್ನು ತಿಳಿದು ಕೊಳ್ಳುವಲ್ಲಿ ಉದಾಸೀನ ಮಾಡಲಾರರೆಂದು ಧಾರಾಳವಾಗಿ ನಂಬಬಹುದು

ಹಳ್ಳಿಯಲ್ಲಿ ಗ್ರಾಮ ಪಂಚಾಯತಗಳು ಹುಟ್ಟಿ ಕೊಂಡರೆ ಸಾಲದು — ಅವುಗಳು ಚಟುವಟಿಕೆಯಿಂದ ಕೆಲಸ ನಿರ್ವಹಿಸಿ, ಹಳ್ಳಿಯ ಸರ್ವಾಂಗಿಕ ಪ್ರಗತಿಯನ್ನು ಸಾಧಿಸುವುದು ಮುಖ್ಯವಾದದ್ದು. ಪಂಚಾಯತುಗಳ ಚುನಾವಣೆಯಲ್ಲಿ ಜಯಶೀಲರಾದ ಹಳ್ಳಿಯ ವರ್ಚಸ್ವಿ ಮುಖಂಡರು, ಉದಾಸೀನತೆಯಿಂದ ಮುಂದೆ ಕಾಲ ಕಳೆಯಬಾರದು. ತಮಗೆ ದೊರೆತ ಅಧಿಕಾರದ ಅನುಚಿತ ಲಾಭ ಹಾಗೂ ದುರುಪಯೋಗವನ್ನೂ ಮಾಡಿಕೊಳ್ಳಲಾಗದು. ಪ್ರತಿಯೊಂದೂ ಹಳ್ಳಿಗೆ ತನ್ನವೇ ಆದ ಸಮಸ್ಯೆಗಳಿರುತ್ತವೆ—ಅಲ್ಲಿಗೇ ವಿಶಿಷ್ಟವಾದ ಸನ್ನಿವೇಶ ಹಾಗೂ ವಾತಾವರಣಗಳಲ್ಲಿ ಅವುಗಳಿಗೆ ಪರಿಹಾರ ಮಾರ್ಗಗಳನ್ನು ಹುಡುಕುವ ಕೆಲಸದಲ್ಲಿ ಈ ನಾಯಕರು ಪ್ರವೃತ್ತರಾದರೆ, ಹಾಗೆ ಕಂಡುಕೊಂಡ ಉಪಾಯ ಎಲ್ಲಿಯೋ ದೂರದ ಸರಕಾರೀ ಅಧಿಕಾರಿ ನೀಡಬಹುದಾದ ಸಲಹೆಗಿಂತ ಚೆನ್ನಾಗಿ ಒಪ್ಪುವುದು. ಹೀಗೆ ಪಂಚಾಯತುಗಳಿಗೆ ಜನರ ಸೌಕರ್ಯಕ್ಕೋಸ್ಕರ ತಕ್ಕ ಕೆಲಸಗಳನ್ನು ಕೈಗೊಳ್ಳಲು ಸಹಾಯಕವಾಗುವಂತೆ ಕೆಲವು ಅಧಿಕಾರಗಳೂ ಕೊಡಲ್ಪಟ್ಟಿವೆ. ಹಳ್ಳಿಯಿಂದ ವಸೂಲಾಗುವ ಭೂಕಂದಾಯದಲ್ಲಿ ಪಂಚಾಯತುಗಳಿಗೆ ಪಾಲು ದೊರೆಯುತ್ತದಲ್ಲದೆ, ಮಾರ್ಗಗಳ ರಚನೆ, ಪ್ರಾಥಮಿಕ ಶಿಕ್ಷಣದ ಪ್ರಚಾರ ಮುಂತಾದ ಸಂಗತಿಗಳಲ್ಲಿ ಸರಕಾರದ ಸಹಾಯವೂ ಸಿಗುತ್ತದೆ. ಮನೆ ತೆರಿಗೆ, ವೃತ್ತಿ ತೆರಿಗೆ ವಾಹನ ತೆರಿಗೆ ಮುಂತಾದವುಗಳನ್ನು ಹೇರುವುದಕ್ಕೂ ಪಂಚಾಯತು ಕಾಯಿದೆ ಅವಕಾಶ ಮಾಡಿಕೊಟ್ಟಿರುವುದರಿಂದ ಸುಧಾರಣೆ ಹಾಗೂ ಸೌಕರ್ಯಗಳಿಗೋಸ್ಕರ ಜನರಿಂದ ಹಣವನ್ನು ಸಂಗ್ರಹಿಸಿ, ಅವುಗಳ ಸದುಪಯೋಗ ಮಾಡಲು ಅವಕಾಶ ದೊರೆತಿರುತ್ತದೆ. ಈ ತೆರಿಗೆಗಳ ವಸೂಲಿಯಲ್ಲಾಗಲೀ ಲೈಸನ್ಸು ಮುಂತಾದವುಗಳನ್ನು ನೀಡುವಲ್ಲಾಗಲೀ ಪಂಚಾಯತುದಾರರು ನಿಷ್ಪಕ್ಷಪಾತವಾಗಿಯೂ ನ್ಯಾಯ ನಿಷ್ಠೆಯಿಂದಲೂ ವರ್ತಿಸಿದರೆ, ಜನಾಪವಾದ ಹಾಗೂ ಇತರ ರೀತಿಯ ಭಯಗಳಿಗೆ ಎಡೆ ಇರುವುದಿಲ್ಲ

ಸರಕಾರದ ಕಡೆಯಿಂದ ಕಾನೂನಿನ ಬಲದಿಂದ ದೊರೆತ ತೆರಿಗೆ ಹೇರುವ ಅಧಿಕಾರವನ್ನು ಚಲಾಯಿಸುವುದರಲ್ಲಿ ಹೆಚ್ಚಿನ ಗ್ರಾಮ ಪಂಚಾಯತುಗಳು ಉದಾಸೀನವಾಗಿರುತ್ತವೆಂದೂ — ಇಂಥ ಉಪೇಕ್ಷೆಯಿಂದಿದ್ದರೆ, ಹಳ್ಳಿಗರು ಅಪೇಕ್ಷಿಸುವ ಸೌಕರ್ಯ ಸೌಲಭ್ಯಗಳನ್ನು ಒದಗಿಸಲು ಸಾಧ್ಯವಾಗದೆ, ಪಂಚಾಯತುಗಳ ಸ್ಥಾಪನೆಯ ಉದ್ದೇಶ ವ್ಯರ್ಥವಾದೀತೆಂದೂ ಮುಖ್ಯ ಮಂತ್ರಿ ರಾಜಾಜಿ ಮುಂತಾದವರು ಹೇಳುತ್ತಾರೆ. ಜನರಿಗೆ [illegible] ಸೌಕರ್ಯಗಳು ಬೇಕೆಂಬುದರಿಂದ ಅವುಗಳನ್ನು ಒದಗಿಸಲು ಇಂಥ ಸ್ಥಳೀಯ ಸಂಸ್ಥೆಗಳ ಸ್ಥಾಪನೆಯಾಯಿತು.—ವ್ಯಕ್ತಿಗತ ಭೇದವಿಲ್ಲದೇ ಒಟ್ಟುಹಳ್ಳಿಯ ಹಿತದೃಷ್ಟಿಯೇ ಇಲ್ಲಿ ಪ್ರಧಾನವಾಗಿರುವುದರಿಂದ, ಕೆಲವರು ತಮಗೆ ವ್ಯಕ್ತಿಶಃ ಲಾಭತರುವ ಸುಧಾರಣೋಪೇಕ್ಷೆಗಳಿಗೆ ತೆರಿಗೆ ಸಲ್ಲಿಸುವ ಮೂಲಕ ನೆರವಾಗಲು ಇಷ್ಟಪಡಲಿಕ್ಕಿಲ್ಲ. ಅಂಥವರು ತಮ್ಮ ತಪ್ಪನ್ನು ತಿದ್ದಿ ಕೊಳ್ಳಬೇಕು - ಹೊಸ ತೆರಿಗೆಗಳು ಹೇರಬೇಕಾಗಿ ಬಂದ ಸಂದರ್ಭ ಮತ್ತು ವಾತಾವರಣವನ್ನು ಹಳ್ಳಿಯ ಪ್ರಜೆಗಳು

(೧೦ನೇ ಪುಟ ನೋಡಿರಿ)

[ಸ್ಥಾಪನೆ. ೧೯೨೫] [ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್.

ನೂತನ ವರ್ಷದ ಶುಭಾಶಯಗಳು!

ನಾವು ನಮ್ಮ ಸಕಲ ಆಶ್ರಯದಾತರಿಗೆ, ಷೇರುದಾರರಿಗೆ ಮತ್ತು ಗ್ರಾಹಕರಿಗೆ ಅವರು ನಮಗಿತ್ತ ಸರ್ವ ಪ್ರೋತ್ಸಾಹ ಸಹಕಾರಗಳಿಗಾಗಿ ನಮ್ಮ ಅಭಿನಂದನೆಗಳನ್ನು ಸಲ್ಲಿಸುತ್ತೇವೆ. ಅಲ್ಲದೆ ಮುಂದೆಯೂ ಅವರ ನಿರಂತರ ಆಶ್ರಯಕ್ಕೆ ನಾವು ಸರ್ವ ವಿಧದಲ್ಲೂ ಪಾತ್ರರಾಗುವಂತೆ ಪ್ರಯತ್ನಿಸುತ್ತೇವೆಂದು ಭರವಸೆಯನ್ನೀಯುತ್ತೇವೆ. ಅವರೆಲ್ಲರಿಗೂ ನೂತನ ವರ್ಷವು ಹರ್ಷ ಮತ್ತು ಪ್ರಗತಿದಾಯಕವಾಗಲಿ ಎಂದು ನಾವು ಹೃತ್ಪೂರ್ವಕ ಹಾರೈಸುತ್ತೇವೆ

The Canara Industrial & Banking Syndicate LTD.,

Estd: 1925] [Head Office: UDIPI, S. India.

ಕನ್ನಡ ಪ್ರಾಂತ ನಿರ್ಮಾಣದ ಕುರಿತು ಒತ್ತಾಯ

ಕುಮಟೆಯಲ್ಲಿ ಮೂವತ್ತಾರನೆಯ ಕನ್ನಡ ಸಾಹಿತ್ಯ ಸಮ್ಮೇಳನ

ಕುಮಟೆಯ ಅತ್ಯುನ್ನತ ಪ್ರದೇಶದಲ್ಲಿರುವ ಗಿಬ್ ಹೈಸ್ಕೂಲಿನ ಆವರಣದಲ್ಲಿ ರಚಿಸಲ್ಪಟ್ಟ ಭವ್ಯವಾದ ಶ್ರೀನಿವಾಸ ನಗರವೆಂಬ ಮಂಟಪದಲ್ಲಿ ಮೂವತ್ತಾರನೆಯ ಕನ್ನಡ ಸಾಹಿತ್ಯ ಸಮ್ಮೇಳನವು ದಶಂಬರದ ೨೬, ೨೭ ಮತ್ತು ೨೮ನೇ ದಿನಾಂಕಗಳಲ್ಲಿ ಯಶಸ್ವಿಯಾಗಿ ನಡೆಯಿತು. ಸಾಹಿತ್ಯ ಸಮ್ಮೇಳನ ಮತ್ತು ತದಂಗವಾಗಿ ನಡೆದ ಪತ್ರಿಕಾ ಗೋಷ್ಠಿ, ಯಕ್ಷನಾಟಕ ಗೋಷ್ಠಿ ಹಾಗೂ ವಿಜ್ಞಾನ ಗೋಷ್ಠಿಗಳ ನಿಯೋಜಿತಾಧ್ಯಕ್ಷರನ್ನು ಮಾನ್ಯ ಮಂತ್ರಿಗಳಾದ ಶ್ರೀ ದ. ಪ. ಕರಮರಕರ ಹಾಗೂ ಜತ್ತಿ ಅವರೊಡನೆ ಸಂಭ್ರಮದ ಮೆರವಣಿಗೆಯಲ್ಲಿ ಕರೆದು ತಂದು, ವಿಶೇಯವರ ಹಸ್ತದಿಂದ ಧ್ವಜಾರೋಹಣ ಮಾಡಿಸುವಲ್ಲಿಂದ ಕಾರ್ಯಕ್ರಮವು ಪ್ರಾರಂಭವಾಯಿತು.

ಉತ್ತರ ಕನ್ನಡದ ವೈಶಿಷ್ಟ್ಯ

ಸ್ವಾಗತಾಧ್ಯಕ್ಷರಾದ ಶ್ರೀ ಭವಾನಿಶಂಕರ ಮಾವಿನಕುರ್ವೆಯವರು ಸಮ್ಮೇಳನಕ್ಕೆ ಬಂದ ಪ್ರತಿನಿಧಿಗಳನ್ನು ಸ್ವಾಗತಿಸುತ್ತ "ನಮ್ಮ ಜಿಲ್ಲೆಯ ಅದ್ವಿತೀಯವಾದ ವಿಶೇಷವೆಂದರೆ, ನಮ್ಮ ಜನ ಮೊದಲಿಂದಲೂ ತೋರಿಸುತ್ತಾ ಬಂದ ಎರಡು ವೃತ್ತಿಗಳು—ಒಂದು, ಜ್ಞಾನ ಅರ್ಜನೆಯ, ವಿದ್ಯಾಭಿರುಚಿಯ ಮನೋವೃತ್ತಿ; ಇನ್ನೊಂದು, ಭಾಷಾ ಭೇದಕ್ಕಾಗಿ ಬಡಿದಾಡದೆ, ಭಿನ್ನ ಭಾಷೆಗಳನ್ನು ಸಮದೃಷ್ಟಿಯಿಂದ, ಸ್ನೇಹ ದೃಷ್ಟಿಯಿಂದ ನೋಡಿ ನಡೆಸಿಕೊಂಡುಬಂದ ಪರಮತ ಸಹಿಷ್ಣು ವೃತ್ತಿ' ಎಂಬುದಾಗಿ ಉತ್ತರಕನ್ನಡ ಜಿಲ್ಲೆಯ ವೈಶಿಷ್ಟ್ಯವನ್ನು ಅವರು ಬಣ್ಣಿಸಿದರು. ಮುಂದುವರಿದು ಅವರು ಹೀಗೆಂದರು—"ನಮ್ಮ ಜಿಲ್ಲೆಯಲ್ಲಿ ಆದಿಕವಿ ಪಂಪನು ಮೆಚ್ಚಿದ ಬನವಾಸಿ ಇದೆ. ಕವೀಂದ್ರ ರವೀಂದ್ರರು ಕಂಡು ಮುಗ್ಧರಾದ ಕಾರವಾರದ ಅಪ್ರತಿಮ ಕಡಲತೀರವಿದೆ. ರಾವಣನೇ ಮೋಹಿತನಾದ ಶ್ರೀ ಗೋಕರ್ಣದ ಸಿದ್ಧ ಕ್ಷೇತ್ರವಿದೆ. ಜಗತ್ತಿಗೆ ಅದ್ಭುತ ರಸವನ್ನುಣಿಸಿ, ಬೆರಗುಗೊಳಿಸಿ, ಮರುಳು ಮಾಡುವ ಜೋಗದ ಜಲಪಾತವಿದೆ, ಯಲ್ಲಾಪುರ, ಶಿರಸಿ, ಸಿದ್ಧಾಪುರಗಳ ಸಮೃದ್ಧವಾದ ಏಲಕ್ಕಿ ಅಡಿಕೆ, ಮೆಣಸಿನಕಾಳುಗಳ ತೋಟಗಳಿವೆ ೧೫ ೧೬ನೇ ಶತಮಾನಗಳಲ್ಲಿ ಕಟ್ಟಿ ಕೆತ್ತಿ ನಿರ್ಮಿಸಿದ ಭಟಕಳದ ಲಾವಣ್ಯ ಮಂದಿರಗಳಾದ ೧೪ ಜೈನ ಬಸದಿಗಳು ಇವೆ. ಈ ಕುಮಟೆಯ ನಗರವು ಅರ್ಧ ಶತಮಾನದ ಹಿಂದೆ ಕರ್ನಾಟಕದ ಅರಳೆಯ ಮುಖ್ಯ ನಿರ್ಯಾತ ಕೇಂದ್ರವಾಗಿದ್ದು ಕುಮಟಾ ಕಾಟನ್ ಎಂಬ ಹೆಸರಿನಲ್ಲಿ ಇಂದು ಅದರ ಗತವೈಭವ ಉಳಿದಿದೆ. ಇವೆಲ್ಲವುಗಳ ಹಿನ್ನೆಲೆಯಲ್ಲಿ ಈ ಜಿಲ್ಲೆಯ, ದೀನದಲಿತ ಜೀವನದ ಘೋರ ಚಿತ್ರವೂ ಅಪಾರವಾದ ಕರುಣೆಯ ಕೋಡಿಯೂ ಕಂಡುಬರುತ್ತದೆ. ವಿಚಿತ್ರದ ಮಾತೆಂದರೆ ಜಿಲ್ಲೆಯ ದಾರುಣ ದಾರಿದ್ರ್ಯಕ್ಕೆ ಇದರ ನಿಸರ್ಗ ಸೌಂದರ್ಯವೇ ಕಾರಣ. ಮುಂಬಯಿ ರಾಜ್ಯದಲ್ಲಿ ನಮ್ಮ ಜಿಲ್ಲೆ ಅರಣ್ಯ ಸಂಪತ್ತಿಗೆ ಹೆಸರಾಗಿದ್ದು, ೧೦೦ಕ್ಕೆ ೮೫ ಪಾಲಿನಷ್ಟು ಕ್ಷೇತ್ರ ಕಾಡಿನಿಂದ ತುಂಬಿದೆ. ಉಳಿದ ೧೫ ಪಾಲು ನೆಲದಲ್ಲಿ ಬಾಳಬೇಕಾಗಿರುವ ಜಿಲ್ಲೆಯ ಜನತೆಯ ಅವಸ್ಥೆ ಅತ್ತ ಕಾಡು. ಇತ್ತ ಕಡಲು; ಬದುಕಲು ಬಲವಿಲ್ಲ, ಸಾಯಲು ಬರುವಂತಿಲ್ಲ— ಎಂಬ ರೀತಿಯಿದೆ"

ಕರಮರಕರರ ಶುಭಾಶಂಸೆ

ಭಾರತ ಸರಕಾರದ ವಾಣಿಜ್ಯ ಮಂತ್ರಿ ಶ್ರೀ ದ ಪ ಕರಮರಕರರು ಸಮ್ಮೇಳನದ ಉದ್ಘಾಟನಾ ಸಮಾರಂಭವನ್ನು ನೆರವೇರಿಸುತ್ತಾ "ಮುಂದಿನ ಸಮ್ಮೇಳನವು ಅಖಂಡ ಕರ್ನಾಟಕದ ರಾಜಧಾನಿಯಲ್ಲಿ ಜರಗುವಂತಾಗಲಿ!" ಎಂದು ಹಾರೈಸುವುದರ ಮೂಲಕ ಇನ್ನು ಒಂದು ಒಂದೂವರೆ ವರ್ಷದವಧಿಯಲ್ಲಿಯೇ ಕನ್ನಡ ರಾಜ್ಯ ನಿರ್ಮಾಣ ವಾಗುವುದೆಂಬ ಸಂಗತಿಯನ್ನು ಧ್ವನಿಸಿದರು. ಅವರ ಭಾಷಣದ ಮುಖ್ಯಾಂಶ ಹೀಗಿದೆ—"ಉತ್ತರ ಕನ್ನಡಜಿಲ್ಲೆ ನಿಸರ್ಗ ದೇವತೆಯ ಆಟದ ಮನೆ ಇಲ್ಲಿ ಒಮ್ಮೆ ಬಂದು ಹೋದವರೆಲ್ಲರೂ ನೆನೆವುದೆನ್ನ ಮನಂ ಬನವಾಸಿ ದೇಶಮಂ ಎಂದು ಕೇಳಿಗ ಆದಿಕವಿ ಪಂಪನ ಮಾತು ಎಷ್ಟು ಸಾರ್ಥಕವಾದದೆಂದು ನೆನೆನೆನೆಯುವರು. ಇತ್ತೀಚಿನ ಸ್ವಾತಂತ್ರ್ಯ ಸಂಗ್ರಾಮ ಕಾಲದಲ್ಲೂ ಈ ಜಿಲ್ಲೆ ತನ್ನ ಪರಾಕ್ರಮದಿಂದ ಭಾರತದ ಕೀರ್ತಿ ಮಂದಿರದಲ್ಲಿ ಸ್ಥಿರವಾದ ಸ್ಥಾನಪಡೆದಿದೆ. ಕರ್ನಾಟಕದ ಸಂಕ್ರಮಣಾವಸ್ಥೆಯ ಈಗಿನ ಇಕ್ಕಟ್ಟಿನ ಸಮಯದಲ್ಲಿ ಇಲ್ಲಿ ಸಮ್ಮೇಲನ ಜರಗುವುದು ಅತ್ಯಂತ ಸಮಂಜಸವಾದುದು. ನಾವೀಗ ಅನೇಕ ಶತಮಾನಗಳಿಂದ ಹರಿದು ಹೋದ ಕನ್ನಡ ನಾಡು ಪುನಃ ಒಟ್ಟಾಗುವ ಪರ್ವ ಕಾಲದಲ್ಲಿದ್ದೇವೆ. ಹಾಗಿರುವುದರಿಂದ ಸಾಹಿತ್ಯದ ಬೆಳವಣಿಗೆಯ ಕಾರ್ಯವನ್ನು ಹುಮ್ಮಸದಿಂದ ನಾವು ಮಾಡಬೇಕು ಹಿರಿಯ ಸಂಸ್ಥೆಗಳು ಇದು ವರೆಗೆ ಈ ದಿಸೆಯಲ್ಲಿ ಮಾಡಿದ ಸೇವೆ ಅಮೋಘವಾದದ್ದು. ನಮ್ಮ ಸಾಹಿತ್ಯಕ್ಕೆ ಪರಿಪೂರ್ಣತೆಯನ್ನು ತಂದುಕೊಡುವ ನಿಶ್ಚಿತ ಯೋಜನೆಯನ್ನು ಪರಿಷತ್ತಿನ ನೇತೃತ್ವದಲ್ಲಿ ನಾವು ಕೈಗೊಂಡು ಜಗತ್ತಿನಲ್ಲಿಯ ಅನ್ಯ ಭಾಷೆಗಳ ಉತ್ತಮೋತ್ತಮ ಕೃತಿಗಳು ಕನ್ನಡದಲ್ಲಿಯೂ ಉಪಲಬ್ಧವಿರುವಂತೆ ಪ್ರಯತ್ನಿಸುವುದವಶ್ಯ ಪ್ರತಿಯೊಂದು ಮನೆಯನ್ನೂ ವಿದ್ಯಾಪೀಠವನ್ನಾಗಿ ಮಾಡುವ ಶಕ್ತಿ ಕನ್ನಡ ಸಾಹಿತ್ಯದಲ್ಲಿ ತುಂಬಿ ಬರಬೇಕು. ಇಂಥ ಉಜ್ವಲ ಸಾಹಿತ್ಯದ ನಿರ್ಮಾಣ ಮಾಡುವುದಲ್ಲದೆ, ಇತ್ತೀಚೆಗೆ ಅಲ್ಲಲ್ಲಿ ಬೆಳೆಯಲು ಹವಣಿಸುವ ಜನಾಂಗದ ವಿಚಾರವನ್ನು ಹೀನ ದೆಸೆಗೆ ಕೊಂಡೊಯ್ಯುವ ಭಂಡ ಕೃತಿಗಳ ಖಂಡನೆಯಾಗಬೇಕು. ಈ ಮಹಾ ಪ್ರಯತ್ನದಲ್ಲಿ ಸರಕಾರವೂ ಜನತೆಯೂ ಪರಸ್ಪರ ಸಹಕರಿಸಬೇಕು."

ಪರಿಷತ್ತಿನ ಉದ್ದೇಶ

ಶ್ರೀಮಾನ್ ವಿ.ಸೀತಾರಾಮಯ್ಯನವರು ಅಧ್ಯಕ್ಷ ವೇದಿಕೆಯಿಂದ ಎದ್ದು – ತಮ್ಮ ಮುದ್ರಿತ ಭಾಷಣದ ಪ್ರತಿಯನ್ನು ನೋಡದೆನೇ ಸ್ಫೂರ್ತಿಯಿಂದ ಮಾತನಾಡಿದರು ಅವರು ಮುಖ್ಯವಾಗಿ ಕರ್ನಾಟಕ ಏಕೀಕರಣದ ವಿಷಯವನ್ನು ಪ್ರಸ್ತಾಪಿಸಿ, ಭಾಷಾ ರಾಜ್ಯಗಳ ನಿರ್ಮಾಣದ ವಿರೋಧಕರನ್ನು ಖಂಡಿಸಿ "ಕರ್ನಾಟಕ ಪ್ರದೇಶಗಳೆಲ್ಲ ಒಟ್ಟುಗೂಡಲೇ ಬೇಕಾದ ಪ್ರಸಂಗ ಬಂದೇ ಬರುತ್ತದೆ. ಇದಕ್ಕೋಸ್ಕರ ಒಂದು ವರ್ಷವಾದರೂ ತಡೆಯೋಣ" ಎಂದು ಹೇಳಿದರು ಅವರ ಭಾಷಣದ ಸಾರಾಂಶವಿದು – "ಸಹ್ಯಾದ್ರಿಯ ಬೆಟ್ಟದ ಸಾಲು ಕಡಲಿಗೆ ಕಾಲುಚಾಚಿ ಕುಳಿತ ಈ ಸಮ್ಮೇಳನ ಸ್ಥಾನ ಪ್ರಕೃತಿಯ ಎರಡು ಮಹಾ ಶಕ್ತಿಗಳ ಸಂಗಮಸ್ಥಳ. ಒಂದು ಸ್ವಾತಂತ್ರ್ಯದ್ದು, ಇನ್ನೊಂದು ನಿಯಮದ್ದು. ಒಂದರದು ಆಳ, ವಿಸ್ತಾರ; ಇನ್ನೊಂದರದು ಸ್ಥೈರ್ಯ, ಉನ್ನತಿ. ಈ ಲಕ್ಷಣಗಳೇ ಸಮಸ್ತ ಮಾನವ ಸಾಧನೆಗಳಿಗೂ ಒರೆಯಿಡುವ ಬೆಲೆಗಳು. ಎಲ್ಲದರ ಜೀವಗುಣ ಸ್ವಾತಂತ್ರ್ಯ. ಅದನ್ನು ಹಿತಮಿತದಲ್ಲಿ ಹಿಡಿದು ನಿಲ್ಲಿಸುವುದು, ನಿಲ್ಲಿಸಬೇಕಾಗಿರುವುದು ನಿಯಮ; ತಮ್ಮ ಮೇಲೆ ತಾವು ಹಾಕಿಕೊಂಡದ್ದು. ಸ್ವಾತಂತ್ರ್ಯದ–ಆಳ ವಿಸ್ತಾರ, ನಿರಂತರ ನವ್ಯತೆ ನುಗ್ಗು—ಇವು ಜೀವದ ಪ್ರಧಾನ ಲಕ್ಷಣಗಳು. ಬದುಕಿರುವವರ ಒಂದೇ ಗುರುತು ಅದು ಅದಿಲ್ಲದ ಯಾವ ನಿಯಮನಿಷ್ಠೆಯೂ ವಂಧ್ಯವಾಗುವುದು. ಆದರೆ ಉಳಿದ ಎಲ್ಲವನ್ನೂ ಸ್ವಾತಂತ್ರ್ಯ ಕಬಳಿಸುವಂತಾದರೆ ಜೀವ ದೊಡ್ಡದಾಗದೆಂಬಂತೆ ಸಾಮಾಜಿಕನಾಗಿ ಬದುಕಬೇಕಾಗಿರುವ ಮನುಷ್ಯನ ನಿಯಮನಕ್ಕಾಗಿ ಒಂದುಕಡೆ ಸ್ಥೈರ್ಯ, ಇನ್ನೊಂದುಕಡೆ ಉನ್ನತಿಯ ಸಂಕೇತಗಳು ನಿಲ್ಲುವುದೂ ಅಗತ್ಯ ಅವೆರಡೂ ಸೋದರ ಧರ್ಮಗಳಾಗಿ ಒಂದರ ಜೊತೆಗೊಂದು ನಿಂತಿರುವುದು ನಿಮ್ಮ ಈ ಜಿಲ್ಲೆಯ ಮತ್ತು ನಮ್ಮ ಕನ್ನಡನಾಡಿನ ಪುಣ್ಯ.

[೧೧ನೇ ಪುಟ ನೋಡಿರಿ]

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. No. 445/1953.

K. P. ಮಾಧವ — — ವಾದಿ.

ಮತ್ತು

ಚೋಮು ಹೆಂಗ್ಸು ಸಹಾ—ಪ್ರತಿವಾದಿ ಯವರೊಳಗೆ

ತಾರೀಕು 23—12—53.

To

D 1. ಚೋಮು ಹೆಂಗ್ಸು, M. ಆನಂದ ಮೇಸ್ತ್ರಿಗಳ ವಿಧವೆ.

D 2. K. P. ರಾಮ ಪ್ರಸಾದ, M. ಆನಂದ ಮೇಸ್ತ್ರಿಗಳ ಮತ್ತು ಚೋಮು ಹೆಂಗ್ಸಿನ ಮಗ. ಕಾಸರಗೋಡು ಕಸಬಾ ಗ್ರಾಮದ ನೆಲ್ಲಿಕುಂಜೆಯಲ್ಲಿರುವವರು

ದಾವಾ ಮನೆ ಸ್ವಾಧೀನತೆಗೂ ಮುಟ್ಟುವಳಿಗೂ ವಾದಿಯು ದಾಖಲು ಮಾಡಿದ ಮೇಲ್ಕಂಡ ವ್ಯಾಜ್ಯವನ್ನು ತಾ. 20—1—51ಕ್ಕೆ 1 ಮತ್ತು 2ನೇ ಪ್ರತಿವಾದಿರ ಕೈಫೀತ್ತು ನೋಟೀಸಿನ ಬಗ್ಗೆ ಇಟ್ಟಿರುವುದ್ರಿಂದ ಆ ದಿವಸ ಪ್ರತಿವಾದಿರು ಕೋರ್ಟಿನ ಮುಂದೆ ಹಾಜರಾಗುವರ ತಪ್ಪಿದರೆ ಅವರನ್ನು ಎಕ್ಸ್ ಪಾರ್ಟಿಮಾಡಿ ಸಂಬ್ರ ತನ್ನಿಯಿಂದ ತೀರ್ಮಾನಿಸಲಾಗುವುದೆಂಬ ಸಂಗ್ತಿ ಈ ಮೂಲ್ಕ ತಿಳಿಸೋಣಾಗಿಯದೆ.

(Sd) B. S. Kakkilaya
Advocate for pltf:
Kasaragod: Date 23—12—53.

THE
Canara Mutual Assurance Co., Ltd.
Head Office. UDIPI, S. INDIA.
ಶುಭಾಶಯಗಳು!
ನಾವು ನಮ್ಮೆಲ್ಲ ವಿಮಾದಾರರನ್ನೂ ಪ್ರೋತ್ಸಾಹಕರನ್ನೂ ಅವರ ನಿರಂತರವಾದ ಬೆಂಬಲಕ್ಕಾಗಿ ಅಭಿನಂದಿಸುತ್ತೇವೆ. ಅಲ್ಲದೆ, ಅವರ ಪ್ರೋತ್ಸಾಹಕ್ಕೆ ಪ್ರತಿಯೊಂದೂ ರೀತಿಯಲ್ಲಿ ಅರ್ಹರಿರುವಂತೆ ಮುಂದಕ್ಕೂ ಪ್ರಯತ್ನಿಸುವೆವೆಂದು ಭರವಸೆಯನ್ನು ನೀಡುತ್ತೇವೆ. ನೂತನ ವರ್ಷವು ಸಕಲರಿಗೂ ಸುಖ ಸಂತೋಷ ಹಾಗೂ ಅಭಿವೃದ್ಧಿಯನ್ನು ತರಲೆಂಬುದೇ ನಮ್ಮ ಹಾರೈಕೆ!
ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.
ಪ್ರಧಾನ ಕಾರ್ಯಾಲಯ: ಉಡುಪಿ, ದ ಭಾರತ.

ಪುತ್ತೂರು ಡಿ. ಮು ಕೋರ್ಟಿನಲ್ಲಿ.

R.E.P. 216 53 O. S. 116,52.

ಸೋಮು ಹೆಂಗ್ಸು —ಅರ್ಜಿದಾರಳು.
ಅಂಗರ ಯಾನೆ ರಾಮಯ್ಯ ಗೌಡ ಕೂಡಾ —ಎದ್ರಿರು.

1ನೇ ಎದ್ರಿ ಅಂಗರ ಯಾನೆ ರಾಮಯ್ಯ ಗೌಡ, ಸುಬ್ಬಪ್ಪ ಗೌಡರ ಮಗ, ಪುತ್ತೂರು ತಾಲೂಕು ಕೊಯ್ಲ ಗ್ರಾಮದ ಒಡಲೂರು. ಇವರಿಗೆ ತಿಳಿಸುವುದೇನೆಂದರೆ.–

ನಿಮ್ಮ ಬಾಬ್ತು ಕೆಳಗೆ ಕಾಣ್ಸಿದ ಸ್ಥಿರಾಸ್ತಿಯನ್ನು ಏಲಂ ಮಾಡಿಸಬೇಕೆಂತ ಅರ್ಜಿದಾರಳು ದಾಖ್ಲು ಮಾಡಿದ ಈ ಅಮಲ್ದಾರಿಯು ತಾ. 15-1-1951ಕ್ಕೆ ಇಟ್ಟಿರುವುದರಿಂದ ನಿಮ್ಮದೇನಾದರೂ ಆಕ್ಷೇಪಣೆ ಇದ್ದಲ್ಲಿ ಸದ್ರಿ ದಿವಸ ಉಪಸ್ಥಾಪಿಸಿ ಕೊಳ್ಳ ತಕ್ಕದ್ದು. ಎಂತ ಈ ಮೂಲಕ ತಿಳ್ಸಿದೆ.

ಆಸ್ತಿಯ ವಿವರ

ದ. ಕ. ಪುತ್ತೂರು ಸ. ಡಿ. ಗೆ ಸೇರಿದ ಕೊಯ್ಲ ಗ್ರಾಮದ—

ಸ. ನ.	ಸ ಡಿ. ನ.	ಕಿಸಂ	ವಿಸ್ತೀರ್ಣ	ತೀರ್ವೆ.
66	5ಪೈಕಿ ಮೂಡು ದಿಕ್ಕಿನಲ್ಲಿ	ನಂಜ.	1–25.	6–8–0
65	2ಪೈಕಿ ಪಡುದಿಕ್ಕಿನಲ್ಲಿ	ಪುಂಜ	1–10.	0–8–0

ಈ ಆಸ್ತಿ ಸರ್ವಾಂಗ —

B. Chidananda Rao.
Vakil for Petitioner.
ಪುತ್ತೂರು, 20—12—53.

ಸುಂದರವಾದ ಮಂಗಳೂರು ಹಂಚುಗಳು

—ಪಶ್ಚಿಮ ಸಮುದ್ರತೀರದ ಪ್ರಮುಖ ಉದ್ಯಮ—

ದ್ವಿತೀಯ ಮಹಾ ಯುದ್ಧದಲ್ಲಿ ಜಪಾನು ಧುಮುಕಿದ ಗಳಿಗೆಯಿಂದ ನಮ್ಮ ಪಶ್ಚಿಮ ಕರಾವಳಿಯಲ್ಲಿ ಹೊಯ್ದಾಡುತ್ತಿದ್ದ ಹಂಚಿನ ಕೈಗಾರಿಕೆ ಸ್ಥಿರವಾದ ನೆಲಗಟ್ಟಿನಲ್ಲಿ ನಿಲ್ಲುವುದು ಸಾಧ್ಯವಾಯಿತು. ಈ ಕೈಗಾರಿಕೆ ಇಂದಿನ ಉತ್ಕರ್ಷ ಸ್ಥಿತಿಯಲ್ಲಿರುವುದಕ್ಕೆ ಯುದ್ಧ ಕಾಲದಲ್ಲಿ ಹಂಚಿನ ಮಹತ್ವವು ತಿಳಿದು ಬಂದು ಅದರ ಆವಶ್ಯಕತೆ ಹೆಚ್ಚಿಕೊಂಡುದೇ ಕಾರಣ. ಯುದ್ಧ ಕಾಲದಲ್ಲಿ ಸಂರಕ್ಷಣವ್ಯೂಹಗಳನ್ನು ರಚಿಸಲು, ಸೈನಿಕ ಠಾಣ್ಯಗಳನ್ನು ಕಟ್ಟಲು ಲಕ್ಷಾಂತರ ಹಂಚುಗಳು ಬೇಕಾದವು. ದೇಶ ವಿದೇಶಗಳಿಗೂ ಇವುಗಳು ನಿರ್ಯಾತಗೊಂಡವು. ಯುದ್ಧ ಮುಗಿದ ಮೇಲೆ ಕೂಡ ಹಂಚುಗಳಿಗೆ ಬೇಡಿಕೆ ಕಡಿಮೆಯಾಗಲಿಲ್ಲ. ಯುದ್ಧ ಕಾಲದಲ್ಲಿ ಕೈಯಲ್ಲಿ ನಾಲ್ಕು ಕಾಸು ಮಾಡಿಕೊಂಡ ಎಲ್ಲರೂ ಸ್ವಂತ ಮನೆಗಳನ್ನು ಕಟ್ಟಿಸಿಕೊಳ್ಳಲು ಹವಣಿಸಿದರು. ಹೀಗಾಗಿ ಹಂಚುಗಳನ್ನು ತಯಾರಿಸುವ ಕೈಗಾರಿಕೆ ಉಚ್ಛ್ರಾಯಾವಸ್ಥೆಯಲ್ಲಿದೆ.

ಪ್ರಾರಂಭಿಕ ಪ್ರಯತ್ನ

ಹಂಚಿನ ಕೈಗಾರಿಕೆಯು ಕೇವಲ ನೂರು ವರ್ಷಗಳ ಹಿಂದೆ ಹುಟ್ಟಿಕೊಂಡು, ಬೆಳೆಯಿತೆಂದರೂ ಸಲ್ಲುತ್ತದೆ. ಫ್ರೆಂಚ ಮಾದರಿಯ ಈಗಿನ ಹಂಚುಗಳ ನಿರ್ಮಾಣ ಹೊಸ ಸಂಶೋಧನೆ—ಮತ್ತು ಇದರ ಎಲ್ಲ ಶ್ರೇಯಸ್ಸೂ ಮಂಗಳೂರಿಗೆ ಮತಪ್ರಚಾರದ ಉದ್ದೇಶದಿಂದ ಬಂದು ನೆಲಸಿದ ಜರ್ಮನ್ ಮಿಶನರಿಗಳಿಗೆ ಸೇರಿದೆ. ಮತಾಂತರಗೊಳಿಸಲ್ಪಟ್ಟ ಜನರಿಗೆ ಹೊಟ್ಟೆ ಬಟ್ಟೆಗೆ ಅನುಕೂಲಮಾಡಿಕೊಡುವ ಉದ್ಯೋಗವನ್ನು ನೀಡಲು ನೇಯಿಗೆ ಕಾರ್ಖಾನೆ, ಶಾಲೆಗಳು, ಮುದ್ರಣಾಲಯಗಳು ಮುಂತಾದವನ್ನು ಮಿಶನರಿಗಳು ಸ್ಥಾಪಿಸಿದರು. ಬಲ್ಮಠದ ಸಮೀಪದಲ್ಲಿಯೇ ಹರಿಯುವ ನೇತ್ರಾವತೀ ನದಿಯ ದಂಡೆಯಲ್ಲಿ ಉತ್ತಮ ದರ್ಜೆಯ ಕೆಂಪುಮಣ್ಣು ಇರುವುದನ್ನು ಕಂಡ ಮಿಶನರಿಗಳಿಗೆ, ಹೊಸತೊಂದು ಕೈಗಾರಿಕೆಯನ್ನು ಸ್ಥಾಪಿಸುವ ವ್ಯಾಮೋಹ ಹುಟ್ಟಿಕೊಂಡುದು ಆಶ್ಚರ್ಯವಲ್ಲ. ಅಂದಿನವರೆಗೆ ಸಣ್ಣ ಪ್ರಮಾಣದಲ್ಲಿ ಯಾವ ತರದ ವಿಶೇಷ ಸಾಧನ ಸಲಕರಣೆಗಳೂ ಇಲ್ಲದೆ ದೇಶೀಯರು ಹಸ್ತ ಕೌಶಲ್ಯದಿಂದಲೇ ತಯಾರಿಸುತ್ತಿದ್ದ ಒರಟು ಹಂಚುಗಳ ಬದಲು ನಯ ನಾಜೂಕುಗಳನ್ನೊಳಗೊಂಡ ತೆಳುವಾದ ಹಂಚುಗಳನ್ನು ತಯಾರಿಸಲು ಮಿಶನರಿಗಳು ಪ್ರಯತ್ನಿಸಿದರು. ಒಬ್ಬ ಜರ್ಮನ ಮಿಶನರಿ ಪ್ಲೆಬಿಸ್ಟ ಫ್ರೆಂಚ ಮಾದರಿಯ ಹಂಚುಗಳನ್ನು ತಯಾರಿಸಬೇಕೆಂಬ ಕುತೂಹಲಕ್ಕೆ ಬಿದ್ದು ಈ ದಿಸೆಯಲ್ಲಿ ಮೊದಲ ಪ್ರಯತ್ನವನ್ನು ಮಾಡಿದನು. ಆದರೆ ದುರ್ದೈವದಿಂದ ಅವನ ಆರೋಗ್ಯವು ಕೆಟ್ಟುದರಿಂದ ತನ್ನ ಪ್ರಯತ್ನವನ್ನು ಬಿಟ್ಟುಕೊಟ್ಟು [illegible] ಅವನು ಮರಳಬೇಕಾಯಿತು. ಸ್ವದೇಶಕ್ಕೆ ಹಿಂತಿರುಗಿದ ಬಳಿಕವೂ ತನ್ನ ಪ್ರಯತ್ನವನ್ನು ಅವನು ನಿಲ್ಲಿಸಲೆ, ಅಲ್ಸೇಸ್ ಲೊರೇನದಲ್ಲಿ ಅವನು ಈ ವಿಷಯದಲ್ಲಿ ಹೆಚ್ಚಿನ ಮಾಹಿತಿಗಳನ್ನು ಸಂಗ್ರಹಿಸಿದನು.

ದೇಶೀಯರ ಸಾಹಸ

ಮುಂದೆ ೧೮೬೫ರಲ್ಲಿ ಅವನು ಪುನಃ ಮಂಗಳೂರಿಗೆ ಬಂದಾಗ, ತನ್ನೊಡನೆ ಆವಶ್ಯಕ ಯಂತ್ರ ಸಲಕರಣೆಗಳನ್ನು ತಂದು ಒಂದು ಕಾರ್ಖಾನೆಯನ್ನು ತೆರೆದನು. ೮೮ ವರ್ಷಗಳ ಪೂರ್ವದಲ್ಲಿ ಸ್ಥಾಪಿಸಲ್ಪಟ್ಟ ಈ ಕಾರ್ಖಾನೆ ಇಂದು ಪಶ್ಚಿಮ ಕರಾವಳಿಯಲ್ಲಿಯೇ ಅತ್ಯಂತ ದೊಡ್ಡ ಹಂಚು ಕೈಗಾರಿಕೆಯ ಸ್ಥಾನವಾಗಿ ಉತ್ಕರ್ಷ ಹೊಂದಿದೆ. ಇಲ್ಲಿ ಹಣವನ್ನೂ ಸಮಯವನ್ನೂ ಉಳಿಸಿ, ಹಂಚುಗಳ ಗುಣವನ್ನು ಹೆಚ್ಚಿಸಲು ನೆರವಾಗುವ ಎಲ್ಲ ಬಗೆಯ ಆಧುನಿಕ ಯಂತ್ರ ಸಾಮಗ್ರಿಗಳು ಇವೆ. ಕಾಮನವೆಲ್ತ್ ಟ್ರಸ್ಟದವರಿಂದ ನಡೆಸಲ್ಪಡುವ ಈ ಕಾರ್ಖಾನೆಯ ಮಾದರಿಯನ್ನೆ ಮಂಗಳೂರಿನಲ್ಲಿ ಆ ಬಳಿಕ ತಲೆಎತ್ತಿದ ಹಲವಾರು ಕಾರ್ಖಾನೆಗಳು ತಮ್ಮದಾಗಿ ಮಾಡಿಕೊಂಡವು. ಮಂಗಳೂರಿನಲ್ಲಿ ವಿದೇಶೀಯನೊಬ್ಬನು ಹೀಗೆ ಕಾರ್ಖಾನೆಯೊಂದನ್ನು ತೆರೆದು ಯಶಗಳಿಸಿದುದರಿಂದ ಸ್ಥಳೀಯರೂ ಕೆಲವರು ಈ ಕಡೆಗೆ ಗಮನ ಪೂರೈಸಿದರು. ಅಲೆಕ್ಸಾಂಡರ್ ಅಲ್ಬುಕರ್ಕರೆಂಬವರೊಬ್ಬರು ಪಾಣೆಮಂಗಳೂರಿನ ಹತ್ತಿರದಲ್ಲಿರುವ ನಂದಾವರದಲ್ಲಿ ಯಾವದೊಂದು ವಿಶೇಷ ಮಾದರಿಯ ಯಾಂತ್ರಿಕ ಸಾಮಗ್ರಿಗಳಿಲ್ಲದೆ, ಹೆಚ್ಚಿನ ಅನುಭವ ಸಂಪನ್ನರ ಸಹಾಯವೂ ಇಲ್ಲದೆ ಹಂಚುಗಳನ್ನು ತಯಾರಿಸುವ ಸಾಹಸದಲ್ಲಿ ಪ್ರವೃತ್ತರಾದರು. ಈ ಹಂಚುಗಳನ್ನು ಅವರು ಪೋರ್ಚುಗೀಸ್ ವ್ಯಾಪಾರಿಗಳಿಗೆ ಮಾರುತ್ತಿದ್ದರು. ಏಳು ವರ್ಷಗಳ ಬಳಿಕ ೧೮೭೨ರಲ್ಲಿ ಬಂದರಕ್ಕೆ ಸಮೀಪವಾಗಿರಬೇಕೆಂಬ ಉದ್ದೇಶದಿಂದ ತಮ್ಮ ಕಾರ್ಖಾನೆಯನ್ನು ಬೋಳಾರಕ್ಕೆ ಸ್ಥಾನಾಂತರಿಸಿದರು. ದುರ್ದೈವದಿಂದ ೧೮೭೭ರಲ್ಲಿ ಒಂದು ಮಹಾಪೂರವು ಕಾರ್ಖಾನೆಯನ್ನು ಸಂಪೂರ್ಣ ಬಳಿದುಕೊಂಡು ಹೋಯಿತು. ಇದರಿಂದ ಎದೆಗೆಡದೆ ಅಲ್ಬುಕರ್ಕರು ಅದೇ ಸ್ಥಳದಲ್ಲಿ ದೊಡ್ಡದಾದ ಇನ್ನೊಂದು ಕಾರ್ಖಾನೆಯನ್ನು ತೆರೆದರು. ಈಗ ಅದು ಹತ್ತು ಎಕ್ರೆ ಜಾಗಕ್ಕಿಂತಲೂ ಹೆಚ್ಚು ಸ್ಥಳವನ್ನು ಆಕ್ರಮಿಸಿದ್ದು ಭಾರತದ ಹಂಚಿನ ಕೈಗಾರಿಕೆಯ ಪ್ರಮುಖ ಕೇಂದ್ರವಾಗಿ ಪರಿಗಣಿಸಲ್ಪಟ್ಟಿದೆ.

ಸಂಶೋಧನೆಗಳ ಅಗತ್ಯ

ಮಂಗಳೂರು ನಗರವು ದಕ್ಷಿಣ ಭಾರತದಲ್ಲಿ ಸುಪ್ರಸಿದ್ಧ ಬಂದರವಾಗಿ ಪ್ರಾದುರ್ಭಾವಕ್ಕೆ ಸಾಗುವಾನಿ, ಏಲಕ್ಕಿ, ಕರಿಮೆಣಸು, ಗೇರುಬೀಜ ಮತ್ತು ಕಾಫಿಗಳ ಜೊತೆಗೆ ಹಂಚಿನ ಕೈಗಾರಿಕೆಯೂ ಹೆಚ್ಚಿನ ನೆರವು ನೀಡಿದೆ. ಮುಂಬಯಿಯಿಂದ ಅಲ್ವೇಯವರೆಗೆ ಅಲ್ಲಲ್ಲಿ ಹಂಚಿನ ಕಾರ್ಖಾನೆಗಳು ಕಂಡುಬಂದರೂ ಮಂಗಳೂರು ಹಂಚಿನ ಕೈಗಾರಿಕೆಯು ಅದ್ವಿತೀಯ ಕೇಂದ್ರ. ಸೌಂದರ್ಯಕ್ಕೂ ತಾಳಿಕೆಗೂ ಹೆಸರಾದ ಮಂಗಳೂರು ಹಂಚುಗಳು ಸಿಂಹಳ, ಸಿಂಗಾಪುರ, ಪೂರ್ವ ಆಫ್ರಿಕಾ, ಮೊದಲಾದ ಪೇಟೆಗಳನ್ನಲ್ಲದೆ, ಈಚೆಗೆ ಆಸ್ಟ್ರೇಲಿಯಾ, ದಕ್ಷಿಣ ಆಫ್ರಿಕಾಗಳಲ್ಲಿ ಕೂಡ ಜನಪ್ರಿಯತೆಯನ್ನು ಗಳಿಸಿವೆ. ವಿದೇಶೀ ಪೇಟೆಗಳಲ್ಲಿ ಹಂಚುಗಳ ಬೇಡಿಕೆ ದಿನೇ ದಿನೇ ಹೆಚ್ಚುತ್ತಿರುವುದರಿಂದ ಈ ಕೈಗಾರಿಕೆಗೆ ಉಜ್ವಲ ಭವಿಷ್ಯವಿದೆಯೆಂದೂ ಹೇಳಬಹುದು. ಹೀಗೆ ಬೇಡಿಕೆ ಹೆಚ್ಚುತ್ತಿರುವುದೂ ಬೆಲೆ ಏರುತ್ತಿರುವುದೂ ಹಂಚುಗಳ ಗುಣ ಮತ್ತು ಸೌಂದರ್ಯಗಳ ಕಡೆಗೆ ಕೊಡುವ ಗಮನವನ್ನು ಕಡಿಮೆ ಮಾಡಿದಂತೆ ಈಗೀಗ ಭಾಸವಾಗುತ್ತದೆ. ಫ್ರಾನ್ಸ್ ದೇಶದ ಸುಪ್ರಸಿದ್ಧ ಮಾರ್ಸೆಲಿಸ್ ಹಂಚುಗಳನ್ನು ಈಗಿನ ಮಂಗಳೂರು ಹಂಚುಗಳೊಂದಿಗೆ ಹೋಲಿಸಿದರೆ ಇದು ಸ್ಪಷ್ಟವಾಗಿ ಗೋಚರಿಸುತ್ತದೆ. ಪೇಟೆಯಲ್ಲಿ ಗಿರಾಕಿಗಳು ಎಷ್ಟು ಬೆಲೆ ಕೊಟ್ಟಾದರೂ ತೆಗೆದುಕೊಳ್ಳಲು ಆತುರರಿರುವರೆಂಬ ಕಾರಣಕ್ಕಾಗಿ ಹಸಿ ಬಿಸಿ ಹಂಚುಗಳನ್ನು ತಯಾರಿಸಿ ರವಾನಿಸುವ ಚಟ ಈಗ ಹುಟ್ಟಿಕೊಂಡಿದೆ. ವಿದೇಶಗಳಿಗೆಂದು ಕಳಿಸುವ ಹಂಚುಗಳು ದೂರ ಸಾಗಾಟದಲ್ಲಿ ಒಡೆದು ಹೋಗಿ ಅಪಾರ ನಷ್ಟವನ್ನುಂಟುಮಾಡುತ್ತವೆ. ಇದು ವಿದೇಶಿಯರಿಗೆ ನಮ್ಮ ವಸ್ತುಗಳ ಮೇಲಿರುವ ಪ್ರೀತಿಯನ್ನು ಕಡಿಮೆ ಮಾಡೀತು. ಹೀಗಾಗುವುದಕ್ಕೆ ಬಿಡಬಾರದು. ಆಕರ್ಷಕವಾದ ಬಣ್ಣ, ತೆಳುವಾದ ಆಕಾರವನ್ನು ಕೊಟ್ಟು ಗಟ್ಟಿಮುಟ್ಟಾಗುವಂತೆ ಹಂಚುಗಳನ್ನು ತಯಾರಿಸಲು ನಾವು ಹೆಚ್ಚಿನ ಪ್ರಯತ್ನಗಳನ್ನು ಮಾಡಬೇಕು. ಈ ಉದ್ದೇಶದಿಂದ ಹಂಚಿನ ಕೈಗಾರಿಕೆಯಲ್ಲಿ ವೈಜ್ಞಾನಿಕ ಪ್ರಯೋಗಗಳನ್ನು ತೊಡಗುವುದು ಲೇಸು. ಮಣ್ಣಿನ ಗುಣ ಹಾಗೂ ಹಂಚುಗಳ ತಾಳಿಕೆ ಬಾಳಿಕೆಯ ವಿಷಯದಲ್ಲಿ ಸಂಶೋಧನೆಗಳು ನಡೆಯಬೇಕಲ್ಲದೆ, ತಯಾರಿಸಿದ ಹಂಚುಗಳ ಮಾರಾಟ ಮತ್ತು ನಿರ್ಯಾತ ವಿಷಯದಲ್ಲಿಯೂ ಯೋಗ್ಯ ಸಲಹೆಗಳನ್ನು ನೀಡಬಲ್ಲ ಸಂಶೋಧನ ಹಾಗೂ ಸಲಹಾ ಸಮಿತಿಗಳು ನೇಮಕಗೊಂಡರೆ ಹಿತವಿದೆ. ಹಂಚುಗಳ ತಯಾರಿಕೆಯಲ್ಲಿ ಮುಂದುವರಿದ ಜಪಾನು ಮುಂತಾದ ದೇಶಗಳಲ್ಲಿ ನಮ್ಮವರನ್ನು ತರಬೇತಿಗಾಗಿ ಕಳಿಸುವುದೂ ಅಲ್ಲಿಯ ತಜ್ಞರ ನೆರವನ್ನು ಪಡೆಯುವುದೂ ಕೈಗಾರಿಕೆಯ ಅಭಿವೃದ್ಧಿಗೆ ಸಾಧನವಾದೀತು.

— ಪೇರಿಸರ ಲೇಖನದಿಂದ.

ದ. ಕ. ಜಿಲ್ಲಾ ಸಬೋರ್ಡಿನೇಟ್ ಜಡ್ಜರ ಕೋರ್ಟಿನಲ್ಲಿ

O. S. 265 1953.

ಲಕ್ಷ್ಮಿ ಶೆಡ್ತಿ .. . ವಾದಿ.

ಮತ್ತು

ಶೀನಪ್ಪ ಶೆಟ್ಟಿ ಕೂಡಾ . ಪ್ರತಿವಾದಿಗಳು.

ಉಡುಪಿ ತಾಲ್ಲೂಕು [illegible] ಗ್ರಾಮದಲ್ಲಿರುವ ಚಂದಮ್ಮ ಶೆಡ್ತಿ ಮಗ 4 ನೇ ಪ್ರತಿವಾದಿ ಮಹಾಬಲ ಶೆಟ್ಟಿ, ಉಡುಪಿ ತಾಲ್ಲೂಕು [illegible] ಗ್ರಾಮದ [illegible] ರಲ್ಲಿರುವ ಚಿಕ್ಕಮ್ಮ ಯಾನೆ ರಾಜಮ್ಮ ಶೆಡ್ತಿ ಮಗಳು 6ನೇ ಪ್ರತಿವಾದಿ [illegible] ಶೆಡ್ತಿ ತನ್ನ ಬಗ್ಗೆ ಮತ್ತು ತನ್ನ ಮೈನರ್ ಮಕ್ಕಳು [9 ರಿಂದ 10ನೇ ಪ್ರತಿವಾದಿಯು] ರತ್ನಾಕರ ಶೆಟ್ಟಿ, [illegible] ಶೆಟ್ಟಿ, [illegible] ಶೆಡ್ತಿ ಕೂಡಾ 3 ಜನರ ಗಾರ್ಡಿಯನಳಾಗಿ ಸಹಾ. ಕಾರ್ಕಳ ತಾಲ್ಲೂಕು [illegible] ಗ್ರಾಮದಲ್ಲಿರುವ ಚಿಕ್ಕಮ್ಮ ಯಾನೆ ರಾಜಮ್ಮ ಶೆಡ್ತಿ ಮಗ 6ನೇ ಪ್ರತಿವಾದಿ. [illegible] ಶೆಟ್ಟಿ, ಉಡುಪಿ ತಾಲ್ಲೂಕು [illegible] ಗ್ರಾಮದ [illegible] ಹೊಸ ಮನೆಯಲ್ಲಿರುವ ಚಿಕ್ಕಮ್ಮ ಯಾನೆ ರಾಜಮ್ಮ ಶೆಡ್ತಿ ಮಗಳು 7ನೇ ಪ್ರತಿವಾದಿ [illegible] ಶೆಡ್ತಿಗೆ—

ಮೇಲಿನ ದಾವೆಯಲ್ಲಿ ವಾದಿಯ ಮತ್ತು ಪ್ರತಿವಾದಿಯರ ಕುಟುಂಬದ ಬಾಬ್ತು ಯಾವತ್ತು ಸೊತ್ತುಗಳನ್ನು [illegible] ಸಂತಾನ ಲಕ್ಷ ಪ್ರಕಾರ ಪಾಲು ಸಿಗಬೇಕೆಂಬುದಾಗಿ ವಗೈರೆ ನಿವೃತ್ತಿ ಕೇಳಿ ವಾದಿಯು ಹಾಕಲ್ಪಟ್ಟ ದಾವೆಯು ವಿಚಾರಣೆಗೆ ತಾ. 21-1-54 ಕ್ಕೆ ಮೇಲಿನ ಕೋರ್ಟಿನಲ್ಲಿ ಇಟ್ಟಿರುತ್ತದೆ. ಆ ಕುರಿತು ಏನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿವಸ ಮೇಲಿನ ಕೋರ್ಟು ಮುಂದೆ ಹಗಲು ಗಂಟೆ 11ಕ್ಕೆ ಸ್ವಂತ ಮುಖ್ಯ ಯಾ ವಕೀಲರ ಮುಖಾಂತ್ರ ಹಾಜರಾಗಿ ಪ್ರತಿಹೇಳಿಕೆ ಮಾಡಿಕೊಳ್ಳತಕ್ಕದ್ದು.

(ಕೋರ್ಟು ಹುಕುಂ ಪ್ರಕಾರ)

B. M. Hegde
Advocate for Plaintiff

ಮಂಗಳೂರು. ತಾ. 21—12—1953.

Visit
K. R. K. SHET DIAMOND MART
Opposite Government College, MANGALORE.
For all your requirements in Diamonds and Jewellery Lucky Birth Stones are also available.
Prop: K. K. R. SHET.

70 ವರುಷಗಳಿಂದ ಜಗಜ್ಜನಿತವಾದುದು
ಮಲೇರಿಯಾ, ಇನ್‌ಫ್ಲೂಯೆಂಜಾ ಮತ್ತು ಇತರ ಜ್ವರಗಳಿಗೆ
ಬಾಟ್ಲಿವಾಲಾ ಆಗ್ ಮಿಕ್ಸ್‌ಚರ್
ಮತ್ತು ಮಾತ್ರೆಗಳು
ಎಲ್ಲಾ ಕೆಮಿಸ್ಟರಲ್ಲೂ ಕಿರಾಣಿ ಅಂಗಡಿಕಾರರಲ್ಲೂ ಮಾರಲ್ಪಡುತ್ತವೆ.
ಉತ್ಪಾದಕರು:-
ಡಾ| ಎಚ್. ಎಲ್. ಬಾಟ್ಲಿವಾಲಾ ಸನ್ಸ್ & ಕೊ. ಲಿಮಿಟೆಡ್,
ಬಾಟ್ಲಿವಾಲಾ ಬಿಲ್ಡಿಂಗ್, ಪೋರ್ಚುಗೀಸ್ ಸ್ಟ್ರೀಟ್,
Tele. Add: "CAWASHABAD" ದಾದರ್, ಬೊಂಬಾಯಿ, 28

ಯೋಜನಾ ಆಯೋಗದ ಮುಂದಿರುವ ಗುರಿ ಏನು?

ನಿತ್ಯ ಜೀವನದ ಮಟ್ಟವನ್ನು ಏರಿಸುವ ಸಂಕಲ್ಪ

ಭಾರತದ ಯೋಜನಾ ಆಯೋಗದ ಉಪಾಧ್ಯಕ್ಷರಾದ ಶ್ರೀ ಕೃಷ್ಣಮಾಚಾರಿಯವರು ಅಖಿಲ ಭಾರತ ವ್ಯವಸಾಯ ಅರ್ಥ ಶಾಸ್ತ್ರದ ೧೪ನೇ ಅಧಿವೇಶನದ ಅಧ್ಯಕ್ಷ ಸ್ಥಾನದಿಂದ ಮಾತನಾಡುತ್ತಾ "ಗ್ರಾಮಾಂತರಗಳಲ್ಲಿ ಜನಜೀವನದ ಮಟ್ಟವು ಏರಿಕೊಳ್ಳುವಂತೆ ಮಹತ್ವ ಪೂರ್ಣ ಪರಿವರ್ತನೆಯನ್ನು ಸಾಧಿಸುವುದೇ, ಲೋಕ ಕಲ್ಯಾಣ ರಾಜ್ಯವಾಗಿರುವ ಭಾರತದ ಉದ್ದೇಶ" ಎಂದರು. "ಯೋಜನಾ ಆಯೋಗವು ಈ ಗುರಿಯನ್ನು ಸಾಧಿಸಲು ಎಲ್ಲ ಕ್ರಮಗಳನ್ನು ಕೈಗೊಂಡಿದೆ. ಜನರ ಆರ್ಥಿಕ ಸ್ಥಿತಿಯನ್ನು ಸುಧಾರಿಸುವುದು ದೊಡ್ಡ ಪ್ರಯಾಸದ ಕೆಲಸವಾಗಿದ್ದು ಇದಕ್ಕೋಸ್ಕರ ಪಂಚವಾರ್ಷಿಕ ಯೋಜನೆ ರೂಪಿಸಲ್ಪಟ್ಟಿದೆ. ಈ ಮಹೋದ್ಯಮದಲ್ಲೂ ರಾಷ್ಟ್ರದ ನಿತ್ಯ ವ್ಯವಹಾರದಲ್ಲೂ ಅಧಿಕಾರಿಗಳೂ ಅಧಿಕಾರೇತರರೂ ಸಹಕಾರದಿಂದ ವರ್ತಿಸುವಂತೆ ಆಡಳಿತದ ಪುನರ್ಘಟನೆ ಮಾಡಲು ಯೋಜನಾ ಆಯೋಗ ಪ್ರಯತ್ನಿಸಿದೆ. ರಾಷ್ಟ್ರೀಯ ವಿಸ್ತರಣಾ ಯೋಜನೆಯು ಅಧಿಕಾರಿಗಳೂ ಅಧಿಕಾರೇತರರೂ ಕೂಡಿ ಕೆಲಸ ಮಾಡುತ್ತಿರುವುದಕ್ಕೆ ನಿದರ್ಶನ" ಎಂದವರು ವಿವರಿಸಿದರು.

ತೃಪ್ತಿಕರ ಆರ್ಥಿಕ ಪರಿಸ್ಥಿತಿ

ಸಿಡ್ನಿಯಲ್ಲಿ ಮುಂದಿನ ಶುಕ್ರವಾರದಿಂದ ತೊಡಗುವ ಕಾಮನವೆಲ್ತ್ ರಾಷ್ಟ್ರಗಳ ಅರ್ಥ ಮಂತ್ರಿಗಳ ಪರಿಷತ್ತಿಗೆ ಹೊರಟು ನಿಂತಿದ್ದ ಭಾರತ ಸರಕಾರದ ಅರ್ಥ ಸಚಿವ ಶ್ರೀ ದೇಶಮುಖರು ಭಾರತದ ಸದ್ಯದ ಆರ್ಥಿಕ ಪರಿಸ್ಥಿತಿಯ ಸಿಂಹಾವಲೋಕನ ಮಾಡುತ್ತಾ ಅದು ತೃಪ್ತಿಕರವಿರುವ ಬಗ್ಗೆ ಸಮಾಧಾನವನ್ನು ವ್ಯಕ್ತಗೊಳಿಸಿದರು. ಪೇಟೆಯ ದರಗಳು ಕೊರಿಯಾ ಯುದ್ಧಕ್ಕೆ ಪೂರ್ವದಲ್ಲಿದ್ದ ಮಟ್ಟಕ್ಕೆ ಬಂದಿದ್ದು ಇದು ಸ್ಥಿರವಾಗಿ ಉಳಿವುದೆಂದು ಅರ್ಥ ಸಚಿವರು ಹಾರೈಸಿದರು "ಭಾರತದ ಪಂಚ ವಾರ್ಷಿಕ ಯೋಜನೆಯನ್ನು ಕಾರ್ಯಕಾರಿಯಾಗಿಸುವಲ್ಲಿ ವಿದೇಶೀ ಸಹಾಯವು ಅಪೇಕ್ಷಿತ ಪ್ರಮಾಣದಲ್ಲಿ ದೊರೆತಿಲ್ಲ ಆದರೂ ಈ ನೆರವಿನ ಮೊತ್ತ ಅತ್ಯಲ್ಪವಿರುವುದರಿಂದ ನಾವು ದಿಗಿಲುಗೊಳ್ಳುವ ಅಗತ್ಯವಿಲ್ಲ. ಯೋಜನೆಯ ಇನ್ನುಳಿದ ಎರಡು ವರ್ಷಗಳಲ್ಲಿ ಅತ್ಯಧಿಕ ಉತ್ಸಾಹದಿಂದ ಕೆಲಸ ಮಾಡಲು ಹೆಣಗುತ್ತೇವೆ. ಕಳೆದ ಮೂರು ವರ್ಷಗಳಲ್ಲಿ ೧೨೦೫ ಕೋಟಿ ರೂಪಾಯಿಗಳ ವೆಚ್ಚವಾಗಬೇಕೆಂದು ನಿರ್ಣಯಿಸಲ್ಪಟ್ಟಿದೆ; ಮುಂದಿನೆರಡು ವರ್ಷಗಳಲ್ಲಿ ೧೩೫೯ ಕೋಟಿ ರೂಪಾಯಿ ವೆಚ್ಚ ಮಾಡಬೇಕಾಗುವುದು. ಯೋಜನೆಗೆ ಒದಗಿಸಿದ ಹಣವೆಚ್ಚವಾಗದಿರುವುದಕ್ಕೆ ವಿದೇಶಗಳಿಂದ ಸರಕುಗಳು ಸಕಾಲದಲ್ಲಿ ಪೂರೈಕೆಗೊಳ್ಳದಿದ್ದುದೇ ಕಾರಣ" ಎಂದವರು ಹೇಳಿದರು.

ಆಯಾತ ಧೋರಣೆ

ನಮ್ಮ ಆರ್ಥಿಕ ಪರಿಸ್ಥಿತಿ ತೃಪ್ತಿಕರವಿರುವುದಕ್ಕೆ ಕೆಲಮಟ್ಟಿಗೆ ದೀರ್ಘಾಲೋಚನೆಯಿಂದ ಅನುಸರಿಸುವ ಸಮಾಧಾನಕರವಾದ ಆಯಾತ ಧೋರಣೆಯೂ ಕಾರಣವಾಗಿರುತ್ತದೆ. ಸರಕಾರದವರು ಇದೇ ಜನವರಿಯಿಂದ ಜೂನು ಅಖೈರಿವರೆಗಿನ ಆಯಾತ ಧೋರಣವನ್ನು ಪ್ರಕಟಪಡಿಸಿದ್ದು ಕಳೆದ ವರ್ಷದ ಉತ್ತರಾರ್ಧದಲ್ಲಿ ಅನುಸರಿಸಿದ ನೀತಿಯನ್ನು ಸಾಮಾನ್ಯವಾಗಿ ಈಗಲೂ ಅಂಗೀಕರಿಸಿರುವರು. ವರ್ತಕ ವರ್ಗದಲ್ಲೂ ವಾಣಿಜ್ಯ ಮತ್ತು ಔದ್ಯೋಗಿಕ ಕ್ಷೇತ್ರದಲ್ಲೂ ಧೋರಣೆಯು ಸ್ವಾಗತವನ್ನು ಪಡೆದಿರುವುದರ ಮೇಲಿಂದಲೇ ಇದರ ಯೋಗ್ಯತೆಯನ್ನು ಗುರುತಿಸಿಕೊಳ್ಳಬಲ್ಲೆವು. ಭಾರತದಲ್ಲಿಯೇ ತಯಾರಾಗುವ ಸಾಮಗ್ರಿಗಳನ್ನು ವಿದೇಶದಿಂದ ಆಯಾತ ಮಾಡಿಕೊಳ್ಳುವುದು ಅನಗತ್ಯವೆಂದು ಸರಕಾರವು ಮನಗಂಡಿರುತ್ತದೆ; ಆದಕಾರಣ ಅವುಗಳನ್ನು ತರಿಸಬಾರದೆಂದು ನಿರ್ಬಂಧಿಸಿದೆ. ಒಬ್ಬನು ಆಯಾತ ಮಾಡಿಕೊಳ್ಳಬೇಕಾದ ಕನಿಷ್ಠ ಮಟ್ಟವನ್ನೂ ಕಡಿಮೆ ಮಾಡಿರುವುದರಿಂದ ಮತ್ತು ಲೈಸನ್ಸ್ ಕೊಡುವ ಪದ್ಧತಿಯನ್ನು ಸುಗಮಗೊಳಿಸಿರುವುದರಿಂದ ಹೊಸಬರಿಗೆ ವ್ಯಾಪಾರೋದ್ಯಮದಲ್ಲಿ ಪ್ರಗತಿ ಹೊಂದಲು ಅವಕಾಶ ದೊರೆತಿದೆ. ಔದ್ಯೋಗಿಕ ಉತ್ಪಾದನೆಯನ್ನು ಹೆಚ್ಚಿಸಬಲ್ಲ ಯಂತ್ರ ಸಾಮಗ್ರಿಗಳಿಗೆ ಪ್ರಾಶಸ್ತ್ಯವು ಕೊಡಲ್ಪಟ್ಟಿದೆ. ಇದರ ಜೊತೆಗೆ ದೇಶದ ಆಯಾತ-ನಿರ್ಯಾತ ಪ್ರಮಾಣದಲ್ಲಿ ಸಮತೋಲವೂ ಸಾಧಿಸಲ್ಪಟ್ಟಿದೆ.

ಅಸ್ಪೃಶ್ಯತೆಯ ನಿರ್ಮೂಲ

ರಾಜ್ಯಾಂಗ ಘಟನೆಯಲ್ಲಿ ಅಸ್ಪೃಶ್ಯತೆಯನ್ನು ಆಚರಿಸತಕ್ಕದ್ದಲ್ಲವೆಂದು ಸ್ಪಷ್ಟವಾಗಿ ಹೇಳಿದ್ದರೂ ನಮ್ಮ ಸಮಾಜದ ಮೇಲಿನ ಈ ಕಲಂಕವು ಇದುವರೆಗೆ ಮಾಯವಾಗಿರುವುದಿಲ್ಲ ಆದುದರಿಂದ ಈ ಸುಧಾರಣಾ ಮಾರ್ಗದಲ್ಲಿ ಪ್ರಗತಿಪರ ಧೋರಣವನ್ನು ವಹಿಸುವುದು ಅಗತ್ಯವೆಂದು ತೋರಿ, ಸರಕಾರವು ಒಂದು ವಿಧೇಯಕವನ್ನು ವಿಶೇಷ ಗಜೆಟಿನಲ್ಲಿ ಪ್ರಕಟಿಸಿರುತ್ತದೆ ಅಸ್ಪೃಶ್ಯತೆಯನ್ನು ಆಚರಿಸುವುದೂ ಈ ಆಚರಣೆಯಿಂದ ತೊಂದರೆಯುಂಟು ಮಾಡುವುದೂ ಅಪರಾಧವೆಂದು ಹೇಳಿ ಅದನ್ನು ದಂಡಿಸಲು ಈ ವಿಧೇಯಕ ಉದ್ದೇಶಿಸಿದೆ. ಇದರನ್ವಯ ಆರು ತಿಂಗಳ ಶಿಕ್ಷೆ ಇಲ್ಲವೇ ೫೦೦ ರೂಪಾಯಿಗಳ ದಂಡ ಅಥವಾ ಎರಡೂ ವಿಧಿಸಲ್ಪಡುತ್ತದೆ. ಹಿಂದೂಗಳಿಗೆ ಮಾತ್ರವೆಂದಲ್ಲ — ಅಸ್ಪೃಶ್ಯತೆಯನ್ನು ಆಚರಿಸುವ ಯಾವನೇ ಇದ್ದರೂ ಅವನನ್ನು ದಂಡಿಸುವಷ್ಟು ಈ ವಿಧೇಯಕ ವ್ಯಾಪ್ತಿಯನ್ನು ಪಡೆದಿರುತ್ತದೆ. ಕಂಪೆನಿಯಾಗಲೀ ವ್ಯಾಪಾರಿಯಾಗಲೀ ವ್ಯವಸಾಯಗಾರನಾಗಲೀ ಯಾರೊಬ್ಬನೂ ಯಾರನ್ನೂ ಅಸ್ಪೃಶ್ಯನೆಂದು ನಡೆಸಿಕೊಳ್ಳಲಾಗದು — ಇದಕ್ಕೆ ತಪ್ಪಿದರೆ ವ್ಯಾಪಾರೋದ್ಯಮಗಳ ಲೈಸೆನ್ಸನ್ನು ಕಳಕೊಳ್ಳಬೇಕಾಗುವುದು. ಸಾರ್ವಜನಿಕ ಮಂದಿರ ಹಾಗೂ ವ್ಯವಹಾರದ ಕ್ಷೇತ್ರಗಳಲ್ಲಿಯೂ ಅಸ್ಪೃಶ್ಯತೆಗೆ ಅವಕಾಶವಿಲ್ಲವೆಂದು ವಿಧೇಯಕ ಹೇಳುತ್ತದೆ

ಧಾನ್ಯಗಳ ವಿನಿಯಂತ್ರಣ

ದೇಶದಲ್ಲಿ ಆಹಾರ ಧಾನ್ಯಗಳ- ಮುಖ್ಯವಾಗಿ ಉರುಟು ಧಾನ್ಯಗಳ ಪರಿಸ್ಥಿತಿಯು ತುಂಬ ಸುಧಾರಿಸಿರುವುದರಿಂದ ಭಾರತ ಸರಕಾರವು ಜೋಳ, ಬಾರ್ಲಿ, ಮೆಕ್ಕೆ ಜೋಳ, ಕಡಲೆ ಮುಂತಾದವುಗಳ ಮೇಲೆ ಇದ್ದ ನಿಯಂತ್ರಣಗಳನ್ನು ಕಿತ್ತೊಗೆದಿದೆ. ಗೋಧಿಯ ಮೇಲಿನ ನಿಯಂತ್ರಣವು ಮೊದಲೇ ಸಡಲಿಸಲ್ಪಟ್ಟಿರುವುದರಿಂದ ಈಗ ಅಕ್ಕಿಯ ಮೇಲೆ ಮಾತ್ರ ನಿಯಂತ್ರಣವು ಉಳಿದಿದೆ. ಮೊದಲು ವಿನಿಯಂತ್ರಣದ ನಿರ್ಣಯ ಸಾರಿದಾಗ ಅಂತರ ರಾಜ್ಯ ಸಾಗಾಟದ ಮೇಲೆ ನಿರ್ಬಂಧವುಳಿಯುವುದೆಂದು ಹೇಳಲ್ಪಟ್ಟಿತ್ತು. ಆದರೆ ಈಗ ಸೌರಾಷ್ಟ್ರ, ಮಧ್ಯಭಾರತ ಮತ್ತು ಉತ್ತರ ಪ್ರದೇಶದ ೧೦ ಜಿಲ್ಲೆಗಳನ್ನು ಬಿಟ್ಟು ಉಳಿದೆಲ್ಲ ಕಡೆ ಉರುಟು ಧಾನ್ಯಗಳ ಸಾಗಾಟದ ಮೇಲಿನ ನಿರ್ಬಂಧವನ್ನು ರದ್ದು ಮಾಡಲಾಗಿದೆ. ಮೇಲೆ ಹೇಳಿದ ಪ್ರದೇಶಗಳಲ್ಲಿ ನಿರ್ಯಾತಕ್ಕೆ ಅವಕಾಶ ಕೊಡದಿದ್ದರೂ ಹೊರರಾಜ್ಯಗಳಿಂದ ಉರುಟು ಧಾನ್ಯಗಳನ್ನು ತರಿಸಿಕೊಳ್ಳಲು ಅವಕಾಶ ಕೊಡಲ್ಪಟ್ಟಿದೆ. ಉತ್ಪಾದನೆಯು ಸಾಮಾನ್ಯವಾಗಿ ತೃಪ್ತಿಕರವಾಗಿ ಹೆಚ್ಚಿರುವುದರಿಂದ ವಿನಿಯಂತ್ರಣ ಧೋರಣೆಯನ್ನು ಅನುಷ್ಠಾನಕ್ಕೆ ತರಲಾಯಿತು. ಸಮೃದ್ಧ ರಾಜ್ಯಗಳಲ್ಲಿ ಬೆಲೆಯಿಳಿಮುಖವಾದುದೂ ಕಂಡು ಬಂದಿದೆ. ಅಕ್ಕಿಯ ಉತ್ಪಾದನೆ ಹೆಚ್ಚು ಕೊಂಡಿದ್ದರೂ ಅದನ್ನು ತಿನ್ನುವವರ ಪ್ರಮಾಣವೂ ಅಧಿಕವಿರುವುದರಿಂದ ಕೂಡಲೇ ವಿನಿಯಂತ್ರಣ ಸಾರಲು ಕಷ್ಟವಾಗಿ ತೋರೀತು. ಆದರೂ ಉರುಟು ಧಾನ್ಯಗಳನ್ನು ತಿನ್ನುವ ಅಭ್ಯಾಸವುಳ್ಳವರು ಇನ್ನು ಮುಂದೆ ಯಾವ ನಿರ್ಬಂಧವಿಲ್ಲದೆಯೇ ಹಾಗೆ ಮಾಡಬಹುದಾದುದರಿಂದ — ಅವರು ಉಪಯೋಗಿಸುತ್ತಿದ್ದ ಅಕ್ಕಿಯನ್ನು ಮುಖ್ಯಾಹಾರವಾಗಿ ಅಕ್ಕಿಯನ್ನು ತಿನ್ನುವ ಜನರು ಬಳಸಬಹುದು. ಅಂತೂ ಜನ ಸಂಖ್ಯೆ ಹೆಚ್ಚಿ ಕೊಂಡಿದ್ದರೂ ರಾಷ್ಟ್ರ ಕಲ್ಯಾಣ ಯೋಜನೆಯು ಕಾರ್ಯಾನ್ವಿತಗೊಂಡ ಪರಿಣಾಮವಾಗಿ ಉತ್ಪಾದನೆ ಹೆಚ್ಚಿ, ಆಹಾರ ಧಾನ್ಯಗಳ ಸಮೃದ್ಧಿ ಕಂಡು ಬಂದಿರುವುದು ಸಂತೋಷ.

ಭಾರತದ ನವ ನಿರ್ಮಾಣ

ಪರಿಸ್ಥಿತಿಯು ದಿನೇ ದಿನೇ ಊರ್ಜಿತಗೊಳ್ಳುತ್ತಿದೆಯೆಂಬುದಕ್ಕೆ ಮೇಲಿನ ಕೆಲವು ಅಂಶಗಳು ನಿದರ್ಶನ ರೂಪದಲ್ಲಿರುತ್ತವೆ — ಜನರು ಇದನ್ನು ಚೆನ್ನಾಗಿ ಮನಗಂಡು ಮಾಡಿಕೊಂಡು ಸರಕಾರದ ಸತ್ಪ್ರಯತ್ನಗಳಲ್ಲಿ ಸಹಕರಿಸುವ ಸಂಕಲ್ಪಮಾಡಬೇಕು. ಜನರ ಸಹಕಾರವನ್ನು ಪಡೆಯುವ ಉದ್ದೇಶದಿಂದ ವಿಧಾಯಕ ಕಾರ್ಯಕರ್ತರೂ ಕಾಂಗ್ರೆಸ ಪ್ರಭೃತಿಗಳೂ ಜೊತೆಗೂಡಿ ಕೆಲಸಮಾಡಬೇಕು. ಕಾಂಗ್ರೆಸಾಧ್ಯಕ್ಷ ನೆಹರೂರವರು ಕಾಂಗ್ರೆಸ್ ಸೇವಾ ದಳದ ೩೦ನೇ ವಾರ್ಷಿಕೋತ್ಸವದ ಕಾಲಕ್ಕೆ ಇಂದಿನ ಬದಲಾದ ಪರಿಸ್ಥಿತಿಯಲ್ಲಿ ಕಾಂಗ್ರೆಸ ಸೇವಾದಳವು ಹೊರಬೇಕಾಗಿ ಬಂದಿರುವ ಹೊಸ ಹೊಸ ಹೊಣೆಗಾರಿಕೆಗಳನ್ನು ಪ್ರಸ್ತಾಪಿಸಿದರು ಸ್ವಾತಂತ್ರ್ಯ ಆಂದೋಲನ ಕಾಲದಲ್ಲಿ ಸೇವಾದಳವು ಮಹತ್ವದ ಪಾತ್ರವನ್ನು ನಿರ್ವಹಿಸಿತು. ಜನರಲ್ಲಿ ಭರದಿಂದ ಕಾಂಗ್ರೆಸ ಪರ ಪ್ರಚಾರ ಕಾರ್ಯವನ್ನು ಸೇವಾದಳ ಕೈಗೊಂಡದ್ದಲ್ಲದೆ, ಶಿಸ್ತು ಮತ್ತು ಶೀಲಗಳಿಗೂ ಪ್ರಸಿದ್ಧಿ ಪಡೆಯಿತು. ಈಗ ವಾತಾವರಣವು ಬೇರೆಯಾಗಿರುವುದರಿಂದ ಭಾರತದ ನವ ನಿರ್ಮಾಣ ಕಾರ್ಯದಲ್ಲಿ ಕಾಂಗ್ರೆಸ ಕಾರ್ಯಕರ್ತರೂ ಸೇವಾದಳದವರೂ ಪರಿಶ್ರಮ ಪೂರ್ವಕ ದುಡಿಯಬೇಕು — ಎಂದು ನೆಹರೂ ವಿನಂತಿಸಿದರು. ಅಹಿಂಸಾ ತತ್ವದಲ್ಲಿ ನಂಬಿಗೆಯಿರಿಸಿ ರಚನಾತ್ಮಕ ಕೆಲಸಗಳಲ್ಲಿ ಹಾಗೂ ರಾಷ್ಟ್ರ ಪುನಾರಚನೆಯ ಪ್ರಯತ್ನಗಳಲ್ಲಿ ಪ್ರವೃತ್ತರಾಗುವುದು ಇಂದಿನ ಆವಶ್ಯಕತೆಯಾಗಿರುತ್ತದೆಂದು ನೆಹರೂ ಸ್ಪಷ್ಟವಾಗಿ ಬಿಂಬಿಸಿದರು. ಸ್ವಾತಂತ್ರ್ಯ ಸಂಪಾದನೆಯಾದ ಬಳಿಕ ಕಾಲ ಕಾಲಕ್ಕೆ ಜರಗುವ ಚುನಾವಣೆಗಳಲ್ಲಿ ಭಾಗ ವಹಿಸುವುದು ಮತ್ತು ಸರಕಾರ ನಡೆಸುವುದು ಮಾತ್ರ ಕಾಂಗ್ರೆಸಿಗರ ಕರ್ತವ್ಯವೆಂದು ಹೇಳುವುದು ಸರ್ವಥಾ ಸರಿಯಲ್ಲ. ಅದು ಕಾಂಗ್ರೆಸ್ಸಿನ ಗುರಿಯಲ್ಲ — ದೇಶದ ಐಕ್ಯ, ಸಂಘಟನೆ, ಶಿಸ್ತು, ಕಷ್ಟ ಸಹಿಷ್ಣುತೆ ಪರಿಶ್ರಮ, ತ್ಯಾಗ ಮುಂತಾದ ಉದಾತ್ತ ಭಾವನೆಗಳನ್ನು ಬಲಗೊಳಿಸಬೇಕು ಸೇವಾ ದಳವು ಕಾಂಗ್ರೆಸದ ರಕ್ಷಾಕವಚವಾಗಬೇಕು. ಎಂದು ನೆಹರೂರವರು ಉಪದೇಶಿಸಿದರು ಇದು ಎಲ್ಲ ಪಕ್ಷದ ಎಲ್ಲ ವ್ಯಕ್ತಿಗಳಿಗೂ ಸಮಾನವಾಗಿ ಅನ್ವಯಿಸುವ ಮಹತ್ವದ ಮಾತು.



ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಷಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ನಾಶಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿನಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0

ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ

ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಆರ್ಥಿಕ ಏಳಿಗೆಯೇ ದೇಶದ ಬೆಂಗೋಲು

ಪರಸ್ಪರ ಸ್ನೇಹ, ವಿಶ್ವಾಸ, ಪ್ರಾಮಾಣಿಕತೆಗಳ ಅಡಿಗಟ್ಟು

ಭಾರತದ ಉಪರಾಷ್ಟ್ರಾಧ್ಯಕ್ಷರಾದ ಡಾ. ರಾಧಾಕೃಷ್ಣನ್ನರು ಆಂಧ್ರ ವಾಣಿಜ್ಯ ಸಂಘದ ರಜತ ಮಹೋತ್ಸವ ಸಮಾರಂಭದಲ್ಲಿ ಭಾಗವಹಿಸುತ್ತ ರಾಜಕೀಯ ಸ್ವಾತಂತ್ರ್ಯಕ್ಕಿಂತ ಆರ್ಥಿಕ ಸ್ವಾತಂತ್ರ್ಯಕ್ಕೆ ಇರುವ ಪ್ರಾಮುಖ್ಯತೆಯನ್ನು ಪ್ರಸ್ತಾಪಿಸಿದರು. ರಾಜಕೀಯ ಸ್ವಾತಂತ್ರ್ಯದ ಭದ್ರತೆಗೆ ಆರ್ಥಿಕ ಸ್ವಾವಲಂಬನೆಯು ಅತ್ಯಂತ ಆವಶ್ಯಕವಾಗಿರುತ್ತದೆಂದು ಅವರು ಒತ್ತಿ ಹೇಳಿದ್ದಲ್ಲದೆ, ಆರ್ಥಿಕ ಸಂಪತ್ತನ್ನು ಅತ್ಯಧಿಕ ಪ್ರಮಾಣದಲ್ಲಿ ಉತ್ಪಾದಿಸುವುದಕ್ಕೆ ನಾವೆಲ್ಲರೂ ಒಗ್ಗಟ್ಟಿನಿಂದ ಪರಿಶ್ರಮಪೂರ್ವಕ ದುಡಿಯಬೇಕಾಗಿದೆಯೆಂದು ಅಭಿಪ್ರಾಯಪಟ್ಟರು. ಉತ್ಪಾದನೆಯು ಅಧಿಕಗೊಳ್ಳಬೇಕಾದರೆ ಕೆಲಸಗಾರರಲ್ಲಿ ನಿಷ್ಠೆ ಮತ್ತು ಪ್ರಾಮಾಣಿಕತೆಗಳು ಬೆಳೆಯಬೇಕಾಗಿವೆಯೆಂದೂ ಆರ್ಥಿಕ ದಬ್ಬಾಳಿಕೆ ಇಲ್ಲದ ಸೌಹಾರ್ದಯುತವಾದ ಸಮಾಜವನ್ನು ರೂಪಿಸುವ ಮನೋಭಾವ ಮೂಡಿಬರಬೇಕಾಗಿದೆಯೆಂದೂ ಎಲ್ಲರಿಗೂ ಗೊತ್ತಿದೆ. ಕೆಲಸಗಳ್ಳತನವೂ ಸಂಪು ಮತ್ತಿತರ ಹಿಂಸಾತ್ಮಕ ಪ್ರವೃತ್ತಿಯೂ ಪ್ರಯೋಜನಕರವಲ್ಲ. ಪರಸ್ಪರ ಸ್ನೇಹ ಮತ್ತು ವಿಶ್ವಾಸದ ವಾತಾವರಣವನ್ನು ಉಂಟುಮಾಡಿಕೊಳ್ಳುವುದೇ ದೇಶದ ಆರ್ಥಿಕ ಸ್ವಾವಲಂಬನೆಯ ಪ್ರಥಮ ಸೂತ್ರವಾಗಿರುತ್ತದೆ

ಶ್ರಮಜೀವಿಗಳ ಮಹತ್ವ

ಶ್ರಮಜೀವಿಗಳು ದೇಶದ ಜೀವಾಳವಾಗಿರುವರೆಂಬ ಅಂಶವನ್ನು ಘನಶಾಸನ ಚೆನ್ನಾಗಿ ತಿಳಿದಿರುವರೆಂಬುದಕ್ಕೆ ಹಲವು ನಿದರ್ಶನಗಳನ್ನು ಕೊಡಬಹುದು-ಜಲಗಾಂವದಲ್ಲಿ ಸೇರಿದ್ದ ಪರಿಷತ್ತಿನ ಕಾರ್ಯಕಲಾಪದಲ್ಲಿರುವ ಇದು ಚೆನ್ನಾಗಿ ವ್ಯಕ್ತಗೊಂಡಿದೆ. ಇದೇ ಸಮಯ ಮುಂಬಯಿಗೆ ನಾಲ್ಕು ಮೈಲು ದೂರದಲ್ಲಿರುವ ಚೆಂಬೂರಿನಲ್ಲಿ ಹೊಸತೊಂದು ಔದ್ಯೋಗಿಕ ವಸಾಹತಿನ ಶಂಕು ಸ್ಥಾಪನೆ ಮಾಡುವಾಗ ಪ್ರಧಾನ ಮಂತ್ರಿ ನೆಹರೂರವರು ಕನಿಷ್ಠ ಎರಡು ಕೋಣೆಗಳುಳ್ಳ ಮನೆಗಳನ್ನಾದರೂ ಕಟ್ಟಿಸಬೇಕಾದ ಆವಶ್ಯಕತೆಗೆ ಜೋರು ಕೊಟ್ಟರು. "ಎರಡು ಕೋಣೆಗಳಾದರೂ ಇಲ್ಲದ ಮನೆಗಳನ್ನು ಕಟ್ಟಿಸಲೇ ಬಾರದು. ಒಂದೇ ಕೋಣೆಯುಳ್ಳ ಗೃಹದಲ್ಲಿ ವಾಸಿಸುವುದರಿಂದ ಶ್ರಮಜೀವಿಗಳ ಕಾರ್ಯಕ್ಷಮತೆಗೆ ಧಕ್ಕೆ ತಗಲುತ್ತದೆ. ಕೋಣೆಯೊಂದರಲ್ಲೇ ತೃಪ್ತಿ ಪಡುವ ಕಾಲ ಈಗ ಉಳಿದಿಲ್ಲ" ಎಂದವರು ಹೇಳಿದರು. ಚೆಂಬೂರಿನ ಈ ವಸಾಹತಿನಲ್ಲಿ ಮೂರೂ ಕಾಲು ಕೋಟಿ ರೂಪಾಯಿಗಳ ವೆಚ್ಚದಿಂದ ಸುಮಾರು ೭೦೦೦ ಮನೆಗಳನ್ನು ಕಟ್ಟಿಸಲಾಗುವುದು. ಬರ್ಮಾ ಶೆಲ್ ಮತ್ತು ಸ್ಟೆಂಡರ್ಡ್ ವೆಕ್ಯೂಮ್ ತೈಲ ಶುದ್ಧೀಕರಣ ಕೇಂದ್ರಗಳಿಗೆ ಇದು ಸಮೀಪ ಇರುವುದು.

ಕಾರ್ಮಿಕನ ಹಿರಿಮೆ

ನೆಹರೂರವರು ಬಂಗಳೂರಿಗೆ ಮೊನ್ನೆ ಆಗಮಿಸಿದಾಗ ಹಿಂದುಸ್ಥಾನ ಏರ್ ಕ್ರಾಫ್ಟ್ ದ ಕಾರ್ಖಾನೆಯನ್ನು ಸಂದರ್ಶಿಸಿ, ಕೆಲಸಗಾರರಲ್ಲಿ ಆತ್ಮ ವಿಶ್ವಾಸವನ್ನು ರಾಷ್ಟ್ರಸೇವೆಯ ಮನೋವೃತ್ತಿಯನ್ನೂ ಪ್ರೋತ್ಸಹಿಸಬೇಕೆಂದೂ ಒತ್ತಾಡಿದರು. ವಿಶ್ವದ ವೈಮಾನಿಕ ನಕ್ಷೆಯಲ್ಲಿ ಭಾರತಕ್ಕೆ ಪ್ರಾಮುಖ್ಯವಾದ ಸ್ಥಾನವನ್ನು ಒದಗಿಸಿಕೊಡುವಲ್ಲಿ ತಾವು ಎಷ್ಟರ ಮಟ್ಟಿಗೆ ನೆರವಾಗುತ್ತೇವೆಂಬ ಅಭಿಮಾನವು ಕೆಲಸಗಾರರಲ್ಲಿ ಮೂಡಿದರೆ, ಅವರಲ್ಲಿ ಉತ್ಸಾಹವೂ ರಾಷ್ಟ್ರ ಕಾರ್ಯಕ್ಕೋಸ್ಕರ ಶ್ರಮಿಸುವ ಬುದ್ಧಿಯೂ ಸದಾ ಜಾಗೃತಗೊಳ್ಳುವುದು. ಇಂದು ಜನನಾಯಕನೆನಿಸುವ ರಾಜಕಾರಣಿಗಿಂತಲೂ ಬೆವರಿಳಿಸಿ ದುಡಿಯುವ ಕಾರ್ಮಿಕನೇ ರಾಷ್ಟ್ರಕ್ಕೆ ಉತ್ತಮವಾದ ಸೇವೆ ನೀಡಬಲ್ಲನು

ಮುಂಬರುವ ಚುನಾವಣೆಗಳು

ರಾಜಕಾರಣದ ಮಹತ್ವ ಇದರಿಂದ ತಗ್ಗಿತೆಂದಲ್ಲ—ಕಲ್ಯಾಣ ರಾಷ್ಟ್ರಕ್ಕೋಸ್ಕರ ಕೆಲಸ ಮಾಡುವ ಸರಕಾರ ಅಸ್ತಿತ್ವದಲ್ಲಿದ್ದು, ಜನತಾ ಸಹಕಾರ ಅದಕ್ಕೆ ದೊರೆಯುವಂತೆ ರಾಜಕಾರಣಿಗಳು ನೋಡಿಕೊಂಡರೆ ದೇಶದಲ್ಲಿ ಸಮೃದ್ಧಿ ಸುಭಿಕ್ಷೆಗಳು ನೆಲೆಗೊಳ್ಳುವುದು ಕಷ್ಟವಾಗಲಾರದು. [illegible] ಹೀಗೆ ಪ್ರಯತ್ನ ನಡೆಯುತ್ತದೆಯೋ ತಿಳಿಯದು. [illegible] ಸಭೆಗೆ ಮರಳಿ ಚುನಾವಣೆ ನಡೆಯಲಿವೆ. ಅಲ್ಲಿ ಕಾಂಗ್ರೆಸಿನ [illegible] ಕಮ್ಯೂನಿಸ್ಟರೊಂದಿಗೆ ಸ್ಪರ್ಧೆ ನಡೆಸಿವೆ. ಈ ಸ್ನೇಹದಲ್ಲಿ ಯಾವ ಪಾವಿತ್ರ್ಯವೂ ಇಲ್ಲ. ತನಗೆ ಬಲವಾದ ವಿರೋಧ ಒಂದೀತೆಂಬ ಅಂಜಿಕೆಯನ್ನು ಲೆಕ್ಕಿಸದೆ, ಕಾಂಗ್ರೆಸು ಚುನಾವಣೆಯ ಎಲ್ಲ ಸ್ಥಾನಗಳಿಗೂ ಹೋರಾಡಲು ನಿರ್ಧರಿಸಿ ಸದಸ್ಯರ ಯಾದಿಯನ್ನು ಸಿದ್ಧಗೊಳಿಸಿದೆ. ಮೆಸ್ಸೂರಿನಲ್ಲಿ ಕಾಂಗ್ರೆಸಿನ ಪರವಾಗಿ ಸ್ಪರ್ಧಿಸಲಿರುವ ಹುರಿಯಾಳುಗಳ ಪಟ್ಟಿಯು ತಯಾರಿಸಲ್ಪಟ್ಟಿದೆ. ದೇಶದ ಇಂದಿನ ಪರಿಸ್ಥಿತಿಯಲ್ಲಿ ಕಾಂಗ್ರೆಸ ಪಕ್ಷಕ್ಕೆಯೇ ದಕ್ಷವಾದ ಸರಕಾರವನ್ನು ರಚಿಸಿಕೊಂಡು ರಾಷ್ಟ್ರವನ್ನು ಅಭ್ಯುದಯ ಮಾರ್ಗದಲ್ಲಿ ಮುನ್ನಡೆಸಲು ಸಾಧ್ಯವುಂಟೆಂದು ನೆಹರೂ ಪ್ರತಿಯೊಂದೆಡೆಯಲ್ಲೂ ದೃಢವಾದ ನಂಬಿಕೆ ವ್ಯಕ್ತಗೊಳಿಸಿದರು. ಆದರೆ ಪಕ್ಷ ಪಂಗಡಗಳ ಪ್ರಚಾರ ವೈಖರಿಗೆಯೇ ಪ್ರಾಶಸ್ತ್ಯ ದೊರೆತಿರುವ ಈ ಕಾಲದಲ್ಲಿ ನಿಜವಾಗಿಯೂ ಯೋಗ್ಯತೆಯುಳ್ಳ ಪಕ್ಷವನ್ನು ಗುರುತಿಸುವುದು ಜನ ಸಾಮಾನ್ಯರಿಗೆ ಕಠಿಣವೆನಿಸಿದೆ.

ವಿಧಾಯಕ ಕಾರ್ಯ

ಪ್ರಚಾರ ವೈಖರಿಗಿಂತ ಭಿನ್ನವಾದ ರಚನಾತ್ಮಕ ಕೆಲಸಗಳು ಕೈಗೂಡದ ಪಕ್ಷದಲ್ಲಿ-ಆಗ ಜನತೆಗೆ ಪಕ್ಷದ ಸಾಮರ್ಥ್ಯವನ್ನೂ ಯೋಗ್ಯತೆಯನ್ನೂ ತಿಳಿಯಕೊಳ್ಳಲು ಸಾಧ್ಯವಾಗುತ್ತದೆ. ಹೈದರಾಬಾದಿನಲ್ಲಿ ಕಸ್ತೂರಬಾ ನಿಧಿಯ ಕಾರ್ಯಕರ್ತರು ಏರ್ಪಡಿಸಿದ ಸಭೆಯಲ್ಲಿ ನೆಹರೂ ಈ ಮಾತನ್ನೆ ಹೇಳಿದರು-ಒಳ್ಳೆಯ ಕಾರ್ಯಕರ್ತರು ವಿಧಾಯಕ ರಂಗವನ್ನು ಪ್ರವೇಶಿಸಿದರೆ ಆಗ ಜನತಾ ಸಹಕಾರವು ಸುಲಭ [illegible] ದೊರೆಯುವುದೆಂದೂ ದೇಶದ ಸಮಸ್ತ ಶಕ್ತಿಯನ್ನು ಇಟ್ಟುಕೊಂಡು [illegible]. ಸಾರ್ವಜನಿಕ ಸಂಸ್ಥೆ [illegible] ಸಹಕಾರದಿಂದ ನಡೆಯಬೇಕೆಂದೂ ಅವರು ಒತ್ತಾಡಿದರು. ಭಾರತ ಸೇವಕ ಸಮಾಜದಂಥ ಸಂಘಟನೆಯು ಜನಮತವನ್ನು ವಿಧಾಯಕ ಕೆಲಸಗಳ ಕಡೆಗೆ ಸೆಳೆಯುವುದರಲ್ಲಿ ಮಹತ್ವದ ಪಾತ್ರವಹಿಸುವ ಸಂಗತಿಯನ್ನು ಅವರು ಪ್ರಸ್ತಾಪಿಸಿದರು.

ಪಾನನಿರೋಧ ಧೋರಣೆ

ಕೆಲವೊಮ್ಮೆ ರಾಜಕಾರಣವು ವಿಧಾಯಕ ಕಾರ್ಯಗಳ ಮಾರ್ಗದಲ್ಲಿ ಆತಂಕವನ್ನೊಡ್ಡುತ್ತದೆ. ಇದಕ್ಕೆ ಆಂಧ್ರದ ಉದಾಹರಣೆಯೇ ಸಾಕು. ಆಂಧ್ರ ವಿಧಾನ ಸಭೆಯಲ್ಲಿ ಮುಂಗಡ ಪತ್ರವನ್ನು ಮಂಡಿಸುತ್ತ ಅರ್ಥಸಚಿವ ಶ್ರೀ ವಿಶ್ವನಾಥ ಶಾಸ್ತ್ರಿಯವರು ಕೊರತೆಯನ್ನು ತುಂಬಿಕೊಳ್ಳುವ ಉದ್ದೇಶದಿಂದ ಪಾನಪ್ರತಿಬಂಧ ಧೋರಣೆಯನ್ನು ಪುನರ್ವಿಮರ್ಶಿಸುವ ನಿರ್ಧಾರವನ್ನು ಪ್ರಕಟಪಡಿಸಿದರು. ಶ್ರೀ ಎಸ್. ವಿ. ರಾಮಮೂರ್ತಿ (ಅಧ್ಯಕ್ಷ), ಪ್ರೊ. ಸಿ. ಸತ್ಯನಾರಾಯಣ ರಾವ್ ಮತ್ತು ಶ್ರೀ ಎಸ್. ರಂಗನಾಥನ್ನರು ಈ ಪರಿಶೀಲನಾ ಸಮಿತಿಯಲ್ಲಿರುವರು. ಇವರು ಮುಂದಿನ ತಿಂಗಳ ೧೫ನೇ ದಿನಾಂಕದೊಳಗೆ ವರದಿಯನ್ನು ಒಪ್ಪಿಸಬೇಕು. ಪಾನನಿರೋಧ ರದ್ದುಗೊಂಡರೆ ಆಂಧ್ರಕ್ಕೆ ಸುಮಾರು ಐದೂವರೆ ಕೋಟಿ ರೂಪಾಯಿಗಳು ಅಬಕಾರಿ ಸುಂಕದ ರೂಪದಲ್ಲಿಹೆಚ್ಚಾಗಿ ದೊರೆಯುತ್ತವೆ ಈ ಹಣದ ಮೋಹವೇ ಧೋರಣೆಯ ಪುನರ್ವಿಮರ್ಶೆಯ ಕುರಿತು ಆತುರ ವ್ಯಕ್ತಪಡಿಸಲು ಕಾರಣ. ಆದರೆ ಮದ್ರಾಸು ರಾಜ್ಯವು ಇಂಥ ಅನುಚಿತ ಕ್ರಮವನ್ನು ಕೈಗೊಳ್ಳುವುದಿಲ್ಲೆಂದು ಮುಖ್ಯ ಮಂತ್ರಿ ರಾಜಾಜೀಯವರ ಹೇಳಿಕೆಯಿಂದ ವ್ಯಕ್ತವಾಗುತ್ತಿದೆ. ಪಾನನಿರೋಧ ಧೋರಣೆಯನ್ನು ಯಶಸ್ವಿಗೊಳಿಸಲು ಎಲ್ಲ ವಿಧದಿಂದಲೂ ಪ್ರಯತ್ನಿಸಲಾಗುವುದೆಂದು ಪುನಃ ಹೇಳಿದ್ದಲ್ಲದೆ ಜನರಲ್ಲಿ ಪಾನನಿರೋಧದ ಬಗ್ಗೆ ಆಸ್ಥೆ ಹುಟ್ಟಿಸುವ ಕೆಲಸವೂ ನಡೆದರೆ ಒಳಿತೆಂದರು

ಅವಾಸ್ತವ ಮಹತ್ವ

ಆಂಧ್ರದ ಸಾಂಪತ್ತಿಕ ಸ್ಥಿತಿಯು ಸಾಮಾನ್ಯವಾಗಿ ಆಶಾದಾಯಕವಾಗಿಯೇ ಇದೆ. ಸುಮಾರು ೫೧ ಲಕ್ಷ ರೂಪಾಯಿಗಳ ಕೊರತೆಯನ್ನು ಈ ಪ್ರಾಣ್ಯಾಸಿಕ ಮುಂಗಡ ಪತ್ರ ತೋರಿಸುತ್ತದೆ. ಸರಕಾರದ ಕಡೆಯಿಂದ ರೈತರಿಗೆ ಕೆಲವು ಭರವಸೆಗಳೂ ದೊರೆತಿವೆ. ಉಳಿದೆಯ ಮದ್ರಾಸು ರಾಜ್ಯದಷ್ಟು ಕೈಗಾರಿಕಾ ಕ್ಷೇತ್ರದಲ್ಲಿ ಮುಂದರಿಯದಿರುವ ಆಂಧ್ರಕ್ಕೆ ರೈತರೇ ನಿಜವಾದ ಸಂಪತ್ತು. ಮದ್ರಾಸದ ಬೊಕ್ಕಸಕ್ಕೆ ಮಾರಾಟ ತೆರಿಗೆಯಿಂದಲೇ ಹೆಚ್ಚಿನ ಹಣ ಸೇರುತ್ತದೆ—ಈ ಸೌಲಭ್ಯವಿಲ್ಲದ ಆಂಧ್ರಕ್ಕೆ ಭೂಕಂದಾಯವೇ ಪ್ರಧಾನವಾದ ಆದಾಯವಾಗಿರುತ್ತದೆ. ಈ ಆದಾಯವನ್ನು ಮಾರಾಟತೆರಿಗೆಯಂತೆ ಅಧಿಕಗೊಳಿಸಲು ಸಾಧ್ಯವಿಲ್ಲೆಂಬ ಕಾರಣದಿಂದಲೇ ಎಲ್ಲ ಅರ್ಥಶಾಸ್ತ್ರಜ್ಞರೂ ರಾಜಕಾರಣಿಗಳೂ ಪಾನಪ್ರತಿಬಂಧದಂಥ ಪವಿತ್ರ ಉದ್ಯಮದತ್ತ ಉದಾಸೀನತೆಯಿಂದ ನೋಡ ತೊಡಗಿ, ಅದನ್ನು ಕಿತ್ತೊಗೆದು ಹಣ ಸಂಗ್ರಹಿಸಲು ಮನ ಮಾಡಿರುವರು. ಆಂಧ್ರ ರಾಜ್ಯ ನಿರ್ಮಾಣದ ವಿಷಯದಲ್ಲಿ ವರದಿ ತಯಾರಿಸಿದ ನ್ಯಾಯ ಮೂರ್ತಿ ವಾಂಛೂರವರು ಇದಕ್ಕೆ ಅವಾಸ್ತವವಾದ ಮಹತ್ವ ಕೊಟ್ಟರು

ರಾಜಕೀಯ ಮತ ಭೇದ

ಈ ಮುಂಗಡ ಪತ್ರದ ಚರ್ಚೆಯ ಕಾಲಕ್ಕೆ ಆಂಧ್ರ ರಾಜಧಾನಿಯ ಪ್ರಶ್ನೆಯನ್ನು ಮರಳಿ ಎತ್ತುವ ಪ್ರಯತ್ನ ನಡೆಯಿತು. ಮುಖ್ಯವಾಗಿ ಕೃಷಿಕರ ಲೋಕ ಪಕ್ಷವು ಗಂಟೂರು—ವಿಜಯವಾಡಗಳೂ ರಾಜಧಾನಿಯಾಗಬಾರದೆಂಬ ತಮ್ಮ ಧೋರಣೆಗೆ ಅಂಟಿಕೊಂಡು ಕಾಂಗ್ರೆಸ್ಸಿನ ಪರ್ವಸ್ತ್ರಿ ಅಧಿಕವಾಗಿರುವ ಸರಕಾರ ತನ್ನ ಧೋರಣೆಯನ್ನು ಬದಲಾಯಿಸುವಂತೆ ಒತ್ತಾಯ ನೀಡಿತು. ಆದರೆ ಇದಕ್ಕೆ ಯಾವ

[೧ನೇ ಪುಟ ನೋಡಿರಿ]

PLACE YOUR LIFE ASSURANCE WITH A COMPANY OF YOUR OWN - - -

Established in 1929, the POPULAR is progressing on sound lines It has built up for itself a record of efficient service sound investment and a personal touch with its Policy holders and Representatives At whatever stage We welcome yours association with the POPULAR.

THE

POPULAR INSURANCE CO. LTD.

"POPULAR BUILDINGS" MANGALORE-1

[illegible] ಪರಿಸರದಲ್ಲಿ ಅತ್ಯಾಧುನಿಕ ಮಾದರಿಯ ಮೇಲ್ತರಗತಿಯ

—ವಸತಿ ಮತ್ತು ಭೋಜನಗೃಹ—

ಸ್ಪೆಸಿಫಿಕ್ ಲಾಜ್

ಫಳನೀರು ರಸ್ತೆ, ಮಂಗಳೂರು.

[illegible] ಸಿಂಗಲ್ ಮತ್ತು ಡಬ್ಬಲ್ ಕೋಣೆಗಳು!

[illegible] ಅನುಕೂಲತೆಗಳು!

[illegible] ಭೋಜನ ಮತ್ತು [illegible] ವ್ಯವಸ್ಥಾಪನ [illegible]

ನ ವ ಯು ಗ

ಉಡುಪಿ, ಗುರುವಾರ ೭-೧-'೫೪

ಅಣು ಸಂಶೋಧನೆ

ಹೊಸ ವರ್ಷದ ಶುಭದಿನದಂದು ಪ್ರಧಾನ ಮಂತ್ರಿ ಶ್ರೀ ಜವಾಹರಲಾಲ ನೆಹರೂರವರು ಮುಂಬಯಿಯಲ್ಲಿ ಟಾಟಾ ಮೂಲ ಸಂಶೋಧನ ಸಂಸ್ಥೆ ಹಾಗೂ ಭಾರತದ ಅಣುಶಕ್ತಿ ಆಯೋಗದ ಕಟ್ಟಡದ ಶಂಕು ಸ್ಥಾಪನಾ ಕಾರ್ಯವನ್ನು ನೆರವೇರಿಸುತ್ತಾ ಹೇಳಿದ ಮಾತುಗಳು ವಿಶ್ವದ ಇಂದಿನ ಪರಿಸ್ಥಿತಿಯಲ್ಲಿ ಹೆಚ್ಚಿನ ಮಹತ್ವದಿಂದ ಕೂಡಿವೆ. ಭಾರತವು ಒಂದಿಲ್ಲೊಂದು ದಿನ, ಇನ್ನು ಹತ್ತು ಹದಿನೈದು ವರ್ಷಗಳ ಬಳಿಕವಾದರೂ, ಅಣು ಶಕ್ತಿಯನ್ನು ತನ್ನ ದೇಶದ ಹಾಗೂ ಮಾನವ ಜನಾಂಗದ ಕಲ್ಯಾಣಕ್ಕೂ ಶ್ರೇಯಸ್ಸಿಗೂ ಉಪಯೋಗಿಸಲು ಸಮರ್ಥವಾಗುವುದೆಂಬ ಆಸೆಯನ್ನು ನೆಹರೂ ವ್ಯಕ್ತಗೊಳಿಸಿದರು. ಜಗತ್ತಿನ ಚರಿತ್ರೆಯಲ್ಲಿ ಅನೇಕ ಕ್ರಾಂತಿಗಳು ಜರಗುದುದನ್ನು ಕೇಳಿದ್ದೇವೆ ಕಂಡಿದ್ದೇವೆ. ಇವುಗಳಲ್ಲಿ ಕಳೆದ ಮೂರು ಶತಮಾನಗಳಿಂದ ಜಗತ್ತಿನ ಪರಿಸ್ಥಿತಿಯನ್ನೇ ಬದಲಾಯಿಸಿ ಬಿಟ್ಟಿರುವ ಔದ್ಯಮಿಕ ಕ್ರಾಂತಿ ಸ್ಥಿರವಾದದ್ದೆಂದು ಇತಿಹಾಸಕಾರರ ಅಭಿಪ್ರಾಯ. ಆದರೆ ಇಂದು ಇದಕ್ಕಿಂತಲೂ ಪ್ರಬಲವಾದ ಪರಿವರ್ತನೆಯೊಂದು ಅಣುಶಕ್ತಿಯ ಸಂಶೋಧನೆಯಿಂದ ಸಾಧ್ಯವೆನಿಸಿದೆ-ಈ ಅಣು ಕ್ರಾಂತಿ ಉಳಿದೆಲ್ಲ ಕ್ರಾಂತಿ ಹಾಗೂ ಸಂಶೋಧನೆಗಳಿಗಿಂತದೊಡ್ಡದೂ ಮಹತ್ವಪೂರ್ಣವೂ ಪರಿಣಾಮಕಾರಕವೂ ಆಗಿರುತ್ತದೆ. ಔದ್ಯಮಿಕ ಕ್ರಾಂತಿಯ ಫಲವಾಗಿ ನಾವು ಇದ್ದಲು, ಕಲ್ಲೆಣ್ಣೆ, ಪೆಟ್ರೋಲು ಮುಂತಾದ ಇಂಧನಗಳನ್ನು ಧಾರಾಳವಾಗಿ ಬಳಸುವಂತಾಗಿರುತ್ತದೆ -ಇನ್ನು ಮುಂದಿನ ಕೆಲವು ದಶಕಗಳಲ್ಲಿ ಈ ಇಂಧನಗಳಉಪಯೋಗವು ಬಹಳವಾಗಿ ಹೆಚ್ಚಿಕೊಳ್ಳುವುದು ನಿಶ್ಚಯ. ಹೀಗೆ ಬಳಕೆ ಅಧಿಕಗೊಂಡ ಪಕ್ಷದಲ್ಲಿ ಇನ್ನು ಎಂಭತ್ತೇ ವರ್ಷಗಳಲ್ಲಿ ಈ ಶಕ್ತಿ ಸ್ರೋತಗಳ ಭಂಡಾರ ಬರಿದಾಗುತ್ತವೆಯೆಂದು ತರ್ಕಿಸಿದ್ದಾರೆ. ಅಂಥದರಲ್ಲಿ ಅಣುಶಕ್ತಿಯ ಸಂಶೋಧನವಾಗಿರುವುದೂ ಅದರ ಶಾಂತಿ ಕಾಲದ ಉಪಯೋಗದ ಕುರಿತು ಹೆಚ್ಚು ಪ್ರಾಮುಖ್ಯತೆಯು ಕೊಡಲ್ಪಟ್ಟಿರುವುದೂ ಮಾನವ ಜನಾಂಗಕ್ಕೆ ಹೊಸ ಭರವಸೆ ಕೊಡುವಂತಿವೆ. ಅಣು ಶಕ್ತಿಯು ಶಾಂತಿ ಕಾಲದ ಉಪಯೋಗಕ್ಕೋಸ್ಕರ ಬಳಸಲ್ಪಟ್ಟರೆ, ಇನ್ನು ಸಾವಿರಾರು ವರ್ಷಗಳವರೆಗೆ ಇತರ ಶಕ್ತಿ ಸ್ರೋತಗಳ ಬಗ್ಗೆ ಚಿಂತಿಸುವ ಅಗತ್ಯವುಳಿಯುವುದಿಲ್ಲ. ಅಣುಶಕ್ತಿಯ ಉತ್ಪಾದನೆಗೆ ಅಗತ್ಯವೆನಿಸಿದ ಖನಿಜ ದ್ರವ್ಯಗಳು ಭಾರತದಲ್ಲೂ ಇತರ ಅನೇಕ ದೇಶಗಳಲ್ಲೂ ಹೇರಳವಾಗಿರುತ್ತವೆ. ಆದರೆ ಅಮೇರಿಕಾ, ರಶಿಯಾ ಮುಂತಾದ ಮಹಾ ರಾಷ್ಟ್ರಗಳು ಅಣು-ಶಕ್ತಿಯನ್ನು ವಿಧ್ವಂಸಕ ಕಾರ್ಯಗಳಿಗೋಸ್ಕರ ಉಪಯೋಗಿಸುವುದಕ್ಕೆಯೇ ಅವಾಸ್ತವ ಹಾಗೂ ಅನುಚಿತವಾದ ಮಹತ್ವವನ್ನು ಕೊಟ್ಟಿರುವುದರಿಂದ, ಅಪಾರವಾದ ಅಣು ಚೈತನ್ಯವು ಮಾನವತೆಯ ಶತ್ರುವಾಗಿಯೇ ಪ್ರಕೃತ ತೋರುತ್ತದೆ. ಎಲ್ಲ ವೈಜ್ಞಾನಿಕ ಆವಿಷ್ಕಾರಗಳೂ ಇಬ್ಬಗೆಯ ಪರಿಣಾಮವನ್ನು ಮಾಡುವಂತೆ ಅಣುಸಂಶೋಧನವೂ ಮಾಡಿರುತ್ತದೇನೋ, ನಿಜ. ಹಾಗೆಂದು ವೈಜ್ಞಾನಿಕ ಸಂಶೋಧನವು ಜಗತ್ತಿನ ವಿನಾಶಕ್ಕಾಗಿ ಇದೆಯೋ ಅಥವಾ ಮಾನವ ಜನಾಂಗದ ಉದ್ಧಾರಕ್ಕಾಗಿಯೋ ಎಂಬ ಪ್ರಶ್ನೆಯನ್ನು ಎಲ್ಲ ವಿಜ್ಞಾನಿಗಳೂ ಇಂದು ಸಮರ್ಪಕವಾಗಿ ಉತ್ತರಿಸುವ ಅಗತ್ಯವಿದೆ. ವಿಜ್ಞಾನಿಗಳು ಸ್ವಾರ್ಥಿ ರಾಜಕಾರಣಿಗಳಕೈಗೊಂಬೆಯಾಗಿ ಮಾನವ ಜನಾಂಗದ ನಾಶ ಮಾಡುವ ಸಂಶೋಧನೆಗಳಲ್ಲಿ ಪ್ರವೃತ್ತರಾಗುವುದರಿಂದ ಗಂಡಾಂತರ ಕಾದಿಟ್ಟದ್ದೆಂದು ಅಣುಬಾಂಬು, ಜಲಜನಕ ಬಾಂಬು ಮುಂತಾದ ಭೀಕರ ಅಸ್ತ್ರಗಳ ನೆನಪು ದೃಢವಾಗಿ ಹೇಳುತ್ತದೆ. ಬ್ರಿಟಿಷ ಪ್ರಧಾನಿ ಸರ್ ವಿನ್‌ಸ್ಟನ್ ಚರ್ಚಿಲ್ಲರು ಹೇಳಿದಂತೆ,ನಾವಿಂದು ಅಂತಿಮ ವಿನಾಶವನ್ನಾಗಲೀ ಪರಮ ಕಲ್ಯಾಣವನ್ನಾಗಲೀ ಆರಿಸಿಕೊಳ್ಳಬೇಕಾಗಿರುತ್ತದೆ. ಇದರಲ್ಲಿ ಮೊದಲಿದನ್ನು ಯಾವದೇ ನಾಗರಿಕ ಅಥವಾ ಕಲ್ಯಾಣ ರಾಷ್ಟ್ರ ಬಯಸಲಾರದು - ಭಾರತವೂ ಇದಕ್ಕೆ ಅಪವಾದವಾಗಿಲ್ಲ. ಭಾರತೀಯ ವಿಜ್ಞಾನಿಗಳು ಅಣು ಶಕ್ತಿಯನ್ನು ಉತ್ಪಾದಕ ಕಾರ್ಯಗಳಲ್ಲಿ ಬಳಸುವ ವಿಧಾನವನ್ನು ರಿಸರ್ಚಿಸುವುದಕ್ಕೆಯೇ ಪ್ರಾಶಸ್ತ್ಯ ಕೊಡುವರೆಂಬ ನೆಹರೂ ಹೇಳಿಕೆಯು ಸಮಂಜಸ ಮಾತ್ರವಲ್ಲದೆ, ರಶಿಯಾ-ಅಮೇರಿಕೆಗಳಂಥ ರಾಷ್ಟ್ರಗಳಿಗೆ ಅನುಕರಣೀಯವೂ ಆಗಿದೆ. ಸುದೈವದಿಂದ ಪ್ರಬಲ ಅಣು ಶಸ್ತ್ರಾಸ್ತ್ರಗಳಿರುವ ಅಮೇರಿಕೆಯು ಅಣುಶಕ್ತಿಯನ್ನು ಶಾಂತಿಕಾಲದ ಉಪಯೋಗಕ್ಕೆ ಬಳಸುವ ಕ್ರಮಗಳ ಸಂಶೋಧನೆಯತ್ತ ಈಚೆಗೆ ಗಮನ ಹರಿಸಿರುತ್ತದೆ. ಅಧ್ಯಕ್ಷ ಐಸೆನ ಹೋವರರು ಸಂಯುಕ್ತ ರಾಷ್ಟ್ರ ಸಂಘದ ಸಭೆಯಲ್ಲಿ ಮುಂದಿಟ್ಟ ಸೂಚನೆಗೆ ರಶಿಯಾವನ್ನೊಳಗೊಂಡು ಎಲ್ಲ ರಾಷ್ಟ್ರಗಳ ಬೆಂಬಲ ದೊರೆತಿದೆ. ಅಲ್ಲದೆ ಅಮೇರಿಕದಲ್ಲಿರಾಜ್ಯಖಾತೆಯ ಒಪ್ಪಿಗೆಯನ್ನು ಪಡೆದು, ಮಿಚಿಗನ್ ವಿಶ್ವವಿದ್ಯಾಲಯವು ಭಾರತ, ಬ್ರಿಟನ, ಬೆಲ್ಜಿಯಂ, ಕೆನಡಾ, ಫ್ರಾನ್ಸು, ನೋರ್ವೆ,ಸ್ವೀಡನ್, ನೆದರ್ಲೆಂಡ, ಮುಂತಾದಲ್ಲಿನ ಅಣುತಜ್ಞರ ಪರಿಷತ್ತೊಂದನ್ನು ಪರಸ್ಪರ ವಿಚಾರ ವಿನಿಮಯಕ್ಕೋಸ್ಕರ ಕರೆದಿದೆ. ಭಾರತದಲ್ಲಿ ಅಣುಶಕ್ತಿಯ ಉತ್ಪಾದನೆಗೆ ಬೇಕಾಗಿರುವ ಮೂಲಧಾತುಗಳು ಹೇರಳವಾಗಿರುವುದರಿಂದ ಮತ್ತು ಈಗಾಗಲೇ ಪಾಶ್ಚಾತ್ಯ ರಾಷ್ಟ್ರಗಳ ವಿಜ್ಞಾನಿಗಳಿಂದಲೂ ಪ್ರಶಂಸೆಗಳಿಸಿದ ಕೆಲವು ಅಮೂಲ್ಯ ಶೋಧಗಳು ಇಲ್ಲಿ ಆಗಿರುವುದರಿಂದ ಭಾರತಕ್ಕೆ ಈ ಗೌರವ ದೊರೆತಿದೆ. ಕೆಲಸಮಯದಿಂದ ಮುಚ್ಚಲಾಗಿದ್ದ ತಿರುಕೊಚ್ಚಿಯ ಟೈಟೇನಿಯಂ ಕಾರ್ಖಾನೆ ಮರಳಿ ಕಾರ್ಯಾರಂಭ ಮಾಡಿರುವುದೂ ಮುಂಬಯಿಯಲ್ಲಿ ಥೊರಿಯಂ-- ಯುರೇನಿಯಂ ಕಾರ್ಖಾನೆಯೊಂದು ಎರಡು ಮೂರು ವರ್ಷಗಳಲ್ಲಿ ಅಸ್ತಿತ್ವಕ್ಕೆ ಬರಲಿರುವುದೂ ಶುಭ ಲಕ್ಷಣ. ಡಾ. ಎಚ್. ಜೆ. ಭಾಭಾರಂಥ ಘನವಾದ ಅಣು ತಜ್ಞರ ನೇತೃತ್ವದಲ್ಲಿ ಭಾರತದ ಸಂಶೋಧನೆಗಳು ಪ್ರಗತಿ ಹೊಂದುತ್ತಲಿವೆ. ಮಾನವ ಹಿತಕ್ಕೋಸ್ಕರ ಮಾಡಲಾದ ಸಂಶೋಧನೆಗಳ ವಿಷಯದಲ್ಲಿ ಯಾವುದೇ ರಹಸ್ಯ ವಿಡುವುದು ಅನಗತ್ಯ—ಹಾಗೆಂದು ಅಣು ವಿಷಯದಲ್ಲಿ ಪ್ರಬಲ ರಾಷ್ಟ್ರಗಳು ತಮ್ಮ ಪ್ರಗತಿಯನ್ನು ರಹಸ್ಯವಾಗಿ ಇಟ್ಟಿರುತ್ತವೆ. ಅವುಗಳು ಗುಟ್ಟಾಗಿ ಸಂಗ್ರಹಿಸಿದ ಜ್ಞಾನದಲ್ಲಿ ನಮಗೆ ಪಾಲು ಸಿಗಬೇಕಿದ್ದರೆ ನಾವೂ ಕೆಲವು ಸಂಗತಿಗಳನ್ನು ಪ್ರಕಟ ಪಡಿಸದಿರುವುದು ಅನಿವಾರ್ಯ. ಹೀಗಿದ್ದರೂ ಮುಂಬಯಿಯ ಈ ಸಂಶೋಧನಾ ಸಂಸ್ಥೆಯ ಲಾಭವನ್ನು ಅಖಿಲ ಭಾರತದ ವೈಜ್ಞಾನಿಕರೂ ವ್ಯಾಸಂಗ ನಿರತ ವಿದ್ಯಾರ್ಥಿಗಳೂ ಧಾರಾಳವಾಗಿ ಮಾಡಿಕೊಳ್ಳಬಹುದು. ಪರಿಣಾಮದಲ್ಲಿ ಔದ್ಯಮಿಕ ಹಾಗೂ ವೈದ್ಯಕೀಯ ಕ್ಷೇತ್ರದಲ್ಲಿ ಅಣು ಶಕ್ತಿಯಿಂದ ಅದ್ಭುತ ಪ್ರಯೋಜನ ದೊರೆತರೆ, ಮತ್ತು ಸಾಕಷ್ಟು ಶಕ್ತಿ ಸ್ರೋತವಿಲ್ಲದೆ ಬಡವಾಗಿರುವ, ಬೆಂಗಾಡಾಗಿರುವ ರಾಷ್ಟ್ರಗಳೂ ಪ್ರದೇಶಗಳೂ ಸಂಪತ್ಸಮೃದ್ಧವಾದರೆ— ಇಡೀ ಮಾನವ ಜನಾಂಗ ವಿಜ್ಞಾನಕ್ಕೆ ಚಿರಋಣಿಯಾಗಿ ಉಳಿಯುವುದು. ಇತರ ದೇಶಗಳು ಏನೇ ಮಾಡಲಿ—ಭಾರತವು ಈ ಉದ್ದೇಶ ಸಾಧನೆಗಾಗಿಯೇ ಶ್ರಮಿಸುವುದೆಂದು ಪ್ರಧಾನ ಮಂತ್ರಿಗಳು ಹೇಳಿರುವುದನ್ನು ನಾವು ಹೃತ್ಪೂರ್ವಕ ಸ್ವಾಗತಿಸುತ್ತೇವೆ; ಮತ್ತು ನಮ್ಮ ವಿಜ್ಞಾನಿಗಳ ಪ್ರಾಮಾಣಿಕಪ್ರಯತ್ನಗಳು ಅದ್ಭುತ ಯಶಸ್ಸನ್ನು ತರಬೊಡು ಹಾರೈಸುತ್ತೇವೆ.

ಏಶ್ಯಾದಲ್ಲಿ ಯುದ್ಧ ಪ್ರಚೋದನೆ

ಪಾಕಿಸ್ತಾನ ಸೈನಿಕ ಒಪ್ಪಂದದಿಂದ ವಿಪತ್ತು ನಿಶ್ಚಯ

ಭಾರತದ ಪಾರ್ಲಿಮೆಂಟು ವಿದೇಶ ಧೋರಣೆಯನ್ನು ಪ್ರಧಾನ ಮಂತ್ರಿಗಳಿಂದ ವಿವರವಾಗಿ ಕೇಳಿಕೊಂಡು ಅದನ್ನು ಬೆಂಬಲಿಸುವ ನಿರ್ಣಯವನ್ನು ಕೈಗೊಂಡಿತೆ. ವಿಶ್ವಸಮಸ್ಯೆಗಳು ಅತ್ಯಂತ ಸೂಕ್ಷ್ಮ ಘಟ್ಟಕ್ಕೆ ಇಂದು ಬಂದು ಮುಟ್ಟಿವೆ --ಕೊರಿಯಾದಲ್ಲಿ ಅಸ್ತಿತ್ವಕ್ಕೆ ಬಂದ ಯುದ್ಧ ವಿರಾಮ ಒಪ್ಪಂದದ ಭವಿಷ್ಯತೀರ ಅನಿಶ್ಚಿತವಾಗಿರುತ್ತದೆ; ಇತ್ತ ಪಾಕಿಸ್ತಾನವು ಅಮೇರಿಕೆಯೊಡನೆ ಸೈನಿಕ ಒಪ್ಪಂದವನ್ನು ಮಾಡಿಕೊಳ್ಳುವುದೆಂಬ ದಟ್ಟವಾದ ವಾರ್ತೆ ಬಂದಿರುತ್ತದೆ. ಇವೆರಡೂ ಭಾರತದ ವಿದೇಶಾಂಗ ವ್ಯವಹಾರದ ಮೇಲೆ ಸ್ಪಷ್ಟವಾಗಿ ಪರಿಣಾಮ ಬೀರುವ ಸಂಗತಿಗಳಾಗಿರುವುದರಿಂದ ಮತ್ತು ಹೆಚ್ಚಿನ ಹೊಣೆಗಾರಿಕೆಯನ್ನು ನವ್ಯ ಸರಕಾರದ ಮೇಲೆ ಹೇರುವುದರಿಂದ ಪಾರ್ಲಿಮೆಂಟಿನ ಉಭಯ ಸಭೆಗಳೂ ನೆಹರೂರ ನಿಲುವೆಯನ್ನು ಕೇಳಿ ಕೊಳ್ಳಲು ಬಯಸಿದುದು ಸಹಜ ಮತ್ತು ಸಮಂಜಸ. ಕೊರಿಯಾದ ಸಂಗತಿಯಲ್ಲಿ ಭಾರತ ತನ್ನ ಮೇಲೆ ಬದ್ಧವಿರುವ ಹೊಣೆಗಾರಿಕೆಯನ್ನು ಹಾರಿಸಿಕೊಳ್ಳಲಾಗದೆಂದು ಪ್ರಧಾನ ಮಂತ್ರಿಗಳು ಹೇಳಿದುದಕ್ಕೆ ಪಾರ್ಲಿಮೆಂಟು ಬೆಂಬಲ ಸೂಚಿಸಿತು. ಪಾಕಿಸ್ತಾನವು ಸೈನಿಕ ಒಪ್ಪಂದ ಮಾಡಿಕೊಳ್ಳುವ ಸಂಗತಿಯಲ್ಲಿಯೂ ಸರಕಾರದ ನಿಲುವೆಗೆ ಪ್ರಚಂಡ ಬೆಂಬಲವು ದೊರೆಯಿತು.

ವಿರೋಧಿ ಪಕ್ಷದ ಬೆಂಬಲ

ಪಾಕ-ಅಮೇರಿಕ ಸೈನಿಕ ಒಪ್ಪಂದದಿಂದ ಅನರ್ಥ ಪರಂಪರೆಗಳು ಉಂಟಾಗುವುವೆಂಬ ನೆಹರೂರ ಮಾತನ್ನು ಎಲ್ಲ ವಿರೋಧಿ ಗುಂಪಿನ ಧುರೀಣರೂ ಸಮರ್ಥಿಸಿದರು. ಭಾರತದ ಜನಮತವನ್ನು ಚೆನ್ನಾಗಿ ಸಂಘಟಿಸಿ, ಪಾಕ—ಅಮೇರಿಕ ಒಪ್ಪಂದದ ಪರಿಣಾಮಕಾರೀ ಚಿತ್ರವನ್ನು ಇಡುವುದಕ್ಕೆ ಎಲ್ಲ ಪಕ್ಷಗಳೂ ಇಚ್ಛೆ ವ್ಯಕ್ತಗೊಳಿಸಿದವು. ಪ್ರಜಾ ಸಮಾಜವಾದೀ ಪಕ್ಷದ ರಾಷ್ಟ್ರೀಯ ಸಮ್ಮೇಳನವು ಮೊನ್ನೆ ತಾನೆ ಸೇರಿದಾಗ, ಸರಕಾರದ ವಿದೇಶಾಂಗ ಧೋರಣೆಯನ್ನು ಬೆಂಬಲಿಸುವ ನಿರ್ಣಯ ಕೈಗೊಳ್ಳಲ್ಪಟ್ಟಿದೆ. ದಕ್ಷಿಣ ಮತ್ತು ಆಗ್ನೇಯ ಏಶಿಯಾದ ರಾಷ್ಟ್ರಗಳು ಯಾವುದೇ ಪ್ರಬಲ ಪಕ್ಷಗಳ ಗುಂಪನ್ನು ಸೇರಿಕೊಳ್ಳದೆ, ತಟಸ್ಥ ಧೋರಣೆಯನ್ನು ವಹಿಸಬೇಕೆಂಬ ಅಪೇಕ್ಷೆ ಇಟ್ಟುಕೊಂಡ ನೆಹರೂರವರಿಗೆ ಪಾಕಿಸ್ತಾನವು ಅಮೇರಿಕೆಯ ಮಿಲಿಟರಿ ಸಹಾಯದ ವ್ಯಾಮೋಹಕ್ಕೂ ವರ್ಚಸ್ಸಿಗೂ ತುತ್ತಾಗಿರುವುದು ನಿರಾಶೆಯನ್ನುಂಟುಮಾಡಿದೆ. ಜನತೆ ಸಂಘಟನಗೊಂಡು ಒಗ್ಗಟ್ಟನ್ನು ಕಾಪಾಡಿಕೊಂಡು ಸರಕಾರದೊಡನೆ ಸಂಪೂರ್ಣ ಸಹಕರಿಸುವುದು ಇಂದಿನ ಅತ್ಯಮೂಲ್ಯ ಕರ್ತವ್ಯವಾಗಿರುತ್ತದೆ

ಅಮೇರಿಕದ ಹೊಂಚು

ಹಾಗೆ ನೋಡಿದರೆ, ಏಶಿಯಾದ ಈ ಪ್ರದೇಶದಲ್ಲಿರುವ ರಾಷ್ಟ್ರಗಳನ್ನು ಮಣಿಸಲೆಂದೇ ಅಮೇರಿಕ ತನ್ನ ಗತ್ತುಗಾರಿಕೆಯನ್ನು ಪ್ರದರ್ಶಿಸಿದೆಯೆಂದೂ ಹೇಳಬಹುದು. ಸುಯೇಜ ಕಾಲುವೆಯಿಂದ ಸಿಂಗಾಪುರದ ವರೆಗೆ ವ್ಯಾಪಿಸಿದ ವಿಶಾಲವಾದ ಭೂಭಾಗದ ನಡುವೆ ಎಲ್ಲಿಯೂ ತನ್ನ ವರ್ಚಸ್ಸನ್ನು ನೆಲೆಗೊಳಿಸಲು ಸಾಧ್ಯವಾಗದುದಕ್ಕೆ ಅಮೇರಿಕ ಬೇಸರಗೊಂಡ ಗಳಿಗೆಯಲ್ಲಿ-ಯುದ್ಧ ವಿಚಾರದಲ್ಲಿ ತಜ್ಞ ಸೇನಾಪತಿಗಳಾದ ಐಸೆನ ಹೋವರರ ಹ

Notice of meeting of Creditors to be held under Section 209A.

SARVODAYA LIMITED.

(In Voluntary Liquidation)

Notice is hereby given as required by Section 209A of the Indian Companies Act. 1913 that a meeting of the Creditors of the Company above mentioned will be held on the 31st day of January 1954 at 6 P. M. at Dr. Nagappa Alva's Clinic, Hampankatta, Mangalore.

(Sd.) K. NAGAPPA ALVA.
Director.

Mangalore, 25-12-1953.

ದ್ದು ಗಣ್ಣು ನಡುಮಧ್ಯದಲ್ಲಿರುವ ಪಾಕಿಸ್ತಾನದ ಮೇಲೆ ಬಿದ್ದು, ತನ್ನ ಕಡೆಗೆ ಸೆಳೆದುಕೊಂಡಿತು. ಇದರಿಂದ ಮುಸ್ಲಿಂ ರಾಷ್ಟ್ರಗಳಲ್ಲಿರುವ ಒಗ್ಗಟ್ಟು ಮುರಿಯುವುದಲ್ಲದೆ, ಭಾರತವನ್ನು ಲೆಕ್ಕಿಸದೆ. ಹಿಂದೂ ಮಹಾಸಾಗರದ ಮೇಲೆ ಪ್ರಭುತ್ವವನ್ನು ಸ್ಥಾಪಿಸಲೂ ಸಹಾಯವಾಗುವುದು.

ಐಕರಿಗೆ ಕಿವಿಮಾತು

ಇದರಿಂದ ಏಶಿಯಾದಲ್ಲಿ ಹಬ್ಬುತ್ತಿರುವ ಕಮ್ಯೂನಿಸಮ್ಮನ್ನು ನಿಯಂತ್ರಿಸಲು ಸಾಧ್ಯವೆಂದು ಅಮೇರಿಕಾದ ಅಭಿಪ್ರಾಯ. ಆದರೆ ಇದು ಸರಿಯಾದ ನೀತಿಯಲ್ಲವೆಂದು ಅಮೇರಿಕದಲ್ಲಿಯೇ ಕೆಲವು ವಿವೇಕಿಗಳು ಹೇಳುತಿದ್ದರೆ ಪಾಕಿಸ್ತಾನಕ್ಕೆ ಸೈನಿಕ ಸಹಾಯವನ್ನೂ ಶಸ್ತ್ರಾಸ್ತ್ರಗಳ ಪೂರೈಕೆಯನ್ನೂ ಮಾಡುವ ಬದಲು ಭಾರತ-ಪಾಕಿಸ್ತಾನಗಳೆರಡಕ್ಕೂ ಆರ್ಥಿಕ ಸಹಾಯವನ್ನು ಕೊಡುವುದು ಹೆಚ್ಚು ಯೋಗ್ಯವಾದ ಧೋರಣೆಯೆಂದು ಅಧ್ಯಕ್ಷ ಐಸೆನ ಹೋವರಿಗೆ ತಿಳಿಸಿ ಹೇಳುವ ಪ್ರಯತ್ನವನ್ನು ಅಮೇರಿಕನ್ನರಲ್ಲಿಯೇ ಕೆಲವರು ಮಾಡಿರುವರು. ಸೆನೇಟರ ಇಮ್ಯಾನುಯೆಲ್ ಸೆಲರರು ತಮ್ಮದೊಂದು ಲೇಖನದಲ್ಲಿ ರಶಿಯಾದ ಆಕ್ರಮಣವನ್ನು ತಡೆಯುವುದಕ್ಕೆ ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರಗಳನ್ನು ಪೂರೈಸುವುದರಿಂದ ಸಾಧ್ಯವಿಲ್ಲವೆಂದು ವಿವರಿಸಿರುವರು.

ಗಿಲ್ಗಿಟದಲ್ಲಿ ರಾಣ್ಯ

ಇವನ್ನೆಲ್ಲ ಕಿವಿಗೆ ಹಾಕಿಕೊಳ್ಳದೆ ಐಕರ ಸರಕಾರ ಮುಂದೊತ್ತುತ್ತಿದೆಯೆಂದೇ ಭಾಸವಾಗುತ್ತದೆ- ಲಂಡನಿನಿಂದ ಹೊರಟ ಸುದ್ದಿಯೊಂದರಂತೆ ಪಾಕಿಸ್ತಾನದ ವಶದಲ್ಲಿರುವ, ರಶಿಯಾದ ಸೀಮೆಗೆ ನಿಕಟವಿರುವ, ಗಿಲ್ಗಿಟದಲ್ಲಿ ಬಲವಾದ ಸೈನಿಕ ರಾಣ್ಯವನ್ನು ಕಟ್ಟಲು ಗುಪ್ತಾಗಿಯೇ ಸಿದ್ಧತೆಗಳು ನಡೆದಿವೆ. ಇದು ನಿಜವಾದರೆ ಕಾಶ್ಮೀರ ಪ್ರಶ್ನೆಯು ಇತ್ಯರ್ಥವು ಇನ್ನಷ್ಟು ಕಠಿಣ ತರವೆನಿಸುವುದಲ್ಲದೆ, "ಬೆಣ್ಣೆಯೊಳಗೆ ಭರ್ಚಿ ನುಗ್ಗಿದಷ್ಟು ಸುಲಭವಾಗಿ" ರಶಿಯಾ ಪಾಕಿಸ್ತಾನದ ಮೇಲೆ ಧಾಳಿಯನ್ನು ಪ್ರಾರಂಭಿಸಲು ಆಹ್ವಾನ ಕೊಟ್ಟಂತಾಗುವುದು. ಈ ನಡುವೆ ಐಸೆನಹೋವರರು ಕೊರಿಯಾದಲ್ಲಿನ ಅಮೇರಿಕದ ಸೈನ್ಯದಲ್ಲಿ ಕೆಲವಂಶವನ್ನು ಹಿಂದೆಗೆದು ಕೊಂಡಿದ್ದು, ಹೀಗೆ ಮುಕ್ತವಾದ ಯುದ್ಧೋಪಕರಣಗಳು ಪಾಕಿಸ್ತಾನಾಭಿಮುಖವಾಗಿ ರವಾನಿಸಲ್ಪಡುವುವೆಂದು ವದಂತಿ ಇದು ನಿಜವಿದ್ದರೆ ನೂರಾರು ವಿಮಾನಗಳೂ, ನೂರಾರು ಇಪ್ಪತ್ತು ವಿನಾಶಿಕೆಗಳೂ, ಕೆಲವು ದೊಡ್ಡ ಯುದ್ಧ ಹಡಗಗಳೂ ಪಾಕಿಸ್ತಾನಕ್ಕೆ ಇಷ್ಟರಲ್ಲೆ ದೊರೆಯುತ್ತವೆ.

ಆಕ್ರಮಣ ಬುದ್ಧಿಯಿಲ್ಲ

ಸೈನ್ಯ ಬಲವನ್ನು ಪಾಕಿಸ್ತಾನ ಹೆಚ್ಚಿಸುವುದರಿಂದ ಏಶಿಯಾದ ರಾಷ್ಟ್ರಗಳಲ್ಲಿ ಸಮತೋಲ ತಪ್ಪುವೆಂಬ ನೆಹರೂ ಟೀಕೆಗೆ ಉತ್ತರವಾಗಿ ಪಾಕ ಪ್ರಧಾನ ಮಂತ್ರಿ ಮಹಮ್ಮದಾಲಿಯವರು ಭರ್ತ್ಸನೆಯ ಮಾತನ್ನಾಡಿರುವರು ಬೇಕಾದರೆ ಇತರ ರಾಷ್ಟ್ರಗಳೂ ಸೈನ್ಯಬಲ ಹೆಚ್ಚಿಸಿಕೊಳ್ಳಲಿ ಎಂಬಂತೆ ಅವರು ಮಾತನಾಡಿರುವ ಭಾರತದ ಮೇಲೆ ಆಕ್ರಮಣ ಮಾಡುವ ಇಚ್ಛೆ ಪಾಕಿಸ್ತಾನಕ್ಕೆ ಎಷ್ಟು ಮಾತ್ರಕ್ಕೂ ಇಲ್ಲವೆಂದು ಅವರು ಪುನಃ ಪುನಃ ಹೇಳಿರುವರು ನೆಹರೂರವರು ಮಾತ್ರ ತಮ್ಮ ಎಲ್ಲ ಭಾಷಣಗಳಲ್ಲಿಯೂ ಈ ಒಪ್ಪಂದದ ಮಾತುಕತೆಗಳನ್ನು ಬಲವಾಗಿ ಖಂಡಿಸಿರುವರಲ್ಲದೆ ವಿಶ್ವದಲ್ಲಿ ಯುದ್ಧಪ್ರಚೋದನೆಯನ್ನುಂಟುಮಾಡುವ ಕ್ರಮವೆಂದೂ ಹೇಳಿರುವರು. ಭಾರತದಲ್ಲಿ ಇದರ ವಿರುದ್ಧ ರೂಪುಗೊಳ್ಳುತ್ತಿರುವ ಜನಾಭಿಪ್ರಾಯವನ್ನು ನಿರ್ಬಂಧಿಸುವುದು ಸಾಧ್ಯವಿಲ್ಲೆಂದೂ ಅವರು ಪಾಕಿಸ್ತಾನಕ್ಕೆ ತಿಳಿಸಿರುವರು

ಗಡಿನಾಡ ಗಾಂಧಿಯ ಬಿಡುಗಡೆ

ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಘನವಾಗಿ ಹೋರಾಡಿದ ಖಾನ ಅಬ್ದುಲ್ಲ ಗಫಾರಖಾನರನ್ನು ಭಾರತ ವಿಭಜನಾನಂತರ ಪಾಕಿಸ್ತಾನವು ೧೯೪೮ರಲ್ಲಿ ಬಂಧಿಸಿ ವಿಚಾರಣೆ ಇಲ್ಲದೆ ಬಂಧನದಲ್ಲಿಟ್ಟಿತ್ತು. ಈಗ ಅವರನ್ನೂ ಅವರ ಅನುಯಾಯಿಗಳನ್ನೂ ಪಾಕಿಸ್ತಾನ ಸರಕಾರ ಬಿಡುಗಡೆ ಮಾಡಿದೆ. ಗಡಿನಾಡಿನ ಜನತೆಯ ಹೃದಯ ಸಿಂಹಾಸನದಲ್ಲಿ ರಾರಾಜಿಸುತಿದ್ದ ಈ ಪುಣ್ಯ ಜೀವಿ. ಸದ್ಯಕ್ಕೆ ಪಶ್ಚಿಮ ಪಂಜಾಬದಲ್ಲಿ ನೆಲೆಸುವರೆಂದು ತಿಳಿದಿದೆ

ಮುಂಬಯಿ

ಮೊಗವೀರ ವ್ಯವಸ್ಥಾಪಕ ಮಂಡಳಿ, ಮುಂಬಯಿ, ಇದರ ಸುವರ್ಣ ಮಹೋತ್ಸವ ಸಮಾರಂಭವೂ, ಶಾಲಾ ಪಾರಿತೋಷ ವಿತರಣ ಕಾರ್ಯಕ್ರಮವೂ ಇದೇ ತಾ 11ರಿಂದ 13ರ ತನಕ ಪ್ರತಿ ದಿನ ಸಂಜೆ ಸರ್ ಕವಾಸ್ಜಿ ಜಹಾಂಗೀರ್ ಸಾರ್ವಜನಿಕ ಸಭಾ ಸದನದಲ್ಲಿ ಜರಗುವುದು ಭಾರತದ ಉಪ ರಾಷ್ಟ್ರಾಧ್ಯಕ್ಷ ಡಾ! ಎಸ್. ರಾಧಾಕೃಷ್ಣನ್, ಅವರು ಸಮಾರಂಭದ ಉದ್ಘಾಟನೆ [illegible] ಮೂರು ದಿವಸಗಳ ಕಾರ್ಯಕ್ರಮಗಳ ಅಧ್ಯಕ್ಷತೆಯನ್ನು ಶ್ರೀಗಳಾದ ಎಸ್. ಪಿ. ಜಗ್ಲಾ, ಎಸ್. ಪಿ. ಪಾಟೀಲ ಮತ್ತು ಎಸ್. ಕೆ. ಪಾಟೀಲರು ಅನುಕ್ರಮವಾಗಿ ವಹಿಸಲಿರುವರು.

ವಿಜಯವಾಡ:— ಕನ್ನಡ ಸೇವಾ ಸಂಘ, ವಿಜಯವಾಡ, ಇವರ ತಿಂಗಳ ಸಮಾರಂಭ ಕೂಟವು ಕಳೆದ ತಾ 27ರಲ್ಲಿ ಯಶಸ್ವಿಯಾಗಿ ಜರಗಿತು. ಕುಮಾರಿ ಲಕ್ಷ್ಮಿಯವರ ವೀಣಾ ವಾದನ ಮತ್ತು ಹಾಡುಗಾರಿಕೆ, ಶ್ರೀ ಮತ್ತು ಶ್ರೀಮತಿ ಬೆಳಗೇರಿಯವರ ಕೊಳಲು ಗಾಯನ ಮೊದಲಾದ ಕಾರ್ಯಕ್ರಮಗಳಿದ್ದವು

ತೆಲುಗು ಭಾಷೆ ಪ್ರಾಬಲ್ಯ ವಿರುವ ಈ ಸ್ಥಳದಲ್ಲಿ ಕನ್ನಡಿಗರು ತಿಂಗಳಿಗೊಮ್ಮೆ ಸೇರಿ ಕನ್ನಡ ನಾಡ ನುಡಿಯ ಸೇವೆಯನ್ನು ಈ ಸಂಘದ ಮುಖೇನ ಮಾಡುತ್ತಿರುವರು. ಕನ್ನಡ ಭಾಷಾಭಿರುಚಿಯನ್ನುಂಟು ಮಾಡಲು ಪುಟ್ಟ ಪುಸ್ತಕ ಭಂಡಾರ ವೊಂದು ತೆರೆಯಲಾಗಿದೆ. ಈ ಪುಸ್ತಕ ಭಂಡಾರಕ್ಕೆ ಕನ್ನಡ ಪುಸ್ತಕ ಗಳನ್ನು ದಾನವಾಗಿ ಕಳುಹಿಸುವವರು [illegible] ಕನ್ನಡ ಸೇವಾ ಸಂಘ 18 259 ಗಾಂಧೀ ನಗರ, ವಿಜಯವಾಡ-2 ವಿಳಾಸಕ್ಕೆ ಕಳುಹಿಸ ಬಹುದು.

ಉಡುಪಿ

ಮುನಿಸಿಪಲ್ ಕೌನ್ಸಿಲು ಸಭೆಯು ಕಳೆದ ತಾ 26ರಲ್ಲಿ ಸಂಜೆ ಚೆರ್‌ಮನ್ ಶ್ರೀ ಯು. ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಸೆಂಟ್ರಲ್ ವಾರ್ಡ ಟೌನ್ ಪ್ಲಾನಿಂಗ್ ಯೋಜನೆಗಾಗಿ ನಗರ ಸಭೆಯು ಸರಕಾರದಿಂದ ರೂ 16,000 ಸಾಲ ಅಪೇಕ್ಷಿಸಿದುದಕ್ಕೆ ಅದು ಸಾಧ್ಯವಿಲ್ಲವೆಂದು ತಿಳಿಸಿದ ಸರಕಾರಿ ಯಾದಾಸ್ತನ್ನು ರಿಕಾರ್ಡ ಮಾಡಲಾಯಿತು. ಶ್ರೀ ಎಸ್. ಸೀತಾರಾಮ ಕಾಮತರ ಸೂಚನೆಯಂತೆ ನಗರದ ಎಲ್ಲಾ ರಸ್ತೆಗಳಿಗೆ ಡಾಮರು ಹಾಕುವಕೆ ಮಹಾ ಜನರಿಂದ ಒಂದು ಲಕ್ಷ ರೂಪಾಯಿ ಸಾಲವೆತ್ತಲು ಸರಕಾರದ ಅಪ್ಪಣೆ ಪಡೆಯ ಬೇಕೆಂದಾಯಿತು.

ಸತ್ಕಾರ ಕೂಟ— ಕಳೆದ ತಾ 27ರಲ್ಲು ಸಹಕಾರಿ ಸಂಘಗಳ ಮಾಜಿ ಡೆಪ್ಯುಟಿ ರಿಜಿಸ್ಟ್ರಾರರೂ ಈಗ ಮುಂಜೇಶ್ವರ ವಿಭಾಗದ ಬ್ಲೋಕ್ ಡೆವಲಪ್‌ಮೆಂಟ್ ಆಫೀಸರರೂ ಆಗಿರುವ ಶ್ರೀ ಕೆ. ಕೇಶವ ಶೆಣೈಯರನ್ನು ಸತ್ಕರಿಸಲು ಉಡುಪಿಯ ನಾಲ್ಕು ಸಹಕಾರಿ ಸಂಸ್ಥೆಗಳು ಉಪಹಾರ ಕೂಟವನ್ನೇರ್ಪಡಿಸಿದ್ದವು. ಶ್ರೀ ಎ. ಲಕ್ಷ್ಮಿನಾರಾಯಣ ರಾಯರು, ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಎಸ್ ವಾಮನ ಬಲ್ಲಾಳರು ಧನ್ಯವಾದಗಳನ್ನರ್ಪಿಸಿದರು.

ಹೊಸವರುಷದ ಗೌರವ ಕೂಟ - ಸ್ಥಳೀಯ ಜನರಲ್ ಇನ್ವೆಸ್ಟ್‌ಮೆಂಟ್ ಎಂಡ್ ಕಮರ್ಶಿಯಲ್ ಕೋರ್ಪೊರೇಶನ್ ಲಿಮಿಟೆಡ್ ಈ ಸಂಸ್ಥೆಯವರು ವರ್ಷಂಪ್ರತಿಯೂ ಓರ್ವ ಗಣನೀಯ ಹಿರಿಯ ವ್ಯಕ್ತಿಯನ್ನು ಹೊಸವರುಷಾರಂಭ ದಿನದಲ್ಲಿ ಗೌರವಿಸುವ ಪದ್ಧತಿಯಂತೆ ಈ ಬಾರಿ ತಾ. 1ರಲ್ಲಿ ಸಂಜೆ ಮುಕುಂದ ನಿವಾಸದಲ್ಲಿ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಪ್ರಿನ್ಸಿಪಾಲ್ ಕೆಪ್ಟನ್ ಮಂಗೇಶ ರಾಯರನ್ನು ಗೌರವಿಸುವ ಸಮಾರಂಭವನ್ನು ಶ್ರೀ ಅರೂರು ಲಕ್ಷ್ಮಿನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಏರ್ಪಡಿಸಿದರು ಸಂಸ್ಥೆಯ ಮೇನೇಜಿಂಗ್ ಡೈರೆಕ್ಟರ್ ಶ್ರೀ ಟಿ ರಮೇಶ ಪೈಗಳು ಮುಖ್ಯ ಅತಿಥಿಯನ್ನೂ ಇತರರನ್ನೂ ಸ್ವಾಗತಿಸಿದರು. ಶ್ರೀಗಳಾದ ಟಿ. ಎ. ಪೈ, ಎಮ್. ಎಲ್. ಎ, ಪ್ರಿನ್ಸಿಪಾಲ್ ಎಚ್. ಸುಂದರ ರಾವ್, ಡಾ ಪಿ. ಆರ್. ನಾಯಕ್, ಬಿ. ರಾಮಚಂದ್ರ ಚೆಟ್, ಡಾ ಎಸ್ ಆರ್. ಪೈ, ಡಾ! ಆನಂದನ್, ಡಾ ಕೋವಿದದಾಸ ಪೈ, ಡಾ ಟಿ. ಮಾಧವ ಪೈ ಮೊದಲಾದವರು ಸಮಯೋಚಿತ ಮಾತುಗಳನ್ನಾಡಿದರು ಶ್ರೀಗಳಾದ ಕೊಚ್ಚಿಕಾರ ಪದ್ಮನಾಭ ಪೈ, ಪಿ. ನಾರಾಯಣ ಪ್ರಭು ಮತ್ತು ಸ್ಥಳೀಯ ರೋಮನ್ ಕಥೋಲಿಕ್ ಇಗರ್ಜೆಯ ಗುರುಗಳು ಮುಖ್ಯ ಅತಿಥಿಗೆ ಪುಷ್ಪ ಮಾಲಿಕೆಗಳನ್ನಿತ್ತರು. ಅಧ್ಯಕ್ಷ ಭಾಷಣ, ಮುಖ್ಯ ಅತಿಥಿಯ ವಂದನೆಗಳಾಗಿ ವಂದನಾರ್ಪಣೆಯೊಂದಿಗೆ ಸಮಾರಂಭ ಕೊನೆಗೊಂಡಿತು

ಭಿಕ್ಷುಕರ ಸಮಸ್ಯೆ— ಯಶಸ್ವಿಯಾಗಿ [illegible] ತಾರೀಕು 1ರಂದು "ಭಿಕ್ಷುಕರ [illegible] ನಗರ [illegible] ಶ್ರೀ ಕೊಚ್ಚಿಕಾರ ಪದ್ಮನಾಭ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಡಾ ಮಾಧವ ಪೈಗಳು ಭಿಕ್ಷುಕರ ಸಮಸ್ಯೆಯನ್ನು ವಿವರಿಸಿ [illegible] ಭಿಕ್ಷುಕರ ಸ್ಥಿತಿಯನ್ನು ತಡೆಯುವ ಸೂಚನೆ ಮುಂದಿಟ್ಟು, ತನ್ನೊಳಗೆ ಶಾರೀರಿಕ ಪ್ರಯತ್ನಕ್ಕೆ ಯೋಗ್ಯರಾದವರಿಗೆ [illegible] ಸ್ವತಂತ್ರ ಜೀವನೋಪಾಯವನ್ನು ಕಲ್ಪಿಸಿ ಕೊಡಬೇಕೆಂಬುದನ್ನು ವಿವರಿಸಿದರು. ಅನಂತರ ನಡೆದ ಸುದೀರ್ಘ ಚರ್ಚೆಯಲ್ಲಿ ಅನೇಕರು ಭಾಗವಹಿಸಿದ್ದರು. ಡಾ! ಪೈಗಳ ಯೋಜನೆಯನ್ನು ಕಾರ್ಯಗತ ಮಾಡಲು ಡಾ! ಮಾಧವ ಪೈಗಳು, ಶ್ರೀ ಪಿ. ಶ್ರೀಪತಿ ಆಚಾರ್ಯರು, ಶ್ರೀ ಎ. ಜೆ ಅಲ್ಸೆ ವಯ ರು ಮತ್ತು ಶ್ರೀ ಕೆ. ನರಹರಿ ಕಾಮತರನ್ನೊಳಗೊಂಡ ಸಮಿತಿಯನ್ನು ಏರ್ಪಡಿಸಲಾಯಿತು.

ಅನಂತರ ರಾತ್ರಿ ಮಠದಾವರದಲ್ಲಿ ಶ್ರೀ ಶ್ರೀಪತಿ ಆಚಾರ್ಯರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ಯೋಜನೆಗೆ ಬೆಂಬಲ ದೊರೆತು. ಸಮಿತಿಗೆ ಶ್ರೀ ಬಿ. ಆರ್. ಹೆಗ್ಡೆ, ಶ್ರೀ ಬಿ. ಕೃಷ್ಣಯ್ಯ ಮತ್ತು ಶ್ರೀ ಪಿ ಯು. ನಾಯಕರನ್ನು ಆರಿಸಲಾಯಿತು.

ಯೂತ್ ಕಾಂಗ್ರೇಸಿನ ಆಶ್ರಯದಲ್ಲಿ ತಾ ೨ರಂದು ಶ್ರೀ ಕೆ. ಪ್ರಭಾಕರ ರಾಯರು ಕುಮುಟಾ ಸಾಹಿತ್ಯ ಸಮ್ಮೇಳನದ ಅನುಭವದ ಕುರಿತಾಗಿ ಭಾಷಣವಿತ್ತರು. ಶ್ರೀ ಎ. ಜೆ. ಅಲ್ಸೆಯವರು ಧನ್ಯವಾದಾರ್ಪಣೆ ಮಾಡಿದರು

ವಿವಾಹ ಸಮಾರಂಭಗಳು - ಉಡುಪಿಯ ಜನಪ್ರಿಯ ವಕೀಲ್ ಶ್ರೀ ವಿ. ಶೀನಪ್ಪ ಹೆಗ್ಡೆಯ ದ್ವಿತೀಯ ಪುತ್ರಿ ಚಿ॥ ಸೌ॥ ಸಾವಿತ್ರಿಯನ್ನು ಬಸ್ರೂರು ಶ್ರೀ ಮುತ್ತಯ್ಯ ಸೆಟ್ಟರ ತೃತೀಯ ಪುತ್ರ ಶ್ರೀ ಗೋಪಾಲ ಕೃಷ್ಣ ಸೆಟ್ಟರನ್ನೂ, ಶ್ರೀ ರಘುರಾಮ ಸೆಟ್ರ ದ್ವಿತೀಯ ಪುತ್ರಿ ಚಿ॥ ಸೌ॥ ಸುಮಿತ್ರಾಳನ್ನು ಕಲ್ಯಾಣಪುರ ಶ್ರೀ ವೆಂಕಪ್ಪ ಸೆಟ್ಟರ ಪ್ರಥಮ ಪುತ್ರ ಶ್ರೀ ಸುಧಾಕರ ಸೆಟ್ಟರೂ, ಬಸ್ರೂರು ಶ್ರೀ ಮುತ್ತಯ್ಯ ಸೆಟ್ರ ದ್ವಿತೀಯ ಪುತ್ರ ಶ್ರೀ ರಂಗು ಸೆಟ್ಟರು. ಕಲ್ಯಾಣಪುರ ಶ್ರೀ ವೆಂಕಪ್ಪ ಸೆಟ್ಟರ ಪ್ರಥಮ ಪುತ್ರಿ ಚಿ ಸೌ॥ ಸಂಜೀವಿ ಯನ್ನು ಕಳೆದ ತಾ ೨೯ರಲ್ಲಿ ಬೆಳಿಗ್ಗೆ ಸ್ಥಳೀಯ ಶ್ರೀ ರಾಮ ಕೃಷ್ಣ ಥಿಯೇಟರಿನಲ್ಲಿ ವಿವಾಹ ವಾದರು. ಈ ಸಮಾರಂಭಕ್ಕೆ ಅನೇಕ ಸ್ತ್ರೀ ಪುರುಷರನೇಕರು ಬಂದಿದ್ದರು.

ಶ್ರೀ ಎ. ಗಣಪತಿ ಎಸ್. ನಾಯ್ಕರ ಪುತ್ರ, ಶ್ರೀ ವಿಶ್ವನಾಥ ನಾಯ್ಕರು, ಕಟಪಾಡಿ ಮಾಧವ ದಾಮೋದರ ಪ್ರಭುಗರ ಪುತ್ರಿ ಶ್ರೀಮತಿ ಜಿನ್ನಿಯನ್ನು ಇದೇ ತಾ. 19ರಲ್ಲಿ ರಾತ್ರಿ ಅಜ್ಜರಕಾಡು ವಧುವಿನ ಮನೆಯಲ್ಲಿ ವಿವಾಹವಾದರು. ಊರ ಅನೇಕರು ಈ ಸಮಾರಂಭಕ್ಕೆ ಬಂದು ವಧೂವರರನ್ನು ಆಶೀರ್ವದಿಸಿದರು.

ಮಂಗಳೂರಿನ— ಡಾ॥ ಯು. ಪಿ. ಮಲ್ಯರ ಪುತ್ರ ಶ್ರೀ ಪ್ರಭಾಕರ ಮಲ್ಯರು ದಿವಂಗತ ಬಿ. ಅಚ್ಯುತ ಬಾಳಿಗರ ಪುತ್ರಿ ಚಿ॥ ಸೌ॥ ಅನಸೂಯಳನ್ನು ಕಳೆದ ತಾ ೩೧ರಲ್ಲಿ ಪೂರ್ವಾಹ್ನ ಮಂಗಳೂರಿನ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ವಿವಾಹ ವಾದರು. ನೂತನ ದಂಪತಿಗಳೆಲ್ಲರಿಗೂ ಶುಭಾಶಯಗಳು.

ಹರ್ಕಾಡಿ - ನವದಂಪತಿಗಳಾದ ಡಾ! ಗಿರಿಧರ ರಾವ್ ಮತ್ತು ಶ್ರೀಮತಿ ಜಯಂತಿಯವರನ್ನು, ಮದ್ರಾಸು ಮೆಡಿಕಲ್ ಕಾಲೇಜಿನಲ್ಲಿ ತೇರ್ಗಡೆ ಹೊಂದಿದ ಡಾ! ಸದಾನಂದ ಬಲ್ಲಾಳ್ ಮತ್ತು ಶ್ರೀಮತಿ ಬಲ್ಲಾಳರನ್ನೂ ಸತ್ಕರಿಸಲು ಸ್ಥಳೀಯ ವಿ. ಜ ಎಸ್. ಶಾಲಾ ಪ್ರಾರ್ಥನಾ ಮಂದಿರದಲ್ಲಿ ಸಬ್ ಪೋಸ್ಟ ಮಾಸ್ಟರ್ ಶ್ರೀ ಕೆ. ಅನಂತ ಸೆಟ್ಟರು ಒಂದು ಚಹಾ ಸತ್ಕಾರ ಕೂಟವನ್ನು ಇದೇ ತಾ 8ರಲ್ಲಿ ಏರ್ಪಡಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಬಾಳ್ಕಟ್ಟ ಬೀಡು ಕೃಷ್ಣಯ್ಯ ಹೆಗ್ಡೆಯವರು ವಹಿಸಿದ್ದರು.

—ನದಿಯುವ ಚಿತ್ರ—

ಸಾವಿರಾರು—[illegible]—ಲಕ್ಷೋಪಲಕ್ಷ—ಜನ ಇವರ ಜಗತ್ತೇ ಮೆಚ್ಚಿದ ಮಹಾ

ಜಗನ್ಮೋಹಿನಿ

(ಕನ್ನಡ ಚಿತ್ರ)

ಪರಿಚೆ, ಶ್ರೀನಿವಾಸ, ಪ್ರತಿಮಾ ಮೊದಲಾದವರು

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡುಪಿ.

ಬದಲಾವಣೆಗೆಂದು ಒಮ್ಮೆ
ಎಸ್. ಆರ್. ಬೀಡಿಯನ್ನು
ಬಳಸಿ ನೋಡಿರಿ,
ಅಂದರೆ ಖಂಡಿತವಾಗಿ ಅದನ್ನೇ
ಎಂದೆಂದಿಗೂ ಕೊಂಡು
ಕೊಳ್ಳುವಿರಿ.

S. R. BEEDI WORKS,
UDIPI. S. K.

ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತದೆ.

(೫ನೇ ಪುಟದಿಂದ)

ಸ್ಸು ದೊರೆಯದ್ದರಿಂದ-ಕೃಷಿಕರ ಲೋಕ ಪಕ್ಷದ ಪ್ರತಿನಿಧಿಯಾಗಿ ಮಂತ್ರಿ ಮಂಡಳದಲ್ಲಿದ್ದ ಶ್ರೀ ಲಚ್ಚಣ್ಣನವರು ತಮ್ಮ ಸ್ಥಾನಕ್ಕೆ ರಾಜಿನಾಮೆ ಕೊಟ್ಟರು. ಮಂತ್ರಿ ಮಂಡಳದಲ್ಲಿ ಪ್ರಜಾ ಸಮಾಜವಾದೀ ಪಕ್ಷದ ಸದಸ್ಯನೆಂದು ಪ್ರವೇಶಿಸಿದ್ದ ಶ್ರೀ ವಿಶ್ವನಾಥಮ್ಮರ ವಿರುದ್ಧ ದೊಡ್ಡ ಆಂದೋಲನವೇ ನಡೆದು ಕೊನೆಗೊಮ್ಮೆ ಅವರು ಆ ಪಕ್ಷಕ್ಕೆಯೇ ರಾಜಿನಾಮೆಕೊಟ್ಟು ಮಂತ್ರಿ ಸ್ಥಾನವನ್ನು ಭದ್ರಪಡಿಸಿಕೊಂಡರು; ಮಾತ್ರವಲ್ಲ, ತಮ್ಮ ಅನುಯಾಯಿಗಳ ಗುಂಪಿನ ಬಲವನ್ನುಪಯೋಗಿಸಿ ಆಂಧ್ರ ಪ್ರಜಾಪಕ್ಷವೆಂಬ ಪ್ರತ್ಯೇಕ ಸಂಸ್ಥೆಯನ್ನ ಸ್ಥಾಪಿಸಿದರು. ಹೀಗೆ ರಾಜಕೀಯ ಅನೈಕ್ಯ ಆಂಧ್ರ ರಾಜ್ಯದ ಪ್ರಗತಿಗೆ ಅಡ್ಡ ಮಾಡುತ್ತಿರುವುದು ನಿಜಕ್ಕೂ ಶೋಚನೀಯ.

ಕನ್ನಡಿಗರ ಕರ್ತವ್ಯ

ಕಚ್ಚಾಡುವುದರಲ್ಲಿಯೇ ನಾವು ಶ್ರೇಯಸ್ಸನ್ನು ಕಾಣುವ ಪಕ್ಷದಲ್ಲಿ— ಈಗ ನೇಮಕಗೊಂಡಿರುವ ಉಚ್ಚಾಧಿಕಾರದ ಆಯೋಗದಿಂದ ಸತ್ಪ್ರಯೋಜನವನ್ನು ಹೊಂದುವುದು ಕಷ್ಟ. ಆಂಧ್ರರಾಜ್ಯ ನಿರ್ಮಾಣದ ಬಳಿಕ ಕರ್ನಾಟಕ ಏಕೀಕರಣದ ಪ್ರಶ್ನೆಗೆಯೇ ಪ್ರಾಶಸ್ತ್ಯ ಬರುತ್ತದೆಂದು ತಿಳಿದಿರುವ ಕನ್ನಡಿಗರಂತೂ ಐಕ್ಯಮತ್ಯವನ್ನು ಪ್ರಬಲವಾಗಿ ಸಂಘಟಿಸಿಕೊಳ್ಳುವುದು ಅತ್ಯಗತ್ಯ. ಒಮ್ಮೆ ಅಸ್ತಿತ್ವಕ್ಕೆ ಬಂದ ಬಳಿಕ ಕರ್ನಾಟಕದ ಪ್ರಶ್ನೆ ಯಾವುದೇ ರಾಜಕೀಯ ಅಡಚಣೆಗೆ ಗುರಿಯಾಗಕೂಡದು ಎಂಬ ಸಂಕಲ್ಪವನ್ನು ಮಾಡಿಕೊಂಡೇ ಇಂದಿನ ಸಿದ್ಧತೆಗಳು ನಡೆಯಬೇಕು. ಕರ್ನಾಟಕ ಪ್ರಾದೇಶಗಳನ್ನೆಲ್ಲ ಏಕೀಕರಿಸುವ ಧ್ಯೇಯವುಳ್ಳ ಹಲವು ಪಕ್ಷಗಳು ಈಗಾಗಲೇ ಹುಟ್ಟಿಕೊಂಡಿದ್ದರೂ — ಅವೆಲ್ಲವುಗಳಿಗಿಂತ ಪ್ರದೇಶ ಕಾಂಗ್ರೆಸ ಸಮಿತಿಗಳ, ಕೇಂದ್ರ ಹಾಗೂ ಶಾಸನ ಸಭಾ ಸದಸ್ಯರ, ಕನ್ನಡ ಸಾಹಿತ್ಯ ಹಾಗೂ ಸಂಶೋಧನ ಸಂಸ್ಥೆಗಳ ಕರ್ತವ್ಯ ಇಂದು ಗುರುತರವಾಗಿರುತ್ತದೆ. ಭಾಷೆ ಮತ್ತು ಸಂಸ್ಕೃತಿಗೆ ಸಾಕಷ್ಟು ಮಹತ್ವ ಕೊಡಬೇಕೆಂದು ರಾಜ್ಯಗಳ ಪುನರ್ವಿಂಗಡಣೆಯ ಪ್ರಶ್ನೆಯನ್ನು ವಿಚಾರಿಸುವ ಆಯೋಗಕ್ಕೆ ಹೇಳಿರುವುದೂ ಸ್ಥೂಲ ತತ್ವಗಳನ್ನು ಮೊದಲು ವಿಚಾರಿಸಿ, ನಡುಗಾಲದ ವರದಿಗಳನ್ನು ಒಪ್ಪಿಸಲು ಅವಕಾಶ ನೀಡಿರುವುದೂ ಕನ್ನಡಿಗರ ಆಕೋತ್ತರಗಳನ್ನು ಅಪ್ರತ್ಯಕ್ಷವಾಗಿ ಪ್ರೋತ್ಸುತ್ತದೆ. ಆದ ಕಾರಣ ಆಯೋಗದೊಡನೆ ಸಂಪೂರ್ಣ ಸಹಕಾರದಿಂದ ವರ್ತಿಸಿ, ಕನ್ನಡಿಗರೆಲ್ಲ ಒಕ್ಕಟ್ಟಿನಿಂದ ತಮ್ಮ ಪಕ್ಷವನ್ನು ಸಮರ್ಥವಾಗಿ ಪ್ರತಿಪಾದಿಸುವುದರಲ್ಲಿ ಈಗ ಉದ್ಯುಕ್ತರಾಗೋಣ. ಕಾಂಗ್ರೆಸಿನ ರಾಜಕೀಯ ಗತ್ತುಗಾರಿಕೆ ಇದೆಂದು ಅಸಂತೋಷ ಹೊಂದುವ ಬದಲು ಕೈಗೆ ಸಿಕ್ಕಿದ ಅವಕಾಶದ ಸದುಪಯೋಗ ಮಾಡಿಕೊಳ್ಳುವ ಕಡೆಗೆಯೇ ಗಮನ ಹರಿಸೋಣ!

ಶಿರ್ವ— ಸ್ಥಳೀಯ ಪಂಚಾಯತ ಬೋರ್ಡಿನ ಸಾಮಾನ್ಯ ಸಭೆಯು ಕಳೆದ ತಾ 23ರಲ್ಲು ಶ್ರೀ ಎಸ್. ಎ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಶಿರ್ವದಲ್ಲಿ ಕುಷ್ಟರೋಗ ಆಸ್ಪತ್ರೆಯನ್ನು ಬೇಗನೆ ತೆರೆಯುಂತೆ ಸರಕಾರವನ್ನು ವಿನಂತಿಸಿ ಕೊಳ್ಳುವ ನಿರ್ಣಯವಾಗಿ ಕೆಲವು ಕಾಮಗಾರಿಕೆಗಳಿಗೆ ಹಣ ಮಂಜೂರು ಮಾಡಲಾಯಿತು.

ಮೂಲ್ಕಿ— ಈ ಕೇಂದ್ರದ ಉಪಧ್ಯಾಯ ಸಂಘಕ್ಕೆ ಸಂಯೋಜಿತವಾದ ಶಾಲೆಗಳ ಮಕ್ಕಳ ಸಂಯುಕ್ತ ಆಟದ ಹಬ್ಬವು ಕಳೆದ ತಿಂಗಳ ತಾ 19ರಲ್ಲು ಸ್ಥಳೀಯ ಗವರ್ನಮೆಂಟ್ ಹ್ಯಾಸ್ಕೂಲ್ ಹೆಡ್ಮಾಸ್ಟರ್ ಶ್ರೀ ಕೆ. ವಿಠಲ ಶೆಣೈಯವರ ಅಧ್ಯಕ್ಷತೆಯಲ್ಲಿ ಜರಗಿ ವಿವಿಧ ಕಾರ್ಯ ಕ್ರಮಗಳಾದುವು.

ಕಾರ್ಕಳ— ಸ್ಥಳೀಯ ಜೈಹಿಂದ್ ಸಿನೇಮಾ ಮಂದಿರದಲ್ಲಿ ಕಳೆದ ತಾ 20ರಲ್ಲು ರಾತ್ರಿ ಡಾ! ಟಿ. ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ಉಡುಪಿಯ ಎಸ್ಸೆಲ್ ಮತ್ತು ಗೆಳೆಯರು, ಕಾರ್ಕಳ ಶ್ರೀ ಅನಂತಪದ್ಮನಾಭ ದೇವಸ್ಥಾನದ ಜೀರ್ಣೋದ್ಧಾರದ ಸಹಾಯಾರ್ಥ "ಬಡವ್ರೊರ್ ಗಂಡ" ಎಂಬ ನಾಟಕವನ್ನು ಅಭಿನಯಿಸಿದರು. ಸಾಧಾರಣ ಎರಡು ಸಾವಿರ ರೂಪಾಯಿಗಳಿಗೂ ಮಿಕ್ಕಿ ಹಣ ಸಂಗ್ರಹವಾಗಿರುವುದೆಂದು ತಿಳಿದು ಬರುತ್ತದೆ.

ಮುಲ್ಕಿ ದ. ಕ. ಜಿಲ್ಲಾ ಫಿಶರೀಸ್ ಶಾಲಾ ಮಾಸ್ತರುಗಳ ಯೂನಿಯನ್ ಮಹಾಸಭೆಯು ಕಳೆದ ತಾ 23ರಲ್ಲು ಮುಲ್ಕಿ ಫಿಶರೀಸ್ ಹ್ಯಾಸ್ಕೂಲಿನಲ್ಲಿ ಶ್ರೀ ಎನ್. ಡಿ. ಕಮ್ತಿ, ರಿಟಾಯರ್ಡ್ ಅಸಿಸ್ಟಾಂಟ್ ಡ್ಯಾರೆಕ್ಟರ್, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಹೊಸ ವರುಷಕ್ಕೆ ಶ್ರೀಮತಿ ೯-ನಾ ಎಸ್. ಅಮಿನ್ (ಅಧ್ಯಕ್ಷೆ), ಶ್ರೀಗಳಾದ ಎ. ಸುಬ್ರಾಯ ಆಲ್ವೆ ಮತ್ತು ಕೆ. ವಿ. ಮೂರ್ತಿ (ಜತೆ ಕಾರ್ಯದರ್ಶಿಯರು) ಯವರು ಆರಿಸಲ್ಪಟ್ಟರು.

ಕೊಡವೂರು:—ಇಲ್ಲಿಯ ಶ್ರೀ ಶಂಕರ ನಾರಾಯಣ ದೇವಸ್ಥಾನದಲ್ಲಿ ವರ್ಷಂಪ್ರತಿ ನಡೆಯತಕ್ಕ ಕಾಲಾವಧಿ ಉತ್ಸವವು ಇದೇ ತಾ 16ರಲ್ಲು ಪ್ರಾರಂಭ ವಾಗಿ ತಾ 18ರಲ್ಲು ಮಹಾರಂಗ ಪೂಜೆ, ತಾ 20ರಲ್ಲು ರಥೋತ್ಸವಾದಿ ಕಾರ್ಯಕ್ರಮ ಗಳಿಂದ ಜರಗಲಿದ್ದು ಭಕ್ತಾದಿಗಳು ಬಂದು ಶ್ರೀ ಮುಡಿಗಂಧ ಪ್ರಸಾದ ಸ್ವೀಕರಿಸ ಬೇಕಾಗಿ ಆಢಳ್ತೆ ಮೊಕ್ತೇಸರ ಡಾ! ಕೆ. ಎಲ್. ಐತಾಳರು ವಿನಂತಿಸುತ್ತಾರೆ.

ಸುರತ್ಕಲ್:—ಸ್ಥಳೀಯ ವಿದ್ಯಾದಾಯಿನಿ ಹೈಸ್ಕೂಲಿನ ವರ್ಧಂತಿ ಸಮಾರಂಭವು ಈಚೆಗೆ ದಕ್ಷಿಣ ರೈಲ್ವೆಯ ಜಿಲ್ಲಾ ಇಂಜಿನಿಯರ್ ಶ್ರೀ ಎಸ್. ಸುಬ್ರಹ್ಮಣ್ಯಂ ನವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಮತಿ ಜಯಲಕ್ಷ್ಮಿ ಸುಬ್ರಹ್ಮಣ್ಯಂ ನವರು ಬಹುಮಾನ ವಿತರಣೆ ಮಾಡಿದರು. ಈ ಶಾಲೆಯ ಹಳೆ ವಿದ್ಯಾರ್ಥಿ ಸಂಘದ ದಿನಾಚರಣೆಯು ಶ್ರೀ ವಿ. ಎಸ್. ಕುಡ್ವರ ಅಧ್ಯಕ್ಷತೆಯಲ್ಲೂ ಜರಗಿತು.

ಕಾಸರ ಗೋಡು:— ಈ ತಾಲೂಕಿನ ಬೋರ್ಡ ಪ್ರಾಥಮಿಕ ಶಾಲಾ ಅಧ್ಯಾಪಕರ ಯೂನಿಯನ್ ಕಾರ್ಯ ಕಾರೀಸಮಿತಿ ಸಭೆಯು ಶ್ರೀ ಪಿ. ಶಿವರಾಯರ ಅಧ್ಯಕ್ಷತೆಯಲ್ಲಿ ಈಚೆಗೆ ಜರಗಿತು. ಉಪಾಧ್ಯಾಯರ ಕೇಳಿಕೆಗಳನ್ನೊಳ ಗೊಂಡ ನಿವೇದನಾ ಪತ್ರವೊಂದನ್ನು ಮುಖ್ಯ ಮಂತ್ರಿಗಳಿಗೆ ಕಳುಹಿಸುವ ನಿರ್ಧಾರ ವಾಯಿತು.

ಕಲ್ಲಡ್ಕ—ಸ್ಥಳೀಯ ಬೋರ್ಡ ಹಾ! ಎ! ಶಾಲೆಯ ಹಳೆ ವಿದ್ಯಾರ್ಥಿ ಸಂಘದ ವರ್ಧಂತ್ಯುತ್ಸವವು ಕಳೆದ ತಾ 27ರಲ್ಲು ಸಂಜೆ ಡಾ! ಎಮ್. ಎಸ್. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನೆ, ವರದಿವಾಚನ, ಬಹುಮಾನ ವಿತರಣೆ, ಹಿತಚಿಂತಕರ ಭಾಷಣ ಮೊದಲಾದ ಕಾರ್ಯಕ್ರಮಗಳಾದ ನಂತರ "ಪ್ರೇಮವಿಜಯ" ನಾಟಕ ಮೊದಲಾದ ವಿನೋದಾವಳಿಗಳಾದುವು.

ಬೇಳೂರು— ಕುಂದಾಪುರ ತಾಲೂಕಿನ ಅತಿದೊಡ್ಡ ಗ್ರಾಮವಾಗಿದ್ದು, ವರ್ಷಕ್ಕೆ ರೂ 9000 - ಮಿಕ್ಕಿ ತೀರ್ವೆಯನ್ನು ಸರಕಾರಕ್ಕೆ ಸಲ್ಲಿಸುತ್ತ ಬರುವ ಈ ಬೇಳೂರು ಗ್ರಾಮಕ್ಕೆ ಒಳ್ಳೆಯ ಮಾರ್ಗವಾಗಲಿ, ಟಪ್ಪಾಲು ಕಟ್ಟೆಯ ಅನುಕೂಲತೆಯಾಗಲೀ, ಪಂಚಾಯತ ಬೋರ್ಡಿನ ಸೌಕರ್ಯವಾಗಲಿ ಯಾವುದೊಂದು ಇಲ್ಲದಿರುವುದರಿಂದ ಸದ್ರಿ ಗ್ರಾಮದ ಕಡೆಗೆ ತಕ್ಕ ಸಿಗಾ ಕೊಟ್ಟು ಗ್ರಾಮದ ಪುನರುಜ್ಜೀವನಕ್ಕೆ ಸಂಬಂಧಪಟ್ಟ ಇಲಾಖೆಯವರು ನೆರವಾಗಬೇಕಾಗಿ ಗ್ರಾಮಸ್ಥರೊಬ್ಬರು ಬರೆಯುತ್ತಾರೆ.

"ಮಧು" (ರಿಜಿಸ್ಟರ್ಡ್) ಮಂಗಳೂರು ನಶ್ಯ.

ಇದು ಉತ್ತಮವಾದುದು ಮತ್ತು ಜನಪ್ರಿಯವಾದುದು.

ಇದು 'ಮಧು ಪ್ರೊಡಕ್ಟ್ಸ್' ಉಡಿಯಾವರ, ದ. ಕ.

ಇವರ ಉತ್ಕೃಷ್ಟ ತಯಾರಿಕೆ.

ಶಾಖೆ:- ಉಡುಪಿ ಮುನ್ಸಿಪಲ್ ಬಸ್ಸ್ ಸ್ಟ್ಯಾಂಡಿನ ಎದುರುಗಡೆ.

ಪರಊರುಗಳ ಬೇಡಿಕೆಗಳಿಗೆ ವಿಶೇಷ ಗಮನ ಕೊಡಲಾಗುವುದು.

ಚ್ಯವನಪ್ರಾಶ

ಹಿಮಾಲಯದ ಉತ್ಕೃಷ್ಟ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಚ್ಯವನಪ್ರಾಶವು ಕ್ಷಯ, ದುರ್ಬಲತೆ ಇತ್ಯಾದಿ ಕಾಹಿಲೆಗಳಿಗೆ ದಿವ್ಯೌಷಧಿ. ವಯೋವೃದ್ಧರಿಗೆ ವಿಶೇಷ ಪರಿಣಾಮಕಾರಿಯಾದುದು. ಎಳೆ ಮಕ್ಕಳನ್ನೂ ಗಟ್ಟಿಮುಟ್ಟಾಗಿಯೂ ಆರೋಗ್ಯವಂತರಾಗಿಯೂ ಇರಗೊಡಿಸುವುದು. ಚ್ಯವನಪ್ರಾಶವನ್ನು ಸತತ ಉಪಯೋಗಿಸುವುದರಿಂದ ಆಯುಸ್ಸು ವೃದ್ಧಿಯಾಗುವುದು. ಪರೀಕ್ಷಾರ್ಥವಾಗಿ ಕೆಳಗಿನ ವಿಳಾಸಕ್ಕೆ ಬರೆದು ಒಮ್ಮೆ ತರಿಸಿ ನೋಡಿರಿ. ಸೇರಿಗೆ ರೂಪಾಯಿ 10/- ಬೆಲೆ.

ಕಾಲಿಕಮಾಲಿ ಆಯುರ್ವೇದ ಫಾರ್ಮಸಿ, ಋಷಿಕೇಶ (ದೆಹರಾಡನ್)

Kali Kamali Ayurved Pharmacy, RISHIKESH (Dehradun.)

ಖಾತ್ರಿ ಚಿನ್ನದ ನೆಕ್‌ಲೇಸ್ ತರಹವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,

ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.

ಫೋನು ನಂಬ್ರ 66

ಮುಖ್ಯ ಪ್ರಕಟಣೆ

"ಆನಂದ ಸುಧ" ನಮ್ಮ ಆನಂದ ಸುಧ ಸಮಸ್ತ ಜನಗಳಿಗೆ ಬಲವನ್ನು ಖಂಡ ಪುಷ್ಟಿಯನ್ನು ಕಲಗಿಸುವುದು. ಅನೇಕ ವ್ಯಾಧಿಗಳನ್ನು ನಾಶಮಾಡುತ್ತೆ. ೧೫ ದಿನಗಳಿಗೆ ಸರಿ ಹೋಗುವ ೮ ಔ. ಸೀಸೆ ೧ಕ್ಕೆ ರೂ. 3—0—0.

"ಸ್ತ್ರೀ ಸುಧ" ನಮ್ಮ ಸ್ತ್ರೀ ಸುಧ ಸ್ತ್ರೀಯರಿಗೆ ಸಂಭವಿಸುವ ಸಮಸ್ತ ಗರ್ಭಾಶಯ ವ್ಯಾಧಿಗಳನ್ನು ಋತು ದೋಷಗಳನ್ನು, ಋತು ಶೂಲೆ, ಸರಿಯಾಗಿ ಬಹಿಷ್ಟೆ ಆಗದಿರುವುದು ಮೊದಲಾದ ಸಮಸ್ತ ವ್ಯಾಧಿಗಳನ್ನು ನಾಶಮಾಡುವುದು. ಸಂತಾನವನ್ನು ಕಲಿಗಿಸುವುದು. ಒಂದು ತಿಂಗಳಿಗೆ ಸರಿಹೋಗುವ ೧ ತೊಲದ ಔಷಧಿ ರೂ. 4—0—0.

"ಬಾಲ ಸುಧ" ಇದು ಸಣ್ಣ ಬಾಲಕರಿಗೆ ಅಜೀರ್ಣ, ಜ್ವರ, ಕೆಮ್ಮು, ಶೀತ, ಮಲಬದ್ಧತೆ, ಹೆಚ್ಚಾಗಿ ಭೇದಿ ಆಗುವಿಕೆ, ಮಕ್ಕಳು ಕ್ಷೀಣವಾಗಿ ಕೈಕಾಲು ಸಣ್ಣದಾಗುವಿಕೆ, ಲಿವರ್ ಬೆಳೆಯುವುದು, ಈ ಎಲ್ಲಾ ವ್ಯಾಧಿಗಳಿಗೆ ವಜ್ರಾಯುಧವಾಗಿದೆ. ಹೀಗಿರುವ ಔಷಧಿ ಇನ್ನೊಂದು ಇಲ್ಲವೆಂದು ಹೇಳಬಹುದು. ಈ ಔಷಧಕ್ಕೆ ಮಿತಿ ಇಲ್ಲದ ಯೋಗ್ಯತಾ ಪತ್ರಗಳನ್ನು ಪಡೆದಿರುವದಲ್ಲದೆ ದೇಶದಲ್ಲಿ ಅನೇಕ ವಿಧದಲ್ಲಿ ಅಭಿವೃದ್ಧಿಯಾಗಿರುತ್ತದೆ. ಸುಮಾರು ೧ ತಿಂಗಳಿಗೆ ಸರಿ ಹೋಗುವ ೫೦ ಮಾತ್ರೆಗಳ ಸೀಸೆ ೧ಕ್ಕೆ ರೂ. 1—0—0.

ಹೆಡ್ಡಾಫೀಸ್:

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್, ರಾಜಮಂಡ್ರಿ.

ಬೆಂಗಳೂರು ಏಜನ್ಸಿ:

ಸುದರ್ಶನ ಆಯುರ್ವೇದ ವೈದ್ಯಶಾಲ, ನಗರ್ತರ ಪೇಟೆ, ಬೆಂಗಳೂರು-೨.

ONLY FOR Rs. 14/6

Beautiful Wrist Watch, Gtd. 3 years.

Size 10½ No. 5

4 Jewels Chrome 14/6 Rolled gold 18/-
15 Jewels chrome 30/-Rolled gold 32/8
15 „ Waterproof 35/- 17 Jewels 40/-
Pocket Watch 17/- Time Piece 15/-

N. B.— Only one watch can be sent to one man. Catalogue Free.

FREE INDIA WATCH CO. N.K.
Post Bag No. 6724, CALCUTTA-7.

ಋತುಸ್ರಾವ ನಿಂತಿತು

"ಕುಮಾರಿ" ಬಿಲ್ಲೆಗಳನ್ನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು, ಹತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು. ಯಾವ ಬಾಧಕವೂ ಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ– ಬೆಲೆ: ರೂ. 3/–; ಸ್ಪೆಶ್ಯಲ್ ರೂ. 5– ಅತ್ಯಧಿಕ ಸ್ಪೆಶ್ಯಲ್ ರೂ. 8–[ವಿ. ಪಿ. ಖರ್ಚು ರವಾನೆ ಪ್ರತ್ಯೇಕ]

Mrs. P. DEVEE, F.U.S.(N.J.)
CALCUTTA. 40

ಸ್ಟಾಕಿಸ್ಟರು: ಶಹಾಕಂಪೆನಿ, ಮಂಗಳೂರು.

ವಿವಿಧ ಪಾತ್ರೆಗಳು.

ಯಾವತ್ತೂ ವಿವಿಧ ಬೆಳ್ಳಿ, ತಾಮ್ರ ಹಿತ್ತಾಳಿ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ

ರಥಬೀದಿ ಉಡುಪಿ.

ಮಂಗಳೂರು

ನಗರ ಸಭೆಯು—ಕಳೆದ ತಾ. 26 ರಲ್ಲಿ ಚೇರ್‌ಮೆನ್ ಶ್ರೀ ಕೆ. ಎಸ್. ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಕೋಣಗಳ ಮೇಳದ ಬೇಲಿಗೆಯನ್ನು ತೆಗೆದು ಹಾಕಬೇಕೆಂಬ ಕಮೀಶನರರ ಸೂಚನೆಯನ್ನು ಆರ್ಥಿಕ ಸಮಿತಿಯು ಪರ್ಯಾಲೋಚಿಸಿ ಕೋಣಗಳ ಬೇಲಿಗೆ ಇರಬೇಕೆಂದೂ; ಆದು ಹಂದಿಗಳಿಗೆ ಬೇಲಿಗೆ ಹಾಕಬೇಕೆಂದೂ ನಿರ್ಣಯ ಮಾಡುವರೆ ಕುರಿತು ಚರ್ಚೆಯಾಗಿ ಮತ ತೆಗೆಯಲು ಆರ್ಥಿಕ ಸಮಿತಿಯು ವಿರೋಧವಾಗಿ ಜಾಸ್ತಿ ಮತಗಳು ದೊರೆತು ಆ ಎರಡು ಸೂಚನೆಗಳು ಬಿದ್ದು ಹೋದವು. ನಗರ ಸಭಾ ಕ್ಷೇತ್ರದಿಂದ ಸಂಗ್ರಹವಾಗುವ ಪುಸ್ತಕ ಭಂಡಾರ ತೆರಿಗೆಯನ್ನು ಆಯಾಯಾ ನಗರ ಸಭೆಗಳಿಗೆ ಕೊಡಬೇಕೆನ್ನುವ ಇತ್ಯಾದಿ ನಿರ್ಣಯಗಳಾದುವು.

ವಾರ್ಷಿಕೋತ್ಸವ— ಮಂಗಳೂರು ಪ್ರಾದೇಶಿಕ ಹಿಂದೀ ಪ್ರಚಾರ ಸಮಿತಿಯ ವಾರ್ಷಿಕೋತ್ಸವವು ಕಳೆದ ತಾ. 28 ರಲ್ಲಿ ಶ್ರೀ ಕೆ. ಎಸ್. ಹೆಗ್ಡೆ ಎಮ್. ಪಿ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಯು. ಕೇಶವರಾಯರ ಸ್ವಾಗತ ಭಾಷಣ, ಶ್ರೀ ಶ್ರೀಧರ ಭಟ್ಟರಿಂದ ವರದಿ ವಾಚನಗಳಾದುವು. ಬಳಿಕ ಶ್ರೀ ರತ್ನಾಕರ ಕಾಮತರು ಅಭಿಭಾಷಣ ಮಾಡುತ್ತ ನಾವು ನಮ್ಮ ಭಾಷೆ, ಸಂಸ್ಕೃತಿಗಳ ಕಡೆಗೆ ಹೆಚ್ಚಿನ ಪ್ರಾಧಾನ್ಯತೆ ಕೊಡಬೇಕೆಂದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಎಲ್ಲರೂ ಹಿಂದಿ ಕಲಿಯಬೇಕೆಂದೂ ಹಿಂದಿಯಿಂದ ಪ್ರಾದೇಶಿಕ ಭಾಷೆಗಳಿಗೆ ತೊಂದರೆಯಿಲ್ಲವೆಂದೂ ತಿಳಿಸಿದರು. ದ. ಭಾರತ ಹಿಂದೀ ಪ್ರಚಾರ ಸಭೆಯ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಪ್ರಮಾಣ ಪತ್ರಗಳನ್ನು ಶ್ರೀ ಬಿ. ರಾಘವ ಬಾಳಿಗರು ಅದೇ ದಿನ ಬೆಳಿಗ್ಗೆ ವಿತರಣೆ ಮಾಡಿದರು. ಶ್ರೀ ಎಮ್. ಡಿ. ಅಧಿಕಾರಿಗಳು ಅಭಿಭಾಷಣ ಮಾಡಿದರು.

ವಾರ್ಷಿಕ ಮಹಾಸಭೆ— ಹಿಂದುಳಿದ ವರ್ಗಗಳ ಸಂಘದ ವಾರ್ಷಿಕ ಮಹಾಸಭೆಯು ಕಳೆದ ತಾ 27ರಲ್ಲಿ ಶ್ರೀ ಕೆ. ರಾಮುನವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ದೇಜಪ್ಪನವರು ವರದಿಯನ್ನು ಓದಿದರು. ಶ್ರೀ ಎನ್. ಎನ್. ಸುವರ್ಣರು ಸಂಘದ ಘಟನೆಯನ್ನು ಸಭೆಯ ಮುಂದಿಟ್ಟರು. ಶ್ರೀಗಳಾದ ಸೀತಾರಾಮ ರಾವ್ ಮತ್ತು ಎ. ಕೆ. ಸೇವಕರು. ಕೆಲವು ಹಿತ ಸೂಚನೆಗಳನ್ನಿತ್ತರು. ನಂತರ ಕಾರ್ಯಕಾರೀ ಸಮಿತಿ ರಚನೆಯಾಗಿ ಶ್ರೀಗಳಾದ ಯು. ಕುಮಾರಯ್ಯ ಅಧ್ಯಕ್ಷರಾಗಿಯೂ ಕೆ. ರಾಮು ಮತ್ತು ಬಿ. ಕೆ. ಮಂಜುನಾಥ ಉಪಾಧ್ಯಕ್ಷರಾಗಿಯೂ, ಎನ್. ಎನ್. ಸುವರ್ಣರು ಪ್ರಧಾನ ಕಾರ್ಯದರ್ಶಿಯಾಗಿಯೂ, ಕೆ. ದೇಜಪ್ಪ ಮತ್ತು ಎ. ಕೆ. ಸೇವಕರೆ, ಜತೆ ಕಾರ್ಯದರ್ಶಿಗಳಾಗಿಯೂ, ಮಾಧವ ಸುವರ್ಣರು ಖಜಾಂಚಿಯರಾಗಿಯೂ ಆರಿಸಲ್ಪಟ್ಟರು.

ಜನ್ಮ ದಿನೋತ್ಸವ—ಶ್ರೀ ರಾಮಕೃಷ್ಣ ಪರಮಹಂಸರ ಜನ್ಮ ದಿನೋತ್ಸವವು ಶ್ರೀ ರಾಮಕೃಷ್ಣ ಮಠದಲ್ಲಿ ಇದೇ ತಾ 1ರಲ್ಲಿ ಮೈಸೂರಿನ ಸ್ವಾಮಿ ಸೋಮನಾಥಾನಂದಜೀ ಯವರ ಅಧ್ಯಕ್ಷತೆಯಲ್ಲಿ ಜರಗಿತು. ಆಶ್ರಮದ ಬಾಲಕರಿಂದ ಶಾಂತಿ ಪಾಠವಾದ ಬಳಿಕ ಶ್ರೀ ಬಿ. ರಾಘವ ಬಾಳಿಗರು ಮಾತನಾಡುತ್ತಾ ಪರಮಹಂಸರು ಹಿಂದೂ ಧರ್ಮದ ಮಹಾ ಭಾಷ್ಯಕಾರರೆಂದೂ ಸಾಮಾನ್ಯರಿಗೆ ತಿಳಿಯುವಂತೆ ಧರ್ಮೋಪದೇಶ ಮಾಡಿದ್ದೇ ಅವರ ಘನತೆಯೆಂದೂ ಹೇಳಿದರು. ಶ್ರೀ ಕೆ. ಕೆ. ರೈಗಳು ಮಾತನಾಡುತ್ತ ಭಕ್ತಿಮಾರ್ಗದ ಮುನ್ನೋಟವು ವೇದದಿಂದ ತೊಡಗಿ ಪರಮಹಂಸರ ವರೆಗೆ ಬೆಳೆದುಬಂದುದನ್ನು ತಿಳಿಸಿ ಈಗ ದ್ವೇಷದ ಬೆಂಕಿಯ ಭೂಮಿಯಲ್ಲಿ ಭಕ್ತಿಯ ಮಂದಾಕಿನಿಯು ಹರಿಯುವಂತೆ ಮಾಡಿದ ರಾಮಕೃಷ್ಣ ಮಠದ ಯತಿಗಳನ್ನೂ ಅಭಿನಂದಿಸಿದರು. ಬಳಿಕ ಮೈಸೂರಿನ ಶ್ರೀ ಕೆ. ವಿ. ರಾಘವಾಚಾರ್ಯರು ಮಾತನಾಡುತ್ತ ಬುದ್ಧಿ ಬಲಕ್ಕಿಂತ ಹೃದಯ ಬಲವೇ ಮುಖ್ಯವೆಂದೂ ಕಣ್ಣಿನಿಂದ ನೋಡಿ ಹೃದಯದಿಂದ ತಿಳಿದು ಭಗವತ್ ಕೃಪೆ ಗಳಿಸಬೇಕೆಂದೂ ಇಂದಿನ ಸಮಾರಂಭದಿಂದ ಒಂದು ಜೀವಿಯು ಮಾಯೆ ದಾಟಿದರೆ ಪರಮಹಂಸರ ಅವತಾರ ಸಾರ್ಥಕವಾಯಿತೆಂದರು. ಶ್ರೀ ಎಮ್. ವಾಸುದೇವ ರಾಯರು ಮಾತನಾಡಿದರು. ಅಧ್ಯಕ್ಷರು ಮಾತನಾಡುತ್ತಾ ಪರಮಹಂಸರ ತತ್ವವು ಪರಿಪೂರ್ಣವಾದುದೆಂದರು. ಶ್ರೀ ಪಿ. ಆರ್. ಪೂಂಜರು ಧನ್ಯವಾದಗಳನ್ನರ್ಪಿಸಿದ ನಂತರ, ಮಂಗಳಾರತಿ, ಪ್ರಸಾದ ವಿತರಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

ಕರ್ನಾಟಕ ಚೇಂಬರ್ ಆಫ್ ಎಗ್ರಿಕಲ್ಚರ್—ಇದರ ಕಾರ್ಯ ನಿರ್ವಾಹಕ ಮಂಡಳಿಯ ಸಭೆಯು ಇತ್ತೀಚೆಗೆ ಸೇರಿ ಮದ್ರಾಸಿನ ಮುಖ್ಯ ಮಂತ್ರಿ ಶ್ರೀ ರಾಜಗೋಪಾಲಾಚಾರಿಯವರು ಕೃಷಿಕರ ಬಗ್ಗೆ ಆಗಾಗ್ಗೆ ಪಾಸು ಮಾಡಿದ ನಿಯಮಗಳಿಗಾಗಿ ಅವರನ್ನು ಅಭಿನಂದಿಸಿ ಅವರ ನಾಯಕತ್ವದಲ್ಲಿ ಅಚಲ ಭಕ್ತಿಯನ್ನು ಪ್ರದರ್ಶಿಸಿತು. ಅಲ್ಲದೆ ಅವರ ಮುಂದಾಳುತ್ವವನ್ನು ತೆಗೆಯುವ ಕುಹಕ ಧೋರಣೆಯನ್ನು ನಿಷೇಧಿಸಿತು. ಕೃಷಿಕರ ಹಿತ ರಕ್ಷಣೆಗಾಗಿ ಮದ್ರಾಸು ಸರಕಾರವು ಹೊರಡಿಸಿದ ಆರ್ಡಿನೆನ್ಸು ಸ್ವಾಗತಾರ್ಹವಾದರೂ, ಈ ಜಿಲ್ಲೆಯ ಮಟ್ಟಿಗೆ ಅದು ಅನಗತ್ಯವೆಂದು ಸಭೆಯು ಅಭಿಪ್ರಾಯ ಪಟ್ಟಿತು. ಒಂದು ವೇಳೆ ದ. ಕ. ಜಿಲ್ಲೆಗೆ ಈ ಆರ್ಡಿನೆನ್ಸು ಅನ್ವಯಿಸುವ ಸಂದರ್ಭದಲ್ಲಿ ನಿಜವಾದ ಕೃಷಿಕನಾರು ಎಂಬುದರ ಸ್ಪಷ್ಟೀಕರಣವಾಗ ತಕ್ಕದೆಂದೂ, ಒಂದು ನೂರು ರೂಪಾಯಿ ಮೇಲ್ಪಟ್ಟು ಇನ್‌ಕಮ್ ಟೇಕ್ಸ್ ಅಥವಾ ಕೀರ್ವ ಕೊಡುವವರನ್ನು ಈ ಆರ್ಡಿನೆನ್ಸಿನಿಂದ ವಿರಹಿತ ಗೊಳಿಸಬೇಕೆಂದು ಸರಕಾರವನ್ನು ವಿನಂತಿಸುವ ನಿರ್ಣಯವಾಯಿತು. ನಿಯಮಿತ ಅವಧಿಯಲ್ಲಿ ಕೃಷಿ ಮಾಡಿ ಭೂಮಿಯನ್ನು ಫಲ ಪ್ರದವಾಗಿ ಮಾಡುತ್ತೇವೆಂದು ಭರವಸೆ ಕೊಡತಕ್ಕವರಿಗೇನೇ ಸರಕಾರಿ ಭೂಮಿಯನ್ನು ಕೊಡಬೇಕೆನ್ನುವ ಸರಕಾರಿ ಕಾಡುಗಳನ್ನು ಸುರಕ್ಷಿತವಾಗಿರಿಸಲು ತಕ್ಕ ನಿಗಾ ತೆಗೆದು ಕೊಳ್ಳಬೇಕೆನ್ನುವ ಠರಾವುಗಳು ಕೂಡಾ ಆದವು.

ಶ್ರೀ ಶಾರದಾ ದೇವಿಯವರ ಜನ್ಮ ದಿನೋತ್ಸವವು— ಇದೇ ತಾ. 3ರಲ್ಲಿ ಆಪರಾಹ್ನ ಶ್ರೀ ರಾಮಕೃಷ್ಣ ಆಶ್ರಮದಲ್ಲಿ ಜರಗಿತು. ಮೈಸೂರಿನ ಶ್ರೀಮತಿ ಚೊಕ್ಕಮ್ಮ ಮತ್ತು ಪಾರ್ಟಿಯವರ ಸಂಗೀತ ಕಚೇರಿ ನಡೆಯಿತು, ಸಂಜೆ ಬೆಂಗಳೂರಿನ ಶ್ರೀಮತಿ ಲಕ್ಷ್ಮೀಕೃಷ್ಣಪ್ಪನವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿತು. ಶ್ರೀಮತಿ ಲೀಲಾಬಾಯಿ ಸಿಕಾಂಬರರಾಯರು, ಸ್ವಾಗತ ಭಾಷಣ ಮಾಡಿದರು. ಶ್ರೀಮತಿಯರಾದ ಮೈಸೂರಿನ ರತ್ನಮ್ಮ, ಮಂಗಳೂರಿನ ವತ್ಸಲಾ ಶಾಳಿತ್ತಾಯ ಮೊದಲಾದವರು ಸತಿ ಶ್ರೀ ಶಾರದಾ ದೇವಿಯರ ಜೀವನ ಧ್ಯೇಯಗಳನ್ನು ವಿವರಿಸಿ ಭಾಷಣವಿತ್ತರು. ಶ್ರೀಮತಿ ಶಾಂಭವಿ ಆರ್. ಪೂಂಜರು ವಂದನೆಗಳನ್ನರ್ಪಿಸಿದರು.

ವಿರೋಧ ಸೂಚಕ ಸಭೆ—ಸ್ಥಳೀಯ ಭಾರತೀಯ ಜನಸಂಘದ ಆಶ್ರಯದಲ್ಲಿ ಶ್ರೀ ಎಸ್. ನಾಗರಾಜಯ್ಯನವರ ಅಧ್ಯಕ್ಷತೆಯಲ್ಲಿ ಇದೇ ತಾ 3ರಂದು ಸಾರ್ವಜನಿಕ ಸಭೆ ಜರಗಿತು. ಶ್ರೀಗಳಾದ ಕೊರಗಪ್ಪ, ಸುವರ್ಣ, ಕೆ. ರಾಮ ಭಟ್, ಪ್ರಭಾಕರ ಶಾನುಭಾಗ ಅವರು ಪಾಕ್-ಅಮೇರಿಕಾ ಒಪ್ಪಂದದಿಂದ ಭಾರತಕ್ಕೂ ಇಡೀ ವಿಶ್ವಕ್ಕೂ ಬರುವ ಗಂಡಾಂತರ, ಅದನ್ನು ಒಕ್ಕಟ್ಟಿನಿಂದ ಎದುರಿಸುವ ಜಾಗರೂಕತೆ ಮತ್ತು ಭಾರತದ ಕರ್ತವ್ಯದ ಕುರಿತು ಭಾಷಣ ಮಾಡಿದರು. ಪಾಕ್ ಅಮೇರಿಕಾ ಒಪ್ಪಂದಕ್ಕೆ ವಿರೋಧ ಸೂಚಿಸುವ ಇತ್ಯಾದಿ ನಿರ್ಣಯಗಳಾದುವು.

ಗ್ರಾಮ ವೈದ್ಯ ಸಮ್ಮೇಳನ—ಕರ್ನಾಟಕ ಮತ್ತು ಕೇರಳ ಪ್ರಾಂತೀಯ ಮೆಡಿಕಲ್ ವೈದ್ಯ ಸಂಘದ ಮಹಾಸಭೆಯು ತಾ 2ರಲ್ಲಿ ಶ್ರೀ ವಾಮನ ಕೊಡಿಯಾಲಬೈಲು, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯಕಾರೀ ಮಂಡಳಿಗೆ ಹೊಸ ಸದಸ್ಯರ ಚುನಾವಣೆ ನಡೆಯಿತು. ಮಧ್ಯಾಹ್ನ ಡಾ| ಎಮ್. ಎಸ್. ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ವೈದ್ಯರ ಸಾರ್ವಜನಿಕ ಸಭೆ ಜರಗಿತು. ವೈದ್ಯರಾದ ಎಮ್. ಆರ್. ಭಟ್. ಮತ್ತು ಶ್ರೀ ಎಮ್. ರಘುನಾಥರು ಮಾತನಾಡುತ್ತಾ ವೈದ್ಯರೆಲ್ಲರೂ ತಮ್ಮ ಹಕ್ಕು ಬಾಧ್ಯತೆ ಗಳಿಗಾಗಿ ಒಗ್ಗಟ್ಟಾಗಬೇಕೆಂದು ಕೇಳಿ ಕೊಂಡರು. ಸರಕಾರೀ ಠರಾವು ಬೇಕಿ ಹೊಂದಿದ ಗ್ರಾಮ ವೈದ್ಯರಿಗೆ ಮೆಡಿಕಲ್ ಪ್ರಾಕ್ಟೀಸಿಗಿಂತ ಹೆಚ್ಚಿನ ರಿಜಿಸ್ಟ್ರೇಶನ್ ಕೊಡಬೇಕು ಮತ್ತು ಅವರನ್ನು ಗ್ರಾಮ ವೈದ್ಯಾಲಯಗಳ ವೈದ್ಯರಾಗಿ ನೇಮಿಸ ಬೇಕು ಎಂದು ಸರಕಾರವನ್ನು ಕೇಳಿ ಕೊಳ್ಳುವ ನಿರ್ಣಯ ವಾಯಿತು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ವೈಜ್ಞಾನಿಕ ದೃಷ್ಟಿ ಮತ್ತು ಜನಹಿತ ದೃಷ್ಟಿಯಿಂದ ಆಯುರ್ವೇದವನ್ನು ಆಧುನಿಕ ಚಿಕಿತ್ಸೆಯನ್ನು ಬೆಳೆಸುತ್ತಾ ಬಂದರೆ ಅದರಿಂದ ಹಳ್ಳಿಗಾಗಿ ಹೆಚ್ಚು ಪ್ರಯೋಜನ ವಾಗುವುದೆಂದರು.

ಭಾರತ ರಾಷ್ಟ್ರೀಯ ಕಾಂಗ್ರೆಸಿನ ಪ್ರತಿನಿಧಿ ಉಪ ಚುನಾವಣೆ.—ದ. ಕ. ಜಿಲ್ಲೆಯಲ್ಲಿ ಪಾಣೆ ಮಂಗಳೂರು ಸರ್ಕಲಿನ ಕಾಂಗ್ರೆಸ್ ಪ್ರತಿನಿಧಿ ಸ್ಥಾನವು ಖಾಲಿ ಇರುವ್ರದರಿಂದ ಉಪ ಚುನಾವಣೆಯು ನಡೆಯಲಿರುವುದು. ಇದೇ ತಾ 6ರಲ್ಲಿ ನಾಮಪತ್ರ ಸ್ವೀಕಾರ, ಅಪರಾಹ್ನ ಪರಿಶೀಲನೆ, 7ರಲ್ಲಿ ಅಪೀಲು ಇದ್ದರೆ ಅಪೀಲು ಮಾಡುವುದು 8ರಲ್ಲಿ ಅಪೀಲು ತೀರ್ಮಾನ', 9ರಲ್ಲಿ ನಾಮ ಪತ್ರ ಹಿಂತೆಗೆಯುವಿಕೆ. ತಾ 16 ರಲ್ಲಿ ಪೂರ್ವಾಹ್ನ 9ರಿಂದ ಸಂಜೆ 5ಗಂಟೆ ತನಕ ಮತ ದಾನ, ತಾ 17ರಲ್ಲಿ ಅಪರಾಹ್ನ ಗಂಟೆ 1ಕ್ಕೆ ಮತ ಗಳ ಎಣಿಕೆ ಮತ್ತು ಫಲಿತಾಂಶ ಪ್ರಕಟಣೆ.

ನಾಮಕರಣ ಫೀಸು ರೂ 5 – ಚುನಾವಣೆ ಡಿಪಾಜಿಟ್ ರೂ10 – ಹೀಗೆ ರೂ15/-ನ್ನು ಉಮೇದ್ವಾರರು ನಾಮ ಪತ್ರ ದೊಡನೆ ಕೊಡತಕ್ಕದ್ದು. ನಾಮ ಪತ್ರ ಸ್ವೀಕಾರ ಮತ್ತು ಮತಗಳ ಎಣಿಕೆ ಮಂಗಳೂರು ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ನಡೆಯುವುವು.

ಟೆಂಡರು

ಮಂದರ್ಶಿ ಶ್ರೀ ದುರ್ಗಾಪರಮೇಶ್ವರೀ ಅಮ್ಮನವರ ದೇವಸ್ಥಾನದ ಆಫೀಸಿನಿಂದ–

ಸದ್ರಿ ದೇವಸ್ಥಾನದ ಗರ್ಭಗುಡಿಗೆ ತಾಂಬ್ರದ ತಗಡನ್ನು ಹೊದಿಸುವ ಬಗ್ಗೆ ತಾ. 16-1-54ನೇ ಶನಿವಾರ ದಿನ ಗಂಟೆ 11ಕ್ಕೆ ಏಲಂ ಕರೆಯಲಾಗುವುದು. ಕ್ಯಾಸುಳ್ಳವರು ಸದ್ರಿ ಸಮಯ ಆಫೀಸಿನಲ್ಲಿ ಹಾಜರಾಗಿ ನೇಮಿಸಿದ ಶರ್ತಗಳನ್ನು ಪರಿಶೀಲಿಸಿ ರೇಟನ್ನು ಕೊಡಬಹುದು.

ಸದ್ರಿ ದೇವಸ್ಥಾನದ ಗರ್ಭಗೃಹದ ಮಾಡಿಗೆ (ವಿಸ್ತೀರ್ಣ 2610 ಚದರ ಫೀಟು) ಮುಚ್ಚುವ ಬಗ್ಗೆ ಸಾಧಾರಣ 200 ಮಣ ಅರ್ಧ ಮಣದ ಯಾ ಸೀಲಿಂಗು ತಗಡುಗಳನ್ನು ಸ್ಥಳದಿಂದ ನೇಮಿಸಲ್ಪಟ್ಟ ಶರ್ತಗಳ ಪ್ರಕಾರ ದೇವಸ್ಥಾನದಲ್ಲಿ ಪವನಿಸಿ ಕೊಡುವ ಶರ್ತಗಳ ಮೇಲೂ ಇದಕ್ಕೆ ಬೇಕಾಗುವ 1½" ಮೊಳೆ ಸ್ಟೀಲ್ ಬಿಟ್ಟೇರು, ಸ್ಕ್ರೂ ವಸ್ತ್ರೆಗಳನ್ನು ಒದಗಿಸಿ ಕೊಡುವ ಬಗ್ಗೆ ತಾ. 16-1-54ನೇ ದಿನ ಬೆಳಿಗ್ಗೆ ಗಂಟೆ 11ಕ್ಕೆ ರೇಟನ್ನು ಸ್ವೀಕರಿಸಲಾಗುವುದು. ಸದ್ರಿ ಸಮಯ ಆಫೀಸಿನಲ್ಲಿ ಹಾಜರಾಗಿ ಶರ್ತಗಳನ್ನು ಪರಿಶೀಲಿಸಿ ಕ್ಯಾಸುಳ್ಳವರು ರೇಟನ್ನು ಕೊಡಬಹುದು.

N. R. Bolar
Executive Officer.

ಮಂದಾರ್ಶಿ. ತಾ. 27-12-53.

ದಿ ಬೊಂಬೆಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿ., ಬೊಂಬಾಯಿ

1953ನೆ ವರ್ಷದ ವೆಲ್ಯುಯೇಶನ್ ಪ್ರಕಾರ ಉದಾರ ಬೋನಸ್

ಎಂಡೋಮೆಂಟ್ ಪೊಲಿಸಿಗಳ ಮೇಲೆ ರೂ. 10-
ಜೀವಾವಧಿ ಪೊಲಿಸಿಗಳ ಮೇಲೆ ರೂ. 12-8
ವರ್ಷ ಒಂದರ ರೂ. 1000ಕ್ಕೆ

(ಪ್ರಚಲಿತ ಪ್ರೀಮಿಯಮ್ ಸ್ಕೇಲಿನಂತೆ)

ಜೀವ ವಿಮೆಗಾಗಲೀ, ಪ್ರಾತಿನಿಧ್ಯಹೊಂದಲಿಕ್ಕಾಗಲೀ
ನಮ್ಮೊಡನೆ ವಿಚಾರಿಸಿದರೆ ಅಪೇಕ್ಷಿತ ಫಲವನ್ನೀಯುವುದು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಚೀಫ್ ಏಜಂಟ್ಸ್, ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್.
ಬೊಂಬೆ ಲ್ಯಾಫ್ ಬಿಲ್ಡಿಂಗ್, ಉಡುಪಿ, ದ. ಕ.

ಅಥವಾ ಶಾಖಾ ಕಛೇರಿಗಳಲ್ಲಿ: ಮಧುರೆ, ಬೆಂಗಳೂರು. ತ್ರಿವೆಂಡ್ರಮ್, ಕಲ್ಲಿಕೋಟೆ
ಬೊಂಬಾಯಿ, ಮಂಗಳೂರು ಮತ್ತು ಕೊಯಮುತ್ತೂರು

The Bombay Life Assurance Co., Ltd., Bombay

। ಶರೀರ್ಮ್ ಮಹೀಮಾಂ ಜನಾರಾಮರಿಣಾಂ ।

—ಆಯುರ್ ವೈದ್ಯಾಶ್ರಮ—

[ಸ್ಥಾಪನೆ: 1933]

ಅಜೀರ್ಣತ್ವ, ಸ್ತ್ರೀಪುರುಷರ ವಿವಿಧ ರೋಗಗಳಿಗೂ, ವಿಶೇಷವಾಗಿ ಇಂದ್ರಿಯಗಳ ದೌರ್ಬಲ್ಯ, ಮಾನಸಿಕ ವಿಕಾರಗಳು, ಗುಹ್ಯ ರೋಗಗಳು, ನಪುಂಸಕತೆ, ಬಂಜೆತನ, ಚರ್ಮವ್ಯಾಧಿಗಳು, ಮುಂತಾದವುಗಳಿಗೆ ರಸ ರಸಾಯನಗಳಿಂದ ವಿಶೇಷ ರೀತಿಯ ಚಿಕಿತ್ಸೆ.
ಪ್ರಬಲವಾದ ವಾತರೋಗಗಳನ್ನು ಕದ್ರಿ ಗುಡ್ಡೆ ಮೇಲೆ (ವೈದ್ಯಾಶ್ರಮದ ಹತ್ತಿರ)

—ಪ್ರಶಾಂತ ಪ್ರದೇಶದಲ್ಲಿ ತೆರೆದಿರುವ—

—ಶುಶ್ರೂಷಾಲಯದಲ್ಲಿ—

ಪಂಚಕರ್ಮ, ಧಾರೆ ಮುಂತಾದ ವಿಶೇಷ ಚಿಕಿತ್ಸೆಗಳ ಸಹಾಯದಿಂದ ಚಿಕಿತ್ಸೆ ಮಾಡುವೆವು.
ಅತ್ಯಂತ ಉಪಯೋಗಿ ಪ್ರಯೋಗಗಳನ್ನು ನಾವರೆಸ ಔಷಧಗಳ ಮೂಲಕ ಕೈಕೊಳ್ಳುವೆವು.
ಪತ್ರ ವ್ಯವಹಾರ ಮಾಡಿ ವಿವರ ತಿಳಿಯಿರಿ.

ಕದ್ರಿ, ಮಂಗಳೂರು.

ಎಂ. ಎಸ್. ಭಿಡೆ,
ಪ್ರಧಾನ ವೈದ್ಯರು ಆಯುರ್ವೇದ ಭಿಷಕ್.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 24 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

THE MOOLKY BANK LTD.
Moolky, S. K.

ಧರ್ಮಾರ್ಥ—ಮುಕ್ತಿ

ಒಂದು ಸಾವಿರ ಕಾಸ್ಮೀರಿ ಬಡಗುಗಳನ್ನು ಧರ್ಮಾರ್ಥ ಕೊಡುತ್ತಲಿದ್ದೇವೆ. ಬೇಗನೆ ಬರೆಯಿರಿ. ವಿಳಂಬವಾದರೆ ನಿರಾಶರಾಗುವಿರಿ.

Diamond Commercial
Chambers (N. U.)
Bhandari Street
BOMBAY—3

ಪಂಚಾಯತುಗಳ ಆಡಳಿತ

[೧ನೇ ಪುಟದಿಂದ]

ಅರಿತುಕೊಳ್ಳಬೇಕು. ಪಂಚಾಯತಿಗಾಗಲೀ, ಸರಕಾರಕ್ಕಾಗಲೀ ತೆರಿಗೆಯುವ ಹಾಲಕ ಹಣ ಪೂರೈಸದಿದ್ದರೆ, ಅವುಗಳಿಂದ ಹೆಚ್ಚಿನ ಸೌಕರ್ಯಗಳನ್ನು ನಾವು ಅಪೇಕ್ಷಿಸುವುದಕ್ಕೆ ನ್ಯಾಯವಿಲ್ಲ.

ಈ ಸಂದರ್ಭದಲ್ಲಿ ಇನ್ನೊಂದು ಮಾತನ್ನು ಹೇಳಬೇಕು – ಪಂಚಾಯತ ಕಾಯಿದೆಯ ವ್ಯಾಪ್ತಿಯನ್ನೂ ಕಾರ್ಯವಿಧಾನವನ್ನೂ ಸಮಂಚಿತ ರೀತಿಯಲ್ಲಿ ತಿಳಿದುಕೊಳ್ಳದೆ ಪಂಚಾಯತು ಬೋರ್ಡಿನ ಸದಸ್ಯರು ತಪ್ಪಿಬೀಳುವ ಸಂಭವವಿದ್ದೀತು. ಅವುಗಳಿಂದ ಕೆಡುಕಾಗಬಾರದೆಂದು ಉದ್ದೇಶಿಸಿ, ಸರಕಾರದವರು ಆಡಳಿತಾಧಿಕಾರಿಯ ನೇಮಕವಾಗಬೇಕೆಂದು ವಿಧಿಸಿರುವರು. ಇದು ಗ್ರಾಮದ ಪ್ರಮುಖರಿಂದ ತಮಗೆ ಒದಗಿಬಂದ ಹಕ್ಕು ಬಾಧ್ಯತೆಗಳನ್ನು ಚಲಾಯಿಸುವುದರಲ್ಲಿ ಆತಂಕ ಮಾಡಿದಂತೆ – ಎಂಬ ದೂರು ಕೇಳಿ ಬರುತ್ತದೆ. ಇಲ್ಲಿ ತುಸು ಸಂಯಮದಿಂದ ಉಭಯ ಪಕ್ಷಗಳೂ ನಡೆದುಕೊಂಡರೆ, ಈ ಏರ್ಪಾಡಿನಿಂದ ಹಾನಿಯೊದಗದೆಂದು ಹೇಳಬಹುದು. ಈಚೆಗೆ ಸರಕಾರದವರು ಜಿಲ್ಲಾ ಬೋರ್ಡುಗಳನ್ನು ವಿಸರ್ಜಿಸಿ, ಅವುಗಳ ಬದಲು ತಾಲೂಕು ಬೋರ್ಡುಗಳನ್ನು ಪುನಃಸ್ಥಾಪಿಸಲೂ ಹವಣಿಸಿದ್ದಾರೆ. ಸ್ಥಳೀಯ ಸಮಸ್ಯೆಗಳನ್ನು ಹೆಚ್ಚು ವಿಚಕ್ಷಣೆಯಿಂದ ಪರಿಶೀಲಿಸಿ, ತಕ್ಕ ಸುಧಾರಣಾ ಕ್ರಮಗಳನ್ನು ಕೈಗೊಳ್ಳಲು ತಾಲೂಕು ಬೋರ್ಡುಗಳಿರುವುದೇ ವಿಹಿತವೆಂದು ಸರಕಾರದ ಅಭಿಪ್ರಾಯ. ಆದರೂ ಜಿಲ್ಲೆಯ ಸಮಷ್ಟಿ ಹಿತವು ದುರ್ಲಕ್ಷಿಸಲ್ಪಡದಂತೆ ನೋಡಿಕೊಳ್ಳಲೂ ಸರಕಾರ ಉದ್ದೇಶಿಸಿದೆ. ಹಳ್ಳಿಗಳಲ್ಲಿ ಹೊಸರಕ್ತವನ್ನು ತುಂಬಲು ನಡೆಯುವ ಇಂಥ ಪ್ರಯತ್ನಗಳಲ್ಲಿ ಲೋಪದೋಷಗಳು ಕಡಿಮೆಯಾಗಿ ಜನಹಿತ ಸಾಧಿಸಲ್ಪಡುವಂತೆ ಎಲ್ಲರೂ ಸಹಕರಿಸೋಣ.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

R. E. P. 362/53.

S. C. 518/52.

ಸ್ಟೆಲ್ಲಾ ಲಸ್ರಾದೊ ಬ್ಯಾ—ಅರ್ಜಿದಾರಳು.

ಸೋಮ ಮರಕಾಲ — — ಎದ್ರಿ.

ಅರ್ಜಿದಾರಳ ಕಡೆಯಿಂದ ಈ ಮೂಲಕ ತಿಳಿಯಪಡಿಸುವದೇನೆಂದ್ರೆ—

ಸೋಮು ಮರಕಾಲ— ಉಪ್ಪೂರು ಕುರ್ದ ಮರಕಾಲನ ಅಳಿಯ ಉಡ್ಪಿ ತಾಲ್ಕು ಕೋಡಿ ಗ್ರಾಮದ ಬೆಂಗ್ರೆ— — — ಎದ್ರಿರು.

ಮೇಲಿನ ಅಮಲ್‌ಜಾರಿಯಲ್ಲಿ ಎದ್ರಿಯ ಬಾಬ್ತು ಸ್ಥಿರಾಸ್ತಿ ಲೈಲಾಂ ಮಾಡಿಸುವ ಗೋಸ್ಕರ ಅರ್ಜಿದಾರಳು ಹಾಜ್ರು ಪಡ್ಸಿದ ಯಿಸ್ತಿಹಾರಿನ ಶರ್ತ ನಿರ್ಣಯಿಸುವಗೋಸ್ಕರ ತಾರೀಕು 22—1—54 ಕ್ಕೆ ಅಪ್ಸೈರು ತಪ್ಸಿಗೆ ಯಿಟ್ಟಿದೆ. ಆ ಕುರಿತು ನಿಮ್ಮದೇನಾದರೂ ಆಕ್ಷೇಪವಿದ್ರೆ ಸದ್ರಿ ದಿವ್ಸ ಬೆಗ್ಲು 11 ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಸ್ವತಹಾ ವ ವಕೀಲರ ದ್ವಾರಾ ಹಾಜ್ರಾಗಿ ಜಾಹೀರುಮಾಡಿ ಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರ ಹಾಜರಿಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದೆಂಬ ಸಂಗ್ತಿ ಅರ್ಜಿದಾರಳ ಕಡೆಯಿಂದ ತಿಳಿಸು ಪಡ್ಸಿದೆ.

G. Sanjiva Rao

Vakil

Coondapur: Date 7—1—54.

ಬಂಟರ ಯಾನೆ ನಾಡವರ ಸಂಘದ ಮಹಾಸಭೆ

ಶ್ರೀ. ಬಿ. ದಾಸ ರೈಗಳ ಅಧ್ಯಕ್ಷ ಭಾಷಣ

ದ. ಕ. ಜಿಲ್ಲಾ ಬಂಟರಯಾನೆ ನಾಡವರ ಸಂಘದ ಮಹಾ ಸಭೆಯು ಕಳೆದ ತಾ 27ರಲ್ಲಿ ಮಂಗಳೂರಿನ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಸಾಂಗವಾಗಿ ಜರಗಿತು. ಶ್ರೀ ಬಿ. ದಾಸ ರೈ, ಬಿ. ಎ. ಬಿ. ಎಲ್, ಅವರು ಸಭಾಧ್ಯಕ್ಷತೆ ವಹಿಸಿ ಭಾಷಣ ಮಾಡುತ್ತಾ ಹೀಗೆಂದರು "ಈ ಸಂಘವು 1907ರಲ್ಲಿ ಜನ್ಮತಾಳಿ ಈ ವರೆಗೆ ಅನೇಕ ಶ್ರೇಯಸ್ಕರ ಹಾಗೂ ದೇಶೋದ್ಧಾರ ಕೆಲಸಗಳನ್ನು ಮಾಡುತ್ತ ಬಂದಿರುವುದು. ಸ್ವಜಾತಿಯ ಏಳಿಗೆಗಾಗಿ ಸ್ಥಾಪಿಸಲ್ಪಟ್ಟ ಈ ಸಂಘವು ಸಮಾಜದ ಮುಂದಾಳುಗಳ ಆಶ್ರಯದಲ್ಲಿ ಸಮಾಜ ಬಂಧುಗಳ ಉನ್ನತಿಯನ್ನು ವೃದ್ಧಿಪಡಿಸಿರುವುದು. ಎಂತಹ ಅಂತಹ ಮುಂದಾಳುಗಳನ್ನು ಈ ಸಂದರ್ಭದಲ್ಲಿ ನೆನಸುವುದು ಸಂದರ್ಭೋಚಿತವು.

ವಿದ್ಯಾರ್ಥಿ ಭವನಗಳು—ಸ್ವಜಾತಿಯ ಯುವಕರಿಗೆ ಶ್ರೇಷ್ಠದ ವಿದ್ಯಾಭ್ಯಾಸಕ್ಕಾಗಿ ಮಂಗಳೂರು ಮೊದಲಾದ ಕಡೆಗಳಲ್ಲಿ ವಿದ್ಯಾರ್ಥಿ ಭವನಗಳು ಸ್ಥಾಪಿಸಲ್ಪಟ್ಟವು. ಪ್ರಕೃತದ ಸ್ಥಿತಿಯಲ್ಲಿ ವಿದ್ಯಾರ್ಥಿ ಭವನಗಳನ್ನು ಎಲ್ಲಾ ಜಾತಿಯವರ ಉಪಯೋಗಕ್ಕಾಗಿ ಇಟ್ಟರೆ ಅವನ್ನು ನಡೆಸಿಕೊಂಡು ಬರಲು ಯೋಗ್ಯ ವ್ಯಕ್ತಿಗಳು ಸಿಕ್ಕದೆ ಹೋಗಲಾರರು. ಮಂಗಳೂರಿನ ವಿದ್ಯಾರ್ಥಿ ಭವನಕ್ಕೆ ಅನ್ಯ ಜಾತಿಯ ವಿದ್ಯಾರ್ಥಿಯರಿಗೂ ಪ್ರವೇಶ ಕೊಟ್ಟಿರುವುದರಿಂದ ಅದೀಗ ಸರ್ವಮಾನ್ಯತೆ ಹೊಂದಿದೆ.

ಅಳಿಯಸಂತಾನ ಕಾನೂನು—ಜಾರಿಗೆ ಬಂದು ಈಗಾಗಲೇ ನಾಲ್ಕು ವರ್ಷಗಳು ದಾಟಿದವು. ಅನೇಕ ಮನೆಗಳಲ್ಲಿ ಕೋರ್ಟು ಕಚೇರಿಗಳಿಗೆ ಹೋಗದೆ ಪಾಲು ವ್ಯವಸ್ಥೆಗಳು ನಡೆದಿದ್ದರೂ, ಅನೇಕ ದೊಡ್ಡ ದೊಡ್ಡ ಕುಟುಂಬಗಳು ಕೋರ್ಟು ವ್ಯವಹರಣೆಯ ಬಲೆಗೆ ಸಿಲುಕಿ ನರಳುತ್ತಿವೆ. ಹಿಂದೆಯಿಂದ ಸದ್ರಿ ಕಾನೂನು ಅಸಿಂಧು ಎಂಬ ಪ್ರಯತ್ನವು ಹ್ಯಾಕೋರ್ಟಿನಲ್ಲಿ ನಡೆಯುತ್ತಿದೆ, ನಮ್ಮ ಸಭೆಯಲ್ಲಿ ಏರ್ಪಟ್ಟ ಅಳಿಯಸಂತಾನ ಕುಟುಂಬಗಳ ಸುಧಾರಕ ಸಮಿತಿಯು ಬೇಕಾದ ಪ್ರಯತ್ನಗಳನ್ನು ನಡಿಸಿ, ಕಾನೂನನ್ನು ಜಾರಿಗೆ ತಂದ ಮೇಲೆ ಅದನ್ನು ಬಲಪಡಿಸಿ ಯುಕ್ತ ನಿರ್ಧಾರಗಳನ್ನು ಈ ಮಹಾ ಸಭೆಯಲ್ಲೂ ಜಾರಿ ಮಾಡದಿದ್ದರೆ, ವ್ಯವಹಾರದಲ್ಲಿ ಸಿಲುಕಿದ ಕುಟುಂಬಗಳ ಪಾಡು ಏನಾದೀತೆಂದು ಹೇಳಲಸಾಧ್ಯ. ಯಾವ ಕಾನೂನಾದರೂ ಕುಂದು ಕೊರತೆಗಳಿಲ್ಲದಿರುವುದು ಅಸಾಧ್ಯ. ದೋಷಗಳಿದ್ದರೆ ಅವುಗಳಿಂದ ಪಾರಾಗುವಂತೆ ಯತ್ನಿಸುವ ಕಾರ್ಯ ಮಾಡುವುದು ನಮ್ಮೆಲ್ಲರ ಕರ್ತವ್ಯ, ಆದಕಾರಣ ಇಂದಿನ ಸಭೆಯಲ್ಲಿ ಬೇಕಾದ ನಿರ್ಣಯಗಳನ್ನು ಮಾಡಿ ಕಾನೂನಿಗೆ ಮುಂದಾಳಾಗಿ ನಿಂತಿದ್ದವರನ್ನು ಬಲಪಡಿಸುವುದು ನಮ್ಮ ಕರ್ತವ್ಯವಿದೆ.

ಕೃಷಿಕರ ಸಾಲ ಸಂದಾಯ ಕುರಿತು ಆರ್ಡಿನೆನ್ಸು—ಹೊಸತಾಗಿ ನಮ್ಮ ಮದ್ರಾಸು ಸರಕಾರದಿಂದ ಹೊರಟದ್ದಕ್ಕಾಗಿ ಮುಖ್ಯವಾಗಿ ಕೃಷಿಕರಾಗುವ ನಮ್ಮವರ ಪರವಾಗಿ ಮಂತ್ರಿ, ಶ್ರೀ ರಾಜಗೋಪಾಲಾಚಾರ್ಯರನ್ನು ಪ್ರತ್ಯಪೂರ್ವಕ ವಂದಿಸಿ, ಯೋಗ್ಯ ನಿರ್ಣಯಗಳನ್ನು ಈ ಸಭೆಯ ಪರವಾಗಿ ಕಳುಹಿಸಿ ಕೊಡುವುದು ನಮ್ಮ ಕರ್ತವ್ಯವೆನಿಸುತ್ತದೆ. ಕೃಷಿಕರಲ್ಲಿ ಇಷ್ಟಷ್ಟು ಸಾಲದ ಅಡಚಣೆಯು ಇತರ ಯಾವ ವ್ಯಕ್ತಿಯಲ್ಲೂ ಇದ್ದಂತೆ ಕಾಣುವುದಿಲ್ಲ. ನಮ್ಮ ಅತಿ ಪುರಾತನ ಮನೆತನಗಳೂ ಅಳಿಯಸಂತಾನ ಕಟ್ಟಿನ ದೆಸೆಯಿಂದಲೇ ಇಷ್ಟು ಕಾಲ ಬಾಳಿ ಬಂದಿರುವುವು. ಹೊಸತಾಗಿ ಜಾರಿಗೆ ಬಂದ ಅಳಿಯಸಂತಾನ ಕಾನೂನಿನ ದೆಸೆಯಿಂದ ದೊಡ್ಡ ಮನೆತನದ ಮನೆಗಳೆಲ್ಲಾ ಹರಿದು ಚೂರಾಗುವ ಕಾಲದಲ್ಲಿ ಅವರಿಗೆ ಸಾಲಕೊಡುವವರನ್ನು ಹೊಸ ಆರ್ಡಿನೆನ್ಸಿನಿಂದ ಬಿಡಿಸುವುದು ನಮ್ಮ ಮಂತ್ರಿಗಳಿಂದೇ ಭಾವಿಸಿ ನಾವು ಕೃತಜ್ಞರಾಗಿರಬೇಕು. ಇನ್ನೂ ಜಾರಿಗೆ ಬರಲಿಕ್ಕಿರುವ ಧನಿ ಒಕ್ಕಲುಗಳ ಮಸೂದೆಯ ವಿಷಯದಲ್ಲೂ ಭೂಮಾಲಿಕರಾಗಿರದವರ ಕುತಂತ್ರ ನರ್ತನಕ್ಕೆ ಆಸ್ಪದ ಕೊಡದಂತೆ ನಮ್ಮ ಸರಕಾರವೂ ಮುಖ್ಯ ಮಂತ್ರಿಗಳೂ ವರ್ತಿಸುವರೆಂಬ ಭರವಸೆ ನನಗಿದೆ.

ವಿಜಯ ಬೇಂಕು—ಇದು 13 ಶಾಖೆಗಳಿಂದ ಕೂಡಿದ್ದು ಮುಖ್ಯ ಆಪೀಸು ಬೇಗನೆ ಸ್ವಂತ ಕಟ್ಟೋಣದ ಸೌಲಭ್ಯವನ್ನು ಪಡೆದು ಶೆಡ್ಯೂಲ್ಡ್ ಬೇಂಕ್ ಆಗಿ ಪರಿಣಮಿಸುಂತಾಗಲೆಂದು ಹಾರೈಸುತ್ತೇನೆ. ಬೇಂಕಿನ ಏಳಿಗೆಗಾಗಿ ಶ್ರಮಿಸಿದ ಹಿಂದಿನ ಚೇರ್‌ಮೆನ ಮತ್ತು ಮುಂದಿನ ಅಭಿವೃದ್ಧಿಯನ್ನು ಸಾಗಿಸಲು ಬದ್ಧಕಂಕಣರಾದ ಈಗಿನ ಚೇರ್‌ಮೇನರ ಮುತುವರ್ಜಿಯಿಂದ ಬೇಂಕು ಇನ್ನಷ್ಟು ಕೀರ್ತಿಯನ್ನು ಪಡೆಯಬಲ್ಲುದಾಗಿದೆ.

ರೈತರ ಅಭಿವೃದ್ಧಿ—ಸಾಧಿಸಲು ಧನಿಗಳೂ ಒಕ್ಕಲುಗಳೂ ಪರಸ್ಪರ ವಾತ್ಸಲ್ಯದಿಂದ ವರ್ತಿಸಬೇಕು. ಇತ್ತಂಡದವರೂ ಪರಸ್ಪರ ಸುಖದುಃಖಗಳಲ್ಲಿ ಭಾಗಿಗಳಾಗಬೇಕು. ಚೇಂಬರ್ ಆಫ್ ಕಾಮರ್ಸ್ ಎಂಬ ಸಂಸ್ಥೆಗಳನ್ನು ಹೇಗೆ ವ್ಯಾಪಾರಿಗಳು ಸ್ಥಾಪಿಸಿಕೊಂಡು ಕೆಲಸ ಮಾಡುತ್ತಿರುವರೊ ಅಂತೆಯೇ ಕೃಷಿಕರು ಕೂಡಾ ಚೇಂಬರ್ ಆಫ್ ಎಗ್ರಿಕಲ್ಚರ್ ಎಂಬ ಸಂಸ್ಥೆಗಳನ್ನು ಸ್ಥಾಪಿಸಿ ತನ್ಮೂಲಕ ತಮ್ಮ ಶ್ರೇಯಸ್ಸನ್ನು ಸಾಧಿಸಬೇಕಾಗಿದೆ. ಭೂಮಿಯಲ್ಲಿ ಉತ್ಪತ್ತಿಯಾದುದನ್ನು ಧನಿಗೆ ಅರ್ಧಾಂಶ ಒಕ್ಕಲಿಗೆ ಅರ್ಧಾಂಶದಂತೆ ಪಂಚಿಕೊಳ್ಳಬೇಕು. ಅದಕ್ಕಿಂತ ಜಾಸ್ತಿ ಗೇಣಿ ಧನಿಗಳು ಅಪೇಕ್ಷಿಸಬಾರದು. ಅವರ ಕೊಳಕೆ ಬೆಳೆಯು ಪೂರಾ ಒಕ್ಕಲಿನ ಕಾಯಕಷ್ಟದಿಂದುಂಟಾಗುವುದರಿಂದ ಅದು ಪೂರಾ ಅವನ ಉಪಯೋಗಕ್ಕೇನೇ ಸಿಕ್ಕಬೇಕು. ಗೇಣಿ ಸರಾಗವಾಗಿ ಕೊಟ್ಟಷ್ಟು ಭೂಮಿಯಲ್ಲಿ ಒಕ್ಕಲುತನ ತೆಗೆಯಲಿಕ್ಕೆ ಧನಿಗೆ ಹೆಚ್ಚು ಪಕ್ಷ ಅಧಿಕಾರವಿಲ್ಲವೆಂದು ಕಾನೂನು ಮಾಡಿದರೆ ಯಾವ ಅವಗುಣವೂ ಬಾರದು. ಕೆಲವು ಅಗತ್ಯ ಸಂದರ್ಭಗಳಲ್ಲಿ ಮಾತ್ರ ಧನಿಯು ಭೂಮಿಯನ್ನು ಸ್ವಾಧೀನ ಪಡೆಯುವ ಹಕ್ಕನ್ನಿಟ್ಟುಕೊಳ್ಳಬಹುದು.

ದೇಶ ಸೇವೆಯ ಕಾರ್ಯಗಳಲ್ಲಿ—ಸ್ವಜಾತಿ ಬಾಂಧವರು ಬಹು ಕಾಲದಿಂದಲೂ ಅನುಭವ ಹೊಂದಿದವರಿರುವರು. ಸ್ವತಂತ್ರ ಭಾರತದಲ್ಲಿ ಈಗಿನ ಕಾಲಸ್ಥಿತಿಗನುಸರಿಸಿ ದೇಶಸೇವಾ ನಿರತರಾಗಬೇಕು. ಯುವಕರು ರಾಷ್ಟ್ರದಳ, ನಾವಿಕ ಸೇನೆ ಮೊದಲಾದವುಗಳಿಗೆ ಸೇರಿ ತಮ್ಮ ಜೀವನವನ್ನೂ ನಾಡಿನ ಕ್ಷೇಮವನ್ನೂ ಹೆಚ್ಚಿಸಲಿಕ್ಕೆ ಯತ್ನಿಸಬೇಕು. ಬರೀ ರಾಜಕೀಯ ತತ್ವಗಳನ್ನು ಮುಂದಿಟ್ಟು ಬೇರೆ ಬೇರೆ ಪಂಗಡ ಕಟ್ಟಿಕೊಳ್ಳುವುದು ಪಟ್ಟಣ ವಾಸಿಗಳಿಗೆ ಹೇಳಿದುದಾಗಿದೆ. ಗ್ರಾಮ ವಾಸಿಗಳು ರಾಜಕೀಯ ತರ್ಕಗಳನ್ನು ಚೆನ್ನಾಗಿ ತಿಳಿದುಕೊಂಡು ಊರ ಜನರಿಗೆ ಸಂಪತ್ತು ಸಮೃದ್ಧಿಯುಂಟಾಗುವ ಕಾರ್ಯಗಳಲ್ಲಿ ನಿರತರಾಗಿ ಆ ಬಗ್ಗೆ ಸತತ ದುಡಿಯಬೇಕು. ನಮ್ಮ ಮನೆ, ಜಾತಿ ಮತ್ತು ಊರಿನ ಕೆಲಸಗಳೊಡನೆ ರಾಷ್ಟ್ರದ ಕೆಲಸಗಳನ್ನು ಕೂಡಾ ನಿರ್ವಹಿಸಲು ನಾವು ಯೋಗ್ಯತೆಯುಳ್ಳವರೆನಿಸಿಕೊಂಡರೇನೇ ನಮ್ಮ ಈ ಸಂಘ ಮತ್ತು ಮಹಾ ಸಭೆಯ ಉದ್ದೇಶಗಳನ್ನು ಸಾಧಿಸಿದಂತಾಗುವುದು.

ದಿ ವಿಜಯ ಬೇಂಕ್, ಲಿಮಿಟೆಡ್.

ಸ್ಥಾಪನೆ: 1931] [ಪ್ರಧಾನ ಕಛೇರಿ: ಮಂಗಳೂರು.

ತೆತ್ತ ಭಂಡವಾಳ ಮತ್ತು ಕ್ಷೇಮನಿಧಿ ರೂ. **10,87,000**

ಠೇವಣಿ—ವಹಿವಾಟು .... ,, **60,50,000**

ಕಾಯಂ ಠೇವಣಾತಿಗಳು 1 ತಿಂಗಳಿನಿಂದ 24 ತಿಂಗಳಿನ ವರೆಗೆ ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲ್ಪಡುವವು

ಮೂರು ವರ್ಷ ಅವಧಿಯ ವಿಜಯ ಕ್ಯಾಶ್ ಸರ್ಟಿಫಿಕೇಟು ಠೇವಣಾತಿಯಲ್ಲಿ 4½% ಬಡ್ಡಿ ದರ ಗಳಿಸಿಕೊಳ್ಳಬಹುದು.

ಜಿಲ್ಲೆಯ ಎಲ್ಲಾ ಮುಖ್ಯ ಸ್ಥಳಗಳಲ್ಲಿ ಮತ್ತು ಮಡಿಕೇರಿ, ಮುಂಬಾಯಿಗಳಲ್ಲಿ ಬೇಂಕಿನ ಶಾಖೆಗಳಿರುತ್ತವೆ.

ಕೆ. ಸುಂದರರಾಮ ಶೆಟ್ಟಿ,
ಬಿ. ಎ. ಬಿ. ಯಲ್., ವಕೀಲ್,
ಬೇಂಕಿನ ಡೈರೆಕ್ಟರರ ಮಂಡಳಿಯ ಅಧ್ಯಕ್ಷರು.

THE VIJAYA BANK, Limited.

ಲಕ್ಷಾಂತರ ಜನರು ಗುಣಹೊಂದಿದ್ದಾರೆ:

ಸರ್ ಜೀವನ್ ಶಿಲಾಜಿತ್‌ಲೇಹ



ಶಿಲಾಜಿತ್ ಹಿಮಾಲಯದ್ದು ಔಷಧಿಗಳ ರಾಜ; ಮೂಲಿಕೆಗಳೊಡನೆ ಸೇರಿಸಿದ ಲೇಹ್ಯ, ದೇಹಶಕ್ತಿ, ಹೊಟ್ಟೆನೋವು, ಅನ್ನ ಸೇರದಿರುವಿಕೆ, ಕೆಮ್ಮು, ದಮ್ಮು, ಬಹುಮೂತ್ರ ಮತ್ತು ವಾಯುವಿನಿಂದಾಗುವ ಎಲ್ಲಾ ರೋಗನಿವಾರಕ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, ಹೆಂಗಸರ ಮತ್ತು ಮಕ್ಕಳ ಸರ್ವರೋಗ ನಿವಾರಕ ಅಮೂಲ್ಯ ರತ್ನ ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು.

೪೮ ದಿನದ ಲೇಹ್ಯ ರೂ. ೫—೮—೦, ೨೪ ದಿನದ ಲೇಹ್ಯ ರೂ. ೩—೮—೦. (ಪೋಸ್ಟೇಜು ಮಾಫಿ)

ನೀಲಗಿರಿ ಡಿಪ್ಪೊ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ.

ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪ್ಪೋವಿನಲ್ಲಿ ಕೇಳಿರಿ.

ಭರ್ತ ಕಂಟ್ರೋಲ

[ಮಕ್ಕಳನ್ನ ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವ್ಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ-೧ ಬಾಟ್ಲಿಗೆ — ರೂ. ೫—೮—೦ .... ಪೋಸ್ಟ್ ಖರ್ಚು ರೂ. ೦ ೧೪—೦

—:ವಿಳಾಸ:—

ಹಾಲಪ್ಪಾ ಹಾವಣಗೇರಿ ಆಯುರ್ವೇದ ಔಷಧಾಲಯ, ಗದಗ.



ಕನ್ನಡ ಪ್ರಾಂತ ನಿರ್ಮಾಣದ ಕುರಿತು ಒತ್ತಾಯ

(೨ನೇ ಪುಟದಿಂದ)

ಕನ್ನಡನಾಡು, ನುಡಿ, ಸಂಸ್ಕೃತಿಗಳ ಬಗೆಗೆ ಜೊತ್ತ ಸೇವೆಯನ್ನು ಸಲ್ಲಿಸಬೇಕು; ಈ ನುಡಿಯ ಮಕ್ಕಳು ಒಂದಾಗಬೇಕು; ಈ ಜನ ಸೌಖ್ಯಾರ್ಥದಿಂದ ಬೆಳೆದು ಆಡ ಳಿತದಲ್ಲಿ ಒಟ್ಟು ಒಂದು ರಾಜ್ಯವಾಗಬೇಕು, ಸಾಹಿತ್ಯ, ಕಲೆ, ಶಾಸ್ತ್ರ ಜ್ಞಾನ, ಧರ್ಮ, ಬದುಕಿನ ನಡುಗಳಲ್ಲಿ ಈ ಜನ ಈ ಮುಂತಾದ ಏನೇನು ಸಾಧಿಸಿ ಗಣ್ಯತೆ ಪಡೆಯಿತೋ ಅದರ ಸಮಗ್ರ ಚರಿತೆಯನ್ನು ಒಳಗೂ ಹೊರಗೂ ಮಾಡಿಕೊಟ್ಟು, ಈ ಕಾಲದಲ್ಲಿಯೂ ಅವೇ ರಂಗಗಳಲ್ಲಿ ಉತ್ಸಾಹವನ್ನು ಸಾಧನ ಸಂಪನ್ನತೆಯನ್ನೂ ಬೆಳೆಸಬೇಕು; ಇಂದು ಸಲ್ಲಿಸುವ ಕಾಣಿಕೆ, ಶಕ್ಯವಾದರೆ, ಹಿಂದಿನದಕ್ಕಿಂತ ಉತ್ತಮವಾಗಬೇಕು; ಮಾನ್ಯರಾದ ಸಾಹಿತಿಗಳಿಗೆ ಪ್ರೋತ್ಸಾಹವನ್ನೂ ಪ್ರತಿ ಫಲವನ್ನೂ ಸಲ್ಲಿಸಿ ವಿಶ್ವಾಸ ತೋರಿಸಬೇಕು; ಹಳೆ, ಹೊಸ ಗ್ರಂಥಗಳ ಪ್ರಕಟಣೆಯನ್ನೂ ಕೈಗೊಳ್ಳಬೇಕು—ಎಂದು ಕನ್ನಡ ಸಾಹಿತ್ಯ ಪರಿಷತ್ತು ಬಯಸಿತು. ಹುಟ್ಟಿ ಈಗ್ಗೆ ಮೂವತ್ತೆಂಟು ವರ್ಷಗಳಾದರೂ ಮಾಡಬಹುದಾಗಿದ್ದಷ್ಟು ಸೇವೆಯನ್ನು ಸಲ್ಲಿಸಲು ಅದಕ್ಕೆ ಸಾಧ್ಯವಾಗಿಲ್ಲ. ಅದು ಸಂಸ್ಥೆಯ ಮೇಲೆ ಮಾತ್ರ ಹೊಂದಿದ್ದಲ್ಲ—ಜನಬಲ, ಧನಬಲ, ರಾಜ್ಯ ಶಕ್ತಿಯಬಲ ಸಾಕಷ್ಟು ಇಲ್ಲವಾದರೆ, ಇಂತಹ ಕಾರ್ಯ ನೆರವೇರದು. ಸ್ವಂತ ಶಕ್ತಿಯೂ ಅಭಿಲಾಷೆಯೂ ಸಿದ್ಧಿಯೂ ಹೇಗೆ ಇರಲಿ ಸಮಸ್ತ ಕರ್ನಾಟಕ ವ್ಯಾಪ್ತಿಯುಳ್ಳ ಸಂಸ್ಥೆ ಇದೊಂದೇ. ಇದರ ಕ್ರಿಯಾ ಶಕ್ತಿಯನ್ನು ಜನರು ಎಷ್ಟು ಹೆಚ್ಚಿಸಿದರೆ, ಇದು ಅಷ್ಟು ದೊಡ್ಡದಾಗಲು ಳ್ಳದ್ದು. ಎಲ್ಲ ಕನ್ನಡಿಗರ ಸಾಂಸ್ಕೃತಿಕ ಆಶೋತ್ತರಗಳನ್ನೂ ರೂಪಿಸಿ, ಅವರ ವಾಣಿಯಾಗಬೇಕೆಂದು ಆಸೆಯಿಂದ ನಡೆಯುತ್ತಿರುವ ಈ ಸಂಸ್ಥೆಯ ಮಹೋತ್ಸವ ಪ್ರೊಂದೊಳ್ಳಿ [illegible] ಜತರಾಗಿದ್ದೇವೆ.

ಇದು ಸರಿಗಿನ ವಾತಾವರಣ

ಈಗ [illegible] ವರ್ಗಗಳಿಂದ ನಡೆಯುವ [illegible] ತಿಪಾ[illegible], ಜನತಾ ಜೀವನದ, ಸಾಹಿತ್ಯ ನಿರ್ಮಾಣದ [illegible] ಮಾಡಿಕೊಂಡರೆಂಬಿದ ನಮ್ಮ [illegible] ಗಿದೆ. ಇದರಿಗೆ [illegible] ವಿಶ ಹೀಗಾ[illegible] ಅರಿವಾಗುವುದ. [illegible] ಬರಬರಕ್ಕೆ [illegible] ಆಗದೆ [illegible]—ಕಾರಣ [illegible] ಸ್ಥಿತಿಯು ಇದಕ್ಕೆ [illegible] ವಾಗ [illegible] ಲೋಕಜೀವನದ ಪರಿಸ್ಥಿತಿ, [illegible] ಅದರ ಮೇಲೆ [illegible]. ಒಂದ, ಚರಿತ್ರೆಯ ದೃಷ್ಟಿ ಒಂದು ತಾರಾತ ಮ್ಯದೃಷ್ಟಿ, ಒಂದು ವಿಮರ್ಶನ ದೃಷ್ಟಿ ಈ ಮೂರು ಸುಳಿದರೆ ಬೆಳೆ ಸಿದ್ಧವಾಗುವುದು. ಇಂದಿನ ಬೇಸೂ, ಬಹುಕೂ ಇಂದಿನ ಮತ್ತು ನಾಳೆಯ ಶ್ರೇಯಸ್ಸಿಗಾಗಿಯೇ ಅಲ್ಲವೆ? ಅದಕ್ಕೆ ತಕ್ಕ ಅವರಣವನ್ನು ಕಲ್ಪಿಸಿಕೊಂಡು ಹೊಸ ಸಂಪತ್ತನ್ನು ಒದಗಿಸಿಕೊಳ್ಳುವ ಉತ್ಸಾಹವೂ ಉದ್ಯೋಗವೂ ಅಗತ್ಯವಾಗಿ ನಮ್ಮದೆನಿಸಲಿ.

ಭಾರತದ ಯಾವ ಭಾಷಾ ವರ್ಗದ ಜನವೂ ಕನ್ನಡದವರಷ್ಟು ಬೇರೆ ಬೇರೆ ರಾಜಕೀಯ ಆಡಳಿತಗಳಲ್ಲಿ ಚೆದರಿ, ಇಷ್ಟು ಕಷ್ಟಪಟ್ಟುದಿಲ್ಲ. ನಿನ್ನೆ ಮೊನ್ನೆಯವರೆಗೂ ಹಲವಾರು ರಾಜ ಮಹಾರಾಜರ ಆಡಳಿತಗಳಲ್ಲಿಯೂ ಮೂರು ಬ್ರಿಟಿಷ ಪ್ರಾಂತಗಳಲ್ಲಿಯೂ ಸಿಕ್ಕಿಕೊಂಡು ಕನ್ನಡಿಗರು ಉಸಿರಾಡಲೇ ಕಷ್ಟವಾಗಿದ್ದಿತು. ಕನ್ನಡ ಆಡುವವರಿಗೆ ಎಲ್ಲ ಭಾಗಗಳವರೂ ಒಂದಾಗಿರಬೇಕೆಂಬ ಆಶಯವೂ [illegible] ಕನ್ನಡ ನಾಯಕರ [illegible] ವರ್ಗವಾಗಿ ತಯಾರಾಗಬೇಕಾಗಿದೆಯೇ ನೋ! ಕನ್ನಡಿಗರ ಜೀವನ ಒಂದು ಮಟ್ಟದಲ್ಲಿ ರೂಪುಗೊಳ್ಳುವಂತೆ, ಅವನ್ನು ನಡೆಸುವ ಅಭಿಮಾನಶಾಲಿಗಳೂ ಕರ್ತೃತ್ವಶಾಲಿ ಮುಂದಾಳುಗಳೂ ನಾಡಿನ ಪ್ರಧಾನ ಮಂತ್ರಾಲೋಚನೆಯ ಮತ್ತು ಕಾರ್ಯಕಾರಿ ಮಂಡಲಿಗಳಲ್ಲಿ ಇಲ್ಲದ್ದರಿಂದ

ಈ [illegible] ಕನ್ನಡಿಗರ [illegible] ಇನ್ನೂ ಬಗೆಹರಿದಿಲ್ಲ.

[illegible] ಕನ್ನಡ ಪ್ರಾಂತವನ್ನು ಸ್ಥಾಪಿಸಿ [illegible] ನಿರಾಕರಿಸಿದ [illegible] ಹಿಂದೆ [illegible] ಇದ್ದ ಕನ್ನಡ ನಾಡಿನ [illegible] ತಕ್ಕ [illegible] ಕನ್ನಡನಾಡಿನ [illegible] ಬೇರೆಯಾಗಿ [illegible] ಕನ್ನಡದ [illegible] ನಡೆಸಿಕೊಂಡು ಬಂತು. ಇದು ಸಂಸ್ಕೃತಿ ವಿಶೇಷದ್ದು—ಒಂದು ಹೊರ [illegible] ನ್ಯಾಯವಿರಬೇಕಾದರೆ ಹೊರ ಕನ್ನಡಿಗರ ಕಷ್ಟ ನಿವಾರಿಸಬೇಕು. ಕೇವಲ [illegible] ಕಟಿಯಾಗಿ ಇದು [illegible]—[illegible] ನಾಶ ಹೊಂದಿದಂತೆ ಇದೆ. ಕನ್ನಡದ ಇತರ ಭಾಗಗಳು ಬೇಕಾದರೆ ಬೇರೆ ಒಂದು ಸಣ್ಣ ಕರ್ನಾಟಕವನ್ನು ಸ್ಥಾಪಿಸಿಕೊಳ್ಳಲಿ, ಕಾಲ ಕ್ರಮದಲ್ಲಿ, ಅಗತ್ಯಬಿದ್ದರೆ, ಈ ಎರಡು ಭಾಗಗಳೂ ಸೇರಲಿ; ಆಡಳಿತ ದೃಷ್ಟಿಯಿಂದಾಗಲಿ, ಸಂಸ್ಕೃತಿ ದೃಷ್ಟಿಯಿಂದಾಗಲಿ ಇವೆರಡನ್ನೂ ಬೆರೆಸಕೂಡದು ಎನ್ನುವ ಹಿರಿಯ ರಾಜಕಾರಣಿಗಳೂ ಇದ್ದಾರೆ. ಈಗ ಒಂದು ವರ್ಷದಿಂದೀಚೆಗೆ ನಮ್ಮ ಆಡಳಿತದ ಮುಖಂಡರ ಧೀರವಾದ ಮುನ್ನುಗ್ಗಿನಿಂದ ಕನ್ನಡದ ಜನ ಕೇಳಿಕಕ್ಕೆ ಆಸೆಗೂ ನೀರೆರೆಯೂ ಬಂದಿದೆ.

ಕರ್ನಾಟಕ ಏಕೀಕರಣ

ಹೀಗೆ ಒಕ್ಕೂಟದವರ ಪಡುವ ಒಂದು ಸುಖವಿಲ್ಲ. ಒಂದು ಕೊರತೆಯಿಲ್ಲ. ಪರಿಷತ್ತು ಇತರ ಅನೇಕ ಸಂಸ್ಥೆ ಸಮ್ಮೇಳನಗಳೂ ಏಕೀಕರಣದ ಅಗತ್ಯವನ್ನು ಒತ್ತಿ ಹೇಳಿವೆ. ನಾಡಿನ ಬಿಡುಗಡೆ ಬರುವ ಮುಂಚೆ ಕಾಂಗ್ರೆಸಿನವರೇ ಭಾಷಾ ಪ್ರಾಂತ ತತ್ವವನ್ನು ಒಪ್ಪಿದ್ದರು. ಆ ಮೇಲೆ ಇದ್ದಕ್ಕಿದ್ದಂತೆ ಪ್ರತ್ಯೇಕ ಕರ್ನಾಟಕ ಪ್ರಾಂತವನ್ನೇ ಬೇಡ ಎರ

ಡು ದೇಶಗಳು [illegible]. ಆಗಲೇ ಸ್ಥಾಪಿತ ವಾದಗಳ್ಳ [illegible]. ಕೇಂದ್ರದ [illegible] ನಿರ್ಮಾಣ [illegible] ಇವೆ ಭಾಷಾ ಪ್ರಾಂತಗಳನ್ನು [illegible] ತತ್ವ [illegible] ನಮ್ಮಕ್ಕೆ [illegible] ಮಾಡಲಾಗುತ್ತದೆ, [illegible] ನಮ್ಮ [illegible] ಇದು [illegible] ಇದರಿಂದ [illegible] ಎಂದ. [illegible] ದಕ್ಷಿಣ [illegible] ಇದಕ್ಕೆ [illegible] [illegible] ಮಾತ್ರ [illegible] ಒಂದು [illegible] ಹೊಸ [illegible] ನಡೆಯಿತು. ಇದೇ ರೀತಿ—ಆಂಧ್ರಪ್ರಾಂತ ನಿರ್ಮಾಣದಿಂದ ಇತರ ಆಂಧ್ರ ವಾರ್ತೆಗಳ [illegible] ಆವಕಾಶವೂ ಧೈರ್ಯವೂ ಸಿಕ್ಕಿದೆ. ಇಂದಿನ ನಾಳೆ ಮುಂದಿನ ವರ್ಷದಲ್ಲಿ ತಪ್ಪಿದರೆ [illegible] ಗಳವರೊಳಗೆ ಕರ್ನಾಟಕ ರಾಜ್ಯ ಬರುವಾಗ [illegible] ಎಂದು ನಮ್ಮ ನಂಬಿಕೆ. ಮುಂದಿನ ಸಮ್ಮೇಳನದ ಹೊತ್ತಿಗೆ ಆ ಮಂಗಳ ಸಂಭ್ರಮ ನೆರವೇರಲಿ!

ಈ ನಂಬಿಕೆಗೆ ನೆರವಾಗುವ ಕಾರ್ಯ ಬೇರೊಂದು ಉಂಟು. ಈ ಸಮಸ್ಯೆ ವಿಶೇಷವಾಗಿ ದಕ್ಷಿಣ ಭಾರತಕ್ಕೆ ಸೇರಿದ್ದು. ಈಗ ಆಂಧ್ರ ಬೇರೆಯಾಯಿತು. [illegible] ಮಹಾರಾಷ್ಟ್ರದ ಮಹಾ [illegible] ವ್ಯಕ್ತಿಯೇ [illegible] ಒಂದು [illegible] ಮುಖ್ಯ ಪ್ರದೇಶಗಳಲ್ಲಿನ ಮರಾಠಿ ಜನತೆಯನ್ನು ಬೆಸೆದು ಒಂದು ಹೊಸ ಸಂಸ್ಥಾನವನ್ನು ಕಟ್ಟಿಕೊಡಬೇಕೆಂದು ಒಮ್ಮತದಿಂದ ಕೇಳುತ್ತಿದ್ದಾರೆ. ಅಂಥ ಪ್ರಬಲ ಏಕಾಭಿಪ್ರಾಯವನ್ನು ನಿರಾಕರಿಸುವುದು ಯಾರಿಗೂ ಅಶಕ್ಯವಾಗುವುದು. ಕೇರಳದವರು ಬೇಕೆಂದು ಬೇರೆಯಾಗಿ ನಿಲ್ಲಲೂ ಅವಕಾಶವುಂಟು. ಆಗ, ಬಹುತರವಾಗಿ ಉಳಿದ ಕನ್ನಡ ಭಾಗಗಳು ಸಂಘಟಿಸಿ ಒಂದಾಗಲು ಪರಮಾನು ಕೂಲ್ಯವುಂಟಾಗುತ್ತದೆ. ನಮ್ಮ ವಿಷಯದಲ್ಲಿ ಪ್ರಭಾವಿ ನೆರೆಯವರೂ ಈಚೆಗೆ ಸಮಾಧಾನಂದಿದೆ—ಕರ್ನಾಟಕ ಏಕೀಕರಣ ವಿಷಯ ಕಷ್ಟವಲ್ಲವೆಂದು ಅವರು ತಿಳಿದಿರುವರು. ಜಾಗರೂಕತೆ ತಪ್ಪದೆ, ಅದರ ಸಾಧನೆಗಾಗಿ ಮಾಡಬೇಕಾದ್ದನ್ನೆಲ್ಲ ಮಾಡುತ್ತಿರೋಣ. ಆತುರ ಪಟ್ಟು ಉಗ್ರ ಕ್ರಮ ಕೈಗೊಳ್ಳುವುದು ಬೇಡ. "ಕೇಂದ್ರಕ್ಕೆ ಧಿಕ್ಕಾರ" ಎಂಬಂತಹ ಮಾತು ಆಡುವುದೂ ಬೇಡ. ಅದು ನಮ್ಮ ಪಾತ್ರವಲ್ಲ—ಅತಿರೇಕವೂ ಅಹಿತವೂ. ಎಂದಿಗೂ ಅದು ತಕ್ಕುದಲ್ಲ. ಇಂಥ ಮಾತು ನಡತೆ ಬೆಳೆಯುವುದೆಂಬ ಭಯದಿಂದಲೇ ಈ ಯತ್ನ ಬೇಡವೆಂದು ನಾಯಕರೂ ನುಡಿದಿರಬಹುದು. ಭಾರತದ ಕೇಂದ್ರ ಹೋದರೆ, ಯಾವ ಪ್ರಾಂತ ಉಳಿದೀತು? ಅದನ್ನು ಕಳೆದುಕೊಂಡು ನಾವು ಸ್ವತಂತ್ರರಾಗಿರುವುದು ಶಕ್ಯವೇ? ಹಾಗೆಯೇ

(೧೨ನೇ ಪುಟ ನೋಡಿರಿ)

ನೋಟೀಸು.

ಉಡ್ಪಿ ಡಿ. ಮು. ಕೋರ್ಟಿನಲ್ಲಿ.

S. C. No. 640, 1953.

T. ಗೋಪಾಲಕೃಷ್ಣ ಪೈ —ವಾದಿ.

ಮತ್ತು

[illegible] ಹೆಬ್ಬಾಡಿ ಕೆಂದೋಡಿ ಮನೆ ಮಹಾಬಲ ಸೆಟ್ಟಿ —ಪ್ರತಿವಾದಿ.

ಇವರೊಳಗೆ

ಪ್ರತಿವಾದಿ: ಮರ್ಡಿನ ಹೆಬ್ಬಾಡಿ ಕೆಂದೋಡಿಮನೆ ಮಹಾಬಲ ಸೆಟ್ಟಿ. ಉಡ್ಪಿತಾಲ್ಲೂಕು ಹಂದಾಡಿ ಗ್ರಾಮದಲ್ಲಿರುವವ.

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವದೇನೆಂದ್ರೆ ವಾದಿಯು ಅಂಗಡಿಯಲ್ಲಿ ನೀವು ತಾ. 15-11-1950ರ ಲಾಗಾಯ್ತು ನಡ್ಸಿಕೊಂಡು ಬಂದ ಲೇವಾದೇವಿ ಬಾಬ್ತು ನಿಮ್ಮ ಮೇಲೆ ಬಾಕಿ ಇರುವ ಆ್ಯವೇಜನ್ನು ಬರಮಾಡಿಕೊಳ್ಳುವರೆ ದಾಕ್ಲು ಮಾಡಿದ ಮೇಲ್ಕಂಡ ದಾವೆಯು ನಿಮ್ಮ ಆಪ್ಪೈರು ನೋಟೀಸು ಬಗ್ಗೆ ತಾ. 18-1-54ಕ್ಕೆ ಇಟ್ಟಿರುವದ್ರಿಂದ ಆ ಕುರಿತು ನಿಮ್ಮದೇನಾದರೂ ಆಕ್ಷೇಪ ವಗೈರೆ ಇದ್ದಲ್ಲಿ ಸದ್ರಿ ದಿವಸ ಪೂರ್ವಾಹ್ನ ಗಂಟೆ 11ಕ್ಕೆ ಮೇಲ್ಕಂಡ ಕೋರ್ಟು ಮುಂದೆ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ಸದ್ರಿ ವ್ಯಾಜ್ಯವನ್ನು ಏಕಪಕ್ಷವಾಗಿ ತೀರ್ಮಾನಿಸಲಾದೀತು ಎಂತ ಮೇಲ್ಕಂಡ ಕೋರ್ಟಿನ ಹುಕುಂ ಪ್ರಕಾರ ತಿಳಿಯಪಡಿಸಿಯದೆ.

K. Varadaraya Pai

ವಾದಿಕಡೆ ವಕೀಲರು

ಮೊಕ್ಕಾಂ ಉಡುಪಿ. ತಾರೀಕು, 25.12.53.

'ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಇವರ

ನವಜೀವಾತು

ಎಂಬ

ಸೂತಿಕಾರಸಾಯನ

ಬಾಣಂತಿಯರ ಸಲುವಾಗಿಯೇ ದೇಹ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದವು ಧುರದ್ರವರಸಾಯನ.



ಪಟ್ಟಿನ ಮಾಹಿತಿಗೆ — ಡಾ। ಯಂ ಸಿ. ಶಾಸ್ತ್ರೀ, ಯಲ್. ಐ. ಎಂ.

ಕೊಡಿಯಾಲಬೈಲು ಪೋಸ್ಟು, (ಮಂಗಳೂರು)

ಪ್ರತಿನಿಧಿ:— ಡಾ। ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ

(೧೧ನೇ ಪುಟದಿಂದ)

ಪ್ರಾಂತಗಳನ್ನು ಕೃಶಮಾಡಿ ಕುಗ್ಗಿಸಿ ಕೇಂದ್ರ ಹೇಗೆ ಬಲಗೊಂಡೀತು? ಕನ್ನಡಿಗರ ಚರಿತ್ರೆಯ ಸ್ವರೂಪ ಲಕ್ಷಣವಾಗಿರುವ ಸಭ್ಯತೆಯೂ ನಯ ಸಂಸ್ಕಾರ ತಾಳ್ಮೆಗಳೂ ಇಂಥ ಸಮಯದಲ್ಲಿ ಒದಗಲಿ. ಆದರೆ ಕರ್ನಾಟಕದ ನಿರ್ಮಾಣ, ಹೊಸ ವಿಂಗಡಣೆಯಲ್ಲಿ ಮೊದಲ ಗಣ್ಯತೆಪಡೆಯಬೇಕು; ನಮ್ಮ ಪ್ರಾಂತ ಆಗದಿದ್ದರೆ ಎರಡು ಕೋಟಿ ಜನಕ್ಕೆ ಪರಮ ಅನ್ಯಾಯವಾಗುತ್ತದೆ ಈ ಪ್ರಾಂತ ನಿರ್ಮಾಣವಾಗುವವರೆಗೂ ನಮ್ಮ ಮನಸ್ಸು ನೆಲೆಗೆ ನಿಲ್ಲದು. ಇಲ್ಲಿ ಕ್ರೋಧಗಳನ್ನು ನೆಲಸಲು ಬಿಡಬೇಡಿರಿ ಎಂದು ಈ ಸಮ್ಮೇಳನದವರು ಕೇಂದ್ರಕ್ಕೆ ಸ್ಪಷ್ಟವಾಗಿ ತಿಳಿಸೋಣ

ಪ್ರಾಂತದ ಪ್ರಗತಿಯಿಂದಲೇ ದೇಶದ ಪ್ರಗತಿಯಾಗಬಲ್ಲದು. ಪ್ರಾಂತಗಳನ್ನು ಕೇಳುವವರ ಬಗೆಗೆ ಕುತ್ಸಿತವಾದ ಮಾತುಗಳನ್ನಾಡಿ ಅವರನ್ನು ನಿರಾಶೆಗೊಳಿಸಿದರೆ ನಡೆಯದು. ಸರ್ವ ಸಮರ್ಥವಾದ ಕೇಂದ್ರ ಸರಕಾರ ಈ ವಿಷಯವನ್ನು ಕೂಲಂಕಷವಾಗಿ ವಿಚಾರಿಸಲಿ ಹತ್ತು ಜನರಂತೆ ಕನ್ನಡಿಗರೂ ಏಳ್ಗೆಗೆ ಬರಲಿ. ಕನ್ನಡ ನಾಡಿನ ಭಾಗ್ಯ ಬೆಳೆಯಲಿ. ಒಟ್ಟು ರಾಷ್ಟ್ರದ ಇಪ್ಪತ್ತೈದು ಭಾಗದಲ್ಲಿ ಒಂದಾದ ಇದು ಭಾರತದ ಕೀರ್ತಿ, ಶಕ್ತಿ, ಒಕ್ಕಟ್ಟುಗಳಿಗೆ ಸತತವಾಗಿ ತನ್ನ ಬಗೆಸಿನ ಎಲ್ಲವನ್ನೂ ನಿವೇದಿಸಿ ಬಾಗಲಿ; ತಾನು ಬಾಳಿ ಎಲ್ಲರನ್ನೂ ಬಾಳಿಸಲಿ.

ಪತ್ರಿಕೆಗಳ ಕರ್ತವ್ಯ

ಮುಂಬಯಿ ರಾಜ್ಯದ ಉಪಮಂತ್ರಿ ಶ್ರೀ ಬಿ. ಡಿ. ಜತ್ತಿಯವರು ಸಾಹಿತ್ಯ ಸಮ್ಮೇಳನದ ಅಂಗವಾಗಿ ಏರ್ಪಡಿಸಿದ ಕಲಾ ಪ್ರದರ್ಶನವನ್ನು ಉದ್ಘಾಟನೆ ಮಾಡುತ್ತಾ ಸಾರ್ವಜನಿಕರೂ ಸರಕಾರದವರೂ ಕನ್ನಡದ ಕಲಾವಿದರಿಗೆ ಎಲ್ಲ ಬಗೆಯಿಂದ ಪ್ರೋತ್ಸಾಹ ನೀಡಬೇಕೆಂದು ಬಿನ್ನವಿಸಿಕೊಂಡರು. ಸ್ವಾಗತಾಧ್ಯಕ್ಷರಾದ ಶ್ರೀ ಎಸ್. ಎ. ಜೈವಂತರು ಮಂತ್ರಿಗಳನ್ನು ಪರಿಚಯಮಾಡಿಕೊಳ್ಳುತ್ತಾ-"ನಮ್ಮ ಕಲಾಕಾರರು, ಚಿತ್ರಕಾರರು, ಗಾಯಕರು, ನರ್ತಕರು---ದೇವರಿಗೆ ಮುಡಿಪೆಂದೇ ತಮ್ಮ ಕಲೆಯನ್ನು ಬೆಳೆಯಿಸಿ, ಬಳಸಿ ಕೃತಾರ್ಥರಾದರು. ನಮ್ಮಲ್ಲಿ ಕಲಾಕಾರರಿಗೆ ಗುಡಿಕಾರರೆಂದು ಸಾರ್ಥಕನಾಮವಿದೆ. ಇವರು ಶಿಲಾ ಸ್ಥಾಪತ್ಯ ಕಲೆಯಿಂದ ಜಗತ್ತನ್ನೆ ಬೆರಗುಗೊಳಿಸುವಂತೆ ಕಲೆಯಲ್ಲಿ ಜೀವಕಳೆ ತುಂಬಿರುವರು. ಜೀವನದ ಅಂಗ ಪ್ರತ್ಯಂಗಗಳಲ್ಲಿ ಜೀವನಾತ್ಮಕವಾಗಿ ರಕ್ತವಾಗಿ ಹರಿಯುತ್ತಿರುವ ಈ ಕಲೆಗೆ ರಾಜಾಶ್ರಯ ಮತ್ತು ಜನತೆಯ ಪ್ರೋತ್ಸಾಹ ನಿರಂತರ ಸಲ್ಲಬೇಕಾದುದು ವಿಹಿತ" ಎಂದರು.

ಸಂಯುಕ್ತ ಕರ್ನಾಟಕ ದೈನಿಕದ ಸಹಸಂಪಾದಕರಾದ ಶ್ರೀ ನಾಯಕ ವೆಂಕಟರಾಯರು ಪತ್ರಿಕಾ ಗೋಷ್ಠಿಯ ಅಧ್ಯಕ್ಷಸ್ಥಾನದಿಂದ ಆಶುಭಾಷಣ ಮಾಡಿದರು- "ಸಾಹಿತ್ಯದಲ್ಲಿ ಪತ್ರಿಕಾ ಲೇಖನದ ಸ್ಥಾನವೇನೆಂಬ ಪ್ರಶ್ನೆಗೆ ಸಮರ್ಪಕವಾದ ಉತ್ತರವನ್ನು ಕೊಡುವುದು ನಿಜವಾಗಿ ಹಗುರವಾದ ವಿಷಯವಲ್ಲ. ಸಾಹಿತ್ಯವು ಜನ ಜೀವನದ ಪ್ರತಿಬಿಂಬವೆಂಬ ಲಕ್ಷಣವು ಸರಿಯೆಂದು ಒಪ್ಪಿದಲ್ಲಿ ಆ ಜನಜೀವನಕ್ಕೆ ಅತ್ಯಂತ ನಿಕಟವರ್ತಿಯಾದ ಪತ್ರಿಕಾ ಲೇಖನವು ಸಾಹಿತ್ಯಕ್ಕೆ ಸಮೀಪದ ಬಂಧುವೆಂದು ಒಪ್ಪಲೇ ಬೇಕಾಗುವುದು. ರಾಜಕೀಯ ಸ್ವಾತಂತ್ರ್ಯವು ಪ್ರಾಪ್ತವಾದಂದಿನಿಂದ ಭಾರತೀಯ ಪತ್ರಿಕೋದ್ಯಮದಲ್ಲಿ ಕ್ರಾಂತಿಕರ ಬದಲಾವಣೆಗಳು ತೊಡಗಿವೆ. ಅವುಗಳಲ್ಲಿ ದೇಶೀಯ ಭಾಷಾ ಪತ್ರಿಕೆಗಳ ಮಹತಿಯು ಬೆಳೆಯುತ್ತಿರುವುದು ಮುಖ್ಯವಾಗಿ ಗಮನಿಸತಕ್ಕ ಅಂಶ. ಆಂಗ್ಲರ ಪ್ರಭುತ್ವಕಾಲದಲ್ಲಿ ಆಂಗ್ಲಭಾಷಾ ಪತ್ರಿಕೆಗಳಿದ್ದ ಅವಸ್ತವ ಮಹತ್ವವು ಇಂದು ಕಡಿಮೆಯಾಗುತ್ತಾ ಬರುವುದು ಸುಚಿಹ್ನ. ನಿರಾಯಾಸವಾಗಿಯೂ ಸಹಜ ಗತಿಯಿಂದಲೂ ಭಾರತೀಯ ಭಾಷಾ ಪತ್ರಿಕೋದ್ಯಮವು ದಿನ ದಿನಕ್ಕೆ ಪ್ರಗತಿಯನ್ನು ಹೊಂದುತ್ತ ತನ್ನ ನ್ಯಾಯವಾದ ಸ್ಥಾನವನ್ನು ಜನ ಜೀವನದಲ್ಲಿ ಬೇಗನೆ ಪಡೆಯುವ ಶುಭ ಶಕುನಗಳು ಸ್ಪಷ್ಟವಾಗಿ ಗೋಚರಿಸುತ್ತವೆ. ಹಿಂದೀ ಭಾಷೆಯಲ್ಲಿ ಸುದ್ದಿ ಸಮಾಚಾರಗಳನ್ನು ಟೆಲಿಪ್ರಿಂಟರ್‌ನ ಮೂಲಕ ಪತ್ರಿಕೆಗಳಿಗೆ ಒದಗಿಸಬೇಕೆಂಬ ವಿಚಾರ ಗಂಭೀರ ಪರಿಶೀಲನೆಯಲ್ಲಿದೆ. ಅಂತಹ ಸೌಕರ್ಯವು ದೊರೆತರೆ ಕನ್ನಡವೇ ಮೊದಲಾದ ಪ್ರಾದೇಶಿಕ ಭಾಷಾ ಪತ್ರಿಕೆಗಳ ಕೆಲಸ ಹಗುರವಾಗುವುದು. ಆಂಗ್ಲ ಭಾಷೆಯಲ್ಲಿ ಬರುವ ವಾರ್ತೆಗಳನ್ನು ಕನ್ನಡಿಸುವುದಕ್ಕಿಂತ ಹಿಂದೀ ಭಾಷೆಯಲ್ಲಿ ಬರುವ ಸುದ್ದಿಗಳನ್ನು ಕನ್ನಡಿಸುವುದು ಸುಲಭ. ಅನೇಕ ಪಾರಿಭಾಷಿಕ ಶಬ್ದಗಳು ಭಾರತೀಯ ಭಾಷೆಗಳಿಗೆ ಸಾಮಾನ್ಯವಾಗಿರುವುದರಿಂದ ಭಾಷಾಂತರವು ಕಠಿಣವಾಗುವುದಿಲ್ಲ. ಜನರ ಸ್ವಾಭಾವಿಕ ಪ್ರಗತಿಗೆ ಅನುಕೂಲವಾದ ಭಾರತೀಯ ಭಾಷೆಗಳು ಅವರ ಶಿಕ್ಷಣದ, ರಾಜಕೀಯ ವ್ಯವಹಾರದ, ವಾಣಿಜ್ಯ ವಿನಿಮಯದ, ಸಂಸ್ಕೃತಿಕ ಆದಾನ ಪ್ರದಾನದ ಮಾಧ್ಯಮಗಳಾಗುವುದು ಅಪರಿಹಾರ್ಯ. ಈ ಸಂಗತಿಗಳನ್ನು ಚೆನ್ನಾಗಿ ಲಕ್ಷ್ಯದಲ್ಲಿಟ್ಟುಕೊಂಡು ಅಂತಹ ಅವಶ್ಯಕತೆಗಳಿಗೆ ತಕ್ಕ ಕಸುವನ್ನು ಭಾರತೀಯ ಭಾಷೆಗಳು ಪಡೆಯುವಂತೆ ವಿಚಾರ ಪೂರ್ವಕ ಪ್ರಯತ್ನಗಳನ್ನು ಈಗಿಂದಲೇ ಭಾರತೀಯ ಭಾಷಾ ಪತ್ರಿಕೆಗಳು ಕೈಗೊಳ್ಳಬೇಕಾಗುವುದು

ವಿಧಾಯಕ ಮನೋಭೂಮಿಕೆ

ಭಾರತದ ರಾಜಕೀಯ ರಂಗದಲ್ಲಿ ಪ್ರಜಾಪ್ರಭುತ್ವ ಪದ್ಧತಿಯ ಅಂಗೀಕಾರದಿಂದ ಉಂಟಾದ ಹೊಸ ಸನ್ನಿವೇಶದ ಸಂಪೂರ್ಣ ಕಲ್ಪನೆಯು ಇಂದಿನ ಹಾಗೂ ಮುಂದಿನ ಪತ್ರಿಕೋದ್ಯಮಿಗಳಲ್ಲಿರುವುದು ಅಗತ್ಯ. ರಾಷ್ಟ್ರದ ಸಾರ್ವಾಂಗಿಕ ಪ್ರಗತಿಯನ್ನು ಸಾಧಿಸುವ ದೃಷ್ಟಿಯಿಂದ ಕೈಕೊಳ್ಳಲಾಗುತ್ತಿರುವ ಮಹಾ ಯೋಜನೆಗಳ ಬಾಧ್ಯತೆಯನ್ನು ಮತ್ತು ಅವುಗಳ ಹೊಣೆಯನ್ನು ಹೊರಲುದ್ಯುಕ್ತರಾಗಿರುವ ಪ್ರಜಾ ಧುರೀಣರ ಧೈರ್ಯ ಸ್ಥೈರ್ಯಗಳನ್ನು ಹಾಗು ಆ ಯೋಜನೆಗಳ ಯಶಸ್ಸಿನಿಂದ ಮಹಾ ಜನತೆಗಾಗಲಿರುವ ಅದ್ಭುತ ಪ್ರಯೋಜನವನ್ನು ಲಕ್ಷ್ಯದಲ್ಲಿಟ್ಟುಕೊಂಡು ವಿಧಾಯಕ ಮನೋಭೂಮಿಕೆಯನ್ನು ಅಳವಡಿಸಿಕೊಂಡು ಕನ್ನಡದ ಪತ್ರಿಕೋದ್ಯಮಿಗಳು ಮುನ್ನಡೆಯುವುದು ನಾಡಿನ ಏಳಿಗೆಗೆ ಹಿತಕರ. ಅರ್ಥಾತ್ ಪ್ರಜಾಪ್ರಭುತ್ವದಲ್ಲಿ ಆತ್ಮಸಂಯಮದ ಅಂಕುಶವೇ ಪ್ರಭಾವಿಯಾದುದೆಂಬುದನ್ನು ಮನಗಂಡು, ಅದಕ್ಕನುಸಾರ ವರ್ತಿಸುವ ಮನೋಧರ್ಮವನ್ನು ಜನ ಸಾಮಾನ್ಯರಲ್ಲಿ ನಿರ್ಮಿಸುವ ಗುರುತರವಾದ ಹೊಣೆ ಪತ್ರಿಕೆಗಳ ಮೇಲಿರುತ್ತದೆ. ಇನ್ನು ಬಾಲ್ಯಾವಸ್ಥೆಯಲ್ಲಿರುವ ಪತ್ರಿಕೋದ್ಯಮಕ್ಕೆ ವಾಙ್ಮಯ ತಪಸ್ಸಿನ ಅವಶ್ಯಕತೆ ವಿಶೇಷವಾಗಿರುತ್ತದೆ. ಆತ್ಮಸಂಯಮದ ಕಟ್ಟುಗೊಳಗಾಗಿ ಪತ್ರಿಕೋದ್ಯಮಿಯು ತನ್ನ ವ್ಯವಸಾಯವನ್ನು ನಡೆಸಲು ನಿರ್ಧರಿಸಿದರೆ ಆತನ ಬದಲಣಿಗೆಯಲ್ಲಿ ವಿಚಾರ ವಿವೇಕಗಳ ಪ್ರಭಾವವು ಹೆಚ್ಚಿಗೆ ಕಂಡು ಬಂದು ವಿಕೃತ ಮನೋಭೂಮಿಕೆಗೆ ಆಸ್ಪದವಿಲ್ಲದಂತಾಗುವುದು. ಆಗ ಆತನ ಮಾತಿಗೆ ಅಸದೃಶವಾದ, ಅಪೂರ್ವವಾದ ಮಹತ್ವಪ್ರಾಪ್ತವಾಗುವುದು.

ಈ ಸಂದರ್ಭದಲ್ಲಿ ಶ್ರೀ ಶಿವರಾಮ ಕಾರಂತರು "ಪತ್ರಿಕೋದ್ಯಮದಲ್ಲಿ ರುಚಿರುಚಿ" ಎಂಬ ಕುರಿತು ಮಾತನಾಡುತ್ತ ಜನರಲ್ಲಿರುವ ಮನೋದೌರ್ಬಲ್ಯವನ್ನು ಹುಡುಕಿಕೊಂಡು, ಅದನ್ನು ಕಣ್ಣು ಕುಕ್ಕಿಸಿ ಮುಂದಿಡುವುದಷ್ಟೆ ಅರುಚಿಯೆಂದರು. "ಅನ್ನ ಮಾತ್ರೆಯನ್ನು ಬರಗಾಲ ಮಂತ್ರಿಯೆನ್ನುವುದೂ ಸರಿಯಲ್ಲ. ನಮ್ಮವರಿಗೆ ಬುದ್ಧಿದಾರಿದ್ರ್ಯವಿದೆಯೆನ್ನುವುದೂ ಸಲ್ಲದು. ಸಂಪಾದಕರಾದವರು ವಿಷಯಕ್ಕೆ ಬೇಕಾದುದನ್ನಲ್ಲಿ ಪರಿಶ್ರಮದಿಂದ ಸಂಗ್ರಹಿಸಿ, ವಿವೇಚಿಸಿ ಬರೆದರೆ ಪತ್ರಿಕೆಯ ರುಚಿರುಚಿ ಬೆಳೆಯುತ್ತದೆ" ಎಂದರು.

ಯಕ್ಷಗಾನ ಕಲೆಯ ಮಹತ್ವ

ಮುಂದೆ ಯಕ್ಷಗಾನ ಗೋಷ್ಠಿ ನಡೆದಾಗ, ಅಧ್ಯಕ್ಷರಾದ ಶ್ರೀ ಕೆ. ಪಿ. ವೆಂಕಪ್ಪ ಶೆಟ್ಟಿಯವರ ಪರಿಚಯ ಮಾಡಿಕೊಡುತ್ತಾ ಶ್ರೀ ಕಾರಂತರು "ಕಳೆದ 20 ವರ್ಷಗಳಿಂದ ಯಕ್ಷ ನಾಟಕ ಕಲೆಯನ್ನೂ ಆರಂಭಿಸಿ ಪ್ರಸಿದ್ಧಿ ಪಡೆದ ವೆಂಕಪ್ಪ ಶೆಟ್ಟರ ಭಾರತದ ಗುರುಕುಲವೆಂಬ ಯಕ್ಷಗಾನ ಪ್ರಬಂಧಕ್ಕೆ ಈ ವರ್ಷ ಮದ್ರಾಸು ಸರಕಾರದ ಬಹುಮಾನ ದೊರೆತಿದ" ಎಂದರು. ಅಧ್ಯಕ್ಷರು ಯಕ್ಷಗಾನದ ಪೂರ್ವ ಪರಂಪರೆಯ ಸಿಂಹಾವಲೋಕನವನ್ನು ಮಾಡಿ ಕನ್ನಡ ಸಾಹಿತ್ಯದಲ್ಲಿ ಯಕ್ಷಗಾನಕ್ಕಿರುವ ಮಹತ್ವವನ್ನು ವಿವರಿಸಿದರು. "ಜನಪದ ಸಾಹಿತ್ಯಗಳಲ್ಲಿ ಯಕ್ಷಗಾನವೇ ಶ್ರೇಷ್ಠ. ದ್ರಾವಿಡ ಭಾಷೆಗಳಲ್ಲಿ ಯಕ್ಷಗಾನವು ಬೇರೆ ಬೇರೆ ಶಬ್ದಗಳಿಂದ ಸಿದ್ಧಿ ಹೊಂದಿದೆ. ಕೇರಳದ ಕಥಕ್ಕಳಿಯಲ್ಲಿರುವ ಶುದ್ಧ ಮೃದಂಗ ಚೆಂಡೆಗಳೆಂಬ ಚರ್ಮ ವಾದ್ಯಗಳು, ಜಾಗಟೆ, ತಾಳ, ಚಕ್ರತಾಳಗಳೆಂಬ ಘನವಾದ್ಯಗಳು, ವೇಷ ಭೂಷಣಗಳು ಕನ್ನಡದಲ್ಲೂ ಇವೆ. ಕೇರಳದವರು ಹಸ್ತ ಮುದ್ರಿಕೆಗಳ ಪ್ರದರ್ಶನದಿಂದ ಮೂಕ ನಾಟಕವಾಡಿದರೆ, ಕನ್ನಡದ ಬಯಲಾಟದವರು ಪಾತ್ರವರ್ಗದ ವಕ್ತೃತ್ವ ಕಲೆಯನ್ನು ತೋರಿಸುವರು. ಹೀಗೆ ಕನ್ನಡದ ಮೂಕನಾಟಕವು ಅಭಿನಯ ಹಾಗೂ ವಕ್ತೃತ್ವ ಕಲೆಗಳಿಂದ ಜನಪದಕಲಾ ಶಿರೋಮಣಿ ಎನಿಸಿದೆ ಮರಾಠಿ ನಾಟಕ ಕಲೆಗೆ ಕರ್ನಾಟಕದ ಬಯಲಾಟಗಳೇ ಸ್ಫೂರ್ತಿ ಕೊಟ್ಟವು ಕನ್ನಡದ ಹಳ್ಳಿ ಮೂಲೆಗಳಲ್ಲಿ ಯಕ್ಷಗಾನ ದಶಾವತಾರದ ಬಯಲಾಟಗಳೆಂದರೆ, ಅದೊಂದು ಹಬ್ಬದೂಟದಂತೆ, ಮಹೋತ್ಸವದಂತೆ ಮನಮೋಹಕವಾದದ್ದು. ಗ್ರಾಮಾಂತರಗಳ ಜನರಿಗೆ ರಾಮಾಯಣ, ಮಹಾಭಾರತಗಳ ವಿಭೂತಿ ಪುರುಷರ ಚರಿತ್ರೆಗಳನ್ನು ನಾಟ್ಯಾಭಿನಯ ಪ್ರದರ್ಶನಗಳಿಂದ ಬೋಧಿಸುವ ರಾತ್ರಿ ಶಾಲೆಯೇ ಯಕ್ಷಗಾನ ನಾಟಕ. ಇಂತಹ ಕಲೆ ಸರ್ವಾಂಗ ಸುಂದರವಾಗಬೇಕಿದ್ದರೆ ಅದರ ಪುನರ್ಘಟನೆ ಆಗಬೇಕು; ಅದನ್ನು ಉದ್ಧರಿಸಬೇಕು' ಎಂದರು

ವಿಜ್ಞಾನ---ತತ್ವಜ್ಞಾನ

ಬಳ್ಳಾರಿಯ ವೀರಶೈವ ಕಾಲೇಜಿನ ಪ್ರಿನ್ಸಿಪಾಲರಾದ ಪಡುಕೋಣೆ ರಮಾನಂದ ರಾಯರು ವಿಜ್ಞಾನ ಗೋಷ್ಠಿಯ ಅಧ್ಯಕ್ಷ ಸ್ಥಾನದಿಂದ ಮಾಡಿದ ಭಾಷಣದಲ್ಲಿ ವಿಜ್ಞಾನ ಮತ್ತು ತತ್ವಜ್ಞಾನಗಳು ಇದೀಗ ತೀರ ಸಮೀಪದಲ್ಲಿ ಬರತೊಡಗಿವೆಯೆಂದೂ ನಮ್ಮ ಶ್ರುತಿ, ಸ್ಮೃತಿ, ಪುರಾಣಗಳಲ್ಲಿನ ದಾರ್ಶನಿಕ ಪರಂಪರೆಗೆ ಹೊಂದಿಕೊಳ್ಳುವ ರೀತಿಯಲ್ಲಿ ಇಂದಿನ ವಿಜ್ಞಾನವಾದವು ಬೆಳೆಯುತ್ತಲಿದೆಯೆಂದೂ ಅಭಿಪ್ರಾಯಪಟ್ಟರು. "ನಮ್ಮ ಪ್ರಾಜ್ಞರೆಲ್ಲ ನಿಸರ್ಗದ ಶೋಧನೆಗಿಂತಲೂ ಹೆಚ್ಚಾಗಿ ಆತ್ಮ ಶೋಧನೆಗೆ ಪ್ರಾಶಸ್ತ್ಯ ಕೊಟ್ಟುದರಿಂದಲೇ ಪಾಶ್ಚಾತ್ಯ ದೇಶಗಳಲ್ಲಿ ಬೆಳದಂತೆ ನಮ್ಮಲ್ಲಿ ವಿಜ್ಞಾನ ಮುಂದರಿಯಲಿಲ್ಲ. ಹಾಗೆಂದು ನಮ್ಮ ಪೂರ್ವಿಕರು ವಿಜ್ಞಾನವನ್ನು ಸಂಪೂರ್ಣ ಕಡೆಗಾಣಿಸಿರಲಿಲ್ಲ---ನೈಸರ್ಗಿಕ ವಿಜ್ಞಾನದಲ್ಲೂ ವಿಚಾರಾತ್ಮಕ ವಿಜ್ಞಾನದಲ್ಲೂ ಅವರು ಅನೇಕ ಸಂಗತಿಗಳಲ್ಲಿ ಆಗಿನ ನಾಗರಿಕ ಜನಾಂಗಗಳಿಗಿಂತಲೂ ಮುಂದರಿದಿದ್ದರು.

ಹೊಸ ಯುಗದಲ್ಲಿ ಕಾಲಿಟ್ಟ ನಮಗೆ ಹೊಸದಾದ ಭಾವನೆಗಳನ್ನು ಒದಗಿಸಿಕೊಳ್ಳುವುದ ಅವಶ್ಯವೆನಿಸಿದೆ---ಈ ಹೊಸ ವಿಚಾರದಂತೆ ನಮ್ಮ ವಿಜ್ಞಾನವನ್ನೆಲ್ಲ ಜಡವಸ್ತು, ಆಕಾಶ ಮತ್ತು ಕಾಲಗಳೆಂಬ ಮೂರು ಅಂಶಗಳ ಮೇಲೆ ಹೊಂದಿಸಬಹುದು. ಐನ್‌ಸ್ಟೀನರು ಕೊಟ್ಟಿರುವ ವಿಶ್ವದ ಚಿತ್ರದಲ್ಲಿ ವಸ್ತು, ಕಾಲ ಇವುಗಳಿಗೆ ಸ್ವತಂತ್ರವಾದ ವ್ಯಕ್ತಿತ್ವವಿಲ್ಲ. ಆಕಾಶ---ಎಂಬ ಅಖಂಡ ದ್ರವ್ಯದಲ್ಲಿ ನಮ್ಮ ಅನುಭವಕ್ಕೆ ಬರುವ ವಸ್ತುಗಳೆಲ್ಲ ಬರೇ ಗ್ರಂಥಿಗಳು. ಅದ್ಭುತ ಸಂಶೋಧನೆ ಸಾಧಿಸಿದ ವಿಜ್ಞಾನದ ಈ ಮಾಹಿತಿಯನ್ನವಲೋಕಿಸಿದರೆ ಬೃಹದಾರಣ್ಯಕೋಪನಿಷತ್ತಿನಲ್ಲಿ ಮಹಾ ವಾಕ್ಯಗಳಲ್ಲಿ ಅಡಕವಾಗಿರುವ ಸತ್ಯಕ್ಕೇನೇ ನಮ್ಮ ವಿಜ್ಞಾನದ ಇಂದಿನ ವಿಚಾರಗಳು ಧಾವಿಸುತ್ತಾವೆಂದು ವಿದಿತವಾಗುತ್ತದೆ" ಎಂದರು.

ಸ್ವೀಕೃತ ಗೊತ್ತುವಳಿಗಳು

ಬಹಿರಂಗ ಅಧಿವೇಶನದ ಮಹತ್ವದ ಕೆಲವು ಗೊತ್ತುವಳಿಗಳು ಸ್ವೀಕಾರಗೊಂಡವು. ಇವುಗಳಲ್ಲಿ ರಾಜ್ಯಗಳ ಪುನರ್ವಿಂಗಡಣೆಯ ಪ್ರಶ್ನೆಯನ್ನು ವಿಚಾರಿಸಲು ಆಯೋಗದ ನೇಮಕಗೊಂಡುದನ್ನು ಸ್ವಾಗತಿಸಿ ಕರ್ನಾಟಕ ರಾಜ್ಯವು ಬೇಗ ನಿರ್ಮಿಸಲ್ಪಡುವುದೆಂದು ಆಶೋಕ್ತಗೊಳಿಸುವ ಠರಾವು ಇಂತಿದೆ-

"ಭಾರತ ಸರಕಾರವು ಪ್ರಾಂತಗಳ ಪುನರ್ರಚನೆಯ ವಿಷಯವನ್ನು ಪರಿಶೀಲಿಸಿ ಸಲಹೆ ಕೊಟ್ಟ ಉಚ್ಚಾಧಿಕಾರ ಆಯೋಗ ನೇಮಿಸಿರುವುದನ್ನು ಈ ಸಮ್ಮೇಳನ ಸ್ವಾಗತಿಸುತ್ತದೆ, ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನ ಧೋರಣೆಗೆ ಅನುಸಾರವಾಗಿ ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಬೆಳವಣಿಗೆಯಾಗುವುದಕ್ಕೆ ನೆರವಾಗುವಂತೆ ಶೀಘ್ರದಲ್ಲಿ ಕರ್ನಾಟಕಪ್ರಾಂತ ರಚನೆಯಾಗುತ್ತದೆಂದು ನಂಬುತ್ತಾರೆ. ಈ ಸಂದರ್ಭದಲ್ಲಿ ಸಂಬಂಧಪಟ್ಟ ಸೋದರ ಭಾಷಾ ಬಂಧುಗಳು ಸ್ನೇಹ ಸೌಹಾರ್ದದಿಂದ ಸಹಕಾರ ನೀಡುವರೆಂದು ಸಮ್ಮೇಳನ ಆಶಿಸುತ್ತದೆ."

ಸಮ್ಮೇಳನವು ಕನ್ನಡಕ್ಕೋಸ್ಕರ ಶ್ರಮಿಸಿ ಮಡಿದ ಮಹನೀಯರ ಸಂಗತಿಯಲ್ಲಿ ದುಃಖ ವ್ಯಕ್ತಪಡಿಸುವ, ಆಕಾಶವಾಣಿಯಲ್ಲಿ ಬಿತ್ತರಿಸಿದ ಕಾರ್ಯಕ್ರಮಗಳ ಸೌಮ್ಯವನ್ನು ಲೇಖಕರಿಗೆ ಕೊಡಬೇಕೆನ್ನುವ, ತಾಲೂಕಿನ ಮುಖ್ಯ ಸ್ಥಳಗಳಲ್ಲಿ ಸಾಹಿತ್ಯ ಸಂಘಗಳ ಸ್ಥಾಪನೆಯಾಗಬೇಕೆನ್ನುವ, ಕನ್ನಡದಲ್ಲಿಯೂ ಕೇಂದ್ರ ಸರಕಾರವು ಸಾಕ್ಷಿ ಚಿತ್ರಗಳನ್ನು ತಯಾರಿಸಬೇಕೆಂದು ಒತ್ತಾಯಿಸುವ, ಪ್ರಾಚೀನ ಕವಿಗಳ ಕೃತಿಗಳನ್ನು ಪ್ರಕಟಿಸಬೇಕೆಂದು ಸಾಹಿತ್ಯ ಪರಿಷತ್ತನ್ನು ವಿನಂತಿಸುವ, ಯಕ್ಷಗಾನ ನಾಟಕ ಕಲೆಗೆ ಸರಕಾರ ಧನಸಹಾಯ ನೀಡಿ ಪ್ರೋತ್ಸಾಹಿಸಬೇಕೆನ್ನುವ ಗೊತ್ತುವಳಿಗೂ ಅಂಗೀಕೃತವಾದವು.

ಅಧ್ಯಕ್ಷರು ಸಮಾರೋಪ ಭಾಷಣದಲ್ಲಿ ಸಮ್ಮೇಳನದ ವ್ಯವಸ್ಥೆಯನ್ನು ಚೆನ್ನಾಗಿ ಮಾಡಿದ ಸಂಘದವರ ಉತ್ಸಾಹ ಮತ್ತು ಪ್ರಯತ್ನಗಳನ್ನು ಪ್ರಶಂಸಿಸಿ, ಸಮ್ಮೇಳನ ಅತ್ಯಂತ ಯಶಸ್ವಿಯಾಗಿ ನೆರವೇರುವಂತೆ ಸಹಕರಿಸಿದ ಕುಮಟೆಯ ನಾಗರಿಕರಿಗೆ ಅಭಿನಂದನೆಗಳನ್ನು ತಿಳಿಸಿದರು. 'ಸಮ್ಮೇಳನಕ್ಕೆ ಕನ್ನಡಿಗರು ಅಭೂತಪೂರ್ವ ಬೆಂಬಲವನ್ನೂ ನೀಡಬೇಕು ಬರೇ ಟೀಕೆಗಳಲ್ಲಿ ಆಸಕ್ತರಾಗುವುದಕ್ಕಿಂತ ವಿಧಾಯಕ ಕೆಲಸಗಳಲ್ಲಿ ಮುನ್ನುಗ್ಗಬೇಕು." ಎಂದರು. ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಗಳಾದ ಶ್ರೀ ಎ. ಎನ್. ಮೂರ್ತಿ ರಾಯರು ಮುಂದಿನ ಸಮ್ಮೇಳನವನ್ನು ನಡೆಸಲು ಧಾರವಾಡ, ಮೈಸೂರುಗಳಿಂದ ಅಧಿಕೃತ ಹಾಗೂ ಬೆಳಗಾಂವಿಯಿಂದ ಅನಧಿಕೃತ ಆಮಂತ್ರಣಗಳು ಬಂದಿವೆಯೆಂದು ಹೇಳಿದರು.

ಸಮ್ಮೇಳನ ಕಾಲದಲ್ಲಿ ಮನೋರಂಜನೆ ಹಾಗೂ ಇತರ ಚಟುವಟಿಕೆಗಳನ್ನೊಳಗೊಂಡ ವಿವಿಧ ಕಾರ್ಯಕ್ರಮಗಳು ಜರಗಿ, ನೆರೆದ ಐದಾರುಸಾವಿರ ಜನರ ಮನಸ್ಸಿನ ಉತ್ಸಾಹ ಸೆಳೆದವು.

Edited, Printed & Published By K. H. Shetty at the Navayuga Press, Udipi, S. India

Regd. No. M. 3618

Licence No 31
Licensed to Post without Prepayment.

ನವಯುಗ

Vol 33 No. 19

14-1-1954

ವರ್ಷ ೩೩ ವಾರ ೧೯

ಏಕೀಕರಿಸುವ ಘಟಕ

ಶಾಂತಿಕಾಲದಲ್ಲಿ ಆರ್ಥಿಕ ಪ್ರಗತಿಯನ್ನೂ ಸಾಮಾಜಿಕ ಅಭ್ಯುದಯವನ್ನೂ ಕೈಗೂಡಿಸುವುದಕ್ಕೆ ಮತ್ತು ಯುದ್ಧದ ಗಳಿಗೆಯಲ್ಲಿ ರಾಷ್ಟ್ರದ ಭದ್ರತೆಯನ್ನು ಕಾಯ್ದುಕೊಂಡು ಸ್ವಾತಂತ್ರ್ಯದ ರಕ್ಷಣೆ ಮಾಡುವುದಕ್ಕೆ ಸಮರ್ಥವಾದ ಸರಕಾರವನ್ನು ಒಂದು ದೇಶ ಪಡೆದಿರುವುದು ಅತ್ಯಗತ್ಯ. ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಪಕ್ಷಸಂಘಟನೆಗಳೇ ಆಧಾರಭೂತವಾದ ಶಾಸನಾಂಗ ಅಸ್ತಿತ್ವದಲ್ಲಿದೆ – ಆದುದರಿಂದ ಸರಕಾರ ರಚಿಸುವ ಪಕ್ಷ ಸಬಲವೂ ಸಮರ್ಥವೂ ಆಗಿದ್ದರೆ ಮಾತ್ರ ರಾಷ್ಟ್ರದ ಕಷ್ಟಾರ್ಜಿತ ಸ್ವಾತಂತ್ರ್ಯವು ರಕ್ಷಿಸಲ್ಪಟ್ಟು, ಸರ್ವಾಂಗೀಣವಾದ ಏಳಿಗೆಯನ್ನು ಕೈಗೂಡಿಸಲು ಸಾಧ್ಯವಾಗುವುದು. ಜನತೆಯ ಬೆಂಬಲವನ್ನು ನಿಃಸಂದಿಗ್ಧವಾಗಿ ಪಡೆದುಕೊಂಡು ರಾಷ್ಟ್ರವನ್ನು ಮುನ್ನಡೆಯಿಸಬಲ್ಲ ಯೋಗ್ಯತೆ ಭಾರತದಲ್ಲಿ ಕಾಂಗ್ರೆಸು ಪಕ್ಷಕ್ಕೆ ಇರುವುದೆಂಬ ಸಂಗತಿ, ಆ ಪಕ್ಷದ ಹೆಸರಿನಲ್ಲಿ ಚುನಾವಣೆಯ ರಂಗದಲ್ಲಿ ಹೋರಾಡಿ ಗೆದ್ದು ಬಂದ ಪ್ರತಿನಿಧಿಗಳೇ ಸರಕಾರದ ಸೂತ್ರವಹಿಸಿರುವುದರಿಂದ, ಚೆನ್ನಾಗಿ ವ್ಯಕ್ತಗೊಂಡಿದೆ. ಆದರೂ ಬೇರೆ ಕೆಲವು ಪಕ್ಷಗಳೂ ಪ್ರಾಬಲ್ಯಕ್ಕೆ ಬಂದಂತೆ ತೋರುತ್ತಿರುವುದರಿಂದ, ಮತ್ತು ಕಾಂಗ್ರೆಸದ ಬಲ ದಿನೇ ದಿನೇ ಕ್ಷೀಣಿಸುತ್ತಿರುವಂತೆಯೂ ಭಾಸವಾಗುವುದರಿಂದ–ಕಾಂಗ್ರೆಸದ ಮಹತ್ವವನ್ನು ಮನವರಿಕೆ ಮಾಡಿಕೊಳ್ಳುವುದೂ ಹೊಸ ಸ್ಫೂರ್ತಿ ಮತ್ತು ಚೈತನ್ಯಗಳು ಈ ಮಹಾ ಸಂಸ್ಥೆಯಲ್ಲಿ ತುಂಬಿಕೊಳ್ಳುವಂತೆ ಮಾಡುವುದೂ ಅಪೇಕ್ಷಣೀಯವಾಗಿರುತ್ತದೆ.

ಕಲ್ಕತ್ತೆಯ ಸಮೀಪದ ಕಲ್ಯಾಣಿಯೆಂಬಲ್ಲಿ ಮುಂದಿನ ವಾರ ಅಖಿಲ ಭಾರತ ಕಾಂಗ್ರೆಸು ಮಹಾಧಿವೇಶನ ಜರಗುತ್ತದೆ—ಇದಕ್ಕೋಸ್ಕರ ಸುದೀರ್ಘವಾದ ಕಾರ್ಯಕ್ರಮವೂ ಸಿದ್ಧಗೊಂಡಿದೆ. ಬಹಿರಂಗ ಅಧಿವೇಶನವೇ ಮುಂತಾದ ಮುಖ್ಯವಾದ ಕಾರ್ಯಕ್ರಮಗಳೊಂದಿಗೆ—ಗ್ರಾಮೋದ್ಯೋಗಗಳ ಪ್ರದರ್ಶನದಿಂದ ತೊಡಗಿ ಯುವಕರ ಪರಿಷತ್ತು, ಮಹಿಳಾಗೋಷ್ಠಿ, ಬಾಲಕರಕೂಟ, ಮನೋರಂಜನೆಯಂಥ ಗೌಣ ಕಾರ್ಯಕ್ರಮಗಳೂ ನಡೆಯುತ್ತವೆ. ದೇಶದ ಪ್ರಕೃತ ಪರಿಸ್ಥಿತಿಯ ಸಿಂಹಾವಲೋಕನವನ್ನು ಮಾಡಿ, ಯಾವ ಮಾರ್ಗದಲ್ಲಿ ಇನ್ನುಮುಂದೆ ನಡೆಯಬೇಕೆಂದು ತೀರ್ಮಾನಿಸುವುದು ಈ ಬಗೆಯ ಅಧಿವೇಶನಗಳ ವೈಶಿಷ್ಟ್ಯ. ಪ್ರಕೃತ ಕಾಂಗ್ರೆಸು ಪ್ರಭೃತಿಗಳೇ ಸರಕಾರದ ಸೂತ್ರವನ್ನು ಕೈಗೆ ತೆಗೆದುಕೊಂಡಿರುವುದರಿಂದ, ಕಾಂಗ್ರೆಸಿನ ನಿರ್ಣಯ ಹಾಗೂ ಮಾರ್ಗದರ್ಶನಗಳೇ ರಾಷ್ಟ್ರೀಯ ಧೋರಣೆಯಾಗಿ ಪರಿಣಮಿಸುವುದು ಸಹಜ. ಈ ದೃಷ್ಟಿಯಿಂದ ದೇಶದ ಪ್ರತಿಯೊಬ್ಬನೂ ಕಲ್ಯಾಣಿಯ ಕಾಂಗ್ರೆಸು ತೋರಿಸುವ ಚಟುವಟಿಕೆಗಳ ಕಡೆಗೆ ಗಮನ ಕೊಡಬೇಕಾಗುತ್ತದೆ.

ಕಾಂಗ್ರೆಸು ಸಂಸ್ಥೆಯು ನಿರ್ವಹಿಸಲಿರುವ ದೊಡ್ಡ ಪಾತ್ರದ ಕುರಿತು ಉದ್ದುದ್ದ ಮಾತು ಕೇಳುತ್ತೇವೆ—ಸ್ವಾತಂತ್ರ್ಯಪೂರ್ವದಲ್ಲಿ ಯಾವುದೇ ತೆರನಾದ ಸಂಕುಚಿತ ಭಾವನೆಗೆ ಎಡೆ ಇಲ್ಲದೆ, ಉಜ್ವಲ ರಾಷ್ಟ್ರಭಕ್ತಿಯಿಂದಲೂ ಅಪಾರವಾದ ತ್ಯಾಗ ಸಹಿಷ್ಣುತೆಗಳಿಂದಲೂ ಸರ್ವಸ್ವವನ್ನೂ ಬಲಿಗೊಟ್ಟು ಹೋರಾಡುವ ಮನೋಭಾವವು ಕಾಂಗ್ರೆಸಿನಲ್ಲಿ ಆಮೂಲಾಗ್ರವಾಗಿ ವ್ಯಾಪಿಸಿದ್ದಿತು. ನಿಶ್ಚಿತ ಧ್ಯೇಯ ಮತ್ತದನ್ನು ಕೈಗೂಡಿಸುವ ದೃಢವಾದ ಸಂಕಲ್ಪ ಹಾಗೂ ಅದಕ್ಕೆ ತಕ್ಕುದಾದ ಸಮಂಜಸವಾದ ಸಾಧನಾ ಮಾರ್ಗಗಳು ಆಗ ಕಾಂಗ್ರೆಸಿಗರಿಗೆ ಜನಾನುರಾಗವನ್ನೂ ಸಮಾನುಭೂತಿ ಸಹಕಾರಗಳನ್ನೂ ಸಂಪಾದಿಸಿ ಕೊಟ್ಟವು. ರಾಷ್ಟ್ರದ ಏಳಿಗೆಗೆ ದಾಸ್ಯದ ಬಂಧನವು ಮೊದಲನೆಯ ಆತಂಕವೆಂಬುದರಿಂದಲೇ ಸ್ವಾತಂತ್ರ್ಯಕ್ಕೋಸ್ಕರ ಅಹಿಂಸಾ ನೀತಿಯಂತೆ ಹೋರಾಡಲು ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ಆದೇಶವಿತ್ತರು. ರಾಜಕೀಯ ಸ್ವಾತಂತ್ರ್ಯದ ಅಡಿಗಟ್ಟಿನ ಮೇಲೆ ಭದ್ರವಾದ ಕಲ್ಯಾಣ ರಾಷ್ಟ್ರವನ್ನು ನೆಲೆಗೊಳಿಸಬೇಕೆಂಬುದೂ ಅದು ಸರ್ವಕೃತವಾದ, ಸರ್ವಕಾಲಕ್ಕೂ ಸರ್ವಜನಾಂಗಕ್ಕೂ ಆದರಣೀಯವಾದ, ರಾಮರಾಜ್ಯಕ್ಕೆ ಸರಿಸಾಟಿಯಾಗಬೇಕೆಂದೂ ಅವರ ಪ್ರಾಮಾಣಿಕವಾದ ಅಪೇಕ್ಷೆ ಇದ್ದಿತು. ಸ್ವಾತಂತ್ರ್ಯ ಸಂಪಾದನೆಯ ಬಳಿಕ ಕಾಂಗ್ರೆಸದ ಸ್ವಯಂ ಸೇವಕರು ಈ ದಿಸೆಯಲ್ಲಿ ದುಡಿಯುವ ಆವಶ್ಯಕತೆಯನ್ನು ಬಿಂಬಿಸಲು ಗಾಂಧೀಜಿ ಪ್ರಯತ್ನಿಸುತಿದ್ದರು. ದುರ್ದೈವದಿಂದ ಸ್ವತಂತ್ರ ಭಾರತಕ್ಕೆ ಅವರ ಮಾರ್ಗದರ್ಶನ ಐದಾರು ತಿಂಗಳುಗಳಿಗೂ ಹೆಚ್ಚು ಕಾಲ ದೊರೆಯದೆ ಹೋಯಿತು—ತತ್ಪರಿಣಾಮವಾಗಿಯೇ ಕಾಂಗ್ರೆಸಿನಲ್ಲಿ ಶೈಥಿಲ್ಯವೂ ದೌರ್ಬಲ್ಯವೂ ತಲೆದೋರಿತೆಂದೂ ಜನತೆಯ ಪ್ರೀತಿಯನ್ನು ನಿಧಾನವಾಗಿ ಕಳೆದುಕೊಳ್ಳುವಂತಹ ದಾರುಣ ಪರಿಸ್ಥಿತಿಯನ್ನು ಕಾಂಗ್ರೆಸು ಪ್ರಕೃತ ಇದಿರಿಸುತ್ತದೆಂದೂ ಚಿಂತೆಯು ಗರಿ ಮೂಡುವುದು.

ಒಂದಿನ ಶಿಸ್ತು, ಸಂಯಮ, ದಕ್ಷತೆ, ರಾಷ್ಟ್ರಸೇವೆಯನ್ನು ಮಾಡಬೇಕೆಂಬ ಆಕಾಂಕ್ಷೆ, ಸ್ವಾರ್ಥ ತ್ಯಾಗಮಾಡಬೇಕೆಂಬ ಸ್ಫೂರ್ತಿ ಇಂದು ಕಾಂಗ್ರೆಸ ಕಾರ್ಯಕರ್ತರಲ್ಲಿ ಕಡಿಮೆಯಾಗತೊಡಗಿವೆ. ಹಳ್ಳಿಹಳ್ಳಿಯಲ್ಲೂ ಉತ್ತಮ ದರ್ಜೆಯ ಕಾರ್ಯಕರ್ತರ ಮೂಲಕ ಸ್ವಾತಂತ್ರ್ಯ ಹೋರಾಟದ ಸ್ಫೂರ್ತಿಯನ್ನು ಅಂದು ಉದ್ರೇಕಿಸಿದ ಕಾಂಗ್ರೆಸು ಮಹಾಸಂಸ್ಥೆ ಇಂದು ಆರ್ಥಿಕ ಪುನಾರಚನೆಯ ವಿಷಯದಲ್ಲಿ ಅಂಥ ಕಾತುರವನ್ನು ಮಾಡುವಂತಾದರೆ–ಎಂದೆನಿಸುತ್ತದೆಯೇ ಹೊರತು, ಹಾಗೆ ನಡೆಯುವ ಕೆಲಸ ಬಹಳ ನಿಧಾನವಾಗಿ, ಅಸ್ತವ್ಯಸ್ತವಾಗಿ, ಬೇಕೋ ಬೇಡವೋ ಎಂಬಂತೆ ಸಾಗಿದೆ. ಕಾಂಗ್ರೆಸಿನ ಸಂಘಟನೆ ಮತ್ತು ನೈತಿಕ ಹಿರಿಮೆಯು ಅಧಿಕಾರದ ವ್ಯಾಮೋಹ ಮತ್ತು ತಜ್ಜನಿತ ವೈರಾಗ್ಯದ ವಿಷಪ್ರಭಾವದಿಂದ ಜಾಗೃತ ಚೈತನ್ಯ ನಾಶಮಾಡುತ್ತ ಬಂದಂತೆ ತೋರುತ್ತದೆ. ಕಳೆದ ಮಹಾ ಚುನಾವಣೆಗಳ ಕಾಲದಲ್ಲಿ, ಕಾಂಗ್ರೆಸಿನಲ್ಲಿ ಕಾಣಿಸಿಕೊಂಡ ಈ ದೌರ್ಬಲ್ಯಗಳ ಕಡೆಗೆಯೇ ಬೊಟ್ಟು ಮಾಡಿ ತೋರಿಸಿ, ಬೇರೆ ರಾಜಕೀಯ ಪಂಗಡಗಳು ಜನಾಭಿಪ್ರಾಯವನ್ನು ಕಾಂಗ್ರೆಸಿನ ವಿರುದ್ಧ ಸಾಕಷ್ಟು ಎತ್ತಿ ಕಟ್ಟಿದವು. ಈ ಚುನಾವಣೆಯಲ್ಲಿ ಸಾಮಾನ್ಯ ಬಹುಮತವನ್ನು ಕಾಂಗ್ರೆಸು ಗಳಿಸಿಕೊಂಡರೂ — ಉಪಚುನಾವಣೆಗಳಲ್ಲಿ ಕಾಂಗ್ರೆಸು ಅನುಭವಿಸಿದ ಸೋಲು, ಮುಂದಿನ ಮಹಾ ಚುನಾವಣೆಗಳಲ್ಲಿ ಕಾಂಗ್ರೆಸು ಇದಿರಿಸಬೇಕಾದ ಪರಿಸ್ಥಿತಿಯ ಸ್ಥೂಲಚಿತ್ರವನ್ನು ಕೊಡುವಂತಿದೆ.

ಈ ಚಿತ್ರ ಕಾಂಗ್ರೆಸು ಯಶಸ್ಸು ಹೊಂದುವದೆಂಬ ಭರವಸೆಯನ್ನು ಕೊಡುವುದಿಲ್ಲ—ಎಂದು ಒಂದೇ ಮಾತಿನಲ್ಲಿ ಹೇಳಬಹುದು. ಐತಿಹಾಸಿಕ ಪ್ರಸಿದ್ಧಿಯನ್ನು ಪಡೆದ ಮಹಾಸಂಸ್ಥೆಯೊಂದು ಸ್ವಾತಂತ್ರ್ಯೋತ್ತರದ ಕೆಲವೇ ವರ್ಷಗಳಲ್ಲಿ ನಶಿಸಿ ಹೋಗುತ್ತಿರುವುದನ್ನು ಕಂಡು ಯಾರಿಗಾದರೂ ವ್ಯಸನವುಂಟಾಗುತ್ತದೆ. ಈ ವ್ಯಥೆ ಹಾಗೂ ಸಂಸ್ಥೆಯ ಉಜ್ವಲ ಪರಂಪರೆಯನ್ನು ಕಾಯ್ದುಕೊಳ್ಳುವ ಹಂಬಲಗಳೇ ಪತನದ ಹಾದಿಯನ್ನು ಬಿಟ್ಟುಗೊಟ್ಟು ಕಾಂಗ್ರೆಸಿಗರೆಲ್ಲ ಒಟ್ಟಿಗೆ ಉದ್ಧಾರದ ಮಾರ್ಗವನ್ನು ತುಳಿದು ಸಾಗಬೇಕೆಂಬ ಸಂದೇಶವನ್ನು ನೀಡುತ್ತದೆ. ಮುಂದಿನ ಹತ್ತು ವರ್ಷಗಳಲ್ಲಿ—ಅಂದರೆ ಭವಿಷ್ಯದ ಎರಡು ಮಹಾ ಚುನಾವಣೆಗಳಲ್ಲಿ—ಕಾಂಗ್ರೆಸು ನಿಃಸಂದಿಗ್ಧ ಬಹುಮತವನ್ನು ಪಡೆಯುವಂತಾದರೆ, ಜನಾನುರಾಗವನ್ನು ಅದು ಉಳಿಸಿಕೊಳ್ಳಬಲ್ಲುದು. ಈ ಹತ್ತು ವರ್ಷಗಳ ಅವಧಿಯಲ್ಲಿ ಕಾಂಗ್ರೆಸು ಮಾಡುವ ಕೆಲಸ, ನೀಡುವ ಸೇವೆ ಮುಂದಿನ ನೂರು ವರ್ಷಗಳ ಕಾಲವಾದರೂ ಉತ್ತಮ ಫಲವನ್ನು ಕೊಡುತ್ತದೆ

ಮೂಲಭೂತವಾದ ಈ ತತ್ವಪ್ರಣಾಳಿಯನ್ನು ಮನವರಿಕೆ ಮಾಡಿಕೊಳ್ಳಬೇಕೆಂದು ನೆಹರೂರವರು ಪದೇ ಪದೇ ಹೇಳುತ್ತಿದ್ದಾರೆ—ಕಾಂಗ್ರೆಸ ಕಾರ್ಯಕರ್ತರು ರಾಜಕೀಯ ಸ್ವಾತಂತ್ರ್ಯವನ್ನು ಗಳಿಸಿಕೊಟ್ಟಂತೆ, ಆರ್ಥಿಕ ಪ್ರಗತಿಯನ್ನೂ ಕೈಗೂಡಿಸಬೇಕಾದದ್ದು ಅವರ ಮೇಲಿನ ನೈತಿಕ ಹೊಣೆಯೆಂಬುದಾಗಿಯೂ ನೆಹರೂ ಉಪದೇಶಿಸುತ್ತಿದ್ದಾರೆ. ಗಾಂಧೀಜಿಯ ಮಾರ್ಗದರ್ಶನ ಲಾಭವಿಲ್ಲದ ಈ

(೧೦ನೇ ಪುಟ ನೋಡಿರಿ)

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್

ಸ್ಥಾಪನೆ: ೧೯೩೫] [ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ

ಭಾರತದ ಸುಭದ್ರ ವಿಮಾ ಕಂಪೆನಿಗಳಲ್ಲಿ 'ಕೆನರಾ ಮ್ಯೂಚುವಲ್' ಎಂಬ ಇದು ವಿಶಿಷ್ಟ ಸ್ಥಾನವನ್ನು ಗಳಿಸಿದೆ. ಇದು ಮ್ಯೂಚುವಲ್ ಕಂಪೆನಿಯಾಗಿ ಘಟಿತವಾಗಿದ್ದು ಪಾಲುದಾರ ಬಂಡವಾಳಗಾರರಿಲ್ಲದಿರುವುದರಿಂದ, ಕಂಪೆನಿಯು ಸರ್ವ ಲಾಭವನ್ನು ಹಕ್ಕು ಹೊಂದಿದ ಪಾಲಿಸಿದಾರರೇ ತಮ್ಮಲ್ಲಿ ಹಂಚಿಕೊಳ್ಳುವರು. ಪ್ರಾಗತಿಕ ಜೀವವಿಮಾ ತಳಹದಿಯ ಮೇಲೆ ನಡೆಸುವ ತನ್ನೆಲ್ಲಾ ವಿಮಾ ಗಣನೆಗಳಲ್ಲಿ ಉಳಿತಾಯವನ್ನು ತೋರಿಸಿರುವ ಮಾತ್ರವಲ್ಲದೆ, ಸ್ಥಾಪಿತವಾದಂದಿನಿಂದಲೂ ಇದು ಬೋನಸು ಹಂಚಿದೆ. ಪಾಲಿಸಿದಾರರ ಹಿತವೃದ್ಧಿಯೇ ಧ್ಯೇಯವಾಗುಳ್ಳ ಈ ಪ್ರಗತಿಶೀಲ ಮ್ಯೂಚುವಲ್ ಕಂಪೆನಿಯಲ್ಲಿ ಇಂದೇ ವಿಮೆ ಇಳಿಸಿ, ನಿಮ್ಮ ಕುಟುಂಬದ ಭದ್ರತೆಯನ್ನು ಕಾಯ್ದುಕೊಳ್ಳಿರಿ.

THE CANARA MUTUAL ASSURANCE COMPANY, LTD.

Estd 1935] [Head Office UDIPI, S. INDIA.

ಸೇನೆಯ ಜವಾನರ ನಾಗರಿಕ ಚಟುವಟಿಕೆ

ಯುದ್ಧೇತರ ಕ್ಷೇತ್ರದಲ್ಲಿ ಚಿರಸ್ಮರಣೀಯ ಕಾರ್ಯ

ಸಂಕ್ರಮಣವನ್ನು ಯಶಸ್ವಿಯಾಗಿ ಪ್ರತಿಭಟಿಸಿ, ರಾಷ್ಟ್ರದ ಸ್ವಾತಂತ್ರ್ಯವನ್ನು ಕಾಯ್ದುಕೊಳ್ಳಲು ಹೋರಾಡುವುದು ನಮ್ಮ ಸೈನ್ಯ ಪಡೆಗಳ ಪ್ರಥಮ ಕರ್ತವ್ಯವಾಗಿರುತ್ತದೆಯಷ್ಟೆ! ಗುರುತರವಾದ ಈ ಹೊಣೆಗಾರಿಕೆಯನ್ನು ನೆರವೇರಿಸುವುದಕ್ಕೆ ಸೇನೆಯ ಭೂ, ಜಲ ಹಾಗೂ ವಾಯು ವಿಭಾಗಗಳು ಸದಾ ಕಾಲವೂ ಸನ್ನದ್ಧವಾಗಿರಬೇಕು. ಇದಕ್ಕೋಸ್ಕರ ಯೋಗ್ಯ ತರಬೇತಿಯನ್ನೂ ಹೊಂದುತ್ತಿರಬೇಕು. ಈ ನಡುವೆಯೂ ನಮ್ಮ ಸೇನಾ ಪಡೆಗಳು ಆಂತರಿಕ ಭದ್ರತೆಯನ್ನು ಕಾಯ್ದು ಶಾಂತಿ ಸ್ಥಾಪನೆಗೆ ನೆರವಾಗುವಲ್ಲಿ ನಾಗರಿಕ ಅಧಿಕಾರಿಗಳೊಡನೆ ಸಹಕರಿಸುತ್ತವೆ. ಮಾತ್ರವಲ್ಲ ಸ್ವಾತಂತ್ರ್ಯನಂತರದ ಈ ವರ್ಷಗಳಲ್ಲಿ ಪ್ರಕೃತಿಯ ಕೋಪಕ್ಕೆ ಬಲಿಯಾದ ಹಾಗೂ ಇನ್ನಿತರ ಕಷ್ಟನಷ್ಟಗಳಿಗೆ ಗುರಿಯಾದ ಜನತೆಯ ನೆರವಿಗೂ ರಾಷ್ಟ್ರಪುನಃ ನಿರ್ಮಾಣದ ಕೆಲಸಕ್ಕೂ ಮುಂಬಂದು ಅನುಪಮವಾದ ಚಿರಸ್ಮರಣೀಯವಾದ ಸೇವೆಯನ್ನು ಸಲ್ಲಿಸಿರತ್ತವೆ. ಶಾಂತಿ ಕಾಲದಲ್ಲಿ ಸೇನೆಯಿಂದ ಪ್ರಯೋಜನ ದೊರಕಿಸಿಕೊಳ್ಳುವ ಈ ಉಪಕ್ರಮದಿಂದ ಹೊಸ ವೈಶಿಷ್ಟ್ಯವನ್ನೆ ಸ್ಥಾಪಿಸಿದಂತಾಗಿರುತ್ತದೆ.

ನಿರಾಶ್ರಿತರಿಗೆ ನೆರವು

ನಮ್ಮ ಸೇನೆಯ "ಜವಾನ" ರು ಯುದ್ಧಕ್ಕೆ ಸಂಬಂಧಿಸಿಲ್ಲದ ನಾಗರಿಕ ಚಟುವಟಿಕೆಗಳಲ್ಲಿ ಭಾಗವಹಿಸುವಾಗ ಕಾರ್ಯಕ್ಷಮತೆಯನ್ನೂ ಉತ್ಸಾಹವನ್ನೂ ಅಭಿಮಾನವನ್ನೂ ಚೆನ್ನಾಗಿಯೇ ವ್ಯಕ್ತಗೊಳಿಸಿರುವುದು ಅಭಿನಂದನೀಯ. ತಮ್ಮ ಹೊಣೆಗಾರಿಕೆಗೆ ಒಪ್ಪಿಸಲ್ಪಟ್ಟ ಕೆಲಸವನ್ನೆಲ್ಲ ನಿಶ್ಚಿತ ಅವಧಿಯೊಳಗೆ ಸರ್ವ ಪ್ರಯತ್ನಗಳನ್ನೂ ಕೈಗೊಂಡು ಪೂರೈಸುವುದು ಲೀಲಾ ಜಾಲವಾಗಿ ಅವರಿಗೆ ತೋರಿವೆ ಶಿಸ್ತು, ಸ್ಥೈರ್ಯ, ನಿರ್ಧಾರ ಮತ್ತು ಪರಸ್ಪರ ಕೂಡಿ ಕೆಲಸ ಮಾಡುವ ಮನೋಭಾವಗಳನ್ನು ಈ ಸೈನಿಕ ವೃಂದ ಪ್ರದರ್ಶಿಸಿ, ದೃಢ ಚಿತ್ತದಿಂದ ಎಂತಹ ಕಠಿಣ ಕಾರ್ಯವನ್ನೂ ಈಡೇರಿಸಲು ಸಾಧ್ಯವೆಂದು ನಾಗರಿಕರಿಗೆ ಮನವರಿಕೆಮಾಡಿಕೊಟ್ಟಿದೆ

ಭೂ ಸೇನೆಯು ಭಾರತದ ವಿಶಾಲ ಭೂ ಭಾಗದಲ್ಲಿ ಅನೇಕ ಕೇಂದ್ರಗಳಲ್ಲಿ ಚದರಿರುವುದರಿಂದ ಎಲ್ಲಿ ಬೇಕೆಂದರೆ ಅಲ್ಲಿ ಯಾವಾಗ ಬೇಕೆನಿಸಿದರೆ ಆಗ, ಉಚಿತ ಸಹಾಯವನ್ನು ನೀಡಲು ಸಾಧ್ಯವಾಗಿದೆ. ವಾಯು ಸೇನೆಯು ಚಿಕ್ಕ ಪ್ರಮಾಣದಲ್ಲಿದ್ದರೂ ಸಹ, ಅದು ಮಹಾ ಸೇವೆಯನ್ನೆ ನೀಡಿರುತ್ತದೆ ನೆಲ ಹಾಗೂ ಜಲ ಮಾರ್ಗಗಳಿಂದ ಉಪಕಾರ ಮುಟ್ಟಿಸಲಾಗದ ಗಂಡಾಂತರದ ಪ್ರಸಂಗಗಳಲ್ಲಿ ಸೇನೆಯ ವಿಮಾನಗಳು ನೊಂದವರಿಗೆ ಅನ್ನ ಬಟ್ಟೆಗಳನ್ನು ಒದಗಿಸಿ ಉಚಿತ ಉಪಕಾರವನ್ನೆ ಸಗಿವೆ. ಜಲ ಸೇನೆಯು ಕರಾವಳಿಗೆ ಹೊಂದಿಕೊಂಡೇ ತನ್ನ ಚಟುವಟಿಕೆಗಳನ್ನು ತೋರಿಸಬೇಕಿದ್ದರೂ— ಅದರ ಮಹತ್ವ ಕಡಿಮೆಯಾಗಿಲ್ಲ

ಭಾರತದ ವಿಭಜನೆಯಾದ ಬಳಿಕ ಸಾವಿರಾರು ಸಂಖ್ಯೆಯಲ್ಲಿ ಬಾವದ ಮಕ್ಕಳು, ಮುದುಕರು, ಹೆಂಗಸರು, ಗಂಡಸರು ನಿರಾಶ್ರಿತರೆಂದು ಓಡಿಬರುತ್ತಿದ್ದಾಗ ಸೈನಿಕರು ತುಂಬ ದಕ್ಷತೆಯಿಂದ ನಡೆದುಕೊಂಡು ಸುರಕ್ಷಿತವಾಗಿ ಈ ದುಃಖಿತರನ್ನು ಸಾಗಿಸುವಲ್ಲಿ ನೆರವು ನೀಡಿದರು. ಭೂ ಹಾಗೂ ವಾಯು ಸೇನೆಗಳ ಸೌಹಾರ್ದಯುತವಾದ ಸಹಾಯವಿಲ್ಲದಿರುತಿದ್ದರೆ, ದೊಡ್ಡ ಸ್ವರೂಪದ ಈ ಉಪಕ್ರಮವು ಯಶಸ್ವಿಯಾಗುತ್ತಿದ್ದಿಲ್ಲ. ಹೀಗೆ ಸಾಗಿಸಲ್ಪಟ್ಟ ನಿರಾಶ್ರಿತರನ್ನು ನೆಲೆಗೊಳಿಸುವುದರಲ್ಲಿಯೂ ಸೇನೆ ಹೆಚ್ಚಿನ ಪರಿಶ್ರಮವನ್ನು ವಹಿಸಿದೆ. ಹೊಸ ದೆಹಲಿಗೆ ಸಮೀಪದ ಕುರುಕ್ಷೇತ್ರ ನಿರಾಶ್ರಿತರ ನಿಲಯವನ್ನು ಸೇನೆಯೇ ನಿರ್ಮಿಸಿತ್ತು, ನಡೆಸಿಕೊಂಡು ಬರುತ್ತದೆ. ಎರಡೂವರೆಲಕ್ಷ ಜನರಿಗೆ ವಸತಿಯೊದಗಿಸುವ ಈ ಕೇಂದ್ರವನ್ನು ಅತ್ಯಲ್ಪ ಕಾಲದಲ್ಲಿಯೇ ಏರ್ಪಡಿಸಿ ಸಜ್ಜುಗೊಳಿಸುವುದು ಸುಲಭಸಾಧ್ಯವಲ್ಲ.

ಜಮ್ಮು—ಕಾಶ್ಮೀರದಲ್ಲಿ

ಕಾಶ್ಮೀರದಲ್ಲಿ ಆಕ್ರಮಣಕಾರರನ್ನು ಓಡಿಸುವಲ್ಲಿ ಸೇನೆಯು ನೆರವಾಗಿರುವುದು ಸರಿಯಷ್ಟೆ—ಇದರ ಜೊತೆಗೆ ಗುಡ್ಡಗಾಡು ಪ್ರದೇಶದ ಗುಂಡಾಗಳ ಹಾವಳಿಯಿಂದ ನೊಂದ ಕಾಶ್ಮೀರಿ ಪ್ರಜೆಗಳಿಗೆ ಯೋಗ್ಯ ಸಹಾಯವನ್ನೂ ಸೇನೆಯು ಸಕಾಲದಲ್ಲಿ ಮುಟ್ಟಿಸಿದೆ. ದಾಳಿಕಾರರು ನಾಶ, ರೋಗ ಹಾಗೂ ಸಂಕಟಗಳ ವಿಷತ್ತಿನಲ್ಲಿ ನಾಗರಿಕರನ್ನು ಸಿಲುಕಿಸಿದ್ದರು—ಇದರಿಂದ ಪಾರಾಗುವಂತೆ ಉತ್ತಮ ವೈದ್ಯಕೀಯ ಚಿಕಿತ್ಸೆಯನ್ನು ಸೇನೆ ಒದಗಿಸಿತಲ್ಲದೆ ಅಪಾಯಕರವಾದ ಪ್ರದೇಶಗಳಿಂದ ನಾಗರಿಕರನ್ನು ಸ್ಥಳಾಂತರಿಸುವ ಕೆಲಸವನ್ನೂ ಮಾಡಿತು ಯುದ್ಧವಿರಾಮ ಒಪ್ಪಂದವಾದ ಬೆನ್ನಿಗೆಯೇ ಕಾಶ್ಮೀರ ಕೊಳ್ಳದಲ್ಲಿ ಜನರ ಜೀವನ ಮಟ್ಟವನ್ನು ಎತ್ತರಿಸುವ ಪ್ರಯತ್ನವನ್ನೂ ಸೇನೆ ಕೈಗೊಂಡಿತು. ಪ್ರಾಥಮಿಕ ಶಾಲೆಗಳನ್ನು ತೆರೆಗೂ, ದುರ್ಗಮವಾದ ಗುಡ್ಡಗಾಡುಗಳಲ್ಲಿ ಮಾರ್ಗಗಳನ್ನು ರಚಿಸಿಯೂ, ವೈದ್ಯಕೀಯ ಸೌಲಭ್ಯವನ್ನು ಒದಗಿಸಿಯೂ ಸೇನೆ ಪ್ರಜೆಗಳ ಪ್ರೀತಿ ಸಂಪಾದಿಸಿತು. ಮಹಾಪೂರ, ಅಗ್ನಿ ಪ್ರಳಯ ಸಾಂಕ್ರಾಮಿಕ ರೋಗಗಳಿಂದ ಜನರು ಭಯಗ್ರಸ್ತರಾದಾಗ—ಸೇನೆಯ ಜವಾನರು ದಿಟ್ಟತನದ ಹೆಜ್ಜೆಯಿಂದ, ಅವರನ್ನು ಸಂರಕ್ಷಿಸಲು ಧಾವಿಸಿದರು.

ಆಸಾಮಿನಲ್ಲಿ ೧೯೫೦ರಲ್ಲಿ ಭಯಂಕರ ಭೂಕಂಪವುಂಟಾದಾಗ ಮತ್ತು ಜಲಪ್ರಳಯದ ಭೀತಿ ಬಾಧಿಸಿದಾಗ ಭೂ ಹಾಗೂ ವಾಯು ಸೇನೆಗಳು ಜನಕ್ಕೆ ನೀಡಿದ ಸೇವೆಯನ್ನೂ ಮರೆಯುವಂತಿಲ್ಲ. ವಿಮಾನಗಳು ಆಕಾಶದಲ್ಲಿ ಹಾರಾಡುತಿದ್ದಂತೆಯೇ ಉತ್ತರ ಲಕಿಂಪುರ, ದಿಬ್ರೂಗಡ ಮತ್ತು ಸದಿಯಾ ಜಿಲ್ಲೆಯ ಸಂಕಟಪೀಡಿತ ಜನರಿಗೆ ಆಹಾರವನ್ನು ಒದಗಿಸಿದವು. ನೂರಾರು ಕಡೆ ಸೈನಿಕರು ಜನರನ್ನು ಬದುಕಿಸಲು ಶತಪ್ರಯತ್ನ ಮಾಡಿದರು. ಮಹಾಪೂರದಿಂದ ಬಳಿದು ಹೋದ ಮಾರ್ಗ ಹಾಗೂ ಸಂಕಗಳನ್ನು ಮರಳಿ ಕಟ್ಟುವುದಕ್ಕೆ ಸೈನ್ಯ ನೆರವಾಯಿತು. ಪ್ರಧಾನ ಮಂತ್ರಿಗಳ ಸಹಾಯ ನಿಧಿಗೆ ಒಂದು ಲಕ್ಷ ರೂಪಾಯಿಗಳನ್ನು ಸಂಗ್ರಹಿಸಿತು. ೧೯೫೨ನೇ ಜೂನು ತಿಂಗಳಲ್ಲಿ ನೆರೆ ಹಾವಳಿ ತಲೆದೋರಿದಾಗಲೂ ಅಸಾಮಿನಲ್ಲಿ ಸೈನ್ಯ ಪದೆಯು ಆಹಾರ ಪೂರೈಕೆ ಮಾಡಿತು

ಬಂಗಾಳದಲ್ಲಿಯೂ ಬಿಹಾರದಲ್ಲಿಯೂ ಸೈನ್ಯ ಕಡೆ ನೆರೆಪೀಡಿತ ಜನರಿಗೆ ಸಕಾಲದಲ್ಲಿ ಸಹಾಯ ಸಲ್ಲಿಸಿದೆ. ತಮಗೆ ಸಿಗುತಿದ್ದ ರೇಶನಿನಲ್ಲಿ ಉಳಿತಾಯವನ್ನು ಸಾಧಿಸಿ, ಅನ್ನಾನ್ನಗತಿಕರಾದ ಜನರಿಗೆ ೧೦೦೦೦ ಮಣ ಅಕ್ಕಿಯನ್ನು ಬಿಹಾರದಲ್ಲಿ ಸೈನ್ಯ ಪೂರೈಸಿದೆ ಮನೆಮಾರುಗಳನ್ನು ಕಳೆದುಕೊಂಡವರಿಗೆ ಗುಡಾರ ಕಟ್ಟಿಕೊಳ್ಳಲು ಬಟ್ಟೆಯನ್ನೂ ಸೈನ್ಯ ಒದಗಿಸಿದೆ

ವಿಧಾಯಕ ಕಾರ್ಯಗಳು

ರಾಷ್ಟ್ರೀಯ ಪುನರಭಿವೃದ್ಧಿಯ ಕ್ಷೇತ್ರದಲ್ಲಿಯೂ ಭಾರತೀಯ ಸೇನೆ ಮಹತ್ವದ ಸೇವೆಯನ್ನು ಸಲ್ಲಿಸಿದೆ. ವಿಭಜನೆಯ ಬಳಿಕ ಅಸಾಮು ರಾಜ್ಯವು ಭಾರತದೊಡನೆ ನೇರಾದ ಸಂಪರ್ಕವನ್ನು ಕಳೆದುಕೊಂಡಾಗ ೧೪೫ ಮೈಲು ಉದ್ದದ ರೈಲು ಮಾರ್ಗವನ್ನು ಸೇನೆಯು ತ್ವರಿತದಲ್ಲಿಯೇ ನಿರ್ಮಾಣ ಮಾಡಿತು. ಭಾರಿ ಮುಸಲೆ ಮಳೆಯನ್ನೂ ಘನವಾದ ಅರಣ್ಯಗಳ ತಡೆಯನ್ನೂ ಲೆಕ್ಕಿಸದೆ ಸೇನೆಯ ಇಂಜೀನಿಯರರು ಇಲ್ಲಿ ದುಡಿದರು.

ತುಂಗ ಭದ್ರೆಯ ಜಲಾಶಯದಿಂದ ಮುಳುಗಿ ಹೋಗುವ ೩೦ ಹಳ್ಳಿಗಳ ನಿವಾಸಿಗಳನ್ನು ೧೯೫೩ನೇ ಮೇ ತಿಂಗಳಲ್ಲಿ ಸುರಕ್ಷಿತ ಪ್ರದೇಶಕ್ಕೆ ಸ್ಥಳಾಂತರಿಸುವುದರಲ್ಲಿಯೂ ಸೈನ್ಯ ಉತ್ಸಾಹ ತೋರಿಸಿತು. ಬೇಕಾದ ಸಾರಿಗೆ ಸೌಕರ್ಯಗಳನ್ನು ಒದಗಿಸಿದ್ದಲ್ಲದೆ, ಸ್ಥಳಾಂತರ ಗೊಂಡವರು ಉಳಕೊಳ್ಳುವದಕ್ಕೋಸ್ಕರ ಒಂದು ನೂರು ಇಟ್ಟಿಗೆಯ ಮನೆಗಳನ್ನು ಕಟ್ಟಿಕೊಟ್ಟಿತು. ನೀರಿನ ಪೂರೈಕೆಯ ವ್ಯವಸ್ಥೆಯನ್ನೂ ಏರ್ಪಡಿಸಿತು.

ರಾಯಲ ಸೀಮಾ ಪ್ರದೇಶದಲ್ಲಿ ೧೯೫೦ನೇ ಎಪ್ರೀಲು ಮಾಸದಲ್ಲಿ ಕುಡಿಯಲು ನೀರು ಸಿಗದೆ, ಜನರು ಸಂಕಟಕ್ಕೆ ಈಡಾದರು. ಆ ಗಳಿಗೆಯಲ್ಲಿ ಸೇನೆಯ ಸಿಪಾಯಿಗಳು ಕ್ಷಿಪ್ರದಲ್ಲಿಯೇ ಚೊಕ್ಕ ಕ್ರಮ ಕೈಗೊಳ್ಳದಿರುತ್ತಿದ್ದರೆ, ಪರಿಣಾಮ ಬಹಳ ಭೀಕರವೂ ಚಿಂತಾಜನಕವೂ ಆಗುತಿತ್ತು. ಸುದೈವದಿಂದ ನಮ್ಮ ಜವಾನರು ಆರು ವಾರಗಳ ವರೆಗೆ ಬೆನಂಳಿಸಿ ದುಡಿದು ಯಥೇಷ್ಟ ನೀರಿನ ಪೂರೈಕೆ ಮಾಡುವ ೧೪೪ ಬಾವಿಗಳನ್ನು ತೋಡಿದರು. ಸುಮಾರು ಎಂಟು ಸಾವಿರ ಚದರ ಮೈಲು ವಿಸ್ತೀರ್ಣ ಪ್ರದೇಶದಲ್ಲಿ ಮಿಲಿಟರಿ ಲಾರಿಗಳು ನೀರು ತುಂಬಿಕೊಂಡು ಓಡಾಡಿ ಜನರ ಜಲಬಾಧೆಯನ್ನು ತೀರಿಸಿದವು. ದಿನಕ್ಕೆ ೩೦೦೦೦—೫೦೦೦೦ ಗೆಲನುಗಳಷ್ಟು ನೀರು ಒದಗಿಸುವ ಎರಡು ಕೇಂದ್ರಗಳನ್ನೂ ಸೇನೆ ಸ್ಥಾಪಿಸಿತು.

ಉತ್ತರ ಪ್ರದೇಶದಲ್ಲಿ ಲಲಿತಪುರ ಆಣೆಕಟ್ಟನ್ನು ಮಿಲಿಟರಿ ಇಂಜನಿಯರರು ಸೇರಿ ನಿರ್ಮಿಸಿದರು. ಕುಂಭಮೇಳದಂತಹ ಭಾರೀ ಜನ ಸೇರುವ ಉತ್ಸವಗಳಿಗೆ ... ವ್ಯವಸ್ಥೆಯನ್ನು ಏರ್ಪಡಿಸಲೂ ಆ ಜಾಗವನ್ನು ವಸತಿ ಯೋಗ್ಯ ಮಾಡಲೂ ಸೇನೆ ದುಡಿಯುತ್ತದೆ

ಹೆಚ್ಚಿನ ಆಹಾರೋತ್ಪತ್ತಿ

ಅಧಿಕ ಆಹಾರ ಬೆಳೆಸುವ ಚಳವಳಿಯನ್ನು ರಾಷ್ಟ್ರದಾದ್ಯಂತ ತೊಡಗಿದಾಗ ಸೇನೆಯೂ ತನ್ನ ಪಾಲಿನ ಕರ್ತವ್ಯವನ್ನು ನಿರ್ವಹಿಸಿತು. ಸಾಧ್ಯವಿರುವಲ್ಲೆಲ್ಲ ಹೊಸ ಜಮೀನನ್ನು ಹಸನುಗೊಳಿಸಿ, ಅಲ್ಲಿ ಆಹಾರ ಧಾನ್ಯಗಳನ್ನೂ ತರಕಾರಿಯನ್ನೂ ಸೇನೆಯವರು ಬೆಳೆಸಿದರು. ಹೀಗೆ ವ್ಯವ

[೧೨ನೇ ಪುಟ ನೋಡಿರಿ]



ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಷಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿನಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0

ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ

ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಧರ್ಮಾರ್ಥ—ಮುಕ್ತಟಿ

ಒಂದು ಸಾವಿರ ಕಾಶ್ಮೀರಿ ಶಾಲುಗಳನ್ನು ಧರ್ಮಾರ್ಥ ಹಂಚುತ್ತಲಿದ್ದೇವೆ. ಬೇಗನೆ ಬರೆಯಿರಿ. ವಿಳಂಬವಾದರೆ ನಿರಾಶರಾಗುವಿರಿ.

Diamond Commercial Chambers (N. U.)
Bhandari Street,
BOMBAY—3

ಒಕ್ಕಲೆಬ್ಬಿಸುವುದನ್ನು ತಡೆಗಟ್ಟುವ ಕ್ರಮ

ದಕ್ಷಿಣ ಕನ್ನಡ ಜಿಲ್ಲೆಯ ರೈತರ ಒಕ್ಕೊರಲಿನ ಬೇಡಿಕೆಗೆ ಮನ್ನಣೆ

ನಮ್ಮ ಜಿಲ್ಲೆಯ ರೈತರ ಬೇಡಿಕೆಗಳಲ್ಲಿ ಪ್ರಮುಖ್ಯವಾದದ್ದು ಒಕ್ಕಲು ಹಿತ ರಕ್ಷಣೆಯ ಶಾಸನಕ್ರಮವೊಂದು ಇಲ್ಲಿ ಜ್ಯಾರಿಗೆ ಬರಬೇಕೆಂಬುದು. ಸ್ವಾತಂತ್ರ್ಯೋತ್ತರದಲ್ಲಿ ಜಿಲ್ಲೆಯನ್ನು ಸಂದರ್ಶಿಸಿದ ಪ್ರತಿಯೊಬ್ಬ ಮಂತ್ರಿಗೆ ಒಪ್ಪಿಸಿದ ಮನವಿಯಲ್ಲೂ ಈ ವಿಷಯ ಪ್ರಸ್ತಾಪಿಸಲ್ಪಟ್ಟಿದೆ; ಇದಲ್ಲದೆ ರೈತರ ಪ್ರತಿನಿಧಿಗಳನೇಕರು ಸರಕಾರಕ್ಕೆ ಶಿಷ್ಟಮಂಡಲಗಳನ್ನು ಕಳಿಸುವುದರ ಮೂಲಕವೂ ಈ ಕುರಿತು ಸರಕಾರವನ್ನು ಒತ್ತಾಯಿಸಿದ್ದುಂಟು. ಚುನಾವಣೆಗಳ ಬಳಿಕ ಜಿಲ್ಲೆಯ ಶಾಸನ ಸಭಾ ಸದಸ್ಯರೆಲ್ಲರೂ ಒಕ್ಕಲುಗಳ ಹಕ್ಕುಬಾಧ್ಯತೆಗಳಿಗೆ ಮನ್ನಣೆ ದೊರೆಯಬೇಕೆಂದೂ, ಅನ್ಯಾಯವಾಗಿ ಒಕ್ಕಲೆಬ್ಬಿಸುವ ಪ್ರವೃತ್ತಿಯನ್ನು ಪ್ರತಿಬಂಧಿಸಬೇಕೆಂದೂ ಒಮ್ಮತದ ಅಭಿಪ್ರಾಯವನ್ನು ಪ್ರಕಟಿಸಿದ್ದರು. ಜೊತೆಗೆ, ಶ್ರೀ ನರ್ಸಪ್ಪಯ್ಯನವರ ಮುಂದಾಳುತನದಲ್ಲಿ ಅಂಥದೊಂದು ಒಕ್ಕಲು ಹಿತ ಮಸೂದೆಯ ಕರಡನ್ನು ಸಿದ್ಧಗೊಳಿಸಿ, ಸಾರ್ವಜನಿಕ ಅಭಿಪ್ರಾಯ ಸಂಗ್ರಹಿಸುವುದಕ್ಕೋಸ್ಕರ ಅದನ್ನು ಪ್ರಚಾರ ಮಾಡಿದ್ದರು. ಮೊನ್ನೆ ತಾನೆ ಮಂಗಳೂರಿಗೆ ಮುಖ್ಯ ಮಂತ್ರಿ ರಾಜಾಜಿಯವರು ಆಗಮಿಸಿದಾಗ ದಕ್ಷಿಣ ಕನ್ನಡದ ರೈತರ ಮತ್ತು ಅವರ ಪರವಾಗಿ ಒಮ್ಮತದಿಂದ ವಾದ ಹೂಡುವ ಶಾಸನ ಸಭಾಸದಸ್ಯರ ಬೇಡಿಕೆಯನ್ನು ಸಹಾನುಭೂತಿಪೂರ್ವಕ ವಿಚಾರಿಸಿ, ಬೇಗನೇ ಯೋಗ್ಯ ಕ್ರಮ ಕೈಗೊಳ್ಳುವ ಭರವಸೆ ನೀಡಿದ್ದರು. ಆದರೆ ಈ "ಬೇಗನೇ" ತೆಗೆದುಕೊಳ್ಳುವ ಕ್ರಮ ಇನ್ನೆಷ್ಟು ಕಾಲ ವಿಳಂಬಿಸಬಹುದೋ ಎಂಬ ಸಂಶಯವಿದ್ದಿತು. ಆ ಸಂಶಯ ಇನ್ನೂ ಮಾಯವಾಗಿಲ್ಲವಾದರೂ-ಸರಕಾರವು ತುರ್ತಿನ, ಆಗತ್ಯದ ಪರಿಸ್ಥಿತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು, ಒಕ್ಕಲೆಬ್ಬಿಸುವುದನ್ನು ತಾತ್ಕಾಲಿಕವಾಗಿ ಪ್ರತಿಬಂಧಿಸಲು ಕಾನೂನೊಂದನ್ನು ಮಾಡಿರುತ್ತದೆ.

ಒಕ್ಕಲೆಬ್ಬಿಸುವುದಕ್ಕೆ ಪ್ರತಿಬಂಧ

ಜನವರಿ ಐದನೇ ದಿನಾಂಕ ಸರಕಾರದವರು ಗಜೆಟಿನಲ್ಲಿ ಜಿಲ್ಲೆಯ ರೈತರನ್ನು ಒಕ್ಕಲೆಬ್ಬಿಸಲ್ಪಡುವುದರಿಂದ ತಡೆಯುವ ಉದ್ದೇಶದಿಂದ ಮಸೂದೆಯೊಂದನ್ನು ಪ್ರಕಟಪಡಿಸಿದರು ಮುಂದೆ ಎಂಟನೇ ದಿನಾಂಕ, ಮದ್ರಾಸು ಶಾಸನ ಸಭೆಯ ಪ್ರಶ್ನೋತ್ತರ ವೇಳೆಯ ಬಳಿಕ, "ದಕ್ಷಿಣ ಕನ್ನಡ ಕೃಷಿ ನಿರತ ಒಕ್ಕಲುಗಳ ರಕ್ಷಣಾ ಮಸೂದೆ"ಯನ್ನು ಚರ್ಚೆಗೆ ತೆಗೆದುಕೊಂಡು, ಕೆಲವೇ ತಾಸುಗಳಲ್ಲಿ ಅದಕ್ಕೆ ಮನ್ನಣೆಯನ್ನು ನೀಡಿತು ಮಸೂದೆಯನ್ನು ಶಾಸನ ಸಭೆಯ ಮುಂದೆ ಮಂಡಿಸುತ್ತಾ ಕಂದಾಯ ಮಂತ್ರಿ ಶ್ರೀ ಮಾಣಿಕ್ಯವೇಲು ನಾಯಕರರು ಹೀಗೆಂದು ಹೇಳಿದರು—"ಕಳೆದ ಹಲವಾರು ತಿಂಗಳುಗಳಿಂದ ಸರಕಾರದ ಕಡೆಗೆ ಹಲವಾರು ಮನವಿಗಳು ಬಂದಿದ್ದು. ಅದರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಭೂಮಾಲಿಕರು ಬಹಳ ದೊಡ್ಡ ಪ್ರಮಾಣದಲ್ಲಿ ಒಕ್ಕಲುಗಳನ್ನು ಎಬ್ಬಿಸುತಿದ್ದಾರೆಂದೂ ಹೀಗೆ ಧನಿ-ಒಕ್ಕಲುಗಳೊಳಗಿನ ಸಂಬಂಧವು ಕ್ಲೇಶಮಯವಾಗಿ ಪರಿಣಮಿಸಿದೆಯೆಂದೂ ಹೇಳಲ್ಪಟ್ಟಿದೆ ಈ ಶಾಸನ ಸಭೆಯಲ್ಲಿರುವ ದಕ್ಷಿಣ ಕನ್ನಡದ ಸದಸ್ಯರು ಒಕ್ಕಲುಗಳ ಹಿತ ರಕ್ಷಣೆಯ ಉದ್ದೇಶದಿಂದ ಧನಿಗಳ ಈ ಪ್ರವೃತ್ತಿಯನ್ನು ಪ್ರತಿಬಂಧಿಸಲು ಏನಾದರೊಂದು ಉಚಿತ ಕ್ರಮವನ್ನು ಕೈಗೊಳ್ಳಬೇಕಾಗಿ ಒತ್ತಾಯಿಸುತಿದ್ದರು. ಸರಕಾರದವರು ಯಾವುದೇ ಕ್ಷಣದಲ್ಲಿ ಭೂಸುಧಾರಣಾ ಕಾಯಿದೆಯನ್ನು ಮಾಡಿಯಾರೆಂಬ ಹೆದರಿಕೆಯಿಂದಲೇ ಭೂಮಾಲಿಕರು ಒಕ್ಕಲೆಬ್ಬಿಸುವುದಕ್ಕೆ ತೊಡಗಿರುವರೆಂದು ನಂಬಲು ಸರಕಾರದೊಡನೆ ಸಾಕಷ್ಟು ಕಾರಣಗಳಿವೆ. ವ್ಯಾಪಕವಾದ ಭೂಸುಧಾರಣಾ ಕಾಯಿದೆಯನ್ನು ಜ್ಯಾರಿಗೆ ತರುವುದಕ್ಕೆ ಮುಂಚೆ, ದಕ್ಷಿಣ ಕನ್ನಡದ ಪರಿಸ್ಥಿತಿಯತ್ತ ಕೂಡಲೇ ಗಮನಹರಿಸಿ, ಕೃಷಿನಿರತರಾದ ಒಕ್ಕಲುಗಳು ಅನಗತ್ಯವಾಗಿ ತೊಂದರೆಗೊಳಗಾಗದಂತೆ ಮಾಡಬೇಕೆಂದು ಸರಕಾರ ಭಾವಿಸಿತು. ಅಂತೆಯೇ ಚಾಲ್ತಿ ಗೇಣಿಯನ್ನು ಸಂದಾಯಮಾಡದ ಪಕ್ಷದಲ್ಲಿ, ಮಸೂದೆಯು ಕಾಯಿದೆಯಾಗಿ ಜ್ಯಾರಿಗೆ ಬಂದ ಒಂದು ವರ್ಷದವರೆಗೆ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಕೃಷಿನಿರತನಾದ ಯಾವುದೇ ಒಕ್ಕಲನ್ನು ಎಬ್ಬಿಸಬಾರದೆಂದು ಈ ಮಸೂದೆಯು ಹೇಳುತ್ತದೆ. ಕಾಸರಗೋಡು ತಾಲೂಕಿನ ೩೩ ಹಳ್ಳಿಗಳಿಗೆ ಮಲಬಾರು ಒಕ್ಕಲುಹಿತ ಮಸೂದೆ (೧೯೫೪) ಅನ್ವಯಿಸುವುದರಿಂದ, ಪ್ರಕೃತದ ಮಸೂದೆಯ ಕಕ್ಷೆಯಲ್ಲಿ ಆ ಪ್ರದೇಶ ಬರುವುದಿಲ್ಲ"

ತ್ರಿವಿಧ ಒಕ್ಕಲುಗಳು

ಚರ್ಚೆಯ ಕಾಲದಲ್ಲಿ ಶ್ರೀಗಳಾದ ಎಲ್. ಸಿ. ಪಾಯಸ್ (ಮಂಗಳೂರು), ಯಡ್ತರೆ ಮಂಜಯ್ಯ ಶೆಟ್ಟಿ (ಕುಂದಾಪುರ), ಟಿ. ಅನಂತ ಪೈ (ಉಡುಪಿ) ಇವರು ಮುಖ್ಯ ಪಾತ್ರವನ್ನು ವಹಿಸಿ ಮಾತನಾಡಿದರು. "ಈ ಮಸೂದೆಯನ್ನು ತಂದುದಕ್ಕೋಸ್ಕರ ನಾನು ಸರಕಾರವನ್ನೂ ಮುಖ್ಯ ಮಂತ್ರಿಗಳನ್ನೂ ಅಭಿನಂದಿಸುತ್ತೇನೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೂರು ಬಗೆಯ ಒಕ್ಕಲುಗಳಿರುವರು. ಮೂಲಗೇಣಿ ಒಕ್ಕಲುಗಳು ಹೆಚ್ಚು ಕಡಿಮೆ ಕಾಯಂ ಒಕ್ಕಲುಗಳೇ ಆಗಿದ್ದು, ಅವರಿಗೆ ಯಾರಿಂದಲೂ ಯಾವುದೇ ತರದ ಸಂರಕ್ಷಣೆ ಬೇಕಾಗಿಲ್ಲ.ಉಳಿದೆರಡು ವರ್ಗದ ಒಕ್ಕಲುಗಳಿಗೆ ಭದ್ರತೆ ಬೇಕು. ವಾಯಿದೆ ಗೇಣಿ ಒಕ್ಕಲುಗಳು ಒಂದು ನಿರ್ದಿಷ್ಟ ಅವಧಿಯವರೆಗೆ ಭೂಮಿ ಸಾಗುವಳಿ ಮಾಡುವರು. ಆ ಅವಧಿಯಲ್ಲಿ ಅವರನ್ನು ಯಾರೂ ತೊಂದರೆಗೊಳಪಡಿಸುವಂತಿಲ್ಲ. ಅವಧಿ ಮೀರಿದೊಡನೆಯೇ ಅವರು ಭೂಮಾಲಿಕರ ಇಚ್ಛೆಯಂತೆ ಬೇಸಾಯ ಮಾಡುವ ಯಾ ಬಿಡುವ ಪ್ರಸಂಗ ಬರುತ್ತದೆ. ಚಾಲಗೇಣಿ ಒಕ್ಕಲುಗಳಂತೂ ಧನಿಗಳ ಮರ್ಜಿಯ ಮೇಲೆ ಬೇಸಾಯ ಮಾಡುವವರಾಗಿದ್ದಾರೆ. ಇವರಿಗೆ ಭೂಮಿಯ ಮೇಲೆ ಯಾವುದೇ ತರದ ಕೃತಗಳನ್ನು ಮಾಡಿ, ಊರ್ಜಿತ ಗೊಳಿಸಲಿಕ್ಕೆ ಅಧಿಕಾರವಿಲ್ಲ. ಒಂದೊಮ್ಮೆ ಮಾಡಿದರೂ ಅದಕ್ಕೆ ಪರಿಹಾರವನ್ನು ಕೊಡದೆಯೇ ಅವರನ್ನು ಒಕ್ಕಲೆಬ್ಬಿಸಲು ಅಭ್ಯಂತರವಿಲ್ಲ. ಮದ್ರಾಸಿನಲ್ಲಿ ಪ್ರಕಾಶಂ ಮಂತ್ರಿಮಂಡಳವು ಬಂದ ಕ್ಷಣದಿಂದ, ಭೂಮಾಲಿಕರು ಭೂಸುಧಾರಣಾ ಕಾಯಿದೆ ಬರುವುದೆಂದು ಯೋಚಿಸಿ, ಒಕ್ಕಲೆಬ್ಬಿಸುವುದಕ್ಕೆ ತೊಡಗಿದರು. ಇದು ವರೆಗೆ ದಕ್ಷಿಣ ಕನ್ನಡ ಜಿಲ್ಲೆಯಿಂದ ಸಲ್ಲಿಸಲ್ಪಟ್ಟ ಮನವಿಗಳು ದುರ್ಲಕ್ಷಿಸಲಾದವು—ಈಗ ಕೊನೆಗಾದರೂ ಇಂಥದೊಂದು ಕ್ರಮ ತೆಗೆದುಕೊಳ್ಳುವುದಕ್ಕೆ ನನಗೆ ಸಂತೋಷವಾಗಿದೆ. ಜಿಲ್ಲೆಗೆ ಜಿಲ್ಲೆಯೇ ಇದನ್ನು ಅಂಗೀಕರಿಸುವುದೆಂದು ನಂಬುತ್ತೇನೆ" ಎಂದು ಶ್ರೀ ಪಾಯಸರು ಹೇಳಿದರು. ಮುಂದುವರಿದು ಅವರು ಹೀಗೆಂದರು - "ಒಕ್ಕಲು ಒಕ್ಕಲುಗಳಿಗೆ ಸಂರಕ್ಷಣೆ ಕೊಡಬೇಕೆಂದು ಹೇಳಿದಾಗ ತುಂಬ ಗೇಣಿಯನ್ನು ಬಾಕಿಮಾಡಿಕೊಂಡಿರುವ ಕೆಟ್ಟ ಒಕ್ಕಲುಗಳೂ ಇದ್ದಾರೆಂಬುದನ್ನು ಸರಕಾರ ಗಮನಿಸಬೇಕು. ವ್ಯಾಪಕವಾದ ಭೂಸುಧಾರಣಾ ಕಾಯಿದೆಯನ್ನು ದಕ್ಷಿಣ ಕನ್ನಡ ಜಿಲ್ಲೆಗೆ ತರುವಾಗ ವಿಷಯದ ಈ ಮುಖವನ್ನೂ ಸರಕಾರ ಲಕ್ಷದಲ್ಲಿಟ್ಟು ಕೊಳ್ಳಲಿ. ಅಂಥ ಕಾಯಿದೆ ಮಾಡುವಾಗ, ಭೂಮಾಲಿಕರೆಂದು ಸಾಮಾನ್ಯವಾಗಿ ಹೇಳಲ್ಪಡುವವರಲ್ಲಿ ಹೆಚ್ಚಿನವರು ಭೂಮಿಯ ಮೇಲಿಂದ ತಮಗೆ ಸಿಗುವ ಅಲ್ಪಸ್ವಲ್ಪ ಗೇಣಿಯ ಮೇಲಿಂದಲೇ ಜೀವನ ನಿರ್ವಹಿಸುವರೆಂಬುದನ್ನೂ ಸರಕಾರ ಮರೆಯದಿರಲಿ. ಗೇಣಿಯನ್ನು ಇಂತಿಷ್ಟೆಯೆಂದು ನಿರ್ಣಯಿಸುವ ಕಾಲಕ್ಕೆ, ಭೂಮಾಲಿಕನು ದೈನ್ಯದಿಂದ ಪಾಪರ್ ಆಗಿ ಹೋಗುವ ಪ್ರಸಂಗ ಬರಲಾಗದು ಇನ್ನು ಕೆಲವು ಒಕ್ಕಲುಗಳು ಹಲವಾರು ವರ್ಷಗಳಿಂದ ಒಂದೇ ಭೂಮಿಯಲ್ಲಿ ವ್ಯವಸಾಯ ನಿರತರಾಗಿದ್ದು ತುಂಬ ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದುಂಟು. ಅವರಿಗೆ ಕಿರುಕುಳವಾಗ ಕೂಡದು. ಯಾವುದೇ ಒಕ್ಕಲನ್ನು ಎಬ್ಬಿಸುವಾಗ, ಅವನು ಮಾಡಿದ ಕೃತಕ್ಕೆ ಯೋಗ್ಯ ಪ್ರತಿಫಲವನ್ನು ಕೊಟ್ಟು ತೀರಬೇಕು."

ರಾಜಾಜಿಯ ಉಪಕಾರ

ಮುಂದೆ ಮಾತಾಡಿದ ಶ್ರೀ ಮಂಜಯ್ಯ ಶೆಟ್ಟರು ಅನ್ಯಾಯವಾಗಿ ಒಕ್ಕಲೆಬ್ಬಿಸುವುದನ್ನು ಪ್ರತಿಬಂಧಿಸುವ ಈ ಮಸೂದೆಗೋಸ್ಕರ ಸರಕಾರವನ್ನು ಅಭಿನಂದಿಸಿದರು."ಜಿಲ್ಲೆಯಿಂದ ಒಂದರ ಹಿಂದೊಂದು ಬರುತಿದ್ದ ಪ್ರಾರ್ಥನೆಗಳನ್ನು ಒಪ್ಪಿ ಸರಕಾರವು ಆಂಶಿಕವಾಗಿ ರೈತರ ಬೇಡಿಕೆಯನ್ನು ಈ ಮಸೂದೆಯಿಂದ ಪೂರೈಸಿದೆ. ಈ ರಾಜ್ಯಕ್ಕೆ ಶ್ರೀ ರಾಜಾಜಿಯಂಥ ಅದ್ವಿತೀಯ ವ್ಯಕ್ತಿಯ ವರ್ಚಸ್ಸಿನ ಸೌಭಾಗ್ಯ ದೊರೆತಿದ. ಮನುಷ್ಯನ ಸಮಸ್ಯೆಗಳನ್ನೂ ಕಷ್ಟಗಳನ್ನೂ ಮನಗಾಣುವ ಬುದ್ಧಿಯು ಅವರಲ್ಲಿದೆ, ರಾಜಾಜಿಯವರ. ವೈಕ್ತಿಗತವಾಗಿ ಈ ಮಸೂದೆಯಲ್ಲಿ ಆಸ್ಥೆ ವಹಿಸದಿರುತಿದ್ದರೆ, ಇಂಥ ಕ್ರಮ ಜ್ಯಾರಿಗೆ ಬರುತ್ತಿರಲಿಲ್ಲ." ಎಂದವರು ಮುಖ್ಯ ಮಂತ್ರಿಗಳನ್ನು ಶ್ಲಾಘಿಸಿದರು. ಮುಂದುವರಿದು ಹೀಗೆಂದರು— "ಈ ಮಸೂದೆಯಿಂದ ದೊರೆತ ಸಂರಕ್ಷಣೆಯು ನಾವೆಲ್ಲರು ಕೃಷಿಕರು ತಮ್ಮ ವ್ಯವಸಾಯ ಕ್ಷೇತ್ರದಲ್ಲಿ ಚಿಂತೆ ಬಿಟ್ಟು ಕೆಲಸ ಮಾಡುವುದಕ್ಕೆ ಹೆಚ್ಚಿನ ನೆರವು ಕೊಟ್ಟಂತೆ ತೋರಿದರೂ, ಇಷ್ಟರಿಂದಲೇ ಜಿಲ್ಲೆಯ ಒಕ್ಕಲುಗಳ ಕೃಷಿ ಸಮಸ್ಯೆ ಸಂಪೂರ್ಣ ಪರಿಹಾರವಾಗಲಿಲ್ಲ. ರೈತರಿಗೆ ಇನ್ನೂ ವ್ಯಾಪಕವಾದ, ಸ್ಥಿರವಾದ ಒಕ್ಕಲುತನ ಮತ್ತು ಗೇಣಿಯ ಭರವಸೆ ಇರುವ, ಧನಿ ಒಕ್ಕಲುಗಳ ನಡುವೆ ಸಮರಸದ ಭಾವನೆ ತುಂಬಿರುವ ಪರಿಸ್ಥಿತಿಯನ್ನು, ನಿರ್ಮಾಣಮಾಡುವ ಸುಖಶಾಂತಿ ಸಮೃದ್ಧಿ ಸಂತೋಷಗಳನ್ನು ತುಂಬುವ ಭೂಸುಧಾರಣಾ ಕಾಯಿದೆ ಬೇಕಾಗಿರುತ್ತದೆ. ಎಲ್ಲ ವರ್ಗದ ಜನರಿಗೂ ನ್ಯಾಯದಾನ ಮಾಡುವ ರೀತಿಯಲ್ಲಿ ತರಲಿರುವ ವ್ಯಾಪಕವಾದ ಭೂಸುಧಾರಣಾ ಕಾಯಿದೆಯನ್ನು ರಚಿಸುವಾಗ ಸರಕಾರ ಇವನ್ನು ನೆನಪಿನಲ್ಲಿಟ್ಟುಕೊಳ್ಳಬೇಕು."

ಶ್ರೀ ಅನಂತ ಪೈಗಳು ಸರಕಾರಕ್ಕೆ ಕೃತಜ್ಞತೆಯನ್ನು ಅರ್ಪಿಸಿದರಲ್ಲದೆ, ಜಿಲ್ಲೆಯಲ್ಲಿ ಭೂಸುಧಾರಣೆಯ ಪ್ರಶ್ನೆಯು ಕೆಲವು ಕಷ್ಟಗಳನ್ನು ಎದುರಿಸಬೇಕಾಗಿರುತ್ತದೆಂದೂ ನುಡಿದರು. "ಒಂದು ವರ್ಷದವರೆಗೆ ಈ ಮಸೂದೆಯು ಒಕ್ಕಲುಗಳಿಗೆ ಸಂರಕ್ಷಣೆಯನ್ನು ಕೊಡುತ್ತದೆ. ಅಷ್ಟು ಸಮಯದಲ್ಲಿ ಭೂಮಾಲಿಕರೂ ಒಕ್ಕಲು

[೧೨ನೇ ಪುಟ ನೋಡಿರಿ]

ಮುಖ್ಯ ಪ್ರಕಟಣೆ

"ಆನಂದ ಸುಧ" ನಮ್ಮ ಆನಂದ ಸುಧ ಸಮಸ್ತ ಜನಗಳಿಗೆ ಬಲವನ್ನು ವೀರ್ಯ ಶಕ್ತಿಯನ್ನು ಕಲಿಗಿಸುವುದು. ಅನೇಕ ವ್ಯಾಧಿಗಳನ್ನು ನಾಶಮಾಡುತ್ತೆ. ೧೩ ದಿನಗಳಿಗೆ ಸರಿ ಹೋಗುವ ೧ ಔ. ಸೀಸೆ ೧ಕ್ಕೆ ರೂ. ೪—೦—೦.

"ಸ್ತ್ರೀ ಸುಧ" ನಮ್ಮ ಸ್ತ್ರೀ ಸುಧ ಸ್ತ್ರೀಯರಿಗೆ ಸಂಭವಿಸುವ ಸಮಸ್ತ ಗರ್ಭಾಶಯ ವ್ಯಾಧಿಗಳನ್ನು ಋತು ದೋಷಗಳನ್ನು, ಋತು ಮೂರೆ, ಸರಿಯಾಗಿ ಬಹಿಷ್ಟೆ ಆಗದಿರುವುದು ಮೊದಲಾದ ಸಮಸ್ತ ವ್ಯಾಧಿಗಳನ್ನು ನಾಶಮಾಡುವುದು. ಸಂತಾನವನ್ನು ಕಲಿಗಿಸುವುದು. ಒಂದು ತಿಂಗಳಿಗೆ ಸರಿಯೋ. ಗುಣ ೧ ತೊಲದ ಔಷಧಿ ರೂ. ೪—೦—೦.

"ಬಾಲ ಸುಧ" ಇದು ಸಣ್ಣ ಬಾಲಕರಿಗೆ ಅಜೀರ್ಣ, ಜ್ವರ, ಕೆಮ್ಮು, ಶೀತ, ಮಲಬದ್ಧತೆ, ಹೆಚ್ಚಾಗಿ ಭೇದಿ ಆಗುವಿಕೆ, ಮಕ್ಕಳು ಕ್ಷೀಣವಾಗಿ ಕೈಕಾಲು ಸಣ್ಣವಾಗುವಿಕೆ, ಲಿವರ್ ಬೆಳೆಯುವುದು, ಈ ಎಲ್ಲಾ ವ್ಯಾಧಿಗಳಿಗೆ ಪರಿಹಾರವಾಗಿದೆ. ಹೀಗಿರುವ ವಿಷಯ ಇನ್ನೊಂದು ಇಲ್ಲವೆಂದು ಹೇಳಬಹುದು ಈ ಔಷಧಕ್ಕೆ ಮಿತಿ ಇಲ್ಲದ ಯೋಗ್ಯತಾ ಪತ್ರಗಳನ್ನು ಪಡೆದಿರುವುದಲ್ಲದೆ ದೇಶದಲ್ಲಿ ಅನೇಕ ವಿಧದಲ್ಲಿ ಅಭಿವೃದ್ಧಿಯಾಗಿರುತ್ತದೆ. ಸುಮಾರು ೧ ತಿಂಗಳಿಗೆ ಸರಿ ಹೋಗುವ ೬೦ ಮಾತ್ರೆಗಳ ಸೀಸೆ ೧ಕ್ಕೆ ರೂ. 1—0—0.

ಹೆಡ್ಡಾಫೀಸ್.

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್, ರಾಜಮಂಡ್ರಿ.

ಬೆಂಗಳೂರು ಏಜಂಟ್:

ಸುದರ್ಶನ ಆಯುರ್ವೇದ ವೈದ್ಯಶಾಲ, ನಗರ್ತರ ಪೇಟೆ, ಬೆಂಗಳೂರು-೨.

ಏಕೀಕರಣದ ಬೇಡಿಕೆ ಈಡೇರುವುದೇ ನಿಜ

ಕನ್ನಡಿಗರಿಗೆ ಉಪರಾಷ್ಟ್ರಾಧ್ಯಕ್ಷ ರಾಧಾಕೃಷ್ಣನ್ನರ ಹಿತೋಕ್ತಿ

ಭಾರತದ ಉಪರಾಷ್ಟ್ರಾಧ್ಯಕ್ಷರಾದ ಡಾ। ರಾಧಾಕೃಷ್ಣನ್ನರು ಕೆಲವೇ ತಿಂಗಳುಗಳ ಪೂರ್ವದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ನೂತನ ಭವನದ ಉದ್ಘಾಟನಾ ಕಾರ್ಯವನ್ನು ನೆರವೇರಿಸುವ ವ್ಯಾಜದಲ್ಲಿ ಉತ್ತರ ಕರ್ನಾಟಕಕ್ಕೆ ಸಂದರ್ಶನ ನೀಡಿದರು. ಮೊನ್ನೆ ಪುನಃ ಅವರು ಹುಬ್ಬಳ್ಳಿಯನ್ನು ಸಂದರ್ಶಿಸಿದ್ದರಿಂದ, ಆ ಪ್ರದೇಶದ ನಾಗರಿಕರಿಗೆ ತುಂಬ ಸಂತೋಷವಾಯಿತು. ಉಪರಾಷ್ಟ್ರಾಧ್ಯಕ್ಷರು ಕರ್ನಾಟಕ ಪ್ರದೇಶ ಕಾಂಗ್ರೆಸ ಸಮಿತಿಯ ಕಾರ್ಯಾಲಯದಲ್ಲಿ ನೆರೆದ ಕಾಂಗ್ರೆಸ ಕಾರ್ಯಕರ್ತರನ್ನು ಉದ್ದೇಶಿಸಿ ಕೆಲವು ಹಿತೋಕ್ತಿಗಳನ್ನಾಡಿದರು. ಪ್ರದೇಶ ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಹಳ್ಳಿಕೇರಿಯವರು ರಾಧಾಕೃಷ್ಣನ್ನರನ್ನು ಸ್ವಾಗತಿಸುತ್ತಾ ಕರ್ನಾಟಕ ರಾಜ್ಯ ನಿರ್ಮಾಣವಾಗಬೇಕೆಂದು ಒತ್ತಾಯಿಸುವ ಮತ್ತು ಈ ವಿಷಯದಲ್ಲಿ ಉಪರಾಷ್ಟ್ರಾಧ್ಯಕ್ಷರು ರಾಜ್ಯಗಳ ಪುನರ್ವಿಂಗಡಣೆಯ ಪ್ರಶ್ನೆಯನ್ನು ವಿಚಾರಿಸಲು ನೇಮಕಗೊಂಡ ಆಯೋಗದ ಮೇಲೆ ಪ್ರಭಾವ ಬೀರಬೇಕೆನ್ನುವ ಮನವಿಯೊಂದನ್ನು ಅರ್ಪಿಸಿದರು. ಇದಕ್ಕೆ ಉತ್ತರ ಕೊಡುತ್ತಾ ರಾಧಾಕೃಷ್ಣನ್ನರು ಹೀಗೆಂದರು—"ಕನ್ನಡಿಗರಾದ ನೀವು ನಿಮ್ಮ ಬೇಡಿಕೆಯನ್ನು ಒಕ್ಕೊರಲಿನಿಂದ ಮತ್ತು ಬಲವತ್ತಾದ ರೀತಿಯಲ್ಲಿ ಈ ಆಯೋಗದ ಮುಂದೆ ಮಂಡಿಸಿದ ಪಕ್ಷದಲ್ಲಿ ಆಯೋಗಕ್ಕೆ ನಿಮ್ಮ ಬೇಡಿಕೆಯನ್ನು ಮಾನ್ಯಮಾಡಲೇ ಬೇಕಾಗಿ ಬರುವುದು. ಈ ವಿಷಯವನ್ನು ಅಭ್ಯಸಿಸಿ ಬೇಡಿಕೆಯನ್ನು ಆಚರಣೆಯಲ್ಲಿ ತರುವುದಕ್ಕೆ ಸ್ವಲ್ಪ ಕಾಲಾವಕಾಶಬೇಕು. ಆದರೆ ಇಂದು ಹೆಚ್ಚು ಗದ್ದಲ ಮಾಡುವವರ ಕೆಲಸಗಳು ನಿರಾಯಾಸವಾಗಿ ಕೈಗೂಡುವವೆಂಬ ತಪ್ಪು ಕಲ್ಪನೆ ಇರುತ್ತದೆ—ಈ ತಪ್ಪು ಭಾವನೆಗೊಳಗಾಗಿ ಕನ್ನಡಿಗರು ಯಾರೂ ಗದ್ದಲ ಮಾಡುತ್ತ ಹೋಗಬಾರದು." ಉಪರಾಷ್ಟ್ರಾಧ್ಯಕ್ಷರು ಗಾಂಧೀಜಿಯವರೊಡನೆ ತಾವು ಈ ವಿಷಯದಲ್ಲಿ ಬಹಳ ಹಿಂದೆ ನಡೆಸಿದ ಮಾತುಕತೆಯನ್ನು ಸ್ಮರಿಸಿಕೊಂಡರು. ಈ ಹಿನ್ನಲೆಯಲ್ಲಿ ಉಚ್ಚ ಅಧಿಕಾರದ ಆಯೋಗ ನೇಮಕಗೊಂಡಿರುವುದನ್ನು ನೋಡಿದರೆ, ಭಾಷಾ ರಾಜ್ಯದ ಪುರಸ್ಕರ್ತರು ನಿರಾಶರಾಗುವುದಕ್ಕೆ ಕಾರಣವಿಲ್ಲೆಂದು ಅವರು ಅಭಿಪ್ರಾಯಪಟ್ಟರು. ಕರ್ನಾಟಕ ಏಕೀಕರಣದ ಪ್ರಶ್ನೆಯು ಎಲ್ಲ ರಾಜಕೀಯ ಭಿನ್ನಾಭಿಪ್ರಾಯಗಳನ್ನೂ ಮೀರಿ ಮೇಲೇರಿ ನಿಲ್ಲುವ ಜೀವಾಳದ ಪ್ರಶ್ನೆಯಾದುದರಿಂದ ಇಲ್ಲಿ ಪಕ್ಷ ಪಂಗಡಗಳ ಭೇದವಿಲ್ಲದೆ ಸಕಲರೂ ಸೌಹಾರ್ದಯುತವಾಗಿ, ಒಗ್ಗಟ್ಟಿನಿಂದ ಕೆಲಸ ಮಾಡಬೇಕು: ಯಾವುದೇ ತರದ ಹಿಂಸಾ ಕಾರ್ಯಗಳಲ್ಲಿ ಪ್ರವೃತ್ತರಾಗದೆ ಶಾಂತ ರೀತಿಯಿಂದ, ಪರಿಣಾಮಕಾರಿ ದಾಖಲೆಗಳನ್ನು ಒದಗಿಸುವುದರ ಮೂಲಕ— ಆಯೋಗಕ್ಕೆ ಕರ್ನಾಟಕ ಏಕೀಕರಣದ ಆವಶ್ಯಕತೆಯನ್ನು ಚೆನ್ನಾಗಿ ಮನವರಿಕೆ ಮಾಡಿಕೊಡಬೇಕು.

ಆಂಧ್ರ ರಾಜಧಾನಿಯ ಪ್ರಶ್ನೆ

ಭಾಷಾ ರಾಜ್ಯದ ಚಳುವಳಿಯು ಪಡೆದ ಆಂಧ್ರ ರಾಜ್ಯವೆಂಬ ಚೊಚ್ಚಲ ಮಗು ಹಲವು ಒಗೆಯ ಕಾಯಿಲೆಗಳನ್ನು ಎದುರಿಸಬೇಕಾಗಿ ಬಂದಿರುವುದು ದೌರ್ಭಾಗ್ಯವೆಂದೇ ಹೇಳಬೇಕು. ಹಿಂದೊಮ್ಮೆ ಹೇಳಿದಂತೆ ಆಂಧ್ರ ರಾಜ್ಯವೇ ಭಾಷಾ ರಾಜ್ಯಗಳ ಬೇಡಿಕೆಯನ್ನು ಮನ್ನಿಸುವುದಕ್ಕೂ ತಿರಸ್ಕರಿಸುವುದಕ್ಕೂ ಒಳಹದಿಯಾಗುವುದಾದರೆ, ಕನ್ನಡಿಗರಿಂದ ತೊಡಗಿ ಎಲ್ಲ ಭಾಷಾ ಪ್ರೇಮಿಗಳೂ ನಿರಾಶರಾಗುವ ಪ್ರಮೇಯ ಬಂದೀತು. ಸ್ಥಿರವಾದ ಭದ್ರವಾದ ಸರಕಾರವನ್ನು ರಚಿಸುವುದಕ್ಕೋಸ್ಕರ, ಅಥವಾ ಗವರ್ನರರ ರಾಜ್ಯಭಾರ ಕ್ರಮವನ್ನು ತಪ್ಪಿಸುವುದಕ್ಕೋಸ್ಕರ—ಆಂಧ್ರದಲ್ಲಿ ನಡೆದ ರಾಜಕೀಯ ಚದುರಂಗದಾಟವು ಜುಗುಪ್ಸೆ ತರುವಂತಿದ್ದರೂ, ಆಂಧ್ರ ರಾಜ್ಯದ ಹಿತದೃಷ್ಟಿಯಿಂದ ಎಲ್ಲರೂ ಶುಭವಾಗಲೆಂದ ಮನದೊಳಗೆ ಹಾರೈಸಿ ಸುಮ್ಮನುಳಿದರು. ಪರಿಣಾಮದಲ್ಲಿ ಅಸ್ತಿತ್ವಕ್ಕೆ ಬಂದ ಸಮ್ಮಿಶ್ರ ಮಂತ್ರಿಮಂಡಲದಲ್ಲಿ ಒಡಕು ಪ್ರಾರಂಭದಿಂದಲೂ ಇತ್ತೆಂಬುದಕ್ಕೆ ಶ್ರೀ. ಲಚ್ಚಣ್ಣನವರು ತಾವಿರುವ ಕೃಷಿಕರ ಲೋಕಪಕ್ಷದ ಆದೇಶದ ಮೇರೆಗೆ ರಾಜೀನಾಮೆ ಕೊಟ್ಟು ಹೊರಬಂದುದೇ ಸಾಕ್ಷಿ. ಆಂಧ್ರ ರಾಜ್ಯದ ಪ್ರಥಮ ಶಾಸನ ಸಭಾಧಿವೇಶನದಲ್ಲಿ ರಾಜಧಾನಿಯ ಪ್ರಶ್ನೆಯನ್ನು ಪುನಃ ಎತ್ತಬಾರದೆಂದು ಏನೋ ಪಿಸಿಬಿಸಿಯಾದ ನಿರ್ಣಯವನ್ನು ಮಾಡಿ, ಪ್ರಕಾಶಮರು ಸಮಾಧಾನದ ಉಸಿರಳೆದಿದ್ದರು. ಆದರೆ, ಈ ಸಲದ ಬಜೆಟು ಅಧಿವೇಶನದಲ್ಲಿ ಮರಳಿ ಈ ಪ್ರಶ್ನೆಯನ್ನು ಎತ್ತಲು ಪ್ರಯತ್ನ ನಡೆಯಿತು. ಕೃಷಿಕರ ಲೋಕಪಕ್ಷದವರು ವಿಜಯವಾಡಾ—ಗುಂಟೂರುಗಳೇ ರಾಜಧಾನಿಯಾಗಲು ಯೋಗ್ಯವೆಂಬ ತಮ್ಮ ಪೂರ್ವದ ನಿಲುಮೆಗೆ ಅಂಟಿಕೊಂಡುದರಿಂದ, ಕರ್ನೂಲಿನಲ್ಲಿ ಸರಕಾರೀ ಕಟ್ಟಡಗಳನ್ನು ರಚಿಸುವುದಕ್ಕೋಸ್ಕರ ಮುಂಗಡ ಪತ್ರದಲ್ಲಿ ಸೂಚಿಸಿದ ವೆಚ್ಚಕ್ಕೆ ಸಮ್ಮತಿಯನ್ನು ನೀಡಲಾಗದೆ ಹೊರಬಂದರು. ಈ ವೆಚ್ಚವನ್ನು ಮಂಜೂರು ಮಾಡಬೇಕೆಂಬ ಸೂಚನೆಯ ಚರ್ಚೆಯ ಕಾಲಕ್ಕೆ ಶ್ರೀ. ಪುಂಡರೀಕಾಕ್ಷ ಎಂಬವರು ಕಡಿತದ ಸೂಚನೆ ಮಂಡಿಸಿ, ಈ ವರ್ಷದ ಒಕ್ಟೋಬರದೊಳಗೆ ಗುಂಟೂರು ವಿಜಯವಾಡಗಳಿಗೆ ರಾಜಧಾನಿಯನ್ನೊಯ್ಯಬೇಕೆಂದೂ ಮದ್ರಾಸಿನಲ್ಲಿರುವ ಆಂಧ್ರ ರಾಜ್ಯದ ಪ್ರದೇಶಗಳು ಇದೇ ಎಪ್ರೀಲದೊಳಗೆ ಗುಂಟೂರು ವಿಜಯವಾಡಗಳಿಗೆ ಸ್ಥಳಾಂತರಿಸಬೇಕೆಂದೂ ಆಗ್ರಹಪಟ್ಟರು. ಸುದೈವದಿಂದ ಮತದಾನ ಕಾಲಕ್ಕೆ ಐದು ಬಹುಮತಗಳಿಂದ ಸರಕಾರಕ್ಕೆ ಜಯಲಭಿಸಿತು. ಹೀಗೆ ರಾಜಧಾನಿಯ ಪ್ರಶ್ನೆ ಸದ್ಯಕ್ಕೆ ಹಿಂದೂಡಲ್ಪಟ್ಟಿತು.

ಪ್ರಕಾಶಮರ ಬೆದರಿಕೆ

ಪ್ರಕಾಶಮರು ಇದರಿಂದ ಧೈರ್ಯ ತಾಳುವಂತೆ ಮಾತ್ರ ಇಲ್ಲವೆಂಬುದನ್ನು ಈ ಮತದಾನದ ಪ್ರಸಂಗವೇ ಎತ್ತಿ ಹೇಳುತ್ತದೆ. ತನ್ನ ಮಂತ್ರಿ ಮಂಡಳದ ಮೇಲೆ ವಿಶ್ವಾಸವನ್ನು ವ್ಯಕ್ತಗೊಳಿಸಬೇಕೆಂದೂ ಅನ್ಯಥಾ ಈಗಿಂದೀಗಲೇ ರಾಜೀನಾಮೆ ಒಪ್ಪಿಸುವುದಾಗಿಯೂ ಅವರು ಸಾರಿದರು. ಸಭಾಧ್ಯಕ್ಷರು ವಿಶ್ವಾಸ ಪ್ರದರ್ಶಿಸುವುದಕ್ಕೆ ಸಂದರ್ಭವನ್ನು ಕೊಡದೆ, ಕಡಿತದ ಸೂಚನೆಯ ಮೇಲೆ ಮತದಾನ ಮಾಡುವುದಕ್ಕೆ ನೇರಾದ ಅವಕಾಶ ಕಲ್ಪಿಸಿದರು. ಹಾಗೆಂದು ಪ್ರಕಾಶಮರ ಈ ಬೆದರಿಕೆ ವಾಂಛಿತ ಫಲವನ್ನು ನೀಡಿತು—ಕೃಷಿಕರ ಲೋಕಪಕ್ಷದ ೧೧ ಸದಸ್ಯರಲ್ಲಿದ್ದ ಒಗ್ಗಟ್ಟನ್ನು ಇದು ಮುರಿಯಿತು. ಒಬ್ಬ ಸದಸ್ಯರು ಸರಕಾರಕ್ಕೆ ಬೆಂಬಲ ನೀಡಿದರೆ, ಇನ್ನೊಬ್ಬರು ಮತದಾನ ಕಾಲಕ್ಕೆ ಯಾರ ತಂಟೆಯೂ ಬೇಡವೆಂದು ಮೆಲ್ಲನೆದ್ದು ಹೊರ ಹೋದರು. ಹಲವು ಸಮಯದಿಂದ ಕಾಯಿಲೆ ಪೀಡಿತರಾಗಿದ್ದ ಕಾಂಗ್ರೆಸ ಸದಸ್ಯರೊಬ್ಬರು ಈ ಸಭೆಗೆ ಬಂದು, ಸರಕಾರಕ್ಕೆ ತಮ್ಮ ಮತವನ್ನು ನೀಡಿದರು. ತಮಗೆ ಬಹುಮತ ದೂರೆಯದೆಂಬ ಅಂಜಿಕೆ ಸರಕಾರಕ್ಕೆ ಇದ್ದಿತೆನ್ನುವುದಕ್ಕೆ ಇದು ನಿದರ್ಶನ. ಆದರೆ ಕಾಂಗ್ರೆಸ ಪಕ್ಷದಲ್ಲೂ ಒಡಕು ಇದ್ದು, ಮೂರು ಮಂದಿ ಸರಕಾರದ ವಿರುದ್ಧ ಮತ ಕೊಟ್ಟರೆಂಬುದನ್ನು ನೆನೆದರೆ, ಆಂಧ್ರದಲ್ಲಿ ರಾಜ್ಯದ ಒಟ್ಟು ಹಿತಕ್ಕಿಂತಲೂ ಸದಸ್ಯರ ವ್ಯಕ್ತಿಗತ ಆಸೆ ಅಪೇಕ್ಷೆ ವ್ಯಾಮೋಹಗಳಿಗೆ ಅಧಿಕ ಹಾಗೂ ಅನುಚಿತ ಪ್ರಾಧಾನ್ಯ ದೊರೆತಿದೆಯೆಂದೆನಿಸುವುದು. ಅಂತೂ ಒಮ್ಮೆ ಸರಕಾರದ ಸೂಚನೆ ಪಾಸಾದುದರಿಂದ, ತಾತ್ಕಾಲಿಕ ರಾಜಧಾನಿಯಾದ ಕರ್ನೂಲಿನಲ್ಲಿ ೫೦೦ ಸರಕಾರಿ ನೌಕರರ ವಸತಿ ಗೃಹಗಳೂ ಸೆಕ್ರೆಟೇರಿಯಟಿನ ಅಧಿಕಾರಿಗಳು ಇರುವುದಕ್ಕೋಸ್ಕರ ಮನೆಗಳೂ, ಒಂದು ಸರಕಾರೀ ಅತಿಥಿ ಗೃಹವೂ ಕ್ಷಿಪ್ರದಲ್ಲಿಯೇ ರಚಿಸಲ್ಪಡುವುದು. ಕೇಂದ್ರ ಸರಕಾರದವರು ಇಲ್ಲಿ ವಿಮಾನ ನಿಲ್ದಾಣವನ್ನು ಕಟ್ಟಿಸುವ ವಿಚಾರವನ್ನು ಮಾಡುತ್ತಿರುವರು. ಈ ಬಗೆಯಾಗಿ ರಾಜಧಾನಿಯ ಸೌಂದರ್ಯ ಹೆಚ್ಚಿಸಲು ಅನುಕೂಲವಾಗಿದೆ—ಸರಿಯಾಗಲೀ ತಪ್ಪಾಗಲೀ ಒಮ್ಮೆ ಶಾಸನ ಸಭಾ ಸದಸ್ಯರೆಲ್ಲ ಸೇರಿ ಬಹುಮತದಿಂದ ಕರ್ನೂಲಿನಲ್ಲಿಯೇ ರಾಜಧಾನಿ ಇರಬೇಕೆಂದು ನಿರ್ಧರಿಸಿಯಾಗಿದೆ. ಇನ್ನು ವಿಶಾಲಾಂಧ್ರದ ರಚನೆಯಾಗುವ ತನಕ ಕರ್ನೂಲನ್ನೆ ತಮ್ಮ ಆವಶ್ಯಕತೆಗಳಿಗೆ ಹೊಂದಿಸಿಕೊಳ್ಳುವುದು ವಿಹಿತ. ಅದು ಬಿಟ್ಟು ಹೀಗೆ ಪದೇ ಪದೇ ಕಿರುಕುಳದ ಪ್ರಶ್ನೆಗೆ ಅವಕಾಶ ಮಾಡಿಕೊಡುವುದು ಸರಿಯಲ್ಲ. ಆದರೆ ಆಂಧ್ರ ರಾಜ್ಯದ ವೈಶಿಷ್ಟ್ಯವೇ ಇದಾಗಿದ್ದೀತು—ಕಳೆದ ಅಧಿವೇಶನದಲ್ಲಿ ಮಂತ್ರಿಗಳಿಗೆ ತಿಂಗಳೊಂದಕ್ಕೆ ೫೦೦ ರೂಪಾಯಿಗಳ ಸಂಬಳವಿರಬೇಕೆಂದೂ ಅವರ ಕೈಕೆಳಗಿನ ಪಾರ್ಲಿಮೆಂಟರಿ ಕಾರ್ಯದರ್ಶಿಗಳಿಗೆ ೬೦೦ ರೂಪಾಯಿಗಳ ಮಾಸಿಕ ವೇತನ ದೊರೆಯಬೇಕೆಂದೂ ಶಾಸನ ಸಭಾ ಸದಸ್ಯರು ತೀರ್ಮಾನಿಸಿದ್ದರು! ಕಾರಣ ಆಂಧ್ರದ ಗವರ್ನರರು ಈ ನಿರ್ಣಯವು ಸಮರ್ಪಕವಾಗಿಲ್ಲವೆಂದೂ ಆದಕಾರಣ ಅದನ್ನು ಪುನರಾಲೋಚಿಸಬೇಕೆಂದೂ, ಮಂತ್ರಿಗಳು ತಮ್ಮ ಸ್ಥಾನದ ಘನತೆ ಗೌರವಗಳನ್ನು ಕಾಪಾಡಿಕೊಳ್ಳುವುದಕ್ಕೋಸ್ಕರ ಸಂಬಳದ ಮಿತಿಯನ್ನು ಏರಿಸಬೇಕೆಂದೂ ಹೇಳಿ, ಮಸೂದೆಯನ್ನು ಮರಳಿ ಶಾಸನ ಸಭೆಗೆ ಕಳಿಸುವ ಪ್ರಸಂಗ ಬಂದಿತು. ಶಾಸನ ಸಭಾ ಸದಸ್ಯರು ತಿಳಿದು ತಿಳಿದು ಇದೇ ಬಗೆಯಲ್ಲಿ ತಪ್ಪಿ ಬೀಳುತಿದ್ದರೆ, ಆ ರಾಜ್ಯದ ಭವಿಷ್ಯದ ಬಗ್ಗೆ ನಾವು ಯಾವ ಆಶೆಯನ್ನು ಕಟ್ಟಿಕೊಳ್ಳೋಣ?

ವೇತನ ದೊರೆಯುವ ಪ್ರತಿ ದಿವಸದಲ್ಲೂ ಸೇವಿಂಗ್ಸ್ ಬೇಂಕ್ ಲೆಖ್ಖದಲ್ಲಿ ಹಣವಿಡಲು ಪ್ರಾರಂಭಿಸಿರಿ.

ನಿಮ್ಮ ಸಂಪಾದನೆಯಲ್ಲಿ ನೀವು ಉಳಿಸಿಕೊಳ್ಳುವ ಅಂಶವೇ ಅತೀ ಮಹತ್ವದ್ದು. ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟಿನಲ್ಲಿ ಸಹಸ್ರಾರು ಮಂದಿ ಸೇವಿಂಗ್ಸ್ ಲೆಖ್ಖ ತೆರೆದು ತಾವು ಉಳಿಸುವ ಹಣವನ್ನು ವೃದ್ಧಾಪ್ಯ, ಅಪೇಕ್ಷಿತ ವಸ್ತುಗಳನ್ನು ಕೊಂಡುಕೊಳ್ಳಲು, ಪರೀಕ್ಷೆ, ಅನಿರೀಕ್ಷಿತ ಘಟನೆಗಳಿಗಾಗಿ ಮೀಸಲಿಡುತ್ತಾರೆ. ಹಲ್ಲಿರುವಾಗಲೇ ಕಡಲೆ ಅಗಿಯಬೇಕು ಎಂಬಂತೆ ಜೀವ ಸಂಪಾದನೆ ಮಾಡುವ ಈ ಸಮಯವೇ ಹಣ ಉಳಿಸುವ ಸುವರ್ಣಕಾಲವಾಗಿದೆ. ಪ್ರತಿ ತಿಂಗಳ ನಿಮ್ಮ ಸಂಬಳದಲ್ಲಿ ಸೇಕಡಾ 10 ರಷ್ಟನ್ನು ಸೇವಿಂಗ್ಸ್ ಲೆಖ್ಖದಲ್ಲಿರಿಸಿ ನಿಮ್ಮ ಆರ್ಥಿಕ ಅಭಿವೃದ್ಧಿ ಹಾಗೂ ಬಾಳಿನ ಭದ್ರತೆಯನ್ನು ಕಾಪಾಡಿಕೊಳ್ಳಲು ಮುಂದಾಗಿರಿ.

ವ್ಯವಹಾರ ವಹಿವಾಟು ರೂ 5,00,00,000

THE CANARA INDUSTRIAL & BANKING SYNDICATE LTD.,

Estd: 1925 H O UDIPI S India

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಸ್ಥಾಪನೆ. ೧೯೨೫] [ಪ್ರಧಾನ ಕಚೇರಿ ಉಡುಪಿ ದ. ಭಾರತ.

ಶಾಂತ ವಾತಾವರಣದಲ್ಲಿ ಅತ್ಯಾಧುನಿಕ ಮಾದರಿಯ ಮೇಲ್ತರಗತಿಯ

—ವಸತಿ ಮತ್ತು ಭೋಜನಗೃಹ—

ಸ್ವಸ್ತಿಕ್ ಲೋಜ್

ಪಳನೀರು ರಸ್ತೆ, ಮಂಗಳೂರು

- ಗಾಳಿ ಬೆಳಕುಗಳಿದ್ದು ಸುಸಜ್ಜಿತವಾದ ಸಿಂಗಲ್ ಮತ್ತು ಡಬ್ಬಲ್ ಕೋಣೆಗಳು!
- ತೃಪ್ತಿಕರವಾದ ಸೇವೆ ಮತ್ತು ಸರ್ವಾನುಕೂಲತೆಗಳು!
- ಶಾಕಾಹಾರಿಗಳಿಗೆ ನುರಿತ ಬ್ರಾಹ್ಮಣ ಅಡಿಗೆ ಭಟ್ಟರಿಂದಲೇ ಭೋಜನ ಮತ್ತು ಉಪಾಹಾರ ತಯಾರಿಕೆ! ದರ ಸುಲಭ! ಸಂದರ್ಶಿಸಿ ಸಮಾಧಾನ ಪಡೆಯಿರಿ!!

ಚಿತ್ತರಂಜನದ ನೂರನೇ ರೈಲ್ವೇ ಯಂತ್ರ

ಸ್ವತಂತ್ರ ಭಾರತದ ಪ್ರಗತಿಯಲ್ಲೊಂದು ಮೈಲುಗಲ್ಲು

ಕಲ್ಕತ್ತೆಯ ಚಿತ್ತರಂಜನ ರೈಲ್ವೆ ಯಂತ್ರ ಕಾರ್ಖಾನೆಯು ಕಳೆದವಾರ ಸ್ವತಂತ್ರ ಭಾರತದ ಪ್ರಗತಿಯನ್ನು ಅಳೆಯುಬಹುದಾದ ಒಂದು ನಿಶ್ಚಿತ ಮಟ್ಟವನ್ನು ಮುಟ್ಟಿತು. ಕಾರ್ಖಾನೆಯಲ್ಲಿ ಉತ್ಪಾದಿತವಾದ ನೂರನೇ ರೈಲ್ವೆ ಯಂತ್ರವನ್ನು ಅಂದು ಹಳಿಗಳ ಮೇಲೆ ಓಡಾಡಿಸಿದರು ಸ್ವತಃ ರೈಲ್ವೆ ಮಂತ್ರಿ ಶ್ರೀ ಲಾಲಬಹಾದ್ದೂರ ಶಾಸ್ತ್ರಿಗಳೇ ರೈಲ್ವೆಯನ್ನು ನಡೆಸಿಕೊಂಡು ಕೆಲವು ಗಜ ದೂರ ಬಂದರು. ಪಶ್ಚಿಮ ಪಂಜಾಬದ ಮುಖ್ಯ ಮಂತ್ರಿ ಡಾ. ಬಿ. ಸಿ ರೋಯ್ ಅವರೂ ಇಂಜಿನದ ಕಾಲ್ಮಣೆಯ ಮೇಲೆ ನಿಂತುಕೊಂಡು ಲಾಲಬಹಾದ್ದೂರ ಶಾಸ್ತ್ರಿಗಳು ನಡೆಸುತ್ತಿದ್ದ ರೈಲ್ವೆಯ ಮೂಲಕ ಸಮಾರಂಭ ಜರಗುವ ಜಾಗಕ್ಕೆ ಆಗಮಿಸಿದರು. ದಿವಂಗತ ದೇಶಬಂಧು ಚಿತ್ತರಂಜನ ದಾಸರ ಧರ್ಮಪತ್ನಿ ಶ್ರೀಮತಿ ಬಸಂತಿ ದೇವಿಯವರು ಈ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು. ಯಂತ್ರದ ಮೇಲೆ ಕೆತ್ತಲ್ಪಟ್ಟಿದ್ದ "ಚಿತ್ತರಂಜನ ೧೦೦" ಎಂಬ ಫಲಕವನ್ನು ಅನಾವರಣ ಮಾಡಿದರು. ರೈಲ್ವೆ ಮಂತ್ರಿಗಳು ಕಾರ್ಖಾನೆಯ ಕೆಲಸಗಾರರ ಕಾರ್ಯದಕ್ಷತೆಯನ್ನು ಪ್ರಶಂಸಿಸಿ ಮಾತನಾಡಿದರಲ್ಲದೆ, ಬೇಗನೇ ಇಲ್ಲಿಯ ಉತ್ಪಾದನಾ ಮಟ್ಟವನ್ನು ಪರಮಾವಧಿ ಮಿತಿಗೆ ಏರಿಸಬೇಕೆಂದು ಅಭಿಪ್ರಾಯಪಟ್ಟರು. ಕಳೆದ ವರ್ಷ ನಿರ್ದಿಷ್ಟಪಡಿಸಿದಕ್ಕಿಂತ ಎರಡು ಯಂತ್ರಗಳು ಹೆಚ್ಚಾಗಿಯೇ ಈ ಕಾರ್ಖಾನೆಯಲ್ಲಿ ಸಿದ್ಧಗೊಂಡಿವೆ. ೧೯೫೮ನೇ ಇಸವಿಯ ಸುಮಾರಿಗೆ ನಮಗೆ ಬೇಕಾದಷ್ಟು ಯಂತ್ರಗಳನ್ನು ಈ ಕಾರ್ಖಾನೆಯೇ ಪೂರೈಸುವ ನಿರೀಕ್ಷೆ ಸಹ ಇದೆ. ವಿದೇಶಗಳಿಂದ ಬಿಡಿ ಭಾಗಗಳನ್ನು ಎಷ್ಟು ಆವಶ್ಯಕವೋ ಅಷ್ಟು ಮಾತ್ರ ತರಿಸಲಾಗುತ್ತಿದೆ ಈ ಯಂತ್ರಗಳ ಉತ್ಪಾದನೆಯಲ್ಲಿ ನೂರಕ್ಕೆ ೯೫ ಭಾರತದಲ್ಲಿಯೇ ತಯಾರಾದ ಬಿಡಿಭಾಗಗಳು ಉಪಯೋಗಿಸಲ್ಪಡುತ್ತಿವೆ. ಈ ಕಾರ್ಖಾನೆಯಲ್ಲಿ ಪ್ರಕೃತ ತಿಂಗಳಿಗೆ ಆರರಂತೆ ಯಂತ್ರಗಳು ನಿರ್ಮಾಣಗೊಳ್ಳುತ್ತಿವೆ ಈ ಪ್ರಮಾಣವನ್ನು ಸುಲಭದಲ್ಲಿಯೇ ಹನ್ನೊಂದಕ್ಕೆ ಏರಿಸಬಹುದೆಂದು ಜಪಾನೀ ತಜ್ಞರು ಅಭಿಪ್ರಾಯ ವ್ಯಕ್ತಗೊಳಿಸಿರುವರು.

ಉದ್ದಿಮೆದಾರರ ಅಭಿಪ್ರಾಯ

ಇದು ಸಾಧ್ಯವಾಗಬೇಕಾದರೆ ಕೆಲಸಗಾರರ ಸಹಕಾರದೊಂದಿಗೆ ನಿರಾತಂಕವಾಗಿ ಕಚ್ಚಾ ವಸ್ತುಗಳ, ಬಿಡಿಭಾಗಗಳ ಪೂರೈಕೆಯಾಗುತ್ತಿರಲೂ ಬೇಕು ನಮ್ಮ ರೈಲ್ವೆ ಯಂತ್ರಗಳೆಲ್ಲ ಬಹಳ ಹಳೆಯದಾಗಿರುವುದರಿಂದ, ಅವುಗಳನ್ನು ತೆಗೆದು ಹೊಸ ಯಂತ್ರಗಳನ್ನು ಸ್ಥಾಪಿಸುವ ಕೆಲಸವು ವಿಳಂಬವಿಲ್ಲದೆ ನಡೆಯಬೇಕಾಗಿರುವುದು. ಚಿತ್ತರಂಜನದ ಇಂಜಿನುಗಳುಮಾತ್ರವೇ ನಮ್ಮ ಆವಶ್ಯಕತೆಯನ್ನು ಪ್ರಕೃತ ಪೂರೈಸಲಾರವು. ಆದ ಕಾರಣ ಹೊರಗಿನ ಸಹಾಯವನ್ನು ಈ ವಿಷಯದಲ್ಲಿ ನಾವು ಪಡೆಯಲೇ ಬೇಕಾದ ಪ್ರಸಂಗ ಬಂದಿರುತ್ತದೆ. ಕೊಲೊಂಬೋ ಯೋಜನೆಯಂತೆ ಕೆನಡಾ ದೇಶವು ಭಾರತಕ್ಕೆ ೧೨೦ ರೈಲ್ವೆ ಯಂತ್ರಗಳನ್ನು ಒದಗಿಸುತ್ತದೆ. ಅಮೇರಿಕಾ ದೇಶವು ಒಂದು ನೂರು ಯಂತ್ರಗಳನ್ನು ಐದು ಸಾವಿರ ಬಂಡಿಗಳನ್ನು ವಿದೇಶಗಳಿಂದ ತರಿಸಿಕೊಳ್ಳಲು ಸಾಕಷ್ಟು ಧನ ಸಹಾಯವನ್ನು ಕೊಡುತ್ತದೆ ಈ ಸಹಾಯಕ್ಕೋಸ್ಕರ ನಾವು ಕೃತಜ್ಞರಾಗಿರುವುದಲ್ಲದೆ, ಇತ್ತ ಭರದಿಂದ ಉತ್ಪಾದನೆಯನ್ನು ಹೆಚ್ಚಿಸಲೂ ನೋಡಬೇಕು. ದೇಶೀಯ ಕೈಗಾರಿಕೆಗಳ ಸಹಕಾರವನ್ನು ಈ ಕಾರ್ಖಾನೆ ಅಧಿಕ ಪ್ರಮಾಣದಲ್ಲಿ ಒದಗಿಸಿಕೊಂಡರೆ, ಆಗ ಬೇಗ ಬೇಗನೇ ಯಂತ್ರಗಳನ್ನು ಕಟ್ಟಿಕೊಳ್ಳಲು ಚಿತ್ತರಂಜನ ಕಾರ್ಖಾನೆಗೆ ಸಾಧ್ಯವಾಗುತ್ತದೆ. ಈ ಕಾರ್ಖಾನೆಯನ್ನೂ ದಾಮೋದರ ಕಣಿವೆ ಯೋಜನೆ, ಸಿಂಧ್ರಿಯ ಗೊಬ್ಬರ ಕಾರ್ಖಾನೆ ಮುಂತಾದ ಸರಕಾರ ನಡೆಸುವ ಬೇರೆ ಉದ್ಯಮಗಳನ್ನೂ ಇತ್ತೀಚೆ ಖಾಸಗಿ ಉದ್ದಿಮೆದಾರರ ತಂಡವೊಂದು ಸಂದರ್ಶಿಸಿ, ಇಲ್ಲಿ ವಿದ್ಯಮಾನವಿರುವ ಪರಿಸ್ಥಿತಿಯ ಅಧ್ಯಯನವನ್ನು ಮಾಡಿತು. ಈ ಸಂಬಂಧದಲ್ಲಿ ಸರಕಾರಕ್ಕೆ ಒಪ್ಪಿಸಿದ ವರದಿಯಲ್ಲಿ ಖಾಸಗಿ ಉದ್ದಿಮೆದಾರರು ದೇಶವನ್ನು ಪ್ರಗತಿಪಥದಲ್ಲಿ ಮುಂದೊಯ್ಯುವ ಈ ಕೈಗಾರಿಕೋದ್ಯಮಗಳ ಕುರಿತು ಮೆಚ್ಚಿಗೆ ವ್ಯಕ್ತಪಡಿಸಿದ್ದಲ್ಲದೆ-ಇನ್ನೂ ಹೆಚ್ಚಿನ ಯನ್ನು ಕಾಣುವಂತಾಗಬೇಕೆಂದು ಅತ್ಯಮೂಲ್ಯ ಸಲಹೆಗಳನ್ನೂ ನೀಡಿರುವರು. ಉದಾಹರಣೆಗೆ ಚಿತ್ತರಂಜನ ಕಾರ್ಖಾನೆಯವರು ಈಗ ವಿದೇಶಗಳಿಂದ ಆಮದು ಮಾಡಿಕೊಳ್ಳುವ ಕೆಲವೊಂದು ಸರಕುಗಳು ದೇಶದೊಳಗೆಯೇ ಉತ್ಪಾದಿಸಲಾಗುತ್ತವೆಂದೂ ಅವುಗಳನ್ನು ಉಪಯೋಗಿಸಿದರೆ ಖಾಸಗಿ ಉದ್ದಿಮೆಗಳ ಬೆಳೆಯುವುದಕ್ಕೆ ಅನುಕೂಲವಾಗುವುದೆಂದೂ ಹೇಳಿರುವರು ಮುಖ್ಯವಾದ ಉದ್ದಿಮೆಯನ್ನು ನಡೆಸುತ್ತಿರುವಂತೆಯೇ ಕೆಲವು ಉಪ ಸಾಮಗ್ರಿಗಳ ಕೈಗಾರಿಕೆಗೂ ಅವಕಾಶ ಕಲ್ಪಿಸಿಕೊಡಬೇಕೆಂಬುದು ಈ ಖಾಸಗಿ ಅಧ್ಯಯನ ಮಂಡಳಿಯವರು ನೀಡಿದ ಇನ್ನೊಂದು ಮುಖ್ಯ ಸೂಚನೆ. ಇವರು ಮಾಡಿದ ಮೂರನೆಯ ಸೂಚನೆಯು ಇನ್ನೂ ಮಹತ್ವದ್ದಾಗಿರುತ್ತದೆ—ಸರಕಾರದ ಕಡೆಯಿಂದ ನಡಿಸಲ್ಪಡುವ ಉದ್ದಿಮೆಗಳಲ್ಲಿ ವ್ಯವಹಾರಿಕ ಜಾಣ್ಮೆ ಮತ್ತು ವ್ಯಾಪಾರೀ ಕೌಶಲ್ಯಗಳಿಗೆ ಅವಕಾಶ ಸಾಕಷ್ಟು ತೋರುತ್ತಿಲ್ಲ. ಈ ನ್ಯೂನತೆಯನ್ನು ಹೋಗಲಾಡಿಸಿ ಪರಿಸ್ಥಿತಿಯನ್ನು ಊರ್ಜಿತಗೊಳಿಸುವುದಕ್ಕೋಸ್ಕರ ನಾಲ್ವರು ಸರಕಾರೀ ಪ್ರತಿನಿಧಿಗಳೂ, ನಾಲ್ವರು ಖಾಸಗಿ ಉದ್ದಿಮೆದಾರರ ಪ್ರತಿನಿಧಿಗಳೂ ಒಬ್ಬ ಆಡಳಿತಾಧಿಕಾರಿಯೂ ಇರುವ ಆಡಳಿತ ಮಂಡಳಿಗಳನ್ನು ಸರಕಾರ ರಚಿಸಬೇಕೆಂದು ಉದ್ದಿಮೆದಾರರ ಅಭಿಪ್ರಾಯ.

ಮದ್ರಾಸು ಶಾಸನ ಸಭೆಯಲ್ಲಿ

ಮದ್ರಾಸಿನಲ್ಲಿ ಕಳೆದ ವಾರ ಶಾಸನ ಸಭೆ ತೋರಿಸಿದ ಚಟುವಟಿಕೆಗಳೆಲ್ಲವೂ ರೈತರ ಹಿತರಕ್ಷಣೆಯ ಧ್ಯೇಯೋದ್ದೇಶವನ್ನೇ ಕಣ್ಣ ಮುಂದಿಟ್ಟುಕೊಂಡಿದ್ದವು ದಕ್ಷಿಣಕನ್ನಡ ಜಿಲ್ಲೆಯಲ್ಲಿ ಒಕ್ಕಲುಗಳನ್ನು ಅನ್ಯಾಯವಾಗಿ ಎಬ್ಬಿಸುವುದನ್ನು ಪ್ರತಿಬಂಧಿಸುವ ಮಸೂದೆ ಅಂಗೀಕಾರಗೊಂಡಿತಲ್ಲದೆ, ಪರಿಶೀಲಕ ಸಮಿತಿಯು ಮಲಬಾರು ಒಕ್ಕಲುಹಿತ ಮಸೂದೆಯ ಕುರಿತು ಸೂಚಿಸಿದ ತಿದ್ದುಪಡಿಗಳನ್ನೊಳಗೊಂಡು ಇದೇ ಮಸೂದೆಯನ್ನು ಪರ್ಯಾಲೋಚಿಸುವ ಕೆಲಸವೂ ನಡೆಯಿತು ನ್ಯಾಯವಾದ ಗೇಣಿ, ಒಕ್ಕಲೆಬ್ಬಿಸುವುದನ್ನು ತಡೆಗಟ್ಟುವುದು ಮುಂತಾದ ವಿಷಯಗಳಲ್ಲಿ ಇನ್ನೂ ಹೆಚ್ಚು ಪಕ್ಷಪಾತವನ್ನು ರೈತರ ಪರವಾಗಿ ತೋರಿಸಬೇಕೆಂದು ಸದಸ್ಯರು ಆಗ್ರಹ ವ್ಯಕ್ತಗೊಳಿಸಲು, ಮುಖ್ಯಮಂತ್ರಿ ರಾಜಗೋಪಾಲಾಚಾರಿಯವರು ಅವುಗಳನ್ನು ಸಹಾನುಭೂತಿಯಿಂದ ಕಂಡರು. ಈ ನಡುವೆ ಕಂದಾಯ ಮಂತ್ರಿ ಮಾಣಿಕ್ಯವೇಲು ನಾಯಕರರು ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ ಇಡೀ ರಾಜ್ಯಕ್ಕೆ ಅನ್ವಯಿಸುವ ವ್ಯಾಪಕವಾದ ಭೂ ಸುಧಾರಣಾ ಕಾಯಿದೆಯನ್ನು ರಚಿಸುವುದರಲ್ಲಿ ಸರಕಾರ ಹೆಚ್ಚಿನ ಆಸ್ಥೆ ವಹಿಸಿದೆಯೆಂದೂ ಅದು ಶೀಘ್ರಾತಿಶೀಘ್ರದಲ್ಲಿ ಶಾಸನ ಸಭೆಯ ಮುಂದೆ ಬರಲಿರುವುದಾಗಿಯೂ ಹೇಳಿದರು. ಕೆಲವೇ ದಿನಗಳ ಹಿಂದೆ ಗವರ್ನರರು ರೈತರ ಪಾಲಿಕ್ಕೆ ತಾತ್ಕಾಲಿಕ ಸಂರಕ್ಷಣೆಯನ್ನು ಕೊಡುವ ಉದ್ದೇಶದಿಂದ ಹೊರಡಿಸಿದ ಸುಗ್ರೀವಾಜ್ಞೆಯ ಸ್ಥಾನದಲ್ಲಿ ಅದೇ ಸ್ವರೂಪದ ಹೊಸ ಮಸೂದೆಯೊಂದನ್ನೂ ಶಾಸನ ಸಭೆ ಪರಿಶೀಲನೆಗೆ ತೆಗೆದುಕೊಂಡಿತು. ಪತ್ರಿಕೆಗಳೂ ಮಹಾಜನರೂ ಮಾಡಿದ ಟೀಕೆ ಮತ್ತು ನೀಡಿದ ಸಲಹೆಗಳನ್ನು ಅನುಲಕ್ಷಿಸಿ "ಸಾಲ" ಮತ್ತು "ಕೃಷಿಕ" ಎಂಬ ಪದಗಳ ಅರ್ಥವನ್ನು ನಿರ್ದಿಷ್ಟಗೊಳಿಸುವ ಪ್ರಯತ್ನವನ್ನು ಈ ಮಸೂದೆಯಲ್ಲಿ ಮಾಡಿದ್ದರೂ ಅದರಲ್ಲಿ ಲೋಪದೋಷಗಳು ಪೂರ್ಣ ಮಾಯಗೊಂಡಂತಿಲ್ಲ. ಇವುಗಳ ಹೊರತಾಗಿ ಶಾಸನ ಸಭೆ ವಿಚಾರಿಸಿದ ಮುಖ್ಯ ಸಂಗತಿಗಳಲ್ಲಿ ಕೊಳಕು ವಸತಿಗಳ ಪರಿಷ್ಕರಣದ ಮಸೂದೆಯು ಉಲ್ಲೇಖನೀಯವಾಗಿರುತ್ತದೆ. ಮದ್ರಾಸು ನಗರದೊಳಗಿರುವ ಕೊಳಕು ವಸತಿಗಳು ಜನರ ವಾಸಕ್ಕೆ ಯೋಗ್ಯವಾಗುವಂತೆ ಅವುಗಳನ್ನು ಸುಧಾರಿಸಲು ಅವಕಾಶ ಮಾಡಿಕೊಡುವುದಕ್ಕೋಸ್ಕರ ಸರಕಾರ ಈ ಮಸೂದೆ ತಂದಿತು ಆರೋಗ್ಯ ಮಂತ್ರಿ ಶ್ರೀ ಎ ಬಿ. ಶೆಟ್ಟರು ಈ ಮಸೂದೆಯನ್ನು ಮಂಡಿಸುತ್ತಾ "ವಶಪಡಿಸಿಕೊಂಡ ಭೂಮಿಗೆ ಪರಿಹಾರಕೊಡಬೇಕೆಂದು ವಿಧಿಸಲ್ಪಟ್ಟಿದೆ. ಕೊಳಕು ವಸತಿಗಳನ್ನು ವಶಪಡಿಸುವಾಗ ಈಗಿನ ಧಾರಣೆ ಮಂತೆ ಹಣ ಕೊಟ್ಟರೆ, ಅದು ತುಂಬ ನಷ್ಟಕ್ಕೆ ಕಾರಣವಾಗುತ್ತದೆ. ಈ ಮಸೂದೆಯು ಸಾಮಾನ್ಯ ವಾರ್ಷಿಕ ಆದಾಯದ ಇಪ್ಪತ್ತು ಪಟ್ಟು ಹಣವನ್ನು ಪರಿಹಾರ ರೂಪದಲ್ಲಿ ಕೊಳಕು ವಸತಿಗಳಿರುವ ಖಾಸಗಿ ಭೂಮಿಯ ಒಡೆಯರಿಗೆ ಕೊಡಬೇಕೆಂದು ಹೇಳುತ್ತದೆ" ಎಂದರು. ಮುಂದೆ ಚರ್ಚೆಯ ಕಾಲದಲ್ಲಿ ಸದಸ್ಯರ ತೀವ್ರ ಭಾವನೆಯನ್ನು ಅನುಲಕ್ಷಿಸಿ, ರಾಜಾಜಿಯವರು ಪರಿಹಾರದ ಪ್ರಮಾಣವನ್ನು ಹಿಂದಿನ ಐದು ವರ್ಷಗಳ ಸರಾಸರಿ ವಾರ್ಷಿಕ ಆದಾಯದ ಹನ್ನೆರಡು ಪಾಲೆಂದು ನಿರ್ಧರಿಸಲು ಸರಕಾರದ ಒಪ್ಪಿಗೆ ಸೂಚಿಸಿದರು ಈ ಮಸೂದೆ ಅಂಗೀಕಾರಗೊಂಡುದರಿಂದ ರಾಜ್ಯದ ಇತರೆಡೆಯಲ್ಲಿರುವ ಪೇಟೆ ಹಾಗೂ ನಗರಗಳ ಕೊಳಕು ವಸತಿಗಳೂ ಸುಧಾರಣೆ ಹೊಂದಲು ಉತ್ತೇಜನವನ್ನು ಕೊಟ್ಟಂತಾಯಿತು.

ದಿ ನ್ಯೂ ಕರ್ನಾಟಕ
ಪ್ರೊವಿಡೆಂಟ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ನಿಮ್ಮ ಸಂಪಾದನೆಗೆ ಸಾಧ್ಯವಿರುವ ಮೊತ್ತಕ್ಕೆ ವಿಮೆ ಮಾಡಲು ಅನುಕೂಲವಿರುವ ಜಿಲ್ಲೆಯ ಏಕಮಾತ್ರ ಜನತಾ ಪ್ರೊವಿಡೆಂಟ್ ವಿಮಾ ಸಂಸ್ಥೆ. ಏಜಂಟರು, ಸ್ಪೆಶಲ್ ಏಜಂಟರು, ಆರ್ಗನೈಜರರು ಮತ್ತು ಇನ್ಸ್‌ಪೆಕ್ಟರರು ಬೇಕಾಗಿದ್ದಾರೆ. ವಿವರಕ್ಕೆ ಬರೆಯಿರಿ:

ಮೆನೇಜರ್,

ದಿ ನ್ಯೂ ಕರ್ನಾಟಕ ಪ್ರೊವಿಡೆಂಟ್ ಇನ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಉಡುಪಿ.

ಮಧು ಮಂಗಳೂರು ನಶ್ಯ
[ರಿಜಿಸ್ಟರ್ಡ್]

ಇದು ಉತ್ತಮವಾದುದು ಮತ್ತು ಜನಪ್ರಿಯವಾದುದು.

ಇದು 'ಮಧು ಪ್ರೊಡಕ್ಟ್ಸ್' ಉಡಿಯಾವರ, ದ. ಕ.

ಇವರ ಉತ್ಕೃಷ್ಟ ತಯಾರಿಕೆ.

ಶಾಖೆ:- ಉಡುಪಿ ಮುನ್ಸಿಪಲ್ ಬಸ್ಸ್ ಸ್ಟಾಂಡಿನ ಎದುರುಗಡೆ.

ಪರಊರುಗಳ ಬೇಡಿಕೆಗಳಿಗೆ ವಿಶೇಷ ಗಮನ ಕೊಡಲಾಗುವುದು.

NAVAYUGA
Popular Kannada Weekly.
Founder:—
Sri A. B. SHETTY,
Minister for Public Health,
Govt. of Madras.

ನವಯುಗ
ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ.
ಸ್ಥಾಪಕರು:- ಶ್ರೀ. ಎ. ಬಿ. ಶೆಟ್ಟಿ,
ಮದ್ರಾಸಿನ ಆರೋಗ್ಯಮಂತ್ರಿ.
ವಾ. ಚಂದಾ: ರೂ. 5-12-0
ಬಿಡಿಪ್ರತಿ: 0- 2-0

ನವಯುಗ

ಉಡುಪಿ, ಗುರುವಾರ ೧೪-೧-'೫೪

ಒಕ್ಕಲುಗಳಿಗೆ ಭದ್ರತೆ

"ಹೂವಿನ ಸ್ಥಾನದಲ್ಲಿ ಹೂವಿನ ಎಸಳು" ಎಂಬಂತೆ, ದಕ್ಷಿಣಕನ್ನಡ ಜಿಲ್ಲೆಗೊಂದು ವ್ಯಾಪಕವಾದ ಒಕ್ಕಲುಹಿತ ಮಸೂದೆಯು ಆವಶ್ಯಕತೆ ಇದ್ದ ಗಳಿಗೆಯಲ್ಲಿ ಅನ್ಯಾಯವಾಗಿ ಒಕ್ಕಲೆಬ್ಬಿಸುವುದನ್ನು ತಾತ್ಕಾಲಿಕವಾಗಿ ಒಂದು ವರ್ಷದವರೆಗೆ ತಡೆಗಟ್ಟುವ ಶಾಸನಬದ್ಧ ಕ್ರಮವೊಂದನ್ನು ಮದ್ರಾಸು ಸರಕಾರ ತಂದಿರುತ್ತದೆ. ಚಾಲ್ತಿ ಗೇಣಿಯನ್ನು ಮಸೂದೆ ಜ್ಯಾರಿಗೆ ಬಂದ ಒಂದು ತಿಂಗಳಿನೊಳಗೆ ಪಾವತಿ ಮಾಡಿದ ಪಕ್ಷದಲ್ಲಿ ಧನಿಯು ಅಂಥ ಒಕ್ಕಲನ್ನು ಭೂಮಿಯಿಂದ ಬಿಡಿಸಲಾರನು. ಈ ತಾತ್ಕಾಲಿಕ ತಡೆಯಾಜ್ಞೆಯ ಅವಧಿಯು ಮುಗಿಯುವುದರೊಳಗೆ, ಅಂದರೆ, ಇನ್ನು ಒಂದು ವರ್ಷದಲ್ಲಿ ಸರಕಾರವು ವ್ಯಾಪಕವಾದ ಭೂಸುಧಾರಣಾ ಮಸೂದೆಯನ್ನು ಜ್ಯಾರಿಗೆ ತರುವದೆಂಬ ಭರವಸೆಯು ಮಂತ್ರಿಗಳಿಂದ ದೊರೆತಿರುವುದರಿಂದ ರೈತರೆಲ್ಲರೂ ಹರ್ಷಭರಿತರಾಗುವುದು ಸ್ವಾಭಾವಿಕ. ಶಾಸನ ಸಭೆಯಲ್ಲಿ ಪ್ರಸ್ತುತದ ಕ್ರಮದ ಮೇಲೆ ಚರ್ಚೆ ನಡೆದ ಕಾಲಕ್ಕೆ ಜಿಲ್ಲೆಯ ಎಲ್ಲ ಸದಸ್ಯರೂ ಅದನ್ನು ಬೆಂಬಲಿಸಿಯೂ ಸ್ವಾಗತಿಸಿಯೂ ಮಾತನಾಡಿದರು. "ಈ ಮಸೂದೆಯು ಸರಿಯಾದ ದಾರಿಯಲ್ಲಿಟ್ಟ ಹೆಜ್ಜೆ" ಎಂದು ಸದಸ್ಯರೊಬ್ಬರು ವರ್ಣಿಸಿದುದರಲ್ಲಿ ಅತಿಶಯೋಕ್ತಿಯಿಲ್ಲ. ಅದರಂತೆ "ಈ ಕ್ರಮದ ಆವಶ್ಯಕತೆಯು ಬಹಳ ಹಿಂದಿನಿಂದಲೂ ಇದ್ದ ಕಾರಣ ಎಂದೋ ಈ ಮಸೂದೆ ಬರಬೇಕಿತ್ತು. ತಡವಾಗಿ ಕ್ರಮ ತೆಗೆದುಕೊಂಡುದರಿಂದ ಅನ್ಯಾಯವಾಗಿ ಎಷ್ಟೋ ಒಕ್ಕಲುಗಳು ಎಬ್ಬಿಸಲ್ಪಟ್ಟರು, ಇನ್ನೆಷ್ಟೋ ಮಂದಿ ಕೋರ್ಟಿನ ಬಾಗಿಲಿಗೆಳೆಯಲ್ಪಟ್ಟರು" ಎಂದು ಮತ್ತೊಬ್ಬ ಸದಸ್ಯರು ಹೇಳಿದುದೂ ವಾಸ್ತವಾಂಶವಾಗಿರುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯ ಒಕ್ಕಲುಗಳು ಸಮಾನ ಹಕ್ಕುಬಾಧ್ಯತೆಗಳು ಹಾಗೂ ಭದ್ರತೆಯ ವಿಷಯದಲ್ಲಿ ಹೆಚ್ಚಿನ ಆಸ್ಥೆಯುಳ್ಳವರಾಗಿರುವರೆಂದು ಬೇರೊಬ್ಬ ಸದಸ್ಯರು ಹೇಳಿದ ಸಂಗತಿಯೂ ಜನಾಭಿಪ್ರಾಯವನ್ನು ಸರಿಯಾಗಿ ಬಿಂಬಿಸುತ್ತದೆ. ಹೀಗೆ ನಮ್ಮ ಜಿಲ್ಲೆಯ ಪ್ರತಿನಿಧಿಗಳಲ್ಲಿ ಎಲ್ಲರೂ ಒಕ್ಕಲುಗಳಿಗಾಗುತ್ತಿರುವ ಅನ್ಯಾಯವನ್ನು ಪ್ರತಿಭಟಿಸಿಯೂ ಅವರ ಉತ್ಕರ್ಷಕ್ಕೆ ನೆರವಾಗುವ ಕ್ರಮವನ್ನು ಜ್ಯಾರಿಗೆ ತರುವಂತೆ ಒತ್ತಾಯಿಸಿಯೂ ಒಮ್ಮತದಿಂದ, ಒಗ್ಗಟ್ಟಿನಿಂದ ಕೆಲಸ ಮಾಡುತ್ತಿರುವುದು ಶ್ಲಾಘನೀಯವಾದದ್ದು. ನಮ್ಮ ರೈತ ಬಾಂಧವರೆಲ್ಲರೂ ಮಾನ್ಯ ಸದಸ್ಯರುಗಳಿಗೆ ಹೃತ್ಪೂರ್ವಕವಾದ ಬೆಂಬಲವನ್ನಿತ್ತು, ಪ್ರತಿನಿಧಿಗಳ ಸ್ವರಕ್ಕೆ ತೂಕಬರುವಂತೆ ಉತ್ತೇಜನನೀಡಬೇಕು ಮತ್ತು ತನ್ಮೂಲಕ ತಮ್ಮ ಆಶೋತ್ತರಗಳನ್ನು ನ್ಯಾಯವಾದ ರೀತಿಯಲ್ಲಿ ತ್ವರಿತದಲ್ಲಿಯೇ ನೆರವೇರಿಸಿಕೊಳ್ಳಬೇಕು. ಸುಬ್ರಹ್ಮಣ್ಯಂ ಸಮಿತಿಯು ಮಾಡಿದೊಂದು ಸಲಹೆಯ ಪರಿಣಾಮವಾಗಿ ಭೂಮಾಲಿಕರು ಒಕ್ಕಲುಗಳ ಗೇಣಿಯನ್ನು ಹೆಚ್ಚಿಸಲು ಉದ್ಯುಕ್ತರಾಗಿ, ಹಾಗೆ ಅಧಿಕ ಗೇಣಿಯನ್ನು ಕೊಡಲೊಪ್ಪದವರನ್ನು ಒಕ್ಕಲೆಬ್ಬಿಸುವುದಕ್ಕೆ ತೊಡಗಿದರು. ಇದರಿಂದ ಸಂತ್ರಸ್ತರಾದ ಒಕ್ಕಲುಗಳ ಒಲವನ್ನು ಸಂಪಾದಿಸುವುದಕ್ಕೋಸ್ಕರ ಭೂಸುಧಾರಣೆಯನ್ನು ಅಮಲಿಗೆ ತರುವುದಾಗಿ ಚುನಾವಣಾ ಗಾಳಿಯಲ್ಲಿ ಪ್ರಚಾರ ಸಂದೇಶಗಳು ತೂರಿಬಿಡಲಾದವು. ಈಗಲೂ ಸರಕಾರದವರು ಸಾರ್ವಜನಿಕ ಅಭಿಪ್ರಾಯದ ಒತ್ತಡಕ್ಕೆ ಕಟ್ಟುಬಿದ್ದೆಂಬಂತೆ ಶಾಸನ ಸಭೆಯ ಮುಂದೆ ತಂದ ಈ ಮಸೂದೆಯು ತಮ್ಮ ಪ್ರಯತ್ನಗಳಿಂದಲೇ ದಿನದ ಬೆಳಕು ಕಂಡಿತೆನ್ನುವ ಪಕ್ಷಸಂಗಡಿಗರಿಗೆ ಕಡಿಮೆ ಇಲ್ಲ. ಖಾಸಗಿಯಾಗಿ ಸದಸ್ಯರು ಶಾಸನ ಸಭೆಯಲ್ಲಿ ತಂದ ಯಾವ ಗೊತ್ತುವಳಿಯೂ ಸ್ವೀಕಾರಗೊಳ್ಳುವ ಉದಾಹರಣೆ ನಮ್ಮ ಮುಂದಿಲ್ಲವಾದುದರಿಂದ, ಎಲ್ಲ ಮಸೂದೆಗಳಿಗೂ ಪ್ರೇರಣೆಯಾಗಿ ಮಂತ್ರಿ ಮಂಡಳದ ಸದಸ್ಯರೇ ಇರುವರೆಂಬುದು ಸ್ವತಃಸಿದ್ಧ. ರಾಜ್ಯದಲ್ಲಿ ಪ್ರಕೃತ ಕಾಂಗ್ರೆಸ ಮಂತ್ರಿಮಂಡಳವಿರುವುದರಿಂದ, ಪಕ್ಷದ ದೃಷ್ಟಿಯಿಂದ ಶ್ರೇಯಸ್ಸೇನಾದರೂ ಸಲ್ಲುವುದಿದ್ದರೆ, ಅದು ಕಾಂಗ್ರೆಸ್ಸಿಗೆ ಸೇರಬೇಕೆಂದು ತೋರುತ್ತದೆ—ಆದರೆ ಹೀಗೆ ಕೀರ್ತಿ ಬಯಸುವುದೂ ತಪ್ಪು. ಬದಲು ಇದಕ್ಕೋಸ್ಕರ ಪ್ರಯತ್ನ ಮಾಡಿದ ಎಲ್ಲರೂ ಒಕ್ಕಲುಗಳಿಗೆ ಮಸೂದೆಯ ಆಶಯವನ್ನು ಚೆನ್ನಾಗಿ ತಿಳಿಸಿ ಹೇಳಬೇಕು. ಓದುಬರಹ ಬಾರದ ಹಳ್ಳಿಯ ರೈತರಿಗೆ ಮಸೂದೆಯ ಕಲಮುಗಳ ಪರಿಜ್ಞಾನವಿರಲಿಕ್ಕಿಲ್ಲ — ಮಾತ್ರವಲ್ಲ ಮಸೂದೆ ಶಾಸನ ಸಭೆಯ ಮುಂದೆ ಬಂದು, ಅಂಗೀಕಾರಗೊಂಡಿದೆ ಎಂಬುದರ ಸುಳಿವೂ ಪತ್ತದ ಒಕ್ಕಲುಗಳು ಹಲವಾರು ಇದ್ದಾರೆ. ಈ ಅಜ್ಞಾನಿ ಒಕ್ಕಲುಗಳನ್ನು ಧನಿಗಳು ಬಲಾತ್ಕಾರ ಹಾಗೂ ಭಯ ಬೆದರಿಕೆಗಳಿಂದ ಈಗಿಂದೀಗ ಒಕ್ಕಲೆಬ್ಬಿಸಲು ನೋಡುತ್ತಿರುವುದನ್ನೂ ಕಾಣಬಹುದು. ಒಕ್ಕಲುಗಳ ಭದ್ರತೆಗಳಿಗೋಸ್ಕರ ಶ್ರದ್ಧೆಯಿಂದ ಮಿಡಿದ ಎಲ್ಲರೂ ಈಗ ಅಂಥ ಸಂಕಟ ಗ್ರಸ್ತ ಒಕ್ಕಲುಗಳ ಸಂರಕ್ಷಣೆಗೆ ಧಾವಿಸಬೇಕಾದುದು ನ್ಯಾಯ ಮತ್ತು ಅಪೇಕ್ಷಣೀಯ. ಅದರಂತೆ, ನಾಳೆ ವ್ಯಾಪಕವಾದ ಮಸೂದೆ ಬಂದ ಬಳಿಕ, ನಿಶ್ಚಿತ ಗೇಣಿ ಮತ್ತು ಸಾಗುವಳಿ ಮಾಡುವ ಭೂಮಿಯ ಮೇಲೆ ಅಧಿಕಾರಬಂಧ ಬಳಿಕ, ಆತನ ಸ್ಥಿತಿ ಸುಧಾರಿಸುವುದಕ್ಕೋಸ್ಕರ ಈಗಿಂದೀಗಲೇ ತಕ್ಕ ಉಪಾಯಗಳನ್ನು ಯೋಜಿಸಬೇಕು. ಗೇಣಿ ಕಡಿಮೆ ಮಾಡಿದರೆ, ಒಕ್ಕಲುತನದ ಭದ್ರತೆ ಕೊಟ್ಟರೆ, ಭೂಸುಧಾರಣೆಯ ಉದ್ದೇಶ ನೆರವೇರಿತೆಂದೂ ಒಕ್ಕಲುಗಳ ಸುಖ ಸಂತೋಷ ಹೆಚ್ಚುವುದೆಂದೂ ಅಭಿಪ್ರಾಯಪಡುವುದು ಸರಿಯಲ್ಲ. ಮುಂಬಯಿಯಲ್ಲಿ ಹೊಲ ಸಾಗುವಳಿ ಕಾಯಿದೆಯು ಧನಿಗೆ ಸಂದಾಯವಾಗುವ ಗೇಣಿಯು ಅಂದ ಉತ್ಪನ್ನದ ಮೂರರಲ್ಲಿ ಒಂದು ಪಾಲು ಎಂದಿದ್ದುದನ್ನು ಆರರಲ್ಲಿ ಒಂದಂಶಕ್ಕೆ ಇಳಿಸಿತು; ಮೇಲಾಗಿ ತೀರ್ವೆಯನ್ನೂ ಧನಿಯೇ ಕಟ್ಟಬೇಕೆಂದು ಹೇಳಿತು. ಆದರೂ ಒಕ್ಕಲುತನ ಅಭಿವೃದ್ಧಿ ಹೊಂದಲಿಲ್ಲ. ಭೂಮಿಯೊಡೆತನ ಪಡೆದ ಅಭಿಮಾನದ ಭರದಲ್ಲಿ, ಉತ್ಪಾದನೆಯನ್ನೇನು ರೈತ ಹೆಚ್ಚಿಸಲಿಲ್ಲ. ರೈತನಿಗೆ ಎತ್ತು ಕೋಣಗಳು ಗೊಬ್ಬರ ಬೀಜಗಳು, ನೀರಾವರಿಯ ಅನುಕೂಲತೆ ಇತ್ಯಾದಿ ಬೇಕಾಗಿವೆಯೆಂದೂ ಆರ್ಥಿಕ ಸಹಾಯವೂ ತುಂಬ ಆವಶ್ಯಕವೆಂದೂ ಕಂಡು ಬಂದಿದೆ. ಮುಂಬರುವ ವ್ಯಾಪಕವಾದ ಭೂಸುಧಾರಣಾ ಕಾಯಿದೆಯು ಪ್ರಶ್ನೆಯ ಈ ಮಹತ್ವದ ಮುಖವನ್ನು ದೃಷ್ಟಿಯಲ್ಲಿಟ್ಟುಕೊಳ್ಳಬೇಕೆಂದು ಶ್ರೀ ಅನಂತ ಪೈಗಳು ಶಾಸನ ಸಭೆಯಲ್ಲಿ ಹೇಳಿರುವುದನ್ನು ನಾವೂ ಅನುಮೋದಿಸುತ್ತೇವೆ; ಮತ್ತು ರೈತರ ಉದ್ಧಾರದಲ್ಲಿ ಆಸಕ್ತಿಯುಳ್ಳ ಪ್ರತಿಯೊಬ್ಬನೂ ಗ್ರಾಮಾಂತರದ ಕೃಷಿ ಪದ್ಧತಿಯ ಮುಂದಿರುವ ಈ ಸಮಸ್ಯೆಯನ್ನು ಚೆನ್ನಾಗಿ ಅಭ್ಯಸಿಸಿ, ಸರಕಾರದ ಮುಂದೆ ಸಕಾಲದಲ್ಲಿಯೇ ಉತ್ತಮ ಸಲಹೆಗಳನ್ನಿಡಬೇಕೆಂದೂ ಸೂಚಿಸುತ್ತೇವೆ.

ಕೊರಿಯಾದ ಕುರಿತು ಭಾರತದ ಸೂಚನೆ

ರಾಷ್ಟ್ರಸಂಘದ ಸಾಮಾನ್ಯಾಧಿವೇಶನ ಸೇರಿಸುವ ಪ್ರಯತ್ನ

ಜನವರಿ ೨೩ನೇ ದಿನಾಂಕ ಸಮೀಪಿಸಿದಂತೆ ಜಾಗತಿಕ ರಾಜಕಾರಣಿಗಳೆಲ್ಲರ ದೃಷ್ಟಿಯೂ ಕೊರಿಯಾದ ಕಡೆಗೆ ಹರಿಯತೊಡಗಿದೆ — ಕೊರಿಯಾದಲ್ಲಿ ಯುದ್ಧಜ್ವಾಲೆ ಕಿಡಿಯುಗುಳುತ್ತಿರುವುದನ್ನು ನಿಲ್ಲಿಸಲು ಶತಪ್ರಯತ್ನಗಳು ಮಾಡಬೇಕಾದವು. ಇದರಲ್ಲಿ ಭಾರತದವು ಮಹತ್ವದ ಪಾತ್ರವನ್ನು ವಹಿಸಿತು, ಮಾತ್ರವಲ್ಲದೆ, ಯುದ್ಧ ವಿರಾಮ ಒಪ್ಪಂದಕ್ಕೆ ಅಡ್ಡಿಯಾಗಿ ನಿಂತಿದ್ದ ವಿನಿಮಯಕ್ಕೊಪ್ಪದ ಯುದ್ಧ ಕೈದಿಗಳ ಪ್ರಶ್ನೆಯನ್ನು ಇತ್ಯರ್ಥಗೊಳಿಸಲು ಒಂದು ಸೂತ್ರವನ್ನೂ ಸಿದ್ಧಗೊಳಿಸಿತು. ಪರಿಣಾಮದಲ್ಲಿ ತನ್ನ ಮೇಲೆ ಬಿದ್ದ ಗುರುತರವಾದ ಹೊಣೆಗಾರಿಕೆಯನ್ನು ಸಂತೋಷದಿಂದ ಸ್ವೀಕರಿಸಿ, ಶಾಂತಿ ನೆಲೆಗೊಳ್ಳಲೆಂದು ಕಷ್ಟಗಳನ್ನು ಧಿಕ್ಕರಿಸಿ ನಡೆಯಿತು. ಆದರೆ ಯುದ್ಧವಿರಾಮ ಒಪ್ಪಂದದ ಮುಖ್ಯವಾದ ಎರಡು ಕಲಮುಗಳು ಯಥಾರ್ಥವಾಗಿ ಆಚರಣೆಯಲ್ಲಿ ಬರಲಿಲ್ಲ—(೧) ೯೦ ದಿನಗಳ ಅವಧಿಯಲ್ಲಿ ವಿನಿಮಯಕ್ಕೊಪ್ಪದ ಯುದ್ಧ ಕೈದಿಗಳಿಗೆ ವಿವರಣೆಯನ್ನು ಕೊಡಬೇಕೆನ್ನುವ ಶರ್ತದ ಪ್ರಕಾರ ಕೆಲಸ ನಡೆಯಲಿಲ್ಲ. ೯೦ ದಿನಗಳ ಅವಧಿ ಮುಗಿದರೂ ಕೇವಲ ಹತ್ತು ದಿನಗಳು ಮಾತ್ರ ವಿವರಣೆಯ ಕಾರ್ಯ ನಡೆಯಿತು. ಮೊದಲಿಗೆ ಸಂಯುಕ್ತ ರಾಷ್ಟ್ರ ಸಂಘ, ಆ ಮೇಲೆ ಕಮ್ಯೂನಿಸ್ಟ ಪಕ್ಷದ ಕಡೆಯಿಂದ ವಿವರಣಾ ಕಾರ್ಯಕ್ಕೆ ಆತಂಕ ಒದಗಿತು (೨) ಯುದ್ಧ ವಿರಾಮ ಒಪ್ಪಂದದಲ್ಲಿ ಉಲ್ಲೇಖಿಸಲ್ಪಟ್ಟಿದ್ದ ಕೊರಿಯಾ ರಾಜಕೀಯ ಸಮ್ಮೇಳನವು ಇನ್ನೂ ಸೇರಿಲ್ಲ. ಇಲ್ಲಿ ಸಹ ಉಭಯ ಪಕ್ಷಗಳೂ ದುರಾಗ್ರಹವನ್ನೆ ಹಿಡಿದವು. ಕುಂಟುತ್ತಲಾದರೂ ನಡೆಯುತಿದ್ದ ಪೂರ್ವಭಾವಿ ಸಮಾಲೋಚನೆಯನ್ನು ದುಡುಕುತನದಿಂದ ಅಮೇರಿಕಾದ ಪ್ರತಿನಿಧಿ ಆರ್ಥರ ಡೀನರು ನಿಲ್ಲಿಸಿಬಿಟ್ಟರು.

ಭಿನ್ನಾಭಿಪ್ರಾಯ

ಇದರಿಂದ ಮುಂದೇನೆಂಬ ಪ್ರಶ್ನೆ ಸಹಜವಾಗಿಯೇ ಉದ್ಭವಿಸುತ್ತದೆ. ಭಾರತೀಯ ರಕ್ಷಣಾ ಪಡೆಯ ಯೋಗಕ್ಷೇಮದಲ್ಲಿ ೨೨ ಸಾವಿರಕ್ಕಿಂತಲೂ ಅಧಿಕ ಸಂಖ್ಯೆಯಲ್ಲಿ ಯುದ್ಧ ಕೈದಿಗಳು ಇರುವರು. ಅವರ ಭವಿಷ್ಯವೇನು? ಅವರನ್ನು ಜನವರಿ ೨೨ನೇ ದಿನಾಂಕ ಮಧ್ಯರಾತ್ರಿ ಹನ್ನೆರಡು ಹೊಡೆದ ಮರುಕ್ಷಣದಲ್ಲಿ ಬಿಡುಗಡೆಮಾಡಬೇಕೆಂದು ಸಂಯುಕ್ತ ರಾಷ್ಟ್ರ ಸಂಘದ ಸೇನಾಧಿಪತ್ಯ ಹೇಳುತ್ತದೆ. ಈ ವಿಷಯದಲ್ಲಿ ತಟಸ್ಥ ರಾಷ್ಟ್ರ ಮಂಡಳದ ಬಹುಮತದ ವರದಿಯನ್ನು ಅದು ಒಪ್ಪಲು ಸಿದ್ಧವಿಲ್ಲ. ಕಮ್ಯೂನಿಸ್ಟ ವಿರೋಧಿ ಕೈದಿಗಳನ್ನು ಸ್ವಾಗತಿಸಿ, ಕರೆದೊಯ್ಯಲು ರಾಷ್ಟ್ರ ಸಂಘದ ಸೇನಾಧಿಪತ್ಯವು ನಿಃಸೈನೀಕೃತ ಪ್ರದೇಶದ ಹೊರಗಡೆ ವ್ಯಾಪಕವಾದ ವ್ಯವಸ್ಥೆಗಳನ್ನು ಮಾಡಿರುತ್ತದೆ. ಅಲ್ಲದೆ ದಿನಾಂಕ ೧೨ರಂದು ಸರ್ವ ಸೇನಾಧಿಪತಿ ಜನರಲ್ ಹಲ್ಲರು ಫೊರ್ಮೋಸಾ ದ್ವೀಪದ ತೈಪೆಗೂ ಆಗಮಿಸಿ, ಚಿಯಾಂಗ ಕೈಶೇಕರನ್ನು ಕಂಡು ಈ ಕೈದಿಗಳ ಮರುವಸತಿಯ ಕುರಿತು ವಿಚಾರ ವಿನಿಮಯ ನಡೆಸಿದರೆಂದೂ ತಿಳಿಯುತ್ತದೆ. ಆದರೆ ಕಮ್ಯೂನಿಸ್ಟರ ನಿಲುವು ತದ್ವಿರುದ್ಧವಾಗಿರುತ್ತದೆ. ರಾಜಕೀಯ ಸಮ್ಮೇಳನವು ಜರಗಿಲ್ಲವಾದುದರಿಂದ ಯುದ್ಧ ಕೈದಿಗಳನ್ನು ಈಗಲೇ ಬಿಡುಗಡೆ ಮಾಡುವುದು ನ್ಯಾಯವಲ್ಲವೆಂದೂ, ಅವರು ಮುಂದೆ ಕೂಡ ಭಾರತೀಯ ಪಡೆಯ ರಕ್ಷಣೆಯಲ್ಲಿರಬೇಕೆಂದೂ ಅವರ ಅಭಿಪ್ರಾಯ. ಈ ಮಾತನ್ನೂ ಕೈದಿಗಳಿಗೆ ವಿವರಣೆ ನೀಡುವ ಅವಧಿಯನ್ನು ವಿಸ್ತರಿಸಬೇಕೆಂಬ ಅವರ ಒತ್ತಾಯವನ್ನೂ ರಾಷ್ಟ್ರ ಸಂಘದ ಸೇನಾಧಿಪತ್ಯ ನಿರ್ದಾಕ್ಷಿಣ್ಯವಾಗಿ ತಿರಸ್ಕರಿಸಿದೆ. ರಾಜಕೀಯ ಸಮ್ಮೇಳನದ ಕುರಿತು ಪೂರ್ವಭಾವಿ ಸಮಾಲೋಚನೆಗಳನ್ನು ಪುನಃ ತೊಡಗಬೇಕೆಂಬ ಪ್ರಯತ್ನವೂ ಈ ನಡುವೆ ನಡೆದಿತ್ತು. ಉಭಯ ಪಕ್ಷದ ಪ್ರತಿನಿಧಿಗಳು ಇದೇ ಗುರುವಾರ (ದಿನಾಂಕ ೧೪) ದಿನ ಸಭೆ ಸೇರುವರೆಂದು ಕೇಳುತ್ತೇವೆ. ಆದರೆ ಇದರಿಂದ ವಾಂಛಿತ ಫಲ ದೊರಕುವ ಭರವಸೆ ಈಗ ಏನೇನೂ ಉಳಿದಿಲ್ಲ.

ಭಾರತದ ಸೂಚನೆ

ತಟಸ್ಥ ರಾಷ್ಟ್ರ ಮಂಡಳದ ಅಧ್ಯಕ್ಷರಾದ ಭಾರತದ ಜನರಲ್ ತಿಮ್ಮಯ್ಯನವರು ಹೇಳಿಕೆಕೊಟ್ಟು ಉಭಯ ಪಕ್ಷಗಳೂ ಪರಸ್ಪರ ಸಮ್ಮತಿಯಿಂದ ಒಪ್ಪಿಕೊಂಡ ಹೊರತು ಕೈದಿಗಳನ್ನೆಲ್ಲ ಬಿಡುಗಡೆ ಮಾಡಬೇಕಾಗಿ ಬರುವುದೆಂದು ಅಭಿಪ್ರಾಯ ವ್ಯಕ್ತಗೊಳಿಸಿರುವರು, ಈ ವಿಷಯದಲ್ಲಿ ಭಾರತ

ಸರಕಾರದ ಅಭಿಪ್ರಾಯವೇನೆಂಬುದು ಸ್ಪಷ್ಟವಾಗಿ ತಿಳಿದಿಲ್ಲವಾದರೂ—ಇಡೀ ಪ್ರಶ್ನೆಯನ್ನು ಸಂಯುಕ್ತರಾಷ್ಟ್ರ ಸಂಘದ ಸಾಮಾನ್ಯಾಧಿವೇಶನಕ್ಕೆ ಒಪ್ಪಿಸಬೇಕೆಂಬ ಕುರಿತು ಪ್ರಯತ್ನಗಳು ನಡೆಯುತ್ತಿವೆ. ಪ್ರಧಾನಿ ನೆಹರೂರವರು ಪಾರ್ಲಿಮೆಂಟಿನಲ್ಲಿ ಕೊಟ್ಟಿದ್ದ ಹೇಳಿಕೆಯ ಹಿನ್ನೆಲೆಯಲ್ಲಿ ಅವರು ಶ್ರೀ ಕೃಷ್ಣ ಮೆನೊನ್ನು, ಹಾಗೂ ವಿದೇಶಾಂಗ ಸಚಿವಾಲಯದ ಇತರ ಪ್ರಮುಖರೊಡನೆ ಈ ವಿಷಯ ಮೊನ್ನೆ ನಡೆಸಿದ ಮಾತುಕತೆಗಳನ್ನು ನಾವು ಪರಿಶೀಲಿಸಿದರೆ, ಈ ಮಾತು ಸ್ಪಷ್ಟವಾಗುತ್ತದೆ. ಈಗ ತಾನೆ ಬಂದ ವರದಿಯಂತೆ, ಭಾರತ ಸರಕಾರವು ಸಂಯುಕ್ತ ರಾಷ್ಟ್ರಸಂಘದ ಸಾಮಾನ್ಯ ಅಧಿವೇಶನದ ಅಧ್ಯಕ್ಷೆಯಾದ ಭಾರತದ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರಿಗೆ ವಿಧ್ಯುಕ್ತವಾಗಿ ಪತ್ರವನ್ನು ಬರೆದು ಕೊರಿಯಾದ ಪ್ರಶ್ನೆಯನ್ನು ವಿಚಾರಿಸಲು ಬೇಗನೆ ರಾಷ್ಟ್ರಸಂಘದ ಸಾಮಾನ್ಯ ಅಧಿವೇಶನವನ್ನು ಕರೆಯಬೇಕಾಗಿ ಪ್ರಾರ್ಥಿಸಿದೆ. ಶ್ರೀಮತಿ ಪಂಡಿತರು ಈ ಸಂದೇಶವನ್ನು ರಾಷ್ಟ್ರಸಂಘದ ಮಹಾಕಾರ್ಯದರ್ಶಿ ಡಾಗ ಹೆಮ್ಮರ ಶೆಲ್ಡರಿಗೆ ಕಳುಹಿಸಿ, ಸದಸ್ಯ ರಾಷ್ಟ್ರಗಳಿಗೆಲ್ಲ ಇದನ್ನು ರವಾನಿಸಬೇಕೆಂದೂ ಕೊರಿಯಾ ವಿಷಯದಲ್ಲಿ ಸಮತರವಾದ ಜವಾಬ್ದಾರಿಯನ್ನು ಪ್ರತಿಯೊಂದು ಸದಸ್ಯ ರಾಷ್ಟ್ರವೂ ವಹಿಸಿರುವುದರಿಂದ ಈ ತಿಂಗಳು ೨೨ನೇ ತಾರೀಕಿನ ಒಳಗೆ ತನ್ನ ಅಭಿಪ್ರಾಯವನ್ನು ತಿಳಿಸಬೇಕೆಂದೂ ಕೇಳಿಕೊಂಡಿರುವರು. ಈ ತಾರೀಕಿನೊಳಗೆ ಉತ್ತರ ಸಿಗದಿದ್ದಲ್ಲಿ, ಅಂಥ ಸಭೆಯನ್ನು ಕರೆಯಲು ಮೌನ ಸಮ್ಮತಿಯನ್ನು ವ್ಯಕ್ತಗೊಳಿಸಿದಂತಾಗುವುದೆಂದೂ ಶ್ರೀಮತಿ ಪಂಡಿತರು ಹೇಳಿರುವರು. ಬಹುಮತದ ಬೆಂಬಲ ದೊರೆತ ಪಕ್ಷದಲ್ಲಿ ಸಾಮಾನ್ಯಾಧಿವೇಶನವು ಫೆಬ್ರುವರಿ ತಿಂಗಳ ೯ನೇ ತಾರೀಕಿಗೆ ಸೇರುವ ನಿರೀಕ್ಷೆ ಇದೆ.

ಸೈನಿಕ ಒಪ್ಪಂದ

ಪಾಕಿಸ್ತಾನವು ಅಮೇರಿಕೆಯೊಡನೆ ಮಾಡಿಕೊಳ್ಳಬೇಕೆಂದಿರುವ ಮಿಲಿಟರಿ ಒಡಂಬಡಿಕೆಯಿಂದ ಭಾರತ ಸರಕಾರವಾಗಲೀ ಜನತೆಯಾಗಲೀ ಚಿಂತೆಗೊಳಗಾಗುವುದು ಅನಾವಶ್ಯಕವೆಂಬ ಮಾತನ್ನು ಮಹಮ್ಮದಲಿಯವರು ಹೇಳುತ್ತಲೇ ಇದ್ದಾರೆ. ಉಭಯರಾಷ್ಟ್ರಗಳಲ್ಲಿ ಸ್ನೇಹ ಸಾಹಾರ್ದಗಳುಳಿಯಬೇಕೆಂಬುದೇ ತಮ್ಮ ಇಚ್ಛೆಯೆಂದೂ ಅವರೆನ್ನುತ್ತಾರೆ. ಭಾರತದಲ್ಲಿ ಈ ಒಡಂಬಡಿಕೆಯ ವಿರುದ್ಧ ಜನಮತವು ಸಂಘಟಿತವಾಗುವುದಕ್ಕೋಸ್ಕರ ಅವರು ವ್ಯಸನ ಸೂಚಿಸಿ, ಅದನ್ನು ತಡೆಯಬೇಕೆಂದು ಪ್ರಧಾನಿ ನೆಹರೂರನ್ನು ವಿನಂತಿಸುತ್ತಾರೆ. ವಿದೇಶಿಯರಿಗೆ ಸೈನ್ಯ ಠಾಣ್ಯಗಳನ್ನು ಕೊಡುವ ಪ್ರಶ್ನೆಯೇ ಇಲ್ಲವೆಂದು ಹೇಳುತಿದ್ದಂತೆಯೇ 'ಜರೂರು ಪರಿಸ್ಥಿತಿಯಲ್ಲಿ ಮಿತ್ರರಾಷ್ಟ್ರಗಳ ಸೈನ್ಯವನ್ನು ಆಹ್ವಾನಿಸುವುದಕ್ಕೆ ಅಡ್ಡಿ ಇಲ್ಲ" ಎಂಬುದಾಗಿಯೂ ಅದನ್ನು ಸ್ಪಷ್ಟೀಕರಿಸುತ್ತಾರೆ. ಈ ನಡುವೆ ಅಮೇರಿಕಾದ ಸುರಿತ ಬರೆಹಗಾರ ಲೂಯಿಫಿಶರರು ಮುಂಬಯಿಯ ಭಾಷಣವೊಂದರಲ್ಲಿ ಈ ಒಡಂಬಡಿಕೆಯ ವಿಷಯವನ್ನು ಪ್ರಸ್ತಾಪಿಸುತ್ತಾ, ಭಾರತ ಸಂಶಯದ ಪೆಡಂ ಭೂತಕ್ಕೆ ಬಲಿಯಾಗಕೂಡದೆಂದು ಹಿತೋಪದೇಶಕ್ಕೆ ತೊಡಗಿದರು. ಪಾಕಿಸ್ತಾನವು ಕಾಶ್ಮೀರದ ಮೇಲೆ ಮರಳಿ ದಾಳಿ ನಡೆಸಿ ಅದನ್ನು ಆಕ್ರಮಿಸುವುದೆಂಬ ಭೀತಿ ಭಾರತಕ್ಕೆ ಇದ್ದಂತೆ, ಪೂರ್ವ ಪಾಕಿಸ್ತಾನವನ್ನು ಭಾರತ ನುಂಗಿಕೊಂಡು ಸೇರು ಕುಡಿದೀತೆಂಬ ಹೆದರಿಕೆ ಪಾಕಿಸ್ತಾನದಲ್ಲಿ ಹಬ್ಬಿದೆಯೆಂದೂ ಅವರು ಹೇಳಿದರು. ಆದುದರಿಂದ ಪಾಕಿಸ್ತಾನ—ಅಮೇರಿಕೆಗಳೊಳಗಿನ ಮಿಲಿಟರಿ ಒಡಂಬಡಿಕೆಯ ಸಮರ್ಪಕತೆಯನ್ನು ಪ್ರಶ್ನಿಸುವುದು ಸರಿಯಲ್ಲವೆಂದು ಅವರ ಅಭಿಪ್ರಾಯ. ಆದರೆ ಅವರೇ ಹೇಳಿದಂತೆ 'ಕಮ್ಯೂನಿಸ್ಟರ ವಿರುದ್ಧ ಈ ಒಪ್ಪಂದ ನಡೆಯುತ್ತಿದೆ. ಏಶ್ಯಾದ ರಾಷ್ಟ್ರಗಳ ಸಮತೋಲ ಕೆಡುವುದಕ್ಕಿಂತಲೂ ರಶಿಯಾದ ಗಮನವನ್ನು ಆಗ್ನೇಯ ಏಶ್ಯದ ಕಡೆಗೆ ಆಕರ್ಷಿಸಿ ಯುದ್ಧ ಪ್ರಚೋದನೆಯನ್ನುಂಟುಮಾಡುವ ಕ್ರಮವಾಗಿ ಇದು ಪರಿಣಮಿಸುತ್ತದೆ ಭಾರತದ ದೃಷ್ಟಿಯಿಂದ ಪರ್ಯಾಲೋಚಿಸಿ ಈ ಸಂಭಾವ್ಯ ವಿಪತ್ತನ್ನು ದೂರೀಕರಿಸಲು ಬಯಸಿ, ಪಾಕಿಸ್ತಾನ ಸರಕಾರದ ಆತುರವನ್ನು ಖಂಡಿಸುತ್ತವೆ. ವಿವೇಕ ಶೀಲರೆಲ್ಲರೂ ಭಾರತದ ನಿಲುವೆಯ ಸಮರ್ಥಕರೆಂಬುದಕ್ಕೆ ಲಂಡನಿನ "ಟೈಮ್ಸ್"ದಂಥ ಪ್ರಸಿದ್ಧ ಪತ್ರಿಕೆ ಮೊನ್ನೆ ಬರೆದ ಸಂಪಾದಕೀಯ ಬರೆಹ ಇತ್ತೀಚಿನ ಸಾಕ್ಷಿ.

ಇಂಡೋ ಚೀನದಲ್ಲಿ

ಕಮ್ಯುನಿಸ್ಟರ ಆಕ್ರಮಣದಿಂದ ಫ್ರೆಂಚ ಸೈನ್ಯ ಪಡೆದು ಚೇತರಿಸಿಕೊಳ್ಳಲಾಗದೆ ಇಂಡೋ ಚೀನಾದಲ್ಲಿ ಮುಗ್ಗರಿಸಿ ಬೀಳುತ್ತಿದೆ. ಹೋಚಿ ಮಿನ್ನರು ಲಾವೋಸದ ಪತನದಷ್ಟಕ್ಕೆಯೇ ನಿಲ್ಲದೆ, ಮುಂದೆಹೋಗಿ ಥೈಲೆಂಡವನ್ನು ಆಕ್ರಮಿಸುವ ಗತ್ತುಗಾರಿಕೆಯನ್ನು ತೋರಿದ್ದಾರೆ. ಥೈಲೆಂಡದಲ್ಲಿ ಜರೂರು ಪರಿಸ್ಥಿತಿಯನ್ನು ಹಿಂದೆಯೇ ಘೋಷಿಸಿದ್ದರು—ಈಗ ಕರ್ಫ್ಯೂ ಆಜ್ಞೆ ಜಾರಿಮಾಡಲ್ಪಟ್ಟಿದೆ. ಫ್ರೆಂಚರ ಅಭಿಪ್ರಾಯವು ಈ ಯುದ್ಧವನ್ನು ಹೇಗಾದರೂ ಕೊನೆಗಾಣಿಸಿ ಹೋಚಿಮಿನ್ನರೊಡನೆ ಸಂಧಾನ ಮಾಡುವುದಕ್ಕೆ ಅನುಕೂಲವಾಗಿ ತೋರುತಿದ್ದರೂ, ಅಮೇರಿಕದ ವರ್ಚಸ್ಸಿನಿಂದ ಆದಿಸೆಯಲ್ಲಿ ಯಶಸ್ವಿಪ್ರಯತ್ನಗಳಾಗುತ್ತಿಲ್ಲ.

ಬರ್ಲಿನ ಪರಿಷತ್ತು

ನಾಲ್ಕು ಮಹಾರಾಷ್ಟ್ರಗಳ ವಿದೇಶಾಂಗ ಸಚಿವರು ಬರ್ಲಿನದಲ್ಲಿ ಜನವರಿ ೨೫ನೇ ದಿನಾಂಕ ಸಭೆಗೂಡಬೇಕೆಂದು ಒಪ್ಪಿಕೊಂಡಿದ್ದು, ಪೂರ್ವ ಭಾವಿ ಸಮಾಲೋಚನೆಗಳು ಈಗಾಗಲೇ ಬರ್ಲಿನದಲ್ಲಿ ನಡೆಯುತ್ತಿವೆ. ಹೆಚ್ಚಿನ ಆಶೆಯನ್ನು ಯಾರೊಬ್ಬರೂ ಕಟ್ಟಿಕೊಳ್ಳುವಂತಿಲ್ಲ. ಉಭಯ ಪಕ್ಷದವರಿಗೂ ಅಣು ಶಸ್ತ್ರಾಸ್ತ್ರದ ಗುಟ್ಟು ಸಿಕ್ಕಿರುವುದರಿಂದ ಈಗ ಪ್ರತ್ಯಕ್ಷ ಯುದ್ಧ ಪ್ರಯೋಜನಕ್ಕೆ ಬಾರದೆಂದು ಚೆನ್ನಾಗಿ ಮನವರಿಕೆಯಾಗಿರುತ್ತದೆ. ಆದ ಕಾರಣ ಪ್ರಚ್ಛನ್ನ ಯುದ್ಧಕ್ಕೆ ಶರಣೆಂದು ಕಾಲಹರಣ ಮಾಡುವುದಕ್ಕೆ ಈ ಪರಿಷತ್ತು ನೆಪವಾಗಬಲ್ಲುದು

ಉಡುಪಿ

ಬೋರ್ಡ್ ಹ್ಯಾಸ್ಕೂಲಿನಲ್ಲಿ ವಸ್ತು ಪ್ರದರ್ಶನ—ಉಡುಪಿ ಬೋರ್ಡ್ ಹೈಸ್ಕೂಲಿನ ಸಾಯನ್ಸ್ ಕ್ಲಬ್ಬಿನ ನೇತೃತ್ವದಲ್ಲಿ ಏರ್ಪಡಿಸಲಾದ ವಸ್ತು ಪ್ರದರ್ಶನವನ್ನು ತಾ. 10ರಂದು ಬೆಳಿಗ್ಗೆ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಪ್ರೊಫೆಸರ್ ಶ್ರೀ ಕೆ. ಪಿ. ಆನಂದನ್, ಅವರು ಉದ್ಘಾಟಿಸಿದರು. ಇದೇ ಸಂದರ್ಭದಲ್ಲಿ ಕ್ಲಾಡ್ ಬರ್ನಾರ್ಡ್‌ರ ಭಾವಚಿತ್ರ ಅನಾವರಣವನ್ನು ನೆರವೇರಿಸಿದರು. ಹೆಡ್ಮಾಸ್ಟರ್ ಶ್ರೀ ಪಿ. ರಾಮಕೃಷ್ಣ ರಾಯರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಯು. ಸುಮನಾಥಾಚಾರ್ಯರು ಕಾಲೋಚಿತ ಮಾತುಗಳನ್ನಾಡಿದರು. ಶ್ರೀ ಟಿ. ವಿಠಲ ಪೈಗಳು ಧನ್ಯವಾದಗಳನ್ನರ್ಪಿಸಿದರು.

ಅಕ್ಕಿ ಹೊರೆ - ಇದೇ ತಿಂಗಳ ತಾ 17ರಲ್ಲು ಬೆಳಿಗ್ಗೆ ಶ್ರೀ ಕೃಷ್ಣ ಮಠದ ಪರ್ಯಾಯ ಪೀಠವನ್ನೇರಲಿರುವ ಶ್ರೀ ಫಲಿಮಾರು ಮಠದ ಶ್ರೀ ರಘುವಲ್ಲಭ ತೀರ್ಥ ಸ್ವಾಮಿಗಳವರ ಪರ್ಯಾಯ ಮಹೋತ್ಸವದ ಸಲುವಾಗಿ ಶ್ರೀ ಅದಮಾರು ಶ್ರೀ ವಿಬುಧೇಶ ತೀರ್ಥ ಸ್ವಾಮಿಗಳವರು ತಾ 12ರಲ್ಲು ಒಂದು ಸಾವಿರದ ಒಂದು ಮುಡಿ ಅಕ್ಕಿ ಹೊರೆಯನ್ನು ಕಳುಹಿಸಿದರು.

ಶ್ರೀ ಯು. ಶ್ರೀನಿವಾಸ ಮಲ್ಯರು—ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿ ಕಾರ್ಯದರ್ಶಿಗಳಾದ ಶ್ರೀ ಯು. ಶ್ರೀನಿವಾಸ ಮಲ್ಯರು, ಶ್ರೀಗಳಾದ ಕೆ. ಎಸ್. ಹೆಗ್ಡೆ, ಎಮ್. ಪಿ, ಬಿ. ಆರ್. ಕರ್ಕೇರರ ಮತ್ತು ವಿ. ಎಸ್. ಕುಡ್ವರೊಂದಿಗೆ ಉಡುಪಿಗೆ ಇದೇ ತಾ 10ರಲ್ಲು ಸಂಜೆ ಬಂದು ಸ್ಥಳೀಯ ಕಾಂಗ್ರೆಸ್ ಕಾರ್ಯಕರ್ತರ ಹಾಗೂ ಇತರರನ್ನು ನೋಡಿ ಈ ಭಾಗದ ಆಗುಹೋಗುಗಳ ಮತ್ತು ಕಾಂಗ್ರೆಸ್ ಸಂಸ್ಥೆಯನ್ನು ಬಲಪಡಿಸುವ ಮೊದಲಾದ ವಿಷಯಗಳ ಕುರಿತು ವಿಚಾರ ವಿನಿಮಯ ಮಾಡಿದರು. ಡಾ| ಟಿ. ಮಾಧವ ಪೈಗಳು ಶ್ರೀ ಮಲ್ಯರ ಮತ್ತು ಶ್ರೀ ಹೆಗ್ಡೆಯವರ ಸ್ವಾಭಿಮಾನ ಶಕ್ತಿ ಸಾಮರ್ಥ್ಯಗಳನ್ನು ಕೊಂಡಾಡಿ ಧನ್ಯವಾದಗಳನ್ನಿತ್ತರು.

ನವಯುಗ ಪ್ರಜಾರಾಜ್ಯ ವಿಶೇಷಾಂಕ

೧೯೫೪

ವಿವಿಧ ಬರಹಗಳು! ಹಲವಾರು ಚಿತ್ರಗಳು! ನೂರಾರು ಪುಟಗಳು!

ವಿಶೇಷ ರೀತಿಯಲ್ಲಿ ಪ್ರಕಟವಾಗುವ ಈ ಸಂಚಿಕೆಯ ಕೆಲವು ಲೇಖಕರು:

ಶ್ರೀ ಆರ್ ಆರ್. ದಿವಾಕರ್, ಬಿಹಾರಿನ ಗವರ್ನರ್.
ಶ್ರೀ ಪಾಟೀಲ ಹನುಮಂತ ರಾವ್, ಎಂ. ಎ., ಬಿ. ಕಾಮ್
ಶ್ರೀ. ನೆಗಳೂರು ರಂಗನಾಥ, ಎಂ. ಎ., ಎಲ್ ಎಲ್, ಬಿ.
ಶ್ರೀ. ಬಿ. ಎ. ಕೃಷ್ಣಸ್ವಾಮಿ ರಾವ್, ಎಮ್. ಎಸ್. ಸಿ.
ಶ್ರೀ. ಬಿ. ಎಚ್. ಶ್ರೀಧರ, ಎಂ. ಎ
ಶ್ರೀ. ಎಸ್. ಯು. ರಾಮಚಂದ್ರ ರಾವ್. ಎಂ. ಎ.
ಶ್ರೀ. ಸೇವ ನಮಿರಾಜ ಮಲ್ಲಿ, ಎಂ ಎ, ಬಿ ಎಲ್.
ಶ್ರೀ. ಕೆ. ಬಿ ರಾಮಕೃಷ್ಣ ರಾವ್. ಬಿ ಎ. (ಆನರ್ಸ್)
ಶ್ರೀಮತಿ ಸರೋಜಿನಿ ಮಹಿಷಿ, ಎಂ. ಎ.

ಶ್ರೀ. ಶಿವರಾಮ ಕಾರಂತ.
ಶ್ರೀ. ಎಂ. ಗೋವಿಂದ ಪೈ.
ಶ್ರೀ. ರಂ ಶ್ರೀ. ಮುಗಳಿ.
ಶ್ರೀ. ಸಂಜೀವ ಲಕ್ಷ್ಮೇಶ್ವರ
ಶ್ರೀ ರಾ. ವೆ. ಕರಗುದರಿ.
ಶ್ರೀ ಕೆ ಟಿ ಪಾಂಡುರಂಗಿ.
ಡಾ| ಎಂ ಗೋಪಾಲಕೃಷ್ಣ ರಾವ್.
ಶ್ರೀ ಎ ಎಸ್. ರಾಮಕೃಷ್ಣ.
ಶ್ರೀ. ಎಸ್. ವೆಂಕಟರಾಜ.

ನೋಟೀಸು.

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ

O. S. No. 96/1952
R. E. P. 390/1953

ಮಂಜುಂಭ ಯೂನಿಸುವಸ್ಮುದ್ ಬ್ಯಾರಿ
—ಅರ್ಜಿದಾರ

ಖದೀಜುಮ್ಮ ವಗೈರಾ. .....ರೆಸ್ಪಾಂಡೆಂಟ್ರು.

1ನೇ ರೆಸ್ಪಾಂಡೆಂಟಳು ಖದೀಜುಮ್ಮ ಮೊಯಿದಿಂಕುಂಞ ಬ್ಯಾರಿ ಹೆಂಡ್ತಿ ವ, ಅಂದು ಬ್ಯಾರಿ ಮಗಳು ಕಾಸರಗೋಡು ತಾಲೂಕು ಶಿರಿಬಾಗಿಲು ಗ್ರಾಮದಲ್ಲಿರುವವಳು.

ಮೇಲ್ಕಂಡ ಅಮಲ್ ಡ್ಯಾರಿಯಲ್ಲಿ ಸ್ಥಿರಾಸ್ತಿ ಏಲಂಮ್ಮಿನ ಬಗ್ಗೆ ಅರ್ಜಿದಾರನು ದಾಖಲು ಪಡಿಸಿದ ಏಲಂ ಯಿಸ್ತಿಹಾರು ಮಂಜೂರಾತಿ ಬಗ್ಗೆ ತಾ 2—2—1954ಕ್ಕೆ ಇಟ್ಟಿರುವ ಸಂಗ್ತಿ 1ನೇ ರೆಸ್ಪಾಂಡೆಂಟಳಿಗೆ ತಿಳಿಸೋದಾಗಿಯದೆ.

Sd/-P. Ahmad
Advocate for Petitioner

ಕಾಸರಗೋಡು 12-1-54

ಕವಿಭೂಷಣ ಕೆ. ಪಿ. ವೆಂಕಪ್ಪ ಶೆಟ್ರು

ಭಾರತದ ಗುರುಕುಲ

(ಯಕ್ಷಗಾನ)

ಸಾಹಸ ಭೀಮ ವಿಜಯ	0—8—0
ಲತ್ತಪಗಡೆ	0—6—0
ಭರತೇಶ ದಿಗ್ವಿಜಯ	0—8—0
ವಾಲಿ ಸುಗ್ರೀವ	0—8—0

ಬೆಲೆ: 0 8 0

ಮದರಾಸು ಸರಕಾರದಿಂದ ಸಂಭಾವನೆ ಪಡೆದ ಗ್ರಂಥ.

ನವಭಾರತ ಪುಸ್ತಕ ಭಂಡಾರ, ಉಡುಪಿ

ನೋಟೀಸು.

ಕಾಸರಗೋಡು ಡಿ. ಮು ಕೋರ್ಟಿನಲ್ಲಿ

O. S. No. 462 1953

T. K. ಅಬ್ದುಲ್ಲ ವಾದಿ............ವಾದಿ.

ಸುಬ್ಬೋಜಿ ರಾಯ. ಕುಂಬಳ್ದ, ಏರೋಜಿ ರಾಯರ ಮಗ. ಕಾಸರಗೋಡು ತಾಲೂಕು ವೇಡತ್ತ ಗ್ರಾಮದ ಕುಂಬಳ್ದವನ್ಲಿರುವವನ.
—ಪ್ರತಿವಾದಿ.

ವಾದಿಯು ಪ್ರತಿವಾದಿಯಿಂದ—ತನಗೆ ಬರಬೇಕಾದ ಸಾಲು ಬಡ್ಡಿ ಸಮೇತ ವಸೂಲಾಗಿ ಕೊಳ್ಳುವದೆ ದಾಖಲು ಮಾಡಿದ ಈ ವ್ಯಾಜ್ಯವು ತಾರೀಕು 25—1—1954ಕ್ಕೆ ಇಟ್ಟಿರುವ ಸಂಗ್ತಿ ತಿಳಿಸಿಯದೆ.

Sd/-P. Ahmad
Advocate for Plaintiff

ಕಾಸರಗೋಡು 12-1 1954

ಫಲಿಮಾರು— ಇದೇ ತಾ 6ರಂದು ಇಲ್ಲಿಯ ಊರ ಮತ್ತು ಪರವೂರ ನೆರೆಕರೆಯು ಮಹನೀಯರು, ಇದೇ 17ಕ್ಕೆ ಪರ್ಯಾಯ ಪೀಠವನ್ನಲಂಕರಿಸಲಿರುವ ಫಲಿಮಾರು ಮಠಾಧೀಶ ಶ್ರೀ ಶ್ರೀ ರಘುವಲ್ಲಭ ತೀರ್ಥ ಸ್ವಾಮಿಗಳವರನ್ನು ಬಿರುದು ಬಾವಲಿಗಳೊಡನೆ ಸ್ಥಳೀಯ ದೇವಾಲಯಕ್ಕೆ ಕರೆದೊಯ್ದು ಅಲ್ಲಿ ಪೂಜಾ ಪುರಸ್ಕಾರಗಳ ತರುವಾಯ ಸರ್ವ ಸಮಿತಿಯರೂ ಶ್ರೀ ಸ್ವಾಮಿಗಳವರಿಗೆ ಪಾದಕಾಣಿಕೆಯನ್ನರ್ಪಿಸಿದರು ಶ್ರೀ ಸ್ವಾಮಿಗಳವರು ನೆನೆದವರಿಗೆ ಫಲ ಮಂತ್ರಾಕ್ಷತೆಗಳನ್ನಿತ್ತು ಹರಸಿದರು. ಸಂಜೆ ಸ್ಥಳೀಯ ಬೋ. ಹಾ. ಎ. ಶಾಲಾ ಅಧ್ಯಾಪಕ ವೃಂದದವರೂ, ಬಾಲಕ ಬಾಲಕಿಯರೂ ಸೇರಿ ಶ್ರೀ ಸ್ವಾಮಿಗಳವರನ್ನು ಸರ್ವ ವಿಜೃಂಭಣೆಗಳಿಂದ ಶಾಲೆಗೆ ಕರೆತಂದು ಶಕ್ತ್ಯನುಸಾರ ಪಾದ ಕಾಣಿಕೆಯನ್ನರ್ಪಿಸಿದರು ಶ್ರೀ ಸ್ವಾಮಿಗಳವರು ಫಲ ಮಂತ್ರಾಕ್ಷತೆಗಳನ್ನಿತ್ತು ಹರಸಿದರು. ಮತ್ತು ವಿದ್ಯಾರ್ಥಿಗಳಿಗೆ ಸಿಹಿ ತಿಂಡಿಯನ್ನು ಹಂಚಿದರು. ತರುವಾಯ ಪುರ ಪ್ರವೇಶಕ್ಕೆ ತೆರಳಲಿರುವ ಸ್ವಾಮಿಗಳವರನ್ನು ಊರ ಪರವೂರ ಜನರು ವಿಜೃಂಭಣೆಯಿಂದ ಬೀಳ್ಕೊಟ್ಟರು

ಬೆಳ್ಮಣ್ಣು— ಇದೇ ತಾ. 3ರಂದು ರಾತ್ರಿ ಬೆಳ್ಳೆ ಶ್ರೀ ಅನಂತ ಉಪಾಧ್ಯಾಯರ ಸಂಗೀತ ಕಚೇರಿಯು ಮೂಡುಬಿದರೆ ಶ್ರೀ ರಾಜು ಭಟ್ರ ಹಾರ್ಮೋನಿಯಮ್, ನಂದಳಿಕೆ ಶ್ರೀ ಗೋಪಾಲಾಚಾರ್ಯರವರ ತಬಲಾ ವಾದನದೊಂದಿಗೆ ಜರಗಿಸಲ್ಪಟ್ಟಿತು.

ಪೆರಡಾಲ— ಪೆರಡಾಲ ಗ್ರಾಮ ಆರೋಗ್ಯ ಸಮಿತಿಯವರ ಪ್ರಯತ್ನದ ಫಲವಾಗಿ ಜಿಲ್ಲಾ ಬೋರ್ಡಿನವರು ತೆರೆಯುವ ರೂರಲ್ ಆಸ್ಪತ್ರೆಯ ಉದ್ಘಾಟನಾ ಸಮಾರಂಭವು ಮಾನ್ಯ ಜಿಲ್ಲಾ ಕಲೆಕ್ಟರ್ ಶ್ರೀ ಎ. ಮಹಾಲಿಂಗಂ ಚೆಟ್ಟಿಯಾರರ ಅಧ್ಯಕ್ಷತೆಯಲ್ಲಿ ದಿ. ಎಂ. ಓ. ರಾದ ಡಾ। ಕೇರವರಾಜರಿಂದ ತಾ 3 ರಂದು ನೆರವೇರಿಸಲ್ಪಟ್ಟಿತು ಪ್ರಾರ್ಥನೆಯ ನಂತರ ಸಮಿತಿಯ ಕಾರ್ಯದರ್ಶಿ ಶ್ರೀ ಕಮಲಾಕ್ಷ ಶೈಗಳು ಸ್ವಾಗತ ಭಾಷಣ ಮಾಡಿದ ಮೇಲೆ, ರೂರಲ್ ಆಸ್ಪತ್ರೆಯ ಡಾಕ್ಟರರಾದ ಶ್ರೀ ಕೆ. ಶ್ರೀನಿವಾಸ ಹೆಗ್ಡೆಯವರು ಕೇಂದ್ರ ಹಾಗೂ ಪ್ರಾಂತ ಆರೋಗ್ಯ ಮಂತ್ರಿ ರಾಜಕುಮಾರಿ ಅಮೃತಕಾರ್ ಮತ್ತು ಶ್ರೀ ಎ. ಬಿ. ಶೆಟ್ಟಿಯಿಂದಲೂ, ಮದ್ರಾಸಿನ ಮಂತ್ರಿಗಳಾದ ಡಾ। ಯು. ಕೃಷ್ಣರಾವ್ ಮತ್ತು ಶ್ರೀ ಕೆ. ರಾಜಾರಾಮ ನಾಯ್ಡುರವರಿಂದಲೂ, ಪಾರ್ಲಿಮೆಂಟಿನ ಮೆಂಬರರಾದ ಶ್ರೀಮತಿ ದುರ್ಗಾಬಾಯಿ ದೇಶಮುಖ್ ಮತ್ತು ಶ್ರೀ ಬಿ. ಶಿವರಾಯರಿಂದಲೂ ಮಾಜಿ ಜಿ. ಬೋ. ಅಧ್ಯಕ್ಷರಾದ ಶ್ರೀ ಮಂಜಯ್ಯ ಹೆಗ್ಡೆಯವರೇ ಮೊದಲಾದವರಿಂದ ಬಂದ ಸಂದೇಶಗಳನ್ನೋದಿದರು. ಉದ್ಘಾಟಕರು ಇಂತಹ ಆಸ್ಪತ್ರೆಗಳ ಆವಶ್ಯಕತೆಗಳನ್ನು ಹೇಳಿ ಸಮಿತಿಯವರ ಪ್ರಯತ್ನವನ್ನು ಶ್ಲಾಘಿಸಿದರು. ಅಧ್ಯಕ್ಷರು ಆಸ್ಪತ್ರೆಗಳ ವಿಷಯ ತಿಳಿಸಿ, ಈ ಆಸ್ಪತ್ರೆಯು ಏಳಿಗೆ ಹಾರೈಸಿದರು. ಸಮಿತಿಯ ಅಧ್ಯಕ್ಷ ಶ್ರೀ ಎನ್. ಸಾಂತ ಮುಲಾಯರು ಧನ್ಯವಾದ ಸಮರ್ಪಣೆ ಮಾಡಿದರು.

ಹಿರಿಯಡಕ— ಸ್ಥಳೀಯ ಶ್ರೀ ವೀರಭದ್ರ ಸ್ವಾಮಿ ಸನ್ನಿಧಿಯಲ್ಲಿ ಇದೇ ತಾ 10ರಲ್ಲು ರಾತ್ರಿ ಸಂಗೀತ ಕಲಾನಿಧಿ ಬೆಳ್ಳೆ ಅನಂತ ರಾಮ ಉಪಾಧ್ಯಾಯರ ಸಂಗೀತ ಕಚೇರಿಯು ಶ್ರೀಗಳಾದ ವ್ಯಾಸ ರಾವ್, ಸುಂದರಾಚಾರ್ಯ ಮತ್ತು ಮಾಧವಾಚಾರ್ಯರ ಹಿಮ್ಮೇಳ ಗಳೊಂದಿಗೆ ಸಾಂಗವಾಗಿ ಜರಗಿತು.

ಪಡುಬಿದ್ರೆ— ಬದಿಯಡ್ಕ ರೂರಲ್ ಆಸ್ಪತ್ರೆಯ ಮೆಡಿಕಲ್ ಆಫೀಸರರಾಗಿ ನೇಮಕಗೊಂಡಿದ ಸ್ಥಳೀಯ ಡಾ। ಕೆ ಶ್ರೀನಿವಾಸ ಹೆಗ್ಡೆಯವರ ಗೌರವಾರ್ಥ ಸತ್ಕಾರ ಕೂಟವು ಕಳದ ತಾ 28ರಲ್ಲು ಡಾ। ಎಚ್. ಎಸ್. ಗಡಿಯಾರರ ಅಧ್ಯಕ್ಷತೆಯಲ್ಲಿ ಜರಗಿತು. ಸಭಿಕರ ಭಾಷಣ ಗಳಾದ ಬಳಿಕ ಶ್ರೀ ಪೈ ಕಾಳಪ್ಪ ಸೆಟ್ಟಿ, ವಿದ್ವಾನ್, ಅವರು ಧನ್ಯವಾದಗಳನ್ನರ್ಪಿಸಿದರು.

ಪುತ್ತೂರು ಶ್ರೀ ಸ್ವಾಮಿ ವಿವೇಕಾನಂದ ಲೈಬ್ರೆರಿಯ ಆಶ್ರಯದಲ್ಲಿ ಕಳದ ತಾ 25ರಲ್ಲು ಶ್ರೀ ಶಾರದಾ ಮಾತಾ ಜನ್ಮ ಶತಮಾನೋತ್ಸವ ನಿಮಿತ್ತ, ಗೀತಾ ಪ್ರವಚನ, ಭಜನೆಗಳಾಗಿ ಸಂಜೆ ಶ್ರೀ ದೇವಿಯವರ ಭಾವಚಿತ್ರ ಮೆರವಣಿಗೆ ಕಾರ್ಯ ಕ್ರಮಗಳಾದುವು. ಶ್ರೀ ಸ್ವಾಮಿ ಆದಿ ದೇವಾನಂದಜೀಯವರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಶ್ರೀ ಗಳಾದ ಗಂಗಾಧರ ವೈದ್ಯ, ಕಷ್ಟಮಯ್ಯ ಮೊದಲಾದವರು ಶ್ರೀ ಶಾರದಾ ದೇವಿಯವರ ಜೀವನದ ಮಹತ್ವದ ಕುರಿತು ಮಾತನಾಡಿದರು.

ಉಚ್ಚಿಲ— ಉಡುಪಿಯ ಪರಿಯಾಳ ಸಮಾಜ ಸುಧಾರಕ ಸಂಘದ ಮಹಾ ಸಭೆಯು ಇದೇ ತಾ 6ರಲ್ಲು ಉಚ್ಚಿಲ ಹಾ। ಎ। ಶಾಲೆಯಲ್ಲಿ ಶ್ರೀ ಪೊಳ್ಳ ದೇಜಪ್ಪ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ದೇವತಾ ಪ್ರಾರ್ಥನೆಯಾದ ಬಳಿಕ ಗತ ವರುಷದ ವರದಿ, ಲೆಖ್ಖ ಪತ್ರಗಳ ಪರಿಶೀಲನೆಗಳಾದುವು. ಶ್ರೀ ಬಾಲಕೃಷ್ಣ ಸಾಲಿಯಾನರು ಶುಭ ಸಂದೇಶಗಳನ್ನೋದಿದರು. ನಂತರ ಕಾರ್ಯಕಾರಿ ಸಮಿತಿಗೆ ಶ್ರೀಗಳಾದ ಯು ಪಿ. ಸುವರ್ಣ (ಅಧ್ಯಕ್ಷ), ಈಶ್ವರ ಕೆ. ಸುವರ್ಣ (ಉಪಾಧ್ಯಕ್ಷ), ಟಿ. ಟಿ. ಸಾಲಿಯಾನ್ (ಕಾರ್ಯದರ್ಶಿ), ಗಿರಿಯಪ್ಪ ಸಾಲಿಯಾನ್ (ಜತೆಕಾರ್ಯದರ್ಶಿ), ಪೂವಪ್ಪ ಬಂಗೇರ (ಕೋಶಾಧಿಕಾರಿ), ಗಳಾಗಿ ಆರಿಸಲ್ಪಟ್ಟರು. ಶ್ರೀಗಳಾದ ಬಾಲಕೃಷ್ಣ ಸಾಲಿಯಾನ್ ಮತ್ತು ರಾಮಪ್ಪ ಕೆ. ಸಾಲಿಯಾನರು ತೆಖ್ಖ ಪರಿಶೋಧಕರಾಗಿ ಚುನಾಯಿಸಲ್ಪಟ್ಟರು. ಹ್ಯಾಸ್ಕೂಲುಗಳಲ್ಲಿ ಕಲಿಯುವ ಸ್ವಸಮಾಜದ ವಿದ್ಯಾರ್ಥಿಗಳಿಗೆ ಸಂಘದ ಮೂಲ ಧನದ ಬಡ್ಡಿಯಿಂದ ವಿದ್ಯಾರ್ಥಿ ವೇತನ ಕೊಡಬೇಕೆನ್ನುವ, ಸಮಾಜದ ಏಳಿಗೆಗಾಗಿ ದುಡಿಯುತ್ತಿರುವ ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಅವರನ್ನು ಅಭಿನಂದಿಸುವ ನಿರ್ಣಯಗಳಾದುವು. ನೆರೆದ ಸಭಿಕರಲ್ಲಿ ಡಾ। ಸುಚೇತ್ತ ಮತ್ತು ಶ್ರೀ ಸುಬ್ಬಚಿಂದ ಹೆಜ್ಮಾಡಿ ಮೊದಲಾದವರು ಮಾತನಾಡಿದರು. ಅಧ್ಯಕ್ಷ ಭಾಷಣ, ಧನ್ಯವಾದರ್ಪಣೆ, ಉಪಹಾರಾದಿಗಳಿಂದ ಸಭಾಂತ್ಯವಾಯಿತು.

ಕುಂಬಳೆ— ಇಲ್ಲಿಯ ಉಪಾಧ್ಯಾಯರ ಕೇಂದ್ರ ಸಭೆಯು ಇದೇ ತಾ 9ರಲ್ಲು ಕಾಸರಗೋಡು ಸರ್ಕಲ್ ಡೆಪ್ಯುಟಿ ಇನ್ಸ್ ಪೆಕ್ಟರ್ ಜನಾಬ್ ಎಮ್ ಹಸನ ಸಾಹೇಬರ ಅಧ್ಯಕ್ಷತೆಯಲ್ಲಿ ಜರಗಿತು. ಗತ ಸಭೆಯ ವರದಿ ವಾಚನ, ಸಭಿಕರ ಬಾಷಣ ಕಾರ್ಯಕ್ರಮಗಳು ಆದ ನಂತರ ಸಂಘದ ಕಾರ್ಯದರ್ಶಿ ಮತ್ತು ಜತೆಕಾರ್ಯದರ್ಶಿಗಳಾಗಿ ಮುಂದಿನ ವರ್ಷಕ್ಕೆ ಶ್ರೀಗಳಾದ ಪಿ. ಶಂಕರ ಭಟ್ ಮತ್ತು ಕೆ. ರಾಜೇಂದ್ರನವರು ಆರಿಸಲ್ಪಟ್ಟರು.

ಕಾಂಗ್ರೆಸ್ ಕಾರ್ಯಕರ್ತರ ಸಭೆಯು ಈಚೆಗೆ ಕುಂಬಳೆಯಲ್ಲಿ ಜನಾಬ್ ಎಮ್. ಎಸ್. ಮೊಗ್ರಾಲ್, ಎಮ್. ಎಲ್ ಎ. ಅವರ ಅಧ್ಯಕ್ಷತೆಯಲ್ಲಿ ಸೇರಿ, ಕಾಂಗ್ರೆಸ್ ಮೆಂಬರರನ್ನು ಅಧಿಕ ಸಂಖ್ಯೆಯಲ್ಲಿ ಸೇರಿಸುವ, ಕಾಂಗ್ರೆಸ್ ಸಂಘಟನೆ, ಕಾಂಗ್ರೆಸ್ ಪ್ರಚಾರ ಇತ್ಯಾದಿ ಕುರಿತು ವಿಚಾರ ವಿನಿಮಯ ನಡೆಯಿತು.

ಇದೇ ತಾ 17ರಂದು ಸಂಜೆ ಸ್ಥಳೀಯ ಮೈದಾನದಲ್ಲಿ ಜರಗಲಿರುವ ಕಿಸಾನ್ ಪಂಚಾಯತ ಸಮ್ಮೇಳನದ ಅಧ್ಯಕ್ಷತೆಯನ್ನು ಬೊಂಬಾಯಿಯ ಶ್ರೀ ದಿನಕರ ದೇಸಾಯಿಯವರು ವಹಿಸಲಿರುವರೆಂದೂ ಸಮ್ಮೇಳನವನ್ನು ಮೈಸೂರು ಶಾಸನ ಸಭಾ ಸದಸ್ಯರಾದ ಶ್ರೀ ಗೋಪಾಲ ಗೌಡರು ಉದ್ಘಾಟಿಸಲಿರುವರೆಂದೂ ತಿಳಿದು ಬರುತ್ತದೆ.

ಕುಂದಾಪುರ— ಎಗ್ರಿ ಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕಿನ ಸಾಧಾರಣ 200000/– ರೂ. ಫ್ರೋಡರಿ, ದುರುಪಯೋಗ ಮೊದಲಾದ ತಕ್ಷೀರುಗಳ ಬಗ್ಗೆ ಬೇಂಕಿನ ಮಾಜಿ ಚೇರ್‌ಮೆನ್ ಶ್ರೀ ಕೆ. ವಾಸುದೇವ ಹೆಗ್ಡೆ, ಮಾಜಿ ಮೇನೇಜಿಂಗ್ ಡೈರೆಕ್ಟರ್ ಶ್ರೀ ಕೆ. ವಿಠಲ ದಾಸ ಶೆಟ್ಟಿ ಮತ್ತು ಇತರು ಮಂದಿಯ ವಿಚಾರಣೆಯು ಕುಂದಾಪುರದಲ್ಲಿ ಸ್ಪೆಶಲ್ ಫಸ್ಟ್ ಕ್ಲಾಸ್ ಮೆಜಿಸ್ಟ್ರೇಟ್ ಕೆಪ್ಟನ್ ಟಿ. ಶ್ರೀನಿವಾಸನ್, ಅವರಿಂದ ಕಳದ ತಿಂಗಳ ತಾ 9ರಲ್ಲು ಪ್ರಾರಂಭ ವಾದುದು ದಿನಾಲೂ ನಡೆಯುತ್ತಲೇ ಇದೆ. ಈ ತನಕ 12ಕ್ಕೂ ಮಿಕ್ಕಿ ಸಾಕ್ಷಿಗಳ ವಿಚಾರಣೆ ನಡೆಯಿತು. ಯಾರ ಯಾರ ಹೆಸರಿನಲ್ಲಿ ಅವರವರಿಗೆ ಗೊತ್ತಿಲ್ಲದೆ ಫೋರ್ಜರಿ ದಸ್ಕತು ಮಾಡಿ ಪಡೆದ ಸಾಲದ ದಾಖಲೆಗಳು ಕೂಡಾ ಸಿಕ್ಕಿವೆ. ತಕ್ಷೀರುಗಾರರ ಕಡೆಯಿಂದ ಕುಂದಾಪುರ ವಕೀಲರುಗಳಾದ ಶ್ರೀ ಗಳಾದ ಎಮ್. ಎ. ಸೆಟ್ಟಿ, ಕೆ ನರಸಿಂಹ ಕಾಮತ್ ಮತ್ತು ಕೆ. ಎಲ್. ಭಂಡಾರಿಗಳು ವಕಾಲತ್ತು ನಡೆಸುತ್ತಿರುವರು. ಇವರು ಸಾಕ್ಷಿಗಾರರಿಗೆ ಕ್ರಾಸ್ ಮಾಡುವ ಕಾರ್ಯವನ್ನು ರಿಜರ್ವ ಮಾಡಿರುವರು. ಸರಕಾರಿ ಕಡೆಯಿಂದ ಸ್ಪೆಶಲ್ ಪಬ್ಲಿಕ್ ಪ್ರೋಸಿಕ್ಯೂಟರ್ ಶ್ರೀ ಕೆ. ನಾರಾಯಣ ರೈಗ ಳ ವಕಾಲತ್ತು ಮಾಡುತ್ತಿರುವರು. ಇವರಿಗೆ ಶ್ರೀ ಎಚ್. ಸಂಜೀವ, ಪೋಲೀಸ್ ಇನ್ಸ್‌ಪೆಕ್ಟರ್‌ಮತ್ತು ಶ್ರೀ ಎಮ್. ಎಸ್. ಮೈಸ್ಪಾಡಿ, ಮದ್ರಾಸಿನ ಸಿ. ಐ. ಡಿ. ಪೋಲೀಸ್ ಸಬ್ ಇನ್ಸ್‌ಪೆಕ್ಟರರು ಸಹಾಯಕರಾಗಿರುವರು.

ಸುರತ್ಕಲ್— ಸ್ಥಳೀಯ ತಾಳೆ ಜಿಲ್ಲದ ಸಹಕಾರಿ ಸಂಘದ ಮಹಾ ಸಭೆಯು ಕಳದ ತಾ 25ರಲ್ಲು ಶ್ರೀ ರಾಮ ಕೃಷ್ಣನವರ ಅಧ್ಯಕ್ಷತೆಯಲ್ಲಿ ಜರಗಿತು. ಸಭೆಯಲ್ಲಿ ಹಾಜರಿದ್ದ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಪ್ರಧಾನ ಕಾರ್ಯದರ್ಶಿ ಗಳಾದ ಶ್ರೀ ಬಿ. ಆರ್. ಕರ್ಕೇರರು ವ್ಯಾಂತಿಕ ಮತ್ತು ಕೇಂದ್ರ ಸರಕಾರ ಗಳಿಂದ ನಮ್ಮ ಜಿಲ್ಲೆಯಲ್ಲಿ ನಡೆದಿರುವ ಅಭಿವೃದ್ಧಿ ಕಾರ್ಯಗಳ ಕುರಿತು ಮಾತನಾಡಿದರು. ಅಲ್ಲದೆ ಸದ್ಯದ ಪರಿಸ್ಥಿತಿಯಲ್ಲಿ ಎಲ್ಲರೂ ಕಾಂಗ್ರೆಸ್ ನೊಡನೆ ಸಂಪೂರ್ಣ ಸಹಕರಿಸಿ ಅದನ್ನು ಬಲ ಪಡಿಸ ಬೇಕೆಂದು ಕೇಳಿ ಕೊಂಡರು.

ಮದ್ರಾಸು ಸರಕಾರದ ಪ್ರಚಾರ-ಸಮಾಚಾರ ಶಾಖೆಯ ಡೈರೆಕ್ಟರರಿಂದ ಮರಣ ದಂಡನೆ

ಪುಳಿಕುಳ ಪಟ್ಟಿ ಎಂಬಲ್ಲಿಯ ಕಂಬಿ ಕುಡಿಯನ್ ಎಂಬವನನ್ನು ಮಧುರೆ ಸೆಂಟ್ರಲ್ ಜೈಲಿನಲ್ಲಿ 2-1 1954ರಂದು ಗಲ್ಲಿಗೇರಿಸಲಾಯಿತು. 27—5—1953ರಂದ ಪಾರ್ವತಮ್ಮಾಳ್ ಎಂಬವಳನ್ನು ಕೊಲೆಗೈದ ತಪ್ಪಿಗಾಗಿ ರಾಮನಾಡ ವುರದ ಸೆಶನ್ಸ್ ಜಡ್ಜರು ಆತನಿಗೆ ಮರಣದಂಡನೆ ವಿಧಿಸಿದ್ದರು.

ಬೊಂಬಾಯಿ

ಗಂಗಯ್ಯ ಸ್ಮಾರಕ ಫಂಡು, ಬೊಂಬಾಯಿ ಇದರ ಹೊಸ ವರುಷದ ಕಾರ್ಯಕಾರಿ ಸಮಿತಿಗೆ ಶ್ರೀ ಗಳಾದ ಪತ್ತ. ಎನ್. ಸುವರ್ಣ (ಅಧ್ಯಕ್ಷ), ಎಮ್. ಲಕ್ಷ್ಮಣ ಗುರಿಕಾರ (ಗಾ. ಕಾರ್ಯದರ್ಶಿ), ಕೃಷ್ಣಪ್ಪ ಎ. ಬಂಗೇರ (ಗಾ. ಕೋಶಾಧಿಕಾರಿ), ಶೀನ ಕೆ. ಕುಂದರ್, ರಾಜು ಕೆ. ಶ್ರೀಯನ್, ಕೇಶವ. ಎಮ್. ಬಂಗೇರ್ ಮತ್ತು ಸೇಸು. ಜಿ. ಸುವರ್ಣ (ಸದಸ್ಯರು)ಇವರು ಆರಿಸಲ್ಪಟ್ಟಿರುವರು.

— ನಡೆಯುವ ಚಿತ್ರ—

ವಿಠ್ಠಲ ರಖುಮಾಯಿ

ಉತ್ಸವದ ಸಲುವಾಗಿ ಸ್ಪೆಶಲ್ ಚಿತ್ರ.

ತಾ. 13—1—54ರಿಂದ

ಶಾಹು ಮೋಡಕ್ ಉಷಾಕಿರಣ್ ಮೊದಲಾದವರು.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡ್ಪಿ.

ಓದಲೇ ಬೇಕಾದ ಪುಸ್ತಕಗಳು

ಹೆಂಗುಸರ ಕತೆಗಳು
ಬೆಲೆ ರೂ. ೨—೦—೦

ಪಂಚಕಜ್ಜಾಯ ಬೆಲೆ ರೂ. ೧—೮—೦

ಅವಿಲು ಬೆಲೆ ರೂ. ೨—೦—೦

ಬಾಳಿನ ಬೆಡಗು
ಸರಸ—ಸುಂದರ್ಸ್ವಕಾದಂಬರಿ. ಬೆಲೆ: ರೂ. 1—4—0

ಸುಲಭದಲ್ಲಿ ಇಂಗ್ಲಿಷ್
ಆಂಗ್ಲ ಸ್ವಯಂಬೋಧಿನಿ ಬೆಲೆ: ೧—೮—೦

ಮನೆ ಮದ್ದು
(ಸುಲಭ ಚಿಕಿತ್ಸೆಗಳು) ಬೆಲೆ: ೨—೮—೦

ನವಭಾರತ ಪುಸ್ತಕ ಭಂಡಾರ ಉಡುಪಿ.

'ವೀರಮಾತೆ'

ಸ್ತ್ರೀಯ ಹಾಗೂ ಮಕ್ಕಳ ವಿಕಾಸಕ್ಕಾಗಿಯೇ ಮೀಸಲಾಗಿಟ್ಟ ಮಾಸಪತ್ರಿಕೆ.

ಸಂಪಾದಕಿಯರು- ಕು. ಸರೋಜಿನಿ ಮಹಿಷಿ, M. A.

ಪ್ರಕಾಶಕರು- ಬಿ. ನಾ. ಬೈಚಬಾಳ. B. A.

ವೀರಮಾತೆ ಕಾರ್ಯಾಲಯ, ಧಾರವಾಡ.

ವಾರ್ಷಿಕ ಚಂದಾಹಣ ರೂಪಾಯಿ 5/- ಬಿಡಿ ಸಂಚಿಕೆ 0-6-0.

ಮಂಗಳೂರು

ಶ್ರೀ ರಾಮಕೃಷ್ಣ ಲೀಲಾ ಪ್ರಸಂಗ

ಭಾರತದ ಆಧ್ಯಾತ್ಮಿಕ ಪುಣ್ಯಜೀವಿಗಳಲ್ಲಿ ಚಿರಸ್ಮರಣೀಯರಾದ ಶ್ರೀ ರಾಮಕೃಷ್ಣ ಪರಮಹಂಸರ ಜೀವನ ಕಥಾಮೃತವನ್ನು ಕನ್ನಡದಲ್ಲಿ ಒದಗಿಸಿ ಕೊಡಲು ಉದ್ದೇಶಿಸಿ, ಮಂಗಳಾದೇವಿ ರಸ್ತೆಯಲ್ಲಿರುವ ರಾಮಕೃಷ್ಣ ಆಶ್ರಮದ ಸ್ವಾಮಿ ಪ್ರಣವೇಶಾನಂದರು ಪ್ರಕಟಣಾ ಕಾರ್ಯಕ್ಕೊಂದಕ್ಕೆ ಕೈಹಾಕಿರುವರು. ಕಾಲಂತರ ಕಟೀಪಿಾಕಾರದ ೧೭೦೦–೧೮೦೦ ಪುಟಗಳನ್ನೊಳಗೊಳ್ಳುವ ಈ ದೊಡ್ಡ ಪುಸ್ತಕವನ್ನು ಸನಾತನ ಧರ್ಮದಲ್ಲಿ ಜಿಜ್ಞಾಸೆಯುಳ್ಳ ಮಹಾನುಭಾವರೆಲ್ಲ ತಮ್ಮ ಅನುಕೂಲಕ್ಕೆ ತಕ್ಕಂತೆ ಕೊಂಡು ಓದಲು ಸಾಧ್ಯವಿದೆ. ಮುಂಗಡ ಹಣ ತೆತ್ತು ಪ್ರತಿಯನ್ನು ಕಾದಿರಿಸಿಕೊಳ್ಳುವವರಿಗೆ ವಿಶೇಷ ರಿಯಾಯಿತಿ ತೋರಿಸಲಾಗುವುದೆಂದೂ ಹಣವನ್ನು ಸ್ವಾಮಿ ಪ್ರಣವೇಶಾನಂದರಿಗೆ ರವಾನಿಸಬೇಕೆಂದೂ ತತ್ಸಂಬಂಧ ಹೊರಡಿಸಿದ ವಿನಂತಿಯಲ್ಲಿದೆ.

ದ.ಕ. ಜಿಲ್ಲಾ ಬೋರ್ಡಿನ–ವಿಶೇಷ ಅಧಿಕಾರಿಗಳಾದ ಜಿಲ್ಲಾ ಕಲೆಕ್ಟರರು 1954–55ನೆ ವರ್ಷದ ಅಂದಾಜು ಬಜೆಟನ್ನು ತಯಾರಿಸಿರುವರು. ಅದರಂತೆ ಬೋರ್ಡಿನ ಮುಂಗಡಪತ್ರದ ಆರಂಭದ ಶಿಲ್ಕು ರೂ. 41,940ರ ಕೊರತೆಯಿಂದ ಪ್ರಾರಂಭ ವಾಗುತ್ತದೆ. ವರ್ಷದ ಉತ್ಪತ್ತಿಯು ರೂ.10,63,100 ಕೊರತೆಯನ್ನು ಕಳೆಯಲಾಗಿ ಉಳಿದ ಜಮೆಯು ರೂ 10,21,500. ವರ್ಷದ ಒಟ್ಟು ವೆಚ್ಚವು ರೂ 10,91,510. ಈ ಪರಿಸ್ಥಿತಿಯಲ್ಲಿ ಬೋರ್ಡಿನ ಮುಂಗಡ ಪತ್ರವು ಕೂಡಾ ರೂ. 70,350 ರ ಕೊರತೆಯಿಂದಲೇ ಕೊನೆಗೊಂಡಿರುವುದು.

ಪತ್ರಿಕಾ ಪರಿಷತ್ತು—ಪ್ರಜಾಸಮಾಜವಾದಿ ಪಕ್ಷದ ರಾಷ್ಟ್ರೀಯ ಸಮಿತಿಯ ಸದಸ್ಯರಾದ ಶ್ರೀ ಕೆ. ಆರ್. ಕಾರಂತರು ಇದೇ ತಾ 6ರಲ್ಲು ಮಂಗಳೂರಿನ ಪತ್ರಿಕೋದ್ಯಮಿಗಳ ಸಭೆಯನ್ನು ಕರೆದು, ಅಲಹಾಬಾದಿನಲ್ಲಿ ಜರಗಿದ ರಾಷ್ಟ್ರೀಯ ಮಹಾ ಸಮ್ಮೇಳನವು ಸ್ವೀಕರಿಸಿದ ಧೋರಣೆಯ ನಿರ್ಣಯಗಳನ್ನು ವಿವರಿಸಿದರು. ಡಾ! ಕೆ. ನಾಗಪ್ಪ ಆಳ್ವರೂ ಸಭೆಯಲ್ಲಿ ಉಪಸ್ಥಿತರಿದ್ದರು.

ಜನ್ಮದಿನೋತ್ಸವ—ಸ್ವಾಮಿ ವಿವೇಕಾನಂದರ 93ನೆ ಜನ್ಮದಿನೋತ್ಸವವು ತಾ 2ರಲ್ಲು ಶ್ರೀ ರಾಮಕೃಷ್ಣ ಮಠದಲ್ಲಿ ಉಡುಪಿಯ ಎಮ್. ಜಿ. ಎಮ್. ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಮೈಸೂರಿನ ಶ್ರೀ ಕೆ. ವಿ. ರಾಘವಾಚಾರ್ಯ ಮೊದಲಾದವರು ಮಾತನಾಡಿದರು. ಶ್ರೀ ಸಿ. ಆರ್. ಪೂಂಜರು ಧನ್ಯವಾದಗಳನ್ನರ್ಪಿಸಿದರು.

ಅಪಘಾತ—ಇದೇ ತಾ 8ರಲ್ಲು ಬಿಜೈಯಲ್ಲಿರುವ ಶಿವರಾಜ್‌ಕಾರ್ ಬಂಗ್ಲೆಯಿಂದ ಮೋಟಾರ್ ಕಾರೊಂದು ಮುಖ್ಯ ಮಾರ್ಗಕ್ಕೆ ಬರುತ್ತಿದ್ದಂತೆಯೇ ಮಾರ್ಗಪಾಟಿ ತರಕಾರಿಗಾಗಿ ಮಗುಚಿ ಬಿದ್ದು, ನಜ್ಜುಗುಜ್ಜಾಯಿತೆಂದೂ, ಕಾರಿನಲ್ಲಿದ್ದವರಿಗೆ ಸಣ್ಣಪುಟ್ಟ ಗಾಯಗಳಾಗಿವೆ ಎಂದೂ ಹೇಳಲಾಗಿದೆ.

ನಗರ ಸಭೆಯು—ಇದೇ ತಾ 7ರಲ್ಲು ಸಂಜೆ ನಗರ ಸಭಾಧ್ಯಕ್ಷ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಮೊದಲನೇ ಭಾರತೀಯ ಕಾರ್ಡಿನಲ್‌ರಾದ ಪೂಜ್ಯ ವೆಲೆರಿಯನ್ ಕಾರ್ಡಿನಲ್ ಗ್ರೇಸಿಯಸರು ನಗರಕ್ಕೆ ಭೆಟ್ಟಿ ಕೊಡುವ ಸಮಯದಲ್ಲಿ ಅವರಿಗೊಂದು ಮಾನ ಪತ್ರ ನೀಡಬೇಕೆಂಬ ಶ್ರೀ ಕ್ರಿಶ್ಚಿಯನ್ ಕಾರ್ಯಪ್ಪನವರ ಸೂಚನೆ ಮಂಜೂರು ಮಾಡಲಾಯಿತು. ಶ್ರೀಗಳಾದ ಎಮ್. ರಮಾನಾಥ, ಪಾಮನ ಕೊಡಿಯಾಲಬೈಲ್ ಮತ್ತು ಎಮ್. ಎಸ್. ಪಯ್ಯಾಕರೆದು ವಿರೋಧ ವ್ಯಕ್ತ ಪಡಿಸಿದರು. ಶ್ರೀ ಗೋಪಾಲ ಸಾಲೆನ್ಸರು ಸಾಟಸ್ಥ್ಯ ವಹಿಸಿದ್ದರು. ಮಾನಪತ್ರದ ಸೂಚನೆ ಬಂದಾಗ ಶ್ರೀ ರಮಾನಾಥರು "ಉಡುಪಿಯ ಅಷ್ಟಮಠಗಳ ಸ್ವಾಮಿಗಳವರು ತಂತಮ್ಮ ಪರ್ಯಾಯ ಮುಗಿಸಿದ ನಂತರ ಈ ನಗರಕ್ಕೆ ಸಂದರ್ಶನವೀಯುವಾಗ ಅವರಿಗೂ ಮಾನಪತ್ರ ಸಮರ್ಪಿಸಬೇಕೆಂಬ ಅರ್ಥದಲ್ಲಿ ಒಂದು ತಿದ್ದುಪಡಿ ಸೂಚನೆ ಕೊಟ್ಟರು. ಆದರೆ ಅದು ಸರಿಯಾಗಿಲ್ಲವೆಂಬ ಕಾರಣದಿಂದ ಸಭಾಧ್ಯಕ್ಷರು ತಿದ್ದುಪಡಿಯನ್ನು ತಿರಸ್ಕರಿಸಿದರು.

ಕವಿ ಮುದ್ದಣ್ಣ ಜಯಂತಿ—ಸಮಾರಂಭವು ಗವರ್ನಮೆಂಟ್ ಕಾಲೇಜಿನಲ್ಲಿ ತಾ10ರಲ್ಲು ಶ್ರೀ ಸೇಡಿಯಾಪು ಕೃಷ್ಣ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಸೂರ್ಯನಾರಾಯಣ ಅಡಿಗರು ಸ್ವಾಗತ ಭಾಷಣ ಮಾಡಿದರು. ಆಲ್ ಇಂಡಿಯಾ ರೇಡಿಯೋ, ಧಾರವಾಡದ ಶ್ರೀ ಎನ್. ಕೆ. ಕುಲಕರ್ಣಿಯವರು ಕವಿ ಮುದ್ದಣ್ಣನ ಅಮರ ಸ್ಥಾನವನ್ನು ಅವರ ಕೃತಿಗಳನ್ನು ಉದಾಹರಿಸಿ ಭಾಷಣ ವಿತ್ತರು. ಆರಂಭದಲ್ಲಿ ಶ್ರೀ ಕೆ. ಕೆ. ಶೆಟ್ಟರು ಅತಿಥಿಗಳ ಪರಿಚಯ ಮಾಡಿಸಿದರು. ಸಭಾಂತ್ಯದಲ್ಲಿ ಶ್ರೀ. ಎಮ್. ಗಣೇಶ ರಾಯರು ಧನ್ಯವಾದ ಗಳನ್ನರ್ಪಿಸಿದರು.

ವ್ಯಾಸ ಕವಿ ಜಯಂತಿಯು—ಅದೇ ದಿನ ಸಂಜೆ ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಶ್ರೀ ಆದಿ ದೇವಾನಂದರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಟಿ. ಕೆ. ರಾಮಚಂದ್ರ ಐಯ್ಯರರು ಪ್ರಧಾನ ಉಪನ್ಯಾಸಕರಿದ್ದು ಶ್ರೀ ವ್ಯಾಸ ಮಹಾತ್ಮೆಯನ್ನು ವರ್ಣಿಸಿದರು. ಸಭಾರಂಭದಲ್ಲಿ ಶ್ರೀ ಟಿ. ಸಿ ಗಂಗಾಧರನ್ ನಾಯರರು ಸ್ವಾಗತ ಮಾತುಗಳನ್ನಾಡಿದರು. ಶ್ರೀ ಕರುಣಾಕರ ರಾಯರು ವಂದನೆಗಳನ್ನರ್ಪಿಸಿದರು.

ಭಾಷಣ—ಶ್ರೀಮತಿ ರೇಣುಚಕ್ರವರ್ತಿ, ಎಮ್. ಪಿ. ಅವರು ತಾ 10ರಂದು ಬೆಸೆಂಟ್ ಮಂದಿರದಲ್ಲಿ ಭಗಿನಿ ಸಮಾಜ ಮತ್ತು ಸ್ತ್ರೀ ಸೇವಾ ಸಮಿತಿಗಳ ಆಶ್ರಯದಲ್ಲಿ ಜರಗಿದ್ದ ಸ್ತ್ರೀಯರ ಸಭೆಯಲ್ಲಿ ಮಾತನಾಡುತ್ತಾ ಸ್ತ್ರೀಯರಿಗೂ ಆರ್ಥಿಕ ಸ್ವಾತಂತ್ರ್ಯ ಬೇಕೆಂದರು. ಶ್ರೀಮತಿ ಕಲ್ಯಾಣಿ ಬಿ. ಶೆಟ್ಟಿರು ಸ್ವಾಗತಮಾತುಗಳನ್ನಾಡಿದರು. ಶ್ರೀಮತಿ ರಾಧಾ ಶಾಸ್ತ್ರಿಯವರು ಧನ್ಯವಾದಗಳನ್ನರ್ಪಿಸಿದರು.

ಗೇರ ಬೀಜ ಮಜೂರರ ಸಭೆಯಲ್ಲಿ—ಶ್ರೀಮತಿ ರೇಣು ಚಕ್ರವರ್ತಿಯವರು ಭಾಷಣವೀಯುತ್ತಾ ಸ್ತ್ರೀ ಮಜೂರರು ಐಕ್ಯವಾಗಿ ಸುಸಂಘಟಿತರಾಗಬೇಕೆಂದು ಹೇಳಿ, ಕುಟುಂಬ ಯೋಜನೆಯನ್ನು ಬಲವಾಗಿ ಟೀಕಿಸಿ ತಾಯ್ತನದ ಹಕ್ಕನ್ನು ಕಸಿದು ಕೊಳ್ಳಲು ಬಿಡಬಾರದೆಂದು ಸೂಚಿಸಿದರು ಆರಂಭದಲ್ಲಿ ಶ್ರೀ ಎಮ್. ಎಚ್. ಕೃಷ್ಣಪ್ಪನವರು ಸ್ವಾಗತ ಬಯಸಿದರು. ಶ್ರೀ ಲಿಂಗಪ್ಪ ಸುವರ್ಣರು ವಂದನೆಗಳನ್ನರ್ಪಿಸಿದರು.

ಶಾಲಾ ವಾರ್ಷಿಕೋತ್ಸವ—ಮಂಗಳೂರು ಕೆನರಾ ಹ್ಯಾಸ್ಕೂಲಿನ ಉರ್ವ ಶಾಖೆಯ ವಾರ್ಷಿಕೋತ್ಸವವು ಇದೇ ತಾ 9ರಲ್ಲು ಡಾ! ಟಿ. ಮಾಧವ ಪೈಗಳವರ ಅಧ್ಯಕ್ಷತೆಯಲ್ಲಿ ಜಯಶೀಲವಾಗಿ ಜರಗಿತು. ಮರುದಿವಸ ಉತ್ಸವದ ಅಂಗವಾಗಿ ವಿವಿಧ ವಿನೋದಾವಳಿಗಳ ಪ್ರದರ್ಶನ ನಡೆಯಿತು.

ಜಿಲ್ಲಾ ರೈತರ ಸಮ್ಮೇಳನದ—ಪ್ರತಿನಿಧಿಗಳ ಸಭೆಯು ತಾ 10ರಲ್ಲು ಬೆಳಿಗ್ಗೆ ಆರ್ಯ ಸಮಾಜದ ಗೀತಾ ಮಂದಿರದಲ್ಲಿ ಶ್ರೀ ಬಿ. ಸಿ. ಕಕ್ಕಿಲ್ಲಾಯ, ಎಮ್. ಸಿ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಸ್ವಾಗತ ಸಮಿತಿ ಅಧ್ಯಕ್ಷ ಶ್ರೀ ಎ ಕೃಷ್ಣ ಶೆಟ್ಟರು ರೈತ ಸಂಘದ ವರದಿಯನ್ನೊಪ್ಪಿಸಿ ರೈತರ ಪರಿಸ್ಥಿತಿ ಮೊದಲಾದುವನ್ನು ವಿವರಿಸಿದರು. ಕಾರ್ಯದರ್ಶಿ ಶ್ರೀ ಎಮ್. ಎಚ್. ಕೃಷ್ಣಪ್ಪನವರು ಒಕ್ಕಲು ಮಸೂದೆಯ ಕರಡನ್ನು ವಿವರಿಸಿ ಗೇಣಿಯ ನಿಷ್ಕರ್ಷೆ ಮತ್ತು ಹಿಡುವಳಿಯ ಭದ್ರತೆಯು ಅಗತ್ಯವೆಂದು ಹೇಳಿದರು. ಡಾ! ಎಮ್. ಎಸ್. ಶಾಸ್ತ್ರಿಗಳು ಈಗಿನ ರೈತರ ಸಾಲ ಮಂಜೂರು ಮಸೂದೆ ಮತ್ತು ಒಕ್ಕಲು ಹಿತ ರಕ್ಷಣಾ ಮಸೂದೆಯನ್ನು ವಿವರಿಸಿ ಅದರಲ್ಲಿರುವ ಕೆಲವು ದೋಷಗಳನ್ನು ವಿವರಿಸಿದರು. ಸಭೆಗೆ ಜಿಲ್ಲೆಯಿಂದ ಸಾಧಾರಣ ನೂರು ಮಂದಿ ರೈತ ಪ್ರತಿನಿಧಿಗಳು ಬಂದಿದ್ದರು. ಕೊಡಗಿನಿಂದ ಕೆಲವು ಸೌಹಾರ್ದ ಪ್ರತಿನಿಧಿಗಳೂ ಆಗಮಿಸಿದ್ದರು.

ಭಾಷಣ—ಕಲ್ಲಿಕೋಟೆ ಸರಕಾರಿ ಮಿಷನ್ ಎಲ್ಲೆಯ ಕಾಲೇಜಿನಲ್ಲಿ ರಸಾಯನ ಶಾಸ್ತ್ರಜ್ಞರಾದ ಶ್ರೀ ಯು ಸುಂದರ ಶೆಣೈಯವರು ಇದೇ ತಾ 10ರಲ್ಲು ರೋಟರಿ ಕ್ಲಬ್ಬಿನಲ್ಲಿ ಮಾನವ ವೈಗಾರಿಕೆಯ ಕುರಿತು ಭಾಷಣವಿತ್ತರು. ಶ್ರೀ ಕೆ. ಸಿ. ಜನಾರ್ಧನ ಪ್ರಭುಗಳು ಅಧ್ಯಕ್ಷತೆ ವಹಿಸಿದ್ದರು.

ಪ್ರಚಾರ ಕಾರ್ಯ–ಶ್ರೀ ಶ್ರೀನಿವಾಸ ಮಲ್ಯ ಎಮ್. ಪಿ. ಶ್ರೀ ಕೆ. ಸದಾನಂದ ಹೆಗ್ಡೆ, ಎಮ್. ಪಿ, ಶ್ರೀ ಬಿ. ಆರ್. ಕರ್ಕೇರ, ಕಾರ್ಯದರ್ಶಿ, ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿ ಮತ್ತು ಶ್ರೀ ವಿ. ಎಸ್. ಕುಡ್ವರು ಇದೇ ತಾ 10ರಲ್ಲಿ ಪಣಂಬೂರು, ಸುರತ್ಕಲ್, ಮೂಲ್ಕಿ, ಪಡುಬಿದ್ರಿ, ಹೆಜಮಾಡಿ, ಕಾಪು, ಕಟ್ಟಾಡಿ ಮತ್ತು ಉಡುಪಿ. ಕೇಂದ್ರಗಳನ್ನು ಕಾಂಗ್ರೆಸ್ ಪ್ರಚಾರ ಕಾರ್ಯಾರ್ಥವಾಗಿ ದರ್ಶನವಿತ್ತರು.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 24 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

THE MOOLKY BANK LTD.
Moolky, S. K.

ಋತುಸ್ರಾವ ನಿಂತಿತು

"ಕುಮಾರಿ" ಬಿಲ್ಲೆಗಳನ್ನು ಉಪಯೋಗಿಸಿದರೆ ಪದತಪ್ಪಿ ಋತುಸ್ರಾವವಾಗುವುದು, ಹತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು. ಯಾವ ಬಾಧಕವೂ ಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ–ಬೆಲೆ: ರೂ. 3/–; ಸ್ಪೆಶ್ಯಲ್ ರೂ. 5–ಅಧಿಕಾಧಿಕ ಸ್ಪೆಶ್ಯಲ್ ರೂ. 8–[ವಿ. ಪಿ. ಹನ್ನೆರಡಾಣೆ ಪ್ರತ್ಯೇಕ]

Mrs. P. DEVEE, F.DS.(N.I.)
CALCUTTA. 40
ಸ್ಟಾಕಿಸ್ಟರು: ರಘಾಕಂಪೆನಿ, ಮಂಗಳೂರು.

ಖಾತ್ರಿ ಚಿನ್ನದ ನೆಕ್‌ಲೇಸ್ ತರಹವಾರು ಚೈನುಗಳು, ಬೆಂಡೋಲೆ,
ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು
ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,
ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.

ಫೋನು ನಂಬ್ರ 66

॥ ಕರಿಷ್ಯೆ ವಚನಂ ತವ ॥

ಆಯುರ್ವೇದಾಶ್ರಮ

[ಸ್ಥಾಪನೆ: 1933]

ಆಬಾಲವೃದ್ಧ, ಸ್ತ್ರೀಪುರುಷರ ವಿವಿಧ ರೋಗಗಳಿಗೂ, ವಿಶೇಷವಾಗಿ ಇಂದ್ರಿಯಗಳ ದೌರ್ಬಲ್ಯ, ಮಾಸಿಕ ವಿಕಾರಗಳು, ಗುಪ್ತ ರೋಗಗಳು, ನಪುಂಸಕತೆ, ಬಂಜೆತನ, ಚರ್ಮವ್ಯಾಧಿಗಳು, ಮುಂತಾದವುಗಳಿಗೆ ರಸ ರಸಾಯನಗಳಿಂದ ವಿಶೇಷ ರೀತಿಯ ಚಿಕಿತ್ಸೆ.
ಪ್ರಬಲವಾದ ವಾತರೋಗಗಳನ್ನು ಕದ್ರಿ ಗುಡ್ಡೆಯ ಮೇಲೆ (ವೈದ್ಯಾಶ್ರಮದ ಹತ್ತಿರ)

—ಪ್ರಶಾಂತ ಪ್ರದೇಶದಲ್ಲಿ ತೆರೆದಿರುವ—

—ಂ ಶುಶ್ರೂಷಾಲಯದಲ್ಲಿ ಂ—

ಪಂಚಕರ್ಮ, ಧಾರೆ ಮುಂತಾದ ವಿಶೇಷ ಚಿಕಿತ್ಸೆಗಳ ಸಹಾಯದಿಂದ ಚಿಕಿತ್ಸೆ ಮಾಡುವೆವು.
ಅತ್ಯಂತ ಆರೋಗ್ಯ ಪ್ರಯೋಗಗಳನ್ನು ಹಾವರಸ ಲಿಂಗಗಳ ಮೂಲಕ ಕೈಕೊಳ್ಳುವುದು.
ಪತ್ರ ವ್ಯವಹಾರ ಮಾಡಿ ವಿವರ ತಿಳಿಯುವದು.

ಕದ್ರಿ, ಮಂಗಳೂರು. } ಪ್ರಧಾನ ವೈದ್ಯರು: ಎಂ. ಎನ್. ಭಿಡೆ, ಆಯುರ್ವೇದ ಭಿಷಕ್.

ಓದ ತೊಡಗಿದರೆ ಪೂರ್ತಿ ಓದದೆ ಕೆಳಗಿಡಲಾಗದ, ವಿನೋದದೊಡನೆ ವಿಚಾರವನ್ನೂ ಕೆರಳಿಸುವ, ವಿವಿಧ ಕನ್ನಡ ಲೇಖಕರ ಓದಲೇ ಬೇಕಾದ ಕೆಲವು ಪುಸ್ತಕಗಳು.

ಅಂತರಂಗದ ಕತೆಗಳು ರೂ. 1 4 0
ಸೃಷ್ಟಿಯ ವಿವಿಧ ವೈಚಿತ್ರ್ಯಗಳನ್ನು ಚಿತ್ರಿಸುವ, ಕಥಾಸಂಗ್ರಹ.

ಪಂಚಕಜ್ಜಾಯ ರೂ 1 8 0
ಚೆಲುವಿನ ಐದು ನೀಳ್ಗತೆಗಳ ಸಂಗ್ರಹ.

ಅವಿಲು ರೂ. 2 0 0
ಸಾಹಿತ್ಯದ ಸರ್ವವಿಧದ ಸಂಗ್ರಹ.

ಹೆಂಗುಸರ ಕತೆಗಳು ರೂ 2 0 0
ಸ್ತ್ರೀಯರ ಚಿತ್ತವೃತ್ತಿಯನ್ನು ಚಿತ್ರಿಸುವ ಸ್ತ್ರೀಯರಿಂದಲೇ ಬರೆಯಲ್ಪಟ್ಟ ನೂತನ ಕತೆಗಳ ಸಂಗ್ರಹ.

ನಗೆನೋಟಗಳು ರೂ. 1 4 0
ವಿನೋದ ಚಿತ್ರಗಳ ಸಂಗ್ರಹ.

ಬಾಳಿನ ಬೆಡಗು ರೂ. 1 4 0
ಬಾಳಿನಬೆಡಗನ್ನು ಚೆನ್ನಾಗಿ ಬಣ್ಣಿಸುವ ನೂತನ ಕಾದಂಬರಿ.

ಧನದ ಬಿಂದಿಗೆ ಮತ್ತಿತರ ನಾಟಕಗಳು
ವಿವಿಧ ಲೇಖಕರ ಉತ್ತಮ ಏಕಾಂಕ ನಾಟಕಗಳು. ರೂ. 1 8 0

ಸುಲಭದಲ್ಲಿ ಇಂಗ್ಲಿಷ್ ರೂ. 1 8 0

ಮನೆ ಮದ್ದು ರೂ. 2 8 0

ಗೀತೆಯ ಕೈಗನ್ನಡಿ ರೂ. 0 12 0

ವಿವರವಾದ ಕೆಟಲಾಗಿಗೆ ಬರೆಯಿರಿ. ಪುಸ್ತಕ ವ್ಯಾಪಾರಿಗಳಿಗೆ ವಿಶೇಷ ಕಮಿಶನ್ ಇದೆ.
ನವಭಾರತ ಪುಸ್ತಕ ಭಂಡಾರ, ಉಡುಪಿ.

ಮುಂಬಯಿ ಏಜಂಟರು:– ಸ್ಟೂಡೆಂಟ್ಸ್ ಬುಕ್ ಡಿಪೋ, 6 E. ಸಿಟಿ ಸ್ಟ್ರೀಟ್, ಫೋರ್ಟ್, ಮುಂಬೈ.

ಬಡವರಿಗೆಂದು ಒಮ್ಮೆ
ಎಸ್. ಆರ್. ಬೀಡಿಯನ್ನು
ಬಳಸಿ ನೋಡಿರಿ.
ಅಂದರೆ ಇದು ಎಷ್ಟರ ಆದಷ್ಟೆ
ಎಂದೆಂದಿಗೂ ಕೊಂಡು
ಕೊಳ್ಳುವಿರಿ.

S.R. BEEDI
WORKS,
UDIPI, S.K.

ಎಲ್ಲಾ ಅಂಗಡಿಗಳಲ್ಲಿಯೂ ದೊರಕುತ್ತವೆ.

(೧ನೇ ಪುಟದಿಂದ)

ಗಳಿಗೆಯಲ್ಲಿ ನೆಹರೂರೊಬ್ಬರೇ ರಾಷ್ಟ್ರನೌಕೆಯ ಚುಕ್ಕಾಣಿ ಹಿಡಿದಿರುವರು. ಅಂಥ ನೆಹರೂ ಹೇಳಿದಂತೆ— ಕಾಂಗ್ರೆಸ್ಸಿಗರು ಈ ಹೊಣೆ ನಿರ್ವಹಿಸುವುದರಲ್ಲಿ ತಪ್ಪಿದರೆ ಗಳಿಸಿದ ಸ್ವಾತಂತ್ರ್ಯವು ದೇಶವನ್ನು ದಿಕ್ಕುಗೇಡಿಯಾಗಿ ಮಾಡುವ ಭಯವಿರುತ್ತದೆ. ಏಕೆಂದರೆ ಕಾಂಗ್ರೆಸೊಂದೇ ಪ್ರಕೃತ ದೇಶದ ಯೋಗಕ್ಷೇಮವನ್ನು ತಕ್ಕಮಟ್ಟಿಗಾದರೂ ನೋಡಿಕೊಳ್ಳಬಲ್ಲಷ್ಟು ಸಂಘಟನೆಯನ್ನು - ಪಡೆದಿದೆ. ಉಳಿದ ಯಾವ ರಾಜಕೀಯ ಪಕ್ಷವೂ ಕಾಂಗ್ರೆಸದಷ್ಟು ಪ್ರಾಬಲ್ಯಕ್ಕೆ ಬಂದಿಲ್ಲ. ಕಾಂಗ್ರೆಸು ತಪ್ಪು ದಾರಿ ಹಿಡಿಯುವುದೆಂದರೆ, ದೇಶವೇ ರಾಜಮಾರ್ಗ ಬಿಟ್ಟು ಕೊರಕಲಿಗೆ ಧುಮುಕಿದಂತೆ! "ಕಾಂಗ್ರೆಸು ಹೋದರೆ ಹೋಗಲಿ, ನಾವಿದ್ದೇವೆ" ಎಂದು ಬೇರೆ ಪಕ್ಷಗಳು ಬಾಯಿಯಿಂದ ಹೇಳಿದರೂ ಕಾಂಗ್ರೆಸಿನಂಥ ಪ್ರಬಲ ಸಂಸ್ಥೆಗೆ ನೀಗದ ಹೊಣೆಯನ್ನು ನಿನ್ನೆ ಮೊನ್ನೆಯ ಈ ರಾಜಕೀಯ ಕೂಸುಗಳಿಗೆ ಒಪ್ಪಿಸಿ ಕೊಡುವುದು ಯಾವ ವಿವೇಕಿಗಳೂ ಒಗ್ಗದ ಮಾತು.

ಆದುದರಿಂದಲೇ ಕಾಂಗ್ರೆಸು ಸಂಸ್ಥೆ ಉಳಿಯಲಿ, ಅದರ ಕಡೆಗೆ ಜನರ ಒಲವು ಬಲಿಯಲಿ, ಹಾಗೆ ಜನಾನುರಾಗ-ದೊರೆಯುವಂತೆ ಕಾಂಗ್ರೆಸ ಕಾರ್ಯಕರ್ತರು ದುಡಿಯಲಿ— ಎಂದು ಎಲ್ಲ ಹಿತೈಷಿಗಳೂ ಬಯಸುತ್ತಾರೆ. ಕಾಂಗ್ರೆಸು ಸಂಸ್ಥೆಯ ಕಡೆಗೆ ಉದಾಸೀನವಿದ್ದರೂ, ರಾಷ್ಟ್ರಕಲ್ಯಾಣದ ಕುರಿತು ಆಸ್ಥೆ ನಮಗಿದ್ದರೆ ಸಾಕು— ಕಾಂಗ್ರೆಸಕ್ಕೆ ಬೆಂಬಲ ಕೊಡುವ ನಿರ್ಣಯಕ್ಕೆ ನಾವು ಒಂದೇ ಬರಬೇಕಾಗುವುದು. ಕಾಂಗ್ರೆಸಿಗೆ ಉದಾಸೀನ ರೋಗ ಹಿಡಿದಿದೆಯೆಂಬುದರಿಂದ ಅದಕ್ಕೆ ಹಿತಚಿಂತಕರು ಉಪದೇಶದ ಔಷದೋಪಚಾರ ಮಾಡ ತಿಳಿಸಿರುವರು — ಈ ಸಹಾನುಭೂತಿಯಿಂದ, ಸಹಾಯ ಹಾಗೂ ಪ್ರೀತಿಯಿಂದ, ಚೇತನ ಸಂಪಾದಿಸಿ, ಲವಲವಿಕೆಯನ್ನು ತೋರಿಸಿ, ವಿಧಾಯಕ ಚಟುವಟಿಕೆಗಳಲ್ಲಿ ಕಾಂಗ್ರೆಸು ಸಂಸ್ಥೆಯ ಪ್ರತಿಯೊಬ್ಬ ಸದಸ್ಯನೂ ನಿರತನಾಗಬೇಕು. ತಿಳಿಸಿ ಹೇಳಿದರೂ ಕಾಂಗ್ರೆಸಿಗರಿಗೆ ವಿವೇಕ ಮೂಡದಿದ್ದ ಪಕ್ಷದಲ್ಲಿ ಅದಕ್ಕೆ ತನ್ನ ದುಃಸ್ವಾಳಿಗಳಿಂದ ತನ್ನನ್ನು ನಂಬಿದೆಲ್ಲರ ಭವಿಷ್ಯವನ್ನೆ ಹಾಳುಗೆಡವಿದ ಕುಲಾಂಗಾರನ ಉಪಮೆಯನ್ನು ಅನಿವಾರ್ಯವಾಗಿ ಕೊಡಬೇಕಾಗುವುದು. ತಾಯಿಯು ಏಕಮಾತ್ರ ಸುಪುತ್ರನಂತೆ ಭಾರತವನ್ನು ಏಕೀಕರಿಸುವ ಏಕಮೇವ ಘಟಕವಾಗಿ ಕಾಂಗ್ರೆಸು ನಮಗೆ ತೋರುತ್ತದೆ. ತನ್ನ ಮಗು ವಿನಶುಭ ಹಾರೈಸುವ ತಾಯಿಯಂತೆ ಕಾಂಗ್ರೆಸದ ಮೇಲಿನ ವ್ಯಾಜ ಪ್ರೀತಿ ಮಮತೆಗಳೇ ಈ ನೊಂದ ನುಡಿಗಳಿಗೆ ಪ್ರೇರಣೆಯನ್ನಿತ್ತಿವೆ. ಕಾಂಗ್ರೆಸಿಗರು ಇದರಿಂದ ಕುಪಿತರಾಗ ಕೂಡದು-ಬದಲು ತಪ್ಪು ತಿದ್ದಿಕೊಂಡು, ಜನತೆಯ ಹೃದಯ ಸಿಂಹಾಸನದಲ್ಲಿ ಪುನಃವಿರಾಜಮಾನರಾಗುವಂತೆ ಬೇಕು ಬೇಕಾದ ರೀತಿಯಲ್ಲಿ ಅಮೋಘ ಕಾರ್ಯಗಳನ್ನು ತೊಡಗಬೇಕು: ಕಷ್ಟಾರ್ಜಿತ ಸ್ವಾತಂತ್ರ್ಯಕ್ಕೊಂದು ಅರ್ಥವನ್ನೂ ನಿಸ್ವಾರ್ಥ ಸೇವೆಯ ಆದರ್ಶವನ್ನೂ ಭಾರತ ಭೂಮಿಯಲ್ಲಿ ಸ್ಥಿರಗೊಳಿಸಬೇಕು.

— ಕಾರ್ತಿಕೇಯ

ಒಕ್ಕಲೆಬ್ಬಿಸುವುದನ್ನು ತಡೆಗಟ್ಟುವ ಕ್ರಮ

(೨ನೇ ಪುಟದಿಂದ)

ಗಳೂ ತಮ್ಮೊಳಗಿನ ಸಂಬಂಧವನ್ನು ಸೌಹಾರ್ದಯುತವಾಗಿ ಮಾಡುವರೆಂದು ನಂಬುತ್ತೇನೆ. ಆದರೆ ಇವರ ನಡುವಣ ಸಂಬಂಧವು ಸುಖಮಯವಾಗಿ ಮುಂದರಿಯ ಬೇಕಾದರೆ ಯಾವುದೇ ವಿಷಯವನ್ನು ಅನಿಶ್ಚಿತ ಪರಿಸ್ಥಿತಿಯಲ್ಲಿ ಬಿಡದ ವ್ಯಾಪಕವಾದ ಶಾಸನ ಕ್ರಮವು ಅಗತ್ಯ. ಭೂಮಿಯ ಬೇಸಾಯ ಮಾಡುವವನನ್ನು ಭೂಮಿಯ ಮೇಲೆ ಅಧಿಕಾರವುಳ್ಳವನಾಗಿ ಮಾಡಬೇಕು— ಅಥವಾ ಭೂಮಾಲಿಕನೇ ಬೇಸಾಯಗಾರನಾಗಿ ಪರಿಣಮಿಸಬೇಕು. ಈ ಎರಡು ವಿಭಿನ್ನ ವರ್ಗಗಳು ಎಂದಿನವರೆಗೆ ಉಳಿಯುತ್ತವೋ, ಅಂದಿನ ವರೆಗೆ, ಭೂಸಮಸ್ಯೆಯು ಒಂದು ರಾಜಕೀಯ ಚದುರಂಗದಾಟವಾಗಿ ಪರಿಣಮಿಸುತ್ತದೆ. ರಾಷ್ಟ್ರ ಹಿತದಮೇಲೆ ಏನು ಪರಿಣಾಮವಾದೀತೆಂಬ ಕಡೆಗೆ ಗಮನವನ್ನು ಕೊಡದೆ ಪಕ್ಷ ಪಂಗಡಗಳೆಲ್ಲ ಈ ಆಟದಲ್ಲಿ ತನ್ಮಯವಾಗುತ್ತವೆ" ಎಂದು ಶ್ರೀ ಪೈಗಳು ಎಚ್ಚರಿಸಿದರು.

ನಿರಾಕೃತ ತಿದ್ದುಪಡಿಗಳು

ಸಾಮಾನ್ಯ ಚರ್ಚೆಯು ಮುಗಿದ ಮೇಲೆ ಮಸೂದೆಯ ಕಲಮುವಾರು ಪರಿಶೀಲನೆಯಲ್ಲಿ ಶಾಸನ ಸಭಾ ಸದಸ್ಯರು ಮಗ್ನರಾದರು. ಮೂರನೆಯ ಕಲಮು ಪ್ರಥಮದಲ್ಲಿ ಪರ್ಯಾಲೋಚಿಸಲ್ಪಟ್ಟಿತು. ಮಸೂದೆಯು ಕಾಯಿದೆಯಾಗಿ ಜಾರಿಗೆ ಬಂದ ಒಂದು ವರ್ಷದ ವರೆಗೆ, ಚಾಲ್ತಿ ಗೇಣಿಯನ್ನು ಸಂದಾಯ ಮಾಡಿದ ಒಕ್ಕಲುಗಳನ್ನು ಎಬ್ಬಿಸಬಾರದೆಂದು ಈ ಕಲಮು ಹೇಳುತ್ತದೆ. ಚಾಲ್ತಿ ಗೇಣಿಯನ್ನು ಪಾವತಿ ಮಾಡುವುದಕ್ಕೆ ಒಂದು ತಿಂಗಳ ಅವಧಿಯು ನಿರ್ಣಯಿಸಲ್ಪಟ್ಟಿದೆ. ಈ ಅವಧಿಯು ಸಾಲದೆಂದೂ ಮೂರು ತಿಂಗಳಿಗೆ ಇದನ್ನು ವಿಸ್ತರಿಸಬೇಕೆಂದೂ ಶ್ರೀ ಕೆ. ಆರ್. ವಿಶ್ವನಾಥನ್ನರು ಒಂದು ತಿದ್ದುಪಡಿ ಮಂಡಿಸಿದರು. ಶ್ರೀ ಟಿ. ಸಿ ನಾರಾಯಣ ನಂಬಿಯಾರರು ಇನ್ನೊಂದು ತಿದ್ದುಪಡಿಯ ಮೂಲಕ ಈ ಶಾಸನ ಕ್ರಮವು ೧೯೫೦ನೇ ಏಪ್ರಿಲು ೧ನೇ ದಿನಾಂಕದಿಂದ ಜ್ಯಾರಿಗೆ ಬರುವಂತಾಗಬೇಕೆಂದು ವಾದಿಸಿದರು. ಶ್ರೀ ಎಸ್. ಎಸ್. ಕೊಳ್ಕೆಬೈಲರು (ಬ್ರಹ್ಮಾವರ) ಚಾಲ್ತಿ ಗೇಣಿಯನ್ನು ಸಂದಾಯ ಮಾಡಬೇಕಿರುವ ಅವಧಿಯನ್ನು ಎರಡು ತಿಂಗಳಿಗೆ ವಿಸ್ತರಿಸಬೇಕೆಂದು ಹೇಳಿದರಲ್ಲದೆ, ಮಾರಾಟ ಮಾಡುವ ಅಥವಾ ಕೋರ್ಟು ಜಪ್ತಿ ಮುಂತಾದವುಗಳ ಮೂಲಕ ಮಾರಾಟವಾಗಲಿಕ್ಕೆ ಬಾಧ್ಯವಾದ ಭೂಮಿಯಲ್ಲಿರುವ ಒಕ್ಕಲುಗಳ ಹಿತರಕ್ಷಣೆ ಗೋಸ್ಕರ ಪ್ರತ್ಯೇಕ ಕಲವೊಂದನ್ನು ಮಸೂದೆಯಲ್ಲಿ ಸೇರಿಸಬೇಕು ಎಂದರು. ಶ್ರೀ ಎಸ್. ರಾಮಲಿಂಗಮರು ಒಕ್ಕಲು ಚಾಲ್ತಿಗೇಣಿಯನ್ನು ನಿರ್ದಿಷ್ಟ ಪಡಿಸಿದ ಅವಧಿಯೊಳಗೆ ಸಲ್ಲಿಸದಿದ್ದ ಪಕ್ಷದಲ್ಲಿ ತನ್ನಿಂದ ತಾನೇ ಒಕ್ಕಲೆಬ್ಬಿಸಲ್ಪಡುವಂತಾಗ ಕೂಡದೆಂದೂ ಭೂಮಾಲಿಕನು ಈ ವಿಷಯದಲ್ಲಿ ಮಾಡಿಕೊಂಡ ಅರ್ಜಿಯನ್ನು ವಿಚಾರಿಸಿದ ಮೇಲೆ ಕೋರ್ಟು ನೀಡುವ ಹುಕುಮಿನಂತೆ ಒಕ್ಕಲೆಬ್ಬಿಸುವ ಕ್ರಮ ನಡೆಯಬೇಕೆಂದೂ ಅಭಿಪ್ರಾಯ ಪಟ್ಟರು. ಈ ತಿದ್ದುಪಡಿಗಳನ್ನೆಲ್ಲ ಚರ್ಚಿಸುವಾಗ, ಮುಖ್ಯ ಮಂತ್ರಿ ರಾಜಾಜಿಯವರು ವಿಷಯವನ್ನು ಅಗತ್ಯವಿದ್ದುದಕ್ಕಿಂತ ಅಧಿಕ ಜಟಿಲಗೊಳಿಸಬಾರದೆಂದು ವಿನಂತಿಸಿದರು. ಇಡೀ ರಾಜ್ಯಕ್ಕೆ ಈ ಶಾಸನ ಕ್ರಮವನ್ನು ವಿಸ್ತರಿಸುವ, ಒಂದು ಜಿಲ್ಲೆಯಲ್ಲಿ ಒಕ್ಕಲಿಗ ಮತ್ತು ಇನ್ನೊಂದು ಜಿಲ್ಲೆಯಲ್ಲಿ ಧನಿ ಇರುವಾಗ ಪರಿಸ್ಥಿತಿ ಹೇಗಿರುತ್ತದೆನ್ನುವ, ಹಿಂದೆ ಒಕ್ಕಲೆಬ್ಬಿಸಲ್ಪಟ್ಟವರಿಗೂ ಸಂರಕ್ಷಣೆ ಕೊಡಬೇಕೆಂದು ಹೇಳುವ ಮಾತುಗಳು ಪ್ರಶ್ನೆಯನ್ನು ಗಡಚಾಗಿಸುತ್ತವೆ. ಮಲಬಾರಿನಷ್ಟು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಿರುಕುಳಗಳು ಇಲ್ಲವೆಂದು ಭಾವಿಸಬಹುದು. "ಏಕೆಂದರೆ ಸದಸ್ಯರಿಂದ ನಮಗೆ ತಿಳಿದು ಬಂದ ಸಂಗತಿ, ಅನುಭವ ಮತ್ತು ಸೂಚನೆಗಳ ಮೇಲಿಂದ ಅಲ್ಲಿ ಸಂಗತಿಗಳು ನಯವಾಗಿರುತ್ತವೆ. ಕಾರಣ— ವಾಸ್ತವದಲ್ಲಿದ್ದುದಕ್ಕಿಂತಲೂ ಗಡುಚಾದ ವಿಷಯಗಳು ಇರಬಹುದೆಂದು ಊಹಿಸುವುದು ತೀರ ಅನಗತ್ಯ."

ಮಸೂದೆಯ ಅಂಗೀಕಾರ

ಮಂತ್ರಿ ಮಾಣಿಕ್ಯವೇಲು ನಾಯಕ್ಕರರು ಇತರ ಜಿಲ್ಲೆಗಳಲ್ಲಿ ಇರುವ ತೊಂದರೆಗಳು ಈ ಮಸೂದೆಯ ಕಕ್ಷೆಯಲ್ಲಿ ಬರುವುದಿಲ್ಲೆಂದು ಹೇಳಿದರು. "ದಕ್ಷಿಣ ಕನ್ನಡ ಜಿಲ್ಲೆಯ ಪ್ರತಿನಿಧಿಗಳು ಒಟ್ಟುಸೇರಿ ಈ ಮಸೂದೆಯನ್ನು ಪರಿಶೀಲಿಸಿ, ಇದು ತೃಪ್ತಿಕರವಿದೆಯೆಂದು ಅಭಿಪ್ರಾಯ ವ್ಯಕ್ತಗೊಳಿಸಿರುವರು. ಚಾಲ್ತಿ ಗೇಣಿಯ ಅವಧಿಯನ್ನು ಒಂದು ತಿಂಗಳಿಂದ ಮೂರು ತಿಂಗಳಿಗೆ ವಿಸ್ತರಿಸುವುದು ಶಕ್ಯವಿಲ್ಲ. ಏಕೆಂದರೆ ಮಸೂದೆಯ ಅವಧಿಯೇ ಒಂದು ವರ್ಷವಿರುತ್ತದೆ ಚಾಲ್ತಿಗೇಣಿಯನ್ನು ಮಾತ್ರ ಸಂದಾಯ ಮಾಡಿದರೆ ಸಾಕೆಂದು ಮಸೂದೆಯು ವಿಧಿಸುವುದರಿಂದ ರೈತರಿಗೆ ಕಷ್ಟವಾಗಲಾರದು. ಬೇರೆ ಸಂಗತಿಗಳು ಮುಂಬರುವ ವ್ಯಾಪಕವಾದ ಭೂಸುಧಾರಣಾ ಮಸೂದೆಯಲ್ಲಿ ಅಡಕವಾಗುತ್ತವೆ" ಎಂದರು. ಮುಂದೆಯಾವುದೇ ತಿದ್ದುಪಡಿ ಇಲ್ಲದೆ ಈ ಕಲಮು ಅಂಗೀಕರಿಸಲ್ಪಟ್ಟಿತು. ಇಷ್ಟರಲ್ಲಿ ಶ್ರೀ ಕೊಳ್ಕೆಬೈಲರು ಇನ್ನೊಂದು ತಿದ್ದುಪಡಿ ಮಂಡಿಸಿ ಕೋರ್ಟುಗಳಲ್ಲಿ ಒಕ್ಕಲೆಬ್ಬಿಸುವಉದ್ದೇಶದಿಂದ ಈಗ ವಿಚಾರಣಾಧೀನವಾಗಿರುವ ಎಲ್ಲ ದಾವೆಗಳನ್ನು ಸ್ಥಗಿತಗೊಳಿಸಬೇಕೆಂದು ಸೂಚಿಸಿದರು. ಅದಕ್ಕೆ ಮಂತ್ರಿಗಳು "ಒಕ್ಕಲೆಬ್ಬಿಸುವುದನ್ನು ನಿಲ್ಲಿಸುವುದಕ್ಕೋಸ್ಕರವೇ ಈ ಮಸೂದೆ ಇರುತ್ತದೆ' ಎಂದು ಉತ್ತರಿಸಿದ್ದರಿಂದ ತಿದ್ದುಪಡಿ ಬಿದ್ದು ಹೋಯಿತು ಮುಂದೆ ಉಳಿದ ಕಲಮುಗಳು ಇಲ್ಲದೆ ಸ್ವೀಕಾರಗೊಂಡವು. ಶ್ರೀ ಕೆ ಬಿ. ಮೆನೊನ್ನರು ಈ ಬಳಿಕ ಮಾತನಾಡುತ್ತಾ ಸರಕಾರದವರು ದೌರ್ಬಲ್ಯ ವಶರಾಗಿ ಈ ಕ್ರಮವನ್ನು ಕೈಗೊಂಡರೆಂದು ಆರೋಪಿಸಿದರು. "ದಕ್ಷಿಣ ಕನ್ನಡಕ್ಕೆ ಈ ಮಸೂದೆ ಎಂದೋ ಅಗತ್ಯವಿದ್ದಿತು. ಇಷ್ಟು ಕಾಲದ ವರೆಗೆ ಆ ಬೇಡಿಕೆಯು ಪುರಸ್ಕರಿಸಲ್ಪಟ್ಟಿತು" ಎಂದವರು ಹೇಳಿದರು ಮಸೂದೆಯ ತೃತೀಯ ವಾಚನ ಕಾಲಕ್ಕೆ ಶ್ರೀ ರಾಜಾಜಿಯವರು ಮಾತನಾಡುತ್ತ ಈಗ ಸೌಹಾರ್ದಯುತರಾಗಿರುವ ಭೂಮಾಲಿಕ ಹಾಗೂ ಒಕ್ಕಲುಗಳ ಸಂಬಂಧವು ಮುಂದಕ್ಕೂ ಚೆನ್ನಾಗಿರುವುದೆಂದು ಆಶಿಸಿದರು. "ದಕ್ಷಿಣ ಕನ್ನಡದಲ್ಲಿ ಪರಸ್ಪರ ತಿಳಿವಳಿಕೆಯೂ ಒಬ್ಬರನ್ನೊಬ್ಬರ ಸುಖಕಷ್ಟಗಳನ್ನು ಗ್ರಹಿಸುವ ಸಾಮರ್ಥ್ಯವೂ ಇದೆ. ದಕ್ಷಿಣ ಕನ್ನಡದಲ್ಲಿ ಉತ್ತಮವಾದ ಈ ಪರಿಸ್ಥಿತಿಯೇ ಮುಂದುವರಿಯಲೆಂದು ಹಾರೈಸುತ್ತೇನೆ" ಎಂದು ರಾಜಾಜಿ ನುಡಿದರು.

ಚ್ಯವನಪ್ರಾಶ

ಹಿಮಾಲಯದ ಉತ್ಕೃಷ್ಟ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಚ್ಯವನಪ್ರಾಶವು ಕ್ಷಯ, ದುರ್ಬಲತೆ ಇತ್ಯಾದಿ ಕಾಹಿಲೆಗಳಿಗೆ ದಿವ್ಯಾಷಧಿ. ವಯೋವೃದ್ಧರಿಗೆ ವಿಶೇಷ ಪರಿಣಾಮಕಾರಿಯಾದುದು. ಎಳೆ ಮಕ್ಕಳನ್ನೂ ಗಟ್ಟಿಮುಟ್ಟಾಗಿಯೂ ಆರೋಗ್ಯವಂತರಾಗಿಯೂ ಇರಗೊಡಿಸುವುದು. ಚ್ಯವನಪ್ರಾಶವನ್ನು ಸತತ ಉಪಯೋಗಿಸುವುದರಿಂದ ಆಯುಸ್ಸು ವೃದ್ಧಿಯಾಗುವುದು. ಪರೀಕ್ಷಾರ್ಥವಾಗಿ ಕೆಳಗಿನ ವಿಳಾಸಕ್ಕೆ ಬರೆದು ಒಮ್ಮೆ ತರಿಸಿ ನೋಡಿರಿ. ಸೇರಿಗೆ ರೂಪಾಯಿ 10/- ಬೆಲೆ.

ಕಾಲಿಕಮಾಲಿ ಆಯುರ್ವೇದ ಫಾರ್ಮಸಿ, ಋಷಿಕೇಶ (ಡೆಹರಾದನ್)

Kali Kamali Ayurved Pharmacy, RISHIKESH (Dehradun.)

ಪ್ರಕಟಣೆ

ಉಡುಪಿ ಶ್ರೀ ಶೀರೂರು ಮಠದ ಆಫೀಸು.

ಉಡುಪಿ ಶ್ರೀ ಶೀರೂರು ಮಠದ ಮೂಲಿಹಕ್ಕಿನ ಬಾಬ್ತು ಉಡ್ಪಿ ತಾಲೂಕು No. 80ನೇ ಬಡಗಬೆಟ್ಟು ಗ್ರಾಮದ ಕಬಿಯಾಡಿಯಲ್ಲಿರುವ ಈ ಕೆಳಗೆ ವಿವರಿಸಿದ, ಸರ್ವೆ ನಂಬರುಗಳಲ್ಲಿ ಇರುವ ಕಟ್ಟಿಗೆಗೆ ಉಪಯೋಗವಾಗುವ ಮರಗಳನ್ನು ತಾ. 30-1-1954ರಲ್ಲು, ಸಾಯಂಕಾಲ ಗಂಟೆ 3ಕ್ಕೆ ಶ್ರೀ ಉಡ್ಪಿ ಶೀರೂರು ಮಠದ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು

ಅಗತ್ಯ ಉಳ್ಳವರು ಆ ದಿವಸ ಹಾಜರಾಗಬೇಕಾಗಿ ತಿಳಿಸೋಣಾಗುತ್ತದೆ. ಏಲಮಿನ ಶರ್ತಗಳನ್ನು ಉಡ್ಪಿ ಮಠದ ಆಫೀಸಿನಿಂದ ತಿಳಿದುಕೊಳ್ಳಬಹುದು.

ಸರ್ವೆ ನಂಬ್ರ	ಸ. ಡಿ.	ವಿಸ್ತೀರ್ಣ.
16	2 ಪೈಕಿ	1—62
158	2	7— 7
156	—	6—89
90	1	4—46
,,	2	0—72
		20-76

ಮೊಕ್ಕಾಂ: ಉಡ್ಪಿ
ತಾ. 8-1-1954.

ಕೆ. ರಾಮಚಂದ್ರ ಉಪಾಧ್ಯ,
ಏಜಂಟ್ ಶ್ರೀ ಶೀರೂರು ಮಠ, ಉಡುಪಿ.

ಸ್ವೀಕಾರ—ವಿಮರ್ಶೆ

ಅವ್ಯಕ್ತ ಮಾನವ—

ಗ್ರಂಥಕರ್ತರು: ಡಾ| ಅಲೆಕ್ಸಿಸ್ ಕೆರೆಲ್. ಅನುವಾದಕರು: ಉ. ಲಕ್ಷ್ಮೀನಾರಾಯಣಾಚಾರ್ಯ ಮತ್ತು ಕು. ಶಿ. ಹರಿದಾಸ ಭಟ್ಟರು. ಪ್ರಕಾಶಕರು: ಮದ್ರಾಸು ವಿಶ್ವ ವಿದ್ಯಾನಿಲಯ, ಮದ್ರಾಸು. ಬೆಲೆ ಆರು ರೂಪಾಯಿ.

ವೈಜ್ಞಾನಿಕ ವಿಷಯಗಳ ಮೇಲೆ ಶಾಸ್ತ್ರೀಯವಾದ ಗ್ರಂಥಗಳ ಕೊರತೆ ಕನ್ನಡದಲ್ಲಿ ತುಂಬ ಬಾರವಷ್ಟು ಇದೆಯೆಂದು ಕೊರಗುತ್ತಿರುವ ಗಳಿಗೆಯಲ್ಲಿ "ಭಟ್ಟಾಚಾರ್ಯ"ರಿಂದ ಅನುವಾದಿಸಲ್ಪಟ್ಟ ಡಾ. ಅಲೆಕ್ಸಿಸ್ ಕೆರೆಲರ ಈ ಉದ್ಗ್ರಂಥ ಕನ್ನಡ ಸಾಹಿತ್ಯ ಭಂಡಾರಕ್ಕೆ ಮಹಾ ಕಾಣಿಕೆಯ ರೂಪದಲ್ಲಿ ಬಂದಿರುತ್ತದೆ. ಕೆರೆಲರು ಆಂಗ್ಲ ಭಾಷೆಯಲ್ಲಿ "Man, the Unknown" ಎಂಬ ಹೆಸರಿನಲ್ಲಿ ಬರೆದ ಈ ಉದ್ಗ್ರಂಥವನ್ನು ಕನ್ನಡಕ್ಕೆ ತರಲು ಮದ್ರಾಸು ವಿಶ್ವ ವಿದ್ಯಾನಿಲಯದವರು ಆಶಿಸಿದುದರ ಫಲವಾಗಿ ಈ ಪುಸ್ತಕ ಪ್ರಕಟಗೊಂಡಿದೆ. ಮೂಲದ ಭಾಷೆ ಸರಳವಾಗಿಲ್ಲ; ಸುಲಭಗ್ರಾಹ್ಯವೂ ಆಗಿಲ್ಲ; ವಿಷಯ ಕೂಡ ಘನವಾದ ವೈದ್ಯ ಹಾಗೂ ಮಾನಸ ಶಾಸ್ತ್ರಗಳೇ ಜೀವಾಳವಾಗಿರುವ ವಿಜ್ಞಾನ. ಅಂಥದನ್ನು ಕನ್ನಡದ ಓದುಗರ ಮನಸ್ಸಿಗೆ ಹಿಡಿಯುವಂತೆ ಲಲಿತವಾಗಿಯೂ, ಕನ್ನಡದ ಶೈಲಿ ಮತ್ತು ನುಡಿಕಟ್ಟುಗಳ ಮಹತ್ವ ತಗ್ಗದಂತೆಯೂ ಮೂಲದ ಪರಿಮಾರ್ಜಿತವೂ ಉತ್ತುಂಗವೂ ನಿಕಟವೂ ನಿಕೃಷ್ಟವೂ ಆದ ಶೈಲಿಯ ಗುರುತ್ವಕ್ಕೆ ಅನ್ಯಾಯವಾಗದಂತೆಯೂ ಅರ್ಥ ಗೌರವಕ್ಕೆ ಎಲ್ಲಿಯೂ ಚ್ಯುತಿ ಇಲ್ಲದಂತೆಯೂ ಅನುವಾದ ಕಾರ್ಯವನ್ನು ಮಾಡುವುದು ಸಾಮಾನ್ಯರಿಗೆ ಸರ್ವಥಾ ಸೀಗದ ಕೆಲಸ. ಭಟ್ಟಾಚಾರ್ಯರು ಪ್ರಜ್ಞೆಯಿಂದಲೂ ಪರಿಶ್ರಮದಿಂದಲೂ ಸಂಯಮದಿಂದಲೂ ಈ ಕೆಲಸವನ್ನು ಅತ್ಯಂತ ಯಶಸ್ವಿಯಾಗಿಯೂ ತುಂಬ ಚೊಕ್ಕವಾಗಿಯೂ ನಿರ್ವಹಿಸಿರುವುದಕ್ಕೆ ನಾವು ಅವರನ್ನು ಅಭಿನಂದಿಸುತ್ತೇವೆ.

ಕೆರೆಲರು ಪ್ರಪಂಚದಲ್ಲಿ ಸದ್ಯ ಪ್ರಚಲಿತವಾಗಿರುವ ಎಲ್ಲ ವಿಜ್ಞಾನಗಳ ಸಾರವನ್ನೂ ಭಟ್ಟಿ ಇಳಿಸಿ ಮಾನವ ವಿಜ್ಞಾನವೆಂಬೊಂದು ಸಮನ್ವಯವನ್ನು ನಿರ್ಮಿಸುವ ಪ್ರಯತ್ನವನ್ನು ಇಲ್ಲಿ ಮಾಡಿರುವರು; ಮತ್ತು ತಮ್ಮ ಉದ್ದೇಶ ಸಾಧನೆಯಲ್ಲಿ ಅವರು ಸಂಪೂರ್ಣ ಜಯಶೀಲತೆಯನ್ನೂ ಗಳಿಸಿರುವರೆಂದರೆ ಅತಿಶಯೋಕ್ತಿಯಾಗದು. ಔದ್ಯೋಗೀಕರಣದ ತಳಹದಿಯ ಮೇಲೆ ಅನೇಕ ಮುಖವಾಗಿ ಬೆಳೆದು ಬಂದ, ಜನಜೀವನದಲ್ಲಿ ನಾನಾ ತೆರನಾಗಿ ವ್ಯಾಪಿಸಿಕೊಂಡ, ವಿಜ್ಞಾನವು ಮಾನವನನ್ನು ಅಖಂಡ ಘಟಕವಾಗಿ ಪರಿಗಣಿಸುವುದನ್ನು ಮರೆಯಿತು—ಮಾನವನ ಕುರಿತಾದ ಜ್ಞಾನವನ್ನು ಪ್ರತ್ಯ ಪ್ರತ್ಯೇಕವಾಗಿ ಕೂಡಿಟ್ಟು, ಮನುಷ್ಯನ ಕುರಿತಾದ ತಿಳುವಳಿಕೆಯನ್ನು ಆಯಾ ವಿಶಿಷ್ಟ ವಿಜ್ಞಾನ ಶಾಖೆಗೆ ಸೀಮಿತ ಗೊಳಿಸಿತು. ಮನುಷ್ಯನ ಬಗ್ಗೆ ಸಂಗ್ರಹವಾದ ಈ ಅಪಾರ ಜ್ಞಾನ ರಾಶಿಯಲ್ಲಿ ಆಯ್ದು, ಅಚ್ಚುಕಟ್ಟಾಗಿ, ಸಮುದಿತವಾಗಿ ಕ್ರೋಢೀಕರಿಸುವ ಯತ್ನವೊಂದು ನಡೆದಿದ್ದರೆ—ಎಂದೆನಿಸುತ್ತಿದ್ದ ಗಳಿಗೆಯಲ್ಲಿ ಕೆರೆಲರ ಈ ಪುಸ್ತಕ ಪ್ರಕಟಗೊಂಡು ಪ್ರೀತಿಯ ಸ್ವಾಗತವನ್ನು ಪಡೆಯಿತು. ಇಲ್ಲಿ ಕ್ರೋಢೀಕರಿಸಿದ ತತ್ವಗಳಲ್ಲಿ ಪ್ರತಿಯೊಂದೂ ವಿಜ್ಞಾನಿಗಳು ಆಯುಷ್ಯವೆಲ್ಲ ಕೆಲಸ ಮಾಡಿ ಪ್ರಕಟಿಸಿದ ಸಂಶೋಧನೆಯ ಆಧಾರದ ಮೇಲೆ ನಿಂತಿರುತ್ತದೆ; ಪ್ರತಿಯೊಂದು ವಾಕ್ಯವೂ ಪ್ರಮಾಣ ರೂಪದಲ್ಲಿಯೇ ಬರೆಯಲ್ಪಟ್ಟಿದೆ. ಹೀಗಿದ್ದರೂ ಪಂಡಿತ ಪಾಮರರಿಗೂ ಮನವರಿಕೆಯಾಗುವಂತೆ ಮುನ್ನೂರು ಪುಟಗಳ ಮಿತಿಯಲ್ಲಿ ಮಾನವ-ವಿಜ್ಞಾನದ ಬಗ್ಗೆ ಸಮಗ್ರವಾದ ಚಿತ್ರವೊಂದನ್ನು ಕೊಟ್ಟಿರುವುದು ಲೇಖಕರ ಸಾಮರ್ಥ್ಯದ ದ್ಯೋತಕ.

ಜಡವನ್ನು ಪ್ರಪಂಚದ ಕಡೆಗೆಯೇ ಹೆಚ್ಚು ಲಕ್ಷ್ಯ ಪೂರೈಸುವಂತೆ ಕಾಣುವ ಮನುಷ್ಯನನ್ನು ನಾವು ಸಮನ್ವಯ ದೃಷ್ಟಿಯಿಂದ ನೋಡಬೇಕಾದ, ಮತ್ತು ತನ್ಮೂಲಕ ಮನುಷ್ಯನು ತನ್ನನ್ನು ಕುರಿತ ಜ್ಞಾನವನ್ನೆ ಸಮರ್ಪಕವಾಗಿ ಅಭ್ಯಸಿಸಿ, ಶಾರೀರಿಕ, ಮಾನಸಿಕ ಕೊರತೆಗಳನ್ನು ತೊಲಗಿಸುವ ಸನ್ನಿವೇಶಗಳನ್ನು ರಚಿಸಬೇಕಾದ ಆವಶ್ಯಕತೆಯು ಪೀಠಿಕಾ ರೂಪದ ಪ್ರಥಮಾಧ್ಯಾಯದಲ್ಲಿ ಸ್ಪಷ್ಟವಾಗಿ ಸ್ಫುಟವಾದ ಮಾತುಗಳಲ್ಲಿ ವರ್ಣಿಸಲ್ಪಟ್ಟಿದೆ. "ಮಾನವ ಜ್ಞಾನ-ವಿಜ್ಞಾನ" ಎಂಬ ಎರಡನೇ ಅಧ್ಯಾಯದಲ್ಲಿ "ಆಧೀನ ತಜ್ಞತೆಯಿಂದ ಅಥವಾ ಪ್ರಯೋಗಗಳ ಅವಸರದಲ್ಲಿ ಮಾನವನ ಅಖಂಡತೆಯನ್ನು ಮರೆಯುವುದರಿಂದ ದೊಡ್ಡ ಪ್ರಮಾದವೇ ಆಗುತ್ತದೆ. ಏನೆಂದರೆ ಆ ಭಾಗವನ್ನು ಮರೆತು ಬಿಡುವುದರಿಂದ ಪ್ರತಿ ಉಳಿದ ಭಾಗವೂ ತನ್ನಂತೆಯೇ ಮುಂದುವರಿಯುವುದಿಲ್ಲದೆ ಮಾನವ ವಿಜ್ಞಾನದ ನಿರ್ಮಾಣಕ್ಕಾಗಿ ಬೆಳೆಯುವುದಿಲ್ಲ" ಎಂದು ಹೇಳಿ, ಅಖಂಡ ಮಾನವನನ್ನು ಅರಿಯುವ ಹೊಸ ವಿಜ್ಞಾನ ಹಾದಿ ಕೊಳ್ಳಬೇಕಾದ ಕ್ರಮಗಳು ವಿವರಿಸಲ್ಪಟ್ಟಿವೆ. ಮನುಷ್ಯನ ಶರೀರ ಮತ್ತು ಶಾರೀರಿಕ ಚಟುವಟಿಕೆಗಳು ಮೂರನೆಯ ಅಧ್ಯಾಯದಲ್ಲಿ ಚೊಕ್ಕವಾಗಿ ವಿವರಿಸಲ್ಪಟ್ಟಿವೆ. ದೇಹದ ಅಂಗಾಂಗವೂ ಒಂದು ಇನ್ನೊಂದರೊಡನೆ ಸಂಪೂರ್ಣ ಹೊಂದಿಕೊಂಡಿದೆಯೆಂಬುದನ್ನೂ ದೇಹದಿಂದ ಸ್ವತಂತ್ರವಾದ ಅಸ್ತಿತ್ವ ಇವುಗಳಲ್ಲಿ ಯಾವುದಕ್ಕೂ ಇಲ್ಲವೆಂಬುದನ್ನೂ ಇಲ್ಲಿ ಎತ್ತಿ ಹೇಳಿರುವರು. ಅದರಂತೆ ಗಂಡಸು ಹೆಂಗಸರಲ್ಲಿ ಮೂಲತಃ ವ್ಯತ್ಯಾಸವಿರುತ್ತದೆಂದು ಹೇಳಿ "ಈ ಸತ್ಯವನ್ನು ಉಪೇಕ್ಷಿಸಿ ಕಳೆದ ಮತ್ತು ಈ ಶತಮಾನದ ಹಲವಾರು ಶಿಕ್ಷಣ ತಜ್ಞರೂ ಅಧ್ಯಯನ ಶಾಸ್ತ್ರಜ್ಞರೂ ಸ್ತ್ರೀಪಕ್ಷಪಾತಿಗಳೂ ಗಂಡಸು ಹೆಂಗಸರಲ್ಲಿ ವಿಶೇಷ ವ್ಯತ್ಯಾಸವಿಲ್ಲೆಂದೂ ಅವರಲ್ಲಿ ಸಮಾನತ್ವವಿದೆಯೆಂದೂ ಆದ್ದರಿಂದಲೇ ಇಬ್ಬರಿಗೂ ಸಮಾನ ವಿದ್ಯೆ ಹಕ್ಕು ಬಾಧ್ಯತೆಗಳನ್ನು ಕೊಡಬಹುದೆಂದೂ ವಾದಿಸುತ್ತಿದ್ದಾರೆ. ಆದರೆ ನಿಜ ಸ್ಥಿತಿಗನುಸಾರವಾಗಿ ತನ್ನ ಪ್ರಕೃತಿ, ಕಣಜಾಲ ಮತ್ತು ಅಂಗಗಳಲ್ಲಿ ಹೆಂಗಸು ಗಂಡಸಿನಿಂತ ಪ್ರತ್ಯೇಕ ರಚನೆ ಮತ್ತು ಧರ್ಮಗಳನ್ನು ತೋರುತ್ತಿದ್ದಾಳೆ" ಎಂದು ಎಚ್ಚರಿಸಿರುವರು. ನಾಲ್ಕನೆಯ ಅಧ್ಯಾಯ ಮಾನಸಿಕ ಚಟುವಟಿಕೆಗಳಿಗೆ ಮೀಸಲಾಗಿದೆ - ಪ್ರತಿಯೊಂದು ಚಟುವಟಿಕೆಗಳಿಗೂ ಕಾಯಿಕ ಹಾಗೂ ಮಾನಸಿಕ ಪರಿಶ್ರಮಗಳು ಬೇಕಾಗಿವೆಯೆಂದೂ ಪರಿಪೂರ್ಣವಾದ ಜ್ಞಾನಾರ್ಜನೆಗೆ ಕಠಿಣ ಶ್ರಮವೂ ದೀರ್ಘ ಅಭ್ಯಾಸವೂ ಸತತ ಧ್ಯಾನವೂ ಮನೋನಿಯತಿಯೂ ಇರಬೇಕೆಂದೂ ಹೇಳಿರುವರು. ಉತ್ತಮವಾದ ಬೌದ್ಧಿಕ, ನೈತಿಕ ಮತ್ತು ದೈಹಿಕ ವ್ಯಾಪಾರಗಳನ್ನು ಪ್ರದರ್ಶಿಸುವ ಜನರೇ ನಮ್ಮ ಜನಾಂಗದಲ್ಲಿ ಶ್ರೇಷ್ಠರೆನಿಸುವರಾದ್ದರಿಂದ ಈ ಮೂರೂ ಚಟುವಟಿಕೆಗಳ ಸಮನ್ವಯಕ್ಕೆ ಮಹತ್ವ ಬಂದಿದೆ. "ಮಾನವನ ಆತ್ಮವೂ ದೇಹವೂ ಪೃಥಕ್ಕಾದ ಎರಡು ಪಿಂಡಗಳೆಂದು ಗ್ರಹಿಸಿಕೊಳ್ಳುವುದು ತಪ್ಪು. ಮನುಷ್ಯನ ಮಾನಸಿಕತೆಯನ್ನು ಯುಕ್ತ ಮಾನಸಿಕ, ಧಾರ್ಮಿಕ ಶಕ್ತಿಗಳೊಡನೆ ಹೊಂದಿಸಿದರೆ ಮಾತ್ರ ಅವನ ವ್ಯಕ್ತಿತ್ವ ಬೆಳಗುವುದು. ನಮ್ಮ ಮನೋವ್ಯಾಪಾರಗಳು ನಮ್ಮ ಮುಷ್ಟಿಷ್ಟವನ್ನೊ ಅಷ್ಟೆ ಇತರ ಇಂದ್ರಿಯಗಳನ್ನು ಮುಟ್ಟಿದೆ ಜೀವ ಸ್ರೋತಗಳನ್ನು ಹೊಂದಿರುತ್ತದೆ. ಇವುಗಳ ನಿರ್ವ್ಯಾಜವಾದ ಸಮರಸತ್ವ ಚೇತನ, ಸ್ಫುರಣೆ, ಪ್ರೇರಣೆಗಳಿಗೆ ಕಾರಣವಾಗುತ್ತವೆ." ದೈಹಿಕ ಹಾಗೂ ಮಾನಸಿಕ ವ್ಯಾಪಾರಗಳ ಪರಿಣಾಮವಾಗಿ ಮನುಷ್ಯನ ಅಂತರಿಕ ಸಮಯ ರೂಪಿಸಲ್ಪಟ್ಟಿರುವ ಬಗೆಯನ್ನು ಐದನೆಯ ಅಧ್ಯಾಯದಲ್ಲೂ ನಮ್ಮ ಜೀವಿತಾವಧಿಯ ಹೆಚ್ಚಳವನ್ನು ಕೈಗೂಡಿಸುವುದಕ್ಕೆ ನೆರವಾಗುವ ಸಂವಿಧಾನದ ಚಟುವಟಿಕೆಗಳನ್ನು ಆರನೇ ಅಧ್ಯಾಯದಲ್ಲೂ ವಿವರಿಸಿರುವರು.

ಸಾಮಾನ್ಯ ಮಾನವ ಜೀವನಕ್ಕಿಂತ ವೈಯಕ್ತಿಕ ವ್ಯಕ್ತಿತ್ವಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ಸಲ್ಲಿಸಬೇಕೆನ್ನುವ ಮತ್ತು ಈಗಿನ ನಾಗರಿಕತೆಯಲ್ಲಿಯೂ ಪುನರುತ್ಥಾನಕ್ಕೆ ಅವಶ್ಯವಾದ ಶಕ್ತಿ ಸ್ರೋತ ಎಲ್ಲಿಂದ ಮತ್ತು ಹೇಗೆ ಬರುವುದೆನ್ನುವ ಕೊನೆಯ ಎರಡು ಅಧ್ಯಾಯಗಳು ಪುಸ್ತಕದ ಮಹತ್ವದ ಭಾಗಗಳೆಂದರೆ ತಪ್ಪಾಗದು. ತಾಗಿ ನೋಡಿದರೆ "ನಾವೆಲ್ಲಾ ನಮ್ಮ ವೈಯಕ್ತಿಕ ವೈಶೇಷಿಕಾಂಶಗಳನ್ನು ದಾಟಿ, ಭೌತವಿಸ್ತರವನ್ನು ದಾಟಬಲ್ಲ ಮಹಾ ಶಕ್ತಿಯುಳ್ಳವರಾಗಿರುವೆವು". ದೇಹದ ಹೊರ ವ್ಯಾಪಾರಗಳಿಂದಲೇ ನಮ್ಮ ಅಂತರಿಕ ಪ್ರಪಂಚವು ಹೊರ ಜಗತ್ತಿನೊಡನೆ ಸಂಪರ್ಕವಿಟ್ಟುಕೊಂಡು, ವಿಶ್ವದ ಘಟಕಗಳಲ್ಲಿ ಮನುಷ್ಯನಿಗೂ ಸ್ಥಾನ ದೊರೆತಿದೆ. ಆದರೆ ಮನಸ್ಸಿನ ವ್ಯಾಪ್ತಿ ಇವ್ಯಾವುದರಿಂದಲೂ ನಿರ್ಬಂಧವಾಗುವುದಿಲ್ಲ. ಪ್ರೀತಿ, ದಯೆ, ಧ್ಯೇಯಸಾಧನೆಯ ಮಾರ್ಗಗಳು ಮನುಷ್ಯನ ಶಕ್ತಿ ಅಥವಾ ದೌರ್ಬಲ್ಯಗಳನ್ನಾಗಲಿ ಅವಲಂಬಿಸಿವೆ. ದೂರ ಭಾವನಾಪ್ರಸಾರ ಮುಂತಾದ ಪರೇಂಗಿತಜ್ಞತೆಗಳಂತಹ ಭೌತ ನಿರ್ಬಂಧಿತವಾದ ವ್ಯಾಪಾರಗಳನ್ನು ಮನಸ್ಸು ಪ್ರದರ್ಶಿಸುವುದರಿಂದ ಇದಕ್ಕೆ ಅನಂತವ್ಯಾಪ್ತಿಯಿದೆಯೆಂದೇ ಹೇಳಬೇಕಾಗುವುದು. ಮಾನವನ ಪುನರುಜ್ಜೀವನದ ಆಸೆಗೆ ಅವನ ಅಖಂಡ ವ್ಯಕ್ತಿತ್ವದ ಸಂಪೂರ್ಣ ಕಲ್ಪನೆಯೇ ಬೆಂಗೋಲು. ಇಂತಹ ವ್ಯಕ್ತಿತ್ವದ ದರ್ಶನ ಲಾಭವು ವೈಜ್ಞಾನಿಕ ಶಾಸ್ತ್ರದ ಅಭ್ಯಾಸವೊಂದರಿಂದಲೇ ಸಾಧ್ಯ. ಈ ಶಾಸ್ತ್ರವು ತನ್ನ ಗಡಿಯನ್ನು ವಿಸ್ತರಿಸಿಕೊಂಡು ಸಮಾಜ ಮತ್ತು ಅರ್ಥ ಶಾಸ್ತ್ರಗಳಿಗೂ ವ್ಯಾಪಿಸಿದರೆ ಅದೇ ಮಾನವ ಶಾಸ್ತ್ರವೆನಿಸುತ್ತದೆ. ಈ ಪರಿವರ್ತಿತ ವೈದ್ಯ ಶಾಸ್ತ್ರವು ನೈಸರ್ಗಿಕ ನಿಯಮಗಳಿಗನುಸಾರವಾಗಿ ಮನುಷ್ಯನ ಪುನರ್ಘಟನೆಯನ್ನು ಮಾಡಿ, ಜನಾಂಗವನ್ನು ನಿಜವಾದ ನಾಗರಿಕತೆಯ ಶಿಖರಕ್ಕೊಯ್ಯುವಂತಹ ನಾಯಕ ಮಣಿಗಳಿಗೆ ಸ್ಫೂರ್ತಿಯನ್ನು ಕೊಡುವುದು. ಹೀಗೆ ನಿರೂಪಿಸಿದ ಕೆರೆಲರು ಅಂತ್ಯದಲ್ಲಿ "ವಿಶ್ವದ ವ್ಯಾಪ್ತಿಯ ಪ್ರತ್ಯಯಗಳಿಗಿಂತಲೂ ಹೊರಗೆ, ಅತಿದೂರ ವ್ಯಾಪಿಸುವ ಮನುಷ್ಯನು ಏಕ ಕಾಲಕ್ಕೆ ಜಡನೂ ಚೇತನ ಶಕ್ತಿಯುಳ್ಳ ಮಾನಸಿಕ ಕ್ರಿಯೆಗಳ ಕೇಂದ್ರವೂ ಆಗಿರುತ್ತಾನೆ. ಈ ಲೋಕದಲ್ಲಿರುವ ಪರ್ವತ, ಸಾಗರ ಮತ್ತು ಮಹಾ ನದಿಗಳ ಹಾಗೆ ಅವನ ರಚನೆಯಾಗಿದೆ. ಆತ ಮರಗಿಡಗಳ, ಪಶುಗಳ ಪ್ರಪಂಚದಲ್ಲಿ ಸುಲಭವಾಗಿ ಬದುಕಬಲ್ಲನು. ನಗರಗಳ ಕಲಾಸೃಷ್ಟಿ, ಭವ್ಯ ಮಂದಿರ, ಯಂತ್ರ ತಂತ್ರ, ಬಂಧು ಮಿತ್ರರೆಂದರೆ ಅವನಿಗೆ ಹಿತ. ಅಂತೆಯೇ ಅವನಿಗೆ ಅಷ್ಟು ಮೆಚ್ಚಿಗೆ ಇರುವ ಇನ್ನೊಂದು ಪ್ರಪಂಚವೂ ಇದೆ—ವ್ಯಕ್ತಿಯ ಹೃದಯ ಕುಹರದಲ್ಲಿ, ಜೀವ ಸ್ಪಂದದಲ್ಲಿ ಅಡಗಿರುವ ಈ ಸನಾತನ, ಚಿರಂತನ ಲೋಕವು ಲೇಶಾತೀತವಾಗಿ ವ್ಯಾಪಿಸಿದೆ. ಅಜೇಯವಾದ ಮನೋಬಲದಿಂದ ಮನುಷ್ಯನು ಈ ವಿಶ್ವದ ಅಗಣಿತವಾದ ಚಕ್ರಗಳಲ್ಲಿ ಪ್ರವಾಸ ಮಾಡಬಹುದು. ವಿಜ್ಞಾನಿಯೂ ಕವಿಯೂ ಕಂಡಿರುವ ಸೌಂದರ್ಯ ಜಗತ್ತು ಸಾಧಕರಾಗಗಳಿಗೆ ಸ್ಫೂರ್ತಿ ಸ್ರೋತವಾಗಿರುವ ಪ್ರೇಮ ಚಕ್ರ; ವಿಶ್ವ ಸತ್ವದ ಮೂಲತತ್ವಗಳನ್ನು ಶೋಧಿಸಿ ಗೆಲ್ಲುವ ಜಗದ್ವ್ಯಾಪ್ತ್ಯಾಕ್ತ್ಯಾದಿ ಚಕ್ರ ಎಲ್ಲವೂ ನಮಗೆ ಶ್ರೇಯ, ಗಮ್ಯ".

ಈ ಅನುವಾದ ಸಂದರ್ಭದ ಪುಸ್ತಕಕ್ಕೆ ಘನತೆಯನ್ನೂ ಗೌರವವನ್ನೂ ತಂದಿದೆ. ಪಾಶ್ಚಾತ್ಯ ಭಾಷೆಗಳಲ್ಲಿಯೂ ಅಷ್ಟು ಸೂಕ್ಷ್ಮವಾಗಿ ಪ್ರಕಟವಾಗುವ ಇಂಥ ಗ್ರಂಥಗಳು ಕನ್ನಡದಲ್ಲಂತೂ ದುರ್ಲಭವೇ. ಈ ಕೊರತೆಯನ್ನು ಹೋಗಲಾಡಿಸುವ ಪ್ರಸ್ತುತ ಪ್ರಕಟಣೆ ಸಕಾಲಿಕವೂ ಸ್ವಾಗತಾರ್ಹವೂ ಆಗಿರುತ್ತದೆ. ಕೊನೆಯಲ್ಲಿ ಅಕಾರಾದಿಯಾಗಿ ಕೊಟ್ಟಿರುವ ವಿಷಯಸೂಚಿ ಎಂಟು ಅಧ್ಯಾಯಗಳಲ್ಲಿ ಅಳ ಪ್ರಕರಣಗಳಿರುವ ಕಾಲಾಂತ ದೆಮಿ ಆಕಾರದ ೨೫೬ ಪುಟದ ಈ ಪುಸ್ತಕದಲ್ಲಿ ಪ್ರತಿಪಾದಿಸಿದ ತತ್ವಗಳನ್ನು ಸುಲಭದಲ್ಲಿ ಗುರುತಿಸಿ, ಗ್ರಹಿಸುವುದಕ್ಕೆ ಸಹಾಯಕವಾಗಿದೆ. ಅಂದ ಚಂದದ ಮುದ್ರಣ ಮತ್ತು ರಸವತ್ತಾದ ಶೈಲಿ ಪುಸ್ತಕದ ಶೋಭೆಯನ್ನು ಅಧಿಕಗೊಳಿಸಿದೆ

—ಕುಮಾರಸ್ವಾಮಿ.

ಕಲಾವಿದ—

(ಹಸ್ತಲಿಖಿತ ಪತ್ರಿಕೆ) ಸಂಪಾದಕರು: ಜಿ. ಎಸ್. ರಾಮು; ಕಾಪು, ದ. ಕ.

ಕಲಾವಿದ ಮೂರನೇ ವರ್ಷದ ದೀಪಾವಳಿಯ ಸವಿ ನೆನಪಿಗಾಗಿ ಪ್ರಕಟಿಸಿದ ವಿಶೇಷ ಚಾರಿತ್ರಿಕ ಸಂಚಿಕೆಯನ್ನು ಸಾದರದಿಂದ ಅವಲೋಕಿಸಿದ್ದೇವೆ. ಕಾಣುವಂತೆ ಕಿರಿಯರು ಕಟ್ಟಿಕೊಂಡ ಮಿತ್ರಮಂಡಳಿಯ ಪ್ರಯತ್ನ ಈ ಹಸ್ತಲಿಖಿತ ಪತ್ರಿಕೆಯಿಂದ ಸ್ಪಷ್ಟವಾಗಿ ಕಾಣುತ್ತದೆ. ಒಳ್ಳೆಯ ನಾಲ್ಕೈದು ಕಥೆಗಳು, ಎರಡು ಮೂರು ಹಾಸ್ಯ ಚಟಾಕಿಗಳು, ಒಂದೆರಡು ಕಲಾತ್ಮಕವಾದ ಚಿತ್ರಗಳು ಈ ಕಿರಿಯರ ಭವಿಷ್ಯವನ್ನು ಸಾರಿ ಹೇಳುತ್ತವೆ.

ಆದರೆ ಒಂದು ಸಲಹೆ ಈ ತರುಣ ಕಲಾವಿದರಿಗೆ ಹೇಳಬೇಕಾಗಿದೆ; ಕೆಲವು ಪುಟಗಳನ್ನು ಒಳ್ಳೆಯ ನಿಷ್ಠೆಯಿಂದ ಬರೆದಿದ್ದರೆ, ಇನ್ನು ಕೆಲವುಗಳನ್ನು ಅವಸರದಿಂದ ಬರೆದಿದ್ದಾರೆ. ಅಂತಲೇ ಈ ಪತ್ರಿಕೆಯ ಹಸ್ತಪ್ರತಿ ಪ್ರಾರಂಭದಿಂದ ಕೊನೆಯ ತನಕ ಒಂದೇ ಮಟ್ಟದಲ್ಲಿಲ್ಲ. ಈ ಕೊರತೆಯನ್ನು ಮುಂದಿನ ಸಂಚಿಕೆಯಲ್ಲಿ ನೀಗಿಸಿಕೊಳ್ಳಬಲ್ಲರೆಂದು ವಿಶ್ವಾಸವಿಡುತ್ತೇವೆ. ದಾಕ್ಷಿಣ್ಯವಿದು. ಗೋವಿಂದ ಪೈಗಳ ಹರಕೆಯು ಈ ಕಿರಿಯರ ಭವಿಷ್ಯವನ್ನು ಉಜ್ವಲಗೊಳಿಸಲೆಂದು ಹಾರೈಸುತ್ತೇವೆ.

AVENUE TRESS—

By C. Rajasekhara Mudaliar & J. Sakharam Rao. Published by the Department of Agriculture, Madras. Price five annas.

ಭಾರತದ ಪರಂಪರೆಗೆ ಅನುಗುಣವಾದ ಲೋಕೋಪಕಾರದ ಮುಖ್ಯ ಕಾರ್ಯಗಳಲ್ಲಿ ಸಾಲು ಮರಗಳನ್ನು ನೆಟ್ಟು, ಪೋಷಿಸುವುದೂ ಒಂದು. ಅಶೋಕನೇ ಮುಂತಾದ ರಾಜರು ಜನತೆಗೆ ಮಾಡಿದ ಸೇವೆಯನ್ನು ಉಲ್ಲೇಖಿಸುವಾಗ ಮಾರ್ಗದ ಇಕ್ಕೆಡೆಯಲ್ಲೂ ವೃಕ್ಷಾರೋಪಣೆ ಮಾಡಿದ ಸತ್ಕೃತಿಯನ್ನು ಅವರ ಕೀರ್ತಿಗೆ ಹಿಡಿದೆಂದು ಇತಿಹಾಸದ ಅಭ್ಯಾಸಿ ಅವಶ್ಯವಾಗಿ ಹೇಳುವನು. ಸಾಲುಮರಗಳು ಹಾದಿಹೋಕರಿಗೆ ಆಶ್ರಯ ಕೊಡುವುದಲ್ಲದೆ, ಫಲ ಪುಷ್ಪಗಳಿಂದ ಫಲಿತವಾದ ಗಳಿಗೆಯಲ್ಲಿ ಕಣ್ಣು ಹಾಗೂ ಹೊಟ್ಟೆಗಳನ್ನು ತಂಪಾಗಿಸುತ್ತವೆ. ಆಧುನಿಕ ಕಾಲದಲ್ಲಿ ಸಾಲುಮರಗಳನ್ನು ನೆಡುವುದರ ಕಡೆಗೆ ಸಾಕಷ್ಟು ಗಮನ ಹರಿದಂತೆ ತೋರುವುದಿಲ್ಲ. ಕೆಲವೇ ಹೊಸ ನಗರಗಳ ರಸ್ತೆಗಳ ಕಡೆಗೆ ಇತ್ತ ಗಮನ ಹರಿಸಿದ ಕಾಲದು-

—ಗಣೇಶ [illegible]

‘ಗೋಪಾಲ ಭೇಷಜಾಶ್ರಮ” ಮಂಗಳೂರು.

(ಸ್ಥಾಪನೆ ೧೯೧೦)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರಿ,

ಇವರ

ನವಜೀವಾತು

ಎಂಬ

ಸೂತಿಕಾರಸಾಯನ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಧರಿಸಿ ತಯಾರಿಸಲ್ಪಟ್ಟ ಅನೋಘವಾದ ಮಧುರವಾದ ರಸಾಯನ.

ಹೆಚ್ಚಿನ ಮಾಹಿತಿಗೆ ಡಾ। ಯಂ ಸಿ ಶಾಸ್ತ್ರೀ, ಯಲ್ ಐ. ಎಂ.

ಕೊಡಿಯಾಲಬೈಲು ಪೋಸ್ಟ್. (ಮಂಗಳೂರು)

ಸ್ಥಾನಿಕಸ್ಥರು: ಡಾ| ಪಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ

ಪ್ರತಿಯೊಂದು ಹಳ್ಳಿ ಮತ್ತು ಪೇಟೆಯಲ್ಲೂ ಈ ಕುರಿತು ಆಸಕ್ತಿ ಮೂಡುವುದು ಅಗತ್ಯ. ರಸ್ತೆಯ ಪಕ್ಕಗಳಲ್ಲಿ ನೆಡಲು ಸಸಿಗಳನ್ನು ಆರಿಸುವಾಗ ಕೆಲವು ಸಂಗತಿಗಳನ್ನು ನೆನಪಿಟ್ಟು ಕೊಳ್ಳಬೇಕು—ಮುಖ್ಯವಾಗಿ, ನೆಟ್ಟ ಸಸಿ ಆ ಸ್ಥಳದಲ್ಲಿ ಚೆನ್ನಾಗಿ ಬೆಳೆದು, ದೀರ್ಘಕಾಲ ಬಾಳುವಂತಿರಬೇಕು; ನೀರಿನ ಆಶ್ರಯವನ್ನು ಅತಿಯಾಗಿ ಹೊಂದಿಕೊಂಡಿರಬಾರದು; ಆಳವಾಗಿ ಬೇರೂರಿಕೊಂಡು ಕ್ಷಿಪ್ರದಲ್ಲಿಯೇ ಮರವಾಗಬೇಕು.

[೩ನೇ ಪುಟದಿಂದ]

ಸಾಯಕ್ಕೊಳಪಡಿಸಿದ ಭೂಮಿ ಸುಮಾರು ೯೦೦೦ ಎಕ್ರೆಯಷ್ಟಾಗಿರುತ್ತದೆ. ವರ್ಷಕ್ಕೆ ಸುಮಾರು ೧೭ ಟನ್ನುಗಳಷ್ಟು ಆಹಾರವನ್ನು ಸೇನೆ ಬೆಳೆಸುತ್ತದೆ

ವನಮಹೋತ್ಸವವನ್ನು ಜವಾನರು ಅಷ್ಟೇ ಉತ್ಸಾಹದಿಂದ ವರ್ಷಂಪ್ರತಿ ಜರಗಿಸುತ್ತಿರುವರು. ಸಾವಿರಾರು ಸಸಿಗಳನ್ನು ನೆಟ್ಟು ಪೋಷಿಸುವುದಕ್ಕೆ ಸೈನಿಕರು ಮುಂದಾಗಿರುವರು ರಾಜಸ್ಥಾನದಲ್ಲಿ ವಿಸ್ತಾರವಾಗಿ ಹಬ್ಬುತ್ತಿರುವ ಮರುಭೂಮಿಯನ್ನು ನಿಯಂತ್ರಿಸುವುದಕ್ಕೆ ಮರಗಳನ್ನು ನಟ್ಟು ಬೆಳೆಸುವುದೊಂದೇ ವ್ಯವಹಾರಿಕವಾದ, ದೀರ್ಘಕಾಲ ಪ್ರಯೋಜನವನ್ನುಂಟುಮಾಡುವ ಕ್ರಮವೆಂದು ತಿಳಿಯಲ್ಪಟ್ಟಿದೆ. ಅಲ್ಲಿಯ ಸರಕಾರದ ವಿನಂತಿಯನ್ನು ಮನ್ನಿಸಿ ವಾಯು ಸೇನೆಯು ಕಳೆದ ಜೂಲೈ ತಿಂಗಳಲ್ಲಿ ಆಕಾಶದಿಂದಲೇ ಬೀಜಗಳನ್ನು ಬಿತ್ತುವ ಹೊಸತೊಂದು ಪ್ರಯೋಗವನ್ನು ಮಾಡಿ ತೋರಿಸಿತು ಇದು ಯಶಸ್ವಿಯಾದರೆ, ಮರು ಪ್ರದೇಶದ ಸ್ವರೂಪವನ್ನು ಶೀಘ್ರದಲ್ಲಿ ಪರಿವರ್ತಿಸಬಹುದು.

ಬೆಳೆಗಳನ್ನು ನಾಶಮಾಡುವ ಮಿಡಿತೆಗಳ ಕಾಟವನ್ನು ನಿಯಂತ್ರಿಸಿ ನಿರ್ಮೂಲ ಮಾಡುವ ಕೆಲಸದಲ್ಲಿಯೂ ಸೇನೆಯಿಂದ ಸಹಾಯ ಸಂದಿದೆ—ಪಂಜಾಬ, ರಾಜಸ್ತಾನ ಮತ್ತು ಢಿಲ್ಲಿ ರಾಜ್ಯಗಳಲ್ಲಿ ಅನೇಕ ವಿಧವಾದ ಚಟುವಟಿಕೆಗಳಿಂದ ಮಿಡಿತೆಗಳ ಉಪಟಳದಿಂದ ರೈತರಿಗೆ ಸಂರಕ್ಷಣೆ ನೀಡಲಾಯಿತು

ವಿಪತ್ತಿನ ಸಂದರ್ಭದಲ್ಲಿ ಸೈನ್ಯದಿಂದ ದೊರೆತ ಮಾದರಿಯ ಸಹಾಯವನ್ನು ಬೇರೆಲ್ಲಿಂದಲೂ ಪಡೆಯಲಾರೆನೆಂದೇ ತೋರುತ್ತದೆ — ಕಳೆದ ವರ್ಷ ಮದ್ರಾಸು ತೀರದಲ್ಲಿ ಮೀನು ಹಿಡಿಯಲು ಹೋಗಿದ್ದ ಸುಮಾರು ೨೨೦ ಬೆಸ್ತರು ಕಾಣೆಯಾದಾಗ, ನೌಕಾ ಪಡೆ ಹಾಗೂ ವಾಯು ಸೇನೆಗಳು ಪರಿಶ್ರಮದಿಂದ ಅವರನ್ನು ಪತ್ತೆ ಹಚ್ಚಿ ದಡಕ್ಕೆ ಸುರಕ್ಷಿತವಾಗಿ ತಂದು ಮುಟ್ಟಿಸಿದುವು

ಪೆಪ್ಸು ಹಾಗೂ ಅಜಮೀರಗಳಲ್ಲಿ ಡಕಾಯಿತುಗಾರರಿಂದ ಯಾವಾಗಲೂ ಭಯ ಗ್ರಸ್ತರಾಗಿದ್ದ ಜನರ ಹೆದರಿಕೆಯನ್ನು ಬಹಳ ಮಟ್ಟಿಗೆ ಕಡಿಮೆಮಾಡಿದರು.

ಹೀಗೆ ಸಾಧ್ಯವಿರುವ ಪ್ರತಿಯೊಂದೂ ರೀತಿಯಲ್ಲಿ ಪ್ರತಿಯೊಂದೂ ಪ್ರದೇಶಕ್ಕೆ ಸೈನಿಕರಿಂದ ಸೇವೆ ಸಂದಿ‍ುತ್ತದೆ ಸಂರಕ್ಷಣೆಗೋಸ್ಕರ ನೀಡಲಾಗುವ ತರಬೇತಿಗೆ ಇದು ವ್ಯತ್ಯಯ ತರಬಾರದೆಂಬ ಮತ್ತು ಹೆಚ್ಚಿನ ಅನಾವಶ್ಯಕ ವೆಚ್ಚಗಳಿಗೆ ಅವಕಾಶವಿರಬಾರದೆಂಬ ನೀತಿಯೊಳಗೆಯೇ ಸೇನೆಯ ಜವಾನರಿಂದ ನಾಗರಿಕರಿಗೆ ನೆರವಾಗುವ ಈ ಎಲ್ಲ ಚಟುವಟಿಕೆಗಳು ನಡೆಸಲ್ಪಡುತ್ತಿವೆ.

ಈ ಪುಸ್ತಕದಲ್ಲಿ ಅಂಥ ಸಸಿಗಳನ್ನು ಸಾಕಿ ಸಲಹುವ ಬಗೆಯನ್ನು ವಿವರಿಸಿರುವರಲ್ಲದೆ, ಸಾಲುಮರಗಳಾಗಿ ಪೋಷಿಸ ಬಹುದಾದ ಸುಮಾರು ೩೪ ವೃಕ್ಷ ಜಾತಿಗಳ ಗುಣ ಧರ್ಮಗಳನ್ನು ವರ್ಣಿಸಿ, ಮದ್ರಾಸು ರಾಜ್ಯದ ಯಾವ ವಿಶಿಷ್ಟ ಪ್ರದೇಶಕ್ಕೆ ಅವು ಸೊಗಯಿಸುವುವೆಂದೂ ಹೇಳಿರುವರು. ಮರಗಳ ಚಿತ್ರಗಳನ್ನೂ ಒದಗಿಸಿ, ಅವುಗಳ ಹೆಸರನ್ನು ಸಾಧ್ಯವಾದಷ್ಟು ಪ್ರಾದೇಶಿಕ ಭಾಷೆಗಳಲ್ಲಿ ಕೊಟ್ಟಿರುವುದೂ ಭಾಷೆ ತೀರ ಸರಳವಾಗಿರುವುದೂ ಪುಸ್ತಕದ ಉಪಯುಕ್ತತೆಯನ್ನು ಹೆಚ್ಚಿಸಿದೆ.

ಅಪ್-ಟು ಡೇಟ್ ಅಮ್ಮಯ್ಯ—

ಲೇಖಕರು: ಕೈವಾರ ರಾಜಾರಾವ್. ಪ್ರಕಾಶಕರು: ಎಚ್. ಎಸ್. ರಾವ್ ಬ್ರದರ್ಸ್, ಚಿಕ್ಕಪೇಟೆ, ಬೆಂಗಳೂರು ೨. ಬೆಲೆ: ಒಂದು ರೂಪಾಯಿ.

ಶ್ರೀಮಂತ ಭೀಮರಾಯರ ಬಿ. ಎ. ಕಲಿತ ಮಗಳು ರಮಾ ಮದುವೆಯಾಗುವ ಉದ್ದೇಶದಿಂದ ತನ್ನನ್ನು ನೋಡಬಂದ ಮಾಧವರಾಯನೊಂದಿಗೆ ಬಿಚ್ಚು ಮನಸ್ಸಿನಿಂದ ವರನಾಗಬೇಕಿರುವವನ ವಿಷಯದಲ್ಲಿ ತನ್ನ ಆಶೆ ಆಕಾಂಕ್ಷೆಗಳನ್ನು ವಿವರಿಸಿದಾಗ "ನೀವು ಕಾದಂಬರಿಯ ನಾಯಕಿಯಾಗಬೇಕೆಂದು ಬಯಸುತ್ತೀರಿ. ಆದರೆ ನಮಗೆ ಸಂಸಾರದ ಗೃಹಿಣಿಯರು ಬೇಕು" ಎಂಬ ಮಾಧವನ ಹೇಳಿಕೆಯಿಂದ ಸಹಜವಾಗಿ ಸಿಟ್ಟುಗೊಂಡು ನಿಲುವಳು. ಆದರೆ ಎಂ. ಎ. ಪಾಸು ಮಾಡಿದ ಮಾಧವರಾಯ ಇವಳ ಅಹಂಕಾರ ದಮನದ ಉಪಾಯವೊಂದನ್ನು ಯೋಚಿಸಿ, ತನ್ನ ಮನೆಯ ಅಡುಗೆ ಮಾಡುವ ಮಂಜುನಾಥನನ್ನು ರಮೆಯ ಮೇಲೆ "ಛೂ" ಬಿಡುವನು. ಈ ಐ. ಸಿ. ಎಸ್. ಪದವೀಧರನ ಎರವಲು ತಂದ ಸೂಟು, ಬೂಟು, ಕಾಲರುಗಳ ಠೀವಿ ಗೊಳಗಾಗಿ ರಮೆ ಪ್ರಥಮ ನೋಟದಲ್ಲಿಯೇ ಪ್ರಣಯ ದಾಹಕ್ಕೆ ತುತ್ತಾಗುವಳು. "ನಿನ್ನ ಮನಸ್ಸನ್ನು ಅಪಹರಿಸಿರುವ ನನ್ನಲ್ಲಿರುವ ಅಂತಹ ಗುಣವಾವುದು" ಎಂದು ಮಂಜುನಾಥ ರಮೆಯನ್ನು ಪ್ರಶ್ನಿಸಿದಾಗ "ಲಿಸಿಕತೆ, ಹಸನ್ಮುಖ, ನಿನಗೆ ಸ್ತ್ರೀಯಲ್ಲಿರುವ ಪೂಜ್ಯ ಭಾವ" ಎಂಬುದಾಗಿ ರಮೆ ಹೇಳುವಳು. "ನಾನು ನಿನ್ನನ್ನೆ ನಂಬಿದ್ದೇನೆ. ನೀನೇನಾದರೂ ನನ್ನನ್ನು ಮದುವೆಯಾಗಲಾರೆನೆಂದು ಹೇಳಿದರೆ, ನಾನೆಲ್ಲಾದರೂ ಆತ್ಮ ಹತ್ಯ ಮಾಡಿ ಕೊಳ್ಳುತ್ತೇನೆ" ಎಂದು ಕಂಬನಿ ಮಿಡಿಯುವಳು. "ನನ್ನ ದೈವ ಇಂದಿಗೆ ಕಣ್ಣು ತೆರೆಯಿತು" ಎಂದವಳು ವೈ ಮರೆತ ಗಳಿಗೆಯಲ್ಲೇ ಮಾಧು ಪ್ರವೇಶಿಸಿ, ಮಂಜುನಾಥನ ನಿಜ ಸ್ವರೂಪವನ್ನು ಬಯಲು ಮಾಡಿದಾಗ ಆಕೆಗೆ ಸಿಡಿಲೆರಗಿದಂತಾಗುವುದು. "ಈಗಲೂ ಈ ಮಂಜುನಾಥನಿಗಿಂತ ನಾನೇ ವಾಸಿ ಅಂತ ತಿಳಿದು ನನ್ನನ್ನು ಮದುವೆಯಾಗುವುದಾದರೆ ನಾನದಕ್ಕೆ ಸಿದ್ಧನಿದ್ದೇನೆ" ಎಂದು ಮಾಧೂ ಹೇಳಿದಾಗ ರಮೆಗೆ ಉತ್ತರ ಕೊಡಲು ಮುಖವಿಲ್ಲ: ಬಾಯಿ ಯಿಲ್ಲ! ತಿಳಿಹಾಸ್ಯ ಬೆರೆತ ಶೈಲಿಯಲ್ಲಿ, ಮನೋರಂಜನೆ ಒದಗಿಸುವುದರ ಜೊತೆಗೆ ಸುಶಿಕ್ಷಿತರ ಸದಸದ್ವಿವೇಕ ಬುದ್ಧಿಯನ್ನೂ ಜಾಗೃತಗೊಳಿಸುವರೀತಿಯಲ್ಲಿ ಈಸ್ವಾರಸ್ಯವಾದ ಪ್ರಹಸನ ಬರೆಯಲ್ಪಟ್ಟಿದೆ. ಈಗಾಗಲೇ ಹಲವಾರು ಬಾರಿ ಅಭಿನಯಿಸಲ್ಪಟ್ಟು ಜನಪ್ರೀತವಾಗಿರುವ ಈ ನಾಟಕ, ಪ್ರತಿಯೊಂದು ಶಾಲಾ ಕಾಲೇಜು ಸಮಾರಂಭಗಳಲ್ಲೂ ಪ್ರಯೋಗಿಸಲ್ಪಟ್ಟು ಮೆಚ್ಚುಗೆ ಪಡೆಯುವುದೆಂಬ ಭರವಸೆ ನಮಗಿದೆ.

ಕಾವ್ಯ ತರಂಗ—

ಲೇಖಕ ಹಾಗೂ ಪ್ರಕಾಶಕರು: ಕೆ. ಎಸ್. ಭಟ್, "ಶಿರಾಡಿವಾಲ್", ಪೋಸ್ಟ್ ಮುಂಡಾಜೆ, ದಕ್ಷಿಣ ಕನ್ನಡ. ಬೆಲೆ: ಎಂಟಾಣೆ.

ಇದು ವಿವಿಧ ವಿಷಯಗಳ ಮೇಲೆ ಬರೆದ ೩೪ ಕವನಗಳ ಸಂಗ್ರಹ. ಕಾವ್ಯ ನೈಪುಣ್ಯವನ್ನು ಹಸ್ತಗತವಾಗಬೇಕೆನ್ನುವ ಪ್ರಾರಂಭಿಕ ಪ್ರಯತ್ನವಿದೆಂಬುದು ಸಹಜವಾಗಿಯೇ ವ್ಯಕ್ತವಾಗುತ್ತದೆ. "ಹಳ್ಳಿಯಿಂದ ಢಿಲ್ಲಿ-ದಿಲ್ಲಿಯಿಂದ ಹಳ್ಳಿ" ಎಂಬ ಕವನ ಇದ್ದುದರಲ್ಲಿ ಒಳ್ಳೆಯದು ಹೆಚ್ಚಿನ ಅಭ್ಯಾಸ ಮತ್ತು ಚಿಂತನೆಗಳಿಂದ ಭಾವ ಮಾಧುರ್ಯವನ್ನು ಹೊರಚೆಲ್ಲಿ ಸ್ಪಂದನವನ್ನುಂಟು ಮಾಡಬಲ್ಲ ಶಕ್ತಿಯನ್ನು ಈ ತರುಣ ಕವಿಗಳು ಪಡೆಯಲೆಂದು ಹಾರೈಸುತ್ತೇವೆ.

ದಿ ವಿಜಯ ಬೇಂಕ್, ಲಿಮಿಟೆಡ್.

ಸ್ಥಾಪನೆ: 1931] [ಪ್ರಧಾನ ಕಛೇರಿ: ಮಂಗಳೂರು.

ತೆತ್ತ ಭಂಡವಾಳ ಮತ್ತು ಕ್ಷೇಮನಿಧಿ ರೂ. **10,87,000**

ಜುಮ್ಲಾ ವಹಿವಾಟು .... ,, **60,50,000.**

ಕಾಯಂ ಠೇವಣಾತಿಗಳು 1 ತಿಂಗಳಿನಿಂದ 24 ತಿಂಗಳಿನ ವರೆಗೆ ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲ್ಪಡುವವು.

ಮೂರು ವರ್ಷ ಅವಧಿಯ ವಿಜಯ ಕ್ಯಾಶ್ ಸರ್ಟಿಫಿಕೇಟು ಠೇವಣಾತಿಯಲ್ಲಿ 4¼% ಬಡ್ಡಿ ದರ ಗಳಿಸಿಕೊಳ್ಳಬಹುದು.

ಜಿಲ್ಲೆಯ ಎಲ್ಲಾ ಮುಖ್ಯ ಸ್ಥಳಗಳಲ್ಲಿ ಮತ್ತು ಮಡಿಕೇರಿ, ಮುಂಬಾಯಿಗಳಲ್ಲಿ ಬೇಂಕಿನ ಶಾಖೆಗಳಿರುತ್ತವೆ.

ಕೆ. ಸುಂದರರಾಮ ಶೆಟ್ಟಿ,
ಬಿ. ಎ. ಬಿ. ಯಲ್., ವಕೀಲ್,
ಬೇಂಕಿನ ಡೈರಕ್ಟರರ ಮಂಡಳಿಯ ಅಧ್ಯಕ್ಷರು.

THE VIJAYA BANK, Limited.

ಲಕ್ಷಾಂತರ ಜನರು ಗುಣಹೊಂದಿದ್ದಾರೆ:

ಸರ್ ಜೀವನ್ ಶಿಲಾಜಿತ್‌ಲೇಹ

ಶಿಲಾಜಿತ್ ಹಿಮಾಲಯದ್ದು ಔಷಧಿಗಳ ರಾಜ; ಮೂಲಿಕೆಗಳೊಡನೆ ಸೇರಿಸಿದ ಲೇಹ್ಯ, ದೇಹಶಕ್ತಿ, ಹೊಟ್ಟೆನೋವು, ಅನ್ನ ಸೇರದಿರುವಿಕೆ, ಕೆಮ್ಮು, ದಮ್ಮು, ಬಹುಮೂತ್ರ ಮತ್ತು ವಾಯುವಿನಿಂದಾಗುವ ಎಲ್ಲಾ ರೋಗನಿವಾರಕ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, ಹೆಂಗಸರ ಮತ್ತು ಮಕ್ಕಳ ಸರ್ವರೋಗ ನಿವಾರಕ ಅಮೂಲ್ಯ ರತ್ನ ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು.

೪೮ ದಿನದ ಲೇಹ್ಯ ರೂ. ೫-೪-೦, ೨೨ ದಿನದ ಲೇಹ್ಯ ರೂ. ೩-೪-೦. (ಪೋಸ್ಟೇಜು ಮಾಫಿ)

ನೀಲಗಿರಿ ಡಿಪೊ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ.

ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋವಿನಲ್ಲಿ ಕೇಳಿರಿ.

ಭರ್ತ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವ್ಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ- ೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟ ಖರ್ಚ ರೂ. ೦-೧೪-೦

—:ವಿಳಾಸ:—

ಹಾಲಪ್ಪಾ ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

In the Court of the District Munsif of Kundapur

O. S. 445/1953

R. I. A. 1319/1953

Anjuman Islahul Muslameen Coondapoor Represented by

1. Khateeb Hassan Saheb, President, 2. Sheik Hassan Saheb, Secretary, 3. K. Mahomed Ali Saheb, 4. G. Mahomed Mira Saheb, 5. M. K. Abbu Saliyaha —*Plaintiffs*.

Abdul Khader Saheb —*Defendant*.

Notice under Order 1 R 8 Civil Procedure Code

All members of Anjuman Islahul Muslameen Coondapoor are hereby given notice that a suit as above-numbered has been filed by Anjuman Islahul Muslameen represented by the above five persons against Abdul Khader Saheb defendant above named for recovery of Rs. 890—12—0, the amount and interest due to the fund by the defendant on account of collections in Madras and Mercara.

The said suit is filed on behalf of Anjuman Islahul Muslameen represented by persons mentioned as above. Notice is hereby given to all the members of the said fund that any one who has any objection thereto may appear in this Court, on 22—1—1954 to which date the suit is posted and getting himself added as party and contest.

The suit is posted to 22 1 1954 at 11 a. m. Please take notice that any members who are interested and who wish to contest may appear before th[illegible] in person or through pleader at 11 a. m. on the date above-mentioned. This notice is published as per order of Court in R. I. A. 1319/1953 on the file of above Court.

By order of Court.

K. Raghunath Shenai,
Pleader.

Coondapoor, 2-1 1954.

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ

ಕಲ್ಯಂಜೆ ವ್ಯಾಸಾಚಾರ್ಯ
ರಥಬೀದಿ ಉಡುಪಿ.

Edited, Printed & Published By K. H. Shetty at the Navayuga Press, Udipi, S. India

Regd. No. M. 3618

Licence No. 31
Licensed to Post without Prepayment.

ನವಯುಗ

Vol.33 No 20 21-1-1954 ವರ್ಷ ೩೩ ವಾರ ೨೦

ದೇಶದ ಏಳಿಗೆ

ಕೃಷಿ ಪ್ರಧಾನವಾದ ದೇಶ ನಮ್ಮದಾಗಿದ್ದರೂ ರಭಸದಿಂದ ವೈಜ್ಞಾನಿಕ ಪ್ರಗತಿಯನ್ನು ಬೆಂಬತ್ತಿ ಮುನ್ನಡೆಯುವ ವಿಶ್ವಗತಿಯೊಂದಿಗೆ ಭಾರತವು ಹೊಂದಿಕೊಳ್ಳಬೇಕಾದರೆ, ಔದ್ಯೋಗೀಕರಣದ ಮಂತ್ರವನ್ನು ನಾವು ಜಪಿಸಬೇಕಾಗುತ್ತದೆ. ಗಾಂಧೀಜಿ ಪ್ರತಿಪಾದಿಸಿದ ವಿಕೇಂದ್ರೀಕೃತ ಔದ್ಯೋಗೀಕರಣವಾಗಲೀ ಪಾಶ್ಚಾತ್ಯ ದೇಶಗಳಲ್ಲಿ ಕಂಡುಬರುವ ಕೇಂದ್ರೀಕೃತ ಕೈಗಾರಿಕೆಯಾಗಲೀ—ಸ್ವಯಂಭುವೆನಿಸಿ ನಮ್ಮ ನಾಡಿನಲ್ಲಿ ಕಾಲೂರಲಾರದು. ಎರಡು ಬಗೆಯದಕ್ಕೂ ತನ್ನದೇ ಆದ ಗತಿ-ಮಿತಿಗಳಿವೆ: ಮೂಲ ಉದ್ಯೋಗಗಳನ್ನು ಕೇಂದ್ರೀಕರಿಸಿದರೆ ಹಿತವುಂಟು. ನಿತ್ಯದ ಉಪಯೋಗದ ಸರಕುಗಳು ವಿಕೇಂದ್ರೀಕೃತ ಔದ್ಯಮಿಕ ಶಾಲೆಗಳಲ್ಲಿ ಉತ್ಪಾದನೆಗೊಂಡರೆ ಅದರಿಂದ ಲಾಭವಾಗುವುದು. ಆದುದರಿಂದ ನಾವು ಔದ್ಯೋಗೀಕರಣದ ವಿಚಾರ ಮಾಡುವಾಗ ಪರಸ್ಪರ ಪೂರಕ ಮಾರ್ಗವನ್ನು, ಸಮನ್ವಯ ದೃಷ್ಟಿಯನ್ನು ಅಗತ್ಯವಾಗಿ ತೋರಿಸತಕ್ಕದ್ದು.

ಭಾರತ ಸರಕಾರವು ಪ್ರಕೃತ ಇಂಥ ಮಾರ್ಗದಲ್ಲಿ ಮುನ್ನಡೆಯುತ್ತಿರುವುದನ್ನು ನಾವು ಕಾಣಬಹುದು. ಗುಡಿ ಕೈಗಾರಿಕೆಗಳ ಪುನರುಜ್ಜೀವನದಲ್ಲಿ ಸರಕಾರವು ಸಾಕಷ್ಟು ಆಸಕ್ತಿಯನ್ನು ವಹಿಸಿ, ಅವುಗಳ ಸಂರಕ್ಷಣೋಪಾಯಗಳನ್ನು ಕೈಗೊಳ್ಳುವುದಕ್ಕೂ, ಗುಡಿ ಕೈಗಾರಿಕೆಗಳು ಉತ್ಪಾದಿಸಿದ ಸರಕುಗಳನ್ನು ಜನಪ್ರಿಯಗೊಳಿಸಿ ಅವುಗಳಿಗೆ ವಿಸ್ತೃತವಾದ ಪೇಟೆಯನ್ನು ದೊರಕಿಸಿ ಕೊಡುವುದಕ್ಕೂ ಸರಕಾರ ತತ್ಪರತೆಯನ್ನು ತೋರಿಸಿದೆ. ಅದೇ ಕಾಲಕ್ಕೆ ದೇಶಕ್ಕೆ ಅಗತ್ಯವೆನಿಸಿದ ಮೂಲೋದ್ಯೋಗದ ಕೇಂದ್ರಗಳನ್ನು ಹೊಸತಾಗಿ ಪ್ರಸ್ಥಾಪಿಸುವುದಕ್ಕೂ ಸರಕಾರ ಮನಸ್ಸು ಮಾಡಿದೆ. ಚಿತ್ತರಂಜನದ ರೈಲ್ವೆ ಕಾರ್ಖಾನೆ, ಸಿಂಧ್ರಿಯ ಗೊಬ್ಬರ ಕಾರ್ಖಾನೆ, ವಿಶಾಖಪಟ್ಟಣದ ಹಡಗು ನಿರ್ಮಾಣದ ಕಾರ್ಖಾನೆ, ಬೆಂಗಳೂರಿನ ವಿಮಾನ ಕಾರ್ಖಾನೆ ಮುಂತಾದವು ದೇಶದ ಔದ್ಯೋಗೀಕರಣದಲ್ಲಿ ಹೊಂದುತ್ತಿರುವ ಪ್ರಗತಿಯ ಮೈಲುಗಲ್ಲುಗಳಾಗಿ ತೋರುವುದು ಸಹಜ. ಹೀಗೆ ಕೇಂದ್ರೀಕೃತ ಉದ್ಯಮಗಳನ್ನು ಸ್ಥಾಪಿಸುವಾಗಲೂ ನಮ್ಮ ಭಾರತದ ವಿಶಾಲ ಭೂಭಾಗವನ್ನು ದೃಷ್ಟಿಯಲ್ಲಿಟ್ಟುಕೊಂಡು ಒಂದೊಂದು ಉದ್ಯೋಗ ಒಂದೊಂದು ಕೇಂದ್ರದಲ್ಲಿರುವಂತೆ ಗಮನಕೊಡುವುದು ವಿಕೇಂದ್ರೀಕೃತ ತತ್ವದಲ್ಲಿ ಭಾರತ ಇಟ್ಟುಕೊಂಡ ಭರವಸೆಯನ್ನೇ ವ್ಯಕ್ತಗೊಳಿಸುತ್ತದೆ.

ಸ್ವತಂತ್ರ ರಾಷ್ಟ್ರವಾದ ಮೇಲೆ ನಮ್ಮ ಮೇಲೆ ಬಂದೊದಗಿದ ಕೆಲವು ಪ್ರಾಮುಖ್ಯ ಜವಾಬ್ದಾರಿಗಳಲ್ಲಿ ಸಂರಕ್ಷಣೆಯೊಂದಾದರೆ, ಸ್ವಾವಲಂಬನೆ ಎರಡನೆಯದು. ರಾಷ್ಟ್ರೀಯ ಐಕ್ಯ, ಶಿಸ್ತು, ಸಂಯಮ, ಧೀರೋದಾತ್ತ ಮನೋಭಾವಗಳನ್ನು ಬೆಳೆಸಿಕೊಂಡರೆ, ಮತ್ತು ಆರೋಗ್ಯಕರವಾದ ಗಟ್ಟಿಮುಟ್ಟಾದ ಶಾರೀರಿಕ ಸಂಪತ್ತಿಯನ್ನು ಪಡೆದಿದ್ದರೆ ಸಂರಕ್ಷಣಾಭಾವಕ್ಕೆ ಹೆಗಲು ಕೊಡುವುದು ಕಷ್ಟಪ್ರದವಾಗಲಾರದು. ಇದಕ್ಕೆ ನಾಗರಿಕರನ್ನು ತರಬೇತಿ ಮಾಡುವುದು ಶಿಕ್ಷಣದ ಮೂಲೋದ್ದೇಶ. ಆದರೆ ದುರ್ದೈವದಿಂದ ಈ ಕಡೆಗೆ ಸಾಕಷ್ಟು ಗಂಭೀರವಾಗಿ ಗಮನಕೊಟ್ಟು ಕೆಲಸ ಮಾಡಿದವರು ಕಡಿಮೆ. ಮೂಲಭೂತವಾದ ನಾಗರಿಕತೆಯ ತರಬೇತಿಯ ಕೊರತೆಯಿಂದಲೇ ಅನೇಕ ರಾಷ್ಟ್ರಹಿತವನ್ನು ಉಪೇಕ್ಷಿಸಿ ಪ್ರಜಾಜನರು ನಡೆಯುವಂತಾಯಿತು. ಈ ಸತ್ಯವನ್ನು ಮರೆಮಾಡುವುದಾಗಲೀ ಅದಕ್ಕೆ ಸಂಭಾವಿತವಾದ ಕಾರಣಗಳನ್ನು ಹುಡುಕ ಹೊರಡುವುದಾಗಲೀ ಅನಗತ್ಯ. ಪ್ರಕೃತ ವಿದ್ಯಾರ್ಜನ ವಿಧಾನ ಶಿಕ್ಷಣದ ಪದ್ಧತಿಯನ್ನು ಅನುಲಕ್ಷ್ಯವಾಗಿ ಪರಿವರ್ತಿಸುವುದರ ಮೂಲಕವಾಗಿಯೇ ನಾವು ರಾಷ್ಟ್ರೀಯ ಚಾರಿತ್ರ್ಯವನ್ನು ಬೆಳೆಸಿಕೊಳ್ಳಬಲ್ಲೆವು; ಮತ್ತು ತನ್ಮೂಲಕ ರಾಷ್ಟ್ರೀಯ ಐಕ್ಯವನ್ನು ಕಾಪಾಡಿಕೊಂಡು, ಎಂಥ ಬಿಕ್ಕಟ್ಟಿನ ಪ್ರಸಂಗವನ್ನು ಧೈರ್ಯ ಸ್ಥೈರ್ಯಗಳಿಂದ ಯಶಸ್ವಿಯಾಗಿ ಎದುರಿಸಬಲ್ಲೆವು.

ಎರಡನೆಯದಾದ ಸ್ವಾವಲಂಬನ ವಿಷಯದಲ್ಲಿ ನಾವು ಎಷ್ಟು ಶೀಘ್ರ ಪ್ರಗತಿಯನ್ನು ಸಾಧಿಸಿದೆವೋ ಅಷ್ಟು ನೆಟ್ಟಗೆ-ದೇಶದ ಮುಂದೆ ಸ್ವಾವಲಂಬನದ ಪ್ರಥಮ ಪಾಠವನ್ನು ಕಲಿಸುವ ಪಂಚವಾರ್ಷಿಕ ಯೋಜನೆ ಇದ್ದು, ಅದನ್ನು ಯಶಸ್ವಿಯಾಗಿ ಕಾರ್ಯಾನ್ವಿತಗೊಳಿಸುವುದರ ಮೂಲಕವೇ ನಾವು ದೇಶದ ಸಾರ್ವಾಂಗಿಕ ಏಳಿಗೆಯ ಸೋಪಾನವನ್ನು ಹಾಕಬಲ್ಲೆವು. ಸುಪ್ರಸಿದ್ಧ ಔದ್ಯಮಿಕ ತಜ್ಞರಾದ ಶ್ರೀ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು ಕೂಡ ಪಂಚವಾರ್ಷಿಕ ಯೋಜನೆಯು ಲೋಕಪ್ರಿಯಗೊಳಿ ದರೂ, ನದಿಯಾವ ಯೋಜನೆಯು ಒಟ್ಟಿ ಹೆಜ್ಜೆ ಇದು ಹಾದೆಂದು ಒಪ್ಪಿ, ಅದಕ್ಕೆ ಬೆಂಬಲ ನೀಡಲು ಸಾರ್ವಜನಿಕರಿಗೆ ಸೂಚಿಸಿರುವರು. ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಮುಖ್ಯವಾಗಿ ಅನ್ನ ಮತ್ತು ಬಟ್ಟೆಗಳ ಉತ್ಪಾದನೆಯು ಹೆಚ್ಚುವಂತೆ ಕ್ರಮಗಳು ಜರುಗಿಸಲ್ಪಟ್ಟಿವೆ. ಆಹಾರ ವಿಷಯದಲ್ಲಿ ನಾವು ಸಾಕಷ್ಟು ಸ್ವಾವಲಂಬಿಗಳಾಗಬೇಕೆನ್ನುವ ಉದ್ದೇಶದಿಂದಲೇ ಅನೇಕ ದೊಡ್ಡ ಹಾಗೂ ಸಣ್ಣ ನೀರಾವರಿ ಕೆಲಸಗಳು ಕೈಗೊಳ್ಳಲ್ಪಟ್ಟಿವೆ. ಇವುಗಳಲ್ಲಿ ಅನೇಕ ಯೋಜನೆಗಳು ಜಲವಿದ್ಯುಚ್ಛಕ್ತಿಯ ಉತ್ಪಾದನಾ ಕಾರ್ಯವನ್ನು ನಡೆಸುವುದರಿಂದ ಈ ಶಕ್ತಿಯನ್ನು ಉಪಯುಕ್ತ ರೀತಿಯಲ್ಲಿ ಬಳಸಿಕೊಳ್ಳಲು ಅವಶ್ಯವಾದ ಕ್ಷೇತ್ರವನ್ನು ಹಳ್ಳಿಗಳಲ್ಲಿ ಏನೇನೂ ನಿರೀಕ್ಷಿಸದೆ ನಾವು ನಿರ್ಮಿ

ಸಿಕೊಳ್ಳುವುದು ಅಗತ್ಯ. ಅಣೆಕಟ್ಟುಗಳು ನೀರಾವರಿಯ ಅನುಕೂಲತೆಯನ್ನು ಒದಗಿಸಿದಂತೆ, ವಿದ್ಯುಚ್ಛಕ್ತಿಯನ್ನೂ ಯಂತ್ರಚಾಲಕ ಶಕ್ತಿಯಾಗಿ ಉಪಯೋಗಿಸಿಕೊಂಡು, ನೀರಿನ ಪಂಪುಗಳನ್ನು ನಡೆಸಿ, ನಾವು ನೀರಾವರಿಯ ಲಾಭವನ್ನು ಪಡೆಯಲು ಸಾಧ್ಯವುಂಟು. ಹೀಗೆ ಮಾಡುವುದರಿಂದ ಅನ್ನ ಮತ್ತು ಬಟ್ಟೆಗಳಿಗೆ ಅವಶ್ಯವೆನಿಸಿದ ಆಹಾರ ಧಾನ್ಯಗಳೂ ಹತ್ತಿ ಮುಂತಾದವೂ ಯಥೇಷ್ಟ ಬೆಳೆಯುವುದರಲ್ಲಿ ಸಂಶಯವಿಲ್ಲ. ಸಮೃದ್ಧನೆ ನಾಕಷ್ಟು ಸಾಧನ ಸಂಪತ್ತುಗಳಿರುವ ಪಕ್ಷದಲ್ಲಿ ಇನ್ನೂ ನೂರಾರು ನೀರಾವರಿಯ ಯೋಜನೆಗಳನ್ನು ಕೈಗೊಳ್ಳುವುದಕ್ಕೆ ಬರುತ್ತದೆ. ಪ್ರತಿಯೊಂದು ಗ್ರಾಮಕ್ಕೂ ತನ್ನದೇ ಆದ ಪಂಚವಾರ್ಷಿಕ ಯೋಜನೆ ಇರತಕ್ಕದೆಂದು ಈಚೆಗೆ ರಾಜಾಜಿ ನುಡಿದಿರುವುದು ಈ ಮಾತನ್ನೇ ಸ್ಪಷ್ಟಗೊಳಿಸುತ್ತದೆ.

ಪಾಶ್ಚಾತ್ಯ ನಾಗರಿಕತೆಯೊಂದಿಗೆ ಕಲಿತುಕೊಂಡ ಬಾಳುವುದಕ್ಕೂ ನಮ್ಮಲ್ಲಿರುವ ಕಾರ್ಮಿಕರನ್ನು ದುಡಿಸಿಕೊಳ್ಳುವುದಕ್ಕೂ ಔದ್ಯಮಿಕ ಕ್ಷೇತ್ರದಲ್ಲಿ ನಡೆಯಬೇಕಾದ ಪ್ರಗತಿಯನ್ನು ಸಮೃದ್ಧವಾದ ಕೃಷಿಯು ಎಂದಿಗೂ ತಡೆಯಲಾರದು. ಕೃಷಿಯ ಯಾಂತ್ರೀಕರಣವನ್ನು ಪ್ರತಿಭಟಿಸುವುದೇನೂ ಯೋಗ್ಯವಾಗೆಂದು ಯಂತ್ರವ್ಯಾಮೋಹವೇ ಬೇಡವೆಂದು ನಾವು ಇಂದು ಹೇಳಲು ಬಾರದು. ಭಾರತವು ಔದ್ಯಮಿಕ ಕ್ಷೇತ್ರದಲ್ಲಿ ತೀರ ಹಿಂದುಳಿದಿದೆ—ನೀರಾವರಿ ಕ್ಷೇತ್ರದಲ್ಲಿ ಈಚೆಗೆ ಗಣನೀಯ ಪ್ರಗತಿ ಸಾಧಿಸಲ್ಪಟ್ಟಿದ್ದರೂ, ಅದಕ್ಕೆ ಪ್ರೋತ್ಸಾಹಕವಾಗಿ ಔದ್ಯಮಿಕ ಕ್ಷೇತ್ರಗಳ ಸಹಕಾರವನ್ನು ಪಡೆದಂತೆ ಕಾಣುವುದಿಲ್ಲ. ನಮ್ಮ ಯೋಜನೆಗಳಿಗೆ ಪಾಶ್ಚಾತ್ಯ ದೇಶಗಳ ತಜ್ಞರು ಮತ್ತು ಸಾಮಾನು ಸರಂಜಾಮುಗಳು ಆಧಾರವಾಗಿರುವ ಪ್ರಕೃತದ ಪರಿಸ್ಥಿತಿ ಹೆಚ್ಚು ಸಮಯದ ವರೆಗೆ ಮುಂದುವರಿಯಬಾರದು. ವಿದೇಶಗಳ ಸಹಾಯವನ್ನು ನಾವು ಹೆಚ್ಚು ದಿವಸ ಅವಲಂಬಿಸುವುದರಿಂದ ಗಂಡಾಂತರದ ಪ್ರಸಂಗದಲ್ಲಿ ನಮಗೆ ಕಣ್ಣು ಕತ್ತಲೆ ಗಟ್ಟುವಂತಾಗುವುದು. ನಮ್ಮ ದೇಶದಲ್ಲಿರುವ ಮೂವತ್ತಾರು ಕೋಟಿ ಜನರಲ್ಲಿ ಇರುವ ನೂರಾರು ಮೇಧಾವಿಗಳು ಇಂದು ತಮ್ಮ ಬುದ್ಧಿಮತ್ತೆಯನ್ನು ಪ್ರದರ್ಶಿಸಲು ಅವಕಾಶವಿಲ್ಲದೆ ಎಲೆಮರೆಯ ಕಾಯಿಯಂತೆ ಬದುಕು ಸಾಗಿಸುವರು. ಸರಕಾರದವರು ಅವರನ್ನು ಬೆಳಕಿಗೆ ತಂದು, ಅವರ ಸುಪ್ತಶಕ್ತಿಯನ್ನು ರಾಷ್ಟ್ರಸೇವೆಯ ಕಾರ್ಯದಲ್ಲಿ ಚೆನ್ನಾಗಿ ಉಪಯೋಗಿಸಬೇಕು. ತ್ರಿ

[ಗಾಂ: ಪು. ಪೋಡಿ]

ವೇತನ ದೊರೆಯುವ ಪ್ರತಿ ದಿವಸದಲ್ಲೂ ಸೇವಿಂಗ್ಸ್ ಬೇಂಕ್ ಲೆಖ್ಖದಲ್ಲಿ ಹಣವಿಡಲು ಪ್ರಾರಂಭಿಸಿರಿ.

[illegible]

ವ್ಯವಹಾರ ಪರಿಮಾಣ ರೂ 5,00,00,000

THE CANARA INDUSTRIAL & BANKING SYNDICATE LTD.,

Estd: 1925 H. O UDIPI. S India

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಸ್ಥಾಪನೆ ೧೯೨೫ [ಪ್ರಧಾನ ಕಚೇರಿ, ಉಡುಪಿ ದ. ಭಾರತ

ಭಾರತದ ಶಾಂತಿಸೇನೆ ಜೀರ್ಣಿಸಿಕೊಂಡ ಅನುಭವ

ಕೊರಿಯದ ಬಿಕ್ಕಟ್ಟಿನ ನಡುವೆ ಪ್ರದರ್ಶಿಸಿದ ಸಂಯಮ

ವಿಶ್ವಶಾಂತಿಯ ಪ್ರಸ್ಥಾಪನಾ ಕಾರ್ಯದಲ್ಲಿ ಶಕ್ಯವಿದ್ದಷ್ಟು ನೆರವಾಗಬೇಕೆನ್ನುವ ಶುದ್ಧ ಹೃದಯದಿಂದ ಭಾರತವು ಗುರುತರವಾದ ಹೊಣೆಗಾರಿಕೆಯನ್ನು ಹೊತ್ತು ಕಷ್ಟ ನಷ್ಟಗಳನ್ನು ಸಹಿಸುತ್ತಾ ಬಂದಿದೆ- ಮುಖ್ಯವಾಗಿ ಜಾಗತಿಕ ಯುದ್ಧದ ಕಿಡಿಯುಗುಳುತಿದ್ದ ಕೊರಿಯದ ನೆಲದಲ್ಲಿ ಕದನ ವಿರಾಮವು ಸಾಧ್ಯವಾಗುವಂತೆ ಅದು ಶಕ್ತಿಮೀರಿ ಪ್ರಯತ್ನಿಸಿತಲ್ಲದೆ, ವಿನಿಮಯಕ್ಕೊಪ್ಪದ ಯುದ್ಧ ಕೈದಿಗಳ ಪ್ರಶ್ನೆ ಬಂದಾಗ ಅದನ್ನು ಸುಸೂತ್ರವಾಗಿ ಬಗೆಹರಿಸಲು ಉಪಾಯವೊಂದನ್ನು ಯೋಚಿಸಿ, ಒಂದು "ಶಾಂತಿ ಸೇನೆ"ಯನ್ನು ಕೊರಿಯಾಕ್ಕೆ ಕಳುಹಿಸಿ, ಆ ಕೈದಿಗಳ ಯೋಗಕ್ಷೇಮ ನೋಡಿಕೊಳ್ಳುವ ಕೆಲಸದಲ್ಲಿ ಉದ್ಯುಕ್ತವಾಯಿತು. ಅದೇ ಕಾಲಕ್ಕೆ ತಟಸ್ಥ ರಾಷ್ಟ್ರಗಳ ಮಂಡಳಿಯ ಅಧ್ಯಕ್ಷಸ್ಥಾನವನ್ನು ವಹಿಸಿ, ಉಭಯ ಪಕ್ಷಗಳಿಗೂ ನ್ಯಾಯ ದಾನವಾಗಬೇಕೆನ್ನುವ, ಸೌಹಾರ್ದಯುತವಾಗಿ ಶಾಂತಿಯಿಂದ ಸಮಸ್ಯೆಗಳು ಪರಿಹಾರಗೊಳ್ಳಬೇಕೆನ್ನುವ, ಧೋರಣವನ್ನು ಶ್ರದ್ಧೆಯಿಂದ ವ್ಯಕ್ತಪಡಿಸಿತು.

ಮಹಾ ಕಂಟಕದ ಭಯ

ನಿಸ್ಪೃಹ ಬುದ್ಧಿಯಿಂದ ಕೈಗೊಂಡ ಈ ಉದಾತ್ತ ಕಾರ್ಯದಲ್ಲಿ ಎಷ್ಟು ಅಡಚಣೆಗಳು ಬಂದವು, ಮತ್ತು ಆಯಕಟ್ಟಿನ ಪ್ರಸಂಗಗಳಲ್ಲಿ ಎಂಥ ಮುತ್ಸದ್ದಿತನವನ್ನು ತೋರಿಸಬೇಕಾಯಿತು ಎನ್ನುವುದರ ಪರಿಚಯ ನಮಗೆ ಅಷ್ಟಾಗಿ ಇರಲಿಕ್ಕಿಲ್ಲ- ದೂರದ ಕೊರಿಯಾದಿಂದ ಬಂದ ವಾರ್ತೆಗಳ ಮೇಲಿಂದಲೇ ನಾವು ಅಲ್ಲಿಯ ವಾಸ್ತವ ಘಟನೆಗಳ ಚಿತ್ರವನ್ನು ಕಟ್ಟಿಕೊಂಡು ಭಾರತೀಯ ಪಡೆಗಳಿಗಾದ ಸಿಹಿ—ಕಹಿ ಅನುಭವದ ಕಲ್ಪನೆ ಮಾಡಿಕೊಳ್ಳಬೇಕು. ಕೊರಿಯದಲ್ಲಿ ಯುದ್ಧ ವಿರಾಮ ಒಪ್ಪಂದದಲ್ಲಿ ಮುಖ್ಯವಾಗಿ ಎರಡು ಅಂಶಗಳು ಇದ್ದವು — (೧) ವಿನಿಮಯಕ್ಕೊಪ್ಪದ ಯುದ್ಧ ಕೈದಿಗಳಿಗೆ ೯೦ ದಿನಗಳ ಕಾಲ ವಿವರಣೆಯನ್ನು ನೀಡಬೇಕು. (೨) ಅಷ್ಟರಲ್ಲಿ ಸ್ವದೇಶಕ್ಕೆ ಮರಳಲು ಒಪ್ಪದ ಕೈದಿಗಳ ಭವಿಷ್ಯವನ್ನು ನಿರ್ಣಯಿಸುವುದಕ್ಕೋಸ್ಕರ ಮುಂದೆ ೩೦ ದಿನಗಳಲ್ಲಿ ಕೊರಿಯದ ರಾಜಕೀಯ ಸಮ್ಮೇಳನವೊಂದು ಸೇರಬೇಕು. ಅಲ್ಲಿ ಏನೊಂದೂ ನಿರ್ಣಯ ಸಾಧ್ಯವಾಗದಿದ್ದರೆ, ಈ ಅವಧಿಯ ಅಂತ್ಯದಲ್ಲಿ, ಅಂದರೆ ೯೦+೩೦=೧೨೦ ದಿನಗಳಿಂದ ಕೂಡಲೇ ಯುದ್ಧ ಕೈದಿಗಳೆಲ್ಲ ಸ್ವತಂತ್ರರಾಗಿ ಬಿಡುಗಡೆ ಹೊಂದುವರು. ಒಪ್ಪಂದದ ಈ ಎರಡೂ ಅಂಶಗಳು ಪಾಲಿಸಲ್ಪಟ್ಟಿರುವುದಿಲ್ಲ. ಯುದ್ಧ ಕೈದಿಗಳಲ್ಲಿ ವಿವರಣೆ ಕೊಡಲ್ಪಟ್ಟವರ ಸಂಖ್ಯೆ ಬಹಳ ಕಡಿಮೆ—ಇನ್ನೂ ೨೨೦೦೦ ಯುದ್ಧ ಕೈದಿಗಳು ವಿವರಣೆ ಕೇಳಿಯೇ ಇಲ್ಲ. ವಿವರಣೆ ಕೇಳಿದವರಲ್ಲಿ ಕೂಡ ಸ್ವದೇಶಕ್ಕೆ ಮರಳಲು ಒಪ್ಪಿದವರು ನೂರರಲ್ಲಿ ಮೂರು ಮಂದಿ ಮಾತ್ರ. ಇದರಿಂದ ಸುಮಾರು ೨೩೦೦೦ ಯುದ್ಧಕೈದಿಗಳನ್ನು ಭೇಟಿಯಾಗಿ, ವಿವರಣೆಗಳನ್ನು ನೀಡುವುದರ ಮೂಲಕ ಅವರ ಮನವೊಲಿಸಿ, ಸ್ವದೇಶಕ್ಕೆ ಮರಳುವಂತೆ ಮಾಡಬಹುದೆಂದು ಕಟ್ಟಿಕೊಂಡಿದ್ದ ಆಶೆಗೆ ಬುಡವಿಲ್ಲದಂತಾಗಿದೆ. ರಾಜಕೀಯ ಸಮ್ಮೇಳನವಂತೂ ಸೇರಿಯೇ ಇಲ್ಲ—ಹೀಗೆ ಯುದ್ಧ ಕೈದಿಗಳ ಭವಿಷ್ಯ ನಿರ್ಣಯಕ್ಕೆ ತಕ್ಕುದಾದ ಪರಿಸ್ಥಿತಿ ಇಲ್ಲದಿರುವುದರ ಪರಿಣಾಮವಾಗಿ ಇದೇ ಜನವರಿ ೨೩ನೇ ದಿನಾಂಕ ಕೊರಿಯದ ಯುದ್ಧ ಕೈದಿಗಳ ಪ್ರಶ್ನೆ ಒಂದು ಮಹಾಕಂಟಕವನ್ನು ಇದಿರಿಸುತ್ತದೆ. ಈ ಗಳಿಗೆಯಲ್ಲಿ ಭಾರತೀಯ ಸೇನಾ ದಳವು ನಿರ್ವಹಿಸಬೇಕಾದ ಪಾತ್ರದ ಗಂಭೀರ ಸ್ವರೂಪ ಕಣ್ಣಿಗೆ ಕಟ್ಟಿ ನಿಲ್ಲುತ್ತದೆ.

ಅಡಚಣೆಯ ಮೂಲ

ಕೊರಿಯದಲ್ಲಿ ಭಾರತೀಯ ಸೈನ್ಯ ಅಡಚಣೆಗಳನ್ನು ಎದುರಿಸಬೇಕಾಗಿ ಬಂದುದೇಕೆಂಬುದು ತೀರ ಗೂಢವಾದ ವಿಚಾರ—ಕೊರಿಯದ ಯುದ್ಧ ಕೇವಲ ಮದ್ದುಗುಂಡುಗಳ ಯುದ್ಧವಾಗಿರಲಿಲ್ಲ. ಎರಡು ಪರಸ್ಪರ ವಿರುದ್ಧವಾದ ತತ್ವ ಪ್ರಣಾಳಿಗಳ ನಡುವಣ ಯುದ್ಧವಾಗಿತ್ತು. ಹಾಗೆಯೇ ಕೈದಿಗಳ ಸಮಸ್ಯೆಯೂ ಸುಲಭದಲ್ಲಿ "ಹೌದು" "ಅಲ್ಲ" ಎಂಬುದನ್ನು ಬಂಧಿತ ಯೋಧರ ಬಾಯಿಯಿಂದ ಹೊರಡಿಸುವ ಯಾಂತ್ರಿಕ ಮಾದರಿಯದಾಗಿರಲಿಲ್ಲ. ಅಲ್ಲಿ ನಡೆದಿರುವುದು ಮಾನಸಿಕ ತುಮುಲ. ಭಾರತ ಸರಕಾರವು ಕೊರಿಯದ ರಣ ಭೂಮಿಗೆ ತನ್ನ "ಶಾಂತಿ ಸೇನೆ"ಯನ್ನು ಕಳುಹಿಸಲು ಒಪ್ಪಿಕೊಂಡಾಗ, ಸಮಸ್ಯೆಯ ಹೊರಗಣ ಅಂಶವನ್ನಷ್ಟೆ ಗಮನಿಸಿತು. ಒಳಗಿನ ಹೂರಣ ಬೆಳಕಿಗೆ ಬಂದುದು, ಕೊರಿಯದ ನಿಜತನವಾದ ನಿಃಶಸ್ತ್ರೀಕೃತ ಪ್ರದೇಶದಲ್ಲಿ ನಮ್ಮ ದಳಗಳು ಕಾಲೂರಿದಾಗಲೇ. ಇದಕ್ಕೆ ಮುಂಚೆ ಕೊರಿಯಾಕ್ಕೆ ನಮ್ಮ ಸರಕಾರ ಕಳುಸಿದ್ದ ಮುಂದಾಳಿಗೆ ಸಮಸ್ಯೆಯ ಆಂತರಿಕ ವ್ಯಾಪಾರದ ಸುಳಿವು ತುಸುವಾದರೂ ಹತ್ತಿದ್ದರೆ, ಯೋಗ್ಯ ಮುನ್ನೆಚ್ಚರಿಕೆಯಿಂದಲೂ ಜಾಗ್ರತೆಯಿಂದಲೂ ಕೆಲಸ ಮಾಡಲು ಅನುಕೂಲವಾಗುತಿತ್ತೊ ಏನೋ. ಆದ ದುರ್ದೈವದಿಂದ ಶಾಂತಿ—ಸಂಧಾನಗಳ ಮಾತುಕತೆ ನಡೆಸುತಿದ್ದ ಸಂಯುಕ್ತ ರಾಷ್ಟ್ರ ಸಂಘದ ಸೇನಾಧಿಪತ್ಯ, ತಾನು ಅತಿಯಾಗಿ ಗೌರವಿಸುವ ಜಿನೀವಾ ಒಪ್ಪಂದದ ಹೆಣದ ಮೇಲೆಯೇ ನಿಂತು ತನ್ನೆಲ್ಲ ಕಾರ್ಯಭಾರಗಳನ್ನು ಕುಟಿಲ ತಂತ್ರದಿಂದ ನೆರವೇರಿಸಿತು. ರಾಷ್ಟ್ರಸಂಘ ಮಾಡಿದ ಮೊದಲನೆಯ ಮೋಸ ಕಮ್ಯುನಿಷ್ಟೆ ಯುದ್ಧ ಕೈದಿಗಳನ್ನು ಸುಸಂಘಟಿತವಾದ ೫೦೦—೬೦೦ ಸಂಖ್ಯೆಯ ಗುಂಪುಗಳಾಗಿ ವಿಭಜನೆ ಪ್ರಾಥಿ, ಪ್ರತಿಯೊಂದೂ ಗುಂಪಿನಲ್ಲಿ ಫೋರ್ಮೋಸದ ಚಿಯಾಂಗ ಕೈಶೇಕ ಮತ್ತು ದಕ್ಷಿಣ ಕೊರಿಯದ ಸಿಂಗ್ಮನ್ ರ್ಹೀಯವರ ಹಸ್ತಕರಿಗೆ ಪ್ರವೇಶ ಕೊಟ್ಟದ್ದನ್ನಬಹುದು. ಈ ದೂತರು ಸ್ವದೇಶಕ್ಕೆ ಮರಳ ಬಯಸುವ ಕೈದಿಗಳನ್ನು ಬೆದರಿಕೆಯಿಂದಲೂ ಹಿಂಸಾತ್ಮಕ ಕೃತಿಗಳ ಮೂಲಕವೂ ಸುಮ್ಮನಾಗಿಸುತಿದ್ದರು. ತಾವು ಪ್ರತಿನಿಧೀಕರಿಸುವ ಸರಕಾರಗಳೊಡನೆ ಸಕಲ ವಿಧದ ಸಂಪರ್ಕವನ್ನು ಸ್ಥಾಪಿಸಿಕೊಳ್ಳಲು ಅವರಿಗೆ ರಾಷ್ಟ್ರ ಸಂಘದ ಸೇನಾಧಿಪತ್ಯ ಅನುಕೂಲತೆ ಒದಗಿಸಿದ್ದಿತು. ಮೂರು ವರ್ಷಗಳ ಕಾಲ ನಿರಂತರವಾದ ಉಪದೇಶ ಮತ್ತು ಬೆದರಿಕೆ ಕೂಡಿದ ಬೋಧನೆಗಳಿಂದ ಚಿಯಾಂಗದ ಏಜಂಟರು ಯುದ್ಧ ಕೈದಿಗಳ ಮೇಲೆ ಅದ್ಭುತ ವರ್ಚಸ್ಸನ್ನು ಬೀರಿದ್ದರು. ಈ ಪುಢಾರಿಗಳನ್ನು ಗುರುತಿಸುವುದು ತೀರ ಕಷ್ಟದ ಕೆಲಸ—ಒಂದೊಮ್ಮೆ ಗುರುತಿಸಿದರೂ ಅವರನ್ನು ದಂಡಿಸುವುದು ಗಂಡಾಂತರವನ್ನು ಆಹ್ವಾನಿಸಿದಂತೆಯೇ ಆಗಿತ್ತು.

ತಪ್ಪು ತಿದ್ದುವಂತಿದ್ದಿಲ್ಲ

ಪ್ರತಿಯೊಂದೂ ಶಿಬಿರದಲ್ಲಿ ಈ ಹಸ್ತಕರು ಇರುತಿದ್ದು ರೇಡಿಯೋ ಸಾಂಕೇತಿಕ ಧ್ವಜ ಮುಂತಾದ ಸಲಕರಣೆಗಳ ಸಹಾಯದಿಂದ ಅವರು ಒಂದು ಶಿಬಿರದಿಂದ ಉಳಿದುದಕ್ಕೆ ಸಲಹೆಗಳನ್ನೂ ಸೂಚನೆಗಳನ್ನೂ ಕಳಿಸುತಿದ್ದರು. ಮೇಲಾಗಿ ರಾಷ್ಟ್ರಸಂಘದ ಸೇನಾಧಿಪತ್ಯ ಗುಟ್ಟಾದ ಶಿಬಂದಿಗಳಲ್ಲಿ ಈ ಯುದ್ಧ ಕೈದಿಗಳ ಶಿಬಿರವನ್ನು ಕಟ್ಟಿಸಿದ್ದರಿಂದ ಚಿಯಾಂಗದ ಏಜಂಟರಿಗೆ ಹೊರಗಿದ್ದ ತಮ್ಮವರೊಂದಿಗೆ ಸಂಪರ್ಕವನ್ನು ಸುಲಭದಲ್ಲಿಯೇ ಬೆಳೆಸಲು ಅನುಕೂಲವಾಯಿತು. ನಾಲದುದಕ್ಕೆ ಶಿಬಿರಗಳ ಕೇಂದ್ರಸ್ಥಾನದಲ್ಲಿ ಒಂದು ಆಸ್ಪತ್ರೆಯೂ ಇದ್ದು, ಹಸ್ತಕರು ಅಸ್ವಾಸ್ಥ್ಯದ ನೆವದಲ್ಲಿ ಅಲ್ಲಿಗೆ ಹೋಗಿ, ಕೆಲಸ ನಿಯುಕ್ತರಾದ ದಾದಿಯರ ಸ್ನೇಹಗಳಿಸಿ, ಹೊಸ ಸೂಚನೆಗಳನ್ನು ತರಿಸುವುದು ಮುಂತಾದ ಉಪಕ್ರಮದಲ್ಲಿ ನಿರಾತಂಕವಾಗಿ ಪ್ರವೃತ್ತರಾಗುತಿದ್ದರು. ರಹಸ್ಯಪೂರ್ವಕ ನಡೆಯುತಿದ್ದ ಈ ಚಟುವಟಿಕೆಗಳನ್ನೆಲ್ಲ ಗಮನಿಸುವುದಕ್ಕೆ ಭಾರತೀಯ ಸೈನ್ಯಪಡೆಗೆ ಸಾಕಷ್ಟು ಅವಕಾಶ ದೊರೆಯಲಿಲ್ಲ—ಆದರೆ ಕ್ರಮೇಣ ತಪ್ಪು ತಿಳಿದು ಬಂದಾಗ ಅದನ್ನು ಶಾಂತಿ ಸೇನೆ ತಿದ್ದುವುದಕ್ಕೂ ಸಮರ್ಥವಾಗಲಿಲ್ಲ. ಸಂಶಯದ ಮೇಲೆ ಹಸ್ತಕರನ್ನು ಬಂಧಿಸ ಹೊರಟಿದ್ದರೆ, ಅವರ ಪ್ರಭಾವಕ್ಕೆ ಬಿದ್ದ ಶಿಬಿರದ ಉಳಿದ ಕೈದಿಗಳ ಕೂಡೆ ಅನಿವಾರ್ಯವಾಗಿ ಸೆಣಸಾಟ ನಡೆಯುತಿತ್ತು. ಒಂದು ಶಿಬಿರದಲ್ಲಿ ಗೊಂದಲವಾಯಿತೆಂದರೆ ಸಾಕು—ಎಲ್ಲ ಶಿಬಿರಗಳೂ ಅಂಕೆ ಮೀರಿ ವರ್ತಿಸುವ ಭಯವಿತ್ತು. ಇವೆಲ್ಲವನ್ನೂ ಹಿಡಿತದಲ್ಲಿಟ್ಟುಕೊಳ್ಳುವುದಕ್ಕೆ ಅಲ್ಪಸಂಖ್ಯಾಕರಾದ ಭಾರತೀಯ ಸೈನ್ಯಪಡೆಗೆ ಕಠಿಣವೆನಿಸಿದ್ದ ಸ್ವಾಭಾವಿಕ ಮತ್ತು ಕೊರಿಯಾವನ್ನು ಕದನ ರಂಗವಾಗಿ ಪುನಃ ಮಾರ್ಪಡಿಸುವ

[೧೦ನೇ ಪುಟ ನೋಡಿರಿ]

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್

ಸ್ಥಾಪನೆ: ೧೯೩೫.] [ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ಭಾರತದ ಸುಭದ್ರ ವಿಮಾ ಕಂಪೆನಿಗಳಲ್ಲಿ "ಕೆನರಾ ಮ್ಯೂಚುವಲ್" ಎಣೆ ಇಲ್ಲದ ವಿಶಿಷ್ಟ ಸ್ಥಾನವನ್ನು ಗಳಿಸಿದೆ. ಇದು ಮ್ಯೂಚುವಲ್ ಕಂಪೆನಿಯಾಗಿ ಘಟಿತವಾಗಿದ್ದು, ಪಾಲುದಾರ ಭಂಡವಾಳಗಾರರಿಲ್ಲದಿರುವುದರಿಂದ, ಕಂಪೆನಿಯ ಸರ್ವ ಲಾಭವನ್ನೂ ಹಕ್ಕು ಹೊಂದಿದ ಪಾಲಿಸಿದಾರರೇ ತಮ್ಮಲ್ಲಿ ಹಂಚಿಕೊಳ್ಳುವರು. ಪ್ರಾಗತಿಕ ಬಿಗುವಾದ ತಳಹದಿಯ ಮೇಲೆ ನಡೆಸಿದ ತನ್ನೆಲ್ಲಾ ವಿಮಾ ಗಣನೆಗಳಲ್ಲಿ ಉಳಿತಾಯವನ್ನು ತೋರಿಸಿದುದು ಮಾತ್ರವಲ್ಲದೆ, ಸ್ಥಾಪಿತವಾದಂದಿನಿಂದಲೂ ಇದು ಬೋನಸು ಹಂಚಿದೆ. ಪಾಲಿಸಿದಾರರ ಹಿತವೃದ್ಧಿಯೇ ಧ್ಯೇಯವಾಗುಳ್ಳ ಈ ಪ್ರಗತಿಶೀಲ ಮ್ಯೂಚುವಲ್ ಕಂಪೆನಿಯಲ್ಲಿ ಇಂದೇ ವಿಮೆ ಇಳಿಸಿ, ನಿಮ್ಮ ಕುಟುಂಬದ ಭದ್ರತೆಯನ್ನು ಕಾಯ್ದುಕೊಳ್ಳಿರಿ.

THE CANARA MUTUAL ASSURANCE COMPANY, LTD.,

Estd: 1935] [Head Office: UDIPI, S. INDIA.

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಷಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುದ್ಧಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿಯೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. ೩—೮—೦

ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ

ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಕುಂಭ ಮೇಳದ ಪರ್ವಕಾಲ

ರಾಷ್ಟ್ರೀಯ ಏಕತೆಯ ದ್ಯೋತಕ

ಭಾರತದಲ್ಲಿ ಪ್ರತಿಯೊಂದು ಗ್ರಾಮದಲ್ಲೂ ಹಬ್ಬ ಹುಣ್ಣಿಮೆಗಳೂ ಉತ್ಸವಗಳೂ ಆಚರಿಸಲ್ಪಡುತ್ತಿವೆ. ಈ ಸಂಪ್ರದಾಯ ಅನಾದಿ ಕಾಲದಿಂದ ನಡೆದು ಬಂದಿದೆ. ಹೆಚ್ಚಿನ ಉತ್ಸವಗಳು ವರ್ಷಂಪ್ರತಿ ನಡೆಯುತ್ತಿದ್ದರೆ, ಕೆಲವು ಎರಡು ವರ್ಷಕ್ಕೊಮ್ಮೆಯೋ ಹನ್ನೆರಡು ವರ್ಷಕ್ಕೊಮ್ಮೆಯೋ ಜರಗುತ್ತವೆ. ಉಡುಪಿಯಲ್ಲಿ ಮೊನ್ನೆ ತಾನೆ ನೆರವೇರಿದ ಪರ್ಯಾಯ ಎರಡು ವರ್ಷಗಳಲ್ಲಿ ಒಮ್ಮೆ ಜರಗುವ ಹಬ್ಬ. ಗೋಮಟೇಶ್ವರನ ಮಸ್ತಕಾಭಿಷೇಕ, ಧರ್ಮಸ್ಥಳದ ನಡಾವಳಿ ಮುಂತಾದವುಗಳು ಹನ್ನೆರಡು ವರ್ಷಕ್ಕೊಮ್ಮೆ ನಡೆಯುವ ಸಂಭ್ರಮದ ಜಾತ್ರೆಗಳು. ಉತ್ತರ ಭಾರತದಲ್ಲಿ ಪ್ರಖ್ಯಾತವಾಗಿರುವ "ಕುಂಭ ಮೇಲ"ವೆಂಬ ರಾಷ್ಟ್ರೀಯ ಹಬ್ಬವೂ ಹನ್ನೆರಡು ವರ್ಷಕ್ಕೊಮ್ಮೆ ಜರಗುತ್ತದೆ. ಈ ವರ್ಷ "ತೀರ್ಥರಾಜ"ವೆಂದು ಹೆಸರಾದ ಪ್ರಯಾಗದ ಪುಣ್ಯಕ್ಷೇತ್ರದಲ್ಲಿ ಕುಂಭಮೇಳ ನಡೆಯುತ್ತದೆ. ಮಕರ ಸಂಕ್ರಾಂತಿಯ ದಿನ, ಅಂದರೆ ಜನವರಿ ೧೪ನೇ ತಾರೀಕಿನಂದು ತೊಡಗಿದ ಈ ಉತ್ಸವ ಮಹಾ ಶಿವರಾತ್ರಿಯಂದು ಮಾರ್ಚ ೩ನೇ ತಾರೀಕಿಗೆ, ಮುಕ್ತಾಯವಾಗುತ್ತದೆ. ಈ ಸಮಯದಲ್ಲಿ ಭಾರತದ ನಾನಾ ಮೂಲೆಗಳಿಂದ ವಿವಿಧ ಭಾಷೆಯ, ಆಚಾರ ವಿಚಾರದ, ವೇಶಭೂಷಣಗಳ ಯಾತ್ರಿಕರು ಸಹಸ್ರ ಸಂಖ್ಯೆಯಲ್ಲಿ ಪ್ರಯಾಗಕ್ಕೆ ಆಗಮಿಸಿ, ಪವಿತ್ರವಾದ ತ್ರಿವೇಣೀ ಸಂಗಮದಲ್ಲಿ ಸ್ನಾನ ಮಾಡುವುದು ಸಂಪ್ರದಾಯ. ಹೊರಗಿನವರಿಗೆ, ಭಾರತೀಯರ ನಡೆನುಡಿಗಳಲ್ಲಿ ಬೇಕೆಂಬಷ್ಟು ವೈವಿಧ್ಯವು ದಿನಾಲೂ ತೋರಿ ಬರುತಿದ್ದರೂ, ನಿಜವಾದ ಅಂತಃಕರಣ, ಪ್ರಾಚೀನ ಸಂಸ್ಕೃತಿ ವೈಶಿಷ್ಟ್ಯ, "ಆಧ್ಯಾತ್ಮಿಕ ತತ್ವವನ್ನೇ ಆಶ್ರಯಿಸಿವೆಯೆಂದು ಖಚಿತವಾಗುವುದು ಈ ಸಂದರ್ಭದಲ್ಲೇ ಎಂದೆನ್ನಬಹುದು.

ನಗರ ನಿರ್ಮಾಣ

ಕುಂಭ ಮೇಲದಲ್ಲಿ ಭಾಗವಹಿಸಲು ಬರುವ ಸುಮಾರು ೫೦ ಲಕ್ಷ ಜನ ಯಾತ್ರಿಕರ ಊಟ ವಸತಿಗಳ ಏರ್ಪಾಡನ್ನು ಮಾಡುವುದು ಸುಲಭದ ಕೆಲಸವಲ್ಲ — ಒಂದೆರಡು ದಿನಗಳಲ್ಲ, ಎರಡು ತಿಂಗಳ ಕಾಲ ಈ ಜನ ಸಂದಣಿ ಪ್ರಯಾಗದಲ್ಲಿ ತಪ್ಪುವುದಿಲ್ಲ. ಆದುದರಿಂದ ಹೊರಗಿನವರಿಗೆ ಇಳಿದು ಕೊಳ್ಳಲು ಅನುಕೂಲವಾಗುವಂತೆ ೮೦೦ ಎಕ್ರೆ ಭೂಮಿಯನ್ನು ಹಸನು ಮಾಡಿ ಅಲ್ಲಿ ಗುಡಿ ಗುಡಾರಗಳನ್ನು ಕಟ್ಟಿ ಕೊಡಬೇಕಾಗುವುದು. ಈ ಜನಸ್ತೋಮದಲ್ಲಿ ಸಾಂಕ್ರಾಮಿಕ ಹಾಗೂ ಇತರ ರೋಗಗಳು ವ್ಯಾಪಿಸದಂತೆ, ತಾತ್ಕಾಲಿಕವಾಗಿ ಕಟ್ಟಿದ ಈ ನಗರವನ್ನು ಒಂಭತ್ತು ವಿಭಾಗಗಳಾಗಿ ವಿಂಗಡಿಸಿದ್ದು, ೧೭ ಡಾಕ್ಟರರು, ೩ ಮಹಿಳಾ ವೈದ್ಯರುಗಳು ಮತ್ತವರ ಕೈಕೆಳಗಿನ ನರ್ಸು ಹಾಗೂ ಕಂಪೌಂಡರರು ಬಿಡುವಿಲ್ಲದೆ ದುಡಿಯಬೇಕಾಗುವುದು. ಆಧುನಿಕ ನಗರವೊಂದಕ್ಕೆ ಬೇಕಾದ ಸಕಲಾನುಕೂಲತೆಗಳನ್ನು ಒಳಗೊಂಡಿರುವ "ಕುಂಭ ನಗರ" ಜಗತ್ತಿನಲ್ಲಿಯೇ ಅತಿ ದೊಡ್ಡ 'ತಾತ್ಕಾಲಿಕ" ವಸತಿ ಕೇಂದ್ರ.

ಕುಂಭಮೇಳ ಭಾರತೀಯರ ಅಖಂಡ ಏಕತೆಯನ್ನು ಪ್ರತಿನಿಧೀಕರಿಸುವ ರಾಷ್ಟ್ರೀಯ ಉತ್ಸವ. ಈ ಹಬ್ಬಕ್ಕೆ ಮುಹೂರ್ತ ಒದಗಿ ಬರುವುದು, ಸಾಮಾನ್ಯವಾಗಿ ಹನ್ನೆರಡು ವರ್ಷಕ್ಕೆ ಒಮ್ಮೆ—ಗುರುವು ಕುಂಭ ರಾಶಿಯಲ್ಲೂ ರವಿಯು ಮೇಷ ರಾಶಿಯಲ್ಲೂ ಇದ್ದಾಗ ಹರಿದ್ವಾರ ಕ್ಷೇತ್ರದಲ್ಲಿ ಕುಂಭ ಮೇಳವಾಗುತ್ತದೆ. ವೃಷಭ ರಾಶಿಯಲ್ಲಿ ಗುರುವೂ ಮೇಷ ರಾಶಿಯಲ್ಲಿ ರವಿಯೂ ಇದ್ದಾಗ ಪ್ರಯಾಗದಲ್ಲಿ ಕುಂಭ ಮೇಳ ಜರಗುತ್ತದೆ. ಇದರಂತೆ ನಾಸಿಕ ಮತ್ತು ಉಜ್ಜೈನಿಗಳಲ್ಲೂ ಸಮಯ ಸಮಯಕ್ಕೆ ಕುಂಭ ಮೇಳದ ಜಾತ್ರೆ ನೆರವೇರುತ್ತದೆ.

ಪ್ರಯಾಗದ ಐತಿಹ್ಯ

ಸೃಷ್ಟಿಕರ್ತನಾದ ಬ್ರಹ್ಮನು ಯಜ್ಞಯಾಗಾದಿಗಳನ್ನು ಮಾಡಿದ ಪುಣ್ಯ ಭೂಮಿಯೆಂಬುದರಿಂದ ಪ್ರಯಾಗಕ್ಕೆ ಆ ಹೆಸರು ಬಂದಿತು. ಗಂಗಾ ಯಮುನೆಯರಲ್ಲದೆ ಗುಪ್ತಗಾಮಿಯಾದ ಸರಸ್ವತಿಯೂ ಇಲ್ಲಿ ಒಂದಾಗಿ ಸೇರುವದಾದುದರಿಂದ ಪ್ರಯಾಗಕ್ಕೆ ತ್ರಿವೇಣಿ ಎಂಬ ಗೌರವ ನಾಮವೂ ಸಲ್ಲುತ್ತದೆ. ಈ ಪ್ರದೇಶಕ್ಕೆ ದೇವನಿಲಯವೆಂಬ ಅರ್ಥ ಬರುವ "ಇಲಾಹಾಬಾದ" ಎಂಬ ಹೆಸರಿತ್ತು; ಆದರೆ ಅಕಬರಬಾದಶಹನ ಕಾಲದಲ್ಲಿ ಅಲಹಾಬಾದ ಎಂಬುದಾಗಿ ಈ ಹೆಸರು ಪರಿವರ್ತನೆಗೊಂಡಿತು. ಹೀಗೆ ಪವಿತ್ರ ಕ್ಷೇತ್ರವೆನಿಸಿದ ಪ್ರಯಾಗದ ಉಲ್ಲೇಖವು ಋಗ್ವೇದದಲ್ಲಿ ಕಂಡು ಬರುತ್ತದೆ, ಮಹಾಭಾರತದಲ್ಲಿಯೂ ಪ್ರಯಾಗ ಕ್ಷೇತ್ರದ ಮಹಿಮೆ ವರ್ಣಿಸಲ್ಪಟ್ಟಿದೆ. ರಘು ವಂಶದ ಶ್ರೀರಾಮನಂತೂ ಅರಣ್ಯವಾಸಕ್ಕೋಸ್ಕರ ತೆರಳುವಾಗ ಇಲ್ಲಿಯೇ ಭಾರದ್ವಾಜ ಮಹರ್ಷಿಗಳ ಆತಿಥ್ಯವನ್ನು ಸ್ವೀಕರಿಸಿದ್ದನು.—

ಹತ್ತು ಸಾವಿರ ವಿದ್ಯಾರ್ಥಿಗಳಿಗೆ ಅನ್ನ ಬಟ್ಟೆಗಳನ್ನೂ ವಸತಿ ಸ್ಥಳವನ್ನೂ ಧರ್ಮಾರ್ಥವಾಗಿ ಒದಗಿಸಿಕೊಟ್ಟು ವಿದ್ಯಾದಾನ ಮಾಡುವ ಪ್ರಾಚೀನ ಕುಲಪತಿಗಳಲ್ಲಿ ಮಹರ್ಷಿ ಭಾರದ್ವಾಜರು ಅಗ್ರಗಣ್ಯ. ಇವರು ನೆಲಸುತ್ತಿದ್ದ ಆಶ್ರಮವೂ ಭಾರದ್ವಾಜ ಮಂದಿರವೂ ಪ್ರಯಾಗದಲ್ಲಿದೆ. ಈ ಆಶ್ರಮದಲ್ಲಿ ಅಕ್ಷಯ ವಟವೃಕ್ಷವೊಂದಿದ್ದು, ಇದು ಅನೇಕ ಯುಗಗಳಲ್ಲಿ ನಡೆದ ಘಟನೆಗಳಿಗೆ ಸಾಕ್ಷಿ ರೂಪದಲ್ಲಿ ನಿಂತಿರುತ್ತದೆ. ಈ ಭಾರದ್ವಾಜಾಶ್ರಮಕ್ಕೆ ಹೊಂದಿಕೊಂಡೇ ಅನತಿ ದೂರದಲ್ಲಿ ಇಂದಿನ ಅಲಹಾಬಾದ ವಿಶ್ವವಿದ್ಯಾಲಯವಿರುವುದು ಯೋಗಾಯೋಗವೇ ನಿಜ.

ಕುಂಭ ಮೇಳದ ಮೂಲ

ಕೃತ ಯುಗದಲ್ಲಿ ದೇವ ದಾನವರು ಸಮುದ್ರವನ್ನು ಮಥಿಸಿದ ಬಳಿಕ ಅಮೃತದ ಕುಂಭವನ್ನು ಹಿಡಿದುಕೊಂಡು ಧನ್ವಂತರಿಯು ಮೇಲೆದ್ದು ಬಂದನು. ದಾನವರು ಅಮೃತವನ್ನುಂಡರೆ, ಅಮರರಾಗಿ ಅಜೇಯರಾಗುವರೆಂದೂ ಅವರನ್ನು ಸದೆಬಡೆಯುವುದೇ ದುಸ್ಸಾಧ್ಯವಾಗುವುದೆಂದೂ ಯೋಚಿಸಿ ದೇವತೆಗಳು ಇಂದ್ರಪುತ್ರನಾದ ಜಯಂತನಿಗೆ ಕಣ್ಣುಸನ್ನೆ ಮಾಡಿ, ಅಮೃತ ಕಲಶವನ್ನು ಹಿಡಿದುಕೊಂಡು ಓಡಿ ಹೋಗುವಂತೆ ಸೂಚಿಸಿದರು. ಜಯಂತನ ಈ ಕೃತ್ಯದಿಂದ ದಾನವರು ಕುಪಿತರಾಗಲು ಅವರಿಗೂ ದೇವತೆಗಳಿಗೂ ೧೨ ದಿನಗಳ ಕಾಲ ಹಗಲೂ ರಾತ್ರಿ ಬಿಡದೆ ಘನಘೋರ ಕಾಳಗ ನಡೆಯಿತು.

ಹೀಗೆ ಹನ್ನೆರಡು ಸಲ ಯುದ್ಧ ನಡೆದುದರಿಂದ ಅಮೃತ ಕುಂಭವು ಹನ್ನೆರಡು ಸಲ ಕೈತಪ್ಪಿ ಬಿಟ್ಟಿತು. ಆಗ ಚಂದ್ರನು ಅಮೃತ ಕೆಳಗೆ ಚೆಲ್ಲದಂತೆ ನೋಡಿದನು; ಸೂರ್ಯನ ಪ್ರಭಾವದಿಂದ ಕುಂಭವು ಒಡೆಯದೆ ಉಳಿಯಿತು; ಕುಂಭವು ದಾನವರ ಕೈಗೆ ಸೇರಿದಾಗ ದೇವಗುರುಗಳಾದ ಬೃಹಸ್ಪತ್ಯಾಚಾರ್ಯರು ಅಮೃತದ ರಕ್ಷಣೆ ಮಾಡಿದರು; ಮತ್ತು ಶನಿ ಮಹಾರಾಜನು ಜಯಂತನ ಕೈಯಲ್ಲಿ ಅಮೃತ ಕುಂಭವಿದ್ದಾಗ ಅವನು ತಾನೊಬ್ಬನೇ ಅಮೃತ ಕುಡಿಯ ಬಾರದೆಂದು ವಕ್ರ ದೃಷ್ಟಿಯಿಂದ ಹೊಂಚು ಹಾಕುತಿದ್ದನು.

ಈ ರೀತಿ, ಕಾಳಗದ ಜಂಜಟದಲ್ಲಿ ಎಲ್ಲೆಲ್ಲಿ ಕುಂಭ ಕೆಳಗೆ ಬಿದ್ದಿತೋ ಅಲ್ಲಿ ಮೇಲೆ ಉಲ್ಲೇಖಿಸಿದ ನಾಲ್ವರು ಗ್ರಹಗಳ ವಿಶೇಷಾನುಗ್ರಹದಿಂದ ಕುಂಭ ಯೋಗ ಒದಗಿ ಬರುತ್ತದೆ. ದೇವತೆಗಳ ಒಂದು ದಿನವೆಂದರೆ ಮಾನವನ ಒಂದು ವರ್ಷವಾಗುವುದರಿಂದ, ಹನ್ನೆರಡು ವರ್ಷಕ್ಕೊಮ್ಮೆ ಈ ಉತ್ಸವ ಆಚರಿಸಲ್ಪಡುತ್ತದೆ. ಅದಲ್ಲದೆ ಕುಂಭ ಕೆಳಗೆ ಬಿದ್ದ ಹನ್ನೆರಡು ಸ್ಥಾನಗಳಲ್ಲಿ ಎಂಟು ಸ್ಥಾನಗಳು ಯಾವುದೋ ಬೇರೆ ಲೋಕದಲ್ಲಿವೆ—ಅರ್ಥಾತ್ ನಮ್ಮೀ ಭೂಲೋಕದಲ್ಲಿ ಯುದ್ಧ ನಡೆದುದು ನಾಲ್ಕು ದಿನ ಮಾತ್ರ; ಆಗ ಕೈಭಾರವಾಗಿ ಅಮೃತ ಕುಂಭ ಕೆಳಗೆ ಬಿದ್ದ ಜಾಗವೇ ಹರಿದ್ವಾರ, ಪ್ರಯಾಗ, ನಾಸಿಕ ಮತ್ತು ಉಜ್ಜೈನಿ.

ಪ್ರಚಾರ ಕೇಂದ್ರ

ಭಾರತದ ಮೇಧಾವಿಗಳೂ ಸಾಧು ಸಂತರೂ ರಾಜಮಹಾರಾಜರೂ ಭಕ್ತಾಗ್ರಣಿಗಳೂ ಪ್ರಯಾಗವನ್ನು ಸಂದರ್ಶಿಸಿ ತೀರ್ಥರಾಜನಾದ ತ್ರಿವೇಣೀ ಸಂಗಮದಲ್ಲಿ ಸ್ನಾನಮಾಡದ ಇಲ್ಲ—ಗೌತಮ ಬುದ್ಧನು ಇಲ್ಲಿ ಧರ್ಮ ಪ್ರಚಾರ ಮಾಡಿದ್ದನು. ಅಶೋಕನೂ ಇದನ್ನು ಸಂದರ್ಶಿಸಿ ಸ್ಮಾರಕ ರಚಿಸಿದ್ದನು. ಹರ್ಷವರ್ಧನನೊಂದಿಗೆ ಕ್ರಿ. ಶ. ೬೪೪ರಲ್ಲಿ ಚೀನೀ ಯಾತ್ರಿಕನಾದ ಹ್ಯುಯೆನ್‌ತ್ಸಾಂಗನೂ ಇಲ್ಲಿ ಬಂದು ಕೆಲವು ವಾರವಿದ್ದನು. ಅವನಿಗೆ ಹರ್ಷವರ್ಧನನು ಪುರಾತನ ಸಂಪ್ರದಾಯದಂತೆ ಪ್ರತಿ ಐದು ವರ್ಷಕ್ಕೊಮ್ಮೆ ಪ್ರಯಾಗಕ್ಕೆ ಬಂದು ಸಂಗ್ರಹದಲ್ಲಿದ್ದ ಎಲ್ಲ ವಸ್ತು ಒಡವೆಗಳನ್ನು ಬಡಬಗ್ಗರಿಗೆ ದಾನ ಮಾಡುವ ಪದ್ಧತಿಯನ್ನು ಕಳೆದ ೩೦ ವರ್ಷಗಳಿಂದ ನಡೆಸಿಕೊಂಡು ಬಂದಿದ್ದೇನೆ' ಎಂದು ಹೇಳಿದ್ದನಂತೆ. ಅವನು ತನ್ನೆಲ್ಲ ಆಭರಣಗಳು, ವಜ್ರಗಳು, ಮಣಿಗಳು, ಬೆಲೆಯುಳ್ಳ ಪೋಷಾಕುಗಳು ಎಲ್ಲವನ್ನೂ ದಾನಮಾಡುತಿದ್ದನೆಂದೂ ಕೊಟ್ಟು ತನ್ನದೆನ್ನುವದೇನೂ ಇಲ್ಲದಾಗಲು ತಂಗಿಯಾದ ರಾಜ್ಯಶ್ರೀಯ ಕೈಯಿಂದ ಹಳೆಯ ವಸ್ತ್ರಗಳನ್ನು ಪಡೆದುಕೊಂಡು ಅದನ್ನು ಧರಿಸಿ, ತನ್ನ ಭಂಡಾರವನ್ನೆಲ ಬಡಬಗ್ಗರಿಗೋಸ್ಕರ ಬರಿದು ಮಾಡಿದೆನೆಂದು ಅಭಿಮಾನಗೊಳ್ಳುತ್ತಿದ್ದನೆಂದೂ ಹ್ಯುಯನ್ ತ್ಸಾಂಗ ಬರೆದಿಟ್ಟಿರುವನು.

ಇಂದು ಹಾಗೆ ದಾನ ಮಾಡುವ ಕ್ಷತ್ರಿಯನು ನಮ್ಮ ರಾಜರಲ್ಲಾಗಲೀ ಸರಕಾರದಲ್ಲಾಗಲೀ ಇಲ್ಲವೆಂಬುದು ನಿಜ. ಆದರೂ

[೫ನೇ ಪುಟ ನೋಡಿರಿ]

PLACE YOUR LIFE ASSURANCE WITH A COMPANY OF YOUR OWN - - -

Established in 1929, the POPULAR is progressing on sound lines. It has built up for itself a record of efficient service sound investment and a personal touch with its Policy holders and Representatives At whatever stage We welcome yours association with the POPULAR

THE
POPULAR INSURANCE CO. LTD.
"POPULAR BUILDINGS" MANGALORE-1

ಮುಖ್ಯ ಪ್ರಕಟಣೆ

"ಆನಂದ ಸುಧ" ನಮ್ಮ ಆನಂದ ಸುಧ ಸಮಸ್ತ ಜನಗಳಿಗೆ ಬಲವನ್ನು [illegible] ಪುಷ್ಟಿಯನ್ನು ಕಲಗಿಸುವುದು. ಅನೇಕ ವ್ಯಾಧಿಗಳನ್ನು ನಾಶಮಾಡುತ್ತೆ. ೪೫ ದಿನಗಳಿಗೆ ಸರಿಹೋಗುವ ೮ ಔ. ಸೀಸೆ ೧ಕ್ಕೆ ರೂ. 3 -0—0.

"ಸ್ತ್ರೀ ಸುಧ" ನಮ್ಮ ಸ್ತ್ರೀ ಸುಧ ಸ್ತ್ರೀಯರಿಗೆ ಸಂಭವಿಸುವ ಸಮಸ್ತ ಗರ್ಭಕೋಶ ವ್ಯಾಧಿಗಳನ್ನು, ಋತು ದೋಷಗಳನ್ನು, [illegible] ಸರಿಯಾಗಿ [illegible] ಆಗದಿರುವುದು [illegible] ಉಂಟಾದ ಸಮಸ್ತ ವ್ಯಾಧಿಗಳನ್ನು ನಾಶಮಾಡುವುದು. ಸಂತಾನವನ್ನು ಕಲಿಗಿಸುವುದು. ಒಂದು ತಿಂಗಳಿಗೆ ಸರಿಹೋಗುವ ೧ ಬಾಟಲ್ ಬೆಲೆ ರೂ. 4—0 0.

"ಬಾಲ ಸುಧ" [illegible] ಬಾಲಕರಿಗೆ ಅಜೀರ್ಣ, ಜ್ವರ, ಕೆಮ್ಮು, [illegible] [illegible] ಸುಲಭವಾಗಿ [illegible] ಶಕ್ತಿಯನ್ನು [illegible] ಈ ಎಲ್ಲಾ ವ್ಯಾಧಿಗಳಿಗೆ [illegible] ಮೇಲಾದ ಔಷಧಿ [illegible] ಇಲ್ಲವೆಂದು [illegible] ಈ ವಿಷಯಕ್ಕೆ [illegible] ಯೋಗ್ಯತಾ ಪತ್ರಗಳನ್ನು [illegible] ಅನೇಕ ಸಭೆಗಳಲ್ಲಿ ಅಭಿವೃದ್ಧಿಯಾಗುತ್ತಿದೆ. ಸುಮಾರು ೧ ತಿಂಗಳಿಗೆ ಸರಿ ಹೋಗುವ ೩೦ ಮಾತ್ರೆಗಳ ಸೀಸೆ ೧ಕ್ಕೆ ರೂ. 1—0—0.

[illegible]

ಶ್ರೀಮಾನ್ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್, ರಾಜಮಂಡ್ರಿ.
ಬೆಂಗಳೂರು ಏಜನ್ಸಿ:
ಸುದರ್ಶನ ಆಯುರುವೇದ ವೈದ್ಯಶಾಲ, ನಗರ್ತರ ಪೇಟೆ, ಬೆಂಗಳೂರು-2

ವಿಶಾಖಪಟ್ಟಣದಲ್ಲಿ ಆಂಧ್ರದ ಹೈಕೋರ್ಟು

ತಿರುಪತಿ ಕ್ಷೇತ್ರದಲ್ಲಿ ಹೊಸ ವಿಶ್ವವಿದ್ಯಾನಿಲಯ

ಆಂಧ್ರ ರಾಜ್ಯ ಸರಕಾರದವರು ಈಚೆಗೆ ಕೆಲವು ಮಹತ್ವಪೂರ್ಣ ನಿರ್ಣಯಗಳನ್ನು ಕೈಗೊಂಡಿರುವರು. ಮಂತ್ರಿಮಂಡಳದ ಸಭೆಯು ದಿನಾಂಕ ೧೫ರಂದು ಶ್ರೀ. ಟಿ ಪ್ರಕಾಶಮರ ಅಧ್ಯಕ್ಷತೆಯಲ್ಲಿ ಸೇರಿದಾಗ, ಆಂಧ್ರ ರಾಜ್ಯದ ಹೈಕೋರ್ಟನ್ನು ವಿಶಾಖಾಪಟ್ಟಣದಲ್ಲಿ ತಾತ್ಕಾಲಿಕವಾಗಿ ನೆಲೆಗೊಳಿಸಬೇಕೆಂದು ತೀರ್ಮಾನಿಸಿತು. ಮುಂದಿನ ಬೇಸಗೆ ರಜೆಯ ಬಳಿಕ ಈ ನಿರ್ಣಯವು ಕಾರ್ಯರೂಪದಲ್ಲಿ ಬರುವುದು. ಮಾರ್ಚಿ ತಿಂಗಳಲ್ಲಿ ಮುಂಗಡ ಪತ್ರದ ಅಧಿವೇಶನ ಸೇರಲಿದ್ದು, ಆ ಕಾಲಕ್ಕೆ ಈ ಸಂಬಂಧದ ಗೊತ್ತುವಳಿಯೊಂದು ಶಾಸನ ಸಭೆಯ ಮುಂದೆ ಮಂಡಿಸಲ್ಪಡುವುದು. ವಿಶಾಖಪಟ್ಟಣದಲ್ಲಿರುವ ಈಗಿನ ಜಿಲ್ಲಾಧಿಕಾರಿಗಳ ಕಚೇರಿಯನ್ನು ಹೈಕೋರ್ಟಾಗಿ ಪರಿವರ್ತಿಸಲು ಬರುವುದೆಂದೂ ಎಡ್ವೊಕೇಟರಿಗೆ ಮತ್ತು ನ್ಯಾಯಮೂರ್ತಿಗಳಿಗೆ ವಾಸಯೋಗ್ಯವಾದ ಗೃಹ ಸೌಲಭ್ಯವೂ ದೊರಕುವುದೆಂದೂ ಭೂ ಜಲ ಹಾಗೂ ವಾಯು ಮಾರ್ಗಗಳಿಂದ ವಿಶಾಖಪಟ್ಟಣಕ್ಕೆ ಬರಲು ಅನುಕೂಲತೆಯುಂಟೆಂದೂ ಹೇಳಿ, ಶಾಸನ ಸಭೆಯ ಕೆಲವು ಸದಸ್ಯರು ತುಸು ಒತ್ತಾಯವನ್ನೂ ಈ ಕುರಿತು ಹೇರಿದ್ದರು.

ಶ್ರೀ ವೆಂಕಟೇಶ್ವರ ವಿಶ್ವವಿದ್ಯಾನಿಲಯ

ಮುಂದಿನ ಶಾಲಾವರ್ಷದಿಂದ ಪ್ರಸಿದ್ಧ ತೀರ್ಥ ಕ್ಷೇತ್ರವಾದ ತಿರುಪತಿಯಲ್ಲಿ ಆಂಧ್ರ ರಾಜ್ಯವು ವಿಶ್ವವಿದ್ಯಾಲಯವೊಂದನ್ನು ತೆರೆಯಲಿದೆ. ರಾಯಲ ಸೀಮೆಯ ಜನರು ತಮಗೊಂದು ಪ್ರತ್ಯೇಕ ವಿಶ್ವವಿದ್ಯಾನಿಲಯಬೇಕೆಂದು ಕಟ್ಟಿಕೊಂಡಿದ್ದ ಆಶೆಯನ್ನು "ಶ್ರೀ ವೆಂಕಟೇಶ್ವರ ವಿಶ್ವವಿದ್ಯಾನಿಲಯ ಎಂಬ ಈ ನೂತನ ಶೈಕ್ಷಣಿಕ ಸಂಸ್ಥೆ ಪೂರ್ತಿಗೊಳಿಸುವುದು. ಈ ಕೇಂದ್ರಕ್ಕೆ ಅನಂತಪುರದಲ್ಲಿರುವ ಇಂಜೀನಿಯರಿಂಗ ಕಾಲೇಜು, ಕರ್ನೂಲಿನಲ್ಲಿರುವ ಸರಕಾರೀ ಅಧ್ಯಾಪಕರ ತರಬೇತಿ ಕಾಲೇಜುಗಳನ್ನೊಳಗೊಂಡು ರಾಯಲಸೀಮೆಯ ಹತ್ತು ಕಾಲೇಜುಗಳು ತಾವಾಗಿಯೇ ಸೇರ್ಪಡೆ ಹೊಂದುತ್ತವೆ. ಮುಂಗಡ ಪತ್ರದ ಅಧಿವೇಶನದಲ್ಲಿ ತತ್ಸಂಬಂಧದ ಗೊತ್ತುವಳಿಯೊಂದು ಮಂಡಿಸಲ್ಪಡುವುದು. ಈ ನಡುವೆ ವಿಶ್ವವಿದ್ಯಾಲಯ ಸ್ಥಾಪನೆಯ ಕುರಿತು ವಿವರಗಳನ್ನೂ ಆರ್ಥಿಕ ಪ್ರಶ್ನೆಯನ್ನೂ ವಿಚಾರಿಸಲು ಮಂತ್ರಿ ಮಂಡಳದ ಉಪಸಮಿತಿಯೊಂದು ರಚಿಸಲ್ಪಟ್ಟಿದೆ.

ತೆಲುಗು ರಾಜ ಭಾಷೆ

ಸರಕಾರಕ್ಕೂ ಸಾಧಾರಣ ಜನರಿಗೂ ನಡುವೆ, ನಿಕಟ ಸಂಪರ್ಕವೇರ್ಪಡಿಸಬೇಕೆಂಬುದೇ ಭಾಷಾ ರಾಜ್ಯಗಳ ಬೇಡಿಕೆಯ ತಿರುಳು. ಸರಕಾರ ತನ್ನ ವ್ಯವಹಾರವನ್ನು ಪ್ರಾದೇಶಿಕ ಭಾಷೆಯಲ್ಲಿ ಸಾಗಿಸುವುದು ಇದಕ್ಕೆ ಯೋಗ್ಯ ಉಪಾಯ. ಆಂಧ್ರ ರಾಜ್ಯದಲ್ಲಿ ತೆಲುಗು ಭಾಷೆಯನ್ನು ಸರಕಾರದ ದೈನಂದಿನ ವ್ಯವಹಾರದಲ್ಲಿ ಬಳಸುವ ಪ್ರಶ್ನೆಯನ್ನು ಮಂತ್ರಿ ಮಂಡಳ ವಿಚಾರಿಸಿ, ಪ್ರಕೃತಕ್ಕೆ ಈ ಮಾರ್ಗದಲ್ಲಿ ಕೆಲವು ಅಡಚಣೆಗಳಿವೆ ಎಂದು ಮನಗಂಡಿತು. ಆದರೂ ತೆಲುಗು ಭಾಷೆಯನ್ನು ಬಳಸುವುದಕ್ಕೆ ಸಕಲ ಪ್ರೋತ್ಸಾಹವನ್ನು ಕೊಡಲು ಅದು ನಿರ್ಧರಿಸಿತು. ಸಾಕಷ್ಟು ತೆಲುಗು ಟೈಪರೈಟರ ಯಂತ್ರಗಳನ್ನು ಸಂಪಾದಿಸುವುದು, ತೆಲುಗು ಶೀಘ್ರ ಲಿಪಿ ಟೈಪಿಸ್ಟರನ್ನು ತರಬೇತಿಗೊಳಿಸುವುದು ಮುಂತಾದ ಕೆಲಸಗಳಿಗೆ ವಿಶೇಷ ಗಮನ ಕೊಡಬೇಕಾಗುವುದೆಂದು ಮಂತ್ರಿಮಂಡಳ ಅಭಿಪ್ರಾಯ ಪಟ್ಟಿತು.

ಆಂಧ್ರ ಕೈದಿಗಳ ಬಿಡುಗಡೆ

ತನ್ನ ಪರಕ್ಕೊಳಪಟ್ಟ ಜೈಲುಗಳಲ್ಲಿರುವ ಎಲ್ಲ ಆಂಧ್ರ ಕೈದಿಗಳನ್ನೂ "ಪೊಂಗಲ್" ಹಬ್ಬಕ್ಕೆ ಕೆಲದಿನ ಮುಂಚೆಯೇ ಆಂಧ್ರರಾಜ್ಯ ಸರಕಾರವು ಬಿಡುಗಡೆಮಾಡಿದೆ. ಈ ಸಾಮೂಹಿಕ ಕ್ಷಮಾ ದಾನವನ್ನು ಆಂಧ್ರರಾಜ್ಯ ಸ್ಥಾಪನೆಯ ಪ್ರಯುಕ್ತ ನೀಡಲು ಮಂತ್ರಿಮಂಡಳ ನಿಶ್ಚಯಿಸಿತು. ಸುಮಾರು ೩೫೦೦ ಕೈದಿಗಳು ಈ ಕ್ಷಮಾದಾನದ ಪ್ರಯೋಜನವನ್ನು ಪಡೆದು ಬಂಧ ಮುಕ್ತರಾದರು.

ಹೊಸ ಶಿಕ್ಷಣ ಪದ್ಧತಿ

ಈಗ ಮದ್ರಾಸು ರಾಜ್ಯದಲ್ಲಿರುವ ವರಸೆ ಕ್ರಮದ ಶಿಕ್ಷಣ ಪದ್ಧತಿಯೇ ಆಂಧ್ರ ರಾಜ್ಯದಲ್ಲೂ ಜಾರಿಯಲ್ಲಿದೆ. ಇದಕ್ಕೆ ಮುಂಚೆ ಇದ್ದ ಪದ್ಧತಿಯನ್ನೂ ಈಗಿನ ಪದ್ಧತಿಯನ್ನೂ ಚೆನ್ನಾಗಿ ಪರಿಶೀಲಿಸಿ, ಹೊಸತೊಂದು ಶಿಕ್ಷಣ ಪದ್ಧತಿಯನ್ನು ಕಂಡು ಹಿಡಿಯಬೇಕೆಂದೂ ಮುಂದಿನ ಜೂನ ತಿಂಗಳಿಂದ ಈ ನೂತನ ಪದ್ಧತಿಯನ್ನು ಆಂಧ್ರದ ಎಲ್ಲ ಪ್ರಾಥಮಿಕ ಶಾಲೆಗಳೂ ಅನುಸರಿಸುವಂತಾಗಬೇಕೆಂದೂ ಆಂಧ್ರ ಸರಕಾರ ನಿರ್ಣಯ ಮಾಡಿದೆ. ಹೊಸ ಪದ್ಧತಿಯನ್ನು ಕಂಡು ಹಿಡಿಯಲು ಒಂದು ಸಮಿತಿಯು ಇಷ್ಟರಲ್ಲೇ ನೇಮಕ ಹೊಂದುವುದು.

ತಮಿಳರ ಬೇಡಿಕೆ

ಮದ್ರಾಸು ರಾಜ್ಯದಲ್ಲಿ ತಮಿಳು ಭಾಷೆಯನ್ನೇ ಸರಕಾರದ ವ್ಯವಹಾರದಲ್ಲಿ ಬಳಸಬೇಕೆಂಬ ಸೂಚನೆಯೊಂದು ಬಂದಿದ್ದ ಗಜೆಟಿನಲ್ಲಿ ಈ ಸಂಬಂಧದ ಖಾಸಗಿ ಮಸೂದೆಯೊಂದು ಪ್ರಕಟಗೊಂಡಿದ್ದು, ಘಟನೆಯ ಪ್ರಕಾರ ದೊರೆತ ಸೌಲಭ್ಯವನ್ನು ಉಪಯೋಗಿಸಿ, ತಮಿಳು ಭಾಷೆಯನ್ನು ಸರಕಾರ ಜನತೆಯೊಡನೆ ವ್ಯವಹರಿಸುವುದಕ್ಕೆ ಉಪಯೋಗಿಸಬೇಕೆಂದು ಅದರಲ್ಲಿ ಹೇಳಿದೆ

ಪಠ್ಯ ಪುಸ್ತಕಗಳಿಗೆ ಟಿಪ್ಪಣಿ

ಮದ್ರಾಸು ರಾಜ್ಯ ಸರಕಾರವು ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ನಿಯುಕ್ತವಾದ ಪಠ್ಯ ಪುಸ್ತಕಗಳಿಗೆ ಟಿಪ್ಪಣಿಗಳನ್ನು ಬರೆದ ಪುಸ್ತಕಗಳ ಪ್ರಕಾಶನವನ್ನು ಪ್ರತಿಬಂಧಿಸುವ ವಿಚಾರವನ್ನು ಮಾಡುತ್ತಿದೆ. ಶ್ರೀಮಾನ್ ಜಿ. ಕೃಷ್ಣಮೂರ್ತಿಯವರು ಇಂಥ ಟಿಪ್ಪಣಿ ಪುಸ್ತಕಗಳು ಹುಡುಗರು ತರಗತಿಯಲ್ಲಿ ಪಾಠಕ್ಕೆ ಗಮನ ಕೊಡದಿರುವುದಕ್ಕೆ ಹೊಣೆಗಾರವಾಗಿರುವುದಿಲ್ಲ ಎಂದು ಪ್ರಶ್ನಿಸಿದ್ದಕ್ಕೆ ಮಾನ್ಯ ಮಂತ್ರಿ ಶ್ರೀ. ಸುಬ್ರಹ್ಮಣ್ಯರು ಇಂಗ್ಲೀಷು ಮತ್ತಿತರ ವಿಷಯಗಳಲ್ಲಿ ವಿದ್ಯಾರ್ಥಿಗಳ ಜ್ಞಾನದ ಮಟ್ಟವನ್ನು ಟಿಪ್ಪಣಿ ಪುಸ್ತಕಗಳೇ ತುಂಬ ಕೆಳಗಿಳಿಸುತ್ತವೆ ಎಂದು ಉತ್ತರ ಕೊಟ್ಟರು.

ಅಗ್ಗದಲ್ಲಿ ಹ್ಯೊಗೆಯ ಪೂರೈಕೆ

ಸಿಮೆಂಟಿನ ತಯಾರಿಕೆಯಲ್ಲಿ ಬಳಸಲಿಕ್ಕೆಂದು ಈಗ ಟನ್ನಿಗೆ ಏಳು ನೂರು ರೂಪಾಯಿಗಳ ಬೆಲೆ ಬಾಳುವ ಹ್ಯೊಗೆಯನ್ನು ವಿದೇಶಗಳಿಂದ ಆಮದು ಮಾಡಲಾಗುತ್ತಿದೆ. ಇನ್ನು ಮುಂದೆ ಈ ಆಮದನ್ನು ನಾವು ಕಡಿಮೆ ಮಾಡಬಲ್ಲೆವು. ಭಾರತ ಸರಕಾರದ ಭೂಗರ್ಭ ಸಂಶೋಧನಾ ಮಂಡಳದವರು ನಡೆಸಿದ ಪರಿಶೀಲನೆಗಳ ಪರಿಣಾಮವಾಗಿ, ಮದ್ರಾಸು ರಾಜ್ಯದ ಚಿಂಗಲ್ಪೇಟೆ ಜಿಲ್ಲೆಯಲ್ಲಿ ಸುಮಾರು ೫೭೮೦೦ ಟನ್ನುಗಳಷ್ಟು ನಾಜೂಕಾದ ಹ್ಯೊಗೆ ಇದೆಯೆಂದೂ ಇದನ್ನು ಸಿಮೆಂಟು ತಯಾರಿಕೆಯಲ್ಲಿ ಬಳಸಬಹುದೆಂದೂ ತಿಳಿದಿದೆ. ಇದರ ಬೆಲೆ ಟನ್ನಿಗೆ ಇಪ್ಪತ್ತು ರೂಪಾಯಿಗಳಷ್ಟು ಕಡಿಮೆ ಬೀಳುತ್ತದೆ. ವರ್ಷಕ್ಕೆ ೫೦೦ ಟನ್ನುಗಳಂತೆ ಉಪಯೋಗಿಸುತ್ತಿದ್ದರೆ, ಇನ್ನು ೧೧೫ ವರ್ಷಗಳ ವರೆಗೆ ಈ ನಿಕ್ಷೇಪ ಸಾಕಾಗುವುದು.

ಅಣು ಸಂಶೋಧನ

ಸುಪ್ರಸಿದ್ಧ ಭಾರತೀಯ ವಿಜ್ಞಾನಿಗಳಾದ ಡಾ. ಎಸ್. ಎಸ್. ಭಾಟನಗರರು ಅಣುಶಕ್ತಿಯ ಜಾಗತಿಕ ಉಪಯೋಗದ ಮೇಲೆ ನಿರ್ಬಂಧ ಹೊರಬೇಕೆಂದೂ ಮಾನವರ ಕಲ್ಯಾಣ ಹಾಗೂ ಹಿತ ದೃಷ್ಟಿಯಿಂದ ಅಣುಶಕ್ತಿಯ ವಿಧಾಯಕ ಉಪಯೋಗವಾಗುವಂತೆ ಅಭಿವೃದ್ಧಿ ಪ್ರಯತ್ನಗಳು ನಡೆಯಬೇಕೆಂದೂ ಹೇಳಿರುವರು. ರಾಜಕೀಯ ಹಾಗು ಆಡಳಿತದ ವರ್ಚಸ್ಸಿಗೆ ಒಳಪಟ್ಟ ಅಣು ಶಕ್ತಿಯ ಸಮಸ್ಯೆ ವಿಜ್ಞಾನಿಗಳ ನಿರ್ಬಂಧವನ್ನು ಮೀರುತ್ತಿದೆಯೆಂದು ಅವರು ಅಭಿಪ್ರಾಯಪಟ್ಟರು. ಅಮೇರಿಕದಿಂದ ಬಂದ ಒಂದು ವಾರ್ತೆಯಂತೆ, ಆರು ಭಾರತೀಯ ವಿದ್ಯಾರ್ಥಿಗಳು ಅಣು ಶಕ್ತಿಯನ್ನು ಸಮಾಜಕ್ಕೆ ಹಿತವನ್ನುಂಟು ಮಾಡುವ ವಿಧಾಯಕ ಕೆಲಸಗಳಿಗೆ ಬಳಸುವ ಕುರಿತು ಕಳೆದ ಐದು ವರ್ಷಗಳಿಂದ ಸಂಶೋಧನೆ ನಡೆಸುತ್ತಿರುವರು. ಪೆನೆಸ್ಸಿ ರಾಜ್ಯದಲ್ಲಿರುವ

(೩ನೇ ಪುಟದಿಂದ)

ತ್ರಿವೇಣೀತಟದಲ್ಲಿ ಧರ್ಮ ಪ್ರಚಾರವೂ ಯಜ್ಞಯಾಗಗಳೂ ಅನೇಕ ದಿನಗಳ ವರೆಗೆ ನಡೆಯುತ್ತವೆ. ಸಂಭ್ರಮದ ಮೆರವಣಿಗೆಗಳು ಧಾರ್ಮಿಕ ವಾತಾವರಣದ ಗಾಂಭೀರ್ಯವನ್ನು ಅಧಿಕಗೊಳಿಸುತ್ತವೆ. ಮೇಳದ ಆಯೋಜಕರು ಯಾತ್ರಾರ್ಥಿಗಳ ಬಗ್ಗೆ ಮನೋರಂಜನೆಯ ಕಾರ್ಯಕ್ರಮಗಳನ್ನೂ ಏರ್ಪಡಿಸುತ್ತಾರೆ. ನಾಟಕ ಪ್ರದರ್ಶನ, ಜಾನಪದ ಹಾಗೂ ಪ್ರಾದೇಶಿಕ ನೃತ್ಯಗಳು, ಪುರಾಣ ಪ್ರವಚನ, ಜಾದೂಗಾರಿಕೆ, ಮಲ್ಲಯುದ್ಧ ಮುಂತಾದ ಬಗೆ ಬಗೆಯ ವಿನೋದಗಳು ಜರಗುವುದರಿಂದ ದೀರ್ಘ ಪ್ರವಾಸದ ಕಷ್ಟ, ಕಾರ್ಪಣ್ಯಗಳ ಅನುಭವವೇ ಆಗುವುದಿಲ್ಲ. ಭಾರತದ ರಾಷ್ಟ್ರೀಯ ಸಂಸ್ಕೃತಿ ಮತ್ತು ವೈಶಿಷ್ಟ್ಯಗಳ, ಭಾರತೀಯ ಆತ್ಮ ದರ್ಶನದ ಪ್ರಚಾರಕ್ಕೂ ಈ ಸಂದರ್ಭವನ್ನು ಉಪಯೋಗಿಸಿಕೊಳ್ಳಬಲ್ಲೆವು.

ದಿ ಬೊಂಬೆಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿ., ಬೊಂಬಾಯಿ
1953ನೆ ವರ್ಷದ ವೆಲ್ಯುಯೇಶನ್ ಪ್ರಕಾರ ಉದಾರ ಬೋನಸ್
ಎಂಡೋಮೆಂಟ್ ಪೊಲಿಸಿಗಳ ಮೇಲೆ ರೂ. 10- } ವರ್ಷ ಒಂದರ
ಜೀವಾವಧಿ ಪೊಲಿಸಿಗಳ ಮೇಲೆ ರೂ. 12-8 } ರೂ. 1000ಕ್ಕೆ
(ಪ್ರಚಲಿತ ಪ್ರೀಮಿಯಮ್ ಸ್ಕೇಲಿನಂತೆ)
ಜೀವ ವಿಮೆಗಾಗಲೀ, ಪ್ರಾತಿನಿಧ್ಯಹೊಂದಲಿಕ್ಕಾಗಲೀ
ನಮ್ಮೊಡನೆ ವಿಚಾರಿಸಿದರೆ ಅಪೇಕ್ಷಿತ ಫಲವಿನ್ನೀಯುವುದು
ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್
ಚೀಫ್ ಏಜಂಟ್ಸ್, ದಿ ಬೊಂಬೆ ಲ್ಯಾಫ್ ಎಶ್ಯೂರೆನ್ ಕೊ. ಲಿಮಿಟೆಡ್.
ಬೊಂಬೆ ಲ್ಯಾಫ್ ಬಿಲ್ಡಿಂಗ್, ಉಡುಪಿ, ದ. ಕ.
ಅಥವಾ ಶಾಖಾ ಕಛೇರಿಗಳಲ್ಲಿ: ಮಧುರೆ, ಬೆಂಗಳೂರು, ತ್ರಿವೆಂಡ್ರಮ್, ಕಲ್ಲಿಕೋಟೆ
ಬೊಂಬಾಯಿ, ಮಂಗಳೂರು ಮತ್ತು ಕೊಯಮುತ್ತೂರು.
The Bombay Life Assurance Co., Ltd., Bombay

70 ವರುಷಗಳಿಂದ ಜಗಜ್ಜನಿತವಾದುದು
ಮಲೇರಿಯಾ, ಇನ್‌ಫ್ಲೂಯೆಂಜಾ ಮತ್ತು ಇತರ ಜ್ವರಗಳಿಗೆ
ಬಾಟ್ಲಿವಾಲಾ ಆಗ್ ಮಿಕ್ಸ್ಚರ್
ಮತ್ತು ಮಾತ್ರೆಗಳು
ಎಲ್ಲಾ ಕೆಮಿಸ್ಟರಲ್ಲೂ ಕಿರಾಣಿ ಅಂಗಡಿಕಾರರಲ್ಲೂ ಮಾರಲ್ಪಡುತ್ತವೆ.
ಉತ್ಪಾದನಾಧಿಕಾರಿಗಳು;-
ಡಾ| ಎಚ್. ಎಲ್. ಬಾಟ್ಲಿವಾಲಾ ಸನ್ಸ್ & ಕೊ. ಲಿಮಿಟೆಡ್,
ಬಾಟ್ಲಿವಾಲಾ ಬಿಲ್ಡಿಂಗ್, ಪೋರ್ತುಗೀಸ್ ಸ್ಟ್ರೀಟ್,
Tele. Add: "CAWASHABAD" ದಾದರ್, ಬೊಂಬಾಯಿ, 28

ಕಲ್ಯಾಣಿಯಲ್ಲಿ ಕಾಂಗ್ರೆಸ ಅಧಿವೇಶನದ ಸಂಭ್ರಮ

ತಿರುಕೊಚ್ಚಿಯಲ್ಲಿ ಚುನಾವಣೆಯ ಪ್ರಚಾರ

ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸಿನ ೫೯ನೇ ಅಧಿವೇಶನವು ಈಗ ಕಲ್ಕತ್ತೆಗೆ ಸಮೀಪದ ಕಲ್ಯಾಣಿಯೆಂಬ ಗ್ರಾಮಾಂತರ ಪ್ರದೇಶದಲ್ಲಿ ನಿರ್ಮಿಸಿದ ತಾತ್ಕಾಲಿಕ ನಗರದಲ್ಲಿ ಜರಗುತ್ತಿದೆ. ದಿನಾಂಕ ೧೬ರಂದು ಔಪಚಾರಿಕವಾಗಿ ಉದ್ಘಾಟಿಸಲ್ಪಟ್ಟ ಸರ್ವೋದಯ ಔದ್ಯೋಗಿಕ ಪ್ರದರ್ಶನದೊಡನೆ ಕಲ್ಯಾಣಿಯ ಕಾಂಗ್ರೆಸ ನಗರವು ಚಟುವಟಿಕೆಗಳಿಂದ ತುಂಬಿ ತುಳುಕುತ್ತಿದೆ. ಕಲ್ಕತ್ತೆಯ ಉತ್ತರಕ್ಕೆ ೩೫ ಮೈಲುಗಳ ಅಂತರದಲ್ಲಿ ಭಾಗೀರಥೀ ನದಿಯ ಪೂರ್ವ ದಂಡೆಯ ಮೇಲೆ ನಿಸರ್ಗದ ಸುಂದರ ಆವರಣದಲ್ಲಿ ೬೦೦ ಎಕ್ರೆ ವಿಶಾಲವಾದ ಅಧಿವೇಶನ ಸ್ಥಳವು ಕಂಗೊಳಿಸುತ್ತದೆ. ಕಾಂಗ್ರೆಸ ಅಧಿವೇಶನಕ್ಕೆ ಭಾರತದ ಮೂಲೆ ಮೂಲೆಗಳಿಂದಲೂ ಆಗಮಿಸುವ ಪ್ರತಿನಿಧಿಗಳಿಗೆ ಟೆಲಿಫೋನ್ ತಂತಿ, ಬೇಂಕಿಂಗ್, ವಿದ್ಯುತ್ ಮತ್ತು ನೀರಿನ ಪೂರೈಕೆ, ವಸತಿಯ ಅನುಕೂಲತೆ ಮುಂತಾದ ಆಧುನಿಕ ನಾಗರಿಕ ಸೌಕರ್ಯಗಳನ್ನು ಒದಗಿಸುವ ಅಚ್ಚುಕಟ್ಟಿನ ವ್ಯವಸ್ಥೆ ಮಾಡಲ್ಪಟ್ಟಿದೆ. ಅತಿಥಿಗಳ ಯೋಗಕ್ಷೇಮ ನೋಡಿಕೊಳ್ಳಲು ೨೫೦೦ ಸ್ವಯಂ ಸೇವಕರ ತಂಡವೂ ಇದೆ.

ಅತ್ಯುತ್ತಮ ವ್ಯವಸ್ಥೆ

ಅಖಿಲಭಾರತ ಕಾಂಗ್ರೆಸದ ಮತ್ತು ಪ್ರದೇಶ ಕಾಂಗ್ರೆಸದ ತಾತ್ಕಾಲಿಕ ಕಚೇರಿಯು ಕಲ್ಯಾಣಿಗೆ ವರ್ಗಾಯಿಸಲ್ಪಟ್ಟಿದೆ. ವಿಷಯ ನಿಯಾಮಕ ಸಮಿತಿಯು ಸೇರಲಿರುವ ಮಂಟಪವಲ್ಲದೆ, ಒಂದೂವರೆ ಲಕ್ಷ ಜನ ಕುಳಿತಿರಬಹುದಾದ ಬಹಿರಂಗ ಅಧಿವೇಶನದ ವಿಶಾಲ ಮಂಟಪ ರಚಿಸಲ್ಪಟ್ಟಿದೆ. ಸಂದರ್ಶಕರಿಗಾಗಿ ಸೀಲ್ದಾ ನಿಲ್ದಾಣದಿಂದ ರೈಲ್ವೆಗಳು ಓಡಿಯಾಡುತ್ತಿವೆ. ಸ್ಟೇಟ್ ಟ್ರಾನ್ಸಪೋರ್ಟ ಬಸ್ಸುಗಳೂ ಪ್ರತಿನಿಧಿಗಳನ್ನು ತುಂಬಿ ತರುತ್ತಿವೆ. ಉಪ ಸಮಿತಿಯೊಂದು ಆರೋಗ್ಯ ರಕ್ಷಣೆಯ ವ್ಯವಸ್ಥೆಯನ್ನು ಕೈಗೊಂಡಿದ್ದು ೧೨ ಮಂಚಗಳುಳ್ಳ ಸಾಮಾನ್ಯ ರೋಗಿಗಳ ಆಸ್ಪತ್ರೆಯೂ ೧೨ ಮಂಚಗಳುಳ್ಳ ಸಾಂಕ್ರಾಮಿಕ ರೋಗಿಗಳ ಆಸ್ಪತ್ರೆಯೂ ತಾತ್ಕಾಲಿಕವಾಗಿ ತೆರೆಯಲ್ಪಟ್ಟಿದೆ. ನಾಲ್ಕು ಪ್ರಥಮ ಚಿಕಿತ್ಸಾ ಶಿಬಿರಗಳೂ ಒಂದು ಆಯುರ್ವೇದ ವೈದ್ಯಾಲಯವೂ ೨೦೦ ಡಾಕ್ಟರರೂ ಅನೇಕ ನರ್ಸುಗಳೂ ಉಪಚಾರ ನಡೆಸಲು ಸಿದ್ಧರಾಗಿರುವರು. ಅಧಿವೇಶನ ಸ್ಥಳಕ್ಕೆ ಮೂರು ಮೈಲು ದೂರದಲ್ಲಿ ಕಲ್ಯಾಣಿ ರೈಲ್ವೆ ನಿಲ್ದಾಣ ರಚಿಸಲ್ಪಟ್ಟಿದೆ. ಕಲ್ಕತ್ತೆಯಿಂದ ಕಲ್ಯಾಣಿಗೆ ಉಗಿ ಹಡಗಗಳೂ ಸಂಚರಿಸುತ್ತಿವೆ. ಕಲ್ಯಾಣಿಗೆ ವಿಮಾನ ಮೂಲಕ ಬರುವವರಿಗೆ ಅನುಕೂಲವಾಗಲೆಂದು ಕಟ್ಟಿಸಿದ ಕಂಚರ ಪಾರಾ ತಾತ್ಕಾಲಿಕ ನಿಲ್ದಾಣಕ್ಕೆ ಡಂಡಂ ವಿಮಾನ ನಿಲ್ದಾಣದಿಂದ ಪ್ರಯಾಣಿಕರನ್ನು ಪುಕ್ಕಟೆ ಒಯ್ಯುವುದಕ್ಕೆ ಆಯಾ ವಿಮಾನ ಕಂಪೆನಿಯೊಡನೆ ಪೂರ್ವ ವ್ಯವಸ್ಥೆಯನ್ನು ಮಾಡಲಾಗಿರುವದು.

ಕಾರ್ಯಕ್ರಮದ ವಿವರ

ಸರ್ವೋದಯ ಔದ್ಯೋಗಿಕ ಪ್ರದರ್ಶನವು ಮೂರು ಚದರ ಮೈಲು ವಿಸ್ತಾರವಾದ ಕಾಂಗ್ರೆಸ ನಗರದ ಪಶ್ಚಿಮ ಭಾಗದಲ್ಲಿದ್ದು "ಗಾಂಧೀ ವೇದಿಕೆ" ಇಲ್ಲಿಯ ಪ್ರಧಾನ ಆಕರ್ಷಣೆಯಾಗಿರುತ್ತದೆ. ಮಹಾತ್ಮಜೀಯ ಜೀವನದ ಮಹತ್ವದ ಘಟನೆಗಳನ್ನು ಚಿತ್ರಿಸುವ ಪ್ರತಿಕೃತಿಗಳನ್ನು ಇದು ಒಳಗೊಂಡಿದೆ. ಕಾಂಗ್ರೆಸಾಧ್ಯಕ್ಷ ನೆಹರೂರವರು ಇದೇ ೧೯ನೇ ದಿನಾಂಕದಿಂದ ೨೫ನೇ ದಿನಾಂಕದ ವರೆಗೆ ಕಲ್ಯಾಣಿಯಲ್ಲಿ ಉಳಿದುಕೊಂಡು, ಕಾಂಗ್ರೆಸ ಕಾರ್ಯ ಸಮಿತಿ ಅಖಿಲ ಭಾರತ ಕಾಂಗ್ರೆಸ ಅಧಿವೇಶನ, ಬಹಿರಂಗ ಅಧಿವೇಶನಗಳ ಅಧ್ಯಕ್ಷತೆ ವಹಿಸುವರಲ್ಲದೆ, ಮಕ್ಕಳ ಜಾತ್ರೆ, ತರುಣರ ಕೂಟ, ಪ್ರದೇಶ ಕಾಂಗ್ರೆಸ ಅಧ್ಯಕ್ಷರ ಸಭೆ, ಮಹಿಳಾ ಗೋಷ್ಠಿ, ನೇತಾಜಿ ಸುಭಾಷಚಂದ್ರ ಬೋಸರ ಜನ್ಮದಿನೋತ್ಸವಗಳಲ್ಲೂ ಭಾಗವಹಿಸುವರು. ಜನವರಿ ೨೩ನೇ ತಾರೀಕಿನ ದಿನ ಪ್ರಾತಃಕಾಲ ಶ್ರೀ ನೆಹರೂರವರ ಅಮೃತ ಹಸ್ತದಿಂದ ಧ್ವಜಾರೋಹಣ ಕಾರ್ಯ ನೆರವೇರುವುದು. ಅದೇ ದಿನ ಮಧ್ಯಾಹ್ನ ಮೂರು ಗಂಟೆಗೆ ವಿಷಯ ನಿಯಾಮಕ ಸಮಿತಿ ಸಭೆಗೂಡುವದು. ೨೩ನೇ ದಿನಾಂಕ ನೇತಾಜಿಯವರ ಜನ್ಮದಿನವಾದುದರಿಂದ ಅಂದು ಬೆಳಿಗ್ಗೆ ಅವರ ಮೂರ್ತಿಗೆ ಪುಷ್ಪಹಾರ ಅರ್ಪಿಸಲಾಗುವದು. ಅದೇ ದಿನ ಅಪರಾಹ್ನ ಮೂರು ಗಂಟೆಗೆ ಮಹಾಧಿವೇಶನ ಜರಗುವುದು.

ರಾಜಾಜಿಯ ಹಿತೋಪದೇಶ

ತಿರುಕೊಚ್ಚಿಯಲ್ಲಿ ಈಗ ಚುನಾವಣಾ ಪ್ರಚಾರ ಕಾರ್ಯವು ಭರದಿಂದ ನಡೆದಿದೆ. ಚುನಾವಣೆಯಲ್ಲಿ ಕಾಂಗ್ರೆಸ್ಸೇತರ ಪಕ್ಷಗಳು ತ್ರಿಪಕ್ಷೀಯ ಪ್ರತಿ ಸ್ಪರ್ಧೆಯನ್ನು ತಪ್ಪಿಸಿಕೊಳ್ಳುವ ಉದ್ದೇಶದಿಂದ ಅಪವಿತ್ರ ಮೈತ್ರಿಯನ್ನು ಮಾಡಿಕೊಂಡಿವೆ. ಕಾಂಗ್ರೆಸು ಕಡೆಯಿಂದ ಚುನಾವಣಾ ಪ್ರಚಾರ ಕಾರ್ಯವನ್ನು ಮಾಡಲು ಕಳೆದ ವಾರ ಮೂರು ದಿನಗಳ ವರೆಗೆ ಮದ್ರಾಸದ ಮುಖ್ಯ ಮಂತ್ರಿ ಶ್ರೀ ರಾಜಗೋಪಾಲಾಚಾರ್ಯರು ತಿರುಕೊಚ್ಚಿಗೆ ಹೋಗಿದ್ದರು. ತಿರುಕೊಚ್ಚಿಯಲ್ಲಿರುವ ಜೋಪಾನಿನಾ ಸರಕಾರದ ಎಲ್ಲ ಮಂತ್ರಿಗಳನ್ನೊಳಗೊಂಡು ಕಾಂಗ್ರೆಸು ಪಕ್ಷವು ದಕ್ಷರಾದ ಉಮೇದ್ವಾರರನ್ನು ಈ ಸಲ ಚುನಾವಣಾ ರಂಗಕ್ಕೆ ಇಳಿಸಿರುವುದು. ಕೇವಲ ೩ ಸ್ಥಾನಗಳಲ್ಲಿ ಕಾಂಗ್ರೆಸು ಸ್ಪರ್ಧೆಗೆ ಇಳಿಯುವುದಿಲ್ಲ. ತಿರುಕೊಚ್ಚಿಯ ವಿಸರ್ಜಿತ ಶಾಸನ ಸಭೆಯ ಅಧ್ಯಕ್ಷರು ಸ್ವತಂತ್ರರಾಗಿ ಸ್ಪರ್ಧಿಸುವ ತಿರುವನಂತಪುರದಲ್ಲಿ ಕಾಂಗ್ರೆಸು ಉಮೇದ್ವಾರರನ್ನು ನಿಲ್ಲಿಸಿಲ್ಲ — ಆದರೆ ಹಿಂದೊಮ್ಮೆ ಮುಖ್ಯಮಂತ್ರಿಗಳಾಗಿದ್ದ ಶ್ರೀ. ಪಟ್ಟಂ ಥಾನು ಪಿಳ್ಳೆಯವರು ಇಲ್ಲಿ ಬಲವಾದ ಪ್ರತಿಸ್ಪರ್ಧೆಯನ್ನು ಕೊಡಲಿರುವರು. ರಾಜಾಜಿಯವರು ಈ ಅನುಚಿತ ಸ್ಪರ್ಧೆಗೆ ಕೈ ಹಾಕಬಾರದೆಂದು ಪಿಳ್ಳೆಯವರಿಗೆ ಹಿತಬೋಧೆ ನೀಡಿರುವರು. ತಿರುಕೊಚ್ಚಿಯ ಜನತೆಗೆ ಕಾಂಗ್ರೆಸ್ಸಿನ ಉಮೇದ್ವಾರರಿಗೆಯೇ ಹೃತ್ಪೂರ್ವಕ ಬೆಂಬಲ ಕೊಟ್ಟು ಮತದಾನ ಮಾಡಬೇಕೆಂದು ರಾಜಾಜಿ ವಿನಂತಿಸಿರುವರು. ರಾಷ್ಟ್ರದ ಈಗಿನ ಪರಿಸ್ಥಿತಿಯಲ್ಲಿ ಕೇಂದ್ರ ಸರಕಾರದೊಂದಿಗೆ ಸಹಕರಿಸುವ ಸರಕಾರವೇ ತಿರುಕೊಚ್ಚಿಯಲ್ಲಿರಬೇಕೆಂದೂ ಆದಕ್ಕೋಸ್ಕರ ಕಾಂಗ್ರೆಸು ನಿಲ್ಲಿಸಿದವರು ಬಹುಮತವನ್ನು ಪಡೆದು ಅಧಿಕಾರಕ್ಕೆ ಬರುವಂತೆ ಮತದಾರರು ನೋಡಬೇಕೆಂದೂ ರಾಜಾಜಿಯ ಅಭಿಪ್ರಾಯ. ಕಾಂಗ್ರೆಸ ಅಧ್ಯಕ್ಷರೂ ಭಾರತದ ಪ್ರಧಾನ ಮಂತ್ರಿಗಳೂ ಅದ್ವಿತೀಯ ಜನನಾಯಕರೂ ಆದ ನೆಹರೂರ ಕೈಗಳನ್ನು ಪಾಕ-ಅಮೇರಿಕ ಮೈತ್ರಿಯ ಕಾರ್ಮೋಡ ಕವಿದಿರುವ ಈ ದುರ್ದಿನದಲ್ಲಿ ಬೆಂಬಲಿಸುವುದು ಪ್ರತಿಯೊಬ್ಬ ರಾಷ್ಟ್ರಿಕನ ಕರ್ತವ್ಯವೆಂದೂ ಇದಕ್ಕೋಸ್ಕರ ಕಾಂಗ್ರೆಸಿಗೆ ಮತವೀಯಬೇಕೆಂದೂ ರಾಜಾಜಿ ಪ್ರಾರ್ಥಿಸಿದರು. ಕಮ್ಯೂನಿಸ್ಟರ ತತ್ವಪ್ರಣಾಳಿಯನ್ನು ಅವರು ಖಂಡಿಸಿದುದಲ್ಲದೆ, ರಾಷ್ಟ್ರಾಧ್ಯಕ್ಷರ ನೇರಾದ ಆಡಳಿತಕ್ಕೆ ಅವಕಾಶ ಮಾಡಿಕೊಡುವ ಕೆಟ್ಟ ಪ್ರಸಂಗವನ್ನು ಶೇಕಡಾ ೯೦ ಸುಶಿಕ್ಷಿತರಿರುವ ತಿರುಕೊಚ್ಚಿಯ ನಾಗರಿಕರು ತಪ್ಪಿಸಬೇಕೆಂದು ಅವರು ಕೇಳಿಕೊಂಡರು.

ಭಾಷಾ ರಾಜ್ಯಗಳ ನಿರ್ಮಾಣ

ರಾಜ್ಯಗಳ ಪುನರ್ವಿಂಗಡನೆಯ ಪ್ರಶ್ನೆಯನ್ನು ವಿಚಾರಿಸಲು ಉಚ್ಚಾಧಿಕಾರ ಸಂಪನ್ನ ಆಯೋಗ ನೇಮಕಗೊಂಡಿರುವುದರಿಂದ ಕಾಂಗ್ರೆಸಿಗರು ಅನಾವಶ್ಯಕವಾಗಿ ಭಾಷಾ ರಾಜ್ಯದ ಪ್ರಶ್ನೆಯನ್ನು ಕೆಣಕಲಾಗದೆಂದು ಕಾಂಗ್ರೆಸ ಕಾರ್ಯದರ್ಶಿಗಳು ಹೇಳುತ್ತಿದ್ದಂತೆಯೇ — ಮುಂಬಯಿ ಪ್ರದೇಶ ಕಾಂಗ್ರೆಸದ ಅಧ್ಯಕ್ಷ ಶ್ರೀ ಎಸ್. ಕೆ. ಪಾಟೀಲರು "ರಾಷ್ಟ್ರೀಯ ಐಕ್ಯ"ದ ಹೆಸರಿನಲ್ಲಿ ಬೇರೆಯೇ ಆಪತ್ತಿಯನ್ನು ಎತ್ತುತ್ತಿರುವರು. ಸಾಂಪ್ರದಾಯಿಕ ದೇಶಭಕ್ತಿಯನ್ನು ಬದಿಗೆ ಸರಿಸಿ ರಾಷ್ಟ್ರೀಯ ಐಕ್ಯವನ್ನು ಸಾಧಿಸಲಿಕ್ಕೂ ಆದರ ಬೇರುಗಳು ಆಳವಾಗಿ ಇಳಿದು ರಾಷ್ಟ್ರವನ್ನು ಬಲಪಡಿಸುವುದಕ್ಕೂ ಮನಸ್ಸು ಮಾಡಬೇಕೆಂದು ಹೇಳುತ್ತಾ ಶ್ರೀ ಪಾಟೀಲರು ಕಾಂಗ್ರೆಸು ಎಂದಿಗೂ ಭಾಷಾವಾರು ಪ್ರಾಂತ ರಚನೆಯ ನಿರ್ಣಯ ಮಾಡಿಲ್ಲವೆಂದು ನುಡಿದರು. ಈ ಅಭಿಪ್ರಾಯವನ್ನು ಹಿಂದಿನ ಕೇಂದ್ರ ಮಂತ್ರಿ ಮತ್ತು ಈಗ ಸಂಸತ್ ಸದಸ್ಯರಾಗಿರುವ ಶ್ರೀ. ಗಾಡಗೀಳರು ಖಂಡಿಸಿ ಕಾಂಗ್ರೆಸು ಭಾಷಾನುಗುಣ ರಾಜ್ಯ ನಿರ್ಮಾಣಕ್ಕೆ ಪುರಸ್ಕಾರ ಕೊಟ್ಟಿರುವುದನ್ನು ಆಧಾರಸಹಿತ ಉಲ್ಲೇಖಿಸಿದರು. ರಾಷ್ಟ್ರೀಯ ಭದ್ರತೆ ಮತ್ತು ಸಂಘಟನೆಗೆ ಭಾಷಾರಾಜ್ಯಗಳಿಂದ ತೊಂದರೆ ಇಲ್ಲವೆಂದೂ ಯೋಗ್ಯ ರೀತಿಯಲ್ಲಿ ಈಗಿನ ರಾಜ್ಯಗಳ ಪುನರ್ಘಟನೆ ಮಾಡುವುದರಿಂದ ದೇಶದ ಐಕ್ಯ ಬಲಗೊಳ್ಳುವುದೆಂದೂ ಭಾಷಾ ರಾಜ್ಯಗಳ ನಿರ್ಮಾಣ ಪ್ರಶ್ನೆಯನ್ನು ಮುಂದೂಡುವುದು ಕಾಂಗ್ರೆಸು ಒಪ್ಪಿಕೊಂಡ ಧೋರಣೆಗೆ ವಿಸಂಗತವಾದುದೆಂದೂ ಗಾಡಗೀಳರು ಅಭಿಪ್ರಾಯಪಟ್ಟರು. ಈ ನಡುವೆ ಮದ್ರಾಸಿನಲ್ಲಿ ಮುಂಬಯಿನ ಕೇಳಪ್ಪನ್ನರು ಇನ್ನೊಂದು ರಾಗಾಲಾಪನೆ ಮಾಡಿದರು — ಐಕ್ಯ ಕೇರಳದ ಪ್ರತಿಪಾದಕರಾಗಿದ್ದ ಈ ಮಹಾನುಭಾವರು ಭಾಷೆಯೊಂದೇ ರಾಜ್ಯಗಳ ಪುನರ್ವಿಂಗಡಣೆಯ ತಳಹದಿಯಾಗಲಾರದೆಂದು ಹೇಳುತ್ತಾ ತಿರುಕೊಚ್ಚಿ, ಮಲಬಾ

(೪ನೇ ಪುಟ ನೋಡಿರಿ)

(೪ನೇ ಪುಟದಿಂದ)

ಓಕ್‌ರಿಜ್ ಅಣು ಅಧ್ಯಯನ ಸಂಸ್ಥೆಯಲ್ಲಿ ಕಲಿಯುವ ೩೩ ಜನಾಂಗದ ೪೭ ವಿದ್ಯಾರ್ಥಿಗಳಲ್ಲಿ ಈ ಭಾರತೀಯರು ಸೇರಿದ್ದಾರೆ.

ಲಾರ್ಡ್ ಸೈಮನ್ನರ ನಿಧನ

೧೯೨೭ರಲ್ಲಿ ಬ್ರಿಟಿಷ್ ಭಾರತದಲ್ಲಿ ರಾಜ್ಯಾಂಗ ವ್ಯವಸ್ಥೆಯಲ್ಲಾಗ ಬೇಕಿರುವ ಸುಧಾರಣೆಗಳನ್ನು ಪರ್ಯಾಲೋಚಿಸಲು ಬಂದ ಸಮಿತಿಯ ಮುಖಂಡರಾಗಿದ್ದ ಲಾರ್ಡ್ ಜೋನ್ ಸೈಮನರು ದಿನಾಂಕ ೧೧ರಂದು ಲಂಡನಿನ ಆಸ್ಪತ್ರೆಯೊಂದರಲ್ಲಿ ತಮ್ಮ ೮೦ನೇ ಪ್ರಾಯದಲ್ಲಿ ನಿಧನ ಹೊಂದಿದರು. ಈ ಮಹಾನುಭಾವ ವರ್ಷಕ್ಕೆ ೭೦,೦೦೦ ಪೌಂಡುಗಳ ವೇತನ ಬರುತಿದ್ದ ವಕೀಲ ವೃತ್ತಿಯನ್ನು ಬಿಟ್ಟುಗೊಟ್ಟು, ರಾಜಕೀಯದಲ್ಲಿ ಪ್ರವೇಶಿಸಿ, ಬ್ರಿಟನಿನ ಪ್ರಸಿದ್ಧ ರಾಜಕಾರಣಿಗಳಲ್ಲಿ ಒಬ್ಬರಾಗಿ ಮೆರೆದರು. ಆದರೆ ಭಾರತದಲ್ಲಿ ಸೈಮನ್ನರ ವಿರುದ್ಧ ಕಪ್ಪು ಪತಾಕೆ ಪ್ರದರ್ಶಿಸಲ್ಪಟ್ಟಿತು. ಮದ್ರಾಸಿನಲ್ಲಿ ಸೇರಿದ್ದ ಕಾಂಗ್ರೆಸು ಸೈಮನ ಸಮಿತಿಯ ಸದಸ್ಯರಲ್ಲಿ ಅರೆವಾಸಿಯನ್ನಾದರೂ ಭಾರತೀಯರೂ ಇರಬೇಕೆಂದು ಹೇಳಿ, ಭಾರತೀಯರ ಪ್ರತಿನಿಧಿಗಳಿಲ್ಲದ ಸಮಿತಿಗೆ ಬಹಿಷ್ಕಾರ ಹಾಕಿತು. ಬಹಿಷ್ಕಾರ ಯಶಸ್ವಿಯಾದರೂ ಪೋಲೀಸರ ಲಾಠಿ ಚಾರ್ಜುಗಳಿಂದ ಜನನೊಂದರು. ಪಂಜಾಬ ಕೇಸರಿಯೆಂದು ಹೆಸರಾದ ಲಾಲಾ ಲಜಪತ ರಾಯರ ಮರಣಕ್ಕೆ ಸೈಮನ ಸಮಿತಿಯ ಆವಾಂತರವೇ ಕಾರಣ. ಈ ಸಮಿತಿ ಬೇಗನೇ ಭಾರತವನ್ನು ಬಿಟ್ಟು ತೆರಳಿತು — ಅದು ಒಪ್ಪಿಸಿದ ವರದಿಯೇ ಮುಂದೆ ಮಹಾತ್ಮ ಗಾಂಧೀಯವರು ಭಾಗವಹಿಸಿದ ದುಂಡು ಮೇಜಿನ ಪರಿಷತ್ತಿಗೆ ಪ್ರೇರಣೆಯೊದಗಿಸಿತು.

ಮಧು ಮಂಗಳೂರು ನಶ್ಯ

[ರಜಿಸ್ಟರ್ಡ್]

ಇದು ಉತ್ತಮವಾದುದು ಮತ್ತು ಜನಪ್ರಿಯವಾದುದು.

ಇದು 'ಮಧು ಪ್ರೊಡಕ್ಟ್ಸ' ಉಡಿಯಾವರ, ದ. ಕ.

ಇವರ ಉತ್ಕೃಷ್ಟ ತಯಾರಿಕೆ.

ಶಾಪ: ಉಡುಪಿ ಮುನ್ಸಿಪಲ್ ಬಸ್ಸ್ ಸ್ಟಾಂಡಿನ ಎದುರುಗಡೆ.

ಪರಊರುಗಳ ಬೇಡಿಕೆಗಳಿಗೆ ವಿಶೇಷ ಗಮನ ಕೊಡಲಾಗುವುದು.

NAVAYUGA
Popular Kannada Weekly.
Founder:—
Sri A. B. SHETTY,
Minister for Public Health,
Govt. of Madras.

ನವಯುಗ
ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ.
ಸ್ಥಾಪಕರು:- ಶ್ರೀ. ಎ. ಬಿ. ಶೆಟ್ಟಿ,
ಮದ್ರಾಸಿನ ಆರೋಗ್ಯಮಂತ್ರಿ.
ವಾ. ಚಂದಾ: ರೂ. 5-12-0
ಬಿಡಿಪ್ರತಿ: 0- 2-0

ನ ವ ಯು ಗ

ಉಡುಪಿ, ಗುರುವಾರ ೨೧-೧-'೫೪

ಶಿಕ್ಷಣ ಮಾಧ್ಯಮದ ಪ್ರಶ್ನೆ

ನೆರೆಯ ಮುಂಬಯಿ ಸರಕಾರದವರು ಈಚೆಗೆ ಒಂದು ಆಜ್ಞೆಯನ್ನು ಹೊರಡಿಸಿ, ಇಂಗ್ಲೀಷ್ ಮಾತೃ ಭಾಷೆಯಾಗಿರದ ವಿದ್ಯಾರ್ಥಿಗಳಿಗೆ ಆಂಗ್ಲೋ—ಇಂಡಿಯನ ಶಾಲೆಗಳಲ್ಲಿ ಪ್ರವೇಶವನ್ನು ಕೊಡತಕ್ಕದ್ದಲ್ಲವೆಂದು ವಿಧಿಸಿದರು. ಈ ಆಜ್ಞೆಯ ವಿರುದ್ಧ ಈಗ ಒಂದು ದೊಡ್ಡ ಆಂದೋಲನವೇ ನಡೆದಿದೆ. ಅದರ ಧುರೀಣರಾಗಿ ಪಾರ್ಲಿಮೆಂಟಿನ ಸದಸ್ಯ ಫ್ರಾಂಕ ಆಂಥೋನಿಯವರು ಇದ್ದಾರೆ. ಆಂಗ್ಲೋ ಇಂಡಿಯನ್ನರಿಗೆ ಭಾರತದ ರಾಜ್ಯಾಂಗ ಘಟನೆಯಲ್ಲಿ ದಯಪಾಲಿಸಲಾದ ಕೆಲವು ಹಕ್ಕುಗಳನ್ನು ರಾಜ್ಯ ಸರಕಾರದ ಈ ಆಜ್ಞೆ ಕಸಿದುಕೊಳ್ಳುತ್ತದೆಂದು ಆಂಥೋನಿಯವರು ವಾದಿಸುತ್ತಾರಲ್ಲದೆ ನ್ಯಾಯ ಸ್ಥಾನಕ್ಕೆ ಈ ಪ್ರಶ್ನೆಯನ್ನು ಒಯ್ದು ತೀರ್ಮಾನವನ್ನು ಕೇಳುವ ತವಕವನ್ನೂ ವ್ಯಕ್ತಪಡಿಸಿರುವರು. ಆದರೆ ಈ ನಡುವೆ ಅವರು ರಾಜ್ಯ ಸರಕಾರದ ಶೈಕ್ಷಣಿಕ ಧೋರಣೆಯ ವಿಷಯದಲ್ಲಿ ಸಲ್ಲದ ಅಪಪ್ರಚಾರವನ್ನೂ ಕೈಗೊಂಡಿರುವುದರಿಂದ ನಾಲ್ಕುಬುದ್ಧಿಯ ಮಾತುಗಳನ್ನು ಹೇಳುವುದು ಪ್ರಶಸ್ತ- ಭಾರತದಲ್ಲಿ ಶಿಕ್ಷಣ ಮಾಧ್ಯಮವು ಯಾವುದಿರಬೇಕೆಂಬ ವಿಷಯದಲ್ಲಿ ಈಗಾಗಲೇ ಸಾಕಷ್ಟು ಚರ್ಚೆಯು ಮಾಡಲ್ಪಟ್ಟಿದೆ. ಅನೇಕ ಶಿಕ್ಷಣ ತಜ್ಞರು ಈ ವಿಚಾರದಲ್ಲಿ ಕೂಲಂಕಷ ಅಧ್ಯಯನವನ್ನೂ ಪರಿಶೀಲನೆಯನ್ನೂ ನಡೆಸಿ, ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವನ್ನು ವಿದ್ಯಾರ್ಥಿಗಳಿಗೆ ಅವರವರ ಮಾತೃಭಾಷೆಯಲ್ಲಿ ಅಥವಾ ಪ್ರಾದೇಶಿಕ ಭಾಷೆಯಲ್ಲಿ ಕೊಡುವುದು ಸೂಕ್ತವಾದುದೆಂಬ ಸಮಂಜಸ ನಿರ್ಣಯಕ್ಕೆ ಬಂದಿರುವರು. ಈಚೆಗೆ ಕೇಂದ್ರ ಸರಕಾರದವರು ನೇಮಿಸಿದ ಮಾಧ್ಯಮಿಕ ಶಿಕ್ಷಣ ಆಯೋಗ ಕೂಡ ಈ ತತ್ವವನ್ನು ಒಪ್ಪಿಕೊಂಡಿರುತ್ತದೆ. ಈ ನೀತಿಯನ್ನು ಕಾರ್ಯಾಚರಣೆಗಿಳಿಸುವ ಪ್ರಯುಕ್ತವೇ ಮುಂಬಯಿ ಸರಕಾರವು ಈಗಿನ ಆಜ್ಞೆಯನ್ನು ಹೊರಡಿಸಿರುತ್ತದೆ. ಒಂದು ರೀತಿಯಿಂದ ನೋಡಿದರೆ ಈ ಆಜ್ಞೆ ಆಕಸ್ಮಿಕವಾದುದೇನಲ್ಲ—ರಾಜ್ಯ ಸರಕಾರದ ಶಿಕ್ಷಣದ ಧೋರಣೆಯು ೧೯೪೮ರಷ್ಟು ಹಿಂದೆಯೇ ನಿರ್ಣಯಿಸಲ್ಪಟ್ಟಿತ್ತು; ಮತ್ತು ಇಂಗ್ಲೀಷು ಮಾಧ್ಯಮವನ್ನುಪಯೋಗಿಸುತ್ತಿದ್ದ ಎಲ್ಲ ಶಾಲೆಗಳಿಗೂ ಅವಶ್ಯಕನುಸಾರ ಸೂಚನೆಗಳು ಕಳಿಸಲ್ಪಟ್ಟಿದ್ದವು ಈ ಧೋರಣವನ್ನು ಮರಳಿ ೧೯೫೧ರಲ್ಲಿ ಸ್ಪಷ್ಟೀಕರಣ ಮಾಡುವಾಗಲೂ ಸಹ ಆಂಗ್ಲೋ ಇಂಡಿಯನ ಶಾಲೆಗಳಿಗೆ ಪ್ರವೇಶಕೊಡುವ ವಿಚಾರದಲ್ಲಿ ನಿರ್ದಿಷ್ಟ ಸೂಚನೆಗಳನ್ನು ನೀಡಲಾಯಿತು. ಅವುಗಳನ್ನು ಪಾಲಿಸಿದಂತೆ ಕಂಡು ಬಾರದುದರಿಂದ, ಈಗಿನ ಕಠಿಣ ಕ್ರಮವು ತೆಗೆದುಕೊಳ್ಳಲ್ಪಟ್ಟಿತು. ಆದುದರಿಂದ ಆಂಗ್ಲೋ ಇಂಡಿಯನ್ನರ ಅವಿಧೇಯತೆ ಹಾಗೂ ಅವಿನಯಗಳೇ ಇಂಥ ಆಜ್ಞೆಗೆ ಕಾರಣಭೂತವಾಗಿದ್ದಾವೆನ್ನುವುದು ಸಮಂಜಸ. ಇನ್ನು ರಾಜ್ಯಾಂಗ ಘಟನೆ ನೀಡಿದ ಹಕ್ಕುಬಾಧ್ಯತೆಗಳ ಪ್ರಶ್ನೆಯಾದರೂ ಆಂಗ್ಲೋ ಇಂಡಿಯನ್ನರ ಧುರೀಣ ಫ್ರಾಂಕ ಆಂಥೋನಿಯವರು ಹೇಳುವಂತೆ ಉಲ್ಲಂಘಿಸಲ್ಪಟ್ಟಿಲ್ಲ. ಇತರ ಕೆಲವು ವಿಶಿಷ್ಟ ಪಂಗಡಗಳಿಗೆ ಕೊಡಲ್ಪಟ್ಟಂತೆ, ಆಂಗ್ಲೋ ಇಂಡಿಯನ್ನರಿಗೂ ಕೆಲವು ವಿಶಿಷ್ಟ ಸವಲತ್ತುಗಳನ್ನು ಕೇವಲ ಹತ್ತು ವರ್ಷಗಳ ತನಕ ಮಾತ್ರ ರಾಜ್ಯಾಂಗ ಘಟನೆಯು ಕೊಟ್ಟಿರುತ್ತದೆ. ಈ ಹತ್ತು ವರ್ಷಗಳ ಅವಧಿಯಲ್ಲಿ ಆಂಗ್ಲೋ-ಇಂಡಿಯನ್ನರೇ ಮುಂತಾದ ಸವಲತ್ತು ಪಡೆದ ವರ್ಗಗಳು ಭಾರತದಲ್ಲಾಗುತ್ತಿರುವ ಸ್ಥಿತ್ಯಂತರಗಳೊಂದಿಗೆ ಹೊಂದಿಕೊಂಡು, ಪ್ರಜಾಪ್ರಭುತ್ವಕ್ಕೆ ಪೋಷಕವೆನಿಸುವ ರೀತಿಯಲ್ಲಿ ಉಳಿದ ಭಾರತೀಯರೊಂದಿಗೆ ಹೆಜ್ಜೆಗೆ ಹೆಜ್ಜೆ ಇಟ್ಟು ನಡೆಯಬೇಕಾದುದು ಅಪೇಕ್ಷಣೀಯ. ಆದರೆ ಈ ವರ್ಗಗಳು ಅಂಥದೇನೂ ಪ್ರಯತ್ನವನ್ನು ಮಾಡದೆ "ಮಧ್ಯಮ ಪ್ರತಿಯ ಆಂಗ್ಲೇಯ"ರನ್ನಾಗಿಯೇ ಮುಂದೆಯೂ ಭಾರತೀಯರನ್ನು ಇಡುವ ಅಕೃತ್ಯಕ್ಕೆ ಕೈ ಹಾಕುವುದು ನಿಜಕ್ಕೂ ಶೋಚನೀಯ. ತಾತ್ಪೂರ್ತಿಕವಾಗಿ ಕೊಡಲಾದ ಸವಲತ್ತುಗಳನ್ನು ರಾಜ್ಯ ಸರಕಾರ ಈಗ ಉಲ್ಲಂಘಿಸಿರುವುದಿಲ್ಲ-ಮುಂಬಯಿಯಲ್ಲಿ ಆಂಗ್ಲೋ ಇಂಡಿಯನ ಶಾಲೆಗಳು ಹೆಚ್ಚೆಂದರೆ ೧೦೦ ಮಾತ್ರ ಇದ್ದು ಅವುಗಳು ಸರಕಾರದ ಈಗಿನ ಆಜ್ಞೆಯಿಂದ ಹಾನಿಗೀಡಾಗುತ್ತವಾದರೆ ಅವುಗಳಿಗೆ ಸಾಕಷ್ಟು ಆರ್ಥಿಕ ಸಹಾಯವನ್ನು ಕೊಡುವ ಆಶ್ವಾಸನೆಯನ್ನು ಶಿಕ್ಷಣ ಮಂತ್ರಿಗಳು ನೀಡಿರುವರು. ಮೇಲಾಗಿ ಇಂಗ್ಲೀಷು ಮಾತೃ ಭಾಷೆಯಾಗಿರುವ ಮಕ್ಕಳಿಗೆ ಆ ಭಾಷೆಯಲ್ಲಿಯೇ ಶಿಕ್ಷಣವನ್ನು ಕೊಡಲಿಕ್ಕೆ ಯಾವದೂ ಅಭ್ಯಂತರವಿಲ್ಲ. ಭಾರತೀಯರ ಶಿಕ್ಷಣವು ಅವರವರ ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆಯಲ್ಲಾಗಬೇಕೇ ಹೊರತು, ಇಂಗ್ಲೀಷ್ ಮಾಧ್ಯಮದ ಮೂಲಕವಲ್ಲ ಎಂಬುದೇ ಸರಕಾರದ ಧೋರಣೆ. ಇದನ್ನು ತಪ್ಪಾಗಿ ತಿಳಿಯುವುದು ಭೂಷಣವಲ್ಲ-ರಾಜ್ಯಾಂಗ ಘಟನೆಯಲ್ಲಿ ಹದಿನೈದು ವರ್ಷಗಳ ಅವಧಿಯಲ್ಲಿ ಇಂಗ್ಲೀಷು ಭಾಷೆಯಬದಲು ಹಿಂದಿ ಮತ್ತಿತರ ಭಾರತೀಯ ಭಾಷೆಗಳು ಸಾರ್ವತ್ರಿಕವಾಗಿ ವ್ಯವಹಾರದಲ್ಲಿ ಬಳಸಲ್ಪಡುವಂತೆ ಕ್ರಮ ತೆಗೆದುಕೊಳ್ಳಬೇಕೆಂದು ವಿಧಿಸಲಾಗಿರುತ್ತದೆ. ಮೇಲಾಗಿ ಇಂಗ್ಲೀಷ್ ಭಾಷೆ ಭಾರತೀಯ ಭಾಷೆಯಲ್ಲ—ರಾಜ್ಯಾಂಗ ಘಟನೆಯಲ್ಲಿ ಅದನ್ನು ಮಾನ್ಯಮಾಡಬೇಕೆಂದು ಎಲ್ಲಿಯೂ ಹೇಳಿಲ್ಲ. ತಾತ್ಕಾಲಿಕವಾಗಿ ಮಾತ್ರ ಅದನ್ನು ಆಶ್ರಯಿಸಲಾಗಿದ್ದು, ಅದಕ್ಕೆ ಶಾಶ್ವತವಾದ ಭವಿಷ್ಯಭಾರತದಲ್ಲಿಲ್ಲ. ಆದರೂ ಇಂಗ್ಲೀಷ ಜಾಗತಿಕ ವ್ಯವಹಾರ ಸಂಬಂಧವನ್ನು ಬೆಳೆಯಿಸಿಕೊಳ್ಳಲು ಅನುಕೂಲವಾಗುವ ಭಾಷೆಯೆಂಬುದರಿಂದ ಹೈಸ್ಕೂಲು ಹಾಗೂ ವಿಶ್ವವಿದ್ಯಾಲಯ ತರಗತಿಗಳಲ್ಲಿ ಅದನ್ನು ಕಲಿಯಲು ಅನುಕೂಲತೆ ಒದಗಿಸಲ್ಪಟ್ಟಿದೆ. ಇಂಗ್ಲೀಷಿನ ಉಚ್ಚಾಟನೆಯು ನಮ್ಮ ಧ್ಯೇಯವಲ್ಲ—ಮಾತೃಭಾಷೆ, ಪ್ರಾದೇಶಿಕ ಹಾಗೂ ರಾಷ್ಟ್ರಭಾಷೆಗಳಿಗೆ ಸಲ್ಲತಕ್ಕ ಮಹತ್ವವನ್ನು ಕೊಟ್ಟು, ಅದಕ್ಕೆ ತಕ್ಕುದಾದ ಶಿಕ್ಷಣ ಪದ್ಧತಿಯನ್ನು ಅಳವಡಿಸಿಕೊಂಡು, ಅದರಲ್ಲಿ ಇಂಗ್ಲೀಷದ ಸ್ಥಾನಮಾನವನ್ನು ನಿರ್ಧರಿಸುವುದೇ ಕೇಂದ್ರ ಹಾಗೂ ರಾಜ್ಯ ಸರಕಾರಗಳ ಉದ್ದೇಶ. ಬಹುಸಂಖ್ಯಾಕರ ಇಷ್ಟಕ್ಕೆ ಅನುಗುಣವಾಗಿರುವ ಈ ತತ್ವದೊಡನೆ ಉಳಿದವರೂ ಸಹಕರಿಸಿಕೊಂಡು, ಸಹಾನುಭೂತಿಯಿಂದ ನಡೆದುಕೊಳ್ಳಬೇಕು. ವ್ಯರ್ಥ ಆಂದೋಲನವನ್ನು ಒಡನೆಯೇ ನಿಲ್ಲಿಸಿಬಿಟ್ಟು ಭಾರತದಲ್ಲಿ ಪ್ರಜಾಪ್ರಭುತ್ವ ಅಭಿವೃದ್ಧಿ ಹೊಂದುವುದಕ್ಕೆ ಅವಕಾಶ ಕಲ್ಪಿಸಿಕೊಡಬೇಕು.

ನೆಹರೂ - ಕೋಟೆಲವಾಲ ಒಡಂಬಡಿಕೆ

ಸಿಂಹಳದ ಭಾರತೀಯರಿಗೆ ನಾಗರಿಕ ಅಧಿಕಾರ

ಸಿಂಹಳದಲ್ಲಿ ವಲಸೆಗಾರರಾಗಿ ಹೋಗಿ ಅಲ್ಲಿಯ ತೋಟಗಳನ್ನು ಅಭಿವೃದ್ಧಿಗೊಳಿಸುವುದರಲ್ಲಿ ನಿರತರಾಗಿ ಕ್ರಮೇಣ ಆ ದೇಶವನ್ನೆ ಮಾತೃಭೂಮಿಯಾಗಿ ತಿಳಿದುಕೊಂಡ ಸುಮಾರು ಒಂಭತ್ತು ಲಕ್ಷ ಭಾರತೀಯರಿಗೆ ನಾಗರಿಕ ಅಧಿಕಾರಗಳನ್ನು ಕೊಡುವ ಪ್ರಶ್ನೆಯು ಬಿಕ್ಕಟ್ಟಿನಲ್ಲಿದ್ದಿತು ಈಚೆಗೆ ಹಲವು ವರ್ಷಗಳಿಂದ ಈ ಸಮಸ್ಯೆಗೊಂದು ಪರಿಹಾರವನ್ನು ಹುಡುಕಲು ಪ್ರಯತ್ನಗಳು ನಡೆಯುತಿದ್ದವು. ಇತ್ತೀಚಿನ ಪ್ರಯತ್ನಗಳಲ್ಲಿ ಕಳೆದ ಜೂನು ತಿಂಗಳಲ್ಲಿ ಲಂಡನಿನಲ್ಲಿ ಪ್ರಧಾನಿ ನೆಹರೂ ಮತ್ತು ಆಗ ಸಿಂಹಳದ ಮುಖ್ಯ ಮಂತ್ರಿಯಾಗಿದ್ದ ಡಡ್ಲೆ ಸೇನಾನಾಯಕೆಯವರ ಮಾತುಕತೆಗಳು ಉಲ್ಲೇಖನೀಯವಾಗಿರುತ್ತವೆ. ಆದರೆ ಈ ಭೇಟಿಯ ಫಲಿತಾಂಶವಾಗಿ ಯಾವುದೇ ನಿರ್ಣಯವಾಗಲಿಲ್ಲ-ಸೇನಾ ನಾಯಕೆಯವರ ಬದಲು ಈಗ ಜೋನ್ ಕೋಟೆಲವಾಲರು ಸಿಂಹಳದ ಮುಖ್ಯ ಮಂತ್ರಿ ಸ್ಥಾನಕ್ಕೆ ಬಂದಿದ್ದು, ಅವರು ಬಗೆಹರಿಯದೆ ಉಳಿದಿರುವ ಭಾರತೀಯರ ವಿಷಯವನ್ನು ಆದಷ್ಟುಬೇಗನೇ ತೀರ್ಮಾನಿಸುವ ಮನೋ ಭಾವವನ್ನು ಪ್ರಕಟಪಡಿಸಿದರು. ನೆಹರೂರೊಡನೆ ಸಮಾಲೋಚನೆ ನಡೆಸಿ, ಸಮಂಜಸವಾದ ಪರಿಹಾರ ಮಾರ್ಗವೊಂದನ್ನು ಕಂಡುಹಿಡಿಯುವುದಕ್ಕೋಸ್ಕರ ಹೊಸ ದೆಹಲಿಗೆ ಬರುವುದಕ್ಕೂ ಸಿದ್ಧರಾದರು. ಇದರಿಂದ ಈ ಸಮಸ್ಯೆ ಇತ್ಯರ್ಥವಾಗಿಯೇ ತೀರುವುದೆಂಬ ಭರವಸೆ ಎಲ್ಲರಲ್ಲಿಯೂ ಉಂಟಾಯಿತು.

ಒಡಂಬಡಿಕೆಯ ವಿವರ

ಈ ಭಾವನೆ ಹುಸಿಹೋಗಲಿಲ್ಲ—ಸರ್ ಕೋಟೆಲವಾಲರು ಇದೇ ಹದಿನೈದನೇ ದಿನಾಂಕ ಹೊಸ ದೆಹಲಿಗೆ ಆಗಮಿಸಿದಾಗ, ಅವರನ್ನು ಸಂಭ್ರಮದ ಸ್ವಾಗತ ನೀಡಿ ನೆಹರೂ ಗೌರವಿಸಿದರು. ಉಭಯ ಸರಕಾರಗಳಿಗೂ ಸಮ್ಮತವಾಗಬಹುದಾದ ಸೂತ್ರವೊಂದನ್ನು ಮೂರು ದಿನಗಳ ಸಮಾಲೋಚನೆಯಲ್ಲಿ ಪ್ರಧಾನಿದ್ವಯರು ಕಂಡುಹಿಡಿದರು. ಆಯಾ ಸರಕಾರಗಳ ಒಪ್ಪಿಗೆ ಪಡೆದ ಮೇಲೆ ಜ್ಯಾರಿಗೆ ಬರತಕ್ಕ ಒಪ್ಪಂದವೊಂದನ್ನು ಸಿದ್ಧಗೊಳಿಸಿ ಅದಕ್ಕೆ ಈರ್ವರು ಪ್ರಧಾನಿಗಳೂ ಸಹಿ ಹಾಕಿದರು . ಈ ಒಪ್ಪಂದದಲ್ಲಿ ಭಾರತೀಯ ಮತ್ತು ಪಾಕಿಸ್ತಾನೀ (ನಾಗರಿಕ ಅಧಿಕಾರ) ಕಾಯಿದೆಯನ್ವಯ ಹೆಸರನ್ನು ದಾಖಲು ಮಾಡಲು ಹಾಕಲಾದ ಸುಮಾರು ೨೩೭೦೦೦ ಅರ್ಜಿಗಳ ಪರಿಶೀಲನೆಯನ್ನು ಎರಡು ವರ್ಷಗಳೊಳಗೆ ಮಾಡಿ ಮುಗಿಸಬೇಕೆಂದು ಹೇಳಲ್ಪಟ್ಟಿದೆ. ಈ ತನಕ ಈ ಕಾಯಿದೆಯನ್ವಯ ೨೦೦೦೦ ಜನರಿಗೆ ಮಾತ್ರ ನಾಗರಿಕ ಅಧಿಕಾರಗಳು ಕೊಡಲ್ಪಟ್ಟಿವೆ. ಈ ಕಾಯಿದೆಯಂತೆ ಹೆಸರು ದಾಖಲು ಮಾಡಿಕೊಂಡವರನ್ನು ಪ್ರತ್ಯೇಕ ಮತದಾರ ಯಾದಿಯಲ್ಲಿ ಸೇರಿಸಲಾಗುವುದು. ಈ ವ್ಯವಸ್ಥೆ ಕೇವಲ ಹತ್ತು ವರ್ಷಗಳ ತನಕವಿರುತ್ತದೆ ಪ್ರತ್ಯೇಕ ಮತದಾರ ಯಾದಿಯಲ್ಲಿದ್ದರೂ ಅವರಿಗೆ ಸಿಂಹಳದ ಇತರ ನಾಗರಿಕರಷ್ಟೇ ಅಧಿಕಾರಗಳು ಇರುತ್ತವೆ. ಯಾವುದಾದರೂ ವಿಶಿಷ್ಟ ಪ್ರದೇಶದಲ್ಲಿ ಇಂಥ ಭಾರತೀಯ ಮತದಾರರ ಸಂಖ್ಯಾ ಪ್ರಮಾಣ ೨೫೦ಕ್ಕಿಂತ ಕಡಿಮೆ ಇದ್ದರೆ, ಆಗ ಅವರ ಹೆಸರುಗಳನ್ನು ರಾಷ್ಟ್ರೀಯ ಮತದಾರರ ಯಾದಿಯಲ್ಲಿಯೇ ಸೇರಿಸಲಾಗುವುದು. ಪ್ರತ್ಯೇಕ ಮತದಾರ ಯಾದಿಯಲ್ಲಿರುವ ಈ ಭಾರತೀಯ ವಲಸೆಗಾರರು ಎಷ್ಟು ಮಂದಿ ಪ್ರತಿನಿಧಿಗಳನ್ನು ಸಿಂಹಳ ಪಾರ್ಲಿಮೆಂಟಿಗೆ ಆರಿಸಬೇಕೆಂದು ಭಾರತದ ಪ್ರಧಾನಿಯೊಂದಿಗೆ ಕೇಳಿಕೊಂಡು ನಿರ್ಧರಿಸಲಾಗುವುದು. ಈ ವಿಷಯದ ತಮ್ಮ ಕೆಲಸವನ್ನು ಸಿಂಹಳದ ಸರಕಾರದವರು ಈಗಿನ ಪಾರ್ಲಿಮೆಂಟು ೧೯೫೭ರಲ್ಲಿ ವಿಸರ್ಜಿಸಲ್ಪಡುವುದಕ್ಕೆ ಮುಂಚೆಯೇ ಮುಗಿಸಬೇಕು. ಸಿಂಹಳದ

In the Court of the District Munsif of Mangalore.
S. C. S. [illegible]
Between
Gajanana Tobacco Stores, Mangalore by partner K. Srinivasa Bhandary ... ... *Plaintiff.*
and
Bailur Laxminarayana Hegde, Tobacco Merchant, residing in Bailur, Karkal Taluk - *Defendant.*
To
The Defendant abovenamed.
Please take notice that the above suit filed by the Plaintiff against you for recovery of a sum of Rs. 256—1—0 due in respect of the dealings, stands posted to 10—2—1954 for final disposal and that if you should fail to appear in person or by pleader duly instructed in the above Court on 10—2—1954 at 11 O'clock in the forenoon, to answer the claim, the suit will be heard and determined in your absence.
(By order of the Court)
(Sd.) K. Devadas Nayak,
Vakil for Plaintiff.
Mangalore, 18th January 1954.

ನಾಗರಿಕರಾಗಲು ಇಚ್ಛಿಸದವರು ಭಾರತೀಯ ನಾಗರಿಕರಾಗಿ ಹೆಸರು ನೊಂದಾಯಿಸಬಲ್ಲರು ನ್ಯಾಯ ಬಾಹಿರವಾಗಿ ವಲಸೆ ಹೋಗುವುದನ್ನು ನಿಯಂತ್ರಿಸಲು ಉಭಯ ಸರಕಾರಗಳೂ ಶ್ರಮ ಕೈಗೊಳ್ಳಬೇಕು. ಸಿಂಹಳ ಸರಕಾರವು ವಲಸೆಗಾರರ ಶಿದ್ಧ್ವಹಿಡಿ ಮಾಸೂದೆಯನ್ನು ಮಂಜೂರು ಮಾಡಬಹುದು ಈ ಕಾಯಿದೆಯಂತೆ ತಾನು ಅಕ್ರಮ ವಲಸೆಗಾರನಲ್ಲವೆಂದು ಆರೋಪಿ ಸಿದ್ಧಪಡಿಸಬೇಕಾಗುವುದು. ಇಂತಹ ಸಂದರ್ಭಗಳಲ್ಲಿ ಯಾರಿಗಾದರೂ ಶಿಕ್ಷೆ ವಿಧಿಸಲ್ಪಡುವುದಿದ್ದರೆ, ಅದು ಸಕಾರಣವೂ ನ್ಯಾಯಪೂರ್ಣವೂ ಆಗಿರುವುದೆಂದು ಖಚಿತ ಮಾಡಿಕೊಳ್ಳಲು ಸಿಂಹಳದಲ್ಲಿರುವ ಭಾರತೀಯ ಹೈ ಕಮಿಶನರಿಗೆ ಅವಕಾಶ ಕೊಡಲ್ಪಡುವುದು.

ಪಂಚ ಪ್ರಧಾನಿಗಳ ಸಭೆ

ಹೀಗೆ ಕೋಟೆಲವಾಲರೂ ನೆಹರೂರವರೂ ಸಾಮಾನ್ಯವಾಗಿ ತೃಪ್ತಿಕರವಾದ ಪರಿಹಾರ ಮಾರ್ಗವೊಂದನ್ನು ಅಂಗೀಕರಿಸಿದ.ದರಿಂದ ಉಭಯ ರಾಷ್ಟ್ರಗಳಲ್ಲಿದ್ದ ಬಹುಕಾಲದ ವಿವಾದವೊಂದು ದೂರಗೊಂಡಂತಾಯಿತು. ಕೋಟೆಲವಾಲರು ಏಶಿಯದ ರಾಷ್ಟ್ರಗಳಲ್ಲಿ ಸೌಹಾರ್ದ ಸಂಬಂಧವುಳಿಯಬೇಕೆಂಬ ಕುರಿತು ಹೆಚ್ಚಿನ ಆಸ್ಥೆಯನ್ನು ಪ್ರದರ್ಶಿಸುತಿದ್ದು, ಭಾರತ, ಬರ್ಮ, ಇಂಡೋನೇಶಿಯಾ, ಪಾಕಿಸ್ತಾನ ಹಾಗೂ ಸಿಂಹಳಗಳ ಪ್ರಧಾನ ಮಂತ್ರಿಗಳು ಪರಸ್ಪರ ಸಂಬಂಧಿಸಿದ ಸಮಸ್ಯೆಗಳ ವಿಷಯದಲ್ಲಿ ವಿಚಾರ ವಿನಿಮಯವನ್ನು ನಡೆಸಲು ಆಗಾಗ್ಗೆ ಸಭೆ ಸೇರಬೇಕೆಂದು ಈಚೆಗೆ ಸೂಚಿಸಿರುವರು. ಈಸಲಹೆಗೆ ಭಾರತದಪ್ರಧಾನಿ ನೆಹರೂರವರು ಸರ್ವಪ್ರಥಮವಾಗಿ ಒಪ್ಪಿಗೆ ವ್ಯಕ್ತಪಡಿಸಿದರು. ಈಗ ಉಳಿದ ಪ್ರಧಾನಿಗಳಿಂದಲೂ ಇದಕ್ಕೆ ಸಮ್ಮತಿ ದೊರೆತಿದೆ. ಪಾಕಿಸ್ತಾನದ ಪ್ರಧಾನ ಮಂತ್ರಿ ಮಹಮ್ಮದಾಲಿಯವರು ಭಾರತ-ಪಾಕಿಸ್ತಾನಗಳ ಬಿಕ್ಕಟ್ಟನ್ನು ಪರಿಹರಿಸುವುದಕ್ಕೆ ಮಿತ್ರರಾಷ್ಟ್ರಗಳ ಈ ಪರಿಷತ್ತಿನಿಂದ ನೆರವು ದೊರೆಕೀತೆಂದು ಹೇಳಿದ್ದರೂ— ಇಂಥ ಸಭೆಯಲ್ಲಿ ಚರ್ಚೆಗೆ ಬರುವ ಸಂಗತಿಗಳು ಯಾವುವೆಂದು ಇನ್ನೂ ನಿರ್ಧರಿಸಲ್ಪಟ್ಟಿಲ್ಲ. ಎಪ್ರೀಲ ಕೊನೆಯ ವಾರದಲ್ಲಿ ಅಥವಾ ಮೇತಿಂಗಳ ಮೊದಲ ವಾರದಲ್ಲಿ ಈ ಐದು ದೇಶಗಳ ಪ್ರಧಾನಿಗಳ ಪ್ರಥಮ ಸಭೆ ಕೊಲೊಂಬೋದಲ್ಲಿ ಐದಾರು ದಿನಗಳ ಕಾಲ ಕೂಡಲಿದೆ. ತಟಸ್ಥ ರಾಷ್ಟ್ರಗಳ ಗುಂಪೊಂದನ್ನು ರಚಿಸಿಕೊಳ್ಳುವುದು ಏಶಿಯಾದ ಪ್ರಗತಿಗೂ ಯುದ್ಧದ ಗಂಡಾಂತರವನ್ನು ಆದಷ್ಟು ದೂರ ಮಾಡುವುದಕ್ಕೂ ಯೋಗ್ಯ ಉಪಾಯ.

ಹಿಂದೊಮ್ಮೆ ಪ್ರಧಾನಿ ನೆಹರೂರವರು ಹೊಸದಿಹಲಿಯಲ್ಲಿ ಏಶಿಯಾ ರಾಷ್ಟ್ರಗಳ ಪ್ರಧಾನಿಗಳ ಪರಿಷತ್ತನ್ನು ಕರೆದು ಶಾಂತಿ ಸ್ಥಾಪನಾ ಕಾರ್ಯದಲ್ಲಿ ಮುಂದಿಡಬೇಕಾದ ಹೆಜ್ಜೆಯನ್ನು ಗುರುತಿಸಿದ್ದರು. ಕೊಲೊಂಬೋದ ಮುಂಬರುವ ಸಭೆ ಇಂತಹ ಉದಾತ್ತ ಕಾರ್ಯದಲ್ಲಿ ಪ್ರವೃತ್ತವಾಗುವುದು ಅಪೇಕ್ಷಣೀಯ.

ಗರ್ಹಣೀಯ ಹೇಳಿಕೆ

ಭಾರತದ ನಿಲುವು ಸದಾ ಕಾಲವೂ ಶಾಂತಿಗೆ ಪೋಷಕವಾಗಿರುತ್ತದೆ—ಆದಾಗ್ಯೂ ಜಗತ್ತು ಶಸ್ತ್ರಾಸ್ತ್ರಗಳ ಸಂಗ್ರಹ ಬಲವನ್ನೇ ನಂಬಿರುವಂತೆ ಭಾಸವಾಗುವುದರಿಂದ, ಭಾರತದ ವಿದೇಶಾಂಗ ನೀತಿ ಕೆಲವು ಅಡಚಣೆಗಳನ್ನು ಅನಿವಾರ್ಯವಾಗಿ ಎದುರಿಸಬೇಕಾಗುವುದು. ಸೂಚಿತ ಪಾಕ್ ಅಮೇರಿಕಾ ಮಿಲಿಟರಿ ಒಡಂಬಡಿಕೆ ಇದಕ್ಕೊಂದು ನಿದರ್ಶನ. ಮಹಮ್ಮದಾಲಿಯವರ ಬಾಯಿಯಿಂದ ಹಿಂದೆ ಹೊರಬಿದ್ದ ಮಾತುಗಳನ್ನೂ ಈಗ ಅವರು ಹೇಳುತ್ತಿರುವುದನ್ನೂ ವಿಮರ್ಶಿಸಿದರೆ, ತಪ್ಪು ಮುಚ್ಚಿಕೊಳ್ಳಲು ಪ್ರಯತ್ನಿಸಿ ಮರಳಿ ತಪ್ಪುಮಾಡುವಂತೆ ಕಾಣುತ್ತದೆ. ಸೈನಿಕ ಒಪ್ಪಂದ ಸುದ್ದಿಯೇ ಸುಳ್ಳೆಂದ ಅವರು ಒಪ್ಪಂದವಾದರೂ ಆಕ್ರಮಣದ ಇಚ್ಛೆ ಪಾಕಿಸ್ತಾನಕ್ಕೆ ಇಲ್ಲವೆಂದರು. ಆದರೆ ಈಗ ಮಿಲಿಟರಿಬಲ ಹೆಚ್ಚಿಸುವುದರಿಂದ, ಕಾಶ್ಮೀರ ಪ್ರಶ್ನೆಯನ್ನು ಸುಲಭವಾಗಿ ಬಗೆಹರಿಸಲು ಬರುವುದೆಂದು ಅವರು ಅಭಿಪ್ರಾಯ ವ್ಯಕ್ತಗೊಳಿಸಿರುವರು. ಅರ್ಥಾತ್ ಸೈನ್ಯ ಬಲವನ್ನು ಪಯೋಗಿಸಿಯೇ ಅವರು ಕಾಶ್ಮೀರ ಪ್ರಶ್ನೆ ಇತ್ಯರ್ಥಮಾಡುವರೆಂದಾಯಿತು. ಹೀಗೆ ಸ್ಪಷ್ಟವಾಗಿ ಹೇಳಿಬಿಡುವ ಬದಲು ಭಾರತದ ಪ್ರಧಾನ ಮಂತ್ರಿ ನೆಹರೂರ ಮೇಲೆ ಕುತ್ಸಿತ ಟೀಕೆಗಳನ್ನು ಮಾಡುವುದಕ್ಕೆ ಅವರು ಹೋದುದು ನಿಂದಾಸ್ಪದ. ಭಾರತದ ಕೂಡೆ ಪಾಕಿಸ್ತಾನಕ್ಕಿಂತ ಹೆಚ್ಚಿನ ಸೈನ್ಯ ಬಲವಿರುವುದರಿಂದ ನೆಹರೂರವರು ಕಾಶ್ಮೀರ ವಿವಾದವನ್ನು ತೀರ್ಮಾನಿಸುವುದರಲ್ಲಿ ಆಸಕ್ತಿ ವಹಿಸುತ್ತಿಲ್ಲವೆಂದು ಮಹಮ್ಮದಾಲಿಯವರು ಹೇಳುತ್ತಿರುವುದು ನ್ಯಾಯವಲ್ಲ. ಅಮೇರಿಕಾ ಪಾಕಿಸ್ತಾನಕ್ಕೆ ಮಿಲಿಟರಿ ಸಹಾಯ ಕೊಡುವ ವಿಷಯವನ್ನು ಕೆಲ ಸಮಯದವರೆಗೆ ಕನಿಷ್ಠ ಪಕ್ಷ ಬರ್ಲಿನದಲ್ಲಿ ನಾಲ್ಕುಮಹಾರಾಷ್ಟ್ರಗಳ ವಿದೇಶಾಂಗ ಸಚಿವರ ಸಮ್ಮೇಳನ ಮುಗಿಯುವವರೆಗೆ ಮುಂದು ಹಾಕಿರುವುದರಿಂದ, ಮಹಮ್ಮದಾಲಿಯವರು ಇನ್ನೂ ಗೊಂದಲಕ್ಕೆ ಬಿದ್ದರು ಅಮೇರಿಕಾ ಮಿಲಿಟರಿ ಸಹಾಯವನ್ನು ಒದಗಿಸಿ ಕೊಡದಿದ್ದರೆ, ಅದರ ವರ್ಚಸ್ಸಿಗೆ ಕೆಡುಕುಂಟಾಗುವುದು" ಎಂದವರು ಐಸೆನ ಹೋವರರ ಅಭಿಮಾನವನ್ನು ಕೆಣಕಲೂ ಹೋದರು.

ಭಾರತದ ಪರಿಹಾರ

ನಿಷ್ಪಕ್ಷಪಾತ ಬುದ್ಧಿಯನ್ನೂ ನ್ಯಾಯಪರತೆಯನ್ನೂ ಭಾರತ ತೋರಿಸುತ್ತಿರುವುದಕ್ಕೆ ಕೊರಿಯದ ಯುದ್ಧ ಕೈದಿಗಳ ವಿಷಯದಲ್ಲಿ ಅದು ಕೈಗೊಂಡ ತೀರ್ಮಾನ ಉಜ್ವಲ ನಿದರ್ಶನ-- ಯುದ್ಧವಿರಾಮ ಒಪ್ಪಂದದ ಕಲಮುಗಳಂತೆ ವಿವರಣೆಯ ಕೆಲಸವೂ ಕೊರಿಯಾದ ರಾಜಕೀಯ ಸಮ್ಮೇಳನವೂ ಜರಗದಿದ್ದುದರಿಂದ, ಮತ್ತು ವಿವರಣೆಯ ಅವಧಿಯನ್ನು ಬೆಳೆಸಬೇಕೆಂಬ ಸೂಚನೆ ಮಾನ್ಯ ಮಾಡಲ್ಪಡದುದರಿಂದ, ತಟಸ್ಥ ರಾಷ್ಟ್ರ ಮಂಡಳಕ್ಕೆ ಯುದ್ಧ ಕೈದಿಗಳನ್ನು ಏನು ಮಾಡಬೇಕೆಂಬುದು ತೊಡಕಿನ ಪ್ರಶ್ನೆಯಾಗಿ ಪರಿಣಮಿಸಿತು ಇಲ್ಲಿ ಕಮ್ಯುನಿಸ್ಟರನ್ನು ಪ್ರತಿನಿಧೀಕರಿಸುವ ಜೇಕೊಸ್ಲೊವಾಕಿಯ ಹಾಗು ಪೋಲೆಂಡಗಳ ಸದಸ್ಯರಿಗೂ ಸಂಯುಕ್ತ ರಾಷ್ಟ್ರ ಸಂಘದ ಸೇನಾಧಿಪತ್ಯದ ಕಡೆಯಿಂದ ವ್ಯವಹರಿಸುವ ಸ್ವಿಜರಲೆಂಡ ಹಾಗೂ ಸ್ವೀಡನ್‌ಗಳಿಗೂ ಭಿನ್ನಾಭಿಪ್ರಾಯವುಂಟಾಯಿತು ಆದಕಾರಣ ಭಾರತವೇ ಸ್ವತಂತ್ರ ನಿರ್ಣಯವೊಂದನ್ನು ಮಾಡುವುದು ಅವಶ್ಯವೆನಿಸಿತು. ಎಲ್ಲ ಅಂಶಗಳನ್ನೂ ಪರಿಶೀಲಿಸಿದ ತರುವಾಯ ವಿನಿಮಯವಾಗದೆ ಉಳಿದಿರುವ ಸುಮಾರು ೨೨ ಸಾವಿರ ಯುದ್ಧ ಕೈದಿಗಳನ್ನು ಅವರನ್ನು ಬಂಧಿಸಿದ ಸೇನಾಧಿಪತ್ಯಗಳಿಗೆ ದಿನಾಂಕ ೨೦ರಿಂದ ೨೨ರ ನಡುವೆ ಒಪ್ಪಿಸಲಾಗುವುದೆಂದು ತಿಮ್ಮಯ್ಯನವರು ಸಾರಿದರು ಆದರೆ ಇವರನ್ನು ಬಿಡುಗಡೆ ಮಾಡುವ ಅಧಿಕಾರ ಉಭಯ ಪಕ್ಷದವರಿಗೂ ಇಲ್ಲವೆಂದು ಅವರು ಸ್ಪಷ್ಟೀಕರಿಸಿರುವರು. ಅಂಥ ಅಧಿಕಾರ ದೊರೆಯುವುದಕ್ಕೆ ಎರಡೂ ಪಕ್ಷಗಳು ಹೊಸ ಒಡಂಬಡಿಕೆ ಮಾಡಬೇಕಾಗುವುದೆಂದು ತಿಮ್ಮಯ್ಯನವರ ಅಭಿಪ್ರಾಯ ಆದರೆ ಸಂಯುಕ್ತ ರಾಷ್ಟ್ರ ಸಂಘದ ಸೇನಾಧಿಪತ್ಯ ಇದನ್ನು ಒಪ್ಪುವುದಿಲ್ಲ. ದಿನಾಂಕ ೨೩ರಂದು ತನ್ನ ವಶಕ್ಕೆ ಬಂದ ಎಲ್ಲ ಯುದ್ಧ ಕೈದಿಗಳನ್ನು ಬಿಡುಗಡೆ ಮಾಡುವುದಾಗಿ ಅದು ಪುನಃ ಪುನಃ ಹೇಳುತ್ತದೆ. ಈ ನಡುವೆ ಸಂಯುಕ್ತ ರಾಷ್ಟ್ರ ಸಂಘದ ಸಾಮಾನ್ಯ ಸಭೆಯ ಅಧ್ಯಕ್ಷೆ ಶ್ರೀಮತಿ ವಿಜಯ ಲಕ್ಷ್ಮಿ ಪಂಡಿತರು ಸಾಮಾನ್ಯ ಸಭೆಯನ್ನು ಕರೆಯಬೇಕೆಂದು ಭಾರತ ನೀಡಿದ ಸೂಚನೆಯ ಸಂಬಂಧದಲ್ಲಿ ಕಳಿಸಿದ ಸಂದೇಶಕ್ಕೆ ಅಮೇರಿಕ ಅಸಮ್ಮತಿಯನ್ನು ವ್ಯಕ್ತಗೊಳಿಸಿದೆ. ಜನವರಿ ೨೨ನೇ ತಾರೀಕಿನೊಳಗೆ ಏನು ಹೇಳುವುದಕ್ಕೂ ಅಸಾಧ್ಯವೆಂದೂ ಅದ ಕಾರಣ ಮತ್ತೊಂದು ವಾರದ ಅವಧಿಕೊಡಬೇಕೆಂದೂ ಅದು ಹೇಳಿದುದರಿಂದ-ಈ ರೀತಿ ಅವಧಿಬೆಳೆಸಲು ಶ್ರೀಮತಿ ಪಂಡಿತರು ಒಪ್ಪಿಕೊಂಡರು

ಉಡುಪಿ

ಮುನಿಸಿಪಲ್ ಕೌನ್ಸಿಲು ಸಭೆಯು ಇದೇ ತಾ 16ರಲ್ಲು ಚೇರ್‌ಮನ್ ಶ್ರೀ ಯು. ಎಸ್ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. 1953—54ರ ತಿದ್ದಿದ ಮತ್ತು 1954—55ರ ಅಂದಾಜು ಬಜೆಟ್ ಪರಿಶೀಲನೆ ಮುಂದಿನ ಸಭೆಗೆ ಬಾಕಿಯಿಡಲಾಯಿತು. ಮುನಿಸಿಪಲ್ ಲೈಬ್ರರಿ ಡಿಪ್ಪೊದಲ್ಲಿ ವಸೂಲಿಗೆ ಬಾಕಿ ಎಂದು ಕಾಣುವ ರೂಪಾಯಿ 1009—6—0 ಮತ್ತು ರೂ 603—9—6 ಬೆಲೆಯ ಪುಸ್ತಕಗಳನ್ನು ಲೆಕ್ಕದಿಂದ ವಜಾ ಮಾಡುವ ಮೊದಲು ಆ ಪರಿಸ್ಥಿತಿಗೆ ಜವಾಬ್ದಾರರು ಯಾರು ಎಂಬುದನ್ನು ಪ್ರಥಮತ ನಿರ್ಧರಿಸಬೇಕೆಂದಾಯಿತು. ಮಾರು ಮಾರ್ಕೆಟು ಅಬ್ದುಲ್ಲರಸ್ತೆಗಳು ಕೂಡುವಲ್ಲಿಯ ಸ್ಥಳವನ್ನು ಮುಂದಾಗಿ ನೋಡಲು ತಕ್ಕ ಕಾರ್ಯವನ್ನು ಕೂಡಲೇ ಕೈಕೊಳ್ಳಬೇಕೆನ್ನುವ ಶ್ರೀ ಎ. ಮಂಜುನಾಥ ರಾಯರ ನಿರ್ಣಯವು ಬಹುಮತದಿಂದ ಪಾಸಾಯಿತು.

ರೈತ ಪರಿಷತ್ತು—ಉಡುಪಿ ತಾಲೂಕಿನ ರೈತ ಪರಿಷತ್ತು ಇದೇ ತಾ 13ರಲ್ಲು ಸಂಜೆ ಡಾ ಕೆ. ನಾಗಪ್ಪ ಆಳ್ವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಬಿ. ಎಸ್. ಅಮೀನರು ಸ್ವಾಗತ ಭಾಷಣ ಮಾಡಿದರು. ಶ್ರೀ ಪಿ. ಶ್ರೀನಿವಾಸ ಶೆಟ್ಟರು ಪರಿಷತ್ತನ್ನು ಉದ್ಘಾಟಿಸಿದರು. ಡಾ ಸಂಜೀವನಾಥ, ಶ್ರೀಗಳಾದ ವಿ. ಮೋಹನ ರಾವ್, ಬಾಲಪ್ಪ ಮೊದಲಾದವರು ರೈತರ ಸಂಕಷ್ಟ ನಿವಾರಣೋಪಾಯ ಧ್ಯೇಯಗಳನ್ನು ವಿವರಿಸಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ರೈತ ಬಂಧುಗಳ ಯೋಗ ಕ್ಷೇಮಕ್ಕಾಗಿ ಮಡಿಯುವ ಪಕ್ಷ ಯಾವುದು ಎಂಬುವನ್ನು ವಿವರಿಸಿ ರೈತ ಸಂಘಟನೆಯನ್ನು ಬಲಪಡಿಸುವಂತೆ ಎಲ್ಲರೂ ಬೆಂಬಲನೀಡಬೇಕೆಂದರು. ಮದ್ರಾಸುಸರಕಾರವು ಒಕ್ಕಲೆಬ್ಬಿಸುವುದನ್ನು ತಡೆಗಟ್ಟುವ ಕಾಯಿದೆ ಮಾಡಿರುವುದನ್ನು ಸ್ವಾಗತಿಸುವ ಇತ್ಯಾದಿ ನಿರ್ಣಯಗಳಾದುವು.

ಶ್ರೀ ಫಲಿಮಾರು ಸ್ವಾಮಿರ ಪರ್ಯಾಯ ಮಹೋತ್ಸವವು—ಇದೇ ತಾ 17ರಂದು ಬೆಳಿಗ್ಗೆ ಜರಗಿತು. ಶ್ರೀ ಮಠದ ಶ್ರೀ ರಘುಮಾನ್ಯ ತೀರ್ಥ ಸ್ವಾಮಿಗಳವರು ಇತರ ಸ್ವಾಮಿಗಳವರೊಂದಿಗೆ ಸೂರ್ಯೋದಯ ಕಾಲದಲ್ಲಿ ಜೋಡುಕಟ್ಟೆಯಿಂದ ಮೆರವಣಿಗೆಯಿಂದ ರಥಬೀದಿಗೆ ಬಂದು ದೇವರ ದರ್ಶನಾದಿಗಳನ್ನು ತೀರಿಸಿ ಪೀಠಾರೋಹಣ ಮಾಡಿದ ಶ್ರೀ ವಿಶ್ವೇಶ ತೀರ್ಥ ಸ್ವಾಮಿಗಳವರಿಂದ ಅಧಿಕಾರ ಸ್ವೀಕಾರ ಮಾಡಿದರು. ನಂತರ ವಸಂತ ಮಹಲಿನಲ್ಲಿ ಪರ್ಯಾಯ ದರ್ಬಾರು ನಡೆಯಿತು.

ವಿವಾಹ ಸಮಾರಂಭ—ಮದ್ರಾಸಿನ ಡಾ ಕೆ. ಎಮ್. ರೈಗಳ ಪುತ್ರಿ ಸೌ। ನಳಿನಿ ಯನ್ನು ಮೂಲ್ಕಿಯ ಶ್ರೀ ಚಂದಯ್ಯ ಶೆಟ್ಟರ ಪುತ್ರ ಡಾ ವಸಂತಕುಮಾರ ಶೆಟ್ಟರು ಇದೇ ತಾ 17ರಲ್ಲಿ ಮಂಗಳೂರಿನ ಜ್ಯೋತಿ ಟಾಕೀಸಿನಲ್ಲಿ ವಿವಾಹವಾದರು. ನಗರದ ನಾಗರಿಕರಿದ್ದ ಈ ಸಮಾರಂಭ ವೈಭವದಿಂದ ಜರಗಿತು.

ಬರುವ ವಾರ ವಿಶೇಷ ರೀತಿಯಲ್ಲಿ ಪ್ರಕಟವಾಗುವದು

ನವಯುಗ ಪ್ರಜಾರಾಜ್ಯ ವಿಶೇಷಾಂಕ

ವಿವಿಧ ಬರಹಗಳು! ಹಲವಾರು ಚಿತ್ರಗಳು! ನೂರಾರು ಪುಟಗಳು!

ಇಷ್ಟಿದ್ದರೂ ಬೆಲೆ ಬದಲಾವಣೆ ಇಲ್ಲ.

0—8—0 ಸ್ಟಾಂಪು ಕಳಿಸಿದರೆ ಪ್ರತಿಯೊಂದನ್ನು ಬುಕ್‌ಪೋಸ್ಟಿನಿಂದ ಕಳಿಸಲಾಗುವುದು.

ಮೆನೇಜರ್, ನವಯುಗ, ಉಡುಪಿ.

ಶ್ರೀ ರಾಮಕೃಷ್ಣ ಥಿಯೇಟರ ಉಡುಪಿಯಲ್ಲಿ.

ತಾ. 19—1—1954ರಿಂದ.

ಭಾಸ್ಕರ್ ಪ್ರೊಡಕ್ಷನ್‌ರವರ

ಬದುಕುವ ಮಾರ್ಗ

ತಾರಾಗಣ: ಶ್ರೀರಂಜನಿ, ನಾಗೇಶ್ವರರಾವ್, ಸಾವಿತ್ರಿ, ರಂಗರಾವ್, ರೇಲಂಗಿ.

ಬರುವ ಚಿತ್ರ— 'ಸಲೋನಿ' ಬರುತ್ತಿದೆ ಕನ್ನಡ ಚಿತ್ರ - "ಜಾತಕ ಫಲ"

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ

ರಥಬೀದಿ ಉಡುಪಿ.

ಬೆಳ್ತಂಗಡಿ— ಇಲ್ಲಿಯ ಬೋರ್ಡು ಹಾ| ಎ| ಶಾಲೆಯ ವಿಸ್ತರಿಸಲಿರುವ ನೂತನ ಕಟ್ಟಡದ ಉದ್ಘಾಟನಾ ಮಹೋತ್ಸವವನ್ನು ಜಿಲ್ಲಾ ಕಲೆಕ್ಟರ್ ಶ್ರೀ ಎ. ಮಹಾಲಿಂಗಂ ಚೆಟ್ಟಿಯಾರರು ಇದೇ ತಾ 10ರಲ್ಲು ನೆರವೇರಿಸಿದರು ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಬಿ. ವೈಕುಂಠ ಬಾಳಿಗ, ಎಮ್. ಎಲ್. ಎ, ಅವರು ವಹಿಸಿದ್ದರು. ಹೆಡ್ಮಾಸ್ತರ್ ಶ್ರೀ ಮಹಾದೇವ ಭಟ್ಟರು ಕಟ್ಟಡ ಸಮಿತಿ ವರದಿಯನ್ನೂ, ಕೋಶಾಧಿಕಾರಿ ಡಾ| ಬಿ. ನಾರಾಯಣ ರಾಯರು ಲೆಖ್ಖಪತ್ರಗಳ ಪಟ್ಟಿಯನ್ನೂ ಓದಿ ಸಂದರ್ಶಕರ ಅಭಿಪ್ರಾಯಗಳನ್ನು ಎತ್ತಿ ಹೇಳಿದರು ಸಭಾಧ್ಯಕ್ಷರು ಕಟ್ಟಡದ ಕೆಲಸದಲ್ಲಿ ಬಡವರು ಶ್ರೀಮಂತರೆನ್ನದೆ ಸರ್ವರೂ ಪ್ರಮುಖಾನ ಯಜ್ಞದಲ್ಲಿ ಭಾಗವಹಿಸಿದುದನ್ನು ಕೊಂಡಾಡಿ ಮಾತನಾಡಿದರಲ್ಲದೆ ಬೆಳ್ತಂಗಡಿಗ ಹೈಸ್ಕೂಲು ಅತ್ಯಾವಶ್ಯಕವೆಂದೂ ಸೂಚಿಸಿದರು. ಸಭಿಕರ ಭಾಷಣಗಳಾದ ನಂತರ ಶ್ರೀ ಎಸ್. ಕೆ. ಭಿಡೆಯವರು ಧನ್ಯವಾದಗಳನ್ನರ್ಪಿಸಿದರು. ನೂತನ ಕಟ್ಟಡಕ್ಕೆ "ಮಹಾತ್ಮಾಜಿ ಹಾಲ್" ಎಂದು ನಾಮಕರಣ ಮಾಡಲಾಯಿತು.

ಹೆಜಮಾಡಿ— ಹೈಸ್ಕೂಲು ಕಟ್ಟಡದ ಸಹಾಯಾರ್ಥವಾಗಿ ಇದೇ ತಾ 30ರಲ್ಲು ರಾತ್ರಿ "ಬಹದ್ದೂರ್ ಗಂಡ" ಎಂಬ ನಾಟಕವನ್ನು ಉಡುಪಿಯ ಎಸ್ವೆಲ್ ಮತ್ತು ಸಂಗಾತಿಗಳು ಶ್ರೀ ಕೆ. ಎಸ್. ಹೆಗ್ಡೆ, ಎಮ್. ಪಿ. ಅವರ ಅಧ್ಯಕ್ಷತೆಯಲ್ಲಿ ಆಡಲಿರುವರು. ಮಹಾಜನರ ಪ್ರೋತ್ಸಾಹ ನಿರೀಕ್ಷಿಸಲಾಗಿದೆ.

ಮಣಿಪುರ— ಗ್ರಾಮದ ಎಡನೀರು ಹಿಂದೂ ಎಲಿಮೆಂಟರಿ ಶಾಲಾ ಕೌನ್ಸಿಲಿಗೆ ಶ್ರೀಗಳಾದ ವೈ. ಸೂರು ಸೆಟ್ಟಿ (ಅಧ್ಯಕ್ಷ), ಕೆ. ಸೀತಾರಾಮಾಚಾರ್ಯ (ಉಪಾಧ್ಯಕ್ಷ), ಕೆ. ಸೋಮಯ್ಯ ಸೆಟ್ಟಿ (ಕಾರ್ಯದರ್ಶಿ), ಬಿ. ಸದಾಶಿವ ಸೆಟ್ಟಿ (ಜತೆಕಾರ್ಯದರ್ಶಿ), ಬಿ. ವಾಸುದೇವ ಕಾಮತ್, ಅನಂತ ಭಟ್, ಬಿ. ಹರಿಯಣ್ಣ ಸೆಟ್ಟಿ, ವೈ. ನಂದ್ಯಪ್ಪ ಸೆಟ್ಟಿ, ಬಿ. ಜಗನ್ನಾಥ ಸೆಟ್ಟಿ, ವೈ. ಜೋಸೆಫ್ ಡಿ. ಸೋಜ, ಬಿ. ವಾಸು ಸೆಟ್ಟಿ, ಕೆ. ಕೃಷ್ಣಯ್ಯ ಶ್ಯಾನುಭಾಗ, ವೈ. ಆಲ್ಬರ್ಟ್ ಮಾರ್ಟಿಸ್— ಇವರು ಸರ್ವಾನುಮತದಿಂದ ಆರಿಸಲ್ಪಟ್ಟಿರುವರು.

ಉಡುಪಿ ಡಿ. ಮು. ಕೋರ್ಟಿನಲ್ಲಿ

ಕ್ರಮ ನಂಬ್ರ 610/1953

ಹರಿಶ್ಚಂದ್ರ ಶ್ಯಾನುಭಾಗ———ವಾದಿ

ಮತ್ತು

ನರ್ಸಿ ಶೆಡ್ತಿ ಕೂಡಾ———ಪ್ರತಿವಾದಿಗಳು

ಇವರೊಳಗೆ.

4. ಹೊನ್ನಯ ಸೆಟ್ಟಿ 6. ರಾಜು ಸೆಟ್ಟಿ
7. ತಿಂಮ ಸೆಟ್ಟಿ — ಲ್ಲು ಸೆಟ್ಟಿ ಮಕ್ಕಳು.
11. ಕಾಳು ಸೆಟ್ಟಿ — ಬಿಜಿಲು ಸೆಡ್ತಿ ಮಗ.
12. ಚಂದು ಸೆಟ್ಟಿ 13. ಶಿಂಧು ಸೆಟ್ಟಿ
14. ತುಕ್ಕು ಸೆಟ್ಟಿ ಕೂಸು ಸೆಟ್ಟಿ ಮಕ್ಕಳು.

ಉಡುಪಿ ತಾಲ್ಕು ಇನ್ನಂಜೆ ಗ್ರಾಮದ ಮಂಡ್ಯಾಡಿಯಲ್ಲಿರುವವರು.

ಇವರಿಗೆ.

ಪ್ಲೇಂಟಿನಲ್ಲಿ ಹೇಳಿದ ತಾ. 24-5-1882ನೇ ನಿಗ್ದಿ ಗೇಣಿ ಎಗ್ರೀಮೆಂಟಿಗೆ ಕಾರಣವಾದ ಆಸ್ತಿಗಳ ಬಾಬ್ತು ವಾದಿಗೆ ಪ್ರತಿವಾದಿರಿಂದ ವ ಅವರ ಕುಟುಂಬಾರ್ಥದಿಂದ ಬಹ ಕಳೆದ ವಿರೋಧಿ ಸಂ||ರದ ಅದಿ ಲಾಗಾಯ್ತು ನಂದನ ಸಂ||ರದ ಅಧ್ಯೆದು ವರೇಗಿನ ನಾಲ್ಕು ವರುಷಗಳ ಗೇಣಿ, ಬಡ್ಡಿ ಕೂಡಾ ರೂಪಾಯಿ 133-10-6ಕ್ಕೆ ವಾದಿಯು ಮಾಡಿರುವ ಈ ದಾವೆಯು ತಾರೀಕು 2-2-1951ಕ್ಕೆ 4-6-7 ಮತ್ತು 11ರಿಂದ 14ನೇವರೇಗಿನ ಪ್ರತಿವಾದಿರಿಗೆ ನೋಟೀಸು ಬಗ್ಗೆ ಇಟ್ಟಿರುತ್ತದೆ. ಸದ್ರಿ ಪ್ರತಿವಾದಿರು ಸ್ವತಹಾ ವ ವಕೀಲರ ಮುಖಾಂತ್ರ ತಾರೀಕು 2-2-1954ನೇ ದಿವ್ಸ ಬೆಳಿಗ್ಗೆ ಹತ್ತು ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಉತ್ತರಿಸದಿರಕ್ಕೆ ತಪ್ಪಿದ್ರೆ ಈ ದಾವೆಯನ್ನು ಅವರ ಗೈರು ಹಾಜರಿಯಲ್ಲಿ ತೀರ್ಮಾನಿಸಲಾಗುವದು ಎಂಬ ಸಂಗ್ತಿ ಈ ಮೂಲ್ಕ ತಿಳಿಸೋಕಾಗುತ್ತದೆ.

V. R. Kidyur.
Advocate for Plaintiff

ತಾರೀಕು 13 ಜನವರಿ1954

ಕುಂಬಳೆಯಲ್ಲಿ ದ. ಕ. ಜಿಲ್ಲಾ ಕಿಸಾನ್ ಸಮ್ಮೇಳನ— ದ. ಕ. ಜಿಲ್ಲಾ ಪ್ರಜಾ ಸೋಶಲಿಸ್ಟ್ ಮತ್ತು ಹಿಂದ್ ಕಿಸಾನ್ ಪಂಚಾಯತದ ಆಶ್ರಯದಲ್ಲಿ ದ. ಕ. ಜಿಲ್ಲಾ ಕಿಸಾನ್ ಸಮ್ಮೇಳನವು ಇದೇ ತಾ 17ರಲ್ಲು ಸಂಜೆ ಕುಂಬಳೆಯ ಕೇಂದ್ರ ಮೈದಾನಿನಲ್ಲಿ ಹಿಂದ್ ಮಜ್ದೂರ್ ಸಭೆಯ ಉಪಾಧ್ಯಕ್ಷ ಶ್ರೀ ದಿನಕರ ದೇಸಾಯಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಸ್ವಾಗತ ಸಮಿತಿ ಅಧ್ಯಕ್ಷ ಶ್ರೀ ಎ. ಎ. ಶೇರೂಲರು ಸ್ವಾಗತ ಭಾಷಣ ಮಾಡಿದ ಮೇಲೆ ಕಾರ್ಯದರ್ಶಿ ಶ್ರೀ ಕೆ. ರಘುನಾಥ ರಾಯರ ಸಂದೇಶಗಳನ್ನು ಓದಿದರು. ಡಾ| ನಾಗಪ್ಪ ಆಳ್ವರು ಸಮ್ಮೇಳನವನ್ನು ಉದ್ಘಾಟಿಸುತ್ತಾ "ಸ್ವರಾಜ್ಯ ಬಂದು ಆರು ವರ್ಷಗಳಾದರೂ ಇಂದಿನ ಸರಕಾರ ದೇಶದ ಬಡತನ, ಅಜ್ಞಾನ, ಅನಾರೋಗ್ಯ ಮೊದಲಾದವುಗಳ ಪರಿಹಾರಕ್ಕೆ ಏನೂ ಮಾಡಿಲ್ಲ ಎಂದು ಮುಂತಾಗಿ ಹೇಳಿದರು. ಅಧ್ಯಕ್ಷ ಶ್ರೀ ದೇಸಾಯಿಯವರು ತಮ್ಮ ಭಾಷಣದಲ್ಲಿ "ಇಂದು ದೇಶದ ಅತಿ ದೊಡ್ಡ ಪ್ರಶ್ನೆ ರೈತರದ್ದು, ಭೂಮಿಯದ್ದು. ರೈತನ ಉದ್ಧಾರವಾಗದೆ ದೇಶದ ಉದ್ಧಾರವಾಗದು. ಭೂಮಿಗೆ ಬೆಲೆ ಬರಬೇಕಾದರೆ ಭೂಮಿಯಲ್ಲಿ ದುಡಿಯಬೇಕು. ದುಡಿತಕ್ಕೆ ಬೆಲೆಯಲ್ಲದೆ ಭೂಮಿಗಲ್ಲ ಎಂದು ವರ್ಗದಾರರು ತಿಳಿಯಬೇಕು. ರೈತ ಧನಿಗಳ ಹಿತ ರಕ್ತ ಕ್ರಾಂತಿಯಿಲ್ಲದನೇ ಸಾಧಿಸಬೇಕಾಗಿದೆ. ಮಹಾತ್ಮಾ ಗಾಂಧಿಯವರ ಶಾಂತ ಮಾರ್ಗದಿಂದಲೇ ರೈತರ ಹಿತ ಸಾಧಿಸುವುದೇ ನಮ್ಮ ಪ್ರಮುಖ ಧ್ಯೇಯ" ಎಂದು ಹೇಳಿದರು. ದಕ್ಷಿಣಕನ್ನಡ ರೈತರ ರಕ್ಷಣಾ ಮಸೂದೆಯ 3 (2)ನೆ ಪ್ರಕರಣದಲ್ಲಿ 31-3-1953 ಎಂದು ಇದ್ದಲ್ಲಿ 13-4-1953 ಎಂದಾಗಬೇಕೆನ್ನುವ, ಆದಷ್ಟು ಬೇಗನೆ ಒಂದು ಸಂಪೂರ್ಣ ರೈತ ಹಿತ ಮಸೂದೆ ಬರಬೇಕೆನ್ನುವ, ರೈತರಿಗೆ ಕಡಿಮೆ ಬಡ್ಡಿಯಲ್ಲಿ ಸಾಲ ಸಿಗುವ ಏರ್ಪಾಡನ್ನು ಸರಕಾರವು ಮಾಡಬೇಕೆನ್ನುವ, ಚಿತ್ಲೆಯಲ್ಲಿ ಕಾರಡ್ಕ, ಬಂಬ್ರಾಣ, ಕೋಟೆಕುಂಜ ಯೋಳ್ಮಾನ ಮೊದಲಾದ ಸ್ಥಳಗಳಲ್ಲಿ ಅಣೆಕಟ್ಟುಗಳನ್ನು ಹಾಕಿ ಸಣ್ಣ ನೀರಾವರಿ ಕೆಲಸಗಳನ್ನು ಕೈಕೊಳ್ಳಬೇಕೆನ್ನುವ ಇತ್ಯಾದಿ ಠರಾವುಗಳಾದುವು. ನಿರ್ಣಯಗಳ ಕುರಿತು ಶ್ರೀಗಳಾದ ಬಿ. ಎಸ್. ಕಕ್ಕಿಲ್ಲಾಯ, ಡಾ| ಪಿ. ಎಸ್. ಶಾಸ್ತ್ರಿ, ಡಾ| ಸಂಜೀವನಾಥ, ಡಾ| ಪಿ. ಎಸ್. ಭಟ್, ಡಿ. ಮೋಹನರಾವ್ ವಿ. ಶ್ರೀನಿವಾಸ ಸೆಟ್ಟಿ ಎ. ಬಾಳಪ್ಪ, ಬಿ. ಎಸ್. ಲೂವಿಸ್, ಎಚ್. ಮಹಾಬಲ ರೈ, ಎ. ಎ. ಶೆರೂಲ್ ಮೊದಲಾದವರು ಮಾತನಾಡಿದರು. ನಂತರ ಜಿಲ್ಲಾ ಹಿಂದ್ ಕಿಸಾನ್ ಪಂಚಾಯತಿನ ಹೊಸ ಕಾರ್ಯಕಾರೀ ಮಂಡಳಿಗೆ ಶ್ರೀಗಳಾದ ವಿ. ಶ್ರೀನಿವಾಸ ಸೆಟ್ಟಿ (ಅಧ್ಯಕ್ಷ), ಎಮ್. ಗೋವಿಂದ ಸೆಟ್ಟಿ ಮತ್ತು ಸೋಮಪ್ಪ ಸುವರ್ಣ (ಉಪಾಧ್ಯಕ್ಷರು), ಎ. ಬಾಳಪ್ಪ ಮತ್ತು ಕ್ಸೇವಿಯರ್ ಸೋಜ (ಕಾರ್ಯದರ್ಶಿಗಳು) ಮತ್ತು ಹದಿಮೂರು ಮಂದಿ ಸದಸ್ಯರಾಗಿ ಆರಿಸಲ್ಪಟ್ಟರು. ಶ್ರೀ ರಘುನಾಥ ರಾಯರು ಧನ್ಯವಾದಗಳನ್ನರ್ಪಿಸಿದರು.

ಮಲೆನಾಡು ಸಮ್ಮೇಲನ ಮತ್ತು ವಸ್ತು ಪ್ರದರ್ಶನ— ಶಿವಮೊಗ್ಗದಲ್ಲಿ ಮುಂದಿನ ಫೆಬ್ರವರಿ ಯಾ ಮಾರ್ಚಿ ತಿಂಗಳಲ್ಲಿ ಜರಗಲಿರುವ ಅಖಿಲ ಭಾರತ ಮಲೆನಾಡು ಸಮ್ಮೇಳನದ ಕುರಿತು ತೀರ್ಥಹಳ್ಳಿಯಲ್ಲಿ ಇದೇ ತಾ 6ರಲ್ಲು ಡಾ| ಬಿ. ಎಸ್. ರಂಗಪ್ಪನವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿ ವಿಚಾರ ವಿನಿಮಯ ನಡೆಯಿತು. ಸಭೆಯಲ್ಲಿ ಶ್ರೀಗಳಾದ ಎಸ್. ಚನ್ನಪ್ಪ ಗೌಡ ಮತ್ತು ವೈ. ಟಿ. ವೆಂಕಟಕೃಷ್ಣ ಜೋಯಿಸರು ರೂ 600/- ರಂತೆ ಸಹಾಯ ಧನವಿತ್ತರು. ಕೇಂದ್ರ ಸರಕಾರದ ಆಹಾರ ಮಂತ್ರಿ ರಫಿ ಅಹಮ್ಮದ್ ಕಿಡ್ವಾಯಿಯವರು ಸಮ್ಮೇಳನವನ್ನು ಉದ್ಘಾಟಿಸಲಿರುವರು. ಪ್ರಧಾನಿ ಪಂಡಿತ ನೆಹರೂರವರು ಬರುವ ಸಂಭವವಿದೆ. ಸಮ್ಮೇಳನದ ಸ್ವಾಗತ ಸಮಿತಿ ಅಧ್ಯಕ್ಷ ಶ್ರೀ ಬದ್ರಿ ನಾರಾಯಣ, ಶ್ರೀ ಕೆ. ಜಿ ಪ್ರೊಫೆಸರ್, ಎಮ್. ಪಿ. ಮೊದಲಾದವರು ಮಂಗಳೂರಿಗೆ ಇದೇ ತಾ 12ರಲ್ಲು ಬಂದಿದ್ದು ದ. ಕನ್ನಡದ ಸಹಾಯ ಕೋರಿದರು.

ಖಾತ್ರಿ ಚಿನ್ನದ ನೆಕ್‌ಲೇಸ್, ತರಹವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,

ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.

ಫೋನು ನಂಬ್ರ 66

Visit

K. R. K. SHET DIAMOND MART

Opposite Government College, MANGALORE.

For all your requirements in Diamonds and Jewellery Lucky Birth Stones are also available.

Prop: **K. K. R. SHET.**

ಚ್ಯವನಪ್ರಾಶ

೩೩ ಮೂಲಿಕೆಯ ಉತ್ಕೃಷ್ಟ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಚ್ಯವನಪ್ರಾಶವು ಕ್ಷಯ, ದುರ್ಬಲತೆ ಇತ್ಯಾದಿ ಕಾಹಿಲೆಗಳಿಗೆ ದಿವ್ಯೌಷಧ. ವಯೋವೃದ್ಧರಿಗೆ ವಿಶೇಷ ಪರಿಣಾಮಕಾರಿಯಾದುದು. ಎಳೆ ಮಕ್ಕಳನ್ನೂ ಗಟ್ಟಿಮುಟ್ಟಾಗಿಯೂ ಆರೋಗ್ಯವಂತರಾಗಿಯೂ ಇರಗೊಡಿಸುವುದು. ಚ್ಯವನಪ್ರಾಶವನ್ನು ಸತತ ಉಪಯೋಗಿಸುವುದರಿಂದ ಆಯುಸ್ಸು ವೃದ್ಧಿಯಾಗುವುದು. ಪರೀಕ್ಷಾರ್ಥವಾಗಿ ಕೆಳಗಿನ ವಿಳಾಸಕ್ಕೆ ಬರೆದು ಒಮ್ಮೆ ತರಿಸಿ ನೋಡಿರಿ. ಸೇರಿಗೆ ರೂಪಾಯಿ 10/- ಬೆಲೆ.

ಕಾಲಿಕಮಾಲಿ ಆಯುರ್ವೇದ ಫಾರ್ಮಸಿ, ಋಷಿಕೇಶ (ದೆಹರಾಡೂನ್)

Kali Kamali Ayurved Pharmacy, RISHIKESH (Dehradun.)

(೫ನೇ ಪುಟದಿಂದ)

ರುಗಳ ಜೊತೆಗೆ ನೀಲಗಿರಿ, ಕೊಡಗು ಮತ್ತು ದಕ್ಷಿಣಕನ್ನಡಗಳನ್ನು ಒಳಗೊಂಡ ಪಶ್ಚಿಮ ಸಮುದ್ರ ತೀರದ ನೂತನ ರಾಜ್ಯ ನಿರ್ಮಾಣವಾಗಬೇಕೆಂದು ಗಂಟಲೆತ್ತಿರುವರು ತಿರುಕೊಚ್ಚಿಯ ಭೆತ್ತದ ಕಣಜವೆನಿಸಿದ ತಮಿಳು ಪ್ರದೇಶಗಳು ಕೈಬಿಟ್ಟಲ್ಲಿ ಆ ರಾಜ್ಯ ಬಡವಾಗುವುದು. ಅಲ್ಲಿನ ಆಹಾರಾಭಾವಕ್ಕೆ ಹೆಸರಾದ ಜಿಲ್ಲೆ. ಆದುದರಿಂದ ಕೇವಲ ಮಲೆಯಾಳಭಾಷೆ ಪ್ರಯೋಜನಕ್ಕೆ ಬಾರದೆಂಬ ಕಾರಣ ಸಮೃದ್ಧವಾದ ನೀಲಗಿರಿ, ಕೊಡಗುಗಳ ಮಲೆನಾಡನ್ನೂ ದಕ್ಷಿಣ ಕನ್ನಡದ ಸುವರ್ಣ ಭೂಮಿಯನ್ನೂ ನುಂಗುವುದೇ ಕೇಳಪ್ಪನ್ನರ ಆಶಯ.

ಕಾಂಗ್ರೆಸ ಪಕ್ಷದ ಐಕ್ಯ

ಹೈದರಬಾದಿನಲ್ಲೂ ಮೈಸೂರಿನಲ್ಲೂ ಹುಟ್ಟಿಕೊಂಡಿದ್ದ ಕಾಂಗ್ರೆಸು ಪಕ್ಷದ ಒಳಭಾಗಗಳು ಈಗ ಸ್ತಿಮಿತಕ್ಕೆಬಂದು ಮುಟ್ಟಿವೆ. ಮೈಸೂರಿನ ಮುಖ್ಯ ಮಂತ್ರಿಗಳ ಮೇಲೆ ಮಾಡಲಾಗಿದ್ದ ಆರೋಪಗಳ ವಿಷಯದಲ್ಲಿ ನೆಹರೂರ ಆದೇಶದಂತೆ ನಡೆದುಕೊಂಡು ಎಲ್ಲವೂ ಸರಿಗೊಳಿಸಲ್ಪಟ್ಟಿದೆ. ಹೈದರಾಬಾದಿನಲ್ಲಿ ಸ್ವಾಮಿ ರಮಾನಂದ ತೀರ್ಥರು ಪ್ರದೇಶ ಕಾಂಗ್ರೆಸ್ ಸ್ಥಾನಕ್ಕೆ ರಾಜಿನಾಮೆ ಕೊಟ್ಟು, ಇನ್ನು ಮುಂದೆ ಭೂದಾನ ಚಳುವಳಿಯತ್ತ ಲಕ್ಷ್ಯ ಹಾಕುವುದಾಗಿ ಇಚ್ಛೆ ವ್ಯಕ್ತಪಡಿಸಿದರು. ಹೊಸ ಪ್ರದೇಶ ಕಾಂಗ್ರೆಸಾಧ್ಯಕ್ಷರ ಚುನಾವಣೆಯು ಕಾಂಗ್ರೆಸದ ಮಹಾಕಾರ್ಯದರ್ಶಿ ಶ್ರೀ ಯು. ಶ್ರೀನಿವಾಸ ಮಲ್ಯರ ಸಮ್ಮುಖದಲ್ಲಿ ನಡೆದು, ಈಗಿನ ಮಂತ್ರಿ ಮಂಡಳದಲ್ಲಿ ಕಂದಾಯ ಹಾಗು ಅಬಕಾರಿ ಮಂತ್ರಿಗಳಾಗಿರುವ ಶ್ರೀ ಕೊಂಡಾ ವೆಂಕಟ ರಂಗ ರೆಡ್ಡಿಯವರು ಜಯಶೀಲರಾದರು. ಹೈದರಾಬಾದ ಮಂತ್ರಿ ಮಂಡಳದ ಪುನರ್ಘಟನೆಯು ಇಷ್ಟರಲ್ಲೇ ನಡೆಯಲಿದ್ದು, ಮಂತ್ರಿ ಮಂಡಳದ ಸದಸ್ಯರ ಸಂಖ್ಯೆಯು ೧೧ಕ್ಕೆ ಇಳಿಸಲ್ಪಡುವುದು. ಮುಖ್ಯ ಮಂತ್ರಿ ರಾಮಕೃಷ್ಣ ರಾಯರ ಮೇಲೆ ಶಾಸನ ಸಭೆಯ ಕಾಂಗ್ರೆಸು ಪಕ್ಷದ ಸದಸ್ಯರಲ್ಲಿ ಕೆಲವರಿಗಿದ್ದ ಅಸಮಾಧಾನವೂ ನೆಹರೂರ ಮನವೊಲಿಸುವಿಕೆಯಿಂದ ದೂರಗೊಂಡಿರುವುದು.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

S. C. 533/1953

ಮಂಜಯ್ಯ ಸೆಟ್ಟಿ, ಸುಬ್ಬಯ್ಯ ಸೆಟ್ರ ಅಳಿಯ, ಕುಂದಾಪುರ ತಾಲ್ಕು, ನಾಡ ಗ್ರಾಮದ ಕಡ್ಕೆ ಜಡ್ಡಾಡಿ, ಮೂಡ್ಕಾನ ಮನೆ. ವಾದಿ.

ಶೀರಗಿರಿ ಅತಾಳ ಅರೆಹೊಳೆ ನಾರಾಯಣ ಬ್ಯಾತಾರಮಗ, ಕುಂದಾಪುರ ತಾಲ್ಕು, ನಾವುಂದ ಗ್ರಾಮದಲ್ಲಿರುವವ. ಪ್ರತಿವಾದಿ.

ಸದ್ರಿ ಪ್ರತಿವಾದಿಗೆ ಈ ಮೂಲ್ಕ ತಿಳಿಯಪಡಿಸುದ್ದು.

ಸದ್ರಿ ವಾದಿಗೆ ಪ್ರತಿವಾದಿಯು, ಬರೆಕೊಟ್ಟ ದಿನಾಂಕು ನೋಟಿನ ಬಾಬ್ತು ಬಹ ಅಸಲು ಬಡ್ಡಿ ಕೂಡಾ ರೂಪಾಯಿ 116—8—0ನ್ನು ಬರಮಾಡಿ ಕೊಳ್ಳುವರೇ ವಾದಿ ದಾಕ್ಲು ಮಾಡಿದ ಸದ್ರಿ ದಾವೆ ತಾ. 29-1-54ಕ್ಕೆ ತನ್ಖಿಗೆ ಇಟ್ಟಿದೆ. ಆ ಕುರಿತು ನಿಂಮ್ಮ ಉದಾಹರಣೆಯಿದ್ದರೆ ಸದ್ರಿ ದಿವಸ ಬೆಳಿಗ್ಗೆ ಗಂಟೆ 11ಕ್ಕೆ ಸದ್ರಿ ಕೋರ್ಟು ಮುಂದೆ ಹಾಜರಾಗಿ, ತಿಳಿಸತಕ್ಕದ್ದು.

(Sd.) Y. Manjaya Shetty,
Advocate for Pltfs.

ಮೊಕ್ಕಾಂ, ಕುಂದಾಪುರ,

ತಾ. 13—1—54.

ಮಂಗಳೂರು

ಕೇಂದ್ರ ಸರಕಾರದ ಸ್ವಾರಿಗೆ ಖಾತೆಯ ಉಪ ಮಂತ್ರಿಗಳಾದ—ಶ್ರೀ ಓ. ವಿ. ಅಲಗೇಶನ್‌ರವರು ಇದೇ ತಾ 12ರಲ್ಲು ಮಂಗಳೂರಿಗೆ ಆಗಮಿಸಿ ಸಂಜೆ ಕೆನರಾ ಚೇಂಬರ್ ಆಫ್ ಕೊಮರ್ಸ್ ಸಂಸ್ಥೆಗೆ ಸಂದರ್ಶನವಿತ್ತರು. ಆಗ ಅವರಿಗೊಂದು ಬಿನ್ನವತ್ತಳೆಯಲ್ಲಿ ಹಾಸನ-ಮಂಗಳೂರು ರೈಲು ಪಶ್ಚಿಮ ಕರಾವಳಿಯಲ್ಲಿ ಮಂಗಳೂರಿನಿಂದ ಬೊಂಬಾಯಿ ತನಕ ಕರಾವಳಿ ರೈಲು, ಮುದವೂರು ಸಂಕ, ಮಂಗಳೂರು ಮದ್ರಾಸು ರೈಲು ಚಲಾವಣೆಯಲ್ಲಿ ಕೆಲವೊಂದು ಬೇಡಿಕೆಗಳು ಸೂಚಿಸಲಾಗಿತ್ತು. ಮಾನ್ಯ ಮಂತ್ರಿಗಳು ಉತ್ತರಿಸುತ್ತ ಹೆಚ್ಚಿನ ಬೇಡಿಕೆಗಳೆಲ್ಲವೂ ಕಾರ್ಯರೂಪಕ್ಕೆ ಬರುವುವೆಂದರು. ತದನಂತರ ಇವರು ನಗರ ಸಭೆಗೆ ಸಂದರ್ಶನವಿತ್ತು ಅಲ್ಲಿಯೂ ಅವರಿಗೊಂದು ಬಿನ್ನವತ್ರ ಅರ್ಪಿಸಲಾಯಿತು. ಮರ್ಮಗೋವೆಯು ಭಾರತದೊಡನೆ ವಿಲೀನವಾಗಲಿರುವುದರಿಂದ ಅದರ ಹೊರತು ಇನ್ನೊಂದು ಪ್ರಬುದ್ಧ ಬಂದರವು ಪಶ್ಚಿಮ ಕರಾವಳಿಯಲ್ಲಿ ಅನಗತ್ಯವೆಂದು ಹೇಳಿ ಉತ್ತರವಿತ್ತರು. ಆಮೇಲೆ ಅವರು ಸಮುದ್ರ ವಿಹಾರ ಮಾಡಿ ಕಾಂಗ್ರೆಸ್ ಕಚೇರಿಗೆ ಹೋಗಿ ಕಾಂಗ್ರೆಸ್ ಕಾರ್ಯಕರ್ತರೊಡನೆ ವಿಚಾರ ವಿನಿಮಯ ನಡೆಸಿದರು. ಅಲ್ಲದೆ ಪೂರ್ವಾಪ್ನ ಪಶ್ಚಿಮ ಕರಾವಳಿಯ ಹಂಚು ತಯಾರಕರ ಸಂಸ್ಥೆಯ ಮನವಿಯನ್ನು ಸ್ವೀಕರಿಸಿದರು. ರಾತ್ರಿ ಮದ್ರಾಸು ಕಡೆ ಪ್ರಯಾಣ ಬೆಳೆಸಿದರು.

ಆಲ್ ಇಂಡಿಯಾ ಕಾಂಗ್ರೆಸ್ ಪ್ರತಿನಿಧಿ ಉಪಚುನಾವಣೆ—ದಾಕ್ಷಿಣ ಮಂಗಳೂರು ಸರ್ಕಲಿನ ಉಪಚುನಾವಣೆಗೆ ಶ್ರೀ ಪಿ. ನಾಥನ ಪಡಿಯಾರರೊಬ್ಬರೇ ನಾಮಪತ್ರ ಹಾಕಿರುವುದರಿಂದ ಅವರು ಆ ಸರ್ಕಲಿನ ಕಾಂಗ್ರೆಸ್ ಪ್ರತಿನಿಧಿಯಾಗಿ ಅವಿರೋಧವಾಗಿ ಆರಿಸಲ್ಪಟ್ಟಿರುವರು.

ಮಿ| ಸ್ಟುವರ್ಟ್ ಸ್ಮಿತ್—ಮದ್ರಾಸಿನಲ್ಲಿ ಯುನೈಟೆಡ್ ಕಿಂಗ್ಡಮ್ ಪರವಾಗಿ ದ. ಭಾರತದ ಟ್ರೇಡ್ ಕಮಿಶನರರಾಗಿರುವ ಮಿ| ಡಿ. ಜೆ. ಸ್ಟುವರ್ಟ್ ಸ್ಮಿತ್, ಅವರು ಈಚೆಗೆ ಮಂಗಳೂರಿಗೆ ಬಂದಿದ್ದು ವಣಿಕ ಸಂಘದಲ್ಲಿ ಪ್ರಮುಖ ವ್ಯಾಪಾರಿಗಳನ್ನು ಕಂಡು, ಆಯಾತ- ನಿರ್ಯಾತಗಳ ಸೌಕರ್ಯ- ಸೌಲಭ್ಯಗಳ ಕುರಿತು ವಿಚಾರ ವಿನಿಮಯ ನಡೆಸಿದರು.

ಟೆಲಿಫೋನು ಎಕ್ಸ್ ಚೇಂಜ್—ಸುತ್ತೂರಿನಲ್ಲಿ ಟೆಲಿಫೋನ್ ಎಕ್ಸ್ ಚೇಂಜ್ ಮತ್ತು ಸಾರ್ವಜನಿಕ ಟೆಲಿಫೋನ್ ಆಫೀಸು ಆರಂಭವಾಗಿದೆ. ಕುಂದಾಪುರದಲ್ಲಿಯೂ ಟೆಲಿಫೋನ್ ಎಕ್ಸ್ ಚೇಂಜ್ ಆಫೀಸು ಆರಂಭವಾಗಿರುವುದೆನ್ನಲಾಗಿದೆ.

ನಿಧನ—ಮಂಗಳೂರಲ್ಲಿ ಕೆಲಕಾಲ ಡೆಪ್ಯುಟಿ ಕಲೆಕ್ಟರರಾಗಿದ್ದ ಶ್ರೀ ಎಸ್. ಬಾಲಾಜಿ ರಾಯರು, ಇದೇ ತಾ 8ರಲ್ಲು ಪರಲೋಕವಾಸಿಗಳಾದರೆನ್ನಲು ವಿಷಾದಿಸುತ್ತೇವೆ.

ಶಾಂತಿ ಉತ್ಸವ—ಫೆಬ್ರವರಿ ತಿಂಗಳ ಎರಡನೇ ವಾರದಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನಿಟ್ಟುಕೊಂಡು "ಶಾಂತಿ ಉತ್ಸವ"ವೊಂದನ್ನು ಜರಗಿಸುವ ಏರ್ಪಾಡು ಮಾಡಲಾಗಿದೆ. ಈ ಉತ್ಸವದ ಅಂಗವಾಗಿ ಕಲಾ ಪ್ರದರ್ಶನ ಕೂಡಾ ನಡೆಯಲಿದೆ ಪ್ರದರ್ಶನಕ್ಕಾಗಿ ತೈಲ ಚಿತ್ರಗಳು, ಬಣ್ಣದ ಚಿತ್ರಗಳು, ಉತ್ತಮ ಛಾಯಾಚಿತ್ರಗಳು, ಕಸೂತಿ ವಸ್ತುಗಳು, ಕೆತ್ತನೆಯ ಕೃತಿಗಳು, ಎರಕದ ಕೃತಿಗಳೇ ಮೊದಲಾದುವನ್ನು ಕಳುಹಿಸಬಹುದಾಗಿದೆ. ಇದೇ ಸಂದರ್ಭದಲ್ಲಿ ಕರ್ನಾಟಕದ ಉತ್ತಮ ಹಸ್ತಪತ್ರಿಕೆಗಳ ಪ್ರದರ್ಶನವೂ ಜರಗುವುದು. ಹೆಚ್ಚಿನ ಮಾಹಿತಿಗಾಗಿ "ಜನಪದ ಕಲಾಮಂಡಲಿ, ಮಹಾತ್ಮಾಗಾಂಧಿ ರೋಡು, ಮಂಗಳೂರು—3" ವಿಳಾಸಕ್ಕೆ ಬರೆದುಕೊಳ್ಳುವುದು.

ಪ್ರಜಾರಾಜ್ಯ ದಿನಾಚರಣೆ—ಇದೇ ತಾ 26ರಲ್ಲು ಪ್ರಜಾರಾಜ್ಯ ದಿನಾಚರಣೆ ನಿಮಿತ್ತ ಮಂಗಳೂರು ಕೇಂದ್ರ ಮೈದಾನದಲ್ಲಿ ಬೆಳಿಗ್ಗೆ 8 ಗಂಟೆಗೆ ಜಿಲ್ಲಾ ಕಲೆಕ್ಟರರು ರಾಷ್ಟ್ರಧ್ವಜವನ್ನು ಅರಳಿಸುವರು. ಈ ಕಾಲಕ್ಕೆ ಪೋಲೀಸ್ ದಳದ ಪರೇಡೂ ಇರುವುದು.

ಮೂಲ್ಕಿ—ಸ್ಥಳೀಯ ಸರಕಾರಿ ಹೈಸ್ಕೂಲಿನ ವರ್ಧಂತ್ಯುತ್ಸವವು ಇದೇ ತಾ 24ರಲ್ಲು ಸಂಜೆ ಶಾಲೆಯ ಹಳೇ ಕಟ್ಟಡದ ವಠಾರದಲ್ಲಿ ಶ್ರೀ ಟಿ. ಎ. ಪೈ, ಎಂ. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಲಿರುವುದು.

ಆಯುರ್ ವೈದ್ಯಾಶ್ರಮ

[ಸ್ಥಾಪನೆ: 1933]

ಆಬಾಲವೃದ್ಧ, ಸ್ತ್ರೀಪುರುಷರ ವಿವಿಧ ರೋಗಗಳಿಗೂ, ವಿಶೇಷವಾಗಿ ಇಂದ್ರಿಯಗಳ ದೌರ್ಬಲ್ಯ, ಮಾನಸಿಕ ವಿಕಾರಗಳು, ಗುಪ್ತ ರೋಗಗಳು, ನಪುಂಸಕತೆ, ಬಂಜೆತನ, ಚರ್ಮವ್ಯಾಧಿಗಳು, ಮುಂತಾದವುಗಳಿಗೆ ರಸ ರಸಾಯನಗಳಿಂದ ವಿಶೇಷ ರೀತಿಯ ಚಿಕಿತ್ಸೆ.

ಪ್ರಬಲವಾದ ವಾತರೋಗಗಳನ್ನು ಕದ್ರಿ ಗುಡ್ಡೆಯ ಮೇಲೆ (ವೈದ್ಯಾಶ್ರಮದ ಪಶ್ಚಿಮ)

—ಪ್ರಶಾಂತ ಪ್ರದೇಶದಲ್ಲಿ ತೆರೆದಿರುವ—

—० ಶುಶ್ರೂಷಾಲಯದಲ್ಲಿ ०—

ಪಂಚಕರ್ಮ, ಧಾರೆ ಮುಂತಾದ ವಿಶೇಷ ಚಿಕಿತ್ಸೆಗಳ ಸಹಾಯದಿಂದ ಚಿಕಿತ್ಸೆ ಮಾಡುವೆವು. ಅತ್ಯಂತ ಅಮೋಘ ಪ್ರಯೋಗಗಳನ್ನು ಪಾದರಸ ಲಿಂಗಗಳ ಮೂಲಕ ಕೈಕೊಳ್ಳುವೆವು. ಪತ್ರ ವ್ಯವಹಾರ ಮಾಡಿ ವಿವರ ತಿಳಿಯುವುದು.

ಕದ್ರಿ, ಮಂಗಳೂರು. } ಪ್ರಧಾನ ವೈದ್ಯರು: ಎಂ. ಎಸ್. ಭಿಡೆ, ಆಯುರ್ವೇದ ವಿಶಾರದ.

ದಿ ಕೆಥೋಲಿಕ್ ಬ್ಯಾಂಕ್ ಲಿಮಿಟೆಡ್, ಕಲ್ಯಾಣಪುರ.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬ್ಯಾಂಕಿನಲ್ಲಿ ನಗದ ಈಡಿನ ಮೇಲೆ ಸಾಲ ಪಡೆದುಕೊಂಡು ಕ್ಲಪ್ತ ನಾಯಿದೆಗೆ ಅಸಲು, ಬಡ್ಡಿ ಸಲ್ಲಿಸಿ ಕೊಡದೆ ಬಾಕಿ ಮಾಡಿರುವುದರಿಂದಲೂ, ಸದ್ರಿ ಸಾಲವನ್ನು ಬರವಾಡಿಕೊಳ್ಳುವರೆ ರಿಜಿಸ್ಟ್ರಿ ನೋಟೀಸು ಬಿಟ್ಟಲ್ಲಿಯೂ ಸದ್ರಿಯವುಗಳನ್ನು ಬಿಡಿಸಿಕೊಂಡು ಹೋಗದೆ ತಪ್ಪಿದ ಕಾರಣ, ಈ ಮೂಲಕ ತಿಳಿಯಪಡಿಸುವುದೇನೆಂದರೆ, ಸದ್ರಿ ನಗಗಳನ್ನು ಇದೇ ತಿಂಗಳ ತಾ. 29ರ ಒಳಗೆ ಬ್ಯಾಂಕಿಗೆ ಸಲ್ಲತಕ್ಕ ಅಸಲು, ಬಡ್ಡಿ, ನೋಟೀಸು ಖರ್ಚು ಇತ್ಯಾದಿಗಳನ್ನು ಸಲಾಯಿಸಿ, ಬಿಡಿಸಿಕೊಂಡು ಹೋಗದೆ ಇದ್ದ ಪಕ್ಷದಲ್ಲಿ, ತಾ 29—1—1954ನೇ ಗುರುವಾರ ಪೂರ್ವಾಹ್ನ ಗಂಟೆ 11ಕ್ಕೆ ಯಾ ಅನಂತರ ನಮಗೆ ಯುಕ್ತಕಂಡ ತಾರೀಕಿನಲ್ಲಿ ಪುನಃ ನೋಟೀಸು ಕೊಡದೇನೇ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ಅಸಲು ಮೊಬಲಗು
27 911	ಚಂದು ಪೂಜಾರಿ, ಐತ ಪೂಜಾರಿಯ ಅಳಿಯ, ಮಾಯಾಡಿ, ಉಪ್ಪೂರು ಗ್ರಾಮ	20—0—0
1217	ವಿಲಿಯಂ ಫಿಲಿಪ್ಸ್ ಸೋಜ. ಲಾರೆನ್ಸ್ ಸೋಜರ ಮಗ, ಕುಸ್ರು ಬೆಟ್ಟು, ಉಪ್ಪೂರು	40—0—0
25 261	ಕಿಟ್ಟಿ ಮರಕಾಲ, ಐತ ಮರಕಾಲನ ಮಗ, ಮಾಯಾಡಿ, ಉಪ್ಪೂರು ಗ್ರಾಮ	100—0—0
136	ಟಿ ದೇವಣ್ಣ ಸುಬ್ರಾಯ ಪೈ, ಟಿ. ಸುಬ್ರಾಯ ಪೈ ಮಗ, ಮಾರು ಕಟ್ಟೆ, ಕಲ್ಯಾಣಪುರ	7[illegible]—0—0
1166	- Do -	2[illegible]—0—0
28 613	ಜೆ ಯಂ ಲೂಯಿಸ್, ಪೀಟರ್ ಡಿಸೋಜರ ಮಗ, [illegible] P. O.	[illegible]5—0—0
95[illegible]	ಗ್ರೆಗರಿ ಫೆರ್ನಾಂಡಿಸ್, ಅಂತು ಫೆರ್ನಾಂಡಿಸರ ಮಗ, ಬಡಾನಿಡಿಯೂರು ಗ್ರಾಮ	65—0—0
10[illegible]0	[illegible] C o [illegible], [illegible] P. O.	1[illegible]0—0—0
120[illegible]	[illegible] ಮರಕಾಲ, [illegible] ಮರಕಾಲನ ಅಳಿಯ, [illegible] ಗ್ರಾಮ	30—0—0

ಕಲ್ಯಾಣಪುರ. 16—1—1954.

S. Rebello,
ಮೆನೇಜರ್.

ಸ್ವೀಕಾರ—ವಿಮರ್ಶೆ

ತೆಂಗಿನ ಕೃಷಿ—

ಬರೆದವರು: ಶ್ರೀ ಸಿ. ಯಂ. ಜೋನ್ಸ್, ಬಿ. ಎ. ಕನ್ನಡಕ್ಕೆ ಭಾಷಾಂತರಿಸಿದವರು: ಶ್ರೀ ಎಚ್. ಮಂಜಣ್ಣ ಶೆಟ್ಟಿ, ಬಿ. ಎಸ್. ಸಿ. (ಎಜಿ.). ಎಲ್. ಟಿ; ಡಿ. ಐ. ಎಚ್. ಪ್ರಕಟಿಸಿದವರು: ದಿ ಇಂಡಿಯನ್ ಸೆಂಟ್ರಲ್ ಕೋಕನಟ್ ಕಮಿಟಿ, ಎರ್ನಾಕುಲಂ. ಬೆಲೆ: ಪತ್ರಾಣೆ

ಭಾರತೀಯ ಸಂಸ್ಕೃತಿಗೆ ಕಲ್ಪವೃಕ್ಷದ ಹೆಸರು ಚಿರಪರಿಚಿತವಾದುದು. ದೇಶಕ್ಕೆ ಮತ್ತು ಜನಕ್ಕೆ ಅನೇಕ ಬಗೆಯ ಸದುಪಯೋಗವನ್ನು ಕೊಡುವ ತೆಂಗನ್ನು ಶಾಸ್ತ್ರೀಯವಾಗಿ ಬೆಳೆಸುವುದಕ್ಕೆ ಈಗ ಅಧಿಕ ಪ್ರಾಮುಖ್ಯತೆಯನ್ನು ಕೊಡಲ್ಪಡುತ್ತದೆ. ಭಾರತ ಸರಕಾರದವರು ಈ ಉದ್ದೇಶದಿಂದಲೇ ೧೯೪೫ರಲ್ಲಿ ಕೇಂದ್ರ ಶಾಸನಕ್ಕೊಳಪಟ್ಟ ಭಾರತದ ಕೇಂದ್ರ ತೆಂಗಿನ ಸಮಿತಿಯನ್ನು ನೇಮಿಸಿ, ತೆಂಗಿನ ಕೃಷಿಯ ವಿಷಯದಲ್ಲಿ ಅತ್ಯಮೂಲ್ಯ ಪ್ರಯೋಗಗಳನ್ನು ಮಾಡುವುದಕ್ಕೂ, ಸಂಶೋಧನೆಗಳನ್ನು ಕೈಗೊಳ್ಳುವುದಕ್ಕೂ ತೆಂಗಿನ ಉತ್ಪತ್ತಿಯ ಮಾರಾಟವನ್ನು ವ್ಯವಸ್ಥಿತಗೊಳಿಸುವುದಕ್ಕೂ ಅನುಕೂಲತೆಯನ್ನು ಕಲ್ಪಿಸಿ ಕೊಟ್ಟಿತು. ಶಾಸ್ತ್ರೀಯ ಮಾಹಿತಿಯನ್ನು ಸಂಶೋಧನಾ ಕ್ಷೇತ್ರಗಳಲ್ಲಿ ನಡೆಸಿದ ಪರಿಶೀಲನೆ ಮತ್ತು ಪ್ರಯೋಗಗಳ ಫಲಿತಾಂಶವನ್ನು ವ್ಯವಸಾಯಗಾರರು ತಿಳಿದುಕೊಂಡ ಪಕ್ಷದಲ್ಲಿ ತೆಂಗಿನ ಕೃಷಿಯನ್ನು ಸಮೃದ್ಧವಾಗಿ ಬೆಳೆಸಿಕೊಂಡು ಹೆಚ್ಚಿನ ಲಾಭ ಪಡೆಯಲು ಸಾಧ್ಯವುಂಟು. ಈಗ ಭಾರತದಲ್ಲಿ ೩೦೦ ಕೋಟಿ ತೆಂಗಿನ ಕಾಯಿಗಳ ಉತ್ಪತ್ತಿ ಕೊಡುವ ೧೫ ಲಕ್ಷ ಎಕ್ರೆಗಳಷ್ಟು ತೆಂಗಿನ ಸಾಗುವಳಿ ಇದೆ. ತೆಂಗಿನ ಕೃಷಿಕರಲ್ಲಿ ಹೆಚ್ಚಿನವರು ಸರಾಸರಿ ೧೦೦ ಅಥವಾ ೧೨೦ ಫಲಗಳನ್ನು ಕೊಡುವ ಮರಗಳುಳ್ಳ ಸಣ್ಣ ಸಣ್ಣ ವ್ಯವಸಾಯಗಾರರಾಗಿರುವರು, ಸಾಗುವಳಿಯು ಶಾಸ್ತ್ರೀಯ ರೀತಿಯಲ್ಲಿರಬೇಕೆಂದು ಮತ್ತು ಕಾಯಿಯ ಪರಿಪಕ್ವತೆ, ಕೊಟ್ಟಿಗೆ, ಯೋಗ್ಯ ಗೊಬ್ಬರ, ರೋಗರುಜಿನಗಳ ಉಪಚಾರ ಮುಂತಾದವುಗಳಿಗೆ ಗಮನ ಕೊಡಬೇಕೆಂದು ಹೇಳಲಾಗುತ್ತಿದ್ದರೂ, ಈಗಿನ ಕೃಷಿಕರಲ್ಲಿ ಯಾರೂ ಈ ಕಡೆ ಸಾಕಷ್ಟು ಗಮನ ಕೊಡುತ್ತಿಲ್ಲ. ಈ ಉದಾಸೀನತೆಗೆ ಸುಧಾರಿತ ವ್ಯವಸಾಯ ಕ್ರಮದ ತಿಳುವಳಿಕೆಯನ್ನು ಕೊಡುವ ಪ್ರಕಟಣೆಗಳ ಅಭಾವ ಕೆಲ ಮಟ್ಟಿಗೆ ಕಾರಣವಾಗಿರಬಹುದು—ಈ ಪುಸ್ತಕ ಈ ಕೊರತೆಯನ್ನು ನೀಗಿಸುತ್ತದೆ. ತೆಂಗಿನ ಪ್ರಾಮುಖ್ಯತೆ. ಚರಿತ್ರೆ. ತೆಂಗು ಬೆಳೆಯುವ ವಿಸ್ತೀರ್ಣ ಮತ್ತು ಸಂಖ್ಯಾವಿಕೆಗಳನ್ನು ಈ ಪುಸ್ತಕದ ಪ್ರಥಮಾಧ್ಯಾಯ ವಿವರಿಸುತ್ತದೆ. ತೆಂಗಿನ ಹುಟ್ಟು ಮತ್ತು ಬೆಳವಣಿಗೆಗೆ ಸಂಬಂಧಿಸಿದ ಅತ್ಯಮೂಲ್ಯ ವಿಷಯ ಸಂಗ್ರಹವ ದ್ವಿತೀಯಾಧ್ಯಾಯದಲ್ಲಿ ಕಾಣುತ್ತೇವೆ. ಮದ್ರಾಸು ರಾಜ್ಯದ ದಕ್ಷಿಣ ಕನ್ನಡ ಜಿಲ್ಲೆಯ ಪಿಲಿಕೋಡು, ನೀಲೇಶ್ವರ ಮತ್ತು ಕಾಸರಗೋಡುಗಳ ತೆಂಗಿನ ಸಂಶೋಧನಾ ಕ್ಷೇತ್ರಗಳಲ್ಲಿ ಸುಮಾರು ೨೦ ವರ್ಷಗಳಿಂದ ನಡೆಸಿದ ಪರಿಶೀಲನೆಯ ಫಲಿತಾಂಶಗಳೇ ಇಲ್ಲಿ ನಿರೂಪಿಸಿದ ಹೆಚ್ಚಿನ ವಿಷಯಗಳಿಗೆ ಆಧಾರವಾಗಿರುವುದರಿಂದ, ನಮ್ಮ ಜಿಲ್ಲೆಯ ರೈತರು ಅಧಿಕ ಲಾಭವನ್ನು ಪಡೆಯಬಲ್ಲರು. ಉಳಿದ ಪ್ರದೇಶಕ್ಕೂ ಅಲ್ಲಿಯ ಪರಿಸ್ಥಿತಿಗೆ ತಕ್ಕಂತೆ ಗೊಬ್ಬರ, ಆರೈಕೆ ಮುಂತಾದ ವಿಷಯಗಳನ್ನು ಹೊಂದಿಸ ಬಹುದು. ಹೀಗೆ ಚೆನ್ನಾದ ಫಲಬರುವಂತೆ ಬೆಳೆಸಿದರೂ ಸಹ, ತೆಂಗಿಗೆ ಅನೇಕ ಬಗೆಯ ರೋಗಗಳು ಬರಬಹುದು; ಅದಲ್ಲದೆ ಕ್ರಿಮಿ ಕೀಟಗಳ ಹಾವಳಿಯಿಂದ ಅದು [illegible]ಗೊಳಗಾದೀತು. ಇವುಗಳ ನಿವಾರಣೋಪಾಯ ಮೂರು ಮತ್ತು ನಾಲ್ಕನೇ ಅಧ್ಯಾಯಗಳಲ್ಲಿ ವಿವರಿಸಿರುವರು. ತೆಂಗಿನ ಕೃಷಿಗೆ ಸಂಬಂಧಿಸಿದ ಅನೇಕ ಚಿತ್ರಗಳೂ ಪುಸ್ತಕದಲ್ಲಿವೆ. ಮೂಲ ಇಂಗ್ಲೀಷಿನ ಕನ್ನಡ ಭಾಷಾಂತರವು ಸರಳ ಸುಂದರವಾಗಿದೆ. ಬೆಲೆಯೂ ಕಡಿಮೆ. ಕನ್ನಡ ಜಿಲ್ಲೆಯ ತೆಂಗಿನ ವ್ಯವಸಾಯಿಗಳು ಪುಸ್ತಕದಿಂದ ಅಧಿಕ ಪ್ರಯೋಜನವನ್ನು ಪಡೆಯುವರೆಂದು ಹಾರೈಸುತ್ತೇವೆ.

ಉಡುಪಿ ಡಿ. ಮು. ಕೋರ್ಟಿನಲ್ಲಿ

O. P. 1,54

P. ಮೀರಾ ಸಾಹೇಬ್ ಕೂಡಾ 4 ಜನರು ಅರ್ಜಿದಾರರು.

ಅರ್ಜಿದಾರರ ಪೈಕಿ 4ನೆಯವರ ಗಂಡ ಮಿಕ್ಕವರ ತಂದೆ ಜನಾಬ್ ಪೆರ್ಲಾ ಮೊಯ್ದೀನ್ ಸಾಹೇಬ್ ಎಂಬವರು ವೀಲು ನಗ್ಗೈರೆ ಮಾಡದೆ, ಕೊಡವೂರು ಗ್ರಾಮದಲ್ಲಿ ತಾ 13—12—1953ರಲ್ಲು ಮೃತರಾಗಿರುವ ಕಾರಣ ಸದ್ರಿಯವರಿಗೆ—

The Canara Banking Corporation Ltd, Malpe, S. B. Account ನ ಬಾಬ್ತು ಬರತಕ್ಕ ರೂಪಾಯಿ 700-5-4ನ್ನು ಪಡೆಯಲು ತಾವು ಹಕ್ಕುದಾರರೆಂತಲೂ, ಆ ಕುರಿತು ತಮ್ಮೆಲ್ಲರ ಪರವಾಗಿ 2ನೇ ಅರ್ಜಿದಾರರಿಗೆ ಒಂದು ಹೇರೀಸು ಸರ್ಟಿಫಿಕೇಟು ಕೊಡಬೇಕಾಗಿಯೂ ಮನವಿ ಮಾಡಿಕೊಂಡ ಮೇಲ್ಕಂಡ ಅರ್ಜಿಯು ತಾ30—1—54ಕ್ಕೆ ತನಿಖೆಗೆ ಇಟ್ಟಿರುತ್ತದೆಂತಲೂ ಆ ಕುರಿತು ಆಕ್ಷೇಪವುಳ್ಳವರು ಈ ಕೋರ್ಟಿನಮುಂದೆ ಸದ್ರಿ ತಾ 30—1—54ರಲ್ಲು ಹಗಲು ಗಂಟೆ 10—15ಕ್ಕೆ ಹಾಜರಾಗಿ ತಮ್ಮ ಆಕ್ಷೇಪಗಳನ್ನು ಹ್ಯಾಜರು ಮಾಡಿಕೊಳ್ಳಬೇಕಾಗಿಯೂ ಈ ಮೂಲಕ ಸರ್ವ ಜನರಿಗೂ ತಿಳಿಸಲಾಗಿದೆ.

N. Ramachandra Bhat
Advocate for Petitioner's

Udipi 16—1—1954

ONLY FOR Rs. 14/6
Beautiful Wrist Watch, Gtd. 3 years
Size 10½ No. 5

4 Jewels Chrome 14/6 Rolled gold 18/-
15 Jewels chrome 30/- Rolled gold 32/8
15 ,, Waterproof 35/- 17 Jewels 40/-
Pocket Watch 12/- Time Piece 15/-
N. B.— Only one watch can be sent to one man. Catalogue Free.
FREE INDIA WATCH CO. N.K.
Post Bag No. 6724, CALCUTTA-7.

ದೇಶದ ಏಳಿಗೆಗೆ

[೧ನೇ ಪುಟದಿಂದ]

ಶ್ರೀ ವಿಶ್ವೇಶ್ವರಯ್ಯನವರಂಥ ಮಹಾನು ಭಾವರಲ್ಲವೇ ಮೈಸೂರು ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಕಾರಣ ಭೂತರು? ಈ ದೇಶ ಅಂಥ ಎಷ್ಟು ವಿಶ್ವೇಶ್ವರಯ್ಯನವರನ್ನು ಪಡೆದಿದೆಯೆಂದು ಹುಡುಕುವ ಪ್ರಾಮಾಣಿಕ ಪ್ರಯತ್ನ ನಡೆಯಲೇ ಬೇಕು.

ಸರಕಾರದವರು ಖಾಸಗಿ ಕ್ಷೇತ್ರದ ಉದ್ದಿಮೆದಾರರನ್ನು ತಮ್ಮ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ರಾಷ್ಟ್ರೀಕರಣದ ಬೇಡಿಕೆಯು ಈಗ ಹೆಚ್ಚು ಹೆಚ್ಚಾಗಿದ್ದರೂ, ಔದ್ಯಮಿಕ ವಿಷಯದಲ್ಲಿ ಇನ್ನೂ ಹಾಲ ಹಸುಳೆಯಂತಿರುವ ನಮ್ಮ ದೇಶಕ್ಕೆ ರಾಷ್ಟ್ರೀಕರಣದಿಂದ ಇಚ್ಛಿತ ಪ್ರಯೋಜನ ಲಭ್ಯವಾಗುವುದು ಸಂಶಯಾಸ್ಪದವಾಗಿರುತ್ತದೆ. ಹಾಲನ್ನೂ ಜೀರ್ಣಿಸಿಕೊಳ್ಳಲಾರದ ಮಗುವಿನ ಹೊಟ್ಟೆಗೆ ಕಡಲೆಯನ್ನು ತಿನ್ನಲು ಕೊಡುವುದು ಸರ್ವಥಾ ಯೋಗ್ಯವಲ್ಲ. ಆದುದರಿಂದ ರಾಷ್ಟ್ರೀಕರಣದ ಪಲ್ಲವಿಯನ್ನು ಹಾಡುವವರು ತುಸು ನಿಧಾನವಾಗಿ, ಸಮಾಧಾನದಿಂದ ವರ್ತಿಸಬೇಕು. ನಮ್ಮ ದೇಶಕ್ಕೆ ಅತಿ ಪ್ರಾಮುಖ್ಯವಾದ ಹತ್ತು ಹದಿನೈದು ಉದ್ದಿಮೆಗಳನ್ನು ಗುರುತಿಸಿ, ಅವುಗಳು ಇತೋಪ್ಯತಿಶಯವಾಗಿ ಬೆಳೆಯುವಂತೆ ತಕ್ಕ ಕಾರ್ಯಕ್ರಮವನ್ನು ರೂಪಿಸಬೇಕು. ಮಹೋದ್ಯಮಗಳನ್ನು ಹೊಸತಾಗಿ ತೊಡಗಲು ಈ ಮುಗ್ಗಟ್ಟಿನ ಕಾಲದಲ್ಲಿ ಕಷ್ಟವೆನಿಸೀತು ಆದರೂ ಸರಕಾರದ ಪ್ರೋತ್ಸಾಹವಿದ್ದರೆ ಈ ಆತಂಕದ ಮೋಡ ಚದರಿ ಹೋಗಬಲ್ಲುದು. ಉದ್ಯೋಗಗಳು ಸಾವಿರಾರು ಜನರಿಗೆ ಕೆಲಸ ಒದಗಿಸಿ ಕೊಡುತ್ತವಲ್ಲದೆ, ಉತ್ಪಾದನೆಯನ್ನೂ ಹೆಚ್ಚಿಸುವುದರಿಂದ, ಸಾಮಾನ್ಯ ಪ್ರಜೆಯ ಜೀವನ ಮಟ್ಟವು ಸುಧಾರಿಸುತ್ತಾ ಹೋಗುವುದು. ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಔದ್ಯೋಗೀಕರಣದ ವಿಷಯಕ್ಕೆ ಹೆಚ್ಚಿನ ಮಹತ್ವ ಕೊಡಲ್ಪಟ್ಟಿದೆಯಾಗಿ ಕೇಳುತ್ತೇವೆ. ಉದ್ದಿಮೆಗಳು ಬೆಳೆಯುವುದಕ್ಕೆ ಆಯಾ ವಿಷಯದಲ್ಲಿ ತಜ್ಞರಾದವರು ಬೇಕಾಗುವುದರಿಂದ, ಉದ್ದಿಮೆದಾರರೊಡನೆ ಸಲಹೆ ಕೇಳಿಕೊಂಡು, ಯೋಗ್ಯ ಉಮೇದ್ವಾರರಿಗೆ ಔದ್ಯಮಿಕ ಶಿಕ್ಷಣವನ್ನು ಸರಕಾರ ಒದಗಿಸಿ ಕೊಡಬೇಕು. ನಮ್ಮ ದೇಶದ ನಾಗರಿಕರ ಕೈಯಲ್ಲಿಯೇ ಉದ್ದಿಮೆಗಳು ಯಶಸ್ವಿಯಾಗಿ ನಡೆಸಲ್ಪಡುವಂತೆ, ಅವರಿಗೆ ತರಬೇತಿ ನೀಡುವುದು ವಿಹಿತ. ಸರಕಾರ ವಿದೇಶೀ ಕಂಪೆನಿಗಳೊಂದಿಗೆ ಒಡಂಬಡಿಕೆ ಮಾಡಿಕೊಂಡು ಹೊಸತಾಗಿ ಉದ್ದಿಮೆಗಳನ್ನು ತೊಡಗುವಾಗ ಈ ನೀತಿಯನ್ನು ಈಗ ಅನುಸರಿಸುತ್ತಿದೆ. ಇದನ್ನು ಇನ್ನಷ್ಟು ವ್ಯಾಪಕ ಗೊಳಿಸಬೇಕೆಂಬುದೇ ನಮ್ಮ ಆಶಯ.

ಧರ್ಮಾರ್ಥ—ಪುಕ್ಕಟೆ

ಒಂದು ಸಾವಿರ ಕಾಶ್ಮೀರಿ ಶಾಲುಗಳನ್ನು ಧರ್ಮಾರ್ಥ ಹಂಚುತ್ತಲಿದ್ದೇವೆ. ಬೇಗನೆ ಬರೆಯಿರಿ. ವಿಳಂಬವಾದರೆ ನಿರಾಶರಾಗುವಿರಿ.

Diamond Commercial
Chambers (N. U.)
Bhandari Street,
BOMBAY—3

[೨ನೇ ಪುಟದಿಂದ]

ದು ಭಾರತದ ಇಚ್ಛೆಯಾಗಿರಲೇ ಇಲ್ಲ. ಆದುದರಿಂದ ಸಾಧ್ಯವಾದಷ್ಟು ಮಟ್ಟಿಗೆ ಚಿತ್ರಹಿಂಸೆ, ಕೊಲೆ ಮುಂತಾದುವುಗಳನ್ನು ತಡೆಯಲು ಸೌಮ್ಯ ಮಾರ್ಗವನ್ನೂ ಮನವೊಲಿಸುವಿಕೆಯ ಉಪಾಯವನ್ನು ಭಾರತೀಯ ಸೇನಾದಳ ಅಂಗೀಕರಿಸಿತು. ಕೈದಿಗಳು ಕ್ರೋಧಕ್ಕೆ ಬಲಿಬಿದ್ದು, ವಿವರಣೆಯನ್ನು ಕೇಳಲು ನಿರಾಕರಿಸದಂತೆ, ಆವೇಶ ದುಂಬಿ ಗೊಂದಲ ಹಾಕದಂತೆ, ನೋಡಿಕೊಳ್ಳಲು ಭಾರತೀಯ ಸೈನಿಕರು ಎಷ್ಟು ಚಾತುರ್ಯವನ್ನು ಸಹನೆ ಸಂಯಮವನ್ನು ಪ್ರದರ್ಶಿಸಬೇಕಾಯಿತೆಂಬುದನ್ನು ನಾಳೆಯ ಇತಿಹಾಸಕಾರರು ಪ್ರಶಂಸಾತ್ಮಕವಾಕ್ಯವೇ ತೋರಿಸಿ ಕೊಡುತ್ತದೆ. —ನಾವೇ ಅದನ್ನು ಹೊಗಳಿದರೆ, ಚಂದಕಾಣಲಿಕ್ಕಿಲ್ಲ.

ಗುಟ್ಟಿನ ಸಿದ್ಧತೆಗಳು

ಹೀಗೆ ಆತಂಕಪಡಿಸಿದ ರಾಷ್ಟ್ರ ಸಂಘದ ಸೇನಾಧಿಪತ್ಯ, ಇತರ ವಿಧಾನದಿಂದಲೂ ಯುದ್ಧ ಕೈದಿಗಳ ಒಪ್ಪಂದವನ್ನು ಸ್ವಾಹಿತಕ್ಕೋಸ್ಕರ ಗುಟ್ಟಿನಲ್ಲಿ ಬಳಸಲು ಸಿದ್ಧತೆ ಕೈಗೊಂಡಿತು. ಭಾರತೀಯ ಸೇನೆ ಕೊರಿಯಾಕ್ಕೆ ಹೊರಟಕ್ಷಣದಲ್ಲೇ ದಕ್ಷಿಣದಲ್ಲಿ ಕೊರಿಯಾದ ಸಿಂಗ್ಮನ್‌ರ್ಹೀ ಭಾರತದ ಸೇನೆಗೆ ಕಾಲೂರಲು ಬಿಡಲಾರೆನೆಂದು ಬೊಬ್ಬಿರಿಯುವಂತೆ ರಾಷ್ಟ್ರ ಸಂಘವೇ ಪ್ರಚೋದನೆ ಕೊಟ್ಟಿತೆನ್ನುವುದು ನಗ್ನಸತ್ಯ. ಕೈದಿಗಳಿಗೆ ರಾಜಕೀಯ ಉಪದೇಶಾಮೃತವನ್ನು ಉಣಿಸಿ ಅವರನ್ನು ಸ್ವಂತ ರಾಷ್ಟ್ರಕ್ಕೆ ದ್ರೋಹಿಗಳಾಗಿ ಪರಿವರ್ತಿಸುವುದು ನಿಷಿದ್ಧವೆಂದು ಜಿನೀವಾ ಒಪ್ಪಂದದಲ್ಲಿ ಹೇಳಿದ್ದರೂ, ಅದನ್ನು ಉಲ್ಲಂಘಿಸಿ ನಡೆದ ರಾಷ್ಟ್ರ ಸಂಘದ ಸೇನಾಧಿಪತ್ಯ, ತಟಸ್ಥ ರಾಷ್ಟ್ರ ಮಂಡಳದವರು ವೈಯಕ್ತಿಕವಾಗಿ ವಿವರಣೆ ಕೊಡಲು ಅವಕಾಶ ಕಲ್ಪಿಸಿದಾಗ ಅದೇ ಜಿನೀವಾ ಒಪ್ಪಂದದ ಹೆಸರಿನಲ್ಲಿ ಪ್ರತಿಭಟನೆಯನ್ನು ವ್ಯಕ್ತಗೊಳಿಸಿತು ರ್ಹೀಯವರ ಬೊಬ್ಬೆ ಜೋರು ಜೋರಾಗಿ ಕೇಳಿ ಬಂದುದೂ ಈ ಕ್ಷಣದಲ್ಲಿಯೇ—ಆದರೆ ಕೆನಡಾ, ಬ್ರಿಟನು ಮತ್ತು ಭಾರತಗಳ ಒತ್ತಾಯ ಕೊಟ್ಟು ಬಿಟ್ಟ—ಅದಕ್ಕೂ ಹೆಚ್ಚಾಗಿ, ಭಾರತೀಯ ಸೈನಿಕರ ಮೇಲೆ ರ್ಹೀಯ ಸೇನೆ ಮಾಡಬಹುದಾದ ಆಕ್ರಮಣದ ಪರಿಣಾಮವನ್ನು ಇದಿರಿಸುವ ಉದ್ದೇಶದಿಂದ ಕಮ್ಯುನಿಸ್ಟರು ಗಡಿ ಪ್ರದೇಶದಲ್ಲಿ ತಂದು ನಿಲ್ಲಿಸಿದ ಸೈನ್ಯದ ಬಲಕ್ಕೂ ಅಂಜಿಕೊಂಡು-ರಾಷ್ಟ್ರ ಸಂಘ ತುಸು ನಯವಾದ ನೀತಿಯನ್ನು ಅಂಗೀಕರಿಸಿತು ಆದರೆ, ಇದಕ್ಕೆ ಮುಂಚೆ ನೆಲಸುರಂಗಗಳಿಂದ ಕೂಡಿದ ನಿಃಸೈನೀಕೃತ ಪ್ರದೇಶದಲ್ಲಿ ಕೈದಿಗಳಿಗೆ ಶಿಬಿರವನ್ನೊದಗಿಸುವುದು ಸಾಧ್ಯವೇ ಇಲ್ಲವೆಂದೂ ಸಾಧ್ಯವಾದರೂ ಹಲವಾರು ದಿನಗಳು ತಗಲುವುವೆಂದೂ ರಾಷ್ಟ್ರಸಂಘ ಹಟ ಪ್ರದರ್ಶಿಸಿತು. ಇಲ್ಲಿ ಶಿಬಿರ ಕಟ್ಟುವುದು ಕಷ್ಟವೆಂಬ ಕಾರಣ ಬಡವಿಲ್ಲದುದೆಂದು ತೋರಿಸಲು—ಭಾರತದ ಬ್ರಿಗೇಡಿಯರ್ ಕೌಲರು ಜೀವದಾಶೆ ಇಲ್ಲದೆ ಆ ಪ್ರದೇಶದುದ್ದಕ್ಕೂ ನಡೆದು ತೋರಿಸಿದರು.

ಭಾರತ ಸೇನೆಯ ಸೌಹಾರ್ದ

ಒಮ್ಮೆ ರಾಷ್ಟ್ರ ಸಂಘದ ಕಡೆಯಿಂದ ತೊಂದರೆಗಳು ಕಡಿಮೆಯಾದಂತೆ ಕಂಡು ಬರುವಾಗ ಅರೆವಾಸಿಗೂ ಹೆಚ್ಚು ಅವಧಿ ಮುಗಿದು ಹೋಯಿತು. ಅವಸರದಿಂದ ವಿವರಣೆಯ ಕೆಲಸ ತೊಡಗಿದಾಗ—ಕಮ್ಯೂನಿಸ್ಟರಿಗೆ ಆಶ್ಚರ್ಯವೂ, ದಿಗ್ಭ್ರಮೆಯೂ ಏಕಕಾಲದಲ್ಲಿ ಉಂಟಾಯಿತು. ತಮ್ಮವರೆಂದು ತಿಳಿದುಕೊಂಡಿದ್ದ ಕಮ್ಯೂನಿಸ್ಟ ಯುದ್ಧಕೈದಿಗಳಲ್ಲಿ ನೂರಕ್ಕೆ ಮೂರು ಮಂದಿ ಮಾತ್ರ ಸ್ವದೇಶಕ್ಕೆ ಮರಳಲು ಸಿದ್ಧರಿದ್ದರು. ಉಳಿದವರು ದುರ್ಭಾಗ್ಯದ ನೆಲೆಗಾಗಿ ಸ್ವದೇಶಕ್ಕೆ ತೆರಳಲು ನಿರಾಕರಿಸಿದರು. ರಾಷ್ಟ್ರಸಂಘಕ್ಕೆ ಆದ ಈ ಲಾಭವು ಕಮ್ಯೂನಿಸ್ಟರನ್ನು ಅನೇಕ ದೂರುಗಳನ್ನು ಮುಂದಿಡುವಂತೆ ಪ್ರೇರಿಸಿತು. ವಿವರಣೆ ಕೇಳಿದ ಕೈದಿಗಳನ್ನು ಕೇಳಿಹೇಳಲ್ಪಡದ ಕೈದಿಗಳಿಂದ ಪ್ರತ್ಯೇಕಿಸಿಡಲಾಗಲಿಲ್ಲವೆಂಬ ದೊಡ್ಡ ಆರೋಪವನ್ನು ಕಮ್ಯುನಿಸ್ಟರು ಭಾರತೀಯ ಸೇನಾ ಪಡೆಯ ಮೇಲೆ ಹೊರಿಸಿ, ಕೈತೊಳೆದುಕೊಂಡರು. ಆದರೆ ಈ ಆರೋಪ ತೀರ ನಿರಾಧಾರವಾದದ್ದು—ಕೈದಿಗಳು ಸಂಘಟಿತರಾಗಿದ್ದಾರೆಂಬುದರ ಸುಳಿವು ಕಮ್ಯೂನಿಸ್ಟರಿಗೂ ಇರಲಿಲ್ಲ—ಭಾರತವಂತೂ ದೂರದಿಂದ ಬಂದ ದೇಶ. ಮೇಲಾಗಿ ಕಮ್ಯುನಿಸ್ಟ ಯುದ್ಧ ಕೈದಿಗಳೆಲ್ಲ, ಮೊದಲು ಚಿಯಾಂಗರ ಸೇನೆಯಲ್ಲಿದ್ದಾರೆಂದೂ, ಕಮ್ಯುನಿಸ್ಟರು ಅವರಿಗೆ ಸೈನ್ಯದಿಂದ ಮುಕ್ತಿ ನೀಡುವ ಆಶ್ವಾಸನೆ ಕೊಟ್ಟಿದ್ದರೂ, ಕೊರಿಯಾ ಯುದ್ಧಕಾಲದಲ್ಲಿ ಒತ್ತಾಯದಿಂದ ಸೈನ್ಯಕ್ಕೆ ಪುನಃ ಭರತಿ ಮಾಡಿದರೆಂದೂ, ಕಾರಣ, ಯುದ್ಧಕ್ಕೆ ಬೇಸತ್ತ ಈ ಯೋಧರು ರಾಷ್ಟ್ರಸಂಘಕ್ಕೆ ಶರಣಾಗತರಾದರೆಂದೂ ಹೇಳಲ್ಪಟ್ಟಿದೆ ರಾಷ್ಟ್ರಸಂಘವೂ ಫೊರ್ಮೋಸಾದ ಚಿಯಾಂಗಿನ ಸರಕಾರವೂ ಈ ಕೈದಿಗಳಿಗೆ ಸುಖ ಜೀವನದ ಭರವಸೆ ಕೊಟ್ಟಿರುತ್ತವೆಯೆಂದ ವದಂತಿ. ಈ ಸುಖದ ಆಮಿಷದಿಂದಲೇ—ಅವರು ಬಿಡುಗಡೆಯ ದಿನವಾದ ೨೩ನೇ ಜನವರಿಯನ್ನು ನಿರೀಕ್ಷಿಸುತ್ತಿದ್ದಾರೆ ಈ ಸರಿಯಲ್ಲಿ ಬಹಳದಿಂದ ಕೊನೆಯ ವರೆಗೂ ಒಳಸಂಚು ನಡೆದಿದ್ದ ಕೊರಿಯದ ಯುದ್ಧ ಕೈದಿಗಳ ಪ್ರಶ್ನೆಯಲ್ಲಿ—ಸಂಭಾವಿತರಾದ ಭಾರತೀಯ ಸೈನಿಕರು, ಕಹಿ ಅನುಭವನ್ನೆ ಹೆಚ್ಚಾಗಿ ಪಡೆದರು ಆದರೂ ರಾಜಕಾರಣದ ಜಂಜಟವನ್ನು ಬಿಟ್ಟು, ಮಾನವೀಯತೆಯ ದೃಷ್ಟಿಯಿಂದ ಭಾರತೀಯ ಸೈನಿಕರ ಕೆಲಸವನ್ನು ವೀಕ್ಷಿಸಿದ ಪಕ್ಷದಲ್ಲಿ—ಭಾರತದ ಸಂಸ್ಕೃತಿಯ ಉಚ್ಚ ಪರಂಪರೆಗೆ ವ್ಯತ್ಯಾಯಬಾರದಂತೆ, ಸರಕಾರದ ಉನ್ನತ ನಿಲುವಿಗೆ ಭಂಗ ಬರದಂತೆ, ಭಾರತದ ರಾಯಭಾರಿತನವನ್ನು ಪ್ರತಿಯೊಬ್ಬ ಸೈನಿಕನೂ ಯಶಸ್ವಿಯಾಗಿ ನಿರ್ವಹಿಸಿದನೆಂಬುದು ನಿರ್ವಿವಾದ.

(ಆಧಾರದಿಂದ)

TENDER NOTICE

1. Sealed tenders are invited for the supply of each of the following groups of articles, so as to reach the undersigned before 13-2-1954.
2. Every tender shall be accompanied by a deposit of earnest money in cash, equivalent to 25% of the gross value of the articles offered to be supplied. Earnest money is liable to be refunded, except in the case of accepted tenders, in which case, it shall be refunded only after the final execution of the contract of supply.
3. Tenderers shall be liable to produce samples of articles to be supplied and the quantity of supplies shall be true to the samples.
4. Tenders will be opened at 11 A. M. on 13—2—1954 at the Office of the Sri Mookambika Temple at Kollur, Coondapur Taluk, S.K.

ARTICLES TO BE SUPPLIED

Group I

	ಮಾನಿಗೆ. ಸೇ. ತೊ. / ಮಣ. ಸೇ. ತೊ.
1 ಉದ್ದು	8—0—0
2 ಹೆಸರು	5—0—0
3 ಕಡಲೆ	1—0—0
4 ತೊಗರಿ ಬೇಳೆ	7—0—0
5 ಉಪ್ಪು	5—0—0
6 ಹುಣ್ಸೆಹಣ್ಣು	6—0—0
7 ಮೆಣಸು	4—0—0
8 ಕೊತ್ತುಂಬರಿ	1-21—0
9 ಜೀರಿಗೆ	0-14—0
10 ಮೆಂತೆ	0-10—0
11 ಸಾಸಿವೆ	0 14—0
12 ಎಳ್ಳು	0 12—0
13 ಅರಿಸಿನ	0-32—0
14 ಕುಂಕುಮ	27—0—0
15 ಕರ್ಪೂರ (in cubes)	0-17—0
16 ಜೋಳಭಾಸ	0—52—0
17 ಹುಂಡಿ	0 12—0
18 ಲವಂಗ, ಗಂಧ ಮಣ್ಣು, ಓಸಿ ಸೇರು 4ರಂತೆ.	

Group II

1 ತೆಂಗಿನ ಎಣ್ಣೆ ಮಣ 100
2 ನೆಲಗಡ್ಲೆ ಎಣ್ಣೆ ಮಣ 40

Group III

1 ಬೆಲ್ಲ ಮಣ 172
2 ಆಕಳ ತುಪ್ಪ ಮಣ 10
3 ಜೇನು ತುಪ್ಪ ಮಣ 7

Group IV

1 ಚಿಮ್ನಿ ಎಣ್ಣೆ ಡಬ್ಬ 36

Group V

1 ರವಿಕೆ ಕಣ ಮಾಡುವರೆ ಅನುಕೂಲವಾಗುವ 6 ಗಜದ ಸೀರೆಗಳು	10
2 ಪ್ರಾಯಸ್ಥರ ಕಟ್ಟುಗಳು	8
3 ,, ಉಪಾದುಗಳು	8
4 ರೇಷ್ಮೆ ದೋತರ	1
5 ರೇಷ್ಮೆ ಶಾಲು	1

B. Narayana Shetty.
Executive Officer,
Sri Mookambika Temple, P. O. Kollur, S. K.

ನಮ್ಮ ಹಳ್ಳಿಗಳಲ್ಲಿದ್ದ ತನ್ನತನ

ಯಂ. ನಾ. ಉಡುಪ, ವಿದ್ವಾನ್, ಐರೋಡಿ.

ಪಳ್ಳಿ, ಹಳ್ಳಿ, ಹೊಳೆ, ಹೋಳು, ಪೋರು—ಇವೆಲ್ಲಾ ಕೇಂದ್ರದಲ್ಲಿ ಒಂದೇ ಸೂತ್ರದಿಂದ ಪೋಣಿಸಲ್ಪಟ್ಟ ಏಕರೀತಿಯಾದ ಅರ್ಥವನ್ನು ಸೂಚಿಸುವ ರತ್ನದಂಥಾ ದೇಶ್ಯಪದಗಳು. ಇವುಗಳಲ್ಲಿ ಮಾತ್ರವಲ್ಲದೆ ಇಂತಹ ಪದಗಳಲ್ಲೆಲ್ಲಾ ಕನ್ನಡಿಗರ ತನ್ನತನದೊಂದಿಗೆ ಪ್ರಾಚೀನ ಕನ್ನಡಿಗರ ಸಂಸ್ಕೃತಿಯೂ ಹುದುಗಿದೆ. ಪಳ್ಳಿ ಎಂಬುದು ಹಳ್ಳಿ ಎಂಬ ಹಳೆಗನ್ನಡದ ಇಂದಿನ ರೂಪವಾಗಿದ್ದಂತೆ, ಉಳಿದ ಪದಗಳೂ ಹಳೆಗನ್ನಡದಿಂದಲೇ ಇಂದಿನ ರೂಪವನ್ನು ತಂದಿವೆ. ಹಳ್ಳಿಗಳು ಹೊಳೆಯುತ್ತಿದ್ದ ಕಾಲದಲ್ಲೇ ಈ ಶಬ್ದವು ಜನ್ಮತಾಳಿ, ಮುಂದೆ ಪ್ರತಿಯೊಂದು ಹಳ್ಳಿಗೂ ಅಂಕಿತನಾಮವಾಗಿಯೋ, ಅನ್ವರ್ಥನಾಮವಾಗಿಯೋ ಒಂದೊಂದು ನಿರ್ದಿಷ್ಟ ನಾಮವು ತಲೆದೋರಿತು. ಈ ಹೆಸರುಗಳಲ್ಲಿ ಕೆಲವು ಸಂಸ್ಕೃತ ನಾಮಗಳಂತೆ ಕಾಣಿಸುತ್ತಿವೆ; ಹಲವು ಅಚ್ಚದೇಶಿಗಳಾಗಿವೆ. ಹಳ್ಳಿಗಳ ಈ ಎರಡು ವಿಧದ ಹೆಸರುಗಳಲ್ಲಿ ಅಚ್ಚದೇಶ್ಯ ಪದಗಳು ಸಂಸ್ಕೃತ ಪದಗಳಿಗಿಂತ ಹಳೆಯವಾಗಿದ್ದು ಅಂದಿನ ಹಳ್ಳಿಗರ ಹೃದಯದ ಪ್ರತೀಕಗಳಾಗಿವೆ. ಉದಾ:—ಹಾರಂಪಳ್ಳಿ. (ಹಾರುವರ = ಬ್ರಾಹ್ಮಣರ, ಪಳ್ಳಿ = ಹಳ್ಳಿ, ಹೊಳೆಯುವ ಊರು) ಇದು ಪರಶುರಾಮ ಸೃಷ್ಟಿಯ ಆದಿಭಾಗದಲ್ಲೇ—ಬಹಳ ಹಿಂದೆ ನಾಮಕರಣ ಹೊಂದಿದ ಹಳ್ಳಿ. ನಂದನವನ (ನಂ)(ಸ್ವರ್ಗದ ಉದ್ಯಾನದಂತಿರುವ ಗ್ರಾಮ) ಇದು ಸಂಸ್ಕೃತ ಪಂಡಿತರೊಬ್ಬರಿಂದ ಈಚೀಚೆಗೆ ಹೆಸರಿಡಲ್ಪಟ್ಟ ಚಿಕ್ಕ ಊರು. ಹಳ್ಳಿಯು ಒಂದು ವಿಧದ ಉಜ್ವಲಾರ್ಥವನ್ನು ಕೊಡುತ್ತಿದ್ದರೆ, ಊರು ಎಂಬುದು ಜನರ ಸಂಸ್ಕೃತಿಗೆ ಆಧಾರವಾದ ಹಳ್ಳಿಯೆಂಬ ಇನ್ನೊಂದು ಸುಭಗಾರ್ಥವನ್ನು ಕೊಡುವುದು.

ಆರ್ಯ ಸಂಸ್ಕೃತಿಗಿಂತ ದ್ರಾವಿಡ ಸಂಸ್ಕೃತಿಯು ಮೊದಲಿನದು. ಎಂಬುದರಲ್ಲಿ ಸತ್ಯಾಂಶವಿದೆ. ಹಾಗೆಯೇ ದೇಶ್ಯಪದಗಳ ಹೆಸರುಳ್ಳ ಹಳ್ಳಿಗಳು ಹಿಂದಿನವು; ಸಂಸ್ಕೃತ ಭಾಷೆಯ ನಾಮಧೇಯದವುಗಳ ಮುಂದಿನವು—ಅರ್ವಾಚೀನ ಕಾಲದವು. ಹಳ್ಳಿ ಮತ್ತು ಹಳ್ಳ ಎಂಬುದಕ್ಕೆ ಹೊಳೆ (ಸದಾ ಪ್ರಕಾಶಿಸುವ ಕಿಡಿ ಬೆಳಕು). ಹೊಳೆ ಎಂಬುದೇ ಧಾತುವಾಗಿರಬೇಕು. ಅಂದಿನ ಹಳ್ಳಿಗಳು ಮಿತ ಹಿತವಾದ ಗ್ರಾಮಗಳಾಗಿದ್ದು, ಅವುಗಳಲ್ಲಿ ವಾಸಮಾಡುತ್ತಿದ್ದ ವ್ಯಕ್ತಿಗಳು ಪುರುಷ ಪುಂಗವರಾಗಿದ್ದರು. ಈ ಸರಳಿಂಯರು ವಾಸಮಾಡುತ್ತಿದ್ದ ಹಲವು ಕುಟುಂಬಗಳ ಗುಂಪಿಗೆ ಹಳ್ಳಿ ಎಂದು ಗ್ರಾಮದ ಗುರಿಕಾರರು ಹೆಸರನ್ನಿಟ್ಟು, ಇನ್ನುಳಿದ ನೆರೆಕರೆಯ ಹಳ್ಳಿಗಳಿಗೂ ಅಲ್ಲಲ್ಲಿಯ ಗುರಿಕಾರರು ವಿಶೇಷವಾಗಿ ಅನ್ವರ್ಥ ನಾಮವನ್ನೇ ಇಡುತ್ತಾ ಬಂದರು, ದ್ರಾವಿಡರ ಈ ಸಂಪ್ರದಾಯವನ್ನು ಆರ್ಯರೂ ಅನುಕರಿಸಿದರು. ಪುರಾಣಕಾಲದ ವ್ಯಕ್ತಿಗಳ ಹೆಸರೆಲ್ಲಾ ಸಾಮಾನ್ಯವಾಗಿ ಅನ್ವರ್ಥನಾಮವಾಗಿಯೇ ಇರುತ್ತಿದ್ದವು ಕ್ರಮೇಣ ಹಳ್ಳಿ ಎಂಬ ಈ ಜೀವಂತವಾದ ಹೆಸರು ಕುಗ್ರಾಮವೆಂಬ ಹೆಸರಿನಲ್ಲಿ ರೂಢಿಯಾಗುತ್ತಾ ಬಂತು, ಮಧ್ಯಕಾಲದಲ್ಲಿ ಹಳ್ಳಿಮನೆ (ಚಿಕ್ಕಚೊಕ್ಕಮನೆ), ಹಳ್ಳಿ ಹೊಳೆ (ಚಿಕ್ಕ ಕಾಲುವೆಗಳಲ್ಲಿ ಸದಾ ನೀರು ಹರಿಯುವ ಜಾಗ) ಇತ್ಯಾದಿ ಪ್ರಯೋಗಗಳಿಂದ ಹಳ್ಳಿ ಎಂಬುದಕ್ಕೆ ಅಚ್ಚುಕಟ್ಟಾದ ಊರು ಎಂದು ಅರ್ಥವಿದ್ದಂತೆ ಈಗ ನಾವು ಊಹಿಸಲು ಎಡೆ ಇದೆ. ಈಗ ಹಳ್ಳಿ ಎಂದರೆ ಅನಾಗರಿಕ ಅಸಂಸ್ಕೃತ ಜೀವಿಗಳು ವಾಸಮಾಡುವ ಕೊಟ್ಟಿಗೆ ಎಂದು ಅರ್ಥ ಮಾಡಬೇಕಾಗುತ್ತದೆ.

ಸೀತಾನದಿಯು ಸಮುದ್ರಾಭಿಮುಖಿಯಾಗಿ ಹರಿದು ಬರುವಾಗ ಇಕ್ಕೆಲದ ಹಳ್ಳಿಗಳಲ್ಲಿಯೂ ನವಜೀವನವನ್ನೀಯುತ್ತಾ ಬರುತ್ತದೆ. ಈ ಪುಣ್ಯನದಿಯು ಸುವರ್ಣ ನದಿಗೆ ಸಂಗಮವಾಗುವಲ್ಲಿ ಈಗ ಬಾಳೆಯಕುದುರೆಂಬ ಚಿಕ್ಕದಾದ ಚೊಕ್ಕ ಹಳ್ಳಿ ಇದೆ. ಹಿಂದೆ ಇದೇ ಸಂಗಮ ಗ್ರಾಮವೆಂದು ಕರೆಯಲ್ಪಡುತ್ತಿತ್ತು. ಬಾರಕೂರಿನ ವೈಭವ ಕಾಲದಲ್ಲಿ ಇಲ್ಲಿಗೆ ಬಂದ ಮಹಾಪುರುಷರಿಂದ ಕೈವಲ್ಯಾಶ್ರಮ ಸ್ವಾಮಿಗಳು ಈ ಗ್ರಾಮಕ್ಕೆ ರಂಭಾಪುರಿ ಎಂಬ ಸಂಸ್ಕೃತದ ಹೆಸರನ್ನಿಟ್ಟರೆಂದು ಅಲ್ಲಿಯ ಸ್ಥಳಪುರಾಣ ಹೇಳುತ್ತದೆ. ಆದರೆ ಅಂದಿನ ಆ ಸಂಸ್ಕೃತದ ಹೆಸರನ್ನು ಕನ್ನಡದಲ್ಲಿ ಭಾಷಾಂತರಿಸಿ ಆ ಹಳ್ಳಿಗರು ಹೇಳಬೇಕಾದರೆ ಅವರಿಗೆ ಕನ್ನಡ ಮನೆಯಲ್ಲಿ ನೆಚ್ಚು ಎಷ್ಟಿರಬೇಕು. ಅವರ ಶ್ಲೋಕ ರಂಭಾ ಎನ್ನುವುದಕ್ಕೆ ಬಾಳೆ ಎನ್ನುವುದು ಸಮಾನಾರ್ಥವಾದರೂ ಕುದುರು ಮತ್ತು ಪುರಿ ಎಂಬವು ಸಮಾನಾರ್ಥಕ ಪದಗಳಲ್ಲ. ಇದರಿಂದ ಬಾಳೆಯಕುದುರೆನ್ನುವ ಕನ್ನಡದ ಹೆಸರನ್ನೇ ಪಂಡಿತರು ಅಂದು ರಂಭಾಪುರಿ ಎಂದು ಕರೆದರೆಂದು ಊಹಿಸುವುದರಲ್ಲಿ ಅರ್ಥವಿದೆ. ಹೀಗೆಯೇ ಅಚ್ಚಕನ್ನಡದ ಹೆಸರುಗಳುಳ್ಳ ಹಳ್ಳಿಗಳನ್ನು ಸಂಸ್ಕೃತಾಭಿಮಾನಿಗಳು ಸಂಸ್ಕೃತ ರೂಪ ಕೊಟ್ಟು ಉಚ್ಚರಿಸುವುದು ಹಲವು ಕಡೆಗಳಲ್ಲಿ ರೂಢಿಯಲ್ಲಿದೆ. ಮೊಗೇರಿ ಎಂಬ ಗ್ರಾಮಕ್ಕೆ ತನ್ನದೇ ಆದ ಅಚ್ಚಕನ್ನಡದ (ಮೊಗೆ=ಸವುತೆಕಾಯಿ, ಏರಿ=ದಿಬ್ಬ; ಸವುತೆಕಾಯಿ ತುಂಬಾ ಬೆಳೆಯುವ ಹಳ್ಳಿ) ಹೆಸರಿದ್ದರೂ ಅದನ್ನು ಮುಕುಪುರಿ ಎಂಬ ಸಂಸ್ಕೃತ ಹೆಸರಿನಿಂದ ಕರೆಯುವುದಿಲ್ಲವೆ?

ಬಾಳೆಯ ಕುದುರಿನಲ್ಲಿದ್ದ ಚಿಕ್ಕ ಬಂದರಕ್ಕೆ ಹಿಂದೆ ಲಂಗರುಕಟ್ಟೆ ಎಂದಿದ್ದ ಹೆಸರು ಈಗ ಜಂಗಾರಕಟ್ಟೆ ಯಾಗಿದೆ. ಐರೋಡಿಯು ಇದರ ಮಗ್ಗುಲ ಹಳ್ಳಿ. ಸಮುದ್ರದ ತೆರೆಗಳು ಇಂದಿನ ವರೆಗೂ ಈ ಊರನ್ನು ನೋಡಲು ಪ್ರಯತ್ನಿಸುತ್ತಲೇ ಇವೆ! ಕೆಳದಿಯ ನಾಯಕರ ಕಾಲದಲ್ಲಿ ಮತ್ತು ಅದಕ್ಕಿಂತ ಮೊದಲು ಇಲ್ಲಿ ಲಿಂಗಾಯತ ಅಯ್ಯಗಳು ತುಂಬಾ ವಾಸ್ತವ್ಯವಿಟ್ಟಂತೆ ತೋರುತ್ತದೆ. ಈ ಗ್ರಾಮದ ಪೂರ್ವ ದಿಕ್ಕಿನಲ್ಲಿ ಕೆಲವು ವರ್ಷಗಳ ಹಿಂದಿನ ವರೆಗೆ ಗುರುಬಸವೆ ಎಂಬ ಶ್ರೀಮಂತ ಲಿಂಗಾಯತ ಸ್ತ್ರೀಯ ಮನೆಯಿದ್ದು ಅದರ ಪಕ್ಕದಲ್ಲಿ ಜಂಗಮರ ದೊಡ್ಡ ದೇವಾಲಯವಿತ್ತು. ಈಗ ಅವೆಲ್ಲಾ ನಾಮಾವಶೇಷವಾಗಿದ್ದರೂ ಜನರು ಅಂದಿನ ಅಯ್ಯಗಳ (ಲಿಂಗಾಯತರ) ಅರಿ (ವಾಸ್ತವ್ಯ) ಯನ್ನು ಮರೆಯದೆ ಈಗಲೂ ಐರೋಡಿಯೆಂದು ಆ ಹಳ್ಳಿಯನ್ನು ಕರೆಯುತ್ತಿದ್ದಾರೆ. ಇನ್ನು ಕೆಲವರು ಈ ಗ್ರಾಮವನ್ನು ಐದು ಮಡಿಗಳು (ಉದ್ದವಾದ ಓಣಿಗಳು) ಪೂರ್ವದಿಂದ ಪಶ್ಚಿಮಕ್ಕೆ ದಾಟಿ ಹೋಗಿರುವುದರಿಂದ ಐಮೋಡಿಯೇ ಐರೋಡಿಯಾಯ್ತು ಎನ್ನುತ್ತಾರೆ. ಸಂಸ್ಕೃತಾಭಿಮಾನಿಗಳು ಆರ್ಯರ ವಾಡೆಯೇ ಐರೋಡಿಯಾಯಿತೆಂದು ತಮ್ಮ ಭಾಷಾಭಿಮಾನವನ್ನು ವ್ಯಕ್ತಗೊಳಿಸುತ್ತಾರೆ. ಇವರು ಬ್ರಾಹ್ಮಣರೆಲ್ಲಾ ಆರ್ಯರ ವರ್ಗದವರೆಂದೂ, ದ್ರಾವಿಡರಿಗೆ ಆರ್ಯರು ಎಂದೂ ವೇದಾಭ್ಯಾಸವನ್ನು ಮಾಡಿಸಿಲ್ಲವೆಂದೂ ಸಾಧಿಸುತ್ತಾರೆ. ಇದರ ಪೂರ್ವ ಗಡಿಯಲ್ಲಿರುವುದೇ ಸಾಸ್ತಾನ. ಇಲ್ಲಿ ಬಿಲ್ಲವರ ಗರಡಿ ಇದ್ದು ಇದೊಂದು ಸಾಹಸ ಪ್ರದರ್ಶನದ ತಾಣವಾಗಿರಬೇಕು. ಹಿಂದೆ ಟಿಪ್ಪುಸುಲ್ತಾನನು ಈ ಸ್ಥಳದಲ್ಲಿ ಕುಳಿತು ಶೃಂಗೇರಿಯ ಜಗದ್ಗುರುಗಳಿಗಿದ್ದ ಕೋಟಿ ಮಾಗಣೆಯಿಂದ ಸಂಪೂರ್ಣ ತೆರಿಗೆಯನ್ನು ಬಿಟ್ಟದ್ದೆ ಕಿಂಚಿತ್ ದ್ರವ್ಯವನ್ನು ಮಾತ್ರ ಕೊಂಡು ಹೋಗುವ ಶಾಸನ ಮಾಡಿದನಂತೆ! (ಶಾಸನ, ಶಾಸನದ + ತಾಣ, ತಾನ) ಇಲ್ಲೇ ಪಕ್ಕದ ಗುಂಡ್ಮಿ (ಗುಂಡು=ಗುಡ್ಡ) ಯ ಗುಡ್ಡವೊಂದು ಟಿಪ್ಪುಸುಲ್ತಾನನು ಬಂದಾಗ ಲೆಲ್ಲಾ ಅವನು ನೆರವೇರಿಸುವ ದರ್ಬಾರದ ಸಿಂಹಾಸನವಾಗುತ್ತಿತ್ತೆಂದು ಇಲ್ಲಿಯ ಮುಸ್ಲಿಮರು ಹೇಳುತ್ತಾರೆ! ಈ ಗ್ರಾಮದ ಹೆಸರು ಇಷ್ಟು ಅರ್ವಾಚೀನವೆಂಬುದರಲ್ಲಿ ಸಂದೇಹವಿದೆ.

ಪಾಂಡೇಶ್ವರ ಗ್ರಾಮಕ್ಕೆ ಇಲ್ಲಿಯ ಹಳ್ಳಿಗರು ಪಾಂಡವರ ಕಥೆಯೊಂದಿಗೆ ಸಂಬಂಧವನ್ನು ಕಲ್ಪಿಸಿದ್ದಾರೆ. ಅವರ ಬಾರಕೂರಿನ ವೈಭವದ ಕಾಲದಲ್ಲಿ ಪಾಂಡಿ ಅಥವಾ ಮಟ್ಟಿಯ ಮಹಿಮಂಡನಾಗಿದ್ದ ಉದ್ದರನೊಬ್ಬ ಲಿಂಗಾಯತನ ಊರು ಈ ಹಳ್ಳಿಯಾಗಿರಬಹುದೆ? ಅದೂ ನಿರ್ಣಯವಾಗಿಲ್ಲ. ಇದರ ಉತ್ತರದಲ್ಲಿ ಹಲವು ಬಂಜರು ಬಯಲು, ಜೀಳವಿದ್ದ ಹಲವು ಭೂಮಿಗಳಿದ್ದ ಮೂಡ ಹಡವು ಗ್ರಾಮವಿದೆ. ಇದರ ನೆರೆಯ ಹಳ್ಳಿಯು ಮಳೆಗಾಲದಲ್ಲಿ (ಕಾರ್) ಮಾತ್ರ ದೋಣಿಯಿಂದ ದಾಟಬಲ್ಲ ಹೊಳೆಯ ಕಡವು (ಕಾರ್ಕಡ) ಇದೆ. ಕೋಟ ಗ್ರಾಮವೇ! ಕೋಟೆಗೆಳೆಯರ ವಾಸ್ತವ್ಯವಿದ್ದ ಊರೇ! ಗಿಳಿಯಾರ (ಅರಿ—ಆಗಾರ). ಆಗಾಗ ಹಲವು ಕನ್ನಡಿಗರಿಗೆ ಹಿಳಿಗಾಗುತ್ತಿದ್ದ ಹಳ್ಳಿಯೇ ಐನ್ಬಾಡಿ. ಹದ್ದರ ಅರಸು ತನ್ನದ ಊರೇ ಹದ್ದರಸ. ಮಣೂರಿನಿಂದ ವ್ಯಾಪ್ತವಾದ ಊರೇ ಮಣೂರು ಅಥವಾ ಮಣೂರು. ಹಂದೆಯವರು (ಕೋಟಿ ಮತಸ್ಥರ ಮಧುಬಂಟರ ಕಟ್ಟು=ಬಯಲು ಪ್ರದೇಶ) ವಾಸವಾಗಿದ್ದ ಹಳ್ಳಿಯೇ ಹಂದಟ್ಟು. ಕೋಟಿಡವರು ಪಿಕೇಶ ವಾಸ್ತವ್ಯವಿದ್ದ ಹಳ್ಳಿಯೇ ಕೋಟತಟ್ಟು. ಹಡುಳ ರಾವಳಿಯಲ್ಲಿ ಸ್ವರಿವ ಊರೆ ಹಡುಕರೆ. ಆಳಿಯ ತುದಿಯ ಊರೇ ಕೋಡಿ. ಕೋಟೀಶ್ವರ ಮಾಗಣೆಯ ತೆಂಕು ದಿಕ್ಕಿನ ಕಟ್ಟೆಯೇ ತೆಕ್ಕಟ್ಟೆ. ಸುಜಿಲ್ಲದ ಊರೆ ಕೊರಗಿ. ಇದಕ್ಕೆ ಅನುಸಾರವಾಗಿ ಅಲ್ಲಿಯ ಹಳ್ಳಿಗರು ಚರಿಗೆ ತುಂಬಾ ಹಣಕೊಟ್ಟರೂ ಕೊರಗಿ ಬೇಡ ಎಂಬ ಮಾತು ಪೋಷಕವಾಗಿದೆ. ಸಮರ್ಥರಾದ ಜನರಿದ್ದ (ಅಚ್ಚ್ಲ್=ಸಮರ್ಥರಾದ ಜನರು) ಊರೇ ಅಚ್ಲಾಡಿ. ಹಾರುವರ ಅಡಿಯೇ ಹಾರ್ಯಾಡಿ. ಕೊಳಕೆ ಭತ್ತ ವಿಶೇಷ ಬೆಳೆಸುವ ಹಳ್ಳಿಯೇ ಕೊಳಕೆಬೈಲು. ಉಳ್ಳವರಿದ್ದ (ಶ್ರೀಮಂತರು) ಊರೇ ಉಳ್ತೂರು. ನೆಲ್ಲಿ ಗಡ್ಡೆಗಳಿಂದ (ಅವರ=ಸುತ್ತಲ್ಪಟ್ಟ ಊರು) ಆವರಿಸಲ್ಪಟ್ಟ ಊರೇ ನೆಲ್ಲಾವರ, ಸೀಬಾವಿ ಸುಂದರವಾದ ಊರೇ (ಮಂಡಸ=ಮಂಟಪ) ಮಟಪಾಡಿ.

ಹೀಗೆ ಹಳ್ಳಿಗಳಿಗೆ ಇಟ್ಟ ಹೆಸರುಗಳನ್ನು ಸುಲಭದಲ್ಲೀ ಕಷ್ಟದಲ್ಲೀ ಊಹಿಸಲು ಸಾಧ್ಯವಿದೆ. ಇದರಿಂದ ಅಂದಿನ ಜನರಿಗೆ ತನ್ನ ಜನದಲ್ಲಿದ್ದ ಅಭಿಮಾನವನ್ನು ಕಂಡು ನಾಗರಿಕತೆಯ ಕೋಡನ್ನೇರಿದ ಈ ಇಪ್ಪತ್ತನೆಯ ಶತಮಾನದ ನಾವು ಹೊಟ್ಟೆ ಕಿಚ್ಚುಪಡಬೇಕಾಗಿದೆ. ಹಳ್ಳಿಗಳಲ್ಲಿ ತನ್ನತನವು ಸಾಕಷ್ಟು ಜೀವಂತ ಕಾಣುತ್ತಿತ್ತು.

ನಮ್ಮ ಹಳ್ಳಿಗರ ಉಡುಗೆ ತೊಡುಗೆಗಳಲ್ಲಿಯೂ ಕರ್ನಾಟಕ ಸಂಸ್ಕೃತಿಯು ನೆರೆ ಇದೆ. ಅವರ ಸುದೀರ್ಘ ದಪ್ಪ ಮುಕ್ಕವಲ್ಲಿ ದಪ್ಪನಾದ ತೋಳು ತೊಡೆಗಳು, ವಿಶಾಲವಾದ ಗಂಡು ಎದೆ—ಇವು ಯಾರ ಮನಸ್ಸನ್ನು ಸೆಳೆಯದು? ಅವರು ದೀರ್ಘಕಾಲ ಬಿಸಿಲು ಜಳಕ್ಕೆ ತಮ್ಮ ಮೈ ಚರ್ಮವನ್ನು ಒಡ್ಡುವುದರ ಪರಿಣಾಮವಾಗಿ ಸಂಪಾದಿಸಿದ ಚರ್ಮದ ತಾಮ್ರ ವರ್ಣವು ಇಂದಿನ ಪಟ್ಟಣಿಗರಿಗೆ ಬಿಳಿಯ ಜನ್ಮ ಕಳೆದರೂ ಪ್ರಾಪ್ತವಾದೀತೆ? ಇನ್ನು ಅವರಿಗೆ ಉಡಿಗೆಗಳಲ್ಲಿ ತೀರಾ ಸರಳತೆಯಲ್ಲೇ ಭಕ್ತಿ! ಒಳಗೆ ನಿರ್ಮಲವಾದ ಒಂದು ದೊಡ್ಡ ಅಂಗವಸ್ತ್ರ, ಸೊಂಟಕ್ಕೆ ಮಾತ್ರ ಮೊಣಕಾಲಿನ ಅಗಲ ಕಿರಿದಾದ ಮೇಲಿನ ವಸ್ತ್ರ, ತಲೆಯ ಮೇಲೆ ಬದಿಗಿನ ಹಾಳೆಯಲ್ಲಿ ಕಸೂತಿ ಹಾಕಿದ ಅಚ್ಚುಕಟ್ಟಾದ ಟೊಪ್ಪಿ—ಇವಿಷ್ಟೇ ಅವರಿಗೆ ಎಷ್ಟೋ ಆಯಿತು. ಅವರು ಈ ಉಡುಗೆಯಿಂದಲೇ ಹಳ್ಳಿ ಯಿಂದ ಹಳ್ಳಿಯವರೆಗೆ ಹೋಗಬಲ್ಲರು. ಬೇಸಗೆಯ ಕಡು ಬಿಸಿಲಲ್ಲಾದರೂ ಕೊಡೆ ಹಿಡಿಯದ ಅವರ ದಿಟ್ಟತನವು ಈಗೀಗ ಅಪರೂಪವಾಗಿ ಅಲ್ಲಲ್ಲಿ ಕಣ್ಣಿಗೆ ಬೀಳುತ್ತಿವೆಯಷ್ಟೆ! ಕರ್ನಾಟಕದ ಶಿಲ್ಪ ರಚನೆಗೆ ಉತ್ತಮ ಮಾದರಿ ಎನಿಸಿದ ದೇವಾಲಯಗಳಲ್ಲೂ, ಗುಹಾ ಮಂದಿರಗಳಲ್ಲೂ ಇಂಥ ಸುಂದರ ಚಿತ್ರಗಳೇ ಇವೆ. ಸ್ತ್ರೀ ಪ್ರಪಂಚಕ್ಕೆ ಆಗಿನ ಕಾಲದ ಮಾದರಿಯೇ ಒಂದು ಕಥವಾಗಿತ್ತು. ಅಂದು ಕನ್ನಡ ಹೊಸುಹದರ ಸಂಚಿಕೆ ಕಥವು.

[ಮುಂದೆ ಪುಟ ನೋಡಿರಿ]

'ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:—ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಇವರ ನವಜೀವಾತು ಎಂಬ ಸೂತಿಕಾರಸಾಯನ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಆಯುರ್ವೇದದ ಘುರದ್ರವರಸಾಯನ.



ಹೆಚ್ಚಿನ ಮಾಹಿತಿಗೆ— ಡಾ। ಯಂ ಸಿ ಶಾಸ್ತ್ರೀ, ಯಲ್ ಐ. ಎಂ.

ಕೊಡಿಯಾಲಬೈಲು ಪೋಸ್ಟು, (ಮಂಗಳೂರು)

ಸ್ಟಾಕಿಸ್ಟರು:— ಡಾ। ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ

ಶಾಂತ ವಾತಾವರಣದಲ್ಲಿ ಅತ್ಯಾಧುನಿಕ ಮಾದರಿಯ ಪ್ರೇಷ್ಠರಗತಿಯ

—ವಸತಿ ಮತ್ತು ಭೋಜನಗೃಹ—

ಸ್ವಸ್ತಿಕ್ ಲೋಜ್

ಪಳನೀರು ರಸ್ತೆ, ಮಂಗಳೂರು.

❖ ಗಾಳಿ ಬೆಳಕುಗಳಿಂದ ಸುಸಜ್ಜಿತವಾದ ಸಿಂಗಲ್ ಮತ್ತು ಡಬ್ಬಲ್ ಕೋಣೆಗಳು!

❖ ತೃಪ್ತಿಕರವಾದ ಸೇವೆ ಮತ್ತು ಸರ್ವಾನುಕೂಲತೆಗಳು'

❖ ಶಾಕಾಹಾರಿಗಳಿಗೆ ಸುಚಿತ ಬ್ರಾಹ್ಮಣ ಅಡಿಗೆ ಬಲ್ಲವರಿಂದಲೇ ಭೋಜನ ಮತ್ತು ಉಪಾಹಾರ ತಯಾರಿಕೆ' 'ಪರ ಮಂಭ' ಸಂದರ್ಶಿಸಿ ಸಮಾಧಾನ ಪಡೆಯಿರಿ''

ಋತುಸ್ರಾವ ನಿಂತಿದೆ

"ಕುಮಾರಿ" ಬಿಲ್ಲೆಗಳನ್ನು ಉಪಯೋಗಿಸಿದರೆ ಪದರಷ್ಟು ಋತುಸ್ರಾವವಾಗುವುದು, ಪರೀಕ್ಷೆಗೆ ಒಪ್ಪಿದ್ದು. ಈ ಔಷಧ ಸೇವನೆಯಿಂದ ತೀವ್ರ ಗುಣದೊಂದಲು ಮತ್ತು ಯಾವ ಬಾಧಕವೂ ಇಲ್ಲ. ನಾಲ್ಕು ದಿನದ ಮಂದಿಗೆ ಮಾತ್ರ ಗುಣವಾಗಿದೆ— ಬೆಲೆ: ರೂ. ೩/; ಸ್ಪೆಷಲ್ ರೂ. ೫-; ಅಧಿಕಾಧಿಕ ಸ್ಪೆಷಲ್ ರೂ. ೯ [ವಿ. ಪಿ. ಖರ್ಚುದಾರರ ಪ್ರತ್ಯೇಕ]

Mrs. P. DEVEE, F.DS.(N.J.)
CALCUTTA. 40

ಸ್ಟಾಕಿಸ್ಟರು: ರಮಾಕಂಪೆನಿ, ಮಂಗಳೂರು.

ಹೆಚ್ಚಿನ ಸ್ತ್ರೀಯರ ವಕ್ಷ ಪ್ರದೇಶವು ವಿಪುಲ ಕುಚಮಂಡಲಕ್ಕೆ ಅಗಲ ಕಿರಿದೆನ್ನಿಸಿದ್ದುವು. ಲಜ್ಜೆಗಿಂತಲೂ ದಿಟ್ಟತನದಲ್ಲಿ ಆಸಕ್ತಿ. ಉಡುಗೆಗಳ ಒಯ್ಯಾರಕ್ಕಿಂತ ಕಲಾ ಪೂರ್ಣವಾದ ದೇಹ ರಚನೆಯ ಕಡೆಗೇ ಗಮನ ಹೆಚ್ಚು. ತುಂಬಾ ನೀತಿಗೆ ಗೌರವ ಬಿಟ್ಟೋರೆ ಗೌರವಿಸುವವರ ಸಂಖ್ಯೆಯೇ ಹೆಚ್ಚು. ಈಗ ಹಳ್ಳಿಗಳಲ್ಲೂ ನಗರದ ಬೆಡಗಿನ ಗಾಳಿಯು ಬೀಸಿ ಪ್ರಾಚೀನ ಪದ್ಧತಿ ಪ್ರಿಯರು ಪ್ರಾತಃಕಾಲದ ನಕ್ಷತ್ರಗಳಾಗಿದ್ದಾರೆ.

ನಮ್ಮ ಹಳ್ಳಿಗಳಲ್ಲಿದ್ದ ಜನರ ಮಾತಿನ ತನ್ನತನದ ವೈಖರಿಯೇ ಮತ್ತೊಂದು ಅನರು ತಿಂಗಳುಗಳಿಗೆ ಕ್ರಮವಾಗಿ ಸುಗ್ಗಿ, (ಚೈತ್ರ) ಪಗ್ಗು, ಬೇಸಿಗೆ, ಕಾರು, ಆಸಾಡಿ, ಸೋಣೆ, ಕನ್ನೆ, ದಿವಾಳಿ, ಕೊಡಿ, ಪಂಚಾಸ್, ಜಾರ, ಶಿವರಾತ್ರಿ ಎಂಬ ಹೆಸರಿನಿಂದ ಕರೆಯುತ್ತಾರೆ. ಹಳ್ಳಿಗಳಲ್ಲಿ ಕಂಬಳ, ಕೋಳಿಕಟ್ಟೆ ಮತ್ತು ಬಯಲಾಟಗಳಿಗೆ ತುಂಬಾ ಪ್ರಾಧಾನ್ಯವಿದೆ. ಮಳೆಗಾಲದಲ್ಲಿ ನಟ್ಟಿಯ ಕೆಲಸಗಳೆಲ್ಲಾ ಮುಗಿದ ಮೇಲೆ ಹಳ್ಳಿಗರು ದೇವಾಲಯದ ಚಾವಡಿಗಳಲ್ಲಿ ಕುಳಿತು ರಾಮಾಯಣ, ಮಹಾಭಾರತಾದಿಗಳನ್ನು ಓದಿಸಿ ಅರ್ಥವಿವರಣೆ ಮಾಡಿಸಿ ಕೇಳಿ ಸಂತೋಷ ಪಡುತ್ತಾರೆ. ಅವರಿಗೆ ತಾಳಮದ್ದಳೆ ದಿನಗಳಲ್ಲಿ ರಾತ್ರಿ ನಿದ್ರಿಸುವ ಆಶೆಯೇ ಇರುವುದಿಲ್ಲ. ಹೆಚ್ಚಿನ ಹಳ್ಳಿಗರಿಗೆ ಯಕ್ಷಗಾನದ ಕೆಲವು ಪದಗಳು ಬಂದೇ ಬರುತ್ತವೆ. ಅವರು ರಾತ್ರಿ ಉಂಡೊಡನೆ ವೀಳೆಯ ಜಗಿಯುವಾಗ ಸಂಧಾನದಿಂದಲೋ ಅಥವಾ ಚೂಡಾಮಣಿ ಇಲ್ಲವೆ ಅತಿಕಾಯನ ಕಾಳಗದಿಂದಲೋ ಒಂದೊಂದು ಪದವನ್ನು ಎತ್ತಿ ಹಾಡುತ್ತಾರೆ. ಆಗ ಅಂದಿನ ನಿಶ್ಶಬ್ದ ರಾತ್ರಿಗೆ ತಾನೇ ತಾನಾಗಿ ತಾರುಣ್ಯವು ಪ್ರಾಪ್ತವಾಗುವುದು.

ನಮ್ಮ ಜಿಲ್ಲೆಯ ಕನ್ನಡಗಳಲ್ಲಿ ಪಶ್ಯಕರ ಕನ್ನಡದ ಮಾರ್ಗ ಒಂದು, ತೌಳವರ ಕನ್ನಡದ ದಾಟಿ ಮತ್ತೊಂದು ಮತ್ತು ಕೋಟದವರ ಕನ್ನಡ ಮಾತಿನ ವೈಖರಿಯು ಇವೆರಡಕ್ಕಿಂತ ಬೇರಾದುದು. ಇವುಗಳಲ್ಲಿ ಕೋಟದವರ ಮಾತಿನ ರೀತಿಯನ್ನು ಶ್ರೀ ಕಾರಂತರು ಮರುಮಣ್ಣಿಗೆ ಕಾದಂಬರಿಯಲ್ಲಿ ಅಲ್ಲಲ್ಲಿ ಕಾಣಿಸಿದ್ದಾರೆ. ಇವುಗಳಲ್ಲಿ ಕನ್ನಡದ ತನ್ನತನ ಮತ್ತು ಸಂಸ್ಕೃತಿಯು ಸಾಕಷ್ಟಿದೆ. ಆ ನುಡಿಯ ಸೊಬಗಿನ ಪದಗಳಲ್ಲಿ ಕೆಲವನ್ನು ಮಾತ್ರ ಕೊಟ್ಟಿದ್ದೇನೆ.

ಗೆಡಸೊಕ್ಕಡಿ=(ಗೆಡಸು=ಒರಿಸುವ, ಒಲ್=ಒಂದು, ಕಡಿ=ಚೂರುವಸ್ತ್ರ) ಒರಿಸುವ ಬಟ್ಟೆ, ಉಪರಿಮೋಟು=ಉಪ್ಪರಿಗೆ, ಹಿಟ್ಟರೆ ಕಲ್ಲು=ಕಡೆಯುವ ಕಲ್ಲು, ಗಂಟಿ=(ಗಂಟು=ಧನ, ಗಂಟಿ=ಗೋಧನ) ದನ, ಹಲಬಾಲ=(ಮರವರ್ಧನೆ) ಪಶುಗಳ ಗರ್ಭಕ್ಕಾಗಿ ಪರಸ್ಪರ ಸಂಯೋಗ, ವಾವು=ಬಾಯಾರಿಕೆ, ಪಕ್ಕಿ=ಅಕ್ಕಿ, ಅಗಬುದು ತಳಕಂಡಿ=ಕಿಟಿಕಿ, ಅಪ್ಪಚ್ಚಿ=ಮಕ್ಕಳು ತಿನ್ನುವ ಹಿಟ್ಟಿನಿಂದ ತಯಾರಿಸಿದ ತಿಂಡಿ, ಗುಮ್ಮ=ಮಕ್ಕಳನ್ನು ಭಯಪಡಿಸುವ ವಿಕಾರಾಕೃತಿ, ಬೀರಿ, ಬೀಚಿ=ಚಿಕ್ಕ, ಹೊಗಮುಟಿ=(ತಾರುಣ್ಯದಲ್ಲಾಗುವ ಮದುವೆ) ಮದುವೆ, ಇನ್ನು ಹಲವು ನಾಮಪದಗಳಿಗೆ ಎಕಾರಕ್ಕೆ ಇಕಾರವು ಬರುವುದು ಚರಿಗೆ-ಚರಿಗಿ, ಒಲೆ-ಒಲಿ, ಸೌದೆ-ಸೌದಿ, ಮದುವೆ—ಮದಿ.

ಸರ್ವನಾಮ ಮತ್ತು ಕ್ರಿಯಾಪದಗಳಲ್ಲಿ ಸಂಕ್ಷೇಪ ರೂಪಕ್ಕೆ ಪ್ರಾಶಸ್ತ್ಯ ಹೆಚ್ಚು. ನಂಗೆ (ನನಗೆ) ಅವಂಗೆ (ಅವನಿಗೆ) ನಿಂಗೆ (ನಿನಗೆ) ಬರ್ಸಂಗೆ=ಬರುವಾಗ, ಹೋಪಂಗೆ=ಹೋಗುವಾಗ, ಬರ್ಕ=ಬರಬೇಕು, ಹೋಯ್ಕ=ಹೋಗಬೇಕು, ಉಣ್ತೆ=ಊಟಮಾಡುತ್ತೇನೆ, ತಿಂತೆ=ತಿನ್ನುತ್ತೇನೆ, ಮಿಂತೆ=ಮಿಂದುತ್ತೇನೆ, ಹೋತ್ತೆ, ಕೇಂತೆ, ಕಲ್ತೆ=ಕಲಿಯುವುದಕ್ಕೆ ಇತ್ಯಾದಿ.

ಕನ್ನಡ ವ್ಯಾಕರಣಗಳಲ್ಲಿ ಹೇಳದ ಸರ್ವನಾಮಕ್ಕೆ ಸಂಬೋಧನಾ ವಿಭಕ್ತಿ ಈ ಕಡೆಯಲ್ಲಿ ಪ್ರಚಾರದಲ್ಲುಂಟು ಅಳೆ! (ಅವಳೆ) ಎಲ್ಲಿಗೆ ಹೋತೆ? (ಹೋಗುತ್ತಿ?)

ವಾಕ್ಯದ ಮಾದರಿ—ಬರ್ಕ ಬರ್ಕ ಎನ್ನು ಸಮೊಗೆ ಬರ್ಲೇ ಆಗ್ಲಿಲ್ಲ (ಬರಬೇಕು ಬರಬೇಕು ಎನ್ನುವ ಸಮಯ ಬರಲಿಕ್ಕೆ ಆಗಲಿಲ್ಲ) ಕಾಲನ್ನು ಬಿಟ್ಟ್ಯಾಕು (ಕಾಲನ್ನು ನೀಡಿ ಹಾಕು) ಯಾರೂ ಮದಿಯ=ಮಾಡ ಕೆಲಸಕ್ಕೂ ಬಾರದು.

ರೂಢಿಗಳು ಹಳ್ಳಿಗಳಲ್ಲಿನ ಶಾಸ್ತ್ರ. ಇವುಗಳಲ್ಲಿ ಹೆಚ್ಚಿನವು ಶಕುನಗಳ ವಿಭಾಗಕ್ಕೆ ಸೇರುವುವು. ಇವುಗಳಲ್ಲಿ ಅರ್ಥವಿಲ್ಲವೆಂದರೆ ಉಂಟು, ಉಂಟೆಂದರೆ ಇಲ್ಲ.

೧. ನಾಯಿಯನ್ನು ತಂದು ಸಾಕಬೇಕು, ಬೆಕ್ಕು ತಾನಾಗಿ ಬಂದು ಸೇರಬೇಕು.
೨. ದಿವಿಪಲಸು ಮನೆಗಿಂತ ಎತ್ತರ ಬೆಳೆಯಬಾರದು.
೩. ಮನೆಯಲ್ಲಿ ಅಣಬು ಎದ್ದರೆ ದಾರಿದ್ರ್ಯ ಅಥವಾ ಯಜಮಾನನ ಮರಣ.
೪. ಅಯ್ಯೋ! ಎನ್ನಬಾರದು.
೫. ತೆಂಗು ಮನೆಯ ಹಿಂದಿರಬಾರದು ಅತ್ತಿಮರ ಹಿಂದಿರಬೇಕು.
೬. ಕಾಗೆ ಮುಟ್ಟಬಾರದು ಅದು ಮಿಥುನವನ್ನು ಕಂಡರೆ ಮರಣದ ವಾರ್ತೆ ಕೇಳಿಸುವುದು. ಕಾಗೆಯು ಕೊಳು ಬಾಗಿದರೆ (ಒಂದು ವಿಧದ ಕೂಗು) ನೆಂಟರು ಬರುತ್ತಾರೆ.
೭. ನಾಯಿ ಬೊಳ್ಳುಗರೆದರೆ ನೆರೆಯ ಜಿಟ್ಟನಲ್ಲಿ ಮರಣ.
೮. ಪಲ್ಲಿ ಮುಟ್ಟಿದರೆ ಹಾಗ ನಷ್ಟ.
೯. ಕಪಿಲೆ ಕಣ್ಣೀರು ಸುರಿಸಿದರೆ ಮನೆಗೆ ಹಾಳು
೧೦. ವಿಷ್ಣು ದೇವಾಲಯದ ಇದಿರಿನ ಮನೆಯಲ್ಲಿ ಸದಾ ದಾರಿದ್ರ್ಯ.
೧೧. ಅಂಗಾಲಿಗೆ ಎಣ್ಣೆ ಹಾಕುವುದರಿಂದ ಆಯುಷ್ಯಕ್ಕೆ ಹಾಳು.

ಈ ಹಳ್ಳಿಗಳಲ್ಲಿ ಮುಖಂಡರಾದ ಪಂಚೆ ಮೊದಲಾದ ಅಧ್ಯಮನೆತನಕ್ಕೆ ಸಂಸ್ಕೃತಜ್ಞರು ಬೇರೆ ವಿಧದಿಂದ ಅರ್ಥ ಹೇಳುತ್ತಾರೆ. ಅವರನ್ನುವುದು ಪಂಚಗಳೆಂದರೆ ಜೇಡಿಗಳಂತೆ. ಆ ಹೆಸರಿನ ಅರ್ಥವು ಅದೇ ಅಪಮಾನ ಸೂಚಕವಾಗಿದ್ದರೆ ಆ ಮನೆತನದವರು ಇನ್ನೂ ತಮ್ಮ ಹೆಸರಿನೊಡನೆ ಅದನ್ನು ಜೋಡಿಸಿ ಹೇಳುತ್ತಿದ್ದರೆ? ಅದೊಂದು ಕನ್ನಡ ಪದ. ಪಂಚು=ಚೆಲಿಸು, ಅಲ್ಲಾಡಿಸು ಎನ್ನುವ ಧಾತುವೇ ಪಂಚೆಯೆಂಬ ಪದಕ್ಕೆ ಕಾರಣ. ಇವರು ಗ್ರಾಮಗಳ ಮುಖಂಡರಾಗಿ ಎಲ್ಲಾ ಕಾರ್ಯಭಾರಗಳನ್ನು ನಡೆಸುವ ಮುಂದಾಳುಗಳು. ಊರಾಳರು (ಊರನ್ನು, ಆಳ್=ಆಳುವವ) ಊರ ರಕ್ಷಕರು. ಕಾರಂತರು (ಸಂ, ಕಾರ್ಯಾಂತರು) (ಕ. ಕಾರಂತ=ಕರೆಸುವಂಥವ) ಸಂಘ ಸಭೆಗಳಿಗೆ ಜನತೆಗೆ ಆಹ್ವಾನ ಕೊಟ್ಟು ಕರೆಸುವವರು ಹೇರಳೆ (ಹೇರಾಳ ಇದ್ದವ) ಗಳು ಹಣದ ವಿನಿಯೋಗದ ಮುಖಂಡರು, ಅಲಸೆ (ಸಂ. ಅಲಸ್ಯಗಾರ) (ಕ. ಅಲೆಸುವವ) ಹತ್ತು ಸಮಸ್ತರಿಗಾಗಿ ಜನರನ್ನು ಓಡಿಸುವವ. ಮಯ್ಯ (ಕ. ಮೇಯ್)ರು ಊರ ಹೊರ ಆವರಣದವರು, ಹೆಬ್ಬಾರರು (ಹಿರಿದು+ಹಾರ, ಗೌರವದ ಗೃಹಸ್ಥರಾಗಿದ್ದು ನ್ಯಾಯ ತೀರ್ಮಾನ ಕಾಲದಲ್ಲಿ ಇವರ ಕೈ ಇತ್ತು. ತುಂಗ (ಶ್ರೇಷ್ಠ)ರೂ ಹೆಬ್ಬಾರರಂತೆ ಪಂಚಾಯತಿಗಳಲ್ಲಿ ಭಾಗಿಗಳಾಗುವವರು ಹೀಗೆ ಉಳಿದವರ ಹೆಸರುಗಳೂ ಹಿಂದಿನ ಹಳ್ಳಿಗರ ಚಟುವಟಿಕೆ ಮತ್ತು ಕರ್ತವ್ಯವನ್ನು ಅವಲಂಬಿಸಿದ್ದಾಗಿದೆ. ಈ ಹೆಸರುಗಳಿಂದಲೂ ಅಂದಿನ ಹಳ್ಳಿಗರ ಆಡಳಿತೆಯನ್ನು ಊಹಿಸಬಹುದಾಗಿದೆ.

ಹರಿಜನರನ್ನು ಕೂಸಾಳು (ಮಗುವಿನಂತೆ ಸರಳತನವುಳ್ಳವ)ಗಳೆಂದು ಕರೆಯುತ್ತಿದ್ದರು. ದೇವಡಿಗರನ್ನು ಸೋಲಿಗಳೆಂದೂ, ಹರಿಜನರ ಒಂದು ಪಂಗಡದವರನ್ನು ಹಮಂಚ (ಮಂಜ) ರೆಂದೂ, ಬಿಲ್ಲವರನ್ನು ಹಳೆಪೈಕ ಅಥವಾ ಕೆಳಸರೆಂದೂ (ಮುಖಂಡ) ಕರೆಯುತ್ತಿದ್ದರು ಇವರಲ್ಲಿ ಪಂಚಮರಲ್ಲಿ ಕನಿಷ್ಠರನ್ನು ಕೊರಗರೆಂದು, ಬರ ಕರೆದಾಗ ಬರುವವ)ರೆಂದೂ ಕರೆಯುವ ಪದ್ಧತಿ. ಇವರಿಗೂ ಹಳ್ಳಿಗಳ ಮುಖ್ಯ ಕೆಲಸಗಳಲ್ಲಿ ಆಹ್ವಾನವಿದೆ. ಆಗ ಇಂದಿನ ಸ್ಪರ್ಶಾಸ್ಪರ್ಶದ ತಗಾದೆಯೇ ಇರಲಿಲ್ಲ. ಎಲ್ಲರಿಗೂ ಅವರವರ ಜೀವನದಲ್ಲಿ ತೃಪ್ತಿ ಇತ್ತು. ಇದೇ ಹಳ್ಳಿಗಳ ತನ್ನತನದಲ್ಲಿದ್ದ ಒಂದು ವೈಶಿಷ್ಟ್ಯ.

ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 24 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

THE MOOLKY BANK LTD
Moolky, S. K.

ದಿ ವಿಜಯ ಬೇಂಕ್, ಲಿಮಿಟೆಡ್.

ಸ್ಥಾಪನೆ: 1931] | ಪ್ರಧಾನ ಕಛೇರಿ: ಮಂಗಳೂರು

ತೆತ್ತ ಭಂಡವಾಳ ಮತ್ತು ಕ್ಷೇಮನಿಧಿ ರೂ. 10,87,000
ಜಮಾ ವಹಿವಾಟು .... ,, 60,50,000

ಕಾಯಂ ಠೇವಣಾತಿಗಳು 1 ತಿಂಗಳಿನಿಂದ 2[illegible] ತಿಂಗಳಿನ ವರೆಗೆ ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲ್ಪಡುವವು

ಮೂರು ವರ್ಷ ಅವಧಿಯ ವಿಜಯ ಕ್ಯಾಶ್ ಸರ್ಟಿಫಿಕೇಟು ಠೇವಣಾತಿಯಲ್ಲಿ 4 ½% ಬಡ್ಡಿ ದರ ಗಳಿಸಿಕೊಳ್ಳಬಹುದು.

ಜಿಲ್ಲೆಯ ಎಲ್ಲಾ ಮುಖ್ಯ ಸ್ಥಳಗಳಲ್ಲಿ ಮತ್ತು ಮಡಿಕೇರಿ. ಮುಂಬಾಯಿಗಳಲ್ಲಿ ಬೇಂಕಿನ ಶಾಖೆಗಳಿರುತ್ತವೆ

ಕೆ ಸುಂದರರಾಮ ಶೆಟ್ಟಿ,
ಬಿ. ಎ. ಬಿ. ಎಲ್., ವಕೀಲ್,
ಬೇಂಕಿನ ಡೈರೆಕ್ಟರರ ಮಂಡಳಿಯ ಅಧ್ಯಕ್ಷರು

THE VIJAYA BANK, Limited.

ಲಕ್ಷಾಂತರ ಜನರ [illegible]

ಸರ್ ಜೀವನ್ ಶಿಲಾಜಿತ್‌ಲೇಹ

ಶಿಲಾಜಿತ್ ಹಿಮಾಲಯದ [illegible] ಸೇರಿಸಿದ ಲೇಹ್ಯ, ದೇಹಶಕ್ತಿ, ಹೊಟ್ಟೆನೋವು, [illegible], ಕೆಮ್ಮು, ದಮ್ಮು, ಬಹುಮೂತ್ರ ಮತ್ತು [illegible] ಎಲ್ಲಾ ರೋಗನಿವಾರಕ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, [illegible] ಮತ್ತು ಮಕ್ಕಳ ಸರ್ವರೋಗ ನಿವಾರಕ [illegible] ಯೂ ಸರ್ವರಿಗೂ ಅನುಕೂಲವುಂಟು.

ಇಲ್ಲ ದಿನದ ಲೇಹ್ಯ ರೂ. ೫-೪-೦, [illegible]

ನೀಲಗಿರಿ ಡಿಪ್ಪೊ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ.
ಶುದ್ಧ ನೀಲಗಿರಿ ಎಣ್ಣೆಗೆ [illegible]

ಭರ್ತ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿನ್ನ ಸೇವಿಸಿದರೆ [illegible] ದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು [illegible]

ಬೆಲೆ- ೧ ಬಾಟ್ಲಿಗೆ — ರೂ. ೫-೮-೦ [illegible] ರೂ ೦-೧೪-೦

ಹಾಲಪ್ಪಾ ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ

ಉಡುಪಿ ಡಿ. ಮು. ಕೋರ್ಟಿನಲ್ಲಿ
O. P. 2 54

F. O. ಪಿಲ್ಲಿಯಮ್ಮ ಕೂಡಾ ೩ ಜನರು ಅರ್ಜಿದಾರರು.

ಅರ್ಜಿದಾರರ ಪೈಕಿ 1ನೇ ಯವರ ಗಂಡ, ಮಕ್ಕಳ ತಂದೆ R. G. ಪಿಲ್ಲಿಯನ್ನುವರು ಪೀಲು ನಗ್ಗೆರೆ ಗೂದದ ಉಡುಪಿ ಕ್ಷಬೆಯಲ್ಲಿ ತಾ 6 8 1953ರಲ್ಲಿ ಮೃತರಾಗಿರುವ ಕಾರಣ, ಸದ್ರಿಯವರಿಗೆ 'The South African Mutual Life Assurance Society, Salisberry, Southern Rhodesia' ಯವರಿಂದ ನಂಬ್ರ 518788ನೇ ಪೋಲಿಸಿ ಬಾಬ್ತು ಬರತಕ್ಕ ರೂ 3187 15 2ನ್ನು ಪಡೆಯಲು ತಾವು ಹಕ್ಕುದಾರರೆಂತಲೂ, ಆ ಕುರಿತು ತಮ್ಮೆಲ್ಲರ ಪರವಾಗಿ 1ನೇ ಅರ್ಜಿದಾರರ ಹೆಸರಿಗೆ ಒಂದು ವಾರೀಸು ಸರ್ಟಿಫಿಕೇಟು ಕೊಡಬೇಕಾಗಿಯೂ ಮನವಿ ಮಾಡಿಕೊಟ್ಟ ಮೇಲ್ಕಂಡ ಅರ್ಜಿಯು ಈ ಕೋರ್ಟಿನಲ್ಲಿ ತಾ 3 2 54ಕ್ಕೆ ತಪ್ಪಿಗೆ ಇಟ್ಟಿರುತ್ತದೆಂತಲೂ, ಆ ಕುರಿತು ಆಕ್ಷೇಪವುಳ್ಳವರು ಈ ಕೋರ್ಟು ನೋಡಿದ ಸದ್ರಿ ತಾ 3 2 54ರಲ್ಲಿ [illegible] ಘಂಟೆ 10 15ಕ್ಕೆ ಹಾಜರಾಗಿ ತಮ್ಮ ಆಕ್ಷೇಪಗಳನ್ನು ಹ್ಯಾಜರು ಮಾಡಿಕೊಳ್ಳಬೇಕಾಗಿಯೂ ಈ ಮೂಲಕ ಸರ್ವ ಜನರಿಗೆ ತಿಳಿಸಲಾಗುತ್ತದೆ.

K Vittal Nayak
Vakil for Petrs

ಉಡುಪಿ [illegible]



Regd. No M. 3618

Licence No 31
Licensed to Post without Prepayment

ನವಯುಗ

Vol.33 No 22 4-2-1954 ವರ್ಷ ೩೩ ವಾರೆ ೨೨

ಇತಿಹಾಸದ ಪಾಠ

ಜನವರಿಯ ೩೦ನೇ ದಿನಾಂಕ ಕಲ್ಯಾಣಿಯಲ್ಲಿ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧಿವೇಶನದ ಅಧ್ಯಕ್ಷ ಸ್ಥಾನದಿಂದ ಭಾಷಣ ಮಾಡುತ್ತಾ ಶ್ರೀ ಜವಾಹರಲಾಲ ನೆಹರೂರವರು ಇತಿಹಾಸದಿಂದ ಪಾಠ ಕಲಿತು ನಾವು ರಾಷ್ಟ್ರದ ಐಕ್ಯವನ್ನು ಬಲಪಡಿಸಬೇಕೆಂದು ದೇಶದ ನಾಗರಿಕರಿಗೆ ಉಪದೇಶ ನೀಡಿದರು. ಅವರು ಯುದ್ಧದ ಭಯಂಕರ ಪರಿಣಾಮಗಳನ್ನು ವರ್ಣಿಸಿದರಲ್ಲದೆ, ಶಾಂತಿಯನ್ನು ನೆಲೆಗೊಳಿಸುವುದೇ ಭಾರತದ ಸರಕಾರದ ಧೋರಣವಾಗಿರುತ್ತದೆಂದು ಪುನರುಚ್ಚರಿಸಿದರು. ಪಾಕಿಸ್ತಾನವು ಅಮೇರಿಕೆಯೊಡನೆ ಮಾಡಿಕೊಳ್ಳುವ ಸೈನಿಕ ಒಪ್ಪಂದದ ದುಷ್ಪರಿಣಾಮಗಳನ್ನು ಸುಸಂಘಟಿತರಾಗಿ ಎದುರಿಸಿ, ಪ್ರಬಲ ಪ್ರತಿಭಟನೆ ನೀಡಲು ನಾವೆಲ್ಲರೂ ಸಿದ್ಧರಿರಬೇಕೆಂದು ನೆಹರೂ ಎಚ್ಚರಿಕೆ ಕೊಟ್ಟರು.

ನಾವೀಗ ಒಂದು ಸಂಕಟಮಯ ಪರಿಸ್ಥಿತಿಯಲ್ಲಿ ಜೀವಿಸುತ್ತಿದ್ದೇವೆ. ನಾಳೆ—ಅಥವಾ ಇನ್ನು ಹತ್ತು ಹದಿನೈದು ದಿನಗಳಲ್ಲಿ ಜಗತ್ತಿನಲ್ಲಿ ಏನು ಆದೀತೆಂದು ಈಗಲೇ ಹೇಳಲು ಬಾರದಷ್ಟು ಪರಿಸ್ಥಿತಿಯು ಕೆಟ್ಟಿರುತ್ತದೆ. ಯುದ್ಧ ಭಯವೇ ಎಲ್ಲರನ್ನೂ ತತ್ತರಿಸುವಂತೆ ಮಾಡಿರುವುದು. ಯುದ್ಧದ ಸಿದ್ಧತೆಯನ್ನು ನಡೆಸುವುದರ ಮೂಲಕವೇ ರಾಷ್ಟ್ರವು ಬಲಾಢ್ಯವಾಗುವುದೆಂದು ಸಾಮಾನ್ಯವಾಗಿ ಅಭಿಪ್ರಾಯ ವ್ಯಕ್ತಗೊಳಿಸಲ್ಪಡುತ್ತದೆ. ಆದರೆ ಜಗತ್ತಿನ ಪ್ರಬಲ ಬಣಗಳೆರಡು ವಿಧ್ವಂಸಕ ಕಾರ್ಯದಲ್ಲಿ ಮಗ್ನಗೊಂಡರೆ, ಅದು ಹಿಂದಿನ ಎರಡು ವಿಶ್ವವೇಳೆಗಳಿಗಿಂತಲೂ ಭಯಂಕರ ಪರಿಣಾಮವನ್ನುಂಟುಮಾಡುವುದು ನಿಶ್ಚಯ. ಅಣು ಬಾಂಬು, ಜಲಜನಕ ಬಾಂಬುಗಳಂಥ ಭೀಕರ ವಿನಾಶಕೆಗಳು ಜಗತ್ತಿನ ಸೌಂದರ್ಯವನ್ನೂ ಸಂಸ್ಕೃತಿಯನ್ನೂ ನಾ[illegible] [illegible] [illegible]

ಎತ್ತಿ ಹಿಡಿದಿರುವುದು ಭಾರತದ ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರು ಅಹಿಂಸೆ ಮತ್ತು ಶಾಂತಿ ಸ್ನೇಹಗಳ ಸಂದೇಶವಾಹಕರಾಗಿದ್ದರು. ಈ ಭವ್ಯ ಪರಂಪರೆಯನ್ನು ಕಾಪಾಡಿಕೊಂಡು ಅದರ ಮನ್ನಣೆ ಗೌರವಗಳನ್ನು ಹೆಚ್ಚಿಸಿಕೊಳ್ಳುವ ಮಹತ್ವದ ಹೊಣೆಗಾರಿಕೆಯು ನಮ್ಮ ಮೇಲೆ ಬಿದ್ದಿರುತ್ತದೆ. ಇದನ್ನು ಅರಿತುಕೊಳ್ಳಲು ನಾವು ಶಕ್ತರಾಗದಿದ್ದರೆ ಕರ್ತವ್ಯ ಚ್ಯುತಿಗೆ ಮನಸ್ಸು ಮಾಡಿದಂತಾಗುವುದು. ಇದು ಸಲ್ಲದೆಂದು ತಿಳಿದು ಶಾಂತಿ ಸ್ಥಾಪನೆಗೋಸ್ಕರ ನಾವು ಪ್ರಯತ್ನಿಸುವಾಗ, ನಗಳು ಶಾಂತಿಪ್ರಿಯದ ಪಾತ್ರವಹಿಸಲು ಸಾಧ್ಯವೆಂಬ ನಂಬಿಕೆಯನ್ನು ಇಟ್ಟುಕೊಂಡಿವೆ. ಯಾರ ಮೇಲೂ ಆಕ್ರಮಣ ಮಾಡುವ ಇಚ್ಛೆಯನ್ನು ನಾವು ಇಟ್ಟುಕೊಂಡಿಲ್ಲ—ಎಲ್ಲರೊಡನೆ ಸ್ನೇಹದಿಂದಿರಲು ನಾವು ಬಯಸುತ್ತೇವೆ. ಅದಕ್ಕೋಸ್ಕರವೇ ಶಾಂತಿಪ್ರಿಯರಾಗಿದ್ದು ಕೊಂಡು ಯುದ್ಧದ ಜಂಜಾಟದಿಂದ ದೂರವುಳಿಯಬಯಸುತ್ತೇವೆ.

ಇಂತಹ ಪ್ರಸಂಗದಲ್ಲೂ ನಮ್ಮ ಮೇಲೆ ಆಕ್ರಮಣವಾಗುವುದಿಲ್ಲೆಂದು ನಿಶ್ಚಿಂತೆಯಿಂದ ನಾವಿರಬಲ್ಲೆವೆ? ದೈವ ದುರ್

ವ್ಯಕ್ತ್ಯುದ್ದೇಶದ ಗೌರವಕ್ಕೆ ತಕ್ಕುದಾದ ಸಾಧನಾ ಮಾರ್ಗವನ್ನೂ ಅನುಸರಿಸಬೇಕು. ಅನ್ಯಥಾ ನಮ್ಮದು ಬಾಯಿ ಬಡಿವಾರವಾಗುವುದೇ ಹೊರತು ನೈತಿಕ ಬಲ ಅದರಲ್ಲಿ ಕಂಡು ಬರಲಾರದು.

ಆದುದರಿಂದ ನಾವು ಯುದ್ಧದಿಂದ ಅಲಿಪ್ತರಾಗಿದ್ದುಕೊಂಡು, ಶಾಂತಿ ಸ್ಥಾಪನೆಗೋಸ್ಕರ ಸಮೂಹದ ಮಾರ್ಗವನ್ನು ಅನುಸರಿಸುವುದಕ್ಕೆ ನಿರ್ಧರಿಸಿದ್ದೇವೆ. ಜಗತ್ತಿನ ಪ್ರಬಲ ಶಕ್ತಿಗಳು ಪರಸ್ಪರ ಯುದ್ಧದಲ್ಲಿ ಘಟಿಸಿದ ವಿಕಟ ಗಳಿಗೆಯಲ್ಲೂ ಕೆಲವು ಪ್ರದೇಶಗಳು ಶಾಂತಿಯಲ್ಲಿರುವಂತಾದರೆ, ಜಗತ್ತಿನ [illegible] ನಾಗರಿಕತೆ ತುಸುವಾದರೂ ಜೀವ ಉಳಿಸಿಕೊಂಡಿರಲು ನೆರವಾದೀತು. ಭಾರತವು ತಾನು [illegible] [illegible]

ಲಾಸದಿಂದಲೂ ವಾತಾವರಣದ ಒತ್ತಡದಿಂದಲೂ ನಾವು ಸಂಕ್ರಮಣ ಪರಿಸ್ಥಿತಿಯೊಂದನ್ನು ಎದುರಿಸಬೇಕಾಗಿ ಬಂದಿರುತ್ತದೆ— ಪಾಕ—ಅಮೇರಿಕ ಮಿಲಿಟರಿ ಒಡಂಬಡಿಕೆಯು ನೀಡುವ ಆಹ್ವಾನವನ್ನು ನಾವೆಲ್ಲರೂ ಒಗ್ಗಟ್ಟಿನಿಂದ ಪ್ರತಿಭಟಿಸುವುದು ಅತ್ಯಗತ್ಯವಾಗಿರುತ್ತದೆ. ನಾವೆಷ್ಟು ಬೇಡ ಬೇಡವೆಂದು ಹೇಳಿದರೂ ಯುದ್ಧವು ನಮ್ಮ ಬಾಗಿಲಿಗೆ ಬರುತ್ತದಾದರೆ, ನಮ್ಮ ರಾಷ್ಟ್ರದ ಮೇಲೆ ಹೊರಗಿನಿಂದ ಆಕ್ರಮಣ ನಡೆಯುವುದಾದರೆ ಆಗಲೂ ನಾವು ಕೈಕಟ್ಟಿ ಕುಳಿತಿರಲಾರೆವು. ನಮ್ಮ ಹತ್ತಿರ ಹೊರ ದೇಶಗಳ ಆಕ್ರಮಣಕ್ಕೆ ಬೇಕಾದಷ್ಟು ದೊಡ್ಡ ಪ್ರಮಾಣದ ಸೈನ್ಯ ಬಲವಿಲ್ಲ, ನಿಜ. ಆದರೆ ದೇಶದ ಸಂರಕ್ಷಣೆಗೆ ಅಗತ್ಯವಿದ್ದಷ್ಟು ಸೈನ್ಯವನ್ನು ನಾವು ಸದಾ ಸಜ್ಜುಗೊಳಿಸಿ ಇಟ್ಟಿದ್ದೇವೆ. ಈ ಸೈನ್ಯವು ನಮ್ಮ ಕಷ್ಟಾರ್ಜಿತ ಸ್ವಾತಂತ್ರ್ಯದ ರಕ್ಷಣೆಗೋಸ್ಕರ ಎಂತಹ ಪ್ರಬಲ ಆಕ್ರಮಣವನ್ನಾದರೂ ಯಶಸ್ವಿಯಾಗಿ ಹಿಮ್ಮೆಟ್ಟಿಸಿ, ರಾಷ್ಟ್ರಕ್ಕೆ ಬಂದೊದಗುವ ಗಂಡಾಂತರವನ್ನು ದೂರ ಮಾಡುವುದು.

ಹೀಗೆಂದಮಾತ್ರಕ್ಕೇ ಭಾರತದ ಮೇಲೆ ಪಾಕಿಸ್ತಾನವು ಆಕ್ರಮಣ ಮಾಡಿಯೇ ತೀರುವುದೆಂದು ನಾವು ಗಾಬರಿ ಪಟ್ಟುಕೊಳ್ಳುವುದೂ ಗೊಂದಲಕ್ಕೆ ಒಳಗಾಗುವುದೂ ಬೇಡ. ಪಾಕಿಸ್ತಾನದೊಡನೆ ನಾವು ಸ್ನೇಹ ಸೌಹಾರ್ದದಿಂದ ಇರಲು ಅಪೇಕ್ಷಿಸುತ್ತೇವೆ. ಯುದ್ಧದ ಮಾತುಗಳು ನಮ್ಮ ಪ್ರೀತಿ ಭಾವನೆಯನ್ನು ಕೆಡಿಸುವಂತಹ ಸಂದರ್ಭಗಳನ್ನು ಒದಗಿಸುತ್ತವೆ. ಯುದ್ಧದ ಸುದ್ದಿಯನ್ನೆ ನಮ್ಮಲ್ಲಿ ಯಾರೂ ಎತ್ತಬಾರದೆಂಬ ಇರಾದೆಯಿಂದ "ಯುದ್ಧವಿಲ್ಲ" ಎಂಬ ನೀತಿಯನ್ನು ಸಾರಬೇಕಾಗಿ ಭಾರತವು ಪಾಕಿಸ್ತಾನಕ್ಕೆ ಕೆಲ ವರ್ಷಗಳ ಪೂರ್ವದಲ್ಲಿ ಸೂಚನೆ ಕೊಟ್ಟದ್ದಿತ್ತು. ಅದನ್ನು ಪಾಕಿಸ್ತಾನ ಮನ್ನಿಸಲಿಲ್ಲ—ಆದರೆ ಭಾರತದ ದೃಷ್ಟಿಗೆ ಅಂದು ಮಾಡಿದ ಸೂಚನೆ ಈಗಲೂ ಊರ್ಜಿತದಲ್ಲಿದೆ. ಈಗಲಾದರೂ ಪಾಕಿಸ್ತಾನವು ಕೆಣಕಿದು ತಾನಿಡುತ್ತಿರುವ ಗಂಡಾಂತರದ ಹೆಜ್ಜೆಯಿಂದ ಪರಾವೃತ್ತವಾದರೆ ಅದು ಉಭಯ ರಾಷ್ಟ್ರಗಳಿಗೂ ಕ್ಷೇಮವನ್ನುಂಟುಮಾಡುವುದು.

ಯುದ್ಧ ಭಯವಿಲ್ಲದಿದ್ದರೂ ಆಕ್ರಮಣದ ಹೆದರಿಕೆಯನ್ನು ಹೊರಗಿನವರು ಹುಟ್ಟಿಸುತ್ತಿರುವುದರಿಂದ, ನಾವು ಸತರ್ಕರಿರಬೇಕಾಗುವುದು. ರಾಷ್ಟ್ರದಲ್ಲಿ ಒಗ್ಗಟ್ಟನ್ನೂ ಐಕ್ಯವನ್ನೂ ಕಾಯ್ದುಕೊಳ್ಳುವ ಪ್ರಮೇಯವು ಹಿಂದಿನೆಲ್ಲ ಕಾಲಕ್ಕಿಂತ ಈಗ ಹೆಚ್ಚು ಸ್ಪಷ್ಟವಾಗಿ ಗೋಚರಿಸುತ್ತದೆ. ಈ ವಿಷಯದಲ್ಲಿ ನಾವು ಇತಿಹಾಸದಿಂದ ಪಾಠ ಕಲಿಯಬೇಕು—ನಾವು ಈ ಹಿಂದೆ ಅನೇಕ ಬಾರಿ ವಿದೇಶೀಯರ ದಾಳಿಗೆ ಒಳಗಾಗಿರುವುದು ಅಂತಹ ಸಂದರ್ಭಗಳಲ್ಲಿ ನಮ್ಮ ಆಂತರಿಕ ದೌರ್ಬಲ್ಯ ಮತ್ತು ಭೇದ ಭಾವನೆಗಳಿಂದಾಗಿ. ನಾವು ಅವರ ಮುಂದೆ ತಲೆಯನ್ನು ತಗ್ಗಿಸಿ ಸೋಲನ್ನೊಪ್ಪಬೇಕಾಯಿತು. ವೈವಿಧ್ಯವು ನಮ್ಮ ನಾಗರಿಕತೆಯ ಶ್ರೇಷ್ಠ ವೈಶಿಷ್ಟ್ಯವೆಂಬುದರ ಭಿನ್ನಾಭಿಪ್ರಾಯವಿಲ್ಲ—ಆದರೆ ಅದೇ ವೈವಿಧ್ಯವು ನಮ್ಮ ಒಗ್ಗಟ್ಟಿನ ಭಾವನೆಯನ್ನು ಅನೇಕ ಪ್ರಸಂಗಗಳಲ್ಲಿ—ಸಂದಿಗ್ಧವಾಗಿ ಅಪಾಯಕಾಲದಲ್ಲಿ—ಕ್ಷೀಣ ಮಾಡಿರುವುದನ್ನು ಮರೆಯುವಂತಿಲ್ಲ. ಈ ನಿಟ್ಟಿನಲ್ಲಿಯೇ ಇಂದಿನ ನಮ್ಮ ಮೂಲ

[illegible] [illegible]

ಪ್ರತಿ[illegible] ದಿವಸದಲ್ಲೂ ಸೇವಿಂಗ್ಸ್
[illegible] ಪ್ರಾರಂಭಿಸಿರಿ.

THE CANARA INDUSTRIAL &
BANKING SYNDICATE LTD.,
UDIPI S. India
[illegible] ಸಿಂಡಿಕೇಟ್ ಲಿಮಿಟೆಡ್

ಪ್ರಜಾರಾಜ್ಯದ ನಾಲ್ಕನೇ ವರ್ಷದಲ್ಲಿ ಮದ್ರಾಸು

ಆಂಧ್ರರಾಜ್ಯದ ರಚನೆ ಮದ್ರಾಸಿಗೆ ಹಾನಿಮಾಡಿಲ್ಲ

ಪ್ರಜಾರಾಜ್ಯದ ನಾಲ್ಕನೇ ವರ್ಷದಲ್ಲಿ ನಮ್ಮ ರಾಜ್ಯ ಸರಕಾರ ತೋರಿಸಿದ ಪ್ರಗತಿಯನ್ನು ವಿಮರ್ಶಾತ್ಮಕ ದೃಷ್ಟಿಯಿಂದ ಪರಿಶೀಲಿಸುವುದು ಅಪ್ರಾಸಂಗಿಕವಾಗಲಾರದು. ಮದ್ರಾಸು ರಾಜ್ಯಕ್ಕೆ ಗಣರಾಜ್ಯದ ನಾಲ್ಕನೇವರ್ಷ ಬಹಳ ಮಹತ್ವದ್ದೆನಿಸಿದೆ—ನಾಲ್ಕೈದು ವರ್ಷಗಳಿಂದ ಮಳೆ ಬಾರದೆ ಬರಗಾಲದ ಪಿಡುಗು ತಾಂಡವಿಸುತ್ತಿದ್ದ ಪ್ರದೇಶಗಳಲ್ಲಿ ದೇವರ ದಯೆಯಿಂದ ಮಳೆ ಬಂದು, ಫಸಲು ಚೆನ್ನಾಗಿ ಬೆಳೆಯಿತು. ಈ ಸಂತೋಷದೊಡನೆ—ಭಾರತದ ರಾಜಕೀಯ ಇತಿಹಾಸದಲ್ಲಿ ಅತಿ ಮಹತ್ವದ ಘಟನೆಯೊಂದಕ್ಕೂ ಮದ್ರಾಸು ಭಾಗಿಯಾಯಿತು. ನಲುವತ್ತು ವರ್ಷಗಳಿಂದ ಆಂಧ್ರರು ನಡೆಸುತ್ತಿದ್ದ ಪ್ರತ್ಯೇಕ ರಾಜ್ಯ ನಿರ್ಮಾಣದ ಚಳುವಳಿಯು ಸಫಲಗೊಂಡು, ಮದ್ರಾಸು ರಾಜ್ಯವು ವಿಭಜನೆಗೊಳಪಟ್ಟಿತು. ಹೀಗೆ ತೆಲುಗರು ಪ್ರತ್ಯೇಕವಾದ ಮೇಲೆ—ಮತ್ತು ತೆಲುಗು ಪ್ರದೇಶದ ಭತ್ತದ ಗದ್ದೆಗಳು ಕೈಬಿಟ್ಟ ಮೇಲೆ — ಕೂಡ, ರಾಜ್ಯದ ಪರಿಸ್ಥಿತಿ ತೃಪ್ತಿಕರವಿರುವುದು ನಮಗೆ ಸಮಾಧಾನವನ್ನುಂಟುಮಾಡಬೇಕು.

ಆಹಾರ ಪರಿಸ್ಥಿತಿ

ಆಂಧ್ರ ಪ್ರದೇಶ ಪ್ರತ್ಯೇಕಗೊಂಡುದರಿಂದ ಮದ್ರಾಸಿಗಾದ ಮೊದಲನೆಯ ಪೆಟ್ಟು—ಕೃಷ್ಣಾ ಗೋದಾವರೀ ಪ್ರದೇಶದ ಹೊನ್ನ ಬೆಳೆ ಬರುವ ಭತ್ತದ ಗದ್ದೆಗಳ ಉತ್ಪನ್ನ ಅಲಭ್ಯವಾದದ್ದು. ಆದರೆ ಸುದೈವದಿಂದ ಆಂಧ್ರ ಸರಕಾರವು ಮದ್ರಾಸು ಸರಕಾರಕ್ಕೆ ಒಂದು ಲಕ್ಷ ಟನ್ನುಗಳಷ್ಟು ಅಕ್ಕಿಯನ್ನು ಸಾಮಾನ್ಯ ದರದಲ್ಲಿಯೇ ಕೊಡಲು ಒಪ್ಪಿಕೊಂಡಿರುವುದು. ಅಲ್ಲದೆ, ಮಳೆ ಚೆನ್ನಾಗಿ ಬಂದಿರುವುದರಿಂದ, ಈ ಸಲದ ಬೆಳೆಯೂ ಆಶಾದಾಯಕವಾಗಿರುವುದು. ಆದ ಕಾರಣ, ಮದ್ರಾಸು ಸರಕಾರಕ್ಕೆ ಆಹಾರದ ವಿಷಯದಲ್ಲಿ ಚಿಂತೆ ಉಳಿದಿಲ್ಲ. ಶ್ರೀ ರಾಜಗೋಪಾಲಾಚಾರಿಯವರು ಅತಿ ಧೈರ್ಯದಿಂದ ಸಾರಿದ ವಿನಿಯಂತ್ರಣ ಧೋರಣೆಯನ್ನು ಕೇಂದ್ರ ಹಾಗು ಇತರ ರಾಜ್ಯ ಸರಕಾರಗಳು ಅನುಸರಿಸಿವೆ, ವಿನಿಯಂತ್ರಣವು ಸಾಕಷ್ಟು ಯಶಸ್ವಿಯಾಗಿರುವುದು. ಕಾಳಸಂತೆ ಮತ್ತು ಆಹಾರ ಧಾನ್ಯಗಳ ಸಂಗ್ರಹ ಪ್ರವೃತ್ತಿಯು ಈಗ ದೂರವಾಗಿರುವುದು. ಆಹಾರ ಧಾನ್ಯಗಳ ಬೆಲೆಯೂ ಸಾಮಾನ್ಯ ಮಟ್ಟದಲ್ಲಿ ನಿಂತಿರುವುದು. ಸರಕಾರವು ಮಿತ ಬೆಲೆಯ ಅಂಗಡಿಗಳನ್ನು ಈಗಲೂ ನಡೆಸಿಕೊಂಡು ಬರುತ್ತಿರುವುದರಿಂದ ಖಾಸಗಿ ಪೇಟೆಯ ಮೇಲೆ ಅಪ್ರತ್ಯಕ್ಷ ಪ್ರಭಾವವನ್ನು ಬೀರಲು ಅದಕ್ಕೆ ಸಾಧ್ಯವಾಗಿರುವುದು. ಇದರ ಜೊತೆಗೆ, ರಾಜ್ಯದಲ್ಲಿ ಅನೇಕಾನೇಕ ನೀರಾವರಿ ಕಾರ್ಯಕ್ರಮಗಳು ರೂಪುಗೊಂಡಿರುವುದರಿಂದ, ಹೊಸತಾಗಿ ಸಾವಿರಾರು ಎಕರೆ ಪ್ರದೇಶವು ಸಾಗುವಳಿಗೆ ಒಳಪಟ್ಟು, ತನ್ಮೂಲಕ ಉತ್ಪಾದನೆ ಹೆಚ್ಚಿಕೊಂಡಿರುವುದು.

ಅಭಿವೃದ್ಧಿ ಯೋಜನೆಗಳು

ಸ್ವಾತಂತ್ರ್ಯೋತ್ತರದ ವರ್ಷಗಳಲ್ಲಿ ಅಭಿವೃದ್ಧಿ ಪ್ರಯತ್ನಗಳಿಗೆ ಅತಿ ಹೆಚ್ಚಿನ ಮಹತ್ವವು ಬಂದಿತು. ರಾಜ್ಯ ಸರಕಾರವು ಅನೇಕ ಕಾರ್ಯಕ್ರಮಗಳನ್ನು ಆಗ ಕೈಗೊಂಡಿತು. ಮುಂದೆ ಭಾರತದ ಸಾರ್ವಜನಿಕ ವಿಳಿಗೆಯ ಧ್ಯೇಯದಿಂದ ಪಂಚವಾರ್ಷಿಕ ಯೋಜನೆಯು ಕಾರ್ಯರೂಪಕ್ಕೆ ಇಳಿದಾಗ, ಉಳಿಕೆಯ ಈಗಿನ ಮದ್ರಾಸು ರಾಜ್ಯಕ್ಕೆ ಸುಮಾರು ೮೦ ಕೋಟಿ ರೂಪಾಯಿಗಳ ಯೋಜನೆ ಬಂದಿತು. ಕೃಷಿಗೆ ಪೋಷಕವಾದ ನೀರಾವರಿ ಮತ್ತು ವಿದ್ಯುಚ್ಛಕ್ತಿಯ ಉತ್ಪಾದನೆಗಳಿಗೋಸ್ಕರವೇ ಇದರ ಒಪ್ಪಂಶ ವೆಚ್ಚವಾಗಬೇಕೆಂದು ನಿಯೋಜಿಸಲ್ಪಟ್ಟಿರುವುದು. ಹೀಗೆ ಕಾರ್ಯರೂಪಕ್ಕೆ ಇಳಿಯುವ ಯೋಜನೆಗಳಲ್ಲಿ ಕೊಯಂಬುತ್ತೂರಿನಲ್ಲಿ ಕೆಳಗಿನ ಭವಾನಿ ಸಾಗರದ ಕೆಲಸವು ಅತಿದೊಡ್ಡದು. ಇದಕ್ಕೆ ೯೦೭ ಲಕ್ಷ ರೂಪಾಯಿಗಳ ವೆಚ್ಚ ಬೀಳುವುದು. ಇದರಿಂದ ೨ ಲಕ್ಷ ಎಕರೆಗೂ ಹೆಚ್ಚು ಭೂಮಿ ನೀರುಣ್ಣುವುದು. ಈ ವಾರ್ಷಾಂತ್ಯದೊಳಗೆ ಯೋಜನೆ ಸಂಪೂರ್ಣ ಮುಗಿಯುವುದಾದರೂ, ನೀರುಬಿಡುವ ಕೆಲಸವು ೧೯೫೩ನೇ ಇಸವಿಯಲ್ಲಿಯೇ ತೊಡಗಿರುವುದು. ಇದನ್ನು ಬಿಟ್ಟರೆ, ತಿನ್ನವೆಲ್ಲಿ ಜಿಲ್ಲೆಯಲ್ಲಿ ಮಣಿಮುತ್ತಾರ ಯೋಜನೆ ಮತ್ತು ಮಲಬಾರಿನ ಮಲಂಪುಜ ಯೋಜನೆಗಳು ಪ್ರತಿಯೊಂದೂ ನಲ್ಕುಕೋಟಿ ರೂಪಾಯಿಗಳ ಕರ್ಚಿನಿಂದ ರೂಪುಗೊಳ್ಳುತ್ತಿವೆ. ಇವುಗಳ ಕೆಲಸವು ಮುಗಿಯುತ್ತಾ ಬಂದಿರುವುದು. ತಮಿಳುನಾಡಿನಲ್ಲಿ ಬೇರೆ ಹಲವು ಯೋಜನೆಗಳೂ ಕೈಗೊಳ್ಳಲ್ಪಟ್ಟಿದ್ದು, ಈಚೆಗೆ ವೈಗೈ ಮತ್ತು ಅಮರಾವತಿ ಯೋಜನೆಗಳಿಗೆ ಯೋಜನಾ ಆಯೋಗದಿಂದ ಮನ್ನಣೆ ದೊರೆತಿದೆ. ಈ ದೀರ್ಘಾವಧಿ ಪ್ರಯೋಜನದ ಕೆಲಸಗಳಲ್ಲದೆ, ಸಣ್ಣ ಸಣ್ಣ ಕಾಮಗಾರಿಗಳ ವಿಷಯದಲ್ಲಿಯೂ ಸರಕಾರ ಆಸಕ್ತಿ ವಹಿಸಿದೆ. ೧೯೪೭೭೦೦೦ ರೂಪಾಯಿಗಳ ವೆಚ್ಚದಲ್ಲಿ ೧೬೭ ಸಣ್ಣ ಯೋಜನೆಗಳನ್ನು ರಾಜ್ಯದಾದ್ಯಂತ ಸರಕಾರವು ಮಂಜೂರು ಮಾಡಿದೆ. ಇದರಿಂದ ಈಗಿನ ೯೩೬೫೫ ಎಕರೆ ಪ್ರದೇಶದೊಂದಿಗೆ ಹೊಸತಾಗಿ ೭೫೩೦೦ ಎಕರೆ ಪ್ರದೇಶ ಲಾಭ ಪಡೆಯುವುದು.

ಕೃಷಿಕರಿಗೆ ಸಂರಕ್ಷಣೆ

ಸುಮಾರು ೩೬೯೦ ಕೆರೆಗಳ ದುರಸ್ತಿಗೋಸ್ಕರ ೧೯೮೫೦೦೦೦ ರೂಪಾಯಿಗಳನ್ನು ಸರಕಾರ ತೆಗೆದಿಟ್ಟಿರುವುದು. ಇವುಗಳಲ್ಲಿ ೧೭೦೦ ಕೆರೆಗಳ ಕೆಲಸ ಈಗಾಗಲೇ ಪೂರ್ಣಗೊಂಡಿದೆ. ಇದಲ್ಲದೆ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಪೂರೈಸಿ ತನ್ಮೂಲಕ ನೀರೆತ್ತುವ ಪಂಪು ಯಂತ್ರಾದಿಗಳನ್ನು ನಡೆಸಲು ಅನುಕೂಲತೆಯನ್ನೂ ಸರಕಾರ ಒದಗಿಸಿ ಕೊಟ್ಟಿರುವುದು. ಇಡೀ ಭಾರತದಲ್ಲಿ, ಈ ವಿಷಯದ ಮಟ್ಟಿಗೆ ಮದ್ರಾಸು ರಾಜ್ಯವೇ ಪ್ರಗತಿಶೀಲವೆಂದು ಹೆಸರು ಪಡೆದಿರುವುದು ನಮಗೆ ಅಭಿಮಾನದ ವಿಷಯ. ಹೀಗೆ ಉತ್ಪಾದನೆ ಹೆಚ್ಚಿಸಲು ನೋಡುವುದರ ಜೊತೆಗೆ ರೈತರ ಸಂಕಷ್ಟಗಳನ್ನು ನಿವಾರಿಸುವುದಕ್ಕೂ ಅವರಿಗೆ ಭದ್ರತೆ ಮತ್ತು ಸಂರಕ್ಷಣೆಯನ್ನು ಕೊಡುವುದಕ್ಕೂ ಸರಕಾರ ಈ ವರ್ಷ ತಕ್ಕುದಾದ ಕ್ರಮ ತೆಗೆದುಕೊಂಡಿದೆ. ಒಂದು ವರ್ಷದ ವರೆಗೆ ಸಾಲದ ಮರುಪಾವತಿಗೋಸ್ಕರ ಯಾರೊಬ್ಬನೂ ರೈತರನ್ನು ಒತ್ತಾಯಿಸಲಾಗದೆಂದು ಕಾಯಿದೆಯನ್ನು ಮಾಡಿರುವುದಲ್ಲದೆ, ದಕ್ಷಿಣಕನ್ನಡದಲ್ಲಿ ಒಕ್ಕಲೆಬ್ಬಿಸುವುದನ್ನು ಪ್ರತಿಬಂಧಿಸುವ ಮತ್ತು ಮಲಬಾರಿನಲ್ಲಿ ರೈತರಿಗೆ ಭದ್ರತೆ ಮತ್ತು ಸಂರಕ್ಷಣೆ ನೀಡುವ ಶಾಸನಗಳನ್ನು ತಂದಿದೆ. ತಂಜಾವೂರಿನಲ್ಲಿ ಧನಿ-ಒಕ್ಕಲುಗಳ ಸಂಬಂಧವನ್ನು ಕಾಯ್ದುಕೊಳ್ಳುವುದಕ್ಕೋಸ್ಕರ ಕಳೆದ ವರ್ಷ ತಂದ ಮಸೂದೆಯ ವ್ಯಾಪ್ತಿಯನ್ನು ಹೆಚ್ಚಿಸಿ, ನೆರೆಕರೆಯ ಕೆಲವು ಪ್ರದೇಶಗಳಿಗೂ ಈ ವರ್ಷ ಅದನ್ನು ಅನ್ವಯಿಸಿರುವುದು. ಸಮಗ್ರ ಮದ್ರಾಸು ರಾಜ್ಯಕ್ಕೆ ಅನ್ವಯಿಸುವ ವ್ಯಾಪಕವಾದ ಭೂಸುಧಾರಣ ಮಸೂದೆಯೊಂದನ್ನು ತರಲು ಸಿದ್ಧತೆಗಳನ್ನೂ ಸರಕಾರ ಮಾಡತೊಡಗಿರುವುದು. ಹೀಗೆ ರೈತರು ಭೂಮಿಯ ಭದ್ರತೆಯಿಂದ ಸಂತೋಷಗೊಂಡು, ಸರಕಾರದ ಕೃಷಿ ಅಧಿಕಾರಿಗಳ ನೆರವು ಪಡೆದು ಸುಧಾರಿತ ಕೃಷಿ ಪದ್ಧತಿಯಲ್ಲಿ ಆಸ್ಥೆ ವಹಿಸಿದರೆ, ಆಹಾರದ ಮಟ್ಟಿಗೆ ನಾವು ಪೂರ್ಣ ಸ್ವಾವಲಂಬಿಗಳಾಗುವ ದಿನವನ್ನು ಸನಿಹದಲ್ಲಿಯೇ ಕಾಣಬಲ್ಲೆವು.

(೧೨ನೇ ಪುಟ ನೋಡಿರಿ)

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ: ೧೯೩೫.] [ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ಭಾರತದ ಸುಭದ್ರ ವಿಮಾ ಕಂಪೆನಿಗಳಲ್ಲಿ "ಕೆನರಾ ಮ್ಯೂಚುವಲ್" ಎಣೆ ಇಲ್ಲದ ವಿಶಿಷ್ಟ ಸ್ಥಾನವನ್ನು ಗಳಿಸಿದೆ. 'ಇದು ಮ್ಯೂಚುವಲ್ ಕಂಪೆನಿಯಾಗಿ' ಘಟಿತವಾಗಿದ್ದು, ಪಾಲುದಾರ ಧಣಿಗಳಿಗಿಲ್ಲದಿರುವುದರಿಂದ, ಕಂಪೆನಿಯ ಸರ್ವ ಲಾಭವನ್ನೂ ಪಕ್ವ ಹೊಂದಿದ ಪಾಲಿಸಿದಾರರೇ ತಮ್ಮಲ್ಲಿ ಹಂಚಿಕೊಳ್ಳುವರು. ಪ್ರಾಗತಿಕ ವಿಮಾಶಾಸ್ತ್ರ ತಳಹದಿಯ ಮೇಲೆ ನಡೆಸಿದ ಕಳೆದ ವಿಮಾ ಗಣನೆಗಳಲ್ಲಿ ಉಳಿತಾಯವನ್ನು ತೋರಿಸಿದುದು ಮಾತ್ರವಲ್ಲದೆ, ಸ್ಥಾಪಿತವಾದಂದಿನಿಂದಲೂ ಇದು ಬೋನಸು ಹಂಚಿದೆ. ಪಾಲಿಸಿದಾರರ ಹಿತವೃದ್ಧಿಯೇ ಧ್ಯೇಯವಾಗುಳ್ಳ ಈ ಪ್ರಗತಿಶೀಲ ಮ್ಯೂಚುವಲ್ ಕಂಪೆನಿಯಲ್ಲಿ ಇಂದೇ ವಿಮೆ ಇಳಿಸಿ, ನಿಮ್ಮ ಕುಟುಂಬದ ಭದ್ರತೆಯನ್ನು ಕಾಯ್ದುಕೊಳ್ಳಿರಿ.

THE CANARA MUTUAL ASSURANCE COMPANY, LTD.,

Estd. 1935] [Head Office. UDIPI, S. INDIA.

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಷಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುದ್ಧಿ ನಾಶಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲಿಸಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. ೩—೮—೦

ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ

ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ ೧೪

ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ.

1939ರಲ್ಲಿ ಸ್ಥಾಪಿತವಾಗಿ 25 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

THE MOOLKY BANK LTD.

Moolky, S. K.

ಬದಲಾವಣೆಗೆಂದು ಒಮ್ಮೆ ಎಸ್. ಆರ್. ಬೀಡಿಯನ್ನು ಬಳಸಿ ನೋಡಿರಿ, ಅಂದರೆ ನೀವು ತಪ್ಪದೆ ಅದನ್ನೇ ಎಂದೆಂದಿಗೂ ಕೊಂಡುಕೊಳ್ಳುವಿರಿ.

S.R. BEEDI WORKS, UDIPI, S.K.



ಎಲ್ಲಾ ಕಡೆಗಳಲ್ಲಿಯೂ ದೊರಕ್ಕುತ್ತವೆ.

OUR BOMBAY STOCKISTS:—

1 V. N. SHENOY, Bombay. 12

2. N. R. KAMATH.

Dahanu Road, Thana Dist (W. Rly.)

ಉದ್ಯೋಗದ ಅವಕಾಶಗಳನ್ನು ಹೆಚ್ಚಿಸುವ ಪ್ರಯತ್ನ

ಪಂಚವಾರ್ಷಿಕ ಯೋಜನೆಯ ಟೀಕಾಕಾರರು ನಿರುದ್ಯೋಗದ ಸಮಸ್ಯೆಯನ್ನು ಪರಿಹರಿಸುವುದರ ಕಡೆಗೆ ಯೋಜನೆಯು ಸಾಕಷ್ಟು ಗಮನವನ್ನು ಪ್ರೊರೈಸಿಲ್ಲವೆಂದು ದೂರುವರು. ೧೯೫೭ನೇ ಇಸವಿಯಲ್ಲಿ ಈ ಟೀಕೆಗೆ ಬಹಳ ಬೆಲೆಯೂ ಬಂದಿತು—ಕಳೆದ ವರ್ಷ ಹಣದ ಉಬ್ಬರವನ್ನು ನಿಯಂತ್ರಿಸುವ ಪ್ರಯತ್ನಗಳು ನಡೆದುದರಿಂದ ಆರ್ಥಿಕ ಸಮತೋಲವು ಸಾಧಿಸಲ್ಪಟ್ಟಿತಾದರೂ ಉದ್ಯೋಗದ ಅವಕಾಶಗಳನ್ನು ಇದು ಕೆಲಮಟ್ಟಿಗೆ ಕಡಿಮೆ ಮಾಡಿತು. ಈ ಕಾರಣದಿಂದಲೇ, ಪಂಚವಾರ್ಷಿಕ ಯೋಜನೆಯಂತೆ ಕಾರ್ಯಗತಗೊಳ್ಳುವ ಕೆಲವು ಔದ್ಯೋಗಿಕ ಪ್ರಯತ್ನಗಳಲ್ಲಿ ಕೆಲಸಮಾಡುವವರ ಪ್ರಮಾಣ ಹೆಚ್ಚಿಕೊಂಡಿದ್ದಾಗಲೂ ದೇಶದಲ್ಲಿ ಸಾಮಾನ್ಯವಾಗಿ ನಿರುದ್ಯೋಗವೇ ಅಧಿಕಗೊಂಡಿತು.

ಇದನ್ನು ದೂರಮಾಡುವುದಕ್ಕೆ ಪರಿಣಾಮಕಾರಿಯಾದ ದೀರ್ಘಾವಧಿ ಯೋಜನೆಗಳನ್ನು ಕೈಗೊಳ್ಳುವುದೊಂದೇ ಯೋಗ್ಯ ಉಪಾಯ. ಇದಕ್ಕೋಸ್ಕರ ನಿರುದ್ಯೋಗ ಪ್ರಶ್ನೆಯ ವ್ಯಾಪ್ತಿಯನ್ನೂ ಅದರ ವಿವಿಧ ಮುಖಗಳನ್ನೂ ಸಂಶೋಧನಾ ದೃಷ್ಟಿಯಿಂದ ಪರಿಶೀಲಿಸುವ ಪ್ರಯತ್ನಗಳು ಕೇಂದ್ರ ಸರಕಾರದ ಕಡೆಯಿಂದ ನಡೆಸಲಾದವು. ಅವುಗಳ ಜೊತೆಗೆ, ಈ ಪ್ರಶ್ನೆಯನ್ನು ಆದಷ್ಟು ಹಗುರಗೊಳಿಸುವುದಕ್ಕೆ ತಾತ್ಕಾಲಿಕ ಕ್ರಮಗಳನ್ನು ಕೈಗೊಳ್ಳದಿದ್ದರೆ—ಜನರಲ್ಲಿ ಉಂಟಾಗುವ ಗೊಂದಲ ಮತ್ತು ಕಳವಳಗಳು ಅನರ್ಥ ಪರಂಪರೆಯನ್ನು ತಂದೊಡ್ಡಬಹುದೆಂಬ ಆಶಂಕೆಯಿಂದ, ಸರಕಾರ ಕೆಲವು ವಿಶಿಷ್ಟ ಕ್ರಮಗಳನ್ನೂ ಅಂಗೀಕರಿಸಿತು.

ವಿವಿಧ ಯೋಜನೆಗಳು ಕಳೆದ ವರ್ಷ ವಿಸ್ತಾರಗೊಂಡಿದುದರಿಂದ ಕೆಲಸದ ಅವಕಾಶ ಹೆಚ್ಚಿಕೊಂಡಿತೆಂದು ಹಿಂದೆ ಹೇಳಿದೆ— ದಾಮೋದರ ಕಣಿವೆಯಲ್ಲಿ ಪ್ರತಿ ತಿಂಗಳಿಗೆ ೨೨೦೦೦ ಜನರು, ಕಕ್ರಪಾರಾ ಯೋಜನೆಯಲ್ಲಿ ೮೭೦೦ ಮಂದಿ ಮತ್ತು ಭಾಕ್ರಾ ನಾಂಗಲದಲ್ಲಿ ೭೯೦೦೦ ಕೆಲಸಗಾರರು ಕಳೆದ ವರ್ಷ ದುಡಿಯುತ್ತಿದ್ದರು. ಜನಪದ ಅಭಿವೃದ್ಧಿ ಯೋಜನೆಗೋಸ್ಕರ ಸುಮಾರು ೫೦೦೦೦ ಕೆಲಸಗಾರರು ನೇಮಕಗೊಂಡರು. ರಾಷ್ಟ್ರೀಯ ವಿಸ್ತರಣಾ ಯೋಜನೆಯಲ್ಲಿ ೮೦೦೦೦ ನುರಿತ ಕೆಲಸಗಾರರಲ್ಲದೆ ಮೂರು ಲಕ್ಷ ಸಾಮಾನ್ಯ ಕೆಲಸಗಾರರನ್ನೂ ಸೇರಿಸಿಕೊಳ್ಳಲು ಪ್ರಯತ್ನ ನಡೆಯಿತು. ಹತ್ತಿಯ ಬಟ್ಟೆ, ಸಿಮೆಂಟು, ಕಾಗದ, ಪ್ಲೈವುಡದ ಉದ್ಯಮಗಳಲ್ಲಿ ಕೆಲಸಮಾಡುವವರ ಪ್ರಮಾಣ ಕಳೆದ ವರ್ಷ ಅಧಿಕಗೊಂಡಿತು.

ಆದರೆ ಕಬ್ಬಿಣ ಮತ್ತು ಉಕ್ಕು, ಸಣಬು, ಯಂತ್ರೋದ್ಯಮಗಳು ಮುಂತಾದ ಕ್ಷೇತ್ರಗಳಲ್ಲಿ ಕೂಲಿಕಾರರು ಕಡಿಮೆಯಾದರು. ಪೇಟೆಗಳು ಸಡಿಲುಗೊಂಡುದು ಈ ಇಳಿತಕ್ಕೆ ಪ್ರಧಾನ ಕಾರಣ. ಹೀಗೆ ದೇಶದಲ್ಲಿ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿದ್ದಂತೆಯೇ ಸಾಮಾನ್ಯಪೇಟೆಯಲ್ಲಿ ವ್ಯಾಪಾರ ಕುಸಿದುದರಿಂದ, ಪಂಚ ವಾರ್ಷಿಕ

ಪಂಚವಾರ್ಷಿಕ ಯೋಜನೆಗೆ ಸೂಚಿತ ಮಾರ್ಪಾಟು

ಯೋಜನೆಯ ವ್ಯಾಪ್ತಿಯನ್ನು ಕೆಲಮಟ್ಟಿಗೆ ವಿಸ್ತರಿಸಿ, ನಿರುದ್ಯೋಗದ ಪ್ರಶ್ನೆಯನ್ನು ಪರಿಹರಿಸಬೇಕೆಂದು ಸರಕಾರ ನಿರ್ಧರಿಸಿತು. ಇದರನ್ವಯ ೧೫೦ ರಿಂದ ೧೭೫ ಕೋಟಿ ರೂಪಾಯಿಗಳ ವೆಚ್ಚ ಬರುವ ಹೊಸ ಯೋಜನೆಗಳು ರೂಪಿಸಲಾದವು.

ಹೊಸತಾಗಿ ಕೈಗೊಳ್ಳಲ್ಪಡುವ ನಿರುದ್ಯೋಗ ನಿರ್ಮೂಲನಾ ಯೋಜನೆಗಳು ಹೀಗಿವೆ— ಕೇಂದ್ರದ ಪರವಾಗಿ ಕೆಲವು ಯೋಜನೆಗಳನ್ನು ಕೈಗೊಳ್ಳುವುದು. ಮುಖ್ಯವಾಗಿ ಉತ್ತರ ಭಾರತದಲ್ಲಿ ನಿರಾಶ್ರಿತರ ಪುನರ್ನಿವೇಶನಕ್ಕೋಸ್ಕರ ೪೫ ಕೋಟಿ ಹಣವನ್ನು ಮನೆಗಳನ್ನು ಕಟ್ಟುವುದಕ್ಕೆ ಉಪಯೋಗಿಸುವುದು; ಅಂತರ್ ರಾಜ್ಯದ ಸಾರಿಗೆ ಸೌಕರ್ಯಗಳನ್ನು ಹೆಚ್ಚಿಸುವ ರೀತಿಯಲ್ಲಿ ಹತ್ತು ಕೋಟಿ ರೂಪಾಯಿ ವೆಚ್ಚದ ಮಾರ್ಗಗಳನ್ನು ರಚಿಸುವುದು; ಆಫೀಸು ಕೆಲಸಗಾರರಿಗೆ ವಸತಿ ಗೃಹಗಳು (೩೦೫ ಕೋಟಿ ರೂಪಾಯಿ) ಆರೋಗ್ಯ ಪ್ರಸಾರ ಯೋಜನೆ (೩ ಕೋಟಿ ರೂಪಾಯಿ); ಕೃಷಿ ವಿಸ್ತರಣಾ ಯೋಜನೆ (೨-೧೫ ಕೋಟಿ ರೂಪಾಯಿ); ಮತ್ತು ಇತರ ಕಾರ್ಯಕ್ರಮಗಳು.

ಇದಲ್ಲದೆ ದೇಶದಲ್ಲಿ ಸದಾ ಕಾಲವೂ ಬರಗಾಲ ತಾಂಡವಾಡುವ ಪ್ರದೇಶಗಳಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಭರದಿಂದ ಮುಂದೊತ್ತಲು ಹನ್ನೆರಡು ರಾಜ್ಯ ಸರಕಾರಗಳಿಗೆ ೪೦ ಕೋಟಿ ರೂಪಾಯಿಗಳ ನೆರವನ್ನು ಕೇಂದ್ರವು ಕೊಟ್ಟಿದೆ. ಇಲ್ಲಿ ವಿವಿಧ ಕಾಮಗಾರಿಗಳು ನಡೆಯುವುದರಿಂದ ನಿರುದ್ಯೋಗಿಗಳು ಅವರಲ್ಲಿ ಭಾಗವಹಿಸಿ ಹೊಟ್ಟೆಬಟ್ಟೆಗೋಸ್ಕರ ಹಣ ಸಂಪಾದಿಸಬಹುದು. ವಿದ್ಯುಚ್ಛಕ್ತಿ ಯೋಜನೆಗಳಿಗೆ (೯ ಕೋಟಿ ರೂಪಾಯಿ); ರಸ್ತೆ ಮತ್ತು ಸಾರಿಗೆ ಸೌಕರ್ಯಕ್ಕೆ (೨ ಕೋಟಿ ರೂಪಾಯಿ); ಗೃಹನಿರ್ಮಾಣಕ್ಕೆ (ಒಂದೂವರೆ ಕೋಟಿ ರೂಪಾಯಿ); ಸಾಮಾಜಿಕ ಸೇವೆಗೆ (ಎರಡು ಕೋಟಿ ರೂಪಾಯಿ) ಮತ್ತು ವಿದ್ಯಮಿಕ ಹಾಗು ತಾಂತ್ರಿಕ ತರಬೇತಿಗೆ (ಒಂದು ಕೋಟಿ ರೂಪಾಯಿ)—ಕೇಂದ್ರವು ಹೀಗೆ ಧನಸಹಾಯವನ್ನು

(೧೧ನೇ ಪುಟ ನೋಡಿರಿ)

ಎ. ಸಿ. ಸಿ. ನೀಲಗಿರಿ **ಸಿಮೆಂಟು**
ಬ್ರಾಂಡ್

ಸದ್ಯಕ್ಕೆ ನಿಮ್ಮ ಕಟ್ಟುವಿಕೆಗೆ ಸಾಲುವಷ್ಟು ದೊರೆಯುತ್ತದೆ

ನಿಮ್ಮ ಆರ್ಡರುಗಳನ್ನು ನಿಮ್ಮ ನಿಕಟವರ್ತಿಯಾದ ಸಿ. ಎಮ್. ಐ. ಸಂಗ್ರಾಹಕ ಅಥವಾ ವ್ಯಾಪಾರಸ್ಥನ ಕಡೆಗಾಗಲಿ, ಇಲ್ಲವೆ
ನೇರಾ
ದಿ ಸಿಮೆಂಟ್ ಮಾರ್ಕೆಟಿಂಗ್ ಕಂಪೆನಿ ಆಫ್ ಇಂಡಿಯಾ ಲಿ.
೯ ಮೌಂಟ್ ರೋಡು, ಮದ್ರಾಸು
೪/೧೩ ರೇಸ್ ಕೋರ್ಸ್ ರೋಡು ಕೊಯಿಮತ್ತೂರು
ಯೂಗರ್ ೮೦ ಬಿಲ್ಡಿಂಗ್ ಬೆಂಗಳೂರು
ಇವರ ಕಡೆಗೆ ಕಳಿಸಿರಿ

ಸಿಮೆಂಟ್ ಕಾಂಕ್ರಿಟ್ ಕಟ್ಟುವಿಕೆಗೆ ಸಂಬಂಧಪಟ್ಟ ಎಲ್ಲ ಪ್ರಶ್ನೆಗಳ ಬಗ್ಗೆ ದೀವು ಕಾಂಕ್ರೀಟ್ ಅಸೋಸಿಯೇಶನ್ ಆಫ್ ಇಂಡಿಯಾ ಇವರ ನಿಶ್ಶುಲ್ಕ ತಾಂತ್ರಿಕ ಸಲಹೆಯನ್ನು ನೀವು ಪಡೆಯಬಹುದು.

ಎಸಿಸಿ
ಸೇಲ್ಸ್ ಮ್ಯಾನೇಜರ್
ದಿ ಸಿಮೆಂಟ್ ಮಾರ್ಕೆಟಿಂಗ್ ಕಂಪೆನಿ ಆಫ್ ಇಂಡಿಯಾ ಲಿಮಿಟೆಡ್

ಕಾಂಗ್ರೆಸು ಚಟುವಟಿಕೆಗಳ ರಂಗಸ್ಥಳ ಕಲ್ಯಾಣಿ

ರಾಷ್ಟ್ರದ ಭದ್ರತೆಗೋಸ್ಕರ ಒಗ್ಗಟ್ಟು ಕಾಯ್ದುಕೊಂಡು ಸ್ವಾವಲಂಬಿಯಾಗಲು ಆಹ್ವಾನ

ನಾವು ಪ್ರತಿದಿನವೂ ಅದ್ಭುತವನ್ನೂ ಚಮತ್ಕಾರವನ್ನೂ ನೋಡಲು ಅಥವಾ ಅಂಥಹದೇನಾದರೂ ಸುದ್ದಿಯನ್ನು ಕೇಳಲು ಸಾಧ್ಯವೇ? ಪ್ರಪಂಚದ ವ್ಯವಹಾರಗಳು ಇಂದು ಮನೆಯೊಳಗಿನ ಮಾತುಗಳೆಂದು ಹೇಳಲಾಗುವಂತೆ ಆಧುನಿಕ ಸೌಕರ್ಯಗಳಿಂದ ಪ್ರತಿಯೊಂದು ದೇಶವೂ ಹತ್ತಿರ ಬಂದಿದ್ದಾಗಲೂ ವಿಶೇಷ ಘಟನೆಗಳ ವಾರ್ತೆಯನ್ನು ಕುತೂಹಲದಿಂದ ನಿರೀಕ್ಷಿಸುತ್ತಿರುವವರಿಗೆ ನಿರಾಶೆಯನ್ನೆದುರಿಸಬೇಕಾಗುತ್ತದೆ. ಇಂತಹದರಲ್ಲಿ—ಕಳೆದ ಎರಡು ವಾರಗಳಲ್ಲಿ ಭಾರತದೊಳಗೆಯೇ ರಾಷ್ಟ್ರೀಯ ಮಹತ್ವದ ಚಟುವಟಿಕೆಗಳು ಬಿಡದೆ ನಡೆದ ಸಮಾಚಾರ ನಮ್ಮ ತವಕವನ್ನು ತಣಿಸುವುದೆಂದು ಭಾವಿಸಲು ಅಡ್ಡಿಯಿಲ್ಲ. ಈ ಚಟುವಟಿಕೆಗಳೆಂದರೆ ಕಲ್ಯಾಣಿಯಲ್ಲಿ ಸೇರಿದ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧಿವೇಶನ ಮತ್ತು ದೇಶದಾದ್ಯಂತ ಸಂಭ್ರಮದಿಂದ ಆಚರಿಸಲಾದ ಪ್ರಜಾರಾಜ್ಯ ದಿನೋತ್ಸವ. ಭಾರತೀಯರ ಪಾಲಿಗಂತೂ ಸರಿಯೇ—ವಿದೇಶೀಯರ ಗಮನವನ್ನೂ ಸೆಳೆದ ಸಂಗತಿಗಳು ಇವಾಗಿರುತ್ತವೆ.

ಸಮಸ್ಯೆಗಳ ವಿಶ್ಲೇಷಣೆ

ವೈಷ್ಣವ ಧರ್ಮದ ಪ್ರಮುಖ ಕೇಂದ್ರವಾಗಿದ್ದು ಸಾವಿರಾರು ಯಾತ್ರಿಕರನ್ನು ಬರಮಾಡಿಕೊಳ್ಳುವ, ಚೈತನ್ಯ ಮಹಾಪ್ರಭುವಿನ ಲೀಲಾಭೂಮಿಯಾಗಿ ಧಾರ್ಮಿಕ ಹಾಗೂ ಸಾಂಸ್ಕೃತಿಕ ಪ್ರಾಮುಖ್ಯತೆಯನ್ನು ಪಡೆದಿರುವ ಕಲ್ಯಾಣಿ ನಗರದಲ್ಲಿ ದೇಶದ ಏಕಮೇವಾದ್ವಿತೀಯವಾದ ಪ್ರಬಲ ರಾಜಕೀಯ ಪಕ್ಷವೆನಿಸಿದ ಕಾಂಗ್ರೆಸ್ಸಿನ ಜನಪ್ರಿಯ ಮುಂದಾಳುಗಳೆಲ್ಲ ಸೇರಿ,ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಪ್ರಶ್ನೆಗಳನೇಕವನ್ನು ಪರಿಶೀಲಿಸಿದರು. ಇವರು ಭಾರತದ ಶಾಂತಿ ಮತ್ತು ಸುವ್ಯವಸ್ಥೆಗಳನ್ನು ಜಾಗರೂಕತೆಯಿಂದ ಕಾಪಾಡಿ ಕೊಳ್ಳುವುದರ ಕಡೆಗೆ ವಿಶೇಷ ಗಮನವನ್ನು ಕೊಟ್ಟುದು,ವ್ಯಕ್ತ ಗೊಳ್ಳುತ್ತದೆ. ಅದೇಕಾಲಕ್ಕೆ ಅಂತಾರಾಷ್ಟ್ರೀಯ ಕ್ಷೇತ್ರದಲ್ಲಿ ಎದ್ದುತೋರುವ ಯುದ್ಧೋತ್ಸಾಹವನ್ನು ಕಂಡು ಭಾರತಕ್ಕೆ ಚಿಂತೆಯುಂಟಾಗಿರುವುದನ್ನೂ ಈ ಅಧಿವೇಶನ ಸ್ಪಷ್ಟಗೊಳಿಸುತ್ತದೆ.

ನೆಹರೂ ಧೋರಣೆ

ಅಧಿವೇಶನದಲ್ಲಿ ಮೊದಲಿಂದ ಕೊನೆಯವರೆಗೂ ತಾನೇತಾನಾಗಿ ಮೆರೆಯುತಿದ್ದ ವ್ಯಕ್ತಿಯೆಂದರೆ ಜವಾಹರಲಾಲ ನೆಹರು ಎಂದೇ ಹೇಳಬೇಕು,ಈ ಮಹಾಜೀವಕ್ಕೆ ಸರಿದೊರೆಯಾದ ಇನ್ನೊಬ್ಬನನ್ನು ಭಾರತ ಪಡೆದು ಕೊಂಡಿಲ್ಲ ಅದ್ವಿತೀಯ ವ್ಯಕ್ತಿತ್ವ ಸಂಪನ್ನರಾದ ನೆಹರೂ ಪ್ರಬಲ ಪಕ್ಷವೊಂದರ ಅಧ್ಯಕ್ಷ ಮತ್ತು ದೇಶದ ಪ್ರಧಾನಿಯೆಂಬ ಮಹತ್ವದ ಹುದ್ದೆಯ ಬಲದಿಂದ ವಿವರಿಸಿದ ಸಮಸ್ಯೆಗಳನ್ನು ಹಾಗು ಸೂಚಿಸಿದ ಪರಿಹಾರ ಮಾರ್ಗವನ್ನು ಉಳಿದೆಲ್ಲ ಜನರು ಮೌನವಾಗಿ ಕೇಳಿಕೊಂಡರು; ಮತ್ತು ಮೆಚ್ಚುಗೆ ವ್ಯಕ್ತಪಡಿಸಿದರು. ಆದ ಕಾರಣ "ಹೊಸತು" ಇದರಲ್ಲಿಲ್ಲವೆಂದು ನಿರಾಸೆಗೊಂಡವರೂ ಕೆಲವರಿರಬಹುದು. ಹೀಗೆ ನೆಹರೂ ತಾನೊಬ್ಬನೇ ಮಾತನಾಡಿದಂತೆ ತೋರಿದರೂ ಸಹ—ಅವರು ದೇಶದ ಕೋಟ್ಯಾಂತರ ಜನತೆಯ ಅಭಿಪ್ರಾಯವನ್ನೆ ಸಮರ್ಪಕ ರೀತಿಯಲ್ಲಿ, ಸಮಂಜಸವಾದ ಮಾತುಗಳಲ್ಲಿ ಬಿಂಬಿಸುತಿದ್ದರೆಂಬ ತೃಪ್ತಿ ಹೆಚ್ಚಾಗಿ ಕಂಡುಬಂದಿದೆ.

ರಾಷ್ಟ್ರದ ಒಗ್ಗಟ್ಟು

ಧ್ವಜಾರೋಹಣದಿಂದ ತೊಡಗಿದ ಕಲ್ಯಾಣಿಯ ಕಾಂಗ್ರೆಸ ಕಾರ್ಯಕ್ರಮ ನೆಹರೂರವರು ಕೊಟ್ಟ ಕರೆಗೆ ಉತ್ತರವಾಗಿ ಭಾರತದ ಶುಭ ಕೋರುವ "ಜಯಹಿಂದ" ಎಂಬ ಅದ್ಭುತ ಉದ್ಗಾರದೊಂದಿಗೆ ಮುಕ್ತಾಯಗೊಂಡಿತು. ಹನಿಹನಿ ಮಳೆ ಬರುತಿದ್ದರೂ ನಸುಕಿನ ಚಳಿ ನಡುಗಿಸುತಿದ್ದರೂ ಧ್ವಜಾರೋಹಣಕ್ಕೆ ನೆರೆದಿದ್ದ ಸಾವಿರಾರು ಜನರನ್ನು ನೋಡಿ ನೆಹರೂ ಕತ್ತಲೆಯಿಂದ ಬೆಳಕಿನೆಡೆಗೆ ದೇಶದ ಜನ ಹೀಗೆಯೇ ಒಗ್ಗಟ್ಟಿನಿಂದ ಸಾಗುವರೆಂಬ ಭರವಸೆಯನ್ನು ಮಾತಿನಲ್ಲಿ ವ್ಯಕ್ತಗೊಳಿಸಿದರು. ಪ್ರಾಸ್ತಾವಿಕ ಭಾಷಣದಲ್ಲಿ ಕತ್ತಲೆಯ ಬೆನ್ನಿಗೆ ಬೆಳಕು ಬರುವುದೆಂದೂ ನೆರಳಿನ ಹಿಂದೆ ಪ್ರಕಾಶವಿದ್ದೇ ಇದೆಯೆಂದೂ ಕಾಂಗ್ರೆಸ್ಸಿನ ಇತಿಹಾಸಕ್ಕೆ ಇದು ಚೆನ್ನಾಗಿ ಅನ್ವಯಿಸುವುದೆಂದೂ ಹೇಳಿದರು. ಕಾಂಗ್ರೆಸು ಬಿಟ್ಟು ಹೋದವರಿಗೆ ಅವರು ಸ್ವಾಗತ ಕೋರಿದರಲ್ಲದೆ—ನಮ್ಮ ತಪ್ಪುಗಳನ್ನೆ ಭೂತಗನ್ನಡಿಯಲ್ಲಿಟ್ಟು ನೋಡುತ್ತಾ ಸಾಧಿಸಿದ ಮಹತ್ಕಾರ್ಯಗಳನ್ನು ಗಮನಿಸದಿರುವ ಪ್ರವೃತ್ತಿ ಹಿತವಲ್ಲವೆಂದು ಖಂಡಿಸಿದರು. ಜಾತೀಯ ಮತ್ತು ಧಾರ್ಮಿಕ ಭಾವನೆಗಳು ರಾಜಕೀಯ ದೃಷ್ಟಿಯನ್ನು ಸಂಕುಚಿತಗೊಳಿಸಲು ಬಿಡಬಾರದೆಂದೂ ರಾಷ್ಟ್ರದ ಒಗ್ಗಟ್ಟಿನ ಪ್ರತೀಕವಾಗಿರುವ ಕಾಂಗ್ರೆಸ್ಸು ಆರ್ಥಿಕ ಸ್ವಾತಂತ್ರ್ಯವನ್ನು ದೇಶಕ್ಕೆ ಒದಗಿಸಿಕೊಡಲು ಉದ್ಯುಕ್ತವಾಗಿರುತ್ತದೆಂದೂ ನೆಹರೂ ಸಾರಿದರು.

ಜನತಾ ಸಂಪರ್ಕ

ನಾವೆಲ್ಲರೂ 'ನೇತಾಜಿ' ಎಂದು ಪ್ರೀತಿಯ ಹೆಸರಿನಿಂದ ಕರೆಯುವ ಸುಭಾಷಚಂದ್ರ ಬೋಸರ ಜನ್ಮದಿನದಂದು ಕಾಂಗ್ರೆಸ್ಸಿನ ಬಹಿರಂಗ ಅಧಿವೇಶನ ಜರಗಿತು. ನೆಹರೂರವರು ನೇತಾಜಿಯ ಪ್ರತಿಮೆಯೊಂದರ ಅನಾವರಣ ಮಾಡುತ್ತಾ ಸುಭಾಷ ಬೋಸರು ರಾಷ್ಟ್ರಕ್ಕೆ ಸಲ್ಲಿಸಿದ ಅಪಾರ ಸೇವೆ ಮತ್ತು ತ್ಯಾಗವೇ ಆದರ್ಶವಾಗಿದ್ದರಿಂದ ಅವರ ಜೀವನವನ್ನು ಸ್ಮರಿಸಿಕೊಂಡರು. ರಾಷ್ಟ್ರದ ಸ್ವಾತಂತ್ರ್ಯಾಂದೋಲನ ಕಾಲದಲ್ಲಿ ಮಡಿದ ಈ ಮಹಾನುಭಾವನನ್ನು ನೆಹರೂ ತಮ್ಮನೆಂದು ವಾತ್ಸಲ್ಯದಿಂದ ಕರೆದರು ಬಹಿರಂಗ ಅಧಿವೇಶನದಲ್ಲಿ ಅಧ್ಯಕ್ಷ ಭಾಷಣ ಮಾಡುತ್ತಾ ನೆಹರೂರವರು ಭಾರತದ ನಿಲುಮೆಯನ್ನು ನಿಃಸಂದಿಗ್ಧವಾದ ಶಬ್ದಗಳಲ್ಲಿ ಲೋಕದ ಎಲ್ಲ ಜನಕ್ಕೆ ಮನವರಿಕೆಯಾಗುವಂತೆ ವರ್ಣಿಸಿದರು. ಯುದ್ಧದ ಅನಾಹುತಗಳ ಕಲ್ಪನೆಯನ್ನವರು ಮಾಡಿಕೊಟ್ಟದಲ್ಲದೆ, ಪಾಕ—ಅಮೇರಿಕ ಮಿಲಿಟರಿ ಒಡಂಬಡಿಕೆ ಭಾರತದ ಮೇಲೆ ಮಾಡಬಹುದಾದ ಪರಿಣಾಮಗಳ ವಿಷಯದಲ್ಲಿ ಸತರ್ಕರಿರುವಂತೆ ಜನರನ್ನು ಎಚ್ಚರಿಸಿದರು. ಅಂತರಿಕ ಭದ್ರತೆಯನ್ನು ಕಾಪಾಡಿಕೊಳ್ಳಲು ನಾವು ಆರ್ಥಿಕ ಬಲವನ್ನು ಸಂಪಾದಿಸಬೇಕೆಂದು ಹೇಳುತ್ತಾ ಅಭಿವೃದ್ಧಿ ಪ್ರಯತ್ನಗಳಲ್ಲಿ ಜನತೆಯ ಸಹಕಾರವನ್ನು ಅವರು ಯಾಚಿಸಿದರು ಅಂತರಿಕ ಭದ್ರತೆಯನ್ನು ಕಾಪಾಡಿಕೊಳ್ಳಲು ನಾವು ಆರ್ಥಿಕ ಬಲವನ್ನು ಸಂಪಾದಿಸಬೇಕೆಂದು ಹೇಳುತ್ತಾ ಅಭಿವೃದ್ಧಿ ಪ್ರಯತ್ನಗಳಲ್ಲಿ ಜನತೆಯ ಸಹಕಾರವನ್ನು ಅವರು ಯಾಚಿಸಿದರು. ಕಾಂಗ್ರೆಸ್ಸಿಗರು ಶಾಸನಾಂಗದಲ್ಲಿ ಭಾಗವಹಿಸುವುದಕ್ಕಿಂತಲೂ ಹೆಚ್ಚಾಗಿ ಜನತಾ ಸಂಪರ್ಕವನ್ನು ಬೆಳೆಸಿಕೊಂಡು, ವಿಧಾಯಕ ಕಾರ್ಯಗಳಲ್ಲಿ ಪ್ರವರ್ತರಾಗುವುದಕ್ಕೆ ಅವರು ಮಹತ್ವ ಕೊಟ್ಟರು.

ಮಹತ್ವದ ಗೊತ್ತುವಳಿ

ವಸಾಹತು ಸಾಮ್ರಾಜ್ಯವಾದವನ್ನು ಖಂಡಿಸುವ, ವರ್ಣದ್ವೇಷದ ಭರ್ತ್ಸನೆ ಮಾಡುವ ರಾಜ್ಯಗಳ ಪುನರ್ವಿಂಗಡಣೆಯ ಪ್ರಶ್ನೆಯನ್ನು ವಿಚಾರಿಸುವ ಆಯೋಗಕ್ಕೆ ಬೆಂಬಲ ಸೂಚಿಸುವ, ದೇಶವನ್ನು ಮರಳಿ ಕಟ್ಟುವ ಕೆಲಸದಲ್ಲಿ ಜನರ ಸಹಕಾರ ಕೋರುವ .ಕೋರಿಯದಲ್ಲಿ ಭಾರತ ನಿರ್ವಹಿಸಿದ ಪಾತ್ರವನ್ನು ಸಮರ್ಥಿಸುವ ಗೊತ್ತುವಳಿಗಳು ಅಧಿವೇಶನದಲ್ಲಿ ಸ್ವೀಕಾರಗೊಂಡವು, ಇದಲ್ಲದೆ ನೆಹರೂರವರೇ ಸ್ವತಃ "ರಾಷ್ಟ್ರಕ್ಕೆ ಆಹ್ವಾನ"ವನ್ನು ನೀಡುವ ವಿಶೇಷ ಗೊತ್ತುವಳಿಯನ್ನು ತಂದು-ರಾಷ್ಟ್ರೀಯ ಐಕ್ಯವನ್ನು ಕಾಪಾಡಿಕೊಳ್ಳುವುದಕ್ಕೂ ಮಿತವ್ಯಯವನ್ನು ಸಾಧಿಸುವುದಕ್ಕೂ ಸ್ವಾವಲಂಭನೆಯ ಮಾರ್ಗದಲ್ಲಿ ಮುನ್ನಡೆಯುವುದಕ್ಕೂ ಜನತೆ ನೊಂಟ ಕಟ್ಟಬೇಕೆಂದು ಕರೆಕೊಟ್ಟರು.

ಸಮಾರೋಪ ಭಾಷಣ

ಅಧಿವೇಶನ ಕಾಲದಲ್ಲಿ ಮಹಿಳಾ ಸಭೆ ಮುಂತಾದವುಗಳು ಜರಗಿ ನೆಹರೂ ಅದರಲ್ಲಿ ಭಾಗವಹಿಸಿದರು ಸ್ವಾತಂತ್ರ್ಯೋತ್ತರ ಕಾಲದಲ್ಲಿ ಕಾಂಗ್ರೆಸು ನಿರ್ವಹಿಸಬೇಕಾದ ಹೊಣೆಗಾರಿಕೆಗಳಲ್ಲಿ ಸ್ತ್ರೀಯರು ಸ್ವಸಂತೋಷದಿಂದ ಹೆಚ್ಚು ಹೆಚ್ಚಾಗಿ ಭಾಗವಹಿಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನೆಹರೂ ಹೇಳಿದರು ತರುಣರು ಶಾಂತಿ ಮತ್ತು ಶಿಸ್ತಿನಿಂದ ಕೂಡಿದ್ದು ವಿಧಾಯಕ ಮನೋಭಾವವನ್ನು ಬೆಳೆಸಿಕೊಳ್ಳಬೇಕೆಂದು ಅಭಿಪ್ರಾಯಪಟ್ಟರು. ಕಾಂಗ್ರೆಸು ಅಧಿವೇಶನದ ಸಮಾರೋಪ ಭಾಷಣ ಮಾಡುತ್ತಾ ಸಂದಿಗ್ಧ ಹಾಗು ಸಂಕಟ ಪರಿಸ್ಥಿತಿಯು ಭಾರತದ ಮುಂದಿರುವ ಈ ವಿಶಿಷ್ಟ ಗಳಿಗೆಯಲ್ಲಿ ಕಾಂಗ್ರೆಸಿನ ಮೇಲೆ ಬಿದ್ದಿರುವ ಜವಾಬ್ದಾರಿಯನ್ನು ಹೊತ್ತು ಸಾಗಬೇಕೆಂದೂ ಕ್ಷುಲ್ಲಕ ವಿಚಾರಗಳಲ್ಲಿ ಆಸ್ಥೆ ವಹಿಸಿ ಮಹಾಕಾರ್ಯಗಳಿಂದ ಪರಾವೃತ್ತರಾಗಕೂಡದೆಂದೂ ಸ್ಫೂರ್ತಿಯಿಂದ ಕಲ್ಯಾಣ ರಾಷ್ಟ್ರವನ್ನು ಕಟ್ಟುವುದೇ ಕಲ್ಯಾಣಿಯ ಕಾಂಗ್ರೆಸ್ಸಿನ ಸಂದೇಶವಾಗಿರುತ್ತದೆಂದೂ ಪುನರುಚ್ಚರಿಸಿದರು

The Canara Industrial & Banking Syndicate, Ltd.,
Head Office: UDIPI.

NOTICE

Is hereby given that the Register of Members and Share Transfer Books of the Syndicate will remain closed from 11th February, 1954 to 11th March, 1954, both days inclusive.

(By order of the Board)

Head Office, 31st January, 1954.

T. M. A. Pai,
Managing Director.

ಮುಖ್ಯ ಪ್ರಕಟಣೆ

"ಆನಂದ ಸುಧ" ನಮ್ಮ ಆನಂದ ಸುಧ ಸುಮಸ್ತ ಜನಗಳಿಗೆ ಬಲವನ್ನು ಮಿಂದ ಪುಷ್ಟಿಯನ್ನು ಕಲಗಿಸುವುದು. ಅನೇಕ ವ್ಯಾಧಿಗಳನ್ನು ನಾಶಮಾಡುತ್ತೆ. ೧೫ ದಿನಗಳಿಗೆ ಸರಿಹೋಗುವ ೮ ಔ. ಸೀಸೆ ೧ಕ್ಕೆ ರೂ. ೩—೦—೦.

"ಸ್ತ್ರೀ ಸುಧ" ನಮ್ಮ ಸ್ತ್ರೀ ಸುಧ ಸ್ತ್ರೀಯರಿಗೆ ಸಂಭವಿಸುವ ಸಮಸ್ತ ಗರ್ಭಾಶಯ ವ್ಯಾಧಿಗಳನ್ನು ಋತು ದೋಷಗಳನ್ನು, ಋತು ಶೂಲೆ, ಸರಿಯಾಗಿ ಬಹಿಷ್ಠೆ ಆಗದಿರುವುದು ಮೊದಲಾದ ಸಮಸ್ತ ವ್ಯಾಧಿಗಳನ್ನು ನಾಶಮಾಡುವುದು. ಸಂತಾನವನ್ನು ಕಲಿಗಿಸುವುದು. ಒಂದು ತಿಂಗಳಿಗೆ ಸರಿಹೋಗುವ ೧ ತೊಲದ ಔಷಧಿ ರೂ. ೪—೦—೦.

"ಬಾಲ ಸುಧ" ಇದು ಸಣ್ಣ ಬಾಲಕರಿಗೆ ಅಜೀರ್ಣ, ಜ್ವರ, ಕೆಮ್ಮು, ಶೀತ, ಮಲಬದ್ಧತೆ, ಹೆಚ್ಚಾಗಿ ಭೇದಿ ಆಗುವಿಕೆ, ಮಕ್ಕಳು ಕ್ಷೀಣವಾಗಿ ಕೈಕಾಲು ಸಣ್ಣವಾಗುವಿಕೆ, ಲಿವರ್ ಬೆಳೆಯುವುದು, ಈ ಎಲ್ಲಾ ವ್ಯಾಧಿಗಳಿಗೆ ಪಚ್ಚಾಯುಧವಾಗಿದೆ. ಹೀಗಿರುವ ಔಷಧಿ ಇನ್ನೊಂದು ಇಲ್ಲವೆಂದು ಹೇಳಬಹುದು. ಈ ಔಷಧಕ್ಕೆ ಮಿತಿ ಇಲ್ಲದ ಯೋಗ್ಯತಾ ಪತ್ರಗಳನ್ನು ಪಡೆದಿರುವದಲ್ಲದೆ ದೇಶದಲ್ಲಿ ಅನೇಕ ವಿಧದಲ್ಲಿ ಅಭಿವೃದ್ಧಿಯಾಗಿರುತ್ತದೆ. ಸುಮಾರು ೧ ತಿಂಗಳಿಗೆ ಸರಿ ಹೋಗುವ ೩೦ ಮಾತ್ರೆಗಳ ಸೀಸೆ ೧ಕ್ಕೆ ರೂ. ೧—೦—೦.

ಹೆಡ್ಡಾಫೀಸ್:

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್, ರಾಜಮಂಡ್ರಿ.

ಬೆಂಗಳೂರು ವಿಜನ್ಸಿ:

ಸುದರ್ಶನ ಆಯುರುವೇದ ವೈದ್ಯಶಾಲ, ನಗರ್ತರ ಪೇಟೆ, ಬೆಂಗಳೂರು-2.

ಧರ್ಮಾರ್ಥ—ಮುಕ್ತಿ

ಒಂದು ಸಾವಿರ ಕಾಶ್ಮೀರಿ ಶಾಲುಗಳನ್ನು ಧರ್ಮಾರ್ಥ ಹಂಚುತ್ತಲಿದ್ದೇವೆ. ಬೇಗನೆ ಬರೆಯಿರಿ. ವಿಳಂಬವಾದರೆ ನಿರಾಶರಾಗುವಿರಿ.

Diamond Commercial
Chambers (N.U.)
Bhandari Street, BOMBAY—3

ಪ್ರಜಾರಾಜ್ಯ ದಿನೋತ್ಸವದ ಸಂಭ್ರಮ

ಅಭಿವೃದ್ಧಿ ಪ್ರಯತ್ನಗಳಲ್ಲಿ ಸಂಪೂರ್ಣ ಸಹಕರಿಸಲು ಜನತೆಗೆ ಬಿನ್ನಹ

ಒಳ್ಳೆಯ ಉತ್ಸಾಹದಿಂದಲೂ ತುಂಬಿದ ಸಂಭ್ರಮದಿಂದಲೂ ಭಾರತದ ಆದ್ಯಂತ ಪ್ರಜಾರಾಜ್ಯೋತ್ಸವವು ಈ ವರ್ಷ ಜರಗಿಸಲ್ಪಟ್ಟಿತು. ದೊಡ್ಡ ನಗರಗಳಲ್ಲಂತೂ ಸರಿಯೇ–ಹಳ್ಳಿ ಹಳ್ಳಿಗಳಲ್ಲೂ ಭಾರತವು ಸಂಪೂರ್ಣ ಸ್ವಾತಂತ್ರ್ಯದ ಗುರಿಮುಟ್ಟಿದ ಈ ಪವಿತ್ರ ದಿನಾಚರಣೆಯು ಚೊಕ್ಕ ರೀತಿಯಲ್ಲಿ ನಡೆಯಿತು. ದೇಶಕ್ಕೆ ಮುಕುಟ ಪ್ರಾಯವಾದ ಹೊಸ ದೆಹಲಿಯಲ್ಲಿ ಪರಂಪರಾಗತವಾದ ವೈಭವ ಮತ್ತು ಆಡಂಬರಗಳಿಂದಲೂ ಮನಸ್ಸಿಗೆ ಆಹ್ಲಾದವನ್ನುಂಟು ಮಾಡುವ ಕಾರ್ಯಕ್ರಮಗಳಿಂದಲೂ ಪ್ರಜಾರಾಜ್ಯ ದಿನಾಚರಣೆ ನೆರವೇರಿತು. ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ಪ್ರಾತಃಕಾಲ ಕವಾಯತಿನ ವಂದನೆಯನ್ನು ಸ್ವೀಕರಿಸಿದರು. ಪ್ರಧಾನ ಮಂತ್ರಿ ನೆಹರು, ಮಂತ್ರಿ ಮಂಡಳದ ಇತರ ಸದಸ್ಯರು, ವಿದೇಶಗಳ ರಾಯಭಾರಿ ವರ್ಗ, ಮತ್ತು ಪ್ರತಿಷ್ಠಿತ ಅತಿಥಿಗಳು ಇದನ್ನು ನಿರೀಕ್ಷಿಸಿದರು. ಸಾಯಂಕಾಲ ರಾಷ್ಟ್ರಪತಿಗಳು ಏರ್ಪಡಿಸಿದ್ದ ಸತ್ಕಾರ ಕೂಟದಲ್ಲಿ ಭೂತಾನದ ಮಹಾರಾಜ ಮತ್ತು ಮಹಾರಾಣಿ, ಬ್ರಿಟನದ ಅರ್ಥ ಮಂತ್ರಿ ಶ್ರೀ ಆರ್. ಎ. ಬಟ್ಲರ, ಸೋವಿಯೆಟ ರಶಿಯಾದ ಸಾಂಸ್ಕೃತಿಕ ಶಿಷ್ಟ ಮಂಡಳದ ಸದಸ್ಯರು, ಇಜಿಪ್ತದ ಮಿಲಿಟರಿ ಹಾಗು ಪತ್ರಿಕಾ ಶಿಷ್ಟ ಮಂಡಳಗಳ ಸದಸ್ಯರು ಮೊಂತಾಗಿ ಐದು ಸಾವಿರ ಅತಿಥಿಗಳು ಭಾಗವಹಿಸಿದ್ದರು. ರಾತ್ರಿಯ ದೀಪೋತ್ಸವವು ರಮಣೀಯವಾಗಿದ್ದಿತು.

ಶುಭಾಶಯಗಳು

ಪ್ರಜಾರಾಜ್ಯ ದಿನೋತ್ಸವದ ಈ ಶುಭ ಸಂದರ್ಭದಲ್ಲಿ ಭಾರತದ ಜನತೆಗೆ ಮತ್ತು ಸರಕಾರಕ್ಕೆ ಉತ್ತರೋತ್ತರ ಶ್ರೇಯಸ್ಸನ್ನು ಕೋರುವ ಮತ್ತು ಶಾಂತಿ–ಸ್ನೇಹಗಳ ಸಂಬಂಧವನ್ನು ಇನ್ನಷ್ಟು ದೃಢಗೊಳಿಸುವ ಸಂದೇಶಗಳು ಜಗತ್ತಿನ ರಾಷ್ಟ್ರಗಳಿಂದ ಬಂದಿದ್ದವು. ರಶಿಯಾದ ಪ್ರಧಾನಿ ಮೆಲೆಂಕೋವ, ಕಮ್ಯುನಿಸ್ಟ ಚೀನಾದ ಅಧ್ಯಕ್ಷ ಮಾವೋ ಮತ್ತು ಪ್ರಧಾನಿ ಚಾಎನ್‌ಲ್ಯಾಯ, ಅಮೇರಿಕದ ಅಧ್ಯಕ್ಷ ಐಸೆನಹೋವರ ಇವರು ಸಹ ಹಾರ್ದಿಕ ಶುಭಾಶಯಗಳನ್ನು ಕಳಿಸಿ ಪ್ರಜಾರಾಜ್ಯದ ಪ್ರಗತಿಗೆ ಸಂತೋಷ ಸೂಚಿಸಿದರು. ರಾಷ್ಟ್ರಪತಿಗಳು ಭಾರತದ ಜನತೆಗೆ ಕೊಟ್ಟ ಸಂದೇಶದಲ್ಲಿ "ಇದು ಸಂತೋಷ ಪಡುವ ದಿನವೆಂಬುದು ನಿಜ; ಆದರೂ ದೇಶ ಸೇವೆಗೋಸ್ಕರ ಜೀವ ಮುಡಿಪಾಗಿಡುವೆವೆಂದು ಪ್ರತಿಜ್ಞೆ ಮಾಡುವ ದಿನವೂ ಇದಾಗಿರುತ್ತದೆ" ಎಂದರು.

ಆಕಾಶವಾಣಿ ಭಾಷಣ

ರಾಷ್ಟ್ರಪತಿಗಳು ಗಣರಾಜ್ಯದ ನಾಲ್ಕು ವರ್ಷಗಳ ಪ್ರಗತಿ ಚಿತ್ರವನ್ನು ತುಲನಾತ್ಮಕವಾಗಿ ವರ್ಣಿಸುತ್ತಾ ಆಕಾಶವಾಣಿ ಭಾಷಣವನ್ನು ಈ ಸಂದರ್ಭದಲ್ಲಿ ಮಾಡಿದರು. ಪಂಚವಾರ್ಷಿಕ ಯೋಜನೆಯ ವಿವಿಧ ಕಾರ್ಯಕ್ರಮಗಳನ್ನು ವರ್ಣಿಸಿ ಅದು ಮುಂದೊತ್ತುತ್ತಿರುವ ಬಗೆಯನ್ನು ಕಂಡು ತೃಪ್ತಿಯನ್ನು ವ್ಯಕ್ತಗೊಳಿಸಿದರು. ವಿಶೇಷವಾಗಿ ಆಹಾರ ಪರಿಸ್ಥಿತಿಯು ಊರ್ಜಿತಗೊಳ್ಳುತ್ತಿರುವುದಕ್ಕೆ ರಾಷ್ಟ್ರಪತಿಗಳು ಸಂತೋಷಪಟ್ಟರು. "ನಮ್ಮ ದೇಶವು ವಿಶಾಲವಾಗಿರುತ್ತದೆ; ಸಮಸ್ಯೆಗಳು ದೊಡ್ಡದಾಗಿರುತ್ತವೆ. ಸರಕಾರಕ್ಕೆ ಜನತೆಯ ಸಂಪೂರ್ಣ ಸಹಾನುಭೂತಿ ಮತ್ತು ಸಹಕಾರಗಳು ದೊರೆಯದೆ ಪ್ರಗತಿಯ ಹೆಜ್ಜೆಯಲ್ಲಿ ಮುನ್ನಡೆಯುವುದು ಕಷ್ಟ" ಎಂದು ರಾಷ್ಟ್ರಪತಿಗಳು ಹೇಳಿದರು.

ರಾಜಾಜಿಯ ವಿನಂತಿ

ಜನರೆಲ್ಲರೂ ಶ್ರಮಪಟ್ಟು ರಚನಾತ್ಮಕ ಕೆಲಸಗಳಲ್ಲಿ ಮಗ್ನರಾಗಬೇಕೆಂದೂ ಶೀಲವನ್ನು ಸಂವರ್ಧಿಸಿಕೊಂಡು ಸ್ವಾವಲಂಬಿಯಾದ ಆಜೇಯ ರಾಷ್ಟ್ರವನ್ನು ಕಟ್ಟಬೇಕೆಂದೂ ಮದ್ರಾಸಿನ ಮುಖ್ಯ ಮಂತ್ರಿ ಶ್ರೀ ರಾಜಗೋಪಾಲಾಚಾರಿಯವರು ಪ್ರಜಾರಾಜ್ಯ ದಿನದಂದು ಸಾರ್ವಜನಿಕ ಭಾಷಣ ಕಾಲದಲ್ಲಿ ವಿನಂತಿ ಮಾಡಿದರು. ಮದ್ರಾಸಿನ ಐಲೇಂಡ ಗ್ರೌಂಡದಲ್ಲಿ ಗವರ್ನರ ಶ್ರೀ ಪ್ರಕಾಶರು ರಾಜ್ಯದ ರಕ್ಷಣಾ ದಳ, ಪೋಲೀಸು ದಳ, ಮತ್ತು ವಿಶೇಷ ಶಸ್ತ್ರಸಜ್ಜಿತ ಪೋಲೀಸ ಪಡೆಗಳ ವಂದನೆಯನ್ನು ಸ್ವೀಕರಿಸಿದರು. ರಾಜಭವನದಲ್ಲಿ ಸತ್ಕಾರಕೂಟವನ್ನು ಏರ್ಪಡಿಸಿದ್ದರು.

ಸಾಂಸ್ಕೃತಿಕ ವೈಶಿಷ್ಟ್ಯ

ಭಾರತದ ಜಾನಪದ ಸಂಸ್ಕೃತಿಯ ವೈಭವವನ್ನು ನೃತ್ಯ ಮಂದ್ರಗಳಲ್ಲಿ ಮತ್ತು ಹಾಡುಗಬ್ಬಗಳಲ್ಲಿ ಪ್ರದರ್ಶಿಸುವ ವಿಶೇಷ ಏರ್ಪಾಡು ರಾಜಧಾನಿಯಾದ ಹೊಸ ದೆಹಲಿಯಲ್ಲಿ ಏರ್ಪಟ್ಟಿತು. ಪ್ರಜಾರಾಜ್ಯೋತ್ಸವಕ್ಕೆ ಜಾನಪದ ಕಲಾವಿದರ ನೃತ್ಯ ಕಾರ್ಯಕ್ರಮವು ವಿಶೇಷ ಕಳೆಯನ್ನು ಕೊಟ್ಟಿತು. ಸುಮಾರು ೭೦೦ ಜನಪದ ಕಲಾವಿದರ ೧೭ ತಂಡಗಳು ಹಳ್ಳಿಯ ನೈಜ ಚಿತ್ರವನ್ನು ನಗರದ ರಸಿಕರ ಮುಂದಿಟ್ಟು ಕಣ್ಮನಗಳ ತೃಷೆಯನ್ನು ತಣಿಸಿದವು. ಪ್ರಧಾನಿ ನೆಹರೂರವರು ಈ ಕಲಾವಿದರನ್ನು ತುಂಬ ಗೆಲವಿನಿಂದಲೂ ನಗುವಿನಿಂದಲೂ ಮಾತನಾಡಿಸಿ, ಬಹುಮಾನವನ್ನು ನೀಡಿದರು.

ಗಾಂಧೀಜಿಯ ನೆನಪು

ಮಹಾತ್ಮಾ ಗಾಂಧೀಜಿಯವರ ಪುಣ್ಯದಿನವು ಪ್ರಜಾರಾಜ್ಯದ ಬೆನ್ನಿಗೆಯೇ ಆಚರಿಸಲ್ಪಟ್ಟಿತು. ನೆಹರೂರವರು ಈ ಸಂದರ್ಭದಲ್ಲಿ ದಿಲ್ಲಿ ಪ್ರಾದೇಶಿಕ ಕಾಂಗ್ರೆಸ ಸಮಿತಿಯು ಏರ್ಪಡಿಸಿದ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುತ್ತ "ಮಹಾತ್ಮರು ಹುತಾತ್ಮರಾದ ಈ ದಿನದಂದು ನಾವು ಕಣ್ಣೀರು ಸುರಿಸಿದರೆ ಅದಕ್ಕೆ ಅರ್ಥವಿಲ್ಲ. ನಾವು ಅವರ ಜೀವನದ ಆದರ್ಶವನ್ನು ನೆನೆದು ಸ್ವಾತಂತ್ರ್ಯ ಸಂಪಾದಿಸುವಂತೆ ಜನತೆಯಲ್ಲಿ ಸ್ಫೂರ್ತಿ ಉತ್ಸಾಹಗಳನ್ನು ಉಕ್ಕೇರಿಸಿದ ಅವರ ತತ್ವಗಳ ಅಧ್ಯಯನ ಮಾಡಬೇಕು. ಗಾಂಧೀಜಿಯವರು ಪ್ರಾರಂಭಿಸಿದ ಕೆಲಸ ಇನ್ನೂ ಪೂರ್ಣವಾಗಿಲ್ಲ—ರಾಜಕೀಯ ಸ್ವಾತಂತ್ರ್ಯದಿಂದ ಆರ್ಥಿಕ ಸ್ವಾತಂತ್ರ್ಯವನ್ನು ಗಳಿಸಲು ನಾವು ಮುನ್ನಡಿ ಇಡುತ್ತಾ, ಪ್ರತಿಯೊಂದು ಪರೀಕ್ಷಾ ಪ್ರಸಂಗವನ್ನು ಧೈರ್ಯದಿಂದ ಎದುರಿಸಿ ತೀರ್ಗಡೆ ಹೊಂದೋಣ" ಎಂದರು. ಅಮೇರಿಕೆಯು ಪಾಕಿಸ್ತಾನಕ್ಕೆ ಕೊಡಲಿರುವ ಸೈನಿಕ ಸಹಾಯವು ಇನ್ನೊಂದು ಮಹಾ ಯುದ್ಧಕ್ಕೆ ನಾಂದಿಯಾಗಿದೆಯೆಂದು ನೆಹರೂ ಜನರನ್ನು ಎಚ್ಚರಿಸಿದರು. "ಮಹಾತ್ಮ ಗಾಂಧೀಯವರು ಬದುಕಿದ್ದರೆ ನಾವು ಯಾವುದೇ ಗುಂಪಿನ ಕಡೆಗೆ ಒಲಿಯಬಾರದೆಂದೇ ನಮಗೆ ಸಲಹೆ ನೀಡುತ್ತಿದ್ದರು" ಎಂಬುದಾಗಿ ನೆಹರೂ ತಿಳಿಸಿದರು.

"ಭಾರತ ವಾಣಿ"

ರಾಜಘಾಟಿನಲ್ಲಿ ಜನರು ತಂಡತಂಡವಾಗಿ ಬಂದು ಗಾಂಧೀಜಿಯವರ ಸಮಾಧಿಗೆ ಗೌರವ ತೋರಿಸುತಿದ್ದರು. ರಾಷ್ಟ್ರಪತಿ ರಾಜೇಂದ್ರ ಪ್ರಸಾದ, ನೆಹರೂ ಮುಂತಾದವರೂ ರಾಮಧ್ಯಾನ, ಸಾಮೂಹಿಕ ಸೂತ್ರಯಜ್ಞ ಮುಂತಾದ ಕಾರ್ಯಕ್ರಮಗಳಲ್ಲಿ ಭಾಗವಹಿಸಿದರು. ಅಂದು ಗಾಂಧಿ ಸ್ಮಾರಕ ಸಮಿತಿಯವರು ಬಾಪೂಜಿಯ ಜೀವನ ಪ್ರಸಂಗಗಳನ್ನು ಆಯ್ದುಕೊಂಡು ರಚಿಸಿದ "ಭಾರತ ವಾಣಿ" ಎಂಬ ಸಾಕ್ಷಿ ಚಿತ್ರವು ಡಾ. ರಾಧಾಕೃಷ್ಣನ್ನರ ಅಧ್ಯಕ್ಷತೆಯಲ್ಲಿ ಪ್ರದರ್ಶಿಸಲ್ಪಟ್ಟಿತು. ಮಹಾತ್ಮರು ಇದ್ದಾಗ ತೆಗೆದುಕೊಂಡ ಚಲಚಿತ್ರ ಮತ್ತು ಭಾವಚಿತ್ರಗಳ ಸಹಾಯದಿಂದ ಇದನ್ನು ತಯಾರಿಸಿದ್ದು, ಸಂಪೂರ್ಣ ಸ್ವಾತಂತ್ರ್ಯದ ಗೊತ್ತುವಳಿಯನ್ನು ಸ್ವೀಕರಿಸಿದ ಲಾಹೋರ ಕಾಂಗ್ರೆಸ ಅಧಿವೇಶನ, ೧೯೩೦ರ ಉಪ್ಪಿನ ಸತ್ಯಾಗ್ರಹ, ಗಾಂಧೀ–ಇರ್ವಿನ ಒಪ್ಪಂದ, ಕರಾಚಿ ಕಾಂಗ್ರೆಸು, ದುಂಡುಮೇಜಿನ ಪರಿಷತ್ತು, ರೋಮಾರೋಲಾರೊಡನೆ ಸಂದರ್ಶನ ಮುಂತಾದ ಘಟನೆಗಳು ಇದರಲ್ಲಿ ಚಿತ್ರೀಕರಿಸಲ್ಪಟ್ಟಿವೆ.

ಕಾಂಗ್ರೆಸು ಪ್ರಚಾರ

ತಿರುಕೊಚ್ಚಿಯಲ್ಲಿ ಕಾಂಗ್ರೆಸ ಚುನಾವಣಾ ಪ್ರಚಾರೋದ್ದೇಶದಿಂದ ನೆಹರೂರವರು ಈ ತಿಂಗಳ ಮಧ್ಯ ಭಾಗದಲ್ಲಿ ಸಂಚಾರ ಕಾರ್ಯಕ್ರಮವನ್ನು ಇಟ್ಟುಕೊಂಡಿರುವರು. ಮುಂಬಯಿಯ ಮುಖ್ಯಮಂತ್ರಿ ಶ್ರೀ ಮೊರಾರಜಿ ದೇಸಾಯರು ಕಳೆದ ವಾರ ತಿರುಕೊಚ್ಚಿಯಲ್ಲಿ ಅನೇಕ ಚುನಾವಣಾ ಪ್ರಚಾರ ಭಾಷಣಗಳನ್ನು ಮಾಡಿದರು. ಕಾಂಗ್ರೆಸ್ಸಿನ ಉನ್ನತ ತತ್ವಾದರ್ಶಗಳಲ್ಲಿ ಭರವಸೆ ಇಟ್ಟು, ತಮಗೆ ದೊರೆತ ಮತ ಕೊಡುವ ಅಧಿಕಾರವನ್ನು ಸದುಪಯೋಗ ಗೊಳಿಸಬೇಕೆಂದು ಅವರು ವಿನಂತಿಸಿದರು. ದೇಶವು ಪ್ರತಿಗಾಮಿ ಶಕ್ತಿಗಳ ಕೈಗೆ ಬೀಳದಂತೆ ದಕ್ಷತೆ ವಹಿಸುವ ಕುರಿತು ಅವರು ಸಲಹೆ ಮಾಡಿದರು.

ಆಂಧ್ರದಲ್ಲಿ

ಆಂಧ್ರ ಸರಕಾರವು ಗಡಿಪ್ರದೇಶದಲ್ಲಿ ಅಕ್ಕಿ, ಭತ್ತ ಮತ್ತು ತಜ್ಜನ್ಯ ಆಹಾರ ವಸ್ತುಗಳ ಕಳ್ಳ ಸಾಗಾಟವನ್ನು ನಿಯಂತ್ರಿಸುವ ಉದ್ದೇಶದಿಂದ ಒಂದು ಕಾಯಿದೆ ಮಾಡಿರುವುದು. ಅಪ್ಪಣೆ ಚೀಟಿ ಇಲ್ಲದೆ ಯಾರೊಬ್ಬನೂ ಅರ್ಧ ಮಣಕ್ಕಿಂತ ಹೆಚ್ಚಿಗೆ ಮೇಲಿನ ಪದಾರ್ಥಗಳನ್ನು ಕೊಂಡು ಹೋಗಬಾರದೆಂದು ಈ ಆಜ್ಞೆ ವಿಧಿಸುತ್ತದೆ.

PLACE YOUR LIFE ASSURANCE WITH A COMPANY OF YOUR OWN - - -

Established in 1929, the POPULAR is progressing on sound lines It has built up for itself a record of efficient service sound investment and a personal touch with its Policy holders and Representatives At whatever stage We welcome yours association with the POPULAR

THE
POPULAR INSURANCE CO. LTD.
"POPULAR BUILDINGS" MANGALORE-1

ಚ್ಯವನಪ್ರಾಶ

[illegible]

ಕಾಲಿಕಮಾಲಿ ಆಯುರ್ವೇದ ಫಾರ್ಮಸಿ, ಋಷಿಕೇಶ (ದೆಹರಾಡೂನ್)
Kali Kamali Ayurved Pharmacy. RISHIKESH Dehradun

ಅಖಿಲ ಭಾರತ

ಖಾದೀ, ಗ್ರಾಮೋದ್ಯೋಗ ಮತ್ತು ಒಕ್ಕಲತನ

ಪ್ರದರ್ಶನ

ಹುಬ್ಬಳ್ಳಿ, ತಾ. ೧-೩-೧೯೫೪ ರಿಂದ ೧೦ ದಿನಗಳು.

(ಮುಂಬಯಿ ಗ್ರಾಮೋದ್ಯೋಗ ಸಮಿತಿಯಿಂದ ಏರ್ಪಡಿಸಿದೆ.)

ನ ವ ಯು ಗ

ಉಡುಪಿ, ಗುರುವಾರ ೪-೨-'೫೪

ಶಿಸ್ತು ಮತ್ತು ಐಕ್ಯದ ಮಂತ್ರ

ಭಾರತವು ತನ್ನದೇ ಆದ ನೀತಿ ಮತ್ತು ಧೋರಣೆಗಳನ್ನು ಅನುಸರಿಸಿಕೊಂಡು ದೇಶದಲ್ಲಿ ಪ್ರಗತಿಯ ಭದ್ರ ಪೀಠದ ಬುನಾದಿಯನ್ನು ಹಾಕುವುದರಲ್ಲಿಯೂ ಅಂತಾರಾಷ್ಟ್ರೀಯ ಕ್ಷೇತ್ರದಲ್ಲಿ ದ್ವೇಷವನ್ನು ಕಡಿಮೆಮಾಡಿ ಶಾಂತಿ ನೆಲೆಗೊಳಿಸುವುದರಲ್ಲಿಯೂ ಉದ್ಯುಕ್ತವಾಗಿರುವುದು ಸರ್ವಶ್ರುತವಿದೆ. ಪಕ್ಷಪಾತ ಮತ್ತು ಆಧುನಿಕ ರಾಜಕಾರಣದ ಕೊಳೆ ಹೊಲಸುಗಳಿಂದ ದೂರವಿದ್ದುಕೊಂಡು ಘನವಾದ ಪವಿತ್ರವಾದ ಉದ್ದೇಶಗಳಿಗೋಸ್ಕರ ಭಾರತೀಯರು ಶ್ರಮಿಸುತ್ತಿರುವುದನ್ನು ಪ್ರಶಂಸಿಸಿ ಬುದ್ಧಿಜೀವಿಗಳು ನಮ್ಮನ್ನು ಪ್ರೋತ್ಸಾಹಿಸುತ್ತಿರುವರು. ಇತ್ತೀಚಿನ ಉದಾಹರಣೆಯಾಗಿ ಬ್ರಿಟನ್ನದ ಅರ್ಥ ಸಚಿವ ಶ್ರೀ ಬಟ್ಲರರು ಮತ್ತು ಕೂಲಿಕಾರ ಪಕ್ಷದ ಧುರೀಣ ಆ್ಯಟ್ಲಿ ಸಾಹೇಬರು ಹೊರಡಿಸಿದ ಉದ್ಗಾರಗಳನ್ನು ನೆನೆಯಬಹುದು—ಆಹಾರೋತ್ಪಾದನೆ, ಪಂಚ ವಾರ್ಷಿಕ ಯೋಜನೆಯ ಕಾರ್ಯಾಚರಣೆ ಮತ್ತು ಹಣದುಬ್ಬರದ ನಿಯಂತ್ರಣದಲ್ಲಿ ಭಾರತ ಯಶಸ್ವಿಯಾಗಿರುವುದೆಂದೂ ಕಾಮನವೆಲ್ಥ ರಾಷ್ಟ್ರಗಳಿಗಷ್ಟೇ ಅಲ್ಲ—ಬ್ರಿಟನಿಗೆ ಸಹ ಮಾದರಿಯಾಗಿದೆಯೆಂದೂ ಬಟ್ಲರರು ಹೇಳಿದರು. ಭಾರತದಂತಹ ವಿಶಾಲ ರಾಷ್ಟ್ರದಲ್ಲಿ ಅನೇಕ ಮುಖವಾದ ಸಂಸ್ಕೃತಿ ವೈವಿಧ್ಯವುಳ್ಳ ಜನರನ್ನು ರಾಷ್ಟ್ರೀಯ ಐಕ್ಯದ ಮಂತ್ರದಿಂದ ಒಗ್ಗಟ್ಟಿನಲ್ಲಿರಿಸಲು ತೋರ್ಪಡಿಸುವ ಉತ್ಸಾಹ ಉತ್ತೇಜಕವಾಗಿದೆಯೆಂದೂ ಅವರು ಹೇಳಿದರು. ಪೂರ್ವ ಪಶ್ಚಿಮ ರಾಷ್ಟ್ರಗಳು ಪರಸ್ಪರರನ್ನು ಅರ್ಥಮಾಡಿಕೊಳ್ಳುವಂತೆ ತಿಳಿಸಿ ಹೇಳುವ ಮಹತ್ವದ ಕೆಲಸವನ್ನು ಭಾರತ ನಿರ್ವಹಿಸುತ್ತಿದೆಯೆಂದೂ ಪ್ರಜಾರಾಜ್ಯವಾದ ಭಾರತ ತತ್ವಜ್ಞಾನವನ್ನು ನಿತ್ಯ ವ್ಯವಹಾರದಲ್ಲಿ ಅಳವಡಿಸಿಕೊಂಡ ಮಹಾದೇಶವೆಂದೂ ಆ್ಯಟ್ಲಿಯವರು ಅಭಿಪ್ರಾಯ ಪಟ್ಟರು. ಪರಂಪರೆಯ ಈ ವೈಶಿಷ್ಟ್ಯದ ಹಿನ್ನೆಲೆಯಲ್ಲಿ ಭಾರತದ ಪ್ರಚಲಿತ ಸಮಸ್ಯೆಗಳನ್ನೂ ಪರಸ್ಪರರನ್ನು ಎತ್ತಿಕಟ್ಟುವ ಪ್ರವೃತ್ತಿ ಪ್ರಬಲಿಸಿದ ಅಂತಾರಾಷ್ಟ್ರೀಯ ರಾಜಕಾರಣದ ಕ್ಷೇತ್ರದಲ್ಲಿ ಭಾರತ ವಹಿಸಬೇಕಾದ ಪಾತ್ರವನ್ನೂ ನಾವು ವಿಮರ್ಶಿಸಿದರೆ—ನಾವಿಂದು ಸಂಕಟಮಯ ಕಾಲದಲ್ಲಿದ್ದೇವೆಂದು ತೋರುತ್ತವೆ. ಪಾಕಿಸ್ತಾನದೊಡನೆ ಭಾರತದ ಸಂಬಂಧ ಊರ್ಜಿತ ಹೊಂದುವ ಬದಲು ದಿನದಿನಕ್ಕೆ ಕೆಡುತ್ತಾ ಸಾಗಿರುವುದೂ ದೊಡ್ಡ ಚಿಂತೆಯ ವಿಷಯ. ಅಮೇರಿಕದೊಡನೆ ಮಿಲಿಟರಿ ಒಡಂಬಡಿಕೆ ಮಾಡಿಕೊಳ್ಳುವ ಅನುಚಿತ ಹವ್ಯಾಸವನ್ನು ಬಿಟ್ಟುಗೊಡದ ಹೊರತು, ಭಾರತ—ಪಾಕ ವಿವಾದಗಳು ತೀರ್ಮಾನ ಹೊಂದಲಾರವು. ಅಮೇರಿಕದ ತಂತ್ರಗಳು ಗಳಿಗೆ ಗಳಿಗೆಗೆ ಹೊಸ ರೂಪವನ್ನು ಧರಿಸುತ್ತಿರುವುದರಿಂದ ಮತ್ತು ಏಶಿಯಾದ ರಾಷ್ಟ್ರಗಳನ್ನು ಬಗಲಿಗೆ ಹಾಕಿಕೊಳ್ಳುವ ಅದರ ಮಹತ್ವಾಕಾಂಕ್ಷೆಗೆ ಇತಿಮಿತಿ ಇಲ್ಲದಿರುವುದರಿಂದ—ಭಾರತ ಇನ್ನಷ್ಟು ಜಾಗರೂಕತೆಯನ್ನು ತೋರಬೇಕಾಗಿ ಬಂದಿದೆ. ಅಮೇರಿಕದ ಪ್ರೋತ್ಸಾಹದಿಂದ ತುರ್ಕಸ್ತಾನದೊಡನೆ ಪಾಕಿಸ್ತಾನವು ಆರ್ಥಿಕ, ಸಾಂಸ್ಕೃತಿಕ ಮತ್ತು ಸೈನಿಕ ಒಪ್ಪಂದವನ್ನು ಮಾಡಿಕೊಳ್ಳುವುದೆಂದೂ, ತನ್ಮೂಲಕ ಉತ್ತರ ಅಟ್ಲಾಂಟಿಕ ಸಂರಕ್ಷಣಾ ವ್ಯೂಹದಲ್ಲಿ ಪ್ರವೇಶ ಹೊಂದುವುದಾಗಿಯೂ ಹೊಸ ಸುದ್ದಿಯೊಂದು ಹೇಳುತ್ತದೆ. ತುರ್ಕ-ಪಾಕ ಒಡಂಬಡಿಕೆಯಾದರೆ, ಇರಾಕ ದೇಶವೂ ಅದರ ಹಿಂದೆ ಸೇರಹೋದೀತೆಂದೂ ಈ ಪ್ರಕಾರವಾಗಿ ಪಾಕ-ತುರ್ಕಗಳು ಕೊನೆಯಾಗುಳ್ಳ ಪ್ರತ್ಯೇಕ ಸೈನ್ಯಾಧಿಪತ್ಯವನ್ನು ಸ್ಥಾಪಿಸಬಹುದೆಂದೂ ಅಮೇರಿಕ ಯೋಚಿಸಿದೆ; ಮತ್ತು ಧಾರಾಳ ಸಹಾಯದ ಭರವಸೆಯನ್ನೂ ನೀಡಿದೆ. ಏಶಿಯದಲ್ಲಿ ಈ ಬಗೆಯ ಸೈನಿಕ ಸಂಘಟನೆಯನ್ನು ಪ್ರಚೋದಿಸುವುದಕ್ಕೆ ಭಾರತ ಪ್ರತಿಕೂಲಾಭಿಪ್ರಾಯವನ್ನು ವ್ಯಕ್ತಗೊಳಿಸುತಿದ್ದಂತೆ- ಅಮೇರಿಕದ ಪ್ರಭಾವಕ್ಕೆ ಇರಾಕ ಬೀಳುವುದನ್ನು ಅರಬ ರಾಷ್ಟ್ರಗಳೂ ಪ್ರತಿಭಟಿಸುತ್ತವೆ. ಈ ವಿರೋಧವನ್ನು ದುರ್ಲಕ್ಷಿಸುವುದು ಹಿತವಲ್ಲದಿದ್ದರೂ- ಅಮೇರಿಕ ತನ್ನ ಯೋಜನೆಯನ್ನು ಬಿಟ್ಟುಗೊಡುವುದು ಸಂಶಯಾಸ್ಪದ. ಹಿಂದುಳಿದ ಏಶಿಯಾದ ರಾಷ್ಟ್ರಗಳು ಜನರ ಸುಖ ಸಂತೋಷಗಳನ್ನು ಹೆಚ್ಚಿಸುವ ಅಭಿವೃದ್ಧಿ ಪ್ರಯತ್ನಗಳಲ್ಲಿ ಮಗ್ನವಾಗುವ ಬದಲು, ಸೈನಿಕ ಬಲ ಸಂವರ್ಧನಾ ಕಾರ್ಯದಲ್ಲಿ ತೊಡಗಬೇಕೆಂದು ಒತ್ತಾಯಿಸುವ ಅಮೇರಿಕದ ನಿಲುವೆ, ಮತ್ತು ಅದರ ಆಮಿಷಕ್ಕೆ ಮೋಹಗೊಂಡ ರಾಷ್ಟ್ರಗಳ ಬುದ್ಧಿವಂತಿಕೆ ಅನರ್ಥ ಪರಂಪರೆಗೆ ಕಾರಣವಾಗುತ್ತದೆ. ಭಾರತದ ಮಟ್ಟಿಗೆ, ಪರಿಸ್ಥಿತಿಯ ಒತ್ತಡ ಈಗ ಎಷ್ಟು ಪ್ರಬಲವಾಗಿದೆಯೆಂದರೆ, ಐಕ್ಯ, ಸಂಘಟನೆ, ಶಿಸ್ತು ಮತ್ತು ಭದ್ರತೆ ಎಂಬ ಕಲ್ಯಾಣಿ ಕಾಂಗ್ರೆಸಿನ ಸಂದೇಶವನ್ನು ಪ್ರತಿಯೊಬ್ಬನೂ ಸ್ಮರಿಸಿಕೊಂಡು, ಈ ಗುಣ ವಿಶೇಷಗಳನ್ನು ಬೆಳೆಸಿಕೊಳ್ಳುವುದು ಅನಿವಾರ್ಯವೂ ಅತ್ಯಗತ್ಯವೂ ಆಗಿರುತ್ತದೆ. ನಮ್ಮ ಸಾಮಾಜಿಕ ಹಾಗು ಆರ್ಥಿಕ ಕಾರ್ಯಕ್ರಮಗಳ ಯಶಸ್ಸಿಗೂ ರಾಷ್ಟ್ರದ ಭದ್ರತೆ ಕಾಯ್ದುಕೊಂಡು ಸ್ವಾತಂತ್ರ್ಯದ ರಕ್ಷಣೆ ಮಾಡುವುದಕ್ಕೂ ಇದೊಂದೇ ತೃಪ್ತಿಕರವಾದ ಉಪಾಯ.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. P. No 5/1951

1. ಸೀನಶೆಟ್ಟಿ 2. ಸಂಕಪ್ಪ ಶೆಟ್ಟಿ. ಅರ್ಜಿದಾರರು.

ಈ ಮೂಲಕ ಸಮಸ್ತ ಜನರಿಗೆ ತಿಳಿಸುವುದೇನೆಂದರೆ:

ಮಂಗಳೂರು ತಾಲ್ಲೂಕು ಕವತಾರು ಗ್ರಾಮದ ನಾಗುಮನೆ ಸೀನ ಶೆಟ್ಟರ (ಅಂದ್ರೆ 1ನೇ ಅರ್ಜಿದಾರಳ) ಮಗ ತಾ. 20-6-1953 ರಲ್ಲಿ ಮೃತನಾದ ಬಾಬಯ್ಯ ಕೊರಗ ಶೆಟ್ಟಿಗೆ ಬರಬೇಕಾಗಿದ್ದ ಸಾಲ ವಗೈರೆಗಳನ್ನು ವಸೂಲು ಮಾಡುವರೆ 1ನೇ ಅರ್ಜಿದಾರಳು ಪಕ್ಷಗಾರರಿಂತ Indian succession Act ನ sec. 372ರ ಮೇರೆಗೆ 1ನೇ ಅರ್ಜಿದಾರಳಿಗೆ ವಾರಿಸು ಸರ್ಟಿಫಿಕೇಟು ಕೊಡಬೇಕೆಂತ ಅರ್ಜಿದಾರರು ಮೇಲ್ಕಾಣಿಸಿದ ಅರ್ಜಿ ಕೊಟ್ಟಿರುವುದರಿಂದ ಸದ್ರಿ ಅರ್ಜಿಯ ಕುರಿತು ಆಕ್ಷೇಪ ಉಳ್ಳಂತವರು ತಾ 27-2-1951ನೇ ಹಗಲು 11 ಗಂಟೆಗೆ ಸದ್ರಿ ಕೋರ್ಟು ಮುಂದೆ ಹಾಜರಾಗಿ ಅವರವರಿಗೆ ಇರತಕ್ಕ ಆಕ್ಷೇಪಣೆಗಳನ್ನು ತಿಳಿಸಿ ಸಾಧಿಸ ತಕ್ಕದ್ದು. ತಪ್ಪಿದರೆ ಸದ್ರಿ ಅರ್ಜಿಯು ಅರ್ಜಿದಾರರ ಅಪೇಕ್ಷೆ ಪ್ರಕಾರ ಅವರ ಗುಣಕ್ಕೆ ತೀರ್ಮಾನಿಸಲ್ಪಡುವುದು- ಎಂಬ ಸಂಗ್ತಿ ಈ ಮೂಲಕ ಕೋರ್ಟು ಹುಕುಂ ಪ್ರಕಾರ ತಿಳಿಸಲಾಗಿಯದೆ—

K. Mahabala Hegde

ಕಾರ್ಕಳ 1-2-54. ಅರ್ಜಿದಾರರ ವಕೀಲ್

ಬರ್ಲಿನ ಸಮ್ಮೇಳನದ ಮಂದ ಪ್ರಗತಿ

ಭಾರತೀಯ ಸೈನ್ಯಪಡೆಯ ಸ್ವದೇಶ ಗಮನ

ಕೊರಿಯಾದ ವಿದ್ಯಮಾನಗಳಲ್ಲೇ ಆಸಕ್ತಿ ವಹಿಸುತಿದ್ದ ರಾಜಕೀಯ ಜಿಜ್ಞಾಸುಗಳು ಈಗ ತಮ್ಮ ದೃಷ್ಟಿಯನ್ನು ಬರ್ಲಿನದಲ್ಲಿ ಸೇರುತ್ತಿರುವ ನಾಲ್ಕು ಮಹಾರಾಷ್ಟ್ರಗಳ ವಿದೇಶ ಮಂತ್ರಿಗಳ ಸಮ್ಮೇಳನದತ್ತ ತಿರುಗಿಸಿರುವರು. ಪಾನ ಮುಂಜಾಮದಲ್ಲಿ ಯುದ್ಧ ಕೈದಿಗಳ ಯೋಗಕ್ಷೇಮ ನೋಡಿಕೊಳ್ಳುತಿದ್ದ ತಟಸ್ಥ ರಾಷ್ಟ್ರ ಮಂಡಳವು ಇಷ್ಟರಲ್ಲೇ ವಿಸರ್ಜನೆ ಹೊಂದಲಿದೆ. ಭಾರತದ ಜನರಲ್ ತಿಮ್ಮಯ್ಯನವರು ನಿರ್ಣಯಿಸಿದ ಪ್ರಕಾರ ಉಭಯ ಪಕ್ಷಗಳಿಗೂ ಅವರವರು ಸೆರೆಹಿಡಿದ, ವಿವರಣೆಯನ್ನು ಕೇಳಿರದ, ಯುದ್ಧ ಕೈದಿಗಳನ್ನು ಮರಳಿ ಒಪ್ಪಿಸಲಾಗಿರುವುದು. ಸಂಯುಕ್ತ ರಾಷ್ಟ್ರ ಸಂಘದ ವಶಕ್ಕೆ ೧೪ ಸಾವಿರ ಚೀನೀಯರನ್ನು ಮತ್ತು ೭॥ ಸಾವಿರ ಉತ್ತರ ಕೋರಿಯನ್ನರನ್ನು ಕೊಟ್ಟಿದ್ದು, ಇವರೆಲ್ಲರನ್ನೂ ಜನವರಿ ೨೩ನೇ ದಿನಾಂಕ ರಾಷ್ಟ್ರ ಸಂಘದ ಸೇನಾಧಿಪತ್ಯ ಬಂಧ ಮುಕ್ತಗೊಳಿಸಿದೆ. ಅಲ್ಲದೆ, ಚೀನೀ ಕೈದಿಗಳನ್ನು ಫೊರ್ಮೊಸಾಕ್ಕೂ ಉತ್ತರ ಕೊರಿಯನ್ನರನ್ನು ದಕ್ಷಿಣ ಕೊರಿಯಾಕ್ಕೂ ಒಯ್ಯಲು ಶೀಘ್ರ ವ್ಯವಸ್ಥೆಯನ್ನೂ ಅದು ಮಾಡಿದೆ

ಉಳಿದಿರುವ ಕೆಲಸ

ಕೈದಿಗಳನ್ನು ಬಿಡುಗಡೆ ಮಾಡುವುದು ನ್ಯಾಯವಲ್ಲವೆಂಬ ಘಟನಾತ್ಮಕ ಪ್ರಶ್ನೆಯನ್ನು ರಾಷ್ಟ್ರ ಸಂಘದ ಸೇನಾಧಿಪತ್ಯಗವ ನಿಸಿಯೋ ಇಲ್ಲ. ಕಮ್ಯೂನಿಸ್ಟರು ಕೈದಿಗಳನ್ನು ಬಂಧಮುಕ್ತ ಮಾಡುವದರ ಕುರಿತು ತೀವ್ರ ಆಕ್ಷೇಪ ಸೂಚಿಸಿದರೂ ಪ್ರಯೋಜನಕ್ಕೆ ಬರಲಿಲ್ಲ. ಕಮ್ಯೂನಿಸ್ಟರು ತಾವು ಸೆರೆಹಿಡಿದ ಸುಮಾರು ೫೦೦ ಮಂದಿ ಅಮೇರಿಕನ್, ಬ್ರಿಟಿಷ ಮತ್ತಿತರ ಜನಾಂಗದ ಯುದ್ಧ ಕೈದಿಗಳನ್ನು ಸ್ವೀಕರಿಸಲೂ ಮೊದಲು ನಿರಾಕರಿಸಿದರು. ಆದರೆ ಮುಂದೆ ಅವರು ಕೈದಿಗಳನ್ನು ಸಂಭ್ರಮದಿಂದ ಬರಮಾಡಿಕೊಂಡುದರಿಂದ- ಈಗ ತಟಸ್ಥ ರಾಷ್ಟ್ರಗಳಿಗೆ ಹೋಗ ಬಯಸುವ ಸುಮಾರು ೧೦೦ ಯುದ್ಧ ಕೈದಿಗಳ ವಿಷಯ ಮತ್ತು ಕಗ್ಗೊಲೆಯನ್ನು ಮಾಡಿದ ನಾಲ್ಕು ಉತ್ತರ ಕೊರಿಯನ್ನ ಯುದ್ಧ ಕೈದಿಗಳ ವಿಚಾರಣೆ – ಇದಿಷ್ಟೇ ಕೆಲಸ ಬಾಕಿ ಉಳಿದಿದೆ.

ಶಾಂತಿಸೇನೆ ಮರಳುವುದು

ಇನ್ನು ಪಾನಮುಂಜಾಮದಲ್ಲಿ ಕೆಲಸವಿಲ್ಲವಾದ್ದರಿಂದ ಭಾರತದ ಸೈನ್ಯ ಇಷ್ಟರಲ್ಲೇ ಸ್ವದೇಶಕ್ಕೆ ಮರಳುವುದು. ಅವರನ್ನು ಕರೆತರಲು ಹಡಗುಗಳ ವ್ಯವಸ್ಥೆಯನ್ನು ಭಾರತ ಸರಕಾರ ಮಾಡಿರುವುದು. ಇತ್ತ ರಾಷ್ಟ್ರ ಸಂಘದ ಸಾಮಾನ್ಯ ಸಭೆಯನ್ನು ಸೇರಿಸಬೇಕೆಂದು ಭಾರತ ಮಾಡಿದ ಸೂಚನೆಗೆ ಬಹುಮತದ ಬೆಂಬಲ ದೊರೆತಿಲ್ಲವಾದುದರಿಂದ—ಕೊರಿಯಾದ ರಾಜಕೀಯ ತಣ್ಣಗಾಗಿರುವುದು. ಅಮೇರಿಕ, ಬ್ರಿಟನು, ಫ್ರಾನ್ಸು. ಕೆನಡಾ, ಫಿಲಿಪ್ಪೈನ್ಸ, ರಾಷ್ಟ್ರೀಯ ಚೀನಾ, ಆಸ್ಟ್ರೇಲಿಯಾ ಮುಂತಾದ ೨೮ ರಾಷ್ಟ್ರಗಳು ಭಾರತದ ಸೂಚನೆಯನ್ನು ವಿರೋಧಿಸಿದವು ರಶಿಯಾ ಮತ್ತು ಸೋವಿಯೆಟ ಬಣದ ಇತರ ರಾಜ್ಯಗಳು ಮತ್ತು ಏಶಿಯಾದ ಹೆಚ್ಚಿನ ದೇಶಗಳು ಹೀಗೆ ೨೨ ಸದಸ್ಯ ರಾಷ್ಟ್ರಗಳು ಭಾರತದ ಸೂಚನೆಯನ್ನು ಬೆಂಬಲಿಸಿದವು. ಪಾಕಿಸ್ತಾನ ನ್ಯೂಜಿಲೇಂಡ್, ದಕ್ಷಿಣ ಆಫ್ರಿಕಾ ಮುಂತಾದ, ೧೦ ದೇಶಗಳು ಉತ್ತರ ಕಳಿಸದೆ ಸುಮ್ಮನುಳಿದವು.

ಚೀನಕ್ಕೆ ಪ್ರಾತಿನಿಧ್ಯ

ಜರ್ಮನಿಯಲ್ಲಿ ಬ್ರಿಟಿಷ, ಅಮೇರಿಕ ಮತ್ತು ಫ್ರೆಂಚ ವಿದೇಶ ಮಂತ್ರಿಗಳು ರಶಿಯಾದ ಮೊಲೊಟೋವರನ್ನು ಸೇರಿಕೊಂಡು ಸಮಾಲೋಚನೆಗೆ ತೊಡಗಿರುವರು. ಏಳೆಂಟು ಅಧಿವೇಶನಗಳು ಮುಗಿದರೂ ಯಾವದೇ ಒಮ್ಮತದ ನಿರ್ಣಯ ಆಗಿರುವುದಿಲ್ಲ. ಜಾಗತಿಕ ದ್ವೇಷವನ್ನು ಕಡಿಮೆ ಮಾಡುವ ವಿಷಯವನ್ನು ಎತ್ತಿದಾಗ ಮೊಲೊಟೋವರು ಕಮ್ಯೂನಿಸ್ಟ ಚೀನಕ್ಕೆ ಪ್ರಾತಿನಿಧ್ಯ ಕೊಡಬೇಕೆಂದು ಆಗ್ರಹ ಪಟ್ಟರು. ನಿರೀಕ್ಷಿಸಿದಂತೆ ಅಮೇರಿಕದ ಡಲ್ಲೇಸರು ಕಟು ವಚನದಲ್ಲಿ ಇದನ್ನು ವಿರೋಧಿಸಿದರು. ಕೊನೆಗೆ ಪೂರ

IN THE HIGH COURT OF JUDICATURE AT MADRAS.

Ordinary Original Civil Jurisdiction.

O. P. No. 95 of 1952.

In the matter of the Indian Companies Act, 1913
and in the matter of Homes & Estates Ltd.

Homes and Estates Limited ... ... Petitioners.

Notice is hereby given that a petition has been presented to the High Court of Judicature at Madras for confirming the resolution of the above Company for reducing its capital from Rupees 100,000/- (one lakh) to Rupees 50,000/- (fifty thousand). A list of persons admitted to have been creditors of Company on the 28th day of April 1952 may be inspected at the offices of the Company at Udipi or at the office of the Advocates for petitioners at the National Insurance Buildings, Esplanade, Madras at any time during office hours on payment of the charge of Re. 1/-

Any person who claims to have been on the last mentioned day and still to be a creditor of the Company and who is not entered on the said list and claims to be so entered, must on or before the 14th day of February 1954 send in his name and address, the particulars of his claim and the name and address of his Advocate if any to the undersigned at the National Insurance Buildings, Esplanade, Madras, or in default thereof he will be precluded from objecting to the proposed reduction of capital.

Dated at Madras this 29th day of January 1954.

Sd. **Chetty & Shetty,**
Advocates for the said Company.

ಪ್ರಾಚ್ಯ ಮತ್ತು ಏಶಿಯಾದ ಸಮಸ್ಯೆಗಳ ಚರ್ಚೆಯ ಕಾಲದಲ್ಲಿಯಾದರೂ ಚೀನವನ್ನು ಕರೆಯಬೇಕೆಂಬ ಮೊಲೊಟೋವರ ಸೂಚನೆಗೆ ತ್ರಿರಾಷ್ಟ್ರಗಳ ವಿದೇಶ ಮಂತ್ರಿಗಳು ಒಪ್ಪಿಗೆ ಸೂಚಿಸಿದರು. ರಹಸ್ಯವಾಗಿ ಸೇರುವ ಈ ಸಭೆಯಲ್ಲಿ ಕಮ್ಯೂನಿಸ್ಟ ಚೀನವನ್ನು ಕರೆದಂತೆ ಸಂಬಂಧಿಸಿದ ಇತರ ಏಶಿಯಾದ ರಾಷ್ಟ್ರಗಳನ್ನು ಆಮಂತ್ರಿಸಬೇಕೆಂಬ ಪ್ರತಿ ಸೂಚನೆ ಬರುವದೋ ಎಂದು ಅನುಮಾನ.

ಶಸ್ತ್ರಾಸ್ತ್ರಗಳ ನಿಯಂತ್ರಣ

ಕಾರ್ಯಕ್ರಮದ ಎರಡನೇ ವಿಷಯವಾದ ಜರ್ಮನಿಯ ಪ್ರಶ್ನೆಯನ್ನು ವಿಚಾರಿಸುವುದಕ್ಕೆ ಮುಂಚೆ ಶಸ್ತ್ರಾಸ್ತ್ರಗಳ ಸಂಗ್ರಹವನ್ನು ಮಿತಗೊಳಿಸುವ ವಿಷಯದಲ್ಲಿ ಪರಿಷತ್ತೊಂದನ್ನು ಸೇರಿಸಬೇಕೆಂದು ರಶಿಯಾ ಸೂಚಿಸಿತು. ತ್ರಿರಾಷ್ಟ್ರಗಳ ವಿದೇಶ ಮಂತ್ರಿಗಳು ಈ ಅನಿರೀಕ್ಷಿತ ಸಲಹೆಯಿಂದ ಪೇಚಿಗೆ ಒಳಗಾದರು. ಯುರೋಪಿನಲ್ಲಿ ಈ ಸೂಚನೆಗೆ ಜನರ ಬೆಂಬಲ ಬಹಳವಿರುವುದರಿಂದ ಅದನ್ನು ತಿರಸ್ಕರಿಸುವ ಧೈರ್ಯ ಯಾರಿಗೂ ಇಲ್ಲ. ಆದುದರಿಂದ ರಾಷ್ಟ್ರಸಂಘದ ಮುಂದೆ ವಿಚಾರಣಾಧೀನವಾಗಿರುವ ಈ ವಿಷಯದಲ್ಲಿ ಸದ್ಯಕ್ಕೆ ವಿಚಾರ ವಿನಿಮಯ ಅಗತ್ಯವಿಲ್ಲೆಂದು ಮೊಲೊಟೋವರಿಗೆ ತಿಳಿಸಲಾಯಿತು. ಆದರೂ ಅಧ್ಯಕ್ಷ ಐಸೆನಹೋವರರು ಅಣುಶಕ್ತಿಯ ಶಾಂತಿಕಾಲದ ಉಪಯೋಗದ ಕುರಿತು ಮಾಡಿದ ಸೂಚನೆಯ ವಿಷಯದಲ್ಲಿ ಡಲ್ಲೆಸ—ಮೊಲೊಟೋವ ಮಾತುಕತೆ ಗುಪ್ತ ರೀತಿಯಲ್ಲಿ ನಡೆಯಿತು.

ಚುನಾವಣೆ ಜರುಗಲಿ

ಜರ್ಮನಿಯ ಪ್ರಶ್ನೆಯನ್ನು ಪರಿಹರಿಸುವುದಕ್ಕೆ ತ್ರಿರಾಷ್ಟ್ರಗಳ ಪರವಾಗಿ ಬ್ರಿಟನ್ನದ ಈಡನ್ನರು ಐದು ಅಂಶಗಳ ಒಂದು ಯೋಜನೆಯನ್ನು ಮಂಡಿಸಿದರು—ಜರ್ಮನಿಯ ಪೂರ್ವ ಮತ್ತು ಪಶ್ಚಿಮ ಎರಡೂ ವಿಭಾಗಗಳಲ್ಲಿ ಅನಿರ್ಬಂಧವಾಗಿ ಗುಪ್ತ ಮತದಾನ ಪದ್ಧತಿಯಂತೆ ಸಾರ್ವತ್ರಿಕ ಚುನಾವಣೆ ನಡೆದು ರೂಪುಗೊಂಡ ರಾಷ್ಟ್ರೀಯ ಸಭೆ ಘಟನೆಯನ್ನು ತಯಾರಿಸಿ ಅಖಿಲ ಜರ್ಮನ ಸರಕಾರ ರಚಿಸಬೇಕೆಂದೂ ಅದು ಸ್ವತಂತ್ರವಿರಬೇಕೆಂದೂ ಈ ಸೂಚನೆ ಹೇಳುತ್ತದೆ. ಮೊಲೊಟೋವರು ಐರೋಪ್ಯ ಸಂರಕ್ಷಣಾ ಮಂಡಳದ ವಿಸರ್ಜನೆ ಮತ್ತು ಬಾನ ಒಪ್ಪಂದದ ಕಾರ್ಯಾಚರಣೆಯ ಸಂಗತಿಗಳನ್ನು ಮುಂದಿಟ್ಟು, ಈ ಸೂಚನೆಯನ್ನು ಟೀಕಿಸಿ, ತಮ್ಮದೇ ಸಲಹೆಗಳನ್ನು ನೀಡುವುದಾಗಿ ಹೇಳಿರುವರು. ಶಸ್ತ್ರಸಜ್ಜಿತ ಜರ್ಮನಿಯು ರಶಿಯಾದ ಮೇಲೆ ಆಕ್ರಮಣ ಮಾಡುವ ಸಂಭವ ಹೆಚ್ಚು—ಆದರೆ ಐರೋಪ್ಯ ಸೇನೆಯಲ್ಲಿ ಸೇರಿದರೆ ಜರ್ಮನಿಗೆ ಏಕಾಕಿಯಾಗಿ ಆಕ್ರಮಣಕ್ಕೋಸ್ಕರ ಸೈನ್ಯ ಉಪಯೋಗಿಸುವ ಅವಕಾಶ ಸಿಗುವುದಿಲ್ಲ. ಏಕೆಂದರೆ ಉಳಿದ ರಾಷ್ಟ್ರಗಳು ಅದಕ್ಕೆ ಸಮ್ಮತಿಸಲಿಕ್ಕಿಲ್ಲ ಎಂದು ಈಡನ್ನರು ತಮ್ಮ ನಿಲುವೆಯನ್ನು ಸ್ಪಷ್ಟೀಕರಿಸಿ, ರಶಿಯಾಕ್ಕೆ ಹಾನಿಯಿಲ್ಲವೆಂದು ತೋರಿಸಿ ಕೊಡಲು ಪ್ರಯತ್ನಪಟ್ಟರು.

ಫ್ರೆಂಚರ ಪ್ರತಿಕ್ರಿಯೆ

ಫ್ರೆಂಚರ ಪ್ರತಿಕ್ರಿಯೆಯೇ ಇಲ್ಲಿ ಮಹತ್ವದ್ದು—ಜರ್ಮನಿಯ ಶಸ್ತ್ರೀಕರಣದಿಂದ ತನಗೆ ಅಪಾಯವಿದೆಯೆಂಬ ಐತಿಹಾಸಿಕ ಸತ್ಯವನ್ನು ಫ್ರಾನ್ಸ್ ಮರೆಯುವುದು ಸಾಧ್ಯವೇ ಇಲ್ಲ. ಜರ್ಮನಿಯು ನಿಶ್ಶಸ್ತ್ರೀಕೃತ ಪ್ರದೇಶವಾಗಬೇಕೆಂದು ರಶಿಯಾ ಆಗ್ರಹಪಡುವುದು ತನ್ನ ಮೇಲೆ ಆಕ್ರಮಣವಾಗುವ ಭಯದಿಂದಾಗಲೆಂದು ಮಾತ್ರವಲ್ಲ—ತನ್ಮೂಲಕ ಫ್ರೆಂಚರ ಪ್ರೀತಿಗಳಿಸಿ, ತ್ರಿರಾಷ್ಟ್ರಗಳಲ್ಲಿ ಒಡಕು ಹುಟ್ಟಿಸುವುದೂ ಅದರ ಉದ್ದೇಶ. ಇತ್ತ ಫ್ರೆಂಚರಿಗೆ ರಶಿಯಾದೊಡನೆ ಮಿತ್ರತ್ವ ಸ್ಥಾಪಿಸಿಕೊಳ್ಳುವ ಆತುರ ಹುಟ್ಟಿಕೊಂಡಿದೆ. ಇಂಡೋಚೀಣದ ಯುದ್ಧದಿಂದ ಸಂತಪ್ತರಾದ ಫ್ರೆಂಚರು ರಶಿಯದ ಸ್ನೇಹದಿಂದ ಕಮ್ಯೂನಿಷ್ಟ ಚೀನಾದಿಂದ ಹೋಚಿಮಿನರಿಗೆ ದೊರಕುವ ಸಹಾಯವನ್ನು ನಿಲ್ಲಿಸಲು ಬಂದೀತೆಂದು ಯೋಚಿಸುತ್ತಿರುವರು.

ಉಡುಪಿ

ಕೋಪರೇಶನ್ ಲ್ಯಾಬ್ರರಿ ಉದ್ಘಾಟನೆ— ಸ್ಥಳೀಯ ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜಿಗೆ ಹತ್ತು ಸಾವಿರ ರೂಪಾಯಿ ಧನ ಸಹಾಯವಿತ್ತು ಸ್ಥಾಪಿತವಾದ "ಕೋಪರೇಶನ್ ಲ್ಯಾಬ್ರರಿ"ಯ ಉದ್ಘಾಟನೆಯನ್ನು ಕಳೆದ ತಾ. ೨೩ರಲ್ಲಿ ಪೇಜಾವರ ಮಠದ ಶ್ರೀ ವಿಶ್ವೇಶ ತೀರ್ಥ ಸ್ವಾಮಿಗಳವರು ನೆರವೇರಿಸಿದರು. ಡಾ| ಟಿ. ಮಾಧವ ಪೈಗಳು ಸ್ವಾಗತ ಭಾಷಣ ಮಾಡಿದರು. ಶ್ರೀ ಬಿ. ವೈಕುಂಠ ಬಾಳಿಗ, ಎಮ್. ಎಲ್. ಎ. ಅವರು ಸಂದರ್ಭೋಚಿತ ಮಾತುಗಳನ್ನಾಡಿದರು. ಡಾ| ಎಸ್. ಆರ್. ಪೈಗಳು ನೂತನವಾದುತ್ತಾ ಲ್ಯಾಬ್ರರಿ ಉದ್ಘಾಟನೆ ಮಾಡುವಂತೆ ಸ್ವಾಮಿಗಳನ್ನು ಕೇಳಿಕೊಂಡರು. ಕೋಪರೇಶನಂತಹ ಸಾರ್ವಜನಿಕ ಸಂಸ್ಥೆಗಳು ವಿದ್ಯಾ ಸಂಸ್ಥೆಗಳಿಗೆ ಸಹಾಯ ಬೆಂಬಲ ನೀಡುವುದು ಅತ್ಯಾವಶ್ಯಕವೆಂದೂ ಕೋಪರೇಶನ್ ಬ್ಯಾಂಕಿನ ಮಾರ್ಗದರ್ಶನವು ಇತರರಿಗೆ ಅನುಕರಣೀಯವಾಗಬೇಕೆಂದೂ ಪಾರ್ಶ್ವಿ ಸ್ವಾಮಿಗಳವರು ತಮ್ಮ ಭಾಷಣ ಮಾಡಿದರು. ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರರಾಯರು ಧನ್ಯವಾದಗಳನ್ನರ್ಪಿಸಿದರು.

ಪ್ರಜಾಪ್ರಭುತ್ವ ದಿನಾಚರಣೆ— ನಗರ ಸಭೆಯ ನೇತೃತ್ವದಲ್ಲಿ ಬೆಳಿಗ್ಗೆ ಗಾಂಧಿ ಮೈದಾನದಲ್ಲಿ ಗೌರವ ಫಸ್ಟ್ ಕ್ಲಾಸ್ ಮೆಜಿಸ್ಟ್ರೇಟ್ ಶ್ರೀ ಕೆ. ಕೃಷ್ಣಯ್ಯನವರು, ಕಾಂಗ್ರೆಸ್ ಕಚೇರಿಯಲ್ಲಿ ಶ್ರೀ ಬಾಳ್ಕಟ್ಟ ಜೀಡು ಕೃಷ್ಣಯ್ಯ ಹೆಗ್ಡೆಯವರು ಧ್ವಜಾರೋಹಣ ನಡೆಸಿದರು. ಪೂರ್ವಾಹ್ನ ಮತ್ತೆ ಪಡುಭಾಂಡೇಶ್ವರ ತೀರದಲ್ಲಿ ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಅವರು ಗಾಂಧಿ ಸ್ಮಾರಕ ಸ್ತೂಪದ ಶಂಕುಸ್ಥಾಪನೆ ಮಾಡಿದರು. ಅಪರಾಹ್ನ ನಗರ ಸಭೆಯ ಆಶ್ರಯದಲ್ಲಿ ಗಾಂಧಿ ಮೈದಾನದಲ್ಲಿ ಪಂದ್ಯಾಟಗಳು ಜರಗಿ ಗೆದ್ದವರಿಗೆ ಬಹುಮಾನ ಹಂಚುವ ಸಮಾರಂಭವು ಡಾ. ಪಿ. ಜಿ. ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಕಾಂಗ್ರೆಸ್ ಕಮಿಟಿ ನೇತೃತ್ವದಲ್ಲಿ ರಥಬೀದಿಯಲ್ಲಿ ವಕೀಲ್ ಶ್ರೀ ಬಿ. ಶೀನಪ್ಪ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿತು. ಶ್ರೀ ಕೆ. ಸದಾನಂದ ಹೆಗ್ಡೆ ಎಮ್. ಪಿ. ಅವರು ಪಾಕಿಸ್ತಾನ ಅಮೇರಿಕಾ ಮಿಲಿಟರಿ ಒಪ್ಪಂದ, ನೊವಬಾದ ಕುರಿತು ಭಾಷಣ ಮಾಡಿದರು. ಟಿ. ಎ. ಪೈ, ಎಂ. ಎಲ್. ಎ. ಗಳವರು ಪ್ರಚಲಿತ ರಾಜಕೀಯದ ಕುರಿತು ಸಂದರ್ಭೋಚಿತವಾಗಿ ಮಾತನಾಡಿದರು.

ಮುನಿಸಿಪಲ್ ಸಭೆಯು— ಕಳೆದ ತಾ. ೨೮ರಂದು ಶ್ರೀ ಯು. ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಕೌನ್ಸಿಲಿನ ಬಜೆಟು ಪರಿಶೀಲನೆ ಮುಂದಿನ ಸಭೆಗೆ ನಿಲ್ಲಿಸಲಾಯಿತು. ಫೆಬ್ರವರಿ ತಾ. ೬ರಲ್ಲಿ ಉಡುಪಿಗೆ ಬರಲಿರುವ ಕಾರ್ಡಿನಲ್ ಗ್ರೇಶಿಯಸರಿಗೆ ಮಾನಪತ್ರ ನೀಡಬೇಕೆಂದಾಯಿತು.

ನಾಟಕ ಪ್ರದರ್ಶನ— ಕಳೆದ ತಾ. ೩೧ರಲ್ಲಿ ರಾತ್ರಿ ಎಕ್ಸೆಲ್ ಗೆಳೆಯರು ನಗರ ಸಭೆಯ ಚೆನ್ನಪ್ಪಾನಾ ಕಮಿಟಿಯ ಸಹಾಯಾರ್ಥವಾಗಿ ಅಜ್ಜರಕಾಡು, ಆಟದ ಬಯಲನ್ನು ಸರಿಗೊಳಿಸುವ ಬಗ್ಗೆ "ಬಡವರ ಗಂಡ" ನಾಟಕವನ್ನು ಡಾ. ಸುಂದರರಾವ ಪೈಗಳ ಅಧ್ಯಕ್ಷತೆಯಲ್ಲಿ ಕ್ರಿಶ್ಚನ್ ಹೈಸ್ಕೂಲ್ ವಠಾರದಲ್ಲಿ ಯಶಸ್ವಿಯಾಗಿ ಅಭಿನಯಿಸಿದರು.

ಸರ್ವೋದಯ ದಿನಾಚರಣೆಯ ಬಗ್ಗೆ— ತಾ. ೩೦ರಲ್ಲಿ ಸರ್ಕಲ್ ಕಾಂಗ್ರೆಸ್ ಕಮಿಟಿಯವರು ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ರಥಬೀದಿಯಲ್ಲಿ ಏರ್ಪಡಿಸಿದ ಸಾರ್ವಜನಿಕ ಸಭೆಯಲ್ಲಿ ಶ್ರೀ ತ. ರಾ. ಸುಬ್ಬರಾಯರು ಮಹಾತ್ಮಾಜಿಯವರ ಆದರ್ಶ ಮತ್ತು ಭಾರತದ ರಾಜಕೀಯ ಪಕ್ಷಗಳ ಕುರಿತು ಭಾಷಣ ಮಾಡಿದರು. ಶ್ರೀ ಎ. ಜೆ. ಅಲ್ಸೆಯವರು ಧನ್ಯವಾದವಿತ್ತರು. ರಾತ್ರಿ ಡಾ. ಸುಂದರರಾವ ಪೈಗಳ ಅಧ್ಯಕ್ಷತೆಯಲ್ಲಿ ಜರಗಿದ ಯುತ್ ಕಾಂಗ್ರೆಸ್ ಸಭೆಯಲ್ಲೂ ಶ್ರೀ ತ. ರಾ. ಸುಬ್ಬರಾಯರು ಭಾಷಣಮಾಡಿದರು. ಅಲ್ಲದೆ ಅವರು ಸ್ಥಳೀಯ ಬೋರ್ಡ್ ಹೈಸ್ಕೂಲ್, ಕ್ರಿಶ್ಚನ್ ಹೈ, ಎಂ. ಜಿ. ಎಂ. ಕಾಲೇಜ್, ಮುನಿಸಿಪಾಲ ಹೈಸ್ಕೂಲ್, ಮೊದರ್ನ್ ಹಾ. ಎ. ಶಾಲೆಯಲ್ಲಿಯೂ ಭಾಷಣ ಮಾಡಿದ್ದರು.

ಮಂತ್ರಿ ಡಾ. ಯು. ಕೃಷ್ಣರಾಯರು— ಇದೇ ತಾ. ೧ನೇ ಬೆಳಿಗ್ಗೆ ಉಡುಪಿಗೆ ಆಗಮಿಸಿದರು. ಮಧ್ಯಾಹ್ನ ಕಟಪಾಡಿಗೆ ತೆರಳಿ ಅಲ್ಲಿಯ ಶ್ರೀ ವೆಂಕಟ್ರಮಣ ಹೈಸ್ಕೂಲಿನ ವಾರ್ಷಿಕೋತ್ಸವದ ಅಧ್ಯಕ್ಷತೆ ವಹಿಸಿದರು. ಅಲ್ಲಿಂದ ಅಥವಾ ಉಗೆ ತೆರಳಿ ಅಲ್ಲಿಯ ಬೋರ್ಡ್ ಹೈಸ್ಕೂಲಿನ ವರ್ಧಂತ್ಯುತ್ಸವದ ಅಧ್ಯಕ್ಷತೆಯನ್ನು ವಹಿಸಿ ರಾತ್ರಿ ಉಡುಪಿಗೆ ಹಿಂತಿರುಗಿ ಬಂದರು. ತಾ. ೨ನೇ ಬೆಳಿಗ್ಗೆ ಕುಂದಾಪುರಕ್ಕೆ ತೆರಳಿ ಅಲ್ಲಿ ಶ್ರೀ ವೈ. ಮಂಜಯ್ಯ ಶೆಟ್ಟಿ ಎಂ. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿದ ಕುಂದಾಪುರ ತಾಲೂಕು ಸಹಕಾರ ಸಂಘದ ಉದ್ಘಾಟನೆ ಮಾಡಿದರು. ಮಧ್ಯಾಹ್ನ ಉಪ್ಪುಂದಕ್ಕೆ ತೆರಳಿ ಅಲ್ಲಿ ಸಾರ್ವಜನಿಕ ವಂತಿಗೆಯಿಂದ ಕಟ್ಟಿಸಿದ ಬೆಲ್ಲದ ಕಟ್ಟಡದ ಪ್ರಾರಂಭೋತ್ಸವವನ್ನು ನೆರವೇರಿಸಿ ರಾತ್ರಿ ಉಡುಪಿಗೆ ಬಂದರು. ತಾ. ೩ನೇ ಬೆಳಿಗ್ಗೆ ಮಣಿಪಾಲದ ಕಸ್ತೂರ್ಬಾ ಮೆಡಿಕಲ್ ಕಾಲೇಜನ್ನು ಸಂದರ್ಶಿಸಿ ಮಧ್ಯಾಹ್ನ ಉಡುಪಿ ಮುನ್ಸಿಪಾಲಿಟಿಯ ಆಫೀಸಿನಲ್ಲಿ ಸಹಕಾರಿ ಸಂಘಗಳ ಮನವಿಯನ್ನು ಸ್ವೀಕರಿಸಿದರು. ಸಂಜೆ ಘಂಟೆ ೪ಕ್ಕೆ ಕ್ರಿಶ್ಚನ್ ಹೈಸ್ಕೂಲಿನ ವರ್ಧಂತಿ ಸಮಾರಂಭದ ಅಧ್ಯಕ್ಷತೆ ವಹಿಸಿದರು.

ಕೊಕ್ಕರ್ಣೆಯಲ್ಲಿ ಡಾ. ಟಿ. ಎಂ. ಎ. ಪೈಗಳು— ಕಳೆದ ತಾ. ೨೪ರಲ್ಲಿ ಕುಂದಾಪುರ ಓ. ಬಿ. ಹೈಸ್ಕೂಲಿನ ಟಿ. ಸಿ. ಕ್ಲಾಸಿನ ರಾಜ ಪ್ರಮುಖರಿಂದ ಉದ್ಘಾಟಿಸಲ್ಪಟ್ಟ ರಜತೋತ್ಸವ ಸಮಾರಂಭದಲ್ಲಿ ಡಾ. ಟಿ. ಎಂ. ಎ. ಪೈಗಳು ಶಿಕ್ಷಣದ ಕುರಿತು ವಿಚಾರ ಪೂರ್ಣ ಭಾಷಣ ಮಾಡಿ ಮರುದಿನ ಹಿಂತಿರುಗಿ ಬಂದಿರುವರು.

ಪ್ರಥಮ ಹಿಂದೀ ಕಾರ್ಡಿನಲ್ ವಾಲೇರಿಯನ್ ಗ್ರೇಸಿಯಸರು— ಇದೇ ತಾ. ೬ನೇ ಬೆಳಿಗ್ಗೆ ೧೧-೩೦ಗಂಟೆಗೆ ಉಡುಪಿಗೆ ಆಗಮಿಸಿ ಶೋಕಮಾತಾ ಇಗರ್ಜಿಯಲ್ಲಿ ಸಾರ್ವಜನಿಕ ಮಾನಪತ್ರ ಸ್ವೀಕರಿಸುವರು, ನಗರ ಸಭೆಯ ಮಾನಪತ್ರ ಸ್ವೀಕರಿಸಿ, ಕಲ್ಯಾಣಪುರಕ್ಕೆ ತೆರಳಿ ಮಧ್ಯಾಹ್ನದ ಸುಂಗಳುವಿಗೆ ಹೋಗುವರು. ಹೋಗುವಾಗ ಎಂ. ಜಿ. ಎಂ. ಕಾಲೇಜು ಕಸ್ತೂರ್ಬಾ ಕಾಲೇಜುಗಳಿಗೆ ಭೇಟಿಯೀಯುವರು.

ಕಳೆದು ಹೋಗಿದೆ—ಕಳೆದ ತಾ ೩೦ನೇ ರಾತ್ರೆ ಶ್ರೀಕೃಷ್ಣ ದೇವಸ್ಥಾನದಿಂದ ಹೊರಗೆ ಬರುವಾಗ ತನ್ನ ಕನ್ನಡಕದ ಗೂಡು ಕಳೆದು ಹೋಗಿರುವುದಾಗಿಯೂ ಅದು ಯಾರಿಗಾದರೂ ಸಿಕ್ಕಿದರೆ ಅವರು ತಂದು ಕೊಟ್ಟಲ್ಲಿ ಯೋಗ್ಯ ಪಾರಿತೋಷಕ ಕೊಡುವೆನೆಂದೂ ಶ್ರೀ ಪಿ. ಸದಾಶಿವ ಪೈ ಅಜ್ಜರಕಾಡು ಇವರು ತಿಳಿಸುತ್ತಾರೆ.

ಶ್ರೀ ಯಂ ಶ್ರೀನಿವಾಸ ಪ್ರಭುಗಳ ನಿಧನ—ಕೆನರಾ ಬ್ಯಾಂಕಿಂಗ್ ಕೋರ್ಪೋರೇಶನಿನ ಮಾಜಿ ಮೆನೇಜರರೂ, ಸಿ. ಪಿ. ಸಿ. ಕಂಪೆನಿಯ ಮಾಜಿ ಡೈರೆಕ್ಟರರೂ ಆಗಿದ್ದ ಶ್ರೀ ಶ್ರೀನಿವಾಸ ಪ್ರಭುಗಳು ತಮ್ಮ ೬೬ನೇ ವಯಸ್ಸಿನಲ್ಲಿ ಕಳೆದ ತಾ ೨೯ರಲ್ಲಿ ನಿಧನಗೊಂಡರೆಂದು ತಿಳಿಸಲು ವಿಷಾದಿಸುತ್ತೇವೆ.

ಶ್ರೀ ಯು ಕೆ. ಭುಜಂಗ ನಾಯಕರ ನಿಧನ- ನಮ್ಮ ಜಿಲ್ಲೆಯಿಂದ ಹೊರಜಿಲ್ಲೆಗೆ ಹೋಗಿ ಸೇಲಂನಲ್ಲಿ ಪ್ರಸಿದ್ಧ ಮತ್ತು ಜನಪ್ರಿಯ ವ್ಯಾಪಾರಿಗಳೂ ಮತ್ತು ಕೆನರಾ ಬ್ಯಾಂಕಿಂಗ್ ಕೋರ್ಪೋರೇಶನ್, ಮತ್ತು ಪ್ರೊವ್ಹಿಡೆಂಟ್ ಇನ್ಶೂರೆನ್ಸ್ ಕಂಪೆನಿಯ ಡೈರೆಕ್ಟರರೂ ಆಗಿದ್ದ ಶ್ರೀ ಯು. ಕೆ. ಭುಜಂಗ ನಾಯಕರು ಕಳೆದ ತಾ ೧೦ರಲ್ಲಿ ನಿಧನಗೊಂಡುದು ವಿಷಾದಕರವಿದೆ.

ಪೋಸ್ಟುಮೇನ್ ಮತ್ತು ಕೆಳತರಗತಿಯ ನೌಕರರ ಸಂಘದ ಉಪಶಾಖೆಯು— ಕಳೆದ ತಾ. ೩೧ರಂದು ಶ್ರೀ ಬಿ. ಎಸ್. ಭಾಸ್ಕರ ಶೈಯವರ ಅಧ್ಯಕ್ಷತೆಯಲ್ಲಿ ತೆರೆಯಲ್ಪಟ್ಟಿತು. ಸಂಘಕ್ಕೆ ಶ್ರೀಗಳಾದ ಯು. ಶೇಷ ಶೆಟ್ಟಿ ಉಪಾಧ್ಯಕ್ಷ, ಲೋರೆನ್ಸ ಅಂದ್ರಾದೆ ಕಾರ್ಯದರ್ಶಿ, ವಾಸುದೇವ ಮತ್ತು ಬಿ. ರಾಮ ಶೆಟ್ಟಿಗಾರ ಜೊತೆ ಕಾರ್ಯದರ್ಶಿಗಳು, ಕೆ. ಜನಾರ್ಧನ ಕೋಶಾಧಿಕಾರಿ, ಮತ್ತು ೧೧ ಜನರಿಂದ ಕೂಡಿದ ಒಂದು ಸಮಿತಿಯನ್ನು ಆರಿಸಲಾಯಿತು. ಅಧ್ಯಕ್ಷಸ್ಥಾನ ಖಾಲಿ ಇಡಲಾಗಿದೆ. ಶ್ರೀಗಳಾದ ಎಂ ನರಸಿಂಹ ರಾವ್, ಪಿ. ಆರ್. ನಾಯಕ್, ಆರ್. ಸಿಕೇರ, ಶೇಕ್ ಅಲ್ಲಿ ಸಾಹೇಬ್ ಮೊದಲಾದವರ ಭಾಷಣಗಳಾಗಿ ಇಲಾಖಾ ನೌಕರಿಗೆ ಸಂಬಂಧಿಸಿದ ಕೆಲವು ಠರಾವುಗಳಾದುವು. ವಾಮನ ಶೆಣೈಗಳು ಧನ್ಯವಾದವಿತ್ತರು.

ಸಾಹಿತ್ಯ ಸ್ಪರ್ಧೆಗಳು— ಫೆಬ್ರವರಿ ತಿಂಗಳ ಎರಡನೆಯ ವಾರದಲ್ಲಿ ನಡೆಯಲಿರುವ ಸಾಂಸ್ಕೃತಿಕ ಉತ್ಸವದ ಭಾಗವಾಗಿ ಜರಗುವ ಸಾಹಿತ್ಯ ಉತ್ಸವದ ಅಂಗವಾಗಿ ಈ ಮೂರು ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ: (೧) ಪ್ರಬಂಧ (೨) ಸಣ್ಣ ಕಥೆ (೩) ಕವಿತೆ.

ಪ್ರಬಂಧ ವಿಷಯ: "ಇಂದಿನ ಪರಿಸ್ಥಿತಿಯಲ್ಲಿ ಕರ್ನಾಟಕ ಏಕೀಕರಣವನ್ನು ಸಾಧಿಸುವ ದಾರಿ ಯಾವುದು?"

ಸಣ್ಣ ಕಥೆ ಫೂಲ್‌ಸ್ಕೇಪ್ ೬ ಪುಟಗಳನ್ನೂ ಪ್ರಬಂಧವು ಫೂಲ್‌ಸ್ಕೇಪ್ 12 ಪುಟಗಳನ್ನೂ ಮೀರಬಾರದು. ಬರೆಹಗಳು ಸ್ವತಂತ್ರವಾಗಿದ್ದು ಈ ಮೊದಲು ಎಲ್ಲಿಯೂ ಪ್ರಕಟವಾಗಿರಬಾರದು. ಬಹುಮಾನ ಪಡೆದ ಬರೆಹಗಳನ್ನು ಪ್ರಕಟಿಸುವ ಅಧಿಕಾರ ಸ್ಪರ್ಧೆಯನ್ನು ಏರ್ಪಡಿಸಿದವರಿಗೆ ಸೇರಿದೆ. ಬರೆಹಗಳು ಫೆಬ್ರವರಿ ತಾ 10ರಂದು ಅಥವಾ ಅದರ ಮೊದಲು ನಮ್ಮ ಕೈ ಸೇರಬೇಕು. ಸ್ಪರ್ಧಿಗಳು ತಮ್ಮ ಹೆಸರನ್ನು ಲೇಖನ ಅಥವಾ ಕವಿತೆಯನ್ನು ಬರೆದ ಕಾಗದದಲ್ಲಿ ಸೂಚಿಸದೆ ಪ್ರತ್ಯೇಕ ಒಂದು ಕಾಗದದಲ್ಲಿ ಸೂಚಿಸಬೇಕು.

ಪ್ರತಿಯೊಂದು ವಿಷಯಕ್ಕೆ ಮೊದಲನೆಯ ಮತ್ತು ಎರಡನೆಯ ಬಹುಮಾನ ಎಂದು ಎರಡೆರಡು ಬಹುಮಾನಗಳನ್ನು ಕೊಡಲಾಗುವುದು. ಬರೆಹಗಳನ್ನು ಬಿ. ಈಶ್ವರ ಭಟ್ಟ C/o ಕನ್ನಡ ಪ್ರಪಂಚ ಪ್ರಕಾಶನ, ಮಂಗಳೂರು ೨, ಈ ವಿಳಾಸಕ್ಕೆ ಕಳುಹಿಸಬೇಕು.

In the Court of the District Munsif of Mangalore.

S. C. No. 742 of 1953.

Between:

G. Narayana Mudlagiri Prabhu... Plaintiff.

and

Ganapathi Prabhu ... Defendant.

To, Defendant: Ganapathi Prabhu, son of Manjunath Prabhu, merchant at Paikal Peta in Udipi Taluk, Post Udipi, S. Kanara.

Take notice that the above suit filed by the plaintiff for recovery of Rs. 212—10—0 with future interest and costs of suit stands posted to 26—2—1954 for disposal. If you wish to oppose the same you may do so either in person or by pleader at 10 A. M. on the said date failing which the suit will be decided in your absence.

[By Order]

H. Vasudeva Kamath,

Vakil for Plaintiff.

Mangalore, 2—2—1954

ಶಿರ್ವ—ಸ್ಥಳೀಯ ಶಾರದಾ ಎಲಿಮೆಂಟರಿ ಶಾಲೆಯ ವರ್ಷಾಂತ್ಯೋತ್ಸವವು ಉಡುಪಿ ರೇಂಜಿನ ಶಾಲಾ ಡಿಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ ವೆಂಕಟರಾಯ ಗಡಿಯಾರರ ಅಧ್ಯಕ್ಷತೆಯಲ್ಲಿ ಕಳೆದ ತಾ 22ರಲ್ಲು ಸಾಂಗವಾಗಿ ಜರಗಿತು.

ಪಂಚಾಯತ ಬೋರ್ಡಿನ ಸಾಮಾನ್ಯ ಸಭೆಯು ಕಳೆದ ತಾ 18ರಲ್ಲು ಶ್ರೀ ಎಸ್. ಎ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಬಂಟಕಲ್ಲಿನಿಂದ ಹೇರೂರಿಗೆ ಒಂದು ರಸ್ತೆ ನಿರ್ಮಿಸುವ ಇತ್ಯಾದಿ ನಿರ್ಣಯಗಳಾದುವು.

ಪ್ರಜಾರಾಜ್ಯ ದಿನೋತ್ಸವದ ಸಂಬಂಧ ಹಿಂದೂ ಹೈಸ್ಕೂಲು ವಠಾರದಲ್ಲಿ ಬೆಳಿಗ್ಗೆ ಶ್ರೀ ಚಂದ್ರಹಾಸ ಹೆಗ್ಡೆಯವರು ಧ್ವಜಾರೋಹಣ ಮಾಡಿದರು, ಶ್ರೀ ಬಿ. ಜಯರಾಮ ಶೆಟ್ಟರು ಕಾಲೋಚಿತ ಭಾಷಣವಿತ್ತರು.

ಮುಲ್ಕಿ ಡಿವಿಜನಿನ ಸ್ಪೋರ್ಟ್ಸ್ ಮೀಟ್ ಸಮಾರಂಭವು ಹಿಂದೂ ಹೈಸ್ಕೂಲು ವಠಾರದಲ್ಲಿ ಈಚೆಗೆ ಡಾ| ಟಿ. ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು.

ಸೈಂಟ್ ಮೇರೀಸ್ ಹೈಸ್ಕೂಲಿನ ವರ್ಷಾಂತ್ಯೋತ್ಸವವು ಕಳೆದ ತಾ 31ನೇ ಸಂಜೆ ಡಿ. ಮುನ್ಸಿಫ್ ಶ್ರೀ ಯಚ್. ಲಕ್ಷ್ಮಣ ಸಾಲಿಯಾನ್ ಇವರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ಯಥಾ ಸಾಂಗವಾಗಿ ನೆರವೇರಿತು.

ಎಕ್ಕಾರು—ಸ್ಥಳೀಯ ಪಂಚಾಯತಬೋರ್ಡಿನ ಸರಹದ್ದಿಗೆ ಸೇರಿದ ಕಮ್ಯೂನಿಟಿ ಪ್ರೊಜೆಕ್ಟ್ ಸಹಾಯದಿಂದ ನಿರ್ಮಿಸಲಾದ ಪೆರ್ಮುದೆ ಮಂಗಳಪೇಟೆ ರಸ್ತೆಯಲ್ಲಿಯ ಸೇತುವೆಯನ್ನು ಕಳೆದ ತಾ. 26ರಲ್ಲು ಉದ್ಘಾಟಿಸುವ ಸಮಾರಂಭವು ಕಮ್ಯುನಿಟಿ ಪ್ರೊಜೆಕ್ಟ್ ಅಸಿಸ್ಟೆಂಟ್ ಇಂಜಿನಿಯರ್ ಮತ್ತು ಎಕ್ಕಾರು ಪಂಚಾಯತ ಬೋರ್ಡ್ ಪ್ರೆಸಿಡೆಂಟ್ ಶ್ರೀ. ಬಿ. ಸುಬ್ಬಯ್ಯ ಹೆಗ್ಡೆಯವರ ಸಮಕ್ಷಮ ಜರಗಿತು. ಪೆರ್ಮುದೆ ಪಟೇಲ್ ಶ್ರೀ ವೈ. ಲಕ್ಷ್ಮಣರಾಯರು ಉದ್ಘಾಟನೆ ಕಾರ್ಯವನ್ನು ನೆರವೇರಿಸಿದರು.

ನಿಡ್ಡೋಡಿ:—ಇಲ್ಲಿಯ ಬಾಪೂಜಿ ಎಲಿಮೆಂಟರಿ ಶಾಲೆಯಲ್ಲಿ ಪಟೇಲ್ ಶ್ರೀ. ಎನ್. ಕೃಷ್ಣ ಶೆಟ್ಟರ ನೇತೃತ್ವದಲ್ಲಿ ಧ್ವಜವಂದನೆ ಇತ್ಯಾದಿ ಕಾರ್ಯಕ್ರಮಗಳಾದುವು.

ಬೈಲೂರು—ಬಸ್ರಿ ಬೋ. ಎಲಿಮೆಂಟರಿ ಶಾಲಾ ಕಟ್ಟಡದ ಶಂಕುಸ್ಥಾಪನೆಯು ಜಿಲ್ಲಾ ಕಮ್ಯೂನಿಟಿ ಪ್ರೊ. ಆಫೀಸರ್ ಶ್ರೀ ಯಚ್. ನರಸಿಂಹನವರು ಕಳೆದ ತಾ 29ರಲ್ಲು ನೆರವೇರಿಸಿದರು. ಅಸಿ. ಕ. ಪ್ರೊ. ಆಫೀಸರರೂ ಊರ ಮಹನೀಯರೂ ಸಹಕರಿಸಿದರು.

ಹಿರೆಬೆಟ್ಟು— ಎಯಿಡೆಡ್ ಎಲಿಮೆಂಟರಿ ಶಾಲೆಯಲ್ಲಿ ಪ್ರಜಾಪ್ರಭುತ್ವ ದಿನಾಚರಣೆಯು ಶ್ರೀ ದೇವದಾಸ ಹೆಗ್ಡೆಯವರಿಂದ ಧ್ವಜಾರೋಹಣ, ಶ್ರೀಗಳಾದ ಶಿವರಾಮ ಶೆಟ್ಟಿ ರಾಘವ ಶೆಟ್ಟಿ ಭಾಷಣಗಳಿಂದ ನೆರವೇರಿತು.

ಬ್ರಹ್ಮಾವರ—ಎಸ್. ಎಮ್. ಎಸ್. ಹೈಸ್ಕೂಲಿನಲ್ಲಿ ಪ್ರಜಾರಾಜ್ಯ ದಿನಾಚರಣೆಯು ಶ್ರೀ ಕೆ. ಪಿ. ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಬೈಕಾಡಿ ವೆಂಕಟಕೃಷ್ಣ ರಾಯರು ಭಾಷಣ ಮಾಡಿದರು.

ಕುದಿಗ್ರಾಮ ಕೊಡಿ ಬೆಟ್ಟು—ನಲ್ಲಿ ಹೊಸದಾಗಿ ಸಂತೆ ಮಾರ್ಕೆಟನ್ನು ತೆರೆಯುವ ಸಮಾರಂಭವು ಪಟೇಲ್ ಯು. ಜಗನ್ನಾಥ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಕೊಂಡಾಡಿ ಜಗನ್ನಾಥ ಶೆಟ್ಟರ ಸ್ವಾಗತ ಭಾಷಣವಾದ ಮೇಲೆ ಶ್ರೀ ಹಯವದನ ಕಾಂತಿಂತಾಯ, ಡಾ. ಬಿ. ಚಂದಯ್ಯ ಹೆಗ್ಡೆ, ಬಿ. ರಂಗನಾಥ ಹೆಗ್ಡೆ, ರಂಗಪ್ಪ ನಾಯಕ್ ಮೊದಲಾದವರು ಭಾಷಣ ಮಾಡಿದರು. ರಾತ್ರಿ ದಶಾವತಾರ ಆಟವಿತ್ತು.

ಹಿರಿಯಡ್ಕ—ಪ್ರಜಾಪ್ರಭುತ್ವ ದಿನಾಚರಣೆಯು ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ಸದಾನಂದ ಹೆಗ್ಡೆ ಎಂ. ಪಿ. ಯವರು ಮುಖ್ಯ ಭಾಷಣಗಾರರಾಗಿದ್ದರು.

ಶಿವಪುರ ಇಲ್ಲಿಯ ಶ್ರೀರಾಮ ಭಜನಾಸಮಿತಿಯ ಆಶ್ರಯದಲ್ಲಿ ಕಳೆದತಾ 23ರಲ್ಲು ಮೂರ್ಸಾಲು ಕೇಂದ್ರದಲ್ಲಿ ಆರನೆವರ್ಷದ ಭಜನಮಂಗಳೋತ್ಸವವು ಶ್ರೀ ಮುದ್ರಾಡಿ ಕೃಷ್ಣಯ್ಯ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು.

ನಿಂಜೂರು ನಿಂಜೂರು ಪಡುಮನೆ ಮೀನಾಕ್ಷಿ ಸೆಡ್ತಿಯವರು ಇದೇ ತಾ19ರಲ್ಲು ಸ್ವರ್ಗಸ್ಥರಾದುದು ವಿಷಾದಕರವಿದೆ

ಬೈಂದೂರು . ಕಳೆದ ತಾ16ರಲ್ಲು ದ. ಕ. ಜಿಲ್ಲೆಯ ಸಹಕಾರಿ ಮುಂದಾಳು ಶ್ರೀ ಮೊಳಹಳ್ಳಿ ಶಿವರಾಯರಿಗೆ ಮಾನ ಪತ್ರವೀಯುವ ಸಮಾರಂಭವು ಸ್ಥಳೀಯ ಹೈಸ್ಕೂಲು ವಠಾರದಲ್ಲಿ ರೆ| ಫಾ| ಫರ್ಟಾಡೊ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಸಹಕಾರಿ ಯೂನಿಯನ್ನಿನ ಅಧ್ಯಕ್ಷ ಶ್ರೀ ನರಸಿಂಹ ವೈದ್ಯರ್. ಶ್ರೀ ಡಿ. ಆರ್. ಕುಂಬಳೆ ಮೊದಲಾದವರು ಮಾತಾಡಿದರು. ಸಹಕಾರಿ ಸುಪರ್ ವೈಜರ್ ಶ್ರೀ ಬಿ. ಚಂದ್ರಶೇಖರ ಹೊಳ್ಳರು ಧನ್ಯವಾದಗಳನ್ನರ್ಪಿಸಿದರು.

ಕಡಿಯಾಳಿ—ಹಾ| ಎ| ಶಾಲೆಯ ವರ್ಷಾಂತ್ಯ ಸಮಾರಂಭವು ಕಳೆದ ತಾ 24ರಲ್ಲು ಶ್ರೀ ಉಗ್ರಾಣ ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಹೆಡ್ಮಾಸ್ತರ್ ಶ್ರೀ ವಿ. ಶ್ರೀನಿವಾಸ ಭಟ್ಟರು ವರದಿಯನ್ನೋದಿದರು. ಶ್ರೀ ಕೆ. ಶ್ರೀಪತಿ ಉಪಾಧ್ಯಾಯರು ಶಾಲಾ ಸ್ವಸ್ತಿವಾಚನ ಮಾಡಿದರು. ಬಹುಮಾನ ವಿತರಣೆ. ಶ್ರೀ ಕೆ. ಕೆ. ಪೈ ಮೊದಲಾದವರ ಭಾಷಣ ಆದ ಬಳಿಕ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಈ ಶಾಲೆಯು ಬೇಗನೆ ಹೈಸ್ಕೂಲಾಗುವಂತೆ ಆಶಿಸಿದರು. "ಸಾಂಬವಿಜಯ" ಕನ್ನಡ ನಾಟಕ ಹಾಗೂ ಇತರ ಮನರಂಜನ ಕಾರ್ಯಕ್ರಮಗಳಿಂದ ಉತ್ಸವವು ಕೊನೆಗೊಂಡಿತು.

ಮೂಲ್ಕಿ—ಸ್ಥಳೀಯ ಗವರ್ನಮೆಂಟ್ ಹೈಸ್ಕೂಲಿನ ವರ್ಷಾಂತ್ಯೋತ್ಸವವು ಕಳೆದ ತಾ 21ರಲ್ಲು ಸಂಜೆ ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಯಶಸ್ವಿಯಲ್ಲಿ ಜರಗಿತು. ಮುಖ್ಯೋಪಾಧ್ಯಾಯ ಶ್ರೀ ಕೆ. ವಿಠಲ ಶೆಣೈಯವರು ಸ್ವಾಗತ ಭಾಷಣ ಮಾಡಿದರು.

ಗೋಳಿತಟ್ಟು ಸೇತುವೆ—ಪ್ರಾರಂಭೋತ್ಸವವು. ಕಳೆದ ತಾ 16ರಲ್ಲಿ ಶ್ರೀ ಕೆ. ವೆಂಕಟರಮಣ ಗೌಡ ಎಂ. ಎಲ್. ಎ. ರವರ ಅಧ್ಯಕ್ಷತೆಯಲ್ಲಿ ಶ್ರೀ ಎಸ್. ನರ್ಸಪ್ಪಯ್ಯನವರಿಂದ ನೆರವೇರಿಸಲ್ಪಟ್ಟಿತು.

ಪೆರಡಾಲ—ಸ್ಥಳೀಯ ನವಜೀವನ ಹೈಸ್ಕೂಲಿನ ವರ್ಷಾಂತ್ಯೋತ್ಸವ ಮತ್ತು ಹಳೆವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ಕಳೆದ ತಾ. 9 ಮತ್ತು 10ರಲ್ಲು ಶ್ರೀ ಬಿ. ಭವಾನಿರಾವ್ ಮತ್ತು ಶ್ರೀ ಎಸ್. ಎನ್. ಹೊಳ್ಳರ ಅಧ್ಯಕ್ಷತೆಯಲ್ಲಿ ಅನುಕ್ರಮವಾಗಿ ಜರಗಿತು. ಶ್ರೀ ಸುಬ್ರಾಯಭಟ್ಟರು ಸ್ವಾಗತ ಭಾಷಣಮಾಡಿದರು; ಶ್ರೀ ಎಸ್. ವಿ. ಎಲ್. ಎನ್. ಶರ್ಮರು ಶಾಲಾ ಸ್ವಸ್ತಿವಾಚನ ಮಾಡಿದರು.

ಸುರತ್ಕಲ್-ಮುಲ್ಕಿ ಮಿತ್ರ ಪಟ್ಣ ಮೊಗವೀರ ಧರ್ಮಾರ್ಥ ರಾತ್ರಿ ಶಾಲೆ ಮತ್ತು ಅಗ್ನಿವಕರಿಯ ಹಾ| ಎ| ಶಾಲೆಗಳಲ್ಲಿ ಕಳೆದ ತಾ. 26ರಂದು ಶ್ರೀ. ಚಂದಯ ಸುವರ್ಣರ ಅಧ್ಯಕ್ಷತೆಯಲ್ಲಿ ಪ್ರಜಾಪ್ರಭುತ್ವ ದಿನವು ವಿವಿಧ ಕಾರ್ಯಕ್ರಮಗಳಿಂದ ಆಚರಿಸಲ್ಪಟ್ಟಿತು.

ತಣ್ಣೀರುಪಂತ:— ಸ್ಥಳೀಯ ಶಾಲಾ ಮಾಸ್ತರು ಮತ್ತು ಬೋರ್ಡು ಶಾಲಾ ಮಕ್ಕಳು ಪ್ರಭಾತಫೇರಿ, ಧ್ವಜವಂದನೆ ಇತ್ಯಾದಿ ಕಾರ್ಯಕ್ರಮಗಳಿಂದ ಪ್ರಜಾರಾಜ್ಯ ದಿನವನ್ನು ಆಚರಿಸಿದರು.

ಮೂಡಬಿದರೆ— ಜೈನ್ ಹೈಸ್ಕೂಲಿನ ವರ್ಷಾಂತ್ಯೋತ್ಸವವು ಕಳೆದ ತಾ. 29ನೇ.. ಸಾಯಂಕಾಲ ಕಮ್ಯುನಿಟಿ ಪ್ರೊಜೆಕ್ಟ್ಸ್ ಎಕ್ಸಿಕ್ಯುಟಿವ್ ಆಫೀಸರ್ ಶ್ರೀ ಯಚ್. ನರಸಿಂಹರವರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ವಿಜೃಂಭಣೆಯಿಂದ ಜರಗಿತು. ಸ್ವಸ್ತಿವಾಚನವನ್ನು ಶ್ರೀ ಸನತ್ಕುಮಾರ ಕಡಂಬ ಬಿ. ಎ., ಅವರು ನೆರವೇರಿಸಿದರು. ಬಹುಮಾನ ವಿತರಣೆ ಅಧ್ಯಕ್ಷರ ಭಾಷಣಗಳಾಗಿ ರಾತ್ರಿ ವಿವಿಧ ವಿನೋದಾವಳಿಗಳು ನಡೆದುವು.

ಹಿರಿಯೂಣ—ಬೋರ್ಡು ಎಲಿಮೆಂಟರಿ ಶಾಲಾ ಮಕ್ಕಳು ತಾ23.21ರಲ್ಲು ಬಾರ್ಕೂರು ಹಂಗಾರಕಟ್ಟೆ ಮೊದಲಾದ ಸ್ಥಳಗಳಿಗೆ ಶೈಕ್ಷಣಿಕ ಪ್ರವಾಸಮಾಡಿದರು.

ಬೊಂಬಾಯಿ

ಮೊಗವೀರ ವ್ಯವಸ್ಥಾಪಕ ಮಂಡಳಿ

ಬೊಂಬಾಯಿ—ಇವರ ಸುವರ್ಣ ಮಹೋತ್ಸವವು ಕಳೆದ ತಾ 11, 12 ಮತ್ತು 13ರಲ್ಲು ಬೊಂಬಾಯಿಯ ಸರ್ ಸಿ. ಜೆ. ಹಾಲಿನಲ್ಲಿ ಜರಗಿತು. ಭಾರತದ ಉಪರಾಷ್ಟ್ರಪತಿಗಳಾದ ಡಾ| ಎಸ್. ರಾಧಾಕೃಷ್ಣನ್, ಅವರು ಉತ್ಸವವನ್ನು ಉದ್ಘಾಟಿಸಿದರು. ಜಸ್ಟಿಸ್ ಶ್ರೀ ಎಮ್. ಚಗ್ಲಾರವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದು ಸಂಘದ ಸೇವೆಯನ್ನು ಪ್ರಶಂಸಿಸಿ ಮಾತನಾಡಿದರು. ಶ್ರೀಮತಿ ಚಗ್ಲಾರವರು ಮಂಡಳಿಯ ಹಿರಿಯ ಕಾರ್ಯಕರ್ತರಿಗೆ ಪಾರಿತೋಷಕ ಹಂಚಿದರು. ಶ್ರೀಗಳಾದ ಎಮ್. ಆರ್. ಮಸಾನಿ ಮತ್ತು ಮಾರ್ಕ್. ಎಸ್. ನೊರೋನ್ಹಾರವರು ಭಾಷಣ ಮಾಡಿದರು. ಶ್ರೀ ಬಿ. ಎಸ್. ಸಾಲಿಯಾನರು ಧನ್ಯವಾದಗಳನ್ನರ್ಪಿಸಿದರು. ನಂತರ ಮನರಂಜನಾ ಕಾರ್ಯಕ್ರಮಗಳಾದುವು.

ಎರಡನೇ ದಿನದ ಸಮಾರಂಭದ ಅಧ್ಯಕ್ಷತೆಯನ್ನು ಮಾನ್ಯ ಮಂತ್ರಿ ಶ್ರೀ ಎಮ್. ಪಿ. ಪಾಟೀಲರು ವಹಿಸಿದ್ದರು ಮಾನ್ಯ ಉಪಮಂತ್ರಿ ಶ್ರೀ ಬಿ. ಡಿ. ಜತ್ತಿ, ಶ್ರೀಗಳಾದ ಕೆ. ಎಫ್. ಪಾಟೀಲ್, ಎಮ್. ವಿ. ಬಂಗೇರ ಮೊದಲಾದವರು ಮಾತನಾಡಿದರು. ಕೊನೆಯ ದಿನದ ಉತ್ಸವವು ಮುಂಬಯಿ ಪ್ರಾದೇಶಿಕ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಶ್ರೀ ಎಸ್. ಕೆ. ಪಾಟೀಲರ ಅಧ್ಯಕ್ಷತೆಯಲ್ಲಿ ಜರಗಿತು. ಸುವರ್ಣ ಮಹೋತ್ಸವದ ಪಂದ್ಯಾಟಗಳಲ್ಲಿ ಗೆದ್ದವರಿಗೆ ಬಹುಮಾನ ಹಂಚಲಾಯಿತು. ಶ್ರೀ ಎಸ್. ಆರ್. ಅಮೀನರು ಸುವರ್ಣ ಮಹೋತ್ಸವದ ವರದಿಯನ್ನೋದಿದರು — ಶ್ರೀಗಳಾದ ಕೆ. ಎನ್. ಗ್ಯಾತೊಂಡೆ ಮತ್ತು ನಾಥಾಲಾಲ್ ಡಿ. ಪಾರಿಖರು ಮಂಡಳಿಯ ವಿವಿಧ ಚಟುವಟಿಕೆಗಳನ್ನು ಕೊಂಡಾಡಿದರು. ಶ್ರೀ ಎಚ್. ಕೆ. ಪುತ್ರನ್ನರು ಧನ್ಯವಾದಗಳನ್ನರ್ಪಿಸಿದರು.

ಜ್ಯೋತಿ ಕಲಾ ಕರ್ನಾಟಕ ನಾಟಕ ಸಭಾ—ಇವರು ಶ್ರೀ ಎಸ್. ಎನ್. ಚೋಳಾರರಿಂದ ಬರೆಯಲ್ಪಟ್ಟ "ಪ್ರೇಮಜ್ಯೋತಿ" ಎಂಬ ಸಾಮಾಜಿಕ ಕನ್ನಡ ನಾಟಕವನ್ನು 13-2-54ನೇ ಶನಿವಾರ ರಾತ್ರಿ ಘಂಟೆ 7.45ಕ್ಕೆ ಪರೇಲ್ ಟ್ರಾಮ್ ಜಂಕ್ಷನಿನ ಬಳಿಯಲ್ಲಿರುವ ದಾಮೋದರ್ ಹಾಕೆರ್ಸ್ ಥಿಯೇಟರಿನಲ್ಲಿ ಶ್ರೀಮತಿ ಕಮಲಾ ಬಾಯಿ ಮಂಗಳೂರ್‌ಕಾರ್ ಇವರ ಅಧ್ಯಕ್ಷತೆಯಲ್ಲಿ ಅಭಿನಯಿಸಲಿರುವರು.

ತಾರೀಕು 2—2—54ರಿಂದ

ಕ್ರೈಸ್ತ ಧಾರ್ಮಿಕ ಚಿತ್ರ—

ಪ್ರಿನ್ಸ್ ಒಫ್ ಪೀಸ್

ಮುಂದಿನ ಚಿತ್ರ:- ಸಿಸಿಲ್ ಬಿ. ಡೆಮಿಲ್ಲರ ವಿಸ್ಮಯಕಾರೀ ಸರ್ಕಸ್ ಚಿತ್ರ-

ದಿ ಗ್ರೇಟೆಸ್ಟ್ ಶೋ ಆನ್ ಅರ್ಥ್

ತಾರೀಕು, 7—3--54ನೇ ಬೆಳಿಗ್ಗೆ 10 ಘಂಟೆಗೆ

ಮೆಟ್ರೊ ಚಿತ್ರ ಮಾರ್ಕ್ಸ್ ಬ್ರದರ್ಸ್ ಎಟ್ ದಿ ಸರ್ಕಸ್

ಅನಂತರ: ಫಿಲ್ಮಿಸ್ತಾನದವರ 'ಅನಾರ್ಕಲಿ', ಕನ್ನಡ ಚಿತ್ರ ರತ್ನ – ಜಾತಕಫಲ

ಶ್ರೀ ರಾಮಕೃಷ್ಣ ಥಿಯೇಟರ್, ಉಡುಪಿಯಲ್ಲಿ

ದಿ ಉಡುಪಿ ಬೇಂಕ್ ಲಿಮಿಟೆಡ್, ಉಡುಪಿ.

THE UDIPI BANK LTD., UDIPI.

ನೋಟೀಸು

ಈ ಕೆಳಗೆ ಹೆಸರುಕಾಣಿಸಿದವರು ಈ ಬೇಂಕಿನ ಉಡುಪಿ ಮತ್ತು ಕುಂದಾಪುರ ಶಾಖೆಗಳಿಂದ ಚಿನ್ನಾಭರಣಗಳ ಈಡಿನಮೇಲೆ ಪಡಕೊಂಡ ಲೋನಿನ ಮೊಬಲಗನ್ನಾಗಲಿ ಅದರಮೇಲಣ ಬಡ್ಡಿ ವಗೈರೆಯನ್ನಾಗಲೀ ಕ್ಲಪ್ತ ಮ್ಯಾದೆಗೆ ಸರಿಯಾಗಿ ಸಲ್ಲಿಸದೆ ಇರುವುದರಿಂದಲೂ, ಸದ್ರಿಯವರಿಗೆ ಈ ಬಗ್ಗೆ ರಿಜಿಸ್ಟ್ರಿ ನೋಟೀಸುಗಳನ್ನು ಬಿಟ್ಟಾಗ್ಯೂ ಆವೇಜನ್ನು ಕಟ್ಟದೆ ಇರುವುದರಿಂದಲೂ, ಸದ್ರಿ ಸಾಲಗಳಬಾಬ್ತು ಅಸಲು ಬಡ್ಡಿ ವಗೈರೆಯಬಗ್ಗೆ ಸದ್ರಿಯವರು ಅಡವಿಟ್ಟ ನಗಗಳನ್ನು ಇದೇ ತಾ 13-2-51ನೇ ಶನಿವಾರ ಹಗಲು ಗಂಟೆ 11ಕ್ಕೆ ಸರಿಯಾಗಿ ಸದ್ರಿ ಬೇಂಕಿನ ಉಡ್ಪಿ ಆಪೀಸಿನಲ್ಲಿ ಏಲಂ ಮಾಡಲಾಗುವುದು. ಯಾವುದೇ ಕಾರಣದಿಂದ ಏಲಂ ಅದೇದಿವಸ ಮಾಡಲು ಅನಾನುಕೂಲವಾದಲ್ಲಿ ಪುನಃ ನೋಟೀಸು ಕೊಡದೇನೆ ಏಲಂ ಮುಂದುವರಿಸುವ ಹಕ್ಕು ಬೇಂಕಿಗೆ ಕಾದಿರಿಸಲ್ಪಟ್ಟಿದೆ, ತಿಳಿದಿರಲಿ.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ಬರಬೇಕಾದ ಅಸ್ಲು ರೂ.
68/52	ಕೆ. ಆರ್. ಮಲ್ಲಿ S/o ಕೆ. ಎಸ್. ಮಲ್ಲಿ, ಕಲ್ಯಾಣಪುರದಲ್ಲಿ ವಾಸಿಸುವವರು.	32—0—0
13/53	ಪಿ. ವಾಸುದೇವ ಪ್ರಭು S/o ಪಿ. ನಾರಾಯಣ ಪ್ರಭು, ಪ್ರಭಾಕರ ಪ್ರೆಸ್ ಲಿಮಿಟೆಡ್ ಉಡುಪಿ.	140—0—0
47/52	ಕೆ. ಭುಜಂಗ ರಾವ್, S/o ಲಕ್ಷ್ಮಣ, ಪೋಸ್ಟ್‌ಮೇನ್, ಕಲ್ಯಾಣಪುರ.	70—0—0
72/51	ಡಿ. ರಾಜ ಪೂಜಾರಿ, S/o ಕರಿಯ ಪೂಜಾರಿ, ಮೂಡು ತೋನ್ಸೆ, ನಿಡಂಬಳ್ಳಿ, ಕಲ್ಯಾಣಪುರ. ಈಗ ಟೀಚರ್ ಕಡಿಯಾಳಿ ಹಯರ್ ಎಲಿಮೆಂಟರಿ ಶಾಲೆ, ಕಡಿಯಾಳಿ.	245—0—0
Coondapoor J.L. 51/52	ಕೆ. ಉಸ್ಮಾನ ಶರೀಫ್ S/o ಕೆ. ಕಾದರ್ ಶರೀಫ್, ಮರ್ಚೆಂಟ್, ಕುಂದಾಪುರ.	45—0—0

ಉಡುಪಿ, 1—2—1954.

P. Purushothama Prabhu,
Agent.

NOTICE.

It has been represented to us by Mr. Baikadi Shabuddin Saheb holder of our policy No. 215635 issued in his favour that the said policy has been totally destroyed and that it was not in any manner transferred or encumbered. Unless valid objections are received at this office within 15 days from the date hereof, the said policy will be cancelled and a duplicate policy issued in his name.

Secretary,
HINDUSTHAN CO-OPERATIVE INSURANCE SOCIETY, LTD.

Dated 1—2—1954.

ಮಂಗಳೂರು

ಪ್ರಜಾಪ್ರಭುತ್ವ ದಿನಾಚರಣೆ ನಿಮಿತ್ತ ಕಳೆದ ತಾ 26ರಲ್ಲು ಬೆಳಗ್ಗೆ ಕೇಂದ್ರಮೈದಾನಿನಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ಎ. ಮಹಾಲಿಂಗಂ ಚೆಟ್ಟಿಯಾರರು ರಾಷ್ಟ್ರಧ್ವಜವನ್ನರಳಿಸಿದರು. ರಿಜರ್ವ್ ಪೋಲೀಸ್‌ದಳ, ತಾಲೂಕು ಪೋಲೀಸ್ ದಳ, ಎನ್. ಸಿ. ಸಿ. ದಳ, ಫಾಯರ್‌ಸರ್ವಿಸ್ ದಳಗಳ ಜೋಡು ಮಾರ್ಚ್‌ಪಾಸ್ಟು ಶಿಸ್ತಿನಿಂದ ನಡೆಯಿತು. ಬಂದರದಲ್ಲಿ ದಿ ಕೆನರಾ ವೆಸಲ್ ಓನರ್ಸ್ ಸಂಘದ ನೇತೃತ್ವದಲ್ಲಿ ದೋಣಿ ಪಂದ್ಯಾಟ, ಈಜುವ, ಮುಳುಗುವ, ಬಾತುಕೋಳಿ ಹಿಡಿಯುವ ಪಂದ್ಯಾಟಗಳು ಜರಗಿದವು. ಮಧ್ಯಾಹ್ನ ಸಾಧಾರಣ 3000 ಬಡ ಜನರಿಗೆ ಭೋಜನ ಕೊಡಲಾಯಿತು. ಸಂಜೆ ಶ್ರೀ ಎಲ್. ಸಿ. ಪ್ಯಾಸ್, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿತು. ಪಂದ್ಯಾಟಗಳಲ್ಲಿ ಗೆದ್ದವರಿಗೆ ಬಹುಮಾನ ದಂಚಿದಬಳಿಕ ಶ್ರೀಗಳಾದ ಕೆ. ಕೃಷ್ಣರಾವ್, ಬಿ. ಕೆ. ಸೂರ್ಯನಾರಾಯಣ ರಾವ್, ಅಪ್ಪಯ್ಯ ಬೇಲಗದ್ದೆ, ಎಚ್. ಎಚ್. ಒಡೆಯರ್, ಬಿ. ಎಮ್. ಇದಿನಬ್ಬ, ಎಫ್. ಎಕ್ಸ್. ಡಿ. ಪಿಂಟೊ ಮೊದಲಾದವರು ಮಾತನಾಡಿದರು. ಸಾರ್ವಜನಿಕ ಸಭೆ ನಡೆಯುತ್ತಿದ್ದಾಗ ಮುಷ್ಕರಹೂಡಿದ ಹಂಚಿನ ಮಜೂರರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ. ಎಫ್. ಎಕ್ಸ್. ಡಿ. ಪಿಂಟೋರವರ ವಿರುದ್ಧವಾಗಿ ಘೋಷಣೆಗಳುಳ್ಳ ಪೋಸ್ಟರುಗಳನ್ನು ಎತ್ತಿಹಿಡಿದುಕೊಂಡು ಅಲ್ಲಲ್ಲಿ ನಿಂತಿದ್ದರು.

ಅತ್ತಾವರ ರಾತ್ರಿ ಶಾಲೆಯಲ್ಲಿ ಶ್ರೀ ಪಿ. ಕೆ. ನಾರಾಯಣನವರ ಅಧ್ಯಕ್ಷತೆಯಲ್ಲಿ ಆರ್. ಎಸ್. ಎಸ್. ನವರ ವಿದ್ಯಾರಣ್ಯ ಶಾಖೆಯಲ್ಲಿ ಶ್ರೀ ಕಡಂಗೋಡ್ಲು ಶಂಕರ ಭಟ್ಟರ ಅಧ್ಯಕ್ಷತೆಯಲ್ಲಿ, ಬೆಸೆಂಟ್ ಬಾಲಿಕಾ ಪಾಠಶಾಲೆಯಲ್ಲಿ ಡಾ! ಬಿ. ಜಿ. ಪ್ರಭುಗಳ ಅಧ್ಯಕ್ಷತೆಯಲ್ಲಿ ಅಂತೆಯೇ ಇನ್ನಿತರ ನಗರದ ಹಲವು ಸಂಸ್ಥೆಗಳಲ್ಲಿ ಪ್ರಜಾರಾಜ್ಯ ದಿನಾಚರಣೆ ನಡೆಯಿತು.

ವಾರ್ಷಿಕೋತ್ಸವ-ದ್ರಾವಿಡ ಬ್ರಾಹ್ಮಣ ವಿದ್ಯಾರ್ಥಿಭವನದ ವಾರ್ಷಿಕೋತ್ಸವವು ಕಳೆದ ತಾ 24ರಲ್ಲು ಶ್ರೀ ಕು. ತಿ. ಹರಿದಾಸ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ವರದರಾಜರಿಂದ ಸ್ವಾಗತ, ಶ್ರೀ ಅನಂತಭಟ್ಟರಿಂದ ವರದಿ ವಾಚನ, ಶ್ರೀ. ಶ್ರೀಪತಿರಾವ್ ಫಲಿಮಾರ್ ಕರ್ರೆವರಿಂದ ಸ್ವಸ್ತಿವಾಚನ, ಅನಕ್ಕೆ ಶ್ರೀ. ಕೆ. ಕರುಣಾಕರರಾಯರಿಂದ ಉತ್ತರಗಳಾದ ಬಳಿಕ ಅಧ್ಯಕ್ಷ ಭಾಷಣ, ವಿವಿಧ ವಿನೋದಾವಳಿಗಳಾದುವು.

ಮಂತ್ರಿ ಡಾ. ಯು. ಕೃಷ್ಣರಾಯರ ಆಗಮನ— ಕೈಗಾರಿಕೆ ಮತ್ತು ಮಜೂರ ಮಂತ್ರಿಗಳಾದ ಡಾ. ಯು. ಕೃಷ್ಣರಾಯರು ಕಳೆದ ತಾ. 30ನೇ ಸಂಜೆ ಮಂಗಳೂರಿಗೆ ಆಗಮಿಸಿದಾಗ ಇಲ್ಲಿಯ ಎಂ. ಎಲ್. ಎ. ಗಳೂ ಅಧಿಕಾರಿಗಳೂ, ಅನೇಕ ನಾಗರಿಕರೂ ಸ್ವಾಗತಿಸಿದರು. ಅವರು ಸರಕಾರಿ ಬಂಗ್ಲೆಯಲ್ಲಿ ಉಳಕೊಂಡು ಮರುದಿನ ಮತ್ತಾರು ಮತ್ತು ಪಿಟ್ಟಿ ಕಡೆಗಳಿಗೆ ತೆರಳಿ ಅಲ್ಲಿಯ ಕಾರ್ಯಕ್ರಮಗಳನ್ನು ಮುಗಿಸಿಕೊಂಡು ತಾ. 31ನೇ ಸಂಜೆ ಸುಮಾರು ೧೪ ಲಕ್ಷ ರೂಪ್ಯ ವೆಚ್ಚ ಮಾಡಿ ಕದ್ರಿಗುಡ್ಡೆಯಲ್ಲಿ ಕಟ್ಟಿಸಲಾದ ಕರ್ನಾಟಕ ಪೋಲಿಟೆಕ್ನಿಕ್ ಕಾಲೇಜಿನ ಭವ್ಯವಾದ ಹೊಸ ಕಟ್ಟಡಗಳ ಆರಂಭೋತ್ಸವನ್ನೂ ಒ ಒಗ್ಗೆ ಏರ್ಪಡಿಸಲಾದ ಕೈಗಾರಿಕಾ ಪ್ರದರ್ಶನದ ಉದ್ಘಾಟನೆಯನ್ನೂ ನೆರವೇರಿಸಿದರು. ಕರ್ನಾಟಕ ಪೋಲಿಟೆಕ್ನಿಕ್ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ. ಯು. ಕೃಷ್ಣಸ್ವಾಮಿರಾಯರು ಸ್ವಾಗತ ಭಾಷಣಮಾಡುತ್ತಾ ಈ ಸಂಸ್ಥೆಯ ಪ್ರಗತಿಯನ್ನು ವಿವರಿಸಿದರು. ಮಂತ್ರಿಗಳು ಭಾಷಣಮಾಡುತ್ತಾ ಮದ್ರಾಸು ಸರಕಾರವು ಔದ್ಯೋಗೀಕರಣಕ್ಕೆ ಹೊಂದಿಕೆಯಾಗುವಂತಹ ತರಬೇತಿಯನ್ನು ನೀಡುವ ವಿಧದಲ್ಲಿ ಔದ್ಯೋಗಿಕ ವಿದ್ಯೆಯನ್ನು ಪುನರ್ರಚಿಸುವುದನ್ನು ತನ್ನ ಮೊದಲ ಕರ್ತವ್ಯವಾಗಿಟ್ಟುಕೊಂಡಿದೆಯೆಂದೂ ಮುಂದಿನ ಪಂಚವಾರ್ಷಿಕ ಯೋಜನೆಯಲ್ಲಿ ಇದಕ್ಕೆ ಹೆಚ್ಚಿನ ಪ್ರಾಮುಖ್ಯತೆ ಕೊಡಲಾಗಿದೆಯೆಂದೂ ಪ್ರಾಂತ್ಯದಲ್ಲಿ ಔದ್ಯೋಗಿಕ ವಿದ್ಯೆಯಲ್ಲಿ ತರಬೇತಿ ಶಿಕ್ಷಣ ಕೊಡುವ ಸಂಸ್ಥೆಗಳ ಪ್ರಗತಿಯನ್ನೂ ವಿವರಿಸಿ ಉದಾರಿಗಳು ವಿದ್ಯಾರ್ಥಿ ವೇತನ ಮೊದಲಾದುವುಗಳ ಮೂಲಕ ಸಹಕರಿಸಬೇಕೆಂದೂ ಕೇಳಿಕೊಂಡರು.

ಮದ್ರಾಸಿನ ಜೋಯಿಂಟ್ ಡೈರೆಕ್ಟರ್ ಆಫ್ ಇಂಡಸ್ಟ್ರೀಸ್ ಶ್ರೀಯುತ ಪಿ. ಗೋವಿಂದ ಮೆನನರು ಧನ್ಯವಾದಗಳನ್ನಿತ್ತರು.

ಮಂತ್ರಿಗಳಿಗೆ ನಗರಸಭೆಯ ಬಿನ್ನವತ್ತಳೆ— ಕಳೆದ ತಾ. 30ನೇ ಬೆಳಗ್ಗೆ ಮಂಗಳೂರು ನಗರ ಸಭೆಯ ಅಧ್ಯಕ್ಷ ಶ್ರೀ. ಕೆ. ಸೂರ್ಯನಾರಾಯಣ ಅಡಿಗರು ಮನವಿಯನ್ನ ಪೀಸಿ ಸ್ಥಾನಿಕ ಸಂಸ್ಥೆಗಳಿಗೆ ಹೆಚ್ಚು ಅಧಿಕಾರ ಕೊಡಬೇಕೆಂದೂ ಮುನಿಸಿಪಲ್ ಅಧೀನದ ಕಟ್ಟಡ ಕಟ್ಟುವ ಬಗ್ಗೆ ಹಳೆಯ ಪೋಲೀಸ್ ಠಾಕಿ ಗ್ರೌಂಡನ್ನು ಸರಕಾರದವರು ನಗರ ಸಭೆಗೆ ಕೊಡಬೇಕೆಂದೂ ಮಂಗಳೂರು ಇಲೆಕ್ಟ್ರಿಕ್ ಸಪ್ಲೈಸ್ ಕಂಪೆನಿಯವರು ತಮ್ಮ ವಿದ್ಯುತ್ ಕ್ಷೇತ್ರವನ್ನು ಮುಂದುವರಿಸುವಂತೆ ಸರಕಾರ ಸಹಕರಿಸಬೇಕೆಂದು ಕೇಳಿಕೊಂಡರು.

ಅದೇ ದಿನ ಬೆಳಗ್ಗೆ ಹಂಚಿನ ಮಜೂರರ ಬೇಡಿಕೆಗಳನ್ನು ಮುಷ್ಕರದಿಂದುಂಟಾದ ಪರಿಸ್ಥಿತಿಯನ್ನೂ ವಿವರಿಸಿ, ಮಂತ್ರಿಗಳು ಇಲ್ಲಿರುವಾಗಲೇ ಈ ವಿವಾದವನ್ನು ತೀರ್ಮಾನಿಸಬೇಕೆಂದೂ ಹಂಚಿನ ಮಜೂರ ಸಂಘದವರು ಒಂದು ಮನವಿಯನ್ನು ಒಪ್ಪಿಸಿದರು.

ದ. ಕ ಜಿಲ್ಲಾ ಭಾರತ್ ಸ್ಕೌಟ್ಸ್ ಮತ್ತು ಗೈಡರ ಮಹಾ ಸಭೆಯು ಕಳೆದ— ತಾ. 24ರಲ್ಲಿ ಶ್ರೀ ಕೆ. ಸಂಜೀವ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಅಧಿಕಾರಿವರ್ಗಕ್ಕೆ ಶ್ರೀಗಳಾದ ಕೆ. ಎಸ್. ಹೆಗ್ಡೆ, ಎಮ್. ಪಿ., ಅಧ್ಯಕ್ಷ, ಎಸ್. ನರಸಪ್ಪಯ್ಯ ಮತ್ತು ಶ್ರೀಮತಿ ಶಾಂತೇರಿ. ಜಿ. ಪ್ರಭು, ಉಪಾಧ್ಯಕ್ಷರು, ಬಿ ಡಿ. ಫಿಲಿಪ್ಸ್ ಮತ್ತು ಎಮ್. ಶಿವರಾಮಾಚಾರ್ಯ ಜತೆ ಕಾರ್ಯದರ್ಶಿಗಳು; ಪಿ. ಪಾಂಡುರಂಗ ಭಂಡಾರಿ, ಕೋಶಾಧಿಕಾರಿಗಳಾಗಿ ಆರಿಸಲ್ಪಟ್ಟರು.

ಶೈಕ್ಷಣಿಕ ಪ್ರದರ್ಶನವೊಂದು ಸೈಂಟ್ ಎಲೋಸಿಯಸ್ ಕಾಲೇಜಿನಲ್ಲಿ ಕಳೆದ ತಾ. 20ರಿಂದ ಮೂರು ದಿನಗಳ ತನಕ ನಡೆಯಿತು. ಪ್ರದರ್ಶನದ ವಸ್ತು, ವಿಷಯ ಮತ್ತು ಪ್ರಯೋಗಗಳನ್ನು ಪಾಠಪಟ್ಟಿಗನುಸಾರವಾಗಿ ಏರ್ಪಡಿಸಲಾಗಿತ್ತು. ವಿದ್ಯಾರ್ಥಿಗಳೇ ಪ್ರಯೋಗಗಳನ್ನು ಮಾಡಿತೋರಿಸುತ್ತಿದ್ದಲ್ಲದೆ ಪ್ರೇಕ್ಷಕರಿಗೆ ವಿವರಣೆಗಳನ್ನೂ ಕೊಡುತ್ತಿದ್ದರು.

ರಾಮಕೃಷ್ಣ ವಿದ್ಯಾರ್ಥಿ ಭವನದ ದಿನಾಚರಣೆಯು ಕಳೆದ ತಾ. 31ನೇ ಸಂಜೆ ಸೈಂಟ್ ಎಲೋಸಿಯಸ್ ಕಾಲೇಜಿನ ರೆಕ್ಟರ್ ಮತ್ತು ಪ್ರಿನ್ಸಿಪಾಲ್ ರೆ. ಇ. ಜೆ. ಜೆಕ್ವೆಸ್ ರವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಬೆಳ್ಳೆ ಬಾಲಕೃಷ್ಣ ಶೆಟ್ಟರ ಸ್ವಾಗತ ಭಾಷಣ, ಶ್ರೀ ಕೆ ಶ್ರೀಧರ ಶೆಟ್ಟರಿಂದ ವರದಿ ವಾಚನ, ಡಿ. ಮುನ್ಸಿಫ್ ಶ್ರೀ ಕೆ. ಚಂದ್ರಶೇಖರ ಹೆಗ್ಡೆರಿಂದ ಸ್ವಸ್ತಿ ವಾಚನ, ಶ್ರೀ ಕೆ. ಜಗನ್ನಾಥ ಶೆಟ್ಟರಿಂದ ಉತ್ತರಗಳಾದ ಮೇಲೆ ಅಧ್ಯಕ್ಷರ ಭಾಷಣ, ನಾಟಕ ಮತ್ತು ವಿವಿಧ ವಿನೋದಾವಳಿಗಳಾದುವು.

ಭಾವಚಿತ್ರ ಅನಾವರಣ— ಮಂಗಳೂರ. ಗವರ್ನಮೆಂಟ್ ಕಾಲೇಜಿನ ಮಾಜಿ ಪ್ರಿನ್ಸಿಪಾಲ್ ದಿವಂಗತ ಶ್ರೀ ಎಮ್ ಐ. ಶಾಹಿಮಯವರ ಭಾವಚಿತ್ರವನ್ನು ಕಳೆದ ತಾ. 29 ರಂದು ಡಾ' ಯು. ಪಿ. ಮಲ್ಯರು ಅನಾವರಣ ಮಾಡಿದರು.

ಶ್ರೀ ಲೋಕನಾಥ ಶೆಟ್ಟರ ಕೊಲೆ- ಇದೇ ತಾ 28ರಂದು ಬೆಳಗ್ಗೆ ಪೋರ್ಗಿನ್ನು ಗೇಟಿನ ಬಳಿಯಿರುವ ಸ್ಟಾಕ್‌ಹೋಲ್ಡರ್ಸ್ ಬಳಿಯಲ್ಲಿ ಸುಮಾರು 3 ಗಂಟೆಗೆ ಆರೇಳು ಜನರ ಗುಂಪೊಂದು ಥಕ್ಕನೆ ಚೂರಿ ಭರ್ಜಿಗಳಿಂದ ಶ್ರೀ ಲೋಕನಾಥ ಶೆಟ್ಟಿ ಎಂಬವರನ್ನು ತಿವಿದಿರುವದ ವರದಿಯಾಗಿದೆ. ಮೃತರು ಮುಷ್ಕರದ ವಿರೋಧವಾಗಿ ಕೆಲಸ ಮಾಡುತಿದ್ದರೆಂದು ಇದರಿಂದಾಗಿ ಮುಷ್ಕರಗಾರರು ಸಿಟ್ಟು ತಾಳಿರಬಹುದೆಂದೂ ವದಂತಿಯಿದೆ. ಕೊಲೆ ಕಸಾಸಿನ ಕಾರ್ಯವನ್ನು ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಶ್ರೀ ಕೆ. ವಿ. ಮಲ್ಯರು ಕೈಕೊಂಡಿರುವರು.

೧೪ನೇ ಸೆಕ್ಷನನ್ನು ಮಂಗಳೂರು ನಗರ ಉಳ್ಳಾಲ ಪಂಚಾಯತ್ ಮತ್ತು ನೇತ್ರಾವತಿ, ಗುರುಪುರ ಹೊಳೆಗಳ ಭಾಗಗಳಲ್ಲಿ ಹಂಚಿನ ಮಜೂರರ ಮುಷ್ಕರ ನಿಮಿತ್ತ ಎರಡು ತಿಂಗಳುಗಳ ತನಕ ಜ್ಯಾರಿ ಮಾಡಲಾಗಿದೆ.

ಉಪನ್ಯಾಸ- ಲಂಡನಿನ ಮನೋರೋಗ ಚಿಕಿತ್ಸಾ ತಜ್ಞರಾದ ಮಂಗಳೂರು ಡಾ'ನರಸಿಂಹ ಪೈಗಳವರು. ಕಳೆದ ತಾ 29ರಲ್ಲು ಸಂಜೆ ಇಂಡಿಯನ್ ಮೆಡಿಕಲ್ ಎಸೋಸಿಯೇಶನಿನ ಜಿಲ್ಲಾ ಶಾಖೆಯ ಆಶ್ರಯದಲ್ಲಿ ಜಿಲ್ಲಾ ಬೋರ್ಡಿನ ಸಭಾ ಸದನದಲ್ಲಿ "ನನ್ನ ಜೀವನಸ್ಮೃತಿಯೊಂದೊಂದು ಅಧ್ಯಾಯ, ಲಂಡನಿನಲ್ಲಿ ನನ್ನ ಕಾರ್ಯ" ಎಂಬ ವಿಷಯದಲ್ಲಿ ಉಪನ್ಯಾಸ ಮಾಡಿದರು. ಡಾ ಎಂ. ಸಿ. ಶೆಟ್ಟಿಯವರು ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ಡಾ ಬಿ. ಆರ್. ಹೆಗ್ಡೆಯವರು ಧನ್ಯವಾದಗಳನ್ನಿತ್ತರು.

ಉಡುಪಿ ಡಿ. ಮು. ಕೋರ್ಟಿನಲ್ಲಿ

ಕ್ರಮ ನಂಬ್ರ 642/53

ಜೋನಿ ಜಾಕೋಬ ಡಾಲ್ಮೆದ......ವಾದಿ.

ಮತ್ತು

ಮಾರ್ಸೆಲ ಸಿಲ್ವ.........ಪ್ರತಿವಾದಿ.

ಮಾರ್ಸೆಲ ಸಿಲ್ವ ಮನ್ವೆಲ್ ಸಿಲ್ವರ ಮಗ, ಸಿರಿಯನ್ ಕ್ರೈಸ್ತ ಜಾತಿ, ಉಡುಪಿ ತಾಲ್ಲುಕು ಹಾರಾಡಿ ಗ್ರಾಮದ ಕುಕ್ಕುಡೆಯಲ್ಲಿರುವವನು.

ಇವನಿಗೆ

ವಾದಿಯ ಪಕ್ಷಿನ ಬಾಬ್ತು ವಾನಾ ಮುಲ್ಲಿ ಭಾವಣಿ ಕಟ್ಟೋಣವನ್ನು ಪ್ರತಿವಾದಿಯು ಬಾಡಿಗೆಗೆ ಪಡೆಕೊಂಡು ವಾದಿಯ ಪೂರ್ವಾದಿಕಾರಿಗೆ ತಾ22—4—1952ರಲ್ಲು ಬರಕೊಟ್ಟ ಬಾಡಿಗೆ ಚೀಟು ಪ್ರಕಾರ ನಿಮ್ಮಿಂದ ತಾ 22—4—1953ರ ಲಾಗಾಯ್ತಿನ ಬಾಡಿಗೆ ಬಾಕಿಗಳನ್ನು, ಸದ್ರಿ ಕಟ್ಟೋಣ ಸ್ವಾಧೀನತೆ ಮತ್ತು ಮಟ್ಟಿಸಿಳಿ ಕೊಡ ಕೇಳಿ ಮಾಡಿದ ಮೇಲ್ಕಂಡ ವಾದೆಯು ತಾ 16-2-54ಕ್ಕೆ ಅದ್ಕೆ ರು ತನ್ನಿಗೆ ಇಟ್ಟಿರುವುದರಿಂದ, ಸದ್ರಿ ದಿನ ಹಗಲು ಘಂಟೆ 10-45ಕ್ಕೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ, ಆ ಕುರಿತು ಉಜ್ರಾದರೆ ಇರುವಲ್ಲಿ ಉಜ್ರಾದರೆ ಹಾಜ್ರು ಮಾಡಬೇಕಾಗಿಯೂ, ಇಲ್ಲದಿದ್ರೆ ನಿಮ್ಮನ್ನು ಸದ್ರಿ ದಿನ ಏಕಪಕ್ಷ ಮಾಡಿ ದಾವೆಯನ್ನು ತೀರ್ಮಾನ ಮಾಡಲಾದೀತೆಂತ ತಿಳಿಸೋಣಾಗುತ್ತದೆ.

(By order of court)

K. Vittal Nayak
Vakil for pltf.

Udipi 1—2—54

ಉಡುಪಿ ಡಿ. ಮು. ಕೋರ್ಟಿನಲ್ಲಿ

ಕ್ರಮ ನಂಬ್ರ 547/1953

The Canara Land Investments, Ltd., Manipal. By its General Power of attorney holder M. S. Bhandary ... ... ವಾದಿ.

ಮತ್ತು

U. B. Ananthakrishna Rao & others .. .. ಪ್ರತಿವಾದಿರು.

ಇವರೊಳಗೆ

To
14th Defendant M Srinivasa Bhat, son of M. Govinda Bhat, Udipi Hotel, Hubli.

ಸದ್ರಿ 14ನೇ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವದೇನಂದ್ರೆ:—

ದಾವಾ A ಶೆಡ್ಯೂಲಿನ ಆಸ್ತಿಯನ್ನು ಸದರಿ ನಿನಗೆ ಸಮರ್ಥ್ಯ ವಿಭಾಗಿಸಿ ಆ ವೃತ್ತಿ ಪ್ಲೇಂಟಿನ B ಶೆಡ್ಯೂಲಿನ ಆಸ್ತಿಯನ್ನು ಬಿಡ್ಡಿಸಿಕೊಡತಕ್ಕ ಬಗ್ಗೆ ವಾದಿಯು ದಾಖಲು ಮಾಡಿದ ಸದ್ರಿ ವ್ಯಾಜ್ಯವು ತಾ. 22—2—54ಕ್ಕೆ ತನ್ಗೆ ಇಟ್ಟಿರುವದರಿಂದ ಆ ಕುರಿತು ಉಜ್ರಾದರೆ ಇದ್ದರೆ ಅದನ್ನು ಸದ್ರಿ ತಾರೀಕಿನ ದಿವಸ ಸದ್ರಿ ವ್ಯಾಜ್ಯದ ತನ್ಗೆ ಸಮಯ ಸದ್ರಿ ಕೋರ್ಟಿನ ಮುಂದೆ ಸದ್ರಿ 14ನೇ ಪ್ರತಿವಾದಿಯು ಸ್ವತಹಾ ಅಥವಾ ವಕೀಲರ ಮುಖಾಂತ್ರ ಹಾಜ್ರುಗಿಜ್ಯಾಹೀರು ಮಾಡತಕ್ಕದ್ದು, ತಪ್ಪಿದಲ್ಲಿ ಸದ್ರಿ ವ್ಯಾಜ್ಯವು ಆತನ ಗೈರ ಹಾಜರಿಯಲ್ಲಿ ತೀರ್ಮಾನಿಸಲಾದೀತೆಂತ್ತ ಸದ್ರಿ 14ನೇ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸೋಣಾಗುತ್ತದೆ.

M. Damoder Kamath,
Advocate for Plaintiff.

Udipi. S. K. 1—2—1954.

ದಿ ಬೊಂಬೆಲೈಫ್ ಎಶ್ಯೂರೆನ್ಸ್ ಕಂಪೆನಿ ಲಿ., ಬೊಂಬಾಯಿ

1953ನೆ ವರ್ಷದ ವೆಲ್ಯುಯೇಶನ್ ಪ್ರಕಾರ ಉದಾರ ಬೋನಸ್

ಎಂಡೋಮೆಂಟ್ ಪೊಲಿಸಿಗಳ ಮೇಲೆ ರೂ. 10- } ವರ್ಷ ಒಂದರ
ಜೀವಾವಧಿ ಪೊಲಿಸಿಗಳ ಮೇಲೆ ರೂ. 12-8 } ರೂ. 1000ಕ್ಕೆ

(ಪ್ರಚಲಿತ ಪ್ರೀಮಿಯಮ್ ಸ್ಕೇಲಿನಂತೆ)

ಜೀವ ವಿಮೆಗಾಗಲೀ, ಪ್ರಾತಿನಿಧ್ಯವೊಂದಲಿಕ್ಕಾಗಲೀ
ನಮ್ಮೊಡನೆ ವಿಚಾರಿಸಿದರೆ ಅಪೇಕ್ಷಿತ ಫಲವನ್ನೀಯುವುದು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಚೀಫ್ ಏಜೆಂಟ್ಸ್, ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್.
ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ, ದ. ಕ.

ಶಾಖಾ ದಾಖಾ ಕಛೇರಿಗಳಲ್ಲಿ: ಮಧುರೆ, ಬೆಂಗಳೂರು, ತ್ರಿವೆಂಡ್ರಮ್, ಕಲ್ಲಿಕೋಟೆ, ಬೊಂಬಾಯಿ, ಮಂಗಳೂರು ಮತ್ತು ಕೊಯಮುತ್ತೂರು.

The Bombay Life Assurance Co., Ltd., Bombay

ತೆರಿಸಿಕೊಳ್ಳಿರಿ.

ಐರಿಷ್ ಹಾಸ್ಪಿಟಲ್ ಸ್ವೀಪ್ ಸ್ಟೇಕ್ಸಿನ 80ನೇ ಡ್ರಾವಲ್ಲಿ 50,000 ಪೌಂಡುಗಳ 14 ಬಹುಮಾನಗಳೂ, 20,000 ಪೌಂಡುಗಳ 14 ಪುರಸ್ಕಾರಗಳೂ, 10,000ಪೌಂಡುಗಳ 14 ಪುರಸ್ಕಾರಗಳೂ ಕೂಡಿ 4000ಕ್ಕೂ ಮಿಕ್ಕಿದ ಬಹುಮಾನಗಳಿವೆ. ಐರಿಷ್ ಪೋಲೀಸ್ ಕಮಿಷನರ ನಿರೀಕ್ಷಣೆಯಲ್ಲಿ 1934ರ ನಂತರ ಇತಿಹಾಸದಲ್ಲೇ ಅದ್ವಿತೀಯವಾದ ಈ ಡ್ರಾ ನಡೆಯುವುದು. ಟಿಕೇಟುಗಳು ನಮ್ಮಲ್ಲಿ ಸಿದ್ಧವಾಗಿವೆ. 15 ರೂ. ಗಳಿಗೆ ಒಂದು, 28 ರೂ. ಗಳಿಗೆ ಎರಡು, 40 ರೂ. ಗಳಿಗೆ ಮೂರರಂತೆ ಸಿಗುವುವು. ಅರ್ಧ ಟಿಕೇಟಿನ ಬೆಲೆಯು ೯ ರೂ. ಈ ಅಪೂರ್ವ ಸಂದರ್ಭದ ಲಾಭ ಹೊಂದಲಿಚ್ಛಿಸುವವರು ಟಿಕೇಟಿನ ಹಣದೊಂದಿಗೆ ಆರ್ಡರನ್ನು ಕೆಳಗಿನ ವಿಳಾಸಕ್ಕೆ ಕಳುಹಿಸಬೇಕು.

ಸವಿಸ್ತಾರ ಮಾಹಿತಿಯುಳ್ಳ ಕನ್ನಡ ಹೊತ್ತಿಗೆ ಮತ್ತು 79ನೆ ಡ್ರಾ ದ ಫಲಿತಾಂಶ ಅಪೇಕ್ಷಿಸುವವರು ಎರಡಾಣೆ ಅಂಚೆ ಚೀಟು ಕಳುಹಿಸಿ ಕೊಡಬೇಕು.

FATIMA STORES,
ERNAKULAM.

ಇತಿಹಾಸದ ಪಾಠ

(೧ನೇ ಪುಟದಿಂದ)

ಭೂತ ಮತ್ತು ಐತಿಹಾಸಿಕ ಏಕತೆಯು ಆಗಾಗ ಛಿನ್ನವಿಚ್ಛಿನ್ನವಾಗಿ ಹೋಯಿತು. ನಮ್ಮದೇ ಶಸ್ತ್ರಾಸ್ತ್ರಗಳು ನಮ್ಮ ಎದುರಾಗಿ ಉಪಯೋಗಿಸಲ್ಪಟ್ಟವು ನಮ್ಮ ಸಹೋದರರೇ ನಮ್ಮನ್ನು ಇರಿದು ಕೊಂದರು. ಆತ್ಮೀಯರೆನಿಸಿದ ನಮ್ಮವರೇ ನಮಗೆ ಅಕ್ಷಮ್ಯ ದ್ರೋಹವನ್ನು ಬಗೆದರು. ಇದೇ ನಮಗೆ ಇತಿಹಾಸ ಕಲಿಸಿದ ಪಾಠ ನಾವು ಈ ಪಾಠದಿಂದ ಚೆನ್ನಾಗಿ ಬುದ್ಧಿ ಕಲಿತು, ಸಾಧ್ಯವಿದ್ದಷ್ಟು ನಮ್ಮ ಲಾಭಕ್ಕಾಗಿ ಇದನ್ನು ಉಪಯೋಗಿಸಬೇಕು. ಜಾತಿ ಮತ್ತು ಮತ, ಭಾಷೆ ಮತ್ತು ಪ್ರದೇಶಗಳ ನೆಪದಲ್ಲಿ ನಾವು ರಾಷ್ಟ್ರದ ಒಕ್ಕಟ್ಟನ್ನು ಬಲಿಗೊಡುವುದಕ್ಕೆ ಉದ್ಯುಕ್ತರಾಗುವುದು ಸರ್ವಥಾ ಸಲ್ಲದು. ನಾವು ಐಕ್ಯದಿಂದಿರಬೇಕು — ನಮ್ಮ ಒಗ್ಗಟ್ಟಿನ ಬಲವನ್ನು ಕಂಡು ನಮ್ಮ ಮೇಲೆ ಆಕ್ರಮಣ ಮಾಡಬೇಕೆನ್ನುವವರು, ನಮ್ಮ ಸ್ವಾತಂತ್ರ್ಯದ ಅಪಹರಣಕ್ಕೆಳಸುವವರು, ನಮ್ಮ ಶಾಂತಜೀವನದ ಬಯಕೆಯನ್ನು ನಾಶ ಮಾಡಲು ಹೊಂಚು ಹಾಕುವವರು ದಿಙ್ಮೂಢರಾಗಬೇಕು.

ರಾಷ್ಟ್ರದ ಭದ್ರತೆ ಮತ್ತು ಒಗ್ಗಟ್ಟೆಂದರೆ ಅದು ನಮ್ಮ ಸಾಮರ್ಥ್ಯ ಮತ್ತು ನಮ್ಮ ಪರಿಶ್ರಮ ಬುದ್ಧಿಯನ್ನು ಅವಲಂಬಿಸಿರುತ್ತದೆ ನಮ್ಮ ಸಾಮರ್ಥ್ಯವನ್ನು ಹೆಚ್ಚಿಸಲು ನಾವು ಬೇರೆಯವರನ್ನು ಹೊಂದಿಕೊಂಡಿರಲಾರೆವು. ಪರಾವಲಂಬನವು ಒಂದಕ್ಕಿಂತ ಇನ್ನೊಂದಕ್ಕೆ ಅಧಿಕವಾಗುತ್ತಾ ಹೋಗುವುದು. ರಾಷ್ಟ್ರದ ಭದ್ರತೆಯನ್ನು ಸಾಧಿಸಲು ದೈಹಿಕ, ಮಾನಸಿಕ, ಆರ್ಥಿಕ ಪ್ರಯತ್ನಗಳಲ್ಲದೆ, ಆಧ್ಯಾತ್ಮಿಕ ಸ್ಫೂರ್ತಿಯೂ ಬೇಕಾಗುತ್ತದೆ. ಅಂತಹ ಪ್ರಯತ್ನಗಳಿಂದಲೇ ನಾವು ನಮ್ಮ ಸ್ವಾತಂತ್ರ್ಯದ ಆದಿಕಾಲದಲ್ಲಿ ತಲೆದೋರಿದ ಗಂಡಾಂತರಗಳನ್ನು ನಿರ್ಭಯತೆಯಿಂದ ನಿವಾರಿಸಿಕೊಂಡೆವು, ಮುಂದೆ ಕೂಡ ದಕ್ಷತೆಯಿಂದ ಸ್ವಾತಂತ್ರ್ಯವನ್ನು ಕಾಪಾಡಿಕೊಂಡು ವಿಶ್ವಶಾಂತಿಗೆ ನೆರವಾಗುವುದು ನಮ್ಮ ಸಂಕಲ್ಪ. ಇದಕ್ಕೆಲ್ಲ ಮೂಲ ಭೂತವಾಗಿ ನಾವು ಸ್ವಾವಲಂಬಿಗಳಾಗಬೇಕು ಕೇವಲ ಶಸ್ತ್ರಾಸ್ತ್ರಗಳ ಸ್ಪರ್ಧೆಯಲ್ಲಿ ಮುಂದೆ ಮುಂದೆ ಓಡುವುದರಿಂದ ನಾವು ಪ್ರಬಲರಾಗುವೆವೆಂದು ಭಾವಿಸುವುದು ತಪ್ಪು. ದೇಶದ ಅಭಿವೃದ್ಧಿ ಮತ್ತು ಜನತೆಯ ಬಲವೇ ನಮ್ಮ ಸರ್ವಸ್ವ; ಇದೇ ರಾಷ್ಟ್ರದ ಸಾಮರ್ಥ್ಯ.

ಬೇಕಾಗಿದ್ದಾರೆ.

ಹಾಯರ್ ಗ್ರೇಡ್ ತರಬೇತಿ ಹೊಂದಿದ ಉಪಾಧ್ಯಾಯರು ಒಬ್ಬರು ತಾ. 31-3-1954 ರ ವರೇಗೆ ಹಂಗಾಮಿ. ಸ್ಕೇಲು ಗವರ್ನ್‌ಮೆಂಟ್ ದರ. ಅರ್ಜಿಯನ್ನು ಮೆನೇಜರರಿಗೆ ಕಳುಹಿಸತಕ್ಕದ್ದು. ಅರ್ಜಿಯ ಯಥಾ ನಕಲನ್ನು ಉಡ್ಪಿ ನೋರ್ತ್ ರೇಂಜ್ ಪರೀಕ್ಷಾಧಿಕಾರಿಗಳವರ ಆಫೀಸಿಗೆ ರವಾನಿಸಬೇಕು.

A. Rangappa Nayak.
Manager.
Kudigrama Aided Ele. School,
Kudi Post.

(೩ನೇ ಪುಟದಿಂದ)

ಒದಗಿಸಿ,ರಾಜ್ಯ ಸರಕಾರಗಳ ಯೋಜನೆಗಳನ್ನು ಇನ್ನಷ್ಟು ಬಲಗೊಳಿಸಿರುವುದು.

ಹಳ್ಳಿಗಳಲ್ಲಿ ನಿರುದ್ಯೋಗ ಹೆಚ್ಚಿಕೊಂಡಿರುವುದರಿಂದ ಅದನ್ನು ತಡೆಗಟ್ಟಲೂ ೧೫ ರಿಂದ ೪೦ ಕೋಟಿ ರೂಪಾಯಿಗಳ ಯೋಜನೆಯನ್ನು ಸರಕಾರ ಸಿದ್ಧಗೊಳಿಸಿತು—ಔದ್ಯಮಿಕ ಅಭಿವೃದ್ಧಿ ಮಂಡಳದ ಕಾರ್ಯಕಲಾಪಗಳ ಪರಿಣಾಮವಾಗಿ ಉದ್ಯೋಗದ ಅವಕಾಶ ಸುಧಾರಿಸುವುದೆಂದು ಸರಕಾರ ನಿರೀಕ್ಷಿಸುತ್ತದೆ. ಸರಕಾರದ ಕಾರ್ಯಕ್ರಮಗಳೊಡನೆ ಖಾಸಗಿ ಕ್ಷೇತ್ರವೂ ಪರಿಣಾಮಕಾರಕ ರೀತಿಯಲ್ಲಿ ಸಹಕರಿಸಿ, ನಿರುದ್ಯೋಗದ ಸಮಸ್ಯೆಯ ಪರಿಹಾರಕ್ಕೆ ನೆರವಾಗುವಂತೆ ಈ ಮಂಡಳಿ ನೋಡಿಕೊಳ್ಳುವುದು. ಸುಶಿಕ್ಷಿತರಿಗೆ ಉದ್ಯೋಗಗಳನ್ನು ಒದಗಿಸಿಕೊಡುವ ಯೋಜನೆ ಈಗಾಗಲೇ ಕಾರ್ಯಗತಗೊಳ್ಳುತಿದ್ದು ಹಳ್ಳಿಗಳಲ್ಲಿ ಹೊಸತಾಗಿ ಶಾಲೆಗಳನ್ನು ತೆರೆದು, ೮೦ ಸಾವಿರ ಅಧ್ಯಾಪಕರನ್ನು ನೇಮಿಸುವ ಮತ್ತು ೧೦ ಸಾವಿರ ಸಾಮಾಜಿಕ ಶಿಕ್ಷಣ ಕೇಂದ್ರಗಳನ್ನು ನಡೆಸುವ ದೊಡ್ಡ ಕೆಲಸ ಸಾಗಿರುವುದು. ಗುಡಿಕೈಗಾರಿಕೆಗಳಿಗೆ ಪ್ರೋತ್ಸಾಹ, ಸಹಕಾರಿ ಪದ್ಧತಿಯಿಂದ ಮನೆಗಳನ್ನು ಕಟ್ಟುವುದು, ಹಳ್ಳಿಯ ಮಾರ್ಗ ಸೌಕರ್ಯವನ್ನು ಉತ್ತಮಗೊಳಿಸುವುದು, ಶಾಲೆಗಳಲ್ಲಿ ಕೈಗಾರಿಕಾ ಶಿಕ್ಷಣ ನೀಡುವುದಕ್ಕೆ ಕ್ರಮ ಕೈಗೊಳ್ಳುವುದು—ಮುಂತಾದ ಇತರ ವಿಧಾನಗಳನ್ನೂ ಸರಕಾರ ಅನುಸರಿಸಲು ನೋಡುತ್ತದೆ.

ಯೋಜನೆಯ ವ್ಯಾಪ್ತಿಯನ್ನು ಹೀಗೆ ವಿಸ್ತರಿಸುವುದಕ್ಕೆ ಉದ್ದೇಶಿಸಿದರೆ ಸಾಲದು—ಅದಕ್ಕೆ ತಕ್ಕ ಬಂಡವಾಳ ಬರುವುದೆಲ್ಲಿಂದ ಎಂಬ ಪ್ರಶ್ನೆಯನ್ನೂ ವಿಚಾರಿಸಬೇಕಾಗುವುದು ಎರಡು ವರ್ಷಗಳ ಅವಧಿಯಲ್ಲಿ, ಪ್ರಥಮ ವರ್ಷ ೨೬೧.೫ ಕೋಟಿ ರೂಪಾಯಿ ಹಾಗು ದ್ವಿತೀಯ ವರ್ಷದಲ್ಲಿ ೩೩೩.೫ ಕೋಟಿ ರೂಪಾಯಿ—ಹೀಗೆ ಒಟ್ಟು ೫೯೫ ಕೋಟಿ ರೂಪಾಯಿಗಳು ವೆಚ್ಚ ಹೊಂದಿವೆ. ಮೂರನೇ ವರ್ಷದಲ್ಲಿ ೪೧೩ ಕೋಟಿ ರೂಪಾಯಿಗಳ ಕಾರ್ಯ ನಡೆಯುವುದೆಂದು ಅಂದಾಜು. ಹಾಗೆಂದು ಒಟ್ಟು ಐದು ವರ್ಷಗಳಲ್ಲಿ ನಡೆಸಬೇಕಾಗಿರು ಕೆಲಸದ ಪ್ರಮಾಣಕ್ಕೆ ಈ ಖರ್ಚಿನ ವಿವರ ಹೊಂದಿಕೆಯಾಗದೆ, ಬಹಳ ಕಡಿಮೆ ತೋರುತ್ತದೆ. ಅಲ್ಲದೆ ಕೊರಿಯಾ ಯುದ್ಧದ ಮುಕ್ತಾಯ ಅಮೇರಿಕಾದಿಂದ ದೊರೆತ ೧೯ ಕೋಟಿ ಡಾಲರುಗಳ ಗೋಧಿ ಸಹಾಯ ಮುಂತಾದ ಅನುಕೂಲ ವಾತಾವರಣ ಮೊದಲಿನೆರಡು ವರ್ಷಗಳಲ್ಲಿ ಕಂಡು ಬಂದಂತೆ—ಇನ್ನು ಮುಂದೆ ಉಳಿಯುವುದು ಸಂಶಯಾಸ್ಪದ, ಕೊರತೆಯ ಧನ ವಿನಿಯೋಗ ಪದ್ಧತಿಯು ಭರವಸೆಯ ಉತ್ತರವಾಗುವುದೆಂದು ಭಾವಿಸಲೂ ಬಾರದು. ದೇಶದೊಳಗಿನ ಸಂಪತ್ತನ್ನು ವಿವಿಧ ಕ್ರಮಗಳಿಂದ ಸಂಗ್ರಹಿಸಲು ನೋಡುವುದೊಂದೇ ತೆರೆದಿರುವ ಮಾರ್ಗ.

ಉದ್ಯೋಗದ ಅವಕಾಶಗಳು ಹೆಚ್ಚುವುದಕ್ಕೆ ಭರದಿಂದ ಅಭಿವೃದ್ಧಿ ಪ್ರಯತ್ನಗಳು ನಡೆಯಲೇ ಬೇಕಾಗಿರುವುದರಿಂದ, ಆಂತರಿಕ ಬಂಡವಾಳವನ್ನು ಶೇಖರಿಸಲು ಉಪಾಯಗಳನ್ನು ಕೈಗೊಳ್ಳಲು ಸರಕಾರ ಕಳೆದ ವರ್ಷ ಉದ್ಯುಕ್ತವಾಯಿತು ಆಸ್ತಿ ತೆರಿಗೆಯ ಕಾನೂನು, ಅಭಿವೃದ್ಧಿ ತೆರಿಗೆ, ನೀರಾವರಿಯ ಹಾಸಲು, ಆಡಂಬರದ ವಸ್ತುಗಳ ಮೇಲೆ ಅಧಿಕ ಕರಾಕರಣೆ ಮುಂತಾದವುಗಳನ್ನು ಸರಕಾರ ಆದಾಯದ ಸ್ರೋತವಾಗಿ ಪರಿಗಣಿಸಿರುವುದು. ಅಲ್ಲದೆ ಔದ್ಯೋಗಿಕ ಉತ್ಪಾದನೆ ಹೆಚ್ಚಿಕೊಂಡಂತೆ, ಆದರಿಂದಲೂ ಕೇಂದ್ರ ಮತ್ತು ರಾಜ್ಯದ ಆದಾಯ ಬೆಳೆಯುತ್ತದೆ.

ತೆರಿಗೆಯ ಮೂಲಕವಲ್ಲದೆ—ಸಾಲಗಳನ್ನು ಎತ್ತುವ ಮೂಲಕ ಜನರ ಕೈಯಿಂದ ಹಣ ಸಂಗ್ರಹಿಸುವುದಕ್ಕೂ ಮನಸ್ಸು ಮಾಡಿರುವುದು. ಕೇಂದ್ರ ಸರಕಾರ ೭೫ ಕೋಟಿ ರೂಪಾಯಿಗಳ ರಾಷ್ಟ್ರೀಯ ಸಾಲಪತ್ರಗಳನ್ನು ಹೊರಡಿಸಿದೆ; ರಾಜ್ಯ ಸರಕಾರಗಳು ೩೩ ಕೋಟಿ ರೂಪಾಯಿಗಳ ಅಭಿವೃದ್ಧಿ ಸಾಲಗಳನ್ನು ಎತ್ತಿವೆ ಸಣ್ಣ ಉಳಿತಾಯದ ಕ್ಷೇತ್ರದಲ್ಲೂ ಕಳೆದೆರಡು ವರ್ಷಗಳಲ್ಲಿ ೭೫ ಕೋಟಿ ರೂಪಾಯಿ ಸಂಗ್ರಹಗೊಂಡಿದೆ ಜನರಲ್ಲಿ ಉಳಿತಾಯ ಪ್ರವೃತ್ತಿಯನ್ನು ಪೋಷಿಸುವುದಕ್ಕೆ ಸರಕಾರ ಹೆಚ್ಚಿನ ಉತ್ತೇಜನವನ್ನು ನೀಡುತ್ತದೆ. ಜನರ ಕೈಯಲ್ಲಿರುವ ಹಣ ಜೀವನೋಪಯೋಗಕ್ಕೆ ವೆಚ್ಚವಾಗುವುದನ್ನು ಕಡಿಮೆ ಮಾಡಿ—ಬಂಡವಾಳ ರೂಪಕ್ಕೆ ಅದು ಪರಿವರ್ತನೆ ಹೊಂದಬೇಕಾದುದು ಸದ್ಯಕ್ಕೆ ಅಗತ್ಯವೆನಿಸಿದೆ ಆದರೆ ನಮ್ಮ ಸರಾಸರಿ ಆದಾಯದ ಪ್ರಮಾಣವೇ ಕನಿಷ್ಟ ಮಟ್ಟದಲ್ಲಿರುವುದರಿಂದ, ನಮ್ಮ ಉಳಿತಾಯದ ಶಕ್ತಿ ಬಹಳ ಮಿತವಾಗಿರುತ್ತದೆ. ಜೀವನ ನಿರ್ವಹಣೆಯ ಖರ್ಚು ಇಳಿಯದೆ ನಾವು ಹೆಚ್ಚು ಉಳಿತಾಯವನ್ನು ಮಾಡುವುದು ಕಷ್ಟಸಾಧ್ಯವೆಂದೇ ತೋರುತ್ತದೆ.

ಖಾತ್ರಿ ಚಿನ್ನದ ನೆಕ್‌ಲೇಸ್, ತರಹವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,

ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.

ಫೋನು ನಂಬ್ರ 66

ಮುಂದಾರ್ತಿ ಶ್ರೀ ದುರ್ಗಾಪರಮೇಶ್ವರೀ ಅಮ್ಮನವರ ದೇವಸ್ಥಾನದ ಭಜಕವೃಂದಗಳಿಗೆ

ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಶ್ರೀ ದೇವಿಯ ಸನ್ನಿಧಿಯ ಶ್ರೀಮನ್ಮಹಾರಥೋತ್ಸವವು ತಾ. 13-2-54ಕ್ಕೆ ಜರಗಲಿರುವುದರಿಂದ ತಾವುಗಳೆಲ್ಲಾ ಬಂದು ಭಾಗವಹಿಸಿ ಶ್ರೀ ದೇವಿಯ ಶಿರಿಮುಡಿ ಗಂಧಪ್ರಸಾದವನ್ನು ಸ್ವೀಕರಿಸಿ ಕೃತಾರ್ಥರಾಗುವಿರೆಂದು ಅಪೇಕ್ಷಿಸುತ್ತೇವೆ.

TRUSTEES, ಮುಂದಾರ್ತಿ.

N. R. BOLAR, Executive Officer.

ವಿ. ಸೂ.:- ಗರ್ಭಗೃಹದ ಜೀರ್ಣೋದ್ಧಾರದ ಕೆಲಸವು ಈಗ ನಡೆಯುತ್ತಲಿರುವುದರಿಂದ ಜೀರ್ಣೋದ್ಧಾರ ಫಂಡಿಗೆ ಭಕ್ತವೃಂದದವರು ಉದಾರ ದೇಣಿಗೆಯನ್ನು ಕೊಟ್ಟು ಈ ಸತ್ಕಾರ್ಯದಲ್ಲಿ ಭಾಗಿಗಳಾಗಬೇಕೆಂದು ಕೇಳಿಕೊಳ್ಳುತ್ತೇವೆ.

'ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರಿ,

ಇವರ **ನವಜೀವಾತು** ಎಂಬ **ಸೂತಿಕಾರಸಾಯನ**

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವರಸಾಯನ.



ಹೆಚ್ಚಿನ ಮಾಹಿತಿಗೆ— ಡಾ। ಯಂ. ಸಿ. ಶಾಸ್ತ್ರೀ, ಯಲ್. ಐ. ಎಂ. ಕೊಡಿಯಾಲಬೈಲು ಪೋಸ್ಟು, (ಮಂಗಳೂರು)

ಸ್ವಾಕಿಸ್ಟರು:— ಡಾ| ವಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.



ಸ್ವೀಕಾರ—ವಿಮರ್ಶೆ

ಒಕ್ಕಲು ಮಸೂದೆ ಏಕೆ?

ಲೇಖಕರು ಮತ್ತು ಪ್ರಕಾಶಕರು:— ವಿ. ಶ್ರೀನಿವಾಸ ಸೆಟ್ಟಿ, ಬಿ. ಎ., ಎಲ್‌ಎಲ್. ಬಿ., ಎಡ್ವೋಕೇಟ್, ಕುಂದಾಪುರ. ಬೆಲೆ: ಆರು ಆಣೆಗಳು.

ದಕ್ಷಿಣ ಕನ್ನಡ ಜಿಲ್ಲೆಯ ಕೃಷಿಕರು ಬಹು ದಿನಗಳಿಂದಲೂ ಒಕ್ಕಲು ಹಿತ ಮಸೂದೆಯೊಂದನ್ನು ಸರಕಾರ ಎಂದು ತರುವುದೋ ಎಂಬ ತವಕವನ್ನು ವ್ಯಕ್ತಪಡಿಸುತ್ತಿರುವರು. ಕೇವಲ ಇಲ್ಲಿಯ ರೈತರೊಂದೇ ಅಲ್ಲ—ಸಮಗ್ರ ಭಾರತದಲ್ಲಿಯೇ ಭೂಸುಧಾರಣೆ, ರೈತರಿಗೆ ಸಂರಕ್ಷಣೆ, ಉಳುವವನಿಗೆಯೇ ಭೂಮಿಯ ಒಡೆತನ ಮುಂತಾದ ಅತ್ಯಗತ್ಯದ ಕೆಲವು ವಿಷಯಗಳಲ್ಲಿ ಈಚೆಗೆ ಕೆಲ ಸಮಯದಿಂದ ಜನಾಭಿಪ್ರಾಯವು ಸಂಘಟಿಸಲ್ಪಡುತ್ತಿದೆ. ಈ ಪುಸ್ತಕದಲ್ಲಿ ಶ್ರೀ ಶ್ರೀನಿವಾಸ ಸೆಟ್ಟರು ಒಕ್ಕಲು ಹಿತ ಮಸೂದೆಯೊಂದನ್ನು ಕೂಡಲೇ ಜ್ಯಾರಿಗೆ ತರಬೇಕಾದ ಅಂಶವನ್ನು ಬಿಂಬಿಸುತ್ತಾ ಭೂಸುಧಾರಣೆಯ ಕುರಿತು ಒತ್ತಾಯವನ್ನು ನೀಡಿರುವರು. ಪ್ರಥಮದಲ್ಲಿ ಅವರು ಭೂಮಿ ಯಾರಿಗೆ ಸೇರಿರುವುದೆಂಬುದರ ಚರ್ಚೆ ಮಾಡಿ, ಸಮಾಜಕ್ಕೆಯೇ ಭೂಮಿ ಸೇರಿದೆ ಎಂದಿರುವರು. ಬ್ರಿಟಿಷರ ಆಡಳಿತ ಕಾಲದಿಂದೀಚೆಗೆ ಭೂಮಾಲಿಕತ್ವವು ಹುಟ್ಟಿಕೊಂಡಿತೆಂದು ಲೇಖಕರ ಅಭಿಪ್ರಾಯವಾಗಿರುತ್ತದೆ. ಭೂಮಾಲಕತ್ವದ ಪರಿಣಾಮವಾಗಿ ಚಾಲಗೇಣಿ ಒಕ್ಕಲುಗಳು ಹುಟ್ಟಿಕೊಂಡರು. ರೈತರಲ್ಲಿಯೇ ತುಣುಕು ಭೂಮಿ ಆಶ್ರಯಕ್ಕೋಸ್ಕರ ಸ್ಪರ್ಧೆ ಹುಟ್ಟಿಕೊಂಡಿತು; ಆಗ ಗೇಣಿ ಏರಿಸುವ ಮತ್ತು ಒಕ್ಕಲೆಬ್ಬಿಸುವ ಚಾಳಿಗೆ ಭೂಮಾಲಿಕರು ಬಿದ್ದರು. ಈಗ ರೈತನ ಕತ್ತು ಗೇಣಿಯ ಭಾರದಿಂದ ಎತ್ತಲಾರದ ಪರಿಸ್ಥಿತಿ ಬಂದಿರುತ್ತದೆ. ಗೇಣಿ ಏರಿಸುವ ಭೂಮಾಲಿಕರು ರೈತನ ಶ್ರಮವನ್ನು ಲೆಕ್ಕಕ್ಕೆ ತೆಗೆದುಕೊಳ್ಳುವುದೇ ಇಲ್ಲ. ನಮ್ಮ ಘಟನೆಯಲ್ಲಿ ಕೃಷಿ ಮಜೂರನ ಸಂಬಳ ಜೀವನ ನಿರ್ವಹಣಕ್ಕೆ ಸರಿಯಾಗಿರುವಂತೆ ನೋಡಿಕೊಳ್ಳಬೇಕೆಂದಿದ್ದರೂ ಈ ದಿಸೆಯಲ್ಲಿ ಕ್ರಮವಾದ ಹೆಜ್ಜೆ ಇಡಲ್ಪಟ್ಟಿಲ್ಲ—ಎಂದೆಲ್ಲ ವಿವರಿಸುತ್ತಾ ನ್ಯಾಯವಾದ ಗೇಣಿಯನ್ನು ನಿಶ್ಚಯಿಸಬೇಕೆಂದು ಎರಡನೆಯ ಪ್ರಕರಣದಲ್ಲಿ ಪ್ರತಿಪಾದಿಸಿರುವರು. ಒಕ್ಕಲುಹಿತ ಮಸೂದೆಯು ರೈತನಿಗೆ ಭೂಮಿಯ ಮೇಲೆ ಭದ್ರತೆಯನ್ನೂ ಶಾಶ್ವತ ಹಕ್ಕನ್ನೂ ದಯಪಾಲಿಸಬೇಕು. ಆದರೆ ಈಗಿರುವ ಚಾಲಗೇಣಿ ಎದುರ್ಮುಡಿಗಳು ಈ ತತ್ವಕ್ಕೆ ತದ್ವಿರುದ್ಧವಾಗಿರುತ್ತವೆ. ಸರಕಾರ ಅಧಿಕ ಆಹಾರ ಬೆಳೆಸಿರಿ, ವನಮಹೋತ್ಸವವನ್ನು ಆಚರಿಸಿರಿ ಎಂಬ ಪಲ್ಲವಿ ಹಾಡುತ್ತಿದ್ದರೂ ಕೃತಕವಾದ ಬಾರದೆಂಬ, ಮಾಡಿದರೂ ಅದಕ್ಕೆ ಪರಿಹಾರವನ್ನು ಕೇಳಬಾರದೆಂಬ ಕಟ್ಟುಪಾಡಿಗೆ ಬಿದ್ದಿರುವ ಸಾಮಾನ್ಯ ಚಾಲಗೇಣಿ ಒಕ್ಕಲಿನ ಪಾಲಿಗೆ ಇದು ಕೇವಲ ಅರ್ಥಶೂನ್ಯವೆನಿಸುತ್ತದೆ. ಚಾಲಗೇಣಿ ಎದುರ್ಮುಡಿಯಲ್ಲಿ ಬಿಟ್ಟಿ ಬೇಗಾರಿಯ ಪ್ರಸ್ತಾಪವೂ ಬರುತ್ತದೆ. ಇದು ರೈತನನ್ನು ಭೂಮಾಲಕನ ಗುಲಾಮನನ್ನಾಗಿಸುವ ಪ್ರವೃತ್ತಿ ಎಂದು ಲೇಖಕರು ವರ್ಣಿಸಿರುವರು. ನಮ್ಮ ಪವಿತ್ರವಾದ ರಾಜ್ಯಾಂಗ ಘಟನೆಯ ಪ್ರಕಾರ, ಬಿಟ್ಟಿ ಬೇಗಾರಿ ಮಾಡಿಸಿಕೊಂಡಾತನು ಶಿಕ್ಷೆಗೆ ಅರ್ಹನಾಗುವನು. ಆದರೆ ಅದು ವ್ಯವಹಾರದಲ್ಲಿ ಇನ್ನೂ ರೂಢವಾಗಿಲ್ಲ. ಮೂರು ಮತ್ತು ನಾಲ್ಕನೇ ಪ್ರಕರಣಗಳಲ್ಲಿ ಮೇಲಿನ ಸಂಗತಿಯ ಚರ್ಚೆ ಮಾಡಿರುವರು. ಐದನೇ ಪ್ರಕರಣದಲ್ಲಿ ಭೂಸುಧಾರಣೆಯ ವಿಷಯದಲ್ಲಿ ಏಶಿಯದ ರಾಷ್ಟ್ರಗಳಾದ ಜಪಾನು, ಬರ್ಮಾ, ಚೀನಾಗಳಲ್ಲಿ ೧೯೪೫ನೇ ಇಸವಿಯಿಂದೀಚೆಗೆ ನಡೆದ ಭೂಸುಧಾರಣಾ ಪ್ರಯತ್ನವನ್ನು ವಿವರಿಸಿರುವರಲ್ಲದೆ, ತನ್ಮೂಲಕ ಸಾಮಾನ್ಯ ರೈತನ ಜೀವನಕ್ಕೆ ಭದ್ರತೆ ಹೇಗೆ ದೊರೆಯಿತೆಂದೂ ಹೇಳಿರುವರು. ಭಾರತದಲ್ಲಿ ನೆರೆಯ ಮುಂಬಯಿ ರಾಜ್ಯದಲ್ಲಿ ೧೯೪೮ನೇ ಇಸವಿಯ ಒಕ್ಕಲುತನ ಸುಧಾರಣೆಯ ಕಾಯಿದೆಯು ಜ್ಯಾರಿಗೆ ಬಂದಿರುವುದನ್ನು ಪ್ರಸ್ತಾಪಿಸುತ್ತಾ, ಭಾರತದಲ್ಲಿ ಮುಂಬಯಿ ಸರಕಾರವೊಂದೇ ರೈತನ ಹಿತದೃಷ್ಟಿಯಲ್ಲಿ ಪ್ರಗತಿಪರ ಶಾಸನ ಕ್ರಮವನ್ನು ಕೈಗೊಂಡಿರುವುದಾಗಿ ಉಲ್ಲೇಖಿಸಿರುವರು. ಅನುಷಂಗಿಕವಾಗಿ ಕಾಶ್ಮೀರದಲ್ಲಿ ಜೋಡಮುಕ್ತಿಯನ್ನು ವಿಧಿಸಿದ ಬಗೆಯ ಕುರಿತಾಗಿಯೂ ವಿವರಣೆ ನೀಡಿರುವರು. ಆರನೆಯ ಪ್ರಕರಣವು ಕಾಂಗ್ರೆಸು ಸಂಸ್ಥಾಪಕರ ಮುಂದೆ ಇಟ್ಟ ಭೂಸುಧಾರಣೆಯ ಚಿತ್ರ, ಕೊಟ್ಟ ಆಶ್ವಾಸನೆ ಮತ್ತು ಸಾದರಪಡಿಸಿದ ವರದಿಗಳ ಅಂಶವನ್ನೊಳಗೊಂಡಿದ್ದು. ಇಲ್ಲಿ ಕಾಂಗ್ರೆಸು ಜನತೆಗೆ ದ್ರೋಹವನ್ನೆ ಬಗೆದಿದೆ ಎಂಬ ಅರ್ಥಬರುವ ಮಾತುಗಳನ್ನೂ ಆಡಿರುವರು. ೧೯೪೭ನೇ ಇಸವಿಯ ಕರಾಚಿ ಅಧಿವೇಶನದಲ್ಲಿ ಕಾಂಗ್ರೆಸು ಸ್ವೀಕರಿಸಿದ ಗೊತ್ತುವಳಿ, ೧೯೪೯ನೇ ಇಸವಿಯಲ್ಲಿ ಹೊರಬಿದ್ದ ಕುಮಾರಪ್ಪಾ ಸಮಿತಿಯ ವರದಿ, ೧೯೫೦ರಲ್ಲಿ ಪ್ರಕಟವಾದ ಕಾಂಗ್ರೆಸು ಯೋಜನಾ ಸಮಿತಿಯ ಪಂಚ ವಾರ್ಷಿಕ ಯೋಜನೆ ಮುಖ್ಯವಾಗಿ ಸರ್ವ ಸಮಿತಿಯ ಮೇಲೆ ಸಮಿತಿಗಳು ಮಾಡಿದ ವರದಿ—ಎಲ್ಲವರ ಸಾರಾಂಶವನ್ನು ನೀಡುತ್ತಾ ಕಾಂಗ್ರೆಸ ಸರಕಾರ ಅಪ್ರಾಮಾಣಿಕತನದಿಂದ ಅನಿಶ್ಚಿತ ರೀತಿಯಲ್ಲಿ ಅಂಬೆಗಾಲಿಕ್ಕುತ್ತಾ ನಡೆದಿದೆ ಎಂದು ಆರೋಪಿಸಿರುವರು. ಮುಂಬ್ರಾಸು ಸರಕಾರ ತಂಜಾವೂರಿನಲ್ಲಿ ತಂದ ಮಸೂದೆ ಭೂಮಾಲಿಕರ ಹಿತವನ್ನೆ ಧ್ಯೇಯವಾಗಿಟ್ಟುಕೊಂಡಿದೆಯೆಂದೂ, ಶ್ರೀ ಜಯಪ್ರಕಾಶರು ಪ್ರಧಾನ ಮಂತ್ರಿ ನೆಹರೂರಿಗೆ ಸಮಾಜವಾದೀ ನೀತಿಯಂತೆ ಭೂಸುಧಾರಣೆಯನ್ನು ನಡೆಸಬೇಕೆಂದು ಬರೆದುದಕ್ಕೆ ನೆಹರೂ ಕೊಟ್ಟ ಉತ್ತರ ಕೂಡ ಭಾವನೆಯ ದ್ಯೋತಕವೆಂದೂ ಹೇಳಿರುವರು. ಮೊನ್ನೆ ತಾನೆ ಸ್ವೀಕಾರಗೊಂಡ ದಕ್ಷಿಣ ಕನ್ನಡ ಜಿಲ್ಲಾ ತಾತ್ಕಾಲಿಕ ಒಕ್ಕಲು ಸುರಕ್ಷಿತಾ ಮಸೂದೆ ಇವರ ದೃಷ್ಟಿಯಲ್ಲಿ "ಪರ್ವತ ಪ್ರಸವ" ಆಗಿದ್ದಾರೆ, ರೈತರಿಗೆ ಸಂರಕ್ಷಣೆ ಕೊಡಬೇಕೆಂದು ಹೇಳುವಾಗ – ಕಾಂಗ್ರೆಸನ್ನು ಹಳಿಯುವ ಯಾವ ಅವಕಾಶವನ್ನೂ ಶ್ರೀ ಸೆಟ್ಟರು ಬಿಟ್ಟುಕೊಟ್ಟಿಲ್ಲ. ಹಾಗೆಂದು ಅವರು ವಿವರಿಸಿದ ಅನೇಕ ಸಂಗತಿಗಳು ಪರಿಸ್ಥಿತಿಯ ನೈಜ ಚಿತ್ರವನ್ನು ನೀಡುತ್ತವೆ. ಮತ್ತು ವಿಳಂಬವಿಲ್ಲದೆ ಸರಕಾರ ಕಾರ್ಯವಿಧಾನ ತೆಗೆದುಕೊಳ್ಳುವ ಆಗತ್ಯವನ್ನು ಸ್ಪಷ್ಟವಾಗಿ ಸೂಚಿಸುತ್ತವೆ.

—ಕಾರ್ತಿಕೇಯ

ಗುರುದಕ್ಷಿಣೆ

(ಅಥವಾ ಶ್ರೀ ಕೃಷ್ಣ ವಿದ್ಯಾಭ್ಯಾಸ)

ಬರೆದವರು: "ಹರಿದಾಸ" ವಿದ್ವಾನ್.
ಪ್ರಕಾಶಕರು: ವೀಣಾ ಪ್ರಕಟಣಾಲಯ, ಶಿರ್ವ. ಬೆಲೆ: ಆರಾಣೆ.

ಶಾಲಾ ವರ್ಷಾಂತ್ಯೋತ್ಸವ ಮುಂತಾದ ಸಂದರ್ಭಗಳಲ್ಲಿ ಅಭಿನಯಿಸಲ್ಪಡುವ ಏಕಾಂಕ ನಾಟಕಗಳು, ಮಕ್ಕಳ ಬೆಳೆಯುತ್ತಿರುವ ವ್ಯಕ್ತಿತ್ವವನ್ನೂ ಪೋಷಿಸುವಂತಿರಬೇಕು—ಅವುಗಳನ್ನು ಸಮ್ಯಗ್ಗಾಯಿತರನ್ನಾಗಿ ಮಾಡಬೇಕು. ಸಾಮಾಜಿಕ ಕಥಾವಸ್ತುವಿಗಿಂತಲೂ ಪೌರಾಣಿಕ ಹಿನ್ನೆಲೆಯಲ್ಲಿ ಬರೆಯಲಾದ ನಾಟಕಗಳು ಮಕ್ಕಳ ಅಭಿರುಚಿಗೆ ಒಪ್ಪುವಂತಿರುವುದಲ್ಲದೆ, ಪ್ರೇಕ್ಷಕರ ಮೇಲೆ ಉತ್ತಮ ಪರಿಣಾಮವನ್ನೂ ಮಾಡಬಲ್ಲುವು. ಹರಿದಾಸರು ಬರೆದ ಈ ಏಕಾಂಕ ನಾಟಕ ಈಗಾಗಲೇ ಜನಪ್ರಿಯತೆಯನ್ನು ಗಳಿಸಿಕೊಂಡಿದೆ—ಮಕ್ಕಳ ಮನಸ್ಸಿನಲ್ಲಿ ದೀರ್ಘಕಾಲ ಪರಿಣಾಮ ಮಾಡಬಲ್ಲ

(೧೬ನೇ ಪುಟ ನೋಡಿರಿ)

ಪ್ರಕಟಣೆ

ಮಂದಾರ್ತಿ ಶ್ರೀ ದುರ್ಗಾ ಪರಮೇಶ್ವರಿ ಅಮ್ಮನವರ ಭಕ್ತವೃಂದಗಳಿಗೆ ಈ ಮೂಲಕ ತಿಳಿಯಪಡಿಸುವದೇನಂದರೆ—

ಸದ್ರಿ ಸನ್ನಿಧಿಯ ಹೆಸರಿನಿಂದ ಗರ್ಭಗೃಹದ ಸಹಾಯ ನಿಧಿಗೆ ಮೋಸದ ಸುಳ್ಳು ಕಲ್ಪನೆಗಳಿಂದ ಸಹಾಯವನ್ನು ಪಡೆದ ತಕ್ಷೀರಿನ ಕೋಟಿ, ಹಿಲ್ಯಾಣ ಹೊರ್ಲಿಮಕ್ಕಿಯಲ್ಲಿರುವ ತೇಜಪ್ಪ ಸೆಟ್ರ ಮಗ ಮೋನಪ್ಪ ಸೆಟ್ರು ಮತ್ತು ಶಿರಾಡಿ ಕೆಳಮನೆ ಸುಬ್ರಾಯ ಅಡಿಗಳ ಮಗ ಕುಪ್ಪಯ್ಯ ಅಡಿಗಳನ್ನು ಬಂಧಿಸಿ ಜಾಮೀನಿನ ಮೇಲೆ ಬಿಡಲಾಗಿದೆ.

Trustees. N. R. Bolar,
Executive Officer.

ಮಂದಾರ್ತಿ ದೇವಸ್ಥಾನದ ಆಫೀಸ್,
P. O. ಮಂದಾರ್ತಿ, ತಾ. 10-1-51.

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಳ್ಳಿ, ತಾಮ್ರ ಹಿತ್ತಾಳಿ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ
ರಥಬೀದಿ ಉಡುಪಿ.

ಶಾಂತ ವಾತಾವರಣದಲ್ಲಿ ಅತ್ಯಾಧುನಿಕ ಮಾದರಿಯ ಮೇಲ್ದರಗತಿಯ

—ವಸತಿ ಮತ್ತು ಭೋಜನಗೃಹ—

ಸ್ವಸ್ತಿಕ್ ಲೋಜ್

ವಳನೀರು ರಸ್ತೆ, ಮಂಗಳೂರು.

- ಗಾಳಿ ಬೆಳಕುಗಳಿದ್ದು ಸುಸಜ್ಜಿತವಾದ ಸಿಂಗಲ್ ಮತ್ತು ಡಬ್ಬಲ್ ಕೋಣೆಗಳು!
- ತೃಪ್ತಿಕರವಾದ ಸೇವೆ ಮತ್ತು ಸರ್ವಾನುಕೂಲತೆಗಳು!
- ಶಾಕಾಹಾರಿಗಳಿಗೆ ನುರಿತ ಬ್ರಾಹ್ಮಣ ಅಡಿಗೆ ಭಟ್ಟರಿಂದಲೇ ಭೋಜನ ಮತ್ತು ಉಪಾಹಾರ ತಯಾರಿಕೆ! ದರ ಸುಲಭ! ಸಂದರ್ಶಿಸಿ ಸಮಾಧಾನ ಪಡೆಯಿರಿ!!

THE CATHOLIC BANK, Ltd., COONDAPOOR.

ದಿ ಕಥೋಲಿಕ್ ಬೇಂಕ್ ಲಿಮಿಟೆಡ್, ಕುಂದಾಪುರ.

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ನಮ್ಮ ಬ್ಯಾಂಕಿನಲ್ಲಿ ಚಿನ್ನದ ನಗಗಳ ಈಡಿನ ಮೇಲೆ ಸಾಲ ಪಡಕೊಂಡು ಕ್ಲಪ್ತ ವಾಯಿದೆಗೆ ಅಸಲು ಬಡ್ಡಿ ವಗೈರೆ ಕೊಡದೆ ಬಾಕಿ ಮಾಡಿಕೊಂಡಿರುವುದರಿಂದಲೂ ಸದ್ರಿ ಸಾಲವನ್ನು ಬರಮಾಡಿಕೊಳ್ಳುವರೆ ರಿಜಿಸ್ಟ್ರಿ ನೋಟೀಸು ಬಿಟ್ಟಲ್ಲಿಯೂ, ನಗಗಳನ್ನು ಬಿಡಿಸಿಕೊಂಡು ಹೋಗುವರೆ ತಪ್ಪಿದರಿಂದಲೂ, ಅಂತವರ ನಗಗಳನ್ನು ಇದೇ ಬರುವ ಫೆಬ್ರವರಿ ತಿಂಗಳ ತಾರೀಕು 10ಕ್ಕೆ (ಬುಧವಾರ) ಮಧ್ಯಾಹ್ನ ಗಂಟೆ 2ಕ್ಕೆ ಸರಿಯಾಗಿ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು. ಆಗತ್ಯ ಬಿದ್ದಲ್ಲಿ ಏಲಂಅನ್ನು ಮುಂದಿನ ನೋಟೀಸಿನ ಶಿವಾಯ ಮುಂದರಿಸಲಾದೀತು.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ತಾ. 31-12-53ರ ತನಕ ಬಡ್ಡಿ ಕೂಡ್ಸಿ ಬರಬೇಕಾದ ಮೊಬ್ಲಗು		
28/46	ಜಿ. ಮಂಜಯ್ಯ ಸೇರಿಗಾರ, ವೆಂಕಟ್ರಮಣ ಸೇರಿಗಾರರ ಮಗ, ಪ್ರೊಸೆಸ್ ಸರ್ವರ್ ಮುನ್ಸಿಫ್ ಕೋರ್ಟ್ ಕುಂದಾಪುರ	44	6	0
28/90	ಪೆತ್ರೂಜ್ ಲೂವಿಸ್, ವಿಕ್ಟರ್ ಪಿರೇರರ ಹೆಂಡ್ತಿ, ಪಡೇರಹೋಬ್ಳಿ, ಕುಂದಾಪುರ	103	4	0
28/133	K. ಮಹಾಬ್ಲ ಸೆಟ್ಟಿ, ಸೇಸಪ್ಪ ಸೆಟ್ಟಿಯರ ಮಗ ಕೆಮ್ಮಾರು ಗ್ರಾಮ, ತೆಕ್ಕಟ್ಟೆ ಪೋಸ್ಟ್	113	4	0
28/157	ರೆಮೆಜ್ ಸೋಜಾಬಾಯಿ, ಸೋಕಿ ಸೋಜರ ಹೆಂಡ್ತಿ ಕಲ್ಲುಗುಡ್ಡೆ, ಚಿಕ್ಕನ್ ಸಾಲು ರೋಡ್, ಕುಂದಾಪುರ	127	6	0
28/189	ಸಿದ್ದ ಬಂಡಾರಿ, ಚಿಕ್ಕ ಭಂಡಾರಿ ಅಳಿಯ, ಹೇರ್ ಕಟ್ಟಿಂಗ್ ಸೆಲೂನ್, ಕುಂದಾಪುರ	50	9	0
28/217	ಭುಜಂಗ ಸೆಟ್ಟಿ, ಶಿವರಾಮ ಹೆಗ್ಡೆ ಅಳಿಯ ಭಂಡಾರ ಮನೆ, ಸೌಕೂರು, ಕಂಡ್ಲೂರು P. O.	70	12	0
28/284	ಆತ್ರಾಡಿ ಸಂಜೀವ ಸೆಟ್ಟಿ, ಅಂತ್ಯ ಸೆಟ್ರ ಅಳಿಯ ಟಿಂಬರ್ ಮರ್ಚೆಂಟ್, ಹಂಡ್ಸೆ ಪೋಸ್ಟ್	157	4	0
28/307	ಬಿ. ಶಿವರಾವ ಸೆಟ್ಟಿ, ಮಂಜಯ್ಯ ಹೆಗ್ಡೆರ ಅಳಿಯ, ಮೊಳಹಳ್ಳಿ - ಮುದ್ದುಮಕ್ಕಿ P. O.	41	1	0
28/330	D. K. ವೆಂಕಟೇಶ, ಸುಬ್ರಾಯ ಸೇರಿಗಾರರ ಮಗ, Peon ಕಲೆಕ್ಟರ್ಸ್ ಆಫೀಸು ಕುಂದಾಪುರ	63	7	0
28/331	D. K. ವೆಂಕಟೇಶ, ಸುಬ್ರಾಯ ಸೇರಿಗಾರರ ಮಗ, Peon. ಕಲೆಕ್ಟರ್ಸ್ ಆಫೀಸು, ಕುಂದಾಪುರ	12	15	0
28/422	ಜೂಜೆ ದೊಮಿಂಗ್, ಮಾಥ್ಯಸ್ ಡೊಮಿಂಗರ ಮಗ, ಹಂಗ್ಳೂರು, ಮಜ್ಜಕೆರೆ, ಕುಂದಾಪುರ	28	2	0
28/479	M. ಕೃಷ್ಣಪ್ಪ ಸೆಟ್ಟಿ. ಅಂತ್ಯ ಸೆಟ್ರ ಅಳಿಯ ಕಕ್ಕುಂಜೆ, ಪೋಸ್ಟ್ - ಕುಂದಾಪುರ	637	7	0
28/517	M. ರತ್ನಾಕರ, B. ಶಂಕರ ಮಗ ಓದರ, ಸರಿಪೇಣ, ಕುಂದಾಪುರ	27	6	0
29/91	A. ಸೂರಪ್ಪ ಸೆಟ್ಟಿ. ಚನ್ನಯ್ಯ ಸೆಟ್ರ ಅಳಿಯ ಟಿಂಬರ್ ಮರ್ಚೆಂಟ್, ಉಪ್ರಾಡಿ	109	5	0
29/158	ಉತ್ರಾಡಿ ಸೂರಪ್ಪ ಸೆಟ್ಟಿ, ಚನ್ನಯ್ಯ ಸೆಟ್ರ ಅಳಿಯ ಉಪ್ರಾಡಿ	115	6	0
29/174	ಅಂತೋನಿ R. D. ಸೋಜಾ, ವೆಂಡ್ತು ಡಿ'ಸೋಜರ ಮಗ, ಟೈಲರ ಕುಂದಾಪುರ	54	6	0
29/193	ಹೆರಿಯಣ್ಣ ಸೆಟ್ಟಿ, ಚನ್ನಯ್ಯ ಸೆಟ್ರ ಅಳಿಯ, ಹಂಡ್ಸೆ ಗ್ರಾಮ - ಹಂಡ್ಸೆ ಪೋಸ್ಟ್	161	0	0

The Catholic Bank, Ltd,
COONDAPOOR
23—1—1954.

I MENEZES,
Agent.

ಕಥಾವಸ್ತುವೊಂದನ್ನು ಆಯ್ದುಕೊಂಡು, ಕುಶಲವಾಗಿ ಪಾತ್ರ ಚಿತ್ರಣಗಳನ್ನು ನಿರ್ಮಿಸಿ, ಹರಿದಾಸರು ಮನೋರಂಜನೆಯೊಂದಿಗೆ ಉಚಿತ ಬೋಧನೆಯನ್ನೂ ಒದಗಿಸಿರುವರು. ಶ್ರೀಕೃಷ್ಣ ಬಲರಾಮರ ಗುರುಭಕ್ತಿ, ಮಕರಂದ ಸುಧಾಮರ ಸ್ನೇಹಬುದ್ಧಿ, ರಾಧೆ ಮೊದಲಾದ ಗೋಪಿಯರ ವಿರಹಭಾವ, ಸಾಂಧಿತ ಋಷಿ ದಂಪತಿಗಳ ನಿರ್ಮಲಾಂತಃಕರಣ ಹಾಗೂ ಪುತ್ರಪ್ರೇಮ—ಇವೆಲ್ಲವನ್ನೂ ಮೇಳವಿಸಿ ಪರಿಣಾಮಕಾರೀ ಚಿತ್ರವನ್ನಿಲ್ಲಿ ಕೊಟ್ಟಿರುವರು.

ದಕ್ಷಿಣ ಭಾರತ—

ಲೇಖಕ ಮತ್ತು ಪ್ರಕಾಶಕ—ಶ್ರೀ. ಬಿ. ಜಿ. ಪರಾಡ್‌ಕರ್, ಶ್ರೀ ರಾಧಾಕೃಷ್ಣ ದೇವಸ್ಥಾನ, ಮಂಗಳೂರು ಬೆಲೆ: ಹನ್ನೆರಡಾಣೆ.

ಪುಣ್ಯಕ್ಷೇತ್ರಗಳ ಐತಿಹ್ಯ ಹಾಗೂ ವೈಶಿಷ್ಟ್ಯಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ವರ್ಣಿಸುವ ಪುಸ್ತಕಗಳು ಇವೆಯೇನೋ ನಿಜ—ಆದರೆ ದಕ್ಷಿಣ ಭಾರತದಲ್ಲಿರುವ ಮೂವತ್ತು ಮೂರು ತೀರ್ಥಕ್ಷೇತ್ರಗಳ ವಿಸ್ತೃತ ಪರಿಚಯವನ್ನು ಮಾಡಿಕೊಡುವ ಒಂದೇ ಪುಸ್ತಕ—ಅದೂ ಕನ್ನಡ ಪುಸ್ತಕ—ನೋಡಲು ಸಿಕ್ಕಿದ್ದೇ ಇಲ್ಲ. ಈಗ ಅಂಥದೊಂದು ಪರಿಚಯ ಬರೆಹ ಪ್ರಕಟಗೊಂಡಿದೆ—ಈ ಪುಸ್ತಕದಲ್ಲಿ ಮುಖ್ಯವಾಗಿ ಭೂಪ್ರದಕ್ಷಿಣಾ ರೂಪದಿಂದ ಸುಮಾರು ೪೦-೪೫ ದಿನಗಳ ಅವಧಿಯಲ್ಲಿ ೩೦೦ ರೂಪಾಯಿಗಳ ವೆಚ್ಚದಲ್ಲಿ ಸಂದರ್ಶಿಸಬಹುದಾದ ೩೩ ಪುಣ್ಯಕ್ಷೇತ್ರಗಳ ಬಗ್ಗೆ ಅಮೂಲ್ಯ ಮಾಹಿತಿಯು ಸಂಗ್ರಹಿಸಲ್ಪಟ್ಟಿದೆ. ಮಂಗಳೂರಿನಿಂದ ಹೊರಟು, ದಕ್ಷಿಣ ರೈಲ್ವೆಯಲ್ಲಿ ಸಂಚಾರ ಮಾಡುತ್ತಾ ತಮಿಳುನಾಡು, ಕೇರಳಗಳ ಸಂಚಾರ ಕೈಗೊಂಡರೆ, ಶ್ರೀ ಗುರುವಾಯೂರು, ಪಾಲಘಾಟ್, ತಳನಿ, ಕೊಯಮುತ್ತೂರು, ಉದಕಮಂಡಲ, ಭವಾನಿಸಾಗರ, ಮೆಟ್ಟೂರು, ಕಾಳಹಸ್ತಿ, ತಿರುಪತಿ, ಮದ್ರಾಸು, ಪಕ್ಷಿತೀರ್ಥ, ಮಹಾಬಲಿಪುರಂ, ಕಾಂಜೀವರಂ, ಅರುಣಾಚಲಂ, ಪಾಂಡಿಚೇರಿ, ಚಿದಂಬರಂ, ಮಾಯಾವರಂ, ತಿರುಕಡಿಯೂರು, ಕುಂಭಕೋಣಂ, ತಂಜಾವೂರು, ತಿರುಚನಾಪಳ್ಳಿ, ಮಧುರೆ, ರಾಮನಾಡು, ರಾಮೇಶ್ವರ, ಧನುಷ್ಕೋಡಿ, ತಿನ್ನವೆಲ್ಲಿ, ತೆಂಕಾಶಿ, ಪಾಪನಾಶಂ, ಕನ್ಯಾಕುಮಾರಿ, ಅನಂತಶಯನ ಕಾಲಾಡಿ ಇವೇ ಮುಂತಾದ ತೀರ್ಥಕ್ಷೇತ್ರ ಹಾಗೂ ಆಧುನಿಕ ನಗರಗಳನ್ನು ಸಂದರ್ಶಿಸುವುದಕ್ಕೆ ಬೇಕು ಬೇಕೆನಿಸಿದ ವಿವರಗಳು ಈ ಪುಸ್ತಕದಲ್ಲಿವೆ. ಸಾಕಷ್ಟು ವಿಷಯ ಸಂಗ್ರಹವಾಗಿಕೊಂಡು ಸುಲಭ ಭಾಷೆಯಲ್ಲಿ ಬರೆಯಲ್ಪಟ್ಟಿರುವ ಮತ್ತು ಅಗ್ಗ ದರದಲ್ಲಿ ಸಿಗುವ ಈ ಪುಸ್ತಕ ದಕ್ಷಿಣ ಭಾರತದ ಪ್ರವಾಸ ಕೈಗೊಳ್ಳುವ ಕನ್ನಡ ಬಂಧುಗಳಿಗೆ ಸ್ನೇಹಿತನಂತೆ, ಮಾರ್ಗದರ್ಶಕನಂತೆ ಕಂಡು ಬರದಿರಲಾರದು.

ವಿದ್ಯಾರ್ಥಿ—

ಪ್ರಕಾಶಕರು: ಕನ್ನಡ ವಿದ್ಯಾರ್ಥಿ ಸಂಘ, C/o ಜಯಹಿಂದ ಕಾಲೇಜ, ಮುಂಬಯಿ ೧. ಬೆಲೆ: ಎಂಟಾಣೆ.

ಮುಂಬಯಿಯ ಕಾಲೇಜುಗಳಲ್ಲಿ ಅಭ್ಯಾಸ ನಿರತರಾದ ಕನ್ನಡ ವಿದ್ಯಾರ್ಥಿ-ವಿದ್ಯಾರ್ಥಿನಿಯರು ತಮ್ಮದೊಂದು ಸಂಘವನ್ನು ಕಟ್ಟಿಕೊಂಡು ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ಚಟುವಟಿಕೆಗಳನ್ನು ತೋರಿಸುತ್ತಿರುವರು. "ವಿದ್ಯಾರ್ಥಿ" ಎಂಬುದು ಈ ಸಂಘದ ಮುಖ ಪತ್ರ. ಇದರಲ್ಲಿ ಉತ್ತಮ ವಿಷಯಗಳ ಮೇಲೆ ಉನ್ನತ ಮಟ್ಟದ ಹಲವಾರು ಲೇಖನಗಳಿವೆ. ಶ್ರೀ "ಎಸ್ಪೀ" ಬರೆದ 'ಆದರ್ಶ ನಾಯಕ ನೆಹರು' ಎಂಬ ನುಡಿ ಚಿತ್ರ ಬಹಳ ಸುಂದರವಿದೆ. ಶಿಕ್ಷಣ ಮತ್ತು ಸಂಸ್ಕೃತಿ ಎಂಬ ವಿಷಯದ ಮೇಲೆ ಮೂರು ನಾಲ್ಕು ವಿಚಾರ ಪೂರ್ಣ ಬರೆಹಗಳು ಇವೆ. ಒಂದೆರಡು ಕತೆಗಳೂ, ಏಕಾಂಕ ನಾಟಕಗಳೂ ವಿಡಂಬನಾ ಬರೆಹಗಳೂ ಕವನಗಳೂ ಇವೆ. ಮುಂಬಯಿಯ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಕಟ್ಟಿಕೊಂಡು ಕನ್ನಡ ಸಂಘಗಳ ಚಟುವಟಿಕೆಯನ್ನು ವಿವರಿಸುವ ವರದಿಯನ್ನೂ ಈ ಸಂಚಿಕೆಯಲ್ಲಿ ಪ್ರಕಟಿಸಿರುವರು. ಹೊರನಾಡಿನಲ್ಲಿದ್ದುಕೊಂಡು ಕನ್ನಡ ವಿದ್ಯಾರ್ಥಿಗಳು ತಮ್ಮ ಮಾತೃಭಾಷೆಯ ಕುರಿತು ತೋರಿಸುವ ವಾತ್ಸಲ್ಯ ಪ್ರಶಂಸಾರ್ಹವಾದುದು. ಕನ್ನಡದ ಈ ಮಕ್ಕಳು ಇತೋಽಪ್ಯತಿಶಯವಾಗಿ ಅಭಿವೃದ್ಧಿ ಹೊಂದಿ, ನಾಡಿಗೆ ಹೆಸರು ತರಲಿ.

ಲೋಕರಾಜ್ಯ—

—ಮುಂಬಯಿ ಸರಕಾರದ ಪ್ರಸಿದ್ಧಿ ಶಾಖೆಯಿಂದ ಪ್ರಕಟಗೊಳ್ಳುವ 'ಲೋಕರಾಜ್ಯ'ವಾದ ಪತ್ರಿಕೆಯು ಪ್ರಜಾರಾಜ್ಯದ ನಿಮಿತ್ತ ವಿಶೇಷಾಂಕವೊಂದನ್ನು ಹೊರಡಿಸಿರುವುದು. ರಾಜ್ಯದಲ್ಲಿ ಸರಕಾರ ನಡೆಸುವ ಅಭಿವೃದ್ಧಿ ಕಾರ್ಯಕ್ರಮಗಳು ಹೊಂದಿದ ಪ್ರಗತಿಯನ್ನು ವಿವರಿಸುವ ಲೇಖನಗಳನ್ನು ಪ್ರತಿಯೊಂದೂ ಪುಟದಲ್ಲಿ ಕಾಣುತ್ತಿವೆ. ಅವುಗಳಿಗೆ ಸಂಬಂಧಿಸಿದಂತೆ ಹಲವಾರು ಸುಂದರವಾದ ಚಿತ್ರಗಳೂ ಪ್ರಕಟಗೊಂಡಿವೆ. ಕಲ್ಯಾಣ ರಾಷ್ಟ್ರವನ್ನು ಕಟ್ಟುವ ಸರಕಾರದ ಪ್ರಯತ್ನಗಳಲ್ಲಿ ಜನತಾ ಸಹಕಾರ ದೊರಕಿಸಿಕೊಳ್ಳುವುದಕ್ಕೆ ಇಂತಹ ಪ್ರಕಟಣೆಗಳು ಸಹಾಯಕವಾಗಿರುತ್ತವೆ. ಈ ಕಾರಣ ಲೋಕರಾಜ್ಯಕ್ಕೆ ಮುಂಬಯಿ ಕರ್ನಾಟಕದಲ್ಲಿ ಯೋಗ್ಯ ಸ್ವಾಗತ ದೊರಯುವುದೆಂದು ಹಾರೈಸುತ್ತೇವೆ.

(೨ನೇ ಪುಟದಿಂದ)

ಸುದೃಢ ಅರ್ಥ ವ್ಯವಸ್ಥೆ

ಮದ್ರಾಸು ರಾಜ್ಯದ ವಿಭಜನೆಯು ಇಲ್ಲಿಯ ಆರ್ಥಿಕ ಪರಿಸ್ಥಿತಿಯ ಮೇಲೆ ಏನು ಪರಿಣಾಮ ಮಾಡುವುದೋ ಎಂಬ ದಿಗಿಲು ಕೆಲವರಿಗಿದ್ದರೂ—ಅರ್ಥಸಚಿವರು ಈ ವರ್ಷದ ಉತ್ತರಾರ್ಧಕ್ಕೋಸ್ಕರ ಮಂಡಿಸಿದ ಮುಂಗಡ ಪತ್ರ ಇಂತಹ ಭಯಕ್ಕೆ ಕಾರಣವಿಲ್ಲವೆಂದು ಹೇಳುತ್ತದೆ. ೬೩೪೧೭ ಚದರ ಮೈಲು ವಿಸ್ತೀರ್ಣದ ಮತ್ತು ೨೦೫೦೭೪೦೧ ಜನ ಸಂಖ್ಯೆಯ ಆಂಧ್ರ ರಾಜ್ಯದೊಡನೆ ೯೧೭೮೯ ಚದರಮೈಲು ವಿಸ್ತೀರ್ಣ ಹಾಗೂ ೩೫೭೩೪೪೪೯ ಜನಸಂಖ್ಯೆಯುಳ್ಳ ಮದ್ರಾಸು ರಾಜ್ಯವನ್ನು ತೂಗಿನೋಡಿದರೆ, ನಮ್ಮಲ್ಲಿ ಜನಸಂಖ್ಯೆ ಅತಿಹೆಚ್ಚೆಂದು ಕಂಡುಬರುವುದು. ಆಂಧ್ರದಲ್ಲಿ ಪ್ರತಿ ಚದರ ಮೈಲಿಗೆ ೩೨೨ ಜನರ ಇದ್ದಾರೆ. ಮದ್ರಾಸಿನಲ್ಲಿ ಆ ಸಂಖ್ಯೆ ೫೯೪ ಆಗಿರುತ್ತದೆ. ಹೀಗಿದ್ದರೂ ನಮ್ಮ ಆರ್ಥಿಕ ಪರಿಸ್ಥಿತಿ ತೃಪ್ತಿಕರವಿದೆಯೆಂದು ಅರ್ಥ ಸಚಿವರು ಹೇಳಿರುವರು; ಮತ್ತು ಉಳಿಕೆಯ ಮುಂಗಡ ಪತ್ರವನ್ನೇ ಅವರು ಮಂಡಿಸಿರುವರು. ಮದ್ರಾಸು ಸರಕಾರವು ತನ್ನ ಪಾನ ಪ್ರತಿಬಂಧದ ಧೋರಣೆಯಿಂದ ಅಬಕಾರಿ ಆದಾಯದ ದೊಡ್ಡ ಮೊತ್ತವೊಂದನ್ನು ಕಳೆದುಕೊಂಡಿದೆ; ಈಚೆಗೆ ಮಾರಾಟ ತೆರಿಗೆಯಿಂದ ದೊರೆಯುವ ಆದಾಯವೂ ಬಹಳ ತಗ್ಗಿಕೊಂಡಿದೆ. ಹೀಗಿದ್ದರೂ ಸರಕಾರದ ಹಣಕಾಸು ಸಮತೋಲವನ್ನು ಕೆಡಿಸಿಕೊಂಡಿಲ್ಲ. ಬದಲು ಸರಕಾರದ ಮೇಲೆ ಜನರ ವಿಶ್ವಾಸವು ಹೆಚ್ಚಿಕೊಂಡಿರುವುದೇ ತೋರಿಬರುತ್ತದೆ—ಕಳೆದ ಜುಲೈ ತಿಂಗಳಲ್ಲಿ ಎತ್ತಿದ ೫ ಕೋಟಿ ರೂಪಾಯಿಗಳ ಸಾರ್ವಜನಿಕ ಸಾಲಕ್ಕೆ ಸುಮಾರು ಹತ್ತು ಕೋಟಿ ರೂಪಾಯಿಗಳು ಸಂಗ್ರಹಗೊಂಡುದೇ ಇದಕ್ಕೆ ಭವ್ಯ ನಿದರ್ಶನ

ಕ್ರಾಂತಿಕರ ಪ್ರಯೋಗ

ಎಲ್ಲರ ಬಾಯಿಂದಲೂ ಕ್ರಾಂತಿಕಾರ ಪ್ರಯೋಗವೆಂದು ಪ್ರಶಂಸಿಸಲ್ಪಡುವ ನೂತನ ಪ್ರಾಥಮಿಕ ಶಿಕ್ಷಣ ಪದ್ಧತಿಯನ್ನು ಮದ್ರಾಸು ಸರಕಾರವು ಕಳೆದ ವರ್ಷ ಜ್ಯಾರಿಗೆ ತಂದಿರುವುದು. ಇದರನ್ವಯ ಮಕ್ಕಳು ಐದು ತಾಸುಗಳಷ್ಟು ದೀರ್ಘ ಕಾಲ ಶಾಲೆಯ ನಾಲ್ಕು ಗೋಡೆಗಳ ನಡುವಿರುವ ಪ್ರಮೇಯ ತಪ್ಪುತ್ತದೆ. ಅವರು ಮೂರು ತಾಸುಗಳ ಪುಸ್ತಕ ಶಿಕ್ಷಣವನ್ನು ಮಾತ್ರ ಶಾಲೆಗಳಲ್ಲಿ ಪಡೆದರೆ ಸಾಕು—ಉಳಿದ ಸಮಯವನ್ನು ಬೇರೆ ಏನಾದರೂ ಉದ್ಯೋಗವನ್ನು ಕಲಿಯುವುದರಲ್ಲಿ ಅಥವಾ ಮನೆಯ ಹಿರಿಯರ ಕೆಲಸಗಳಲ್ಲಿ ನೆರವಾಗುವುದರಲ್ಲಿ ಕಳೆಯಬಲ್ಲರು. ಈ ಪದ್ಧತಿಯು ಶಾಲೆಗಳ ಸಂಖ್ಯೆ ಪ್ರಮಾಣವನ್ನು ಹೆಚ್ಚಿಸದೆಯೇ ಈಗಿನ ಇಮ್ಮಡಿ ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ಒದಗಿಸಿ ಕೊಡುವುದಕ್ಕೂ ಉದ್ದೇಶಿಸಿದೆ. ಸರದಿ ಕ್ರಮದಿಂದ ತರಗತಿಗಳನ್ನು ನಡೆಸುವುದರಿಂದ ಇದು ಸಾಧ್ಯವಾಯಿತು. ಶೈಕ್ಷಣಿಕ ಕ್ಷೇತ್ರದ ಈ ಪ್ರಯೋಗ ವಿದ್ಯಾರ್ಥಿಗಳ ಭವಿಷ್ಯವನ್ನೇ ಹಾಳುಗೆಡವುತ್ತದೆಂದು ಕೆಲವರು ಆಕ್ಷೇಪವೆತ್ತಿದುದರಿಂದ, ಸರಕಾರವು ಪ್ರೊ. ಆರ್. ವಿ. ಪರುಳೇಕರರ ಅಧ್ಯಕ್ಷತೆಯಲ್ಲೊಂದು ಸಮಿತಿಯನ್ನು ನೇಮಿಸಿತು. ಹೊಸ ಪದ್ಧತಿಯು ಶೈಕ್ಷಣಿಕ ದೃಷ್ಟಿಯಲ್ಲಿ ಉತ್ತಮವಾಗಿರುವುದೆಂದೂ ವ್ಯವಹಾರ ದೃಷ್ಟಿಯಲ್ಲಿ ಎಲ್ಲ ಮಕ್ಕಳಿಗೆ ಶಿಕ್ಷಣವನ್ನೊದಗಿಸಲು ಇದು ನೆರವಾಗುವುದೆಂದೂ ಅಭಿಪ್ರಾಯಪಟ್ಟು ಕೆಲವು ಶಿಫಾರಸುಗಳನ್ನು ಮಾಡಿರುವುದು. ಸರಕಾರವು ಈ ಶಿಫಾರಸುಗಳ ಪರಿಶೀಲನೆಯಲ್ಲಿ ಈಗ ತೊಡಗಿರುತ್ತದೆ.

ಶಿಕ್ಷಣದಲ್ಲಾದಂತೆ, ದಕ್ಷಿಣ ಭಾರತದ ಔದ್ಯಮಿಕ ಕ್ಷೇತ್ರದಲ್ಲೂ ತೀವ್ರ ಮಾರ್ಪಾಟನ್ನು ಮಾಡಬಲ್ಲ ಹೊಸ ಬೆಳಕೊಂದು ತೋರಿರುವುದು— ನೇವೇಲಿಯಲ್ಲಿ ಕಂದು ಕಲ್ಲಿದ್ದಲಿನ ಭೂಗರ್ಭನಿಧಿಯುಂಟೆಂದು ತಿಳಿದು ಬಂದಿದೆ. ಸುಮಾರು ಒಂದು ನೂರು ಚದರ ಮೈಲು ಪ್ರದೇಶದಲ್ಲಿ ೧೫೦ ಅಡಿ ಆಳದ ವರೆಗೆ ಸುಮಾರು ೨೦೦ ಕೋಟಿ ಟನ್ನುಗಳಷ್ಟು ಕಂದು ಕಲ್ಲಿದ್ದಲಿನ ನಿಕ್ಷೇಪ ದಕ್ಷಿಣ ಆರ್ಕಾಟು ಜಿಲ್ಲೆಯಲ್ಲಿದೆಯಾಗಿ ತಿಳಿಯುತ್ತದೆ. ಇದರಿಂದ ಈಗಾಗಲೇ ವಿದ್ಯುಚ್ಛಕ್ತಿಯ ಸೌಲಭ್ಯವನ್ನು ಪಡೆದ ಮದ್ರಾಸು ರಾಜ್ಯದ ೨೦೦೦ ಹಳ್ಳಿಗಳಲ್ಲದೆ, ಇನ್ನೂ ಅನೇಕ ಗ್ರಾಮಗಳಲ್ಲಿ ಔದ್ಯಮಿಕ ಪ್ರಗತಿ ಸಾಧ್ಯವೆನಿಸುವ ನಿರೀಕ್ಷೆ ಇದೆ.

ಈಚೆಗೆ ಮದ್ರಾಸು ಮತ್ತಿತರ ನಗರಗಳಲ್ಲಿ ಅನೇಕ ಹೊಸ ಕಾರ್ಖಾನೆಗಳು ಹುಟ್ಟಿಕೊಂಡಿವೆ. ಪರ್ಕಿನ್ಸ್ ಡೀಸೆಲ ಇಂಜಿನುಗಳು, ಕಾಸ್ಟಿಕ ಸೋಡ, ನೋಟರು ಸೈಕಲ, ಫೌಂಟೆನ್ ಪೆನ್ನು, ಶಾಯಿ, ಸೈಕಲು ಮುಂತಾದ ಕಾರ್ಖಾನೆಗಳು ಮದ್ರಾಸು ನಗರದಲ್ಲಿಯೂ ಪಾಪನಾಶಂ; ಅಂಬತ್ತೂರು ಮುಂತಾದ ನಗರಗಳಲ್ಲಿಯೂ ತಲೆ ಎತ್ತಿವೆ; ಅಥವಾ ಎತ್ತುತ್ತಲಿವೆ.

SEASON DEPOSITS.

Are now accepted for periods from 3 to 6 months 3½% interest per annum for amounts of Rs. 500/- and multiples thereof. No deposit is allowed to run beyond 15—10—1954.

Attractive rates of interest are offered for Fixed Deposits for periods ranging from 1 to 24 months.

Banking transactions of all kinds are undertaken.

Branches throughout South Kanara, and one each in Mercara and Fort, Bombay.

THE VIJAYA BANK LIMITED,
Head Office: **MANGALORE.**

ಲಕ್ಷಾಂತರ ಜನರು ಗುಣಹೊಂದಿದ್ದಾರೆ:

ಸರ್ ಜೀವನ್ ಶಿಲಾಜಿತ್‌ಲೇಹ

ಶಿಲಾಜಿತ್ ಹಿಮಾಲಯದ್ದು ಔಷಧಿಗಳ ರಾಜ; ಮೂಲಿಕೆಗಳೊಡನೆ ಸೇರಿಸಿದ ಲೇಹ್ಯ, ದೇಹಶಕ್ತಿ, ಹೊಟ್ಟೆನೋವು, ಅನ್ನ ಸೇರದಿರುವಿಕೆ, ಕೆಮ್ಮು, ದಮ್ಮು, ಬಹುಮೂತ್ರ ಮತ್ತು ವಾಯುವಿನಿಂದಾಗುವ ಎಲ್ಲಾ ರೋಗನಿವಾರಕ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, ಹೆಂಗಸರ ಮತ್ತು ಮಕ್ಕಳ ಸರ್ವರೋಗ ನಿವಾರಕ ಅಮೂಲ್ಯ ರತ್ನ. ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು.

೪೮ ದಿನದ ಲೇಹ್ಯ ರೂ. ೫-೪-೦, ೨೨ ದಿನದ ಲೇಹ್ಯ ರೂ. ೩-೪-೦. (ಪೋಸ್ಟೇಜು ಮಾಫಿ)

ನೀಲಗಿರಿ ಡಿಪೊ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ.

ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋವಿನಲ್ಲಿ ಕೇಳಿರಿ.

ಭರ್ತ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ-೧ ಬಾಟ್ಲಿಗೆ — **ರೂ. ೫-೮-೦** .... ಪೋಸ್ಟು ಖರ್ಚು **ರೂ. ೦-೧೪-೦**

—:ವಿಳಾಸ:—

ಹಾಲಪ್ಪಾ ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ಋತುಸ್ರಾವ ನಿಂತಿತು

"ಕುಮಾರಿ" ಬಿಲ್ಲೆಗಳನ್ನು ಉಪಯೋಗಿಸಿದರೆ ತಪ್ಪದೆ ಋತುಸ್ರಾವವಾಗುವುದು, ಹೊಟ್ಟೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು. ಯಾವ ಬಾಧಕವೂ ಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ- ಬೆಲೆ: ರೂ. 3/-; ಸ್ಪೆಶ್ಯಲ್ ರೂ. 5-. ಅಧಿಕಾಧಿಕ ಸ್ಪೆಶ್ಯಲ್ ರೂ. 8-[ವಿ. ಪಿ. ಹನ್ನೆರಡಾಣೆ ಪ್ರತ್ಯೇಕ]

Mrs. P. DEVEE, P.D.S. (N.J.)
CALCUTTA. 40

ಸ್ಟಾಕಿಸ್ಟರು: ಶಹಾ ಕಂಪೆನಿ, ಮಂಗಳೂರು.

Edited, Printed & Published By K. H. Shetty at the Navayuga Press, Udipi, S. India

Regd. No. M. 3618

Licence No 31
Licensed to Post without Prepayment.

ನವಯುಗ

Vol.33 No 23 11-2-1954 ವರ್ಷ ೩೩ ವಾರ ೨೩

ಓಟು ಕೇಳಲು ಬಂದವರು...

ಮುಂದಿನ ಸೋಮವಾರದಿಂದ(ದಿನಾಂಕ ೧೫) ತಿರುವಾಂಕೂರು—ಕೊಚ್ಚಿ ರಾಜ್ಯದಲ್ಲಿ ತಿರುಗಿ ಸಾರ್ವತ್ರಿಕ ಚುನಾವಣೆಗಳು ನಡೆಯುತ್ತವೆ ಉತ್ತರ ಭಾರತದ ಪೆಪ್ಸು ರಾಜ್ಯದಲ್ಲಿಯೂ ಸದ್ಯವೇ ಚುನಾವಣೆ ನಡೆಯಲಿದೆ ಪೆಪ್ಸು ರಾಜ್ಯದಲ್ಲಿ ಕಳೆದ ಮಹಾ ಚುನಾವಣೆಯಲ್ಲಿ ಅಧಿಕಾರಕ್ಕೆ ಬಂದ ಕಾಂಗ್ರೆಸು ಮಂತ್ರಿ ಮಂಡಳದ ಮೇಲೆ ವಿರೋಧೀ ಗುಂಪುಗಳು ಅವಿಶ್ವಾಸದ ಠರಾವನ್ನು ಮಂಡಿಸಿದಾಗ ಅದು ಮಂಜೂರಾಯಿತು. ಪರಿಣಾಮದಲ್ಲಿ ವಿರೋಧೀ ಗುಂಪುಗಳೇ ಐಕ್ಯರಂಗವನ್ನು ಕಟ್ಟಿಕೊಂಡು ಮಂತ್ರಿ ಮಂಡಲವನ್ನು ರಚಿಸಿಕೊಂಡವು ಆದರೆ ಸಮರ್ಪಕ ರೀತಿಯಲ್ಲಿ ಸರಕಾರದ ಕಾರ್ಯ ಕಲಾಪಗಳು ನಡೆಯದ್ದರಿಂದ, ರಾಷ್ಟ್ರಾಧ್ಯಕ್ಷರೇ ಆಡಳಿತವನ್ನು ತಮ್ಮ ಕೈಗೆ ತೆಗೆದು ಕೊಂಡರು ಇದೀಗ ಸುಮಾರು ಒಂದು ವರ್ಷಗಳಿಗೂ ಹೆಚ್ಚು ಕಾಲದ ಮೇಲೆ ಎರಡನೇ ಸಲ ಅಲ್ಲಿ ಮಹಾ ಚುನಾವಣೆ ನಡೆಸಲು ಸಿದ್ಧತೆಗಳಾಗುತ್ತವೆ ಕಾಂಗ್ರೆಸು ಈಗಲೂ ಪ್ರಬಲ ಪಕ್ಷವಾಗಿ ಚುನಾವಣೆಯಲ್ಲಿ ಸ್ಪರ್ಧೆಗೆ ನಿಂತಿದೆ-ಆದರೆ, ಅಕಾಲಿ ದಳವೇ ಮುಂತಾದ ಪಕ್ಷಗಳ ಪ್ರಬಲ ವಿರೋಧವನ್ನು ಕಾಂಗ್ರೆಸು ಇದಿರಿಸಿ ಗೆದ್ದು ಬರುವುದು ಸುಲಭದ ಮಾತಲ್ಲ ಅಲ್ಲಿಯ ವಿರೋಧೀ ಪಕ್ಷಗಳು ಎಷ್ಟು ಬೇಜವಾಬ್ದಾರಿಯಿಂದ ವರ್ತಿಸುತ್ತವೆಂದರೆ—ಸಭ್ಯತೆಯ ಎಲ್ಲೆಯನ್ನು ಮೀರಬಾರದೆಂಬ ತತ್ವವನ್ನು ಅವು ಗಮನಿಸಿದಂತೆಯೇ ಇಲ್ಲ. ಈಚೆಗೆ ನೆಹರೂರವರು ಗುರುದ್ವಾರದಲ್ಲಿ ಭಾಷಣ ಮಾಡಲೆಂದು ಹೋದಾಗ—"ನೆಹರೂರವರೇ, ಹಿಂದೆ ಹೋಗಿರಿ" ಎಂದು ಭಯಂಕರ ಆಕ್ರೋಶಗೈಯುತ್ತಾ, ಲಾಠೀ ಮತ್ತು ಭರ್ಚಿಗಳಿಂದ ಜನಜಂಗುಳಿಯನ್ನು ಹೆದರಿಸಿದ ಅಕಾಲಿದಳ ಚುನಾವಣಾ ಪ್ರಚಾರಕ್ಕೆ ಅನುಚಿತಕ್ರಮ ಮತ್ತು ಮಾರ್ಗವನ್ನು ಅನುಸರಿಸುತ್ತದೆ. ಮೊನ್ನೆ ಕಾಂಗ್ರೆಸಿನವರು ಚುನಾವಣಾ ಪ್ರಚಾರ ಸಭೆಯನ್ನು ಏರ್ಪಡಿಸಿದಾಗ, ಅದರ ಕಾರ್ಯಕಲಾಪಗಳಿಗೆ ಭಂಗವನ್ನೆಸಗಿ ತನ್ಮೂಲಕ ಗೊಂದಲಮಯ ವಾತಾವರಣವನ್ನುಂಟು ಮಾಡಲೂ ಅಕಾಲಿದಳ ಉದ್ಯುಕ್ತವಾಯಿತು. ಚುನಾವಣಾ ಪ್ರಚಾರ ಸಭೆಗೆ ಸೇರಿದ ಜನರ ಮೇಲೆ ಕಲ್ಲು, ಇಟ್ಟಿಗೆಗಳನ್ನು ಬಿಸಾಡುವುದು, ಚುನಾವಣಾ ಪ್ರಚಾರ ಭಾಷಣ ಕೇಳಿಸದಂತೆ ಧ್ವನಿವರ್ಧಕದ ಮೂಲಕ ತಾವೂ ಬಾಯಿಗೆ ಬಂದಂತೆ ಬೊಬ್ಬೆ ಹೊಡೆಯುವುದು ಇತ್ಯಾದಿ ಅನಾಗರಿಕ ವರ್ತನೆಯನ್ನು ವಿರೋಧೀ ಗುಂಪುಗಳು ಅನುಸರಿಸುವುದಕ್ಕೆ ಹೇಸುವುದಿಲ್ಲ.

ಸುದೈವದಿಂದ ತಿರು-ಕೊಚ್ಚಿಯಲ್ಲಿ ಇಂತಹ ಅನುಚಿತ ಪ್ರಸಂಗಗಳು ನಡೆಯದೆ-ಗೌರವಯುತ ರೀತಿಯಲ್ಲಿಯೇ ಚುನಾವಣೆಯ ಪ್ರಚಾರ ಭರದಿಂದ ಸಾಗುತ್ತದೆ ಶಾಸನಸಭೆಗೆ ಇರುವ ೧೧೮ ಸ್ಥಾನಗಳಿಗೆ ಒಟ್ಟು ೨೬೬ ಹುರಿಯಾಳುಗಳು ನಿಂತಿದ್ದು, ಹೆಚ್ಚಿನ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಮತ್ತು ಐಕ್ಯರಂಗದ ಅಥವಾ ಪ್ರಜಾಸಮಾಜವಾದೀ ಪಕ್ಷದ ಹುರಿಯಾಳುಗಳೊಳಗೆ ಸ್ಪರ್ಧೆ ನಡೆಯುತ್ತದೆ ಪ್ರಜಾಸಮಾಜವಾದೀ ಪಕ್ಷಕ್ಕೂ ಕಮ್ಯುನಿಸ್ಟ, ಕೇರಳ ಸೋಶಲಿಸ್ಟ ಮತ್ತು ಕ್ರಾಂತಿಕಾರಿ ಸೋಶಲಿಸ್ಟ ಪಕ್ಷಗಳು ಕಟ್ಟಿಕೊಂಡ ಐಕ್ಯರಂಗಕ್ಕೂ ಒಂದು ಬಗೆಯ ಚುನಾವಣಾ ಸಂಧಾನವಾಗಿದ್ದು, ತ್ರಿಪಕ್ಷೀಯ ಸ್ಪರ್ಧೆಯನ್ನು ಈ ವ್ಯವಸ್ಥೆ ತಪ್ಪಿಸುತ್ತದೆ ಪೆಪ್ಸುವಿನಲ್ಲಿ ವಿರೋಧೀ ಪಕ್ಷಗಳಿಗೆ ಅಧಿಕಾರಕೊಟ್ಟುದರಿಂದ ಪರಿಸ್ಥಿತಿ ಹದಗೆಟ್ಟುಹೋಯಿತು. ಇದರಿಂದ ಗಳಿಸಿದ ಅನುಭವ ತಿರುಕೊಚ್ಚಿಯಲ್ಲಿ ವಿರೋಧೀ ಪಕ್ಷಗಳಿಗೆ ಸರಕಾರ ರಚಿಸಲು ಅವಕಾಶಕೊಡುವುದಕ್ಕೆ ಅನುಕೂಲವಾಗಿರಲಿಲ್ಲ. ಆದುದರಿಂದ, ಕಾಂಗ್ರೆಸ್ ಮಂತ್ರಿ ಮಂಡಳವೇ ಚುನಾವಣೆಗಳು ಮುಗಿದು ಹೊಸ ಸರಕಾರ ಬರುವವರೆಗೆ ಅಸ್ತಿತ್ವದಲ್ಲಿ ಉಳಿಯಬೇಕೆಂಬ ಯೋಗ್ಯ ನಿರ್ಧಾರವನ್ನು ರಾಜಪ್ರಮುಖರು ಕೈಗೊಂಡರು. ಇಲ್ಲಿ ತಿರುಗಿ ನಡೆಯುವ ಚುನಾವಣೆಯಲ್ಲಿ ಜಯಗಳಿಸುವ ಕುರಿತು ಕಾಂಗ್ರೆಸು ತನ್ನ ಸರ್ವ ಶಕ್ತಿಯನ್ನು ಉಪಯೋಗಿಸುತ್ತದೆ. ವಿರೋಧೀ ಗುಂಪುಗಳಾದರೂ ಈ ಸಂದರ್ಭದ ಸಾಧ್ಯವಿದ್ದಷ್ಟು ಹೆಚ್ಚು ಪ್ರಯೋಜನವನ್ನು ಮಾಡಿಕೊಳ್ಳಲು ಸೊಂಟ ಕಟ್ಟಿರುತ್ತವೆ ಕಾಂಗ್ರೆಸಿಗೆ ಮುಖ್ಯವಾಗಿ ಕಮ್ಯುನಿಸ್ಟರ ವರ್ಚಸ್ಸಿನ ಭಯವಿದೆ-ಆದುದರಿಂದ ರಾಜಾಜಿ ಮೊರಾರಜಿ ಮುಂತಾದ ಕಾಂಗ್ರೆಸ ಪ್ರಭೃತಿಗಳು ತಮ್ಮ ಚುನಾವಣಾ ಪ್ರಚಾರ ಭಾಷಣದಲ್ಲಿ ಕಮ್ಯುನಿಸ್ಟರ ತತ್ವ ಮತ್ತು ಧ್ಯೇಯಗಳನ್ನು ಖಂಡಿಸಿ, ಭಾರತದ ಪ್ರಗತಿಗೆ ಕಮ್ಯುನಿಸ್ಟ ಧೋರಣೆಯಿಂದ ಪೆಟ್ಟು ತಗಲುವುದೆಂದು ತಿಳಿಸಿದರು. ಕಾಂಗ್ರೆಸು ಪ್ರಕಟಪಡಿಸಿದ ಚುನಾವಣಾ ಘೋಷಣೆಯಲ್ಲಿ ಜನರಿಗೆ ಕೆಲವು ಭರವಸೆಯ ಮಾತುಗಳು ಕೊಡಲ್ಪಟ್ಟಿವೆ--ಮುಖ್ಯವಾಗಿ ಸರಕಾರಿ ಭೂಮಿಯನ್ನು ಭೂಮಿ ಇಲ್ಲದವರಿಗೆ ಕೊಡುವ, ಕೂಲಿಕಾರರು ಮತ್ತಿತರ ನೌಕರರ ಸಂಬಳವನ್ನು ಪುನರ್ವಿಮರ್ಶಿಸುವ, ಅಭಿವೃದ್ಧಿ ಯೋಜನೆಗಳನ್ನು ಭರದಿಂದ ಮುಂದೊತ್ತುವ ಕ್ರಮಗಳನ್ನು ಕೈಗೊಳ್ಳುವುದಾಗಿ ಕಾಂಗ್ರೆಸು ಹೇಳಿದೆ

ಶ್ರೀ ಜವಾಹರಲಾಲ ನೆಹರೂರವರು ಕಳೆದ ಗುರುವಾರದಿಂದ (ದಿನಾಂಕ ೪) ಆರು ದಿನಗಳ ವರೆಗೆ ತಿರು—ಕೊಚ್ಚಿಯಲ್ಲಿ ಸುಮಾರು ೭೦೦ ಮೈಲು ದೂರ ಪ್ರವಾಸ ಮಾಡುತ್ತಾ ೧೦೭ ಮತದಾರ ಕ್ಷೇತ್ರಗಳನ್ನು ಸಂದರ್ಶಿಸುವ ಮತ್ತು ಜನರು ಕಾಂಗ್ರೆಸಿಗೆ ಬೆಂಬಲ ಕೊಡಬೇಕೆಂದು ಭಾಷಣಮಾಡುವ ಕಾರ್ಯಕ್ರಮವನ್ನು ಇಟ್ಟುಕೊಂಡರು ಈಸಲದ ಚುನಾವಣೆಯ ಪರಿಣಾಮವಾಗಿ ನಿಶ್ಚಿತ ಬಹುಮತಪ್ರಾಪ್ತ ಕಾಂಗ್ರೆಸು ಸರಕಾರ ಅಧಿಕಾರಕ್ಕೆ ಬರಬೇಕೆಂಬ ನಿರ್ಧಾರದಿಂದಲೇ ನೆಹರೂ ದಿನಕ್ಕೆ ಹತ್ತು—ಹನ್ನೆರಡು ತಾಸುಗಳವರೆಗೆ ಎಡೆಬಿಡದ ಪ್ರಚಾರ ಭಾಷಣ ಮಾಡಲು ಮತ್ತು ತಿರುಕೊಚ್ಚಿಯ ಪ್ರತಿಯೊಂದೂ ಮೂಲೆಯನ್ನು ಸಂದರ್ಶಿಸಲು ನಿರ್ಧಾರ ಕೈಗೊಂಡಂತೆ ತೋರುತ್ತದೆ ಕೇಂದ್ರದಲ್ಲಿ ಮತ್ತು ಉಳಿದೆಲ್ಲ ರಾಜ್ಯಗಳಲ್ಲಿ ಕಾಂಗ್ರೆಸು ಸರಕಾರ ಅಧಿಕಾರದಲ್ಲಿರುವಾಗ-ತಿರುಕೊಚ್ಚಿಯ ಈ ಮರು ಚುನಾವಣೆಯಲ್ಲಿ ಕಾಂಗ್ರೆಸು ಸೋಲುವುದು ಇಷ್ಟವಲ್ಲದ ವಿಷಯ ಆದರೆ ವಿರೋಧೀ ಗುಂಪುಗಳು ಕಾಂಗ್ರೆಸಿನಷ್ಟೇ ಪ್ರಬಲ ಪ್ರಚಾರವನ್ನು ಕೈಗೊಂಡು, ಹೇಗಾದರೂ ಮಾಡಿ ಇಲ್ಲಿ ತಮ್ಮ ಚಂಚು ಪ್ರವೇಶಕ್ಕೆ ಎಡೆ ದೊರಕಿಸಬೇಕೆಂದು ಪ್ರಯತ್ನ ಪಡುತ್ತವೆ. ಕಾಂಗ್ರೆಸು ಸರಕಾರದ ಕೆಲಸ ಅಕರ್ಮಣ್ಯತೆಯನ್ನೂ ಕಾರ್ಯಭ್ರಷ್ಟತೆಯನ್ನೂ ತೋರಿಸಿಕೊಡುತ್ತವೆಂದು ಇವರು ಸಾರುತ್ತಿದ್ದು, ಭೂಸುಧಾರಣೆ, ರಾಷ್ಟ್ರೀಕರಣ ಮುಂತಾದ ಧ್ಯೇಯಗಳ ಸಾಧನೆಗಾಗಿ ತಾವು ದುಡಿಯುತ್ತೇವೆಂದು ಹೇಳುವರು ಕಾಂಗ್ರೆಸಿಗೆ ಪ್ರಬಲವಾದ ಕೆಥೋಲಿಕ ಚರ್ಚಿನ ಬೆಂಬಲ ಪಿಸಿಯೆಂದು ಬಹಿರಂಗವಾಗಿ ಹೇಳುವುದಕ್ಕೂ ಅದರ ವರ್ಚಸ್ಸನ್ನು ಕಾಂಗ್ರೆಸು ಉಪಯೋಗಿಸುತ್ತಿದೆಯೆಂದು ಆರೋಪಿಸುವುದಕ್ಕೂ ವಿರೋಧೀ ಗುಂಪು ಹಿಂಜರಿದಿಲ್ಲ ತಿರುಕೊಚ್ಚಿಯಲ್ಲಿ ಕೂಲಿಕಾರರ, ರೈತರು, ಮಧ್ಯ ವರ್ಗದ ಜನರು ಮುಂತಾದ ಸಾಮಾನ್ಯರ ಹಿತಸಾಧಿಸುವ ವಿರೋಧೀ ಗುಂಪಿನ ಸರಕಾರ ರಚಿಸಲ್ಪಟ್ಟಿತೆಂದರೆ, ಅದು ಭಾರತದ ಇತಿಹಾಸದಲ್ಲಿ ಹೊಸ ಅಧ್ಯಾಯ ತೆರೆಯುವುದಲ್ಲದೆ, ಕ್ರಮೇಣ ಭಾರತವಾದ್ಯಂತ ತನ್ನ ಪ್ರಭಾವವನ್ನು ಬೀರುತ್ತದೆಂದು ಕಮ್ಯುನಿಸ್ಟ ಧುರೀಣ ಜ್ಯೋತಿ ಬಸು ಮುಂತಾದವರು ಆಶಿಸಿರುವರು ಆಚಾರ್ಯ ಕೃಪಲಾನಿ, ಡಾ ರಾಮ ಮನೋಹರ ಲೋಹಿಯಾ, ಅಶೋಕ ಮೆಹತಾ ಮುಂತಾದ ಪ್ರಜಾಸಮಾಜವಾದಿ ಧುರೀಣರು ಕಾಂಗ್ರೆಸುಸಂಸ್ಥೆಯ ಮಂದ ಪ್ರಗತಿಯನ್ನು ನಿದಾಕ್ಷಿಣ್ಯವಾಗಿ ಟೀಕಿಸಿ, ಚುನಾವಣೆಯಲ್ಲಿ ಅದಕ್ಕೆ ಸೋಲನ್ನುಂಟು ಮಾಡುವುದೇ ಮತದಾರರ ಕರ್ತವ್ಯವೆಂದು ಬೋಧಿಸುತ್ತಿರುವರು. ಕಾಂಗ್ರೆಸು ಸರಕಾರದ ಲೋಪದೋಷಗಳನ್ನು ಅತಿರಂಜಿತಗೊಳಿಸಿ ಜನರಲ್ಲಿ ಅಸಂತೃಪ್ತಿಯನ್ನು ಕೆರಳಿಸುವ ಅವಕಾಶವನ್ನು ವಿರೋಧೀ ಪಕ್ಷಗಳು ಪಡೆದಿರುವುದರಿಂದ—ಕಾಂಗ್ರೆಸಿನ ಪ್ರಚಾರ ಈ ಆಕ್ಷೇಪಗಳನ್ನು ಉತ್ತರಿಸುವಷ್ಟು ಸಮರ್ಥವಾಗಿರಬೇಕಾಗುತ್ತದೆ

(೧೦ನೇ ಪುಟ ನೋಡಿರಿ)

ವೇತನ ದೊರೆಯುವ ಪ್ರತಿ ದಿವಸದಲ್ಲೂ ಸೇವಿಂಗ್ಸ್ ಬ್ಯಾಂಕ್ ಲೆಖ್ಖದಲ್ಲಿ ಹಣವಿಡಲು ಪ್ರಾರಂಭಿಸಿರಿ.

ನಿಮ್ಮ ಸಂಪಾದನೆಯಲ್ಲಿ ನೀವು ಉಳಿಸಿಕೊಳ್ಳುವ ಅಂಶವೇ ಅತೀ ಮಹತ್ವದ್ದು ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟಿನಲ್ಲಿ ಸಹಸ್ರಾರು ಮಂದಿ ಸೇವಿಂಗ್ಸ್ ಲೆಖ್ಖ ತೆರೆದು ತಾವು ಉಳಿಸುವ ಹಣವನ್ನು [illegible] ಅಪೇಕ್ಷಿತ ವಸ್ತುಗಳನ್ನು ಕೊಂಡುಕೊಳ್ಳಲು ಹೆಚ್ಚೇಕೆ, ಅನಿರೀಕ್ಷಿತ ಘಟನೆಗಳಿಗಾಗಿ ಮೀಸಲಿಡುತ್ತಾರೆ [illegible] ನಿಮ್ಮ ಸಂಪಾದನೆ ಮಾಡುವ ಈ ಸಮಯವೇ ಹಣ ಉಳಿಸುವ ಶುಭಕಾಲವಾಗಿದೆ ಪ್ರತಿ ತಿಂಗಳ ನಿಮ್ಮ ಸಂಬಳದಲ್ಲಿ ಸೇಕಡಾ 10ರಷ್ಟನ್ನು ಸೇವಿಂಗ್ಸ್ ಡಿಪೋಜಿಟ್‌ನಲ್ಲಿರಿಸಿ ನಿಮ್ಮ ಆರ್ಥಿಕ ಅಭ್ಯುದಯ ಹಾಗೂ ಭಾವೀ ಭದ್ರತೆಯನ್ನು ಕಾಪಾಡಿಕೊಳ್ಳಲು ಮುಂದಾಗಿರಿ

ವ್ಯವಹಾರ ವಹಿವಾಟು ರೂ 5,00,00,000

THE CANARA INDUSTRIAL &
BANKING SYNDICATE LTD.,
Estd: 1925 H O UDIPI S India

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್
ಸ್ಥಾಪನೆ ೧೯೨೫] [ಪ್ರಧಾನ ಕಚೇರಿ ಉಡುಪಿ ದ ಭಾರತ.

ವಿದೇಶಗಳಿಂದ ನಮಗೆ ದೊರೆತ ನೆರವು

ರಾಷ್ಟ್ರದ ಪ್ರಗತಿಗೆ ಪರಸ್ಪರ ಸ್ನೇಹ-ಸಹಕಾರ ತತ್ವದ ಅಡಿಗಲ್ಲು

ಸುಮಾರು ೮೦ ವರ್ಷಗಳ ಪೂರ್ವದಲ್ಲಿ ಇಂದು ಸಂಪತ್ಸಮೃದ್ಧವಾದ ಸಂಯುಕ್ತರಾಜ್ಯ ಅಮೇರಿಕಾದ ವಿಶಾಲವಾದ ಪ್ರದೇಶ ಮರುಭೂಮಿ ಸದೃಶವಾಗಿತ್ತು. ಇದನ್ನು ಕೃಷಿಯೋಗ್ಯ ಮಾಡುವುದು ಹೇಗೆಂಬ ಚಿಂತೆ ೧೮೭೩ನೇ ಇಸವಿಯಲ್ಲಿ ಅಮೇರಿಕದ ಸರಕಾರವನ್ನು ಬಾಧಿಸತೊಡಗಿತು. ಆ ಸಮಯದಲ್ಲಿ ಭಾರತದಲ್ಲಿ ಬರಗಾಲವನ್ನು ತಡೆಯುವ ಉದ್ದೇಶದಿಂದ ದೊಡ್ಡ ದೊಡ್ಡ ನೀರಾವರಿ ಯೋಜನೆಗಳು ಕಾರ್ಯಾನ್ವಿತಗೊಳ್ಳುತ್ತಿದ್ದುವು. ಅಮೇರಿಕದ ಸರಕಾರವು ಇಂಜೀನಿಯರುಗಳ ಒಂದು ತಂಡವನ್ನು ಭಾರತಕ್ಕೆ ಕಳುಹಿಸಿ, ಇಲ್ಲಿ ಯಾವ ಪ್ರಕಾರವಾಗಿ ಯೋಜನೆಗಳನ್ನು ನಡೆಸುತ್ತಿರುವರೆಂದು ನೋಡಿ, ಕಲಿತು ಬರಲು, ಹೇಳಿತು. ಭಾರತದ ನೀರಾವರಿ ಯೋಜನೆಗಳು ಮಹೋನ್ನತ ಇಂಜಿನಿಯರಿಂಗ ಕಾಮಗಾರಿಯೆಂದೂ-ಅವುಗಳಲ್ಲಿ ಕೆಲವಂತೂ ಅಸ್ವಾದೃಶವಾದ ಸಾಹಸ ಕಾರ್ಯವೆಂದೂ ಅಮೇರಿಕದ ಇಂಜೀನಿಯರರು ಅಭಿಪ್ರಾಯಪಟ್ಟು, ಭಾರತದಿಂದ ಅಮಿತ ಸ್ಫೂರ್ತಿ ಮತ್ತು ಪ್ರೋತ್ಸಾಹವನ್ನು ಹೊಂದಿದರು. ೧೮೮೮ರಲ್ಲಿ ಅಮೇರಿಕಾದಿಂದ ಇನ್ನೊಂದು ಪಂಗಡವು ಭಾರತವನ್ನು ಸಂದರ್ಶಿಸಿತು. ಇದು ಒಪ್ಪಿಸಿದ ವರದಿಯೇ ೧೯೦೨ರಲ್ಲಿ ಪಾಸಾದ ಭೂ ಸುಧಾರಣಾ ಕಾಯಿದೆಗೂ "ಅನ್ನಪೂರ್ಣಾ" ಎಂಬ ಹೆಸರು ಅಮೇರಿಕಕ್ಕೆ ಬರುವುದಕ್ಕೂ ಕಾರಣವಾಯಿತು.

ಪರಸ್ಪರ ಸಹಕಾರ ತತ್ವ

ಅಂತಾರಾಷ್ಟ್ರೀಯ ಕ್ಷೇತ್ರದಲ್ಲಿ ಪರಸ್ಪರ ಸಹಕಾರದಿಂದ ವರ್ತಿಸಬೇಕೆಂಬ ತತ್ವಕ್ಕೆ ಪ್ರಾಧಾನ್ಯ ಇನ್ನು ಬಂದಿರದ ಹಿಂದಿನ ಕಾಲದಲ್ಲಿ ಮೇಲಿನ ಘಟನೆ ನಡೆಯಿತು. ಆದರೆ ಇಂದು ಜಗತ್ತಿನ ರಾಷ್ಟ್ರಗಳೆಲ್ಲ ಒಂದು ಇನ್ನೊಂದರ ಸುಖಕಷ್ಟಗಳನ್ನು ಮನಸಂಕೆ ಮಾಡಿಕೊಂಡು ಸಾಧ್ಯವಿದ್ದೆಲ್ಲ ರೀತಿಯಿಂದ ನೆರವು ನೀಡುವುದು ಸಂಪ್ರದಾಯವಾಗಿಯೇ ತಿಳಿಯಲ್ಪಟ್ಟಿದೆ. ಆರ್ಥಿಕ ವಿಷಯದಲ್ಲಿ ಪರಸ್ಪರ ಸಹಕಾರ ಮನೋವೃತ್ತಿ ಇರಬೇಕೆಂದು ಪ್ರತಿಪಾದಿಸುವ ರಾಷ್ಟ್ರಗಳಲ್ಲಿ ಮತ್ತು ಆದಕ್ಕೋಸ್ಕರ ದುಡಿಯುವವರಲ್ಲಿ ಅಮೇರಿಕಕ್ಕೆ ಅಗ್ರಸ್ಥಾನ ಸಲ್ಲುತ್ತದೆ. ಮಿತ್ರ ರಾಷ್ಟ್ರಗಳ ಆರ್ಥಿಕ ತಜ್ಞರು ಕೂಡಿದ್ದ ಬ್ರೆಟನ್ ವೂಡ್ಸ್ ಸಮ್ಮೇಳನದ ಉದ್ಘಾಟನೆ ಮಾಡುತ್ತಾ ೧೯೪೪ನೇ ಇಸವಿಯ ಜುಲೈ ತಿಂಗಳಲ್ಲಿ ಅಧ್ಯಕ್ಷ ರೂಜವೆಲ್ಟರು ಹೇಳಿದ ಮಾತುಗಳಲ್ಲಿ ಅಂತಾರಾಷ್ಟ್ರೀಯ ಸಹಕಾರದ ಬೀಜ ಮಂತ್ರ ಸ್ಪಷ್ಟವಾಗಿ ಮೊದಲ ಬಾರಿಗೆ ಧ್ವನಿಸಿತು—"ಆರ್ಥಿಕ ರೋಗಗಳು ಬಹು ಬೇಗನೆ ವ್ಯಾಪಕಗೊಳ್ಳುತ್ತವೆ. ಆದುದರಿಂದ ಸ್ವಾಭಾವಿಕವಾಗಿಯೇ ಒಂದು ರಾಷ್ಟ್ರದ ಆರ್ಥಿಕ ಆರೋಗ್ಯವು ಅದರ ನಿಕಟ ಹಾಗೂ ದೂರದ ಎಲ್ಲ ನೆರೆಹೊರೆಯ ರಾಷ್ಟ್ರಗಳೂ ವಿಚಾರಿಸಬೇಕಾದ ಅಂಶವಾಗಿ ಪರಿಣಮಿಸುತ್ತದೆ." ದರು ಈ ಸಮ್ಮೇಳನದಲ್ಲಿ ಅಮೇರಿಕದ ಪ್ರತಿನಿಧಿ ಹೀಗೆ ನುಡಿದರು—"ಅಭಿವೃದ್ಧಿ ಮತ್ತು ಸಮೃದ್ಧಿಗಳೂ ಶಾಂತಿಯಂತೆ ಅವಿಭಾಜ್ಯವಾದವುಗಳು—ಮಿತಿ ಇಲ್ಲದವುಗಳು. ಬಡತನವು ಎಲ್ಲಿಯೇ ಇರಲಿ ಯಾವದೇ ರೂಪ ಧರಿಸಿರಲಿ, ಅದು ನಮ್ಮೆಲ್ಲರಿಗೂ ತೊಂದರೆ ಮಾಡುತ್ತದೆ. ನಮ್ಮ ಪ್ರತಿಷ್ಠೆಗೂ ಅದರಿಂದ ಕುಂದು ಬರುತ್ತದೆ. ಅದು ಯುದ್ಧದಂತೆ ಸ್ಥಳೀಯವಾಗಿರುವುದಿಲ್ಲ—ಬಹು ಬೇಗನೇ ಅದು ವಿಸ್ತಾರಗೊಂಡು, ಆರ್ಥಿಕ ದೃಷ್ಟಿಯಲ್ಲಿ ಭದ್ರವಾದ ಪ್ರದೇಶಗಳನ್ನೂ ಆಹುತಿ ತೆಗೆದುಕೊಳ್ಳುತ್ತದೆ. ಆದುದರಿಂದ ಜಗತ್ತಿನ ಆರ್ಥಿಕ ಆರೋಗ್ಯವೆಂಬ ವಿಷಯ ಅತ್ಯಂತ ಮಹತ್ವದ್ದೆಂದು ನಾವು ತಿಳಿಯುತ್ತೇವೆ."

ಈ ಯಥಾರ್ಥವಾದ ಭಾವನೆಗಳೇ ಮುಂದೆ ಅಂತರಾಷ್ಟ್ರೀಯ ಹಣಕಾಸಿನ ಮಂಡಳ ಮತ್ತು ಜಾಗತಿಕ ಬೇಂಕುಗಳಿಗೆ ಜನ್ಮವಿತ್ತುವು. ರಾಷ್ಟ್ರಗಳು ಪರಸ್ಪರ ವ್ಯಾಪಾರ ವ್ಯವಹಾರಗಳನ್ನು ಬೆಳೆಸಿಕೊಂಡು ಹೋಗುವುದಕ್ಕೂ ಸುಕರ ವಿನಿಮಯ ಪದ್ಧತಿಯನ್ನು ನೆಲೆಗೊಳಿಸುವುದಕ್ಕೂ ಹಣಕಾಸಿನ ಮಂಡಳ ನೋಡುತ್ತದೆ. ಜಾಗತಿಕ ಬೇಂಕು ಉತ್ಪಾದಕ ಕಾರ್ಯಗಳಿಗೆ ದೀರ್ಘಾವಧಿಯ ಸಾಲವನ್ನು ಒದಗಿಸಿಕೊಟ್ಟು, ತನ್ಮೂಲಕ ಪ್ರತಿಯೊಂದೂ ಸದಸ್ಯ ರಾಷ್ಟ್ರದ ಆರ್ಥಿಕ ಪುನಾರಚನೆಗೂ ಅಭಿವೃದ್ಧಿಗೂ ಸಹಾಯ ಸಲ್ಲಿಸುತ್ತದೆ.

ಹಣಕಾಸಿನ ಮಂಡಲ

ಈ ಸಂಸ್ಥೆಗಳ ಸ್ಥಾಪನೆಗೆ ಕಾರಣವಾದ ಆದರ್ಶ ತತ್ವಗಳನ್ನು ಭಾರತವು ಬಹಳ ಮೆಚ್ಚಿಕೊಂಡಿರುವುದು. ಆದುದರಿಂದ ಅದು ಮೊದಲಿಂದಲೂ ಸಂಸ್ಥೆಗಳ ಸದಸ್ಯತನವನ್ನು ಅಂಗೀಕರಿಸಿತು. ಸಂಸ್ಥೆಗಳ ಪಾಲು ಮತ್ತು ಬಂಡವಾಳಗಳಲ್ಲಿ ಹೆಚ್ಚಿನ ಹಣ ಹಾಕಿದ ರಾಷ್ಟ್ರಗಳಲ್ಲಿ ಭಾರತ ಐದನೇ ಸ್ಥಾನವನ್ನು ಪಡೆಯುತ್ತದೆ. ಸಂಯುಕ್ತ ರಾಷ್ಟ್ರ ಸಂಘದ ಪತಿಯಿಂದ ನಡೆಸಲ್ಪಡುವ ಈ ಎರಡೂ ಸಂಸ್ಥೆಗಳು ಭಾರತಕ್ಕೆ ಅನೇಕ ಬಗೆಯಲ್ಲಿ ನೆರವನ್ನು ಕೊಟ್ಟಿವೆ. ೧೯೪೮—೪೯ರಲ್ಲಿ ಹಣಕಾಸಿನ ಮಂಡಳದಿಂದ ಭಾರತವು ೧೦ ಕೋಟಿ ಡಾಲರುಗಳನ್ನು ಪಡೆದುಕೊಂಡು, ತನ್ನ ಡಾಲರು ಪರಿಸ್ಥಿತಿಯನ್ನು ಸುಧಾರಿಸಿ ಕೊಂಡಿತು. ಕಳೆದ ವರ್ಷದ ಆದಿಯಲ್ಲಿ ಮಂಡಳದ ಶ್ರೀ ಇ. ಎಂ. ಬರ್ನೆಸ್ಟೀನರು ಭಾರತಕ್ಕೆ ಬಂದು ಪಂಚವಾರ್ಷಿಕ ಯೋಜನೆಯ ಆರ್ಥಿಕ ವಿಷಯದಲ್ಲಿ ಸಲಹೆಗಳನ್ನಿತ್ತು ನೆರವಾದರು.

ಜಾಗತಿಕ ಬೇಂಕಿನಿಂದ ಸಾಲವನ್ನು ಪಡೆದ ಏಶಿಯಾದ ರಾಷ್ಟ್ರಗಳಲ್ಲಿ ಭಾರತವೇ ಮೊತ್ತಮೊದಲನೆಯದು-ಕಳೆದ ನಾಲ್ಕು ವರ್ಷಗಳಲ್ಲಿ ಜಾಗತಿಕ ಬೇಂಕು ಭಾರತದ ಅಭಿವೃದ್ಧಿ ಯೋಜನೆಗಳಿಗೆ ಅನೇಕ ವಿಧದಲ್ಲಿ ಸಹಾಯ ನೀಡಿ, ಪ್ರೋತ್ಸಾಹಿಸಿರುತ್ತದೆ. ೧೯೪೯ರಲ್ಲಿ ೩೪೦ ಲಕ್ಷ ಡಾಲರುಗಳ ಸಾಲವನ್ನು ಬೇಂಕು ನೀಡಿದುದರಿಂದ, ೪೦೦ ರೈಲ್ವೆ ಯಂತ್ರಗಳನ್ನು ಪಡೆದು, ಆಂತರಿಕ ಸಾಗಿಗೆಯಲ್ಲಿ ಕಂಡು ಬಂದಿದ್ದ ಮುಗ್ಗಟ್ಟನ್ನು ನಿವಾರಿಸುವುದು ಭಾರತಕ್ಕೆ ಸಾಧ್ಯವಾಯಿತು. ಕುಸು ಸಮಯಾನಂತರ ಒಂದು ಕೋಟಿ ಡಾಲರುಗಳ ಇನ್ನೊಂದು ಸಾಲವನ್ನು ಪಡೆದುಕೊಂಡು ದೇಶದೊಳಗೆ ಆಹಾರ ಧ್ಯಾನಗಳ ಉತ್ಪಾದನೆಯನ್ನು ಅಧಿಕಗೊಳಿಸಲು ಭಾರತ ನೋಡಿತು: ೨೦೦ ಮಹಾ ಟ್ರಾಕ್ಟರುಗಳನ್ನು ಕೊಂಡು ಕೊಂಡು ಮಧ್ಯಭಾರತದಲ್ಲಿ "ಕಾನ್ಸ" ಎಂದು ಸಾಮಾನ್ಯವಾಗಿ ಕರೆಯಲ್ಪಡುವ ಕುರುಚಿ ಹುಲ್ಲನ್ನು ಕಿತ್ತು, ಭೂಮಿಯನ್ನು ಹಸನುಗೊಳಿಸಲು ಈ ಸಾಲ ಸಹಾಯ ಮಾಡಿತು. ದಾಮೋದರ ನದೀ ಕಣಿವೆಯಲ್ಲಿ ತಲೆಎತ್ತುವ ಮತ್ತು ಎತ್ತುತ್ತಿರುವ ಅನೇಕ ಉದ್ಯಮಗಳಿಗೆ ೧೫೦೦೦೦ ಕಿಲೋವಾಟುಗಳಷ್ಟು ವಿದ್ಯುಚ್ಛಕ್ತಿಯನ್ನು ನೀಡುವ ಬೊಕಾರೋ ವಿದ್ಯುಚ್ಛಕ್ತಿ ಉತ್ಪಾದನಾ ಕೇಂದ್ರಕ್ಕೋಸ್ಕರ ೧೮೫ ಲಕ್ಷ ಡಾಲರುಗಳ ಮೂರನೆಯ ಸಾಲ ದೊರೆಯಿತು. ನಾಲ್ಕನೇ ಬಾರಿ ಸಾಲ ನೀಡುವಾಗಲಂತೂ ಸರಕಾರಕ್ಕೆ ಮಾತ್ರ ಸಾಲ ಕೊಡುವದೆಂಬ ತನ್ನ ಸಾಮಾನ್ಯ ನಿಯಮವನ್ನು ಬದಿಗೊತ್ತಿ ಜಾಗತಿಕ ಬೇಂಕು ಭಾರತ ಸರಕಾರದ ಗ್ಯಾರಂಟಿಯ ಆಧಾರದ ಮೇಲೆ, ನೇರಾಗಿ ಭಾರತೀಯ ಕಬ್ಬಿಣ ಮತ್ತು ಉಕ್ಕಿನ ಕಂಪೆನಿಗೇ ೩೧೫ ಲಕ್ಷ ಡಾಲರುಗಳನ್ನು ಕೊಟ್ಟಿತು. ಇದರಿಂದ ಭಾರತದಲ್ಲಿ ಉಕ್ಕಿನ ಉತ್ಪಾದನೆಯನ್ನು ಶೇಕಡಾ ೩೩ ಹಾಗು ಕಬ್ಬಿಣವನ್ನು ನೂರಕ್ಕೆ ನೂರರಷ್ಟು ಅಧಿಕಗೊಳಿಸಲಾಗುವುದು. ೧೯೫ ಲಕ್ಷ ಡಾಲರುಗಳ ಐದನೇ ಸಾಲವು ದಾಮೋದರ ಕಣಿವೆಯಲ್ಲಿ ಎರಡು ಜಲಾಶಯಗಳನ್ನು ಕಟ್ಟಲಿಕ್ಕೆ, ಎರಡು ಜಲ ವಿದ್ಯುತ್ತಿನ ಕೇಂದ್ರ ಸ್ಥಾಪನೆಗೆ ಮತ್ತೊಂದು ನೀರಾವರಿ ವಲಯ ರಚನೆಗೆ ಉಪಯೋಗಿಸಲ್ಪಡುವುದು. ಆರ್ಥಿಕವಾಗಿಯಲ್ಲದೆ, ಸಿಂಧೂ ನದಿಯ ನೀರಿನ ಉಪಯೋಗದ ವಿಷಯದಲ್ಲಿ ತಾಂತ್ರಿಕ ಪರೀಕ್ಷೆಗಳನ್ನು ನಡೆಸುವುದಕ್ಕೂ ಬೇಂಕು ತಜ್ಞರ ನೇಮಕ ಮಾಡಿದೆ.

ಆರ್ಥಿಕ ಸಹಾಯ

ಸಂಯುಕ್ತ ರಾಷ್ಟ್ರ ಸಂಘ ಇನ್ನೂ ಅನೇಕ ಉಪ ಸಂಸ್ಥೆಗಳನ್ನು ಕಟ್ಟಿಕೊಂಡಿದ್ದು, ಅವೆಲ್ಲವುಗಳಿಂದಲೂ ಭಾರತವು ಉಪಕೃತವಾಗಿರುತ್ತದೆ. ಆರ್ಥಿಕ ಸಹಾಯ ಹಾಗೂ ಸಂಪದಭಿವೃದ್ಧಿಯ ವಿಷಯಗಳಲ್ಲಿ ಇವುಗಳಿಂದ ಧಾರಾಳ ಸಹಾಯವು ನಮಗೆ ದೊರೆತಿದೆ. ಜಾಗತಿಕ ಬೇಂಕು ಸಾಲ ರೂಪದಲ್ಲಿ, ಹಣಕ್ಕೆ ಬಡ್ಡಿ ಕೊಡಬೇಕೆನ್ನುವ ನೀತಿಯಂತೆ, ಬಂಡವಾಳವನ್ನು ಒದಗಿಸುತ್ತದೆ—ಹಾಗೆಂದು ರಾಷ್ಟ್ರ ಸಂಘದ ಇತರ ಸಂಸ್ಥೆಗಳಿಂದ ನಮಗೆ ಸಹಾಯಧನದ ರೂಪದಲ್ಲಿಯೇ ಎಲ್ಲ ಹಣವೂ ಸಿಕ್ಕಿರುತ್ತದೆ. ಈ ವಿಶಿಷ್ಟ ಸಂಸ್ಥೆಗಳು ಅನೇಕ ವಿಷಯಗಳಲ್ಲಿ ತರಬೇತಿಯನ್ನು ಸೌಕರ್ಯಗಳನ್ನು ಒದಗಿಸುತ್ತಲೂ ತಜ್ಞ

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್

ಸ್ಥಾಪನೆ: ೧೯೩೫] [ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ಭಾರತದ ಸುಭದ್ರ ವಿಮಾ ಕಂಪೆನಿಗಳಲ್ಲಿ "ಕೆನರಾ ಮ್ಯೂಚುವಲ್" ಎಣೆ ಇಲ್ಲದ ವಿಶಿಷ್ಟ ಸ್ಥಾನವನ್ನು ಗಳಿಸಿದೆ. ಇದು ಮ್ಯೂಚುವಲ್ ಕಂಪೆನಿಯಾಗಿ ಘಟಿತವಾಗಿದ್ದು, ಪಾಲುದಾರ ಭಂಡವಾಳಿಗರಿಲ್ಲದಿರುವುದರಿಂದ, ಕಂಪೆನಿಯ ಸರ್ವ ಲಾಭವನ್ನೂ ಹಕ್ಕು ಹೊಂದಿದ ಪಾಲಿಸಿದಾರರೇ ತಮ್ಮಲ್ಲಿ ಹಂಚಿಕೊಳ್ಳುವರು. ಪ್ರಾಗತಿಕ ಬಿಗುವಾದ ತಳಹದಿಯ ಮೇಲೆ ನಡೆಸಿದ ತನ್ನೆಲ್ಲಾ ವಿಮಾ ಗಣನೆಗಳಲ್ಲಿ ಉಳಿತಾಯವನ್ನು ತೋರಿಸಿದುದು ಮಾತ್ರವಲ್ಲದೆ, ಸ್ಥಾಪಿತವಾದಂದಿನಿಂದಲೂ ಇದು ಬೋನಸು ಹಂಚಿದೆ. ಪಾಲಿಸಿದಾರರ ಹಿತವೃದ್ಧಿಯೇ ಧ್ಯೇಯವಾಗುಳ್ಳ ಈ ಪ್ರಗತಿಶೀಲ ಮ್ಯೂಚುವಲ್ ಕಂಪೆನಿಯಲ್ಲಿ ಇಂದೇ ವಿಮೆ ಇಳಿಸಿ, ನಿಮ್ಮ ಕುಟುಂಬದ ಭದ್ರತೆಯನ್ನು ಕಾಯ್ದುಕೊಳ್ಳಿರಿ.

THE CANARA MUTUAL ASSURANCE COMPANY, LTD.,

Estd: 1935] [Head Office: UDIPI, S. INDIA

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಷಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. ೩—೯—0
ಸಣ್ಣ ಬಾಟ್ಲಿಗೆ ರೂ. 2—0 - 0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ರ ಸಹಕಾರವನ್ನು ನೀಡುತ್ತಲೂ ಹಿಂದುಳಿದ ದೇಶಗಳ ತಾಂತ್ರಿಕ ಪ್ರಗತಿಗೆ ಹೃತ್ಪೂರ್ವಕ ದುಡಿಯುತ್ತವೆ. ರಾಜಸ್ಥಾನದ ಮರುಭೂಮಿಯಲ್ಲಿ ನೀರಿನ ಆಸರೆಯನ್ನು ಕಂಡು ಹಿಡಿಯುವುದು, ಟ್ರ್ಯಾಕ್ಟರು ಮುಂತಾದ ಕೃಷಿ ಯಂತ್ರಗಳಿಂದ ಅಮಿತ ಪ್ರಯೋಜನವನ್ನು ಹೊಂದುವುದು, ಭಾರತೀಯ ಗುಡಿ ಕೈಗಾರಿಕೆಗಳ ಉತ್ಪಾದನೆ ವಿದೇಶಗಳಲ್ಲಿ ಜನಪ್ರಿಯತೆಯನ್ನು ಗಳಿಸುವಂತೆ ಸಂಶೋಧನೆಗಳನ್ನು ನಡೆಸುವುದು ಮುಂತಾದ ಕ್ಷೇತ್ರಗಳಲ್ಲಿ ತಜ್ಞರ ಸಹಕಾರವನ್ನು ಭಾರತ ಕೃತಜ್ಞತೆಯಿಂದ ಸ್ವೀಕರಿಸಿರುವುದು. ಮಿಡಿತೆಗಳ ಹಾವಳಿಯನ್ನು ತಡೆಗಟ್ಟುವುದಕ್ಕೂ ಆಕಾಶದಿಂದಲೇ ಬೀಜ ಬಿತ್ತುವ ಕ್ರಮವನ್ನು ಜಾರಿಗೆ ತರುವಂತೆ ಪ್ರಯೋಗ ನಡೆಸುವುದಕ್ಕೂ ಪರಿಣತರ ಸಹಕಾರ ಈ ವರ್ಷ ಸಿಕ್ಕಿದೆ.

ಹೊಸತಾಗಿ ಕಾರ್ಖಾನೆಗಳನ್ನು ತೆರೆಯುವುದಕ್ಕೂ ಇಂತಹ ಸಂಸ್ಥೆಗಳು ಸಹಾಯ ಒದಗಿಸಿರುತ್ತವೆ. - ಪುಣೆಯ ಸಮೀಪ ಪಿಂಪ್ರಿಯಲ್ಲಿ ತಿಂಗಳಿಗೆ ನಾಲ್ಕು ಲಕ್ಷ ಯುನಿಟು ಪೆನಿಸಿಲಿನ್ ಔಷಧ ಉತ್ಪಾದಿಸುವ ಕಾರ್ಖಾನೆಗೆ ಭಾರತ ಸರಕಾರ ೧೫೫ ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡುತ್ತದೆ— ಈ ಕಾರ್ಖಾನೆಗೆ ಸಲಕರಣೆಗಳನ್ನು ಮತ್ತು ತಜ್ಞರನ್ನು ಒದಗಿಸುವುದಕ್ಕೆ ತಗಲುವ ೧೨ ಲಕ್ಷ ಡಾಲರುಗಳು ಪುಕ್ಕಟೆ ದೊರೆಯುತ್ತವೆ. ವರ್ಷಕ್ಕೆ ೭೦೦ ಟನ್ನುಗಳಷ್ಟು ಡಿಡಿಟಿ ಎಂಬ ದ್ರವ್ಯವನ್ನು ಉತ್ಪಾದಿಸುವ ದಿಲ್ಲಿಗೆ ಸಮೀಪದ ನಜಫಘರ ರೋಡಿನ ಕಾರ್ಖಾನೆಗೆ ಭಾರತ ಸರಕಾರ ೨೨೫೫೦೦೦ ರೂಪಾಯಿ ಖರ್ಚುಮಾಡಿದರೆ, ಸಹಾಯಧನವಾಗಿ ನಮಗೆ ೩೫೦೦೦೦ ಡಾಲರುಗಳು ದೊರೆತಿವೆ. ಮುಂಬಯಿಯಲ್ಲಿ ಹಾಲಿನ ಪುಡಿಯನ್ನು ಉತ್ಪಾದಿಸುವ ಮತ್ತು ಅತ್ಯಾಧುನಿಕ ಶೀತ ಸೌಕರ್ಯ ಮುಂತಾದುವನ್ನು ಒದಗಿಸುವ ಉದ್ಯಮವೊಂದು ಹೊಸತಾಗಿ ರೂಪಿಸಲ್ಪಟ್ಟಿರುವುದು. ತಿರು-ಕೊಚ್ಚಿಯಲ್ಲಿ ಗರ್ಭಿಣಿ ಸ್ತ್ರೀಯರ ಮತ್ತು ಮಕ್ಕಳ ಯೋಗಕ್ಷೇಮದ ಅಭಿವೃದ್ಧಿ ಕೇಂದ್ರವೊಂದು ಇಂತಹ ಸಹಾಯದ ಕಾರಣದಿಂದಲೇ ಅಸ್ತಿತ್ವಕ್ಕೆ ಬರುವುದು.

ಅಮೇರಿಕೆಯ ನೆರವು

ಅಮೇರಿಕಾ ದೇಶವು ಭಾರತದ ಆರ್ಥಿಕ ಪುನಾರಚನೆಯಲ್ಲಿ ಸಂಯುಕ್ತ ರಾಷ್ಟ್ರ ಸಂಘದಷ್ಟೇ ಆಸಕ್ತಿವಹಿಸಿ, ನೆರವುನೀಡಿದೆ ೧೯೫೧ರಲ್ಲಿ ಭಾರತಕ್ಕೆ ಶೇಕಡಾ ಎರಡೂವರೆ ಬಡ್ಡಿ ದರದಲ್ಲಿ ಅಮೇರಿಕಾ ದೇಶವು ೧೯ ಕೋಟಿ ಡಾಲರುಗಳ ಸಾಲವನ್ನು ಕೊಟ್ಟು ೨೦ ಲಕ್ಷ ಟನ್ನು ಗೋಧಿಯನ್ನು ಕೊಂಡುಕೊಳ್ಳಲು ಸಹಾಯಮಾಡಿತು. ಅಭಿವೃದ್ಧಿ ಯೋಜನೆಗೆಂದು ಸ್ಪಷ್ಟವಾಗಿ ಈ ಸಹಾಯವನ್ನು ತೆಗೆದುಕೊಳ್ಳುವಂತಿಲ್ಲದಿದ್ದರೂ ಸಹ—ಭಾರತಕ್ಕೆ ತನ್ನ ಡಾಲರು ನಿಧಿಯನ್ನು ಯಂತ್ರೋದ್ಯಮಗಳಿಗೆ ವ್ಯಯಿಸುವುದಕ್ಕೆ ಈ ಸಾಲ ಅವಕಾಶ ಮಾಡಿಕೊಟ್ಟಿತು. ಅಲ್ಲದೆ ಗೋಧಿಯ ಮಾರಾಟದಿಂದ ಬಂದ ಹಣದಿಂದ ಹೊಸತೊಂದು ನಿಧಿಯನ್ನು ಏರ್ಪಡಿಸಲೂ ಅದರ ಬಲದಿಂದ ಕೆಲವು ಯೋಜನೆಗಳನ್ನು ಕಾರ್ಯರೂಪಕ್ಕೆ ಇಳಿಸಲೂ ಸಾಧ್ಯವಾಯಿತು. ಹಿಂದುಳಿದ ದೇಶಗಳ ಅಭಿವೃದ್ಧಿಗೆ ಹಣದಷ್ಟೇ ತಾಂತ್ರಿಕ ವಿಷಯಗಳಲ್ಲಿ ತರಬೇತಿ ಹೊಂದಿದ ತಜ್ಞರ ಸಲಹೆ ಸಹಕಾರಗಳು ಅತ್ಯವಶ್ಯಕವಾಗಿದ್ದು—ಅಮೇರಿಕಾದ ಪರಿಣತರು ಭಾರತಕ್ಕೆ ಚಿರಸ್ಮರಣೀಯವಾದ ಉಪಕಾರವನ್ನು ಮಾಡಿದ್ದಾರೆ ಇಂತಹ ಸಹಕಾರವನ್ನು ನೀಡಬೇಕೆಂದು ಮಾಜಿ ಅಧ್ಯಕ್ಷ ಟ್ರೂಮನ್ನರು ಹೇಳುತ್ತಾ ತನ್ನ ಸುಪ್ರಸಿದ್ಧ ನಾಲ್ಕು ಅಂಶಗಳ ಕಾರ್ಯಕ್ರಮವನ್ನು ೧೯೪೯ರಲ್ಲಿ ಮುಂದಿಟ್ಟರು. "ನಮ್ಮ ಸಂಶೋಧನಾ ಕ್ಷೇತ್ರದ ಅಪಾರ ಜ್ಞಾನ ಮತ್ತು ಔದ್ಯಮಿಕ ಅಭಿವೃದ್ಧಿಯ ರಹಸ್ಯಗಳನ್ನು ಹಿಂದುಳಿದ ಪ್ರದೇಶಗಳ ಅಭಿವೃದ್ಧಿ ಮತ್ತು ಪುನಾರಚನೆಗೋಸ್ಕರ ವ್ಯಯಿಸಬೇಕು. ಅಧಿಕ ಉತ್ಪಾದನೆಯೇ ಶಾಂತಿ - ಸಮೃದ್ಧಿಗಳ ರಾಜಮಾರ್ಗ. ಅರ್ವಾಚೀನ ವೈಜ್ಞಾನಿಕ ಹಾಗು ತಾಂತ್ರಿಕ ಜ್ಞಾನದ ಸದುಪಯೋಗದಿಂದ ಅಧಿಕ ಉತ್ಪಾದನೆಯು ಸಾಧ್ಯ" ಎಂದವರು ಆಗ ಹೇಳಿದರು.

ನಾಲ್ಕು ಅಂಶಗಳ ಪರಸ್ಪರ ಸಹಾಯದ ಈ ಕಾರ್ಯಕ್ರಮದಲ್ಲಿ ಅಮೇರಿಕದ ತಜ್ಞರನ್ನು ಭಾರತದ ಬಹುಮುಖ ಸಮಸ್ಯೆಗಳ ಪರಿಹಾರಕ್ಕೆ ಎರವಲು ನೀಡುವುದು, ಮತ್ತು ಭಾರತೀಯರಿಗೆ ತರಬೇತಿ ಸೌಕರ್ಯಗಳನ್ನು ಕಲ್ಪಿಸಿ ಕೊಡುವುದು—ಈ ವಿಷಯಕ್ಕೆ ಪ್ರಾಮುಖ್ಯತೆ ಕೊಡಲ್ಪಟ್ಟಿದೆ. ಈ ಕಾರ್ಯಕ್ರಮದಂತೆ ನಡೆಯುವ ಕೆಲಸಗಳಲ್ಲಿ ಭಾರತಕ್ಕೆ ಶ್ರದ್ಧೆ ಮತ್ತು ವಿಶ್ವಾಸಗಳು ಇವೆಯೆಂದು ಪ್ರದರ್ಶಿಸುವುದಕ್ಕೋಸ್ಕರ ಭಾರತ ಸರಕಾರವೂ ವೆಚ್ಚದ ಒಂದಂಶವನ್ನು ಹೂರುತ್ತದೆ. ೧೯೫೦ರಲ್ಲಿ ನಾಲ್ಕು ಅಂಶಗಳ ಕಾರ್ಯಕ್ರಮಕ್ಕೆ ಉಭಯ ಸರಕಾರಗಳೂ ಸಹಿಹಾಕಿದವು. ಮರುವರ್ಷ ಕೆಲವು ಭಾರತೀಯರನ್ನು ಅಮೇರಿಕೆಗೆ ತರಬೇತಿಗಾಗಿ ಕಳಿಸಲಾಯಿತು. ೧೯೫೨—೫೩ನೇ ವರ್ಷದಲ್ಲಿ ೮೮೩½ ಲಕ್ಷ ಡಾಲರುಗಳ ಸಹಾಯವು ಅಮೇರಿಕೆಯಿಂದ ದೊರೆತು, ಭಾರತದಲ್ಲಿ ಅಭಿವೃದ್ಧಿ ಕೇಂದ್ರಗಳು ತಲೆ ಎತ್ತಿದವು. ೧೯೫೩—೫೪ನೇ ವರ್ಷಕ್ಕೆ ೯೩೩ ಲಕ್ಷ ಡಾಲರುಗಳನ್ನೊದಗಿಸಿ ಹಿಂದಿನ ಕೇಂದ್ರಗಳನ್ನು ಊರ್ಜಿತಗೊಳಿಸುವುದಲ್ಲದೆ, ಹೊಸತಾಗಿ ಅಭಿವೃದ್ಧಿ ಪ್ರಯತ್ನಗಳನ್ನು ನಡೆಸುವುದಕ್ಕೂ ಅಮೇರಿಕ ಅವಕಾಶ ಕಲ್ಪಿಸಿದೆ. ಗ್ರಾಮಾಂತರ ಪ್ರದೇಶಗಳ ಸ್ವರೂಪವನ್ನೆ ಬದಲಾಯಿಸಿ ಬಿಡಬಲ್ಲ ಜನಪದ ಅಭಿವೃದ್ಧಿ ಯೋಜನೆಗಳಿಗೆ ಅಮೇರಿಕಾದ ಈ ಸಹಾಯವೇ ಬೆಂಗೋಲು. ರಾಸಾಯನಿಕ ಫಲವರ್ಧಕಗಳು, ಮಿಡಿತೆ ಹಾವಳಿ ತಡೆಯಲು ಜೀಪು ಮತ್ತು ವಿಮಾನಗಳು, ಕೃಷಿ ಸಲಕರಣೆಗಳಿಗಾಗಿ ಉಕ್ಕು ಮತ್ತು ಕಬ್ಬಿಣದ ಆಯಾತ, ಕೊಳವೆ ಬಾವಿ ಮುಂತಾದ ಯೋಜನೆಗಳಲ್ಲಿಯೂ ಭಾರತದೊಡನೆ ಅಮೇರಿಕ ಸಹಕರಿಸುತ್ತದೆ ರೂರ್ಕಿಯ ಕೇಂದ್ರ ಗೃಹ ನಿರ್ಮಾಣ ಸಂಶೋಧನಾ ಸಂಸ್ಥೆಯಲ್ಲಿ ಅಗ್ಗ ದರದ ಮನೆಗಳನ್ನು ಕಟ್ಟುವ ವಿಷಯದಲ್ಲಿ

(೧೦ನೇ ಪುಟ ನೋಡಿರಿ)



ಎಸಿಸಿ ನೀಲಗಿರಿ ಬ್ರ್ಯಾಂಡ್ ಸಿಮೆಂಟ್ ಸಿಮೆಂಟ್

ಸದ್ಯಕ್ಕೆ ನಿಮ್ಮ ಕಟ್ಟುವಿಕೆಗೆ ಸಾಲುವಷ್ಟು ದೊರೆಯುತ್ತದೆ

ಗುಡಿಸಲು, ಬಂಗ್ಲೆ, ಪ್ಲಾಟ್ಸ್, ಫ್ಯಾಕ್ಟರಿ, ಗೊದಾಮು, ಕಾರ್ಮಿಕರ ಮನೆಗಳು, ಬಾವಿ, ದನದಹಟ್ಟಿ, ಕಾಲಿನಹಗೆ ಅಥವಾ ನೀರಾವರಿಯ ಕಾಲುವೆ ಇವುಗಳನ್ನು ಕಟ್ಟಲಿಕ್ಕೆ ಸಿಮೆಂಟು ಸರ್ವೋತ್ಕೃಷ್ಟವಾದ ಸಾಧನ. ಬ್ರಿಟಿಶ್ ಮಟ್ಟದ ತಯಾರಿಕೆಗಿಂತ ಮಿಗಿಲಾದ ಈ ಎ. ಸಿ. ಸಿ. ಸಿಮೆಂಟು ಈಗ ಕೂಡಲೆ ದೊರೆಯುತ್ತದೆ.

ನಿಮ್ಮ ಆರ್ಡರುಗಳನ್ನು
ನಿಮ್ಮ ನಿಕಟವರ್ತಿಯಾದ ಸಿ.ಎಮ್.ಎ. ಸಂಗ್ರಾಹಕ ಅಥವಾ ವ್ಯಾಪಾರಸ್ಥನ ಕಡೆಗಾಗಲಿ, ಇಲ್ಲವೆ.
ಸೀಧಾ

ದಿ ಸಿಮೆಂಟ್ ಮಾರ್ಕೆಟಿಂಗ್ ಕಂಪೆನಿ ಆಫ್ ಇಂಡಿಯಾ ಲಿ.

೯ ಮೌಂಟ್‌ರೋಡು ಮದ್ರಾಸು | ೪/೧೨ ರೇಸ್ ಕೋರ್ಸ್ ರೋಡು ಕೊಯಿಮತ್ತೂರು | ಶುಗರ್ ಕಂ. ಬಿಲ್ಡಿಂಗ್ ಬೆಂಗಳೂರು

ಇವರ ಕಡೆಗೆ ತಿಳಿಸಿರಿ

ಸಿಮೆಂಟ್ ಕಾಂಕ್ರೀಟ್ ಕಟ್ಟುವಿಕೆಗೆ ಸಂಬಂಧಪಟ್ಟ ಎಲ್ಲ ಪ್ರಶ್ನೆಗಳ ಬಗ್ಗೆ ನೀವು ಕಾಂಕ್ರೀಟ್ ಅಸೋಸಿಯೇಶನ್ ಆಫ್ ಇಂಡಿಯಾ ಇವರ ವಿನಾಮೂಲ್ಯ ತಾಂತ್ರಿಕ ಸಲಹೆಯನ್ನು ನೀವು ಪಡೆಯಬಹುದು.

ಎಸಿಸಿ
ಸೇಲ್ಸ್ ಮ್ಯಾನೇಜರ್ಸ್
ದಿ ಸಿಮೆಂಟ್ ಮಾರ್ಕೆಟಿಂಗ್ ಕಂ. ಆಫ್ ಇಂಡಿಯಾ ಲಿ.

SISTA'S CHI 148 Kan

ಕಾಂಗ್ರೆಸು ಅಧ್ಯಕ್ಷರ ತಿರು-ಕೊಚ್ಚಿಯ ಪ್ರವಾಸ

ಮದ್ರಾಸು ರಾಜ್ಯದ ಗ್ರಾಮ ಪಂಚಾಯತುಗಳ ಪರಿಷತ್ತು

ನಮ್ಮ ಮದ್ರಾಸು ಸರಕಾರದವರು ಕೈಗೊಂಡ ದೊಡ್ಡ ಕೆಲಸಗಳಲ್ಲಿ ಗ್ರಾಮ ಪಂಚಾಯತುಗಳನ್ನು ಸ್ಥಾಪಿಸುವುದೊಂದೆಂದು ಧಾರಳವಾಗಿ ಹೇಳಬಹುದು. ರಾಜ್ಯದಲ್ಲಿ ಇನ್ನೂ ಅನೇಕಗ್ರಾಮಗಳಲ್ಲಿ ಪಂಚಾಯತುಗಳು ರಚಿಸಲ್ಪಡಬೇಕಾದರೂ ಸಾಮಾನ್ಯವಾಗಿ ೫೦೦ಕ್ಕಿಂತ ಹೆಚ್ಚು ಜನವಸತಿಯುಳ್ಳ ಹಳ್ಳಿಗೊಂದು ಗ್ರಾಮ ಪಂಚಾಯತನ್ನು ಸ್ಥಾಪಿಸುವುದು ಸರಕಾರದ ಉದ್ದೇಶ. ಪ್ರಕೃತ ರಾಜ್ಯದಾದ್ಯಂತ ಸುಮಾರು ೪೫೦೦ ಚಿಕ್ಕ ಹಾಗು ದೊಡ್ಡ ಪಂಚಾಯತುಗಳು ಕೆಲಸ ಮಾಡುತ್ತವೆ. ರಾಜ್ಯದ ವಿವಿಧ ಭಾಗಗಳಿಂದ ಬಂದ ಈ ಪಂಚಾಯತುಗಳ ಸುಮಾರು ೩೦೦೦ ಪ್ರತಿನಿಧಿಗಳ ಪರಿಷತ್ತೊಂದು ಕಳೆದ ೨೯ ಮತ್ತು ೩೦ನೇ ದಿನಾಂಕಗಳಲ್ಲಿ ಜರಗಿ ಐವತ್ತಕ್ಕಿಂತಲೂ ಅಧಿಕ ಗೊತ್ತುವಳಿಗಳನ್ನು ಅಂಗೀಕರಿಸಿತು; ನಡುವೆ ಒಂದೆರಡು ಅಪ್ರಿಯ ಪ್ರಸಂಗಗಳಿಗೂ ಅವಕಾಶ ನೀಡಿತು.

ಗವರ್ನರರ ಹಿತೋಪದೇಶ

ಈ ಪರಿಷತ್ತನ್ನು ಉದ್ಘಾಟಿಸಿದ ಮದ್ರಾಸಿನ ಗವರ್ನರ ಶ್ರೀ ಪ್ರಕಾಶರು ಗ್ರಾಮ ಪಂಚಾಯತುಗಳು ಸ್ವಾವಲಂಬಿಗಳಾಗಬೇಕಾದ ಆವಶ್ಯಕತೆಯನ್ನು ಒತ್ತಿ ಹೇಳಿದರು. ಸರಕಾರದ ಕಡೆಯಿಂದ ದೊರಕುವ ಸಹಾಯವೇ ಪಂಚಾಯತುಗಳಿಗೆ ಆಧಾರವಾಗಿರುವ ಪರಿಸ್ಥಿತಿ ಊರ್ಜಿತಗೊಳ್ಳಬೇಕೆಂದು ಗವರ್ನರರು ಹೇಳಿದರು. ಅಧ್ಯಕ್ಷ ಸ್ಥಾನವನ್ನು ವಹಿಸಿದ್ದ ಡಾ. ಪಿ. ಸುಬ್ಬರಾಯನ್ನರು ಪಂಚಾಯತುಗಳ ಅಧ್ಯಕ್ಷರನ್ನು ನೇರಾಗಿ ಚುನಾಯಿಸುವ ಪದ್ಧತಿಯನ್ನು ಟೀಕಿಸುತ್ತಾ, ಸದಸ್ಯರು ಮತ್ತು ಅಧ್ಯಕ್ಷರ ನಡುವೆ ಒಮ್ಮತವಿಲ್ಲದೆ ಹೋಗುವ ಪ್ರಸಂಗವೇ ಈಗ ಹೆಚ್ಚಿದೆಯೆಂದೂ ಪರಿಣಾಮದಲ್ಲಿ ಪರಸ್ಪರ ತಿಕ್ಕಾಟವುಂಟಾಗಿ ಪಂಚಾಯತುಗಳ ಕೆಲಸ ಸರಿಯಾಗಿ ನೆರವೇರುವುದಿಲ್ಲವೆಂದು ಅವರು ಅಭಿಪ್ರಾಯಪಟ್ಟರು.

ಸೌಹಾರ್ದದ ಅಭಾವ

ಆಂಧ್ರರಾಜ್ಯ ಅಸ್ತಿತ್ವಕ್ಕೆ ಬಂದ ಬಳಿಕ ಮದ್ರಾಸು ರಾಜ್ಯವೆಂದರೆ ತಮಿಳರ ನಾಡೇ ಆಗಿರುತ್ತದೆ—ತಮಿಳು ಭಾಷೆಯನ್ನು ಸರಕಾರ ತನ್ನ ನೈಸಂದಿನ ವ್ಯವಹಾರಕ್ಕೆ ಉಪಯೋಗಿಸಬೇಕೆಂಬ ಸೂಚನೆಗಳೂ ಬರುತ್ತವೆ. ಗ್ರಾಮ ಪಂಚಾಯತುಗಳ ಪರಿಷತ್ತಿನ ಕಾರ್ಯಕಲಾಪಗಳೆಲ್ಲ ತಮಿಳಿನಲ್ಲಿಯೇ ನಡೆದವು. ಈ ಭಾಷೆಯನ್ನರಿಯದ್ದರಿಂದ ಮದ್ರಾಸಿನ ದಕ್ಷಿಣಕನ್ನಡ ಮತ್ತು ಮಲಬಾರು ಜಿಲ್ಲೆಗಳ ಪ್ರತಿನಿಧಿಗಳು ಇದನ್ನು ಪ್ರತಿಭಟಿಸಿ ಸಭೆಯಿಂದ ಹೊರನಡೆದರು. ಬಹುಜನರಾದ ತಮಿಳರ ಭಾಷೆಯನ್ನು ಅರಿಯದ ಇವರನ್ನು ಸಭೆ ಸೌಹಾರ್ದದಿಂದ ನೋಡಲಿಲ್ಲ. ಅಧ್ಯಕ್ಷ ಸುಬ್ಬರಾಯನ್ನರು ಸಮಾಧಾನ ಮಾಡಲು ನೋಡಿದರೂ ಅದು ಪ್ರಯೋಜನಕ್ಕೆ ಬರಲಿಲ್ಲ.

ಅಧಿಕಾರದ ದಾಹ

ಇಲ್ಲಿ ಸ್ವೀಕರಿಸಲಾದ ಗೊತ್ತುವಳಿಗಳಲ್ಲಿ ಗುಪ್ತ ಮತದಾನ ಪದ್ಧತಿಯಿಂದಲೇ ಚುನಾವಣೆಗಳು ನಡೆಯಬೇಕೆಂಬುದು ಉಲ್ಲೇಖನೀಯ. ಪಂಚಾಯತುಗಳ ಅಧಿಕಾರವನ್ನು ವ್ಯಾಪಕಗೊಳಿಸುವ ಮತ್ತು ಅದರ ಅಧ್ಯಕ್ಷರ ಅಧಿಕಾರವನ್ನು ಹೆಚ್ಚಿಸುವ ಬೇಡಿಕೆಗಳನ್ನ ಪರಿಷತ್ತು ಮುಂದಿಟ್ಟಿದೆ. ಗ್ರಾಮ ಪಂಚಾಯತುಗಳು ಭಾರತಕ್ಕೆ ಹೊಸತಲ್ಲ—ಮತ್ತು ಮಹಾತ್ಮಾ ಗಾಂಧೀಜಿಯವರ ಕಲ್ಪನೆಯಂತೆ ಗ್ರಾಮರಾಜ್ಯದ ಸ್ಥಾಪನೆಯೇ ಭಾರತದ ಪ್ರಗತಿಯ ಪ್ರತೀಕ; ಆದರೆ ಅಧಿಕಾರ ದಾಹವೂ ಪದವಿಯ ಮೋಹವೂ ಬೆಳೆಯುತ್ತಿದೆಯಲ್ಲದೆ—ಸೇವಾಪರಾಯಣತೆ ಮತ್ತು ಪ್ರಾಮಾಣಿಕತೆಗಳು ಈಗಿನ ಗ್ರಾಮ ಪಂಚಾಯತುಗಳ ಸದಸ್ಯರಲ್ಲಿ ಸಾಕಷ್ಟು ಕಂಡು ಬರುವುದಿಲ್ಲ. ಉತ್ತಮ ರೀತಿಯಲ್ಲಿ ಕೆಲಸ ನಿರ್ವಹಿಸುವ ಪಂಚಾಯತುಗಳಿಗಿಂತ ಅಸಮರ್ಪಕವಾಗಿ ಕಾರ್ಯ ಸಾಗಿಸುವವುಗಳೇ ಅಧಿಕವೆಂದು ಹೇಳಬೇಕಾಗುವುದು. ಪ್ರಜಾತಾಂತ್ರಿಕ ಪ್ರಣಾಳಿಯನ್ನು ಅರಗಿಸಿಕೊಳ್ಳಲು ನಾವು ಇನ್ನೂ ಹೆಚ್ಚು ಪರಿಶ್ರಮ ವಹಿಸಬೇಕಾಗಿದೆಯಾಗಿ, ಗ್ರಾಮ ಪಂಚಾಯತುಗಳ ಮತ್ತು ಅವುಗಳ ಸದಸ್ಯರ ಅಧಿಕಾರ ವ್ಯಾಪ್ತಿಯನ್ನು ಹೆಚ್ಚಿಸುವ ವಿಷಯದಲ್ಲಿ ವಿಶೇಷ ಜಾಗರೂಕತೆಯನ್ನೂ ವಿವೇಕವನ್ನೂ ತೋರಿಸಬೇಕಾಗಿರುವುದು.

ಮತದಾರರಿಗೆ ಕಿವಿ ಮಾತು

ಕಾಂಗ್ರೆಸಿನ ಅಧ್ಯಕ್ಷ ಶ್ರೀ ಜವಾಹರಲಾಲ ನೆಹರೂರವರು ತಿರುಕೊಚ್ಚಿಯಲ್ಲಿ ಚುನಾವಣಾ ಪ್ರಚಾರ ಭಾಷಣಗಳ ಕಾರ್ಯಕ್ರಮವನ್ನು ಇಟ್ಟುಕೊಂಡು ಆ ರಾಜ್ಯದ ಪ್ರತಿಯೊಂದೂ ಮೂಲೆಯನ್ನು ಸಂದರ್ಶಿಸಿ, ಮತದಾರರು ಚೆನ್ನಾಗಿ ಆಲೋಚನೆಮಾಡಿ ತಮ್ಮ ಓಟಿನ ಅಧಿಕಾರವನ್ನು ಚಲಾಯಿಸಬೇಕೆಂದು ಕೇಳಿಕೊಂಡರು. ಕಾಂಗ್ರೆಸಿನ ಪರವಾಗಿ ತಾನು ಓಟು ಕೇಳಲು ಬಂದಿರುವೆನೆಂದು ಹೇಳುತ್ತ ನೆಹರೂರವರು ಕಾಂಗ್ರೆಸು ಸರಕಾರ ಇದು ವರೆಗೆ ಸಾಧಿಸಿದ ಕೆಲಸಗಳ ಮಟ್ಟಿಗೆ ಅಭಿಮಾನಪಡಬಹುದೆಂದು ಹೇಳಿದರು. ತಿರು-ಕೊಚ್ಚಿಯಲ್ಲಿ ಪ್ರತಿ ಶತಕ್ಕೆ ೯೪ ವಿದ್ಯಾವಂತರು ಇದ್ದಾರೆ. ಇಷ್ಟು ಹೆಚ್ಚು ಸಾಕ್ಷರತೆಯನ್ನೂ ಸುಶಿಕ್ಷಿತರನ್ನೂ ಪಡೆದ ರಾಜ್ಯ ಭಾರತದಲ್ಲಿ ಇನ್ನೊಂದಿಲ್ಲ. ಆದುದರಿಂದ ಇಲ್ಲಿಯ ಮಹಾಜನರು ವಿವೇಕ ಶೀಲತೆಯಿಂದ ವರ್ತಿಸಿ ತಮಗೆ ದೊರೆತ ಅಮೂಲ್ಯವಾದ ಮತದಾನದ ಅಧಿಕಾರವನ್ನು ಉಪಯೋಗಿಸಿ ಇತರರಿಗೆ ಮಾದರಿಯಾಗಬೇಕೆಂದು ನೆಹರೂ ಆಶಿಸಿದರು.

ರಾಷ್ಟ್ರದ ಒಗ್ಗಟ್ಟು

ನೆಹರೂರವರು ಕಾಂಗ್ರೆಸದ ಪರವಾಗಿ ಓಟು ಕೇಳುತಿದ್ದಂತೆಯೇ ದೇಶದ ಜನತೆಗೆ ಕೆಲವು ಪ್ರಾಸಂಗಿಕವಾದ ಹಿತೋಪದೇಶದ ಮಾತುಗಳನ್ನೂ ಆಡಿದರು. ಸುರಲೋಕದ ನಂದನವನಗಳ ಸೌಂದರ್ಯ ಮತ್ತು ಬೆಡಗನ್ನು ನಾಚಿಸುವ ತೆಂಗಿನ ತೋಟಗಳ ನಡುವೆ ಹಾದು ಹೋಗುವಾಗ, ಅಪಾರ ಜನ ಸಮುದಾಯ ನೆಹರೂರವರನ್ನು ಕಂಡು ಪದೇ ಪದೇ ಜಯ ಜಯಕಾರಮಾಡುತ್ತ ಕಾರನ್ನು ನಿಲ್ಲಿಸಿ ಹೂಮಾಲೆಗಳನ್ನಿತ್ತು, ಆರತಿಯನ್ನೆತ್ತಿ ಗೌರವ ತೋರಿಸಿತು. ಇವರನ್ನು ಉದ್ದೇಶಿಸಿ ನೆಹರೂ ಅಲ್ಲಲ್ಲಿ ಚಿಕ್ಕ ಪುಟ್ಟ ಭಾಷಣ ಮಾಡಿದರು. ರಾಷ್ಟ್ರದ ಒಗ್ಗಟ್ಟನ್ನು ಕಾಯ್ದುಕೊಳ್ಳುವುದು ಇಂದಿನ ಪ್ರಥಮಾವಶ್ಯಕತೆಯೆಂದು ಅವರು ಹೇಳಿ, ಈ ದೃಷ್ಟಿಯಿಂದ ಕಾಂಗ್ರೆಸಿನ ಹುರಿಯಾಳುಗಳು ಗೆದ್ದು ಬರುವಂತೆ ಮತದಾರರು ನೋಡಬೇಕಾದುದು ಅಗತ್ಯವೆಂದು ತಿಳಿಸಿದರು. ಎಲ್ಲರಾಜ್ಯಗಳಂತೆ ತಿರು-ಕೊಚ್ಚಿಯಲ್ಲಿಯೂ ಕಾಂಗ್ರೆಸು ಸರಕಾರ ಅಸ್ತಿತ್ವದಲ್ಲಿರುವುದು ಹಿತಾವಹವೆಂದೂ ಇದರಿಂದ ಕೇಂದ್ರ ಸರಕಾರದ ಕೈಗಳನ್ನು ಬಲಗೊಳಿಸಿದಂತಾಗುವುದೆಂದೂ ನೆಹರೂ ಅಭಿಪ್ರಾಯಪಟ್ಟರು.

ಅರ್ಥವಿಲ್ಲದ ಐಕ್ಯರಂಗ

ರಚನಾತ್ಮಕ ಸಲಹೆಗಳನ್ನು ನೀಡುವ ಮತ್ತು ವಿಧಾಯಕ ಟೀಕೆಗಳನ್ನು ಮಾಡುವ ಪ್ರಬಲ ಪ್ರತಿಪಕ್ಷವನ್ನು ತಾನು ಸ್ವಾಗತಿಸುವುದಾಗಿ ನೆಹರೂ ಹೇಳಿದರೂ ಅಂತಹ ಪಕ್ಷವೊಂದು ಇನ್ನೂ ಜನ್ಮಕ್ಕೆ ಬಂದಂತೆ ಕಾಣುವುದಿಲ್ಲ. ತಿರು--ಕೊಚ್ಚಿಯಲ್ಲಿ ಕಾಂಗ್ರೆಸನ್ನು ಸೋಲಿಸಬೇಕೆಂಬ ಒಂದೇ ಇರಾದೆಯಿಂದ ವಿರೋಧೀ ಗುಂಪುಗಳೆಲ್ಲ ಒಟ್ಟಾಗಿ ಐಕ್ಯರಂಗವನ್ನು ರಚಿಸಿಕೊಂಡ ವಿಷಯವನ್ನು ಪ್ರಸ್ತಾಪಿಸುತ್ತಾ ವಿವಿಧ ಧ್ಯೇಯಾದರ್ಶಗಳುಳ್ಳ ಪಕ್ಷಗಳು ಐಕ್ಯರಂಗ ಸ್ಥಾಪಿಸಬಹುದೆಂಬ ಕಲ್ಪನೆಯೇ ಅರ್ಥಶೂನ್ಯವೆಂದವರು ಸಾರಿದರು. ಹತ್ತಾರು ಮುಖ ಕೈಕಾಲುಗಳುಳ್ಳ ವಿಚಿತ್ರ ಶಿಶುವಿಗೆ ಈ ಐಕ್ಯರಂಗವನ್ನು ನೆಹರೂ ಹೋಲಿಸಿದರು. ಕಾಂಗ್ರೆಸೊಂದೇ ದೇಶದ ಪರಂಪರೆಯನ್ನು ಉಳಿಸಿಕೊಂಡು, ಪ್ರಗತಿಪಥದಲ್ಲಿ ನಮ್ಮೆಲ್ಲರನ್ನು ಒಯ್ಯಲು ಸಮರ್ಥವಾಗಿದೆಯೆಂಬ ತಮ್ಮ ಅಚಲ ವಿಶ್ವಾಸವನ್ನು ನೆಹರೂ ಪುನರುಚ್ಚರಿಸಿದರು.

ಪ್ರಬಲ ವಿರೋಧೀ ಪಕ್ಷ

ತಮ್ಮ ದೌರ್ಬಲ್ಯ ಮತ್ತು ಲೋಪದೋಷಗಳನ್ನು ವಿರೋಧೀ ಗುಂಪುಗಳು ಮರೆತಿವೆಯೆಂದೇನಲ್ಲ—ಪ್ರಜಾ ಸಮಾಜವಾದೀ ಧುರೀಣ ಡಾ। ರಾಮ ಮನೋಹರ ಲೋಹಿಯರು ಕಾಂಗ್ರೆಸು ಸ್ವಾತಂತ್ರ್ಯ ಪೂರ್ವದಲ್ಲಿ ಪ್ರತಿಶತ ೯೫ ಬಹುಮತವನ್ನು ಪಡೆದಿದ್ದರೆ, ಕಳೆದ ಮಹಾ ಚುನಾವಣೆಯಲ್ಲಿ ೪೪ ಓಟುಗಳನ್ನು ಮಾತ್ರ ಸಂಪಾದಿಸಿತು. ಇದೇ ಪರಿಸ್ಥಿತಿ ಮುಂದರಿದರೆ, ಕಾಂಗ್ರೆಸು ತನ್ನ ಜನಪ್ರಿಯತೆಯನ್ನು ಕಳಕೊಂಡು ಸತ್ವಹೀನವಾಗುವುದು ಎಂದು ಹೇಳುತ್ತಾ ಅಂತಹ ಪರಿಸ್ಥಿತಿಯಲ್ಲಿ ದೇಶದ ಭವಿಷ್ಯವನ್ನು ಹೊರಬಲ್ಲ ಪ್ರಬಲ ಪ್ರತಿಪಕ್ಷವೊಂದು ಅತ್ಯಗತ್ಯ. ಈ ವಿಷಯದಲ್ಲಿ ನಮಗೆ ಆಶಾದಾಯಕವಾದ ಚಿತ್ರ ಕಾಣುವುದಿಲ್ಲ— ಪ್ರಜಾಸಮಾಜವಾದಿಗಳು ಪಕ್ಷದ ಸಾಮರ್ಥ್ಯವನ್ನು ಸಂವರ್ಧಿಸಿಕೊಂಡು, ಈಗಿನ ಕಳವಳವನ್ನು ದೂರ ಮಾಡಬೇಕು ಎಂದು ಘೋಷಿಸಿದರು.

Visit

K. R. K. SHET DIAMOND MART

Opposite Government College, MANGALORE.

For all your requirements in Diamonds and Jewellery Lucky Birth Stones are also available.

Prop: **K. K. R. SHET.**

ಚ್ಯವನಪ್ರಾಶ

ಹಿಮಾಲಯದ ಉತ್ಕೃಷ್ಟ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಚ್ಯವನಪ್ರಾಶವು ಕ್ಷಯ, ದುರ್ಬಲತೆ ಇತ್ಯಾದಿ ಕಾಹಿಲೆಗಳಿಗೆ ದಿವ್ಯೌಷಧಿ. ವಯೋವೃದ್ಧರಿಗೆ ವಿಶೇಷ ಪರಿಣಾಮಕಾರಿಯಾದುದು. ಎಳೆ ಮಕ್ಕಳನ್ನೂ ಗಟ್ಟಿಮುಟ್ಟಾಗಿಯೂ ಆರೋಗ್ಯವಂತರಾಗಿಯೂ ಇರಗೊಡಿಸುವುದು. ಚ್ಯವನಪ್ರಾಶವನ್ನು ಸತತ ಉಪಯೋಗಿಸುವುದರಿಂದ ಆಯುಸ್ಸು ವೃದ್ಧಿಯಾಗುವುದು. ಪರೀಕ್ಷಾರ್ಥವಾಗಿ ಕೆಳಗಿನ ವಿಳಾಸಕ್ಕೆ ಬರೆದು ಒಮ್ಮೆ ತರಿಸಿ ನೋಡಿರಿ. ಸೇರಿಗೆ ರೂಪಾಯಿ 10/- ಬೆಲೆ.

ಕಾಲಿಕಮಾಲಿ ಆಯುರ್ವೇದ ಫಾರ್ಮಸಿ, ಋಷಿಕೇಶ (ದೆಹರಾಡನ್)

Kali Kamali Ayurved Pharmacy, RISHIKESH (Dehradun.)

AUCTION NOTICE

It is proposed to conduct the auction sale at 3 P.M. on 1-3 1954 of the right of purchasing milk from the District Livestock Farm, Koila Cattle Farm post, South Kanara for a period of one year commencing from 1—4—1954 to 31—3—1955, at the Office of the undersigned in the District Livestock Farm, Koila. The intending bidders may apply to this Office for full details enclosing a postal cover for reply.

Superintendent,
District Livestock Farm, Koila,
South Kanara.

ಭಾರತದಲ್ಲಿ ಕಾಶ್ಮೀರ ರಾಜ್ಯದ ಸೇರ್ಪಡೆಗೆ ಒಪ್ಪಿಗೆ

ಕುಂಭ ನಗರದಲ್ಲಿ ದುರಂತಕ್ಕೀಡಾದ ಹತಭಾಗ್ಯರು

ಭಾರತ ಸರಕಾರವು ಕಾಶ್ಮೀರಕ್ಕೆ ವಿಶಿಷ್ಟ ಸ್ಥಾನಮಾನವನ್ನು ಕೊಟ್ಟಿದೆ—ರಾಜ್ಯಾಂಗ ಘಟನೆಯಲ್ಲಿಯೇ ಇದಕ್ಕೆ ಅವಕಾಶವನ್ನು ಮಾಡಿಕೊಡಲಾಗಿದ್ದು, ಭಾರತಾಂತರ್ಗತವಾದ ಇತರ ರಾಜ್ಯಗಳಿಗಿಂತ ಕಾಶ್ಮೀರ ಹೆಚ್ಚು ಸ್ವಾಯತ್ತಾಧಿಕಾರವನ್ನು ಪಡೆದಿರುವುದು ಇದು ಭಾರತೀಯರಲ್ಲಿ ಹಲವರಿಗೆ ಅಸಮಾಧಾನವನ್ನುಂಟು ಮಾಡಿದ್ದರೂ ಸಹ—ಪ್ರಧಾನಿ ನೆಹರೂರವರು ಕಾಶ್ಮೀರದ ಸಮಸ್ಯೆ ಬಗೆಹರಿಯುವವರೆಗೆ ಆ ರಾಜ್ಯವನ್ನು ಇತರ ರಾಜ್ಯಗಳಂತೆ ನಡೆಸಿಕೊಳ್ಳಲು ಬಾರದೆಂದು ಅಭಿಪ್ರಾಯ ಪ್ರಕಟಿಸುತ್ತಾ ಬಂದಿರುವರು. ಆದರೂ ಭಾರತದೊಡನೆ ಕಾಶ್ಮೀರದ ಸಂಬಂಧ ನಯವಾಗಿರಬೇಕೆಂದೂ ಭಾರತದೊಡನೆ ಅದು ಸಮೀಕರಣ ಸಾಧಿಸಬೇಕೆಂದೂ ಉದ್ದೇಶಿಸಿ, ೧೯೫೨ನೇ ಇಸವಿಯಲ್ಲಿ ಆಗಿನ ಕಾಶ್ಮೀರ ಪ್ರಧಾನಿ ಶೇಕ ಅಬ್ದುಲ್ಲರು ಮತ್ತು ಭಾರತ ಸರಕಾರ—ಇವರೊಳಗೆ ಒಂದು ಒಪ್ಪಂದವಾಯಿತು. ಈ ಒಪ್ಪಂದದ ಕೆಲವು ಮುಖ್ಯ ಕಲಮುಗಳ ಕಾರ್ಯಾಚರಣೆಯಲ್ಲಿ ವಿಳಂಬ ಕಂಡು ಬಂದುದರಿಂದ, ಕಾಶ್ಮೀರ ಸರಕಾರದ ಸದುದ್ದೇಶದ ಬಗ್ಗೆ ಸಂಶಯವುಂಟಾಗಲು ಅವಕಾಶವಾಯಿತು. ಈಗ ಈ ಸಂದೇಹ ದೂರಗೊಳ್ಳುವ ಘಟನೆಗಳು ಜರಗಿವೆ.

ಘಟನಾ ಸಮಿತಿಯ ನಿರ್ಣಯ.

ಕೆಲವು ದಿನಗಳ ಪೂರ್ವದಲ್ಲಿ ಕಾಶ್ಮೀರದ ಈಗಿನ ಪ್ರಧಾನ ಮಂತ್ರಿ ಬಕ್ಷಿ ಗುಲಾಂ ಮಹಮ್ಮದರು ಭಾರತೀಯ ಮುಂದಾಳುಗಳೊಡನೆ ಸಮಾಲೋಚನೆ ನಡೆಸಿದರು. ಇದರ ಪರಿಣಾಮವಾಗಿ ಹೊಸ ದೆಹಲಿಯ ಒಡಂಬಡಿಕೆಯನ್ನು ಕಾರ್ಯಗತ ಮಾಡುವ ವಿಷಯದಲ್ಲಿ ಕೆಲವು ಸೂಚನೆಗಳು ಕಾಶ್ಮೀರ ಘಟನಾ ಸಮಿತಿಯ ಕಳೆದ ವಾರದ ಅಧಿವೇಶನದಲ್ಲಿ ಮಂಡಿಸಲ್ಪಟ್ಟು ಸ್ವೀಕಾರಗೊಂಡವು. ಈ ಒಪ್ಪಂದದ ಮೇರೆಗೆ ಕಾಶ್ಮೀರವು ಇನ್ನು ಮುಂದೆಯೂ ಸಹ ಭಾರತಾಂತರ್ಗತವಾದ ಉಳಿದ ರಾಜ್ಯಗಳಿಗಿಂತ ವಿಶೇಷವಾದ ಸ್ಥಾನಮಾನವನ್ನು ಪಡೆದಿರುವುದು. ಆದರೆ ಭಾರತಕ್ಕೆ ಸ್ವಾತಂತ್ರ್ಯ ದೊರೆತ ದಿನದಂದು ಕಾಶ್ಮೀರ ಸಂಸ್ಥಾನಕ್ಕೆ ಸೇರಿದ್ದ ಎಲ್ಲ ಭಾಗಗಳೊಂದಿಗೆ ಅದು ವಿಲಯನ ಹೊಂದಿದೆಯೆಂದು ಘಟನಾ ಸಮಿತಿಯ ಮೊನ್ನೆಯ ಸಭೆಯಲ್ಲಿ ಒಪ್ಪಿಕೊಳ್ಳಲ್ಪಟ್ಟಿದೆ. ರಾಜಕೀಯವಾಗಿಯೂ ಆರ್ಥಿಕವಾಗಿಯೂ ಕಾಶ್ಮೀರ ರಾಜ್ಯವು ಭಾರತದೊಂದಿಗೆ ಸೇರ್ಪಡೆ ಹೊಂದಿದ್ದು, ನಮ್ಮ ಘಟನೆಯ ಮೂಲಭೂತ ಹಕ್ಕುಗಳ ಕಲಮು ಕಾಶ್ಮೀರಕ್ಕೂ ಅನ್ವಯಿಸುತ್ತದೆ. ಖಾಸಗಿ ಸೊತ್ತುಗಳನ್ನು ವಶಪಡಿಸಿಕೊಳ್ಳುವಾಗ ಸರಕಾರವು ಪರಿಹಾರ ಧನಕೊಡಬೇಕೆನ್ನುವ ಕಲಮು ಮಾತ್ರ ಇದಕ್ಕೆ ಅಪವಾದ.

ಒಪ್ಪಂದದ ಕಾರ್ಯಾಚರಣೆ

ಕಾಶ್ಮೀರ ಹೈಕೋರ್ಟಿನ ಮೇಲೆ ಭಾರತದ ವರಿಷ್ಠ ನ್ಯಾಯಾಲಯದ ಅಧಿಕಾರವನ್ನು ಒಪ್ಪಿಕೊಳ್ಳಲಾಗಿದೆ. ಆದರೆ ಹೈಕೋರ್ಟು ನೀಡಿದ ತೀರ್ಮಾನಗಳ ವಿರುದ್ಧ ಅಪೀಲು ಮಾಡಿಕೊಳ್ಳುವುದಕ್ಕೆ ಮಾತ್ರ ವರಿಷ್ಠ ನ್ಯಾಯಾಲಯಕ್ಕೆ ಹೋಗಬೇಕೆಂದು ಒಂದು ವಿಶೇಷ ಕಲಮು ಇದರೊಂದಿಗೆ ಸೇರಿರುವುದು. ಆರ್ಥಿಕ ವಿಲಯನಕ್ಕೂ ಕಾಶ್ಮೀರ ಒಪ್ಪಿಕೊಂಡಿದ್ದು ಉತ್ಪನ್ನಕರ ಮುಂತಾದವುಗಳನ್ನು ವಸೂಲು ಮಾಡುವ ಅಧಿಕಾರ ಕೇಂದ್ರಕ್ಕೆ ಬರುತ್ತದೆ. ಭಾರತದ ಗಡಿಯಲ್ಲಿ ಕಾಶ್ಮೀರ ಸರಕಾರ ವಸೂಲು ಮಾಡುತ್ತಿದ್ದ ಸುಂಕವು ರದ್ದುಗೊಳ್ಳುತ್ತದೆ. ಭಾರತದ ರಾಷ್ಟ್ರಪತಿಗಳು ವಿಪತ್ತಿನ ಪ್ರಸಂಗದಲ್ಲಿ ಕಾಶ್ಮೀರ ಸರಕಾರದ ಸಲಹೆ ಪಡೆದು ಗಂಡಾಂತರ ಪರಿಸ್ಥಿತಿಯನ್ನು ಸಾರಲು ಅಧಿಕಾರ ಹೊಂದಿರುವರು. ಸಂರಕ್ಷಣೆ, ಸಾರಿಗೆ ಸೌಕರ್ಯ ಮುಂತಾದ ವಿಷಯಗಳಲ್ಲಿ ಮೊದಲೇ ಭರವಸೆಯಷ್ಟು ಸೇರ್ಪಡೆ ಹೊಂದಿದ್ದ ಕಾಶ್ಮೀರ ಸರಕಾರ ಈಗ ಭಾರತದೊಂದಿಗೆ ಪೂರ್ಣ ಸಮೀಕರಣವನ್ನು ಸಾಧಿಸಿದಂತಾಗಿರುವುದು ಸಂತೋಷ.

ಹನುಮಂತಯ್ಯನವರ ಹಾರೈಕೆ

ಭಾರತದ ಐಕ್ಯ ಮತ್ತು ಒಗ್ಗಟ್ಟಿನ ದೃಷ್ಟಿಯಿಂದ ಇಂತಹ ವಿವಾದಗಳು ಬೇಗನೇ ತೀರ್ಮಾನಗೊಂಡಷ್ಟು ಭದ್ರತೆ ಬೆಳೆಯುತ್ತದೆ. ನೆಹರೂ ಮುಂತಾದವರು ತುಂಬ ವಿಷಾದದಿಂದ ಕಂಡರೂ ಭಾರತದಲ್ಲಿ ಭಾಷಾವಾರು ರಾಜ್ಯಗಳ ಕುರಿತಾದ ವಿಚಾರ ಧಾರೆ, ಎಷ್ಟು ಪ್ರಬಲವಾಗಿದೆಯೆಂದರೆ, ಸಾವಿರ ಆತಂಕಗಳ ನಡುವೆ ಆಂಧ್ರ ರಾಜ್ಯದ ಪ್ರಸವವಾಗುವುದು ಮತ್ತು ರಾಜ್ಯಗಳ ಪುನರ್ವಿಂಗಡಣೆಯ ಪ್ರಶ್ನೆಯನ್ನು ವಿಚಾರಿಸಲು ಆಯೋಗವೂ ನೇಮಕ ಹೊಂದಿರುವುದು. ಕನ್ನಡಿಗರು ಏಕೀಕರಣದ ಕುರಿತು ಎಂದಿಗಿಂತಲೂ ಹೆಚ್ಚು ಕಾತರ ಮತ್ತು ತವಕವನ್ನು ಈಗ ವ್ಯಕ್ತಗೊಳಿಸುತ್ತಿದ್ದಾರೆ. ಇವರಿಗೆ ಮೈಸೂರ ಮುಖ್ಯಮಂತ್ರಿ ಶ್ರೀ ಕೆಂಗಲ್ ಹನುಮಂತಯ್ಯನವರು ಕಳೆದ ವಾರ ಉತ್ತರ ಕರ್ನಾಟಕದ ವಿಜಾಪುರ ಹಾಗು ಧಾರವಾಡ ಜಿಲ್ಲೆಗಳ ಪ್ರವಾಸ ಕಾಲದಲ್ಲಿ ಹೇಳಿದ ಭರವಸೆಯ ಮಾತು ಆಪ್ಯಾಯಮಾನವಾಗುತ್ತದೆ: ಕಾಲ—ಕರ್ಮಗಳು ಕೈಗೂಡಿ ಒಂದಿಷ್ಟು, ಮೈಸೂರಿನೊಡನೆ ಸೇರಿಕೊಂಡು ಕರ್ನಾಟಕ ರಾಜ್ಯ ನಿರ್ಮಾಣ ಹೊಂದುವ ದಿನ ದೂರವಿಲ್ಲೆಂದು ಅವರು ಆತ್ಮವಿಶ್ವಾಸವನ್ನು ವ್ಯಕ್ತಗೊಳಿಸಿರುವರು. ಆಯೋಗದ ಮುಂದೆ ಕನ್ನಡಿಗರು ತಮ್ಮ ಈ ಆಕಾಂಕ್ಷೆಯನ್ನು ಸಮರ್ಪಕ ರೀತಿಯಲ್ಲಿ ಮಂಡಿಸಬೇಕೆಂದೂ ಅವರು ಸಲಹೆ ಮಾಡಿರುವರು.

ಕೊಡಗಿನ ನಿರ್ಣಯ

ಇದೇ ಸಮಯ, ಕನ್ನಡ ನಾಡಿನ ಒಕ್ಕೂಟದಲ್ಲಿ ನ್ಯಾಯವಾಗಿ ಸಮಾವೇಶಗೊಳ್ಳಬೇಕಾದ ಕೊಡಗು ತಾನು ಪ್ರತ್ಯೇಕವಾಗಿ ಉಳಿಯಬೇಕೆಂಬ ಅಭಿಪ್ರಾಯವನ್ನು ವ್ಯಕ್ತಗೊಳಿಸಿದೆ—ಕೊಡಗಿನ ಚುನಾವಣಾಕಾಲದಲ್ಲಿ ವಿಲಯನ ವಿರೋಧಿ ಗುಂಪೊಂದು ತಲೆ ಎತ್ತಿಕೊಂಡು ಶಾಸನ ಸಭೆಯ ೨೪ ಸ್ಥಾನಗಳಲ್ಲಿ ೯ ಸ್ಥಾನಗಳನ್ನು ಪಡೆದಿತ್ತು. ಅದರ ಧುರೀಣರು ಮೊನ್ನೆ ತಾನೆ ತಮ್ಮ ನಿಲುಮೆಯನ್ನು ವಿಶದೀಕರಿಸುತ್ತ, ಕೊಡಗು ಪ್ರತ್ಯೇಕವಾಗಿಯೇ ಉಳಿಯಬೇಕೆಂಬ ತಮ್ಮ ಅಭಿಪ್ರಾಯವನ್ನು ಪುನರುಚ್ಚರಿಸಿದರು. ಇದರ ಬೆನ್ನಿಗೆ ಕೊಡಗು ಜಿಲ್ಲಾ ಕಾಂಗ್ರೆಸ ಸಮಿತಿಯ ಸಭೆಯೊಂದು ಸೇರಿ, ಕೊಡಗಿನ ಮುಖ್ಯ ಮಂತ್ರಿ ಶ್ರೀ ಪೂಣಚ್ಚರು ಮಂಡಿಸಿದ, ಪ್ರತ್ಯೇಕ ರಾಜ್ಯವಾಗಿ ಮುಂದೆಯೂ ಕೊಡಗು ಉಳಿಯಬೇಕೆನ್ನುವ ಗೊತ್ತುವಳಿಯನ್ನು ಸ್ವೀಕರಿಸಿತು. ಇತರ ಯಾವುದೇ ಪ್ರಾಂತ್ಯಗಳಲ್ಲಿ ಕೊಡಗನ್ನು ಸೇರಿಸ ತಕ್ಕದ್ದಲ್ಲವೆಂದು ಇವರ ಅಭಿಪ್ರಾಯವಿರುತ್ತದೆ. ಈ ನಿರ್ಧಾರಕ್ಕೆ ಬರುವಾಗ ಕರ್ನಾಟಕದ ಸಮಷ್ಟಿ ಹಿತವನ್ನು ಇವರು ಲಕ್ಷಿಸಿದಂತೆ ಕಾಣುವುದಿಲ್ಲ.

ಕುಂಭ ಮೇಳದ ದುರಂತ

ಕನ್ನಡಿಗರು ಇದರಿಂದ ದಿಗಿಲುಗೊಳ್ಳಬಹುದು—ಆದರೆ ಭಾರತದಾದ್ಯಂತ ದಿಗಿಲು ಹುಟ್ಟಿಸಿದ ಕುಂಭ ಮೇಳಾದ ದುರಂತದ ಮುಂದೆ ಇದು ಈಗ ಯಾರ ಗೋಚರಕ್ಕೂ ಬಾರದೆ ಹೋದೀತು. ತ್ರಿವೇಣಿಯ ಪವಿತ್ರ ಸಂಗಮದಲ್ಲಿ ಸ್ನಾನಮಾಡಿ ಪುಣ್ಯ ಗಳಿಸಲು ಬಂದ ಲಕ್ಷಾಂತರ ಜನರು ಎಷ್ಟು ಶಿಸ್ತು ಮತ್ತು ಅಚ್ಚುಕಟ್ಟಿನಿಂದ ನಡೆದುಕೊಂಡರೂ ಕಡಿಮೆಯಾಗುತ್ತದೆ. ಈ ಅಪಾರ ಜನಸಮ್ಮರ್ದವನ್ನು ನಿಯಂತ್ರಿಸುವುದೂ ಕಠಿಣದ ಕೆಲಸ—ಮೊನ್ನೆ ೩ನೇ ದಿನಾಂಕ ನಾಗಾ ಸಾಧುಗಳ ಮೆರವಣಿಗೆಯೊಂದು ಬಂದಾಗ, ಅವರ ಪಾದ ಸ್ಪರ್ಶಕ್ಕೆಂದು ಕೆಸರು ತುಂಬಿದ ಮಾರ್ಗದ ಇಕ್ಕೆಲಗಳಿಂದಲೂ ಜನರು ಒಬ್ಬರ ಮೇಲೊಬ್ಬರು ಏರಿಬರಲು, ಸುಮಾರು ೩೫೦ ಜನರು ಪದಹತಿಯಿಂದ ಮೃತ್ಯುವಶರಾದರೆಂದೂ ಸಾವಿರಾರು ಜನ ಗಾಯಗೊಂಡು ನೊಂದರೆಂದೂ ವರದಿಗಳು ಹೇಳುತ್ತವೆ. ತೀರಾ ಅಶಕ್ತರಾದ ಮುದುಕರು, ಹೆಂಗಸರು ಮತ್ತು ಮಕ್ಕಳು ಕಾಲುಗಳ ಕೆಳಗೆ ಬಿದ್ದು ನಜ್ಜುಗುಜ್ಜಾಗಿ ಹೋದರು. ಪ್ರಧಾನ ಮಂತ್ರಿ ನೆಹರೂ ಹಾಗು ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ಪ್ರಯಾಗಕ್ಕೆ ಸಂದರ್ಶನಾರ್ಥ ಬಂದಿದ್ದಾಗಲೇ ಈ ಘೋರ ಪ್ರಕರಣ ನಡೆಯಿತು. ನೆಹರೂರವರು ಕೂಡಲೇ ಪತ್ರಿಕಾ ಪರಿಷತ್ತೊಂದನ್ನು ಕರೆದು ಶಿಸ್ತು ಮತ್ತು ವ್ಯವಸ್ಥೆಯನ್ನು ಕಾಯ್ದುಕೊಳ್ಳಲು ತೆಗೆದುಕೊಂಡ ಮುಂಜಾಗ್ರತೆಗಳನ್ನು ಪ್ರಶಂಸಿಸಿದರು—ಆದರೆ ಇಕ್ಕಟ್ಟಾದ ಜಾಗದಲ್ಲಿ ಅಸಂಖ್ಯಾತ ಜನರು ಒಮ್ಮೆಲೆ ನುಗ್ಗಿಕೊಂಡುದರಿಂದಲೇ ಇಂತಹ ದುರಂತ ಸಂಭವಿಸಿತೆಂದು ಹೇಳಿದರು.

ಅದ್ಭುತ ಯಶಸ್ಸು

ಆಚಾರ್ಯ ವಿನೋಬಾ ಭಾವೆಯವರು ಭೂದಾನ ಯಜ್ಞದ ಸಂದೇಶವನ್ನು ಬೀರುತ್ತಾ ಅತ್ಯದ್ಭುತ ಯಶಸ್ಸನ್ನು ತಮ್ಮ ಕಾರ್ಯದಲ್ಲಿ ಸಂಪಾದಿಸಿರುವರು. ಈ ಮಾರ್ಚಿಯೊಳಗೆ ೨೫ಲಕ್ಷ ಎಕ್ರೆಯಷ್ಟು ಜಮೀನನ್ನು ದಾನ ರೂಪದಲ್ಲಿ ಪಡೆಯಬೇಕೆಂದು ಅವರು ಇಟ್ಟುಕೊಂಡಿದ್ದ ಧ್ಯೇಯವು ಈಗಾಗಲೇ ಕೈಗೂಡಿಸಲ್ಪಟ್ಟದೆ ೪ ಲಕ್ಷ ಎಕ್ರೆಗಳಷ್ಟು ಹೆಚ್ಚಾಗಿಯೇ ಭೂದಾನ ದೊರತಿದೆ. ಬಿಹಾರ ರಾಜ್ಯದಲ್ಲಿ ಹೆಚ್ಚು ಭೂಮಿಯು ದಾನವಾಗಿ ಸಿಕ್ಕುತ್ತದೆ—ಹೀಗೆ ದಾನಬಂದ ಭೂಮಿಯಲ್ಲಿ ೪೦೫೫೦ ಎಕ್ರೆಯಷ್ಟನ್ನು ಭೂಮಿಗಳಿಲ್ಲದ ೭೫೫ ಕುಟುಂಬಗಳಿಗೆ ಹಂಚಿಕೊಟ್ಟಿರುವದಾಗಿ ಕೇಳುತ್ತೇವೆ. ಕೇವಲ ಭೂಮಿಯಿಂದಲೇ ಕೃಷಿ ಸಾಧ್ಯವಿಲ್ಲ—ಅದಕ್ಕೆ ತಕ್ಕ ಎತ್ತಿನ ಜತೆ, ಬೀಜ, ನೇಗಿಲು ಮುಂತಾದ ಸಲಕರಣೆಗಳೂ ಬೇಕು. ಅವುಗಳನ್ನೊದಗಿಸುವ ಬಗೆ ಹೇಗೆ? ವಿನೋಬಾಜೀಯವರು ಪ್ರಾಯಶಃ ಇಂತಹ ಸಾಧನಗಳನ್ನು ಕೊಂಡುಕೊಳ್ಳಲಾಗುವಂತೆ ಸಂಪತ್ತಿ ದಾನ ಯಜ್ಞವನ್ನು ಪ್ರವರ್ತಿಸಿದರೆಂದು ತೋರುತ್ತದೆ. ಸಾರ್ವಜನಿಕರು ಈ ಅಭೂತಪೂರ್ವವಾದ ಯೋಜನೆಯಲ್ಲಿ ಸಹಕರಿಸಿದರೆ, ಅಹಿಂಸಾತ್ಮಕ ಕ್ರಾಂತಿಗೊಂದು ಮಾದರಿ ಪಾರ ದೊರೆಯುತ್ತದೆ.

ದಿ ನ್ಯೂ ಕರ್ನಾಟಕ ಪ್ರೊವಿಡೆಂಟ್ ಇನ್ಶೂರೆನ್ಸ್

ಕಂಪೆನಿ ಲಿಮಿಟೆಡ್.

ಪ್ರಧಾನ ಕಚೇರಿ,] [ಉಡುಪಿ, ದ. ಕನ್ನಡ.

ನಿಮ್ಮ ಸಂಪಾದನೆಗೆ ಸಾಧ್ಯವಿರುವ ಮೊತ್ತಕ್ಕೆ ವಿಮೆ ಮಾಡಲು ಅನುಕೂಲವಿರುವ ಜಿಲ್ಲೆಯ ಏಕಮಾತ್ರ ಜನತಾ ಪ್ರೊವಿಡೆಂಟ್ ವಿಮಾ ಸಂಸ್ಥೆ.

ಎಜಂಟರು, ಆರ್ಗನೈಜರು ಮತ್ತು ಇನ್ಸ್‌ಪೆಕ್ಟರು ಬೇಕಾಗಿದ್ದಾರೆ.

ವಿವರಕ್ಕೆ ಬರೆಯಿರಿ

THE NEW KARNATAKA PROVIDENT
Insurance Co Ltd., UDIPI.

ಸ್ವಿಸ್ ತಯಾರಿ ರಿಸ್ಟ್ ವಾಚು

ಬೆಲೆ ರೂ. 5/- ಮಾತ್ರ.



ರೂಪಾಯಿ 5/-ಕ್ಕೆ ಸ್ವಿಸ್ ತಯಾರಿ ರಿಸ್ಟ್ ವಾಚು ಮತ್ತು ಸ್ಟೆಂಡರ್ಡ್ ಫೌಂಟನ್ ಪೆನ್ ದೊರೆಯುತ್ತವೆ. 15 ವರುಷಗಳ ಗ್ಯಾರಂಟಿ. ರೂಪಾಯಿ 1-2-0 ಟಪಾಲು ವೆಚ್ಚ ಪ್ರತ್ಯೇಕ.

ಇಂದೇ ಬರೆಯಿರಿ:

National Swiss Watch Suppliers,
Halka No. 28 (BG) Meerut (U. P.)

ನ ವ ಯು ಗ

ಉಡುಪಿ, ಗುರುವಾರ ೧೧-೨-'೫೪

ತಜ್ಞರ ಅಭಿಪ್ರಾಯ

ಭಾರತದಲ್ಲಿ ವಿದ್ಯಮಾನವಿರುವ ಆರ್ಥಿಕ, ಔದ್ಯೋಗಿಕ ಮತ್ತು ತತ್ಸಂಬಂಧದ ಪರಿಸ್ಥಿತಿಯನ್ನು ಕೂಲಂಕಷವಾಗಿ ಪರಿಶೀಲಿಸಲೆಂದು ಕಳೆದ ವರ್ಷದ ಆದಿಯಲ್ಲಿ ಇಲ್ಲಿಗೆ ಸಂದರ್ಶನ ನೀಡಿದ ಅಂತಾರಾಷ್ಟ್ರೀಯ ಹಣಕಾಸಿನ ಮಂಡಳದ ಪ್ರತಿನಿಧಿ ಸಂಪುಟ ಒಪ್ಪಿಸಿದ ವರದಿಯ ಮುಖ್ಯಾಂಶಗಳು ಈಗಷ್ಟೇ ಪ್ರಕಟಗೊಂಡಿರುತ್ತವೆ—ಈ ವರದಿಯಲ್ಲಿ ಭಾರತ ಸರಕಾರದ ಆರ್ಥಿಕ ಧೋರಣೆಯ ಯಶಸ್ಸಿನ ಕುರಿತು ಮೆಚ್ಚುಗೆಯ ಮಾತುಗಳು ಕಂಡು ಬರುತ್ತವೆ. ಇದರೊಂದಿಗೆ ಕೆಲವು ಅತ್ಯಮೂಲ್ಯವಾದ ಸೂಚನೆಗಳನ್ನೂ ಪ್ರತಿನಿಧಿ ಸಂಘದವರು ಒಪ್ಪಿಸಿದ್ದು, ಭಾರತ ಸರಕಾರಕ್ಕೂ ರಾಜ್ಯ ಸರಕಾರಗಳಿಗೂ ಅವುಗಳಿಂದ ಹೆಚ್ಚಿನ ಪ್ರಯೋಜನ ಲಭ್ಯವಾದೀತೆಂದು ತೋರುತ್ತದೆ. ಈ ವರದಿಯು ಸ್ವತಂತ್ರ ಅಧ್ಯಯನದ ಫಲವಾಗಿರುವುದರಿಂದ ಮತ್ತು ಅಂತಾರಾಷ್ಟ್ರೀಯ ಆರ್ಥಿಕ ಸಮಸ್ಯೆಗಳ ವಿಷಯದಲ್ಲಿ ಅಧಿಕಾರವಾಣಿಯಿಂದ ಮಾತನಾಡಬಲ್ಲವರ ಅಭಿಪ್ರಾಯವನ್ನು ವರದಿ ಒಳಗೊಂಡಿರುವುದರಿಂದ ಇಲ್ಲಿ ಮಾಡಲಾದ ಸೂಚನೆಗಳೂ ವ್ಯಕ್ತಗೊಳಿಸಿದ ಅಭಿಪ್ರಾಯಗಳೂ ಮಹತ್ವವನ್ನು ಪಡೆಯುತ್ತವೆ. ಪಂಚವಾರ್ಷಿಕ ಯೋಜನೆಯಂಥ ಗುರುತರವಾದ ಕಾರ್ಯವನ್ನು ಕೈಗೆ ತೆಗೆದುಕೊಂಡಿರುವುದನ್ನು ಪ್ರಸ್ತಾಪಿಸುತ್ತಾ, ಭಾರತ ಸರಕಾರವು ಸರಿಯಾದ ದಿಸೆಯಲ್ಲಿಟ್ಟ ಪ್ರಥಮ ಹೆಜ್ಜೆ ಇದೆಂದು ವರದಿ ಹೇಳುತ್ತದೆ. ಈ ಮಹಾ ಯೋಜನೆಯನ್ನು ಕಾರ್ಯಗತ ಮಾಡುವುದಕ್ಕೆ ಅಪಾರ ಬಂಡವಾಳ ಬೇಕು; ಆದರೆ ಭಾರತದಲ್ಲಿ ತಲೆಯೊಂದರ ಆದಾಯ ಬಹಳ ಕೆಳಮಟ್ಟದಲ್ಲಿರುವುದರಿಂದ, ಜನರು ಉಳಿತಾಯವನ್ನು ಮಾಡಿಕೊಂಡು ಯೋಜನೆಗೆ ಬೇಕಾದ ಬಂಡವಾಳವನ್ನೆಲ್ಲ ಸಂಗ್ರಹಿಸಿ ಯಾರೆಂದು ಹೇಳಲು ಬಾರದು. ಆದರೂ ಉತ್ಪಾದಕ ಕಾರ್ಯಗಳಿಗೆಯೇ ಎಲ್ಲ ಹಣವೂ ಸಿಗುವಂತೆ ಉಳಿತಾಯ ಪ್ರವೃತ್ತಿಯನ್ನು ಸರಕಾರೇತರ ಮಾರ್ಗದಿಂದಲೂ ಪೋಷಿಸತಕ್ಕದ್ದು. ಔದ್ಯೋಗಿಕ ಹಾಗೂ ಕೈಗಾರಿಕಾ ಕ್ಷೇತ್ರದಲ್ಲಿಯೂ ಗ್ರಾಮಾಂತರ ಪ್ರದೇಶದಲ್ಲಿಯೂ ಉಳಿತಾಯದ ಮನೋಭಾವವನ್ನು ಬಲಿಯಗೊಡಬೇಕೆಂದು ವರದಿ ಸೂಚಿಸುತ್ತದೆ. ಅದರೊಂದಿಗೆ ಇತರ ವಿಧಾನದಿಂದಲೂ ದೇಶದೊಳಗಿನ ಹಣವನ್ನು ಸಂಗ್ರಹಿಸಲು ಕೆಲವು ಕ್ರಮಗಳನ್ನು ಅನುಸರಿಸಬಹುದೆಂದು ಅದು ಹೇಳಿದೆ. ಯೋಜನಾ ಆಯೋಗವು ಪಂಚ ವಾರ್ಷಿಕ ಯೋಜನೆಯನ್ನು ಕಾರ್ಯಗತ ಮಾಡುವುದಕ್ಕೋಸ್ಕರ ರಾಜ್ಯ ಸರಕಾರಗಳು ಸಾಕಷ್ಟು ಬಂಡವಾಳವನ್ನು ಕೂಡಿಸಬೇಕೆಂದು ಹೇಳಿದ್ದರೂ—ರಾಜ್ಯ ಸರಕಾರಗಳ ಈ ವರೆಗಿನ ಪ್ರಯತ್ನಗಳು ಈ ದಿಸೆಯಲ್ಲಿ ಪರಿಣಾಮಕಾರಿ ಚಿತ್ರವನ್ನೇನೂ ಒದಗಿಸುವುದಿಲ್ಲ. ರಾಜ್ಯ ಸರಕಾರಗಳಿಗೆ ಉಪಯುಕ್ತವಾದ ಮೂರು ಸಲಹೆಗಳನ್ನು ವರದಿ ನೀಡುತ್ತದೆ (೧) ಕಳೆದ ಹತ್ತು ಹದಿನೈದು ವರ್ಷಗಳಿಂದ ಏರುತ್ತಿರುವ ಬೆಲೆ ಮತ್ತು ಕಂದಾಯದ ಬೇಡಿಕೆಗಳಿಗನುಗುಣವಾಗಿ ಹೆಚ್ಚು ವಿಧಿಸದ ತೆರಿಗೆಗಳನ್ನು ಹೆಚ್ಚಿಸುವುದು; (೨) ಪಂಚ ವಾರ್ಷಿಕ ಯೋಜನೆಯಿಂದ ಪ್ರಯೋಜನ ಹೊಂದಿ, ಅಧಿಕ ಉತ್ಪಾದನೆಯನ್ನೂ ಸಂಪಾದನೆಯನ್ನೂ ತಂದ ಕೆಲಸಗಳ ವಿಷಯದಲ್ಲಿ ತೆರಿಗೆ ಹೊರಿಸುವುದು; ಮತ್ತು (೩) ಅನಾವಶ್ಯಕವಾಗಿ ವಸ್ತುಗಳ ಬಳಕೆಯಾಗುವುದನ್ನು ತಡೆ ಗಟ್ಟುವ ರೀತಿಯಲ್ಲಿ ಕರಾಕರಣೆಯನ್ನು ಮಾಡುವುದು. ಈ ವಿಧಾನಗಳನ್ನು ಅನುಸರಿಸುವುದರಿಂದ ಪಂಚ ವಾರ್ಷಿಕ ಯೋಜನೆಗೆ ದೇಶದೊಳಗೆಯೇ ಅಧಿಕ ಬಂಡವಾಳ ಶೇಖರಗೊಳ್ಳಲು ಸಾಧ್ಯವುಂಟು. ರಾಜ್ಯ ಸರಕಾರದವರು ಈಗಾಗಲೇ ನೀರಾವರಿಯಿಂದ ಲಾಭ ಹೊಂದಿದ ಪ್ರದೇಶಗಳಲ್ಲಿ ಅಭಿವೃದ್ಧಿ ತೆರಿಗೆಯನ್ನು ಹೊರಿಸುವ ಪದ್ಧತಿಯನ್ನು ಅಂಗೀಕರಿಸಿರುವರು. ಇದರಂತೆ ಉಳಿದ ಸೂಚನೆಗಳನ್ನೂ ಅವರು ವಿಚಾರಿಸಬಹುದು. ಹಳ್ಳಿಗಳಲ್ಲಿ ಪೂರ್ಣೋದ್ಯೋಗ ಒದಗಿಸಲ್ಪಡುವಂತೆ ಗುಡಿ ಕೈಗಾರಿಕೆಗಳನ್ನು ಅಭಿವೃದ್ಧಿಗೊಳಿಸುವುದಕ್ಕೆ ಅಧಿಕ ಮಹತ್ವವನ್ನು ಕೊಡಬೇಕೆಂದು ವರದಿಯು ಹೇಳುವುದನ್ನು ನೋಡಿದರೆ, ಸರಕಾರದಿಂದ ದೊರೆತ ಪ್ರೋತ್ಸಾಹ ಸಮಸ್ಯೆಯ ದೊಡ್ಡತನದ ಮುಂದೆ ಅಲ್ಪವಾಗಿಯೇ ಕಂಡು ಬರುತ್ತದೆ. ನಿಯಂತ್ರಣಗಳನ್ನು ಸಡಿಲಿಸಬಹುದೆಂದು ವರದಿ ಹೇಳಿದ್ದು, ಸರಕಾರ ಈ ದಿಸೆಯಲ್ಲಿ ಈಗಾಗಲೇ ಹೆಜ್ಜೆ ಮುಂದಿಟ್ಟಿದೆ. ಆಹಾರ ಧಾನ್ಯಗಳ ವಿಷಯದಲ್ಲಿ ತೃಪ್ತಿಕರ ಸಂಗ್ರಹವಿಟ್ಟುಕೊಳ್ಳುವುದು ವಿಹಿತವೆಂದು ವರದಿ ತಿಳಿಸುತ್ತದೆ— ಕೇಂದ್ರದ ಆಹಾರ ಮಂತ್ರಿಗಳು ನಮ್ಮ ಹತ್ತಿರ ಸಾಕಷ್ಟು ಧಾನ್ಯ ಸಂಗ್ರಹವಿದೆಯೆಂದು ಹೇಳಿದ್ದಾರೆ ಇಂತಹ ಪರಿಸ್ಥಿತಿಯಲ್ಲೂ ನಮಗೆ—ವಿದೇಶಗಳ....ಸಾಲವು ಬೇಕೇ ಬೇಕಾಗುವುದೆಂದು ವರದಿಯಲ್ಲಿ ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿದೆ— ಮತ್ತು ಸಾಲ ರೂಪದ ನೆರವಿಗಿಂತಲೂ ಸಹಾಯಧನವೆಂಬುದಾಗಿ ಪುಕ್ಕಟೆ ಬಂಡವಾಳವನ್ನು ಭಾರತಕ್ಕೆ ವಿದೇಶಗಳು ನೀಡಿದರೆ ಒಳಿತೆಂದು ಅದು ಶಿಫಾರಸು ಮಾಡಿರುತ್ತದೆ. ಆರ್ಥಿಕ ಭದ್ರತೆಗೆ ಹಣದುಬ್ಬರವನ್ನು ಯಶಸ್ವಿಯಾಗಿ ನಿಯಂತ್ರಿಸಿದುದು ಕಾರಣವೆಂದು ವರದಿ ಹೇಳುತ್ತಾ, ನಿತ್ಯ ವ್ಯವಹಾರದಲ್ಲಿ ಉಪಯೋಗಿಸುವ ವಸ್ತುಗಳ ಬೆಲೆ ಈಗ ಸ್ಥಿರವಾಗಿದ್ದು, ಇನ್ನೂ ಕೆಳಗೆ ಇಳಿಯಲಾರದೆಂದೂ ಕೊರತೆ ಧನವಿನಿಯೋಗ ಪದ್ಧತಿಯನ್ನು ಅವಲಂಬಿಸುವುದಕ್ಕೆ ಕಾಲವು ಪ್ರತಿಕೂಲವಾಗಿಲ್ಲವೆಂದೂ ವರದಿ ತಿಳಿಸುತ್ತದೆ. ಆರ್ಥಿಕ ಮಂಡಳದ ಭದ್ರತೆಯನ್ನು ಕಾಯ್ದುಕೊಂಡು ಹೋಗುವ ಮುನ್ನೋಟ ಮತ್ತು ದಕ್ಷತೆಗಳು ನಮ್ಮ ಮಂತ್ರಿ ಮಹೋದಯರಲ್ಲೂ ಇತರ ಅಧಿಕಾರಿಗಳಲ್ಲೂ ಇವೆಯೆಂದು ವರದಿಯ ಸ್ಥೂಲ ವಿಮರ್ಶೆಯಿಂದ ನಮಗೆ ಮನವರಿಕೆಯಾಗುತ್ತದೆ ಇದು ಎಲ್ಲರಿಗೂ ಧೈರ್ಯ ಮತ್ತು ಸಂತೋಷವನ್ನು ಕೊಡುವುದು ನಿಶ್ಚಯ

ಲಾವೋಸದ ಮೇಲೆ ವೀಟಮಿನರ ದಾಳಿ

ಮುನ್ನುಗ್ಗುತ್ತಿರುವ ಸೈನ್ಯ ಕಂಡು ಫ್ರೆಂಚರಿಗೆ ದಿಗ್ಭ್ರಮೆ

ಕೊರಿಯದ ಯುದ್ಧ ನಿಲುಗಡೆಗೆ ಬಂದಿತೆಂಬ ಸಮಾಧಾನ ತಲೆದೋರಿದ ಗಳಿಗೆಯಲ್ಲೇ ಇದೀಗ ಇಂಡೋ ಚೀನದಲ್ಲಿ ಫ್ರೆಂಚ ಹಾಗು ಹೋಚಿಮಿನ್ಹರ ಸೈನ್ಯಗಳ ನಡುವೆ ಕಾಳಗವು ಅತ್ಯುಗ್ರ ಸ್ವರೂಪವನ್ನು ಮುಟ್ಟಿದ ವಾರ್ತೆ ಬಂದಿರುತ್ತದೆ. ಕಳೆದ ವರ್ಷದಲ್ಲಿ ಒಮ್ಮೆ ಲಾವೋಸದ ಮೇಲೆ ಏರಿ ಬರಲು ಹೊಂಚು ಹಾಕಿ ಹಿಂದೆ ಹೋದ ಹೋಚಿ ಮಿನ್ಹರ ಸೈನ್ಯ ಈಗ ಮತ್ತೆ ಸರ್ವ ಸನ್ನಾಹದೊಂದಿಗೆ ಮುಂದೊತ್ತಿ ಬಂದಿರುವುದು. ಲಾವೋಸಿನ ರಾಜಧಾನಿ ಲುವಾಂಗ ಪ್ರಭಾಂಗದತ್ತ ಮುನ್ನುಗ್ಗುತ್ತಾ ಸಾಗುವ ಈ ಸೈನ್ಯವನ್ನು ತಡೆಯುವುದು ಫ್ರೆಂಚರಿಗೆ ಬಹಳ ಕಷ್ಟವೆಂದು ತೋರಿದೆ. ಲಾವೋಸದ ಪ್ರಜೆಗಳು ಧೈರ್ಯದಿಂದ ಪರಿಸ್ಥಿತಿಯನ್ನು ಎದುರಿಸುತ್ತಿದ್ದರೂ - ಹೋಚಿಮಿನ್ಹರ ಆಕ್ರಮಣದಿಂದ ಸಂರಕ್ಷಿಸಿಕೊಂಡೇವೆಂಬ ಆಶೆ ಅವರಿಗೆ ಉಳಿದಿಲ್ಲ.

ಆಸ್ಥೆ ಉಳಿದಿಲ್ಲ

ಇಂತಹ ಪರಿಸ್ಥಿತಿಯಲ್ಲಿ ಕಮ್ಯೂನಿಸ್ಟರೆಂದು ಹೆಸರು ಹೊಂದಿದ ಹೋಚಿಮಿನ್ಹರ ಸೈನ್ಯವನ್ನು ಹಿಂದಕ್ಕೆ ಅಟ್ಟಲು ಅಮೇರಿಕ ಸಕಲ ಶಸ್ತ್ರಾಸ್ತ್ರಗಳ ರಭಸದ ಪೂರೈಕೆಗೆ ಮನಸ್ಸು ಮಾಡಿದೆ. ಈ ಶಸ್ತ್ರಗಳನ್ನು ಪಡೆದುಕೊಂಡ ಮೇಲೆ ಕೂಡ—ಇಂಡೋಚೀನಾದ ನಿವಾಸಿಕರು ಹೋಚಿಮಿನ್ಹರನ್ನು ಹೊಡೆದೋಡಿಸಿಯಾರೆಂದು ಅಧ್ಯಕ್ಷ ಐಸೆನ ಹೋವರರು ಎಣಿಸುವುದಿಲ್ಲ. ಇಷ್ಟು ವರ್ಷಗಳ ಮೇಲೆ ಇದೀಗ ಹೋಚಿಮಿನ್ಹರೊಡನೆ ಕಾಳಗ ನಡೆಸುವುದರಲ್ಲಿ ಇಂಡೋ ಚೀನಾದ ನಿವಾಸಿಕರ ಆಸ್ಥೆ ಕುಂದಿ ಹೋಗಿದೆಯೆಂದಾಗಿ ಅಮೇರಿಕ ಮನವರಿಕೆ ಮಾಡಿಕೊಂಡಿದೆ.

ವೀಟಮಿನರ ಸಾಹಸ

ಹೋಚಿ ಮಿನ್ಹರು ಫ್ರೆಂಚರ ಕೈಯಿಂದ ಅನೇಕ ದುರ್ಗಗಳನ್ನು ವಶಪಡಿಸಿಕೊಂಡಿದ್ದು, ಅತ್ತ ಕಾಂಬೋಡಿಯಾದ ಮೇಲೂ ದಾಳಿ ನಡೆಸುವ ಗತ್ತುಗಾರಿಕೆಯನ್ನು ತೋರಿಸಿರುವರು. ಫ್ರೆಂಚ ಸೈನಿಕರಲ್ಲಿ ನವೋತ್ಸಾಹವನ್ನು ತುಂಬಿಸಲು ಮತ್ತು ಇಂಡೋಚೀನಾದ ನಿವಾಸಿಕರಿಗೆ ಇಲ್ಲದ ಧೈರ್ಯ ತಂದು ಕೊಡಲು ಉದ್ದೇಶಿಸಿ, ಫ್ರಾನ್ಸಿನ ರಕ್ಷಣಾ ಮಂತ್ರಿ ಪ್ಲೆವೆನ್ನರು ಇದೀಗ ಸೈಗಾನಿಗೆ ಆಗಮಿಸಿ, ಯುದ್ಧದ ಚಲನವಲನಗಳ ನಿರೀಕ್ಷೆಗೆ ತೊಡಗಿರುವರು. ಫ್ರೆಂಚ ಮಂತ್ರಿ ಮಂಡಳವು ಇವರಿಗೆ ಯೋಗ್ಯ ಕಾರ್ಯಕ್ರಮಗಳನ್ನು ಕೈಗೊಳ್ಳಲು ಅಧಿಕಾರವನ್ನು ಕೊಟ್ಟಿರುತ್ತದೆ. ಬಾಯಿಯಲ್ಲಿ ಫ್ರೆಂಚ ಪಡೆಗಳಿಗೆ ಹೋಚಿ ಮಿನ್ಹರ ಸೈನ್ಯವನ್ನು ಸದೆಬಡೆಯುವುದು ಕಷ್ಟವಾಗಲಿಕ್ಕಿಲ್ಲವೆಂದು ಸಂರಕ್ಷಣಾ ಮಂತ್ರಿಗಳು ಹೇಳುತ್ತಿದ್ದರೂ, ಅವರು ಸ್ವತಃ ಇಷ್ಟು ದೂರ ಹಾರಿ ಬಂದುದರ ಮೇಲಿಂದಲೇ ಪರಿಸ್ಥಿತಿ ಸುಲಭದಲ್ಲಿ ಹಿಡಿತಕ್ಕೆ ಬರಲಾರದೆಂದು ಸ್ಪಷ್ಟವಾಗುತ್ತದೆ. ಉತ್ತರ ಲಾವೋಸಿನಿಂದ ಈಗಾಗಲೇ ನಿರಾಶ್ರಿತರು ಸಹಸ್ರಾರು ಸಂಖ್ಯೆಯಲ್ಲಿ ದಕ್ಷಿಣದತ್ತ ಓಡಿಬರುತ್ತಿದ್ದು, ಅವರನ್ನು ನೆಲೆಗೊಳಿಸುವುದೂ ದೊಡ್ಡದೊಂದು ಸಮಸ್ಯೆ.

ಅಮೇರಿಕದ ಪ್ರೋತ್ಸಾಹ

ಈ ಸಮರವನ್ನು ನಿಲ್ಲಿಸಿಬಿಡಬೇಕೆಂದು ಫ್ರಾನ್ಸು ನಿಜವಾಗಿಯೂ ಬಯಸುತ್ತದೆ—ಆದರೆ, ಅಮೇರಿಕದ ಒಳಗೈಯ ಪ್ರೋತ್ಸಾಹದಿಂದಾಗಿ, ಫ್ರಾನ್ಸು ಏನು ಮಾಡಬೇಕೆಂದು ತಿಳಿಯದೆ ದಿಗ್ಭ್ರಮೆಯಲ್ಲಿದೆ. ಅಮೇರಿಕದೊಡನೆ ಮನಸ್ತಾಪ ಕಟ್ಟಿಕೊಳ್ಳುವುದಕ್ಕೆ ಫ್ರಾನ್ಸು ಇಷ್ಟಪಡುವುದಿಲ್ಲ. ಇಂಡೋ ಚೀನದಲ್ಲಿ ಯುದ್ಧ ಮುಂದುವರಿಸಿಕೊಂಡು ದಿನದಿನಕ್ಕೂ ತನ್ನ ಸ್ವಂತ ನೆತ್ತರನ್ನು ಬಸಿಯುತ್ತಾ ಹೋಗುವುದೂ ತನ್ನ ಸಾಮರ್ಥ್ಯವನ್ನು ವ್ಯರ್ಥವಾಗಿ ಕ್ಷೀಣಿಸಿಕೊಳ್ಳುವುದೂ ಅದಕ್ಕೆ ಬೇಡವಾಗಿದೆ. ಆದರೆ ಕಮ್ಯುನಿಸ್ಟ ಪಿಡುಗಿನ ಹುಟ್ಟಡಗಿಸಬೇಕೆಂಬ ಭ್ರಾಂತಿಯಲ್ಲಿ ಬಿದ್ದ ಅಮೇರಿಕಕ್ಕೆ ಫ್ರಾನ್ಸಿನ ವ್ಯವಹಾರಿಕ ಮುತ್ಸದ್ದಿತನದ ಮಹತ್ವ ತಿಳಿಯುವುದಿಲ್ಲ.

ಫ್ರೆಂಚರ ಮನಸ್ಸು

ಹೀಗಿದ್ದರೂ ಚತುರ್ರಾಷ್ಟ್ರಗಳ ವಿದೇಶ ಮಂತ್ರಿಗಳು ಬರ್ಲಿನದಲ್ಲಿ ನಡೆಸುತ್ತಿರುವ ಗುಪ್ತ ಸಭೆಯಲ್ಲಿ ರಶಿಯಾದ ಮನವೊಲಿಸಿಕೊಂಡು, ತನ್ಮೂಲಕ ಕಮ್ಯುನಿಸ್ಟರನ್ನು ಸಂತೈಸಲು ಬಂದೀತೋ ಏನೆಂಬ ಪ್ರಯತ್ನಮಾಡಲು ಫ್ರಾನ್ಸು ಆತುರ ತೋರಿಸುತ್ತದೆ. ಬಹಿರಂಗವಾಗಿ ನಡೆದ ಮಹಾ ಚತುಷ್ಟಯ ಸಮ್ಮೇಳನ ಊಹಿಸಿದಂತೆ ಕಾಲಹರಣದ ವಿಷಯವಾಯಿತೇ ಹೊರತು, ನಿರ್ದಿಷ್ಟವಾದ ಯಾವ ಘಟ್ಟವನ್ನೂ ಮುಟ್ಟಲಿಲ್ಲ. ಈಡನ್ನರು ಮೊದಲು ಚುನಾವಣೆಯಾಗಬೇಕೆಂದು ಮುಂದಿಟ್ಟ ಸೂಚನೆಯನ್ನು ಮೊಲೊಟೋವರು ತಿರಸ್ಕರಿಸಿ, ಮೊದಲಿಗೆ ಪೂರ್ವ ಹಾಗೂ ಪಶ್ಚಿಮ ಜರ್ಮನಿಗಳಲ್ಲಿ ಸಂಯುಕ್ತವಾಗಿ ತಾತ್ಪೂರ್ತಿಕ ಸರಕಾರವನ್ನು ಸ್ಥಾಪಿಸಬೇಕೆಂದೂ ಅದರೊಡನೆ ಶಾಂತಿ ಒಪ್ಪಂದವನ್ನು ಮಾ

ನಮ್ಮ ಚಂದಾದಾರರಲ್ಲಿ ಸವಿನಯ ವಿನಂತಿ

ನಮ್ಮ ಚಂದಾದಾರರಿಗೆಲ್ಲಾ ಅವರವರ ಬಾಕಿಯನ್ನು ಸೂಚಿಸಿ ಈ ಮೊದಲೇ ಆಗಾಗ್ಗೆ ಬರೆದು ತಿಳಿಸಿರುತ್ತೇವೆ. ಕೆಲವರು ಕ್ರಮವಾಗಿ ಚಂದಾ ಹಣ ಕಳುಹಿಸಿದ್ದಾರೆ. ಇನ್ನು ಕೆಲವರು ನಾವು ಕಳುಹಿಸಿದ ವಿ. ಪಿ. ಪಿ. ಯನ್ನು ಸ್ವೀಕರಿಸಿದ್ದಾರೆ. ಅವರೆಲ್ಲರಿಗೂ ನಾವು ಆಭಾರಿಗಳಾಗಿದ್ದೇವೆ. ಇನ್ನೂ ಚಂದಾ ಹಣವನ್ನು ಬಾಕಿ ಮಾಡಿಕೊಂಡಿರುವ, ವಿ. ಪಿ. ಪಿ. ಯನ್ನು ಕೂಡ ಸ್ವೀಕರಿಸದಿರುವ ಚಂದಾದಾರರೆಲ್ಲರೂ ಪ್ರೀತ್ಯಾಭಿಮಾನವಿಟ್ಟು ತಮ್ಮ ಚಂದಾ ಹಣವನ್ನು ಈಗಲಾದರೂ ಕಳುಹಿಸಿಕೊಟ್ಟು ನಮಗೆ ನೆರವಾಗಬೇಕಾಗಿ ಕೇಳಿಕೊಳ್ಳುತ್ತೇವೆ.

—ಮೆನೇಜರ್.

ಡಿಕೊಳ್ಳಬೇಕೆಂದೂ ಹೇಳಿದರು. ಇದನ್ನು ತ್ರಿರಾಷ್ಟ್ರಗಳ ವಿದೇಶ ಮಂತ್ರಿಗಳು ತಿರಸ್ಕರಿಸಿರುವದರಿಂದ ಸಮಸ್ಯೆ ಇದ್ದಲ್ಲಿಯೇ ಉಳಿದಿದೆ

ಬರ್ಲಿನ್ ಪರಿಷತ್ತಿನಲ್ಲಿ

ಜರ್ಮನಿಯಲ್ಲಿ ಈಗಲೇ ಚುನಾವಣೆಗಳನ್ನು ನಡೆಸಿದರೆ, ಅಲ್ಲಿ ಯುದ್ಧೋತ್ಸಾಹಿಯಾದ ಮರಿಹಿಟ್ಲರನ ಯಶಸ್ಸುಗಳಿಸಿ, ತಮಗೆದುರಾಗಿ ನಿಂತಾನೆಂಬ ಹೆದರಿಕೆ ರಶಿಯಾಕ್ಕೆ ಇದೆ. ಆದುದರಿಂದ ಶಾಂತಿ ಒಪ್ಪಂದವನ್ನು ಮೊದಲಿಗೆ ಮಾಡಿಕೊಂಡು, ಸಂರಕ್ಷಣೋದ್ದೇಶದಿಂದ ಮಾತ್ರ ಸೈನ್ಯವನ್ನು ಜರ್ಮನಿಯಲ್ಲಿಟ್ಟು, ಅದನ್ನು ತಟಸ್ಥಗೊಳಿಸುವದು ಮೊಲೊಟೋವರ ಅಪೇಕ್ಷೆ. ಪಾಶ್ಚಾತ್ಯ ರಾಷ್ಟ್ರಗಳ ಐರೋಪ್ಯ ಸೈನ್ಯ ಸಂಘಟನೆಯಲ್ಲಿ ಜರ್ಮನಿಗೆ ಮಹತ್ವದ ಸ್ಥಾನವಿರುವುದರಿಂದ, ಮೊಲೊಟೋವರ ಸೂಚನೆ ಅವರಿಗೆ ಅಪ್ರಿಯವೆನಿಸಿದೆ; ಮಾತ್ರವಲ್ಲ, ಒಮ್ಮೆ ಸಂಯುಕ್ತ ಜರ್ಮನ' ಸರಕಾರ ರಚಿಸಿದ ಮೇಲೆ, ಕಮ್ಯುನಿಷ್ಟರು ರಹಸ್ಯವಾಗಿಯೇ ತಮ್ಮ ವರ್ಚಸ್ಸನ್ನು ಬೀರುತ್ತಾ, ಸಾರ್ವತ್ರಿಕ ಚುನಾವಣೆಯಲ್ಲಿ ತಮ್ಮನ್ನು ಬೆಂಬಲಿಸಿ ನಿಲ್ಲುವ ಶಕ್ತಿಗಳ ವರ್ಚಸ್ಸನ್ನು ನಾಶ ಮಾಡುತ್ತಾರೆಂದು ತ್ರಿರಾಷ್ಟ್ರಗಳು ಶಂಕಿಸುತ್ತವೆ.

ಕೊರಿಯಾದಿಂದ ಹಿಂದೆ

ಇನ್ನೆರಡು ವಾರಗಳಲ್ಲಿ ಕೊರಿಯಾಕ್ಕೆ ಹೋಗಿದ್ದ ಭಾರತದ ಶಾಂತಿ ಸೇನೆಯ ಎಲ್ಲ ವಿಭಾಗಗಳೂ ಸ್ವದೇಶಕ್ಕೆ ಮರಳುತ್ತವೆ. ಮೊದಲನೇ ತಂಡವು ಈಗಾಗಲೇ ಹೊರಟಿದ್ದು, ಅದರೊಂದಿಗೆ ೮೮ ಮಂದಿ ಚೀನಿ ಮತ್ತು ಕೊರಿಯನ್ನ ಯುದ್ಧ ಕೈದಿಗಳೂ ಭಾರತಕ್ಕೆ ಬರುವರು. ಯುದ್ಧ ಭಾಗಿಯಾದ ರಾಷ್ಟ್ರಗಳಿಗೆ ಹೋಗಲೊಪ್ಪದೆ ತಟಸ್ಥ ರಾಷ್ಟ್ರವನ್ನು ಸೇರಲು ಈ ಕೈದಿಗಳು ಬಯಸಿದ್ದರಿಂದ, ಅವರನ್ನು ಭಾರತಕ್ಕೆ ಕರೆದು ತರಬೇಕಾಯಿತು. ತಟಸ್ಥ ರಾಷ್ಟ್ರ ಮಂಡಳದ ಸಭೆಯು ದಿನಾಂಕ ೧೦ರಂದು ಸೇರಿ, ಉಭಯ ಸೈನ್ಯಾಧಿಪತ್ಯಗಳಿಗೆ ಒಪ್ಪಿಸಬೇಕಿರುವ ಅಂತಿಮ ವರದಿಯನ್ನು ತಯಾರಿಸುವ ಕೆಲಸದಲ್ಲಿ ತೊಡಗಿರುತ್ತದೆ. ಈ ನಡುವೆ ರಾಜಕೀಯ ಸಮ್ಮೇಳನದ ಮಾತುಕತೆಗಳನ್ನು ಪುನಃ ನಡೆಸಬೇಕೆಂದು ಕಮ್ಯುನಿಸ್ಟರು ಒತ್ತಾಯವನ್ನು ಹೇರುತ್ತಿದ್ದು— ಅಮೇರಿಕವು ಆರ್ಥರ ಡೀನರ ಬದಲು ಬೇರೆ ಯಾರನ್ನಾದರೂ ತನ್ನ ಕಡೆಯಿಂದ ಮಾತುಕತೆಯಲ್ಲಿ ಭಾಗವಹಿಸಲು ಪ್ರತಿನಿಧಿಯಾಗಿ ಕಳಿಸಿದರೂ ಕಳಿಸೀತು.

ಸೈನಿಕ ಸಹಾಯ ನಿಶ್ಚಿತ

ಪಾಕಿಸ್ತಾನವು ಅಮೇರಿಕದ ಸೈನಿಕ ಸಹಾಯವನ್ನು ಪಡೆಯುವುದಕ್ಕೆ ನೋಡುತ್ತಿರುವುದರ ವಿರುದ್ಧ ಈಜಿಪ್ತದ ಜನರಲ್ ನಗೀಬರು ಪ್ರತಿಭಟನೆಯ ಮಾತುಗಳನ್ನಾಡಿರುವರು. ಅರಬ ರಾಷ್ಟ್ರಗಳಲ್ಲಿ ಪ್ರಮುಖ ಸ್ಥಾನವನ್ನು ಪಡೆದ ಈಜಿಪ್ತಕ್ಕೆ ಪಾಕಿಸ್ತಾನ—ತುರ್ಕಸ್ಥಾನಗಳ ನಡುವಣ ಪ್ರದೇಶದಲ್ಲಿ ಅಮೇರಿಕದ ವರ್ಚಸ್ಸು ಬೆಳೆಯುವುದೂ ಅದಕ್ಕೆ ಇರಾಕ ಬಲಿಬೀಳುವುದೂ ಸರಿತೋರಿಲ್ಲ. ಇಸ್ರೇಲವೂ ಇರಾಕದ ಮೇಲೆ ಅಮೇರಿಕಾ ಒಡೆತನ ಸ್ಥಾಪಿಸುವ ಗತ್ತುಗಾರಿಕೆಯ ವಿರುದ್ಧ ಸ್ವರವೆತ್ತಿದೆ. ಇಂತಹ ಪ್ರತಿರೋಧಗಳಿದ್ದರೂ ಸಹ— ಅಮೇರಿಕವು ಪಾಕಿಸ್ತಾನಕ್ಕೆ ಸೈನಿಕ ಸಹಾಯವನ್ನು ಕೊಟ್ಟೇ ತೀರುವುದಾಗಿ ಅಮೇರಿಕೆಯಲ್ಲಿರುವ ಭಾರತೀಯ ಧುರೀಣರ ಅಭಿಪ್ರಾಯ. ಆರ್ಥಿಕ ಸಹಾಯ ಸಲ್ಲಿಸುವುದೂ ಸೈನಿಕ ಸಹಾಯ ಸಲ್ಲಿಸುವುದೂ—ಎರಡೂ ಒಂದೇ ಬಗೆಯ ಸಂಗತಿಗಳೆಂದು ಅಮೇರಿಕದ ಸಿನೇಟರರು ಹೇಳುವ ಮಾತಿಗೆ ಬ್ರಿಟನ್ನದಂಥ ಕಾಮನವೆಲ್ಥ ರಾಷ್ಟ್ರವೂ ಸೈಗುಟ್ಟುತ್ತದೆ.

ಎಣ್ಣೆಯ ಸಮಸ್ಯೆ

ಬಹಳ ದಿನಗಳಿಂದ ನನೆಗುದಿಗೆ ಬಿದ್ದಿದ್ದ ಇರಾಣದ ಎಣ್ಣೆಯ ಸಮಸ್ಯೆಗೆ ಅಮೇರಿಕದ ಕಡೆಯಿಂದ ಹೊಸತಾದ ಪರಿಹಾರ ಮಾರ್ಗವೊಂದು ಸೂಚಿತವಾಗಿದೆಯೆಂದೂ ಬ್ರಿಟನು ಮತ್ತು ಇರಾಣಗಳು ಇದಕ್ಕೆ ಒಪ್ಪಿಕೊಂಡಿವೆಯೆಂದೂ ತಿಳಿಯುತ್ತದೆ. ಹೆಚ್ಚಿನ ವಿವರಗಳು ತಿಳಿದಿಲ್ಲವಾದರೂ —ಅಮೇರಿಕ, ಬ್ರಿಟನು ಮತ್ತು ಇರಾಣಗಳು ಎಣ್ಣೆ ವ್ಯಾಪಾರದಲ್ಲಿ ತೊಡಗುವ, ಮತ್ತು ಆಂಗ್ಲೋ ಇರಾಣಿಯನ್ ಎಣ್ಣೆ ಕಂಪೆನಿಗೆ ಪರಿಹಾರ ಕೊಡುವ ವಿಷಯಗಳಲ್ಲಿ ಒಮ್ಮತವೇರ್ಪಡುತ್ತಿದೆಯಾಗಿ ಕೇಳುತ್ತೇವೆ. ಇರಾಣದಲ್ಲಿ ಈಗ ಜನರಲ್ ಜಹೇದಿಯವರ ಸರಕಾರ ಆಡಳಿತ ನಡೆಸುತ್ತಿದ್ದು, ಚುನಾವಣೆಗಳನ್ನು ಅದು ಜರಗಿಸಿದೆ. ಮಾಜಿ ಪ್ರಧಾನಿ ಮುಸಾದಿಕರ ಬೆಂಬಲಿಗರು ಈ ಚುನಾವಣೆಯಲ್ಲಿ ಟ್ಯೂಡೇ ಪಕ್ಷದೊಂದಿಗೆ ಸಹಕರಿಸಿ ಜನತೆಯ ಪ್ರೋತ್ಸಾಹವನ್ನು ಪಡೆಯಲು ಯತ್ನಿಸಿದರೂ ಅವರಿಗೆ ಸಾಕಷ್ಟು ಯಶಸ್ಸು ದೊರೆತಿಲ್ಲ.

ಉಡುಪಿ

ಕಾರ್ಡಿನಲ್ ಗ್ರೇಸಿಯಸರ ಆಗಮನ— ಅಖಿಲ ಭಾರತದ ರೋಮನ್ ಕಥೋಲಿಕ್ ಪಂಥದ ಗುರುಗಳಾದ ಕಾರ್ಡಿನಲ್ ವೆಲೇರಿಯನ್ ಗ್ರೇಸಿಯಸ್, ಅವರು ಇದೇ ತಾ. ೬ರಲ್ಲು ಮಂಗಳೂರಿನಿಂದ ಕಾರ್ಕಳಕ್ಕೆ ಬಂದು ಅಲ್ಲಿ ಸ್ವಾಗತವನ್ನು ಪಡೆದು ಉಡುಪಿಗೆ ಬರುವಾಗ್ಗೆ ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜನ್ನು ಸಂದರ್ಶಿಸಿದರು. ಪ್ರಿನ್ಸಿಪಾಲ್ ಎಚ್. ಸುಂದರರಾವ್ ಮೊದಲಾದವರು ಸ್ವಾಗತವಿತ್ತರು. ವಿದ್ಯಾರ್ಥಿ, ವಿದ್ಯಾರ್ಥಿನಿಯರಲ್ಲಿರಬೇಕಾದ ಶಿಸ್ತು, ಗುಣ ನಡತೆಗಳ ಆವಶ್ಯಕತೆಯನ್ನು ವಿವರಿಸಿದರು. ಅಲ್ಲಿಂದ ಅವರು ಉಡುಪಿ ಇಗರ್ಜಿಗೆ ಆಗಮಿಸಿ ಅಲ್ಲಿ ಸಂಭ್ರಮದ ಸ್ವಾಗತ ಪಡೆದರು. ಧಾರ್ಮಿಕ ಕಾರ್ಯಕ್ರಮವನ್ನು ಅಲ್ಲಿ ತೀರಿಸಿ ಮುಂದೆ ಮುನಿಸಿಪಲ್ ಬೈಲ್ ಕಡೆಗೆ ಬಂದಾಗ ಮುನಿಸಿಪಲ್ ಚೇರ್ಮೆನ್ ಮೊದಲಾದವರು ಸ್ವಾಗತವನ್ನು ಬಯಸಿದರು. ವೈಸ್ ಚೇರ್ಮೆನ್ ಡಾ' ಪಿ ವ್ಯಾಸರಾಯರು ನಗರಸಭೆಯ ಮಾನಪತ್ರವನ್ನರ್ಪಿಸಿದರು. ಪೂಜ್ಯ ಕಾರ್ಡಿನಲ್ಲರು ಉಡುಪಿಯ ಸೌಂದರ್ಯ, ಸ್ವಚ್ಛತೆಯನ್ನು ಪ್ರಶಂಸಿಸಿ ನಗರಸಭೆಯು, ನಗರದ ಕ್ಷೇಮಚಿಂತನಾ ಕಾರ್ಯದಲ್ಲಿ ಮುಂದುವರಿಯುತ್ತಿರಬೇಕಾಗಿ ಹೇಳಿದರು. ಚೇರ್ಮೆನ್ ಶ್ರೀ. ಯು. ಎಸ್. ನಾಯ್ಕರು ಧನ್ಯವಾದಗಳನ್ನರ್ಪಿಸಿದರು.

ನಂತರ ಅವರು ಮೆರವಣಿಗೆಯಿಂದ ಶ್ರೀ ರಾಮಕೃಷ್ಣ ಥಿಯೇಟರಿಗೆ ಆಗಮಿಸಿದಾಗ ಸಂಭ್ರಮದ ಸ್ವಾಗತನೀಯಲಾಯಿತು. ಸಾರ್ವಜನಿಕರ ಕಡೆಯಿಂದ ಶ್ರೀ ಟಿ.ಎ. ಪೈ, ಎಮ್. ಎಲ್.ಎ. ಅವರು ಮಾನಪತ್ರವನ್ನು ಒಪ್ಪಿಸಿದರು ಮಾನ ಪತ್ರಕ್ಕೆ ಉತ್ತರಕೊಡುತ್ತಾ, ಸರ್ವಜಾತಿಯವರೂ ಒಮ್ಮತದಿಂದ ಸ್ವಾಗತ ನೀಡಿದುದಕ್ಕೆ ಪ್ರಥಮತಃ ತನ್ನ ಸಂತೋಷವನ್ನು ವ್ಯಕ್ತಪಡಿಸಿದರು. ಪಂಡಿತ ನೆಹರೂರವರ ಮುಂದಾಳ್ತನವನ್ನು ಶ್ಲಾಘಿಸಿದುದಲ್ಲದೆ ಕ್ರೈಸ್ತ ಇಗರ್ಜಿಗಳು ದೇಶದ ಕಲ್ಯಾಣಕ್ಕಾಗಿ ಸದಾ ದುಡಿಯುವುವಾಗಿ ಒತ್ತಿ ಹೇಳಿದರು. ಬಳಿಕ ಕಲ್ಯಾಣಪುರಕ್ಕೆ ಹೋಗಿ ಅಲ್ಲಿಯೂ ಸಂಭ್ರಮದ ಸ್ವಾಗತ ಪಡೆದರು. ಕಾರ್ಡಿನಲ್ಲರ ಆಗಮನದ ಪ್ರೀತ್ಯರ್ಥವಾಗಿ ಬಡವರಿಗೆ ಅಕ್ಕಿ ಹಂಚಲಾಯಿತು. ಮಧ್ಯಾಹ್ನ ಹಿಂತೆರಳುವಾಗ ಮಣಿಪಾಲದ ಕಸ್ತೂರ್ಬಾ ಮೆಡಿಕಲ್ ಕಾಲೇಜಿಗೆ ಭೆಟ್ಟಿಯಿತ್ತರು.

ಟ್ರೈನಿಂಗ್ ಶಾಲಾ ವರ್ಧಂತಿ— ಉಡುಪಿಯ ಗಂಡು ಮಕ್ಕಳ ಸರಕಾರಿ ಟ್ರೈನಿಂಗ್ ಶಾಲೆಯ ವರ್ಧಂತಿ ಸಮಾರಂಭವು ತಾ ೬ರಲ್ಲು ಸಂಜೆ ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಹೆಡ್ಮಾಸ್ಟರ್ ಶ್ರೀ ಉಗ್ರಾಣ ಕೃಷ್ಣ ರಾಯರು ಶಾಲೆಯ ವರದಿಯನ್ನೋದಿದರು. ಶ್ರೀಗಳಾದ ಬಿ. ಕೊರಗಪ್ಪ ಶೆಟ್ಟಿ ಮತ್ತು ಟಿ. ವಿಠಲ ಶೆಟ್ಟರು ಸ್ವಸ್ತಿವಾಚನ ಮಾಡಿದರು ಬಹುಮಾನ ವಿತರಣೆ, ಅಧ್ಯಕ್ಷರ ಭಾಷಣ ಮನರಂಜನೆ ಕಾರ್ಯಕ್ರಮಗಳಾಗಿ ವರ್ಧಂತಿ ಸಮಾರಂಭವು ಮುಕ್ತಾಯವಾಯಿತು ತಾ ೭ರಂದು ಈ ಶಾಲೆಯ ಹಳೆ ವಿದ್ಯಾರ್ಥಿ ಸಂಘದ ವರ್ಧಂತಿಯುತ್ಸವವು ಶ್ರೀ ಪಿ. ಶ್ರೀಪತಿ ರಾಯರ ಅಧ್ಯಕ್ಷತೆಯಲ್ಲಿ ಜರಗಿತು.

ಇನ್ಸ್ಯೂರೆನ್ಸ್ ಕಂಪೆನಿಗಳ ಸಂಘದ ಅಧ್ಯಕ್ಷರ ಆಗಮನ— ಭಾರತೀಯ ವಿಮಾ ಸಂಸ್ಥೆಗಳ ಸಂಘದ ಅಧ್ಯಕ್ಷರೂ, ನ್ಯಾಶನಲ್ ಇನ್ಸ್ಯೂರೆನ್ಸ್ ಕಂಪೆನಿಯ ಮೆನೇಜರ್ ಮತ್ತು ಆಕ್ಚುವರಿಯೂ ಆದ ಶ್ರೀ ಎಸ್. ಡಿ. ಶ್ರೀನಿವಾಸನ್, ಅವರು ತಾ ೭ರಂದು ಸಂಜೆ ಮಂಗಳೂರಿಗೆ ಆಗಮಿಸಿದಾಗ ಅವರನ್ನು ರೈಲ್ವೆ ನಿಲ್ದಾಣದಲ್ಲಿ ಪೋಪ್ಯುಲರ್ ಇನ್ಸ್ಯೂರೆನ್ಸ್ ಕಂಪೆನಿಯ ಮೆನೇಜಿಂಗ್ ಡ್ಯಾರೆಕ್ಟರ್ ಶ್ರೀ ಬಿ. ವಿಠಲ ರಾಯರೂ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿಯ ಮೆನೇಜಿಂಗ್ ಡ್ಯಾರೆಕ್ಟರ್ ಶ್ರೀ ಟಿ. ಆರ್. ಎ ಪೈಗಳೂ ಸ್ವಾಗತಿಸಿದರು. ಪೋಪ್ಯುಲರ್ ಇನ್ಸ್ಯೂರೆನ್ಸ್ ಕಂಪೆನಿಯಲ್ಲಿ ಅವರಿಗೆ ಸತ್ಕಾರವೀಯಲಾಯಿತು. ರಾತ್ರಿ ಉಡುಪಿಗೆ ಬಂದರು.

ಎಮ್. ಜಿ. ಎಮ್ ಕಾಲೇಜಿನಲ್ಲಿ ಸ್ಥಳೀಯ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿಯವರು ಅದರ ಸ್ಥಾಪಕ ಡಾ. ಟಿ. ಎಮ್. ಎ. ಪೈಗಳ ಹೆಸರಲ್ಲಿ ಕಟ್ಟಿಸಿ ಕಾಲೇಜಿಗೆ ದಾನವಿತ್ತ ಹಾಲಿನ ಪ್ರಾರಂಭೋತ್ಸವವನ್ನು ತಾ. ೫ರಲ್ಲು ಸಂಜೆ ಶ್ರೀ ಎಸ್. ಡಿ. ಶ್ರೀನಿವಾಸನ್ನರು, ಅಧಮಾರುಮಠದ ಶ್ರೀ ವಿಭುದೇಶತೀರ್ಥ ಸ್ವಾಮಿಯವರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು. ಪ್ರಿನ್ಸಿಪಾಲ್ ಶ್ರೀ. ಎಚ್. ಸುಂದರರಾಯರು ಸಂದೇಶ ವಾಚನ ಮಾಡಿ ಸ್ವಾಗತ ಮಾತುಗಳನ್ನಾಡಿದರು. ಅನಂತರ ಶ್ರೀ. ಬಿ. ವೈಕುಂಠ ಬಾಳಿಗ, ಶ್ರೀ ಕೊಚ್ಚಿಕಾರ್ ಪದ್ಮನಾಭ ಪೈ, ಡಾ! ಟಿ. ಎಮ್. ಎ ಪೈ, ಡಾ' ಎಸ್. ಆರ್. ಪೈ, ಶ್ರೀ ಟಿ. ರಘುನಾಥ ಪೈಗಳು ಭಾಷಣಮಾಡಿದ ಮೇಲೆ ಅಧ್ಯಕ್ಷರ ಭಾಷಣವಾದೊಡನೆ ಪ್ರಿನ್ಸಿಪಾಲರು ಧನ್ಯವಾದಗಳನ್ನರ್ಪಿಸಿದರು. ರಾತ್ರಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿಯಲ್ಲಿ ಭೋಜನ ಸತ್ಕಾರ ನಡೆಯಿತು. ಮೊದಲಿನ ರಾತ್ರಿ ಡಾ! ಟಿ. ಎಮ್. ಎ. ಪೈಗಳು ಸಿಂಡಿಕೇಟ್ ರೆಸ್ಟ್ ಹಾಲಿನಲ್ಲಿ ಭೋಜನವನ್ನೇರ್ಪಡಿಸಿದ್ದರು.

ವರ್ಧಂತಿ— ಕ್ರಿಶ್ಚಿಯನ್ ಹ್ಯೆಸ್ಕೂಲಿನ ವರ್ಧಂತಿ ಉತ್ಸವವು ತಾ ೮ರಲ್ಲು ಮಂತ್ರಿ ಡಾ! ಯು. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಹೆಡ್ಮಾಸ್ಟರ್ ಶ್ರೀ ಮರಾಯರು ವರದಿಯನ್ನೋದಿದರು. ಡಾ! ಸಿ. ಜಿ. ಆಚಾರ್ಯರು ಸ್ವಸ್ತಿವಾಚನ ಮಾಡಿದರು. ಪಾರಿತೋಷಕ ವಿತರಣೆ, ಅಧ್ಯಕ್ಷರ ಭಾಷಣ, ನಾಟಕಾಭಿನಯಗಳಾಗಿ ಸಭಾಂತ್ಯವಾಯಿತು.

ಉಪಹಾರ ಸತ್ಕಾರ— ಮೋಡರ್ನ್ ಹಾ! ಎ' ಶಾಲಾ ರಜತೋತ್ಸವ ಕಾಲದಲ್ಲಿ ನೆರವಾದವರನ್ನು ಅಭಿನಂದಿಸುವ ಮತ್ತು ಶ್ರೀ ಯು. ಎ. ಪೈ ಬಂಧುಗಳನ್ನು ಸನ್ಮಾನಿಸುವ ಸಲುವಾಗಿ ಶಾಲಾ ಮೆನೇಜರ್ ಶ್ರೀ ಕೆ. ಜಗನ್ನಾಥ ನಾಯ್ಕರು ತಾ ೭ರಂದು ಉಪಹಾರ ಕೂಟವೊಂದನ್ನು ಏರ್ಪಡಿಸಿದ್ದರು. ಶ್ರೀ ಪಿ. ಶ್ರೀಪತಿ ಆಚಾರ್ಯರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಶ್ರೀ ನಾಯ್ಕರು ವರದಿಯನ್ನೋದಿ ನೆರವಾದವರನ್ನು ಮನಸಾರೆ ಅಭಿನಂದಿಸಿದರು. ಶಾಲಾ ಬೆನಿಫಿಟ್ ಟ್ರಸ್ಟಿನ ಕಾರ್ಯದರ್ಶಿ ಶ್ರೀ ಎ. ಜೆ. ಆಳ್ವಿಯವರು ಟ್ರಸ್ಟಿನ ವರದಿಯನ್ನು ವಿವರಿಸಿದರು. ಶ್ರೀ ಯು. ಎ. ಪೈ, ಡಾ ಟಿ. ಎಂ. ಎ. ಪೈ, ಟಿ. ಎ. ಪೈ, ಟಿ. ರಮೇಶ ಪೈ, ಶ್ರೀ ಬಿ. ಶೀನಪ್ಪ ಹೆಗ್ಡೆಯವರ ಭಾಷಣ, ಅಧ್ಯಕ್ಷರ ಭಾಷಣ, ಧನ್ಯವಾದಗಳೊಂದಿಗೆ ಸಭಾಂತ್ಯವಾಯಿತು.

ಸಹಕಾರಿ ಸಂಘಗಳ ಮನವಿ— ಉಡುಪಿಯ ಹದಿನೇಳು ಸಹಕಾರಿ ಕೂಟಗಳು ತಾ ೩ರಲ್ಲಿ ಮಂತ್ರಿ ಡಾ' ಯು. ಕೃಷ್ಣರಾಯರಿಗೆ ಸಂಯುಕ್ತ ಮಾನ ಪತ್ರವೊಂದನ್ನು ಮಿಲ್ಕ್ ಸೊಸೈಟಿಯ ಆವಾರದಲ್ಲಿ ಒಪ್ಪಿಸಿದರು. ಶ್ರೀ ಅಮ್ಮೆರು ಲಕ್ಷ್ಮೀನಾರಾಯಣ ರಾಯರು ಮಾನ ಪತ್ರವನ್ನೋದಿ ಒಪ್ಪಿಸಿದ ಮೇಲೆ ಡಾ! ಟಿ. ಮಾಧವ ಪೈಗಳು ಸಹಕಾರಿ ಸಂಘಗಳ ಮಹತ್ವದ ಕಾರ್ಯಗಳನ್ನು ವಿವರಿಸಿದರು. ಮಂತ್ರಿಗಳು ಈ ಜಿಲ್ಲೆಯ ಸಹಕಾರಿ ಸಂಘಗಳು ಪ್ರಾಂತ್ಯದಲ್ಲೇ ಅದ್ವಿತೀಯವಾದವುಗಳಿರುವವು ಎಂದರು. ಶ್ರೀ ಎಂ. ವಾಮನ ಭಟ್ಟರು ಧನ್ಯವಾದಿಸಿದರು.

UDIPI MUNICIPALITY

TENDER NOTICE.

Sealed tenders will be received by the undersigned UPTO 4—0 P. M. ON 18—2—1954 for ordinary Kerosene and Petromax street lighting for 1954—'55. Any particulars as to the conditions of contract may be obtained from the Municipal Office during office hours on working days.

Municipal Office, Udipi.
Date: 6--2--1954.

K. GOPALA MENON,
Commissioner,
Udipi Municipality, Udipi

NA VAYUGA
Popular Kannada Weekly.
Founder:—
Sri A. B. SHETTY,
Minister for Public Health,
Govt. of Madras.

ನವಯುಗ
ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ.
ಸ್ಥಾಪಕರು:- ಶ್ರೀ. ಎ. ಬಿ. ಶೆಟ್ಟಿ,
ಮದ್ರಾಸಿನ ಆರೋಗ್ಯಮಂತ್ರಿ.
ವಾ. ಚಂದಾ: ರೂ. 5-12-0
ಬಿಡಿಪ್ರತಿ: 0- 2-0

-ಹೊಸಕೆರೆ ಚಿದಂಬರಯ್ಯನವರ-
ಗೀತೆಯ ಕೈಗನ್ನಡಿ
ಭಗವದ್ಗೀತೆಯ ಸಮೂಲ
ಭಾಷಾಂತರ.
ಬೆಲೆ. 0-12-0
V. P. P. ಮೂಲಕ 1—4—0
ಒಂದು ರೂಪಾಯಿ ಮನಿಯಾರ್ಡರು ಮಾಡಿದರೆ ಪ್ರತಿಯೊಂದನ್ನು ಬುಕ್ ಪೋಸ್ಟ್ ಮಾಡಿ ಕಳಿಸಬಹುದು.
ನೂರುಗಟ್ಟಲೆ ಪಡಕೊಳ್ಳುವವರಿಗೆ ರಿಯಾಯತಿ ದರವಿದೆ. ವಿಚಾರಿಸಿರಿ:-
ನವಯುಗ ಪ್ರೆಸ್, ಉಡುಪಿ.

ಕಾಸರಗೋಡು— ಈ ತಾಲೂಕಿನ ಬೋರ್ಡ್ ಪ್ರಾಥಮಿಕ ಶಾಲಾ ಅಧ್ಯಾಪಕರ ಯೂನಿಯನ್ನಿನ ವಾರ್ಷಿಕ ಅಧಿವೇಶನವು ಕಳೆದ ತಾ. 31ರಲ್ಲಿ ಎಡ್ವೊಕೇಟ್ ಶ್ರೀ ಕೆ. ಮಹಾಬಲ ಭಂಡಾರಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎಚ್. ಜಿ. ಪಂಡೆಯವರು ಅಧಿವೇಶನವನ್ನು ಉದ್ಘಾಟಿಸಿದರು. ಶ್ರೀ ಪಿ. ಶಿವರಾಯರು ಸ್ವಾಗತ ಭಾಷಣವಿತ್ತರು. ಶ್ರೀ ಎನ್. ಅಬ್ದುಲ್ಲರು ವರದಿವಾಚನ ಮಾಡಿದರು. ಅಧ್ಯಾಪಕರಿಗೆ ಬಾಕಿಯಾದ ಸಂಬಳ ಬಟವಾಡೆಯಾಗಿ ಮುಂದಕ್ಕೆ ಪ್ರತಿ ತಿಂಗಳ ತಾ 10 ರೊಳಗೆ ಸಂಬಳ ದೊರೆಯುವಂತಾಗಬೇಕೆನ್ನುವ, ಶಾಲಾ ದಿನಗಳನ್ನು 200ಕ್ಕೆ ಇಳಿಸಬೇಕೆನ್ನುವ, ಮನೆ ಬಾಡಿಗೆ ಪ್ರತ್ಯೇಕ ಭತ್ತೆ ಕೊಡಬೇಕೆನ್ನುವ, ಶಾಲಾ ಸಮಯವನ್ನು 5 ಗಂಟೆಗೆ ಇಳಿಸಬೇಕೆನ್ನುವ, ಉಪಾಧ್ಯಾಯಿನಿಯರಿಗೆ ಹೆರಿಗೆ ರಜೆಯನ್ನು 3 ತಿಂಗಳಿಗೇರಿಸಬೇಕೆನ್ನುವ ಇತ್ಯಾದಿ ನಿರ್ಣಯಗಳಾದುವು.

ದೇವಚಳ್ಳ—ಪುತ್ತೂರು ತಾಲೂಕಿನ ದೇವಚಳ್ಳ ಗ್ರಾಮದ ಉಪಯೋಗಾರ್ಥವಾಗಿ ಕಳೆದ ತಾ 29ರಲ್ಲಿ ಟಪ್ಪಾಲು ಆಫೀಸು ತೆರೆಯಲಾಗಿದೆ.

ಸುರತ್ಕಲ್ - ಶ್ರೀ ಪೇಜಾವರ ಮಠದ ಸ್ವಾಮಿಗಳವರು ಕಳೆದ ತಾ 24ರಲ್ಲಿ ಇಲ್ಲಿಯ ವಿದ್ಯಾದಾಯಿನಿ ಹೈಸ್ಕೂಲಿಗೆ ಸಂದರ್ಶನವಿತ್ತು ಉಪದೇಶಪರ ಭಾಷಣ ಮಾಡಿದರು. ಅಲ್ಲದೆ ಹೈಸ್ಕೂಲಿಗೆ ಸಹಾಯ ಧನವಾಗಿ ರೂ. 1000ವನ್ನು ಉದಾರ ಮನಸ್ಸಿನಿಂದ ವಾಗ್ದಾನ ಮಾಡಿದರು.

ಬೆಳ್ಳಪಾಡಿ—ಕಳೆದ ತಾ 29ರಲ್ಲಿ ಸ್ಥಳೀಯ ಶ್ರೀ ವಿಷ್ಣುಮೂರ್ತಿ ಎಯಿಡೆಡ್ ಎಲಿಮೆಂಟರಿ ಶಾಲೆಯ ವರ್ಧಂತಿ ಸಮಾರಂಭವು ಉಡುಪಿ ಸರಕಾರಿ ಉಪಾಧ್ಯಾಯರ ತರಬೇತಿ ಶಾಲಾ ಹೆಡ್ಮಾಸ್ಟರ್ ಶ್ರೀ ಉಗ್ರಾಣ ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಜರಗಿತು.

ಕುದಿಗ್ರಾಮ ಕೊಡಿಬೆಟ್ಟು—ಕುದಿಗ್ರಾಮ ಶಾಲೆಯ ಹಳೆವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ಕೊಡಿಬೆಟ್ಟುನಲ್ಲಿ ಸಾರ್ವಜನಿಕ ವಾಚನಾಲಯವೊಂದು ತೆರೆಯಲಾಗಿದೆ.

ಫಲಿಮಾರು— ಇಲ್ಲಿಯ ಬೋರ್ಡ್ ಹಾ। ಎ। ಶಾಲೆಯಲ್ಲಿ ಗಾಂಧೀಜಿಯವರ ಪುಣ್ಯತಿಥಿಯು ಕಳೆದ ತಾ 30ರಲ್ಲಿ ಸಾಮೂಹಿಕ ಭಜನೆ, ಭಾಷಣ ಮೊದಲಾದ ಕಾರ್ಯಕ್ರಮಗಳಿಂದ ಆಚರಿಸಲಾಯಿತು.

ಕರ್ನಿರೆ— ಕಳೆದ ತಾ 29ರಲ್ಲಿ ಕರ್ನಿರೆ ಗ್ರಾಮದಲ್ಲೊಂದು ಹೊಸ ಬ್ರಾಂಚ್ ಪೋಸ್ಟಾಫೀಸು ಮಂಗಳೂರು ಸರ್ಕಲ್ ಪೋಸ್ಟಲ್ ಇನ್ಸ್‌ಪೆಕ್ಟರರಿಂದ ತೆರೆಯಲ್ಪಟ್ಟಿದೆ.

ಹೆಜಮಾಡಿ—ಇಲ್ಲಿಯ ಹೈಸ್ಕೂಲಿನ ಸಹಾಯಾರ್ಥವಾಗಿ ಕಳೆದ ತಾ 30ರಲ್ಲಿ ಉಡುಪಿಯ ಎಸ್ಸೆಲ್ ಮತ್ತು ಗೆಳೆಯರು "ಬಸವ್ವಾರ ಗಂಡ" ನಾಟಕವನ್ನು ಶ್ರೀ ಕೆ. ಎಸ್. ಹೆಗ್ಡೆ, ಎಮ್. ಪಿ. ಅವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಅಭಿನಯಿಸಿದರು. ಪ್ರೇಕ್ಷಕ ವರ್ಗವು ನಾಲ್ಕು ಸಾವಿರಕ್ಕೂ ಮಿಕ್ಕಿಯಿತ್ತು.

ಕಡೆಕಾರು – ಶ್ರೀ ಕೃಷ್ಣಮೂರ್ತಿ ವ್ಯಾಯಾಮ ಮಂದಿರ, ಪಡುಕರೆ, ಇದರ ವಾರ್ಷಿಕೋತ್ಸವವು ತಾ 4-3-54ರಂದು ಸಂಜೆ ಶ್ರೀ ಕೆ. ನರಸಿಂಹನ್ ಸಬ್ ಇನ್ಸ್‌ಪೆಕ್ಟರ್ ಆಫ್ ಫಿಶರೀಸ್ ಮಲ್ಪೆ, ಇವರ ಅಧ್ಯಕ್ಷತೆಯಲ್ಲಿ ಜ್ಞಾನೋದಯ ಭಜನಾ ಮಂದಿರದ ವಠಾರದಲ್ಲಿ ಜರಗಲಿದೆ.

ಕಟಪಾಡಿ—ಇದೇ ತಾ ೧ರಂದು ಸ್ಥಳೀಯ ಶ್ರೀ ವೆಂಕಟರಮಣ ಸ್ವಾಮಿ ಹೈಸ್ಕೂಲಿನ ವಾರ್ಷಿಕೋತ್ಸವವು ಮಾನ್ಯ ಸಚಿವ ಡಾ. ಯು. ಕೃಷ್ಣ ರಾಯರ ಅಧ್ಯಕ್ಷತೆಯಲ್ಲಿ ಆಚರಿಸಲ್ಪಟ್ಟಿತು. ದೇವತಾ ಪ್ರಾರ್ಥನೆಯಾದ ಬಳಿಕ ಶ್ರೀ ಎಮ್ ಎನ್. ಭಟ್ಟರು ಈ ಸಮಾರಂಭಕ್ಕೆ ಶುಭವನ್ನು ಕೋರಿಬಂದ ಸಂದೇಶಗಳನ್ನು ಓದಿದರು. ಹಳೆ ವಿದ್ಯಾರ್ಥಿ ಮಿ। ವಿಲಿಯಮ್ ಬೆನೆಡಿಕ್ಟ್ ಅಲ್ವಿನ್‌ರ ಶಾಲಾ ಸ್ವಸ್ತಿ ವಾಚನವಾದ ನಂತರ ಶಾಲಾ ಮುಖ್ಯ ಅಧ್ಯಾಪಕ ಶ್ರೀ ಪಿ. ರಾಮದಾಸ ನಾಯಕರು ಶಾಲೆಯ ಸಂಕ್ಷಿಪ್ತ ವರದಿಯನ್ನೋದಿದರು. ವಿದ್ಯಾರ್ಥಿಗಳಿಗೆ ಪಾರಿತೋಷಕ ವಿತರಣೆ ಮತ್ತು ಅಧ್ಯಕ್ಷರಿಂದ ಸಂದರ್ಭೋಚಿತ ಭಾಷಣಗಳಾಗಿ ಶ್ರೀ ಕೆ. ಆರ್. ಶೆಣೈಯವರಿಂದ ಧನ್ಯವಾದ ಸಮರ್ಪಣೆಯೊಂದಿಗೆ ಅಂದಿನ ಸಾಯಂಕಾಲದ ಸಮಾರಂಭವು ಕೊನೆಗೊಂಡಿತು. ರಾತ್ರೆ ಶಾಲಾ ಬಾಲಕ ಬಾಲಿಕೆಯರಿಂದ ಮೂರು ನಾಟಕಗಳು ಯಶಸ್ವಿಯಾಗಿ ಅಭಿನಯಿಸಲ್ಪಟ್ಟವು. ಅಂದು ಪೂರ್ವಾಹ್ನ ಶಾಲೆಯ ವಿದ್ಯಾರ್ಥಿಗಳ ಉಪಹಾರ ಕೂಟವೂ ಇತ್ತು.

ಕಳೆದ ತಿಂಗಳ 29ರಂದು "ಶಾಲಾ ಕ್ರೀಡಾ ದಿನ"ವು ಡಾಕ್ಟರ್ ಕೆ. ಜೆ. ಕಿಣಿಯವರ ಅಧ್ಯಕ್ಷತೆಯಲ್ಲಿ ಜರಗಿತು.

ಅವನೂರು— ಬೋರ್ಡ್ ಹೈಸ್ಕೂಲಿನ ವರ್ಧಂತ್ಯುತ್ಸವವು ತಾ 1ರಲ್ಲಿ ಮಂತ್ರಿ ಡಾ। ಯು. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ನೆರವೇರಿತು. ವಿದ್ಯುದ್ದೀಪಗಳಿಂದ ಅಲಂಕೃತವಾದ ಸಭಾಸ್ಥಳವು ಜನರಿಂದ ಕಿಕ್ಕಿರಿದಿತ್ತು. ಶ್ರೀ ಅವನೂರು ಮಠಾಧೀಶರೂ, ಉಡುಪಿಯ ಪುರಪ್ರಮುಖರನೇಕರೂ ಸಭೆಯಲ್ಲಿ ಉಪಸ್ಥಿತರಾಗಿದ್ದರು. ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಎಸ್ ಆರ್. ಆಚಾರ್, ಇವರು ಸಭಿಕರನ್ನು ಸ್ವಾಗತಿಸಿ, ವರದಿವಾಚನ ಮಾಡಿದ ಬಳಿಕ ಶ್ರೀಯುತ ವೈ. ಲಕ್ಷ್ಮೀನಾರಾಯಣ ಭಟ್ಟರು ಶಾಲಾ ಸ್ವಸ್ತಿವಾಚನ ಮಾಡಿದರು. ಬಹುಮಾನ ವಿತರಣೆಯಾದ ಬಳಿಕ ಮಾನ್ಯ ಅಧ್ಯಕ್ಷರು ಶಾಲೆಯ ಪ್ರಗತಿಯನ್ನು ಕೊಂಡಾಡಿ ಶ್ರೀ ಅವನೂರು ಮಠದ ಶ್ರೀ ವಿಭುದೇಶ ತೀರ್ಥ ಶ್ರೀಪಾದಂಗಳವರು ಅನುಸರಿಸುತ್ತಿರುವ ವಿದ್ಯಾ ಸಂಬಂಧವಾದ ಚಟುವಟಿಕೆಗಳನ್ನು ಪ್ರಶಂಸಿಸಿ ಸಂಸ್ಥೆಗೆ ಯಶವನ್ನು ಕೋರಿದರು. ಶ್ರೀ ಜಿ. ಮಹಾಬಲ ಸೆಟ್ಟರು ಧನ್ಯವಾದವನ್ನು ಅರ್ಪಿಸಿದರು. ಅನಂತರ ಶಾಲೆಯ ಈಗಿನ ವಿದ್ಯಾರ್ಥಿಗಳ ಮತ್ತು ಹಳೆಯ ವಿದ್ಯಾರ್ಥಿಗಳ ಮನೋರಂಜನೆಯ ಕಾರ್ಯಕ್ರಮಗಳಿದ್ದುವು.

ಕೋಟೇಶ್ವರ— ಬಾಪೂಜಿ ಪುಣ್ಯ ತಿಥಿಯು ಕಳೆದ ತಾ 30ರಲ್ಲಿ ಶ್ರೀ ವೈ. ಮಂಜಯ್ಯ ಸೆಟ್ಟಿ, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಆಚರಿಸಲ್ಪಟ್ಟಿತು. ಶ್ರೀಗಳಾದ ಎಮ್. ಎಮ್. ಹೆಗ್ಡೆ, ಬಿ. ವಿ. ಕಾರಂತ, ಕೆ. ಎಸ್. ಉರಾಳ್, ಕೆ. ಸೀತಾರಾಮ ಐತಾಳ ಮೊದಲಾದವರು ಸಮಾರಂಭದಲ್ಲಿ ಭಾಗವಹಿಸಿದ್ದರು.

ಕೌನ್ಸಿಲ್ ಚುನಾವಣಾ ಕ್ಷೇತ್ರಗಳ ಮತದಾರರ ಪಟ್ಟಿಗಳಲ್ಲಿ ಹೆಸರು ಸೇರಿಸಲು ಕೈಕೊಳ್ಳಬೇಕಾದ ಕಾರ್ಯಕ್ರಮಗಳು

ಸಾರ್ವಜನಿಕರ ಅವಗಾಹನೆಗಾಗಿ ಭಾರತದ ಚುನಾವಣಾ ಕಮಿಶನು ಈ ಪ್ರಕಟಣೆಯನ್ನು ಕೊಟ್ಟಿರುವುದು. 1953 ನವಂಬರ 5ನೇ ತಾರೀಕಿನಂದು ಚುನಾವಣಾ ಸಮಿತಿಯು ಶಾಸನ ಸಭೆ ಮತ್ತು ಲೋಕ ಸಭೆಗಳ ಚುನಾವಣಾ ಕ್ಷೇತ್ರಗಳ ಮತದಾರರ ಪಟ್ಟಿಯಲ್ಲಿ ಹೆಸರನ್ನು ಸೇರಿಸುವ ಕ್ರಮದಲ್ಲಿ ಮಾಡಲಾದ ಬದಲಾವಣೆಗಳನ್ನು ವಿವರಿಸಿ ಒಂದು ವಾರ್ತಾ ಸೂಚಿಯನ್ನು ಪ್ರಕಟಿಸಿತ್ತು. ಕೌನ್ಸಿಲ್ ಚುನಾವಣಾ ಕ್ಷೇತ್ರದ ಮತದಾರರೂ, ಈ ಕೆಳಗಿನ ತಿದ್ದುಪಡಿಗಳೊಡನೆ ಆ ಕ್ರಮವನ್ನನುಸರಿಸಬೇಕು.

ಕೌನ್ಸಿಲ್ (ಪದವೀಧರ, ಅಧ್ಯಾಪಕ ಮತ್ತು ಸ್ಥಳೀಕ ಸಂಸ್ಥೆ) ಚುನಾವಣಾ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಹೆಸರು ಸೇರಿಸಲು ಒಪ್ಪಿಸುವ ಅರ್ಜಿಗಳಲ್ಲಿ ಈ ವಿವರಗಳಿರಬೇಕು- 1) ಅರ್ಜಿದಾರನ ಹೆಸರು. 2) ತಂದೆಯ/ಗಂಡನ ಹೆಸರು. 3) ಕೌನ್ಸಿಲ್ ಚುನಾವಣಾ ಕ್ಷೇತ್ರದ ಹೆಸರು. 4) ವಿಳಾಸ

ಪದವೀಧರ ಮತ್ತು ಅಧ್ಯಾಪಕರ ಚುನಾವಣಾ ಕ್ಷೇತ್ರದ ಮನವಿಗಳಲ್ಲಿ ಈ ವಿವರಗಳನ್ನು ಹೆಚ್ಚಾಗಿ ಕಾಣಿಸಬೇಕು—1) ವಸತಿ ಸ್ಥಳದ ಹೆಸರು 2) ಮತದಾನ ಯೋಗ್ಯತೆ ಹೊಂದುವ ದಿನದ ವರೆಗೆ ಚುನಾವಣಾ ಕ್ಷೇತ್ರದಲ್ಲಿ ವಸತಿಯಿತ್ತೊ?

ಪದವೀಧರರ ಚುನಾವಣಾಕ್ಷೇತ್ರದ ಅರ್ಜಿ ಪತ್ರಗಳಲ್ಲಿ ಹೆಚ್ಚಿನ ಈ ವಿವರಗಳಿರಬೇಕು 1) ಮತದಾನ ಯೋಗ್ಯತೆ ಪಡೆಯುವ ದಿನದ 3 ವರ್ಷಗಳ ಹಿಂದೆ, ಭಾರತದ ಯಾವುದೇ ಒಂದು ಪ್ರದೇಶದ ಪದವೀಧರ ಅಥವಾ ಪ್ರಾಂತ ಸರಕಾರದಿಂದ ಕೊಡಲ್ಪಟ್ಟ ಇನ್ನು ಯಾವುದಾದರು ವಿದ್ಯಾ ಯೋಗ್ಯತೆಯ ಪತ್ರವುಳ್ಳವನಾಗಿರುವನೆ? ಈ ರೀತಿಯ ಪ್ರಶಸ್ತಿ ಪತ್ರ ಪಡೆದವನಾಗಿದ್ದರೆ, ಈ ಕೆಳಗಿನ ವಿವರಗಳನ್ನೊದಗಿಸಬೇಕು. (ಅ) ಪದವಿ ಅಥವಾ ಡಿಪ್ಲೊಮದ ಅಧಿಕೃತ ಪ್ರತಿ (ಬ) ಪ್ರಶಸ್ತಿ ಪತ್ರವನ್ನು ಸೂಚಿಸಿರುವ ಸರಕಾರಿ ಗಾರ್ಡಿನ ಪ್ರತಿ. (ಸ) ಯಾವುದಾದರೊಂದು ವಿಶ್ವ ವಿದ್ಯಾಲಯದ ಪದವೀಧರನೆಂಬುದಕ್ಕೆ ಅಧಿಕೃತ ಪುರಾವೆ. (ದ) ವಿದ್ಯಾರ್ಜನೆ ಮಾಡಿದ ಕಾಲೇಜಿನ ಪ್ರಿನ್ಸಿಪಾಲರ ಶಿಫಾರಸಿನೊಡನೆ ಪ್ರಮಾಣ ಪತ್ರ. (ಇ) ಪರೀಕ್ಷಾ ಫಲಿತಾಂಶವು ಪ್ರಕಟಿಸಲ್ಪಟ್ಟಿರುವ ಸರಕಾರಿ ಗಜೇಟಿನ ಅಧಿಕೃತ ಪ್ರತಿ

ಅಧ್ಯಾಪಕರ ಚುನಾವಣಾ ಕ್ಷೇತ್ರದ ಬಗ್ಗೆ, ಈ ಕೆಳಗಿನ ಪ್ರತ್ಯೇಕ ವಿವರಗಳು ಅರ್ಜಿಯಲ್ಲಿರಬೇಕು— ಮತದಾನ ಯೋಗ್ಯತೆ ಹೊಂದುವ ದಿನದ ಹಿಂದೆ 6 ವರ್ಷಗಳಲ್ಲಿ, ಕನಿಷ್ಠ ಪಕ್ಷ 3 ವರ್ಷವಾದರೂ ಅಧ್ಯಾಪಕ ವೃತ್ತಿಯಲ್ಲಿದ್ದನೆ? ಶಿಕ್ಷಣ ವೃತ್ತಿಯಲ್ಲಿದ್ದ ವಿದ್ಯಾ ಸಂಸ್ಥೆಯು ಪ್ರಾಂತ ಸರಕಾರದಿಂದ ಮನ್ನಣೆ ಪಡೆದುದಾಗಿರಬೇಕು. ಹೀಗೆ ಉಪಾಧ್ಯಾಯ ವೃತ್ತಿಯಲ್ಲಿದ್ದಿದ್ದರೆ, ಕೆಲಸ ಮಾಡಿದ ಶಾಲೆಗಳ ಹೆಸರು ಮತ್ತು ಅವಧಿಗಳನ್ನು ಸೂಚಿಸಬೇಕು. ಈ ವಿವರಗಳ ಪತ್ರದ ಜೊತೆ ಸಂಬಂಧಪಟ್ಟ ವಿದ್ಯಾ ಸಂಸ್ಥೆಗಳ ಮುಖ್ಯಾಧಿಕಾರಿಗಳ ಸಹಿಯಿರಬೇಕು.

ಸ್ಥಳೀಕ ಸಂಸ್ಥೆಗಳ ಚುನಾವಣಾ ಕ್ಷೇತ್ರಗಳ ಬಗ್ಗೆ ಒಪ್ಪಿಸುವ ಅರ್ಜಿಗಳಲ್ಲಿ ಸೂಚಿಸಬೇಕಾದ ಪ್ರತ್ಯೇಕ ವಿವರಗಳು—ಮತದಾನ ಯೋಗ್ಯತೆ ಹೊಂದುವಂದು ಅರ್ಜಿದಾರನು, ಚುನಾವಣಾ ಕ್ಷೇತ್ರದೊಳಗಿನ ಯಾವುದಾದರೊಂದು ಸ್ಥಳೀಕ ಸಂಸ್ಥೆಯ ಸದಸ್ಯನಾಗಿರುವನೆ? ಇದ್ದಿದ್ದರೆ, ಸದ್ರಿ ಸಂಸ್ಥೆಯ ಅಧ್ಯಕ್ಷರಿಂದ ಅಧಿಕೃತ ಪತ್ರ ಒಂದನ್ನು ಪಡೆದು ಅರ್ಜಿಯೊಡನೆ ಕಳುಹಿಸಬೇಕು.

(ಮದ್ರಾಸು ಸರಕಾರದ ಪ್ರಚಾರ-ಸಮಾಚಾರ ಶಾಖೆಯ ಡೈರೆಕ್ಟರರಿಂದ)

ಕಿದಿಯೂರು— ಮದ್ರಾಸು ವಯಸ್ಕರ ಶಿಕ್ಷಣಕ್ಕೆ ಸಂಬಂಧಿಸಿದ ಕೊಯಮುತ್ತೂರು ಡಿವಿಜನಿನ ಎಡಲ್ಟ್ ಎಜುಕೇಶನ್ ಯೂನಿಟಿನ ಅಧಿಕಾರಿಗಳಾದ ಶ್ರೀ ಕೆ. ಎಸ್. ಕುಮಾರ ಕೃಷ್ಣ ಅವರು ಕಳೆದ ತಾ 29ರಲ್ಲಿ ಕಿದಿಯೂರು ಎಯಿಡೆಡ್ ಹಾ। ಪ್ರಾ। ಶಾಲೆಯಲ್ಲಿ ಶೈಕ್ಷಣಿಕ ಚಲಚಿತ್ರವನ್ನು ಪ್ರದರ್ಶಿಸಿದರು. ಚಲಚಿತ್ರದ ವಿಷಯಗಳನ್ನು ಶ್ರೀಯುತರು ಇಂಗ್ಲಿಷಿನಲ್ಲಿ ಹೇಳಿದುದನ್ನು ಡಾ। ಕೆ. ರಾಮಕೃಷ್ಣ ಭಾಗವತರು ಕನ್ನಡಕ್ಕೆ ಭಾಷಾಂತರಿಸಿದರು. ಶ್ರೀ ಎ. ಎಸ್. ವಿ. ತಂತ್ರಿಗಳು ಧನ್ಯವಾದಗಳನ್ನರ್ಪಿಸಿದರು.

ಕುಂದಾಪುರ— ಈ ತಾಲೂಕಿನ ಸಹಕಾರಿ ಸಮ್ಮೇಳನವು ತಾ 2ರಲ್ಲಿ ಶ್ರೀ ವೈ. ಮಂಜಯ್ಯ ಸೆಟ್ಟಿ, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಮದ್ರಾಸಿನ ಸರಕಾರಿ ಮಂತ್ರಿ ಮಾನ್ಯ ಡಾ। ಯು. ಕೃಷ್ಣರಾಯರು ಸಮ್ಮೇಳನವನ್ನು ಉದ್ಘಾಟಿಸುತ್ತಾ, ಸಹಕಾರಿಗಳು ಅರ್ಪಿಸಿದ ಮನವಿಯ ಬೇಡಿಕೆಗಳನ್ನು ಸಾಧ್ಯವಿದ್ದಷ್ಟು ಪೂರೈಸಲು ನಿಗಾ ಕೊಡುವುದಾಗಿ ಹೇಳಿದರು. ಶ್ರೀ ಕಾಪು ಸಂಜೀವ ಸೆಟ್ಟರು ಸ್ವಾಗತ ಭಾಷಣ ಮಾಡಿದರು. ಶ್ರೀ ಬಿ. ಸಂಜೀವ ರಾಯರು ವರದಿವಾಚನ ಮಾಡಿದರು. ಶ್ರೀ ಎಸ್. ಎಸ್. ಕೊಳ್ಕೆಬೈಲ್, ಎಮ್. ಎಲ್. ಎ, ಎಸ್. ಎಸ್. ಪರಮೇಶ್ವರಯ್ಯ, ಎಚ್. ಎಲ್. ಕಾಮತ್, ಕೆ. ಎಲ್. ಭಂಡಾರಿ ಮೊದಲಾದವರು ಮಾತನಾಡಿದರು. ಶ್ರೀ ಬಿ. ಸುಬ್ಬಣ್ಣ ಹೆಗ್ಡೆಯವರು ಧನ್ಯವಾದಗಳನ್ನರ್ಪಿಸಿದರು.

ಬೆಳ್ಮಾರು—ಸ್ಥಳೀಯ ಬೋರ್ಡ್ ಹೈಸ್ಕೂಲಿನ ವರ್ಧಂತ್ಯುತ್ಸವವು ತಾ 7ರಲ್ಲಿ ಸಂಜೆ ಶ್ರೀ ಎಮ್. ಎಸ್. ಪಿತಾಂಬರ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ನೊಳಪಳ್ಳಿ ಶಿವರಾಯರು ಬಹುಮಾನ ವಿತರಣಾ ಕಾರ್ಯವನ್ನು ನೆರವೇರಿಸಿದರು. ಉತ್ಸವವು ವಿವಿಧ ಕಾರ್ಯ ಕ್ರಮಗಳಿಂದ ಜಯಶೀಲವಾಗಿ ಜರಗಿತು.

ಗಲ್ಲಿಗೇರಿಸಲಾಯಿತು

ಚಿನ್ನ ತುಟ್ಟಿ ಎಂಬವನನ್ನು 30-1-54 ರಂದು ಸೇಲಂ ಸೆಂಟ್ರಲ್ ಜೈಲಿನಲ್ಲಿ ಗಲ್ಲಿಗೇರಿಸಲಾಯಿತು. 21—3—1953ರಲ್ಲಿ ಚಿನ್ನಾಮ್ಮಾಳ್ ಎಂಬವಳನ್ನು ತಿವಿದು ಕೊಂದುದಕ್ಕಾಗಿ ಸೇಲಮಿನ ನ್ಯಾಯಾಧೀಶರು ಅವನಿಗೆ ಮರಣದಂಡನೆ ವಿಧಿಸಿದ್ದರು.

3 ವರುಷ ಗ್ಯಾರಂಟಿಯುಳ್ಳ

ಚಲೋ ರಿಸ್ಟುವಾಚು

ಬರೇ ರೂಪಾಯಿ 14-6-0 ಕಿಮ್ಮತು.
ಸ್ಟ್ರಾಪ್ 10 ಸಂಖ್ಯೆ 6



4 ಜ್ಯುವೆಲ್ಸ್ ಕ್ರೋಮ್ ರೂ. 14/6, ರೋಲ್ಡ್ ಗೋಲ್ಡ್ ರೂ. 18, 15 ಜ್ಯುವೆಲ್ಸ್ ಕ್ರೋಮ್ ರೂ. 30/, ರೋಲ್ಡ್ ಗೋಲ್ಡ್ ರೂ. 32/8, 15 ಜ್ಯುವೆಲ್ಸ್ ವಾಟರ್ ಪ್ರೂಫ್ ರೂ. 35/, 17 ಜ್ಯುವೆಲ್ಸ್ ರೂ. 40/, ಪಾಕೀಟು ವಾಚು ರೂ. 12/

ಟಾಯಮ್ ಪೀಸು ರೂ. 15 -

ಒಬ್ಬರಿಗೆ ಒಂದಕ್ಕಿಂತ ಹೆಚ್ಚಿಗೆ ವಾಚು ಕಳುಹಿಸುವುದಿಲ್ಲ. ಕ್ಯಾಟಲಾಗು ಧರ್ಮಾರ್ಥ.

FREE INDIA WATCH CO. N.K
Post Bag No. 6724, CALCUTTA-7

ಚರಿತ್ರೆಯಲ್ಲಿ ಹೊಸದು — ನೀತಿಯಲ್ಲಿ ಹೊಸದು

ಪ್ರಣಯದಲ್ಲಿ ಹೊಸದು — ವಿನೋದದಲ್ಲಿ ಹೊಸದು

ಪ್ರತಿಯೊಂದು ಸನ್ನಿವೇಶದಲ್ಲಿ ಹೊಸ ಹೊಸ ವೈವಿಧ್ಯತೆಯ ಪ್ರೇಮಗೀತೆಯು ಪ್ರತಿಯೊಬ್ಬನ ಹೃದಯ ಗೀತೆಯಾಗಿದೆ.

ತಾ 12—2—54ರಿಂದ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಅನಾರ್ಕಲಿ

[ಫಿಲ್ಮಿಸ್ತಾನ್]

ಪ್ರದೀಪ್ ಕುಮಾರ್, ಬಿನಾರೈ, ಮುಬಾರಕ್ ಮೊದಲಾದವರು.

ಕವಿಭೂಷಣ ಕೆ. ಪಿ. ವೆಂಕಪ್ಪ ಶೆಟ್ರ

ಭಾರತದ ಗುರುಕುಲ

(ಯಕ್ಷಗಾನ)

ಬೆಲೆ: 0 8 0

ಮದರಾಸು ಸರಕಾರದಿಂದ ಸಂಭಾವನೆ ಪಡೆದ ಗ್ರಂಥ.

ಸಾಹಸ ಭೀಮ ವಿಜಯ	0—8—0
ಲಕ್ಷ್ಮಪಗಡೆ	0—6—0
ಧರತೇಶ ದಿಗ್ವಿಜಯ	0—8—0
ವಾಲಿ ಸುಗ್ರೀವ	0—8—0

ನವಭಾರತ ಪುಸ್ತಕ ಭಂಡಾರ, ಉಡುಪಿ

ಮಂಗಳೂರು

ವಲೇರಿಯನ್ ಕಾರ್ಡಿನಲ್ ಗ್ರೇಸಿಯಸ್— ಅವರು ಇದೇ ತಾ ೩ರಲ್ಲಿ ಬೆಳಗ್ಗೆ ಬಜ್ಪೆ ವಿಮಾನ ನಿಲ್ದಾಣದಲ್ಲಿ ಬಂದಿಳಿದಾಗ ನಗರದ ಹಲವಾರು ಪ್ರತಿಷ್ಠಿತ ಪ್ರಮುಖರು ಅವರಿಗೆ ಸ್ವಾಗತವಿತ್ತರು. ಅಲ್ಲಿಂದ ಮಂಗಳೂರಿಗೆ ಬಂದು ನಗರ ಸಭೆಯ ಮಾನಪತ್ರ ಸ್ವೀಕರಿಸಿದರು. ನಗರ ಸಭಾಧ್ಯಕ್ಷ ಶ್ರೀ ಕೆ ಎಸ್. ಅಡಿಗರು ಸ್ವಾಗತ ಭಾಷಣ ಮಾಡಿದರು. ಶ್ರೀಗಳಾದ ಎಸ್. ಎಕ್ಸ್. ಡಿ. ಪಿಂಟೋ, ಎಲ್. ಸಿ. ಪಾಯಿಸ್, ಬಿ. ವೈಕುಂಠ ಬಾಳಿಗ ಮೊದಲಾದವರು ಕೂಡಾ ಸುಸ್ವಾಗತ ವನ್ನು ಬಯಸಿ ಮಾತನಾಡಿದರು.

ಕಾರ್ಡಿನಲ್ಲರು ತನಗಿತ್ತ ಸ್ವಾಗತ ಹಾಗೂ ಮಾನ ಪತ್ರಕ್ಕಾಗಿ ಸರ್ವರಿಗೂ ಧನ್ಯವಾದಗಳನ್ನರ್ಪಿಸಿದರು. ಮಾನವನು ತನ್ನ ಧಾರ್ಮಿಕ ವಿಚಾರದೊಂದಿಗೆ ರಾಷ್ಟ್ರಕ್ಕೆ ಸಲ್ಲಿಸುವ ಕರ್ತವ್ಯವನ್ನು ಸಲ್ಲಿಸಬೇಕೆಂದು ಸೂಚಿಸಿದರು. ಮಂಗಳೂರ ಕ್ರಿಶ್ಚಿಯನ್ ಸಂಘದ ಕಾರ್ಯದರ್ಶಿ ಶ್ರೀ ಯು. ಕಣ್ಣಪ್ಪನವರು ಧನ್ಯವಾದಗಳನ್ನರ್ಪಿಸಿದರು.

ದ. ಕ. ಗೋರಕ್ಷಣಾ ಸಮಿತಿಯ. ಪ್ರಥಮ ವಾರ್ಷಿಕ ಮಹಾ ಸಭೆಯು ಕಳೆದ ತಾ. 31ರಲ್ಲಿ ಶ್ರೀ ವೈದ್ಯಾಶ್ರಮದಲ್ಲಿ ಶ್ರೀ ಎಮ್. ಕೆ. ದೇವರಾಜರ ಅಧ್ಯಕ್ಷತೆಯಲ್ಲಿ ಜರಗಿತು. ಗೋಶಾಲೆಯೊಂದನ್ನು ಸ್ಥಾಪಿಸುವ ಕುರಿತು ಪ್ರಯತ್ನಿಸಬೇಕೆಂದು ನಿರ್ಧರಿಸಲಾಯಿತು.

ವರ್ಧಂತ್ಯುತ್ಸವ— ಕಾಶಿಯಾ ಹೈಸ್ಕೂಲ್, ಸೈಂಟ್ ಜೋನ್ಸ್ ಹಾ। ಎ। ಶಾಲೆ, ಸೈಂಟ್ ರೀತಾ ಹಾ। ಎ। ಮಡುಗಿಬೈಲ ಶಾಲೆಗಳ ವರ್ಧಂತ್ಯುತ್ಸವವು ಕಳೆದ ತಾ 31ರಲ್ಲಿ ಸಬ್ ಜಡ್ಜ್ ಡಿ. ಸೊರೆಸ್ಸಿನವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಮತಿ ಸೊರೆಸ್ಸಿನವರು ಬಹುಮಾನ ಹಂಚಿದರು.

ಹಾಸ್ಟೆಲ್ ದಿನಾಚರಣೆ— ಕದ್ರಿ ಮತ್ತು ಕೊಡಿಯಾಲ ಬೈಲು ಹರಿಜನ ವೆಲ್‌ಫೇರ್ ಹಾಸ್ಟೆಲುಗಳ "ಹಾಸ್ಟೆಲ್ ದಿನವು" ತಾ 7ರಂದು ಮದ್ರಾಸಿನ ಹರಿಜನ ವೆಲ್‌ಫೇರ್ ಇಲಾಖೆಯ ಡೈರೆಕ್ಟರ್ ಶ್ರೀ ಆರ್. ಎಸ್. ಮಲಯಪ್ಪನ್, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಜಿಲ್ಲಾ ಹರಿಜನ ಅಭಿವೃದ್ಧಿ ಆಫೀಸರ್ ಶ್ರೀ ಪಿ. ಎಸ್. ತಿಮ್ಮಪ್ಪ ಸೆಟ್ಟಿರ ಸ್ವಾಗತ ಮಾತುಗಳನ್ನಾಡಿದರು. ಕದ್ರಿ ಹಾಸ್ಟೆಲಿನ ವರದಿಯನ್ನು ಶ್ರೀ ಎ. ಬಾಬುರವರೂ, ಕೊಡಿಯಾಲಬೈಲ್ ಹಾಸ್ಟೆಲ್ ವರದಿಯನ್ನು ಕುಮಾರಿ ಬಿ. ನಳಿನಿಯವರೂ ಓದಿದರು. ಹಾಸ್ಟೆಲಿನ ಸ್ವಪ್ನಾಜನವನ್ನು ಶ್ರೀ ಎಮ್. ಪಿ. ಸುಂದರನವರು ಮಾಡಿದರು. ಅ

In the Court of the District Munsiff of Kasargod.

O. P. No. 9/54.

In the matter of deceased Khaijumma, widow of Mahamad Beary, and daughter of Kopla Beera-Moidine Beary, of Mangalpadi village—Kasargod Taluk.

(1) Iddinkunhi, (2) Moosakunhi, (3) Aisabi— *Petitioners.*

Children of deceased Khajumma, and Mammade Beary, residing at Mangalpadi village, Kasargod Taluk.

Take notice that the above-named petitioners have applied to this Court to grant them a succession certificate to collect the amount due to deceased Khaijumma, and this said petition is posted to 22—2—1954.

(Sd.) **K. Devadas Shenai,**
Vakil for Petitioners.

Kasargod, 6—2—'54.

ಪಕ್ಷೆ ಶ್ರೀ ಸಂಜೀವನವರು ಉತ್ತರ ಕೊಟ್ಟರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಕೊರಗರಂತಹ ಬಹು ಕೀಳು ತರಗತಿಯವರನ್ನು ಹರಿಜನ ಮೇಲ್ದಾತಿಯವರು ಸರಿಸಮಾನತೆಯಿಂದ ಕಾಣಬೇಕು ಎಂದು ಮಂಗಳಾಗಿ ಹೇಳಿದರು.

ಸಹಾಯಾರ್ಥ ನಾಟಕ— ಅತ್ತಾವರ ಶ್ರೀ ಅರಸು ಮುಂಡತ್ತಾಯ ದೇವಸ್ಥಾನದ ಜೀರ್ಣೋದ್ಧಾರ ನಿಧಿಯ ಸಹಾಯಾರ್ಥವಾಗಿ ಗಣಪತಿ ಹೈಸ್ಕೂಲಿನ ಶಾರದಾ ಸದನದಲ್ಲಿ ಮಂಗಳೂರಿನ ಶ್ರೀ ಶಿವಕಲಾ ನಾಟಕ ಸಭೆಯವರು "ಉಷಾ ಪರಿಣಯ" ಎಂಬ ಕನ್ನಡ ಪೌರಾಣಿಕ ನಾಟಕವನ್ನು ಇದೇ ತಾ 27 ಮತ್ತು 28ರಲ್ಲಿ ಅಭಿನಯಿಸಲಿರುವರು.

ದ. ಕನ್ನಡ ಜಿಲ್ಲಾ ಕಸ್ತೂರ್‌ಬಾ ಗ್ರಾಮ ಸೇವಿಕಾ ತರಬೇತಿ ಶಿಬಿರ— ತಾ. 22—2—54ರಿಂದ ಸುಮಾರು ಎರಡು ತಿಂಗಳುಗಳ ತನಕ ಗ್ರಾಮ ಸೇವಿಕೆಯರ ತರಬೇತಿ ಮಾಡುವುದಕ್ಕಾಗಿ ನಮ್ಮ ಜಿಲ್ಲೆಯಲ್ಲಿ ಜಿಲ್ಲೆಯ ಸ್ತ್ರೀಯರಿಗಾಗಿಯೇ ಒಂದು ಶಿಬಿರವನ್ನು ತೆರೆಯಬೇಕೆಂದು ಕರ್ನಾಟಕ ಪ್ರಾಂತಿಕ ಕಸ್ತೂರ್‌ಬಾ ಸ್ಮಾರಕ ಸಂಘದ ಪ್ರತಿನಿಧಿಗಳಾದ ಶ್ರೀ. ಉಮಾಬಾಯಿ ಕುಂದಾಪುರದವರು ತಿಳಿಸುತ್ತಾರೆ ನಮ್ಮ ಜಿಲ್ಲೆಯಲ್ಲಿ ಗ್ರಾಮ ಸೇವೆಯನ್ನು ಮಾಡಬೇಕೆಂದಿರುವ ಸೇವಾಕಾಂಕ್ಷಿ ಮಹಿಳೆಯರಿಗೆ ಇದೊಂದು ಅಪೂರ್ವ ಸಂದರ್ಭವು. ಅಂಥಾ ಶಿಬಿರದಿಂದ ತರಬೇತಿ ಪಡೆಯಬಯಸುವ ಮಹಿಳೆಯರು ಶ್ರೀಮತಿ ಲೀಲಾಬಾಯಿ ಕಕ್ಕಂಬರೆ ರಾವ್, ಪೆನ್ಶನ್ ಲೈನ್, ಕೊಡಿಯಾಲ್ ಬೈಲ್, ಮಂಗಳೂರು 3. ಇವರಿಂದ ಸವಿಸ್ತಾರ ಮಾಹಿತಿ ಪಡೆಯಬಹುದು.

ಶ್ರೀ ಪೇಜಾವರ ಮಠದ— ಶ್ರೀ ವಿಶ್ವೇಶತೀರ್ಥ ಸ್ವಾಮಿಗಳವರು ಮಂಗಳೂರಲ್ಲಿ ಮೊಕ್ಕಾಂ ಮಾಡಿ ಸೆಂಟ್ ಬಾಲಿಕಾ ಪಾಠಶಾಲೆ, ಕೆನರಾ ಹೈಸ್ಕೂಲು, ಶ್ರೀ ವೆಂಕಟರಮಣ ದೇವಸ್ಥಾನ, ಶ್ರೀ ಕೆ. ಆರ್. ಕೆ. ಶೇಟರ ಶ್ರೀ ಲಕ್ಷ್ಮೀನಾರಾಯಣ ದೇವಸ್ಥಾನ ಮೊದಲಾದ ಸಂಸ್ಥೆಗಳಿಗೆ ಸಂದರ್ಶನವಿತ್ತು ಅಖಿಲ ಭಾರತ ಮಾಧ್ವ ಮಹಾ ಮಂಡಲದ ಧ್ಯೇಯ ಧೋರಣೆಗಳನ್ನು ವಿವರಿಸಿದರು. ಶ್ರೀ ಲಕ್ಷ್ಮೀನಾರಾಯಣದೇವಸ್ಥಾನದಲ್ಲಿ ಮೊಕ್ತೇಸರ್ ಶ್ರೀ ಕಮಲಾಕ್ಷ ಶೆಟ್ರು ಮೊದಲಾದವರು ಸ್ವಾಮಿಯವರನ್ನು ಗೌರವಿಸಿದರು.

ವಿದಾಯ ಸತ್ಕಾರ— ಮಂಗಳೂರಿನ ಹೆಡ್ ಪೋಸ್ಟಾಫೀಸಿನ ಪೋಸ್ಟ್ ಮಾಸ್ತರ್ ಆಗಿರುವ ಶ್ರೀ ಜೆ ಎಚ್. ಸಲ್ಡಾನಿಸ್ ಅವರಿಗೆ ಕೊಟ್ಟಾಯಂಗೆ ವರ್ಗವಾಗಿರುವ ನಿಮಿತ್ತ ಅವರನ್ನು ಬೀಳ್ಕೊಡುವ ಮತ್ತು ಅವರ ಸ್ಥಾನದಲ್ಲಿ ಪೋಸ್ಟ್ ಮಾಸ್ತರರಾಗಿ ನೇಮಕ ಹೊಂದಿರುವ ಶ್ರೀ ಬಿ. ಫಕೀರ್ ಮಹಮ್ಮದರನ್ನು ಸ್ವಾಗತಿಸುವ ಸಮಾರಂಭವು ಶ್ರೀ ಆರ್. ಬಿ. ಸಿದ್ದನಾಥನ್, ಪೋಸ್ಟಲ್ ಸುಪರಿಂಟೆಂಟ್ ಅವರ ಅಧ್ಯಕ್ಷತೆಯಲ್ಲಿ ಜರಗಿತು.

ಹಿಂದೀ ದಿನಾಚರಣೆ— ಗವರ್ನ್‌ಮೆಂಟ್ ಆರ್ಟ್ಸ್ ಕಾಲೇಜಿನ ಹಿಂದೀ ಸಂಘದ ಆಶ್ರಯದಲ್ಲಿ "ಹಿಂದೀ ದಿನಾಚರಣೆಯು" ಇದೇ ತಾ 6ರಲ್ಲಿ ಸಂಚೆ ಮುನಿಸಿಪಲ್ ಕಮಿಶನರ್ ಶ್ರೀ ಎಲ್. ಸಿ. ಲಿಯಾಹ್ನರವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಯು. ವೆಂಕಟ ರಾಯರು ಸ್ವಾಗತ ಭಾಷಣ ಮಾಡಿದರು. ಶ್ರೀ ಅಪ್ಪನವರು ಪರಿಚಯಿಸಿದರು, ಶ್ರೀಮತಿ ಕಲ್ಯಾಣಿ ದೇವಪ್ಪ ಸ್ವಾಮಿ ಕಾಲೋಚಿತ ಭಾಷಣ ಮಾಡಿದರು. ಉಪಕಾರ್ಯದರ್ಶಿಯವರು ವಂದನೆಗಳನ್ನರ್ಪಿಸಿದರು.

ಅಖಿಲ ಭಾರತ ಮಲೆನಾಡು ಪರಿಷತ್ತು ಮತ್ತು ಪ್ರದರ್ಶನ

ಮಲೆನಾಡಿಗರಲ್ಲಿಯೂ, ಮಲೆನಾಡಿನ ಸಹೋದ್ಯೋಗಿಗಳಲ್ಲಿಯೂ ಒಂದು ಬಿನ್ನಹ

ಇಂದು ಯಾವ ಸಾರ್ವಜನಿಕ ಚಳವಳಿಗಳಲ್ಲಿಯೂ ಭಾಗವಹಿಸದೆ, ನನ್ನ ದಾದ ವೈದ್ಯಕೀಯ ಕ್ಷೇತ್ರದಲ್ಲಿ ನನ್ನ ಕೈಲಾದ ಜನಹಿತ ಸೇವೆಯನ್ನು ಮಾಡಲು ತೊಡಗಿದ್ದೇನೆ. ದೇವದತ್ತವಾದ ನನ್ನ ಉಳಿದ ಆಯುಸ್ಸನ್ನು ಜನಹಿತಕ್ಕಾಗಿ ಮೀಸಲಾಗಿರಿಸಿ ದುಡಿಯುತ್ತಿರುವಾಗ ಎಷ್ಟೆಂದರೂ ಹಿಂದಿನ ನೆನಪುಗಳು ನಮ್ಮನ್ನು ಬಿಟ್ಟು ಹೋಗುವುದಿಲ್ಲ. ಅಖಿಲ ಭಾರತ ಮಲೆನಾಡು ಪರಿಷತ್ತು ಮತ್ತು ಪ್ರದರ್ಶನದ ಸ್ವಾಗತಾಧ್ಯಕ್ಷರು ಮತ್ತು ಸ್ವಾಗತ ಸಮಿತಿಯ ಇತರ ಪ್ರಮುಖ ವ್ಯಕ್ತಿಗಳು ನಮ್ಮಲ್ಲಿಗೆ ಬಂದು ನನ್ನ ಸೇವೆಯನ್ನು ಅಪೇಕ್ಷಿಸಿದಾಗ ನಾನು ನಿರಾಕರಿಸಲು ಶಕ್ತನಾಗಲಿಲ್ಲ. ಸ್ವಾಗತ ಸಮಿತಿಯ ಅಧ್ಯಕ್ಷರು ಮತ್ತು ಶ್ರೀ ಒಡೆಯರಂತಹ ವ್ಯಕ್ತಿಗಳು ನನ್ನ ಪೂರ್ವ ಸ್ನೇಹಿತರು. ಅದಲ್ಲದೆ ಮತ್ತು ಮಲೆನಾಡು ಚಳವಳಿಗಳಲ್ಲಿ ಅವರುಗಳೆಲ್ಲಾ ನಮ್ಮ ಸಹೋದ್ಯೋಗಿಗಳು ಶಿವಮೊಗ್ಗೆಯ ಜಿಲ್ಲಾ ಬೋರ್ಡಿನವರೇ ಸದ್ಯ ಈ ಉದ್ಯಮಕ್ಕೆ ಕೈಯಿಕ್ಕಿದ್ದಾರೆ. ಮೈಸೂರು ಸರಕಾರವು ಸಕಲ ವಿಧಗಳಿಂದಲೂ ಈ ಚಳವಳಿಕ್ಕೆ ಸಹಾಯಕನಾಗಿರುವುದೆಂಬುದು ಒಂದು ಮಹತ್ವದ ವಿಚಾರ. ಸರಕಾರಗಳಲ್ಲಿ ಕೊಡಗು ಸರಕಾರವು ಕೂಡ ಹೆಚ್ಚಿನ ಸಹಕಾರವು ನೀಡುವಂತಿದೆ. ಬೊಂಬಾಯಿ ಮತ್ತು ಮದರಾಸು ಸರಕಾರಗಳು ಕೂಡ ಸಹಕರಿಸಬಹುದು. ಕೇಂದ್ರ ಸರಕಾರದಲ್ಲಿ ಈ ವಿಷಯದಲ್ಲಿ ಆಸಕ್ತಿಯುಂಟಾಗುವಂತೆ ಹೆಚ್ಚಿನ ಪ್ರತಿಷ್ಠಿತ ವ್ಯಕ್ತಿಗಳು ಪ್ರವೃತ್ತರಾಗಿದ್ದಾರೆ. ಶ್ರೀಗಳಾದ ನಿಜಲಿಂಗಪ್ಪ, ಕೃಷ್ಣಮೂರ್ತಿ ರಾಯರು, ಕೆ. ಜಿ. ಒಡೆಯರ್ ಮುಂತಾದವರು ಬಹಳ ಪ್ರಭಾವಶಾಲಿಗಳು. ಮಂತ್ರಿ ಮಂಡಲದಲ್ಲಿ ಸೇರಿರುವ ಶ್ರೀ ಕೆ. ಸಿ. ರೆಡ್ಡಿ ಮತ್ತು ಶ್ರೀ ಎಂ. ವಿ. ಕೃಷ್ಣಪ್ಪನವರೂ ಈ ಕುರಿತು ಕ್ರಮವಹಿಸುತ್ತಿರುವ ಪರಿಣಾಮವಾಗಿಯೇ ಕೇಂದ್ರ ಸರಕಾರದ ರಫಿ ಅಹಮ್ಮದ್ ಕಿದ್ವಾಯಿಯವರು ಉದ್ಘಾಟನೆ ಮಾಡಲು ಒಪ್ಪಿದ್ದಾಗಿರುತ್ತದೆ. ಅವಕಾಶ ದೊರಕಿಸಿ ಕೊಂಡಾದರೂ ನೆಹರು ಕೂಡ ಬರಬಹುದೆಂಬ ಪ್ರತೀಕ್ಷೆಯಿರುವ ಕಾರಣವಾದರೂ ಈ ವ್ಯಕ್ತಿಗಳ ಪ್ರತಿಷ್ಠೆ.

ಹಿಂದೆ 1947ರಲ್ಲಿ ಆರಂಭವಾದ ಮಲೆನಾಡು ಚಳವಳಿವು ಪ್ರಧಾನ ತ್ರೈಬಲ್ಗಳಿಲ್ಲದೆ, ಹಣ ಜನಗಳ ಬೆಂಬಲವಿಲ್ಲದೆ, "ಅನಾಥ"ವಾಗಿ ಜೀರ್ಣವಸ್ಥೆಯನ್ನು ಸೇರಿ 1951ರಲ್ಲಿ ಕೇಂದ್ರ ಸರಕಾರದವರು ಕೇಂದ್ರ ಮಲೆನಾಡು ಯೋಜನಾ ಸಮಿತಿಯ ನಿರ್ಮಾಣದೊಂದಿಗೆ ಪ್ರತ್ಯೇಕತೆಯ ನಿಧಿಯ ಭಾವನೆಯಲ್ಲಿ ಅನುಭವಿಯಾಯಿತು. ಆದಿಲ್ಲಾ ಆಶೆ, ಆಕಾಂಕ್ಷೆಗಳು ಈಗ ಈಡೇರುವ ಸಂಭವ ಉಂಟಾಗಿದೆ. "ಈ ಬಾರಿ ಖಚಿತವಾಗಿ ಪರಿಣಾಮ ಉಂಟಾಗದಿರದು" ಎಂಬ ದೃಷ್ಟಿ ಭಕ್ತಿಗಳನ್ನಿಟ್ಟು ಮಲೆನಾಡಿನ ಸಮಗ್ರ ಜನತೆಯು ಹಿಂದಿನ ಸರಾಭವಗಳನ್ನೆಲ್ಲಾ ಸಂಪೂರ್ಣ ಮರೆತು ಏಕ ಮನಸ್ಸಿನಿಂದ, ನಿಷ್ಠೆಯಿಂದ ಒಂದುಗೂಡಿ ಮಲೆನಾಡಿನ ಉದ್ಧಾರಕ್ಕಾಗಿ ಕಂಕಣಬದ್ಧರಾಗಬೇಕು. ಮಲೆನಾಡಿನ ಮೂರೆ ಕೋಟಿಯ ಜನತೆಗೆ ಇದು ನನ್ನ ಅಂತಃಕರಣದ ಹಾರ್ದಿಕ ಆಹ್ವಾನವಾಗಿದೆ. ಸಮರ್ಥರಾದವರು ನನ್ನ ಕೈ ಬಿಟ್ಟು ಕಾರ್ಯವನ್ನು ಎತ್ತಿಹಿಡಿದು, ಶಿಖರಕ್ಕೇರಿಸುವ ದೃಢಸಂಕಲ್ಪವಿಟ್ಟು ಸರ್ವ ಭಾಗ್ಯೋದಯವನ್ನು ಗುರುತಿಸಿ ಸಂತೋಷದಿಂದ ನಮ್ಮ ಸಹಕಾರ, ಸಲಹೆ ಮತ್ತು ಸಂತೃಪ್ತಿಗಳೊಡನೆ ಭಾಗಿಯಾಗಬೇಕಾಗಿದೆ.

ಸ್ವಾಗತ ಸಮಿತಿಯವರು ನಮ್ಮ ಜಿಲ್ಲೆಯ ಹಾಗೂ ಇತರ ಪ್ರದೇಶಗಳ ಮುಖಂಡರುಗಳನ್ನು ಕೇಳಿಕೊಂಡಾಗ ಅವರಿಗೆ ಸಂಪೂರ್ಣ ಬೆಂಬಲಕೊಟ್ಟು ಪ್ರತಿಯೊಬ್ಬರೂ ತ್ರಿಕರಣ ಸಹಾಯ ಮಾಡುವಂತೆ ಭಗವಂತನು ಸ್ಫೂರ್ತಿ ಕೊಡುವಂತೆ ಬೇಡುತ್ತೇನೆ.

"ನಿವೃತ್ತ ಮಲೆನಾಡಿಗ,"
ಎಂ. ಎನ್. ಭಟ್.
ಆಯುರ್ವೈದ್ಯಾಶ್ರಮ, ಕದ್ರಿ, ಮಂಗಳೂರು 2.

ಅಖಿಲಭಾರತ ಖಾದೀ ಗ್ರಾಮೋದ್ಯೋಗ ಮತ್ತು ಒಕ್ಕಲತನ ಪ್ರದರ್ಶನೆ— ಹುಬ್ಬಳ್ಳಿ ೧-೪-೧೯೫೪ ಹುಬ್ಬಳ್ಳಿಯಲ್ಲಿ ಶಿವರಾತ್ರಿ ಸಪ್ತಾಹದಲ್ಲಿ ಮೇಲಿನ ಪ್ರದರ್ಶನವು ನಡೆಯುವದು. ಪ್ರದರ್ಶನದ ಅಂಗವಾಗಿ ಅಖಿಲ ಕರ್ನಾಟಕ ನೂಲುವ ಸ್ಪರ್ಧೆಯನ್ನು ನಡೆಸುವ ನಿಶ್ಚಯ ಮಾಡಲಾಗಿದೆ. ಈ ಕೆಳಗಿನ ಸದಸ್ಯರನ್ನೊಳಗೊಂಡ ಸ್ಪರ್ಧಾ ಸಮಿತಿಯನ್ನು ನೇಮಿಸಲಾಗಿದೆ.

ಶ್ರೀ ಎಸ್. ಎಚ್. ಕೌಜಲಗಿ, ಅಧ್ಯಕ್ಷರು.
,, ಆರ್. ವಿ. ಪಡನಿ, ಕಾರ್ಯದರ್ಶಿ.
,, ಎಚ್. ಪಿ. ಸರಾಫ, ಸದಸ್ಯರು.
,, ಎಸ್. ಟಿ. ವಾಬಳೆ, ,,
,, ಆರ್. ಬಿ. ಕುಲಕರ್ಣಿ, ,,
,, ಬಿ. ಜಿ. ಸರಾಫ, ,,

ಸ್ಪರ್ಧಾ ಸಮಿತಿಗೆ ಸ್ಪರ್ಧೆಯ ನಿಯಮಗಳನ್ನು ಸಿದ್ಧಗೊಳಿಸಿ ಪ್ರಸಿದ್ಧಿಸಲು ಅಧಿಕಾರ ಕೊಡಲಾಗಿದೆ. ಮೈಸೂರು, ಹೈದರಾಬಾದ, ಕನ್ನಡ ಜಿಲ್ಲೆಗಳು, ಕೊಡಗು, ಮುಂತಾದ ಎಲ್ಲ ಕರ್ನಾಟಕದ ನೂಲುವವರಿಗೆ ಸ್ಪರ್ಧೆಯಲ್ಲಿ ಭಾಗವಹಿಸಲು ಅವಕಾಶವಿದೆ. ನೂಲುವ ಸ್ಪರ್ಧೆಯು ಮಾರ್ಚ ೭ನೇ ತಾರೀಖು ಆದಿತ್ಯವಾರ ನಡೆಯುವದು.

ಕಾ. ಆ. ವೆಂಕಟರಾಮಯ್ಯಾ
ನಿಯಂತ್ರಕ
ಪ್ರದರ್ಶನಾ ಸಮಿತಿ.

ರೋಣ, ೬—೧—೧೯೫೪.

ನಿಮಗೆ ಸುಲಭದಲ್ಲಿ
ಇಂಗ್ಲಿಷ್ ಕಲಿಯಬೇಕೆ?
ಹಾಗಿದ್ದರೆ
ಸುಲಭದಲ್ಲಿ
ಇಂಗ್ಲಿಷ್
ಎಂಬ ಆಂಗ್ಲ ಸ್ವಯಂಬೋಧಿನಿ
ಪುಸ್ತಕ ಅತ್ಯುಪಯುಕ್ತವಾದುದು.
ಬೆಲೆ: ಸಾದಾಪ್ರತಿ 1—8—0
ಉತ್ತಮ ಪ್ರತಿ ರೂ. 2—4—0
ಡಾ| ಕೊಡಕ್ಕಿಲ್ಲರ
ಮನೆ ಮದ್ದು
ನೂರಾರು ರೋಗಗಳಿಗೆ ಮನೆಯಲ್ಲಿ
ಮಾಡಿಕೊಳ್ಳುವ ವಿಧಾನವನ್ನು
ವಿವರಿಸುವ ಗ್ರಂಥ.
ಬೆಲೆ: ರೂ. 2—8—0
ಪುಸ್ತಕ ವ್ಯಾಪಾರಿಗಳಿಗೆ ಧಾರಾಳ ಕಮಿಶನ್!
ಎಲ್ಲಾ ತರದ ಕನ್ನಡ ಪುಸ್ತಕಗಳೂ
ದೊರೆಯುತ್ತವೆ.
ನವಭಾರತ ಪುಸ್ತಕ ಭಂಡಾರ, ಉಡುಪಿ.



ಎಲ್ಲಾ ಕಡೆಗಳಲ್ಲಿಯೂ ಮಾರಲ್ಪಡುತ್ತವೆ.
OUR BOMBAY STOCKISTS:—
1. V. N. SHENOY, Bombay. 12
2. N. R. KAMATH.
Dahanu Road, Thana Dist (w. rly.)

(೪ನೇ ಪುಟದಿಂದ)

ಪ್ರಯೋಗ ನಡೆಸಲು ಅಮೇರಿಕ ತಜ್ಞರನ್ನು ಕಳಿಸಿದೆ.

ಕೊಲೊಂಬೋ ಯೋಜನೆ

ದಕ್ಷಿಣ ಮತ್ತು ಆಗ್ನೇಯ ಏಶ್ಯಾದ ರಾಷ್ಟ್ರಗಳ ಸಾರ್ವಾಂಗಿಕ ಅಭಿವೃದ್ಧಿಯನ್ನು ಪರಸ್ಪರ ಸಹಕಾರ ತತ್ವದಮೇಲೆ ಕೈಗೊಳ್ಳಲು ಉದ್ದೇಶಿಸಿದ ಕೊಲೊಂಬೋ ಯೋಜನೆಯಿಂದಲೂ ನಾವು ಕೊಟ್ಟುದಕ್ಕಿಂತ ಹೆಚ್ಚುಸಹಾಯವನ್ನು ಪಡೆದುಕೊಂಡಿದ್ದೇವೆ. ಕೆನಡಾ, ಆಸ್ಟ್ರೇಲಿಯಾ,ಬ್ರಿಟನು ಮುಂತಾದ ರಾಷ್ಟ್ರಗಳು ಭಾರತಕ್ಕೆ ಅಪಾರ ಸೇವೆಯನ್ನು ಸಲ್ಲಿಸಿವೆ. ಕಳೆದ ಜೂನು ತಿಂಗಳವರೆಗೆ ಆಸ್ಟ್ರೇಲಿಯಾ ದೇಶವು ೨೨ ಲಕ್ಷ ಪವನುಗಳನ್ನು ಭಾರತಕ್ಕೆ ಸಹಾಯರೂಪದಲ್ಲಿ ನೀಡಿತು. ಇದರಲ್ಲಿ ೩೭ ಲಕ್ಷ ಗೋಧಿ ಮತ್ತು ಗೋಧಿಹಿಟ್ಟಿನ ಮೇಲೆ ಕರ್ಚಾಗಿ, ಉಳಿದ ಹಣ ತುಂಗಭದ್ರೆಯ ಅಣೆಕಟ್ಟಿನ ಕೆಲಸಕ್ಕೆ ದೊರೆಯಿತು. ಕೆನಡಾ ನೀಡಿದ ೨೫೮ ಲಕ್ಷ ಡಾಲರುಗಳಲ್ಲಿ ೧೫೦ ಲಕ್ಷ ಡಾಲರುಗಳು ಆಹಾರ ಧಾನ್ಯದ ರೂಪದಲ್ಲಿದ್ದವು. ೫೦ ಲಕ್ಷ ಡಾಲರನ್ನು ಮುಂಬಯಿ ಸರಕಾರದ ಬಸ್ಸು ಸಾರಿಗೆಯಲ್ಲಿ ವಿನಿಯೋಗಿಸಲಾಯಿತು. ಉಳಿದುದನ್ನು ಮಯೂರಾಕ್ಷಿ ಮತ್ತು ಇತರ ಅಭಿವೃದ್ಧಿ ಯೋಜನೆಯಲ್ಲಿ ಬಳಸಿದರು. ನ್ಯೂಜೀಲೆಂಡು ೧೯೫೨ ರಲ್ಲಿ ೨೫೦೦೦೦ ಮತ್ತು ೧೯೫೩ರಲ್ಲಿ ೩೭೫೦೦೦ ಪವನುಗಳನು ಕೊಡಮಾಡಿದ್ದು ಇದನ್ನು ಹೊಸದಿಲ್ಲಿಯಲ್ಲಿ ಅಖಿಲ ಭಾರತ ವೈದ್ಯ ವಿಜ್ಞಾನ ಕೇಂದ್ರವನ್ನು ಕಟ್ಟುವುದಕ್ಕೆ ಉಪಯೋಗಿಸಲಾಗುವುದು. ಬ್ರಿಟನು ೧೯೫೭ನೇ ಇಸವಿಯ ವರೆಗೆ ವರ್ಷಕ್ಕೆ ೩೫೦ ಲಕ್ಷ ಪವನುಗಳಷ್ಟು ಸ್ಟರ್ಲಿಂಗ ಶಿಲ್ಕನ್ನು ಭಾರತಕ್ಕೆ ಒದಗಿಸಿಕೊಡುವ ಮೂಲಕ ಸಹಾಯ ಸಲ್ಲಿಸುತ್ತದೆ-ಇದರಿಂದ ಸುಮಾರು ೨೯೦ ಕೋಟಿ ರೂಪಾಯಿಗಳಷ್ಟು ಕೊರತೆ ಧನ ವಿನಿಯೋಗಿಸಿ, ಪಂಚವಾರ್ಷಿಕ ಯೋಜನೆಯು ತೋರಿಸುವ ಬಂಡವಾಳದ ಅಭಾವವನ್ನು ದೂರ ಗೊಳಿಸಲು ಭಾರತಕ್ಕೆ ಸಾಧ್ಯವಾಗುತ್ತದೆ. ಇದಲ್ಲದೆ ಬ್ರಿಟನಿನಿಂದ ಅಣೆಕಟ್ಟು, ಸಂಪರ್ಕ ಸಾಧನ, ಮುದ್ರಣ ಕಾರ್ಯ ಮುಂತಾದ ವಿಷಯಗಳ ತಜ್ಞರೂ ಭಾರತಕ್ಕೆ ಬಂದಿರುವರು. ಖರಗಪುರದಲ್ಲಿರುವ ಭಾರತೀಯ ತಾಂತ್ರಿಕ ವಿಜ್ಞಾನ ಕೇಂದ್ರಕ್ಕೆ ಸಲಕರಣೆಗಳನ್ನು ಬ್ರಿಟನು ಒದಗಿಸಿರುವುದು.

ನಮಗೆ ಬಹಳ ದೂರದಲ್ಲಿರುವ ನೋರ್ವೆ ದೇಶದಿಂದಲೂ ಸಹಾಯವು ದೊರಕುತ್ತದೆ--ತಿರು-ಕೊಚ್ಚಿಯಲ್ಲಿ ಮತ್ಸ್ಯ ವ್ಯವಸಾಯವನ್ನು ಅಭಿವೃದ್ಧಿಗೊಳಿಸಲು ಒಂದು ಕೋಟಿ ಕ್ರೋನರುಗಳನ್ನು (ಅಂದರೆ ೬೭ ಲಕ್ಷ ರೂಪಾಯಿ) ನೋರ್ವೆ ಮಂಜೂರು ಮಾಡಿರುವುದು; ಮತ್ತು ತಜ್ಞರನ್ನು ಕಳಿಸಿಕೊಟ್ಟು, ಹಾಗೂ ಭಾರತೀಯ ವಿದ್ಯಾರ್ಥಿಗಳನ್ನು ಬರಮಾಡಿಕೊಂಡು, ಅವರಿಗೆ ತರಬೇತಿ ಕೊಟ್ಟು ಈ ಋಣ ಭಾರವನ್ನು ಹೆಚ್ಚಿಸಿರುವುದು.

ಖಾಸಗಿ ಸಂಸ್ಥೆಗಳ ಔದಾರ್ಯ

ವಿದೇಶಗಳ ಸರಕಾರಗಳು ಮಾತ್ರವೇ ಭಾರತದ ಅಭಿವೃದ್ಧಿ ಪ್ರಯತ್ನಗಳಲ್ಲಿ ಆಸ್ಥೆವಹಿಸಿ ದುಡಿಯುತ್ತವೆಂದು ಭಾವಿಸಿದರೆ—ಅದು ತಪ್ಪಾಗುವುದು. ಹೊರಗಿನ ದೇಶಗಳ ಖಾಸಗಿ ಸಂಘ ಸಂಸ್ಥೆಗಳಿಂದಲೂ ಇಂತಹ ಸಹಾಯ ದೊರೆಯುತ್ತದೆ. ಅಮೇರಿಕದ ರಾಕಫೆಲರ್ ಫೌಂಡೇಶನದವರು ಭಾರತವನ್ನೊಳಗೊಂಡು ಅನೇಕ ದೇಶಗಳಲ್ಲಿ ಮಾನವನ ಸುಖ ಸಂತೋಷ ಸಾಧನಗಳಿಗೋಸ್ಕರ ಕೋಟ್ಯಾಂತರ ಹಣವನ್ನು ಧರ್ಮ ಬುದ್ಧಿಯಿಂದ ವಿನಿಯೋಗಿಸಿರುವರು. ೧೯೩೯ರಷ್ಟು ಹಿಂದೆಯೇ ಕಲ್ಕತ್ತೆಯಲ್ಲಿ ಅಖಿಲ ಭಾರತ ಸಾರ್ವಜನಿಕ ಆರೋಗ್ಯ ಕೇಂದ್ರವನ್ನು ಸ್ಥಾಪಿಸಲು ಈ ಸಂಸ್ಥೆ ನೆರವಾಯಿತು. ಬೆಂಗಳೂರಿನಲ್ಲಿರುವ ತನ್ನ ಶಾಖಾ ಕಚೇರಿಯ ಮೂಲಕ ಭಾರತದಾದ್ಯಂತ ಆರೋಗ್ಯ ಪ್ರಸಾರ ಚಟುವಟಿಕೆಗಳು ನಡೆಯುವುದಕ್ಕೂ ಅಮೇರಿಕದಲ್ಲಿ ವೈದ್ಯ ವಿಜ್ಞಾನದ ಶಿಕ್ಷಣವನ್ನು ಭಾರತೀಯ ವಿದ್ಯಾರ್ಥಿಗಳು ಪಡೆಯುವುದಕ್ಕೂ ಅದು ಪ್ರಯತ್ನಿಸಿದೆ. ಭಾರತೀಯ ವೈದ್ಯ ವಿಜ್ಞಾನ ಪ್ರಯೋಗಾಲಯದ ಅಂಗವೊಂದನ್ನು ಪುಣೆಯಲ್ಲಿ ತೆರೆಯುವುದಕ್ಕೂ ನಜಫಘರದಲ್ಲಿ ಹಳ್ಳಿಯ ಆರೋಗ್ಯ ಕೇಂದ್ರವನ್ನು ಸ್ಥಾಪಿಸುವುದಕ್ಕೂ ಸಹಕರಿಸಿದೆ. ಪಂಚವಾರ್ಷಿಕ ಯೋಜನೆಯ ಗ್ರಾಮಾಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸುವುದಕ್ಕೆ ಫೋರ್ಡ್ ಫೌಂಡೇಶನದವರು ನೀಡಿದ ಸಹಾಯ ಪ್ರಶಂಸಾರ್ಹವಾಗಿರುತ್ತದೆ— ಯೋಜನೆಯನ್ನು ಕಾರ್ಯಗತಗೊಳಿಸುವ ಅಧಿಕಾರಿಗಳ ಐದು ತರಬೇತಿ ಕೇಂದ್ರಗಳನ್ನು ಮತ್ತು ೧೫ ವಿಸ್ತರಣಾ ಯೋಜನೆಗಳನ್ನು ಮೊದಲಿನ ಮೂರು ವರ್ಷ ತಮ್ಮದೇ ಕರ್ಚಿನಿಂದ ಮತ್ತು ಉಳಿದ ಎರಡು ವರ್ಷಗಳಲ್ಲಿ ಮೂರರಲ್ಲಿ ಒಂದಂಶ ಕರ್ಚನ್ನು ಸಹಾಯವಾಗಿ ಕೊಟ್ಟು ನಡೆಸುವುದಕ್ಕೆ ಈ ಸಂಸ್ಥೆ ಮುಂಬಂದಿದೆ. ಜನಪದ ಅಭಿವೃದ್ಧಿ ಯೋಜನೆಯಲ್ಲೂ ಇದು ಆಸ್ಥೆವಹಿಸಿದ್ದು, ಸಾಕಷ್ಟು ನೆರವು ನೀಡಿರುವುದು. ಈ ಯೋಜನೆಯ ಪರಿಣಾಮಗಳನ್ನು ಕಲೆಹಾಕುವುದಕ್ಕೋಸ್ಕರ ಒಂದು ಮಂಡಳ ಸ್ಥಾಪಿಸಲು ೨೫೦೦೦೦ ಡಾಲರುಗಳನ್ನು ಮಂಜೂರುಮಾಡಿದೆ. ಭಾರತೀಯ ವಿದ್ಯಾರ್ಥಿಗಳಿಗೆ ವೇತನಗಳನ್ನು ದೊರಕಿಸಿಕೊಟ್ಟು ವಿದೇಶಗಳಿಗೆ ಕಳಿಸಿ, ಅಲ್ಲಿ ಅನೇಕ ಪ್ರಾಮುಖ್ಯ ವಿಷಯಗಳಲ್ಲಿ ಶಿಕ್ಷಣವನ್ನೂ ತರಬೇತಿಯನ್ನೂ ಪಡೆಯುವುದಕ್ಕೆ ನುಫೀಲ್ಡ ಫೌಂಡೇಶನ, ಬರ್ಮಾಶೆಲ್, ಇಂಪೀರಿಯಲ್ ಕೆಮಿಕಲ್ ಇಂಡಸ್ಟ್ರೀಸ್ ಇತ್ಯಾದಿ ಖಾಸಗಿ ಸಂಘಗಳು ಅನುಕೂಲತೆಯನ್ನು ಒದಗಿಸಿಕೊಟ್ಟವೆ

ಅನುಕರಣೀಯ ಆದರ್ಶ

ಹಿಂದೊಮ್ಮೆ ಅಮೇರಿಕಾದ ಇಕೆಜಸೇಯರರಿಗೆ ಮಾದರಿಯಾಗಿ ನಿಂತು ಸ್ಫೂರ್ತಿ ನೀಡಿದ ಭಾರತ ಇಂದು ಬಡತನದಿಂದ ಕಂಗೆಟ್ಟು ಆರ್ಥಿಕ ದುಸ್ಥಿತಿಯಿಂದ ಬನ್ನಪಟ್ಟು, ವಿಫಲ ವಿದೇಶೀ ಸಹಾಯವನ್ನು ರಾಷ್ಟ್ರೀಯ ಅಭಿವೃದ್ಧಿ ಪ್ರಯತ್ನಗಳಲ್ಲಿ ಯಾಚಿಸುತ್ತದೆ; ಮತ್ತು ಹಾರ್ದಿಕ ಸ್ವಾಗತವನ್ನು ನೀಡುತ್ತದೆ. ಭಾರತ ಪ್ರಗತಿ ಹೊಂದಿದ ಪಾಶ್ಚಾತ್ಯ ರಾಷ್ಟ್ರಗಳಿಗೂ ಬಹಳಹಿಂದುಳಿದ ಪೂರ್ವದ ದೇಶಗಳಿಗೂ ಮಧ್ಯದಲ್ಲಿರುತ್ತದೆ—ಆದುದರಿಂದ ತನಗಿಂತಲೂ ದೈನ್ಯಾವಸ್ಥೆಯಲ್ಲಿರುವ ರಾಷ್ಟ್ರಗಳಿಗೆ ತನ್ನಿಂದಾದ ಸಹಾಯವನ್ನು ಸಲ್ಲಿಸುವುದರ ಮೂಲಕ ಸಂಪನ್ನ ರಾಷ್ಟ್ರಗಳಿಂದ ತಾನು ಹೊಂದಿದ ಋಣವನ್ನು ಕೆಲಮಟ್ಟಿಗೆ ಸಂದಾಯ ಮಾಡುತ್ತದೆ. ಪಾಕಿಸ್ಥಾನ, ಸಿಂಹಳ, ನೇಪಾಳ ಮುಂತಾದ ದೇಶಗಳು ಭಾರತದ ಸಲಹೆ—ಸಹಕಾರಗಳಿಂದ ಪ್ರಗತಿ ಪಥದಲ್ಲಿ ಮುನ್ನಡೆಯುತ್ತಿವೆ. ರಾಷ್ಟ್ರಗಳು ಪರಸ್ಪರ ಸ್ನೇಹ ಸೌಹಾರ್ದದಿಂದಲೂ ಸಹಕಾರ ಮನೋಭಾವದಿಂದಲೂ ನಡೆದುಕೊಳ್ಳಬೇಕೆಂಬ ಆದರ್ಶ ತತ್ವ ಪ್ರಿಯವಾದ, ಎಲ್ಲರಿಗೂ ಅನುಕರಣೀಯವಾದ ವಿಷಯ ಭಾರತ ಇಂತಹ ಸ್ನೇಹವನ್ನು ಕಳೆದುಕೊಳ್ಳಲು ಬಯಸುವುದಿಲ್ಲ. ಉತ್ಪಾದಕ ಕಾರ್ಯಗಳಲ್ಲಿ ಪ್ರಗತಿ ಸಾಧಿಸುವ ಉದ್ದೇಶದಿಂದ ಹೊರಗಿನ ಸಹಾಯವನ್ನು ಅದು ಸ್ವಾಗತಿಸುತ್ತದೆ. ವಿದೇಶಗಳ ನೆರವನ್ನು ಭಾರತದ ಪಂಚ ವಾರ್ಷಿಕ ಯೋಜನೆಯ ಕಾರ್ಯಾಚರಣೆಗೆ ಬಂಡವಾಳ ಒದಗಿಸುವ ಪ್ರಮುಖ ಸ್ರೋತಗಳಲ್ಲಿ ಒಂದಾಗಿ ಪರಿಗಣಿಸಲಾಗಿರುವುದು. ಆದರೂ ಇಂತಹ ಸ್ನೇಹ ಮತ್ತು ಸಹಾನುಭೂತಿ ಸ್ವಾಭಾವಿಕವಾದ ತನ್ನ ಎಲ್ಲೆಯನ್ನು ಮೀರಿ, ರಾಜಕೀಯ ಪ್ರಭುತ್ವದ ವರ್ಚಸ್ಸು ಬೀರುವುದಕ್ಕೆ ನೆಪವಾಗುವುದೂ ಉಂಟು. ಸೈನ್ಯ ಬಲಸಂವರ್ಧನೆ ಮುಂತಾದ ಮಹತ್ವದ ವಿಷಯಗಳಲ್ಲಂತೂ ಇಂತಹ ಭಯ ಅನಿವಾರ್ಯ —ಸುದೈವದಿಂದ ಭಾರತ ಸೈನಿಕ ಒಪ್ಪಂದದ ಮೋಹಜಾಲದಲ್ಲಿ ಸಿಲುಕಿಲ್ಲ. ಹೀಗಿದ್ದರೂ ಆರ್ಥಿಕ ನೆರವು ದಾಸ್ಯಪ್ರವೃತ್ತಿಯನ್ನು ಪೋಷಿಸುವುದರಿಂದ ಮತ್ತು ಸ್ವಾವಲಂಬನೆಯತತ್ವಕ್ಕೆ ಉಚಿತವಲ್ಲವಾದ್ದರಿಂದ ನಾವು ಸ್ವಯಂಪೂರ್ಣರಾಗಲು, ಬೇಗನೆ ಸ್ವಂತ ಕಾಲಮೇಲೆ ನಿಂತುಕೊಳ್ಳಲು, ನೋಡಬೇಕಾದುದು ಅತ್ಯಂತ ಅಪೇಕ್ಷಣೀಯ.

—"ಕೆಪಿಟಲ್"

ಧರ್ಮಾರ್ಥ--ಪುಕ್ಕಟೆ

ಒಂದು ಸಾವಿರ ಕಾಶ್ಮೀರಿ ಶಾಲುಗಳನ್ನು ಧರ್ಮಾರ್ಥ ಹಂಚುತ್ತಲಿದ್ದೇವೆ. ಬೇಗನೆ ಬರೆಯಿರಿ. ವಿಳಂಬವಾದರೆ ನಿರಾಶರಾಗುವಿರಿ.

Diamond Commercial Chambers (N.U.)
Bhandari Street, BOMBAY—3

ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 25 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

THE MOOLKY BANK LTD.
Moolky, S. K.

ಶಾಂತ ವಾತಾವರಣದಲ್ಲಿ ಅತ್ಯಾಧುನಿಕ ಮಾದರಿಯ ಮೇಲ್ದರಗತಿಯ

—ವಸತಿ ಮತ್ತು ಭೋಜನಗೃಹ—

ಸ್ವಸ್ತಿಕ್ ಲೋಜ್

ಪಳನೀರು ರಸ್ತೆ, ಮಂಗಳೂರು

- ಗಾಳಿ ಬೆಳಕುಗಳಿಂದ ಸುಸಜ್ಜಿತವಾದ ಸಿಂಗಲ್ ಮತ್ತು ಡಬ್ಬಲ್ ಕೋಣೆಗಳು!
- ತೃಪ್ತಿಕರವಾದ ಸೇವೆ ಮತ್ತು ಸರ್ವಾನುಕೂಲತೆಗಳು!
- ಶಾಕಾಹಾರಿಗಳಿಗೆ ನುರಿತ ಬ್ರಾಹ್ಮಣ ಅಡಿಗೆ ಭಟ್ಟರಿಂದಲೇ ಭೋಜನ ಮತ್ತು ಉಪಾಹಾರ ತಯಾರಿಕೆ! ದರ ಸುಲಭ! ಸಂದರ್ಶಿಸಿ ಸಮಾಧಾನ ಪಡೆಯಿರಿ!!

ಖಾತ್ರಿ ಚಿನ್ನದ ನೆಕ್‌ಲೇಸ್, ಕರಹವಾರು ಚೈನುಗಳು, ಬೆಂಡೋಲೆ, ಸರಗಳು, ತೋಲಕ್ಕುಗಳು, ನಮೂನೆವಾರು ಉಂಗುರಗಳು

ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,

ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.

ಫೋನು ನಂಬ್ರ 66

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. S. No. 511 1953.

ಎಲ್ಲಪ್ಪ ಶೆಟ್ಟಿ —ವಾದಿ.

ಮತ್ತು

ಟಿ. ಶಿವ ಶೆಟ್ಟಿ-ತಾಳಿಪಾಡಿ ಗುತ್ತು ಸೋಮಪ್ಪ ಶೆಟ್ರ ಅಳಿಯ, ಉಡುಪಿ ತಾಲ್ಲೂಕು ಹೇರೂರು ಗ್ರಾಮದ ಕಲ್ಲುಗುಡ್ಡೆ ಎಂಬಲ್ಲಿರುವವ

--ಪ್ರತಿವಾದಿ.

ಇವರೊಳಗೆ—

ಈ ಮೂಲಕ ಸದ್ರಿ ಪ್ರತಿವಾದಿಗೆ ತಿಳಿಸುವದೇನಂದರೆ:—

ವಾದಿಯು ನಿಮ್ಮ ಮೇಲೆ ದಾಖಲುಮಾಡಿದ ಮೇಲ್ಕಂಡ ದಾವೆಯು ನಿಂಮ ಹಾಜರಾತಿ ಬಗ್ಗೆ ತಾರೀಕು 27—2—1954 ಕ್ಕೆ ಇಟ್ಟಿದೆ ನೀವು ಸದ್ರಿ ದಿನ ಬೆಳಿಗ್ಗೆ 11 ಗಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ಸ್ವತಹಾ ಯಾ ವಕೀಲದ್ವಾರಾ ಹಾಜರಾಗಿ ಉಪಾಪರಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಶಿವಾಯಿಮಾಡಿ ಸದ್ರಿ ದಾವಾ ತೀರ್ಮಾನಿಸಲಾದೀತು.

By order of the Court
N. M. Adyanthaya,
Advocate for Plaintiff.
Kamp: Karkala Dated 2-2-'45



ಶಾಲೆ-ನಾಗರಿಕತೆಯ ತರಬೇತಿ ನೀಡುವ ಗರಡಿ ಮನೆ

ಲೇಖಕರು:— ಡಾ| ಜಿ. ಎಸ್. ಕೃಷ್ಣಯ್ಯ.

> ದಾಸ್ಯದ ಶೃಂಖಲೆಯನ್ನು ಕಡಿದೊಗೆದು ಭಾರತವು ಬಿಡುಗಡೆಹೊಂದಿ ಪ್ರಜಾರಾಜ್ಯವಾಗಬೇಕೆಂದು ಅದೆಷ್ಟೋ ದಶಕಗಳವರೆಗೆ ಹೋರಾಡಿದ, ರಾಷ್ಟ್ರಕ್ಕಾಗಿ ಸರ್ವಸ್ವವನ್ನೂ ತ್ಯಾಗಮಾಡಿದ ಜನತೆಯು ಕಷ್ಟ ಪಾಟಗಳ ಸಿದ್ಧಿಯನ್ನು ಮುಂಬರುವ ದಿನಮಾನಗಳಲ್ಲಿ ಕಂಡುಕೊಳ್ಳಬೇಕಾದರೆ, ನಮ್ಮ ದೇಶದಲ್ಲಿಯ ಶಾಲೆಗಳು ಉತ್ತಮ ನಾಗರಿಕರನ್ನು ತರಬೇತುಮಾಡುವ ಗರಡಿಗಳಾಗಿ, ಪರಸ್ಪರರನ್ನು ಒಂದುಗೂಡಿಸುವ ಸಾಧನಗಳಾಗಿ ಹೆಚ್ಚು ಹೆಚ್ಚು ಜಾಗರೂಕತೆಯಿಂದಲೂ ವಿವೇಕ ಬುದ್ಧಿಯಿಂದಲೂ ಕಾರ್ಯ ಸಾಧಿಸತಕ್ಕದ್ದು.

ಕೇಂದ್ರದ ಶಿಕ್ಷಣ ಮಂತ್ರಿಮಂಡಲವೂ ಮತ್ತು ವಿವಿಧ ರಾಜ್ಯಗಳೂ ಸಾಮಾಜಿಕ ಶಿಕ್ಷಣದ ಯೋಜನೆಯನ್ನು ಕಾರ್ಯರೂಪಕ್ಕಿಳಿಸುವ ನಿರ್ಧಾರಕ್ಕೆ ಬಂದಿವೆ. ವಿಚಾರವಂತನಾದ ಉತ್ತಮ ನಾಗರಿಕನನ್ನಾಗಿ ರೂಪಿಸಲು, ಸರ್ವ ಸಾಮಾನ್ಯ ಜನತೆಯಲ್ಲಿ ಉತ್ತಮ ನಾಗರೀಕತೆಯನ್ನು ಮತ್ತು ಸಾಮಾಜಿಕ ನೀತಿ-ನಡತೆಗಳನ್ನು ತುಂಬುವುದೇ ಸಾಮಾಜಿಕ ಶಿಕ್ಷಣದ ಉದ್ದೇಶವಾಗಿದೆ. ಪಂಡಿತ ನೆಹರೂ, ಮೌಲಾನಾ ಅಬ್ದುಲ್‌ಕಲಮ್ ಆಝಾದ ಮುಂತಾದ ರಾಷ್ಟ್ರೀಯ ಧುರೀಣರು ರಾಷ್ಟ್ರೀಯ ಸಂಘಟನೆಯ ಪ್ರೇರೇಪಣೆಯ ಅವಶ್ಯಕತೆಯನ್ನು ಒತ್ತಿ ಹೇಳಿದ್ದಾರೆ. ಸಾಮಾಜಿಕ ಮತ್ತು ರಾಷ್ಟ್ರೀಯ ಶಿಕ್ಷಣವನ್ನೀಯುವದಕ್ಕೆ ಬಹುಮುಖವಾದಯೋಜನೆಯೊಂದು ಜನತೆಗೆ ಎಂದಿಗಿಂತ ಇಂದು ಅತೀವ ಅವಶ್ಯವಾಗಿದೆ.

ತಮ್ಮ ಮುಂದಿರುವ ಸಮಸ್ಯೆಗಳನ್ನು ಎದುರಿಸುವಂಥ ಯೋಗ್ಯ ನಾಗರಿಕರ ನಿರ್ಮಾಣಕ್ಕಾಗಿ, ಉತ್ತಮ ನಾಗರೀಕತೆಯ, ಸಾಮಾಜಿಕ ರೀತಿ-ನೀತಿಗಳ ಮತ್ತು ಸಾಮಾಜಿಕ ಹಕ್ಕು ಭಾಧ್ಯತೆಗಳ ಉದಾತ್ತ ವಿಚಾರವನ್ನು ರಾಷ್ಟ್ರದ ಜನತೆಯಲ್ಲಿ ತುಂಬಲು ಸರಿಯಾದ-ಕ್ರಮಬದ್ಧವಾದ ಪ್ರಯತ್ನಗಳು ಸಾಗಬೇಕೆಂಬುದು ಬಹುಜನರ ನಂಬಿಕೆಯಾಗಿದೆ. ಜಾತಿ ಜಾತಿಗಳಲ್ಲಿಯ ಭೇದಭಾವನೆ ಪಕ್ಷಪಂಗಡಗಳಲ್ಲಿಯ ಅಂತಃಕಲಹ—ಮತ ಮತಗಳಲ್ಲಿಯ ಹುಳುಕು—ಇವೆಲ್ಲ ವಿಷಮ ವಾತಾವರಣದ ಮುನ್ಸೂಚನೆಗಳಾಗಿದೆಯೆಂಬುದು ಸುಸ್ಪಷ್ಟವಿದೆ. "ನಾವು—ನಮ್ಮದು" ಎನ್ನುವ ಭಾವನೆಯೇ ಇಂದು ನಮ್ಮಲ್ಲಿ ಇಲ್ಲದಾಗಿ "ನಾವೆಲ್ಲರೂ ಒಂದು" ಎನ್ನುವ ವಿಚಾರ ಗಾಳಿಗಂಟಾಗಿದೆ. ಸರ್ವಜನ ಹಿತಕ್ಕಾಗಿ ನಮ್ಮ ನಮ್ಮಲ್ಲಿಯ ಮತ ಭೇದಗಳು—ಭೇದಭಾವನೆಗಳು ಇನ್ನೂ ಹುದಿಗೂಡಿ ಹೋಗಿಲ್ಲ. ಕ್ಷುದ್ರ ರಾಗ ದ್ವೇಷಗಳನ್ನೆಲ್ಲ—ಸ್ವಾರ್ಥ ಪ್ರವೃತ್ತಿಗಳನ್ನೆಲ್ಲ—ಭ್ರಮೆ ವಿಭ್ರಮೆಗಳನ್ನೆಲ್ಲ ನುಂಗಿ ನೀರ್ಗುಡಿಯುವ ಮಹತ್ತರವಾದ ರಾಷ್ಟ್ರೀಯ ಭಾವನೆಯೇ ನಮ್ಮಲ್ಲಿಲ್ಲದಾಗಿದೆ. ಹಾಗಾದರೆ ಇವೆಲ್ಲ ನಿಜವಿದ್ದ ಪಕ್ಷದಲ್ಲಿ, ಹಿಂದಿನ ನೂರಾರು ವರುಷಗಳ ಕಾಲಾವಧಿಯಲ್ಲಿ ಭಾರತೀಯ ಶಿಕ್ಷಣವೇನಾದರೂ ಈ ಪರಿಸ್ಥಿತಿಯನ್ನ ಮರಿಸುವುದಕ್ಕಾಗಿ ಪ್ರಯತ್ನಿಸಿದ್ದಾಗಿದಿಯೇ?

ಭಾರತವಿನ್ನೂ ಭೌಗೋಲಿಕ, ಘಟಕದ ಸೀಮೆಯನ್ನೇ ದಾಟಿಲ್ಲವೆಂಬ ಟೀಕೆಯು ಜಾಡಿನಲ್ಲಿ ತಾನೂ ಸಿಕ್ಕುಬಿದ್ದಿದ್ದರೂ ಆ ಸಾಮಾನ್ಯ ಜೀವಿಯ ಮುಖದಿಂದ ಹೊರಬರುವ ಆ ಸ್ಫುಟವಾತು, ಅದೆಷ್ಟೇ ನಿರ್ದಯವಾಗಿ ಕಂಡರೂ, ಬಹುಕಾಲದಿಂದ ಕಂಡುಬರುವ ಭಾರತದ ವಿಕೃತರೂಪದೆಡೆಗೆ ನಮ್ಮಗಮನವನ್ನೆಳೆಯುತ್ತದೆ ಮತ್ತು ಶೀಘ್ರವಾದ ಅದರ ನಿವಾರಣೋಪಾಯಗಳೆಡೆಗೆ ನಮ್ಮನ್ನು ಹೊರಳಿಸುತ್ತದೆ

ಭಾರತೀಯರಲ್ಲಿ ಪರಸ್ಪರ ಸಹಕಾರ ಭಾವನೆಯಿಲ್ಲ; ಅವರು ಪ್ರಚೋದನಾತ್ಮಕ ಮತ್ತು ವ್ಯಾವಹಾರಿಕ ಮನೋಭಾವನೆಯ ವಿಷಯದಲ್ಲಿ ಹಿಂದುಳಿದಿದ್ದಾರೆ—ಅವರಲ್ಲಿಯ ವಿಮರ್ಶಾತ್ಮಕ ಬುದ್ಧಿಯ ಉಪಯೋಗವೇ ಎಂದೂ ಆಗಿಲ್ಲ - ಅವರಲ್ಲಿಯ ಹೊಣೆಗೇಡಿ ತನದ ಪರಿಣಾಮವಾಗಿಯೇ ಅವರ ಹೊಣೆಗಾರಿಕೆ ಎದ್ದು ತೋರುತ್ತದೆ—ಸಾಹಸ, ತನ್ನತನ ಮತ್ತು ಸ್ವತಂತ್ರ ಪ್ರವೃತ್ತಿ ಇವೆಲ್ಲವೂ ಬಹುತರವಾಗಿ ಅವರಿಗೆ ಗೊತ್ತಿಲ್ಲದ ವಿಷಯಗಳಾಗಿವೆ—ಅಂತೆಯೇ ಪ್ರಗತಿ ಪರವಾದ ಮಾನವರಲ್ಲಿ ಅವಶ್ಯವಾಗಿ ಇರಬೇಕಾದ ಆಶೆ ಆಕಾಂಕ್ಷೆಗಳು ಮತ್ತು ಸಹಜ ಸತ್ಪ್ರವೃತ್ತಿಗಳೂ ಅವರಲ್ಲಿ ಕಂಡುಬರುತ್ತಿಲ್ಲ—ಎಂಬೀ ಒಗೆಯಾಗಿ ಭಾರತೀಯರ ಮೇಲೆ ಮತ್ತೆ ಮತ್ತೆ ಆಕ್ಷೇಪಣೆಗಳೆತ್ತಲ್ಪಟ್ಟಿವೆ

ಕೆಲವು ಪ್ರಶ್ನೆಗಳು:—

ಈ ಎಲ್ಲ ಸಂಗತಿಗಳು ಜಾಗ್ರತಾವಸ್ಥೆಯ ನಿಯಂತ್ರಣದ ಪ್ರತೀಕವಾಗಿವೆಯೇ? ಇಲ್ಲವೇ ಶಾಲೆಯಲ್ಲಿಯ ಸಾಮಾಜಿಕ ಕಾರ್ಯ ನಿರ್ವಹಣೆಗೆ ನಿದರ್ಶನವಾಗಿ ನಿಲ್ಲುತ್ತವೆಯೇ? ಕಾಲಮಾನ—ಪರಿಸ್ಥಿತಿಗಳಿಗನುಸರಿಸಿ ಕಂಡುಬರುವ ಕೊರತೆಗಳನ್ನು ತುಂಬಿಕೊಡುವಲ್ಲೇನಾನರೂ ಭಾರತೀಯ ಶಿಕ್ಷಣವು ಗಂಭೀರವಾಗಿ ಪರ್ಯಾಲೋಚನೆ ಮಾಡಿದೆಯೇ? ಇಂದು ಅತ್ಯಗತ್ಯವಾಗಿ ಬೇಕಾಗಿರುವ ಬುದ್ಧಿ ಕೌಶಲ್ಯಗಳನ್ನು ಮತ್ತು ಸದ್ಗುಣಗಳ ಸಮುದಾಯವನ್ನು ದೊರಕಿಸಿಕೊಳ್ಳುವಲ್ಲಿ ತರಬೇತಿಯ ಭೂಮಿಕೆಯನ್ನೇನಾದರೂ ಪೂರೈಸಿಕೊಡಲಾಗಿದೆಯೇ? ವಂಶ ಪರಂಪರಾಗತವಾದ ನಮ್ಮಲ್ಲಿಯ ತಪ್ಪು—ತಡೆಗಳನ್ನು—ಆಳವಾಗಿ ಬೇರೂರಿರುವ ಮೂಢರೂಢಿಗಳನ್ನು—ನವಿರ್ಮಾ ಬಾಳನ್ನೇ ಸುತ್ತುಗಟ್ಟಿದ ದ್ವೇಷ—ಕ್ಲೇಷಗಳನ್ನು ಸರಿಪಡಿಸುವ ಕಡೆಗೇನಾದರೂ ಅದರ ಗುರಿಯಾಗಿದೆಯೇ? ವಿದ್ಯಾರ್ಥಿಯನ್ನು ಆತನ ಸಹಜ ಸ್ಥಿತಿಗತಿಯಲ್ಲಿಯೇ ತೆಗೆದುಕೊಂಡು ಅವನಾವರೀತಿಯಲ್ಲಿ ಪರಿವರ್ತಿತವಾಗಬೇಕಾಗಿದೆಯೋ ಆ ರೀತಿಯಲ್ಲಿ ಮಾತ್ರ ಮಾರ್ಗದರ್ಶನ ಮಾಡುವುದೇ ಶಿಕ್ಷಣದ ಕಾರ್ಯವಾಗಿರುವುದಾದರೆ, ಭಾರತದಲ್ಲಿಯ ಶಾಲೆಗಳು ಜನತೆಯನ್ನು ಉತ್ತಮ ನಾಗರಿಕರನ್ನಾಗಿ ಮಾಡುವಲ್ಲಿ ತೃಪ್ತಿಕರವಾಗಿ ಕಾರ್ಯ ಸಾಗಿಸಲಾಗುತ್ತದೆಯೇ?

ನಮ್ಮ ಶಿಕ್ಷಣ ಪದ್ಧತಿಯು ವಿದ್ಯಾರ್ಥಿ ಹಾಗು ಶಿಕ್ಷಕ ಇವರಿಬ್ಬರಲ್ಲಿ ಒಬ್ಬರನ್ನು ಕೂಡ ಉದ್ಧರಿಸವೆ—ಧನ್ಯನನ್ನಾಗಿ ಮಾಡದೆ, ರಾಷ್ಟ್ರೀಯ ಭಾವನೆಗೆ ಸಂಬಂಧಿಸದೆ ರಾಷ್ಟ್ರದ ಅವಶ್ಯಕತೆಗಳಿಗೆ ಹೊಣೆಯಾಗಿರದ ಮತ್ತು ರಾಷ್ಟ್ರೀಯ ಸಮಸ್ಯೆಗಳ ಚಿಂತನೆಯಿಲ್ಲದೆ ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿನ ವರೆಗೆ ಹಾಗೆಯೇ ಸಾಗುತ್ತದೆ. ಮೇಲಿನ ಆ ಪ್ರಶ್ನೆಗಳೆಲ್ಲ ನೇರವಾಗಿ ನಮ್ಮನ್ನು ಇದೇ ನಿರ್ಣಯದೆಡೆಗೆ ತಂದು ನಿಲ್ಲಿಸುತ್ತದೆ. ಹಿಂದಿನ ಸಂಸ್ಕೃತಿಯಲ್ಲಿದ್ದ ಅಸ್ಥೆಗೆ ಇಂದಿನ ಯುಗಮಾನದ ಪ್ರಶ್ನಾವಳಿಗೆ ಮತ್ತು ಭವಿತವ್ಯದ ಭಯ ಹಾಗೂ ಆಶೆ-ಆಕಾಂಕ್ಷೆಗಳಿಗೆ ನಿದರ್ಶನವಾಗಿ ನಿಲ್ಲುವ ಶಿಕ್ಷಣ ಮಾರ್ಗವನ್ನು ಇನ್ನೂ ನಮ್ಮ ಶಾಲೆಗಳು ಪರ್ಯಾಲೋಚಿಸಬೇಕಾಗಿದೆ

ಕೇವಲ ಭಾಷೆಯ ಬದಲಾವಣೆಯಿಂದಲೇ ನಮ್ಮ ಶಿಕ್ಷಣವು ಸುಲಭವಾಗಿ ವಿಕೃತಾವಸ್ಥೆಯೆಡೆಗೆ ಸಾಗುತ್ತಿದೆ ಎಂದು ಹೇಳುವಲ್ಲಿ ಅತಿಶಯೋಕ್ತಿಯೇನೂ ಇಲ್ಲವೆನ್ನುವಷ್ಟು ನಮ್ಮ ಶಿಕ್ಷಣವು ನಿಜಕ್ಕೂ ವ್ಯಕ್ತಿತ್ವ ರಹಿತವಾದುದೂ ವೈಶಿಷ್ಟ್ಯವಿಲ್ಲದುದೂ ಹಾಗೂ ಬಹುದೂರ ಸಿಡಿದು ನಿಲ್ಲುವಂತಹದೂ ಆಗಿದೆ. ವ್ಯಕ್ತಿತ್ವ ಹಾಗು ಉದ್ದೇಶಾತ್ಮಕತೆಯಲ್ಲಿಯ ಹಿನ್ನಡೆಯೇ ಭಾರತೀಯ ಶಿಕ್ಷಣದ ಪರಿಸ್ಫುಟ ಲಕ್ಷಣವಾಗಿದೆಯೆಂದು ಸಂಕ್ಷೇಪವಾಗಿ ಸೂಚಿಸಬಹುದು.

ಪರದೇಶಗಳಿಂದ ಬೆಳಕು:—

ನಮ್ಮ ನಾಗರಿಕರಿಗೆ, ಪ್ರಥಮತಃ ತಾವು ಪ್ರಾಮುಖ್ಯವಾಗಿ ಭಾರತೀಯರಾಗಿದ್ದಾರೆಯೇ ವಿನಃ ಇತರ ಪಕ್ಷಪಂಗಡಗಳ ಜಾತಿಮತಗಳ ಸದಸ್ಯರಾಗಿಲ್ಲವೆಂಬ ಭಾವನೆಯನ್ನು ತಂದು ಕೊಡಬೇಕೆನ್ನುವ ಸದ್ಯ ಭಾರತದ ಮುಂದಿರುವ ಆ ಸಮಸ್ಯೆ ಹಿಂದೆಂದೂ ಎಲ್ಲಿಯೂ ಘಟಿಸದಂತಹದೇನೂ ಅಲ್ಲ ಇತರ ರಾಷ್ಟ್ರಗಳೂ ಇಂತಹ ಪರಿಸ್ಥಿತಿಯನ್ನೇ ಎದುರಿಸಬೇಕಾಯಿತು. ಅಂತೆಯೇ ಅವುಗಳ ಅನುಭವದ ಮಾರ್ಗದರ್ಶನ ಮತ್ತು ಪ್ರೋತ್ಸಾಹಗಳನ್ನು ಪಡೆದರೆ ಸದ್ಯ ಉಪಯೋಗವಾದರೂ ಆದೀತು.

ಭಾರತದಲ್ಲಿಯ ಎರಡು ತೊಡಕುಗಳನ್ನನುಲಕ್ಷಿಸಿ, ಜನಾಂಗ-ಜನಾಂಗಗಳಲ್ಲಿಯ ವಿಜಾತೀಯತೆಗೆ ಪ್ರತಿಯಾಗಿ ಯುನೈಟೆಡ್ ಸ್ಟೇಟ್ಸದಲ್ಲಿ ರಾಷ್ಟ್ರೀಯ ಸಂಘಟನೆ ಇರುವುದೆಂಬುದನು ಅರಿತುಕೊಳ್ಳುವುದು ಸಮಾಧಾನಕರವಾದ ಸಂಗತಿಯಾಗಿದೆ ಫ್ರೆಂಚ್ ಭಾಷೆಯನ್ನಾಡುವ ಜರ್ಮನ್ ಭಾಷೆಯನ್ನಾಡುವ ಇಟಲೀ ಭಾಷೆಯನ್ನಾಡುವ ಪ್ರದೇಶಗಳೆಂಬುವಾಗಿ ವಿಭಾಗಿಸಲ್ಪಟ್ಟಿದ್ದರೂ ಮತ್ತು ತಮಗೆ ತಕ್ಕಂತಹ ತಮ್ಮದೇ ಆದ ಒಂದು ಭಾಷೆಯು ಅವರಿಗೆ ಇರದಿದ್ದರೂ ಸ್ವಿಸ್ ಜನತೆಗೆ ಒಂದು ರಾಷ್ಟ್ರೀಯ ಜೀವನವಿದೆ ಜರ್ಮನಿಯಲ್ಲಾಗಲೀ ಇಲ್ಲವೆ ಇಂಗ್ಲಂಡಿನಲ್ಲಾಗಲೀ ಇರುವ ಧಾರ್ಮಿಕ ಕ್ಷೇತ್ರದಲ್ಲಿಯ ವಿಚ್ಛಿನ್ನತೆಯು ಅಲ್ಲಿಯ ರಾಷ್ಟ್ರೀಯ ಸಂಘಟನೆಯ ಹಾದಿಯಲ್ಲಿ ಕಾಲ್ತೊಡಕಾಗಿ ನಿಂತಿಲ್ಲ.

ದೇಶದ ಜನತೆಯಲ್ಲಿ ಕಂಡು ಬರುವ ಸಾಮಾನ್ಯ ಪರಂಪರೆಯು ರಾಷ್ಟ್ರೀಯ ಭಾವನೆಯ ಜಾಗೃತಿಯನ್ನುಂಟು ಮಾಡುವ ಅತಿ ಪ್ರಬಲವಾದ ಘಟಕಗಳಲ್ಲಿ ಒಂದಾಗಿವೆ. "ರಾಷ್ಟ್ರೀಯತೆ ಮತ್ತು ಅಂತರ್‌ರಾಷ್ಟ್ರೀಯತೆ" ಎಂಬ ತಮ್ಮ ಹೊತ್ತಿಗೆಯಲ್ಲಿ ರ್‍ಯಾಮ್ಸೇ ಮುಯಿರ(Ramsay Muir)ರು "ವೀರಪತ್ನಾದ ಕೃತಿಗಳು—ಧೀರೋದಾತ್ತತೆಯಿಂದ ಸಹಿಸಿದ ಕಷ್ಟ—ನಷ್ಟಗಳು—ಇವೆಲ್ಲವು ರಾಷ್ಟ್ರೀಯ ಭಾವನೆಯನ್ನು ಪೋಷಿಸುವಂಥ ಅಮ್ಯಾಕದುಣಿ ಸನ್ನೀಯುತ್ತವೆ ಆ ರಾಷ್ಟ್ರಗಳ ಆತ್ಮಶಕ್ತಿ

(೧೬ನೇ ಪುಟ ನೋಡಿರಿ)

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಳ್ಳಿ, ತಾಮ್ರ ಹಿತ್ತಾಳಿ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ
ರಥಬೀದಿ ಉಡುಪಿ.

'ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ ೧೯೧೦)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರಿ,

ಇವರ
ನವಜೀವಾತು
ಎಂಬ
ಸೂತಿಕಾರಸಾಯನ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ನೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವರಸಾಯನ.



ಹೆಚ್ಚಿನ ಮಾಹಿತಿಗೆ— ಡಾ| ಯಂ. ಸಿ. ಶಾಸ್ತ್ರೀ, ಯಲ್. ಐ. ಎಂ.
ಕೊಡಿಯಾಲಬೈಲು ಪೋಸ್ಟು, (ಮಂಗಳೂರು)
ಸ್ಥಾನಿಕರು:— ಡಾ| ವಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ

ಯನ್ನು ರೂಪಿಸುವ ಪವಿತ್ರಮಯವಾದ ಮತ್ತು ಅವಿನಾಶಿಯಾದ ಪರಂಪರೆಗಳು ಇವುಗಳಿಂದಲೇ ಸ್ಫುರಣಗೊಂಡಿವೆ" ಎಂಬುದಾಗಿ ಹೇಳುತ್ತಾರೆ. ರಾಷ್ಟ್ರೀಯತೆಯ ತಿರುಳೂ ಒಂದು ಸ್ಥಾಯೀಭಾವವೇ ಆಗಿದೆ.

ಮೇಲಿನ ಈ ಸಂಗತಿಗಳನ್ನು ಗಮನಿಸಿದರೆ, ಮೂಲದಲ್ಲಿ ಸಂಘಟನೆಯು ಅವೆಷ್ಟೋ ಮೂಲ ತತ್ವಗಳೇ ಅಸ್ತಿತ್ವದಲ್ಲಿರದಂಥ ಪ್ರದೇಶದಲ್ಲಿ ಕೂಡ ರಾಷ್ಟ್ರೀಯ ಭಾವನೆಯನ್ನು ಪೋಷಿಸಿ ಅದಕ್ಕೊಂದು ಮೂರ್ತ ಸ್ವರೂಪವನ್ನು ಕೊಡಬೇಕೆನ್ನುವುದು ಸುಸ್ಪಷ್ಟವಿದೆ. ಜರ್ಮನಿ ರಾಷ್ಟ್ರವು ಯುದ್ಧ ಸಾಗಿಸುವ ಬೇರೆ ಬೇರೆ ಪ್ರದೇಶಗಳ ಗುಂಪಾಗಿ ನಿಲ್ಲುವುದಕ್ಕಿಂತ ಹೆಚ್ಚಿನ ವಿಶೇಷತೆಯನ್ನು ತೋರದಿದ್ದರೂ, ಅಂಥದರಲ್ಲಿಯೇ ಸಮಸ್ತ ಜರ್ಮನಿಯೆಲ್ಲ ಅವಿನಾಶಿಯಾದ ರಾಷ್ಟ್ರವಾಗಿ ರೂಪುಗೊಂಡಿತು. ಇಟಲಿಯು ಮೊದಮೊದಲು ಕೈಕೊಂಡಿದ್ದುದು ಕೇವಲ ಭೌಗೋಲಿಕ ಏಕೀಕರಣವೇ ಆಗಿದ್ದರೂ – ಎರಡೇ ಎರಡು, ತಲೆಮಾರಿನ ಕಾಲಾವಧಿಯೊಳಗಾಗಿಯೇ ಅದು ಹುಡಿಗೂಡಿ ಹೋಗದ ರಾಷ್ಟ್ರವಾಗಿ ನಿಂತಿತು.

ಇತಿಹಾಸದಿಂದ ಕಲಿಯಬೇಕಾದ ಪಾಠ:—

ವಾಸ್ತವ ರೂಪಕ್ಕಿಳಿಯುವ ಮುನ್ನವೇ ಆದರ್ಶಾತ್ಮಕವಾದ ರಾಷ್ಟ್ರದ ಕಲ್ಪನೆ ಮೂಡಿ ಬಂದಿರಬೇಕು; ಅರಳಿ ನಿಂದಿರಬೇಕು ಮತ್ತು ಎಲ್ಲೆಡೆಯಲ್ಲಿಯೂ ಆ ಆದರ್ಶ ರಾಷ್ಟ್ರದ ಕಲ್ಪನೆಯು ಬೋಧಿಸಾಗಬೇಕೆಂಬುದೇ ಇತಿಹಾಸವು ನಮಗೆ ಕಲಿಸುತ್ತಿರುವ ಪಾಠವಾಗಿದೆ.

ಈ ಮಾತಿಗೆ ನಿದರ್ಶನವೆಂದರೆ ಇಟಲೀ ದೇಶವು ಇಟಲಿಯ ಕವಿಗಳು ತಮ್ಮ ರಾಷ್ಟ್ರವನ್ನು ಕುರಿತು ಹಾಡಿ ಹರಸಿದರು. ಇಟಲೀ ಜನತೆಯ ಹೃದಯವು ಅಭಿಮಾನದಿಂದ ಇಟಲೀ ದೇಶ ನಮ್ಮ ತಾಯ್ನಾಡೆಂದು ಸ್ಪಂದಿಸುವವರೆವಿಗೂ– ಆದರ್ಶಾತ್ಮಕ ರಾಷ್ಟ್ರವನ್ನಾಗಿ ಚಿತ್ರಿಸಲಾಯಿತಲ್ಲದೆ ಹಾಡಿ ಹೊಗಳಿದ್ದೂ ಆಯಿತು. ತದನಂತರ ಆದರ್ಶವಾದಿ ಮಜ್ಜಿನಿ (Mazzini) ಯ ಲೆಕ್ಕಣಿಕೆಯು ತಾಯ್ನಾಡಿನ ಅಭಿಮಾನದ ಪ್ರಖರತೆಯಿಂದ ಕಿಡಿಕಾರಿತು. ಯೋಧನೂ ಮತ್ತು ರಾಜಕಾರಣಿಯೂ ಆದ ಗ್ಯಾರಿಬಾಲ್ಡಿ (Garibaldi) ಯು ಇಟಲಿ ರಾಜಕಾರಣದ ಶಿಲ್ಪಿಯಾದ "ಆಧುನಿಕ ಐತಿಹಾಸಿಕ ಕ್ಷೇತ್ರದಲ್ಲಿ ರಾಷ್ಟ್ರೀಯತೆಯ ಉಗಮ (Rise of Nationality in Modern History) ಎಂಬ ತಮ್ಮ ಗ್ರಂಥದಲ್ಲಿ ಪ್ರೊಫೆಸರ ರೋಜರು (Prof. Rose) ಉದ್ಧರಿಸಿದ – ಇನ್ನೂ ಶೈಶವಾವಸ್ಥೆಯಲ್ಲಿದ್ದ ಇಟಲೀ ದೇಶವು ಪ್ರಚೋದಿಸಿದ ಹಾಗು ಅಲ್ಲಿಯ ರಾಷ್ಟ್ರಶಿಲ್ಪಿಗಳು ಸಂದರ್ಭ ಬಂದಾಗಲೆಲ್ಲ ಎತ್ತಿ ಹೇಳುತ್ತಿದ್ದ ಆ ಪ್ರತಿಜ್ಞೆಯೇನೂ ಕಡಿಮೆ ವೈಶಿಷ್ಟ್ಯದಿಂದೊಡಗೂಡಿಲ್ಲ:

"ದೇವದೇವನ ಸಾಕ್ಷಿಯಾಗಿ— ಸಮಸ್ತ ಇಟಲೀ ರಾಷ್ಟ್ರದ ಸಾಕ್ಷಿಯಾಗಿ— ಸ್ವಕೀಯರ ಮತ್ತು ಪರಕೀಯರ ನಿರಂಕುಶಾಧಿಕಾರಿತ್ವದ ತುಳಿತಕ್ಕೆ ಸಿಕ್ಕುಬಿದ್ದ ಪವಿತ್ರ ಇಟಲಿಯ ಘನೋದ್ದೇಶಕ್ಕಾಗಿ ಬಲಿದಾನ ಮಾಡಿದ ಹುತಾತ್ಮರ ಸಾಕ್ಷಿಯಾಗಿ— ನನ್ನ ತಾಯಿಗೆ ಜನ್ಮವಿತ್ತು ನನ್ನ ಮಕ್ಕಳುಮರಿಗಳಿಗೂ ನಿವಾಸಸ್ಥಾನವಾಗಿ ನಿಲ್ಲುವ ಈ ರಾಷ್ಟ್ರದ ಬಗೆಗೆ ಇದ್ದ ಪ್ರೀತಿ – ಪುರಸ್ಕಾರಗಳ ನಿಮಿತ್ತವಾಗಿ— ಪರಕೀಯ ರಾಷ್ಟ್ರಗಳ ನಾಗರಿಕರ ಸಮ್ಮುಖದಲ್ಲಿ ನಿಂತಾಗ, ನಾಗರಿಕತೆಯ ಹಕ್ಕು ಬಾಧ್ಯತೆಗಳು ನನಗಿಲ್ಲದಿರುವದನ್ನು ಕಂಡುಕೊಂಡಾಗ – ನನ್ನದೇ ಆದ ರಾಷ್ಟ್ರ— ರಾಷ್ಟ್ರಧ್ವಜ ನನಗಿಲ್ಲವಲ್ಲಾ ಎಂದು ತಿಳಿದು ಬಂದು ನಾಚಿಕೆಯಿಂದ ತಲೆ ತಗ್ಗಿಸಬೇಕಾದ ಪ್ರಸಂಗದ ನಿಮಿತ್ತವಾಗಿ— ನಮ್ಮ ಪ್ರಾಚೀನ ಹಿರಿಮೆಯ ಸ್ಮರಣೆಯಿಂದ ನಮಗಾಗುವ ಇಂದಿನ ನಮ್ಮ ಅಧಃಪತನದ ಅರಿವಿನ ನಿಮಿತ್ತದಿಂದ – ಗಲ್ಲಿಗೇರಿಸಲ್ಪಟ್ಟು ಹಸರಾದ - ಕಾರಾಗೃಹವಾಸದ ಕೈದಿಗಳಾಗಿ ಮರಣಕ್ಕೆ ತುತ್ತಾದ – ಗಡಿಪಾರಾಗಿ ಹುತಾತ್ಮರಾದ ತಮ್ಮ ಮಕ್ಕಳು ಮರಿಗಳಿಗಾಗಿ ಕಣ್ಣೀರಿನ ಕೋಡಿ ಮುನ್ನೀ ಹರಿಯಿಸುವ ಇಟಲಿಯ ತಾಯಂದಿರ ನಿಮಿತ್ತವಾಗಿ – ಕಷ್ಟ ಕಾರ್ಪಣ್ಯಗಳಿಗೆ ತುತ್ತಾದ ಲಕ್ಷಾನುಲಕ್ಷ ಜನತೆಗಾಗಿ ನನ್ನ ಸಮಸ್ತವನ್ನೂ ಸರ್ವಾರ್ಪಣ ಭಾವದಿಂದ ಸಮರ್ಪಿಸಲು ಮತ್ತು ಆ ಚಿರಂತನವಾಗಿ ಇಟಲೀ ದೇಶವನ್ನು ಸ್ವತಂತ್ರ ಪ್ರಜಾಪ್ರಭುತ್ವವಾದಿ ರಾಷ್ಟ್ರವನ್ನಾಗಿ ಮಾಡಲು ಎಂದೆಂದಿಗೂ ಹೆಣಗುವುದಾಗಿ ನಾನು ಪ್ರತಿಜ್ಞೆ ಮಾಡುತ್ತೇನೆ.

ಇಟಲೀ ದೇಶವು ಆ ಕಾಲ್ಪನಿಕ ಜಗತ್ತಿನಿಂದ ವಾಸ್ತವಿಕ ಪ್ರಪಂಚಕ್ಕೆ ಬಂದಿಳಿಯಿತು; ಹೊಸ ಇಟಲಿಯ ಉದಯವಾಯಿತು.

ದುಗುಡ ದುಮ್ಮಾನಗಳ ಅನುಭವದಲ್ಲಿಯೂ ಕೂಡ ಅಮೇರಿಕೆಯ ಸಂಯುಕ್ತ ಪ್ರಾಂತಗಳು (United States of America) ಅನೇಕ ಜನಾಂಗಗಳನ್ನು ನಾನಾ ಧರ್ಮಗಳನ್ನು ವಿವಿಧ ಸಂಸ್ಕೃತಿಗಳನ್ನು ಬಗೆಬಗೆಯ ರಾಷ್ಟ್ರೀಯ ಭಾವನೆಗಳನ್ನು ಮತ್ತು ತರತರದ ಭಾಷಾ ಗುಂಪುಗಳನ್ನು ಏಕತ್ರವಾಗಿ ಎರಕ ಹೊಯ್ದು ಆಧುನಿಕ ರಾಷ್ಟ್ರವಾಗಿ ಪರಿವರ್ತಿತವಾಗಿರುವದರಿಂದ ಮಿತ್ರ ರಾಷ್ಟ್ರವಾಗಿ ನಿಲ್ಲಬಹುದಾಗಿದೆ. ಅಲ್ಲಿಗೆ ವಲಸೆ ಬಂದ ಪರರಾಷ್ಟ್ರದ ಜನರು ಅಮೇರಿಕನ್ನರಾಗಿ ಮಾರ್ಪಾಟಾಗುವ ಆವಶ್ಯಕತೆಯನ್ನು ಬಹು ಮುಂಚೆಯೇ ಪರಿಶೀಲಿಸಿ, ಪರರಾಷ್ಟ್ರಗಳಲ್ಲಿ ಜನಿಸಿದ ಅವರನ್ನೆಲ್ಲ ತನ್ನಲ್ಲೇ ಗರ್ಭೀಕರಿಸಿಕೊಳ್ಳುವುದಕ್ಕಾಗಿ ಕಾರ್ಯಕ್ರಮಗಳ ಪಟ್ಟಿಯೊಂದನ್ನು ಕುರಿತು ಅದು ಯೋಜಿಸಿತು. ಅದರಂತೆಯೇ ಅಲ್ಲಿಯ ಶಾಲೆಗಳು ನಖಶಿಖಾಂತ— ರಾಷ್ಟ್ರಾಭಿಮಾನವುಳ್ಳ ವ್ಯಕ್ತಿಗಳನ್ನು ರೂಪಿಸಲು ಹೃತ್ಪೂರ್ವಕವಾಗಿ ತಮ್ಮ ಸಹಕಾರದ ಹಸ್ತವನ್ನು ನೀಡಿದವು. ರಾಷ್ಟ್ರ ನಿರ್ಮಾಣದ ಆ ತಾಂತ್ರಿಕ ರೀತಿಯನ್ನು ಸರಿಯಾಗಿ ಕಲಿಯಬೇಕಾದುದು ಇಲ್ಲಿ ಅದೆಷ್ಟೋ ಇದೆ.

ಪ್ರಾಮುಖ್ಯತೆ:—

೧೯೪೭ನೆಯ ಆಗಸ್ಟ ೧೫ನೆಯ ದಿನಾಂಕದಿಂದೀಚೆಗೆ ಗತಿಸಿದ ದಿನಮಾನಗಳಲ್ಲಿ ಭಾರತದ ಧುರೀಣರು ಈ ಮೊದಲೆಂದೂ ತೋರದ ಕುತೂಹಲತೆಯುಳ್ಳವರಾಗಿ ರಾಷ್ಟ್ರೀಯ ಸಂಘಟನೆ ಜಾತಿ ಜಾತಿಗಳಲ್ಲಿ ರೂಪುಗೊಳ್ಳಬೇಕಾದ ಸಮರಸ ಜೀವನ— ಧೀಶಕ್ತಿಯ ಮಹಾ ನಾಗರೀಕತೆ ಇವೆಲ್ಲವುಗಳ ಶಿಕ್ಷಣಕ್ಕೆ ಆಗ್ರಸ್ಥಾನವಿರಬೇಕೆಂಬ ವಿಷಯದಲ್ಲಿ ತುಂಬಾ ಎಚ್ಚತ್ತಿದ್ದಾರೆ. ದಾಸ್ಯದ ಶೃಂಖಲೆಗಳನ್ನು ಬಿಸುಟು ಭಾರತವು ಬಿಡುಗಡೆ ಹೊಂದಿ ಸರ್ವತಂತ್ರ ಸ್ವತಂತ್ರ ರಾಷ್ಟ್ರವಾಗಬೇಕೆಂದು ಅದೆಷ್ಟೋ ದಶಕಗಳ ವರೆಗೆ ಹೋರಾಡಿದ— ರಾಷ್ಟ್ರಕ್ಕಾಗಿ ಸರ್ವಸ್ವವನ್ನೂ ತ್ಯಾಗ ಮಾಡಿದ ಜನತೆಯ ಆಶೆ- ಆಕಾಂಕ್ಷೆಗಳ— ದೃಷ್ಟಿಪಾಟಗಳ ಸಿದ್ಧಿಯನ್ನು ಸ್ವತಂತ್ರ ಭಾರತದ ಮುಂಬರುವ ದಿನಮಾನಗಳಲ್ಲಿ ಕಂಡುಕೊಳ್ಳಬೇಕಾದರೆ ನಮ್ಮ ದೇಶದಲ್ಲಿಯ ಶಾಲೆಗಳು ಉತ್ತಮ ನಾಗರಿಕರನ್ನು ತರಬೇತುಗೊಳಿಸುವ ಗರಡಿಗಳಾಗಿ ಪರಸ್ಪರರನ್ನು ಒಂದು ಗೂಡಿಸುವ ಸಾಧನ ಸಾಮಗ್ರಿಗಳಾಗಿ ಹೆಚ್ಚು ಹೆಚ್ಚು ಜಾಗರೂಕತೆಯಿಂದ ವಿವೇಕತನದಿಂದ ಕಾರ್ಯನಿರತವಾಗಿ ಶತಕ್ಕದ್ದು.

ಅನುವಾದಕರು:– ಶ್ರೀ ಎಸ್. ಎಸ್. ಬಸುಪಟ್ಟದ, ಎಂ. ಎ; ಬಿ. ಟಿ. ವಿಶೇಷ ಸಂಚಿಕೆಗೆ ಬಂದದ್ದು.

(೧ನೇ ಪುಟದಿಂದ ಮುಂದರಿದುದು.)

ಕಾಂಗ್ರೆಸು ವ್ಯವಹಾರಿಕ ರೂಪದ ಪ್ರವಾಹಕ್ಕೆ ಇದಿರಾಗಿ ದೋಣಿ ಸಾಗಿಸುವ ಪ್ರಯಾಸದಲ್ಲಿದ್ದರೆ, ಉಳಿದ ಪಕ್ಷಗಳು ಭಗವಸೆಯ ಒಯ್ಲು ನೀರಿನಲ್ಲಿ ತಮ್ಮ ನೌಕೆಯನ್ನು ಬಿಡುವ ಹುಮ್ಮಸ್ಸಿನಲ್ಲಿವೆ. ಎಲ್ಲ ಪಕ್ಷಗಳ ಧುರೀಣರೂ ಇದು ವರೆಗಿನ ಅನುಭವವನ್ನು ವರ್ಣಿಸುತ್ತಾ ತಂತಮ್ಮ ಪಕ್ಷದ ಹುರಿಯಾಳುಗಳಿಗೇ ಅಧಿಕ ಮತ ದೊರೆಯುವುದೆಂಬ ನಿಶ್ಚಿತ ಅಭಿಪ್ರಾಯವನ್ನು ವ್ಯಕ್ತಗೊಳಿಸುವರು. ನಿಜವಾಗಿ ಜನರ ತೀರ್ಮಾನ ಹೇಗೆ ನಿಲ್ಲುವುದೆಂಬುದನ್ನು ಚುನಾವಣಾ ಫಲಿತಾಂಶವೇ ಹೇಳಬೇಕು.

SEASON DEPOSITS.

Are now accepted for periods from 3 to 6 months 3½% interest per annum for amounts of Rs. 500/- and multiples thereof. No deposit is allowed to run beyond 15—10—1954.

Attractive rates of interest are offered for Fixed Deposits for periods ranging from 1 to 24 months.

Banking transactions of all kinds are undertaken.

Branches throughout South Kanara, and one each in Mercara and Fort, Bombay.

THE VIJAYA BANK LIMITED,
Head Office: **MANGALORE.**

ಲಕ್ಷಾಂತರ ಜನರು ಗುಣಹೊಂದಿದ್ದಾರೆ:

ಸರ್ ಜೀವನ್ ಶಿಲಾಜಿತ್‌ಲೇಹ

ಶಿಲಾಜಿತ್ ಹಿಮಾಲಯದ್ದು ಔಷಧಿಗಳ ರಾಜ; ಮೂಲಿಕೆಗಳೊಡನೆ ಸೇರಿಸಿದ ಲೇಹ್ಯ, ದೇಹಶಕ್ತಿ, ಹೊಟ್ಟೆನೋವು, ಅನ್ನ ಸೇರದಿರುವಿಕೆ, ಕೆಮ್ಮು, ದಮ್ಮು, ಬಹುಮೂತ್ರ ಮತ್ತು ವಾಯುವಿನಿಂದಾಗುವ ಎಲ್ಲಾ ರೋಗನಿವಾರಕ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, ಹೆಂಗಸರ ಮತ್ತು ಮಕ್ಕಳ ಸರ್ವರೋಗ ನಿವಾರಕ ಅಮೂಲ್ಯ ರತ್ನ. ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು.

೪೮ ದಿನದ ಲೇಹ್ಯ ರೂ. ೫-೪-೦, ೨೨ ದಿನದ ಲೇಹ್ಯ ರೂ. ೩-೪-೦. (ಪೋಸ್ಟೇಜು ಮಾಫಿ)

ನೀಲಗಿರಿ ಡಿಪ್ಪೊ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ.

ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪ್ಪೋವಿನಲ್ಲಿ ಕೇಳಿರಿ.

ಭರ್ತ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ- ೧ ಬಾಟ್ಲಿಗೆ — ರೂ. ೫–೮–೦ .... ಪೋಸ್ಟು ಖರ್ಚು ರೂ. ೦–೧೪–೦

—:ವಿಳಾಸ:—

ಹಾಲಪ್ಪಾ ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ಋತುಸ್ರಾವ ನಿಂತಿತು

"ಕುಮಾರಿ" ಬಿಲ್ಲೆಗಳನ್ನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು, ಹತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ಶೀಘ್ರ ಗುಣಹೊಂದಬಹುದು. ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ– ಬೆಲೆ: ರೂ. 3/–; ಸ್ಪೆಶಲ್ ರೂ. 5–. ಅಧಿಕಾಧಿಕ ಸ್ಪೆಶಲ್ ರೂ 8–[ವಿ. ಪಿ. ಖರ್ಚು ಪ್ರತ್ಯೇಕ]

Mrs. P. DEVEE, P.Ds. (N.J.)
CALCUTTA. 40

ಸ್ಟಾಕಿಸ್ಟರು: ಶಹಾ ಕಂಪನಿ, ಮಂಗಳೂರು.

Edited, Printed & Published By K. H. Shetty at the Navayuga Press, Udipi, S. India

Regd. No. M. 3618

Licence No. 31
Licensed to Post without Prepayment

ನವಯುಗ

Vol.33 No 24

18-2-1954

ವರ್ಷ ೩೩ ವಾರ ೨೪

ಜೈನರ ಸುಪ್ರಸಿದ್ಧ ಯಾತ್ರಾಸ್ಥಳವಾದ ಬಿಹಾರು ರಾಜ್ಯದ ಪೋವಾಪುರಿ ಎಂಬಲ್ಲಿ ದಿನಾಂಕ ೭ ರಿಂದ ಮೂರು ದಿನಗಳವರೆಗೆ ಭಾರತ ಸೇವಕ ಸಮಾಜದ ಪರಿಷತ್ತೊಂದು ಜರಗಿತು. ಯೋಜನಾ ಆಯೋಗದ ಉಪಾಧ್ಯಕ್ಷರಾದ ಶ್ರೀ ಗುಲಜಾರಿಲಾಲನಂದಾರವರು ಅಧ್ಯಕ್ಷತೆಯನ್ನು ವಹಿಸಿದ್ದರು. ಮದ್ರಾಸು, ಬರೋಡಾ, ಅಜಮೀರ, ದಿಲ್ಲಿ, ಹೈದರಾಬಾದ, ಗುಜರಾತ ಮಧ್ಯಪ್ರದೇಶ, ನಾಗಪುರ, ಮಹಾಕೋಸಲ, ವಿದರ್ಭ, ಪೆಪ್ಸು ಮುಂತಾದೆಡೆಗಳಿಂದ ೫೦ ಪ್ರತಿನಿಧಿಗಳೂ ೧೬೦ ಗ್ರಾಮಸೇವಕರೂ ಬಿಹಾರದ ಹಲವು ಹಳ್ಳಿಯ ಮುಖ್ಯಸ್ಥರೂ ಈ ಪರಿಷತ್ತಿನಲ್ಲಿ ಭಾಗವಹಿಸಿದರು.

ಯೋಜನೆಯನ್ನು ಕೆಳಗಿನಿಂದ ಮೊದಲು ಮಾಡುವ ವಿಚಾರವನ್ನು ಪರಿಶೀಲಿಸುವುದಕ್ಕೆ ಈ ಪರಿಷತ್ತನ್ನು ಕರೆಯಲಾಯಿತು. ಇಂತಹ ಯೋಜನೆಯ ಮುಖ್ಯೋದ್ದೇಶವೆಂದರೆ "ಭಾರತದ ಅಪಾರ ಮನುಷ್ಯ ಶಕ್ತಿಗೆ ಯೋಗ್ಯ ಉದ್ಯೋಗಗಳನ್ನು ಒದಗಿಸಿ ಕೊಡುವ ಮೂಲಕ ಉತ್ಪಾದಕ ಕಾರ್ಯಗಳಲ್ಲಿ ಪ್ರಗತಿ ಸಾಧಿಸುವುದು, ದೇಶದ ಸಾಧನ ಸಂಪತ್ತುಗಳನ್ನು ಪೂರ್ಣ ಪ್ರಯೋಜನ ಲಭ್ಯವಾಗುವಂತೆ ಉಪಯೋಗಿಸುವುದು, ಅಭಿವೃದ್ಧಿ ಪ್ರಯತ್ನಗಳಲ್ಲಿ ಮತ್ತು ವಿಧಾಯಕ ಕಾರ್ಯಗಳಲ್ಲಿ ಜನರು ಹೆಚ್ಚು ಹೆಚ್ಚಾಗಿ ಭಾಗವಹಿಸುವಂತೆ ಮಾಡುವುದು ಮತ್ತು ಪ್ರಜಾಪ್ರಭುತ್ವದ ಘನವಾದ ಆದರ್ಶಕ್ಕೆ ಅನುಗುಣವಾಗಿ ಜನರು ವರ್ತಿಸಿ, ಅದನ್ನು ಬಲಗೊಳಿಸುವುದು." ಎಂದಾಗಿ ನಂದಾರವರು ಹೇಳಿದರು.

ಜನರಲ್ಲಿ ರಚನಾತ್ಮಕ ಕೆಲಸಗಳ ಬಗ್ಗೆ ಆಸ್ಥೆಯನ್ನು ಜಾಗೃತಗೊಳಿಸುವ ಉದ್ಯಮದಲ್ಲಿ ಭಾರತ ಸೇವಕ ಸಮಾಜ ಪ್ರವೃತ್ತವಾಗಿರುತ್ತದೆ ದೇಶದ ಮುಂದಿರುವ ಮೊದಲನೆ ಪಂಚವಾರ್ಷಿಕ ಯೋಜನೆಯ ಸಂದೇಶವನ್ನು ಹರಡುವುದು ಸಮಾಜದ ಈಗಿನ ಕರ್ತವ್ಯ. ಆದರೆ ನಾವು ಬಯಸುವುದನ್ನೆಲ್ಲ ಯೋಜನೆಯ ಐದು ವರ್ಷಗಳ ಕಾಲದಲ್ಲಿ ಪಡೆಯುವುದು ಕಷ್ಟಸಾಧ್ಯ—ಯೋಜನೆಯ ಮೇಲೆ ಯೋಜನೆಗಳನ್ನು ರೂಪಿಸಿಕೊಂಡು, ಅವುಗಳಲ್ಲಿ ನಿರ್ದಿಷ್ಟಗೊಳಿಸಿದಂತೆ, ಸರಕಾರವೂ ಜನತೆಯೂ ಮುಂದಿನ ಹತ್ತಿಪ್ಪತ್ತು ವರ್ಷಗಳ ಕಾಲ ಕಾರ್ಯತತ್ಪರವಾಗಬೇಕಾಗುವುದು. ಸರಕಾರದ ಕಡೆಯಿಂದ ಉತ್ತೇಜನ ಮತ್ತು ಸಾಧನ ಸಲಕರಣೆಗಳು ದೊರೆತಂತೆ, ಜನರು ಶ್ರಮದಾನ, ಭೂಮಿದಾನ, ಸಂಪತ್‌ದಾನ ಮುಂತಾದವುಗಳಲ್ಲಿ ಸಹಕರಿಸಿ ದುಡಿದರೆ, ದೇಶವನ್ನು ಸಮೃದ್ಧ ಮಾಡುವ ನಮ್ಮ ಪ್ರಯತ್ನ ಇಮ್ಮಡಿ ವೇಗದಿಂದ ಫಲದಾಯಕವಾಗುತ್ತದೆ.

ನಮ್ಮ ಪ್ರಗತಿಯನ್ನು ಯಾರೊಬ್ಬರೂ ಬಹುಮಾನ ರೂಪದಲ್ಲಿ ಕೊಡುವುದು ಅಸಾಧ್ಯವಾದ ಮಾತು. ನಮ್ಮ ಪರಿಶ್ರಮ, ನಮ್ಮ ಬುದ್ಧಿವಂತಿಕೆ, ನಮ್ಮ ಮುನ್ನೋಟಗಳನ್ನೆ ನಮ್ಮ ಪ್ರಗತಿಯೂ ಅವಲಂಬಿಸಿರುತ್ತದೆ. ಸರಕಾರವು ನಿರ್ವಹಿಸಬೇಕಾದ ಕೆಲಸಗಳಿರುವಂತೆ, ಜನರೂ ಸಹ ಪೂರೈಸಬೇಕಾದ ಹೊಣೆಗಾರಿಕೆಗಳಿರುತ್ತವೆ. ಜನರು ಜಾಗೃತರಾಗಿ ಗೊಳಿಸುವುದರಲ್ಲಿ ಜನರು ನೇರಾಗಿ ಹೆಚ್ಚು ಆಸ್ಥೆಯನ್ನು ತೋರಿಸಲಿಲ್ಲ ತಮ್ಮ ಆವಶ್ಯಕತೆಗಳನ್ನು ಸರಕಾರದ ಮುಂದಿಡುವುದಕ್ಕೆ ಮತ್ತು ತಮ್ಮಿಂದಾದ ಸಹಾಯವನ್ನು ಸಲ್ಲಿಸುವುದಕ್ಕೆ ಜನರಿಗೆ ಅಧಿಕ ಅವಕಾಶ ದೊರೆಯಲಿಲ್ಲವೆಂದೂ ಹೇಳಬಹುದು ಎರಡನೆಯ ಪಂಚವಾರ್ಷಿಕ ಯೋಜನೆ ಇನ್ನೆರಡು ವರ್ಷಗಳಲ್ಲಿ ಕಾರ್ಯಾನ್ವಿತಗೊಳ್ಳಲಿದೆ. ಆಗ ನಾವು ಉತ್ಸಾಹದಿಂದ ಯೋಜನೆಯಲ್ಲಿ ಭಾಗವಹಿಸಲು ಅನುಕೂಲವಾಗುವಂತೆ ಈಗಲೇ ಕಾರ್ಯಕ್ರಮವನ್ನು ಸಿದ್ಧಗೊಳಿಸುವ ಉಭಯ ಕೆಲಸವನ್ನು ಕೈಗೊಳ್ಳಬೇಕು.

ಯೋಜನೆಯ ಮೂಲ ಘಟಕ

ದ್ದುಕೊಂಡು, ತಮ್ಮ ಕರ್ತವ್ಯವನ್ನು ದಕ್ಷತೆಯಿಂದ ನೆರವೇರಿಸುತ್ತಿದ್ದರೆ ಸರಕಾರದ ಮೇಲೆ ಅವರ ನಿಯಂತ್ರಣವೂ ವರ್ಚಸ್ಸೂ ಹೆಚ್ಚುತ್ತದೆ. ಜನರು ನೈತಿಕ ಆದರ್ಶವನ್ನು ಅಂಗೀಕರಿಸಿ, ನಿತ್ಯ ವ್ಯವಹಾರದಲ್ಲಿ ಅದನ್ನು ಅಳವಡಿಸಿಕೊಂಡ ಪಕ್ಷದಲ್ಲಿ ಸರಕಾರದ ಬಲವನ್ನು ಹೆಚ್ಚಿಸಿದಂತಾಗುವುದು ಪರಸ್ಪರ ಸಹಾನುಭೂತಿ ಮತ್ತು ಸಹಕಾರ, ಶಿಸ್ತು ಮತ್ತು ತ್ಯಾಗಬುದ್ಧಿ, ಸಮಾಜದ ಹಿತಕ್ಕೋಸ್ಕರ ಶ್ರಮದಾನ ಯಜ್ಞದಲ್ಲಿ ಸಾಮೂಹಿಕ ರೂಪದಲ್ಲಿ ಭಾಗವಹಿಸುವ ಮನೋಭಾವಗಳನ್ನು ನಾವೆಲ್ಲರೂ ಬೆಳೆಸಿಕೊಳ್ಳುವುದು ಆಪೇಕ್ಷಣೀಯವಾಗಿರುತ್ತದೆ

ಮೊದಲನೆಯ ಪಂಚವಾರ್ಷಿಕ ಯೋಜನೆ ಸ್ವಲ್ಪ ಅವಸರದಲ್ಲಿಯೇ ಸಿದ್ಧಗೊಂಡಿತೆಂದು ಹೇಳಬಹುದ—ಅದನ್ನು ಸಿದ್ಧ

ಯೋಜನೆಯು ಅಪರಿಮಿತ ಪ್ರಮಾಣದ ಬಂಡವಾಳವನ್ನು ಅಪೇಕ್ಷಿಸುವುದರಿಂದ, ಮೊದಲನೆಪಂಚವಾರ್ಷಿಕ ಯೋಜನೆಯ ಫಲವಾಗಿ, ಅಥವಾ ನಮ್ಮ ಪರಿಶ್ರಮದ ಕಾರಣದಿಂದ ಅಧಿಸಿದ ಅಧಿಕ ಉತ್ಪಾದನೆ ಹಾಗೂ ಸಂಪಾದನೆಯನ್ನು ಉಳಿಸಿಕೊಂಡು, ಅದನ್ನೆ ಪುನಃ ಬಂಡವಾಳವಾಗಿ ವಿನಿಯೋಗಿಸಲು ಸಿದ್ಧರಾಗಬೇಕು.

ದೇಶದ ಸರ್ವಾಂಗವನ್ನೂ ಕೆಳಗಿನಿಂದ ಕಟ್ಟುವ ಮತ್ತು ಪುನರ್ಘಟಿಸುವ ಪ್ರಯತ್ನ ನಮ್ಮದಾದುದರಿಂದ ಹಳ್ಳಿಯೇ ಈ ಯೋಜನೆಯ ಮೂಲ ಘಟಕವಾಗುತ್ತದೆ. ಮೊದಲನೆಯ ಪಂಚ ವಾರ್ಷಿಕ ಯೋಜನೆಯನ್ನು ಟೀಕಿಸಿದವರಲ್ಲಿ ಹಳ್ಳಿಯನ್ನು ಯೋಜನಾ ಆಯೋಗ ದುರ್ಲಕ್ಷಿಸಿತೆಂದು ಹೇಳಿದವರೇ ಹೆಚ್ಚು. ನಿರುದ್ಯೋಗದ ಸಮಸ್ಯೆಯನ್ನು ಸಂಹರಿಸುವುದಕ್ಕೆ ಯೋಜನೆಯ ಮೂಲ ಘಟಕವಾಗಿ ಹಳ್ಳಿಯನ್ನು ತೆಗೆದುಕೊಳ್ಳುವುದೇ ಉಪಾಯವೆಂದು ಸೂಚಿಸಿದವರುಂಟು. ಗಾಂಧೀಜಿಯವರು "ರಾಮರಾಜ್ಯ" ವೆಂದು ಹೇಳಿದಾಗ "ಗ್ರಾಮರಾಜ್ಯ"ವನ್ನೆ ಕಣ್ಣಮುಂದಿಟ್ಟುಕೊಂಡಿದ್ದರು. ಸರ್ವೋದಯವೆಂದೂ ನಾವು ಈ ಆದರ್ಶವನ್ನು ಸಾಮಾನ್ಯ ಮಾತಿನಲ್ಲಿ ಕರೆಯುತ್ತೇವೆ

ಆದುದರಿಂದ ಭಾರತ ಸೇವಕ ಸಮಾಜದ ಪರಿಷತ್ತಿನಲ್ಲಿ ಯೋಜನೆಯ ಮೂಲ ಘಟಕವಾಗಿ ಹಳ್ಳಿಯನ್ನು ಇಟ್ಟುಕೊಳ್ಳಬೇಕೆಂಬ ಗೊತ್ತುವಳಿಯು ಸ್ವೀಕಾರಗೊಂಡದ್ದು ಸ್ವಾಗತಾರ್ಹವಾಗಿರುತ್ತದೆ. ಪೂರ್ಣೋದ್ಯೋಗ, ಅತಿಹೆಚ್ಚಿನ ಸಮತೋಲವಾದ ಉತ್ಪಾದನೆ, ಸಾಂಸ್ಕೃತಿಕ ಅಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯಗಳ ಪ್ರಸ್ತಾಪನೆಯೇ ಇದರ ಉದ್ದೇಶವಾಗಿರುತ್ತದೆಂದು ಗೊತ್ತುವಳಿ ಹೇಳುತ್ತದೆ. ಈ ಯೋಜನೆಯ ಮೊದಲ ಹೆಜ್ಜೆಯೆಂದರೆ ಹಳ್ಳಿಗರಲ್ಲಿ ತಮ್ಮ ಆವಶ್ಯಕತೆಯನ್ನು ಸ್ವತಃ ಪೂರೈಸಿಕೊಳ್ಳಬೇಕೆಂಬ ಜಾಗೃತಿಯನ್ನು ಹುಟ್ಟಿಸುವುದು ಎರಡನೆಯ ಹೆಜ್ಜೆಯಾಗಿ, ಭಾರತ ಸೇವಕ ಸಮಾಜವು ಸಾಧ್ಯವಿದ್ದಲ್ಲೆಲ್ಲ ಪ್ರತಿಯೊಂದೂ ಹಳ್ಳಿಗೆ ಅಭಿವೃದ್ಧಿ ಯೋಜನೆಯನ್ನು ಸಿದ್ಧಗೊಳಿಸಬೇಕು, ಇದಕ್ಕೆ ಬೇಕಾದ ಕಾರ್ಯಕರ್ತರನ್ನು ತರಬೇತಿಗೊಳಿಸುವ ಮತ್ತು ಪ್ರಯೋಗಗಳನ್ನು ನಡೆಸುವ ಹೊಣೆಯನ್ನು ಸಮಾಜವೇ ವಹಿಸಬೇಕು ಹಳ್ಳಿಯ ಎಲ್ಲ ಸಂಪತ್ತನ್ನೂ ಸಮುಚಿತ ರೀತಿಯಲ್ಲಿ ಸಹಕಾರ ಪದ್ಧತಿಯಂತೆ ಬಳಸಿಕೊಂಡು ಅಭಿವೃದ್ಧಿ ಹೊಂದುವುದಕ್ಕೆ ಅವಕಾಶ ಕಲ್ಪಿಸಿಕೊಡುವುದು ಮತ್ತು ಈ ಕೆಲಸವನ್ನು ಪ್ರೋತ್ಸಾಹಿಸುವುದು ಭಾರತ ಸೇವಕ ಸಮಾಜ ಇಟ್ಟುಕೊಂಡ ಧ್ಯೇಯ

"ಕೆಳಗಿನಿಂದ ಯೋಜನೆ" ಎಂಬ ತತ್ವವನ್ನು ಅಂಗೀಕರಿಸಿದರೆ, ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿ ಕಾರ್ಯಕ್ರಮಕ್ಕೆ ಅತ್ಯಧಿಕಪ್ರಾಶಸ್ತ್ಯ ಸಲ್ಲುತ್ತದೆ—ಕೃಷಿ ಉತ್ಪಾದನೆ ಗಿಡಮರಗಳ ಸಂರಕ್ಷಣೆ ಪಶು ಸಂಗೋಪನೆ, ಸಾಮಾನ್ಯ ನೀರಾವರಿ ಕೆಲಸಗಳು, ಮಣ್ಣು ಕೊಚ್ಚಿ ಹೋಗುವುದನ್ನು ತಡೆಯುವುದು, ಅರಣ್ಯಗಳನ್ನು ಕಾಪಾಡುವುದು. ಹಳ್ಳಿಯ ಮಕ್ಕಳ ಶಿಕ್ಷಣದ ವ್ಯವಸ್ಥೆ. ಜನಶಿಕ್ಷಣದ ಕಾರ್ಯಕ್ರಮ, ಗುಡಿಕೈಗಾರಿಕೆಗಳ ಅಭಿವೃದ್ಧಿ, ಆರೋಗ್ಯ ಹಾಗೂ ಸಾಂಸ್ಕೃತಿಕ ಚಟುವಟಿಕೆ, ಇನ್ನಿತರ ಅಭಿವೃದ್ಧಿ ಪ್ರಯತ್ನ—ಇವಕ್ಕೆ ಮುಂದಿನ ಪಂಚವಾರ್ಷಿಕ ಯೋಜನೆಯಲ್ಲಿ ಸ್ಥಾನ ಸಿಗಬೇಕಾಗುವುದು. ಹಳ್ಳಿಯು

(೧೧ನೇ ಪುಟ ನೋಡಿರಿ)

ವೇತನ ದೊರೆಯುವ ಪ್ರತಿ ದಿವಸದಲ್ಲೂ ಸೇವಿಂಗ್ಸ್ ಬೇಂಕ್ ಲೆಕ್ಕದಲ್ಲಿ ಹಣವಿಡಲು ಪ್ರಾರಂಭಿಸಿರಿ.

ನಿಮ್ಮ ಸಂಪಾದನೆಯಲ್ಲಿ ನೀವು ಉಳಿಸಿಕೊಳ್ಳುವ ಅಂಶವೇ ಅತೀ ಮಹತ್ವದ್ದು ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟಿನಲ್ಲಿ ಸಹಸ್ರಾರು ಮಂದಿ ಸೇವಿಂಗ್ಸ್ ಲೆಕ್ಕ ತೆರೆದು ತಾವು ಉಳಿಸುವ ಹಣವನ್ನು ವೃದ್ಧಾಪ್ಯ ಅಪೇಕ್ಷಿತ ವಸ್ತುಗಳನ್ನು ಕೊಂಡುಕೊಳ್ಳಲು ಹೆಚ್ಚೇಕೆ, ಅನಿರೀಕ್ಷಿತ ಘಟನೆಗಳಿಗಾಗಿ ಮೀಸಲಿಡುತ್ತಾರೆ [illegible] ಎಂಬಂತೆ ನೀವು ಸಂಪಾದನೆ ಮಾಡುವ ಈ ಸಮಯವೇ ಹಣ ಉಳಿಸುವ ಸುವರ್ಣಕಾಲವಾಗಿದೆ ಪ್ರತಿ ತಿಂಗಳ ನಿಮ್ಮ ಸಂಬಳದಲ್ಲಿ ನೇಕಡಾ 10ರಷ್ಟನ್ನು ಸೇವಿಂಗ್ಸ್ ಲೆಕ್ಕದಲ್ಲಿರಿಸಿ ನಿಮ್ಮ ಆರ್ಥಿಕ ಅಭಿವೃದ್ಧಿ ಹಾಗೂ ಭಾವೀ ಭದ್ರತೆಯನ್ನು ಕಾಪಾಡಿಕೊಳ್ಳಲು ಮುಂದಾಗಿರಿ.

ವ್ಯವಹಾರ ವಹಿವಾಟು ರೂ ೩,00,00,000

THE CANARA INDUSTRIAL & BANKING SYNDICATE LTD.,
H O UDIPI. S. India.
Estd: 1925
ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್
ಸ್ಥಾಪನೆ ೧೯೨೫] [ಪ್ರಧಾನ ಕಚೇರಿ: ಉಡುಪಿ ದ ಭಾರತ

ಚಲಚ್ಚಿತ್ರ—ಜನಶಿಕ್ಷಣದ ಅಪೂರ್ವ ಮಾಧ್ಯಮ

ನಾವು ಚಲಚ್ಚಿತ್ರ ಮಂದಿರವನ್ನು ಪ್ರವೇಶಿಸಿದಾಗಲೆಲ್ಲ, ಮೊದಲಿಗೆ ಭಾರತ ಸರಕಾರದಿಂದ ರಚಿಸಲ್ಪಟ್ಟು, ಪ್ರಕಟಿಸಲಾದ ವಾರ್ತಾ ಚಿತ್ರವನ್ನೋ ಸಾಕ್ಷಿ ಚಿತ್ರವನ್ನೋ ನೋಡುತ್ತೇವೆ. ದೇಶದ ಪ್ರಗತಿಯ ಮೈಲುಗಲ್ಲುಗಳನ್ನು ನಾವು ಸಾಕ್ಷಿ ಚಿತ್ರಗಳಲ್ಲಿ ಗುರುತಿಸುತ್ತೇವೆ; ಮಹತ್ವದ ಘಟನೆಗಳ ಪರಿಚಯವನ್ನು ಸುದ್ದಿ ಚಿತ್ರಗಳಿಂದ ಮಾಡಿಕೊಳ್ಳುತ್ತೇವೆ. ವಾರಕ್ಕೆ ಒಮ್ಮೆ ಈ ಚಿತ್ರ ಪ್ರದರ್ಶನ ಬದಲಾಗುತ್ತದೆ.

ಯುದ್ಧಕಾಲದಲ್ಲಿ ಪ್ರಚಾರದ ಪ್ರಬಲ ಸಾಧನವಾಗಿ ಸುದ್ದಿ ಚಿತ್ರಗಳನ್ನು ಉಪಯೋಗಿಸಲಾಯಿತು. ಮನೋರಂಜನೆಗಾಗಿ ಚಲಚ್ಚಿತ್ರಗಳನ್ನು ನೋಡಲೆಂದು ಬರುವ ಸಾವಿರಾರು ಜನಕ್ಕೆ ಯುದ್ಧದ ಚಟುವಟಿಕೆಗಳನ್ನು ಚಿತ್ರ ಪ್ರದರ್ಶನದ ಮೂಲಕ ತೋರಿಸಿ ಕೊಟ್ಟು, ಬೇಕು ಬೇಕಾದ ನೆರವು ದೊರೆಯುವಂತೆ ಮನವೊಲಿಸುವ ಹಂಚಿಕೆಯಾಗಿ ಮೊದಲಿಗೆ ಈ ಪದ್ಧತಿ ಬಳಕೆಯಲ್ಲಿ ಇಳಿಯಿತು. ಸ್ವಾತಂತ್ರ್ಯೋತ್ತರದಲ್ಲಿ ಚಲಚ್ಚಿತ್ರದ ಮಾಧ್ಯಮವನ್ನುಪಯೋಗಿಸಿ ಜನತೆಗೆ ಶಿಕ್ಷಣ ಕೊಡುವ ಪದ್ಧತಿಯ ಸಂಪೂರ್ಣ ಪ್ರಯೋಜನವನ್ನು ಪಡೆಯಲು ಸರಕಾರ ಹವಣಿಸಿತು. ರಾಷ್ಟ್ರ ಕಲ್ಯಾಣದ ಹಿತಚಿಂತನೆಯನ್ನು ಕಟ್ಟಿಕೊಂಡ ಧುರೀಣರು ಚಲಚ್ಚಿತ್ರಗಳ ಮೂಲಕ ಓದು ಬರಹ ಬಾರದ ಅಶಿಕ್ಷಿತ ಜನರಿಗೆ ದೇಶವು ಹೊಂದುತ್ತಿರುವ ಪುರೋಗತಿಯ ಕಲ್ಪನೆ ಮಾಡಿಕೊಡುವುದಕ್ಕೆ ಮಹತ್ವವನ್ನೂ ಪ್ರಾಶಸ್ತ್ಯವನ್ನೂ ಸಲ್ಲಿಸಿದರು.

ಅದ್ಭುತ ಪ್ರಭಾವ

ಶ್ರವಣ ಮತ್ತು ದೃಷ್ಟಿ ಶಕ್ತಿಗಳೆರಡನ್ನೂ ಬಳಸಿಕೊಂಡು, ಬುದ್ಧಿಗೆ ಒಪ್ಪ ಕೊಡುವ ಸಾಧನಗಳಲ್ಲಿ ಚಲಚ್ಚಿತ್ರಗಳಿಗಿಂತ ಮಿಗಿಲಾದುದು ಇಲ್ಲವೆಂದರೆ ಅತಿಶಯೋಕ್ತಿಯಾಗದು. ಈಗಂತೂ ತ್ರಿಗಾತ್ರ ಚಲಚ್ಚಿತ್ರಗಳ ಅನ್ವೇಷಣೆಯಾಗಿರುವುದರಿಂದ, ಈ ಮಾಧ್ಯಮ ಪ್ರೇಕ್ಷಕರ ಮೇಲೆ ಅದ್ಭುತ ಪರಿಣಾಮವನ್ನುಂಟು ಮಾಡುವುದು ನಿಶ್ಚಯ. ಒಂದು ಸಾಮಾನ್ಯ ಚಲಚ್ಚಿತ್ರವು ನಿರ್ವಹಿಸುವ ಕೆಲಸಗಳನ್ನು, ಮಾಡುವ ಪರಿಣಾಮವನ್ನು ಪುಸ್ತಕಗಳು, ಪತ್ರಿಕೆಗಳು, ಆಕಾಶವಾಣಿಯ ಪ್ರಸಾರ ಭಾಷಣಗಳು—ಇವಾವುದರಿಂದಲೂ ಕೈಗೂಡಿಸಿಕೊಳ್ಳಲಾರೆವು.

ಇದನ್ನು ಮನಗಂಡು ಭಾರತ ಸರಕಾರದವರು ೧೯೪೮ನೇ ಇಸವಿಯಲ್ಲಿ ಸುದ್ದಿ ಮತ್ತು ಪ್ರಸಾರ ಶಾಖೆಯ ಅಂಗವಾಗಿ ಚಲಚ್ಚಿತ್ರ ವಿಭಾಗವೊಂದನ್ನು ಸ್ಥಾಪಿಸಿದರು. ಮುಂಬಯಿಯ ಪೆದ್ದಾರ ರೋಡಿನಲ್ಲಿ ಸರಕಾರದ ಚಲಚ್ಚಿತ್ರ ವಿಭಾಗದ ಕಾರ್ಯಾಲಯ ಮತ್ತು ಚಿತ್ರಗ್ರಹಣ ಮಂದಿರಗಳಿವೆ. ಮುಂಭಾಗದಲ್ಲಿ ಎದ್ದು ಬರುವ ತೆರೆಗಳಿಂದ ತುಂಬಿದ ಅರಬೀ ಸಮುದ್ರ, ಸುತ್ತಲೂ ಮನಮೋಹಕವಾದ, ಅಂದವಾಗಿ ಶೃಂಗರಿಸಿದ ತೋಟಗಳು—ಇವುಗಳ ನಡುವೆ ಚಲಚ್ಚಿತ್ರ ಗ್ರಹಣ ಮಂದಿರ ಸದಾಕಾಲ ಕಾರ್ಯ ತತ್ಪರವಾಗಿರುತ್ತದೆ.

ಸುದ್ದಿ ಮತ್ತು ಸಾಕ್ಷಿ ಚಿತ್ರಗಳಿಂದ ರಾಷ್ಟ್ರೀಯ ಚಟುವಟಿಕೆಗಳ ದಿಗ್ದರ್ಶನ

ಈ ಕೇಂದ್ರದಿಂದಲೇ ಭಾರತದಾದ್ಯಂತ ಪ್ರದರ್ಶನಕ್ಕೋಸ್ಕರ ಚಲಚ್ಚಿತ್ರಗಳು ಸಿದ್ಧಗೊಂಡು, ಕಳುಹಿಸಲ್ಪಡುತ್ತವೆ. ಭಾರತದ ಕೀರ್ತಿ ಗೌರವಗಳ ಸಂದೇಶವನ್ನು ಲೋಕದ ಮೂಲೆ ಮೂಲೆಗೂ ಚಿತ್ರಗಳ ಮೂಲಕ ಕೊಂಡೊಯ್ಯುವ ಘನವಾದ ಕಾರ್ಯವನ್ನು ಈ ಕೇಂದ್ರ ದಕ್ಷತೆಯಿಂದಲೂ ಹೊಣೆಗಾರಿಕೆಯಿಂದಲೂ ಪೂರೈಸುತ್ತದೆ. ಶ್ರೀ ಎಂ. ಭವನಾನಿ ಎಂಬ ಮಹನೀಯರು ಈ ಚಲಚ್ಚಿತ್ರಗಳನ್ನು ಉತ್ಪಾದಿಸುವುದರಲ್ಲಿ ಕಳೆದ ನಾಲ್ಕಾರು ವರ್ಷಗಳಿಂದ ಮನಃಪೂರ್ವಕ ದುಡಿದು, ಇದು ವರೆಗಿನ ಶ್ರೇಯಸ್ಸಿಗೆ ಕಾರಣಭೂತರೆನಿಸಿಕೊಂಡಿರುವರು. ಅವರ ಮೇಲ್ವಿಚಾರಣೆಯಲ್ಲಿ ನುರಿತ ತಂತ್ರಜ್ಞರು ಮತ್ತು ದಿಗ್ದರ್ಶಕರು ತಮ್ಮ ಎಲ್ಲ ಬುದ್ಧಿವಂತಿಕೆಯನ್ನೂ ಉಪಯೋಗಿಸಿ, ಸುಂದರವಾದ, ಮನಮೋಹಕವಾದ ಶೈಕ್ಷಣಿಕ ಮಹತ್ವದಿಂದ ಕೂಡಿದ ಚಲಚ್ಚಿತ್ರಗಳನ್ನು ಒದಗಿಸುವುದಕ್ಕೆ ದುಡಿಯುವರು

ಚಿತ್ರ ತಯಾರಿಯ ಕೇಂದ್ರ

ಭಾರತ ಸರಕಾರದ ಅಪೇಕ್ಷೆಯಂತೆ ಈ ಕೇಂದ್ರದಲ್ಲಿ ಸುಮಾರು ೨೬೦ಕ್ಕಿಂತ ಹೆಚ್ಚು ಸುದ್ದಿಚಿತ್ರಗಳು ಮತ್ತು ೧೫೦ಕ್ಕಿಂತ ಅಧಿಕ ಸಾಕ್ಷಿ ಚಿತ್ರಗಳು ಈ ವರೆಗೆ ಸಿದ್ಧಗೊಂಡು, ಪ್ರದರ್ಶನಕ್ಕೆ ಹೋಗಿವೆ. ಯೋಜನಾ ಆಯೋಗ, ಜನಪದ ಅಭಿವೃದ್ಧಿ ಯೋಜನೆ ಮುಂತಾದ ವಿಶಿಷ್ಟ ವಿಭಾಗಗಳ ಆವಶ್ಯಕತೆಯನ್ನು ಮನಗಂಡು ಅವುಗಳಿಗೊಪ್ಪುವ ಚಲಚ್ಚಿತ್ರಗಳನ್ನು ನಿರ್ಮಿಸುವುದಕ್ಕೂ ಈ ವಿಭಾಗ ನೋಡುತ್ತದೆ.

ಸಾಮಾನ್ಯವಾಗಿ ವರ್ಷಕ್ಕೆ ೩೬ ಸಾಕ್ಷಿ ಚಿತ್ರಗಳನ್ನು ಮತ್ತು ೫೨ ಸುದ್ದಿ ಚಿತ್ರಗಳನ್ನು ತಯಾರಿಸಬೇಕೆಂದು ಈ ವಿಭಾಗ ನಿರ್ಧರಿಸಿದೆ. ಈ ವರ್ಷ ಮಾತ್ರ ೭೨ ಸಾಕ್ಷಿ ಚಿತ್ರಗಳನ್ನು ತಯಾರಿಸಲು ಅದು ಅಪೇಕ್ಷಿಸಿದೆ. ಈ ಚಿತ್ರಗಳು ಒಂದು ಸಾವಿರ ಅಡಿಯ ಮಿತಿಯ ಒಳಗಿರುತ್ತವೆ. ಇಂಗ್ಲೀಷು, ಹಿಂದಿ, ಬಂಗಾಳಿ, ತಮಿಳು ಮತ್ತು ತೆಲುಗು ಎಂಬ ಐದು ಭಾಷೆಗಳಲ್ಲಿ ಇದಕ್ಕೆ ವಿವರಣೆಯನ್ನು ಜೋಡಿಸಲಾಗುತ್ತದೆ. ಜನಗಣನೆ ಮತ್ತು ಚುನಾವಣೆಗಳ ಸಂಬಂಧದಲ್ಲಿ ತಯಾರಿಸಲಾದ ಎರಡು ಚಿತ್ರಗಳು ಮಾತ್ರ ಇದಕ್ಕೆ ಅಪವಾದ—ಇವನ್ನು ಮೇಲಿನ ಐದು ಭಾಷೆಗಳಲ್ಲಿಯಷ್ಟೇ ಅಲ್ಲ, ಕನ್ನಡ, ಮರಾಠಿ, ಮಲೆಯಾಳಿ ಮತ್ತು ಗುಜರಾಥಿ ಭಾಷೆಗಳಲ್ಲೂ ತಯಾರಿಸಲಾಯಿತು

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್

ಸ್ಥಾಪನೆ: ೧೯೩೩.] [ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ಭಾರತದ ಸುಭದ್ರ ವಿಮಾ ಕಂಪೆನಿಗಳಲ್ಲಿ "ಕೆನರಾ ಮ್ಯೂಚುವಲ್" ಎಣೆ ಇಲ್ಲದ ವಿಶಿಷ್ಟ ಸ್ಥಾನವನ್ನು ಗಳಿಸಿದೆ. ಇದು ಮ್ಯೂಚುವಲ್ ಕಂಪೆನಿಯಾಗಿ ಘಟಿತವಾಗಿದ್ದು, ಪಾಲುದಾರ ಚಂದಾದಾರರಿಲ್ಲದಿರುವುದರಿಂದ, ಕಂಪೆನಿಯ ಸರ್ವ ಲಾಭವನ್ನೂ ಪಕ್ಕಾ ಹೊಂದಿದ ಪಾಲಿಸಿದಾರರೇ ತಮ್ಮಲ್ಲಿ ಹಂಚಿಕೊಳ್ಳುವರು. ಪ್ರಾಗತಿಕ ಬಿಗುವಾದ ತಳಹದಿಯ ಮೇಲೆ ನಡೆಸಿದ ತನ್ನೆಲ್ಲಾ ವಿಮಾ ಗಣನೆಗಳಲ್ಲಿ ಉಳಿತಾಯವನ್ನು ತೋರಿಸಿದುದು ಮಾತ್ರವಲ್ಲದೆ, ಸ್ಥಾಪಿತವಾದಂದಿನಿಂದಲೂ ಇದು ಬೋನಸು ಹಂಚಿದೆ. ಪಾಲಿಸಿದಾರರ ಹಿತದೃಷ್ಟಿಯೇ ಧ್ಯೇಯವಾಗುಳ್ಳ ಈ ಪ್ರಗತಿಶೀಲ ಮ್ಯೂಚುವಲ್ ಕಂಪೆನಿಯಲ್ಲಿ ಇಂದೇ ವಿಮೆ ಇಳಿಸಿ, ನಿಮ್ಮ ಕುಟುಂಬದ ಭದ್ರತೆಯನ್ನು ಕಾಪಾಡಿಕೊಳ್ಳಿರಿ.

THE CANARA MUTUAL ASSURANCE COMPANY, LTD.,

Estd: 1933] [Head Office: UDIPI, S. INDIA.



ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಷಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕೆ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಭಾರತ ಸರಕಾರದ ಚಿತ್ರಗಳೆಲ್ಲವನ್ನೂ ಬಿಳಿ ಮತ್ತು ಕಪ್ಪು ವರ್ಣದಲ್ಲೇ ಸಿದ್ಧಗೊಳಿಸುವುದು ವಾಡಿಕೆ. ಆದರೆ ಅಪೂರ್ವವಾಗಿ ವರ್ಣಚಿತ್ರಗಳನ್ನು ತಯಾರಿಸುವುದೂ ಉಂಟು — ಕುಮಾಂವ್ ಗುಡ್ಡಗಾಡು ಪ್ರದೇಶಗಳನ್ನು ಕುರಿತಾದ ಸಾಕ್ಷಿ ಚಿತ್ರವು ಈ ವಿಭಾಗ ತಯಾರಿಸಿದ ಮೊದಲನೇ ಟೆಕ್ನಿ ಕಲರ್ ವರ್ಣ ಚಿತ್ರ. ಕಾಶ್ಮೀರ ಪ್ರಸಂಗವನ್ನು ಆಧರಿಸಿ, ದಿಲ್ಲಿಯಲ್ಲಿ ಪ್ರಜಾರಾಜ್ಯದಿನೋತ್ಸವದ ಸಂಭ್ರಮವನ್ನು ಚಿತ್ರೀಕರಿಸಿದ ಚಿತ್ರಗಳು ಬಹಳ ಆಕರ್ಷಕವೂ ಮನಮೋಹಕವೂ ಆಗಿವೆ.

ಖಾಸಗಿ ಉತ್ಪಾದಕರು ಸರಕಾರದ ಉದ್ದೇಶಗಳಿಗನುಗುಣವಾದ ಉತ್ತಮ ಸಾಕ್ಷಿ ಚಿತ್ರ ಪಟಗಳನ್ನು ತಯಾರಿಸಿದ್ದರೆ, ಅವುಗಳ ಪ್ರದರ್ಶನದ ಹಂಚಿಕೆಯನ್ನೂ ಈ ವಿಭಾಗ ಮಾಡುತ್ತದೆ. ಈ ವರೆಗೆ ಖಾಸಗಿ ಜನರು ನಿರ್ಮಿಸಿದ ೨೭ ಚಿತ್ರಗಳ ಪ್ರದರ್ಶನಕ್ಕೆ ವ್ಯವಸ್ಥೆ ಮಾಡಲಾಗಿರುವುದು.

ವಿತರಣೆಯ ಕೆಲಸ

ಮುಂಬಯಿಯ ಕೇಂದ್ರ ಚಿತ್ರಗ್ರಹಣ ಮಂದಿರದಲ್ಲಿ ವಾರ್ತಾ ಚಿತ್ರಗಳ ಸಂಪಾದನಾ ಹಾಗೂ ವಿತರಣಾ ಕಾರ್ಯಗಳನ್ನು ಮಾಡಲಾಗುತ್ತದೆ. ಪ್ರತಿ ವಾರದಲ್ಲೂ ನಡೆಯುವ ಮಹತ್ವದ ಘಟನೆಗಳನ್ನು ಚಿತ್ರೀಕರಿಸುವ ಉದ್ದೇಶದಿಂದ ದೇಶದಾದ್ಯಂತ ಏಳು ಚಲಚ್ಚಿತ್ರ ಗ್ರಾಹಕರನ್ನು ಈ ವಿಭಾಗ ಕೆಲಸಕ್ಕೆ ನೇಮಿಸಿದೆ. ಇವರು ಸಂಗ್ರಹಿಸಿದ ವಾರ್ತಾ ಚಿತ್ರಗಳನ್ನು ಪರಿಶೀಲಿಸಿ, ಅದಕ್ಕೆ ಯೋಗ್ಯ ಟಿಪ್ಪಣಿಯನ್ನು ಜೋಡಿಸಿ, ಪ್ರತಿ ಶುಕ್ರವಾರವೂ ಒಂದೊಂದು ವಾರ್ತಾ ಚಿತ್ರವನ್ನು ಮುಂಬಯಿಯಿಂದ ಕಳಿಸಲಾಗುವುದು. ಅತಿ ಮಹತ್ವದ ಘಟನೆಗಳೇನಾದರೂ ಜರಗಿದ್ದರೆ, ಅವುಗಳ ಚಿತ್ರ ಪ್ರದರ್ಶನಕ್ಕೆ ಕ್ಷಿಪ್ರ ವ್ಯವಸ್ಥೆಯನ್ನು ಮಾಡುವರು.

ನಮ್ಮ ಊರಿನ ಚಲಚ್ಚಿತ್ರ ಮಂದಿರಕ್ಕೆ ವಾರವಾರವೂ ತಪ್ಪದೆ ಹೊಸ ಸಾಕ್ಷಿ ಚಿತ್ರ ಅಥವಾ ಸುದ್ದಿ ಚಿತ್ರ ಬರುವಂತೆ ನೋಡಿಕೊಳ್ಳುವ ಹೊಣೆಯನ್ನೂ ಈ ವಿಭಾಗ ಹೊತ್ತಿದೆ. ಮುಂಬಯಿ, ಕಲ್ಕತ್ತಾ, ಮದ್ರಾಸು, ಲಕ್ನೋ ಮತ್ತು ನಾಗಪುರ ಕೇಂದ್ರಗಳಲ್ಲಿ ಚಿತ್ರವಿತರಣೆಯ ಕಾರ್ಯಾಲಯಗಳು ಕೆಲಸ ಮಾಡುತ್ತವೆ. ಒಂದು ಸ್ಥಳದಿಂದ ಇನ್ನೊಂದಕ್ಕೆ ಚಿತ್ರಗಳನ್ನು ಕಳುಹಿಸುವ ಮತ್ತು ಪ್ರತಿ ವಾರವೂ ದೇಶದಾದ್ಯಂತ ಒಂದು ಸಾಕ್ಷಿ ಚಿತ್ರ ಮತ್ತೊಂದು ವಾರ್ತಾ ಚಿತ್ರ ಪ್ರದರ್ಶಿಸಲ್ಪಡುವಂತೆ ನೋಡುವ ಹೊಣೆ ಇವಕ್ಕೆ. ಸೇರಿದ ಚಲಚ್ಚಿತ್ರ ಮಂದಿರಗಳನ್ನು ಎರಡು ಭಾಗಗಳಲ್ಲಿ ವಿಂಗಡಿಸಿ, ಒಂದು ಪಂಗಡಕ್ಕೆ ವಾರ್ತಾ ಚಿತ್ರಗಳನ್ನೂ ಇನ್ನೊಂದಕ್ಕೆ ಸಾಕ್ಷಿ ಚಿತ್ರಗಳನ್ನೂ ಈ ಕೇಂದ್ರಗಳು ಪ್ರತಿವಾರವೂ ಒದಗಿಸುತ್ತವೆ. ಹೀಗೆ ಏಕಕಾಲಕ್ಕೆ ಪ್ರದರ್ಶನವನ್ನೇರ್ಪಡಿಸಲು ಈಗ ವಾರಕ್ಕೆ ೭೫ ಪ್ರತಿಗಳು ಬೇಕಾಗುತ್ತವೆ

ಈ ಚಿತ್ರಗಳ ತಯಾರಿಗೆ ಕಳೆದ ವರ್ಷ ೩೬ ಲಕ್ಷ ರೂಪಾಯಿಗಳ ವೆಚ್ಚ ತಗಲಿತು

(೧೨ನೇ ಪುಟ ನೋಡಿರಿ)

ಹೊಟ್ಟೆಯೊಳಗಿನ ಮಗು ಗಂಡೋ, ಹೆಣ್ಣೋ?

ಜೊಲ್ಲು ರಸದಿಂದ ಸತ್ಯ ಭವಿಷ್ಯ ಹೇಳುವ ವೈಜ್ಞಾನಿಕ ಚಮತ್ಕಾರ

ನಮ್ಮ ಈಶಾನ್ಯ ಮೂಲೆಯ ಅಸ್ಸಾಮು ರಾಜ್ಯದಲ್ಲಿ ಒಂದು ದಂತಕತೆಯುನ್ನು ಜನರು ಹೇಳುವುದುಂಟು — ಹಿಂದಿನ ಕಾಲದಲ್ಲಿ ಒಬ್ಬ ಜ್ಯೋತಿಷಿ ಹೊಟ್ಟೆಯಿಂದ ಹುಟ್ಟಲಿರುವ ಮಗು ಗಂಡೋ ಅಥವಾ ಹೆಣ್ಣೋ ಏನೆಂಬುದನ್ನು ಮುಂದಾಗಿ ತಿಳಿಸುತಿದ್ದನು. ಇದಕ್ಕೆ ಅವನು ಅನುಸರಿಸುವ ಪದ್ಧತಿ ಬಹಳ ಸುಲಭವಾಗಿತ್ತು — ಪ್ರಶಾಂತವಾಗಿ ಹರಿಯುವ ನದಿಯ ಮೇಲೆ ಗರ್ಭಿಣಿ ಸ್ತ್ರೀಯ ಕೈಯಿಂದ ಒಂದು ತುಂಡು ಕಟ್ಟಿಗೆಯನ್ನು ಬಿಸಾಡಿಸುವುದು. ಕಟ್ಟಿಗೆಯ ತುಂಡು ನದಿಯ ಉಗ್ಗಮಸ್ಥಾನದತ್ತ ಹೋದರೆ ಗಂಡುಮಗು ಜನಿಸುವುದೆಂದೂ ಪ್ರವಾಹದೊಂದಿಗೆಯೇ ಸಾಗಿದರೆ ಹೆಣ್ಣು ಮಗುವಾಗುವುದೆಂದೂ ಜ್ಯೋತಿಷಿ ನಿರ್ಣಯ ಹೇಳುತಿದ್ದ. ಸುದೈವದಿಂದ ಪ್ರಥಮ ಗರ್ಭಿಣಿಸ್ತ್ರೀಯ ಸಂಬಂಧದಲ್ಲಿ ಅವನು ಹೇಳಿದ ಕಣಿ ನಿಜವಾಯಿತು — ಜನ ಅವನನ್ನು ದೇವರೆಂದು ತಿಳಿದು ಪೂಜಿಸಿದರು. ಆದರೆ ಈ ತ್ರಿಕಾಲಜ್ಞಾನಿಯು ಇನ್ನೊಬ್ಬ ಗರ್ಭಿಣಿ ಸ್ತ್ರೀಯ ವಿಷಯದಲ್ಲಿ ಹೇಳಿದ ಭವಿಷ್ಯ ಸುಳ್ಳಾಯಿತು — ಜನರು ಈ ಠಕ್ಕು ಜೋಯಿಸನನ್ನು ಅದೇ ನದಿಯಲ್ಲಿ ಎಸೆದುಬಿಟ್ಟು, ತಮ್ಮ ಕ್ರೋಧ ಶಮನ ಮಾಡಿಕೊಂಡರು!

ಅನಾದಿ ಕಾಲದ ಕುತೂಹಲ

ಆದರೆ ಆ ಸಾಮಾನ್ಯ ಜೋಯಿಸನು ಮೃತ್ಯುಗೊಂಡ ಮಾತ್ರಕ್ಕೆ, ಮನುಷ್ಯನಲ್ಲಿ ಅನಾದಿ ಕಾಲದಿಂದಲೂ ಇರುವ ತನ್ನ ಭಾವೀ ಸಂತಾನದ ವಿಷಯದಲ್ಲಿ ಮುಂದಾಗಿ ಮಾಹಿತಿ ದೊರೆತರೆ ಆ ದೀತೆನ್ನುವ ಬಯಕೆ ಮಾಯವಾಗಲಿಲ್ಲ— ಗರ್ಭಸ್ಥ ಶಿಶುವು ಗಂಡೋ ಹೆಣ್ಣೋ ಎಂಬುದನ್ನು ತಿಳಿಯಲು ಅಪೇಕ್ಷಿಸಿ ಅನೇಕ ನಮೂನೆಯ ಯಂತ್ರ, ಮಂತ್ರಗಳ ಮೋಹಕ್ಕೆ ಸ್ತ್ರೀಯರು ಗುರಿಯಾಗಿರುವರು. ಜೋಯಿಸರಿಂದ ಹಿಡಿದು ವೈದ್ಯರವರೆಗೆ ಎಲ್ಲರೂ [illegible] ಸ್ತ್ರೀ ಸಹಜವಾದ ಅಪೇಕ್ಷೆಯನ್ನು ಪೂರೈಸಲು ನೋಡುವರು. ಕೆಲವು ಕಾಮಶಾಸ್ತ್ರದ ಗ್ರಂಥಗಳಲ್ಲಂತೂ ಇಚ್ಛಿತ ಸಂಸಂತಾನ ಪ್ರಾಪ್ತಿಗೋಸ್ಕರ ಗರ್ಭಾದಾನ ಕಾಲದಲ್ಲಿ ಅನುಸರಿಸಬೇಕಾದ ವಿಧಾನಗಳೂ ವರ್ಣಿಸಲ್ಪಟ್ಟಿವೆ. ಹಾಗೆಂದು ಇಷ್ಟರವರೆಗಿನ ಯಾವ ಕ್ರಮದಿಂದಲೂ ಇಷ್ಟಸಿದ್ಧಿಯಾಗಲಿಲ್ಲ.

ಪ್ಯಾರಿಸಿನ "ಕಾನ್‌ಸ್ಟೆಲೇಶನ್" ಎಂಬ ಪತ್ರಿಕೆಯಲ್ಲಿ ಪ್ರಕಟಗೊಂಡ ಲೇಖನಮಾಲೆಯೊಂದು ಈ ವಿಷಯದಲ್ಲಿ ಚಿಕಿತ್ಸಾ ವಿಜ್ಞಾನ ಅದ್ಭುತ ಪ್ರಯತ್ನವನ್ನು ಮಾಡಿ, ಯಶಸ್ಸುಗಳಿಸಿದೆಯೆಂದೂ ಇನ್ನು ಮುಂದೆ ಗರ್ಭಸ್ಥ ಶಿಶುವಿನ ಲಿಂಗ ರಹಸ್ಯವನ್ನು ಹೇಳುವುದಕ್ಕೆ ಎಷ್ಟೋ ದಿನಗಳ ಮುಂಚಿತವಾಗಿಯೇ ಉದ್ಘಾಟಿಸಲು ಸಾಧ್ಯವೆಂದೂ ಹೇಳುತ್ತದೆ. ಒಂದು ಪರೀಕ್ಷಾ ನಳಿಕೆಯಲ್ಲಿ ಗರ್ಭವತಿ ಸ್ತ್ರೀಯ ಜೊಲ್ಲನ್ನು ಹಿಡಿದು, ಅದಕ್ಕೆ ಕೆಲವು ವಿಶಿಷ್ಟ ರಾಸಾಯನಿಕ ದ್ರವ್ಯಗಳನ್ನು ಬೆರಸಲಾಗುತ್ತದೆ — ಅರ್ಧ ತಾಸಿನ ಅವಧಿಯೊಳಗೆ ಜೊಲ್ಲಿನ ಬಣ್ಣ ಕಂದು ಅಥವಾ ನಸು ಹಳದಿಯಾಗುತ್ತದೆ. ಜೊಲ್ಲು ಕಂದು ಬಣ್ಣಕ್ಕೆ ತಿರುಗಿದರೆ, ಆ ಹೆಂಗಸಿಗೆ ಗಂಡು ಮಗುವಾಗುವುದೆಂದೂ ನಸು ಹಳದಿಯಾದರೆ ಹೆಣ್ಣು ಶಿಶು ಜನಿಸುವುದೆಂದೂ ವಿಜ್ಞಾನಿಗಳ ಅಭಿಪ್ರಾಯ. ಡಾ. ಗುಸ್ತಾವ್ ಡಬ್ಲ್ಯು. ರ‍್ಯಾಪ್ ಮತ್ತು ಡಾ. ಗಾಡ್ಫ್ರೆಡ್ ಸೀ. ರಿಚರ್ಡ್‌ಸನ್ನ ಎಂಬಿಬ್ಬರು ಅಮೇರಿಕನ್ನರು ಈ ನೂತನ ಆವಿಷ್ಕಾರವನ್ನು ಮಾಡಿದರು. ಇವರಾಡುವ ಭವಿಷ್ಯವಾಣಿಯು ನೂರಕ್ಕೆ ತೊಂಭತ್ತೈದರಷ್ಟು ಸತ್ಯವೆಂದು ಅಂಕೆಸಂಖ್ಯೆಗಳು ತಿಳಿಸುತ್ತವೆ.

ಬಹು ದಿನಗಳ ಶೋಧ

ಹೆಂಗಸು ಗರ್ಭಿಣಿ ಹೌದೋ ಅಲ್ಲವೋ ಎಂಬುದನ್ನು ಸುಲಭದಲ್ಲಿ ನಿರ್ಣಯಿಸುವ ಉಪಾಯವೊಂದನ್ನು ಚಿಕಾಗೋ ನಗರದಲ್ಲಿ ಡಾ. ರಿಚರ್ಡ್‌ಸನ್ನರು ಹುಡುಕುತಿದ್ದರು. ಬಹುದಿನಗಳ ಪ್ರಯತ್ನಾನಂತರ ಅವರಿಗೊಂದು ಮಾರ್ಗ ಹೊಳೆಯಿತು. ಗರ್ಭಿಣಿ ಸ್ತ್ರೀಯ ಮೂತ್ರವನ್ನು ಹೆಣ್ಣು ಮೊಲ ಅಥವಾ ಇಲಿಯ ಶರೀರದಲ್ಲಿ ಪ್ರವೇಶಿಸಗೊಟ್ಟಾಗ ಅದರ ಡಿಂಬಾಶಯವು ದೊಡ್ಡದಾದರೆ, ಸ್ತ್ರೀ ಗರ್ಭಿಣಿ ಎಂದವರು ನಿರ್ಣಯಿಸಿದರು. ಗರ್ಭಿಣಿ ಸ್ತ್ರೀಯಲ್ಲಿ ಲೈಂಗಿಕ ಹಾರ್ಮೋನುಗಳೆಂಬ ದ್ರವ್ಯ ವಿಶೇಷ ಉಂಟಾಗುತ್ತದೆ — ಮತ್ತು ಮೂತ್ರದ ಮೂಲಕ ಅದರ ಬಹ್ವಂಶ ಹೊರಗೆ ಹೋಗುತ್ತವೆ. ಆದರೆ ಈ ಪರೀಕ್ಷೆಗೆ ಹೆಣ್ಣು ಮೊಲ ಅಥವಾ ಇಲಿ ಅಗತ್ಯವಿದ್ದುದರಿಂದ ಇದು ಸರ್ವಜನ ಸುಲಭವಾಗಿರಲಿಲ್ಲ.

ಆದಕಾರಣ ಅವರು ಇನ್ನೂ ಸಂಶೋಧನೆಗಳನ್ನು ಮಾಡುತ್ತಾ ಹೋದರು. ಹೆಣ್ಣು ಇಲಿ ಅಥವಾ ಮೊಲಗಳ ಸಹಾಯವಿಲ್ಲದೆ, ಕೆಲವು ವಿಶಿಷ್ಟ ರಾಸಾಯನಿಕ ದ್ರವ್ಯಗಳನ್ನುಪಯೋಗಿಸಿ, ಅದರಲ್ಲಿ ಸ್ತ್ರೀಯ ಮೂತ್ರವನ್ನು ಬೆರಸುವುದರಿಂದ ಗರ್ಭಿಣಿ ಹೌದೊ ಅಲ್ಲವೊ ಎಂಬುದನ್ನು ನಿರ್ಧರಿಸುವುದು ಸಾಧ್ಯವೇ ಹೇಗೆಂದು ಅವರು ಯೋಚಿಸಿದರು. ಈ ವಿಷಯದಲ್ಲಿ ನೆರವಾಗಲು ಚಿಕಾಗೋ ವಿಶ್ವವಿದ್ಯಾಲಯದ ದಂತ ಚಿಕಿತ್ಸಾ ಶಿಕ್ಷಣಾಲಯದ ರಸಾಯನ ಶಾಸ್ತ್ರಜ್ಞ ಡಾ. ರ‍್ಯಾಪರನ್ನು ಅವರು ಕೇಳಿಕೊಂಡರು.

ಐದು ವರ್ಷಗಳವರೆಗೆ ಇಬ್ಬರೂ ಸಂತತ ಸಂಶೋಧನೆಗಳಲ್ಲಿ ನಿರತರಾದರು. ಪರಿಣಾಮದಲ್ಲಿ ನಾಲ್ಕು ರಸಾಯನ ದ್ರವ್ಯ ವಿಶೇಷಣಗಳಲ್ಲಿ ಸ್ತ್ರೀಯ ಮೂತ್ರವನ್ನು ಬೆರಸಿದಾಗ ಅದು ಕಂದು ಬಣ್ಣಕ್ಕೆ ತಿರುಗಿದರೆ ಅವಳು ಗರ್ಭಿಣಿಯೆಂದೂ ನಸು ಹಳದಿಗೆ ತಿರುಗಿದರೆ ಗರ್ಭಿಣಿ ಅಲ್ಲವೆಂದೂ ಗೊತ್ತು ಮಾಡಿದರು. ಲೈಂಗಿಕ ಹಾರ್ಮೋನುಗಳು ಗರ್ಭಿಣಿ ಸ್ತ್ರೀಯ ಮೂತ್ರದಲ್ಲಿ ಮಾತ್ರವಲ್ಲ— ಕಣ್ಣೀರು, ಬೆವರು, ರಕ್ತ ಮತ್ತು ಜೊಲ್ಲಿನಲ್ಲಿಯೂ ಇದೆಯೆಂದು ಅವರು ತಿಳಿದಿದ್ದರು. ಕಣ್ಣೀರನ್ನಾಗಲೀ ಬೆವರನ್ನಾಗಲೀ ಪರೀಕ್ಷಾ ನಳಿಕೆಯಲ್ಲಿ ಸಂಗ್ರಹಿಸುವುದು ಕಷ್ಟಸಾಧ್ಯ. ರಕ್ತವನ್ನು ನೀಡಲು ಹೆಚ್ಚಿನ ಹೆಂಗಸರು ಮುಂದಾಗುವುದಿಲ್ಲ. ಆದುದರಿಂದ ಸಾಮಾನ್ಯವಾದ ಜೊಲ್ಲನ್ನೇ ಸಂಗ್ರಹಿಸುವ ಮೂಲಕ ಪರೀಕ್ಷೆ ನಡೆಸಲು ಅವರು ತೀರ್ಮಾನಿಸಿದರು.

ಆಕಸ್ಮಿಕ ಆವಿಷ್ಕಾರ

ಹೀಗೆ ನಡೆಸಿದ ಪರೀಕ್ಷೆ ಅಯಶಸ್ವಿಯಾಯಿತು — ಗರ್ಭಿಣ್ಯಾವಸ್ಥೆಯ ಪ್ರಾರಂಭದ ತಿಂಗಳುಗಳಲ್ಲಿ ತೆಗೆದುಕೊಂಡ ಜೊಲ್ಲು ರಾಸಾಯನಿಕ ದ್ರವ್ಯದ ಮೇಲೆ ಯಾವುದೇ ನಿಶ್ಚಿತ ಪರಿಣಾಮವನ್ನುಂಟುಮಾಡಲಿಲ್ಲ. ಗರ್ಭಕ್ಕೆ ಐದಾರು ತಿಂಗಳು ಅವಧಿಯಾದ ಬಳಿಕ ಸ್ತ್ರೀಯಿಂದ ಜೊಲ್ಲು ತೆಗೆದು ಪರೀಕ್ಷಿಸಿದಾಗ, ಕಂದುಬಣ್ಣಕ್ಕೆ ತಿರುಗಿದಷ್ಟೇ ನಸು ಹಳದಿಬಣ್ಣಕ್ಕೆ ಪರಿವರ್ತನೆಹೊಂದುವ ಪ್ರತಿಕ್ರಿಯೆ ತೋರಿಬಂತು. ಇದರಿಂದನೋಡಕೊಮ್ಮೆ ಡಾಕ್ಟರರಿಗೆ ಹತಾಶೆಯುಂಟಾದರೂ — ಒಮ್ಮಿಂದೊಮ್ಮೆ ಹೊಳೆದ ವಿಚಾರವೊಂದು ಅವರನ್ನು ಆಕಸ್ಮಿಕ ಶೋಧದೆಡೆಗೆ ಎಳೆದೊಯ್ಯಿತು. ಹೀಗೆ ಬಣ್ಣ ಬದಲಾಗುವುದರಲ್ಲಿ ಲಿಂಗಸಂಬಂಧದ ರಹಸ್ಯ ಅಡಗಿದೆಯೆಂದವರು ಊಹಿಸಿದರು. ಯೋಗ್ಯ ಪರಿಶೀಲನೆಗಳನ್ನು ನಡೆಸಿದಾಗ ಗಂಡು ಶಿಶು ಗರ್ಭದಲ್ಲಿದ್ದರೆ ಜೊಲ್ಲು ಕಂದು ಬಣ್ಣಕ್ಕೆ ತಿರುಗುವುದೆಂದೂ ಮಗು ಹೆಣ್ಣಾಗಿದ್ದರೆ ಜೊಲ್ಲು ನಸು ಹಳದಿಯಾಗುತ್ತದೆಂದೂ ಅವರಿಗೆ ಖಚಿತವಾಯಿತು.

ಹುಟ್ಟಲಿರುವ ಮಗು ಗಂಡೋ ಹೆಣ್ಣೋ ಎಂಬುದನ್ನು ತಿಳಿಯಬೇಕಾದರೆ ಗರ್ಭ ನಿಂತ ಐದು ತಿಂಗಳ ಮೇಲೆಯೇ ಮೇಲಿನ ಪರೀಕ್ಷೆಗೆ ಗುರಿಯಾಗಬೇಕಾಗುವುದು — ಅದಕ್ಕಿಂತ ಮೊದಲು ಗರ್ಭಸ್ಥ ಶಿಶುವಿನಲ್ಲಿ ಲಿಂಗ ಲಕ್ಷಣಗಳು ಉದಿಸುವುದಿಲ್ಲ. ಪರೀಕ್ಷೆಗೆ ಮುಂಚೆ ಗರ್ಭಿಣಿ ಸ್ತ್ರೀ ಕೆಲವು ನಿಯಮಗಳನ್ನು ಪಾಲಿಸಬೇಕಾಗುವುದು. ಪರೀಕ್ಷಾ ಪೂರ್ವದ ೪೮ ತಾಸುಗಳಲ್ಲಿ ಅವಳು ಯಾವುದೇ ತರದ ಉತ್ತೇಜಕ ಪಾನೀಯ ಅಥವಾ ತಿಂಡಿಯನ್ನು, ಗುಳಿಗೆ ಅಥವಾ ಔಷಧವನ್ನು ತೆಗೆದುಕೊಳ್ಳಕೂಡದು. ಹಲ್ಲು ಉಜ್ಜುವಾಗ ಪೇಸ್ಟನ್ನಾಗಲೀ ಪುಡಿಯನ್ನಾಗಲೀ ಉಪಯೋಗಿಸದೆ ಸ್ವಚ್ಛ ನೀರನ್ನು ಬಳಸಬೇಕು. ಆ ಮೇಲೆ ಯಥೇಷ್ಟ ಜೊಲ್ಲನ್ನು ಬರಿಸಿಕೊಳ್ಳುವುದಕ್ಕೋಸ್ಕರ ರಾಸಾಯನಿಕ ದೃಷ್ಟಿಯಲ್ಲಿ ನಿಷ್ಕ್ರಿಯವಾದ ರಬ್ಬರು ತುಣುಕು ಅಥವಾ ಬೇರಾವುದೇ ವಸ್ತುವನ್ನು ಜಗಿಯಬೇಕು.

ಸ್ವೇಚ್ಛಾ ಸಂತಾನ ಪ್ರಾಪ್ತಿ

ಆಶ್ಚರ್ಯ ಜನಕವಾದ ಈ ಸಂಗತಿಯನ್ನು ತಿಳಿದುಕೊಂಡ ಬಳಿಕ್ಕೆ ಮುನ್ನುಗ್ಗುವ ಪ್ರವೃತ್ತಿ ಈ ವೈಜ್ಞಾನಿಕ ಯುಗದ ಮನುಷ್ಯನದು ಸರ್ವಥಾ ಅಲ್ಲವಷ್ಟೆ! ಅವನು ಸ್ವೇಚ್ಛಾ ಸಂತಾನ ಪ್ರಾಪ್ತಿಯ ರಹಸ್ಯವನ್ನು ತಿಳಿದುಕೊಳ್ಳಲು ಎಂದಿನಿಂದಲೂ ಹಾತೊರೆದಿದ್ದಾನೆ. ಬೇಕಾದ ಗಂಡು ಅಥವಾ ಹೆಣ್ಣು ಮಗುವನ್ನು ಪಡೆಯುವ ಮಾರ್ಗವನ್ನು ಕರಗತಮಾಡಿಕೊಳ್ಳಬೇಕೆಂಬ ಹಂಬಲವೂ ಕೈಗೂಡಬಹುದಾದ ಲಕ್ಷಣ ಈಚೆಗೆ ತೋರುತ್ತದೆ.

ಚಿಕಾಗೋ ಮತ್ತು ಡಿಟ್ರಾಯಿಟ ನಗರಗಳಲ್ಲಿ ಡಾ. ಪೀಟರ್ಸನ್ನರೆಂಬ ವೈಜ್ಞಾನಿಕರು ನಡೆಸಿದ ಸಂಶೋಧನೆಗಳಿಗನುಸಾರ, ಸೆಕೆಗಾಲದಲ್ಲಿ ಗರ್ಭಾದಾನವಾದಾಗ ಹೆಚ್ಚು ಹೆಣ್ಣು ಶಿಶುಗಳೂ ಚಳಿಗಾಲದಲ್ಲಾದಾಗ ಹೆಚ್ಚು ಗಂಡು ಮಕ್ಕಳೂ ಹುಟ್ಟುತ್ತವೆ. ಡ್ಯೂಕ್ ವಿಶ್ವವಿದ್ಯಾಲಯದ ಡಾ. ಪಾರ್ಟರ ಮತ್ತು ಮೂಡಿ ಎಂಬಿಬ್ಬರು ಇನ್ನೂ ಖಚಿತವಾದ ರೀತಿಯಲ್ಲಿ ಫಲ ದೊರಕಿಸಿದ ಪ್ರಯೋಗ ಮಾಡಿರುವರ. ಸಾಮಾನ್ಯವಾಗಿ ೧೦೫ ಗಂಡು ಶಿಶುಗಳಿಗೆ ೧೦೦ ಹೆಣ್ಣು ಶಿಶುಗಳು ಜನಿಸುತ್ತವೆ. ಇವ

ಮುಖ್ಯ ಪ್ರಕಟಣೆ

"ಆನಂದ ಸುಧ" ನಮ್ಮ ಆನಂದ ಸುಧ ಸಮಸ್ತ ಜನಗಳಿಗೆ ಬಲವನ್ನು ಪುಷ್ಟಿಯನ್ನು ಕಲಿಗಿಸುವುದು. ಅನೇಕ ವ್ಯಾಧಿಗಳನ್ನು ನಾಶಮಾಡುತ್ತೆ. ೧೫ ದಿನಗಳಿಗೆ ಸರಿ ಹೋಗುವ ೬ ಔ. ಸೀಸೆ ೧ಕ್ಕೆ ರೂ. ೩—೦—೦.

"ಸ್ತ್ರೀ ಸುಧ" ನಮ್ಮ ಸ್ತ್ರೀ ಸುಧ ಸ್ತ್ರೀಯರಿಗೆ ಸಂಭವಿಸುವ ಸಮಸ್ತ ಗರ್ಭಾಶಯ ವ್ಯಾಧಿಗಳನ್ನು, ಋತು ದೋಷಗಳನ್ನು, ಋತು ಶೂಲೆ, ಸರಿಯಾಗಿ ಬಹಿಷ್ಟೆ ಆಗದಿರುವುದು ಮೊದಲಾದ ಸಮಸ್ತ ವ್ಯಾಧಿಗಳನ್ನು ನಾಶಮಾಡುತ್ತದೆ. ಸಂತಾನವನ್ನು ಕಲಿಗಿಸುತ್ತದೆ. ಒಂದು ತಿಂಗಳಿಗೆ ಸರಿಹೋಗುವ ೧ ತೊಲದ ಔಷಧಿ ರೂ. 1—0—0.

"ಬಾಲ ಸುಧ" ಇದು ಸಣ್ಣ ಬಾಲಕರಿಗೆ ಅಜೀರ್ಣ, ಜ್ವರ, ಕೆಮ್ಮು, ಶೀತ, ಮಲಬದ್ಧತೆ, ಹೆಚ್ಚಾಗಿ ಭೇದಿ ಆಗುವಿಕೆ, ಮಕ್ಕಳು ಕ್ಷೀಣವಾಗಿ ಕೃಶರಾಗಿ ಸೊರಗುವಿಕೆ, ಲಿವರ್ ಬೆಳೆಯುವುದು, ಈ ಎಲ್ಲಾ ವ್ಯಾಧಿಗಳಿಗೆ ಪ್ರತ್ಯಾಯುಧವಾದ ಒಳ್ಳೆಯ ಔಷಧಿ ಇನ್ನೊಂದು ಇಲ್ಲವೆಂದು ಹೇಳಬಹುದು. ಈ ಔಷಧಕ್ಕೆ ಮತಿ ಇಲ್ಲದ ಯೋಗ್ಯತಾ ಪತ್ರಗಳನ್ನು ಪಡೆದಿರುವದಲ್ಲದೆ ನೀರನ್ನ ಅನೇಕ ವಿಧದಲ್ಲಿ ಅಭಿವೃದ್ಧಿಯಾಗುತ್ತದೆ. ಸುಮಾರು ೧ ತಿಂಗಳಿಗೆ ಸರಿ ಹೋಗುವ ೫೦ ಮಾತ್ರೆಗಳ ಸೀಸೆ ೧ಕ್ಕೆ ರೂ 1—0—0.

ದೊರೆಯುವ ಸ್ಥಳ:

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್, ರಾಜಮಂಡ್ರಿ.

ಬೆಂಗಳೂರು ಏಜನ್ಸಿ:

ಸುದರ್ಶನ ಆಯುರ್ವೇದ ವೈದ್ಯಶಾಲ, ನಗರ್ತರ ಪೇಟೆ, ಬೆಂಗಳೂರು-2.

AUCTION NOTICE

It is proposed to conduct the auction sale at 3 P. M on 1-3-1954 of the right of purchasing milk from the District Livestock Farm, Koila Cattle Farm post, South Kanara for a period of one year commencing from 1—1—1954 to 31—3—1955 at the Office of the undersigned in the District Livestock Farm, Koila. The intending bidders may apply to this Office for full details enclosing a postal cover for reply.

Superintendent,
District Livestock Farm, Koila,
South Kanara

ರು ಇಲಿಗಳ ಸಂಭೋಗ ಕಾಲವನ್ನು ಜಾಗರೂಕತೆಯಿಂದ ನಿಯಂತ್ರಿಸಿ ೨೫೦ ಗಂಡಿಗೆ ೧೦೦ ಹೆಣ್ಣುಗಳಾಗುವಂತೆ ಸಂತಾನ ದೊರಕಿಸಲು ಸಮರ್ಥರಾದರು. ಇವರು ಕಂಡು ಹಿಡಿದ ಮುಖ್ಯ ತತ್ವವೆಂದರೆ ಇದು—ಬೆದೆ ಕಾಲದ ಆರಂಭದ ದಿನಗಳಲ್ಲಿ ಅಂದರೆ ಋತು ಸಮಯದಲ್ಲಿ ಮತ್ತು ಅದಕ್ಕೆ ಮುಂಚಿನ ಕೆಲವು ದಿನಗಳಲ್ಲಿ ಗರ್ಭಾದಾನ ಮಾಡಾಗ ಬಹಳ ಮಾಡಿ ಹೆಣ್ಣು ಶಿಶುಗಳು ಜನಿಸುತ್ತವೆ; ಬೆದೆಕಾಲದ ಕೊನೆಯವಧಿಯಲ್ಲಿ ಸಂಸರ್ಗಮಾಡಾಗ ಬಹಳಮಾಡಿ ಗಂಡು ಮಗುವೇ ಹುಟ್ಟುತ್ತದೆ. ಡಿಂಬದಲ್ಲಿ ಪುರುಷ ಶುಕ್ರಾಣುವಿನಲ್ಲಿರುವ "ವೈ" ಎಂಬ ಹೆಸರಿನ ವರ್ಣ ಶರೀರದ ಪ್ರವೇಶದಿಂದ ಗಂಡು ಭ್ರೂಣದ ರಚನೆಯಾಗುತ್ತದೆ; "ಎಕ್ಸ್" ಎಂಬ ವರ್ಣ ಶರೀರ ಹೆಣ್ಣು ಭ್ರೂಣವನ್ನು ನಿರ್ಮಿಸುತ್ತದೆ. ಇವೆರಡು ಪ್ರಕಾರದ ವರ್ಣ ಶರೀರಗಳಲ್ಲಿ ಡಿಂಬಾಶಯದ ವರೆಗೆ ಹೋಗುವ ಮತ್ತು ಗರ್ಭ ನಿರ್ಮಿಸುವ ಶಕ್ತಿ ಭಿನ್ನ ಭಿನ್ನವಾಗಿರುತ್ತದೆ. ಇದನ್ನು ದೃಷ್ಟಿಯಲ್ಲಿಟ್ಟುಕೊಂಡು, ಸ್ವೇಚ್ಛಾ ಸಂತಾನಕ್ಕೆ ತಕ್ಕ ಅನುಕೂಲತೆಯನ್ನೊದಗಿಸುವುದಕ್ಕೆ ಗರ್ಭಾದಾನ ಕಾಲವನ್ನು ನಿಯಂತ್ರಿಸುವ ಮೇಲಿನ ತತ್ವ ನೋಡುತ್ತದೆ.

ಜಗತ್ತಿಗೆ ಹೊಸ ಸಮಸ್ಯೆ

ಆದರೂ ಇದು ಸಂಪೂರ್ಣ ಫಲಕಾರಿಯೆಂದು ಹೇಳಲಾಗದು—ಇಲಿಗಳ ವಿಷಯದಲ್ಲಿ ಸತ್ಯವೆಂದು ಕಂಡುಬಂದ ಸಿದ್ಧಾಂತ, ಮನುಷ್ಯನಿಗೆ ಎಷ್ಟರಮಟ್ಟಿಗೆ ಅನ್ವಯಿಸುತ್ತದೆಂದು ಇನ್ನೂ ಪ್ರಯೋಗಗಳು ನಡೆಯಬೇಕು. ಹಾಗೆಂದು ಕೃತಕ ಗರ್ಭಾದಾನ ಕ್ರಮದಿಂದ ಹುಟ್ಟಿದ ಶಿಶುಗಳ ಸಂಗತಿಯಲ್ಲಿ ಮೇಲಿನ ಬೆದೆಕಾಲದ ನಿಯಮ ನಿಜವೆಂದು ಗೊತ್ತಾಗುತ್ತದೆ. ಪ್ರತ್ಯಕ್ಷ ಪುರುಷ ಸಂಸರ್ಗವಿಲ್ಲದೆ ಪರೀಕ್ಷಾ ನಳಿಕೆಯ ಮೂಲಕ ಶುಕ್ರಾಣುಗಳನ್ನು ಡಿಂಬಾಶಯಕ್ಕೆ ಪ್ರವೇಶಿಸಗೊಡುವ ಈ ಪ್ರಯೋಗ ಕಾಲದಲ್ಲಿ ಹೆಂಗಸು ಗರ್ಭಾದಾನ ಹೊಂದಲು ಯೋಗ್ಯವಾದ ಋತುಕಾಲದಲ್ಲಿದ್ದಾಳೆಂದು ಡಾಕ್ಟರರು ಖಚಿತಮಾಡಿಕೊಳ್ಳಲು ಬಯಸುತ್ತಾರೆ. ಆದಕಾರಣ—ಋತುಕಾಲದ ಕೊನೆಯ ದಿನಗಳಲ್ಲಿ ಕೃತಕ ಗರ್ಭಾದಾನವನ್ನವರು ಮಾಡುವರು. ಸ್ತ್ರೀಯು ಈ ಪ್ರಕಾರವಾಗಿ ಶಿಶು ಪ್ರಸವ ಮಾಡಿದ ಸಂಗತಿಗಳಲ್ಲಿ ಗಂಡು—ಹೆಣ್ಣು ಶಿಶುವಿನ ಪ್ರಮಾಣ ೧೦೫ಕ್ಕೆ ೧೦೦ ಎಂದಿರಲು, ೫೬.೭೬ ಗಂಡಿಗೆ ೩೮೧೩ ಹೆಣ್ಣು, (ಅರ್ಥಾತ್, ನೂರಕ್ಕೆ ೪೮ ಗಂಡು ಹೆಚ್ಚು) ಆಯಿತು. ಇಲಿಗಳ ವಿಷಯದ ತರ್ಕವನ್ನು ಸತ್ಯವೆಂದು ಇದು ವ್ಯಕ್ತಗೊಳಿಸುತ್ತದೆ. ಆದರೆ ಹೀಗೆ ಸ್ವೇಚ್ಛಾ ಸಂತಾನವನ್ನು ಪಡೆಯುವ ರಹಸ್ಯ ಹಸ್ತಗತವಾದರೆ, ಜಗತ್ತಿನ ಮುಂದೆ ಎಂತಹ ಸಮಸ್ಯೆ ನಿಲ್ಲುತ್ತದೋ, ಹೇಳಲು ಬಾರದು. ವಿಜ್ಞಾನ ನಮ್ಮನ್ನು ಎತ್ತ ಒಯ್ಯುತ್ತದೋ, ತಿಳಿಯದು

ನವನೀತ—

ದಕ್ಷಿಣ ಕನ್ನಡ ಜಿಲ್ಲಾ ಕಲೆಕ್ಟರರ ಪ್ರಕಟಣೆ

1951ನೇ ಇಸವಿ ಫೆಬ್ರವರಿ ತಿಂಗಳ ತಾರೀಕು 26—2—1951ರಿಂದ 8—1—54ರ ವರೇಗೆ ಜೊಸಮರ್ಗದಲ್ಲಿ ತೆರೆಯೋಣಾಗುವ ಶ್ಯಾನಭಾಗರ ಸರ್ವೆ ಶಾಲೆಗೆ ಸೇರಲಿಚ್ಚಿಸುವವರು ಇದೇ ತಿಂಗಳ ತಾ 20—2—54ರ ಒಳಗೆ ಜಿಲ್ಲಾ ಸರ್ವೆಯರಿಗೆ ಅರ್ಜಿ ಬರೆಕೊಳ್ಳುವದಲ್ಲದೆ ಶಾಲೆಯು ತೆರೆಯೋಣಾಗುವಲ್ಲಿ ಹಾಜರಾಗತಕ್ಕದ್ದು.

(Sd.) C. V. Thomas
For Collector

ದ. ಕ ಜಿಲ್ಲಾ ಕಲೆಕ್ಟರರ ಆಫೀಸು
ಮಂಗಳೂರು ತಾ. 5—2—54

ಪೆಪ್ಸು ಮತ್ತು ತಿರು-ಕೊಚ್ಚಿಯಲ್ಲಿ ಚುನಾವಣೆ

ಭದ್ರ ಸರಕಾರ ರಚಿಸಲ್ಪಡುವಂತೆ ನೋಡುವುದು ಮತದಾರರ ಕರ್ತವ್ಯ

ಎರಡು ವರ್ಷಗಳ ಪೂರ್ವದಲ್ಲಿ ಚುನಾವಣೆಯ ನೋವು-ಸುಖಗಳನ್ನು ಅನುಭವಿಸಿದ್ದ ನೆರೆಯ ತಿರು-ಕೊಚ್ಚಿ ರಾಜ್ಯದಲ್ಲಿ ಇದೇ ೧೫ನೇ ದಿನಾಂಕದಿಂದ ೨೬ನೇ ತಾರೀಕಿನ ವರೆಗೆ ಇನ್ನೊಂದು ಮಹಾ ಚುನಾವಣೆ ಜರಗುತಿದ್ದು, ಎಲ್ಲರ ಲಕ್ಷ್ಯವನ್ನೂ ತನ್ನೆಡೆಗೆ ಈ ಚುನಾವಣೆ ಸೆಳೆದಿದೆ. ೧೦೬ ಚುನಾವಣಾ ಕ್ಷೇತ್ರಗಳಿಂದ, ಒಟ್ಟು ೧೧೭ ಜನ ಸದಸ್ಯರು ಆಯ್ಕೆ ಹೊಂದಲಿದ್ದು, ಈ ಸ್ಥಳಗಳಿಗೆ ಕಾಂಗ್ರೆಸು ೧೧೫, ಪ್ರಜಾ ಸಮಾಜ ವಾದಿ ೩೮, ಕಮ್ಯುನಿಸ್ಟ ೩೭, ಕ್ರಾಂತಿಕಾರಿ ಸಮಾಜ ವಾದಿ ೧೨, ತಿರುವಾಂಕೂರು ತಮಿಳುನಾಡಿನ ಕಾಂಗ್ರೆಸು ೧೭ ಮತ್ತು ಜನಸಂಘ ೧-ಹೀಗೆ ಹುರಿಯಾಳುಗಳು ನಿಂತಿರುವರು. ಇವರ ಹೊರತು ೪೭ ಸ್ವತಂತ್ರ ಉಮೇದ್ವಾರರೂ ಚುನಾವಣೆಯಲ್ಲಿ ಸ್ಪರ್ಧಿಸಲಿದ್ದು ಅವರಲ್ಲಿ ಎಷ್ಟೋ ಮಂದಿ ಕಾಂಗ್ರೆಸ್ಸೇತರ ಪಕ್ಷಗಳ ಬೆಂಬಲವನ್ನು ಪಡೆದು ಕೊಂಡಿರುವರು.

ಮತದಾರರ ಹೊಣೆ

ತಿರುಕೊಚ್ಚಿಯಲ್ಲಿನ ಮತದಾರರ ಸಂಖ್ಯಾ ಪ್ರಮಾಣವು ಕಳೆದ ಎರಡು ವರ್ಷಗಳಲ್ಲಿ ಎರಡು ಲಕ್ಷದಷ್ಟು ಏರಿರುತ್ತದೆ. ಸುಮಾರು ೪೫ ಲಕ್ಷ ಮತದಾರರು ತಮಗೆ ದೊರೆತ ಅತ್ಯಮೂಲ್ಯವಾದ ಓಟಿನ ಹಕ್ಕನ್ನು ಈ ಚುನಾವಣೆಯಲ್ಲಿ ಚಲಾಯಿಸುವ ರೀತಿಯನ್ನು ಈ ರಾಜ್ಯದ ಭವಿಷ್ಯತ್ತು ಅವಲಂಬಿಸಿರುತ್ತದೆ. ಇಲ್ಲಿಯ ಮತದಾರರೆಲ್ಲರೂ ಭಾರತದಲ್ಲಿಯೇ ಅತಿ ಹೆಚ್ಚು ಸುಶಿಕ್ಷಿತರು—ಇವರು ಪೂರ್ವಾಪರ ಯೋಚನೆಯನ್ನು ಮಾಡಿ ನಿಃಸಂದಿಗ್ಧ ಬಹುಮತವುಳ್ಳ ಭದ್ರವಾದ ಸರಕಾರವನ್ನು ರಚಿಸಲಾಗುವಂತೆ ಮತದಾನ ಮಾಡಿದರೆ, ಮುಂದೆ ಏಳುವ ಘರ್ಷಣೆಗಳು ತಪ್ಪುತ್ತವೆ. ಈ ದೃಷ್ಟಿಯಿಂದ ಹೆಚ್ಚುಕಡಿಮೆ ಎಲ್ಲ ಸ್ಥಾನಗಳಿಗೂ ಹುರಿಯಾಳುಗಳನ್ನು ನಿಲ್ಲಿಸಿರುವ, ದೇಶದಲ್ಲಿಯೇ ಅತ್ಯಂತ ಸುಸಂಘಟಿತವಾದ ಮತ್ತು ಉನ್ನತ ಧ್ಯೇಯಾದರ್ಶಗಳನ್ನು ಅಂಗೀಕರಿಸಿರುವ ಕಾಂಗ್ರೆಸು ಪಕ್ಷವನ್ನು ಬೆಂಬಲಿಸುವುದು ಯೋಗ್ಯ.

ಜಾಣತನ ಬೇಕು

ಕಾಂಗ್ರೆಸಿನ ಬಲವನ್ನು ಮುರಿಯುವ ಉದ್ದೇಶದಿಂದ ಅಪವಿತ್ರವಾದ ಚುನಾವಣಾ ಒಪ್ಪಂದವನ್ನು ವಿರೋಧೀ ಪಕ್ಷಗಳು ಮಾಡಿಕೊಂಡಿವೆ—ಆದರೆ, ಮದ್ರಾಸಿನಲ್ಲಿ ವಿರೋಧೀ ಪಕ್ಷಗಳ ಐಕ್ಯರಂಗ ಶಾಸನ ಸಭೆಯು ಕ್ರಮವಾಗಿ ಕೆಲಸಮಾಡತೊಡಗಿದ ಕೆಲವೇ ದಿನಗಳಲ್ಲಿ ಚೂರು ಚೂರಾಗಿ ಒಡೆದುಹೋದುದನ್ನು ನೆನೆದರೆ, ತಿರು-ಕೊಚ್ಚಿಯ ಮತದಾರರು ಐಕ್ಯರಂಗದ ಮೋಹ ಜಾಲಕ್ಕೆ ಬಲಿಬೀಳದೆ ಜಾಣತನದಿಂದಲೂ ಜಾಗ್ರತೆಯಿಂದಲೂ ವರ್ತಿಸಬೇಕೆಂದು ಎಚ್ಚರಿಸ ಬೇಕಾಗುತ್ತದೆ.

ಮೋಜಿನ ಘಟನೆ

ಚುನಾವಣೆಯ ಎಲ್ಲ ವ್ಯವಸ್ಥೆಗಳನ್ನೂ ಚೊಕ್ಕವಾಗಿ ಏರ್ಪಡಿಸಿದ್ದರೂ—ಒಂದು ಮೋಜಿನ ಘಟನೆ ನಡೆದೇ ಹೋಯಿತು—ಮತಪತ್ರಗಳನ್ನು ತುಂಬಿಸಿ ನಾಸಿಕದಿಂದ ತಿರುವನಂತಪುರಕ್ಕೆ ಕಳಿಸಿದ ೨೦ ಪೆಟ್ಟಿಗೆಗಳಲ್ಲಿ ೩ ಕಳವಾಗಿ ಹೋದವು. ಚುನಾವಣಾ ಕಮಿಶನಿನವರು ಹೀಗೆ ಕದಿಯಲ್ಪಟ್ಟ ಮತಪತ್ರಗಳ ಸಂಖ್ಯೆಯನ್ನೆ ರದ್ದುಗೊಳಿಸಿ, ಹೊಸ ಕ್ರಮ ಸಂಖ್ಯೆಗಳನ್ನು ಪಡೆದ ಬೇರೆ ಮತಪತ್ರಗಳನ್ನು ಪೂರೈಸಿದರು. ಕಳವಾದ ಒಂದೆರಡು ದಿನಗಳಲ್ಲಿ ಕಡಪ ಮತ್ತು ಅನಂತಪುರಗಳ ಗಡಿ ಪ್ರದೇಶದಲ್ಲಿ ಮತ ಪತ್ರಗಳು ಗಾಳಿಯಲ್ಲಿ ಹಾರಾಡುತಿದ್ದುವಂತೆ! ತಿರುಕೊಚ್ಚಿಗೆ ಹೋಗುತಿದ್ದ ಈ ಪೆಟ್ಟಿಗೆಗಳಲ್ಲಿ ಉಪಯುಕ್ತ ವಸ್ತುಗಳು ಇರಬಹುದೆಂದು ಯಾರೋ ಕಳ್ಳರು ಕೈಕೊಟ್ಟಿರಬೇಕು. ಒಡೆದು ನೋಡುವಾಗ—ಪೆಟ್ಟಿಗೆಗಳಲ್ಲಿ ಮತಪತ್ರಗಳು ಮಾತ್ರ ಕಾಣಸಿದುದರಿಂದ ಅವರು ತುಂಬ ನಿರಾಶೆ ಹೊಂದಿ, ಅವನ್ನು ಬಿಸಾಡಿಬಿಟ್ಟರು.

ನೆಹರೂರ ವಿನಂತಿ

ಉತ್ತರ ಭಾರತದ ಸೀಮಾ ಪ್ರದೇಶವಾದ ಪೆಪ್ಸು ರಾಜ್ಯದಲ್ಲಿ ಸಹ ಇಷ್ಟರಲ್ಲೇ ಚುನಾವಣೆಗಳು ಮರಳಿ ನಡೆಯಲಿವೆ. ಕಳೆದ ವಾರ ಕಾಂಗ್ರೆಸಾಧ್ಯಕ್ಷ ಶ್ರೀ ಜವಾಹರಲಾಲ ನೆಹರೂರವರು ಇಲ್ಲಿ ಚುನಾವಣಾ ಪ್ರಚಾರ ಭಾಷಣಗಳನ್ನು ಮಾಡಿದರು. ಅವರು ಜಾತೀಯ ಮತ್ತು ಮತೀಯ ಭಾವನೆಗಳನ್ನು ಕೆರಳಿಸಿ, ರಾಜಕೀಯ ಲಾಭವನ್ನು ಪಡೆಯುವ ಹವ್ಯಾಸವನ್ನು ಬಲವಾಗಿ ಖಂಡಿಸಿದರು. ಕಮ್ಯುನಿಸ್ಟರ ದೇಶನಿಷ್ಠೆಯನ್ನು ಅವರು ಪ್ರಶ್ನಿಸಿ ಭಾರತದಲ್ಲಿ ಕಮ್ಯುನಿಸ್ಟರ ಬಗ್ಗೆ ಎಚ್ಚರದಿಂದಿರಬೇಕಾಗಿ ಹೇಳಿದರು. ಕಾಂಗ್ರೆಸ್ಸಿನ ಧ್ಯೇಯಾದರ್ಶಗಳನ್ನು ಪ್ರಶಂಸಿಸಿ, ದೇಶಕ್ಕೆ ಅದು ಸಲ್ಲಿಸಿದ ಸೇವೆಯನ್ನು ಜನರು ಮೆಚ್ಚಿ, ಕಾಂಗ್ರೆಸಿಗೆ ಓಟು ಕೊಡಬೇಕೆಂದು ಕೇಳಿಕೊಂಡರು. ದೇಶದ ಬಾಗಿಲಿಗೆ ಹೊಸತೊಂದು ವಿಪತ್ತು ಅನಿರೀಕ್ಷಿತವಾಗಿಯೇ ಬರುವ ಸಂಭವ ತೋರುತ್ತಿರುವುದರಿಂದ ಸೀಮಾಂತ ಪ್ರದೇಶದ ಪೆಪ್ಸು ರಾಜ್ಯದಲ್ಲಿ ಭದ್ರವಾದ, ಜನಹಿತ ಸರಕಾರವನ್ನು ಸ್ಥಾಪಿಸಲಾಗುವಂತೆ—ಅರ್ಥಾತ್, ಕಾಂಗ್ರೆಸ್ಸು ಸರಕಾರವನ್ನು ರಚಿಸುವಂತೆ—ಮತದಾನ ಮಾಡಬೇಕೆಂದು ನೆಹರೂ ಆಗ್ರಹದಿಂದ ವಿನಂತಿಸಿದರು.

ಪೆಪ್ಸುವಿನಲ್ಲಿ ಪಕ್ಷಬಲ

ಪೆಪ್ಸುವಿನ ಮತದಾರರು ೬೦ ಮಂದಿ ಶಾಸನಸಭಾ ಸದಸ್ಯರನ್ನು ಚುನಾಯಿಸಬೇಕಾಗಿದ್ದು—ಈ ಎಲ್ಲ ಸ್ಥಾನಗಳಿಗೂ ಕಾಂಗ್ರೆಸು ಹುರಿಯಾಳುಗಳನ್ನು ನಿಲ್ಲಿಸಿದೆ. ಮಾಸ್ಟರ ತಾರಾಸಿಂಗರ ಅಕಾಲಿ ದಳವು ೩೩ ಸ್ಥಳಗಳಿಗೆ ಮತ್ತು ಅಕಾಲಿದಳದ ಎಡಪಕ್ಷವು ೨೨ ಸ್ಥಳಗಳಿಗೆ ಹುರಿಯಾಳುಗಳನ್ನು ನಿಲ್ಲಿಸಿವೆ. ಈ ಎಡಪಕ್ಷದವರಿಗೆ ಪ್ರಜಾರಂಗದ ಬೆಂಬಲವಿದೆ. ಸ್ವತಃ ಪ್ರಜಾರಂಗದವರು ೧೦, ಕಮ್ಯೂನಿಸ್ಟರು ೧೧, ಸಮಾಜವಾದಿಗಳು ೪ ಮತ್ತು ಜನಸಂಘದವರು ೧೧ ಹುರಿಯಾಳುಗಳನ್ನು ನಿಲ್ಲಿಸಿದ್ದು, ಇವರ ಹೊರತು ಬೇರೆ ೧೨೫ ಹುರಿಯಾಳುಗಳೂ ಚುನಾವಣಾ ಸ್ಪರ್ಧೆಗೆ ಇಳಿದಿರುವರು. ಇವರಲ್ಲಿ ಪೆಪ್ಸುದಲ್ಲಿ ವಿರೋಧೀ ಪಕ್ಷದ ಕಡೆಯಿಂದ ಸರಕಾರ ರಚಿಸಿದ್ದ ಸರದಾರ ಜ್ಞಾನಸಿಂಗ ರಾರೇವಾಲಾರ ೧೮ ಮಂದಿ ಬೆಂಬಲಿಗರನ್ನು ಕಾಣುತ್ತೇವೆ.

ಕಾಂಗ್ರೆಸಿನ ವಿಶ್ವಾಸ

ಅರಾಜಕತೆಯನ್ನು ನಾಶಮಾಡಿ ಸುವ್ಯವಸ್ಥೆಯನ್ನೂ ಶಾಂತ ವಾತಾವರಣವನ್ನೂ ರಾಷ್ಟ್ರಾಧ್ಯಕ್ಷರ ಆಳಿಕೆ ನೆಲೆಗೊಳಿಸಿದ್ದರಿಂದ, ಕಾಂಗ್ರೆಸಿಗೆ ಜನರು ಬೆಂಬಲ ಕೊಡುವರೆಂದು ಹೇಳಲಾಗುತ್ತದೆ. ಅಕಾಲಿದಳವು ಪಂಜಾಬೀ ಭಾಷೆಯನ್ನಾಡುವ ಪ್ರತ್ಯೇಕ ರಾಜ್ಯ ರಚನೆಯ ಪ್ರಶ್ನೆಯನ್ನು ಮುಂದೊತ್ತಿ ಚುನಾವಣೆಯಲ್ಲಿ ಬೆಂಬಲ ಗಳಿಸಲು ನೋಡುತ್ತದೆ. ಕಾಂಗ್ರೆಸಿನಷ್ಟೇ ತಾರಾಸಿಂಗರ ಅಕಾಲಿದಳವೂ ಪ್ರತಿಗಾಮಿಯಾಗಿದೆಯೆಂದು ಎಡಪಕ್ಷದ ಅಕಾಲಿದಳದ ಧುರೀಣರು ಹೇಳುತ್ತಾ, ತಮಗೆ ಬೆಂಬಲ ಕೋರುವರು. ಕಾಂಗ್ರೆಸು ಹಿಂದಿನ ರಾಜ ಮಹಾರಾಜರನ್ನೂ ಶ್ರೀಮಂತರನ್ನೂ ೧೫ ಸ್ಥಳಗಳಿಗೆ ನಿಲ್ಲಿಸಿರುವುದರಿಂದ ಅದು ಗೆದ್ದು ಬಂದರೆ ಹಿಂದಿನ ಅಶಾಂತ ವಾತಾವರಣ ಮರಳಿ ಕಾಣಿಸೀತೆಂದು ಇವರ ಎಚ್ಚರಿಕೆ.

ಕಮ್ಯೂನಿಸ್ಟರ ವಿಚಾರ ಪ್ರಣಾಳಿ

ಕಮ್ಯೂನಿಸ್ಟರು ಇಲ್ಲಿ ಯಾವ ನಿಶ್ಚಿತ ಧೋರಣೆಯನ್ನೂ ಅವಲಂಬಿಸಿಲ್ಲ—ಕಾಂಗ್ರೆಸು ಅಧಿಕಾರಕ್ಕೆ ಬಂದರೆ, ಅಕಾಲಿದಳ

ದಿ ನ್ಯೂ ಕರ್ನಾಟಕ ಪ್ರೊವಿಡೆಂಟ್ ಇನ್ಶೂರೆನ್ಸ್
ಕಂಪೆನಿ ಲಿಮಿಟೆಡ್.

ಪ್ರಧಾನ ಕಚೇರಿ,] [ಉಡುಪಿ, ದ. ಕನ್ನಡ.

ನಿಮ್ಮ ಸಂಪಾದನೆಗೆ ಸಾಧ್ಯವಿರುವ ಮೊತ್ತಕ್ಕೆ ವಿಮೆ ಮಾಡಲು ಅನುಕೂಲವಿರುವ ಜಿಲ್ಲೆಯ ಏಕಮಾತ್ರ ಜನತಾ ಪ್ರೊವಿಡೆಂಟ್ ವಿಮಾ ಸಂಸ್ಥೆ.

ಏಜಂಟರು, ಸ್ಪೆಶ್ಯಲ್ ಏಜಂಟರು ಆರ್ಗನೈಜರು ಮತ್ತು ಇನ್ಸ್‌ಪೆಕ್ಟರರು ಬೇಕಾಗಿದ್ದಾರೆ.

ವಿವರಕ್ಕೆ ಬರೆಯಿರಿ:

THE NEW KARNATAKA PROVIDENT
Insurance Co. Ltd., UDIPI.

ಪಾರ್ಲಿಮೆಂಟಿನ ಉಭಯ ಸಭೆಗಳ ಅಧಿವೇಶನ

ರಾಷ್ಟ್ರಾಧ್ಯಕ್ಷರಿಂದ ಉದ್ಘಾಟನೆ ಮತ್ತು ಪ್ರಗತಿಯ ಪ್ರಶಂಸೆ

ಭಾರತದ ಪಾರ್ಲಿಮೆಂಟಿನ ಉಭಯ ಸಭೆಗಳ ಸಂಯುಕ್ತ ಅಧಿವೇಶನವನ್ನು ದಿನಾಂಕ ೧೫ರಂದು ಸದ್ಧತಿಯಂತೆ ರಾಷ್ಟ್ರಾಧ್ಯಕ್ಷ ಡಾ. ರಾಜೇಂದ್ರ ಪ್ರಸಾದರು ಉದ್ಘಾಟಿಸಿದರು. ಮೂರು ತಿಂಗಳ ವರೆಗೆ ಜರಗಲಿರುವ ಪ್ರಕೃತದ ಅಧಿವೇಶನದಲ್ಲಿ ಮುಂಗಡ ಪತ್ರದ ಪರಿಶೀಲನೆಯಲ್ಲದೆ ಬಹು ದಿನಗಳಿಂದ ಬಾಕಿಬಿದ್ದಿರುವ ಕೆಲವು ಮಸೂದೆಗಳ ಕುರಿತು ಚರ್ಚೆಯೂ ನಡೆಯಲಿದೆ. ರಾಷ್ಟ್ರಾಧ್ಯಕ್ಷರ ಉದ್ಘಾಟನಾ ಕಾಲದಲ್ಲಿ ಕಮ್ಯುನಿಸ್ಟ ಸದಸ್ಯರು ಸಭೆಯನ್ನು ಬಹಿಷ್ಕರಿಸಿದ್ದರು. ಕುಂಭ ಮೇಳದ ದುರಂತಕ್ಕೆ ಕೇಂದ್ರ ಸರಕಾರದ ಅಲಕ್ಷ್ಯವೇ ಕಾರಣವೆಂದು ಅವರು ತಕರಾರು ಪ್ರಕಟಿಸಿ, ಈ ನಿರ್ಣಯಕ್ಕೆ ಬಂದರು. ಕಮ್ಯುನಿಸ್ಟರಂತೆ, ಪ್ರಜಾ ಸಮಾಜವಾದಿ, ಹಿಂದೂ ಮಹಾ ಸಭೆಯ ಧುರೀಣರೂ ನಿಲುವಳಿ ಸೂಚನೆಗಳನ್ನು ಮಂಡಿಸಲೆತ್ನಿಸಿ, ವಿಫಲರಾಗಿ, ತಮ್ಮ ಪ್ರತಿಭಟನೆಯ ಸೂಚನಾರ್ಥ ಸಭಾ ತ್ಯಾಗಮಾಡಿದರು. ಪ್ರಧಾನಿ ನೆಹರೂರವರು ದಕ್ಷವಾದ ಶಾಂತಿರಕ್ಷಣಾ ವ್ಯವಸ್ಥೆ ಕೈಗೊಳ್ಳಲಾಗಿದ್ದು ತೀರ ಆಕಸ್ಮಿಕವಾಗಿ ಪರಿಸ್ಥಿತಿ ಕೈತಪ್ಪಿ ಹೋಯಿತೆಂದೂ ಈ ಪ್ರಕರಣದಿಂದ ರಾಜಕೀಯ ಬಂಡವಾಳವನ್ನು ಮಾಡಿಕೊಳ್ಳಕೂಡದೆಂದೂ ಹೇಳಿದರು. ಆದರೆ, ವಿರೋಧೀ ಪಕ್ಷಗಳಿಗೆ ಈ ಮಾತು ರುಚಿಸಲಿಲ್ಲ.

ಮುಕ್ತ ಕಂಠದ ಪ್ರಶಂಸೆ

ರಾಷ್ಟ್ರಾಧ್ಯಕ್ಷರು ಮಾಡಿದ ಭಾಷಣದಲ್ಲೂ ಕುಂಭಮೇಳದ ದುರಂತಕ್ಕೋಸ್ಕರ ವ್ಯಸನ ಸೂಚಿಸಿದರು. ಉತ್ತರ ಪ್ರದೇಶದ ಸರಕಾರವು ಸರಿಯಾದ ಏರ್ಪಾಡುಗಳನ್ನು ಮಾಡಿದ್ದರೂ ಈ ಆಕಸ್ಮಿಕ ಘಟನೆಯೊಂದು ಸಂಭವಿಸಿ ಸಾವಿರಾರು ಮಂದಿ ನೋಯುವಂತಾಯಿತೆಂದು ಅವರು ವಿಷಾದಿಸಿದರು. ಅವರ ಭಾಷಣವು ಬಹಳ ಚುಟುಕಾಗಿ, ೧೫ ನಿಮಿಷಗಳ ಕಾಲವನ್ನಷ್ಟೇ ತೆಗೆದುಕೊಂಡಿತು. ಎಂದಿನಂತೆ ಹಿಂದೀಯಲ್ಲಿ ಭಾಷಣಮಾಡಿದ ಬಳಿಕ ಇಂಗ್ಲೀಷಿನಲ್ಲಿ ಅದರ ಅನುವಾದವನ್ನು ಅವರು ಓದದೆ, ಹೊಸ ಪರಂಪರೆಯನ್ನು ಹಾಕಿಕೊಟ್ಟರು. ಅವರು ವಿವರಿಸಿದ ಸಂಗತಿಗಳ ಮೇಲಿಂದ ಹೇಳುವುದಾದರೆ, ಸರಕಾರದ ಧೋರಣೆಯಲ್ಲಿ ಹೊಸತೇನೂ ಕಂಡುಬರುವುದಿಲ್ಲ. ದೇಶದೊಳಗಿನ ಅಭಿವೃದ್ಧಿ ಪ್ರಯತ್ನಗಳು ಹೊಂದುತ್ತಿರುವ ಪ್ರಗತಿಯನ್ನು ಅವರು ಮೆಚ್ಚಿದರು. ಪರದೇಶಗಳೊಡನೆ ಶಾಂತಿ-ಸೌಹಾರ್ದಯುತವಾದ ಸಂಬಂಧವನ್ನು ಇಟ್ಟುಕೊಳ್ಳುವ ಅಭಿಲಾಷೆಯನ್ನು ಅವರು ಪುನರುಚ್ಚರಿಸಿದರು. ಅಂತಾರಾಷ್ಟ್ರೀಯ ಕ್ಷೇತ್ರದಲ್ಲಿ ಮುಖ್ಯವಾಗಿ ಕೊರಿಯಾದಲ್ಲಿ ಭಾರತೀಯ ರಕ್ಷಣಾ ಸೇನೆ ಜವಾಬ್ದಾರಿ ನಿರ್ವಹಿಸಿದ ರೀತಿಯನ್ನು ಅವರು ಮುಕ್ತಕಂಠದಿಂದ ಪ್ರಶಂಸಿಸಿದರು. ಪಾಕಿಸ್ತಾನ ಮತ್ತು ಭಾರತಗಳ ನಡುವಣ ಸಂಬಂಧದ ವಿಷಯದಲ್ಲಿ ಕಳೆದ ವರ್ಷದ ಆದಿಯಲ್ಲಿ ಕಂಡು ಬಂದ ಸೌಹಾರ್ದ ಮನೋಭಾವವು ಮತ್ತು ಸಾಧಿಸಿದ ಪ್ರಗತಿಯು ಈಚೆಗೆ ಕೆಲವು ಘಟನೆಗಳಿಂದ ತಡೆ ಹಿಡಿಯಲ್ಪಟ್ಟಿವೆ ಎಂದವರು ಹೇಳಿದರು.

ಪ್ರಗತಿಪರ ದೃಷ್ಟಿ

ಪ್ರಕೃತದ ಅಧಿವೇಶನದ ಮುಂದೆ ಮಂಡಿಸಲ್ಪಡುವ ಕಾಯಿದೆ ಅಂಶಗಳನ್ನು ವಿವರಿಸುತ್ತಾ, ಹಿಂದೂ ಕಾನೂನಿನ ಕ್ರೋಢೀಕರಣದ ಮಸೂದೆಗೆ ಸರಕಾರ ಅತ್ಯಧಿಕ ಪ್ರಾಶಸ್ತ್ಯ ಸಲ್ಲಿಸುವುದೆಂದು ತಿಳಿಸಿದರು. ತ್ವರಿತವಾಗಿ ನ್ಯಾಯದಾನವಾಗುವಂತೆಯೂ ಖರ್ಚು ಕಡಿಮೆ ಬೀಳುವಂತೆಯೂ ನ್ಯಾಯಾಂಗವನ್ನು ಸುಧಾರಿಸುವುದಕ್ಕೆ ಸರಕಾರ ಮಹತ್ವ ಕೊಡುತ್ತದೆಂದು ಅವರು ನುಡಿದರು. ಪಂಚವಾರ್ಷಿಕ ಯೋಜನೆಯನ್ನು ಉದ್ಯೋಗದ ಅವಕಾಶಗಳನ್ನು ಹೆಚ್ಚಿಸುವ ಉದ್ದೇಶದಿಂದ ಪರಿಷ್ಕರಿಸಲಾಗುತ್ತಿದೆಯೆಂದೂ ಹೊಸತಾಗಿ ಕೋಸಿ, ಕೊಯಾನಾ, ಚಂಬಲ ಮೊದಲಾದ ಐದು ನದೀ ಯೋಜನೆಗಳನ್ನು ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿಯೇ ಸೇರಿಸಲಾಗುವಂತೆ ಭರದಿಂದ ಪೂರ್ವ ಪರಿಶೀಲನೆ ನಡೆಯುತ್ತಿದೆಯೆಂದೂ ಪ್ರಕಟಿಸಿದರು. ಅಂಚೆ ತಂತಿಗಳ ಸೌಕರ್ಯವನ್ನು ದೇಶದಾದ್ಯಂತ ಗ್ರಾಮಾಂತರ ಪ್ರದೇಶಗಳಲ್ಲಿ ವಿಸ್ತರಿಸಲಾಗಿದೆ. ರೈಲ್ವೆಗಳು ಅಭಿವೃದ್ಧಿ ಹೊಂದಿವೆ. ಗುಡಿ ಕೈಗಾರಿಕೆಗಳ ವಿಷಯದಲ್ಲಿ ಸರಕಾರ ಪ್ರೋತ್ಸಾಹ ಕೊಡುತ್ತಿದ್ದರೂ ಪರಿಸ್ಥಿತಿ ಸುಧಾರಿಸದಿರುವುದಕ್ಕೆ ಅವರು ಚಿಂತೆ ವ್ಯಕ್ತಗೊಳಿಸಿದರು. ರಶಿಯಾದೊಡನೆ ವ್ಯಾಪಾರ ಒಪ್ಪಂದವಾಗಲಿಕ್ಕೊಂಡುದನ್ನೂ ಅವರು ಪ್ರಸ್ತಾಪಿಸಿದರು.

ಹೊಸ ವರ್ಷ ಹೇಗಿದೆ?

ರಾಜ್ಯಗಳ ಪುನರ್ವಿಂಗಡಣೆಯ ಪ್ರಶ್ನೆಯನ್ನು ವಿಚಾರಿಸಲು ಸರಕಾರ ಆಯೋಗ ನೇಮಿಸಿರುವುದು ಭಾರತಕ್ಕೆ ಐತಿಹಾಸಿಕ ಮಹತ್ವದಿಂದ ಕೂಡಿದ ಘಟನೆಯೆಂದು ರಾಷ್ಟ್ರಾಧ್ಯಕ್ಷರು ವರ್ಣಿಸಿದರು. ನಾವೆಲ್ಲರೂ ವಿಚಾರಪೂರ್ಣ ದೃಷ್ಟಿಯಿಂದ ನಡೆದುಕೊಳ್ಳಬೇಕೆಂದೂ ಉದ್ವೇಗಕ್ಕೆ ಎಡೆಕೊಡಬಾರದೆಂದೂ ಅವರು ಉಪದೇಶಿಸಿದರು. ಕಳೆದ ವರ್ಷದಲ್ಲಿದ್ದ ಭಯ-ಬಿಕ್ಕಟ್ಟುಗಳು ಇನ್ನೂ ದೂರವಾಗಲಿಲ್ಲ. ಹೊಸವರುಷದಲ್ಲಿ ಭರವಸೆಯೂ ಭಯವೂ ಸಮಪ್ರಮಾಣದಲ್ಲಿ ಬೆರೆತಿದ್ದು, ನಾನೆಲ್ಲರೂ ಶಾಂತಿ-ಸಹನೆ-ಸ್ವಾವಲಂಬನವೆಂಬ ಮಹಾತ್ಮಾ ಗಾಂಧೀಜಿಯ ಅಮೃತ ಸಂದೇಶವನ್ನು ಸ್ಮರಿಸಿಕೊಂಡು ನಡೆದರೆ ಪ್ರಗತಿಪರೋಗದ ಬಲ್ಲೆವು ಭಾರತದ ಅಭಿವೃದ್ಧಿಯನ್ನು ಸಾಧಿಸಿ ಸಂರಕ್ಷಣೆಯನ್ನು ಮಾಡಿಕೊಳ್ಳಬಲ್ಲೆವು. ಲೋಕ ಶಾಂತಿಯನ್ನು ಸ್ಥಾಪಿಸುವುದಕ್ಕೂ ನೆರವಾಗಬಲ್ಲೆವು ಎಂಬಾಶಯವನ್ನು ರಾಷ್ಟ್ರಾಧ್ಯಕ್ಷರು ವ್ಯಕ್ತಪಡಿಸಿದರು. ರಾಷ್ಟ್ರಾಧ್ಯಕ್ಷರ ಭಾಷಣದ ಮೇಲೆ ಎರಡು ದಿನಗಳ ಚರ್ಚೆಯು ಇಷ್ಟರಲ್ಲೇ ಮುಗಿಯುತ್ತದೆ.

ಕೃಷಿಮೂಲವಾದ ಸಂಸ್ಕೃತಿ

ಕೃಷಿಯೇ ಪ್ರಧಾನವಾಗಿರುವ ಭಾರತದಲ್ಲಿ ಸುಧಾರಿತ ಪದ್ಧತಿಯನ್ನು ರೈತರು ಬಳಸುವಂತೆ ಮಾಡುವುದಕ್ಕೆ ಸಲ್ಲಿಸಬೇಕಾದ ಮಹತ್ವವನ್ನು ಉಪರಾಷ್ಟ್ರಾಧ್ಯಕ್ಷರಾದ ಡಾ. ರಾಧಾಕೃಷ್ಣನ್ನರು ಕೇಂದ್ರ ಕೃಷಿ ಸಂಶೋಧನಾ ಮಂಡಳದ ಪದವೀದಾನ ಸಮಾರಂಭ ಕಾಲದಲ್ಲಿ ಪ್ರಸ್ತಾಪಿಸಿದರು. ಮಾನವನ ಸಂಸ್ಕೃತಿಗೆ ಕೃಷಿಯೇ ಮೂಲವೆಂದು ಅವರು ವಿವರಿಸಿದರು. ನದೀದಂಡೆಗಳೇ ಪ್ರಾಚೀನ ಕಾಲದಿಂದಲೂ ಸಂಸ್ಕೃತಿಯ ಕೇಂದ್ರಗಳಾಗಿದ್ದುವೆಂದು ಅವರು ಹೇಳುತ್ತಾ ಋಗ್ವೇದದಲ್ಲಿ ಸೀತಾ ಮಾತೆಯನ್ನು ಕೃಷಿ ಮತ್ತು ಪಣ್ಯ ಹೊಲಗಳ ಅಧಿದೇವತೆಯಾಗಿ ವರ್ಣಿಸಿರುವದನ್ನು ಜನಕ ರಾಜನು ನೇಗಿಲು ಹಿಡಿದು ಉಳುವಾಗ ಜಾನಕಿಯು ನೇಗಿಲ ಕುಳಕ್ಕೆ ಸಿಕ್ಕಿದಂದ ಐತಿಹ್ಯ ... ವಿಶ್ಲೇಷಿಸಿದರು. ಪವಿತ್ರವಾದ ಜೀವನಾಧಾರವಾದ ಕೃಷಿಯನ್ನು ಬಿಟ್ಟುಕೊಟ್ಟು ಬೇರೆ ಉದ್ಯೋಗಗಳನ್ನು ಕೈಗೊಳ್ಳುವ ಮನೋಭಾವವು ಬಲಿಯುತ್ತಿರುವುದಕ್ಕೆ ಅವರು ವ್ಯಸನ ಸೂಚಿಸಿದರು. ರೈತರು ಶಾಲೆಯ ಹೊರೆಯಿಂದಲೂ ಸಾವಿನ ಸಲಕರಣೆಗಳ ಅಭಾವ ಮತ್ತು ಸುಧಾರಿತ ಪದ್ಧತಿಯ ಅಜ್ಞಾನಗಳಿಂದ ಬಳಲುತ್ತಿರುವರೆಂದು ಅವರು ಸತ್ಯ ಸಂಗತಿಯನ್ನು ಬಿಚ್ಚು ಮಾತಿನಲ್ಲಿ ಹೇಳಿದರು. ಕೃಷಿಪದವೀಧರರೂ ಪಂಡಿತರೂ ರೈತನ ಮನೆ ಬಾಗಿಲಿಗೆ ತಮ್ಮ ಜ್ಞಾನವನ್ನು ಹೊತ್ತುಸಾಗಬೇಕೆಂದು ಅವರು ಆದೇಶ ನೀಡಿದರು.

ಸರಕಾರದ ವಿರುದ್ಧ ತೀರ್ಪು

ಮುಂಬಯಿ ಸರಕಾರದವರು ಇಂಗ್ಲೀಷು ಬೋಧ ಭಾಷೆಯಾಗಿರುವ ಆಂಗ್ಲೋ ಇಂಡಿಯನ್ ಶಾಲೆಗಳಲ್ಲಿ ಭಾರತೀಯ ವಿದ್ಯಾರ್ಥಿಗಳಿಗೆ ಪ್ರವೇಶಕೊಡಬಾರದೆಂದು ನಿರ್ಬಂಧಿಸಿದ ಪರಿಪತ್ರದ ಘಟನಾತ್ಮಕ ಪ್ರಶ್ನೆಯು ರಾಜ್ಯದ ಹೈಕೋರ್ಟಿನ ಮುಂದೆ ವಿಚಾರಣೆಗೆ ಬಂದಿತು. ನ್ಯಾಯಮೂರ್ತಿಗಳಾದ ಛಾಗ್ಲಾ ಮತ್ತು ದೀಕ್ಷಿತರು ಸರಕಾರದ ಆಜ್ಞೆಯು ಘಟನೆಯ ೨೯ (೨) ಮತ್ತು ೩೩ನೇ ನಿಯಮಗಳನ್ನು ಉಲ್ಲಂಘಿಸುತ್ತದೆಂದು ತೀರ್ಪು ಹೇಳಿ, ಆಜ್ಞೆಯನ್ನು ಆಚರಣೆಗೆ ತರಬಾರದೆಂದು ಮುಂಬಯಿ ಸರಕಾರವನ್ನು ನಿಷೇಧಿಸಿದೆ. ಭಾರತೀಯರಿಗೆ ಇಂಗ್ಲೀಷ್ ಮಾಧ್ಯಮದ ಮೂಲಕ ಶಿಕ್ಷಣವನ್ನು ನೀಡಬಾರದೆಂಬುದೂ ಭಾರತೀಯ ಭಾಷೆಗಳಲ್ಲಿ ನಮ್ಮ ವಿದ್ಯಾರ್ಥಿಗಳು ವಿದ್ಯೆ ಕಲಿಯಬೇಕೆಂಬುದೂ ಸರಕಾರದ ಉದ್ದೇಶ. ಮುಂಬಯಿ ಹೈಕೋರ್ಟು ಕೊಟ್ಟ ತೀರ್ಪಿನ ವಿರುದ್ಧ ವರಿಷ್ಠ ನ್ಯಾಯಾಲಯಕ್ಕೆ ಸರಕಾರವು ಇಷ್ಟರಲ್ಲೇ ಅಪೀಲು ಮಾಡಲಿದ್ದು, ಅಲ್ಲಿ ಮಹತ್ವದ ಈ ಘಟನಾತ್ಮಕ ಪ್ರಶ್ನೆ ಕೊನೆಯದಾಗಿ ಇತ್ಯರ್ಥವೊಂದುವುದು.

ಮದರಾಸಿನ ಮಾದರಿ

ಕೇಂದ್ರ ಶಿಕ್ಷಣ ಸಲಹಾ ಮಂಡಳವು ಈಚೆಗೆ ಹೊಸದೆಹಲಿಯಲ್ಲಿ ಸಭೆಸೇರಿ, ಭಾರತದಲ್ಲಿ ಅನುಸರಿಸಬೇಕಾದ ಶಿಕ್ಷಣ ಪದ್ಧತಿ ಹಾಗು ತತ್ಸಂಬಂಧಿ ಸಂಗತಿಗಳನ್ನು ಪರಿಶೀಲಿಸಿ ಅತ್ಯಮೂಲ್ಯವಾದ ಸಲಹೆಗಳನ್ನು ಮಾಡಿರುತ್ತದೆ. ಪ್ರಾಥಮಿಕ ಶಿಕ್ಷಣ ಪದ್ಧತಿಯನ್ನು ಪ್ರಸ್ತಾಪಿಸುತ್ತಾ ಮದ್ರಾಸು ಸರಕಾರವು ಜ್ಯಾರಿಗೆ ತಂದಿರುವ ಪದ್ಧತಿಯ ಘಟನೆಯ ಉದ್ದೇಶವನ್ನು ಪರಿಪಾಲಿಸುವುದಕ್ಕೂ ಶಿಕ್ಷಣವನ್ನು ನಿತ್ಯಜೀವನದೊಂದಿಗೆ ಹೊಂದಿಸುವ ಉದ್ದೇಶಸಾಧನೆಗೂ ತಕ್ಕುದಾದ ಕ್ರಮವೆಂದು ಸಲಹೆಗಾರ ಸಮಿತಿ ಹೇಳಿರುವುದನ್ನು ಅನುಮೋದಿಸಿದೆ. ಇತರ ರಾಜ್ಯ ಸರಕಾರಗಳೂ ಮದ್ರಾಸಿನ ಆದರ್ಶವನ್ನು ಅನುಸರಿಸಬೇಕೆಂದು ಅದು ಸಲಹೆ ಮಾಡಿದೆ. ಮದ್ರಾಸು ಸರಕಾರವು ಮುಂದಿನ ಶಾಲಾ ವರ್ಷದಿಂದ ಈ ಪದ್ಧತಿಯನ್ನು ಪೇಟೆ ಪಟ್ಟಣಗಳೊಳಗಿನ ಶಾಲೆಗಳಿಗೂ ವಿಸ್ತರಿಸಲು ನಿರ್ಧರಿಸಿದೆ. ಅಲ್ಲದೆ ಮಕ್ಕಳ ಹಾಜರಿ ಸಂಖ್ಯೆಯು ಕಡಿಮೆಯಾಗಿರುವ ... ಪೇಕ್ಷಿಸಿದೆ ... ಶಿಕ್ಷಕರು ಕೆಲಸಗಳಿಗೆ ... ರೂಪದಲ್ಲಿ ಪಡೆಯುವುದಕ್ಕೂ ಸರಕಾರ ನೋಡುತ್ತದೆ. ಈಗ ಕೆಲಸದಲ್ಲಿರುವ ಯಾವುದೇ ಅಧ್ಯಾಪಕರನ್ನು ಮನೆಗೆ ಕಳಿಸುವುದಿಲ್ಲವೆಂದೂ, ಅವರ ಅಧ್ಯಾಪಕರೇ ಮತ್ತು ಮನೆ ಮಕ್ಕಳನ್ನು ಶಾಲೆಗೆ ತರುವಂತೆ ಒತ್ತಾಯ ನೀಡುವುದಾಗಿಯೂ ಸರಕಾರ ಹೇಳುತ್ತದೆ.

ದ ವರ್ಚಸ್ಸು ಮಣ್ಣುಗೂಡುವುದರಿಂದ, ಮುಂದೆ ಕಾಂಗ್ರೆಸ್ಸಿನೊಂದನ್ನೆ ಪ್ರತಿಭಟಿಸಿ ಸೋಲಿಸಬಹುದೆಂದು ಇವರ ಅಂಬೋಣ. ಒಂದುವೇಳೆ ಅಕಾಲಿದಳ ಗೆದ್ದು ಬಂದರೆ, ಆಗ ಅವರಿಗೆ ಸರಕಾರ ರಚಿಸಲು ತಮ್ಮ ಪಕ್ಷದ ಸಹಾಯ ಬೇಕಾಗುವುದರಿಂದ ತಮ್ಮ ಇಷ್ಟಾರ್ಥ ಸಿದ್ಧಿಯಾದೀತೆಂದೂ ಕಮ್ಯೂನಿಸ್ಟರ ವಿಚಾರವುಂಟು. ಚುನಾವಣೆಯಲ್ಲಿ ಯಾವದೇ ಪಕ್ಷಕ್ಕೆ ಸರಕಾರ ರಚಿಸಲು ಸಾಧ್ಯವಿಲ್ಲವಾದರೆ—ಆಗ ಪಂಜಾಬ ರಾಜ್ಯದೊಂದಿಗೆ ಪೆಪ್ಸುವನ್ನು ಕೇಂದ್ರ ಸೇರಿಸಿ ಬಿಡಬಹುದು. ಹೀಗಾದರೆ ಪಂಜಾಬೀ ರಾಜ್ಯ ರಚನೆಯ ಕೆಲಸವನ್ನು ಭರದಿಂದ ಮುಂದೊತ್ತಬಹುದೆಂಬ ಆಶೆಯನ್ನೂ ಕಮ್ಯೂನಿಸ್ಟರು ವ್ಯಕ್ತಗೊಳಿಸುವರು. ಜನಸಂಘದವರದು ಗೊತ್ತೇ ಇದೆ—ಗಡಿಯಾಚೆಗೆ ಇರುವ ಪಾಕಿಸ್ತಾನದ ವಿರುದ್ಧ ಭಾರತೀಯರ ಮನೋಭಾವವನ್ನು ಪ್ರಚೋದಿಸಿ, ಬೇಳೆ ಬೇಯಿಸುವುದು ಅವರ ಕೆಲಸ.

1953 ANOTHER YEAR OF RECORD PROGRESS:

PREMIUMS & OTHER INCOME	Rs 8,40,000
NEW BUSINESS COMPLETED	Rs 31,86,250
LIFE & RESERVE FUNDS	Rs 32,65,000
BUSINESS IN FORCE	Rs 1,43,00,000

We thank all those who have made this progress possible with their co-operation and patronage. We look forward to this co-operation in a greater measure during the year 1954 - the SILVER JUBILEE Year of the "POPULAR"

POPULAR INSURANCE COMPANY LIMITED
Popular Buildings - MANGALORE
Estd 1929

ನವಯುಗ

ಉಡುಪಿ, ಗುರುವಾರ ೧೮-೨-'೫೪

ಶಿಕ್ಷಣ ಮತ್ತು ಶಿಕ್ಷಕರು

ಭಾರತದ ಶಿಕ್ಷಣ ಪದ್ಧತಿಯನ್ನು ಪುನರ್ಘಟಿಸುವ ಮತ್ತು ಸುಧಾರಿಸುವ ಉದ್ದೇಶದಿಂದ ಕೇಂದ್ರ ಶಿಕ್ಷಣ ಸಲಹಾಮಂಡಳವು ಕಳೆದವಾರದ ಅಧಿವೇಶನದಲ್ಲಿ ಮಾಡಿದ ನಿರ್ಣಯಗಳು ಗಮನಾರ್ಹವಾಗಿರುತ್ತವೆ. ಪ್ರಾಥಮಿಕ ಶಿಕ್ಷಣವನ್ನು ಕ್ರಮವಾಗಿ ಸುಧಾರಿಸುತ್ತಾ ಹೋಗಿ ಎಂಟು ವರ್ಷಗಳಲ್ಲಿ ಮೂಲ ಶಿಕ್ಷಣದ ರೂಪಕ್ಕೆ ಅದನ್ನು ಪರಿವರ್ತಿಸುವ ಧೋರಣೆಯನ್ನು ಮಂಡಳ ವ್ಯಕ್ತಪಡಿಸಿದೆ. ಮಧ್ಯಂತರದ ಅವಧಿಯಲ್ಲಿ ಮದ್ರಾಸು ರಾಜ್ಯದಲ್ಲಿ ಆಚರಣೆಗೆ ತರಲಾದ ಪ್ರಾಥಮಿಕ ಶಿಕ್ಷಣದ ಹೊಸ ವ್ಯವಸ್ಥೆಯನ್ನು ಉಳಿದ ರಾಜ್ಯಗಳೂ ಅನುಸರಿಸಬಹುದೆಂದು ಮಂಡಳ ಹೇಳಿರುತ್ತದೆ. ಮಕ್ಕಳಿಗೆ ಪಾಠ ಹೇಳುವ ಸಮಯವನ್ನು ಐದರಿಂದ ಮೂರು ತಾಸಿಗೆ ಇಳಿಸಿದುದರಿಂದ ವಿದ್ಯೆ ನಷ್ಟವಾಯಿತೆಂದು ಭಾವಿಸಬಾರದಾಗಿ ಮಂಡಳ ತಿಳಿಸುತ್ತದೆ. ಅದೇ ಸಮಯದಲ್ಲಿ ಶಾಲೆಯ ಹೊರಗಿನ ಚಟುವಟಿಕೆಗಳನ್ನು ಉಚಿತ ರೀತಿಯಲ್ಲಿ ನಿಯಂತ್ರಿಸುವ ಮತ್ತು ಅದರ ಮೇಲೆ ಕಣ್ಣಿಡುವ ಬಗ್ಗೆ ವ್ಯವಸ್ಥೆ ಮಾಡಬೇಕೆಂದು ಪರುಳೇಕರ ಸಮಿತಿ ಸೂಚಿಸಿರುವುದರ ಕಡೆಗೆ ಗಮನವನ್ನು ಸೆಳೆದು, ಈ ದಿಸೆಯಲ್ಲಿ ಸರಕಾರ ಶೀಘ್ರ ಕ್ರಮವನ್ನು ಕೈಗೊಳ್ಳಬೇಕೆಂದು ಹೇಳಿದೆ. ಪರುಳೇಕರ ಸಮಿತಿಯ ವರದಿಯಲ್ಲಿ ಅಧ್ಯಾಪಕರಿಗೆ ಆರ್ಥಿಕ ಪ್ರೋತ್ಸಾಹವನ್ನು ಕೊಡಬೇಕೆಂಬ ಸೂಚನೆಯೂ ಇದ್ದು—ಈ ವಿಷಯಕ್ಕೆ ಅಧ್ಯಾಪಕರ ಹಿತಾಸಕ್ತಿಯುಳ್ಳ ವರ್ಗಗಳು ಪ್ರಾಧಾನ್ಯ ಸಲ್ಲಿಸುವುದು ಸಹಜ. ಮಾಧ್ಯಮಿಕ ಮತ್ತು ಉಚ್ಚ ಶಿಕ್ಷಣ ಪದ್ಧತಿಯ ಪುನರ್ಘಟನೆಯನ್ನು ಪ್ರಸ್ತಾಪಿಸುವಾಗ, ಕೇಂದ್ರ ಶಿಕ್ಷಣ ಸಲಹಾ ಮಂಡಳವು ಶಿಕ್ಷಕರಿಗೆ ಹೆಚ್ಚಿನ ಸೌಕರ್ಯಗಳನ್ನು ಒದಗಿಸಿಕೊಡಬೇಕೆಂದು ಹೇಳಿರುವುದನ್ನು ಅಧ್ಯಾಪಕ ವರ್ಗದವರು ಸರಕಾರದ ಗಮನಕ್ಕೆ ತಂದು ಒತ್ತಾಯ ಹೇರುವುದಕ್ಕೆ ಹಿಂದುಳಿಯಲಿಕ್ಕಿಲ್ಲ. ಶಿಕ್ಷಕ ವರ್ಗದಲ್ಲಿ ತಮಗೆ ದೊರೆಯುವ ವೇತನದ ವಿಷಯದಲ್ಲಿ ತೀವ್ರ ಅಸಂತೃಪ್ತಿ ತುಂಬಿದ್ದು, ಶಿಕ್ಷಣ ಮಟ್ಟವು ಕೆಳಗಿಳಿಯುತ್ತಿರುವುದಕ್ಕೆ ಇದೂ ಒಂದು ಕಾರಣವಾಗಿರುತ್ತದೆ. ವಿದ್ಯಾರ್ಥಿಗಳಲ್ಲಿ ಶಿಸ್ತುಗೇಡಿತನವು ದಿನದಿಂದ ದಿನಕ್ಕೆ ಬಲಿಯುತ್ತಿರುವುದಕ್ಕೆ ಸಹ ಶಿಕ್ಷಕರು ಹೊಣೆಗಾರಿಕೆಯನ್ನು ತಪ್ಪಿಸಿಕೊಳ್ಳುವುದು ಕಾರಣವೆಂದು ತೋರುತ್ತದೆ. ವಿದ್ಯಾರ್ಥಿಗಳ ಮುಂದೆ ಉನ್ನತ ಆದರ್ಶವನ್ನು ಇಟ್ಟು ಸ್ಫೂರ್ತಿಯನ್ನು ತುಂಬುತ್ತಾ ಮಾರ್ಗದರ್ಶನ ಮಾಡುವ ಮನೋಭಾವ ಅಧ್ಯಾಪಕ ವರ್ಗದಲ್ಲಿ ಮಾಯವಾಗುತ್ತಾ ಬರುತ್ತದೆ. ಅಧ್ಯಾಪಕರ ಸಂಬಳವು ಸರಕಾರದ ಇತರ ನೌಕರ ವರ್ಗದವರ ವೇತನ ಪ್ರಮಾಣಕ್ಕಿಂತ ಕಡಿಮೆಯಾಗಿ ಕಂಡುಬರುವುದರಿಂದ, ಆರ್ಥಿಕ ತೊಂದರೆಗಳ ನೆಪವನ್ನೊಡ್ಡಿ, ತಮ್ಮ ಮೇಲೆ ಬಿದ್ದ ಹೊಣೆಗಾರಿಕೆಯನ್ನು ಜಾರಿಸಿಕೊಳ್ಳಲು ಅಧ್ಯಾಪಕರು ನೋಡುವರು. ಕಡಿಮೆ ಸಂಬಳದ ಈ ಉದ್ಯೋಗದಲ್ಲಿ ಯೋಗ್ಯತಾಹೀನರ ಪ್ರವೇಶವೂ ಆಗಿದ್ದು, ಪರಿಣಾಮದಲ್ಲಿ ಶಿಕ್ಷಣದ ಸ್ಥಾನಮಾನ ಇಳಿಯುತ್ತಾ ನಡೆದಿದೆಯೆಂದರೆ ತಪ್ಪಾಗದು. ಅಸಮಾಧಾನದಿಂದ ತುಂಬಿದ ಶಿಕ್ಷಕರು ಈಚೆಗೆ ರಾಜಕೀಯ ಹಿತಾಸಕ್ತಿಯುಳ್ಳ ಕೆಲವು ಪಂಗಡಗಳ ಬಲೆಗೆ ಬಿದ್ದು ಶೈಕ್ಷಣಿಕ ಜೀವನದ ಪಾವಿತ್ರ್ಯಕ್ಕೆ ಕಲಂಕ ಲೇಪಿಸುವ ಅನುಚಿತ ಕಾರ್ಯಾಚರಣೆಯಲ್ಲಿ ಇಳಿದ ಉದಾಹರಣೆಗಳೂ ಸಿಗುತ್ತವೆ. ಬಂಗಾಳದಲ್ಲಿ ಸರಕಾರೇತರ ಪ್ರಾಥಮಿಕ ಶಾಲೆಗಳ ಅಧ್ಯಾಪಕರು ಮುಷ್ಕರವನ್ನು ಕೈಗೊಂಡು ೧೦ ಲಕ್ಷ ಮಕ್ಕಳಿಗೆ ಮನೆಯಲ್ಲಿ ಆಡುತ್ತಿರಲು ಅವಕಾಶ ಮಾಡಿಕೊಟ್ಟರು. ತಿರುಕೊಚ್ಚಿಯಲ್ಲೂ ಉತ್ತರಪ್ರದೇಶದಲ್ಲೂ ತಮ್ಮ ಕೋರಿಕೆಗಳನ್ನು ಸರಕಾರ ಮನ್ನಿಸಬೇಕೆಂದು ಉಪವಾಸ ಮುಂತಾದ ಉಪಾಯಗಳನ್ನು ಅಧ್ಯಾಪಕರು ಅನುಸರಿಸಿದ್ದುಂಟು. ಭಾವೀ ಜನಾಂಗಕ್ಕೆ ಶಿಸ್ತು ಮತ್ತು ನೈತಿಕ ಆದರ್ಶವನ್ನು ಹಾಕಿಕೊಡಬೇಕಾದ ಅಧ್ಯಾಪಕ ವರ್ಗ ತಾವೇ ವಿರುದ್ಧ ಪಥಾವಲಂಬಿಗಳಾದರೆ, ರಾಷ್ಟ್ರಕ್ಕೆ ಅದಕ್ಕಿಂತ ದೊಡ್ಡ ಗಂಡಾಂತರ ಬೇರೊಂದಿರಲಾರದು. ಶಿಕ್ಷಕರ ಬೇಡಿಕೆಯನ್ನು ಸರಕಾರ ಹಣದ ಅಭಾವದ ಕಾರಣ ತೋರಿಸಿ ಮೂಲೆಗುಂಪು ಮಾಡುತ್ತಾ ಬಂದಿದೆ—ಎಲ್ಲೋ ಅಲ್ಪ ಸ್ವಲ್ಪ ಪ್ರಮಾಣದಲ್ಲಿ ತುಟ್ಟಿಭತ್ತೆಯನ್ನೇರಿಸುವುದಕ್ಕೆ ನೋಡಿ, ಅಷ್ಟರಿಂದಲೇ ಉಪಾಧ್ಯಾಯರು ತೃಪ್ತರಾಗಬೇಕೆಂದು ಹೇಳುತ್ತದೆ. ಸರಕಾರದ ಆರ್ಥಿಕ ಪರಿಸ್ಥಿತಿ ಚಿಂತಾಜನಕವಾಗಿದೆಯೆಂಬ ಮಾತು ಅತಿಶಯೋಕ್ತಿಯಲ್ಲ, ನಿಜ. ಕೃಷಿ ಕೈಗಾರಿಕಾ ಕ್ಷೇತ್ರಗಳಲ್ಲಾದಂತೆ—ಶಿಕ್ಷಣಕ್ಕೆ ಮಾಡುವ ವೆಚ್ಚದ ಪರಿಣಾಮವಾಗಿ ತ್ವರಿತ ಪ್ರತಿಫಲ ದೊರೆಯುವುದಿಲ್ಲ. ಹಾಗೆಂದು ನೂರುವರ್ಷಗಳ ಮೇಲಾದರೂ ದೇಶದಲ್ಲಿ ಬಲಿಷ್ಠರಾದ ಚರಿತ್ರ ಸಂಪನ್ನರಾದ, ಉದ್ಯೋಗಶೀಲರಾದ ನಾಗರಿಕರಾಗಿ ನಮ್ಮ ಮಕ್ಕಳು ನೆಲೆಸಬೇಕೆಂಬ ದೂರದೃಷ್ಟಿಯನ್ನಿಟ್ಟುಕೊಂಡವರಿಗೆ, ಶಿಕ್ಷಣಕ್ಕೋಸ್ಕರ ವ್ಯಯಿಸುವ ರೂಪಾಯಿಗಳು ಹೆಚ್ಚೆನಿಸುವುದಿಲ್ಲ—ಮತ್ತು ಅಂತಹ ವೆಚ್ಚ ಪ್ರಕೃತ ಅನಗತ್ಯವೆಂದೂ ಕಾಣುವುದಿಲ್ಲ. ಕಾರಣ ಸರಕಾರ ದೂರಾಲೋಚನೆಯಿಂದ ಶಿಕ್ಷಣದ ಸಮಸ್ಯೆಗಳನ್ನು ಮತ್ತು ಶಿಕ್ಷಕರ ಬೇಡಿಕೆಗಳನ್ನು ಪರಿಶೀಲಿಸುವುದು ಆಗತ್ಯ. ಕೇಂದ್ರ ಸಲಹಾ ಮಂಡಳವು ಬೌದ್ಧಿಕ ಶಿಕ್ಷಣದ ಜೊತೆಯಲ್ಲಿ ಯಂತ್ರೋದ್ಯಮ, ವಿಜ್ಞಾನ, ವಾಣಿಜ್ಯ, ಕೃಷಿ, ಲಲಿತಕಲೆ, ಗೃಹವಿಜ್ಞಾನ ಮುಂತಾದ ಕ್ಷೇತ್ರಗಳಲ್ಲಿ ವಿದ್ಯಾರ್ಥಿಗಳಿಗೆ ತರಬೇತಿ ದೊರೆಯಬೇಕೆಂದು ಹೇಳಿದೆ. ಇಂತಹ ವಿವಿಧೋದ್ದೇಶದ ಶಾಲೆಗಳು ಮಾತ್ರವೇ ಭಾರತವನ್ನು ಸ್ವಾವಲಂಬಿಯಾಗಿ ಮಾಡಬಲ್ಲವೆಂದು ತಜ್ಞರ ಅಭಿಪ್ರಾಯ. ಇದರೊಂದಿಗೆ ಶಿಕ್ಷಕರ ಸಾಮಾಜಿಕ ಸ್ಥಾನಮಾನವನ್ನು ಎತ್ತರಿಸಲು ನೋಡಬೇಕೆಂಬ ಮತ್ತು ಅವರಿಗೆ ವಿಮೆ, ಪ್ರಾವಿಡೆಂಟ ಫಂಡು, ಪೆನ್ಶನ್, ವಸತಿಗೃಹ, ಮಕ್ಕಳಿಗೆ ಧರ್ಮಾರ್ಥ ಶಿಕ್ಷಣದ ಸೌಕರ್ಯಗಳನ್ನು ನೀಡಬೇಕೆಂಬ ಮಂಡಳದ ಸಿಫಾರಸನ್ನು ಕಾರ್ಯಗತಗೊಳಿಸಿದರೆ ಆಗ ತೃಪ್ತಿಕರ ರೀತಿಯಲ್ಲಿ ಶಿಕ್ಷಕರು ತಮ್ಮ ಹೊಣೆ ನಿರ್ವಹಿಸುವರೆಂದು ಧೈರ್ಯದಿಂದ ಹೇಳಬಹುದು. ಆದರೆ ಮೊದಲೇ ಸೂಚಿಸಿದಂತೆ, ಸರಕಾರದ ಆರ್ಥಿಕ ಸ್ಥಿತಿ ಚೆನ್ನಾಗಿಲ್ಲ. ಆದುದರಿಂದ ಅಗತ್ಯದ ಶೈಕ್ಷಣಿಕ ಸುಧಾರಣೆಯೂ ವಿಳಂಬವಾಗುತ್ತದೆ. ಇದನ್ನು ಶಿಕ್ಷಕರು ಸಹ ಮನಗಾಣಬೇಕು. ತುಸು ಔದಾರ್ಯದಿಂದಲೂ ತಮ್ಮ ಘನತೆ ಗಾಂಭೀರ್ಯಗಳು ಕೆಡದಂತೆಯೂ ವಿನಯದಿಂದ ನಡೆದುಕೊಳ್ಳಬೇಕು.

ನಿಷ್ಫಲವಾದ ಬರ್ಲಿನ ಸಮ್ಮೇಳನ

ಉಪಾಂಗ ಪ್ರಭಾಂಗದಲ್ಲಿ ಸಂರಕ್ಷಣಾ ಚಟುವಟಿಕೆ

ನಾಲ್ಕು ಮಹಾರಾಷ್ಟ್ರಗಳ ವಿದೇಶ ಮಂತ್ರಿಗಳು ಬರ್ಲಿನದಲ್ಲಿ ಸಮ್ಮೇಳನ ನಡೆಸಿದ್ದರಿಂದ ಏನಾದರೂ ಪ್ರಯೋಜನವಾಯಿತೋ ಎಂಬುದನ್ನು ವಿಮರ್ಶಿಸುವ ಕಾಲ ಸನ್ನಿಹಿತವಾಗಿರುತ್ತದೆ. ಕಳೆದ ಜನವರಿ ೨೫ರಂದು ತೊಡಗಿದ ಈ ಪರಿಷತ್ತು ಇಷ್ಟರಲ್ಲೇ ಮುಗಿಯುತ್ತದೆ. ಈ ಗುರುವಾರ (ದಿನಾಂಕ ೧೮) ಸೇರುವ ಸಭೆಯೇ ಕೊನೆಯದೆಂದು ವರದಿಗಳು ಸೂಚಿಸುತ್ತವೆ. ಇಷ್ಟು ದಿನಗಳ ಮಾತುಕತೆ ವಿಚಾರ ವಿನಿಮಯ ಮತ್ತು ಚರ್ಚೆಗಳ ಬಳಿಕ ಯಾವುದೇ ಆಶಾದಾಯಕ ಪರಿಣಾಮವಾಗುತ್ತಿಲ್ಲವಲ್ಲ ಎಂಬ ಕಳವಳ ಬಿಟ್ಟರೆ, ಬೇರೇನನ್ನೂ ಈ ಪರಿಷತ್ತು ಸಾಧಿಸಲಿಲ್ಲ. ಜರ್ಮನಿಯ ಏಕೀಕರಣ, ಆಸ್ಟ್ರಿಯದ ಸಮಸ್ಯೆ, ಜಾಗತಿಕಶಾಂತಿ–ಯಾವುದೇ ಪ್ರಶ್ನೆಯ ಸಂಬಂಧದಲ್ಲೂ ಒಡಂಬಡಿಕೆಯಾಗದಿರುವುದು ನಿರಾಶೆಯನ್ನುಂಟು ಮಾಡುತ್ತದೆ. ಸಮ್ಮೇಳನದ ಬಳಿಕ ಎರಡೂ ಗುಂಪಿನವರು ಪ್ರಗತಿ ಸಾಧಿಸಲ್ಪಡದುದಕ್ಕೆ ಇನ್ನೊಂದು ಬಣದ ಮೇಲೆ ಹೊಣೆಯೆಂದು ಪ್ರಚಾರಕ್ಕೆ ತೊಡಗಿದರೆ- ಅಲ್ಲಿಗೆ ಮಂಗಲ ಪದ ಹಾಡಿದಂತಾಗುವುದು.

ಮೊಲೊಟೋವರ ಸೂಚನೆ

ರಶಿಯಾದ ವಿದೇಶಾಂಗ ಸಚಿವ ಮೊಲೊಟೋವರು ಕಳೆದವಾರ ಜರ್ಮನಿಯ ವಿಷಯದಲ್ಲಿ ಪರಿಷ್ಕೃತ ಸೂಚನೆಯೊಂದನ್ನು ಮಂಡಿಸಿ, ಪಾಶ್ಚಾತ್ಯ ಪ್ರತಿನಿಧಿಗಳನ್ನು ಆಕಸ್ಮಿಕಗೊಂದಲಕ್ಕೆ ಕೆಡವಿದರು. ಜರ್ಮನಿಯನ್ನು ಬಿಟ್ಟು ವಿದೇಶೀ ಸೈನ್ಯಗಳು ಹೊರಗೆ ಹೋಗಬೇಕೆಂದೂ, ತನ್ನ ರಕ್ಷಣೆಗೆ ಬೇಕಾದಷ್ಟು ಮಾತ್ರ ಪೋಲೀಸು ಪಡೆಯನ್ನದು ಇಟ್ಟುಕೊಳ್ಳತಕ್ಕದ್ದೆಂದೂ ಏಕೀಕೃತ ಜರ್ಮನಿ ಹಿಟ್ಲರಶಾಹಿಯನ್ನು ತೋರಿಸದಂತೆ ತಡೆಗಟ್ಟುವ ಉದ್ದೇಶದಿಂದ ರಶಿಯಾ ಹಾಗೂ ಅದರ ಬೆಂಬಲಿಗ ರಾಷ್ಟ್ರಗಳನ್ನೊಳಗೊಂಡು ಇಡೀ ಯುರೋಪಿನ ಕುರಿತು ಸಂರಕ್ಷಣಾ ಒಪ್ಪಂದವಾಗಬೇಕೆಂದೂ ಮೊಲೊಟೋವರ ಈ ಸೂಚನೆ ಹೇಳುತ್ತದೆ. ಕಮ್ಯುನಿಸಮ್ಮಿನ ವಿರುದ್ಧ ಆಂದೋಲನ ನಡೆಸುವ ಅಮೇರಿಕವನ್ನು ಯುರೋಪಿನ ರಂಗಭೂಮಿಯಿಂದ ಹೊರಗೆ ಇಡುವ ಈ ಸೂಚನೆಯನ್ನು ತ್ರಿರಾಷ್ಟ್ರ ಪ್ರತಿನಿಧಿಗಳು ಒಪ್ಪದೆ, ಕೂಡಲೇ ನಿರಾಕರಿಸಿದರು. ಹಾಗೆಂದು ಯುರೋಪಿನ ಬೇರೆ ರಾಷ್ಟ್ರಗಳಿಗೆ ರಶಿಯಾದ ಸೂಚನೆಗಳು ಆಕರ್ಷಕವಾಗಿ ಕಂಡುಬರುತ್ತವೆ.

ಆಸ್ಟ್ರಿಯದ ಪ್ರಶ್ನೆ

ಚೀನದೊಡನೆ ಮಾತುಕತೆ ಮತ್ತು ಜಾಗತಿಕ ತ್ವೇಷ ನಿವಾರಣೆಯ ಕುರಿತು ನಡೆದ ಗುಪ್ತ ಪರ್ಯಾಲೋಚನೆಯ ವಿವರಗಳು ಇನ್ನು ಪ್ರಕಟಗೊಳ್ಳಬೇಕಷ್ಟೆ. ಬಹಿರಂಗ ಸಭೆಯಲ್ಲಿ ಆಸ್ಟ್ರಿಯದ ಪ್ರಶ್ನೆಯ ಕುರಿತು ಸಾಕಷ್ಟು ಚಟುವಟಿಕೆಗಳು ಕಂಡು ಬಂದವು. ಆದರೆ ಅವುಗಳಿಂದ ಪ್ರಯೋಜನ ಮಾತ್ರ ಸ್ವಲ್ಪವೂ ಆಗಲಿಲ್ಲ. ರಶಿಯಾದ ಪರವಾಗಿ ಮಂಡಿಸಲಾದ ಒಂದು ಸೂಚನೆಯಂತೆ ಜರ್ಮನಿಯೊಡನೆ ಶಾಂತಿ ಒಪ್ಪಂದವಾಗುವವರೆಗೆ ದ್ವಿತೀಯ ಮಹಾ ಯುದ್ಧದಲ್ಲಿ ಜರ್ಮನಿಯ ವಿರುದ್ಧ ಹೋರಾಡಿದ ಯಾವುದೇ ವಿದೇಶ ರಾಷ್ಟ್ರಗಳೊಡನೆ ಯಾವುದೇ ಬಗೆಯ ಸೈನಿಕ ಒಪ್ಪಂದವನ್ನು ಆಸ್ಟ್ರಿಯಾ ಮಾಡಿಕೊಳ್ಳಲಾಗದು; ಮತ್ತು ವಿಯೆನ್ನಾ ನಗರವೊಂದನ್ನು ಬಿಟ್ಟು, ಆಸ್ಟ್ರಿಯದ ಇತರ ಭಾಗಗಳಲ್ಲಿ ಆಕ್ರಮಿತ ರಾಷ್ಟ್ರಗಳ ಸೈನಿಕರು ಉಳಿಯತಕ್ಕದ್ದು. ಇದು ಆಸ್ಟ್ರಿಯಕ್ಕೆ ಸ್ವಾತಂತ್ರ್ಯ ನೀಡಬೇಕೆನ್ನುವ ಪಾಶ್ಚಾತ್ಯ ಧೋರಣೆಗೆ ತೀರಾ ವಿರುದ್ಧವಾದ ಸೂಚನೆಯಾದುದರಿಂದ ತ್ರಿರಾಷ್ಟ್ರಗಳು ಅದಕ್ಕೆ ಸಮ್ಮತಿಸಲಿಲ್ಲ. ಆಸ್ಟ್ರಿಯದೊಡನೆ ಮಾಡಿಕೊಳ್ಳುವ ಶಾಂತಿ ಒಪ್ಪಂದದ ಅಂತಿಮ ಕರಡನ್ನು ನಾಲ್ಕು ಪ್ರಬಲ ರಾಷ್ಟ್ರಗಳ ಪ್ರತಿನಿಧಿಗಳು ಮೂರು ತಿಂಗಳೊಳಗೆ ಸಿದ್ಧಪಡಿಸುವಂತೆ ಮಾಡಬೇಕೆನ್ನುವ ರಶಿಯಾದ ಸೂಚನೆಯೂ ಒಪ್ಪಿಗೆಯಾಗಲಿಲ್ಲ – ಏನಾದರೂ ಪ್ರಯತ್ನ ನಡೆಯುವುದಿದ್ದರೆ, ವಿದೇಶಾಂಗ ಸಚಿವರ ಸಮ್ಮೇಳನದಲ್ಲೇ ಚರ್ಚೆ ಇತ್ಯರ್ಥಕ್ಕೆ ಬರಬೇಕೆಂದು ಪಾಶ್ಚಾತ್ಯ ರಾಷ್ಟ್ರಗಳ ಅಪೇಕ್ಷೆ. ಆದರೆ ಈ ಬಯಕೆ ಕೈಗೂಡಿ ಬಾ

ಸವಿನಯ ವಿನಂತಿ

ನಮ್ಮ ಚಂದಾದಾರರಿಗೆಲ್ಲಾ ಆವರವರ ಬಾಕಿಯನ್ನು ಸೂಚಿಸಿ ಈ ಮೊದಲೇ ಆಗಾಗ್ಗೆ ಬರೆದು ತಿಳಿಸಿರುತ್ತೇವೆ. ಕೆಲವರು ಕ್ರಮವಾಗಿ ಚಂದಾಹಣ ಕಳುಹಿಸಿದ್ದಾರೆ. ಇನ್ನು ಕೆಲವರು ನಾವು ಕಳುಹಿಸಿದ ವಿ. ಪಿ. ಪಿ. ಯನ್ನು ಸ್ವೀಕರಿಸಿದ್ದಾರೆ. ಅವರೆಲ್ಲರಿಗೂ ನಾವು ಆಭಾರಿಗಳಾಗಿದ್ದೇವೆ. ಇನ್ನೂ ಚಂದಾಹಣವನ್ನು ಬಾಕಿ ಮಾಡಿಕೊಂಡಿರುವ, ವಿ. ಪಿ. ಪಿ. ಯನ್ನು ಕೂಡ ಸ್ವೀಕರಿಸದಿರುವ ಚಂದಾದಾರರೆಲ್ಲರೂ ಒಂದುವೇಳೆ ನಮ್ಮ ನೆನಪೋಲೆ ಮುಟ್ಟದಿದ್ದವರು ಕೂಡ ಪ್ರೀತ್ಯಾಭಿಮಾನವಿಟ್ಟು ತಮ್ಮ ಚಂದಾಹಣವನ್ನು ಈಗಲಾದರೂ ಕಳುಹಿಸಿಕೊಟ್ಟು ನಮಗೆ ನೆರವಾಗಬೇಕಾಗಿ ಕೇಳಿಕೊಳ್ಳುತ್ತೇವೆ. ಸಕಾಲದಲ್ಲಿ ಚಂದಾಹಣ ಅಥವಾ ಉತ್ತರ ಬಾರದಿದ್ದರೆ ಮುಂದಿನ ಸಂಚಿಕೆಯನ್ನು ವಿ. ಪಿ. ಪಿ. ಕಳುಹುವೆವು.

—ಮೆನೇಜರ್.

ರದಿರುವುದು ಆಸ್ಟ್ರಿಯಕ್ಕೆ ಮಾತ್ರವಲ್ಲ–ಎಲ್ಲರಿಗೂ ಖೇದವನ್ನುಂಟುಮಾಡಿದೆ. ಜರ್ಮನಿಯ ವಿವಾದ ಪರಿಹಾರವಾಗದೆ ಉಳಿದರೂ ಆಸ್ಟ್ರಿಯ ಸಮಸ್ಯೆ ತೀರ್ಮಾನ ಹೊಂದುವದೆಂಬ ಭಾವನೆಯನ್ನು ಹೆಚ್ಚಿನವರು ವ್ಯಕ್ತಪಡಿಸಿದ್ದರು. ಇದು ಸುಳ್ಳಾಯಿತು

ಸಂರಕ್ಷಣೆಯ ಹೆಜ್ಜೆಗಳು

ಇಂಡೋಚೀನದ ಆಶ್ರಿತ ರಾಜ್ಯಗಳಲ್ಲಿ ಒಂದಾದ ಲಾವೋಸದಲ್ಲಿ ವೀಟಮಿನರ ಚಟುವಟಿಕೆಗಳು ಜೋರಾಗುತ್ತಾ ಬಂದಿವೆ. ಹೋಚಿಮಿನರ ಸೇನೆಯ ಮುಂದಳವು ರಾಜಧಾನಿಗೆ ಅತಿ ನಿಕಟದಲ್ಲಿಯೇ ಠಾಣ್ಯ ಹೂಡಿದೆಯಾಗಿ ಕೇಳುತ್ತೇವೆ. ಫ್ರೆಂಚ ಸೈನ್ಯಾಧಿಕಾರಿಗಳು ಸುವರ್ಣ ಬುದ್ಧನ ಪ್ರತಿಮೆ ಇರುವ ಲುವಾಂಗ ಪ್ರಭಾಂಗವೆಂಬ ಈ ನಗರದ ಸಂರಕ್ಷಣೋದ್ದೇಶದಿಂದ ಯೋಗ್ಯ ಉಪಾಯಗಳನ್ನು ಕೈಗೊಂಡಿರುವರು. ರಾಜಧಾನಿಯ ಸುತ್ತಲಿರುವ ಕೋಟೆ-ಕೊತ್ತಳಗಳನ್ನು ಫ್ರೆಂಚ ಸಂರಕ್ಷಣಾ ಮಂತ್ರಿ ರೇನೆಪ್ಲೆವೆನ್ನರು ಪರಿಶೀಲಿಸಿ, ಲುವಾಂಗ ಪ್ರಭಾಂಗವನ್ನು ಉಳಿಸಲು ಕೊನೆಯವರೆಗೂ ಹೋರಾಡುವ ದೃಢ ನಿಶ್ಚಯವನ್ನು ಪುನರುಚ್ಚರಿಸಿದರು. ಹೋಚಿಮಿನರ ಸೇನೆಗಳು ಇನ್ನೂ ದೂರದಲ್ಲಿದ್ದರೂ ಹತ್ತಿರದಲ್ಲೇ ಒಂದು ಗುಡ್ಡದ ಅರಣ್ಯ ಭಾಗದಲ್ಲಿ ಸಂಚರಿಸುತಿದ್ದ ವೀಟಮಿನ ಪಡೆಗಳ ಮೇಲೆ ಫ್ರೆಂಚ ರಕ್ಷಣಾ ತೋಪುಗಳು ಗುಂಡಿನ ಮಳೆಗರೆದವು. ಶಸ್ತ್ರಾಸ್ತ್ರಗಳ ಪೂರೈಕೆಯು ಧಾರಾಳವಾಗಿ ಭರದಿಂದ ನಡೆಯುತ್ತದೆ. ಇವುಗಳನ್ನು ಕಳುಹಿಸುವ ಅಮೇರಿಕವು ನೇರಾಗಿ ಯುದ್ಧದಲ್ಲಿ ಪ್ರವೇಶಿಸುವುದಿಲ್ಲವೆಂದು ಅಧ್ಯಕ್ಷ ಐಸೆನಹೋವರರು ತಮ್ಮ ನಿಲುವೆಯ ಸ್ಪಷ್ಟಗೊಳಿಸಿರುವರು

ವೃದ್ಧ ನೃಪತಿಯ ಆಸ್ಥೆ

ಸ್ವಭಾವದಿಂದ ಅಲಸಿಗರಾದ ಲುವಾಂಗ ಪ್ರಭಾಂಗದ ನಿವಾಸಿಗಳು ಈಗ ನಗರದಲ್ಲಿ ತಂಡ ತಂಡವಾಗಿ ಸಂರಕ್ಷಣೋದ್ದೇಶದಿಂದ ಕುಣಿಗಳನ್ನು ತೋಡುತ್ತಾ ಗಿಡಗಳನ್ನು ಸವರುತ್ತಾ ಹುರುಪಿನಿಂದ ದುಡಿಯ ತೊಡಗಿರುವರು ಗಂಡಸರು ಆರಾಮ ಜೀವನಕ್ಕೂ ಹೆಂಗಸರು ಒನಪು ಒಯ್ಯಾರಕ್ಕೇ ಶೃಂಗಾರ [illegible] ಬಣ್ಣದ ಉಡಿಗೆ ತೊಡಿಗೆಗಳಿಗೂ ಇದು ವರೆಗೆ ಕೊಡುತಿದ್ದ ಮಹತ್ವ ಮೆಲ್ಲನೆ ಮಾಯವಾಗುತ್ತಾ ಇದೆ. ಲಾವೋಸಿನ ಈ ಇಪ್ಪತ್ತು ಲಕ್ಷ ಪ್ರಜೆಗಳಿಗೆ ವೀಟಮಿನರೊಡನೆ ನಡೆಸುವ ಕಾಳಗ ದೂರದ ಸಮಾಚಾರವಾಗಿದ್ದಿತು. ಆದರೆ ಕಳೆದ ವರ್ಷ ಎಪ್ರಿಲು ತಿಂಗಳಲ್ಲಿ ಒಮ್ಮಿಂದೊಮ್ಮೆ ಹೋಚಿಮಿನರ ಸೇನೆ ಮುಂದೊತ್ತಿ ಬರುವುದರಿಂದ ನಗರದ ರಕ್ಷಣೆಗೋಸ್ಕರ ಅವರು ಸೊಂಟ ಕಟ್ಟಿದರು ಫ್ರೆಂಚರು ಕಳವಳಿಕ್ಕೆಯಾದ ಈ ಸಂದರ್ಭದಲ್ಲಿ ಲಾವೋಸದ ಅರಸನಾದ ೭೮ ವರ್ಷ ವಯಸ್ಸಿನ ಸಂಧಿವಾತಗ್ರಸ್ತ ವೃದ್ಧ ಸಿಸವಂಗವೊಂಗನು ಜನತೆಯ ವೀರ ಶಿರೋಮಣಿಯಾಗಿ ಮೆರೆದನು ರಾಜಧಾನಿಯ ಪತನ ನಿಶ್ಚಿತವೆಂದೂ ರಾಜಧಾನಿಯನ್ನು ತ್ಯಜಿಸಿ ಅರಸನು ಕಣ್ಮರೆಯಾಗಬೇಕೆಂದೂ ಅಧಿಕಾರಿಗಳು ಸೂಚಿಸಿದಾಗ ಸಿಸವಂಗವೊಂಗನು ಎದೆಯನ್ನು ಕಲ್ಲು ಮಾಡಿಕೊಂಡು ನನ್ನ ಪಿತೃಪಿತಾಮಹರ ಈ ನೆಲವನ್ನು ಬಿಟ್ಟು ಬೇರೆಲ್ಲಿಗೂ ಹೋಗಲಾರೆನೆಂದೂ ಪ್ರಜೆಗಳಿಗೊದಗಿದ ಅವಸ್ಥೆಯನ್ನೇ ತಾನೂ ಅನುಭವಿಸುವೆನೆಂದೂ ಛಲ ತೊಟ್ಟು ನಿಂತನು.

ಕುರುಡ ಜೋಯಿಸನ ಕಣಿ

ದೇಶದಾದ್ಯಂತ ಇದು ವಿದ್ಯುತ್ಸಂಚಾರವನ್ನು ಮಾಡಿತು ಜನರು ಅತ್ಯುತ್ಸಾಹದಿಂದ ಸಂರಕ್ಷಣಾ ಕಾರ್ಯದಲ್ಲಿ ಮಗ್ನರಾದರು ಸುದೈವದಿಂದ ವೀಟಮಿನರ ಸೇನೆ ನಡುಮಾರ್ಗದಲ್ಲಿಯೇ ದಿಕ್ಕು ಬದಲಾಯಿಸಿ ಮಾಯವಾಯಿತು ಆದರೆ ಈ ಸಲ ಮರಳಿ ಆಪತ್ತು ತೋರಿ ಬರುತ್ತದೆ. ಅರಸ ಸಿಸವಂಗವೊಂಗನು ಜನತೆಯ ಸಂಪೂರ್ಣ ಸಹಕಾರವನ್ನು ಪಡೆದು ರಕ್ಷಣಾ ಧ್ಯೇಯದಿಂದ ದುಡಿಯುತ್ತಿರುವುದನ್ನು ಫ್ರೆಂಚರು ಮೆಚ್ಚಿಕೊಂಡಿದ್ದಾರೆ "ಕೆಲವು ಸಣ್ಣ ರಾಜ್ಯಗಳಲ್ಲಿ ಪ್ರಭಾವಶಾಲಿ ಅರಸರು ಇದ್ದಾರೆ" ಎಂಬ ಉದ್ಗಾರವನ್ನು ಪ್ಲೆವಿನ್ನರು ಹೊರಡಿಸಿದ್ದಾರೆ. ಈ ಸಲವೂ ವೀಟಮಿನ ಪಡೆಗಳು ರಾಜಧಾನಿಯನ್ನು ಮುಟ್ಟುವ ಮೊದಲೇ ಸರಿದು ಹೋಗುತ್ತವೆಂದು ಲುವಾಂಗ ಪ್ರಭಾಂಗದ ಜನರ ವಿಶ್ವಾಸ–ಕನಿಷ್ಟ ಪಕ್ಷಕ್ಕೆ ಅಂತಹ ಕಣಿಯನ್ನು ಅರಸ ಸಿಸವಂಗವೊಂಗನ ವಿಶ್ವಾಸ ಪಾತ್ರನಾದ ಕುರುಡು ಜೋಯಿಸನೊಬ್ಬ ಈ ಸಲವೂ ಹೇಳಿದ್ದಾನೆ. ಕಳೆದ ವರ್ಷ ಅವನು ಹೇಳಿದ್ದ ಭವಿಷ್ಯ ಸತ್ಯವಾಯಿತು ಅರಸನು ಆಪತ್ತಿನ ಪ್ರಸಂಗದಲ್ಲೂ ರಾಜಧಾನಿ ಬಿಟ್ಟು ಹೋಗದಿದ್ದುದಕ್ಕೆ ಈ ಜೋಯಿಸನ ಕಣಿಯ ಮೇಲಿನ ಭರವಸೆಯೇ ಕಾರಣವಾಗಿರಲೂಬಹುದು. ಜೊತೆಗೆ ಅರಮನೆಯಲ್ಲಿ ಇಪ್ಪತ್ತಂಗುಲ ಎತ್ತರದ ಸುವರ್ಣ ಬುದ್ಧನ ವಿಗ್ರಹ ಇರುವಷ್ಟು ಕಾಲ ರಾಜನಿಗೂ ಭಯವಿಲ್ಲವೆಂಬ ಪರಂಪರಾಗತ ಐತಿಹ್ಯವೂ ಜನರಿಗೆ ಆತ್ಮವಿಶ್ವಾಸವನ್ನು ನೀಡಿತು ಈ ಸಲ ಸುವರ್ಣ ಬುದ್ಧನು ರಾಜಧಾನಿಯನ್ನು ರಕ್ಷಿಸುವನೋ ಅಥವಾ ಕೈಬಿಡುವನೋ ನೋಡಬೇಕು.

ಸೈನಿಕ ಸಹಾಯದ ಉದ್ದೇಶ

ಭಾರತದ ಪ್ರತಿಭಟನೆಯನ್ನು ಲಕ್ಷಿಸದೆ, ಪಾಕಿಸ್ತಾನಕ್ಕೆ ಸೈನಿಕ ಸಹಾಯವನ್ನು ಅಮೇರಿಕ ಕೊಟ್ಟೇ ತೀರುವುದೆಂದು ಅಮೇರಿಕದ ರಾಜಕೀಯ ವರ್ಗಗಳ ಅಭಿಪ್ರಾಯ ತುರ್ಕಿ ಮತ್ತು ಪಾಕಿಸ್ತಾನಗಳು ಪರಸ್ಪರ "ಆರ್ಥಿಕ ಹಾಗೂ ಸಾಂಸ್ಕೃತಿಕ" ಒಪ್ಪಂದವನ್ನು ಇಷ್ಟರಲ್ಲಿಯೇ ಮಾಡಿಕೊಳ್ಳಲಿರುವುವಾಗಿ ಮಹಮ್ಮದಾಲಿಯವರು ಹೇಳಿದ್ದು. ಈ ಒಡಂಬಡಿಕೆಯ ಬೆನ್ನಿಗೆಯೇ ಅಮೇರಿಕದ ನೆರವು ದೊರೆಯುತ್ತದೆ. ಸೈನಿಕ ಸಹಾಯ ಯಾವ ರೂಪದಲ್ಲಿರಬೇಕು ಮತ್ತು ಎಷ್ಟು ಪ್ರಮಾಣದಲ್ಲಿರಬೇಕೆಂದು ನಿರ್ಣಯಿಸಲು ಇಷ್ಟರಲ್ಲಿಯೇ ತಜ್ಞರ ಮಂಡಳಿಯೊಂದು ಪಾಕಿಸ್ತಾನವನ್ನು ಸಂದರ್ಶಿಸುತ್ತದೆ ಸೈನಿಕ ಸಹಾಯವನ್ನು ಕೊಡಲು ನಿರಾಕರಿಸಿದರೆ, ಆಗ ಭಾರತದ ಪ್ರಧಾನಿ ನೆಹರೂರವರು ವಹಿಸಿದ ನಿಲುವಿಗೆ ವಿಜಯ ಲಭಿಸುವುದರಿಂದ ಮತ್ತು ಅಮೇರಿಕದ ಪ್ರತಿಷ್ಠೆಗೆ ಇದು ಕುಂದು ತರುವುದರಿಂದ ಸಹಾಯ ಕೊಡಲೇಬೇಕೆಂದು ಅಮೇರಿಕ ತೀರ್ಮಾನಿಸಿದಂತೆ ತೋರುತ್ತದೆ ರಶಿಯಾದ ಗಡಿಯಲ್ಲಿರುವ ಇತರ ರಾಷ್ಟ್ರಗಳೂ ಇಂತಹ ಸಹಾಯ ದೊರಕಿಸುವ ಯೋಜನೆಯಲ್ಲಿ ಸೇರಿಕೊಳ್ಳುವ ನಿರೀಕ್ಷೆಯನ್ನೂ ಅಮೇರಿಕ ಇಟ್ಟುಕೊಂಡಿದೆ. ಪಾಕ ಪ್ರಧಾನಿಗಳು ಮಾರ್ಚ ತಿಂಗಳ ಮೊದಲನೇ ವಾರದಲ್ಲಿ ಈ ಕುರಿತು ಪ್ರಕಟಣೆ ಕೊಡುವುದಾಗಿ ಹೇಳಿರುವರು.

ಉಡುಪಿ

ಎಮ್. ಜಿ. ಎಮ್ ಕಾಲೇಜಿನ ವರ್ಧಂತಿ ಸಮಾರಂಭವು— ತಾ 12ರ [illegible] ಶ್ರೀ ಎಲ್ [illegible], ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಡಾ ಕೆ. ಎಮ್. ಎ. ಪೈಗಳು ಸ್ವಾಗತ ಭಾಷಣ ಮಾಡಿದರು. ಪ್ರಿನ್ಸಿಪಾಲ್ ಶ್ರೀ ಎಚ್. [illegible] ವರದಿಯನ್ನೋದಿದರು. ಶ್ರೀಮತಿ [illegible] ವಿತರಣೆ ಮಾಡಿದರು. ಶ್ರೀ ಎಮ್. [illegible] ಸ್ವಾಗತ ಮಾಡಿದರು. ಅದಕ್ಕೆ ಶ್ರೀ ಎಮ್. ಎಲ್. ಟಿ. [illegible] ಉತ್ತರ ಕೊಟ್ಟರು. ಶ್ರೀಮತಿ ಎಸ್. ಕೆ [illegible], ಅವರು ವಿದ್ಯಾರ್ಥಿನಿಗಳನ್ನು ಬೆಳಗಿಸಿದರು. ಅಧ್ಯಕ್ಷ ಭಾಷಣಾನಂತರ ಕುಮಾರಿ ಟಿ. [illegible] ಧನ್ಯವಾದಗಳನ್ನರ್ಪಿಸಿದರು. ಬಳಿಕ ವಿವಿಧ ವಿನೋದಾವಳಿಗಳಾದುವು. ತಾ 10ರಲ್ಲಿ ಕಾಲೇಜಿನ ವರ್ಷಾವಧಿ [illegible] ಜರಗಿ [illegible] ಸಮಾರಂಭವು ಡಾ ಅನಂತನ್, ಅವರ ಅಧ್ಯಕ್ಷತೆಯಲ್ಲಿ ಜರಗಿತು. ತಾ 13ರಲ್ಲಿ ಕಾಲೇಜಿನ ಯೂನಿಯನ್ ಡೇ ಸಮಾರಂಭವು ಡಾ ಟಿ. ಎಮ್. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಟಿ. ರಾಮ [illegible] ಹೆಗ್ಡೆಯವರು ಸ್ವಾಗತ ಮಾತುಗಳನ್ನಾಡಿದರು. ವರದಿವಾಚನ, ಅಧ್ಯಕ್ಷ ಭಾಷಣ ಮೊದಲಾದ ಕಾರ್ಯಕ್ರಮಗಳಿಂದ ಸಾಂಗವಾಯಿತು. ತಾ 14ರಲ್ಲಿ ಕಾಲೇಜಿನ ಹಾಸ್ಟೆಲ್ ಮತ್ತು ಹಳೆ ವಿದ್ಯಾರ್ಥಿ [illegible] ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಪ್ರಿನ್ಸಿಪಾಲ್ ಡಾ ಎಸ್. [illegible] ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ವೈ. ಶ್ರೀಧರ [illegible] ಸ್ವಾಗತ [illegible] ಶ್ರೀ ಎಸ್. [illegible] ಉತ್ತರವಿತ್ತರು. ಅಧ್ಯಕ್ಷ ಭಾಷಣಾನಂತರ ಮನರಂಜನ ಕಾರ್ಯಕ್ರಮಗಳಾದುವು.

ಬೋರ್ಡ್ ಹೈಸ್ಕೂಲು ವರ್ಧಂತ್ಯುತ್ಸವವು— ತಾ 14ರಲ್ಲಿ ಸಂಜೆ [illegible] ಹೆಡ್ಮಾಸ್ಟರ್ ಶ್ರೀ [illegible], ಅವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನೆಯಾದ ಬಳಿಕ ಹೆಡ್ಮಾಸ್ಟರ್ ಶ್ರೀ [illegible] ವರದಿಯನ್ನೋದಿದರು. ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಯವರು [illegible] ಸ್ವಾಗತ [illegible] ಮಾಡಿದರು. ಬಹುಮಾನ ವಿತರಣೆ, ಅಧ್ಯಕ್ಷರ ಭಾಷಣ, ಧನ್ಯವಾದಾರ್ಪಣ, ವಿನೋದಾವಳಿ ಕಾರ್ಯಕ್ರಮ [illegible], ವಿದ್ಯಾರ್ಥಿಗಳಿಂದ ಕನ್ನಡ ನಾಟಕ ಪ್ರದರ್ಶನವಿತ್ತು.

ಸೈಂಟ್ ಸಿಸಿಲೀಸ್ ಹೈಸ್ಕೂಲಿನ ವರ್ಧಂತಿಯು— ತಾ 13ರಲ್ಲಿ ಮಂಗಳೂರಿನ [illegible] ಡಾ ಬಿ. ಎಸ್. ಟಿ. [illegible], ಇವರ ಅಧ್ಯಕ್ಷತೆಯಲ್ಲಿ ಜರಗಿತು. ವರದಿವಾಚನ, ಪಾರಿತೋಷಕ ವಿತರಣೆಗಳಾದ ಮೇಲೆ ಇಂಗ್ಲಿಷ್, ಕನ್ನಡ, ಹಿಂದಿ ನಾಟಕಗಳು [illegible] ವಿದ್ಯಾರ್ಥಿನಿಯರಿಂದ ಅಭಿನಯಿಸಲ್ಪಟ್ಟವು. [illegible] ನೃತ್ಯಗಳು ನಡೆದು ಜನ ಮೆಚ್ಚುಗೆ ಪಡೆದವು. ಅಂತ್ಯದಲ್ಲಿ ಅಧ್ಯಕ್ಷರು ಬೋಧಪರ ಭಾಷಣಮಾಡಿದರು. ಧನ್ಯವಾದಾರ್ಪಣೆಯೊಂದಿಗೆ ಸಭಾಂತ್ಯವಾಯಿತು.

ವಿದ್ಯುಚ್ಛಕ್ತಿ ತಾಗಿ ಮರಣ. [illegible] ತಾ 11ರಲ್ಲಿ [illegible] ನಾಯರಿ ಎಂಬ ಇಲೆಕ್ಟ್ರಿಕ್ [illegible], ಇಲೆಕ್ಟ್ರಿಕ್ ಕಂಪೆನಿಯ [illegible] ಕಂಬವೊಂದರಲ್ಲಿ [illegible] ಕೆಲಸ ಮಾಡುತ್ತಿರುವಾಗ ವಿದ್ಯುಚ್ಛಕ್ತಿ ತಾಗಿ ಮೃತ ಪಟ್ಟಿರುವುದು ವಿಷಾದಕರವಿದೆ.

ಕಡೆಕಾರು— [illegible] ಪಂಚಾಯತ ಬೋರ್ಡಿನವರು ಕಟ್ಟಿಸಲಿರುವ ಆಫೀಸು ಕಟ್ಟಡದ [illegible] ಸಮಾರಂಭವನ್ನು [illegible] ತಾ 12ರಲ್ಲಿ, ಬೆಳಿಗ್ಗೆ ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಅವರು ನೆರವೇರಿಸಿದರು. ಈ ಸಂದರ್ಭದಲ್ಲಿ ಸರಕಾರದ [illegible] ಬೋರ್ಡಿನ ಕಡೆಯಿಂದ ಅಧ್ಯಕ್ಷ ಶ್ರೀ ಕೆ. [illegible] ಶ್ರೀ ಪೈಗಳಿಗೆ ಮಾನಪತ್ರವೊಂದನ್ನೊಪ್ಪಿಸಿದರು. ಶ್ರೀ ಪೈಗಳು ಗ್ರಾಮ ಪಂಚಾಯತುಗಳ [illegible] ಸರಕಾರ [illegible] ಹೊಂದಿಕೊಂಡಿದೆ [illegible] ಊರವರು ಸಹಕರಿಸಿದರೆ ಹೆಚ್ಚಿನ ಕಾರ್ಯ ಸಾಧ್ಯವೆಂದೂ ಉತ್ತರವಿತ್ತರು. ಈ ಮೊದಲು ಸಭೆಯಲ್ಲಿ ಶ್ರೀ ಆರ್. ಭಾಗವತ, ಶ್ರೀ ಎ. ಜೆ. ಆಳ್ವರವರು ಸಂದರ್ಭೋಚಿತ ಭಾಷಣ ಮಾಡಿದರು. ಉಪಾಧ್ಯಕ್ಷ ಶ್ರೀ ಅನಂತ ಶೆಟ್ಟರ ಧನ್ಯವಾದದೊಂದಿಗೆ ಸಭಾಂತ್ಯವಾಯಿತು.

ಚರಿತ್ರೆಯಲ್ಲಿ ಹೊಸದು - ನೀತಿಯಲ್ಲಿ ಹೊಸದು

ಪ್ರಣಯದಲ್ಲಿ ಹೊಸದು - ವಿನೋದದಲ್ಲಿ ಹೊಸದು

[illegible]

ತಾ 12 2 54ರಿಂದ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಅನಾರ್ಕಲಿ

[ಹಿಂದೂಸ್ಥಾನಿ]

ಪ್ರದೀಪ್ ಕುಮಾರ್, ಬಿನಾರೈ, ಮುಬಾರಕ್ ಮೊದಲಾದವರು.

ತಾ ೨೦-೨-೫೪ರಿಂದ 'ಜಾತಕಫಲ'—ಕನ್ನಡಚಿತ್ರ

ಪರ್ಕಳ ಪಂಚಾಯತ ಬೋರ್ಡಿನಲ್ಲಿ

ಪಿ. ಪ್ಯಾ. ನಂಬ್ರ 1/1954

ಕೊಡ್ಗ ನ್ಯಾಸ .... ವಾದಿ

ಮತ್ತು [illegible]—[illegible]

[illegible]—ಉಡುಪಿ ತಾಲೂಕು [illegible]—೨ನೇ ಪ್ರತಿವಾದಿ—

ಸದ್ರಿ ೨ನೇ ಪ್ರತಿವಾದಿಗೆ ಈ ಮೂಲಕ ತಿಳಿಯ ಪಡಿಸುವದೇನಂದ್ರೆ:—

[illegible] ಮತ್ತು 1ನೇ ಪ್ರತಿವಾದಿ [illegible] ತಾರೀಕು 23—10—1951 ರಲ್ಲಿ [illegible]—ಈ ಸಂಸ್ಥೆಗೆ ರೂಪಾಯಿ 250–ಕ್ಕೆ [illegible] ತಾರೀಕು 6—3—54ಕ್ಕೆ [illegible] ೨ ಘಂಟೆಗೆ [illegible] ಹಾಜರಾಗಿ [illegible]—[illegible]

ಪರ್ಕಳ ಪಂಚಾಯತ ಬೋರ್ಡು

ಪ್ರೆಸಿಡೆಂಟ್

ಕಾರ್ಕಳ— ದ. ಕ. ಜಿಲ್ಲೆಯ ಬೋರ್ಡ್ ಹೈಸ್ಕೂಲುಗಳಲ್ಲಿ 1953ರ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಪ್ರಥಮ ಸ್ಥಾನವನ್ನು ಪಡೆದ ಹೆಗ್ಗುರುತಾಗಿ ದ. ಕ. ಜಿಲ್ಲಾ ಬೋರ್ಡಿನವರು ಇತ್ತ "ರಜತ ಗುರಾಣಿ" ಯ ಸ್ವೀಕಾರದ ಸಂತೋಷ ಸಮಾರಂಭವು ಇದೇ ತಾ 11ರಲ್ಲು ಉಡುಪಿಯ ಡಾ। ಟಿ. ಎಮ್. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಹೆಡ್ಮಾಸ್ಟರ್ ಶ್ರೀ ಬಿ. ಶ್ಯಾಮರಾಯ ಸೆಟ್ಟರು ಸಂದೇಶಗಳನ್ನು ಓದಿ ಈ ಪಾರಿತೋಷಕವು ಜಿಲ್ಲೆಯ ಪ್ರಥಮ ಪ್ರತೀಕವಾಗಿರುವುದರಿಂದ ಅದನ್ನು ಅತೀ ಜತನದಿಂದ ಉಳಿಸಿಕೊಳ್ಳ ಬೇಕಾಗಿದೆ ಎಂದು ಅಪೇಕ್ಷಿಸಿದರು. ಶ್ರೀಗಳಾದ ಡಿ. ವಿ. ಭಟ್, ಪಿ. ವಿ. ಶೆಣೈ ಕೆ. ಜಿ. ಶೆಣೈ ಮತ್ತು ಕೆ. ಎಸ್. ಉಪಾಧ್ಯರು ಕಾಲೋಚಿತ ಮಾತುಗಳನ್ನಾಡಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಈ ಶಾಲೆಯ ಪ್ರಥಮ ಶ್ರೇಣಿಯ ಪರೀಕ್ಷಾ ಫಲಿತಾಂಶವನ್ನು ಶ್ಲಾಘಿಸಿ, ಜಿಲ್ಲೆಯಲ್ಲಿ ನಿರುದ್ಯೋಗ ಸಮಸ್ಯೆ ಮತ್ತು ಕಲಾ ಶಾಲೆಗಳ ಕೊರತೆಯನ್ನು ಹೋಗಲಾಡಿಸುವ ಪ್ರಯತ್ನಕ್ಕೆ ಸರ್ವರೂ ಪ್ರೋತ್ಸಾಹಿಸಬೇಕಾಗಿದೆ ಎಂದು ಹೇಳಿ ವಿದ್ಯೆಯ ಮಹತ್ವವನ್ನು ನಿವರಿಸಿದರು. ಅನಂತರ ವಿವಿಧ ವಿನೋದಾವಳಿಗಳಾಗಿ ಧನ್ಯವಾದಾರ್ಪಣೆಯೊಂದಿಗೆ ಸಮಾರಂಭ ಕೊನೆಗೊಂಡಿತು.

ಬಿಜಾಡಿ— ಇದೇ ತಾ 12ರಲ್ಲು ಪ್ರಜಾ ಸೋಶಿಯಲಿಸ್ಟ್ ಪಕ್ಷದ ಆಶ್ರಯದಲ್ಲಿ ಬಿಜಾಡಿ ಗ್ರಾಮದಲ್ಲಿ ರೈತರ ಸಭೆಯೊಂದು ವಕೀಲ್ ಶ್ರೀ ವಿ. ಶ್ರೀನಿವಾಸ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ರೈತರು ತಮ್ಮ ಶಾಶ್ವತವಾದ ಹಕ್ಕಿಗಾಗಿ ಹೋರಾಡ ಬೇಕು, ವಿರೋಧ ಪಕ್ಷ ಬಲಗೊಳಿಸ ಬೇಕು ಎಂದು ಮೊದಲಾಗಿ ಅವರು ಹೇಳಿದರು.

ಮೂಳ್ಕಿ— ಬ್ರಹ್ಮ ಶ್ರೀ ನಾರಾಯಣ ಗುರು ಸ್ವಾಮಿಯವರ ಪ್ರತಿಮಾ ಪ್ರತಿಷ್ಠಾಪನಾಚರಣೆಯು ಇದೇ ತಾ 7ರಲ್ಲು ವಕೀಲ್ ಶ್ರೀ ಬಿ. ಗಂಗಾಧರ ದಾಸ್ ಅವರ ಅಧ್ಯಕ್ಷತೆಯಲ್ಲಿ ನೆರವೇರಿತು. ಶ್ರೀಗಳಾದ ಕೆ. ಸೋಮಪ್ಪ ಸುವರ್ಣ, ಎಮ್. ವೆಂಕಪ್ಪಯ್ಯ, ಎಮ್. ರಾಜೀವ, ಎಮ್. ನವೀನ ಚಂದ್ರ ಮೊದಲಾದವರು ಸಮಾಜದ ಏಳಿಗೆ ಮತ್ತು ಸಂಘಟನೆ ಕುರಿತು ಮಾತನಾಡಿದರು. ಪ್ರಸಾದ ವಿತರಣೆ, ಧನ್ಯವಾದಾರ್ಪಣೆ ಕಾರ್ಯಗಳಾಗಿ ಸಮಾರಂಭ ಕೊನೆಗೊಂಡಿತು.

ಕುಂಬಳೆ— ಇಲ್ಲಿಯ ರೂರಲ್ ಡಿಸ್ಪೆನ್ಸರಿ ಚಾರ್ಜಿನಲ್ಲಿದ್ದು ಬೆಳ್ತಂಗಡಿಯ ಲೋಕಲ್ ಫಂಡ್ ಆಸ್ಪತ್ರೆಯ ಡಾ। ಕೆ. ಎಸ್ ನಾಯಕರಿಗೆ ತ್ರಿಕರಪುರಕ್ಕೆ ವರ್ಗವಾದ ನಿಮಿತ್ತ ಅವರನ್ನು ಬೀಳ್ಕೊಡುವ ಸತ್ಕಾರ ಸಭೆಯು ಈಚೆಗೆ ಟೌನ್‌ಬೇಂಕ್ ವಠಾರದಲ್ಲಿ ಶ್ರೀ ಮಹಮ್ಮದ್ ಉಸ್ಮಾನರ ಅಧ್ಯಕ್ಷತೆಯಲ್ಲಿ ಜರಗಿತು.

ಮಾಯಿಪಾಡಿ— ಬುನಾದಿ ಶಿಕ್ಷಣ ತರಬೇತು ಶಾಲೆಯ ವಾರ್ಷಿಕೋತ್ಸವವು ಇದೇ ತಾ 13 ರಲ್ಲು ಜಿಲ್ಲಾ ವಿದ್ಯಾಧಿಕಾರಿ ಶ್ರೀ ಕೆ. ಸಂಜೀವ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಹೆಡ್ಮಾಸ್ತರ್ ಶ್ರೀ ಕೆ. ರಾಮಕೃಷ್ಣ ಸೆಟ್ಟರು ಶಾಲಾವರದಿಯನ್ನು ಓದಿದರು. ಬಳಿಕ ನಾಟಕ ವಿನೋದಾವಳಿಗಳಾದುವು. ಉತ್ಸವದ ಅಂಗವಾಗಿ ಏರ್ಪಡಿಸಲಾದ ವಸ್ತು ಪ್ರದರ್ಶನವನ್ನು ಅಂದು ಬೆಳಿಗ್ಗೆ ಮಂಜೇಶ್ವರ ಬ್ಲೋಕ್ ಡೆವಲಪ್‌ಮೆಂಟ್ ಆಫೀಸರ್ ಶ್ರೀ ಕೆ. ಕೇಶವ ಕಿಣಿಯವರು ಉದ್ಘಾಟಿಸಿದರು.

ಹೇರೂರು (ಕಾಪುಶಿರ್ವ)— ದಿನಾಂಕ 12ರಂದು ಇಲ್ಲಿಯ ಶ್ರೀ ಮಹಾಲಿಂಗೇಶ್ವರ ಸ್ವಾಮಿ ಪ್ರಾಥಮಿಕ ಶಾಲೆಯಲ್ಲಿ ಗ್ರಾಮಸ್ಥರ ಸಭೆಯು ಜರಗಿ, ನೂತನ ಪ್ರಾಥಮಿಕ ವಿದ್ಯಾಭ್ಯಾಸ ಕ್ರಮದಂತೆ, ಶಾಲಾ ಕೌನ್ಸಿಲು ಸ್ಥಾಪನೆಯಾಯಿತು. ಶ್ರೀಗಳಾದ ಶ್ರೀನಿವಾಸ ರಾವ್ (ಅಧ್ಯಕ್ಷ), ಶಿವರಾಮ ಶೆಟ್ಟಿ (ಉಪಾಧ್ಯಕ್ಷ), ನಾರಾಯಣ ಶೆಟ್ಟಿ, ಸುಬ್ಬಯ್ಯ ಶೆಟ್ಟಿ, ಚಂದು ಶೆಟ್ಟಿ, ಮುದ್ದಣ್ಣ ಶೆಟ್ಟಿ, ಡೇನಿಸ್ ಡಿ ಸೋಜ (ಕಾರ್ಯದರ್ಶಿ)ರು ಕೌನ್ಸಿಲಿನ ಸದಸ್ಯರಾಗಿ ಸರ್ವ ಸಮ್ಮತದಿಂದ ಚುನಾಯಿಸಲ್ಪಟ್ಟರು.

ಕಳಂಜ— ಸ್ಥಳೀಯ ಪಂಚಾಯತ ಬೋರ್ಡಿನ ಆಶ್ರಯದಲ್ಲಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಪ್ತಾಹವು ಜನವರಿ ತಿಂಗಳ ದಿನಾಂಕ 26 ರಿಂದ ಇದೇ ತಾ 1ರ ತನಕ ನಡೆಯಿತು. ಶಿಶು, ಕೃಷಿ, ಆರೋಗ್ಯ, ವ್ಯಾಯಾಮ ಪ್ರದರ್ಶನಗಳು, ವಿವಿಧ ವಿನೋದಾವಳಿ ಕಾರ್ಯಕ್ರಮಗಳಾದುವು. ಬೆಳ್ಳಾರೆ ಬೋರ್ಡು ಹೈಸ್ಕೂಲಿನ ಹೆಡ್ಮಾಸ್ಟರ್ ಶ್ರೀ ಪಿ. ಮಾರಪ್ಪ ಸೆಟ್ಟಿ, ಶ್ರೀ ಎಚ್. ಎಸ್. ನಾಯಕ್ ಆರೋಗ್ಯಾಧಿಕಾರಿ, ಶ್ರೀ ಎಮ್. ಕೆ. ಬಾಬು ಸೆಟ್ಟಿ, ಗ್ರಾಮಾಭಿವೃದ್ಧಿ ಅಧಿಕಾರಿ, ಶ್ರೀಗಳಾದ ಪಿ ಗೋಪಾಲಕೃಷ್ಣ, ಎಸ್. ಮುಕುಂದ ರಾವ್ ಮೊದಲಾದ ನುರಿತ ಮಹನೀಯರ ಭಾಷಣಗಳಾದುವು. ಪಂಚಾಯತ ಬೋರ್ಡು ಅಧ್ಯಕ್ಷ ಶ್ರೀ ಎನ್. ವೆಂಕಟ ಸುಬ್ಬರಾಯರು ಈ ಉತ್ಸವದ ಯಶಸ್ಸಿಗೆ ತುಂಬಾ ಶ್ರಮವಹಿಸಿದ್ದರು.

ಕಳಂಜ ಬಾಳಿಲ— ಕೋಟೆ ಮುಂಡುಗಾರು ಎಲಿಮೆಂಟರಿ ಶಾಲೆಯ ವರ್ಧಂತಿ ಸಮಾರಂಭವು ಈಚೆಗೆ ಶ್ರೀ ನೊಳಪಳ್ಳಿ ಶಿವರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಪಟೇಲ್ ಬಿ ನಾರಾಯಣ ಶೇಕ, ಪಿ. ಮಾರಪ್ಪ ಸೆಟ್ಟಿ, ಡಾ। ಎನ್. ಗೋಪಾಲಕೃಷ್ಣಯ್ಯನವರು ಶಾಲೆಯ ಏಳಿಗೆಯನ್ನು ಬಯಸಿ ಮಾತನಾಡಿದರು. ಹೆಡ್ಮಾಸ್ತರ್ ಶ್ರೀ ಹೊನ್ನಯ್ಯ ಗೌಡರು ಧನ್ಯವಾದಗಳನ್ನರ್ಪಿಸಿದರು.

ಕುಂದಾಪುರ— ಕರ್ನಾಟಕ ಪ್ರಾಂತಿಕ ಭೂದಾನ ಸಮಿತಿಯ ಸಂಯೋಜಕರೂ ಅಲ್ಲದೆ ಗಾಂಧಿ ಸ್ಮಾರಕ ನಿಧಿಯ ಸಂಚಾಲಕರೂ ಆದ ಶ್ರೀಮಾನ್ ನಾಯಕ ಮಾಸ್ತರವರು ಭೂದಾನ ಯಜ್ಞದ ತತ್ವ ಪ್ರಣಾಲಿ ಅವಶ್ಯಕತೆ ಇಂದಿನ ಪರಿಸ್ಥಿತಿಯಲ್ಲಿ ಸಮಾಜಕ್ಕೆ ಈ ಕಾರ್ಯದಿಂದಾಗುವ ಹಿತವನ್ನು ಹೃದಯಂಗಮವಾಗಿ ತಿಳಿಸಿ ಹೇಳಿದರು. ಈ ಸಂದರ್ಭದಲ್ಲಿ ಇಲ್ಲಿಯ ಜನತಾ ಪ್ರತಿನಿಧಿಗಳಾಗಿ ಮಾನ್ಯ ಶ್ರೀ ಯಡ್ತರೆ ಮಂಜಯ್ಯ ಸೆಟ್ರು ಜನತೆಯು ಈ ಕಾರ್ಯದಲ್ಲಿ ನೆರವಾಗ ಬೇಕಾಗಿ ಬಿನ್ನವಿಸಿ ಕೊಂಡರು ಅಲ್ಲದೆ ಮದ್ರಾಸ್ ಸರಕಾರವು ಇತ್ತೀಚೆಗೆ ಜಾರಿಗೆತಂದ ವಕ್ಕಲು ಮಸೂದೆ ಕೃಷಿಕರ ಸಾಲದ ಮಸೂದೆ ಮತ್ತು ಅಕ್ಕಿಯ ಬೆಲೆಯನ್ನು ನಿಯಂತ್ರಿಸುವರೆ ಸರಕಾರವು ಕೈಗೊಳ್ಳುವ ಯೋಜನೆಯನ್ನು ಹಾಗೂ ಕಾಂಗ್ರೆಸ ಸರಕಾರವು ಬಡ ಜನತೆಯ ಹಿತಕ್ಕಾಗಿ ಕೈಗೊಂಡ ಕಾರ್ಯ ಕ್ರಮವನ್ನು ಮನ ಮೆಚ್ಚುವಂತೆ ಜನತೆಗೆ ತಿಳಿಯ ಪಡಿಸಿದರು.

ಭೂದಾನ ಪ್ರಚಾರ ಈ ಕೆಳಗಿನ ಎಲ್ಲ ಸಭೆಗಳಲ್ಲಿಯೂ ಜನತೆಯು ಕಿಕ್ಕಿರಿದು ನೆರೆದು ಉತ್ಸಾಹದಿಂದ ಭಾಷಣ ಕೇಳುತ್ತಿದ್ದರು. 6-2-54ಕ್ಕೆ ಕೋಟೇಶ್ವರದಲ್ಲಿ ಶ್ರೀ ಮಂಜುನಾಥ ಐತಾಳರ, ತಾ 7-2-54ಕ್ಕೆ ತೆಕ್ಕಟ್ಟೆಯಲ್ಲಿ ಕೆ. ಸುಬ್ರಾಯ ಉರಾಳರ, ತಾ 8-1-51ಕ್ಕೆ ಶಂಕರ ನಾರಾಯಣದಲ್ಲಿ ಶ್ರೀ ವೆಂಕಟರಮಣಯ್ಯ, ಸಿದ್ಧಾಪುರದಲ್ಲಿ ಶ್ರೀ ಮಾನಂಜೆ ನಾರಾಯಣ ರಾಯರು, ಕಾಳಾವರದಲ್ಲೂ ಶ್ರೀ ಬಂಡಸಾಲೆ ಮಂಜಯ್ಯ ಸೆಟ್ರು ಅಧ್ಯಕ್ಷತೆಯಲ್ಲಿ ಸಭೆ ಜರಗಿಸಲಾಗಿತ್ತು.

ದಿ. ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕಿನ ಹಣದ ದುರುಪಯೋಗದ ಕುರಿತು ಕುಂದಾಪುರದಲ್ಲಿ ಸ್ಪೆಶಲ್ ಫಸ್ಟ್‌ಕ್ಲಾಸ್ ಮೆಜಿಸ್ಟ್ರೇಟ್ ಶ್ರೀ ಟಿ. ಶ್ರೀನಿವಾಸನ್, ಅವರ ಕೋರ್ಟಿನಲ್ಲಿ ಕಳೆದ ದಶಂಬರ ತಾ 9 ರಿಂದ ವಿಚಾರಣೆಗಾರಂಭವಾಗಿತ್ತು. ಇದೇ ತಾ 2 ರಲ್ಲು ಬೇಂಕಿನ ಚೆರ್‌ಮೆನ್ ಶ್ರೀ ಕೆ. ವಾಮನ ಶೆಣೈ, ಮಾಜಿ ಮೆನೇಜಿಂಗ್ ಡ್ಯಾರೆಕ್ಟರ್ ಶ್ರೀ ಕೆ. ವಿಠಲದಾಸ ಶೆಣೈ, ಮತ್ತು ಶ್ರೀಗಳಾದ ಪಿ. ಎನ್ ಶೆಣೈ, ಕೆ. ಮಂಜುನಾಥ ಶೆಣೈ, ಯು. ರಾಮಚಂದ್ರ ಭಟ್, ಎ ಮರ್ತಪ್ಪ ನಾಯಕರ ಮೇಲೆ ಸೆಕ್ಷನ್ಸ್ 120 (ಬಿ), 409 ಮತ್ತು 477 (ಎ) ಐ. ಪಿ. ಸಿ. ಪ್ರಕಾರ ತಪ್ಪು ಸ್ಥಾಪನೆ ಮಾಡಲಾಯಿತು. ಆರೋಪಿಗಳು ತಾವೆಲ್ಲರೂ ತಪ್ಪಿತಸ್ಥರಲ್ಲವೆಂದು ಹೇಳಿದರು. ಮುಂದಿನ ವಿಚಾರಣೆ ನಡೆಯುತ್ತಲಿದೆ. ಆರೋಪಿಗಳ ಕಡೆಯಿಂದ ಶ್ರೀಗಳಾದ ಎಸ್. ಜಿ ಕಾಮತ್, ಎಮ್. ಎ. ಸೆಟ್ಟಿ, ಕೆ. ನರಸಿಂಹ ಕಾಮತ್ ಮತ್ತು ಕೆ. ಎಲ್. ಭಂಡಾರಿಗಳು ವಕಾಲತ್ತು ನಡೆಸುತ್ತಿರುವರು. ಸಿ. ಐ. ಡಿ. ಇನ್ಸ್‌ಪೆಕ್ಟರ್ ಶ್ರೀ ಎಚ್. ಸಂಜೀವ ಮತ್ತುಸಬ್ ಇನ್ಸ್‌ಪೆಕ್ಟರ್ ಶ್ರೀ ಎಮ್. ಎಸ್. ಮಾನಿಪಾಡಿಯವರ ಸಹಾಯದಿಂದ ಸ್ಪೆಶಲ್‌ಪಬ್ಲಿಕ್ ಪ್ರೊಸಿಕ್ಯೂಟರ್ ಶ್ರೀ ಕೆ ನಾರಾಯಣ ರೈಗಳು ಸರಕಾರದ ಕಡೆಯಿಂದ ವಕಾಲತ್ತು ನಡೆಸುತ್ತಿರುವರು.

ಮೂಡಬಿದ್ರೆ— ಇಲ್ಲಿಯ ಬೋ. ಹಾ. ಎ. ಶಾಲೆಯ ವಾರ್ಷಿಕೋತ್ಸವವು ಶ್ರೀ ಕೆ. ವಿ. ಪಡಕಣ್ಣಾಯ, ಎಂ. ಎ. ಇವರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳೊಂದಿಗೆ ತಾ 13-2-54ರಲ್ಲಿ ಯಶಸ್ವಿಯಾಗಿ ಜರಗಿತು.

ಬೆಳ್ಳಾರೆ— ಜಿಲ್ಲೆಯ ಪ್ರಥಮ ಶ್ರೇಣಿಯ ಸಾರ್ವಜನಿಕ ಕೆಲಸಗಾರರೂ ಪುತ್ತೂರು ತಾಲೂಕಿನ ಬಹುತೇಕ ಅಭಿವೃದ್ಧಿಗೆ ಕಾರಣೀಭೂತರಾದವರೂ ಆದ ಶ್ರೀ ನೊಳಪಳ್ಳಿ ಶಿವರಾಯರಿಗೆ ತಾ 7ರಲ್ಲಿ ಬೆಳ್ಳಾರೆ ಮಹಾ ಜನರು ಮಾನಪತ್ರವೊಂದನ್ನು ಅರ್ಪಿಸಿ ಗೌರವಿಸಿದರು. ಶ್ರೀ ಬಿ. ನಾರಾಯಣ ಶೇಕರು ಮಾನಪತ್ರವನ್ನು ಓದಿ ಅರ್ಪಿಸಿದ ಮೇಲೆ ಶ್ರೀ ಶಿವರಾಯರು ಹೃದಯ ಸ್ಪರ್ಶಿ ಭಾಷಣ ಮಾಡಿ ಆಭಾರ ಸೂಚಿಸಿದರು.

ಮಹಾಜನರಲ್ಲಿ ವಿನಂತಿ.

ಈ ವರ್ಷ ಬೆಳೆ ಸಮೃದ್ಧಿಯಾಗಿ ಆಹಾರದ ಕೊರತೆ ನಿವಾರಣೆ ಹೊಂದುತ್ತಲಿತ್ತು, ಆಹಾರ ಸಾಮಾಗ್ರಿಗಳ ಬೆಲೆ ಇಳಿಯುತ್ತಾ ಬರಬೇಕಿತ್ತು ಆದರೆ ಇಂದು ನಮ್ಮ ಜಿಲ್ಲೆಯಲ್ಲಿ ಕಂಡು ಬಂದ ಪರಿಸ್ಥಿತಿಯೇನು? ಅಕ್ಕಿ, ಭತ್ತದ ಕ್ರಯ ಏರುತ್ತಾ ಬರುತ್ತಿದೆ, ಇದು ಕೇವಲ ಸ್ವಾರ್ಥಿಗಳ ಉಪಟಳದ ಪರಿಣಾಮ. ಈ ಪರಿಸ್ಥಿತಿಯನ್ನು ತಡೆಗಟ್ಟದೇ ಇದ್ದಲ್ಲಿ ಬಡಜನರು ಹೆಚ್ಚಿನ ಕಷ್ಟ ನಷ್ಟಗಳಿಗೆ ಗುರಿಯಾಗುವುದರಲ್ಲಿ ಸಂದೇಹವಿಲ್ಲ. ಅಂತಹ ವಿಷಮ ಪರಿಸ್ಥಿತಿಯನ್ನು ಹತೋಟಿಗೆ ತರಲು ಮುಂಜಾಗ್ರತೆ ತೆಗೆದು ಕೊಳ್ಳುವುದು ನಮ್ಮೆಲ್ಲರ ಕರ್ತವ್ಯ.

ಈಗಾಗಲೇ ಮದ್ರಾಸು ಸರಕಾರದ ಮಾನ್ಯ ಆಹಾರ ಮಂತ್ರಿಗಳಿಗೆ ಏರುತ್ತಿರುವ ಆಹಾರ ಪದಾರ್ಥದ ಬೆಲೆಯನ್ನು ಹತೋಟಿಗೆ ತರುವ ಅವಶ್ಯಕತೆಯ ಕುರಿತು ತಂತಿ ಮನವಿ ಮೂಲಕ ಕೇಳಿಕೊಂಡಿದ್ದೇನೆ. ಮಾನ್ಯ ಮಂತ್ರಿಗಳು ಈ ಮನವಿಯನ್ನು ನಮ್ಮ ಜಿಲ್ಲಾಧಿಕಾರಿಗಳಿಗೆ ಅಗತ್ಯ ಕಾರ್ಯಕ್ರಮ ಕೈಕೊಳ್ಳಲು ಕಳುಹಿಸಿರುವರಾಗಿ ತಿಳಿಯುತ್ತೇನೆ. ಕುಂದಾಪುರ ತಾಲೂಕು ಕಾಂಗ್ರೆಸ್ ಕಮಿಟಿ ಸಹಾ ಅಗತ್ಯವುಳ್ಳ ಕಾರ್ಯಕ್ರಮ ಕೈಕೊಳ್ಳುತ್ತಿದೆ. ಜನತೆಯು ತನ್ನ ಸ್ವಾರ್ಥಪರ ಲಾಭ ದೃಷ್ಟಿಯಿಂದ ಆಹಾರದ ಬೆಲೆ ಏರುವಿಕೆಗೆ ಎಡೆಗೊಟ್ಟು ಬಡಜನರ ಗೋಳಿಗೆ ಕಾರಣಭೂತವಾದರೆ ಇನ್ನೊಮ್ಮೆ ಆಹಾರ ನಿಯಂತ್ರಣಕ್ಕೆ ಆಹ್ವಾನ ಕೊಟ್ಟಂತಾಗುವುದು. ಹಿಂದೆ ಆಹಾರ ನಿಯಂತ್ರಣದ ಕಠಿನ ಕಾಯಿದೆಯಿಂದ ಬಂದ ಕಹಿ ನೆನಪು ಮಾಸಿರಲಾರದು ಅವನ್ನು ನೆನಸಿ ಸರಕಾರಕ್ಕೆ ಈ ಉಗ್ರ ಕಾರ್ಯಕ್ರಮ ತರಲು ಎಡೆಗೊಡದೆ, ನಿಸ್ವಾರ್ಥ ಬುದ್ಧಿಯಿಂದ ಜನತೆಯು ತನ್ನಲ್ಲಿ ಇರುವ ಅಕ್ಕಿ, ಭತ್ತಗಳನ್ನು ಆದಷ್ಟು ಮಿತ ಬೆಲೆಗೆ ಬಡಜನರಿಗೆ ದೊರೆಯುವಂತೆ ಮಾಡುವುದು ಕರ್ತವ್ಯ. ಹೀಗೆ ಜನತೆ ತನ್ನ ಜವಾಬ್ದಾರಿ ಅರಿತು ವರ್ತಿಸಿದರೆ, ಪರಿಸ್ಥಿತಿಯು ಸುಗಮವಾಗುವುದು. ಅಲ್ಲದಿದ್ದಲ್ಲಿ ದುಃಸ್ಥಿತಿಗೆ ಎಡೆಗೊಟ್ಟ ಕೆಲವು ಸ್ವಾರ್ಥಿಗಳ ಕಾರಣದಿಂದ ಇಡೀ ಜನತೆಯೇ ಕಷ್ಟಕ್ಕೊಳಗಾಗುವುದು.

ಇತೀ ನಿಮ್ಮ ಪ್ರತಿನಿಧಿ

ಯಡ್ತರೆ ಮಂಜಯ್ಯ ಶೆಟ್ಟಿ.

ತಾರೀಕು, 10-2-54, ಕುಂದಾಪುರ.

ಕರ್ಣಾಟಕ ಸಂಘ ಮದ್ರಾಸು—

ತಾ 7-2-54ಸಂಜೆ ಸರ್. ಯಂ. ಸಿ. ಟಿ. ಮುತ್ತಯ್ಯ ಚೆಟ್ಟಿಯಾರ್ ಹೈಸ್ಕೂಲಿನಲ್ಲಿ ಸಂಘದ ಆಶ್ರಯದಲ್ಲಿ ಪುರಂದರ ದಾಸರ ದಿನಾಚರಣೆಯು ಡಾ॥ ಯಂ. ಆರ್. ಬೈಲರೆ ಅಧ್ಯಕ್ಷತೆಯಲ್ಲಿ ಜರಗಿತು

ಶ್ರೀ ಸಿ. ಕೆ. ತಿರುಮಲೇಶರು ಪುರಂದರ ದಾಸರ ಜೀವನದ ಕುರಿತೂ, ಅವರು ಕೀರ್ತನೆಗಳ ಮೂಲಕ ಜನರಿಗೆ ಬೋಧಿಸಿದ ಅಗಾಧ ತತ್ವಗಳ ಕುರಿತೂ ಸ್ವಾರಸ್ಯವಾದ ಭಾಷಣ ವಿತ್ತರು. ಕುಮಾರಿಯರಾದ ಉಷಾ, ಉಮಾ, ಶಕುಂತಳಾ, ವಿಶಾಲಾಕ್ಷಿ, ವಿಜಯಲಕ್ಷ್ಮಿ, ಇವರು ಕೆಲವು ಕೀರ್ತನೆಗಳನ್ನು ಉತ್ತಮ ಹಿಮ್ಮೇಳದೊಂದಿಗೆ ಸಮಧುರವಾಗಿ ಹಾಡಿದರು.

ಓದ ತೊಡಗಿದರೆ ಪೂರ್ತಿ ಓದದೆ ಕೆಳಗಿಡಲಾಗದ, ವಿನೋದದೊಡನೆ ವಿಚಾರವನ್ನೂ ಕುದುರಿಸುವ, ವಿವಿಧ ಕನ್ನಡ ಲೇಖಕರ ಓದಲೇ ಬೇಕಾದ ಕೆಲವು ಪುಸ್ತಕಗಳು.

ಅಂತರಂಗದ ಕತೆಗಳು ರೂ. 1 4 0
ಸೃಷ್ಟಿಯ ವಿವಿಧ ವೈಚಿತ್ರ್ಯಗಳನ್ನು ಚಿತ್ರಿಸುವ, ಕಥಾಸಂಗ್ರಹ.

ಪಂಚಕಜ್ಜಾಯ ರೂ 1 8 0
ಚೆಲುವಿನ ಐದು ನೀಳ್ಗತೆಗಳ ಸಂಗ್ರಹ.

ಅವಿಲು ರೂ. 2 0 0
ಸಾಹಿತ್ಯದ ಸರ್ವವಿಧದ ಸಂಗ್ರಹ.

ಹೆಂಗುಸರ ಕತೆಗಳು ರೂ 2 0 0
ಸ್ತ್ರೀಯರ ಚಿತ್ತವೃತ್ತಿಯನ್ನು ಚಿತ್ರಿಸುವ ಸ್ತ್ರೀಯರಿಂದಲೇ ಬರೆಯಲ್ಪಟ್ಟ ನೂತನ ಕತೆಗಳ ಸಂಗ್ರಹ.

ನಗೆನೋಟಗಳು ರೂ. 1 4 0
ವಿನೋದ ಚಿತ್ರಗಳ ಸಂಗ್ರಹ.

ಬಾಳಿನ ಬೆಡಗು ರೂ. 1 4 0
ಬಾಳಿನಬೆಡಗನ್ನು ಚೆನ್ನಾಗಿ ಬಣ್ಣಿಸುವ ನೂತನ ಕಾದಂಬರಿ.

ಧನದ ಬಿಂದಿಗೆ ಮತ್ತಿತರ ನಾಟಕಗಳು
ವಿವಿಧ ಲೇಖಕರ ಉತ್ತಮ ಏಕಾಂಕ ನಾಟಕಗಳು. ರೂ. 1 8 0

ಸುಲಭದಲ್ಲಿ ಇಂಗ್ಲಿಷ್ ರೂ. 1 8 0

ಮನೆ ಮದ್ದು ರೂ. 2 8 0

ಗೀತೆಯ ಕೈಗನ್ನಡಿ ರೂ. 0 12 0

ವಿವರವಾದ ಕೆಟಲಾಗಿಗೆ ಬರೆಯಿರಿ. ಪುಸ್ತಕ ವ್ಯಾಪಾರಿಗಳಿಗೆ ವಿಶೇಷ ಕಮಿಶನ್ ಇದೆ.
ನವಭಾರತ ಪುಸ್ತಕ ಭಂಡಾರ, ಉಡುಪಿ.

ಮುಂಬಯಿ ಏಜಂಟರು:- ಸ್ಟುಡೆಂಟ್ಸ್ ಬುಕ್ ಡಿಪೊ, 6 L. ಪಿತಾ ಸ್ಟ್ರೀಟ್, ಫೋರ್ಟ್, ಮುಂಬೈ.

ಸ್ವಿಸ್ ತಯಾರಿ ರಿಸ್ಟ್ ವಾಚು
ಬೆಲೆ ರೂ. 5/- ಮಾತ್ರ.



ರೂಪಾಯಿ 5/-ಕ್ಕೆ ಸ್ವಿಸ್ ತಯಾರಿ ರಿಸ್ಟ್ ವಾಚು ಮತ್ತು ಸ್ಟೆಂಡಾರ್ಡ್ ಫೌಂಟನ್ ಪೆನ್ ದೊರೆಯುವುದು. 15 ವರುಷಗಳ ಗ್ಯಾರಂಟಿ.
ರೂಪಾಯಿ 1-2-0 ಟಪ್ಪಾಲು ವೆಚ್ಚ ಪ್ರತ್ಯೇಕ.
ಇಂದೇ ಬರೆಯಿರಿ:

National Swiss Watch Suppliers,
Halka No. 28 (BG) Meerut (U. P.)

NAVAYUGA
Popular Kannada Weekly.
Founder:—
Sri **A. B. SHETTY,**
Minister for Public Health,
Govt. of Madras.

ನವಯುಗ
ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ.
ಸ್ಥಾಪಕರು:- ಶ್ರೀ. ಎ. ಬಿ. ಶೆಟ್ಟಿ,
ಮದ್ರಾಸಿನ ಆರೋಗ್ಯ ಮಂತ್ರಿ.

ವಾ. ಚಂದಾ: ರೂ. 5-12-0
ಬಿಡಿಪ್ರತಿ: 0- 2-0



ಮಂಗಳೂರು

ದಿ ಪ್ರೊಪ್ರೈಲರ್ ಇನ್ಶೂರೆನ್ಸ್ ಕಂಪೆನಿಯು— 1952ರಲ್ಲಿ ರೂಪಾಯಿ 30,35,500ರ ವಿಮಾ ವ್ಯವಹಾರವನ್ನು ಮಾಡಿದ್ದು 1953ರಲ್ಲಿ ಅದಕ್ಕೂ ಮಿಗಿಲಾಗಿ ರೂ 31,86,950 ರಷ್ಟು ವಿಮಾ ವ್ಯವಹಾರವನ್ನು ಗಳಿಸಿರುವುದು ಎನ್ನಲು ತುಂಬಾ ಸಂತೋಷ ಪಡುತ್ತೇವೆ.

ಅನ್ನದಾನ— ಸೈಂಟ್ ಆಗ್ನೇಸ್ ಕಾಲೇಜಿನಲ್ಲಿ ತಾ 10ರಲ್ಲಿ ಸಾಧಾರಣ ಎರಡು ಸಾವಿರ ಬಡಬಗ್ಗರಿಗೆ ಕಾರ್ಡಿನಲ್ ಗ್ರೇಶಿಯಸರ ಗೌರವಾರ್ಥವಾಗಿ, ಬಡವರಿಗೆ ಅನ್ನದಾನ ಮಾಡುವ ಉಪಸನ್ಯಾಸಿನಿಯವರು ಊಟ ವಿತ್ತರು.

ಹರಿಜನ ಮಹಾಸಭೆ— ಇದೇ ತಾ 7ರಲ್ಲಿ ಡಿ. ಸಿ. ಎಮ್. ಶಾಲಾ ಕಟ್ಟಡದಲ್ಲಿ ಶ್ರೀ ಕೆ. ಈಶ್ವರ, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಮುಂಡಾಲರ ಸಭೆಯೊಂದು ಜರಗಿತು. ಶ್ರೀಗಳಾದ ಗುರುವ, ಪ್ರುದ್ದು, ಚೆನ್ನಪ್ಪ, ಶಾಂತಪ್ಪ, ರಾಮಚಂದ್ರ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು. ಮುಂಡಾಲ ಯೂನಿ ಉದ್ಧಾರ ಸಂಘವೊಂದನ್ನು ಸ್ಥಾಪಿಸಿ ಕೂಡಲೇ ರಿಜಿಸ್ಟ್ರಿ ಮಾಡಬೇಕೆನ್ನುವ ನಿರ್ಣಯವಾಯಿತು. ಮದ್ರಾಸಿನ ಹರಿಜನ ಪ್ಯಾರಿಕ್ಸರ್ ಶ್ರೀ ಆರ್. ಎಸ್. ಮಲೆಯಪ್ಪನವರ ಅಧ್ಯಕ್ಷತೆಯಲ್ಲಿ ಹರಿಜನರ ಸಾರ್ವಜನಿಕ ಸಭೆಯು ತಾ 7ರಲ್ಲಿ ಜರಗಿತು.

ಮಾರಾಟಿಕರ ಕಾನೂನು— 1939ರ ಮಾರಾಟ ತೆರಿಗೆ ಕಾನೂನಿನ 21ನೇ ನಿಬಂಧನೆಯನ್ನು ಈ ಕೆಳಗಿನಂತೆ ಬದಲಾಯಿಸಲಾಗಿದೆ:—ವರ್ತಕರು ಅಥವಾ ಲೈಸೆನ್ಸು ಇರುವವರು ವ್ಯಾಪಾರ ನಿಲ್ಲಿಸುವುದು, ಅಥವಾ ಇತರರಿಗೆ ವ್ಯಾಪಾರ ಅಧಿಕಾರವನ್ನು ಅಂಶ ಇಲ್ಲದೆ ಸಂಪೂರ್ಣವಾಗಿ ಕೊಡುವುದು. ವ್ಯಾಪಾರ ಸ್ಥಳ ಬದಲಾವಣೆ, ಹೊಸ ವ್ಯಾಪಾರದ ಆರಂಭ, ವ್ಯಾಪಾರ ಸಂಸ್ಥೆಯ ಹೆಸರು ಬದಲಾಯಿಸುವುದು. ಮುಂತಾದ ಸಂದರ್ಭಗಳಲ್ಲಿ 30 ದಿವಸಗಳೊಳಗೆ ಈ ವಿಚಾರವನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸತಕ್ಕದ್ದು.

ಸಿಮೆಂಟಿನ ಬೆಲೆ— ಸರಕಾರವು ಸಿಮೆಂಟಿನ ಬೆಲೆಯನ್ನು ನಿಶ್ಚಯಿಸಿದ್ದು ಇದೇ ತಾ 1ರಿಂದ ಹೊಸ ಬೆಲೆಯು ಜಾರಿಗೆ ಬರುವುದು. (1) ಇಂಡಿಯದ ಸಿಮೆಂಟ್ ಲಿಮಿಟೆಡ್‌ನವರಿಂದ ಭಾರತದಲ್ಲಿ ತಯಾರಿಸಲ್ಪಟ್ಟ 1 ಟನ್ ಪೋರ್ಟ್‌ಲೇಂಡ್ ಸಿಮೆಂಟಿಗೆ ರೂ 75/- (2) ಎಸೋಸಿಯೇಟೆಡ್ ಸಿಮೆಂಟ್ ಕಂಪೆನಿ (ಬೊಂಬಾಯಿ) ಮತ್ತು ಡಾಲ್ಮಿಯ ಸಿಮೆಂಟ್ ಲಿಮಿಟೆಡ್ (ಡಾಲ್ಮಿಯ ಪುರಂ) ನವರಿಂದ ತಯಾರಿಸಲ್ಪಟ್ಟ 1 ಟನ್ ಸಿಮೆಂಟಿಗೆ ರೂ 71/- (3) 1 ಟನ್ ಸಿಮೆಂಟ್ [illegible] ಗೋಣಿಚೀಲಕ್ಕೆ [illegible] 11—9—0 ಬೆಲೆ ಕೊಡಬೇಕು.

ವಿದ್ಯಾರ್ಥಿಗಳಿಗೆ ಉಪದೇಶ— ಸೈಂಟ್ ಎಲೋಸಿಯಸ್ ಕಾಲೇಜು ವಿದ್ಯಾರ್ಥಿ ಸಂಘದ ವಾರ್ಷಿಕ [illegible] 6ರಲ್ಲಿ ಜರಗಿತು. ಅಧ್ಯಕ್ಷ ಸ್ಥಾನದಿಂದ [illegible] ಕಾರ್ಡಿನಲ್ ಗ್ರೇಶಿಯಸ್ [illegible] ದಲ್ಲಿ ವಿದ್ಯಾರ್ಥಿಗಳು [illegible] [illegible] ವಹಿಸಿತ್ತರು.

ಸೈಂಟ್ ಎಗ್ನೆಸ್ ಕಾಲೇಜಿನಲ್ಲಿ— [illegible] ರಲ್ಲಿ ಜರಗಿತು. ಶ್ರೀಮತಿ [illegible] ರು ವಹಿಸಿಕೊಂಡಿದ್ದರು. [illegible] ಅಧ್ಯಕ್ಷತೆ ವಹಿಸಿದ [illegible] ಶಿಯಸರು ಈ ಕಾಲೇಜಿನ [illegible] [illegible] ತಿಯಲ್ಲಿ [illegible] ಕ್ರೈಸ್ತ ಸಂಸ್ಕೃತಿ [illegible] ಎಂದು ಹೇಳಿದರು. ವಿದ್ಯಾರ್ಥಿನಿಯರು ತಮ್ಮ ಮುಂದಿನ [illegible] [illegible] ದಿಂದ [illegible] ರು. ಕೊಂಕಣಿ ನಾಟಕ [illegible] ಯಿಸಿದ [illegible] ಯ ನಾಟಕದ [illegible] ಲ್ಲಿದು ಮಾಡಲಾಯಿತು [illegible] ನ ಸಭೆಯವರ ಕಾರ್ಯ [illegible]

ನಂದಿಸಿದರು. ಅಲ್ಲದೆ ಅವರು ಸಂಗೀತಕ್ಕೂ ಹೆಚ್ಚಿನ ಗಮನವೀಯಬೇಕೆಂದು ಕೇಳಿಕೊಂಡರು.

ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿ

ಇದೇ ತಾ 4ರಲ್ಲಿ ಉದ್ಯಾವರ, ಹೊಸಬೆಟ್ಟು ಮತ್ತು ಬಂಗ್ರ ಮಂಜೇಶ್ವರ ಗ್ರಾಮಗಳ ಕಾಂಗ್ರೆಸ್ ಕಾರ್ಯಕರ್ತರ ಸಭೆಯು ಶ್ರೀ ಎಮ್. ಸರ್ವೋತ್ತಮ ಕಾಮತರ ಅಧ್ಯಕ್ಷತೆಯಲ್ಲಿ ಜರಗಿತು. ಸಭೆಗೆ ಹಾಜರಿದ್ದ ಶ್ರೀ ಬಿ. ಆರ್. ಹೆಗ್ಡೇರವರು ತಾತ್ಕಾಲಿಕ ಕಮಿಟಿಯನ್ನು ರಚಿಸುವ ಕುರಿತು ಸಲಹೆಗಳನ್ನು ಕೊಟ್ಟರು. ಬಳಿಕ 24 ಜನರುಳ್ಳ "ಬಂಗ್ರ ಮಂಜೇಶ್ವರ ಕಾಂಗ್ರೆಸ್ ಪಂಚಾಯತ್ ಎಡ್ ಹೋಕ್ ಕಮಿಟಿ" ಯನ್ನು ರಚಿಸಲಾಯಿತು. ಶ್ರೀಗಳಾದ ಎಮ್. ಎಸ್. [illegible] (ಅಧ್ಯಕ್ಷ), [illegible] [illegible] [illegible]

[illegible]

ಶ್ರೀ [illegible]— [illegible]

ಯಿಂದ ಜರಗಿತು. ಪೂಜೆ, ಉತ್ಸವ ಸಮಾರಾಧನೆಗಳಲ್ಲದೆ ಚಲಚ್ಚಿತ್ರ ಪ್ರದರ್ಶನ, ಹರಿಕಥೆ, ನಾಟಕ, ಗಾಯನಾದಿ ಕಾರ್ಯಕ್ರಮಗಳೂ ಇದ್ದುವು.

ಬೊಂಬಾಯಿ

ಬೊಂಬಾಯಿ— [illegible] ಕನ್ನಡ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ಇದೇ ತಾ 7ರಲ್ಲಿ ಪ್ರಿನ್ಸಿಪಾಲ್ ಶ್ರೀ [illegible] ಅವರ ಅಧ್ಯಕ್ಷತೆಯಲ್ಲಿ ಜರಗಿತು. ಮುಂಬಯಿ ಸರಕಾರದ ಆರೋಗ್ಯ ಖಾತೆಯ ಉಪಮಂತ್ರಿ ಶ್ರೀ ಬಿ. ಡಿ. ಜತ್ತಿಯವರು ಮುಖ್ಯ ಅತಿಥಿಗಳಾಗಿದ್ದರು. ಸಂಘದ ಅಧ್ಯಕ್ಷ ಶ್ರೀ. ವಿ. ವಿಶ್ವನಾಥ ಸೆಟ್ಟರು ಸ್ವಾಗತ ಮಾತುಗಳನ್ನಾಡಿದರು. ಕಾರ್ಯದರ್ಶಿ ಶ್ರೀ ಸಿ. ಶಂಕರ [illegible] ವರದಿಯನ್ನೋದಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಕನ್ನಡ ವಿದ್ಯಾರ್ಥಿಗಳ ಚಟುವಟಿಕೆಗಳನ್ನು ಪ್ರಶಂಸಿಸಿ ಮಾತನಾಡಿದರು. ಶ್ರೀ ಜತ್ತಿಯವರು ಮಾತನಾಡುತ್ತಾ [illegible] [illegible] ತಮ್ಮ ನಾಡಿನ [illegible] [illegible] ರು. [illegible] [illegible] ಶ್ರೀ ಬಿ. ಆರ್. [illegible] ತಮ್ಮ [illegible]

ನಿಮಗೆ ಸುಲಭದಲ್ಲಿ
ಇಂಗ್ಲಿಷ್ ಕಲಿಯಬೇಕೆ?
ಹಾಗಿದ್ದರೆ

ಸುಲಭದಲ್ಲಿ
ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿ
ಪುಸ್ತಕ ಅತ್ಯುಪಯುಕ್ತವಾದುದು.
ಬೆಲೆ ಸಾಮಾನ್ಯ ಪ್ರತಿ 1—[illegible]—0
ಉತ್ತಮ ಪ್ರತಿ ರೂ. 2—[illegible]—0
ಹಾಲ್ ಕೊಡಬ್ಬಲ್ಲಿದ
ಮನೆ ಮದ್ದು
ಸಾಧಾರಣ ರೋಗಗಳಿಗೆ ಮನೆಯಲ್ಲಿ
ಮಾಡಿಕೊಳ್ಳುವ ವಿಧಾನವನ್ನು
ವಿವರಿಸುವ ಗ್ರಂಥ
ಬೆಲೆ ರೂ. 2—8—0
ಪುಸ್ತಕ ವ್ಯಾಪಾರಿಗಳಿಗೆ ಧಾರಾಳ ಕಮಿಷನ್!
ಎಲ್ಲಾ ತರದ ಕನ್ನಡ ಪುಸ್ತಕಗಳೂ
ದೊರೆಯುತ್ತವೆ.

ನವಭಾರತ ಪುಸ್ತಕ ಭಂಡಾರ, ಉಡುಪಿ

ಕ್ಷಯನಾಶಕ [illegible]

[illegible] ಅನೇಕ ವರ್ಷಗಳಿಂದ ಉಪಯೋಗಿಸಲ್ಪಡುತ್ತಿರುವ ಪ್ರಸಿದ್ಧ ಔಷಧಿ [illegible]

ಕಾಲಿಕಮಾಲಿ ಆಯುರ್ವೇದ ಫಾರ್ಮಸಿ, ಋಷಿಕೇಶ (ಡೆಹರಾಡೂನ್)

Kali Kamali Ayurved Pharmacy, RISHIKESH Dehradun

ದಿ ಬೊಂಬೆಲೈಫ್ ಎಶ್ಯೂರೆನ್ಸ್ ಕಂಪೆನಿ ಲಿ., ಬೊಂಬಾಯಿ

1953ನೆ ವರ್ಷದ ವೆಲ್ಯುಯೇಶನ್ ಪ್ರಕಾರ ಉದಾರ ಬೋನಸ್

ಎಂಡೋವ್‌ಮೆಂಟ್ ಪೋಲಿಸಿಗಳ ಮೇಲೆ ರೂ 10-[illegible] ವರ್ಷ ಒಂದರ
ಜೀವಾವಧಿ ಪೋಲಿಸಿಗಳ ಮೇಲೆ ರೂ 12-[illegible] ರೂ 1000ಕ್ಕೆ
[illegible]
[illegible]
[illegible]

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಚೀಫ್ ಏಜಂಟ್ಸ್, ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್.
ಬೋಂಬೆ ಲೈಫ್ ಬಿಲ್ಡಿಂಗ್, ಉಡುಪಿ, ದ. ಕ.

ಅಥವಾ ಶಾಖಾ ಕಛೇರಿಗಳಲ್ಲಿ ಮದ್ರಾಸ್, ಬೆಂಗಳೂರು, ತ್ರಿವೆಂಡ್ರಮ್, ಕಲ್ಲಿಕೋಟೆ,
ಬೊಂಬಾಯಿ, ಮಂಗಳೂರು ಮತ್ತು ಕೊಯಮುತ್ತೂರು.

The Bombay Life Assurance Co., Ltd., Bombay

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. 251/1951 R. E. P. 760/1953.

ರಾಮ ಪೂಜಾರಿ. —ಅರ್ಜಿದಾರ.

ಮತ್ತು

1. ಕೊರಗ, 2 ಪಂಜು, 3. ಜೋಗ,
4. ಲಿಂಗಿ ಹೆಂಗ್ಸು, 5. ಮೈನರ ಸೀತು,
6. ಮೈನರ ಪದ್ದು. —ಎದ್ರಿರು.

ಕುಂದಾಪುರ ತಾಲ್ಲೂಕು ವಸೇರ ಹೋಬಳಿ ಗ್ರಾಮದಲ್ಲಿರುವ ಅಬ್ಬಕ್ಕ ಹೆಂಗ್ಸಿನ ಮಗ ಪಂಜು 1. ವಂಡ್ಸೆ ಗ್ರಾಮದಲ್ಲಿರು ಅಬ್ಬಕ್ಕ ಹೆಂಗ್ಸಿನ ಮಗ 3ನೇ ಎದ್ರಿ ಜೋಗ 1; ಕುಂದಾಪುರ ತಾಲ್ಲೂಕು ಸಿದ್ದಾಪುರ ಗ್ರಾಮದಲ್ಲಿರುವ ಚಿಕ್ಕಿ ಹೆಂಗ್ಸಿನ ಮಗಳು ಲಿಂಗಿ ಹೆಂಗ್ಸು 1 ಕೂಡಾ 3 ಜನರಿಗೆ ಈ ಮೂಲ್ಕ ತಿಳಿಯಪಡಿಸುವುದೇನೆಂದರೆ.

ಸದ್ರಿ ಅಮಲ್ಜಾರಿ ವ್ಯವಹರಣೆಯಲ್ಲಿ ಎದ್ರಿರ ಹಕ್ಕಿನ ಸ್ಥಿರಾಸ್ತಿ ಯೇಲಂ ಮಾಡುವ ಬಗ್ಗೆ [illegible] ಯೇಲಂ ಇಷ್ಟಿಹಾರಿನ ಷರತುಗಳನ್ನು ನಿರ್ಣಯ ಮಾಡುವ ಬಗ್ಗೆ ತಾ. 25—2—1954ಕ್ಕೆ ಮೇಲಿನ ಕೋರ್ಟಿನಲ್ಲಿ ತಸ್ಕಿಗೆ ಇಟ್ಟಿರುತ್ತಾರೆ. ಆ ಕುರಿತು ಯೇನಾದರೂ ಆಕ್ಷೇಪಣೆಗಳಿದ್ದಲ್ಲಿ ಸದ್ರಿ ದಿವ್ಸ ಹಗಲು 11 ಗಂಟೆಗೆ ಮೇಲಿನ ಕೋರ್ಟು ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲ್ಕ ತಿಳಿಯಪಡಿಸಿರುತ್ತದೆ.

N. S. Parameshvariah,
Advocate for Petr.

Coondapoor, 7—2—'54.

3 ವರ್ಷ ಗ್ಯಾರಂಟಿಯುಳ್ಳ ಚಿನೋಯಿಸ್ಟ್ ವಾಚ್ ಒಂದೇ ರೂಪಾಯಿ 14—0—0 ಕಿಮ್ಮತ್. ಜ್ಯುವೆಲ್ 10 ಸಂಖ್ಯೆ 5

4 ಜ್ಯುವೆಲ್ಸ್ ಕ್ರೋಮ್ ರೂ 11-0, ರೋಲ್ಡ್ ಗೋಲ್ಡ್ ರೂ. 15, 15 ಜ್ಯುವೆಲ್ಸ್ ಕ್ರೋಮ್ ರೂ. 30, ರೋಲ್ಡ್ ಗೋಲ್ಡ್ ರೂ 32-, 15 ಜ್ಯುವೆಲ್ಸ್ ಸ್ಕ್ವೇರ್ ಕ್ರೋಮ್ ರೂ. [illegible], 17 ಜ್ಯುವೆಲ್ಸ್ ರೂ. 40, [illegible] ಟೈಂಪೀಸ್ ರೂ. 15 —
[illegible] ಇಲ್ಲ. ಕ್ಯಾಟಲಾಗ್ ಧರ್ಮಾರ್ಥ.

FREE INDIA WATCH CO. [illegible]
Post Bag No. 6724, CALCUTTA-7

[೧ನೇ ಪುಟದಿಂದ]

ಬಳಿಕ, ಪ್ರಾದೇಶಿಕ ಆವಶ್ಯಕತೆಗಳು ಮತ್ತು ಕೊನೆಯದಾಗಿ ರಾಷ್ಟ್ರದ ಆವಶ್ಯಕತೆಗಳು ಬರುತ್ತವೆ.

ಗ್ರಾಮ ಪಂಚಾಯತು ಮತ್ತು ಸಹಕಾರ ಪದ್ಧತಿ—ಇವುಗಳ ಸಂಘಟಣೆಯು ಇಂತಹ ಯೋಜನೆಯನ್ನು ರಚಿಸುವುದರಲ್ಲಿ ಅನಿವಾರ್ಯವಾಗುತ್ತದೆ. ಎರಡನೆ ಪಂಚವಾರ್ಷಿಕ ಯೋಜನೆಯ ಅವಧಿ ಮುಗಿಯುವುದರೊಳಗಾಗಿ, ಪ್ರತಿಯೊಂದೂ ಗ್ರಾಮಕ್ಕೆ ಅಥವಾ ಕೆಲವು ಹಳ್ಳಿಗಳ ಒಂದು ಸಣ್ಣ ಗುಂಪಿಗೆ ಪಂಚಾಯತುಗಳು ಸ್ಥಾಪಿಸಲ್ಪಡುವಂತೆ ರಾಜ್ಯ ಸರಕಾರಗಳು ಕ್ರಮತೆಗೆದುಕೊಳ್ಳಬೇಕೆಂದು ಗೊತ್ತುವಳಿ ಅಪೇಕ್ಷಿಸುತ್ತದೆ. ಚುನಾವಣೆಗಳ ಮೂಲಕ ಪಂಚಾಯತುಗಳ ಅಧಿಕಾರಿಗಳನ್ನು ಆರಿಸುವ ಪದ್ಧತಿಯನ್ನು ನಿಲ್ಲಿಸಿ, ಹಳ್ಳಿಗಳಲ್ಲಿರುವ ಸರ್ವಮಾನ್ಯ ಧುರೀಣರು, ಹರಿಜನರು, ಮಹಿಳಾ ಪ್ರತಿನಿಧಿಗಳು, ಉತ್ಕೃಷ್ಟ ರೈತರು, ಸಹಕಾರಿ ಕಾರ್ಯಕರ್ತರು, ಇತರ ಪ್ರಮುಖ ಉದ್ಯೋಗಸ್ಥರು ಗ್ರಾಮ ಪಂಚಾಯತುಗಳಲ್ಲಿ ಸೇರುವಂತೆ ನೋಡಬೇಕೆಂದು ಗೊತ್ತುವಳಿ ಸಲಹೆ ಮಾಡಿದೆ.

ಹಳ್ಳಿಯ ಸಮಾಜದ ಪುನಾರಚನೆಯ ಉದ್ದೇಶದಿಂದ, ಪ್ರತಿಯೊಂದೂ ಪ್ರದೇಶದ ಆವಶ್ಯಕತೆಗಳನ್ನು ತಿಳಿದುಕೊಳ್ಳುವ, ಮತ್ತು ಅಲ್ಲಿಯ ಸಾಧನ ಸಂಪತ್ತನ್ನು ಅಳೆಯುವ ಕಾರ್ಯಕ್ರಮವೊಂದನ್ನು ಈ ಪರಿಷತ್ತು ಸೂಚಿಸಿದೆ—ಪ್ರತಿಯೊಂದೂ ಕುಟುಂಬ ಹಾಗು ಸಂಸ್ಥೆಗಳಿಗೆ ಯೋಜನೆಯಿಂದ ಲಾಭ ಸಿಗಬೇಕೆನ್ನುವ ಧ್ಯೇಯವನ್ನು ಇಟ್ಟುಕೊಂಡು ಕೆಲಸ ನಡೆಯಬೇಕಾಗಿ ಹೇಳಲ್ಪಟ್ಟಿದೆ. ಇದರಂತೆ, ಸರಕಾರದ ಸಹಾಯವಿಲ್ಲದೆಯೇ ನಡೆಯಬಹುದಾದ ಯೋಜನೆಗಳು, ತಾಂತ್ರಿಕ ಹಾಗೂ ಅಧಿಕಾರಿಗಳ ಸಹಾಯವನ್ನು ಮಾತ್ರ ಸರಕಾರದಿಂದ ಅಪೇಕ್ಷಿಸುವ ಕೆಲಸಗಳು, ತಾಂತ್ರಿಕ ಸಹಾಯದ ಜೊತೆಗೆ ಸಾಧನ ಸಲಕರಣೆಗಳನ್ನು ಸರಕಾರವೇ ಒದಗಿಸಿಕೊಟ್ಟು ಜನಹಿತದ ಕೆಲಸವನ್ನು ಪೂರೈಸಿಕೊಡಬೇಕಾದ ಪ್ರಸಂಗಗಳು—ಇವುಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ಕಲೆ ಹಾಕುವುದಕ್ಕೆ ಪ್ರತಿಯೊಂದೂ ಹಳ್ಳಿಯಲ್ಲಿ ಈಗಿಂದೀಗ ಪ್ರಯತ್ನ ಮುಂದೊತ್ತಬೇಕು. ನಿರುದ್ಯೋಗದ ಸಮಸ್ಯೆ, ಭೂಮಿ ಇಲ್ಲದ ಶ್ರಮಗಾರರ ಪ್ರಶ್ನೆ ಮುಂತಾದ ಸಂಗತಿಗಳಲ್ಲಿ ನಿರ್ದಿಷ್ಟ ಮಾಹಿತಿಯನ್ನು ಸಂಗ್ರಹಿಸುವುದೊಳಿತು. ಹೀಗೆ ಮಾಡುವುದರಿಂದ—ನಮ್ಮ ಶಾಸನ ಸಭಾಸದಸ್ಯರ ಮುಖಾಂತರವಾಗಿಯಾಗಲೀ, ಸಾರ್ವಜನಿಕ ಸೇವೆಯ ದೀಕ್ಷೆ ತೊಟ್ಟ ಭಾರತ ಸೇವಕ ಸಮಾಜದಂತಹ ಸಂಘ ಸಂಸ್ಥೆಗಳಿಂದಾಗಲೀ—ನಮ್ಮ ಕಾರ್ಯಕ್ರಮವನ್ನು ಸರಕಾರದ ಮತ್ತು ಯೋಜನಾ ಆಯೋಗದ ಮುಂದಿಟ್ಟು, ಕೆಲಸ ಸಾಧಿಸಿಕೊಳ್ಳಲು ಬರುತ್ತದೆ.

ಧರ್ಮಾರ್ಥ—ಸುಕೃತಿ

ಒಂದು ಸಾವಿರ ಕಾಶ್ಮೀರಿ ಶಾಲುಗಳನ್ನು ಧರ್ಮಾರ್ಥ ಹಂಚುತ್ತಲಿದ್ದೇವೆ. ಬೇಗನೆ ಬರೆಯಿರಿ. ವಿಳಂಬವಾದರೆ ನಿರಾಶರಾಗುವಿರಿ.

Diamond Commercial Chambers (N.U.)
Bhandari Street, BOMBAY—3

ಸ್ವೀಕಾರ—ವಿಮರ್ಶೆ

ಶ್ರೀ|| ಜಿ. ಆರ್. ಪಾಂಡೇಶ್ವರ—

ಸಂಪಾದಕ, ಜಯಕರ್ನಾಟಕ ಧಾರವಾಡ: ಇವರು ಹಿಂದೆ ಶಿರಸಿಯಲ್ಲಿ ಜರಗಿದ ಪ್ರಥಮ ಕರ್ನಾಟಕ ಯಕ್ಷಗಾನ ನಾಟಕ ಪರಿಷತ್ತಿನಲ್ಲಿ ಮಾಡಿದ "ಅಧ್ಯಕ್ಷ ಭಾಷಣದ ಪ್ರತಿ" ಮತ್ತು ಇವರಿಂದ ವಿರಚಿತವಾದ "ಸುಪಂಥಾ" "ಶ್ರೀಕೃಷ್ಣಲೀಲಾಮೃತಂ" ಬಲಿವಾಮನ ಗೀತಾರೂಪಕ"ಗಳನ್ನು ಅತ್ಯಾದರದಿಂದ ಸ್ವೀಕರಿಸಿ ಓದಿ ನೋಡಿದೆನು.

ಯಕ್ಷಗಾನ ನಾಟಕ ಪರಿಷತ್ತಿನ ಅಧ್ಯಕ್ಷ ಭಾಷಣದಲ್ಲಿ—ಹಿಂದಿನ—ಇಂದಿನ—ಮುಂದಿನ, ಯಕ್ಷಗಾನ ಕಲೆಯ ರೂಪ, ರೀತಿ ವೈವಿಧ್ಯಗಳನ್ನು ವಿಚಾರಪೂರ್ವಕ ಬಹು ಸೊಗಸಾಗಿ ಬಣ್ಣಿಸಿರುವರು. ಇದರಲ್ಲಿ ೧. ಯಕ್ಷರಗಾನ ನಾಟಕ ೨ ನಾಟಕಗಳ ಉದ್ದೇಶ ಆನಂದ ೩ ಮನಸ್ಸಂಸ್ಕಾರ ೪ ಸಾಧನಟನೆ ೫ ಕಲಾಸಂಚಾಮೃತ ೬ ದೃಶ್ಯದ ಮೂಲ ಕಲ್ಪನೆ ೭ ಭಾವಾನು ಕೀರ್ತನೆ ೮ ಕನ್ನಡದಲ್ಲಿ ನಾಟಕ ಸಾಹಿತ್ಯ ೯ ಏಕಾಂಕದಿಂದಲೇ ನಾಟಕದ ಹುಟ್ಟು ೧೦ ಯಕ್ಷಗಾನ ನಾಟಕದ ವೈಶಿಷ್ಟ್ಯ ೧೧ ಕಲಾವಿದರ ಸ್ಥಾನಮಾನ ೧೨ ಚಾರಿತ್ರ ಶುದ್ಧಿ ೧೩ ಯಕ್ಷಗಾನದಲ್ಲಿ ಸುಧಾರಣೆ ೧೪ ಸುಧಾರಣೆಯ ರೀತಿ ನೀತಿ ೧೫ ಕಲಾಭ್ಯಾಸ ಕೇಂದ್ರ—ಹೀಗೆ ಪ್ರಾಮುಖ್ಯವಾದ ೧೫ ಶಿರೋನಾಮೆಗಳುಳ್ಳ ವಿಷಯಗಳ ಮೇಲೆ ಆ ಭಾಷಣವು ಬರೆಯಲ್ಪಟ್ಟಿದೆ. ಇದು ರು ಪಾಣ್ಯದಿಂದ ಹಾರ್ನ ಮಿಗೆ ಮುಂದುವರಿದ ಯಕ್ಷಗಾನ ಕಲಾ ನಿಧಿಯ ಉತ್ತರೋತ್ತರ ಶಿಧಿಗಳ ತಿಂಗಳ ಬೆಳಕಿನಂತಿದೆ. ಯಕ್ಷಗಾನ ಕಲಾಭಿಜ್ಞರೂ—ಸಾಹಿತಿಗಳೂ ಓದಿ ಸಂಗ್ರಹಿಸಿಟ್ಟುಕೊಳ್ಳ ತಕ್ಕ ವಿಷಯಗಳು ಇದರಲ್ಲಿವೆ. ಇದಕ್ಕಾಗಿ ಶ್ರೀ|| ಪಾಂಡೇಶ್ವರರಿಗೆ ನನ್ನ ಅಭಿನಂದನವನ್ನು ಸಮರ್ಪಿಸುತ್ತೇನೆ.

"ಬಲಿವಾಮನ ಗೀತಾರೂಪಕ" ಇದು ಧಾರವಾಡದ ಬಾನುಲಿಯಲ್ಲಿ ಪ್ರಕಟವಾದ ಕನ್ನಡ ಸಾಹಿತ್ಯದಲ್ಲಿ "ವಿಜ್ಞಾನಸಪ್ತಪ" ಬಂದ ಕಾವ್ಯವಿದೆ "ಶ್ರೀಕೃಷ್ಣ ಲೀಲಾಮೃತ" ಈ ಕೃತಿಯು ಭಗವಾನ್ ಕೃಷ್ಣಮೂರ್ತಿಯ, ಪರೋಕ್ಷ ಲೀಲಾ ಕಥನದ ಕೆಲವು ವಿಷಯಗಳನ್ನು ರಸಮಯವಾದ ಸುಂದರ ಪದ್ಯಗಳಿಂದ ಹೃದಯಂಗಮವಾಗುವಂತೆ ಬಣ್ಣಿಸಿಯದೆ. "ಸುಪಂಥಾ" ಇದು ಬೇರೆ ಬೇರೆ ವಿಷಯಗಳ ಮೇಲೆ ಕಾಲೋಕ್ತವಾಗಿ ಬರೆದ ಹೊಸ ಕವಿತೆಗಳ ಪದ್ಯಮಾಲಿಕೆ—ನವೀನ ಕವಿತೆಗಳ ಸ್ಥಾನವು ಇನ್ನೂ ನಿರ್ದಿಷ್ಟವಾಗಲಿಲ್ಲ. ಅದರ ಪ್ರಯೋಗವು ಉತ್ತಮ ಸಾಹಿತಿಗಳಿಂದ ನಡಿಯುತ್ತಿದೆ. ಪ್ರತಿ ವರ್ಷದ ಸುಗ್ಗಿಯಲ್ಲಿ ಲತಾ ವೃಕ್ಷಗಳು ಚಿಗುರೇರಿ, ನನೆಕೊನೆಗಳಿಂದ ವಿಕಾಸವಾಗುತ್ತಿವೆ. ಸಂವತ್ಸರವು ಬೇರೆಯಾದರೂ, ಗಿಡ, ಬಳ್ಳಿ-ವೃಕ್ಷಗಳು ಮೊದಲಿನವುಗಳೇ ಆಗಿವೆ. "ಸುಪಂಥಾ" ಈ ಹೊಸ ಕೃತಿಯಲ್ಲಿ ಹಳೆ ಸನ್ನಿವೇಶಗಳು ಪ್ರಕಟಗೊಂಡಿವೆ. ಶ್ರೀಯುತ ಪಾಂಡೇಶ್ವರರ ಕೃತಿಗಳು ಮುಂದೆ ಅವರು ಹಿರಿಯರ ಸ್ಥಾನಕ್ಕೇರತಕ್ಕವರೆಂಬುದನ್ನು ತೋರಿಸುತ್ತಿವೆ. ಅವರ ಬಾಳತಕ್ಕ ಕೃತಿಗಳು ಕನ್ನಡಮ್ಮನ ಕಂಠಾಭರಣವಾಗಿ ಬೆಳಗಲೆಂದು ಹಾರೈಸುತ್ತೇನೆ.

ಕೆ. ಪಿ. ವೆಂಕಪ್ಪ ಶೆಟ್ಟಿ. ವಾಣಾಜೆ.

ಸಂಗ್ರಾಮ—

ಬರೆದವರು: ಅ. ನ. ಕೃಷ್ಣರಾಯರು. ಪ್ರಕಾಶಕರು: ಪ್ರತಿಭಾ ಗ್ರಂಥಮಾಲೆ, ಧಾರವಾಡ. ಬೆಲೆ: ರೂ ೩—೦—೦

ದುರಂತ ಪರಿಸ್ಥಿತಿಯಲ್ಲಿರುವ ಭಾರತೀಯ ಶಿಲ್ಪವನ್ನು ಉಳಿಸಿಕೊಳ್ಳಲು ಹೋರಾಡಿದ ಶಿಲ್ಪಿಯ ಜೀವನವನ್ನು ಈ ಕಾದಂಬರಿಯಲ್ಲಿ ಚಿತ್ರೀಕರಿಸಿ, ಭಾರತೀಯ ಶಿಲ್ಪಕಲೆಯ ಔನ್ನತ್ಯವನ್ನು ಮನಗಾಣಿಸಿ ಕೊಡುವ ಪ್ರಯತ್ನವನ್ನು ಇಲ್ಲಿ ಕಾಣುತ್ತೇವೆ. ಕನ್ನಡದ ಜನಪ್ರಿಯ ಕಾದಂಬರಿಕಾರರಾದ ಅ. ನ. ಕೃ. ಅವರ ಈ ಕೃತಿಯು ಸರಸವಾದ ನಿರೂಪಣಾ ಶೈಲಿ ಮತ್ತು ಮೋಹಕವಾದ ಮಾತುಗಳಿಂದ ಜನರಿಗೆ ರಸೋಲ್ಲಾಸವನ್ನುಂಟು ಮಾಡುವುದು ನಿಶ್ಚಯ. ಶ್ರೀಕಂಠ ಸಿದ್ಧ ಶಿಲ್ಪಿಯಾದರೂ ಮೋಹ ಮತ್ತು ಲೋಭಗಳ ಬಲೆ ಅವನನ್ನು ಮುಂಕುಗೊಳಿಸುತ್ತದೆ. ಸ್ವರ್ಣಳ ಮರಂತಕ್ಕೆ ಅವನು ಕಾರಣಭೂತ. ತಾಜಳ ಮೋಹದಲ್ಲಿ ಬಿದ್ದು ಆತ್ಮೀಯರಾಗಿ ಬಂದ ರಾಜು ಮತ್ತು ಪ್ರಭೆಯರನ್ನು ಉಪೇಕ್ಷಿಸುವಷ್ಟು ಅವನು ದುರ್ಬಲ. ಅವನಲ್ಲಿ ದೈವಾಂಶ ಸಂಭೂತ ವೆನಿಸಿದ ದಿವ್ಯಶಕ್ತಿಯೊಂದರೆ ಒಂದೇ-ಅದ್ಭುತವಾಗಿ ಶಿಲ್ಪವನ್ನು ನಿರ್ಮಿಸಬಲ್ಲ ಸಾಮರ್ಥ್ಯ. ಜೀವನದಲ್ಲಿ ನೊಂದ ಬಳಿಕವೇ ಅವನಿಗೆ ಜೀವದತ್ತವಾದ ಕಲೆ ಮೈಗೂಡುತ್ತದೆ. ಹಣಕ್ಕಾಗಿ, ಕೀರ್ತಿಗಾಗಿ, ಪ್ರಚಾರಕ್ಕಾಗಿ ಶಿಲ್ಪ ನಿರ್ಮಾಣದ ವ್ಯವಸಾಯವನ್ನುಪಯೋಗಿಸುವುದು ಬಿಟ್ಟು ಪರಮೇಶ್ವರನ ಪ್ರೀತ್ಯರ್ಥವಾಗಿ, ಸಾಕ್ಷಾತ್ಕಾರಕ್ಕಾಗಿ ಶಿಲ್ಪ ನಿರ್ಮಿಸುವ ಸಂಕಲ್ಪ ಅವನದಾಗುತ್ತದೆ. ಈ ಕಥಾನಕದ ಓಟನ್ನು ಪ್ರತಿಮಾಲಕ್ಷಣ ಗಳನ್ನು ನಿರೂಪಿಸುವ ಕೆಲವು ಪುಟಗಳು ತಡೆಯುವಂತೆ ಭಾಸವಾಗುವುದು. ಕಮ್ಯುನಿಸ್ಟ್ ವಿಚಾರ ಪ್ರಸಾರವನ್ನು ಖಂಡಿಸುವ ಮಾತುಗಳು ಕತೆಯೊಡನೆ ಬೆರೆತು ಹೋದಂತೆ ಈ ಲಕ್ಷಣ ವಿವರಣೆ ಸೇರುವುದಿಲ್ಲ. ಅವುಗಳನ್ನು ಉಪೇಕ್ಷಿಸಿದಲ್ಲಿ, ಇದನ್ನು ರಮ್ಯ ಕಾದಂಬರಿಯಾಗಿ ಪರಿಗಣಿಸಲಡ್ಡಿಯಿಲ್ಲ.

ಐದು ದಿನಗಳು—

ಬರೆದವರು: ಎಂ. ರಾಮಮೂರ್ತಿ. ಪ್ರಕಾಶಕರು: ವಿನೋದಿನಿ ಪ್ರಕಟಣಾಲಯ, ಬಸವನ ಗುಡಿ, ಬೆಂಗಳೂರು— ೪ ಬೆಲೆ: ರೂ ೦—೯—೦

ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಹೆಸರಾದ ಪತ್ತೆದಾರಿ ಕಾದಂಬರಿಗಳ ಪರಂಪರೆ ಕನ್ನಡದಲ್ಲಿ ಹುಟ್ಟಿ ಬರಲಿಲ್ಲವಲ್ಲ ಎಂದು ಚಿಂತಿಸುತ್ತಿದ್ದವರಿಗೆ ರಾಮಮೂರ್ತಿಯವರ ಪತ್ತೆದಾರಿ ಕಾದಂಬರಿಗಳು ತುಂಬ ಮೆಚ್ಚುಗೆಯಾಗುವ ಭರವಸೆ ಕೊಡಬಹುದು. ಚೊಕ್ಕ ಕತೆಯೊಂದನ್ನು ಉದ್ವೇಗ ಹುಟ್ಟಿದ ವ್ಯಕ್ತಿ ಚಿತ್ರಣ ಹಾಗೂ ಕುತೂಹಲ ಕೆರಳಿಸುವ ಘಟನೆಗಳಿಂದ ನಿರೂಪಿಸುವ ಕೌಶಲವನ್ನು "ಐದು ದಿನಗಳು" ಎಂಬ ಈ ಪತ್ತೆದಾರಿ ಕಾದಂಬರಿಯಲ್ಲಿ ಗುರುತಿಸುತ್ತೇವೆ. ನಿಜವಾದ ಕೊಲೆಗಾರನು ಯಾರೆಂದು ನಾವು ನಿರೀಕ್ಷಿಸುತ್ತಾ, ಮುಂದೆ ಸುಳಿದ ಪ್ರತಿಯೊಂದೂ ಪಾತ್ರದಲ್ಲಿ ಸಂಶಯಪಡುತ್ತಾ ಸಾಗಿದಂತೆ, ಆನಂದನೇ ಕೊಲೆ ಮಾಡಿದನೆಂದು ಪತ್ತೇದಾರ ಚಲಂ ನಿರ್ಣಯಿಸುವುದನ್ನು ಕೇಳಿ ನಾವು ದಂಗಾಗುತ್ತೇವೆ. ಆನಂದನ ಮೇಲೆ ನಮಗೆ ತುಸುವಾದರೂ ಸಂಶಯವಿರಲಿಲ್ಲವಾಗಿ ಈ ಆಶ್ಚರ್ಯ ದಿಗ್ಭ್ರಮೆ ಒದಗುತ್ತದೆ. ಕನ್ನಡಕ್ಕೆ ಹೊಸತಾದ ರೀತಿಯಲ್ಲಿ ಬರೆದ ಪುಸ್ತಕ ೯ ಆಣೆಯನ್ನು ಅಗ್ಗ ಬೆಲೆಗೆ ದೊರೆಯುತ್ತಿರುವುದಕ್ಕೆ ಅಭಿಮಾನಪಡಬೇಕು.

ನೃತ್ಯ ಭಾರತಿ—

ಸಂಪಾದಕರು: ಕುಲಕರಣಿ ಶ್ರೀನಿವಾಸ ಮತ್ತು ಮೇವುಂಡಿ ಮಲ್ಲಾರಿ. ಪ್ರಕಾಶಕರು: ಭಾರತೀಯ ನೃತ್ಯ ಕಲಾ ಕೇಂದ್ರ ಗುರುಕುಲ, ಹಂಸ ಭಾವಿ ಪೋಸ್ಟ್ ಧಾರವಾಡ ಜಿಲ್ಲೆ. ಬೆಲೆ: ರೂ. ೧-೪-೦

ಈ ತ್ರೈಮಾಸಿಕ ಸಂಪುಟದಲ್ಲಿ ನಾಟ್ಯ ಶಾಸ್ತ್ರ ಮತ್ತು ಲಲಿತರ ಕಲೆಗಳಿಗೆ ಸಂಬಂಧಿಸಿದ ಅಮೂಲ್ಯ ಬರೆಹಗಳನ್ನು ತಜ್ಞರಾದವರು ಬರೆದಿರುವರು. ನೃತ್ಯಾಭ್ಯಾಸಿಗಳಿಗೂ, ರಸಿಕ ವೃಂದಕ್ಕೂ ಇದು ಉಪಯುಕ್ತವಾಗಿ ಕಂಡು ಬಂದೀತು. ಯಕ್ಷಗಾನ, ಕಥಕ್ ಮತ್ತು ಕಥಕ್ಕಳಿ ನೃತ್ಯ ವಿಧಾನ, ಭಾರತೀಯ ಸಂಗೀತದ ಆದರ್ಶ, ಭರತಮುನಿಯ ನಾಟ್ಯ ಶಾಸ್ತ್ರ ಮುಂತಾದ ಈ ಸಂಚಿಕೆಯಲ್ಲಿರುವ ಮೇಲ್ಮಟ್ಟದ ಬರೆಹಗಳ ಪರಂಪರೆಯನ್ನುಳಿಸಿಕೊಂಡು, ಪತ್ರಿಕೆ ಬಾಳಿ ಬೆಳಗಲೆಂದು ಹಾರೈಸುತ್ತೇನೆ.

ಪರಾಗ—

ಉಡುಪಿಯ ಮಹಾತ್ಮ ಗಾಂಧಿ ಸ್ಮಾರಕ ಕಾಲೇಜಿನ ಹಸ್ತ ಪತ್ರಿಕೆಯ ಎರಡನೆಯ ಸಂಚಿಕೆಯು ಮೊದಲಿನದಕ್ಕಿಂತ ತುಸು ಅಂದವಾಗಿಯೇ ಬೆಳಕು ಕಂಡಿದೆ. ಅನಿರುದ್ಧನ ಚಿತ್ರ ಕೌಶಲ ಇನ್ನಷ್ಟು ಸ್ಫುಟವಾಗಿ ಮೂಡಿರುತ್ತದೆ. ಲೇಖನಗಳೂ ಸೊಗಸಾಗಿವೆ. ಆದರೆ, ನಾಲ್ಕಾರು ಕೈಗಳಿಂದ ಪ್ರತಿ ತೆಗೆಸುವ ದೋಷ ಇನ್ನೂ ನಿವಾರಣೆಯಾಗದೆ ಉಳಿದಿದೆ.

ಸಾಹಿತ್ಯ ವಾಹಿನಿ—

ಉಳಿಯಾರು ಶ್ರೀ ದುರ್ಗಾ ವಿದ್ಯಾರ್ಥಿ ಸಂಘದವರು ಶ್ರೀ ಪದ್ಮನಾಭ ಉಪಾಧ್ಯಾಯರ ಸಂಪಾದಕತ್ವದಲ್ಲಿ ಹೊರಡಿಸುತ್ತಿರುವ ಸಾಹಿತ್ಯ ವಾಹಿನಿ ಹಸ್ತ ಪತ್ರಿಕೆಯ ಸಚಿತ್ರ ದೀಪಾವಳಿ ಸಂಚಿಕೆಯು ಹಲವಾರು ಉತ್ತಮ ಲೇಖನ, ಕವನ, ಕಥೆ, ಹರಟೆಗಳಿಂದ ಕೂಡಿದ್ದು ವಾಚನೀಯವಾಗಿದೆ.

ಶಾಂತ ವಾತಾವರಣದಲ್ಲಿ ಅತ್ಯಾಧುನಿಕ ಮಾದರಿಯ ಮೇಲ್ದರಗತಿಯ

—ವಸತಿ ಮತ್ತು ಭೋಜನಗೃಹ—

ಸ್ವಸ್ತಿಕ್ ಲೋಜ್

ಪಳನೀರು ರಸ್ತೆ, ಮಂಗಳೂರು.

- ಗಾಳಿ ಬೆಳಕುಗಳಿದ್ದು ಸುಸಜ್ಜಿತವಾದ ಸಿಂಗಲ್ ಮತ್ತು ಡಬ್ಬಲ್ ಕೋಣೆಗಳು!
- ತೃಪ್ತಿಕರವಾದ ಸೇವೆ ಮತ್ತು ಸರ್ವಾನುಕೂಲತೆಗಳು!
- ಶಾಕಾಹಾರಿಗಳಿಗೆ ಸುರಿತ ಬ್ರಾಹ್ಮಣ ಅಡಿಗೆ ಭಟ್ಟರಿಂದಲೇ ಭೋಜನ ಮತ್ತು ಉಪಾಹಾರ ತಯಾರಿಕೆ! ದಕ್ಷಪ್ರುಲ್ಪಳಿ! ಸಂದರ್ಶಿಸಿ ಸಮಾಧಾನ ಪಡೆಯಿರಿ!!

ಖಾತ್ರಿ ಚಿನ್ನದ ನೆಕ್‌ಲೇಸ್ ತರಹವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,

ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.

ಫೋನು ನಂಬ್ರ ೬೮

The Moolky Bank Ltd.
MULKI.

NOTICE

The 24th Ordinary Annual General Body Meeting of the Bank will be held at the Registered Office of the Bank on Sunday the 7th March 1954 at 10 A. M.

(The Register of Members & Transfer Books of the Bank will remain closed from 20-2-1954 to 10-3-1954 both days inclusive)

(Sd) M. R. H. Punja,
MANAGER.

ಶ್ರೀರಾಮಕೃಷ್ಣರ ಭಕ್ತಿ ಮಾರ್ಗ

ಶ್ರೀ. ಕಯ್ಯಾರ ಕಿಞ್ಞಣ್ಣ ರೈ.

ರಾಷ್ಟ್ರದ ನಿರ್ಮಲವೂ ನಿರಂತರವೂ ಆದ ಸಂಪತ್ತು ಆ ರಾಷ್ಟ್ರದಲ್ಲಿ ಜನ್ಮವೆತ್ತಿಬಂದ ನಿರ್ಮಲಾಂತಃಕರಣರ ಪರಿಶುದ್ಧ ಜೀವಿತ ಚರಿತೆಗಳೂ, ಆ ಜೀವಿತ ಚರಿತೆಗಳ ಪಾಠದಿಂದ ಪ್ರಪಂಚದ ಮನುಷ್ಯ ಸಂತತಿ ತಮಸ್ಸಿನಿಂದ ಜ್ಯೋತಿಯ ಕಡೆಗೆ, ಅಸತ್ತಿನಿಂದ ಸತ್ತಿನ ಕಡೆಗೆ, ಮೃತ್ಯುವಿನಿಂದ ಅಮೃತದ ಕಡೆಗೆ ಕಂಡುಕೊಂಡ ದಿವ್ಯದರ್ಶನಗಳೂ ಆಗಿವೆ. ಅರ್ವಾಚೀನ ಕಾಲದ ವಿಭೂತಿ ಪುರುಷ ಶ್ರೀರಾಮಕೃಷ್ಣ ಪರಮಹಂಸರು ಕಂಡುಕೊಂಡ ಭಕ್ತಿಮಾರ್ಗ ವಿಶ್ವಾತ್ಮನಲ್ಲಿ ಆತ್ಮಾರ್ಪಣೆಮಾಡುವುದಕ್ಕೆ ಸುಮಾರ್ಗವನ್ನು ತೋರಿಸುವಂತಿದೆ.

ಒಂದು ರಾಷ್ಟ್ರದ ಶಾಶ್ವತವಾದ ಸಂಪತ್ತು ಸಾಗರದ ಬಹಿರ್ವ್ಯಾಪ್ತಿಯನ್ನು ಬೆರಗುಗೊಳಿಸುವ ಬೆಳ್ಳಿ ಬಂಗಾರಗಳ ರಾಶಿಯಲ್ಲ; ಒಂದು ರಾಷ್ಟ್ರವು ಇನ್ನೊಂದು ರಾಷ್ಟ್ರದ ಜೀವಕೋಟಿಯನ್ನು ಧರಧರನೆ ನಡುಗಿಸಲು ಸಂಗ್ರಹಿಸಿಟ್ಟುಕೊಂಡಿರುವ ಮಾರಕ ಶಕ್ತಿಗಳುಳ್ಳ ಸೇನಾ ವಿಮಾನ ದಳಗಳಾಗಲಿ, ಮಹಾಪದಾತಿ ಪಡೆಯಾಗಲಿ, ದುಷ್ಟ ಪರಿಣಾಮ ವಿಷವಾಯು ಬಾಂಬುಗಳಾಗಲಿ, ಇನ್ನಾವುವೂ ಸರ್ವಥಾ ಅಲ್ಲ. ಒಂದು ರಾಷ್ಟ್ರದ ನಿರ್ಮಲವೂ ನಿರಂತರವೂ ಆದ ಸಂಪತ್ತು, ಆ ರಾಷ್ಟ್ರದಲ್ಲಿ ಜನ್ಮವೆತ್ತಿ ಬಂದ ನಿರ್ಮಲಾಂತಃಕರಣರ ಪರಿಶುದ್ಧ ಜೀವಿತ ಚರಿತೆಗಳೂ, ಆ ಜೀವಿತ ಚರಿತೆಗಳ ಪಾಠದಿಂದ ಪ್ರಪಂಚದ ಮನುಷ್ಯ ಸಂತತಿ ತಮಸ್ಸಿನಿಂದ ಜ್ಯೋತಿಯ ಕಡೆಗೆ, ಅಸತ್ತಿನಿಂದ ಸತ್ತಿನ ಕಡೆಗೆ, ಮೃತ್ಯುವಿನಿಂದ ಅಮೃತದ ಕಡೆಗೆ ಕಂಡುಕೊಂಡ ದಿವ್ಯ ದರ್ಶನಗಳೂ ಆಗಿವೆಯೆಂಬುದನ್ನು ವಿಚಾರಶೀಲರು ಒಪ್ಪಲೇ ಬೇಕಾಗಿದೆ. ಈ ದೃಷ್ಟಿಯಿಂದ ನಮ್ಮ ಭಾರತವರ್ಷವು ಮಾನವ ಜೀವಿತದ ಇತಿಹಾಸದ ಆದಿಕಾಲದಿಂದಲೇ ವೇದೋಪನಿಷತ್ತುಗಳ ಬೀಡಾಗಿ, ಋಷಿ ಪರಂಪರೆಯ ನಾಡಾಗಿ, ತ್ಯಾಗಿಯೋಗಿಗಳ ಗೂಡಾಗಿ, ಉದಾತ್ತ ತತ್ವಗಳನ್ನು ಕಂಡ, ಆ ತತ್ವಗಳನ್ನು ಸಾಧಿಸಿ ಅರಗಿಸಿಕೊಂಡ, ಆ ಮೂಲಕ ವಿಶ್ವ ಸೃಷ್ಟಿಯ ಅಂತಃಕರಣವನ್ನು ಅರಳಿಸಿ ಬೆಳಗಿಸಿದ ಪುಣ್ಯ ಭೂಮಿಯಾಗಿ ಚಿರಂತನವೂ ನವನೂತನವೂ ನಿರ್ಮಲವೂ ಶಾಶ್ವತವೂ ಆದ ಸಂಪದ್ರಾಶಿಯುಳ್ಳದ್ದಾಗಿದೆ; ನಮ್ಮ ತಾಯಿ ಭಾರತಿಯು ಭುವನೇಶ್ವರಿಯೆನಿಸಿದ್ದಾಳೆ!

ಭುವನೇಶ್ವರಿಯೆನಿಸಿದ ಭಾರತ ಮಾತೆಯ ಪುಣ್ಯ ಗರ್ಭದಲ್ಲಿ ಎಂತೆಂತಹ ಪುತ್ರ ರತ್ನರು ಹುಟ್ಟಿ ಬಂದರು! ಸ್ವಕೃತಿ ಪರದಿಂದ, ಮಾಯಾಮೋಹದಿಂದ, ವಿಷಯ ಲಾಲಸೆಯಿಂದ, ತಪ್ಪು ದಾರಿ ಹಿಡಿಯಬಹುದಾದ ಮಾನವರನ್ನು ಸರಿ ದಾರಿಗೆ ಕರೆದೊಯ್ಯಲು, ದೇವರೇ ಅವತಾರ ತಾಳಿ ಬಂದರೆಂದು ನಮ್ಮ ಪವಿತ್ರ ಪುರಾಣಗಳು ಸಾರಿವೆ; ಪುರಾಣಗಳ ಕಥೆಗಳು ಕಲ್ಪಿತವೋ ನಿಜವೋ ಎಂಬ ಬಗ್ಗೆ, ಇತಿಹಾಸ ತಜ್ಞರಿಗೆ, ಸೂಕ್ಷ್ಮ ವಿಜ್ಞಾನ ದೃಷ್ಟಿಯುಳ್ಳ ಆಧುನಿಕರಿಗೆ ಸಂಶಯವಿರಬಹುದು. ಆದರೆ ಪುರಾಣ ಪುರುಷರ ಜೀವಿತ ಚರಿತೆಗಳು, ಶ್ರೀ ಮದ್ರಾಮಾಯಣ, ಶ್ರೀ ಮದ್ಭಾಗವತ, ಶ್ರೀ ಮಹಾಭಾರತಗಳು ಉದಾತ್ತ ಜೀವಿತ ತತ್ವಬೋಧಕಗಳಾದ ಸಾರ್ವಕಾಲೀನ ಸಾಹಿತ್ಯಗಳೆಂದು ನಾವು ಭಾರತೀಯರು ಮಾತ್ರವಲ್ಲ ಪ್ರಪಂಚದ ಮೇಧಾವಿಗಳೆಲ್ಲರೂ ಏಕ ಕಂಠರಾಗಿ ಕೊಂಡಾಡಿದ್ದಾರೆ. ಪ್ರಪಂಚದ ಪೂರ್ವ ಭಾಗವನ್ನು ತನ್ನ ಧರ್ಮದೀಪದಿಂದ ಬೆಳಗಿದ ಭಗವಾನ್ ಬುದ್ಧ, ಇಂದಿನ ಯಾಂತ್ರಿಕ ಯಾತ್ರಾನುಕೂಲತೆಯು ಲವಲೇಶವೂ ದೊರಕದ ಆ ಕಾಲದಲ್ಲಿ, ತನ್ನ ಆಯುಷ್ಯದ ಅತ್ಯಲ್ಪ ಕಾಲದಲ್ಲಿಯೇ, ಆ ಸೇತು ಹಿಮಾಚಲ ಪರ್ಯಟನ ಮಾಡಿ ಅದ್ವೈತ ತತ್ವವನ್ನು [illegible] ಗ್ರಂಥಗಳ ಮೂಲಕವೂ, ಉದ್ಬೋಧೆಯ ಮೂಲಕವೂ ಪ್ರಚಾರಮಾಡಿ, ವೇದಪ್ರಾಮಾಣ್ಯಂತ ಮಠಗಳನ್ನು ಸ್ಥಾಪಿಸಿದ, ಶ್ರೀಮತ್ ಶಂಕರಾಚಾರ್ಯ ಯತಿವರ್ಯರು, ಅಂತೆಯೇ ದ್ವೈತಮತ ಬೋಧಕರೂ, ಆಧ್ಯಾತ್ಮ ಸ್ಥಾಪಕರೂ ಆದ ಶ್ರೀಮನ್ಮಧ್ವಾಚಾರ್ಯರು, ವಿಶಿಷ್ಟಾದ್ವೈತ ಮತಬೋಧಕರಾದ ಶ್ರೀಮದ್ರಾಮಾನುಜಾಚಾರ್ಯರು, ಶ್ರೀ ಕೃಷ್ಣ ಚೈತನ್ಯ, ಶ್ರೀ ಗುರುನಾನಕ್, ಮಹಾತ್ಮಾ ಕಬೀರ, ಶ್ರೀ ಜ್ಞಾನೇಶ್ವರ, ಮತ್ತು ನಮ್ಮ ಕನ್ನಡ ನಾಡಿನ ದಾಸರು, ಶಿವಶರಣರು, ಹೀಗೆ ಒಬ್ಬರಲ್ಲ, ಇಬ್ಬರಲ್ಲ ಸಹಸ್ರ ಸಂಖ್ಯೆಯಿಂದ ಜೀವಜ್ಯೋತಿಗಳು ಭಾರತ ಮಾತೆಯ, ತಾಯಿ ಭುವನೇಶ್ವರಿಯ ರತ್ನಕಿರೀಟವನ್ನು ಬೆಳಗಿಸಿದ್ದಾರೆ; ನಮಗೆ ಜೀವನಾದರ್ಶರಾಗಿದ್ದಾರೆ. ಇಂತಹ ಮಹಾ ವಿಭೂತಿಪುರುಷರ ಸಾಲಿಗೆ ಸೇರಿದವರು ನಾವಿಂದು ಇಲ್ಲಿ ಜನ್ಮೋತ್ಸವವನ್ನು ಆಚರಿಸಿ ನೆನವರಿಕೆ ಮಾಡುವ ಶ್ರೀ ರಾಮಕೃಷ್ಣ ಪರಮಹಂಸರು.

— ೨ —

ಮನುಷ್ಯನ ಮನಸ್ಸಿಗೆ [illegible] ಸಿಕ್ಕಿದ ಅಜ್ಞಾನದ ಕತ್ತಲೆಯನ್ನು ಹೋಗಲಾಡಿಸಿ, ಆತನ ಹೃದಯದಲ್ಲಿ ಜ್ಞಾನದ ಸಂಪಾದನೆಯನ್ನು ಬೆಳಗುವಂತೆ ಮಾಡಿದ ಮಹೋಪಕಾರಕ್ಕಾಗಿ, ಕೃತಜ್ಞತೆಯಿಂದ ನಾವು ಮಹಾ ಪುರುಷರ ಪುಣ್ಯನಾಮವನ್ನು ಸ್ಮರಿಸುತ್ತೇವೆ; ಆ ಮಹಾವಿಭೂತಿ ಪುರುಷರ ಪುಣ್ಯ ಜನ್ಮದಿನಗಳನ್ನು ಆಚರಿಸುತ್ತೇವೆ. ಆ ಮಹಾತ್ಮರು ಯಾವ ಯಾವ ಬಗೆಗಳಿಂದ, ಮುಖ್ಯ ಪ್ರವಚನಗಳಿಂದಲೋ, ಗ್ರಂಥ ಲೇಖನಗಳಿಂದಲೋ, ತ್ಯಾಗ ಜೀವನದಿಂದಲೋ, ಯೋಗ ಸಾಧನೆಯಿಂದಲೋ, ವೈರಾಗ್ಯ ತಪಸ್ಸುಗಳಿಂದಲೋ, ಭಕ್ತಿ ಭಾವನೆಗಳಿಂದಲೋ ಯಾವ ಯಾವ ಸನ್ಮಾರ್ಗಗಳಿಂದ, ಯಾವ ಯಾವ ರೀತಿ ನಡತೆಗಳಿಂದ, ನಮ್ಮ ಅಜ್ಞಾನದ ಕತ್ತಲೆಯನ್ನು ಪರಿಹರಿಸಿ ಜ್ಞಾನಜ್ಯೋತಿಯನ್ನು ಬೆಳಗಿಸಿದರೆಂದು ನಾವು ವಿವಿಧ ದೃಷ್ಟಿಗಳಿಂದ ವಿಚಾರಿಸಿ ವಿಮರ್ಶಿಸಿ ನಮ್ಮ ಜೀವನವನ್ನು ಪಾವನಗೊಳಿಸಲು ಪ್ರಯತ್ನಿಸುತ್ತೇವೆ. ಮಹಾತ್ಮರ ದಾರಿ ಒಂದೇ ದಾರಿಯಲ್ಲ; ವಿವಿಧ ಜೀವಿತದ, ವಿವಿಧ ವ್ಯವಹಾರದ ವಿವಿಧ ಮನದ ಜೀವಿಗಳೊಡನೆ ಅವರು ವ್ಯವಹರಿಸುವಲ್ಲಿ ಅನೇಕ ದಾರಿಗಳಿಂದಲೂ ಸನ್ಮಾರ್ಗ ಬೋಧನೆ ಮಾಡಬೇಕಾದುದು ಅವಶ್ಯವೂ ಉಚಿತವೂ ಎನಬೇಕು; ಯಾವ ವಿಶಾಲ ಆಕಾಶದಿಂದ ಇಳಿದು ಬಂದ ಮಳೆಯ ಧಾರೆಯು, ಯಾವ ಕೈಲಾಸ ಪರ್ವತದ ಶಿಖರದಲ್ಲಿ ಬೀಳಲಿ, ಯಾವ ಗಂಗಾನದಿಯ ಬಯಲಲ್ಲಿ ಹರಿಯಲಿ, ಯಾವ ಸಹಾರಾ ಮರುಭೂಮಿಯಲ್ಲಿ ಇಂಗಲಿ ಕೊನೆಗೆ ಗಂಭೀರಸಾಗರಕ್ಕೆ ಸೇರಿ ಮತ್ತೆ ಅದೇ ಆಕಾಶದೆತ್ತರಕ್ಕೆ ಏರುವಂತೆ, ಒಂದೇ ಪರಮಸತ್ಯ, ಒಂದೇ ದಿವ್ಯಜ್ಞಾನ ಮಹಾ ಪುರುಷರ ವಿವಿಧ ಸಾಧನೆಗಳ ಮೂಲಕ, ವೈರಾಗ್ಯವೋ ತಪಸ್ಸೋ ಭಕ್ತಿಯೋ ಅನೇಕ ವಿಧಗಳಿಂದ ಅನೇಕ ಜೀವಿಗಳಿಗೆ ಜ್ಞಾನತತ್ವ ಪರ್ಯವಸಾನವಾಗಿ ಕೊನೆಗೆ ಅದೇ ಸತ್ಯದಲ್ಲಿ ಅದೇ ಜ್ಞಾನದಲ್ಲಿ ಒಂದುಗೂಡುವುದೆಂಬುದನ್ನು ನಾವು ಮರೆಯಬಾರದು. ಅಂತೆಯೇ ನಾನಿಂದು ಶ್ರೀರಾಮಕೃಷ್ಣರ ಭಕ್ತಿಮಾರ್ಗದ ಕುರಿತು, ನನ್ನ ಮತಿ, ಸಮುದ್ರದ ಜಲರಾಶಿ ಎಷ್ಟಿದ್ದರೂ, ನಾನು ಕೊಂಡುಹೋದ ಬಿಂದಿಗೆಯಲ್ಲಿ ತುಂಬುವಷ್ಟು ಮೊಗೆದು ತಂದಿದ್ದೇನೆ, ಶ್ರೀ ಪರಮಹಂಸರು ಜೀವಕೋಟಿಗಿತ್ತ ಜ್ಞಾನದಾನದ ಕೇವಲ ಒಂದು ರೀತಿಯ ಒಂದಂಶದ ನೆನಪು ಮಾತ್ರದ್ದೇನೆಂದು ವಿನಯಪೂರ್ವಕ ವಿಜ್ಞಾಪಿಸಿಕೊಳ್ಳುತ್ತೇನೆ.

— ೩ —

ಪರಮಸತ್ಯದ ಜ್ಞಾನದ ಅನ್ವೇಷಣೆಗೆ ಭಕ್ತಿಯು ಒಂದು ನೈಸರ್ಗಿಕ ಮಾರ್ಗ, ಕೇವಲ ಮಾರ್ಗ ಮಾತ್ರವಲ್ಲ ಅದೇ ಮೂಲವೆಂದರೂ ಸಲ್ಲುವುದು. ಭಕ್ತಿಯ ಪ್ರಾದುರ್ಭಾವಕ್ಕೆ ಪ್ರಕೃತಿಯೇ ಪ್ರೇರಕ ಶಕ್ತಿಯಾಗಿದೆ. ಆದಿಮಾನವನಿಗೆ ಪ್ರಕೃತಿಯ ಉದಯ-ಅಸ್ತಮಾನಗಳನ್ನು ಕಂಡು ಸಂತೋಷವೂ ಬೆರಗೂ ಆಗುತ್ತದೆ. ಭೋರ್ಗರೆವ ಮಳೆ, ಗುಡುಗಿನ ಸಿಡಿಲು, ಭುಗಿಲ್ಗುಟ್ಟುವ ಸಿಂಹ, ಬೀಸುವ ಮಂದವೂ ಪ್ರಚಂಡವೂ ಆದ ಮಾರುತ, ಹೀಗೆ ಒಮ್ಮೊಮ್ಮೆ ಪ್ರಕೃತಿಯ ಸುಂದರ ಸ್ವರೂಪವೂ, ಒಮ್ಮೊಮ್ಮೆ ರೌದ್ರ ಸ್ವರೂಪವೂ ಆತನಿಗೆ ಆಗುವುದು. ಸೌಂದರ್ಯವನ್ನು ಕಂಡು ಸಂತೋಷವಾದಂತೆ, ರೌದ್ರತೆಯ ದರ್ಶನದಿಂದ ಭೀತಿಯುಂಟಾಗುವುದು. ಇದೇ ಆತನಲ್ಲಿ ಪ್ರಕೃತಿಯ ಕುರಿತು ಪ್ರೇಮ ಮತ್ತು ಭೀತಿಗಳನ್ನು ಹುಟ್ಟಿಸುತ್ತದೆ. ಇಂತಹ ಪ್ರಕೃತಿಯ ವೈಚಿತ್ರ್ಯವೇ ಆತನಲ್ಲಿ ಅದರ ಮೂಲವನ್ನು ಅರಿಯಲು ಜ್ಞಾನದ ಪಿಪಾಸೆಯನ್ನುಂಟುಮಾಡುವುದು. ಹೀಗೆ ತೊಡಗಿದ ಅರಿವಿನ ಬೆಂಬತ್ತಿ ಆತನು ಅನುಭವಿಸಿದ ಕಂಡುಂಡ ಜೀವನ ಮರಣಗಳು, ಸುಖದುಃಖಗಳು, ರೋಗ ದಾರಿದ್ರ್ಯ, ಸೌಖ್ಯ ಸಂಪತ್ತುಗಳು ಪ್ರಸ್ಫುಟವಾಗಿ ಇವೆಲ್ಲವನ್ನೂ ಪ್ರೇರೇಪಿಸುವ ಮೂಲ ಶಕ್ತಿಯೊಂದಿದೆಯೆಂಬ ಕಲ್ಪನೆ ಹುಟ್ಟುವುದು. ಪ್ರಕೃತಿಯ ಅನಂತತೆಯಲ್ಲಿ ಅಡಗಿರುವ ಆ ಮೂಲ ಶಕ್ತಿಯನ್ನು ನಿರ್ದಿಷ್ಟವಾಗಿ ತಿಳಿಯಲು ಈ ಪರಮ ರಹಸ್ಯವನ್ನು ಭೇದಿಸಲು ತೊಡಗುವ ಪ್ರಯತ್ನವೇ ಜ್ಞಾನಾನ್ವೇಷಣೆಯ ಮಾರ್ಗ. ಈ ಅನ್ವೇಷಣಾ ಕಾರ್ಯದಲ್ಲಿ ಆತನಲ್ಲಿ ಪ್ರಕೃತಿ ಕುರಿತು ಉಂಟಾದ ಪ್ರೇಮ ಭಕ್ತಿಗಳೇ ನಿರಂತರ ಸಹಾಯಕಗಳಾಗುತ್ತವೆ.

ವೇದಕಾಲದ ಋಷಿವರ್ಯರು ಈ ಜ್ಞಾನಾನ್ವೇಷಣೆಗೆ ಪ್ರಾರಂಭ ಮಾಡಿದವರು. ಈ ನಿರಂತರ ಅನ್ವೇಷಣೆಯ ಫಲವಾಗಿ ವೈದಿಕ ಋಷಿಗಳಿಗೆ ದೇವರ ಅರಿವು ಆಯಿತು [illegible] ಕಂಡು ಬರುವುದು ಅದೇ ಋಗ್ವೇದದಲ್ಲಿ ದೇವರನ್ನು ಪ್ರಜಾಪತಿ—ಸೃಷ್ಟಿಕರ್ತನೆಂದು ಹೇಳಲಾಗಿದೆ. ದೇವರಿಗೆ ಅನೇಕ ಹೆಸರು. ಪ್ರಕೃತಿ ದೇವರೂ ಆತನೊಬ್ಬನೇ ಎಂಬುದು 'ಏಕಂ ಸದ್ವಿಪ್ರಾ ಬಹುಧಾವದಂತಿ' ಎಂಬ ಋಕ್ಕಿನಿಂದ ತಿಳಿದು ಬರುವುದು. ಆದರೆ ಆತ್ಮ ವಿಚಾರದ ಅಥರ್ವ ಕಾಲದ ಕಾಲದ ವರೆಗೆ ತಿಳಿದು ಬಂದಂತೆ ತೋರುವುದಿಲ್ಲ. ಅದ್ವೈತ ಪರಿಪೂರ್ಣ ಜ್ಞಾನ ಒಂದಿದ್ದರೂ ಉಪನಿಷತ್ತುಗಳಲ್ಲಿ ಮಾತ್ರ. ಅಹಂ ಬ್ರಹ್ಮಾಸ್ಮಿ, ತತ್ವಮಸಿ ಎಂದು ಅಲ್ಲಿ ಸಾರಲಾಗಿದೆ. ಈ ಮೇಲೆ ಪುರಾಣಗಳಲ್ಲಿ, ಅವುಗಳಲ್ಲಿಯೂ ಶ್ರೀ [illegible] ಶ್ರೀ ಕೃಷ್ಣನ [illegible] ದೊರೆಯುವುದು, [illegible] ಅವರ [illegible] ತೋರುವುದು. [illegible] ಭಗವದ್ಗೀತೆಯ [illegible] ಜ್ಞಾನ ಮಾರ್ಗ, ಕರ್ಮ ಮಾರ್ಗ [illegible] ಆದರೆ ಭಕ್ತಿಯೇ ಸಾಧನವೆಂದು, ಸರ್ವ ಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ "ಯೋ ಮದ್ಭಕ್ತಃ ಸ ಮೇ ಪ್ರಿಯಃ" [illegible] ಭಕ್ತಿ [illegible] ಪ್ರತಿಪಾದಿಸಲಾಗಿದೆ. [illegible] ಭಗವದ್ಗೀತೆಯು [illegible] ಭಕ್ತಿ ಮಾರ್ಗ [illegible] ಭಕ್ತಿ ಸಂಪ್ರದಾಯಕ್ಕೆ ಪ್ರಧಾನ ಪ್ರೇರಣೆಯಾಗಿದೆ. [illegible] ಭಕ್ತಿ ಸಂಪ್ರದಾಯಗಳಿಗೆ ಆಧಾರವಾಗಿದೆ. [illegible] ಶಿವ, ನಾರಾಯಣ, ದೇವಿ, ಅಗ್ನಿ [illegible] ಈ ತತ್ವ [illegible] ಪ್ರಾರ್ಥನೆಗಳ ಅಧಿದೇವತೆಯರು, [illegible] ಭಕ್ತಿಯಿಂದ [illegible] ಭಕ್ತಿ ಮಾರ್ಗದಿಂದ [illegible] ಹೀಗೆ ಕಾಲಕಾಲಕ್ಕೆ ಬೆಳೆದು ಬಂದ ಭಕ್ತಿ ಮಾರ್ಗವು ಅನೇಕ ಅವತಾರಗಳಲ್ಲಿ ಮೇಳವಿಸಿದೆ.

ವೇದ ಉಪನಿಷತ್ ಕಾಲದಿಂದ ಪುರಾಣ ಯುಗದಿಂದ ಹೀಗೆ ಬೆಳೆದು ಬಂದ ಧಾರ್ಮಿಕ ತತ್ವಗಳನ್ನು ಭಾರತದಾದ್ಯಂತ ಪ್ರಚಾರ ಮಾಡಿ, ತತ್ವ ಗ್ರಂಥ ರಚಿಸಿದರು, [illegible] ತತ್ವ ಸಿದ್ಧಾಂತಗಳ ಮೂಲಕ ಅದನ್ನು ಜನರಿಗಾಗಿ ಬೆಳೆಸಿದ ಕೀರ್ತಿ ಶ್ರೀ ಶಂಕರಾಚಾರ್ಯ, ಶ್ರೀರಾಮಾನುಜಾಚಾರ್ಯ, ಶ್ರೀಮಧ್ವಾಚಾರ್ಯ ಈ ಆಚಾರ್ಯತ್ರಯರದು. ಈ ಭಕ್ತಿ ಮಾರ್ಗವು ಕನ್ನಡ ದಾಸರಿಂದಲೂ, ಶಿವಶರಣರಿಂದಲೂ, ತುಳಸೀದಾಸ ಕಬೀರರಿಂದಲೂ, ಮಹಾರಾಷ್ಟ್ರದ ಜ್ಞಾನದೇವ ಸಂತರಿಂದಲೂ, ಬಂಗಾಳದ ಶ್ರೀಕೃಷ್ಣ ಚೈತನ್ಯ [illegible] ಮೊದಲಾದವರಿಂದಲೂ ಮುಂದುವರಿದು [illegible] ಕರ್ಮಭೂಮಿಯಾದ ಭಾರತದಲ್ಲಿ [illegible] ಈ ಕಾಲದಲ್ಲಿ ಶ್ರೀರಾಮಕೃಷ್ಣ ಪರಮಹಂಸರಿಂದ ಮುಂದುವರಿಸಲ್ಪಟ್ಟಿತು. ಅವರ ದಿವ್ಯ ಸಂದೇಶವು, ಇಡೀ ಭಾರತ ದೇಶ ಮಾತ್ರವಲ್ಲ ಪಾಶ್ಚಾತ್ಯ ದೇಶಗಳಲ್ಲಿಯೂ ಈ ಜ್ಞಾನದ ಸಂಪಾದನೆಯನ್ನು ಉದ್ದೀಪಿಸಿದ್ದು ಪ್ರಪಂಚದ ಭಾಗ್ಯವೆನ್ನಬೇಕು.

[ಮುಂದುವರಿಯುವುದು.]

'ಗೋಪಾಲ ಭೇಷಜಾಶ್ರಮ" ಮಂಗಳೂರು.

ಸ್ಥಾಪನೆ 1910)

ಸ್ಥಾಪಕರು.-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರಿ,

ಇವರ
ನವಜೀವಾತು
ಎಂಬ
ಸೂತಿಕಾರಸಾಯನ

ಬಾಣಂತಿಯರ ಸಮತಾಗಿಯೇ ದೇಹ ಮತ್ತು ಪ್ರಕೃತಿಯ ಮೇಲೆ ಸ್ಥಿತಿಯನ್ನು ನಿರ್ವಹಿಸಿ ತವರಾದ ಪುಷ್ಟಿಯನ್ನು ಹೊಂದುವ ಮಹೌಷಧವಿದು.



ಪಟ್ಟಣ ಮಾರಾಟಗಾರರು - ಡಾ॥ ಯಂ ಸಿ. ಶೆಟ್ಟಿ, ಯಲ್ ಐ. ಎಂ.
ಕೊಡಿಯಾಲಬೈಲು ರೋಡ್ (ಮಂಗಳೂರು)
ಸ್ಟಾಕಿಸ್ಟರು.— ಡಾ॥ ಪಿ. ಟಿ. ಶಿವರಾಮರಾವ್ ಕುಂಜಿಬೆಟ್ಟು. ಉಡುಪಿ

ಋತುಸ್ರಾವ ನಿಂತರೆ

'ಋತುಸಾರ್' ಔಷಧಿಗಳನ್ನು ಉಪಯೋಗಿಸಿದರೆ ಎಷ್ಟು ದಿವಸದಿಂದ ನಿಂತಿದ್ದರೂ ಮುಟ್ಟು ತಕ್ಷಣ ಬರುವುದು. ಈ ಔಷಧ ಸೇವನೆಯಿಂದ ತೊಂದರೆ ಇಲ್ಲ. ಗರ್ಭಿಣಿಯರು ಮಾತ್ರ ಉಪಯೋಗಿಸಬಾರದು. ಬೆಲೆ: ರೂ. ೩/-; ಸ್ಪೆಷಲ್ ರೂ. ೫/-. ಅಧಿಕ ಸ್ಪೆಷಲ್ ರೂ. ೭-೮. ಪ. [ಅಂಚೆ ವೆಚ್ಚ ಪ್ರತ್ಯೇಕ]

Mrs. P. DEVEE, [illegible]
CALCUTTA. 4

ಸ್ಟಾಕಿಸ್ಟರು: [illegible]

ಚಲಚ್ಚಿತ್ರ—ಜನಶಿಕ್ಷಣದ ಅಪೂರ್ವ ಮಾಧ್ಯಮ

[೨ನೇ ಪುಟದಿಂದ]

ನಮ್ಮ ಊರಿನ ಚಲಚ್ಚಿತ್ರಮಂದಿರದವರು ಸಾಕ್ಷಿ ಹಾಗೂ ವಾರ್ತಾ ಚಿತ್ರಗಳಿಗೆ ಬಾಡಿಗೆಯನ್ನು ಕೊಡಬೇಕಾಗುವುದು. ಚಿತ್ರ ಪ್ರದರ್ಶನ ಮಂದಿರದ ವಾರ್ಷಿಕ ಆದಾಯದ ನೂರರಲ್ಲಿ ಒಂದಂಶವೆಂದು ಈ ಬಾಡಿಗೆ ನಿರ್ಣೀತವಾಗಿದ್ದು, ಇದರನ್ವಯ ಪ್ರತಿಯೊಂದು ಸಾಕ್ಷಿ ಅಥವಾ ವಾರ್ತಾ ಚಿತ್ರಕ್ಕೆ ವಾರಕ್ಕೆ ೫ರಿಂದ ೧೫೦ ರೂಪಾಯಿಗಳ ಬಾಡಿಗೆ ದೊರೆಯುತ್ತದೆ.

ವಿದೇಶಗಳಲ್ಲಿ ಪ್ರದರ್ಶನ

ಆದರೂ ಚಲಚ್ಚಿತ್ರ ವಿಭಾಗ ಇನ್ನೂ ವರೆಗೆ ಸ್ವಾವಲಂಬಿಯಾಗಿಲ್ಲ—೧೯೪೯ರಲ್ಲಿ ೨೦೦೦ ಚಿತ್ರ ಪ್ರದರ್ಶನ ಮಂದಿರಗಳಿಗೆ ಚಿತ್ರ ಪಟಗಳನ್ನೊದಗಿಸಿ ಕೊಟ್ಟ ಈ ವಿಭಾಗಕ್ಕೆ ಕೇವಲ ಹತ್ತು ಲಕ್ಷ ರೂಪಾಯಿಗಳ ಆದಾಯ ದೊರೆಯಿತು. ೧೯೫೩ರಲ್ಲಿ ೩೩೦೦ ಚಲಚ್ಚಿತ್ರ ಮಂದಿರಗಳಿಂದ ಬಾಡಿಗೆ ರೂಪದಲ್ಲಿ ೩೦ ಲಕ್ಷ ರೂಪಾಯಿಗಳಷ್ಟು ಹೆಚ್ಚು ಮೊತ್ತ ದೊರೆತರೂ—ವೆಚ್ಚವನ್ನು ಬಾಯಿ ಗೂಡಿಸಲು ಈ ಉತ್ಪಾದನೆ ಸಾಲದು.

ಈ ಚಿತ್ರಗಳನ್ನು ವಿದೇಶಗಳಲ್ಲಿ ಪ್ರದರ್ಶಿಸುವುದಕ್ಕೂ ವ್ಯವಸ್ಥೆ ಏರ್ಪಟ್ಟಿದೆ. ಭಾರತೀಯರು ಅಧಿಕ ಸಂಖ್ಯೆಯಲ್ಲಿರುವ ಪೂರ್ವಆಫ್ರಿಕಾ, ಮೌರೀಶಿಯಸ ದ್ವೀಪಗಳು, ಮಲಯಾ, ಸಿಂಗಾಪುರ, ಇಂಡೋನೇಶಿಯಾ, ವೆಸ್ಟ ಇಂಡೀಸ, ಬಾಹರೈನ, ಏಡನ ಮುಂತಾದ ಪ್ರದೇಶಗಳಲ್ಲಿ ನಮ್ಮ ದೇಶದ ಸಾಕ್ಷಿ ಹಾಗು ವಾರ್ತಾ ಚಿತ್ರಗಳು ಪ್ರದರ್ಶಿಸಲ್ಪಡುತ್ತವೆ. ವ್ಯಾಪಾರೀ ಮಟ್ಟದಲ್ಲಿ ಈ ಚಿತ್ರಗಳನ್ನು ಅಮೇರಿಕ, ಇಂಗ್ಲೆಂಡ ಮತ್ತಿತರ ಯುರೋಪ್ಯ ದೇಶಗಳಲ್ಲಿ ಪ್ರದರ್ಶಿಸುವುದಕ್ಕೋಸ್ಕರ ಉಚಿತ ಕ್ರಮವೂ ಕೈಗೊಳ್ಳಲ್ಪಟ್ಟಿದೆ. ಇದಲ್ಲದೆ, ವಿದೇಶಗಳಲ್ಲಿರುವ ಭಾರತ ಸರಕಾರದ ರಾಯಭಾರಿ ಹಾಗು ಪ್ರತಿನಿಧಿ ಕಾರ್ಯಾಲಯಗಳಿಗೆ ಆಯ್ದು ಚಿತ್ರಗಳನ್ನು ಕಳುಹಿಸಿ, ಭಾರತದ ಸಾಂಸ್ಕೃತಿಕ ಮಹತಿಯನ್ನೂ ರಾಷ್ಟ್ರೀಯ ಚಟುವಟಿಕೆಗಳನ್ನೂ ತಿಳಿಸಿ ಹೇಳಲಾಗುತ್ತದೆ.

ರಾಜ್ಯ ಸರಕಾರಗಳಲ್ಲಿ ಪ್ರತಿಯೊಂದೂ ಒಂದೊಂದು ಚಿತ್ರಪಟವನ್ನು ಪುಕ್ಕಟೆಯಾಗಿ ಪಡೆಯುತ್ತವೆ. ಇವುಗಳನ್ನು ಗ್ರಾಮಾಂತರ ಪ್ರದೇಶದಲ್ಲಿರುವ ಜನರಿಗೆ ಮೋಟಾರು ವಾಹನಗಳ ಮೂಲಕ ಕೊಂಡೊಯ್ದು ಪ್ರದರ್ಶಿಸಲಾಗುವುದು ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ನಿರ್ವಹಿಸುವ ಶಾಲಾ ಕಾಲೇಜುಗಳಿಗೂ ಸಂಘಸಂಸ್ಥೆಗಳಿಗೂ ನಾಮಮಾತ್ರ ಬಾಡಿಗೆಯನ್ನು ವಸೂಲು ಮಾಡಿ ಈ ಚಿತ್ರ ಪಟಗಳನ್ನು ಅವುಗಳ ಉಪಯೋಗಕ್ಕೆ ನೀಡಲಾಗುವುದು. ಇವರಲ್ಲಿ ಯಾರಾದರೂ ತಮ್ಮ ಸ್ವಂತ ಉಪಯೋಗಕ್ಕೋಸ್ಕರ ಚಿತ್ರ ಪಟದ ಪ್ರತಿಯನ್ನು ಕೊಂಡುಕೊಳ್ಳಲು ಬಯಸಿದರೆ, ಅವರಿಗೆ ರಿಯಾಯತಿ ದರದಲ್ಲಿ ಅದನ್ನು ಒದಗಿಸಲಾಗುವುದು. "ಅಸಾಮಿನ ಇಣುಕು ನೋಟ" ಮತ್ತು "ಹಿಮಾಂಪು ಗುಡ್ಡಗಾಡು ಪ್ರದೇಶ" ಎಂಬೆರಡು ಸಾಕ್ಷಿ ಚಿತ್ರಗಳು ವಿದೇಶಗಳಲ್ಲಿ ಮಾರಾಟಗೊಂಡಿವೆ.

ಚಲಚ್ಚಿತ್ರ ಪ್ರಯೋಗಾಲಯ

ಈಚೆಗೆ ಭಾರತ ಸರಕಾರದ ಅಪ್ಪಣೆಯನ್ನು ಪಡೆದು, ಚಲಚ್ಚಿತ್ರ ವಿಭಾಗದವರು ಎರಡು ಪೂರ್ಣ ಪ್ರಮಾಣದ ಕಥನ ಚಿತ್ರಗಳನ್ನು ತಯಾರಿಸಲು ನಿರ್ಧರಿಸಿರುವರು ಸಾಮಾನ್ಯ ಜನರಿಗೆ ಸಭ್ಯ ಮನೋರಂಜನೆಯನ್ನು ಒದಗಿಸುವ ಎಲ್ಲ ಅಂಶಗಳನ್ನು, ಅರ್ಥಾತ್, ಸಂಗೀತ, ನರ್ತನ, ವಿನೋದ, ಹಾಸ್ಯ ಮುಂತಾದೆಲ್ಲವಕ್ಕೂ ಈ ಕಥನಚಿತ್ರಗಳಲ್ಲಿ ಅವಕಾಶ ಸಿಗುತ್ತದೆ. ಅದರೊಂದಿಗೆ ಚಿತ್ರವು ಬೋಧಪ್ರದವಾಗಿದ್ದು, ಭಾರತದಲ್ಲಿ ಖಾಸಗಿ ನಿರ್ಮಾಪಕರು ತಯಾರಿಸುತ್ತಿರುವ ಕಥನ ಚಿತ್ರಪಟಗಳಿಗೆ ಒಂದು ಮಾದರಿಯಾಗಿ ಇದನ್ನು ತಯಾರಿಸಲಾಗುವುದು. ಒಂದರ ಕಥಾನಕವು ರಾಮಾಯಣದಿಂದ ಉದ್ಧೃತವಾಗಿರುವುದು; ಇನ್ನೊಂದು ಜನಪದ ಅಭಿವೃದ್ಧಿ ಯೋಜನೆಯ ಕಥಾ ವಸ್ತುವನ್ನೊಳಗೊಳ್ಳುವುದು. ನಿತ್ಯವೂ ನಾವು ನೋಡುವ ಚಲಚ್ಚಿತ್ರಗಳಂತೆ ಇಲ್ಲಿ ಪ್ರಸಿದ್ಧ ತಾರಾಗಣ ಪಾತ್ರವಹಿಸುವುದಿಲ್ಲ—ಎಲ್ಲರೂ ಹೊಸಬರು—ಮತ್ತು ಕಥೆಯ ಆವಶ್ಯಕತೆಗೆ ತಕ್ಕಂತೆ ಅವರನ್ನು ಆಯ್ದುಕೊಳ್ಳಲಾಗುವುದು. ಚಲಚ್ಚಿತ್ರ ವಿಭಾಗದ ನುರಿತ ದಿಗ್ದರ್ಶಕರ ವಶಕ್ಕೆ ಕಥನ ಚಿತ್ರಗಳನ್ನು ತಯಾರಿಸುವ ಹೊಣೆಯನ್ನು ಒಪ್ಪಿಸಲಾಗಿದ್ದು, ಸರಕಾರ ಇವುಗಳ ರಚನೆಗೋಸ್ಕರ ಮೂರುಲಕ್ಷ ರೂಪಾಯಿಗಳನ್ನು ಮಂಜೂರ ಮಾಡಿದೆ.

ಕಥನ ಚಿತ್ರಗಳನ್ನು ತಯಾರಿಸಲು ನಿರ್ಧರಿಸಿದುದರ ಮೇಲಿಂದ ಖಾಸಗಿ ಚಿತ್ರ ನಿರ್ಮಾಪಕರೊಡನೆ ಸ್ಪರ್ಧೆಗೆ ತಾನು ನಿಂತಂತಾಯಿತೆಂದು ಭಾವಿಸಬಾರದಾಗಿ ಸರಕಾರ ಹೇಳುತ್ತದೆ. ಸಾಕ್ಷಿ ಮತ್ತು ಸುದ್ದಿ ಚಿತ್ರಗಳಿಗಿಂತ ಕಥನ ಚಿತ್ರವನ್ನು ಹೆಚ್ಚಿನ ಪ್ರೇಕ್ಷಕರು ಮೆಚ್ಚುವರು—ಅವರ ಈ ಅಭಿರುಚಿಯನ್ನು ತಣಿಸುತ್ತಾ, ವಿಚಾರ ಪ್ರಚೋದನೆಯನ್ನು ಉಂಟುಮಾಡುವಂತೆ ಕಥನ ಚಿತ್ರಗಳನ್ನು ತಯಾರಿಸುವ ಪ್ರಯೋಗವನ್ನಷ್ಟೇ ಸರಕಾರದ ಕಡೆಯಿಂದ ಮಾಡಲಾಗುವುದು ಈ ಪ್ರಯೋಗ ಯಶಸ್ವಿಯಾದರೆ, ಭಾರತದ ಖಾಸಗಿ ನಿರ್ಮಾಪಕರ ಕಣ್ಣು ತೆರೆದೀತು.

ಭಾರತೀಯ ಸಂಸ್ಕೃತಿ, ಕಲೆ, ಕೃಷಿ, ಔದ್ಯಮಿಕ ಪ್ರಗತಿ, ಸಾರ್ವಜನಿಕ ಆರೋಗ್ಯ, ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳು ಮುಂತಾದುವನ್ನು ಚಿತ್ರೀಕರಿಸುವುದೇ ಸರಕಾರದ ಚಲಚ್ಚಿತ್ರ ವಿಭಾಗದ ಮುಖ್ಯೋದ್ದೇಶ. ವರ್ಷದ ಪ್ರಾರಂಭದಲ್ಲಿ ಯಾವ ವಿಷಯಕ್ಕೆ ಪ್ರಾಶಸ್ತ್ಯವನ್ನು ಕೊಡಬೇಕೆಂದು ನಿರ್ಣಯ ಮಾಡಿ, ಅದಕ್ಕೆ ತಕ್ಕಂತೆ ವಿವರಣಾ ರೂಪದ ಟಿಪ್ಪಣಿಯನ್ನು ಸಿದ್ಧಗೊಳಿಸಲಾಗುವುದು. ಈ ವಿಷಯದಲ್ಲಿ ಸಂಬಂಧಿಸಿದ ಸರಕಾರದ ಶಾಖೆಗಳ ಮತ್ತು ಆ ವಿಶಿಷ್ಟ ಕ್ಷೇತ್ರದಲ್ಲಿ ಅನುಭವ ಮತ್ತು ಪಾಂಡಿತ್ಯ ಪಡೆದವರ ಸಹಕಾರವನ್ನು ವಿಭಾಗ ಪಡೆಯುತ್ತದೆ.

ಇಷ್ಟರಲ್ಲೇ ಹೊರಬೀಳಲಿರುವ ಸಾಕ್ಷಿ ಚಿತ್ರಗಳಲ್ಲಿ "ಡಾರ್ಜಲಿಂಗ"ಎಂಬುದು ಎಲ್ಲರೂ ಮೆಚ್ಚಬಹುದಾದ ಸಾಕ್ಷಿಚಿತ್ರ ಇಂತಹ ಚಿತ್ರಗಳ ರಚನೆಯಲ್ಲಿ ಭಾರತ ತುಂಬ ಮುಂದುವರಿದಿರುವುದಕ್ಕೆ ಅಂತರಾಷ್ಟ್ರೀಯ ಪ್ರದರ್ಶನಗಳಲ್ಲಿ ಪಡೆದ ಪ್ರಶಂಸೆಯೇ ಸಾಕ್ಷಿಯಾಗಿರುತ್ತದೆ. ಹಾಗೆಂದು ಚಲಚ್ಚಿತ್ರ ವಿಭಾಗದಲ್ಲಿ ಎಷ್ಟು ಹೊಸ ತಂತ್ರಗಳನ್ನು ಅಳವಡಿಸಿಕೊಂಡರೂ ಕಡಿಮೆಯಾಗುತ್ತದೆ. ಸಂಶೋಧನೆಗಳನ್ನು ನಡೆಸಿದಷ್ಟೂ ದರ್ಜೆ ಊರ್ಜಿತಗೊಳ್ಳುತ್ತದೆ. ಅಂಥ ಸಂಶೋಧನಾಲಯವೊಂದು ನಮ್ಮಲ್ಲಿಲ್ಲವಲ್ಲ ಎಂಬುದೊಂದು ಕೊರಗಾಗಿ ಉಳಿದಿದೆ. ಸರಕಾರ ಇತ್ತ ತೀವ್ರ ಗಮನಕೊಟ್ಟು ಉಚಿತ ಕ್ರಮ ಕೈಗೊಳ್ಳಲೆಂದು ಚಲಚ್ಚಿತ್ರ ಪ್ರಿಯರು ಹಾರೈಸುವರು.

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ
ರಥಬೀದಿ ಉಡುಪಿ.

ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 25 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

THE MOOLKY BANK LTD.
Moolky, S. K.

SEASON DEPOSITS.

Are now accepted for periods from 3 to 6 months 3½% interest per annum for amounts of Rs. 500/- and multiples thereof. No deposit is allowed to run beyond 15—10 - 1954.

Attractive rates of interest are offered for Fixed Deposits for periods ranging from 1 to 24 months.

Banking transactions of all kinds are undertaken.

Branches throughout South Kanara, and one each in Mercara and Fort, Bombay.

THE VIJAYA BANK LIMITED,
Head Office: **MANGALORE.**

ಲಕ್ಷಾಂತರ ಜನರು ಗುಣಹೊಂದಿದ್ದಾರೆ:

ಸರ್ ಜೀವನ್ ಶಿಲಾಜಿತ್‌ಲೇಹ

ಶಿಲಾಜಿತ್ ಹಿಮಾಲಯದ್ದು ಔಷಧಿಗಳ ರಾಜ; ಮೂಲಿಕೆಗಳೊಡನೆ ಸೇರಿಸಿದ ಲೇಹ್ಯ, ದೇಹಶಕ್ತಿ, ಹೊಟ್ಟೆನೋವು, ಅನ್ನ ಸೇರದಿರುವಿಕೆ, ಕೆಮ್ಮು, ದಮ್ಮು, ಬಹುಮೂತ್ರ ಮತ್ತು ವಾಯುವಿನಿಂದಾಗುವ ಎಲ್ಲಾ ರೋಗನಿವಾರಕ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, ಹೆಂಗಸರ ಮತ್ತು ಮಕ್ಕಳ ಸರ್ವರೋಗ ನಿವಾರಕ ಅಮೂಲ್ಯ ರತ್ನ. ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು.

೪೨ ದಿನದ ಲೇಹ್ಯ ರೂ. ೫-೪-೦, ೨೧ ದಿನದ ಲೇಹ್ಯ ರೂ. ೩-೪-೦. (ಪೋಸ್ಟೇಜು ಮಾಫಿ)

ನೀಲಗಿರಿ ದಿಪ್ಪೊ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ.

ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋದವರಲ್ಲಿ ಕೇಳಿರಿ.

ಭರ್ತ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು: ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ: ೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟು ಖರ್ಚು ರೂ. ೦-೧೪-೦

—:ವಿಳಾಸ:—

ಹಾಲಪ್ಪಾ ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ಬದಲಾವಣೆಗೆಂದು ಒಮ್ಮೆ
ಎಸ್. ಆರ್. ಬೀಡಿಯನ್ನು
ಬಳಸಿ ನೋಡಿರಿ.
ಅಂದರೆ ತಪ್ಪದೆ ಅದನ್ನೇ
ಎಂದೆಂದಿಗೂ ಕೊಂಡು
ಕೊಳ್ಳುವಿರಿ.

S.R. BEEDI WORKS,
UDIPI, S.K.



ಎಲ್ಲಾ ಕಡೆಗಳಲ್ಲಿಯೂ ದೊರಕಲ್ಪಡುತ್ತವೆ.

OUR BOMBAY STOCKISTS:—
1 V N. SHENOY. Bombay. 12
• N. R. KAMATH.
Dahanu Road, Thana Dist (w. rly.)

Edited, Printed & Published By K. H. Shetty at the Navayuga Press, Udipi, S. India

Regd. No. M. 3618

Licence No. 31
Licensed to Post without Prepayment.

ನವಯುಗ

Vol.33, No 25 25-2-1954 ವರ್ಷ ೩೩ ವಾರ ೨೫

ಹೊಸ ಬೆಳಕಿನ ಆಸರೆ

ನಾವು ಇಂದು ಸಂಕ್ರಮಣ ಕಾಲವೊಂದನ್ನು ಕ್ರಮಿಸುತ್ತಿದ್ದೇವೆಂದು ಅನಿಸುತ್ತದೆ—ಜೀವನದ ಅನೇಕ ಮುಖಗಳಲ್ಲಿ, ರಾಷ್ಟ್ರೀಯ ಚಟುವಟಿಕೆಗಳ ವಿವಿಧ ಕ್ಷೇತ್ರಗಳಲ್ಲಿ ಈ ಮಾತು ಹೊಳೆದು ತೋರುತ್ತದೆ. ನಮಗೆ ಪ್ರಜಾಪ್ರಭುತ್ವದಲ್ಲಿ ಶ್ರದ್ಧೆ ಇದೆ—ಆದರೆ ಇದು ದೃಢವಾಗಿ ಇನ್ನೂ ಬೇರೂರಿಲ್ಲ. ಆದುದರಿಂದ ಕಮ್ಯುನಿಸ್ಟ ದೇಶಗಳ ಕಡೆಗಿನ ನಮ್ಮ ಒಲವನ್ನು ಸುಲಭದಲ್ಲಿ ಹತ್ತಿಕ್ಕಿಕೊಳ್ಳಲು ಆಗುವುದಿಲ್ಲ. ಅಲ್ಲಿ ಸಾಧಿಸಿದ ಅದ್ಭುತಗಳ ಕತೆಯನ್ನು ಕೇಳಿ ರೋಮಾಂಚನಹೊಂದುವ ಆವೇಗವನ್ನೂ ತಡೆದುಕೊಳ್ಳಲಾಗುವುದಿಲ್ಲ. ಮನದೊಳಗೆಯೇ ಕಮ್ಯುನಿಸ್ಟ ವಿಚಾರ ಪ್ರಣಾಳಿಯ ಚಿಂತನೆಯನ್ನು ಮಾಡುತ್ತಾ ತೋರಿಕೆಗೆ ಮಾತ್ರವೇ ಪ್ರಜಾಪ್ರಭುತ್ವದ ಜಪಬೇರಿಗೆ ನೀರೆರೆಯಲು ನೋಡುವ ಜನರು ನಮ್ಮಲ್ಲಿ ಹೆಚ್ಚೆಂದರೆ ತಪ್ಪಾಗಲಾರದು. ವಿದೇಶಗಳ ಸಾಧನೆಯ ವಿವರದಿಂದ ನಾವು ಅವರತ್ತ ಆಕೃಷ್ಟರಾಗಿ ಮಾಲಿಕೊಳ್ಳುವುದರಲ್ಲಿಯೇ ತೃಪ್ತಿ ಮತ್ತು ಕೃತಾರ್ಥತೆಯನ್ನು ಕಂಡುಕೊಳ್ಳುತ್ತಿದ್ದೇವೆ—ಹೊರತು, ನಮ್ಮ ದೇಶವನ್ನು ಮರಳಿ ಕಟ್ಟುವ ಛಲತೊಟ್ಟು, ಕಾರ್ಯಮಗ್ನರಾಗುವುದಿಲ್ಲ

ಇದು ನಮ್ಮ ರಾಷ್ಟ್ರೀಯ ಚಟುವಟಿಕೆಗಳ ಕ್ಷೇತ್ರದಲ್ಲಿ ಕಂಡು ಬರುವ ದೌರ್ಬಲ್ಯಗಳಲ್ಲಿ ಮುಖ್ಯವಾದದ್ದು. ಒಳ್ಳೆಯದೆಂದರೇನೆಂಬುದನ್ನು ತಿಳಿದುಕೊಳ್ಳಲು ತಕ್ಕುದಾದ ಸಂಸ್ಕಾರವನ್ನು ನಾವು ಪಡೆದಿರುತ್ತೇವೆ. ಆದರೆ ಅಂತಹ ಒಳ್ಳೆಯ ಕಾರ್ಯದಲ್ಲಿ ನಾವೂ ಪ್ರವೃತ್ತರಾಗುವುದಕ್ಕೆ ಬೇಕಾದ ... ವನ್ನೂ ಸ್ಫೂರ್ತಿ ಮತ್ತು ಸೇವಾ ಮನೋಭಾವವನ್ನು ಹುಟ್ಟಿಸಿಕೊಂಡಿಲ್ಲ. ಪರಿಣಾಮದಲ್ಲಿ ನಮಗ ಪ್ರಕೃತದ ಪರಿಸ್ಥಿತಿಯ ಮೇಲೆ ತೀವ್ರ ಜುಗುಪ್ಸೆ ಹುಟ್ಟಿಕೊಂಡಿದೆ—ಆದರೆ ಬೇಸರದ ಸ್ಥಾನದಲ್ಲಿ ಸಂತೋಷವನ್ನೂ ತಿರಸ್ಕಾರದ ಬದಲು ಗೌರವವನ್ನೂ ಕೊಡಬಲ್ಲ ಹೊಸತಾದ ವಾತಾವರಣವನ್ನು ನಿರ್ಮಿಸಿಕೊಳ್ಳಲು ನಾವು ಸಮರ್ಥರಾಗಿಲ್ಲ ಪ್ರಜಾಪ್ರಭುತ್ವದ ಮೇಲಿನ ಶ್ರದ್ಧೆಯನ್ನು ಹೊರಗಿನವರ ವಿಚಾರ ಹಾಗೂ ಸಾಧನೆಗಳ ಮೇಲಿನ ಮೋಹದಿಂದ ಒಳಗೊಳಗೆಯೇ ಚಂಚಲಗೊಳ್ಳುತ್ತಾ ಕ್ಷೀಣವಾಗುತ್ತಾ ಕ್ಷಯರೋಗದಂತೆ ನಿಧಾನವಾಗಿ ಆಹುತಿ ತಗೆದುಕೊಳ್ಳುತ್ತದೆ ಇದು ರಾಷ್ಟ್ರದ ಅಭ್ಯುದಯಕ್ಕೆ ಬಲವಾದ ಆಘಾತವನ್ನುಂಟು ಮಾಡುವುದರಿಂದ ನಾವು ಸಕಾಲದಲ್ಲಿ ಎಚ್ಚರಿಸಿಕೊಂಡು ಆತ್ಮ ಶೋಧನೆ ಮಾಡಿಕೊಳ್ಳುವುದು ಅಪೇಕ್ಷಣೀಯ ರಾಷ್ಟ್ರಜೀವನ ವ್ಯಕ್ತಿಜೀವನದ ವಿಸ್ತೃತ ರೂಪ — ಒಂದು ರೀತಿಯಿಂದ ನೋಡಿದರೆ, ವ್ಯಕ್ತಿಜೀವನ ಸಮಾಧಾನಕರವಿದ್ದರೆ ರಾಷ್ಟ್ರಜೀವನವೂ ಭದ್ರವೆಂದೂ ಮಧುರವೆಂದೂ ಹೇಳಲು ಅಡ್ಡಿಯಿಲ್ಲ ವ್ಯಕ್ತಿ ಜೀವನದಲ್ಲಿ ಇಂದು ಎಷ್ಟೋ ಬಗೆಯ ಅನಪೇಕ್ಷಿತ ಹಾಗೂ ಅನಿಷ್ಟ ಅಂಶಗಳು ಬಂದುಸೇರಿ, ಪರಂಪರಾಗತವಾದ ಶಿಸ್ತು, ಸಂಪ್ರದಾಯ ಮತ್ತು ಮನೋಭಾವವನ್ನು ಕದಿಸಿಬಿಟ್ಟಿದೆ ನಮ್ಮಲ್ಲಿ ವಿದ್ಯಾವಂತರು ಮತ್ತು ಸುಶಿಕ್ಷಿತರೆನಿಸಿಕೊಂಡವರಿಂದಲೇ ನಮ್ಮ ಸಮಾಜಜೀವನಕ್ಕೆ ವಿನಾಶಕಾರಿಯಾದ ಕೆಲಸಗಳು ನಡೆಸಲ್ಪಡುತ್ತವೆ ಎಷ್ಟೋ ಕಾಯಿದೆ ಕಾನೂನುಗಳು ಸುಧಾರಣೆಯ ಸೋಗಿನಲ್ಲಿ ಸಂಪೂರ್ಣ ವಿಚಾರ ಹಾಗೂ ದೂರದೃಷ್ಟಿಯ ಅಭಾವಗಳು ಇದ್ದಂತೆಯೇ ಅವಸರದಿಂದ ಜಾರಿಗೆ ಬರುತ್ತಿವೆ— "ಜನರು ಅವುಗಳನ್ನು ಅಪೇಕ್ಷಿಸಿ, ಒತ್ತಾಯ ಮಾಡುತಿದ್ದಾರೆಂದಲ್ಲ, ಅವು ನಮ್ಮ ಶಾಸನ ಪುಸ್ತಕದಲ್ಲಿ ಇಲ್ಲದಿದ್ದರೆ, ಪಾಶ್ಚಾತ್ಯರ ದೃಷ್ಟಿಯಲ್ಲಿ ನಾವು ಕೀಳಾದೇವೆಂಬ ಅಂಜಿಕೆಯಿಂದ" ಇಂತಹ ಕಾನೂನುಗಳು ಆಗುತ್ತವೆ. ನಮ್ಮ ಜನರ ಸಮರಸವೇ ಆದರ್ಶವಾಗುಳ್ಳ ಜೀವನದಲ್ಲಿ ಇವುಗಳಿಂದ ನೋವಿನ ಸುಳಿಗಳು ಕಾಣಿಸಿಕೊಳ್ಳುವುದು ಸಹಜ

ನಮ್ಮ ಸುಶಿಕ್ಷಿತರು ವಿಚಾರ-ವಿಮರ್ಶೆಯ ಸುಳಿಗಾಳಿಗೆ ಸಿಕ್ಕಿಬಿದ್ದು—ಮೂಲದ ಪರಂಪರಾಗತವಾದ ಧರ್ಮದ ಆಧಾರವನ್ನು ಕಳೆದು ಕೊಂಡಿರುವರು, ಆದರೆ ಹೊಸತಾದ ಯಾವದೇ ತತ್ವವನ್ನು ದೃಢವಾಗಿ ಆಧರಿಸಿ ನಿಲ್ಲಲು ಇನ್ನೂ ಅಶಕ್ಯರಾಗಿ ಕಾಣುವರು ಹಳೆಯ ಸಾಮಾಜಿಕ ಹಾಗೂ ಆರ್ಥಿಕ ಧೋರಣೆಯ ಮೇಲೆ ನಮಗೆ ಯಾರಿಗೂ ವಿಶ್ವಾಸವುಳಿದಿಲ್ಲ—ಧರ್ಮವು ಒಣಗಿಸಿದ ಹೆಣದಂತೆ ನಮ್ಮ ಸುಶಿಕ್ಷಿತರಿಗೆ ಕಾಣಿಸುವುದೆಂಬ ಉತ್ತರ ಪ್ರದೇಶದ ಗೃಹ ಮಂತ್ರಿ ಡಾ. ಸಂಪೂರ್ಣಾನಂದರ ಮಾತ ಈಗಿನ ಪರಿಸ್ಥಿತಿಯ ಸ್ಪಷ್ಟ ಚಿತ್ರವನ್ನ ಕೊಡುತ್ತದೆ ಆಧ್ಯಾತ್ಮಿಕ ಶೂನ್ಯತೆಯೇ ಬುದ್ಧಿವಂತಿಕೆಯ ದ್ಯೋತಕವೆಂದು ತಿಳಿದ. ಕೊಂಡ ನಮ್ಮ ಯುವ ಜನಾಂಗ, ಸುಶಿಕ್ಷಿತರ ದೊಡ್ಡ ಗುಂಡು—ಶ್ರದ್ಧಾಹೀನ, ಆತ್ಮಹೀನ, ಆಶಾ ಹೀನ ಜೀವನ ನಡೆಸುವ ವಿಚಿತ್ರ ವ್ಯಾಧಿ ಪೀಡೆಗೋಳಾಗುದಂತೆ ವಿಚಾರವಂತರಿಗೆ ಭಾಸವಾಗುತ್ತದೆ

ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಒಬ್ಬ ರಾಧಾಕೃಷ್ಣನ್ನರು ವೇದಾಂತ ಜೀವನದ ಸಾರಸರ್ವಸ್ವವನ್ನೂ ಬಟ್ಟಿ ಇಳಿಸುವ ಭಾಷಣವನ್ನು ಒಬ್ಬ ಜವಾಹರಲಾಲ ನೆಹರೂ ಗಾಂಧೀಜಿಯ ಆದರ್ಶದ ವೈಶಿಷ್ಟ್ಯ ವಿವರಿಸುವ ಉಪನ್ಯಾಸವನ್ನು ಕೊಡುತ್ತಾ ಸಾಗಿದರೆ, ಅಷ್ಟರಿಂದಲೇ ದೇಶ ಪುನೀತವಾಗಲಾರದು. ಹೊರಗಿನ ದೇಶಗಳವರ ಕ್ಷಣಿಕ ಪಿಪಾಸೆಯನ್ನು ಸಂತೃಪ್ತಿಗೊಳಿಸಲು, ನಮ್ಮಲ್ಲಿಯೂ ಭವ್ಯವಾದ ಅನರ್ಘ್ಯವಾದ ಸಂಪತ್ತು ಹಿರಿಯರ ಕೈಯಿಂದ ದೊರೆತದ್ದುಂಟು ಎಂಬುವರ ನಿಲುವಿನ ಹೊಳವು ನೀಡಲು ಈ ಪರಿಚಯದ ರೂಪುಗಳು ನೆರವಾದಾವು ಆದರೆ, ದೇಶದ ಜನರ ಜೀವನಕ್ಕೆ ಇವುಗಳು ಯಥಾರ್ಥವಾಗಿ ಪ್ರತಿಫಲಿಸದೆ ಹೋದಲ್ಲಿ, ನಿತ್ಯ ವ್ಯವಹಾರದಲ್ಲಿ ಅವುಗಳ ಪರಿಣಾಮವೂ ಕಂಡು ಬಾರದಿದ್ದಲ್ಲಿ ನಮ್ಮ ಪ್ರಾಚೀನ ಪರಂಪರೆಯ ವೈಭವ ವರ್ಣನೆಯಿಂದ ನಾವು ಅಭಿಮಾನಪಟ್ಟುಕೊಳ್ಳುವುದಕ್ಕೆ ಅರ್ಥವಿಲ್ಲ—'ಮಾತೊಂದು—ನಡೆಯೊಂದು" ಎಂಬ ನಮ್ಮ ಕಪಟದ ರಹಸ್ಯೋದ್ಘಾಟನೆಯು ಆದಾಗ, ಮುಖ ಮುಚ್ಚಿಕೊಳ್ಳುವುದಕ್ಕೆ ನಮಗೆ ಆತ್ಮ ವಿಶ್ವಾಸದ ಚಿಂದಿ ಬಟ್ಟೆಯೂ ದೊರೆಯಲಿಕ್ಕಿಲ್ಲ

ಆದುದರಿಂದ ನಾವು ಒಣ ಜಂಭದ ಮಾತುಗಳನ್ನಾಡುವುದನ್ನು ಬಿಟ್ಟುಗೊಡಬೇಕು—ಬೇರೆ ದೇಶಗಳ ಪ್ರಗತಿಯ ಮೋಹ ಜಾಲದಲ್ಲಿ ಬಿದ್ದು, ಬೇಕೆನಿಸಿರುವುದಕ್ಕೂ ಬೇಡವಾದುದಕ್ಕೂ ಅವುಗಳ ಅನುಕರಣೆ ಮಾಡುವ ಚಪಲವನ್ನು ದೂರ ಮಾಡಬೇಕು— ಭಾರತೀಯ ಸಂಸ್ಕೃತಿಗೆ ಒಪ್ಪುವಂತೆ, ನಮ್ಮ ಪ್ರಾಚೀನ ಸಂಸ್ಕಾರಗಳು ಚಿಗುರಿ ಹಸುರಾಗಿ ರಂಜಿಸುವಂತ ಹೊಸತಾಗಿ ಕೃಷಿಯನ್ನು ಕೈಗೊಳ್ಳಬೇಕು ಇದಕ್ಕೋಸ್ಕರ ನಾವು ಸಮಾಜ ವಿಜ್ಞಾನದ ವಿಷಯದಲ್ಲಿ ತರಬೇತಿಯನ್ನು ಹೊಂದಬೇಕಾಗಿ ಬರುವುದು. ನಮ್ಮ ಸಾಂಸ್ಕೃತಿಕ, ವೈಜ್ಞಾನಿಕ ಹಾಗೂ ಶೈಕ್ಷಣಿಕ ಶ್ರೇಯಸ್ಸನ್ನು ಮಾಡುವ ಇಂತಹ ಸಾಮಾಜಿಕ ವಿಜ್ಞಾನದ ತರಬೇತಿ ನಮ್ಮನ್ನು ಸ್ವತಂತ್ರರೂ ಉದಾತ್ತರೂ ಆಗಿ ಮಾಡುವುದಕ್ಕೆ ನೆರವಾಗುತ್ತದೆ ಇಂತಹ ತರಬೇತಿ ಪಡೆದ ಜನಾಂಗ ಸ್ವಹಿತವನ್ನಷ್ಟೆ ಅಲ್ಲ—ಮಾನವತೆಯ ಪುನರುತ್ಥಾನವನ್ನೂ ಸಾಧಿಸ ಬಲ್ಲುದು

ಹೊಸದೆಹಲಿಯಲ್ಲಿ "ಯುನೆಸ್ಕೊ" ಸಮ್ಮೇಳನವೊಂದರಲ್ಲಿ ಮಾತನಾಡುವಾಗ ಭಾರತದ ಉಪರಾಷ್ಟ್ರಪತಿ ಡಾ. ರಾಧಾಕೃಷ್ಣನ್ನರು ಇಂತಹ ಸಾಮಾಜಿಕ ಶಿಕ್ಷಣದ ರೂಪರೇಷೆಯನ್ನು ವಿವರಿಸಿದರು—ಸಮಾಜದ ಹಿತವನ್ನೆ ಉದ್ದೇಶವಾಗುಳ್ಳ ವಿಜ್ಞಾನಗಳಲ್ಲಿ ಅರ್ಥಶಾಸ್ತ್ರ, ರಾಜಕೀಯ ಶಾಸ್ತ್ರ, ಸಾಮಾಜಿಕ ಮನಃಶಾಸ್ತ್ರ, ಸಾಮಾಜಿಕ ಜೀವನಶಾಸ್ತ್ರ ಮುಂತಾದವುಗಗಳು ಸಮಾವೇಶಗೊಳ್ಳುತ್ತವೆ ನಾವು ವಾಸಿಸಿರುವ ಪರಿಸರದ ತಿಳುವಳಿಕೆಯು ನಮಗೆ ಅತ್ಯಗತ್ಯವೆನಿಸಿವುದರಿಂದ, ನಮ್ಮ ಸಮಾಜರಚನೆಯ ವೈಶಿಷ್ಟ್ಯಗಳನ್ನೂ ನಾವು ತಿಳಿದಿರುವುದು ಅಗತ್ಯ ಒಬ್ಬನು ಇನ್ನೊಬ್ಬನ ಸಂತೋಷಕ್ಕೆ ಬಾಧೆಯುಂಟಾಗದ ರೀತಿಯಲ್ಲಿ ಸಾಕಷ್ಟು ಮಿತಿಯಾದ ಕ್ಷೇತ್ರದಲ್ಲಿಯೇ ತನ್ನ ಸೌಖ್ಯವನ್ನು ಅನುಭವಿಸುತ್ತಿರಬೇಕೆಂಬ ನೀತಿಯನ್ನು ಮನದಟ್ಟುಮಾಡಿಕೊಡುವುದು ಸಾಮಾಜಿಕ ವಿಜ್ಞಾನ ಶಿಕ್ಷಣದ ಹೊಣೆಯಾಗಿರುತ್ತದೆ

(ಮುಂದೆ ಪುಟ ನೋಡಿರಿ)

ವೇತನ ದೊರೆಯುವ ಪ್ರತಿ ದಿನಸದಲ್ಲೂ ಸೇವಿಂಗ್ಸ್ ಬೇಂಕ್ ಲೆಖ್ಖದಲ್ಲಿ ಹಣವಿಡಲು ಪ್ರಾರಂಭಿಸಿರಿ.

ವ್ಯವಹಾರ ಮಹಸೂಲು ರೂ 5,00,00,000

THE CANARA INDUSTRIAL & BANKING SYNDICATE LTD.,
Estd: 1925 H. O. UDIPI S. India
ದಿ ಕೆನರಾ ಇಂಡಸ್ಟ್ರಿಯಲ ಎಂಡ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ನಮ್ಮ ಪ್ರಗತಿಯ ಪಥದಲ್ಲಿ ಇನ್ನೊಂದು ಮೈಲುಗಲ್ಲು

ಉಕ್ಕು ಉತ್ಪಾದಿಸುವುದರಲ್ಲಿ ವಿಶ್ವ ವಿಶ್ರುತ ಜರ್ಮನ ತಜ್ಞರ ಆಸ್ಥೆ

ತೆಳ್ಳನೆಯ, ದೀರ್ಘಕಾಯದ, ಸೊಂಟ ಕುಸು ಬಗ್ಗಿದಂತಿರುವ ಅತ್ಯಸಂಲಗ್ನ ವ್ಯಕ್ತಿಯೊಂದು ಪ್ರತಿನಿತ್ಯ ಮುಂಜಾನೆ ಎಂಟೂವರೆಯ ಸುಮಾರಿಗೆ ತನ್ನ ಏಳು ಕೋಣೆಗಳುಳ್ಳ ಮನೆಯಿಂದ ಸಣ್ಣ ಮೋಟಾರುಕಾರಿನಲ್ಲಿ ಹೊರಟು, ಜರ್ಮನಿಯ ಸುಪ್ರಸಿದ್ಧ ಔದ್ಯೋಗಿಕ ಕೇಂದ್ರವಾದ ಎಸ್ಸೆನ ನಗರ ಪ್ರವೇಶಿಸುವದನ್ನು ಕಾಣಬಹುದು. ಇಲ್ಲಿರುವ ವಿಶ್ವವಿಶ್ರುತ ಕ್ರುಪ್ಸ ಕಾರ್ಖಾನೆಯ ಪ್ರಧಾನ ಕಾರ್ಯಾಲಯವನ್ನು ಈ ವ್ಯಕ್ತಿ ಪ್ರವೇಶಿಸುವಾಗ ಸಾಮಾನ್ಯ ಕ್ಲಾರ್ಕನಿಂದ ಹೆಚ್ಚಿನವನೆಂದೇನೂ ನಮಗನಿಸುವುದಿಲ್ಲ. ಆದರೆ ಇವನಾರು? ರಾಜರಿಗೆಲ್ಲ ಮಹಾರಾಜನಿರುವಂತೆ, ಉದ್ಯೋಗಪತಿಗಳಲ್ಲಿಯೇ ಹಿರಿಯನೆನಿಸಿದ ಮಹಾ ಉದ್ಯೋಗಪತಿ ಆಲ್ಫ್ರೆಡ ಕ್ರುಪ್ಸನೆಂದರೆ ಬೇರಾರೂ ಅಲ್ಲ, ಇನ್ನೂ ೪೫ ಮೀರದ ಇವನ ಹೆಸರು ಕೇಳಿದ ಮಾತ್ರಕ್ಕೆ ಜರ್ಮನರದಷ್ಟೇ ಅಲ್ಲ—ಜಗತ್ತಿನ ಧುರೀಣರ ರೋಮ ನಿಗುರಿ ನಿಲ್ಲುತ್ತದೆ.

ಸೃಷ್ಟಿ ಸಂಹಾರಗಳ ಸೂತ್ರಧಾರ

ನೀರು ಕಾಯಿಸುವ ಕೊಳವೆಯಿಂದ ಹಿಡಿದು ದೊಡ್ಡ ದೊಡ್ಡ ಕಾರ್ಖಾನೆಗಳವರೆಗೆ, ಸಣ್ಣದೊಂದು ಬಂದೂಕಿನಿಂದ ಹಿಡಿದು ದೊಡ್ಡ ದೊಡ್ಡ ವಿನಾಶಿಕೆಗಳವರೆಗೆ ಎಲ್ಲ ಕೆಲಸವನ್ನೂ ಪೂರೈಸಬಲ್ಲ, ಕಾರ್ಯಕ್ಷಮತೆಯನ್ನು ಕ್ರುಪ್ಸ ತೋರಿಸಿರುವುದರಿಂದಲೇ ಜಗತ್ತು ಅವನೆಂದರೆ ಹೆದರುತ್ತದೆ; ಅವನ ಶಕ್ತಿ ಸಾಮರ್ಥ್ಯಗಳನ್ನು ಹೊಗಳುತ್ತದೆ. ಉತ್ಪಾದಕ ಕಾರ್ಯಗಳಲ್ಲಿ ಎಷ್ಟೋ, ಅಷ್ಟೇ ವಿನಾಶಕಾರ್ಯದಲ್ಲೂ ಆಸಕ್ತಿ ವಹಿಸಿದ, ಸೃಷ್ಟಿ ಹಾಗೂ ಸಂಹಾರ ಕಾರ್ಯಗಳ ಸೂತ್ರಧಾರ ಆಲ್ಫ್ರೆಡ ಕ್ರುಪ್ಸನ ಜೀವನವನ್ನು ಯಮ ಧರ್ಮರಾಯನ ದ್ವಿವಿಧ ಪಾತ್ರಕ್ಕೆ ಹೋಲಿಸಬಹುದು. ಕ್ರುಪ್ಸ ಕಾರ್ಖಾನೆಯುಳ್ಳ ಐದು ಚದರ ಮೈಲು ವಿಸ್ತೀರ್ಣದ ಉದ್ಯೋಗ ಸಾಮ್ರಾಜ್ಯದಲ್ಲಿ ದುಡಿಯುವ ೨೬೦೦೦೦ ಪ್ರಜೆಗಳಿಗೆ ಹತ್ತು ವರ್ಷಗಳ ಪೂರ್ವದಲ್ಲಿ ಆಲ್ಫ್ರೆಡ ಕ್ರುಪ್ಸ ಅರಸನಾಗಿ ಅಧಿಕಾರಕ್ಕೆ ಬಂದ. ತನ್ನ ವಂಶಕ್ಕೆ ಮೈಗೂಡಿ ಹೋದ ಈ ಕಾರ್ಖಾನೆಗಳನ್ನು ಅಭಿವೃದ್ಧಿಯ ತುತ್ತ ತುದಿಗೇರಿಸಲು ಅವನು ಪ್ರಯತ್ನಶೀಲನಾದ. ಸಾವಿರಾರು ದೇಶಗಳಲ್ಲಿ ವಿವಿಧ ಪ್ರಕಾರದ ಉತ್ಪಾದಕ ಕೆಲಸಗಳನ್ನು ಮಾಡುವ ಯಂತ್ರಗಳು ಇದೇ ಕ್ರುಪ್ಸ ಕಾರ್ಖಾನೆಯಲ್ಲಿ ನಿರ್ಮಾಣಗೊಂಡವು. ದ್ವಿತೀಯ ಮಹಾ ಯುದ್ಧದಲ್ಲಿ ಜರ್ಮನಿಯ ಹಿಟ್ಲರನಿಗೆ ಬೇಕು ಬೇಕೆನಿಸಿದ ಯುದ್ಧೋಪಕರಣಗಳ ಪೂರೈಕೆಯನ್ನೂ ಇದೇ ಕಂಪನಿ ಮಾಡಿತು. ಯುದ್ಧ ಮುಗಿದ ಬಳಿಕ ಮಿತ್ರರಾಷ್ಟ್ರಗಳು ಕ್ರುಪ್ಸನನ್ನೂ ಯುದ್ಧ ಪ್ರಚೋದಕರ ಸಾಲಿಗೆ ಸೇರಿಸಿ ೧೨ ವರ್ಷಗಳ ಸೆರೆ ಮನೆಗೆ ಅಟ್ಟಿದರು. ಆದರೆ ಕಾರಣಾಂತರಗಳಿಂದ ಎರಡು ವರ್ಷಗಳ ಹಿಂದೆ ಅವನ ಬಿಡುಗಡೆಯಾಯಿತು. ತಾವು ಯಾವ ಅಪರಾಧಕ್ಕಾಗಿ ಕ್ರುಪ್ಸನನ್ನು ಕಾರಾವಾಸಕ್ಕೆ ಅಟ್ಟಿದೆವೋ ಅದೇ ಅಕ್ರಮ ಕೃತ್ಯವನ್ನು ಮಾಡುವುದಕ್ಕೆ ಈಗ ಮಿತ್ರ ರಾಷ್ಟ್ರಗಳು ಪ್ರೋತ್ಸಾಹ ನೀಡುತ್ತವೆ. "ಆಗ ಟೇಂಕುಗಳನ್ನು ರಚಿಸಿದೆನೆಂದು ಜೈಲಿಗೆ ಹಾಕಿದಿರಿ. ಈಗ ಟೇಂಕುಗಳ ಸುಧಾರಣೆ ಮಾಡೆಂದು ಹೇಳುತ್ತಾ ನನಗೆ ಬೆದರಿಕೆ ಹಾಕುತ್ತೀರಿ. ಇದೆಂತಹ ನಡವಳಿಕೆ?" ಎಂಬ ಕ್ರುಪ್ಸನ ಪ್ರಶ್ನೆಗೆ ಉತ್ತರ ಕೊಡುವವರಿಲ್ಲ.

ತಿರುಗಿಕೊಂಡ ಒಲವು

ಕ್ರುಪ್ಸನನ್ನು ನೋಯಿಸಲು ಯಾರೂ ಬಯಸುವುದಿಲ್ಲ—ಅವನೆಂದರೆ ದೊಡ್ಡ ಆಸ್ತಿ. ಅವನ ಮನವೊಲಿಸಿದರೆ, ಕಲ್ಯಾಣ ರಾಷ್ಟ್ರವನ್ನು ಕಟ್ಟುವ ಕನಸನ್ನು ನನಸಾಗಿಸುವುದು ಸಾಧ್ಯ; ಯುದ್ಧದಲ್ಲಿ ಅಜೇಯರಾಗುವಂತೆ ಶಕ್ತಿ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳುವುದೂ ಸಾಧ್ಯ. ಆದುದರಿಂದ ಅವನ ಕಾರ್ಖಾನೆಗಳನ್ನು ಅವನಿಗೇ ಮಿತ್ರ ರಾಷ್ಟ್ರಗಳು ಬಿಟ್ಟು ಕೊಟ್ಟಿವೆ. ಕೇವಲ ಕಲ್ಲಿದ್ದಲು ಮತ್ತು ಉಕ್ಕಿನ ಕಾರ್ಖಾನೆಗಳನ್ನು ಮಾತ್ರ ಅವನಿಂದ ಅಪಹರಿಸಿ ಕೊಂಡಿವೆ ಜರ್ಮನಿಯ ಪುನರುತ್ಥಾನ ಮಿತ್ರ ರಾಷ್ಟ್ರಗಳಿಗೆ ಅಪಾಯವನ್ನುಂಟು ಮಾಡಬಾರದೆಂಬುದೇ ಈ ಎಚ್ಚರಿಕೆಯನ್ನು ತೆಗೆದುಕೊಂಡುದರ ಉದ್ದೇಶ. ಹೀಗಾಗಿ ರೆಕ್ಕೆ ಇಲ್ಲದ ಪಕ್ಷಿಯಂತೆ ಕ್ರುಪ್ಸ ತೋರುತ್ತಾನೆ—ಆದುದರಿಂದ ಅವನ ಅಸ್ಖಲಿತ ಪ್ರತಿಭೆ ಹೊಸತೊಂದು ನಿರ್ಗಮ ಮಾರ್ಗವನ್ನು ಕಂಡು ಕೊಂಡು, ತನ್ಮೂಲಕ ಸ್ವಯಂ ವ್ಯಕ್ತಗೊಳ್ಳಲು ಹವಣಿಸಿದೆ. ದಕ್ಷಿಣ ಆಫ್ರಿಕಕ್ಕೆ ಒಂದು ಕೋಟಿ ಬೆಲೆ ಬಾಳುವ ರೈಲ್ವೆ ಯಂತ್ರಗಳನ್ನು ಕ್ರುಪ್ಸ ಒದಗಿಸಿದನು. ಯುಗೊಸ್ಲಾವಿಯಕ್ಕೆ ಫಲವರ್ಧಕಗಳನ್ನು ಉತ್ಪಾದಿಸುವ ಕಾರ್ಖಾನೆಗಳನ್ನು ನೀಡಿದನು ಗ್ರೀಸಿಗೆ ನಿಕ್ಕೆಲ ಲೋಹ ತಯಾರಿಸುವ ಕೇಂದ್ರವನ್ನು ಕಟ್ಟಿಕೊಟ್ಟನು. ತುರ್ಕಸ್ಥಾನಕ್ಕೆ ಬಾಸಫೋರಸದಿಂದ ಕಟ್ಟಿಸಿದ ಮೊದಲನೇ ಸೇತುವೆ ಕಾಣಿಕೆಯಾಗಿ ಬಂತು. ಇದೀಗ ಭಾರತಕ್ಕೂ ಅವನು ದೊಡ್ಡ ಉಪಕಾರವೆಸಗುತಿದ್ದು—ಪರಿಣಾಮದಲ್ಲಿ ವರ್ಷಕ್ಕೆ ಐದುಲಕ್ಷ ಟನ್ನುಗಳಷ್ಟು ಉಕ್ಕನ್ನು ಉತ್ಪಾದಿಸಬಲ್ಲ ದೊಡ್ಡದೊಂದು ಕಾರ್ಖಾನೆ ನಮ್ಮ ದೇಶದಲ್ಲಿ ತಲೆಎತ್ತುತ್ತದೆ. ಹಿಂಸಾತ್ಮಕ ಕೃತ್ಯಗಳಿಗೆಯೇ ಪ್ರೋತ್ಸಾಹಕೊಡುತಿದ್ದ ಜೀವನದಲ್ಲಿ ಜಿಗುಪ್ಸೆಬಂದು, ಕ್ರುಪ್ಸ ಈಗ ಜನಹಿತದ ಯೋಜನೆಗಳ ಕಡೆಗೆ ಗಮನ ನೀಡುತ್ತಾ, ತನ್ನ ಅಪಾರ ಧನಸಂಚಯವನ್ನೂ ತಜ್ಞರ ಬುದ್ಧಿವಂತಿಕೆಯನ್ನೂ ಹಿಂದುಳಿದ ದೇಶಗಳ ಅಭಿವೃದ್ಧಿಗೋಸ್ಕರ ವಿನಿಯೋಗಿಸುವ ದೃಢ ನಿರ್ಧಾರಕ್ಕೆ ಬಂದಿರುವಂತೆ ತೋರುತ್ತದೆ. ಬದುಕಿನ ವಿರಳಿತಗಳ ಪೂರ್ಣ ಅನುಭವ ಮಾಡಿಕೊಂಡಿರುವ ಈ ಜೀವಕ್ಕೆ ಹೊಸ ನಿಲುವು ತೃಪ್ತಿ ತಂದು ಕೊಟ್ಟೀತು. ಕೂಲಿಕಾರರ ಸುಖ ಕಷ್ಟಗಳನ್ನು ಕೇಳುತ್ತಾ ತನ್ನ ಅರೆವಾಸಿ ಸಮಯವನ್ನು ವ್ಯಯಿಸುವ ಕ್ರುಪ್ಸನ ಹೃದಯ ಉಕ್ಕಿನ ಕಾಠಿಣ್ಯಕ್ಕೆ ತೀರ ವಿರುದ್ಧವಾದ ಕೋಮಲ ಭಾವದಿಂದ ತುಂಬಿ ತುಳುಕುತ್ತಿದೆ. ಇಂತಹ ವ್ಯಕ್ತಿ ತನ್ನ ಪ್ರತಿಭೆಯ ಪ್ರದರ್ಶನಕ್ಕೆ ಹಿಂದುಳಿದ ದೇಶಗಳ ಪ್ರಗತಿಯ ಕ್ಷೇತ್ರವನ್ನು ಆರಿಸಿಕೊಂಡುದು ಮೆಚ್ಚಿಗೆಯ ವಿಷಯ.

ರೂರಕೇಲಾದ ಕಾರಖಾನೆ

ಭಾರತ ಸರಕಾರದವರು ಒಡಿಸಾ ರಾಜ್ಯದ ರೂರಕೇಲಾದಲ್ಲಿ ಈ ನೂತನ ಕಾರ್ಖಾನೆಯನ್ನು ಕಟ್ಟಿಸಲು ನಿರ್ಧರಿಸಿರುವರು. ಕ್ರುಪ್ಸ ಮತ್ತು ಡಿಮಾಗ ಕಂಪೆನಿಗಳೊಡನೆ ಒಂದು ಒಡಂಬಡಿಕೆಯನ್ನು ಸರಕಾರ ಮಾಡಿಕೊಂಡಿದ್ದು, ಕಾರ್ಖಾನೆಗೋಸ್ಕರ ೧೦೦ ಕೋಟಿ ರೂಪಾಯಿಗಳ ಬಂಡವಾಳವುಳ್ಳ "ಹಿಂದುಸ್ಥಾನ್ ಸ್ಟೀಲ್ ಲಿಮಿಟೆಡ್" ಎಂಬ ಹೆಸರಿನ ಸಂಸ್ಥೆಯೊಂದು ಅಸ್ತಿತ್ವಕ್ಕೆ ಬರುವುದು. ಈ ಕಂಪೆನಿಯಲ್ಲಿ ನೂರಕ್ಕೆ ಇಪ್ಪತ್ತರಷ್ಟು ಪಾಲುಗಳನ್ನು ಜರ್ಮನಿಯ ಸಂಸ್ಥೆಗಳು ಒದಗಿಸುತ್ತವೆ. ಉಳಿದ ಅಂಶವನ್ನು ಭಾರತ ಸರಕಾರ ನೀಡುತ್ತದೆ. ಹೀಗೆ ಸ್ಥಾಪಿಸಲ್ಪಡುವ ಕಾರ್ಖಾನೆಯ ನಿರ್ಮಾಣಕ್ಕೆ ಸುಮಾರು ೭೧ ಕೋಟಿ ರೂಪಾಯಿಗಳ ವೆಚ್ಚ ಬರುತ್ತದೆ. ಇಂತಹ ಕಾರ್ಖಾನೆಯನ್ನು ತಮ್ಮ ರಾಜ್ಯದ ಗಡಿಯೊಳಗೆಯೇ ಸ್ಥಾಪಿಸಬೇಕೆಂದು ಭಾರತದ ನಾಲ್ಕು ರಾಜ್ಯ ಸರಕಾರಗಳು ಪರಸ್ಪರ ಸ್ಪರ್ಧೆಯಲ್ಲಿ ಇಳಿದು ಕೇಂದ್ರ ಸರಕಾರಕ್ಕೆ ಮನವಿಗಳನ್ನು ಒಪ್ಪಿಸಿದ್ದವು. ಬಿಹಾರದ ಸಿಂಧ್ರಿ, ಪಶ್ಚಿಮ ಬಂಗಾಳದ ದುರ್ಗಾಪುರ, ಮಧ್ಯ ಪ್ರದೇಶದ ಬಿಲಹಾಯಿ ಮತ್ತು ಒಡಿಸಾದ ರೂರಕೇಲಾ—ಈ ನಾಲ್ಕು ಸ್ಥಳಗಳಲ್ಲಿ ಯಾವುದು ಉಕ್ಕಿನ ಕಾರ್ಖಾನೆಯನ್ನು ಸ್ಥಾಪಿಸಲು ಅತ್ಯುತ್ತಮವಾದದ್ದು ಎಂಬುದನ್ನು ನಿರ್ಧರಿಸಲು ಜರ್ಮನ ತಜ್ಞರು ಪರಿಶೀಲನೆಗಳನ್ನು ಕೈಗೊಂಡಾಗ ಈ ಸ್ಪರ್ಧೆ ತುಂಬ ಬಿರುಸಾಯಿತು. ಆಯಾ ಸರಕಾರಗಳೊಂದಿಗೆ ಮತ್ತು ಕೇಂದ್ರದ ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿ ಸ್ಥಳ ಸಂದರ್ಶನಗೈದು, ತಮ್ಮ ಇಲ್ಲಿಯ ಹಾಗೂ ಜರ್ಮನಿಯಲ್ಲಿರುವ ತಜ್ಞರ ಅಭಿಪ್ರಾಯಗಳನ್ನು ತೂಗಿ ನೋಡಿ ರೂರಕೇಲಾದಲ್ಲಿ ಉಕ್ಕಿನ ಕಾರ್ಖಾನೆ ಸ್ಥಾಪಿಸಲು ಇವರು ಭಾರತ ಸರಕಾರಕ್ಕೆ ಸೂಚಿಸಿದರು. ಭಾರತ ಸರಕಾರವು ಆಯಾ ಸರಕಾರಗಳ ಅಭಿಪ್ರಾಯವನ್ನೂ, ಅಲ್ಲಿಯ ಮುಖ್ಯ ಮಂತ್ರಿಗಳು ವ್ಯಕ್ತಗೊಳಿಸಿದ ವಿಚಾರವನ್ನೂ, ಜರ್ಮನ ತಜ್ಞರ ವರದಿಯ [illegible] ಸೂಕ್ಷ್ಮವಾಗಿ ಅವಲೋಕಿಸಿತ್ತಲ್ಲದೆ ಉತ್ಪಾದನಾ ಮಂತ್ರಿ ಶ್ರೀ. ಕೆ. ಸಿ ರೆಡ್ಡಿಯವರು ಸ್ವತಃ ಸ್ಥಳ

(೧೧ನೇ ಪುಟ ನೋಡಿರಿ)

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ: ೧೯೩೫.] [ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ಭಾರತದ ಸುಭದ್ರ ವಿಮಾ ಕಂಪೆನಿಗಳಲ್ಲಿ "ಕೆನರಾ ಮ್ಯೂಚುವಲ್" ಎಣೆ ಇಲ್ಲದ ವಿಶಿಷ್ಟ ಸ್ಥಾನವನ್ನು ಗಳಿಸಿದೆ. ಇದು ಮ್ಯೂಚುವಲ್ ಕಂಪೆನಿಯಾಗಿ ಘಟಿತವಾಗಿದ್ದು, ಪಾಲುದಾರ ಭಂಡವಳಿಗರಿಲ್ಲದಿರುವುದರಿಂದ, ಕಂಪೆನಿಯ ಸರ್ವ ಲಾಭವನ್ನೂ ಹಕ್ಕು ಹೊಂದಿದ ಪಾಲಿಸಿದಾರರೇ ತಮ್ಮಲ್ಲಿ ಹಂಚಿಕೊಳ್ಳುವರು. ಪ್ರಾಗತಿಕ ಬಿಗುಮಾನದ ತಳಹದಿಯ ಮೇಲೆ ನಡೆಸಿದ ತನ್ನೆಲ್ಲಾ ವಿಮಾ ಗಣನೆಗಳಲ್ಲಿ ಉಳಿತಾಯವನ್ನು ತೋರಿಸಿದುದು ಮಾತ್ರವಲ್ಲದೆ, ಸ್ಥಾಪಿತವಾದಂದಿನಿಂದಲೂ ಇದು ಬೋನಸು ಹಂಚಿದೆ. ಪಾಲಿಸಿದಾರರ ಹಿತದೃಷ್ಟಿಯೇ ಧ್ಯೇಯವಾಗುಳ್ಳ ಈ ಪ್ರಗತಿಶೀಲ ಮ್ಯೂಚುವಲ್ ಕಂಪೆನಿಯಲ್ಲಿ ಇಂದೇ ವಿಮೆ ಇಳಿಸಿ, ನಿಮ್ಮ ಕುಟುಂಬದ ಭದ್ರತೆಯನ್ನು ಕಾಯ್ದುಕೊಳ್ಳಿರಿ.

THE CANARA MUTUAL ASSURANCE COMPANY, LTD.,

Estd. 1935] [Head Office: UDIPI, S. INDIA.



ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಷಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಒಕ್ಕಿ ನಾಶಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. ೨—೮—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಸಾರ್ವಜನಿಕರಿಗೆ ಸಂಚಾರಿ ಬೇಂಕುಗಳ ಸೇವೆ

ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚಿನ ಪ್ರಯೋಜನ ನೀಡುವ ಪ್ರಯೋಗ

ಆಧುನಿಕ ಅನುಕೂಲತೆಗಳನ್ನು ಲೆಕ್ಕಿಸುವಾಗ—ಹಣದ ವ್ಯವಹಾರವನ್ನು ನಡೆಸುವ ಬೇಂಕುಗಳಿಗೆ ಅಗ್ರಸ್ಥಾನ ಸಲ್ಲಬೇಕಾಗುತ್ತದೆ. ಅರ್ಥಮಂಡಲದ ನಾನಾ ಬಗೆಯ ಚಟುವಟಿಕೆಗಳ ಮೇಲೆ ಬೇಂಕುಗಳು ಮಾಡುವ ಪರಿಣಾಮ ಜನಜೀವನದ ಮೇಲೆ ಬೇಂಕುಗಳು ಇಟ್ಟುಕೊಳ್ಳುವ ನಿಯಂತ್ರಣ ಮುಂತಾದವುಗಳ ಪರಿಚಯ ಇರುವ ಯಾರೇ ಆದರೂ—ಬೇಂಕಿನ ವಹಿವಾಟು ಅರ್ವಾಚೀನ ನಾಗರಿಕತೆಯ ಮುಖ್ಯಾಂಗವೆಂಬುದನ್ನು ಒಪ್ಪುವುದು ನಿಶ್ಚಯ. ಈ ಬೇಂಕುಗಳು ಇದುವರೆಗೆ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ವ್ಯವಹಾರ ಸಾಗಿಸುತ್ತಿದ್ದವು—ಅವುಗಳ ಕಾರ್ಯಾಲಯವೂ ಈ ನಗರಗಳಲ್ಲಿ ಇದ್ದು, ಬೇಂಕಿನ ಸೌಕರ್ಯದ ಲಾಭ ಪಡೆಯಬಯಸುವವರು ಅಲ್ಲಿಗೆ ಬಂದು ತಮ್ಮ ಕೆಲಸ ಮುಗಿಸಿಕೊಡುವ ಸಂಪ್ರದಾಯ. ಆದರೆ, ದ್ವಿತೀಯ ಮಹಾಯುದ್ಧದ ಬಳಿಕ, ಬೇಂಕುಗಳು ಕೆಲಸಮಾಡುವ ವಿಧಾನ ಮತ್ತು ಅವುಗಳ ಕಾರ್ಯಾಲಯದ ರಚನೆಯ ಬಗೆಯಲ್ಲಿ ಪ್ರಗತಿಪರ ಪರಿವರ್ತನೆಗಳನ್ನು ಕೈಗೂಡಿಸಲಾಯಿತು. ಇದರ ಪರಿಣಾಮವಾಗಿಯೇ, ಇಂದು ಬ್ರಿಟನ್ನಿನಲ್ಲಿರುವ ದೊಡ್ಡ ದೊಡ್ಡ ಬೇಂಕುಗಳು ಮಾರ್ಗದಲ್ಲಿ ಗಾಲಿಯ ಮೇಲೆ ಓಡಾಡುವ ವಾಹನಗಳ ಮೇಲೆ ತಮ್ಮ ಶಾಖೆಗಳನ್ನು ತೆರೆದು, ಜನತೆಯ ಅತ್ಯಂತ ಸಮೀಪಕ್ಕೆ ಬೇಂಕಿನ ಸೌಕರ್ಯಗಳನ್ನು ಒದಗಿಸಿ, ತಮ್ಮ ಕಾರ್ಯಕ್ಷೇತ್ರವನ್ನು ವ್ಯಾಪಕಗೊಳಿಸಿವೆ; ಮಾತ್ರವಲ್ಲ, ಬೇಂಕುಗಳಿಂದ ದೇಶಕ್ಕೆ ಆಗುವ ಉಪಕಾರದ ಮೊತ್ತವನ್ನೂ ಈ ಉಪಾಯದಿಂದ ಹೆಚ್ಚಿಸಿಕೊಂಡಿವೆ.

ಸುಲಭ ಸಾಧ್ಯವಾದ ಸೌಕರ್ಯ

ಬೇಂಕುಗಳು ಜನರಿಂದ ಬಡ್ಡಿಯ ಮೇಲೆ ಹಣವನ್ನು ಠೇವಣಾತಿಯಾಗಿ ಪಡೆದುಕೊಂಡು, ಹಣದ ಅಗತ್ಯ ಬಿದ್ದವರಿಗೆ ಯೋಗ್ಯ ಭದ್ರತೆಯ ಮೇಲೆ ಸಾಲ ಕೊಡುತ್ತವೆ ಎಂಬ ಸಂಗತಿ ಎಲ್ಲರಿಗೂ ಗೊತ್ತಿದೆ. ಆದರೆ, ಈಗಿನ ಬೇಂಕುಗಳ ವಹಿವಾಟು ಇಷ್ಟಕ್ಕೆ ಮುಗಿಯುವುದಿಲ್ಲ—ಅವು ತಮ್ಮ ಗಿರಾಕಿಗಳ ಪರವಾಗಿ ನಿರ್ವಹಿಸುವ ಇತರ ಅನೇಕ ನಮೂನೆಯ ಕೆಲಸಗಳುಂಟು. ಇಂದು ಬೇಂಕನ್ನು ಆಶ್ರಯಿಸುವವರು ಅದು ಕೊಡುವ ಬಡ್ಡಿ ಮತ್ತು ನೀಡಬಹುದಾದ ಸಾಲದ ಪ್ರಮಾಣವನ್ನಷ್ಟೆ ದೃಷ್ಟಿಯಲ್ಲಿಟ್ಟು ಕೊಂಡಿಲ್ಲ. ಆದುದರಿಂದ ಬೇಂಕಿನಿಂದ ದೊರೆಯುವ ನಾನಾ ವಿಧದ ಪ್ರಯೋಜನವನ್ನು ಪಡೆಯಲು ಹೆಚ್ಚಿನವರು ಆತುರರಾಗಿರುವರು. ಬ್ರಿಟನ್ನಿನಂತಹ ಸುಶಿಕ್ಷಿತರ ದೇಶದಲ್ಲಿ ಬೇಂಕುಗಳ ಮಹತ್ವವನ್ನು ಮನಗಂಡ ನಾಗರಿಕರು ಸಹಜವಾಗಿಯೇ ಅವುಗಳ ಸೇವೆಯನ್ನು ಒದಗಿಸಿಕೊಳ್ಳಲು ಆತುರ ವ್ಯಕ್ತಪಡಿಸುವರು. ಹಾಗೆಂದು ಹಳ್ಳಿಯ ಮೂಲೆಯಿಂದ ಪೇಟೆ ಪಟ್ಟಣಗಳಿಗೆ ನಡೆದು ಬರುವುದು ಎಲ್ಲರಿಗೂ ಸುಲಭವಾಗಲಾರದು. ಇದರಿಂದ ಬೇಂಕಿನ ಸೌಕರ್ಯ ಬೇಕೆಂದೆನಿಸಿದರೂ—ಅದು ಸುಲಭದಲ್ಲಿ ನಮ್ಮ ಮನೆಬಾಗಿಲಿನಲ್ಲಿ ದೊರೆಯುತ್ತಿಲ್ಲವಲ್ಲ ಎಂಬ ಕಾರಣದಿಂದ ಸಹಸ್ರಾರು ಜನರು ಬೇಂಕಿನ ಸೌಕರ್ಯಗಳಿಂದ ವಂಚಿತರಾಗಬೇಕಾಗುವುದು. ಇದು ಸ್ವತಃ ಬೇಂಕುಗಳ ಪ್ರಗತಿಗೆ ಮಾತ್ರವಲ್ಲ, ದೇಶದ ಅಭ್ಯುದಯಕ್ಕೂ ಹಿತವಲ್ಲ. ಆದುದರಿಂದ ಸಾಮಾನ್ಯಜನರ ಕೈಯಳವಿಗೂ ಬೇಂಕಿನ ಸೌಕರ್ಯ ದೊರೆಯಬೇಕೆಂಬುದಕ್ಕಾಗಿ ಪ್ರಗತಿಪರ ಬೇಂಕುಗಳು ಹೊಸ ಹೊಸ ಉಪಾಯಗಳನ್ನು ಹುಡುಕುತ್ತವೆ. ಉಡುಪಿಯ ಸಿಂಡಿಕೇಟು ಬೇಂಕು "ಪಿಗ್ಮಿ" ಡಿಪಾಜಿಟ್ ಯೋಜನೆಯೊಂದನ್ನು ಕೈಗೊಂಡು, ಬಡವರಲ್ಲಿ ಬಡವರೂ ಬೇಂಕಿನ ಬಂಧುಗಳಾಗುವಂತೆ ನೋಡಿಕೊಂಡುದನ್ನು ಇದಕ್ಕೆ ನಿದರ್ಶನವಾಗಿ ಕೊಡಬಹುದು. ಹೀಗಿರುವಾಗ ಬ್ರಿಟನ್ನಿನಲ್ಲಿ ಕೆಲಸಮಾಡುವ ಬೇಂಕುಗಳು ತುಂಬ ಪ್ರಭಾವಿಯಾದ ಹೊಸ ಏರ್ಪಾಡುಗಳನ್ನು ಮಾಡಲೆಳಸಿರುವುದು ಆಶ್ಚರ್ಯವಲ್ಲ.

ಹಳ್ಳಿಯ ಕಾರ್ಯಕ್ಷೇತ್ರ

ಸಾರಿಗೆ ಸೌಕರ್ಯಗಳು ಹಳ್ಳಿಗಳಲ್ಲಿ ಸಾಕಷ್ಟು ಚೆನ್ನಾಗಿಲ್ಲ. ಆದರೂ ಸಾಮಾನ್ಯರಸ್ತೆಯೊಂದು ಹಳ್ಳಿಯನ್ನು ಮುಟ್ಟುವುದಾದರೆ, ಅದರ ಮೇಲೆ ಈ ಸಂಚಾರಿ ಬೇಂಕುಗಳು ಓಡಿಯಾಡಿ, ಹಳ್ಳಿಯ ರೈತನನ್ನು ತನ್ನ ಬಳಿಗೆ ಕರೆಯುತ್ತವೆ. ಪೇಟೆ–ಪಟ್ಟಣಗಳ ಜನರಲ್ಲಿ ಮಾತ್ರವೇ ಹಣ ಇರುವುದಲ್ಲ; ಅವರಿಗೇ ಹಣದ ಅಗತ್ಯ ಉಂಟಾಗುವುದೂ ಅಲ್ಲ. ಹಳ್ಳಿಯ ರೈತನಲ್ಲೂ ಹಣವಿದೆ–ಅವನಿಗೂ ಹಣ ಬೇಕಾಗುತ್ತದೆ. ಆದುದರಿಂದ ಬೇಂಕುಗಳು ಏಳಿಗೆಯೊಂದಬೇಕಾದರೆ, ಹಳ್ಳಿಗರ ನಡುವೆ ಹಳ್ಳಿಯ ಮೂಲೆ ಮೂಲೆಯಲ್ಲೂ ಅವು ಕೆಲಸ ಮಾಡುವುದಕ್ಕೆ ತೊಡಗಬೇಕು. ಸಿಂಡಿಕೇಟು ಬೇಂಕಿನವರು ಜಿಲ್ಲೆಯ ಪ್ರಮುಖ ಗ್ರಾಮಕೇಂದ್ರಗಳಲ್ಲಿ ಹಳ್ಳಿಯ ಶಾಖೆಗಳನ್ನು ತೆರೆದು ಚೊಕ್ಕ ಕೆಲಸ ಮಾಡಲು ಹವಣಿಸಿದ್ದಾರೆ. ಇವರ ಮಾದರಿಯನ್ನು ಬೇರೆ ಬೇಂಕುಗಳೂ ಅನುಸರಿಸುವುದಲ್ಲದೆ, ಬ್ರಿಟನ್ನಿನಲ್ಲಿ ಆಚರಣೆಗೆ ತರಲಾದ "ಗಾಲಿಗಳ ಮೇಲೆ ಓಡುವ ಬೇಂಕು"ಗಳನ್ನು ಸ್ಥಾಪಿಸಲೂ ನೋಡುವುದೊಳಿತು. ಈಗಾಗಲೇ ಅನೇಕ ಪ್ರದರ್ಶನ ಕೇಂದ್ರಗಳಲ್ಲಿ ಉತ್ಸವ ಮತ್ತು ಮೇಳಗಳಲ್ಲಿ ನಮ್ಮವರು ಬೇಂಕಿನ ತಾತ್ಕಾಲಿಕ ಶಾಖೆಗಳನ್ನು ತೆರೆದು ಆಗಂತುಕರಿಗೆ ಹಣದ ವ್ಯವಹಾರದಲ್ಲಿ ನೆರವಾಗುವುದನ್ನು ನೋಡಿದ್ದೇನೆ. ಬ್ರಿಟನ್ನಿನಲ್ಲಿ ಪ್ರತಿಯೊಂದೂ ಔದ್ಯೋಗಿಕ, ಕೃಷಿ ಹಾಗು ತತ್ಸಂಬಂಧದ ಪ್ರದರ್ಶನ ಕೇಂದ್ರಗಳಲ್ಲಿ ಭಾಗವಹಿಸುವ ಎಲ್ಲರಿಗೂ ಬೇಂಕುಗಳು ತಮ್ಮ ಸೇವೆಯನ್ನು ಒದಗಿಸುತ್ತವೆ.

ಬ್ರಿಟನ್ನಿನ ಯಶಸ್ವಿ ಪ್ರಯೋಗ

ಸ್ಕೋಟ್‌ಲೇಂಡಿನಲ್ಲಿ ೧೯೪೬ನೇ ನವಂಬರ ಮಾಸದಲ್ಲಿ ಒಂದು ಸ್ಪ್ಯಡ ಬೇಕರ ವಾಹನದ ಮೇಲೆ ನೇಶನಲ ಬೇಂಕಿನವರು ಓಡಾಡುವ ತಮ್ಮ ಶಾಖೆಯೊಂದನ್ನು ತೆರೆದರು. ಇದರಲ್ಲಿ ಬೇಂಕಿನ ಇಬ್ಬರು ನೌಕರರು ಕೆಲಸ ನಿರ್ವಹಿಸುತ್ತಿದ್ದರು. ಈ ಶಾಖೆ ತಮ್ಮ ಊರಿಗೆ ಯಾವಾಗ ಬರುವುದೆಂಬುದನ್ನು ಮುಂದಾಗಿ ಹಳ್ಳಿಗರು ತಿಳಿದಿರಬೇಕೆಂಬ ಉದ್ದೇಶದಿಂದ

(೧೨ನೇ ಪುಟ ನೋಡಿರಿ)

Visit

K. R. K. SHET DIAMOND MART

Opposite Government College, MANGALORE.

For all your requirements in Diamonds and Jewellery Lucky Birth Stones are also available.

Prop: **K. K. R. SHET.**

ಮುಖ್ಯ ಪ್ರಕಟಣೆ

"ಆನಂದ ಸುಧಾ" ನಮ್ಮ ಆನಂದ ಸುಧಾ ಸಮಸ್ತ ಜನಗಳಿಗೆ ಬಲವನ್ನು ಬಿಂದ ಪುಷ್ಟಿಯನ್ನು ಕಲಗಿಸುವುದು. ಅನೇಕ ವ್ಯಾಧಿಗಳನ್ನು ನಾಶಮಾಡುತ್ತೆ. ೧೫ ದಿನಗಳಿಗೆ ಸರಿಹೋಗುವ ೮ ಔ. ಸೀಸೆ ೧ಕ್ಕೆ ರೂ. 3—0—0.

"ಸ್ತ್ರೀ ಸುಧಾ" ನಮ್ಮ ಸ್ತ್ರೀ ಸುಧಾ ಸ್ತ್ರೀಯರಿಗೆ ಸಂಭವಿಸುವ ಸಮಸ್ತ ಗರ್ಭಾಶಯ ವ್ಯಾಧಿಗಳನ್ನು ಋತು ದೋಷಗಳನ್ನು, ಋತು ನೋವು, ಸರಿಯಾಗಿ ಬಹಿಷ್ಟೆ ಆಗದಿರುವುದು ಮೊದಲಾದ ಸಮಸ್ತ ವ್ಯಾಧಿಗಳನ್ನು ನಾಶಮಾಡುವುದು. ಸಂತಾನವನ್ನು ಕಲಗಿಸುವುದು. ಒಂದು ತಿಂಗಳಿಗೆ ಸರಿಹೋಗುವ ೧ ತೊಲದ ಔಷಧಿ ರೂ. 4—0—0.

"ಬಾಲ ಸುಧಾ" ಇದು ಸಣ್ಣ ಬಾಲಕರಿಗೆ ಅಜೀರ್ಣ, ಜ್ವರ, ಕೆಮ್ಮು, ಶೀತ, ಮಲಬದ್ಧತೆ, ಹೆಚ್ಚಾಗಿ ಭೇದಿ ಆಗುವಿಕೆ, ಮಕ್ಕಳು ಕ್ಷೀಣವಾಗಿ ಕೈಕಾಲು ಸಣ್ಣವಾಗುವಿಕೆ. ಲಿವರ್–ಬೆಳೆಯುವುದು, ಈ ಎಲ್ಲಾ ವ್ಯಾಧಿಗಳಿಗೆ ಬ್ರಹ್ಮಾಸ್ತ್ರವಾಗಿದೆ. ಹೀಗಿರುವ ಔಷಧಿ ಇನ್ನೊಂದು ಇಲ್ಲವೆಂದು ಹೇಳಬಹುದು. ಈ ಔಷಧಕ್ಕೆ [illegible] ಯೋಗ್ಯತಾ ಪತ್ರಗಳನ್ನು ಪಡೆದಿರುವುದಲ್ಲದೆ ದೇಶದಲ್ಲಿ ಅನೇಕ [illegible] ಅಭಿವೃದ್ಧಿಯಾಗಿರುತ್ತದೆ. ಸುಮಾರು ೧ ತಿಂಗಳಿಗೆ ಸರಿ ಹೋಗುವ ೫೦ ಮಾತ್ರೆಗಳ [illegible] ರೂ. 1—0—0.

ತಯಾರಕರು:

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್, ರಾಜಮಂಡ್ರಿ.

ಬೆಂಗಳೂರು ಏಜನ್ಸಿ:

ಸುದರ್ಶನ ಆಯುರುವೇದ ವೈದ್ಯಶಾಲ, ನಗರ್ತರ ಪೇಟೆ, ಬೆಂಗಳೂರು-2.

ಶಾಂತ ವಾತಾವರಣದಲ್ಲಿ ಅತ್ಯಾಧುನಿಕ ಮಾದರಿಯ ಮೇಲ್ದರ್ಜೆಯ

—ವಸತಿ ಮತ್ತು ಭೋಜನಗೃಹ—

ಸ್ವಸ್ತಿಕ್ ಲೋಜ್

ಪಳನೀರು ರಸ್ತೆ, ಮಂಗಳೂರು

❖ [illegible] ಸಿಂಗಲ್ ಮತ್ತು ಡಬ್ಬಲ್ ಕೋಣೆಗಳು!

❖ [illegible] ಮತ್ತು [illegible] ಅನುಕೂಲತೆಗಳು!

❖ [illegible] ಭೋಜನ ಮತ್ತು ಉಪಾಹಾರ ತಯಾರಿಕೆ! [illegible] ಸಮಾಧಾನ ಪಡೆಯಿರಿ!!

AUCTION NOTICE

It is proposed to conduct the auction sale at 3 P. M. on 1-3-1954 of the right of purchasing milk from the District Livestock Farm, Koila Cattle Farm post, South Kanara for a period of one year commencing from 1—4—1954 to 31—3—1955, at the Office of the undersigned in the District Livestock Farm, Koila. The intending bidders may apply to this Office for full details enclosing a postal cover for reply.

Superintendent,
District Livestock Farm, Koila,
South Kanara.

NOTICE

In The Court of The District Munsif of Hosdurga (S. K.)

O. P. No 4/1954

Kizhakke Veetil Mani Amma... Petitioner

Meenakshi and another ...... Respondents

To

Whomsoever it may concern

The above application filed by the petitioner for issue of succession certificate in her name for the collection of debt due to deceased Kizhakke Veetil Kunhambu Gurukal stands posted to 5th March 1954.

(by Order of Court)

(Sd) C. M. Kunhambu Nair
Vakil for Petitioner

Hosdurg 17—2—54

ದಕ್ಷಿಣ ಕನ್ನಡ ಜಿಲ್ಲಾ ಕಲೆಕ್ಟರರ ಪ್ರಕಟಣೆ

1951ನೇ ಇಸವಿ ಫೆಬ್ರವರಿ ತಿಂಗಳ ತಾರೀಕು 16—2—1954ರಿಂದ 8—4—54 ರ ವರೆಗೆ ಹೊಸದುರ್ಗದಲ್ಲಿ ತೆರೆಯಲಾಗುವ [illegible] ಸಲ್ಲಿಸುವವರು ತಾ 20—2—54ರ ಒಳಗೆ ಜಿಲ್ಲಾ ಕಲೆಕ್ಟರಿಗೆ ಅರ್ಜಿ ಬರೆಕೊಳ್ಳ [illegible] ತೆರೆಯಲಾಗುವಲ್ಲಿ [illegible].

(Sd) C. V. Thomas
For Collector

ದ. ಕ. ಜಿಲ್ಲಾ ಕಲೆಕ್ಟರರ ಆಫೀಸು
ಮಂಗಳೂರು. 5—2—54

ಪ್ರತಿಪಕ್ಷದವರಿಂದ ಸರಕಾರದ ವರ್ತನೆಯ ಆಕ್ಷೇಪ

ರಾಷ್ಟ್ರಪತಿಗಳ ಭಾಷಣದ ಮೇಲೆ ತೀವ್ರ ಚರ್ಚೆ ಮತ್ತು ವಾಗ್ಯುದ್ಧ

ಪಾರ್ಲಿಮೆಂಟಿನ ಉಭಯ ಸಭೆಗಳ ಸಂಯುಕ್ತ ಅಧಿವೇಶನವನ್ನು ಉದ್ಘಾಟಿಸುವಾಗ ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ಮಾಡಿದ ಭಾಷಣದ ಮೇಲೆ ಚರ್ಚೆ ನಡೆದಾಗ-ಪ್ರತಿಪಕ್ಷದವರು ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಕ್ಷೇತ್ರಗಳಲ್ಲಿ 'ಸರಕಾರ ವಹಿಸಿದ ಧೋರಣವನ್ನು ಟೀಕಿಸುವುದು ಸಹಜ. ಪ್ರಧಾನಿ ನೆಹರೂ ಅನುಸರಿಸಿಕೊಂಡುಬಂದ ವಿದೇಶಾಂಗ ನೀತಿಯ ಟೀಕೆ ಮಾಡಿದವರು ಹೊಸತೇನನ್ನೂ ಹೇಳಲಿಲ್ಲ—ಅವೇ ಹಿಂದಿನ ಅಸಮಾಧಾನದ ಮಾತುಗಳಿಗೆ, ಅವೇ ಹಿಂದಿನ ಉತ್ತರಗಳನ್ನು ಸರಕಾರದ ಪರವಾಗಿ ನೀಡಲಾಯಿತು. ಪಾಕಿಸ್ತಾನದೊಡನೆ ಸಂಬಂಧವು ಹದಗೆಟ್ಟು ಸಾಗುತ್ತಿರುವುದಕ್ಕೆ ಕಮ್ಯುನಿಸ್ಟರೂ ಪ್ರಜಾಸೋಶಿಯಲಿಸ್ಟರೂ ಕಾಂಗ್ರೆಸಿನವರಷ್ಟೇ ದುಃಖ ಮತ್ತು ಕಳವಳವನ್ನು ವ್ಯಕ್ತಗೊಳಿಸಿದರು. ಮುಸ್ಲಿಂ ಲೀಗಿನ ಏಕಮೇವ ಪ್ರತಿನಿಧಿಯಾದ ಶ್ರೀ. ಬಿ. ಪೋಕರ ಇವರು ಪಾಕಿಸ್ತಾನಕ್ಕೆ ಅಮೇರಿಕೆಯು ನೀಡಲಿರುವ ಸೈನಿಕ ಸಹಾಯವನ್ನು ಕಟುವಾಗಿ ಟೀಕಿಸಿದರು. ಪಾಕಿಸ್ತಾನದ ಸ್ಥಾಪನೆಗೆ ಅವಿಭಾಜ್ಯ ಭಾರತದ ಮುಸ್ಲಿಮರೆಲ್ಲರ ಹೋರಾಟವೇ ಕಾರಣಭೂತವಾಗಿರುವುದೆಂಬ ಸಂಗತಿಯನ್ನು ಪಾಕಿಸ್ತಾನ ಮರೆಯಲಾಗದೆಂದು ಅವರು ಎಚ್ಚರಿಕೆ ಕೊಟ್ಟರು.

ಅಧ್ಯಾಪಕರ ಮುಷ್ಕರ

ಈ ಸಲ ಕಮ್ಯುನಿಸ್ಟ ಮತ್ತು ಪ್ರಜಾಸೋಶಲಿಸ್ಟ ಪಕ್ಷಗಳು ದೇಶದೊಳಗಿನ ಕೆಲವು ಘಟನೆಗಳಿಗೆ ಸರಕಾರವೇ ಹೊಣೆಯೆಂದು ಹೇಳುತ್ತಾ ನಿಲುವಳಿ ಸೂಚನೆಗಳನ್ನು ಮಂಡಿಸಲೆತ್ನಿಸಿ ವಿಫಲಗೊಂಡವು. ಕಲ್ಕತ್ತೆಯಲ್ಲಿ ಮಾಧ್ಯಮಿಕ ಶಾಲೆಗಳ ಶಿಕ್ಷಕರು ಹೂಡಿದ ಸಂಪಿನಸಂಬಂಧದಲ್ಲಿ ಕೇಂದ್ರ ಸರಕಾರ ಹಸ್ತಕ್ಷೇಪಮಾಡಬೇಕೆಂಬ ಒತ್ತಾಯವನ್ನು ವಿರೋಧಿ ಗುಂಪುಗಳು ಮಾಡಿದ್ದಲ್ಲದೆ, ಅಲ್ಲಿ ನಡೆದ ಗೋಳೀ ಬಾರಿನ ಪ್ರಕರಣವನ್ನು ಒಲವಾಗಿ ಖಂಡಿಸಿ, ಯೋಗ್ಯ ವಿಚಾರಣೆ ನಡೆಸಬೇಕೆಂದು ಸೂಚಿಸಿದರು. ಕುಂಭಮೇಳದಲ್ಲಿ ನೂರಾರು ಮಂದಿ ಮೃತ್ಯುವಿಗೀಡಾದುದನ್ನು ಪ್ರಸ್ತಾಪಿಸಿ, ಸರಕಾರದ ದುರ್ಲಕ್ಷ್ಯತನವೇ ಇದಕ್ಕೆ ಹೇತುವೆಂದು ಆರೋಪಿಸಿದರು. ಕಲ್ಕತ್ತೆಯ ಅಧ್ಯಾಪಕರ ಸಂಪಿನ ವಿಷಯದ ಚರ್ಚೆಗೆ ಪಾರ್ಲಿಮೆಂಟಿನಲ್ಲಿ ಅವಕಾಶ ದೊರೆಯಲಿಲ್ಲ—ಶಿಕ್ಷಣ ಮತ್ತು ಕಾಯಿದೆ ಸುವ್ಯವಸ್ಥೆಗಳನ್ನು ನೋಡಿಕೊಳ್ಳುವುದು ರಾಜ್ಯ ಸರಕಾರದ ಕೆಲಸವೆಂದು ಸಭಾಪತಿಗಳು ನಿರ್ಣಯಕೊಟ್ಟರು. ಪಶ್ಚಿಮ ಬಂಗಾಳ ಸರಕಾರವು ಪರಿಸ್ಥಿತಿಯ ನಿಯಂತ್ರಣಕ್ಕೋಸ್ಕರ ಮಿಲಿಟರಿಯನ್ನು ಕರೆದಿದ್ದರೆ, ಅದಕ್ಕೆ ಕೇಂದ್ರ ಹೊಣೆಯಾಗಲಾರದು — ಮಿಲಿಟರಿಯು ಆಗ ರಾಜ್ಯ ಸರಕಾರದ ಅಪ್ಪಣೆಯಂತೆ ನಡೆದುಕೊಳ್ಳುತ್ತದೆ ಎಂದವರು ಅಭಿಪ್ರಾಯಪಟ್ಟರು. ಅಧ್ಯಾಪಕರ ಮುಷ್ಕರವನ್ನು "ಶಾಂತಮಯವಾಗಿ ಸಾಗಿದ ಸಂಪು" ಎಂಬುದಾಗಿ ಕಮ್ಯುನಿಸ್ಟ ಸದಸ್ಯರು ವರ್ಣಿಸಿದಾಗ ಕಾಂಗ್ರೆಸ ಪಕ್ಷದ ಸದಸ್ಯರು ಆಶ್ಚರ್ಯಗೊಂಡವರಂತೆ "ಓಹೋ—ಓಹೋ-"ಎಂದು ವ್ಯಂಗ್ಯಉದ್ಗಾರ ಹೊರಡಿಸಿದರು. ನಿಲುವಳಿ ಸೂಚನೆಗೆ ಅವಕಾಶ ದೊರೆಯದಾಗ, ಅದಕ್ಕೆ ಪ್ರತಿಭಟನೆ ಸೂಚಿಸುತ್ತಾ "ನಾಚಿಕೆ, ನಾಚಿಕೆ" ಎಂದು ಕೂಗುತ್ತಾ ಕಮ್ಯುನಿಸ್ಟ ಸದಸ್ಯರು ಹೊರ ನಡೆದರು

ನಿಷೇಧಪರ ನಿರ್ಣಯ

ರಾಜ್ಯ ಪರಿಷತ್ತಿನಲ್ಲಿ ಕಮ್ಯುನಿಸ್ಟ ಪಕ್ಷದ ಧುರೀಣರು ಕಲ್ಕತ್ತೆಯ ಪ್ರಶ್ನೆಯನ್ನು ಎತ್ತಿದಾಗ 'ಸಭಾಪತಿಗಳು ಅಲ್ಲಿಯ ಘಟನೆಗಳನ್ನು ಚರ್ಚಿಸಲು ಅವಕಾಶ ನೀಡಿದರು. ಈ ಸಂಬಂಧದ ಕಾಗದ ಪತ್ರಗಳ ಬಗ್ಗೆ ಪ್ರತಿಪಕ್ಷದ ಕೆಲವರಿಂದ ಸೂಚನೆಗಳು ಬಂದಿವೆ. ಆದುದರಿಂದ ಕೇಂದ್ರಕ್ಕೆ ಶಿಕ್ಷಣ ಮತ್ತು ಕಾಯಿದೆ ಸುವ್ಯವಸ್ಥೆಗಳ ವಿಷಯ ಸಂಬಂಧಿಸಿರದಿದ್ದರೂ ಸಹ ಸಾಮಾನ್ಯ ಭಾವನೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಚರ್ಚೆಗೆ ವಿಶೇಷ ಅವಕಾಶವನ್ನು ಮಾಡಿಕೊಡುವೆನೆಂದು ಅವರು ತಿಳಿಸಿದರು. ಇದನ್ನು ಕೇಳಿದ ಲೋಕಸಭೆಯ ಪ್ರತಿಪಕ್ಷದ ಧುರೀಣರು, ಸರಕಾರದ ವಿರುದ್ಧ ನಿಷೇಧಪರ ಸೂಚನೆಯನ್ನು ಮಂಡಿಸಿದರು. "ಕಲ್ಕತ್ತೆಯಲ್ಲಿ ಘಟಿಸಿದ ಗಂಭೀರ ಸ್ವರೂಪದ ಘಟನೆಗಳ ಬಗ್ಗೆ ಚರ್ಚೆ ನಡೆಸಲು ರಾಜ್ಯ ಪರಿಷತ್ತಿನಲ್ಲಿ ಸಮ್ಮತಿ ಕೊಟ್ಟಿದ್ದರೂ ಈ ಸಭೆಯಲ್ಲಿ ಸರಕಾರವು ತಾನಾಗಿಯೇ ಆ ಬಗ್ಗೆ ಚರ್ಚೆ ನಡೆಯುವಂತೆ ಕ್ರಮವನ್ನು ಕೈಕೊಳ್ಳಲಿಲ್ಲ" ಎಂದು ಡಾ| ಲಂಕಾಸುಂದರಮರು ಆರೋಪಿಸಿದರು. ಇದು ತಾಂತ್ರಿಕವಾಗಿ ನಿಲುವಳಿ ಸೂಚನೆಯಾಗಿದ್ದರೂ ನಿಷೇಧಪರ ಸೂಚನೆಯಾಗಿಯೇ ಇದನ್ನು ತೆಗೆದುಕೊಳ್ಳುವುದಾಗಿ ಸಭಾಪತಿ ಮಾವಳಣಕರರು ಮುಂದಾಗಿ ತಿಳಿಸಿ, ಚರ್ಚೆಗೆ ಅವಕಾಶ ನೀಡಿದರು. ಸರಕಾರವು ಮೌನವಾಗಿ ಕುಳಿತುದೇಕೆ ಎಂಬ ಪ್ರಶ್ನೆಗೆ ಪ್ರಧಾನಮಂತ್ರಿಗಳು ಬಿರುಸಿನಿಂದಲೇ ಉತ್ತರಕೊಟ್ಟರು. "ಸಭಾಪತಿಗಳ ನಿರ್ಣಯವನ್ನು ಪ್ರತಿಭಟಿಸಿ ಒದರುತ್ತ ಕಿರುಚುತ್ತ ಕೂಗುತ್ತ ಹೊರಟುಹೋಗುವ ವಿರೋಧೀ ಪಕ್ಷದವರನ್ನು ಸುಮ್ಮನೆ ನೋಡುತ್ತ ಕೂಡುವುದೇ ಒಳಿತೆಂದು ತೋರಿತು" ಎಂದವರು ಕಮ್ಯುನಿಸ್ಟರ ಅಸಭ್ಯ ವರ್ತನೆಯನ್ನು ಖಂಡಿಸಿದರು. ರಾಜ್ಯಪರಿಷತ್ತಿನಲ್ಲಿ ಕಾಗದಪತ್ರಗಳ ಬೇಡಿಕೆಯನ್ನು ಮಂಡಿಸಲಾಯಿತು — ಅಂತಹ ಸೂಚನೆ ಲೋಕಸಭೆಯ ಮುಂದೆ ಇರಲಿಲ್ಲ. ಇಲ್ಲಿದ್ದುದು ನಿಲುವಳಿ ಸೂಚನೆ. ಇದನ್ನು ಕಿತ್ತುಹಾಕುವಾಗ ಅಧ್ಯಕ್ಷರಿಗೂ ನಿಲುವಳಿ ಸೂಚನೆ ಮಂಡಿಸಿದವರಿಗೂ ನಡೆದ ವಾದವಿವಾದದಲ್ಲಿ ಸರಕಾರದ ಪರವಾಗಿ ಮಾತನಾಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ — ಎಂಬುದಾಗಿ ಗೃಹಮಂತ್ರಿಗಳು ಸ್ಪಷ್ಟೀಕರಣವನ್ನು ಕೊಟ್ಟರು. ನಿಷೇಧಪರಸೂಚನೆಯು ಸರಕಾರೀ ಪಕ್ಷಕ್ಕೆ ೨೫೫ ವಿರುದ್ಧ ೬೬ ಮತಗಳಿಂದ ಪ್ರಚಂಡ ಪರಾಭವವನ್ನು ಹೊಂದಿತು.

ಕಮ್ಯುನಿಸ್ಟರ ಟೀಕೆ

ಕಮ್ಯುನಿಸ್ಟರ ವರ್ತನೆಯು ಪ್ರಜಾಪ್ರಭುತ್ವ ತತ್ವಕ್ಕೆ ವಿರುದ್ಧವಾದದ್ದು ಎಂದು ಕಾಂಗ್ರೆಸಿನ ಡಾ| ಸತ್ಯನಾರಾಯಣ ಸಿಂಹರು ಅಭಿಪ್ರಾಯ ವ್ಯಕ್ತಗೊಳಿಸಿದ್ದಲ್ಲದೆ "ಪ್ರಜಾಪ್ರಭುತ್ವದ ಶಾಂತ ವಾತಾವರಣಕ್ಕೆ ಹೊಂದಿಕೊಂಡು ಹೋಗಲಾರದ ಕಮ್ಯುನಿಸ್ಟ ಪಕ್ಷದ ಮೇಲೆ ನಿರ್ಬಂಧವನ್ನು ಏಕೆ ಹೇರಬಾರದು?" ಎಂದು ಪ್ರಶ್ನೆ ಹಾಕಿದರು ನಮ್ಮ ಜಿಲ್ಲೆಯ ಶ್ರೀ ಕೆ. ಸದಾನಂದ ಹೆಗ್ಡೆಯವರು ಕಳೆದ ಆರು ವರ್ಷಗಳಲ್ಲಿ ದೇಶದ ಆರ್ಥಿಕ ಪರಿಸ್ಥಿತಿಯಲ್ಲಿ ನಿಶ್ಚಿತವಾಗಿಯೂ ಸುಧಾರಣೆಯಾಗಿರುವುದೆಂದು ಹೇಳಿದ್ದಲ್ಲದೆ ಕಮ್ಯುನಿಸ್ಟರು ಈ ಅಭಿವೃದ್ಧಿಯನ್ನು ಕಂಡು ಮತ್ಸರಪಟ್ಟು ದ್ವೇಷಿಸುವರೆಂದು ನುಡಿದರು "ಸಂಪು ಹಾಗೂ ತೊಂದರೆ"ಗಳೇ ಕಮ್ಯುನಿಸ್ಟರ ಕಾರ್ಯಕ್ರಮಗಳೆಂದು ಅವರು ಟೀಕಿಸಿದರು. ಕಮ್ಯುನಿಸ್ಟ ಸದಸ್ಯರು ಉಪವಾಸ ಮತ್ತು ದುಃಖಗಳೇ ಕಾಂಗ್ರೆಸ ಪಕ್ಷದ ಆಡಳಿತದ ಫಲವೆಂದು ಹೇಳಿದುದಕ್ಕೆ ಕಮ್ಯುನಿಸ್ಟರು ದೇಶದ್ರೋಹಿಗಳೆಂದು ಕಾಂಗ್ರೆಸ ಸದಸ್ಯರು ಉತ್ತರ ಕೊಟ್ಟರು ಇಂತಹ ವಾಗ್ಯುದ್ಧಕ್ಕೆ ಸಭೆಯಲ್ಲಿ ಆತಂಕ ಬರಲಿಲ್ಲ—ಆದರೆ ಆಚಾರ್ಯ ಕೃಪಲಾನಿಯವರು ಕುಂಭಮೇಳದ ದುರಂತವನ್ನು ಎತ್ತಿಕೊಂಡು ಅಂಧಶ್ರದ್ಧೆಯ ಟೀಕೆಗೆ ತೊಡಗಿದಾಗ ಸಭಾಪತಿಗಳು ಕೃಪಲಾನಿಯವರ ಭಾಷಣದ ಕೆಲವು ಅಂಶಗಳು ಬಹು ಜನರ ಧಾರ್ಮಿಕ ಭಾವನೆಗಳನ್ನು ನೋಯಿಸುವಂತಿವೆಯಾಗಿ ಹೇಳಿ, ಸಭೆಯ ನಡವಳಿಕೆಯಿಂದ ಅದನ್ನು ಕಿತ್ತುಹಾಕಿದರು. ಅದರಂತೆ ಬೇರೊಂದು ರಾಜ್ಯದ ವರಿಷ್ಠಸ್ಥಾನಾಪನ್ನರ ವರ್ತನೆಯನ್ನು ಪ್ರತ್ಯೇಕ ಸೂಚನೆಯ ಮೂಲಕ ನಿವೇದಿಸಬಹುದಲ್ಲದೆ, ಚರ್ಚೆಯ ಕಾಲಕ್ಕೆ ಟೀಕಾ ವಾಕ್ಯಗಳನ್ನು ಉಚ್ಚರಿಸುವುದು ಸರಿಯಲ್ಲವೆಂದೂ ಅದಕ್ಕೆ ಅವಕಾಶ ಕೊಡುವುದಿಲ್ಲವಾಗಿಯೂ ಸಭಾಪತಿಗಳು ಕೃಪಲಾನಿಯವರಿಗೆ ತಿಳಿಸಿದರು

ಕುಂಭಮೇಳದ ದುರಂತ

ಕೃಪಲಾನಿಯವರು "ಕುಂಭಮೇಳದಲ್ಲಿ ಕಷ್ಟ ನಷ್ಟಗಳಿಗೆ ಗುರಿಯಾದವರ ಕುರಿತು ಸಹಾನುಭೂತಿಯನ್ನು ವ್ಯಕ್ತಪಡಿಸಿದರೆ ತೀರದು. ಈ ದುರ್ಘಟನೆಗಳಿಗೆ ನಾವು ಹೊಣೆಯಾಗಿದ್ದೇವೆಯೋ ಇಲ್ಲವೆ? ಅವು ಪುನಃ ಘಟಿಸದಂತೆ ನಾವು ಜಾಗರೂಕತೆಯಿಂದ ನಡೆಯಬೇಡವೆ? ಎಂಬೀ ವಿಷಯಗಳನ್ನು ವಿಚಾರಿಸುವುದು ಅಸತ್ಯ. ಕೇವಲ ರಾಜಕೀಯ ಉದ್ದೇಶಕ್ಕಾಗಿ ಕುಂಭಮೇಳದ ದುರಂತವನ್ನು ಪ್ರಸ್ತಾಪಿಸುತ್ತೇವೆನ್ನುವುದು ಸರಿಯಲ್ಲ" ಎಂದು ಹೇಳಿದರು. ಮುಂದೆ ಸಾಗುತ್ತಾ "ಗಂಗಾನದಿಯಲ್ಲಿ ಮುಳುಗಿದರೆ ಇಲ್ಲವೆ ಅದರ ನೀರನ್ನು ತಲೆಯ ಮೇಲೆ ಸಿಂಪಡಿಸಿಕೊಂಡರೆ ಪಾಪಕ್ಷಾಲನೆಯಾಗುವುದೆಂದು ನಾವೆಂದೂ ಭಾವಿಸಿರಲಿಲ್ಲ. ಇವು ಮೂಢನಂಬಿಕೆಯೆಂದು ನಾವು ತಿಳಿದಿದ್ದೆವು; ಮತ್ತದನ್ನು ಪ್ರತಿಭಟಿಸುತಿದ್ದೆವು. ಸಾವಿರಾರು ಬತ್ತಲೆ ಸಾಧುಗಳು ಪಾದಚಾರಿಗಳಾಗಿ, ಕತ್ತೆ, ಕುದುರೆ, ಆನೆಗಳ ಮೇಲೆ ಕುಳಿತು ಮೆರವಣಿಗೆಯಲ್ಲಿ ಸಾಗುವುದೂ ಇಂಥ ಬತ್ತಲೆ ಸಾಧುಗಳಿಗೆ ಪವಿತ್ರ ತೀರ್ಥದಲ್ಲಿ ಸ್ನಾನ ಮಾಡುವ ಪ್ರಥಮ ಪ್ರಾಶಸ್ತ್ಯ ಕೊಡಬೇಕೆಂಬುದೂ ನಮಗೆ ಅಸಹನೀಯ ವಿಚಾರ. ಇಂತಹ ಸಾಧುಗಳು ತೊಂದರೆ ಕೊಡುವ ಪ್ರಾಣಿಗಳೆಂದೇ ನಾವು ತಿಳಿದಿದ್ದೇವೆ" ಎಂದು ಮುಂದಾಗಿ ನುಡಿದಾಗ ಸಭಾಪತಿಗಳು ಆಕ್ಷೇಪವೆತ್ತಿದರು. ಉತ್ತರ ಪ್ರದೇಶದ ರಾಜ್ಯಪಾಲರು ಈ ಉತ್ಸವದಲ್ಲಿ ಭಾಗವಹಿಸಿದ ಉಲ್ಲೇಖವನ್ನು ಮಾಡಿ ಕೃಪಲಾನಿಯವರು ಟೀಕಿಸಿದಾಗಲೂ ಸಭಾಪತಿಗಳು ಅವರನ್ನು ತಡೆದರು.

ಓದಲೇ ಬೇಕಾದ ನವೀನ ಸಾಮಾಜಿಕ ಕಾದಂಬರಿ

(ತೆಲುಗಿನಿಂದ ಅನುವಾದಿತ)

ಕುಲವಿಲ್ಲದ ಹೆಣ್ಣು

ಅನುವಾದಕರು:— ಶ್ರೀ ಪಿ. ವೆಂಕೋಬಾಚಾರ್ಯರು,
ಬಿ. ಎ. ಬಿ, ಟಿ, ಹುಬ್ಬಳ್ಳಿ.

"ಮಿಶ್ರಸಂತತಿಯ ಹೆಣ್ಣೊಂದು ಧರ್ಮದ ಸೋಗಿನ ಜಾಲ ಧನದ ಜಾಲ, ವೃದ್ಧರ ಕಾಮಜಾಲದಿಂದ ಪಾರಾಗಿ ಆಧುನಿಕ ಯುವಕ ಸಂತತಿಯ ಉದಾರತೆಯ ಕೈಹಿಡಿದು ಸುಖವಾಗಿ ಬಾಳಿತೆಂಬುದನ್ನು ಸೂಚಿಸುವ ಈ ಕಾದಂಬರಿಯಲ್ಲಿ ಪ್ರಾಸಂಗಿಕವಾಗಿ ನಾಟಕ ಕಲೆಯ ಮೇಲೆಯೂ ಕೆಲವು ಅಭಿಪ್ರಾಯಗಳನ್ನು ಸೂಚಿಸಿದ್ದಾರೆ.

ಕುಲವಿರಲಿ ಇಲ್ಲದಿರಲಿ, ವೈಯಕ್ತಿಕ ಶೀಲವೊಂದಿದೆ; ಅದರ ಬೆಳಕಿನಲ್ಲಿ ವ್ಯಕ್ತಿಯು ಎಂತಹ ಸಾಮಾಜಿಕ, ಧಾರ್ಮಿಕ ಎಡರುತೊಡರುಗಳನ್ನೂ ದಾಟಿ ಮನಮೆಚ್ಚಿದ ಶಾಂತಿಸುಖ ಸಮಾಧಾನಗಳ ಬಾಳನ್ನು ಬಾಳಬಲ್ಲುದು ಎಂಬುದೇ ಈ ಕಾದಂಬರಿಯ ನೀತಿ"—ಜೈಹಿಂದ್.

ಕನ್ನಡದ ಸ್ತ್ರೀಪುರುಷರೆಲ್ಲರೂ ಅವಶ್ಯ ಓದಲೇ ಬೇಕಾದ
ಅತ್ಯಾಧುನಿಕ ಕಾದಂಬರಿ ಬೆಲೆ ರೂ. 2-0-0

ಪ್ರತಿಗಳಿಗೆ— ನವಭಾರತ ಪುಸ್ತಕ ಭಂಡಾರ ಉಡುಪಿ.

ರೈಲ್ವೆಗಳು ತೋರಿಸಿದ ತೃಪ್ತಿಕರ ಪ್ರಗತಿಯ ಪ್ರಶಂಸೆ

ಪ್ರಯಾಣ ಸೌಕರ್ಯ ಮತ್ತು ಅಭಿವೃದ್ಧಿ ಪ್ರಯತ್ನಗಳ ದಿಗ್ದರ್ಶನ

ಪ್ರಧಾನಮಂತ್ರಿ ನೆಹರೂರವರು ಈಸಂದರ್ಭದಲ್ಲಿ ನಡುವೆ ಎದ್ದು "ಸಭ್ಯತೆಗೆ ಉಚಿತವಾದ ಶಬ್ದಗಳಲ್ಲಿ ಜನರ ಧಾರ್ಮಿಕ ಭಾವನೆಯನ್ನು ಟೀಕಿಸಲು ಸದಸ್ಯರಿಗೆ ಅಧಿಕಾರವಿಲ್ಲವೆ? ನಮ್ಮಲ್ಲಿ ಕೆಲವರು ಅಸ್ಪೃಶ್ಯತೆಯು ಶುದ್ಧ ತಪ್ಪಾದ್ದು, ಅಂಧಶ್ರದ್ಧೆ ನೀಚ ವರ್ತನೆ ಎಂದು ಹೇಳುತ್ತಾ ಅದರ ಉಚ್ಚಾಟನೆಯ ವಿಷಯವಾಗಿ ಮಾತನಾಡುತ್ತೇವೆ. ಇದು ಕೆಲವರ ಮನ ನೋಯಿಸಬಹುದು. ಆದುದರಿಂದ ಸದಸ್ಯರ ಹಕ್ಕಿನ ಪ್ರಶ್ನೆ ಮಹತ್ವದ್ದಾಗಿ ಪರಿಣಮಿಸುವುದು" ಎಂದರು. ಅದಕ್ಕೆ ಸಭಾಪತಿಗಳು ತಾವು ಕೊಟ್ಟ ನಿರ್ಣಯವು ಧರ್ಮ ಪದ್ಧತಿಯ ಟೀಕೆಗೆ ಸಂಬಂಧಿಸಿರದೆ, ವಿಶಿಷ್ಟ ವಾಕ್ಯಾಂಶಕ್ಕೆ ಅನ್ವಯಿಸುತ್ತದೆ ಎಂದು ಸ್ಪಷ್ಟೀಕರಣ ಮಾಡಿದರು. ರಾಜ್ಯಪಾಲರ ಹೆಸರೆತ್ತುವುದರ ಸಂಬಂಧದಲ್ಲೂ ನೆಹರೂ ಸಭಾಪತಿಗಳ ವಿವರಣೆಯನ್ನು ಅಪೇಕ್ಷಿಸಿದರು. ಇದಕ್ಕೆ "ಹೆಸರೆತ್ತಬಹುದು, ಆದರೆ ವರಿಷ್ಠ ಸ್ಥಾನಾಪನ್ನರ ಹೇಳಿಕೆಯನ್ನು ಆಕ್ಷೇಪಿಸುವುದು ಸರಿಯಲ್ಲ" ಎಂಬ ಸಮಾಧಾನ ದೊರೆಯಿತು.

ಸುಗ್ರೀವಾಜ್ಞೆಗೆ ಆಕ್ಷೇಪ

ಹೀಗೆ ವಾಗ್ಯುದ್ಧಗಳು ನಡೆಯುತಿದ್ದಂತೆಯೇ ಕೆಲವು ಸಂದರ್ಭಗಳಲ್ಲಿ ಪ್ರತಿಪಕ್ಷದವರು, ಮುಖ್ಯವಾಗಿ ಕಮ್ಯುನಿಸ್ಟರು, ತಮ್ಮ ಪ್ರತಿಭಟನೆಯನ್ನು ಸೂಚಿಸುವುದಕ್ಕೋಸ್ಕರ ಸಭಾ ತ್ಯಾಗದ ಗತ್ತುಗಾರಿಕೆಯನ್ನೂ ಪ್ರದರ್ಶಿಸಿದರು. ಪ್ರತಿಪಕ್ಷದ ಆಕ್ಷೇಪ ಮತ್ತು ಟೀಕೆಗಳು ಬಲವಾಗಿದ್ದರೂ ಸಹ, ರಾಷ್ಟ್ರಪತಿಗಳ ಭಾಷಣಕ್ಕೆ ಆಭಾರ ಸೂಚಿಸುವ ಠರಾವು ಬಹುಮತದಿಂದ ಸ್ವೀಕಾರಗೊಂಡಿತು. ಪಾರ್ಲಿಮೆಂಟಿನಲ್ಲಿ ವಿರೋಧೀ ಗುಂಪುಗಳ ಟೀಕೆಗೆ ಅವಕಾಶಕೊಟ್ಟ ಇತರ ಸಂಗತಿಗಳಲ್ಲಿ ಸರಕಾರವು ಸುಗ್ರೀವಾಜ್ಞೆಗಳನ್ನು ಹೊರಡಿಸುವ ನೀತಿಯು [illegible]—ಪಾರ್ಲಿಮೆಂಟಿನ ಕಳೆದ ಅಧಿವೇಶನದ ಬಳಿಕದ ಆರು ವಾರಗಳಷ್ಟು ಅಲ್ಪಾವಧಿಯಲ್ಲಿ ಏಳು ಸುಗ್ರೀವಾಜ್ಞೆಗಳನ್ನು ಸರಕಾರ ಹೊರಡಿಸಿದೆಯೆಂದೂ ಇವುಗಳಲ್ಲಿ ಪ್ರೆಸ್ ಕಾಯಿದೆ ಮತ್ತು ಕುಂಭಮೇಳದ ತೆರಿಗೆ ಹೊರಿಸುವ ಆಜ್ಞೆಗಳು ಎಷ್ಟು ಮಾತ್ರಕ್ಕೂ ಅನಿರೀಕ್ಷಿತ ಪ್ರಸಂಗಗಳಾಗಿರಲಿಲ್ಲವೆಂದೂ ಪಾರ್ಲಿಮೆಂಟಿನಲ್ಲಿ ಇದಕ್ಕೆ ಪೂರ್ವ ಸಮ್ಮತಿಯನ್ನು ಪಡೆದುಕೊಳ್ಳಲು ಸಾಧ್ಯವಿತ್ತೆಂದೂ ಪ್ರತಿಪಕ್ಷಗಳು ವ್ಯಕ್ತಗೊಳಿಸಿದ ಅಭಿಪ್ರಾಯಕ್ಕೆ ಕಾಂಗ್ರೆಸಿನ ಒಬ್ಬಿಬ್ಬರು ಸದಸ್ಯರೂ ಸ್ವರಕೂಡಿಸಿದರು. ಗೃಹಮಂತ್ರಿ ಕಟಜೂರವರು ಮತ್ತು ಅರ್ಥಸಚಿವ ದೇಶಮುಖರು ಈ ಸುಗ್ರೀವಾಜ್ಞೆಗಳನ್ನು ಹೊರಡಿಸಲಾದ ಪರಿಸ್ಥಿತಿಯನ್ನು ವಿವರವಾಗಿ ವರ್ಣಿಸಿ ಸರಕಾರವು ಯಾವುದೇ ತರದ ಅಲಕ್ಷ್ಯಭಾವವನ್ನೂ ದುರುದ್ದೇಶವನ್ನೂ ಇಟ್ಟುಕೊಂಡಿಲ್ಲವೆಂದು ವಿದಿತಪಡಿಸಿದರು. ಈ ನಡುವೆ ರಾಜ್ಯ ಪರಿಷತ್ತಿನಲ್ಲಿ ಆರೋಗ್ಯ ಮಂತ್ರಿ ರಾಜಕುಮಾರಿ ಅಮೃತ ಕೌರರು ಒಂದು ಮಸೂದೆಯನ್ನು ಮಂಡಿಸಿ, ತಕ್ಕ ಔಷಧ ಮತ್ತು ಮಾಯಾಶಕ್ತಿಯ ಯಂತ್ರ, ಉಂಗುರ ಮುಂತಾದವುಗಳಿಂದ ರೋಗ ಗುಣಪಡಿಸುವೆವೆಂದು ಮೋಸಗೊಳಿಸುವ ಜಾಹೀರಾತುಗಳ ಪ್ರಕಟಣೆಯನ್ನು ನಿಯಂತ್ರಿಸುವುದು ಇದರಉದ್ದೇಶವೆಂದುಹೇಳಿದರು ಇದಕ್ಕೆ ಸಾಮಾನ್ಯವಾಗಿ ಎಲ್ಲ ಸದಸ್ಯರೂ ಬೆಂಬಲ ನೀಡಿದರು.

ರೈಲ್ವೆ ಮುಂಗಡ ಪತ್ರ

ಲೋಕಸಭೆಯ ಮುಂದೆ ರೈಲ್ವೆಯ ಮುಂಗಡ ಪತ್ರವು ಮಂಡಿಸಲ್ಪಟ್ಟಿದೆ—ಇದರನ್ವಯ ಕಳೆದ ವರ್ಷದ ಉಳಿತಾಯವು ಮೊದಲು ನಿರೀಕ್ಷಿಸಿದಂತೆ ೯೩೧ ಲಕ್ಷ ರೂಪಾಯಿಗಳಾಗದೆ, ೩೧೮ ಲಕ್ಷ ರೂಪಾಯಿಗಳು ಮಾತ್ರವೇ ಆಗುತ್ತವೆ. ರೈಲ್ವೆ ನೌಕರರಿಗೆ ತುಟ್ಟಿಭತ್ತೆಯ ಅರೆವಾಸಿಯಷ್ಟನ್ನು ಸಂಬಳದಲ್ಲಿ ಸೇರಿಸಿಕೊಡಬೇಕೆಂದು ಗಾಡಗೀಳ ಸಮಿತಿಯು ಮಾಡಿದ ಸೂಚನೆಯನ್ನು ಕಾರ್ಯಗತಗೊಳಿಸಿದ್ದರಿಂದ ಈ ಇಳಿತಾಯ ಸಂಭವಿಸಿತೆಂದು ಸ್ಪಷ್ಟೀಕರಣವನ್ನು ಮಂತ್ರಿಗಳು ನೀಡಿದರು. ಮುಂದಿನ ವರ್ಷದಲ್ಲಿ ರೈಲ್ವೆಗಳ ಆದಾಯವು [illegible] ಲಕ್ಷ ರೂಪಾಯಿಗಳಾಗುವುವೆಂದೂ ವೆಚ್ಚವು [illegible] ಲಕ್ಷ ರೂಪಾಯಿಗಳ ಗಟಬಹುದೆಂದೂ ಅಂದಾಜು ಮಾಡಿದ್ದು, ಉಳಿತಾಯದಲ್ಲಿ ಕೇಂದ್ರಕ್ಕೆ ೩೫೦ ಲಕ್ಷ ರೂಪಾಯಿಗಳನ್ನು ಸಲ್ಲಿಸಿದ ಬಳಿಕ, ರೈಲ್ವೆ ಖಾತೆಯು ೫೯ ಲಕ್ಷ ರೂಪಾಯಿಗಳ ನಿವ್ವಳ ಉಳಿತಾಯವನ್ನು ತೋರಿಸುವುದೆಂದು ಮಂತ್ರಿಗಳು ಹೇಳಿದರು. ಅವರು ರೈಲ್ವೆಗಳು ಹೊಂದಿದ ಪ್ರಗತಿಯನ್ನು ವಿವರಿಸಿದರಲ್ಲದೆ—ಈಚೆಗಿನ ಕೆಲವು ವರ್ಷಗಳಲ್ಲಿ ಪ್ರಯಾಣಿಕರಿಗೆ ಒದಗಿಸಲಾದ ಸೌಕರ್ಯಗಳು ಪ್ರಯಾಣವನ್ನು ತುಂಬ ಸುಖಕರವಾಗಿ ಮಾಡಿವೆಯೆಂದೂ ರೈಲ್ವೆಗಳಲ್ಲಿ ಹಳೆಯ ಯಂತ್ರ ಹಾಗೂ ಬಂಡಿಗಳ ಸ್ಥಾನದಲ್ಲಿ ಹೊಸತನ್ನು ಜೋಡಿಸುವ ಕೆಲಸವು ತೃಪ್ತಿಕರವಾಗಿ ನಡೆದಿದೆಯೆಂದೂ ಅಭಿಪ್ರಾಯಪಟ್ಟರು. ರೈಲ್ವೆಯ ಪ್ರವಾಸ ದರವನ್ನು ಸರಕಾರ ಏರಿಸುವುದಿಲ್ಲವೆಂದೂ ಹಾಗೆಂದು ಪಂಚವಾರ್ಷಿಕ ಯೋಜನೆಯಲ್ಲಿ ಅಪೇಕ್ಷಿಸಿದಷ್ಟು ಉಳಿತಾಯವನ್ನು ಸಾಧಿಸುವುದು ಮಾತ್ರ ಸಂಶಯದ ಸಂಗತಿಯೆಂದೂ ಹೇಳಿದರು. ಹೊಸತಾಗಿ ರೈಲ್ವೆ ಮಾರ್ಗಗಳನ್ನು ಹಾಕುವ ಮತ್ತು ರೈಲ್ವೆಗಳ ಓಡಾಟವನ್ನು ವಿಸ್ತರಿಸುವ ಕಾರ್ಯಕ್ರಮಗಳ ರೂಪ ರೇಷೆಯನ್ನೂ ಅವರು ನೀಡಿದರು. ಮಂಗಳೂರು ಮತ್ತು ಹಾಸನಗಳ ನಡುವೆ ರೈಲ್ವೆಮಾರ್ಗವನ್ನು ನಿರ್ಮಿಸುವ ವಿಚಾರವನ್ನು ಅವರು ಪುನರುಚ್ಚರಿಸಿದರಲ್ಲದೆ, ಪರಿಶೀಲನಾ ಕೆಲಸವು ನಡೆದಿದೆಯೆಂದೂ ತಿಳಿಸಿದರು. ಕಳೆದ ವರ್ಷ ನೀಡಿದ ಕೆಲವು ರಿಯಾಯತಿಗಳನ್ನು ರೈಲ್ವೆಯವರು ಮುಂದಿನ ವರ್ಷದಲ್ಲಿ ವಿಸ್ತರಿಸುವರೆಂದೂ ಅದರಂತೆ ೧೫೦ ಮೈಲುಗಳಿಗಿಂತ ಹೆಚ್ಚುದೂರ ಪ್ರಯಾಣ ಮಾಡಿ ಹೊರಟಲ್ಲಿಗೆ ಮರಳುವ ಪ್ರವಾಸಿಕರಿಗೆ ಮುಕ್ಕಾಲು ದರದಿಂದ ಎಲ್ಲ ವರ್ಗಗಳ ಟಿಕೇಟು ದೊರೆಯುತ್ತದೆಂದೂ ಈ ಮುಂಚೆ ಕನಿಷ್ಠ ಹತ್ತು ಜನವೆಂದಿದ್ದ ಪ್ರಮಾಣವನ್ನು ನಾಲ್ಕಕ್ಕೆ ಇಳಿಸಿ, ಅಷ್ಟು ಮಂದಿ ವಿದ್ಯಾರ್ಥಿಗಳು ಒಂದು ಗುಂಪಿನಲ್ಲಿ ೪೫ ದಿನಗಳ ಸಂಚಾರ ಮಾಡಿ ಸ್ವಸ್ಥಾನಕ್ಕೆ ಬರುವುದಾದಲ್ಲಿ ಅವರಿಗೂ ಟಿಕೇಟು ರಿಯಾಯತಿ ಕೊಡಲಾಗುವುದೆಂದೂ ಗುಡ್ಡ ಪ್ರದೇಶಗಳಿಗೆ ಎಪ್ರೀಲು ಮಾಸದಿಂದ ಅಕ್ಟೋಬರದ ವರೆಗೆ ತೆರಳಿ ಹಿಂತಿರುಗುವವರಿಗೆ ರಿಟರ್ನ ಟಿಕೇಟನ್ನು ಒಂದೂವರೆಪಟ್ಟು ದರದಲ್ಲಿಯೇ ಒದಗಿಸಲಾಗುವುದು ಎಂದೂ ರೈಲ್ವೆ ಮಂತ್ರಿಗಳು ಪ್ರಕಟಪಡಿಸಿದರು.

ಫಂಟಿಮಾರಾ

ಶ್ರೀ. ಕು. ಶಿ. ಹರಿದಾಸ ಭಟ್ಟರು, ಎಂ. ಎ.

'ಅವಮಾನದಿದಿರು, ಅನ್ಯಾಯದಿದಿರು, ಯಾರೂ ತಗ್ಗಿ ನಡೆಯಬಾರದು' ಎಂಬ ನಿರ್ಮಲ ಮಾನವವಾದಿಯಾದ ಇಗ್ನೇಶಿಯೋ ಸಿಲೋನೆಯ ಪ್ರಖ್ಯಾತ ಇಟಾಲಿಯನ್ ಕಾದಂಬರಿಯ ಕನ್ನಡ ಅನುವಾದ.

○— —ಕೆಲವು ಅಭಿಪ್ರಾಯಗಳು— —○

"ಈ ಶತಮಾನದ ಅತ್ಯಂತ ಮರ್ಮಸ್ಪರ್ಶಿ ಕಾದಂಬರಿಗಳಲ್ಲೊಂದು"
—ಕರ್ಮವೀರ.

"ಅಂಥದ ಹೆಚ್ಚಿನ ದೇಶೀಯತೆಯನ್ನು ಕನ್ನಡದ ಕಾಯಿಯಲ್ಲಿ ಅದ್ದಿ ಶ್ರೀ. ಭಟ್ಟರು ಅನುವಾದವನ್ನು ಮೂಲಗ್ರಂಥಕ್ಕೆ ಚ್ಯುತಿ ಇಲ್ಲದಂತೆ ಮಾಡಿದ್ದಾರೆ"
—ಚಿತ್ರಗುಪ್ತ.

"ಮೂಲಗ್ರಂಥದ ವೈಶಿಷ್ಟ್ಯಗಳೆಲ್ಲ ಸಮರ್ಪಕವಾಗಿ ಕನ್ನಡಿಸಲ್ಪಟ್ಟುದನ್ನು ನೋಡುವಾಗ ಅನುವಾದವು ಸರ್ವೋತ್ತಮವೆಂದು ಹೇಳಲು ಅಡ್ಡಿಯಿಲ್ಲ. ಅನುವಾದ ಮಾಡಿದ ಶ್ರೀ ಭಟ್ಟರೂ ಮುದ್ರಿಸಿದ ಪ್ರಕಾಶಕರೂ ಅಭಿನಂದನೀಯರು."
—ಇಂಡಿಯನ್ ಎಕ್ಸ್‌ಪ್ರೆಸ್.

ಮರ್ಮಸ್ಪರ್ಶಿ ಕಾದಂಬರಿ! ೨೦೧ ಪುಟಗಳು! ಬೆಲೆ ರೂ 2-0-0

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಶಾಸನ ಸಭಾಧಿವೇಶನ

ಕೆಲವು ರಾಜ್ಯಗಳ ಶಾಸನ ಸಭೆಗಳು ಈಗ ಕೆಲದಿನಗಳಿಂದ ಮುಂಗಡಪತ್ರದ ಪರಿಶೀಲನೆಯ ಉದ್ದೇಶದಿಂದ ಅಧಿವೇಶನದಲ್ಲಿ ಸೇರಿದ್ದು, ಅಲ್ಲಿ ಸಹ ಪ್ರತಿಪಕ್ಷಗಳು ತಮ್ಮ ಸಭಾತ್ಯಾಗದ ಗತ್ತುಗಾರಿಕೆಯನ್ನು ತೋರಿಸಿದ ಉದಾಹರಣೆ ಸಿಗುತ್ತದೆ. ಪಶ್ಚಿಮ ಬಂಗಾಳದಲ್ಲಿ ಅಧ್ಯಾಪಕರು ಹೂಡಿದ ಸಂಪಿನ ನೆಪ ಹೇಳಿ, ಪ್ರತಿಪಕ್ಷದ ಸದಸ್ಯರು ಸಭಾತ್ಯಾಗವನ್ನು ಮಾಡಿದರು. ಈ ಸಂಪು ಹನ್ನೆರಡು ದಿನಗಳ ತನಕ ನಡೆದು ಇದೀಗ ಮುಕ್ತಾಯಗೊಂಡಿದೆ. ಮುಖ್ಯಮಂತ್ರಿ ರಾಯ್ ಹಾಗು ಅಧ್ಯಾಪಕರ ಸಂಘದ ಅಧ್ಯಕ್ಷರು ಪರಸ್ಪರ ಒಡಂಬಡಿಕೆಗೆ ಬಂದುದರಿಂದ—ಈಗ ಬಂಧನಕ್ಕೊಳಗಾದ ಹಾಗು ಖಟ್ಲೆಗೆ ಗುರಿಯಾದ ಅಧ್ಯಾಪಕರ ಬಿಡುಗಡೆ ಮಾಡಲ್ಪಟ್ಟಿದೆ. ಉತ್ತರ ಪ್ರದೇಶದಲ್ಲಿ ಪ್ರತಿಪಕ್ಷದವರು ಕುಂಭಮೇಳದ ದುರಂತ ಪ್ರಕರಣವನ್ನು ಎತ್ತಿ ಹಿಡಿದು ಸಭೆಯಿಂದ ಹೊರಬಂದರು. ಒಡಿಸಾದಲ್ಲಿ ಗವರ್ನರರಾದ ಶ್ರೀ ಕುಮಾರಸ್ವಾಮಿ ರಾಜಾರು ಕಳೆದ ಮಹಾ ಚುನಾವಣೆಯಲ್ಲಿ ಸೋಲು ತಿಂದ ಹುರಿಯಾಳು ಎಂಬ ಕಾರಣವನ್ನು ಮುಂದೆ ಮಾಡಿ ವಿರೋಧೀ ಗುಂಪಿನ ಸದಸ್ಯರು ಸಭೆಗೆ ಬಹಿಷ್ಕಾರ ಹಾಕಿದರು. ಹೈದರಾಬಾದಿನಲ್ಲಿ ನಿಜಾಮರು ರಾಜ ಪ್ರಮುಖರಾಗಿ ಉಳಿಯುವ ಪದ್ಧತಿಯ ನಿಷೇಧಾರ್ಥವಾಗಿ ಸರಕಾರದ ವಿರೋಧಕರು ಹೊರಗೆ ನಡೆದರು. ದಿನಾಂಕ ೨೦ರಂದು ಮದ್ರಾಸಿನಲ್ಲಿ ಶಾಸನ ಸಭೆ ಸೇರಿದಾಗ ಅಂತಹ ಅಪ್ರಿಯ ಘಟನೆ ನಡೆಯದಿದ್ದುದು ಸಂತೋಷ—ಗವರ್ನರ ಶ್ರೀ ಪ್ರಕಾಶರು ಮದರಾಸು ಸರಕಾರದ ಮುಂದಿನ ಚಟುವಟಿಕೆಗಳನ್ನು ವಿವರಿಸುತ್ತಾ ಚಿಕ್ಕ ನೀರಾವರಿ ಯೋಜನೆಗಳಿಗೆ ಪ್ರೋತ್ಸಾಹ ಕೊಡಲಿಕ್ಕೂ ಹರಿಜನರಿಗೆ ಸೌಕರ್ಯಗಳನ್ನು ಒದಗಿಸಲಿಕ್ಕೂ ಪ್ರಯತ್ನಿಸುವುದಾಗಿ ಹೇಳಿದರು. ಸರಕಾರವು ಮದ್ಯಪಾನ ನಿಷೇಧ ಧೋರಣೆಯನ್ನು ಇನ್ನಷ್ಟು ಬಿಗಿಯಾಗಿ ಕಾರ್ಯಗತಗೊಳಿಸಲು ನಿರ್ಧರಿಸಿದೆಯೆಂದೂ ಈ ಕೆಲಸವನ್ನು ಪೋಲೀಸು ಖಾತೆಗೆ ಒಪ್ಪಿಸಿಕೊಡುವುದೆಂದೂ ಗವರ್ನರರು ತಿಳಿಸಿದರು. ನೂತನವಾಗಿ ಉದಯಿಸಿದ ಆಂಧ್ರ ರಾಜ್ಯಕ್ಕೆ ಅಭಿವೃದ್ಧಿಯ ಪ್ರಯತ್ನಗಳಲ್ಲಿ ಅವರು ಯಶಸ್ಸು ಕೋರಿದರಲ್ಲದೆ, ಚಿತ್ತೂರು ಜಿಲ್ಲೆಯ ಗಡಿ ಪ್ರದೇಶದ ವಿವಾದವನ್ನು ಸಮಾಧಾನಕರ ರೀತಿಯಲ್ಲಿ ತೀರ್ಮಾನಿಸುವ ಇಚ್ಛೆಯನ್ನು ವ್ಯಕ್ತಪಡಿಸಿದರು. ಮದ್ರಾಸಿನಂತೆ ಉಳಿದ ರಾಜ್ಯ ಸರಕಾರಗಳೂ ಆಹಾರ ಪರಿಸ್ಥಿತಿಯ ಬಗ್ಗೆ ತೃಪ್ತಿಯನ್ನೂ ಅಭಿವೃದ್ಧಿ ಪ್ರಯತ್ನಗಳನ್ನು ಮುಂದೊತ್ತುವ ಆಶ್ವಾಸನೆಯನ್ನೂ ಉದ್ಯೋಗದ ಅವಕಾಶಗಳನ್ನು ಹೆಚ್ಚಿಸುವ ಅಪೇಕ್ಷೆಯನ್ನೂ ಇಟ್ಟುಕೊಂಡಿವೆ. ಇವುಗಳ ಯಶಸ್ಸಿಗೋಸ್ಕರ ಜನತೆಯ ಸಂಪೂರ್ಣ ಸಹಕಾರವನ್ನು ಅಪೇಕ್ಷಿಸುತ್ತವೆ

ನವಯುಗ ವಾರಪತ್ರಿಕೆಗೆ ಚಂದಾದಾರರಾಗಿರಿ.

ನವಯುಗ

ಉಡುಪಿ, ಗುರುವಾರ ೨೫-೨-'೫೪

ಮದ್ಯಪಾನ ಪ್ರತಿಬಂಧ

ಆಂಧ್ರರಾಜ್ಯವು ಅಸ್ತಿತ್ವಕ್ಕೆ ಬಂದ ಕೆಲವೇ ದಿನಗಳಲ್ಲಿ ಅಲ್ಲಿಯ ರಾಜ್ಯ ಸರಕಾರವು ಇದುವರೆಗೆ ಆ ಪ್ರದೇಶದಲ್ಲಿ ರೂಢಿಯಲ್ಲಿದ್ದ ಕೆಲವು ಧೋರಣೆಗಳನ್ನು ಪುನರ್ವಿಮರ್ಶಿಸುವ ಇಚ್ಛೆಯನ್ನು ವ್ಯಕ್ತಪಡಿಸಿತು. ಇವುಗಳಲ್ಲಿ ಮದ್ರಾಸು ರಾಜ್ಯದಲ್ಲಿ ಆಂಧ್ರದ ಪ್ರದೇಶಗಳು ಸೇರಿದ್ದಾಗ ಅನುಸರಿಸಲ್ಪಟ್ಟ ಪಾನಪ್ರತಿಬಂಧ ಹಾಗು ಪ್ರಾಥಮಿಕ ಶಿಕ್ಷಣ ಪದ್ಧತಿಯ ಹೊಸ ಯೋಜನೆಗಳ ಸುಧಾರಣೆ ಮಾಡಬೇಕೆನ್ನುವುದು ಮುಖ್ಯವಾದ ಧೋರಣೆಯ ಪ್ರಶ್ನೆಗಳೆಂದು ಹೇಳಲಡ್ಡಿಯಿಲ್ಲ. ಪಾನಪ್ರತಿಬಂಧವನ್ನು ಕಿತ್ತೊಗೆಯುವುದು ಸರಕಾರದ ಉದ್ದೇಶವಿದ್ದಂತೆ ತೋರುವುದಿಲ್ಲ—ಹಾಗೆಂದು ಕಳ್ಳು ಕುಡಿಯಲು ಬಯಸುವವರಿಗೆ ಅದನ್ನು ನಿರಾಕರಿಸುವುದೂ ಸರಕಾರದ ಇಚ್ಛೆಯಲ್ಲ. ಈಗ ಜ್ಯಾರಿಯಲ್ಲಿರುವ ಮದ್ಯಪಾನ ನಿಷೇಧ ಕಾನೂನನ್ನು ಸಾರ್ವಜನಿಕರು ಮಿತಿಮೀರಿ ಉಲ್ಲಂಘಿಸುತ್ತಾರೆಂದೂ ರಹಸ್ಯವಾಗಿ ಕಳ್ಳು ಮತ್ತಿತರ ಮಾದಕ ಪೇಯಗಳನ್ನು ತಯಾರಿಸುತ್ತಾರೆಂದೂ ಇವುಗಳು ಸಾಮಾನ್ಯವಾಗಿ ಕುಡಿಯುವ ಕಳ್ಳಿಗಿಂತಲೂ ಆರೋಗ್ಯಕ್ಕೆ ಹೆಚ್ಚಿನ ಹಾನಿಯನ್ನುಂಟುಮಾಡುತ್ತವೆಂದೂ ಪರಿಣಾಮದಲ್ಲಿ ಪಾನನಿಷೇಧ ಧೋರಣೆಯು ಸಂಪೂರ್ಣ ವಿಫಲವಾಗಿದೆಯಾಗಿಯೂ ಕೆಲವು ವರ್ಗಗಳು ಪ್ರತಿಪಾದಿಸುತ್ತವೆ. ಮದ್ರಾಸ ರಾಜ್ಯದಲ್ಲಿಯೂ ಪಾನನಿರೋಧವನ್ನು ಮೆಚ್ಚದ ಜನಗಳು ಇದ್ದು, ಅವರು ಸರಕಾರದ ವಿರುದ್ಧ ಸ್ವರವೆತ್ತುವ ಯಾವ ಅವಕಾಶವನ್ನೂ ಸುಮ್ಮನೆ ಹೋಗಗೊಡುವುದಿಲ್ಲ. ಆದರೆ ರಾಜಾಜಿಯವರಂತಹ ಆತ್ಮ ವಿಶ್ವಾಸವುಳ್ಳ ಮತ್ತು ಸ್ಪಷ್ಟವಾದ ಮುನ್ನೋಟವುಳ್ಳ ಮೇಧಾವಿಗಳ ಕೈಯಲ್ಲಿ ರಾಜ್ಯಸೂತ್ರವಿರುವುದರಿಂದ ಕಳ್ಳು ಕುಡಿಯಲು ಬಿಡಿರೆಂದು ಹೇಳುವ ಜನರ ಒತ್ತಾಯಕ್ಕೆ ಸರಕಾರ ಬಗ್ಗುವುದಿಲ್ಲ. ರಾಜ್ಯದ ಗವರ್ನರ ಶ್ರೀ ಪ್ರಕಾಶರು ಶಾಸನ ಸಭೆಯ ಮುಂಗಡ ಪತ್ರದ ಅಧಿವೇಶನವನ್ನು ಉದ್ದೇಶಿಸಿ ಭಾಷಣ ಮಾಡುವಾಗ "ಮದ್ಯನಿಷೇಧ ಆಜ್ಞೆಯು ದೇಶದ ಜನಸಾಮಾನ್ಯರ ಹಿತಕ್ಕೆ ಯೋಗ್ಯವೆಂದು ನಾವು ಖಚಿತವಾಗಿ ಮನಗಂಡಿರುವಾಗ ಯಾರೋ ಕೆಲವರು ತಮ್ಮ ಸ್ವಾರ್ಥದ ಗಳಿಕೆಗೋಸ್ಕರ ಕಾಯಿದೆ ಮುರಿಯುವ ಹವ್ಯಾಸಕ್ಕೆ ಬಿದ್ದಿರುವರೆಂದು ಕೇಳಿ ಧೃತಿಗೆಡಬೇಕಾಗಿಲ್ಲ" ಎಂದು ಅಭಿಪ್ರಾಯ ವ್ಯಕ್ತಗೊಳಿಸಿದರು. ಮದ್ಯಪಾನ ಪ್ರತಿಬಂಧವು ಯಶಸ್ವಿಯಾಗುವಂತೆ ನೋಡಿಕೊಳ್ಳುವ ಎಲ್ಲ ಕಾರ್ಯಗಳನ್ನು ಪೋಲೀಸರ ಹೊಣೆಗಾರಿಕೆಗೆ ಒಪ್ಪಿಸಿ ಕೊಡುವುದಾಗಿ ಅವರು ಹೇಳಿದರು. ಮದ್ಯಪಾನ ನಿಷೇಧಾಜ್ಞೆಯನ್ನು ಸಫಲಗೊಳಿಸುವುದಕ್ಕೋಸ್ಕರ ಜನಾಭಿಪ್ರಾಯವನ್ನು ಸಂಘಟಿಸಲು ಅವರು ಶಾಸನ ಸಭಾ ಸದಸ್ಯರನ್ನು ವಿನಂತಿಸಿದಲ್ಲದೆ ಸಾರ್ವಜನಿಕರ ಸಹಕಾರವನ್ನೂ ಅಪೇಕ್ಷಿಸಿದರು. ಮುಖ್ಯ ಮಂತ್ರಿ ರಾಜಗೋಪಾಲಾಚಾರಿಯವರು ತಮಿಳುನಾಡು ಪ್ರಾದೇಶಿಕ ಕಾಂಗ್ರೆಸ ಸಮಿತಿಯ ಸಭೆಯೊಂದರಲ್ಲಿ ಈಚೆಗೆ ಮಾತನಾಡುತ್ತಾ "ಅಲ್ಲಲ್ಲಿ ಕೆಲವರು ನಮ್ಮ ಮದ್ಯನಿರೋಧ ಧೋರಣೆಯು ಬಲಗುಂದುವಂತೆ ಮಾಡಲು ಶಕ್ತ ಪ್ರಯತ್ನ ನಡೆಸುತ್ತಿದ್ದಾರೆ. ಇಂತಹ ಯತ್ನಗಳೆಲ್ಲ ಮೊದಲು ನಿಲ್ಲಬೇಕೆಂದು ನನ್ನ ಪ್ರಾರ್ಥನೆ. ಜನರೀಗ ಮೊದಲಿಗಿಂತ ಹೆಚ್ಚು ಸುಖಿಯಾಗಿದ್ದಾರೆ—ಅವರು ಕೂಲಿಯಾಗಿರಲಿ, ಬಡವರಿರಲಿ, ಹಿಂದಿಗಿಂತ ಸ್ವಚ್ಛವಾದ ಉಡುಪು ಧರಿಸುತ್ತಾರೆ. ಈ ಸತ್ಪರಿಣಾಮವು ಮದ್ಯ ನಿರೋಧ ಧೋರಣೆಯಿಂದ ಉಂಟಾಗಿರುತ್ತದೆ. ಅಕ್ರಮ ಮದ್ಯ ತಯಾರಿಯು ಎಷ್ಟೇ ಇದ್ದರೂ ಹೆಚ್ಚಿನ ಜನರು ಪಾನಪ್ರತಿಬಂಧದಿಂದ ಸುಖಿಗಳಾಗಿದ್ದಾರೆಂಬುದರಲ್ಲಿ ಅನುಮಾನವಿಲ್ಲ. ಬಹಿರಂಗವಾಗಿ ಕುಡಿಯುವವರು ಈಗ ಯಾರೂ ಇಲ್ಲ. ಹೀಗಿರುವಾಗ ಅಪರೂಪದ ಅಕ್ರಮ ತಯಾರಿಯ ಪ್ರಶ್ನೆಯನ್ನು ದೊಡ್ಡದು ಮಾಡುವುದು ನ್ಯಾಯವಲ್ಲ. ಕೊಲೆಪಾತಕ, ಕಳ್ಳತನಗಳ ವಿರುದ್ಧ ಕಠಿಣ ಶಿಕ್ಷೆ ಕೊಡುವ ಕ್ರಮ ಪ್ರಾಚೀನಕಾಲದಿಂದಲೂ ಜ್ಯಾರಿಯಲ್ಲಿದೆ. ಇದನ್ನು ಉಲ್ಲಂಘಿಸುವ ಉದಾಹರಣೆಗಳು ಇಲ್ಲವೆ? ಅದಕ್ಕೋಸ್ಕರ ಈ ಕಾನೂನೇ ಬೇಡವೆಂದು ಯಾರಾದರೂ ವಾದಿಸುತ್ತಾರೆಯೇ?" ಎಂದು ಜನರಿಗೆ ನೇರಾದ ಪ್ರಶ್ನೆಯನ್ನು ಹಾಕಿದರು. ನಾವು ಈ ಮಾತಿನ ಮರ್ಮವನ್ನು ಮನಗಾಣುವುದು ಅಗತ್ಯ. ಮದ್ಯಪಾನ ಪ್ರತಿಬಂಧದಿಂದ ದೈಹಿಕ, ಮಾನಸಿಕ ನೈತಿಕ, ಬೌದ್ಧಿಕ ಹಾಗು ಆತ್ಮಿಕ ಸುಖಮತ್ತು ಸಾಮಾಜಿಕ ಸಂತೋಷಗಳೂ ಆರೋಗ್ಯ ಹಾಗೂ ಗುಣಶೀಲಗಳೂ ಹೆಚ್ಚಿಕೊಳ್ಳುತ್ತವೆಂಬುದರಲ್ಲಿ ಯಾರದೂ ಭಿನ್ನಾಭಿಪ್ರಾಯವಿಲ್ಲದಿರುವಾಗ— ಪಾನ ಪ್ರತಿಬಂಧ ಧೋರಣೆಯನ್ನು ಪುನರ್ವಿಮರ್ಶಿಸುವ ವಿಚಾರವೇ ಹಾಸ್ಯಾಸ್ಪದ. ಅದರಲ್ಲೂ ಶ್ರೀ ಪ್ರಕಾಶರೇ ಮದ್ರಾಸಿನಲ್ಲಿ ಬಿಗಿಯಾಗಿ ಜ್ಯಾರಿಗೆ ತಂದ ಧೋರಣೆಯನ್ನು ಆಂಧ್ರದಲ್ಲಿ ಸಡಲಿಸಲು ಬಗೆದುದು ಮೆಚ್ಚುಗೆಯ ವಿಷಯವಲ್ಲ. ಆಂಧ್ರ ಸರಕಾರ ನೇಮಿಸಿದ ರಾಮಮೂರ್ತಿ ಸಮಿತಿಯ ಶಿಫಾರಸುಗಳನ್ನು ಕಾರ್ಯಗತಗೊಳಿಸಿದರಂತೂ, ಈಗಿನ ಮದ್ಯ ನಿಷೇಧ ಧೋರಣೆಯ ತಳಹದಿಯೇ ತಪ್ಪಿ ಹೋಗುತ್ತದೆ. ಸಮಿತಿಯು ಹದಿನಾಲ್ಕು ಸೂಚನೆಗಳನ್ನು ಮಾಡಿದ್ದು ಪರ್ಮಿಟು ಇಲ್ಲದೆ ಕಳ್ಳಿನ ಉಪಯೋಗಕ್ಕೆ ಅವಕಾಶಮಾಡಿ ಕೊಡಬೇಕೆಂದೂ ಮದ್ಯವನ್ನು ಸೀದಾ ಪದ್ಧತಿಯಂತೆ ನಿಶ್ಚಿತ ಪ್ರಮಾಣದಲ್ಲಿ ನಿಶ್ಚಿತ ಅಂಗಡಿಗಳಿಂದ ಕೊಂಡುಕೊಳ್ಳುವಂತೆ ಮಾಡಬೇಕೆಂದೂ ಅಬಕಾರಿ ತೆರಿಗೆಯನ್ನು ಕಡಿಮೆಮಾಡಿ ಮಾದಕ ಪೇಯಗಳು ಕುಡಿಯುವವನಿಗೆ ನ್ಯಾಯವಾದ ಕಡಿಮೆ ಬೆಲೆಗೆ ದೊರೆಯುವಂತೆ ನೋಡಬೇಕೆಂದೂ ಹೇಳಿದೆ. ಮೊದಲಿನೆರಡು ಸೂಚನೆಗಳು ಮದ್ಯಪಾನ ಪ್ರತಿಬಂಧ ಧೋರಣೆಗೆ ವಿರುದ್ಧವಿದ್ದಂತೆ, ಕೊನೆಗೆ ಉಲ್ಲೇಖಿಸಿದ ಸೂಚನೆ ಮದ್ಯಪಾನ ನಿರೋಧ ಕ್ರಮವನ್ನು ತೆಗೆದುಹಾಕುವುದರಿಂದ ಸರಕಾರದ ಆದಾಯ ಏರುವದೆಂಬ ಆಶೆಗೂ ತಣ್ಣೀರನ್ನೆರಚುತ್ತದೆ. ಇಂತಹ ಸೂಚನೆಗಳನ್ನು ಮಾಡುವಾಗಲೂ ಸಹ ಸಮಿತಿ ಹೇಳಿದ ಕೆಲವು ಸಂಗತಿಗಳನ್ನು ಪರ್ಯಾಲೋಚಿಸಿದರೆ, ಪಾನ ಪ್ರತಿಬಂಧವು ಅತ್ಯಂತ ಯೋಗ್ಯವಾದ ಹೆಜ್ಜೆಯೆಂಬುದನ್ನೆ ಅದು ಮನವರಿಕೆ ಮಾಡಿಕೊಡುವುದು - ಹೊರತು ಧೋರಣೆಯನ್ನು ಸಡಲಿಸಬೇಕೆಂದೇನಲ್ಲ: ಉದಾಹರಣೆಗೆ ೨೧ ವರ್ಷ ವಯಸ್ಸಿಗಿಂತ ಕಡಿಮೆ ಪ್ರಾಯದವರಿಗೂ ಹೆಂಗಸರಿಗೂ ಮದ್ಯವನ್ನು ಒದಗಿಸಬಾರದೆಂದು ಸಮಿತಿ ಹೇಳುತ್ತದೆ; ಮತ್ತು "ಸಾರ್ವಜನಿಕ ಅಭಿಪ್ರಾಯವನ್ನು ಮದ್ಯ ನಿಷೇಧದ ಕಡೆಗೆ ಸಾಕಷ್ಟು ಮಟ್ಟಿಗೆ ಆಕರ್ಷಿಸದಿರುವುದೆ ಧೋರಣೆಯು ವಿಫಲವಾಗಲು ಮುಖ್ಯ ಕಾರಣ" ಎಂಬ ತೀರ್ಮಾನಕ್ಕೆ ಬಂದಿದೆ. ಹೀಗೆ ಪಾನಪ್ರತಿಬಂಧ ಒಳ್ಳೆಯದೆಂಬ ಸಂಗತಿಯನ್ನು ಧ್ವನಿಸುತ್ತಿದ್ದಂತೆಯೇ ಸಮಿತಿಯು ಮಾಡಿದ ೧೪ ಮುಖ್ಯ ಸೂಚನೆಗಳು ವಿರೋಧಾಭಾಸದ ಪರಮಾವಧಿಯೆಂದೆನ್ನಬೇಕಾಗುವುದು. ಅಕ್ರಮ ಮದ್ಯ ತಯಾರಿಯ ವಿರುದ್ಧ ಆಕ್ರೋಶ ಎಬ್ಬಿಸಿದವರು ಮದ್ಯವನ್ನು ಸೀದಾ ಪದ್ಧತಿಯಂತೆ ಹಂಚುವುದರಿಂದ ಮತ್ತು ಅಲ್ಪವಯಿಗಳೂ ಸ್ತ್ರೀಯರೂ ಮದ್ಯಪಾನ ಮಾಡಬಾರದೆಂದು ನಿರ್ಬಂಧಿಸುವುದರಿಂದ—ತೃಪ್ತರಾಗುವುದು ಸಾಧ್ಯವಿಲ್ಲ, ಏಕೆಂದರೆ ಈ ನಿರ್ಬಂಧಗಳೇ ಕಳ್ಳತನದಿಂದ ಕಾಯಿದೆ ಮುರಿಯುವುದಕ್ಕೆ ಪ್ರೇರೇಪಿಸಬಹುದು. ಈ ಹವ್ಯಾಸವನ್ನು ತಡೆಗಟ್ಟುವುದಕ್ಕೆ ಸಾರ್ವಜನಿಕ ಅಭಿಪ್ರಾಯವನ್ನು ಮದ್ಯನಿಷೇಧದ ಪರವಾಗಿ ಒಲಿಸಿಕೊಳ್ಳುವುದೇ ಯೋಗ್ಯ ಮಾರ್ಗ. ಸಮಿತಿಯು ಸಾರ್ವಜನಿಕ ಅಭಿಪ್ರಾಯವನ್ನು ಸಂಘಟಿಸುವ ಬಗೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಸಲಹೆಗಳನ್ನು ಮಾಡುತ್ತಿದ್ದರೆ, ಮತ್ತು "ಈ ನಿಷೇಧಾಜ್ಞೆ ನಿಜವಾಗಿ ನಿಷೇಧಿಸುವುದಿಲ್ಲ" ಎಂದು ಹೇಳುವ ಬದಲು ನಿಜವಾಗಿ ನಿಷೇಧಿಸಲು ತೆಗೆದುಕೊಳ್ಳಬೇಕಾದ ಕ್ರಮಗಳನ್ನು ವಿವರಿಸುತ್ತಿದ್ದರೆ—ಎಂದನಿಸುತ್ತದೆ. ಹಾಗೆ ಮಾಡದೆ ಪಾನನಿರೋಧ ಧೋರಣವನ್ನು ಸಡಲಿಸಲು ಅದು ಸೂಚಿಸಿದುದನ್ನು ಯಾವ ವಿಚಾರಶೀಲ ನಾಗರಿಕನೂ ಪ್ರಶಂಸಿಸಲಾರ. ಆಂಧ್ರರಾಜ್ಯ ಸರಕಾರ ಈ ಸಮಿತಿಯ ಸೂಚನೆಗಳನ್ನು ಅಂಗೀಕರಿಸುವ ಪ್ರಮಾದವನ್ನು ಮಾಡಬಾರದೆಂದು ಬಿನ್ನವಿಸುತ್ತೇವಲ್ಲದೆ ಪ್ರದೇಶ ಕಾಂಗ್ರೆಸ ಸಮಿತಿಯು ನೈತಿಕವಾಗಿ ತನ್ನ ಮೇಲೆ ಬಿದ್ದಿರುವ, ಪಾನ ನಿರೋಧವನ್ನು ಜನಪ್ರಿಯಗೊಳಿಸುವ, ಹೊಣೆಯನ್ನು ಚೊಕ್ಕ ರೀತಿಯಲ್ಲಿ ನಿರ್ವಹಿಸಬೇಕೆಂದೂ ರಾಜ್ಯಸರಕಾರವಾದರೂ ಘಟನೆಯ ನಿರ್ದೇಶಕ ತತ್ವಗಳ ಕಾರ್ಯಾಚರಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಮುಂಬರಿಯುತ್ತಾ ಕಲ್ಯಾಣ ಸಾಧಿಸಬೇಕೆಂದೂ ಕೇಳಿಕೊಳ್ಳುತ್ತೇವೆ.

ಇಂಡೋ ಚೀನದಲ್ಲಿ ಯುದ್ಧ ವಿರಾಮ

ಪ್ರಧಾನಮಂತ್ರಿ ನೆಹರೂರವರು ಮಾಡಿಕೊಂಡ ಬಿನ್ನಹ

ನಾಲ್ಕು ಮಹಾರಾಷ್ಟ್ರಗಳ ವಿದೇಶಾಂಗ ಸಚಿವರ ಬರ್ಲಿನ ಸಮ್ಮೇಳನವು ಮುಖ್ಯ ಪ್ರಶ್ನೆಗಳಾಗಿದ್ದ ಜರ್ಮನಿ ಹಾಗು ಆಸ್ಟ್ರಿಯಾಗಳ ಮಟ್ಟಿಗೆ ಸಂಪೂರ್ಣ ವಿಫಲಗೊಂಡಿದರೂ-ಜಾಗತಿಕ ಶಾಂತಿಯ ಆಶಾಕಿರಣವೊಂದಕ್ಕೆ ಅವಕಾಶವಮಾಡಿಕೊಟ್ಟಿತು. ಈ ಪರಿಷತ್ತು ಒಳ್ಳೆಯ ಫಲವನ್ನು ನೀಡುವುದೆಂದು ದೂರದರ್ಶಿ ರಾಜಕಾರಣಿಗಳಾರೂ ಭರವಸೆ ಇಟ್ಟುಕೊಂಡಿರಲಿಲ್ಲ - ತಮ್ಮ ಹಿಡಿತ ಮತ್ತು ಧೋರಣೆಯನ್ನು ಎಷ್ಟುಮಾತ್ರಕ್ಕೂ ಬಿಟ್ಟುಕೊಡಲಾರೆವೆಂಬ ಛಲ ಪ್ರವೃತ್ತಿಯನ್ನು ರಶಿಯಾ ಹಾಗೂ ಪಾಶ್ಚಾತ್ಯ ರಾಷ್ಟ್ರಗಳೆರಡೂ ಭದ್ರವಾಗಿ ಪ್ರದರ್ಶಿಸಿದ್ದರಿಂದ—ಇದಿರುಪಕ್ಷದವರಿಗೆ ಒಪ್ಪಿಗೆಯಾಗಲಾರದ ಕರಾರುಗಳನ್ನೆ ಮುನ್ನೀಡಲು ಈ ಬಣಗಳು ನೋಡಿದವು; ಮತ್ತು ಪ್ರತಿಪಕ್ಷದವರು ತಮ್ಮ "ಅತ್ಯಂತ ಯೋಗ್ಯ" ಕರಾರುಗಳಿಗೆ ಒಪ್ಪಲಿಲ್ಲವಾದುದರಿಂದ ಅವರ ಹಟಮಾರಿತನವೇ ಪರಿಷತ್ತನ್ನು ನಿಷ್ಫಲವಮಾಡಿತೆಂದು ಡಂಗುರ ಸಾರಲು ದಾರಿಮಾಡಿಕೊಂಡವು.

ಚಿಗುರಿದ ಆಶೆ

ಇಂತಹ ಪರಿಸ್ಥಿತಿಯಲ್ಲಿಯೂ ಕೊರಿಯಾ ಸಮಸ್ಯೆಯ ಬಗ್ಗೆ ಪರ್ಯಾಲೋಚನೆ ನಡೆಸಲು ಏಪ್ರಿಲು ೨೬ನೇ ದಿನಾಂಕ ಜಿನಿವಾದಲ್ಲಿ ಕಮ್ಯೂನಿಸ್ಟ ಚೀನವನ್ನೊಳಗೊಂಡ ಪಂಚಮಹಾರಾಷ್ಟ್ರಗಳ ಪರಿಷತ್ತನ್ನು ಸೇರಿಸಲು ನಿರ್ಧಾರವಮಾಡಿದುದು ಆಶ್ಚರ್ಯ. ಈ ಪರಿಷತ್ತಿನಲ್ಲಿ ಭಾಗವಹಿಸಲು ಉತ್ತರ ಹಾಗು ದಕ್ಷಿಣ ಕೊರಿಯಗಳನ್ನು ಕೇಳಿಕೊಳ್ಳಲು ವಿದೇಶಾಂಗ ಸಚಿವರು ನಿರ್ಧಾರವಮಾಡಿದ್ದು, ಕೊರಿಯಾ ರಾಜಕೀಯ ಪರಿಷತ್ತೊಂದನ್ನು ಸೇರಿಸಬೇಕೆಂದು ಇದುವರೆಗೆ ನಡೆದ ಪ್ರಯತ್ನಗಳು ವಿಫಲಗೊಂಡರೂ ಮುಂದೆ ಏನಾದರೂ ಒಳ್ಳೆಯದಾದೀತೆಂಬ ಆಶೆಗೆ ಇದು ಪುಟಗೊಟ್ಟಿದೆ. ಜನೀವಾ ಸಮ್ಮೇಳನ ಸೇರಿಸುವ ನಿರ್ಧಾರದ ಮೂಲಕ ಕೊರಿಯಾದಲ್ಲಿ ಕಮ್ಯೂನಿಸ್ಟರೊಡನೆ ಒಂದೇ ಪಂಕ್ತಿಯಲ್ಲಿ ಕುಳಿತು ವಿಚಾರ ವಿನಿಮಯ ಮಾಡಲಾರೆವೆಂದು ಹೇಳುತ್ತಿದ್ದ ಅಮೇರಿಕದ ಹಟ ಹಾಗು ತಟಸ್ಥ ರಾಷ್ಟ್ರಗಳನ್ನು ಪರಿಷತ್ತಿಗೆ ಕರೆಯಬೇಕೆಂಬ ರಶಿಯಾದ ಧೋರಣ - ಇವೆರಡನ್ನೂ ತ್ಯಜಿಸಿದಂತಾಗಿರುವುದು.

ಇಂಡೋಚೀನದ ವಿಚಾರ

ಇದಲ್ಲದೆ ಜಿನೀವಾದ ಪರಿಷತ್ತಿನಲ್ಲಿ ಇನ್ನೊಂದು ಮುಖ್ಯ ಸಮಸ್ಯೆಯೂ ಚರ್ಚಿಸಲ್ಪಡುವುದು— ಇಂಡೋಚೀನದ ಯುದ್ಧದಿಂದ ಕೀರಸೊಂದುಕೊಂಡು ಬೇಸರಗೊಂಡಿರುವ ಫ್ರೆಂಚಸರಕಾರ ಹೇಗಾದರೂ ಮಾಡಿ ರಶಿಯಾದ ಮನವೊಲಿಸಿ, ತನ್ಮೂಲಕ ಕೆಂಪುಚೀನದ ಸ್ನೇಹಗಳಿಸಿ, ಹೋಚಿಮಿನ್ನರೊಡನೆ ಸಂಧಾನ ಮಾಡಿಕೊಳ್ಳಬೇಕೆಂದು ಕೆಲದಿನಗಳಿಂದ ಅಪೇಕ್ಷೆಯಿಟ್ಟುಕೊಂಡು, ಸಮಯ ಸಂದರ್ಭಗಳ ನಿರೀಕ್ಷೆಯಲ್ಲಿತ್ತು. ಬರ್ಲಿನ ಪರಿಷತ್ತಿನಲ್ಲಿ ರಶಿಯಾದೊಡನೆ ಮಾತುಕತೆ ನಡೆಸುವಾಗ ಇಂಡೋ ಚೀನದ ಪ್ರಶ್ನೆಯನ್ನು ಬಿಡಿಸಲು ಮಾರ್ಗ ದೊರೆತೀತೋ ಎಂದದು ತವಕಗೊಂಡಿತ್ತು. ಜಿನೀವಾ ಪರಿಷತ್ತಿನಲ್ಲಿ ಇಂಡೋಚೀನದ ಪರಿಸ್ಥಿತಿಯನ್ನು ವಿಚಾರಿಸಲಾಗುವುದೆಂದು ಈಗ ನಿರ್ಧರಿಸಲ್ಪಟ್ಟಿದೆ, ಇದಕ್ಕೆ ಬ್ರಿಟನು ಮತ್ತು ಅಮೇರಿಕದ ಬೆಂಬಲವನ್ನು ದೊರಕಿಸಿಕೊಂ

ದದ್ದು ಹಾಗು ರಶಿಯಾದ ಅನುಕೂಲಾಭಿಪ್ರಾಯವನ್ನು ಸಂಪಾದಿಸಿದ್ದು ಫ್ರಾನ್ಸಿನ ದೊಡ್ಡ ವಿಜಯವೆಂದು ಹೇಳಿದರೆ ತಪ್ಪಾಗದು. ಇಂಡೋ ಚೀನದ ಯುದ್ಧಕ್ಕೆ ಅಮೇರಿಕೆಯು ಹೇರಳವಾಗಿ ವೈಮಾನಿಕ ಸಹಾಯ ನೀಡುತ್ತಾ ಬಂದಿದ್ದರೂ-ಫ್ರೆಂಚ ಸೈನಿಕರಲ್ಲೂ ಇಂಡೋ ಚೀನದ ನಾಗರಿಕರಲ್ಲೂ ಯುದ್ಧೋತ್ಸಾಹ ಉಳಿದಿಲ್ಲ ಅಮೇರಿಕದ ಸೇನೆಯನ್ನು ಪ್ರತ್ಯಕ್ಷ ರಣಭೂಮಿಗೆ ಕಳಿಸಿಕೊಟ್ಟು ಹೋಚಿಮಿನರೊಡನೆ ಹೋರಾಡಲು – ಐಸೆನ ಹಾವರರ ರಿಪಬ್ಲಿಕನ್ನ ಸರಕಾರ ಅಪೇಕ್ಷಿಸುವುದಿಲ್ಲ. ಕೊರಿಯಾ ರಣರಂಗದಿಂದ ತಮ್ಮ ಸೈನಿಕ ಬಾಂಧವರನ್ನು ವಾಪಸು ಕರೆತಂದೇ ತೀರುವೆವೆಂದು ಚುನಾವಣಾಕಾಲದಲ್ಲಿ ಕೊಟ್ಟಭರವಸೆಯನ್ನು ಈಡೇರಿಸಿದೆವೆಂದು ಜಂಭ ಕೊಚ್ಚಿಕೊಳ್ಳುವ ರಿಪಬ್ಲಿಕನ್ನರು ಇನ್ನೊಂದು ಚುನಾವಣೆ ಸಮೀಪಿಸಿರುವಾಗ, ಜನತೆಯ ಬೆಂಬಲವನ್ನು ಕಳೆದುಕೊಳ್ಳಲು ಸಿದ್ಧರಿಲ್ಲ.

ಯುದ್ಧ ಮುಂದರಿಸಿ ಪ್ರಯೋಜನವಿಲ್ಲ

ಹೋಚಿಮಿನರೊಡನೆ ಸಂಧಾನ ಮಾತುಕತೆಗಳ ಬಗ್ಗೆ ತೀವ್ರ ಆಸಕ್ತಿಯು ಪ್ರಕಟಗೊಳ್ಳುತಿದ್ದರೂ ಇಂಡೋ ಚೀನದಲ್ಲಿ ರಣರಂಗದ ಚಟುವಟಿಕೆಗಳು ಬಿರುಸಾಗಿಯೇ ಕಂಡು ಬರುತ್ತವೆ. ಕದನವು ಈ ರೀತಿ ಮುಂದುವರಿಯುವುದು ಪ್ರಕೃತದ ಪರಿಸ್ಥಿತಿಯಲ್ಲಿ ಪ್ರಯೋಜನಕಾರಿಯಾಗಿ ಕಾಣಿಸುವುದಿಲ್ಲ—ಹೇಗೂ ಸಂಧಾನವಾಗುವುದು ಹೌದಾದರೆ, ಇನ್ನೂ ಇನ್ನೂ ಹತ್ಯಾಕಾಂಡದಲ್ಲಿ ತೊಡಗುವುದು ಬೇಸರದ ವಿಷಯ. ಆದುದರಿಂದ ಸಂಬಂಧಪಟ್ಟ ಎಲ್ಲ ಪಂಗಡಗಳೂ ರಾಷ್ಟ್ರಗಳೂ ಇಂಡೋ ಚೀನದಲ್ಲಿ ಯುದ್ಧ ವಿರಾಮವನ್ನು ಸಾಧಿಸಲು ಪ್ರಯತ್ನಿಸಬೇಕೆಂದು ಭಾರತದ ಪ್ರಧಾನ ಮಂತ್ರಿ ನೆಹರೂರವರು ಹೇಳಿದ್ದು, ಇದಕ್ಕೆ ಜಾಗತಿಕ ವಲಯದಲ್ಲಿ ತುಂಬ ಮಹತ್ವ ದೊರಕಿದೆ ಲೋಕ ಸಭೆಯಲ್ಲಿ ರಾಷ್ಟ್ರಪತಿಗಳ ಭಾಷಣದ ಮೇಲೆ ಚರ್ಚೆ ನಡೆಯುತಿದ್ದಾಗ ಪ್ರಧಾನಿಗಳು ಈ ವಿನಂತಿಯನ್ನು ಮಾಡಿದರು ಇದನ್ನು ಎಲ್ಲ ಪಕ್ಷಗಳ ಸದಸ್ಯರೂ ಹರ್ಷೋದ್ಗಾರಗಳೊಡನೆ ಸ್ವಾಗತಿಸಿದರು "ಇನ್ನೆರಡು ತಿಂಗಳಲ್ಲಿ ಇಂಡೋ ಚೀನದ ಪ್ರಶ್ನೆಯು ಜಿನೀವಾದಲ್ಲಿ ಚರ್ಚಿಸಲ್ಪಡುವುದರಿಂದ ಯಾವುದೇ ಪಕ್ಷವು ತನ್ನ ಸ್ಥಾನಮಾನ, ಮತ್ತು ಅಧಿಕಾರವನ್ನು ತ್ಯಜಿಸದೆ ಯುದ್ಧ ವಿರಾಮವನ್ನು ಕಾರ್ಯರೂಪಕ್ಕೆ ಇಳಿಸಬೇಕೆಂದು ನಾನು ಸವಿನಯ ಪೂರ್ವಕ ವಿನಂತಿಸುತ್ತೇನೆ. ಜಿನೀವಾ ಸಮ್ಮೇಳನ ಸೇರಿಸುವ ವಿಚಾರದಲ್ಲಿ ಚೀನೀ ಸರಕಾರದ ಒಪ್ಪಿಗೆಯನ್ನು ಪಡೆಯಲಾಗಿದೆಯಾಗಿಯೂ ನಾನು ಭಾವಿಸುತ್ತೇನೆ" ಎಂದು ನೆಹರೂ ಹೇಳಿದರು.

ಶಾಂತಿ ಸೇನೆಯ ಪುನರಾಗಮನ

ಕೊರಿಯದಲ್ಲಿ ಹೊತ್ತಂತೆ ಭಾರತ ಸರಕಾರವು ಇಲ್ಲಿ ಯಾವುದೇ ಹೊಣೆಯನ್ನು ನಿರ್ವಹಿಸಲಾರದೆಂದು ಪ್ರಧಾನಿಗಳು ಕಂಠೋಕ್ತವಾಗಿ ಸಾರಿದರು-ಕೊರಿಯಾದಲ್ಲಿ ತಟಸ್ಥ ರಾಷ್ಟ್ರ ಮಂಡಳದ ಕೆಲಸ ಹಾಗು ಭಾರತೀಯ ಸೈನ್ಯ ಪಡೆಯ ಕಾರ್ಯಗಳು ಬಹಳ ಸೂಕ್ಷ್ಮ ಗೊಂದಲವಾಗಿದ್ದು—ಅವುಗಳಿಗೆ ಮೊದಲು ಎಣಿಸಿದ ದಕ್ಕಿಂತ ಭೀಕರವಾದ ಅಡಚಣೆಗಳನ್ನು ಎದುರಿಸಬೇಕಾಯಿತು. ತಮ್ಮ ಶಾಂತಿ ಕಾರ್ಯವನ್ನು ಪೂರೈಸಿದ ಬಳಿಕ ಭಾರತೀಯ ಯೋಧರ ಮೊದಲ ತಂಡವು ಇದೀಗ ಮರಳಿ ಮಾತೃಭೂಮಿಗೆ ಬಂದು ಸೇರಿದೆ. ಐದು ತಿಂಗಳ ಹಿಂದೆ ಭಾರತ ಬಿಟ್ಟು ಹೊರಟಿದ್ದ ಈ ಸೈನಿಕರನ್ನು ಮದ್ರಾಸಿನ ಅದೇ ಧಕ್ಕೆಯಲ್ಲಿ ಸ್ವದೇಶಕ್ಕೆ ಸಂಭ್ರಮದಿಂದ ಸ್ವಾಗತಿಸಲಾಯಿತು. ಭಾರತದ ಉಚ್ಚ ಪರಂಪರೆ ಮತ್ತು ಉದಾತ್ತ ಆದರ್ಶಗಳನ್ನು ಎತ್ತಿ ಹಿಡಿದು ದಕ್ಷತೆಯಿಂದಲೂ ಸಹನೆಯಿಂದಲೂ ತೃಪ್ತಿಕರ ರೀತಿಯಲ್ಲಿ ತನಗೊಪ್ಪಿಸಲಾದ ಜವಾಬ್ದಾರಿಯನ್ನು ಭಾರತೀಯ ಸೇನೆ ನೆರವೇರಿಸಿದುದಕ್ಕೆ ಭಾರತದ ವರಿಷ್ಠ ಸ್ಥಾನಾಪನ್ನರಂತೂ ಸರಿಯೇ—ವಿದೇಶಗಳ ಧುರೀಣರೂ ಅಂತಾರಾಷ್ಟ್ರೀಯ ಖ್ಯಾತಿಯುಳ್ಳ ಪತ್ರಿಕೆಗಳೂ ಅಭಿನಂದನೆಯನ್ನು ಅರ್ಪಿಸಿದ್ದು ಮೆಚ್ಚುಗೆಯ ವಿಷಯ ತಟಸ್ಥ ರಾಷ್ಟ್ರ ಮಂಡಳವು ಇದೀಗ ವಿಸರ್ಜನೆ ಹೊಂದಿದ್ದು, ಅದರ ಅಧ್ಯಕ್ಷರಾಗಿ ಕೆಲಸಮಾಡಿದ ತಿಮ್ಮಯ್ಯನವರು ಸಿಯೋಲದಿಂದ ಟೋಕಿಯೋಗೆ ತೆರಳಿ, ಅಲ್ಲಿಂದ ಬೇಗನೇ ಭಾರತಕ್ಕೆ ಆಗಮಿಸುವರು.

ಪಾಕ-ತುರ್ಕ ಒಡಂಬಡಿಕೆ

ಅಮೇರಿಕವು ಪಾಕಿಸ್ತಾನಕ್ಕೆ ಸೈನಿಕ ಸಹಾಯವನ್ನು ನೀಡುವುದಕ್ಕೆ ಪೂರ್ವಭಾವಿಯಾಗಿ ಪಾಕ-ತುರ್ಕ ಒಡಂಬಡಿಕೆಯೊಂದು ಜರಗಲಿದ್ದು, ಪ್ರಾಸ್ತಾವಿಕವಾದ ಎಲ್ಲ ಘಟ್ಟಗಳೂ ಇಷ್ಟರಲ್ಲೆ ಮುಗಿದು ಹೋಗಿವೆ. ಕರಾಚಿ ಮತ್ತು ಅಂಕಾರಗಳಿಂದ ಏಕಕಾಲಕ್ಕೆ ಹೊರಟ ಪ್ರಕಟಣೆಯೊಂದ ರಾಜಕೀಯ, ಆರ್ಥಿಕ ಹಾಗು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಅತಿ ನಿಕಟವಾದ ಸಂಬಂಧವನ್ನು ಪಾಕಿಸ್ತಾನ-ತುರ್ಕಸ್ತಾನಗಳು ಬೆಳೆಸಲಿಚ್ಛಿಸುವುವೆಂದೂ ಈ ಉದ್ದೇಶದಿಂದ ಮಾತುಕತೆಗಳು ನಡೆದಿವೆಯೆಂದೂ ತಿಳಿಸುತ್ತವೆ. ರಾಜಕೀಯ ಸಂಬಂಧದಲ್ಲಿ ಸಂರಕ್ಷಣೋಪಾಯವೂ ಸೇರಿದೆಯಾಗಿ ವಿಧಿತ ವರ್ಗಗಳ ಅಭಿಪ್ರಾಯ ಶಾಂತಿ ಭದ್ರತೆಯನ್ನು ಬಲಪಡಿಸುವ ಈ ಒಡಂಬಡಿಕೆಗೆ ಅಮೇರಿಕ ಮತ್ತು ಬ್ರಿಟನುಗಳ ಸಂಪೂರ್ಣ ಬೆಂಬಲ ದೊರಕಿದೆ—ತನಗೆ ಸೈನಿಕ ಸಹಾಯ ನೀಡಬೇಕೆಂದು ಅಮೇರಿಕಕ್ಕೆ ಪಾಕಿಸ್ತಾನವು ಮಾಡಿಕೊಂಡ ವಿನಂತಿಯನ್ನು ಐಸೆನ ಹೋವರರ ಸರಕಾರ "ವಿಶೇಷ ರೀತಿಯಲ್ಲಿ" ಪರಿಶೀಲಿಸುತ್ತಿದೆ. ಪಾಕ-ತುರ್ಕ ಒಪ್ಪಂದಕ್ಕೆ ಅಂಕಿತ ಬಿದ್ದೊಡನೆಯೇ ಅಮೇರಿಕದ ಸಹಾಯ ದೊರೆಯ ಬಹುದೆಂದು ಹೇಳಲಾಗಿದ್ದು-ಈ ಒಪ್ಪಂದ ಮಧ್ಯಪೂರ್ವ ಸಂರಕ್ಷಣಾ ಯೋಜನೆಗೆ ಉಚಿತ ಹಿನ್ನಲೆಯನ್ನೊದಗಿಸುವ ನಿರೀಕ್ಷೆಯನ್ನೂ ಇಟ್ಟುಕೊಳ್ಳಬಹುದು. "ಇದು ಮುಸ್ಲಿಂ ಜಗತ್ತಿನ ಬಲ ಹೆಚ್ಚಿಸುವ ಮೊದಲ ಹೆಜ್ಜೆ" ಎಂದು ಮಹಮ್ಮದಾಲಿಯವರು ವರ್ಣಿಸಿದ್ದು, ಅರಬ ರಾಷ್ಟ್ರಗಳನ್ನೊಳಗೊಂಡು ಇತರ ಮುಸ್ಲಿಂ ರಾಷ್ಟ್ರಗಳನ್ನೂ ಸೆಳೆದುಕೊಳ್ಳುವ ಅಮೇರಿಕದ ಹೊಂಚಿನ ಬಲೆಯೇ ಪಾಕ-ತುರ್ಕ ಒಪ್ಪಂದವೆಂಬ ಅಭಿಪ್ರಾಯವನ್ನು ಈ ಹೇಳಿಕೆ ಪುಷ್ಟೀಕರಿಸುತ್ತದೆ.

ಸಿಂಹಳದ ಭಾರತೀಯರು

ಭಾರತ ಸಿಂಹಳಗಳು ಮಾಡಿಕೊಂಡ ಇತ್ತೀಚಿನ ಒಪ್ಪಂದಕ್ಕೆ ಉಭಯ ಸರಕಾರಗಳಿಂದ ದೃಢೀಕರಣ ದೊರೆತಿದೆ. ಸಿಂಹಳ ಕಾಂಗ್ರೆಸಿಗೆ ಮಾತ್ರ ಈ ಒಪ್ಪಂದ ಸಂಪೂರ್ಣ ಸಮಾಧಾನವನ್ನು ತಂದಿಲ್ಲ—ಎಲ್ಲ ಭಾರತೀಯರಿಗೂ ನಾಗರಿಕ ಅಧಿಕಾರ ದೊರೆಯಬೇಕೆನ್ನುವ ಉದ್ದೇಶದಿಂದ ತನ್ನ ಮುಂದೆಯೂ ಹೋರಾಟ ನಡೆಸುವುದಾಗಿ ಕಾಂಗ್ರೆಸು ಹೇಳುತ್ತದೆ. ಈ ಸಂದರ್ಭದಲ್ಲಿ ಉದ್ಭೂತವಾಗುವ ರಾಷ್ಟ್ರರಹಿತರ ಪ್ರಶ್ನೆಯನ್ನು ಒಡಂಬಡಿಕೆಯ ಕಕ್ಷೆಯ ಹೊರಗಡೆ, ಪ್ರತ್ಯೇಕ ಸಂಧಾನದಿಂದ ಬಗೆಹರಿಸಬೇಕೆಂದು ನೆಹರೂರ ಅಭಿಪ್ರಾಯ.

ಉಡುಪಿ

ನಗರಸಭೆಯು—ತಾ 20ರಲ್ಲು ಉಪಾಧ್ಯಕ್ಷ ಡಾ ಪಿ. ವಿ. ವ್ಯಾಸರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಕೌನ್ಸಿಲಿನ 1953—54ರ ತಿದ್ದಿದ ಮತ್ತು 1954—55ರ ಅಂದಾಜು ಬಜೆಟು ಪಾಸು ಮಾಡಲಾಯಿತು. ಮೂರನೆ ತರಗತಿ ಮುನಿಸಿಪಾಲಿಟಿಗಳಿಗೆ ಕಮಿಶನರರ ಹುದ್ದೆಗಳನ್ನು ರದ್ದು ಮಾಡಿ, ಅವರ ಅಧಿಕಾರವನ್ನು ಹೆಲ್ತ್ ಆಫೀಸರರಿಗೆ ಕೊಡಬೇಕೆನ್ನುವ, ಮುನಿಸಿಪಲ್ ಕ್ಷೇತ್ರದ ಸರಕಾರಿ ಖಾಲಿ ಜಾಗದ ಮೇಲಿನ ಟೇಕ್ಸ್ ಮೊಬಲಗನ್ನು ನಗರ ಸಭೆಗೆ ಸರಕಾರವು ಕೊಡಬೇಕೆನ್ನುವ ನಿರ್ಣಯಗಳು ಕೂಡಾ ಬಜೆಟ್ ಸ್ವೀಕಾರ ಸಮಯ ಒಮ್ಮತದಿಂದ ಪಾಸಾದುವು. ಕಾಂಗ್ರೆಸ್ ಪಕ್ಷದ ವಕೀಲ್ ಶ್ರೀ ಪಿ. ಎ. ಆಚಾರ್ಯರು ಕೌನ್ಸಿಲಿನಲ್ಲಿ ಇನ್ನು ಮುಂದೆಯಾದರೂ ಪಕ್ಷ ಪಂಗಡಗಳ ವ್ಯತ್ಯಾಸವಿಲ್ಲದೆ ಸರ್ವರೂ ನಗರದ ಕ್ಷೇಮ ಚಿಂತನೆಗೆ ಒಂದಾಗಿ ದುಡಿಯಬೇಕೆಂದು ಅಪೇಕ್ಷಿಸಿದರು. ಶ್ರೀ ಕೆ. ಕೆ. ಪೈ ಮೊದಲಾದವರು ಶ್ರೀ ಆಚಾರ್ಯರ ಅಭಿಪ್ರಾಯವನ್ನು ಪುಷ್ಟೀಕರಿಸಿದರು. ಸ್ವತಂತ್ರ ಪಕ್ಷದ ಶ್ರೀಗಳಾದ ಎ. ಮಂಜುನಾಥ ರಾವ್, ಸೀತಾರಾಮ ಕಾಮತ್ ಮೊದಲಾದವರು ಶ್ರೀ ಆಚಾರ್ಯರ ಸೂಚನೆಯನ್ನು ಸ್ವಾಗತಿಸಿದರು.

ಉಡುಪಿ ತಾಲೂಕು ಖಾಸಗಿ ಶಾಲೆಗಳ ಅಧ್ಯಾಪಕರ—ಯೂನಿಯನಿನ ಪತಿಯಿಂದ ತಾ 28—2—54ನೇ ಆದಿತ್ಯವಾರ ಅಪರಾಹ್ನ ಘಂಟೆ 2ಕ್ಕೆ "ಉಪಾಧ್ಯಾಯರ ಕೇಳಿಕೆಯ ದಿನ"ವನ್ನು ಉಡುಪಿ ಮೋಡೆರ್ನ್ ಹಾ' ಎ ಶಾಲೆಯಲ್ಲಿ ಆಚರಿಸುವುದಾಗಿ ನಿಶ್ಚಯಿಸಿರುವುದರಿಂದ ಸಂಬಂಧಪಟ್ಟ ಅಧ್ಯಾಪಕ, ಅಧ್ಯಾಪಕಿಯರೆಲ್ಲರೂ, ಅಂದಿನ ಮಹಾಸಭೆಯಲ್ಲಿ ಸಹಭಾಗಿಗಳಾಗಬೇಕಾಗಿ ಸದ್ರಿ ಯೂನಿಯನಿನ ಅಧ್ಯಕ್ಷರು ಅಪೇಕ್ಷಿಸುತ್ತಾರೆ.

NOTICE

In the Court of the IInd Add. Sub. Judge of S. Kanara.

A. S. 3/54.

Between:-

Edeyillom Ramani Amma ... ... *Appellant.*

and

Edeyillom Chathu Nair and others ... *Respondents.*

To Respondents 3 to 6, 8, 9, 12 to 14, 16 to 24.

(1) Umbi alias Laxmi (R 3)
(2) Krishnan Nair (R 4)
(3) Narayana Nair (R 5)
(4) Kunhi Raman Nair (R 6)
(5) Kunhi Kannan Nair (R 8)
(6) Keshavan Nair (R 9)
} All are the Children of Laxmi Amma.

(7) Shekaran (R 12) S/o Bhagirathi Amma.

(8) Laxmi (R 13)
(9) Radhakrishna (R 14)
(10) Unnamed female child R24
} Minors by Gudn. 11th respondent Bhagirathi Amma, d/o Umbi alias Laxmi, residing at Pathandka in Mulivar village, Kasargod Tq.

(11) Lalitha R 16
(12) Kunhambu R17
(13) Kunhambu R23
} Minors by Guardian 15th respondent Sushila d/o Kunhammavu alias Kalyani Amma residing at Kannanthur in Mulivar village, Kasargod Tq.

(14) Raghu (R18
(15) Sukumaran (R19
(16) Devaki (R20)
(17) Mani (R21
(18) Radha (R22
} Minors by Guardian 7th respondent Kunhammavu alias Kalyani Amma d/o Laxmi Amma residing at Kolathur village, Kasargod Tq

Respondents 3, 4, 6, 8, 9, 12, 13, 14 and 24 reside in Pathandka in Mulivar Village Kasaragod Taluq

Respondent 7 is residing at Kolathur Village of Kasaragod Taluq

Please take notice that the abovenamed appellant has filed the above appeal against the decree and judgment in O S 103/52 d. 24-8-1953 in the file of D M C, Kasaragod and the said appeal is posted to 17-3-1954 at 11 a.m. in the above Court.

You may appear either in person or by a pleader and contest the same on the said date failing which it will be heard and decided in your absence

[By order of Court]

Mangalore }
D. 15—2—1954 }

K Sunder Rama Shetty,
Vakil for Appellant.

ಹೊಸದುರ್ಗ ಡಿಸ್ಟ್ರಿಕ್ಟ ಮುನ್ಸಿಫ ಕೋರ್ಟಿನಲ್ಲಿ

O. P. No. 3/54

1. K. V. ಕಲ್ಯಾಣಿ ಬಾಯಿ,
2. ಜಯರಾಜ } ಮೈನರರು ಗಾರ್ಡಿಯನ್
3. ಕೃಷ್ಣಕುಮಾರ್ { ನ್ 1ನೇ ಅರ್ಜಿದಾರಳು

ಹೊಸದುರ್ಗ ಗ್ರಾಮದಲ್ಲಿರುವವರು.

—ಅರ್ಜಿದಾರ್ರು.

ಹೊಸದುರ್ಗ ಗ್ರಾಮದಲ್ಲಿ ಮೃತಪಟ್ಟ 1ನೇ ಅರ್ಜಿದಾರಳ ಗಂಡ, 2 ಮತ್ತು 3ನೇ ಅರ್ಜಿದಾರರ ತಂದೆ B. M. ಲಕ್ಷ್ಮಣರಾಯರಿಗೆ South Indian Bank Ltd, Indo Mercantile Bank Ltd, ಮತ್ತು The South Indian Bank Ltd. (Chit-funds) - Palghat ಯಲ್ಲಿರುವ ನಿಕ್ಷೇಪ ಪ್ರತಿಯ ರೂ. 1777-11-0ಕ್ಕೆ ಅರ್ಜಿದಾರರ ಬಗ್ಗೆ 1ನೇ ಅರ್ಜಿದಾರಳ ಹೆಸರಿಗೆ "ಸಕ್ಸೆಷನ್ ಸರ್ಟಿಫಿಕೇಟು" ಕೊಡಬೇಕೆಂಬ ದಾವಾದ ಮೊಕದ್ದಮೆಯ ಅರ್ಜಿಯು ತಾ 16-3-54ಕ್ಕೆ ಇಟ್ಟಿರುವುದರಿಂದ ಆಕ್ಷೇಪ ಉಳ್ಳವರು ಆ ದಿನ ಹಾಜರಾಗಿ ತಕರಾರು ಮಾಡತಕ್ಕದ್ದು ಎಂತ ಈ ಮೂಲಕ ತಿಳಿಸಲಾಗಿದೆ.

(Sd) V. K. K. Nayar,
Advocate for Petitioners.

[illegible] 3—2—54.

ಬೈಲೂರು— ಈ ಕೇಂದ್ರದ ಜನತೆಯ ಪರವಾಗಿ ಡಾ| ಯು. ಎಲ್. ನಾರಾಯಣ ರಾವ್, ಮದ್ರಾಸು, ಇವರಿಗೆ ಮಾನಪತ್ರ ಅರ್ಪಿಸುವ ಸಮಾರಂಭವು ತಾ 16ರಲ್ಲು ಡಾ| ಟಿ. ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಬೈಲೂರು ಪಂಚಾಯತ ಬೋರ್ಡು ಅಧ್ಯಕ್ಷ ಶ್ರೀ ಕೆ. ರಘುರಾಮ ಹೆಗ್ಡೆಯವರು ಮಾನ ಪತ್ರವನ್ನೋದಿದರು. ಜತೆಯಲ್ಲಿಯೇ ಶ್ರೀ ಕೆ. ಎಸ್. ಹೆಗ್ಡೆಯವರಿಂದ ಬಂದ ಸಂದೇಶಗಳನ್ನು ಓದುತ್ತಾ ಇಲ್ಲಿ ಅತೀ ಅಗತ್ಯವಿರುವ ಹ್ಯಾಸ್ಕೂಲಿಗೆ ಡಾ|ಯು ಎಲ್. ನಾರಾಯಣರಾಯರು ಮಾರ್ಗದರ್ಶಕರಾಗಬೇಕೆಂದು ಕೇಳಿಕೊಂಡರು. ಮಾನ್ಯ ಅತಿಥಿಯು ಜನತೆಯು ತನ್ನನ್ನು ಅಭಿಮಾನ ಪೂರ್ವಕ ಗೌರವಿಸಿದುದಕ್ಕೆ ಆಭಾರ ಸೂಚಿಸಿದರು. ಹ್ಯಾಸ್ಕೂಲು ಬಗ್ಗೆ ಹಣ ಸಂಗ್ರಹಿಸುವರೆ ಹ್ಯಾಸ್ಕೂಲು ಕಮಿಟಿಯೊಂದು ರಚಿಸಲ್ಪಟ್ಟಿತು. ಕಮಿಟಿಯಲ್ಲಿ ಡಾ| ಯು. ಎಲ್. ನಾರಾಯಣ ರಾಯರು ಅಧ್ಯಕ್ಷರಾಗಿಯೂ ಶ್ರೀ ಕೆ. ಎಸ್. ಹೆಗ್ಡೆ, ಎಮ್. ಪಿ. ಯವರು ಕಾರ್ಯದರ್ಶಿಗಳಾಗಿಯೂ, ಶ್ರೀ ಬಿ. ಕೇಶವ ಕಿಣಿಯವರು ಸಹಾಯಕ ಕಾರ್ಯದರ್ಶಿಗಳಾಗಿಯೂ ಶ್ರೀ ಪಿ. ನರಸಿಂಹಾಚಾರ್ಯರು ಕೋಶಾಧಿಕಾರಿಗಳಾಗಿಯೂ ಇರುವರು. ಡಾ| ಟಿ. ಮಾಧವ ಪೈಗಳು ಕಮಿಟಿಯ ಸಲಹೆಗಾರರಾಗಿ ಆರಿಸಲ್ಪಟ್ಟರು. ಶ್ರೀ ಸಿಂಜೂರು ಸಂಜೀವ ಶೆಟ್ಟರು ಧನ್ಯವಾದಗಳನ್ನರ್ಪಿಸಿದ ಬಳಿಕ ಸಭಾಂತ್ಯವಾಯಿತು.

ಮೂಲ್ಕಿ—ಸ್ಥಳೀಯ ಮ್ಯಾಡಲಿನ್ ಬಾಲಿಕೆಯರ ಹ್ಯಾಸ್ಕೂಲಿನ ವರ್ಧಂತ್ಯುತ್ಸವವು ತಾ 17ರಲ್ಲು ಸಂಜೆ ಡಾ| ಟಿ. ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಮುಖ್ಯೋಪಾಧ್ಯಾಯಿನಿ ಶ್ರೀಮತಿ ಎ. ಸಿಂಟೋರೆಸರು ಶಾಲಾ ವರದಿಯನ್ನೋದಿದರು. ಅಧ್ಯಕ್ಷರು ಪಾರಿತೋಷ ವಿತರಣೆ ಮಾಡಿ ಸ್ತ್ರೀ ಶಿಕ್ಷಣದ ಆವಶ್ಯಕತೆಯ ಕುರಿತು ವಿಚಾರಪೂರ್ಣ ಭಾಷಣವಿತ್ತರು ಬಳಿಕ ವಿವಿಧ ವಿನೋದಾವಳಿಗಳಾದುವು.

ಉದ್ಯಾವರ—ಸ್ಥಳೀಯ 14 ಪಟ್ಣ ಮೊಗವೀರ ಮಹಾಜನ ಸಭೆಯ ವಿಶೇಷ ಮಹಾಸಭೆಯು ಇದೇ ತಾ 21ರಲ್ಲು ಶ್ರೀ ಉದ್ಯಾವರ ಸದಿಯ ಸಾಹುಕಾರರ ಅಧ್ಯಕ್ಷತೆಯಲ್ಲಿ ಜರಗಿತು. ಕೈಪುಂಜಾಲು ಆಗಾಯಿತು ಕದಿಕಾರು ವರೆಗಿನ 14 ಮೊಗವೀರ ಪಟ್ಣಗಳಲ್ಲಿಯ ನಿರಕ್ಷರ ಪ್ರಾಯಸ್ಥ ಮೊಗವೀರರಿಗೆ ಐಚ್ಛಾಯ ಶಿಕ್ಷಣವನ್ನು ಸಭೆಯ ಖರ್ಚಿನಿಂದಲೇ ಕೊಡಿಸತಕ್ಕದ್ದೆಂದು ನಿರ್ಣಯವಾಯಿತು. ಈ ಕುರಿತು ಪ್ರತ್ಯೇಕ ಕಮಿಟಿ ರಚಿಸಲ್ಪಟ್ಟಿತು. ಶಾಲೆಯು ಮುಂದಿನ ಎಪ್ರಿಲ್ ತಿಂಗಳಲ್ಲಿ ಆರಂಭವಾಗಲಿರುವುದು.

ಪ್ರಕಟಣೆ.

ಪಕಾರ್ಳ ಪಂಚ್ಯಾತ ಬೋರ್ಡು ಪ್ರಸಿಡೆಂಟರು ಈ ಮೂಲಕ ಸರ್ವರಿಗೆ ತಿಳಿಯಪಡಿಸುವದೇನೆಂದರೆ:—

ಬೋರ್ಡಿನ ಪರ್ಕಾಳದಲ್ಲಿರುವ ವಾರ ಸಂತೆ, ದಿನವಹಿ ಮೀನು ಮಾರ್ಕೇಟು ಮತ್ತು ಗಾಡಿ ಚಾಕಗಳಲ್ಲಿ 1951ನೇ ಇಸವಿ ಎಪ್ರಿಲು ತಾರೀಕು 1ರಿಂದ 1955ನೇ ಇಸವಿ ಮಾರ್ಚಿತಿಂಗಳ ತಾ. 31ರವರೇಗೆ ಪೂರ್ತಿ ಒಂದು ವರ್ಷದಲ್ಲಿ ಸುಂಕ ವಸೂಲು ಮಾಡುವ ಹಕ್ಕುಗಳನ್ನು ಪ್ರತ್ಯಪ್ರತ್ಯೇಕವಾಗಿ ಇದೇ ಬರುವ ಮಾರ್ಚಿ ತಿಂಗಳ ತಾರೀಕು 5ನೇ ಶುಕ್ರವಾರ ಸಾಯಂಕಾಲ ಗಂಟೆ 3ಕ್ಕೆ ಪ್ರಾರಂಭವಾಗಿ ಬೋರ್ಡು ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು.

ಹೆಚ್ಚಿನ ಮಾಹಿತಿ ಬಗ್ಗೆ ಬೋರ್ಡಿನ ಆಫೀಸು ನೋಟೀಸು ಬೋರ್ಡಿನಲ್ಲಿ ಪ್ರಕಟಿಸಿರುವ ವಿವರವಾದ ಏಲಂ ಶರ್ತ-ವ-ನಿಬಂಧನೆಗಳನ್ನೊಳಗೊಂಡ ಪ್ರಕಟಣೆಯನ್ನು ನೋಡಿ—ಯಾ—ಮುಖತಾ ವಿಚಾರಿಸಿ ತಿಳಿಯಬಹುದು.

ಸದ್ರಿ ದಿನ ಸಾಯಂ. ಗಂಟೆ 1-30ರಿಂದ, ಬೋರ್ಡಿನ ಹಳೆ ಪತ್ರಿಕೆಗಳನ್ನು (ಗಜೇಟು), ಹಳೆ ಡಬ್ಬಿಗಳನ್ನು ಮತ್ತು ಕಸಕಡ್ಡಿಗಳ ಗೊಬ್ಬರವನ್ನು ಸಹಾ ಏಲಂ ಮಾಡಲಾಗುವುದು.

H. ಸದಾಶಿವ ಹೆಗ್ಡೆ,
ಪ್ರಸಿಡೆಂಟ್.

ಪಂಚ್ಯಾತ ಬೋರ್ಡು ಆಫೀಸು, ಪಕಾರ್ಳ.
ತಾರೀಕು, 22—2—54.

ಶಿರಿಯೂರು— ತಾ 16ರಲ್ಲಿ ಇಲ್ಲಿಯ ಹಾ| ಎ| ಶಾಲೆಯಲ್ಲಿ ಎಂ. ಜಿ. ಎಂ. ಕಾಲೇಜಿನ ಹಳೆ ವಿದ್ಯಾರ್ಥಿ ಶ್ರೀ ಎಮ್. ಸಂಜೀವ ಶೆಟ್ಟರು 75 ಆಸನಗಳನ್ನು ಪ್ರದರ್ಶಿಸಿದರು. ಶ್ರೀ ಎ. ಎನ್. ವೆಂಕಟ್ರಮಣ ತಂತ್ರಿಗಳು ಶ್ರೀ ಶೆಟ್ಟರಿಗೆ ಶುಭಾಶೀರ್ವಾದಗಳನ್ನು ಮಾಡಿದರು.

ಅಂಪಾರು—ಇಲ್ಲಿಯ ಮಹಿಷಮರ್ದಿನಿ ದೇವಿ ಸನ್ನಿಧಿಯಲ್ಲಿ ಊರವರ ಸಹಕಾರದಿಂದ ಇದೇ ತಾ 12ರಲ್ಲು ಪ್ರಾರಂಭವಾದ ಶ್ರೀರಾಮ ಭಜನೆಯ ಮಂಗಳೋತ್ಸವವು ತಾ 19ರಲ್ಲು ಯಶಸ್ವಿಯಾಗಿ ಕೊನೆಗೊಂಡಿತು.

ಕುಂಬಳೆ— ಜಿಲ್ಲಾ ಕಲೆಕ್ಟರ್ ಶ್ರೀ ಎ. ಮಹಾಲಿಂಗಂ ಚೆಟ್ಟಿಯಾರರು, ಪುತ್ತೂರು ಸಬ್ ಕಲೆಕ್ಟರ್ ಶ್ರೀ ಬಿ. ಎನ್. ಹೆಗ್ಡೆ, ಬ್ಲೋಕ್ ಡೆವಲಪ್‌ಮೆಂಟ್ ಅಫೀಸರ್ ಶ್ರೀ ಕೆ. ಕೆ. ಕಿಣಿ, ಶ್ರೀ ಬಿ. ದೇವಪ್ಪ ಆಳ್ವ, ಜನಾಬ್ ಎಮ್. ಎಸ್. ಮೊಗ್ರಾಲ್, ಎಮ್. ಎಲ್. ಎ. ಮೊದಲಾದವರೊಡನೆ ಇದೇ ತಾ 16ರಲ್ಲು ಬಂಬ್ರಾಣದ ವಲಯದಲ್ಲಿ ಆಗಬೇಕೆಂದು ಕೃಷಿಕರು ಅಪೇಕ್ಷಿಸಿದ ಅಣೆಕಟ್ಟಿನ ಕಾರ್ಯ ಪರಿಶೀಲನೆ ಮಾಡಿದರು.

ಎಡನೀರು—ತಾ 13ರಲ್ಲಿ ಎಡನೀರ ಮಠಾಧೀಶರಾದ ಶ್ರೀ ಈಶ್ವರಾನಂದ ಭಾರತಿ ಶ್ರೀಪಾದಂಗಳವರ ಹಸ್ತದಿಂದ, ಉಡುಪಿ ಪುತ್ತಿಗೆ ಮಠದ ಕಿರಿಸ್ವಾಮಿಗಳ ಅಧ್ಯಕ್ಷತೆಯಿಂದ, ಮುಳ್ಳಿವಾಡಿ ಯಕ್ಷಗಾನ ಕಲಾವರ್ಧಕ ಸಂಘದವರು ಕವಿಭೂಷಣ ಕೆ. ಪಿ. ವೆಂಕಪ್ಪ ಶೆಟ್ಟರಿಗೆ ಮಾನಪತ್ರವೊಂದನ್ನು ಎಡನೀರು ಮಠದ ಹಾ| ಎ| ಶಾಲೆಯಲ್ಲಿ ಅರ್ಪಿಸಿದರು. ವಕೀಲ್ ಶ್ರೀ ಕೆ. ಮಹಾಬಲ ಭಂಡಾರಿ, ಶ್ರೀ ಪಿ. ಐತಪ್ಪ, ಕೆ. ಗೋಪಾಲಕೃಷ್ಣಯ್ಯ ಬಾಡೂರು ಜಗನ್ನಾಥ ರೈ ಮೊದಲಾದವರು ಭಾಷಣವಿತ್ತರು. ಅಧ್ಯಕ್ಷರು ವೆಂಕಪ್ಪ ಶೆಟ್ಟರ ಯೋಗ್ಯತೆಯನ್ನು ಕೊಂಡಾಡಿ ಹರಸಿದರು. ರಾತ್ರಿ ಪುತ್ತೂರು ಕಲಾಪ್ರೇಮಿ ವೃಂದದವರು ಎಡನೀರು ಸ್ವಾಮಿಗಳ ಆಶ್ರಯದಲ್ಲಿ "ಸಂಸಾರ" ಸಾಮಾಜಿಕ ನಾಟಕವನ್ನು ಅಭಿನಯಿಸಿದರು.

ಪೊಳಲಿ—ಇದೇ ಫೆಬ್ರುವರಿ ತಾ. 19ರಲ್ಲು ಮದ್ರಾಸ್ ರಿಲೀಯಸ್ ಚೆರಿಟೇಬಲ್ ಎಂಡೋಮೆಂಟ್ ಬೋರ್ಡಿನವರು ಮಂಗಳೂರು ತಾಲ್ಲೂಕು ಪೊಳಲಿ ಶ್ರೀ ರಾಜರಾಜರಾಜೇಶ್ವರಿ ಅಮ್ಮನವರ ದೇವಸ್ಥಾನಕ್ಕೆ ಆದ ಸ್ಕೀಮು ಆರ್ಡರ್ ಮೇಲೆಗೆ ಕರಿಯಂಗಳ ಗ್ರಾಮದ ಶ್ರೀ ಗುಂಡಿಲ ಮಂಜಪ್ಪ ಶೆಟ್ರನ್ನು ಮತ್ತು ಅಮುಣಂಜೆ ಗುತ್ತಿನ ಪೊಳಲಿ ಎನ್. ಎ. ಶೀನಪ್ಪ ಹೆಗ್ಡೆಯವರನ್ನು ಟ್ರಸ್ಟಿಗಳಾಗಿ ನೇಮಕ ಮಾಡಿರುತ್ತಾರಾಗಿ ತಿಳಿದು ಬರುತ್ತದೆ.

ಹೆಜಮಾಡಿ— ಹೈಸ್ಕೂಲ್ ಕಟ್ಟಡದ ಸಹಾಯಾರ್ಥವಾಗಿ ತಾ. 2—3—54ನೇ ಮಂಗಳವಾರ ರಾತ್ರಿ ಗಂಟೆ 9ಕ್ಕೆ ಸ್ಥಳೀಯ ಶಾಲಾ ವಠಾರದಲ್ಲಿ ಶ್ರೀ ಬಾಲಕೃಷ್ಣ ರಾವ್, ಎಡ್ವೋಕೇಟ್, ಪೊಳಲಿ ಶಂಕರನಾರಾಯಣ ಶಾಸ್ತ್ರಿ, ಪೊಲ್ಯ ದೇಜಪ್ಪ ಶೆಟ್ಟಿ, ತೆಕ್ಕುಂಜೆ ಗೋಪಾಲಕೃಷ್ಣ ಭಟ್ಟ, ಬೊಕ್ಕಾಡಿ ಸೀತಾರಾಮಯ್ಯ, ಮಟ್ಟಿ ಸುಬ್ರಾವ್, ಶೆಡ್ಡೆ ಕೃಷ್ಣಮಲ್ಲಿ ಮೊದಲಾದ ಸುಪ್ರಸಿದ್ಧ ಅರ್ಥದಾರಿಗಳಿಂದಲೂ, ಶ್ರೀ ಮಹಾಬಲ ನೋಂಡ ಇವರ ಭಾಗವತಿಕೆಯಿಂದಲೂ, ಎರಿಕ್ಕಳ ಈಶ್ವರಪ್ಪಯ್ಯ ಇವರ ಮೃದಂಗ ವಾದನದಿಂದಲೂ ಕೂಡಿ "ಜರಾಸಂಧ ವಧೆ ಮತ್ತು ಕರ್ಣ ಪರ್ವ" ಯಕ್ಷಗಾನವು ಜರಗಿಸಲ್ಪಡುವುದು.

ಕುಂದಾಪುರದಲ್ಲಿ ಅಕ್ಕಿ ಕ್ರಯ ನಿಯಂತ್ರಣದ ಸಭೆ—ಕುಂದಾಪುರ ತಾಲೂಕಿನ ಸರ್ವಪಕ್ಷ ಪಂಥದವರ, ವರ್ಗದಾರರ, ಸಾಹುಕಾರರ ಸಭೆಯೊಂದು ಇದೇ ತಾ 15ರಲ್ಲು ಕುಂದಾಪುರದಲ್ಲಿ ಸಬ್ ಕಲೆಕ್ಟರ್ ಶ್ರೀ ಎಸ್. ಯು. ಪರಶುರಾಮ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿ ದಿನೇ ದಿನೇ ಏರುತ್ತಿರುವ ಅಕ್ಕಿ ಕ್ರಯವನ್ನು ಸಮತೂಕಕ್ಕೆ ತರುವ ಕುರಿತು ವಿಚಾರ ವಿನಿಮಯ ನಡೆಯಿತು. ಶ್ರೀಗಳಾದ ಪೈ ಮಂಜಯ್ಯ ಶೆಟ್ಟಿ, ಎಮ್. ಎಲ್. ಎ.; ಎಸ್. ಎಸ್. ಕೊಳ್ಕೆಬೈಲ್. ಎಮ್. ಎಲ್. ಎ.; ವಿ. ಶ್ರೀನಿವಾಸ ಶೆಟ್ಟಿ; ಎಮ್. ಎಮ್. ಹೆಗ್ಡೆ ಮೊದಲಾದ ಪಕ್ಷಗಳ ಧುರೀಣರು ಹಾಜರಿದ್ದರು. ಸಭಾಧ್ಯಕ್ಷರು ಸಭೆ ಕರೆದುದರ ಉದ್ದೇಶವನ್ನು ವಿವರಿಸುತ್ತಾ, ಸರಕಾರವು ಅಕ್ಕಿ ಭತ್ತಗಳ ನಿಯಂತ್ರಣ ತೆಗೆದು ಹಾಕಿದುದರ ಅರ್ಥ, ಜನರು ತಾವಾಗಿಯೇ ಸ್ವೇಚ್ಛೆಯಿಂದ ಒಂದು ರೀತಿಯ ನಿಯಂತ್ರಣವನ್ನು ಜಾರಿ ಮಾಡಿಕೊಳ್ಳಬೇಕೆಂಬುದಾಗಿದೆ ಎಂದು ಸೂಚಿಸಿದರು.

ಮಂಗಳೂರು ಮಾರ್ಕೆಟಿನಲ್ಲಿ ಕ್ರಯ ಏರಿದ್ದೇ ಕುಂದಾಪುರದಲ್ಲಿಯೂ ದರ ಏರಲು ಕಾರಣವಾಯಿತೆಂದು ಹಲವರು ಸೂಚಿಸಿದರು. ಮಂಗಳೂರಿನಿಂದ ಮಲಬಾರಿಗೆ ಅಕ್ಕಿ ಸಾಗಾಟವಾಗುತ್ತಿರುವುದನ್ನು ತಡೆಗಟ್ಟಲು ಮಾಡಿರುವ ಏರ್ಪಾಡನ್ನು ಸಭಾಧ್ಯಕ್ಷರು ವಿವರಿಸಿದರು. ಅಕ್ಕಿಯ ದರ ಏರಲು ಅಕ್ಕಿ ಮಿಲ್ಲುಗಳೂ ಕಾರಣವೆಂದು ಶ್ರೀ ಬಿ. ರಾಮರಾಯರು ಸೂಚಿಸಿದರು. ಅಕ್ಕಿ ಮಿಲ್ಲುಗಳು ನಿರುದ್ಯೋಗ ಹೆಚ್ಚಿಸುವ ಬಗೆಯನ್ನೂ ಅಕ್ಕಿಯ ಸತ್ವವನ್ನು ಹಾಳುಮಾಡುತ್ತಿರುವುದನ್ನೂ ಕೂಡಾ ಶ್ರೀ ಬಿ. ರಾಮರಾಯರು ವಿವರಿಸಿದರಲ್ಲದೆ ಅವುಗಳ ಲೈಸೆನ್ಸು ನಿಲ್ಲಿಸುವ ಅವಶ್ಯಕತೆಯನ್ನು ಕೂಡಾ ಸೂಚಿಸಿದರು. ಜಿಲ್ಲೆಯ ಹೊರಗಿನಿಂದ ಅಕ್ಕಿ ಇಲ್ಲಿಗೆ ಒದಗಿಸುವ ಅವಶ್ಯಕತೆಯನ್ನು ಹಲವರು ಸೂಚಿಸಿದರು. ಸಭೆಯಲ್ಲಿ ಸಾಕಷ್ಟು ಚರ್ಚೆಯಾದ ಮೇಲೆ ಸಭಾಧ್ಯಕ್ಷರು ಮಾತನಾಡುತ್ತಾ, ಒಂದು ಕುಟುಂಬದವರು ತಮಗೆ ಬೇಕಾದ ಅಕ್ಕಿ ಇಟ್ಟುಕೊಂಡು ಉಳಿದುದನ್ನು ಮಾತ್ರ ಹೇಗೆ ಮಾರಾಟ ಮಾಡುತ್ತಾರೊ, ಅಂತೆಯೇ ಒಂದು ಊರು ಅಥವಾ ತಾಲೂಕು ಒಂದೇ ಕುಟುಂಬವೆಂಬ ಭಾವನೆಯಿಂದ ಸಾಕಷ್ಟು ಅಕ್ಕಿ ಉಳಿಸಿಕೊಂಡು ಉಳಿದುದನ್ನು ನ್ಯಾಯವಾದ ಕ್ರಯಕ್ಕೆ ಮಾರಾಟ ಮಾಡುವುದು ನ್ಯಾಯವೆಂದರು. ಸಭಾಂತ್ಯದಲ್ಲಿ ಅಕ್ಕಿ ಮುಡಿ ಒಂದರ ರೂಪಾಯಿ 20/ರಲ್ಲಿ ಕೊಂಡು ಕೊಂಡು ರೂ. 21/ರಲ್ಲಿ ಮಾರಾಟ ಮಾಡಿದರೆ ಅದು ನ್ಯಾಯವಾದ ಕ್ರಯವೆನ್ನಬಹುದೆಂದು ತೀರ್ಮಾನವಾಯಿತು. ಮುಖ್ಯ ಸೆಂಟರುಗಳಲ್ಲೆಲ್ಲ ಈ ನ್ಯಾಯವಾದ ಬೆಲೆಗೆ ಅಕ್ಕಿ ಮಾರಾಟ ಮಾಡುವ ನ್ಯಾಯ ಬೆಲೆ ಅಂಗಡಿಗಳನ್ನು ಮಹಾಜನರೇ ವ್ಯವಸ್ಥೆಗೊಳಿಸಿ ನಡೆಸಬೇಕೆಂದೂ ನಿರ್ಣಯವಾಯಿತು. ಸರಕಾರದವರು ಹೊರಗಿನಿಂದ ಅಕ್ಕಿ ತರಿಸಲು ಸಾಧ್ಯವಿದ್ದಲ್ಲಿ ಸಾಹುಕಾರರಿಗೆ ಸಾಕರ್ಯ ಒದಗಿಸಬೇಕೆಂದೂ ತೀರ್ಮಾನವಾಯಿತು. ಇಂತಹ ಸರ್ವಪಕ್ಷಗಳ ಸಭೆಗಳು ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿಯೂ ಜರಗಿ ಒಮ್ಮತದ ನಿರ್ಧಾರಕ್ಕೆ ಬರುವುದು ಶ್ರೇಯಸ್ಕರ.

ಪುರಂದರ ದಾಸರ ಪುಣ್ಯದಿನ ಮತ್ತು ಮಧ್ವನವಮಿ ಮಹೋತ್ಸವವು
ಮದ್ರಾಸಿನ ದಾಸಪ್ರಸಾದದಲ್ಲಿ ಈಚೆಗೆ ಶ್ರೀ ಕೆ. ಸೀತಾರಾಮರಾಯರ ನಾಯಕತ್ವದಲ್ಲಿ ಭಜನೆ, ಮೆರವಣಿಗೆ, ಭಾಷಣ ಸಂಗೀತಾದಿ ಕಾರ್ಯಕ್ರಮಗಳಿಂದ ಜರಗಿತು.

ಅಕ್ಕಿಯ ಬೆಲೆ ಕಡಿಮೆಯಾಗಲಿ

ಕಳೆದ ಕೆಲವು ಸಮಯದಿಂದ ಸ್ಥಳೀಯ ರೇಶನ್ ಅಂಗಡಿಗಳಲ್ಲಿ ಒಂದು ವಿಧದ ಕೆಂಪು ಅಕ್ಕಿಯನ್ನು ಕೊಡಲಾಗುತ್ತದೆ. ಇದು ನಾಗರಿಕರ ಆರೋಗ್ಯಕ್ಕೆ ಬಹಳ ಗಂಡಾಂತರ ಕಾರಿಯಾದುದರಿಂದ ಜನರು ರೇಶನ್ ಅಕ್ಕಿಯನ್ನು ಕೊಂಡು ಹೋಗುವುದನ್ನು ನಿಲ್ಲಿಸಿ, ಹೊರಗಿನ ಅಂಗಡಿಗಳಿಂದಲೇ ಅಕ್ಕಿಯನ್ನು ಕೊಳ್ಳುತಿದ್ದಾರೆ. ಪರಿಣಾಮವಾಗಿ ಅಕ್ಕಿಯ ಬೆಲೆಯು ದಿನದಿಂದ ದಿನಕ್ಕೆ ಏರುತ್ತಾ ಬರುತ್ತಿದೆ. ಈಗ ಸೇರು ಒಂದರ 0—5—6 ಗೆ ಮಾರಾಟವಾಗುತ್ತಿದ್ದು ಜನಸಾಮಾನ್ಯರು ಅಕ್ಕಿಯನ್ನು ಕೊಳ್ಳದಂತೆ ಆಗಿದೆ.

ಆದುದರಿಂದ ಈಗ ರೇಶನ್ ಅಂಗಡಿಗಳಲ್ಲಿ ಕೊಡಲಾಗುತ್ತಿರುವ ಕೆಂಪು ಅಕ್ಕಿಯನ್ನು ಬದಲಿಸಿ ಒಳ್ಳೆ ಅಕ್ಕಿಯು ಸಿಗುವ ವ್ಯವಸ್ಥೆಯಾಗಬೇಕು ಈ ಕುರಿತು ಸಂಬಂಧ ಪಟ್ಟ ಅಧಿಕಾರಿಗಳು ಕೂಡಲೇ ಗಮನ ಕೊಟ್ಟು ಜನಸಾಮಾನ್ಯರ ಆರೋಗ್ಯವನ್ನು ರಕ್ಷಿಸಿಕೊಡಬೇಕಾಗಿದೆ.

ಏರಿದ ಅಕ್ಕಿಯ ಬೆಲೆಯು ಕಡಿಮೆಯಾಗುವಂತೆ ಎಲ್ಲಾ ಸಂಘ, ಸಂಸ್ಥೆಗಳೂ, ರಾಜಕೀಯ ಪಕ್ಷಗಳೂ ಒಂದಾಗಿ ಚಳುವಳಿ ನಡೆಸಲು ಮುಂದೆ ಬರಬೇಕೆಂದೂ ಮಹಾಜನರು ಸಹಕರಿಸಬೇಕೆಂದೂ ವಿನಂತಿ.

ಉಡುಪಿ. —ಡೆವಿಡ್ ಕರ್ಕಡ.

ದಿ| ಕಿಲ್ಲೆಯವರ ಮೂರು ಗ್ರಂಥಗಳು

1.	ಪ್ರಾಚೀನ ತುಳುನಾಡು	ಬೆಲೆ ರೂ. ೨ ೦ ೦
2.	ಭಾರತದ ಕರ್ಣ (ಗದ್ಯ)	,, ,, ೦ ೬ ೦
3.	ಮುರಲಿ (ಪದ್ಯ-ಅಚ್ಚಿನಲ್ಲಿದೆ)	,, ,, ೦ ೧೦ ೦

ಟಪ್ಪಾಲು ಖರ್ಚು ಪ್ರತ್ಯೇಕ ಪುಸ್ತಕ ವ್ಯಾಪಾರಿಗಳಿಗೆ ಕಮಿಶನ್ ಕೊಡಲಾಗುವುದು.

ನವಯುಗ ಪ್ರೆಸ್,
ಪೋಸ್ಟ್ ಬಾಕ್ಸ್ ನಂಬ್ರ 22,
ಉಡುಪಿ.

A. T. Mohan Rai,
Valancia, Kankanady,
Mangalore 2.

ತಾರೀಕು **20 2 1954**ರಿಂದ ಅನೋಘ ಪ್ರಾರಂಭ

ಮರುಗುವ ಮಕ್ಕಳು, ಕೊರಗುವ ಮಡದಿ, ಗದರಿಸುವ ಅತ್ತೆ, ಆದರಿಸುವ ತಾಯಿ, ಪ್ರೀತಿಸುವ ತಂದೆ, ಕಾತರಿಸುವ ಅತ್ತಿಗೆ ಎಲ್ಲರೊಂದಾಗಿ ನಕ್ಕರೆ ಅದು ಸ್ವರ್ಗ. ಆ ಸ್ವರ್ಗಕ್ಕಾಗಿ ಕಷ್ಟ ಬೇಕು. ಕಷ್ಟ ಸಾಧಿಸಲು ನಿಷ್ಠುರವಿರಬೇಕು. ನಿಷ್ಠುರದಲ್ಲಿ ನೆಲೆತಪ್ಪಿದಾಗ ಸುಖ ಸೃಷ್ಟಿಯ ಉಪಾಯಬೇಕು. ಈ ಉಪಾಯವು ಅಪಾಯವಿಲ್ಲದೆ ನಡೆದರೆ ಇದೂ ಸ್ವರ್ಗ —ಈ ಸ್ವರ್ಗ ಸುಖದ ಹೆಬ್ಬಾಗಿಲೇ

ಆರ್. ಎನ್. ಆರ್. ಪಿಕ್ಚರ್ಸರವರ ಕನ್ನಡ ಚಿತ್ರ

ಜಾತಕ ಫಲ

ಪಾತ್ರವರ್ಗ:—ಆರ್. ನಾಗೇಂದ್ರ ರಾವ್, ಸೂರ್ಯಕಲಾ, ಬಾಲಚಂದರ್, ಓಮಲಮ್ಮ, ಕೆ. ಸಾರಂಗಪಾಣಿ, ಕೆ. ಆರ್. ಚಲ್ಲಂ ಮೊದಲಾದವರು.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಶಿವರಾಮ ಕಾರಂತರ
ಕೆಲವು ಪುಸ್ತಕಗಳು

ಅಪೂರ್ವ ಪಶ್ಚಿಮ	4	4	0
ಬತ್ತದ ತೊರೆ	0	3	0
ಜಾರುವ ದಾರಿಯಲ್ಲಿ	4	0	0
ಔದಾರ್ಯದ ಉರುಳಲ್ಲಿ	6	0	0
ಮರಳಿ ಮಣ್ಣಿಗೆ	5	0	0
ತರುಣನ ಕರೆ	3	0	0
ಸನ್ಯಾಸಿಯ ಬದುಕು	2	8	0
ಸರಸಮ್ಮನ ಸಮಾಧಿ	1	8	0
ಕನ್ಯಾ ಬಲಿ	1	0	0
ದೇವದೂತರು	2	0	0
ಸಿರಿಗನ್ನಡ ಅರ್ಥಕೋಶ	1	0	0

ನವಭಾರತ ಪುಸ್ತಕ ಭಂಡಾರ, ಉಡುಪಿ.

ಮಂಗಳೂರು

ಎಲೋಸಿಯಸ್ ಕಾಲೇಜಿನ ರಾಷ್ಟ್ರೀಯ ಸೇನಾದಳದ ವಾರ್ಷಿಕೋತ್ಸವ— ವಾರ್ಷಿಕೋತ್ಸವವು ತಾ 13ರಲ್ಲಿ ಕಾಲೇಜಿನ ಪ್ರಿನ್ಸಿಪಾಲರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ಮಂಜುನಾಥ ಶರ್ಮರು ಸ್ವಾಗತ ಮಾತು ಗಳನ್ನಾಡಿದರು. ಕೆಡೆಟ್ ಅಂಡರ್ ಆಫೀಸರ್ ಶ್ರೀ ಅಯ್ಯಪ್ಪನವರು ವರದಿವಾಚನ ಮಾಡಿದರು. ಬಳಿಕ ಪರ್ಷದ ಅತ್ಯುತ್ತಮ ಕೆಡೆಟ್ ಎಂದು ಕಂಪೆನಿ ಸಾರ್ಜಂಟ್ ಮೇಜರ್ ಶ್ರೀ ಕೆ. ಶಂಕರ ಭಟ್ಟರಿಗೆ ಒಂದು ಬೆಳ್ಳಿಯ ಕಪ್ ಮತ್ತು ಕೆಡೆಟ್ ಅಲ್ಬರ್ಟ್ ಸಿಕ್ವೇರರಿಗೆ ಉತ್ತಮ ಅಟಗಾರರೆಂದು ಒಂದು ಪದಕವನ್ನು ಕೊಡಲಾಯಿತು.

ಸರ್ವ ಪಕ್ಷೀಯ ಸಭೆಯ ಯೋಜನೆ— ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತಿನ ಜಿಲ್ಲಾ ಸಮಿತಿಯ ಆಶ್ರಯದಲ್ಲಿ ತಾ 16ರಲ್ಲಿ ಶ್ರೀ ಬಿ. ಮಂಜಯ್ಯ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಕೇಳಪ್ಪನ್ ಮತ್ತಿತರ ಪಕ್ಷಗಳ ಕರಾವಳಿಯ ಕೇಳಿಕೆಯನ್ನು ನಿರಾಕರಿಸಬೇಕೆಂದು ನಿರ್ಣಯವಾಯಿತು. ಈ ಕುರಿತು ಯೋಗ್ಯ ನಿರ್ಣಯ ಮಾಡಲು ಇದೇ ತಾ 25ರಲ್ಲಿ ಸರ್ವ ಪಕ್ಷೀಯ ಸಭೆಯೊಂದು ಮಂಗಳೂರಲ್ಲಿ ಜರಗಿಸುವ ನಿರ್ಣಯವಾಯಿತು.

ಭಾಷಣ— ಮದ್ರಾಸು ಲೆಜಿಸ್ಲೇಟಿವ್ ಕೌನ್ಸಿಲು ಸದಸ್ಯರಾದ ಶ್ರೀ ಜಿ. ಕೃಷ್ಣಮೂರ್ತಿಯವರು ತಾ 15ರಲ್ಲಿ ಕೆನರಾ ಹೈಸ್ಕೂಲಿನ ಭುವನೇಂದ್ರ ಭವನದಲ್ಲಿ ಸೇರಿದ ಸಭೆಯಲ್ಲಿ ತಾನು ಕೌನ್ಸಿಲಿನಲ್ಲಿ ಮಾಡಿದ ಕಾರ್ಯಕಲಾಪಗಳನ್ನು ವಿವರಿಸಿದರು. ಶ್ರೀ ಜೆ. ವಾಸುದೇವ ಪೈಗಳು ಸಭಾಧ್ಯಕ್ಷತೆ ವಹಿಸಿದ್ದರು.

ನಗರ ಸಭೆಯು— ತಾ 19ರಲ್ಲಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎಮ್. ರಮಾನಾಥರು ಮಂಡಿಸಿದ ನಿರ್ಣಯ ಮತ್ತು ಅದಕ್ಕೆ ಶ್ರೀ ಮೋಹನ ಶೆಟ್ಟಿಯವರು ತಂದ ತಿದ್ದುಪಡಿಗನುಸಾರವಾಗಿ ಶ್ರೀ ಪೇಜಾವರ ಮಠದ ಸ್ವಾಮಿಗಳವರಿಗೆ ಮಾನಪತ್ರ ಕೊಡಬೇಕೆಂದು ನಿರ್ಣಯವಾಯಿತು.

ವಾರ್ಷಿಕೋತ್ಸವ— ಸೈಂಟ್ ಎಲೋಸಿಯಸ್ ಕಾಲೇಜಿನ ಕರ್ನಾಟಕ ಸಂಘದ ವಾರ್ಷಿಕೋತ್ಸವವು ತಾ 20ರಲ್ಲಿ ಕುಮಟಾ ಕೆನರಾ ಕಾಲೇಜಿನ ಡಾ. ಕೆ. ಕೃಷ್ಣಮೂರ್ತಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಟಿ. ಗೋಪಾಲಕೃಷ್ಣ ಭಟ್ಟರ ಸ್ವಾಗತ, ಶ್ರೀ ರಾಜಗೋಪಾಲಾಚಾರ್ಯರ ವರದಿವಾಚನಗಳಾದ ಮೇಲೆ ಶ್ರೀ ಬಿ. ಕೆ. ಸೂರ್ಯನಾರಾಯಣ ರಾಯರು ಸ್ವಸ್ತಿವಾಚನ ಮಾಡಿದರು. ಶ್ರೀ ಎಚ್. ಗಣೇಶನವರು ಅದಕ್ಕೆ ಉತ್ತರಿತ್ತರು. ಶ್ರೀ ಎ. ಎನ್. ರಾಮಸ್ವಾಮಿಯವರು "ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ" ಎಂಬ ವಿಷಯವಲ್ಲೂ ಉಡುಪಿ ಸಂಸ್ಕೃತ ಕಾಲೇಜು ಪ್ರಿನ್ಸಿಪಾಲ್ ಶ್ರೀ ಕೌಲಗಿ ದೇಶಪಾಂಡೆಯವರು "ನಾಟಕ ಮತ್ತು ಜೀವನ" ಎಂಬ ವಿಷಯದಲ್ಲೂ ಉಪನ್ಯಾಸವಿತ್ತರು. ಅಧ್ಯಕ್ಷರ ಭಾಷಣ, ವಂದನಾರ್ಪಣೆಗಳೊಂದಿಗೆ ಸಭಾಂತ್ಯವಾಯಿತು.

ವರ್ಧಂತಿಸಮಾರಂಭ— ಕನ್ನಡ ಮೊಗವೀರಿಯವರ ಸಮಾಜ ಸುಧಾರಕ ಸಂಘದ ವರ್ಧಂತಿ ಸಮಾರಂಭವು ಇದೇ ತಾ 24ರಲ್ಲಿ ಉರ್ವ ಶ್ರೀ ಮಹಾದೇವಿ ದೇವಸ್ಥಾನದಲ್ಲಿ ಮಂಗಳೂರು ಮ್ಯುನಿಸಿಪಲ್ ಕೌನ್ಸಿಲಿನ ಚೇರ್ಮನ್ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎಮ್. ಗುರುಪ್ಪನವರು ವರದಿಯನ್ನೋದಿದರು. ಶ್ರೀಗಳಾದ ಬಿ. ಎಸ್. ಭಾಸ್ಕರ ಪೈ, ಕಡೆಂಗೋಡ್ಲು ಶಂಕರ ಭಟ್, ಕೆ. ಹರಿಶ್ಚಂದ್ರಾಚಾರ್ಯ, ಪಿ. ಮಂಜುನಾಥ, ಪಿ. ಕೆ. ನಾರಾಯಣ ಮೊದಲಾದವರು ಮಾತನಾಡಿದರು.

ಉಪಾಧ್ಯಾಯರ ಕೇಳಿಕೆಯ ದಿನಾಚರಣೆಯು— ಮಂಗಳೂರಿನ ಎಲ್ಲಾ ಶಾಲೆಗಳ ಸಹಕಾರದಿಂದ ಇದೇ ತಾ 24ರಲ್ಲಿ ಸಂಜೆ 5 ಗಂಟೆಗೆ ಬೆಸೆಂಟ್ ಬಾಲಿಕಾ ಪಾಠಶಾಲೆಯಲ್ಲಿ ಜರಗುವುದು.

ವಿದಾಯ ಸತ್ಕಾರ— ಕಳೆದ 20 ವರುಷಗಳಿಂದ ಮಂಗಳೂರು ಮ್ಯುನಿಸಿಪಲ್ ಬೋಳೂರು ಧರ್ಮಾಸ್ಪತ್ರೆಯ ಜನಪ್ರಿಯ ವೈದ್ಯ ಉದ್ಯೋಗಸ್ಥರಾಗಿದ್ದ ಡಾ। ಐ. ಕೆ. ಪಿ. ಶರ್ಮರು ಇದೇ ತಾ 15ರಲ್ಲಿ ಸೇವೆಯಿಂದ ನಿವೃತ್ತರಾದರು. ಇವರನ್ನು ಮಂಗಳೂರು ಮ್ಯುನಿಸಿಪಲ್ ವೈದ್ಯ ಇಲಾಖಾ ಸಂಘದವರು ತಾ 11ರಲ್ಲಿ ಒಂದು ವಿದಾಯ ಸತ್ಕಾರ ಕೊಟ್ಟ ಸ್ನೇಹಪೂರ್ವಕ ಬೀಳ್ಕೊಟ್ಟರು.

ಶಾಲಾ ದಿನಾಚರಣೆ— ಬೋಳಾರ ಮುನಿಸಿಪಲ್ ಶಾಲೆಯಲ್ಲಿ ಶಾಲಾ ದಿನಾಚರಣೆ ಸಂಬಂಧವಾಗಿ ತಾ 14ರಲ್ಲಿ ಬೆಳಿಗ್ಗೆ ಚಿಕ್ಕ ಕೂಟವೊಂದು ಜರಗಿತು. ಈ ಸಮಾರಂಭಕ್ಕೆ ಶ್ರೀಗಳಾದ ಎಸ್. ಎಸ್. ಡಿ. ಒಂಟೋ, ಬಿ. ಆರ್. ಕರ್ಕೇರ, ಕೆ. ಕೆ. ಸಟ್ಟಿ, ಕೆ. ಪಿ. ಮಂಜುನಾಥ ಶೆಟ್ಟಿ ಮೊದಲಾದವರು ಆಗಮಿಸಿದ್ದರು. ಶ್ರೀ ಬಿ. ವೈಕುಂಠ ಬಾಳಿಗ, ಎಮ್. ಎಲ್. ಎ. ಅವರು ನಾಟಕದಲ್ಲಿ ಅಭಿನಯಿಸಿದ ಶಾಲಾ ಮಕ್ಕಳಿಗೆ ಬಹುಮಾನವಿತ್ತರು. ಶ್ರೀ ಬಿ. ನರಸಪ್ಪನವರು ಶಾಲಾ ಓರಗೆಲವರಿಗೂ ಉಪಾಧ್ಯಾಯರಿಗೂ ಉಪಹಾರ ಸತ್ಕಾರವಿತ್ತರು.

ಯಕ್ಷಗಾನ ಕಥಾಭಾಗ— ಕದ್ರಿ ಶ್ರೀ ಮಂಜುನಾಥ ಕೃಪಾ ಪೋಷಿತ ಯಕ್ಷಗಾನ ಸಂಘದವರಿಂದ ಇದೇ ತಾ 14ರಲ್ಲಿ "ದಾನವಾಸುರ ವಧೆ" ಎಂಬ ಕಥಾ ಭಾಗವು ಅಭಿನಯಿಸಲ್ಪಟ್ಟಿತು.

ಶ್ರೀ ಎಚ್. ವಿ. ಕಾಮತರ ಭಾಷಣ— ಪ್ರಜಾ ಸೋಶಿಯಲಿಸ್ಟ್ ಪಕ್ಷದ ರಾಷ್ಟ್ರೀಯ ಕಾರ್ಯಕಾರಿ ಕಮಿಟಿಯ ಮೆಂಬರ ಶ್ರೀ ಎಚ್. ವಿ. ಕಾಮತರು ತಾ 22ನೇ ಸಂಜೆ ಕೇಂದ್ರ ಮೈದಾನದಲ್ಲಿ ಶ್ರೀ ಕೆ. ಆರ್. ಕಾರಂತರ ಅಧ್ಯಕ್ಷತೆಯಲ್ಲಿ ಈಗಿನ ಸರಕಾರದ ಧೋರಣೆಯಿಂದಾಗುವ ಅವ್ಯವಸ್ಥೆ, ಅದು ಮುಂದೆ ಅಧಿಕಾರಕ್ಕೆ ಬಾರದಂತೆ ಮಾಡುವ ಆವಶ್ಯಕತೆ ಇತ್ಯಾದಿಗಳ ಕುರಿತು ಭಾಷಣವಿತ್ತರು. ಡಾ। ನಾಗಪ್ಪ ಆಳ್ವರು ಧನ್ಯವಾದಗಳನ್ನಿತ್ತರು.

ಬಿ. ಇ ಯಂ. ಹೈಸ್ಕೂಲು ಹಳೆ ವಿದ್ಯಾರ್ಥಿ ಸಂಘದ— ವರ್ಧಂತಿಯು ತಾ 11ರಲ್ಲಿ ಶ್ರೀ ಬಿ. ವೈಕುಂಠ ಬಾಳಿಗ, ಎಂ. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಅಧ್ಯಕ್ಷ ರಾ। ಬಿ. ಆರ್. ಹೆಗ್ಡೆಯರು ಸ್ವಾಗತ ಭಾಷಣ ಮಾಡಿದರು. ಕಾರ್ಯದರ್ಶಿ ಶ್ರೀ ಕೆ. ಕೃಷ್ಣ ಭಟ್ಟರು ವರದಿಯನ್ನೋದಿದರು. ಬಹುಮಾನ ವಿತರಣೆ, ಅಧ್ಯಕ್ಷರ ಭಾಷಣ, ವಿವಿಧ ವಿನೋದಾವಳಿಗಳೊಂದಿಗೆ ಸಭಾಂತ್ಯವಾಯಿತು.

ಗಾಯನ ಕಚೇರಿ— ತಾ 18ನೇ ರಾತ್ರಿ ವಿನಂಟ್ ಮಂದಿರದಲ್ಲಿ ಶ್ರೀ ಬೆಳ್ಳೆ ಅನಂತರಾಮ ಉಪಾಧ್ಯಾಯರ ಸಂಗೀತ ಕಚೇರಿಯೊಂದು ಶ್ರೀ ಪಿ. ಎಲ್. ಆಚಾರ್ಯರ ಪಿಟೀಲು, ಶ್ರೀ ನಾರಾಯಣ ಮಯ್ಯರ ಮೃದಂಗದೊಡನೆ ಜರಗಿತು.

ಹುಲಿ ಬೇಟೆ ತಾ. 19ನೇ ಬೆಳಿಗ್ಗೆ ಬಿಜೈ ಚರ್ಚಿನ ಬಳಿಯ ಹಿತ್ತಿಲೊಂದರಲ್ಲಿ ಮರೆಯಾಗಿದ್ದ ಹುಲಿಯೊಂದನ್ನು ಏಚೆಲ್ ಕೈರಾನ್ ಲೋಬರು ಗುಂಡುಹೊಡೆದು ಕೊಂದಿರುತ್ತಾರೆ.

ದಿವಂಗತ ಶ್ರೀ ಬಂಗ್ಲೆ ಸೀತಾರಾಮ ಕಾಮತರು— ಮೂಲ್ಕಿಯ ಸಾರ್ವಜನಿಕ ಸೇವಕರಲ್ಲೊಬ್ಬರಾಗಿ, ಜನಪ್ರಿಯರಾಗಿದ್ದ ಶ್ರೀ ಬಂಗ್ಲೆ ಸೀತಾರಾಮ ಕಾಮತರು ಇದೇ ತಾ 11ರಲ್ಲಿ ಮಂಗಳೂರಲ್ಲಿ ನಿಧನಹೊಂದಿದರು. ಅವರ ಸ್ಮಶಾನ ಯಾತ್ರೆಯು ಮೂಲ್ಕಿಯಲ್ಲಿ ಜರಗಿದಾಗ ಜಾತಿಮತ ಭೇದವಿಲ್ಲದೆ ಸಾವಿರಾರು ಜನರು ಭಾಗವಹಿಸಿದ್ದರು.

ಶ್ರೀ ಕಾಮತರು ಮೂಲ್ಕಿಯ ಸುಪ್ರಸಿದ್ಧ ಗೌಡಸಾರಸ್ವತ ಮನೆತನದಲ್ಲಿ ಜನ್ಮತಾಳಿದರು. ಅವರು ಚಿಕ್ಕಂದಿನಿಂದಲೇ ಜನತಾ ಸೇವಾ ತತ್ಪರರಾಗಿದ್ದು ಅಸಹಕಾರ ಚಳವಳಿ ಕಾಲದಲ್ಲಿ ಮೂಲ್ಕಿಯಲ್ಲಿ ಜನ ಜಾಗೃತಿಯನ್ನುಂಟು ಮಾಡಿದರು. ಶ್ರೀ ಕಾಮತರು ಮೂಲ್ಕಿಯಲ್ಲಿ ಖಾದಿ ಪ್ರಚಾರ, ಹಿಂದಿ ಪ್ರಚಾರ ಮೊದಲಾದ ಕಾಂಗ್ರೆಸಿನ ವಿಧಾಯಕ ಕಾರ್ಯಕ್ರಮಗಳನ್ನು ಜನತೆಯಲ್ಲಿ ಪ್ರಚಾರ ಮಾಡಿದರು. ಶ್ರೀ ವಿನೋಬಾರ ಭೂದಾನಕ್ಕೆ ದ. ಕ. ಜಿಲ್ಲೆಯಲ್ಲಿ ಮೊತ್ತಮೊದಲು ಐದು ಎಕ್ರೆ ಭೂಮಿಯನ್ನು ಅರ್ಪಿಸಿದವರು ಶ್ರೀ ಕಾಮತರೇ. ಮೂಲ್ಕಿಯ ವಿವಿಧ ಸಾರ್ವಜನಿಕ ಸಂಘ ಸಂಸ್ಥೆಗಳಲ್ಲಿ ಶ್ರೀ ಕಾಮತರ ಪ್ರಾತಿನಿಧ್ಯವಿದ್ದೇ ಇತ್ತು. ಜನಹಿತಕ್ಕಾಗಿ ದುಡಿಯುತ್ತಿದ್ದ ಶ್ರೀ ಕಾಮತರ ನಿಧನದಿಂದ ಮೂಲ್ಕಿ ಪ್ರದೇಶಕ್ಕೆ ತುಂಬಾ ನಷ್ಟವಾಯಿತೆನ್ನಬಹುದಾಗಿದೆ.

ಶಿವಮೊಗ್ಗ

ಮಲೆನಾಡು ಪರಿಷತ್ತು ಮತ್ತು ವಸ್ತು ಪ್ರದರ್ಶನ— ಧರ್ಮಸ್ಥಳ ಶ್ರೀ ಮಂಜಯ್ಯ ಹೆಗ್ಗಡೆಯವರು ಪರಿಷತ್ತು ಮತ್ತು ಪ್ರದರ್ಶನಕ್ಕೆ ಧನವನ್ನು ಕೋರಿ ಸಹಕಾರ, ಸಹಾಯ ನೀಡುವುದಾಗಿ ಭರವಸೆ ಕೊಟ್ಟಿರುತ್ತಾರೆ. ಶಿವಮೊಗ್ಗದ ಶ್ರೀ ಜವಳಿ ಲಕ್ಷ್ಮೀ ರಾಮನಾರಾಯಣ ಅವರ್ಧಾನಿಯವರು ಪರಿಷತ್ತಿನ ಸಹಾಯಾರ್ಥವಾಗಿ ರೂ 1001,ನ್ನು ಕೊಟ್ಟಿರುತ್ತಾರೆ. ಸ್ವಾಗತ ಕಮಿಟಿ ಕಡೆಯಿಂದ ಸಾಗರ, ಸೊರಾಬ್, ಶಿರಸಿ, ಸಿದ್ದಾಪುರ ಮೊದಲಾದ ಕಡೆಗಳಲ್ಲಿ ಪ್ರಚಾರ ಕಾರ್ಯವಾಗಿ ಆ ಸ್ಥಳಗಳಿಂದ ಪರಿಷತ್ತಿಗೆ ಸಹಾನುಭೂತಿ ದೊರೆತಿರುವುದು. ವಸ್ತುಪ್ರದರ್ಶನ ಮಂಟಪದ ಕೆಲಸವು ಈಗಾಗಲೇ ಪ್ರಾರಂಭವಾಗಿದೆ. ಪರಿಷತ್ತನ್ನು ಮುಂದಿನ ಏಪ್ರಿಲ ತಿಂಗಳ ದಿನಾಂಕ 7ರಲ್ಲಿ ಜರಗಿಸುವ ಯೋಜನೆ ನಡೆದಿದೆಯೆಂದು ಸ್ವಾಗತ ಕಮಿಟಿಯು ಪ್ರಕಟಣೆಯಿಂದ ತಿಳಿದುಬರುತ್ತದೆ.

ಓದ ತೊಡಗಿದರೆ ಪೂರ್ತಿ ಓದದೆ ಕೆಳಗಿಡಲಾಗದ, ವಿನೋದದೊಡನೆ ವಿಚಾರವನ್ನೂ ಕುದುರಿಸುವ, ಕೆಲವು ಪುಸ್ತಕಗಳು.

ಅಂತರಂಗದ ಕತೆಗಳು ರೂ. 1 4 0
ಸೃಷ್ಟಿಯ ವಿವಿಧ ವೈಚಿತ್ರ್ಯಗಳನ್ನು ಚಿತ್ರಿಸುವ, ಕಥಾಸಂಗ್ರಹ.

ಪಂಚಕಜ್ಜಾಯ ರೂ 1 8 0
ಚೆಲುವಿನ ಐದು ನೀಳ್ಗತೆಗಳ ಸಂಗ್ರಹ.

ಅವಿಲು ರೂ. 2 0 0
ಸಾಹಿತ್ಯದ ಸರ್ವವಿಧದ ಸಂಗ್ರಹ.

ಹೆಂಗುಸರ ಕತೆಗಳು ರೂ 2 0 0
ಸ್ತ್ರೀಯರ ಮನಸ್ಸನ್ನು ಚಿತ್ರಿಸುವ ಸ್ತ್ರೀಯರಿಂದಲೇ ಬರೆಯಲ್ಪಟ್ಟ ನೂತನ ಕತೆಗಳ ಸಂಗ್ರಹ.

ನಗೆನೋಟಗಳು ರೂ. 1 4 0
ವಿನೋದ ಚಿತ್ರಗಳ ಸಂಗ್ರಹ.

ಬಾಳಿನ ಬೆಡಗು ರೂ. 1 4 0
ಬಾಳಿನಬೆಡಗನ್ನು ಚೆನ್ನಾಗಿ ಬಣ್ಣಿಸುವ ನೂತನ ಕಾದಂಬರಿ.

ಧನದ ಬಿಂದಿಗೆ ಮತ್ತಿತರ ನಾಟಕಗಳು
ವಿವಿಧ ಲೇಖಕರ ಉತ್ತಮ ಏಕಾಂಕ ನಾಟಕಗಳು. ರೂ. 1 6 0

ಸುಲಭದಲ್ಲಿ ಇಂಗ್ಲಿಷ್ ರೂ. 1 3 0

ಮನೆ ಮದ್ದು ರೂ. 2 8 0

ಗೀತೆಯ ಕೈಗನ್ನಡಿ ರೂ. 0 12 0

ವಿವರವಾದ ಕೆಟಲಾಗಿಗೆ ಬರೆಯಿರಿ. ಪುಸ್ತಕ ವ್ಯಾಪಾರಿಗಳಿಗೆ ವಿಶೇಷ ಕಮಿಷನ್ ಇದೆ.
ನವಭಾರತ ಪುಸ್ತಕ ಭಂಡಾರ, ಉಡುಪಿ.

ಮುಂಬಯಿ ಏಜಂಟರು:- 1) ... ಬುಕ್ ಡಿಪ್ಪೋ, 6 E. ಪಿಟಾ ಸ್ಟ್ರೀಟ್, ಫೋರ್ಟ್, ಮುಂಬೈ, 2) ಕೆನರಾ ಬುಕ್ ಡಿಪೊ, 389 ಕಾಲ್‌ಬಾರ್ಗ್, ಮುಂಬೈ 12.

ದಿ ನ್ಯೂ ಕರ್ನಾಟಕ ಪ್ರೊವಿಡೆಂಟ್ ಇನ್ಸೂರೆನ್ಸ್ ಕಂಪೆನಿ ಲಿಮಿಟೆಡ್.

ಪ್ರಧಾನ ಕಚೇರಿ,] [ಉಡುಪಿ, ದ. ಕನ್ನಡ.

ನಿಮ್ಮ ಸಂಪಾದನೆಗೆ ಸಾಧ್ಯವಿರುವ ಮೊತ್ತಕ್ಕೆ ವಿಮೆ ಮಾಡಲು ಅನುಕೂಲವಿರುವ ಜಿಲ್ಲೆಯ ಏಕಮಾತ್ರ ಜನತಾ ಪ್ರೊವಿಡೆಂಟ್ ವಿಮಾ ಸಂಸ್ಥೆ.

ಏಜಂಟರು, ಸ್ಪೆಶಲ್ ಏಜಂಟರು, ಆರ್ಗನೈಸರು ಮತ್ತು ಇನ್ಸ್‌ಪೆಕ್ಟರರು ಬೇಕಾಗಿದ್ದಾರೆ.
ವಿವರಕ್ಕೆ ಬರೆಯಿರಿ.

THE NEW KARNATAKA PROVIDENT
Insurance Co. Ltd., UDIPI.

ಅಖಿಲ ಭಾರತ ... ಗ್ರಂಥಕರ್ತ ... ಆದ
ಶ್ರೀ. ಎ. ಎಸ್. ಪಂಚಾಪಕೇಶ ಐಯ್ಯರ್, ಎಂ. ಎ., ಐ. ಸಿ. ಎಸ್., ಬ್ಯಾರಿಸ್ಟರ್ ಎಟ್ ಲಾ ಎಫ್. ಆರ್. ಎಸ್. ಎಲ್. ಅವರು ಬರೆದ Tales of Ind ಎಂಬ ಕಥಾವಳಿಯ ಅನುವಾದ

ಭಾರತೀಯ ಕತೆಗಳು

ಅನುವಾದಕರು — ಶ್ರೀ ಕೊಡ್ಗಲ್ ಶ್ರೀನಿವಾಸ ರಾವ್.

ಪ್ರತಿಯೊಬ್ಬನಿಗೂ ತನ್ನ ಸಾಮಾಜಿಕ ಹಾಗೂ ವ್ಯಾವಹಾರಿಕವಾದ ಮಾತುಗಾರಿಕೆಯು ಸ್ವಾರಸ್ಯವಾಗಿ, ಪರಿಣಾಮಕಾರಿಯಾಗಬೇಕೆಂಬ ಹಂಬಲಿಕೆ ಇದ್ದೇ ಇದೆ. ಇದು ಸಿದ್ಧಿಸಬೇಕಾದರೆ ಮಾತಿನ ನಡುನಡುವೆ ಸಂದರ್ಭೋಚಿತವಾದ ಉಪಮೆ, ಗಾದೆ, ಕಥೆ ದೃಷ್ಟಾಂತ ಇತ್ಯಾದಿಗಳು ಬರಬೇಕು. ಅಂತಹ ಅಮೂಲ್ಯ ಭಂಡಾರ ... ಭಾರತೀಯ ಕತೆಗಳು

ಎಲ್ಲರಿಗೂ ಅತ್ಯವಶ್ಯಕ ಓದತಕ್ಕ ಅಪೂರ್ವ ಗ್ರಂಥ
151 ಕತೆಗಳು ಬೆಲೆ ರೂ 1-12-0
ನವಭಾರತ ಪುಸ್ತಕ ಭಂಡಾರ, ಉಡುಪಿ



ಸ್ವೀಕಾರ—ವಿಮರ್ಶೆ

ವಿಷ ಚಿಕಿತ್ಸೆ—

ಲೇಖಕ ಹಾಗೂ ಪ್ರಕಾಶಕ: ಪಂಡಿತ ಅಲೆವೂರು ಕೃಷ್ಣ ಭಟ್ಟ, ವಿಷ ವೈದ್ಯ, ಅಲೆವೂರು, ದಕ್ಷಿಣಕನ್ನಡ. ಬೆಲೆ: ಎಂಟಾಣೆ.

ಪ್ರಾಣಿ ಮಾತ್ರಕ್ಕೆ ಬರಬಹುದಾದ ಗಂಡಾಂತರಗಳಲ್ಲಿ ಶಾರೀರಿಕವಾದ ರೋಗೋಪದ್ರವಗಳಿಗಿಂತಲೂ ಆಗಂತುಕವಾದ ವಿಷಬಾಧಾಜನಿತವಾದ ಆಪತ್ತುಗಳು ಅತಿಶಯ ಪ್ರಮಾದಕಾರಿಗಳೆಂದು ಆಯುರ್ವೇದವು ವರ್ಣಿಸುತ್ತದೆ. ವಿಷಪಾನ ಅಥವಾ ವಿಷದಂಶದಿಂದ ಸಂಭವಿಸುವ ಆಪತ್ತು ತನ್ನ ಅನಿರೀಕ್ಷಿತತೆ, ಅನಿಶ್ಚಿತತೆ, ಹಾಗೂ ಶೀಘ್ರಕಾರಿತ್ವಗಳಿಂದಾಗಿ ಘೋರತಮವೂ ಮೃತ್ಯು ಸ್ವರೂಪವೂ ಆಗಿರುತ್ತದೆ. ವಿಷ ಬಾಧೆಯು ಯಾವ ಹೊತ್ತಿನಲ್ಲಿ ಯಾವ ಸ್ಥಳದಲ್ಲಿ ಯಾವ ಸನ್ನಿವೇಶಗಳಲ್ಲಿ ಸಂಭವಿಸುವುದೆಂದು ಹೇಳಲು ಸಾಧ್ಯವಿಲ್ಲ. ನಮ್ಮ ಊಹೆಗೂ ಸಿಲುಕದಂತೆ ಶೀಘ್ರ ಪ್ರಾಣಹರಣ ಶಕ್ತಿಯುಳ್ಳ ವಿಷಜಂತು ಯಾ ವಸ್ತುಗಳು ಜೀವನಕ್ಕೆ ಆಹ್ವಾನ ರೂಪವಾಗಿ ಮೈದೋರುತ್ತವೆ. ಇವುಗಳುಂಟುಮಾಡುವ ಗಂಡಾಂತರದಿಂದ ಪಾರಾಗುವ ಉಪಾಯ ಉಪಕ್ರಮ ಸಾಧನಾದಿಗಳನ್ನು ಕೆಲ ಮಟ್ಟಿಗಾದರೂ ತಿಳಿದಿರುವುದು ಅತ್ಯವಶ್ಯವಾಗಿರುತ್ತದೆ. ಅನೇಕ ವರ್ಷಗಳಿಂದ ವಿಷ ವೈದ್ಯರಾಗಿ ಈ ವಿಷಯದಲ್ಲಿ ಅಪೂರ್ವ ಅನುಭವವನ್ನು ಸಂಪಾದಿಸಿರುವ ಅಲೆವೂರು ಕೃಷ್ಣ ಭಟ್ಟರು ತಮ್ಮ ಈ ಪುಸ್ತಕದಲ್ಲಿ ಸಾಮಾನ್ಯವಾಗಿ ಜನರಿಗೆ ತಿಳಿಯುವ ಸುಲಭ ಮಾತುಗಳಲ್ಲಿ ಹೆಚ್ಚಿನ ಕಷ್ಟವಿಲ್ಲದೆ ದೊರಕುವ ಗಿಡಮೂಲಿಕೆ ಇತ್ಯಾದಿಗಳಿಂದ ವಿಷ ಬಾಧೆಯನ್ನು ಪರಿಹರಿಸುವ ಮಾರ್ಗವನ್ನು ವಿವರಿಸಿರುವರು. ವಿಷದಂಶವಾದಾಗ ಮನುಷ್ಯನಲ್ಲಿ ಎದ್ದು ತೋರುವ ಲಕ್ಷಣಗಳು, ವಿಷ ಪ್ರಭಾವವು ಒಂದು ಧಾತುವಿನಿಂದ ಇನ್ನೊಂದಕ್ಕೆ ಕ್ರಮಿಸುವಾಗ ಉಂಟಾಗುವ ವಿಕಾರಗಳು ಮುಂತಾದುವುಗಳನ್ನು ವಿವರಿಸಿದ ಬಳಿಕ, ವಿವಿಧ ಪ್ರಕಾರದ ವಿಷದ ಹಾವುಗಳು ಕಚ್ಚಿದಾಗ ಕೈಗೊಳ್ಳಬೇಕಾದ ಚಿಕಿತ್ಸೆಯ ವಿವರವನ್ನು ಕೊಟ್ಟಿರುವರು. ವಿಷದಂಶವಾದ ಕೂಡಲೇ "ಕಿವಿ ಮಲವನ್ನು ತೆಗೆದು ಬಾಯಿಯ ಜೊಲ್ಲಿನಲ್ಲಿ ಕಲಸಿ ಕಚ್ಚಿದ ಗಾಯಕ್ಕೆ ಲೇಪ ಮಾಡಬೇಕು. ಆ ಸ್ಥಳವನ್ನು ಕೊಯ್ದು ರಕ್ತ ಹಿಂಡಿ ತೆಗೆಯಬೇಕು. ಬೆಂಕಿಯಿಂದಲೋ ಲೋಹಗಳನ್ನು ಕೆಂಪಗೆ ಕಾಯಿಸಿ ಅದರಿಂದಲೋ ಆ ದಂಶವನ್ನು ಸುಡಬೇಕು. ದಂಶದ ನಾಲ್ಕು ಬೆರಳು ಮೇಲೆ ಒಂದು ಹಗ್ಗದಿಂದ ಒಂದು ಕಟ್ಟವನ್ನು, ಅಲ್ಲಿಂದ ಮೇಲೆ ಮೇಲಕ್ಕೆ ಮೂರು ಕಟ್ಟುಗಳನ್ನು ಹಾಕಬೇಕು" ಎಂದು ಭಟ್ಟರು ಪ್ರಥಮ ಚಿಕಿತ್ಸೆಯನ್ನು ಹೇಳಿರುವರು. ಆ ಮೇಲೆ ಕಚ್ಚಿದ ಸರ್ಪ ಜಾತಿಯನ್ನು ಲಕ್ಷಣಗಳ ಆಧಾರದಿಂದ ಗುರುತಿಸಿ ಯೋಗ್ಯ ಚಿಕಿತ್ಸೆ ಮಾಡಬೇಕು. ಈ ಚಿಕಿತ್ಸೆ ಎಷ್ಟು ಸುಲಭವಾಗಿದೆಯೆಂಬುವನ್ನು ಕೆಳಗೆ ಆಯ್ದುಕೊಟ್ಟ ಮದ್ದುಗಳಿಂದ ತಿಳಿಯಬಹುದು—ಉದಾ: ಸರ್ಪ ಜಾತಿಯ ವಿಷದಂಶಕ್ಕೆ "ಹೊಂಗಾರೆಕನ ಮರದ ಎಲೆಯ ರಸದಲ್ಲಿ ಹಿಂಗು, ಕಾಳುಮೆಣಸು, ಬಜೆ ಇವನ್ನು ಅರೆದು ಹಚ್ಚಿದರೆ ವಿಷನಿವಾರಣೆಯಾಗುವುದು." ಕಂದೊಡಿ ಕಚ್ಚಿದರೆ "ಕಾಸರಮರದ ಬೇರನ್ನು ನೀರಿನಲ್ಲಿ ತೇದು ಲೇಪಿಸಿದರೆ ವಿಷಶಮನವಾಗುವುದು." ಕದಂಬಳೆ ಮುಂತಾದವುಗಳು ಕಚ್ಚಿದರೆ "ಬಿಸಿ ನೀರಿನಲ್ಲಿ ಒಣ ಶುಂಠಿಯನ್ನು ಅರೆದು ಕುಡಿಸಬೇಕು. ಅಥವಾ ಬಜೆ, ಕಾಳು ಮೆಣಸುಗಳನ್ನು ಬಿಸಿ ನೀರಿನಲ್ಲಿ ಅರೆದು ಕುಡಿಸಬೇಕು." ಕಚ್ಚಿದ ಹಾವಿನ ಜಾತಿಯನ್ನು ತಿಳಿಯಲು ಸಾಧ್ಯವಾಗದೆ ಹೋದರೆ "ಬರೇ ಬಾಳೆಗಡ್ಡೆ ರಸವನ್ನು ಮಾತ್ರ ಒಂದು ಕುಡುತೆ ತೆಗೆದು ಕುಡಿಸಿದರೆ ವಿಷ ನಿವಾರಣೆಯಾಗುವುದು." ಇಂತಹ ಹಲವು ಔಷಧಗಳನ್ನು ಪುಸ್ತಕದಲ್ಲಿ ಕೊಟ್ಟಿರುವುದರಿಂದ ಅವುಗಳಲ್ಲಿ ಯಾವುದಾದರೊಂದು ಪ್ರಕಾರದ ಔಷಧವನ್ನು ವಿಳಂಬವಿಲ್ಲದೆ ಮಾಡಬಹುದು. ಹಾವಿನ ವಿಷವಲ್ಲದೆ, ಜೇಡರಹುಳ, ಇಲಿ, ನಾಯಿ, ಹುಚ್ಚುನಾಯಿ, ಕೊಂಬುಚೇಳು, ಹಲ್ಲಿ ಮುಂತಾದ ಬೇರೆ ಅನೇಕ ಪ್ರಾಣಿಗಳ ದಂಶದಿಂದಲೂ ವಿಷಬಾಧೆಯಾಗುತ್ತದೆ. ಕೈವಿಷ ಅಂದರೆ ಕೊಲ್ಲುವುದಕ್ಕೂ ವಶೀಕರಣ ಮಾಡುವುದಕ್ಕೂ ಮಂತ್ರ ಔಷಧಗಳಿಂದ ತಯಾರಿಸಿ ಕೊಟ್ಟ ಮದ್ದು ಪ್ರಾಣಾಪಾಯವನ್ನುಂಟು ಮಾಡುತ್ತದೆ. ಇವುಗಳಿಗೆಲ್ಲ ಆಯುರ್ವೇದ ಚಿಕಿತ್ಸೆಗಳನ್ನು ಹೇಳಿರುವ ಈ ಪುಸ್ತಕವನ್ನು ಚೆನ್ನಾಗಿ ಅಭ್ಯಾಸ ಮಾಡಿದರೆ, ಮನೆಗೊಬ್ಬ ವಿಷವೈದ್ಯನಿದ್ದಂತೆಯೇ ಆಗುತ್ತದೆ. ಇಷ್ಟು ಉಪಯುಕ್ತವಾದ ಪುಸ್ತಕವನ್ನು ಬರೆದ ಭಟ್ಟರಿಗೆ ನಾವು ಋಣಿಗಳಾಗಿದ್ದೇವೆ

ಕೈಹಿಡಿದ ಕಾವೇರಿ—

ಬರೆದವರು: ಎಂ. ಹರಿದಾಸ ರಾಯ. ಪ್ರಕಾಶಕರು: ಸರ್ವೋದಯ ಸಾಹಿತ್ಯ ಮಾಲೆ, ಮುಬ್ಬಳ್ಳಿ. ಬೆಲೆ. ರೂ. ೨—೪—೦

ಕನ್ನಡಿಗರಿಗೆ ಸುಪರಿಚಿತರಾದ ಹರಿದಾಸ ರಾಯರ ಇತ್ತೀಚಿನ ಸಾಮಾಜಿಕ ಕಾದಂಬರಿಯೇ "ಕೈಹಿಡಿದ ಕಾವೇರಿ". ಇಲ್ಲಿಯ ಕಥಾವಸ್ತು ಹೊಸತು. ದಕ್ಷಿಣ ಕನ್ನಡದ ಮಲೆನಾಡಿನ ವಾತಾವರಣವನ್ನು ಅತ್ಯಂತ ಪ್ರಭಾವಿಯಾದ ಹಿನ್ನೆಲೆಯಾಗಿ ತೆಗೆದುಕೊಂಡು ಕಥಾನಕವನ್ನು ಸೊಗಸಾಗಿ ಹೆಣೆದಿರುವುದರಿಂದ ಕಾದಂಬರಿಯ ಅಂಗಾಂಗವೂ ಮೈ ತುಂಬಿ ಬಂದಿದೆ; ಸಹಜ ಸನ್ನಿವೇಶ ಹಾಗೂ ಪಾತ್ರ ಚಿತ್ರಣಗಳಿಂದ ಕಳೆಗೊಂಡಿದೆ. ಸೂಳೆಯೊಬ್ಬಳನ್ನು ಹೆಂಡತಿಯಂತೆ ನಡೆಸಿಕೊಂಡು ಬರುತ್ತಿದ್ದ ಡಾಕ್ಟರ ಆನಂದರಾಯ ಬಂಗಾಡಿಯ ಮುಗ್ಧೆ ಕಾವೇರಿಯ ಕೈಹಿಡಿದುದರಿಂದ ಉಂಟಾಗುವ ದುಸ್ಥಿತಿಯೇ ಇಲ್ಲಿ ಆಯ್ದುಕೊಂಡ ವಿಷಯ. ವಾಸಂತಿ ಸೂಳೆಯಾದರೂ ಗರತಿಯಂತೆ ಬಾಳಬೇಕೆಂಬ ಆಸೆ-ಆಕಾಂಕ್ಷೆಯನ್ನಿಟ್ಟುಕೊಂಡವಳು. ಆದುದರಿಂದ ಆನಂದರಾಯನನ್ನೆ ನಂಬಿಕೊಂಡು ಅವನಿಗೆ ಅನುಕೂಲೆಯಾಗಿ ಇದ್ದುಕೊಂಡು, ತನ್ನ ಹೃದಯ ಹಾಗೂ ಪ್ರೇಮಗಳನ್ನು ಅರ್ಪಿಸಿದಳು. ಆದರೆ ಆನಂದರಾಯ ಕಾವೇರಿಯ ಕೈ ಹಿಡಿದ—ವಾಸಂತಿಯಲ್ಲಿಲ್ಲದ ಯಾವುದೋ ಗುಣವಿಶೇಷ ಅವನನ್ನು ಕಾವೇರಿಯ ಕಡೆಗೆ ಆಕರ್ಷಿಸಿತು. ಆದರೆ ತನ್ನ ರಹಸ್ಯಪ್ರಣಯ ಬಹಿರಂಗಗೊಂಡ ಮೇಲೆ ಅವನ ಬಾಳು ಹೇಯವಾಯಿತು—ಕಾವೇರಿಗೆ ಇದಿರಿಸಬೇಕಾಗಿ ಬಂದ ದುರಂತ ಪ್ರಸಂಗವನ್ನು ಅವಳ ತಾಯಿ ತಂದೆಯರು ಕಂಡು ಮರುಗಿದರೂ ಮಗಳು ಮದುವೆ ಮನೆ ತುಂಬಿಸಿದ ಮೇಲಾದರೂ ಹೊರ ಬಾಳಿ ನಿಂತೀತೆಂಬ ಆಶೆಯಿಂದ ಅವರು ಎಲ್ಲವನ್ನೂ ಸಹಿಸಿಕೊಂಡರು. ಆದರೆ ಪ್ರಸವ ರಾತ್ರಿ ಆನಂದನ ಬಾಯಿಂದ "ವಾಸಂತಿ ವಾಸಂತಿ" ಎಂಬ ಶಬ್ದ ಹೊರಟಾಗ, ಕಾವೇರಿಯ ಸ್ವಾಭಿಮಾನ ಸಿಡಿಲಿನಂತೆ ಗುಡುಗಿತು. ಆನಂದರಾಯ ಇದನ್ನು ಹೆಣ್ಣಿನ ಸೊಕ್ಕೆಂದು ತಿಳಿದ. ತನ್ನ ಸೂಳೆಯ ಕುತ್ತಿಗೆ ಕೈಯೊಡ್ಡುವ ತೋತ್ರಾಗಿ ಕಾವೇರಿಯನ್ನು ಇಡಬಯಸಿದ. ಕಾವೇರಿಯ ವಿವೇಕ ಬುದ್ಧಿ ಅದನ್ನು ಪ್ರತಿಭಟಿಸಿತು ತಮ್ಮ ನಾರಾಯಣನ ಕಪಟದಿಂದ ವಾಸಂತಿಗೂ ದುರ್ಗತಿ ಬಂತು. ಅಂತ್ಯ ಕಾಲದಲ್ಲಿ ಅವಳು ಕಾವೇರಿಯ ಸ್ವಾಭಿಮಾನವನ್ನು ಮೆಚ್ಚಿಕೊಂಡಳು; ಆನಂದರಾಯನ ಕುರಿತು ಜುಗುಪ್ಸೆ ಪಟ್ಟಳು. ಬಂಗಾಡಿಗೆ ಹೋಗೋಣವೆಂದು ಅಂಗಲಾಚಿ ಬಂದ ವಾಸಂತಿ ತನ್ನೆಲ್ಲ ಶಕ್ತಿಯನ್ನೂ ಕೊನೆಗೊಮ್ಮೆ ಉಪಯೋಗಿಸಿ ಕಾವೇರಿಯ ಕೈಯನ್ನು ಎತ್ತಿ ಆನಂದರಾಯನ ಕೈಗಿತ್ತಳು. ಕಾದಂಬರಿಯಲ್ಲಿ ಅನೇಕ ತುಳು ಪ್ರಯೋಗಗಳೂ ನುಡಿಕಟ್ಟುಗಳೂ ಬಂದು ಸೇರಿದ್ದು ನೈಜ ಚಿತ್ರವನ್ನು ಒದಗಿಸಿ ಕೊಡುವ ಲೇಖಕರ ಪ್ರಯತ್ನ ಯಶಸ್ಸನ್ನು ಗಳಿಸಿದೆ. ಇಷ್ಟು ಸುಂದರವಾದ ಈ ಕಾದಂಬರಿಯಲ್ಲಿ ಎದ್ದು ಕಾಣುವ ದೋಷವೊಂದಿದೆ—ವಾಸಂತಿ ಮತ್ತು ಆನಂದರಾಯನ ಪ್ರಣಯ ಸಂಬಂಧವನ್ನು ವಿವರಿಸುವಾಗ ಲೈಂಗಿಕ ಭಾವನೆಗಳನ್ನು ಪ್ರಚೋದಿಸುವ ಕೆಲವು ವರ್ಣನೆಗಳಿಗೆ ಎಡೆಕೊಡುವುದು ಅಗತ್ಯವಿರಲಿಲ್ಲ. ಸೂಚ್ಯವಾಗಿ ಹೇಳಬೇಕಾದುದನ್ನು ವಾಚ್ಯದಲ್ಲಿ ಪ್ರಕಟಗೊಳಿಸಿದ್ದು ಕಲಾವಂತಿಕೆಯಲ್ಲ-ಅದು ಜನಪ್ರಿಯತೆಗಳಿಸುವ ಅಗ್ಗದ ತಂತ್ರ ಮಾತ್ರ. ಇದಕ್ಕೆ ಎಡೆಕೊಡಬಾರದಿತ್ತೆಂದೆನಿಸುತ್ತದೆ. ಕಥಾವಸ್ತುವಿನ ಆಯ್ಕೆ, ತಂತ್ರ ಹಾಗು ಸನ್ನಿವೇಶ ರಚನಾ ಕೌಶಲ, ಶೈಲಿ ಮತ್ತು ಭಾಷಾ ಮಾಧುರ್ಯ, ಪಾತ್ರಚಿತ್ರಣ ಮತ್ತು ರಸಪುಷ್ಟಿ ಮುಂತಾದ ಎಲ್ಲ ದೃಷ್ಟಿಯಲ್ಲಿಯೂ ಈ ಕಾದಂಬರಿ ಚೊಕ್ಕವಾಗಿದೆ. ಅಂತಹದರಲ್ಲಿ ಕಾದಂಬರಿಯ ತೂಕ ಗೌರವಗಳನ್ನು ತಗ್ಗಿಸುವ ಅನಾವಶ್ಯಕ ಪ್ರಸಂಗಗಳನ್ನು ಬಿಟ್ಟುಬಿಡುವುದೇ ಶ್ರೇಯಸ್ಕರ.

ಕೆಲೆಂಡರ್, ಡೈರಿ ಮತ್ತು ಪಂಚಾಂಗ ಸ್ವೀಕಾರ—ಹಿಂದೂಸ್ಥಾನ್ ಪೇಪರ್ ಎಂಡ್ ಸ್ಟೇಶನರಿ ಮಾರ್ಟ್, ಉಡುಪಿ, ಉಡುಪಿ ಪ್ರೆಸ್ ಉಡುಪಿ, ಶಾರದಾ ಪ್ರೆಸ್, ಮಂಗಳೂರು, ಯು. ಆರ್. ಶೆಣೈ ಎಂಡ್ ಸನ್ಸ್, ಮಂಗಳೂರು, ನ್ಯೂ ರೋಯಲ್ ಕೆಫೆ, ಉಡುಪಿ, ನೆಲ್ಸನ್ ಎಂಡ್ ಕೊ, ಮದ್ರಾಸು, ಎಸ್. ಆರ್. ಬೀಡಿ ವರ್ಕ್ಸ್, ಉಡುಪಿ, ನೋರ್ಟನ್ ಎಂಡ್ ಕಂಪೆನಿ, ಮದ್ರಾಸು, ಬ್ರಿಟಿಷ್ ಇನ್‌ಫೊರ್ಮೇಶನ್ ಸರ್ವಿಸ್, ಮದ್ರಾಸು, ಗ್ರೇಟ್‌ದಿಲ್ ಬಹಾರ್ ಬೀಡಿ ವರ್ಕ್ಸ್, ಉಡುಪಿ ಇವರ ಸುಂದರವಾದ 1954 ನೆ ಇಸವಿಯ ಕೆಲಂಡರುಗಳನ್ನೂ, ಪಂಡಿತ ಅಂಬಲೆ ರಾಮಸ್ವಾಮಿ ಅಯ್ಯರರ ಸಂತಾನ ಸಿಂಧೂರ ಮತ್ತು ಕುರಾಡಿ ವಿಶ್ವ ವೈದ್ಯನಿಲಯದ ಪಾಕೆಟ್ ಕೆಲೆಂಡರುಗಳನ್ನೂ, ಹಿಂದೂಸ್ಥಾನ್ ಪೇಪರ್ ಮಾರ್ಟಿನ ಹಿಂದೂಸ್ಥಾನ ಡೈರಿ, ಮಂಗಳೂರು ಶಾರದಾ ಪ್ರೆಸ್ಸಿನ ಶಾರದಾ ಡೈರಿಯನ್ನೂ ಆತ್ಮಾದರದಿಂದ ಸ್ವೀಕರಿಸಿದ್ದೇವೆ. ಅಲ್ಲದೆ ಶ್ರೀ ಪಿ. ಲಕ್ಷ್ಮೀನಾರಾಯಣ ಅಡಿಗರಿಂದ ಗುಣಿಸಿ ಪರಿಶೋಧಿಸಲ್ಪಟ್ಟು ಉಡುಪಿ ಮೆಜೆಸ್ಟಿಕ್ ಪ್ರೆಸ್ಸಿನಿಂದ ಪ್ರಕಟಿಸಲ್ಪಟ್ಟ ಜಯನಾಮ ಸಂವತ್ಸರದ ಶ್ರೀ ಕೃಷ್ಣ ಪಂಚಾಂಗ ಉಡುಪಿ. (ಬೆಲೆ 0-4-0) ವೈದ್ಯಗುರು ಎಮ್. ಆರ್. ಭಟ್ಟರಿಂದ ಗುಣಿಸಿ ಪರಿಶೋಧಿತವಾಗಿ ಮಂಗಳೂರು ಶಾರದಾ ಛಾಪಖಾನೆಯವರಿಂದ ಪ್ರಕಾಶಿತವಾದ ಶಾರದಾ ಪಂಚಾಂಗ (ಬೆಲೆ 0-4-0), ಶ್ರೀ ಅಲೆವೂರು ಸೀತಾರಾಮಾಚಾರ್ಯ ಮತ್ತು ಶ್ರೀ ಅತ್ತೂರು ವಾಸುದೇವ ಉಡುಪರಿಂದ ಪರಿಶೋಧಿಸಲ್ಪಟ್ಟು ಕೊಯಮುತ್ತೂರಿನ ರವಿಪ್ರಸಾದ ಜ್ಯೋತಿಷಾಲಯದಿಂದ ಪ್ರಕಟಿಸಲ್ಪಟ್ಟಿರುವ ಉಡುಪಿ ಪಂಚಾಂಗ (ಬೆಲೆ 0-6-0) ಇವನ್ನು ಸಹಾ ಆತ್ಮಾದರದಿಂದ ಸ್ವೀಕರಿಸಿದ್ದೇವೆ.

3 ವರ್ಷ ಗ್ಯಾರಂಟಿಯುಳ್ಳ ಚಲೋರಿಸ್ಟು ವಾಚು ಬರೇ ರೂಪಾಯಿ 14-6-0 ಕಿಮ್ಮತ್ತು. ಸೈಜ್ 10 ನಂಬ್ರ 5



4 ಜ್ಯುವೆಲ್ಸ್ ಕ್ರೋಮ್ ರೂ. 14 6, ರೋಲ್ಡ್ ಗೋಲ್ಡ್ ರೂ 18, 15 ಜ್ಯುವೆಲ್ಸ್ ಕ್ರೋಮ್ ರೂ. 30/, ರೋಲ್ಡ್ ಗೋಲ್ಡ್ ರೂ. 32/8, 15 ಜ್ಯುವೆಲ್ಸ್ ವಾಟರ್ ಪ್ರೂಫ್ ರೂ. 35/, 17 ಜ್ಯುವೆಲ್ಸ್ ರೂ. 40, ಪಾಕೆಟು ವಾಚು ರೂ. 12/ ಟೈಂಪೀಸು ರೂ. 15 –

ಒಬ್ಬರಿಗೆ ಒಂದಕ್ಕಿಂತ ಹೆಚ್ಚಿಗೆ ವಾಚು ಕಳುಹಿಸುವುದಿಲ್ಲ. ಕ್ಯಾಟಲಾಗು ಧರ್ಮಾರ್ಥ.

FREE INDIA WATCH CO N K
Post Bag No. 6724, CALCUTTA-7.

ಕರುಣಾರಸ, ವಾತ್ಸಲ್ಯರಸಗಳಿಂದ ಲಕ್ಷಾಂತರ ಜನರ ಹೃದಯಗಳನ್ನು ಮಿಡಿದ

ದಿ. ಸಾನೇ ಗುರೂಜಿಯವರ ಅಮರ ಕಾದಂಬರಿ!

ಪ್ರತಿಯೊಂದು ಕನ್ನಡ ಕುಟುಂಬದವರೂ ಸಂಗ್ರಹಿಸಬೇಕಾದ ಪುಸ್ತಕ.

ಶ್ಯಾಮನ ತಾಯಿ

ಮುನ್ನೂರು ಪುಟಗಳು! ದ್ವಿವರ್ಣ ರಕ್ಷಾಕವಚ! ಬೆಲೆ ೧-೮-೦ ಮಾತ್ರ.

ಅಂಚೆವೆಚ್ಚ ಸೇರಿ ಎರಡು ರೂಪಾಯಿ ಮನಿಯಾರ್ಡರು ಕಳಿಸಿರಿ. (ವಿ. ಪಿ. ಮಾಡುವದಿಲ್ಲ.

ಕಾರುಣ್ಯಮೂರ್ತಿ 'ಶ್ಯಾಮನ ತಾಯಿ'ಯ ಒಂದೊಂದು ನುಡಿಯೂ ಅಮೃತವಾಣಿಯಾಗಿದೆ! ಸಣ್ಣ ಸಣ್ಣ ಮಾತುಗಳಲ್ಲಿಯೂ ಧರ್ಮ ಮತ್ತು ಸಂಸ್ಕೃತಿಯ ದಿವ್ಯದರ್ಶನವಾಗುತ್ತದೆ. ಬಡವರಿಗೆ ಮಿತವಾದ, ಧನಿಕರಿಗೆ ಸಮತಾವಾದ, ಅತ್ತೆಸೊಸೆಯರಿಗೆ ಹಿತವಾದ, ಸಹೋದರರಿಗೆ ಬುದ್ಧಿವಾದ, ತರುಣರಿಗೆ ಧ್ಯೇಯವಾದವನ್ನು ಬೋಧಿಸಿದ್ದಾಳೆ.

ಸಮಾಜ ಪುಸ್ತಕಾಲಯ, ಧಾರವಾಡ.

ಚ್ಯವನಪ್ರಾಶ

ಹಿಮಾಲಯದ ಉತ್ಕೃಷ್ಟ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಚ್ಯವನಪ್ರಾಶವು ಕ್ಷಯ, ದುರ್ಬಲತೆ ಇತ್ಯಾದಿ ಕಾಯಿಲೆಗಳಿಗೆ ದಿವ್ಯೌಷಧಿ. ವಯೋವೃದ್ಧರಿಗೆ ವಿಶೇಷ ಪರಿಣಾಮಕಾರಿಯಾದುದು. ಎಳೆ ಮಕ್ಕಳನ್ನೂ ಗಟ್ಟಿಮುಟ್ಟಾಗಿಯೂ ಆರೋಗ್ಯವಂತರಾಗಿಯೂ ಇರಗೊಡಿಸುವುದು. ಚ್ಯವನಪ್ರಾಶವನ್ನು ಸತತ ಉಪಯೋಗಿಸುವುದರಿಂದ ಆಯುಸ್ಸು ವೃದ್ಧಿಯಾಗುವುದು. ಪರೀಕ್ಷಾರ್ಥವಾಗಿ ಕೆಳಗಿನ ವಿಳಾಸಕ್ಕೆ ಬರೆದು ಒಮ್ಮೆ ತರಿಸಿ ನೋಡಿರಿ. ಸೇರಿಗೆ ರೂಪಾಯಿ 10/- ಬೆಲೆ.

ಕಾಲಿಕಮಾಲಿ ಆಯುರ್ವೇದ ಫಾರ್ಮಸಿ, ಋಷಿಕೇಶ (ಡೆಹರಾಡನ್)

Kali Kamali Ayurved Pharmacy, RISHIKESH (Dehradun.)

ನಿಮಗೆ ಸುಲಭದಲ್ಲಿ ಇಂಗ್ಲಿಷ್ ಕಲಿಯಬೇಕೆ? ಹಾಗಿದ್ದರೆ

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿ ಪುಸ್ತಕ ಅತ್ಯುಪಯುಕ್ತವಾದುದು.

ಬೆಲೆ: ಸಾದಾಪ್ರತಿ 1—8—0

ಡಾ| ಕೊರನ್ಸೆಲ್ಲರ

ಮನೆ ಮದ್ದು

ಬೆಲೆ: ರೂ. 2—8—0

ಪುಸ್ತಕ ವ್ಯಾಪಾರಿಗಳಿಗೆ ಧಾರಾಳ ಕಮಿಶನ್! ಎಲ್ಲಾ ತರದ ಕನ್ನಡ ಪುಸ್ತಕಗಳೂ ದೊರೆಯುತ್ತವೆ.

ನವಭಾರತ ಪುಸ್ತಕ ಭಂಡಾರ, ಉಡುಪಿ.

— ೪ —

ದೇವರ ಸತ್ಕಥೆಗಳನ್ನು ಕೇಳುವುದು ಭಕ್ತನ ಮೊದಲನೆಯ ಹೆಜ್ಜೆ. ಇದರಿಂದಾಗಿ ಮನಸ್ಸು ಒಂದೇ ಕಡೆಗೆ ಆಕರ್ಷಿತವಾಗಿ ಮನಸ್ಸು ಆ ವಿಷಯದಲ್ಲಿಯೇ ನಡಲು ತೊಡಗುವುದು. ಇದಕ್ಕೆ ಸ್ಮರಣವೆನ್ನುತ್ತಾರೆ. ಹರಿಕಥೆ ಮೊದಲಾದವುಗಳು ಶ್ರವಣ ಭಕ್ತಿಯ ಸಾಧಕಗಳು. ಶ್ರವಣದಿಂದ ದೇವರಲ್ಲಿ ಮನಸ್ಸು ನಟ್ಟನಂತರ ಆತನನ್ನು ಏಕಚಿತ್ತದಿಂದ ಸ್ಮರಿಸಬೇಕು; ಇದು ಭಕ್ತನ ಎರಡನೆಯ ಹೆಜ್ಜೆ. ಜಪ, ಸ್ತೋತ್ರ ಮೊದಲಾದವುಗಳು ಸ್ಮರಣಭಕ್ತಿಯ ಸಾಧಕಗಳು. ದೇವರಲ್ಲಿ ನಟ್ಟ ಮನಸ್ಸು ಆತನನ್ನು ಸ್ಮರಿಸುತ್ತಿದ್ದು ಆ ಮೇಲೆ ದೇವರನ್ನು ಹೊಗಳಲು ತೊಡಗುತ್ತಾನೆ. ಈ ಕೀರ್ತನ ಭಕ್ತಿಗೆ ಭಜನೆ ಮೊದಲಾದವುಗಳು ಸಾಧಕಗಳಾಗಿವೆ. ಇದಾದನಂತರ ಪಾದ ಸೇವನೆ, ವಂದನೆ, ಅರ್ಚನೆ ಮುಂತಾದ ವೈಧಿಕ ಭಕ್ತಿಗಳು ತೊಡಗುತ್ತವೆ. ಭಕ್ತನಾದವನು ಭಗವಂತನನ್ನು ಕಾಣಲು ಹೊರಟ ಸಾಧನೆಯಲ್ಲಿ, ತನಗುಂಟಾದ ಅನುಭವದಲ್ಲಿ ತನ್ನನ್ನು ದೇವರಿಗೆ ಅರ್ಪಿಸುವ ಹಂಬಲವೇ ಈ ವೈಧಿಕ ಭಕ್ತಿಗಳಾಗಿವೆ.

ಶ್ರೀರಾಮಕೃಷ್ಣರ ಭಕ್ತಿಮಾರ್ಗ

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಶ್ರೀ. ಕಯ್ಯಾರ ಕಿಞ್ಞಣ್ಣ ರೈ.

ದಕ್ಷಿಣೇಶ್ವರದ ಕಾಳೀ ಸನ್ನಿಧಿಯಲ್ಲಿ, ಪಂಚವಟಿಯ ತಪೋಭೂಮಿಯಲ್ಲಿ, ಭೈರವಿಬ್ರಾಹ್ಮಣಿ, ತೋತಾಪುರಿಗಳಂತಹ ಗುರುಗಳ ಸಮ್ಮುಖದಲ್ಲಿ, ತನ್ನ ಬಳಿಗೆ ಜ್ಞಾನಪಿಪಾಸುಗಳಾಗಿ ಬಂದ ಶಿಷ್ಯಕೋಟಿಯ ಸಹವಾಸದಲ್ಲಿ ಶ್ರೀರಾಮಕೃಷ್ಣ ಪರಮಹಂಸರು ಇಂತಹ ಭಕ್ತಿ ಮಾರ್ಗವನ್ನು ನಿರಂತರ ನಡೆಸುತ್ತಿದ್ದರೆಂಬುದು ಅವರ ಜೀವನ ಚರಿತ್ರೆಯಿಂದ ನಾವು ತಿಳಿಯಬಹುದಾಗಿದೆ.

ಭಕ್ತನ ಅನೇಕ ಭಾವಗಳನ್ನು ಭಕ್ತಿ ಸಾಧನದಲ್ಲಿ ಹೇಳಲಾಗಿದೆ. ಅವೆಲ್ಲವುಗಳನ್ನೂ ಶ್ರೀರಾಮಕೃಷ್ಣರ ಜೀವನದಲ್ಲಿ ನಾವು ನೋಡಬಹುದು. ಶ್ರೀರಾಮಕೃಷ್ಣರು ತನ್ನ ಅಲ್ಪತೆ ಕ್ಷುದ್ರತೆಗಳಿಗಾಗಿ ದೇವರಲ್ಲಿ ಮೊರೆಯಿಡುವುದನ್ನು ನಾವು ನೋಡುತ್ತೇವೆ. ಇದಕ್ಕೆ ಆರ್ತಭಾವನೆಂದು ಹೆಸರು. ದಕ್ಷಿಣೇಶ್ವರದ ಮಾತೆಯೊಡನೆ ಅವರು ಮೊರೆಯಿಡುತ್ತಿದ್ದುದು ಅವರ ಜೀವನದ ಉದ್ದಕ್ಕೂ ಅವರ ಚರಿತ್ರೆಯಲ್ಲಿ ಬಂದಿದೆ. ತಾನು ದೀನನು, ಹೀನನು, ದಾಸನು ಎಂದೀ ಕಂಗಾಲುಸ್ಥಿತಿಯಲ್ಲಿ ಪಶ್ಚಾತ್ತಾಪವು ಹುಟ್ಟಿ ಮುಂದೆ ಭಕ್ತನಿಗೆ ವೈರಾಗ್ಯಭಾವವು ಉದಯವಾಗುವುದು. ಪಶ್ಚಾತ್ತಾಪ ದಗ್ಧವಾದ ಮನಸ್ಸು ವಿಷಯಲೋಲುಪತೆಯಿಂದ ವೈರಾಗ್ಯವೊಂದುವುದು. ಶ್ರೀರಾಮಕೃಷ್ಣರು ವಿವಾಹಿತರಾಗಿದ್ದರೂ, ಪತ್ನಿಯನ್ನು ಮಾತೆಯಾಗಿ ಪೂಜಿಸುತ್ತಿದ್ದ ಸ್ಥಿತಿಯಲ್ಲಿ ನಾವೀ ವೈರಾಗ್ಯ ಭಾವನನ್ನು ಕಾಣುತ್ತೇವೆ. ಆಗಾಗ ಅವರು ತನ್ನ ದೇಹ ಬಟ್ಟೆ ಬರೆಗಳು ಇವುಗಳ ಕುರಿತು ಗಮನಿಸದೇ ಸಮಾಧಿಸ್ಥಿತಿಯಲ್ಲಿರುವುದೂ ಇದೇ ವೈರಾಗ್ಯಭಾವದಿಂದಲೇ ಎಂಬುದು ಖಚಿತವಾಗುವುದು. ಹೀಗೆ ಲೌಕಿಕ ಸುಖದ ಬಿಸಿಲ್ಗುದುರೆಯ ಬೆನ್ನೇರಿ ಹೋಗುತ್ತಿರುವ ಮನಸ್ಸನ್ನು ಆರ್ತಭಾವ, ವೈರಾಗ್ಯಭಾವಗಳಿಂದ ತಡೆದು ಹಿಡಿದನಂತರ, ಆ ಮನಸ್ಸು ದೈವಿಕಸುಖದ ಕಡೆಗೆ ಪರಿವಂತೆ ಮಾಡುವುದೇ ಮುಂದಿನ ಮಾರ್ಗ. ಇದಕ್ಕೆ ಮುಮುಕ್ಷು ಭಾವವೆನ್ನುವರು; ಅವರೊಡನೆ ಸಂಪರ್ಕಗೊಂಡ ಶಿಷ್ಯಕೋಟಿಗೆ, ಅವರ ದಿವ್ಯಸ್ಪರ್ಶವು ಯಾವುದಕ್ಕಾಗಿ ದೊರೆಯಿತೋ, ಆ ದಿವ್ಯ ಸ್ಪರ್ಶದಿಂದ ಅವರು ಯಾವ ದಿವ್ಯಾನಂದ ಅನುಭವಿಸಿದರೋ ಅದೆಲ್ಲವೂ ಮುಮುಕ್ಷು ಭಾವದ ವಿವಿಧ ತರಂಗಗಳೆನ್ನಬಹುದು. ಇಂತು ಭಕ್ತನು ದೇವರನ್ನು ಪಡೆವ ಬಯಕೆಯನ್ನು ಸಾಧಿಸಿದ ನಂತರ ಆತನಿಗೆ ದೇವರನ್ನು ಉಳಿದಿರಲು ಸಾಧ್ಯವೇ ಇಲ್ಲವಾಗುವುದು. ಇದಕ್ಕೆ ಲೌಕಿಕ ದೃಷ್ಟಿಯಲ್ಲಿ ವಿರಹವೆನ್ನುತ್ತೇವೆ. ವಿರಹ ಸ್ಥಿತಿಯಲ್ಲಿ ಪ್ರಣಯಿ ಪ್ರೇಯಸಿಯರಿಗೆ ಅಗಲುವಿಕೆಯ ನೋವು ಹೇಗೆ ಸಹಿಸಲಸದಳವೋ ಹೇಗೆ ಆಗ ಅನ್ನ ಬೇಡ, ನೀರು ಬೇಡ, ನಿದ್ದೆ ಬೇಡ ಎಂದಾಗುವುದೋ ಹಾಗೆ ಭಕ್ತನಿಗೂ ದೇವರ ವಿರಹ ಅಸಾಧ್ಯವಾಗಿ ಹಸಿವುತೃಷೆ ನಿದ್ರೆಗಳಿಲ್ಲದೆ ಇರುವ ಸ್ಥಿತಿಗೆ ವ್ಯಾಕುಲ ಭಾವವೆಂದು ಹೆಸರು. ಕೃಷ್ಣ ರಾಧೆಯರ ಪ್ರೇಮ, ಅಕ್ತ ಮಹಾದೇವಿಗೆ ಚೆನ್ನಮಲ್ಲಿಕಾರ್ಜುನನಲ್ಲಿ ಉಂಟಾದ ಪ್ರೇಮ ಇವೆಲ್ಲವೂ ಈ ಅವಸ್ಥೆಯವು. ಈ ವ್ಯಾಕುಲ ಭಾವದಿಂದಾಗಿ ಭಕ್ತನ ಮನಸ್ಸು ಪುಟವಿಟ್ಟ ಚಿನ್ನದಂತೆ ಸಂಸ್ಕಾರಹೊಂದಿ, ಆತನಿಗೆ ಸತ್ಯದ ಪ್ರಕಾಶ ಕಾಣುತ್ತದೆ. ಮನಸ್ಸಿನ ತಳಮಳವು ಕಡಿಮೆಯಾಗುತ್ತದೆ ಆಗ ಭಕ್ತನು ಗಂಭೀರನೂ ಶಾಂತನೂ ಆಗುತ್ತಾನೆ. ಇದನ್ನೇ ಶಾಂತ ಭಾವವೆನ್ನುವರು. ಇಂತಹ ವ್ಯಾಕುಲ ಭಾವ ಶಾಂತ ಭಾವಗಳು ಶ್ರೀರಾಮಕೃಷ್ಣರಲ್ಲಿ ಉಂಟಾಗಿದ್ದವು ಅಂತೆಯೇ ದೇವರನ್ನು ಅವರು ತಮ್ಮ ಸಮಾಧಿಭಾವದಿಂದ ಕಂಡು ಎಲ್ಲಾ ಸುಖದುಃಖವನ್ನು ದೇವರೊಡನೆ ವಿಚಾರ ವಿನಿಮಯ ಮಾಡಿ ನಿರ್ಧಾರಕ್ಕೆ ಬರುತ್ತಿದ್ದರು.

ದೇವರೊಡನೆ ಮಾನವೀಯ ಸಂಬಂಧಗಳನ್ನು ಕಲ್ಪಿಸಿಕೊಂಡ ಮನುಷ್ಯನು ದಾಸ್ಯಭಾವನನ್ನು ಹೊಂದಲು ಕೈಕೊಳ್ಳುವನು. ಕ್ರಮೇಣ ಸಖ್ಯ ಭಾವ ಬರುವುದು. ಅನಂತಾತ್ಮನಾದ ದೇವರ ಕಡೆಗೆ ತನ್ನ ಆತ್ಮ ಚಲಿಸುವ ಸ್ಥಿತಿಯದು, ದೊಡ್ಡ ಬೆಳಕಿನ ಒಂದಂಶ ಈ ಸಣ್ಣ ಜ್ಯೋತಿಯೆಂಬರಿವು. ಅರ್ಜುನನಿಗೆ ಈ ಸಖ್ಯ ಭಾವ ಬಂದಿತ್ತು. ತಾನು ತಂದೆಯಾಗಿ ತಾಯಿಯಾಗಿ ಪರಮಾತ್ಮನನ್ನು ಲಾಲಿಸಬೇಕೆಂಬುದು ವಾತ್ಸಲ್ಯಭಾವ. ಪುರಾಣದಲ್ಲಿ ಯಶೋಧೆಯ ಭಕ್ತಿ ಇಂತಹದು. ತಾಯಿ ಮಗುವಿನಲ್ಲಿ ಹೇಗೆ ತನ್ನ ತನವನ್ನು ಕರಗಿಸುತ್ತಾಳೋ ಅಂತೆ ಭಕ್ತನು ಪರಮಾತ್ಮನಲ್ಲಿ ತನ್ನ ತನವನ್ನು ಕರಗಿಸುವನು. ಮುಂದಿನದು ಮಧುರಭಾವ, ಇದಕ್ಕೆ ಸತಿಪತಿ ಭಾವವೆನ್ನುತ್ತಾರೆ. ಇದು ಅತ್ಯಂತ ಮಧುರವೂ ಮುಖ್ಯವೂ ಆದುದಾಗಿದೆ. ಪ್ರಕೃತಿ ಪುರುಷರಂತೆ, ಶಿವ ಪಾರ್ವತಿಯರಂತೆ, ದ್ವಿದಳ ಧಾನ್ಯದಂತೆ ಹೆಣ್ಣುಗಂಡು ಜೀವನದ ಎರಡು ಮುಖ. ಒಂದರಿಂದ ಒಂದು ಪೂರ್ಣವಾಗುತ್ತದೆ ದೇವರೊಡನೆ ತನ್ನ ಸಂಬಂಧ ಹೀಗೆ ಪೂರ್ಣವಾಗುವುದೇ ಮಧುರ ಭಾವವಾಗಿದೆ. ಕೊನೆಯದು ಸಮರ್ಪಣ ಭಾವ. ಇಲ್ಲಿ ನಾನು, ತನ್ನದು ಎಂಬ ಭಾವ ಹೋಗಿ ದೇವರಲ್ಲಿ ತನ್ನ ಸಮರ್ಪಣೆಯಾಗಿದೆ. ವಿಶ್ವಾತ್ಮನಲ್ಲಿ ಆತ್ಮಾರ್ಪಣೆ ಮಾಡುವುದು. ಈ ಸ್ಥಿತಿಯೇ ಸೋಹಂ ಸ್ಥಿತಿ. ಇಂತಹ ಪ್ರತಿಯೊಂದು ಭಕ್ತಿಮಾರ್ಗದ ವಿವಿಧ ಸೋಪಾನಗಳನ್ನು ಶ್ರೀ ರಾಮಕೃಷ್ಣರು ಏರಿ ಪರಿಶುದ್ಧಾತ್ಮರಿಗೆ ದೊರೆಯಬಲ್ಲ ಮೋಕ್ಷವನ್ನು ಪಡೆದರೆಂದು ನಾವು ಅವರ ಪವಿತ್ರ ಜೀವನ ಚರಿತ್ರೆಯಿಂದ ತಿಳಿಯಬಹುದಾಗಿದೆ. ಭಕ್ತರಾದವರು ಸಾಮಾನ್ಯ ಜನರ ದೃಷ್ಟಿಗೆ ಉನ್ಮತ್ತರಂತೆ ಕಾಣುವುದು ಈ ಭಾವಾವೇಶವು ಅವರಲ್ಲಿ ಉಂಟಾದಾಗ ಎಂಬುದನ್ನು ನಾವು ಗಮನಿಸಬೇಕು.

ಸಾಮಾನ್ಯ ಮನುಷ್ಯನು ಪ್ರಾಪಂಚಿಕ ಸುಖ ಕಾಮಿಯು; ಅಂತೆಯೇ ವಸ್ತುವಾದಿಯಾದ್ದಾನೆ. ಆದುದರಿಂದಲೇ ಆತನು ಪ್ರಕೃತಿಯ ಮೇಲೆ, ಜೀವಜಂತುಗಳ ಮೇಲೆ ತನ್ನ ಅಧಿಕಾರವನ್ನು ಸ್ಥಾಪಿಸ ಹೋಗಿ ದ್ವೇಷ, ಮತ್ಸರ, ಹಿಂಸೆಗಳಿಗೆ ಗುರಿಯಾಗುತ್ತಾನೆ. ಆತನ ಹೃದಯ ಕಲುಷಿತವಾಗಿ ಕತ್ತಲೆಯಿಂದ ಬೆಳಕಿನ ಕಡೆಗೆ ಆತನ ದೃಷ್ಟಿ ಹೋಗಲಾರದು. ಇಂತಹ ಅಂಧ ಜೀವನದ ಮರುಗಾಡಿನಲ್ಲಿ ಭಕ್ತಿಯ ಪ್ರವಾಹ ಹರಿದು ನಮ್ಮ ಜೀವನವು ಪುಣ್ಯ ಮಂದಾಕಿನಿಯಿಂದ ಪಾವನವಾಗಬೇಕು. ಅದಕ್ಕೆ ಶ್ರೀ ರಾಮಕೃಷ್ಣ ಪರಮಹಂಸರಂತಹ ಋಷಿ ಪರಂಪರೆಯ ಸಾಧುವರ್ಯರ ಜೀವನಾದರ್ಶಗಳು ನಮಗೆ ಮಾರ್ಗದರ್ಶಕವಾಗಲಿ!

[ತಾ 1-1-1954ರಂದು ಶ್ರೀರಾಮಕೃಷ್ಣ ಪರಮಹಂಸರ ಜನ್ಮೋತ್ಸವದಂದು ಮಂಗಳೂರು ಶ್ರೀರಾಮಕೃಷ್ಣಾಶ್ರಮದಲ್ಲಿ ಮಾಡಿದ ಭಾಷಣ.]

(೨ನೇ ಪುಟ ನೋಡಿರಿ)

ಸಂದರ್ಶನವನ್ನೂ ಮಾಡಿದರು ಆ ಮೇಲೆ, ಮಂತ್ರಿ ಮಂಡಳವು ರೂರಕೇಲಾದಲ್ಲಿ ಉಕ್ಕಿನ ಕಾರ್ಖಾನೆಯನ್ನು ಸ್ಥಾಪಿಸಬೇಕೆನ್ನುವ ಸೂಚನೆಗೆ ಮನ್ನಣೆ ಕೊಟ್ಟಿತು.

ತಜ್ಞರ ಅಭಿಪ್ರಾಯ

ಜರ್ಮನ ತಜ್ಞರು ಕೇಂದ್ರ ಸರಕಾರಕ್ಕೆ ಒಪ್ಪಿಸಿದ ತಾಂತ್ರಿಕ ವರದಿಯಲ್ಲಿ ರೂರಕೇಲಾದಲ್ಲಿ ಕಾರ್ಖಾನೆ ಸ್ಥಾಪಿಸಲು ಹೆಚ್ಚಿನ ಅನುಕೂಲತೆ ಇದೆಯೆಂದು ವರ್ಣಿಸಿದ್ದರು. ಇವರು ಕಚ್ಚಾ ಮಾಲುಗಳ ಪೂರೈಕೆ ಮುಂತಾದ ಪ್ರತಿಯೊಂದೂ ಸಂಗತಿಯಲ್ಲಿ ವಿವರವಾದ ಮಾಹಿತಿಗಳನ್ನು ಸಂಗ್ರಹಿಸಿ, ತಮ್ಮ ಸಿಫಾರಸು ಮಾಡಿದರು. ರೂರಕೇಲಾವು ಕಬ್ಬಿಣದ ಅದುರು ಮತ್ತು ಸುಣ್ಣದ ಕಲ್ಲುಗಳ ನಿಕ್ಷೇಪಕ್ಕೆ ಮತ್ತು ಹಿರಾಕುಡ ಅಣೆಕಟ್ಟು ಪೂರ್ತಿಯಾದಾಗ ಕೆಲಸ ತೊಡಗುವ ವಿದ್ಯುದುತ್ಪಾದನಾ ಕೇಂದ್ರಕ್ಕೆ ಸಮೀಪವಾಗಿರುತ್ತದೆ. ಕಲ್ಲಿದ್ದಲನ್ನು ಮಾತ್ರ ಬಂಗಾಳದಿಂದ ತರಬೇಕಾಗಿ ಬರುತ್ತದೆ ಆದರೆ ಇದು ಸಾರಿಗೆ ಸಂಪರ್ಕದ ವ್ಯವಸಾಯದ ಮೇಲೆ ಹೆಚ್ಚಿನ ಹೊರೆಯನ್ನು ಹೇರುವುದಿಲ್ಲ ಏಕೆಂದರೆ ಒಡಿಸಾದಿಂದ ಸುಣ್ಣದ ಕಲ್ಲನ್ನೂ ಕಬ್ಬಿಣದ ಅದುರನ್ನೂ ಬಂಗಾಳದ ಕಬ್ಬಿಣ ಹಾಗು ಉಕ್ಕಿನ ಕಾರ್ಖಾನೆಗಳಿಗೆ ಪೂರೈಸುವ ವಾಗೀನುಗಳು ಮರಳಿ ಬರುವಾಗ ಖಾಲಿ ಇರುತ್ತವೆ ಇವುಗಳಲ್ಲಿ ಕಲ್ಲಿದ್ದಲನ್ನು ತುಂಬಿಸಿ ತರಲು ಸಾಧ್ಯವುಂಟು. ಅಲ್ಲದೆ ಕಲ್ಕತ್ತೆಯ ಔದ್ಯಮಿಕ ಕ್ಷೇತ್ರದ ಆವಶ್ಯಕತೆಗಳನ್ನು ಪೂರೈಸುವುದಕ್ಕೋಸ್ಕರ ಈಗಾಗಲೇ ಬಂಗಾಳದಲ್ಲಿ ಎರಡು ಮತ್ತು ಬಿಹಾರದಲ್ಲಿ ಒಂದು ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ಕೆಲಸಮಾಡುತ್ತವೆ. ಆದುದರಿಂದ ಆ ರಾಜ್ಯಗಳಲ್ಲಿ ಹೊಸ ಕಾರ್ಖಾನೆಯನ್ನು ಸ್ಥಾಪಿಸುವುದು ಅಗತ್ಯವಿಲ್ಲ ಬಿಲಹಾಯಿ ಕೇಂದ್ರಕ್ಕೆ ಅನೇಕ ಬಗೆಯ ಅಡಚಣೆಗಳು ಇರುವುದರಿಂದ, ಅವುಗಳನ್ನು ದೂರಮಾಡುವ ಹೊಸ ಕೆಲಸವೊಂದು ಬಂದು ಸೇರುತ್ತದೆ. ಆದುದರಿಂದ ಮಿತವ್ಯಯ ಹಾಗೂ ಶೀಘ್ರ ರಚನೆ ಮತ್ತು ಉತ್ಪಾದನಾ ದೃಷ್ಟಿಯನ್ನೇ ಇಟ್ಟುಕೊಂಡ ಜರ್ಮನ ತಜ್ಞರು ಮಧ್ಯಪ್ರದೇಶದ ಬೇಡಿಕೆಗೆ ಮಹತ್ವ ಕೊಡಲಿಲ್ಲ. ಆದಾಗ್ಯೂ ಮಧ್ಯ ಪ್ರದೇಶ ರಾಜ್ಯದ ಖನಿಜ ಸಂಪತ್ತಿನ, ವಿಶೇಷತಃ ಕಬ್ಬಿಣದ ಅದುರು ಹಾಗು ಕಲ್ಲಿದ್ದಲಿಯ ನಿಕ್ಷೇಪಗಳ ಪರಿಶೀಲನೆ, ಪರೀಕ್ಷೆ ಮತ್ತು ಪೃಥಕ್ಕರಣವನ್ನು ಆರ್ಥಿಕ ಹಾಗು ಔದ್ಯಮಿಕ ಅಭಿವೃದ್ಧಿಯ ದೃಷ್ಟಿಯಿಂದ ಕೈಕೊಳ್ಳಬೇಕೆಂದು ಭಾರತ ಸರಕಾರ ತೀರ್ಮಾನಿಸಿದೆ. ದೇವರು ನಡೆಸಿದರೆ, ಇನ್ನು ಕೆಲವೇ ವರ್ಷಗಳಲ್ಲಿ ಹೊಸತೊಂದು ಕಾರ್ಖಾನೆ ಸ್ಥಾಪಿಸಲ್ಪಟ್ಟು, ಭಾರತದ ಪ್ರಗತಿಯ ಮತ್ತೊಂದು ಮೈಲುಗಲ್ಲಾಗಿ ಮೆರೆಯೀತು. ಆದರೆ ಈ ನಡುವೆ ರೂರಕೇಲಾದ ಕಾರ್ಖಾನೆಯಲ್ಲಿ ಉಕ್ಕು ಉತ್ಪಾದಿಸುವ ಕಾರ್ಯಾರಂಭವಾಗುವುದಂತೂ ನಿಶ್ಚಯ. ಈಗಾಗಲೇ ಉಕ್ಕಿನ ಕಾರ್ಖಾನೆ ಹಾಗೂ ಅದಕ್ಕೆ ಸಂಬಂಧಿಸಿದಂತಿರುವ ಇತರ ಕಾರ್ಖಾನೆಗಳನ್ನು ಕಟ್ಟಿಸುವುದಕ್ಕೋಸ್ಕರ ರೂರಕೇಲಾದಲ್ಲಿ ಹೆಚ್ಚಿನ ಪರೀಕ್ಷೆಯನ್ನು ನಡೆಸಲೂ, ಸ್ಥಳವನ್ನು ಸಜ್ಜುಗೊಳಿಸಲೂ ಸರಕಾರ ಸಿದ್ಧತೆಗಳನ್ನು ಮಾಡಿರುತ್ತದೆ.

'ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರಿ,

ಇವರ

ನವಜೀವಾತು

ಎಂಬ

ಸೂತಿಕಾರಸಾಯನ

ಬಾಣಂತಿಯರ ಸಲುವಾಗಿಯೇ ದೇಹ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ದೇಶಿಸಿ ತಯಾರಿಸಿ ಲ್ಪಟ್ಟ ವಿಶೇಷವಾದ ಮಹೌಷಧ ಪರಸಾಯನ.

ಹೆಚ್ಚಿನ ಮಾಹಿತಿಗೆ - ಡಾ। ಯಂ. ಸಿ. ಶಾಸ್ತ್ರೀ, ಯಲ್. ಐ. ಎಂ.
ಕೊಡಿಯಾಲಬೈಲು ಪೋಸ್ಟು. (ಮಂಗಳೂರು)
ಸ್ಟಾಕಿಸ್ಟರು.— ಡಾ। ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ

ಸ್ವಿಸ್ ತಯಾರಿ ರಿಸ್ಟ್ ವಾಚು

ಬೆಲೆ ರೂ. 5/- ಮಾತ್ರ.



ರೂಪಾಯಿ 5/-ಕ್ಕೆ ಸ್ವಿಸ್ ತಯಾರಿ ರಿಸ್ಟ್ ವಾಚು ಮತ್ತು ಸ್ಟಿಂಡಾರ್ಡ ಫೌಂಟನ್ ಪೆನ್ ದೊರೆಯುವುದು. 15 ವರುಷಗಳ ಗ್ಯಾರಂಟಿ. ರೂಪಾಯಿ 1-2-0 ಟಪ್ಪಾಲು ವೆಚ್ಚ ಪ್ರತ್ಯೇಕ.
ಇಂದೇ ಬರೆಯಿರಿ:

National Swiss Watch Suppliers,
Halka No. 25 (BG) Meerut (U. P.)

ಋತುಸ್ರಾವ ನಿಂತಿತು

"ಕುಮಾರಿ" ಬಿಲ್ಲೆಗಳನ್ನು ಉಪಯೋಗಿಸಿದರೆ ಪದೆಪದೆ ಋತುಸ್ರಾವವಾಗುವುದು, ಪತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣವೊಂದಬಹುದು. ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ— ಬೆಲೆ: ರೂ. 3/-; ಸ್ಪೆಶ್ಯಲ್ ರೂ. 5-, ಅಧಿಕಾಧಿಕ ಸ್ಪೆಶ್ಯಲ್ ರೂ. 8-[ವಿ. ಪಿ. ಪೋಸ್ಟೇಜು ಪ್ರತ್ಯೇಕ]

Mrs. P. DEVEE, F.D.S. (N.J.)
CALCUTTA. 43
ಸ್ಟಾಕಿಸ್ಟರು: ರಮಾಕಂಪೆನಿ, ಮಂಗಳೂರು.

(೧ನೇ ಪುಟದಿಂದ)

ಶಿಸ್ತು, ಶ್ರದ್ಧೆ ಮತ್ತು ಸಂಯಮಗಳ ಶಿಕ್ಷಣಕೊಡುವ ಧರ್ಮಶಾಸ್ತ್ರ, ತತ್ವಜ್ಞಾನ ಶಾಸ್ತ್ರ ಮತ್ತು ನೀತಿ ಶಾಸ್ತ್ರಗಳೂ ನಮ್ಮ ಸಾಮಾಜಿಕ ಶಿಕ್ಷಣದ ಮುಖ್ಯಾಂಗವಾಗಿ ಪರಿಗಣಿಸಲ್ಪಡಬೇಕಾಗುವುದು. ಪ್ರಗತಿ ಹಾಗೂ ನಾಗರಿಕತೆಯ ಮುಖ್ಯಾ ಶ್ರೇಣಿಯನ್ನು ಮುಟ್ಟಬೇಕೆನ್ನುವ ನಮ್ಮ ಅಭಿಲಾಷೆಗೆ ಈ ತತ್ವಗಳೇ ದೃಢವಾದ, ಎಂದೆಂದಿಗೂ ಜಗ್ಗದ ಅಡಿಗಲ್ಲುಗಳೆಂಬ ಸತ್ಯವನ್ನು ಮರೆಯುವುದು ಸಲ್ಲದು.

ಸುಭದ್ರವಾದ ಈ ತತ್ವಗಳನ್ನು ಅಡಿಗಲ್ಲಾಗಿ ಸ್ವೀಕರಿಸುವುದಕ್ಕೆ ನಾವು ಸಿದ್ಧರಿಲ್ಲದಿದ್ದರೆ—ನಮ್ಮ ಯಾವ ಕಾಯಿದೆ ಕಾನೂನುಗಳೂ ಬಾಳುವಂತಿಲ್ಲ. ಆರ್ಥಿಕ ವಿಷಮತೆಯನ್ನು ತೆಗೆದು ಹಾಕಬೇಕೆನ್ನುವ ನಮ್ಮ ಧೋರಣೆಗೆ ಎಲ್ಲರನ್ನೂ ನಿನ್ನಂತೆಯೇ ಕಂಡು ಪ್ರೀತಿಸು ಎಂಬ ತತ್ವವೇ ಮೂಲ. ಈ ತತ್ವಕ್ಕೆ ಮನ್ನಣೆ ಇಲ್ಲದಿದ್ದರೆ, ಶಾಸನಾಂಗದ ಮನ್ನಣೆ ದೊರೆತುದರಿಂದಲೇ ಆ ಕಾಯಿದೆ ಜ್ಯಾರಿಗೆ ಬರಲಾರದು—ಬಂದರೂ ಯಶಸ್ಸು ದೊರೆಯದು. ಹೆಚ್ಚು ಉತ್ಪಾದನೆಯನ್ನು ಮಾಡಿದರೆ ಸಾಲದು, ಅದರ ವಿನಿಯೋಗ ಹೇಗಾಗಬೇಕೆಂಬ ವಿಷಯದಲ್ಲಿ ಜ್ಞಾನವೂ ನಮಗೆ ಬೇಕು. ಇಲ್ಲವಾದರೆ, ಕೆಲವೇ ಮಂದಿಯ ಕೈಗೆ ಈ ಉತ್ಪಾದನೆ ಬಿದ್ದು, ಅವರಲ್ಲಿ ಸಂಗ್ರಹಗೊಂಡು, ಉಳಿದವರು ತಿಂದುಣ್ಣಲು ಇಲ್ಲದೆ ಬಳಲ ಬೇಕಾದೀತು. ಈ ಬಗೆಯ ನೂರಾರು ಅಡಚಣೆಗಳು ಮತ್ತು ಅನಿಷ್ಟ ಪ್ರವೃತ್ತಿಗಳು ಗಳಿಗೆ ಗಳಿಗೆಗೂ ನಮ್ಮ ಬೆನ್ನುಹತ್ತಿಬರುತ್ತಿರುವುದರಿಂದ, ಅವುಗಳನ್ನು ಯಶಸ್ವಿಯಾಗಿ ಪ್ರತಿಭಟಿಸಿ, ಕಲ್ಯಾಣ ಸಾಧಿಸುವುದಕ್ಕೆ ಉಚಿತವೆನಿಸಿದ ಸಾಮಾಜಿಕ ಶಿಕ್ಷಣದ ತರಬೇತಿ ನಮಗೆ ದೊರೆತಷ್ಟೂ ಒಳ್ಳೇದು.

ತೀರ ಶಿಥಿಲವಾಗಿ ಹೋಗಿರುವ ಸಾಮಾಜಿಕ ನರನಾಡಿಯಲ್ಲಿ ಹೊಸ ರಕ್ತವನ್ನು ಪ್ರವಹಿಸಗೊಟ್ಟು ನಾವು ಬಳಲುತ್ತಿರುವ ವಿಚಿತ್ರ ವ್ಯಾಧಿಯಿಂದ ಮುಕ್ತಿಹೊಂದುವುದಕ್ಕೆ ದೂರದರ್ಶಿಗಳೂ ಧುರೀಣರೂ ಪ್ರಯತ್ನಶೀಲರಾಗಿ, ಅಧೋಗತಿಗೆ ಇಳಿಯುತ್ತಿರುವ ಜನಾಂಗದ ರಕ್ಷಣೆಯನ್ನು ಮಾಡಬೇಕಾಗಿರುವುದು. ಸಾಮಾನ್ಯ ನಾಗರಿಕರಾದರೂ ಧುರೀಣರ ಹಿತವಾಕ್ಯಗಳನ್ನು ಕಿವಿಗೊಟ್ಟು ಕೇಳಿ, ಅದರಲ್ಲಿ ಅಡಕವಾಗಿರುವ ವಿವೇಕವನ್ನೂ ಸತ್ವವನ್ನೂ ಚೆನ್ನಾಗಿ ಗುರುತಿಸುವುದು ಶ್ರೇಯಸ್ಕರ. ಈಗಿನ ಹದಗೆಟ್ಟ, ಆಡಗೆಟ್ಟ, ರೂಪುಗೆಟ್ಟ, ಹೊಣೆಗೆಟ್ಟ, ನೀತಿಗೆಟ್ಟ ಸಾಮಾಜಿಕ ಜೀವನದ ಪುನರ್ಘಟನೆಗೆ ಭಾರತೀಯ ಸಂಸ್ಕೃತಿ ಮತ್ತು ಸಂಪ್ರದಾಯದ ಅಚ್ಚಿನಲ್ಲಿ ಅದನ್ನು ಎರಕಹೊಯ್ಯುವ ಕೆಲಸ ನಡೆಯಲೇ ಬೇಕಾಗಿರುವುದು—ಇದರಲ್ಲಿ ಕ್ಷಣ ಮಾತ್ರದ ವಿಳಂಬವೂ ಸಲ್ಲದು. ನಮ್ಮ ಸಾಮಾಜಿಕ ಜೀವನದ ಅಧ್ವರ್ಯುಗಳು ಇದನ್ನು ತಿಳಿದು, ಉಚಿತ ಕ್ರಮಗಳನ್ನು ಕೈಗೊಂಡು ಸಂರಕ್ಷಣಾ ಭಾರವನ್ನು ಹೊತ್ತು ಸಾಗಬೇಕು. ಈ ವಿಷಯದಲ್ಲಿ ಪಾಶ್ಚಾತ್ಯ ರೀತಿ—ನೀತಿಗಳ ಆದರ್ಶ ನಮ್ಮ ಕಣ್ಣ ಬೆಳಕನ್ನು ಮಂಕುಗೊಳಿಸಲು ಬಿಡಬಾರದು. ಗಾಂಧೀಜಿಯವರು ಪ್ರತಿಪಾದಿಸಿ, ಅನುಸರಿಸಲು ಸಾಧ್ಯವೆಂದು ತೋರಿಸಿ ಕೊಟ್ಟಿರುವ ತತ್ವ ಮತ್ತು ವಿಚಾರ ಪ್ರಣಾಳಿಯನ್ನು ಮೈಗೂಡಿಸಿಕೊಳ್ಳುವುದರಿಂದ ನಾವು ಹೆಚ್ಚಿನ ಪ್ರಯೋಜನವನ್ನೂ ಲಾಭವನ್ನೂ ಪಡೆಯಬಲ್ಲೆವು. ಈ ಆತ್ಮವಿಶ್ವಾಸದಿಂದ ಹೆಜ್ಜೆ ಮುಂದಿಟ್ಟು ಸಾಗುತ್ತಾ ಕೃತಕೃತ್ಯರಾಗೋಣ!

(೪ನೇ ಪುಟದಿಂದ)

ಕಾಲನಿಯಾಮಕ ಪಟ್ಟಿಯನ್ನು ಸಿದ್ಧಗೊಳಿಸಿ, ಅದನ್ನು ಅನುಸರಿಸುತ್ತಿದ್ದರು. ವಾರದಲ್ಲಿ ನಾಲ್ಕೈದು ದಿನಗಳ ವರೆಗೆ ಈ ಸಂಚಾರಿ ಶಾಖೆಗಳು ಓಡಿಯಾಡುತ್ತಿದ್ದು, ಪ್ರತಿ ದಿನ ೩೫—೫೦ ಮೈಲು ದೂರದ ಹಳ್ಳಿಗಳಲ್ಲಿ ವ್ಯವಹಾರ ನಡೆಸುತ್ತಿದ್ದವು. ಪ್ರತಿ ದಿನ ರಾತ್ರಿ ತಮ್ಮ ಮೊಕ್ಕಾಮಿಗೆ ಹಿಂತಿರುಗುತ್ತಿದ್ದವು. ಸಾಮಾನ್ಯವಾಗಿ ಹಳ್ಳಿಯ ರಸ್ತೆಗಳು ಚೆನ್ನಾಗಿರುವುದಿಲ್ಲ— ಅವುಗಳ ಮೇಲೆ ಓಡಾಡಬೇಕಿರುವ ಈ ವಾಹನಗಳು ನಡುದಾರಿಯಲ್ಲಿ ಕೆಟ್ಟು ನಿಂತುಬಿಡಬಾರದೆಂದು ತಕ್ಕ ಮುಂಜಾಗ್ರತೆಯನ್ನು ಮಾಡಬೇಕಾಗುವುದು. ಗಟ್ಟಿಮುಟ್ಟಾದ ಟಾಯರು ಮುಂತಾದವುಗಳನ್ನು ಉಪಯೋಗಿಸಿ, ಅಪಾಯ ಸಂಭವಿಸದಂತೆ ನೋಡುವರು. ಈ ಪ್ರಥಮ ಪ್ರಯೋಗ ಯಶಸ್ವಿಯಾದುದನ್ನು ಕಂಡ ಇತರ ದೊಡ್ಡ ಬೇಂಕುಗಳವರು ತಾವು ಸಹ ಇಂತಹ ಅನುಕೂಲತೆಯನ್ನು ಗ್ರಾಹಕರಿಗೆ ನೀಡಲು ಮುಂದಾದರು. ಇಂಗ್ಲೆಂಡಿನಲ್ಲಿ ರಸ್ತೆಗಳು ಕೆಟ್ಟು ಹೋಗಿವೆ ಎಂಬ ಆಕ್ಷೇಪ ಬಹಳ ಕಡಿಮೆ—ಆದುದರಿಂದ ಅಲ್ಲಿ ವಿಶಾಲವಾದ ಕೋಣೆಗಳುಳ್ಳ ವಾಹನಗಳಲ್ಲಿ ಶಾಖಾ ಕಾರ್ಯಾಲಯವನ್ನು ಸಜ್ಜುಗೊಳಿಸಿ, ಗಿರಾಕಿಗಳಿಗೆ ಯಾವತರದ ತೊಂದರೆಯೂ ಆಗದಂತೆ ನೋಡತೊಡಗಿದರು. ಟೆಲಿಫೋನು ಸಂಪರ್ಕದ ವ್ಯವಸ್ಥೆಯೂ ಈ ವಾಹನಗಳಲ್ಲಿ ಇರುತ್ತದೆ. ಲ್ಲಾಯ್ಡ್ಸ ಬೇಂಕಿನವರು ಇಂಗ್ಲಾಂಡಿನಲ್ಲಿ ೧೯೪೭ರಲ್ಲಿ ಪ್ರಥಮವಾಗಿ ಪ್ರಾರಂಭಿಸಿದ ಈ ಪ್ರಯೋಗ, ಅದ್ಭುತ ಯಶಸ್ಸನ್ನು ಸಂಪಾದಿಸಿದ್ದಲ್ಲದೆ, ಇತರರಿಗೂ ಮೇಲ್ಪಂಕ್ತಿ ಹಾಕಿ ಕೊಟ್ಟಿದೆ. ಭಾರತದ ಹಳ್ಳಿಯಲ್ಲಿನ ಆರ್ಥಿಕ ಪರಿಸ್ಥಿತಿಯನ್ನು ಊರ್ಜಿತಗೊಳಿಸುವುದಕ್ಕೆ ನಮ್ಮಲ್ಲಿನ ಬೇಂಕುಗಳು ಗಾಲಿಯ ಮೇಲೆ ಓಡುವ ಶಾಖೆಗಳನ್ನು ತೆರೆಯಲು ನೋಡಿದರೆ, ಈ ಏರ್ಪಾಡು ಬಹಳ ಶೀಘ್ರದಲ್ಲಿಯೇ ಜನಪ್ರಿಯತೆಯನ್ನು ಗಳಿಸುವ ನಿರೀಕ್ಷೆ ಇದೆ.

SEASON DEPOSITS.

Are now accepted for periods from 3 to 6 months 3½% interest per annum for amounts of Rs. 500/- and multiples thereof. No deposit is allowed to run beyond 15—10 1954.

Attractive rates of interest are offered for Fixed Deposits for periods ranging from 1 to 24 months.

Banking transactions of all kinds are undertaken.

Branches throughout South Kanara, and one each in Mercara and Fort, Bombay.

THE VIJAYA BANK LIMITED,
Head Office: MANGALORE.

ಖಾತ್ರಿ ಚಿನ್ನದ ನೆಕ್‌ಲೇಸ್, ತರಹವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,
ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.

ಫೋನು ನಂಬ್ರ 66

ಲಕ್ಷಾಂತರ ಜನರು ಗುಣಹೊಂದಿದ್ದಾರೆ:

ಸರ್ ಜೀವನ್ ಶಿಲಾಜಿತ್‌ಲೇಹ

ಶಿಲಾಜಿತ್ ಹಿಮಾಲಯದ ಔಷಧಿಗಳ ರಾಜ; ಮೂಲಿಕೆಗಳೊದನೆ ಸೇರಿಸಿದ ಲೇಹ್ಯ, ದೇಹಶಕ್ತಿ, ಹೊಟ್ಟೆನೋವು, ಅನ್ನ ಸೇರದಿರುವಿಕೆ, ಕೆಮ್ಮು, ದಮ್ಮು, ಬಹುಮೂತ್ರ ಮತ್ತು ವಾಯುವಿನಿಂದಾಗುವ ಎಲ್ಲಾ ರೋಗನಿವಾರಕ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, ಹೆಂಗಸರ ಮತ್ತು ಮಕ್ಕಳ ಸರ್ವರೋಗ ನಿವಾರಕ ಅನುಪಾಲ್ಯ ರತ್ನ ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು.

೪೫ ದಿನದ ಲೇಹ್ಯ ರೂ ೫ ೪ ೦, ೨೨ ದಿನದ ಲೇಹ್ಯ ರೂ೩-೪ ೦ (ಪೋಸ್ಟೇಜು ಮಾಫಿ)

ನೀಲಗಿರಿ ಡಿಪ್ಪೊ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ.

ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋನಲ್ಲಿ ಕೇಳಿರಿ

ಭರ್ತ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ-೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟು ಖರ್ಚು ರೂ. ೦-೧೪-೦

—:ವಿಳಾಸ:—

ಹಾಲಪ್ಪಾ ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ
ರಥಬೀದಿ ಉಡುಪಿ.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 25 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

THE MOOLKY BANK LTD.
Moolky, S. K.

ಧರ್ಮಾರ್ಥ—ಮುಕ್ಕಟೆ

ಒಂದು ಸಾವಿರ ಕಾಶ್ಮೀರಿ ಶಾಲುಗಳನ್ನು ಧರ್ಮಾರ್ಥ ಹಂಚುತ್ತಲಿದ್ದೇನೆ. ಬೇಗನೆ ಬರೆಯಿರಿ. ವಿಳಂಬವಾದರೆ ನಿರಾಶರಾಗುವಿರಿ.

Diamond Commercial
Chambers (N.U.)
Bhandari Street, BOMBAY—3



ಎಲ್ಲಾ ಕಡೆಗಳಲ್ಲಿಯೂ ದೊರಕಲ್ಪಡುತ್ತದೆ.

OUR BOMBAY STOCKISTS:—
1. V. N. SHENOY. Bombay. 12
2. N. R. KAMATH.
Dahanu Road, Thana Dist (w. rly.)

Edited, Printed & Published By K. H. Shetty at the Navayuga Press, Udipi, S. India

Regd. No. M. 3618

Licence No 31
Licensed to Post without Prepayment.

ನವಯುಗ

Vol.33 No 26

4-3-1954

ವರ್ಷ ೩೩ ವಾರ ೨೬

ಅಧಿಕಾಧಿಕ ಉಳಿತಾಯ

ಮೊದಲನೇ ಪಂಚವಾರ್ಷಿಕ ಯೋಜನೆಯು ಸುಮಾರು ಮೂರು ವರ್ಷಗಳ ಕಾಲಾವಧಿಯನ್ನು ಇಷ್ಟರಲ್ಲಿಯೇ ಮುಗಿಸುತ್ತದೆ. ಯೋಜನಾ ಆಯೋಗವು ಇಟ್ಟುಕೊಂಡಿದ್ದ ಅಂತಿಮ ಗುರಿಯನ್ನು ಈ ಅವಧಿಯ ಕಾಲದಲ್ಲಿ ನಾವು ಎಷ್ಟುಮಟ್ಟಿಗೆ ಮುಟ್ಟಿದ್ದೇವೆಯೋ ಸ್ಪಷ್ಟವಾಗಿ ತಿಳಿದುಬರುವುದಿಲ್ಲ. ಉತ್ಪಾದನೆಯಲ್ಲಿ ಹೆಚ್ಚಳ ಕೈಗೂಡಿದುದರ ಸರಿಯಾದ ಅಂದಾಜನ್ನು ಇನ್ನೂ ಮಾಡಿಲ್ಲ. ಸ್ಥೂಲರೂಪದ ನಿರೀಕ್ಷಣೆಯಿಂದ ಎಷ್ಟು ತಿಳಿದುಬರುತ್ತದೋ, ಅಷ್ಟರಿಂದಲೇ ನಾವು ಪ್ರಗತಿಯ ರೂಪ ರೇಷೆಯನ್ನು ಗುರುತಿಸಬೇಕಾಗುತ್ತದೆ. ಮುಖ್ಯವಾಗಿ, ಸರಕಾರೇತರ ಕ್ಷೇತ್ರಗಳಲ್ಲಿ ಯೋಜನೆಯು ಯಾವರೀತಿ ಕಾರ್ಯಗತಗೊಳ್ಳುತ್ತಿರುವುದೆಂಬುದನ್ನು ತಿಳಿಯಲು ಸಾಧ್ಯವಾಗಿಲ್ಲ.

ಯೋಜನೆಯಲ್ಲಿ ಸರಕಾರೀ ಮಟ್ಟದಲ್ಲಿ ಹಾಗೂ ಖಾಸಗಿಕ್ಷೇತ್ರದಲ್ಲಿ ಕೈಗೂಡಿಸಬೇಕಾದ ಪ್ರಗತಿಯು ಪ್ರತ್ಯೇಕಪ್ರತ್ಯೇಕವಾಗಿ ವಿವರಿಸಲ್ಪಟ್ಟಿದ್ದರೂ, ಖಾಸಗಿ ಉದ್ದಿಮೆಗಳ ಮೇಲೆ ಸರಕಾರದ ಅಥವಾ ಯೋಜನಾ ಆಯೋಗದ ಪ್ರತ್ಯಕ್ಷ ವರ್ಚಸ್ಸು ಬೀಳುವುದಿಲ್ಲ. ಸರಕಾರದ ಕಡೆಯಿಂದ ನೆರವೇರಬೇಕೆಂದಿರುವ ಚಟುವಟಿಕೆಗಳಲ್ಲಿಯೂ ಮೂರು ವರ್ಷಗಳ ಪ್ರಗತಿ ತುಂಬ ಸಂತೋಷದ ಚಿತ್ರವನ್ನೇನು ಕೊಡುವುದಿಲ್ಲ. ಯೋಜನೆಯಲ್ಲಿ ವಿನಿಯೋಗಿಸಬೇಕೆಂದು ಹೇಳಲ್ಪಟ್ಟ ಹಣದಲ್ಲಿ ಅರೆವಾಸಿಗೂ ಮಿಕ್ಕಿದ ಪ್ರಮಾಣ ಇನ್ನು ವೆಚ್ಚವಾಗಬೇಕು ಮಾತ್ರ. ಅದಕ್ಕೋಸ್ಕರ ಹಣವನ್ನು ಒದಗಿಸುವುದು ತುಂಬಾ ಪ್ರಯಾಸದ [illegible] ಕ್ಷೇತ್ರಗಳ ನೆರವು ಹಾಗು ಕೊರತೆಯ ಧನವಿನಿಯೋಗ ಪದ್ಧತಿಯನ್ನು ಆಶ್ರಯಿಸುವುದಕ್ಕೂ ಒಂದು ಮಿತಿ ಇರುವುದರಿಂದ ಮುಂದಿನೆರಡು ವರ್ಷಗಳಲ್ಲಿ ಎಷ್ಟು ಜಾಗರೂಕತೆಯಿಂದ ಹೆಜ್ಜೆ ಮುಂದಿಟ್ಟರೂ ಸಾಕಾಗದು.

ಹೀಗಿದ್ದರೂ ಪಂಚವಾರ್ಷಿಕ ಯೋಜನೆಯ ಪ್ರಗತಿಯ ಕುರಿತು ಅಸಂತುಷ್ಟತೆ ತೋರಿಸ ಬಾರದೆಂದು ಯೋಜನಾ ಆಯೋಗದ ಉಪಾಧ್ಯಕ್ಷರಾದ ಶ್ರೀ ವಿ. ಟಿ. ಕೃಷ್ಣಮಾಚಾರಿಯವರ ಅಭಿಪ್ರಾಯ. ಇನ್ನುಳಿದ ಎರಡು ವರ್ಷಗಳಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ಯೋಜನೆಯನ್ನು ಭರದಿಂದ ಮುಂದೊತ್ತಲು, ಅನುಕೂಲವಾಗುವಂತೆ ಸಾಕಷ್ಟು ಹಣವನ್ನು ಒದಗಿಸಿಕೊಳ್ಳುವುದಕ್ಕೂ, ದೇಶದ ಆರ್ಥಿಕ ಪದ್ಧತಿಯಲ್ಲಿ ಆವಶ್ಯಕ ಬದಲಾವಣೆ ಮಾಡುವುದಕ್ಕೂ ನಮ್ಮ ಉತ್ಪಾದನೆಗಳಿಗೆ ಹೆಚ್ಚು ಹೆಚ್ಚಿನ ಪೇಟೆಯನ್ನು ದೊರಕಿಸಿಕೊಂಡು ಉತ್ಪಾದನೆಯನ್ನು ಬೆಳೆಸಿಕೊಂಡು ತನ್ಮೂಲಕ ಉದ್ಯೋಗದ ಅವಕಾಶಗಳನ್ನು ಹೆಚ್ಚಿಸುವುದಕ್ಕೂ ನಾವು ಪ್ರಯತ್ನಶೀಲರಾಗಬೇಕೆಂದು ಅವರ ಅಪೇಕ್ಷೆ.

ದೇಶದೊಳಗೆಯೇ ಯೋಜನೆಗೆ ಅಗತ್ಯವಿದ್ದ ಹಣವನ್ನು ಎತ್ತುವುದು ದೊಡ್ಡ ಸಮಸ್ಯೆ—ಮತ್ತು ಮಹತ್ವದ ಪ್ರಶ್ನೆ. ಸ್ವಾವಲಂಬನದ ಸೂತ್ರವನ್ನು ವ್ಯಾವಹಾರಿಕ ಕ್ಷೇತ್ರದಲ್ಲಿ ಹೊಂದಿಸಿಕೊಳ್ಳುವ ಮಹಾಪ್ರಯೋಗವೆಂದು ಇದನ್ನು ಕರೆಯಬಹುದು. ದೇಶದ ನಾಗರಿಕರಲ್ಲಿ ಉಳಿತಾಯ ಪ್ರವೃತ್ತಿಗೆ ಹೆಚ್ಚಿನ ಪ್ರೋತ್ಸಾಹ ಕೊಡುವುದೊಂದೇ ಸರಕಾರಕ್ಕೆ ತೋರುವ ಉಪಾಯ—ಯೋಜನಾ ಆಯೋಗದವರು ರಾಜ್ಯ ಸರಕಾರಗಳೊಂದಿಗೆ ಸದಾಕಾಲ ಈ ವಿಷಯದಲ್ಲಿ ಸಲಹೆ ಸೂಚನೆಗಳನ್ನು ಕೇಳುತಿದ್ದು, ದಿನದಿಂದ ದಿನಕ್ಕೆ ಚಿಕ್ಕ ಉಳಿತಾಯದ ಕ್ಷೇತ್ರವನ್ನು ವ್ಯಾಪಕವಾಗಿಸಲು ಮಾಡುವ ಪ್ರಯತ್ನ ಯಶಸ್ಸುಗೊಂಡುತ್ತದೆ. ಸಣ್ಣ ಉಳಿತಾಯಗಳನ್ನು ಶೋಧಿಸಿ ಸಂಗ್ರಹಿಸುವುದರಿಂದ ದೇಶಕ್ಕೆ ಎಷ್ಟರಮಟ್ಟಿನ ಸಹಾಯ ದೊರಕುವುದೆಂಬುದಕ್ಕೆ, ಮದ್ರಾಸು ರಾಜ್ಯಸರಕಾರವು ಕಳೆದವರ್ಷ ಎತ್ತಿದ ಸಾಲವೇ ಪ್ರತ್ಯಕ್ಷ ನಿದರ್ಶನ—ಸಂಗ್ರಹವಾದ ಹತ್ತುಕೋಟಿ ರೂಪಾಯಿಗಳಲ್ಲಿ ಆರುಕೋಟಿಯಷ್ಟು ಹಣವು ೫೦೦ ರೂಪಾಯಿಗಳಿಗೂ ಕಡಿಮೆ ಪ್ರಮಾಣದಲ್ಲಿ ಸಾಲಕ್ಕೆ ಹಣ ಒದಗಿಸಿದ ನಾಗರಿಕರ ದೇಣಿಗೆಯಾಗಿ ಬಂದಿದೆ. ದೇಶದ ಸಾಮಾನ್ಯ ನಾಗರಿಕರು ರಾಷ್ಟ್ರದ ಅಭಿವೃದ್ಧಿಯಲ್ಲಿ ತೋರಿಸುವ ಆಸಕ್ತಿ ಮತ್ತು ಶ್ರದ್ಧೆಗೆ ಈ ಸಂಗತಿ ಒಪ್ಪವಿಡುತ್ತದೆ.

ಸಣ್ಣ ಉಳಿತಾಯದೊಂದಿಗೆ ನೀರಾವರಿ ಅನುಕೂಲತೆಯ ಮೇಲಿನ ತೆರಿಗೆಯನ್ನು ಏರಿಸುವುದು, ಹೊಸತಾಗಿ ನೀರಾವರಿ ಅನುಕೂಲತೆಯನ್ನು ಒದಗಿಸಲಾದ ಕ್ಷೇತ್ರಗಳ ಮೇಲೆ ಕರಾಕರಣೆ ಮಾಡುವುದು ಮುಂತಾದ ಇತರ ಕ್ರಮಗಳನ್ನು ಅನುಸರಿಸಲಾಗುವುದು. ಅಂತೂ ಸಮಾಜದ ಪ್ರತಿಯೊಂದು ಅಂಗದಲ್ಲಿ ಉಳಿತಾಯವನ್ನು ಹೆಚ್ಚಿಸಬೇಕೆಂಬುದೇ ಈಗಿನ ಉದ್ದೇಶ. ಇದರಿಂದ ಸರಕಾರೀ ಹಾಗು ಖಾಸಗಿ ಉದ್ದಿಮೆಗಳಲ್ಲಿ ಅತ್ಯಧಿಕ ಬಂಡವಾಳವನ್ನು ತೊಡಗಿಸಲು ಅನುಕೂಲವಾಗುತ್ತದೆ. ನಾವು ಈ ರೀತಿ ಬಂಡವಾಳವನ್ನು ಕೂಡಿಸಲು ಸಮರ್ಥರಾದರೆ ಒಂದೋ ಕರಭಾರವನ್ನು ಹೆಚ್ಚಾಗಿ ಹೊರಬೇಕು, ಇಲ್ಲವೇ ಸುದೀರ್ಘ ಕಾಲ ಯೋಜನೆಯ ಭಾರವನ್ನು ಹೊತ್ತು ಸಾಗಬೇಕು ಎಂಬ ದ್ವಂದ್ವವೇ ಉಳಿಯುವುದಿಲ್ಲ. ದರಗಳು ಸ್ಥಿರವಾಗಿ ಉಳಿದು, ಉತ್ಪಾದನೆಯು ಹೆಚ್ಚುತ್ತಾ ಹೋದರೆ ಯೋಜನೆಗೆ ಹಣವನ್ನು ಪೂರೈಸುವುದು ಹೆಚ್ಚು ಕಷ್ಟವಾಗಲಿಕ್ಕಿಲ್ಲ. ನಮ್ಮ ವಿದೇಶ ವ್ಯಾಪಾರದಲ್ಲಿ ೧೯೫೩ನೇ ಇಸವಿಯಿಂದೀಚೆಗೆ ಇಳಿತ ಕಂಡುಬರುತ್ತದೆ. ಹೊರಗಿನಿಂದ ನಾವು ಆಯಾತ ಮಾಡಿಕೊಳ್ಳುವ ವಸ್ತುಗಳ ಮೊತ್ತ ತಗ್ಗಿರುತ್ತವೆ - ದೇಶದೊಳಗೆ ಆಹಾರ ಧಾನ್ಯಗಳ ಪರಿಸ್ಥಿತಿ ಸುಧಾರಿಸಿರುವುದೂ ಹತ್ತಿ ಸೆಣಬು ಮುಂತಾದ ಕಚ್ಚಾವಸ್ತುಗಳ ಉತ್ಪಾದನೆ ತೃಪ್ತಿಕರವಿರುವುದೂ ಇದಕ್ಕೆ ಕಾರಣ.

ಈ ಸುಧಾರಿತ ಪರಿಸ್ಥಿತಿಗೆ ಮೊದಲನೇ ಪಂಚವಾರ್ಷಿಕ ಯೋಜನೆಯಲ್ಲಿ ಕೃಷಿ, ನೀರಾವರಿ ಮತ್ತು ಸಾರಿಗೆ ಸಂಪರ್ಕಗಳಿಗೆ ನೀಡಲಾದ ಪ್ರಾಶಸ್ತ್ಯವೇ ಹೊಣೆಯಾಗಿರುತ್ತದೆ. ನಮ್ಮ ವ್ಯಾಪಾರೀ ವ್ಯವಹಾರ ಸಮತೋಲದಲ್ಲಿ ನಿಂತಿದ್ದು, ಈಚೆಗೆ ಸ್ಟರ್ಲಿಂಗ ಶಿಲ್ಕಿಗೆ ಸ್ವಲ್ಪ ಮೊತ್ತವನ್ನು ಕೂಡಿಸಲಿಕ್ಕೂ ಸಾಧ್ಯವಾಗಿದೆ. ಇದನ್ನು ಮನಗಂಡರೆ, ಯೋಜನೆಯನ್ನು ನಾವು ಆತ್ಮವಿಶ್ವಾಸದಿಂದ ಮುಂದುವರಿಸಿಕೊಂಡು ಹೋಗಲು ಅಡ್ಡಿ ಕಾಣುವುದಿಲ್ಲ. ಹೀಗೆ ಯೋಜನೆಗಳ ಮೇಲೆ ಯೋಜನೆಗಳನ್ನು ಕೈಗೊಂಡು ಭಾರತೀಯರ ತಲಾವಾರ್ಷಿಕ ಆದಾಯವನ್ನು ಸಾಧ್ಯವಿದ್ದಷ್ಟು ಬೇಗನೇ ಈಗಿನದರ ಇಮ್ಮಡಿ ಮಾಡುವುದನ್ನೇ ಯೋಜನಾ ಆಯೋಗ ತನ್ನ ಧ್ಯೇಯವಾಗಿ ಇಟ್ಟುಕೊಂಡಿದೆ. ಆದುದರಿಂದ ಯಾರಾದರೂ ಮೊದಲನೇ ಪಂಚವಾರ್ಷಿಕ ಯೋಜನೆಯೊಂದಿಗೇ ನಮ್ಮ ಕಾರ್ಯಕ್ರಮ ನಿಂತು ಹೋಗುತ್ತದೆಂದು ಭಾವಿಸುವುದು ಸರಿಯಲ್ಲ—ನಮ್ಮ ಕಾರ್ಯಕ್ಷೇತ್ರವು ತುಂಬಾ ವಿಶಾಲವಾಗುತ್ತದೆ; ನಮ್ಮನ್ನು ಇದಿರಿಸುವ ಪ್ರಶ್ನೆಗಳೂ ಜಟಿಲವಾಗಿರುತ್ತವೆ. ಇವುಗಳ ಮುಂದೆ ಮೊದಲನೇ ಪಂಚವಾರ್ಷಿಕ ಯೋಜನೆ ಕೇವಲ ಪ್ರಾರಂಭಿಕ ಹೆಜ್ಜೆಯಾಗಿಯೇ ಉಳಿಯುತ್ತದೆ. ಹೆಚ್ಚು ಮಹತ್ವದ ಕೆಲಸಗಳು ೧೯೫೬ನೇ ವರ್ಷದಿಂದ ತೊಡಗಲಿರುವ ದ್ವಿತೀಯ ಪಂಚವಾರ್ಷಿಕ ಯೋಜನೆಯ ಕಾಲಾವಧಿಯಲ್ಲಿ ಮೊದಲಾಗುತ್ತವೆ.

ಈಗಿನ ಪಂಚವಾರ್ಷಿಕ ಯೋಜನೆಯಲ್ಲಿ ಎರಡುಸಾವಿರ ಕೋಟಿ ರೂಪಾಯಿಗಳಿಗೂ ಹೆಚ್ಚು ಹಣ ವಿನಿಯೋಗವಾಗಬೇಕೆಂದಿದ್ದರೆ, ಮುಂದಿನ ಯೋಜನೆಯಲ್ಲಿ ಇದರ ಇಮ್ಮಡಿ ಹಣ ವ್ಯಯಿಸಲ್ಪಡುವುದು. ಈಗ ಕಾರ್ಯಗತಗೊಳ್ಳುತ್ತಿರುವ ಯೋಜನೆಗಳು ಭಾರತೀಯರ ಜೀವನಮಟ್ಟವನ್ನು ಶೇಕಡಾ ಐದರಷ್ಟು ಅಲ್ಪ ಪ್ರಮಾಣದಲ್ಲಿ ಮಾತ್ರವೇ ಉನ್ನತಗೊಳಿಸುತ್ತವೆ—ಜೀವನಮಟ್ಟವು ಬೇಗನೇ ಉನ್ನತಹೊಂದುವಂತೆ ದ್ವಿತೀಯ ಪಂಚವಾರ್ಷಿಕ ಯೋಜನೆಯನ್ನು ಆಳವಡಿಸಲಾಗುತ್ತದೆ. ಇದರಲ್ಲಿ ಸರಕಾರದೊಂದಿಗೆ ಭುಜಕ್ಕೆ ಭುಜಕೊಟ್ಟು ಖಾಸಗೀ ಉದ್ದಿಮೆದಾರರೂ ಸಾಗಬೇಕೆಂದು ಯೋಜನಾ ಆಯೋಗ ಅಪೇಕ್ಷಿಸುತ್ತದೆ.

ಈ ಉದ್ದೇಶದಿಂದ ಖಾಸಗೀ ಉದ್ದಿಮೆದಾರರೊಡನೆ ಯೋಜನಾ ಆಯೋಗ ಬೇಗನೆ ಮಾತುಕತೆಯನ್ನು ತೊಡಗಲಿದ್ದು, ಅದಕ್ಕೆ ಪೂರ್ವಭಾವಿಯಾಗಿ ಔದ್ಯೋಗಿಕ ರಂಗದಲ್ಲಿ ಹಣ ತೊಡಗಿಸುವ ಪ್ರವೃತ್ತಿ,

([illegible]ನೇ ಪುಟ ನೋಡಿ)

ವೇತನ ದೊರೆಯುವ ಪ್ರತಿ ದಿವಸದಲ್ಲೂ ಸೇವಿಂಗ್ಸ್ ಬ್ಯಾಂಕ್ ಲೆಕ್ಕದಲ್ಲಿ ಹಣವಿಡಲು ಪ್ರಾರಂಭಿಸಿರಿ.

ನಿಮ್ಮ ಸಂಪಾದನೆಯಲ್ಲಿ ಸ್ವಲ್ಪ ಉಳಿಸಿಕೊಳ್ಳುವ ಅಭ್ಯಾಸವೇ ಅತಿ ಮಹತ್ವದ್ದು. ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟಿನಲ್ಲಿ [illegible] ಸೇವಿಂಗ್ಸ್ ಲೆಕ್ಕ ತೆರೆದು ತಾವು ಉಳಿಸುವ ಹಣವನ್ನು [illegible] ಅಪೇಕ್ಷಿತ ವಸ್ತುಗಳನ್ನು ಕೊಂಡುಕೊಳ್ಳಲು, [illegible], ಅನಪೇಕ್ಷಿತ ಘಟನೆಗಳಿಗಾಗಿ [illegible] ಪ್ರತಿ ತಿಂಗಳ [illegible] ಕನಿಷ್ಠ 10 [illegible] ಸೇವಿಂಗ್ಸ್ ಲೆಕ್ಕದಲ್ಲಿರಿಸಿ ನಿಮ್ಮ ಆರ್ಥಿಕ ಅಭಿವೃದ್ಧಿ ಹಾಗೂ ಭಾವೀ ಜಿವನವನ್ನು ಕಾಪಾಡಿಕೊಳ್ಳಲು [illegible]

ವ್ಯವಹಾರ ಮಹಿಪಾಟು ರೂ 5,00,00,000

THE CANARA INDUSTRIAL &
BANKING SYNDICATE LTD.,
Estd: 1925 H O UDIPI. S. India.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್
ಸ್ಥಾಪನೆ ೧೯೨೫ | ಪ್ರಧಾನ ಕಚೇರಿ: ಉಡುಪಿ. ದ. ಭಾರತ.

ಕ್ಷೀರವ್ಯವಸಾಯದಲ್ಲಿ ಶಾಸ್ತ್ರೀಯ ಕ್ರಮದ ಮಹತ್ವ

ಬೆಂಗಳೂರಿನ ಸಂಶೋಧನಾಲಯದ ಚಟುವಟಿಕೆಗಳು

ವೈಜ್ಞಾನಿಕ ಕ್ಷೇತ್ರದಲ್ಲಿ ನಮ್ಮ ದೇಶವು ಹಿಂದುಳಿದಿದೆಯೆಂದು ಹೇಳುವುದುಂಟು —ಪಾಶ್ಚಾತ್ಯ ದೇಶಗಳ ಪ್ರಗತಿಯೊಂದಿಗೆ ತುಲನೆಮಾಡುವಾಗ ಹೀಗೆ ಹೇಳಲೂ ಬೇಕಾಗುತ್ತದೆ. ಆದರೆ ಪೌರ್ವಾತ್ಯ ದೇಶಗಳೊಡನೆ ಭಾರತವನ್ನು ಹೋಲಿಸಿದರೆ, ನಾವು ಎಷ್ಟೋ ಮುಂದುವರಿದಿದ್ದೇವೆಂದು ತೋರುತ್ತದೆ. ಬ್ರಿಟಿಷರ ಕಾಲದಲ್ಲಿ ವೈಜ್ಞಾನಿಕ ಸಂಶೋಧನೆಯ ಕುರಿತು ಹೆಚ್ಚಿನ ಆಸಕ್ತಿ ಕೊಡಲ್ಪಡದಿದ್ದರೂ ಸಹ, ಸ್ವಾತಂತ್ರ್ಯೋತ್ತರದಲ್ಲಿ ಕೇಂದ್ರ ಸರಕಾರವು ಸಂಶೋಧನಾಲಯಗಳ ಸ್ಥಾಪನೆಯ ಕಡೆಗೆ ಅಧಿಕ ಗಮನವನ್ನು ಪೂರೈಸುತ್ತಾ ಬಂದಿದೆ. ಹಳೆಯ ಸಂಶೋಧನಾಲಯಗಳು ಚೊಕ್ಕ ರೀತಿಯಲ್ಲಿ ಕೆಲಸ ಮಾಡುವಂತೆ ವ್ಯವಸ್ಥೆಗಳನ್ನು ಏರ್ಪಡಿಸಿ, ಅವುಗಳ ಪ್ರಯೋಜನವು ರಾಷ್ಟ್ರ ಜೀವನದ ಪ್ರಗತಿಯಲ್ಲಿ ಪ್ರತಿಫಲಿಸುವಂತೆ ನೋಡಿಕೊಂಡಿದೆ.

ಬೆಂಗಳೂರಿನಲ್ಲಿ ಹಾಲಿನ ಸಂಶೋಧನಾಲಯವೊಂದು ೧೯೨೩ನೇ ಇಸವಿಯಿಂದ ಕೇಂದ್ರ ಸರಕಾರದ ಅಧೀನದಲ್ಲಿ ಕೆಲಸ ಮಾಡುತ್ತಾ ಬಂದಿದೆ. ಇದರ ಸ್ಥಾಪನೆ ಮಾಡಿದವರು ಬ್ರಿಟಿಷರೆಂದು ಪ್ರತ್ಯೇಕ ಹೇಳಬೇಕಾಗಿಲ್ಲ. ಪ್ರಥಮ ಮಹಾಯುದ್ಧಾ ನಂತರ ದೇಶದಲ್ಲಿ ಹಾಲಿನ ವ್ಯವಸಾಯವನ್ನು ಅಭಿವೃದ್ಧಿಪಡಿಸುವುದು ಅತ್ಯಗತ್ಯವೆಂದು ಸರಕಾರ ಮನಗಂಡಿತು. ಇದಕ್ಕೋಸ್ಕರ ಹೆಚ್ಚಿನ ಸಂಶೋಧನೆಗಳನ್ನು ನಡೆಸಿದರೆ ಒಳಿತೆಂದು ಭಾವಿಸಿ, ಹೊಸ ಯೋಜನೆಯೊಂದನ್ನು ಸಿದ್ಧಗೊಳಿಸಿತು. ೧೯೦೭ನೇ ಇಸವಿಯಿಂದಲೂ ಕೆಲಸಮಾಡುತ್ತಿದ್ದ ಸೈನಿಕ ಹಾಲಿನ ಕೇಂದ್ರವನ್ನು ಸಂಶೋಧನಾಲಯವಾಗಿ ಪರಿವರ್ತಿಸಲು ಭಾರತ ಸರಕಾರ ನಿರ್ಧರಿಸಿತು.

ಸ್ಥಾಪನೆ ಮತ್ತು ಧ್ಯೇಯ

ಈ ಸಂಶೋಧನಾಲಯವನ್ನು ಸ್ಥಾಪಿಸುವ ಕಾಲದಲ್ಲಿ ಸರಕಾರದ ಮುಂದೆ ಈ ವಿಚಾರ ಇದ್ದಿತು— ಹಾಲಿನ ವ್ಯವಸಾಯದಲ್ಲಿ ಹೊಸ ಹೊಸ ರೀತಿ ನೀತಿಗಳನ್ನು ಅನುಸರಿಸಲು ಬಯಸುವ ಮತ್ತು ತನ್ಮೂಲಕ ಹಾಲಿನ ಉತ್ಪಾದನೆಯನ್ನು ಹೆಚ್ಚಿಸಬಲ್ಲ ಜನರನ್ನು ತಯಾರು ಮಾಡಬೇಕೆಂಬ ಮಹತ್ವಾಕಾಂಕ್ಷೆಯೊಂದಿಗೆ ಈ ಉದ್ಯೋಗದಲ್ಲಿ ತೊಡಗಿದವರು ಎದುರಿಸಬೇಕಾಗಿ ಬರುವ ನಾನಾ ಬಗೆಯ ತೊಂದರೆಗಳ ವಿಷಯದಲ್ಲಿ ಯೋಗ್ಯ ಸಲಹೆ ಮತ್ತು ಸಹಾಯಗಳನ್ನು ನೀಡಬೇಕೆಂದೂ ಸರಕಾರ ಉದ್ದೇಶಿಸಿದ್ದಿತು. ಹೀಗೆ ಶಿಕ್ಷಣದೊಡನೆ ಸಂಶೋಧನೆಯನ್ನು ಹೊಂದಿಸಿಕೊಂಡು ಪ್ರಗತಿ ಸಾಧಿಸುವುದೇ ಕೇಂದ್ರ ಕೃಷಿ ಮಂತ್ರಾಲಯದಿಂದ ನಡೆಸಲ್ಪಡುವ ಈ ಸಂಶೋಧನಾಲಯದ ಧ್ಯೇಯ.

ಇಲ್ಲಿ ನಾಲ್ಕು ವಿಭಾಗಗಳು ಕೆಲಸ ಮಾಡುತ್ತವೆ—(೧) ಪಶುಪಾಲನೆ ವಿಭಾಗ; (೨) ಹಾಲಿನ ಅಣುಜೀವಿಗಳ ವಿಜ್ಞಾನ ವಿಭಾಗ; (೩) ಹಾಲಿನ ರಸಾಯನ ವಿಜ್ಞಾನ ವಿಭಾಗ ಮತ್ತು (೪) ಹಾಲಿನ ತಂತ್ರ ವಿಜ್ಞಾನ ವಿಭಾಗ. ಈ ಸಂಶೋಧನಾಲಯ ಮೂರು ಪ್ರಮುಖ ಕ್ಷೇತ್ರಗಳಲ್ಲಿ ಕೆಲಸ ನಡೆಸುತ್ತದೆ. (ಅ) ಭಾರತೀಯ ಹಾಲಿನ ವ್ಯವಸಾಯಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಸಂಶೋಧನೆ; (ಆ) ಹಾಲು ಕೊಡುವ ದನಗಳ ಉತ್ತಮ ಸೀಳಿಗೆಯನ್ನು ಸಿದ್ಧಗೊಳಿಸುವುದು; ಮತ್ತು (ಇ) ಹಾಲಿನ ವ್ಯವಸಾಯದ ವೈಜ್ಞಾನಿಕ ಹಾಗು ವ್ಯಾವಹಾರಿಕ ವಿಷಯದಲ್ಲಿ ಯೋಗ್ಯ ಶಿಕ್ಷಣವನ್ನು ನೀಡುವುದು.

ಸುಮಾರು ೩೦೦ ಹೈನ ಪಶುಗಳು ಇಲ್ಲಿ ಸಾಕಲ್ಪಡುತ್ತವೆ—ಇಲ್ಲಿ ಸಿಂಧೀ ಮುಂತಾದ ಶ್ರೇಷ್ಠ ಜಾತಿಯ ಎತ್ತು ಹಾಗು ದನಗಳಲ್ಲದೆ, ಭಿನ್ನ ಭಿನ್ನವಾದ ತಳಿಯ ಬೆರಕೆಯಿಂದ ಹೊಸತಾಗಿ ಉಂಟುಮಾಡಿದ ಒಳ್ಳೆಯ ಜಾತಿಯ ದನಗಳೂ ತುಂಬಾ ಇವೆ. ಇವುಗಳನ್ನು ಪಶುಗಳ ತಳಿಯ ಸಂಬಂಧದಲ್ಲಿ ಹೆಚ್ಚಿನ ಸಂಶೋಧನೆ ನಡೆಸಲು ಉಪಯೋಗಿಸಲಾಗುವುದು. ಬೇರೆ ಬೇರೆ ನಮೂನೆಯ ಹುಲ್ಲು, ಕಾಳು ಕಡಿಗಳನ್ನು ತಿನ್ನಲು ಕೊಟ್ಟು, ಮೇವಿನ ಒಳ್ಳೆಯ ಹಾಗು ಕೆಟ್ಟ ಗುಣಗಳ ಮಾಹಿತಿಯನ್ನು ಸಂಗ್ರಹಿಸಲಾಗುವುದು. ಈ ದನಗಳು ಕೊಡುವ ಹಾಲನ್ನು ಸಂಶೋಧನಾ ಕಾರ್ಯಕ್ಕೂ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವುದಕ್ಕೂ ಉಪಯೋಗಿಸುವರು. ಹೀಗೆ ಉಪಯೋಗಿಸಿದ ಮೇಲೆ ಉಳಿದ ಹಾಲನ್ನು ಪಾಶ್ಚರೀಕರಣ (ಅಂದರೆ, ಅದರ ಉಷ್ಣತೆಯನ್ನು ೬೨·೮ ಡಿಗ್ರಿ ಸೆಂಟಿಗ್ರೇಡಿನಿಂದ ೬೫·೫ ಡಿಗ್ರಿಗೆ ಏರಿಸುವುದು) ಪ್ರಯೋಗಕ್ಕೆ ಗುರಿಪಡಿಸಿ, ಜೀವಾಣುಗಳು ಹಾಲನ್ನು ಕೆಡದಂತೆ ಮಾಡಿ, ತಣಿಸಿ, ಬಾಟಲಿಗಳಲ್ಲಿ ತುಂಬಿಸಿ, ಆಸ್ಪತ್ರೆಗೆ ಹಾಗು ಇತರ ಗ್ರಾಹಕರಿಗೆ ಮುಟ್ಟಿಸಲಾಗುವುದು. ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವ ಸಂಬಂಧದಲ್ಲಿ ಮೊಸರು, ತುಪ್ಪ, ಬೆಣ್ಣೆ ಮತ್ತಿತರ ವಸ್ತುಗಳನ್ನೂ ಸ್ವಲ್ಪ ಸ್ವಲ್ಪ ತಯಾರಿಸಲಾಗುವುದು. ಈ ಸಂಶೋಧನಾಲಯವು ಸ್ವತಃ ಮೇವಿನ ಹುಲ್ಲನ್ನು ಬೆಳೆಸುತ್ತದೆ. ಅರ್ಧ ವ್ಯಾಪಾರೀ ಮಟ್ಟದಲ್ಲಿ ಒಂದು ಹಾಲು ಪೂರೈಕೆಯ ಕೇಂದ್ರವನ್ನೂ ನಡೆಸುತ್ತದೆ. ಇಲ್ಲಿ ತೀರ ಹೊಸ ಮಾದರಿಯನ್ನು ಅನುಸರಿಸಿ ಹಾಲನ್ನು ಹಿಂಡುವ ಮತ್ತು ಸಂಗ್ರಹಿಸಿ ವಿತರಿಸುವ ವ್ಯವಸ್ಥೆ ಇದೆ.

ಪಶು ಸಂಗೋಪನೆ

ಮೇಲೆ ವಿವರಿಸಿದ ನಾಲ್ಕೂ ವಿಭಾಗಗಳಲ್ಲಿ ಮಹತ್ವದ ಸಂಶೋಧನೆಗಳು ಜರಗುತ್ತವೆ. ದೇಶದ ಸರ್ವಾಂಗಕ್ಕೂ ಲಾಭವುಂಟುಮಾಡುವ ಈ ಸಂಶೋಧನೆಗಳು ಹಾಲಿನ ಉತ್ಪಾದನೆಯನ್ನು ಹೆಚ್ಚಿಸುವ ವ್ಯವಹಾರಯುಕ್ತ ಪ್ರಯತ್ನಗಳ ಬಗೆಯನ್ನು ಹಾಗು ಭಾರತೀಯರ ಭೋಜನದಲ್ಲಿ ಪೋಷಕಾಂಶಗಳು ಹೆಚ್ಚಿನ ಪ್ರಮಾಣದಲ್ಲಿ ದೊರೆಯಲು ಕೈಗೊಳ್ಳಬೇಕಾದ ರೀತಿಯನ್ನು ನಿರ್ದೇಶಿಸುತ್ತವೆ.

ಪಶುಪಾಲನಾವಿಭಾಗದಲ್ಲಿ ಹೈನ ಪಶುಗಳ ಸಂತತಿಯನ್ನು ಸುಧಾರಿಸುವ, ಅವುಗಳ ಮೇವನ್ನು ಉತ್ತಮಗೊಳಿಸುವ ಮತ್ತು ಸಂಗೋಪನಾ ವಿಷಯದಲ್ಲಿ ತೆಗೆದುಕೊಳ್ಳಬೇಕಾದ ಕ್ರಮಗಳನ್ನು ಪ್ರಚುರಪಡಿಸುವ ಕೆಲಸ ನಡೆಯುತ್ತದೆ. ಕಳೆದ ೨೦ ವರ್ಷಗಳಿಂದ ಪಶುಗಳನ್ನು ವಿಂಗಡಿಸಿ, ವಿಂಗಡಿಸಿ, ವ್ಯವಸ್ಥಿತ ಕ್ರಮದಲ್ಲಿ ತಳಿಸುಧಾರಣಾ ಕಾರ್ಯವನ್ನು ಕೈಗೊಂಡುದರ ಪರಿಣಾಮವಾಗಿ ದನಗಳ ಹಾಲು ಕೊಡುವ ಸಾಮರ್ಥ್ಯ ತುಂಬ ವೃದ್ಧಿಹೊಂದಿದೆ. ಇಲ್ಲಿ ಬೀಜದ ಹೋರಿಗಳನ್ನೂ ಕೋಣಗಳನ್ನೂ ತಯಾರು ಮಾಡಿ ಪ್ರಾದೇಶಿಕ ಅವಶ್ಯಕತೆಗಳನ್ನು ಪೂರೈಸುವುದಕ್ಕೋಸ್ಕರ ರಾಜ್ಯ ಸರಕಾರಗಳಿಗೂ ಪಶು ಪಾಲಕರಿಗೂ ಒದಗಿಸಿಕೊಡುವರು. ಕೃತ್ರಿಮ ಗರ್ಭಾಧಾನದ ವಿಭಾಗವೊಂದು ಒಳ್ಳೆಯ ಬೀಜದ ಹೋರಿಗಳ ವೀರ್ಯವನ್ನು ಸ್ಥಳೀಯ ದನಗಳ ಮೇಲೆ ಪ್ರಯೋಗಿಸಿ, ಅವುಗಳ ಸಂತಾನವನ್ನು ಉತ್ತಮ ವರ್ಗದ್ದನ್ನಾಗಿ ಮಾಡುವ ಪ್ರಯತ್ನ ನಡೆಸುತ್ತದೆ. ಉತ್ತಮ ಜಾತಿಯ ಬೀಜದ ಹೋರಿಗಳೂ ಕೋಣಗಳೂ ಬೇಕೆಂಬುದಾಗಿ ದೇಶದೊಳಗಿಂದಷ್ಟೇ ಅಲ್ಲ—ಸಯಾಂ, ಮಲಯಾ ಮುಂತಾದ ವಿದೇಶಗಳಿಂದಲೂ ಅತ್ಯಧಿಕ ಬೇಡಿಕೆಗಳು ಈ ಕೇಂದ್ರಕ್ಕೆ ಬರುತ್ತವೆ.

ಉತ್ತಮ ಮೇವಿನ ವ್ಯವಸ್ಥೆಯನ್ನೂ ಈ ವಿಭಾಗ ಮಾಡುತ್ತದೆ—ದೇಶೀಯ ಹಾಗೂ ವಿದೇಶೀಯ ಹುಲ್ಲುಗಳ ಅನೇಕ ನಮೂನೆಗಳನ್ನು ತುಂಡು ಹೊಲದಲ್ಲಿ ಬಿತ್ತಿ, ಯಾವ ನೆಲದಲ್ಲಿ, ಯಾವ ಹವಾಮಾನದಲ್ಲಿ ಯಾವ ಪ್ರಕಾರದ ಹುಲ್ಲು ಚೆನ್ನಾಗಿ ಬೆಳೆಯುತ್ತದೆಂದು ಸಂಶೋಧನೆ ನಡೆಸಲಾಗುವುದು. ಇವುಗಳ ಜೊತೆಗೆ ಯ. ಪಶುಗಳಿಗೆ ಅತ್ಯಂತ ಕಡಿಮೆ ವೆಚ್ಚದಲ್ಲಿ ಅತ್ಯುತ್ತಮವಾದ ಹುಲ್ಲನ್ನು ಒದಗಿಸಿಕೊಡುವ ಮತ್ತು ಆರೋಗ್ಯವನ್ನು ಚೆನ್ನಾಗಿ ಇಡುವ ರೀತಿಯಾವುದೆಂಬುದನ್ನೂ ಸಂಶೋಧಿಸಲಾಗುವುದು. ದನಕರುಗಳಿಗೆ ನಾನಾ ಬಗೆಯ ಮೇವನ್ನು ತಿನ್ನಿಸಿ, ಇದರಿಂದ ಉಂಟಾಗುವ ಶಾರೀರಿಕ ಪ್ರತಿಕ್ರಿಯೆಗಳನ್ನು ಸೂಕ್ಷ್ಮ ದೃಷ್ಟಿಯಿಂದ ಅವಲೋಕಿಸಲಾಗುವುದು.

ಕೆಡದಂತೆ ನೋಡುವ ಬಗೆ

ಹಾಲನ್ನು ಹಿಂಡಿ ತೆಗೆದ ಮೇಲೆ, ಅದರಲ್ಲಿ ಜೀವಾಣುಗಳು ಒಂದೇ ಸವನೆ ವೃದ್ಧಿ ಹೊಂದುತ್ತವೆ. ಇದರಿಂದ ಹಾಲು ಬೇಗನೇ ಕೆಟ್ಟು ಹೋಗುತ್ತದೆ. ಹಾಲು ಹಿಂಡಿ ತೆಗೆದ ಐದು ನಿಮಿಷಗಳಲ್ಲಿ ಒಂದು ನಿರ್ದಿಷ್ಟ ಪ್ರಮಾಣದ ಹಾಲಿನಲ್ಲಿ ೬೩೦೦ ಜೀವಾಣುಗಳು ಕಂಡು ಬಂದರೆ, ಹದಿನೈದೇ ನಿಮಿಷಗಳಲ್ಲಿ ಇವುಗಳ ಸಂಖ್ಯೆ ೨೬೩೦೦ ಆಯಿತು. ಎರಡು ತಾಸುಗಳ ಬಳಿಕ ೨೨೫೦೦೦೦ಕ್ಕೆ ಈ ಸಂಖ್ಯೆ ಏರಿತು. ಪಾಶ್ಚರೀಕರಣದ ಹದಿನಾರು ತಾಸುಗಳ ಬಳಿಕ ಹಾಲಿನ ಕಾಲಿ ಬಾಟಲಿಗಳು ವಾಪಾಸು

(೧೧ನೇ ಪುಟ ನೋಡಿರಿ)

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ: ೧೯೩೫] [ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ

ಭಾರತದ ಸುಭದ್ರ ವಿಮಾ ಕಂಪೆನಿಗಳಲ್ಲಿ "ಕೆನರಾ ಮ್ಯೂಚುವಲ್" ಎಣೆ ಇಲ್ಲದ ವಿಶಿಷ್ಟ ಸ್ಥಾನವನ್ನು ಗಳಿಸಿದೆ. ಇದು ಮ್ಯೂಚುವಲ್ ಕಂಪೆನಿಯಾಗಿ ಘಟಿತವಾಗಿದ್ದು, ಪಾಲುದಾರ ಭಂಡವಾಳಿಗರಿಲ್ಲದಿರುವುದರಿಂದ, ಕಂಪೆನಿಯ ಸರ್ವ ಲಾಭವನ್ನೂ ಹಕ್ಕು ಹೊಂದಿದ ಪಾಲಿಸಿದಾರರೇ ತಮ್ಮಲ್ಲಿ ಹಂಚಿಕೊಳ್ಳುವರು. ಪ್ರಾಗತಿಕ ಬಿಗುಮಾನದ ತಳಹದಿಯ ಮೇಲೆ ನಡೆಸಿದ ತನ್ನೆಲ್ಲಾ ವಿಮಾ ಗಣನೆಗಳಲ್ಲಿ ಉಳಿತಾಯವನ್ನು ತೋರಿಸಿದುದು ಮಾತ್ರವಲ್ಲದೆ, ಸ್ಥಾಪಿತವಾದಂದಿನಿಂದಲೂ ಇದು ಬೋನಸು ಹಂಚಿದೆ. ಪಾಲಿಸಿದಾರರ ಹಿತರಕ್ಷಣೆಯೇ ಧ್ಯೇಯವಾಗುಳ್ಳ ಈ ಪ್ರಗತಿಶೀಲ ಮ್ಯೂಚುವಲ್ ಕಂಪೆನಿಯಲ್ಲಿ ಇಂದೇ ವಿಮೆ ಇಳಿಸಿ, ನಿಮ್ಮ ಕುಟುಂಬದ ಭದ್ರತೆಯನ್ನು ಕಾಯ್ದುಕೊಳ್ಳಿರಿ.

THE CANARA MUTUAL ASSURANCE COMPANY, LTD.,

Estd: 1935] [Head Office: UDIPI, S. INDIA

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಷಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. ೩—೮—೦

ಸಣ್ಣ ಬಾಟ್ಲಿಗೆ ರೂ. ೨—೦—೦

ಶ್ರೀ ರಾಮತೀರ್ಥ ಯೋಗಾಶ್ರಮ,

ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಪ್ರವಾಸಪ್ರಿಯರಿಗೆ ಅಕ್ಕರೆಯ ಆತಿಥ್ಯ

ವಿದೇಶಗಳ ಸಂದರ್ಶಕರೇ ಭಾರತದ ರಾಯಭಾರ ವರ್ಗ

ಮೊನ್ನೆ ತಾನೆ ಮುಂಬಯಿಯಿಂದ ಬಂದ ವರದಿಯೊಂದು ಹೀಗೆ ತಿಳಿಸುತ್ತದೆ —"ಭಾರತದ ಪ್ರೇಕ್ಷಣೀಯ ಸ್ಥಳಗಳನ್ನು ನೋಡಲು ಅಮೇರಿಕೆಯ ೪೫೦ ಧನಾಢ್ಯ ಸಂದರ್ಶಕರು ಅತಿ ದೊಡ್ಡದಾದ 'ಇಂಡಿ ಪೆಂಡೆಂಟ್' ಹಡಗದಿಂದ ಇಲ್ಲಿಗೆ ಬಂದು ಇಳಿದರು. ಈ ಸಂದರ್ಶಕರು ಮಧ್ಯ ಪೂರ್ವ ಹಾಗು ದಕ್ಷಿಣ ಏಶಿಯಾ ಮತ್ತು ಭೂಮಧ್ಯ ಸಮುದ್ರ ವಲಯದ ದೇಶಗಳನ್ನು ಸಂದರ್ಶಿಸಲು ಫೆಬ್ರುವರಿ ೪ಕ್ಕೆ ನ್ಯೂ ಯಾರ್ಕದಿಂದ ಹೊರಟಿದ್ದು, ಎಪ್ರಿಲ ೧೦ಕ್ಕೆ ತಿರುಗಿ ಹೋಗಬಹುದು. ಇವರು ತಮ್ಮ ಭಾರತದ ವಾಸ್ತವ್ಯ ಕಾಲದಲ್ಲಿ ದಿಲ್ಲಿ, ಆಗ್ರಾ, ಕಾಶಿ, ಫತೆಪುರ ಸಿಕ್ರಿ, ಸಾಂಚಿ, ಜಯಪೂರ, ಔರಂಗಾಬಾದ, ಅಜಂತಾ, ಮದ್ರಾಸು, ಮೈಸೂರು, ಮಧುರೆ, ದಾರ್ಜಲಿಂಗ, ಕಲ್ಕತ್ತ ಮುಂತಾದ ಸ್ಥಳಗಳನ್ನು ಸಂದರ್ಶಿಸುವರು. ಭಾರತದಲ್ಲಿ ಇವರು ಸುಮಾರು ೩॥ ಲಕ್ಷ ರೂಪಾಯಿಗಳನ್ನು ವೆಚ್ಚಮಾಡಬಹುದೆಂದು ಸಂದರ್ಶಕರ ಸಹಾಯಕರ ಧುರೀಣ ಜಲೆಪ್ಪಿಯವರು ಸುದ್ದಿಗಾರರಿಗೆ ತಿಳಿಸಿದರು. ಭಾರತ ಸರಕಾರವು ಇವರಿಗೆ ಕೆಲವು ಸೌಲಭ್ಯಗಳನ್ನು ಒದಗಿಸಿಕೊಟ್ಟಿದೆ. ಅಲ್ಲದೆ, ಮುಂಬಯಿ ಸರಕಾರ ಹಡಗದ ಕೋಣೆಗಳಲ್ಲಿ ಮದ್ಯ ಸೇವನೆಗೆ ಅನುಮತಿಯನ್ನು ನೀಡಿದೆ."

ಪ್ರವಾಸ ಪ್ರಿಯರ ಆಸಕ್ತಿ

ಮೇಲಿನ ವಾರ್ತೆಯನ್ನೋದಿದ ಮೇಲೆ ನಮ್ಮಲ್ಲಿ ಉಂಟಾಗುವ ಪ್ರತಿಕ್ರಿಯೆಗಳೇನು? ಭಾರತವು ವಿದೇಶಗಳ ಸಂದರ್ಶಕರನ್ನು ತನ್ನೆಡೆಗೆ ಸೆಳೆದುಕೊಳ್ಳುವಷ್ಟು ಪ್ರೇಕ್ಷಣೀಯವಾದ ಸ್ಥಳವೆಂದು ನಮಗೆ ಖಚಿತವಾಗಿ ಮನವರಿಕೆಯಾಗುತ್ತದೆ. ನಮ್ಮ ಐತಿಹಾಸಿಕ ಹಾಗು ಸಾಂಸ್ಕೃತಿಕ ಪರಂಪರೆಯು ಉಜ್ವಲವಾಗಿದ್ದು ಇಲ್ಲಿ ರಸಿಕರಿಗೆ ಸವಿಯೂಟ ಉಣ್ಣಿಸುವ ಅಸಂಖ್ಯಾತ ಕ್ಷೇತ್ರಗಳೂ ಪ್ರಸಿದ್ಧ ಸ್ಥಳಗಳೂ ಇರುತ್ತವೆ. ಪ್ರಖ್ಯಾತವಾದ ಉದಕ ಮಂಡಲ, ದಾರ್ಜಲಿಂಗ, ಸಿಮ್ಲಾ, ಮಸೂರಿಗಳಂತಹ ಪರ್ವತ ರಮ್ಯ ಪ್ರದೇಶಗಳು ನಿಸರ್ಗ ಶೋಭೆಯಿಂದ ಕಣ್ಮನಗಳಿಗೆ ಆಹ್ಲಾದವನ್ನೂ ಆನಂದವನ್ನೂ ನೀಡುತ್ತವೆ. ಇವುಗಳನ್ನೆಲ್ಲ ನೋಡಿ ನಲಿಯುವ ಪುಣ್ಯ ಸುಲಭ ಪ್ರಾಪ್ತವಲ್ಲ—ಏಕೆಂದರೆ ಎಲ್ಲಕ್ಕಿಂತ ಹೆಚ್ಚಾಗಿ ನಮಗೆ ಹಣದ ಆವಶ್ಯಕತೆಯುಂಟು. ಆದರೆ ದೇಶದೊಳಗೂ ಹೊರಗೂ ಶ್ರೀಮಂತರು ಇದ್ದೇ ಇರುವರು. ಮತ್ತವರು ಸಾವಿರಾರು ರೂಪಾಯಿಗಳ ವೆಚ್ಚವನ್ನು ಸಹಿಸಿಕೊಂಡು ಪ್ರೇಕ್ಷಣೀಯ ಸ್ಥಳಗಳನ್ನು ಸಂದರ್ಶಿಸಿ ತೃಪ್ತಿಯ ಉಸಿರನ್ನೆಳೆಯಲು ಬಯಸುವರು ಎಂಬ ಸಂಗತಿ ಸುಳ್ಳಲ್ಲ. ಪ್ರವಾಸಿಗಳನ್ನು ತೃಪ್ತಿಪಡಿಸುವ ಪ್ರೇಕ್ಷಣೀಯ ಸ್ಥಳಗಳು ನಮ್ಮಲ್ಲಿನವೆಯಲ್ಲ ಎಂದು ಹೆಮ್ಮೆಪಟ್ಟುಕೊಳ್ಳುವ ನಮ್ಮವರಲ್ಲಿಯೇ ಕೆಲವು [illegible] —ಅವರು ಭಾರತದ ವಾಸ್ತವ್ಯ ಕಾಲದಲ್ಲಿ ವೆಚ್ಚ ಮಾಡುವ ಹಣದ ಮೊತ್ತದ ಮೇಲೂ ಜೀಕುತ್ತದೆ. ಇದು ಪ್ರವಾಸ ಪ್ರಿಯರ ಆತಿಥ್ಯಕ್ಕೆ ವ್ಯಾಪಾರೀ ಮಹತ್ವವನ್ನು ಕೊಡುತ್ತದೆ. ಮೊದಲು ಉಲ್ಲೇಖಿಸಿದ ಅಮೇರಿಕದ ಧನಾಢ್ಯ ಸಂದರ್ಶಕರು ಭಾರತದಲ್ಲಿ ೩॥ ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡುವರಾದುದರಿಂದ—ಅಷ್ಟು ಮಟ್ಟಿಗೆ ನಮ್ಮ ದೇಶದ ವ್ಯಾಪಾರ ಬೆಳೆದಂತಾಗುತ್ತದೆ. ಹಣ ಕೊಟ್ಟು ಸತ್ಕಾರ ಹಾಗೂ ಸೌಕರ್ಯಗಳನ್ನು ಒದಗಿಸಿಕೊಳ್ಳುವ ಅತಿಥಿಗಳು ಇವರಾದುದರಿಂದ, ಈ ಸಂದರ್ಶಕರಿಗೆ ನಮ್ಮಲ್ಲಿ ಸಾಕಷ್ಟು ಅನುಕೂಲತೆಗಳು ದೊರಕದೆ ಹೋದರೆ, ಮುಂದೆಂದೂ ಅವರು ಅಥವಾ ಅವರ ದೇಶದವರು, ಗುರುತು ಪರಿಚಯದವರು ನಮ್ಮನ್ನು ಮೂಸಿ ನೋಡಲಿಕ್ಕಿಲ್ಲ. ಹಾಗೆಯೇ-ನಮ್ಮ ದೇಶದಲ್ಲಿ ಪ್ರೇಕ್ಷಣೀಯವಾದ ಸಾವಿರಾರು ಸ್ಥಳಗಳು ಇವೆಯೆಂಬುದು ಸಾಕಷ್ಟು ಪ್ರಸಿದ್ಧಗೊಂಡಿಲ್ಲದಿದ್ದರೆ, ಯಾರಿಗೂ ನಮ್ಮ ದೇಶದಲ್ಲಿ ಪ್ರವಾಸ ಮಾಡುವುದರಿಂದ ಲಭಿಸಬಹುದಾದ ಆನಂದಾನುಭವದ ಕಲ್ಪನೆಯಾಗಲೂ ಸಾಧ್ಯವಿಲ್ಲ. ಹೊರಗಿನವರಿರಲಿ, ದೇಶದೊಳಗಿನ ನಾಗರಿಕರಿಗೂ ವಿಶಾಲ ಭಾರತದ ಪ್ರೇಕ್ಷಣೀಯ ಸ್ಥಳಗಳ ಮಾಹಿತಿ ಇರುವುದು ಅತಿಸ್ವಲ್ಪ. ಈ ಕಾರಣದಿಂದಲೇ ಪ್ರವಾಸ ಪ್ರಿಯರ ಆಸಕ್ತಿಯನ್ನು ಕೆರಳಿಸಿ ಆಕರ್ಷಿಸಿಕೊಳ್ಳುವ ಕಲೆಯನ್ನು ನಾವು ಮೈಗೂಡಿಸಿಕೊಳ್ಳಬೇಕಾದ ಅಗತ್ಯ ಕಂಡುಬರುತ್ತದೆ

ತಣಿಯದ ಕುತೂಹಲ

ವಿದೇಶಗಳಲ್ಲಿ ಪ್ರವಾಸ ಪ್ರಿಯರು ಆಯಾ ರಾಜ್ಯಗಳ ಆದಾಯ ಸ್ರೋತಗಳಲ್ಲಿ ಒಂದಾಗಿ ಪರಿಗಣಿಸಲ್ಪಡುವರು – ಆದರೆ ದುರ್ದೈವದಿಂದ ನಮ್ಮ ದೇಶದಲ್ಲಿ ಈ ಕಲೆಯು ಬರಬೇಕಾದಷ್ಟು ಊರ್ಜಿತಕ್ಕೆ ಇನ್ನೂ ಬಂದಿರದೆ ಬಹಳ ಹಿಂದೆಯೇ ಉಳಿದಿದೆ. ಪ್ರವಾಸಿಗಳನ್ನು ಸೆಳೆದುಕೊಂಡು ವ್ಯಾಪಾರ ವ್ಯವಹಾರವನ್ನು ಕುದುರಿಸುವುದಕ್ಕೆ ಪೂರ್ವಭಾವಿಯಾಗಿ ನಡೆಯಬೇಕಾದ ಎಷ್ಟೋ ಕೆಲಸಗಳು ನಮ್ಮಲ್ಲಿ ಮುಂದುವರಿಯದಿದ್ದುದೇ ಇದಕ್ಕೆ ಮುಖ್ಯ ಹೇತು. ನಮ್ಮಲ್ಲಿ ಎರಡು—ಮೂರು ಸಾವಿರ ವರ್ಷ ಪುರಾತನವಾದ ಸಂಸ್ಕೃತಿ ವೈಶಿಷ್ಟ್ಯಗಳು ಇವೆ. ಶಿಲ್ಪ ಹಾಗೂ ಚಿತ್ರರಚನೆಗಳಲ್ಲಿ ಬೇಲೂರಿನ ಶಿಲಾಬಾಲಿಕೆಗಳೂ ಅಜಂತದ ಭಿತ್ತಿ ಚಿತ್ರಗಳೂ ವಿದೇಶದ ಯಾವ ಕಲಾಸಿರಿಗೂ ಕಡಿಮೆಯಾಗಿಲ್ಲ. ಹಿಮಾಲಯದ ಭವ್ಯ ಹಿನ್ನೆಲೆಯಲ್ಲಿ ತಂಪಾಗಿ ನಿಂತಿರುವ ನಿಸರ್ಗ ಸುಂದರ ವಸತಿಗಳು ಆಲ್ಪ್ಸ್ ಪರ್ವತದ ಶೋಭೆಗೆ ಯಾವ ರೀತಿಯಲ್ಲೂ ಹಿಂದುಳಿಯವು. ಭೌಗೋಲಿಕ ವಾತಾವರಣದಲ್ಲಿ ನಿತ್ಯ ವ್ಯವಹಾರದಲ್ಲಿ, ನಡೆ ನುಡಿಯಲ್ಲಿ, ಭಾಷೆ ಹಾಗೂ ಸಂಸ್ಕೃತಿಯಲ್ಲಿ, ಹೆಚ್ಚೇಕೆ ಜೀವನದ ಚಟುವಟಿಕೆ ನಡೆದಿರುವ ಪ್ರತಿಯೊಂದೂ ಕ್ಷೇತ್ರದಲ್ಲಿ ಅಸಾಧಾರಣ ವೈವಿಧ್ಯವನ್ನು ಮೈಗೂಡಿಸಿಕೊಂಡಿರುವ, ಆದರೆ ಅದೇ ಕಾಲಕ್ಕೆ ರಾಷ್ಟ್ರೀಯ ಐಕ್ಯವನ್ನು ಕಾಯ್ದುಕೊಂಡಿರುವ, ದಿವ್ಯ, ಭವ್ಯ ಹಾಗು ಉನ್ನತವಾದ ಚಿತ್ರ ಭಾರತವನ್ನು ಬಿಟ್ಟರೆ ಬೇರೆಲ್ಲಿಯೂ ನಮಗೆ ದೊರೆಯದು. ಇದನ್ನು ತಿಳಿದುಕೊಂಡ ಭಾರತೀಯರೇ ವಿರಳ—ಸುಶಿಕ್ಷಿತರು ಕಡಿಮೆಯಾದ, ಬಡತನ ತಾಂಡವವಾಡುವ ಭಾರತದಲ್ಲಿ ಪ್ರವಾಸಪ್ರಿಯತೆಯನ್ನು ವ್ಯಕ್ತಗೊಳಿಸುವ ಜನ ಕಾಣಸಿಗುವುದು ಕ್ವಚಿತ್ ಅಪರೂಪ. ಅಂಥವರಿಗೂ ಸಾಕಷ್ಟು ಮಾಹಿತಿ ದೊರಕದಿರುವುದು, ಅನುಕೂಲತೆಗಳು ಅಲಭ್ಯವಾಗುವುದು— ಮುಗಿದಾಸೆಯನ್ನು ಈಡೇರಿಸುವ ಮಾರ್ಗದ ಅಡಚಣೆಗಳಾಗುತ್ತವೆ. ಒಳಗಿನ ಪರಿಸ್ಥಿತಿ ಹೀಗಿದ್ದರೆ, ಹೊರದೇಶಗಳ ಪ್ರವಾಸಿಕರಿಗೆ ಕಂಡುಬರುವುದೂ ಇದೇ ನೋಟ. ಹಣವನ್ನು ನೀರಿನಂತೆ ಚೆಲ್ಲಲು ಸಿದ್ಧರಾಗಿದ್ದಾಗ್ಯೂ ಬೇಕಾದ ಸೌಕರ್ಯಗಳು ಸಿಗುವುದಿಲ್ಲವಾದರೆ, ಭಾರತದ ಕುರಿತು ಮನಸು ಮುಸುಕಾಗಿಯೇ ಮೂಡಿದ ಕುತೂಹಲ ತಣಿದು ನೀರಾಗುತ್ತದೆಯೇ ಹೊರತು, ಪ್ರವಾಸ ಲಾಭ ಸಿದ್ಧಿಸುವುದಿಲ್ಲ.

ಅನುಕೂಲತೆಗಳ ಕೊರತೆ

ಪುಣ್ಯದಿಂದ ನಮ್ಮ ದೇಶದಲ್ಲಿ ತೀರ್ಥಯಾತ್ರೆ ಮಾಡುವುದು ಸ್ವರ್ಗ ಸೋಪಾನ ಸದೃಶವೆಂದು ಪರಿಭಾವಿಸಲ್ಪಟ್ಟಿದೆ. ಆದುದರಿಂದ ವರ್ಷಂಪ್ರತಿ ಸಾವಿರಾರು ಯಾತ್ರಿಕರು ತೀರ್ಥ ಕ್ಷೇತ್ರ ಸಂದರ್ಶನ ಮತ್ತು ಸ್ನಾನಗಳನ್ನು ಧ್ಯೇಯವಾಗಿಟ್ಟುಕೊಂಡು ಊರಿಂದೂರಿಗೆ ತೆರಳುವ ಸಂಪ್ರದಾಯ ನಡೆದುಬಂದಿದೆ. ಈ ವರ್ಷದ ಕುಂಭಮೇಳಾದ ಪರ್ವಕಾಲದಲ್ಲಿ ತ್ರಿವೇಣಿಯಲ್ಲಿ ಒಂದು ಮುಳುಗು ಹಾಕುವ ಉದ್ದೇಶದಿಂದ ಐವತ್ತು ಲಕ್ಷಕ್ಕೂ ಮಿಕ್ಕಿ ಯಾತ್ರಿಕರು ಸಂದಣಿಸಿದರು. ಹಿಮಾಲಯದ ದುರ್ಗಮ ದಾರಿಯಲ್ಲಿ ಕಷ್ಟದಿಂದ ಹೆಜ್ಜೆಯೂರುತ್ತಾ ನಮ್ಮ ಜನರು ಬದರೀನಾಥ, ಕೇದಾರನಾಥಗಳ ಸಂದರ್ಶನ ಗೈದು ಪಾವನರಾಗುತ್ತಾರೆಂದರೆ, ಪ್ರವಾಸವು ಸಾಕಷ್ಟು ಜನ ಪ್ರಿಯತೆಯನ್ನು ಗಳಿಸಿದೆಯೆಂದೇ ಭಾಸವಾಗುತ್ತದೆ. ಇದು ಪ್ರವಾಸದ ಶೈಕ್ಷಣಿಕ ಮಹತ್ವವನ್ನು ಮತ್ತು ದೊರಕುವ ಅನುಭವ ಮತ್ತು ಆನಂದವನ್ನು ಲಕ್ಷಿಸದೆ, ಪುಣ್ಯ ಭಾವನೆಯಿಂದ ಮಾತ್ರವೇ ಪ್ರೇರಿತರಾಗುವರೆಂಬುದೊಂದು ದೋಷ—ಆದರೂ ಶಿಕ್ಷಣ ಪ್ರಸಾರ ಹೆಚ್ಚಿಕೊಂಡಂತೆ, ಮೂಢ ನಂಬಿಕೆಗಳ ಸ್ಥಾನದಲ್ಲಿ ಜಾಗ್ರತೆಳೆದ ಸದ್ವಿವೇಕ ಬುದ್ಧಿಯ ಫಲಸ್ವರೂಪವಾದ ಯಥಾರ್ಥ ಜ್ಞಾನ ಮತ್ತು ತಿಳುವಳಿಕೆ ಮೂಡಿ ಬರಬಲ್ಲದು. ಆದ ಕಾರಣ, ಇವರ ಯೋಗಕ್ಷೇಮಗಳನ್ನು ನೋಡಿಕೊಳ್ಳುವುದಕ್ಕೆ, ಪ್ರವಾಸದ ಕಷ್ಟ ಮತ್ತು ತಾಪತ್ರಯಗಳು ಕಡಿಮೆಯಾಗುವುದಕ್ಕೆ, ವೆಚ್ಚವು ಕನಿಷ್ಠ ಮಟ್ಟಕ್ಕೆ ಇಳಿದು, ಅನುಕೂಲತೆಗಳು ಹೆಚ್ಚಿಕೊಳ್ಳುವುದಕ್ಕೆ ಸರಕಾರದ ಕಡೆಯಿಂದ ವಿಶೇಷ ಪ್ರಯತ್ನ ನಡೆಯಬೇಕಾಗಿರುತ್ತದೆ. ರಿಯಾಯತಿ ದರದಿಂದ ಟಿಕೇಟುಗಳನ್ನು ಕೊಡುವುದು, ಪ್ರತಿಯೊಂದೂ ಪ್ರೇಕ್ಷಣೀಯ ಸ್ಥಳದಲ್ಲಿ ಅದರ ಮಹತ್ವ ಹಾಗು ವೈಶಿಷ್ಟ್ಯಗಳನ್ನು ತಿಳಿಸಿ ಹೇಳುವ ಜನರನ್ನು ಒದಗಿಸುವುದು, ಸುಲಭ ಹಾಗು ಕ್ಲಪ್ತ ಸಮಯಕ್ಕೆ ಮುಟ್ಟಿಸುವ ಸಂಚಾರಾನುಕೂಲತೆಗಳನ್ನು ಕಲ್ಪಿಸುವುದು, ಧರ್ಮಛತ್ರಗಳನ್ನು ಮತ್ತು ವಸತಿ ಯೋಗ್ಯವಾದ ವ್ಯಾಪಾರಿ ಹೋಟಲುಗಳನ್ನು ತೆರೆಯುವುದು—ಇತ್ಯಾದಿ ಕ್ರಮಗಳನ್ನು ಸರಕಾರ ಕೈಗೊಂಡರೆ, ಪ್ರವಾಸಪ್ರಿಯರ ಕೃತಜ್ಞತೆಯನ್ನು

ಶಾಂತ ವಾತಾವರಣದಲ್ಲಿ ಅತ್ಯಾಧುನಿಕ ಮಾದರಿಯ ಮೇಲ್ತರಗತಿಯ
—ವಸತಿ ಮತ್ತು ಭೋಜನಗೃಹ—
ಸ್ವಸ್ತಿಕ್ ಲೋಜ್
ಫಳನೀರು ರಸ್ತೆ, ಮಂಗಳೂರು.
❀ ಗಾಳಿ ಬೆಳಕುಗಳಿಂದ ಸುಸಜ್ಜಿತವಾದ ಸಿಂಗಲ್ ಮತ್ತು ಡಬ್ಬಲ್ ಕೋಣೆಗಳು!
❀ ತೃಪ್ತಿಕರವಾದ ಸೇವೆ ಮತ್ತು ಸರ್ವಾನುಕೂಲತೆಗಳು!
❀ ಶಾಕಾಹಾರಿಗಳಿಗೆ ನುರಿತ ಬ್ರಾಹ್ಮಣ ಅಡಿಗೆ ಭಟ್ಟರಿಂದಲೇ ಭೋಜನ ಮತ್ತು ಉಪಾಹಾರ ತಯಾರಿಕೆ! ದರ ಸುಲಭ! ಸಂದರ್ಶಿಸಿ ಸಮಾಧಾನ ಪಡೆಯಿರಿ!!

ಮುಖ್ಯ ಪ್ರಕಟಣೆ
"ಆನಂದ ಸುಧಾ" ನಮ್ಮ [illegible] ಜನಗಳಿಗೆ ಬಲವನ್ನು [illegible] ಪುಷ್ಟಿಯನ್ನು ಕಲಗಿಸುವುದು. ಅನೇಕ [illegible]. ೧೫ ದಿನಗಳಿಗೆ ಸರಿ ಹೋಗುವ ೮ ಔ. ಸೀಸೆ ೧ಕ್ಕೆ ರೂ. 1—0—0.
"ಸ್ತ್ರೀ ಸುಧಾ" ನಮ್ಮ ಸ್ತ್ರೀ ಸುಧಾ [illegible] ಸಮಸ್ತ ಗರ್ಭಾಶಯ ವ್ಯಾಧಿಗಳನ್ನು [illegible] ದೋಷಗಳನ್ನು, [illegible] ಒಡನೆ [illegible]. ಮೊದಲಾದ ಸಮಸ್ತ ವ್ಯಾಧಿಗಳನ್ನು [illegible] ಸಂತಾನವನ್ನು ಕಲಗಿಸುವುದು. ಒಂದು ತಿಂಗಳಿಗೆ ಸರಿಹೋಗುವ ೧ ತೊಲದ ಡಬ್ಬಿ ರೂ. 4—0—0.
"ಬಾಲ ಸುಧಾ" [illegible] ಬಾಲಕರಿಗೆ ಅಜೀರ್ಣ, ಜ್ವರ, ಕೆಮ್ಮು, ಶೀತ, ಮಲಬದ್ಧತೆ, [illegible] ಅಲ್ಲದೆ ಬೆಳೆಯುವುದು [illegible] ಇವುಗಳಿಗೆ ಬಹಳ ಉಪಯುಕ್ತವಾದ [illegible] ಯೋಗ್ಯತಾ ಪತ್ರಗಳನ್ನು ಪಡೆದಿದೆ [illegible] ೧ ತಿಂಗಳಿಗೆ ಸರಿ ಹೋಗುವ [illegible] ೧ಕ್ಕೆ ರೂ. 1—0—0.
ಪ್ರೊಪ್ರೈಟರ್ಸ್:
ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್, ರಾಜಮಂಡ್ರಿ.
[illegible]
ಸುದರ್ಶನ ಆಯುರುವೇದ ವೈದ್ಯಶಾಲ, ನಗರ್ತರ ಪೇಟೆ, ಬೆಂಗಳೂರು-2.

ಗಳಿಸುವುದಲ್ಲದೆ, ವ್ಯಾಪಾರೀ ಪ್ರಯೋಜನವನ್ನೂ ಹೊಂದಬಹುದು. ಇವುಗಳೊಂದಿಗೆ ಭರದಿಂದ ಪ್ರಚಾರಕಾರ್ಯವನ್ನೂ ಸರಕಾರ ನಡೆಸಿದರೆ ಒಳಿತು—ದೇಶೀಯರಿಗಿಂತಲೂ ವಿದೇಶದ ಪ್ರವಾಸಿಕರನ್ನು ಆಕರ್ಷಿಸುವುದಕ್ಕೆ ಇಂತಹ ಉಪಕ್ರಮ ನಡೆಯಲೇ ಬೇಕು. ಪ್ರೇಕ್ಷಣೀಯ ಸ್ಥಳಗಳ ಮಹತ್ವವನ್ನು ದಿಗ್ದರ್ಶಿಸುವ ಸಚಿತ್ರ ಪುಸ್ತಕಗಳು, ಸಂಚಾರಕ್ಕೆ ಸಂಬಂಧಿಸಿದ ವಿವರಗಳನ್ನೊಡಗೊಂಡ ಕೈಪಿಡಿಗಳು, ಛಾಯಾಚಿತ್ರ ಹಾಗೂ, ಮಾಯಾಲಾಂದ್ರ ಪ್ರದರ್ಶನಗಳು ಮುಂತಾದವುಗಳ ಮೂಲಕ ವಿದೇಶೀ ಪ್ರವಾಸಿಕರ ಕುತೂಹಲವನ್ನು ಕೆರಳಿಸಬಲ್ಲವು. ಹೀಗೆ ಬರಮಾಡಿಕೊಂಡ ಅತಿಥಿಗಳ ಸೌಕರ್ಯಗಳನ್ನು ನೋಡಿಕೊಳ್ಳುವುದೂ ದೊಡ್ಡ ಹೊಣೆಯಾಗಿರುತ್ತದೆ

ಸರಕಾರದ ಗಮನ

ಭಾರತ ಸರಕಾರದವರು ಇತ್ತ ಗಮನವನ್ನು ಹರಿಸಿದಂತೆಯೇ ಇಲ್ಲ—ರೈಲ್ವೆಗಳು ೧೯೩೦ರ ಸುಮಾರಿಗೆ ದೊಡ್ಡ ಮುಗ್ಗಟ್ಟನ್ನು ಇದಿರಿಸಿದ ಕಾಲದಲ್ಲಿ ಬ್ರಿಟಿಷ ಸರಕಾರವು ಲಂಡನ್ ಮತ್ತು ನ್ಯೂಯಾರ್ಕ ನಗರಗಳಲ್ಲಿ ಪ್ರವಾಸಿಕರನ್ನು ಆಕರ್ಷಿಸುವುದಕ್ಕೋಸ್ಕರ ಕೇಂದ್ರಗಳನ್ನು ತೆರೆದದ್ದುಂಟು ಆದರೆ ಇದರಿಂದ ಲಾಭವೇನೂ ಆಗಲಿಲ್ಲ. ಸ್ವಾತಂತ್ರ್ಯೋತ್ತರದಲ್ಲಿ ಕೇಂದ್ರ ಸರಕಾರವು ಪ್ರವಾಸಪ್ರಿಯರಿಂದ ರಾಷ್ಟ್ರಕ್ಕೆ ದೊರಕುವ ಅಮೂಲ್ಯ ಪ್ರಯೋಜನವನ್ನು ಮನಗಂಡು ಒಂದು ಸಮಿತಿಯ ನೇಮಕ ಮಾಡಿ, ಪ್ರವಾಸ ಸೌಲಭ್ಯಗಳನ್ನು ಹೆಚ್ಚಿಸುವ ವಿಷಯದಲ್ಲಿ ವ್ಯಾವಹಾರಿಕವಾದ ಸೂಚನೆಗಳನ್ನು ಸ್ವಾಗತಿಸಿತು ಈ ಸಮಿತಿಯು ಪ್ರಾದೇಶಿಕರವಿಭಾಗಗಳ ಮೂಲಕ ತನ್ನ ಸ್ವರೂಪವನ್ನು ವ್ಯಾಪಕಗೊಳಿಸಿ, ಕೆಲಸಮಯದಿಂದೀಚೆಗೆ ಹೆಚ್ಚಿನ ಚಟುವಟಿಕೆಗಳನ್ನು ಪ್ರದರ್ಶಿಸುತ್ತದೆ. ನಾವೀಗ ಪ್ರಸಿದ್ಧ ಪತ್ರಿಕೆಗಳಲ್ಲಿ ಆಯಾ ರಾಜ್ಯ ಸರಕಾರದ ಪ್ರೇಕ್ಷಣೀಯ ಸ್ಥಳ ಮತ್ತಿತರ ವೈಶಿಷ್ಟ್ಯಗಳ ಉಲ್ಲೇಖಮಾಡಿ ಪ್ರವಾಸಿಕರಿಗೆ ಕರೆಕೊಡುವ ಪ್ರಕಟಣೆಗಳನ್ನೂ ಜಾಹೀರಾತುಗಳನ್ನೂ ನೋಡುತ್ತೇವೆ. ಭಾರತಕ್ಕೆ ವಿದೇಶೀ ಸಂದರ್ಶಕರು ಅಧಿಕಾಧಿಕ ಪ್ರಮಾಣದಲ್ಲಿ ಬರಬೇಕೆಂಬ ವಿಷಯಕ್ಕೆ ಹೆಚ್ಚಿನ ಪ್ರಾಧಾನ್ಯವನ್ನು ಇವರು ಸಲ್ಲಿಸಿದ್ದು, ಈ ಪ್ರಯತ್ನ ಬಹುಮಟ್ಟಿಗೆ ಯಶಸ್ಸು ಹೊಂದಿದೆ. ೧೯೫೧ರಲ್ಲಿ ೨೦೦೦೦ ವಿದೇಶೀಯರು ಭಾರತಕ್ಕೆ ಬಂದಿದ್ದರೆ, ೧೯೫೩ರಲ್ಲಿ ಇವರ ಸಂಖ್ಯಾಪ್ರಮಾಣ ೫೫೦೦೦ ಆಯಿತು. ಹೆಚ್ಚಾಗಿ ಡಾಲರ ಪ್ರದೇಶದಿಂದ-ಅರ್ಥಾತ್ ಅಮೇರಿಕಾದಿಂದ-ಪ್ರವಾಸಿಕರು ಬರಬೇಕೆಂದು ಸರಕಾರದ ಅಪೇಕ್ಷೆ. ಇದರಿಂದ ನಮ್ಮ ಹಣದ ವಿನಿಮಯ ಪರಿಸ್ಥಿತಿ ಸುಧಾರಿಸುತ್ತದೆ ಮೇಲಿನೆರಡು ವರ್ಷಗಳಲ್ಲಿ ಕ್ರಮವಾಗಿ ೩೫೦೦ ಮತ್ತು ೫೦೦೦ ಅಮೇರಿಕದ ನಾಗರಿಕರು ಭಾರತಕ್ಕೆ ಬಂದರು ಈ ವಿದೇಶೀಯರು ಭಾರತದಲ್ಲಿ ಕೈಗೊಳ್ಳುವ ಪ್ರವಾಸ ಬಹಳ ಅಮೂಲ್ಯವಾದದ್ದು-ಏಕೆಂದರೆ, ಭಾರತ ಸಂದರ್ಶನದ ಪರಿಣಾಮವಾಗಿ ಅವರಲ್ಲಿ ಮೂಡುವ ಭಾವನೆಗಳು ಜಾಗತಿಕ ಮಟ್ಟದಲ್ಲಿ ಭಾರತದ ಕೀರ್ತಿಯನ್ನು ಬೆಳಗುವುದಕ್ಕೆ ನೆರವಾಗುತ್ತವೆ ನಮ್ಮ ಸಂಸ್ಕೃತಿ ಮತ್ತು ಪ್ರಗತಿಯ ರಾಯಭಾರಿಗಳಾಗಿ ಇವರು ಹೊರಗೆ ಹೋಗುವರೆಂದರೆ ಅತಿಶಯೋಕ್ತಿಯಾಗದು. ಯುದ್ಧೋತ್ತರ ಕಾಲದಲ್ಲಿ ಶಾಂತಿಪಿಪಾಸೆಯಿಂದ ಪೀಡಿತರಾಗಿ, ಮರುಭೂಮಿಯ ನಡುವಣ ಜಲಾಶಯದಂತೆ ಭಾರತದೆಡೆಗೆ ಹೊರಳುವವರು ಅಧಿಕ—ಇಂಥವರು ನಮ್ಮ ಬಗ್ಗೆ, ನಮ್ಮ ಧ್ಯೇಯಧೋರಣಗಳ ಬಗ್ಗೆ, ನಮ್ಮ ಉದಾತ್ತ ಸಂಪ್ರದಾಯಗಳ ಬಗ್ಗೆ, ವಿವಿಧ ಚಟುವಟಿಕೆಗಳ ಬಗ್ಗೆ ತೃಪ್ತಿಯನ್ನೂ ಸಮಾಧಾನವನ್ನೂ ಹೊಂದುವಂತೆ, ನಾವು ಬದುಕಿನ ರೀತಿನೀತಿಯನ್ನು ಅಳವಡಿಸಿಕೊಳ್ಳುವುದು ಅಪೇಕ್ಷಣೀಯ. ಇದನ್ನು ನೆರವೇರಿಸುವಂತೆ, ಸರಕಾರ ಪ್ರಯತ್ನ ಶೀಲವಾಗಲೆಂದು ಹಾರೈಸೋಣ!

ಮರು ಚುನಾವಣೆಗಳ ಫಲಿತಾಂಶ

ಪೆಪ್ಸುವಿನಲ್ಲಿ ಜಯಗಳಿಸಿದ ಕಾಂಗ್ರೆಸ್ಸಿಗೆ ತಿರುಕೊಚ್ಚಿಯಲ್ಲಿ ನಿಶ್ಚಿತ ಬಹುಮತವಿಲ್ಲ

ಎರಡನೆಯ ಬಾರಿ ಮಹಾಚುನಾವಣೆಗಳು ಜರಗಿದ ತಿರುಕೊಚ್ಚಿ ಮತ್ತು ಪೆಪ್ಸು ರಾಜ್ಯಗಳಲ್ಲಿ ಇದೀಗ ಚುನಾವಣಾ ಫಲಿತಾಂಶಗಳು ಹೊರಬಿದ್ದು, ಸಾರ್ವಜನಿಕರಿಗಿದ್ದ ಕುತೂಹಲವು ಚರಮಾವಸ್ಥೆಯನ್ನು ಮುಟ್ಟಿದೆ. ಪೆಪ್ಸು ರಾಜ್ಯಕ್ಕಿಂತಲೂ ತಿರುಕೊಚ್ಚಿಯಲ್ಲಿ ಚುನಾವಣೆಯು ತುರುಸಿನದಾಗಿ ಕಂಡು ಬಂತು—ಅಲ್ಲಿ ಮತದಾನದ ಪ್ರಮಾಣವೂ ಪೆಪ್ಸುವಿನಲ್ಲಾದುದಕ್ಕಿಂತ ಹೆಚ್ಚು ಇದ್ದಿತು. ಸಾಮಾನ್ಯವಾಗಿ ಮರುಚುನಾವಣೆಯಲ್ಲಿ ಜನರಿಗೆ ಆಸಕ್ತಿ ಇರುವುದಿಲ್ಲ- ತಿರುಕೊಚ್ಚಿಯ ಪ್ರಸಂಗ ಇದಕ್ಕೆ ಅಪವಾದವೆಂದು ಹೇಳಬಹುದು. ಹೀಗೆ ಬಿರುಸಾಗಿ ನಡೆದ ಚುನಾವಣೆಯ ಫಲಿತಾಂಶವಾಗಿ ಭದ್ರವಾದ ಸರಕಾರವೊಂದನ್ನು ಆ ರಾಜ್ಯದಲ್ಲಿ ಸ್ಥಾಪಿಸಲು ಸಾಧ್ಯವಾಯಿತೋ, ಹೇಗೆಂದು ಕೇಳಿದರೆ ತೀರಾ ನಿರಾಶೆಯ ಉತ್ತರವನ್ನು ಕೊಡಬೇಕಾಗುತ್ತದೆ. ಏಕೆಂದರೆ, ತಿರು-ಕೊಚ್ಚಿಯಲ್ಲಿ ಯಾವ ಪಕ್ಷಕ್ಕೂ ನಿರ್ದಿಷ್ಟ ಬಹುಮತ ದೊರೆತಿಲ್ಲ. ಕಾಂಗ್ರೆಸು ಪಕ್ಷವು ಇದಿರಾಳಿಗಳ ಸ್ಪರ್ಧೆಯ ಮುಂದೆ, ಸೋಲನ್ನೊಪ್ಪಿಕೊಳ್ಳಬೇಕಾಗಿ ಬಂದಿದ್ದು, ಚುನಾವಣಾ ಫಲಿತಾಂಶ ಕಾಂಗ್ರೆಸಿಗೆ ಏನೇನೂ ಅನುಕೂಲವಾಗಿಲ್ಲ. ದಿನಾಂಕ ೧ನೇ ಸೋಮವಾರದ ವರೆಗೆ ಪ್ರಕಟವಾದ ೯೦ ಸ್ಥಾನಗಳ ಪೈಕಿ ಕಾಂಗ್ರೆಸಿಗೆ ದೊರೆತದ್ದು ೩೧ ಸ್ಥಾನಗಳು ಮಾತ್ರ

ಪ್ರತಿ ಪಕ್ಷದ ಮೇಲ್ಮೈ

ಒಟ್ಟು ೧೧೭ ಸದಸ್ಯರು ಇರುವ ತಿರುಕೊಚ್ಚಿಯ ಶಾಸನ ಸಭೆಯಲ್ಲಿ ಕಾಂಗ್ರೆಸು ನಿಶ್ಚಿತ ಬಹುಮತವನ್ನು ಪಡೆಯದಿದ್ದ ಪಕ್ಷದಲ್ಲಿ— ಮುಂದೆ ಯಾವ ರೀತಿ ಸರಕಾರವನ್ನು ರಚಿಸಲು ಸಾಧ್ಯವೋ ಹೇಳಲಾಗದು. ಕಾಂಗ್ರೆಸನ್ನು ಪ್ರತಿಭಟಿಸುವುದಕ್ಕೋಸ್ಕರ ಚುನಾವಣಾ ಒಪ್ಪಂದವನ್ನು ಮಾಡಿಕೊಂಡ ವಿರೋಧೀ ಗುಂಪುಗಳಲ್ಲಿ ಕಮ್ಯುನಿಸ್ಟರೂ ಪ್ರಜಾ ಸಮಾಜವಾದಿಗಳೂ ಕ್ರಾಂತಿಕಾರಿ ಸೋಶಲಿಸ್ಟರೂ ಕಾಂಗ್ರೆಸ ಇದಿರಾಳಿಗಳನ್ನು ಸೋಲಿಸುವುದರಲ್ಲಿ ಸಾಕಷ್ಟು ಯಶಸ್ಸು ಗಳಿಸಿದ್ದಾರೆ. ತಿರುಕೊಚ್ಚಿಯ ತಮಿಳು ಪ್ರದೇಶದಲ್ಲಿ ಭಾಷಾ ಪ್ರಶ್ನೆಯನ್ನು ಮುಂದೆ ಮಾಡಿ ಚುನಾವಣೆಗೆ ನಿಂತ ತ್ರಾವಣಕೋರ ತಮಿಳುನಾಡು ಕಾಂಗ್ರೆಸು ಜನರ ಮನವೊಲಿಸುವುದರಲ್ಲಿ ಸಮರ್ಥವಾಗಿ –ಕಾಂಗ್ರೆಸ ಉಮೇದ್ವಾರರಲ್ಲಿ ಹೆಚ್ಚಿನವರನ್ನು ಪರಾಭವಗೊಳಿಸಿದೆ ಮಂತ್ರಿಗಳಲ್ಲಿ ಶ್ರೀ ಮಾಧವನ ನಾಯರರು ಚುನಾವಣೆಯಲ್ಲಿ ಸೋತ ಸುದ್ದಿ ಪ್ರಕಟಗೊಂಡ ಕೂಡಲೇ ಅವರು ತಮ್ಮ ಹುದ್ದೆಗೆ ರಾಜೀನಾಮೆ ಕೊಟ್ಟರು ವಿಸರ್ಜಿತ ಶಾಸನ ಸಭೆಯ ಅಧ್ಯಕ್ಷರಾಗಿ ಕೆಲಸ ಮಾಡಿದ ಶ್ರೀ ನೀಲಕಂಠ ಪಿಳ್ಳೆಯವರನ್ನು ಪ್ರಜಾ ಸಮಾಜವಾದಿ ಧುರೀಣ (ಹಾಗೂ ಮಾಜಿ ಮಂತ್ರಿ) ಶ್ರೀ ಪಟ್ಟಂಥಾನು ಪಿಳ್ಳೆಯವರು ಪ್ರಚಂಡ ಬಹುಮತದಿಂದ ಸೋಲಿಸಿ ವಿಜಯ ಗಳಿಸಿದರು. ಕಾಂಗ್ರೆಸು ನೀಲಕಂಠ ಪಿಳ್ಳೆಯವರ ಉಮೇದ್ವಾರಿಕೆಯನ್ನು ಸಮರ್ಥಿಸುತಿತ್ತಿಲ್ಲವೆ—ತನ್ನ ಪರವಾಗಿ ಯಾರನ್ನೂ ನಿಲ್ಲಿಸಿರಲಿಲ್ಲ.

ಭದ್ರ ಸರಕಾರ ಸಾಧ್ಯವೆ?

ಪೆಪ್ಸುದಲ್ಲಿ ಮಾತ್ರ ಕಾಂಗ್ರೆಸಿಗೆ ನಿಶ್ಚಿತ ಬಹುಮತ ದೊರಕುವ ಸಂಪೂರ್ಣ ಲಕ್ಷಣಗಳು ಕಂಡುಬಂದಿವೆ—ಅಕಾಲಿದಳ ಮತ್ತು ಕಮ್ಯೂನಿಸ್ಟ ಪಕ್ಷಗಳು ನಿರೀಕ್ಷಿಸಿದುದಕ್ಕಿಂತ ಹೆಚ್ಚು ಸೋಲನ್ನು ಕಂಡವು. ಇಲ್ಲಿ ಕಾಂಗ್ರೆಸು ಪಕ್ಷವು ಸರಕಾರವನ್ನು ರಚಿಸಿ, ಭದ್ರವಾದ ರೀತಿಯಲ್ಲಿ ಆಡಳಿತದ ಹೊಣೆಯನ್ನು ಹೊರುವ ಭರವಸೆ ಇದೆ. ಈ ಮಾತನ್ನು ತಿರುಕೊಚ್ಚಿಯ ಮಟ್ಟಿಗೆ ಹೇಳಲು ಸಾಧ್ಯವಿಲ್ಲ. ಅಲ್ಲಿ ಕಾಂಗ್ರೆಸು ಪಕ್ಷದ ಸದಸ್ಯರ ಸಂಖ್ಯಾ ಪ್ರಮಾಣ ಉಳಿದ ಯಾವುದೊಂದು ಪಕ್ಷದ ಸದಸ್ಯರಿಗಿಂತ ಅಧಿಕ ಕಂಡುಬಂದರೂ ನಿಶ್ಚಿತ ಬಹುಮತವಿಲ್ಲದ ಪೆನೆಯಿಂದ ಏನನ್ನೂ ಮಾಡಲು ಬರುವುದಿಲ್ಲ ಸ್ವತಂತ್ರ ಹುರಿಯಾಳುಗಳು ಕಾಂಗ್ರೆಸಿನೊಡನೆ ಸಹಕರಿಸಿದರೆ, ಸರಕಾರವನ್ನು ರಚಿಸಬಹುದೋ ಎಂದು ಯಾರಿಗಾದರೂ ತೋರೀತು— ಆದರೆ ಸ್ವತಂತ್ರ ಸದಸ್ಯರೆಲ್ಲ ಕಾಂಗ್ರೆಸಿಗೆ ವಿರೋಧ ನಿಂತು ಆರಿಸಿ ಬಂದವರಷ್ಟೇ ಅಲ್ಲ, ಇತರ ವಿರೋಧೀ ಗುಂಪುಗಳ ಬೆಂಬಲದೊಡನೆ ಈ ಸ್ವತಂತ್ರರು ಕಾಂಗ್ರೆಸ್ಸನ್ನು ಇದಿರಿಸಿದ್ದರು. ಆದುದರಿಂದ ಇವರು ಯಾರೂ ಸಹಕರಿಸುವ ಪ್ರಶ್ನೆ ಇಲ್ಲ. ಇನ್ನುಳಿದ ದಾರಿಯೆಂದರೆ, ವಿರೋಧೀ ಗುಂಪುಗಳು ಪರಸ್ಪರ ಸಹಕರಿಸಿ, ಮಂತ್ರಿಮಂಡಳವನ್ನು ರಚಿಸುವುದು. ಇದು ಎಷ್ಟರಮಟ್ಟಿಗೆ ವ್ಯವಹಾರದಲ್ಲಿ ಸಿದ್ಧಿಸುವುದೋ ಹೇಳುವಂತಿಲ್ಲ. ಚುನಾವಣೆಗಳ ಮಟ್ಟಿಗೆ ಮಾಡಿಕೊಂಡ ಒಪ್ಪಂದ, ಫಲಿತಾಂಶಗಳು ಪ್ರಕಟಗೊಂಡ ಮೇಲೆ ಎಷ್ಟರ ಮಟ್ಟಿಗೆ ಊರ್ಜಿತದಲ್ಲಿ ಉಳಿಯುತ್ತವೋ ಎಂಬ ಸಂಶಯದ ಜೊತೆಗೆ-ಇಂತಹ ಐಕ್ಯರಂಗ ಕೆಲವೇ ಸಮಯದೊಳಗೆ ಏಳಬಹುದಾದ ಭಿನ್ನಾಭಿಪ್ರಾಯಗಳಿಂದ ನುಚ್ಚುನೂರಾಗಲಿಕ್ಕಿಲ್ಲವೇ ಎಂಬ ತರ್ಕವೂ ತಲೆ ಎತ್ತುತ್ತದೆ. ಹಾಗಾಗುವುದೇ ನಿಜವೆಂದಿದ್ದರೆ—ತಿರುಕೊಚ್ಚಿಯಲ್ಲಿ ರಾಷ್ಟ್ರಾಧ್ಯಕ್ಷರ ಆಳಿಕೆಯೊಂದೇ ಜರೆದಿರುವ ಕ್ರಮ. ಅಂತೂ ತಿರುಕೊಚ್ಚಿಯಲ್ಲಿ ಕಾಂಗ್ರೆಸು ಅನುಭವಿಸಿದ ಸೋಲು ಶುಭ ಸೂಚಕವಲ್ಲ—ರಾಷ್ಟ್ರದ ಭದ್ರತೆಗೂ ಭವಿಷ್ಯಕ್ಕೂ ಪೋಷಕವಾದದ್ದಲ್ಲ.

SEASON DEPOSITS.

Are now accepted for periods from 3 to 6 months 3½% interest per annum for amounts of Rs. 500/- and multiples thereof. No deposit is allowed to run beyond 15—10 - 1954.

Attractive rates of interest are offered for Fixed Deposits for periods ranging from 1 to 24 months.

Banking transactions of all kinds are undertaken.

Branches throughout South Kanara, and one each in Mercara and Fort, Bombay.

THE VIJAYA BANK LIMITED,
Head Office: MANGALORE.

ಚ್ಯವನಪ್ರಾಶ

ಹಿಮಾಲಯದ ಉತ್ಕೃಷ್ಟ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಚ್ಯವನಪ್ರಾಶವು ಕ್ಷಯ, ದುರ್ಬಲತೆ ಇತ್ಯಾದಿ ಕಾಹಿಲೆಗಳಿಗೆ ದಿವ್ಯೌಷಧಿ. ವಯೋವೃದ್ಧರಿಗೆ ವಿಶೇಷ ಪರಿಣಾಮಕಾರಿಯಾಗಿದೆ. ಎಳೆ ಮಕ್ಕಳನ್ನೂ ಗಟ್ಟಿಮುಟ್ಟಾಗಿಯೂ ಆರೋಗ್ಯವಂತರಾಗಿಯೂ ಇರಗೊಡಿಸುವುದು. ಚ್ಯವನಪ್ರಾಶವನ್ನು ಸತತ ಉಪಯೋಗಿಸುವುದರಿಂದ ಆಯುಸ್ಸು ವೃದ್ಧಿಯಾಗುವುದು. ಪರೀಕ್ಷಾರ್ಥವಾಗಿ ಕೆಳಗಿನ ವಿಳಾಸಕ್ಕೆ ಬರೆದು ಒಮ್ಮೆ ತರಿಸಿ ನೋಡಿರಿ. ಸೇರಿಗೆ ರೂಪಾಯಿ 10/- ಬೆಲೆ.

ಕಾಲಿಕಮಾಲಿ ಆಯುರ್ವೇದ ಫಾರ್ಮಸಿ, ಋಷಿಕೇಶ (ಡೆಹರಾಡೂನ್)
Kali Kamali Ayurved Pharmacy, RISHIKESH (Dehradun.)

ಸ್ವಿಸ್ ತಯಾರಿ ರಿಸ್ಟ್ ವಾಚು
ಬೆಲೆ ರೂ. 5/- ಮಾತ್ರ.



ರೂಪಾಯಿ 5/-ಕ್ಕೆ ಸ್ವಿಸ್ ತಯಾರಿ ರಿಸ್ಟ್ ವಾಚು ಮತ್ತು ಸ್ಟೆಂಡಾರ್ಡ ಫೌಂಟನ್ ಪೆನ್ ದೊರೆಯುವುದು. 15 ವರುಷಗಳ ಗ್ಯಾರಂಟಿ.
ರೂಪಾಯಿ 1-2-0 ಟಪ್ಪಾಲು ವೆಚ್ಚ ಪ್ರತ್ಯೇಕ.
ಇಂದೇ ಬರೆಯಿರಿ:

National Swiss Watch Suppliers,
Halka No. 28 (BG) Meerut (U. P.)

ಮದ್ರಾಸು ಹಾಗೂ ಕೇಂದ್ರಸರಕಾರಗಳ ಕೊರತೆಯ ಮುಂಗಡಪತ್ರ

ಹೊಸ ತೆರಿಗೆ ಹಾಗೂ ಕೊರತೆ ಧನ ವಿನಿಯೋಗ

ಕಳೆದವಾರ ಮದ್ರಾಸು ಶಾಸನ ಸಭೆಯ ಮುಂದೆಯೂ ಕೇಂದ್ರ ಪಾರ್ಲಿಮೆಂಟಿನಲ್ಲಿಯೂ ಮುಂದಿನ ವರ್ಷದ ಮುಂಗಡ ಪತ್ರಗಳು ಮಂಡಿಸಲ್ಪಟ್ಟವು. ಮದ್ರಾಸಿನಲ್ಲಿ ಗವರ್ನರರ ಭಾಷಣದ ಮೇಲೆ ಚರ್ಚೆಯು ನಡೆದು ಪ್ರತಿಪಕ್ಷದ ಟೀಕೆ ಮತ್ತು ಸಲಹೆ ಸೂಚನೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, ಅವುಗಳ ಬೆಲೆಯನ್ನು ವಿಮರ್ಶಿಸುವ ಚೊಕ್ಕ ಭಾಷಣಗಳನ್ನು ಉತ್ತರ ರೂಪದಲ್ಲಿ ಮಂತ್ರಿ ಭಕ್ತವತ್ಸಲಮರು ಮಾಡಿದರು. ಗವರ್ನರರ ಭಾಷಣದಲ್ಲಿದ್ದ ಒಂದು ಸಾವಿರ ಜನವಸತಿ ಇರುವ ಪ್ರತಿಯೊಂದೂ ಹಳ್ಳಿಗೆ ಪ್ರಾಥಮಿಕ ಶಾಲೆಯೊಂದು ಇರುವಂತೆ, ೧೦ ಶಾಲೆಗಳನ್ನು ಹೊಸದಾಗಿ ತೆರೆಯುವ ಸೂಚನೆಯನ್ನು ಸ್ವಾಗತಿಸಿದವರು ಪರುಳೇಕರ ಸಮಿತಿಯ ಸಲಹೆಗಳನ್ನು ಕಾರ್ಯಗತಗೊಳಿಸುವ ವಿಷಯದಲ್ಲಿ ಸರಕಾರದ ಮನೋಭಾವ ಪ್ರೋತ್ಸಾಹದಾಯಕವಾಗಿ ಕಾಣುವುದಿಲ್ಲೆಂದು ಟೀಕಿಸಿದರು. ಭೂಸುಧಾರಣೆಯ ಕುರಿತು ಒತ್ತಾಯವನ್ನು ನೀಡಿದ ಸದಸ್ಯರಿಗೆ ಉತ್ತರ ಕೊಡುತ್ತಾ ಸಾವಧಾನಚಿತ್ತದಿಂದ ಸರಕಾರ ಈ ವಿಷಯವನ್ನು ಪರಿಶೀಲಿಸುತ್ತಿದೆಯಾಗಿ ಮಂತ್ರಿಗಳು ತಿಳಿಸಿದರು. ಇದೇ ಜೂನು ಅಂತ್ಯದೊಳಗೆ ಜಿಲ್ಲಾ ಬೋರ್ಡುಗಳ ಚುನಾವಣಾ ಕಾರ್ಯವನ್ನು ನೆರವೇರಿಸುವ ಭರವಸೆಯನ್ನು ಮಂತ್ರಿಗಳು ನೀಡಿದ್ದಲ್ಲದೆ, ಜಿಲ್ಲಾ ಬೋರ್ಡುಗಳ ಭವಿತವ್ಯವನ್ನು ವಿಚಾರಿಸಿ, ಅವುಗಳ ಸ್ಥಾನದಲ್ಲಿ ನಮಗೆ ಬೇಕಾದ ಸ್ಥಳೀಯ ಸಂಸ್ಥೆಗಳ ವಿಚಾರವನ್ನೂ ಗ್ರಾಮ ಪಂಚಾಯತುಗಳ ಸಂಗತಿಯನ್ನೂ ವಿಮರ್ಶಿಸಲು ಸಮಿತಿಯೊಂದನ್ನು ನೇಮಿಸುವ ಇರಾದೆಯನ್ನು ವ್ಯಕ್ತಪಡಿಸಿದರು. ಹೀಗೆ ಸಮಾಧಾನ ಹೇಳಿದ ಮೇಲೆ- ಶಾಸನಾಂಗದ ಎರಡೂ ಮನೆಗಳಲ್ಲೂ ಗವರ್ನರರಿಗೆ ಅಭಿನಂದನೆ ಅರ್ಪಿಸುವ ಠರಾವು ಮಂಜೂರಾಯಿತು.

ಕೊರತೆಯ ಬಜೆಟು

ಆ ಮೇಲೆ ಅರ್ಥ ಸಚಿವ ಶ್ರೀ ಸುಬ್ರಹ್ಮಣ್ಯಮ್‌ರವರು ಮುಂಗಡ ಪತ್ರವನ್ನು ಮಂಡಿಸಿ, ಭಾಷಣ ಮಾಡಿದರು. ಆಂಧ್ರ ಪ್ರದೇಶಗಳು ಪ್ರತ್ಯೇಕಗೊಂಡ ಬಳಿಕ, ಉಳಿಕೆಯ ಮದ್ರಾಸು ರಾಜ್ಯದ ಇಡೀ ವರ್ಷದ ಚಿತ್ರ ಕೊಡುವ ಪ್ರಥಮ ಮುಂಗಡ ಪತ್ರವಿದಾದುದರಿಂದ—ಸ್ವಭಾವಿಕವಾಗಿಯೇ ಇದಕ್ಕೆ ಮಹತ್ವ ಬರುತ್ತದೆ. ಅರ್ಥ ಸಚಿವರ ಮುಂಗಡ ಪತ್ರ ೫೮ ಲಕ್ಷ ರೂಪಾಯಿಗಳ ಕೊರತೆಯನ್ನು ಸೂಚಿಸುತ್ತದೆ. ಇದನ್ನು ತುಂಬಿಸುವುದಕ್ಕೋಸ್ಕರ ಕೆಲವು ಹೊಸ ತೆರಿಗೆಗಳನ್ನು ಹೊರಿಸಲು ಸರಕಾರ ಬಯಸುತ್ತದೆ. ಇವುಗಳಲ್ಲಿ (೧) ೫೦೦ ರೂಪಾಯಿಗಿಂತ ಹೆಚ್ಚು ತೀರ್ವೆ ತೆರುವ ಪಟ್ಟಾದಾರರು ಕೊಡಬೇಕಾದ ಭೂಕಂದಾಯದ ಸರಚಾರ್ಜು, (೨) ೧೯೪೭ನೇ ಇಸವಿಯಿಂದೀಚೆಗೆ ಕೈಗೂಡಿಸಲಾದ ನೀರಾವರಿ ಯೋಜನೆಗಳಿಂದ ಲಾಭ... ಪಡೆವ ಭೂಮಿಗಳ ಮೇಲೆ ಅಭಿವೃದ್ಧಿ ತೆರಿಗೆ, (೩) ಕಾಫಿ, ಚಾ, ರಬ್ಬರು, ಏಲಕ್ಕಿ ಮುಂತಾದ ತೋಟದಲ್ಲಿ ಉತ್ಪಾದಿಸಲ್ಪಡುವ ರೊಕ್ಕದ ಪೈರುಗಳ ಮೇಲೆ ಕೃಷಿ ಆದಾಯ ಕರವನ್ನು ಹೇರುವುದು (೪) ಚಿನ್ನಾಭರಣ ಮತ್ತು ಕೃತಕ ರತ್ನಗಳ ಮೇಲೆ ಸೌಂದರ್ಯ ತೆರಿಗೆ ಹೊರಿಸುವುದು ಮುಂತಾದವು ಸಮಾವೇಶಗೊಂಡಿವೆ. ಬೇಗನೇ ಕೆಡುವ ಮಾಂಸ, ಮೀನು, ಮೊಟ್ಟೆ, ತರಕಾರಿ, ಹಣ್ಣು ಹಂಪಲುಗಳ ಮೇಲಿನ ಮಾರಾಟ ತೆರಿಗೆಯನ್ನು ರದ್ದು ಮಾಡಲು ಸರಕಾರ ನಿರ್ಧರಿಸಿದೆ. ಕೈಮಗ್ಗದ ಬಟ್ಟೆಯ ಪರಿಸ್ಥಿತಿಯನ್ನು ಊರ್ಜಿತಗೊಳಿಸುವುದಕ್ಕೋಸ್ಕರ ಉಣ್ಣೆ, ರೇಶ್ಮೆ ಹಾಗು ಗಿರಣಿ ಬಟ್ಟೆಗಳ ಮೇಲಿನ ತೆರಿಗೆಯನ್ನು ರೂಪಾಯಿಗೆ ೧೫ ಪೈಯಂತೆ ಏರಿಸಲು ಸರಕಾರ ಉದ್ದೇಶಿಸಿದೆ. ಈ ತೆರಿಗೆಗಳು ಸಾಮಾಜಿಕ ನ್ಯಾಯದ ತಳಹದಿಯ ಮೇಲೆ ನಿಂತಿವೆಯೆಂದೂ ಬಡವರ ಮೇಲೆ ಅಧಿಕ ಕರಭಾರ ಬೀಳುವುದಿಲ್ಲವೆಂದೂ ರಾಜಾಜಿಯವರೂ ಅರ್ಥ ಸಚಿವರೂ ವಿವರಿಸಿದರು. ಈ ತೆರಿಗೆಗಳು ಕೊರತೆಯನ್ನು ೧೮ಲಕ್ಷ ರೂಪಾಯಿಗಳಿಗೆ ಇಳಿಸುತ್ತವೆಂದು ಸರಕಾರ ನಿರೀಕ್ಷಿಸುತ್ತದೆ.

ಅಭಿವೃದ್ಧಿಯ ವೆಚ್ಚ

ವೆಚ್ಚದ ವಿಷಯದಲ್ಲಿ ಅಭಿವೃದ್ಧಿ ಪ್ರಯತ್ನಗಳಿಗೆ ಪ್ರಥಮ ಪ್ರಾಶಸ್ತ್ಯವನ್ನು ಸಲ್ಲಿಸಲಾಗುವುದು—೨೩೨ ಕಾಮಗಾರಿಗಳನ್ನು ಹೊಸತಾಗಿ ಪ್ರಾರಂಭಿಸಲು ರಾಜ್ಯಸರಕಾರ ಉದ್ದೇಶಿಸಿದ್ದು, ಇವುಗಳ ಪ್ರಯೋಜನವು ಎಲ್ಲ ಪ್ರದೇಶಕ್ಕೂ ದೊರೆಯುತ್ತದೆ. ಸಣ್ಣ ನೀರಾವರಿ ಕೆಲಸಗಳಿಗೆ ವಿಶೇಷ ಪ್ರೋತ್ಸಾಹವನ್ನು ಸರಕಾರ ಕೊಡುವುದಲ್ಲದೆ, ಹಳ್ಳಿಗಳಿಗೆ ವಿದ್ಯುಚ್ಛಕ್ತಿಯ ಸೌಕರ್ಯಗಳನ್ನು ಒದಗಿಸುವ ವಿಶೇಷ ಪ್ರಯತ್ನಗಳನ್ನು ಮುಂದೊತ್ತಲಾಗುವುದು. ಸರಕಾರದವರು ೧೯೫೧ನೇ ಇಸವಿಯಲ್ಲಿ ಆದಾಯದಲ್ಲಿ ನೂರಕ್ಕೆ ೪೮ ಮಾತ್ರ ಸಾರ್ವಜನಿಕ ಉಪಯೋಗದ ಯೋಜನೆಗಳಿಗೆ ವೆಚ್ಚಮಾಡುತ್ತಿದ್ದರು—ಆದರೆ ಈಗ ಈ ಪ್ರಮಾಣ ಶೇಕಡಾ ೬೬ ಆಗಿರುತ್ತದೆ. ಕಲ್ಯಾಣ ರಾಷ್ಟ್ರವನ್ನು ಕಟ್ಟುವುದೇ ಸರಕಾರದ ಉದ್ದೇಶವಾದುದರಿಂದ ಆಡಳಿತದ ವೆಚ್ಚವನ್ನು ಲೋಕೋಪಕಾರದ ವೆಚ್ಚದೊಂದಿಗೆ ತೂಗಿಸಿಕೊಳ್ಳಲೇಬೇಕಾಗಿ ಬಂದಿರುತ್ತದೆ. ಪಂಚವಾರ್ಷಿಕ ಯೋಜನೆಯಂತೆ ೮೨ ಕೋಟಿ ರೂಪಾಯಿಗಳ ಹೊಣೆ ರಾಜ್ಯ ಸರಕಾರದ ಮೇಲಿದ್ದು ಸಾರ್ವಜನಿಕರ ಸಹಕಾರವಿಲ್ಲದಿದ್ದರೆ, ಯೋಜನೆಗಳನ್ನು ಕಾರ್ಯಗತಗೊಳಿಸಲು ಸಾಧ್ಯವಿಲ್ಲ. ಕೇಂದ್ರ ಸರಕಾರದ ಉದಾರ ಸಹಾಯವನ್ನು ರಾಜ್ಯ ಸರಕಾರ ನಿರೀಕ್ಷಿಸುತ್ತದಲ್ಲದೆ, ಸಾರ್ವಜನಿಕ ಸಾಲವನ್ನು ಎತ್ತಲೂ ನೋಡುತ್ತದೆ. ಅತ್ಯಧಿಕ ಪ್ರಮಾಣದಲ್ಲಿ ಉಳಿತಾಯಕ್ಕೆ ತೊಡಗದಿದ್ದರೆ ನಮ್ಮ ಅಭಿವೃದ್ಧಿ ಯೋಜನೆಗಳು ರೂಪುಗೊಳ್ಳುವಂತೆಯೇ ಇಲ್ಲ – ಎಂದು ಮುಂತಾಗಿ ಮಂತ್ರಿಗಳು ವಿವರಿಸಿದರು.

ದೇಶಮುಖರ ಭಾಷಣ

ಪಾರ್ಲಿಮೆಂಟಿನಲ್ಲಿ ಮಂಡಿಸಲಾದ ಭಾರತ ಸರಕಾರದ ಮುಂಗಡ ಪತ್ರವೂ ಮುಂದಿನ ವರ್ಷಕ್ಕೆ ೨೬ ಕೋಟಿ ರೂಪಾಯಿಗಳ ಅಂದಾಜು ಕೊರತೆಯನ್ನು ತೋರಿಸುತ್ತದೆ. ಇದನ್ನು ತುಂಬಿಕೊಳ್ಳಲು ಕರಭಾರವನ್ನು ಪುನರ್ವ್ಯವಸ್ಥೆಗೆ ಗುರಿಪಡಿಸಲು ನೋಡಲಾಗಿದ್ದು, ಅಡಿಕೆಯ ಮೇಲಿನ ಕರವನ್ನು ರಾತಲಿಗೆ ಆರೂವರೆ ಆಣೆಯಷ್ಟು ಏರಿಸುವುದು, ಹತ್ತಿಯ ನಿರ್ಯಾತವ್ಯಾಪಾರದ ಮೇಲೆ ಸುಂಕ ತೆಗೆದು ಹಾಕಿ, ಅದರ ಬದಲು ಅತಿಜಿನುಗು ಬಟ್ಟೆಯ ಮೇಲೂ ಕೃತಕ ರೇಶ್ಮೆ ವಸ್ತ್ರದ ಮೇಲೂ ಅಬಕಾರಿ ಸುಂಕ ಹೇರುವುದು. ಸಿಮೆಂಟು, ಪಾದರಕ್ಷೆಗಳು, ಸಾಬೂನು ಮುಂತಾದ ಕೆಲವು ದ್ರವ್ಯಗಳ ಮೇಲೆ ಕರಾಕರಣೆ ಮಾಡುವುದು ಮುಂತಾದ ಕ್ರಮಗಳಿಂದ ಸುಮಾರು ೧೧೪೫ ಲಕ್ಷ ರೂಪಾಯಿಗಳನ್ನು ಗಳಿಸಲು ಸರಕಾರ ನೋಡುತ್ತದೆ. ಆ ಮೇಲೆಯೂ ೧೪೨೧ ಲಕ್ಷ ರೂಪಾಯಿಗಳ ಕೊರತೆಯುಳಿವುದಲ್ಲದೆ, ಮುಂದಿನ ವರ್ಷಕ್ಕೆ ಭಾರತ ಸರಕಾರದ ಸಾಮಾನ್ಯ ಹಣಕಾಸಿನ ಪರಿಸ್ಥಿತಿಯು ೫೫ ಕೋಟಿ ರೂಪಾಯಿಗಳ ಕೊರತೆಯ ಮಟ್ಟವನ್ನು ಮುಟ್ಟುತ್ತದೆ.-ಇದರಿಂದ ಯಾವುದೇ ತರದ ಅನಿಷ್ಟ ಪರಿಣಾಮವಾಗಲಾರದೆಂಬ ಭರವಸೆಯನ್ನು ದೇಶಮುಖರು ವ್ಯಕ್ತಗೊಳಿಸಿದ್ದು ನಾವು ಭಯ ರಹಿತರಾಗಿ ಇಷ್ಟು ಮಟ್ಟಿಗೆ ಕೊರತೆ ಧನವಿನಿಯೋಗ ಪದ್ಧತಿಯನ್ನು ಅವಲಂಬಿಸಬಹುದೆಂದು ಅವರ ಅಭಿಪ್ರಾಯ. ಭಾರತವು ಶಸ್ತ್ರಾಸ್ತ್ರಗಳ ಸ್ಪರ್ಧೆಗೆ ಇಳಿಯದೆ, ಅಭಿವೃದ್ಧಿ ಕಾರ್ಯಗಳಿಗೋಸ್ಕರ ತನ್ನೆಲ್ಲ ಸಂಪತ್ತನ್ನು ಉಪಯೋಗಿಸುವುದೆಂದು ಅರ್ಥಸಚಿವರು ಸಾರಿದರು. ಸಂರಕ್ಷಣಾ ವೆಚ್ಚವು ಕೇವಲ ಆರುಕೋಟಿ ರೂಪಾಯಿಗಳಷ್ಟು ಏರುತ್ತದೆ—ಆದರೆ ಪಂಚವಾರ್ಷಿಕ ಯೋಜನೆಯ ಕಾರ್ಯಾಚರಣೆಗಾಗಿ ವೆಚ್ಚಮಾಡಬೇಕಾದ ಹಣದ ಮೊತ್ತ ಬಹಳ ದೊಡ್ಡದಿದೆ. ರಾಜ್ಯ ಸರಕಾರಗಳು ಹೊಸತಾಗಿ ಆದಾಯದ ಉಪಾಯಗಳನ್ನು ಕಂಡುಕೊಳ್ಳುವುದು ಅಗತ್ಯವೆಂದೂ ನಾಗರಿಕರಲ್ಲಿ ಉಳಿತಾಯದ ಮನೋಭಾವ ಬೆಳೆದು ಬರಬೇಕೆಂದೂ ಹೇಳುತ್ತಾ, ದೇಶಮುಖರು, ಭಾರತದ ಪ್ರಗತಿಯ ಸುಂದರ ಚಿತ್ರವನ್ನು ಲೋಕಸಭೆಯ ಸದಸ್ಯರ ಮುಂದೆ ಇಟ್ಟು, ವಿವರಿಸಿದರು.

ರಾಜ್ಯಗಳ ಪುನರ್ಘಟನೆ-

ರಾಜ್ಯಗಳ ಪುನರ್ವಿಂಗಡಣೆಯ ಪ್ರಶ್ನೆಯನ್ನು ವಿಚಾರಿಸಲು ನೇಮಕಗೊಂಡ ಆಯೋಗವು ಈಚೆಗೆ ಕೆಲವು ಸಲ ಕೂಡಿ, ಸಾರ್ವಜನಿಕರಿಂದ ತನಗೆ ದೊರೆಯಬಹುದಾದ ಅಮೂಲ್ಯ ಸೂಚನೆಗಳನ್ನೂ ಸಲಹೆಗಳನ್ನೂ ಸ್ವಾಗತಿಸುವ ಪ್ರಕಟನೆ ಹೊರಡಿಸಿದೆ. ಆಯೋಗವು ತನಗೊಪ್ಪಿಸಲಾದ ಕಾರ್ಯವನ್ನು ಆದಷ್ಟು ಬೇಗನೆ ಮುಗಿಸಿ ಬಿಡಬೇಕೆಂದು ಸಂಕಲ್ಪಿಸಿ, ಪ್ರಶ್ನಾವಳಿಯನ್ನು ತಯಾರಿಸಿ ಉತ್ತರ ತರಿಸುವ ಹವ್ಯಾಸವನ್ನು ಬಿಟ್ಟುಕೊಟ್ಟಿದ್ದು, ಸಾರ್ವಜನಿಕರು ಮತ್ತು ಸಂಘ ಸಂಸ್ಥೆಗಳು ಆಯೋಗದ ಕೆಲಸಕ್ಕೆ ನೆರವು ದೊರೆಯಬಹುದೆಂಬ ವಿಷಯಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಲಿಖಿತ ಮನವಿಗಳ ಮೂಲಕ ಎಪ್ರೀಲು ತಿಂಗಳ ೨೪ನೇ ತಾರೀಕಿನೊಳಗೆ ಮುಟ್ಟುವಂತೆ ಕಳಿಸಬೇಕಾಗಿ ಪ್ರಾರ್ಥಿಸಿದೆ. ರಾಜ್ಯಗಳ ಪುನರ್ಘಟನೆಯ ವಿಷಯದಲ್ಲಿ ಗಮನಿಸಬೇಕಾದ ಸಂಗತಿಗಳನ್ನು ಭಾರತ ಸರಕಾರ ಈ ರೀತಿಯಾಗಿ ನಿರ್ಧರಿಸಿದೆ—೧.ಆಯಾ ಪ್ರದೇಶದ ಭಾಷೆ ಮತ್ತು ಸಂಸ್ಕೃತಿ ಅಲ್ಲಿಯ ಸಾಮಾನ್ಯ ಜೀವನ ಪದ್ಧತಿಯನ್ನು ವ್ಯಕ್ತಪಡಿಸುವುದರಿಂದ ಮಹತ್ವದ ವಿಷಯವಾಗುತ್ತದೆ. ಇದರೊಂದಿಗೆ ಭಾರತದ ಐಕ್ಯ ಮತ್ತು ಭದ್ರತೆಯನ್ನು ಕಾಪಾಡುವುದು, ಬಲಸಂವರ್ಧಿಸಿಕೊಳ್ಳುವುದು, ಇಡೀ ದೇಶದ ದೃಷ್ಟಿಯಿಂದ ಆರ್ಥಿಕ, ಹಣಕಾಸು, ಆಡಳಿತ ವಿಚಾರಗಳನ್ನು ಗಮನಿಸುವುದು, ಈಗ ಕೈಗೊಂಡಿರುವ ರಾಷ್ಟ್ರೀ

(೮ನೇ ಪುಟ ನೋಡಿರಿ)

1953 ANOTHER YEAR OF RECORD PROGRESS:

PREMIUMS & OTHER INCOME	Rs	8,40,000
NEW BUSINESS COMPLETED	Rs	31,86,250
LIFE & RESERVE FUNDS	Rs	32,65,000
BUSINESS IN FORCE	Rs	1,43,00,000

We thank all those who have made this progress possible with their co-operation and patronage. We look forward to this co-operation in a greater measure during the year 1954 - the SILVER JUBILEE Year of the "POPULAR"

POPULAR INSURANCE COMPANY LIMITED
Popular Buildings - MANGALORE.
Estd 1929

ಪ್ರಕಟಣೆ

ತೋನ್ಸೆ ಪಂಚಾಯತ ಬೋರ್ಡು.

ಈ ಬೋರ್ಡು ವ್ಯವಹಾರಕ್ಷೇತ್ರಕ್ಕೆ ಒಳಪಟ್ಟ ಕೆಮ್ಮಣ್ಣು ಹಪ್ತೆವಾರು ಸಂತೆ, ದಿನಚರಿಯ ಮೀನು ಮಾರ್ಕೆಟು ಮತ್ತು ಪಡುಕುದ್ರು ಪಾರಿಯಲ್ಲಿ ಕೂಡ 1954ನೇ ಇಸವಿ ಎಪ್ರಿಲ್ ತಾರೀಕು 1ರಿಂದ 1955ನೇ ಇಸವಿ ಮಾರ್ಚ್ ತಾರೀಕು 31ರ ವರೆಗೆ ವಸೂಲು ಮಾಡುವ ಸ್ವಾತಂತ್ರ್ಯವನ್ನು ಇದೇ ಮಾರ್ಚ್ ತಿಂಗಳ ತಾರೀಕು 11ನೇ ಗುರುವಾರ ಸಾಯಂಕಾಲ ಘಂಟೆ 3ಕ್ಕೆ ಬೋರ್ಡ್ ಆಫೀಸಿನಲ್ಲಿ ಪ್ರತ್ಯೇಕ ಪ್ರತ್ಯೇಕ ಬಹಿರಂಗವಾಗಿ ಏಲಂ ಮಾಡಲಾಗುವುದು. ಏಲಂನ ಶರತು ವಗೈರೆ ಇತರ ವಿವರಗಳನ್ನು ಸದರಿ ಬೋರ್ಡು ಆಫೀಸಿನಲ್ಲಿ ತಿಳಿದುಕೊಳ್ಳಬಹುದು ಎಂತ ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸಲಾಗುತ್ತದೆ.

ಟಿ. ಗೋವಿಂದ ಉಡುಪ,
ಪ್ರೆಸಿಡೆಂಟ್.

ತೋನ್ಸೆ ಪಂಚಾಯತ ಬೋರ್ಡು,
27—2—1954.

ನವಯುಗ

ಉಡುಪಿ, ಗುರುವಾರ ೪-೩-'೫೪

ಅಮೇರಿಕದ ಮಿಸುನಿ ಬಲೆ

ಅಮೇರಿಕವು ಪಾಕಿಸ್ತಾನಕ್ಕೆ ಸೈನಿಕ ಸಹಾಯವನ್ನು ಕೊಡುವುದರ ವಿರುದ್ಧ ಭಾರತವು ಸ್ಪಷ್ಟವಾಗಿ ಎಚ್ಚರಿಕೆಯನ್ನು ನೀಡುತಿದ್ದರೂ ಸಹ—ಅದನ್ನು ಕಡೆಗಣಿಸುವ ಮತ್ತು ಭದ್ರತೆ ಮತ್ತು ಶಾಂತಿಯ ಸೋಗಿನಲ್ಲಿ ಸೌಹಾರ್ದ ವಾತಾವರಣವನ್ನೆ ಕಲಕುವ ಹೆಜ್ಜೆಯನ್ನು ಐಸೆನ ಹಾವರರು ಮುಂದಿಟ್ಟರು. ಕಳೆದವಾರ ಅವರು ಭಾರತದ ಪ್ರಧಾನ ಮಂತ್ರಿ ನೆಹರೂರವರಿಗೆ ವೈಯಕ್ತಿಕ ಪತ್ರವೊಂದನ್ನು ಬರೆದು ಪಾಕಿಸ್ತಾನಕ್ಕೆ ಸೈನಿಕ ಸಹಾಯವನ್ನು ಕೊಡಬೇಕೆಂದು, ತಮ್ಮ ಸರಕಾರ ತೀರ್ಮಾನಿಸಿರುವುದನ್ನು ತಿಳಿಸಿದರು. ಈ ನಿರ್ಣಯವು ಭಾರತದ ಬಗೆಗಿರುವ ಅಮೇರಿಕನ್ನರ ಪ್ರೀತಿಯನ್ನು ಕುಂದಿಸುವುದಿಲ್ಲವೆಂದು ಹೇಳಿದ್ದಲ್ಲದೆ, ಪಾಕಿಸ್ತಾನ ಅಥವಾ ಬೇರೆ ಯಾವುದೇ ರಾಷ್ಟ್ರಕ್ಕೆ ಕೊಡುವ ಸಹಾಯವು ಇನ್ನೊಂದು ರಾಷ್ಟ್ರದ ಮೇಲೆ ಆಕ್ರಮಣ ಮಾಡುವುದಕ್ಕೆ ಉಪಯೋಗಿಸಲ್ಪಡಲಾಗದೆಂದೂ, ಅಂತಹ ಪ್ರಸಂಗವೇನಾದರೂ ಘಟಿಸಿದ ಸಂದರ್ಭದಲ್ಲಿ ತಾನು ಘಟನಾತ್ಮಕವಾಗಿ ತನ್ನ ಕೈಯಲ್ಲಿರುವ ಅಧಿಕಾರವನ್ನು ಉಪಯೋಗಿಸಿಕೊಂಡು ಸಂಯುಕ್ತ ರಾಷ್ಟ್ರಸಂಘದ ಒಳಗೂ ಹೊರಗೂ ತೀವ್ರ ಕ್ರಮಗಳನ್ನು ಕೈಗೊಳ್ಳುವುದಾಗಿ ಐಕರು ಈ ಪತ್ರದಲ್ಲಿ ಭರವಸೆ ನೀಡಿರುವರು. ರಾಷ್ಟ್ರವು ಬಲಗೊಂಡು ಭದ್ರವಾಗಬೇಕಾದರೆ ಆರ್ಥಿಕ ಪ್ರಗತಿ ಅವಶ್ಯವಿರುವುದೆಂಬ ಭಾರತದ ನಂಬುಗೆಗೆ ನೀರೆರೆದು ಪೋಷಿಸುವುದಕ್ಕೆ ಅಮೇರಿಕದ ಆತುರವನ್ನು ಅನರು ವ್ಯಕ್ತಗೊಳಿಸಿ, ಇನ್ನೂ ಹೆಚ್ಚಿನ ಸಹಾಯವು ದೊರಕುವಂತೆ ಅಮೇರಿಕದ ಕಾಂಗ್ರೆಸ್ಸಿಗೆ ಶಿಫಾರಸು ಮಾಡುವುದಾಗಿಯೂ ಐಸೆನ ಹಾವರರು ಹೇಳಿದರು. ಇಷ್ಟಕ್ಕೆ ಅವರು ಸುಮ್ಮನಾಗುತಿದ್ದರೆ ಅದರಿಂದ ಕೆಡುಕಿರಲಿಲ್ಲ—ಇನ್ನೂ ಒಂದು ದುಡುಕಿನ ಹೆಜ್ಜೆಯನ್ನು ಅವರು ಮುಂದಿಟ್ಟರು: "ನಿಮ್ಮ ಸಂರಕ್ಷಣಾ ವ್ಯವಸ್ಥೆಯನ್ನು ನಾವು ಮನವಾರೆ ಮೆಚ್ಚಿದ್ದೇವೆ" ಎಂದು ಹೊಗಳುತ್ತಾ "ಆದಾಗ್ಯೂ ನಮ್ಮ ಸರಕಾರವು ಪಾಸು ಮಾಡಿದ ಪರಸ್ಪರ ಸಂರಕ್ಷಣಾ ಕಾಯಿದೆಯ ಕಕ್ಷೆಯಲ್ಲಿ ಬರುವ ಸೈನಿಕ ಸಹಾಯಬೇಕೆಂದು ನಿಮಗನಿಸಿದರೆ, ನಿಮ್ಮ ಬಿನ್ನಹವನ್ನು ಸಹಾನುಭೂತಿಯಿಂದ ವಿಚಾರಿಸುತ್ತೇವೆಂದು ಆಶ್ವಾಸನ ಕೊಡ ಬಯಸುತ್ತೇನೆ" ಎಂದು ಹೇಳಿ ಐಕರು ನೆಹರೂರವರದಷ್ಟೇ ಅಲ್ಲ—ಭಾರತದ ಆತ್ಮಾಭಿಮಾನವನ್ನು [illegible]ದರು. ಐಕರು ಮಿಸುನಿ ಬಲೆಯನ್ನು ಬೀಸುತ್ತಾ ಅಲ್ಲಸಲ್ಲದ ಆಮಿಷಗಳನ್ನು ತೋರಿಸುತ್ತಾ ತಮ್ಮ ಸ್ವಾರ್ಥ ಸಾಧಿಸಿಕೊಳ್ಳುತ್ತಿದ್ದರೂ ಬಹಿರಂಗವಾಗಿ ಶಾಂತಿ-ಭದ್ರತೆಗಳ ಹೆಸರನ್ನೆತ್ತಿ ಇದ್ದ ಚೊಕ್ಕಟವಾದ ವ್ಯವಸ್ಥೆಗೆನೇ ವಿಘ್ನ ವಿಚ್ಛೇದಗಳನ್ನೊಡ್ಡುವುದರಲ್ಲಿ ಧುಮುಕಿದಂತೆ ಭಾಸವಾಗುತ್ತದೆ. ಮಧ್ಯಪೂರ್ವ ಸಂರಕ್ಷಣಾ ಯೋಜನೆಯ ಗೋಳು ಅವರನ್ನು ಬಾಧಿಸುತಿದ್ದು, ಆಕ್ರಮಣದ ವಿರುದ್ಧ ಬಲಸಂವರ್ಧನೆ ಮಾಡಿಕೊಳ್ಳಬೇಕೆಂಬ ಚಟಕ್ಕೆ ಅಮೇರಿಕ ಗುರಿಯಾಗಿದೆ. ಪಾಕಿಸ್ತಾನವು ಅಮೇರಿಕದ ದೊಡ್ಡಸ್ತಿಕೆಯನ್ನು ಕಂಡು, ಉಬ್ಬಿ, ಅದರ ಸಹಾಯದಿಂದ ಪುನೀತವಾಗಲು ನಿರ್ಧರಿಸಿದೆ—ಹಾಗೆಂದು ಭಾರತಕ್ಕೆ ಐಸೆನ ಹೋವರರು ಕೊಟ್ಟ ಭರವಸೆಗಳ ಪ್ರತಿಕ್ರಿಯೆ ಮಧುರವಾಗಿರಲು ಸಾಧ್ಯವಿಲ್ಲ. ಶಾಂತಿ ಮತ್ತು ಸ್ವಾತಂತ್ರ್ಯಗಳ ರಕ್ಷಣೆಯಾಗಬೇಕೆಂಬ ಇಚ್ಛೆ ಭಾರತಕ್ಕೂ ಇದೆ. ಈ ಉದ್ದೇಶಕ್ಕೆ ಭಂಗವೊದಗುವ ರೀತಿಯಲ್ಲಿ ಯಾವುದಾದರೂ ಘಟನೆ ನಡೆದರೆ ಅದನ್ನು ಮೌನವಾಗಿ ಸಹಿಸುತ್ತಾ ಭಾರತ ಕುಳಿತು ಕೊಳ್ಳುವಂತಿಲ್ಲ—ಅಮೇರಿಕವು ಪಾಕಿಸ್ಥಾನಕ್ಕೆ ನೀಡಬೇಕೆಂದಿರುವ ಸೈನಿಕ ಸಹಾಯದ ಪರಿಣಾಮವಾಗಿ ಭಾರತದ ಮೇಲೆ ಆಕ್ರಮಣವಾಗುವುದಿಲ್ಲೆಂಬ ಭರವಸೆಯ ಮಾತನ್ನು ಸಂಪೂರ್ಣ ನಂಬೋಣ. ಅಷ್ಟರಿಂದಲೇ ಪರಿಸ್ಥಿತಿ ಶಾಂತವಾಗುತ್ತದೆಯೋ? ಇಲ್ಲ—ಇದು ಯಾಕೆ ಹೀಗೆಂದು ಪ್ರಧಾನ ನೆಹರೂರವರು ಐಕರಿಗೆ ಕಳಿಸಿದ ಉತ್ತರದಲ್ಲಿ ಮತ್ತು ಇದನ್ನು ಪ್ರಸ್ತಾಪಿಸುತ್ತಾ ಮೊನ್ನೆ ಸೋಮವಾರ ದಿನ ಲೋಕ ಸಭೆಯಲ್ಲಿ ಮಾಡಿದ ಭಾಷಣದಲ್ಲಿ ಸ್ಪಷ್ಟವಾಗಿ, ವಿವರವಾಗಿ, ನಿಃಸಂದಿಗ್ಧವಾಗಿ ವರ್ಣಿಸಿರುವರು. ಐಕರು ಕೊಟ್ಟ ಭರವಸೆಗಳನ್ನು ಕಾಶ್ಮೀರ ಸಮಸ್ಯೆ, ಭಾರತ—ಪಾಕಿಸ್ತಾನಗಳ ಶಾಂತಿ ಮತ್ತು ಮೈತ್ರಿ, ಏಶ್ಯಾಖಂಡದ ಭದ್ರತೆ ಮುಂತಾದ ವಿವಿಧ ದೃಷ್ಟಿಕೋಣದಿಂದ ನೆಹರೂ ವಿಮರ್ಶಿಸಿದರು—ಈ ಸೈನಿಕ ಸಹಾಯದ ಮೊದಲನೇ ಪರಿಣಾಮವು ಕಾಶ್ಮೀರ ಸಮಸ್ಯೆಯ ಮೇಲೆ ಆಗುತ್ತದೆ. ಕಾಶ್ಮೀರದಲ್ಲಿರುವ ನಿರೀಕ್ಷಕರ ತಂಡದಲ್ಲಿ ಅಮೇರಿಕನ್ನ ಸದಸ್ಯರೇ ಹೆಚ್ಚಿದ್ದು, ಇನ್ನು ಮುಂದೆ ನಿಷ್ಪಕ್ಷಪಾತ ರೀತಿಯಲ್ಲಿ ನಿರ್ಣಯ ಕೊಡಬಲ್ಲ ತಟಸ್ಥ ಗುಂಪೆಂದು ಅವರನ್ನು ಪರಿಗಣಿಸಲು ಸಾಧ್ಯವಿಲ್ಲ. ಆದ ಕಾರಣ ಅವರನ್ನು ಅಲ್ಲಿ ಇದ್ದುಕೊಂಡು ಕೆಲಸ ಮಾಡುವುದು ಅನುಚಿತ. ಯುದ್ಧ ವಿರಾಮ ರೇಖೆಯ ಇಕ್ಕೆಡೆಗಳಲ್ಲಿ ಆಯಾ ಸರಕಾರದವರು ನಿಲ್ಲಿಸಬಹುದಾದ ಸೈನ್ಯದ ಗಾತ್ರ ಮತ್ತು ಸ್ವರೂಪವು ಬಹಳ ಮುಖ್ಯವಾದ ಅಂಶವೆಂದು ಹಿಂದಿನಿಂದಲೂ ಒಪ್ಪಿಕೊಳ್ಳಲಾಗಿದ್ದು, ಇನ್ನು ಮುಂದೆ ಯುದ್ಧ ವಿರಾಮ ರೇಖೆಯ ಪಾಕಿಸ್ತಾನೀ ಸೀಮೆಯಲ್ಲಿ ಅಗಾಧವಾದ ಪ್ರಮಾಣದಲ್ಲಿ ಸೈನ್ಯವನ್ನು ಮತ್ತು ಸೈನಿಕ ಸರಂಜಾಮನ್ನು ತಂದು ತುಂಬಿಸುವುದರಿಂದ ಪರಿಸ್ಥಿತಿ ಪೂರಾ ಕೆಟ್ಟುಹೋಗುತ್ತದೆ. ಇಲ್ಲಿ ಸದುದ್ದೇಶದ ಪ್ರಶ್ನೆಯೊಂದನ್ನೆ ನಾವು ನಂಬಿಕರೆ ಕೆಲಸವಾಗುವುದಿಲ್ಲ—ಇಂತಹ ಸದುದ್ದೇಶವು ಕಾಲಾಂತರದಲ್ಲಿ ಅನಪೇಕ್ಷಿತವಾದ, ನತದೃಷ್ಟವಾದ ಪರಿಣಾಮವನ್ನೆ ಕೊಡುವುದೆಂದು ಭಾರತ ತನ್ನ ಅನುಭವದ ಬಲದಿಂದ ತಿಳಿದುಕೊಂಡಿದೆ. ಅಮೇರಿಕವು ಆಕ್ರಮಣ ತಡೆಯಲು ಪ್ರಯತ್ನಿಸುವುದೆಂಬ ನಂಬಿಕೆಗೆ ಆಧಾರ ಸಾಲದು—ಏಕೆಂದರೆ, ಕಾಶ್ಮೀರದಲ್ಲಿ ಪಾಕಿಸ್ತಾನ ಸೇನೆಗಳು ಅನಧಿಕೃತ ಪ್ರವೇಶಗೈದು ಆಕ್ರಮಣ ಮಾಡಿದವೆಂದು ಸಂಯುಕ್ತರಾಷ್ಟ್ರ ಸಂಘದ ಮಧ್ಯಸ್ಥಗಾರರು ತೀರ್ಮಾನಿಸಿದ್ದಾಗ್ಯೂ ಇನ್ನೂವರೆಗೆ ಅಮೇರಿಕ ಈ ಮಾತನ್ನು ಮನ್ನಿಸಿಲ್ಲ—ಆಕ್ರಮಣವನ್ನು ಖಂಡಿಸಿಯೂ ಇಲ್ಲ. ಕಾಶ್ಮೀರದ ಮೇಲೆಯೇ ಪಾಕಿಸ್ತಾನದ ಕಣ್ಣು ಕುಳಿತಿದೆಯೆಂಬುದಕ್ಕೆ ಪಾಕ ಪ್ರಧಾನಿ ಮಹಮ್ಮದಾಲಿಯವರ ಬಾಯಿಂದ ಹೊರಬೀಳುವ ಮಾತುಗಳೇ ನಿದರ್ಶನ—ಸೈನಿಕ ಸಹಾಯದ ಪರಿಣಾಮವಾಗಿ ಕಾಶ್ಮೀರ ಸಮಸ್ಯೆಯ ಪರಿಹಾರವು ಹಗುರಾಗುವುದೆಂದು ಆಪಾದಿಸುವ ಮಾತನ್ನು ಭಾರತವು ಹಗುರಾಗಿ ನೋಡಲು ಸಾಧ್ಯವಿಲ್ಲ. ಕಾಶ್ಮೀರದ ಮೇಲೆ ಮರಳಿ ದಾಳಿಯನ್ನಾರಂಭಿಸುವುದೇ ಪಾಕಿಸ್ತಾನದ ಆಂತರಿಕ ಧ್ಯೇಯವಾಗಿರಲೂ ಸಾಕು—ಅನ್ಯಥಾ ಅದಕ್ಕೆ ಸೈನ್ಯ ಬಲವನ್ನು ಹೆಚ್ಚಿಸಿಕೊಳ್ಳುವ ಅಗತ್ಯವೇನು? ಆಕ್ರಮಣದ ವಿರುದ್ಧ ಈ ಸೈನ್ಯ ಬಲಸಂವರ್ಧನೆ ಎಂದು ಹೇಳುವುದಾದರೆ, ಆಕ್ರಮಣ ಎಲ್ಲಿಂದಾದೀತೆಂಬುದರ ಕಲ್ಪನೆ ಬೇಡವೆ? ಏಶ್ಯಾದ ಅತಿ ದೊಡ್ಡ ರಾಷ್ಟ್ರಗಳಲ್ಲಿ ಭಾರತ ಮತ್ತು ಚೀನಾಗಳಿಂದ ಅದಕ್ಕೆ ಯಾವ ಅಂಜಿಕೆಯೂ ಇಲ್ಲ. ಭಾರತವು ಈ ಹಿಂದೆಯೇ ಕೆಲವೊಂದು ಸಂದರ್ಭಗಳಲ್ಲಿ ಯುದ್ಧ ನಿರೋಧ ಘೋಷಣೆಯ ಸೂಚನೆಯನ್ನು ಪಾಕಿಸ್ತಾನದ ಮುಂದೆ ಇಟ್ಟಿದೆ—ಆದರೆ ಸ್ವತಃ ಪಾಕಿಸ್ತಾನಕ್ಕೆ ಅದು ಬೇಡವಾಯಿತು. ಚೀನಾದ ಆಕ್ರಮಣ ಎಲ್ಲಿಂದ ಹೇಗೆ ನಡೆಯಬಹುದೋ—ಪಾಕಿಸ್ತಾನಕ್ಕೆಯೇ ಗೊತ್ತು. ಇಂಥದರಲ್ಲಿ ಕಾಶ್ಮೀರದಲ್ಲಿ ಮೇಲ್ಗೈ ಸಂಪಾದಿಸುವುದೊಂದೇ ಸೈನಿಕ ಸಹಾಯ ಯೋಜನೆಯೊಳಗಿನ ಗುಟ್ಟು. ಹೀಗಿರುವುದರಿಂದ ಕಾಲಾಂತರದಲ್ಲಿ ಕಾಶ್ಮೀರದ ಮೇಲೆ ಪಾಕಿಸ್ತಾನ ದಾಳಿ ಮಾಡಿದರೆ, ಅದು ಆಕ್ರಮಣ ಹೌದೊ ಅಲ್ಲವೇ ಎಂಬುದನ್ನು ನಿರ್ಣಯಿಸುವುದಕ್ಕೆ ಅಮೇರಿಕ ದೀರ್ಘಕಾಲ ತೆಗೆದುಕೊಳ್ಳಬಹುದು. ಆಕ್ರಮಣವಲ್ಲವೆಂದು ನಿರ್ಧರಿಸಿದರೂ ಆಶ್ಚರ್ಯಬೇಡ. ಇದು ಸಮಸ್ಯೆಯ ಒಂದು ಮುಖವಾದರೆ— ಏಶ್ಯಾದ ರಾಷ್ಟ್ರಗಳನ್ನು ನಿರಂತರ ದಾಸ್ಯಕೂಪದಲ್ಲಿ ಅದ್ದುವ ಪ್ರವೃತ್ತಿ ಅಮೇರಿಕದ್ದೆಂದೂ ಈ ಸೈನಿಕ ಸಹಾಯ ವ್ಯಕ್ತಗೊಳಿಸುತ್ತದೆ. ಕಮ್ಯುನಿಸಮ್ಮನ್ನು ಸಂಪೂರ್ಣ ಕ್ಷೀಣಿಸಿ ಬಿಡುವವರೆಗೆ ಏಶ್ಯಾಖಂಡದಲ್ಲಿ ಅಮೇರಿಕ ತನ್ನ ಶಕ್ತಿ ಸಾಮರ್ಥ್ಯಗಳನ್ನು ಪರಿಪರಿಯಾಗಿ ಉಪಯೋಗಿಸಲೆತ್ನಿಸುವುದೆಂದೂ ಪರಿಣಾಮದಲ್ಲಿ ಸ್ವಾತಂತ್ರ್ಯ ರಕ್ಷಣೆಯ ಹೆಸರಿನಲ್ಲಿ ಸ್ವಾತಂತ್ರ್ಯದ ಭಕ್ಷಣೆ ಮಾಡುವುದೆಂದೂ ಅಮೇರಿಕದ ಹೊಣೆಗಾರ ವ್ಯಕ್ತಿಗಳ ಮಾತಿನಿಂದ ಸಿದ್ಧವಾಗುತ್ತದೆ. ಇದನ್ನು ಏಶಿಯಾದ ಸ್ವಾತಂತ್ರ್ಯಪ್ರಿಯ ರಾಷ್ಟ್ರಗಳು ಒಪ್ಪಲಾರವು—ಕನಿಷ್ಠ ಪಕ್ಷಕ್ಕೆ ಭಾರತವಂತೂ ಇದನ್ನು ಮನ್ನಿಸದು. ಮುಸ್ಲಿಂ ಬಾಂಧವ್ಯ ಎಂಬ ಶಬ್ದ ಪ್ರಯೋಗವಾದರೂ ಹುರುಳಿಲ್ಲದ್ದು—ಇಂತಹ ವ್ಯಾಪಕವಾದ ಹಿನ್ನೆಲೆಯಲ್ಲಿ ಭಾರತಕ್ಕೂ ಸೈನಿಕ ಸಹಾಯ ನೀಡುವ ಆಶ್ವಾಸನೆ ಕೊಡಬಂದ ಐಕರು ಉದ್ಧಟತನದ ಪ್ರದರ್ಶನಗೈದರೆಂದರೆ ಅತಿಶಯೋಕ್ತಿಯಾಗದು. ಐಕರ ಈ ಸೂಚನೆ ನಮಗೂ ನ್ಯಾಯವನ್ನು ತೋರಿಸದೆ, ತಮಗೂ ಅನ್ಯಾಯ ಮಾಡಿಕೊಂಡಂತಾಯಿತು" ಎಂಬುದಾಗಿ ನೆಹರೂ ಹೇಳಿದುದು ಅಕ್ಷರಶಃ ಸತ್ಯ. ಭಾರತವು ತಾನು ಯಾ. ಉದಾತ್ತ ತತ್ವಗಳನ್ನು ಪ್ರತಿಪಾದಿಸುತ್ತಾ ಮುನ್ನೋಟದಿಂದ ವಿಚಾರಿಸುತ್ತಾ ಈ ಸೈನಿಕ ಒಪ್ಪಂದದ ಖಂಡನೆ ಮಾಡಿತೋ— ಅವೆಲ್ಲ ಆದರ್ಶಗಳನ್ನು ಗಾಳಿಗೆ ತೂರಿ, ಭಿಕ್ಷಾಪಾತ್ರೆಯನ್ನು ಮುಂದೊಡ್ಡುವ ಕೃತ್ಯವನ್ನೆಸಗುವುದು ಕಲ್ಪನೆಗೂ ನಿಲುಕದ ವಿಷಯ. ನಮಗ ಸೈನಿಕ ಸಹಾಯ ಬೇಕೆಂಬುದಕ್ಕಾಗಿ ಬಡಬಡ ಬೊಗಳಿಕೊಂಡೆವೆಂದು ಅಮೇರಿಕ ಭಾವಿಸಿ, ಅತಿದೊಡ್ಡ ತಪ್ಪನ್ನು ಮಾಡಿದೆ; ಮತ್ತು ಈ ತಪ್ಪು ಅಮೇರಿಕಾ ಇಟ್ಟ ತಪ್ಪುಹೆಜ್ಜೆಗಳಲ್ಲಿಯೇ ದೊಡ್ಡದೆಂದು ಹೇಳಬಹುದು. ಪ್ರಧಾನಮಂತ್ರಿ ನೆಹರೂರವರು ಐಕರ ಸೂಚನೆಯನ್ನು ತಿರಸ್ಕರಿಸಿಬಿಟ್ಟು, ಭಾರತೀಯರ ಘನತೆ ಗೌರವಗಳನ್ನು ಎತ್ತಿಹಿಡಿದರು. ಇಲ್ಲಿ ಪಕ್ಷಪಂಗಡಗಳ ಭೇದಭಾವನೆ ಇಲ್ಲವೆಂದೂ ಇದು ರಾಷ್ಟ್ರೀಯ ಮಹತ್ವದ ಪ್ರಶ್ನೆಯೆಂದೂ ನೆಹರೂ ಹೇಳಿದ್ದು, ತಮ್ಮ ನಿಲುವಿಗೆ ಭಾರತಸರಕಾರದ, ಅದು ಹೊಣೆಯಾಗಿರುವ ಪಾರ್ಲಿಮೆಂಟಿನ, ಮತ್ತು ಈ ಸಭೆ ಪ್ರತಿನಿಧೀಕರಿಸುವ ಮೂವತ್ತೈದು ಕೋಟಿ ಭಾರತೀಯರ ಹೃತ್ಪೂರ್ವಕ ಬೆಂಬಲವಿದೆಯೆಂದು ಐಕರಿಗೆ ನೆಹರೂ ತಿಳಿಸಿದರು. ಗಂಡಾಂತರದ ವಿಷಮ ಪರಿಸ್ಥಿತಿಯಲ್ಲೂ ಈ ವಿವೇಕವನ್ನು ಪ್ರಧಾನಮಂತ್ರಿಗಳು ಪ್ರದರ್ಶಿಸಿರುದಕ್ಕೆ ಭಾರತದ ಜನತೆ ಅತ್ಯಂತ ಕೃತಜ್ಞವಾಗಿರುತ್ತದೆ.

ತಾ. 6—3-1954ರಿಂದ

3ನೇ ವಾರ!

ಆರ್. ಎನ್. ಆರ್. ಪಿಕ್ಚರ್ಸ್‌ರವರ—

ಅಮೋಘ ಕನ್ನಡ ಚಿತ್ರ

ಜಾತಕಫಲ

ಪಾತ್ರವರ್ಗ:—

R. ನಾಗೇಂದ್ರ ರಾವ್, ಸೂರ್ಯಕಲಾ, ಬಾಲಚಂದರ್, ಕಮಲಮ್ಮ, ಕೆ. ಸಾರಂಗಪಾಣಿ, ಕೆ. ಆರ್. ಚೆಲ್ಲಂ ಮೊದಲಾದವರು.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಪ್ರಕಟಣೆ

ಹಿರಿಯಡ್ಕ ಪಂಚಾಯತ್ ಬೋರ್ಡು ಪ್ರೆಸಿಡೆಂಟರಿಂದ ಈ ಮೂಲಕ ತಿಳಿಯಪಡಿಸುವದೇನೆಂದ್ರೆ—

ಇದೇ 1954ನೇ ಇಸವಿ ಎಪ್ರಿಲ್ ತಾರೀಕು 1ರ ಲಾಗಾಯ್ತು 1955ನೇ ಇಸವಿ ಮಾರ್ಚಿ ತಾರೀಕು 31ರ ವರೆಗಿನ ಒಂದು ವರುಷದ ವರೇಗೆ ಹಿರಿಯಡ್ಕ ಪಂಚಾಯತ್ ಬೋರ್ಡು ವಾರ ಸಂತೆ ಮಾರ್ಕೇಟಿನಲ್ಲಿ ಮತ್ತು ಗಾಡಿ ಚಾಕದಲ್ಲಿ ಸುಂಕ ವಸೂಲು ಮಾಡುವ ಹಕ್ಕನ್ನು ಇದೇ ತಿಂಗಳ ತಾರೀಕು 15—3—54 ನೇ ಸೋಮವಾರ ಮಧ್ಯಾಹ್ನ ಗಂಟೆ 4ಕ್ಕೆ ಹಿರಿಯಡ್ಕ ಪಂಚಾಯತ್ ಪ್ರೆಸಿಡೆಂಟರವರಿಂದ ಪಂಚಾಯತ್ ಬೋರ್ಡು ಆಫೀಸಿನಲ್ಲಿ ಏಲಂ ಮಾಡಲಾಗುವದು,

ಹೆಚ್ಚಿನ ವಿವರಗಳಿಗೆ—ಪಂಚಾಯತದ ಆಫೀಸಿನ ನೋಟೀಸು ಬೋರ್ಡಿನಲ್ಲಿ ಅಂಟಿಸಿದ ಪ್ರಕಟಣೆಯಲ್ಲಿ ಕಾಣಿಸಿದ ಶರ್ತಗಳನ್ನು ನೋಡಿ ತಿಳಿಯತಕ್ಕದ್ದು ಅಲ್ಲದೆ—ಮೊಕ್ತಾ ವಿಚಾರಿಸಬಹುದು.

A. [illegible] Hegde.

President.

Panchayat Board Hiriadka.

ಜನರಲ್ ನಗೀಬರ ಪತನದ ನಾಟಕ

ಮಧ್ಯ ಪ್ರಾಚ್ಯದ ಎರಡು ರಾಜ್ಯಗಳಲ್ಲಿ ಕಳೆದ ವಾರ ತೀರಾ ಅನಿರೀಕ್ಷಿತವಾದ ಘಟನೆಗಳು ಜರಗಿ—ಲೋಕ ನಾಯಕರನ್ನು ದಿಙ್ಮೂಢಗೊಳಿಸಿವೆ. ಇಜಿಪ್ತ ಮತ್ತು ಸೀರಿಯಾಗಳಲ್ಲಿ ಸೈನ್ಯ ಕ್ರಾಂತಿಯ ಅದ್ಭುತ ನಡೆದಿದೆ. ಇಜಿಪ್ತದ ಘಟನೆಗಳಂತೂ ತುಂಬ ಮೋಜಿನದಾಗಿದ್ದು, ಈ ಕೋಲಾಹಲದ ಒಳಗೇನಿದೆಯೋ ಎಂದು ಎಲ್ಲ ರಾಜಕಾರಣಿಗಳೂ ಚಿಂತಾತುರಗಳನ್ನು ವ್ಯಕ್ತಗೊಳಿಸುವರು ಈ ಗೊಂದಲಗಳ ಕಾರಣಭೂತರು ಎರಡೂ ರಾಜ್ಯಗಳಲ್ಲಿ ಮಿಲಿಟರಿ ನಾಯಕರೇ ಆಗಿದ್ದು—ದಂಡು ಮೆಚ್ಚಿದವನೇ ಪಟ್ಟಕ್ಕೆ ಬರುವ ಪರಂಪರೆಯನ್ನು ಈ ಕ್ಷಿಪ್ರ ಘಟನೆಗಳು ಸೃಷ್ಟಿಸುತ್ತವೆ

ನಗೀಬರ ಪತನ

ಫರೂಕ ಅರಸರ ಆಡಳಿತದಿಂದ ಬೇಸರ ಮತ್ತು ಅಸಮಾಧಾನವನ್ನು ಹೊಂದಿದ್ದ ಸೇನೆಯ ದಂಡನಾಯಕರೆಲ್ಲ ಆಗ ತನ್ನ ಪರಾಕ್ರಮ ಪ್ರದರ್ಶನದಿಂದ ಹೆಸರುಗೊಂಡಿದ್ದ ಜನರಲ್ ನಗೀಬರ ಧುರೀಣತ್ವದಲ್ಲಿ ಸೈನ್ಯಕ್ರಾಂತಿ ನಡೆಸಿದ, ಇಪ್ಪತ್ತು ತಿಂಗಳುಗಳ ಬಳಿಕ, ಅದೇ ನಗೀಬರನ್ನು ಮೂಲೆಗುಂಪುಮಾಡಲು ಕ್ರಾಂತಿಕಾರಿಗಳು ನಿರ್ಧರಿಸಿದರು. ನಗೀಬರು ತಮ್ಮ ಕೈಯಲ್ಲಿಟ್ಟುಕೊಂಡಿದ್ದ ಅಧಿಕಾರಗಳನ್ನೆಲ್ಲ ಒಂದೊಂದೇಯಾಗಿ ಬಿಡುವಂತೆ ಈ ಕ್ರಾಂತಿಕಾರಿಗಳು ಒತ್ತಾಯಿಸಿದರು. ಇದರ ಮರ್ಮ ತಿಳಿದುಕೊಂಡ ನಜೀಬರು ತನಗೆ ಕೆಲವು ವಿಶೇಷಾಧಿಕಾರಗಳನ್ನು ಕೇಳಿ, ಅವುಗಳನ್ನು ನೀಡದಿದ್ದರೆ ರಾಜೀನಾಮೆ ಕೊಡುವ ಬೆದರಿಕೆ ಹಾಕಿದರೆಂದೂ, ಕ್ರಾಂತಿಕಾರರ ಮಂಡಳ, ಅವರಿಂದ ರಾಜೀನಾಮೆ ಬರೆಸಿಕೊಳ್ಳುವುದರಲ್ಲಿಯೇ ತೃಪ್ತಿಹೊಂದಿತೆಂದೂ ಒಂದ ಸುದ್ದಿ ತೀರ ಅನಿರೀಕ್ಷಿತವಾಗಿದ್ದಿತು. ಈಜಿಪ್ತದಲ್ಲಿ ನಗೀಬರ ಸರಕಾರ ಇಷ್ಟರಮಟ್ಟಿನ ಆಂತರಿಕ ದೌರ್ಬಲ್ಯವನ್ನು ಹೊಂದಿತೆಂದು ಯಾರೂ ನಂಬುವಂತಿರಲಿಲ್ಲ.

ನಸೀರರ ಚಟುವಟಿಕೆ

ಜನರಲ್ ನಗೀಬರ ಪತನವಾದ ಕೂಡಲೇ ಅವರನ್ನು ಅವರ ಮನೆಯಲ್ಲಿಯೇ ಬಂಧಿಸಿಟ್ಟರು. ಕ್ರಾಂತಿಕಾರಿಗಳೆಲ್ಲ ಸೇರಿ, ಕರ್ನಲ್ ನಸೀರರನ್ನು ಪ್ರಧಾನ ಮಂತ್ರಿಯಾಗಿ ಸಾರಿದರು. ಇವರು ನಗೀಬರು ಪ್ರಧಾನ ಮಂತ್ರಿಯಾಗಿದ್ದಾಗ, ಗೃಹ ಮಂತ್ರಿಗಳಾಗಿ ಕೆಲಸ ಮಾಡಿದವರು. ಬ್ರಿಟಿಷರ ಕೂಡೆ ಸಖ್ಯ ಬಯಸುವ, ಸ್ನೇಹದಿಂದ ಸುಯೇಜ ಕಾಲುವೆಯ ಸಮಸ್ಯೆ ಬಿಡಿಸಬೇಕೆನ್ನುವ ನಗೀಬರ ಧೋರಣೆಗೆ ತೀರ ವಿರುದ್ಧವಾದ ನಿಲುಮೆ ಅನುಸರಿಸುವ ನಸೀರರ ಕೈಯಲ್ಲಿ ಇಜಿಪ್ತು ಬಹಳ ತೀವ್ರಗಾಮಿಯಾದ ಸುಧಾರಣೆಗಳನ್ನು ಹೊಂದಬಹುದೆಂದು ರಾಜಕಾರಣಿಗಳ ಅಭಿಪ್ರಾಯ. ಜನರಲ್ ನಗೀಬರ ಪ್ರತಿಷ್ಠೆಯನ್ನು ಸೈನ್ಯ ಕ್ರಾಂತಿಗೋಸ್ಕರ ತಾತ್ಕಾಲಿಕವಾಗಿ ಉಪಯೋಗಿಸಬೇಕೆಂದು ಎಣಿಸಿದ್ದ ಕರ್ನಲ ನಸೀರರಂತಹ ಕಿರಿಯ ದಂಡನಾಯಕರು, ನಗೀಬರು ತನ್ನ ಅಧಿಕಾರವನ್ನು ಬಲವಾಗಿ ಬೇರೂರಿಸುವುದಕ್ಕೆ ನೋಡಿದಂತೆಲ್ಲ ಕ್ಷುಬ್ಧರಾಗುತಿದರು. ಅವರ ಮಧ್ಯ ಮಾರ್ಗ ಮತ್ತು ಸೌಮ್ಯ ಧೋರಣೆಯನ್ನು ನಸೀರರೂ ಕ್ರಾಂತಿಕಾರ ಮಂಡಳದ ಇತರ ಧುರೀಣರೂ ಮೆಚ್ಚುತ್ತಿರಲಿಲ್ಲ. ಮೇಲಾಗಿ ತಾನೇ ಪ್ರಧಾನಿ ಪಟ್ಟವನ್ನು ಅಲಂಕರಿಸಬೇಕೆಂಬ ಮೋಹವಿದ್ದ ಕರ್ನಲ ನಸೀರರಿಗೆ ನಗೀಬರೇ ಪ್ರಧಾನ ಮಂತ್ರಿಯಾಗಿ ಉಳಿದುದರಿಂದ ಹೆಚ್ಚಿನ ನಿರಾಶೆಯಾಯಿತು.

ಪುನಃ ನಗೀಬರು

ಇದರ ಪರಿಣಾಮವಾಗಿಯೇ ನಗೀಬರ ಪತನ ಸಂಭವಿಸಿ, ನಸೀರರು ಮಂತ್ರಿಯಾಗಿ ನೇಮಕಗೊಂಡರು. ಆದರೆ ನಗೀಬರ ಕಡೆಗೆ ಬಲವುಳ್ಳವರು ಇಜಿಪ್ತದ ಸೈನ್ಯದಲ್ಲಿ ಕಡಿಮೆ ಇಲ್ಲ—ಇನ್ನೂ ಚಿಕ್ಕ ಹುದ್ದೆಯಲ್ಲಿರುವ ಸುಮಾರು ೪೦ ಮಂದಿ ಸೈನ್ಯಾಧಿಕಾರಿಗಳು ಸೈನಿಕರ ಕಣ್ಣಾಪಿನಲ್ಲಿದ್ದ ನಗೀಬರನ್ನು ಕಂಡು, ಅವರನ್ನು ಮರಳಿ ಅಧಿಕಾರಕ್ಕೇರಿಸಲು ದಂಗೆ ಎದ್ದರು. ಇವರ ಬಂಧನ ಸತ್ರ ನಡೆಯಿತಾದರೂ—ನಗೀಬರನ್ನು ಬಿಟ್ಟುಗೊಟ್ಟರೆ, ಸರಕಾರ ನಡೆಸಲು ಸಾಧ್ಯವಿಲ್ಲೆಂದು ಕ್ರಾಂತಿಕಾರ ಮಂಡಳಕ್ಕೆ ಖಚಿತಲಾಯಿತು. ಆದುದರಿಂದ ನಗೀಬರಿಗೆ ಪತ್ರ ಮುಖೇನ ರಾಯಸವೊಂದನ್ನು ಕಳಿಸಿ, ಅವರು ಮರಳಿ ಅಧ್ಯಕ್ಷರಾಗಬೇಕೆಂದು ವಿನಂತಿಸಲಾಯಿತು. ಅದನ್ನು ನಗೀಬರು ಮನ್ನಿಸಿದ್ದರಿಂದ ಅವರು ತಿರುಗಿ ಅಧಿಕಾರಕ್ಕೆ ಬಂದ ಹಾಗಾಯಿತು— ಆದರೆ, ಪ್ರಧಾನ ಮಂತ್ರಿ ಸ್ಥಾನವು ನಸೀರರ ಕೈಯಲ್ಲೇ ಭದ್ರವಾಗಿರುವುದರಿಂದ, ನಗೀಬರು ನಿರ್ವಿಷ ಸರ್ಪದಂತೆ ಕಾಣುವರು. ಇನ್ನು ಮುಂದೆ ನಗೀಬರ ಆಟ ನಡೆಯದೆ, ನಸೀರರದೇ ಕೈ ನಡೆಯುತ್ತದೆ; ಮತ್ತು ಕೆಲವೇ ತಿಂಗಳುಗಳಲ್ಲಿ ಮರಳಿ ನಗೀಬರ ಪತನವಾದರೂ ಆದೀತು.

ಉಡುಪಿ

ವಿದ್ಯಾರ್ಥಿ ಸಭಾ—ಕಳೆದ ತಾ ೨೦ರಲ್ಲಿ ಉಡುಪಿ ವಿದ್ಯಾರ್ಥಿ ಸಭೆಯು ಬೋರ್ಡ್ ಹ್ಯಾಸ್ಕೂಲ್ ಹಾಲಿನಲ್ಲಿ ಡಾ ಎಂ. ಎಸ್. ಆರ್. ಪೈಗಳ ಅಧ್ಯಕ್ಷತೆಯಲ್ಲಿ ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರ ರಾಯರಿಂದ ಉದ್ಘಾಟಿಸಲ್ಪಟ್ಟಿತು.

ವಿವಾಹ ಸಮಾರಂಭ—ಬ್ರಹ್ಮಾವರದ ದಿವಂಗತ ಮಹಾಬಲ ಸೆಟ್ರು ಪುತ್ರ ಡಾ. ವಿ. ಸುಬ್ಬಯ ಸೆಟ್ಟರು ಕಳೆದ ತಾ ೨೩ರಲ್ಲಿ ಶ್ರೀ ಕೆ. ಶೀನಪ್ಪ ಸೆಟ್ಟರ ಪುತ್ರಿ ಸೌ ಕುಮಾರಿ ಹೀರಳನ್ನು ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ವಿವಾಹವಾದರು. ಊರಪರವೂರ ಗೃಹಸ್ಥ ಗೃಹಿಣಿಯರು ಈ ಸಮಾರಂಭಕ್ಕೆ ಚಿತ್ತೈಸಿದ್ದರು.

ವರ್ಷಾವಧಿ ಪಂದ್ಯಾಟ—ಮಣಿಪಾಲದ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ವಾರ್ಷಿಕ ಪಂದ್ಯಾಟ ದಿನಾಚರಣೆಯು ಕಳೆದ ತಾ ೨೧ರಂದು ಸಂಜೆ ಸ್ಥಳೀಯ ಪ್ರಿನ್ಸಿಪಲ್ ಡಾ ಮನ್ಸಿಸ್ಟ್ ಶ್ರೀ ಇ. ಗೊನ್ಸಾಲ್ವಿಸ್, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಮೊದಲು ಪಂದ್ಯಾಟ ನಡೆಯಿತು. ಅನಂತರ ಉಪಾಹಾರ, ಪಾರಿತೋಷ ವಿತರಣೆಯಾಯಿತು.

ಮಹಾಸಭೆ—ಖಾಸಗಿ ಶಾಲೆಗಳ ಅಧ್ಯಾಪಕರ ಯೂನಿಯನ್ ಮಹಾಸಭೆಯು ಕಳೆದ ೩೦ರಲ್ಲಿ [illegible] ಶ್ರೀ ಎಸ್. ಫರ್ನಾಂಡಿಸರ ಅಧ್ಯಕ್ಷತೆಯಲ್ಲಿ ಜರಗಿ, ಜಿಲ್ಲಾ ಬೋರ್ಡ್ ಗಳಲ್ಲಿ [illegible] ರ್ಧರಿಸಿದ ಉಪಾಧ್ಯಾಯರ ಕೇಳಿಕೆಗಳ ಕಡೆಗೆ ತೀವ್ರ ಗಮನಹರಿಸುವಂತೆ ಸರಕಾರವನ್ನು ವಿನಂತಿಸಲಾಯಿತು. ಬಳಿಕ ಯೂನಿಯನ್ ಕಾರ್ಯಕಾರಿ ಮಂಡಳಿಯ ರಚನೆಯಾಗಿ ಅಧ್ಯಾಪಕರ ಸಂಘಟನೆ [illegible] ಗಳಾದುವು

ಮುಲ್ಕಿ—ಸ್ಥಳೀಯ ಪ್ರತಿಷ್ಠಿತ ವ್ಯಾಪಾರಿ ಜನಪ್ರಿಯ ನಾಯಕರಾದ ಶ್ರೀ [illegible] ಪ್ಪನವರು ಕಳೆದ ತಾ ೧೪ರಲ್ಲಿ [illegible] ಮದು ವಿಷಾದಕರವಿದೆ.

ಪ್ರಜೆಗಳೇ ರಾಷ್ಟ್ರದ ಸಂಪತ್ತು

[ಮದ್ರಾಸು ಎಸೆಂಬ್ಲಿಯಲ್ಲಿ, ಮಾನ್ಯ ಗವರ್ನರರ ಭಾಷಣದ ಚರ್ಚೆಯ ಸಂದರ್ಭದಲ್ಲಿ ತಾ. ೨೩-೨-೫೪ರಂದು ಶ್ರೀ. ಟಿ. ಎ. ಪೈ ಎಂ. ಎಲ್. ಎ. ಅವರು ಮಾಡಿದ ಭಾಷಣದ ಸಾರ.]

ತಿದ್ದಿದ ವಿದ್ಯಾ ಪದ್ಧತಿಯೂ ಕಮ್ಯೂನಿಸ್ಟರೂ:—ಮಾನ್ಯ ವಿರೋಧಿ ಪಕ್ಷದ ನಾಯಕರು, ಮದ್ರಾಸಿನ ವಿದ್ಯಾ ಸುಧಾರಣೆಯ ಕುರಿತಾಗಿ ಟೀಕಿಸಿ ಮಾಡಿದ ಭಾಷಣ ಅವರ ನಿಲುವಿಗೆ ಒಪ್ಪುವಂತೆಯೇ ಇದೆ. ಯಾವುದೇ ಒಂದು ಸುಧಾರಣೆಯನ್ನು ತಮ್ಮ ಧೋರಣೆಗೆ ತಕ್ಕಂತೆ ಈ ಗಳೆಯುವುದು ಪಕ್ಷದ ಒರಿಮೆಯ ಧ್ಯೇಯಕವಾಗಲಾರದು. ಟೀಕೆ ಎಷ್ಟು ಅಗತ್ಯವೋ ಆ ಮಗ್ಗುಲಲ್ಲೇ "ಹಾಗಲ್ಲ ಹೀಗೆ" ಎಂದು ಹೇಳುವ ವಿಮರ್ಶಬುದ್ಧಿಯೂ ಅಷ್ಟೇ ಅಗತ್ಯ. ಮಾತು ಮಾತಿಗೆ "ರಶಿಯಾ" ಎಂದೊಡನೆ ಸುಧಾರಣೆ ಸೂಚಿಸಿದಂತಾಗಲಾರದು. ರಶಿಯಾ ಅನಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿ ಮಾಡುವಲ್ಲಿ ತೀವ್ರ ಪ್ರಗತಿಯನ್ನು ಸಾಧಿಸಿದೆ ಎನ್ನುವ ಮಾತು ಶುದ್ಧ ಸುಳ್ಳು. ರಶಿಯಾವೂ ನಮ್ಮಂತೆಯೇ ಹಿಂದುಳಿದ ರಾಷ್ಟ್ರ. ಈ ವಿದ್ಯಾವಿಷಯಕವಾಗಿ ನಮಗೆದುರಾಗಿರುವ ಸಮಸ್ಯೆಗಳೇ ಪ್ರಾರಂಭದಲ್ಲಿ ರಶಿಯಾಕ್ಕೂ ಎದುರಾಗಿದ್ದುವು. ರಶಿಯಾ, ರಾಷ್ಟ್ರದ ಸಂಪತ್ತನ್ನು ಏಕಮುಖವಾಗಿ ಪ್ರತಿ ಪ್ರಜೆಗೂ ಹಂಚುವ ಧೋರಣೆಯುಳ್ಳ ರಾಷ್ಟ್ರ. ಸರಿಯೇ; ಆದರೆ, ಈ ವಿದ್ಯಾ ಅನುಕೂಲತೆಗಳನ್ನೂ ಪ್ರತಿಯೊಬ್ಬರಿಗೂ ಸಮನಾಗಿ ಹಂಚುವ ವಿಷಯಕವಾದ ಮಾತನ್ನು ಮಾನ್ಯ ವಿರೋಧಿ ಪಕ್ಷದ ನಾಯಕರು ವಿರೋಧಿಸಲಾರರೆಂದು ಭರವಸೆ ಇಟ್ಟುಕೊಳ್ಳಬಹುದೇ?

ನಮ್ಮ ನಿರೀಕ್ಷೆ:—ಇಷ್ಟು ಹೊತ್ತಿಗಾಗಲೇ ಸುಮಾರು ೨ ಸಾವಿರ ಕೋಟಿ ರೂ. ಗಳಿಗೂ ಮೇಲ್ಪಟ್ಟು, ದೊಡ್ಡ ನೀರಾವರಿ ಯೋಜನೆಗಳಿಗಾಗಿ ಮತ್ತು ಅಣೆಕಟ್ಟುಗಳ ನಿರ್ಮಾಣಕ್ಕಾಗಿ ಖರ್ಚಾಗಿದೆ. ಇನ್ನೂ ಹೆಚ್ಚಿನ—ಬೃಹದ್ರೂಪದ ಸಮಸ್ಯೆಗಳು ನಮ್ಮ ತಲೆ ತಿನ್ನುತ್ತಿವೆ. ಅವುಗಳ ಪರಿಹಾರವಾಗಬೇಕಾಗಿದೆ. ಅದೂ ಶೀಘ್ರವಾಗಿ ಆಗಬೇಕೆಂದು ಈವತ್ತಿನ ಜನ ಆಶಿಸುತ್ತವೆ. ಅದೇ, ಮುಂದಿನ ಪಂಚವಾರ್ಷಿಕ ಯೋಜನೆಯಲ್ಲಿ ಏಳು ಸಾವಿರ ಕೋಟಿ ರೂ. ತೆಗೆದಿರಿಸಲಾಗಿದೆ. ರಾಷ್ಟ್ರದ ಸಂಪತ್ತೇ ರಾಷ್ಟ್ರದ ಪ್ರಜೆಗಳು. ಸಾರ್ವಜನಿಕ ಆರೋಗ್ಯದ ಸಮಸ್ಯೆ, ವಿದ್ಯಾ ಸಮಸ್ಯೆ, ಕ್ಷೇಮರಕ್ಷಣೆ ಸಮಸ್ಯೆಗಳೆಲ್ಲಾ ಬೇಗಬೇಗನೆ ಪರಿಹಾರವಾಗಬೇಕೆಂದು ರಾಷ್ಟ್ರದ ಜನತೆ ಒಕ್ಕೊರಲಿನಿಂದ ಕೇಳುತ್ತಿದೆ. ಜನದ ಕೇಳಿಕೆಯನ್ನು ನಾವು ಅಲ್ಲಗಳೆಯುವಂತಿಲ್ಲ. ಎಂತಲೇ, ನಾವು ಖರ್ಚುಮಾಡಲಿರುವ ಹಣ ಜನದ ಇಷ್ಟದಂತೆ ಖರ್ಚಾಗುತ್ತಿದೆಯೇ ಎಂಬುದನ್ನು ಲಕ್ಷಿಸಬೇಕಾಗಿದೆ. ನಮ್ಮ ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಈ ದೃಷ್ಟಿ ಇರಲಿ.

ನಮ್ಮ ಉಪಾಧ್ಯಾಯರ ದುಸ್ಥಿತಿ: ಮಾನ್ಯ ಗವರ್ನರರು ತಮ್ಮ ಭಾಷಣದಲ್ಲಿ ಮುಖ್ಯವಾದ—ನಮ್ಮೆದುರಿಗಿರುವ ಎರಡು ಸಮಸ್ಯೆಗಳ ಕುರಿತು ಆಡಿದುದು ನ್ಯಾಯವೂ ಸಮಯೋಚಿತವೂ ಆಗಿದೆ. ಅವುಗಳಲ್ಲೊಂದು ವಿದ್ಯಾವಿಷಯಕವಾದುದು. ಈ ಪ್ರಾಥಮಿಕ ವಿದ್ಯಾ ಸುಧಾರಣಾ ಯೋಜನೆ, ನಮ್ಮ ಒಂದು ದೊಡ್ಡ ಸಾಹಸವೆಂಬುದು ನಿರ್ವಿವಾದ. ಆದರೂ, ನಾವು ನಮ್ಮ ಉಪಾಧ್ಯಾಯರ ಕುರಿತಾಗಿ ಇನ್ನೂ ಗಮನಹರಿಸದಿರುವುದು ಹಿತಾವಹವಾದುದಲ್ಲ. ನಮ್ಮ ಉಪಾಧ್ಯಾಯರು ಇಂದು ಸಿಗುತ್ತಿರುವ ಅಲ್ಪವೇತನದಲ್ಲೇ ತೃಪ್ತಿಪಟ್ಟು, ಒಳಳ ಚಿಂತಾಜನಕ ಪರಿಸ್ಥಿತಿಯಲ್ಲಿದ್ದಾರೆ. ನಾಳಿನ ರಾಷ್ಟ್ರನಿರ್ಮಾಪಕರಾದ, ಈವತ್ತಿನ ಮಕ್ಕಳ ಹಿರಿಯ ಗುರುಗಳು ಈ ಉಪಾಧ್ಯಾಯರಾಗಿದ್ದಾರೆ. ಎಂತಲೇ, ಉಪಾಧ್ಯಾಯರನ್ನು ತೃಪ್ತಿಪಡಿಸಬೇಕಾದುದು ನಮ್ಮ ಕರ್ತವ್ಯ. ಅವರ ಸಂಬಳವನ್ನು ಯಾವ ಮಟ್ಟದಲ್ಲಿ ಹೆಚ್ಚಿಸುವಂತೆ ನೋಡಬೇಕಾದುದು ಅತೀ ಅಗತ್ಯವಾಗಿದೆ. ಶಾಲೆಗೆ ಬರುತ್ತಿರುವ ಮಕ್ಕಳ ಅವಸ್ಥೆಯೂ ಅಷ್ಟೇ. ಹರಿದ ಹರಕು ಚಿಂದಿಗಳಿಂದ ಮೈಮುಚ್ಚಿಕೊಂಡು ಬರುವ ಮಕ್ಕಳು ನಮ್ಮಲ್ಲಿ ಅಸಂಖ್ಯಾತವಿವೆ. ಇಂಥವರು ನಾಳಿನ ಭಾರತದ ಆರೋಗ್ಯ ಜನಾಂಗವಾಗಿ ಬಾಳಿ, ದೇಶದ ಕೀರ್ತಿಯನ್ನು ಹೆಚ್ಚಿಸಲು ಶಕ್ತರಾಗುವರೇ ಎಂದು ವಿಷಾದದಿಂದ ಪ್ರಶ್ನಿಸಬೇಕಾಗಿದೆ. ಒಂದುವೇಳೆ ಸರಕಾರವು ಶಾಲೆಗೆ ಬರುವ ಮಕ್ಕಳು ಒಂದು ನಿರ್ದಿಷ್ಟವಾದ ಉಡುಪನ್ನು ಹಾಕಿಕೊಂಡು ಶಾಲೆಗೆ ಬರಬೇಕೆಂದು ಆಜ್ಞೆಯನ್ನು ಹೊರಡಿಸುವುದಾದರೂ ಸರಿಯೇ. ಕಾರಣ, ಬಡವ—ಬಲ್ಲಿದರೊಳಗಿನ ಮಕ್ಕಳ ತಾರತಮ್ಯ ಆಗ ಎತ್ತಿ ತೋರಿಸಲು ಸಾಧ್ಯವಾಗುವಂತಿಲ್ಲ.

ಸರಕಾರವು ಉಪಾಧ್ಯಾಯರ ಮಕ್ಕಳಿಗೆ ಶಾಲೆ ಕಲಿಯುವಲ್ಲಿ ಸಂಬಳ ವಿನಾಯತಿ ತೋರಿಸಿದುದು, ಒಪ್ಪತಕ್ಕದೇ. ಆದರೆ, ಒಬ್ಬ ಉಪಾಧ್ಯಾಯನು ತನ್ನ ವೃತ್ತಿಯಿಂದ ನಿವೃತ್ತನಾದಮೇಲೆ ಈ ವಿನಾಯತಿ ಅವನ ಮಕ್ಕಳಿಗೆ ಸಿಗದೇ ಇರುವುದು ಒಪ್ಪತಕ್ಕದ್ದಲ್ಲ. ಆದುದರಿಂದ, ಉಪಾಧ್ಯಾಯನು ನಿವೃತ್ತನಾದಮೇಲೂ ಈ ಸಂಬಳ ವಿನಾಯತಿ ಅವನ ಮಕ್ಕಳಿಗೆ ಸಿಗುವಂತಾಗಬೇಕು.

ಸಾರ್ವಜನಿಕ ಆರೋಗ್ಯ:—ನಮ್ಮ ಸಾರ್ವಜನಿಕ ಆರೋಗ್ಯದ ಮಟ್ಟ ಇನ್ನೂ ಏರಬೇಕೇನೋ ನಿಜ. ಆದರೆ, ಪರಿಸ್ಥಿತಿ ಪೂರಕವಾಗಿಲ್ಲ. ನಮ್ಮ ಸರಕಾರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾಡಿದ ಸಾರ್ವಜನಿಕ ಆರೋಗ್ಯ ವಿಷಯವಾದ ಸುಧಾರಣೆಯನ್ನು ಉದಾಹರಣೆಗಾಗಿ ಇಲ್ಲಿ ಹೇಳುತ್ತೇನೆ. ಸರಕಾರವೇನೋ, ಪ್ರತಿ ಹಳ್ಳಿ ಆಸ್ಪತ್ರೆಗಳಿಗೂ ಬೇಕಷ್ಟು ಸೂಲಗಿತ್ತಿಯರನ್ನು ನೇಮಕ ಮಾಡಿದೆ. ಸರಕಾರದ ನೇಮಕ—ಕಾನೂನು ಇದ್ದಲ್ಲೇ ಇದೆ. ಆದರೆ, ಆ ಹಳ್ಳಿ ಆಸ್ಪತ್ರೆಗಳಲ್ಲಿ ಸೂಲಗಿತ್ತಿಯರಿಲ್ಲ. ಕಾರಣ, ತರಬೇತಿ ಹೊಂದಿದ ಸೂಲಗಿತ್ತಿಯರ ಅಭಾವ ಇರಬಹುದು. ಆದರೆ, ಸೂಲಗಿತ್ತಿತನದಲ್ಲಿ ತರಬೇತಿ ಹೊಂದಿ ಆಯಾ ಸ್ಥಳಕ್ಕೆ ಅವರು ನೇಮಕವಾಗಿ ಬರುವವರೆಗೂ, ನಮ್ಮ ಹೆಂಗಸರು ಹೆರಿಗೆ ಅಥವಾ ಪ್ರಸವಿಸದೆ ಅವರು ಬರುವ ತನಕ ಕಾದು ಕುಳಿತಿರಲು ಸಾಧ್ಯವೇ? ಏನೇ ಇರಲಿ, ನಮ್ಮ ಹಳ್ಳಿಯ ಸೋದರಿಯರು ಸೂಲಗಿತ್ತಿ ವಿದ್ಯೆಯಲ್ಲಿ ಪಾರಂಗತರಾಗಲು ಹೆಚ್ಚು ಸಂಖ್ಯೆಯಲ್ಲಿ ಮುಂದೆ ಬರಬೇಕು.

ಜನಹಿತ ಯೋಜನೆಗಳನ್ನು ಪೂರೈಸಲು ಸರಕಾರದ ಸಿಬ್ಬಂದಿಯಿಂದ ತಡವಾಗದಂತೆ ಮಾನ್ಯ ಮಂತ್ರಿಗಳು ನೋಡಿಕೊಳ್ಳಬೇಕು. ಏಕೆಂದರೆ ಜನತೆ ಬರೀ ಭರವಸೆಯಲ್ಲಿ ತೃಪ್ತರಾಗುವುದಿಲ್ಲ. ಭರವಸೆಯ ಬೆನ್ನ ಹಿಂದೆಯೇ ಪ್ರಗತಿಯನ್ನೂ ಜನ ನಿರೀಕ್ಷಿಸುತ್ತದೆ.

ಪಾನನಿರೋಧ:— ಪಾನ ನಿರೋಧವೆಂಬುದೊಂದು ಸಾಮಾಜಿಕ ಪರೀಕ್ಷೆ. ಈ ಪರೀಕ್ಷೆ ಜನರ ಸಹಕಾರ ವಾತಾವರಣದಲ್ಲೇ ಗೆಲ್ಲಬಲ್ಲುದು. ಇತರ ಸರಕಾರಗಳ ಪಾನನಿರೋಧ ಸಾಧನೆ ದೊಡ್ಡ ಸೋಲೆಂದು ಈಗೀಗ ತಿಳಿದು ಬರುತ್ತಿರುವಾಗ, ನಾವು ನಮ್ಮ ಪಾನ ನಿರೋಧ ಧೋರಣೆಯನ್ನು ಇನ್ನು ಯಾವ ಯಾವ ಮಾರ್ಗಗಳಲ್ಲಿ ಜಯಶೀಲವಾಗಿ ಮಾಡಬಹುದೋ, ಅರ್ಥವಾಗದಂಥ ವಿಷಯವಾಗಿದೆ. ಕುಡಿಯಬೇಕೆಂದು ಆಶಿಸುವವನ ಅಥವಾ ಕುಡುಕನೊಬ್ಬನು ತನ್ನ ಮಗನು ಕುಡುಕನಾಗಬಾರದೆಂದೇ ಆಶಿಸುತ್ತಾನೆ; ಇದು ಸತ್ಯ. ಈ ಒಂದು ದೃಷ್ಟಿಯಲ್ಲೇ ದೇಶದ ಸುಭಿಕ್ಷೆಯನ್ನಾಶಿಸಿ ಪಾನನಿರೋಧ ಬೇಕೇ ಬೇಡವೇ ಎಂದು ನಿರ್ಧರಿಸಬಹುದು. ಪಾನನಿರೋಧವನ್ನು ಬಳಕೆಗೆ ತಂದಮೇಲೆ, ಅದು ಯಶಸ್ವಿಯಾಗಲಿಲ್ಲ ಎಂಬ ಹೇಳಿಕೆಯ ಮೇಲೆ ಅಷ್ಟು ಸುಲಭವಾಗಿ ಅದನ್ನು ಪುನಃ ಕಿತ್ತುಹಾಕುವುದು ಒಳ್ಳೆಯದಲ್ಲ. ಬದಲಿಗೆ ಪಾನನಿರೋಧ ಧೋರಣೆಯ ಇನ್ನೊಂದು ಅಂಗವಾದ ಜನಹಿತ ಧೋರಣೆಯ ಕಾರ್ಯವನ್ನು ಕೈಕೊಳ್ಳೋಣ. ಪಾನನಿರೋಧ ಜ್ಯಾರಿಯಲ್ಲಿರುವುದರಿಂದ ಸರಕಾರಕ್ಕೆ ಆರ್ಥಿಕ ಸೋಲು ಉಂಟೆಂದು ಈ ಹಿಂದೆ ಒಂದು ಆರೋಪವಿದ್ದಿತು. ಇವತ್ತು ಅಂಥಾ ಆರೋಪಗಳಿಗೆಡೆ ಇಲ್ಲ. ಸರಕಾರವು ಬೇರೆ ರೀತಿಯಲ್ಲಿ ಆ ನಷ್ಟವನ್ನು ತುಂಬಿಸಿಕೊಂಡಿದೆ. ಅದ ಕಾರಣ, ನಮ್ಮ ಜನರು ಮನಃಪೂರ್ವಕ ಪಾನನಿರೋಧವನ್ನು ಬೆಂಬಲಿಸಬೇಕು.

(೫ನೇ ಪುಟಂದ)

ಯ ಯೋಜನೆಗೆ ವಿಘ್ನವೊದಗದಂತೆ ನೋಡಿಕೊಳ್ಳುವುದು ಅಗತ್ಯ." ಸಾಧಾರವಾದ ವಿಷಯ ಪ್ರತಿಪಾದನೆಯಿಂದಲೂ ವಿಶ್ವಾಸಾರ್ಹ ಅಂಕೆ ಸಂಖ್ಯೆಗಳಿಂದಲೂ ನಕ್ಷೆ ಮುಂತಾದವುಗಳಿಂದಲೂ ತನ್ನ ಮನವಿಯನ್ನು ಪರಿಪುಷ್ಟಗೊಳಿಸಬೇಕೆಂದೂ ಆಯೋಗ ಅಪೇಕ್ಷಿಸುತ್ತದೆ. ಕನ್ನಡಿಗರ ಪರವಾಗಿ ಇಂತಹ ಪ್ರಯತ್ನಗಳು ಇಷ್ಟರಲ್ಲೇ ತೊಡಗುವ ಸೂಚನೆ ಕಂಡು ಬರುತ್ತದೆ.

ಲಾರೆಂಟರ ಸಂದರ್ಶನ

ಸನ್ಮಾನ್ಯ ಅತಿಥಿಗಳೊಬ್ಬರು ಕಳೆದ ವಾರ ಭಾರತಕ್ಕೆ ಆಗಮಿಸಿ, ನಿಕಟವಾದ ಪರಿಚಯ ಲಾಭವನ್ನು ಮಾಡಿಕೊಂಡರು. ಕಾಮನವೆಲ್ತ ರಾಷ್ಟ್ರಗಳಲ್ಲಿ ಸೇರಿದ ಕೆನಡಾದ ಪ್ರಧಾನ ಮಂತ್ರಿ ಲೂಯಿ ಸೆಂಟಲಾರೆಂಟರ ಈ ಸೌಹಾರ್ದ ಸಂದರ್ಶನ ಉಭಯ ರಾಷ್ಟ್ರಗಳ ನಡುವಣ ಸ್ನೇಹದ ಬಂಧನವನ್ನು ಇನ್ನಷ್ಟು ಬಿಗಿಗೊಳಿಸಿತು. ಲಾರೆಂಟರು ಸ್ಪಷ್ಟವಾದಿಯಾಗಿ, ಕೆಲವು ಮಾತುಗಳನ್ನು ಆಡಿದರು. ಭಾರತದ ಪ್ರತಿಷ್ಠೆ ಹೆಚ್ಚುತ್ತಿರುವುದಕ್ಕೂ ಗಾಂಧೀಜಿಯ ಸಂದೇಶ ಭಾರತದ ಸೀಮೆಯನ್ನು ಉಲ್ಲಂಘಿಸಿ ಜಾಗತಿಕ ವಲಯದಲ್ಲಿ ಹಬ್ಬಿರುವುದಕ್ಕೂ ಲಾರೆಂಟರು ಸಂತೋಷ ವ್ಯಕ್ತಗೊಳಿಸಿದರು. ಅದೇ ಕಾಲಕ್ಕೆ ಕೆಲವು ವಿಷಯಗಳಲ್ಲಿ ತಮ್ಮ ಸರಕಾರಕ್ಕೂ ಭಾರತದ ನಿಲುಮೆಗೂ ಇರುವ ವ್ಯತ್ಯಾಸವನ್ನು ಗುರುತಿಸಿದರು— ಅಮೇರಿಕದ ಪರವಾಗಿ ತಮಗಿರುವ ಗೌರವ ಭಾವ ಹಾಗು ಪಾಕಿಸ್ತಾನಕ್ಕೆ ಸೈನಿಕ ಸಹಾಯ ನೀಡುವಲ್ಲಿನ ಅದರ ಸದುದ್ದೇಶಗಳ ಬಗ್ಗೆ ತಮ್ಮ ಮೆಚ್ಚುಗೆಯನ್ನು ಅವರು ವ್ಯಕ್ತಪಡಿಸಲು ಹಿಂಜರಿಯಲಿಲ್ಲ. ಆದರೂ ಏಶಿಯಾದ ಸಮಸ್ಯೆಗಳನ್ನು ಅವರು ಸಹಾನುಭೂತಿಯಿಂದ ನೋಡಿದರು. ವಸಾಹತುಗಳ ಸ್ವಾತಂತ್ರ್ಯ ಸಂಗ್ರಾಮದ ಪ್ರಗತಿ ತೀರ ಮಂದವಾಗಿದೆಯೆಂದು ಅವರು ಅಭಿಪ್ರಾಯಪಟ್ಟರಲ್ಲದೆ, ಪಂಡಿತ ನೆಹರೂರಿಂದ ತಾನು ಪೌರ್ವಾತ್ಯ ದೇಶಗಳ ಕುರಿತಾದ ವಿಶೇಷ ಜ್ಞಾನವನ್ನು ಸಂಪಾದಿಸಿದೆನೆಂದೂ ಹೇಳಿದರು. ರಾಜಾಜಿಯವರು ಮದ್ರಾಸಿನ ಶಾಸನ ಸಭೆಯಲ್ಲಿ ಶಸ್ತ್ರೀಕರಣದ ಸ್ಪರ್ಧೆಯ ವಿರುದ್ಧ ಸ್ವರವೆತ್ತಿದುದನ್ನು ಪ್ರಸ್ತಾಪಿಸುತ್ತಾ, ಬಡ ಏಶಿಯಾದ ರಾಷ್ಟ್ರಗಳು ತಮ್ಮ ಆದಾಯ ಸ್ರೋತವನ್ನು ಯುದ್ಧದಂತಹ ವಿನಾಶಕಾರ್ಯಕ್ಕೆ ಉಪಯೋಗಿಸಲಾರವೆಂಬ ರಾಜಾಜಿಯ ಅಭಿಪ್ರಾಯವನ್ನು ತಾವೂ ಅನುಮೋದಿಸಿದರು ಆದರೂ ಸ್ಪರ್ಧೆ ಅನಿವಾರ್ಯವಾಗಿ ಭಾಸವಾಗುತ್ತಿದೆಯೆಂದವರು ವ್ಯಸನ ಸೂಚಿಸಿದರು.

ಕಟಪಾಡಿ ಪಂಚ್ಯಾತ ಬೋರ್ಡಿನಲ್ಲಿ

ತಿ. ವ್ಯಾ, ನಂಬ್ರ 27/1953

ಕೆ. ಸದಾನಂದ ಶ್ಯಾನುಭಾಗ — ವಾದಿ.

ಮತ್ತು

ವ್ಯಾ. ವಿಠಲ ಹೆಗ್ಡೆ, ಮಾಜಿ ಪಟೇಲ ವ್ಯಾ. ರಾಮಯ್ಯ ಹೆಗ್ಡೆರ ಅಳಿಯ, ಉಡ್ಪಿ ತಾಲೂಕು ಯೇಣಗುಡ್ಡೆ ಗ್ರಾಮ— ಪ್ರತಿವಾದಿ.

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ, ನೀವು, ವಾದಿಗೆ ಮನೆ ಕಟ್ಟೋಣದ ಬಗ್ಗೆ ಕಿರಾಲ ಭೋಗಿ ಮರದ ಮೋಪನ್ನು ಕೊಡುವುದಾಗಿ ತಾ.5-10-1950 ರಲ್ಲು ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್ ಕಟಪಾಡಿ ಬ್ರಾಂಚಿನ ಚೆಕ್ ನಂಬ್ರ 067677 ಪ್ರಕಾರ ಪಡಕೊಂಡ ಮೊಬ್ಲಗು ರೂ. 100-0-0ರಲ್ಲಿ ವಸ್ಲು ಆದ್ದು ಹೋಗ್ಗಾ ಬಾಕಿಯಾಗುವ ರೂ. 50—0—0 ಅಪ್ರ ಮೇಲಣ ಬಡ್ಡಿ, ಕೋರ್ಟು ಖರ್ಚು ಕೂಡಾ ಬರಮಾಡಿಕೊಳ್ಳುವರೆ ವಾದಿಯು ದಾಖ್ಲೆ ಮಾಡಿದ ಮೇಲ್ಕಂಡ ದಾವೆಯು ತಾ. 31—3—1954ಕ್ಕೆ ತನ್ಕಿಗೆ ಇಟ್ಟಿದೆ. ಸದ್ರಿ ದಾವೆಯಲ್ಲಿ ಉದಾಹರಿಸುವಂಥಾದಿದ್ರೆ ಸದ್ರಿ ದಿವ್ಸ ಅಪರಾಹ್ನ 2 ಘಂಟೆಗೆ ಸದ್ರಿ ಕೋರ್ಟು ಮುಂದೆ ನೀವು ಸ್ವತಹಾ ಯಾ ಮುಖಾಲಿಕನ ಮೂಲ್ಕ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು— ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ಏಕಪಕ್ಷವಾಗಿ ತೀರ್ಮಾನಿಸಲಾದೀತು.

P. Venkatraya Nayak, B. Sc.
ಕಟಪಾಡಿ ಪಂಚ್ಯಾತ ಬೋರ್ಡು ಪ್ರೆಸಿಡೆಂಟ್.
ಕಟಪಾಡಿ, ತಾ. 1—3—1954.

ಕಟಪಾಡಿ-ಕಳೆದ ದಿನಾಂಕ 27ರಂದು ಸ್ಥಳೀಯ ಎಸ್. ವಿ. ಎಸ್. ಹಾಯರ್ ಎಲಿಮೆಂಟರಿ ಶಾಲೆಯ ವರ್ಧಂತ್ಯುತ್ಸವವು ಡಿ. ಇನ್ಸ್ಪೆಕ್ಟರರಾದ ಶ್ರೀ ಎಚ್. ವೆಂಕಟ್ರಾಯ ಗಡಿಯಾರ್ ಬಿ. ಎಸ್. ಸಿ., ಬಿ. ಟಿ. ಅವರ ಅಧ್ಯಕ್ಷತೆಯಲ್ಲಿ ಆಚರಿಸಲ್ಪಟ್ಟಿತು. ಶಾಲಾ ಲೇಖಕ ಶ್ರೀ ಪಿ. ರಾಮದಾಸ ನಾಯಕರಿಂದ ಸ್ವಾಗತ ಭಾಷಣ, ಮುಖ್ಯ ಅಧ್ಯಾಪಕ ಶ್ರೀಯು. ರಾಮಚಂದ್ರ ಮಯ್ಯರಿಂದ ಸಂದೇಶ, ಮತ್ತು ವರದಿ ವಾಚನ, ಹಳೆ ವಿದ್ಯಾರ್ಥಿ ಶ್ರೀ ಕೆ. ಶ್ರೀನು ಶೆಟ್ಟರಿಂದ ಶಾಲಾ ಸ್ವಸ್ತಿ ವಾಚನ ನಡೆಯಿತು. ಪಾರಿತೋಷಕ ವಿತರಣೆಯಾದ ಬಳಿಕ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಶಾಲೆಯ ಸರ್ವತೋಮುಖ ಬೆಳಗೆಯನ್ನೂ ಶಾಲಾ ಆಡಳಿತೆ ಸಂಘದವರು ವಿದ್ಯಾಪ್ರಪಂಚದಲ್ಲಿ ಮಾಡುತ್ತಿರುವ ಸೇವೆಯನ್ನೂ ಪ್ರಶಂಸಿಸಿ, ಮಾರ್ಪಟ್ಟ ಪ್ರಾಥಮಿಕ ವಿದ್ಯಾಭ್ಯಾಸ ಕ್ರಮವು ಯಶಸ್ವಿಯಾಗುವಂತೆ ಮಾಡಲು ಅಧ್ಯಾಪಕ ವರ್ಗಕ್ಕೂ ಹೆತ್ತವರಿಗೂ ಕೆಲವೊಂದು ಉಪಯುಕ್ತ ಸಲಹೆಗಳನ್ನಿತ್ತರು. ಅಂದು ರಾತ್ರಿ ಶಾಲಾ ಬಾಲಕಿಯರಿಂದ 'ಸಾವಿತ್ರಿ' ಎಂಬ ಕನ್ನಡ ನಾಟಕವೂ ಬಾಲಕರಿಂದ 'ವಿದ್ಯೆವತಾದಿ' ಎಂಬ ತುಳು ನಾಟಕವೂ ಯಶಸ್ವಿಯಾಗಿ ಅಭಿನಯಿಸಲ್ಪಟ್ಟವು.

ಬೆಳ್ಳಿ— ಸ್ಥಳೀಯ ಇಗರ್ಜಿಯ ಪ್ರಥಮ ಗುರುಗಳಾಗಿದ್ದ ಜನಪ್ರಿಯ ರೆ| ಫಾ| ಕಾಶ್ಮಿರ್ ಫೆರ್ನಾಂಡೀಸ್, ಅವರ ಗುರು ಪಟ್ಟಾಭಿಷೇಕದ ಸುವರ್ಣೋತ್ಸವವು ಕಳೆದ ತಾ 24ರಲ್ಲು ಈಗಿನ ಇಗರ್ಜಿ ಪಾದ್ರಿಗಳಾದ ರೆ| ಫಾ| ಜೆ. ಎಮ್. ಪಿಂಟೋರವರ ನೇತೃತ್ವದಲ್ಲಿ ಜರಗಿತು. ಭಾವಚಿತ್ರ ಅನಾವರಣ, ನಿಧಿ ಸಮರ್ಪಣೆ ನಡೆದು ಸಮಾರಂಭ ಕೊನೆಗೊಂಡಿತು.

ಕುಂಬಡಾಜೆ— ಸ್ಥಳೀಯ ಬೋರ್ಡು ಬುನಾದಿ ಎಲಿಮೆಂಟರಿ ಶಾಲಾ ಹೆಡ್ಮಾಸ್ಟರ್ ಶ್ರೀ ಕೆ. ಶ್ರೀಧರ ಶೆಟ್ಟರನ್ನು ಬೀಳ್ಕೊಡುವ ಸಮಾರಂಭವು ಕಳೆದ ತಾ 23ರಲ್ಲು ಶ್ರೀ ಕೆ. ಶಾಂತಾಳ್ವರ ಅಧ್ಯಕ್ಷತೆಯಲ್ಲಿ ಜರಗಿತು. ಗ್ರೂಪ್ ಫೋಟೋ, ಲಘು ಉಪಾಹಾರಾದಿ ಕಾರ್ಯಕ್ರಮಗಳಿದ್ದುವು.

ಕಿದಿಯೂರು— ವಾಡಿಕೆಯಂತೆ ಬಿಲ್ಲವ ಸಮಾಜದವರಿಂದ ಕಿದಿಯೂರು ಬೈದರ್ಕಳ ಗರಡಿಯಲ್ಲಿ ಆಗತಕ್ಕ ಕಾಲಾವಧಿ ನೇಮವು ಕಳೆದ ತಾ 26ರಲ್ಲು ಜರಗಿತೆಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಫಲಿಮಾರು ಕಳೆದ ತಾ 19ರಲ್ಲಿ ಸಾರ್ವಜನಿಕ ಸಭೆಯೊಂದು ಶ್ರೀ ಎ. ಜೆ. ಆಳ್ವರವರ ಅಧ್ಯಕ್ಷತೆಯಲ್ಲಿ ಜರಗಿ, ಅಧ್ಯಕ್ಷರ ಮತ್ತು ಶ್ರೀ ಟಿ. ಎ. ಪೈ, ಎಂ. ಎಲ್. ಎ. ಅವರ ಭಾಷಣಗಳಾದುವು. ಕಾಂಗ್ರೆಸ್ ಸರಕಾರ ಮಾಡಿದ ಜನಹಿತವನ್ನು ವಿವರಿಸಿ, ಕಾಂಗ್ರೆಸ್ ಸರಕಾರಕ್ಕೆ ಜನತೆಯ ಸಂಪೂರ್ಣ ಬೆಂಬಲವನ್ನು ಪೈಗಳು ಕೋರಿದರು.

ಮಣಿಪಾಲ ಹೈಸ್ಕೂಲಿನ ವರ್ಧಂತಿಯು ಕಳೆದ ತಾ 21ರಂದು ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಪ್ರಿನ್ಸಿಪಾಲ್ ಡಾ| ಎನ್. ಮಂಗೇಶರಾಯರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ಮುಖ್ಯ ಅಧ್ಯಾಪಕರಾದ ಶ್ರೀಯು. ಪುಂಡಲೀಕ ಶೆಣೈಯವರು ಶಾಲಾ ವರದಿಯನ್ನೋದಿದರು. ಕುಮಾರಿ ಟಿ. ತಾರಾಬಾಯಿಯವರು ಶಾಲಾ ಸ್ವಸ್ತಿವಾಚನ ಮಾಡಿದರು. ಆನಂತರ ಬಹುಮಾನ ವಿತರಣೆ, ಬಿ. ಧನಪಾಲ ಹೆಗ್ಡೆಯವರಿಂದ ಸಹಾಯಕರ ಅಭಿನಂದನೆ, ಅಧ್ಯಕ್ಷರ ಭಾಷಣಗಳಾದುವು. ಕೊನೆಗೆ ವಿವಿಧ ವಿನೋದಾವಳಿಗಳು ಜಯಪ್ರದವಾಗಿ ನೆರವೇರಿದುವು. ಮುಖ್ಯೋಪಾಧ್ಯಾಯರು ಧನ್ಯವಾದಗಳನ್ನಿತ್ತರು. ಅಂದು ಬೆಳಿಗ್ಗೆ ಪ್ರೇಕ್ಷಣೀಯವಾದ ವಸ್ತು ಪ್ರದರ್ಶನದ ಉದ್ಘಾಟನೆಯು ಡಾ| ಸುಂದರರಾಮಯ್ಯಗಳಿಂದ ಡಾ| ಟಿ. ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ಜರಗಿಸಲ್ಪಟ್ಟಿತ್ತು. ಛದ್ಮವೇಷ ಸ್ಪರ್ಧೆ, ತಿಂಡಿವಿತರಣೆಗಳೂ ಇದ್ದುವು.

ನಾಲ್ಕೂರು – ಕಳೆದ ತಾ 24ರಲ್ಲು ನಾಲ್ಕೂರಿನಲ್ಲಿ ಬ್ರಾಂಚ್ ಪೋಸ್ಟಾಫೀಸು ತೆರೆಯಲ್ಪಟ್ಟಿದೆ.

ಫೆರ್ಲಂಪಾಡಿ— ಇಲ್ಲಿಯ ಬೋರ್ಡು ಎಲಿಮೆಂಟರಿ ಶಾಲೆಯಲ್ಲಿ ಕಳೆದ ತಾ 28ರಲ್ಲು ಪುತ್ತೂರು ಸ್ಪೆಶಲ್ ರೆವಿನ್ಯೂ ಇನ್ಸ್ಪೆಕ್ಟರ್ ಶ್ರೀ ಕೆ. ರಾಮಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ಕೊಳ್ತಿಗೆ ಗ್ರಾಮದ ಹರಿಜನೋದ್ಧಾರ ಸಭೆಯು ಜರಗಿತು. ಶ್ರೀಗಳಾದ ಬಿ. ದಿನಕರರಾವ್, ಎ. ಕೆ. ಗೌಡ ಮತ್ತು ಕೆ. ನಾಗಪ್ಪ ರೈಗಳು ಹರಿಜನೋದ್ಧಾರದ ಕುರಿತು ಭಾಷಣವಿತ್ತರು. ಶ್ರೀ ಬಿ. ದಿನಕರರಾಯರು ಲಘು ಉಪಹಾರವನ್ನಿತ್ತರು.

ಪುತ್ತೂರು— ಸ್ಥಳೀಯ ಪಂಚಾಯತ ಬೋರ್ಡಿನ ನೂತನ ಆಫೀಸು ಕಟ್ಟಡದ ಉದ್ಘಾಟನೆಯನ್ನು ಕಳೆದ ತಾ 25ರಲ್ಲು ಶ್ರೀ ಮೊಳಹಳ್ಳಿ ಶಿವರಾಯರು ನೆರವೇರಿಸಿದರು. ಕೊಡಗಿನ ಮುಖ್ಯಮಂತ್ರಿ ಶ್ರೀ ಸಿ. ಎಮ್. ಪೂಣಚ್ಚನವರು, ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಕುಮಾರಿ ಜಿ. ಯಶೋಧಾರವರಿಂದ ಪ್ರಾರ್ಥನೆಯಾದ ಬಳಿಕ ಪಂಚಾಯತ ಬೋರ್ಡು ಸದಸ್ಯ ಶ್ರೀಮತಿ ಬಿ. ಸುನಂದಾ ಬಾಳಿಗರು ಸ್ವಾಗತ ಮಾತುಗಳನ್ನಾಡಿದರು. ಪಂಚಾಯತ ಬೋರ್ಡಿನ ಅಧ್ಯಕ್ಷ ಶ್ರೀ ಬಿ. ಚಿದಾನಂದ ರಾಯರು ವರದಿಯನ್ನೋದಿದರು. ಸಭಾಧ್ಯಕ್ಷರಿಗೆ ಪಂಚಾಯತ ಬೋರ್ಡು ಸದಸ್ಯ ಶ್ರೀ ಎಚ್. ಸೀತಾರಾಮ ಭಟ್ಟರು ಮಾನಪತ್ರವನ್ನರ್ಪಿಸಿದರು. ಅಂತೆಯೇ ಶ್ರೀ ಎಮ್. ಶಿವರಾಯರಿಗೆ ಶ್ರೀ ಬಿ. ಚಿದಾನಂದ ರಾಯರು ಮಾನಪತ್ರವನ್ನು ಅರ್ಪಿಸಿದರು. ಶ್ರೀಗಳಾದ ಎಚ್. ಪುಂಡರೀಕ ಭಟ್, ಉಗ್ರಾಣ ಮಂಗೇಶರಾವ್ ಮತ್ತು ರೆ| ಫಾ| ಎ. ಪತ್ರಾವೋರವರು ಕಾಲೋಚಿತ ಮಾತುಗಳನ್ನಾಡಿದರು. ಶ್ರೀ ಶಿವರಾಯರು ಮಾತನಾಡುತ್ತಾ ಪುತ್ತೂರಿನ ಅಭಿವೃದ್ಧಿಗಾಗಿ ನಾಗರಿಕರೆಲ್ಲರೂ ಪ್ರಯತ್ನಿಸಬೇಕೆಂದು ಕೇಳಿಕೊಂಡರು. ಕೊಡಗು ಪುತ್ತೂರುಗಳ ಸ್ನೇಹ ಬಾಂಧವ್ಯವನ್ನು ಶ್ಲಾಘಿಸಿ, ದ. ಕ. ಜಿಲ್ಲೆಗೆ ವಿದ್ಯುತ್ ಸರಬರಾಯಿ, ಆಹಾರ ಪೂರೈಕೆ ಇತ್ಯಾದಿಗಳಲ್ಲಿ ಕೊಡಗಿನ ಜನತೆ ಹಾಗೂ ಸರಕಾರವು ಯಾವಾಗಲೂ ಸಹಾಯ ನೀಡಲು ತಯಾರಿದೆ ಎಂದು ಸಭಾಧ್ಯಕ್ಷರು ತಮ್ಮ ಭಾಷಣದಲ್ಲಿ ಹೇಳಿದರು ವಂದನಾರ್ಪಣೆಯೊಂದಿಗೆ ಸಮಾರಂಭ ಕೊನೆಗೊಂಡಿತು.

THE VIJAYA BANK LIMITED, BRAHMAVAR.

ದಿ ವಿಜಯಾ ಬೇಂಕ್ ಲಿಮಿಟೆಡ್, ಬ್ರಹ್ಮಾವರ.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರುಗಳು ನಮ್ಮ ಶಾಖೆಯಿಂದ ಚಿನ್ನಾಭರಣ ನಗಗಳ ಈಡಿನ ಮೇಲೆ ಪಡೆದ ಸಾಲವನ್ನು ಮರುಪಾವತಿ ಮಾಡುವರೆ ರಿಜಿಸ್ಟ್ರೀ ನೋಟೀಸು ಮೂಲಕ ಕೇಳಿಕೊಂಡಾಗ್ಯೂ ಅಸ್ಲು ವ ಬಡ್ಡಿ ಯಾವುದನ್ನೂ ಈ ತನಕವೂ ಕೊಡದೆ ಬಾಕಿ ಮಾಡಿಕೊಂಡಿರುವವರಿಂದಲೂ ಸದ್ರಿಯವರು ನಮ್ಮಲ್ಲಿ ಈಡಿಟ್ಟ ನಗಗಳನ್ನು ಇದೇ ಬರುವ ತಾರೀಕು 13—3—54ನೇ ಶನಿವಾರ ಅಪರಾಹ್ನ ಘಂಟೆ 2ಕ್ಕೆ ಸರಿಯಾಗಿ ಯಾ ಯುಕ್ತ ಕಂಡ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೆ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು, ತಿಳಿದಿರಲಿ.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ಮೊಬಲಗು		
391/52	ಚಾರ್ಲ್ಸ್ ಲುವೀಸ್, ಇಲಿಯಾಸ್ ಲುವಿಸರ ಮಗ, C/o ವಿನ್ಸೆಂಟ್ ಲುವೀಸ್, ಭದ್ರಗಿರಿ, P.O. ಬ್ರಹ್ಮಾವರ.	26	12	0
200/—	ಐ. ಪ್ರಭಾಕರ ಹೆಗ್ಡೆ, ಐ. ನಾರಾಯಣ ಹೆಗ್ಡೇರ ಅಳಿಯ, ಕುಂಜಾಲ್	205	10	0
760/—	ಶಂಕ್ರಯ್ಯ ಆಚಾರಿ, ಕೃಷ್ಣಯ್ಯ ಆಚಾರಿಯ ಮಗ, P. O. ಕುಂಜಾಲ್	49	3	0
783/—	ಐ. ಭಾಸ್ಕರ್ ಹೆಗ್ಡೆ, ಐ. ನಾರಾಯಣ ಹೆಗ್ಡೇರ ಅಳಿಯ, ಕುಂಜಾಲ್	118	12	0
687/—	ಶೀನ ಸೇರಿಗಾರ್, ವಾಸ ಸೇರಿಗಾರರ ಮಗ, ಉಪ್ಪೂರ್ ಗ್ರಾಮ, ಹಿರಿಬೆಟ್ಟು, P. O. ಕಲ್ಯಾಣಪುರ	80	6	0
630/—	ಹೈದರ್ ಖಾನ್ ಸಾಹೇಬ, ಇಸ್ಮಾಯಿಲ್ ಖಾನ್ ಸಾಹೇಬರ ಮಗ, ಕುಮ್ರಗೋಡು ಗ್ರಾಮ, P. O. ಬ್ರಹ್ಮಾವರ	23	4	0
623/—	—do—	48	12	0
601/—	ಅಚ್ಚು ಸೆಟ್ಟಿ, ಬಾಬ ಸೆಟ್ರ ಅಳಿಯ, ವಾರಂಬಳ್ಳಿ ಗ್ರಾಮ, P. O. ಬ್ರಹ್ಮಾವರ	66	12	0
605/—	—do—	116	1	0
580/—	ಭುಜಂಗ ಹೆಗ್ಡೆ, ಅಂತಯ್ಯ ಹೆಗ್ಡೇರ ಅಳಿಯ, ಹಳ್ಳಮನೆ, ಹಂದಾಡಿ ಗ್ರಾಮ, P. O. ಬ್ರಹ್ಮಾವರ	17	8	0

Office of the Bank,
BRAHMAVAR,
Dated 27—2—54.

(Sd-) ಬಿ. ಬಾಸ್ಕರ ಸೆಟ್ಟಿ,
ಏಜಂಟ್.

ಪ್ರಕಟಣೆ.

ಶಿರ್ವಾ ಪಂಚ್ಯಾತ್ ಬೋರ್ಡು ಪ್ರೆಸಿಡೆಂಟರಿಂದ

ಶಿರ್ವಾ ಪಂಚ್ಯಾತ್ ಬೋರ್ಡಿಗೆ ಒಳಪಟ್ಟ ಮಂಚಕಲ್ಲು ಸಂತೆ ಮಾರ್ಕೆಟು ಮತ್ತು ದಿನಚರಿ ಮೀನು ಮಾರ್ಕೇಟುಗಳಲ್ಲಿ ತಾರೀಕು 1—4—1954ರಿಂದ, 31—3—1155ರ ವರೆಗೆ ಒಂದು ವರ್ಷದಲ್ಲಿ ವರಿ ವಸೂಲು ಮಾಡುವ ಸ್ವತಂತ್ರವನ್ನು ತಾ 16-3-1954ನೇ ಮಂಗಳವಾರ ಸಾಯಂಕಾಲ ಗಂಟೆ 4ಕ್ಕೆ ಪಂಚ್ಯಾತ್ ಬೋರ್ಡು ಆಫೀಸಿನ ಬಳಿ ಬಹಿರಂಗವಾಗಿ ಏಲಂ ಮಾಡೋಣಾಗುವುದು. ದಿನಚರಿ ಮೀನು ಮಾರ್ಕೆಟನ್ನು ಮೊಗವೀರರು ವಹಿಸಿಕೊಳ್ಳುವಲ್ಲಿ ಅವರಿಗೆ ಪ್ರಥಮ ಪ್ರಾಶಸ್ತ್ಯ ಕೊಡೋಣಾಗುವುದು. ಏಲಂ ಶರ್ತಗಳನ್ನು ಆಫೀಸು ನೋಟೀಸು ಬೋರ್ಡಿನಲ್ಲಿ ಮನ ಪ್ರಕಟಣೆಗಳಿಂದ ತಿಳಿಯಬಹುದು. ಎಂಬ ಸಂಗ್ತಿ ಎಲ್ಲಾ ಜನರಿಗೆ ಈ ಮೂಲಕ ತಿಳಿಸೋಣಾಗುವದು.

(Sd) S. A. Hegde
President,
Panchayat Board Shirva.

Dated, 27-2-1954.

ಮಂಗಳೂರು

ಸಮಾಜ ಸೇವಾ ಸಂಘದ ವಾರ್ಷಿಕೋತ್ಸವವು— ಸೈಂಟ್ ಎಲೋಸಿಯಸ್ ಕಾಲೇಜಿನಲ್ಲಿ ಕಳೆದ ತಾ 24ರಲ್ಲು ಸಂಜೆ ಜಿಲ್ಲಾ ನ್ಯಾಯಾಧೀಶರಾದ ಶ್ರೀ ಕೆ. ನರಸಿಂಹ ಚೆಟ್ಟಿಯಾರರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಟಿ. ಎಸ್. ಶೆಟ್ಟಿಗಳು ಸ್ವಾಗತ ಭಾಷಣ ಮಾಡಿದ ಬಳಿಕ ಸಂಘದ ಕಾರ್ಯದರ್ಶಿ ಶ್ರೀ ಗಣಪತಿ ಪೊಳ್ಳರು ವರದಿಯನ್ನೊಪ್ಪಿಸಿದರು. ವರದಿಯಲ್ಲಿ ವಯಸ್ಕರ ಶಿಕ್ಷಣ, ಬಡವರಿಗೆ ಸಹಾಯ, ರೋಗಿಗಳ ಸಂದರ್ಶನ, ಚರಂಡಿಗಳ ನಿರ್ಮಲೀಕರಣ, ಮೂಲುವುದು. ವೈಹಿಕ ಶ್ರಮ, ಗ್ರಾಮಾಭಿವೃದ್ಧಿ ಕಾರ್ಯಗಳೇ ಮೊದಲಾದುವನ್ನು ಸಂಘದ ಸದಸ್ಯರು ಮಾಡಿರುವುದಾಗಿ ಹೇಳಲಾಗಿತ್ತು. ನಂತರ ಕಾಲೇಜಿನ ಪ್ರಿನ್ಸಿಪಾಲರಾದ ರೆ| ಫಾ| ಇ. ಜೆ. ಜೇಕ್ಸರವರು ಭಾಷಣ ಮಾಡಿ ಹಲವಾರು ಸಲಹೆಗಳನ್ನಿತ್ತು ವಿದ್ಯಾರ್ಥಿಗಳ ಸಮಾಜ ಸೇವಾ ಕಾರ್ಯಗಳನ್ನು ಶ್ಲಾಘಿಸಿದರು. ಶ್ರೀಗಳಾದ ಕೆ. ಸೂರ್ಯನಾರಾಯಣ ಅಡಿಗ, ಬಿ. ಮಂಜಯ್ಯ ಹೆಗ್ಡೆ. ಬಿ. ವೈಕುಂಠ ಬಾಳಿಗ, ಎಮ್. ಎಲ್. ಎ. ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು. ಆ ಮೇಲೆ ಉತ್ತಮವಾಗಿ ಸಮಾಜ ಸೇವಾ ಕಾರ್ಯ ಸಲ್ಲಿಸಿದವರಿಗೆ ಪ್ರಶಸ್ತಿ ಪತ್ರಗಳನ್ನೂ ಪದಕಗಳನ್ನೂ ಅಧ್ಯಕ್ಷರು ವಿತರಣೆ ಮಾಡಿದರು. ಈ ಸಂಘದವರೆ ಮುಂದೆಯೂ ದೇಶದ ಅಭಿವೃದ್ಧಿ ಕಾರ್ಯದಲ್ಲಿ ನಿರತರಾಗಿ ಬಡ ಜನತೆಯ ಏಳಿಗೆಗಾಗಿ ದುಡಿಯಬೇಕೆಂದು ಅಧ್ಯಕ್ಷರು ಉಪದೇಶವಿತ್ತರು. ಸಂಘದ ಅಧ್ಯಕ್ಷ ಶ್ರೀ ಎ. ಸಿ. ಮುತಾಲಿಯವರು ವಂದನೆಗಳನ್ನರ್ಪಿಸಿದ ತರುವಾಯ ಸಭಾಂತ್ಯವಾಯಿತು.

ಜಿಲ್ಲಾ ಕರ್ನಾಟಕ ಪ್ರಾಂತ ರಚನಾ ಪರಿಷತ್ತು—ಪ್ರಸ್ತಾಪಿತ ಪುನರ್ಘಟನಾ ಆಯೋಗಕ್ಕೆ ಕರ್ನಾಟಕ ಪ್ರಾಂತ ರಚನೆಯ ಕುರಿತು ದ. ಕ. ಜಿಲ್ಲೆಯ ಅಭಿಪ್ರಾಯ ಒಪ್ಪಿಸುವ ಬಗ್ಗೆ ಜಿಲ್ಲೆಯೊಂದು ಪಕ್ಷಾತೀತ ಸರ್ವಪಕ್ಷೀಯ ಸಮ್ಮೇಳನವನ್ನು ಜರಗಿಸುವ ಉದ್ದೇಶ್ಯ ಕಳೆದ ತಾ 25ರಲ್ಲು ಸಂಜೆ ಶ್ರೀ ಕೆ. ಆರ್. ಆಚಾರ್ಯರ ಅಧ್ಯಕ್ಷತೆಯಲ್ಲೊಂದು ಸಭೆ ಜರಗಿ ಸ್ವಾಗತ ಸಮಿತಿಯೊಂದು ರಚಿಸಲಾಯಿತು. ಅಲ್ಲದೆ ಸ್ವಾಗತ ಕಮಿಟಿಯ ಅಧ್ಯಕ್ಷರಾಗಿ ಶ್ರೀ ಬಿ. ಮಂಜಯ್ಯ ಹೆಗ್ಡೆಯವರನ್ನು ಶ್ರೀಗಳಾದ ಕೆ. ಬಿ. ಜಿನರಾಜ ಹೆಗ್ಡೆ ಮತ್ತು ಬಿ. ಎಸ್. ಭಾಸ್ಕರ ರೈಗಳನ್ನು ಕಾರ್ಯದರ್ಶಿಗಳಾಗಿಯೂ ಆರಿಸಲಾಯಿತು. ಇದೇ ತಿಂಗಳ ತಾ 20 ಮತ್ತು 21ರಲ್ಲು ಮಂಗಳೂರಲ್ಲಿ ಕರ್ನಾಟಕ ಪ್ರಾಂತ ರಚನಾ ಪರಿಷತ್ತನ್ನು ಜರಗಿಸುವುದೆಂದಾಯಿತು. ಪರಿಷತ್ತನ್ನು ಉದ್ಘಾಟಿಸಲು ಬೊಂಬಾಯಿ ಕೃಷಿ ಮಂತ್ರಿ ಶ್ರೀ ಎಮ್. ಪಿ. ಪಾಟೀಲ್, ಮದ್ರಾಸಿನ ಮಂತ್ರಿಗಳಾದ ಶ್ರೀ ಎ. ಬಿ. ಶೆಟ್ಟಿ ಅಥವಾ ಡಾ ಯು. ಕೃಷ್ಣರಾವ್ ಅಥವಾ ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಡೆ ಇವರಲ್ಲೊಬ್ಬರನ್ನು ಕೇಳಿಕೊಳ್ಳಲು ನಿರ್ಣಯವಾಯಿತು. ಪರಿಷತ್ತಿನ ಅಧ್ಯಕ್ಷಸ್ಥಾನ ವಹಿಸಲು ಶ್ರೀ ಕೆ. ಆರ್. ಕಾರಂತರನ್ನು ಕೇಳಿಕೊಳ್ಳಬೇಕೆಂದು ನಿರ್ಧರಿಸಾಯಿತು. ಪರಿಷತ್ತಿನ ಕಾರ್ಯಕ್ರಮಗಳನ್ನು ಮುಂದೊತ್ತಲು ಉಪಸಮಿತಿಗಳ ರಚನೆಯಾಯಿತು.

ಸರ್ಕಲ್ ಕಾಂಗ್ರೆಸ್ ಕಮಿಟಿಯ ಅವಸರದ ಸಭೆಯು—ಕಳೆದ ತಾ 2? ರಲ್ಲು ಶ್ರೀ ಬಿ. ಆರ್. ಕರ್ಕೇರರ ಅಧ್ಯಕ್ಷತೆಯಲ್ಲಿ ಜರಗಿ ಕಾಂಗ್ರೆಸ್ ಸೇವಾ ನಿಷ್ಠರಾಗಿದ್ದ ಮೂಲ್ಕಿ ಬಂಗ್ಲೆ ಸೀತಾರಾಮ ಕಾಮತರ ಅಕಾಲ ನಿಧನದ ಬಗ್ಗೆ ಸಂತಾಪ ವ್ಯಕ್ತಪಡಿಸಲಾಯಿತು. ದಿನೇ ದಿನೇ ಅಕ್ಕಿಧಾರಣೆ ಏರುತ್ತಿರುವುದನ್ನು ತಡೆಯಲು ಸರಕಾರವು ಕೂಡಲೇ ಕಾರ್ಯಕ್ರಮ ಕೈಕೊಳ್ಳಬೇಕೆಂದೂ ಜಿಲ್ಲೆಯ ವರ್ತಕರೂ, ವರ್ತಕರೂ ಸರಕಾರದೊಡನೆ ಈ ಪರಿಸ್ಥಿತಿ ನಿವಾರಿಸಲು ಸಹಕರಿಸಬೇಕೆಂದೂ, ಮಿತಧಾರಣೆ ಅಂಗಡಿಗಳಲ್ಲಿ ಕೊಡುವ ಅಕ್ಕಿ ಪ್ರಮಾಣವನ್ನು ಜಾಸ್ತಿ ಮಾಡಿ ಒಳ್ಳೆಯ ಅಕ್ಕಿ ಒದಗಿಸಬೇಕೆಂದೂ ಸರಕಾರವನ್ನು ಕೇಳಿಕೊಳ್ಳಲಾಯಿತು. ಆಹಾರ ಮಂತ್ರಿಗಳಿಗೂ ಮುಖ್ಯ ಮಂತ್ರಿಗಳಿಗೂ ಎಸೆಂಬ್ಲಿ ಮೆಂಬರರಿಗೂ ನಿರ್ಣಯಗಳನ್ನು ಕಳುಹಿಸಬೇಕೆಂದು ನಿರ್ಧರಿಸಲಾಯಿತು.

ಕಳೆದ ತಾ 25ರಲ್ಲು ಸರ್ಕಲ್ ಕಾಂಗ್ರೆಸ್ ಕಮಿಟಿ ಆಶ್ರಯದಲ್ಲಿ ಸಾರ್ವಜನಿಕ ಸಭೆಯು ಡಾ ಯು. ಪಿ. ಮಲ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಬಿ. ಆರ್. ಕರ್ಕೇರ, ಬಿ. ವೈಕುಂಠ ಬಾಳಿಗ, ಎಮ್. ಎಲ್. ಎ. ಎಸ್. ಎಸ್. ಪೊಳ್ಳರು ಭಾಷಣವಿತ್ತರು. ಏರುತ್ತಿರುವ ಅಕ್ಕಿ ಬೆಲೆಯನ್ನು ತಡೆಯಬೇಕು, ಸಹಕಾರಿ ಸಂಘಗಳಲ್ಲಿ ವರ್ತಕರೂ, ರೈತರೂ ಅಕ್ಕಿ ಮುಡಿಗಳನ್ನು ದಾಸ್ತಾನಿಡುವಂತೆ ಗಿಟ್ಟುವ ದರವನ್ನು ಪಡೆಯುತ್ತಿರುವುದನ್ನು ಪ್ರೋತ್ಸಾಹಿಸುವ ಉಚಿತ ಕ್ರಮ ಕೈಗೊಳ್ಳಬೇಕು, ದಿನಂದಿನದ ಜೀವನ ವಸ್ತುಗಳ ಬೆಲೆ ಏರದಂತೆ ಸರಕಾರ ನಿಗಾ ಕೊಡಬೇಕು ಎಂಬಿತ್ಯಾದಿ ಕುರಿತು ನಿರ್ಣಯವಾಯಿತು.

ನೃತ್ಯೋತ್ಸವ— ಮಂಗಳೂರು ಭಗಿನೀ ಸಮಾಜದವರು ಜಪ್ಪು ಕೇಂದ್ರದ ಶಿಶು ವಿಹಾರದಲ್ಲಿ ಕಳೆದ ತಾ 20ರಲ್ಲು ಶ್ರೀಮತಿ ಪೋಬ್ಸನರ ಅಧ್ಯಕ್ಷತೆಯಲ್ಲಿ ನೃತ್ಯೋತ್ಸವವನ್ನು ಜರಗಿಸಿದರು.

ಕವಿದಿನಾಚರಣೆ— ಸೆಂಟ್ ಪಾಲಿನ ಪಾಠಶಾಲೆಯಲ್ಲಿ ಕಳೆದ ತಾ 24ರಲ್ಲು ಕವಿ ಎಮ್. ಎಸ್. ಕಾಮತರ ಜಯಂತಿಯು ಶ್ರೀ ಟಿ ವಾಮನ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ವಿದ್ಯಾರ್ಥಿನಿಯರು ತಾವು ತಯಾರಿಸಿದ ಪ್ರಬಂಧಗಳನ್ನು ಓದಿದರು.

ಪ್ರಜಾ ಸೋಶಲಿಸ್ಟ್ ಪಾರ್ಟಿಯ ಜಿಲ್ಲಾ ಕಾರ್ಯಕಾರಿ ಸಮಿತಿ ಸಭೆಯು ಕಳೆದ ತಾ. 21ರಲ್ಲು ಶ್ರೀ. ಕೆ. ಆರ್. ಕಾರಂತರ ಅಧ್ಯಕ್ಷತೆಯಲ್ಲಿ ಜರಗಿತು. ಈಚೆಗೆ ಜರಗಿದ ಮಲಬಾರಿನ ಪ್ರ. ಸೊ. ಪಾರ್ಟಿಯ ಸಮ್ಮೇಳನದಲ್ಲಿ ಸ್ವೀಕೃತವಾದ ದಕ್ಷಿಣ ಕನ್ನಡ ಸೇರಿ, ಕನ್ಯಾಕುಮಾರಿವರೆಗಿನ ಪಶ್ಚಿಮ ಪ್ರಾಂತ ರಚನೆಯಾಗಬೇಕೆನ್ನುವ ನಿರ್ಣಯವು ದಕ್ಷಿಣ ಕನ್ನಡ ಜಿಲ್ಲೆಗೆ ಮಾಡಿದ ದ್ರೋಹವೆಂದೂ, ಆದುದರಿಂದ ಪಾರ್ಟಿಯ ನ್ಯಾಶನಲ್ ಎಕ್ಸಿಕ್ಯೂಟಿವ್ ಈ ವಿಷಯ ಕೂಡಲೇ ತಕ್ಕ ಕಾರ್ಯಕ್ರಮ ಕೈಕೊಳ್ಳಬೇಕೆಂದೂ ಕೇಳಿಕೊಳ್ಳುವ ನಿರ್ಣಯವಾಯಿತು. ಮುಂದಿನ ಏಪ್ರಿಲ್ ತಿಂಗಳಾಂತ್ಯಕ್ಕೆ ಪಾರ್ಟಿಯ ಸಮ್ಮೇಳನವನ್ನು ಮಂಗಳೂರಲ್ಲಿ ಜರಗಿಸಬೇಕೆಂದೂ ಅದಕ್ಕೆ ಶ್ರೀ ಜಯಪ್ರಕಾಶ ನಾರಾಯಣ, ಶ್ರೀ ರಾಮಮನೋಹರ ಲೋಹಿಯಾ, ಶ್ರೀಮತಿ ಲೀಲಾರೋಯ ಮತ್ತು ಕೃಷ್ಣ ನಾಥಸಿಂಗ್ ಅವರನ್ನು ಆಮಂತ್ರಿಸಬೇಕೆಂದೂ ನಿರ್ಣಯವಾಯಿತು.

ಜಪ್ಪುಗೋರಕ್ಷದಂಡು ದೇವಸ್ಥಾನದಲ್ಲಿ— ಇದೇ ತಾ 13ರಿಂದ 20ರ ವರೆಗೆ ವರ್ಷಾವಧಿ ಉತ್ಸವವು ನಡೆಯಲಿರುವುದು.

ಸಮರ್ಥ ಸಂಗೀತ ಶಾಲೆ— ಯ ವಾರ್ಷಿಕೋತ್ಸವವು ಕಳೆದ ತಾ 26ರಲ್ಲಿ ಗಣಪತಿ ಹೈಸ್ಕೂಲ್ ಸದನದಲ್ಲಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಪ್ರಿನ್ಸಿಪಾಲ್ ಶ್ರೀ ಜಿ. ಎಸ್. ರತ್ನಾಕರ ಭಟ್ಟರು ವರದಿಯನ್ನೋದಿದರು. ಅಧ್ಯಕ್ಷರ ಭಾಷಣ, ವಿವಿಧ ವಿನೋದಾವಳಿಗಳಿಂದ ಸಮಾರಂಭ ಅಂತ್ಯವಾಯಿತು.

ಮದ್ರಾಸು ಕೌನ್ಸಿಲು ಚುನಾವಣೆ ಪಶ್ಚಿಮ ಕರಾವಳಿಯ ಸ್ಥಳೀಯ ಸಂಸ್ಥೆಗಳ ಮತದಾರ ಕ್ಷೇತ್ರದಿಂದ ಚುನಾಯಿಸಲ್ಪಡುವ ಮದ್ರಾಸು ಕೌನ್ಸಿಲಿನ ಒಂದು ಸ್ಥಾನಕ್ಕೆ ಕಾಂಗ್ರೆಸ್ ಉಮೇದ್ವಾರರಾಗಿ ಶ್ರೀ ಎಸ್. ನ ನರಪ್ಪಯ್ಯನವರೂ ಪ್ರಜಾಸೋಶಲಿಸ್ಟ್ ಕಡೆಯಿಂದ ಶ್ರೀ ಬಿ. ವೇದವ್ಯಾಸರಾಯರೂ ಸ್ಪರ್ಧಿಸುವರು.

Roc. No Dr-3810-54.

Sri A Mahalingam Chettiar I.A.S.,
Special Officer, District Board.
S. Kanara.

ಟೆಂಡರ ನೋಟೀಸು

ತಾ. 1–4–1954ರಿಂದ 31–3–1955ರ ವರೆಗೆ ದಕ್ಷಿಣ ಕನ್ನಡ ಜಿಲ್ಲಾ ಬೋರ್ಡು ಆಫೀಸು ಮತ್ತು ಇದರ ತಾಬೆಯಲ್ಲಿರುವ ಬೇರೆ ಆಫೀಸುಗಳ ಪ್ರಿಂಟಿಂಗ್, ಬೈಂಡಿಂಗ್ ಇತ್ಯಾದಿ ಕೆಲಸಾವಳಿಗಳ ಬಗ್ಗೆ ಸೀಲು ಟೆಂಡರುಗಳನ್ನು "1954—55ನೇ ವರ್ಷದ ಬಾಬ್ತು ಪ್ರಿಂಟಿಂಗ್, ಬೈಂಡಿಂಗ್ ವಗೈರೆ ಕೆಲಸಾವಳಿಗಳ ಬಾಬ್ತು ಟೆಂಡರು" ಎಂತ ಸೀಲುಮಾಡಿದ ಲಕೋಟೆಯ ಮೇಲೆ ಸ್ಪೆಶಲ್ ಆಫೀಸರ್ ದಕ್ಷಿಣ ಕನ್ನಡ ಜಿಲ್ಲಾ ಬೋರ್ಡು, ಮಂಗಳೂರು ಎಂತ ವಿಳಾಸ ಬರೆದು **1954ನೇ ಇಸವಿ ಮಾರ್ಚಿ ತಿಂಗಳ ತಾರೀಕು 19ನೇ ಶುಕ್ರವಾರ ಅಪರಾಹ್ನ ಘಂಟೆ 5ರ ವಳಗೆ** ದಕ್ಷಿಣ ಕನ್ನಡ ಜಿಲ್ಲಾ ಬೋರ್ಡು ಆಫೀಸಿಗೆ ತಲಪುವಂತೆ ಕಳುಹಿಸಿಕೊಡಬೇಕಾಗಿ ಕೇಳಿಕೊಳ್ಳಲಾಗುತ್ತದೆ. ನಿರ್ದಿಷ್ಟಪಡಿಸಿದ ತಾರೀಕಿನ ಸಾಯಂಕಾಲದನಂತರ ಬರುವ ಟೆಂಡರುಗಳನ್ನು ಅಂಗೀಕರಿಸಲಾಗಲಿಕ್ಕಿಲ್ಲ. ಟೆಂಡರುಗಳು ದಕ್ಷಿಣ ಕನ್ನಡ ಜಿಲ್ಲಾ ಬೋರ್ಡು ಸ್ಪೆಶಲ್ ಆಫೀಸರರಿಂದ ಅಥವಾ ಅವರಿಂದ ಅಧಿಕಾರಹೊಂದಲ್ಪಟ್ಟವರಿಂದ **1954ನೇ ಇಸವಿ ಮಾರ್ಚಿ ತಿಂಗಳ ತಾರೀಕು 20ನೇ ಶನಿವಾರ ಅಪರಾಹ್ನ ಘಂಟೆ 4—30ಕ್ಕೆ** ದಕ್ಷಿಣ ಕನ್ನಡ ಜಿಲ್ಲಾ ಬೋರ್ಡು ಆಫೀಸಿನಲ್ಲಿ ಆ ಸಮಯ ಹಾಜರಿರುವ ಟೆಂಡರುದಾರರ ಸಮಕ್ಷಮ ತೆರೆಯಲ್ಪಡಲಾಗುವುದು.

2. ಪ್ರಿಂಟಿಂಗ್ ಇತ್ಯಾದಿ ಕೆಲಸಾವಳಿಗಳ ಕುರಿತು ಪ್ರಿಂಟ್ ಮಾಡಿದ ಟೆಂಡರು ಫಾರ್ಮು ಮತ್ತು ಟೆಂಡರು ಕುರಿತಾದ ಕ್ರಮ ನಿಬಂಧನೆಗಳ ಪ್ರತಿಯೊಂದಕ್ಕೆ ಎರಡು ಫಾರ್ಮುಗಳ ಒಂದು ಸೆಟ್ಟಿಗೆ ರೂ. (1—0—0) ಒಂದರಂತೆ ಶಾಸ್ತಿ ಮಾಡಿ ಬರದ ಮೂಲಕ ಕೇಳಿಕೊಂಡಲ್ಲಿ ಒದಗಿಸಿ ಕೊಡಲಾಗುವುದು.

(Sd) ಎಮ್. ಸುಂದರ ರಾವ್,
ದ. ಕ. ಜಿಲ್ಲಾ ಬೋರ್ಡು
ಸ್ಪೆಶಲ್ ಆಫೀಸರರ ಬಗ್ಗೆ.

ದ. ಕ. ಜಿಲ್ಲಾ ಬೋರ್ಡು ಆಫೀಸು,
ಮಂಗಳೂರು, 17–2–1954.

ಖಾತ್ರಿ ಚಿನ್ನದ ನೆಕ್‌ಲೇಸ್ ತರಹವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಜಾಗ್ರತೆ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,

ಜ್ಯುವೆಲರ್. ತೆಂಕಪೇಟೆ, ಉಡುಪಿ, ದ. ಭಾರತ

ಫೋನು ನಂಬ್ರ 66



ಎಸ್. ಆರ್. ಬೀಡಿಗಳ ಟ್ರೇಡ್‌ಮಾರ್ಕನ್ನು ನೋಡಿಕೊಂಡುಕೊಳ್ಳಿ ನಿಮಗೆ ಅತ್ಯುತ್ತಮವಾದುದು ದೊರೆಯುವುದೆಂದು ತಿಳಿಯಿರಿ.

ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತವೆ.

S.R.BEEDI WORKS,
UDIPI, S. K.

Our Bombay Stockists - 1 V N Shenoy, Bombay.
2 N R Kamath Dahanu Road, Thana Dist (W. Rly)

ಪ್ರಕಟಣೆ.

"ರಾಜಾಪುರ ಸಾರಸ್ವತ ಸಂಘ"
ಮುಂಬಯಿ.

ಈ ಸಂಘದ ಸರ್ವ ಮೆಂಬರರಿಗೂ ಮತ್ತು ಸಮಾಜದ ಬಾಂಧವರಿಗೂ ಈ ಮೂಲಕ ತಿಳಿಯಪಡಿಸುವುದೇನೆಂದರೆ— ಸಂಸ್ಥೆಯ ವಂತಿಗೆ ವಸೂಲಿ ಮಾಡುವ ರಶೀದಿ ನಂಬ್ರ 376–400ರ ವರೆಗಿನ ರಶೀದಿಗಳುಳ್ಳ ಪುಸ್ತಕ ನಂಬ್ರ 16 ವಂತಿಗೆ ವಸೂಲಿಗೆ ಹೋದಾಗ ಜರಾ ಸೋಶಿಯಿಂದ ಬಿದ್ದು ಹೋದುದರಿಂದಲೂ ಸದ್ರಿ ಪುಸ್ತಕವು ಈ ತನಕ ಸಿಗದಿರುವುದರಿಂದಲೂ ಮೇಲ್ಕಾಣಿಸಿದ ರಶೀದಿ ಪುಸ್ತಕದಲ್ಲಿರುವ ರಶೀದಿಗಳನ್ನು ಯಾರಾದರೂ ಉಪಯೋಗಿಸುವ ಪ್ರಯತ್ನ ಮಾಡಿದ ಪಕ್ಷಕ್ಕೆ ಆ ರಶೀದಿಗಳನ್ನು ಯಾರೂ ಸ್ವೀಕರಿಸಬಾರದಾಗಿ ಜಾಹೀರು ಮಾಡಲಾಗಿದೆ.

'ಕಾರ್ಯದರ್ಶಿ'

ನೋಟೀಸು

ಈ ಮೂಲಕ ತಿಳಿಯಪಡಿಸುವುದೇನಂದರೆ:- 1954-55ನೇ ವರ್ಷಗಳಲ್ಲಿ ಕಟಪಾಡಿ ಪಂಚಾಯತ ಬೋರ್ಡಿನ ಆಡಳಿತಕ್ಕೆ ಒಳಪಟ್ಟ ಮಾರ್ಕೇಟು, ಇಳಿಯುವ ಸ್ಥಳ (Jetty) ಸುಂಕ ಕಟ್ಟು ಇತ್ಯಾದಿಗಳಲ್ಲಿ ವರಿ ವಸೂಲು ಮಾಡುವ ಹಕ್ಕನ್ನು ಪಂಚಾಯತ ಬೋರ್ಡಿನ ಪ್ರೆಸಿಡೆಂಟರು ತಾ. 13—3—54ನೇ ಶುಕ್ರವಾರ ಅಪರಾಹ್ನ ಗಂಟೆ 3ಕ್ಕೆ ಪಂಚಾಯತ ಬೋರ್ಡು ಆಫೀಸಿನಲ್ಲಿ ಆ ಕುರಿತು ಹಾಜರಿರುವವರಿಗೆ ನಿಯಮಗಳಿಗನುಸಾರವಾಗಿ ಬಹಿರಂಗವಾಗಿ ಹರಾಜು ಮೂಲಕ ಮಾರಾಟ ಮಾಡುವರು.

ಈ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಆಫೀಸು ಸಮಯ ಪಂಚಾಯತ ಬೋರ್ಡು ಆಫೀಸಿಗೆ ಬಂದು ತಿಳಿದುಕೊಳ್ಳಬಹುದು.

P Venkatraya Nayak, B. Sc.,
President.
Katapadi, 1—3—'54.

ಸ್ವೀಕಾರ—ವಿಮರ್ಶೆ

ಜೀವನ ಸಂಗೀತ—

ಲೇಖಕರು: ವಿಠಲದಾಸ ಶೆಟ್ಟಿ. ಪ್ರಕಾಶಕರು: ಜನತಾ ಸಾಹಿತ್ಯಮಾಲೆ. ಮಂಗಳೂರು ಬೆಲೆ: ಒಂದು ರೂಪಾಯಿ.

ಶ್ರೀ. ಮಂಜೇಶ್ವರ ಗೋವಿಂದ ಪೈಗಳ ಮುನ್ನುಗಿಯ ಆಶೀರ್ವಾದದೊಂದಿಗೆ ಬೆಳಕು ಕಂಡಿರುವ ಈ ಕವಿತಾಸಂಗ್ರಹದಲ್ಲಿ ತರುಣರೊಬ್ಬರು ಕಾವ್ಯ ಸಾಹಿತ್ಯದಲ್ಲಿ ಮಾಡಿದ ಕೆಲವು ಪ್ರಯೋಗಗಳನ್ನು ಕಾಣುತ್ತೇವೆ. ಕವಿತೆಗಳು ಉತ್ಕೃಷ್ಟವಾಗಿವೆಯೆಂದು ಹೇಳುವುದು ಸರಿಯಾಗಲಿಕ್ಕಿಲ್ಲ—ಏಕೆಂದರೆ ಕವಿಗಳು ಹೊಸಬರು. ಆದರೆ, ಅವರಲ್ಲಿ ಕವನ ಸಾಮರ್ಥ್ಯ ಇಲ್ಲವೆಂದೂ ಹೇಳಲಾಗದು. "ನಿವೇದನೆ" ಎಂಬ ಪ್ರಥಮ ಕವನದಲ್ಲಿ,

"ಎದೆಯಗಲ ಹೊಲದೊಳಗೆ
ಕಂಬನಿಯ ನೀರೆರೆದು
ಕನಸುಗಳ ಹೆಗಲಿನಲಿ
ನಿಟ್ಟುಸಿರ ನೊಗವಿಟ್ಟು
ಕರುಣೆಯಾ ನೇಗಿಲಲಿ
ಉತ್ತು ನೀ ಬಿತ್ತಿರುವ
ಕವನಗಳ ಬೀಜಗಳು
ಮೊಳಕೆ ಯೊಡೆದಿವೆ ನೋಡು"

ಎಂದು ಕವಿ ವರ್ಣಿಸುವರು. ಹೀಗೆ ಮೊಳಕೆಯೊಡೆದು ತೆನೆ ಬಿಟ್ಟ ಫಸಲಿನಲ್ಲಿ ಕೆಲವು ಜಡ್ಡಾಗಿದ್ದರೂ ಒಟ್ಟಾರೆ ಫಸಲು ತೃಪ್ತಿಕರವಿದೆ. ಕವಿಯ ಹೃದಯದಲ್ಲಿ ಹಳ್ಳಿ ಮತ್ತು ಬಡವರ ಬಗೆಗೆ ತುಂಬ ಅನುಕಂಪವುಂಟು. "ವಿಶ್ವವನೆಲ್ಲ ಒಲಿಸಿರುವಿ, ಹಳ್ಳಿಯ ಮಂದಿಯ ಮರೆತಿರುವಿ" (ಒಳದನಿ) ಎಂಬ ಉದ್ಗಾರ ಸತ್ಯಕ್ಕೆ ಮುಸುಕಿದ ತೆರೆ ಕಳಚುತ್ತವೆ. ಜನರ ನೋವು ಸಂಕಟ ಕಂಡು ಕವಿ ಮರುಗುವಾಗಿನ ಮಾತು ಮರ್ಮಭೇದಕವಾಗಿ ಕಾಣಿಸುವುದು—

"ನೆಲವುಂಟು ಹೊಲವುಂಟು
ಬಗೆಬಗೆಯ ಪೈರುಂಟು
ತಿಂದು ತೇಗುವರುಂಟು
ಬೆಳೆಸುವರಿಗೇನುಂಟು?
ಹಳೆದಿನದ ದಾರಿದ್ರ್ಯ
ಬಿಟ್ಟಿಹುದೆ ನಂಟು?"
(ಸ್ವಾತಂತ್ರ್ಯ ಪಡೆದೇನು?)

ಎಂದವರು ಕೇಳುವಾಗ ನಾವು ನಿರುತ್ತರರಾಗುತ್ತೇವೆ. ಪರಿಸ್ಥಿತಿ ಹೀಗೆ ರುದ್ರಭೀಕರವಾಗಿರುವಾಗ "ಕ್ರಾಂತಿ ಕಹಳೆ" ಸಹಜವಾಗಿಯೇ ಮೊಳಗುತ್ತದೆ. "ದಲಿತ ಜನಶಕ್ತಿ ಮುಂದೋಡಿ ಜನಜಾಗೃತಿಯ ರಾಜ್ಯವನು ಕಟ್ಟಿರಳು!" ಆಗ-

"ರುದ್ರ ವೀಣೆಯ ಗಾನ
ಆತ್ಮಗಳ ಬಲಿದಾನ
ಕಂಬನಿಯ ಹಿಮಸ್ನಾನ
ನಾವೆಲ್ಲ ಬರಿ ಮಸಣ"

ಎಂದು ತೋರಿದರೂ "ಅರುಣ ವೀಣೆ" ಹೊಸ ಚೇತನ ತರುತ್ತದೆ. "ಜನತೆ ನಿನ್ನೆಯ ಕಂದಿನ ಮರೆತು ಹೊನ್ನಿನ ಹೊಸದಿನ ಕರೆಯುವರು!" ಇಂತಹ ಪ್ರಗತಿಪರವಿಚಾರಗಳ ಎಡೆಯಲ್ಲಿ ಸೌಂದರ್ಯಾನುಭೂತಿ ಹಾಗು ತಾತ್ವಿಕ ವಿವೇಚನೆಯ ಹೊಳಪುಗಳು ಮಿಂಚಿ ಮಾಯವಾಗುತ್ತವೆ.

"ಬಡತನ ಕಠಿತನ ಕಡೆತನಕಿಲ್ಲ
ಹಳ್ಳಿಯ ಹೂಗಳೇ ನೀವೆಲ್ಲ
ಮಲ್ಲಿಗೆ ಸಂಪಿಗೆ ಸಮಗೆಲ್ಲ
ಘಮಘಮ ಪರಿಮಳ ಬಾಳೆಲ್ಲ"
(ರೈತರ ಹಾಡು)

ಎಂಬ ಉದಾತ್ತ ಭಾವನೆ, "ಬಾಳಿಗೆ ಬಣ್ಣವ ಬಳಿಯೋಣ!" (ಪ್ರೇಮವಿಹಾರ) "ಮುಗಿಲಿಗೆ ಮುತ್ತನು ನೀಡುವ ನಾವು" (ಕೆಮ್ಮಲೆ) ಎಂಬ ಉಲ್ಲಾಸ ''ಅಕ್ಕರೆಯ ಅಮ್ಮನಾ ಸುಳಿವಿಲ್ಲ, ಹಸಿದಾಗ ಪಕ್ಕನೆ ಹಾಲನ್ನು ನೀಡುವಾ ಕೈ ಇಲ್ಲ" ಎಂಬ ಪರಿತಾಪ—ಇವೆಲ್ಲ ಬದುಕಿನ ಜೀವನಾಡಿಯಾಗಿ ತೋರುತ್ತವೆ. ಹಾಗೆಂದು ಕೆಲವು ಸ್ಖಾಲಿತ್ಯಗಳೂ ಕಂಡುಬರಲಿಲ್ಲ—ಕಾಡಿನಲ್ಲಿ ಬಾಲ ಧ್ರುವನು "ಬಕ್ಕ ಬೇಡುವರಂತೆ'' ಕುಳಿತಿರ್ದನೆಂದು ಬಣ್ಣಿಸುವುದು ಪ್ರಮಾದ. ಅದೇ ರೀತಿ ''ಕನ್ನಡದೆಮ್ಮನ ಹೆಮ್ಮೆಯ ನಗಗಳೆ" ಎಂದು ಕರೆದ ಬಾಯಿಯೇ "ಕನ್ನಡ ನಾಡಿನ ಕುರಿಹಿಂಡುಗಳೇ" ಎಂದು ಸಂಭೋಧಿಸುವುದು ಉಚಿತವಲ್ಲ. ಇಂತಹ ಕುಂದು ಕೊರತೆಗಳನ್ನು ದೂರ ಮಾಡುತ್ತಾ ಹೆಚ್ಚಿನ ಅಭ್ಯಾಸವನ್ನು ಕೈಗೊಂಡು ಮುನ್ನಡೆದರೆ, ಶ್ರೀ ವಿಠಲದಾಸ ಶೆಟ್ಟರು ಪ್ರಥಮ ಶ್ರೇಣಿಯ ಕವಿಗಳಾಗಬಲ್ಲರು. ಈ ಸಂಗ್ರಹದಲ್ಲಿರುವ ''ಅಳು—ನಗು' ಎಂಬ ಕವನ ಓದಿದ ಯಾರಿಗೂ ಇಂತಹ ಭಾವನೆ ಮತ್ತು ಭರವಸೆಗಳಾಗುತ್ತವೆ.

ಕಣ್ಣೀರಿನ ಕಡಲು—

ಬರೆದವರು: ಕೊರಟ ಶ್ರೀನಿವಾಸರಾವ್. ಪ್ರಕಾಶಕರು: ಪ್ರತಿಭಾ ಗ್ರಂಥಮಾಲೆ, ಧಾರವಾಡ. ಬೆಲೆ: ರೂ. ೨—೧—೦

ಹೆಣ್ಣಿನ ಸಮಸ್ಯೆ ಚಿತ್ರಿಸುವ ಕಾದಂಬರಿಗಳಲ್ಲಿ ಇದೂ ಒಂದು—ಚೆನ್ನಾಗಿಯೇ ಚಿತ್ರಣಗೊಂಡು, ಹೊರಬಂದಿದೆ. ರಾಮಚಂದ್ರ ಕೊರಟೆಯ ಶ್ಯಾಮರಾಯರಲ್ಲಿಗೆ ಹೆಣ್ಣು ನೋಡಲು ಹೋದಾಗ, ಶಾರದೆ-ಶ್ಯಾಮಲೆಯರ ಜೊತೆಯಲ್ಲಿ ತನಗಾಗುವವಳು ಯಾರೆಂದು ತಿಳಿಯದೆ ಹೋದ. ಅವರಲ್ಲಿ ಬಿಳಿ ಚರ್ಮದವಳನ್ನು ಮೆಚ್ಚಿಕೊಂಡ ರಾಮಚಂದ್ರನಿಗೆ, ಮದುವೆ ಮಂಟಪದಲ್ಲಿ ತುಸು ಕಪ್ಪು ಬಣ್ಣದ ಶಾರದೆ ವಧುವೆಂದು ತಿಳಿಯುತ್ತದೆ. ಶಾರದೆಯಲ್ಲಿ ಹೀಗೆ ಉಂಟಾದ ವಿರಸ ಅವನನ್ನು ಮೋಹಿನಿಯ ಬಲೆಗೆ ಕೆಡವುತ್ತದೆ. ಅವನು ಘಟಿಂಗನೇ ಆಗಿ, ಸಾಲದಲ್ಲಿ ಮುಳುಗಿದ ಗಳಿಗೆಯಲ್ಲಿ, ಒಡೆದ ಸಂಸಾರವನ್ನು ಕೂಡಿಸಲು ಪ್ರಯತ್ನ ನಡೆಯುತ್ತದೆ. "ತಪ್ಪುದಂಡ" ವಾಗಿ ರೂಪಾಯಿ ದೊರೆಯುವುದೆಂಬ ಹಾಗು ಇನ್ನೂ ಕನ್ಯೆಯಾಗಿ ಅನಾಘ್ರಾಣಿತ ಪುಷ್ಪವಾಗಿ ಉಳಿದ ಶಾರದೆಯ ಯೌವನ ಸುಧೆಯನ್ನು ಹೀರ ಬಹುದೆಂಬ ಆಶೆ ರಾಮಚಂದ್ರನನ್ನು ಶಾರದೆಯ ಹತ್ತಿರ ಕರೆದೊಯ್ಯುತ್ತದೆ. ಹೀಗೆ ಸಂಸಾರ ಮಾಡಿಕೊಂಡು ಎರಡು ಮಕ್ಕಳ ತಂದೆಯಾದ ಮೇಲೆ—ಅವನಿಗೆ ಶಾರದೆಯ ಮೇಲೆ ಆಸಕ್ತಿ ಉಳಿಯುವುದಿಲ್ಲ. ಅವನು ಮರಳಿ ಸೂಳೆಯರ ಸಹವಾಸಕ್ಕೆ ಬಿದ್ದು, ಹೆಂಡತಿ ಮಕ್ಕಳನ್ನು ಮರೆಯುತ್ತಾನೆ. ನಿರ್ಗತಿಕಳಾದ ಶಾರದೆ, ಕಷ್ಟದಿಂದ, ಹುಡುಗಿಯರಿಗೆ ಸಂಗೀತ ಕಲಿಸುತ್ತಾ ದಿನಗಳೆಯುವಾಗ, ಮನೆಯ ಮಾಲಿಕನೊಡನೆ ಸರಸದಿಂದಿರುವಳೆಂದು ರಾಮಚಂದ್ರ ಅಪಪ್ರಚಾರ ನಡೆಸುತ್ತಾನೆ. ಸಾಲದುದಕ್ಕೆ ಒಂದು ದಿನ ಮಂಗಲ ಸೂತ್ರವನ್ನು ಹರಿದು ತೆಗೆಯುತ್ತಾನೆ—ಇದರಿಂದ ಶಾರದೆಯ ಆತ್ಮಾಭಿಮಾನ ಕೆರಳುತ್ತದೆ, ಅವಳು ಕ್ರಾಂತಿ ಕನ್ಯೆಯಾಗಿ, ಮನೆಯ ಮಾಲಿಕ ಕಿಟ್ಟಣ್ಣನನ್ನೆ ಮದುವೆಯಾಗುತ್ತಾಳೆ ಸಮಾಜದ ಅವಹೇಳನಕ್ಕೆ ಅವಳು ಕಿವಿಗೊಡುವುದಿಲ್ಲ. ರಾಮಚಂದ್ರ ತನ್ನ ಮಕ್ಕಳನ್ನು ಕಳೆಸಲು ಒತ್ತಾಯ ಮಾಡಿದಾಗ ಮಾತ್ರ ಅವರನ್ನು ಕೋಣೆಯಲ್ಲಿಯೇ ಮಲಗಿಸಿಟ್ಟು, ಕಣ್ಣೀರು ತುಂಬಿ ಶಾರದೆ ಕಿಟ್ಟಣ್ಣನೊಡನೆ ಮಡಿಕೇರಿಗೆ ಪ್ರಯಾಣ ಹೊರಡುತ್ತಾಳೆ. —ಈ ಕಥಾನಕ ರಮ್ಯವಾಗಿದೆ, ನಿಜ. ಆದರೆ ಭಾರತೀಯ ಮಹಿಳೆ, ಅದರಲ್ಲೂ ಕುಲೀನ ಸ್ತ್ರೀ ಶಾರದೆ, ಮಾನವಂತೆಯ ಬದುಕನ್ನು ಬಿಟ್ಟುಗೊಟ್ಟು ವ್ಯಕ್ತಿಗತವಾಗಿ ರಾಮಚಂದ್ರನ ಮತ್ತು ಸಾಮಾಜಿಕವಾಗಿ ಸಮಾಜದ ವಿರುದ್ಧ ನಿಂತು, ಕಿಟ್ಟಣ್ಣನನ್ನು ಮದುವೆಯಾದಳೆಂದು ನಂಬುವುದು ಕಷ್ಟ. ಹಾಗೆ ಮದುವೆಯಾದ ಮೇಲೆ, ಮಕ್ಕಳಿಬ್ಬರನ್ನು ಮಲಗಿಸಿಟ್ಟು ತಾನು ಹೊಸಗಂಡನೊಂದಿಗೆ ಹೊರಟು ಹೋದಳೆಂದು ಹೇಳುವುದಂತೂ ಅತ್ಯಂತ ಕ್ರೂರವಾದ ವಿಚಾರ. ರಾಮಚಂದ್ರನಂತಹ ತಿಳಿಗೇಡಿಗೆ, ಲಫಂಗನಿಗೆ, ಎರಡು ಮಕ್ಕಳು ಹುಟ್ಟುವ ವರೆಗೆ ಸಂಸಾರ ಕಟ್ಟಿಕೊಂಡಿರುವ ಬುದ್ಧಿ ಬಂತೆಂಬ ತಿಳಿವಳಿಕೆಗೆ ಅವನ ಚಾರಿತ್ರ್ಯದ ಪೂರ್ವಾಪರ ಪ್ರಸಂಗಗಳು ಪುಷ್ಟಿ ಕೊಡುವುದಿಲ್ಲ. ಆದುದರಿಂದ ಕಾದಂಬರಿಯು ಸಹಜತೆಯಿಂದ ತುಸು ದೂರ ಸರಿದಂತೆ ಸಾಮಾನ್ಯ ಓದುಗನಿಗನಿಸಿದರೆ, ಆಶ್ಚರ್ಯವಿಲ್ಲ. ಆದರೆ, ಸಮಾಜದ ಪದ್ಧತಿ ಮತ್ತು ಮನುಷ್ಯನ ಬುದ್ಧಿ ಈಗಿನಷ್ಟು ನೀಚವಾಗಿ ಉಳಿದರೆ, ಶಾರದೆಯಂತಹ ಹೆಣ್ಣು ಮಕ್ಕಳು ಕ್ರಾಂತಿ ಕನ್ಯೆಯರಾಗುವ ಅನಿವಾರ್ಯ ಪ್ರಮೇಯ ಬಂದೀತೆಂಬ ಎಚ್ಚರಿಕೆಯನ್ನು ಈ ಕಾದಂಬರಿ ಕೊಡುತ್ತದೆ. ಕಾದಂಬರಿಯುದ್ದಕ್ಕೂ ಒಸರುವ ಕಣ್ಣೀರು, ಕೊನೆಯ ಪುಟ ಓದುತ್ತಿದ್ದಂತೆ ಕೋಡಿಯಾಗಿಯೇ ಹರಿಯ ತೊಡಗುತ್ತದೆ—ತಬ್ಬಲಿ ಮಕ್ಕಳ ಬಗ್ಗೆ ಅನುಕಂಪ ಹುಟ್ಟಿಸುತ್ತದೆ. ನಾಳಿನ ಮಕ್ಕಳು ಇಂತಹ ದುರಂತದಿಂದ ಪಾರಾಗಬೇಕಾದರೆ, ಸಮಾಜ ಪುರುಷ ಪರಿವರ್ತನೆಯನ್ನೊಪ್ಪಬೇಕು. ಜೊತೆಗೆ, ಮನುಷ್ಯನ ಚಾರಿತ್ರ್ಯವೂ ಉನ್ನತವಾಗಬೇಕು. ಈ ಸಂದೇಶವನ್ನು ಸಾರುವ ಮತ್ತು ನಯವಾದ ಮಾತಿನಿಂದ, ತಡೆಯಿಲ್ಲದೆ ಮುನ್ನಡೆಯುವ ಸನ್ನಿವೇಶಗಳಿಂದ, ಮನಸೆಳೆಯುವ ಮೋಡಿಯಿಂದ ಕಾದಂಬರಿ ಬರೆದ, ಲೇಖಕರಿಗೆ ಧನ್ಯವಾದ.

ಉಡುಪಿ ಡಿ. ಮು. ಕೋರ್ಟಿನಲ್ಲಿ

O. P. No. 5/1954.

H. ಸುಂದರಿ ಯಾನೆ ಲಕ್ಷ್ಮೀದೇವಿ ..... ಅರ್ಜಿದಾರಳು—

ಮತ್ತು

1. Dr. H. ಶಂಕರ ನಾಯಕ. 2. H. ರಾಮನಾಥ ನಾಯಕ. 3. H. ಕೇಶವ ನಾಯಕ. 4. H. ಮಾಧವ ನಾಯಕ. 5. H. ಶ್ರೀಧರ ನಾಯಕ. 6. H. ಬಾಲಕೃಷ್ಣ ನಾಯಕ. 7. H. ಗೋಪಾಲ ನಾಯಕ. ಯದ್ರಿರು—

ಸದ್ರಿ ಯದ್ರಿರಿಗೆ ಮತ್ತು ಸಮಸ್ತ ಜನರಿಗೆ ತಿಳಿಯಪಡಿಸುವದೇನಂದರೆ.

ಅರ್ಜಿದಾರಳ ಗಂಡ ವ ಯದ್ರಿರ ತಂದೆ—ತಾ 13—2—52ರಲ್ಲಿ ಸ್ವರ್ಗಸ್ಥರಾದ—H. N. ನಾಯಕ ಇವರಿಗೆ ದಿ. ಬೊಂಬೆ ಲೈಫ್ ಎಶ್ಯೂರೆನ್ಸ್ Co. Ltd. Bombay ಯಾ ಸಂಸ್ಥೆಯಿಂದ—ಪ್ರತಿ [illegible] ಸಿಕ್ಕ [illegible] ಇನ್ಸೂರೆನ್ಸ್ ಕಮಿಶನ್ ಬಾಬ್ತು ರೂ. 195-0-0 ವಸೂಲು ಪಡಿಯುವರೆ—ವಾರಿಸದಾರರಾದ ಅರ್ಜಿದಾರಳು ಮತ್ತು ಯದ್ರಿರು—ಹಕ್ಕುದಾರರೆಂತ್ಲೂ—ಆ ಕುರಿತು ಅರ್ಜಿದಾರಳಿಗೆ— ಸಕ್ಸಸಂಸ್ ಸರ್ಟಿಫಿಕೇಟು ಕೊಡಿಸಬೇಕಾಗಿ-ಅರ್ಜಿದಾರಳು ದಾಕ್ಲು ಮಾಡಿದ—ಸದ್ರಿ ಅರ್ಜಿಯು ತಾ 24-3-1954 ಕ್ಕೆ ಇಟ್ಟಿದೆ—ಆಕ್ಷೇಪ-ಹೇಳತಕ್ಕವರು ಇದ್ರೆ ಸದ್ರಿ ದಿವ್ಸ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು—ಯೆಂಬ ಸಂಗ್ತಿ ತಿಳಿಸೋಣಾಗಿಯದೆ.

N. V. Kamath
Advocate for Petitioner

ಉಡ್ಪಿ, 1—3—1954

ದಿ ಮುಲ್ಕಿ ಬೇಂಕ್ ಲಿಮಿಟೆಡ್, ಮುಲ್ಕಿ.

ನೋಟೀಸು

ಈ ಮೂಲಕ ತಿಳಿಯಪಡಿಸುವುದೇನಂದರೆ, ಈ ಕೆಳಗೆ ಕಾಣಿಸಿದ ಮಹನೀಯರು ನಮ್ಮ ಬೇಂಕಿನಿಂದ ಚಿನ್ನಾಭರಣದ ಅಡವಿನಲ್ಲಿ ಸಾಲ ಪಡಕೊಂಡು ದೀರ್ಘಕಾಲದಿಂದ ಅಸಲು ಬಡ್ಡಿಯನ್ನು ಬಾಕಿ ಮಾಡಿರುವುದರಿಂದ, ರಿಜಿಸ್ಟ್ರಿ ನೋಟೀಸು ಕೊಟ್ಟರೂ, ಅಡವಿಟ್ಟ ನಗಗಳನ್ನು ಬಿಡಿಸಿಕೊಳ್ಳದಿರುವುದರಿಂದ ಸದ್ರಿಯವರ ನಗಗಳನ್ನು ತಾ. 20—3—1954ನೇ ಶನಿವಾರ ಅಪರಾಹ್ನ ಗಂಟೆ 1ಕ್ಕೆ, ಯಾ ತದನಂತರ ಯುಕ್ತಕಂಡ ದಿವಸ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು, ತಿಳಿದಿರಲಿ.

ಲೋನು ನಂಬ್ರ	ಹೆಸರು ಮತ್ತು ವಿಳಾಸ	ಅಸಲು ಮೊಬಲಗು
89/50	ವೃದ್ಧ, ಗೇರಿಕಟ್ಟೆ, ಮುಲ್ಕಿ	8/-
246/51	ಕೆ. ವಿಠಲ ಶೆಟ್ಟಿ s/o ಗಂಗು ಶೆಡ್ತಿ, ಮುಲ್ಕಿ.	150/-
280/51	ಯಚ್. ಪಿ. ಯುಸುಫ್. ಯೂಸೂಫ್, s/o ಯಚ್. ಪಿ. ಅಹಮ್ಮದ್, ಹಳೆಯಂಗಡಿ.	100/-
267/51	ಜೋನ್ ಫರ್ಟಾಡೊ s/o ಕಾಮಿಲ್ ಫರ್ಟಾಡೊ, ಕ್ಷೊಕ್ರಾಣಿ ಮುಲ್ಕಿ.	280/-
301/51	...ಬಳ ಶೆಟ್ಟಿ, ಪಡುಮನೆ, ಬಪ್ಪನಾಡು, ಮುಲ್ಕಿ.	200/-
466/51	[illegible]ನ ಡಿ ಸಿರಿಯಾನ್, s/o ಡೋಗು ಸಾಲಿಯಾನ್, ಸಸಿಹಿತ್ಲು.	80/-
469/51	ಕೆ. ವಾಸುದೇವ ರಾವ್ s/o ವೆಂಕ[illegible]ಕೃಷ್ಣಯ್ಯ, ಶಿಮಂತೂರು.	39/-
710/51	ಮುಕ್ರಿ ಪಿ. ಕರ್ಕೇರ, s/o ಪೂವ ಕರ್ಕೇರ, ಕಾಡಿಪಟ್ನ, ಪಡುಬಿದ್ರಿ.	200/-
118/51	ಸು[illegible] s/o ನೇಸೋಜಿ, ಕವತ್ತಾರು, ಪಂಜಿನಡ್ಕ.	70/-
770/51	—do—	75/-
786/51	ಎಸ್. ಶ್ರೀನಿವಾಸ ಭಟ್, s/o ರಾಘವೇಂದ್ರ ಭಟ್, ಮಾನಂಪಾಡಿ, ಮುಲ್ಕಿ.	60/-
55/52	ಅಪ್ಪ ಅ[illegible] s/o ಮಂಜಯ ಆಚಾರಿ, ಕಾರ್ನಾಡು, ಮುಲ್ಕಿ.	60/-
67/51	ಕೆ. ಕ[illegible]ಕಾಮತ್, s/o ದಾಸ ಕಾಮತ್, ಅತಿಕಾರಿಬೆಟ್ಟು.	30/-
157/51	—do—	400/-
162/51	—do—	70/-
222/51	—do—	70/-
370/51	—do—	70/-
330/51	—do—	20 -

ಮುಲ್ಕಿ,
27-2-1954.

ಯಂ ಆರ್. ಯಚ್. ಪೂಂಜ,
ಮೆನೇಜರ್.

ನವಯುಗ ವಾರಪತ್ರಿಕೆಗೆ ಚಂದಾದಾರರಾಗಿರಿ.

3 ವರ್ಷ ಗ್ಯಾರಂಟಿಯುಳ್ಳ ಚಿಟೋರಿಸ್ಟ್ ವಾಚು ಬರೇ ರೂಪಾಯಿ 14-6-0 ಕಿಮ್ಮತ್ತು ಸ್ಯಾಜ್ 10 ಸಂಬ್ರ 6.



4 ಜ್ಯುವೆಲ್ಸ್ ಕ್ರೋಮ್ ರೂ. 14/6, ರೋಲ್ಡ್ ಗೋಲ್ಡ್ ರೂ. 18/, 15 ಜ್ಯುವೆಲ್ಸ್ ಕ್ರೋಮ್ ರೊ. 30/, ರೋಲ್ಡ್ ಗೋಲ್ಡ್ ರೂ. 32/8, 15ಜ್ಯುವೆಲ್ಸ್ ವಾಟರ್ ಪ್ರೂಫ್ ರೂ. 35/, 17ಜ್ಯುವೆಲ್ಸ್ ರೂ. 40/, ಪಾಕೇಟು ವಾಚು ರೂ. 12/ ಟೈಂಪೀಸು ರೂ. 15 –

ಒಬ್ಬರಿಗೆ ಒಂದಕ್ಕಿಂತ ಹೆಚ್ಚಿಗೆ ವಾಚು ಕಳುಹಿಸುವುದಿಲ್ಲ. ಕ್ಯಾಟಲಾಗು ಧರ್ಮಾರ್ಥ.

FREE INDIA WATCH CO. N.K.
Post Bag No. 6724, CALCUTTA-7.

ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 25 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

THE MOOLKY BANK LTD.
Moolky, S. K.

ಕ್ಷೀರ ವ್ಯವಸಾಯದಲ್ಲಿ ಶಾಸ್ತ್ರೀಯ ಕ್ರಮದ ಮಹತ್ವ

(೨ನೇ ಪುಟದಿಂದ)

ಬಂದಾಗ, ಅವುಗಳ ತಳದಲ್ಲಿ ಉಳಿದ ಹಾಲಿನ ಪರೀಕ್ಷೆ ನಡೆಸಲು, ೧೨೧೦೦೦ ಜೀವಾಣುಗಳು ಕಂಡು ಬಂದವು. ಆದುದರಿಂದ ಹಾಲಿನ ರುಚಿಯನ್ನು ಕೆಡಿಸದಂತೆ, ನಿರ್ದುಷ್ಟವಾದ ಕ್ರಮಗಳನ್ನು ಅನುಸರಿಸುವುದಕ್ಕೆ ಈ ವಿಭಾಗ ನೋಡುತ್ತದೆ. ಮೊಸರು ಮುಂತಾದುವುಗಳ ತಯಾರಿಕೆಯಲ್ಲಿ ಅನುಸರಿಸಬೇಕಾದ ಉತ್ತಮ ವಿಧಿಗಳನ್ನು ಕಂಡು ಹಿಡಿಯುವುದಕ್ಕೆ ಈ ವಿಭಾಗ ಪ್ರಯತ್ನಿಸುತ್ತದೆ. ಬಿಸಿಮಾಡಿದರೂ ನಾಶ ಹೊಂದದ ಕೆಲವು ಜೀವಾಣುಗಳು ಹಾಲಿನಲ್ಲಿರುತ್ತವೆ. ಇವುಗಳನ್ನು ಗುರುತಿಸಿ, ಅವುಗಳ ಹಾನಿಯನ್ನು ತಡೆಗಟ್ಟುವುದಕ್ಕೂ ವಿಭಾಗ ಸಂಶೋಧನೆಗಳನ್ನು ಕೈಗೊಂಡಿದೆ. ಹೈಡ್ರೋಜನ್ ಪರಾಕ್ಸೈಡ್ ಎಂಬ ರಸಾಯನಪದಾರ್ಥವು ಜೀವಾಣುಗಳ ನಾಶಮಾಡುತ್ತದೆ. ಇದನ್ನು ಹಾಲು ಕೆಡದಂತೆ ಆದರೆ, ಹಾಲಿನಲ್ಲಿರುವ ಜೀವಾಣು ನಾಶ ಹೊಂದುವಂತೆ ಎಷ್ಟರ ಮಟ್ಟಿಗೆ ಯಾವ ಪ್ರಕಾರವಾಗಿ ಉಪಯೋಗಿಸ ಬಹುದೆಂದು ನೋಡಲಾಗುತ್ತದೆ. ಯಾವ ಜೀವಾಣು ಯಾವ ರುಚಿಯ ಮೊಸರು ಕೊಡುತ್ತದೆಂದು ಕಂಡು ಹಿಡಿದಿದ್ದು, ಈ ಸಂಶೋಧನೆಯಿಂದ ಉತ್ತಮ ಮಟ್ಟದ ಮೊಸರು, ಬೆಣ್ಣೆ, ಕೆನೆ ಮತ್ತಿತರ ಖಾದ್ಯ ವಸ್ತುಗಳನ್ನು ತಯಾರಿಸುವುದು. ಸುಲಭವೆಂದು ತೋರಿದೆ. ಭಾರತೀಯ ಹಾಲಿನಲ್ಲಿ ಮೇಥೀಲೀನ್‌ಬ್ಲು ಮತ್ತು ರೇಸಾಜರೀನ್ ಎಂಬ ಬಣ್ಣಗಳನ್ನು ಬೆರಸುವುದರಿಂದ ಹಾಲಿನ ವರ್ಣ ಬದಲಾಗುತ್ತದೆ. ಈ ಕೇಂದ್ರವು ಪರೀಕ್ಷೆ ಮತ್ತು ಪ್ರಯೋಗಗಳನ್ನು ನಡೆಸಿ, ಈ ವರ್ಣ ಪರಿವರ್ತನದ ಆಧಾರದ ಮೇಲೆ ಹಾಲಿನ ಯೋಗ್ಯತೆಯನ್ನು ತಿಳಿಯುವ ಯಾವುದಾದರೊಂದು ನಿಶ್ಚಿತ ವಿಧಾನವನ್ನು ಕಂಡು ಹಿಡಿಯ ಬಹುದೇ ಹೇಗೆಂದು ನೋಡುತ್ತದೆ.

ಹಾಲು ಮತ್ತು ಹಾಲಿನಿಂದ ತಯಾರಾದ ವಸ್ತುಗಳ ರಾಸಾಯನಿಕ ಗುಣವಿಶೇಷಗಳ ವಿಶ್ಲೇಷಣೆಯೂ ತುಂಬ ಮಹತ್ವದ ಕಾರ್ಯ—ಇಲ್ಲಿ ನಡೆಸಿದ ಸಾವಿರಾರು ಪ್ರಯೋಗಗಳ ಫಲಿತಾಂಶವು ಉತ್ತೇಜಕವಾಗಿ ಕಂಡುಬಂದಿದೆ. ಹಾಲು ಮತ್ತು ತಜ್ಜನಿತ ಪದಾರ್ಥಗಳ ಶುದ್ಧತೆಯನ್ನು ಅಳೆಯುವ ಮತ್ತು ಶುದ್ಧ ವಸ್ತುಗಳನ್ನು ತಯಾರಿಸುವ ಕ್ರಮ ಕಂಡು ಹಿಡಿಯುವ ಪ್ರಯತ್ನಗಳು ಸಫಲಗೊಂಡಿವೆ. ಬೇರೆ ವಸ್ತುಗಳ ಬೆರಕೆಯನ್ನು ಕಂಡುಹಿಡಿಯುವುದಕ್ಕೂ ಅವುಗಳನ್ನು ತಡೆಗಟ್ಟುವುದಕ್ಕೂ ಯೋಗ್ಯ ಕ್ರಮಗಳನ್ನು ಕೈಗೊಳ್ಳಲು ಇವುಗಳಿಂದ ಸಹಾಯ ದೊರೆತಿದೆ ತುಪ್ಪವು ಹಾಲಿನ ವ್ಯವಸಾಯದ ಮುಖ್ಯಾಂಗ— ಇದನ್ನು ಹೆಚ್ಚು ಸಮಯ ಇಟ್ಟರೆ ದುರ್ವಾಸನೆ ತಲೆದೋರಿ ರುಚಿಕೆಟ್ಟು ಹಾಳಾಗುತ್ತದೆ. ತುಂಬ ದಿನಗಳ ವರೆಗೆ ತುಪ್ಪವನ್ನು ಶುದ್ಧವಾಗಿಡುವುದು ಹೇಗೆಂದು ಸಂಶೋಧನಾಲಯವು ಬಹಳ ದಿನಗಳ ಪ್ರಯತ್ನ ಮಾಡಿ, ಒಂದು ಕ್ರಮವನ್ನು ಕಂಡು ಹಿಡಿದಿದೆ—ತುಪ್ಪವನ್ನು ತಯಾರು ಮಾಡುವ ಮತ್ತು ಸಂಗ್ರಹಿಸಿ ಇಡುವ ತಪ್ಪು ವಿಧಾನಗಳೇ ಅದನ್ನು ಬೇಗನೆ ನಿರುಪಯುಕ್ತ ಮಾಡುತ್ತವೆಂದು ಸಂಶೋಧನೆ ತಿಳಿಸುತ್ತದೆ ತುಪ್ಪವನ್ನು ಗಾಳಿಗೆ ತೆರೆದಿಟ್ಟರೆ, ಬೆಳಕು ಬಂದು ಸೇರಿದರೆ, ಬೇರೆ ಯಾವುದಾದರೂ ವಸ್ತು ಮಿಶ್ರಗೊಂಡರೆ ಅದು ಬೇಗ ಹಾಳಾಗುತ್ತದೆ. ಪೇಟೆಯಲ್ಲಿ ಮಾರಾಟ ಹೊಂದುವ ತುಪ್ಪದಲ್ಲಿ ಆಮ್ಲ ಗುಣವು ಅಧಿಕವಿರುತ್ತದೆ ಇದನ್ನು ಪರಿಹರಿಸಲಿಕ್ಕೋಸ್ಕರ ತುಪ್ಪವನ್ನು ೧೨೮ ಡಿಗ್ರಿ ಸೆಂಟಿ ಗ್ರೇಡಿನಷ್ಟು ಬಿಸಿಮಾಡಿ, ಅದಕ್ಕೆ ತುಸು ಹಸಿ ಸುಣ್ಣವನ್ನು ಹಾಕಬೇಕು; ಮತ್ತು ಸ್ವಲ್ಪ ಹೊತ್ತು ಪಾತ್ರೆಯನ್ನು ಕುಲುಕಿಸುತ್ತಿರಬೇಕು ಅನಂತರ ತುಪ್ಪವನ್ನು ಶೋಧಿಸಿ, ಭರಣಿಯಲ್ಲಿ ತುಂಬಿಟ್ಟರೆ, ದುರ್ಗಂಧ ಹುಟ್ಟುವುದಿಲ್ಲ; ತುಪ್ಪವೂ ಕೆಡುವುದಿಲ್ಲ ಈ ಕ್ರಮವು ಈಗ ಹೆಚ್ಚು ಜನಪ್ರಿಯತೆಯನ್ನು ಗಳಿಸಿದೆ.

ಭೋಜನದ ಸುಧಾರಣೆ

ದಕ್ಷಿಣ ಭಾರತೀಯರ ಭೋಜನ ವಿಷಯದಲ್ಲಿ ಈ ವಿಭಾಗವು ಮಹತ್ವದ ಸಂಶೋಧನೆಗಳನ್ನು ನಡೆಸುತ್ತದೆ—ಇಲ್ಲಿ ಹೆಚ್ಚಿನವರು ಅಕ್ಕಿಯನ್ನು ಉಪಯೋಗಿಸುವರು. ಪಶುಗಳಿಂದ ಉತ್ಪಾದಿಸಲಾಗುವ ಹಾಲು, ಬೆಣ್ಣೆ, ತುಪ್ಪಗಳನ್ನು ತಿನ್ನುವವರೇ ಇಲ್ಲ. ಅದಕ್ಕೆ ಬೇಕಾದ ಸಂಪತ್ತು ಇರುವ ಜನರು ವಿರಳ. ಮನುಷ್ಯರು ತಿನ್ನುವ ಈ ಆಹಾರವನ್ನು ಇಲಿಗಳಿಗೆ ತಿನ್ನಿಸಿ ನೋಡಿದಾಗ, ಇದರಲ್ಲಿ ತುಂಬ ಕೊರತೆಗಳಿರುವುದು ಕಂಡುಬಂತು. ಕಲ್ಸಿಯಂ ಮತ್ತು ಜೀವಾತುಗಳ ಅಂಶ ನಾವು ತಿನ್ನುವ ಆಹಾರದಲ್ಲಿ ಬಹಳ ಕಡಿಮೆ ಇದೆ. ಸಾರಜನಕವೂ ಸಾಕಷ್ಟು ಪ್ರಮಾಣದಲ್ಲಿ ಇರುವುದಿಲ್ಲ. ಆಹಾರದೊಂದಿಗೆ ಹಾಲು, ಮೊಸರು, ಮಜ್ಜಿಗೆ ಮತ್ತಿತರ ಹಾಲಿನಿಂದ ತಯಾರಾದ ಪದಾರ್ಥಗಳನ್ನು ಮಿಶ್ರಮಾಡಿ ಉಣಗೊಟ್ಟಾಗ, ಇಲಿಗಳು ಸ್ವಾಭಾವಿಕ ರೀತಿಯಲ್ಲಿಯೇ ಬೆಳವಣಿಗೆಯನ್ನು ಸಾಧಿಸಿದವು ಅವುಗಳ ಸಂತಾನೋತ್ಪಾದನಾ ಸಾಮರ್ಥ್ಯದ ಮೇಲೆಯೂ ಕೆಟ್ಟ ಪರಿಣಾಮವಾಗುವುದು ನಿಂತಿತು. ಈ ವಿಭಾಗವು ಪ್ರಾಣಿಜನ್ಯ ತುಪ್ಪ ಮತ್ತು ವನಸ್ಪತಿ ತುಪ್ಪದ ಪೋಷಕಾಂಶಗಳನ್ನು ತುಲನಾತ್ಮಕ ದೃಷ್ಟಿಯಿಂದ ಪರಿಶೀಲಿಸುತ್ತದೆ. ದನ, ಎಮ್ಮೆ, ಆಡು ಮುಂತಾದವುಗಳ ಹಾಲಿನಲ್ಲಿರುವ ಸಾರಜನಕ, ಜೀವಾತು, ನೈಟ್ರೋಜನ್, ಅಮಿನೊ ಎಸಿಡ್ ಮುಂತಾದ ದ್ರವ್ಯಗಳ ಅಂಶವನ್ನು ಪರೀಕ್ಷಾ ಪ್ರಯೋಗಗಳಿಂದ ಅಧ್ಯಯನ ಮಾಡಿ, ಅವುಗಳ ಬೆಲೆ ಮತ್ತು ಮಹತ್ವವನ್ನರಿಯುವುದರಲ್ಲಿ ಬಹಳ ಮಟ್ಟಿನ ಯಶಸ್ಸು ಗಳಿಸಿದೆ

ಹಾಲಿನ ತಂತ್ರ ವಿಜ್ಞಾನದ ವಿಭಾಗವು ದೊಡ್ಡ ಪ್ರಮಾಣದಲ್ಲಿ ಹಾಲನ್ನು ಒಂದೆಡೆಯಿಂದ ಇನ್ನೊಂದು ಮೂಲೆಗೆ ಕೊಂಡೊಯ್ಯುವ ಸಮಸ್ಯೆಯನ್ನು ಬಿಡಿಸುವುದರಲ್ಲಿ ನಿರತವಾಗಿದ್ದು, ಅನೇಕ ರೀತಿಯಿಂದ ಪ್ರಯೋಗ ನಡೆಸಿ, ಅದರಲ್ಲಿ ಸಫಲತೆಯನ್ನು ಪಡೆದಿದೆ. ಹಾಲನ್ನು ಮಾರಾಟ ಮಾಡುವ ಕಲೆಯಲ್ಲಿ ಶಾಸ್ತ್ರೀಯ ದೃಷ್ಟಿಯೇ ಜೀವಾಳವಾಗುಳ್ಳ ಪ್ರಯೋಗಗಳಿಗೆ ಅಸ್ಪದವಿರುವುದೆಂದು ಹೇಳುವುದು ಅನಗತ್ಯ. ಗ್ರಾಮಾಂತರ ಪ್ರದೇಶಗಳಿಂದ ಹಾಲನ್ನು ಸ್ವಲ್ಪವೂ ಕೆಡದಂತೆ ಸಂಗ್ರಹಿಸಿ ಸಮೀಪದ ನಗರಗಳಿಗೆ ಒಯ್ಯುವುದು ಸುಲಭದ ಕೆಲಸವಲ್ಲ—ವಿಭಾಗವು ಸಂಶೋಧನೆಗಳನ್ನು ನಡೆಸಿದ ಫಲಿತಾಂಶ ರೂಪದಲ್ಲಿ ಹೊಸ ಪದ್ಧತಿಯೊಂದರ ಆವಿಷ್ಕಾರವಾಗಿದ್ದು, ಅದರನ್ವಯ ಹಾಲನ್ನು ಹಿಂಡಿದ ಕೂಡಲೇ ಬಿಸಿ ಮಾಡಲಾಗುವುದು; ಮತ್ತು ಕೂಡಲೇ ಅದನ್ನು ತಂಪಾಗಿ ಮಾಡುವರು. ಹೀಗೆ ಕೆಲವು ಸಲ ಮಾಡುವುದರಿಂದ, ಜೀವಾಣುಗಳು ನಷ್ಟ ಹೊಂದುತ್ತವೆ. ಈ ವಿಭಾಗ ಕಂಡು ಹಿಡಿದ ವಿಶೇಷ ತರದ ಪಾತ್ರೆಯೊಂದರಲ್ಲಿ ಹಾಲನ್ನು ಹಾಕಿದರೆ, ಅದಕ್ಕೆ ಬೇರಾವುದೇ ಪದಾರ್ಥವನ್ನು ಮಿಶ್ರ ಮಾಡಲು ಬರುವುದಿಲ್ಲ.

ಶಿಕ್ಷಣದ ವ್ಯವಸ್ಥೆ

ಸಂಶೋಧನಾಲಯದಲ್ಲಿ (೧) ಇಂಡಿಯನ್ ಡೈರಿ ಡಿಪ್ಲೊಮಾ ಎಂಬ ಪದವಿಗೋಸ್ಕರ; (೨) ಕ್ಷೀರ ವ್ಯವಸಾಯದಲ್ಲಿ ನೈಪುಣ್ಯ ಸಿದ್ಧಿಗೋಸ್ಕರ ಮತ್ತು (೩) ವೈಜ್ಞಾನಿಕ ವಿಷಯಗಳಲ್ಲಿ ಸಂಶೋಧನೆ ನಡೆಸುವುದಕ್ಕೋಸ್ಕರ ಶಿಕ್ಷಣವನ್ನು ಪಡೆಯ ಬಯಸುವ ವಿದ್ಯಾರ್ಥಿಗಳು ವ್ಯಾಸಂಗದಲ್ಲಿ ಮಗ್ನರಾಗಿರುವರು. ಪದವಿಯನ್ನು ಪಡೆಯ ಬಯಸುವ ವಿದ್ಯಾರ್ಥಿಗಳು ಮೆಟ್ರಿಕ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕಾಗುವುದು. ಇಲ್ಲಿಯ ಶಿಕ್ಷಣ ಮುಗಿಸಿದ ಮೇಲೆ ಅವರು ಕ್ಷೀರ ವ್ಯವಸಾಯದ ಯಾವುದಾದರೊಂದು ಕೇಂದ್ರದಲ್ಲಿ ಕೆಲಸ ದೊರಕಿಸಿಕೊಳ್ಳಬಲ್ಲರು ಪ್ರಸ್ತುತ ೩೦ ಮಂದಿ ವಿದ್ಯಾರ್ಥಿಗಳು ಈ ಪದವಿಗೋಸ್ಕರ ಶಿಕ್ಷಣ ಪಡೆಯುತ್ತಿದ್ದಾರೆ ಎರಡು ವರ್ಷಗಳ ಕಾಲ ನಡೆಯುವ ಈ ಶಿಕ್ಷಣ ಕ್ರಮದಲ್ಲಿ ಕ್ಷೀರವ್ಯವಸಾಯದ ತಾತ್ವಿಕ ಹಾಗೂ ವ್ಯಾವಹಾರಿಕ ವಿಜ್ಞಾನಾಂಗಗಳಲ್ಲಿ ಪಾಠ ಹೇಳಲ್ಪಡುವುದು ಪಶು ಸಂಗೋಪನಾ ಕಾರ್ಯದಲ್ಲಿ ವಿದ್ಯಾರ್ಥಿಗಳಿಗೆ ತರಬೇತಿಕೊಡಲಾಗುವುದು; ಹಾಲನ್ನು ಹಿಂಡುವ ಮತ್ತದನ್ನು ಚೊಕ್ಕಟವಾಗಿ ಸಂಗ್ರಹಿಸುವ ಕ್ರಮವನ್ನು ಕಲಿಸಲಾಗುವದು ಹಾಲಿನಿಂದ ಬೇರೆ ಪದಾರ್ಥಗಳನ್ನು ತಯಾರಿಸುವ, ಹೈನ ಪಶುಗಳಿಗೆ ಉತ್ತಮ ಮೇವನ್ನು ಸಿದ್ಧಗೊಳಿಸುವ, ಒಟ್ಟಿನಲ್ಲಿ, ಕ್ಷೀರ ವ್ಯವಸಾಯ ಕ್ಷೇತ್ರದ ಅಂಗೋಪಾಂಗಗಳ ಸಂಪೂರ್ಣ ಪರಿಜ್ಞಾನ ದೊರಕುವ ಶಿಕ್ಷಣವನ್ನು ನೀಡಲಾಗುವುದು ಇದಕ್ಕೋಸ್ಕರ ಈ ವಿದ್ಯಾರ್ಥಿಗಳ ತಂಡವನ್ನು ದೇಶದ ದೊಡ್ಡ ದೊಡ್ಡ ಪಶು ಸಂಗೋಪನಾ ಕೇಂದ್ರ, ಹಾಲಿನ ಪೂರೈಕೆಯ ಕೇಂದ್ರ, ಕ್ಷೀರ ವ್ಯವಸಾಯ ಕೇಂದ್ರ ಮುಂತಾದವುಗಳೆಡೆಗೆ ಕರೆದೊಯ್ಯುವರು.

ಮೊದಲಿಂದಲೂ ಕ್ಷೀರ ವ್ಯವಸಾಯದಲ್ಲಿ ತೊಡಗಿರುವವರಿಗೆ ಅಲ್ಪಾವಧಿಯಲ್ಲಿಯೇ ಅವರು ನಿಪುಣರಾಗುವಂತೆ ಮಾಡುವ ಶಿಕ್ಷಣ ಪದ್ಧತಿಯು ಅನುಸರಿಸಲ್ಪಡುತ್ತದೆ. ಇದು ಮೂರು ತಿಂಗಳಲ್ಲಿ ಮುಗಿಯುತ್ತದೆ. ಮೇವಿನ ಬೆಳೆಯನ್ನು ಬೆಳೆಸುವ, ಪಶುಗಳನ್ನು ಚೆನ್ನಾಗಿ ಸಂರಕ್ಷಿಸುವ, ಹಾಲನ್ನು ಶಾಸ್ತ್ರೀಯ ರೀತಿಯಲ್ಲಿ ಸಂಗ್ರಹಿಸುವ ಶಿಕ್ಷಣವನ್ನು ಇವರಿಗೆ ಕೊಡಲಾಗುವುದು. ಒಂದು ಸಲಕ್ಕೆ ಹತ್ತು ಮಂದಿಯಂತೆ, ವರ್ಷಕ್ಕೆ ಮೂರು ಬಾರಿ ಒಟ್ಟು ಮೂವತ್ತು ವಿದ್ಯಾರ್ಥಿಗಳು ಹೀಗೆ ತರಬೇತಿ ಹೊಂದಿ ನೈಪುಣ್ಯ ಗಳಿಸಿ ಹೊರಬೀಳುವರು.

ಹೊರಗಿನವರಿಗೆ ಸಲಹೆ

ಕಳೆದ ಮೂವತ್ತು ವರ್ಷಗಳಲ್ಲಿ ಒಟ್ಟು ೧೦೨೪ ಮಂದಿ ವಿದ್ಯಾರ್ಥಿಗಳು ಈ ಕೇಂದ್ರದಿಂದ ಶಿಕ್ಷಣ ಪಡೆದು ಹೊರ ಬಿದ್ದಿರುವರು. ಇವರಲ್ಲಿ ದೇಶದ ಪ್ರತಿಯೊಂದೂ ಪ್ರದೇಶದ ವ್ಯಕ್ತಿಗಳು ಸೇರಿದ್ದು, ಸಿಂಹಳ, ಮಲಯಾ, ಬರ್ಮಾ ಇರಾಣ ಮುಂತಾದ ವಿದೇಶಗಳಿಂದ ಬಂದು ಕಲಿತವರು ಹಲ ಮಂದಿ ಇದ್ದಾರೆ.

ಸಂಶೋಧನೆ ನಡೆಸುವ ಮತ್ತು ವಿದ್ಯಾರ್ಥಿಗಳಿಗೆ ಶಿಕ್ಷಣ ಕೊಡುವ ಕೆಲಸದೊಟ್ಟಿಗೆ, ಈ ಕೇಂದ್ರದ ನಿರ್ದೇಶಕ ಹಾಗೂ ಅವರ ಸಹಾಯಕ ವರ್ಗಕ್ಕೆ ಎಷ್ಟೋ ವಿಷಯಗಳಲ್ಲಿ ಹೊರಗಿನವರಿಗೆ ಸಲಹೆ ಸೂಚನೆಗಳನ್ನು ಕೊಡುವ ವಿಶೇಷ ಹೊಣೆಗಾರಿಕೆಯನ್ನು ನಿರ್ವಹಿಸಬೇಕಾಗಿ ಬರುತ್ತದೆ. ಕ್ಷೀರ ವ್ಯವಸಾಯವನ್ನು ಅಂಗೀಕರಿಸಿ ನಡೆಸ ಬಯಸುವ ವ್ಯಕ್ತಿಗಳೂ ಸಂಸ್ಥೆಗಳೂ ಈ ಕೇಂದ್ರದ ಸಹಾಯವನ್ನು ಬಯಸುತ್ತವೆ. ಸಂಶೋಧನಾಲಯವು ಇವರಿಗೆಲ್ಲ ಯೋಜನೆಯ ರೂಪರೇಷೆಯನ್ನು ಒದಗಿಸಿಕೊಡಲು, ವೆಚ್ಚದ ಅಂದಾಜನ್ನು ಸೂಚಿಸುತ್ತದೆ. ಹಾಲನ್ನು ಸ್ವಚ್ಛವಾಗಿ ಸಂಗ್ರಹಿಸುವ ಮತ್ತು ಉಚಿತ ರೀತಿಯಲ್ಲಿ ಪೂರೈಸುವ ಕೆಲಸಗಳಲ್ಲಿ ನೆರವಾಗಲು ಕೇಂದ್ರವು ತಾಂತ್ರಿಕ ಸಹಾಯವನ್ನು ಸಲ್ಲಿಸುತ್ತದೆ. ಭಾರತ ಸರಕಾರದವರು ರೂಪಿಸಿದ ಒಂದು ಯೋಜನೆಯಂತೆ ಬೆಂಗಳೂರಿನ ಆಸು ಪಾಸುಗಳ ಗ್ರಾಮಾಂತರ ಪ್ರದೇಶ

'ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರಿ

ಇವರ

ನವಜೀವಾತು

ಎಂಬ

ಸೂತಿಕಾರಸಾಯನ

ಬಾಣಂತಿಯರ ಪಾಲುಮಾಗಿಯೇ ದೇಹ ಮತ್ತು ಪ್ರಕೃತಪ ದೇಹ ಸ್ಥಿತಿಯನ್ನು ನಿರ್ಮಿಸಿ ತಯಾರಿಸಲ್ಪಟ್ಟ ಅತ್ಯುಪಯೋಗವಾದ ಮಧುರಪ್ರವರಸಾಯನ.

ಹೆಚ್ಚಿನ ಮಾಹಿತಿಗೆ – ಡಾ। ಯಂ. ಸಿ. ಶಾಸ್ತ್ರೀ, ಯಲ್. ಐ. ಎಂ.

ಕೊಡಿಯಾಲಬೈಲು ಪೋಸ್ಟು. (ಮಂಗಳೂರು)

ಸ್ಥಾನಿಕರು – ಡಾ। ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ

ಗಳಲ್ಲಿ ಪಶುಗಳ ಸಂತತಿ ಸುಧಾರಣಾ ಕಾರ್ಯವನ್ನೂ ಈ ಕೇಂದ್ರ ಕೈಗೊಂಡು ನಡೆಸುತ್ತದೆ

ಹೈನ ವಿಜ್ಞಾನದಲ್ಲಿ ಆಸಕ್ತಿಯುಳ್ಳ ಸುಮಾರು ೨೦೦ ಭಾರತೀಯರು ಕೆಲಸ ಮಾಡುವ ಸಂಸ್ಥೆಯೊಂದು ಈ ಕೇಂದ್ರದ ಆಶ್ರಯದಲ್ಲಿ ನಡೆಯುತ್ತದೆ. ವೈಜ್ಞಾನಿಕ ಸಂಶೋಧನೆಗಳಿಗೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡುವ ಮತ್ತು ಸಂಶೋಧನ ಫಲಿತಾಂಶವನ್ನು ಪ್ರಚುರಪಡಿಸುವ ಮತ್ತಿತರ ಉಚಿತ ಕಾರ್ಯಕಲಾಪಗಳು ಈ ಸಂಸ್ಥೆಯ ಮೂಲಕ ನೆರವೇರುತ್ತವೆ. ಕ್ಷೀರ ವ್ಯವಹಾರದಲ್ಲಿ ತೊಡಗಿದ ನಾಗರಿಕರಿಗೆ ವಿಶೇಷ ಲಾಭವನ್ನೂ ಜ್ಞಾನವನ್ನೂ ಒದಗಿಸಿ ಕೊಡುವ ಉದ್ದೇಶದಿಂದ "ಇಂಡಿಯನ್ ಜರ್ನಲ್ ಆಫ್ ಡೈರಿ ಸ್ಯಾನ್ಸ್" ಎಂಬ ತ್ರೈಮಾಸಿಕವನ್ನು ಇದು ಪ್ರಕಟಿಸುತ್ತದೆ. "ಇಂಡಿಯನ್ ಡೈರಿಮೆನ್" (ಅಂದರೆ, ಭಾರತೀಯ ಗೋಪಾಲರು) ಎಂಬ ಇನ್ನೊಂದು ಮಾಸಿಕವೂ ಪ್ರಕಟವಾಗುತ್ತಿದ್ದು, ಇವೆರಡೂ ಪತ್ರಿಕೆಗಳು ದೇಶ—ವಿದೇಶಗಳಲ್ಲಿ ಮನ್ನಣೆಯನ್ನು ಪಡೆದು, ಸಾಕಷ್ಟು ಪ್ರಸಾರವನ್ನು ಗಳಿಸಿವೆ. ಕ್ಷೀರ ವ್ಯವಸಾಯವು ಶಾಸ್ತ್ರೀಯ ದೃಷ್ಟಿಯನ್ನೂ ಕ್ರಮಗಳನ್ನೂ ಅಳವಡಿಸಿಕೊಂಡು ಮುನ್ನಡೆಯುವ ಪ್ರಯತ್ನದಲ್ಲಿ ಈ ಕೇಂದ್ರದಿಂದ ಹೆಚ್ಚಿನ ಪ್ರಯೋಜನವನ್ನು ಪಡೆಯುತ್ತದೆ

ಋತುಸ್ರಾವ ನಿಂತಿತು

"ಕುಮಾರಿ" ಬಿಲ್ಲೆಗಳನ್ನು ಉಪಯೋಗಿಸಿದ್ದರೆ ಪದೆಪದೆ ಋತುಸ್ರಾವವಾಗುವುದು, ಹರೋಟಿಗೆ ಬರುವುದು ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು. ಯಾವ ಬಾಧಕವೂ ಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ- ಬೆಲೆ: ರೂ. 3/-, ಸ್ಪೆಶಲ್ ರೂ. ೬ ಅಧಿಕಶಾಖಿಕ ಸ್ಪೆಶಲ್ ರೂ. ೭ [ವಿ ಪಿ ಹನ್ನೆರಡಾಣೆ ಪ್ರತ್ಯೇಕ]

Mrs. P. DEVEE, 1 I S (N.J.)
CALCUTTA. 4
ಸ್ಟಾಕಿಸ್ಟರು. ಶಹಾ ಕಂಪನಿ, ಮಂಗಳೂರು.

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ
ರಥಬೀದಿ ಉಡುಪಿ.



(೧ನೇ ಪುಟದಿಂದ)

ಉತ್ಪಾದನೆಯ ಮಟ್ಟ, ಮತ್ತಿತರ ತೊಡಕುಗಳನ್ನು ಜಾಗರೂಕತೆಯಿಂದ ಪರಿಶೀಲಿಸಬೇಕಾಗಿ ಬರುತ್ತದೆ ಮುಂದಿನ ಯೋಜನೆಯಲ್ಲಿ ಕೃಷಿ ಕ್ಷೇತ್ರದಿಂದ ಕೈಗಾರಿಕಾ ಕ್ಷೇತ್ರಕ್ಕೆ ಪ್ರಾಶಸ್ತ್ಯ ದೊರಕುತ್ತದೆ - ಇದು ಸ್ವಾಭಾವಿಕವಾಗಿಯೇ ಖಾಸಗಿ ಕೈಗಾರಿಕಾ ಕ್ಷೇತ್ರದ ಕಾರ್ಯಕ್ಷೇತ್ರವನ್ನು ವ್ಯಾಪಕಗೊಳಿಸುವುದು. ಕೈಗಾರಿಕೆಯ ಅಭಿವೃದ್ಧಿಯಲ್ಲಿ ಖಾಸಗಿ ರಂಗದ ಮಹತ್ವವನ್ನು ಇಷ್ಟರಿಂದಲೇ ನಾವು ಮನವರಿಕೆಮಾಡಿಕೊಳ್ಳಬಹುದು.

ಆದರೆ ಈ ರೀತಿ ಅಭಿವೃದ್ಧಿ ಪ್ರಯತ್ನಗಳು ನಡೆಯುತಿದ್ದರೂ ನಮಗೊಂದು ದೊಡ್ಡ ಅಡಚಣೆಯನ್ನು ಇದಿರಿಸಬೇಕಾಗಿ ಬರುತ್ತದೆ—ಅದೆಂದರೆ ಪ್ರಜಾಜನನ ಪ್ರಮಾಣ ದೇಶದಲ್ಲಿ ನಾವು ಕೈಗೂಡಿಸಿದ ಸುಧಾರಣೆಯನ್ನೆಲ್ಲ ನುಂಗಿ ನೀರು ಕುಡಿಯುವ ರೀತಿಯಲ್ಲಿ ಜನಸಂಖ್ಯೆಯು ಹೆಚ್ಚುತ್ತಾ ಹೋದರೆ, ನಮ್ಮ ಜನರ ಜೀವನ ಮಟ್ಟವನ್ನು ಸುಧಾರಿಸಲು ಕೈಗೊಂಡ ಯಾವುದೇ ಪ್ರಯತ್ನವೂ ಪ್ರತ್ಯಕ್ಷಪರಿಣಾಮವನ್ನು ತೋರಿಸುವುದು ಸಂಶಯ. ಆದಾಯವು ಬಹಳ ಕಡಿಮೆ ಇರುವ ಮತ್ತು ಜೀವನ ನಿರ್ವಹಣವು ಅತಿ ಕಷ್ಟವಾಗಿ ಪರಿಣಮಿಸಿರುವ ಭಾರತದಂತಹ ಹಿಂದುಳಿದ ದೇಶದಲ್ಲಿ ಪ್ರಜಾಜನನ ಪ್ರಮಾಣವನ್ನು ಯಶಸ್ವಿಯಾಗಿ ನಿಯಂತ್ರಿಸುವುದು ಬಹಳ ಅಗತ್ಯವೆಂದು ಕೃಷ್ಣಮಾಚಾರಿಯವರ ವಿಚಾರ. ಆದುದರಿಂದ ಭಾರತೀಯ ವಣಿಕ ಸಂಘಗಳಿಗೆ ಅಭಿವೃದ್ಧಿ ಪ್ರಯತ್ನಗಳಲ್ಲಿ ಖಾಸಗಿ ರಂಗದ ಮಹತ್ವವನ್ನು ತಿಳಿಸುತಿದ್ದಂತೆಯೇ, ಜನಸಾಮಾನ್ಯರಲ್ಲಿ ಕೂಡ ಪ್ರಜಾಜನನ ನಿಯಂತ್ರಣದ ವಿಷಯದಲ್ಲಿ ಪರಂಪರಾಗತವಾಗಿಯೂ ಆನುವಂಶಿಕವಾಗಿಯೂ ಬಂದಿರುವ ವಿಚಾರಸರಣಿಯಲ್ಲಿ ಕ್ರಾಂತಿಕಾರ ಪರಿವರ್ತನೆಯನ್ನು ಸಾಧಿಸಬೇಕೆಂದು ಅವರು ಉಪದೇಶಕೊಡಲು ಮುಂದಾದರು ಇದನ್ನು ಸರಕಾರೀ ಮಟ್ಟದಲ್ಲಿ ನಿಯಂತ್ರಿಸುವುದಕ್ಕಿಂತಲೂ ದೇಶದಲ್ಲಿ ಸಂತತಿ ನಿಯಮನದ ಕುರಿತು ಆಸಕ್ತಿ ಇರುವ ಜನರು ಸರಕಾರೇತರ ಸಂಸ್ಥೆಯೊಂದನ್ನು ಕಟ್ಟಿಕೊಂಡು ಕೆಲಸಮಾಡಬೇಕೆಂದು ಅವರು ವ್ಯಕ್ತಪಡಿಸಿದರು. ಹೀಗೆ ನಾವು ಪ್ರತಿಯೊಂದೂ ರೀತಿಯಿಂದ ಸಹನೆ, ಸಂಯಮ ಹಾಗೂ ಮಿತವ್ಯಯಗಳನ್ನು ಸಾಧಿಸಿದರೆ ಮಾತ್ರ ಜೀವನ ಮಟ್ಟವನ್ನು ಸುಧಾರಿಸುವ ದೀರ್ಘಾವಧಿ ಯೋಜನೆಯಿಂದ ಹೆಚ್ಚಿನ ಲಾಭವನ್ನೂ ಪ್ರಯೋಜನವನ್ನೂ ಪಡೆಯಬಲ್ಲೆವು.

ಓದಲೇ ಬೇಕಾದ ನವೀನ ಸಾಮಾಜಿಕ ಕಾದಂಬರಿ
(ತೆಲುಗಿನಿಂದ ಅನುವಾದಿತ)

ಕುಲವಿಲ್ಲದ ಹೆಣ್ಣು

ಅನುವಾದಕರು:- ಶ್ರೀ. ಪಿ. ವೆಂಕೋಬಾಚಾರ್ಯರು,
ಬಿ. ಎ ಬಿ, ಟಿ, ಹುಬ್ಬಳ್ಳಿ.

"ಮಿಶ್ರಸಂತತಿಯ ಹೆಣ್ಣೊಂದು ಧರ್ಮದ ಸೋಗಿನ ಜಾಲ ಧನದ ಜಾಲ, ವೃದ್ಧರ ಕಾಮಜಾಲದಿಂದ ಪಾರಾಗಿ ಆಧುನಿಕ ಯುವಕ ಸಂತತಿಯ ಉದಾರತೆಯ ಕೈಹಿಡಿದು ಸುಖವಾಗಿ ಬಾಳಿತೆಂಬುದನ್ನು ಸೂಚಿಸುವ ಈ ಕಾದಂಬರಿಯಲ್ಲಿ ಪ್ರಾಸಂಗಿಕವಾಗಿ ನಾಟಕ ಕಲೆಯ ಮೇಲೆಯೂ ಕೆಲವು ಅಭಿಪ್ರಾಯಗಳನ್ನು ಸೂಚಿಸಿದ್ದಾರೆ

ಕುಲವಿರಲಿ ಇಲ್ಲದಿರಲಿ, ವೈಯಕ್ತಿಕ ಶೀಲವೊಂದಿದೆ; ಅದರ ಬೆಳಕಿನಲ್ಲಿ ವ್ಯಕ್ತಿಯು ಎಂತಹ ಸಾಮಾಜಿಕ, ಧಾರ್ಮಿಕ ಎಡರುತೊಡರುಗಳನ್ನೂ ದಾಟಿ ಮನಮೆಚ್ಚಿದ ಶಾಂತಿಸುಖ ಸಮಾಧಾನಗಳ ಬಾಳನ್ನು ಬಾಳಬಲ್ಲುದು ಎಂಬುದೇ ಈ ಕಾದಂಬರಿಯ ನೀತಿ"—ಜೈಹಿಂದ್

ಕನ್ನಡದ ಸ್ತ್ರೀಪುರುಷರೆಲ್ಲರೂ ಅವಶ್ಯ ಓದಲೇ ಬೇಕಾದ ಅತ್ಯಾಧುನಿಕ ಕಾದಂಬರಿ ಬೆಲೆ ರೂ 2 0-0

ಪ್ರತಿಗಳಿಗೆ— ನವಭಾರತ ಪುಸ್ತಕ ಭಂಡಾರ ಉಡುಪಿ.

ಲಕ್ಷಾಂತರ ಜನರು ಗುಣಹೊಂದಿದ್ದಾರೆ

ಸರ್ ಜೀವನ್ ಶಿಲಾಜಿತ್‌ಲೇಹ

ಶಿಲಾಜಿತ್ ಹಿಮಾಲಯದ್ದು ಔಷಧಿಗಳ ರಾಜ, ಮೂಲಿಕೆಗಳೊಡನೆ ಸೇರಿಸಿದ ಲೇಹ್ಯ, ದೇಹಶಕ್ತಿ, ಹೊಟ್ಟೆನೋವು, ಅನ್ನ ಸೇರದಿರುವಿಕೆ, ಕೆಮ್ಮು, ದಮ್ಮು, ಬಹುಮೂತ್ರ ಮುತ್ತು ವಾಯುವಿನಿಂದಾಗುವ ಎಲ್ಲಾ ರೋಗನಿವಾರಕ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, ಹೆಂಗಸರ ಮತ್ತು ಮಕ್ಕಳ ಸರ್ವರೋಗ ನಿವಾರಕ ಅಮೂಲ್ಯ ರತ್ನ ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು

೪೨ ದಿನದ ಲೇಹ್ಯ ರೂ ೩ ೪ ೦, ೨೧ ದಿನದ ಲೇಹ್ಯ ರೂ೧-೪-೦ (ಪೋಸ್ಟೇಜು ಮಾಫಿ)

ನೀಲಗಿರಿ ಡಿಪೊ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ.
ರುಪ್ತ ನೀಲಗಿರಿ ಎಕ್ಕೆಗೆ ನೀಲಗಿರಿ ಡಿಪೋವಿನಲ್ಲಿ ಕೇಳಿರಿ

ಭರ್ತ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ ೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟು ಖರ್ಚು ರೂ. ೦-೧೪-೦

—:ವಿಳಾಸ —

ಹಾಲಪ್ಪಾ ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ಇದನ್ನು ಚೆನ್ನಾಗಿ ತಿಳಿದು ಸರಕಾರದೊಡನೆ ಸಂಪೂರ್ಣ ಸಹಕರಿಸುವ ಮನೋಭಾವವು ನಮ್ಮೆಲ್ಲರಲ್ಲಿ ಮೂಡಿ ಬರಲೆಂದು ಹಾರೈಸುತ್ತೇನೆ

ಗಯಾ ಭೂದಾನ ಸಂಕಲ್ಪ ಪೂರ್ತಿ

ಶ್ರೀ ವಿನೋಬಾಜಿಯವರು ತಾರೀಕು ೧೪—೯—೧೯೫೨ನೇ ದಿನ ಬಿಹಾರ ಪ್ರದೇಶವನ್ನು ಪ್ರವೇಶಿಸಿದರು ಬಿಹಾರಿನ ಭೂ ಸಮಸ್ಯೆಯನ್ನು ಬಗೆಹರಿದೇ ತಾನು ಬಿಹಾರಿನಿಂದ ಹೊರಡುವೆನೆಂದು ಆ ದಿನವೇ ವಿನೋಬಾಜಿಯವರು ಹೇಳಿದರು. ಇಂದಿಗೆ ಸುಮಾರು ಒಂದೂವರೆ ವರ್ಷದಿಂದ ಅವರು ಬಿಹಾರಿನಲ್ಲಿ ಸಂಚರಿಸಿರುವರು. ಬಿಹಾರಿನ ಭೂ ಸಮಸ್ಯೆಯನ್ನು ಪರಿಹರಿಸಲು ಅಗತ್ಯವಿರುವ ಮೂವತ್ತೆರಡು ಲಕ್ಷ ಎಕ್ರೆ ಜಮೀನಿನ ಪೈಕಿ, ಇನ್ನೂ ಬಹಳ ಭೂಮಿ ಪ್ರಾಪ್ತವಾಗಲು ಬಾಕಿ ಉಳಿದಿದೆಯಾದರೂ, ಮುಂದಿನ ಸರ್ವೋದಯ ಸಮ್ಮೇಲನದ ಪೂರ್ವದಲ್ಲೆ ಕನಿಷ್ಠ ಪಕ್ಷಕ್ಕೆ ಗಯಾ ಜಿಲ್ಲೆಯ ಮೂರು ಲಕ್ಷದ ಪಾಲಾದರೂ ಪರಿಪೂರ್ಣವಾಗಿ ಪ್ರಾಪ್ತವಾಗಬೇಕು ಈ ವಿಷಯವನ್ನು ಶ್ರೀ ವಿನೋಬಾಜಿಯವರು ಕಾರ್ಯಕರ್ತರ ಮುಂದಿಟ್ಟಿರುತ್ತಾರೆ. ಬಿಹಾರಿನ ಭೂ ಸಮಸ್ಯೆಯನ್ನು ಪರಿಹರಿಸುವ ಉತ್ಕಟ ಪ್ರಯತ್ನದ ಇದೊಂದು ಮುಖ್ಯ ಭಾಗವಾಗಿದೆ.

'ಮಾಡುವೆವು ಇಲ್ಲವೆ ಮಡಿವೆವು' ಎಂಬ ಭಾವನೆ ಮತ್ತು ಭಾಷೆಗಳನ್ನು ವ್ಯಕ್ತಮಾಡಿ ತಾ. ೩೧-೧-೧೯೫೪ನೇ ದಿನ ವಿನೋಬಾಜಿಯವರು ಗಯಾ ಜಿಲ್ಲೆಯನ್ನು ಪ್ರವೇಶಿಸಿದರು ಗಯಾ ಜಿಲ್ಲೆಯವರನ್ನುದ್ದೇಶಿಸಿ ಆ ನಿವೇದನೆಯನ್ನವರು ಹೊರಡಿಸಿದ್ದರೂ, ಅವರ ತೀವ್ರತೆ ಮತ್ತು ಪರಿಸ್ಥಿತಿಯ ಗಂಭೀರತೆಯು ಅದರಿಂದ ಕಂಡುಬರುತ್ತದೆ. ಸರ್ವಸೇವಾ ಸಂಘವು ಕೂಡ ಆ ಗಂಭೀರತೆಯನ್ನನುಭವಿಸುತ್ತದೆ. ಶ್ರೀ ವಿನೋಬಾಜಿಯವರು ಗಯಾ ಜಿಲ್ಲೆಯನ್ನುದ್ದೇಶಿಸಿ ಹೇಳಿದ ಮಾತು ಇಡೀ ಹಿಂದುಸ್ಥಾನಕ್ಕೂ ಸಂಬಂಧಿಸಿರುತ್ತದೆ. ಇಡೀ ದೇಶದಲ್ಲಿ ಎರಡು ವರ್ಷಗಳ ಅವಧಿಯಲ್ಲಿ ಇಪ್ಪತ್ತೈದು ಲಕ್ಷ ಸಿಗಬೇಕೆಂಬ ಸಂಕಲ್ಪವಾಗಿ ಅದು ಒಂದು ರೀತಿಯಲ್ಲಿ ಪರಿಪೂರ್ಣವಾಗಿರುವುದಾದರೂ, ಬೇರೆ ಬೇರೆ ಪ್ರಾಂತಗಳ ನಿಶ್ಚಿತ ಭಾಗಗಳು ಇನ್ನೂ ಅನೇಕ ಪ್ರಾಂತಗಳಲ್ಲಿ ಸರಿಯಾಗಿ ದೊರಕಿಲ್ಲ. ಆದಕಾರಣ ಎಲ್ಲ ಜನರು ಸಂಕಲ್ಪಪೂರ್ತಿಯ ಕರ್ತವ್ಯ ವ ಮಹತ್ವವನ್ನು ಚೆನ್ನಾಗಿ ಅರಿತು, ಸಂಪೂರ್ಣರೀತಿಯಿಂದ ಭೂದಾನ ಕಾರ್ಯಕ್ಕೆ ತೊಡಗಬೇಕೆಂದು ಸರ್ವ ಸೇವಾಸಂಘವು ಮಹಾಜನರಲ್ಲಿ ಆಗ್ರಹಪೂರ್ವಕವಾಗಿ ಕೇಳಿಕೊಳ್ಳುತ್ತದೆ. ಸಮ್ಮೇಲನದ ತನಕವಾದರೂ ಯಾನೆ ಮುಂದಿನ ಏಪ್ರಿಲ್ ತಾ. ೧೮ರ ತನಕವಾದರೂ ಎಲ್ಲರೂ ಭೂದಾನ ಕಾರ್ಯಕ್ಕಾಗಿ ತಮ್ಮ ಸಮಯವನ್ನುಪಯೋಗಿಸಬೇಕು

ಇಡೀ ದೇಶದ ಭೂ ಸಮಸ್ಯೆಯನ್ನು ಪರಿಹರಿಸುವ ನಿಮಿತ್ತವಾಗಿ ಯಾವುದಾದರೊಂದು ಪ್ರದೇಶದ ಭೂಮಿಯ ಪ್ರಶ್ನೆಯನ್ನು ಪರಿಹರಿಸಿ ತೋರಿಸುವುದು ಅಗತ್ಯವೆಂದು ಕಂಡು ವಿನೋಬಾಜಿಯವರು ತನ್ನ ಶಕ್ತಿಯನ್ನು ಬಿಹಾರಿನಲ್ಲಿ ಕೇಂದ್ರಿತವಾಗಿ ಉಪಯೋಗಿಸಿರುವರು ಅದೇ ರೀತಿಯಲ್ಲಿ ಗಯಾ ಜಿಲ್ಲೆಯ ಪಾಲಿನವರನ್ನು ಪೂರ್ಣಗೊಳಿಸುವುದು ಬಿಹಾರ ಮತ್ತು ಇಡೀ ದೇಶದ ಭೂದಾನ ಕಾರ್ಯಕ್ಕೆ ವಿಶೇಷ ಮಹತ್ವವನ್ನುಂಟುಮಾಡಿರುತ್ತದೆ.

ರಚನಾತ್ಮಕ ಸಂಸ್ಥೆಗಳೂ ಕಾರ್ಯಕರ್ತರೂ ತಮ್ಮ ವರ್ತಮಾನ ಕೆಲಸಗಳನ್ನು ಅವಿರತವಾಗಿ ಮಾಡದೆ, ಆದಷ್ಟು ಹೆಚ್ಚು ತಮ್ಮ ಸಮಯವನ್ನು ಭೂ ದಾನ ಕಾರ್ಯಕ್ಕೆ ಉಪಯೋಗಿಸಬೇಕೆಂದು ಸರ್ವಸೇವಾ ಸಂಘವು ವಿಶೇಷವಾಗಿ ಆಗ್ರಹ ಪೂರ್ವಕ ವಿನಂತಿಯನ್ನು ಮಾಡುತ್ತಿದೆ

—(ಹಿಂದೀ 'ಸತಾಯಿ ಮಂಡಲ ಪತ್ರಿಕೆ' ಯಿಂದ ಅನುವಾದಿಸಿದ್ದು—ಸಂಚಾಲಕ ಸರ್ವಸೇವಾ ಸಂಘ, ೬. ೭, ಮತ್ತು ಕೊಡಗು ವಿಭಾಗ, ಮಂಗಳೂರು—1)

Edited, Printed & Published By K. H. Shetty at the Navayuga Press, Udipi, S. India

Regd. No. M. 3618

Licence No 31
Licensed to Post without Prepayment.

ನವಯುಗ

Vol.33. No 27 | 11-3-1954 | ವರ್ಷ ೩೩ ವಾರ ೨೭

ದೇಶ ಬಾಂಧವರಿಗೆ ಕರೆ

ರಾಷ್ಟ್ರದ ಅಭಿವೃದ್ಧಿಯನ್ನು ಪ್ರಸ್ತಾಪಿಸುವಾಗ ನಾವೆಲ್ಲರೂ ಸಾಮಾನ್ಯವಾಗಿ ಕೇಳುವ ಮಾತೊಂದಿದೆ– ಆರ್ಥಿಕ ಸಂಪತ್ತನ್ನು ಅದು ಹೊಂದುತ್ತದೆನ್ನುವುದೇ ಈ ಅಭಿಪ್ರಾಯ. ಆದರೆ ಕೇವಲ ಸಂಪತ್ತಿನ ಹೆಚ್ಚಳದಿಂದ ಸಾಮಾನ್ಯ ಜನತೆಗೆ ಲಾಭವಾಗುತ್ತದೆಯೆ? ಗಾಂಧೀಜಿಯವರೂ ಇತರ ಅನೇಕ ಅರ್ಥ ಶಾಸ್ತ್ರಿಗಳೂ ಈ ಮಾತನ್ನು ನಿರಾಕರಿಸುತ್ತಿದ್ದರು—ಆರ್ಥಿಕ ಸಂಪತ್ತಿನ ಹೆಚ್ಚಳದಿಂದಲ್ಲ— ಆರ್ಥಿಕ ಸಂಪತ್ತಿನ ಸಮನಾದ ವಿತರಣೆಯಿಂದ ರಾಷ್ಟ್ರವು ಸರ್ವತೋಮುಖವಾದ ಏಳಿಗೆಯನ್ನೈದುವುದೆಂದು ಅವರು ನಂಬಿಕೆ ವ್ಯಕ್ತಪಡಿಸುತಿದ್ದರು ರಾಷ್ಟ್ರದ ಕೃಷಿ ಕೈಗಾರಿಕೆಗಳಲ್ಲಿ ಸಮನ್ವಯ ಸಾಧಿಸಬೇಕೆಂದು ಹೇಳುವಾಗ ನಾವು ಮೇಲಿನ ವಿವರಣೆಯನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು. ಇಲ್ಲದಿದ್ದರೆ, ಸಂಪತ್ತು ಕೆಲವೇ ಜನರ ಕೈಯಲ್ಲಿ ಸಂಗ್ರಹಗೊಂಡು, ಸಾಮಾನ್ಯ ಜನತೆಯ ಉಪಯೋಗಕ್ಕೆ ದೊರಕದೆ ಹೋಗುವ ಭಯ ತುಂಬಾ ಇದೆ

ಈ ದೃಷ್ಟಿಯಿಂದ ದೇಶದಾದ್ಯಂತ ಈ ವಾರ ಆಚರಿಸಲಾದ ಕೈಮಗ್ಗಗಳ ಸಪ್ತಾಹದ ಮಹತ್ವವನ್ನು ಮನಗಾಣಲು ಪ್ರಯತ್ನಿಸುವುದು ಪ್ರಯೋಜನಕಾರಿ. ದಿನಾಂಕ ೭ರಿಂದ ೧೩ರವರೆಗೆ ಕೈಮಗ್ಗಗಳ ಸಪ್ತಾಹವು ಅನೇಕ ಪ್ರದರ್ಶನಗಳು, ಭಾಷಣಗಳು ಎಲ್ಲಕ್ಕೂ ಹೆಚ್ಚಾಗಿ ಖಾದಿ ಮತ್ತು ಕೈಮಗ್ಗದ ವಸ್ತ್ರಗಳ ತುರುಸಿನ ವ್ಯಾಪಾರ—ಇವೇ ಮುಂತಾದ ಕಾರ್ಯಕ್ರಮಗಳಿಂದ ನೆರವೇರುತ್ತಿರುವುದು ಸಂತೋಷದ ವಿಚಾರ. ಖಾದಿಯಾಗಲೀ ಕೈಮಗ್ಗಗಳಾಗಲೀ ಇತರ ಗ್ರಾಮೋದ್ಯೋಗಗಳಾಗಲೀ ಭಾರತದಂತಹ [illegible] ಜನಸಂಖ್ಯೆಯುಳ್ಳ ಮತ್ತು ಇನ್ನೂ ನಿಕೃಷ್ಟಾವಸ್ಥೆಯಲ್ಲಿ ತೊಳಲಾಡುವ ದೇಶಕ್ಕೆ ಬದುಕುವ ಸಾಧನಗಳಾಗಿ ಪರಿಣಮಿಸುತ್ತವೆ ಇದು ತಾತ್ವಿಕ ವಿವರಣೆಯಲ್ಲ—ಅನುಭವ ಸಿದ್ಧವಾದ ವಿಷಯ ಇದಾದುದರಿಂದ ಅಸಡ್ಡೆಯಿಂದ ಈ ಮಾತನ್ನು ಕಾಣುವುದು ಸಲ್ಲದು.

ವಿಶಾಲವಾದ ಪೇಟೆಯನ್ನು ದೊರಕಿಸಿಕೊಂಡು ಉದ್ಯೋಗದ ಅವಕಾಶಗಳನ್ನು ಹೆಚ್ಚಿಸಿಕೊಂಡು ಸಂಪತ್ತನ್ನು ಬೆಳೆಸಿಕೊಂಡು, ಭಾರತವನ್ನೂ ಭಾರತೀಯರನ್ನೂ ಬದುಕಿಸಬಲ್ಲ ಅದ್ಭುತ ಶಕ್ತಿ ಗ್ರಾಮೋದ್ಯೋಗಗಳಿಗೂ ಖಾದಿ ಕೈಮಗ್ಗಗಳಿಗೂ ಇರುತ್ತದೆ. ಇದನ್ನು ಮನಗಾಣಿಸುವುದಕ್ಕೋಸ್ಕರ ಏರ್ಪಟ್ಟ ಪ್ರದರ್ಶನಗಳಲ್ಲಿ ರಾಷ್ಟ್ರದಲ್ಲಿ ನಿಷ್ಠೆಯುಳ್ಳ ನಾಗರಿಕರು ಅಖಿಲ ಭಾರತದ ಸ್ವಾವಲಂಬನೆಯ ಶಕ್ತಿಯನ್ನು ಪ್ರತ್ಯಕ್ಷೀಕರಿಸಿಕೊಳ್ಳಬಲ್ಲರು. ಸ್ವದೇಶೀ ವಸ್ತುಗಳ ಬಳಕೆ, ಸ್ವಾವಲಂಬನೆ, ಸರಳ ಜೀವನ—ಇವುಗಳ ವ್ರತವನ್ನು ಕೈಗೊಂಡು ನಡೆಸಬೇಕೆಂಬ ಉದಾತ್ತ ಸಂದೇಶವನ್ನು ಬೀರುತ್ತಾ, ಜನರನ್ನು ಜಾಗೃತಗೊಳಿಸುವ ಗೃಹೋದ್ಯಮಗಳ ಮಹತ್ವವನ್ನು ಎಷ್ಟು ಪ್ರಶಂಸಿಸಿದರೂ ಕಡಿಮೆಯೇ ಆದೀತು

ಆದರೆ ಇಷ್ಟು ಮಹತ್ವದ ಮತ್ತು ಆಗತ್ಯದ ಉದ್ಯಮವು ಇಂದು ಹೊಂದುತ್ತಿರುವ ಅವನತಿಯು ಭಾರತೀಯರ ಘನತೆಗೆ ಸರ್ವಥಾ ಶಕ್ಯವಲ್ಲ—ದೊಡ್ಡ ದೊಡ್ಡ ಕೈಗಾರಿಕೆಗಳ ವ್ಯಾಮೋಹವು ಈಗ ಹೆಚ್ಚಿಕೊಂಡಿರುತ್ತದೆ ಪಾಶ್ಚಾತ್ಯ ದೇಶಗಳನ್ನು ಪ್ರತಿಯೊಂದೂ ವಿಷಯದಲ್ಲಿ ಅನುಕರಿಸುವ ನಮ್ಮ ಹಲವು ದಶಕಗಳ ಪ್ರವೃತ್ತಿಯೂ ಯಂತ್ರೋದ್ಯಮಗಳ ಮೂಲಕ ಭಾರತದ ಕೈಗಾರೀಕರಣವನ್ನು ಸಾಧಿಸಬೇಕೆಂಬ ದುಷ್ಪ್ರೇರಣೆಯನ್ನು ನೀಡುತ್ತದೆ. ಪಾಶ್ಚಾತ್ಯರ ಮಾದರಿಯನ್ನು ಅನುಸರಿಸಿ, ದೊಡ್ಡ ದೊಡ್ಡ ಯಾಂತ್ರಿಕ ಸಲಕರಣೆಗಳನ್ನು ಉಪಯೋಗಿಸಿ ಮಹೋದ್ಯಮಗಳನ್ನು ಬೆಳೆಯಗೊಟ್ಟು, ಗೃಹೋದ್ಯಮಗಳನ್ನು ದುರ್ಲಕ್ಷಿಸಿದರೆ, ಎಲ್ಲರಿಗೂ ಉದ್ಯೋಗ ದೊರಕಿಸಿ ಕೊಡುವ, ಸಂಪತ್ತನ್ನು ಸಮನಾಗಿ ಎಲ್ಲರಿಗೂ ಹಂಚುವ ನಮ್ಮ ಉದ್ದೇಶಕ್ಕೆ ತಡೆಯನ್ನುಂಟು ಮಾಡಿದಂತಾಗುವುದೆಂದು ಹೇಳುವವರ ಮಾತಿನ ಕಡೆಗೆ ಯಾರ ಗಮನವೂ ಹರಿಯುವುದಿಲ್ಲ. ಸದ್ಯಕ್ಕೆ ನಮ್ಮಲ್ಲಿರುವ ದೊಡ್ಡ ದೊಡ್ಡ ಉದ್ಯಮಗಳನ್ನು ಇನ್ನಷ್ಟು ಅಭಿವೃದ್ಧಿಪಡಿಸಿದರೆ ಹೆಚ್ಚೆಂದರೆ ಈಗಿನದರ ಇಮ್ಮಡಿ ಅಂದರೆ, ಎಪ್ಪತ್ತು ಲಕ್ಷ ಜನರಿಗೆ ಉದ್ಯೋಗದ ಅವಕಾಶವನ್ನು ಒದಗಿಸಿಕೊಡಬಲ್ಲವು ನಮ್ಮ ದೇಶದ ೩೬ ಕೋಟಿ ಜನಸಂಖ್ಯೆಯ ಮುಂದೆ, ನೂರಕ್ಕೆ ಎಪ್ಪತ್ತರಷ್ಟು ಪ್ರಮಾಣದಲ್ಲಿರುವ ಕೃಷಿಕ ವರ್ಗಕ್ಕೆ ಕೈತುಂಬ ಕೆಲಸ ಒದಗಿಸಿಕೊಡುವ ಸಮಸ್ಯೆಯ ಮುಂದ, ಮಹೋದ್ಯಮಗಳನ್ನು ಅವಲಂಬಿಸಿದ ಕೈಗಾರೀಕರಣವು ನಮಗೆ ನಿಜವಾದ ಸಮಾಧಾನವನ್ನು ತರುವುದಿಲ್ಲ.

ಆದುದರಿಂದ ಎಲ್ಲ ಬುದ್ಧಿವಂತರೂ ನಮ್ಮ ದೇಶದ ವಸ್ತುಸ್ಥಿತಿಯನ್ನು ಮನಗಂಡು ಗೃಹೋದ್ಯಮಗಳಿಗೆಯೇ ಅತ್ಯಧಿಕ ಮಹತ್ವವನ್ನೂ ಪ್ರಾಶಸ್ತ್ಯವನ್ನೂ ಪ್ರಾಧಾನ್ಯವನ್ನೂ ಕೊಟ್ಟಿರುವರು ಹೀಗೆ ಹೇಳಿದ ಮಾತ್ರಕ್ಕೆ ಗೃಹೋದ್ಯಮಗಳಿಗೂ ಮಹೋದ್ಯಮಕ್ಕೂ ನಡುವೆ ಅನುಚಿತ ಸ್ಪರ್ಧೆ ಬೇಕೆನ್ನುತ್ತದೆಂದು ಭಾವಿಸಲಾಗದು—ಅಥವಾ ಈಗಿನ ಮಹೋದ್ಯಮಗಳ ಉಚ್ಚಾಟನೆಗೆ ಪ್ರಯತ್ನಿಸಬೇಕೆಂದೂ ಅರ್ಥವಿಸಲಾಗದು ಕೆಲವು ಸರಕುಗಳು ದೊಡ್ಡ ಉದ್ದಿಮೆಗಳಲ್ಲಿಯೇ ಉತ್ಪಾದಿಸಲು ಯೋಗ್ಯವಾಗಿರುತ್ತವೆ—ಆದರೆ ಗೃಹೋದ್ಯಮಗಳು ಚೊಕ್ಕವಾಗಿ ತಯಾರಿಸಲ್ಪಡುವ ವಸ್ತುಗಳನ್ನು ಸಹ ದೊಡ್ಡ ಕೈಗಾರಿಕೆಗಳು ಸಿದ್ಧಗೊಳಿಸಲು ತೊಡಗಿದರೆ, ಇದನ್ನು ಆಕ್ರಮಣ ಪ್ರವೃತ್ತಿಯಿಂದೇ ವರ್ಣಿಸಬೇಕಾಗುತ್ತದೆ ಗೃಹ ಕೈಗಾರಿಕೆಗಳ ಕ್ಷೇತ್ರದಲ್ಲಿ ದೊಡ್ಡ ಉದ್ದಿಮೆಗಳು ಪ್ರವೇಶಿಸುವುದು ಸರಿಯಾಗದು. ಗಾಂಧೀಜಿಯವರು ಇದನ್ನು ನಮಗೆ ತಮ್ಮ ಜೀವಿತ ಕಾಲದಲ್ಲಿ ಪದೇ ಪದೇ ಉಪದೇಶಿಸುತಿದ್ದರು. ಬಟ್ಟೆಯ ಗಿರಣಿ ಮತ್ತು ಚರಖಾಗಳ ಪ್ರಶ್ನೆಯನ್ನು ವಿವೇಚಿಸುವಾಗ— ಅವರು ಪ್ರತಿಯೊಬ್ಬನಿಗೂ ಕೆಲಸ ಒದಗಿಸಿ ಕೊಡುವ ಸರಕಾರದ— ಆ ಮೂಲಕ ಸಮಾಜದ—ಕರ್ತವ್ಯವನ್ನು ದೃಷ್ಟಿಯಲ್ಲಿಟ್ಟು ಕೊಂಡಿದ್ದರು.

ಉತ್ಪಾದನೆಯನ್ನು ಹೆಚ್ಚಿಸಿದ ಮಾತ್ರಕ್ಕೆ ಸಂಪತ್ತು ಹೆಚ್ಚಿಕೊಳ್ಳುವದೆಂಬ ಭಾವನೆಗೂ ಈಗ ಪೆಟ್ಟು ಬೀಳ ಹತ್ತಿದೆ—ಅಧಿಕ ಉತ್ಪಾದನೆಗೆ ಪೇಟೆ ಬೇಕು ಪೇಟೆಯಲ್ಲಿ ವ್ಯವಹಾರ ಚೆಲೋದಾಗಿ ನಡೆಯಬೇಕಾದರೆ ಜನರ ಕ್ರಯ ಶಕ್ತಿ ಅಧಿಕಗೊಳ್ಳುವುದು ಆಗತ್ಯ ಜನರೆಲ್ಲ ನಿರುದ್ಯೋಗಿಗಳಾದರೆ— ಜೀವನಾವಶ್ಯಕವಾದ ಸರಕನ್ನು ಕೊಳ್ಳಲಾರದೆ ಪೇಚಿನಲ್ಲಿ ಬೀಳುವರು ಆಗ ಉತ್ಪಾದಿತವಾದ ಸರಕು ಬಳಸುವವರಿಲ್ಲದೆ ಕೊಳೆಯ ಹತ್ತುವುದು ವಿದೇಶಗಳ ಪೇಟೆಯ ಬರವಸೆಯನ್ನೂ ಇಂತಹ ಸಂದರ್ಭದಲ್ಲಿ ನಾವಿಟ್ಟುಕೊಳ್ಳಲಾರೆವು—ಇಕ್ಕೆಂದರೆ, ಪ್ರತಿಯೊಂದೂ ರಾಷ್ಟ್ರವು ಈಗ ಆವಶ್ಯಕ ಸರಕುಗಳ ಹುಟ್ಟಿಗಾದರೂ ಸ್ವಾವಲಂಬಿಯಾಗುವ ಪ್ರಯತ್ನದಲ್ಲಿ ತೊಡಗಿದ್ದು, ಹೊರಗಿನಿಂದ ತರಿಸುವ ವಸ್ತುಗಳನ್ನು ಆದಷ್ಟು ಕಡಿಮೆ ಮಾಡುತ್ತಾ ಬರುತ್ತದೆ. ಆದುದರಿಂದ ದೊಡ್ಡ ಉದ್ದಿಮೆಗಳ ಪುರಸ್ಕರ್ತರಾದವರ ಮೇಲೆ ನಾವು ಭರವಸೆಯನ್ನಿಟ್ಟು ನಡೆದರೆ, ಯಾವ ಕೈಗಾರಿಕೆಯೂ ದೇಶದಲ್ಲಿ ಬಾಳಲಾರದ ಉತ್ಕಟ ಪರಿಸ್ಥಿತಿಯನ್ನು ಎದುರಿಸಬೇಕಾಗಿ ಬರುತ್ತದೆ.

ಇದನ್ನು ತಪ್ಪಿಸುವುದು ನಮ್ಮ ಉದ್ದೇಶ—ಮತ್ತು ಆದ್ಯ ಕರ್ತವ್ಯ. ಆದ ಕಾರಣ ದೊಡ್ಡ ಕೈಗಾರಿಕೆಗಳ ಮತ್ತು ಗೃಹೋದ್ಯಮಗಳ ಕ್ಷೇತ್ರ ಪರಿಮಿತಿಯನ್ನು ನಿರ್ದಿಷ್ಟಗೊಳಿಸುವುದು ನೆಂವಬನೇ ಕೆಲಸ. ಗೃಹೋದ್ಯಮಗಳು ನಿತ್ಯೋಪಯೋಗದ ಅನೇಕಾನೇಕ ವಸ್ತುಗಳನ್ನೂ ಉಪಕರಣಗಳನ್ನೂ ತಯಾರಿಸುವುದರಲ್ಲಿ ಈಗಲೂ ಸಮರ್ಥವಿವೆಯೆಂಬ ಮಾತಿಗೆ ಖಾದಿ ಮತ್ತು ಗ್ರಾಮೋದ್ಯೋಗ ಪ್ರದರ್ಶನಗಳೇ ಪ್ರತ್ಯಕ್ಷ ನಿದರ್ಶನ. ಯಂತ್ರಗಳಿಗಿಂತಲೂ ಸಂಪನ್ನವಾದ ಕಲಾಕೌಶಲ ಹಾಗು ಹಸ್ತ ನೈಪುಣ್ಯಗಳಿಗೆ ಗೃಹೋದ್ಯಮಗಳಲ್ಲಿ

(೧೦ನೇ ಪುಟನೋಡಿರಿ)

ವೇತನ ದೊರೆಯುವ ಪ್ರತಿ ದಿವಸದಲ್ಲೂ ಸೇವಿಂಗ್ಸ್ ಬೇಂಕ್ ಲೆಖ್ಖದಲ್ಲಿ ಹಣವಿಡಲು ಪ್ರಾರಂಭಿಸಿರಿ.

[illegible]

ವ್ಯವಹಾರ ವಹಿವಾಟು ರೂ 5,00,00,000

THE CANARA INDUSTRIAL & BANKING SYNDICATE LTD.,

Estd: 1925 H O UDIPI S India

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಸ್ಥಾಪನೆ ೧೯೨೫ ಪ್ರಧಾನ ಕಚೇರಿ ಉಡುಪಿ ದ. ಭಾರತ

★ ಕನ್ನಡದ ಸಂಪತ್ತಿನ ಕೇಂದ್ರ-ಮಲೆನಾಡು ★

ಅಭಿವೃದ್ಧಿ ಪ್ರಯತ್ನಗಳ ಅಗತ್ಯ ಸೂಚಿಸುವ ಅಪಾರ ವನಶ್ರೀ

ಮೊನ್ನೆ ಪಾರ್ಲಿಮೆಂಟಿನಲ್ಲಿ ರೈಲ್ವೆ ಮುಂಗಡಪತ್ರದ ಚರ್ಚೆಗೆ ಉತ್ತರ ಕೊಡುವಾಗ ಮಂತ್ರಿ ಶ್ರೀ ಲಾಲಬಹಾದ್ದೂರ ಶಾಸ್ತ್ರಿಗಳು ಹೊಸ ರೈಲ್ವೆಗಳನ್ನು ಹಾಕುವಾಗ ಗಮನಿಸಬೇಕಾದ ಪ್ರಾಶಸ್ತ್ಯ ಕ್ರಮವನ್ನು ಪ್ರಸ್ತಾಪಿಸಿದರು. ದೊಡ್ಡ ಉದ್ದಿಮೆಗಳ ಅಭಿವೃದ್ಧಿಗೆ ಅನುಕೂಲವಾಗುವಂತೆಯೂ ಖನಿಜ ಪದಾರ್ಥಗಳನ್ನು ವಿಪುಲವಾಗಿರುವ ಪ್ರದೇಶಗಳಲ್ಲಿ ಖನಿಗಳನ್ನು ಅಗೆಯಲು ಸಹಾಯಕವಾಗುವಂತೆಯೂ ರೈಲ್ವೆ ಮಾರ್ಗಗಳನ್ನು ಹಾಕಬೇಕೆಂದು ಅವರು ಅಭಿಪ್ರಾಯಪಟ್ಟರು. ಈ ದೃಷ್ಟಿಯಿಂದ "ಮೈಸೂರು ರಾಜ್ಯದ ಮಲೆನಾಡು ಪ್ರದೇಶ, ಮುಂಬಯಿ ರಾಜ್ಯದ ಉತ್ತರ ಕನ್ನಡ ಜಿಲ್ಲೆ ಮೊದಲಾದ ಪ್ರದೇಶಗಳಿಗೆ ವಿಶೇಷ ಗಮನ ಕೊಡಬೇಕಾಗುವುದು" ಎಂದು ರೈಲ್ವೆ ಮಂತ್ರಿಗಳು ಹೇಳಿದರು. ಅದಲ್ಲದೆ ಪಾರ್ಲಿಮೆಂಟಿನಲ್ಲಿ ರೈಲ್ವೆ ಮುಂಗಡಪತ್ರವು ಪಾಸಾದ ಬಳಿಕ ತಾವು ಕಾರವಾರಕ್ಕೆ ರೈಲ್ವೆ ಮಾರ್ಗ ರಚಿಸುವ ಪ್ರಶ್ನೆಯ ಕಡೆಗೆ ಲಕ್ಷ್ಯಕೊಡುವುದಾಗಿ ಮಂತ್ರಿಗಳು ಶ್ರೀ ಜೋಕಿಂ ಆಳ್ವಾರ ಮುಖಾಂತರ ಕರ್ನಾಟಕದ ಜತೆಗೆ ಆಶ್ವಾಸನೆಕೊಟ್ಟಿರುವರು. ಇಷ್ಟರಲ್ಲಿಯೇ ಈ ಯೋಜನೆಯ ಪರಿಶೀಲನಾ ಕಾರ್ಯ ಕೈಗೊಳ್ಳಲ್ಪಡುವುದು. ಈ ದೃಷ್ಟಿಯಿಂದ, ಮತ್ತು ಮುಂದಿನ ತಿಂಗಳ ಆದಿಯಲ್ಲಿ ಮಲೆನಾಡು ಪ್ರದೇಶದ ವ್ಯವಸಾಯಿಗಳ ಪರಿಷತ್ತೊಂದು ನೇರಲಿರುವುದರಿಂದ— ಕನ್ನಡದ ಮಲೆನಾಡಿನ ಸಂಪತ್ತು ಎಷ್ಟು ಅಮೂಲ್ಯವಾದುದೆಂದು ತಿಳಿದುಕೊಳ್ಳುವುದು ಸೂಕ್ತವಾಗಿರುತ್ತದೆ.

ಮಲೇರಿಯಾದ ಹಾವಳಿ

ಮಲೆನಾಡು ಎಂದು ನಾವು ಕರೆಯುವ ಪ್ರದೇಶವು ಪಶ್ಚಿಮ ಘಟ್ಟಗಳ ಉದ್ದಕ್ಕೂ ಚಾಚಿ ನಿಂತಿದೆ. ಮುಂಬಯಿ, ಮುದ್ರಾಸು, ಮೈಸೂರು, ತಿರುವಾಂಕೂರು-ಕೊಚ್ಚಿ ಕೊಡಗು ರಾಜ್ಯಗಳಲ್ಲಿ ಮಲೆನಾಡು ವಿಸ್ತರಿಸಿದ್ದು, ನೀಲಗಿರಿ, ಪಳನಿ, ಅಣ್ಣಾಮಲೆ ಮುಂತಾದ ಗುಡ್ಡ ಪ್ರದೇಶಗಳೂ ಮಲೆನಾಡಿನಲ್ಲಿ ಸಮಾವೇಶಗೊಂಡಿವೆ. ನೈಋತ್ಯ ಮುಸೂನು ಗಾಳಿಗಳು ಪಶ್ಚಿಮ ಘಟ್ಟಕ್ಕೆ ಮುಟ್ಟಿ ತಣಿಯುವಲ್ಲಿ ವರ್ಷಕ್ಕೆ ಇನ್ನೂರು ಅಂಗುಲದಷ್ಟು ಮಳೆ ಬೀಳುತ್ತದೆ— ಮಲೆನಾಡಿನ ಪೂರ್ವ ಭಾಗದಲ್ಲಿ ಮಳೆಯ ಅಂಶವು ಕಡಿಮೆಯಾಗುತ್ತಾ ಹೋಗಿ ಮೈದಾನುಪ್ರದೇಶ ಬರುವಷ್ಟಕ್ಕೆ ಆರಿಂದ ೫೦ ಅಂಗುಲ ಮಳೆಯಾಗುತ್ತದೆ. ಧಾರಾಳವಾಗಿ ಮಳೆ ಬೀಳುವ ಮಲೆನಾಡು ಪ್ರದೇಶದಲ್ಲಿ ದಟ್ಟವಾದ ಅರಣ್ಯಗಳು ತುಂಬಿಕೊಂಡಿದ್ದರೆ, ಸಾಧಾರಣ ಮಳೆಯು ಬೀಳುವ ಮಲೆನಾಡು ಪ್ರದೇಶದಲ್ಲಿ ಅತ್ಯುತ್ತಮ ಜಾತಿಯ ಬಿದಿರು ಮೆಳೆಗಳು ಪುಷ್ಕಳವಾಗಿ ಬೆಳೆಯುತ್ತವೆ. ಇವುಗಳ ನಡುವೆ ಲಕ್ಷಗಟ್ಟಳೆ ಎಕ್ರೆ ಜಮೀನು ಹುಲ್ಲು-ಪೊದೆಗಳ ನಡುವೆ ಹಾಳು ಬಿದ್ದಿದೆ. ಹೇರಳವಾದ ಜಲಾಶ್ರಯವಿದ್ದರೂ ಇಲ್ಲಿ ಕೃಷಿ ನಡೆಯುವುದಿಲ್ಲ—ಈ ಜಮೀನುಗಳ ಎಡೆಯಿಂದ ನದಿಗಳು ಉಗಮಿಸಿ, ಮುಂದೆ ಬಯಲು ಸೀಮೆಯತ್ತ ನೀರನ್ನೊಯ್ದು, ಹರಿಯುತ್ತವೆ. ಮಲೆನಾಡಿನ ದಕ್ಷಿಣ ಪ್ರದೇಶಕ್ಕಿಂತಲೂ ಹೆಚ್ಚು ಉತ್ತರ ಭಾಗದಲ್ಲಿ ಬೀಳು ಭೂಮಿಯು ಕೃಷಿಯಾಗದೆ ವ್ಯರ್ಥ ಬಿದ್ದುಕೊಂಡಿದೆ. ಇಷ್ಟು ಸಂಪತ್ತನ್ನು ಉಚಿತ ರೀತಿಯಲ್ಲಿ ಉಪಯೋಗಿಸುವುದಕ್ಕೆ ಎರಡು ಆತಂಕಗಳು ಕಂಡು ಬರುತ್ತವೆ— ಸಾರಿಗೆ ಸಂಪರ್ಕದ ಅನುಕೂಲತೆಗಳ ಅಭಾವವೊಂದಾದರೆ. ಜೀವವನ್ನೆ ಹಿಂಡುವ ಮಲೇರಿಯಾ ರೋಗದ ಉಪಟಳ ಇನ್ನೊಂದು ಗಂಡಾಂತರ. ಈ ತ್ರಾಸಗಳ ನಿವಾರಣೆಯ ಪ್ರಯತ್ನ ನಡೆದರೆ, ಮಲೆನಾಡಿನ ಐಶ್ವರ್ಯವನ್ನು ಉಪಯೋಗಿಸಿಕೊಂಡು, ಕನ್ನಡದ ಜನ ಅಭಿವೃದ್ಧಿ ಹೊಂದಬಹುದು.

ಸಾಂಸ್ಕೃತಿಕ ವೈಭವ

ಅರಣ್ಯ ಸಂಪತ್ತಿಗೆ ಮಲೆನಾಡಿನಷ್ಟು ಪ್ರಸಿದ್ಧವಾದ ಪ್ರದೇಶ ಭಾರತದಲ್ಲಿ ಬೇರೆ ಇರಲಾರದು— ಮಲೆನಾಡು ಮೈಸೂರಿನ ಆಯಕಟ್ಟಿನ ಭಾಗವಷ್ಟೇ ಅಲ್ಲ, ಕನ್ನಡದ ಐಶ್ವರ್ಯದ ಸ್ರೋತಗಳಲ್ಲಿ ಪ್ರಾಮುಖ್ಯವಾದದ್ದು. ಅಡಕೆ, ತೆಂಗು, ಕಾಫಿ, ಬಿದಿರು, ಮೋಪು, ಮಸಾಲೆ, ಗಂಧ, ಏಲಕ್ಕಿ, ಕರಿಮೆಣಸು - ಒಂದೇ. ಎರಡೇ? ಕಲಿಯುಗದ ಬಲ ಭೀಮನೆನಿಸಿದ ವಿದ್ಯುಚ್ಛಕ್ತಿಯೂ ಮಲೆನಾಡಿನ ಕಾಣಿಕೆಗಳಲ್ಲಿ ಒಂದಾಗಿರುತ್ತದೆ. ಸಾಂಸ್ಕೃತಿಕ ಕುರುಹುಗಳಿಗೂ ಇತಿಹಾಸ ಪ್ರಸಿದ್ಧ ರಾಜಧಾನಿಗಳಿಗೂ ಮಲೆನಾಡು ಹೆಸರ್ಗೊಂಡಿದೆ. ಚಂದ್ರಹಾಸನ ರಾಜ್ಯ ಸೊರಬದ ಬಳಿ ಇದ್ದಿತು ಶೃಂಗೇರಿ ಋಷ್ಯಶೃಂಗ ಮಹರ್ಷಿಯ ಊರು; ಶಂಕರಾಚಾರ್ಯರ ಪೀಠವಂತೂ ಹೌದಷ್ಟೆ! ವೇದವತೀ ನದಿಯ ತೀರದಲ್ಲಿ ರುಕ್ಮಾಂಗದ ರಾಜ್ಯವಾಳಿದನು. ತುರವಿನ ಕೆರೆಯ ಬಳಿ ಶಕ ಪುರುಷ ಶಾಲಿವಾಹನ ಹುಟ್ಟಿದನು. ಕದಬದ ಸಂಪಿಗೆ ಹಂಸಧ್ವಜನ ಮಗ ಸುಧನ್ವನ ರಾಜಧಾನಿ. ಕೈದಳ ಎಂಬ ಊರೇ ಪ್ರಸಿದ್ಧ ಶಿಲ್ಪಿ ಜಕ್ಕಣಾಚಾರ್ಯನ ಜನ್ಮಸ್ಥಳ. ಇವಲ್ಲದೆ ಯಾತ್ರಾ ಸ್ಥಾನಗಳಿಗಂತೂ ಲೆಕ್ಕವಿಲ್ಲ—ಹಿರಿದಾದ ಗಿರಿಶಿಖರಗಳೆಲ್ಲ ಪವಿತ್ರವೆಂದು ಪೂಜಿಸಲ್ಪಡುತ್ತವೆ. ಇಷ್ಟೆಲ್ಲ ಪ್ರಾಚೀನ ವೈಭವ ಮತ್ತು ಮಹತ್ವವಿದ್ದ ಮಲೆನಾಡು, ಒಂದು ಕಾಲದಲ್ಲಿ ಪ್ರಗತಿಪರ ಜನಾಂಗಕ್ಕೂ ಅವರ ಸಂಸ್ಕೃತಿಗೂ ತೂಗುತೊಟ್ಟಿಲಾದ ಮಲೆನಾಡು, ಸಂಪತ್ತಿನ "ಮೊಲೆ—ನಾಡು" ಈಗ ಕೇವಲ ಮಲೆತ ನಾಡು ಅಥವಾ ಮರೆತ ನಾಡಾಗಿ ಉಳಿದಿರುವುದು ಶ್ರೇಯಸ್ಕರವಲ್ಲ. ಈ ಅವನತಿಗೆ ಚಾಡಿನ ರೋಗದ ಬೆಳವಣಿಗೆ ಐವತ್ತು ಪಾಲು ಹೊಣೆಯೆಂದು ಹೇಳಿದರೂ—ಇನ್ನುಳಿದ ಐವತ್ತು ಪಾಲಿಗೆ ಜನತೆಯ ಔದಾಸೀನ್ಯವೇ ಕಾರಣವೆಂದು ಹೇಳಬೇಕಾಗುತ್ತದೆ. ಕೃಷಿ ಯೋಗ್ಯವಾದ ಭೂಮಿ ಇದ್ದರೂ ಜನರು ಕರಾವಳಿ ಪ್ರದೇಶದ ಅಥವಾ ಬಯಲು ಸೀಮೆಯ ಸುಲಭದ ಬೇಸಾಯದತ್ತ ಆಕೃಷ್ಟರಾಗಿ, ಜಲ ಸಮೃದ್ಧವಾದ, ಫಲವತ್ತಾದ ಭೂಮಿಯನ್ನು ಉಪಯೋಗಿಸದೆ ಬಿಟ್ಟುಕೊಟ್ಟರು. ಹಾಲು ಹೈನಗಳನ್ನು ಪುಷ್ಕಳವಾಗಿ ಸಾಕಬಹುದಾದ ಈ ಪ್ರದೇಶದಲ್ಲಿ ನೆಲೆಯೂರುವುದಕ್ಕೆ ಮತ್ತು ಕೃಷಿ ನಿರತವಾಗುವುದಕ್ಕೆ ವನ್ಯ ಮೃಗಗಳ ಹಾವಳಿಯೂ ಒಂದು ಕಾರಣವಾಯಿತು.

ಅರಣ್ಯ ಸಂಪತ್ತು

ಕನ್ನಡದ ಮಲೆನಾಡು ಪ್ರದೇಶದಲ್ಲಿ ಅರಣ್ಯ ಸಂಪತ್ತು ಉತ್ತರ ಕನ್ನಡ ಜಿಲ್ಲೆಯಲ್ಲೇ ಕೇಂದ್ರೀಕೃತವಾಗಿದೆಯೆಂದರೆ ತಪ್ಪಾಗದು— ಇಲ್ಲಿಯ ಭೀಮಕಾಯದ ತೇಗು ಬರ್ಮಾದ ತೇಗಿನ ಗಾತ್ರವನ್ನೂ ಮೀರಿಸುತ್ತದೆ. ಇಷ್ಟು ದಪ್ಪ, ಉದ್ದ, ಅಗಲತೆಗಳುಳ್ಳ ತೇಗು ಭಾರತದಲ್ಲಿ ಬೇರೆಲ್ಲೂ ಸಿಗುವುದಿಲ್ಲ. ಉರುವಲದ ಕಟ್ಟಿಗೆ ಮುತ್ತಿತರ ಮರವೂ ಇಲ್ಲಿ ಬೇಕಾದಷ್ಟು ಇದೆ. ಮಲ್ಲಾಪುರ, ದಾಂಡೇಲಿಗಳು ಕಟ್ಟಿಗೆ ಮತ್ತು ಮೋಪಿನ ದೊಡ್ಡ ವ್ಯಾಪಾರ ಕೇಂದ್ರಗಳು. ಇಲ್ಲಿಯ ಚಂದನ ಮುಂಬಯಿ ರಾಜ್ಯದಲ್ಲಿಯೇ ಶ್ರೇಷ್ಠವಾದದ್ದು. ಇಲ್ಲಿಯ ಬಿದಿರಿಗೂ ಅಖಿಲ ಭಾರತದಲ್ಲಿ ಉನ್ನತ ಸ್ಥಾನವುಂಟು. ಇವುಗಳಲ್ಲದೆ ಔದ್ಯೋಗಿಕ ಉಪಯೋಗಕ್ಕೆ ಬರುವ ಅಂಟುಗಳು, ಕಾಯಿಗಳು, ಅರಗು ಮುಂತಾದವುಗಳಿಗೂ ಮಲೆನಾಡು ತವರೂರಾಗಿರುತ್ತದೆ. ಉತ್ತರ ಕನ್ನಡ, ಮೈಸೂರು, ಕೊಡಗು, ನೀಲಗಿರಿಗಳಲ್ಲಿ ಜೇನು ತುಪ್ಪದ ವ್ಯವಸಾಯವೂ ದಿನದಿಂದ ದಿನಕ್ಕೆ ಉಚ್ಛ್ರಾಯಾವಸ್ಥೆಯನ್ನು ಹೊಂದುತ್ತದೆ. ವನ್ಯಶ್ರೀ ತುಂಬಿದ ಪ್ರದೇಶಗಳಲ್ಲಿ ಜೇನು ತುಪ್ಪದ ವ್ಯವಸಾಯಕ್ಕೆ ಹೆಚ್ಚಿನ ಬಂಡವಳವಾಗಲೀ ಸಾಧನೋಪಕರಣಗಳಾಗಲೀ ಅಗತ್ಯವಿಲ್ಲ—ಉತ್ತರ ಕನ್ನಡ ಜಿಲ್ಲೆಯ ೩೦೦೦ ಚದರ ಮೈಲು ಕ್ಷೇತ್ರದಲ್ಲಿ ಒಂದು ನೂರು ಟನ್ನುಗಳ ವರೆಗೂ ಜೇನನ್ನು ಉತ್ಪಾದಿಸಬಹುದೆಂದು ಅಂದಾಜು. ಈಗ ವರ್ಷಕ್ಕೆ ೨೦ ಟನ್ನುಗಳಷ್ಟು ಆಗುವ ಜೇನಿನ ಉತ್ಪಾದನೆ ಮುಂದಿನ ಐದು ವರ್ಷಗಳಲ್ಲಿ ೫೦ ಟನ್ನುಗಳಿಗೇರೀತು. ಕನ್ನಡ ನಾಡಿನ ೩೦೦೦೦ ಚದರ ಮೈಲು ಪ್ರದೇಶದಲ್ಲಿ ಒಂದು ಸಾವಿರ ಟನ್ನು ಜೇನು ತುಪ್ಪ ದೊರೆತರೆ ಆಶ್ಚರ್ಯವಲ್ಲ.

ವಿದ್ಯುಚ್ಛಕ್ತಿ

ವಿದ್ಯುತ್ಸಂಪತ್ತಿನ ವಿಷಯದಲ್ಲಿಯೂ ಮಲೆನಾಡನ್ನು ಕೊಂಡಾಡಬೇಕು—ಉತ್ತರ ಕನ್ನಡ ಜಿಲ್ಲೆಯೊಂದರಲ್ಲೇ ಇರುವಷ್ಟು ಜಲವಿದ್ಯುದಾಗರಗಳು ಹಿಮಾಲಯದ ಪರಿಸರವನ್ನು ಬಿಟ್ಟರೆ ಭಾರತದಲ್ಲಿ ಮತ್ತೆಲ್ಲೂ ಇಲ್ಲ. ಮೈಸೂರಿನ ಐಸಿರಿ ಹೆಚ್ಚುವುದಕ್ಕೆ ಕಾರಣವಾದ ಜೋಗದ ಎಲ್ಲೆಯಿಂದ ಯಲ್ಲಾಪುರದ ವರೆಗಿನ ೭೦ ಮೈಲು ಅಂತರದಲ್ಲಿ ನಾಲ್ಕು ದೊಡ್ಡ ಜಲಪಾತಗಳೂ ಒಂದೆರಡು ಚಿಕ್ಕ ಜಲಪಾತಗಳೂ ಕಾಣ

(೧೧ನೇ ಪುಟ ನೋಡಿರಿ)

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ: ೧೯೩೫.] [ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ಭಾರತದ ಸುಭದ್ರ ವಿಮಾ ಕಂಪನಿಗಳಲ್ಲಿ "ಕೆನರಾ ಮ್ಯೂಚುವಲ್" ಎಣೆ ಇಲ್ಲದ ವಿಶಿಷ್ಟ ಸ್ಥಾನವನ್ನು ಗಳಿಸಿದೆ. ಇದು ಮ್ಯೂಚುವಲ್ ಕಂಪೆನಿಯಾಗಿ ಘಟಿತವಾಗಿದ್ದು, ಪಾಲುದಾರ ಭಂಡವಳಿಗರಿಲ್ಲದಿರುವುದರಿಂದ, ಕಂಪೆನಿಯ ಸರ್ವ ಲಾಭವನ್ನೂ ಪಕ್ವತೆ ಹೊಂದಿದ ಪಾಲಿಸಿದಾರರೇ ತಮ್ಮಲ್ಲಿ ಹಂಚಿಕೊಳ್ಳುವರು. ಪ್ರಾಗತಿಕ ಬಿಗುವಾದ ತಳಹದಿಯ ಮೇಲೆ ನಡೆಸಿದ ತನ್ನೆಲ್ಲಾ ವಿಮಾ ಗಣನೆಗಳಲ್ಲಿ ಉಳಿತಾಯವನ್ನು ತೋರಿಸಿರುವುದು ಮಾತ್ರವಲ್ಲದೆ, ಸ್ಥಾಪಿತವಾದಂದಿನಿಂದಲೂ ಇದು ಬೋನಸು ಹಂಚಿದೆ. ಪಾಲಿಸಿದಾರರ ಹಿತದೃಷ್ಟಿಯೇ ಧ್ಯೇಯವಾಗುಳ್ಳ ಈ ಪ್ರಗತಿಶೀಲ ಮ್ಯೂಚುವಲ್ ಕಂಪೆನಿಯಲ್ಲಿ ಇಂದೇ ವಿಮೆ ಇಳಿಸಿ, ನಿಮ್ಮ ಕುಟುಂಬದ ಭದ್ರತೆಯನ್ನು ಕಾಯ್ದುಕೊಳ್ಳಿರಿ.

THE CANARA MUTUAL ASSURANCE COMPANY, LTD.,

Estd: 1935] [Head Office: UDIPI, S. INDIA.



ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಷಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುದ್ಧಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತವೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. ೩—೮—0

ಸಣ್ಣ ಬಾಟ್ಲಿಗೆ ರೂ. 2—0 - 0

ಶ್ರೀ ರಾಮತೀರ್ಥ ಯೋಗಾಶ್ರಮ,

ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಪೆಪ್ಸುವಲ್ಲಿ ಕಾಂಗ್ರೆಸು ಮಂತ್ರಿಮಂಡಳದ ಅಧಿಕಾರ ಸ್ವೀಕಾರ

ತಿರು-ಕೊಚ್ಚಿಯಲ್ಲಿ ಸರಕಾರರಚಿಸಲು ಎಡಪಕ್ಷಗಳ ಪ್ರಯತ್ನ

ಪೂರ್ವ ಪಂಜಾಬ ಹಾಗು ಪತಿಯಾಳಾ ಒಕ್ಕೂಟ (ಪೆಪ್ಸು) ರಾಜ್ಯದಲ್ಲಿ ಮರುಚುನಾವಣೆಯು ಕಾಂಗ್ರೆಸು ಪಕ್ಷಕ್ಕೆ ತುಂಬ ಅನುಕೂಲವಾಗಿ ಪರಿಣಮಿಸಿತು. ಭಯ, ಹಿಂಸೆ, ಪರೋಡೆಗಳಿಂದ ಪೀಡಿತರಾಗಿ ಇಲ್ಲಿಯ ಜನರು ಭದ್ರವಾದ, ಶಾಂತಿ ಸುವ್ಯವಸ್ಥೆಗಳನ್ನು ಕಾಪಾಡಿಕೊಂಡು ಹೋಗಬಲ್ಲ ಆಡಳಿತವನ್ನು ಬಯಸುತ್ತಿದ್ದರು. ರಾಷ್ಟ್ರಾಧ್ಯಕ್ಷರು ನೇರಾಗಿ ಸರಕಾರದ ಸೂತ್ರವನ್ನು ವಹಿಸಿಕೊಂಡುದರಿಂದ, ಜನಕ್ಕೆ ಸುಖ ಸಮಾಧಾನಗಳು ಉಂಟಾದವು. ಈ ಅನುಕೂಲತೆಗಳೇ ಪೆಪ್ಸುವಲ್ಲಿ ಕಾಂಗ್ರೆಸು ಪಕ್ಷಕ್ಕೆ ಜನತೆಯ ಬೆಂಬಲವನ್ನು ಗಳಿಸಿಕೊಟ್ಟವು. ಕಾಂಗ್ರೆಸೊಂದೇ ದಕ್ಷ ಸರಕಾರವನ್ನು ರಚಿಸಬಲ್ಲುದೆಂದೂ ಅನಾಯಕತ್ವ ಮತ್ತು ಹಿಂಸೆಗಳನ್ನು ತಡೆಗಟ್ಟಲು ಸಮರ್ಥವೆಂದೂ ಜನರ ತಿಳುವಳಿಕೆಗೆ ಸ್ಪಷ್ಟವಾಗಿ ಬಂದಿರುತ್ತದೆ.

ಹೊಸ ಮಂತ್ರಿಮಂಡಲ

ಕಾಂಗ್ರೆಸ್ ಪಕ್ಷವು ಕರ್ನಲ್ ರಘುವೀರ ಸಿಂಘರನ್ನು ಶಾಸನಾ ಸಭಾ ಧುರೀಣರಾಗಿ ಆರಿಸಿದೆ. ಶ್ರೀ ವೃಷಭಾನು ಉಪಧುರೀಣರಾಗುತ್ತಾರೆ. ಇವರಿಬ್ಬರು ಮಹನೀಯರು ಸರಕಾರದ ಸೂತ್ರವನ್ನು ತಮ್ಮ ಕೈಯಲ್ಲಿ ತೆಗೆದುಕೊಂಡಿರುವರು. ದಿನಾಂಕ ೮ರಲ್ಲು ಜರಗಿದ ಸಮಾರಂಭದಲ್ಲಿ ಸರಕಾರದ ಮುಖ್ಯ ಕಾರ್ಯದರ್ಶಿಗಳು ಪೆಪ್ಸು ರಾಜ್ಯದಲ್ಲಿ ರಾಷ್ಟ್ರಾಧ್ಯಕ್ಷರ ಆಡಳಿತವನ್ನು ಅಂತ್ಯಗೊಳಿಸಿರುವುದಾಗಿ ಸಾರುವ ಸಂದೇಶವನ್ನು ಓದಿದರು. ಅನಂತರ ರಾಜಪ್ರಮುಖರು ರಘುವೀರ ಸಿಂಘ ಹಾಗೂ ವೃಷಭಾನು ಇವರಿಗೆ ಮುಖ್ಯ ಮಂತ್ರಿ ಹಾಗೂ ಉಪಮುಖ್ಯ ಮಂತ್ರಿಯೆಂದು ಪ್ರತಿಜ್ಞಾವಚನವನ್ನು ಉಪದೇಶಿಸಿದರು. ಹೊಸ ಮಂತ್ರಿಮಂಡಳವು ಟಡತನದ ವಿರುದ್ಧ ಹೋರಾಡುವುದೆಂದೂ ರಾಜ್ಯದಲ್ಲಿ ಶಾಂತಿ, ಸುವ್ಯವಸ್ಥೆ ಮತ್ತು ಭದ್ರತೆಗಳನ್ನು ಕಾಪಾಡುವುದಕ್ಕೋಸ್ಕರ ಸಂಸರ್ಗಾನುಕೂಲತೆಗಳನ್ನು ಹೆಚ್ಚಿಸುವುದೆಂದೂ ಹರಿಜನರ ಹಾಗೂ ಹಿಂದುಳಿದವರ ಅಭಿವೃದ್ಧಿಗೆ ಪ್ರಯತ್ನಿಸುವುದೆಂದೂ ಹೇಳಲ್ಪಟ್ಟಿದೆ.

ಕಾಂಗ್ರೆಸಿನ ಸೋಲು

ತಿರುವಾಂಕೂರು-ಕೊಚ್ಚಿಯಲ್ಲಿ ಮಾತ್ರ ಕಾಂಗ್ರೆಸು ಸಂಪೂರ್ಣ ಪರಾಭವವನ್ನು ಅನುಭವಿಸಿತು. ೧೦೮ ಮಂದಿ ಸದಸ್ಯರಿದ್ದ ತಿರುಕೊಚ್ಚಿಯ ಹಿಂದಿನ ಶಾಸನ ಸಭೆಯಲ್ಲಿ ಕಾಂಗ್ರೆಸಿಗೆ ೪೪ ಸ್ಥಳಗಳು ದೊರೆತಿದ್ದುವು. ಐವರು ಸ್ವತಂತ್ರರ ಮತ್ತು ೯ ಮಂದಿ ತಿರು-ತಮಿಳುನಾಡು ಕಾಂಗ್ರೆಸು ಪಕ್ಷದ ಬೆಂಬಲದ ಭರವಸೆಯನ್ನು ನಂಬಿ ಕಾಂಗ್ರೆಸು ಸರಕಾರವನ್ನು ರಚಿಸಿತು. ಭಾಷಿಕ ವಿವಾದದಿಂದಾಗಿ ಕಳೆದ ವರ್ಷದ ಮಧ್ಯದಲ್ಲಿ ತಿರು-ತಮಿಳುನಾಡು ಕಾಂಗ್ರೆಸು ಪಕ್ಷವು ಸರಕಾರದೊಡನೆ ಸಹಕರಿಸಲು ನಿರಾಕರಿಸಿದ್ದರಿಂದ, ಹೊಸ [illegible] ನಡೆಯುವ ಪ್ರಸಂಗ ಬಂತು. ಈಗಿನ ಶಾಸನ ಸಭೆಯಲ್ಲಿರುವ ೧೧೭ ಸ್ಥಾನಗಳಲ್ಲಿ ಕಾಂಗ್ರೆಸಿಗೆ ಕೇವಲ ೪೫ ಸ್ಥಳಗಳು ದೊರಕಿವೆ. ಕಮ್ಯುನಿಸ್ಟರಿಗೆ ೨೩, ಕ್ರಾಂತಿಕಾರಿ ಸಮಾಜವಾದಿಗಳಿಗೆ ೯, ಪ್ರಜಾ ಸಮಾಜವಾದಿಗಳಿಗೆ ೧೯, ತಿರು-ತಮಿಳುನಾಡು ಕಾಂಗ್ರೆಸಿಗೆ ೧೨, ಮತ್ತು ಸ್ವತಂತ್ರರಿಗೆ ೯ ಸ್ಥಾನಗಳು ಒಕ್ಕಿರುತ್ತವೆ.

ಕಾದು ನೋಡುವ ಧೋರಣೆ

ಮೇಲಿನ ಚುನಾವಣಾ ಫಲಿತಾಂಶವು ಯಾವ ಪಕ್ಷಕ್ಕೂ ಸರಕಾರ ರಚಿಸುವ ಸಂದರ್ಭವನ್ನು ಕೊಡುವುದಿಲ್ಲ. ಕಾಂಗ್ರೆಸು ಪಕ್ಷವು ತನ್ನ ಸೋಲನ್ನು ಒಪ್ಪಿಕೊಂಡಿದೆ. ಮತ್ತು ಹೊಸ ದಿಹಲಿಯ ಕಾಂಗ್ರೆಸು ವರಿಷ್ಠರ ಸೂಚನೆಯನ್ನು ಮನ್ನಿಸಿ "ಕಾದು ನೋಡುವ" ಧೋರಣೆಗೆ ಅದು ಅಂಟಿಕೊಂಡಿದೆ. ರಾಜ ಪ್ರಮುಖರನ್ನು ಕಾಂಗ್ರೆಸು ಪಕ್ಷದ ನಾಯಕ ಗೋವಿಂದ ಮೆನನ್ನರು ಕಂಡಾಗ ಈ ಸಂಗತಿಯನ್ನು ಸ್ಪಷ್ಟಗೊಳಿಸಿದರು. ವಿರೋಧೀ ಪಕ್ಷಗಳು ಕೆಲವು ದಿನಗಳ ಮಟ್ಟಿಗಾದರೂ ಅಧಿಕಾರದ ಮುಳ್ಳಿನ ಕಿರೀಟವನ್ನು ತಲೆಯಲ್ಲಿ ಹೊತ್ತುಕೊಳ್ಳಲೆಂದು ಕಾಂಗ್ರೆಸು ತೀರ್ಮಾನಿಸಿದಂತೆ ತೋರುತ್ತದೆ. ಹೆಚ್ಚೆಂದರೆ ತಿರು ತಮಿಳುನಾಡು ಕಾಂಗ್ರೆಸಿನ ೧೨ ಜನರ ಬೆಂಬಲವನ್ನು ಅದು ಗಳಿಸಬಹುದು- ಹೀಗೆ ಮಾಡಿದರೂ ಪಕ್ಷದ ಬಲ ೫೭ ಮಾತ್ರ ಆಗುವುದರಿಂದ ಸರಕಾರವನ್ನು ರಚಿಸಲು ಕಾಂಗ್ರೆಸು ಬಯಸುವುದಿಲ್ಲ

ಪ್ರತಿಪಕ್ಷಗಳ ಪ್ರಯತ್ನ

ಕಾಂಗ್ರೆಸಿನ ಅನಾಸಕ್ತಿ ವಿರೋಧೀ ಗುಂಪುಗಳ ಚಟುವಟಿಕೆಗೆ ಅವಕಾಶ ಮಾಡಿಕೊಟ್ಟಿದೆ–ಪ್ರಜಾ ಸಮಾಜವಾದೀ ಧುರೀಣ ಶ್ರೀ ಪಟ್ಟಂಥಾನು ಪಿಳ್ಳೆಯವರು ತಮಗೆ ೫೯ ಮಂದಿ ಜನರ ಬೆಂಬಲವಿದೆಯಾಗಿ ರಾಜ ಪ್ರಮುಖರಿಗೆ ತಿಳಿಸಿರುವರಲ್ಲದೆ, ತಮಗೆ ಸರಕಾರ ರಚಿಸಲು ಅವಕಾಶ ಕೊಡಬೇಕೆಂದು ಕೇಳಿರುವರು. ಆದರೆ ಪ್ರಜಾ ಸಮಾಜವಾದಿ ಪಕ್ಷದ ಪರಿಷ್ಕರಿಗೆ ಪಿಳ್ಳೆಯವರ ದೃಢ ಕತನ ಮನಸ್ಸಿಗೆ ಬಂದಿಲ್ಲ. ಎಡಪಕ್ಷಗಳ ಸಹಕಾರದಿಂದ ಸರಕಾರ ರಚಿಸುವುದರ ಒಳಿತು—ಕೇಡುಗಳನ್ನು ಪರ್ಯಾಲೋಚಿಸಲು ಇದೇ ೧೦, ೧೧ ೧೨ನೇ ದಿನಾಂಕಗಳಲ್ಲಿ ಮದ್ರಾಸಿನಲ್ಲಿ ಪ್ರಜಾ ಸಮಾಜವಾದಿ ಪಕ್ಷದ ಕಾರ್ಯನಿರ್ವಾಹಕ ಸಮಿತಿ ಸಭೆ ಸೇರುತ್ತದೆ. ಈ ನಡುವೆ ಶ್ರೀ ಅಶೋಕ ಮೆಹತಾರಂಥ ಪ್ರಜಾ ಸಮಾಜವಾದಿ ಧುರೀಣರೂ - ನಂಬೂದಿರಿಪಾದ ಮುಂತಾದ ಕಮ್ಯೂನಿಸ್ಟ ಪಾಲಿಟಬ್ಯುರೋದ ಪ್ರಮುಖರೂ ತಿರುಕೊಚ್ಚಿಯಲ್ಲಿ ತಂತಮ್ಮ ಪಕ್ಷದ ಅಭಿಪ್ರಾಯವನ್ನು ಸಂಗ್ರಹಿಸುವ ಕಾರ್ಯದಲ್ಲಿ ತೊಡಗಿರುವರು

ಸರಕಾರದ ಬಗೆ

ರಾಜಪ್ರಮುಖರು ಇದೇ ೨೫ನೇ ದಿನಾಂಕ ತಿರುಕೊಚ್ಚಿಯ ಶಾಸನ ಸಭೆ ಸೇರಬೇಕೆಂದು ಆಜ್ಞೆ ಹೊರಡಿಸಿರುವರಲ್ಲದೆ, ಆಂಗ್ಲೋ-ಇಂಡಿಯನ ಪ್ರತಿನಿಧಿಯೆಂದು ಕಾಂಗ್ರೆಸರೆ ವ್ಯಕ್ತಿಯೊಬ್ಬನನ್ನು ಶಾಸನ ಸಭೆಗೆ ನಾಮಕರಣ ಮಾಡಿರುವರು. ಈ ನೇಮಕವು ವಿರೋಧೀ ಗುಂಪುಗಳಿಗೆ ಸರಿ ಬಂದಿಲ್ಲ. ಶ್ರೀ. ಎ. ಜೆ ಜಾನರ ಜೋಣಾಸನಾ ಸರಕಾರವು ರಾಜೀನಾಮೆಯನ್ನು ಕೊಟ್ಟಿದ್ದರೂ — ಹೊಸ ಸರಕಾರದ ರಚನೆಯ ವರೆಗೆ ಅಸ್ತಿತ್ವದಲ್ಲಿ ಉಳಿಯಬೇಕೆಂದು ರಾಜಪ್ರಮುಖರು ಕೇಳಿಕೊಂಡಿರುವರು. ಶ್ರೀ. ಪಟ್ಟಂಥಾನು ಪಿಳ್ಳೆಯವರು ಮಂತ್ರಿಮಂಡಳ ರಚಿಸುವಲ್ಲಿ ತೋರಿಸುವ ಆತುರಕ್ಕೆ ಕಮ್ಯುನಿಸ್ಟರಿಂದಲೇ ತಣ್ಣೀರೆರಚಲ್ಪಡುತ್ತದೆ— ತಮ್ಮ ಪ್ರಾತಿನಿಧ್ಯವಿಲ್ಲದ ಮಂತ್ರಿಮಂಡಳಕ್ಕೆ ಬೆಂಬಲ ಕೊಡುವುದು ಸಾಧ್ಯವಿಲ್ಲೆಂದು ಕಮ್ಯೂನಿಸ್ಟರು ಈಗಾಗಲೇ ಸಾರಿರುವರು. ಕಮ್ಯುನಿಸ್ಟರನ್ನು ಮಂತ್ರಿಮಂಡಲದಲ್ಲಿ ಸೇರಿಸುವುದು ಪ್ರಜಾ ಸಮಾಜವಾದಿ ಧುರೀಣರಿಗೆ ಹಿತಕರವೆಂದು ತೋರಿಲ್ಲ—ಪ್ರಜಾ ಸಮಾಜವಾದಿ ಪಕ್ಷದ ಕಾರ್ಯದರ್ಶಿಗಳು ಕಮ್ಯುನಿಸ್ಟ ಪಕ್ಷವು ಮಂತ್ರಿಮಂಡಲದ "ಹೊರಗಡೆಯಿಂದ" ತಮಗೆ ಸಹಕಾರ ನೀಡಬೇಕೆಂದೂ, ಅಥವಾ ಕಮ್ಯುನಿಸ್ಟರೇ ಸರಕಾರ ರಚಿಸಿ ಪ್ರಜಾ ಸಮಾಜವಾದಿ ಪಕ್ಷದ ಹೊರಗಡೆಯ ಬೆಂಬಲದಿಂದ ತೃಪ್ತರಾಗಬೇಕಾಗುವುದೆಂದೂ ತಮ್ಮ ಅಭಿಪ್ರಾಯವನ್ನು ತಿಳಿಸಿರುವರು.

ಪಾರ್ಲಿಮೆಂಟಿನ ಕಾರ್ಯಕಲಾಪ

ಪಾರ್ಲಿಮೆಂಟಿನಲ್ಲಿ ಮುಂಗಡ ಪತ್ರದ ಚರ್ಚೆಯ ಕಾಲಕ್ಕೆ ಸಂರಕ್ಷಣಾವಿಷಯದಲ್ಲಿ ಸ್ವಾವಲಂಬಿಗಳಾಗುವುದಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡಬೇಕೆಂದು ಅನೇಕ ಸದಸ್ಯರು ಆಗ್ರಹದಿಂದ ಮಾತನಾಡಿದರು. ಸಾಬೂನು, ಸಾಮೆರಕ್ಕೆ ಮುಂತಾದ ನಿತ್ಯೋಪಯೋಗದ ವಸ್ತುಗಳ ಮೇಲೆ ತೆರಿಗೆ ಹೊರಿಸುವ ನಿರ್ಧಾರವನ್ನು ಕೆಲವು ಸದಸ್ಯರು ಟೀಕಿಸಿದರು. ರೈಲ್ವೆ ಮುಂಗಡ ಪತ್ರದ ಚರ್ಚೆಯಲ್ಲಿ ಭಾಗವಹಿಸಿದ ಸದಸ್ಯರು ಪ್ರಯಾಣ ಸೌಕರ್ಯಗಳು, ಹೊಸ ಮಾರ್ಗಗಳ ರಚನೆ ಮುಂತಾದವುಗಳ ಕುರಿತು ಅನೇಕ ಸಲಹೆ ಸೂಚನೆಗಳನ್ನು ಮುಂದಿಟ್ಟರು. ಮಂತ್ರಿಗಳು ಉತ್ತರ ಕೊಡುತ್ತಾ ಎರಡನೆ ಪಂಚವಾರ್ಷಿಕ ಯೋಜನೆಯಲ್ಲಿ ೧೫೦೦ರಿಂದ ೨೦೦೦ ಮೈಲು ಉದ್ದ ಹೊಸ ರೈಲ್ವೆ ಮಾರ್ಗಗಳನ್ನು ಹಾಕುವ ಭರವಸೆ ನೀಡಿದರು. ಮಲೆನಾಡು ಹಾಗು ಉತ್ತರ ಕನ್ನಡ ಪ್ರದೇಶಗಳಲ್ಲಿ ಹೊಸ ಮಾರ್ಗವೊಂದು ರಚಿಸಲ್ಪಡುವ ಸೂಚನೆಯನ್ನು ಮಂತ್ರಿಗಳು ನೀಡಿದರಲ್ಲದೆ ಮುಂಬಯಿ ಮಂಗಳೂರು ಕರಾವಳಿಯಲ್ಲಿ ದೀಪಗಾಂವದ ಮೂಲಕ ರೈಲ್ವೆ ಮಾರ್ಗ ಹಾಕುವ ಬಗ್ಗೆ ಪರಿಶೀಲನೆ ನಡೆಯುವ ವಿಚಾರವನ್ನು ಪ್ರಸ್ತುತ ಕಾಲದಲ್ಲಿ ಹೊರಗೆಡಹಿದರು.

THE CANARA MUTUAL ASSURANCE COMPANY, LIMITED.

Head Office UDIPI S. India

NOTICE IS HEREBY GIVEN that the Nineteenth Ordinary General Meeting of the Company will be held at the Company's Registered Office at Canara Mutual Building Udipi on Friday, the 30th April 1954 at 3-30 P. M. to transact the following business

1. To receive and adopt the annual Report, Audited Statement of Accounts and Balance Sheet for the year ending 31st December 1953

2. To approve the appointment of Sri P. Shripathi Acharya [illegible] as a Director of the Company under Article 44 and to elect a Director in his place as he retires by rotation but is eligible for re-election under Article 37.

3. To elect a Director in place of Dr. K. L. Ashabi [illegible] who retires by rotation and is eligible for re-election under Article 37

4. To appoint an Auditor or Auditors for the year 1954 and fix the remuneration payable to him or them. The last year's Auditors Sri A. [illegible] Ra[illegible] Mangalore 3 and Sri [illegible] Varadaraja Nayak [illegible] Car Street Mangalore, retire and are eligible for re-appointment

5. To transact any other business which may be brought before the meeting with the permission of the Chairman.

N. B. If a member is unable to attend the meeting he may appoint any other member as his proxy and the instrument appointing him must be duly stamped signed and attested and should be in the prescribed form vide Article No 3? and should reach the Head Office not less than 12 hours before the time appointed for holding the meeting.

By Order of the Board

UDIPI, 23rd January 1954

T. R. A. Pai, MANAGING DIRECTOR.

The Canara Mutual Assurance Company, Limited.

Head Office UDIPI, S. India

Summary of Balance Sheet and Revenue Account of the [illegible] in respect of total business

REVENUE ACCOUNT FOR THE YEAR ENDED 31-12-1953

PARTICULARS	Rs. As. Ps.	PARTICULARS	Rs. As. Ps.
Claims and Surrenders less reinsurances	[illegible]	Balance of Fund at the beginning of the year	[illegible]
Expenses of Management including Commission	[illegible]	[illegible]	[illegible]
Bad Debts	Nil	[illegible]	[illegible]
[illegible]	[illegible]	[illegible]	[illegible]
[illegible]	[illegible]	[illegible]	[illegible]
Total	[illegible]	Total	[illegible]

BALANCE SHEET AS AT 31-12-1953

LIABILITIES	Rs. As. Ps.	ASSETS	Rs. As. Ps.
[illegible]	[illegible]	[illegible]	[illegible]
[illegible]	[illegible]	[illegible]	[illegible]
[illegible]	[illegible]	[illegible]	Nil
[illegible]	[illegible]	[illegible]	[illegible]
[illegible]	[illegible]	[illegible]	[illegible]
Total	[illegible]	Total	[illegible]

UDIPI 23-1-1954

T. R. A. Pai, MANAGING DIRECTOR

ನಮ್ಮ ಪ್ರತಿನಿಧಿಗಳ ಅಭಿಪ್ರಾಯ

ಮದ್ರಾಸು ಶಾಸನ ಸಭೆಯಲ್ಲಿ ಮುಂಗಡ ಪತ್ರದ ಟೀಕೆ ಮಾಡಿದ ಸದಸ್ಯರು ಪ್ರಾಥಮಿಕ ಶಿಕ್ಷಣ ಪದ್ಧತಿ, ಹಳ್ಳಿಗಳಲ್ಲಿ ನೀರಾವರಿ ಹಾಗು ವಿದ್ಯುಚ್ಛಕ್ತಿಯ ಸೌಕರ್ಯ, ಪಾನನಿರೋಧ ಧೋರಣೆ, ಭೂಕಂದಾಯದ ಮೇಲೆ ಸರ್ ಚಾರ್ಜು ಮುಂತಾದ ವಿಷಯಗಳ ಮೇಲೆ ವಾಗ್ಬಾಣಗಳನ್ನು ಬಿಟ್ಟರು. ನಮ್ಮ ಜಿಲ್ಲೆಯ ಪ್ರತಿನಿಧಿಗಳಲ್ಲಿ ಶ್ರೀ ಸುವರ್ಣರೂ ಪಾಯಸರೂ ಪಾನನಿರೋಧ ಧೋರಣೆಯನ್ನು ಪುನರ್ವಿಮರ್ಶಿಸಬೇಕೆಂದು ಹೇಳಿದರು. ಮೊಗ್ರಾಲರು ಮುಂಗಡ ಪತ್ರವನ್ನು ಸ್ವಾಗತಿಸಿ, ಭೂ ಸುಧಾರಣಾ ಕಾನೂನಿನ ಮಾರ್ಗದಲ್ಲಿ ಸರಚಾರ್ಜ ಹೊರಿಸುವ ಸಂಪ್ರದಾಯವು ಆತಂಕವಾಗದಿರಲೆಂದು ಹಾರೈಸಿದರು. ಅಲ್ಲದೆ ಪಾನನಿರೋಧ ಕಾನೂನು ಮುರಿಯುವುದನ್ನು ದಕ್ಷತೆಯಿಂದ ತಡೆಗಟ್ಟಬೇಕೆಂದು ಒತ್ತಾಯಿಸಿದರು. ಶ್ರೀ ಮಂಜಯ್ಯ ಶೆಟ್ಟರು ದಕ್ಷಿಣಕನ್ನಡ ಜಿಲ್ಲೆಯಲ್ಲಿ ಅಕ್ಕಿಯ ಬೆಲೆ ಏರುತ್ತಿರುವುದನ್ನು ಪ್ರಸ್ತಾಪಿಸಿ, ಮಿತ ಬೆಲೆಯ ಅಂಗಡಿಗಳ ಮೂಲಕ ಅಗ್ಗದರದಲ್ಲಿ ಅಕ್ಕಿಯನ್ನು ಒದಗಿಸಿ ಕೊಡಬೇಕೆಂದು ವಿನಂತಿಸಿದರಲ್ಲದೆ,ಉಪಾಧ್ಯಾಯರ ಸಂಬಳವನ್ನು ಹೆಚ್ಚಿಸದೆ ಹೊಸ ವಿದ್ಯಾ ಧೋರಣೆ ಯಶಸ್ಸು ಹೊಂದಲಾರದೆಂದು ಅಭಿಪ್ರಾಯ ಪಟ್ಟರು. ಶ್ರೀ ಕೊಳ್ಳೆಬೈಲರು ಪಾನನಿರೋಧ ಧೋರಣೆಯನ್ನು ಟೀಕಿಸಿದರಲ್ಲದೆ, ಗವರ್ನರರ ಸಂಬಳ ತಗ್ಗಿಸಬೇಕೆಂದೂ ಮಣಿಪಾಳ ಕಸ್ತೂರ್ಬಾ ಮೆಡಿಕಲ್ ಕಾಲೇಜಿಗೆ ಅಧಿಕ ಧನ ಸಹಾಯ ನೀಡಬೇಕೆಂದೂ ಹೇಳಿದರು.

ಪಾನ ನಿರೋಧ ಹೋಗದು

ಶಾಸನ ಸಭಾ ಕಾರ್ಯಕಲಾಪಗಳಲ್ಲಿ ಭಾಗ ವಹಿಸುತ್ತಾ ಮುಖ್ಯ ಮಂತ್ರಿ ರಾಜಗೋಪಾಲಾಚಾರಿಯವರು ಕೆಲವು ಮುಖ್ಯ ಸಂಗತಿಗಳಲ್ಲಿ ಸರಕಾರದ ವಿಚಾರವನ್ನು ಸ್ಪಷ್ಟಗೊಳಿಸಿದರು— ಪಾನನಿರೋಧ ಧೋರಣೆಯ ಕುರಿತು ವಿಚಾರಣೆ ನಡೆಸುವ ಅಗತ್ಯವಿಲ್ಲೆಂದು ಅವರು ಖಂಡತುಂಡವಾಗಿ ಹೇಳಿದರು. ಸತ್ಯವು ಒಳ್ಳೆಯದು, ಪ್ರಾಮಾಣಿಕತನವು ಶ್ರೇಷ್ಠವಾದದ್ದು ಎನ್ನುವುದು ಲಹರಿಯಾಗಿದ್ದಷ್ಟೇ ಪಾನನಿರೋಧವೂ ಲಹರಿಯಾಗಿರುತ್ತದೆಂದು ಅವರು ಅಭಿಪ್ರಾಯಪಟ್ಟರು. ಪಾನನಿರೋಧ ಕಾಯಿದೆ ಭಂಗಿಸುವುದಕ್ಕೋಸ್ಕರ ಪುರುಷರೇ ಸ್ತ್ರೀಯರಿಗೆ ಪ್ರೇರಣೆ ಕೊಡುವರೆಂದೂ, ಶೀಘ್ರವೇ ಮಹಿಳಾ ಪೋಲೀಸರ ನೇಮಕವನ್ನು ಅಕ್ರಮ ಭಟ್ಟಿ ಇಳಿಸುವವರನ್ನು ಕಂಡು ಹಿಡಿಯುವುದಕ್ಕೋಸ್ಕರ ಮಾಡಲಾಗುವುದೆಂದೂ ಹೇಳಿದರು. ನಿರುದ್ಯೋಗ ಹೆಚ್ಚಿ ಕೊಂಡಿದೆಯೆಂಬ ಆಪಾದನೆಗೆ ಉತ್ತರ ಕೊಡುತ್ತಾ ಜನಸಂಖ್ಯೆ ಹೆಚ್ಚುತ್ತಿರುವ ಪ್ರಮಾಣದಿಂದ ಸಂಪತ್ತು ಅಧಿಕಗೊಂಡಿಲ್ಲದಿರುವುದೇ ಸಮಸ್ಯೆಯ ಮೂಲವೆಂದು ಅವರು ವಿವರಿಸಿದರು. ದೇಶದಲ್ಲಿ ದೊಡ್ಡ ದೊಡ್ಡ ನೀರಾವರಿ ಯೋಜನೆಗಳು, ವಿದ್ಯುಚ್ಛಕ್ತಿ ಉತ್ಪಾದನಾ ಕೇಂದ್ರಗಳು, ಸಮಾಜ ವಿಕಾಸ ಕಾರ್ಯಗಳು ನೆಲೆಗೊಂಡಂತೆ ದೇಶದ ಸಂಪತ್ತು ಹೆಚ್ಚಿ, ಅಧಿಕ ಜನರಿಗೆ ಉದ್ಯೋಗ ಕಲ್ಪಿಸಿ ಕೊಡುವುದು ಸಾಧ್ಯವಾದೀತೆಂದು ಆಶಿಸಿದರು.

ಆಂಧ್ರದ ಹೈಕೋರ್ಟು

ಆಂಧ್ರದ ಹ್ಯಾಕೋರ್ಟನ್ನು ವಿಶಾಖಪಟ್ಟಣದಲ್ಲಿ ಸ್ಥಾಪಿಸಬೇಕೆಂಬ ಸರಕಾರದ ಗೊತ್ತುವಳಿಯು ಪರಾಭವವನ್ನು ಹೊಂದಿ, ಇದೇ ಜೂಲೈ ತಿಂಗಳಿಂದ ಗುಂಟೂರಿನಲ್ಲಿ ಹೈಕೋರ್ಟನ್ನು ನೆಲೆಗೊಳಿಸಬೇಕೆಂಬ ತಿದ್ದುಪಡಿಯು ಅಂಗೀಕಾರವಾಗಿರುತ್ತದೆ. ಶಾಸನ ಸಭೆಯ ಮುಂದೆ ೧೯೫೪-೫೫ನೇ ಸಾಲಿನ ಮುಂಗಡಪತ್ರ ಮಂಡಿಸಲ್ಪಟ್ಟದ್ದು ಇದು ಸುಮಾರು ೩ ಕೋಟಿ ರೂಪಾಯಿಗಳ ಕೊರತೆ ತೋರಿಸುತ್ತದೆ. ನೀರಾವರಿ ಭೂಮಿ, ದೊಡ್ಡದ ವೈರು ಮುಂತಾದವುಗಳ ಮೇಲಿನ ಕರವನ್ನು ಅಧಿಕಗೊಳಿಸುವ ಮತು ಮಾರಾಟ ಕರ ಕಾಯಿದೆಯ ವ್ಯಾಪ್ತಿ ಅಧಿಕಗೊಳಿಸುವ ಮೂಲಕ ಒಂದು ಕೋಟಿ ರೂಪಾಯಿಯಷ್ಟು ಆದಾಯ ಹೆಚ್ಚಿಸುವ ಸೂಚನೆಗಳು ಮುಂಗಡಪತ್ರದಲ್ಲಿವೆ. ಪ್ರಸಕ್ತ ಹಣಕಾಸಿನ ವರ್ಷದಲ್ಲಿ ೩ ಕೋಟಿ ರೂಪಾಯಿಗಳ ಸಾರ್ವಜನಿಕ ಸಾಲವನ್ನು ಎತ್ತಲಾಗುವುದಲ್ಲದೆ ಕೇಂದ್ರ ಸರಕಾರದಿಂದ ೭ ಕೋಟಿ ರೂಪಾಯಿಗಳನ್ನು ಪಡೆದು, ಯೋಜನೆಗಳನ್ನು ಮುಂದೊತ್ತಲಾಗುವುದು.

ಮೈಸೂರಿನ ಮುಂಗಡ ಪತ್ರ

ಮೈಸೂರು ರಾಜ್ಯದಲ್ಲಿಯೂ ೩೯ ಲಕ್ಷ ರೂಪಾಯಿಗಳ ಕೊರತೆ ಮುಂಗಡ ಪತ್ರ ಮಂಡಿಸಲ್ಪಟ್ಟಿದ್ದು, ಭೂಕಂದಾಯದ ಮೇಲೆ ವಿಶೇಷ ತೆರಿಗೆ, ಕಾಫಿ ಮುಂತಾದ ತೋಟಗಳ ಕರದಲ್ಲಿ ಹೆಚ್ಚಳ ವಿದ್ಯುಚ್ಛಕ್ತಿ ಮತ್ತು ನೀರಿನ ಬಳಕೆಯ ಮೇಲೆ ಅಧಿಕ ಕರ ಮುಂತಾದವುಗಳಿಂದ ಕೊರತೆಯನ್ನು ಕೆಲಮಟ್ಟಿಗೆ ತುಂಬಿಸಿಕೊಳ್ಳುವ ಪ್ರಯತ್ನ ನಡೆದಿದೆ. ಮಳೆಬೆಳೆಗಳು ಚೆನ್ನಾಗಿದ್ದರೂ ಅಭಿವೃದ್ಧಿ ಪ್ರಯತ್ನಗಳನ್ನು ಮುಂದೊತ್ತುವುದಕ್ಕಾಗಿ ವೆಚ್ಚವನ್ನು ಕೈಗೊಳ್ಳುವುದು ಅನಿವಾರ್ಯವೆನಿಸಿತು. ಇದಕ್ಕೆ ಬಂಡವಾಳವನ್ನು ಒದಗಿಸುವುದಕ್ಕೋಸ್ಕರ ಮೂರು ಕೋಟಿ ರೂಪಾಯಿಗಳ ಎರಡನೆ ಅಭಿವೃದ್ಧಿ ಸಾಲವನ್ನು ಈ ವರ್ಷ ಬಹಿರಂಗ ಪೇಟೆಯಲ್ಲಿ ಎತ್ತಲಾಗುವುದು.

ಹಿಂದೀ ಭಾಷೆ

ಮುಂಬಯಿ ಸರಕಾರವು ೧೯೫೫ನೇ ಜೂನ್ ತಿಂಗಳಿಂದ ಸರಕಾರೀ ಕಾಲೇಜುಗಳಲ್ಲಿ ಹಿಂದಿಯನ್ನು ಶಿಕ್ಷಣ ಮಾಧ್ಯಮವನ್ನಾಗಿ ಮಾಡುತ್ತದೆ. ಗುಜರಾಥ ವಿಶ್ವವಿದ್ಯಾಲಯವು ಈಗಾಗಲೇ ಬೋಧ ಭಾಷೆಯನ್ನು ಗುಜರಾಥಿ ಅಥವಾ ಹಿಂದೀಯಾಗಿ ಮಾಡುವುದಕ್ಕೆ ನಿರ್ಧರಿಸಿದ್ದು, ಸರಕಾರಕ್ಕೆ ಉತ್ತೇಜನ ಕೊಟ್ಟಿದೆ. ಮುಂಬಯಿ ವಿಶ್ವವಿದ್ಯಾಲಯವು ಹಿಂದೀಯಲ್ಲಿ ಕಾಲೇಜುಗಳ ಪರೀಕ್ಷೆ ನಡೆಸಲು ಒಪ್ಪದಿದ್ದರೆ, ಗುಜರಾಥ ವಿಶ್ವವಿದ್ಯಾಲಯಕ್ಕೆ ಈ ಎಲ್ಲ ಸರಕಾರೀ ಕಾಲೇಜುಗಳನ್ನು ಸೇರಿಸಲಾಗುವುದೆಂದು ಶಿಕ್ಷಣ ಮಂತ್ರಿಗಳು ಹೇಳಿದ್ದಾರೆ. ಅಲ್ಲದೆ ಹಿಂದೀಯನ್ನು ಸರಕಾರದ ಹಾಗೂ ಕೋರ್ಟು ಕಛೇರಿಗಳ ವ್ಯವಹಾರ ಭಾಷೆಯನ್ನಾಗಿ ಮಾಡಬೇಕೆಂಬ ವಿಧೇಯಕವನ್ನು ಬೇಗನೆ ತರುವುದಾಗಿ ಅವರು ಹೇಳಿದ್ದಾರೆ. ೫೦೦ ಜನರು ವಾಸಿಸುವ ಪ್ರತಿಯೊಂದು ಹಳ್ಳಿಯಲ್ಲೂ ಶಾಲೆಯನ್ನು ಸ್ಥಾಪಿಸಿ, ಕಡ್ಡಾಯದ ಪ್ರಾಥಮಿಕ ಶಿಕ್ಷಣವನ್ನು ಕೊಡಲಾಗುವುದೆಂದೂ ಶಿಕ್ಷಣ ಮಂತ್ರಿಗಳು ತಿಳಿಸಿದರು.

ದಿ ಕೆನರಾ ಮ್ಯೂಚ್ಯುವಲ್ ಎಶ್ಯೂರೆನ್ಸ್ ಕಂಪೆನಿ, ಲಿ.

ಇದರ ೧೯೫೩ನೇ ಇಸವಿಯ ಆಯುವ್ಯಯ ಪಟ್ಟಿ ಮತ್ತಿತರ ವರ್ಷಾವಧಿ ಲೆಕ್ಕಗಳನ್ನೊಳಗೊಂಡ ವರದಿಯು ತುಂಬ ತೃಪ್ತಿಕರವಾಗಿರುತ್ತದೆ. ವರದಿ ವರ್ಷದಲ್ಲಿ ಕಂಪೆನಿಯು ೫೦ಲಕ್ಷ ರೂಪಾಯಿಗಳಿಗೂ ಮಿಕ್ಕಿದ ಹೊಸ ಪಾಲಿಸಿಗಳನ್ನು ಕೊಟ್ಟಿತು. ವಿಮಾ ಚಂದಾ ಆದಾಯವಾಗಿ ರೂ. ೧೭,೯೩,೮೮೮ ಹಾಗು ಬಡ್ಡಿ ಮತ್ತಿತ್ತರ ಆದಾಯವಾಗಿ ರೂ. ೩,೩೮,೦೮೧ ಜಮೆಯಾಯಿತು. ಕಂಪೆನಿಯ ಆಡಳಿತ ವೆಚ್ಚವು ಆದಾಯದ ೧೭% ಮಾತ್ರ ಇದ್ದು, ಇಷ್ಟು ಮಿತವ್ಯಯದ ದಾಖಲೆ ಬೇರೆ ಕಂಪೆನಿಯಲ್ಲಿ ಸಿಗುವುದು ಸಂಶಯಾಸ್ಪದ. ಎರಡುವರ್ಷಗಳ ಹಿಂದೆ ಇದ್ದ ೭೧ಲಕ್ಷ ರೂಪಾಯಿಯಷ್ಟರ ಜೀವವಿಮಾ ನಿಧಿಯು ಈಗ ೯೩ಲಕ್ಷ ರೂ.ಗಳನ್ನೂ ಮೀರುತ್ತದೆ. ಈ ಪೈಕಿ ನೂರಕ್ಕೆ ಎಪ್ಪತ್ತರಷ್ಟು ನಿಧಿಯನ್ನು ಸರಕಾರದ ಮತ್ತು ಸರಕಾರದ ಮಂಜೂರಾತಿ ಪಡೆದ ಠೇವಣಾತಿಗಳಲ್ಲಿ ನಿಕ್ಷೇಪಿಸಿರುವುದು ಪಾಲಿಸಿದಾರರ ಶ್ರೇಯಸ್ಸಿನ ದೃಷ್ಟಿಯಿಂದಲೂ ಭದ್ರತೆಯ ವಿಚಾರದಿಂದಲೂ ಸಮಂಜಸ. ಪೇಟೆಯಲ್ಲಿ ಆರ್ಥಿಕ ಮುಗ್ಗಟ್ಟು ಕಂಡು ಬರುವ ಈ ಕಾಲದಲ್ಲೂ ಕಂಪೆನಿಯು ತನ್ನ ಉನ್ನತವಾದ ಪರಂಪರೆಯನ್ನು ಕಾಯ್ದುಕೊಂಡು ಬಂದಿರುವುದು ಪ್ರಶಂಸನೀಯ. ಈ ಸರ್ವತೋಮುಖ ಪ್ರಗತಿಗೆ ಕಾರಣಭೂತರಾದ ಶ್ರೀ ಟಿ. ಆರ್. ಎ. ಪೈಗಳ ದಕ್ಷ ಆಡಳಿತೆಯನ್ನು ಹೃತ್ಪೂರ್ವಕ ಶ್ಲಾಘಿಸುತ್ತೇವೆ.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

O. S. 652/53.

ವಾದಿ-ಮುಹಮ್ಮದ ಯಾನಿ ಮುಮ್ಮಣ ಬ್ಯಾರಿ.

ಪ್ರತಿವಾದಿ— ಮುಹಮ್ಮದ್ ಬ್ಯಾರಿ.

ಕುಂದಾಪುರ ತಾಲ್ಲೂಕು ಶಿರೂರು ಗ್ರಾಮದಲ್ಲಿರುವ ಚಿಮ್ಮನಾಡು ಮುಚ್ಚಿ ಪಡುವು ಪದ್ದಿಯಾನ ಬ್ಯಾರಿಗಳ ಮಗ ಪ್ರತಿವಾದಿ ಮಹಮ್ಮದ್ ಬ್ಯಾರಿಗಳವರಿಗೆ ಈ ಮೂಲಕ ತಿಳಿಯಪಡಿಸುವುದೇನಂದರೆ

ನೀವು ಸದ್ರಿ ವಾದಿಗೆ ತಾ. 25-11-50 ರಲ್ಲು ರೂ. 600/—ಕ್ಕೆ ಬರಕೊಟ್ಟ ದಿಮಾಂಡ್ ನೋಟಿನ ಬಾಬ್ತು ಬಾಕಿ ಹಣ ಬಡ್ಡಿ ವಗೈರೆ ಬರಮಾಡಿಕೊಳ್ಳುವ ಬಗ್ಗೆ ವಾದಿ ದಾಖಲು ಮಾಡಿದ ಮೇಲಿನ ದಾವಾ ಮೇಲ್ಕಾಣುವ ಕೋರ್ಟಿನಲ್ಲಿ ತಾ. 16-3-1954ನೇ ದಿನ ಬೆಳಗ್ಗೆ 11 ಗಂಟೆಗೆ ತನಿಖೆಗೆ ಇಡಲಾಗಿದೆ ಎಂಬ ಸಂಗತಿ ಈ ಮೂಲಕ ತಿಳಿಸಲಾಗಿದೆ.

B. S. Shetty.
Vakil for Pltf.

Coondapoor, 6-3-54.

ಟೆಂಡರ್ ನೋಟೀಸು

ಕಾರ್ಕಳ ತಾಲೂಕು ನಾಡ್ಪಾಲು ಗ್ರಾಮದ ಸೋಮೇಶ್ವರದಲ್ಲಿ ಹೊಸ ಬಸ್ಸು ನಿಲ್ದಾಣದ ಪಠಾರದಲ್ಲಿ ಬಸ್ಸಿನ ಪ್ರಯಾಣಿಕರ ಉಪಯೋಗಕ್ಕಾಗಿ ಒಂದು ಹಂಚಿನ ತಂಗುವ ಗೃಹ (ವೈಟಿಂಗ್ ಶೆಡ್)ವನ್ನು ಕಟ್ಟಿಸಿ ಕೊಡುವ ಬಗ್ಗೆ ರಿಜಿಸ್ಟರ್ಡ್ ಕಂಟ್ರಾಕ್ಟದಾರರಿಂದ, ಪ್ರಥಮ ಠೇವಣಾತಿ ರೂ. 80/-ರ ಸಹಿತ ಅರ್ಜಿಗಳನ್ನು ತಾ. 15-3-1954ರ ಸಂಜೆ ತನಕ ಹೆಬ್ರಿ ಪಂಚಾಯ್ತ ಆಫೀಸಿನಲ್ಲಿ ಅಧ್ಯಕ್ಷರಿಂದ ಸ್ವೀಕರಿಸಲಾಗುವುದು.

ಕಾಮಗಾರಿಯ ಎಸ್ಟಿಮೇಟು ಮೊಬಲಗು ರೂ 1650/-. ಹೆಚ್ಚಿನ ಶರ್ತಗಳು ಮತ್ತು ವಿವರಗಳಿಗೆ ಪಂಚಾಯ್ತ ಆಫೀಸಿನಲ್ಲಿ, ಆಫೀಸು ಸಮಯ ವಿಚಾರಿಸಿ ತಿಳಿಯಬಹುದು

ಹೆಬ್ರಿ ಪಂಚಾಯ್ತ ಬೋರ್ಡ್, ಆಫೀಸು: 1-3-1954.

ಎಚ್. ಮಂದರಧರ ಬಲ್ಲಾಳ
ಅಧ್ಯಕ್ಷ.

ರಾಷ್ಟ್ರಮತ

ಸಂಪಾದಕ: ಕಡೆಂಗೋಡ್ಲು ಶಂಕರ ಭಟ್ಟ.

ವಾರ್ಷಿಕ ಚಂದಾಹಣ ಅಂಚೆ ವೆಚ್ಚ ಸೇರಿ ರೂ. 4—13—0.

ನಮ್ಮ ಚಂದಾದಾರರದೇ ಆದ, ಅವರಿಂದಲೆ ಸಂಪಾದಿಸಲ್ಪಡುವ

ಹೊಸ ವರ್ಷದ ಕಾಣಿಕೆ

ಮೇ ಪ್ರಥಮ ವಾರದಲ್ಲಿ ಹೊರಬೀಳುವುದು.

ಚಂದಾದಾರರಿಗೆ ಉಚಿತ. ಇತರರಿಗೆ ಅಂಚೆವೆಚ್ಚ ಹೊರತು ಬೆಲೆ ಆರು ಆಣೆ.

ಜಾಹೀರಾತುದಾರರಿಗೆ ಉತ್ತಮ ಸೌಕರ್ಯ. ಮಾರಾಟಕ್ಕೆ ತುಂಬಾ ರಿಯಾಯತಿ.

ಬರೆಯಿರಿ:

ರಾಷ್ಟ್ರಮತ ಕಾರ್ಯಾಲಯ, ಮಂಗಳೂರು 2.

ನಿರೀಕ್ಷಿಸಿ:—

ಚಿತ್ರ ಪ್ರಪಂಚದಲ್ಲೇ ದೊಡ್ಡ ಚಿತ್ರವೆಂದು ಪರಿಗಣಿಸಲ್ಪಟ್ಟ ಅದ್ಭುತ ವಿಶೇಷ.

ಗೋನ್ ವಿದ್ ದಿ ವಿಂಡ್ (ವರ್ಣ ಚಿತ್ರ)

GONE WITH THE WIND

— ಮತ್ತು ಎರಡು ತಮಿಳು ಚಿತ್ರಗಳು —

ನಾಲ್ವರು, ದೇವದಾಸ್

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ನ ವ ಯು ಗ

ಉಡುಪಿ, ಗುರುವಾರ ೧೧-೩-೫೪

ಖಾಸಗಿ ಬಂಡವಾಳ

ಅಖಿಲ ಭಾರತ ವಣಿಕ ಮಹಾ ಮಂಡಳದ ೩೭ನೇ ಸಭೆಯು ಹೊಸ ದೆಹಲಿಯಲ್ಲಿ ಜರಗಿದ ಕಾಲಕ್ಕೆ ಔದ್ಯೋಗಿಕ ಮಹತ್ವವನ್ನು ಪಡೆದ ಅನೇಕ ವಿಷಯಗಳ ಪರಿಶೀಲನೆಯು ಮಾಡಲ್ಪಟ್ಟಿತು. ಪ್ರಧಾನ ಮಂತ್ರಿ ಶ್ರೀ ನೆಹರೂರವರು ಪ್ರಮುಖ ಉದ್ದಿಮೆದಾರರಾದ ಶ್ರೀ ಜಿ. ಡಿ. ಬಿರ್ಲಾರವರೂ ಕೈಗಾರಿಕಾ ಕ್ಷೇತ್ರದ ಅನೇಕ ಸಮಸ್ಯೆಗಳನ್ನು ಕೂಲಂಕುಷವಾಗಿ ವಿಮರ್ಶಿಸಿದರು. ಶ್ರೀ ನೆಹರೂರವರು ಭಾರತ ಸರಕಾರದ ಆರ್ಥಿಕ ಹಾಗೂ ಕೈಗಾರಿಕಾ ನೀತಿಯನ್ನು ಬಹಳ ಸ್ಪಷ್ಟವಾದ, ಸ್ಫುಟವಾದ ಮತ್ತು ಸಂದೇಹನಿವಾರಕವಾದ ಶಬ್ದಗಳಲ್ಲಿ ವಿವರಿಸಿದರಲ್ಲದೆ, ಖಾಸಗಿ ಬಂಡವಾಳವು ದೇಶದ ಪ್ರಗತಿಯಲ್ಲಿ ವಹಿಸಬೇಕಾದ ಪಾತ್ರವನ್ನೂ ವರ್ಣಿಸಿದರು. ಕೈಗಾರಿಕೆಗಳು ಸಾಕಷ್ಟು ಸ್ವತಂತ್ರ ರೀತಿಯಲ್ಲಿ ಕೆಲಸ ನಿರ್ವಹಿಸುವುದಕ್ಕೆ ಅನುಕೂಲವಾದ ವಾತಾವರಣವನ್ನು ಕಲ್ಪಿಸಿಕೊಡುವ ಅಗತ್ಯವನ್ನು ನೆಹರೂ ಪ್ರಸ್ತಾಪಿಸಿದರು. ಮಹಾ ಮಂಡಳವು ಸ್ವೀಕರಿಸಿದ ಗೊತ್ತುವಳಿಯಲ್ಲಿ ಸರಕಾರದ ಬಿಗಿತನವನ್ನು ಕೆಲಮಟ್ಟಿಗೆ ಸಡಲಿಸಬೇಕೆಂದು ಹೇಳಲ್ಪಟ್ಟಿದೆ. ಮುಖ್ಯವಾಗಿ ಆಡಳಿತಲ್ಲಿದ ಸರಳತೆಯುಂಟಾಗಿ, ಈಗ ಹಾಕಲ್ಪಟ್ಟ ಅನಾವಶ್ಯಕವಾದ ನಿಯಂತ್ರಣಗಳು ದೂರಾಗಬೇಕೆಂದೂ ವ್ಯರ್ಥವಾಗಿ ಕೈಗಾರಿಕಾ ವಿಷಯಗಳಲ್ಲಿ ಸರಕಾರ ಹಸ್ತಕ್ಷೇಪ ಮಾಡಿ ಕಿರುಕುಳ ಕೊಡಬಾರದೆಂದೂ ಗೊತ್ತುವಳಿ ಪ್ರಾರ್ಥಿಸುತ್ತದೆ. ಈ ಮಾತನ್ನು ಸರಕಾರದವರು ಲಕ್ಷ್ಯಪೂರ್ವಕ ವಿಚಾರಿಸುವುದು ಅಪೇಕ್ಷಣೀಯ. ಸಾಧ್ಯವಿದ್ದ ಮಟ್ಟಿಗೆ ಉದ್ದಿಮೆದಾರರು ಸ್ವತಂತ್ರ ರೀತಿಯನ್ನು ಅಳವಡಿಸಿಕೊಳ್ಳುವುದಕ್ಕೆ ಸರಕಾರ ಬಿಡುವುದು ಒಳಿತು. ಆದರೆ ಖಾಸಗಿ ಬಂಡವಳದಾರರೂ ಗಮನಿಸಬೇಕಾದ ಮುಖ್ಯಾಂಶ ಇಲ್ಲದಿಲ್ಲ— ನೆಹರೂರವರು ತಿಳಿಸಿದಂತೆ ಉದ್ದಿಮೆಗಳನ್ನು ಯದ್ವಾತದ್ವಾ ಬೆಳೆಸದೆ, ರಾಷ್ಟ್ರದ ಸಾರ್ವಾಂಗಿಕ ಅಭಿವೃದ್ಧಿಗೆ ಪೋಷಕವಾಗುವ ರೀತಿಯಲ್ಲಿ ಕೈಗಾರಿಕೆಗಳ ಯೋಜನಾಬದ್ಧ ಅಭ್ಯುದಯಕ್ಕೆ ಪ್ರಯತ್ನ ನಡೆಸಬೇಕು. ಭಾರತ ಸ್ವಾವಲಂಬನೆಯ ಪ್ರಥಮ ಅಗ್ನಿಪರೀಕ್ಷೆಗೆ ಗುರಿಯಾಗಿರುವ ಈ ಕಾಲದಲ್ಲಿ ಖಾಸಗಿ ಬಂಡವಾಳಗಾರರೂ ಸರಕಾರದಷ್ಟೇ ಆಸಕ್ತಿಯನ್ನು ರಾಷ್ಟ್ರದ ಹಿತಚಿಂತನಾ ದೃಷ್ಟಿಯಿಂದ ತೋರಿಸುವುದು ಕರ್ತವ್ಯವಾಗಿರುತ್ತದೆ. ಸರಕಾರವು ಪಂಚವಾರ್ಷಿಕ ಯೋಜನೆಯ ಕಾರ್ಯಗತಗೊಳಿಸುವ ಮೂಲಕ ಭಾರತದ ೩೬ ಕೋಟಿ ಜನರ ಶ್ರೇಯಸ್ಸನ್ನು ಸಾಧಿಸುವ ಮಾರ್ಗದ ರೇಖಾಂಕನ ಮಾಡಿದ್ದು— ಇದರಲ್ಲಿ ಖಾಸಗಿ ಬಂಡವಾಳದಾರರು ನಿರ್ವಹಿಸಬೇಕಾದ ಕೆಲಸಗಳು ಸರಕಾರದ ಯೋಜನೆಗಳಿಗೆ ಯಾವ ದೃಷ್ಟಿಯಲ್ಲೂ ಕಡಿಮೆ ಮಹತ್ವದ್ದಾಗಿ ಎಣಿಸಲ್ಪಟ್ಟಿಲ್ಲ. ಮೂಲ ಉದ್ಯೋಗಗಳನ್ನು ಮಾತ್ರವೇ ಸರಕಾರ ತನ್ನ ವಶದಲ್ಲಿಟ್ಟುಕೊಂಡು, ನಿತ್ಯೋಪಯೋಗದ ವಸ್ತುಗಳ ಉತ್ಪಾದನೆಯನ್ನು ಖಾಸಗಿ ಬಂಡವಾಳಗಾರರಿಗೆ ಬಿಟ್ಟುಕೊಡುವ ನೀತಿಯು ಎಲ್ಲರೂ ಮೆಚ್ಚುವಂತಹದೇ ನಿಜ. ಹೀಗೆ ತಮಗೆ ದೊರೆತ ಅವಕಾಶವನ್ನು ಖಾಸಗಿ ಬಂಡವಾಳಗಾರರು ದುರುಪಯೋಗ ಪಡಿಸುವುದಾಗಲೀ ವ್ಯರ್ಥಹೋಗಗೊಡುವುದಾಗಲೀ ಸಲ್ಲದು. ಕೈಗಾರೀಕರಣದ ಹೆಸರಿನಲ್ಲಿ ಮಹೋದ್ಯಮಗಳು ಗೃಹೋದ್ಯಮಗಳ ಕಾರ್ಯಕ್ಷೇತ್ರದಲ್ಲಿ ಕಾಲಿಡುವುದು ಎಷ್ಟರ ಮಟ್ಟಿಗೆ ಅನುಚಿತವೋ ಕೆಲಸಗಾರರಿಗೆ ಸೌಕರ್ಯಕೊಡಬೇಕೆನ್ನುವ ಸರಕಾರದ ಧೋರಣೆಯನ್ನು ವಿರೋಧಿಸುವುದೂ ಅಷ್ಟೇ ಕೆಟ್ಟದು. ನಾವು ತಂತ್ರ ವಿಜ್ಞಾನದಲ್ಲಿ ಮುಂದುವರಿಯಬೇಕಾದುದು ಅಗತ್ಯ. ಹೌದಾದರೂ—ಮಾನವೀಯ ಭಾವನೆಯು ಕೈಗಾರೀಕರಣದ ಪ್ರವೃತ್ತಿಯ ಕೈಯಿಂದ ಪೆಟ್ಟು ತಿನ್ನುವುದಕ್ಕೆ ಬಿಡಲಾಗದು. ಗೃಹೋದ್ಯಮಗಳನ್ನು ಸಂರಕ್ಷಿಸುವ ಸರಕಾರದ ಪ್ರಯತ್ನಗಳಿಗೆ ಆತಂಕವೊಡ್ಡುವುದಕ್ಕೆ ದೊಡ್ಡ ಕೈಗಾರಿಕೆಗಳವರು ಹೋಗುವುದು ಸರಿಯಲ್ಲ. ಹಾಗೆಂದು ಗೃಹೋದ್ಯಮಗಳ ಹೆಸರಿನಲ್ಲಿ ತಕಲಿ, ಚರಖಾ, ಕೈಮಗ್ಗ, ಗಾಣಗಳ ಮಂತ್ರವನ್ನೇ ಇನ್ನು ಮುಂದಕ್ಕೂ ಜಪಿಸುತ್ತಿರುವುದು ಜನರ ಜೀವನ ಮಟ್ಟವನ್ನು ಎತ್ತರಿಸಬೇಕೆಂಬ ನಮ್ಮ ಉದ್ದೇಶ ಸಾಧನೆಗೆ ಪ್ರಯೋಜನಕಾರಿಯಲ್ಲ. ಉದ್ಯೋಗದ ಅವಕಾಶಗಳು ಹೆಚ್ಚುವಂತೆ ಉತ್ಪಾದನೆ ಅಧಿಕಗೊಳ್ಳುವಂತೆ, ಜನರ ಶ್ರಮಶಕ್ತಿ ಹೆಚ್ಚಿಕೊಂಡು ಜೀವನ ಮಟ್ಟ ಊರ್ಜಿತ ಹೊಂದುವಂತೆ ನಾವು ತಾಂತ್ರಿಕಕೌಶಲ್ಯವನ್ನು ಅಳವಡಿಸಿಕೊಳ್ಳಬೇಕು. ಖಾಸಗಿ ಬಂಡವಾಳದಾರರು ಈ ವಿಷಯದಲ್ಲಿ ಆಸಕ್ತಿ ವಹಿಸಿ ದುಡಿದರೆ, ದೇಶದ ಅಭ್ಯುದಯಕ್ಕೆ ಸಹಕಾರ ನೀಡಿದಂತಾಗುವುದು. ತಮ್ಮ ಸ್ವಂತ ಲಾಭವೊಂದನ್ನೇ ದೃಷ್ಟಿಯಲ್ಲಿಟ್ಟುಕೊಳ್ಳದೆ, ತಾಂತ್ರಿಕರ ಕೆಲಸಗಾರರ, ಸಾಮಾನ್ಯ ಗ್ರಾಹಕರ ಹಿತವನ್ನೂ ಕಣ್ಣಮುಂದಿಟ್ಟು ಕೊಂಡ ಪಕ್ಷದಲ್ಲಿ ಅದನ್ನು ಸರಕಾರವೂ ಮೆಚ್ಚುತ್ತದೆ —ಮತ್ತು ಜನತೆಯೂ ಪ್ರಶಂಸಿಸುತ್ತದೆ.

ಸವಿನಯ ವಿನಂತಿ

ನಮ್ಮ ಚಂದಾದಾರರಿಗೆಲ್ಲಾ ಅವರವರ ಬಾಕಿಯನ್ನು ಸೂಚಿಸಿ ಈ ಮೊದಲೇ ಆಗಾಗ್ಗೆ ಬರೆದು ತಿಳಿಸಿರುತ್ತೇವೆ. ಕೆಲವರು ಕ್ರಮವಾಗಿ ಚಂದಾಹಣ ಕಳುಹಿಸಿದ್ದಾರೆ. ಇನ್ನು ಕೆಲವರು ನಾವು ಕಳುಹಿಸಿದ ವಿ. ಪಿ. ಪಿ. ಯನ್ನು ಸ್ವೀಕರಿಸಿದ್ದಾರೆ. ಅವರೆಲ್ಲರಿಗೂ ನಾವು ಆಭಾರಿಗಳಾಗಿದ್ದೇವೆ. ಇನ್ನೂ ಚಂದಾಹಣವನ್ನು ಬಾಕಿ ಮಾಡಿಕೊಂಡಿರುವ, ವಿ. ಪಿ. ಪಿ. ಯನ್ನು ಕೂಡ ಸ್ವೀಕರಿಸದಿರುವ ಚಂದಾದಾರರೆಲ್ಲರೂ ಒಂದುವೇಳೆ ನಮ್ಮ ನೆನಪೋಲೆ ಮುಟ್ಟದಿದ್ದವರು ಕೂಡ ಪ್ರೀತ್ಯಾಭಿಮಾನವಿಟ್ಟು ತಮ್ಮ ಚಂದಾಹಣವನ್ನು ಈಗಲಾದರೂ ಕಳುಹಿಸಿಕೊಟ್ಟು ನಮಗೆ ನೆರವಾಗಬೇಕಾಗಿ ಕೇಳಿಕೊಳ್ಳುತ್ತೇವೆ. ಸಕಾಲದಲ್ಲಿ ಚಂದಾಹಣ ಅಥವಾ ಉತ್ತರ ಬಾರದಿದ್ದರೆ ಮುಂದಿನ ಸಂಚಿಕೆಯನ್ನು ವಿ. ಪಿ. ಪಿ. ಮಾಡುವೆವು.

— ಮೆನೇಜರ್.

ಶರಣುಬಂದ ಮೌ ಮೌ ಧುರೀಣರು

ಸುಮಾರು ಎರಡೂವರೆ ವರ್ಷಗಳಿಂದ ದಕ್ಷಿಣ ಆಫ್ರಿಕದ ಕೆನ್ಯಾದಲ್ಲಿ ಬಿಳಿಯರ ವಿರುದ್ಧ ಆಂದೋಲನವನ್ನು ನಡೆಸುತ್ತಿದ್ದ ಮೌಮೌ ಧುರೀಣರು ತಮ್ಮ ಚಳವಳವನ್ನು ಇಷ್ಟರಲ್ಲಿಯೇ ನಿಲ್ಲಿಸುವರೆಂದು ವರದಿಗಳು ತಿಳಿಸುತ್ತವೆ. ಬ್ರಿಟಿಷ ಸರಕಾರವು ಈಚೆಗೆ ಜನರಲ್ ಚೀನಾ ಎಂಬ ಪ್ರಮುಖ ಮೌಮೌ ಧುರೀಣನನ್ನು ಬಂಧಿಸಿ, ಜೀವಾವಧಿ ಶಿಕ್ಷೆಯನ್ನು ಕೊಟ್ಟಿತು. ಆದರೆ ಈತನು ಇತರ ಮೌಮೌ ಧುರೀಣರನ್ನು ಸಂಧಾನಕ್ಕೋಸ್ಕರ ಮನವೊಲಿಸುವ ಪ್ರಯತ್ನ ಮಾಡುತ್ತೇನೆಂದು ವಚನ ಕೊಟ್ಟುದರಿಂದ ಬ್ರಿಟಿಷರು ಸಂತುಷ್ಟರಾದರು. ಗೌಪ್ಯವಾಗಿ ಖಾಸಗಿ ಪತ್ರಗಳನ್ನು ಬರೆಯಲು ಜನರಲ್ ಚೀನಾ ನಾಮಾಂಕಿತ ಧುರೀಣನಿಗೆ ಅವಕಾಶವನ್ನು ಬ್ರಿಟಿಷರು ಕಲ್ಪಿಸಿಕೊಟ್ಟರು. ಈ ಬ್ರಿಟಿಷ ಕೈಗೊಂಬೆಯ ಪ್ರಯತ್ನದ ಫಲವಾಗಿ ಮೌಮೌ ಧುರೀಣರೆಲ್ಲ ಶರಣು ಬರಲು ಒಪ್ಪಿರುವರು. ಮೌ ಮೌ ಜನರ ಮುಖ್ಯ ಸೇನಾಪತಿ ಟಾಂಗ ನಿಯಾಕಾನು ಕೂಡ ಈಗ ಕೆನ್ಯಾ ಸರಕಾರಕ್ಕೆ ಶರಣು ಬಂದಿರುವುದರಿಂದ, ಭಯೋತ್ಪಾದಕರ ಗಂಡಾಂತರವು ತಪ್ಪಿ, ಶಾಂತಿ, ಸುವ್ಯವಸ್ಥೆಗಳನ್ನು ಕಾಪಾಡಲು ಅನುಕೂಲವಾದ ವಾತಾವರಣ ಉಂಟಾಗಿರುವುದು

ಬಹುಜನರ ಹಿತ

ಆದರೆ ಇಷ್ಟು ಮಾತ್ರದಿಂದಲೇ ಕೆನ್ಯಾದ ಪ್ರಶ್ನೆ ಬಗೆಹರಿಯಿತೆಂದು ಹೇಳಲಾಗದು—ಅಲ್ಲಿಯ ಒಂದೂವರೆ ಲಕ್ಷ ಏಶಿಯನರ, ಐವತ್ತೈದು ಲಕ್ಷ ಆಫ್ರಿಕನರ ಇಷ್ಟಾರ್ಥಗಳನ್ನು ಪೂರೈಸುವ ಜನಪ್ರಿಯ ಸರಕಾರ ಅಸ್ತಿತ್ವದಲ್ಲಿ ಬಂದರೆ ಮಾತ್ರ ಕೆನ್ಯಾದ ಸಮಸ್ಯೆ ಸಮಾಧಾನಕರವಾಗಿ ನಿವಾರಣೆ ಹೊಂದಬಹುದು. ಕೇವಲ ನಲುವತ್ತು ಸಾವಿರದಷ್ಟು ಅಲ್ಪ ಸಂಖ್ಯಾಕರಾದ ಬಿಳಿ ಜನರು ಕೆನ್ಯಾದಲ್ಲಿ ವರ್ಣ ದ್ವೇಷದ ಧೋರಣೆಗೆ ಅಂಟಿಕೊಂಡು ಇನ್ನು ಮುಂದೆಯೂ ಕುಳಿತುಕೊಳ್ಳುವುದು ಪ್ರಶಸ್ತವಲ್ಲ. ಕೆನ್ಯಾದ ನೆಲದ ಮಕ್ಕಳ ಭೂಮಿಯ ಹಸಿವೆ ಹಿಂಗುವುದೂ ಔದ್ಯೋಗಿಕ ಚಟುವಟಿಕೆಗಳು ಹೆಚ್ಚುವುದರ ಜೊತೆಗೆ ನ್ಯಾಯವಾದ ಕೂಲಿ ಮತ್ತು ವಸತಿ ಹಾಗು ಶಿಕ್ಷಣದ ಅನುಕೂಲತೆಗಳು ದೊರಕುವುದೂ ಅತ್ಯಂತ ಅಗತ್ಯವಾಗಿದೆ. ಬ್ರಿಟಿಷ್ ಸರಕಾರದವರು ಇನ್ನು ಮುಂದೆಯೂ ಆಫ್ರಿಕನರನ್ನು ತಿರಸ್ಕಾರ ದೃಷ್ಟಿಯಿಂದ ನೋಡುತ್ತಿದ್ದರೆ, ಸಮೀಪದಲ್ಲಿಯೇ ಇನ್ನೊಂದು ಗಂಡಾಂತರ ಕಾಣಿಸಿಕೊಳ್ಳಬಹುದು. ಆಫ್ರಿಕನ್ನ ದುಶ್ಶಕ್ತಿಗಳಿಗೆ ಸರಕಾರ ಮಣಿಯಿತೆಂದು ಟೀಕೆಮಾಡದ ತೊಡಗದೆ ಎಲ್ಲ ಮಾತನ್ನು ಕಡೆಗಣಿಸಿ ಬಹುಜನರ ಹಿತಕ್ಕಾಗಿ ಆದರೆ ಮಾತ್ರ ಬ್ರಿಟಿಷ್ ಸರಕಾರ ತುಸು ನೆಮ್ಮದಿಯಿಂದ ಇರಬಹುದು.

ಗುಂಡಿನ ಹಾರಾಟ

ವಸಾಹತುವಾದದ ವಿರುದ್ಧ ಆಂದೋಲನ ತುಂಬ ಪ್ರಬಲಿಸಿರುವುದಕ್ಕೆ ಅಮೇರಿಕದ ಪ್ರಜಾಪ್ರತಿನಿಧಿ ಸಭೆಯಲ್ಲಿ ಕಳೆದ ವಾರ ನಡೆದ ಗುಂಡುಗಳ ಹಾರಾಟವನ್ನೂ ನಿದರ್ಶನವಾಗಿ ಕೊಡಬಹುದು— ಸಭೆಯ ಕಾರ್ಯಕಲಾಪಗಳು ಜರಗುತ್ತಿದ್ದಂತೆಯೇ ತೀರ ಆಕಸ್ಮಿಕವಾಗಿ ಗುಂಡುಗಳ ಸುರಿ ಮಳೆಯಾಯಿತು. ಸದಸ್ಯರೆಲ್ಲ ಕಕ್ಕಾಬಿಕ್ಕಿಯಾಗಿ ಓಡುವ ಪ್ರಯತ್ನಕ್ಕೆ ತೊಡಗಿದಂತೆಯೇ ನಾಲ್ವೈದು ಮಂದಿಗೆ ಗುಂಡು ಹೊಡೆದು ಗಾಯವುಂಟಾಯಿತು. ಪೋರ್ಟೋರೀಕೋ ಎಂಬ ಅಮೇರಿಕದ ಅಧೀನ ರಾಜ್ಯದ ಸ್ವಾತಂತ್ರ್ಯಾಪೇಕ್ಷಿ ಚಳವಳಿಗಾರರು ಈ ಪ್ರಕರಣಕ್ಕೆ ಕಾರಣರೆಂದು ತಿಳಿಯಿತು ತಮ್ಮ ನಾಡಿಗೆ ಸಂಪೂರ್ಣ ಸ್ವಾತಂತ್ರ್ಯವನ್ನು ಕೊಡುವ ಆವಶ್ಯಕತೆಯನ್ನು ಬಿಂಬಿಸಲು ಚಳುವಳಿಗಾರರು ಗುಂಡಿನ ಹಾರಾಟಕ್ಕೆ ಮನಸ್ಸು ಮಾಡಿದರು. ಮೂರು ವರ್ಷಗಳ ಹಿಂದೆ ಮಾಜಿ ಅಧ್ಯಕ್ಷ ಟ್ರೂಮನ್ನರನ್ನು ಮುಗಿಸಿಬಿಡುವ ನಿಷ್ಫಲ ಪ್ರಯತ್ನವೊಂದನ್ನು ಪೋರ್ಟೋರೀಕೊದ ಧುರೀಣರು ನಡೆಸಿದುದನ್ನು ಇಲ್ಲಿ ನೆನೆಯಬಹುದು.

ಸ್ವಾತಂತ್ರ್ಯದ ಅಪೇಕ್ಷೆ

ಪೋರ್ಟೋರೀಕೋಕ್ಕೆ ಸಾಕಷ್ಟು ವ್ಯಾಪಕವಾದ ಸ್ವಾತಂತ್ರ್ಯವನ್ನು ಅಮೇರಿಕಾ ಈಗಾಗಲೇ ಕೊಟ್ಟಿರುತ್ತದೆ— ತನ್ನ ಗವರ್ನರನನ್ನು ತಾನೇ ಆರಿಸಿಕೊಳ್ಳುವ ಅಧಿಕಾರ ಪೋರ್ಟೋರೀಕೋಕ್ಕೆ ಲಭಿಸಿದೆಯಲ್ಲದೆ, ಅಲ್ಲಿಯ ಶಾಸನ ಸಭೆಯಲ್ಲಿ ಮಂಜೂರಾದ ಕಾಯಿದೆಗಳನ್ನು ಅಮೇರಿಕದ ಸರಕಾರ ರದ್ದು ಪಡಿಸುವಂತಿಲ್ಲ. ಇಲ್ಲಿಯ ವರಿಷ್ಠ ನ್ಯಾಯಾಲಯದ ನ್ಯಾಯಾಧೀಶರನ್ನು ಆರಿಸುವ ಅಧಿಕಾರ ಅಮೇರಿಕಕ್ಕೆ ಇಲ್ಲ ಇಷ್ಟು ಸ್ವಾತಂತ್ರ್ಯದೊರೆತಿದ್ದರೂ, ಗಂಡಾಂತರದ ವೇಳೆಯಲ್ಲಿ ಅಮೇರಿಕಾದ ಅಧ್ಯಕ್ಷರು ಪೋರ್ಟೋರೀಕೋಕ್ಕೆ ಸೈನ್ಯ ಕಳಿಸುವ ಅಧಿಕಾರ ಉಳಿಸಿಕೊಂಡಿರುವುದರಿಂದ, ಇಲ್ಲಿಯ ನಿವಾಸಿಕರು ಸಂಪೂರ್ಣ ಸ್ವಾತಂತ್ರ್ಯವನ್ನು ಕೇಳುತ್ತಿದ್ದಾರೆ. ಅಮೇರಿಕವೊಡನೆ ವ್ಯಾಪಾರ ಹಾಗು ಆರ್ಥಿಕ ಸಂಬಂಧವನ್ನು ಇಟ್ಟುಕೊಂಡಿರುವ ಇಲ್ಲಿಯ ಬಿಳಿ ಹಾಗೂ ಮಿಶ್ರ ಜನಾಂಗ ತನ್ನ ಆಂದೋಲನದಲ್ಲಿ ಜಯ ಗಳಿಸುವುದು ಹೇಗೋ— ಆದರೂ ಗುಂಡಿನ ಅತ್ಯಾಚಾರದ ಕಾವು ಆರಿದ ಮೇಲೆ, ಪೋರ್ಟೋರೀಕೋಕ್ಕೆ ಸ್ವಾತಂತ್ರ್ಯವನ್ನು ಕೊಡುವ ಬಗ್ಗೆ ಜನಮತಗಣನೆ ನಡೆಸುವ ವಿಚಾರವನ್ನು ಅಮೇರಿಕಾ ಮಾಡಲಿದೆಯಾಗಿ ತಿಳಿದು ಬಂದಿದೆ ಪೋರ್ಟೋರೀಕೋಕ್ಕೆ ಅಮೇರಿಕದ ದಲ್ಲಿ ಪೂರ್ಣ ಸಂಸ್ಥಾನದ ಸ್ಥಾನಮಾನ ನೀಡಬಹುದೆಂದು ರಿಪಬ್ಲಿಕನ್ ಹಾಗೂ ಡೆಮೊಕ್ರಾಟ ಪಕ್ಷಗಳೆರಡೂ ಒಪ್ಪಿದೆಯೆಂದಿವೆ. ಹಾಗೆಂದು ಪೋರ್ಟೋರೀಕೋಕ್ಕೆ ಈ ಮಾದರಿಯ ಸ್ವಾತಂತ್ರ್ಯದಿಂದ ತೃಪ್ತಿ ದೊರೆಯಲಾರದೆಂದು ರಾಜಕಾರಣಿಗಳ ಅಭಿಪ್ರಾಯ

ಖಾರ್ಟೂಮಿನ ಗಲಭೆ

ಈಜಿಪ್ತದಲ್ಲಿ ಸರಕಾರ ಬೊಂಮೆತ್ತಿರುವ ಬದಲಾವಣೆಯು ತುಂಬ ಆಶ್ಚರ್ಯವನ್ನು ಹುಟ್ಟಿಸುತ್ತದೆ—ನಗೀಬರು ಪತನ ಹೊಂದಿದ ಮೂರೇ ದಿನಗಳಲ್ಲಿ ಪುನಃ ಸ್ಥಿರಾಭಿಷಿಕ್ತರಾದರು. ಸುದಾನೀಯರು ಮಾಡಿದ ಗೊಂದಲವೇ ಕರ್ನಲ್ ನಸೀರ

(೯ನೇ ಪುಟ ನೋಡಿರಿ.)

THE MOOLKY BAN

(INCORPORATED IN I

BALANCE SHEET AS

CAPITAL & LIABILITIES	Rs. As. Ps.	Rs. As
1. Capital:		
AUTHORISED CAPITAL: 8 000 shares of Rs. 25/- each	2,00,000 0 0	
ISSUED CAPITAL: 4,000 shares of Rs. 25/- each	1,00,000 0 0	
SUBSCRIBED CAPITAL: 3 194 shares of Rs. 25/- each	79,850 0 0	
AMOUNT CALLED-UP: at Rs. 15/- per share	47,910 0 0	
Less: Calls unpaid	100 0 0	
	47,810 0 0	
Add: Forfeited shares	Nil	47,810
2. Reserve Fund and other Reserves:		9,532
3. Deposits and other Accounts:		
Fixed & Time Deposits	1,24,102 0 0	
Savings Bank Deposits	8,751 15 3	
Current Accounts, Contingency Accounts, etc	16,727 15 3	1,49,581 1
4. Borrowings from other Banking Companies, Agents, etc:		Nil
5. Bills Payable:		Nil
6. Bills for collection being Bills Receivable, as per contra:		Nil
7. Other Liabilities:		
For expenses	100 0 0	
Unclaimed Dividends	1,937 11 6	
Interest accrued on Deposits	2,725 10 0	3,863
8. Acceptances, Endorsements and other obligations, as per contra:		Nil
9. Profit & Loss Account:		
Profit as per last Balance Sheet	4,473 0 6	
Less Appropriations: Reserve Fund, Dividends and other Reserves	4,372 5 3	
	100 11 3	
Add: Profits for the year brought from the Profit & Loss A/c	4,822 14 7	
	4,923 9 10	
Less: Appropriated to Statutary Reserve Fund and other Reserves	3,032 1 0	1,891
10. Contingent Liability:		Nil
Total ...		2,12,678 1

OFFICE OF THE BANK, MULKI; Date 14—2—1954.

(Sd.) M. SHANKERA SHETTY.
" KRISHNA M. SALIAN.
" K. SANJIVA SHETTY.

(Sd.) P. SANJIVA HEGDE.
" A. DODDANNA SHETTY,

} DIR

Dr.

PROFIT AND LOSS ACCOUNT FOR

EXPENDITURE	Rs. As.
1. Interest paid on Deposits, Borrowings, etc.	4,330 1
2. Salaries and Allowances and Provident Fund .. .. (Including salary of Rs. 1,500/- paid to Manager)	2,502
3. Directors and Local Committee Members' fees and allowances	63
4. Rent, Taxes, Insurance, Lighting etc.	195
5. Law Charges	Nil
6. Postage, Telegrams and Stamps	91
7. Auditor's Fees	100
8. Depreciation on and repairs to the Banking Cos., property	31 1
9. Stationery, Printing, Advertisement, etc...	390
10. Loss from sale of or dealing with non-Banking Assets	Nil
11. Other expenditure	317
12. Balance of Profit	4,822 1
Total ...	12,844

OFFICE OF THE BANK, MULKI, Date 14—2—1954.

(Sd.) M. SHANKERA SHETTY.
" KRISHNA M. SALIAN.
" K. SANJIVA SHETTY.

(Sd.) P. SANJIVA HEGDE.
" A. DODDANNA SHETTY,

} DI

AUDITOR

I have audited the fore-going Balance Sheet of the Moolky Bank, Limited Mulki, (South Kanara), as at 31st December 1953 and also the Profit
(*a*) I have obtained all the informations and explanations I have required and have found them satisfactory, (*b*) the transactions of the Bank w
conformity with Law; (*d*) Such Profit and Loss account show a true balance of Profit for the year; (*e*) Such Balance Sheet exhibits a true and correct
(*f*) in my opinion, the books of Accounts have been kept by the Bank as required by Section 130 of the Indian Companies Act 1913.

Mangalore,
14—2—1954.

LIMITED, MULKI.

(…H LIMITED LIABILITY)

…T DECEMBER, 1953.

PROPERTY & ASSETS	Rs. As. Ps.	Rs. As. Ps.
1. Cash:		
In hand		16,412 8 0
2. Balances with other Banks:		
(i) In India:		
On Fixed Deposits	36,000 0 0	
On Current Accounts	12,537 7 2	
(ii) Outside India	Nil	48,537 7 2
3. Money at call and short notice:		Nil
4. Investments:		
(i) Securities of the Central and State Governments of the face value of Rs. 34,500/- at cost. ...	34,377 8 0	
(ii) Shares	Nil	
(iii) Debentures and Bonds	Nil	
(iv) Other Investments	Nil	
(v) Gold	Nil	34,377 8 0
5. Advances:		
I. Loans, Cash Credits, Over Drafts, etc.		
(i) In India	1,10,899 11 8	
(ii) Outside India	Nil	
II. Bills Discounted and purchased		
(i) Payable in India	Nil	
(ii) Payable outside India	Nil	1,10,899 11 8
Particulars of Advances:		
(i) Debts considered good in respect of which the Banking Company is fully secured	1,05,734 3 4	
(ii) Debts considered good for which the Banking Company holds no other security than the Debtors' personal security	Nil	
(iii) Debts considered good secured by the personal liabilities of one or more parties in addition to the personal security of the Debtors	5,165 8 4	
(iv) Debts considered doubtful or bad, not provided for	Nil	
Total ...	1,10,899 11 8	
(v) Debts due by Directors or Officers of the Banking Company or any of them either severally or jointly with other persons	8,110 8 1	
(vi) Debts due by Companies or Firms in which the Directors of the Banking Company are interested as Directors, Partners or Managing Agents, or, in the case of Private Companies, as Members	Nil	
(vii) Maximum total amount of advances, including temporary advances made at any time during the year to Directors or Managers or Officers of the Banking Company or any of them either severally or jointly with any other persons	8,110 8 1	
(viii) Maximum total amount of advances, including temporary advances granted during the year to the Companies or Firms in which the Directors of the Banking Company are interested as Directors, Partners or Managing Agents, or, in the case of Private Companies, as Members ...	Nil	
(ix) Due from Banking Companies	Nil	
6. Bills Receivable being Bills For Collection, as per contra		Nil
7. Constituents' Liabilities For Acceptances, Endorsements and Other Obligations, as per contra		Nil
8. Premises, less depreciation:		Nil
9. Furniture and Fixtures:		
At Cost	982 6 4	
Additions in the year	106 2 9	
	1,088 9 1	
Less: Depreciation to date	739 1 1	349 8 0
10. Other Assets:		
Interest accrued or due on Investments	1,174 3 0	
Tax provisionally deposited	928 0 0	2,102 3 0
11. Non-Banking Assets Acquired in Satisfaction of claims.		Nil
Total ...		2,12,678 13 10

(Sd.) N. M. ADYANTHAYA,
President.

(Sd.) M. R. H. PUNJA,
Manager.

YEAR ENDED 31st DECEMBER 1953. Cr.

INCOME	Rs. As. Ps.
1. Interest and Discount	11,346 9 8
2. Commission, Exchange and Brokerage	1,456 14 0
3. Rents	Nil
4. Net Profit on sale of Investments, etc.	Nil
5. Net Profit on revaluation of Investments, etc.	Nil
6. Income from Banking Assets and profit from sale or dealing with such Assets	Nil
7. Other receipts	41 0 0
Total ...	12,844 7 8

(Sd.) N. M. ADYANTHAYA,
President.

(Sd.) M. R. H. PUNJA,
Manager.

…TIFICATE.

…Account for the year ended upon that date and report that –
…ome to my notice have been within the powers of the Bank, … in my opinion, the above Balance Sheet, and Profit and Loss Account are drawn up in … state of affairs of the Bank according to the best of my information and the explanations given to me and as shown by the books of the Bank; and

(Sd.) M. S. Krishna Rau, F. C. A.,
Chartered Accountant.

ಪಾಕ-ಅಮೇರಿಕ ಮಿಲಿಟರಿ ಒಡಂಬಡಿಕೆಯ ಖಂಡನೆ

(೫ನೇ ಪುಟದಿಂದ)

ಪ್ರಮುಖರಾದ ಕ್ರಾಂತಿಕಾರ ಮಂಡಳದ ಧುರೀಣರನ್ನು ಭಯಗೊಳಿಸಿ, ಪರಿಸ್ಥಿತಿಯನ್ನು ನಿಯಂತ್ರಣದಲ್ಲಿಡಲು ನಗೀಬರಲ್ಲದೆ ಇತರರಿಂದ ಅಸಾಧ್ಯವೆಂಬ ಕಲ್ಪನೆ ಮಾಡಿಕೊಟ್ಟಿತು. ನಗೀಬರು ಮರಳಿ ಅಧಿಕಾರಕ್ಕೆ ಬಂದ ಕೂಡಲೇ ಮಾರ್ಚ ಒಂದರಲ್ಲು ಸುಡಾನಿನ ರಾಜಧಾನಿ ಖಾರ್ಟೂಮದಲ್ಲಿ ತೆರೆಯಲಿದ್ದ ಹೊಸ ಪಾರ್ಲಿಮೆಂಟಿನ ಅಧಿವೇಶನಕ್ಕೆ ತೆರಳಿದರು. ಭಾರತದ ಶ್ರೀ ಸುಕುಮಾರ ಸೇನರ ನೇತೃತ್ವದಲ್ಲಿ ಸುಡಾನದಲ್ಲಿ ಈಚೆಗೆ ಸಾರ್ವತ್ರಿಕ ಚುನಾವಣೆಗಳು ನಡೆದು, ಈಜಿಪ್ತದೊಡನೆ ಐಕ್ಯದಿಂದ ಇರಬಯಸುವ ಒಕ್ಕೂಟ ಪಕ್ಷಕ್ಕೆ ಬಹುಮತ ದೊರೆತಿದೆ. ಸಂಪೂರ್ಣ ಸ್ವತಂತ್ರವಾಗಿ ಸುಡಾನು ಇರಬೇಕೆಂಬ ಉಮ್ಮಾ ಪಕ್ಷಕ್ಕೆ ಈಗ ಸೋಲು ಉಂಟಾಗಿರುವುದಾದರೂ, ಬ್ರಿಟಿಷರ ಕೈವಾಡದಿಂದ ಅದು ಗಲಭೆಗೊಂದಲಗಳನ್ನು ಎಬ್ಬಿಸುತ್ತಿರುತ್ತದೆ.

ಈಜಿಪ್ತಿನಲ್ಲಿ

ಇಂತಹ ಗಲಭೆಯೊಂದು ನಗೀಬರ ಆಗಮನಕಾಲದಲ್ಲಿ ನಡೆಯಿತು-ಸುಡಾನದ ಸ್ವಾತಂತ್ರ್ಯವನ್ನೇ ಧ್ಯೇಯವಾಗುಳ್ಳ ಉಮ್ಮಾ ಪಕ್ಷದ ೫೦ ಸಾವಿರ ಮಂದಿ ಪ್ರದರ್ಶಕರು ಗೊಂದಲ ಮಾಡಿದುದರಿಂದ ಅನೇಕ ಮಂದಿ ಹತರಾದರು. ಗವರ್ನರರು ಶಾಸನ ಸಭೆಯ ಅಧಿವೇಶನವನ್ನು ಮಾರ್ಚ ಹತ್ತಕ್ಕೆ ಮುಂದರಿಸಿದರು. ನಗೀಬರ ಕಡೆಗೆ ಒಲವುಳ್ಳ ಮತ್ತು ಈಜಿಪ್ತದೊಂದಿಗೆ ಬೆರೆಯ ಬಯಸುವ ನಿರ್ಣಯಕ್ಕೆ ಸುಡಾನದ ಹೊಸ ಪಾರ್ಲಿಮೆಂಟು ಬಂದರೆ ಅಲ್ಲಿ ಅಂತಃ ಕಲಹವೇಳುವುದು ನಿಶ್ಚಯವೆಂದೂ, ಇದು ಬ್ರಿಟಿಷರಿಗೆ ಸುಡಾನದಲ್ಲಿ ಇನ್ನೂ ಉಳಿಯುವ ಅವಕಾಶ ಕೊಡಬಹುದೆಂದೂ ಹೇಳಲಾಗುತ್ತದೆ. ಹೀಗೆ ಖಾರ್ಟೂಮದಿಂದ ಹಿಂದಿರುಗಬೇಕಾಗಿ ಬಂದ ನಗೀಬರನ್ನು ಕ್ರಾಂತಿಕಾರಮಂಡಳವು ಪುನಃ ಅಧ್ಯಕ್ಷ ಹಾಗೂ ಪ್ರಧಾನ ಮಂತ್ರಿ ಪಟ್ಟಕ್ಕೆ ಏರಿಸಿದೆ. ಕರ್ನಲ ನಸೀರರನ್ನು ಈಜಿಪ್ತದ ಮಿಲಿಟರಿ ಗವರ್ನರರಾಗಿ ನೇಮಕ ಮಾಡಿದೆ. ಇದೇ ಜೂನು ತಿಂಗಳಲ್ಲಿ ಈಜಿಪ್ತದಲ್ಲಿ ಘಟನಾ ಸಮಿತಿಯ ಚುನಾವಣೆ ನಡೆಯುವುದೆಂದೂ, ಸೈನ್ಯಾಧಿಕಾರಿಗಳು ನಿಧಾನವಾಗಿ ರಾಜಕಾರಣದಲ್ಲಿ ಆಸ್ಥೆ ವಹಿಸುವರೆಂದೂ ಧುರೀಣರ ಹೇಳಿಕೆಗಳು ವ್ಯಕ್ತ ಪಡಿಸುತ್ತವೆ.

ಕಾಶ್ಮೀರದಲ್ಲಿ ತಟಸ್ಥರು

ಪ್ರಧಾನ ಮಂತ್ರಿ ನೆಹರೂರವರು ಪಾಕ ಅಮೇರಿಕ ಸೈನಿಕ ಒಪ್ಪಂದದ ವಿಷಯದಲ್ಲಿ ಭಾರತದ ನಿಲುಮೆಯನ್ನು ಸ್ಪಷ್ಟೀಕರಿಸುತ್ತಾ ಅತ್ಯಂತ ಮರ್ಮಘಾತಕವಾದ ಅಂಶಗಳನ್ನು ಹೊರಗೆಡಹಿದುದರಿಂದ–ರಾಜಕಾರಣಿಗಳೆಲ್ಲ ಚಿಂತಾತುರಕ್ಕೆ ಬಿದ್ದರು. ಪಾಕಿಸ್ತಾನ ಹಾಗು ಅಮೇರಿಕಾ ಸರಕಾರಗಳ ಉದ್ದೇಶಗಳು ಯಾವ ಪ್ರಕಾರ ಇವೆಯೆಂಬುದನ್ನು ನೆಹರೂರವರು ಆಯಾ ಸರಕಾರಗಳ ಹೊಣೆಗಾರ ವ್ಯಕ್ತಿಗಳ ಮಾತುಗಳಲ್ಲಿಯೇ ಪ್ರಕಟಗೊಳಿಸಿದುದರಿಂದ, ತಮ್ಮ ತಂತ್ರ ಬಯಲಿಗೆ ಬಿದ್ದಿತಲ್ಲಾ ಎಂದವು ಪರಿತಪಿಸುವಂತಾಗಿರುತ್ತದೆ. ಕಾಶ್ಮೀರ ಪ್ರಶ್ನೆಯಲ್ಲಿ ಅಮೇರಿಕನ್ನರು ಇನ್ನು ಮುಂದೆ ತಟಸ್ಥ ನಿರೀಕ್ಷಕರಾಗಿ ಇರುವಂತಿಲ್ಲವೆಂದು ನೆಹರೂ ಹೇಳಿದುದರಿಂದಂತೂ–ಅಮೇರಿಕವು ಭಾರತದ ಸೌಹಾರ್ದವನ್ನು ಸಂಪೂರ್ಣ ಬಲಿಗೊಟ್ಟಿತೆಂದು ಐರೋಪ್ಯ ರಾಷ್ಟ್ರಗಳಲ್ಲಿ ಅಭಿಪ್ರಾಯ ತುಂಬಿಕೊಂಡಿದೆ. ಭಾರತವು ಅಮೇರಿಕನ ನಿರೀಕ್ಷಕರನ್ನು ವಾಪಾಸು ಕರೆಯಬೇಕೆಂದು ತಾನಾಗಿಯೇ ವಿಧ್ಯುಕ್ತವಾಗಿ ವಿನಂತಿಸುವುದಿಲ್ಲವೆಂದೂ—ಆದರೂ ಸಂಯುಕ್ತ ರಾಷ್ಟ್ರ ಸಂಘವು ನೆಹರೂ ಹೇಳಿಕೆಯ ಬೆಳಕಿನಲ್ಲಿ ಈ ವಿಷಯವನ್ನು ಸೂಕ್ಷ್ಮವಾಗಿ ಪರ್ಯಾಲೋಚಿಸಿ ಸೂಕ್ತ ನಿರ್ಣಯಕ್ಕೆ ಬರಬೇಕಾಗುವುದೆಂದೂ ಹೇಳಲಾಗುತ್ತದೆ.

ಪಾಕ ಧುರೀಣರ ಹೇಳಿಕೆ

ಅಮೇರಿಕದಂತೆ ಪಾಕ ಧುರೀಣರೂ ನೆಹರು ಹೇಳಿಕೆಯಿಂದ ತುಂಬ ಅಸಮಾಧಾನವನ್ನು ಹೊಂದಿದರು. ಮಹಮ್ಮದಾಲಿಯವರು ನೆಹರೂ ಹೇಳಿಕೆಯ ಅನೇಕ ಅಂಶಗಳನ್ನು ಎತ್ತಿ ಅವುಗಳನ್ನು ಖಂಡಿಸಿ ಮಾತನಾಡಿದರು. ಆರ್ಥಿಕ ಸಹಾಯದಿಂದ ಗಂಡಾಂತರ ಪ್ರಾಪ್ತವಾಗುವುದಿಲ್ಲವಾದರೆ, ಮಿಲಿಟರಿ ಸಹಾಯವೂ ಅನರ್ಥ ಮಾಡಲಾರದೆಂದು ಅವರು ಹೇಳಿದರು. ಅಮೇರಿಕದ ಆರ್ಥಿಕ ಸಹಾಯವು ದೊರೆತದ್ದರಿಂದಲೇ ಭಾರತಕ್ಕೆ ಸೈನ್ಯಶಕ್ತಿಯ ಸಂವರ್ಧನೆಗಾಗಿ ಹಣವವನ್ನು ವೆಚ್ಚಮಾಡಲು ಸಾಧ್ಯವಾಯಿತೆಂದು ಅವರು ಅಭಿಪ್ರಾಯಪಟ್ಟರು. ಅಮೇರಿಕದ ನಿರೀಕ್ಷಕರನ್ನು ಇನ್ನು ಮುಂದೆ ತಟಸ್ಥರೆಂದು ತಿಳಿಯಲು ಸಾಧ್ಯವಿಲ್ಲ ಎಂಬ ನೆಹರೂ ಹೇಳಿಕೆ ಅಸಮರ್ಥನೀಯವಿದೆಯಾಗಿ ಜಾಫರುಲ್ಲಾ ಖಾನರು ಹೇಳಿದರು. ಆರ್ಥಿಕ ಸಹಾಯವು ಅಮೇರಿಕನ್ನರ ತಟಸ್ಥ ಗುಣವನ್ನು ತಗ್ಗಿಸದ ಪಕ್ಷದಲ್ಲಿ ಮಿಲಿಟರಿ ಸಹಾಯವೂ ಅಂತಹ ಪರಿಣಾಮ ಮಾಡದೆಂದು ಜಾಫರುಲ್ಲಾ ಖಾನರು ಸಾರಿದರು.

ಭಾರತಕ್ಕೆ ಬೆಂಬಲ

ಅಂತೂ ಈ ಸೈನಿಕ ಒಪ್ಪಂದ ಮಾಡಿಕೊಂಡುದರ ಪರಿಣಾಮವಾಗಿ ಕಾಶ್ಮೀರದ ಮೇಲೆ ಇನ್ನೊಮ್ಮೆ ಜಾಗತಿಕ ದೃಷ್ಟಿ ಕೇಂದ್ರೀಕೃತವಾದಂತಾಯಿತು. ಇಂತಹ ಪರಿಸ್ಥಿತಿಯಲ್ಲಿ ಕಾಶ್ಮೀರಿ ಪ್ರಜೆಗಳ ಅಭಿಪ್ರಾಯಕ್ಕೆ ತುಂಬ ಮಹತ್ವ ಬರುತ್ತದೆ. ಅಲ್ಲಿಯ ಧುರೀಣರ ಭಾಷಣಗಳನ್ನು ವಿಮರ್ಶಿಸಿದರೆ, ಭಾರತದ ನಿಲುಮೆಗೆ ಕಾಶ್ಮೀರ ಸರಕಾರದ ಸಂಪೂರ್ಣ ಬೆಂಬಲವಿದೆಯೆಂದು ಸ್ಪಷ್ಟವಾಗುತ್ತದೆ. ಪಾಕ-ಅಮೇರಿಕಾ ಸರಕಾರಗಳೆರಡೂ ಸೈನಿಕ ಒಪ್ಪಂದದ ಹವ್ಯಾಸಕ್ಕೆ ಬಿದ್ದು ದೊಡ್ಡ ತಪ್ಪನ್ನು ಮಾಡಿವೆಯೆಂದು ಸಿನೇಟರ ಫಲ್ ಬ್ರೈಟರಂಥ ಅಮೇರಿಕನ್ನ ಮುತ್ಸದ್ದಿಗಳೂ ಪೂರ್ವ ಪಾಕಿಸ್ತಾನ ಮಂತ್ರಿ ಕಡೆಯ ಕೆಲವು ಮುಸ್ಲಿಂ ಧುರೀಣರೂ ಬಹಿರಂಗವಾಗಿ ಟೀಕಿಸಿದ್ದು ಲಕ್ಷಿಸತಕ್ಕ ಸಂಗತಿಯಾಗಿರುತ್ತದೆ. ಹೀಗೆ ಕಳವಳದ ವಾತಾವರಣ ಕಂಡುಬರುತ್ತಿರುವಾಗ ಹಿಂದಕ್ಕೆ ನೇಮಿಸಲಾಗಿದ್ದ ಕಾಶ್ಮೀರ ಸಮಿತಿಯ ಅಧಿಕಾರಿಯೊಬ್ಬರು ಕಾಶ್ಮೀರದ ಬಗ್ಗೆ ಯುದ್ಧವೇ ಪ್ರಾರಂಭವಾದೀತೆಂದು ಅಭಿಪ್ರಾಯ ಪಟ್ಟಿರುವುದು ಇನ್ನಷ್ಟು ಚಿಂತೆಯನ್ನು ಹುಟ್ಟಿಸುತ್ತದೆ.

ಇಂಡೋ ಚೀನದ ವಿಚಾರ

ಜಿನೀವಾ ಪರಿಷತ್ತು ಎಪ್ರೀಲು ೨೬ನೇ ದಿನಾಂಕ ಸೇರಲಿದ್ದು, ಅದರ ಪೂರ್ವಭಾವಿ ಸಿದ್ಧತೆಗಳು ಭರದಿಂದ ನಡೆಯುತ್ತವೆ. ಕೊರಿಯಾ ಸಮಸ್ಯೆಯನ್ನು ಚರ್ಚಿಸುವುದಕ್ಕೋಸ್ಕರ ಯುದ್ಧದಲ್ಲಿ ಭಾಗ ವಹಿಸಿದ ೧೬ ರಾಷ್ಟ್ರಗಳಿಗೆ ಅಮೇರಿಕಾ ಆಮಂತ್ರಣವನ್ನು ಕಳಿಸಿದೆ. ಇಷ್ಟರ ವರೆಗೆ ಒಂಭತ್ತು ರಾಷ್ಟ್ರಗಳು ಈ ಪರಿಷತ್ತಿನಲ್ಲಿ ಸೇರಲು ಒಪ್ಪಿಗೆ ಸೂಚಿಸಿ ಬರೆದಿವೆ. ದಕ್ಷಿಣ ಕೊರಿಯಾ ಮಾತ್ರ ಪರಿಷತ್ತು ಸೇರಿದ ಮೂರು ತಿಂಗಳೊಳಗೆ ಸಮಾಧಾನಕರ ನಿರ್ಣಯಕ್ಕೆ ಬಂದೇ ತೀರುವ ಆಶ್ವಾಸನೆ ಕೊಡಬೇಕೆಂದು ಪಟ್ಟು ಹಿಡಿದಿದೆ. ಕಮ್ಯುನಿಸ್ಟ ಚೀನಕ್ಕೂ ಉತ್ತರ ಕೊರಿಯಕ್ಕೂ ರಶಿಯಾ ಆಮಂತ್ರಣ ಕಳಿಸಿದ್ದು, ಇವು ಸ್ವೀಕಾರಗೊಂಡಿವೆ. ಕೊರಿಯಾದ ಚರ್ಚೆಯಲ್ಲದೆ ಈ ಪರಿಷತ್ತಿನಲ್ಲಿ ಇಂಡೋ ಚೀನಾದ ಸಮರ ವಿಚಾರವೂ ಪರಿಶೀಲಿಸಲ್ಪಡುತ್ತದೆ ಫ್ರೆಂಚ ವರ್ತುಲಗಳಲ್ಲಿ ಪರಿಷತ್ತಿನಲ್ಲಿ ಈ ಪ್ರಶ್ನೆ ಯಶಸ್ವಿಯಾಗಿ ತೀರ್ಮಾನಿಸಲ್ಪಡುವುದೆಂಬ ನಂಬಿಕೆ ತುಂಬಿಕೊಂಡಿದೆ. ಆದರೆ ನೆಹರೂರ ವಿನಂತಿಯಂತೆ ಯುದ್ಧ ವಿರಾಮವನ್ನು ಶೀಘ್ರದಲ್ಲಿಯೇ ಸಾಧಿಸುವ ವಿಚಾರ ಮಾತ್ರ ಮಹತ್ವ ಪಡೆದಿಲ್ಲ. ಅಮೇರಿಕನ್ನರಿಗೆ ಇದು ಇಷ್ಟವಿಲ್ಲವಾದುದರಿಂದ ಫ್ರೆಂಚರು ಏನೂ ಮಾಡಲಾರರು. ಯುದ್ಧ ವಿರಾಮವನ್ನು ಬಯಸಿ ಹೋಚಿಮಿನರೇ ಹಿಂದೆ ಸರಿಯಬೇಕೆಂಬ ಬಗ್ಗೆ ವಿವರವಾದ ಶರ್ತವನ್ನು ಫ್ರೆಂಚ ಪಾರ್ಲಿಮೆಂಟಿನಲ್ಲಿ ೫ನೇ ದಿನಾಂಕ ಮಂಡಿಸಲಾಯಿತು. ಆದರೆ ಹೋಚಿಮಿನರು ಇದನ್ನು ಮನ್ನಿಸುವುದು ಸಂಶಯ—ಅವರಿಗೆ ಜಿನೀವಾ ಪರಿಷತ್ತಿನಲ್ಲಿ ಆಮಂತ್ರಣವಿದೆಯೋ ಇಲ್ಲವೋ ಇನ್ನೂ ತಿಳಿದಿಲ್ಲ.

ತಿದ್ದುಪಡಿ— ಕಳೆದ ಸಂಚಿಕೆಯ ೨ನೆ ಪುಟದಲ್ಲಿ ಪ್ರಕಟವಾದ ಕಟಪಾಡಿ ಪಂಚಾಯತ ಬೋರ್ಡಿನ ಆಡಳಿತಕ್ಕೆ ಒಳಪಟ್ಟ ಮಾರ್ಕೆಟು ವಗೈರೆ ಏಲಂ ನೋಟೀಸಿನಲ್ಲಿ ತಾರೀಕು 13—3—54ನೆ ಶುಕ್ರವಾರ ಎಂಬುದನ್ನು ತಾ 12 3—54ನೆ ಶುಕ್ರವಾರ ಎಂದು ತಿದ್ದಿಕೊಳ್ಳಬೇಕಾಗಿದೆ.

ಅಲ್ಲದೆ ೭ನೆ ಪುಟದಲ್ಲಿ ಪ್ರಕಟವಾದ ವಿಜಯ ಬೇಂಕ್ ಲಿಮಿಟೆಡ್, ಬ್ರಹ್ಮಾವರ, ಇದರ ಏಲಂ ನೋಟೀಸಿನಲ್ಲಿ ಸಾಲದ ನಂಬ್ರ 733 53 ಐ. ಭಾಸ್ಕರ ಹೆಗ್ಡೆ, ಐ. ನಾರಾಯಣ ಹೆಗ್ಡೇರ ಅಳಿಯ ಎಂಬುದು ಐ. ನಾರಾಯಣ ಸೆಟ್ಟಿರ ಅಳಿಯ ಎಂದಾಗಬೇಕು.

(ಸಂ. ಸ.)

ಮೂಲ್ಕಿ ಬೇಂಕ್ ಲಿಮಿಟೆಡ್

ಜಿಲ್ಲೆಯ ಪ್ರಸಿದ್ಧ ಕಾಂಗ್ರೆಸ್ ಕಾರ್ಯಕರ್ತರಲ್ಲೊಬ್ಬರೂ ವ್ಯವಹಾರ ಜ್ಞಾನಕುಶಲರೂ ದೂರದರ್ಶಿಗಳೂ ಆಗಿದ್ದ ದಿ। ಮೂಲ್ಕಿ ರಾಮಕೃಷ್ಣ ಪೂಂಜರ ಮುಂದಾಳ್ತನದಲ್ಲಿ 1929ರಲ್ಲಿ ಊರವರ ಹಿತಸಾಧನೆಗಾಗಿ ಸ್ಥಾಪಿತವಾದ ಮೂಲ್ಕಿ ಬೇಂಕು ಕಾಲಕ್ರಮೇಣ ಅಭಿವೃದ್ಧಿ ಹೊಂದುತ್ತ ಬಂದಿರುವುದು ಅಭಿನಂದನೀಯ. 1953ನೆ ದಶಂಬರಕ್ಕೆ ಅಂತ್ಯವಾಗುವ ವರ್ಷದಲ್ಲಿ ಇದರ ಐನ್ ಮುನಾಫೆಯು ರೂ. 4822-14-7 ಆಗಿದ್ದು ಪಾಲುಗಾರರಿಗೆ ಇನ್‌ಕಮ್ ಟೇಕ್ಸ್ ರಹಿತವಾಗಿ 3½% ಡಿವಿಡೆಂಟ್ ಹಂಚಿರುತ್ತದೆ. ಈ ಬಗ್ಗೆ ಬ್ಯಾಂಕಿನ ಮೇಲ್ಮೆಯನ್ನೇ ಹಾರೈಸುತ್ತಿರುವ ಅಧ್ಯಕ್ಷ ಎಸ್. ಮೋಹನದಾಸ ಆಡ್ಯಂತಾಯರೂ ಇತರಡೈರೆಕ್ಟರರೂ ಪ್ರಶಂಸನೀಯರು. ಮೆನೇಜರ್ ಶ್ರೀ ಎಮ್. ಆರ್. ಎಚ್. ಪೂಂಜರ ಸಮರ್ಥ ಮತ್ತು ಸೂಕ್ಷ್ಮ ಆಡಳಿತದಲ್ಲಿ ಈ ಬೇಂಕು ಇನ್ನಷ್ಟು ಪ್ರಗತಿ ಹೊಂದಲೆಂದು ಹಾರೈಸುತ್ತೇವೆ.

ನಿಮಗೆ ಸುಲಭದಲ್ಲಿ ಇಂಗ್ಲಿಷ್ ಕಲಿಯಬೇಕೆ? ಹಾಗಿದ್ದರೆ

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿ ಪುಸ್ತಕ ಅತ್ಯುಪಯುಕ್ತವಾದುದು.

ಈ ಪುಸ್ತಕದಿಂದ ಸಾವಿರಾರು ಜನರು ಸುಲಭವಾಗಿ ಸಾಕಷ್ಟು ಇಂಗ್ಲಿಷ್ ಕಲಿತುಕೊಂಡಿದ್ದಾರೆ. ನೀವೂ ಪ್ರಯತ್ನಿಸಬಾರದೇಕೆ?

ಬೆಲೆ: ನಾದಾಪ್ರತಿ 1—8—0.



ದಿ। ಕಿಲ್ಲೆಯವರ ಮೂರು ಗ್ರಂಥಗಳು

ಪ್ರಾಚೀನ ತುಳುನಾಡು	(ಎಂ. ಗೋವಿಂದ ಪೈಗಳ ಮುನ್ನುಡಿ)	೨	೦	೦
ಭಾರತದ ಕರ್ಣ (ಗದ್ಯ)	(ಎಂ. ಆರ್. ಶಾಸ್ತ್ರಿಗಳ ,,)	೦	೬	೦
ಮುರಲಿ (ಪದ್ಯ-ಅಚ್ಚಿನಲ್ಲಿದೆ)	(ಕಯ್ಯಾರ ಕಿಞ್ಞಣ್ಣ ರೈಗಳ ,,)	೦	೧೨	೦

ಟಪ್ಪಾಲು ಖರ್ಚು ಪ್ರತ್ಯೇಕ. ಪುಸ್ತಕ ವ್ಯಾಪಾರಿಗಳಿಗೆ ಕಮಿಶನ್ ಕೊಡಲಾಗುವುದು.

ನವಯುಗ ಪ್ರೆಸ್,
ಪೋಸ್ಟ್ ಬಾಕ್ಸ್ ನಂಬ್ರ ೪೨,
ಉಡುಪಿ.

A. T. Mohan Rai,
Valancia, Kankanady,
Mangalore 2.

ಪುತ್ತೂರು—ಸ್ಥಳೀಯ ಬೋರ್ಡ್ ಹೈಸ್ಕೂಲಿನ ಸೇವಾನಂದ ಸ್ಕೌಟ್ ದಳದ ಮತ್ತು ದ್ರೌಪದಿ ಗೈಡ್ ಕೂಟದ ವರ್ಷಾವಧಿ ಸಭೆಯು ತಾ 4ರಲ್ಲಿ ಶಾಲಾ ಹೆಡ್ಮಾಸ್ತರ್ ಶ್ರೀ ಕೆ. ಪಟ್ಟಿಸ್ವಾಮಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಟ್ರೂಪ್ ಲೀಡರ್ ಶ್ರೀ ಕೆ. ಎಮ್. ದಮೋದರರಾಯರು ವರದಿಯನ್ನೋದಿದರು. ಶ್ರೀಗಳಾದ ಬಿ. ಎಲ್. ನಾರಾಯಣ ಭಟ್, ಟಿ. ಕೃಷ್ಣಮಯ್ಯ ಮತ್ತು ಕುಮಾರಿ ಬಿ. ಎಲ್. ಭಟ್ಟರು ಮಾತನಾಡಿದರು. ಅಧ್ಯಕ್ಷರ ಭಾಷಣವಾಗಿ ಸಭಾಂತ್ಯವಾಯಿತು.

ಪುತ್ತೂರಲ್ಲಿ ಈಗ ಒಂದು ಟೆಲಿಫೋನ್ ಪಬ್ಲಿಕ್ ಕಾಲ್ ಆಫೀಸು ತೆರೆಯಲ್ಪಟ್ಟಿದ್ದು ಅನ್ಯಾನಾದ ಕೇಂದ್ರ ಸಚಿವ? ಇಲ್ಲಿಗೆ ಟೆಲಿಫೋನ್ ಎಕ್ಸ್‌ಚೇಂಜ್ ಆಫೀಸು ಅಗತ್ಯವಿದೆ ಎಂದು ಪಟ್ಟಣದ ಸುಮಾರು 46 ಮಂದಿ ಅಧ್ಯರು ಮದ್ರಾಸಿನ ಪೋಸ್ಟ್‌ಮಾಸ್ಟರ್ ಜನರಲ್ಲರಿಗೆ ಒಂದು ಮನವಿಯನ್ನು ಕಳುಹಿಸಿರುವರು. ಮನವಿ ಪ್ರತಿಗಳನ್ನು ಸಂಬಂಧಪಟ್ಟವರಿಗೆಲ್ಲ ಕಳುಹಿಸಿ ಕೊಡಲಾಗಿದೆ.

ಬೈಲೂರು—ಸ್ಥಳೀಯ ಹೈಸ್ಕೂಲು ಸಮಿತಿ ಸಭೆಯು ಇದೇ ತಾ 7ರಲ್ಲಿ, ಶ್ರೀ ಕೆ. ಸದಾನಂದ ಹೆಗ್ಡೆ, ಎಮ್. ಪಿ., ಅವರ ಅಧ್ಯಕ್ಷತೆಯಲ್ಲಿ ಜರಗಿ ಸ್ಥಳಕ್ಕಾಗಿ ಜಿಲ್ಲಾ ಕಲೆಕ್ಟರರಿಗೆ ಬರಕೊಳ್ಳುವ ಮತ್ತು ಹಣ ಸಂಗ್ರಹದ ವ್ಯವಸ್ಥೆಯ ಕುರಿತು ನಿರ್ಣಯಗಳಾದುವು.

ದೊಂಡೆರಂಗಡಿ—ಕಾರ್ಕಳ ತಾಲೂಕಿನ ಕುಕ್ಕುಜೆ ದೊಂಡೆರಂಗಡಿಯಲ್ಲಿ ಕಮ್ಯೂನಿಟಿ ಪ್ರೊಜೆಕ್ಟ್ ಖಾತೆಯ ಸಹಾಯದಿಂದಲೂ ಗ್ರಾಮಸ್ಥರ ನೆರವಿನಿಂದಲೂ ರಚಿಸಲಾದ ಸ್ಕೂಲ್ ಕಮಿಟಿ ಮುಖೇನ ಜಿಲ್ಲಾ ಬೋರ್ಡಿನ ಮಂಜೂರಾತಿ ಮೇರೆಗೆ ಇದೇ ತಾ 1ರಲ್ಲಿ ಶಾಲಾ ಮುಖ್ಯೋಪಾಧ್ಯಾಯ ಶ್ರೀ ಕೆ. ಶ್ರೀಧರ ಶೆಟ್ಟರಿಂದ ಡಿ. ಬೊ. ಎಲಿಮೆಂಟರಿ ಹೊಸ ಶಾಲೆಯು ತೆರೆಯಲ್ಪಟ್ಟಿತು.

ಪೊಳಲಿ—ಸ್ಥಳೀಯ ಶ್ರೀ ರಾಜರಾಜೇಶ್ವರಿ ದೇವಿಯ ಸನ್ನಿಧಿಯಲ್ಲಿ ಕಾಲಂಪ್ರತಿ ಜರಗುವ ಉತ್ಸವವು ಇದೇ ತಾ. 14ರಲ್ಲಿ ಧ್ವಜಾರೋಹಣದಿಂದ ಪ್ರಾರಂಭವಾಗಿ ಎಪ್ರಿಲ್ ತಿಂಗಳ ತಾ 3ನೇ ಶನಿವಾರ ದಿವಸ ಶ್ರೀ ದೇವಿ ದಂಡಮಾರೋತ್ಸವವು ಜರಗುವುದು. ಆಸ್ತಿಕ ಜನರು ಶ್ರೀ ದೇವೀ ಮಹೋತ್ಸವ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕಾಗಿ ಸಂಬಂಧಪಟ್ಟವರು ತಿಳಿಸುತ್ತಾರೆ.

ಬೆಳ್ಳೂರು—ಕಾಸರಗೋಡು ತಾಲೂಕು ಬೆಳ್ಳೂರು ಬೋರ್ಡ್ ಬುನಾದಿ ಹಾ। ಎ। ಶಾಲಾ ವರ್ಧಂತಿಯೂ ಸದ್ರಿ ಗ್ರಾಮದ ವಯಸ್ಕರ ಶಾಲಾ ವರ್ಧಂತಿಯೂ ಕಳೆದ ತಾ 28ರಲ್ಲು ಕವಿರಾಜ್ ಡಾ। ಕೆ. ಸಿ. ಆಳ್ವರ ಅಧ್ಯಕ್ಷತೆಯಲ್ಲಿ ಜರಗಿತು. ಮಕ್ಕಳಿಗೆ ಬಹುಮಾನವೀಯುವರೆ ಶ್ರೀಗಳಾದ ಎನ್. ಎಸ್. ಕದಂಬಳಿತ್ತಾಯ ಮತ್ತು ಸುಬ್ರಾಯ ಕದಂಬಳಿತ್ತಾಯರು ಧನ ಸಹಾಯ ಮಾಡಿದರು

ಬ್ರಹ್ಮಾವರ—ಸ್ಥಳೀಯ ವೀವರ್ಸ್ ಕೋಪರೇಟಿವ್ ಸೊಸೈಟಿಯವರು ಸಾಲಿಕೇರಿ ಆಫೀಸಿನಲ್ಲಿ ಇದೇ ತಾ 7ರಲ್ಲು ಪ್ರಥಮ ಕೈಮಗ್ಗ ಸಪ್ತಾಹವನ್ನು ಪ್ರಾರಂಭಿಸಿದರು. ಬೈಕಾಡಿ ಶ್ರೀ ವೆಂಕಟ ಕೃಷ್ಣರಾಯರು ಸಪ್ತಾಹದ ಉದ್ಘಾಟನೆಯನ್ನು ನೆರವೇರಿಸಿದರು.

ಬಸ್ರೂರು—ಇಲ್ಲಿಯ ಹಿಂದೂ ಹಾ' ಎ। ಶಾಲೆಯ ವರ್ಧಂತ್ಯುತ್ಸವವು ಇದೇ ತಾ 1ರಲ್ಲು ಕುಂದಾಪುರ ರೆವಿನ್ಯೂ ಡಿವಿಜನಲ್ ಆಫೀಸರ್ ಶ್ರೀ ಎಚ್. ಯು. ಪರಶುರಾಮ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಮುಖ್ಯೋಪಾಧ್ಯಾಯ ಶ್ರೀ ಬಿ. ಶಂಕರ ರಾಯರು ವರದಿ ವಾಚನ ಮಾಡಿದರು. ಶ್ರೀ ಎಮ್. ಕೃಷ್ಣಪ್ಪ ಶೆಟ್ಟರು ಸ್ವಸ್ತಿವಾಚನ ಮಾಡಿದರು. ಸಭಿಕರ ಭಾಷಣ, ಅಧ್ಯಕ್ಷ ಭಾಷಣ, ವಿವಿಧ ವಿನೋದಾವಳಿಗಳೊಂದಿಗೆ ಸಮಾರಂಭ ಕೊನೆಗೊಂಡಿತು.

ಮೂಲ್ಕಿ ಮಾನಂಪಾಡಿ—ಶ್ರೀ ಶಂಕರ ನಾರಾಯಣ ದೇವರಿಗೆ ಇದೇ ತಾ 11ರಲ್ಲು ಅಷ್ಟಬಂಧ ಬ್ರಹ್ಮ ಕಲಶಾಭಿಷೇಕವು ನಡೆಯುವುದರಿಂದ ಭಕ್ತಾದಿಗಳು ಬಂದು ಶ್ರೀ ಮುಡಿ ಗಂಧ ಪ್ರಸಾದಾದಿಗಳನ್ನು ಸ್ವೀಕರಿಸಿ ಶ್ರೀ ದೇವತಾನುಗ್ರಹಕ್ಕೆ ಪಾತ್ರರಾಗ ಬೇಕಾಗಿ ಶ್ರೀ ಎಮ್. ಆರ್. ಭಟ್ ಮೊದಲಾದ ವ್ಯವಸ್ಥಾಪಕರ ವಿನಂತಿಯಿದೆ.

ಕಟಪಾಡಿ—ಸ್ಥಳೀಯ ಶ್ರೀ ವೆಂಕಟರಮಣ ಸ್ವಾಮಿ ವಿದ್ಯಾವರ್ಧಕ ಸಂಘದ ಆಡಳಿತದಲ್ಲಿ ನಡೆಯುವ ಅಂಬಾಡಿ ಪಾಂಗಾಳ ಜರದರಾಯ ನಾಯಕ್ ಎಲಿಮೆಂಟರಿ ಶಾಲೆ ಮತ್ತು ಚೊಕ್ಕಾಡಿ ಶ್ರೀ ಮಹಾಲಿಂಗೇಶ್ವರ ಸ್ವಾಮಿ ಎಲಿಮೆಂಟರಿ ಶಾಲೆಯ ಸಂಯುಕ್ತ ವಾರ್ಷಿಕೋತ್ಸವವು ಇದೇ ತಾ 6ರಲ್ಲು ಸಂಜೆ ಮೂಲ್ಕಿಯ ಸರಕಾರಿ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾದ ಶ್ರೀ ಕೆ. ವಿಠಲ ಶೆಣೈ, ಅವರ ಅಧ್ಯಕ್ಷತೆಯಲ್ಲಿ ಕಟಪಾಡಿ ಎಸ್. ವಿ. ಎಸ್. ಹಾ' ಎ' ಶಾಲಾ ವಠಾರದಲ್ಲಿ ಜರಗಿತು. ಶ್ರೀ ಪಿ ಬಾಲಕೃಷ್ಣ ನಾಯಕರು ಸ್ವಾಗತ ನುಡಿದರು. ಶ್ರೀಗಳಾದ ಕೆ. ರಾಮರಾವ್ ಮತು ಕೆ. ರಘುರಾಮ ಶೆಟ್ಟರು ಶಾಲೆಗಳ ವರದಿಯನ್ನೋದಿದರು. ಶ್ರೀ ಕೆ. ಬಾಲಕೃಷ್ಣ ಕುಮಾರರು ಅಂಬಾಡಿ ಶಾಲೆಯ ಸ್ವಸ್ತಿವಾಚನ ಮಾಡಿದರು. ಅಧ್ಯಕ್ಷರು ಪಾರಿತೋಷ ವಿತರಣೆ ಮಾಡಿ ಹೊಸ ಪ್ರಾಥಮಿಕ ವಿದ್ಯಾ ಯೋಜನೆಯ ಕುರಿತು ಮಾತನಾಡಿ ಜನತೆಯ ಬೆಂಬಲವನ್ನು ಕೋರಿದರು. ಶ್ರೀ ಕೆ. ಆರ್. ಶೆಣೈಯವರು ಧನ್ಯವಾದಗಳನ್ನರ್ಪಿಸಿದರು. ವಿವಿಧ ವಿನೋದಾವಳಿಗಳೊಂದಿಗೆ ಸಮಾರಂಭ ಕೊನೆಗೊಂಡಿತು.

ಕಾಂತಾವರ—ಜನಪ್ರಿಯರೂ ಪ್ರತಿಷ್ಠಿತರೂ ಆಗಿದ್ದ ಶ್ರೀ ಸತ್ಯೆಂಪರಾರಿ ಮಹಾಲಿಂಗ ಶೆಟ್ಟರು ಕಳೆದ ತಾ 27ರಲ್ಲು ಬೇಲಾಡಿಯಲ್ಲಿ ತಮ್ಮ 71ನೆ ವಯಸ್ಸಿನಲ್ಲಿ ನಿಧನಹೊಂದಿದುದು ವಿಷಾದಕರವಿದೆ.

ಬೆಳ್ಳಾರೆ—ಇಲ್ಲಿಯ ಎಕ್ಸ್‌ಟ್ರಾ ಡಿಪಾರ್ಟ್‌ಮೆಂಟಲ್ ಸಬ್ ಪೋಸ್ಟಾಫೀಸನ್ನು ಕಳೆದ ತಾ. 27ರಿಂದ ಇಲಾಖಾ ಸಬ್ ಪೋಸ್ಟಾಫೀಸಾಗಿ ಪರಿವರ್ತಿಸಲಾಗಿದೆ. ಶ್ರೀ. ಎಮ್. ಬಾಬು ಹೆಗ್ಡೆಯವರು ಸಬ್ ಪೋಸ್ಟ್‌ಮಾಸ್ತರರಾಗಿ ನೇಮಕಹೊಂದಿರುವರು.

ಪೆರ್ಡೂರು—ಶ್ರೀ ಅನಂತಪದ್ಮನಾಭ ದೇವಸ್ಥಾನದಲ್ಲಿ ವಾಡಿಕೆಯಂತೆ ನಡೆಯುವ ರಥೋತ್ಸವ ಕಾರ್ಯಕ್ರಮಗಳು, ಇದೇ ತಾ 12ರಿಂದ 19 ತನಕ ಜರಗಲಿರುವವು. ಭಕ್ತಾದಿಗಳು ಬಂದು ಸಹಕರಿಸಬೇಕೆಂದು ಎಕ್ಸಿಕ್ಯುಟಿವ್ ಆಫೀಸರ್ ಶ್ರೀ ಕೆ. ಭೋಜರಾಜ ಶೆಟ್ಟರ ವಿನಂತಿಯಿದೆ.

ಉಡುಪಿ

ಕೈಮಗ್ಗ ಸಪ್ತಾಹ ಪ್ರಾರಂಭ—ಉಡುಪಿಯಲ್ಲಿ ಕೈಮಗ್ಗ ಸಪ್ತಾಹವನ್ನು ಇದೇ ತಾ 7ರಲ್ಲು ಸಂಜೆ ರಥಬೀದಿಯಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಅವರು ಉದ್ಘಾಟಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಎ. ಲಕ್ಷ್ಮೀನಾರಾಯಣ ರಾಯರು ವಹಿಸಿದ್ದರು. ಶ್ರೀಗಳಾದ ಪಿ. ಶೀನ ನಾಯಕ್ ಮತ್ತು ಟಿ. ವಾಸುದೇವ ಶೆಣೈಯವರು ಭಾಷಣವಿತ್ತರು. ಶ್ರೀ ಯು. ರಾಮರಾಯರು ಧನ್ಯವಾದಗಳನ್ನರ್ಪಿಸಿದರು. ಸಭಾರಂಭದ ಮೊದಲು ಮೆರವಣಿಗೆ ಇತ್ತು.

ರಾಷ್ಟ್ರೀಯ ಉಳಿತಾಯ ಪಕ್ಷವು—ಉಡುಪಿಯಲ್ಲಿ ಇದೇ ತಾ 6ರಲ್ಲು ತಾಲೂಕು ಕಚೇರಿಯಲ್ಲಿ ಸಬ್ ಕಲೆಕ್ಟರ್ ಶ್ರೀ ಪರಶುರಾಮ ನಾಯ್ಕರ ಅಧ್ಯಕ್ಷತೆಯಲ್ಲಿ ಆಚರಿಸಲ್ಪಟ್ಟಿತು. ಹಿರಿಯಡ್ಕ, ಕಲ್ಯಾಣಪುರ ಮೊದಲಾದ ಸ್ಥಳಗಳಲ್ಲಿ ಪ್ರಚಾರ ಸಭೆಗಳನ್ನು ಏರ್ಪಡಿಸಬೇಕಾಗಿ ನಿರ್ಧರಿಸಲಾಯಿತು.

ಮುನಿಸಿಪಲ್ ಕಾಂಗ್ರೆಸ್ ಪಾರ್ಟಿ ಚುನಾವಣೆಯು—ಕಳೆದ ಜನವರಿ ತಿಂಗಳ ತಾ 28ರಲ್ಲು ಜರಗಿ ಈ ಕೆಳಗಿನವರು ಅಧಿಕಾರಿಗಳಾಗಿ ಆರಿಸಲ್ಪಟ್ಟಿರುವರೆಂದು ಪಾರ್ಟಿ ಸೆಕ್ರೆಟರಿಗಳು ತಿಳಿಸುತ್ತಾರೆ. ಡಾ। ಕೆ. ಎಲ್. ಐತಾಳ್ ಡಿಪ್ಯುಟಿ ಲೀಡರ್; ಜನಾಬ್ ಯು. ಎಸ್. ಇಮಾಮ್ ಸಾಹೇಬ್; ಜಾಯಿಂಟ್ ಸೆಕ್ರೆಟರಿ?? —

ಕಾರ್ಯದರ್ಶಿ, ಶ್ರೀ ಕೆ. ದೇವೇಂದ್ರ ಶೆಣೈ, ವ್ಹಿಪ್; ಶ್ರೀ ಕೆ. ಪ್ರಭಾಕರ ಪೈ, ಕೋಶಾಧಿಕಾರಿ.

ತಾಲೂಕು ಪಾನನಿರೋಧ ಸಲಹಾ ಸಮಿತಿ ಸಭೆಯು—ಇದೇ ತಾ 5ರಲ್ಲಿ, ತಾಲೂಕು ಕಚೇರಿಯಲ್ಲಿ ಸಬ್ ಕಲೆಕ್ಟರ್ ಶ್ರೀ ಎಸ್. ಯು. ಪಿ. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಉಡುಪಿ, ಮಲ್ಪೆ, ಕಟಪಾಡಿ, ಶಿರ್ವ, ಭಟಪಾಡಿ, ಬಾರ್ಕೂರು ಮೊದಲಾದ ಕೇಂದ್ರಗಳಲ್ಲಿ ನೀರಾ ಅಂಗಡಿಗಳನ್ನು ತೆರೆಯುವ ಅವಶ್ಯಕತೆಯನ್ನು ಮಂಬರದು ಸೂಚಿಸಿ, ಆ ಕುರಿತು ಸರಕಾರಕ್ಕೆ ವಿನಂತಿಸಬೇಕೆಂದು ನಿಶ್ಚಯಿಸಲಾಯಿತು.

ಸಾಹಿತ್ಯ ಮತ್ತು ಪತ್ರಿಕೆಗಳ ಪ್ರದರ್ಶನ—ಸ್ಥಳೀಯ ಬೋರ್ಡ್ ಹೈಸ್ಕೂಲಿನ ಕರ್ನಾಟಕ ಸಂಘದ ಆಶ್ರಯದಲ್ಲಿ ಇದೇ ತಾ 6 ಮತ್ತು 7ರಲ್ಲು ಕನ್ನಡ ಸಾಹಿತ್ಯ ಮತ್ತು ವಾರ್ತಾ ಪತ್ರಿಕೆಗಳ ಪ್ರದರ್ಶನವೊಂದನ್ನು ಎಮ್. ಜಿ. ಎಮ್. ಕಾಲೇಜಿನ ಶ್ರೀ ಕು. ಶಿ. ಹರಿದಾಸ ಭಟ್ಟರು ಉದ್ಘಾಟಿಸಿದರು. ಶಾಲಾ ಹೆಡ್ಮಾಸ್ಟರ್ ಶ್ರೀ ಪಿ. ರಾಮಕೃಷ್ಣರಾಯರು ಸಭಾಧ್ಯಕ್ಷತೆ ವಹಿಸಿದ್ದರು. ಶ್ರೀ ಯು. ಮೋಹನರಾಯರು ಸ್ವಾಗತಿಸಿದರು. ಶ್ರೀ ಟಿ. ಶ್ರೀನಿವಾಸ ನಾಯರು ಧನ್ಯವಾದಗಳನ್ನಿತ್ತರು.

ಉಡುಪಿ ಸಹಕಾರಿ ಟೌನ್ ಬೇಂಕಿನ ಮಹಾಸಭೆಯು—ಇದೇ ತಾ 6ರಲ್ಲು ಶ್ರೀ ಕೆ. ಗುರುರಾಜ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಬೇಂಕಿನ ವರದಿವಾಚನ, ಆಡಿಟ್ ರಿಪೋರ್ಟ್ ಸ್ವೀಕಾರ, ಡೈರೆಕ್ಟರರ ಚುನಾವಣೆ ಮೊದಲಾದ ಕಾರ್ಯಕ್ರಮಗಳಾದುವು.

ಉಡುಪಿ ಕೋಟ್ ಧಾರಣೆ—ಜೆಡ್ಡಿಗೆ ನಂಬ್ರ 1—ರೂ 26. ಬೆಳ್ತಿಗೆ ನಂಬ್ರ 2—ರೂ 25. ಮುಸ್ಕತಿ ಮುಡಿ ರೂ 23. ತೊಳ್ಸಲು ರೂ 22-8-0 ಕಜೆ ರೂ 22. ತೆಂಗಿನೆಣ್ಣೆ ಜೋಳಿ ರೂ 3-12-0 ತೆಂಗಿನ ಕಾಯಿ 100ಕ್ಕೆ ರೂ 19. ಉದ್ದು ಮುಡಿ ರೂ 22. ಮೆಣಸು ಸೂಡಿ 100ಕ್ಕೆ ರೂ 3¼.

ಕುಂದಾಪುರ ಕೋರ್ಟ್ ಧಾರಣೆ—ತೊಳ್ಸಲು ಅಕ್ಕಿ ಮುಡಿ ರೂ 20-8-0 ಮುಸ್ಕತಿ ರೂ 21. ಬೆಳ್ತಿಗೆ ರೂ 23. ಸಣ್ಣಕ್ಕಿ ರೂ. 25. ಕಜೆ ರೂ 20. ದಂಡ ರೂ 20-2-0 ಜೇಡಿನ ಕುಚ್ಚಿಗೆ ರೂ 20-8-0 ಭತ್ತ ರೂ 10. ತೆಂಗಿನ ಕಾಯಿ 100ಕ್ಕೆ ರೂ 15. ಉದ್ದು ಮುಡಿ ರೂ 18. ಬೆಲ್ಲ ಮಣ ರೂ. 6—8—0

ದಿ ನ್ಯೂ ಕರ್ನಾಟಕ ಪ್ರೊವಿಡೆಂಟ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಪ್ರಧಾನ ಕಚೇರಿ] [ಉಡುಪಿ, ದ. ಕನ್ನಡ.

ನಿಮ್ಮ ಸಂಪಾದನೆಗೆ ಸಾಧ್ಯವಿರುವ ಮೊತ್ತಕ್ಕೆ ವಿಮೆ ಮಾಡಲು ಅನುಕೂಲವಿರುವ ಜಿಲ್ಲೆಯ ಏಕಮಾತ್ರ ಜನತಾ ಪ್ರೊವಿಡೆಂಟ್ ವಿಮಾ ಸಂಸ್ಥೆ

ಏಜಂಟರು, ಸ್ಪೆಶಲ್ ಏಜಂಟರು ಆರ್ಗನೈಜರರು ಮತ್ತು ಇನ್ಸ್‌ಪೆಕ್ಟರರು ಬೇಕಾಗಿದ್ದಾರೆ.

ವಿವರಕ್ಕೆ ಬರೆಯಿರಿ:

THE NEW KARNATAKA PROVIDENT Insurance Co. Ltd., UDIPI.

Visit

K. R. K. SHET DIAMOND MART

Opposite Government College, MANGALORE.

For all your requirements in Diamonds and Jewellery Lucky Birth Stones are also available.

Prop: K. K. R. SHET.

ಕರುಣಾರಸ, ವಾತ್ಸಲ್ಯರಸಗಳಿಂದ ಲಕ್ಷಾಂತರ ಜನರ ಹೃದಯಗಳನ್ನು ಮಿಡಿದ

ಡಿ. ಸಾನೇ ಗುರೂಜಿಯವರ ಅಮರ ಕಾದಂಬರಿ!

ಪ್ರತಿಯೊಂದು ಕನ್ನಡ ಕುಟುಂಬದವರೂ ಸಂಗ್ರಹಿಸಬೇಕಾದ ಪುಸ್ತಕ.

ಶ್ಯಾಮನ ತಾಯಿ

ಮುನ್ನೂರು ಪುಟಗಳು. ದ್ವಿವರ್ಣ ರಕ್ಷಾಕವಚ. ಬೆಲೆ ೨ ರೂ. ಮಾತ್ರ.

ಅಂಚೆವೆಚ್ಚ ಸೇರಿ ಎರಡು ರೂಪಾಯಿ ಮನಿಯಾರ್ಡರು ಕಳಿಸಿರಿ. (ವಿ. ಪಿ ಮಾಡುವದಿಲ್ಲ.

ಕಾದಂಬರಿಯ ಪ್ರತಿ ಪುಟವೂ ಒಂದೊಂದು ಮಾತೃಪ್ರೇಮದ ಅಮೃತವಾಹಿನಿಯಾಗಿದೆ. ಸಂಸ್ಕೃತಿಯ ದಿವ್ಯದರ್ಶನವಾಗುತ್ತದೆ. ಬಡವರಿಗೆ ಹಿತವಾದ, ಧನಿಕರಿಗೆ ಸಮತಾವಾದ, ಅತ್ತೆಸೊಸೆಯರಿಗೆ ಹಿತವಾದ, ಸಮಾಜದವರಿಗೆ ಬುದ್ಧಿವಾದ, ತರುಣರಿಗೆ ಧ್ಯೇಯವಾದವನ್ನು ಬೋಧಿಸಿದ್ದಾಳೆ

ಸಮಾಜ ಪುಸ್ತಕಾಲಯ, ಧಾರವಾಡ.

ಋತುಸ್ರಾವ ನಿಂತಿತ್ತೆ

"ಕುಮಾರಿ" ಬಿಲ್ಲೆಗಳನ್ನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು, ಹತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು. ಯಾವ ಬಾಧಕವೂ ಇಲ್ಲ. ನಾಸಿರಾರು ಮಂದಿಗೆ ಖಾತ್ರಿ ಗುಣವಾಗಿದೆ—ಬೆಲೆ: ರೂ. 3/-; ಸ್ಪೆಶಲ್ ರೂ. 5-, ಅಧಿಕಾಧಿಕ ಸ್ಪೆಶಲ್ ರೂ. 8--[ವಿ. ಪಿ. ಖರ್ಚು ರವಾನೆ ಪ್ರತ್ಯೇಕ]

MRS. P. DEVEE, P.DS. (N.I.) CALCUTTA. 40

ಸ್ಟಾಕಿಸ್ಟರು: ಶಹಾ ಕಂಪೆನಿ, ಮಂಗಳೂರು.

ಪ್ರೈಮರಿ, ಪಂಚಾಯತ ಬೋರ್ಡ ಮೊದಲಾದುವುಗಳ ಲೈಬ್ರರಿಗಳಿಗೆ ಬೇಕಾಗುವ ಪುಸ್ತಕಗಳು ವಿಶೇಷತರದ ಕಮಿಶನಿನಲ್ಲಿ ದೊರೆಯುತ್ತವೆ.

ವಿಚಾರಿಸಿರಿ:—

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

(೧ನೇ ಪುಟದಿಂದ)

ಅವಕಾಶವಿರುವುದರಿಂದ, ಅವುಗಳು ಕುಂಬ ಮೆಚ್ಚಿಗೆಗೆ ಪಾತ್ರವಾಗುತ್ತವೆ ಆದರೆ ಇವುಗಳ ಬಳಕೆಯಲ್ಲಿ ಕಂಡುಬರುವ ಎರಡು ಮುಖ್ಯ ಕೊರತೆಗಳೆಂದರೆ ಬೆಲೆ ಹೆಚ್ಚು ಇರುವುದು, ಮತ್ತು ಹಳೆಯ ಮಾದರಿಗಳಲ್ಲಿ ಸುಧಾರಣೆಯಾಗದಿರುವುದು ಬೆಲೆ ಏರುವುದಕ್ಕೆ ಕೈಮಗ್ಗ ಮತ್ತಿತರ ಗೃಹ ಕೈಗಾರಿಕೆಯ ಉತ್ಪಾದನೆಗಳಿಗೆ ಸಾಕಷ್ಟು ಗಿರಾಕಿಗಳು ಇಲ್ಲದಿರುವುದೇ ಮುಖ್ಯ ಕಾರಣ—ಪೇಟೆ ವಿಸ್ತಾರಗೊಂಡರೆ, ಉತ್ಪಾದಿತ ಸರಕುಗಳ ಬೆಲೆ ತಗ್ಗುತ್ತದೆ. ಹೊಸ ಸುಧಾರಣೆಗಳು ನಡೆಯದಿರುವುದಕ್ಕೂ ಚಿಕ್ಕ ಕೈಗಾರಿಕೆಗಳಿಗೆ ಪ್ರೋತ್ಸಾಹ ಇಲ್ಲದಿರುವುದೇ ಹೇತು—ಹೆಚ್ಚಿನ ಉತ್ತೇಜನ ದೊರೆತರೆ ಸಂಶೋಧನೆ ನಡೆಸಲು ಸ್ಫೂರ್ತಿಯೂ ಉತ್ಸಾಹವೂ ಉಂಟಾಗುತ್ತದೆ ಸರಕಾರದವರು ಈಗ ಅನೇಕ ಬಗೆಯ ಸಂರಕ್ಷಣೆಯನ್ನೂ ಸಹಕಾರಗಳನ್ನೂ ನೀಡುತ್ತಾ, ಗೃಹೋದ್ಯಮಗಳನ್ನು ಕಾಪಾಡಿಕೊಂಡು ಬಂದು, ಅವುಗಳಲ್ಲಿ ನಿರತರಾದವರ ಯೋಗಕ್ಷೇಮದ ಕಡೆಗೆ ಅಧಿಕಲಕ್ಷ್ಯವನ್ನು ಪ್ರವೃತ್ತಿಸುತಿದ್ದಾರೆ. ಆದರೆ ಜನತಾ ಸಹಕಾರವಿಲ್ಲದೆ ಹೋದರೆ, ಸರಕಾರದ ಪ್ರಯತ್ನ ಫಲಿಸುವುದು ಕಷ್ಟಸಾಧ್ಯ—ಆದುದರಿಂದ ಹುಬ್ಬಳ್ಳಿಯಲ್ಲಿ ಅಖಿಲ ಭಾರತ ಖಾದಿ ಗ್ರಾಮೋದ್ಯೋಗ ಮತ್ತು ಕೃಷಿಪ್ರದರ್ಶನವನ್ನು ಉದ್ಘಾಟಿಸುವಾಗ ಮುಂಬಯಿ ಮುಖ್ಯ ಮಂತ್ರಿ ಶ್ರೀ ಮುರಾರಜಿ ದೇಸಾಯಿಯವರು ಹೇಳಿದ ಕೆಳಗಿನ ಮಾತುಗಳನ್ನು ಜ್ಞಾಪಕದಲ್ಲಿ ಇಟ್ಟುಕೊಳ್ಳುವುದು ಶ್ರೇಯಸ್ಕರ—

"ಪ್ರತಿಯೊಬ್ಬನೂ ನಿತ್ಯ ಬಳಕೆಗಾಗಿ ಗೃಹ ಕೈಗಾರಿಕೆ ವಸ್ತುಗಳನ್ನೆ ಕೊಂಡುಕೊಳ್ಳುವ ಪ್ರತಿಜ್ಞೆಯನ್ನು ಸ್ವೀಕರಿಸಬೇಕು. ಅವು ಸಿಗದಿದ್ದರೆ, ಸ್ವದೇಶದಲ್ಲಿ ಸಿದ್ಧವಾದ ವಸ್ತುಗಳನ್ನೇ ಕೊಂಡುಕೊಳ್ಳತಕ್ಕದ್ದು, ಅವೂ ದೊರೆಯದಿದ್ದರೆ ಮಾತ್ರ ವಿದೇಶೀ ಸರಕುಗಳನ್ನು ಆಶ್ರಯಿಸಬಹುದು" ಹೀಗೆ ವರ್ತಿಸುವುದರಿಂದ ಮಾತ್ರ ಕೃಷಿಗೆ ನಂತರ ಅತಿ ಹೆಚ್ಚು ಜನರು ಆಶ್ರಯಿಸಿರುವ ಗೃಹೋದ್ಯಮಗಳ ರಕ್ಷಣೆಯನ್ನು ಸಾಮಾಜಿಕ ಮಟ್ಟದಿಂದ ಮಾಡಿದಂತಾಗುವುದು ದೇಶಬಾಂಧವರೆಲ್ಲರೂ ಈ ಕರೆಯನ್ನು ಮನ್ನಿಸಿ ರಾಷ್ಟ್ರದ ಶ್ರೇಯಸ್ಸಿನಲ್ಲಿ ಭಾಗಿಗಳಾಗಿಯುನ್ನತಿ ಹೊಂದಲಿ!

ಮಂಗಳೂರು

ಭಾಷಣ—ಭಾರತೀಯ ಜನಸಂಘದ ಕರ್ನಾಟಕ ಶಾಖಾ ಸಂಘಟನಾ ಕಾರ್ಯದರ್ಶಿಗಳಾದ ಶ್ರೀ ಜಗನ್ನಾಥರಾವ್ ಜೋಶಿಯವರು ತಾ 10ರಲ್ಲು ಸಂಜೆ ಶ್ರೀ ಎಚ್. ಭಾಸ್ಕರ ರಾಯರ ಅಧ್ಯಕ್ಷತೆಯಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ ಮಾತನಾಡುತ್ತಾ "ಎಲ್ಲರಿಗೂ ಉದ್ಯೋಗ ಕಲ್ಪಿಸಿಕೊಡುವ ಗುಡಿ ಕೈಗಾರಿಕೆಗಳಿಗೆ ಸರಕಾರವು ಪ್ರೋತ್ಸಾಹಿಸಬೇಕು. ಸಮಸ್ತ ರಕ್ಷಣೆಗಾಗಿ ಪ್ರತಿಯೊಬ್ಬನಿಗೂ ಸೈನಿಕ ಶಿಕ್ಷಣ ದೊರೆಯಬೇಕು. ಜನಸಂಘವು ದೇಶದ ಅಖಂಡತ್ವಕ್ಕಾಗಿ ದುಡಿಯುತ್ತಿದೆ" ಎಂದು ಮುಂತಾಗಿ ಹೇಳಿದರು

ಶಿವರಾತ್ರಿ ಭಾಷಣ—ಶ್ರೀ ರಾಮಕೃಷ್ಣಾಶ್ರಮದಲ್ಲಿ ತಾ 4ರಲ್ಲು ಜಿಲ್ಲಾ ನ್ಯಾಯಾಧೀಶರಾದ ಶ್ರೀ ಕೆ. ನರಸಿಂಹ ಶೆಟ್ಟಿಯವರು "ಶಿವನು ಭಕ್ತಿಗೆ ಒಲಿಯುವನು" ಎಂಬ ವಿಷಯವನ್ನೆತ್ತಿ ಭಾಷಣವಿತ್ತರು.

ಗುಡಿ ಕೈಗಾರಿಕೆಗಳ ಪರಿಶೀಲನೆ—ಅಖಿಲ ಭಾರತ ಗುಡಿ ಕೈಗಾರಿಕೆಗಳ ಸಮಿತಿಯ ಅಧ್ಯಕ್ಷೆ ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯ, ಸಮಿತಿ ಸದಸ್ಯ ಹಾಗೂ ಅಖಿಲ ಭಾರತ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಶ್ರೀ ಯು. ಶ್ರೀನಿವಾಸಮಲ್ಯ ಮತ್ತು ಸಮಿತಿ ಕಾರ್ಯದರ್ಶಿ ಶ್ರೀ ಕೆ. ಎಲ್. ನಂಜಪ್ಪನವರು ಮಂಗಳೂರಿಗೆ ತಾ 2ರಲ್ಲು ಬೊಂಬಾಯಿಂದ ಬಂದರು. ಇವರ ಜತೆಯಲ್ಲಿ ಭಾರತದ ಅಮೇರಿಕನ್ ರಾಯಭಾರಿ ಕಚೇರಿಯಲ್ಲಿ ತಾಂತ್ರಿಕ ಸಹಾಯ ಆಡಳಿತೆಯ ಸಲಹೆಗಾರರಾದ ಮಿಸ್. ವಿಲ್ಲಸರೂ ಬಂದಿದ್ದರು. ಜಿಲ್ಲೆಯಲ್ಲಿರುವ ಬೆತ್ತದ, ಬಿದಿರಿನ, ಬಳಪದ ಕಲ್ಲಿನ, ಕೊಂಬಿನ, ಕಂಚು ಇತ್ಯಾದಿ ಜಿಲ್ಲೆಯ ಗುಡಿ ಕೈಗಾರಿಕೆಗಳನ್ನು ಪರಿಶೀಲಿಸುವ ಬಗ್ಗೆ ಹಲವು ಸಂಘ ಸಂಸ್ಥೆಗಳನ್ನು ಭೇಟಿಯಾದರು.

ರಾಷ್ಟ್ರೀಯ ಉಳಿತಾಯ ಪಕ್ಷದ ಅಂಗವಾಗಿ ತಾ 2ರಲ್ಲು ಸಂಜೆ ಜಿಲ್ಲಾ ಕಲೆಕ್ಟರ್ ಶ್ರೀ ಎ. ಮಹಾಲಿಂಗಂ ಚೆಟ್ಟಿಯಾರರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯೊಂದು ಜರಗಿತು. ಜಿಲ್ಲೆಯ ಸಣ್ಣ ಉಳಿತಾಯ ಯೋಜನೆಯ ವ್ಯವಸ್ಥಾಪಕ ಶ್ರೀ ಜಿ. ಎಸ್. ಪಾಲ್‌ರವರು ಉಳಿತಾಯ ಯೋಜನೆಯ ಧ್ಯೇಯ ಧೋರಣೆಗಳನ್ನು ವಿವರಿಸಿದರು.

ಜಿಲ್ಲಾ ಪಂಚಾಯತುಗಳ ಸಂಘ ದ. ಕ. ಜಿಲ್ಲಾ ಪಂಚಾಯತುಗಳ ಪ್ರತಿನಿಧಿಗಳ ಸಭೆಯು ಕಳೆದ ತಾ 28ರಲ್ಲು ಸೆಂಟ್ರಲ್ ಕೋಆಪರೇಟಿವ್ ಬೇಂಕಿನ ಭವನದಲ್ಲಿ ಶ್ರೀ ಆರ್. ಹರಿ ಶೆಣೈಯವರ ಅಧ್ಯಕ್ಷತೆಯಲ್ಲಿ ಜರಗಿತು. ಮುಂದಿನ ಎಪ್ರಿಲ್ ತಿಂಗಳ ತಾ 28 ಮತ್ತು 29ರಲ್ಲು ದ. ಕ. ಜಿಲ್ಲಾ ಪರಿಷತ್ತನ್ನು ಜರಗಿಸಬೇಕೆಂದು ನಿರ್ಣಯವಾಯಿತು. ಪರಿಷತ್ತನ್ನು ಉದ್ಘಾಟಿಸಲು ಮದ್ರಾಸಿನ ಸ್ಥಾನಿಕ ಸ್ವರಾಜ್ಯ ಮಂತ್ರಿಗಳನ್ನು ಆಹ್ವಾನಿಸಬೇಕೆಂದು ಅಭಿಪ್ರಾಯವಾಯಿತು. ಸ್ವಾಗತ ಸಮಿತಿ ರಚಿಸಲ್ಪಟ್ಟು ಶ್ರೀ ಸಂಜೀವ ರಾವ್. ಆರ್. ಕೆ. (ಅಧ್ಯಕ್ಷ), ಶ್ರೀ ಆರ್. ಹರಿ ಶೆಣೈ (ಉಪಾಧ್ಯಕ್ಷ), ಶ್ರೀ ಕೆ. ಸೀತಾರಾಮ ಸೆಟ್ಟಿ (ಕಾರ್ಯದರ್ಶಿ ಹಾಗೂ ಖಜಾಂಚಿ)ಯರಾಗಿ ಆರಿಸಲ್ಪಟ್ಟರು.

ಮಿಲ್ ಬಟ್ಟೆಯ ಲ್ಯಾಸೆನ್ಸು—ಮಿಲ್ ಬಟ್ಟೆಯ ವ್ಯಾಪಾರಿಗಳು ಮಾತ್ರವಲ್ಲದೆ ವ್ಯಾಪಾರಿಗಳ ಬಗ್ಗೆ ಮುಂಗಡ ಹಣತೆತ್ತು ಭದ್ರತೆಗಾಗಿ ಮಿಲ್ ಬಟ್ಟೆಗಳನ್ನು ದಾಸ್ತಾನು ಇರಿಸಿ ಕೊಳ್ಳುವ ಬೇಂಕರರು ಮತ್ತು ಖಾಸಗೀ ಸಾಲಕೊಡುವವರು ನಿಯುಕ್ತವಾದ ಲ್ಯಾಸೆನ್ಸು ಪಡೆಯತಕ್ಕದ್ದೆಂದು ಟೆಕ್ಸ್‌ಟ್ಯಾಲ್ ಕಂಟ್ರೋಲ್ ಆಫೀಸರರ ಪ್ರಕಟಣೆ ಹೊರಟಿರುವುದು.

ಗೋ ಸಂರಕ್ಷಣ ಸಮಿತಿ ಸಭೆಯು—ಇದೇ ತಾ 4ರಲ್ಲು ಶ್ರೀ ದೇವರಾಜ್ ಎಮ್. ಕೆ. ಅವರ ಭವನದಲ್ಲಿ ಜರಗಿ ಈ ಕೆಳಗಣ ನಿರ್ಣಯಗಳನ್ನು ಮಾಡಿತು. (1) ಶ್ರೀ ದೇವರಾಜ್ ಎಮ್. ಕೆ. ಅವರು ಕೊಡಮಾಡಿದ ಬಿಜಾಯ್ ಸ್ಥಳದಲ್ಲಿ ಪ್ರಸ್ತುತ ಸಾಧಾರಣ 50 ಜಾನುವಾರುಗಳನ್ನು ಕಟ್ಟಿ ಸಾಕಲು ಅನುಕೂಲವಾಗುವಂತೆ ಒಂದು ಗೋಶಾಲೆಯನ್ನು ಏರ್ಪಡಿಸಿ ನಡೆಸುವುದಕ್ಕೋಸ್ಕರ ಅಂದಾಜು ರೂಪಾಯಿ 10,000ಬೇಕೆಂದು ನಿರ್ಣಯಿಸಲಾಯಿತು ಅಲ್ಲದೆ ಅಲ್ಲಿ ನೆರೆದ ಮೆಂಬರುಗಳಿಂದಲೇ ರೂಪಾಯಿ 213 ಆಗಲೇ ಸಂಗ್ರಹವಾಯಿತು. (2) ದ. ಕ. ಜಿಲ್ಲೆಯಲ್ಲಿ ಅನಾಥ ಗೋವುಗಳನ್ನು ಜಾಗ್ರತೆಯಿಂದ ಸಾಕಿ ಕೊಡುವುದಕ್ಕೆ ಮಲೆನಾಡಿನಲ್ಲಿ ವ್ಯವಸ್ಥೆ ಮಾಡಿ ಕೊಡ ಬೇಕೆಂದು ಮಲೆನಾಡಿನ ಆಗಾಮಿ ಪರಿಷತ್ತಿನಲ್ಲಿ ಕೇಳಿಕೊಳ್ಳಬೇಕೆಂದು ನಿರ್ಣಯವಾಯಿತು.

ಕೈಮಗ್ಗ ಸಪ್ತಾಹ—ಮಂಗಳೂರು ನೇಕಾರ ಸಹಕಾರಿ ಸಂಘದ ಆಶ್ರಯದಲ್ಲಿ ಅಖಿಲ ಭಾರತ ಕೈಮಗ್ಗ ಸಪ್ತಾಹವನ್ನು ತಾ 7ರಲ್ಲು ಜಿಲ್ಲಾ ಕಲೆಕ್ಟರ್ ಶ್ರೀ ಎ. ಮಹಾಲಿಂಗಂ ಚೆಟ್ಟಿಯಾರರು ಉದ್ಘಾಟಿಸಿದರು. ಮುನಿಸಿಪಲ್ ವೈಸ್ ಚೇರ್‌ಮೇನ್ ಶ್ರೀ ಬಿ. ಭಾಸ್ಕರ ಶೈಣಳ ಅಧ್ಯಕ್ಷತೆ ವಹಿಸಿದ್ದರು. ಮದ್ರಾಸು ಪ್ರಾಂತದ ಸಹಕಾರಿ ಸಂಘಗಳ ಜಾಯಿಂಟ್ ರಿಜಿಸ್ಟ್ರಾರ್ ಶ್ರೀ ಪಲನಿಯಪ್ಪ ಮುದಲಿಯಾರ್, ಶ್ರೀಗಳಾದ ಆರ್. ಕೆ. ಪ್ರಭು, ಎಚ್. ಆರ್. ಮಲ್ಯ, ಜಿ. ಬಿ. ಡಿ. ಸೋಜ ಮೊದಲಾದವರು ಕೈಮಗ್ಗದ ವಸ್ತುಗಳನ್ನು ಜನತೆಯು ಕೊಂಡು ಕೊಂಡು ಕೈಮಗ್ಗ ಕೈಗಾರಿಕೆಯನ್ನು ಬಲ ಪಡಿಸುವ ಆವಶ್ಯಕತೆ ಇತ್ಯಾದಿ ವಿಷಯಗಳಲ್ಲಿ ಮಾತನಾಡಿದರು. ಶ್ರೀ ಶಾಲಿನ್ಸರು ಧನ್ಯವಾದಗಳನ್ನು ಸಿರ್ಪಿಸಿದರು.

3 ವರ್ಷ ಗ್ಯಾರಂಟಿಯುಳ್ಳ ಚಪೋರಿಸ್ಟ್ ವಾಚು ಬರೇ ರೂಪಾಯಿ 14-6-0 ಕಿಮ್ಮತು ಸ್ಟ್ಯಾಚ್ 10 ನಂಬ್ರ 5.

4 ಜ್ಯುವೆಲ್ಸ್ ಕ್ರೋಮ್ ರೂ. 14 6, ರೋಲ್ಡ್ ಗೋಲ್ಡ್ ರೂ. 18, 15 ಜ್ಯುವೆಲ್ಸ್ ಕ್ರೋಮ್ ರೂ. 30/, ರೋಲ್ಡ್ ಗೋಲ್ಡ್ ರೂ. 32/8, 15 ಜ್ಯುವೆಲ್ಸ್ ವಾಟರ್ ಪ್ರೂಫ್ ರೂ. 35/, 17 ಜ್ಯುವೆಲ್ಸ್ ರೂ. 10 . ಪಾಕೇಟು ವಾಚು ರೂ. 12/ ಟೈಂಪೀಸು ರೂ 15 –

ಒಬ್ಬರಿಗೆ ಒಂದಕ್ಕಿಂತ ಹೆಚ್ಚಿಗೆ ವಾಚು ಕಳುಹಿಸುವುದಿಲ್ಲ. ಕ್ಯಾಟಲಾಗು ಧರ್ಮಾರ್ಥ.

FREE INDIA WATCH CO. N-K
Post Bag No. 6724, CALCUTTA-7.

ವಿವಿಧ ಪಾತ್ರೆಗಳು



ನೂರಾರು ವಿವಿಧ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯರ
ರಥಬೀದಿ ಉಡುಪಿ.

ಚ್ಯವನಪ್ರಾಶ

ಹಿಮಾಲಯ—ಉತ್ಕೃಷ್ಟ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಚ್ಯವನಪ್ರಾಶವು ಕ್ಷಯ, ದುರ್ಬಲತೆ ಇತ್ಯಾದಿ ಕಾಹಿಲೆಗಳಿಗೆ ದಿವ್ಯೌಷಧಿ. ವಯೋವೃದ್ಧರಿಗೆ ವಿಶೇಷ ಪರಿಣಾಮಕಾರಿಯಾದುದು. ಎಳೆ ಮಕ್ಕಳನ್ನು ಗಟ್ಟಿಮುಟ್ಟಾಗಿಯೂ ಆರೋಗ್ಯವಂತರಾಗಿಯೂ ಇರಗೊಡಿಸುವುದು. ಚ್ಯವನಪ್ರಾಶವನ್ನು ಸತತ ಉಪಯೋಗಿಸುವುದರಿಂದ ಆಯುಸ್ಸು ವೃದ್ಧಿಯಾಗುವುದು. ಪರೀಕ್ಷಾರ್ಥವಾಗಿ ಕೆಳಗಿನ ವಿಳಾಸಕ್ಕೆ ಬರೆದು ಒಮ್ಮೆ ತರಿಸಿ ನೋಡಿರಿ. ಸೇರಿಗೆ ರೂಪಾಯಿ 10/- ಬೆಲೆ.

ಕಾಲಿಕಮಾಲಿ ಆಯುರ್ವೇದ ಫಾರ್ಮಸಿ, ಋಷಿಕೇಶ (ದೆಹರಾಡನ್)
Kali Kamali Ayurved Pharmacy, RISHIKESH (Dehradun.)

ಶಾಂತ ವಾತಾವರಣದಲ್ಲಿ ಅತ್ಯಾಧುನಿಕ ಮಾದರಿಯ ಮೇಲ್ತರಗತಿಯ
—ವಸತಿ ಮತ್ತು ಭೋಜನಗೃಹ—

ಸ್ವಸ್ತಿಕ್ ಲೋಜ್

ಪಳನೀರು ರಸ್ತೆ, ಮಂಗಳೂರು.

ಗಾಳಿ ಬೆಳಕುಗಳಿಂದ ಸುಸಜ್ಜಿತವಾದ ಸಿಂಗಲ್ ಮತ್ತು ಡಬ್ಬಲ್ ಕೋಣೆಗಳು!
ತೃಪ್ತಿಕರವಾದ ಸೇವೆ ಮತ್ತು ಸರ್ವಾನುಕೂಲತೆಗಳು!
ಶಾಕಾಹಾರಿಗಳಿಗೆ ಸುಶಿತ ಬ್ರಾಹ್ಮಣ ಅಡಿಗೆ ಭಟ್ಟರಿಂದಲೇ ಭೋಜನ ಮತ್ತು ಉಪಾಹಾರ ತಯಾರಿಕೆ! ದರ ಸುಲಭ! ಸಂದರ್ಶಿಸಿ ಸಮಾಧಾನ ಪಡೆಯಿರಿ!!

SEASON DEPOSITS.

Are now accepted for periods from 3 to 6 months 3½% interest per annum for amounts of Rs. 500/- and multiples thereof. No deposit is allowed to run beyond 15–10–1954.

Attractive rates of interest are offered for Fixed Deposits for periods ranging from 1 to 24 months.

Banking transactions of all kinds are undertaken.

Branches throughout South Kanara, and one each in Mercara and Fort, Bombay.

THE VIJAYA BANK LIMITED,
Head Office: **MANGALORE.**

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 25 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

THE MOOLKY BANK LTD.
Moolky, S. K.



(೨ನೇ ಪುಟ ನೋಡಿರಿ)
ಸಿಗುತ್ತವೆ. ಉತ್ತರ ಕನ್ನಡ ಜಿಲ್ಲೆಯು ಈ ಜಲಶಕ್ತಿಯನ್ನು ಮಾತ್ರ ಬಳಸಿಕೊಂಡರೂ ಸುಮಾರು ಜೋಗದ ವಿದ್ಯುಚ್ಛಕ್ತಿಯ ಹತ್ತು ಪಾಲು ಹೆಚ್ಚು ಶಕ್ತಿಯನ್ನು ಉತ್ಪಾದಿಸಬಲ್ಲವು. ದಕ್ಷಿಣ ಕನ್ನಡಕ್ಕೆ ಇಷ್ಟು ಪುಷ್ಕಳ ಅನುಕೂಲತೆ ಇಲ್ಲದಿದ್ದರೂ ಪಶ್ಚಿಮ ಘಟ್ಟದ ಕಿಬ್ಬದಿಯಲ್ಲಿ ಧುಮುಕುವ ಅಬ್ಬಿಗಳಿಗೆ ಕೊರತೆಕಾಣುವುದಿಲ್ಲ. ಇವುಗಳನ್ನು ಸಮುಚಿತ ರೀತಿಯಲ್ಲಿ ಬಳಸಿಕೊಂಡು ಹೇರಳ ವಿದ್ಯುತ್ತನ್ನು ಉತ್ಪಾದಿಸಿ, ಕೈಗಾರಿಕೆಗಳನ್ನು ಬೆಳೆಸಲು ಪ್ರಯತ್ನ ನಡೆಯಬೇಕು. ಕನ್ನಡದ ಮಲೆನಾಡಿನಲ್ಲಿ ಭೂಗತಸಂಪತ್ತಿಗೂ ಕೊರತೆ ಇಲ್ಲ. ಕಬ್ಬಿಣ, ಮ್ಯಾಂಗನೀಸ್, ಸೀಸ, ಆಸ್ಬೆಸ್ಟಾಸ್, ಗಂಧಕ ಮುಂತಾದ ಖನಿಜಗಳು ಈ ಪ್ರದೇಶದಲ್ಲಿವೆಯೆಂದು ತಿಳಿಯುತ್ತವೆ. ಅವುಗಳ ಉಪಯೋಗ ಮಾಡಿಕೊಳ್ಳುವುದು ಎಷ್ಟು ಬೇಗ ಸಾಧ್ಯವಾದೀತೋ, ಕನ್ನಡ ನಾಡಿನ ಮಹತ್ವ ಅಷ್ಟು ಬೇಗ ಪ್ರಸಿದ್ಧವಾಗುತ್ತದೆ.

ರೊಕ್ಕದ ಪೈರು

ಅಡಿಕೆ, ಮಸಾಲೆ ಮತ್ತು ಚಾ ಕಾಫಿಗಳು ಮಲೆನಾಡಿನ ಉತ್ಪಾದನೆಯಲ್ಲಿ ಹೆಸರಾದವು. ಅಡಿಕೆ ತೋಟಗಳು, ತಂಪಾದ ಕಣಿವೆಗಳಲ್ಲಿ ಸೊಂಪಾಗಿ ಬೆಳೆಯುತ್ತವೆ. ಪೇಟೆಯಲ್ಲಿ ಅಡಿಕೆಯ ವ್ಯಾಪಾರ ಉತ್ಕರ್ಷವನ್ನು ಹೊಂದುತ್ತಿದ್ದು—ಭಾರತದ ಲಾಭದಾಯಕ ನಿರ್ಯಾತ ವ್ಯವಹಾರಗಳಲ್ಲಿ ಅಡಿಕೆಗೆ ಉನ್ನತ ಸ್ಥಾನ ಪ್ರಾಪ್ತವಾಗಿರುತ್ತದೆ. ದಕ್ಷಿಣಕನ್ನಡ ಜಿಲ್ಲೆಯ ವಿಟ್ಲದಲ್ಲಿ ಅಡಿಕೆ ಸಂಶೋಧನಾ ಕೇಂದ್ರವನ್ನು ಸ್ಥಾಪಿಸಲು ಭಾರತ ಸರಕಾರ ನಿರ್ಧರಿಸಿದೆ. ಅಡಿಕೆ ವ್ಯವಸಾಯಗಾರರು ಒಳ್ಳೆಯ ಸಂಘಟನೆಯನ್ನು ಮಾಡಿಕೊಂಡಿದ್ದು, ಸರಕಾರದಿಂದಲೂ ಹೆಚ್ಚಿನ ಸಹಾಯ ಹಾಗು ಪ್ರಯೋಜನಗಳು ಇವರಿಗೆ ಸಿಗುತ್ತವೆ. ಮಲೆನಾಡಿನ ತೀರ ತೆಂಕಣದಲ್ಲಿ (ಅರ್ಥಾತ್ ತಿರುಕೊಚ್ಚಿಯಲ್ಲಿ) ರಬ್ಬರು ತೋಟಗಳು ಕಂಡುಬಂದರೂ—ಮಸಾಲೆ ಜಿನಸುಗಳಿಗೆ ಮತ್ತು ಕಾಫಿಯ ತೋಟಗಳಿಗೆ ಉಳಿದ ಭಾಗ ಹೆಸರಗೊಂಡಿದೆ. ಕಾಫಿಯ ತೋಟಗಳ ನಡುವೆ ಏಲಕ್ಕಿ ಕರಿಮೆಣಸು ಮುಂತಾದವುಗಳನ್ನು ಕೃಷಿ ಮಾಡುತ್ತಿದ್ದರೂ ಸಹ—ಸದಾಹಸುರಾದ ಕಾಡಿನ ಕಣಿವೆಗಳಲ್ಲಿ ಈ ಮಸಾಲೆಗಳು ಹೆಚ್ಚು ಲಾಭವನ್ನು ತರುತ್ತವೆ. ಕಾಡಿನ ಕಣಿವೆಯನ್ನು ಹೊಕ್ಕು, ಅಲ್ಲಿಯ ನೆಲದಲ್ಲಿ ಮಸಾಲೆ ಜಿನಸುಗಳ ತೋಟಗಳನ್ನು [illegible] ದೊರೆತರೆ ತುಂಬ ಪ್ರಯೋಜನವಾದೀತು. ಕಾಫಿಯ ಬೆಳೆಯು ಮೈಸೂರು ರಾಜ್ಯದ ಚಿಕ್ಕಮಗಳೂರು ಜಿಲ್ಲೆಯಿಂದ ತೊಡಗಿ, ಕೊಡಗು, ನೀಲಗಿರಿಗಳ ಮೂಲಕ, ತಿರುಕೊಚ್ಚಿಯ ಮೇರೆಯನ್ನು ವ್ಯಾಪಿಸುತ್ತದೆ. ೧೮೫೦ನೇ ಇಸವಿಯಲ್ಲಿ ಮ[illegible]ಲಕ್ಷ ಎಕ್ರೆ ಪ್ರದೇಶದಲ್ಲಿ ಪಸರಿಸಿದ್ದ ಕಾಫಿ ತೋಟಗಳು, ಈಗ ಎರಡು ಲಕ್ಷ ಎಕ್ರೆಯಲ್ಲಿ ಮಾತ್ರ ಕಂಡು ಬರುತ್ತವೆ. ಮೈಸೂರಿನ ಶಿವಮೊಗ್ಗ ಜಿಲ್ಲೆಯಲ್ಲಿ ಹಿಂದೆ ಕಾಫಿಯ ತೋಟಗಳು ಇದ್ದವು—ಇಂದು ಅವುಗಳ ಕುರುಹನ್ನೂ ಕಾಣುವಂತಿಲ್ಲ.

ಅಭಿವೃದ್ಧಿಗೆ ಆಸ್ಪದ

ಕೇಂದ್ರ ಸರಕಾರವು ದ್ವಿತೀಯ ಯುದ್ಧಾರಂಭದ ಗಳಿಗೆಯಲ್ಲಿ ಕಾಫೀ ಮಂಡಳವೊಂದನ್ನು ರಚಿಸಿ, ಈ ವ್ಯವಸಾಯದ ರಕ್ಷಣೆಗೆ ಪ್ರಯತ್ನ ಕೈಗೊಂಡಿತು. ಮಲೆನಾಡು ಪ್ರದೇಶದಲ್ಲಿ ಯಥೋಚಿತ ಅನುಕೂಲತೆಗಳು ಲಭ್ಯವಾದರೆ ಇನ್ನೂ ಎರಡೂವರೆ ಲಕ್ಷ ಎಕ್ರೆ ಪ್ರದೇಶದಲ್ಲಿ ಕಾಫಿ ಮುಂತಾದ ತೋಟಗಳನ್ನು ರಚಿಸಿ ಎರಡು ಲಕ್ಷಕ್ಕೂ ಹೆಚ್ಚು ಜನರಿಗೆ ಉದ್ಯೋಗ ಒದಗಿಸಿ ಕೊಡಬಹುದು. ಇದರಿಂದಾಗಿ ವ್ಯಾಪಾರ ವ್ಯವಹಾರದ ಹೊಸ ಕೇಂದ್ರಗಳು ಹುಟ್ಟಿಕೊಂಡು, ಸಾವಿರಾರು ಮಂದಿಗೆ ಕೈ ತುಂಬ ಸಂಪಾದನೆಯಾದೀತು. ಗೇರುಬೀಜ ಮತ್ತು ಕಿತ್ತಳೆ ಹಣ್ಣುಗಳ ವ್ಯವಸಾಯಕ್ಕೂ ಮಲೆನಾಡಿನ ತಪ್ಪಲು ಹೆಸರಾಗಿರುತ್ತದೆ—ಕೊಡಗಿನಲ್ಲಿ ಕೇಂದ್ರ ಸರಕಾರವು ಇತ್ತೀಚೆಗೆಯೇ ಕಿತ್ತಳೆ ಹಣ್ಣಿನ ಸಂಶೋಧನಾಲಯವೊಂದನ್ನು ಸ್ಥಾಪಿಸಲಿದ್ದು, ಈ ಸಂಸ್ಥೆಗೆ ಬೇಕಾಗುವ ಭೂಮಿ ಹಾಗು ಅದರ ಕಟ್ಟಡಗಳನ್ನು ಒಟ್ಟು ಉಳಿದ ಎಲ್ಲ ಆವರ್ತ ಹಾಗು ಅನಾವರ್ತ ವೆಚ್ಚವನ್ನು ಭಾರತ ಸರಕಾರವು ವಹಿಸುತ್ತವೆ. ಮಲೆನಾಡು ರೊಕ್ಕದ ಪೈರಿಗೆ ಹೆಸರಾದ ಪ್ರದೇಶವೆಂದು ಇದರಿಂದ ಸಿದ್ಧವಾಗುತ್ತದೆ. ಇದರ ಅಭಿವೃದ್ಧಿಯಿಂದ ವಿದೇಶಗಳ ವ್ಯವಹಾರವು ಕುದುರಿಕೊಂಡು ಹಣ ವಿನಿಮಯ ಸುಕರವಾಗುತ್ತದೆ. ಸಾವಿರಾರು ಜನರಿಗೆ ಉದ್ಯೋಗ ದೊರಕುತ್ತದೆ.

ಆದರೆ, ನಮ್ಮ ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಈ ಪ್ರದೇಶದ ಅಭಿವೃದ್ಧಿಗೋಸ್ಕರ ಯಾವ ಕ್ರಮವನ್ನೂ ಸೂಚಿಸದೆ, ಯೋಜನಾ ಆಯೋಗ ಅಲಕ್ಷ್ಯವನ್ನು ತೋರಿಸಿದೆ. ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಾದರೂ ಈಗ ಮರೆಯಲ್ಲಿ ಉಳಿದ ಮಲೆನಾಡು, ಯೋಜನಾ ಆಯೋಗದ ಕಣ್ಣಿಗೆ ಬಿದ್ದು, ಇದರ ನಾಲ್ಕಷ್ಟು ಹೆಚ್ಚು ಮೊತ್ತವನ್ನು ಮಲೆನಾಡಿನ ಅಭಿವೃದ್ಧಿಗಾಗಿ ವಿನಿಯೋಗಿಸುವರೆಂದು ಆಶಿಸೋಣ! ಮಲೆನಾಡು ಕನ್ನಡದ ಸಂಪತ್ತುಗಳಲ್ಲೊಂದು ಶ್ರೇಷ್ಠವಾದುದರಿಂದ, ಕನ್ನಡಿಗರು ಈ ವಿಷಯದಲ್ಲಿ ಒಗ್ಗಟ್ಟಿನಿಂದ ಒಮ್ಮನಸ್ಸಿನಿಂದ ಕೇಂದ್ರ ಹಾಗೂ ರಾಜ್ಯ ಸರಕಾರಗಳನ್ನು ಒತ್ತಾಯಿಸೋಣ! ಜೇನು ಸುರಿವ, ಹಾಲು ಹರಿವ ಸ್ವರ್ಗವೇ ಕನ್ನಡ ನಾಡು ಎಂದು ಸಾರುವ ಕವಿತೆಯ ಸಾಲಿನಿಂದ ನಾವು ಸ್ಫೂರ್ತಿ ಪಡೆಯೋಣ!

ಖಾತ್ರಿ ಚಿನ್ನದ ನೆಕ್‌ಲೇಸ್ ತರಹವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,

ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.

ಫೋನು ನಂಬ ೯೯

ದಿ ಬೊಂಬೆಲೈಫ್ ಎಶ್ಯೂರೆನ್ಸ್ ಕಂಪೆನಿ ಲಿ., ಬೊಂಬಾಯಿ

1953ನೆ ವರ್ಷದ ವೆಲ್ಯುಯೇಶನ್ ಪ್ರಕಾರ ಉದಾರ ಬೋನಸ್

ಎಂಡೋವ್ಮೆಂಟ್ ಪೊಲಿಸಿಗಳ ಮೇಲೆ ರೂ. 10- } ವರ್ಷ ಒಂದರ
ಜೀವಾವಧಿ ಪೊಲಿಸಿಗಳ ಮೇಲೆ ರೂ. 12-8 } ರೂ. 1000ಕ್ಕೆ

(ಪ್ರಚಲಿತ ಪ್ರೀಮಿಯಮ್ ಸ್ಕೇಲಿನಂತೆ)

ಜೀವ ವಿಮೆಗಾಗಲೀ, ಪ್ರಾತಿನಿಧ್ಯಹೊಂದಲಿಕ್ಕಾಗಲೀ ನಮ್ಮೊಡನೆ ವಿಚಾರಿಸಿದರೆ ಅಪೇಕ್ಷಿತ ಫಲವನ್ನೀಯುವುದು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಚೀಫ್ ಏಜಂಟ್ಸ್, ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್.
ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ, ದ. ಕ.

ಅಥವಾ ಶಾಖಾ ಕಛೇರಿಗಳಲ್ಲಿ ಮಧುರೆ, ಬೆಂಗಳೂರು, ತ್ರಿವೇಂದ್ರಮ್, ಕಲ್ಲಿಕೋಟೆ, ಬೊಂಬಾಯಿ, ಮಂಗಳೂರು ಮತ್ತು ಕೊಯಮುತ್ತೂರು.

The Bombay Life Assurance Co., Ltd., Bombay.

'ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ ೧೯೧೦)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರಿ,

ಇವರ **ನವಜೀವಾತು** ಎಂಬ **ಸೂತಿಕಾ ರಸಾಯನ**

ಬಾಣಂತಿಯರ ಸಲುವಾಗಿಯೇ ವೇದ ಶಾಸ್ತ್ರ ಪ್ರಕೃತವ ಪೇವ ಸ್ಥಿತಿಯನ್ನು ನಿರ್ಮೂಲಿಸಿ ತವರಾರಿಲ್ಲಿಟ್ಟ ಅನೋಘವಾದ ಮಧುರವ್ರವರಸಾಯನ



[illegible] ಡಾ। ಜೆ. ಸಿ. ಶಾಸ್ತ್ರಿ ಯಂ. ಏ. ಎಂ.
ಕೊಡಿಯಾಲಬೈಲು [illegible]

ಡಾ। ಏ. ಕೆ. ಶಿವರಾಮರಾವ, ಕುಂಜಿಬೆಟ್ಟು, ಉಡುಪಿ.

ಸ್ವೀಕಾರ—ವಿಮರ್ಶೆ

ಪ್ರೇಮಚಂದ: ಸಾಹಿತ್ಯ ಹಾಗೂ ವಿಮರ್ಶೆ—

ಸಂಪಾದಕರು ಹಾಗು ಪ್ರಕಾಶಕರು: [illegible], ಬಳ್ಳಿಯ ಚಾವಡಿ, ಜನರೇಟ್, ಧಾರವಾಡ. ಬೆಲೆ: ರೂ. ೧—೮—೦

ಭಾರತೀಯ ಕಥಾ ಸಾಹಿತ್ಯಕ್ಕೆ ಉನ್ನತವಾದ ಸ್ಥಾನವನ್ನು ಕಲ್ಪಿಸಿಕೊಟ್ಟು, ಅಂತರ್‌ರಾಷ್ಟ್ರೀಯ ಖ್ಯಾತಿಯನ್ನು ಗಳಿಸಿದವರಲ್ಲಿ ರವೀಂದ್ರನಾಥ ಠಾಕೂರ, ಶರಚ್ಚಂದ್ರ ಚಟರ್ಜಿಯವರ ಬಳಿಕ ಪ್ರೇಮಚಂದರ ಹೆಸರು ಬರುತ್ತದೆ. ರಾಷ್ಟ್ರಭಾಷೆಯಾಗಿ ಅಂಗೀಕರಿಸಲ್ಪಟ್ಟ ಹಿಂದಿಯ ಉನ್ನತಿಯನ್ನು ಇದೀಗ ಪಡೆದುಕೊಂಡಿರುವ ಹಿಂದಿಯಲ್ಲಿ ಪ್ರೇಮಚಂದರು ಕೈಯಾಡಿಸದ ಕ್ಷೇತ್ರವಿಲ್ಲ. ಮಹಾತ್ಮಾಗಾಂಧೀಜಿಯವರ ಪ್ರಭಾವದಿಂದ ಆಕರ್ಷಿತರಾಗಿ ಸ್ವಾತಂತ್ರ್ಯ ಹೋರಾಟದ ಸೋಲು ಗೆಲುವುಗಳನ್ನು ನಗುತ್ತಾ ಸಹಿಸುತ್ತವಂತೆಯೇ—ಪ್ರೇಮಚಂದರು ಹಿಂದೀಯ ಸಾಹಿತ್ಯಕ್ಕೆ ಉಚಿತವಾದ, ಜನತೆಯ ಮನೋಭೂಮಿಕೆಯನ್ನು ವಿಶಾಲಗೊಳಿಸುವ, ರಚನಾತ್ಮಕ ಪ್ರವೃತ್ತಿಯನ್ನು ಜಾಗ್ರತಗೊಳಿಸುವ, ಶೀಲ-ಚಾರಿತ್ರ್ಯಗಳನ್ನು ಸಂಪನ್ನಗೊಳಿಸುವ ಉನ್ನತ ಮಟ್ಟದ ಸಾಹಿತ್ಯ ನಿರ್ಮಾಣ ಕಾರ್ಯಕ್ಕೆ ಕೈಹಾಕಿ ಕೃತಕೃತ್ಯರಾದರು. ಆವರ ಜೀವನ ಹಾಗು ಅವರ ಕಥಾಸಾಹಿತ್ಯದ ಪರಿಚಯವನ್ನು ಕನ್ನಡಿಗರಿಗೆ ಈ ಮೊದಲಿನ ಪುಸ್ತಕವು ಒದಗಿಸಿಕೊಟ್ಟ ಮಿಂಚಿನ ಬಳ್ಳಿಯ ಸಂಪಾದಕರು, 'ಸಾಹಿತ್ಯ ಹಾಗೂ ವಿಮರ್ಶೆ' [illegible] ಭಾಗದಲ್ಲಿ ಪ್ರೇಮಚಂದರ ಸಣ್ಣ ಸಾಹಿತ್ಯ, ಪ್ರಬಂಧ ಸಾಹಿತ್ಯ ಮತ್ತು ಬಾಲಸಾಹಿತ್ಯದ ಪರಿಚಯವನ್ನು ನೀಡಿರುವರು. ಗೆಳೆಯರೊಬ್ಬರಿಗೆ ಬರೆದ ಪತ್ರವೊಂದರಲ್ಲಿ ಪ್ರೇಮಚಂದರು ಹಿಂದೀ ಸಾಹಿತ್ಯ ಹಾಗೂ ಅದರಲ್ಲಿ ಮಡಿದ ತಮ್ಮ ಕುರಿತಾದ ತಮ್ಮ ಅನಿಸಿಕೆ, ಅಭಿಪ್ರಾಯಗಳನ್ನು ವ್ಯಕ್ತಗೊಳಿಸಿರುವರು. [illegible] ಉದರ ನಿರ್ವಹಣೆಗೆ ಈ ವ್ಯವಸಾಯ ಪ್ರಯೋಜನವಿಲ್ಲೆಂಬ ಅರಿವು ತುಂಬ ನೋವುಂಟುಮಾಡುತ್ತದೆ. ಅವರ ಹುಟ್ಟು ಸುತ್ತು [illegible] ಅರಿಗಳನ್ನು ಪ್ರಕಟಿಸದೆ ಇಟ್ಟುಕೊಂಡಿರಲಿಲ್ಲ. "ಹೊಟ್ಟೆಗಾಗಿ ಹಿಟ್ಟು ಸಿಗುತ್ತದೆ—ಸಾಕು. ಸಾಹಿತ್ಯ ಮತ್ತು ಸ್ವದೇಶಗಳ ಸಲುವಾಗಿ ಏನನ್ನಾದರೂ ಮಾಡಲು ಪ್ರಯತ್ನಿಸುತ್ತಿರುತ್ತೇನೆ. ನಾನಿಲ್ಲದೂ ಸ್ವರಾಜ್ಯ ಸಂಗ್ರಾಮದಲ್ಲಿ ವಿಜಯಿಗಳಾಗಬೇಕೆಂಬುದೇ ನನ್ನ ಹಿರಿಯ ಆಕಾಂಕ್ಷೆ" ಎಂದು ಹೃದಯದೊಳಗಿನ ಭಾವನೆಗಳನ್ನು ಬಿಚ್ಚಿ ತೋರಿಸಿದ ಪ್ರೇಮಚಂದರನ್ನು ಅವರ ಮಹತ್ವ ಕಾಲಿಗೆ ಸೇರಿಸಲು ಯಾವ ಅಡ್ಡಿಯೂ ಇಲ್ಲ. ಇಂಥವರು ಸೃಷ್ಟಿಸಿದ ಸಾಹಿತ್ಯ ಚಿರಂತನವಾಗಿರುತ್ತದೆಂದು ಪ್ರತ್ಯೇಕ ಹೇಳಬೇಕಾಗಿಲ್ಲ—"ಸಾಹಿತ್ಯದ ಉದ್ದೇಶ" ಎಂಬ ಪ್ರಬಂಧದಲ್ಲಿ ಪ್ರೇಮಚಂದರು ಇಂದಿನ ಸಾಹಿತ್ಯದ ಲಕ್ಷಣ ಹಾಗು ಪ್ರವೃತ್ತಿ [illegible] ಮಾಡುತ್ತಾ, ಕರ್ತವ್ಯಗಳನ್ನು ತಿಳಿಸಿ, ಹೊಸ ಮಾನವನನ್ನು ಕ್ರಮಿಸಬೇಕಾದ ಅವಶ್ಯಕತೆಯನ್ನು ಪ್ರತಿಪಾದಿಸಿದ್ದಾರೆ. ಸಾಹಿತ್ಯಕ್ಕೆ [illegible] ಅಧ್ಯಾತ್ಮಿಕ [illegible] ಹೊಸ ಕರ್ತವ್ಯದ ಸಂದೇಶವನ್ನು ಬೀರುವ ಶಕ್ತಿಯ ಅವಶ್ಯಕತೆ ಇದೆ. ಹಿಂದಿನ ಕಲಾವಿದರು "ಬಣ್ಣಗೆಟ್ಟ [illegible]ಗಳಲ್ಲಿ, [illegible] ಕನ್ನಗಳಲ್ಲಿ [illegible], [illegible] ಮತ್ತು [illegible]ಗಳನ್ನು ಕಂಡದ್ದೇ ಹೊರತು, [illegible] ಹೊಲಗಳಲ್ಲಿ, [illegible] ಹಾಗೂ [illegible] ಮತ್ತು ಕಷ್ಟ ಸಹಿಷ್ಣುತೆಯ [illegible] ನೋಡಲಿಲ್ಲ." ಪ್ರೇಮಚಂದರು ಸಾಹಿತ್ಯ [illegible] ಪರಿಪೂರ್ಣತೆಯನ್ನು [illegible] ಮನೋರಂಜನೆ [illegible] ಉನ್ನತವಾದ [illegible] ಸ್ವತಂತ್ರತೆಯ [illegible]. ಸೌಂದರ್ಯದ [illegible] [illegible] ಪ್ರಭಾವ [illegible], [illegible] [illegible] ಸಾಹಿತ್ಯ [illegible] [illegible] ಈ

ಗುರಿಯನ್ನಿಟ್ಟುಕೊಂಡು ಕೆಲಸ ಮಾಡುವ ಸಾಹಿತಿಯು ಸುಲಭದಲ್ಲಿ ಗುರಿಯನ್ನು ಮುಟ್ಟಲಿಕ್ಕಿಲ್ಲ. ಏಕೆಂದರೆ ಕಥೆಯ ಕಲೆಯನ್ನೂ ಕಾದಂಬರಿಯ ತಂತ್ರವನ್ನೂ ಕೈಗೂಡಿಸಿ ಕೊಳ್ಳುವುದು ಎಲ್ಲರಿಂದಾಗದ ಕೆಲಸ. ಅದಕ್ಕೆ ಅದ್ಭುತ ಪ್ರತಿಭೆ ಬೇಕು, ನಿರೀಕ್ಷಣ ಸಾಮರ್ಥ್ಯ ಬೇಕು; ಕಲ್ಪನೆಯ ಚಮತ್ಕಾರಬೇಕು; ಆದರ್ಶದ ಬೆಳಕಿನಲ್ಲಿ ಇವುಗಳೆಲ್ಲ ಮೇಳವಿಸಬೇಕು. ಮನುಷ್ಯನ ಮನೋವ್ಯಾಪಾರಗಳನ್ನು ಚಿತ್ರಿಸಿ, ಅಜ್ಞಾತ ಭಾವನೆಗಳ ಕೈವಾಡವನ್ನು ದಿಗ್ದರ್ಶಿಸುವುದು ಅರ್ವಾಚೀನ ಕಥನ ಸಂಪ್ರದಾಯ. ಕಥೆ ಹತ್ತು—ಹದಿನೈದು ನಿಮಿಷಕ್ಕಿಂತ ಹೆಚ್ಚಿನ ಸಮಯ ತೆಗೆದುಕೊಳ್ಳುವುದಿಲ್ಲ. ಅದರ ಮೊದಲ ವಾಕ್ಯವೇ ನಮ್ಮನ್ನು ಸೆಳೆಯುತ್ತದೆ—ಮತ್ತು ಕೊನೆಯವರೆಗೂ ಮುಗ್ಧ ಮಾಡುತ್ತವೆ. ತುಸು ಚಟುವಟಿಕೆ, ಒಗರು ತಾಜಾತನ, ವಿಕಾಸ ಭಾವ, ಹಾಗೂ ತಾತ್ವಿಕ ಧ್ಯೇಯಗಳು ಇದರಲ್ಲಿ ಸಮಾವೇಶಗೊಳ್ಳುತ್ತವೆ. ಮಧುರ ಸುಂದರ ಭಾವಗಳಿಗೊಂದು ರೂಪುಗೊಡುವುದೇ ಕಥೆಯ ಸಾರಸರ್ವಸ್ವ. ಮನೋವೈಜ್ಞಾನಿಕ ಸತ್ಯವನ್ನು ಆಧರಿಸಿದ ಕಥೆಯೇ ಎಲ್ಲ ಕಥೆಗಳಿಗಿಂತ ಉತ್ತಮ. ವಾಚಕನ ಹೃದಯ ದ್ವಾರವನ್ನು ತೆರೆದು ಒಳ ಪ್ರವೇಶಿಸಿ ಅವನಲ್ಲಿ ಸದಸದ್ವಿವೇಕವನ್ನು ಮೂಡಿಸಬಲ್ಲ ಕಥೆಯ ಕಲೆಯನ್ನು ಪ್ರೇಮಚಂದರು ಸ್ವಾರಸ್ಯವಾದ ರೀತಿ ವರ್ಣಿಸಿದ್ದು, ಎಲ್ಲ ಭಾಷೆಯ ಸಾಹಿತಿಗಳಿಗೂ ಇದು ಮನನೀಯವಾಗಿರುತ್ತದೆ. ಕಾದಂಬರಿಯ ಬಗೆಗೂ ಪ್ರೇಮಚಂದರ ದೃಷ್ಟಿ ತಾತ್ವಿಕ ದೃಷ್ಟಿಯಿಂದ ಕೂಡಿದೆ. ಯಥಾರ್ಥವಾದ ಮತ್ತು ಆದರ್ಶವಾದಗಳು ಪರಸ್ಪರ ತಿಕ್ಕಾಟಕೆ ಬಾರದೆ, ಅವುಗಳಲ್ಲಿ ಸಮನ್ವಯವನ್ನು ಸಾಧಿಸಿಕೊಳ್ಳಬೇಕಾದುದೇ ಸಾಹಿತಿಗೆ ಭೂಷಣ. ಯಥಾರ್ಥವಾದವು "ದುರ್ಬಲತೆಗಳ ಚಿತ್ರಣ ಮಾಡುವಾಗ ಶಿಷ್ಟತೆಯ ಸೀಮೆಯನ್ನು ಉಲ್ಲಂಘಿಸಿದಲ್ಲಿ ಆಪತ್ತಿಜನಕವಾಗುತ್ತದೆ. ನಮ್ಮ ದೌರ್ಬಲ್ಯ, ವೈಷಮ್ಯ ಹಾಗು ಕ್ರೌರ್ಯಗಳ ನಗ್ನ ಚಿತ್ರವೇ ಯಥಾರ್ಥವಾದವಾದುದರಿಂದ ಅದು ನಮ್ಮನ್ನು ನಿರಾಶಾವಾದಕ್ಕೆ ತಳ್ಳುತ್ತದೆ; ಮಾನವನ ಚಾರಿತ್ರ್ಯದ ಮೇಲಿನ ಆತ್ಮವಿಶ್ವಾಸ ಹಾರಿ ಹೋಗುತ್ತದೆ, ಸುತ್ತಲೂ ಕೆಟ್ಟುದೇ ಗೋಚರಿಸುತ್ತದೆ. ಮನುಷ್ಯನ ಚಿತ್ತಕ್ಕೆ ಇದು ಪ್ರಸನ್ನತೆಯನ್ನುಂಟು ಮಾಡಲಾರದು—"ಸ್ವಲ್ಪ ಸಮಯವಾದರೂ ಸರಿಯೇ, ಕುತ್ಸಿತ ಭಾವನೆಗಳಿಂದ ಮುಕ್ತಿ ದೊರೆಯುವ, ತಾನು ಚಿಂತೆಯಲ್ಲಿ ಬಿದ್ದಿದ್ದೇನೆಂಬುದನ್ನು ಮರೆಯಗೊಡುವ, ತನಗೆ ಸಜ್ಜನ ಸಹೃದಯರ ಉದಾರಜೀವಿಗಳ ದರ್ಶನ ಲಾಭವಾಗುವ, ಛಲ, ಕಪಟ, ವಿರೋಧ, ವೈಷಮ್ಯಗಳಿಗೆ ಪ್ರಾಧಾನ್ಯವಿರದ ಲೋಕಕ್ಕೆ ಹಾರಿ ಹೋಗಲು ಅದು ಅಪೇಕ್ಷಿಸುತ್ತದೆ.' ಆದುದರಿಂದ ಪ್ರಲೋಭನೆಗಳ ಎದುರಿಗೆ ತಲೆಬಾಗಿಸದೆ ಅವುಗಳನ್ನು ಸೋಲಿಸುವಂಥವೂ ವಾಸನೆಗಳ ಜಾಲದಲ್ಲಿ ಸಿಗದೆ ಅವುಗಳ ದಮನ ಮಾಡುವಂಥವೂ ಆದ ನೈಸರ್ಗಿಕ ಪ್ರಕಾರವನ್ನೂ, ಸತ್ವವನ್ನೂ ಸಾಹಿತಿಯ ಪಾತ್ರಚಿತ್ರಣ ಪ್ರಕಟಗೊಳಿಸಬೇಕು. ಕಾದಂಬರಿಯಲ್ಲಿ ಕುವಾಸನೆಗಳ, ದೌರ್ಬಲ್ಯಗಳ, ಅಪಕೀರ್ತಿ ಮತ್ತು ಆಸಕ್ತಿಗಳ ವರ್ಣನೆ ವಾಂಛನೀಯವೆಂದು ಪ್ರೇಮಚಂದರು ಭಾವಿಸುವುದಿಲ್ಲ. "ಹೇಡಿಗೆ 'ನೀನು ಹೇಡಿ ಇರುವೆ' ಎಂದು ಹೇಳಿದ ಮಾತ್ರಕ್ಕೆ ಅವನು ಶೂರನಾಗಲಾರ". ಯಾವ ಕಾದಂಬರಿಯನ್ನು ಓದಿ ಮುಗಿಸಿದ ಬಳಿಕ ಓದುಗರಿಗೆ ಉತ್ಕರ್ಷದ ಅನುಭವವಾಗುವುದೋ ಮತ್ತು ಸದ್ಭಾವಗಳು ಜಾಗ್ರತವಾಗುವುವೋ ಅದೇ ಯಶಸ್ವಿಯಾದ ಕಾದಂಬರಿ" ಇವರ ಕಾದಂಬರಿಯಲ್ಲಿ ಜೀವನದ ಚೌಕಟ್ಟನ್ನು ಮೀರಿ ಹೊರಗಿನ ವಸ್ತುವನ್ನೇನು ತರುವುದು ಬೇಡ—ಲೇಖಕನ ಬುದ್ಧಿಯು ಕಲ್ಪನಾ ಕುಶಲವಾಗಿದ್ದರೆ ಅದು ಸೂಕ್ಷ್ಮತಮ ಭಾವಗಳಿಂದ ಜೀವನವನ್ನು ವ್ಯಕ್ತಗೊಳಿಸುತ್ತದೆ. ಜೀವನದಲ್ಲಿ ನವೀನತೆಯ ಅಭಾವವನ್ನು ಅದು ಎಂದಿಗೂ ಅನುಭವಿಸಲಿಕ್ಕಿಲ್ಲ. ಭವಿಷ್ಯದ ಕಾದಂಬರಿಗಳಲ್ಲಿ ಕಲ್ಪನೆಯ ತತ್ವಗಳಿದ್ದರೂ ಅವುಗಳಲ್ಲಿ ಸತ್ಯವು ಅಧಿಕ ಪ್ರಮಾಣದಲ್ಲಿರುತ್ತದೆ. ಹೀಗೆ ನಿರೂಪಿಸಿದ ಪ್ರೇಮಚಂದರು ಜೀವನದಲ್ಲಿ ಸಾಹಿತ್ಯದ ಸ್ಥಾನವನ್ನು ಸರಿಯಾಗಿಯೇ ಗುರುತಿಸಿದ್ದಾರೆ—ಸಾಹಿತ್ಯವು ಸಾಮಾಜಿಕ ಆದರ್ಶಗಳ ಜನಕ, ಮನುಷ್ಯನ ಆತ್ಮವಿಕಾಸಕ್ಕೋಸ್ಕರ ಆವಶ್ಯವೆನಿಸಿದ ಸಂಯಮವನ್ನು ಸಾಧಿಸಲು ಸಾಹಿತ್ಯ ನೆರವಾಗುತ್ತದೆ, ಏಕೆಂದರೆ ಮನೋವಿಕಾರಗಳ ರಹಸ್ಯವನ್ನು ಬಿಟ್ಟು, ಸದ್ವೃತ್ತಿಗಳನ್ನದು ಜಾಗೃತಗೊಳಿಸುತ್ತದೆ. ಸಾಹಿತ್ಯವು ಮಾನವ ಹೃದಯವನ್ನು ಸುಲಭದಲ್ಲಿ ಹೊಕ್ಕು ಜನತೆಯ ಆತ್ಮಕ್ಕೆ ಮಹಾತ್ಮರ ಸಂದೇಶವನ್ನು ಮುಟ್ಟಿಸುತ್ತದೆ. ಉಪದೇಶಗಳಿಂದಲ್ಲ, ಬುದ್ಧಿಯ ಮಾತುಗಳಿಂದಲ್ಲ, ಭಾವಗಳನ್ನು ಸ್ಪಂದಿತಗೊಳಿಸಿ, ಮನಸ್ಸಿನ ಕೋಮಲ ತಂತಿಗಳನ್ನು ಮೀಟಿ, ಪ್ರಕೃತಿಯೊಡನೆ ಸಾಮಂಜಸ್ಯವನ್ನು ಹುಟ್ಟಿಸಿ, ಸಾಹಿತ್ಯವು ಮನುಷ್ಯನನ್ನು ದೇವತ್ವದ ಸ್ಥಾನಕ್ಕೊಯ್ಯುತ್ತದೆ. ಸ್ಥಾಯಿ ಸಾಹಿತ್ಯವು ವಿಧ್ವಂಸ ಮಾಡುವುದಿಲ್ಲ, ನಿರ್ಮಾಣ ಮಾಡುತ್ತದೆ. ಮಾನವ ಚಾರಿತ್ರ್ಯದ ಕಪ್ಪು ಕಲೆಗಳನ್ನದು ತೋರಿಸುವುದಿಲ್ಲ, ಉಜ್ವಲತನವನ್ನು ಪ್ರಕಟಿಸುತ್ತದೆ. "ಮನೆಯನ್ನು ಕೆಡವುವಾತ ಇಂಜಿನಿಯರನೆನಿಸಿಕೊಳ್ಳಲಾರ—ಇಂಜಿನಿಯರನು ನಿರ್ಮಾಣ ಮಾಡುವನು" ಜೀವ ಮಾನವನ ನಿರ್ಮಾಣವೇ ಸಾಹಿತಿಯ ಗುರಿಯಾಗಬೇಕೆಂದು ಪ್ರೇಮಚಂದರ ಅಪೇಕ್ಷೆ. ಹೀಗೆ ಸಾಹಿತ್ಯದ ಕುರಿತು ತಮ್ಮ ಹೃದಯಂಗಮವಾದ ಶೈಲಿಯಲ್ಲಿ ಪ್ರಖರವೂ ನಿಖರವೂ ಆದ ವಿಚಾರಗಳನ್ನು ಹೊರಗೆಡಹಿದ ಪ್ರೇಮಚಂದರು ರಾಷ್ಟ್ರಭಾಷೆಯ ಉತ್ಕರ್ಷವನ್ನು ಕಣ್ಣ ಮುಂದಿಟ್ಟುಕೊಂಡಿದ್ದರು. ಭಾರತದಲ್ಲಿ ಇಂಗ್ಲೀಷಿಗೆ ಭದ್ರಭವಿಷ್ಯವಿರುವುದಿಲ್ಲವೆಂದೇ ಅವರ ಅಭಿಪ್ರಾಯ—"ನೂರಾರು ವರ್ಷಗಳಿಂದ ಇಂಗ್ಲಿಷನ್ನು ತಪಸ್ಸು ಮಾಡಿ ಕಲಿತರೂ ಭಾರತವು ಇಂಗ್ಲಂಡಿನಲ್ಲಿ ಮೂರನೆಯ ವರ್ಗದ ಒಬ್ಬ ಇಂಗ್ಲೀಷ ಲೇಖಕನ ಪುಸ್ತಕಕ್ಕೆ ದೊರೆಯುವಷ್ಟು ಮನ್ನಣೆಯಾದರೂ ದೊರೆಯುವಂತಹ ಒಂದು ಇಂಗ್ಲಿಷ ಗ್ರಂಥವನ್ನು ಹೊರಗೆಡವಲಿಲ್ಲ" ಎಂಬ ಅವರ ಮಾತು ಕೆಲವರಿಗೆ ಕಹಿಯೆನಿಸಿದರೂ, ನಿಜವಾದ ವಿಷಯ. ಭಾರತೀಯ ಭಾಷೆಯೊಂದನ್ನು ರಾಷ್ಟ್ರಭಾಷೆಯಾಗಿ ಅಂಗೀಕರಿಸಬೇಕೆಂದಾಗ "ಚಿರಕಾಲದವರೆಗೆ ರಾಷ್ಟ್ರವನ್ನು ಒಂದು ಸೂತ್ರದಲ್ಲಿ ಕಟ್ಟುವ" ಭಾಷೆಯ ಬಂಧನದ ಬಿಗಿಯನ್ನು ದೃಷ್ಟಿಯಲ್ಲಿಟ್ಟುಕೊಂಡಿದ್ದೇವೆ. ಈ ರಾಷ್ಟ್ರಭಾಷೆಯ ಪ್ರಚಾರ ಭರದಿಂದ ಬೆಳೆಯಬೇಕು—ಪರಭಾಷೆಗಳಿಂದ ಹಿಂದೀಗೆ ಬರಬಹುದಾದ ಬಳಕೆಯ ಶಬ್ದಗಳನ್ನು ನಾವು ಸ್ವೀಕರಿಸಬಹುದು. ಏಕೆಂದರೆ ಅವು ಮಾನವನ ಮನೆಗೆ ಬಂದ ಮೇಲೆ ಮನೆಯ ದೇಶಿಯಾಗುತ್ತವೆ. ಜನತೆಯಲ್ಲಿ ಸಾಕ್ಷರತೆಯೂ ಶಿಕ್ಷಣವೂ ಚೆನ್ನಾಗಿ ಪ್ರಸಾರಗೊಂಡಾಗ ವ್ಯಾವಹಾರಿಕ ಶಬ್ದಾವಳಿಯೂ ಬೆಳೆಯುತ್ತದೆ—ಮತ್ತು ಆಗ ಕ್ಲಿಷ್ಟವಾದ ವೈಜ್ಞಾನಿಕ ಹಾಗೂ ತಾಂತ್ರಿಕ ವಿವೇಚನೆಗಳನ್ನೂ ಸ್ವಭಾಷೆಯಲ್ಲಿಯೇ ಮಾಡಲು ಸಾಧ್ಯವೆಂಬ ವಿಶ್ವಾಸ ಪ್ರೇಮಚಂದರಿಗಿರುತ್ತದೆ. ಪುಸ್ತಕದ ಕೊನೆಯ ವಿಭಾಗವಾಗಿ "ನಾಯಿಯ ಕಥೆ" ಎಂಬ ಬಾಲಸಾಹಿತ್ಯವು ಪ್ರಕಟಗೊಂಡಿದೆ—ಇದರಲ್ಲಿ ಮುದ್ದು ನಾಯಿಯೊಂದು ತನ್ನ ಚರಿತ್ರ ಬಲದಿಂದ ಪ್ರಾಣಿಶ್ರೇಷ್ಠನೆನಿಸಿದ ಮನುಷ್ಯನ ಕೈಯಿಂದ ಮನ್ನಣೆಯನ್ನು ಪಡೆದುಕೊಂಡ ಹೃದಯಂಗಮ ಹಾಗೂ ರೋಮಾಂಚಕವಾದ, ಬೋಧಪ್ರದವಾದ, ಮಕ್ಕಳ ಮನಸ್ಸನ್ನು ಚೆನ್ನಾಗಿಯೇ ಮುಗ್ಧಗೊಳಿಸುವ ಸನ್ನಿವೇಶ ಚಿತ್ರೀಕರಿಸಲ್ಪಟ್ಟಿದೆ. ಹಿಂದೀಯ ಕುರಿತು ನಾವು ಹೆಚ್ಚು ಹೆಚ್ಚು ತಿಳಿದುಕೊಳ್ಳಬೇಕಾಗಿ ಬಂದಿರುವ ಈ ದಿನಗಳಲ್ಲಿ ಇಂತಹ ಸುಂದರ ಪ್ರಕಟಣೆಯನ್ನು ಕೈಗೊಂಡ ಮಿಂಚಿನ ಬಳ್ಳಿಯವರಿಗೂ ಪ್ರೇಮಚಂದರ ಬರೆಹಗಳನ್ನು ಚೊಕ್ಕವಾಗಿ ಅನುವಾದಿಸಿ ಕೊಟ್ಟು ಅವರೊಡನೆ ಸಹಕರಿಸಿದ ಶ್ರೀಗಳಾದ ಗುರುನಾಥ ಜೋಶಿ, ಬಾಳಾಚಾರ್ಯ ಅವಧಾನಿ, ವೆಂ. ಮು. ಜೋಶಿ, ಕೆ. ಟಿ. ಜೋಶಿ ಇವರಿಗೂ ನಮ್ಮ ಧನ್ಯವಾದಗಳು. ಕನ್ನಡ ಸಾಹಿತ್ಯದಲ್ಲಿ ಆಸ್ಥೆಯುಳ್ಳವರಿಗೆ ಪ್ರೇಮಚಂದರ ವಿಚಾರಗಳು ಆಸ್ವಾದ್ಯಮಾನವಾಗಿ ಭಾಸವಾಗದಿರವು—ಈ ದೃಷ್ಟಿಯಿಂದ ಪ್ರತಿಯೊಬ್ಬ ಸಾಹಿತ್ಯಾಭಿಮಾನಿಯೂ ಪುಸ್ತಕದ ಪ್ರತಿಯೊಂದನ್ನು ಸಂಗ್ರಹಿಸುವುದೊಳಿತು

ಪುತ್ತೂರು ಡಿ. ಮುಂ. ಕೋರ್ಟಿನಲ್ಲಿ

O. S, 503/53 R I A.2336/53.

ಕುಂಞ ಗೌಡ. . . . . . . .ವಾದಿ.

ಮಹಾಬಲ ಶೆಟ್ಟಿ . . . .ಪ್ರತಿವಾದಿ.

ಸದ್ರಿ ಪ್ರತಿವಾದಿ—ಮಹಾಬಲ ಶೆಟ್ಟಿ—ತಿಮ್ಮಪ್ಪ ಶೆಟ್ರ ಅಳಿಯ—ಪ್ರಾಯ ಸುಮಾರು 25 ವರ್ಷ. ಪುತ್ತೂರು ತಾಲ್ಲೂಕು ನೆಲ್ಯಾಡಿ ಗ್ರಾಮದ ಹೊಸಮಾರು ಎಂಬಲ್ಲಿ.

ಇವರಿಗೆ

ಈ ಮೂಲ್ಕ ಕೋರ್ಟು ಹುಕುಂ ಪ್ರಕಾರ ತಿಳಿಯಪಡಿಸುವದೇನೆಂದರೆ.—

ಪ್ರತಿವಾದಿಯು ನ್ಯಾಯವಾದ ಪ್ರತಿಫಲ ಪಡೆದು ತಾ 13—11—50ರಲ್ಲು ಸೀತಮ್ಮಗೆ ರೂಪಾಯಿ 275/-ಕ್ಕೆ ಬರಕೊಟ್ಟ ಡಿ. ಪ್ರೊ. ನೋಟಿನ ಹಕ್ಕನ್ನು ಪ್ರತಿಫಲ ತೆತ್ತು ತಾ 20—6—1953ರಲ್ಲು ಪರಾಬಾರೆಗೆ ಪಡೆದ ವಾದಿಗೆ ಪ್ರತಿವಾದಿಯಿಂದ ಬರ ಸದ್ರಿ ನೋಟಿನ ಅಸಲು ಬಡ್ಡಿ ಕೂಡಾ ರೂ 320-10-10ಕ್ಕೆ ವಾದಿ, ಪ್ರತಿವಾದಿಯ ಮೇಲೆ ಮಾಡಿದ ಮೇಲಿನ ವ್ಯಾಜ್ಯ ಮತ್ತು ಡಿಕ್ರಿಗೆ ಮುಂಚಿತವಾಗಿ ಪ್ರತಿವಾದಿಯ ಚರಸೊತ್ತು ಜಪ್ತಿ ಬಗ್ಗೆ ಕೊಟ್ಟ R. I. A 2336/53ನೇ ಅರ್ಜಿ ಸಹಾ ತಾ 15—3—54ಕ್ಕೆ ವಿಚಾರಣೆಗೆ ಇಟ್ಟಿರುತ್ತದೆ. ಆ ಕುರಿತು ನಿಮಗೆ ಆಕ್ಷೇಪಗಳೇನಾದರೂ ಇದ್ದರೆ ಸದ್ರಿ ವಾಯಿದೆ ದಿನ ಪೂರ್ವಾಹ್ನ ಗಂಟೆ 11ಕ್ಕೆ ನೀವು ಸ್ವತಃ ಯಾ ವಕೀಲದ್ವಾರಾ ಹಾಜರಾಗಿ ಉಜರಿಸತಕ್ಕದ್ದು; ತಪ್ಪಿದ್ರೆ ನಿಮ್ಮನ್ನು ಬಿಟ್ಟು ಮಾಡಿ ಯುಕ್ತ ಕಂಡಂತೆ ತೀರ್ಮಾನಿಸಲಾದೀತು.

M. Sadashiva Rao

Puttur, 4-3-54. Pleader for Pltf.

S. R. BEEDI WORKS, UDIPI, S.K.

ಲಕ್ಷಾಂತರ ಜನರು ಗುಣಹೊಂದಿದ್ದಾರೆ:

ಸರ್ ಜೀವನ್ ಶಿಲಾಜಿತ್‌ಲೇಹ

ಶಿಲಾಜಿತ್ ಹಿಮಾಲಯದ್ದು ಔಷಧಿಗಳ ರಾಜ; ಮೂಲಿಕೆಗಳೊಡನೆ ಸೇರಿಸಿದ ಲೇಹ್ಯ, ದೇಹಶಕ್ತಿ, ಹೊಟ್ಟೆನೋವು, ಅನ್ನ ಸೇರದಿರುವಿಕೆ, ಕೆಮ್ಮು, ದಮ್ಮು, ಬಹುಮೂತ್ರ ಮತ್ತು ವಾಯುವಿನಿಂದಾಗುವ ಎಲ್ಲಾ ರೋಗನಿವಾರಕ. ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, ಹೆಂಗಸರ ಮತ್ತು ಮಕ್ಕಳ ಸರ್ವರೋಗ ನಿವಾರಕ ಅಮೂಲ್ಯ ರತ್ನ ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು

೪೪ ದಿನದ ಲೇಹ್ಯ ರೂ. ೫ ೪ ೦, ೨೨ ದಿನದ ಲೇಹ್ಯ ರೂ. ೩-೪-೦ (ಪೋಸ್ಟೇಜು ಮಾಫಿ)

ನೀಲಗಿರಿ ಡಿಪೋ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ.

ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋವಿನಲ್ಲಿ ಕೇಳಿರಿ.

-ಹೊಸಕೆರೆ ಚಿದಂಬರಯ್ಯನವರ-

ಗೀತೆಯ ಕೈಗನ್ನಡಿ

ಭಗವದ್ಗೀತೆಯ ಸಮೂಲ ಭಾಷಾಂತರ.

ಬೆಲೆ. 0-12-0

V. P. P. ಮೂಲಕ 1—4—0

ನವಯುಗ ಪ್ರೆಸ್, ಉಡುಪಿ.

ಗರ್ಭ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ- ೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟು ಖರ್ಚು ರೂ. ೦-೧೪-೦

—:ವಿಳಾಸ:—

ಹಾಲಪ್ಪಾ ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ಸ್ವಿಸ್ ತಯಾರಿ ರಿಸ್ಟ್ ವಾಚು ಬೆಲೆ ರೂ. 5/- ಮಾತ್ರ.

ರೂಪಾಯಿ 5/-ಕ್ಕೆ ಸ್ವಿಸ್ ತಯಾರಿ ರಿಸ್ಟ್ ವಾಚು ಮತ್ತು ಸ್ಟೆಂಡಾರ್ಡ್ ಫೌಂಟನ್ ಪೆನ್ ದೊರೆಯುವುದು. 15 ವರುಷಗಳ ಗ್ಯಾರಂಟಿ. ಸಾಗಾಟ 1-2-0 ಟಪ್ಪಾಲು ವೆಚ್ಚ ಪ್ರತ್ಯೇಕ.

ಇಂದೇ ಬರೆಯಿರಿ:

National Swiss Watch Suppliers, Halka No 28 (LC) Meerut (U. P.)

Edited, Printed & Published By K. H. Shetty at the Navayuga Press, Udipi, S. India

Regd. No. M. 3618

Licence No 31
Licensed to Post without Prepayment.

ನವಯುಗ

Vol.33 No 28 · 18-3-1954 ವರ್ಷ ೩೩ ವಾರ ೨೮

ಆಹಾರ ರಂಗ ಪರಿಶೀಲನ

ನಮ್ಮ ಮೊದಲನೇ ಪಂಚ ವಾರ್ಷಿಕ ಯೋಜನೆಯ ಮುಖ್ಯ ಉದ್ದೇಶವನ್ನು "ಎಲ್ಲರಿಗೂ ಆಹಾರ" ಎಂಬ ಒಂದೇ ಮಾತಿನಲ್ಲಿ ವರ್ಣಿಸಬಹುದು ಇದು ಸರಿಯಾದ ಗುರಿಯೆಂಬುದರಲ್ಲಿ ಯಾರಿಗೂ ಸಂಶಯವಿಲ್ಲ -ಭಾರತವು ಆಹಾರದ ಕೊರತೆಯನ್ನು ದೀರ್ಘಕಾಲದಿಂದ ಅನುಭವಿಸುತ್ತಾ ಬಂದಿದೆ. ಇಲ್ಲಿಯ ಜನತೆ ತನ್ನ ಆದಾಯದ ಅರೆವಾಸಿಗೂ ಹೆಚ್ಚಿನ ಮೊತ್ತವನ್ನು ಕೇವಲ ಹೊಟ್ಟೆ ತುಂಬುವುದಕ್ಕೋಸ್ಕರ ವ್ಯಯಿಸುತ್ತದೆ. ನಮ್ಮ [illegible]ನೇ ಇಸವಿಯ ಜನಗಣನೆಯಂತೂ ದೇಶದ ಆಹಾರ ಪರಿಸ್ಥಿತಿಯನ್ನು ಶೀಘ್ರದಲ್ಲಿಯೇ ಸುಧಾರಿಸದಿದ್ದರೆ ಅತಿ ದೊಡ್ಡ ಗಂಡಾಂತರವನ್ನು ಸನಿಹದಲ್ಲಿಯೇ ಇದಿರು ನೋಡಬೇಕಾಗುವುದೆಂದು ಹೇಳಿದೆ. ಆಗಿಂದಾಗ್ಗೆ ಬರಗಾಲ, ನೆರೆ ಹಾವಳಿ ಮುಂತಾದ ನೈಸರ್ಗಿಕ ಪ್ರಕೋಪಗಳೂ ಭಾರತದ ಕೃಷಿ ಉತ್ಪಾದನೆಯ ಮೇಲೆ ವಿಪರೀತ ಪರಿಣಾಮವನ್ನು ಉಂಟುಮಾಡುತ್ತವೆ. ಆದುದರಿಂದ ನಿರಾಶೆಯ ವಾತಾವರಣವನ್ನು ಕಳೆದು ಆಶಾಕಿರಣಕ್ಕೆ ಅವಕಾಶ ಮಾಡಿಕೊಡುವಂತಹ ಪ್ರಯತ್ನ ಸ್ವಾಗತಾರ್ಹವಾಗಿರುತ್ತದೆ.

ಇಂತಹ ಭರವಸೆಯ ಮಾತುಗಳನ್ನು ಸರಕಾರದ ಧುರೀಣರಿಂದ ನಾವು ಈಗೀಗ ಹೆಚ್ಚು ಪ್ರಮಾಣದಲ್ಲಿ ಕೇಳುತ್ತಿದ್ದೇವೆ. ಪ್ರಧಾನ ಮಂತ್ರಿ ನೆಹರೂರವರು ತಮ್ಮದೊಂದು ಭಾಷಣದಲ್ಲಿ ಜನರು ಯೋಜನಾ ಬದ್ಧ ಉಪಕ್ರಮದ ಮಹತ್ವವನ್ನು ನಿಧಾನವಾಗಿ ಮನವರಿಕೆ ಮಾಡಿಕೊಳ್ಳುತ್ತಿರುವರೆಂದು ಹೇಳುತ್ತಾ ಆಹಾರರಂಗದಲ್ಲಿ ದೇಶವು ತುಂಬ ಪ್ರಗತಿಯನ್ನು ಸಾಧಿಸಿದೆ ಎಂಬ ವಿಶ್ವಾಸವನ್ನು ಪ್ರಕಟಿಸಿದರು. "ನಾವು ಆಹಾರ ಸಮಸ್ಯೆಯ ಮೇಲೆ ಭದ್ರ ಮುಷ್ಟಿಯನ್ನಿಟ್ಟುಕೊಂಡಿದ್ದೇವೆ. ಬೆಳೆಗಳ ನಾಶವೇ ಮುಂತಾದ ದುರ್ದೈವದ ಸಂಗತಿಗಳು ನಡೆದರೂ ನಾವು ಈ ಬಿಗಿತವನ್ನು ಕಾಯ್ದುಕೊಳ್ಳುತ್ತೇವೆ ಕಳೆದ ಕೆಲವು ವರ್ಷಗಳಿಂದ ಇಲ್ಲದ ಉತ್ತಮ ಬೆಳೆ ಈಗ ಕೈವಶವಾಗಿದೆಯೆಂಬ ತೃಪ್ತಿಯಷ್ಟೇ ನಮಗಿರುವುದಲ್ಲ-ಹೆಚ್ಚು ಭೂಮಿಯನ್ನು ಕೃಷಿ ಯೋಗ್ಯ ಮಾಡಿರುತ್ತೇವೆ; ಮತ್ತು ಎಕ್ರೆಯೊಂದರ ಉತ್ಪಾದನಾ ಪ್ರಮಾಣವನ್ನೂ ಹೆಚ್ಚಿಸಿದ್ದೇವೆ. ಮುಖ್ಯವಾಗಿ ಅಕ್ಕಿಯ ಉತ್ಪಾದನೆ ಅಧಿಕಗೊಂಡಿದೆ. ಗೋಧಿಯ ಫಸಲಿನ ಬಗೆಗೂ ಈ ಮಾತನ್ನು ಹೇಳಬಹುದು. ನಮ್ಮ ಇತರ ನೂರಾರು ಸಮಸ್ಯೆಗಳ ಪರಿಹಾರಕ್ಕೆ ಆತಂಕವನ್ನೊಡ್ಡುತ್ತಿದ್ದ [illegible] ಆಹಾರದ ಪ್ರಶ್ನೆಯು ಈಗ ಬಿಡಿಸಲ್ಪಟ್ಟಿದ್ದು ಕ್ಕೆ ತೃಪ್ತಿಯೆನಿಸುತ್ತದೆ. "ನಮ್ಮ ಹತ್ತಿರ ಸಾಕಷ್ಟು ದೊಡ್ಡ ಸಂಗ್ರಹವಿದ್ದು, ಮುಂದೆ ಯಾರೊಬ್ಬನೂ ಆಹಾರಾಭಾವದ ದೆಸೆಯಿಂದ ಉಪವಾಸ ಬೀಳುವ ಪರಿಸ್ಥಿತಿ ಬಾರದು" ಎಂದು ನೆಹರೂ ತಿಳಿಸಿದರು.

ರಾಷ್ಟ್ರಪತಿ, ಗವರ್ನರ, ರಾಜಪ್ರಮುಖ ಮುಂತಾದವರ ಹಾಗೂ ಮುಂಗಡ ಪತ್ರಗಳನ್ನು ಮಂಡಿಸಿದ ಪ್ರತಿಯೊಬ್ಬ ಅರ್ಥ ಸಚಿವನ ಭಾಷಣಗಳಲ್ಲಿ ಮಳೆಬೆಳೆಗಳು ಚೆನ್ನಾಗಿವೆಯೆಂದೂ ಆಹಾರ ಧಾನ್ಯಗಳ ಸಂಗ್ರಹ ತೃಪ್ತಿಕರ ವಿಧಿಯೆಂದೂ ಆಶ್ವಾಸನೆಗಳು ತುಂಬ ತುಳುಕುತ್ತಿವೆ. ಕೇಂದ್ರ ಆಹಾರ ಸಚಿವರು ಕಳೆದ ವರ್ಷ ಸರಕಾರದ ಆಯಾತ ಧೋರಣವನ್ನು ವಿವರಿಸುತ್ತಾ ಸರಕಾರದೊಡನೆ ಗೋಧಿಯ ವಿಪುಲ ಸಂಗ್ರಹವಿದೆಯೆಂದೂ ಕೊರತೆಯ ಪ್ರದೇಶಗಳಿಗೆ ಆಹಾರ ಧಾನ್ಯಗಳನ್ನು ನಿರಾತಂಕವಾಗಿ ಪೂರೈಸುವಷ್ಟರ ಮಟ್ಟಿನ ಸಂಗ್ರಹ ಕೇಂದ್ರದೊಡನೆ ಇದೆಯೆಂದೂ ಹೇಳಿದರು; ಮತ್ತು ಈ ಕಾರಣದಿಂದ ಅಂತಾರಾಷ್ಟ್ರೀಯ ಗೋಧಿ ಮಂಡಳಿಯೊಡನೆ ಈ ಮೊದಲೇ ಮಾಡಿಕೊಂಡ ಒಡಂಬಡಿಕೆಯಂತೆ ಆಮದು ಮಾಡಿಕೊಳ್ಳಬೇಕಿರುವ ೧೫ ಲಕ್ಷ ಟನ್ನು ಗೋಧಿಯನ್ನಲ್ಲದೆ ಬೇರಾವ ಧಾನ್ಯದ ಆಯಾತಕ್ಕೂ ಮನಸ್ಸು ಮಾಡುವುದಿಲ್ಲವೆಂದು ಸಾರಿದರು. ಅಕ್ಕಿಯ ಅಭಾವ ಕೆಲವೆಡೆ ಕಂಡು ಬಂದರೂ ದೇಶದೊಳಗಿನ ಸಮೃದ್ಧ ರಾಜ್ಯಗಳಲ್ಲಿ ಎತ್ತುವಳಿ ಕ್ರಮಗಳು ಯಶಸ್ವಿಯಾಗಿದ್ದು ಹೀಗೆ ಕೂಡಿಸಿದ ಅಕ್ಕಿಯು ಕೊರತೆಯನ್ನು ಭಾರೀವಾಗಿ ತುಂಬಿಸುವುದೆಂದು ಮಂತ್ರಿಗಳು ಅಭಿಪ್ರಾಯಪಟ್ಟರು.

ಅವರೆ ಇದೇ ಆಹಾರ ಮಂತ್ರಿಗಳು ಮೊನ್ನೆ ತಾನೆ ಪಾರ್ಲಿಮೆಂಟಿನಲ್ಲಿ ಬರ್ಮಾದಿಂದ ೯ ಲಕ್ಷ ಟನ್ನು ಅಕ್ಕಿಯನ್ನು ತರಿಸಿಕೊಳ್ಳುವ ಸರಕಾರದ ಉದ್ದೇಶವನ್ನು ಹೊರಗೆಡಹಿದರೆ. ಈಗ ಶಾಸನಬದ್ಧ ರೇಶನ್ ಕ್ರಮ ಇರುವ ಮುಂಬಯಿ ತಿರುವಾಂಕೂರು-ಕೊಚ್ಚಿ ಮತ್ತು ಕಲ್ಕತ್ತೆ ನಗರಗಳ ಗ್ರಾಹಕರಿಗೆ ಬೇಕಾದಷ್ಟು ಅಕ್ಕಿಯನ್ನು ಪೂರೈಸಲು ಹೀಗೆ ತರಿಸಿದ ಸಂಗ್ರಹವನ್ನು ಉಪಯೋಗಿಸಲಾಗುವುದು. ಬರ್ಮಾದ ಅಕ್ಕಿಯ ಬೆಲೆ ಟನ್ನಿಗೆ ಸರಾಸರಿ ೪೮ ಪೌಂಡು ಸ್ಟರ್ಲಿಂಗದಷ್ಟಾಗುತ್ತದೆ—ಹೀಗೆ ಕೊಂಡ ಅಕ್ಕಿಯನ್ನು ಕೊರತೆ ರಾಜ್ಯಗಳಲ್ಲಿ ಈಗ ಅಕ್ಕಿಯು ಮಾರಲ್ಪಡುವದಕ್ಕಿಂತಲೂ ಅಗ್ಗ ಬೆಲೆಯಲ್ಲಿ ವಿತರಿಸಲಾಗುವುದು ಎಂದು ಸಚಿವರು ತಿಳಿಸಿದರು. ಹೀಗೆ ಹೇಳುತ್ತಿದ್ದಂತೆಯೇ ಹತ್ತು ಲಕ್ಷ ಟನ್ನು ಅಕ್ಕಿಯ ಕಾಯ್ದಿಟ್ಟ ಸಂಗ್ರಹವೊಂದನ್ನು ಮಾಡಲು ಸರಕಾರ ಉದ್ದೇಶಿಸಿದೆಯೆಂದೂ ಇದಕ್ಕೋಸ್ಕರ ಸಮೃದ್ಧ ರಾಜ್ಯಗಳಲ್ಲಿ ಎತ್ತುವಳಿಯನ್ನು ಕೈಗೊಳ್ಳಲಾಗುವುದೆಂದೂ ಕಿದ್ವಾಯಿಯವರು ಹೇಳಿದರು.

ಮಂತ್ರಿಗಳ ಹೇಳಿಕೆಯನ್ನು ಸೂಕ್ಷ್ಮವಾಗಿ ವಿಮರ್ಶಿಸಿದರೆ—ಭಾರತದಲ್ಲಿ ಅಕ್ಕಿಯ ಬೆಳೆ ಹೆಚ್ಚಿಕೆಯಿಂದ, ಈಗಿನ ಜನಸಂಖ್ಯಾ ಪ್ರಮಾಣಕ್ಕೆ ಹೊಟ್ಟೆ ತುಂಬ ಅನ್ನ ಸಿಗುವ ಭರವಸೆ ಮೂಡುತ್ತದೆ. ಆದರೂ ನೈಸರ್ಗಿಕ ವಿಪತ್ತುಗಳ ಆಕಸ್ಮಿಕ ಪ್ರಸಂಗದಿಂದ ರಕ್ಷಣೆ ಪಡೆಯುವ ಉದ್ದೇಶದಿಂದ ಬರ್ಮಾದ ಅಕ್ಕಿಯನ್ನು ಆಯಾತಮಾಡಿಕೊಳ್ಳಲು ಕರಾರು ನಡೆಯಿತು. ಇದರಲ್ಲಿ ರಾಜಕೀಯ ಉದ್ದೇಶವೂ ಅಡಕವಾಗಿದೆಯೆಂದು —ಬರ್ಮಾದಿಂದ ಭಾರತಕ್ಕೆ ಹಣ ಬರತಕ್ಕದ್ದು, ಅದರ ಬದಲು ಅಕ್ಕಿ ದೊರೆತರಾಯಿತು. ಮಾನ್ಯ ದೇಶಮುಖರು, ಸದ್ಯದ ಸ್ಥಿತಿಯೇ ಈ ವಿಚಾರವನ್ನೇ ಬೆಳಕಿಗೆ ತರುವ ನಿರೀಕ್ಷೆ ಇದೆ. ಇದಾಗಿದ್ದರೂ—ಆಹಾರ ಪರಿಸ್ಥಿತಿ ಊರ್ಜಿತಗೊಂಡಿರುವುದೆಂಬ ಕುರಿತು ವಿಶ್ವಸಿಸಬಹುದಾದ ಹೇಳಿಕೆಗಳು ಸರಕಾರೀ ವಲಯದಿಂದ ಬರುತ್ತವೆ.

ಪರಿಸ್ಥಿತಿ ಊರ್ಜಿತಗೊಂಡಿರುವುದಕ್ಕೆ ಸರಕಾರವು ಧೈರ್ಯದಿಂದ ವಿನಿಯಂತ್ರಣ ಧೋರಣೆಯನ್ನು ಅನುಸರಿಸಿದ್ದೇ ಕಾರಣವೆಂದು ಕೃಷಿಮಂತ್ರಿ ಡಾ. ಪಂಜಾಬರಾವ ದೇಶಮುಖರ ಅಭಿಪ್ರಾಯವಿರುತ್ತದೆ. ದೇಶದೊಳಗಿನ ಕಳವಳವು ದೂರವಾಗಿರುವುದರಿಂದ ಇನ್ನು ಮುಂದೆ ವಿದೇಶಗಳಿಗೆ ಭಾರತದ ಕೆಲವು ಉತ್ಕೃಷ್ಟ ಜಾತಿಯಲ್ಲಿ ಅಕ್ಕಿಯನ್ನು ನಿರ್ಯಾತ ಮಾಡುವ ವಿಚಾರ ಸರಕಾರಕ್ಕೆ ಇದೆ. ನಿಯಂತ್ರಣಗಳನ್ನು ಹೇರುವ ಮೊದಲು ಹೊರಗಿನಿಂದ ವಿಪುಲ ಆಹಾರ ಧಾನ್ಯಗಳನ್ನು ಭಾರತ ತರಿಸುತ್ತಿದ್ದರೂ, ಈ ದೇಶದ ಅಕ್ಕಿಯನ್ನೇ ತಿನ್ನುವ ಅಭ್ಯಾಸವಿಟ್ಟುಕೊಂಡಿದ್ದ ಆಫ್ರಿಕಾ ಮತ್ತಿತರ ಕಡೆಯ ಜನರಿಗೆ ವರ್ಷಕ್ಕೆ ಎರಡರಿಂದ ಎರಡೂವರೆ ಲಕ್ಷ ಟನ್ನು ಅಕ್ಕಿಯನ್ನು ಪೂರೈಸುತ್ತಿತ್ತು. ನಿಯಂತ್ರಣಗಳ ದೆಸೆಯಿಂದ ನಿಂತುಹೋದ ಈ ನಿರ್ಯಾತವನ್ನು ಪುನಃ ಪ್ರಾರಂಭಿಸಬಹುದೆಂದು ಆಹಾರದ ಉಪಮಂತ್ರಿ ಕೃಷ್ಣಪ್ಪನವರು ಹೇಳಿದರು. ಆದರೆ ಹೀಗೆ ನಿರ್ಯಾತ ಮಾಡುವ ಅಧಿಕಾರ ಸರಕಾರಕ್ಕೆ ಮಾತ್ರ ಇರುತ್ತದೆ.

ಸರಕಾರದ ಹೇಳಿಕೆಗಳಿಗನುಸಾರ ಬೆಲೆಗಳು ತುಂಬ ಇಳಿಮುಖವಾಗುತ್ತಾ ಹೋಗುತ್ತಿವೆ. ಆದರೆ ವಸ್ತುಸ್ಥಿತಿ ಹೇಗಿದೆಯೋ ವಿವರವಾಗಿ ತಿಳಿದುಬಂದಿಲ್ಲ. ಸಮೃದ್ಧ ರಾಜ್ಯಗಳಲ್ಲಿ ಬೆಲೆಗಳು ಇಳಿಯುತ್ತಿರಬಹುದು.—ಉದಾಹರಣೆಗೆ ತಂಜಾವೂರಿನಲ್ಲಿ ಅಕ್ಕಿಯ ಬೆಲೆ ಸರಕಾರದ ನಿಯಂತ್ರಣ ಬೆಲೆಗಿಂತ ತಗ್ಗಿಕೊಂಡಿದೆ. ಇದನ್ನು ತಡೆದು ಕೃಷಿಕರಿಗೆ ತಮ್ಮ ಉತ್ಪನ್ನಕ್ಕೆ ಯೋಗ್ಯ ಬೆಲೆಯನ್ನು ದೊರಕಿಸಿಕೊಡಲು ಸರಕಾರ ಕೆಲವು ಕ್ರಮಗಳನ್ನು ಅನುಸರಿಸುತ್ತಿದೆ. ಆದರೆ ದಕ್ಷಿಣ ಕನ್ನಡ ಜಿಲ್ಲೆಯಂತಹ ಪ್ರದೇಶದ ಆಹಾರ ಪರಿಸ್ಥಿತಿ [illegible] ಅಕ್ಕಿಯ [illegible]

([illegible])

ಸಮರ್ಥ ಸಾಲಗಳು

[illegible]

THE CANARA INDUSTRIAL & BANKING SYNDICATE LTD
Estd: 1925 H O UDIPI, S India
ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್.,
ಸ್ಥಾಪನೆ ೧೯೨೫ (ಪ್ರಧಾನ ಕಚೇರಿ ಉಡುಪಿ, ದ. ಭಾರತ

ಮೋಸದ ಔಷಧಗಳ ಮೋಹ ನಮಗೆ ಬೇಡ

ಅದ್ಭುತ ರಮ್ಯವಾದ ಭ್ರಾಮಕ ವಿಚಾರಗಳಿಂದ ದೂರವಿರಲು ಎಚ್ಚರಿಕೆ

ಮಾನವ ಜನಾಂಗಕ್ಕೆ ಔಷಧಗಳಿಂದ ಆಗುವ ಪ್ರಯೋಜನವನ್ನು ವರ್ಣಿಸುವುದೆಂದರೆ ಅಸಾಧ್ಯವಾದ ಮಾತು. ಜರಾಮರಣಗಳೇ ಪ್ರಧಾನ ಲಕ್ಷಣವಾಗುಳ್ಳ ಮನುಷ್ಯನ ದೃಷ್ಟಿಯಲ್ಲಿ ಅಶ್ವಿನೀ ಕುಮಾರ ದೇವತೆಗಳೂ ಧನ್ವಂತರಿಯೂ ಪರಮಪೂಜ್ಯರೆಂಬಲ್ಲಿ ಪ್ರತಿ ಮಾತಿಲ್ಲ. ನಾಗರಿಕತೆಯು ಬೆಳೆದು ಬಂದ ಕಾಲವನ್ನು ಅನುಲಕ್ಷಿಸಿ, ಔಷಧಗಳನ್ನು ಮೂರು ಪ್ರಕಾರವಾಗಿ ವಿಂಗಡಿಸಲು ಬರುತ್ತದೆ—ವಿಶ್ವಾಸವೇ ರೋಗ ಶಮನ ಮಾಡುವ ವಿಧಾನ, ಮದ್ದುಪಥ್ಯಗಳಿಂದ ಕಾಯಿಲೆ ಕಸಾರಿಕೆಗಳನ್ನು ಗುಣಪಡಿಸಿಕೊಳ್ಳುವ ವಿಧಾನ ಮತ್ತು ಆರೋಗ್ಯಕ್ರಮಗಳನ್ನು ನಿಯಮ ತಪ್ಪದೆ ಪಾಲಿಸುತ್ತಾ ನಿರೋಗಿಯಾಗಿರುವ ವಿಧಾನವೆಂದು ಇವು ವರ್ಣಿಸಲ್ಪಡುತ್ತವೆ. ವಿಶ್ವಾಸವನ್ನು ಗೆದ್ದುಕೊಂಡು ರೋಗ ಶಮನ ಮಾಡುವ ಪದ್ಧತಿ ಪ್ರಾಚೀನವಾದ ಕ್ರಮವಾಗಿದ್ದು, ಎಲ್ಲ ಮಾಯಾ ಮಂತ್ರ ಮತ್ತು ಇಂದ್ರಜಾಲ ತಂತ್ರಗಳಿಗೆ ಇದು ಅವಕಾಶ ಮಾಡಿ ಕೊಟ್ಟಿದೆ. ಫ್ರಾಯಿಡನಂತಹ ಮನೋವಿಜ್ಞಾನಿಗಳ ಕೈಯಲ್ಲಿ ಈ ತಂತ್ರಗಳು ಪರಿಮಾರ್ಜಿತವೂ ಪರಿವರ್ಧಿತವೂ ಆಗಿ, ಮನಃಶಾಸ್ತ್ರವೆಂಬ ಖ್ಯಾತಿಯನ್ನು ಈಚೆಗೆ ಪಡೆದುಕೊಂಡಿದ್ದರೂ ಸಹ, ಜನರಲ್ಲಿ ಮೊದಲಿದ್ದ ಶ್ರದ್ಧೆ ಈ ವಿಷಯದಲ್ಲಿ ಈಗ ಉಳಿದಿಲ್ಲ. ಅದರಂತೆ, ರೋಗಗಳಿಂದ ಪೀಡಿತರಾದ ಬಳಿಕ, ವೈದ್ಯರ ಬಳಿಗೆ ಓಡಿ ಹೋಗಿ ಮದ್ದು ಮಾಡಿಕೊಳ್ಳುವ ಬದಲು, ಆರೋಗ್ಯಕರವಾದ ಜೀವನ ಕ್ರಮವನ್ನು ಅನುಸರಿಸಬೇಕೆಂಬ ವಿಷಯಕ್ಕೂ ಹೆಚ್ಚು ಗಮನ ಪೂರೈಸಲ್ಪಟ್ಟಿಲ್ಲ. ಶಿಕ್ಷಣದ ಅಭಾವ, ಸಾಮಾಜಿಕ ಪರಿಸ್ಥಿತಿ, ಆರ್ಥಿಕ ತೊಂದರೆಗಳೇ ಮುಂತಾದವು ಭಾರತೀಯರ ಆರೋಗ್ಯ ರಕ್ಷಣಾಪ್ರಯತ್ನಗಳ ಪ್ರಗತಿಯನ್ನು ಬಹಳ ನಿಧಾನವಾಡುತ್ತವೆ.

ವೈಜ್ಞಾನಿಕ ದೃಷ್ಟಿ

ಮದ್ದು ಪಥ್ಯಗಳ ಸೇವನೆಯೊಂದೇ ಇಂದಿನ ದಿನದಲ್ಲಿ ರೋಗೋಪಶಮನದ ಏಕಮೇವ ಉಪಾಯವಾಗಿ ತೋರುತ್ತದೆ ಆದರ ಈಗಿನ ಮಾದರಿಯ ಔಷಧಗಳ ಸೇವನೆಗೆ ಪುರಾತನವಾದ ಪರಂಪರೆ ಇದ್ದಂತೆ ಕಾಣುವುದಿಲ್ಲ. ವೈಜ್ಞಾನಿಕ ದೃಷ್ಟಿಯ ಪ್ರಾಬಲ್ಯದಿಂದಾಗಿ ಈಗ ಈ ಔಷಧಗಳ ಗುಣ ಮತ್ತು ಉಪಕಾರಗಳು ಬೆಳಕಿಗೆ ಬಂದಿದ್ದರೂ ಕೆಲವೇ ಶತಮಾನಗಳ ಹಿಂದೆ, ಹೊಸ ವಸ್ತುವೆಂದು ಯಾವುದು ದೊರೆತರೂ ಅದನ್ನು ಮದ್ದಿಗಾಗಿಯೆ ಉಪಯೋಗಿಸುವ ಪರಿಪಾಟಿ ಇದ್ದಂತೆ ಕಾಣುತ್ತದೆ. ಉದಾಹರಣೆಗೆ ಹೊಗೆಸೊಪ್ಪನ್ನು ಕಾಲಿನ ಗಾಯಗಳಿಗೆ ಹಚ್ಚಲು ಪ್ರಥಮತಃ ಉಪಯೋಗಿಸುತ್ತಿದ್ದರು. ಮುಂದೆ ಮೂಗಿನೊಳಗೆ ನಶ್ಯರೂಪದಲ್ಲಿ ಸೇವನೆ ಮಾಡುವುದರ ಮುಖಾಂತರ ಇತರ ಶಾರೀರಿಕ ಹಾಗೂ ಮಾನಸಿಕ ರೋಗಗಳನ್ನು ಗುಣಪಡಿಸಬಹುದೆಂಬ ಭ್ರಾಮಕ ವಿಚಾರ ತಲೆದೋರಿತು. ಸಿಗಾರೇಟು, ಹುಕ್ಕ ಮುಂತಾದವುಗಳ ಸೇವನೆಯು ಮೂಲವೂ ಇದೇ ರೀತಿಯಾಗಿರುತ್ತದೆ. ಇದರಂತೆ, ಯುರೋಪಿನಲ್ಲಿ ಬಟಾಟೆಯು ಮೊದಲು ಕಾಣಿಸಿದಾಗ ಅದನ್ನು ಹೊಟ್ಟೆ ತುಂಬಿಸುವ ಸಾಧನವೆಂದು ಯಾರೂ ತಿಳಿದಿದ್ದಿಲ್ಲ. ತುಂಬ ಬೆಲೆಕೊಟ್ಟು ಬಟಾಟೆಯನ್ನು ತಂದು ಔಷಧವಾಗಿ ಉಪಯೋಗಿಸುತ್ತಿದ್ದರು. ಕಸ್ತೂರಿ, ತೃಣಮಣಿ, ಚಿನ್ನ, ಮುತ್ತು, ಹಸ್ತಿದಂತ ಮುಂತಾದವುಗಳು ಯುರೋಪಿನಲ್ಲಿ ಹದಿನಾರನೇ ಶತಮಾನದ ಸುಮಾರಿಗೆ ಔಷಧ ವಸ್ತುಗಳೆಂದೇ ತಿಳಿಯಲ್ಪಡುತ್ತಿದ್ದವು. ಡ್ರೆಸ್ಡನದಲ್ಲಿ ಹಸ್ತಿದಂತವೊಂದಕ್ಕೆ ೭೫೦೦ ಡಾಲರುಗಳ ಬೆಲೆ ಕಟ್ಟಿದ್ದರು.

ಆದರೆ ವೈಜ್ಞಾನಿಕ ದೃಷ್ಟಿಕೋಣವು ಪ್ರಾದುರ್ಭಾವಕ್ಕೆ ಬಂದಂತೆಲ್ಲ ಔಷಧಗಳ ಗುಣ ವಿಶೇಷಗಳನ್ನು ಪ್ರಯೋಗಾನುಭವದ ಮೂಲಕ ನಿಷ್ಕರ್ಷ ರೂಪದಲ್ಲಿ ತಿಳಿದುಕೊಳ್ಳುವ ಪ್ರವೃತ್ತಿ ಬಲಗೊಂಡಿತು. ಇಂದು ಪ್ರತಿಯೊಂದೂ ನಾಗರಿಕ ಸರಕಾರವು ತನ್ನ ದೇಶದಲ್ಲಿ ಔಷಧಿಗಳ ಗುಣದ ಮಟ್ಟವನ್ನು ದಕ್ಷತೆಯಿಂದ ಕಾಪಾಡಿಕೊಳ್ಳುವುದು ಕರ್ತವ್ಯವೆಂದು ಭಾವಿಸಿ, ಔಷಧಿಗಳ ಪರೀಕ್ಷೆ, ಅವುಗಳ ತಯಾರಿಕಾ ವಿಧಾನ ಹಾಗೂ ಮಾರಾಟದ ಮೇಲೆ ನಿಯಂತ್ರಣ ಮುಂತಾದ ಕ್ರಮಗಳನ್ನು ಕೈಗೊಂಡಿದೆ, ತಪ್ಪು ವಿಧಾನದಿಂದ ಔಷಧವನ್ನು ಉಪಯೋಗಿಸುವುದೂ, ಗುಣಾಂಶವಿಲ್ಲದ ಮದ್ದಿನ ಸೇವನೆಯೂ ಮಾನಸಿಕ ಹಾಗೂ ಶಾರೀರಿಕ ಸ್ವಾಸ್ಥ್ಯಕ್ಕೆ ಮಾರಕವಾಗಿರುವುದರಿಂದ ಇಂತಹ ಮುಂಜಾಗ್ರತೆಯನ್ನು ತೆಗೆದುಕೊಳ್ಳುವುದು ಅತ್ಯಗತ್ಯ.

ಸರಕಾರದ ಹೊಣೆ

ಭಾರತದ ಕೇಂದ್ರ ಸರಕಾರವು ದೇಶದೊಳಗೆ ಆಯಾತ ಮಾಡಿಕೊಳ್ಳುವ ಔಷಧಗಳ ಮಟ್ಟಿಗೆ ಹೊಣೆಗಾರವಾಗಿರುತ್ತದೆ. ಹೀಗೆ ನಮ್ಮ ಪೇಟೆಗೆ ಬರುವ ವಿದೇಶೀ ಔಷಧಗಳು ನಿರ್ದಿಷ್ಟ ಗುಣಾಂಶಗಳಿಂದ ಕೂಡಿರಬೇಕಾಗಿದ್ದು, ಇದನ್ನು ಗಮನಿಸುವುದಕ್ಕೋಸ್ಕರ ಉಚಿತವಾದ ಏರ್ಪಾಟುಗಳು ಇವೆ ಆಯಾತ ಮಾಡಿಕೊಳ್ಳುವುದಕ್ಕೆ ಅಪ್ಪಣೆ ಕೊಡುವ ಅಥವಾ ನಿರಾಕರಿಸುವ ಅಧಿಕಾರಿಯೊಬ್ಬರ ನೇತೃತ್ವದಲ್ಲಿ ಔಷಧಗಳ ತನಿಖೆ ಮುಂತಾದ ಕ್ರಮಗಳು ನಡೆಯುತ್ತವೆ. ಮುಂಬಯಿ, ಕಲ್ಕತ್ತಾ, ಮದ್ರಾಸು ಮತ್ತು ಕೊಚ್ಚಿ ಎಂಬ ನಾಲ್ಕು ಬಂದರುಗಳ ಮೂಲಕ ಮಾತ್ರ ನಮ್ಮ ದೇಶದ ವ್ಯಾಪಾರಿಗಳು ಪರದೇಶಗಳಿಂದ ಔಷಧಗಳನ್ನು ತರಿಸಬಲ್ಲರು. ಹೀಗೆ ಆಯಾತ ಮಾಡಿಕೊಳ್ಳುವುದಕ್ಕೆ ಮುಂಚೆ, ಪ್ರತಿಯೊಂದೂ ಔಷಧದ ಮಾದರಿಯನ್ನು ಸರಕಾರದ ಅಧಿಕಾರಿಗಳು ತರಿಸಿಕೊಂಡು ಅವುಗಳ ಗುಣಾಂಶವನ್ನು ಪ್ರಯೋಗಶಾಲೆಯಲ್ಲಿ ಪರೀಕ್ಷಿಸಿ ತಿಳಿದುಕೊಳ್ಳುವರು.

ಆಯಾತ ಮಾಡಿಕೊಳ್ಳುವುದಕ್ಕೆ ಅಪ್ಪಣೆ ಕೊಡುವಾಗ, ಆ ಔಷಧವು ತಯಾರಾದ ದೇಶದ ಪೇಟೆಯಲ್ಲಿ ಅನಿರ್ಬಂಧವಾಗಿ ಬಳಸಲ್ಪಡುತ್ತದೆಯೋ ಹೇಗೆ ಎಂಬ ವಿಷಯವನ್ನು ಪರಿಶೀಲಿಸಲಾಗುತ್ತದೆ. ಹೀಗೆ ಅವುಗಳ ಮಾರಾಟ ನಡೆಯುತ್ತದೆಂದೂ ಅವುಗಳ ರಾಸಾಯನಿಕ ಹಾಗೂ ಔಷಧ ಗುಣಗಳು ಯೋಗ್ಯ ಮಟ್ಟದಲ್ಲಿವೆಯೆಂದೂ ನಿಯಂತ್ರಣಾಧಿಕಾರಿಗಳಿಗೆ ಮನವರಿಕೆಯಾದರೆ ಮಾತ್ರ, ಆಯಾತಕ್ಕೆ ಅಪ್ಪಣೆ ದೊರೆಯುತ್ತದೆ. ೧೯೪೦ನೇ ಇಸವಿಯಲ್ಲಿ ಪಾಸಾದ ಕಾಯಿದೆ ಪ್ರಕಾರ, ಕಲ್ಕತ್ತೆಯಲ್ಲಿ ಕೇಂದ್ರ ಔಷಧ ಸಂಶೋಧನಾಲಯವೊಂದು ಸ್ಥಾಪಿಸಲ್ಪಟ್ಟಿದೆ. ಸುಂಕದ ಅಧಿಕಾರಿಗಳೂ ಕೋರ್ಟು ಕೇಸಿನ ಪ್ರಕರಣಗಳಲ್ಲಿ ಮೆಜಿಸ್ಟ್ರೇಟರೂ ಔಷಧಗಳನ್ನು ಪರೀಕ್ಷೆಗಾಗಿ ಈ ಪ್ರಯೋಗ ಕೇಂದ್ರಕ್ಕೆ ಕಳಿಸುವರು. ಔಷಧಗಳ 'ಪೇಟೆಂಟು' ದಯಪಾಲಿಸುವ ಮುಂತಾದ ಕೆಲಸವೂ ಈ ಕೇಂದ್ರದ ಶಿಫಾರಸನ್ನು ಹೊಂದಿಕೊಂಡಿರುತ್ತದೆ. ಕಾಯಿದೆಯು ರಾಜ್ಯ ಸರಕಾರಗಳಿಗೆ ಔಷಧಗಳ ತಯಾರಿಕೆ, ಮಾರಾಟ ಮತ್ತು ವಿತರಣಾ ಕಾರ್ಯದ ಮೇಲೆ ಕಣ್ಣಿಡಬೇಕೆಂದು ವಿಧಿಸುತ್ತದೆ. ಎಲ್ಲ ರಾಜ್ಯಗಳಲ್ಲೂ ಔಷಧಗಳ ಕಾಯಿದೆಯು ಚೆನ್ನಾಗಿ ಪರಿಪಾಲಿಸಲ್ಪಡುತ್ತದೆಂದು ನೋಡಲು ಅಧಿಕಾರಿಗಳು ಇರುವರಲ್ಲದೆ, ಅವರ ಅಧೀನದಲ್ಲಿ ಪರೀಕ್ಷಕರ ತಂಡಗಳೂ ಕೆಲಸಮಾಡುತ್ತವೆ. ಔಷಧ ತಯಾರಿ ಕೇಂದ್ರಗಳನ್ನು ಸಂದರ್ಶಿಸಿ, ಅಲ್ಲಿಯ ವಾತಾವರಣವನ್ನು ನಿರೀಕ್ಷಿಸುವ ಮತ್ತು ತಪ್ಪುಗಳಿಗೋಸ್ಕರ ತಕ್ಷೀರು ನಡೆಸುವ ಅಧಿಕಾರ ಇವರ ಕೈಯಲ್ಲಿದೆ.

ಯಶಸ್ವೀ ನಿಯಂತ್ರಣ

ಕೆಲವು ವಿಶಿಷ್ಟ ಕಾಯಿಲೆಗಳ ಸಂಬಂಧದಲ್ಲಿ ಯಾವುದೇ ಔಷಧವನ್ನು ಹೊರಗಿನಿಂದ ತರಿಸುವುದಾಗಲೀ ದೇಶದೊಳಗೆ ತಯಾರಿಸುವುದಾಗಲೀ ಮಾರಾಟ ಮಾಡುವುದಾಗಲೀ ಸಲ್ಲದೆಂದು ಔಷಧಗಳ ಕಾನೂನು ನಿಷೇಧಿಸುತ್ತದೆ. ಆದರೆ ಇಷ್ಟರಿಂದಲೇ ಔಷಧಗಳು ಜಗತ್ತಿನಲ್ಲಿ ಈಗ ನಡೆಯುತ್ತಿರುವ ಹಾವಳಿಯನ್ನು ನಿಯಂತ್ರಿಸುವುದು ಅಸಾಧ್ಯವಾಗಿ ಈಗೀಗ ಕಂಡು ಬರುತ್ತದೆ. ಉದಾಹರಣೆಗೆ ತಾಯಿತ, ಕವಚ ಮುಂತಾದವುಗಳು ಮಂತ್ರಬಲದಿಂದ ರೋಗಗಳನ್ನು ಕ್ಷಣ ಮಾತ್ರದಲ್ಲಿ ನಿವಾರಿಸುತ್ತವೆಂದು ಸಾರುವ ಜಾಹೀರಾತುಗಳ ಪ್ರಕಟಣೆಯನ್ನು ೧೯೪೦ನೇ ಇಸವಿಯ ಕಾಯಿದೆ ನಿರ್ಬಂಧಿಸುವುದಿಲ್ಲ. ದೇಶೀಯ ಪದ್ಧತಿಯಂತೆ ತಯಾರಿಸಲ್ಪಡುವವುಗಳೆಂದು ಹೇಳಲಾಗುವ ಔಷಧಿಗಳ ಪ್ರಚಾರವನ್ನೂ ಈ ಕಾಯಿದೆ ನಿಯಂತ್ರಿಸುವುದಿಲ್ಲ. ಔಷಧಗಳ ಬಾಟಲಿಗೆ ಹಚ್ಚಿದ ಪಟ್ಟಿಯಲ್ಲಿ ಹೊರತು, ವೃತ್ತ ಪತ್ರಿಕೆಗಳು, ನಿಯತಕಾಲಿಕಗಳು, ಪರಿಪತ್ರಗಳು, ಪುಸ್ತಕಗಳು ಮುಂತಾದ ಇತರ ಪ್ರಚಾರ ಹಾಗೂ ಪ್ರಕಟಣಾ ವ್ಯವಸ್ಥೆಯ ಮೇಲೆ ಈ ಕಾಯಿದೆಯಂತೆ ಯಾವ ಕ್ರಮವನ್ನೂ ತೆಗೆದುಕೊಳ್ಳಲು ಬರುವುದಿಲ್ಲ.

ಈ ಕೊರತೆಗಳ ನಿವಾರಣೋದ್ದೇಶದಿಂದಲೇ ಭಾರತ ಸರಕಾರವು ಮೊನ್ನೆ ತಾನೆ ಪಾರ್ಲಿಮೆಂಟಿನಲ್ಲಿ ವ್ಯಾಪಕವಾದ ಮಸೂದೆಯೊಂದನ್ನು ಮಂಡಿಸಿರುತ್ತದೆ. ಭ್ರಾಮಕ ಹಾಗೂ ಮೋಸಗೊಳಿಸುವ ಆಕ್ಷೇಪಾರ್ಹ ಔಷಧಿಗಳ ಪ್ರಕಟಣೆಯನ್ನು ಈ ಮಸೂದೆ ನಿರ್ಬಂಧಿಸುತ್ತದೆ. ನಾನಾ ವಿಧದ ಗುಣಗಳಿವೆಯೆಂದು ಸಾರಿಕೊಳ್ಳುವ ಅನೇಕ ಔಷಧಗಳ ಜಾಹೀರಾತನ್ನು ನಾವು ಪ್ರತಿಯೊಂದು ಪತ್ರಿಕೆಯಲ್ಲೂ ನೋಡುತ್ತೇವೆ. ಅಂತಾರಾಷ್ಟ್ರೀಯ ಕೂಲಿಕಾರ ಸಂಘದ ಆಶ್ರಯದಲ್ಲಿ ಸ್ಥಾಪಿಸಲ್ಪಟ್ಟು ಭಾರತವನ್ನೊಳಗೊಂಡು ೪೩ ರಾಷ್ಟ್ರಗಳ ಪ್ರತಿನಿಧಿಗಳಿರುವ ಅಂತಾರಾಷ್ಟ್ರೀಯ ಸಾಮಾಜಿಕ ಭದ್ರತಾ ಸಂಸ್ಥೆಯೊಂದು ಈಚೆಗೆ ಜನರಲ್ಲಿ ಪ್ರಚಲಿತವಿರುವ ಔಷಧಿಗಳ ಭ್ರಾಂತಿಯ ಕುರಿತು ಮಹತ್ವದ ಎಚ್ಚರಿಕೆಯನ್ನು ಕೊಟ್ಟಿದೆ— 'ಪ್ರತಿನಿತ್ಯ ಔಷಧಿಯ ಉಪಯೋಗ ಹೆಚ್ಚುತ್ತಿದ್ದು ಇದು ಇಡೀ ಜಗತ್ತಿನ ಜನರ ಆರೋಗ್ಯಕ್ಕೆ ಗಂಡಾಂತರವನ್ನು ತರುತ್ತದೆ ಔಷಧಿ ಶಾಸ್ತ್ರದ ದೃಷ್ಟಿಯಿಂದ ಇದು ತೀರ ಅನಗತ್ಯವೂ ಅನ್ಯಾಯವೂ ಆಗಿರುವುದಲ್ಲದೆ, ಸಾಮಾಜಿಕ ಭದ್ರತೆ

(೧೧ನೇ ಪುಟನೋಡಿರಿ)

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ: ೧೯೩೫.] [ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ಭಾರತದ ಸುಭದ್ರ ವಿಮಾ ಕಂಪೆನಿಗಳಲ್ಲಿ "ಕೆನರಾ ಮ್ಯೂಚುವಲ್" ಎಣೆ ಇಲ್ಲದ ವಿಶಿಷ್ಟ ಸ್ಥಾನವನ್ನು ಗಳಿಸಿದೆ. ಇದು ಮ್ಯೂಚುವಲ್ ಕಂಪೆನಿಯಾಗಿ ಘಟಿತವಾಗಿದ್ದು, ಪಾಲುದಾರ ಭಂಡವಳಿಗರಿಲ್ಲದಿರುವುದರಿಂದ, ಕಂಪೆನಿಯ ಸರ್ವ ಲಾಭವನ್ನೂ ಹಕ್ಕು ಹೊಂದಿದ ಪಾಲಿಸಿದಾರರೇ ತಮ್ಮಲ್ಲಿ ಹಂಚಿಕೊಳ್ಳುವರು. ಪ್ರಾಗತಿಕ ಬಿಗುಮಾನದ ತಳಹದಿಯ ಮೇಲೆ ನಡೆಸಿದ ತನ್ನೆಲ್ಲಾ ವಿಮಾ ಗಣನೆಗಳಲ್ಲಿ ಉಳಿತಾಯವನ್ನು ತೋರಿಸಿದುದು ಮಾತ್ರವಲ್ಲದೆ, ಸ್ಥಾಪಿತವಾದಂದಿನಿಂದಲೂ ಇದು ಬೋನಸು ಹಂಚಿದೆ. ಪಾಲಿಸಿದಾರರ ಹಿತದೃಷ್ಟಿಯೇ ಧ್ಯೇಯವಾಗುಳ್ಳ ಈ ಪ್ರಗತಿಶೀಲ ಮ್ಯೂಚುವಲ್ ಕಂಪೆನಿಯಲ್ಲಿ ಇಂದೇ ವಿಮೆ ಇಳಿಸಿ, ನಿಮ್ಮ ಕುಟುಂಬದ ಭದ್ರತೆಯನ್ನು ಕಾಯ್ದುಕೊಳ್ಳಿರಿ.

THE CANARA MUTUAL ASSURANCE COMPANY, LTD.,

Estd: 1935] [Head Office: UDIPI, S. INDIA.

ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 25 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಕೊಡುವಲ್ಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವದು.

THE MOOLKY BANK LTD.

Moolky, S. K.

ಭಾರತೀಯ ಕೈಮಗ್ಗದ ಅದೃಷ್ಟದಲ್ಲಿ ಏರಿಳಿತ

ನೇಕಾರರ ಪರಿಸ್ಥಿತಿ ಸುಧಾರಿಸುವ ಪ್ರಯತ್ನಗಳು

ಇದೇ ಮಾರ್ಚಿ ೭ನೇ ದಿನಾಂಕದಿಂದ ೧೩ನೇ ತಾರೀಕಿನ ವರೆಗೆ ದೇಶದಾದ್ಯಂತ ಕೈಮಗ್ಗದ ಸಪ್ತಾಹವು ಆಚರಿಸಲ್ಪಟ್ಟಿತು. ಅಖಿಲಭಾರತ ಕೈಮಗ್ಗದ ಮಂಡಳದವರು ಏರ್ಪಡಿಸಿದ ಈ ಸಪ್ತಾಹವು ಆದಷ್ಟು ಹೆಚ್ಚು ಕೈಮಗ್ಗದ ವಸ್ತ್ರಗಳನ್ನು ಉತ್ಪಾದಿಸಿ ಮಾರಾಟಮಾಡುವುದರ ಕಡೆಗೆ ಜನರ ಗಮನವನ್ನು ಸೆಳೆಯುವುದಕ್ಕೆ ಪ್ರಯತ್ನಿಸಿದೆ. ಇದರಲ್ಲಿ ಭಾಗವಹಿಸಿದ ಮಂತ್ರಿಗಳೇ ಮುಂತಾದವರು ಜನರು ಆದಷ್ಟು ಹೆಚ್ಚು ಕೈಮಗ್ಗದ ವಸ್ತ್ರಗಳನ್ನು ಕೊಂಡುಕೊಂಡು ಭಾರತದ ಅತ್ಯಂತ ದೊಡ್ಡ ಕೈಗಾರಿಕೆಯಾದ ಕೈಮಗ್ಗದ ಉದ್ದಿಮೆಗೆ ಪ್ರೋತ್ಸಾಹಿಸಬೇಕೆಂದು ಪ್ರಾರ್ಥಿಸಿದರು. ಕೇಂದ್ರ ಸರಕಾರದ ವಾಣಿಜ್ಯ ಮಂತ್ರಿ ಶ್ರೀ ಕೃಷ್ಣಮಾಚಾರಿಯವರು ಕೈಮಗ್ಗದ ಕೈಗಾರಿಕೆಗೆ ಸಾಕಷ್ಟು ರಕ್ಷಣೆ ಕೊಡುವುದು ಸರಕಾರದ ಧೋರಣೆಯೆಂದು ಸಾರಿದರು. ಹೀಗೆ ಅಖಿಲ ಭಾರತ ಮಹತ್ವವನ್ನೂ ಪ್ರಚಾರವನ್ನೂ ಪಡೆದ ಕೈಮಗ್ಗದ ಉದ್ದಿಮೆಯ ಪ್ರಾಚೀನ ಇತಿಹಾಸವನ್ನೂ ಅಲ್ಲಿಂದ ಈಚೆಗೆ ಉಂಟಾದ ಅಪಕರ್ಷದ ಕಾರಣಗಳನ್ನೂ ಮನವರಿಕೆಮಾಡಿಕೊಳ್ಳುವುದು ಅಪೇಕ್ಷಣೀಯ.

ಗಿಡದಲ್ಲಿ ಉಣ್ಣೆ

ಹತ್ತಿಯಿಂದ ಬಟ್ಟೆಯನ್ನು ಉತ್ಪಾದಿಸುವ ತಂತ್ರವನ್ನು ಸರ್ವಪ್ರಥಮವಾಗಿ ಭಾರತೀಯರೇ ತಿಳಿದಿದ್ದರೆಂದು ಸಾಮಾನ್ಯವಾಗಿ ಎಲ್ಲರೂ ಒಪ್ಪುವರು. ನಮ್ಮ ಹತ್ತಿಯ ಗಿಡವನ್ನು ಒಂದೊಂದು ಜನಾಂಗ ಒಂದೊಂದು ತೆರನಾಗಿ ಬಣ್ಣಿಸಿದೆ. ಅದರ ಯಕ್ಷಿಣೀ ಮಹಿಮೆ ಪ್ರತಿಯೊಬ್ಬನನ್ನೂ ಮುಗ್ಧಗೊಳಿಸಿದೆ. "ಹಣ್ಣು ಕಾಯಿಗೆ ಬದಲಾಗಿ ಕುರಿಯ ತುಪ್ಪಟಕ್ಕಿಂತ ನಯವಾದ ಉಣ್ಣೆಯನ್ನು ಆ ಗಿಡ ಕೊಡುತ್ತದೆ. ಭಾರತೀಯರು ಆ ಉಣ್ಣೆಯಿಂದ ತಮ್ಮ ಸೊಗಸಾದ ಬಟ್ಟೆಬರೆಗಳನ್ನು ನೇಯುತ್ತಾರೆ" ಎಂದು ಕ್ರಿಸ್ತ ಪೂರ್ವ ಐದನೇ ಶತಮಾನದಲ್ಲಿ ಗ್ರೀಕ ಇತಿಹಾಸಕಾರ ಹೆರೊಡೋಟಸ್ ಬರೆದ. ಇನ್ನೊಬ್ಬ ಯಾತ್ರಿಕ "ಇದೇನೋ ಗಿಡದಲ್ಲಿ ಹುಟ್ಟುವ ಕುರಿಮರಿ" ಎಂದು ಆಶ್ಚರ್ಯಗೊಂಡ.

ಭಾರತವು ಹತ್ತಿಯ ಉಪಯೋಗವನ್ನು ಉಳಿದೆಲ್ಲರಿಗಿಂತ ಮೊದಲಾಗಿ ಕಂಡುಹಿಡಿದು, ಅನುದಿನದ ಜೀವನದಲ್ಲಿ ಬಟ್ಟೆಬರೆಯನ್ನು ವಿಪುಲವಾಗಿ ಬಳಸಿತು. ಇಲ್ಲಿ ತಯಾರಾದ ಮಸ್ಲಿನ್ ಮತ್ತು ಚೀಟುಗಳಿಗೆ ಇಜಿಪ್ತ, ಗ್ರೀಸ, ರೋಮ, ಪರ್ಶಿಯ, ಅರಬಸ್ತಾನ, ಇತಿಯೋಪಿಯ ಮುಂತಾದ ದೇಶಗಳಲ್ಲಿ ಬೇಡಿಕೆ ಇದ್ದಿತು. ಭಾರತದ ಕೈಮಗ್ಗದ ಉದ್ದಿಮೆ ತುಂಬ ಸಮೃದ್ಧ ಸ್ಥಿತಿಯಲ್ಲಿತ್ತು — ಹತ್ತಿಯ ಉತ್ಪಾದನೆಯಲ್ಲಿ ಭಾರತಕ್ಕೆ ಎದುರಾಳಿಯೇ ಇರಲಿಲ್ಲ. ಇಲ್ಲಿ ತಯಾರಾದ ಬಟ್ಟೆಗಳು ಸಿಂಧದ ಮೊಹೆಂಜೊದಾರೊ, ಇಜಿಪ್ತದ ಪಿರಾಮಿಡು ಮುಂತಾದೆಡೆ ನಡೆದ ಉತ್ಖನನ ಕಾಲದಲ್ಲಿ ದೊರೆತಿದ್ದು, ಅವು ಒಂದಿಷ್ಟೂ ಕೆಡದೆ ಉಳಿದಿವೆ. ಈ ಬಟ್ಟೆಗಳು ಐದು ಸಾವಿರ ವರ್ಷಕ್ಕೂ ಪೂರ್ವದಲ್ಲಿ ಸಿದ್ಧ ಮಾಡಲ್ಪಟ್ಟವೆಂದು ಸಂಶೋಧಕರ ಅಭಿಪ್ರಾಯ. ರಾಮಾಯಣ, ಮಹಾಭಾರತಗಳಲ್ಲಂತೂ ಸರಿಯೇ — ಪ್ರಾಚೀನವಾದ ವೇದಗಳ ಕಾಲದಲ್ಲೂ ವಸ್ತ್ರ ಮತ್ತು ನಾರುಮಡಿಗಳ ಉಲ್ಲೇಖವನ್ನು ಕಾಣುತ್ತೇವೆ.

ನಮ್ಮ ದೇಶದಲ್ಲಿ ಈಸ್ಟ್ ಇಂಡಿಯಾ ಕಂಪನಿಯ ದಿನಗಳು ತೊಡಗುವುದಕ್ಕೆ ಮುಂಚೆ ನೇಕಾರರು ಕೈಮಗ್ಗದಿಂದ ನೂತ ನಾಜೂಕಾದ ಬಟ್ಟೆ ನಯ ನುಣುಪಿನಲ್ಲಿ ಜೇಡನ ಬಲೆಯನ್ನು ಹೋಲುತಿತ್ತು. ಅಕ್ಬರನಿಗೆ ಕಾಣಿಕೆಯಾಗಿ ಒಬ್ಬನು ೭೩ ಗಜ ಬಟ್ಟೆಯನ್ನು ಒಂದು ತೆಂಗಿನ ಚಿಪ್ಪಿನಲ್ಲಿ ಮಡಗಿ ಕೊಟ್ಟನು! ಬಾದಶಹ ಔರಂಗಜೇಬನು ತನ್ನ ಮಗಳು ಸಾಕಷ್ಟು ದಪ್ಪವಾಗಿ ಬಟ್ಟೆ ಉಡಲಿಲ್ಲವೆಂದು ಆಕ್ಷೇಪಿಸಿದಾಗ, ಆಕೆ ಮುಗುಳ್ನಗುತ್ತ "ಏಕೆ ಅಪ್ಪಾ, ಏಳೇಳು ಸುತ್ತು ಹಾಕಿ ಸೀರೆ ಉಟ್ಟಿದ್ದೇನೆ. ಇನ್ನೂ ನೀವು ತೋರಿದರೆ ನಾನೇನು ಮಾಡಲಿ!" ಎಂದಳಂತೆ! ಇದು ಕೈಮಗ್ಗದಿಂದಲೇ ತಯಾರಾದ ಢಾಕಾ ಮಸ್ಲಿನದ ಹಿರಿಮೆ. ಇದರ ಸೂಕ್ಷ್ಮವಾದ ಶ್ರೇಷ್ಠವಾದ ನೇಯ್ಗೆ ಜಗತ್ತನ್ನೇ ಬೆರಗುಗೊಳಿಸಿದೆ. ಈ ನೇಯ್ಗೆ ಕೆಲಸದಲ್ಲಷ್ಟೇ ಭಾರತೀಯರು ಚತುರರೆಂದಲ್ಲ — ಬಟ್ಟೆಗಳಿಗೆ ಬಣ್ಣಹಾಕುವ ಕಲೆಯಲ್ಲೂ ನಮ್ಮ ನೇಕಾರರು ನಿಷ್ಣಾತರಿದ್ದರು. ನಾನಾ ವರ್ಣಗಳಿಂದ ರಂಜಕವಾಗಿ ಮುದ್ರಿಸುವ ಅವರ ಚಾತುರ್ಯ ಲೋಕದ ಕಣ್ಣನ್ನು ಸೆಳೆಯಿತು. ಮಲಬಾರಿನ ಕಲ್ಲಿಕೋಟೆಯಲ್ಲಿ ತಯಾರಾಗುತ್ತಿದ್ದ "ಕ್ಯಾಲಿಕೋ" ಬಟ್ಟೆಯಿಂದಾಗಿ, ತಮ್ಮಲ್ಲಿಯ ಬಟ್ಟೆಗೆ ಏನೇನೂ ಗಿರಾಕಿ ಬಾರದುದನ್ನು ಕಂಡು ಇಂಗ್ಲಂಡು ೧೭೦೦ರಲ್ಲಿ ಕ್ಯಾಲಿಕೋ ಉಪಯೋಗಿಸಕೂಡದೆಂದು ಶಾಸನ ಮಾಡಿತು!

ಅದ್ವಿತೀಯ ಸ್ಥಾನ

ಜಗತ್ತಿನಲ್ಲಿ ಹದಿನೆಂಟನೇ ಶತಮಾನದ ಆದಿಯವರೆಗೂ ಭಾರತದ ಕೈಮಗ್ಗದ ಸ್ಥಾನ ಅದ್ವಿತೀಯವಾಗಿದ್ದಿತು. ಆಗ ಕೈಮಗ್ಗದವರಿಗೆ ರಾಜ ಮಹಾರಾಜರ ಪ್ರೋತ್ಸಾಹವು ಅಮಿತವಾಗಿ ದೊರಕುತ್ತಿದ್ದಿತು. ಈ ಕೈಗಾರಿಕೆಯು ಪರಂಪರಾಗತವಾಗಿದ್ದು ಇದನ್ನೇ ಜೀವನ ವ್ಯವಸಾಯವಾಗಿ ಮಾಡಿಕೊಂಡ ಕುಲಗಳ ಕಸುಬಾಗಿದ್ದಿತು. ಆನುವಂಶಿಕವಾಗಿ ನೇಯುವ ಗುಟ್ಟು ತಂದೆಯಿಂದ ಮಗನಿಗೆ ಬರುವ ರಹಸ್ಯ. ಬೇರೆ ಬೇರೆ ಎಳೆಗಳಲ್ಲಿ ಬೇರೆ ಬೇರೆ ಪಂಗಡಗಳು ಕೌಶಲವನ್ನು ಸ್ಥಾಪಿಸಿದ್ದವು. ಸಮೃದ್ಧ ಸ್ಥಿತಿಯಲ್ಲಿದ್ದ ಕೈಮಗ್ಗದ ಬಟ್ಟೆಯ ಉತ್ಪಾದನೆ ಯುರೋಪ್ಯ ರಾಷ್ಟ್ರಗಳ ಶ್ರೀಮಂತ ವರ್ಗದಲ್ಲಿ ಅತ್ಯಂತ ಜನಪ್ರಿಯತೆಯನ್ನು ಗಳಿಸಿದ್ದಿತು.

ಆದರೆ ಅದೇ ಯುರೋಪ್ಯ ದೇಶಗಳಲ್ಲಿ ಔದ್ಯೋಗಿಕ ಕ್ರಾಂತಿಯ ಪರಿಣಾಮದಲ್ಲಿ ಬಳಕೆಗೆ ಬಂದ ಯಾಂತ್ರಿಕ ಸಾಧನೆಗಳು ಭಾರತದ ಬಟ್ಟೆಯ ಜಾಗತಿಕ ಗುತ್ತಿಗೆಯ ಮೇಲೆ ವಿಪರೀತ ಪರಿಣಾಮವನ್ನು ಉಂಟುಮಾಡಿದವು. ಉಗಿ ಯಂತ್ರಗಳ ಆವಿಷ್ಕಾರವೂ ಸುಯೇಜ ಕಾಲುವೆಯ ನಿರ್ಮಾಣವೂ ಯುರೋಪಿನಿಂದ ಭಾರತಕ್ಕೆ ಸುಲಭ ಪ್ರವಾಸದ ಅನುಕೂಲತೆಯನ್ನು ಒದಗಿಸಿ ಕೊಟ್ಟುದರಿಂದ ಭಾರತದಲ್ಲಿ ವಿದೇಶಗಳು ತಯಾರಿಸಿದ ಬಟ್ಟೆಯನ್ನು ತಂದು ಸ್ಪರ್ಧಿಸುವುದು ಸುಲಭವಾಯಿತು. ಸಂಗಡಲೇ ಗಿರಣಿ ನೂಲು ಪೇಟೆಗೆ ಬಂದು ಕೈಮಗ್ಗದಲ್ಲಿ ಈ ವರೆಗೆ ಉಪಯೋಗಿಸುತ್ತಿದ್ದ ಕೈ ನೂಲಿಗೆ ಹೊಡೆತ ತಿನ್ನಬೇಕಾಯಿತು. ಮಗ್ಗದವರೂ ಗಿರಣಿ ನೂಲನ್ನೇ ಆಶ್ರಯಿಸಿದರು. ಹೀಗೆ ಭಾರತದಲ್ಲಿ ಜವಳಿ ಉದ್ದಿಮೆಯು ಭಾಗ್ಯ ಪರಿವರ್ತನೆಯನ್ನು ಹೊಂದಿ, ನೇಕಾರರು ದೀನ ಪರಿಸ್ಥಿತಿಗೆ ಇಳಿದರು.

ಕಂಪೆನಿ ಸರಕಾರದವರು ಕೈಮಗ್ಗಗಳನ್ನು ರೊಕ್ಕದ ಬಲದಿಂದ ಕೈವಶಮಾಡಿಕೊಳ್ಳಲು ಹವಣಿಸಿದರು. ಕೈಮಗ್ಗದ ಉದ್ದಿಮೆಯ ನಾಶಕ್ಕೆ ಅವರು ಅನುಸರಿಸಿದ ಕುತಂತ್ರ ಹಾಗೂ ಚತುರೋಪಾಯಗಳ ರೋಮಾಂಚಕ ಕತೆ ಐತಿಹಾಸಿಕ ಸತ್ಯದಿಂದ ಕೂಡಿದೆ. ಆಂಗ್ಲ ಪ್ರಭುತ್ವದ ಪ್ರಭಾವದಿಂದಾಗಿ ನಮ್ಮವರು ಪಾಶ್ಚಾತ್ಯ ಮಾದರಿಯ ವೇಷಕ್ಕೆ ಮಾರುಹೋಗಿದಂತೆ, ಭಾರತದ ರಾಜಾಶ್ರಯ, ಕೈಮಗ್ಗದ ಉತ್ಪಾದನೆಗೆ ತಪ್ಪಿ ಹೋದಂತೆ, ನೇಕಾರರು ನಿರುದ್ಯೋಗಕ್ಕೆ ತಳ್ಳಲ್ಪಟ್ಟು ಅಸ್ತಿತ್ವವನ್ನು ಉಳಿಸಿಕೊಳ್ಳುವುದೇ ಅವರಿಗೆ ಕಠಿಣವಾಗಿ ಪರಿಣಮಿಸಿತು. ಇಂಥದರಲ್ಲಿ ಕೈಮಗ್ಗಗಳು ಜೀವ ಹಿಡಿದುಕೊಂಡು ಇಂದಿನವರೆಗೆ ನಿಲವೂರಿನಿಂತಿದ್ದರೆ, ಅದು ಭಾರತೀಯ ಮಹಿಳೆಯರ ಸ್ವಾಭಿಮಾನದ ಆತ್ರ ಬುದ್ಧಿಯೇ ಸರಿ. ಭಾರತೀಯ ಮಹಿಳೆಯರಿಗೆ ಕೈಮಗ್ಗದಲ್ಲಿ ಸಿದ್ಧಗೊಂಡ ಬಣ್ಣಬಣ್ಣದ ಕಲಾತ್ಮಕ ನೇಯ್ಗೆಯ ಮೇಲಿನ ಪ್ರೀತಿ ಕಡಿಮೆಯಾಗಲಿಲ್ಲವಾಗಿ ನೇಕಾರರು ಬದುಕಿಕೊಂಡರು.

ಅತಿದೊಡ್ಡ ಕೈಗಾರಿಕೆ

ಭಾರತದಲ್ಲಿ ಇಂದು ೬೦ ಲಕ್ಷ ನುರಿತ ನೇಕಾರರು ಈ ಉದ್ದಿಮೆಯಲ್ಲಿ ತೊಡಗಿದ್ದು ಸುಮಾರು ೧೪೦ ಲಕ್ಷ ಜನರಿಗೆ ಕೈಮಗ್ಗದ ಕೈಗಾರಿಕೆ ಜೀವನಾಧಾರವಾಗಿರುತ್ತದೆ. ನಮ್ಮಲ್ಲಿ ೨೦ ಲಕ್ಷ ಕೈಮಗ್ಗಗಳು ಕೆಲಸಮಾಡುತಿದ್ದು, ಅವುಗಳು ವರ್ಷವಿಡೀ ಕೆಲಸಮಾಡಿದರೆ ೬೦೦ ಕೋಟಿ ಗಜ ಬಟ್ಟೆಯನ್ನು ಉತ್ಪಾದಿಸಬಲ್ಲವು. ಆದರೆ ಇವುಗಳಿಗೆ ನೂಲಿನ ಪೂರೈಕೆ ಸಾಕಷ್ಟು ಆಗುತ್ತಿಲ್ಲ. ೧೯೫೧ರಲ್ಲಿ ತಿಂಗಳಿಗೆ ಸರಾಸರಿ ೭೬೦೦೦ ಗಂಟುಗಳಷ್ಟು ಮಾತ್ರ ನೂಲು ಲಭ್ಯವಾಯಿತು. ಈ ನೂಲಿನ ಪೂರೈಕೆಯ ಮೇಲಿಂದ ೧೩೦ ಕೋಟಿಗಜ ಬಟ್ಟೆಯು ಸಿದ್ಧಗೊಂಡಿತು. ದೇಶದ ಬಟ್ಟೆಯ ಆವಶ್ಯಕತೆಯಲ್ಲಿ ಕೆಲವು ವರ್ಷ ಪೂರ್ವದಲ್ಲಿ ಕೈಮಗ್ಗಗಳು ಮೂರರಲ್ಲಿ ಒಂದಂಶದಷ್ಟು ಬಟ್ಟೆಯನ್ನು ಒದಗಿಸುತ್ತಿದ್ದರೆ ಇಂದು ಈ ಪ್ರಮಾಣ ಐದರಲ್ಲಿ ಒಂದಂಶಕ್ಕೆ ಇಳಿದಿದೆ.

ಕೈಮಗ್ಗಗಳು ಹೆಚ್ಚಾಗಿ ಹತ್ತಿಯ ಬಟ್ಟೆಯನ್ನು ನೇಯುತ್ತವೆ. ಆದರೆ ರೇಷ್ಮೆ, ಕೃತಕ ರೇಷ್ಮೆ, ಉಣ್ಣೆಗಳನ್ನು ನೇಯುವ ಮಗ್ಗಗಳೂ ೫೦ ಸಾವಿರ ನೂಲನ್ನು ಬಳಸಿ ೬೦—೧೦೦ ಗಜ ಬಟ್ಟೆಯನ್ನು ಉತ್ಪಾದಿಸಬಲ್ಲವು. ಒರಟು ಬಟ್ಟೆಯಾದರೆ ಕಡಿಮೆ, ನಯವಾದರೆ ಹೆಚ್ಚು ಬಟ್ಟೆ ನೇಯಬಹುದು. ನಮ್ಮ ಕೈಮಗ್ಗಗಳು ಮುಖ್ಯವಾಗಿ ಸೀರೆ—ಧೋತರಗಳನ್ನೇ ನೇಯುತ್ತಿದ್ದರೂ ಅಲಂಕಾರದ ಬಟ್ಟೆ, ಜಮಖಾನ, ಅಂಗವಸ್ತ್ರ, ಉತ್ತರೀಯ, ದುಪ್ಪಟಿ, ರುಮಾಲುಗಳನ್ನೂ ತಯಾರಿಸುತ್ತವೆ.

ಹತ್ತೊಂಭತ್ತನೇ ಶತಮಾನದ ಕೊನೆಕೊನೆಗೆ ಭಾರತದಲ್ಲಿ ನೂಲಿನ ಗಿರಣಿಗಳು ತಲೆಯೆತ್ತಿಕೊಂಡು ಕೆಲವು ಕಾಲದವರೆಗೆ ಮಾತ್ರ ಕೈಮಗ್ಗದ ಉದ್ದಿಮೆಗೆ ಪೂರಕವಾಗಿ ಇದ್ದು ಉಳಿದವು. ವಿದೇಶದ ಬಟ್ಟೆಗಳ ಮೇಲೆ ಆಯಾತ ಸುಂಕ ಮತ್ತು ಸ್ವದೇಶೀ ಗಿರಣಿ ಬಟ್ಟೆಗಳ ಮೇಲೆ ಅಬಕಾರಿ ಸುಂಕ ಹಾಕುವ ಸರಕಾರದ ಈಗಿನ ಧೋರಣೆಯೂ ನಿಧಾನವಾಗಿ ತಲೆಯೆತ್ತುತ್ತಿದ್ದ ಸ್ವದೇಶೀ ಪ್ರತದ ಚಳುವಳಿಯೂ ಕೈಮಗ್ಗಗಳಿಗೆ ತುಸು ನೆರವಾದವು. ಸ್ವದೇಶೀ ಮುಂತಾದ ಯಾಂತ್ರಿಕ ಸುಧಾರಣೆಗಳಿಂದಾಗಿ ಕೈಮಗ್ಗದ ಉತ್ಪಾದನಾ

(ಆರನೇ ಪುಟ ನೋಡಿರಿ)

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಷಲ್ ನಂ (ರೆಜಿಸ್ಟರ್ಡ್)

ಸ್ಥಾನಿಕ ಕ್ರಯ:

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಅಂದಮಾನ ನಿಕೋಬಾರಗಳಿಗೆ ಸೌಹಾರ್ದ ಸಂದರ್ಶನ

ರಾಷ್ಟ್ರಪತಿ ರಾಜೇಂದ್ರ ಪ್ರಸಾದರ ನಾಲ್ಕು ದಿನಗಳ ಪ್ರವಾಸ

ಕರಿನೀರಿನ ಶಿಕ್ಷೆ ಪಡೆದ ಕುಪ್ರಸಿದ್ಧರಿಗೂ ದೇಶ ಬಿಟ್ಟುಹೋಗಬೇಕೆಂದು ಆದೇಶಿಸಲ್ಪಟ್ಟವರಿಗೂ ಆಶ್ರಯಸ್ಥಾನವೆನಿಸಿದ್ದ ಅಂದಮಾನ—ನಿಕೋಬಾರ ದ್ವೀಪಗಳು ಇಂದು ನಾಗರಿಕ ವಾಸಸ್ಥಾನಗಳಾಗಿ ಅಭಿವೃದ್ಧಿ ಹೊಂದುತ್ತಿವೆ ಭಾರತ ಸರಕಾರವು ಈ ದ್ವೀಪಗಳಲ್ಲಿ ನಿರಾಶ್ರಿತ ಕುಟುಂಬಗಳನ್ನು ನೆಲೆಗೊಳಿಸಿ, ಅಲ್ಲಿಯ ಸಾರ್ವಾಂಗಿಕ ಪ್ರಗತಿಯ ಉದ್ದೇಶದಿಂದ ಅನೇಕ ಕ್ರಮಗಳನ್ನು ಸ್ವಾತಂತ್ರ್ಯೋತ್ತರದಲ್ಲಿ ಕೈಗೊಂಡಿದೆ. ಇಲ್ಲಿಯ ಸ್ಥಿತಿಗತಿಗಳನ್ನು ವಿವರವಾಗಿ ಪರಿಶೀಲಿಸಿ ಅನುಭವ ಮಾಡಿಕೊಳ್ಳುವ ಅಪೇಕ್ಷೆಯಿಂದ ಕಳೆದ ವಾರ ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ನಾಲ್ಕು ದಿನಗಳ ಪ್ರವಾಸವನ್ನು ಮಾಡಿದರು. ರಾಷ್ಟ್ರಪತಿಗಳು ದಿಲ್ಲಿ ಹಡಗವನ್ನು ಏರಿ ಕಲ್ಕತ್ತೆಯಿಂದ ಹೊರಟರು ಹಡಗದ ರಕ್ಷಣೆಗಾಗಿ ಗಂಗಾ ಮತ್ತು ಯಮುನಾ ಎಂಬ ಎರಡು ವಿನಾಶಿಕೆಗಳೂ ಹೊರಟು ನಿಂತವು. ಅಂದಮಾನದ ಕೇಂದ್ರನಗರವಾದ ಪೋರ್ಟ್‌ಬ್ಲೇರಕ್ಕೆ ಹಡಗು ಆಗಮಿಸಿದಾಗ ಸೂರ್ಯೋದಯದ ವೇಳೆ—ಆಗಿನ ನಿಸರ್ಗ ಸೌಂದರ್ಯವನ್ನು ನೋಡುತ್ತಾ ರಾಷ್ಟ್ರಪತಿಗಳು ಕೆಲಕಾಲ ಮಂತ್ರಮುಗ್ಧರಂತೆ ತಲ್ಲೀನರಾಗಿ ಕುಳಿತರೆಂದು ಪತ್ರಿಕಾವರದಿ ತಿಳಿಸುತ್ತದೆ

ರಮಣೀಯ ನೋಟ

ಭೋರ್ಗರೆಯುವ ಸಾಗರದ ಮಧ್ಯೆ ತೆಂಗಿನ ತೋಟ ಹಾಗು ತೇಗಿನ ಅರಣ್ಯಗಳಿಂದ ತುಂಬಿಕೊಂಡ ಈ ನಡುಗುಡ್ಡೆ ಅತ್ಯಂತ ರಮಣೀಯವಾಗಿರುತ್ತದೆ. ಬ್ರಿಟಿಷರ ಆಡಳಿತ ಕಾಲದಲ್ಲಿ ಅನೇಕ ದೇಶಭಕ್ತರು ಕಾಲಕಳೆದ ಕುಪ್ರಸಿದ್ಧ ತುರಂಗದ ಕೋಣೆಗಳೂ ದಂಡೆಯಿಂದ ಕಾಣಿಸುತ್ತವೆ. ಈಗ ಈ ಕೋಣೆಗಳಲ್ಲಿ ಆಸ್ಪತ್ರೆಗಳು ಇವೆ; ಕೆಲವದರಲ್ಲಿ ಸರಕಾರಿ ನೌಕರರು ವಾಸಿಸುತ್ತಾರೆ. ಎಲ್ಲೋ ೪೦-೫೦ ಸ್ಥಾನಿಕ ಕೈದಿಗಳು ಮಾತ್ರ ಈ ತುರಂಗಗಳಲ್ಲಿ ಇರಬಹುದು.

ಅಂದಮಾನ ಹಾಗೂ ನಿಕೋಬಾರ ದ್ವೀಪಗಳ ಜನಸಂಖ್ಯೆ ಮೂವತ್ತೈದು ಸಾವಿರದಷ್ಟು ಕಡಿಮೆ ಇವೆ. ಭಾರತ ಸಂವಿಧಾನದಂತೆ ಪ್ರತಿ ೭೫೦೦೦ ಜನರಿಗೆ ಒಬ್ಬ ಪ್ರತಿನಿಧಿಯನ್ನು ಆರಿಸಬೇಕಾಗಿರುವುದರಿಂದ, ಈ ದ್ವೀಪಗಳಲ್ಲಿ ಚುನಾವಣೆ ನಡೆಯಲಾರದು. ಹಾಗೆಂದು ಇಲ್ಲಿಯ ನಿವಾಸಿಗಳ ಹಿತ ರಕ್ಷಣೆ ಕಡೆಗಣಿಸಲಾಗದೆಂಬ ಅಭಿಪ್ರಾಯದಿಂದ ರಾಷ್ಟ್ರಪತಿಗಳೇ ರೆವರೆಂಡ್ ಬಿಶಪ್ ರಿಚರ್ಡ್‌ಸನ್ನರನ್ನು ಪ್ರತಿನಿಧಿಗಳಾಗಿ ನಾಮಕರಣ ಮಾಡಿರುವರು

ಸಂಭ್ರಮದ ಸ್ವಾಗತ

ರಾಷ್ಟ್ರಪತಿಗಳಿಗೆ ದ್ವೀಪವಾಸಿಗಳು ಸಂಭ್ರಮದ ಸ್ವಾಗತವನ್ನು ನೀಡಿದರು ಜಮುಖಾನಾ ಮೈದಾನದಲ್ಲಿ ಮಾನಪತ್ರ ಸ್ವೀಕರಿಸಲು ರಾಷ್ಟ್ರಪತಿಗಳು ಹೊರಟಾಗ ದಾರಿಯುದ್ದಕ್ಕೂ ತಾಳೆಯಗರಿ ಹಾಗೂ ಬಾಳೆಯ ಎಲೆಗಳಿಂದ ಮಂಟಪ ರಚಿಸಿದ್ದು ಕಂಡುಬಂತು. ಸುಮಾರು ಎರಡು ಸಾವಿರ ಜನರು ಸಭಾಂಗಣದಲ್ಲಿ ನೆರೆದಿದ್ದರಲ್ಲದೆ, ಮಾರ್ಗದ ಪಕ್ಕದಲ್ಲಿ ನೂರಾರು ಸ್ತ್ರೀ ಪುರುಷರು ನಿಂತುಕೊಂಡು ರಾಷ್ಟ್ರಪತಿಗಳಿಗೆ ಸ್ವಾಗತ ನೀಡಿದರು

ಶಿಕ್ಷಣಕ್ಕೆ ಹೆಚ್ಚಿನ ಸೌಕರ್ಯಗಳನ್ನು ಕೊಡಬೇಕು, ಬಾಲಿಕೆಯರಿಗೋಸ್ಕರ ಪ್ರತ್ಯೇಕ ಶಾಲೆಗಳು ಏರ್ಪಡಬೇಕು; ಇಲ್ಲಿ ನೆಲೆಗೊಳಿಸಲಿಕ್ಕೆಂದು ಜನರನ್ನು ತರುವಾಗ ಅವರು ಭಾರತದ ಎಲ್ಲ ಪ್ರದೇಶಗಳವರಾಗುವಂತೆ ನೋಡಬೇಕು, ಒಂದೇ ವರ್ಗದವರ ಪ್ರಭುತ್ವವುಂಟಾದರೆ ಅಲ್ಪಸಂಖ್ಯಾಕರ ಹಿತಗಳು ಅಲಕ್ಷಿಸಲ್ಪಡಬಹುದಾದ ಕಾರಣ, ಈ ಸೂಚನೆಯನ್ನು ತೀವ್ರ ಪರ್ಯಾಲೋಚಿಸಬೇಕು, ಕುಡಿಯುವ ನೀರು ಮತ್ತು ಹೊಲ ಸಾಗುವಳಿ ಮಾಡಲು ಸೌಕರ್ಯಗಳು ಬೇಕು—ಎಂದು ಮುಂತಾಗಿ ಮಾನಪತ್ರದಲ್ಲಿ ಅಪೇಕ್ಷಿಸಿದ್ದರು.

ಜನಹಿತದ ಯೋಜನೆ

ಕಳೆದ ವರ್ಷ ತಯಾರಿಸಿದ ಪಂಚವಾರ್ಷಿಕ ಯೋಜನೆಯಂತೆ ೪೦೦೦ ಕುಟುಂಬಗಳನ್ನು ಇಲ್ಲಿ ತಂದು ನೆಲೆಗೊಳಿಸುವ ಉದ್ದೇಶವನ್ನು ಸರಕಾರ ಇಟ್ಟುಕೊಂಡಿದೆ ಈಗ ಇರುವ ನಿರಾಶ್ರಿತ ಕುಟುಂಬಗಳಲ್ಲಿ ಹೆಚ್ಚಿನವರು ಬಂಗಾಳದಿಂದ ಬಂದವರು. ಇವರಿಗೆ ಕಾಡುಗಳನ್ನು ಕಡಿದು ಹೊಲಮನೆ ಮಾಡಿಕೊಳ್ಳಲು ಅನುಕೂಲತೆ ಕೊಡಲ್ಪಡುತ್ತದೆ ಇಲ್ಲಿಯ ಚೀಫ್ ಕಮಿಶನರಿಗೆ ಸಲಹೆ ನೀಡಲು ಅಧಿಕಾರೇತರ ಮಂಡಳಿಯೊಂದು ನೇಮಕಗೊಂಡಿದೆ. 'ಇದು ಪ್ರಜಾಪ್ರಭುತ್ವ ಪದ್ಧತಿಗೆ ಪೋಷಕವಾದ ಕ್ರಮ'ವೆಂದು ರಾಷ್ಟ್ರಪತಿಗಳು ವರ್ಣಿಸಿದರು "ರಾಷ್ಟ್ರ ವಿಭಜನೆಯ ನಂತರ ಮನೆಮಾರಿಲ್ಲದೆ ತಿರುಗಬೇಕಾಗಿ ಬಂದವರು ಈ ದ್ವೀಪಗಳನ್ನು ಆಶ್ರಯಿಸಿದಾಗ ಅವರನ್ನು ಸಮಾಜದಲ್ಲಿ ಬೇಗನೆ ಸಮರಸ ಮಾಡಿಕೊಳ್ಳುವಿರೆಂದು ಆಶಿಸುತ್ತೇನೆ" ಎಂಬುದಾಗಿ ರಾಷ್ಟ್ರಪತಿಗಳು ಹೇಳಿದರು. ಶಿಕ್ಷಣ ವಿಷಯದಲ್ಲೂ ನೀರಾವರಿಯ ಅನುಕೂಲತೆಯಲ್ಲೂ ಅಭಿವೃದ್ಧಿ ಪ್ರಯತ್ನಗಳಲ್ಲೂ ಭಾರತ ಸರಕಾರವು ಅಂದಮಾನ ನಿಕೋಬಾರಗಳನ್ನು ಮರೆಯುವುದಿಲ್ಲೆಂದೂ ಮುಂದಿನ ಕೆಲವು ವರ್ಷಗಳಲ್ಲಿ ಅನೇಕ ಬಗೆಯ ಸಹಾಯ ಸೌಕರ್ಯಗಳನ್ನು ನೀಡಲಾಗುವುದೆಂದೂ ರಾಷ್ಟ್ರಪತಿಗಳು ಆಶ್ವಾಸನೆ ಇತ್ತರು.

ಪುನರ್ನಿವೇಶನ

ಮಧ್ಯ ಅಂಡಮಾನದಲ್ಲಿ ವಸಾಹತು ಯೋಜನೆಯೊಂದು ಕಾರ್ಯಾನ್ವಿತಗೊಳ್ಳುತ್ತದೆ ಇದರನ್ವಯ ಸುಮಾರು ೨೦ ಸಾವಿರ ಎಕ್ರೆ ಭೂಮಿ ಸಾಗುವಳಿಗೆ ಸಿದ್ಧವಾಗುತ್ತದೆ ಇಲ್ಲಿಯ ಜನರು ಭತ್ತ ಬೆಳೆಯುವುದನ್ನೂ ಮುಖ್ಯ ಕಸಬಾಗಿ ಮಾಡಿಕೊಂಡಿದ್ದು, ಪ್ರತಿ ಎಕರೆಗೆ ೨೦ ೨೫ ಮಣ ಭತ್ತ ಬೆಳೆಯುತ್ತದೆ. ಕೆಲವು ಧಾನ್ಯಗಳೂ ಹಣ್ಣು ಹಂಪಲುಗಳೂ ಬೆಳೆಯುತ್ತವೆ.

ಇಲ್ಲಿ ಸರಕಾರವು ವೈದ್ಯಕೀಯ ಸೌಲಭ್ಯವನ್ನು ಅತಿ ಅಗ್ಗ ಬೆಲೆಗ ಒದಗಿಸಿರುವುದರಿಂದ ಖಾಸಗೀ ವೈದ್ಯರು ಕಂಡುಬರುವುದೇ ಇಲ್ಲ ೩೫ ಸಾವಿರ ಜನವಸತಿಯುಳ್ಳ ಈ ದ್ವೀಪ ಸಮುದಾಯಕ್ಕೆ ೧೦ ಔಷಧಾಲಯಗಳೂ ಒಟ್ಟು ೩೦೦ ಹಾಸಿಗೆಗಳುಳ್ಳ ಆಸ್ಪತ್ರೆಗಳೂ ಇವೆ.

ರಾಷ್ಟ್ರಪತಿಗಳು ಜೇಲುಗಳನ್ನು ಸಂದರ್ಶಿಸಿದಾಗ, ಕರಿನೀರಿನ ಶಿಕ್ಷೆಯ ನೆನಪು ತರುವ ಇವುಗಳನ್ನು ರದ್ದುಗೊಳಿಸುವ ಸರಕಾರದ ಮನೀಷೆಯನ್ನು ಪ್ರಕಟಿಸಿದರು

ತೆಂಗು ಹಾಗು ತೇಗು

ಈ ದ್ವೀಪಗಳಲ್ಲಿ ತೆಂಗು ಮತ್ತು ತೇಗು ಮುಂತಾದ ಮೋಪುಗಳ ಉತ್ಪತ್ತಿಯು ದೊಡ್ಡ ಸ್ರೋತವಾಗಿರುತ್ತವೆ. ಅಂದಮಾನದ ಚಟ್ಟಂ ರೇವು ತೇಗಿನ ವ್ಯಾಪಾರಕ್ಕೆ ಪ್ರಖ್ಯಾತವಾಗಿರುತ್ತದೆ ಇದು ಪ್ರತಿವರ್ಷ ೭೦ ಲಕ್ಷ ರೂಪಾಯಿಗಳ ಆದಾಯವನ್ನು ತರುತ್ತದೆ ನಿಕೋಬಾರ ಗುಂಪಿನಲ್ಲಿರುವ ನಾನ್‌ಕ್ರಾವಿಯು ಸಂರಕ್ಷಣಾ ಮಹತ್ವದಿಂದ ಕೂಡಿದೆ. ಭಾರತವನ್ನು ಬಿಟ್ಟುಹೋಗುವಾಗ ಬ್ರಿಟಿಷರು ಈ ದ್ವೀಪವನ್ನು ತಮಗೆ ಕೊಡಬೇಕೆಂದು ಅಪೇಕ್ಷೆ ವ್ಯಕ್ತಗೊಳಿಸಿದ್ದರು ಇದು ಕೊಬ್ಬರಿ ತಯಾರಿಕೆಗೆ ಹೆಸರ್ಗೊಂಡಿದೆ. ೧೯೪೪ರಿಂದ ಎಲ್ಲ ಹಳ್ಳಿಗಳಲ್ಲೂ ಸಹಕಾರಿ ಸಂಸ್ಥೆಗಳು ಸ್ಥಾಪಿತಗೊಂಡಿವೆ ರಾಷ್ಟ್ರಪತಿಗಳು ಈ ದ್ವೀಪಗಳನ್ನು ಸಂದರ್ಶಿಸಿದಾಗ ನಿವಾಸಿಗಳು ಅವರನ್ನು ಆದರದಿಂದ ಕಂಡು ಸತ್ಕರಿಸಿದರು.

ಮೂಲ ನಿವಾಸಿಗಳು

ರಾಷ್ಟ್ರಪತಿಗಳು ಅಂದಮಾನದ ಮೂಲ ನಿವಾಸಿಗಳನ್ನೂ ಭೇಟಿಮಾಡಿದರು. ಫ್ಲಾರೆನ್ಸ ವಿಶ್ವವಿದ್ಯಾಲಯದ ಡಾ. ಲಿಡಿಯೊ ಕಿಪ್ರಿಯಾನಿಯವರು ಓಂಗೀಸರು ಅಂದಮಾನದ ಮೂಲ ನಿವಾಸಿಗಳೆಂದು ಹೇಳುವರು. ಇವರು ಮಧ್ಯ ಅಂಡಮಾನದಲ್ಲಿ ವಾಸಿಸುತ್ತಿದ್ದು ಕುಳ್ಳರೂ ಗಟ್ಟಿಗರೂ ಇರುವರು. ಮುಖಕ್ಕೆ ಬಣ್ಣ ಹಚ್ಚಿಕೊಂಡು ಮಾನ ಮುಚ್ಚಿಕೊಳ್ಳುವಷ್ಟು ಮಾತ್ರ ಬಟ್ಟೆತೊಟ್ಟು ರಾಷ್ಟ್ರಪತಿಗಳ ಸಂದರ್ಶನಕ್ಕೆ ಇವರು ಬಂದರು. ಹೆಂಗಸರು ಇನ್ನೂ ಕಾಡುಸ್ಥಿತಿಯಲ್ಲಿದ್ದು ಸೊಂಟದ ಸುತ್ತಲೂ ಹುಲ್ಲನ್ನು ಸುತ್ತಿಕೊಂಡಿದ್ದರು. ಈ ಮೂಲನಿವಾಸಿಗಳು ಸುಮಾರು ೫೦೦ ಇರಬಹುದು. ಗಡ್ಡೆಗೆಣಸು, ಮೀನು ಮತ್ತು ಕಾಡು ಹಂದಿಯ ಮಾಂಸವೇ ಇವರ ಆಹಾರ. ಸಿಕ್ಕಿದರೆ ಅಕ್ಕಿಯನ್ನೂ ಉಣ್ಣುವರು. ಆದರೆ ಕೃಷಿ ಮಾಡುವ ಅಭ್ಯಾಸ ಇವರಿಗಿಲ್ಲ. ತಮ್ಮದೇ ಭಾಷೆಯನ್ನು ಇವರು ಆಡುತಿದ್ದರೂ ಇವರ ಧುರೀಣನಿಗೆ ಹಿಂದೀ ಭಾಷೆ ಬರುತ್ತದೆ ಅವನು ರಾಷ್ಟ್ರಪತಿಗಳೊಡನೆ ತಮ್ಮವರ ಯೋಗಕ್ಷೇಮದ ಕುರಿತು ಮಾತನಾಡಿದನು ರಾಷ್ಟ್ರಪತಿಗಳು ಇವರಿಗೆಲ್ಲ ಕಾಣಿಕೆಗಳನ್ನು ಹಂಚಿದರು.

ಕೃತಜ್ಞತೆ

ಹಿಂದುಳಿದ ಭಾರತದ ಹಿಂದುಳಿದ ದ್ವೀಪ ಸಮುದಾಯವಾದ ಅಂದಮಾನ-ನಿಕೋಬರಗಳ ಅಭಿವೃದ್ಧಿ ಪ್ರಯತ್ನದಲ್ಲಿ ರಾಷ್ಟ್ರಪತಿಗಳ ಪ್ರಕೃತ ಸಂದರ್ಶನದ ಅನುಭವ ಹೆಚ್ಚಿನ ಪ್ರಯೋಜನವನ್ನು ನೀಡಬಲ್ಲುದು ಈ ಸೌಹಾರ್ದ ಪ್ರವಾಸವನ್ನು ಕೈಗೊಂಡ ರಾಷ್ಟ್ರಪತಿಗಳು ದಿನಾಂಕ ೧೯ರಂದು ತಮ್ಮೊಂದಿಗೆ ಸುಂದರ ವಾಸ ಸವಿ ನೆನಪುಗಳನ್ನು ತೆಗೆದುಕೊಂಡು ೭೮೦ ಮೈಲು ಸಮುದ್ರ ಪ್ರವಾಸವನ್ನು ಮುಗಿಸಿ ವಿಶಾಖಪಟ್ಟಣದ ರೇವಿನಲ್ಲಿ ಇಳಿಯಲು ಸ್ವದೇಶಾಭಿಮುಖರಾದರು ತಮ್ಮ ಅಲ್ಪಾವಧಿಯ ಸಂದರ್ಶನ ಕಾಲದಲ್ಲಿ ದ್ವೀಪದ ಜನರು ತಮಗೆ ನೀಡಿದ ಸನ್ಮಾನ ಸತ್ಕಾರಗಳಿಗೋಸ್ಕರ ಅವರಿಗೆ ಕೃತಜ್ಞತೆಯನ್ನು ಅರ್ಪಿಸಿದರು.

PLACE YOUR LIFE ASSURANCE WITH A COMPANY OF YOUR OWN - - -

Established in 1929, the POPULAR is progressing on sound lines It has built up for itself a record of efficient servicesound investment and a personal touch with its Policy holders and Representatives At whatever stage We welcome yours association with the POPULAR

THE
POPULAR INSURANCE CO. LTD.
"POPULAR BUILDINGS" MANGALORE-1

ಚ್ಯವನಪ್ರಾಶ

ಹಿಮಾಲಯದ ಉತ್ಕೃಷ್ಟ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಚ್ಯವನಪ್ರಾಶವು ಕ್ಷಯ, ದುರ್ಬಲತೆ ಇತ್ಯಾದಿ ರೋಗಿಗಳಿಗೆ ದಿವ್ಯೌಷಧಿ ವಯೋವೃದ್ಧರಿಗೆ ವಿಶೇಷ ಪರಿಣಾಮಕಾರಿಯಾದುದು ಎಳೆ ಮಕ್ಕಳನ್ನೂ ಗಟ್ಟಿಮುಟ್ಟಾಗಿಯೂ ಆರೋಗ್ಯವಂತರಾಗಿಯೂ ಇರಗೊಡಿಸುವುದು ಚ್ಯವನಪ್ರಾಶವನ್ನು ಸತತ ಉಪಯೋಗಿಸುವುದರಿಂದ ಆಯುಸ್ಸು ವೃದ್ಧಿಯಾಗುವುದು ಪರೀಕ್ಷಾರ್ಥವಾಗಿ ಕೆಳಗಿನ ವಿಳಾಸಕ್ಕೆ ಬರೆದು ಒನ್ನು ತರಿಸಿ ನೋಡಿರಿ ಸೇರಿಗೆ ರೂಪಾಯಿ 10/. ಮಾತ್ರ

ಕಾಲಿಕಮಾಲಿ ಆಯುರ್ವೇದ ಫಾರ್ಮಸಿ, ಋಷಿಕೇಶ (ದೆಹರಾಡನ್)
Kali Kamali Ayurved Pharmacy, RISHIKESH (Dehradun)



ತಿರುಕೊಚ್ಚಿಯಲ್ಲಿ ಮಂತ್ರಿಮಂಡಳದ ಪ್ರಶ್ನೆ

ಪ್ರಜಾಸಮಾಜವಾದಿಗಳಿಗೆ ಕಾಂಗ್ರೆಸು ಪಕ್ಷದ ಸಹಕಾರ

ತಿರುವಾಂಕೂರು—ಕೊಚ್ಚಿಯಲ್ಲಿ ಮರುಚುನಾವಣೆಗಳು ಮುಗಿದು ಇಷ್ಟು ಸಮಯವಾದರೂ ಹೊಸ ಮಂತ್ರಿಮಂಡಳ ರಚಿಸುವ ಪ್ರಯತ್ನಗಳು ಯಶಸ್ವಿಯಾಗಲಿಲ್ಲ. ಭದ್ರವಾದ, ಸ್ಥಿರವಾದ, ಜನತೆಯ ಬೆಂಬಲವನ್ನು ನಿಃಸಂದಿಗ್ಧವಾಗಿ ಪಡೆದುಕೊಂಡ, ಶಾಂತಿ ಸುವ್ಯವಸ್ಥೆಗಳನ್ನು ದಕ್ಷತೆಯಿಂದ ರಕ್ಷಿಸಿಕೊಂಡು ಹೋಗಬಲ್ಲ ಸರಕಾರದ ರಚನೆಯಾಗಬೇಕೆಂದು ಎಲ್ಲರ ಅಪೇಕ್ಷೆ ಇದ್ದರೂ ಅಲ್ಲಿಯ ಚುನಾವಣಾ ಫಲಿತಾಂಶ ಯಾವುದೇ ಪಕ್ಷಕ್ಕೆ ಅನುಕೂಲ ಬಹುಮತವನ್ನು ಕೊಡಲಿಲ್ಲ. "ಕರ್ಮವೀರ" ಪತ್ರಿಕೆಯಲ್ಲಿ ಓದುಗರೊಡನೆ ಹರಟೆ ಹೊಡೆಯುತ್ತಾ, ಲಾಂಗೂಲಾಚಾರ್ಯರು "ಜನರಿಗೆ ಸಾಮೂಹಿಕ ಇಚ್ಛೆಯೆಂಬುದು ಇರುವುದೇ ನಿಜವಾದರೆ ತಿರುಕೊಚ್ಚಿಯ ಸಾಮೂಹಿಕ ಬಲವು ಎಡಕ್ಕೂ ಅಲ್ಲ, ಬಲಕ್ಕೂ ಅಲ್ಲ, ಅರಾಜಕತೆಯ ಕಡೆಗೆ ಇದೆ ಎಂಬುದನ್ನು ಮೊನ್ನಿನ ಚುನಾವಣೆಗಳು ತೋರಿಸಿ ಕೊಟ್ಟವು" ಎಂದು ಬರೆದರು. ಈ ಮಾತಿನಲ್ಲಿ ಗಹನವಾದ ವ್ಯಂಗ್ಯವು ಹುದುಗಿಕೊಂಡಿದೆ. ಭಾರತದ ಅತ್ಯಂತ ಹೆಚ್ಚು ವಿದ್ಯಾವಂತರಾದ ಜನರ ಬುದ್ಧಿವಂತಿಕೆಯ ಪರಿಣಾಮವಾಗಿ ಅಲ್ಲಿ ಯಾವ ಪಕ್ಷದ ಸರಕಾರವೂ ಸುಲಭದಲ್ಲಿ ಅಧಿಕಾರ ವಹಿಸಿಕೊಳ್ಳದಂತೆ ಪರಿಸ್ಥಿತಿ ನಿರ್ಮಾಣಗೊಂಡಿತು.

ಪ್ರಸವಾಪರ್ವತದ ಪ್ರಸವ

೧೧೮ ಮಂದಿ ಸದಸ್ಯರಿರುವ ಶಾಸನಸಭೆಯಲ್ಲಿ ತಮ್ಮ ಪಕ್ಷದ ಬಲ ೧೯ ಮಾತ್ರ ಇದ್ದರೂ ಸಂಯುಕ್ತ ರಂಗದ ಹೊಗೆ ೫ ಸ್ವತಂತ್ರ ಸದಸ್ಯರ ಬೆಂಬಲವನ್ನು ಪಡೆದು ಪಟ್ಟಂತಾನು ಪಿಳ್ಳೆಯವರು ಮಂತ್ರಿಮಂಡಳ ರಚಿಸುವ ಉತ್ಸಾಹವನ್ನು ಪ್ರಕಟಿಸಿದರು. ಆದರೆ ಏನು ಕಾರಣವೋ— ಪ್ರಜಾ ಸಮಾಜ ವಾದೀ ಪಕ್ಷದ ರಾಷ್ಟ್ರೀಯ ಸಮಿತಿಯು ಇದನ್ನು ಅನುಮೋದಿಸಲಿಲ್ಲ. ಮದ್ರಾಸಿನಲ್ಲಿ [illegible] ಸೇರಿದ ಸಭೆಯು ಬಹಳ ದೀರ್ಘ ಕಾಲ ವಿಚಾರ ವಿನಿಮಯವನ್ನು ನಡೆಸಿದ ಬಳಿಕ ತಿರುಕೊಚ್ಚಿಯಲ್ಲಿ ಪ್ರಜಾ ಸಮಾಜವಾದೀ ಪಕ್ಷವನ್ನೇ ಮಂತ್ರಿ ಮಂಡಳ ರಚಿಸಲು ಆಮಂತ್ರಿಸಿದರೆ ಹಾಗೆ ಮಾಡಲು ಅದು ಸಿದ್ಧವಿದೆಯೆಂದು ನಿರ್ಣಯಿಸಿತು. ಈ ಗೊತ್ತುವಳಿಯು ತಿರುಕೊಚ್ಚಿಯ ಪ್ರಕೃತ ಪರಿಸ್ಥಿತಿಯಲ್ಲಿ ಎಷ್ಟು ಪ್ರಯೋಜನಕ್ಕೆ ಬರುವುದೋ ತಿಳಿಯದು. ಆಚಾರ್ಯ ಕೃಪಲಾನಿಯವರೇ ಇದರ ಬಗ್ಗೆ "ನಾವು ಪರ್ವತದಷ್ಟು ಬೇನೆ ತಿಂದು ಈ ಇಲಿಯನ್ನು ಹೆತ್ತಿರುತ್ತೇವೆ. ಅದು ಸತ್ತ ಇಲಿಯೂ ಆಗಿರಬಹುದು; ಕೆಲವರಿಗೆ ಪ್ಲೇಗಿನ ಇಲಿಯೂ ಆಗಿರಬಹುದು" ಎಂದು ಹೇಳಿದರು. ಇದರಲ್ಲಿ ತತ್ವನಿಷ್ಠೆ ಇರಬಹುದು—ಆದರೆ ವ್ಯವಹಾರದಲ್ಲಿ ಹೇಗೋ!

ತೋರುವ ಉಪಾಯ

ಕೇವಲ ಪ್ರಜಾ ಸಮಾಜವಾದೀ ಸದಸ್ಯರು ಮಂತ್ರಿ ಮಂಡಳ ರಚಿಸುವುದು ಹೇಗೆ ಎಂಬುದನ್ನು ಪ್ರಸವಾ ಧುರೀಣರು ವಿವರಿಸುತ್ತಾ ಫ್ರಾನ್ಸಿನಲ್ಲಿ ಯಾವುದೇ ಪಕ್ಷಕ್ಕೂ ಸಮಾಜವಾದಿಗಳು ನಿಶ್ಚಿತ ಬಹುಮತವಿಲ್ಲದಿದ್ದರೂ ಮಂತ್ರಿಮಂಡಳವನ್ನು ರಚಿಸಿ ಆಡಳಿತ ನಡೆಸುವ ಪದ್ಧತಿಯನ್ನು ಉಲ್ಲೇಖಿಸಿದರು. ತಿರುಕೊಚ್ಚಿಯ ವಿಶಿಷ್ಟ ಪರಿಸ್ಥಿತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಅಲ್ಲಿ ಸ್ವಿಜರಲೇಂಡಿನ ಮಾದರಿಯಂತೆ ಮಂತ್ರಿಮಂಡಳ ರಚಿಸಬೇಕೆಂದೂ ಇದಕ್ಕೋಸ್ಕರ ಭಾರತದ ಸಂವಿಧಾನದಲ್ಲಿ ಅಗತ್ಯಕಂಡ ಬದಲಾವಣೆ ಮಾಡಬೇಕೆಂದೂ ಪ್ರೊ. ಎನ್. ಜಿ ರಂಗಾ ಕೆಲಸಮಯದ ಹಿಂದೆ ಸೂಚಿಸಿದ್ದರು. ಆಯ್ಕೆಹೊಂದಿಬಂದ ಸದಸ್ಯರ ಸಂಖ್ಯಾಬಲವನ್ನು ಹೊಂದಿಕೊಂಡು ಆಯಾ ಪಕ್ಷದ ಪ್ರತಿನಿಧಿಗಳನ್ನು ಮಂತ್ರಿಮಂಡಳದಲ್ಲಿ ಸೇರಿಸಿಕೊಳ್ಳುವುದು ಈ ಕ್ರಮ. ಆದರೆ ಮೇಲಿನ ಎರಡೂ ನಮೂನೆಯ ಸರಕಾರ ಪದ್ಧತಿ ಭಾರತದ ಈಗಿನ ವಾತಾವರಣದಲ್ಲಿ ನೆಲೆಯೂರಲಾರದು.

ಹೊರಗಿನಿಂದ ಬೆಂಬಲ

ಚುನಾವಣಾ ಹೋರಾಟ ಕಾಲಕ್ಕೆ ಮಾತ್ರ ಪ್ರಸವಾ ಧುರೀಣರೂ ಸಂಯುಕ್ತರಂಗದ ಧುರೀಣರೂ ಮಾಡಿಕೊಂಡ ಒಡಂಬಡಿಕೆ, ಮಂತ್ರಿಮಂಡಳ ರಚನೆಯ ಪ್ರಶ್ನೆಗೆ ಸಹಕಾರಿಯಾಗಲಿಲ್ಲ. 'ಹೊರಗಿನಿಂದ' ಬೆಂಬಲ ಕೊಡುವ ಅಥವಾ ಪಡೆಯುವ ಧೋರಣೆ ಇವರಿಗಿದ್ದರೂ ಅದು ಆಯಾ ವಿಷಯಗಳ 'ಯೋಗ್ಯತೆ' ಯನ್ನು ಹೊಂದಿಕೊಂಡಿರುವುದರಿಂದ ಬಹಳ ಕಷ್ಟದ ಬಳಿಕ ರಚಿಸಲ್ಪಟ್ಟ ಮಂತ್ರಿ ಮಂಡಳವು ಯಾವ ಕಾಲದಲ್ಲಿ ಉರುಳಿ ಹೋದೀತೆಂದು ಹೇಳುವುದು ಕಷ್ಟ. ಕಾಂಗ್ರೆಸಿನ ನೀತಿಯು ಪ್ರಸವಾ ಪಕ್ಷದ ಸರಕಾರದ ವಿಷಯದಲ್ಲಿ ತುಸು ಆಶಾಜನಕವಾಗಿ ಕಂಡುಬಂದಿದೆ. ಪ್ರಸವಾ ಪಕ್ಷಕ್ಕೆ ಬೆಂಬಲ ಕೊಡುವುದಾಗಿ ಕಾಂಗ್ರೆಸು ಧುರೀಣರು ಹೇಳಿರುವರು. ಆದರೆ ಪ್ರಸವಾ ಪಕ್ಷವು ಸರಕಾರವನ್ನು ರಚಿಸುವ ಉತ್ಸಾಹವನ್ನೇ ಕಳೆದುಕೊಂಡಂತೆ ಈಚೆಗಿನ ಘಟನೆಗಳು ತೋರಿಸಿಕೊಡುತ್ತವೆ. ಅದರ ಬದಲು ಸಂಯುಕ್ತ ರಂಗಕ್ಕೆ "ಪ್ರಜಾ ಸಮಾಜವಾದಿ ಪಕ್ಷದ ತತ್ವ ಮತ್ತು ಕಾರ್ಯಕ್ರಮಗಳಿಗೆ ವ್ಯತಿರಿಕ್ತವಾಗದ ರೀತಿಯಲ್ಲಿ ಮತ್ತು ದೇಶದ ಹಿತ ದೃಷ್ಟಿಯನ್ನು ಇಟ್ಟುಕೊಂಡು ಅದು ಕೆಲಸ ಮಾಡುವವರೆಗೆ" ಬೆಂಬಲ ಕೊಡಲು ಪ್ರಸವಾಪಕ್ಷ ನಿರ್ಧರಿಸಿದೆ.

ನಿರಾಶೆಯ ವಾತಾವರಣ

ಎಡ ಪಕ್ಷಗಳ ಸಂಯುಕ್ತ ರಂಗವು ಶ್ರೀ ಟಿ ವಿ ಥಾಮಸರನ್ನು ಧುರೀಣರನ್ನಾಗಿ ಆರಿಸಿದ್ದು, ಇವರು ಸರಕಾರ ರಚಿಸುವ ಕುರಿತು ಮಾತುಕತೆ ಯಾಡಲು ರಾಜಪ್ರಮುಖರ ಸಂದರ್ಶನವನ್ನು ಅಪೇಕ್ಷಿಸಿರುವರು. ಶ್ರೀ ಪಟ್ಟಂತಾನು ಪಿಳ್ಳೆಯವರಿಗೆ ಈಗ ತೀರಾ ನಿರಾಶೆಯಾಗಿದೆ. ಎಡಪಕ್ಷದ ಐಕ್ಯರಂಗಕ್ಕೆ ಬೆಂಬಲಕೊಡಬೇಕೆಂದು ತಿರುಕೊಚ್ಚಿಯ ಪ್ರಸವಾ ವಿಭಾಗ ನಿರ್ಧರಿಸಿರುವುದಕ್ಕೆ ಆಚಾರ್ಯ ಕೃಪಲಾನಿಯವರೂ ಬೇಸರಹೊಂದಿರುವರು. ತಿರುಕೊಚ್ಚಿಯಲ್ಲಿ ಪ್ರಜಾ ಸಮಾಜವಾದಿ ಪಕ್ಷವೇ ಸರಕಾರದ ಹೊಣೆಯನ್ನು ಹೊರುವಂತಾಗುತ್ತಿದ್ದರೆ ಅವರಿಂದ ಜನತೆಯ ಆಸೆಗಳು ಈಡೇರುತ್ತಿದ್ದುವೆಂದು ಪ್ರಸವಾ ಪಕ್ಷದ ಧುರೀಣರ ಪ್ರಾಮಾಣಿಕವಾದ ಅಭಿಪ್ರಾಯ. ಆದರೆ ಇವರಾಗಲೀ ಇತರ ಪಕ್ಷದವರಾಗಲೀ ಕಾಂಗ್ರೆಸು ಮಂತ್ರಿ ಮಂಡಳ ರಚಿಸುವುದನ್ನು ಮೆಚ್ಚುವುದಿಲ್ಲ—ಎಡ ಪಕ್ಷಗಳ ಮಂತ್ರಿ ಮಂಡಳ ರಚಿತವಾದರೆ ಅದು ಭಿನ್ನಾಭಿಪ್ರಾಯದ ದೆಸೆಯಿಂದ ಸಾಕಷ್ಟು ಬೆಂಬಲಗಳಿಸದೆ ಹೋಗಬಹುದು. ಪರಿಣಾಮದಲ್ಲಿ ಬೇಡ ಬೇಡವೆಂದು ಹೇಳುತ್ತಿದ್ದಂತೆಯೇ ರಾಷ್ಟ್ರಪತಿಗಳ ಆಡಳಿತ ಅನಿವಾರ್ಯವಾದೀತು. ಆದುದರಿಂದ ಎಡ ಪಕ್ಷಗಳನ್ನು ನಂಬಿಯಲ್ಲ— ಕಾಂಗ್ರೆಸು ಧುರೀಣರು ನೀಡುವ ಸಹಕಾರದ ಮೇಲೆ ಭರವಸೆ ಇಟ್ಟರೆ ಪ್ರಸವಾ ಪಕ್ಷಕ್ಕೆ ಸರಕಾರ ರಚಿಸಲು ಸಾಧ್ಯವಾಗಬಹುದು— ಮತ್ತು ಅಂತಹ ಸರಕಾರ ಕೆಲಕಾಲವಾದರೂ ಬಾಳೀತು.

ಪತ್ರಿಕಾ ಶಾಸನ

ಲೋಕ ಸಭೆಯಲ್ಲಿ ಗೃಹ ಮಂತ್ರಿ ಡಾ. ಕಟಜೂರವರು ಪತ್ರಿಕೆಗಳನ್ನು ನಿಯಂತ್ರಿಸುವ ವಿಧೇಯಕಕ್ಕೆ ಇನ್ನೂ ಎರಡು ವರ್ಷಕಾಲ ಜೀವದಾನಮಾಡಬೇಕೆಂದು ಕೇಳಿ ಕೊಂಡರು. ಈ ಶಾಸನವನ್ನು ಸರ್ವ ಪ್ರಥಮವಾಗಿ ಶ್ರೀ ರಾಜಗೋಪಾಲಾಚಾರಿಯವರು ಮಂಡಿಸಿದಾಗ ಇದು ಸ್ಥಾಯಿಯಾಗಿ ಉಳಿಯುವುದಿಲ್ಲವೆಂದೂ ತಾತ್ಕಾಲಿಕ ಕ್ರಮವಿದೆಂದೂ ಹೇಳಿದ್ದರು. ಆದರೆ ಪತ್ರಿಕಾ ಶಾಸನವು ಪ್ರತ್ಯೇಕವಾದ ಶಾಸನವಾಗಿ ಅಸ್ತಿತ್ವದಲ್ಲಿ ಉಳಿಯಲು ಬಂದಂತೆ ತೋರುತ್ತದೆ. ಪತ್ರಿಕೆಗಳಲ್ಲಿ ಅಶ್ಲೀಲ, ಹಿಂಸಾಪ್ರಚೋದಕ, ರಾಷ್ಟ್ರವಿಘಾತಕ ಬರೆಹಗಳು ಪ್ರಕಟಗೊಳ್ಳಕೂಡದೆಂಬ ಉದ್ದೇಶದಿಂದ ಈ ಶಾಸನ ತರಲ್ಪಟ್ಟಿದೆ. "ಪತ್ರಿಕೆಗಳ ಮಾರಾಟವನ್ನು ಹೆಚ್ಚಿಸಲು ಹೊಣೆಗೇಡಿ ಲೇಖ ಬರೆಯುವುದನ್ನು ಸರಕಾರವು ಸಹಿಸಲಾರದು. ಹೊಲಸು ಸುದ್ದಿಯನ್ನು ಪ್ರಕಟಿಸುವುದಕ್ಕೂ ಅವಕಾಶ ಕೊಡಲಾರೆವು" ಎಂದು ಕಟಜೂ ಸಾರಿದರು. "ಗಟಾರ ಪತ್ರಿಕೆಗಳು ಸುಧಾರಿಸಿಲ್ಲವಾದುದರಿಂದ ಈ ಶಾಸನಕ್ಕೆ ಜೀವದಾನ ಮಾಡುವುದು ಅತ್ಯಗತ್ಯ" ಎಂದವರು ಹೇಳಿದ್ದಲ್ಲದೆ "ಈಗ ಕಠಿಣ ಕಾಲವನ್ನು ದೇಶ ಎದುರಿಸುತ್ತದೆ— ಜಾತೀಯ ಹಾಗೂ ಪ್ರಾಂತೀಯ ಭಾವನೆಗಳು ಉದ್ರೇಕಗೊಳ್ಳುತ್ತವೆ" ಎಂದು ಭಯವ್ಯಕ್ತಗೊಳಿಸಿದರು.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

ಕ್ರಮಸಂಖ್ಯೆ 651/1953.

ತಿಮ್ಮಣ್ಣ ಅರಸ ಪರೀಕ್ಷಿಂದ್ರ ರಾಜ ಅಜಲರು. —ವಾದಿ.

ಮತ್ತು

(1. ಮಾಧವ ಪೈ ಕೂಡಾ - ಪ್ರತಿವಾದಿಯವರೊಳಗೆ—

1ನೇ ಪ್ರತಿವಾದಿ— G. ಮಾಧವ ಪೈ, ಗುರ್ಪುರದ ರಘುನಾಥ ಪೈಗಳು, ಕಾರ್ಕಳ ತಾಲ್ಲೂಕು ಮರ್ನಾಡಿ ಗ್ರಾಮದ ಮೂಡಬಿದ್ರೆ ಪೇಟೆ—

ವಾದಿಯು ತಾ. 1—9—1942ರ ರಿಜಿಸ್ಟ್ರಿ ಮೂಲಗೇಣಿ ಕರಾರು ಪ್ರಕಾರ ವಾದಿಗೆ 1ನೇ ಪ್ರತಿವಾದಿಯಿಂದ ಬರತಕ್ಕ ಮೂಲಗೇಣಿ ಗೇಣಿ ಬಾಕಿ ಬಗ್ಗೆ ದಾಖಲು ಮಾಡಿದ ಸದ್ರಿ ದಾವೆಯು ತಾರೀಕು 29—3—1954ಕ್ಕೆ 1ನೇ ಪ್ರತಿವಾದಿಯ ಹಾಜರು ಬಗ್ಗೆ ಇಟ್ಟಿದೆ. ಆದ್ದರಿಂದ ಸದ್ರಿ ದಾವೆ ಕುರಿತು ಆಕ್ಷೇಪವಿದ್ದರೆ ಸದ್ರಿ ಕೋರ್ಟಿನಲ್ಲಿ ಸದ್ರಿ ತಾರೀಕಿನಲ್ಲಿ ಬೆಳಗ್ಗೆ 10 ಗಂಟೆಗೆ ಹಾಜರಾಗಿ ಹೇಳಿಕೊಳ್ಳತಕ್ಕದು.

(ಕೋರ್ಟಿನ ಹುಕುಂ ಪ್ರಕಾರ)

Sd/ H. K. Gopalkrishn Rao

ವಾದಿ ಕಡೆ ವಕೀಲ.

ಕಾರ್ಕಳ, ತಾ. 15-3-1954

ನವಯುಗವು ಪ್ರೈಮರಿ ಶಾಲೆಗಳ ಉಪಯೋಗಾರ್ಥವಾಗಿ ಮದ್ರಾಸು ರಾಜ್ಯದ ವಿದ್ಯಾಂಗ ಡೈರೆಕ್ಟರರಿಂದ ಮಂಜೂರಾತಿ ಹೊಂದಿರುವುದರಿಂದ ಯಾವತ್ತೂ ಪ್ರೈಮರಿ ಶಾಲೆಗಳು ಇದನ್ನು ತರಿಸಿಕೊಳ್ಳಬಹುದಾಗಿದೆ.

CANARA BANK LTD.,

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ಆಡಳಿತೆ ಕಚೇರಿಯನ್ನು ಬೆಂಗಳೂರಿಗೆ ವರ್ಗಾಯಿಸಲಾಗುವುದು.

ನಮ್ಮ ಎಲ್ಲಾ ಗ್ರಾಹಕರಿಗೂ, ಸಾರ್ವಜನಿಕರಿಗೂ ಈ ಮೂಲಕ ತಿಳಿಯಪಡಿಸುವುದೇನೆಂದರೆ ನಮ್ಮ ಬ್ಯಾಂಕಿನ ಆಡಳಿತೆಯ ಶಾಖೆಯನ್ನು—

ವೆಂಕಟಪ್ಪಾಸ್ ಬಿಲ್ಡಿಂಗ್,

ಸೆಕೆಂಡ್ ಫ್ಲೋರ್

111-118 ಸಿಲ್ವರ್ ಜುಬಿಲಿ ಪಾರ್ಕ್‌ರೋಡ್

ಬೆಂಗಳೂರು 2.

ಇಲ್ಲಿಗೆ ವರ್ಗಾಯಿಸಲಾಗುವುದು. ಮತ್ತು ತಾ. 1 ಎಪ್ರಿಲ್ 1954ರಿಂದ ಮೇಲಿನ ಆಫೀಸಿನಲ್ಲಿ ವ್ಯವಹಾರ ಆರಂಭಿಸಲಾಗುವುದು.

ಬ್ಯಾಂಕಿನ ರಿಜಿಸ್ಟರ್ಡ್ ಆಫೀಸು ಮಾತ್ರ ಮಂಗಳೂರಿನ ಲೈಟ್‌ಹೌಸ್ ಹಿಲ್‌ನಲ್ಲೇ ಇರುವುದು. ಆದುದರಿಂದ ಬ್ಯಾಂಕಿನ ಪಾಲುಗಳು, ಪಾಲುಗಳ ವರ್ಗಾವಣೆ ಇತ್ಯಾದಿ ವಿಷಯಗಳ ಮೇಲಿನ ಪತ್ರವ್ಯವಹಾರವನ್ನು ಈ ಮೊದಲಿನಂತೆ ಮೇಲಿನ ರಿಜಿಸ್ಟರ್ಡ್ ಆಫೀಸಿಗೆ ಕಳುಹಿಸಬೇಕೆಂದು ಕೇಳಿಕೊಳ್ಳುತ್ತೇವೆ.

ಬ್ಯಾಂಕಿನ ಕಚೇರಿ.
ಮಂಗಳೂರು.
13 ಮಾರ್ಚ 1954

ಯು. ಕೃಷ್ಣ ಶೆಣೈ. ಬಿ. ಎ.
ಅಸಿಸ್ಟೆಂಟ್ ಸೆಕ್ರೆಟರಿ

ನವಯುಗ

ಉಡುಪಿ, ಗುರುವಾರ ೧೮-೩-'೫೪

ಸಾಹಿತ್ಯ ಪ್ರಗತಿ

ಭಾರತ ಸರಕಾರದವರು ನಮ್ಮ ಸಾಂಸ್ಕೃತಿಕ ಪ್ರಗತಿಯ ಕಡೆಗೂ ವಿಶೇಷ ಗಮನವನ್ನು ಕೊಡತೊಡಗಿರುವರು. ಜನತೆಯ ಸರ್ವಾಂಗೀಣ ಅಭಿವೃದ್ಧಿಯು ರಾಷ್ಟ್ರ ಕಲ್ಯಾಣವನ್ನೆ ಧ್ಯೇಯವಾಗಿಟ್ಟುಕೊಂಡ ಸ್ವತಂತ್ರ ಸರಕಾರದ ಮಹತ್ವದ ಕಾರ್ಯಕ್ರಮವಾಗಿರುವುದರಿಂದ, ಆರ್ಥಿಕ, ಸಾಮಾಜಿಕ ಪ್ರಗತಿಯೊಂದಿಗೆ ಸಾಂಸ್ಕೃತಿಕ ಪುನರುತ್ಥಾನಕ್ಕೂ ಎಡೆಮಾಡಿಕೊಡುವುದು ಅಪೇಕ್ಷಣೀಯ. ರಾಷ್ಟ್ರವನ್ನು ಮರಳಿ ಕಟ್ಟುವಲ್ಲಿ, ವ್ಯಕ್ತಿತ್ವ ವಿಕಸನಕ್ಕೆ ಸರ್ವಪ್ರಕಾರದ ಅನುಕೂಲತೆಗಳನ್ನು ಪೂರೈಸಿ, ಚರಿತ್ರ ಸಂಪನ್ನ ನಾಗರಿಕರನ್ನು ರೂಪಿಸುವುದರಲ್ಲಿ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಪ್ರಸಾರದಿಂದ ಅತ್ಯಧಿಕ ಸೇವೆ ದೊರಕುತ್ತದೆ. ಸರಕಾರದವರು ಸಾಂಸ್ಕೃತಿಕ ಅಭಿರುಚಿಯನ್ನು ಪೋಷಿಸಿಕೊಂಡು ಭಾರತೀಯ ಪರಂಪರೆಗೆ ಉಚಿತವಾದ ಉನ್ನತ ಮಟ್ಟವನ್ನು ಕಾಯ್ದುಕೊಳ್ಳಲು ಉದ್ದೇಶಿಸಿ ಈಗಾಗಲೇ ಸಂಗೀತ ನಾಟಕ ಮಂಡಳವನ್ನು ಸ್ಥಾಪಿಸಿರುವರು. ರಾಷ್ಟ್ರಪತಿಗಳು ಸಂಗೀತ ವಿದ್ವಾಂಸರಿಗೆ ವರ್ಷಂಪ್ರತಿ ಬಹುಮಾನಗಳನ್ನಿತ್ತು ಮನ್ನಣೆ ನೀಡುವ ಉಪಕ್ರಮವೂ ಕೆಲವು ವರ್ಷ ಪೂರ್ವದಲ್ಲಿ ಪ್ರಾರಂಭವಾಗಿರುತ್ತದೆ. ಇಷ್ಟರಲ್ಲಿಯೇ ಲಲಿತ ಕಲೆಗಳ ಮಂಡಳವೊಂದು ಅಸ್ತಿತ್ವಕ್ಕೆ ಬರಲಿದೆ. ಇವುಗಳ ಜೊತೆಗೆ ಸಾಹಿತ್ಯಿಕ ಪ್ರಗತಿಯನ್ನೂ ಕೈಗೂಡಿಸಬೇಕೆಂಬ ಹಂಬಲದಿಂದ ಸರಕಾರದವರು ಮಂಡಳವೊಂದನ್ನು ರಚಿಸಿದ್ದು, ಮೊನ್ನೆ ತಾನೆ ಕೇಂದ್ರ ಶಿಕ್ಷಣ ಮಂತ್ರಿ ಮೌಲಾನಾ ಆಜಾದರು ಇದರ ಉದ್ಘಾಟನೆ ಮಾಡಿದರು. ಭಾರತದ ಬೇರೆ ಬೇರೆ ರಾಜ್ಯ ಸರಕಾರಗಳು ತಮ್ಮ ಪ್ರದೇಶದಲ್ಲಿ ಬಳಕೆಯಲ್ಲಿರುವ ಭಾಷೆಗಳಲ್ಲಿ ಉತ್ತಮ ಸಾಹಿತ್ಯ ನಿರ್ಮಾಣವಾಗಬೇಕೆಂಬ ಇರಾದೆಯಿಂದ ಯೋಗ್ಯ ಸಾಹಿತ್ಯ ಕೃತಿಗಳಿಗೆ ಬಹುಮಾನ ನೀಡಿ ಪುರಸ್ಕರಿಸುವ ಸಂಪ್ರದಾಯವೊಂದನ್ನು ಈಗಾಗಲೇ ಪ್ರಾರಂಭಿಸಿದ್ದುಂಟು. ಕೇಂದ್ರ ಸರಕಾರ ಸ್ಥಾಪಿಸಿದ ಈ ಅಕಾಡಮಿಯ ಉದ್ದೇಶ ಇದಕ್ಕಿಂತಲೂ ಘನತರವಾದದ್ದು— ಸಾಹಿತ್ಯದಲ್ಲಿ ಅತ್ಯುಚ್ಚ ಮಟ್ಟವನ್ನು ಸ್ಥಾಪಿಸಿ, ಸಾಹಿತ್ಯದ ಕುರಿತಾದ ಜನರ ಒಲವನ್ನೂ ಅಭಿರುಚಿಯನ್ನೂ ಪೋಷಿಸಿಕೊಂಡು ಪ್ರಗತಿ ಸಾಧಿಸುವಂತೆ ದುಡಿಯುವುದು ಈ ಮಂಡಳದ ಧ್ಯೇಯ. ಇದಕ್ಕೆ ಅನುಗುಣವಾದ ರೀತಿಯಲ್ಲಿ ಉನ್ನತ ಮಟ್ಟಕ್ಕೆ ಏರಿದ ಸಾಹಿತಿಗಳಿಗೆ ಮಾತ್ರವೇ ಮಂಡಳದಲ್ಲಿ ಸ್ಥಾನ ದೊರೆಯುತ್ತದೆ. ಸಂಸ್ಥೆಯ ಮಟ್ಟವನ್ನು ಕೆಳಗಿಳಿಸುವುದಾಗಲೀ ಅಮರ ಕೃತಿಗಳನ್ನು ರಚಿಸಿ ಯೋಗ್ಯತೆ ಸ್ಥಾಪಿಸದ ಸಾಹಿತಿಗಳಿಗೆ ಅಕಾಡಮಿಯಲ್ಲಿ ಪ್ರವೇಶಗೊಡುವುದಾಗಲೀ ಉದ್ದೇಶಕ್ಕೆ ವ್ಯತಿರಿಕ್ತವಾಗುತ್ತದೆ. ಸಾಹಿತಿಗಳು ಜನಪ್ರಿಯತೆಯನ್ನು ಮಾತ್ರ ಗಳಿಸಿಕೊಂಡರೆ ಸಾಲದೆಂದೂ ಅವರ ಕೃತಿಗಳು ಚಿರಕಾಲ ಬಾಳುವಂತಿರಬೇಕೆಂದೂ ಇದರಿಂದ ಸಿದ್ಧವಾಗುತ್ತದೆ. ಡಾ. ರಾಧಾಕೃಷ್ಣನ್ನರ ಮಾತುಗಳಲ್ಲಿ "ವಿಶ್ವಸಾಹಿತ್ಯಕ್ಕೆ ಕಾಣಿಕೆ ಸಲ್ಲಿಸಬೇಕೆಂದಿರುವ ನಮ್ಮ ಸಾಹಿತಿಗಳು, ಕಲಾವಿದರು ಹಾಗು ದಾರ್ಶನಿಕರು ಪ್ರಾಚೀನ ವೈಭವವನ್ನು ನೆನೆದು ಹೊಸ ವಿಚಾರಗಳು ಕುದುರುವಂತಹ ವಾತಾವರಣವನ್ನು ತಮ್ಮ ಕೃತಿಗಳಲ್ಲಿ ನಿರ್ಮಿಸಬೇಕು" ಈ ಮಾದರಿಯ ಉದಾತ್ತ ಕೃತಿಗಳನ್ನು ಸಾಹಿತಿಗಳು ರಚಿಸುವುದಕ್ಕೆ ಯೋಗ್ಯ ಹಿನ್ನೆಲೆಯನ್ನು ನಿರ್ಮಿಸಿ ಪ್ರೋತ್ಸಾಹ ಕೊಡುವುದೇ ಅಕಾಡೆಮಿಯ ಸ್ಥಾಪನೆಯ ಮೂಲೋದ್ದೇಶ. ಹದಿನೇಳನೇ ಶತಮಾನದಲ್ಲಿ ಫ್ರೆಂಚ ಅರಸ ಹದಿನಾಲ್ಕನೇ ಲೂಯಿಯು ಸ್ಥಾಪಿಸಿದ ಅಕಾಡೆಮಿಯನ್ನು ನಮ್ಮ ಸಾಹಿತ್ಯ ಸಂಸ್ಥೆಯೂ ಹೋಲುತ್ತದೆ. ಫ್ರೆಂಚ ಸಾಹಿತ್ಯ ಸಂಸ್ಥೆಯ ಸದಸ್ಯತ್ವವು ಕೇವಲ ನಲುವತ್ತು ಮಂದಿ ಸದಸ್ಯರನ್ನು ಮಾತ್ರ ಒಳಗೊಂಡಿದೆ- ಇದರಲ್ಲಿ ಪ್ರವೇಶ ದೊರಕಬೇಕಾದರೆ ಸಾಹಿತ್ಯ ಕ್ಷೇತ್ರದಲ್ಲಿ ಅಪೂರ್ವ ಪರಿಶ್ರಮವನ್ನೂ ಅಭ್ಯಾಸವನ್ನೂ ರಾಷ್ಟ್ರ ಗೌರವವನ್ನು ಎತ್ತಿಹಿಡಿಯುವಂತಹ ಉದಾತ್ತ ಕೃತಿಯ ನಿರ್ಮಾಣವನ್ನೂ ಮಾಡಿರಬೇಕಾಗುತ್ತದೆ. ಮೋಪಾಸಾ, ಜೋಲಾ ಮುಂತಾದ ನಾಮಾಂಕಿತ ಸಾಹಿತಿಗಳಿಗೆ ಕೂಡ ಈ ಸಂಸ್ಥೆಯಲ್ಲಿ ಪ್ರವೇಶ ದೊರಕಲಿಲ್ಲವೆಂದರೆ, ಇದರ ಔನ್ನತ್ಯದ ಕಲ್ಪನೆಯಾದೀತು. ಭಾರತದ ಸಂಸ್ಥೆಯ "ಫೆಲೋ''ಗಳು ಯಾವ ಸಂದರ್ಭದಲ್ಲೂ ಇಪ್ಪತ್ತೊಂದರ ಮಿತಿಯನ್ನು ಮೀರುವುದಿಲ್ಲ. ಆದರೆ ಸಾಹಿತ್ಯದ ಅಭಿವೃದ್ಧಿಗೆ ಕಾರಣರಾದವರಿಗೂ ಬೇರೆ ಬೇರೆ ಪ್ರಾದೇಶಿಕ ಭಾಷೆಗಳ ಪ್ರಖ್ಯಾತ ಸಾಹಿತಿಗಳಿಗೂ ಸಾಮಾನ್ಯ ಸದಸ್ಯತ್ವ ತೆರೆದಿಡಲ್ಪಡುವುದು. ಶ್ರೀ ಜವಾಹರಲಾಲ ನೆಹರೂರವರು ಸಂಸ್ಥೆಯ ಅಧ್ಯಕ್ಷರಾಗಿದ್ದು, ಶ್ರೇಷ್ಠ ಮುತ್ಸದ್ಧಿ ಎಂಬುದಕ್ಕಿಂತಲೂ ಮಹಾ ಸಾಹಿತಿ ಎಂಬ ಕಾರಣದಿಂದ ಈ ಉನ್ನತ ಸ್ಥಾನಕ್ಕೆ ನೇಮಕಗೊಂಡಿರುವರು. ಪ್ರಕೃತ ವಿಶ್ವವಿದ್ಯಾಲಯಗಳು, ರಾಜ್ಯ ಸರಕಾರಗಳು, ಭಾರತ ಸರಕಾರ ಮುಂತಾದ ಪ್ರತಿನಿಧಿಗಳಿಂದ ಕೂಡಿದ ಈ ಸಂಸ್ಥೆಯಲ್ಲಿ ಕನ್ನಡದ ಪರವಾಗಿ ಶ್ರೀಗಳಾದ ಡಿ. ವಿ. ಗುಂಡಪ್ಪ ಸಿ. ಕೆ. ವೆಂಕಟರಾಮಯ್ಯನವರಂಥ ಖ್ಯಾತನಾಮರು ಪ್ರವೇಶ ಪಡೆದಿರುವರು. ಈ ಅಕಾಡೆಮಿಯವರು ಭಾರತೀಯ ಸಂವಿಧಾನದಲ್ಲಿ ಹೇಳಿದ ೧೪ ಭಾಷೆಗಳ ಶ್ರೇಷ್ಠ ಸಾಹಿತಿಗಳನ್ನು ಮನ್ನಿಸುವುದಕ್ಕೋಸ್ಕರ ಐವ್ವೈದು ಸಾವಿರ ರೂಪಾಯಿಗಳ ಬಹುಮಾನವನ್ನು ವರ್ಷಂಪ್ರತಿ ಕೊಡಬೇಕೆಂದು ಸಂಕಲ್ಪಿಸಿರುವರು. ಅಕಾಡೆಮಿಯು ಸ್ವಾಯತ್ತ ರೂಪದಲ್ಲಿ ಕೆಲಸ ಮಾಡುತ್ತಿದ್ದು, ಈ ಸಾಹಸವನ್ನು ರಾಧಾಕೃಷ್ಣನ್ನರು ವಿಶ್ವ ಸ್ವರೂಪದ್ದೆಂದು ಹೇಳಿರುವದು ಅರ್ಥಪೂರ್ಣವಿದೆ. ರಾಜಕೀಯ ಪುರೋಗತಿಗಿಂತಲೂ ಸಾಂಸ್ಕೃತಿಕ ಪುನರುತ್ಥಾನವು ರಾಷ್ಟ್ರದ ಅಂತಸ್ತನ್ನು ಮೇಲ್ಮಟ್ಟಕ್ಕೊಯ್ಯುತ್ತದೆಂಬ ನಂಬಿಕೆ ಇಟ್ಟುಕೊಂಡ ನಾವು ಸಾಹಿತ್ಯದ ಪ್ರಗತಿ ಸಾಧನೆಯ ಈ ಉಪಕ್ರಮವನ್ನು ಮನಃಪೂರ್ವಕ ಸ್ವಾಗತಿಸುತ್ತೇವೆ; ಮತ್ತು ನಮ್ಮ ಸಾಹಿತಿಗಳೂ, ಜನತೆಯೂ ಇದರ ಸಂಪೂರ್ಣ ಪ್ರಯೋಜನವನ್ನು ಹೊಂದುವುದಕ್ಕೆ ಈಗಿಂದಲೇ ಪ್ರಯತ್ನ ತೊಡಗಲೆಂದೂ ಹೇಳುತ್ತೇವೆ.

ಪೂರ್ವ ಬಂಗಾಳದ ಚುನಾವಣೆಗಳು

ಮುಸ್ಲಿಂ ಲೀಗಿಗೆ ಏನೇನೂ ಬೆಂಬಲವಿಲ್ಲ

ಪಾಕಿಸ್ತಾನದ ಪ್ರಾರಂಭದಿಂದಲೂ ಪೂರ್ವ ಬಂಗಾಳದ ನಿಲುಮೆಗೂ ಪಾಕಿಸ್ತಾನ ಸ್ಥಾಪನೆಗೋಸ್ಕರ ದುಡಿದ ಅಧ್ವರ್ಯುಗಳ ಧೋರಣಕ್ಕೂ ತಿಕ್ಕಾಟವೂ ಮತಭೇದವೂ ಸಾಮಾನ್ಯವಾಗಿದ್ದಿತು. ಕೇಂದ್ರ ಸರಕಾರದ ಸೂತ್ರಧಾರಿಗಳ ಅಭಿಪ್ರಾಯದೊಂದಿಗೆ ಪೂರ್ವ ಬಂಗಾಳ ಮಹತ್ವದ ವಿಷಯಗಳಲ್ಲಿ ಮತಭೇದಗಳನ್ನು ವ್ಯಕ್ತಪಡಿಸಿದ ನಿದರ್ಶನಗಳು ಇವೆ—ಉದಾಹರಣೆಗಾಗಿ ಉರ್ದುವನ್ನು ಪಾಕಿಸ್ತಾನದ ರಾಷ್ಟ್ರಭಾಷೆಯಾಗಿ ಮಾಡಬೇಕೆಂಬ ಪ್ರಯತ್ನಕ್ಕೆ ಪೂರ್ವ ಬಂಗಾಳದ ಜನತೆ ತೀರ ವಿರೋಧವನ್ನು ವ್ಯಕ್ತಗೊಳಿಸಿದ್ದಿತು ಅಲ್ಲಿಯ ೩೦೯ ಸ್ಥಾನಗಳಿರುವ ಶಾಸನ ಸಭೆಗೆ ಮೊನ್ನೆ ನಡೆದ ಚುನಾವಣೆಯ ಫಲಿತಾಂಶವೂ ಭಿನ್ನಾಭಿಪ್ರಾಯವನ್ನು ಸ್ಪಷ್ಟಪಡಿಸುತ್ತದೆ.

ಸಂಯುಕ್ತರಂಗದ ವಿರೋಧ

ಶಾಸನ ಸಭೆಯಲ್ಲಿ ಮುಸ್ಲಿಮರಿಗೋಸ್ಕರ ೨೨೮ ಮತ್ತು ಅಲ್ಪ ಸಂಖ್ಯಾಕರಿಗೋಸ್ಕರ ೭೨ ಸ್ಥಾನಗಳು ಕಾಯ್ದಿಡಲ್ಪಟ್ಟಿದ್ದು—ವಿಚಿತ್ರವಾದ ಜಾತೀಯ ವರ್ಗೀಕರಣದ ತಳಹದಿಯ ಮೇಲೆ ಈ ಚುನಾವಣೆಗಳು ನಡೆದವು. ಪಾಕಿಸ್ತಾನದ ಸ್ಥಾಪನೆಗೋಸ್ಕರ ದುಡಿದ ಮುಸ್ಲಿಂ ಲೀಗು ಎಲ್ಲ ಮುಸ್ಲಿಂ ಸ್ಥಾನಗಳಿಗೂ ಉಮೇದ್ವಾರರನ್ನು ನಿಲ್ಲಿಸಿ ರಭಸದ ಪ್ರಚಾರ ನಡೆಸಿದ್ದರೂ, ಪ್ರತಿಯೊಂದು ಕಡೆ ಅದಕ್ಕೆ ಎಂಭತ್ತೆರಡು ವರ್ಷ ಪ್ರಾಯದ ವೃದ್ಧ ರಾಜಕಾರಣಿ ಫಜಲುಲ ಹಕ್ಕರ ಧುರೀಣತ್ವ ಮನ್ನಿಸುವ ಸಂಯುಕ್ತರಂಗದ ಪ್ರಚಂಡ ವಿರೋಧವನ್ನು ಇದಿರಿಸಬೇಕಾಯಿತು. ೧೩ನೇ ತಾರೀಕಿನ ವರೆಗೆ ಪ್ರಕಟಗೊಂಡ ೪೭ ಸ್ಥಾನಗಳ ಚುನಾವಣಾ ಫಲಿತಾಂಶದಲ್ಲಿ ಕೇವಲ ಎರಡು ಸ್ಥಾನಗಳನ್ನು ಮಾತ್ರ ಮುಸ್ಲಿಂ ಲೀಗು ಸಂಪಾದಿಸಿತು.

ಸೌಹಾರ್ದಯುತ ಧೋರಣೆ

ಸಂಯುಕ್ತ ರಂಗಕ್ಕೆ ಜಯಮಾಲೆ ಲಭಿಸುವುದು ನಿಶ್ಚಯವೆಂದು ಈ ಮಾತಿನಿಂದ ಭವಿಷ್ಯ ಹೇಳಬಹುದು. ಈ ಪಕ್ಷದ ಕಾರ್ಯಕ್ರಮದ ಮುಖ್ಯಾಂಶಗಳು ಹೀಗಿವೆ—ಪೂರ್ವ ಬಂಗಾಲಕ್ಕೆ ಹೆಚ್ಚಿನ ಸ್ವಾಯತ್ತಾಧಿಕಾರವನ್ನು ಸಂಪಾದಿಸುವುದು; ಭಾರತ ಪಾಕಿಸ್ತಾನಗಳ ನಡುವೆ ಸಂಚರಿಸುವುದಕ್ಕೋಸ್ಕರ ಈಗಿರುವ ವೀಸಾ ಪದ್ಧತಿಯನ್ನು ರದ್ದುಗೊಳಿಸುವುದು ಭಾರತದೊಡನೆ ಹೆಚ್ಚಿನ ವ್ಯಾಪಾರ ಸಂಬಂಧವನ್ನು ಬೆಳೆಸುವುದು; ಬಂಗಾಲಿಯನ್ನು ರಾಷ್ಟ್ರಭಾಷೆಗಳಲ್ಲೊಂದಾಗಿ ಸ್ವೀಕರಿಸುವುದು. ಈ ಉದ್ದೇಶವು ಭಾರತದೊಡನೆ ಅಧಿಕ ಸೌಹಾರ್ದಯುತವಾದ ನೀತಿಯನ್ನು ಪ್ರದರ್ಶಿಸುವುದರಿಂದ, ಪೂರ್ವ ಬಂಗಾಳದ ಜನತೆಗೆ ಪಶ್ಚಿಮ ಬಂಗಾಳದ ಹಿಂದೂಗಳಿಂದ ಅಪ್ರತ್ಯಕ್ಷ ಪ್ರೋತ್ಸಾಹ ದೊರಕಿದೆಯೆಂದೂ ಇದರ ಬಲದಿಂದಲೇ ಚುನಾವಣ ಪ್ರಚಾರದ ರಭಸವನ್ನು ಹೆಚ್ಚಿಸಲು ಸಂಯುಕ್ತ ರಂಗಕ್ಕೆ ಸಾಧ್ಯವಾಯಿತೆಂದೂ ಆರೋಪ ಕೇಳಿಬರುತ್ತದೆ.

ಚುನಾವಣೆಗಳು ಸ್ವತಂತ್ರ ಹಾಗೂ ಸಮಂಜಸ ರೀತಿಯಲ್ಲಿ ನಡೆಯಲಿಲ್ಲವೆಂಬ ಆರೋಪವೂ ಕೇಳಿಬರುತ್ತದೆ. ಈ ನಡುವೆ

ತಿರುಕೊಚ್ಚಿಗೆ ಪ್ರಸಪಾ ಪಕ್ಷದ ಮಂತ್ರಿಮಂಡಳ

ಶ್ರೀ. ಪಟ್ಟಂ ತಾನು ಪಿಳ್ಳೆಯವರು ಮುಖ್ಯಮಂತ್ರಿ

ತಿರುವಾಂಕೂರು - ಕೊಚ್ಚಿ ರಾಜ್ಯದ ಮಂತ್ರಿಮಂಡಳ ರಚನೆಯ ಪ್ರಶ್ನೆಯನ್ನು ಕುರಿತು ಈ ಸಂಚಿಕೆಯ ಬೇರೆಡೆಯಲ್ಲಿ ಪ್ರಕಟಗೊಂಡ ಲೇಖ ಬರೆದ ಬಳಿಕ, ಅಂದರೆ, ದಿನಾಂಕ ೧೬ನೇ ಮಂಗಳವಾರ, ಪ್ರಜಾ ಸಮಾಜವಾದೀ ಪಕ್ಷದ ನಾಯಕರಾದ ಶ್ರೀ ಪಟ್ಟಂತಾನು ಪಿಳ್ಳೆಯವರು ಮುಖ್ಯಮಂತ್ರಿಗಳಾಗಿ ಪ್ರತಿಜ್ಞಾ ವಚನವನ್ನು ಸ್ವೀಕರಿಸಿದ ವಾರ್ತೆ ಬಂದಿತು. ಭದ್ರವಾದ ಸರಕಾರವನ್ನು ರಚಿಸುತ್ತೇನೆ ಎನ್ನುವ ಆಶ್ವಾಸನೆಯನ್ನು ಶ್ರೀ ಪಿಳ್ಳೆಯವರಿಂದ ತೆಗೆದುಕೊಂಡ ಬಳಿಕ, ರಾಜಪ್ರಮುಖರು ಈ ಕ್ರಮವನ್ನು ಕೈಗೊಂಡರು.

ಪ್ರಜಾಸಮಾಜವಾದೀ ಪಕ್ಷವು ತನ್ನನ್ನು ಮಾತ್ರ ಸರಕಾರ ರಚಿಸಲು ಆಮಂತ್ರಿಸಿದರೆ ಆ ಪ್ರಯತ್ನವನ್ನು ಮಾಡುವುದಾಗಿ ಮದ್ರಾಸಿನಲ್ಲಿ ನಿರ್ಣಯ ಮಾಡಿದ್ದಿತು. ಕಾಂಗ್ರೆಸದ ತತ್ವಕ್ಕೂ ಪ್ರಸಪಾ ಪಕ್ಷದ ತತ್ವಕ್ಕೂ ಸಾಮಾನ್ಯ ಹೋಲಿಕೆಯಿದೆಯೆಂಬ ಕಾರಣದಿಂದ ಕಾಂಗ್ರೆಸು ಪಕ್ಷವು ಪ್ರಸಪಾ ಮಂತ್ರಿಮಂಡಳಕ್ಕೆ ಬೆಂಬಲ ಕೊಡಲು ನಿರ್ಧರಿಸಿತು. ಇವೆರಡು ಪಕ್ಷಗಳು ಸಹಕಾರದಿಂದ ಕೊನೆಯವರೆಗೂ ವರ್ತಿಸಿದರೆ ೧೧೮ ಸದಸ್ಯರ ಶಾಸನ ಸಭೆಯಲ್ಲಿ ೭೪ ಸ್ಥಾನಗಳನ್ನು ಪಡೆದುಕೊಂಡು ನಿಶ್ಚಿತ ಬಹುಮತದ ಭರವಸೆಯಿಂದ ಕೆಲಸ ಮಾಡಲು ಸಾಧ್ಯವುಂಟು.

ಈ ಭರವಸೆಯೇ ರಾಷ್ಟ್ರಪತಿಗಳ ಆಳಿಕೆಯನ್ನು ತಪ್ಪಿಸಲಸಾಧ್ಯವೆಂದು ನಿರಾಶೆ ವ್ಯಕ್ತಗೊಳಿಸಿದ ಪಿಳ್ಳೆಯವರಲ್ಲಿ ಮರಳಿ ಆಶೋದಯಕ್ಕೆ ಎಡೆಮಾಡಿತೆಂದು ಹೇಳಬಹುದು. ಪಿಳ್ಳೆಯವರು ತಮ್ಮ ಮುಂದಿನ ನಿಲುಮೆಯನ್ನು ವಿವರಿಸುತ್ತಾ ಶಾಸನ ಸಭೆಯ ಎಲ್ಲ ಪಕ್ಷಗಳ ಸಹಕಾರವೂ ತಮಗೆ ದೊರಕುವ ಬಗ್ಗೆ ಆಶೆಯನ್ನು ವ್ಯಕ್ತಪಡಿಸಿದರು. ಆದರೆ, ಕಮ್ಯೂನಿಸ್ಟರೇ ಮುಂತಾದ ಐಕ್ಯರಂಗದ ಸದಸ್ಯರ ಪ್ರತಿಕ್ರಿಯೆ ಇದಕ್ಕೆ ಅನುಕೂಲವಾಗಿರಲಿಕ್ಕಿಲ್ಲ. ಇವೇನೇ ಇದ್ದರೂ ಕಾಂಗ್ರೆಸ ಪಕ್ಷದ ಸಾಮಾನ್ಯ ಸಹಕಾರದ ಆಶ್ವಾಸನೆ ದೊರೆತಿರುವುದು ಸಂತೋಷ. ಚುನಾವಣೆಯಲ್ಲಿ ಜನಾಭಿಪ್ರಾಯ ಕಾಂಗ್ರೆಸಿಗೆ ವಿರೋಧವಾಗಿದೆಯೆಂದು ಹೇಳುತ್ತಿದ್ದರೂ, ಸರಕಾರದಲ್ಲಿ ಅದರ ವರ್ಚಸ್ಸು ಕಡಿಮೆಯಾಗಲಿಲ್ಲವೆಂಬ ಊಹನೆಗೆ ಈಗಿನ ಪರಿಸ್ಥಿತಿ ಪುಷ್ಟಿ ಕೊಡುತ್ತದೆ.

ಅವಾಮಿಲೀಗಿನ ನಾಯಕ ಸುಹ್ರವರ್ದಿಯವರು ಪಾಕಿಸ್ತಾನದ ಈಗಿನ ಘಟನಾಸಮಿತಿಯು ಪ್ರಾತಿನಿಧಿಕವಾಗಿಲ್ಲವೆಂದು ಹೇಳುತ್ತಾ, ಅದನ್ನು ರದ್ದುಗೊಳಿಸಬೇಕೆಂದೂ ಸಾರ್ವತ್ರಿಕ ಚುನಾವಣೆಯ ಮೂಲಕ ಘಟನಾ ಸಮಿತಿಯನ್ನು ಹೊಸತಾಗಿ ಸಂಘಟಿಸಬೇಕೆಂದೂ ಕೇಳಿರುವರು.

ಕಾಶ್ಮೀರದ ನಿರೀಕ್ಷಕರು

ಪಾಕಿಸ್ತಾನದ ಭಾರತ ವಿರೋಧಿ ನೀತಿಗೆ ಅಮೇರಿಕಾ ಮತ್ತಿತರ ಪಾಶ್ಚಾತ್ಯ ರಾಷ್ಟ್ರಗಳ ಬೆಂಬಲ ಮೊದಲಿಂದಲೂ ಇತ್ತೆಂಬ ಮಾತು ಕಾಶ್ಮೀರ ವಿವಾದವನ್ನು ಕೈಗೆತ್ತಿಕೊಂಡ ಗಳಿಗೆಯಲ್ಲೆಲ್ಲ ಹೇಳಲ್ಪಡುತ್ತದೆ. ಅದರಂತೆ ಅಮೇರಿಕಾದ ವರ್ಚಸ್ಸಿನಿಂದ ಸಂಯುಕ್ತರಾಷ್ಟ್ರ ಸಂಘವು ಮುಕ್ತವಾಗಿಲ್ಲವೆಂದೂ ಭಾಸವಾದ ಗಳಿಗೆಯುಂಟು. ಕಾಶ್ಮೀರದಲ್ಲಿರುವ ಅಮೇರಿಕನ್ನ ನಿರೀಕ್ಷಕರನ್ನು ತಟಸ್ಥರೆಂದು ಇನ್ನು ಮುಂದೆ ತಿಳಿಯಲು ಅಸಾಧ್ಯವೆಂಬುದಾಗಿ ಪ್ರಧಾನಿ ನೆಹರೂರವರು ಹೇಳಿದುದನ್ನು ಪ್ರಸ್ತಾಪಿಸುತ್ತಾ ರಾಷ್ಟ್ರ ಸಂಘದ ಮಹಾಕಾರ್ಯದರ್ಶಿ ಡಾಗಹೆಮ್ಮರ್ ಶೆಲ್ಡರು ವ್ಯಕ್ತಗೊಳಿಸಿದ ಅಭಿಪ್ರಾಯ ಈ ಸಂಶಯಕ್ಕೆ ಅನುವು ಮಾಡಿಕೊಡುತ್ತದೆ. ಅಮೇರಿಕದ ನಿರೀಕ್ಷಕರು ಕಾಶ್ಮೀರದಲ್ಲಿ ಸಂಯುಕ್ತ ರಾಷ್ಟ್ರ ಸಂಘದ ಪ್ರತಿನಿಧಿಗಳಾಗಿ ಇರುವರೆಂದೂ ರಾಷ್ಟ್ರ ಸಂಘಕ್ಕೆ ಅವರು ನಿಷ್ಠರಾಗಿದ್ದಾರೆಂದೂ ಅವರು ಹೇಳಿದರು. ಇದನ್ನು ಒಪ್ಪಬಹುದೆಂದು ಕೊಂಡರೂ—ಅದೇ ಸಮಯ ರಾಷ್ಟ್ರ ಸಂಘದ ಪ್ರತಿನಿಧಿಗಳಾದ ಕಾರಣ ಅವರನ್ನು ಅಮೇರಿಕನ್ನರೆಂದು ತಿಳಿಯ ಕೂಡದೆಂಬ ಅವರ ಮಾತು ವಾದಕ್ಕೆ ಎಡೆ ಕೊಡುತ್ತದೆ.

ಅರ್ಹತೆಯ ನಿರ್ಣಯ

ನಿರೀಕ್ಷಕರ ಯೋಗ್ಯತೆಯನ್ನು ತಿಳಿಯುವುದಕ್ಕೆ ಅವರು ಯಾವ ರಾಷ್ಟ್ರದ ನಾಗರಿಕರೆಂಬುದನ್ನು ಯೋಗ್ಯವಾದ ಮಾನದಂಡವಾಗಿ ಸ್ವೀಕರಿಸುವ ಸಂಪ್ರದಾಯ ಇಂದು ನಿನ್ನೆಯದಲ್ಲ. ಕೊರಿಯಾದ ಪ್ರಶ್ನೆಯಲ್ಲೂ ಸ್ವತಃ ರಾಷ್ಟ್ರ ಸಂಘದ ಮಹಾ ಕಾರ್ಯದರ್ಶಿಯ ಆಯ್ಕೆಯಲ್ಲೂ ಉಭಯ ಪಕ್ಷಗಳಿಗೂ ಸಮ್ಮತವಾದ ತಟಸ್ಥ ರಾಷ್ಟ್ರದ ನಾಗರಿಕರನ್ನು ಹುಡುಕಿ ತೆಗೆದರು. ಈ ಸಂಪ್ರದಾಯ [illegible] ತಟಸ್ಥ ನಾಗರಿಕರ ರಾಷ್ಟ್ರದ ಪ್ರಶ್ನೆಯನ್ನು ಎತ್ತಿ ಹಿಡಿಯುತ್ತದೆ. ಅದು ಬಿಟ್ಟರೂ ಸಹ ವಿವಾದಕ್ಕೆ ಬಿದ್ದ ರಾಷ್ಟ್ರಗಳಲ್ಲಿ ಒಂದು ರಾಷ್ಟ್ರವು ತಟಸ್ಥ ನಿರೀಕ್ಷಕರ ಬಗ್ಗೆ ಆಕ್ಷೇಪ ಎತ್ತಿದಾಗ, ಅದನ್ನು ಕಡೆಗಣಿಸುವುದು ಮುತ್ಸದ್ದಿತನವಲ್ಲ, ನ್ಯಾಯವೂ ಅಲ್ಲ. ಶ್ರೀ ನೆಹರೂರವರು ದಿನಾಂಕ ೧೬ರಂದು ತಮ್ಮ ಹಿಂದಿನ ಅಭಿಪ್ರಾಯವನ್ನು ಪುನಃ ಒತ್ತಿಹೇಳಿದ್ದು, ರಾಷ್ಟ್ರ ಸಂಘದ ಮಹಾ ಕಾರ್ಯದರ್ಶಿಗಳು ಸಮಸ್ಯೆಯ ಪೂರ್ವಾಪರ ವಿಚಾರವನ್ನು ಮಾಡಿ, ಭಾರತದ ಸೂಚನೆಯ ಔಚಿತ್ಯವನ್ನು ಮನವರಿಕೆ ಮಾಡಿಕೊಳ್ಳಬೇಕೆಂದು ಧ್ವನಿಸಿರುವರು. ಸ್ವತಃ ಅಮೇರಿಕವೇ ಕೈಗೊಳ್ಳಬೇಕಾಗಿದ್ದ ಕ್ರಮವನ್ನು ರಾಷ್ಟ್ರಸಂಘವಾದರೂ ತೆಗೆದುಕೊಂಡು, ಅಮೇರಿಕನ ನಿರೀಕ್ಷಕರನ್ನು ಹಿಂದೆ ತೆಗೆದುಕೊಳ್ಳಬೇಕು.

ನಿರುಪಯೋಗಿ ಸುಧಾರಣೆ

ಕೆನ್ಯಾದಲ್ಲಿ ಮೌಮೌ ಚಳುವಳಿಯನ್ನು ಉಗ್ರ ಕ್ರಮಗಳ ಮೂಲಕ ಹತ್ತಿಕ್ಕಲು ನೋಡಿದ ಬ್ರಿಟಿಷ ಸರಕಾರವು ತನ್ನ ಐರೋಪ್ಯಪರ ನೀತಿಯಿಂದ ಸ್ಥಳೀಯರನ್ನು ಇನ್ನು ಮುಂದೆಯೂ ಸಮಾಧಾನದಲ್ಲಿಡಬಹುದೆಂಬ ಕಲ್ಪನೆಯನ್ನು ಬಿಟ್ಟುಕೊಟ್ಟಂತೆ ತೋರುತ್ತದೆ. ಜನರಲ್ ಚೀನರಂಥ ಧುರೀಣರ ಮನವೊಲಿಸಿ, ಮೌಮೌ ಧುರೀಣರು ಶರಣು ಬರುವಂತೆ ಮಾಡಿದುದರಿಂದ ಹೋರಾಟದ ಒಂದು ಘಟ್ಟ ಮುಗಿಯಬಹುದು. ಆದರೆ ಬ್ರಿಟಿಷ ಸರಕಾರದ ವಸಾಹತು ಶಾಖೆಯು ತಯಾರಿಸಿದ ಸುಧಾರಣಾ ಯೋಜನೆಯು ಆಫ್ರಿಕನ್ನರಿಗೆ ಏನೇನೂ ಸಂತೃಪ್ತಿ ಕೊಡದುದನ್ನು ನೋಡಿದರೆ ಹೋರಾಟ ಯಾವ ಗಳಿಗೆಯಲ್ಲಿ ಪುನಃ ತೊಡಗುವುದೋ ಹೇಳಲು ಬಾರದು. ಮೂವರು ಐರೋಪ್ಯರೂ ಇಬ್ಬರು ಏಶಿಯನ್ನರೂ ಒಬ್ಬ ಆಫ್ರಿಕನ್ನನೂ ಇರುವ ಮಂತ್ರಿಮಂಡಳವನ್ನು ರಚಿಸಿ ಸರಕಾರ ನಿರ್ಮಿಸಬೇಕೆನ್ನುವುದೇ ಈ ಯೋಜನೆ—ಬಹುಸಂಖ್ಯೆಯ ಆಫ್ರಿಕನ್ನರಿಗೆ ಬೇಕೋ ಬೇಡವೋ ಎಂಬಂತೆ ಒಂದು ಸ್ಥಾನವನ್ನು ಕೊಟ್ಟಿದ್ದು ಇದರಿಂದ ಆಫ್ರಿಕನ್ನರ ಆಶೋತ್ತರಗಳು ಈಡೇರುವುದು ಅಸಾಧ್ಯವಾದ ಮಾತು. ಆಫ್ರಿಕನ್ನರು ಈ ಕಾರಣಕ್ಕಾಗಿಯೇ ಯೋಜನೆಯನ್ನು ತಿರಸ್ಕರಿಸಿದರು— ಮತ್ತು ಸ್ಥಳೀಯರನ್ನು ತೃಪ್ತಿಗೊಳಿಸದ ಯೋಜನೆಯೊಡನೆ ಸಹಕರಿಸುವುದು ಧರ್ಮವಲ್ಲ ಎಂಬ ಅಭಿಪ್ರಾಯವನ್ನು ಏಶಿಯನ ನಾಗರಿಕರು ವ್ಯಕ್ತಗೊಳಿಸಿದರು.

ಪರಿಹಾರ ಮಾರ್ಗ

ಇಂತಹ ಪರಿಸ್ಥಿತಿಯಲ್ಲಿ ಬ್ರಿಟಿಷ ಸರಕಾರದ ರಾಜಕೀಯ ಕೊಡುಗೆ ನಿರರ್ಥಕವೇ ಆಗುತ್ತದೆ. ಆಫ್ರಿಕದಲ್ಲಿ ರಾಜಕೀಯ ಧುರೀಣತ್ವವನ್ನು ಹೊರಬಲ್ಲ ಸಮರ್ಥರು ಇಲ್ಲವೆಂಬ ಹಳೆಯ ಹಾಡನ್ನು ಬ್ರಿಟಿಷ ವಸಾಹತು ಶಾಖೆ ಹಾಡುತ್ತದೆ—ಆದರೆ ಜೊಮೊ ಕೆನ್ಯಾಟಾರಂಥ ಮುಖಂಡರನ್ನು ಜೈಲಿನಲ್ಲಿ ಕೊಳೆಯಗೊಡುತ್ತಾ ಈ ಮಾತನ್ನಾಡುವುದು ಬ್ರಿಟಿಷರ ಕುಹಕ ನೀತಿಯೇ ನಿಜ. ಐರೋಪ್ಯರು ಆಫ್ರಿಕನ್ನರನ್ನು ಗುಡ್ಡಗಾಡುಗಳಿಗೆ ಅಟ್ಟಿ, ಫಲವತ್ತಾದ ಭೂಮಿಯನ್ನು ತಮ್ಮ ಕೈಯಲ್ಲಿ ಇರಿಸಿಕೊಳ್ಳುವುದಕ್ಕೆ ಆಫ್ರಿಕನ್ನರ ವಿರೋಧವಿರುವುದರಿಂದ ರಾಜಕೀಯ ಸುಧಾರಣೆಗಳಿಗಿಂತಲೂ ಭೂಸುಧಾರಣೆಯ ಆವಶ್ಯಕತೆಯು ಅಲ್ಲಿ ಅಧಿಕವಿರುತ್ತದೆ. ಕೆನ್ಯಾದ ಪರಿಸ್ಥಿತಿಯನ್ನು ಅಭ್ಯಸಿಸುವ ರಾಯಲ ಕಮಿಶನು ಇದನ್ನು ಗಮನಿಸಿ ಪರಿಹಾರ ನೀಡಿದರೆ ಒಳಿತಾಗುವುದು. ಆಫ್ರಿಕನ್ನ ಧುರೀಣರನ್ನೊಳಗೊಂಡ ಸರ್ವ ಪಕ್ಷೀಯ ಪರಿಷತ್ತು ಇದಕ್ಕೆ ನೆರವಾದೀತು.

ರಾಜ್ಯಗಳ ಪುನರ್ವಿಂಗಡಣೆಯ ಪ್ರಶ್ನೆ

ಕರ್ನಾಟಕದ ಪರವಾಗಿ ಒಂದೇ ಮನವಿ

ರಾಜ್ಯಗಳ ಪುನರ್ವಿಂಗಡಣೆಯ ಪ್ರಶ್ನೆಯನ್ನು ವಿಚಾರಿಸುವುದಕ್ಕೋಸ್ಕರ ನೇಮಕಗೊಂಡ ಉಚ್ಚ ಅಧಿಕಾರ ಸಂಪನ್ನ ಆಯೋಗದ ಮುಂದೆ ಕರ್ನಾಟಕದ ಪರವಾಗಿ ಮನವಿ ಮಂಡಿಸಲು ಕರಡು ಸಮಿತಿಯೊಂದು ಮುಂಬಯಿಯಲ್ಲಿ ಸೇರಿದ ಕರ್ನಾಟಕ ಪ್ರದೇಶ ಕಾಂಗ್ರೆಸ ಸಮಿತಿಯ ಸಭೆಯಲ್ಲಿ ನೇಮಕಗೊಂಡಿದೆ. ಶ್ರೀ. ಆರ್. ಎ. ಜಾಗೀರದಾರರು ಇದರ ಅಧ್ಯಕ್ಷರಾಗಿದ್ದು, ಕಾಂಗ್ರೆಸ ಸದಸ್ಯರಲ್ಲದೆ ಶ್ರೀ ದಿನಕರ ದೇಸಾಯರಂಥ ಧುರೀಣರು ಇದರಲ್ಲಿ ಇರುವರು. ಕರ್ನಾಟಕದ ಪರವಾಗಿ ಪ್ರಾತಿನಿಧಿಕಸ್ವರೂಪದ ಒಂದೇ ಮನವಿಯನ್ನು ಮಂಡಿಸಬೇಕೆಂಬ ಪ್ರಯತ್ನಗಳು ನಡೆದಿದ್ದು, ಈ ಉದ್ದೇಶ ಪೂರ್ತಿಗಾಗಿ ಎಪ್ರೀಲು ತಿಂಗಳ ೧೧ನೇ ದಿನಾಂಕ ದಾವಣಗೆರೆಯಲ್ಲಿ ಸರ್ವ ಪಕ್ಷೀಯ ಪ್ರತಿನಿಧಿಗಳ ಸಭೆಯೊಂದನ್ನು ಸೇರಿಸುವ ನಿರ್ಧಾರವನ್ನು ಇಲ್ಲಿ ಮಾಡಲಾಯಿತು. ಸಾಂಸ್ಕೃತಿಕ, ಐತಿಹಾಸಿಕ, ಆರ್ಥಿಕ, ಸಾಮಾಜಿಕ ಹಾಗೂ ಭಾಷಿಕ ಮಹತ್ವದ ಸಂಗತಿಗಳನ್ನು ಕನ್ನಡಿಗರ ಮನವಿಯು ಒಳಗೊಂಡು, ಕನ್ನಡಿಗರಿಗೋಸ್ಕರ ಪ್ರತ್ಯೇಕ ರಾಜ್ಯದ ನಿರ್ಮಾಣ ಮಾಡುವ ಆವಶ್ಯಕತೆಯನ್ನು ಆಯೋಗಕ್ಕೆ ಮನವರಿಕೆ ಮಾಡುವ ಗುರುತರವಾದ ಹೊಣೆಯನ್ನು ಕರಡು ಸಮಿತಿ ಹೊತ್ತಿದೆ. ಸಮಿತಿಯು ಎಪ್ರೀಲು ೬ನೇ ತಾರೀಕಿನೊಳಗೆ ತನ್ನ ಕೆಲಸವನ್ನು ಮುಗಿಸಬೇಕೆಂದು ನಿಗದಿಯಾಗಿದ್ದು, ಕನ್ನಡದ ಧುರೀಣರು ಈ ವಿಷಯದಲ್ಲಿ ತಮ್ಮ ಹಾರ್ದಿಕ ಸಹಕಾರವನ್ನು ತೋರಿಸುವುದು ಅಗತ್ಯವಾಗಿರುತ್ತದೆ. ಈ ಕೆಲಸಕ್ಕೆ ಉದ್ಯುಕ್ತರಾಗುವಾಗ ಯಾವುದೇ ಭೇದ ಭಾವಗಳಿಗೆ ಎಡೆಕೊಡಕೂಡದೆನ್ನುವ ಮತ್ತು ತನು ಮನಧನಗಳಿಂದ ಈ ನೆರವಿತ್ತು ಮಹತ್ಕಾರ್ಯವನ್ನು ಸಾಂಗಗೊಳಿಸಬೇಕೆನ್ನುವ ಶ್ರೀ ನಿಜಲಿಂಗಪ್ಪನವರ ವಿನಂತಿಯನ್ನು ಕನ್ನಡಿಗರು ಮನ್ನಿಸಲಿ!

ಉಡುಪಿ

ಅಕ್ಕಿಯ ಬೆಲೆ ನಿರ್ಧಾರ ಸಭೆ— ಇದೇ ತಾ 12ರಲ್ಲು ಸಂಜೆ ತಾಲೂಕು ಕಚೇರಿಯಲ್ಲಿ ಕುಂದಾಪುರ ಸಬ್ ಕಲೆಕ್ಟರ್ ಶ್ರೀ ಪರಶುರಾಮ ನಾಯ್ಕರ ಅಧ್ಯಕ್ಷತೆಯಲ್ಲಿ ಸ್ಥಳೀಯ ಸಾಹುಕಾರರ, ವರ್ತಕರ ಮತ್ತು ಇತರರ ಸಭೆಯೊಂದು ಜರಗಿ ದಿನೇ ದಿನೇ ಏರುತ್ತಿರುವ ಅಕ್ಕಿಯ ಬೆಲೆಯ ಕುರಿತು ವಿಚಾರವಿನಿಮಯ ನಡೆಯಿತು. ಅಕ್ಕಿ ದರ ಜಾಸ್ತಿಯಾಗುತ್ತ ಬರುವುದರಿಂದ ಬಡವರಿಗೆ ಮತ್ತು ಮಧ್ಯಮ ವರ್ಗದವರಿಗೆ ತುಂಬಾ ಕಷ್ಟವಾಗುವುದರಿಂದ ಉಡುಪಿ ತಾಲೂಕಿನ ಪ್ರಮುಖ ಸ್ಥಳಗಳಲ್ಲಿ ಅಗ್ಗ ದರದ ಅಂಗಡಿಗಳನ್ನು ತೆರೆಯಬೇಕೆಂದಾಯಿತು. ಅಕ್ಕಿ ಉತ್ಪಾದಕರಿಂದ ಮುಡಿಗೆ ರೂ. 20ರಂತೆ ಸಾಹುಕಾರರು ಕೊಂಡು ಕೊಂಡು ಮುಡಿಗೆ ರೂ. 21ರಂತೆ ಜನತೆಗೆ ಮಾರಬೇಕೆಂದೂ ಸಭೆಯು ಅಭಿಪ್ರಾಯಪಟ್ಟಿತು. ಈ ಯೋಜನೆಯು ಸಫಲವಾಗುವಂತೆ ಭೂಮಾಲಕರೂ ಸಾಹುಕಾರರೂ ಸರಕಾರದೊಡನೆ ಸಹಕರಿಸಬೇಕೆಂದು ಅಧ್ಯಕ್ಷರು ವಿನಂತಿ ಮಾಡಿದರು.

ನಗರ ಸಭೆ— ಉಡುಪಿ ನಗರ ಸಭೆಯು ದಿನಾಂಕ 13ರಂದು ಸಂಜೆ ಉಪಾಧ್ಯಕ್ಷ ಡಾ! ಕೆ. ಪಿ. ವ್ಯಾಸರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಅಗ್ಗ ದರದ ಅಂಗಡಿಗಳಲ್ಲಿ ಈಗ ಕೊಡುವ ಅಕ್ಕಿ ಮಿತಿಯನ್ನು 4 ಸೇರುಗಳಿಂದ 8 ಸೇರುಗಳಿಗೇರಿಸಬೇಕೆನ್ನುವ ಶ್ರೀ ಎಸ್. ಸೀತಾರಾಮ ಕಾಮತರ ನಿರ್ಣಯವು ಚರ್ಚಿಸಲ್ಪಟ್ಟು ಕೊನೆಗೆ ಸರ್ವಾನುಮತದಿಂದ ಪಾಸಾಯಿತು. ಮುನಿಸಿಪಲ್ ಕೆಲಸಗಾರರ ಯೂನಿಯನ್ ಕಳಿಸಿದ ತೋಟಿಗಳ ಮತ್ತು ಜಾಡಮಾಲಿಗಳ ಬೇಡಿಕೆಗಳನ್ನು ಸಭೆಯಲ್ಲಿ ಪರಿಶೀಲಿಸಲಾಯಿತು. ಶ್ರೀ ಯು. ದಾಸ ಶೇರಿಗಾರರು ಈ ಕೆಲಸಗಾರರಿಗೆ ಸಮುಚಿತ ಪ್ರೋತ್ಸಾಹವನ್ನು ಕೊಡಬೇಕೆಂದು ನಿರ್ಣಯವನ್ನು ತಂದರು. ಈ ವಿಷಯದಲ್ಲಿ ತುಂಬಾ ಚರ್ಚೆ ನಡೆದು ಕೊನೆಗೆ ನಿರ್ಣಯವು ಬಿದ್ದುಹೋಯಿತು.

ಕೈಮಗ್ಗ ಬಟ್ಟೆಗೆ ಪ್ರೋತ್ಸಾಹದ ಆವಶ್ಯಕತೆ—ಯ ಕುರಿತು ಕೈಮಗ್ಗ ಸಪ್ತಾಹದ ಅಂಗವಾಗಿ ಶ್ರೀಗಳಾದ ಟಿ. ರಮೇಶ ಶೆಣೈ, ಎ. ಜೆ. ಅಲ್ಸೆ, ಯು. ರಾಮರಾವ್ ಇವರು ಬೋರ್ಡ್ ಹೈಸ್ಕೂಲು, ಕ್ರಿಶ್ಚಿಯನ್ ಹೈಸ್ಕೂಲು, ಸರಕಾರಿ ಹುಡುಗರ [illegible], [illegible] ಕಾನ್ವೆಂಟುಗಳಲ್ಲಿ ಬೇರೆ ಬೇರೆ ದಿನಗಳಲ್ಲಿ ಭಾಷಣವಿತ್ತರು.

ಜಪಾನ್ ವಸ್ತು ಮತ್ತು ಕೈಮಗ್ಗ ವಸ್ತ್ರಗಳ ಪ್ರದರ್ಶನ— [illegible] ಕೈಮಗ್ಗ ಸಪ್ತಾಹದ ನಿಮಿತ್ತ [illegible] ತಮ್ಮ ಅಂಗಡಿಯಲ್ಲಿ [illegible] ಇಟ್ಟರು. ಶ್ರೀ ಟಿ. [illegible] ಇತ್ತೀಚೆಗೆ ಜಪಾನಿನಿಂದ ತಂದ ಅನೇಕ ಗುಡಿಕೈಗಾರಿಕೆಯ ಕೆಲವು ವಸ್ತುಗಳು ಇವರನ್ನು ವಿಶೇಷವಾಗಿ ಆಕರ್ಷಿಸಿದ್ದು.

ಮಳೆ— ತಾ 11ನೇ ಸಂಜೆ ರಾತ್ರಿ ಗುಡುಗು ಮಿಂಚಿನೊಂದಿಗೆ ಸಾಧಾರಣ ಮಳೆ ಬಿದ್ದಿದ್ದು ಈಗ ಉಷ್ಣತೆ ಕಡಿಮೆಯಾಗಿರುವುದಲ್ಲದೆ ಮೋಡವೂ ಕಾಣಿಸಿಕೊಳ್ಳುತ್ತಿದೆ.

ದಯಮಾಡಿ ಬೇಗನೆ ನಿಮ್ಮ ಚಂದಾ ಹಣ ಕಳುಹಿಸಿರಿ

ಅಚ್ಚುಕಟ್ಟಾದ ಮುದ್ರಣ!
ಆದರೂ ದರ ಕಡಿಮೆ!!

ಲಗ್ನಪತ್ರಿಕೆ ಮೊದಲಾದ ಎಲ್ಲಾ ತರದ ಆಮಂತ್ರಣ ಪತ್ರಿಕೆ, ಕರಪತ್ರ, ರಶೀದಿ ಪುಸ್ತಕ, ಫಾರ್ಮ್, ಬುಕ್ ವರ್ಕ್, ತರತರದ ಜೋಬ್ ವರ್ಕ್ ಮುಂತಾದುವನ್ನು ಮಿತವರ್ಜಿಯಿಂದ ನಾಜೂಕಾಗಿ ಸಕಾಲದಲ್ಲಿ ಮಾಡಿಕೊಡಲಾಗುವುದು.

ಬುಕ್ ಬೈಂಡಿಂಗ್, ರೂಲಿಂಗ್, ಕಟ್ಟಿಂಗ್ ಕಾರ್ಯಗಳನ್ನೂ ಕೈಗೊಳ್ಳಲಾಗುವುದು.

ನವಯುಗ ಪ್ರೆಸ್,
ಸಂತೆಕಟ್ಟೆ - - - ಉಡುಪಿ.

ಕುಂಬಳೆ—ಕಣ್ಣಾನೂರಿನ ಶ್ರೀ ಎ. ಕೆ. ಲಕ್ಷ್ಮಣನ್ ಎಂಬವರು ಇದೇ ತಾ 15ರಲ್ಲಿ ಬೆಳಿಗ್ಗೆ ಆರು ಗಂಟೆಗೆ ನೆಲಕ್ಕಿಳಿಯದೇ 36 ಗಂಟೆ ಕಾಲ ಸೈಕಲ್ ಸವಾರಿ ಮಾಡಲಾರಂಭಿಸಿರುವರು. ಕಿತ್ತಳೆ ಹಣ್ಣಿನ ರಸವನ್ನು ಮಾತ್ರ ಉಪಯೋಗಿಸುತ್ತಿರುವರು.

ಅಜ್ರಿ—ಅಜ್ರಿ ಕಮಲ ಶಿಲಾ ಕಲಾ ಮಂಡಳಿಯವರು ಕಳೆದ ತಾ 28ರಲ್ಲಿ ಅಜ್ರಿ ಎಲಿಮೆಂಟರಿ ಶಾಲಾ ವಠಾರದಲ್ಲಿ "ನಾರದ ಗರ್ವ ಭಂಗ" ಎಂಬ ನಾಟಕವನ್ನು ವಿವಿಧ ವಿನೋದಾವಳಿಗಳನ್ನೂ ಪ್ರದರ್ಶಿಸಿದರು. ಕುಂದಾಪುರ ತಾಲೂಕಿನ ಭೂದಾನ ಸಂಚಾಲಕರಾದ ಶ್ರೀ ಎಮ್. ಎಸ್. ವೆಂಕಟ್ರಮಣಯ್ಯನವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ನರಸಿಂಹ ಶೆಟ್ಟರು ಧನ್ಯವಾದಗಳನ್ನರ್ಪಿಸಿದರು.

ನೀಲಾವರ—ಈ ಗ್ರಾಮದ ಜಮೀನ್ದಾರ ಎಳಂಪಳ್ಳಿ ವೆಂಕಟಕೃಷ್ಣಾಚಾರ್ಯರು ಇದೇ ತಾ 6ರಲ್ಲಿ ತಮ್ಮ 80ನೆ ವಯಸ್ಸಿನಲ್ಲಿ ಸ್ವರ್ಗಸ್ಥರಾದರು. ಇವರು ಇಲ್ಲಿಯ ದೇವಸ್ಥಾನದ ಆಡಳಿತೆ ಮೊಕ್ತೇಸರರಿದ್ದು ಹಳ್ಳಿಗರಿಗೆ ಹಲವಾರು ರೀತಿಯಲ್ಲಿ ಸಹಾಯಿಸುತ್ತ ಜನಪ್ರಿಯತೆ ಗಳಿಸಿದ್ದರು.

ವರಂಗ—ಶ್ರೀ ಪದ್ಮಾವತಿ ನಾಟಕ ಕಲಾ ಮಂಡಳಿಯವರು ಇದೇ ತಾ 7ರಲ್ಲಿ ವರಂಗ ಪೇಟೆಯ ಥಿಯೇಟರಿನಲ್ಲಿ "ಬ್ಲೇಕ್ ಮಾರ್ಕೆಟ್" ಎಂಬ ಸಾಮಾಜಿಕ ನಾಟಕವನ್ನು ಅಭಿನಯಿಸಿದರು.

ಕೊಳೂರು—ಇಲ್ಲಿಯ ಚರಕ ಚಿಕಿತ್ಸಾ ಮಂದಿರದ ದ್ವಿತೀಯ ವಾರ್ಷಿಕೋತ್ಸವವು ಇದೇ ತಾ 7ರಲ್ಲಿ ಡಾ ಎಮ್. ಗೋಪಾಲಕೃಷ್ಣ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ವೈದ್ಯಗುರು ಡಾ' ಎಮ್. ಆರ್. ಭಟ್ ಮೊದಲಾದವರು ಕಾಲೋಚಿತ ಭಾಷಣ ಮಾಡಿದರು. ಡಾ ಪಿ. ಎಲ್. ಮಂಜರ್, ಅವರು ವಂದನೆಗಳನ್ನರ್ಪಿಸಿದರು. ವಿವಿಧ ವಿನೋದಾವಳಿ ಕಾರ್ಯಕ್ರಮಗಳೂ ಇದ್ದುವು.

ಅಂಬಲಪಾಡಿ—ಉಡುಪಿ ಕಲಾವೃಂದದ ಶಾಖೆಯೊಂದು ಇದೇ ತಾ 12ರಲ್ಲಿ ಸಂಜೆ ಅಧಮಾರು ಮಠದ ಶ್ರೀ ವಿಬುಧೇಶ ತೀರ್ಥ ಶ್ರೀಪಾದಂಗಳವರ ಅಧ್ಯಕ್ಷತೆಯಲ್ಲಿ ತೆರೆಯಲ್ಪಟ್ಟಿತು.

ನಿಲೇಶ್ವರ—ಡಿಸ್ಟ್ರಿಕ್ಟ್ ರೂರಲ್ ವೆಲ್‌ಫೇರ್ ಕಮಿಟಿಯ ಸಭೆಯು ನಿಲೇಶ್ವರದ ರಾಜಾಸ್ ಹೈಸ್ಕೂಲಿನಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ಎ. ಮಹಾಲಿಂಗಂ ಚೆಟ್ಟಿಯಾರರ ಅಧ್ಯಕ್ಷತೆಯಲ್ಲಿ ಜರಗಿತು. ಸುಳ್ಯ ಮತ್ತು ಮಂಜೇಶ್ವರ ಬ್ಲಾಕ್ ಡೆವಲಪ್‌ಮೆಂಟ್ ಆಫೀಸರರು ತಂತಮ್ಮ ಕ್ಷೇತ್ರದಲ್ಲಿ ಫೆಬ್ರವರಿ ತಿಂಗಳಲ್ಲಾದ ವರದಿಗಳನ್ನೋದಿದರು. ನಿಲೇಶ್ವರದ ಪಂಚಾಯತ ಬೋರ್ಡಿನ ಆಶ್ರಯದಲ್ಲಿ ಏರ್ಪಡಿಸಲಾದ ಕೃಷಿ, ಜಾನುವಾರು, ಗ್ರಾಮಕೈಗಾರಿಕೆ ವಸ್ತುಪ್ರದರ್ಶನಗಳನ್ನು ಜಿಲ್ಲಾ ಕಲೆಕ್ಟರರು ಉದ್ಘಾಟಿಸಿದರು.

ಕೊಡಕ್ಕಾಡ—ಮಂಗಳೂರಿನಿಂದ ಇಪ್ಪತ್ತೆರಡು ಮೈಲು ದೂರದಲ್ಲಿರುವ ಕೊಡಕ್ಕಾಡ್ ಗ್ರಾಮದಲ್ಲಿ ತನ್ನ ಗುಡಿಸಲಿನಲ್ಲಿದ್ದ ಎಪ್ಪತ್ತು ವರ್ಷ ಪ್ರಾಯದ ಮುದುಕಿಯು ಒಬ್ಬಂಟಿಗಳಾಗಿಯೇ ಇದ್ದಾಗ ಆಹಾರವನ್ನು ಹುಡುಕುತ್ತಾ ಹೊರಟಿದ್ದ ಎರಡು ಗುಳ್ಳೇನರಿಗಳು ಆ ಮುದುಕಿಯನ್ನೇ ತಮ್ಮ ಆಹಾರವನ್ನಾಗಿ ಮಾಡಿಕೊಂಡು ಭಯಾನಕ ಘಟನೆಯೊಂದು ವರದಿಯಾಗಿದೆ. ನೀರು ತರಲು ಹೋಗಿದ್ದ ಆಕೆಯ ಐವತ್ತು ವರ್ಷ ಪ್ರಾಯದ ಮಗಳು ಮನೆಗೆ ಬಂದಾಗ ತನ್ನ ತಾಯಿಯ ದುರವಸ್ಥೆಯನ್ನು ಕಂಡು ನರಿಗಳೊಡನೆ ತಾನೂ ಕಾದಾಡಿ ಗಾಯಗೊಂಡಳು. ಆಕೆಯ ಕೂಗಿನಿಂದ ನೆರೆಕರೆಯವರು ಓಡಿಬಂದು ಒಂದು ನರಿಯನ್ನು ಗುಂಡಿಕ್ಕಿ ಕೊಂದರು. ಇನ್ನೊಂದು ಓಡಿಹೋಯಿತೆನ್ನಲಾಗಿದೆ.

ಅಡ್ಯಾರು—ಇದೇ ತಾ 15ರಂದು ರಾತ್ರಿ ಧರ್ಮಸ್ಥಳದಿಂದ ನಾಲ್ಕೂವರೆ ಗಂಟೆಗೆ ಹೊರಟ ಹಲವು ಜನರು ಕುಳಿತುಕೊಳ್ಳುವಂತಹ ಮೋಟಾರು ವಾಹನವೊಂದು ಅಡ್ಯಾರದ ಬಳಿ 25 ಅಡಿ ಕೆಳಗಿರುವ ಗದ್ದೆಗೆ ಬಿದ್ದು ಒಬ್ಬಳು ಮಧ್ಯ ವಯಸ್ಸಿನ ಹೆಂಗಸು ಕೂಡಲೇ ಮೃತಪಟ್ಟಳು. ಅಪಘಾತ ಸಂಭವಿಸಿದ ಕೂಡಲೇ ಅಲ್ಲಿಯೇ ಮಾರ್ಗದ ಬಳಿಯಲ್ಲಿ ಕುಳಿತಿದ್ದ ಶ್ರೀ ಸಾಮ್ಸಂಡ ಬ್ಯಾಪ್ಟಿಯವರು ಜೊಬ್ಬಿಟ್ಟು ಇತರರನ್ನು ಬರಮಾಡಿಕೊಂಡು ವಾಹನವನ್ನು ಎತ್ತಿಹಾಕಿ, ಒಳಗಿದ್ದವರನ್ನು ಹೊರತೆಗೆದರು. ಬಳಿಕ ಗಾಯಗೊಂಡವರನ್ನು ಮಂಗಳೂರಿಗೆ ಸಾಗಿಸಿ ಗೋಶನ್ ಮತ್ತು ವೆನ್‌ಲೋಕ್ ಆಸ್ಪತ್ರೆಗಳಲ್ಲಿ ಸೇರಿಸಲಾಗಿದೆ. ಮೋಟಾರ್ ವಾಹನವು ಹಾಸನದ ಕಡೆಯಿಂದ ಬಂದುದಾಗಿದೆ.

ಶ್ರೀ ಜಯಕರ್ನಾಟಕ ನಾಟ್ಯ ಸಂಘವು—ತಾ 4—11—1952ರಿಂದ ತನ್ನ ಚಟುವಟಿಕೆಗಳನ್ನು ನಿಲ್ಲಿಸಿತ್ತು. ಆದರೆ ಮಹಾಜನರ ಪ್ರೋತ್ಸಾಹದಿಂದ ಆಧೀನ ತಕ್ಕಮಟ್ಟಿನ ಜೀರ್ಣೋದ್ಧಾರಗೊಂಡು ತಾ 15.2.54 ರಲ್ಲಿ ತಾಲಗುಪ್ಪೆಯ ಮೊಕ್ಕಾಮಿನಲ್ಲಿ ತನ್ನ ಸಂಘವನ್ನು ಸ್ಥಾಪಿಸಿ ಸಕರ್ಮವಾಗಿ ಕೃತಿಯನ್ನು ಪ್ರಾರಂಭಿಸಿರುವುದು. ಸಂಘವು ನಾಲ್ಕಾರು ನಾಟಕಗಳನ್ನು ವ್ಯವಸ್ಥಿತವಾಗಿ ಆಡುವಂತಾದೊಡನೆ ದಕ್ಷಿಣ ಕನ್ನಡ ಜಿಲ್ಲೆಗೆ ಬಂದು ಇಲ್ಲಿಯ ಮಿತ್ರರ ಸೇವೆಯನ್ನು ಸಲ್ಲಿಸಿ ಅವರ ನೆರವಿನಿಂದ ಅಸ್ತಿತ್ವಕ್ಕೆ ಬೇಕಾದ ಸಲಕರಣೆಗಳನ್ನೊಳಗೊಂಡು ಶ್ರೀ ಜಯಕರ್ನಾಟಕವು ದಕ್ಷಿಣ ಭಾರತದ ಆದರ್ಶ ಸಂಸ್ಥೆಯಾಗಬೇಕೆನ್ನುವ ಬಯಕೆಯಿರುವುದಾಗಿ ಶ್ರೀ ಕೆ. ಸೀತಾರಾಮ ಶಾಸ್ತ್ರಿ, ಮುಲಿಮನೆ ಅವರು ತಿಳಿಸುತ್ತಾರೆ.

ದ. ಕನ್ನಡದಲ್ಲಿ ಬಡವರ ಸಂಕಷ್ಟ

ಮದ್ರಾಸು ಬಜೆಟ್ ಅಧಿವೇಶನದಲ್ಲಿ ಕುಂದಾಪುರದ ಶ್ರೀ ವೈ. ಮಂಜಯ್ಯ ಶೆಟ್ಟಿ, ಎಮ್. ಎಲ್. ಎ. ಅವರು ಮಾಡಿದ ಭಾಷಣದ ಸಾರಾಂಶ.

ಬಜೆಟ್ ಚರ್ಚೆಯಲ್ಲಿ ತನಗೂ ಮಾತನಾಡಲು ಸಂದರ್ಭ ಸಿಕ್ಕಿದುದಕ್ಕಾಗಿ ಪ್ರಥಮ ನನ್ನನ್ನು ನಾನೇ ಅಭಿನಂದಿಸಿ ಕೊಳ್ಳಬೇಕಾಗಿದೆ. (ನಗು) ಬಜೆಟನ್ನು ತಯಾರಿಸಿದ ರೂಪರೇಖೆಗಳು ಬಹು ಚಳೋದಿದ್ದು ನಮ್ಮ ರಾಜ್ಯವನ್ನು ವೆಲ್‌ಫೇರ್ ಸ್ಟೇಟ್ ಕಡೆಗೆ ಒಯ್ಯಲು ಅನುಕೂಲವಾಗುವುದರಿಂದ ಆರ್ಥಿಕ ಮಂತ್ರಿಗಳನ್ನು ಈ ಸಂದರ್ಭದಲ್ಲಿ ಅಭಿನಂದಿಸಲು ನಾನು ಹೆಮ್ಮೆ ಪಡುತ್ತೇನೆ. ಆಹಾರ ಧಾನ್ಯಗಳ ಬೆಲೆಯು ಕಡಿಮೆಯಾಗಿದೆ ಎಂದು ಆರ್ಥಿಕ ಮಂತ್ರಿಗಳು ತಮ್ಮ ಭಾಷಣದಲ್ಲಿ ಹೇಳಿರುವರು. ತಮಿಳು ಜಿಲ್ಲೆಗಳಲ್ಲಿ ಇದು ನಿಜವಿರಬಹುದು. ಆದರೆ ದ. ಕ. ಜಿಲ್ಲೆಯಲ್ಲಿ ಮಾತ್ರ ಅಕ್ಕಿ ಭತ್ತದ ಕ್ರಯವು ದಿನದಿಂದ ದಿನಕ್ಕೆ ಏರುತ್ತಲೇ ಇದೆ. ಇದರ ಪರಿಣಾಮವಾಗಿ ಬಡವರೂ ಮಧ್ಯಮ ವರ್ಗದವರೂ ತುಂಬಾ ಕಷ್ಟಕ್ಕೀಡಾಗಿರುತ್ತಾರೆ. ಕಳೆದ ವರುಷ ಇದೇ ಸಮಯದಲ್ಲಿ ಅಕ್ಕಿ ಮುಡಿಗೆ ರೂಪಾಯಿ 18 ಕ್ರಯವಿತ್ತು. ಆದರೆ ಈ ವರ್ಷ ಇದೇ ಸಮಯದಲ್ಲಿ ಅಕ್ಕಿ ಮುಡಿಯ ಬೆಲೆ ರೂಪಾಯಿ 24/-ರಷ್ಟಿದೆ. ಅಲ್ಲದೆ ಮುಂದೆ ಇನ್ನೂ ಜಾಸ್ತಿಯಾಗುವ ಸಂಭವ ಕೂಡಾ ಇರುವುದು. ಪರಿಸ್ಥಿತಿಯನ್ನು ಹತೋಟಿಗೆ ತಂದಿರಿಸಲು ಸರಕಾರವು ಅಗ್ಗ ದರದ ಅಂಗಡಿಗಳನ್ನು ತೆರೆಯಬೇಕು. ಎರಡನೆಯದಾಗಿ ಅಡಗಿಸಿಟ್ಟ ಅಕ್ಕಿ ಭತ್ತವನ್ನು ಸ್ವಾಧೀನ ಪಡಿಸಿಕೊಳ್ಳಬೇಕು ಎಂಬ ಸೂಚನೆಯನ್ನು ಆರ್ಥಿಕ ಮಂತ್ರಿಗಳ ಗಮನಕ್ಕೆ ತರಬಿಚ್ಛಿಸುತ್ತೇನೆ.

ಹೊಸ ಪ್ರಾಥಮಿಕ ವಿದ್ಯಾ ಯೋಜನೆಯ ಕುರಿತು ಮಾತನಾಡುತ್ತಾ ಅಧ್ಯಾಪಕರ ಸಂಬಳ ಇತ್ಯಾದಿ ಕುರಿತು ಸರಕಾರವು ತೀವ್ರ ಗಮನವಿತ್ತು ಅವರ ಹುಮ್ಮಸ್ಸನ್ನು ಸಾಧಿಸಬೇಕಾಗಿದೆ. ಹಳ್ಳಿಗಳಲ್ಲಿ ವೈದ್ಯಕೀಯ ಸವಲತ್ತುಗಳು ಇನ್ನೂ ಜಾಸ್ತಿಯಾಗಿ ಸಿಗಬೇಕು. ಕುಂದಾಪುರ ತಾಲೂಕಿಗೆ ಮೊಬೈಲ್ ಡಿಸ್ಪೆನ್ಸರಿಯು ಅತೀವ ಅಗತ್ಯವಿದೆ. ಈ ಕುರಿತು ಸರಕಾರವು ನಿಗಾ ಕೊಡಬೇಕಾಗಿದೆ. ನೀರಾವರಿ ಯೋಜನೆಗಳಲ್ಲೂ ಬಿಜಾಪುರ ಮತ್ತು ಹಾಲಾಡಿ ಯೋಜನೆಗಳು ಇನ್ನೂ ಕಾರ್ಯಗತವಾಗದಿದ್ದುದರಿಂದ ಅವನ್ನು ಕೂಡಲೇ ಪ್ರಾರಂಭಿಸಬೇಕಾಗಿದೆ. ಒಕ್ಕಲುಹಿತ ಮಸೂದೆಯು ಕೃಷಿಕರಿಗೆ ತಾತ್ಕಾಲಿಕ ಸುಖವನ್ನೀಯುವುದಾದರೂ ಅವರಿಗೆ ಇನ್ನೂ ಹೆಚ್ಚಿನ ಸೌಕರ್ಯಗಳನ್ನೀಯುವ ಮಸೂದೆಯು ಬೇಗನೆ ಬರಬೇಕು. ಬಡವರ ಸೌಕರ್ಯಗಳಿಗಾಗಿ ನೀರಾ ಅಂಗಡಿಗಳು ದ. ಕ. ಜಿಲ್ಲೆಯಲ್ಲಿ ಹೆಚ್ಚು ಸಂಖ್ಯೆಗಳಿಂದ ತೆರೆಯಲ್ಪಡುವಂತಾಗಬೇಕು. ಅಲ್ಲದೆ ಬೆಲ್ಲ ತಯಾರಿಕೆಯ ಸಹಕಾರಿ ಸಂಘಗಳನ್ನು ಕರಾವಳಿ ಪ್ರದೇಶದಲ್ಲಾದರೂ ಬಹುಸಂಖ್ಯೆಯಿಂದ ಸ್ಥಾಪಿಸಿ ನಿರುದ್ಯೋಗಿ ಮುರ್ತೆದಾರರಿಗೆ ಉದ್ಯೋಗಗಳನ್ನು ಕಲ್ಪಿಸಿ ಕೊಡಬೇಕಾಗಿ ಕೇಳಿಕೊಳ್ಳುತ್ತೇನೆ.

ಮುಖ್ಯ ಪ್ರಕಟಣೆ

"ಆನಂದ ಸುಧ" ನಮ್ಮ ಆನಂದ ಸುಧ ಸಮಸ್ತ ಜನಗಳಿಗೆ ಬಲವನ್ನು ಬಿಂದ ಪುಷ್ಟಿಯನ್ನು ಕಲಗಿಸುವುದು. ಅನೇಕ ವ್ಯಾಧಿಗಳನ್ನು ನಾಶಮಾಡುತ್ತೆ. ೧೫ ದಿನಗಳಿಗೆ ಸರಿ ಹೋಗುವ ೮ ಔ. ಸೀಸೆ ೧ಕ್ಕೆ ರೂ. 3—0—0.

"ಸ್ತ್ರೀ ಸುಧ" ನಮ್ಮ ಸ್ತ್ರೀ ಸುಧ ಸ್ತ್ರೀಯರಿಗೆ ಸಂಭವಿಸುವ ಸಮಸ್ತ ಗರ್ಭಾಶಯ ವ್ಯಾಧಿಗಳನ್ನು ಋತು ದೋಷಗಳನ್ನು, ಋತು ಶೂಲೆ, ಸರಿಯಾಗಿ ಬಹಿಷ್ಟೆ ಆಗದಿರುವುದು ಮೊದಲಾದ ಸಮಸ್ತ ವ್ಯಾಧಿಗಳನ್ನು ನಾಶಮಾಡುವುದು. ಸಂತಾನವನ್ನು ಕಲಗಿಸುವುದು. ಒಂದು ತಿಂಗಳಿಗೆ ಸರಿಹೋಗುವ ೧ ತೊಲದ ಔಷಧಿ ರೂ. 4—0—0.

"ಬಾಲ ಸುಧ" ಇದು ಸಣ್ಣ ಬಾಲಕರಿಗೆ ಅಜೀರ್ಣ, ಜ್ವರ, ಕೆಮ್ಮು, ಶೀತ, ಮಲಬದ್ಧತೆ, ಹೆಚ್ಚಾಗಿ ಭೇದಿ ಆಗುವಿಕೆ, ಮಕ್ಕಳು ಕ್ಷೀಣವಾಗಿ ಕೈಕಾಲು ಸಣ್ಣದಾಗುವಿಕೆ, ಲಿವರ್ ಬೆಳೆಯುವ್ರದು, ಈ ಎಲ್ಲಾ ವ್ಯಾಧಿಗಳಿಗೆ ವಜ್ರಾಯುಧವಾಗಿದೆ. ಹೀಗಿರುವ ಔಷಧಿ ಇನ್ನೊಂದು ಇಲ್ಲವೆಂದು ಹೇಳಬಹುದು. ಈ ಔಷಧಕ್ಕೆ ಮಿತಿ ಇಲ್ಲದ ಯೋಗ್ಯತಾ ಪತ್ರಗಳನ್ನು ಪಡೆದಿರುವುದಲ್ಲದೆ ದೇಶದಲ್ಲಿ ಅನೇಕ ವಿಧದಲ್ಲಿ ಅಭಿವೃದ್ಧಿಯಾಗಿರುತ್ತದೆ. ಸುಮಾರು ೧ ತಿಂಗಳಿಗೆ ಸರಿ ಹೋಗುವ ೫೦ ಮಾತ್ರೆಗಳ ಸೀಸೆ ೧ಕ್ಕೆ ರೂ. 1—0—0.

ಹೆಡ್ಡಾಫೀಸ್:
ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್, ರಾಜಮಂಡ್ರಿ.
ಬೆಂಗಳೂರು ಏಜನ್ಸಿ:
ಸುದರ್ಶನ ಆಯುರ್ವೇದ ವೈದ್ಯಶಾಲ, ನಗರ್ತರ ಪೇಟೆ, ಬೆಂಗಳೂರು-2.

ದಿ ನ್ಯೂ ಕರ್ನಾಟಕ ಪ್ರೊವಿಡೆಂಟ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಪ್ರಧಾನ ಕಚೇರಿ] [ಉಡುಪಿ, ದ. ಕನ್ನಡ.

ನಿಮ್ಮ ಸಂಪಾದನೆಗೆ ಸಾಧ್ಯವಿರುವ ಮೊತ್ತಕ್ಕೆ ವಿಮೆ ಮಾಡಲು ಅನುಕೂಲವಿರುವ ಜಿಲ್ಲೆಯ ಏಕಮಾತ್ರ ಜನತಾ ಪ್ರೊವಿಡೆಂಟ್ ವಿಮಾ ಸಂಸ್ಥೆ.

ಏಜಂಟರು, ಸ್ಪೆಶ್ಯಲ್ ಏಜಂಟರು ಆರ್ಗನೈಜರರು ಮತ್ತು ಇನ್ಸ್‌ಪೆಕ್ಟರರು ಬೇಕಾಗಿದ್ದಾರೆ.

ವಿವರಕ್ಕೆ ಬರೆಯಿರಿ:

THE NEW KARNATAKA PROVIDENT
Insurance Co. Ltd., UDIPI.

ದಾರಿ ತಪ್ಪಿದರೆ ಕೋಳಿತ ಕಣ್ಣು ನೀತಿ ತಪ್ಪಿದರೆ ನಿಸ್ಸಾರ ಹೆಣ್ಣು. ಆದರೆ ಪಾತಿವ್ರತ್ಯ ಉಳಿಸಿಕೊಂಡಾಗ ಇಡೀ ಜಗತ್ತಿಗೇ ಅವಳೊಂದು ಕಣ್ಣು ಅವಳ ಬಾಳೇ

ಹೆಣ್ಣಿನ ಬಾಳು

([illegible])
ಟಿ. ಆರ್. ರಾಜ ಕುಮಾರಿ, ಬಿ. ಎಸ್ ಸರೋಜ, ಪಂಡರಿಬಾಯಿ
ತಾ. **15—3 1954** ರಿಂದ
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ತಾ. 21—3—1954ನೇ ಆದಿತ್ಯವಾರ ಬೆಳಿಗ್ಗೆ 10ಕ್ಕೆ
ಲೇಡಿ ಇನ್ ದಿ ಐಯರ್ನ್ ಮಾಸ್ಕ್ (ವರ್ಣ ಚಿತ್ರ)
LADY IN THE IRON MASK

ನಿಮಗೆ ಸುಲಭದಲ್ಲಿ ಇಂಗ್ಲಿಷ್ ಕಲಿಯಬೇಕೆ? ಹಾಗಿದ್ದರೆ

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿ ಪುಸ್ತಕ ಅತ್ಯುಪಯುಕ್ತವಾದುದು.
ಈ ಪುಸ್ತಕದಿಂದ ಸಾವಿರಾರು ಜನರು ಸುಲಭವಾಗಿ ಸಾಕಷ್ಟು ಇಂಗ್ಲಿಷ್ ಕಲಿತುಕೊಂಡಿದ್ದಾರೆ. ನೀವೂ ಪ್ರಯತ್ನಿಸಬಾರದೇಕೆ?
ಬೆಲೆ: ಸಾದಾಪ್ರತಿ 1—8—0
ನವಭಾರತ ಪುಸ್ತಕ ಭಂಡಾರ, ಉಡುಪಿ.

ನವಯುಗ ವಾರಪತ್ರಿಕೆಗೆ ಚಂದಾದಾರರಾಗಿರಿ.

ಮಂಗಳೂರು

ನಗರ ಸಭೆಯು— ಇದೇ ತಾ 13ರಲ್ಲಿ ನಗರ ಸಭಾಧ್ಯಕ್ಷ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಆನೆಕಾಲು ನಿರೋಧ ಕಾರ್ಯಕ್ರಮದ ಬಗ್ಗೆ ಹೆಟ್ರಾಜನ್ ಮಾತ್ರೆಗಳನ್ನು ಜನರಿಗೆ ಒದಗಿಸುವ ಸಲುವಾಗಿ ಕ್ರಯಕ್ಕೆ ಪಡಕೊಳ್ಳುವರೆ ಹತ್ತು ಸಾವಿರ ರೂಪಾಯಿಗಳನ್ನು ಮಂಜೂರು ಮಾಡಲಾಯಿತು. ಈ ಮಾತ್ರೆಗಳನ್ನು ಅವುದು ಕೆರಿಗೆ ವಿರಹಿತಪಡಿಸಿ ಧರಿಸಿಕೊಡುವಂತೆ ಸಹಕರಿಸಲು ಭಾರತ ಸರಕಾರ ಅಥವಾ ಮಲೇರಿಯಾ ಸಂಸ್ಥೆಯನ್ನು ಕೇಳಿಕೊಳ್ಳಲೂ ಮತ್ತು ಸೇಲ್ಸ್ ಟೇಕ್ಸ್ ವಿರಹಿತಪಡಿಸುವಂತೆಯೂ, ಈ ಯೋಜನೆಯನ್ನು ಆದಕ್ಕೆ ಬೇಕಾದ ಖರ್ಚನ್ನು ಮಂಜೂರು ಮಾಡುವಂತೆಯೂ ಪ್ರಾಂತ ಸರಕಾರವನ್ನು ಕೇಳಿಕೊಳ್ಳಬೇಕೆಂದೂ ನಿರ್ಣಯವಾಯಿತು. ಪ್ರಕೃತಕ್ಕೆ 8ನೆ ಮತ್ತು 9ನೆ ವಾರ್ಡುಗಳಲ್ಲಿ ಮಾತ್ರ ಈ ಕಾರ್ಯಕ್ರಮ ಕೈಗೊಂಡು ಅನಂತರ ವಿಸ್ತರಿಸುವುದೆಂದಾಯಿತು.

ನಗರ ಸಭೆಯ ವಿಶೇಷ ಸಭೆಯು ಅದೇ ದಿನ ರಾತ್ರಿ ಜರಗಿತು ಮಾರ್ಕೆಟು, ಸ್ಟಾಲು ಇತ್ಯಾದಿಗಳ ಏಲಮಿನ ಕುರಿತು ಪರಿಶೀಲಿಸಿ, ವೆಬಸ್ಟರ್ ಮಾರ್ಕೆಟು, ಕದ್ರಿ ಮಾರ್ಕೆಟು, ಜಪ್ಪು ಮಾರ್ಕೆಟು ಮತ್ತು ಕಂಕನಾಡಿ ಮಾರ್ಕೆಟುಗಳ ಒಳಗೆ ಬಾಡಿಗೆಯ ಅಂಗಡಿಗಳಲ್ಲಿರುವವರಿಗೆ ಹೊರೆಗಳನ್ನು ತರುವ ಬಗ್ಗೆ ಕೆಲವು ಸಲವತ್ತುಗಳನ್ನು ಕೊಡಬಹುದೆಂದು ನಗರ ಸಭೆಯು ತಾತ್ಕಾಲಿಕ ಉಪಸಮಿತಿಯ ಸೂಚನೆಗೆ ಒಪ್ಪಿಗೆ ಕೊಡಲಾಯಿತು. ಈಗ ಏಲಮಿಗೆ ಹಿಂತವರು ಈ ಸವಲತ್ತುಗಳ ಶರ್ತಗಳಿಗೆ ಒಪ್ಪಿದಲ್ಲಿ ವೆಬಸ್ಟರ್, ಕದ್ರಿ ಮತ್ತು ಜಪ್ಪು ಮಾರ್ಕೆಟುಗಳನ್ನು ಪುನಃ ಏಲಮಿಗೆ ಇಡುವ ಅಗತ್ಯವಿಲ್ಲವೆಂದಾಯಿತು.

ಮಹಿಳಾ ದಿನಾಚರಣೆಯು— ಸ್ಥಳೀಯ ಸ್ತ್ರೀ ಸೇವಾಸಮಿತಿಯ ಆಶ್ರಯದಲ್ಲಿ ಇದೇ ತಾ 7ರಲ್ಲು ಶ್ರೀಮತಿ ಲಕ್ಷ್ಮೀ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಮತಿಯರು ರಾಧಾ ಶಾಸ್ತ್ರಿ, ಲಕ್ಷ್ಮೀನಾರಾಯಣಿ ಮೊದಲಾದವರ ಭಾಷಣಗಳಾದುವು. ಪಾಕಿಸ್ತಾನ ಅಮೇರಿಕಗಳೊಳಗಿನ ಸೈನಿಕ ಒಪ್ಪಂದದ ಕುರಿತು ನೆಹರುಗಳ ಹೋರಣೆಯನ್ನು ಸ್ವಾಗತಿಸುವ ನಿರ್ಣಯವಾಗಿ ಸಭಾಂತ್ಯವಾಯಿತು.

ನವಭಾರತ ರಾತ್ರಿ ಶಾಲೆಯ ವಾರ್ಷಿಕೋತ್ಸವವು— ಇದೇ ತಾ 7ರಲ್ಲು ಆಸಿ ಜಡ್ಜರಾದ ಶ್ರೀ ಬಿ ಸೋಮನ್ನಾರವರ ಅಧ್ಯಕ್ಷತೆಯಲ್ಲಿ ಜರಗಿತು. ಡಾ ಕೆ. ನಾಗಪ್ಪ ಆಳ್ವರು ಸ್ವಾಗತ ಭಾಷಣ ಮಾಡಿದರು. ಶ್ರೀಮತಿ ಬಿ ಸೋಮಣ್ಣಾರವರು ಬಹುಮಾನ ವಿತರಣೆ ಮಾಡಿದರು.

ಆನೆಕಾಲು ರೋಗ ನಿವಾರಣಾ ಕಾರ್ಯ— ದ. ಕ. ಜಿಲ್ಲಾ ಇಂಡಿಯನ್ ಮೆಡಿಕಲ್ ಸಂಘದ ಕಾರ್ಯಸಮಿತಿ, ಮಂಗಳೂರು ನಗರ ಸಭೆಯ ಅಧಿಕಾರಿಗಳು ಮತ್ತು ಮಂಗಳೂರಿಗೆ ಬಂದಿರುವ ದಿಲ್ಲಿಯ ಮಲೇರಿಯಾ ಇನ್‌ಸ್ಟಿಟ್ಯೂಟಿನ ಫೈಲೇರಿಯಾ ಖಾತೆಯ ಉಪಡೈರೆಕ್ಟರ್ ಶ್ರೀ ... ಕೆ ... ಸ್ವಾಮಿ ಅವರೆಲ್ಲರ ಸಂಯುಕ್ತ ಸಭೆಯೊಂದು ಇದೇ ತಾ 7ರಲ್ಲು ಜರಗಿತು. ಮಂಗಳೂರಲ್ಲಿ ಆನೆಕಾಲು ರೋಗ ನಿವಾರಣೆಯ ಕಾರ್ಯಕ್ರಮ ಕೈಕೊಳ್ಳುವ ಕುರಿತು ಚರ್ಚೆಯಾಗಿ ಕೆಲವೊಂದು ಕಾರ್ಯಕ್ರಮ ನಿರ್ಧರಿಸಲಾಯಿತು. ಈ ಆನೆಕಾಲು ರೋಗದ ಪರಿಶೀಲನೆಯೊಂದಿಗೆ ರೋಗಗಳಿಗೆ ಧರ್ಮಾರ್ಥ ಔಷಧ ಕೊಡುವುದಲ್ಲದೆ ರೋಗ ನಿರೋಧದ ಪ್ರಚಾರವನ್ನು ಕೈಕೊಳ್ಳುವುದೆಂದಾಯಿತು.

ದಸ್ತಗಿರಿ— ಶ್ರೀ ಲೋಕನಾಥ ಶೆಟ್ಟರ ಕೊಲೆಯ ಸಂಬಂಧವಾಗಿ ವೆಂಕಪ್ಪ ಮತ್ತು ಮುತ್ತಪ್ಪ ಎಂಬೀರ್ವರನ್ನು ಮಂಗಳೂರು ಪೋಲೀಸರವರು ಕೊಡಗಿನ ಫ್ರೆಜರ್ ಪೇಟೆಯಲ್ಲಿ ದಸ್ತಗಿರಿ ಮಾಡಿ ತಂದಿರುವರು. ಈ ಕೊಲೆಯ ಸಂಬಂಧವಾಗಿ ಬಾಬು ಪೂಜಾರಿ ಎಂಬವನನ್ನು ಕೂಳೂರಲ್ಲಿ ಬಂಧಿಸಲಾಗಿದೆ.

ಸಹಕಾರಿ ಚಳವಳದ ಸುವರ್ಣೋತ್ಸವವು— ಮುಂದಿನ ಎಪ್ರಿಲ್ ತಾ 11ರಿಂದ 18ರ ತನಕ ಅಖಿಲ ಭಾರತದಲ್ಲಿ ಜರಗುವುದು. ಈ ಸಂದರ್ಭದಲ್ಲಿ ದ. ಕ. ಜಿಲ್ಲಾ ಸಹಕಾರೀ ಅಭಿವೃದ್ಧಿ ಸಂಘದ ಕಡೆಯಿಂದ ಸಾರ್ವಜನಿಕರಿಗಾಗಿ, ಕಾಲೇಜು ವಿದ್ಯಾರ್ಥಿಗಳಿಗಾಗಿ ಮತ್ತು ಹೈಸ್ಕೂಲು ವಿದ್ಯಾರ್ಥಿಗಳಿಗಾಗಿ ಮೂರು ಪ್ರಬಂಧಗಳನ್ನು ಏರ್ಪಡಿಸಲಾಗುವುದು. ಪ್ರಬಂಧಗಳು ಒಂದು ಸಾವಿರ ಶಬ್ದಗಳಿಗೆ ಮೀರಿ ಕೂಡದು. ಈ ತಿಂಗಳ ತಾ 29ರೊಳಗೆ ಅವನ್ನು ಕಾರ್ಯದರ್ಶಿ, ದ. ಕ. ಜಿಲ್ಲಾ ಸಹಕಾರಿ ಅಭಿವೃದ್ಧಿ ಸಂಘ, ಕೊಡಿಯಾಲಬೈಲು, ಮಂಗಳೂರು 3— ಅವರಿಗೆ ಕಳುಹಿಸಬೇಕು. ಹೆಚ್ಚಿನ ವಿವರಗಳನ್ನು ಮೇಲಿನವರಿಂದ ಪಡೆಯಬಹುದು.

ದ. ಕ ಜಿಲ್ಲಾ ಅಂಚೆ ಮತ್ತು ತಂತಿ ನೌಕರರ ಆಟಗಳ ಸ್ಪರ್ಧೆಯೊಂದು— ಇದೇ ತಾ 21ರಲ್ಲು ಬೆಳಗ್ಗೆ 8.30ಕ್ಕೆ ಪೋಸ್ಟ್ ಮಾಸ್ಟರ್ ಜನರಲರಿಂದ ಹೆಡ್ ಪೋಸ್ಟಾಫೀಸ್ ವಠಾರದಲ್ಲಿ ಪ್ರಾರಂಭಿಸಲ್ಪಡುವುದು. ಅದೇ ದಿನ ಸಂಜೆ ಕಥೋಲಿಕ್ ಕ್ಲಬ್ಬಿನಲ್ಲಿ ನಗರ ಸಭಾಧ್ಯಕ್ಷರಿಂದ ಕಲೆ ಮತ್ತು ಸಾಂಸ್ಕೃತಿಕ ಉತ್ಸವ ಪ್ರಾರಂಭವಾಗುವುದು.

ಮದ್ರಾಸಿನಲ್ಲಿ ಕೈಮಗ್ಗ ಬಟ್ಟೆಗಳ ಪ್ರದರ್ಶನವು— ಇದೇ ತಾ 25 ಮತ್ತು 26ರಲ್ಲು ಸ್ಟೇಟ್ ಬೇಂಕ್ ಮೆಮೋರಿಯಲ್ ಹಾಲಿನಲ್ಲಿ ಜರಗಲಿರುವುದು. ಕೈಮಗ್ಗ ಕೈಗಾರಿಕೆಯಲ್ಲಿ ನಿರತರಾದವರು ತಾವು ತಯಾರಿಸಿದ ಸೀರೆ, ಕೋಟಿಂಗ್, ಶರ್ಟಿಂಗ್, ಟೇಬಲ್ ಕ್ಲಾತ್ ಮೊದಲಾದುವನ್ನು ಪ್ರದರ್ಶಿಸಬಹುದು. ಪ್ರದರ್ಶನ ಸ್ಥಾನಗಳಿಗೆ ಬಾಡಿಗೆ ಕೊಡಬೇಕಾಗಿಲ್ಲ. ಉಮೇದ್ವಾರಿಗಳು ಪ್ರದರ್ಶನ ತಾರೀಕಿನಿಂದ ಒಂದು ವಾರ ಮೊದಲು ತಮ್ಮ ಹೆಸರುಗಳನ್ನು "ಪ್ರಿನ್ಸಿಪಾಲ್, ಗವರ್ನಮೆಂಟ್ ಟೆಕ್ಸ್‌ಟೈಲ್ ಇನ್‌ಸ್ಟಿಟ್ಯೂಟ್, ಮದ್ರಾಸು. 21" ಅವರೊಡನೆ ತಿಳಿಸಿ ರಿಜಿಸ್ಟರ್ ಮಾಡಿಕೊಳ್ಳತಕ್ಕದ್ದು. ರೂಪಾಯಿ 4850ರ ವಿವಿಧ ಉತ್ತಮ ಬಟ್ಟೆ ಬರೆಗಳಿಗೆ ಬಹುಮಾನವಾಗಿ ಹಂಚಲಾಗುವುದು.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. S. No. 126/1951
R. E. P. No. 65/1954

2ನೇ ವಾದಿ. ಪೀತಾಂಬರ ಪೋತಿ. ಶ್ರೀನಿವಾಸ ತಂತ್ರಿಯವರ ಮಗ, Shanthidar, in Kadashinad Kshetram, in Panthalam Town, in Quilon Trovncore state-

ಅರ್ಜಿದಾರ.

ಮತ್ತು.

M. ಅನಂತ ಆಚಾರ್ಯ ವಗೈರೆರು
ಪ್ರತಿವಾದಿರು.
ಯದ್ರಿರು.

1ನೇ ಪ್ರತಿವಾದಿ 1ನೇ ಯದ್ರಿ. M. ಅನಂತ ಆಚಾರ್ಯ ... ರ ಮಗ, ಉದ್ಯಾವರ, ಬೆಳಪು ಗ್ರಾಮಸ್ಥ. ಈಗ Brindavan Hotel, Egmore 2. Madras ನಲ್ಲಿ ಇರುವವರಿಗೆ. ಅರ್ಜಿದಾರನು, ಮೇಲ್ಕಂಡ ವಿಕ್ರಯ ಮೇಲೆ ನಡಿಸಿದ ಮೇಲ್ಕಂಡ ಅಸ್ಸಲ್ಯಾಯಿಯಲ್ಲಿ ಮೇಲ್ಕಂಡ ದಾವೆಯ ಲೆಕ್ಕಕ್ಕೆ ನಿಮ್ಮ ಪಕ್ಷಿನವಾಗಿ ಡಿಪಾಜಿಟಿನಲ್ಲಿರುವ ಹಣದಲ್ಲಿ ರೂಪಾಯಿ 750 ಜಪ್ತು ಮಾಡಿಸಿ ಆ ಜಪ್ತು ನವರಿ ಡಿಕ್ರಿಯ ಪೂರ್ಣ ಸಂದಾಯಕ್ಕಾಗಿ ತನಗೆ ಬರ ಹಣ ಕೊಡ್ಡಬೇಕಾಗಿ ಮನವಿ ಮಾಡಿದಂತೆ ಸದರಿ ಹಣ ಜಪ್ತಿಯ ಬಗ್ಗೆ ಹುಕುಮು ಆಗಿ ಜಪ್ತು ಮಾಡಲ್ಪಟ್ಟಿದೆ. ಸದರಿ ಜಪ್ತಿಯ ವಿಷಯದಲ್ಲಿ ನಿಮ್ಮ ಆಕ್ಷೇಪಣೆಯು ಇರುವಲ್ಲಿ ಸದರಿ ಅಸ್ಸಲ್ಯಾಯಿಯು ತನ್ನಿಗೆ ಇಟ್ಟ ತಾರೀಕು 6-1-54 ರಲ್ಲು ಬೆಳಿಗ್ಗೆ 10 ಗಂಟೆಯ ಸಮಯಕ್ಕೆ ಮೇಲ್ಕಂಡ ಕೋರ್ಟಿನ ಮುಂದೆ ಸ್ವತಹಾ ಅಥವಾ ವಕೀಲರ ಮುಖಾಂತರ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳ ಬಹುದಾಗಿಯೂ, ತಪ್ಪಿದಲ್ಲಿ ಸದರಿ ಜಪ್ತಿಯ ಕಾಯಮು ಮಾಡಲ್ಪಡುತ್ತದೆಂಬವಾಗಿಯೂ ಈ ಮೂಲಕ ನಿಮಗೆ ತಿಳಿಸೋಣವಾಗುತ್ತದೆ.—

A. N. S. Achar
Advocate for Petitioner

ಕಾರ್ಕಳ ತಾ 12-3-54

ದಿ ವಿಜಯಾ ಬೇಂಕ್ ಲಿಮಿಟೆಡ್, ಕಾರ್ಕಳ.

ಜಾಹೀರು ನೋಟೀಸು.

ಈ ಕೆಳಗೆ ಹೆಸರು ಕಾಣಿಸಿನವರು ಈ ಬೇಂಕಿನಲ್ಲಿ ಅಡವಿಟ್ಟ ನಗಗಳನ್ನು ಬಿಡಿಸಿ ಕೊಂಡು ಹೋಗದೆ ಇದ್ದುದರಿಂದಲೂ, ಅವರಿಗೆ ಕಳುಹಿಸಿದ ರಿಜಿಸ್ಟ್ರಿ ನೋಟೀಸು ಜಾರಿಯಾಗದೆ ವಾಪಾಸು ಬಂದಿರುವುದರಿಂದಲೂ ಈ ಮೂಲಕ ತಿಳಿಯ ಪಡಿಸುವದೇನೆಂದರೆ— ಸದ್ರಿಯವರು ಅಡವಿಟ್ಟ ನಗಗಳನ್ನು ಇದೇ ತಾ. 21—3—54ನೇ ಬುಧವಾರ ಮಧ್ಯಾಹ್ನ ಗಂಟೆ 3ಕ್ಕೆ ಯಾ ಅನಂತರ ಬೇಂಕಿನವರಿಗೆ ಯುಕ್ತ ಕಂಡ ತಾರೀಕಿಗೆ ಬೇಂಕಿನ ಆಫೀಸಿನಲ್ಲಿ ಪುನಃ ನೋಟೀಸು ಕೊಡದೇನೇ ಬಹಿರಂಗವಾಗಿ ಏಲಂ ಮಾಡಲ್ಪಡುವವು. ಏಲಂನಲ್ಲಿ ಹುಟ್ಟಿ ಬಂದ ಹಣವು ಸಾಲದ ಮೊಬಲಗಿಗೆ ಕಮ್ಮಿಯಾದಲ್ಲಿ ಸಂಬಂಧಪಟ್ಟವರ ವೈಯಕ್ತಿಕ ಜವಾಬ್ದಾರಿಯಿಂದ ಬೇಂಕಿಗೆ ಬರ ಬಾಕಿಯನ್ನು ವಸೂಲು ಮಾಡಲಾದೀತೆಂಬುದನ್ನು ಈ ಮೂಲಕ ತಿಳಿಸೋಣವಾಗಿದೆ

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ತಾ. 31-12-53ಕ್ಕೆ ಬರತಕ್ಕ ಮೊಬಲಗು		
269 50	ಶ್ರೀ. ರಾಮ ಪೂಜಾರಿ, ಕಿಟ್ಟ ಪೂಜಾರಿಗಳ ಅಳಿಯ, ಹರಿಹರಪುರ, ಶಿಗ್ಗಾಲ್ ಗ್ರಾಮ, ಕೊಪ್ಪ ತಾಲೂಕು	65	3	0
41/51	ಶ್ರೀ. ಕೆ. ಬಾಹುಬಲಿ ಹೆಗ್ಡೆ, ದೇವರಾಜ ಪೂವಣಿಗಳ ಮಗ, ಕುಕ್ಕುಂದೂರು ಗ್ರಾಮ	112	2	0
90./51	ಶ್ರೀ ರಾಮ ಶೆಟ್ಟಿ, ಸಿದ್ದ ಶೆಟ್ಟಿಗಳ ಮಗ, ಕಾರ್ಕಳ	111	[illegible]	0
1317 51	ಶ್ರೀ ಕೃಷ್ಣಪ್ಪ ಪೂಜಾರಿ, ಅಂತಪ್ಪ ಪೂಜಾರಿಗಳ ಅಳಿಯ, ಕೋಳಕೆ ಮುದ್ರಾಡಿ ಗ್ರಾಮ	14[illegible]	4	0
221 53	ಶ್ರೀ ಜೋರ್ಜ್ ಡಿ ಸಿಲ್ವ, ಯಸ್ ಡಿ ಸಿಲ್ವರ ಮಗ, ಕಾರ್ಕಳ	11	1[illegible]	0
732 52	ಶ್ರೀ. ಕೊರಗ ಶೆಟ್ಟಿ, ಸುಬ್ಬ ಶೆಟ್ಟಿ ಮಗ, ಪೆರ್ವಾಜೆ ಕಾರ್ಕಳ	2[illegible]	10	0

KARKALA
11—3—'54.

K. Gopalkrishna Shetty,
Agent



ನಕಲಿ ಬಗ್ಗೆ ಎಚ್ಚರಿಕೆ!

ಈ ಮೇಲೆ ಕಾಣಿಸಿದ ಟ್ರೇಡ್ ಮಾರ್ಕಿನ ಲೇಬಲು ಬಣ್ಣಗಳಲ್ಲಿಯೂ, ಡಿಸ್ಸಾಯಿನಲ್ಲಿಯೂ ಯಾರಾದರೂ ಅನುಕರಣೆ ಮಾಡುವುದು 1940ನೇ ಟ್ರೇಡ್ ಮಾರ್ಕ್ ಏಕ್ಟಿನ ಮೇರೆಗೆ ತಕ್ಷೀರಿಗೆ ಒಳಗಾಗುವರು. ಹೀಗೆ ಮಾಡುವವರ ಮೇಲೆ ಸದ್ಯದಲ್ಲೇ ಕ್ರಮ ಜರಗಿಸಲಾಗುವುದು. ಆದುದರಿಂದ ನಮ್ಮ ಗ್ರಾಹಕರು ನಕಲಿ ಮಾಲಿಗೆ ಮೋಸ ಹೋಗಬಾರದಾಗಿ ವಿನಂತಿ.

S.R.BEEDI WORKS, UDIPI, S.K.

In the Court of the Subordinate Judge (Ist Addl) of South Kanara.

O. S. No. 239 of 1953.

Between -

Vasudeva Bhatta — Plaintiff
and
Krishna Bhatta & others— Defendants.

NOTICE.

1. Achutha Bhatta (2nd Defendant) son of Narayana Bhatta, whose present address is not known the last address is care of K. Srinivas Thanthri, Southern Street, Rameshwar, Ramnad District.

2 Narayana Bhatta (3rd Defendant) son of 2nd defendant Achutha Bhatta, residing in Kumbadaje Village, Kumbadaje Post, Kasaragod Taluk.

The plaintiff has filed the above suit for partition and redemption of the family properties against the defendants Take notice that the said suit is posted to 29-3-1954 for hearing on which date if you fail to appear either in person or through Advocate the suit will be decided exparte

(By Order)

Mangalore
15—3 54

K. N. Rai,
Advocate.

ಬಿಳಿತೊನ್ನಿನ ನಿಂತಿತು

"ಕುಷ್ಠಾರಿ" ಬಿಲ್ಲೆಗಳನ್ನು ಉಪಯೋಗಿಸಿದರೆ ಬಿಳಿತೊನ್ನು ಮಾಯವಾಗುವುದು, ಪರೀಕ್ಷಿಸಿ ಬಿಡುವುದು. ಈ ಔಷಧ ಸೇವನೆಯಿಂದ ಶೀಘ್ರ ಗುಣವಾಗುವ ದಲ್ಲದೆ ಯಾವ ಬಾಧಕವೂ ಇಲ್ಲ. ಸಾಧಾರಣ ಮಾದರಿಗೆ ಚಾರ್ಜು ಸಹಿತ ಬೆಲೆ ರೂ. 3/; ಸ್ಪೆಶಲ್ ರೂ. 5-, ಅತ್ಯಧಿಕ ಸ್ಪೆಶಲ್ ರೂ. 8-[ವಿ. ಪಿ. ಖರ್ಚು ಬೇರೆ]

Mrs. P. DEVEE, P. O. S. (Xvi.)
CALCUTTA, 40

ಸ್ಟಾಕಿಸ್ಟರು: ...ಕಂಪೆನಿ, ಮಂಗಳೂರು.

(೩ನೇ ಪುಟದಿಂದ)

ಸಾಮರ್ಥ್ಯ ಅಧಿಕಗೊಂಡು ಕೆಲಕಾಲ ಗಿರಣಿಗಳೊಡನೆ ಸ್ಪರ್ಧೆ ಇದ್ದಂತೆಯೇ ಬೆಳೆಯಲು ಅದಕ್ಕೆ ಶಕ್ತಿ ಒದಗಿತು. ಪ್ರಥಮ ಮಹಾ ಯುದ್ಧಕಾಲದಲ್ಲಿ ವಿದೇಶೀ ಬಟ್ಟೆಗಳ ಆಯಾತ ಇಳಿಮುಖವಾದಾಗ, ಸ್ವದೇಶೀ ಗಿರಣಿಗಳ ಉತ್ಪಾದನೆ ದೇಶದ ಆವಶ್ಯಕತೆಯನ್ನು ಪೂರೈಸದಾಗ, ಕೈಮಗ್ಗಗಳು ತುಸು ಚೇತರಿಸಿಕೊಂಡು, ಹೆಚ್ಚಿನ ಪ್ರೋತ್ಸಾಹವನ್ನು ಪಡೆದವು.

ಗಿರಣಿಗಳ ಹಾವಳಿ

ಕೆಲಕಾಲದಲ್ಲೇ ಇದು ಕ್ಷಣಿಕ ಶುಭೋದಯವಾಗಿ ಸಿದ್ಧಗೊಂಡಿತು—ಯುದ್ಧ ಮುಗಿದ ಮೇಲೆ ಗಿರಣಿಗಳು ಉತ್ಪಾದನೆ ಹೆಚ್ಚಿಸಿದ್ದಲ್ಲದೆ, ಅನಾದಿಕಾಲದಿಂದ ಕೈಮಗ್ಗಗಳ ಗುತ್ತಿಗೆಯಾಗಿದ್ದ ಬಣ್ಣದ ಸೀರೆಗಳ ನೇಯ್ಗೆಯನ್ನು ತಾವು ಆಕ್ರಮಿಸಿ ಕೈಮಗ್ಗಗಳ ಮೇಲೆ ಕೈಮಾಡಿದವು ೧೯೩೦ನೇ ಸಾಲಿನ ಆರ್ಥಿಕ ಮುಗ್ಗಟ್ಟು ನೇಕಾರರನ್ನು ಉಪವಾಸ ಬೀಳುವಂತೆ ಮಾಡಿತು. ಈ ಗೋಳು ಸರಕಾರದ ಕಿವಿಗೆ ಮುಟ್ಟಿದಾಗ ಕೈಮಗ್ಗದ ಬಟ್ಟೆಗಳಿಗೆ ಪೇಟೆ ಕಂಡುಕೊಳ್ಳುವುದು, ನಕಾಶೆಗಳನ್ನು ಸುಧಾರಿಸುವುದು, ಪೇಟೆಯನ್ನು ವಿಸ್ತರಿಸುವುದು ಮುಂತಾದವುಗಳಿಗಾಗಿ ಪ್ರತಿ ವರ್ಷ ೫ ಲಕ್ಷ ರೂಪಾಯಿಗಳನ್ನು ಹನ್ನೆರಡು ವರ್ಷಗಳ ವರೆಗೆ ಉಪಯೋಗಿಸಲು ಸರಕಾರ ನಿರ್ಧರಿಸಿತು ಮುಂದೆ ೧೯೪೧ರಲ್ಲಿ ಕೈಮಗ್ಗದ ಕೈಗಾರಿಕೆಯ ಸಮಸ್ಯೆಗಳನ್ನೂ ಅವುಗಳ ಪರಿಹಾರೋಪಾಯಗಳನ್ನೂ ಕಂಡು ಹಿಡಿಯಲು ವಿಚಾರಣಾ ಸಮಿತಿ ನೇಮಿಸಲ್ಪಟ್ಟು, ಅದರ ವರದಿಯ ಆಧಾರದ ಮೇಲೆ ೧೯೪೫ರಲ್ಲಿ ಅಖಿಲ ಭಾರತ ಕೈಮಗ್ಗದ ಮಂಡಳ ಸ್ಥಾಪಿಸಲ್ಪಟ್ಟಿತು. ಗಿರಣೀ ಉತ್ಪಾದನೆಯ ಮೇಲೆ ಶಾಯಿದೆಬದ್ಧ ನಿಯಂತ್ರಣವನ್ನು ಹೇರಿದ್ದಲ್ಲದೆ, ಕೈಮಗ್ಗಗಳಿಗೆ ಒಂದು ಕನಿಷ್ಠ ಪ್ರಮಾಣದಲ್ಲಿ ನೂಲನ್ನ ಪೂರೈಸಬೇಕೆಂದು ನಿರ್ಬಂಧಿಸಲಾಯಿತು. ಗಿರಣಿಗಳಲ್ಲಿ ಯಾಂತ್ರಿಕ ಮಗ್ಗಗಳನ್ನು ಹೆಚ್ಚಿಸುವುದನ್ನೂ ಪ್ರತಿಬಂಧಿಸಿದರು.

ಪುನರುಜ್ಜೀವನದ ಪ್ರಯತ್ನ

ಕೈಮಗ್ಗದ ಕೈಗಾರಿಕೆಯನ್ನು ಪುನರುಜ್ಜೀವನಗೊಳಿಸುವುದಕ್ಕೋಸ್ಕರ ಸ್ವಾತಂತ್ರ್ಯ ಪ್ರಾಪ್ತಿಯ ನಂತರವೂ ಪ್ರಯತ್ನಗಳು ಮುಂದುವರಿಸಲ್ಪಟ್ಟವು. ೧೯೪೮ರಲ್ಲಿ ಸರಕಾರವು ಕೈಮಗ್ಗಗಳ ಅಭಿವೃದ್ಧಿಗೋಸ್ಕರ ೧೦ ಲಕ್ಷ ರೂಪಾಯಿಗಳ ನಿಧಿಯನ್ನೊದಗಿಸಿತು. ೧೯೫೦ರಲ್ಲಿ ಪುನಃ ೫ ಲಕ್ಷ ರೂಪಾಯಿ ದೊರೆತವು. ಗಿರಣಿಗಳು ಕೆಲವು ವಿಶಿಷ್ಟ ಮಾದರಿಯ ಬಟ್ಟೆಗಳನ್ನು ತಯಾರಿಸಲಾಗದೆಂದು ನಿರ್ಬಂಧಿಸಿ ಅವುಗಳ ಉತ್ಪಾದನೆಯನ್ನು ಕೈಮಗ್ಗಗಳಿಗೇ ಮೀಸಲಿಟ್ಟರು. ಅಲ್ಲದೆ ಸರಕಾರದವರು ತಮ್ಮ ಆವಶ್ಯಕತೆಗಳಿಗೋಸ್ಕರ ಕೈಮಗ್ಗದ ಬಟ್ಟೆಗಳಿಗೆ ಪ್ರಾಶಸ್ತ್ಯ ಕೊಡಲು ನಿರ್ಧರಿಸಿದರು. ಇವೆಲ್ಲ ಕ್ರಮಗಳಿಂದ ಕೈಮಗ್ಗದ ಬಟ್ಟೆಗಳು ಪುನರುಜ್ಜೀವನವನ್ನು ಹೊಂದಿದರೂ—೧೯೫೨ರಲ್ಲಿ ತಲೆದೋರಿದ ಆರ್ಥಿಕ ಮುಗ್ಗಟ್ಟಿನಿಂದ ನಿರುದ್ಯೋಗವು ವ್ಯಾಪಿಸಿತು, ಉತ್ಪಾದಿತ ಸರಕುಗಳು ರಾಶಿರಾಶಿಯಾಗಿ ಉಳಿದು ಶೋಚನೀಯ ಪರಿಸ್ಥಿತಿಯನ್ನು ಇದಿರಿಸಬೇಕಾಗಿ ಬಂದ ನೇಕಾರರು ಕೆಲವು ರಾಜ್ಯಗಳಲ್ಲಿ ತೀವ್ರ ಆಂದೋಲನವನ್ನು ಕೈಗೊಂಡರು.

ನೇಕಾರರಿಗೆ ಪರಿಹಾರ ಕೊಡಲು ಸರಕಾರವು ೧೯೪೭ರಲ್ಲಿ ವಿಸರ್ಜಿಸಿದ ಮಂಡಳದ ಸ್ಥಾನದಲ್ಲಿ ವ್ಯಾಪಕ ಅಧಿಕಾರವುಳ್ಳ ಹೊಸತೊಂದು ಅಖಿಲ ಭಾರತ ಕೈಮಗ್ಗದ ಮಂಡಳವನ್ನು ಸ್ಥಾಪಿಸಿತು ಸಮಸ್ಯೆಗೆ ತಾತ್ಪೂರ್ತಿಕವಾದ ಪರಿಹಾರ ರೂಪದಲ್ಲಿ ಗಿರಣಿ ಬಟ್ಟೆಯ ಮೇಲೆ ಅಬಕಾರಿ ಸುಂಕವನ್ನ ಹೇರಿತು ಗಿರಣಿಗಳು ತಮ್ಮ ಸಾಮರ್ಥ್ಯದ ನೂರಕ್ಕೆ ೬೦ಕ್ಕಿಂತ ಹೆಚ್ಚು ಧೋತರ ನೇಯಕೂಡದೆಂದೂ ಬಣ್ಣದ ಸೀರೆಗಳನ್ನು ತಯಾರಿಸಲೇ ಬಾರದೆಂದೂ ಆಜ್ಞೆ ವಿಧಿಸಿತು ಗಜಕ್ಕೆ ಮೂರುಪೈಯಂತೆ ಕೇಂದ್ರ ಸರಕಾರ ಹೊರಿಸುವ ಗಿರಣಿ ಬಟ್ಟೆಗಳ ಮೇಲಿನ ಸುಂಕ ವರ್ಷಕ್ಕೆ ೩-೪ ಕೋಟಿ ರೂಪಾಯಿಗಳ ನಿಧಿಯನ್ನು ತರುತ್ತದೆ. ಇದನ್ನು ಕೈಮಗ್ಗಗಳಿಗೆ ಯೋಗ್ಯ ಸಹಾಯ ಹಾಗು ಸಂತತವಾದ ನೂಲಿನ ಪೂರೈಕೆ, ಪೇಟೆಗಳ ಸಂಘಟನೆ ಸಂಶೋಧನೆ, ನಕಾಶೆಗಳ ಸುಧಾರಣೆ, ತಾಂತ್ರಿಕ ಸುಧಾರಣೆ, ನೇಕಾರರ ತರಬೇತಿ, ಉತ್ಪಾದಿತ ವಸ್ತ್ರಗಳ ಗುಣನಿಷ್ಕರ್ಷೆ, ಸಹಕಾರಿಪದ್ಧತಿಯ ಪ್ರಸಾರ—ಇತ್ಯಾದಿ ಉದ್ದೇಶಗಳಿಗೆ ವಿನಿಯೋಗಿಸಲಾಗುವುದು.

ಸಹಕಾರ ಮಾರ್ಗ

ಸಹಕಾರಿ ಪದ್ಧತಿಯನ್ನು ನೇಕಾರರು ಮೆಚ್ಚುವಂತೆ ಮಾಡುವುದಕ್ಕೆ ಸರಕಾರ ತುಂಬ ಮಹತ್ವವನ್ನು ಕೊಡುತ್ತದೆ. ಆರ್ಥಿಕ ತಾಪತ್ರಯಗಳಿಗೆ ಗುರಿಯಾದ ನೇಕಾರರು ಗಿರಣಿಗಳೊಡನೆ ಮಾತ್ರ ಸ್ಪರ್ಧೆಹೂಡುವುದಲ್ಲ—ನೇಕಾರ ಸೋದರರೊಡನೆಯೂ ಸ್ಪರ್ಧೆಗೆ ಇಳಿಯುವರು ಇದನ್ನು ತಪ್ಪಿಸುವುದು ಆಗತ್ಯ. ಹೀಗೆ ಮಾಡಿದರೆ ನೇಕಾರರ ಸಂಪಾದನೆ ಹೆಚ್ಚುತ್ತದೆ. ದೇಶದ ಜನರು ಕೈಮಗ್ಗಗಳು ನಿರ್ವಹಿಸುವ ಪಾತ್ರದ ಮಹತ್ವವನ್ನು ತಿಳಿದು ಕೈಮಗ್ಗದ ವಸ್ತ್ರಗಳ ಅಧಿಕಾಧಿಕ ಉಪಯೋಗವನ್ನು ಮಾಡಿಕೊಂಡರೆ, ಸ್ವದೇಶೀ ವ್ರತವನ್ನು ನಿಷ್ಠೆಯಿಂದ ಪಾಲಿಸಿದಂತಾಗುವುದಲ್ಲದೆ, ಒಂದೂ ಒಂದೂವರೆ ಕೋಟಿ ನೇಕಾರ ಬಂಧುಗಳಿಗೆ ಬದುಕಿ ಉಳಿಯಲು ಅವಕಾಶ ನೀಡಿದಂತಾಗುವುದು ಜಪಾನು ದೇಶೀಯರನ್ನು ಈ ವಿಷಯದಲ್ಲಿ ಆದರ್ಶ ಪ್ರಾಯರಾಗಿ ನಾವು ಕಾಣಬಹುದು ಕೈಮಗ್ಗದ ವಸ್ತ್ರಗಳಿಗೆ ಕೊಡಬೇಕಾಗುವ ಅಧಿಕ ಬೆಲೆಯು ಅದರ ತಾಳಿಕೆ ಬಾಳಿಕೆಗಳ ದೃಷ್ಟಿಯಿಂದ ನ್ಯಾಯವೆಂದು ಎಲ್ಲರಿಗೂ ಗೊತ್ತಿದೆ. ಆದರೆ ಹೊಸ ಹೊಸ ಫೇಶನುಗಳ ಯುಗದಲ್ಲಿ, ತಾಳಿಕೆ, ಬಾಳಿಕೆಯ ಸ್ಥಾನವನ್ನು ಥಳಕು ಬೆಳಕು ಆಕ್ರಮಿಸಿದೆ. ತಾಳ್ಮೆ ಕಡಿಮೆಯಾದ ಜನರು ಕೈಗೆ ಸಿಕ್ಕಿದ ಗಿರಣಿ ಬಟ್ಟೆಯನ್ನೇ ಕೊಂಡುಕೊಳ್ಳುವರಲ್ಲದೆ. ಕೈಮಗ್ಗಗಳನ್ನು ಹುಡುಕಿಕೊಂಡು ಹೋಗಲು ಪ್ರಯತ್ನಿಸುವುದಿಲ್ಲ. ಈ ಮನೋಭಾವ ಪರಿಮಾರ್ಜಿತಗೊಂಡಷ್ಟೂ ಕೈಮಗ್ಗಗಳು ಸುಧಾರಿಸುತ್ತವೆ.

ದೇಶೀಯರಲ್ಲಿ ಜನಪ್ರಿಯತೆಯನ್ನು ಕೈಮಗ್ಗಗಳು ಗಳಿಸಿಕೊಳ್ಳುವುದಲ್ಲದೆ ವಿದೇಶಗಳಲ್ಲೂ ಪೇಟೆ ದೊರಕಿಸಿಕೊಳ್ಳಬೇಕು ಮೋಟಾರು ವಾಹನಗಳ ಮೂಲಕ ಹಳ್ಳಿಯ ಮೂಲೆಗೂ ಕೈಮಗ್ಗದ ಬಟ್ಟೆ ಪೂರೈಸುವ ಪ್ರಯತ್ನ ಭಾರತದೊಳಗೆ ನಡೆಯುತ್ತಿದ್ದರೆ, ಏಡನ, ಕರಾಚಿ, ಚಿತಗಾಂಗ, ರಂಗೂನ, ಬ್ಯಾಂಗಕಾಕ, ಸಿಂಹಳ, ಸಿಂಗಾಪುರಗಳಲ್ಲಿ ಕೈಮಗ್ಗದ ಜವುಳಿ ಪ್ರದರ್ಶನಗಳು ಏರ್ಪಡುತ್ತವೆ. ಈಗ ವರ್ಷಕ್ಕೆ ಸುಮಾರು ೫-೭ ಕೋಟಿ ರೂಪಾಯಿ ಬೆಲೆಯ ೪೦—೬೦ ಕೋಟಿ ಗಜ ಕೈಮಗ್ಗದ ಬಟ್ಟೆ ಪಶ್ಚಿಮ ಆಫ್ರಿಕ, ಮಧ್ಯ ಪ್ರಾಚ್ಯ, ದಕ್ಷಿಣ ಏಶಿಯ ರಾಷ್ಟ್ರಗಳಿಗೆ ನಿರ್ಯಾತವಾಗುತ್ತದೆ. ಈ ಪೇಟೆ ಇನ್ನೂ ವ್ಯಾಪಕಗೊಳ್ಳಬೇಕು—ಮತ್ತು ದೇಶದ ಆಂತರಿಕ ಬಳಕೆ ಅಧಿಕಗೊಳ್ಳಬೇಕು. ಅಂದರೆ ಮಾತ್ರ ಕೈಮಗ್ಗದ ಕೈಗಾರಿಕೆ ಸ್ಥಿರವಾದ ತಳಹದಿಯನ್ನು ಕಾಣಬಹುದು. ಅಂದಿನವರೆಗೆ ಗಿರಣಿ ಬಟ್ಟೆಗಳ ಮೇಲಿನ ಪ್ರತಿಬಂಧವೂ ನಿಯಂತ್ರಣವೂ ಕರಾಕರಣೆಯೂ ತಾತ್ಪೂರ್ತಿಕ ಸಮಾಧಾನವನ್ನಷ್ಟೇ ನೀಡುತ್ತದೆ. ಆದ ಕಾರಣ ಗಣ್ಯ ವ್ಯಕ್ತಿಗಳೂ ಸಾಮಾಜಿಕ ಕಾರ್ಯಕರ್ತರೂ ಕೈಮಗ್ಗದ ವಸ್ತ್ರಗಳ ಪ್ರಚಾರ ಕಾರ್ಯದಲ್ಲಿ ಹೆಚ್ಚಿನ ಉತ್ಸಾಹವನ್ನು ತೋರಿಸುವುದು ಕರ್ತವ್ಯ. (ಆಧಾರದಿಂದ)

ಸ್ವೀಕಾರ—ವಿಮರ್ಶೆ

ಸೋಲು—

ಬರೆದವರು: ರಮಾನಂದ ಅಮೀನ್. ಪ್ರಕಾಶಕರು: ಚಂದ್ರಸಾಗರ ಪ್ರಕಾಶನ, ಗವರ್ನಮೆಂಟ್ ನ್ಯೂ ಬಿಲ್ಡಿಂಗ್—೧, ಬ್ಲಾಕ್ ೫, ನಂಬ್ರ ೭೦ನೇ ಬಿ. ಡಿ. ಚಾಲಿನ ಎದುರು, ವರ್ಲಿ, ಮುಂಬಯಿ ೧೮. ಬೆಲೆ: ರೂ. ೧-೦-೦

ಇದೊಂದು ದಕ್ಷಿಣ ಕನ್ನಡದ ಮಧ್ಯಮ ವರ್ಗದ ಸಂಸಾರಕ್ಕೆ ಸಂಬಂಧಿಸಿದಂತಿರುವ ಸಾಮಾಜಿಕ ಕಾದಂಬರಿ—ರಮೇಶನು ಮುಂಬಯಿಯಿಂದ ಮಂಗಳೂರಿಗೆ ತಂದೆಯೊಂದಿಗೆ ಬಂದು, ಕುಟುಂಬದ ಜಂಜಟದಲ್ಲಿ ಸಿಕ್ಕಿ, ದಾರಿಯಲ್ಲಿ ಬಿದ್ದು ಸಾಯುವುದು ಇಲ್ಲಿಯ ಕಥೆ. ಕಥಾನಾಯಕನಾದ ರಮೇಶ ನಮಗೊಬ್ಬ ಮೊದ್ದು ಪ್ರಾಣಿಯಂತೆ ತೋರುತ್ತಾನೆ—ಅವನಲ್ಲಿ ದೊಡ್ಡ ಗುಣಗಳ ಬಿನಂಪೇನೋ ತುಂಬಿದಂತೆ ಕಾಣುತ್ತದೆ; ತಮ್ಮ ಉಮೇಶನು ಯೌವನ ಭರದಲ್ಲಿ ಹುಡುಗಿಯೊಬ್ಬಳಿಗೆಸಗಿದ ಅನ್ಯಾಯಕ್ಕೋಸ್ಕರ ಮರುಗಿ ಅವಳಿಗೆ ಮರ್ಯಾದೆಯಿಂದ ಜೀವಿಸುವದಕ್ಕೆ ಅನುಕೂಲತೆಯೊದಗಿಸಿ ಕೊಡುವಷ್ಟರ ಮಟ್ಟಿನ ಔದಾರ್ಯ ರಮೇಶನದ್ದು. ಆದರೆ ಕುಟುಂಬದ ಜೀವನ ನಿರ್ವಹಣಕ್ಕೆ ಆಧಾರವೆನಿಸಿದ ಅಂಗಡಿಯ ಕೆಲಸದಲ್ಲಿ ರಮೇಶನಿಗೆ ಮನಸ್ಸಿಲ್ಲ. ಬದಲು ಏನೋ ಸಾರ್ವಜನಿಕ ಸೇವೆ ಮಾಡುತ್ತಾನಂತೆ ಕಾಂಗ್ರೆಸಿನ ಚಳವಳದಲ್ಲಿ ಸೇರಿ ಜೈಲನ್ನೂ ಕಾಣುತ್ತಾನಂತೆ— ಅವನ ಸೇವಾಜೀವನದ ಯಾವ ಮುಖವೂ ಕಾದಂಬರಿಯಲ್ಲಿ ಕಾಣುವುದಿಲ್ಲ. ತಮ್ಮನೊಂದಿಗೆ ಕೂಡಿ ನಡೆಯುವುದಿಲ್ಲವಾದರೆ, ಹೊಸತೊಂದು ಅಂಗಡಿಯನ್ನು ತೆರೆದಾದರೂ ಹೆಂಡತಿ ಮಕ್ಕಳನ್ನು ಸಾಕಿಕೊಂಡು ಮಾನವಂತನಾಗಿ ಬದುಕೆಂದು ಮಾವನ ಮನೆಯವರು ಉಪದೇಶಿಸುತಿದ್ದರೂ ಅತ್ತ ಕಿವಿಗೊಡದ ಅವನ ಬುದ್ಧಿವಂತಿಕೆಗೆ, ದೊಡ್ಡ ಮನಸ್ಸಿಗೆ, ಧೀಮಾರಿ ಹಾಕಬೇಕು. ಇಂತಹ ನಿಷ್ಕ್ರಿಯ ಜೀವನವನ್ನು ರಮೇಶ ನಡೆಸಿದನೆಂದು ನಂಬುವುದೇ ಕಷ್ಟ ಅದರಲ್ಲೂ ಅವನು ಮಂಗಳೂರಿನಿಂದ ಮೂಲ್ಕಿಗೆ ಪ್ರಯಾಣಿಸುವಾಗ ದಾರಿಯಲ್ಲಿ ಬಿದ್ದು ಸತ್ತನೆಂದು ಹೇಳುವುದು ತೀರ ಕೃತಕ, ಅಸ್ವಾಭಾವಿಕ ಗುತ್ತು ಪ್ರಮಾದ. ಕಥಾನಿರೂಪಣೆಯೂ ಪಾತ್ರಸೃಷ್ಟಿಯೂ ಪೂರಾ ಕೈಬಿಟ್ಟ ಈ ಕಾದಂಬರಿ ಲೇಖಕರ ದೊಡ್ಡ "ಸೋಲು". ಹೊಸ ಲೇಖಕರ ಬೆನ್ನು ತಟ್ಟಿ ಪ್ರೋತ್ಸಾಹಿಸಬೇಕಾದ ನಮಗೆ ಈ ಮಾತು ಬರೆಯಲು ತುಂಬ ವಿಷಾದವಾಗುತ್ತದೆ- ಕನ್ನಡದಲ್ಲಿ ಬರುವ ಸಂಭಾಷಣೆಗಳನ್ನು ಮುದ್ರಿಸಿದ ತಪ್ಪು ರೀತಿಗೆ ಯಾರು ಹೊಣೆಯೋ ತಿಳಿಯುವುದಿಲ್ಲ. ಒಟ್ಟಿನಲ್ಲಿ ಬೇಸರ ಬರಿಸುವ ಈ ಕಾದಂಬರಿಯನ್ನು ಪ್ರಕಟಿಸುವುದಕ್ಕೆ ಮುಂಚೆ ಸಾಕಷ್ಟು ವಿಚಾರಮಾಡಬೇಕಾಗಿತ್ತೆಂದು ನಮ್ಮ ಅಭಿಪ್ರಾಯ. "ನಾವು ಸಾಹಿತ್ಯ ನಿರ್ಮಾಣಕ್ಕಾಗಿ ವಿಪುಲಸಿದ್ಧತೆ ಮಾಡಿಕೊಳ್ಳಬೇಕು- ಅಂದರೆ ಆ ಔಷಧಗಳ ಪ್ರಮಾಣಗಳನ್ನು ಪಾರಮಾಡಿ ದವಸಕ್ಕೆ ವೈದ್ಯರಾಗಿ ಕುಳಿತುಕೊಳ್ಳಬಾರದು.. ಸಾಹಿತ್ಯಕಾರನು ಆದರ್ಶವಾದಿಯಾಗಬೇಕು, ಪರಿಮಾರ್ಜಿತ ಭಾವಗಳ ಮೇಲೆ ಒಡೆತನವಿರಬೇಕು; ಅವನಲ್ಲಿ ಸಾಧನೆ, ಸಂಯಮ, ಸೌಂದರ್ಯ ಮತ್ತು ಸ್ವೇಚ್ಛಾನುವೃತ್ತಿ ಪ್ರವೃತ್ತನಾಗಬೇಕು" ಎನ್ನುವ ಪ್ರೇಮಚಂದರ ಮಾತನ್ನು ಅಮೀನರು ಮನ ಮಾಡುವುದೊಳಿತು.

ಡಾ| ಶಿವರಾಮ ಕಾರಂತ? ಶ್ರೀಯುವರ ಮೂರು ಗ್ರಂಥಗಳು

ಪ್ರಾಚೀನ ತುಳುನಾಡು	(ಎಂ. ಗೋವಿಂದ ಪೈಗಳ ಮುನ್ನುಡಿ)	೨	೦	೦
ಭಾರತದ ಕರ್ಣ (ಗದ್ಯ)	(ಎಂ. ಆರ್. ಶಾಸ್ತ್ರಿಗಳ ,,)	೦	೬	೦
ಮುರಲಿ (ಪದ್ಯ)	(ಕಯ್ಯಾರ ಕಿಞ್ಞಣ್ಣ ರೈಗಳ ,,)	೦	೧೨	೦

ಟಪ್ಪಾಲು ಖರ್ಚು ಪ್ರತ್ಯೇಕ. ಪುಸ್ತಕ ವ್ಯಾಪಾರಿಗಳಿಗೆ ಕಮಿಶನ್ ಕೊಡಲಾಗುವುದು.

ನವಯುಗ ಪ್ರೆಸ್,
ಪೋಸ್ಟ್ ಬಾಕ್ಸ್ ನಂಬ್ರ 22,
ಉಡುಪಿ.

A. T. Mohan Rai,
Valencia, Kankanady,
Mangalore 2.

'ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರಿ

ಇವರ
ನವಜೀವಾತು
ಎಂಬ
ಸೂತಿಕಾ ರಸಾಯನ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರೀಕ್ಷಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವರಸಾಯನ.

ಹೆಚ್ಚಿನ ಮಾಹಿತಿಗೆ— ಡಾ| ಯಂ. ಸಿ. ಶಾಸ್ತ್ರೀ, ಯಲ್. ಐ. ಎಂ.
ಕೊಡಿಯಾಲಬೈಲು ಪೋಸ್ಟು, (ಮಂಗಳೂರು)
ಸ್ಟಾಕಿಸ್ಟರು:—ಡಾ| ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ

(೩ನೇ ಪುಟದಿಂದ)

ಯ ದೃಷ್ಟಿಯಲ್ಲಿ ಗಂಭೀರವಾದ ಆರ್ಥಿಕ ಸಮಸ್ಯೆಯನ್ನೂ ಹುಟ್ಟಿಸುತ್ತದೆ" ಎಂದು ಸಂಸ್ಥೆಯ ಖಚಿತ ಅಭಿಪ್ರಾಯ.

ತಜ್ಞರ ಅಭಿಪ್ರಾಯ

ಡಾ|| ಎಮಿಲ್ ಟೆರ್ಚ್‌ಮನ್ನರೆಂಬ ತಜ್ಞರ ಆಳವಾದ ಅಭ್ಯಾಸ, ಪ್ರಯೋಗ, ಪರೀಕ್ಷೆಗಳ ಫಲಿತಾಂಶವಾಗಿ ಪ್ರಕಟಗೊಂಡ ವರದಿಯ ಆಧಾರದ ಮೇಲೆ ಉಕ್ತ ಜಾಗತಿಕ ಸಂಘವು ಮೇಲಿನ ನಿರ್ಣಯವನ್ನು ಕೈಗೊಂಡಿತು. ರೋಗಗಳು ಹೆಚ್ಚಾಗಿಲ್ಲ—ಆದರೆ ರೋಗಗಳ ಭ್ರಮೆ ಮಾತ್ರ ವ್ಯಾಪಕಗೊಂಡಿದೆ. ಪರಿಣಾಮದಲ್ಲಿ ಉತ್ತಮ ಆರೋಗ್ಯ ರಕ್ಷಣೆ ಅಥವಾ ಸಾರ್ವತ್ರಿಕ ಆರೋಗ್ಯ ಸುಧಾರಣೆಯ ಪ್ರಯತ್ನಗಳು ನಡೆಯದಿದ್ದರೂ ಸಹ, ಔಷಧಗಳ ಪ್ರಚಾರ ಮಿತಿಮೀರಿ ಹೋಗಿದೆ. ಈ ರೀತಿ ಔಷಧಗಳ ಉಪಯೋಗ ಹೆಚ್ಚಾಗುತ್ತಿರುವದಕ್ಕೆ ಔಷಧ ತಯಾರಿಕೆ ಉದ್ದಿಮೆಯ ಪ್ರಚಂಡವಾದ,ಹಾಗೂ ಅವ್ಯಾಹತವಾದ ಜಾಹಿರಾತುಪ್ರಬಲಹೇತುವೆಂದು ಟೆರ್ಚ್‌ಮನ್ನರ ನಿರ್ಣಯ. ಪ್ರತಿನಿತ್ಯವೂ ಪ್ರತಿಯೊಂದು ಪತ್ರಿಕೆಯಲ್ಲೂ ರೋಗ ನಿವಾರಣೆ ಮಾಡಿ ಆರೋಗ್ಯವನ್ನೀಯುವುದರ ಜೊತೆಗೆ ನಿಜವಾಗಿಯೂ ಇರುವ ಅಥವಾ ಕಲ್ಪಿತ ನೋವನ್ನು ಶಮನಗೊಳಿಸಿ ದೀರ್ಘಾಯುಷ್ಯವನ್ನೂ ತಾರುಣ್ಯವನ್ನೂ ಒದಗಿಸುವವೆಂಬ ಹಲವು ಔಷಧಗಳ ಜಾಹೀರಾತುಗಳು ಕಣ್ಣಿಗೆ ಬೀಳುತ್ತವೆ. ಇದರಿಂದ ಪ್ರತ್ಯಕ್ಷ ರೋಗ ಪೀಡಿತರಾದವರ ಜೊತೆಗೆ,ಎಲ್ಲಿಯೋ ಅಲ್ಪ ಸ್ವಲ್ಪ ಶಾರೀರಕ ತೊಂದರೆ ಕಂಡು ಬಂದವರೂ ಸಹ ಅದ್ಭುತ ಸಾಧನೆಯ ರಮ್ಯ ಔಷಧಿಗಳಿಗೆ ಶರಣು ಹೋಗುವುದು ಆಶ್ಚರ್ಯವಲ್ಲ.

ನಮ್ಮ ದೇಶದಲ್ಲಿ ಮಾತ್ರವೆಂದೇನಲ್ಲ—ಅಮೇರಿಕಾ ಬ್ರಿಟನು ಮುಂತಾದ ತೀರ ಮುಂದರಿದ ರಾಷ್ಟ್ರಗಳಲ್ಲಿ ಕೂಡ ಮೋಸದ ಔಷಧಿಗಳ ವ್ಯಾಪಾರ ಚೆನ್ನಾಗಿ ನಡೆಯುತ್ತದೆ. ಶಿಕ್ಷಣದ ಅಭಾವ ಇರುವ, ವೈಜ್ಞಾನಿಕ ಸಂಶೋಧನೆಗಳು ಪ್ರಾಬಲ್ಯಕ್ಕೆ ಬಂದಿಲ್ಲದ ಭಾರತದಲ್ಲಂತೂ ಅಜ್ಞಾನ ಜನತೆಯನ್ನು ಮಂಕುಗೊಳಿಸುವ ಸುಲಭ ಸಾಧನವಾಗಿ ಈ ಮೋಸದ ಔಷಧಗಳು ಇರುತ್ತವೆ. ಅಜ್ಞಾನ ಸಾಲದುದಕ್ಕೆ, ಹಿಮಾಲಯದ ಗಿಡಮೂಲಿಕೆಗಳ ಮುನಿಪುಂಗವರ ತಪೋಬಲವೂ ಮಂತ್ರತಂತ್ರಗಳ ಇಂದ್ರಜಾಲವೂ ನಮ್ಮನ್ನು ಮುಗ್ಧ ಮಾಡುತ್ತದೆ—ಹೀಗಾಗಿ ಯಾವ ಬಾವಾಜಿಯ ಎಂಥ ಬೂದಿಯಾದರೂ ವಿ. ಪಿ. ಪಿ. ಮೂಲಕ ಪಡೆಯಲು ಅರ್ಹವಾಗುತ್ತದೆ—ಬಯಸಿದ ತರುಣಿಯನ್ನು ಕುಳಿತಲ್ಲಿಯೇ ಪ್ರಯತ್ನವಿಲ್ಲದೆ ಒಲಿಸಿಕೊಳ್ಳಬಲ್ಲ ಅದ್ಭುತ ಸಾಮರ್ಥ್ಯವನ್ನು ಮೂರಾಣೆಯ ತಾಯಿತವೊಂದು ನೀಡುತ್ತದೆ! ಸುಕೃತ ಮತ್ತು ಧರ್ಮಾರ್ಥವಾದ ಗುರುವಿನ ರಾಜರ ಆಜ್ಞೆ ಪ್ರಕಾರ ಪ್ರಚಾರ ಹೊಂದುತ್ತಿರುವ ಅತ್ಯಮೂಲ್ಯ ಔಷಧಗಳ ಪ್ರಕಟಣೆಯನ್ನು ಓದಿ ನಾವು ಕುಣಿಯುತ್ತೇವೆ. ಒಂದು ಸೀಸೆ ಎಣ್ಣೆಯು ತಲೆನೋವು, ಕಿವಿ ನೋವು, ಕಾಲು ನೋವು, ಸೊಂಟ ನೋವು, ಶೀತ, ಕೆಮ್ಮು, ಜ್ವರ, ಪಿತ್ಥ ಮುಂತಾದ ಯಾವ ರೋಗಕ್ಕಾದರೂ ತಿಕ್ಕಿದರೆ, ಮೂಸಿದರೆ, ಹೊಟ್ಟೆಗೆ ತೆಗೆದು ಕೊಂಡರೆ ನಿಮಿಶಾರ್ಧದಲ್ಲಿ ಗುಣವನ್ನು ಕೊಡುತ್ತದೆ! ಇವನ್ನೆಲ್ಲ ನಂಬಿ ಮರುಳಾಗದ ಜನರು ನಮ್ಮಲ್ಲಿ ಎಷ್ಟು ಇರಬಹುದು?

ಭ್ರಾಮಕ ಕಲ್ಪನೆ

ಇಂತಹ ಅಜ್ಞಾನದ ಪರಿಣಾಮವಾಗಿ ನಮಗೆ ನಾವೇ ವೈದ್ಯರೂ ಡಾಕ್ಟರರೂ ಶರೀರ ಹಾಗು ಮನಃಶಾಸ್ತ್ರಗಳಲ್ಲಿ ಪರಿಣತರೂ ಆಗಿ ಬಿಡುತ್ತೇವೆ. ಶಾರೀರಕ ಶ್ರಮದ ಕಾರಣದಿಂದ ಅಥವಾ ಮಾನಸಿಕ ತ್ರಾಸದ ನೆಪದಿಂದ ಉಂಟಾದ ಸಾಮಾನ್ಯ ಅವ್ಯವಸ್ಥೆಯು ಮೋಸದ ಔಷಧಗಳ ಪ್ರಭಾವಲಯದಲ್ಲಿ ಬಿದ್ದ ಮನುಷ್ಯನನ್ನು ದಿಗಿಲುಗೊಳಿಸುತ್ತದೆ. ಈ ಪ್ರವೃತ್ತಿ ಎಷ್ಟು ಬಲಿತುಕೊಳ್ಳುವುದೆಂದರೆ, ನಿಜವಾಗಿ ನಿರೋಗಿಗಳಾಗಿದ್ದವರೂ ಸಹ ತಾವು ರೋಗಗ್ರಸ್ತರೆಂದು ಮನವರಿಕೆ ಮಾಡಿಕೊಳ್ಳಲು ಡಾಕ್ಟರರ ಬಳಿ ಬರುವರು. ನಿಮ್ಮಲ್ಲಿ ಯಾವ ವಿಕಾರವೂ ಇಲ್ಲವೆಂದು ಡಾಕ್ಟರರು ತಿಳಿಸಿದಾಗ ಅವರಿಗೆ ನಂಬಿಕೆಯೇ ಆಗುವುದಿಲ್ಲ—ಎಂಬುದಾಗಿ ವಿಯೆನ್ನಾದ ಪ್ರಸಿದ್ಧ ಆರೋಗ್ಯತಜ್ಞ, ಪ್ರೊ. ಹಾಫರು ಹೇಳುವರು. ಸಾಧಾರಣವಾದ ನೆಗಡಿ ಪೀಡಿತನು ತಾನು ಶೀತ ಜ್ವರ ಬಾಧಿತನೆಂದು ಸುಳ್ಳು ಸುಳ್ಳೇ ಭಾವಿಸಿ ಆರೋಗ್ಯವನ್ನು ಹಾಳು ಮಾಡಿಕೊಳ್ಳುತ್ತಾನೆ.

ಹೀಗೆ ಬೇಕೆಂದೇ ಭ್ರಾಮಕ ವಿಚಾರಕ್ಕೆ ಬಲಿಸಿದ್ದು ಜನರು ಅನೇಕ ಬಗೆಯ ಕ್ಷಿಪ್ರಗುಣ ನೀಡುವ ಔಷಧಗಳ ಚಟ ಹಚ್ಚಿಕೊಳ್ಳುವರು. ವೇದನಾಹಾರಿ ಗುಳಿಗಳನ್ನು ಮತ್ತು ಉತ್ತೇಜಕಮಾತ್ರೆಗಳನ್ನು ನುಂಗುವ ಚಪಲ ತೀರಾ ಸಾಮಾನ್ಯವಾಗಿ ಬಿಟ್ಟಿದೆ. ಮದನಕಾಮಾನಂದ ಗುಟಿಯಿಂದ ಹಿಡಿದು ತಲೆ ನೋವಿನ ಗುಳಿಗೆಯವರೆಗೂ ಎಲ್ಲವನ್ನೂ ನುಂಗಿ ನೀರು ಕುಡಿದು ನಿಶ್ಚಿಂತರಾಗುವ ಹಂಬಲ ಈಗ ಪ್ರಬಲಿಸಿದೆ. ಆದರೆ ದೀರ್ಘಕಾಲ ಹಾಗು ಪುನಃ ಪುನಃ ಸೇವಿಸಲ್ಪಟ್ಟಾಗ ಇವುಗಳಿಂದ ಯಾವ ಪ್ರಯೋಜನವೂ ದೊರಕುವುದಿಲ್ಲ. ಪ್ರತಿಯಾಗಿ ಮಾನಸಿಕ ಹಾಗೂ ದೈಹಿಕ ಶಕ್ತಿ ಕ್ಷೀಣಿಸುತ್ತದೆಂದೂ ಮನೋದಾರ್ಢ್ಯ ಹಾಗೂ ಕಾರ್ಯಕ್ಷಮತೆ ಕುಂದುತ್ತದೆಂದೂ ಉತ್ಸಾಹವಿಲ್ಲದೆ ದಣಿವು ಆಕ್ರಮಿಸುವುದೆಂದೂ ತಜ್ಞರ ಸಂಶೋಧನೆಗಳು ತಿಳಿಸುತ್ತವೆ. ಹಾಗೆಂದು ಇವುಗಳನ್ನು ಗಮನಿಸಿದವರು ಯಾರು? ಡೆನ್ಮಾರ್ಕ ದೇಶದ ೪೦ ಲಕ್ಷ ಜನರು ವರ್ಷಕ್ಕೆ ೨೦ ಕೋಟಿ ತಲೆನೋವಿನ ಗುಳಿಗೆ ನುಂಗುತ್ತಾರೆ—ಅಂದರೆ ತಲಾ ವರ್ಷಕ್ಕೆ ೫೦ ಮಾತ್ರೆ ಯಾಯಿತು! ಬ್ರಿಟನ್ನಿನಲ್ಲಿ ೫ ಕೋಟಿ ಜನರು ದಿನಕ್ಕೆ ಇಂತಹ ಒಂದು ಕೋಟಿ ಗುಳಿಗೆ ಸೇವಿಸುವರು!

ಸಾಮಾಜಿಕ ಅಪಾಯ

ಸುಶಿಕ್ಷಿತ ದೇಶಗಳ ಅವಸ್ಥೆಯೇ ಹೀಗಿರುವುದರಿಂದ,ಭಾರತದಂತಹ ತೀರ ಹಿಂದುಳಿದ ನಾಡಿನಲ್ಲಿ ಪರಿಸ್ಥಿತಿ ಕೆಟ್ಟು ಹೋಗುವುದು ದೊಡ್ಡ ಸಂಗತಿಯಲ್ಲ—ಆದರೆ ಇದರಷ್ಟು ಕ್ಲೇಶದಾಯಕವಾದ ವಿಷಯವು ಮತ್ತೊಂದಿರಲಾರದು ಅಮೇರಿಕಾದಲ್ಲಿ ಕೆಲವು ವರ್ಷಗಳ ಪೂರ್ವದಲ್ಲಿ ಅಲ್ಲಿಯ ವೈದ್ಯಕೀಯ ಶಾಸ್ತ್ರದಲ್ಲಿ ನುರಿತ ವಿಜ್ಞಾನಿಗಳು ಮೋಸದ ಔಷಧಗಳ ಯೋಗ್ಯತಾ ಪರೀಕ್ಷೆಯನ್ನು ಪ್ರಯೋಗ ಮೂಲಕ ನಡೆಸಿದರು. ಪರಿಣಾಮದಲ್ಲಿ ಯಾವ ಔಷಧಕ್ಕೂ ಅದು ಸಾಧಿಸುವುದೆಂದು ಹೇಳಿದ ಗುಣದ ಕಿಂಚಿತ್ತಂಶವೂ ಇಲ್ಲವೆಂದು ಸ್ಪಷ್ಟಗೊಂಡಿತು. ಭಾರತದಲ್ಲಿ ಕೂಡ ಇಂತಹ ಪ್ರಯತ್ನ ಸನಿಹದಲ್ಲಿಯೇ ನಡೆದರೆ ಒಳಿತು. ಇಲ್ಲದಿದ್ದರೆ ಜನರು ಯೋಗ್ಯ ವೈದ್ಯಕೀಯ ಸಲಹೆಯನ್ನು ಪಡೆದು ಕ್ರಮಬದ್ಧ ಜೀವನ ನಡೆಸಿ ಉಚಿತ ಆಹಾರ ಸೇವಿಸಿ ನಿರೋಗಿಗಳಾಗಿರುವುದು ಎಷ್ಟರ ಮಟ್ಟಿಗೆ ಸಾಧ್ಯವೋ ಹೇಳಲು ಬಾರದು.

ಆರೋಗ್ಯ ಮತ್ತು ಆರ್ಥಿಕ ದೃಷ್ಟಿಯಲ್ಲಿ ಗಂಡಾಂತರಪ್ರಾಯವಾದ ಮತ್ತು ಸಾಮಾಜಿಕ ಸ್ವಾಸ್ಥ್ಯಕ್ಕೆ ಆಹ್ವಾನರೂಪದಲ್ಲಿರುವ ಮೋಸದ ಹಾಗು ಅಪಾಯಕರ ಔಷದಗಳ ಮೇಲೆ ಸರಕಾರ ಸರ್ಪಗಾವಲು ಇಡುವುದು ಯೋಗ್ಯ. ಯಾವುದೇ ತರದ ಪೋಷಕಾಂಶಗಳನ್ನು ವಿಶೇಷ ರೂಪದಲ್ಲಿ ತೆಗೆದುಕೊಳ್ಳುವುದು ಅನಗತ್ಯವೆಂದೂ ಸಾಮಾನ್ಯ ಆಹಾರವನ್ನು ಮಿತವಾಗಿ ಸೇವಿಸಿದರೆ ಬೆಳವಣಿಗೆ ಮತ್ತು ಆರೋಗ್ಯವು ಕ್ರಮಬದ್ಧವಾಗಿರುವುದೆಂದೂ ಡಾಕ್ಟರರು ಸಂಶೋಧನೆಗಳಿಂದ ಮನಗಂಡಿರುವರು. ತೀರ ನಿರಾಶಾ ಪರಿಸ್ಥಿತಿಯಲ್ಲಿ ಪ್ರಾಣಾಪಾಯವನ್ನು ತಪ್ಪಿಸಿ ಆರೋಗ್ಯವನ್ನು ದಯಪಾಲಿಸುವ ಪೆನಿಸಿಲಿನ್ ಮುಂತಾದ ನವೀನ ಮಾದರಿಯ ಅಮೂಲ್ಯ ಔಷಧಿಗಳನ್ನು ಸಹಜರೀತಿಯಾಗಿ ಉಪಯೋಗಿಸುವುದು ಕೇಡಿಗೆ ಕಾರಣವಾಗುತ್ತದೆ ಅತ್ಯಂತದಕ್ಷ ವೈದ್ಯರ ಸಲಹೆ ಸೂಚನೆಗಳನ್ನು ಅನುಸರಿಸಿಯೇ ಇವನ್ನು ಪ್ರಯೋಗಿಸ ತಕ್ಕದ್ದು ವಿಹಿತ.

ಹೀಗಿರುವಾಗ ನಮಗೆ ನಾವೇ ವೈದ್ಯರಾಗುವುದೂ ಒಂದು ಔಷಧವು ಸರ್ವರೋಗಗಳಿಗೂ ರಾಮಬಾಣವೆಂದು ತಿಳಿಯುವುದೂ ಅತಿದೊಡ್ಡ ಮೂರ್ಖತನ. ಸಾಮಾನ್ಯ ಆರೋಗ್ಯಕ್ಕೆ ಸಿದ್ಧಾರಸ ಮಾಡಲ್ಪಟ್ಟ ಅತ್ಯುತ್ತಮ ಔಷಧ ವಿಶೇಷವೊಂದು, ನಮ್ಮ ವಿಶಿಷ್ಟ ದೈಹಿಕ ಪರಿಸ್ಥಿತಿಗೆ ಒಗ್ಗದೆ, ವಿಪರೀತ ಪರಿಣಾಮವನ್ನುಂಟುಮಾಡಿದರೆ ನಾವು ಬೆಚ್ಚಿ ಬೀಳುವುದು ಬೇಡ. ನಮ್ಮ ದೇಹದ ಆರೋಗ್ಯವನ್ನು ಅತಿ ಸೂಕ್ಷ್ಮವಾಗಿ ಲಕ್ಷಿಸಬಲ್ಲ ವೈದ್ಯರ ಸಲಹೆಯನ್ನೇ ನಾವು ಅಂಗೀಕರಿಸಬೇಕಲ್ಲದೆ—ಅದ್ಭುತ ರಮ್ಯ ಸಂಗತಿಯನ್ನೊಳಗೊಂಡ, ಅಗ್ಗ ಬೆಲೆಯ,ಆಕರ್ಷಕ ಜಾಹೀರಾತಿನ ಮೋಸದ ಔಷಧಗಳನ್ನು ಆಶ್ರಯಿಸಬಾರದು. ಒಂದು ಡಾಲರು ಬೆಲೆಯ ಔಷಧ ಸೇವನೆಗಿಂತ ಎರಡು ಸೆಂಟ್.ಗಳ ಉಪಯುಕ್ತ ಆಹಾರ ಸೇವನೆಯಿಂದ ಹೆಚ್ಚಿನ ಸತ್ವ ದೊರಕುತ್ತದೆಂಬ ಮಾತನ್ನು ನಾವೆಲ್ಲ ಲಕ್ಷಿಸೋಣ.

(ಬರೆದು ಬಂದುದು)

ಬಂಟರಯಾನೆ ನಾಡವರ ಸಂಘ
ಮುಂಬಯಿ

ಈ ಸಂಘದ "ಸೋಶಿಯಲ್ ಗೇದರಿಂಗ್" ಶೆಟ್ಟಿ ಬಂಡಾರಿ ಹೋಲ್, ಗೋಖಲೆ ರೋಡ್ ನೋರ್ಥ ದಾದರ್, ಇಲ್ಲಿ ಇದೇ ತಾರೀಕು 4—4—54ನೇ-ಆದಿತ್ಯವಾರ ಸಂಜೆ ಗಂಟೆ 2½ಯಿಂದ 8-00ರ ತನಕ ಜರಗಲಿರುವುದು. ವಿವಿಧ ವಿನೋದಾವಳಿಗಳಿಂದಲೂ, ಲಘು ಉಪಹಾರಗಳಿಂದಲೂ ನೆರವೇರಲಿರುವ ಈ ಸಮಾರಂಭಕ್ಕೆ ಸ್ವಜಾತಿಬಾಂಧವರೆಲ್ಲರೂ ಬಂದು ಸಹಕರಿಸಬೇಕಾಗಿ ವಿನಂತಿ.

ಕಾಪು ಸುಬ್ಬಯ್ಯ ಕೆ. ಶೆಟ್ಟಿ.
ಗೌರವ ಕಾರ್ಯದರ್ಶಿ

THE VIJAYA BANK LIMITED, BOMBAY.
ದಿ ವಿಜಯಾ ಬೇಂಕ್ ಲಿಮಿಟೆಡ್, ಬೊಂಬೆ.

ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದ ಸಾಲಗಾರರುಗಳು ನಮ್ಮ ಶಾಖೆಯಿಂದ ಚಿನ್ನಾಭರಣ ನಗಗಳ ಈಡಿನ ಮೇಲೆ ಪಡೆದ ಸಾಲವನ್ನು ಮರುಪಾವತಿ ಮಾಡುವರೆ ರಿಜಿಸ್ಟ್ರ ನೋಟೀಸು ಮೂಲಕ ಕೇಳಿಕೊಂಡಾಗ್ಯೂ ಅಸಲು, ವ, ಬಡ್ಡಿ ಯಾವುದನ್ನೂ ಈ ತನಕವೂ ಕೊಡದೆ ಬಾಕಿಮಾಡಿಕೊಂಡಿರುವುದರಿಂದಲೂ ಸದ್ರಿಯವರು ನಮ್ಮಲ್ಲಿ ಇಡಿಟ್ಟ ನಗಗಳನ್ನು ಇದೇ ಬರುವ ತಾರೀಕು 3—4—54ನೇ ಶನಿವಾರ ಅಪರಾಹ್ನ ಘಂಟೆ 3ಕ್ಕೆ ಸರಿಯಾಗಿ ಯಾ ಯುಕ್ತ ಕಂಡ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೇ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ತಿಳಿದಿರಲಿ.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ಮೊಬಲಗು		
163/52	ಪಿ. ಬಿ. ಮುಂಜೇಶ್ವರ್, A 36, ಪಾರ್ವತಿ ಮೆನ್ಶನ್, ಲೆಮಿಂಗ್ಟನ್ ರೋಡ್, ಬೊಂಬೆ 7.	103	0	0
181/52	ವಿಠಲ ಬಾಲಕೃಷ್ಣ ಮುಂಜೇಶ್ವರ್, A 36 ಪಾರ್ವತಿ ಮೆನ್ಶನ್, ಲೆಮಿಂಗ್ಟನ್ ರೋಡ್, ಬೊಂಬೆ 7.	61	0	0
217/52	ಲೋಕಯ್ಯ ಸಾಲಿಯಾನ್, ಜಕಾರಿಯಾ ಬಿಲ್ಡಿಂಗ್, ಯಶ್ವಂತ್ ದೇಸಾಯಿ ಚಾಲ್ ನಂ 1, ಕುಲಾಬಾ, ಬೊಂಬೆ.	51	0	0
10/53	ಡಿ. ಎ. ವಾಸ್, ಎಲ್ಫಿನ್ ಹೋಟೆಲ್, ಕುರ್ಲಾ, ಬೊಂಬೆ	216	0	0

Office of the Bank
BOMBAY,
Dated 10-3-54.

(Sd.) P. P. Lobo Prabhu,
M.A., C.A.I.I.B., I.C.S.(Lond),
Manager.

ಸ್ವಿಸ್ ತಯಾರಿ ರಿಸ್ಟ್‌ವಾಚು
ಬೆಲೆ ರೂ. 5/- ಮಾತ್ರ.

ರೂಪಾಯಿ 5/-ಕ್ಕೆ ಸ್ವಿಸ್ ತಯಾರಿ ರಿಸ್ಟ್ ವಾಚು ಮತ್ತು ಸ್ಟೇಂಡಾರ್ಡ ಫೌಂಟನ್ ಪೆನ್ ದೊರೆಯುವುದು. 15 ವರುಷಗಳ ಗ್ಯಾರೆಂಟಿ.
ರೂಪಾಯಿ 1-2-0 ಟಪ್ಪಾಲು ವೆಚ್ಚ ಪ್ರತ್ಯೇಕ.
ಇಂದೇ ಬರೆಯಿರಿ:
National Swiss Watch Suppliers,
Halka No. 28 (BG) Meerut (U. P.)

ಹೈಸ್ಕೂಲ್, ಪಂಚಾಯತ ಬೋರ್ಡು ಮೊದಲಾದುವುಗಳ ಲೈಬ್ರರಿಗಳಿಗೆ ಬೇಕಾಗುವ ಪುಸ್ತಕಗಳು ವಿಶೇಷತರದ ಕಮಿಶನಿನಲ್ಲಿ ದೊರೆಯುತ್ತವೆ.

ವಿಚಾರಿಸಿರಿ:—
ನವಭಾರತ ಪುಸ್ತಕ ಭಂಡಾರ,
ಉಡುಪಿ, ದ. ಕ.

(೧ನೇ ಪುಟ ನೋಡಿರಿ)

ಯುತಿದ್ದರೂ, ಅದರ ಧಾರಣೆ ಬಡವರ ಕೈಗೆ ನಿಲುಕುವಂತೆ ಇಲ್ಲ. ಸೇರಿಗೆ ೯-೧೦ ಆಣೆಗಳ ಬೆಳ್ತಿಗೆ ಅಕ್ಕಿಯನ್ನು ಕೊಂಡು ಜೀವಿಸುವುದು ಈಗಿನ ದಿನದಲ್ಲಿ ಪ್ರಯಾಸಕರ. ಸರಕಾರದವರು ನ್ಯಾಯವಾದ ಬೆಲೆಯನ್ನು ಕಾಯ್ದುಕೊಳ್ಳುವುದಕ್ಕೆ ಪ್ರಯತ್ನಿಸದಿದ್ದರೆ ನಾವು ನಿಯಂತ್ರಣವನ್ನು ರದ್ದುಗೊಳಿಸಿ ಬಡಜನರ ಉಪಕಾರ ಮಾಡಿದೆವೆಂದು ಹೇಳುವ ಮಾತಿಗೆ ಅರ್ಥವಿಲ್ಲವೆಂದಾಗುತ್ತದೆ. ನಿಯಂತ್ರಣಗಳು ಇದ್ದಾಗ ಕೂಡ ಮುಡಿಗೆ ೩೫ ರೂಪಾಯಿಗಳ ಧಾರಣೆಯಲ್ಲಿ ಕಳ್ಳಪೇಟೆಯಲ್ಲಿ ಅಕ್ಕಿ ಸಿಗುತಿತ್ತೆಂದು ಹೇಳಲ್ಪಟ್ಟಿದೆ. ಹೀಗಿರುವಾಗ ಮುಡಿಗೆ ೧೮ ರೂಪಾಯಿಯನ್ನೂ ಮೀರುವ ಧಾರಣೆ ಬಡಜನರ ಹಿತದೃಷ್ಟಿಗೆ ಪೋಷಕವಾದುದಲ್ಲ.

ಮದ್ರಾಸು ಸರಕಾರವು ಸರ್ವಪ್ರಥಮವಾಗಿ ಮುಂದಿಟ್ಟ ಧೈರ್ಯದ ವಿನಿಯಂತ್ರಣ ಧೋರಣೆಯನ್ನು ಕೇಂದ್ರ ಸರಕಾರವು ನಿಧಾನವಾಗಿ ಅನುಸರಿಸಿ, ಈಗ ಜೂಲೈ ತಿಂಗಳ ಸುಮಾರಿಗೆ ನಿಯಂತ್ರಣಗಳನ್ನು ಸಂಪೂರ್ಣ ಸಡಲಿಸುವ ವಿಚಾರ ಮಾಡುತ್ತಿದೆ. ಮುಂಬಯಿ ಹಾಗು ಪಶ್ಚಿಮಬಂಗಾಳ ಸರಕಾರಗಳೂ ನಿಯಂತ್ರಣ ಕ್ರಮವನ್ನು ರದ್ದುಗೊಳಿಸಲು ನೋಡುತ್ತವೆ. ಹೀಗಿರುವುದರಿಂದ ಜನತೆಯ ಸಮಷ್ಟಿಹಿತವನ್ನು ದೃಷ್ಟಿಯಲ್ಲಿಟ್ಟುಕೊಂಡು ಬೆಲೆಗಳನ್ನು ಕಾಯ್ದುಕೊಳ್ಳಬೇಕು—ಬಡಜನರಿಗೆ ಆಹಾರದ ಬೆಲೆಯೊಂದು ಹೊರೆಯಾಗಬಾರದು. ಹೀಗೆ ಮಾಡಿದರೆ ಮಾತ್ರ ಕೃಷಿಸಮೃದ್ಧಿಯು ನಿಜವಾಗಿಯೂ ಕೈಗೂಡಿದೆಯೆಂಬ ವಿಷಯವು ಜನಸಾಧಾರಣರಿಗೆ ಅನುಭವವೇದ್ಯವಾಗಬಲ್ಲುದು. ಹಾಗೆಂದು ಈಗ ಕೈಗೂಡಿದ ಪ್ರಗತಿಯಿಂದಲೇ ತೃಪ್ತರಾದರೆ — ಜನಸಂಖ್ಯೆ ಹೆಚ್ಚಿದಂತೆ, ಅಭಾವದ ಅನುಭವ ಪುನಃ ಬಂದೀತು. ಆಹಾರ ಧಾನ್ಯಗಳ ಸಮೃದ್ಧ ಪೂರೈಕೆಯನ್ನು ಮಾಡುತಿದ್ದಂತೆಯೇ ಸರಕಾರವು ಆಹಾರೋತ್ಪಾದನೆಯನ್ನು ಜನಸಂಖ್ಯೆ ಹೆಚ್ಚುತ್ತಿರುವ ಪ್ರಮಾಣವನ್ನು ಮೀರಿಸುವ ತೆರದಲ್ಲಿ ಅಧಿಕಗೊಳಿಸಲು ಕ್ರಮ ತೆಗೆದುಕೊಳ್ಳುವುದು ಅಪೇಕ್ಷಣೀಯ. ಆದುದರಿಂದ ಮುಂದಿನ ಯೋಜನೆಗಳಲ್ಲೂ ನಾವು ಕೃಷಿಗೆ ನಾಕಷ್ಟು ಪ್ರಾಧಾನ್ಯವನ್ನು ಸಲ್ಲಿಸಲೇ ಬೇಕಾಗುವುದು

---

3 ವರ್ಷ ಗ್ಯಾರಂಟಿಯುಳ್ಳ ಚತೋರಿಸ್ಟ್ ವಾಚ್, ಬರೇ ರೂಪಾಯಿ 14-6-0 ಕಿಮ್ಮತ್ತು

ಸ್ಟೈಜ್ 10 ನಂಬ್ರ 5.

5 ಜ್ಯುವೆಲ್ಸ್ ಕ್ರೋಮ್ ರೂ. 14/6, ರೋಲ್ಡ್ ಗೋಲ್ಡ್ ರೂ. 18, 15 ಜ್ಯುವೆಲ್ಸ್ ಕ್ರೋಮ್ ರೂ. 30/, ರೋಲ್ಡ್ ಗೋಲ್ಡ್ ರೂ. 32/8, 15 ಜ್ಯುವೆಲ್ಸ್ ವಾಟರ್ ಪ್ರೂಫ್ ರೂ. 35/, 17 ಜ್ಯುವೆಲ್ಸ್ ರೂ. 40/, ಪಾಕೆಟು ವಾಚು ರೂ. 12/ ಟೈಂಪೀಸು ರೂ. 15 –

ಒಬ್ಬರಿಗೆ ಒಂದಕ್ಕಿಂತ ಹೆಚ್ಚಿಗೆ ವಾಚು ಕಳುಹಿಸುವುದಿಲ್ಲ. ಕ್ಯಾಟಲಾಗು ಧರ್ಮಾರ್ಥ.

FREE INDIA WATCH CO. N.K.
Post Bag No. 6724, CALCUTTA-7.

ಪಶ್ಚಿಮ ಕರಾವಳಿ ರಾಜ್ಯಯೋಜನೆಯ ಖಂಡನೆ

ಮದ್ರಾಸು ಗವರ್ನರರು ನ್ಯಾಯವಿಧಾಯಕ ಸಭೆಯಲ್ಲಿ ಮಾಡಿದ ಭಾಷಣಕ್ಕಾಗಿ ಅವರನ್ನು ಅಭಿನಂದಿಸುವ ಕಾಲಕ್ಕೆ ನಮ್ಮ ಜಿಲ್ಲೆಯ ಎಮ್. ಎಲ್. ಸಿಗಳಾದ ಶ್ರೀ ಎಸ್. ಸರ್ವಸ್ವರಯ್ಯನವರು ಕೌನ್ಸಿಲಿನಲ್ಲಿ ಭಾಷಣ ಮಾಡುತ್ತಾ ಕೇರಳ ರಾಜ್ಯ ಸ್ಥಾಪನೆಯಾಗಬೇಕೆನ್ನುವ ಮಳಿಯಾಳಿ ಸದಸ್ಯರ ಬೇಡಿಕೆ ಮಾತನ್ನು ಬಲವಾಗಿ ಪ್ರತಿಭಟಿಸಿದರು. ಅವರು ಹೇಳಿದುದೇನೆಂದರೆ ಶ್ರೀ ಗೋವಿಂದ ಮೆನೊನ್‌ರವರು ಪಶ್ಚಿಮಕರಾವಳಿ ರಾಜ್ಯದ ಪ್ರಸ್ತಾಪವನೆತ್ತಿದುದು ದುರಾದೃಷ್ಟವೆನಿಸುತ್ತದೆ. ಈ ಕುರಿತು ಶ್ರೀ ಶಿವಜ್ಞಾನ ಗ್ರಾಮಣಿಯವರು ಹೇಳಿದುದನ್ನೆಲ್ಲಾ ಅಕ್ಷರಶಃ ನಾನು ಪುಷ್ಟೀಕರಿಸುತ್ತೇನೆ. ಭಾಷಾವಾರು ಪ್ರಾಂತ ಬೇಡಿಕೆಯ ಸೋಗಿನಲ್ಲಿ ದ. ಕ. ಜಿಲ್ಲೆಯ ಉತ್ತರ ಭಾಗದ ಮೂಕಾಂಬಿಕಾ ಕ್ಷೇತ್ರಕ್ಕೂ ದೃಷ್ಟಿಹರಿಸಿ ತನ್ಮೂಲಕ ಇಡೀ ದಕ್ಷಿಣ ಕನ್ನಡ ಜಿಲ್ಲೆಯನ್ನೇ ಸ್ವಾಹಾ ಮಾಡಬೇಕೆಂಬ ಮಳಿಯಾಳಿಗಳ ಮನೋ ಯೋಜನೆಯನ್ನು ನೋಡುವಾಗ ತುಂಬಾ ವಿಷಾದವೆನಿಸುತ್ತದೆ. ಈ ಯೋಜನೆಯನ್ನು ಮುಂದೊತ್ತುವಾಗ ದ. ಕ. ಜಿಲ್ಲೆಯ ಹಿರಿಯ ವ್ಯಕ್ತಿಯನ್ನಾಗಲೀ ಅಥವಾ ಕರ್ನಾಟಕ ಪ್ರಾಂತನಿರ್ಮಾಣ ಧುರಂಧರ ಶ್ರೀ ಕೆ. ಕಾರಂತರನ್ನಾಗಲೀ ಕೇಳಿದುದುಂಟೇ? ಶ್ರೀ ಆಚಾರ್ಯ ಕೃಪಲಾನಿಯವರು ಕೊಟ್ಟ ಪತ್ರಿಕಾ ಪ್ರಕಟಣೆಗೆ ಇವರು ಮಾನ್ಯತೆ ಕೊಟ್ಟರೆ? ಇವೆಲ್ಲವನ್ನು ಬದಿಗೊತ್ತಿ ದ. ಕ. ಜಿಲ್ಲೆಯನ್ನು ತಮ್ಮ ಬಗಲಿಗೆ ಹಾಕಿಕೊಂಡು ತಮ್ಮ ರಾಜ್ಯದ ಕೊರತೆಯನ್ನು ಭರ್ತಿಮಾಡಿ ಕೊಳ್ಳುವ ಸಂಚಕಾರವೇನು? ಇಂತಹ ಪರಿಸ್ಥಿತಿಯಲ್ಲಿ ದಕ್ಷಿಣ ಕನ್ನಡದ ಪ್ರತಿಯೋರ್ವ ವ್ಯಕ್ತಿಯೂ ಪಶ್ಚಿಮಕರಾವಳಿ ರಾಜ್ಯ ಯೋಜನೆಯನ್ನು ಖಂಡತುಂಡ ಪ್ರತಿಭಟಿಸಲು ಸಿದ್ಧನಾಗಿ ಆ ಬಗ್ಗೆ ಕೊನೆತನಕ ಕಾದಾಡಲು ಸದಾ ಸಿದ್ಧನಿರುವನು ಎಂದು ನಾನೀ ಸಂದರ್ಭದಲ್ಲಿ ಧೈರ್ಯದಿಂದ ಹೇಳಬಲ್ಲೆ.

ಜಾನಸಿರೋಧ ಪ್ರಶ್ನೆಯ ಕುರಿತು ಮಾತನಾಡುತ್ತಾ, ಎಡಪಕ್ಷದವರು ಟೀಕೆ ಮಾಡಿದಾಗ್ಲೂ ಜಾನಸಿರೋಧ ಕಾನೂನು ಮುಂದರಿಯಲೇ ಬೇಕು. ಬಡ ಜನತೆಗೆ ಅದರಿಂದ ಆಗ ತಕ್ಕ ಉಪಯೋಗಳೇನೆಂಬುದು 1920ರಲ್ಲಿ ಗಡಂಗುಗಳೆದುರು ಪಿಕೆಟಿಂಗ್ ಮಾಡಿ, ಲಾಠಿ ಪೆಟ್ಟು ತಿಂದು ಕಾರಾಗೃಹದ ಅನುಭವಿಸಿದವರಿಗೆನೇ ಚೆನ್ನಾಗಿ ಗೊತ್ತಿದೆ.

ಸರಕಾರದ ವಿದ್ಯಾಯೋಜನೆ ಕೂಡಾ ವಿರುದ್ಧ ಪಕ್ಷದವರ ಟೀಕೆಗೊಳಗಾಗಿರುತ್ತದೆ. ವಿದ್ಯಾಯೋಜನೆಯು ಯಾವ ರಾಜಕೀಯ ಕ್ಷೇತ್ರಕ್ಕೂ ಅಂಟಿಕೊಂಡಿರಬಾರದೆಂಬುದು ನಿಜವೇ. ರಾಷ್ಟ್ರಜೀವನ, ರಾಷ್ಟ್ರ ಕಲ್ಯಾಣಕ್ಕೆ ಬೇಕಾಗುವ ನ್ಯಾಯ ಮತ್ತು ಯೋಗ್ಯವಾದ ರೀತಿಯಲ್ಲಿ ತರುಣ ತರುಣಿಯರಿಗೆ ವಿದ್ಯೆ ಕೊಡಬೇಕು. ಪುರಸ್ಕೃತ ಮತದಾನ ಪಂಚಾಂಗದಲ್ಲಿ ಸ್ಥಾಪಿತವಾದ ಸರಕಾರವು ತನ್ನ ಮತದಾರರ ಮರಿಮಕ್ಕಳಿಗೆಲ್ಲಾ ಎಂತಹ ವಿದ್ಯೆಯನ್ನು ಕೊಡಬೇಕು ಎಂದು ತಿಳಿದಿರುವುದರಿಂದಲೇ ವಿದ್ಯಾ ಇಲಾಖೆಯ ಆಗುಹೋಗುಗಳನ್ನು ಕೆಲವೇ ಮಂದಿಯ ಪಕ್ಷಕ್ಷೇಪಕ್ಕೆ ಬಿಟ್ಟು ಕೊಡಲು ಸಾಧ್ಯವಿಲ್ಲ. ಅಲ್ಲದೆ ಹಾಗೆ ಮಾಡಿದರೆ ಮತದಾರರಿಗೆ ನ್ಯಾಯವಾದ ಸೇವೆ ಸಲ್ಲಿಸಿದಂತಾಗಲಾರದು.

ಖಾತ್ರಿ ಚಿನ್ನದ ನೆಕ್‌ಲೇಸ್ ತರಹವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,

ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.

ಫೋನು ನಂಬ್ರ 66

SEASON DEPOSITS.

Are now accepted for periods from 3 to 6 months $3\frac{1}{2}$% interest per annum for amounts of Rs. 500/- and multiples thereof. No deposit is allowed to run beyond 15—10—1954.

Attractive rates of interest are offered for Fixed Deposits for periods ranging from 1 to 24 months.

Banking transactions of all kinds are undertaken.

Branches throughout South Kanara, and one each in Mercara and Fort, Bombay.

THE VIJAYA BANK LIMITED,
Head Office: **MANGALORE.**

ಲಕ್ಷಾಂತರ ಜನರು ಗುಣಹೊಂದಿದ್ದಾರೆ:

ಸರ್ ಜೀವನ್ ಶಿಲಾಜಿತ್‌ಲೇಹ

ಶಿಲಾಜಿತ್ ಹಿಮಾಲಯದ್ದು ಔಷಧಿಗಳ ರಾಜ; ಮೂಲಿಕೆಗಳೊಡನೆ ಸೇರಿಸಿದ ಲೇಹ್ಯ, ದೇಹಶಕ್ತಿ, ಹೊಟ್ಟೆನೋವು, ಅನ್ನ ಸೇರದಿರುವಿಕೆ, ಕೆಮ್ಮು, ದಮ್ಮು, ಬಹುಮೂತ್ರ ಮತ್ತು ವಾಯುವಿನಿಂದಾಗುವ ಎಲ್ಲಾ ರೋಗನಿವಾರಕ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, ಹೆಂಗಸರ ಮತ್ತು ಮಕ್ಕಳ ಸರ್ವರೋಗ ನಿವಾರಕ ಅಮೂಲ್ಯ ರತ್ನ ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು

೪೫ ದಿನದ ಲೇಹ್ಯ ರೂ. ೫-೪-೦, ೨೨ ದಿನದ ಲೇಹ್ಯ ರೂ. ೩-೪-೦ (ಪೋಸ್ಟೇಜು ಮಾಫಿ)

ನೀಲಗಿರಿ ಡಿಪ್ರೊ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ.

ಮತ್ತು ನೀಲಗಿರಿ ಏಜೆಂಟರಲ್ಲಿ ನೀಲಗಿರಿ ಡಿಪ್ರೋದಲ್ಲಿ ಕೇಳಿರಿ.

ಭರ್ತ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ. ೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟು ಖರ್ಚು ರೂ. ೦-೧೪-೦

—:ವಿಳಾಸ:—

ಪಾಲಿಶಪ್ಪ ಡಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ಮತದಾರರ ಪಟ್ಟಿ

ಮತದಾರರ ಪಟ್ಟಿ ತಯಾರಿಸುವಾಗ ಸೈನಿಕರು, ರಾಷ್ಟ್ರಾಧ್ಯಕ್ಷರಿಂದ ಮನ್ನಿಸಲ್ಪಟ್ಟ ಉದ್ಯೋಗದಲ್ಲಿರುವವರು ಮತ್ತು ಭಾರತ ಸರಕಾರದ ನೌಕರರಾಗಿ ಪರದೇಶದಲ್ಲಿರುವವರು, ತಮ್ಮ ಹುಟ್ಟೂರಿನ ಚುನಾವಣಾಕ್ಷೇತ್ರದ ಮತದಾರರೆಂದು ಪರಿಗಣಿಸಲ್ಪಡುವರು. ಈ ರಿಯಾಯ್ತಿಯು ಅವರ ಪತ್ನಿಯರಿಗೂ ಅನ್ವಯಿಸುವುದು. ಮದ್ರಾಸು ಪ್ರಾಂತದ ಮತದಾರರ ಪಟ್ಟಿಗಳ ವಾರ್ಷಿಕ ಪರಿಶೀಲನೆಯು ಸದ್ಯದಲ್ಲಿ ನಡೆಯಲಿರುವುದರಿಂದ ಮೇಲೆ ಕಾಣಿಸಿದವರು ತಮ್ಮ ಅರ್ಜಿಗಳನ್ನು ಮುಖ್ಯ ಚುನಾವಣಾಧಿಕಾರಿಗಳಿಗೆ ಕಳುಹಿಸಬೇಕು. ಈಗಾಗಲೇ ಪಟ್ಟಿಯಲ್ಲಿ ಹೆಸರಿದ್ದವರು, ಹುಟ್ಟೂರಿನಲ್ಲಿ ತಮ್ಮ ತಮ್ಮ ವಾಸಸ್ಥಾನವನ್ನು ಬದಲಾಯಿಸುವುದಿದ್ದರೆ ಮಾತ್ರ ಮನವಿ ಮಾಡಿದರೆ ಸಾಕು. ಮತದಾರನು ತನ್ನ ಉಚ್ಚಾಧಿಕಾರಿಗಳ ಮೂಲಕ ಅರ್ಜಿಯನ್ನು 1—5—1954ರ ಮೊದಲು ಮುಖ್ಯ ಚುನಾವಣಾಧಿಕಾರಿ, ಮದ್ರಾಸು ಪ್ರಾಂತ, ಫೋರ್ಟ್‌ಸೈಂಟ್ ಜಾರ್ಜ್ ಮದ್ರಾಸು—9 ಇವರಿಗೆ ತಲಪಿಸಬೇಕು. ಮತದಾರನು 1—3—1954ರಂದು 21 ವರ್ಷ ಪ್ರಾಯದವನಿರಬೇಕಲ್ಲದೆ 1953ರಲ್ಲಿ ಕನಿಷ್ಠ ಪಕ್ಷ 180 ದಿನ ಚುನಾವಣಾಕ್ಷೇತ್ರದಲ್ಲಿ ವಾಸಿಸಿರಬೇಕು. ಅಥವಾ ಯಾವುದಾದರೊಂದು ವಸತಿ ಸ್ಥಳದ ಒಡೆಯನಾಗಿದ್ದಿರಬೇಕು. ಮತದಾರನ ಯೋಗ್ಯತೆಗಳನ್ನು ಕಾಣಿಸುವ ಅರ್ಜಿ ಪತ್ರಗಳನ್ನು, ಚುನಾವಣಾಧಿಕಾರಿಗಳು ಅಥವಾ ಕಂದಾಯ ಅಧಿಕಾರಿಗಳಿಂದ ಪಡೆಯಬಹುದು. ಸೈನಿಕರು ತಮ್ಮ ಅರ್ಜಿಯಲ್ಲಿ ಸೇನೆಯಲ್ಲಿ ತಮಗಿರುವ ಸ್ಥಾನ ಮತ್ತು ತಮ್ಮ ನಿವಾಸವನ್ನು ಸ್ಪಷ್ಟವಾಗಿ ಕಾಣಿಸಬೇಕು. ಇದರಿಂದ ಕಾಲವಿಳಂಬವಿಲ್ಲದೆ, ಅವರಿಗೆ ಮತದಾನ ಪತ್ರಗಳನ್ನು ಕಳುಹಿಸಲು ಸಾಧ್ಯವಾಗುತ್ತದೆ. ಚುನಾವಣಾಕ್ಷೇತ್ರದ ವಿವರಗಳನ್ನು ಕೊಡುವಾಗ, ಹಳ್ಳಿ, ಫಿರ್ಕಾ, ತಾಲೂಕು, ಜಿಲ್ಲೆ, ಮುನ್ಸಿಪಾಲಿಟಿ, ಪಂಚಾಯತು, ಮತ್ತು ಸಾಧ್ಯವಿದ್ದರೆ ಬೀದಿಯ ಹೆಸರನ್ನು ಕಾಣಿಸಬೇಕು.

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.

ಶಬ್ಬೀರ್ ಬ್ರಾಸ್‌ಮರ್ಚಂಟ್

ರಥಬೀದಿ ಉಡುಪಿ.

Edited, Printed & Published By K. H. Shetty at the Navayuga Press, Udipi, S. India

Regd. No. M. 3618

Licence No 31
Licensed to Post without Prepayment.

ನವಯುಗ

Vol 33 No 29 25-3-1954 ವರ್ಷ ೩೩ ವಾರ ೨೯

ಹೊಸ ಪರಂಪರೆ

ಮರು ಚುನಾವಣೆಗಳು ನಡೆದು ತಿರುವಾಂಕೂರು—ಕೊಚ್ಚಿ ರಾಜ್ಯದ ಶಾಸನ ಸಭೆಯಲ್ಲಿ ಯಾವುದೇ ಪಕ್ಷಕ್ಕೆ ನಿಶ್ಚಿತ ಬಹುಮತ ಇಲ್ಲವೆಂದಾಯಿತು. ಎರಡು ವಾರಗಳ ವರೆಗೆ ಮುಂದೇನು ಎಂಬುದಾಗಿ ಎಲ್ಲರೂ ಎಲ್ಲರನ್ನೂ ಕೇಳುವಂತಾಯಿತು. ಪ್ರಜಾಸಮಾಜವಾದೀ ಧುರೀಣರು ಎಡಪಕ್ಷಗಳ ಸಹಕಾರದಿಂದ ಮಂತ್ರಿಮಂಡಳವನ್ನು ರಚಿಸುವರೆಂದು ಊಹಿಸಿದವರು, ಪ್ರಸವಾ ಪಕ್ಷದ ರಾಷ್ಟ್ರೀಯ ಕಾರ್ಯಕಾರಿಣಿಯು ಮದ್ರಾಸದಲ್ಲಿ ಕೈಗೊಂಡ ನಿರ್ಣಯದಿಂದ ತೀರ ಹತಾಶರಾದರು. ಸ್ವತಃ ಪಟ್ಟಂ ತಾನು ಪಿಳ್ಳೆಯವರೇ ತಾವಾಗಿ ಮಂತ್ರಿಮಂಡಳ ರಚಿಸುವ ಹವ್ಯಾಸವನ್ನು ಬಿಟ್ಟುಕೊಟ್ಟು, ಸಂಯುಕ್ತ ರಂಗಕ್ಕೆ ಒಂದು "ಛಾನ್ಸು" ಕೊಡಲು ನೋಡಿದರು. ಆದರೆ ವಾರಾಂಗನೆಯ ನೀತಿಯಷ್ಟೇ ರಾಜಕೀಯವೂ ಶೀಘ್ರ ಪಲ್ಲಟವನ್ನು ಹೊಂದುತ್ತದೆಂಬ ಸೂಕ್ತಿಗನುಸಾರವಾಗಿ, ತಿರುಕೊಚ್ಚಿಯಲ್ಲೂ ಪರಿಸ್ಥಿತಿ ದಿನ ಬೆಳಗಾಗುವುದರೊಳಗೆ ವಿಪರ್ಯಾಸಹೊಂದಿ, ಪ್ರಸವಾಪಕ್ಷದ ಸರಕಾರ ಅಧಿಕಾರ ಗ್ರಹಣಮಾಡಿತು.

ಇದು ತೀರ ಅನಿರೀಕ್ಷಿತವಾದ ಘಟನೆಯಾಗಿ ಕಂಡುಬಂದರೂ— ತಿರುಕೊಚ್ಚಿಯಲ್ಲಿ ರಾಷ್ಟ್ರಪತಿಗಳ ಆಳಿಕೆಯನ್ನು ತಪ್ಪಿಸಬೇಕೆಂಬ ಮತ್ತು ಹೇಗಾದರೂ ಮಾಡಿ ಪ್ರಜಾಪ್ರಭುತ್ವದ ರಥವನ್ನು ಸಾಗಿಸಬೇಕೆಂಬ ಇಚ್ಛೆಯನ್ನಿಟ್ಟುಕೊಂಡವರಿಗೆ ಪಿಳ್ಳೆಯವರ ಮಂತ್ರಿಮಂಡಳ ಹರ್ಷವನ್ನೇ ತಂದಿದೆ. ಎಡಪಕ್ಷಗಳ ಸಮ್ಮಿಶ್ರ ಸರಕಾರವಾಗಲೀ ಸಂಯುಕ್ತ ರಂಗದ ಮಂತ್ರಿಮಂಡಳವಾಗಲೀ ತಿರುಕೊಚ್ಚಿಯ ಜನತೆಗೆ ಇಷ್ಟವಾದುದಲ್ಲ—ಕಮ್ಯೂನಿಷ್ಟರನ್ನು ಅಧಿಕಾರದ ಗದ್ದುಗೆಗೆ ಏರಿಸುವುದು ಕಾಂಗ್ರೆಸಿಗೆ ಎಷ್ಟುಮಾತ್ರಕ್ಕೂ ಇಷ್ಟವಿಲ್ಲ. ಇವರ ಆಡಳಿತಕ್ಕಿಂತ ಪ್ರಜಾಸಮಾಜವಾದಿಗಳ ಆಡಳಿತವು ಎಷ್ಟೋ ಒಳ್ಳೆಯದಾದೀತೆಂದು ಕಾಂಗ್ರೆಸು ತಿಳಿದುಕೊಂಡಿತು. ಹಿಂದಿನ ಕಾಂಗ್ರೆಸ ಧುರೀಣರೇ ಇಂದಿನ ಪ್ರಸವಾ ಧುರೀಣರಾಗಿರುವುದರಿಂದ, ಮತ್ತು ತಾತ್ವಿಕ ಭಿನ್ನಾಭಿಪ್ರಾಯವು ಉಳಿದ ಪಕ್ಷಗಳಷ್ಟು ತೀವ್ರವಾಗಿಲ್ಲದಿರುವದರಿಂದ ಕಾಂಗ್ರೆಸು ಪ್ರಸವಾ ಮಂತ್ರಿಮಂಡಳಕ್ಕೆ ಬೆಂಬಲ ನೀಡಲು ನಿರ್ಧರಿಸಿತು.

ರಾಜಪ್ರಮುಖರಿಗೆ ಈ ಬೆಂಬಲ ದೊರಕುವ ಸಂಗತಿ ತಿಳಿದು ಬರಲು ಅವರು ಪಿಳ್ಳೆಯವರ ಮಂತ್ರಿಮಂಡಳ ಭದ್ರವಾಗಿ ಉಳಿದೀತೆಂದು ಆಶಿಸಿ, ಪ್ರಸವಾ ಪಕ್ಷವನ್ನು ಅಧಿಕಾರ ಪೀಠಕ್ಕೆ ಏರಿಸಿದರು. ಕಾಂಗ್ರೆಸಿನ ಕೂಡೆ ಪ್ರಸವಾ ಪಕ್ಷವು ಯಾವದೇ ರೀತಿಯ ನೇರವಾದ ಮಾತುಕತೆಯನ್ನು ತೊಡಗಿದ್ದಿಲ್ಲ. ತಾವು ಮಂತ್ರಿಮಂಡಳ ರಚಿಸಿದರೆ, ಎಲ್ಲ ಪಕ್ಷಗಳ ಸಹಕಾರ ದೊರಕುವುದೆಂಬ ಆಶೆಯನ್ನಷ್ಟೇ ಪ್ರಸವಾ ಧುರೀಣರು ವ್ಯಕ್ತಗೊಳಿಸಿದ್ದರು. ಕಾಂಗ್ರೆಸಿನ ಸಹಕಾರವೂ ಎಲ್ಲರೊಂದಿಗೆ ದೊರಕುವುದೆಂದು ತಮ್ಮ ಭಾವನೆ ಇರುವುದಾಗಿ ಹೇಳಿದ್ದರು. ಅಷ್ಟೇ ಹೊರತು ಕಾಂಗ್ರೆಸ ಹಾಗೂ ಪ್ರಸವಾ ಧುರೀಣರಲ್ಲಿ ಯಾವ ತರದ ಮಾತುಕತೆಯಾಗಲೀ ಪತ್ರವ್ಯವಹಾರವಾಗಲೀ ನಡೆದದ್ದಿಲ್ಲ. ಕಾಂಗ್ರೆಸು ಪ್ರಸವಾ ಪಕ್ಷಕ್ಕೆ ಬೆಂಬಲ ನೀಡುವ ತನ್ನ ನಿರ್ಣಯವನ್ನು ರಾಜಪ್ರಮುಖರಿಗೆ ತಿಳಿಸಿದ್ದರಿಂದ ಅವರಿಗೆ ಪಿಳ್ಳೆಯವರ ಮಂತ್ರಿಮಂಡಳಕ್ಕೆ ನಿಶ್ಚಿತ ಬಹುಮತ ದೊರಕುವದೆಂಬ ಭರವಸೆಯುಂಟಾಯಿತು. ಅಂತೂ ಕಾಂಗ್ರೆಸು ತಾನಾಗಿಯೇ ಬೆಂಬಲ ಕೊಡಲು ನಿರ್ಧರಿಸಿ ಔದಾರ್ಯದಿಂದ ವರ್ತಿಸಿದ್ದಷ್ಟೇ ಅಲ್ಲ—ಜಾಣತನದ ಮತ್ತು ಸಮಯೋಚಿತವಾದ ಈ ನಿರ್ಣಯದಿಂದ ಪ್ರಜಾಪ್ರಭುತ್ವ ಪದ್ಧತಿಯ ಪುರಸ್ಕರ್ತರ ಪ್ರಶಂಸೆಯನ್ನೂ ಗಳಿಸಿತು.

ಪ್ರಜಾಸಮಾಜವಾದೀ ಪಕ್ಷದ ಮಟ್ಟಿಗೆ ಹೇಳುವುದಾದರೆ ಅದು ಭಾರತದಲ್ಲಿ ಹೊಸತೊಂದು ಪರಂಪರೆಯನ್ನೇ ಸ್ಥಾಪಿಸಿತು. ೧೧೮ ಮಂದಿ ಸದಸ್ಯರುಳ್ಳ ಶಾಸನ ಸಭೆಯಲ್ಲಿ ಕೇವಲ ೧೯ ಮಂದಿ ಜನರನ್ನೊಳಗೊಂಡ ಪಕ್ಷವು ಮಂತ್ರಿಮಂಡಳವನ್ನು ರಚಿಸುವ ದಾಖಲೆ ಪ್ರಜಾಪ್ರಭುತ್ವದ ಇತಿಹಾಸದಲ್ಲಿಯೇ ಬೇರೊಂದಿರಲಾರದು. ಅಧಿಕಾರಾರೂಢವಾದ ಸರಕಾರವು ತನ್ನ ಅಸ್ತಿತ್ವಕ್ಕೋಸ್ಕರ ಮಂತ್ರಿಮಂಡಳದ ಹೊರಗೆ ಉಳಿದ ಪಕ್ಷಗಳನ್ನು ನಂಬಿ, ದಿನ ಬೆಳಗಾದರೆ ಅವುಗಳ ಒಲವು ನಿಲುವನ್ನು ಕಾತರ ದೃಷ್ಟಿಯಿಂದ ನೋಡುತ್ತ ಕುಳಿತುಕೊಳ್ಳುವ ಪರಿಸ್ಥಿತಿ ಹಿಂದೆಂದೂ ನಿರ್ಮಾಣವಾಗಿದ್ದಿಲ್ಲ. ತಿರುವಾಂಕೂರು ಕೊಚ್ಚಿಯಲ್ಲಿ ಪ್ರಸವಾ ಪಕ್ಷವು ಈ ಅಗ್ನಿ ಪರೀಕ್ಷೆಯನ್ನು ಇದಿರಿಸಲು ಸೊಂಟಕಟ್ಟಿದಂತಾಯಿತು. ಇದು ಭಾರತದಲ್ಲಿಯೇ ಪ್ರಥಮ ಪ್ರಜಾಸಮಾಜವಾದೀ ಮಂತ್ರಿಮಂಡಳ ಎಂಬುದಂತೂ ಮಹತ್ವದ ವಿಷಯ—ಅದಕ್ಕಿಂತಲೂ ಹೆಚ್ಚಾಗಿ ಪಿಳ್ಳೆಯವರು ವರ್ಣಿಸಿದ ಈ "ಅತ್ಯಂತ ಧೈರ್ಯದ ಅಪೂರ್ವ ಪ್ರಯೋಗ" ಪಕ್ಷ ಪಂಗಡಗಳ ರಾಜಕೀಯ ಆಡಳಿತ ಪದ್ಧತಿಯ ಮುಖವನ್ನೇ ಬದಲಾಯಿಸುವುದು ಆಶ್ಚರ್ಯಜನಕ ವಿಚಾರ. ಈ ಪ್ರಯೋಗ ಯಶಸ್ವೀಯಾದರೆ, ಇನ್ನುಮುಂದೆ ನಿಶ್ಚಿತ ಬಹುಮತ ದೊರಕಲಿಲ್ಲವಲ್ಲ ಎಂದು ಚಿಂತಿಸುವ ಪ್ರಮೇಯ ಯಾರಿಗೂ ಉಳಿಯಲಿಕ್ಕಿಲ್ಲ. ಜನತಾ ಸಂಕಷ್ಟವನ್ನು ನಿವಾರಿಸುವ ಪರಿಣಾಮಕಾರೀ ಯೋಜನೆಗಳಲ್ಲಿ ಶಾಸನಸಭೆಯ ಉಳಿದ ಪಕ್ಷಗಳು ಸಕ್ರಿಯ ಸಹಕಾರವನ್ನು ನೀಡುವ ಭರವಸೆಯನ್ನು ಎಲ್ಲರೂ ಹೊಂದಬಹುದು, ಮತ್ತು ಅಂತಹ ಸಹಕಾರ ಪಡೆಯಬಲ್ಲವ ಕೆಚ್ಚೆದೆಯ ಧುರೀಣನೊಬ್ಬ ಮುಖ್ಯ ಮಂತ್ರಿಯಾದಾನು.

ಇನ್ನೂ ಬಾಲ್ಯಾವಸ್ಥೆಯಲ್ಲಿರುವ ನಮ್ಮದೇಶದ ರಾಜಕೀಯ ಕ್ಷೇತ್ರದಲ್ಲಿ ಅನಿವಾರ್ಯವಾಗಿಯೇ ಹೊಸತೊಂದು ಪ್ರಯೋಗ ನಡೆಯುವಂತಾಯಿತು. ಶ್ರೀ ಪಟ್ಟಂ ತಾನು ಪಿಳ್ಳೆಯವರು ರಾಜ್ಯದ ಮುಂದಿನ ಸಮಸ್ಯೆಗಳನ್ನು ಪ್ರಸವಾ ಪಕ್ಷದ ನೀತಿಯಂತೆ ಬಿಡಿಸುವ ನಿರ್ಧಾರವನ್ನು ಪ್ರಕಟಿಪಡಿಸಿರುವರು. ಮುಖ್ಯವಾಗಿ ನಿರುದ್ಯೋಗ, ಆಹಾರಾಭಾವ, ಭೂಮಾಲಿಕರ ಮತ್ತು ರೈತರ ಸಂಬಂಧ, ಅಧಿಕಾರದ ವಿಕೇಂದ್ರೀಕರಣ, ಕೂಲಿಕಾರರ ಹಿತ, ಗೃಹಕೈಗಾರಿಕೆಗಳ ಪುನರುಜ್ಜೀವನ, ಮಕ್ಕಳಿಗೆ ಶಿಕ್ಷಣದ ಸೌಕರ್ಯ, ಲಂಚಗುಳಿತನದ ನಿರ್ಮೂಲನ ಮುಂತಾದ ಸಮಸ್ಯೆಗಳನ್ನು ನಿವಾರಿಸಬೇಕಾಗಿರುತ್ತದೆ. ಇವುಗಳಲ್ಲೆಲ್ಲ ಕಾಂಗ್ರೆಸು ಸರಕಾರವನ್ನು ಟೀಕಿಸಿದಷ್ಟು ಸುಲಭದಲ್ಲಿ ಪರಿಹಾರ ಮಾರ್ಗವನ್ನು ಕಂಡುಕೊಳ್ಳಲು ಸಾಧ್ಯವಿಲ್ಲವೆಂದು ಪ್ರಸವಾ ಮಂತ್ರಿ ಮಂಡಳದ ಅನುಭವಕ್ಕೆ ಬಂದೀತು. ಹೀಗಿದ್ದರೂ ಪ್ರಸವಾ ಪಕ್ಷವು ಸಮಸ್ಯೆಗಳ ನಿವಾರಣೆಗೆ ಅನುಸರಿಸುವ ಮಾರ್ಗಗಳೇನೆಂಬುದನ್ನು ಈ ಮಂತ್ರಿಮಂಡಳದ ಚಟುವಟಿಕೆಗಳು ವ್ಯಕ್ತಗೊಳಿಸುತ್ತವೆ. ಮತ್ತು ಈ ದೃಷ್ಟಿಯಿಂದ ಕಾಂಗ್ರೆಸಿನ ಆಡಳಿತಕ್ಕೂ ಪ್ರಸವಾ ಪಕ್ಷದ ಸರಕಾರಕ್ಕೂ ಇರುವ ವ್ಯತ್ಯಾಸವನ್ನು ಜನರು ಗುರುತಿಸಬಹುದು.

ಅನಿಶ್ಚಿತ ವಾತಾವರಣ ಮತ್ತು ರಾಷ್ಟ್ರಪತಿಗಳ ಆಳಿಕೆಯ ಭಯ ತಪ್ಪಿತೆಂದು ತೋರಿದರೂ ಪ್ರಸವಾ ಮಂತ್ರಿಮಂಡಳಕ್ಕೆ ಕಮ್ಯೂನಿಸ್ಟ ಹಾಗೂ ಸಂಯುಕ್ತ ರಂಗದ ಇತರ ಸದಸ್ಯರ ಪ್ರಬಲ ವಿರೋಧವನ್ನೂ ಟೀಕೆಯನ್ನೂ ಇದಿರಿಸಬೇಕಾಗಿರುತ್ತದೆ. ಕಮ್ಯೂನಿಸ್ಟ ಪಕ್ಷವು ಈಗಿನ ವ್ಯವಸ್ಥೆಯನ್ನು ಕಾಂಗ್ರೆಸ- ಪ್ರಸವಾ ಸಮ್ಮಿಶ್ರ ಸರಕಾರವೆಂದೇ ಪರಿಗಣಿಸಬೇಕಾಗಿ ತನ್ನದೊಂದು ಪ್ರಕಟಣೆಯಲ್ಲಿ ಹೇಳಿದೆ. ಆದಕಾರಣ ಕಾಂಗ್ರೆಸಿನಿಂದ ನೀಗದ ಕೆಲಸವನ್ನು ಪ್ರಸವಾ ಮಂತ್ರಿಮಂಡಳ ಕೈಗೂಡಿಸುವದೆಂಬ ನಿರೀಕ್ಷೆಯೇ ತಪ್ಪೆಂದು ಕಮ್ಯೂನಿಸ್ಟರ ಅಭಿಪ್ರಾಯ. ಕೇರಳ ಸೋಶಲಿಸ್ಟರೂ ಕೇರಳಿನಿಂದು ಪ್ರಸವಾ ಪಕ್ಷವು ಚುನಾವಣಾ ಕಾಲದಲ್ಲಿ ವ್ಯಕ್ತಗೊಳಿಸಿದ ತನ್ನ ಘೋಷಣೆಗೆ ತೀರ ವ್ಯತಿರಿಕ್ತವಾಗಿ ನಡೆದಿದೆಯೆಂದೂ ಜನರಿತ್ತ ನಿರ್ಣಯಕ್ಕೆ ದ್ರೋಹ ಬಗೆದಿದೆಯೆಂದೂ ಆರೋಪ ಹೊರಿಸಿದೆ. ಕಾಂಗ್ರೆಸಿನ ಪ್ರಭಾವದಿಂದ ಜನರನ್ನು ಮುಕ್ತಗೊಳಿಸಬೇಕೆಂಬ ಛಲ ತೊಟ್ಟ

(೨ ನೇ ಪುಟ ನೋಡಿರಿ)

ಸಮರ್ಥ ನಾಲಗಳು

[illegible]

THE CANARA INDUSTRIAL & BANKING SYNDICATE LTD.,
Estd: 1925 H. O. UDIPI, S. India
ದಿ ಕೆನರಾ ಇಂಡಸ್ಟ್ರಿಯಲ್ ಎಂಡ್
ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್.,
ಪ್ರಧಾನ ಕಛೇರಿ ಉಡುಪಿ, ದಕ್ಷಿಣ ಭಾರತ

ಚಕ್ರಬಂಧ ಸ್ಪರ್ಧೆಗಳ ವಿಷ ಚಕ್ರ

ಬಹುಮಾನದ ಆಮಿಷದ ಹಿಂದೆ ಪತನದ ಅಪಾಯ

ಮನುಷ್ಯನ ವ್ಯಕ್ತಿತ್ವದ ದುರ್ಬಲ ಕೇಂದ್ರಗಳಿಗೆ ಅನಾವಶ್ಯಕವಾಗಿ ಪ್ರಚೋದನೆಯನ್ನಿತ್ತು ಅವು ಕೆರಳುವಂತೆ ಮಾಡುವ ಹವ್ಯಾಸ ವ್ಯಕ್ತಿಯ ಶ್ರೇಯಸ್ಸಿನ ದೃಷ್ಟಿಯಿಂದ ಮಾರಕವಾಗಿದ್ದಷ್ಟೇ ಸಾಮಾಜಿಕ ಸ್ವಾಸ್ಥ್ಯಕ್ಕೆ ಅಪಾಯಕರವೂ ಆಗಿರುತ್ತದೆ. ಪಶು ಪ್ರವೃತ್ತಿಯು ಮನುಷ್ಯನಲ್ಲಿ ಅಂತರ್ಗತವಾಗಿದ್ದಾಗಲೂ, ಬುದ್ಧಿಯ ಕಡಿವಾಣದಲ್ಲಿ ವಿಚಾರ ಪೂರ್ಣ ಸಂಯಮದಲ್ಲಿ ಅದು ನಿಯಂತ್ರಿತವಾಗಿರುವುದರಿಂದ–ಮನುಷ್ಯನು ಉತ್ಕರ್ಷವನ್ನೂ ಉತ್ಸರ್ಗವನ್ನೂ ಹೊಂದುವುದು ಸಾಧ್ಯವಾಗುತ್ತದೆ. ಈ ಹಿಡಿತವೂ ಬಿಗಿತವೂ ವಿವೇಕವೂ ತಪ್ಪಿ ನಿಯಂತ್ರಣವು ಶಿಥಿಲವಾಗುವಂತೆ ಮಾಡುವ ಯಾವುದೇ ಪ್ರಸಂಗ, ಸನ್ನಿವೇಶ, ಅಥವಾ ವಾತಾವರಣವು ಪ್ರಗತಿಗೆ ಪೋಷಕವಾದುದಲ್ಲ. ಮೇನಕೆಯ ಮೇಲಿನ ಮೋಹವಲ್ಲದಿದ್ದರೆ ವಿಶ್ವಾಮಿತ್ರನ ತಪೋಭಂಗವಾಗುತ್ತಿರಲಿಲ್ಲ. ಹೆಂಡತಿ ಮಕ್ಕಳಮೇಲಿನ ಮಮತೆ ಸಂಸಾರಿಗರನ್ನು ತಪೋಮಾರ್ಗದಿಂದ ಪರಾವೃತ್ತರನ್ನಾಗಿ ಮಾಡಿ, ಜನನ ಮರಣದ ಚಕ್ರದಲ್ಲಿ ಸುತ್ತುತ್ತಿರುಗುತ್ತಲೇ ಇರಬೇಕಾದ ಪರಿಸ್ಥಿತಿಯನ್ನು ನಿರ್ಮಿಸಿದೆ. ಪಾರಮಾರ್ಥಿಕ ದೃಷ್ಟಿಯಲ್ಲಿ ಇವುಗಳಿಗೆ ಶಾಶ್ವತ ಬೆಲೆ ಇಲ್ಲ. ಲೌಕಿಕದ ವಿವೇಕಕ್ಕೂ ಪ್ರಚಲಿತ ಸಮಾಜದಲ್ಲಿ ಕಂಡು ಬರುವ ಕೆಲವು ವಿಷಯಗಳು ಮನುಷ್ಯನನ್ನು ವ್ಯರ್ಥವಾಗಿ ಕಾಡುವ ವ್ಯಸನಗಳೆಂದು ತೋರುತ್ತವೆ. ಔಷಧಗಳ ಮೇಲಿನ ಭ್ರಾಮಕ ಕಲ್ಪನೆಗಳು ಇಂಥದೊಂದು ಚಾಳಿಯಾದರೆ, ಚಕ್ರಬಂಧ ಸ್ಪರ್ಧೆಗಳ ಪ್ರಚಾರ ವೈಖರಿ ಇನ್ನೊಂದು ಬಗೆಯ ಸಾಮಾಜಿಕ ಕೇಡು.

ಔಷಧಗಳ ವಿಷಯದಲ್ಲಿಯಾದರೆ—ಎಲ್ಲವೂ ಮೋಸವೆಂದು ಹೇಳಲು ಬರುವುದಿಲ್ಲ. ನಾಲ್ಕು ಮಂದಿ ಒಳ್ಳೆಯವರೊಂದಿಗೆ ಹತ್ತು ಮಂದಿ ಕೆಟ್ಟವರೂ ಸೇರಿದಂತೆ, ಕ್ರಮಬದ್ಧವಾದ ಶಾಸ್ತ್ರೀಯವಾದ ಔಷಧಗಳೊಂದಿಗೆ ಮೋಸದ ಹಾಗೂ ಮರುಳುಗೊಳಿಸುವ ಔಷಧಗಳೂ ಬಂದು ಸೇರಿವೆ. ಇವುಗಳನ್ನು ಪ್ರತ್ಯೇಕಿಸುವುದು ಬಹಳ ಕಷ್ಟದ ಕೆಲಸ. ತಜ್ಞರ ಮಂಡಳಿಯೊಂದಕ್ಕೆ ಇದನ್ನು ಒಪ್ಪಿಸಿಕೊಡಬಹುದಾದರೂ ಅವ್ಯಾಹತವಾದ ಪ್ರಚಾರದಿಂದ ಮೋಸದ ಔಷಧಿಗಳು ಗಳಿಸುವ ಜನಪ್ರಿಯತೆಯನ್ನು ತಡೆಗಟ್ಟಲು ಇಷ್ಟರಿಂದಲೇ ಸಾಧ್ಯವಾಗಲಾರದು. ಇದನ್ನು ಮನಗಂಡೇ ಜಾಹೀರಾತುಗಳ ಮೇಲೆ ಹತೋಟಿ ಹೇರುವ ಕ್ರಮವನ್ನು ಕೇಂದ್ರ ಸರಕಾರ ಕೈಗೊಂಡಿತು.

ಮೋಸದ ಜೂಗಾರಾಟ

ಚಕ್ರಬಂಧ ಸ್ಪರ್ಧೆಗಳು ಮಾಡುವ ಹಾವಳಿ ಇದಕ್ಕಿಂತಲೂ ಭೀಕರವಾದದ್ದು—ಅವುಗಳು ಪೂರಾ ಮೋಸದ ಜೂಗಾರಾಟವೆಂದರೂ ತಪ್ಪಲ್ಲ. ಇಲ್ಲಿ ಯಾವ ಪ್ರಕಾರದ ಪ್ರಾಮಾಣಿಕತೆಯನ್ನೂ ನಾವು ಕಾಣುವಂತಿಲ್ಲ. ಜನರ, ಮುಖ್ಯವಾಗಿ ತರುಣ ತರುಣಿಯರ, ಹಗಲುಗನಸುಗಳು ಕೆರಳಿನಿಲ್ಲುವುದಕ್ಕೆ ಚಕ್ರಬಂಧ ಸ್ಪರ್ಧೆಗಳು ಬಹಳ ಸುಲಭದಲ್ಲಿ ಪ್ರಚೋದನೆಯನ್ನೊದಗಿಸುತ್ತವೆ. ಅಲ್ಪಶ್ರಮದಿಂದ, ಕೆಲವೇ ರೂಪಾಯಿಗಳ ಬಂಡವಾಳದಿಂದ, ಲಕ್ಷಾಂತರ ರೂಪಾಯಿಗಳ "ಬಹುಮಾನ" ಸಂಪಾದಿಸಲು ಸಾಧ್ಯವಾದರೆ, ಶ್ರೀಮಂತ ಜೀವನವನ್ನು ನಡೆಸುವುದಕ್ಕೆ ಇದಕ್ಕಿಂತ ಸುಲಭವೂ ಸುಖಕರವೂ ಶ್ರೀಘ್ರಫಲದಾಯಕವೂ ಆದ ಬೇರೆ ಮಾರ್ಗ ಯಾವುದುಂಟು?

ಲಕ್ಷಾಂತರ ನಾಗರಿಕರು ಹಗಲಿರುಳೂ ಈ ಸುಲಭ ಮಾರ್ಗದ ಮೂಲಕ ಸುಖದ ಸುಪ್ಪತ್ತಿಗೆಯನ್ನೇರುವ ಕಲ್ಪನಾ ಸಾಮ್ರಾಜ್ಯದಲ್ಲಿ ಓಲಾಡುತ್ತಿರುವರು. ಇವರಿಗೆ ಕ್ಷಣ ಕ್ಷಣಕ್ಕೂ ನಿರಾಶೆಯ ಅನುಭವಕ್ಕೆ ಬರುತಿದ್ದರೂ "ಈ ಸಲ ಗೆಲ್ಲುವುದೇ ನಿಶ್ಚಯ" ಎಂಬ ಮೌಢ್ಯವು ಅವರನ್ನು ಮೃಗಜಲದಂತೆ ಮೋಸಗೊಳಿಸುವುದು. ಮಾನಸಿಕ ಸ್ವಾಸ್ಥ್ಯಕ್ಕೆ ಇದಕ್ಕಿಂತ ಹೆಚ್ಚು ಗಂಡಾಂತರವನ್ನುಂಟು ಮಾಡುವ ಆಟ ಬೇರೊಂದಿರಲಾರದು.

ಇದನ್ನು ಅರಿತೇ ಭಾರತ ಸರಕಾರದವರು ಚಕ್ರಬಂಧ ಸ್ಪರ್ಧೆಗಳಿಗೆ ಅರ್ಧಚಂದ್ರ ಪ್ರಯೋಗಮಾಡಬೇಕೆಂಬ ವಿಚಾರದತ್ತ ಲಕ್ಷ್ಯಕೊಟ್ಟಿರುವರು. ರಾಜ್ಯಪರಿಷತ್ತಿನಲ್ಲಿ ಶ್ರೀ. ಕೆ ರಾಮರಾಯರು ಚಕ್ರಬಂಧ ಸ್ಪರ್ಧೆಗಳನ್ನು ಪ್ರತಿಬಂಧಿಸುವುದಕ್ಕೆ ಸಾಧ್ಯವಾಗುವಂತೆ ಭಾರತೀಯ ದಂಡ ಶಾಸನದಲ್ಲಿ ತಕ್ಕ ತಿದ್ದುಪಡಿಮಾಡಬೇಕೆಂದು ಸೂಚಿಸಿದಾಗ, ಗೃಹ ಮಂತ್ರಿ ಕಟಜೂರವರು ಸರಕಾರವು ಪ್ರತ್ಯೇಕ ಶಾಸನದ ಮೂಲಕ ಚಕ್ರಬಂಧ ಸ್ಪರ್ಧೆಗಳನ್ನು ತಡೆಗಟ್ಟುವುದಕ್ಕೆ ಪ್ರಯತ್ನಿಸುವುದೆಂದು ಹೇಳಿದರು.

ಸ್ವಾಗತಾರ್ಹ ಕ್ರಮ

ಈ ಕ್ರಮವು ನಿಜವಾಗಿಯೂ ಸ್ವಾಗತಾರ್ಹವಾಗಿರುತ್ತದೆ — ಕೇಂದ್ರ ಸರಕಾರದವರು ಮಾಡುವ ಶಾಸನವು ಅಖಿಲ ಭಾರತ ಸ್ವರೂಪದ್ದಾಗುವುದರಿಂದ, ಭಾರತದಲ್ಲೆಲ್ಲ ಯಾರೊಬ್ಬರೂ ಚಕ್ರಬಂಧ ಸ್ಪರ್ಧೆಗಳ ಮೂಲಕ ಜನರನ್ನು ಮರುಳುಗೊಳಿಸಿ, ತಾವು ದುಡ್ಡಿನ ದೊಡ್ಡಪ್ಪಗಳಾಗುವ ಅವಕಾಶ ನಿಂತುಹೋಗುತ್ತದೆ. ಸಾಮಾಜಿಕ ವಿವೇಕದ ಲೂಟಿಯಾಗುವುದೂ ನಿಲ್ಲುತ್ತದೆ. ಕೆಲವು ರಾಜ್ಯ ಸರಕಾರಗಳು ಈಗಾಗಲೇ ಚಕ್ರಬಂಧ ಸ್ಪರ್ಧೆಗಳು ಮಾಡುವ ಕೆಟ್ಟ ಪರಿಣಾಮವನ್ನು ಮನಗಂಡು, ಅವುಗಳ ಹಾವಳಿಯನ್ನು ನಿಯಂತ್ರಿಸಲು ಕ್ರಮ ಕೈಗೊಂಡದ್ದುಂಟು ಆದರೆ, ಚಕ್ರಬಂಧ ಸ್ಪರ್ಧೆಗಳ ಸಂಚಾಲಕರು, ತಮ್ಮ ವ್ಯವಸಾಯದ ಕೇಂದ್ರವನ್ನು ಈ ಕಾನೂನು ಕೆಲಸಮಾಡದ ಬೇರೊಂದು ರಾಜ್ಯಕ್ಕೆ ಒಯ್ದು, ಮೊದಲಿನಂತೆಯೇ ಸ್ಪರ್ಧೆಗಳನ್ನು ನಡೆಸಹತ್ತಿದ್ದರಿಂದ, ಇದರ ಉದ್ದೇಶ ವಿಫಲವಾಯಿತು.

ಕೆಲವು ಸಮಯಕ್ಕೆ ಹಿಂದೆ ಭಾರತೀಯ ಚಲಚ್ಚಿತ್ರೋದ್ಯಮ ಮಂಡಳದವರೂ ಸೆನ್ಸಾರ ಪದ್ಧತಿಯ ದುರುಪಯೋಗವನ್ನು ಇದೇ ರೀತಿ ಮಾಡುತಿದ್ದರು. ಮುಂಬಯಿಯ ಮಂಡಳ ನಿರಾಕರಿಸಿದ ಚಲಚ್ಚಿತ್ರದ ಪ್ರದರ್ಶನಕ್ಕೆ ಕಲ್ಕತ್ತೆಯ ಮಂಡಳ ಒಪ್ಪಿಗೆ ನೀಡುತಿತ್ತು. ಉತ್ತರ ಪ್ರದೇಶದ ರಾಜ್ಯ ಸರಕಾರ ನಿರ್ಬಂಧ ಹೇರಿದ ಚಲಚ್ಚಿತ್ರವು ಮಧ್ಯ ಪ್ರದೇಶದಲ್ಲಿ ನಿರಾತಂಕವಾಗಿ ಪ್ರದರ್ಶಿಸಲ್ಪಡುತಿತ್ತು. ಭಾರತದೊಳಗೆ ಈ ರೀತಿಯ ಭೇದ ಅಪೇಕ್ಷಿತವಲ್ಲವೆಂದು ಭಾವಿಸಿ ಕೇಂದ್ರ ಸರಕಾರ ಅಖಿಲ ಭಾರತ ಸ್ವರೂಪದ ಸೆನ್ಸಾರ ಮಂಡಳವನ್ನು ನೇಮಿಸಿತು. ಚಕ್ರಬಂಧ ಸ್ಪರ್ಧೆಗಳ ವಿಷಯದಲ್ಲೂ ಇಂಥ ಶಾಸನ ಮಾಡಲು ಉಪಕ್ರಮಿಸುವುದು ಸಂತೋಷದ ವಿಚಾರ.

ವಿವೇಕದ ದಿವಾಳಿ

ನಮ್ಮಲ್ಲಿಯ ಅನೇಕ ಪತ್ರಿಕೆಗಳು ಚಕ್ರಬಂಧ ಸ್ಪರ್ಧೆಯನ್ನು ಏರ್ಪಡಿಸಿ, ತನ್ಮೂಲಕ ತಮ್ಮ ಪ್ರಸಾರವನ್ನು ಹೆಚ್ಚಿಸಲು ನೋಡುತ್ತವೆ. ದೊಡ್ಡ ದೊಡ್ಡ ಬಂಡವಾಳ ಶಾಹಿಗಳು ಪತ್ರಿಕಾ ಪ್ರಪಂಚದಲ್ಲಿ ಪ್ರಭುತ್ವವನ್ನು ಪಡೆಯಲು ಉದ್ದೇಶಿಸಿ ಈ ಕುಹಕತಂತ್ರವನ್ನು ತಮ್ಮ ಉದ್ದೇಶಪೂರ್ತಿಯ ಯಶಸ್ವೀ ಸಾಧನವಾಗಿ ಪರಿಗ್ರಹಿಸಿರುವರು. ಸ್ಪರ್ಧೆಯ ಬಹುಮಾನದ ಆಶೆಗೆಬಿದ್ದ ಜನರು ಪತ್ರಿಕೆಗಳನ್ನು ಕೊಂಡುಕೊಳ್ಳುವರು. ಇದರಿಂದ ಪತ್ರಿಕಾ ಪ್ರಪಂಚದಲ್ಲಿ ಬಂಡವಾಳಶಾಹಿತ್ವದ ಮೇಲುಗೈಯಾಗುತ್ತದೆ; ಮತ್ತು ಜನಸಾಧಾರಣರ ಹಿತ ಅಲಕ್ಷಿಸಲ್ಪಡುತ್ತದೆ. ಇದು ಇಷ್ಟವಲ್ಲ.

ಸಾಮಾನ್ಯ ನಾಗರಿಕನಿಗೆ ಪತ್ರಿಕಾ ಪ್ರಪಂಚದ ಹಾಗೂ ಭಾರತದ ಪ್ರಗತಿಯ ಕುರಿತು ಹೆಚ್ಚಿನ ಆಸ್ಥೆ ಇರಲಿಕ್ಕಿಲ್ಲ—ತನ್ನ ವ್ಯಕ್ತಿಗತ ಶ್ರೇಯಸ್ಸನ್ನೇ ಆತನು ಚಿಂತಿಸುತ್ತಿರಬಹುದು. ಅದಕ್ಕೋಸ್ಕರವೇ ಕೆಲವು ರೂಪಾಯಿಗಳನ್ನು ಪ್ರವೇಶಧನವಾಗಿ ಕಟ್ಟಿ, ಬಹಳ ಬುದ್ಧಿವಂತಿಕೆಯಿಂದ ಶಬ್ದಗಳನ್ನು ಜೋಡಿಸಿ, ಕೂಪನು ತುಂಬಿಸಿ ಅವನು ಕಳುಹಿಸುವನು. ಆದರೆ, ಪ್ರತಿಯೊಂದೂ ಒಗಟಿಗೆ ಅನೇಕ ಶಬ್ದಗಳನ್ನು ಅವನ ತರ್ಕದಷ್ಟೇ ಪ್ರಬಲ ತರ್ಕಗಳನ್ನು ಮುಂದೊಡ್ಡಿ, ಹೊಂದಿಸಲು ಸಾಧ್ಯವೆಂಬ ಮಾತು ಅವನಿಗೆ ಹೊಳೆಯುದೇ ಇಲ್ಲ. ಮೇಲಾಗಿ, ಚಕ್ರಬಂಧ ಸ್ಪರ್ಧೆಗಳನ್ನು ಜೋಡಿಸಿದ ಪತ್ರಿಕಾ ಕಾರ್ಯಾಲಯದ ಮಹಾನುಭಾವನು ಸರ್ವಜ್ಞನಲ್ಲವೆಂಬ ಮತ್ತು ತನ್ನಂತೆಯೇ ಅವನೊಬ್ಬ ಸಾಮಾನ್ಯ ಬುದ್ಧಿವಂತನೆಂಬ ವಿಷಯ ಈ ಓದುಗನಿಗೆ ಹೊಳೆಯುವುದಿಲ್ಲ. ಹೀಗಾಗಿ ಕೊನೆಯ ಕ್ಷಣದವರೆಗೂ ತನ್ನ ಉತ್ತರವೇ ಸರಿಯೆಂದೂ "ಬಹುಮಾನದ ಗಂಟು ತನಗೇ ದೊರಕುವುದೆಂದೂ ಇವ ನಿಟ್ಟುಕೊಂಡಿದ್ದ ಆಸೆ, ಪರಿಣಾಮ ಬಹಿರಂಗಗೊಂಡ ಕ್ಷಣದಲ್ಲಿ ಅವನನ್ನು ಪೆಚ್ಚುಗೊಳಿಸುತ್ತದೆ; ವಿವೇಕದ ದಿವಾಳಿ ತೆಗೆಯುತ್ತದೆ.

ಸಾಮಾಜಿಕ ಅಪಾಯ

ಮೊನ್ನೆ ಮೊನ್ನೆಯವರೆಗೆ ಶಬ್ದಗಳನ್ನು ಜೋಡಿಸುವ ಸ್ಪರ್ಧೆ ನಡೆಯುತಿದ್ದರೆ ಈಗ ಅಂಕೆ ಸಂಖ್ಯೆಗಳ ಸ್ಪರ್ಧೆಯನ್ನೂ ಕಾಣುತ್ತೇವೆ- ಪತ್ರಿಕೆಗಳು ಮಾತ್ರವಲ್ಲ- ಖಾಸಗಿ ಜನರೂ ಈ ಸ್ಪರ್ಧೆಗಳನ್ನು ಏರ್ಪಡಿಸಿ, ಪತ್ರಿಕೆಗಳ ಮುಖಾಂತರ ಪ್ರಕಟಣೆ ಕೊಡುವರು. ಇವುಗಳಿಗೆ ಹಾಕುವ ಹಣ ಕೇವಲ ದಂಡ—ನಾವು ಹೆಚ್ಚೆಂದರೆ ಎರಡು ಡಜನು ಕೂಪನು ತುಂಬಿ ಕಳಿಸಬಹುದು. ಆದರೆ, ಈ ಸ್ಪರ್ಧೆಗೆ ಎರಡು ನೂರು ನಮೂನೆಯ ಸಮರ್ಪಕ ಉತ್ತರವನ್ನು ರಚಿಸಲು ಸಾಧ್ಯವುಂಟು! ಕೆಲವು ವೇಳೆ ಕೆಲವು ಸಾವಿರ ಸಮರ್ಪಕ ಉತ್ತರಗಳನ್ನೂ ಸೃಷ್ಟಿಸಬಹುದು. ಇವುಗಳಲ್ಲಿ ಆ ಕಚೇರಿಯಲ್ಲಿ ಸೀಲುಮಾಡಿಟ್ಟ ಉತ್ತರನೇ ಸರಿಯಾದುದೆಂದು ನಂಬುವ ನಾವು ಮೂರ್ಖರೇ ನಿಜ.

ಹೀಗೆ ಮನುಷ್ಯನಲ್ಲಿ ಹಣ ಸಂಗ್ರಹದ ವ್ಯಾಮೋಹವನ್ನು ಉದ್ರೇಕಿಸಿ, ಅವನ ಹಣವನ್ನೆ ಸೂರೆಗೊಳ್ಳುವ ಈ ಚಕ್ರಬಂಧ ಸ್ಪರ್ಧೆಗಳು ಆರ್ಥಿಕ ದುಷ್ಪರಿಣಾಮವನ್ನಷ್ಟೇ ಅಲ್ಲ, ಮಾನಸಿಕ ದುರಂತವನ್ನೂ ಉಂಟುಮಾಡಿ ವ್ಯಕ್ತಿತ್ವದ ವಿಕಸನಕ್ಕೆ ಆಘಾತ ತರುತ್ತವೆ. ಬುದ್ಧಿ ಕುಶಲ ಸ್ಪರ್ಧೆಯು ನಮ್ಮ ಬುದ್ಧಿ ಶಕ್ತಿಯನ್ನು ಅಸಮಂಜಸದಲ್ಲಿ ಕೆಡವಿ ಮಂಕುತನವನ್ನು ತರುತ್ತದೆ! ಅಲ್ಪ ಶ್ರಮದಿಂದ ಅಪಾರ ಲಾಭ ಎಂಬ ದುರ್ಬೋಧನೆಯನ್ನೂ ನೀಡುತ್ತದೆ ಈ ನೀತಿಯನ್ನು ಮೆಚ್ಚಿದ ಜನಾಂಗ ಯಾವ ಪುರುಷಾರ್ಥವನ್ನೂ ಸಾಧಿಸಲಾರದು. ಕರ್ಮಭೂಮಿಯಾದ ಸಮಾಜಕ್ಕೆ ಇದಕ್ಕಿಂತ ದೊಡ್ಡ ಕೇಡು ಬೇರೊಂದಿಲ್ಲ. ಬಹುಮಾನದ ಆಮಿಷ ತೋರಿಸಿ, ಸಾಮಾಜಿಕ ಆರ್ಥಿಕ ಹಾಗೂ ಮಾನಸಿಕ ಅಪಾಯದ ಬಲಿಗೆ ನೂಕುವ ಈ ಚಕ್ರಬಂಧ ಸ್ಪರ್ಧೆ ವಿಷ ಚಕ್ರವಾಗಿರುತ್ತದೆ. ಆದುದರಿಂದ ಚಕ್ರಬಂಧ ಸ್ಪರ್ಧೆಗಳ ಪ್ರತಿಬಂಧ ಅತ್ಯಾವಶ್ಯಕವಾದ ಕ್ರಮ.

(ಬರೆದು ಬಂದುದು)

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್

ಸ್ಥಾಪನೆ: ೧೯೩೫.] [ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ

ಭಾರತದ ಸುಭದ್ರ ವಿಮಾ ಕಂಪೆನಿಗಳಲ್ಲಿ "ಕೆನರಾ ಮ್ಯೂಚುವಲ್" ಎಣೆ ಇಲ್ಲದ ವಿಶಿಷ್ಟ ಸ್ಥಾನವನ್ನು ಗಳಿಸಿದೆ. ಇದು ಮ್ಯೂಚುವಲ್ ಕಂಪೆನಿಯಾಗಿ ಘಟಿತವಾಗಿದ್ದು, ಪಾಲುದಾರ ಭಂಡವಾಳಿಗರಿಲ್ಲದಿರುವುದರಿಂದ, ಕಂಪೆನಿಯ ಸರ್ವ ಲಾಭವನ್ನು ಪಕ್ಕೆ ಹೊಂದಿದ ಪಾಲಿಸಿದಾರರೇ ತಮ್ಮಲ್ಲಿ ಹಂಚಿಕೊಳ್ಳುವರು. ಪ್ರಾಗತಿಕ ಬಿಗುಮಾನದ ತಳಹದಿಯ ಮೇಲೆ ನಡೆಸಿದ ತನ್ನೆಲ್ಲಾ ವಿಮಾ ಗಣನೆಗಳಲ್ಲಿ ಉಳಿತಾಯವನ್ನು ತೋರಿಸಿದುದು ಮಾತ್ರವಲ್ಲದೆ, ಸ್ಥಾಪಿತವಾದಂದಿನಿಂದಲೂ ಇದು ಬೋನಸು ಹಂಚಿದೆ. ಪಾಲಿಸಿದಾರರ ಹಿತದೃಷ್ಟಿಯೇ ಧ್ಯೇಯವಾಗುಳ್ಳ ಈ ಪ್ರಗತಿಶೀಲ ಮ್ಯೂಚುವಲ್ ಕಂಪೆನಿಯಲ್ಲಿ ಇಂದೇ ವಿಮೆ ಇಳಿಸಿ, ನಿಮ್ಮ ಕುಟುಂಬದ ಭದ್ರತೆಯನ್ನು ಕಾಯ್ದುಕೊಳ್ಳಿರಿ.

THE CANARA MUTUAL ASSURANCE COMPANY, LTD.,

Estd: 1935] [Head Office: UDIPI, S. INDIA

ನಮ್ಮ ಜವಳಿ ಉದ್ದಿಮೆಯ ಶತವಾರ್ಷಿಕೋತ್ಸವ

ಭಾರತೀಯ ಗಿರಣಿಗಳ ಪುರೋಗತಿಯ ಇತಿಹಾಸ

ಕಳೆದವಾರ ಭಾರತದಲ್ಲಿ ಜವಳಿ ಉದ್ದಿಮೆಯ ಶತವಾರ್ಷಿಕೋತ್ಸವವು ಸಂಭ್ರಮದಿಂದ ಆಚರಿಸಲ್ಪಟ್ಟಿತು. ನಾವು ಅನೇಕ ಕ್ಷೇತ್ರಗಳಲ್ಲಿ ಹಿಂದುಳಿದಿರುವೆವೆಂದು ಕಂಡುಬಂದರೂ ಕೆಲವು ವಿಶಿಷ್ಟ ವಿಷಯಗಳಲ್ಲಿ ಒಂದುನೂರು ವರ್ಷಗಳ ಸಾಹಸಮಯ ಸಂಘರ್ಷವನ್ನು ನಡೆಸಿ, ಪ್ರಬುದ್ಧಾವಸ್ಥೆಯನ್ನು ಮುಟ್ಟಿರುತ್ತೇವೆಂಬುದು ಅಭಿಮಾನಾಸ್ಪದವಾಗಿರುತ್ತದೆ. ರೈಲ್ವೆ ಶತವಾರ್ಷಿಕೋತ್ಸವವನ್ನು ಕಳೆದ ವರ್ಷ ನಾವು ಆಚರಿಸಿದೆವು. ಅದರ ಬೆನ್ನಿಗೆ ಕಳೆದ ನವೆಂಬರದಲ್ಲಿ ತಂತಿವಾರ್ತೆಯ ಶತಾಬ್ಧಿಯು ನೆರವೇರಿತು. ಇದೀಗ ಜವಳಿ ಉದ್ದಿಮೆಯು ನೂರು ವರ್ಷಗಳನ್ನು ಯಶಸ್ವಿಯಾಗಿ ಮುಗಿಸಿದೆ. ನೂರುವರ್ಷ ಬಾಳಿದ ಉದ್ದಿಮೆಯು ನೂರಾರುವರ್ಷ ಬಾಳುತ್ತದೆಂದು ನಾವು ಖಚಿತವಾಗಿ ಹೇಳಬಹುದು. ಆದುದರಿಂದ ಇದುವರೆಗೆ ನಡೆದುಬಂದ ದಾರಿಯ ನೆನಪು ಮಾಡಿಕೊಂಡರೆ ಅದರಿಂದ ಅಭ್ಯುದಯದ ಮುನ್ನೋಟವನ್ನಿಟ್ಟುಕೊಳ್ಳಲು ಸಹಾಯವಾಗುತ್ತದೆ

ಉದ್ದಿಮೆಯ ವೈಶಿಷ್ಟ್ಯ

ನಮ್ಮ ಜವಳಿ ಉದ್ದಿಮೆಯ ಪ್ರಾರಂಭವು ಕೆಲವು ವೈಶಿಷ್ಟ್ಯಗಳಿಂದ ಕೂಡಿದೆ — ಹತ್ತಿಬಟ್ಟೆಯ ಉತ್ಪಾದನೆಯಲ್ಲಿ ಕ್ರಿಸ್ತಪೂರ್ವ ಮೂರು ಸಾವಿರ ವರ್ಷಗಳಷ್ಟು ಹಿಂದಿನಿಂದಲೂ ಭಾರತವು ಖ್ಯಾತನಾಮವಾಗಿತ್ತೆಂದು ಇಲ್ಲಿ ಪುನರುಚ್ಚರಿಸುವುದು ಅನಗತ್ಯ. ಆದರೆ ಈಗಿನ ಮಾದರಿಯಲ್ಲಿ ಜವಳಿ ಉದ್ದಿಮೆಯು ಬೆಳೆಯಲು ತೊಡಗಿದ್ದು ಔದ್ಯೋಗಿಕ ಕ್ರಾಂತಿಯ ಬಳಿಕವೆಂದು ಹೇಳಬಹುದು. ಐರೋಪ್ಯ ದೇಶಗಳಲ್ಲಿ ಬಳಕೆಗೆ ಬಂದ ನವೀನವಾದ ಸಾಧನ ಸಲಕರಣೆಗಳು ಬಟ್ಟೆಯ ಉತ್ಪಾದನೆಯ ಇತಿಹಾಸದಲ್ಲಿ ಹೊಸ ಅಧ್ಯಾಯವನ್ನು ತೆರೆದವು. ಅದುವರೆಗೆ ಭಾರತ ಮತ್ತಿತರ ದೇಶಗಳಿಂದ ಜವಳಿಯನ್ನು ಆಮದು ಮಾಡಿಕೊ[illegible] ನಿರ್ಯಾತ ವ್ಯಾಪಾರಕ್ಕೆ ತೊಡಗಿತು. ನಿಜ ಹೇಳಬೇಕೆಂದರೆ ತಮ್ಮ ಲಂಕಾಶೈರದ ಬಟ್ಟೆಗೆ ಶಾಶ್ವತವೂ ವಿಶಾಲವೂ ಆದ ಪೇಟೆಯನ್ನು ದೊರಕಿಸಿಕೊಳ್ಳಲೆಂದೇ ಭಾರತದ ಮೇಲೆ ಆಂಗ್ಲ ಪ್ರಭುತ್ವವನ್ನು ಸ್ಥಾಪಿಸುವ ಇಚ್ಛೆ ಪ್ರಬಲಿಸಿತು.

ಇಂಗ್ಲೆಂಡಿನಿಂದ ಬಟ್ಟೆಯನ್ನು ತಂದು ಇಲ್ಲಿ ಮಾರುವುದು ನಡೆದಂತೆಯೇ ಬಂಗಾಳದ ಹೌರಾ ಜಿಲ್ಲೆಯಲ್ಲಿ ೧೮೧೮ನೇ ಇಸವಿಯಲ್ಲಿ ಒಂದು ಜವಳಿಯ ಗಿರಣಿಯನ್ನು ಸ್ಥಾಪಿಸುವ ಕೆಲಸವೂ ನೆರವೇರಿತು. ಇದು ಒಬ್ಬ ಸಾಹಸಿಗನ ಪ್ರಯತ್ನವಾಗಿಯೇ ಕೆಲವು ದಶಕಗಳ ಕಾಲ ಉಳಿಯಿತು. ಭಾರತದಲ್ಲಿ ನಿಜವಾಗಿ ಜವಳಿಯ ಗಿರಣಿಗಳು ನೆಲಗೊಂಡದ್ದು ೧೮೫೪ನೇ ಇಸವಿಯಿಂದ ಈಚೆಗೆ. ಆ ವರ್ಷ ಕವಾಸ್ಜಿ ನಾನಾಭಾಯಿ ದಾವರರು ಮುಂ[illegible]ಲ್ಲಿ ಬೊಂಬೇ ಸ್ಪಿನ್ನಿಂಗ್ ಮಿಲ್ಸ್ ಎಂಬ ಗಿರಣಿಯನ್ನು ತೆರೆದರು. ಮುಂದಿನ ನಾಲ್ಕೇ ವರ್ಷಗಳಲ್ಲಿ ಮತ್ತೆ ಎರಡು ಗಿರಣಿಗಳು ಹುಟ್ಟಿಕೊಂಡವು. ಇದೇ ಸಮಯದ ಅಮೇರಿಕದಲ್ಲಿ ಯಾದವೀ ಕಲಹ ಉಂಟಾಗಲು, ಭಾರತದ ಜವಳಿ ಉದ್ದಿಮೆಗೆ ಇದರಿಂದ ಅಪ್ರತ್ಯಕ್ಷ ಪ್ರೋತ್ಸಾಹ ದೊರೆತು ೧೮೬೫ನೇ ವರ್ಷದ ಸುಮಾರಿಗೆ ಒಟ್ಟು ೩೩೦೦೦೦ ಕದಿರುಗಳೂ ೩೪೦೦ ಮಗ್ಗಗಳೂ ಇರುವ ಹತ್ತು ಗಿರಣಿಗಳು ತಲೆಎತ್ತಿದವು. ಆ ಮೇಲೆ ಗಿರಣಿಗಳ ಸಂಖ್ಯೆಯು ಹೆಚ್ಚುತ್ತ ಹೋಯಿತು. ೧೮೭೭ರಲ್ಲಿ ತಾತಾ ಅವರು ನಾಗಪುರದಲ್ಲಿ ಎಂಪ್ರೆಸ್ ಮಿಲ್ಲನ್ನು ತೆರೆದರು.

ಭಾರತದ ಜವಳಿ ಗಿರಣಿಗಳ ಕೂಲಿಕಾರರ ಮೊದಲನೇ ತಂಡದಲ್ಲಿ ಇಂಗ್ಲಿಷ ಹುಡುಗಿಯರೇ ಇದ್ದರು. ಇವರಲ್ಲಿ ಅನೇಕರು ಕಾಲರಾ, ಪ್ಲೇಗ ಮುಂತಾದ ಸಾಂಕ್ರಾಮಿಕ ರೋಗಗಳಿಂದ ಮೃತ್ಯುಗೊಂಡರು. ೧೮೭೦ರಲ್ಲಿ ಮುಂಬಯಿಯ ಗಿರಣಿಯೊಂದರಲ್ಲಿ ಚೀನೀ ಕೆಲಸಗಾರರೇ ಅಧಿಕ ಸಂಖ್ಯೆಯಲ್ಲಿದ್ದರು. ನಮ್ಮ ಗಿರಣಿಗಳಲ್ಲಿ ಇಂಗ್ಲೀಷರೂ ಚೀನೀಯರೂ ಅಲ್ಲದೆ, ಸಿಂಹಳೀಯರೂ ಇಸ್ರೇಲಿಗಳೂ ಕೆಲಸ ಮಾಡಿದ್ದರು. ಇದಕ್ಕೆ ಪ್ರತಿಯಾಗಿ ಸಿಂಹಳದಲ್ಲಿಯ ಗಿರಣಿಗಳು ಭಾರತದಿಂದ ಬಂದ ಕೂಲಿಗಳಿಂದಲೇ ನ[illegible]ಕ್ಕೆ ಬಂದವು. ಚೀನದಲ್ಲಿ ಮೊದಮೊದಲು ಸ್ಥಾಪಿಸಲಾದ ಗಿರಣಿಗಳಲ್ಲಿ ಶ್ರೀ ವೈದ್ಯರೆಂಬ ಭಾರತೀಯರದೂ ಒಂದು ಗಿರಣಿಯಿದ್ದಿತು.

ಮೊದಲ ದಿನಗಳು

ಪ್ರಾರಂಭಾವಸ್ಥೆಯಲ್ಲಿದ್ದ ಜವಳಿ ಉದ್ದಿಮೆಯು ಈ ಶತಮಾನದ ಆದಿಕಾಲದಲ್ಲಿ ದೃಢವಾದ ತಳಹದಿಯ ಮೇಲೆ ಬೆಳೆಯಲು ಉಪಕ್ರಮಿಸಿತು. [illegible]ನೇ ಇಸವಿಯಲ್ಲಿದ್ದ [illegible] ಗಿರಣಿಗಳ ಸಂಖ್ಯೆಯು [illegible]ನೇ ಇಸವಿಗಾಗುವಾಗ [illegible] ಆಯಿತು. ಚೀನೀ ಹಾಗೂ ಜಪಾನೀ ಪೇಟೆಗಳು ಕೈಬಿಟ್ಟದ್ದೇ ಇದಕ್ಕೆ ಕಾರಣ. ನಾಣ್ಯನಿಧಿಯ ಕ್ರಮದಲ್ಲಿ ಅಡಚಣೆಗಳು ಅನಿವಾರ್ಯವಾಗಿ ಕಾಣಿಸಿಕೊಂಡುದರಿಂದ ನಮ್ಮ ಗಿರಣಿಗಳು ನೂಲನ್ನು ನಿರ್ಯಾತ ಮಾಡ[illegible] ಹೋದವು. ಬದಲು ಸಂಗ್ರಹ ಬಿದ್ದ ನೂಲನ್ನು ತಾವೇ ಬಟ್ಟೆಯಾಗಿ ನೇಯಲು ತೊಡಗಿದವು. ಪ್ರಥಮ ಮಹಾಯುದ್ಧ ಪ್ರಾರಂಭವಾದ ಕಾಲಕ್ಕೆ ನಮ್ಮ ಗಿರಣಿಗಳಲ್ಲಿ ಹೆಚ್ಚಿನವು ನೂತ ನೂಲನ್ನು ತಾವೇ ನೇದು ಬಟ್ಟೆಯನ್ನು ಉತ್ಪಾದಿಸುವ ಕೆಲಸದಲ್ಲಿ ಮಗ್ನವಾಗಿದ್ದವು. ಈ ಅವಧಿಯಲ್ಲಿ ಕದಿರುಗಳ ಪ್ರಮಾಣವು ನೂರಕ್ಕೆ ಮೂವತ್ತೊಂಭತ್ತರಷ್ಟು ಏರಿತು: ಮಗ್ಗಗಳು ಮಾತ್ರ ನೂರಕ್ಕೆ ನೂರ ನಲುವತ್ತೆರಡರಷ್ಟು ಹೆಚ್ಚಿಕೊಂಡವು.

ಇದೇ ಅವಧಿಯಲ್ಲಿ ಮುಂಬಯಿಗೆ ಮಾತ್ರ ಮೀಸಲಿದ್ದ ಜವಳಿಯ ಗಿರಣಿಗಳು ತಮ್ಮ ಕಾರ್ಯಕ್ಷೇತ್ರವನ್ನು ಇತರೆಡೆಗಳಿಗೂ ವಿಸ್ತರಿಸಿದವು. ಈ ಶತಮಾನದ ಆದಿಯಲ್ಲಿ ಉಳಿದೆಡೆ [illegible] ಗಿರಣಿಗಳು ಇದ್ದಾಗ, ಮುಂಬಯಿ ನಗರದಲ್ಲಿ ಮಾತ್ರವೇ [illegible] ಗಿರಣಿಗಳು ಕೆಲಸಮಾಡುತ್ತಿದ್ದವು. ಪ್ರಥಮ ಮಹಾಯುದ್ಧದ ಪ್ರಾರಂಭದಲ್ಲಿ ಮುಂಬಯಿಯ ಗಿರಣಿಗಳ ಸಂಖ್ಯೆ ಮೂರರಷ್ಟು ಮಾತ್ರ ಹೆಚ್ಚಿಕೊಂಡಿತು. ಆದರೆ ಉಳಿದ ಕೇಂದ್ರಗಳಲ್ಲಿ [illegible] ಹೊಸ ಗಿರಣಿಗಳು ಸ್ಥಾಪಿಸಲ್ಪಟ್ಟವು. ಹೀಗಿದ್ದರೂ ಸಹ ಬಟ್ಟೆ ಉತ್ಪಾದನೆಯಲ್ಲಿ ಮೊದಲಿಂದಲೂ ಮುಂಬಯಿನಗರವೇ ಮಹತ್ವವನ್ನು ಪಡೆದಿತ್ತು. ತನ್ನ [illegible] ಕದಿರುಗಳಿಂದ ಮತ್ತು [illegible] ಮಗ್ಗಗಳಿಂದ ಕ್ರಮವಾಗಿ [illegible] ಲಕ್ಷ ರಾತಲು ನೂಲನ್ನೂ [illegible] ಲಕ್ಷ ರಾತಲು ಬಟ್ಟೆಯನ್ನೂ ಮುಂಬಯಿನಗರ ಸಿದ್ಧಗೊಳಿಸುತ್ತಿದ್ದರೆ ಉಳಿದೆಲ್ಲ ಕೇಂದ್ರಗಳು ತಮ್ಮ [illegible] ಕದಿರುಗಳಿಂದಲೂ [illegible] ಮಗ್ಗಗಳಿಂದಲೂ ಕ್ರಮವಾಗಿ [illegible] ಲಕ್ಷ ರಾತಲು ನೂಲನ್ನೂ [illegible] ಲಕ್ಷ ರಾತಲು ಬಟ್ಟೆಯನ್ನೂ ಉತ್ಪಾದಿಸುತ್ತಿದ್ದವು.

ಮಹಾಯುದ್ಧಕ್ಕೆ ಮುಂಚೆ ಹೀಗೆ ಬಟ್ಟೆಯ ಉತ್ಪಾದನೆ ವೃದ್ಧಿ ಹೊಂದುವುದಕ್ಕೆ ದೇಶದೊಳಗೆ ಸ್ವದೇಶೀ ವ್ರತದ ಕುರಿತು ನಡೆದ ಚಳವಳಿ [illegible] ಕಾರಣ. ವಿದೇಶಗಳಲ್ಲಿ ಸಿದ್ಧಗೊಂಡ ಬಟ್ಟೆಗಿಂತ ನಮ್ಮ ದೇಶದಲ್ಲಿ ನೂತು ನೆಯ್ದು ತಯಾರಾದ ವಸ್ತ್ರವೇ ಶ್ರೇಷ್ಠವೆಂಬ ಭಾವನೆಯು ಜನರಲ್ಲಿ ಮೂಡಿದ್ದರಿಂದ ಗಿರಣಿಗಳು ತಮ್ಮ ವ್ಯವಹಾರವನ್ನು ಹೆಚ್ಚಿಸಿಕೊಳ್ಳುವುದು ಸಾಧ್ಯವಾಯಿತು. ಪ್ರ. ಮ. ಮಹಾಯುದ್ಧ ಪ್ರಾರಂಭವಾದ ಬಳಿಕ ನಮಗೆ ವಿದೇಶಗಳಿಂದ ಬಟ್ಟೆಯು ಆಮದಾಗುವುದು ನಿಂತು ಹೋಗಲು, ಸ್ವದೇಶೀ ಗಿರಣಿಗಳು ತಮ್ಮ ಉದ್ದಿಮೆಯನ್ನು ಭರದಿಂದ ಬೆಳೆಸಿಕೊಂಡವು. ಆದರೆ ಯಾಂತ್ರಿಕ ಸಲಕರಣೆಗಳನ್ನು ಪಾಶ್ಚಿಮಾತ್ಯ ದೇಶಗಳಿಂದ ತರಿಸಲು ಆಗದ್ದರಿಂದ ಗಿರಣಿಗಳ ವಿಸ್ತರಣಾಕಾರ್ಯ ಕೈಗೂಡಲಿಲ್ಲ.

ಸಂರಕ್ಷಣೆಯ ಕ್ರಮ

ಪ್ರಥಮ ಮಹಾಯುದ್ಧ ಮುಗಿದ ಬಳಿಕದ ಆರ್ಥಿಕ ಪರಿಸ್ಥಿತಿಯು ಗಿರಣಿಗಳಿಗೆ ಒಳ್ಳೆಯ ಲಾಭವನ್ನು ತಂದುಕೊಟ್ಟಿತು. ಗಿರಣಿಗಳು ತಮ್ಮ ಸಾಮರ್ಥ್ಯದ ಮಿತಿಯೊಳಗೆಯೇ ಸಾಧ್ಯವಿದ್ದಷ್ಟು ಹೆಚ್ಚು ಕೆಲಸ ಮಾಡಹತ್ತಿದವು. ತತ್ಪರಿಣಾಮವಾಗಿ [illegible]ರಲ್ಲಿ [illegible] ಲಕ್ಷ ರಾತಲು ನೂಲು ನೂತರೆ [illegible]ರಲ್ಲಿ [illegible] ರಾತಲ ನೂಲು ಉತ್ಪಾದನೆಗೊಂಡಿತು. ಬಟ್ಟೆಯ ಪ್ರಮಾಣವು [illegible] ರಾತಲಿನಿಂದ [illegible] ರಾತಲುಗಳಿಗೆ ಏರಿತು. [illegible]ನೇ ವರ್ಷದ ಸುಮಾರಿಗೆ ಬಟ್ಟೆಯ ಆಯಾತ ಪ್ರಮಾಣವು ತೀರ ಕುಗ್ಗಿತು. ಭಾರತದ ಬೇರೆ ಬೇರೆ ಕೇಂದ್ರಗಳಲ್ಲಿ ಗಿರಣಿಗಳು ತಲೆಎತ್ತಿಕೊಂಡು ಲಾಭದಾಯಕ ಪರಿಸ್ಥಿತಿಯನ್ನು ಸ್ವಪ್ರಯೋಜನಕ್ಕೆ ಉಪಯೋಗಿಸಿಕೊಂಡವು. ಇವುಗಳಲ್ಲಿ ತೊಡಗಿದ ಭಂಡವಾಳವು [illegible]ರಿಂದ [illegible]ನೇ ವರ್ಷಕ್ಕಾಗುವಾಗ [illegible] ಲಕ್ಷ ರೂಪಾಯಿಗಳಿಗಿಂತ [illegible] ಲಕ್ಷ ರೂಪಾಯಿಗಳಿಗೆ ಹೆಚ್ಚಿತು.

(೯ನೇ ಪುಟನೋಡಿ)

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ. ಒ[illegible] ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. [illegible]

ಸಣ್ಣ ಬಾಟ್ಲಿಗೆ ರೂ. [illegible]

ಶ್ರೀ ರಾಮತೀರ್ಥ ಯೋಗಾಶ್ರಮ,

ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಸ್ವಿಸ್ ತಯಾರಿ ರಿಸ್ಟ್‌ವಾಚು ಬೆಲೆ ರೂ. 5/- ಮಾತ್ರ.

ರೂಪಾಯಿ 5/-ಕ್ಕೆ ಸ್ವಿಸ್ ತಯಾರಿ ರಿಸ್ಟ್ ವಾಚು ಮತ್ತು ಸ್ಟೆಂಡಾರ್ಡ ಫೌಂಟನ್ ಪೆನ್ ದೊರೆಯುವುದು. 15 ವರುಷಗಳ ಗ್ಯಾರಂಟಿ. ರೂಪಾಯಿ 1-2-0 ಟಪ್ಪಾಲು ವೆಚ್ಚ ಪ್ರತ್ಯೇಕ.

ಇಂದೇ ಬರೆಯಿರಿ:

National Swiss Watch Suppliers,
Halka No. 26 (BG) Meerut (U. P.)

ಋತುಸ್ರಾವ ನಿಂತಿತು

"ಕುಮಾರಿ" ಗುಳಿಗೆಗಳನ್ನು ಉಪಯೋಗಿಸಿದರೆ [illegible] ಋತುಸ್ರಾವವಾಗುವದು, ಹತೋಟಿಗೆ ಬರುವದು. ಈ ಔಷಧ ಸೇವನೆಯಿಂದ ಶೀಘ್ರ ಗುಣಹೊಂದಬಹುದು. ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ: ರೂ. 3/-; ಸ್ಪೆಶಲ್ ರೂ. 5-, ಅಧಿಕಾಧಿಕ ಸ್ಪೆಶಲ್ ರೂ. 8-[ವಿ. ಪಿ. ಖರ್ಚು ಪ್ರತ್ಯೇಕ]

Mrs. P. DEVEE, F.I.S.(N.J.)
CALCUTTA. 40

ಸ್ಟಾಕಿಸ್ಟರು: ಶಹಾ ಕಂಪನಿ, ಮಂಗಳೂರು.

ಆಡಳಿತದ ಟೀಕೆ

ಮದ್ರಾಸು ಶಾಸನ ಸಭೆಯಲ್ಲಿ ಈಗ ಬೇರೆ ಬೇರೆ ಇಲಾಖೆಗಳಿಗೆ ಹಣವನ್ನು ಮಂಜೂರು ಮಾಡುವ ಕಾರ್ಯಕ್ರಮ ನಡೆಯುತ್ತದೆ. ಆಡಳಿತದಲ್ಲಿ ಮುಂದುಗಾರಿಕೆ, ಲಂಚ ಗುಳಿತನ ಮತ್ತು ಅಧಿಕಾರದ ದುರುಪಯೋಗ ಮುಂತಾದ ಆರೋಪಗಳನ್ನು ವಿರೋಧೀ ಗುಂಪುಗಳು ಹೊರಿಸಲು, ಮುಖ್ಯ ಮಂತ್ರಿ ಶ್ರೀ ರಾಜಗೋಪಾಲಾಚಾರಿಯವರ ಗೈರು ಹಾಜರಿಯಲ್ಲಿ ಶ್ರೀ ಸುಬ್ರಹ್ಮಣ್ಯಂ ಅವುಗಳನ್ನು ಖಂಡಿಸಿ ಉತ್ತರ ಕೊಟ್ಟರು. ಚರ್ಚೆಯ ಕಾಲದಲ್ಲಿ ಕಾಂಗ್ರೆಸಿನ ಶ್ರೀ ಟಿ. ಅನಂತ ಪೈಗಳು ಮಾತನಾಡುತ್ತಾ ಅಗ್ಗದ ಜನಪ್ರಿಯತೆಯನ್ನು ಗಳಿಸುವ ಉದ್ದೇಶದಿಂದ ಪ್ರತಿಪಕ್ಷಗಳು ಮಂತ್ರಿಗಳ ಸಂಚಾರ ಕಾರ್ಯಕ್ರಮ ಮುಂತಾದುವನ್ನು ಟೀಕಿಸುವುದು ಮತ್ತು ಎಲ್ಲೋ ಒಬ್ಬಿಬ್ಬರು ತಪ್ಪಿ ನಡೆದುದಕ್ಕೆ ಆಡಳಿತವೇ ಸಂಪೂರ್ಣ ಕೆಟ್ಟು ಹೋಯಿತೆಂದು ದೂರುವುದು ಸರಿಯಲ್ಲ ಎಂದರು.

ಹಿಂಸೆಯನ್ನು ತ್ಯಜಿಸಿರಿ

ಪೋಲೀಸ್ ಇಲಾಖೆಯ ಬೇಡಿಕೆಯ ಚರ್ಚೆಯನ್ನು ಉತ್ತರಿಸುವಾಗ ಶ್ರೀ ಸುಬ್ರಹ್ಮಣ್ಯಮರು ಕಮ್ಯುನಿಸ್ಟರಿಗೆ ಹಿಂಸಾ ವೃತ್ತಿಯನ್ನು ಬಿಟ್ಟುಕೊಡಲು ಹೇಳಿದರು. ಸರಕಾರವನ್ನು ಬದಲಿಸುವುದಕ್ಕಾಗಿ ರಾಜ್ಯ ಘಟನೆಯಲ್ಲಿ ಹೇಳಲಾದ ಪದ್ಧತಿಯನ್ನೆ ಅನುಸರಿಸುವುದಾಗಿಯೂ ಕಮ್ಯುನಿಸ್ಟರು ಸಾರಬೇಕು. ಆಗ ಮಾತ್ರ ಪೋಲೀಸ ಇಲಾಖೆಯ ಖರ್ಚನ್ನು ಇಳಿಸಬಹುದು ಎಂದವರು ನುಡಿದರು. ಮುಂದುವರಿದು, ೧೯೪೭ರ ಬಳಿಕ ಕಮ್ಯುನಿಸ್ಟ ಪಕ್ಷದ ಧೋರಣೆ ಹಾಗೂ ಚಟುವಟಿಕೆಗಳಿಂದಾಗಿ ಮದ್ರಾಸ ರಾಜ್ಯದ ಪೋಲಿಸ ಇಲಾಖೆಯ ವೆಚ್ಚ ಎರಡು ಕೋಟಿ ರೂಪಾಯಿಗಳಿಂದ ಹೆಚ್ಚಿತು. ಕಮ್ಯುನಿಸ್ಟರು ಕಾಂಗ್ರೆಸಿನಿಂದ ಅಧಿಕಾರ ಕಸಿದುಕೊಳ್ಳಲು ಹಿಂಸಾಚಾರಗಳನ್ನು ಅವಲಂಬಿಸಿರುವುದೇ ಇದರ ಕಾರಣ. ಪೋಲೀಸ ಇಲಾಖೆಯ ಖರ್ಚು ಈಗ ನಾಲ್ಕು ಕೋಟಿ ರೂಪಾಯಿಗಳನ್ನು ಮೀರುತ್ತದೆ. ಒಂದೂವರೆ ಕೋಟಿ ರೂಪಾಯಿಗಳನ್ನು ಸಾಮಾನ್ಯ ಪೋಲೀಸರಿಗೆ ಸಂಬಳಕ್ಕಾಗಿ ಕೊಡಲಾಗುವುದು. ಕಮ್ಯುನಿಸ್ಟರು ರಾಜ್ಯದಲ್ಲಿ ನಡೆಸುವ ಗೊಂದಲಗಳನ್ನು ಹತ್ತಿಕ್ಕಲು ಎರಡೂವರೆ ಕೋಟಿ ರೂಪಾಯಿಗಳ ವೆಚ್ಚದಿಂದ ವಿಶೇಷ ಪೋಲೀಸ ಪಡೆಯನ್ನು ಕಟ್ಟಬೇಕಾಯಿತು. "ಜನರು ತಮ್ಮ ತೊಂದರೆಗಳನ್ನು ನಿವಾರಿಸಿಕೊಳ್ಳಲು ಹಿಂಸಾ ಮಾರ್ಗವನ್ನು ಹಿಡಿದರೆ ಅದನ್ನು ತಡೆಯಲಾರೆವು" ಎಂದು ಕಮ್ಯುನಿಸ್ಟ ಧುರೀಣ ಶ್ರೀ ರಾಮಮೂರ್ತಿಯವರು ಹೇಳಿದ ನಂತರ ಪೋಲೀಸ ಪಡೆಯ ಖರ್ಚನ್ನು ಕಡಿಮೆ ಮಾಡುವುದೆಂತು? ಎಂದು ಪ್ರಶ್ನಿಸಿ, ಮಂತ್ರಿಗಳು ತಮ್ಮ ನಿಲುಮೆಯನ್ನು ಸಮರ್ಥಿಸಿಕೊಂಡರು.

ಆರೋಗ್ಯ ರಕ್ಷಣೆ

ಸಾರ್ವಜನಿಕ ಆರೋಗ್ಯ ಇಲಾಖೆಯ ಬೇಡಿಕೆಯನ್ನು ಮಂಡಿಸುವಾಗ ಮಾನ್ಯ ಮಂತ್ರಿ ಶ್ರೀ ಎ. ಬಿ. ಶೆಟ್ಟರು ರಾಜ್ಯದಲ್ಲಿ ರೋಗಗಳನ್ನು ತಡೆಗಟ್ಟಿ ಆರೋಗ್ಯಕರವಾದ ವಾತಾವರಣವನ್ನು ನಿರ್ಮಿಸಲು ಕೈಗೊಂಡ ಪ್ರಯತ್ನಗಳನ್ನು ಸಮರ್ಪಕವಾಗಿ

ಹಿಂಸೆಯನ್ನು ತ್ಯಜಿಸಲು ಕಮ್ಯೂನಿಸ್ಟರಿಗೆ ಬಿನ್ನಹ

ಆಂಧ್ರದಲ್ಲಿ ಪಾನಪ್ರತಿಬಂಧದ ಬಗ್ಗೆ ಸ್ವಾಮಿ ಸೀತಾರಾಮರ ಆಗ್ರಹ

ವಿವರಿಸಿದರು. ಸಾಂಕ್ರಾಮಿಕ ರೋಗಗಳೂ ಆಹಾರದಲ್ಲಿ ಪೌಷ್ಟಿಕ ಪದಾರ್ಥದ ಅಭಾವವೂ ಆರೋಗ್ಯರಕ್ಷಣಾ ಕಾರ್ಯದಲ್ಲಿ ಇದಿರಿಸಬೇಕಾದ ಸಮಸ್ಯೆಗಳೆಂದು ಅವರು ಹೇಳಿದರು. ಪ್ಲೇಗು, ಸಿಡುಬು, ಕೊಲೆರಾ ಮುಂತಾದವುಗಳನ್ನು ನಿಯಂತ್ರಿಸಲು ಈಗಾಗಲೇ ಕ್ರಮ ತೆಗೆದುಕೊಳ್ಳಲ್ಪಟ್ಟಿದೆ. ಮಲೇರಿಯಾದ ಹಾವಳಿಯನ್ನು ತಡೆಗಟ್ಟಲು ರಾಷ್ಟ್ರವ್ಯಾಪಿ ಯೋಜನೆಯೊಂದು ಕಾರ್ಯಾನ್ವಿತಗೊಳ್ಳುತ್ತದೆ. ಆನೆಕಾಲು ರೋಗದ ನಿವಾರಣೋದ್ದೇಶದಿಂದ ೪ ಕೇಂದ್ರಗಳಿಗೆ ಸರಕಾರ ಹಣವನ್ನು ಒದಗಿಸುತ್ತದೆ. ಹೆರಿಗೆ ಹಾಗೂ ಶಿಶು ಸಂಗೋಪನಾ ವ್ಯವಸ್ಥೆಯೂ ಭರದಿಂದ ವಿಸ್ತರಿಸಲ್ಪಡುತ್ತದೆ. ಕುಟುಂಬ ಯೋಜನೆಯ ಉದ್ದೇಶದಿಂದ ಅಲ್ಲಲ್ಲಿ ಔಷಧಾಲಯಗಳನ್ನು ತೆರೆಯುವ ಮತ್ತು ಹೆರಿಗೆಯ ಆಸ್ಪತ್ರೆಗಳನ್ನು ಸ್ಥಾಪಿಸುವ ವಿಚಾರ ಪರಿಶೀಲನೆಯಲ್ಲಿದೆ. ಆರೋಗ್ಯ ರಕ್ಷಣಾ ದೃಷ್ಟಿಯಿಂದ ಶುದ್ಧ ನೀರಿನ ಪೂರೈಕೆಯ ವ್ಯವಸ್ಥೆಯೊಂದು ಇಷ್ಟರಲ್ಲೇ ಅನುಸರಿಸಲ್ಪಡುತ್ತದೆ—ಎಂದು ಮಂತ್ರಿಗಳು ತಿಳಿಸಿದರು.

ಮೆಡಿಕಲ್ ಕಾಲೇಜು

ಪ್ರಶ್ನೋತ್ತರ ಕಾಲದಲ್ಲಿ ಶ್ರೀ ಅನಂತ ಪೈಗಳಿಗೆ ಉತ್ತರ ಕೊಡುತ್ತಾ ಶ್ರೀ ಎ. ಬಿ. ಶೆಟ್ಟರು ಮಧುರೆಯಲ್ಲಿ ಸುಮಾರು ೭೧,೫೫,೦೦೦ ರೂಪಾಯಿಗಳ ವೆಚ್ಚದಿಂದ ಹೊಸತೊಂದು ವೈದ್ಯಕೀಯ ಶಿಕ್ಷಣನೀಡುವ ಕಾಲೇಜನ್ನು ಕಟ್ಟಿಸುತ್ತಿರುವುದಾಗಿ ಹೇಳಿದರು. ಈ ಕಾಲೇಜು ಬರುವ ಜೂಲೈ ತಿಂಗಳಿಂದ ಕೆಲಸವನ್ನು ತೊಡಗುತ್ತದೆ. ಇದರಲ್ಲಿ ಐವತ್ತು ವಿದ್ಯಾರ್ಥಿಗಳಿಗೆ ಪ್ರವೇಶ ದೊರಕುತ್ತದೆ. ಎರಡು ವರ್ಷಗಳಲ್ಲಿ ನೂರು ವಿದ್ಯಾರ್ಥಿಗಳಿಗೆ ಅವಕಾಶಮಾಡಿಕೊಡಲಾಗುವುದು. ಕಟ್ಟಡಗಳಿಗೋಸ್ಕರ ೪೫.೩ ಲಕ್ಷ ರೂಪಾಯಿಗಳೂ ಪ್ರಯೋಗಶಾಲೆಗೋಸ್ಕರ ೨೫.೨ ಲಕ್ಷ ರೂಪಾಯಿಗಳೂ ಸಾಧನ ಸಲಕರಣೆಗಳಿಗೋಸ್ಕರ ೧.೩ ಲಕ್ಷ ರೂಪಾಯಿಗಳೂ ಖರ್ಚಾಗುತ್ತವೆ.

ಚಕ್ರಬಂಧ ಸ್ಪರ್ಧೆ

ಚಕ್ರಬಂಧ ಸ್ಪರ್ಧೆಯನ್ನು ಲೈಸೆನ್ಸಿಗೊಳಪಡಿಸುವ, ಪ್ರತಿಬಂಧಿಸುವ ಇಲ್ಲವೆ ನಿಯಂತ್ರಿಸುವ ಬಗ್ಗೆ ರಾಜ್ಯ ಹಾಗೂ ಕೇಂದ್ರ ಸರಕಾರಗಳ ನಡುವೆ ತೀವ್ರ ಪರ್ಯಾಲೋಚನೆ ನಡೆದಿರುವುದಾಗಿ ಕಾಯಿದೆ ಮಂತ್ರಿ ಶ್ರೀ ಕುಟ್ಟಿ ಕೃಷ್ಣನಾಯರರು ಒಂದು ಪ್ರಶ್ನೆಗೆ ಉತ್ತರ ಕೊಟ್ಟರು. ಸರಕಾರೀ ಕಚೇರಿಗಳಲ್ಲಿ ನೌಕರರು ಚಕ್ರಬಂಧ ಸ್ಪರ್ಧೆಗಳನ್ನು ಬಿಡಿಸುವುದರಲ್ಲಿ ತೊಡಗಿದ್ದರಿಂದ ಸರಕಾರೀ ಕೆಲಸಗಳು ಸರಿಯಾಗಿ ನಡೆಯುತ್ತಿಲ್ಲವೆಂದು ಈ ಸ್ಪರ್ಧೆಗಳನ್ನು ಪ್ರತಿಬಂಧಿಸಲಾಗುತ್ತದೆಯೋ ಎಂದೊಬ್ಬರು ಪೂರಕ ಪ್ರಶ್ನೆಯನ್ನು ಕೇಳಿದಾಗ ಮಂತ್ರಿಗಳು ಹೌದೆಂದು ಉತ್ತರಿಸಿದರು. ಇಂಥ ಜೂಜುಗಾರಿಕೆಯನ್ನು ತಡೆಯುವುದೇ ಸರಕಾರದ ಉದ್ದೇಶವೆಂದವರು ಹೇಳಿದರು.

ಭೂಮಿಯ ಗಣನೆ

ರಾಜ್ಯದಲ್ಲಿ ಕೆಲವು ನಿರ್ದಿಷ್ಟ ಹಳ್ಳಿಗಳಲ್ಲಿ ಭೂಧಾರಣಾ ಪರಿಸ್ಥಿತಿಯನ್ನು ಅಭ್ಯಸಿಸುವುದಕ್ಕೋಸ್ಕರ ಅಂಕೆ ಸಂಖ್ಯೆಗಳನ್ನು ಸಂಗ್ರಹಿಸಲಾಗುತ್ತದೆಂದು ಕಂದಾಯ ಮಂತ್ರಿ ಮಾಣಿಕ್ಯವೇಲು ನಾಯುಕ್ಕರರು ಹೇಳಿದರು. ಇಡೀ ರಾಜ್ಯದಲ್ಲಿ ಭೂಸಂಬಂಧದ ಖಾನೇಸುಮಾರಿಯನ್ನು ತೆಗೆಯುವ ವಿಚಾರವನ್ನು ಆ ಬಳಿಕ ಪರ್ಯಾಲೋಚಿಸುವುದಾಗಿ ಅವರು ತಿಳಿಸಿದರು. ಭೂಸುಧಾರಣಾ ಪ್ರಶ್ನೆಯನ್ನು ಬಿಡಿಸುವಾಗ ಈ ಖಾನೇಸುಮಾರಿಯಿಂದ ಹೆಚ್ಚಿನ ಪ್ರಯೋಜನ ಲಭ್ಯವಾದೀತೆಂದು ಅವರು ಅರುಹಿದರು. ರಾಜ್ಯದ ಬೇರೆ ಬೇರೆ ಪ್ರದೇಶಗಳಲ್ಲಿ ಭಿನ್ನ ಭಿನ್ನ ಪ್ರಕಾರದ ಭೂಸಾಗುವಳಿಯ ಕ್ರಮವು ಅನುಸರಿಸಲ್ಪಡುವುದರಿಂದ ಎಲ್ಲ ಪದ್ಧತಿಯ ಮಾಹಿತಿಯನ್ನು ಕೊಡುವ ರೀತಿಯಲ್ಲಿ ಹಳ್ಳಿಯ ಕೇಂದ್ರಗಳನ್ನು ಪರಿಶೀಲನೆಗೋಸ್ಕರ ಆರಿಸಲಾಗುವುದೆಂದು ಮಂತ್ರಿಗಳು ನುಡಿದರು.

ಸೀತಾರಾಮರ ಉಪವಾಸ

ಆಂಧ್ರದಲ್ಲಿ ಪಾನಪ್ರತಿಬಂಧದ ವಿಷಯ ವಿಲಂಬನೆಯ ಪರಿಸ್ಥಿತಿ ಉಂಟಾಗಿರುತ್ತದೆ. ರಾಮಮೂರ್ತಿ ಸಮಿತಿಯವರ ಸಿಫಾರಸುಗಳನ್ನು ಕಾರ್ಯಗತಮಾಡಬಾರದೆಂಬ ಕಾರಣವನ್ನು ಮುಂದೆಮಾಡಿ ಸ್ವಾಮಿ ಸೀತಾರಾಮರು ಉಪವಾಸವನ್ನು ಪ್ರಾರಂಭಿಸಿದ್ದು, ಅವರ ಸ್ಥಿತಿ ತುಂಬ ಚಿಂತಾಜನಕವಾಗಿರುತ್ತದೆ. ಕೇವಲ ಮೂರ್ಛಾವಸ್ಥೆಯಲ್ಲಿ ಅವರು ಬಿದ್ದುಕೊಂಡಿರುವರೆಂದು ವರದಿಗಳು ತಿಳಿಸುತ್ತವೆ. ಉಪವಾಸವನ್ನು ಮುರಿಯಬೇಕೆಂದು ರಾಷ್ಟ್ರಪತಿ ರಾಜೇಂದ್ರ ಪ್ರಸಾದ, ರಾಜಗೋಪಾಲಾಚಾರಿ ಮುಂತಾದ ಹಲವು ಮಹನೀಯರು ವಿನಂತಿಮಾಡಿಕೊಂಡರೂ ಅದು ಪ್ರಯೋಜನಕ್ಕೆ ಬರಲಿಲ್ಲ. ಸ್ವಾಮಿ ಸೀತಾರಾಮರ ಭೇಟಿಗಾಗಿ ಶ್ರೀ ಗೋಪಾಲ ರೆಡ್ಡಿಯವರೂ ಪ್ರೊಫೆಸರ ಭನ್ಸಾಲಿಯವರೂ ವಿನಯಾಶ್ರಮಕ್ಕೆ ಧಾವಿಸಿದರು. "ಹರಿಜನ" ಪತ್ರಿಕೆಗಳ ಸಂಪಾದಕರಾದ ಮಗನಭಾಯಿ ದೇಸಾಯರು ಹಾಗೂ ಕಾಂಗ್ರೆಸ ಕಾರ್ಯದರ್ಶಿ ಅಗರವಾಲಾರವರು ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ಉದ್ದೇಶ ಸಾಧನೆಗೋಸ್ಕರ ಅನ್ನಸತ್ಯಾಗ್ರಹ ಹೂಡುವ ವಿಚಾರ ಖಂಡನೀಯವೆಂದು ಹೇಳಿರುವರು. ರಾಮಮೂರ್ತಿ ಸಮಿತಿಯ ಸಿಫಾರಸುಗಳು ಇನ್ನೂ ಸರಕಾರದ ಪರ್ಯಾಲೋಚನೆಯಲ್ಲಿದೆ—ಅಲ್ಲದೆ ಕಾಂಗ್ರೆಸ ಕಾರ್ಯಕಾರೀ ಸಮಿತಿಯು ಎಪ್ರೀಲು ೪ನೇ ತಾರೀಕಿಗೆ ಇದನ್ನು ವಿಚಾರಿಸುತ್ತದೆ. ಹೀಗಿರುವುದರಿಂದ ಈಗಿನ ಉಪವಾಸವು ಕಾಲೋಚಿತವೂ ಅಲ್ಲ; ನ್ಯಾಯವೂ ಅಲ್ಲ ಎಂದು ಅಗರವಾಲಾರ ಅಭಿಪ್ರಾಯ.

ರೈತರ ಮತಪ್ರದರ್ಶನ

ಕಮ್ಯೂನಿಸ್ಟರ ಪ್ರಚೋದನೆಯಿಂದ ಕರ್ನೂಲಿನಲ್ಲಿ ಆಂಧ್ರ ರೈತರು ದೊಡ್ಡದೊಂದು ಮೆರವಣಿಗೆಯನ್ನು ತೆರೆದು ಮತ ಪ್ರದರ್ಶನವನ್ನು ಮಾಡಿದರು. ಸುಮಾರು ಐದುಸಾವಿರ ರೈತರು ಇದರಲ್ಲಿ ಭಾಗವಹಿಸಿ ಭೂಸುಧಾರಣೆಯ ಬಗ್ಗೆ ತ್ವರಿತ ಕ್ರಮ ಕೈಗೊಳ್ಳಬೇಕೆಂದು ಆಗ್ರಹಪಟ್ಟರು. ಬಂಜರು ಭೂಮಿಯನ್ನು ಭೂಮಿ ಇಲ್ಲದವರಿಗೆ ಕೊಡಬೇಕು, ಪಾನಪ್ರತಿಬಂಧವನ್ನು ಕಿತ್ತೊಗೆಯಬೇಕು, ನೂತನ ಪ್ರಾಥಮಿಕ ಶಿಕ್ಷಣವನ್ನು ರದ್ದುಗೊಳಿಸಬೇಕು. ಒಕ್ಕಲುಗಳನ್ನು ಹೊರಗಟ್ಟದಂತೆ ತಡೆಯಬೇಕು, ಇನಾಂ ಭೂಮಿಗಳ ರದ್ಧತಿಯಾಗಬೇಕು, ರೈತರ ಋಣ ಪರಿಹಾರದ ಕಾನೂನು ಜ್ಯಾರಿಗೆ ಬರಬೇಕು ಎಂದು ಮುಂತಾದ ಬೇಡಿಕೆಗಳನ್ನು ಅವರು ಶಾಸನ ಸಭಾಸದಸ್ಯ ಶ್ರೀ ನಾಗಿರೆಡ್ಡಿ ಮುಂತಾದವರ ಮೂಲಕ ಮುಖ್ಯ ಮಂತ್ರಿ ಶ್ರೀ ಪ್ರಕಾಶಮರ ಗಮನಕ್ಕೆ ತಂದರು. ಈ ಮತ ಪ್ರದರ್ಶನದಿಂದ ಗಲಭೆ ದೊಂಬಿಗಳಾಗ

Visit

K. R. K. SHET DIAMOND MART

Opposite Government College, MANGALORE.

For all your requirements in Diamonds and Jewellery Lucky Birth Stones are also available.

Prop: K. K. R. SHET.

ಚ್ಯವನಪ್ರಾಶ

ಹಿಮಾಲಯದ ಉತ್ಕೃಷ್ಟ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಚ್ಯವನಪ್ರಾಶವು ಕ್ಷಯ, ದುರ್ಬಲತೆ ಇತ್ಯಾದಿ ಕಾಹಿಲೆಗಳಿಗೆ ದಿವ್ಯೌಷಧಿ. ವಯೋವೃದ್ಧರಿಗೆ ವಿಶೇಷ ಪರಿಣಾಮಕಾರಿಯಾದುದು. ಎಳೆ ಮಕ್ಕಳನ್ನೂ ಗಟ್ಟಿಮುಟ್ಟಾಗಿಯೂ ಆರೋಗ್ಯವಂತರಾಗಿಯೂ ಬೆಳೆಸುವುದು. ಚ್ಯವನಪ್ರಾಶವನ್ನು ಸತತ ಉಪಯೋಗಿಸುವುದರಿಂದ ಆಯುಸ್ಸು ವೃದ್ಧಿಯಾಗುವುದು. ಪರೀಕ್ಷಾರ್ಥವಾಗಿ ಕೆಳಗಿನ ವಿಳಾಸಕ್ಕೆ ಬರೆದು ಒಮ್ಮೆ ತರಿಸಿ ನೋಡಿರಿ. ಸೇರಿಗೆ ರೂಪಾಯಿ 10/- ಬೆಲೆ.

ಕಾಲಿಕಮಾಲಿ ಆಯುರ್ವೇದ ಫಾರ್ಮಸಿ, ಋಷಿಕೇಶ (ಡೆಹರಾಡೂನ್)

Kali Kamali Ayurved Pharmacy, RISHIKESH (Dehradun.)

ತಿರುಕೊಚ್ಚಿಯಲ್ಲಿ ಶಾಸನಸಭೆಯ ಉದ್ಘಾಟನೆ

ಕೇಂದ್ರ ಹಣಕಾಸಿನ ಮಂತ್ರಿಗಳಿಂದ ಕೆಲವು ರಿಯಾಯತಿಗಳ ಆಶ್ವಾಸನೆ

ದಂತೆ ವಿಶೇಷವಾದ ಪೋಲೀಸು ವ್ಯವಸ್ಥೆಯನ್ನು ಏರ್ಪಡಿಸಿದ್ದರು. ಕರ್ನೂಲು ನಗರದಲ್ಲಿ ಶಾಂತವಾಗಿಯೇ ಕಿಸಾನರು ವರ್ತಿಸಿದರೂ ಕೆಲವು ರೈಲ್ವೆ ಮಾರ್ಗಗಳಲ್ಲಿ ಅವರು ಅಡಚಣೆಯನ್ನುಂಟು ಮಾಡಿದರು.

ಆಂಧ್ರ ಹೈಕೋರ್ಟು

ಆಂಧ್ರದ ಹೈಕೋರ್ಟನ್ನು ಜೂಲೈ ೫ನೇ ತಾರೀಕಿನಂದು ಸ್ಥಾಪಿಸಲಾಗುವುದೆಂದು ಗೃಹಮಂತ್ರಿ ಡಾ। ಕಟಜೂರವರು ತಿಳಿಸಿದ್ದಾರೆ. ಶಾಸನ ಸಭೆಯು ಗುಂಟೂರಿನಲ್ಲಿ ಹೈಕೋರ್ಟು ನೆಲಸಬೇಕೆಂದು ಈಗಾಗಲೇ ನಿರ್ಣಯ ಮಾಡಿದ್ದು ಗವರ್ನರರು ಘಟನಾತ್ಮಕವಾದ ಕ್ರಮದಂತೆ ಇಷ್ಟರಲ್ಲೇ ಆಜ್ಞೆಯನ್ನು ಹೊರಡಿಸಬಹುದು. ಕಳೆದವಾರ ಕಾಯಿದೆ ಸಚಿವ ಶ್ರೀ ವಿಶ್ವನಾಥಂ ಹಾಗು ಆಂಧ್ರ ಸರಕಾರದ ಮುಖ್ಯ ಕಾರ್ಯದರ್ಶಿ ಪುಲ್ಲಾ ರೆಡ್ಡಿಯವರು ಗುಂಟೂರು ನಗರವನ್ನು ಸಂದರ್ಶಿಸಿ ಹೈಕೋರ್ಟನ್ನು ನೆಲೆಗೊಳಿಸಲು ಉಚಿತವಾದ ಸ್ಥಳಗಳ ಪರಿಶೀಲನಾ ಕಾರ್ಯ ನಡೆಸಿದರು.

ಪ್ರಸಪಾ ಮಂತ್ರಿಮಂಡಳ

ತಿರುವಾಂಕೂರು ಕೊಚ್ಚಿ ರಾಜ್ಯದಲ್ಲಿ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಪ್ರಸಪಾ ಧುರೀಣ ಶ್ರೀ ಪಟ್ಟಂತಾನು ಪಿಳ್ಳೈಯವರು ಶ್ರೀಗಳಾದ ನಟರಾಜ ಪಿಳ್ಳೈ, ಅಚ್ಯುತನ್ ಮತ್ತು ಕುಂಜು ಇವರು ಮೂವರನ್ನು ಮಂತ್ರಿಮಂಡಳದ ಇತರ ಸದಸ್ಯರನ್ನಾಗಿ ಆರಿಸಿರುವರು. ತಿರುಕೊಚ್ಚಿಯ ಸರಕಾರವು ಇಷ್ಟರಲ್ಲೇ ಭೂಸುಧಾರಣೆಯೇ ಮುಂತಾದ ಪ್ರಗತಿಪರ ಕಾರ್ಯಗಳತ್ತ ಗಮನ ಕೊಟ್ಟಿದೆ. ಕಾಂಗ್ರೆಸಿನ ಸಹಕಾರದ ಬಲವು ಪ್ರಸಪಾ ಧುರೀಣರಿಗೆ ಲಭಿಸಿರುವುದರಿಂದ, ಪ್ರತಿಪಕ್ಷದವರು ಸರಕಾರವು ಜನಾಭಿಪ್ರಾಯಕ್ಕೆ ವ್ಯತಿರಿಕ್ತವಾಗಿದೆಯಾಗಿ ಹೇಳುತ್ತಿದ್ದರೂ ಪಿಳ್ಳೆಯವರ ಮಂತ್ರಿಮಂಡಳ ಮುಂದಿನ ಚುನಾವಣೆಯವರೆಗೆ ಉಳಿಯುವ ಭರವಸೆ ತೋರುತ್ತದೆ.

ಮುಂದಿನ ಕೆಲಸ

ಇಲ್ಲಿಯ ಶಾಸನ ಸಭೆಯ ಉದ್ಘಾಟನೆಯನ್ನು ರಾಜಪ್ರಮುಖರು ದಿನಾಂಕ ೨೨ನೇ ಸೋಮವಾರ ನೆರವೇರಿಸಿದರು. ಭೂಸುಧಾರಣೆಯ ಕುರಿತು ಹೆಚ್ಚಿನ ಗಮನ ಕೊಡಲಾಗುವುದೆಂದು ಅವರು ತಿಳಿಸಿದರು. ಗುಡಿ ಕೈಗಾರಿಕೆಗಳಿಗೆ ಹೆಚ್ಚು ಪ್ರೋತ್ಸಾಹವನ್ನು ಕೊಡಲಾಗುವುದೆಂದೂ ಶಿಕ್ಷಣದ ಸೌಕರ್ಯಗಳನ್ನು ಅಧಿಕಗೊಳಿಸುವ ಪ್ರಯತ್ನ ನಡೆಯುವುದೆಂದೂ ಅವರು ನುಡಿದರು. ಇದಕ್ಕೆ ಮುಂಚೆ ಶಾಸನ ಸಭಾ ಸದಸ್ಯರ ಪ್ರತಿಜ್ಞಾವಚನವು ನಡೆಯಿತು; ಮತ್ತು ಅಧ್ಯಕ್ಷರ ಚುನಾವಣೆಯೂ ಜರಗಿತು. ಪ್ರಸಪಾ ಪಕ್ಷದ ಶ್ರೀ ಗಂಗಾಧರನ್ನರು ಸಂಯುಕ್ತ ರಂಗದ ಶ್ರೀ ಜಾರ್ಜರಿಗಿಂತ ಅಧಿಕ ಮತವನ್ನು ಗಳಿಸಿ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆ ಹೊಂದಿದರು. ಮತದಾನದಲ್ಲಿ ತಿರುತಮಿಳುನಾಡು ಕಾಂಗ್ರೆಸು ಪಕ್ಷದ ಸದಸ್ಯರು ಭಾಗ ವಹಿಸದೆ ತಟಸ್ಥರಾಗಿ ಉಳಿದರು.

ತೆರಿಗೆಯಲ್ಲಿ ರಿಯಾಯತಿ

ಕೇಂದ್ರ ಮುಂಗಡ ಪತ್ರದ ಮೇಲಿನ ಸಾಮಾನ್ಯ ಚರ್ಚೆಗೆ ಉತ್ತರ ಕೊಡುತ್ತಾ ಅರ್ಥ ಸಚಿವ ಶ್ರೀ ದೇಶಮುಖರು ಹೊಸತಾಗಿ ಹೊರಿಸಲು ಬಯಸಿದ ತೆರಿಗೆಗಳಲ್ಲಿ ಕೆಲವು ರಿಯಾಯತಿಗಳನ್ನು ನೀಡಲು ಮುಂಬಂದರು. ಪಾದರಕ್ಷೆ, ಕೃತಕ ರೇಷ್ಮೆ ಮತ್ತು ಸಾಬೂನು ಇವುಗಳ ಮೇಲೆ ಹೊರಿಸಬೇಕೆಂದಿರುವ ತೆರಿಗೆಗಳ ಪ್ರಮಾಣವನ್ನು ಮಂತ್ರಿಗಳು ಕೆಲಮಟ್ಟಿಗೆ ಇಳಿಸಿದರು. ಚರ್ಚೆಯ ಕಾಲದಲ್ಲಿ ಮಾನ್ಯ ಸದಸ್ಯರೊಬ್ಬರು "ವೀಳ್ಯದಲ್ಲಿ ಇರುವ ಕಾಲ್ಸಿಯಮದಿಂದ ಬಡವನು ಪೋಷಣೆ ಹೊಂದುವನು. ದಕ್ಷಿಣ ಭಾರತದ ಜನರು ಅನ್ನ ನೀರುಗಳಿಲ್ಲದೆ ಕೆಲದಿನ ಇರಬಹುದು. ಆದರೆ ತಾಂಬೂಲ ಸವಿಯದೆ ಒಂದು ಗಳಿಗೆಯನ್ನೂ ಕಳೆಯಲಾರರು. ಆದುದರಿಂದ ಅಡಿಕೆಯ ಮೇಲಿನ ಕರವನ್ನು ಹೇರುವುದರಿಂದ ಬಡವರಿಗೆ ಹಾನಿಯಾಗುತ್ತದೆ" ಎಂದು ವಾದಿಸಿದ್ದರೂ ಅರ್ಥ ಸಚಿವರು "ಅಡಿಕೆಯ ಕರದಲ್ಲಿ ರಿಯಾಯತಿ ತೋರಿಸುವುದು ಅನಗತ್ಯ" ಎಂದರು.

ವಿನಿಯಂತ್ರಣದ ಕ್ರಮ

ಮುಂಬಯಿ ರಾಜ್ಯದಲ್ಲಿ ಹನ್ನೊಂದು ನಗರಗಳನ್ನುಳಿದು ಬೇರೆ ಕಡೆಗಳಲ್ಲಿ ಅಕ್ಕಿಯ ಮೇಲಿನ ಹತೋಟಿಯನ್ನು ಮಾರ್ಚ ೨೧ನೇ ತಾರೀಕಿನಿಂದ ತೆಗೆದು ಹಾಕಿದ್ದಾರೆ. ಮುಂಬಯಿ ನಗರವನ್ನು ಬಿಟ್ಟು ಬೇರೆಲ್ಲ ಕಡೆ ಗೋಧಿಯ ಅನಿರ್ಬಂಧ ಸಾಗಾಟಕ್ಕೂ ಅನುವು ಮಾಡಿದ್ದಾರೆ. ಎಪ್ರೀಲು ತಿಂಗಳಲ್ಲಿ ಅಕ್ಕಿಯ ಮೇಲಿನ ನಿಯಂತ್ರಣವು ಸಂಪೂರ್ಣ ರದ್ದಾಗುವುದೆಂದೂ ಹೇಳಲ್ಪಟ್ಟಿದೆ. ಬರ್ಮಾದಿಂದ ಭಾರತವು ತರಿಸಿಕೊಳ್ಳುವ ೯ ಲಕ್ಷ ಟನ್ನು ಅಕ್ಕಿಯಲ್ಲಿ ನಾಲ್ಕು ಲಕ್ಷ ಟನ್ನುಗಳನ್ನು ಮುಂಬಯಿಗೆ ಒದಗಿಸಲಾಗುವುದರಿಂದ ಈ ಕ್ರಮ ತೆಗೆದುಕೊಳ್ಳಲ್ಪಟ್ಟಿತು. ಇನ್ನೊಂದು ಕೊರತೆಯ ರಾಜ್ಯವಾದ ಪಶ್ಚಿಮ ಬಂಗಾಳವು ಕೇಂದ್ರದಿಂದ ಅಕ್ಕಿಯನ್ನು ಬಯಸುವುದಿಲ್ಲವೆಂದು ತಿಳಿಯುತ್ತದೆ.

ಗಿರಣಿಯೊಡೆಯರಿಗೆ ಹಿತೋಕ್ತಿ

ಮುಂಬಯಿಯಲ್ಲಿ ಭಾರತದಲ್ಲಿಯ ಜವಳಿ ಉದ್ದಿಮೆಯ ಶತವಾರ್ಷಿಕೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಭಾರತ ಸರಕಾರದ ವಾಣಿಜ್ಯ ಮಂತ್ರಿ ಶ್ರೀ ಕೃಷ್ಣಮಾಚಾರಿಯವರು ಈ ಸಂದರ್ಭದಲ್ಲಿ ಗಿರಣಿಯೊಡೆಯರಿಗೆ ಹಲವು ಹಿತದ ಮಾತುಗಳನ್ನು ಹೇಳಿದರು. ಉತ್ಪಾದನೆಯನ್ನು ಹೆಚ್ಚಿಸುವುದಕ್ಕೂ ಕೂಲಿಕಾರರ ಕಲ್ಯಾಣವನ್ನು ಮಾಡುವುದಕ್ಕೂ ಅಧಿಕ ಗಮನ ಕೊಡಬೇಕೆಂದು ಅವರು ಉಪದೇಶಿಸಿದರು. ಕೂಲಿಯನ್ನು ತಗ್ಗಿಸುವ ಮತ್ತು ನಿರುದ್ಯೋಗವನ್ನು ಹೆಚ್ಚಿಸುವ ಯಾವುದೇ ಕ್ರಮವನ್ನು ಅನುಸರಿಸಲಾಗದು. ಕೂಲಿಕಾರರಿಗೆ ಈಗ ಕೊಡುತ್ತಿರುವ ಸಂಬಳ ಪ್ರಮಾಣವು ಬಹಳ ಕಡಿಮೆ ಇದ್ದು, ಅದನ್ನು ಹೆಚ್ಚಿಸುವುದಲ್ಲದೆ, ಇತರ ಸೌಕರ್ಯಗಳನ್ನೂ ಅವರಿಗೆ ಒದಗಿಸಿ ಕೊಡಬೇಕು ಎಂದರು.

ಕೈಮಗ್ಗದ ಆರ್ಥಿಕ ಮಹತ್ವ

ಕೈಮಗ್ಗ ಮತ್ತು ಗಿರಣಿಗಳ ನಡುವೆ ಇದೆಯೆಂದು ಹೇಳಲಾದ ಸ್ಪರ್ಧೆಯ ಕುರಿತು ಮಾತನಾಡುತ್ತಾ ಇವುಗಳ ನಡುವೆ ಇರುವ ಸಂಬಂಧವನ್ನು ಮಂತ್ರಿಗಳು ವಿವರಿಸಿದರು. ಗಿರಣಿ ಉದ್ಯೋಗದ ಸ್ಥಾನಕ್ಕೆ ಕೈಮಗ್ಗವಾಗಲೀ ಖಾದಿಯಾಗಲೀ ಬರಲು ಅಪೇಕ್ಷಿಸುವುದಿಲ್ಲ ಎಂದವರು ಸಾರಿದರು. ಹಳ್ಳಿಯ ಆರ್ಥಿಕ ಪುನಾರಚನೆಗೆ ನೆರವಾಗಬೇಕೆಂಬ ಸದುದ್ದೇಶದಿಂದ ಕೂಡಿದ ಕೈಮಗ್ಗಗಳ ಚಳುವಳಿಗೆ ಸಹೃದಯರ ಮತ್ತು ಸ್ಥಿತಿವಂತರ ಬೆಂಬಲ ದೊರಕುವುದು ಅಗತ್ಯ ಎಂದವರು ತಿಳಿಸಿದರು. ಸರಕಾರವು ಕೈಮಗ್ಗಗಳ ಉದ್ದಿಮೆಯ ಆರ್ಥಿಕ ಮುಖ್ಯ ಮಹತ್ವವನ್ನು ಕೊಡುತ್ತಿದ್ದು, ಈ ಪ್ರೋತ್ಸಾಹದಿಂದ ಗಿರಣಿಗಳ ಲಾಭ ಕಡಿಮೆಯಾಗಲಾರದು ಎಂದು ಮಂತ್ರಿಗಳು ಅಭಿಪ್ರಾಯ ವ್ಯಕ್ತಗೊಳಿಸಿದರು. ಈ ಸಮಾರಂಭದ ಅಧ್ಯಕ್ಷತೆವಹಿಸಿದ್ದ ಮೊರಾರಜಿ ದೇಸಾಯಿಯವರು ಉದ್ದಿಮೆದಾರರು ಬದಲಾದ ಪರಿಸ್ಥಿತಿಗೆ ಹೊಂದಿಕೊಂಡು ಕಲ್ಯಾಣ ರಾಜ್ಯದ ವ್ಯವಸ್ಥೆಯನ್ನಿಟ್ಟು ಸಾಗಬೇಕಾಗಿ ಅಪೇಕ್ಷಿಸಿದರು.

ಕುಟುಂಬ ಯೋಜನೆ

ಪಾರ್ಲಿಮೆಂಟಿನಲ್ಲಿ ಖಾಸಗಿ ಸದಸ್ಯರ ಗೊತ್ತುವಳಿಯನ್ನು ಚರ್ಚಿಸುವಾಗ ಕುಟುಂಬ ಯೋಜನೆಯ ವಿಷಯವು ಪರಿಶೀಲನೆಗೆ ಬಂತು. ಡಾ. ಜೋಯಿಸರಾಮ ಗಿಡ್ವಾನಿಯವರು ಈ ಬಗ್ಗೆ ಗೊತ್ತುವಳಿಯನ್ನು ಮಂಡಿಸುತ್ತಾ ಕೃತ್ರಿಮ ಸಲಕರಣೆಗಳನ್ನು ಉಪಯೋಗಿಸಬೇಕು, ದೊಡ್ಡ ಕುಟುಂಬಗಳ ತಂದೆಯಾದವರು ನಿರ್ಬೀಜೀಕರಣಕ್ಕೆ ಒಪ್ಪಬೇಕು, ಸರಕಾರವು ಕುಟುಂಬ ಯೋಜನೆಗೆ ಪ್ರತಿಯೊಂದೂ ವಿಧದಿಂದ ಪ್ರೋತ್ಸಾಹ ಕೊಡಬೇಕು ಎಂದು ಮುಂತಾಗಿ ಸೂಚಿಸಿದರು. ರಾಜಕುಮಾರಿ ಅಮೃತಕೌರರು ದಂಪತಿಗಳು ಆತ್ಮಸಂಯಮವನ್ನೂ ಋತುಚಕ್ರ ಪದ್ಧತಿಯನ್ನೂ ಅನುಸರಿಸಬೇಕೆಂದರು. ಹೆಣ್ಣು ಮಕ್ಕಳ ವಿವಾಹದ ವಯಸ್ಸನ್ನು ಹೆಚ್ಚಿಸಬೇಕೆಂದು ಅವರು ಅಭಿಪ್ರಾಯಪಟ್ಟರು. "ಕುಟುಂಬ ಯೋಜನೆಗಾಗಿ ಕೃತ್ರಿಮ ಸಾಧನಗಳನ್ನು ಅನುಸರಿಸದಂತೆ ನಿರ್ಬಂಧವೇನೂ ಇಲ್ಲ. ಬೇಕಾದರೆ ಜನರಿಗೆ ಅವುಗಳ ಜ್ಞಾನಮಾಡಿ ಕೊಡಲಾಗುವುದು. ಸರಕಾರವು ಇಂಥ ಸಲಕರಣೆಗಳನ್ನು ಒದಗಿಸುತ್ತಿಲ್ಲ. ಇವು ಆರೋಗ್ಯಕ್ಕೆ ಹಾನಿಕರವೆಂದು ಕಂಡು ಬಂದಿರುವುದರಿಂದ ಪರೀಕ್ಷೆ ನಡೆಸಲು ಸರಕಾರ ಬಯಸುತ್ತದೆ" ಎಂದು ಮಂತ್ರಿಗಳು ಹೇಳಿದರು.

ಜಪಾನೀ ಕೃಷಿ ಪದ್ಧತಿ

ಕಳೆದ ವರ್ಷ ತೊಡಗಿದ ಜಪಾನಿ ಪದ್ಧತಿಯ ಕೃಷಿಯನ್ನು ಈ ವರ್ಷವೂ ಉತ್ಸಾಹದಿಂದ ಮುಂದುವರಿಸಲು ಕೇಂದ್ರ ಸರಕಾರ ಅಪೇಕ್ಷಿಸಿ, ರಾಜ್ಯ ಸರಕಾರಗಳಿಗೆ ನಿರ್ದಿಷ್ಟ ಗುರಿಯನ್ನು ಮುಟ್ಟಬೇಕಾಗಿ ತಿಳಿಸಿದೆ. ಕಳೆದ ಸಲ ಜಪಾನೀ ಪದ್ಧತಿಯನ್ನು ಸುಮಾರು ೫೮೦೦೦೦ ಎಕ್ರೆ ಜಮೀನಿನಲ್ಲಿ ಭತ್ತವನ್ನು ಬೆಳೆಸಲಾಯಿತು. ೨ಲಕ್ಷ ಎಕ್ರೆ ಪ್ರದೇಶದಲ್ಲಿ ಅಲ್ಪ ಸ್ವಲ್ಪ ಮಟ್ಟಿಗೆ ಈ ಪದ್ಧತಿಯನ್ನು ಅನುಸರಿಸಲಾಯಿತು. ಪರಿಣಾಮದಲ್ಲಿ ಕೆಲವೆಡೆ ಎಕ್ರೆಗೆ ೧೪೦ ಮಣ ಭತ್ತ ಹೆಚ್ಚು ಬೆಳೆದದ್ದು ಕಂಡು ಬಂತು. ಈ ಪದ್ಧತಿಯಂತೆ ಕಡಿಮೆ ಬೀಜ ಸಾಕಾಗುತ್ತದೆ. ಆದರೆ ನೇಜಿಗದ್ದೆಗೂ ಹೊಲಕ್ಕೂ ಸಾರವತ್ತಾದ ಗೊಬ್ಬರ ಮತ್ತು ಯಥೇಷ್ಟ ನೀರು ಪೂರೈಸುವುದು ಅಗತ್ಯ.

CANARA BANK LTD.,
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.
ಆಡಳಿತೆ ಕಚೇರಿಯನ್ನು ಬೆಂಗಳೂರಿಗೆ ವರ್ಗಾಯಿಸಲಾಗುವುದು.

ನಮ್ಮ ಎಲ್ಲಾ ಗ್ರಾಹಕರಿಗೂ, ಸಾರ್ವಜನಿಕರಿಗೂ ಈ ಮೂಲಕ ತಿಳಿಯ ಪಡಿಸುವುದೇನೆಂದರೆ ನಮ್ಮ ಬ್ಯಾಂಕಿನ ಆಡಳಿತೆಯ ಶಾಖೆಯನ್ನು—

ವೆಂಕಟೆಸ್ವಾಸ್ ಬಿಲ್ಡಿಂಗ್,
ಸೆಕೆಂಡ್ ಫ್ಲೋರ್
111-118 ಸಿಲ್ವರ್ ಜುಬಿಲಿ ಪಾರ್ಕರೋಡ್
ಬೆಂಗಳೂರು ೨.

ಇಲ್ಲಿಗೆ ವರ್ಗಾಯಿಸಲಾಗುವುದು. ಮತ್ತು ತಾ 1 ಎಪ್ರಿಲ್ 1954ರಿಂದ ಮೇಲಿನ ಆಫೀಸಿನಲ್ಲಿ ವ್ಯವಹಾರ ಆರಂಭಿಸಲಾಗುವುದು.

ಬ್ಯಾಂಕಿನ ರಿಜಿಸ್ಟರ್ಡ್ ಆಫೀಸು ಮಾತ್ರ ಮಂಗಳೂರಿನ ಲೈಟ್ ಹೌಸ್ ಹಿಲ್‌ನಲ್ಲೇ ಇರುವುದು. ಆದುದರಿಂದ ಬ್ಯಾಂಕಿನ ಪಾಲುಗಳು, ಪಾಲುಗಳ ವರ್ಗಾವಣೆ ಇತ್ಯಾದಿ ವಿಷಯಗಳ ಮೇಲಿನ ಪತ್ರವ್ಯವಹಾರವನ್ನು ಈ ಮೊದಲಿನಂತೆ ಮೇಲಿನ ರಿಜಿಸ್ಟರ್ಡ್ ಆಫೀಸಿಗೆ ಕಳುಹಿಸಬೇಕೆಂದು ಕೇಳಿಕೊಳ್ಳುತ್ತೇವೆ.

ಬ್ಯಾಂಕಿನ ಕಚೇರಿ.
ಮಂಗಳೂರು.
13 ಮಾರ್ಚ 1954

ಯು. ಕೃಷ್ಣ ಕಿಣಿ, ಎಂ. ಎ.
ಜನರಲ್ ಸೆಕ್ರೆಟರಿ

ಹೈಸ್ಕೂಲ್, ಪಂಚಾಯತ ಬೋರ್ಡು ಮೊದಲಾದವುಗಳ ಲೈಬ್ರರಿಗಳಿಗೆ ಬೇಕಾಗುವ ಪುಸ್ತಕಗಳು ವಿಶೇಷ ತರದ ಕಮಿಶನಿನಲ್ಲಿ ದೊರೆಯುತ್ತವೆ.
ವಿಚಾರಿಸಿ:-
ನವಭಾರತ ಪುಸ್ತಕ ಭಂಡಾರ,
ಉಡುಪಿ, ದ. ಕ.

ನ ವ ಯು ಗ

ಉಡುಪಿ, ಗುರುವಾರ ೨೫-೩-'೫೪

ವಸಾಹತುಗಳ ವಿಲೀನೀಕರಣ

ಭಾರತದಲ್ಲಿರುವ ವಿದೇಶೀ ವಸಾಹತುಗಳ ವಿಲೀನೀಕರಣದ ಪ್ರಶ್ನೆಯು ಈಗ ಪುನಃ ಜನಮನವನ್ನು ಸೆಳೆದುಕೊಂಡಿದೆ ಕೆಲದಿನಗಳಿಂದೀಚೆಗಿನ ಘಟನೆಗಳು ನಮ್ಮ ನಾಡಿಗೆ ಹೊಂದಿಕೊಂಡಿರುವ ಮೂರು ಪೋರ್ಚುಗೀಜ ಹಾಗು ನಾಲ್ಕು ಫ್ರೆಂಚ ವಸಾಹತುಗಳ ವಿಷಯವನ್ನು ತೀವ್ರ ಪರ್ಯಾಲೋಚನೆಗೆ ಗುರಿಮಾಡಿರುತ್ತವೆ. ಭಾರತವು ಬ್ರಿಟಿಷ್ ಚಕ್ರಾಧಿಪತ್ಯದಿಂದ ಸಿಡಿದು ಹೊರಬಂದರೂ ಸಹ ಇನ್ನೂ ಪರಕೀಯರ ಕೈಯಲ್ಲಿರುವ ಈ ತುಣುಕು ವಸಾಹತುಗಳ ದೆಸೆಯಿಂದ ನಮ್ಮ ರಾಜಕೀಯ ಸ್ವಾತಂತ್ರ್ಯವು ಅಪೂರ್ಣವಾಗಿಯೇ ಕಂಡುಬರುತ್ತದೆ. ಈಗ ಈ ವಸಾಹತುಗಳಲ್ಲಿ ಬಹಳ ಬಿರುಸಿನಿಂದ ವಿಲೀನೀಕರಣದ ಚಳುವಳಿ ನಡೆದಿರುವುದರಿಂದ, ಭಾರತದ ಮೇಲೂ ಇದರ ಪ್ರತಿಕ್ರಿಯೆ ಉಂಟಾಗಿರುತ್ತದೆ. ಫ್ರೆಂಚ ಭಾಗದಲ್ಲಿ ಪಶ್ಚಿಮ ಕರಾವಳಿಯ ಮಾಹೆ, ಪೂರ್ವ ಕರಾವಳಿಯ ಕರೈಕಲ್, ಪಾಂಡಿಚೇರಿ, ಯಾನಂ ಮತ್ತು ಚಂದ್ರನಗರಗಳು ಸೇರಿರುತ್ತವೆ. ಪಡು ಕರಾವಳಿಯ ಗೋವೆ, ದೀವ ಮತ್ತು ದಮನಗಳೆಂಬ ಉಪನಿವೇಶಗಳು ಪೋರ್ಚುಗೀಜ ಸರಕಾರದ ವಶದಲ್ಲಿವೆ. ಇವು ತಮ್ಮ ಅಸ್ತಿತ್ವಕ್ಕೂ ಅಭಿವೃದ್ಧಿಗೂ ಭಾರತವನ್ನೇ ಅವಲಂಬಿಸಿಕೊಂಡಿದ್ದರೂ ಸಹ ಪರಕೀಯ ಸರಕಾರದ ಕಡೆಯಿಂದ ಅಲ್ಲಿ ದಬ್ಬಾಳಿಕೆಗಳು ಅವ್ಯಾಹತವಾಗಿ ನಡೆಯುತ್ತವೆ. ಪೋರ್ಚುಗೀಜರು ದಬ್ಬಾಳಿಕೆ ನಡೆಸುವದರಲ್ಲಿ ಫ್ರೆಂಚರನ್ನು ಮೀರಿಸಿದ್ದು, ಭಾರತ ಸರಕಾರದೊಡನೆ ತೀರಾ ಹಟಮಾರಿತನದಿಂದ ವರ್ತಿಸಿರುವರು. ರಾಷ್ಟ್ರೀಯ ವಾದವನ್ನು ಹತ್ತಿಕ್ಕುವುದಕ್ಕೋಸ್ಕರ ಇಲ್ಲಿ ನಡೆದಂತಹ ದಬ್ಬಾಳಿಕೆಯು ಭಾರತದಲ್ಲಿ ಬ್ರಿಟಿಷರು ಆಡಳಿತ ನಡೆಸಿಕೊಂಡಿದ್ದ ದುರ್ದಿನಗಳಲ್ಲಿ ಕೂಡ ನಡೆದದ್ದಿಲ್ಲವೆಂದು ಹೇಳಿದರೆ ಅತಿಶಯೋಕ್ತಿಯಾಗದು. ಈ ವಸಾಹತುಗಳಲ್ಲಿರುವ ನಿವಾಸಿಗಳು ಭಾರತದೊಡನೆ ನೇರ್ಪಡೆ ಹೊಂದಬೇಕೆಂಬ ಪ್ರಾಮಾಣಿಕವಾದ ಆಶಯವನ್ನು ಬಲವತ್ತರವಾಗಿ ವ್ಯಕ್ತಗೊಳಿಸುತಿದ್ದರೂ ಅವರ ಆಶೋತ್ತರಗಳನ್ನು ಉಪೇಕ್ಷಾಭಾವದಿಂದ ಅಕ್ಷಯ ಸರಕಾರ ಕಂಡಿತು; ಮಾತ್ರವಲ್ಲ ಅತ್ಯುಗ್ರವಾದ ನಿರ್ಲಜ್ಜನಾದ ದಮನಕ್ರಮವನ್ನೂ ಕೈಗೊಂಡಿತು. ಪೋರ್ಚುಗೀಜ ಸರಕಾರವು ಭಾರತದೊಡನೆ ವಿಲೀನೀಕರಣದ ಪ್ರಶ್ನೆಯನ್ನು ಎತ್ತಲಿಕ್ಕೇ ಒಡಂಬಡಲಿಲ್ಲ ಬದಲಾಗಿ, ಜನತೆಯ ಇಚ್ಛೆ ಪ್ರಕಟಗೊಳ್ಳಲು ಯಾವುದೇ ಅವಕಾಶವನ್ನು ಕೊಡದೆ, ರಾಜ್ಯ ಸಂವಿಧಾನದಲ್ಲಿ ಸರಳವಾದ ತಿದ್ದುಪಡಿಯೊಂದನ್ನು ಮಾಡುವ ಮೂಲಕ ಭಾರತದಲ್ಲಿಯ ಈ ಉಪನಿವೇಶಗಳು ಪೋರ್ಚುಗಾಲದ ಅವಿಭಾಜ್ಯ ಅಂಗವೆಂದು ಸಾಧಿಸಿತು; ಮತ್ತು ತನ್ಮೂಲಕ ಅಟ್ಲಾಂಟಿಕ ಒಡಂಬಡಿಕೆಯಲ್ಲಿ ವಸಾಹತು ಪ್ರದೇಶಗಳಿಗೂ ಲಕ್ಷ್ಯವು ದೊರಕುವುದೆಂದು ಹೇಳುತ್ತಾ, ಭಾರತದ ಸೈನಿಕ ಕ್ರಮವನ್ನು ಕೈಗೊಂಡ ಪಕ್ಷದಲ್ಲಿ ಪ್ರತಿಭಟನಾರ್ಥವಾಗಿ ತನಗೆ ಇತರ ಪಾಶ್ಚಾತ್ಯ ಸರಕಾರಗಳ ನೆರವು ಸಿಗುವುದೆಂದು ಸಾರ ತೊಡಗಿತು. ಪೋರ್ಚುಗೀಜ ಸರ್ವಾಧಿಕಾರಿಯಾದ ಸಾಲಜಾರಾರ ಲೆಕ್ಕದಂತೆ ಐನೂರು ವರ್ಷಗಳ ಬಳಿಕ ಯಾವ ಕಾಯಿದೆಬದ್ಧ ಸಂಬಂಧವೂ ಇಲ್ಲದ ಭಾರತಕ್ಕೆ ಗೋವೆ ಮುಂತಾದುವನ್ನು ಒಪ್ಪಿಸಬೇಕೆನ್ನುವುದು ಶುದ್ಧ ಅನ್ಯಾಯ ಆದರೆ ಸ್ವತಂತ್ರ ಭಾರತದ ಇಚ್ಛೆಗಿಂತಲೂ ಗೋವಾನೀಯರ ಚಳವಳಿಯೇ ಪ್ರಬಲವಾಗಿದ್ದು, ಭಾರತದೊಂದಿಗೆ ಸೇರಬೇಕೆಂಬ ಇವರ ಆಂದೋಲನದ ಭರದಿಂದಲೇ ಸಮಸ್ಯೆಯ ಪರಿಹಾರವು ಪೋರ್ಚುಗೀಜ ಸರಕಾರದ ಸಾಗರೋತ್ತರ ವಸಾಹತುವಾದದ ನೀತಿಗೆ ವಿರುದ್ಧವಾಗಿರುತ್ತದೆಂದು ವ್ಯಕ್ತಗೊಳ್ಳುತ್ತದೆ. ಕಳೆದ ಐದು ಶತಕಗಳ ಅವಧಿಯಲ್ಲಿ ಗೋವಾನೀಯರು ಅನೇಕ ವೇಳೆ ದಂಗೆಎದ್ದ ಉದಾಹರಣೆಯುಂಟುಮೊನ್ನೆ ಡಾ. ಗಾಯತೊಂಡೆಯವರಂತಹ ರಾಷ್ಟ್ರೀಯ ಚಳುವಳಿಯ ಸೂತ್ರಧಾರರನ್ನು ಬಂಧಿಸಿ ಲಿಸ್ಬನಿಗೆ ಒಯ್ದುದರಿಂದಂತೂ ಪರಿಸ್ಥಿತಿ ವಿಷಮಾವಸ್ಥೆಯನ್ನು ಮುಟ್ಟಿದೆ. ಭಾರತ ಸರಕಾರವು ತನ್ನ ತೀವ್ರ ಆಕ್ಷೇಪವನ್ನು ತಿಳಿಸುವುದರ ಮೂಲಕ ಗಾಯತೊಂಡೆಯವರ ಬಂಧನ ಸತ್ರವನ್ನು ಖಂಡಿಸಿದೆ. ಭಾರತ ಪಾರ್ಲಿಮೆಂಟಿನಲ್ಲಿಯೂ ಈ ಕುರಿತು ಚರ್ಚೆ ನಡೆದು, ಭಾರತದನಿಲುಮೆಯು ಪುನಃ ಸ್ಪಷ್ಟೀಕರಿಸಲ್ಪಟ್ಟಿತು ಆದರೆ ಭಾರತದಲ್ಲಿ ಸೇರಬೇಕೆಂದು ನಡೆಯುವ ಆಂದೋಲನವು ಸ್ಪಷ್ಟವಾಗಿ ಕಾಯಿದೆ ವಿರುದ್ಧವಾಗಿರುತ್ತದೆಂದೂ ಬಾಹ್ಯ ಸಂರಕ್ಷಣೆಗೆ ಆತಂಕವಾಗುವ ಈ ಅಪರಾಧಗಳನ್ನು ಶಿಕ್ಷಿಸುವುದು ಕ್ರಮಬದ್ಧವೆಂದೂ ಪೋರ್ಚುಗೀಜ ಸರಕಾರ ವಿಚಿತ್ರವಾದವನ್ನು ಹೂಡುತ್ತದೆ. ಸಾಲಜಾರರಿಗೆ ಅಮೇರಿಕದ ಬೆಂಬಲದ ಭರವಸೆ ದೊರೆತಂತೆ ಕಾಣುತಿದ್ದು, ಈ ಕಾರಣದಿಂದಲೇ ಭಾರತವನ್ನು ಮಾತು ಮಾತಿಗೂ ಅಣಕಿಸಲು ಪೋರ್ಚುಗೀಜ ಸರಕಾರ ಉದ್ಯುಕ್ತವಾಗುತ್ತದೆ. ಗೋವದಲ್ಲಿ ಮಿಲಿಟರಿ ದಳಗಳು ಬಂದಿಳಿದಿವೆಯೆಂದೂ ವಿಮಾನ ನಿಲ್ದಾಣಗಳು ಕಟ್ಟಲ್ಪಡುತ್ತಿವೆಯೆಂದೂ ಒಬ್ಬನೇ ಒಬ್ಬ ಅಮೇರಿಕನ್ನನಿಲ್ಲದಿದ್ದರೂ ಅಲ್ಲಿ ಅಮೇರಿಕದ ಪ್ರತಿನಿಧಿ ಕಚೇರಿ ತೆರೆಯಲ್ಪಟ್ಟಿದೆಯೆಂದೂ ಗೊತ್ತಾಗಿದ್ದು ಭಾರತ ಸರಕಾರವು ಪರಿಸ್ಥಿತಿಯನ್ನು ಕಣ್ಣಲ್ಲಿ ಎಣ್ಣೆ ಹಾಕಿಕೊಂಡು ನಿರೀಕ್ಷಿಸುತ್ತದೆ. ಫ್ರೆಂಚರ ವರ್ತನೆಯು ಇಷ್ಟು ಉಗ್ರವಾಗಿಲ್ಲದಿದ್ದರೂ ವಸಾಹತುಗಳನ್ನು ಬಿಟ್ಟುಗೊಡುವುದಕ್ಕೆ ಅವರಿಗೂ ಮನಸ್ಸುಬರುವುದಿಲ್ಲ. ಭಾರತವು ಸ್ವತಂತ್ರಗೊಂಡಮೇಲೆ ಸಂಸ್ಕೃತಿ, ಭಾಷೆ ಮತ್ತು ಸಂಪ್ರದಾಯಗಳ ಸ್ವಾತಂತ್ರ್ಯವನ್ನು ಕೊಟ್ಟ ಯೋಗ್ಯರೀತಿಯಿಂದ ವಸಾಹತುಗಳ ನಿವಾಸಿಗಳನ್ನು ನಡೆಸಿಕೊಳ್ಳಲಾಗುವುದೆಂದು ಭಾರತ ಸರಕಾರವು ಫ್ರೆಂಚ ಹಾಗು ಪೋರ್ಚುಗೀಜ ಸರಕಾರಗಳಿಗೆ ಭರವಸೆನೀಡಿ, ವಿಲೀನೀಕರಣದ ಪ್ರಶ್ನೆಯನ್ನು ಮುಂದೊಡ್ಡಿದಾಗ, ಫ್ರೆಂಚರು ಜನಮತಗಣನೆ ನಡೆಸುವುದರ ಮೂಲಕ ವಸಾಹತುಗಳ ಭವಿಷ್ಯ ನಿರ್ಣಯಕ್ಕೆ ಒಪ್ಪಿಗೆ ನೀಡುವ ಸೌಜನ್ಯ ತೋರಿಸಿದರು. ಚಂದ್ರ ನಗರದಲ್ಲಿ ಚುನಾವಣೆಗಳು ನಡೆದವು; ಮತ್ತು ಅದು ಭಾರತಕ್ಕೆ ಅನುಕೂಲವಾಗಿಯೇ ಪರಿಣಮಿಸಿತು. ಇದು ಫ್ರೆಂಚರಿಗೆ ಇಷ್ಟವಾಗದ್ದರಿಂದ ಅಲ್ಲಿ ಹೆದರಿಕೆಯ ವಾತಾವರಣವನ್ನುಂಟು ಮಾಡುವ ಹವಣು ನಡೆಯಿತು. ಚುನಾವಣೆಗಳು ಅಣದಾಟಗಳಾದವು; ಮತ್ತು ಬಲವುಳ್ಳವನದ್ದೇ ನ್ಯಾಯವಾಯಿತು. ಈ ಪರಿಸ್ಥಿತಿಯಲ್ಲಿ ಮತಗಣನೆಗಳು ಪ್ರಯೋಜನಕ್ಕೆ ಬರುವುದೆಂತು? ಆದುದರಿಂದ ನೇರಾಗಿಯೇ ವಿಲೀನೀಕರಣದ ಕಾರ್ಯ ನಡೆಯಬೇಕೆಂದು ಭಾರತ ಸರಕಾರ ಈಗ ಹೇಳುತ್ತದೆ. ಇದಕ್ಕೆ ಫ್ರೆಂಚ ಭಾರತದ ಜನತೆಯ ಸಂಪೂರ್ಣ ಬೆಂಬಲ ಇರುತ್ತದೆ. ಮೊನ್ನೆ ತಾನೆ ಪಾಂಡಿಚೇರಿಯ ಚುನಾಯಿತ ಪ್ರತಿನಿಧಿ ಸಭೆಯ ಅಧ್ಯಕ್ಷರು, ಮಂತ್ರಿಗಳು ಹಾಗು ನಗರ ಸಭೆಗಳ ಪರಿಷ್ಕರು ಫ್ರೆಂಚ ಭಾರತ ಮತಗಣನೆ ಇಲ್ಲದೆಯೇ ಭಾರತದೊಂದಿಗೆ ವಿಲೀನ ಮಾಡಬೇಕೆಂದು ಸರ್ವಾನುಮತದಿಂದ ತೀರ್ಮಾನಿಸಿದ್ದಾರೆ. ಈ ಗೊತ್ತುವಳಿಯ ಸ್ವೀಕಾರದ ನಂತರ ವಿಲೀನೀಕರಣದ ಪುರಸ್ಕರ್ತರ ಬಂಧನ, ಈ ಚಳುವಳಿಯಲ್ಲಿ ಭಾಗವಹಿಸದಿರುವಂತೆ ಎಚ್ಚರಿಕೆ, ಪೋಲೀಸರ ದಾಳಿ ಮುಂತಾದವುಗಳು ನಡೆದವು. ಭಾರತ ಸರಕಾರವು ಇದಕ್ಕೆ ತೀವ್ರ ಪ್ರತಿಭಟನೆಯನ್ನು ತಿಳಿಸಿದ್ದಲ್ಲದೆ, ಜನರನ್ನು ಹೆದರಿಸುವ ಕೃತಿಗಳನ್ನು ಕೂಡಲೇ ನಿಲ್ಲಿಸಬೇಕೆಂದು ಆಗ್ರಹ ತೊಟ್ಟಿದೆ. ಫ್ರೆಂಚ ಭಾರತದ ಚುನಾಯಿತ ಪ್ರತಿನಿಧಿಗಳ ಈ ಬೇಡಿಕೆಯ ಬಿಸಿಯು ಫ್ರೆಂಚ ಮಂತ್ರಿಮಂಡಳಕ್ಕೆ ತಗಲಿದೆಯೆಂದೂ ಹಿರಿಯ ಸಚಿವರೊಡನೆ ಮಂತ್ರಾಲೋಚನೆ ನಡೆಸಲು ಮುಖ್ಯಮಂತ್ರಿ ಲೇನಿಯೆಲರು ನಿರ್ಧರಿಸಿರುವರಾಗಿಯೂ ಈಗ ತಾನೆ ಬಂದ ಸುದ್ದಿ ಹೇಳುತ್ತದೆ. ಇದರ ಪರಿಣಾಮವಾಗಿ ಫ್ರೆಂಚ ವಸಾಹತುಗಳು ಭಾರತದೊಡನೆ ಬೇಗನೇ ಸೇರ್ಪಡೆ ಹೊಂದಿದರೆ ಅದರಿಂದ ಸಂತೋಷವಾಗುತ್ತದೆ. ಪೋರ್ಚುಗೀಜ ವಸಾಹತು ವಾದದ ಮೇಲೆಯೂ ಇದರಿಂದ ಒಳ್ಳೆಯ ಪರಿಣಾಮವಾಗಬಹುದು. ಅಂತೂ ಈ ಪರತಂತ್ರ ತುಣುಕುಗಳು ಭಾರತದೊಡನೆ ಸೇರಿ ಹೋಗದೆ ಭಾರತಕ್ಕೆ ಸುಖವಿಲ್ಲ — ಭಾರತ ಸರಕಾರವು ಶಾಂತಿ ಮಾರ್ಗವನ್ನೇ ಅನುಸರಿಸಿ ಈ ಕಾರ್ಯವನ್ನು ಸಾಂಗಗೊಳಿಸುವ ಇಚ್ಛೆಯನ್ನು ಇಟ್ಟುಕೊಂಡಿದೆ. ಅದಕ್ಕೆ ಯಶಸ್ಸು ದೊರೆಯಲೆಂದು ಹಾರೈಸೋಣ!

'ಸಿಂಡಿಕೇಟ್' ಬ್ಯಾಂಕಿನ ಪ್ರಗತಿ

ಈ ಸಂಚಿಕೆಯ ಬೇರೊಂದೆಡೆ ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್ ಇದರ ಆಡಳಿತ ಮಂಡಳಿಯ ಅಧ್ಯಕ್ಷರಾದ ಡಾ ಟಿ. ಎಂ. ಎ. ಪೈಗಳು ಬೇಂಕಿನ ೨೯ನೇ ವರ್ಷಾವಧಿ ಮಹಾಸಭೆಯಲ್ಲಿ ಮಾಡಿದ ಭಾಷಣವು ಪ್ರಕಟಗೊಂಡಿದೆ. ಇದನ್ನು ಪರಿಶೀಲಿಸಿದಲ್ಲಿ ಸಿಂಡಿಕೇಟು ಗಣನೀಯ ಪ್ರಗತಿಯನ್ನು ಸಾಧಿಸಿರುವುದು ಕಂಡು ಬರುತ್ತದೆ ಕಾದಿಟ್ಟ ನಿಧಿಯು ೧೧೦೦೦೦೦ ರೂಪಾಯಿಗಳಿಂದ ೧೨೧೦೦೦೦ ರೂಪಾಯಿಗಳಿಗೇರಿದೆ. ಇಡು ಗಂಟಿನ ಹಣವು ೪೦೧೦೭೯೯ ರೂಪಾಯಿಗಳಿಂದ ೪೭೧೫೦೬೭೪ ರೂಪಾಯಿಗಳಿಗೆ ಹೆಚ್ಚಿಕೊಂಡಿದೆ. ಬೇಂಕಿನ ಒಟ್ಟು ಸಂಪತ್ತು ಆರು ಕೋಟಿ ರೂಪಾಯಿಗಳಿಗೆ ಸಮೀಪದಲ್ಲಿದ್ದು, ಗ್ರಾಹಕರ ಸಂಖ್ಯೆಯು ೧೬೭೫೪ ಆಗಿರುತ್ತದೆ. ಬೇಂಕಿನ ಆಡಳಿತ ವೆಚ್ಚವು ಹೆಚ್ಚುತಿದ್ದರೂ ಸಹ ಒಟ್ಟು ಬಂಡವಾಳ ಹಾಗೂ ಕಾದಿಟ್ಟ ನಿಧಿಯ ನೂರಕ್ಕೆ ಆರರಷ್ಟೂ ಈ ಕರ್ಚು ಇಲ್ಲವೆಂಬುದು ಸಂತೋಷ ಪ್ರದವಾದ ವಿಚಾರ. ವರದಿ ವರ್ಷದಲ್ಲಿ ಸಿಂಡಿಕೇಟು ತನ್ನ ಆಶ್ರಯದಲ್ಲಿಯೇ ಮೊದಲು ಪ್ರಾರಂಭಿಸಲ್ಪಟ್ಟ ಬೇರೆ ಎರಡು ಬೇಂಕುಗಳ ಸಾಲಸೊತ್ತುಗಳನ್ನೆಲ್ಲ ವಹಿಸಿಕೊಂಡು ಸಮಿಾಕರಣವನ್ನು ಸಾಧಿಸಿತು. ಇದನ್ನೆಲ್ಲ ವಿವರಿಸಿದ ಡಾಕ್ಟರ್ ಪೈಗಳು ತಮ್ಮ ಕತೃತ್ವ ಶಕ್ತಿ ಹಾಗೂ ಅನುಭವದ ಬಲದಿಂದ ಅತ್ಯಮೂಲ್ಯವಾದ ಕೆಲವು ಹಿತಸೂಚನೆಗಳನ್ನೂ ಮಾಡಿದ್ದು, ಬೇಂಕಿಂಗ್ ವ್ಯವಹಾರದ ಅಭಿವೃದ್ಧಿಯಲ್ಲಿ ಆಸ್ಥೆಯುಳ್ಳವರಿಗೆ ಇದು ಉಪಯುಕ್ತವಾಗಿರುತ್ತದೆ. ಡಾ. ಪೈಗಳ ಕಲ್ಪನಾ ಕುಶಲತೆಯ ಮತ್ತು ಮುನ್ನೋಟದ ದ್ಯೋತಕವಾಗಿ "ಪಿಗ್ಮಿ" ಯೋಜನೆಯು ರೂಪುಗೊಂಡಿತು. ಚಿಕ್ಕ ಉಳಿತಾಯವನ್ನು ಪ್ರೋತ್ಸಾಹಿಸುವ ಈ ಯೋಜನೆಯು ಅತ್ಯಂತ ಜನಪ್ರಿಯವಾಗಿರುವುದಕ್ಕೆ ೩೬೦೦೦ ಜನರು ಇದರ ಲಾಭ ಪಡೆದುಕೊಳ್ಳುತ್ತಿರುವುದೇ ನಿದರ್ಶನ. ಸರಕಾರೀ ಸಾಲಪತ್ರಗಳನ್ನು ಜನಪ್ರಿಯಗೊಳಿಸುವುದಕ್ಕೆ ಬೇಂಕುಗಳನ್ನು ಸರಕಾರದ ಏಜಂಟರಾಗಿ ನೇಮಕ ಮಾಡಬೇಕೆಂಬ ಪೈಗಳ ಸೂಚನೆ ಗಮನಾರ್ಹವಾಗಿರುತ್ತದೆ. ಇದೇ ಪ್ರಕಾರ ಗ್ರಾಮಾಂತರ ಪ್ರದೇಶಗಳಿಗೆ ಬೇಂಕಿಂಗ್ ಸೌಲಭ್ಯವನ್ನೊದಗಿಸಿ ಕೊಡಬೇಕೆಂದೂ ಪ್ರತಿಪಾದಿಸಿ, ದಕ್ಷಿಣ ಕನ್ನಡ ಜಿಲ್ಲೆಯ ೫೦೦೦೦ ಜನವಸತಿಯನ್ನು ಮಿಾರಿದ ೨೪ ಗ್ರಾಮಗಳಲ್ಲಿ ತಮ್ಮ ಬೇಂಕು ನಿರ್ವಹಿಸಿದ ಸೇವೆಯ ಸುಂದರ ಚಿತ್ರವನ್ನು ಕೊಟ್ಟಿರುವರು. ಹಳ್ಳಿಯ ಅಭಿವೃದ್ಧಿ ಪ್ರಯತ್ನದಲ್ಲಿ ಬೇಂಕಿಂಗ್ ಸೌಕರ್ಯವು ಮಹತ್ವದ ಹೆಜ್ಜೆಯಾಗುತ್ತದೆ ಹೀಗೆ ಸಿಂಡಿಕೇಟು ಎಲ್ಲರ ಮನ್ನಣೆಯನ್ನೂ ಪಡೆದು ಬೆಳೆದು ಬಂದಿದೆ. ಇದರ ಶ್ರೇಯಸ್ಸು ಸಂಸ್ಥೆಯ ಕರ್ಣಧಾರರಾದ ಡಾ. ಟಿ. ಎಂ ಎ ಪೈಗಳಿಗೆ ಸಲ್ಲುತ್ತದೆ. ಇವರ ದಕ್ಷವಾದ, ಚತುರವಾದ, ಆಡಳಿತದ ಪ್ರತಿಭೆಗೆ ಬೇಂಕಿನ ಜನರಲ್ ಮೆನೇಜರ್ ಶ್ರೀ ಟಿ. ಎ. ಪೈಗಳ ಹಾರ್ದಿಕ ಸಹಕಾರದ ಬೆಂಬಲ ಒಪ್ಪವಿಡುತ್ತದೆ. ಪೈ ಬಂಧುಗಳ ನೇತೃತ್ವದ ಸಿಂಡಿಕೇಟು ಶೀಘ್ರ ಪ್ರಗತಿಯನ್ನು ಹೊಂದಿ ಮುಂದಿನ ವರ್ಷಗಳಲ್ಲಿ ಇನ್ನಷ್ಟು ಜನಪ್ರಿಯತೆಯನ್ನು ಗಳಿಸಲೆಂದು ಹಾರೈಸುತ್ತೇವೆ.

ಮದ್ರಾಸು ಎಸೆಂಬ್ಲಿಯಿಂದ

ಕೌನ್ಸಿಲ್ ಆಫ್ ಸ್ಟೇಟ್ಸ್‌ಗೆ—ಸ್ಪರ್ಧಿಸಿದ್ದ 11 ಮಂದಿಯಲ್ಲಿ ಕೆಳಗಿನ 6 ಜನರು ಚುನಾಯಿತರಾಗಿದ್ದಾರೆ.

ಶ್ರೀ. ಕೆ. ಮಾಧವ ಮೆನೊನ್ (ಕಾಂಗ್ರೆಸ್) ಡಾ! ಪಿ. ಸುಬ್ಬರಾಯನ್ (ಕಾಂ.) ಕೆ. ಸದಾನಂದ ಹೆಗ್ಡೆ (ಕಾಂ.) ಪಿ. ಎಸ್. ರಾಜಗೋಪಾಲ ನಾಯ್ಡು (ಸ್ವ.) ಟಿ. ವಿ. ಕಮಲಸ್ವಾಮಿ (ಸ್ವ.) ಶ್ರೀಮತಿ ಪಾರ್ವತಿ ಕೃಷ್ಣನ್ (ಕ.)

ಮದ್ರಾಸು ಎಸೆಂಬ್ಲಿಯಿಂದ ಕೌನ್ಸಿಲಿಗೆ—ಶ್ರೀಗಳಾದ ಎಸ್. ಅನಾಮಲೈ ಪಿಳ್ಳೆ (ಕಾಂ) ಟಿ. ಪಿ. ಕೃಷ್ಣಮೂರ್ತಿ (ಕಾಂ) ಎಸ್. ಸರ್ವಪ್ಪಯ್ಯ (ಕಾಂ) ಪಿ. ಪಿ. ರಾಮಸ್ವಾಮಿ, ಮತ್ತು ಎ. ಸುಬ್ರಹ್ಮಣ್ಯಂ (ಸ್ವ) ಹೀಗೆ 5 ಜನ ಆರಿಸಲ್ಪಟ್ಟಿದ್ದಾರೆ.

ಮುಸ್ಲಿಂ ಲೀಗಿನ ಪ್ರಚಂಡ ಪರಾಭವದ ಹಿನ್ನೆಲೆ

ಪೂರ್ವ—ಪಶ್ಚಿಮ ಪಾಕಿಸ್ತಾನಗಳಲ್ಲಿ ಉತ್ತರ—ದಕ್ಷಿಣ ಧ್ರುವಗಳಷ್ಟು ಅಂತರ

ಪಾಕಿಸ್ತಾನವನ್ನು ಬೇಡಿ ಪಡೆದಿದ್ದ ಮುಸ್ಲಿಂ ಲೀಗು ತನ್ನ ಜನಪ್ರಿಯತೆಯನ್ನು ಸಂಪೂರ್ಣ ಕಳೆದು ಕೊಂಡಿರುವುದಕ್ಕೆ ಪೂರ್ವ ಬಂಗಾಳದಲ್ಲಿ ನಡೆದ ಸಾರ್ವತ್ರಿಕ ಚುನಾವಣೆಗಳ ಫಲಿತಾಂಶ ಸಾಕ್ಷಿ ಹೇಳುತ್ತದೆ. ಇಲ್ಲಿ ಪ್ರಜಾಪ್ರಭುತ್ವದ ಇತಿಹಾಸದಲ್ಲಿಯೇ ಅಪೂರ್ವವಾದ ರೀತಿಯಲ್ಲಿ ಅಧಿಕಾರಾರೂಢವಾದ ಪಕ್ಷವು ಮುಖಭಂಗವನ್ನು ಹೊಂದಿತು. ೩೦೯ ಸ್ಥಾನಗಳಲ್ಲಿ ಮುಸ್ಲಿಂ ಲೀಗಿಗೆ ಹತ್ತು ಸ್ಥಾನಗಳೂ ದೊರಕಲಿಲ್ಲವೆಂದರೆ, ಯಾರಿಗೆ ಆಶ್ಚರ್ಯವಾಗಲಿಕ್ಕಿಲ್ಲ? ಸಂಯುಕ್ತ ರಂಗವು ೧೮೦ಕ್ಕೂ ಹೆಚ್ಚು ಮತಗಳನ್ನು ಸಂಪಾದಿಸಿದ್ದು ಶಾಸನ ಸಭೆಯಲ್ಲಿ ಅದು ತಾನೇ ತಾನಾಗಿ ಮೆರೆಯುತ್ತದೆ. ಮುಸ್ಲಿಂ ಲೀಗು ನೂರಕ್ಕೆ ನಾಲ್ಕರಷ್ಟು ಕಡಿಮೆ ಸ್ಥಾನಗಳನ್ನು ಗಳಿಸುವುದೆಂದು ಯಾರೂ ಊಹಿಸಿರಲಿಲ್ಲ ಈ ವಿಚಾರವೇ ಕಲ್ಪನಾತೀತ. ಸಂಯುಕ್ತರಂಗದ ಪ್ರಬಲ ವಿರೋಧವಿದ್ದರೂ ಸಹ ಕೆಲವು ಸ್ಥಾನಗಳನ್ನಾದರು ಹೆಚ್ಚು ಗಳಿಸಬಹುದೆಂಬ ಮುಸ್ಲಿಂ ಲೀಗಿಗೆ ಆಶೆ ಇದ್ದಿತು. ಮುಸ್ಲಿಂ ಲೀಗಿನ ಆಡಳಿತೆಯನ್ನು ಎಷ್ಟೇ ಟೀಕಿಸಿದರೂ ಅದು ಕೆಲ ಮಟ್ಟಿಗಾದರೂ ಬೆಂಬಲ ಗಳಿಸಬಹುದೆಂದು ಸಂಯುಕ್ತರಂಗ ಭಾವಿಸಿದ್ದಿತು. ಆದರೆ ಪರಿಸ್ಥಿತಿಯು ಇಷ್ಟು ಮಟ್ಟಿನ ವಿಪರ್ಯಾಸವನ್ನು ತೋರಿಸಬಹುದೆಂದು ಯಾರ ಮನಸ್ಸಿಗೂ ಹೊಳೆದದ್ದಿಲ್ಲ. ತಮಗೆ ದೊರೆತ ಈ ಅಭೂತಪೂರ್ವವಾದ ಆಶ್ಚರ್ಯಪೂರ್ವವಾದ ವಿಜಯವನ್ನು ಕಂಡು ಸಂಯುಕ್ತರಂಗದ ಧುರೀಣರಿಗೆ ನಿಜವಾಗಿಯೂ ದಿಗ್ಭ್ರಮೆಯಾಗಿರಬೇಕು.

ಪರಾಭವದ ಕಾರಣ

ಈ ಚುನಾವಣೆಯಲ್ಲಿ ಮುಖ್ಯಮಂತ್ರಿಗಳೂ ಮುಸ್ಲಿಂ ಲೀಗಿನ ಪ್ರಾದೇಶಿಕ ಅಧ್ಯಕ್ಷರೂ ಆದ ನೂರುಲ ಅಮೀನರು ವಿದ್ಯಾರ್ಥಿ ಮುಖಂಡನೊಬ್ಬನಿಂದ ಸೋಲಿಸಲ್ಪಟ್ಟರು. ಅವರ ಮಂತ್ರಿಮಂಡಳದ ಇತರ ಸದಸ್ಯರೂ ಇದೇ ರೀತಿಯಾಗಿ ಪ್ರಚಂಡ ಪರಾಭವವನ್ನು [illegible]ದರು. ಹಿಂದೆ ಜಿನ್ನಾ ಸಾಹೇಬರ ಪ್ರೋತ್ಸಾಹದಿಂದ ಬಂಗಾಳದಲ್ಲಿ ಮುಸ್ಲಿಂ ಲೀಗಿನ ವರ್ಚಸ್ಸು ಹೆಚ್ಚಿಸಿದ ಫಜಲುಲ ಹಕ್ಕರನ್ನು ಅಧಿಕಾರದಿಂದ ನಿವೃತ್ತಿ ಪಡಿಸಿದ್ದಕ್ಕೆ ಈಗ ಮುಸ್ಲಿಂ ಲೀಗು ಚೆನ್ನಾದ ಏಟನ್ನು ತಿನ್ನಬೇಕಾಯಿತು. ಬಂಗಾಳದ ರಾಜಕೀಯ, ಆರ್ಥಿಕ ಹಾಗೂ ಸಾಮಾಜಿಕ ಪರಿಸ್ಥಿತಿಗಳು ಮುಸ್ಲಿಂ ಲೀಗಿಗೆ ಹೊಡೆತ ಕೊಡುವುದಕ್ಕೆ ಹೆಚ್ಚಿನ ಅನುಕೂಲತೆಯನ್ನು ಒದಗಿಸಿದವು. ಪಾಕಿಸ್ತಾನದ ಜನಸಂಖ್ಯೆಯಲ್ಲಿ ಬಂಗಾಲಿ ಮಾತನಾಡುವವರೇ ಬಹುಮತವಿದೆ. ಹೀಗಿದ್ದರೂ ಉರ್ದು ಭಾಷೆಯನ್ನು ರಾಷ್ಟ್ರಭಾಷೆಯಾಗಿ ಹೇರುವುದಕ್ಕೆ ಕರಾಚಿಯ ಕೇಂದ್ರ ಸರಕಾರ ನಿರ್ಧರಿಸಿದ್ದರಿಂದ ಸ್ವಾಭಿಮಾನಿಗಳಾದ ಬಂಗಾಲಿಗಳು ರೊಚ್ಚಿಗೆದ್ದರು. ವಿದ್ಯಾರ್ಥಿಗಳು ಹಿಂಸಾ ಕೃತ್ಯಗಳನ್ನು ತೊಡಗಿದಲ್ಲದೆ ರಾಜಕೀಯ ಪ್ರಚಾರವನ್ನೂ ಪ್ರಾರಂಭಿಸಿ, ಸರಕಾರದ ವಿರುದ್ಧ ನಿಂತರು. ಈ ಚುನಾವಣೆಯಲ್ಲಿ ಮುಸ್ಲಿಂ ಲೀಗು ಪರಾಭವ ಹೊಂದುವುದಕ್ಕೆ ವಿದ್ಯಾರ್ಥಿ ಮುಖಂಡರ ಅವ್ಯಾಹತವಾದ ಪ್ರಚಾರವೂ ಒಂದು ಕಾರಣ. ಇವನ್ನು ಬಿಟ್ಟರೆ [illegible] ವಿಚ್ಛೇದನಾನಂತರ ಭಾರತದೊಡನೆ ತಪ್ಪಿಹೋದ ಆರ್ಥಿಕ ಸಂಬಂಧವು ಬಡವರಾದ ಬಂಗಾಳಿಗಳ ಭಾವನೆಯ ಮೇಲೆ ವಿಪರೀತ ಪರಿಣಾಮವನ್ನು ಉಂಟುಮಾಡಿತು. ಪಾಕಿಸ್ತಾನ ಸರಕಾರದ ಆರ್ಥಿಕ ನೀತಿಯು ಸೆಣಬನ್ನು ಉತ್ಪಾದಿಸುತ್ತಿದ್ದ ಪೂರ್ವಬಂಗಾಳದ ರೈತರನ್ನು ಕಂಗೆಡಿಸಿತು. ಸಾಲದುದಕ್ಕೆ ವೀಸಾಪದ್ಧತಿಯೊಂದು ಬಳಕೆಗೆಬಂದು ಪೂರ್ವ—ಪಶ್ಚಿಮ ಬಂಗಾಳಗಳ ನಡುವೆ ಪ್ರಯಾಣವು ಕೆಲಮಟ್ಟಿಗೆ ದುಸ್ತರವಾಯಿತು. ಪಶ್ಚಿಮ ಪಾಕಿಸ್ತಾನದ ಪಠಾಣ[illegible] ಸಂಜಾಬಿಗಳು ಬಂಗಾಲಿಗಳನ್ನು ತಿರಸ್ಕಾರ ದೃಷ್ಟಿಯಿಂದ ನೋಡ ಹತ್ತಿದ್ದರಿಂದ, ಮುಸ್ಲಿಂಲೀಗಿನ ಸರಕಾರದಕುರಿತು ಬಂಗಾಳಿಗಳು ಜುಗುಪ್ಸೆಯನ್ನು ತೋರ ತೊಡಗಿದರು. ಪಾಕಿಸ್ತಾನ ಪಾರ್ಲಿಮೆಂಟಿನಲ್ಲಿ ನ್ಯಾಯವಾಗಿ ಬಹುಮತ ದೊರೆಯಬೇಕಿದ್ದರೂ ಬಂಗಾಳಕ್ಕೆ ಸಮಪ್ರಾತಿನಿಧ್ಯವನ್ನು ಮಾತ್ರ ಕೊಡಲಾಯಿತು. ಮೇಲ್ಮನೆಯಲ್ಲಂತೂ ಎಲ್ಲ ಪ್ರಾಂತಗಳಿಗೂ ಸಮಾನವಾದ ಪ್ರಾತಿನಿಧ್ಯ ದೊರಕಬೇಕೆಂದು ಹೇಳಿ ಪೂರ್ವ ಬಂಗಾಳದ ಬಹುಮತವನ್ನೇ ದುರ್ಲಕ್ಷಿಸಿದ್ದರಿಂದ ರಾಜಕೀಯ ಅಸಂತೋಷ ಇನ್ನಷ್ಟು ಹೆಚ್ಚಿಕೊಂಡಿತು "ಒಟ್ಟಿನಮೇಲೆ ಧರ್ಮ ಬಾಂಧವ್ಯವನ್ನು ನಂಬಿ ಪಾಕಿಸ್ತಾನದಲ್ಲಿ ಸೇರಿದ ಪೂರ್ವ ಬಂಗಾಲಿಗಳು ತಾವು ಪಾಕಿಸ್ತಾನೀ ಬಸವನ ಹಿಂದಿನ ಬಾಲ ಮಾತ್ರ ಆಗುವುದನ್ನು ಕಂಡು ಲೀಗನ್ನು ಹೊರ ತಳ್ಳಿದರು."

ರಾಜಕೀಯ ಗೊಂದಲ

ಇದರಿಂದ ಪಾಕಿಸ್ತಾನದ ರಾಜಕೀಯ ವಾತಾವರಣದಲ್ಲಿ ಅಲ್ಲೋಲಕಲ್ಲೋಲವೆದ್ದು ಪ್ರಧಾನ ಮಂತ್ರಿ ಮಹಮ್ಮದಾಲಿಯವರ ತಲೆಚಿಟ್ಟೆನ್ನುತ್ತದೆ. ಇದೇ ಎಪ್ರೀಲು ನಾಲ್ಕನೇ ತಾರೀಕಿಗೆ ಇಂಡೋನೇಶಿಯಾಕ್ಕೆ ಹೋಗಲಿದ್ದ ಪಾಕ ಪ್ರಧಾನರು ತಮ್ಮ ಪ್ರಯಾಣವನ್ನು ಸ್ಥಗಿತಗೊಳಿಸಿರುವರು. ವಿಶೇಷವಾದ ರಾಜಕೀಯ ಚಟುವಟಿಕೆಗಳು ಪಾಕಿಸ್ತಾನದಲ್ಲಿ ನಡೆಯುತ್ತಿದ್ದು, ಮುಸ್ಲಿಂ ಲೀಗದ ಅಧಿಕಾರಿಗಳಲ್ಲಿಯೇ ಭಿನ್ನಾಭಿಪ್ರಾಯವುಂಟಾಗಿದೆಯಾಗಿ ತಿಳಿಯುತ್ತದೆ. ಪೂರ್ವ ಬಂಗಾಳದ ಚುನಾವಣೆಗಳು ಪಾಕ ಘಟನಾ ಸಮಿತಿಯ ಪ್ರಾತಿನಿಧಿಕಸ್ವರೂಪಕ್ಕೆ ತೀರ ವ್ಯತಿರಿಕ್ತವಾಗಿರುವುದರಿಂದ, ಈಗಿನ ಘಟನಾ ಸಮಿತಿಯನ್ನು ವಿಸರ್ಜಿಸಬೇಕೆಂದು ಅವಾಮಿ ಲೀಗಿನ ಸುಹ್ರವರ್ದಿ ಮುಂತಾದ ಧುರೀಣರು ಹೇಳುತ್ತಿರುವುದನ್ನು ಮಹಮ್ಮದಾಲಿಯವರು ಒಪ್ಪುವುದಿಲ್ಲ. ಈ ಸಂಬಂಧದಲ್ಲಿ ಲೀಗಿನ ಪದಾಧಿಕಾರಿಗಳಲ್ಲಿಯೇ ಭಿನ್ನಾಭಿಪ್ರಾಯ ಕಂಡುಬರುತ್ತದೆ. ಮಹಮ್ಮದಾಲಿಯವರು ಘಟನಾ ಸಮಿತಿಯ ವಿಸರ್ಜನೆಗೆ ವಿರುದ್ಧವಿದ್ದರೂ ಸಂಯುಕ್ತರಂಗಕ್ಕೆ ಸರಕಾರವನ್ನು ರಚಿಸಲು ಅವಕಾಶ ಕೊಡುವುದಾಗಿ ಹೇಳಿದ್ದು, "ಪಶ್ಚಿಮ ಪಾಕಿಸ್ತಾನದಲ್ಲಿಯ ಮುಸ್ಲಿಂ ಲೀಗಿನ ಸರಕಾರಗಳಿಗೆ ಸಿಕ್ಕಿದಷ್ಟೇ ಸಹಕಾರವನ್ನು ಪೂರ್ವ ಬಂಗಾಳವೂ ಪಡೆಯುತ್ತದೆ" ಎಂದಿರುವರು. ಮುಸ್ಲಿಂ ಲೀಗಿನ ಸೋಲು ಪಾಕಿಸ್ತಾನದ ಪಾರ್ಲಿಮೆಂಟಿನಲ್ಲಿ ಟೀಕೆಗೆ ಗುರಿಯಾಗುತ್ತಿದೆ. ಮುಂಗಡ ಪತ್ರದ ಮೇಲೆ ಚರ್ಚೆ ನಡೆದಾಗ ಆಝಾದ ಪಾಕಿಸ್ತಾನಿ ಪಕ್ಷದ ಮಿಯಾ ಇಫ್ತಿಕರುದ್ದೀನರಂತೂ ಪಾಕ—ಅಮೇರಿಕಾ ಮಿಲಿಟರಿ ಒಡಂಬಡಿಕೆಯ ಮೇಲೆ ಇದರಿಂದ ಕೆಟ್ಟ ಪರಿಣಾಮವಾಗುತ್ತದೆಂದು ಖಂಡಿತವಾಗಿ ಹೇಳಿದರು. "ಪಾಕಿಸ್ತಾನವೀಗ ಅಮೇರಿಕೆಯ ವಸಾಹತು ಆಗಿಬಿಟ್ಟಿತು. ಪಾಕಿಸ್ತಾನವನ್ನು ಮಾರಿಕೊಂಡಂತೆಯೇ ಆಯಿತು — ಇನ್ನು ಅಮೇರಿಕದ ಲಕ್ಷಾವಧಿ ಸೈನಿಕರು ಇಲ್ಲಿಗೆ ಬಂದೊಡನೆ ನಮ್ಮ ದೇಶದ ಹೆಣ್ಣು ಮಕ್ಕಳ ಮಾರಾಟವು ನಡೆಯುತ್ತದೆ" ಎಂದವರು ತಿರಸ್ಕಾರದ ಮಾತನ್ನಾಡಿದರು. ಫಕ್ತೂನಿಸ್ತಾನದ ಚಳವಳಿಯ ಧುರೀಣರಾದ "ಗಡಿನಾಡ ಗಾಂಧಿ" ಗಫಾರಖಾನರು ದೇಶದಲ್ಲೀಗ ಆರ್ಥಿಕ ಹಾಗು ಸಾಮಾಜಿಕ ಕಾರ್ಯಕ್ರಮಗಳನ್ನಿಟ್ಟುಕೊಂಡ ಪಕ್ಷಗಳಿರಬೇಕೆಂದೂ ಮುಸ್ಲಿಂ ಲೀಗು ಅಸ್ತಿತ್ವದಲ್ಲಿ ಉಳಿಯುವುದು ಅನಗತ್ಯವೆಂದೂ ಖಂಡಿತವಾಗಿ ತಿಳಿಸಿದರು. ನೆರೆಹೊರೆಯ ರಾಷ್ಟ್ರಗಳೊಡನೆ ಸೌಹಾರ್ದ ಸಂಬಂಧವನ್ನು ಪ್ರಸ್ಥಾಪಿಸಿ ನಿಕಟ ಸಂಪರ್ಕವನ್ನು ಬೆಳೆಸಬೇಕೆಂದು ಅವರು ಅಪೇಕ್ಷಿಸಿದರು. ಆದರೆ ಪಾಕಿಸ್ತಾನಕ್ಕೆ ಈಗ ನೆರೆಹೊರೆಯವರ ವಿಚಾರ ಮಾಡಲು ಅವಕಾಶ ದೊರೆಯದು—ಆಂತರಿಕ ಪರಿಸ್ಥಿತಿಯನ್ನೇ ಅದು ಸುಧಾರಿಸಿಕೊಳ್ಳಬೇಕಾಗಿದೆ. ಪೂರ್ವ ಬಂಗಾಳದ ಜಂಜಾಟದೊಂದಿಗೆ ಸಿಂಧದ ಮಂತ್ರಿಮಂಡಳದ ಬಿಕ್ಕಟ್ಟು ಇನ್ನೊಂದು ತಲೆಬೇನೆಯಾಗಿ ಪರಿಣಮಿಸಿದೆ. ಇವನ್ನೆಲ್ಲ ಕಂಡ ಅಮೇರಿಕ ಮಿಲಿಟರಿ ಕೊಡುಗೆಯ ವಿಚಾರದಲ್ಲಿ ಆಲೋಚನಾಪರವಾಗುವುದು ನಿಶ್ಚಯ

ದಿ ನ್ಯೂ ಕರ್ನಾಟಕ ಪ್ರೊವಿಡೆಂಟ್ ಇನ್ಶೂರೆನ್ಸ್
ಕಂಪೆನಿ ಲಿಮಿಟೆಡ್,
ಪ್ರಧಾನ ಕಛೇರಿ,] [ಉಡುಪಿ, ದ. ಕನ್ನಡ.
ನಿಮ್ಮ ಸಂಪಾದನೆಗೆ ಸಾಧ್ಯವಿರುವ ಮೊತ್ತಕ್ಕೆ ವಿಮೆ ಮಾಡಲು ಅನುಕೂಲವಿರುವ ಜಿಲ್ಲೆಯ ಏಕಮಾತ್ರ ಜನತಾ ಪ್ರೊವಿಡೆಂಟ್ ವಿಮಾ ಸಂಸ್ಥೆ.
ಏಜಂಟರು, ಸ್ಪೆಶಲ್ ಏಜಂಟರು, ಆರ್ಗನೈಜರರು ಮತ್ತು ಇನ್ಸ್‌ಪೆಕ್ಟರರು ಬೇಕಾಗಿದ್ದಾರೆ.
ವಿವರಕ್ಕೆ ಬರೆಯಿರಿ:
THE NEW KARNATAKA PROVIDENT
Insurance Co. Ltd., UDIPI.

ಅಚ್ಚುಕಟ್ಟಾದ ಮುದ್ರಣ!
ಆದರೂ ದರ ಕಡಿಮೆ!!
ಲಗ್ನಪತ್ರಿಕೆ ಮೊದಲಾದ ಎಲ್ಲಾ ತರದ ಆಮಂತ್ರಣ ಪತ್ರಿಕೆ, ಕರಪತ್ರ, ರಶೀದಿ ಪುಸ್ತಕ, ಫಾರ್ಮು, ಬುಕ್ ವರ್ಕ್, ತರತರದ ಜೋಬ್ ವರ್ಕ್ ಮುಂತಾದುವನ್ನು ಮುತುವರ್ಜಿಯಿಂದ ನಾಜೂಕಾಗಿ ಸಕಾಲದಲ್ಲಿ ಮಾಡಿಕೊಡಲಾಗುವುದು.
ಬುಕ್ ಬೈಂಡಿಂಗ್, ರೂಲಿಂಗ್, ಕಟ್ಟಿಂಗ್ ಕಾರ್ಯಗಳನ್ನು ಕೈಗೊಳ್ಳಲಾಗುವುದು.
ನವಯುಗ ಪ್ರೆಸ್,
ಸಂತೆಕಟ್ಟೆ - - - ಉಡುಪಿ.

ಉಡುಪಿ

ಧಾರ್ಮಿಕ ಉಂಬಳಿ ಕಾಯಿದೆ ಅಸಿಂಧು—ಮದ್ರಾಸು ಹಿಂದೂ ಧಾರ್ಮಿಕ ಉಂಬಳಿ ಶಾಸನದ ಕೆಲವೊಂದು ಪ್ರಕರಣಗಳು ಘಟನಾ ವಿರುದ್ಧವೆಂದೂ ಅವನ್ನು ಕೇಂದ್ರ ರಾಜ್ಯ ವಿಧಾನ ಸಭೆಯ ಅಧಿಕಾರಕ್ಕೊಳಪಟ್ಟದ್ದೆಂದೂ ಇತ್ತೀಚೆಗೆ ಸುಪ್ರೀಮು ಕೋರ್ಟು ಶೀರೂರು ಮಠದ ಅಪ್ಪೀಲೊಂದರ ಪರಿಶೀಲನೆಯ ಸಮಯದಲ್ಲಿ ನಿರ್ಣಯಿಸಿರುವುದರಿಂದ ಶಿರೂರು ಮಠಕ್ಕೆ ಜಯವಾಗಿದೆ.

ನಾಟಕ ಪ್ರದರ್ಶನ—ಸ್ಥಳೀಯ ಪದ್ಮಕಲಾ ಸಂಗೀತ ನಾಟಕ ಮಂಡಳಿ, [illegible] ಕೂಟದವರು ಇದೇ ತಾ 17ರಂದು ಶ್ರೀ ಕೃಷ್ಣಮಠದ ವಸಂತ ಮಹಲಿನಲ್ಲಿ "ಭೂಕೈಲಾಸ"ವೆಂಬ ಪೌರಾಣಿಕ ನಾಟಕವನ್ನು [illegible] ಸಜ್ಜನರ ಕೋರಿಕೆ. ದಿವಸವು ಬೋರ್ಡ್ ಹೈಸ್ಕೂಲಿನ ಜನತಾ ಭವನದಲ್ಲಿ, ಡಾ' ಟಿ. ಎಂ. ಎ. ಪೈಗಳ ಅಧ್ಯಕ್ಷತೆಯಲ್ಲಿ [illegible] ಶ್ರೀ. [illegible] ಶೆಟ್ಟಿ [illegible] "ಪರಿವರ್ತನೆ" ಎಂಬ ನಾಟಕವನ್ನು ಅಭಿನಯಿಸಿದರು.

ಮಂಗಳೂರು

ಮಹಿಳಾ ಸಮಾಜದಲ್ಲಿ ಭಾಷಣ

ಜಿಲ್ಲೆಯ ಸಮಾಜ ವಿಕಾಸ ಯೋಜನಾ ಕ್ಷೇತ್ರಗಳ ಪರಿಶೀಲನೆಗಾಗಿ ಬಂದಿರುವ ಲೇ| ಘಾ| ಡಾ| ಇ. ಡಿ. ಮಾಲ್ಡರು ದಿನಾಂಕ 20ರಂದು ಸಂಜೆ ಮಹಿಳಾ ಸಭೆಯಲ್ಲಿ ಮಹಿಳೆಯರನ್ನುದ್ದೇಶಿಸಿ ಭಾಷಣ ಮಾಡುತ್ತಾ, ಸ್ತ್ರೀಯರ ಕರ್ತವ್ಯ, ಜಗತ್ತಿನ ಹಲವು ರಾಷ್ಟ್ರಗಳಲ್ಲಿ ಸ್ತ್ರೀಯರಿಗಿರುವ ಸ್ಥಾನಮಾನಗಳು, ಲೋಕ ಪ್ರವಾಸದಲ್ಲಿ ತಾನು ಕಂಡ ರಾಷ್ಟ್ರಗಳಲ್ಲಿನ ಸ್ತ್ರೀಯರ ಪರಿಸ್ಥಿತಿ, ಪ್ರಾಚೀನ, ಐತಿಹಾಸಿಕ ಮತ್ತು ಆಧುನಿಕ ಭಾರತದಲ್ಲಿ ಸ್ತ್ರೀಯರ ಸ್ಥಾನ ಇತ್ಯಾದಿಗಳನ್ನು ವಿವರಿಸಿದರು. ವಿದ್ಯಾವಂತ ಮಹಿಳೆಯರು ಸಾಮಾಜಿಕ ಕ್ಷೇತ್ರಗಳಲ್ಲಿ ದುಡಿದು, ತಮಗಿಂತ ಕೆಳಮಟ್ಟದಲ್ಲಿರುವ ಸ್ತ್ರೀಯರ ಉದ್ಧಾರ ಕಾರ್ಯಗಳನ್ನು ಕೈಕೊಳ್ಳಬೇಕೆಂದು ಕೂಡಾ ಅಪೇಕ್ಷಿಸಿದರು. ಶ್ರೀ ಪಿ. ಆರ್. ಆರ್. ಪೂಂಜರು ಸಭಾಧ್ಯಕ್ಷತೆ ವಹಿಸಿದ್ದರು. ಶ್ರೀಮತಿ ರಾಂಭಟಿ ಪಿ ಆರ್. ಪೂಂಜರು ಧನ್ಯವಾದಗಳನ್ನರ್ಪಿಸಿದರು.

ಸಾಂಸ್ಕೃತಿಕ ಉತ್ಸವ— ದ. ಕ. ಜಿಲ್ಲೆಯ ಅಂಚೆ ತಂತಿ ಇಲಾಖೆಯವರ ಪ್ರಥಮ ಆಟ, ಕಲೆ ಮತ್ತು ಸಾಂಸ್ಕೃತಿಕ ಉತ್ಸವವನ್ನು ತಾ 21ರಲ್ಲಿ ಮುನಿಸಿಪಲ್ ಚೇರ್ಮೆನ್ ಶ್ರೀ ಕೆ. ಸೂರ್ಯನಾರಾಯಣ ಅಡಿಗರು ಉದ್ಘಾಟಿಸಿದರು. ಮದ್ರಾಸಿನ ಪೋಸ್ಟು ಮಾಸ್ತರ್ ಜನರಲ್ ಶ್ರೀ ಕೆ. ವಿ. ಸೇನರು ಸಭಾಧ್ಯಕ್ಷತೆ ವಹಿಸಿದರು. ಸಭಾರಂಭದಲ್ಲಿ ಪೋಸ್ಟಲ್ ಸುಪರಿಂಟೆಂಡೆಂಟ್ ಶ್ರೀ ಆರ್. ಬಿ. ವಿಶ್ವನಾಥನರು ಸ್ವಾಗತ ಭಾಷಣ ಮಾಡಿದರು. ಶ್ರೀ ಎಮ್. ಬಿ. ವಿ. ಭಟ್ಟರು ಅಂಚೆ ತಂತಿ ಇಲಾಖೆಯ ರಿಕ್ರಿಯೇಶನ್ ಕ್ಲಬ್ಬಿನ ವರದಿಯನ್ನೋದಿದರು. ಶ್ರೀ ಕೆ. ವಿ. ಆಚಾರ್ಯರು ಶುಭ ಸಂದೇಶಗಳನ್ನು ಓದಿದರು. ಶ್ರೀ ಸೇನರು ಬಹುಮಾನ ವಿತರಣೆ ಮಾಡಿದ ಬಳಿಕ ಮನರಂಜನ ಕಾರ್ಯಕ್ರಮಗಳಾದುವು. ನಂತರ ಶ್ರೀ ಪಿ. ಶಿವಶಂಕರನವರು ಧನ್ಯವಾದಗಳನ್ನರ್ಪಿಸಿದರು. ಸಾಂಸ್ಕೃತಿಕ ಉತ್ಸವದ ಅಂಗವಾಗಿ ಅಂದೇ ಬೆಳಿಗ್ಗೆ ಆಟಗಳ ಉತ್ಸವವು ಜಿಲ್ಲಾ ಪೋಲೀಸ್ ಸುಪರಿಂಟೆಂಡೆಂಟ್ ಶ್ರೀ ಎ. ಕೃಷ್ಣ ಸ್ವಾಮಿಯವರ ಅಧ್ಯಕ್ಷತೆಯಲ್ಲಿ ಜರಗಿತು.

ಕರ್ನಾಟಕ ಪ್ರಾಂತ ರಚನಾ ಪರಿಷತ್ತು— ಮುಂದಿನ ಎಪ್ರಿಲ್ ತಿಂಗಳ ತಾ 3ರಲ್ಲಿ ಮಂಗಳೂರಲ್ಲಿ ಶ್ರೀ ಕೆ. ಆರ್. ಕಾರಂತರ ಅಧ್ಯಕ್ಷತೆಯಲ್ಲಿ ಜರಗಲಿರುವುದು.

ರಾಜಾಪುರ ಸಾರಸ್ವತ ಸಂಘ, ಮುಂಬಯಿ.

ಇದರ ನಾಲ್ಕನೇ ವಾರ್ಷಿಕ ಮಹಾಸಭೆಯು ತಾ 15 3-51ರಲ್ಲಿ ಸಮಾಜದ ಅಗ್ರಗಣ್ಯ ಜ್ಯೋತಿಷ್ಕರಾದ ಶ್ರೀ ಉಡುಪಿ ಪಾಂಡುರಂಗ ಜೋಯಿಸರ ಅಧ್ಯಕ್ಷತೆಯಲ್ಲಿ ಜರಗಿತು. ಗತವಾರ್ಷಿಕ ವರದಿಯನ್ನು ಸಂಘದ ಗೌರವ ಕಾರ್ಯದರ್ಶಿ ಶ್ರೀ ಡಿ. ಡಿ. ಪ್ರಭುಗಳವರು ಓದಿ ಹೇಳಿ ವರದಿಯು ಸರ್ವಾನುಮತದಿಂದ ಮಂಜೂರಾದ ಬಳಿಕ ಕೋಶಾಧಿಕಾರಿ ಶ್ರೀ ಯಸ್. ಯಸ್. ನಾಯಕರು ಸಂಘದ ಲೆಖ್ಖ ಪತ್ರಗಳನ್ನು ಸಭೆಕರ ಮುಂದಿಟ್ಟು ಲೆಖ್ಖಪತ್ರ ಪರಿಶೋಧಿಸಲಾಯಿತು. ನಂತರ ಸಭಿಕರಲ್ಲಿ ಕೆಲವರು ಸಂಘದ ಕಾರ್ಯ ಕಲಾಪ ಮತ್ತು ಸಂಘಾಭಿವೃದ್ಧಿಯ ಕುರಿತು ಯಥೋಚಿತ ಭಾಷಣವಿತ್ತರು. ಬಳಿಕ ರಾಜಾಪುರ ಸಾರಸ್ವತ ಸಮಾಜದ ಅತೀ ಬಡ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಧರ್ಮಾರ್ಥ ವಿದ್ಯಾರ್ಥಿ ವೇತನವನ್ನು ಕೊಡುವುದಾಗಿಯೂ ಅಂತಹ ವಿದ್ಯಾರ್ಥಿ ವಿದ್ಯಾರ್ಥಿನಿಯರು ಯಾ ಅವರ ರಕ್ಷಕರು ತಾ. 15—6—51ರ ಒಳಗೆ ಸಂಘದ ಆಫೀಸಿಗೆ ತಲಪುವಂತೆ ವಿವಾಸದ ಮತ್ತು ಶಾಲೆಯ ಪಿಳಾಸವನ್ನು ಒರೆದು ಅರ್ಜಿ ಮಾಡತಕ್ಕದ್ದೆಂದೂ ಸರ್ವಾನುಮತದಿಂದ ಮಂಜೂರಾಯಿತು. ನಂತರ ಅಧ್ಯಕ್ಷರ ಭಾಷಣ, ಕಾರ್ಯದರ್ಶಿಯವರಿಂದ ಧನ್ಯವಾದಗಳೊಂದಿಗೆ ಸಭೆಯು ಮುಕ್ತಾಯವಾಯಿತು.

ಸಂಘದ ವಿಳಾಸ ರಾಜಾಪುರ ಸಾರಸ್ವತ ಸಂಘ, ಮುಂಬಯಿ ಪರೇಲ್ಬಾಡಿ, ೨ನೇ ಮಾಳಿಗೆ, ರೂಮ್ ನಂ. 51 ಪಟೇಲ್ ಟೇಂಕ್ ರೋಡ್, ಮುಂಬಯಿ ನಂ. 12.

ಶ್ರೀ ಎಸ್. ನಿಜಲಿಂಗಪ್ಪನವರು ಪರಿಷತ್ತನ್ನು ಉದ್ಘಾಟಿಸಲಿರುವರು.

ತಿರು-ಕೊಚ್ಚಿ ದಿನಾಚರಣೆಯು— ಕಳೆದ ತಾ 11ರಲ್ಲಿ ಸಂಜೆ ಕೇಂದ್ರ ಮೈದಾನದಲ್ಲಿ ಕಮ್ಯೂನಿಸ್ಟ್ ಪಾರ್ಟಿಯ ಆಶ್ರಯದಲ್ಲಿ ಶ್ರೀ ಎ. ಕೃಷ್ಣ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಎ. ಶಾಂತಾರಾಮ್ ಪೈ, ಕೊರಗಪ್ಪ ರೈ ಮೊದಲಾದವರ ಭಾಷಣಗಳಾದುವು.

ಬಿರುಗಾಳಿ ಮಳೆಯ ಅನಾಹುತ— ಕಳೆದ ತಾ 18ರಲ್ಲಿ ಉಳ್ಳಾಲದಲ್ಲಿ ಬಿರುಗಾಳಿ ಮಳೆಯ ಅನಾಹುತಕ್ಕೆ ತುತ್ತಾದ ಒಂದು ಮಂಚಿಯು ಮುಳುಗಿರುವುದಾಗಿ ಹೇಳಲಾಗಿದೆ. ಇದರಲ್ಲಿ ಹಂಚು ತುಂಬಿಸಲಾಗಿತ್ತು. ಉಳ್ಳಾಲದಲ್ಲಿ ವಿಪರೀತ ಮಳೆ ಬಂದು ಸಿಡಿಲು ಬಡಿದು ಅನಾಹುತ ಉಂಟಾಗಿದೆ.

ಅಪ್ಯಾರಿನ ಮೋಟಾರು ಅಪಘಾತದಲ್ಲಿ ಈ ತನಕ ಇಬ್ಬರು ಮರಣ ಪಟ್ಟಿರುವರು. ಅಜಾಗ್ರತೆಯಿಂದ ನಡೆಸಿದ ಮೋಟಾರಿನ ಡ್ರೈವರನನ್ನು ರಿಮಾಂಡಿನಲ್ಲಿಡಲಾಗಿದೆ.

ಪ್ರಜಾ ಸೋಶಲಿಸ್ಟ್ ಪಾರ್ಟಿ ಹೇಳಿಕೆ— ಜಿಲ್ಲೆಯಲ್ಲಿ ಅಕ್ಕಿಯ ಧಾರಣೆ ದಿನೇ ದಿನೇ ಜಾಸ್ತಿಯಾಗುತ್ತ ಬರುವುದರಿಂದ, ಸರಕಾರವು ಈ ಕೆಳಗಿನ ಕಾರ್ಯಕ್ರಮವ ಕೈಕೊಳ್ಳಬೇಕೆಂದು ಪ್ರ. ಸೋ. ಪಾರ್ಟಿಯು ಹೇಳಿಕೆಯೊಂದು ಹೊರಡಿಸಿದೆ. 1 ಜಿಲ್ಲೆಯ ಹೊರಗಿನಿಂದ ಅಕ್ಕಿ ತರಿಸಬೇಕು. 2 ಸ್ಟೋರುಗಳಲ್ಲಿ ಕೊಡಲ್ಪಡುವ ಅಕ್ಕಿಯ ಪರಿಮಾಣವನ್ನು ಹೆಚ್ಚಿಸಬೇಕು. 3 ಸ್ಟೋರುಗಳಲ್ಲಿ ಒಳ್ಳೆಯ ಅಕ್ಕಿಯನ್ನೇ ವಿತರಣೆ ಮಾಡಬೇಕು. 4 ಈ ಕಾರ್ಯಕ್ರಮ ಕೂಡಲೇ ಜಾರಿಯಾಗುವಂತೆ ಜಿಲ್ಲಾಧಿಕಾರಿಗಳಿಗೆ ಸರಕಾರ ಹುಕುಂ ಕೊಡಬೇಕು. 5 ಜಿಲ್ಲೆಯಲ್ಲಿ ಅಕ್ಕಿ ಸಂಗ್ರಹ ಕಡಿಮೆಯಾಗದಂತೆ ಸರಕಾರವು ಮುಂಜಾಗ್ರತೆಯಿಂದಿರಬೇಕು.

ಜಿಲ್ಲಾ ದೇವಾಡಿಗ ಸಮಾಜ ಸುಧಾರಕ ಸಂಘದ— ವಾರ್ಷಿಕೋತ್ಸವವು ಇದೇ ತಾ 25ನೆ ಆದಿತ್ಯವಾರ ಸಂಜೆ ಮಂಗಳೂರು ಶರವು ಮಹಾ ಗಣಪತಿ ದೇವಸ್ಥಾನದ ಉಪ್ಪರಿಗೆಯಲ್ಲಿ ಶ್ರೀ ಬಿ. ಗಂಗಾಧರ ರಾವ್, ಎಡ್ವೊಕೇಟ್, ಅವರ ಅಧ್ಯಕ್ಷತೆಯಲ್ಲಿ ಜರಗಲಿರುವುದು.

ದ. ಕ. ಜಿಲ್ಲೆಗೆ 2000 ಟನ್ ಅಕ್ಕಿ— ದ. ಕ. ಜಿಲ್ಲೆಯ ಅಕ್ಕಿಯ ಕ್ರಯವನ್ನು ಇಳಿಸುವ ಮಾಡುವರೆ ಮದ್ರಾಸು ಸರಕಾರವು ಕೊಡಗಿನ 2000 ಟನ್ ಅಕ್ಕಿಯನ್ನು ಈ ಜಿಲ್ಲೆಯಲ್ಲಿ ಬಹಿರಂಗ ಮಾರಾಟಕ್ಕೆ ವಿನಿಯೋಗಿಸುವುದಾಗಿ ತಿಳಿದು ಬರುತ್ತದೆ.

ನಾಗೋರಿ— ಕುಂದಾಪುರ ತಾಲೂಕಿನ ನಾಗೋರಿನಲ್ಲಿ ಶ್ರೀ ನಾರಾಯಣ ಹೆಬ್ಬಾರರ ಹಿತನದಲ್ಲಿ ಭೂದಾನ ಯಜ್ಞ ಪ್ರಚಾರದ ಸಭೆ ಜರಗಿತು. ಶ್ರೀಗಳಾದ ವಿ. ನಾಗಯ್ಯ ಮತ್ತು ಎಮ್. ಎಸ್. ವೆಂಕಟರಮಣಯ್ಯನವರು ಭೂದಾನ ಯಜ್ಞದ ಮಹತ್ವ ಇತ್ಯಾದಿ ವಿಷಯಗಳನ್ನೆತ್ತಿ ಭಾಷಣವಿತ್ತರು.

ಕೊಕ್ಕರ್ಣೆ— ಇಲ್ಲಿಯ ಬೋರ್ಡು ಹಾ| ಎ| ಶಾಲೆಯ ವಾರ್ಷಿಕೋತ್ಸವವು ಕಳೆದ ತಾ 13ರಲ್ಲಿ ಶ್ರೀ ಪಿ. ಎನ್. ಭೋಜರಾಯರ ಅಧ್ಯಕ್ಷತೆಯಲ್ಲಿ ಜರಗಿತು. ವಿವಿಧ ಮನರಂಜನ ಕಾರ್ಯಕ್ರಮಗಳಾದ ಬಳಿಕ ಮುಖ್ಯೋಪಾಧ್ಯಾಯ ಶ್ರೀ ಹಿರಿಯಣ್ಣ ಶೆಟ್ಟರು ಧನ್ಯವಾದಗಳನ್ನರ್ಪಿಸಿದರು.

ಗುಡ್ಡೆಯಂಗಡಿ— ಸ್ಥಳೀಯ ಬೋರ್ಡು ಎಲಿಮೆಂಟರಿ ಶಾಲಾ ಹಳೆ ವಿದ್ಯಾರ್ಥಿ ಸಂಘದ ಉದ್ಘಾಟನಾ ಸಮಾರಂಭವು ಇದೇ ತಾ 13ರಲ್ಲಿ ಶ್ರೀ ಬಿ. ಚಂದ್ರಶೇಖರ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯಕಾರೀ ಮಂಡಳಿಯ ರಚನೆಯಾಗಿ ಶ್ರೀಗಳಾದ ಬಿ. ಚಂದ್ರಶೇಖರ ಶೆಟ್ಟರು ಅಧ್ಯಕ್ಷರಾಗಿಯೂ ಶ್ರೀ ಬಿ. ಗಣಪತಿ ಶೈಗಳು ಕಾರ್ಯದರ್ಶಿಯರಾಗಿಯೂ ಶ್ರೀ ಕೆ. ಚಂದ್ರಶೇಖರ ಹೆಗ್ಡೆಯವರು ಕೋಶಾಧಿಕಾರಿಗಳಾಗಿಯೂ ಆರಿಸಲ್ಪಟ್ಟರು.

ಸುರತ್ಕಲ್— ಸುರತ್ಕಲ್ ಸಮೀಪದ ಆದಿ ಕೃಷ್ಣಾಪುರ ಮಠದಲ್ಲಿ ಶ್ರೀ ಕೃಷ್ಣಾಪುರ ಮಠದ ಶ್ರೀ ವಿದ್ಯಾರತ್ನ ತೀರ್ಥ ಶ್ರೀಪಾದಂಗಳವರು ಇದೇ ತಾ 20ರಲ್ಲಿ ತಮ್ಮ ಗುರುಗಳ ಆರಾಧನೆಯನ್ನು ಅತ್ಯಂತ ವೈಭವದಿಂದ ಜರಗಿಸಿದರು.

ಮೂಲ್ಕಿ— ಸ್ಥಳೀಯ ಬೋರ್ಡು ಹಾ| ಎ| ಶಾಲಾ ವಾರ್ಷಿಕೋತ್ಸವವು ಇದೇ ತಾ 14ರಲ್ಲಿ ಮೂಲ್ಕಿ ಗವರ್ನಮೆಂಟ್ ಹೈಸ್ಕೂಲ್ ಹೆಡ್ಮಾಸ್ತರ್ ಶ್ರೀ ಕೆ. ವಿಠಲ ಶೆಣೈಯವರ ಅಧ್ಯಕ್ಷತೆಯಲ್ಲಿ ಜರಗಿತು. ಡಾ| ರಾಯಪ್ಪ ಕಾಮತ್, ಶ್ರೀ ಭೋಜರಾವ್, ಪಂಚಾಯತ ಬೋರ್ಡು ಪ್ರೆಸಿಡೆಂಟ್ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು. ಶಾಲಾ ಬಾಲಿಕೆಯರು "ಪ್ರೇಮ ಸಂಕಲ್ಪ" ಎಂಬ ಕನ್ನಡ ನಾಟಕವನ್ನು ಚಲೋದಾಗಿ ಅಭಿನಯಿಸಿದರು.

ನಡಿಯುವ ಚಿತ್ರ

ಮೊದಲ ಬಣ್ಣದ ರಾಣಿಯಾಗಿ ಭಾರತದಲ್ಲಿ ಖ್ಯಾತಿ ಪಡೆದ ನಾದಿರಾ, ಇವರೊಂದಿಗೆ ಅಶೋಕ ಕುಮಾರ್, ಓಂಪ್ರಕಾಶ್ ಮೊದಲಾದವರು - ಇವರನ್ನು ಕಾಣಲು

ನಗ್ಮಾ

ಅನಂತರ ಹವಾ ಸಫಾರ್

ತಾರೀಕು 25ನೇ ಆದಿತ್ಯವಾರ ಬೆಳಿಗ್ಗೆ ಘಂಟೆ 10ಕ್ಕೆ

HURRICANE ISLAND

ಶ್ರೀ ರಾಮಕೃಷ್ಣ ಥಿಯೇಟರ್, ಲಿಮಿಟೆಡ್ ಉಡುಪಿ.

ಡಿ| ಕಿಟ್ಟೆಲ್‌ಯವರ ಮೂರು ಗ್ರಂಥಗಳು

ಪ್ರಾಚೀನ ತುಳುನಾಡು	(ಎಂ. ಗೋವಿಂದ ಪೈಗಳ ಮುನ್ನುಡಿ)	೨	೦	೦
ಭಾರತದ ಕರ್ಣ (ಗದ್ಯ)	(ಎಂ. ಆರ್. ಶಾಸ್ತ್ರಿಗಳ ,,)	೦	೬	೦
ಮುರಲಿ (ಪದ್ಯ)	(ಕಯ್ಯಾರ ಕಿಞ್ಞಣ್ಣ ರೈಗಳ ,,)	೦	೧೨	೦

ಟಪ್ಪಾಲು ಖರ್ಚು ಪ್ರತ್ಯೇಕ. ಪುಸ್ತಕ ವ್ಯಾಪಾರಿಗಳಿಗೆ ಕಮಿಶನ್ ಕೊಡಲಾಗುವುದು.

ನವಯುಗ ಪ್ರೆಸ್, ಪೋಸ್ಟ್ ಬಾಕ್ಸ್ ನಂಬ್ರ 22, ಉಡುಪಿ.

ಕೆನರಾ ನ್ಯೂಸ್ ಏಜನ್ಸಿ, ನೆಹರೂ ಲಂಚ್‌ಹೋಮ್ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು.

ಗಮನಿಸಿರಿ!



ನಮ್ಮ ಟ್ರೇಡ್‌ಮಾರ್ಕಿನ ಅನುಕರಣೆಯನ್ನು ಮಾಡುವ ಇತರ ನಕಲಿ ಬೀಡಿಗಳಿಗೆ ಮೋಸಹೋಗದಿರಿ.

ಮೇಲಿನ ಎಸ್. ಆರ್. ಟ್ರೇಡ್‌ಮಾರ್ಕ್ ಇರುವ ಬೀಡಿಗಳು ಮಾತ್ರ ನಿಮಗೆ ಖಾತ್ರಿದಾಯಕವಾದುದು.

S.R.BEEDI WORKS, UDIPI, S.K.

ಸವಿನಯ ವಿನಂತಿ

ನಮ್ಮ ಚಂದಾದಾರರಿಗೆಲ್ಲಾ ಅವರವರ ಬಾಕಿಯನ್ನು ಸೂಚಿಸಿ ಈ ಮೊದಲೇ ಆಗಾಗ್ಗೆ ಬರೆದು ತಿಳಿಸಿರುತ್ತೇವೆ. ಕೆಲವರು ಕ್ರಮವಾಗಿ ಚಂದಾ ಹಣ ಕಳುಹಿಸಿದ್ದಾರೆ. ಇನ್ನು ಕೆಲವರು ನಾವು ಕಳುಹಿಸಿದ ವಿ. ಪಿ. ಪಿ. ಯನ್ನು ಸ್ವೀಕರಿಸಿದ್ದಾರೆ. ಅವರೆಲ್ಲರಿಗೂ ನಾವು ಆಭಾರಿಗಳಾಗಿದ್ದೇವೆ. ಇನ್ನೂ ಚಂದಾ ಹಣವನ್ನು ಬಾಕಿ ಮಾಡಿಕೊಂಡಿರುವ, ವಿ. ಪಿ. ಪಿ. ಯನ್ನು ಕೂಡ ಸ್ವೀಕರಿಸದಿರುವ ಚಂದಾದಾರರೆಲ್ಲರೂ ಒಂದುವೇಳೆ ನಮ್ಮ ನೆನಪೋಲೆ ಮುಟ್ಟದಿದ್ದವರು ಕೂಡ ಪ್ರೀತ್ಯಾಭಿಮಾನವಿಟ್ಟು ತಮ್ಮ ಚಂದಾ ಹಣವನ್ನು ಈಗಲಾದರೂ ಕಳುಹಿಸಿಕೊಟ್ಟು ನಮಗೆ ನೆರವಾಗಬೇಕಾಗಿ ಕೇಳಿಕೊಳ್ಳುತ್ತೇವೆ. ಸಕಾಲದಲ್ಲಿ ಚಂದಾ ಹಣ ಅಥವಾ ಉತ್ತರ ಬಾರದಿದ್ದರೆ ಮುಂದಿನ ಸಂಚಿಕೆಯನ್ನು ವಿ. ಪಿ. ಪಿ. ಮಾಡುವೆವು.

—ಮೆನೇಜರ್.

ನಮ್ಮ ಜವುಳಿ ಉದ್ದಿಮೆಯ ಶತವಾರ್ಷಿಕೋತ್ಸವ

(೪ನೇ ಪುಟದಿಂದ)

ಉತ್ಕರ್ಷದ ಈ ಕಾಲಾವಧಿಯು ಹೆಚ್ಚು ಸಮಯ ಉಳಿಯಲಿಲ್ಲ. ಯುದ್ಧೋತ್ತರದ ಆರ್ಥಿಕ ಮುಗ್ಗಟ್ಟು ಗಿರಣಿಗಳನ್ನು ಶೀಘ್ರದಲ್ಲಿಯೇ ಬಾಧಿಸ ತೊಡಗಿತು. ಇತ್ತ ಜಪಾನು ದೇಶವು ಜವುಳಿಯ ಪೇಟೆಯ ಮೇಲೆ ತನ್ನ ವರ್ಚಸ್ಸನ್ನು ಬೀರಹತ್ತಿತು. ಇದರಿಂದ ಉದ್ದಿಮೆದಾರರ ಕೈಯಲ್ಲಿ ಕಾಸು ಕುಣಿಯುವುದು ನಿಂತಿತು. ರೂಪಾಯಿಯ ವಿನಿಮಯ ದರ ಒಮ್ಮೆಲೇ ಇಳಿದುದರಿಂದ ಹೊಸತಾಗಿ ಯಂತ್ರ ಸಾಮಗ್ರಿಗಳನ್ನು ತರಿಸಬೇಕೆಂದು ಎಣಿಸಿದವರ ಅಭೀಷ್ಟ ಅಪೂರ್ಣವಾಗಿಯೇ ಉಳಿಯಿತು. ಜೊತೆಯಲ್ಲಿಯೇ ಖಾದಿಯ ಆಂದೋಲನವೂ ಪ್ರಬಲಗೊಂಡು, ನಮ್ಮ ಗಿರಣಿಯಲ್ಲಿ ಸಿದ್ಧಗೊಂಡ ಬಟ್ಟೆ ಸಹ ತಿರಸ್ಕಾರ ಪ್ರಾಯವಾಯಿತು.

ಜವುಳಿ ಉದ್ದಿಮೆಗೆ ಕಣ್ಣು ಕಟ್ಟಿದಂತಾದುದರಿಂದ, ಇದಕ್ಕೆ ಸಂರಕ್ಷಣೆ ಕೊಡಬೇಕೆನ್ನುವ ಕೂಗು ಈಗ ಹುಟ್ಟಿಕೊಂಡಿತು. ೧೯೨೨ ಮತ್ತು ೧೯೩೦ ಈ ವರ್ಷಗಳಲ್ಲಿ ನಮ್ಮ ದೇಶಕ್ಕೆ ಬಂದ ಜಪಾನು ದೇಶದ ಬಟ್ಟೆಯ ಪ್ರಮಾಣ ೧೦೮೦ ಲಕ್ಷ ಗಜದಿಂದ ೬೫೬೦ ಲಕ್ಷ ಗಜಕ್ಕೆ ಏರಿದ್ದನ್ನು ಕಂಡು, ಸರಕಾರಕ್ಕೆ ಕೂಡ ಸಂರಕ್ಷಣೆಯನ್ನು ಕೊಡದೆ ಹೋದರೆ ಜವುಳಿಯ ಉದ್ದಿಮೆ ನಮ್ಮ ದೇಶದಲ್ಲಿ ಬದುಕಿ ಉಳಿಯಲಾರದೆಂದು ಮನದಟ್ಟಿಕೆಯಾಯಿತು. ಸುಂಕ ಮಂಡಳವು ಆಯಾತ ಸುಂಕವನ್ನು ಹೇರಲು ತೊಡಗಿತು. ೧೯೩೦ರಲ್ಲಿ ಬ್ರಿಟಿಷ ಬಟ್ಟೆಯ ಮೇಲೆ ನೂರಕ್ಕೆ ೨೫ ಮತ್ತು ಉಳಿದ ವಸ್ತ್ರಗಳ ಮೇಲೆ ನೂರಕ್ಕೆ ೩೧ ೧/೪ ಸುಂಕ ಹೇರಲಾಯಿತು. ೧೯೩೩ರಲ್ಲಿ ಬ್ರಿಟಿಷ ಬಟ್ಟೆಯ ಮೇಲಿನ ಸುಂಕವನ್ನು ನೂರಕ್ಕೆ ಐವತ್ತು ಮಾಡಿದರು. ಜಪಾನು ದೇಶದ ಸ್ಪರ್ಧೆಯನ್ನು ತಪ್ಪಿಸಲು ನೂರಕ್ಕೆ ೭೫ ಸುಂಕ ಹೇರಿದರು. ಇದನ್ನು ಮುಂದೆ ನೂರಕ್ಕೆ ೫೦ ಮಾಡಲಾಯಿತು.

ಈ ಸಂರಕ್ಷಣೆಯ ಕ್ರಮವು ದೇಶೀಯ ಗಿರಣಿಗಳನ್ನು ಪುನಃ ಮೇಲಿನ ಸ್ಥಿತಿಗೆ ತಂದಿತು. ಬಟ್ಟೆಯ ಗಿರಣಿಗಳ ಸಂಖ್ಯೆಯೂ ಅವುಗಳ ಕದಿರು ಹಾಗು ಮಗ್ಗಗಳ ಸಂಖ್ಯೆಯೂ ಏರಿತು. ಇಷ್ಟರಲ್ಲಿ ದ್ವಿತೀಯ ಮಹಾಯುದ್ಧವು ... ಗಿದುದರಿಂದ, ಭಾರತದ ಜವುಳಿ ಗಿರಣಿಗಳು ಅಂತರಿಕ ಬೇಡಿಕೆಯನ್ನು ಪೂರೈಸುವುದಕ್ಕೋಸ್ಕರ ಮಿತಿಮೀರಿ ದುಡಿಯಹತ್ತಿದವು. ಯುದ್ಧದಲ್ಲಿ ಜಪಾನು ದೇಶವು ಭಾಗವಹಿಸಿದುದರಿಂದ ನಮ್ಮ ಗಿರಣಿಗಳಿಗೆ ಮತ್ತಷ್ಟು ಮಹತ್ವ ಬಂತು.

ಉದ್ದಿಮೆಯ ಮಹತ್ವ

ಯುದ್ಧಕಾಲದ ಅವಿರತ ಚಟುವಟಿಕೆಗಳ ಪರಿಣಾಮವಾಗಿ ಭಾರತವು ಬಟ್ಟೆಯ ಆಯಾತ ಮಾಡಿಕೊಳ್ಳುತ್ತಿದ್ದ ಪರಿಸ್ಥಿತಿಯು ತಪ್ಪಿಹೋಗಿ, ೧೯೪೩ನೇ ಇಸವಿಯಲ್ಲಿ ನಿರ್ಯಾತ ವ್ಯಾಪಾರವನ್ನು ತೊಡಗಿತು. ೧೯೫೦ನೇ ವರ್ಷದಲ್ಲಿ ನಮ್ಮ ದೇಶದ ಗಿರಣಿಗಳು ೧೨೦ ಕೋಟಿ ಗಜ ಬಟ್ಟೆಯನ್ನು ನಿರ್ಯಾತ ಮಾಡಿ ತೀರಾ ಹೊಸತಾದ ಅತ್ಯುನ್ನತ ದಾಖಲೆಯನ್ನು ಸ್ಥಾಪಿಸಿದವು. ಆದರೆ ಆ ಮೇಲೆ ಈ ಮಟ್ಟವನ್ನು ಕಾಯ್ದುಕೊಳ್ಳಲಾಗಲಿಲ್ಲ. ಆದಾಗ್ಯೂ ಬಟ್ಟೆಯ ನಿರ್ಯಾತ ವ್ಯಾಪಾರದಲ್ಲಿ ನಮ್ಮ ದೇಶಕ್ಕೆ ಈಗಲೂ ಮನ್ನಣೆಯ ಸ್ಥಾನವುಂಟು ಮತ್ತು ಉತ್ಪಾದನಾ ದೃಷ್ಟಿಯಿಂದ ನಾವು ಈಗಾಗಲೇ ಪಂಚವಾರ್ಷಿಕ ಯೋಜನೆಯ ಗುರಿಯನ್ನು ಮುಟ್ಟಿದ್ದೇವೆ.

ಇಂದು ಭಾರತದಲ್ಲಿ ಜವುಳಿಯ ಉದ್ದಿಮೆಯು ಜನಗಳಿಗೆ ಉದ್ಯೋಗ ಒದಗಿಸಿಕೊಡುವ ಹಾಗೂ ರಾಷ್ಟ್ರಕ್ಕೆ ಆದಾಯವನ್ನು ತರುವ ದೃಷ್ಟಿಯಲ್ಲಿ ಉನ್ನತ ಸ್ಥಾನವನ್ನು ಪಡೆಯುತ್ತದೆ. ನಮ್ಮಲ್ಲಿ ಈಗ ೪೫೩ ಗಿರಣಿಗಳು ಸ್ಥಾಪನೆಗೊಂಡಿದ್ದು ಇವುಗಳಲ್ಲಿ ಏಳೂವರೆ ಲಕ್ಷ ಕೆಲಸಗಾರರು ಇರುವರು. ೧೧೭ ಲಕ್ಷ ಕದಿರುಗಳು ಮತ್ತು ಎರಡು ಲಕ್ಷಕ್ಕೂ ಮಿಕ್ಕಿದ ಮಗ್ಗಗಳು ಸುಮಾರು ೭೪೦ ಕೋಟಿ ರೂಪಾಯಿ ಬೆಲೆ ಬಾಳುವ ೪೮೦ ಕೋಟಿ ಗಜ ಬಟ್ಟೆಯನ್ನು ಉತ್ಪಾದಿಸುತ್ತವೆ. ಈ ಉದ್ದಿಮೆಯಲ್ಲಿ ೧೧೯ ಕೋಟಿ ರೂಪಾಯಿಗಳ ಭಂಡವಾಳ ತೊಡಗಿಸಲ್ಪಟ್ಟಿದೆ. ಕೈಮಗ್ಗದ ಬಟ್ಟೆಯ ಕೈಗಾರಿಕೆಯನ್ನು ಬಿಟ್ಟರೆ ಇಷ್ಟು ದೊಡ್ಡ ಉದ್ಯಮ ದೇಶದಲ್ಲಿ ಬೇರೊಂದಿಲ್ಲ. ಕಚ್ಚಾ ಹತ್ತಿಯನ್ನು ಬಳಸುವ ದೇಶಗಳಲ್ಲಿ ಭಾರತಕ್ಕೆ ದ್ವಿತೀಯ ಸ್ಥಾನ ಲಭಿಸುತ್ತದೆ. ಕದಿರು ಹಾಗು ಮಗ್ಗಗಳ ಸಂಖ್ಯಾ ಪ್ರಮಾಣದ ತುಲನೆಯಿಂದ ಭಾರತಕ್ಕೆ ತೃತೀಯ ಸ್ಥಾನ ದೊರಕುತ್ತದೆ. ನಮ್ಮ ಗಿರಣಿಗಳು ಭಾರತದಲ್ಲಿ ಬೆಳೆಯುವ ೧೫೦ ಕೋಟಿ ರೂಪಾಯಿ ಬೆಲೆ ಬಾಳುವ ೪೨ ಲಕ್ಷ ಬೇಲು ಹತ್ತಿಯ ಪ್ರಯೋಜನವನ್ನು ಪಡೆಯುತ್ತವೆ. ೫೦ ಲಕ್ಷ ಟನ್ನುಗಳಷ್ಟು ಉರುವಲನ್ನು, ೫೦೦ ಲಕ್ಷ ಗೆಲನು ಎಣ್ಣೆಯನ್ನು ೯೦ ಕೋಟಿ ಕಿಲೋವ್ಯಾಟುಗಳಷ್ಟು ವಿದ್ಯುಚ್ಛಕ್ತಿಯನ್ನು ಈ ಗಿರಣಿಗಳು ಬಳಸುತ್ತವೆ. ಇವುಗಳಿಂದ ವರ್ಷಕ್ಕೆ ೪೦೦ ಕೋಟಿ ರೂಪಾಯಿಗಳ ವ್ಯವಹಾರ ನಡೆಯುತ್ತದೆ.

ಈ ಉದ್ದಿಮೆಯಿಂದ ಸರಕಾರಕ್ಕೆ ಸಾಕಷ್ಟು ದೊಡ್ಡ ಪ್ರಮಾಣದಲ್ಲಿ ಆದಾಯ ಬರುತ್ತದೆ. ೧೯೪೯ರಿಂದ ೫೩ನೇ ವರ್ಷದವರೆಗೆ ಸುಮಾರು ೧೧ಕೋಟಿ ರೂಪಾಯಿಗಳಿಗೂ ಹೆಚ್ಚು ಹಣವನ್ನು ಪ್ರತಿವರ್ಷ ಆದಾಯಕರ ಮುಂತಾದ ರೂಪದಲ್ಲಿ ಗಿರಣಿಗಳು ಕೊಟ್ಟವು. ಇದಲ್ಲದೆ ಸರಕಾರವು ಗಿರಣಿಗಳ ಮೇಲೆ ಅಬಕಾರಿ ಸುಂಕವನ್ನು ಹೇರಿ ೨೦ಕೋಟಿ ರೂಪಾಯಿಗಳನ್ನು ಸಂಪಾದಿಸುತ್ತದೆ. ಈ ಬಾಬಲಿನಿಂದ ಆರು ಕೋಟಿ ರೂಪಾಯಿಗಳನ್ನು ಕೈಮಗ್ಗ ಹಾಗು ಖಾದಿಯ ಅಭಿವೃದ್ಧಿ ಪ್ರಯತ್ನಗಳಿಗೋಸ್ಕರ ವ್ಯಯಿಸಲು ಸರಕಾರ ನಿರ್ಧರಿಸಿದೆ. ಕೇಂದ್ರ ಸರಕಾರದ ಕರ ಮತ್ತು ಸುಂಕಗಳನ್ನಲ್ಲದೆ ರಾಜ್ಯಸರಕಾರಗಳಿಗೂ ಇವು ಸುಮಾರು ೧೧ಕೋಟಿ ರೂಪಾಯಿಗಳ ಕರವನ್ನು ತೆರುತ್ತವೆ.

ಪ್ರತಿಕ್ಷೇಪಣದ ಸಮಸ್ಯೆ

ಇಷ್ಟು ದೊಡ್ಡ ಉದ್ದಿಮೆಯು ಬೆಳೆದು ಬಂದ ಹಿನ್ನೆಲೆಯನ್ನು ಪರಿಶೀಲಿಸಿದರೆ, ನಮ್ಮ ಗಿರಣಿಗಳು ಇದಿರಿಸುವ ಕೆಲವು ಸಮಸ್ಯೆಗಳು ಗೋಚರಿಸುತ್ತವೆ. ಮೊದಲನೆಯದಾಗಿ ನಮ್ಮ ಗಿರಣಿಗಳಲ್ಲಿರುವ ಯಂತ್ರಗಳೆಲ್ಲ ಕೆಲಸ ಮಾಡಿ ಮಾಡಿ ದಣಿದು ಹೋಗಿವೆ. ಅಥವಾ ಈಗಿನ ವೈಜ್ಞಾನಿಕ ಪ್ರಗತಿಯೊಂದಿಗೆ ಹೆಜ್ಜೆ ಹಾಕಲಾರದೆ ಹಿಂದೆ ಉಳಿದಿವೆ. ಇವುಗಳನ್ನು ಪ್ರತಿಕ್ಷೇಪಿಸುವುದು ತೀರಾ ಜಗತ್ತದ ಮತ್ತು ತುರ್ತಾಗಿ ಗಮನಿಸಲೇ ಬೇಕಾದ ವಿಚಾರ. ನಮ್ಮಲ್ಲಿರುವ ಗಿರಣಿ ಯಂತ್ರಗಳಲ್ಲಿ ಮುಕ್ಕಾಲಂಶ ೨೫ ವರ್ಷಗಳಿಗಿಂತಲೂ ಹೆಚ್ಚು ಹಳತಾಗಿರುತ್ತವೆ. ವರ್ಷವಿಡೀ ಎಡೆಬಿಡದೆ ದುಡಿಸಿದ ರಿಂದ ಮತ್ತು ಯುದ್ಧ ಕಾಲದಲ್ಲಿ ಬಿಡಿ ಭಾಗಗಳು ದೊರೆಯದೆ ಹೋಗಿ ಇವುಗಳ ರಿಪೇರಿ ಕೆಲಸ ಹಿಂದೆ ಬಿದ್ದುದರಿಂದ, ಇವುಗಳನ್ನು ಇನ್ನು ಮುಂದೆಯೂ ಬಳಸುವುದರಿಂದ ಲಾಭವಾಗಲಾರದು. ಆದುದರಿಂದ ಹೊಸ ಯಂತ್ರೀಕರಣಗಳನ್ನು ಕೊಂಡುಕೊಳ್ಳುವುದು ಅಪೇಕ್ಷಣೀಯವಾಗಿರುತ್ತದೆ. ಹೀಗೆ ಎಲ್ಲ ಗಿರಣಿಗಳನ್ನೂ ಆಧುನಿಕ ಸಲಕರಣೆಗಳಿಂದ ಸುಸಜ್ಜಿತಗೊಳಿಸುವುದಕ್ಕೆ ಸುಮಾರು ೩೦೦ ಕೋಟಿ ರೂಪಾಯಿಗಳ ಭಂಡವಾಳ ಬೇಕಾಗುತ್ತದೆ. ಆದರೆ ಈಗ ಗಿರಣಿಗಳಲ್ಲಿ ೬೦ ಕೋಟಿ ರೂಪಾಯಿಗಳ ನಿಧಿಯೂ ಲಭ್ಯವಿಲ್ಲವಾದುದರಿಂದ ಸರಕಾರದವರೂ ಗಿರಣಿಯೊಡೆಯರೂ ಕೂಡಿಯೇ ಈ ವಿಷಯದಲ್ಲಿ ವಿಚಾರ ವಿನಿಮಯ ಮಾಡಿ ಸೂಕ್ತವಾದ ಪರಿಹಾರ ಮಾರ್ಗವನ್ನು ಕಂಡುಕೊಳ್ಳಬೇಕು.

ಇನ್ನೊಂದು ದೊಡ್ಡ ಸಮಸ್ಯೆ ಉತ್ಪಾದನಾ ವೆಚ್ಚಕ್ಕೆ ಸಂಬಂಧಿಸಿದೆ. ನಮ್ಮ ದೇಶದಲ್ಲಿ ಸರಾಸರಿ ಪ್ರತಿಯೊಬ್ಬನಿಗೆ ೧೩ ಗಜ ಬಟ್ಟೆ ದೊರಕುತ್ತದೆ. ಈ ಪ್ರಮಾಣವನ್ನು ೧೮ ಗಜಗಳಿಗಾದರೂ ಏರಿಸಬೇಕೆಂದು ಹೇಳುತ್ತಿದ್ದರೂ ಜವುಳಿ ಉದ್ದಿಮೆಯ ಪ್ರಕೃತ ಪರಿಸ್ಥಿತಿ ಇದಕ್ಕೆ ಅನುಕೂಲವಾಗಿಲ್ಲ. ಸಾಮಾನ್ಯ ಜನರ ಆದಾಯವು ಹೆಚ್ಚು ಬಟ್ಟೆಯನ್ನು ಕೊಂಡುಕೊಳ್ಳುವುದರಲ್ಲಿ ಈಗಿನ ಬಟ್ಟೆಯ ದರವನ್ನು ತೆರುವುದಕ್ಕೆಯೇ ಅನುಕೂಲವಾಗಿಲ್ಲ. ಯುದ್ಧಕಾಲದಿಂದೀಚೆಗೆ ಬಟ್ಟೆ ಉತ್ಪಾದನೆ ಹೆಚ್ಚಿಕೊಂಡರೂ ಅದರ ಬೆಲೆಯೂ ಏರಿದೆ. ಹೀಗಾಗಿ ಸಾಮಾನ್ಯ ಗ್ರಾಹಕನಿಗೆ ಸಮೃದ್ಧಿಯ ಲೇಶ ಮಾತ್ರ ಅನುಭವವೂ ಆಗುವುದಿಲ್ಲ.

ಇದಕ್ಕೆ ಗಿರಣಿಯೊಡೆಯರೇ ಕಾರಣರೆಂದು ದೂರಿದರೆ ತಪ್ಪಾಗುತ್ತದೆ. ಬಟ್ಟೆಯ ಉತ್ಪಾದನಾವೆಚ್ಚವು ಪ್ರತಿಯೊಂದೂ ...

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S. 9·1954

ಅಣ್ಣಪ್ಪ —ವಾದಿ.

ಮತ್ತು

ರಮಾನಾಥ ಕಮ್ತಿ—ದಾಯ ಕಮ್ತಿರ ಮಗ—ಉಡುಪಿ ತಾಲೂಕು ಬಾರಕೂರು ಗ್ರಾಮದಲ್ಲಿರುವವ. ಪ್ರತಿವಾದಿ-

ಯವರೊಳಗೆ..

ನೀವು ತಾರೀಕು 8-1-1951ರಲ್ಲಿ ವಾದಿಗೆ ಬರಕೊಟ್ಟ ದಿಮಾಂಡು ನೋಟಿನ ಅಸಲು ರೂಪಾಯಿ 300/-(ಮುನ್ನೂರು) ಮತ್ತು ಬಡ್ಡಿ ಸಹಾ ಹಣಗಳನ್ನು ಬರಮಾಡಿ ಕೊಳ್ಳುವರೆ ನಿಮ್ಮ ಮೇಲೆ ಹೂಡಿದ ಮೇಲ್ಕಂಡ ದಾವೆಯು ತಾರೀಕು 30-3-1954ಕ್ಕೆ ಮುಟ್ಟಿ ಉತ್ತರವು ಉಪಾಪರಿಸು ವಂಥಾದ್ದಾಗಿ ಆದಿತ್ಯ ಪೂರ್ವಾಹ್ನ 10ಗಂಟೆಗೆ ನದ್ರಿ ಕೋರ್ಟ ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳ ಬಹುದು- ತಪ್ಪಿದ್ದರೆ ನಿಮ್ಮ ಗೈರು ಹಾಜರಿಯಿಂದ ಏಕಪಕ್ಷವಾಗಿ ತೀರ್ಮಾನ ... ವದು

K. Ramakrishna Rao

Vakil for plaintiff

Udipi. Dated 18—3—1954

'ಗೋಪಾಲ ಭೇಷಜಾಶ್ರಮ' ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರಿ

ಇವರ

ನವಜೀವಾತು

ಎಂಬ

ಸೂತಿಕಾ ರಸಾಯನ

ಬಾಣಂತಿಯರ ನಿಬಾ ಗಿಯ್ಯ ರೋಗ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ಸ್ಥಿರಗೊಳಿಸಿ ತಯಾರಿಸಲ್ಪಟ್ಟ ಅತಿ ಉತ್ತಮವಾದ ಮಹೌಷಧ ...



ಹೆಚ್ಚಿನ ಮಾಹಿತಿಗೆ ಡಾ॥ ಯಂ ಸಿ ಶಾಸ್ತ್ರೀ, ಯಲ್ ಐ. ಎಂ

ಕೊಡಿಯಾಲಬೈಲು ಪೋಸ್ಟು, (ಮಂಗಳೂರು)

ಉಡುಪಿಯಲ್ಲಿ ದೊರೆಯುವ ಡಾ॥ ಪಿ ಕೆ ಶಿವಾನಂದರಾವ್, ಕುಂಜಿಬೆಟ್ಟು, ಉಡುಪಿ

3 ವರ್ಷ ಗ್ಯಾರಂಟಿಯುಳ್ಳ ಪಬ್ಲಿಸಿಟಿ ವಾಚ ಒಂದೇ ರೂಪಾಯಿ 14-6-5 ಕಿಮ್ಮತ್ತು ನ್ಯಾಜ್ 10 ನಂಬ್ರ 5

4 ಜ್ಯುವೆಲ್ಸ್ ಕ್ರೋಮ್ ರೂ. 11 6, ಗೋಲ್ಡ ರೋಲ್ಡು ರೂ. 14, 15 ಜ್ಯುವೆಲ್ಸ್ ಕ್ರೋಮ್ ರೂ. 30, ರೋಲ್ಡ್ ಗೋಲ್ಡ್ ರೂ. 32, 17ಜ್ಯುವೆಲ್ಸ್ ವಾಟರ್ ಪ್ರೂಫ್ ರೂ. 45, 17ಜ್ಯುವೆಲ್ಸ್ ರೂ. 40, ಪಾಕೆಟ್ ವಾಚ ರೂ. 14, ಟೈಂಪೀಸು ರೂ. 15 - ಒಟ್ಟಿಗೆ ಒಂದಕ್ಕಿಂತ ಹೆಚ್ಚಿಗೆ ವಾಚು ಕೊಳ್ಳಬಹುದು. ಕ್ಯಾಟಲಾಗು ಧರ್ಮಾರ್ಥ.

FREE INDIA WATCH CO. N.K.

Post Bag No. 6724, CALCUTTA-7.

ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 25 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವದು

THE MOOLKY BANK LTD.

Moolky, S. K.

(೯ನೇ ಪುಟದಿಂದ)

ದೃಷ್ಟಿಯಲ್ಲಿ ಯುದ್ಧ ಪೂರ್ವದ ನಾಲ್ಕು ಪಾಲಷ್ಟು ಹೆಚ್ಚಿಕೊಂಡಿದೆ ಗಿರಣಿಗಳು ಗಳಿಸುವ ಪ್ರತಿಯೊಂದು ರೂಪಾಯಿಯಲ್ಲಿ ಎಂಟಾಣೆಯಷ್ಟು ಹತ್ತಿಗೆ, ನಾಲ್ಕಾಣೆಯಷ್ಟು ಕೂಲಿ ಮತ್ತು ವೇತನಗಳಿಗೆ, ಎರಡೂ ಕಾಲಾಣೆಯಷ್ಟು ವಿದ್ಯುಚ್ಛಕ್ತಿ ಉರುವಲು ಸಂಗ್ರಹ ಹೆಚ್ಚ ಮುಂತಾದ್ದುಗಳಿಗೆ ಹೋಗುತ್ತದೆ ಉಳಿದ ಒಂದೂ ಮುಕ್ಕಾಲಾಣೆಯಲ್ಲಿ ಸವಕಳಿ ವೆಚ್ಚ, ಕರ, ಕಾದಿಟ್ಟ ನಿಧಿಯ ಪಾಲು, ಲಾಭಾಂಶ ಮುಂತಾದುವೆಲ್ಲವನ್ನೂ ತೆರಬೇಕಾಗುತ್ತದೆ. ಕೂಲಿಕಾರರ ಹಿತರಕ್ಷಣೆಗೋಸ್ಕರ ಸರಕಾರ ಶಾಸನ ಮಾಡಿದುದರಿಂದ ಇವರಿಗೆ ಮೊದಲಿನ ನಾಲ್ಕು ಪಟ್ಟು ಸಂಬಳ ತೆರುವುದರ ಜೊತೆಗೆ, ಬೋನಸು, ಪ್ರಾವಿಡೆಂಟ ಫಂಡು, ಆರೋಗ್ಯ ವಿಮೆ, ವೇತನ ಸಹಿತ ರಜೆ ಮುಂತಾದ ಸೌಕರ್ಯಗಳನ್ನೂ ಒದಗಿಸಿ ಕೊಡುವ ಅಗತ್ಯ ಉಂಟಾಗಿದೆ. ಇವುಗಳ ಕಾರಣದಿಂದ ಉತ್ಪಾದನಾ ವೆಚ್ಚ ಬೆಳೆಯುತ್ತದೆಂದು ಗಿರಣಿಗಳು ವಾದಿಸುತ್ತವೆ ಆದರೆ ಮುಂಬಯಿ ಸರಕಾರದ ಮುಖ್ಯ ಮಂತ್ರಿಗಳು ಇದನ್ನು ಅಲ್ಲಗಳೆದು "ನೀವು ಅಂದರೆ ಉದ್ದಿಮೆದಾರರು ಸಿಗರೇಟಿಗಾಗಿ ವ್ಯಯಿಸುವಷ್ಟು ಹಣವನ್ನು ಸಾಮಾನ್ಯ ಕೂಲಿಕಾರನು ಪರಿಶ್ರಮ ಜೀವನದಿಂದ ಸಂಪಾದಿಸುತ್ತಿಲ್ಲ" ಎಂದಿರುವರು.

ವಿದೇಶಗಳ ಪೇಟೆ

ಭಾರತದಲ್ಲಿ ಜವುಳಿ ಗಿರಣಿಗಳಿಗೆ ವಿದೇಶದ ಪೇಟೆಯು ಅಧಿಕ ಪ್ರಮಾಣದಲ್ಲಿ ದೊರೆತರೆ ಆದೀತೆಂಬ ಮಹದಾಶೆಯನ್ನು ಎಲ್ಲರೂ ವ್ಯಕ್ತಗೊಳಿಸುವರು. ನಮ್ಮ ಉದ್ಯಮೆಗೆ ಶಾಶ್ವತವಾದ ಪೇಟೆ ದೊರಕಬೇಕೆಂದಿದ್ದರೆ, ಉತ್ಪಾದನಾ ವೆಚ್ಚವನ್ನು ಕಡಿಮೆ ಮಾಡುವುದೇ ಏಕಮೇವ ಉಪಾಯ ಹತ್ತಿಯ ಉತ್ಪಾದನೆಯನ್ನು ನಾವು ಹೆಚ್ಚಿಸಲು ಸಮರ್ಥರಾದರೆ ಆಗ, ಅದರ ಬೆಲೆ ಇಳಿಯಬಹುದು ಇದರಿಂದ ಗಿರಣಿಗಳ ಉತ್ಪಾದನಾ ವೆಚ್ಚ ತಗ್ಗುವುದಲ್ಲದೆ, ಬಟ್ಟೆಯ ಉತ್ಪಾದನೆಯಲ್ಲಿ ನೆಚ್ಚಳ ಕೈಗೂಡಿ ಅದರ ದರವೂ ಇಳಿದೀತು. ಜಪಾನು ಮುಂತಾದ ವಿದೇಶಗಳು ಅಗ್ಗದ ದರದಲ್ಲಿ ಬಟ್ಟೆಯನ್ನು ವಿಕ್ರಯಿಸುತ್ತಿರುವುದೇ ನಮ್ಮ ಈಗಿನ ಸಮಸ್ಯೆಯ ಮೂಲವಾದುದರಿಂದ ಈ ಉಪಾಯದಿಂದ ನಾವು ಉತ್ಪಾದನೆಯ ಖರ್ಚನ್ನು ಕಡಿಮೆ ಮಾಡಬಹುದು

ನಮ್ಮ ದೇಶದಲ್ಲಿ ಗಿಡ್ಡ ಎಳೆಯ ಹತ್ತಿಯು ಸಮೃದ್ಧವಾಗಿ ಬೆಳೆಯುತ್ತಿದ್ದರೂ ಈಚೆಗೆ ಇದನ್ನು ಬೆಳೆಯುವ ಕ್ಷೇತ್ರವು ಕಡಿಮೆಯಾಗುತ್ತಾ ಬರುತ್ತದೆ. ಇದನ್ನು ತಡೆಗಟ್ಟಿ ಹತ್ತಿ ಬೆಳೆಯುವ ಪ್ರಯತ್ನ ಭರದಿಂದ ಮುನ್ನಡೆಯಬೇಕು. ಸಾಧ್ಯವಿದ್ದ ಪ್ರಯತ್ನಗಳನ್ನೆಲ್ಲ ಮಾಡಿ ಉದ್ದೆಳೆಯ ಹತ್ತಿಯನ್ನೂ ನಾವು ಬೆಳೆಯಲು ನೋಡಬೇಕು. ಈಗ ಭಾರತ ಎರಡು ಲಕ್ಷ ಬೇಲು ಗಿಡ್ಡ ಎಳೆಯ ಹತ್ತಿಯನ್ನು ನಿರ್ಯಾತ ಮಾಡಿ ಅದಕ್ಕೆ ಬದಲಾಗಿ ೧೧೦ ಕೋಟಿ ರೂಪಾಯಿ ಬೆಲೆಯ ಹತ್ತು ಲಕ್ಷ ಉದ್ದ ಎಳೆಯ ಹತ್ತಿಯನ್ನು ತರಿಸುತ್ತದೆ. ಪಾಕಿಸ್ತಾನವು ಅಸ್ತಿತ್ವಕ್ಕೆ ಬಂದಂದಿನಿಂದ ನಮಗೆ ಹತ್ತಿಯ ಕೊರತೆ ಅನುಭವಕ್ಕೆ ಬರುತಿದ್ದು, ಪಂಚವಾರ್ಷಿಕ ಯೋಜನೆಯಂತೆ ನಡೆಯುವ ನೀರಾವರಿ ಕೆಲಸಗಳು ಈ ಭಾರವನ್ನು ಬಹಳಷ್ಟು ದೂರ ಮಾಡಬಹುದು

ಕೈಮಗ್ಗದ ಬಟ್ಟೆಯು ಗಿರಣಿ ಬಟ್ಟೆಯ ಅಭಿವೃದ್ಧಿಯ ಮಾರ್ಗದಲ್ಲಿ ಆತಂಕವನ್ನೊಡ್ಡುತ್ತದೆ ಎಂಬ ಅಪವಾದನೆಯನ್ನೂ ಈ ಸಂದರ್ಭದಲ್ಲಿ ಕೇಳುತ್ತೇನೆ. ರಾಜ್ಯ ಹಾಗೂ ಕೇಂದ್ರ ಸರಕಾರಗಳು ಕೈಮಗ್ಗದ ರಕ್ಷಣೆಗೆ ಧಾವಿಸುವ ಭರದಲ್ಲಿ ಗಿರಣಿಗಳ ವ್ಯವಹಾರವನ್ನು ಮುಗ್ಗಟ್ಟಿನದ್ದಾಗಿ ಮಾಡುತ್ತವೆಂದು ಹೇಳಲಾಗುತ್ತದೆ. ಕೈಮಗ್ಗದ ಸಮಸ್ಯೆಯನ್ನು ಗಿರಣಿಯೊಡೆಯರ ದೃಷ್ಟಿಕೋಣದಿಂದ ನೋಡುವುದ. ತಪ್ಪು ಕ್ರಮ. ಪ್ರಧಾನಿ ನೆಹರೂ ಹೇಳಿದಂತೆ ಮಾನವೀಯ ಭಾವನೆಯಿಂದ ಅವನ್ನು ಪರಿಶೀಲಿಸತಕ್ಕದ್ದು ಲಕ್ಷಾಂತರ ಜನರ ಜೀವನಾಧಾರದ ಪ್ರಶ್ನೆಯಾಗಿ ಕೈಮಗ್ಗದ ಸಮಸ್ಯೆ ನಮ್ಮ ಮುಂದಿರುತ್ತದೆ— ಅದನ್ನು ಬಿಡಿಸುವುದಕ್ಕೆ ಪ್ರಯತ್ನಿಸುವಾಗ ಕಿಂಚಿತ್ತಾಗಿ ಗಿರಣಿಗಳಿಗೆ ಆತಂಕವುಂಟಾದರೆ ಅದನ್ನು ಆಕ್ಷೇಪಿಸುವುದು ನ್ಯಾಯವಲ್ಲ. ಒಂದು ಕಾಲದಲ್ಲಿ ಕೈಮಗ್ಗಗಳ ಉದ್ಧಿಮೆಗೆ ಪೂರಕವಾಗಿ ನಮ್ಮಲ್ಲಿಯ ಗಿರಣಿಗಳು ಕೆಲಸಮಾಡುತಿದ್ದವೆಂಬುದನ್ನು ನಾವು ಮರೆಯಬಾರದು — ಈಗ ಗಿರಣಿಯೊಡೆಯರ ಕೃಪಾಛತ್ರದ ನೆಳಲಲ್ಲಿ ಕೈಮಗ್ಗಗಳು ಆಶ್ರಯ ಪಡೆಯಬೇಕಾಗಿ ಬಂದಿರುವುದು ನಿಜಕ್ಕೂ ದುರ್ದೈವ. ಬಟ್ಟೆಯ ಉದ್ದಿಮೆಯ ಶತ ವಾರ್ಷಿಕೋತ್ಸವದ ಸಂದರ್ಭದಲ್ಲಿ ಗಿರಣಿಗಳು ಕೈಮಗ್ಗಗಳನ್ನು ಸಹಾನುಭೂತಿಯ ದೃಷ್ಟಿಯಿಂದ ನೋಡಲಿ! ಮತ್ತು ತಮ್ಮನ್ನು ನಿಜವಾಗಿ ಇದಿರಿಸುತ್ತಿರುವ ದೊಡ್ಡ ಪ್ರಶ್ನೆಗಳನ್ನು ಬಿಡಿಸುವುದಕ್ಕೆ ಪ್ರಯತ್ನಗಳನ್ನು ಯೋಜಿಸಿ, ಉಜ್ವಲ ಭವಿಷ್ಯದ ಮಾರ್ಗ ಕಂಡುಕೊಳ್ಳಲಿ!

(ಸಂಗ್ರಹ)

ಪ್ರಕಟಣೆ APPEAL

ಪ್ರಿಯ ಮಹಾಶಯರೇ,

ಕಳೆದ 16—1—54ನೇ ಶುಕ್ರವಾರ ರಥೋತ್ಸವದ ದಿನ ಅಗ್ನಿಗಾಹುತಿಯಾಗಿದ್ದು ಈಗ ಸುಮಾರು 15,000 ರೂಪಾಯಿಗಳ ವೆಚ್ಚದಿಂದ ಪುನಃ ಪ್ರತಿಷ್ಠಿಸಲ್ಪಟ್ಟ ನಮ್ಮ ಬಾಳ ಮತ್ತು ಕಳವಾರು ಗ್ರಾಮಗಳ ಶ್ರೀ ಬೆಂಕಿನಾಥೇಶ್ವರ ದೇವಸ್ಥಾನದಲ್ಲಿ ಇದೇ ಬರುವ ಜಯನಾಮ ಸಂವತ್ಸರದ [illegible] (ತಾ. 4—5—1954ನೇ) ಮಂಗಳವಾರ ರಾತ್ರಿ ಘಂಟೆ 4ಕ್ಕೆ [illegible] ಮೀನಲಗ್ನ [illegible] ಶ್ರೀ ಬೆಂಕಿನಾಥೇಶ್ವರ ದೇವರಿಗೆ ಬ್ರಹ್ಮಕಲಶಾಭಿಷೇಕವನ್ನು ನಡೆಸುವುದಾಗಿ ಗ್ರಾಮಸ್ಥರೂ, ಜೀರ್ಣೋದ್ಧಾರ ಸಮಿತಿಯವರೂ [illegible] ಶ್ರೀ ದೇವತಾನುಗ್ರಹದಿಂದ ಜರಗಲಿರುವ ಈ ಮಹೋತ್ಸವಕ್ಕೆ [illegible] ತಮ್ಮ ಬಂಧು, ಮಿತ್ರರೊಂದಿಗೆ [illegible] ತನು, ಮನ, ಧನಗಳ ಸಹಕಾರವನ್ನಿತ್ತು ಪ್ರೋತ್ಸಾಹಿಸಿ, ಶ್ರೀ [illegible] ಗಂಧ ಪ್ರಸಾದವನ್ನು ಸ್ವೀಕರಿಸಿ ಶ್ರೀ ದೇವರ ಕೃಪೆಗೆ ಪಾತ್ರರಾಗಬೇಕಾಗಿ ಸಾದರದಿಂದ ಅಪೇಕ್ಷಿಸುವ,

ತಮ್ಮ ಶ್ರೇಯೋಭಿಲಾಷಿಗಳಾದ

ಕಡಂದಲೆ ಗುತ್ತು ದೇಜು ಶೆಟ್ಟಿ,
ಆಡಳಿತ ಮೊಕ್ತೇಸರ.

ಕಳವಾರು ವಳಚಿಲು
ಲಕ್ಷ್ಮೀನಾರಾಯಣ ಭಟ್ಟ,
ಮೊಕ್ತೇಸರ. ಮತ್ತು ಅಧ್ಯಕ್ಷ
ಜೀರ್ಣೋದ್ಧಾರ ಸಮಿತಿ.

ಜೀರ್ಣೋದ್ಧಾರ ಸಮಿತಿಯ ಕಾರ್ಯದರ್ಶಿ ಮತ್ತು ಮೆಂಬರರ ವಿನಯದ ಆಮಂತ್ರಣ.

ವಿ. ಸೂ: - ಮಹಾಶಯರು ಕೊಡುವ ಉದಾರಹಸ್ತದ ಸಹಾಯವನ್ನು ಕೃತಜ್ಞತೆಯಿಂದ ಸ್ವೀಕರಿಸಲಾಗುವುದು.

The Trustees, The President & members of Sri Benkinatheshwara Temple Renovation Committee, Bala & Kalavar request the pleasure of the presence of the public with family and friends on the occasion of the celebration of the Brahmakalashabhishekam of Sri Benkinatheshwara on 4-5-'54 Tuesday night at 4 O'clock (Meenalagnam) at Kalavar, Mangalore Taluk, South Kanara.

Kadandale Guttu
Deju Shetty,
Managing Trustee.

K. Lakshminarayana Bhatta,
Trustee and President Renovation Committee.

(N. B. Liberal donations from the generous Public will be accepted with great regard)

ದಿ ಬೊಂಬೆಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿ., ಬೊಂಬಾಯಿ

193ನೆ ವರ್ಷದ ವೆಲ್ಯುಯೇಶನ್ ಪ್ರಕಾರ ಉದಾರ ಬೋನಸ್

ಎಂಡೋಮೆಂಟ್ ಪೋಲಿಸಿಗಳ ಮೇಲೆ ರೂ. 10- } ವರ್ಷ ಒಂದರ
ಜೀವಾವಧಿ ಪೋಲಿಸಿಗಳ ಮೇಲೆ ರೂ. 12-8 } ರೂ. 1000ಕ್ಕೆ

ಪ್ರಚಲಿತ ಪ್ರೀಮಿಯಮ್ ಸ್ಕೇಲಿನಂತೆ)

ಜೀವ ವಿಮೆಗಾಗಲೀ, ಪ್ರಾತಿನಿಧ್ಯಹೊಂದಲಿಕ್ಕಾಗಲೀ

ನಮ್ಮೊಡನೆ ವಿಚಾರಿಸಿದರೆ ಅಪೇಕ್ಷಿತ ಫಲವನ್ನೀಯುವುದು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಚೀಫ್ ಏಜಂಟ್ಸ್, ದಿ ಬೊಂಬೆ ಲ್ಯಾಫ್ ಎಶ್ಯೂರೆನ್ ಕೊ. ಲಿಮಿಟೆಡ್.

ಬೊಂಬೆ ಲ್ಯಾಫ್ ಬಿಲ್ಡಿಂಗ್, ಉಡುಪಿ, ದ. ಕ.

ಅಥವಾ ಶಾಖಾ ಕಛೇರಿಗಳಲ್ಲಿ: ಮಧುರೆ, ಬೆಂಗಳೂರು, ತ್ರಿವೆಂಡ್ರಮ್, ಕಲ್ಲಿಕೋಟೆ ಬೊಂಬಾಯಿ, ಮಂಗಳೂರು ಮತ್ತು ಕೊಯಮುತ್ತೂರು

The Bombay Life Assurance Co., Ltd., Bombay.

ಜಂಗ್ಲಿ ಇಲಾಖಾ ಧೋರಣೆಯು ಪುನರ್ವಿಮರ್ಶೆಯಾಗಬೇಕು

ಜಂಗ್ಲಿ ಇಲಾಖೆಯ ಹಣ ಮುಂಜೂರಾತಿ ಕಾಲದಲ್ಲಿ ಮದ್ರಾಸು ಎಸೆಂಬ್ಲಿಯಲ್ಲಿ ಶ್ರೀ ಟಿ. ಎ. ಪೈಗಳು ಮಾಡಿದ ಭಾಷಣದ ಸಾರಾಂಶ

ನಾನು ಕೆಲಕಾಲದ ಹಿಂದೆ ಸರಕಾರದ ಗಮನಕ್ಕೆ ತಂದಂತೆ ಮದ್ರಾಸು ಮಲಬಾರು, ದಕ್ಷಿಣ ಕನ್ನಡ ಮತ್ತು ನೀಲಗಿರಿ ಜಿಲ್ಲೆಗಳ ಕಾಡುಗಳಿಂದಲೇ ನೇಕಡಾ 60ರಿಂದ 70ರಷ್ಟು ಆದಾಯವಿದೆ. ಆದುದರಿಂದ ಈ ಉತ್ಪತ್ತಿಯ ಹಣವನ್ನು ಈ ಮೂರು ಜಿಲ್ಲೆಗಳಿಗನೇ ಉಪಯೋಗಿಸಬೇಕೆಂದು ನನಗನಿಸುತ್ತದೆ. ಆದರೆ ಈ ಜಿಲ್ಲೆಯ ಮರಮುಟ್ಟುಗಳನ್ನು [illegible] ವಿದೇಶ ಕಂಪೆನಿಯವರು [illegible] ಕೊಂಡೊಯ್ಯುತ್ತಾರೆ. [illegible] ಕೊಡುವ ವೇಳೆ ಈ ಕಂಪೆನಿಯವರು [illegible] ಈ ಮೂರು ಜಿಲ್ಲೆಗಳಲ್ಲೇ ತಯಾರಿಸುವ ಶರ್ತವನ್ನು [illegible] ಒಳ್ಳೆಯದೆಂದು ನನಗನಿಸುತ್ತದೆ. ಕಾರಣ ಈ ಜಿಲ್ಲೆಗಳಲ್ಲಿ ಚಿಕ್ಕ ಪುಟ್ಟ ಕೈಗಾರಿಕೆಗಳು ಹುಟ್ಟುವಂತಾಗಿ [illegible] ಸಮಸ್ಯೆ ಕೆಲ ಮಟ್ಟಿಗಾದರೂ ಬಗೆಹರಿಸಲು ಸಾಧ್ಯವಾಗುವುದು. ಅಲ್ಲದೆ ಪೆನ್ಸಿಲು, ಆಟದ ಗೊಂಬೆ, [illegible] ಇತ್ಯಾದಿಗಳನ್ನು ಈ ಜಿಲ್ಲೆಯಲ್ಲಿ ತಯಾರಿಸಲು ಪ್ರೋತ್ಸಾಹಿಸತಕ್ಕದ್ದಾಗುವುದು. ವಿದೇಶ ಕಂಪೆನಿಯವರಿಗೆ [illegible] ಕೆಲವೊಂದು ಅಡಚಣೆಗಳಿವೆ. ಎಂದು ಸರಕಾರವು ನನಗೆ ತಿಳಿಸಿರುವುದು. [illegible] ಕಂಪೆನಿಯು ಒಳ್ಳೆಯ ಸಂಸ್ಥೆಯೆಂಬುದನ್ನು ನಾನೂ ಬಲ್ಲೆನು. [illegible] ಸರಕಾರವು ಈ ಕುರಿತು [illegible] ಕೊಡುವುದಾಗಿ ನಾನು ನಂಬುತ್ತೇನೆ.

ಜಂಗ್ಲಿ ಆಡಳಿತದಲ್ಲಿ ಕೆಲವೊಂದು ದೋಷಗಳಿವೆ. ಕೆಲವು ಜಂಗ್ಲಿ ಕಾನೂನು [illegible] ಕೆಲವು [illegible] ವಿಜ್ಞಾನ [illegible] ಕಟ್ಟಿಗೆ [illegible] ಜಾರಿ [illegible]. ಇದನ್ನು [illegible] ದ. ಕ. ಜಿಲ್ಲೆಯಲ್ಲಿ [illegible] ಮತ್ತು [illegible] ದ. ಕ. ಜಿಲ್ಲಾ ಆಹಾರ ಸಮಿತಿಯು [illegible] ಕಾರ್ಯರೂಪಕ್ಕೆ [illegible] ಸರಕಾರಿ [illegible] ಕಾಡುಗಳ [illegible] ಹಣ [illegible] ಬರುತ್ತದೆ. [illegible] ಕೆಲವು [illegible] 6/13 [illegible] ಬಿಡಲಾಗುವುದಿಲ್ಲ [illegible] ಹೇಳಲಾಗುತ್ತಿದೆ. ಇಂತಹ ಪದ್ಧತಿಯು ನಿಲ್ಲಬೇಕು ಬಡವರಿಗೆ, ಕೃಷಿಕರಿಗೆ ಅರಣ್ಯ ಸಂಪತ್ತಿನ ಸೌಲಭ್ಯಗಳು ದೊರಕುವಂತಾಗಬೇಕು. ಸರಕಾರವು ಈ ಕಡೆ ಗಮನವೀಯುವುದೆಂದು ನಾನು ಆಶಿಸುತ್ತೇನೆ.

ದ. ಕ. ಜಿಲ್ಲೆಯಲ್ಲಿ ಮಲೆನಾಡು ಪ್ರದೇಶವಿದೆ. ಇದರ ಅಭಿವೃದ್ಧಿ [illegible] ಜರಗಲಿರುವುದು. ಮಲೆನಾಡು ಜಲಸಮೃದ್ಧ ಪ್ರದೇಶವಿದ್ದು ಅದರ ಉಪಯೋಗವನ್ನು [illegible] ಈ ಪರಿಷತ್ತಿನಲ್ಲಿ [illegible]. ಮದ್ರಾಸು ಸರಕಾರವೂ ಈ ಪರಿಷತ್ತಿನಲ್ಲಿ ಭಾಗವಹಿಸಿ ತನ್ನ ಪಾಲಿನ ಕರ್ತವ್ಯವನ್ನು ಸಲ್ಲಿಸುವುದೆಂದು ನಾನು ಇಚ್ಛಿಸುತ್ತೇನೆ. ದ. ಕ. ಜಿಲ್ಲೆಯು ಅರಣ್ಯ ಸಂಪತ್ತಿನ ಬೀಡಾಗಿರುವುದು. ಅದನ್ನು ಸದುಪಯೋಗ ಪಡಿಸಿಕೊಳ್ಳಲು ನಮ್ಮಲ್ಲಿ ಧೈರ್ಯ ಸಾಹಸ ಕರ್ತವ್ಯ ಬುದ್ಧಿ ಇರಬೇಕು. ಆದುದರಿಂದ ಇನ್ನು ಮುಂದೆ [illegible] ಸರಕಾರವು ತನ್ನ ಜಂಗ್ಲಿ ಇಲಾಖಾ ಧೋರಣೆಯನ್ನು ಪುನರ್ವಿಮರ್ಶಿಸಿ ಈ ಭಾಗದ ಜನರ [illegible] ಸ್ಥಿತಿಗತಿಗಳನ್ನು ಸುಧಾರಿಸಲು ಮುಂದಾಗುವುದೆಂದು ನಂಬುತ್ತೇನೆ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್.

ತಾ. 7-3-1954ರಲ್ಲಿ ಜರಗಿದ ೨೯ನೇ ವರ್ಷಾವಧಿ ಮಹಾ ಸಭೆಯಲ್ಲಿ ಆಡಳಿತ ಮಂಡಳಿಯ ಅಧ್ಯಕ್ಷರಾದ ಡಾ| ಟಿ. ಎಂ. ಎ. ಪೈ, ಎಂ. ಬಿ. & ಬಿ. ಎಸ್. ಇವರ ಭಾಷಣ



ಡಾ| ಟಿ. ಎಂ. ಎ. ಪೈ

ಮಹನೀಯರೆ,

ಈ ಸಿಂಡಿಕೇಟಿನ ೨೯ನೇ ವಾರ್ಷಿಕ ಸಾಧಾರಣ ಸಭೆಗೆ ನಿಮ್ಮನ್ನೆಲ್ಲ ಸ್ವಾಗತಿಸಲು ನನಗೆ ಸಂತೋಷವಾಗುತ್ತದೆ. ಈ ಬ್ಯಾಂಕಿನ ವಾರ್ಷಿಕ ಲೆಕ್ಕಪತ್ರಗಳ ವರದಿಯನ್ನು ನೀವು ಈಗಾಗಲೇ ಪರಿಶೀಲಿಸಿರಬಹುದು. ಅದನ್ನೆಲ್ಲ ಸಾರಾಂಶವಾಗಿ ತಿಳಿಸುತ್ತೇನೆ. ಈ ವರ್ಷದಲ್ಲಿ ಬ್ಯಾಂಕಿನ ಶೇರು ಬಂಡವಾಳ [illegible] ರೂಪಾಯಿಗಳ ವರೆಗೆ ಏರಿತು. ಇನ್ನೂ ಕೆಲವು ಬಾಕಿ ಶೇರುಗಳು ಮಾರಿಸಲ್ಪಟ್ಟದ್ದರ ಕಾರಣ ಇನ್ನು ಕೇಳದಿದ್ದ ಬಂಡವಾಳ [illegible] ರೂಪಾಯಿಗಳಷ್ಟು ಉಳಿದದ್ದು ಇದರಲ್ಲಿಯ ಹೆಚ್ಚು ಭಾಗವು ಈ ವರ್ಷದಲ್ಲಿ ಸಂದಾಯವಾಗುವದೆಂದು ನಿರೀಕ್ಷಿಸಿದ್ದೇನೆ. ಈ ಬ್ಯಾಂಕಿನ ಶೇರುದಾರರ ಸಂಖ್ಯೆಯು [illegible] ರಷ್ಟಿದ್ದು ಬ್ಯಾಂಕಿನಂಥ ಲೋಕೋಪಯೋಗಿ ಸಂಸ್ಥೆಯ ಶೇರುದಾರರ ಸಂಖ್ಯೆಯು ಅದಕ್ಕೂ ವಿಸ್ತೃತವಾಗಿರಬೇಕೆಂದು ನನ್ನ ಅಭಿಪ್ರಾಯ. ೧೯೫೩ ಡಿಸೆಂಬರ ೩೧ರ ಲಾಭ ಹಾನಿ ಲೆಕ್ಕದ ಪ್ರಕಾರ ಈ ಬಂಡವಳದ ಮೇಲಿನ ಕಾದಿಟ್ಟ ನಿಧಿಯು ೧೧೦೦೦೦೦ ರೂಪಾಯಿಗಳಿಂದ ೧೨,೧೦,೦೦೦ ರೂ ಗಳಿಗೇರಿದೆ ಈ ವರ್ಷದಲ್ಲಿ ಬ್ಯಾಂಕಿನ ಇಡುಗಂಟಿನ ಹಣವು ನೂರಕ್ಕೆ ೧೫ರಷ್ಟು ಹೆಚ್ಚಿದೆ ಅಂದರೆ [illegible] ರೂಪಾಯಿಗಳಿಂದ [illegible] ರೂಪಾಯಿಗಳಿಗೇರಿದೆ ಷೆಡ್ಯೂಲ್ಡ್ ಬ್ಯಾಂಕ ರೇಪ್ರಗಳಲ್ಲಿಯೂ ವಿಶೇಷ ಹೆಚ್ಚಳವು ಕಂಡುಬರುತ್ತಿದಿಯಿಲ್ಲದೆ ಒಂದು ಕೋಟಿ ರೂಪಾಯಿಗಳ ಗುರಿಯನ್ನು ದಾಟಿದ ಬ್ಯಾಂಕಿನ ವ್ಯವಹಾರದಲ್ಲಿ ಇದು ಇನ್ನೂ ಯಶಸ್ವಿಯಾಗಿದೆಂಬುದು ಗೋಚರವಾಗುತ್ತದೆ ಬ್ಯಾಂಕುಗಳು ಸ್ಪರ್ಧಾತ್ಮಕವಾಗಿ ಬಡ್ಡಿ ದರಗಳನ್ನು ನೀಡುವಪದ್ಧತಿಯಿಂದ ಮುದ್ದತಿ ಠೇವುಗಳನ್ನು ಇಡುವ ಪ್ರವೃತ್ತಿಯು ಹೆಚ್ಚುತ್ತಿದೆ. ಬ್ಯಾಂಕುಗಳು ತಮ್ಮ ನಿರ್ವಹಣ ವೆಚ್ಚವನ್ನು ಕಡಿಮೆ ಮಾಡುವ ಅವುಗಳ ಸಾಮರ್ಥ್ಯವು ಇದರೊಂದೆ ಅಂಶವನ್ನು ಅವಲಂಬಿಸಿರುವದರಿಂದ ಬ್ಯಾಂಕುಗಳು ತಾವಾಗಿಯೆ ಬಡ್ಡಿ ದರಗಳನ್ನು ಹೆಚ್ಚಿಸಲು ಮುಂದಾಗಬಾರದು. ನಿಮ್ಮ ಬ್ಯಾಂಕಿನಲ್ಲಿಯ ಠೇವಿನ ಹಣವು [illegible] ಖಾತೆಗಳಿಂದ ಬಂದದ್ದಾಗಿದೆ ಅಂದರೆ ಎಷ್ಟು ಹೆಚ್ಚು ಜನರ ಉಳಿತಾಯವನ್ನು ಒಳಗೊಂಡಿದೆಂಬುದನ್ನು ತಿಳಿಯಬಹುದು. ಇನ್ನು ಬ್ಯಾಂಕಿನ ಹತ್ತಿರ ಇರುವ [illegible] ರೂಪಾಯಿಗಳ ನಗದು ಹಣವು ಠೇವಿನ ಹಣದಲ್ಲಿ ನೂರಕ್ಕೆ ೧೫ರಷ್ಟಿದೆ ಸರಕಾರೀ ಸಾಲಪತ್ರಗಳಲ್ಲಿ ತೊಡಗಿಸಿರುವ ಹಣವು [illegible] ರೂಪಾಯಿಗಳಿಂದ [illegible] ರೂಪಾಯಿಗಳಿಗೇರಿದ್ದು ಈ ಹಣವು ಠೇವಿನ ಹಣದ ನೂರರಲ್ಲಿ ೩೧ರಷ್ಟಿದೆ ಹಣಕ್ಕಾಗಿ ಬೇಡಿಕೆಯು ವಿಪರೀತವಾಗಿದ್ದು ಮುಂಗಡವೆಂದು ಕೊಟ್ಟ ಹಣವು [illegible] ರೂಪಾಯಿಗಳಿಗೇರಿತು. ಇದು ಠೇವಿನ ಹಣದ ನೂರಕ್ಕೆ ೬೬ರಷ್ಟಿದೆ ಮತ್ತು ಈ ಮುಂಗಡ ಕೊಟ್ಟ ಹಣದಲ್ಲಿ ನೂರಕ್ಕೆ ೬೦ ರಷ್ಟು ಹಣವನ್ನು ತಿರುಗಿ ಪಡೆದದ್ದಾಗಿದೆ. ೧೯೫೩ರ ಜನವರಿಗೆ ಈ ಹಣವನ್ನು ಮುಂಗಡವಾಗಿ ಕೊಡಲಾಗಿತ್ತು. ಹಣ ಠೇವಿರಿಸುವವಕ್ಕಾಗಿ ಬಂದ ಬಡ್ಡಿಗಳೂ ಮುಂತಾದವುಗಳ ಮೊತ್ತವು [illegible] ರೂ ಗಳಿಂದ [illegible] ರೂ ಗಳಿಗೇರಿತು, ನೂರಕ್ಕೆ ೫೦ರಷ್ಟು ಹೆಚ್ಚಿದು ಬಾಯಿತು. ಕೆಟ್ಟ ಸಾಲ ಹಾಗೂ ಸಂಶಯಾಸ್ಪದ ಸಾಲಗಳಿಗಾಗಿ ವ್ಯವಸ್ಥೆಯನ್ನು ಮಾಡಿದ ನಂತರ ಬ್ಯಾಂಕಿನ ಒಟ್ಟು ಆಧಾಯವು [illegible] ರೂ. ಗಳಿಂದ [illegible] ರೂ ಗಳಿಗೇರಿದ್ದು ಕಂಡು ಬಂತು. ಆದರೆ ಠೇವು ಹಣದ ಮೇಲೆ ಹೆಚ್ಚಿಗೆ ಬಡ್ಡಿಯನ್ನು ಕೊಡಬೇಕಾದ್ದರಿಂದ ಬ್ಯಾಂಕಿಗೆ ಆದ ನಿವ್ವಳ ಲಾಭವು [illegible] ರೂ. ಗಳಿಂದ [illegible] ರೂ ಗಳಿಗೆ ಇಳಿದಿದೆ ಬ್ಯಾಂಕಿನ ಒಟ್ಟು ಆದಾಯದಲ್ಲಿ ಸಿಬ್ಬಂದಿಯವರ ವೇತನ, ಬಡ್ಡಿ, ಭತ್ತೆ ಹಾಗೂ [illegible] ಗಾಗಿ [illegible] ರಷ್ಟು, ಠೇವಿನ ಹಣದ ಮೇಲೆ ಬಡ್ಡಿಯಿಂದ [illegible] ರಷ್ಟು [illegible] ಶೇರುದಾರರ [illegible] ತೆರಿಗೆ [illegible] ಲಾಭಾಂಶದ ಹಣವು [illegible] ರಷ್ಟು ಮಾತ್ರ

ಇದೆ. ಇತ್ತ ಈ ಎಲ್ಲ ಹೆಚ್ಚಿನ ಬ್ಯಾಂಕಿನ ಒಟ್ಟು ಬಂಡವಳ ಹಾಗೂ ಕಾದಿಟ್ಟ ನಿಧಿಯಲ್ಲಿ ನೂರಕ್ಕೆ ೫೭ ರಷ್ಟು ಮಾತ್ರ ಇದೆಂಬುದನ್ನು ಅರಿತು ನಿಮಗೆ ಸಂತೋಷವಾಗಬಹುದು ಬ್ಯಾಂಕಿನ ಒಟ್ಟು ಸಂಪತ್ತು [illegible] ರೂ ಗಳಿಗೇರಿದರೆ ಗ್ರಾಹಕರ ಸಂಖ್ಯೆಯು [illegible] ಗಳಿಗೇರಿತು ಬ್ಯಾಂಕಿನ ವ್ಯವಹಾರವು ಈ ವರ್ಷದಲ್ಲಿ ಎಲ್ಲ ದೃಷ್ಟಿಯಿಂದಲೂ ತೃಪ್ತಿಕರವಾಗಿ ಸಾಗಿದಂಬುದನ್ನು ಈ ಅಂಕೆ ಸಂಖ್ಯೆಗಳು ನಿಮಗೆ ತೋರಿಸಿಕೊಡುತ್ತಿವೆ. ಉಡುಪಿಯಲ್ಲಿ ನಮ್ಮ ಕಚೇರಿಗಳನ್ನಿಟ್ಟುಕೊಂಡು ಪಾಲಘಾಟ, ತಾಳಿಕಟ್ಟ, ತಲ್ಲಿಶೇರಿ, ಬದಗರ, ಕೊಲ್ಹಾಪುರ, ಕರಾಡ, ಸಾಂಗ್ಲಿ, ರಬಕವಿಗಳಲ್ಲಿ ಶಾಖಾ ಕಚೇರಿಗಳನ್ನಿಟ್ಟುಕೊಂಡಿರುವ ದಿ ಸದರ್ನ ಇಂಡಿಯಾ ಅಪೆಕ್ಸ ಬ್ಯಾಂಕ ಲಿಮಿಟೆಡ್ ಹಾಗೂ ಮಹಾರಾಷ್ಟ್ರ ಅಪೆಕ್ಸ ಬ್ಯಾಂಕ ಲಿ., ಈ ಬ್ಯಾಂಕುಗಳ ಸಾಲ ಸೊತ್ತುಗಳನ್ನೆಲ್ಲ ನಾವು ಡಿಸೆಂಬರ ತಿಂಗಳದಲ್ಲಿ ವಹಿಸಿಕೊಂಡೆವು ಎಂಬ ಸಂಗತಿಯು ನಿಮಗೆ ತಿಳಿದಿದೆ ಈ ಬ್ಯಾಂಕುಗಳು ಸಿಂಡಿಕೇಟಿನ ಆಶ್ರಯದಲ್ಲಿಯೇ ಮೊದಲು ಪ್ರಾರಂಭಿಸಲ್ಪಟ್ಟವು, ಇವುಗಳ ಆಡಳಿತವನ್ನು ಸಿಂಡಿಕೇಟ ಕೆಲವು ವರ್ಷಗಳ ವರೆಗೆ ನೋಡಿಕೊಳ್ಳುತ್ತಿತ್ತು ಮತ್ತು ಇವುಗಳನ್ನು ಸಿಂಡಿಕೇಟಿನಲ್ಲಿ ಕೂಡಿಸಿಬಿಡಬೇಕು ಎಂಬ ಮಾತು ಕೆಲದಿನಗಳಿಂದ ಕೇಳ ಬರುತ್ತಿತ್ತು ಈ ಸಮೀಕರಣದ ಪರಿಣಾಮವಾಗಿ ಶೇರುದಾರರುಗಳ ಮೌಲ್ಯ ಮಾಪನವನ್ನು ಮಾಡಬೇಕಾಗುತ್ತಿದ್ದಿಕ್ಕಲ್ಲದೆ ಇದರಿಂದ ನಮ್ಮ ಶೇರು ಬಂಡವಳು ೩೦ ಲಕ್ಷ ರೂಗಳಷ್ಟು ಹೆಚ್ಚಾಗುತ್ತಿದ್ದಿತು ಈ ಬ್ಯಾಂಕುಗಳ ಈಗಿರುವ ಶಾಖೆಗಳನ್ನು ವಹಿಸಿಕೊಂಡ ನಂತರ ಹೀಗೆ ಒದಗಿದ ಹೊಸ ಶೇರ ಹಣಕ್ಕೆ ಲಾಭಾಂಶವನ್ನು ಹಂಚುವ ಹೊಣೆಗಾರಿಕೆಯನ್ನು ಹೊರಲು ಡೈರೆಕ್ಟರ ಮಂಡಲದವರು ಸಿದ್ಧರಿರಲಿಲ್ಲ ಬ್ಯಾಂಕಿನ ಬಂಡವಳು ವಿಕ್ಕೇಂದ್ರೀಕರಿಸಬೇಕು ಎನ್ನುವ ತತ್ವಕ್ಕೆ ಅನುಕೂಲವಾಗಿ ಯಾರು ಏನೇ ಹೇಳಿದರೂ, ಬಂಡವಳು ಹೀಗೆ ಪ್ರಮಾಣ ಮೀರಿ ಹೆಚ್ಚುವದರಿಂದ ತೊಂದರೆಗಳೇ ಹೆಚ್ಚುತ್ತವೆ; ಇದಕ್ಕಿಂತ ಕಾದಿಟ್ಟ ನಿಧಿಯನ್ನು ಹೆಚ್ಚಿಸಿಕೊಳ್ಳುವದೇ ಮೇಲು ಎಂದು ನಾನು ನಿಮಗೆ ಕಳಕಳಿಯಿಂದ ಹೇಳಿದ್ದೇನೆ. ಅನುಭವವು ಇದನ್ನೇ ತೋರಿಸಿಕೊಟ್ಟಿದೆ ಈ ಮಾರ್ಗದಿಂದ ಮುಂದುವರಿಯಲು ನಾವು ಅಸ್ತಿಯಿಂದ ಪ್ರಯತ್ನಿಸೋಣ ಅಪೆಕ್ಸ ಬ್ಯಾಂಕುಗಳ ಶೇರುದಾರರ ಬಂಡವಳವನ್ನು ಅವರಿಗೆ ಮುಟ್ಟಿಸುವ [illegible] ಕೈಕೊಳ್ಳಲಾಗುತ್ತದೆ.

ದೇಶದಲ್ಲಿಯ ಕೆಲವು ಸಮಸ್ಯೆಗಳೂ ಸಾಮಾನ್ಯತಃ ಬ್ಯಾಂಕುಗಳ ವ್ಯವಹಾರದ ಮೇಲೆ ಪರಿಣಾಮ ಮಾಡುವದರಿಂದ ಅವುಗಳನ್ನು ಕುರಿತು ನಾನು [illegible] ಹೇಳಬಯಸುತ್ತೇನೆ

ಆರ್ಥಿಕ ಪರಿಸ್ಥಿತಿಯು ಅನಿಶ್ಚಿತ ಸ್ವರೂಪದ್ದಾಗಿರುವದರಿಂದ ಕರಿಭಾರ ಪರಿಮಾಣ ಬ್ಯಾಂಕುಗಳು ಪ್ರಸಿದ್ಧಿಸಿದ [illegible] ಅಂಕಿಗಳನ್ನೇ [illegible] ಅಂಕಿಗಳಿಂದ ಓದಬಾರದು. [illegible]

ಬ್ಯಾಂಕು ತನಗೆ ಲಾಭವಾದ ವರ್ಷದಲ್ಲಿ ಒಂದು ಕೆಟ್ಟ ಸಾಲ ಹಾಗೂ ಸಂದೇಹಾಸ್ಪದವಾದ ಸಾಲಗಳ ಬಗ್ಗೆ ಹಣವನ್ನು ತೆಗೆದಿಟ್ಟರೂ, ಸೋಲಿನ ಕರಾರುಗಳನ್ನು ತೃಪ್ತಿಕರವಾಗಿ ಪೂರೈಸದಿದ್ದರೆ, ಆ ಹಣವನ್ನು ಹೇರಬಯುವಾದ ಕರದಿಂದ ಮುಕ್ತಮಾಡಲಿಕ್ಕಾಗದು. ಈ ದೇಶದಲ್ಲಿ ಬ್ಯಾಂಕಿಂಗ ವ್ಯವಹಾರಕ್ಕೆ ಸರಕಾರವು ಕೇವಲ ಕಾಯಿದೆಗಳಿಂದಲ್ಲದೆ ಪ್ರತ್ಯಕ್ಷ ಕ್ರಿಯಾತ್ಮಕ ಸಹಾಯವನ್ನು ನೀಡಿ ಬಲವನ್ನು ತಂದು ಕೊಡಬೇಕಾಗಿದೆ. ಪ್ರಭಾವಿಯಾದ ಪತ್ತಿನ ವಿದ್ಧತಿಗೆ ಭದ್ರವಾದ ಬ್ಯಾಂಕಿಂಗ ಪದ್ಧತಿಗಿಂತ ಬೇರೆ ಉತ್ತಮವಾದ ತಳಹದಿಯು ದೊರೆಯಲಾರದು ಅಮೇರಿಕೆಯಲ್ಲಿ ಕೂಡ ಇಂಥ ವ್ಯವಸ್ಥೆ ಕಲ್ಪೊಂದು ಮರ್ಯಾದೆಯ ವರೆಗೆ ಅಂದರೆ ಹಿಂದಿನ ವರ್ಷಗಳ ಹಾನಿಯ ಸರಾಸರಿಯನ್ನು ನೋಡಿಕೊಂಡಾಗಲೇ ಒಟ್ಟು ಮುಂಗಡ ಹಣದ ನೂರಕ್ಕೆ ಇಂತಿಷ್ಟೆಂದಾಗಲೇ ಅವಕಾಶ ಕೊಡಲಾಗುತ್ತಿದೆ. ಈ ಅಂಶವನ್ನು ನಾವು ಕೇಂದ್ರ ಸರಕಾರಕ್ಕೆ ಆಗ್ರಹ ಪೂರ್ವಕ ಸೂಚಿಸುತ್ತಿದ್ದೇವೆ. ಭಾರತೀಯ ಬ್ಯಾಂಕುಗಳ ಸಂಘದವರೂ ಈ ವಿಚಾರವನ್ನು ಇತ್ತೀಚಿಗೆ ಎತ್ತಿಕೊಂಡಿರುವದನ್ನು ಕಂಡು ನಮಗೆ ಸಮಾಧಾನವಾಗಿದೆ. ಕರವಿಚಾರಣೆ ಸಮಿತಿಯವರು ಬ್ಯಾಂಕಿಂಗ ಪದ್ಧತಿಗೆ ನೆರವಾಗಿಯೂ ನ್ಯಾಯವಾದ ಈ ಕ್ರಮವನ್ನು ಮನ್ನಿಸುವದಾಗಿ ನಾನು ವಿಶ್ವಾಸದಿಂದ ನಂಬಿದ್ದೇನೆ

ಭಾರತದಲ್ಲಿ ಉದ್ಯಮಗಳ ಪದ್ಧತಿಯನ್ನು ಬೆಳಸಿಕೊಂಡು ಬರುವದು ಎಷ್ಟು ಅಗತ್ಯದ್ದಾಗಿದೆಂಬ ಮಾತನ್ನು ಸರ್ವರೀತಿಯಿಂದಲೂ ಒಪ್ಪಲಾಗುತ್ತಿದೆ ಪತ್ತನ್ನು ಹೆಚ್ಚಿಸಿಕೊಳ್ಳುವದಕ್ಕಾಗಿ ಸರಕುಗಳನ್ನು ಸಾಗಿಸುವ ಅಧವಾ ಮಾರ್ಪಡಿಸುವ ವೈಯಕ್ತಿಕ ಕ್ರಮವನ್ನು ಬಿಟ್ಟು ಸರಕನ್ನಾಗಿ ಉಗ್ರಾಣದ ಪಾವತಿಯನ್ನು ಪಡೆಯುವದು ವಿಶೇಷ ಆರ್ಥಿಕ ಮಹತ್ವದ್ದಾಗುವದು. ಈ ಕುರಿತು ಅನೇಕ ರಾಜ್ಯ ಸರಕಾರಗಳು ಕಾಯಿದೆಗಳನ್ನು ರಚಿಸಿದ್ದು ನಮ್ಮ ರಾಜ್ಯದಲ್ಲಿ ೧೯೫೧ ರಲ್ಲಿ ಇಂಥ ಕಾಯಿದೆಯು ಪಾಸಾಗಿದೆ. ಆದರೂ ಅನಂತರ ಈ ವಿಷಯದಲ್ಲಿ ಸಾಕಷ್ಟು ಪ್ರಗತಿಯಾಗಿಲ್ಲ. ಉತ್ಪಾದನದ ಹಾಗೂ ವಿತರಣೆಯ ಕೇಂದ್ರಗಳಲ್ಲಿ ಹಾಗೂ ಬಂದರಗಳಲ್ಲಿ ದೊಡ್ಡ ಉಗ್ರಾಣಗಳನ್ನು ಕಟ್ಟಿಸುವದಕ್ಕೆ ಅಪಾರ ಹಣವನ್ನು ವೆಚ್ಚ ಮಾಡಬೇಕಾಗುವದು. ಸದ್ಯದ ಪರಿಸ್ಥಿತಿಯಲ್ಲಿ ಈ ಹಣವು ದೊರೆಯುತ್ತಿರುವದಿಲ್ಲ. ಆದ್ದರಿಂದ ಅನುಕೂಲತೆಯನ್ನು ನೋಡಿಕೊಂಡು ಎಲ್ಲ "ಮೊಲಗಳಲ್ಲ ಉಗ್ರಾಣ"ಗಳ ಪದ್ಧತಿಯನ್ನು ನಾವು ಅವಲಂಬಿಸುವದು ಯೋಗ್ಯವಾಗುವದು ಸರಕುಗಳನ್ನು ಉಗ್ರಾಣಗಳಿಗೆ ಸಾಗಿಸದೆ [illegible] ಉಗ್ರಾಣಗಳ ಸೃಷ್ಟಿ ಹೊಸ ಕಟ್ಟಡಗಳನ್ನು ಕಟ್ಟಿಸುವದನ್ನು ತಪ್ಪಿಸಬಹುದು. ಇದೇ ಅಮೇರಿಕೆಯ ಪದ್ಧತಿಯಾಗಿದೆ ನಮ್ಮ ಪತ್ತಿಗ ಪೇಟೆಗಳಾಗಿ ಸಾಕಷ್ಟು ಬಂಡವಳು ಇರುವ ಹಾಗೂ ಉಗ್ರಾಣಗಳನ್ನಿಡಲು ಲೈಸೆನ್ಸ ಪಡೆದ ಸಂಸ್ಥೆಗಳು ಯಾವಾಗ ಉಗ್ರಾಣಕ್ಕೆ ತಮ್ಮ ಅಂಕಿತ ಘಟಕಗಳನ್ನು ಹೆಚ್ಚಿಸಬಹುದು ಮತ್ತು ಇದರಿಂದ [illegible] ಎಲ್ಲ ಕಲಮುಗಳೂ ಅದಕ್ಕೆ ಅನ್ವಯಿಸುತ್ತವೆ ಈ ದೇಶದಲ್ಲಿ ಉಗ್ರಾಣಗಳ ಪದ್ಧತಿಯನ್ನು ಬೆಳಸಿಕೊಂಡು ಬರುವದಕ್ಕೆ ಕಾಯಿದೆಗಿಂತ ಇನ್ನೂ ಕೆಲವು ಹೆಚ್ಚಿನ ಅಂಶಗಳ ಅಗತ್ಯವಿದೆ ಸರಕಾರವು ಈ ಉಗ್ರಾಣ ಪದ್ಧತಿಯನ್ನು ಅಭಿವೃದ್ಧಿಪಡಿಸಲು [illegible] ಪ್ರೋತ್ಸಾಹಿಸಬೇಕೆಂದು ನಂಬಿದ್ದೇನೆ

ಇನ್ನು ಹಳ್ಳಿಗಳಲ್ಲಿಯ ಬ್ಯಾಂಕಿಂಗ ವಿಷಯವನ್ನು ನೋಡೋಣ ಈ [illegible] ಬ್ಯಾಂಕಿನ [illegible] ತ್ಯಗಳು ಸುಕಷ್ಟು ಸಫಲತೆಗೊಂಡಿರುವುದಿಲ್ಲ.

ನಮ್ಮ ಬ್ಯಾಂಕು ಯೋಗ್ಯವಾದ ಹೆಮ್ಮೆಯಿಂದ ಹೇಳಿಕೊಳ್ಳಬಹುದು. ದಕ್ಷಿಣ ಕನ್ನಡದಲ್ಲಿ ೫೦೦೦ ಕ್ಕಿಂತ ಕಡಿಮೆ ಜನಸಂಖ್ಯೆಯುಳ್ಳ ೨೪ ಗ್ರಾಮಗಳಲ್ಲಿ ನಮ್ಮ ಬ್ಯಾಂಕಿನ ಶಾಖೆಗಳನ್ನಿಟ್ಟು ಚಿಕ್ಕ ಉಳಿತಾಯಗಳನ್ನು ಹೆಚ್ಚಿಸುವ ಯೋಜನೆಗಳನ್ನು ಪ್ರಾರಂಭಿಸಿದ್ದೇವಲ್ಲದೆ ಸುರಕ್ಷಿತವಾದ, ಮಿತವ್ಯಯದ ಹಾಗೂ ಅನುಕೂಲಕರವಾದ ಕ್ರಮಗಳನ್ನು ಕೈಕೊಂಡು ದೇಶದಲ್ಲಿ ಬ್ಯಾಂಕಿನ ಹಾದಿಯನ್ನು ಸಿದ್ಧ ಮಾಡಿಕೊಟ್ಟಿದ್ದೇವೆ. ಹಳ್ಳಿಗಳ ನಮ್ಮ ಈ ಶಾಖೆಗಳ ಕಾರ್ಯವನ್ನು ಲಕ್ಷ್ಯಕ್ಕೆ ತಂದುಕೊಂಡರೆ, ಬ್ಯಾಂಕಿಂಗ ದಲ್ಲ ಜನಪ್ರಿಯವಾಗಿದೆ ಮತ್ತು ಬೇರೆ ಜಿಲ್ಲೆಗಳ ಹಳ್ಳಿಗರೂ ತಮಗೂ ಈ ಸೌಕರ್ಯಗಳನ್ನು ಒದಗಿಸಬೇಕೆಂದು ಕೇಳಿಕೊಳ್ಳುತ್ತಿದ್ದಾರೆ. ಇದುವರೆಗೆ ಉಳಿತಾಯದ ಚಟುವಟಿಕೆಯು ಇದ್ದದ್ದು ನಗರದಲ್ಲಿ ಉಳಿತಾಯದ ಹಣವನ್ನು ಹುಟ್ಟಿಸುವವರ ಜೊತೆಗೆ ನಮ್ಮ ಉಳಿತಾಯವನ್ನು ಯೋಗ್ಯ ರೀತಿಯಿಂದ ವಿನಿಯೋಗಿಸುವ ಪದ್ಧತಿಯನ್ನು ಜನಪ್ರಿಯವಾಗಿಸಲಾಗುತ್ತಿದೆ. ಈ ಹಳ್ಳಿಗಳಲ್ಲಿ ಸಾಲದ ಮೇಲಿನ ಬಡ್ಡಿಯ ದರವನ್ನು ಇಳಿಸುವ ಕಾರ್ಯದಲ್ಲಿಯೂ ಈ ಬ್ಯಾಂಕಿನ ಶಾಖೆಗಳು ಸಾಕಷ್ಟು ಸಹಾಯಕವಾಗಿವೆ. ಹಣ ಸಾಲ ಕೊಡುವ ವಿಷಯದಲ್ಲಿ ಶಾಸನ ಮಾಡುವದಕ್ಕಿಂತ ಹಳ್ಳಿಗಳಲ್ಲಿ ಬೇರೆ ಆಧಾರದ ಸಾಕಷ್ಟು ಪತ್ತಿನ ಕ್ಷೇತ್ರಗಳನ್ನು ಒದಗಿಸುವದರಿಂದಲೇ ಹಳ್ಳಿಗರ ಸಮಸ್ಯೆಗಳನ್ನು ಕೊನೆಗೊಳಿಸಿ ಬಿಡಿಸಬಹುದು. ಇಂಥ ವಿಷಯಗಳಲ್ಲಿ ಕಾಯಿದೆ ರಚಿಸುವದು ಪ್ರತಿಕೂಲಾತ್ಮಕವಾದ ಮಾರ್ಗ. ಆದರೆ ಇಂಥ ಸ್ಥಳಗಳಲ್ಲಿ ಬ್ಯಾಂಕಿಂಗ ಸೌಕರ್ಯವನ್ನು ಒದಗಿಸಬೇಕಾಗಿದ್ದರೆ ನಿರ್ವಹಣ ವೆಚ್ಚವನ್ನು ಅದಕ್ಕೆ ಕಳೆಯಬೇಕಾಗುವದು. ಇದು ಬೇಕಾಗುವದು. ಇಂಥ ಸ್ಥಳಗಳಿಗೆ ಅನೇಕವಾಗಿರುವ ಕೂಡಿಕಾರ ಕಾಯಿದೆಗಳನ್ನು ಕೊಡುಗೆಗಳನ್ನು ಅನ್ವಯಿಸಬಾರದು ಎಂದು ಹಳ್ಳಿಗಳ ಬ್ಯಾಂಕಿಂಗ ಸಮಿತಿಯು ಸೂಚಿಸಿದ್ದು ಉತ್ತಮವಾಗಿದೆ ಈ ಕೊಡುಗೆಗಳಲ್ಲಿ ಶಾಖೆಯವರಲ್ಲೂ ರಾಜ್ಯದ ವ್ಯಕ್ತಿ ಅಗತ್ಯ ಎಂದು ಸರಕಾರವು ಜನತೆಯಲ್ಲಿ ಬಾವಿಸುವ ವಾದನೆ ಅವರು ತಮಗೆ ಈ ಬ್ಯಾಂಕಿಂಗ ಕಾರ್ಯಗಳು ಬೇಕಾಗಬೇಕೋ ಇಲ್ಲವೋ ಎಂದು ಮೊಳಗಬೇಕೇ [illegible] ಯಾವಮೊದನ್ನು ಅರಿಸಿಕೊಳ್ಳಬೇಕಾಗುವದು

ನಮ್ಮ ಬ್ಯಾಂಕು ೧೯೫೩ರಲ್ಲಿ 'ಚಿಕ್ಕಿ' ಎಂಬ ಚಿಕ್ಕ ಉಳಿತಾಯ ಯೋಜನೆಯನ್ನು ಜನಪ್ರಿಯವಾಗಿಸುವ [illegible] ಒಂದು ಠೇವಿಗೆ [illegible] ರಷ್ಟು ಏರಿಸಲಾಗಿದೆ [illegible] ಉಳಿತಾಯವನ್ನು [illegible] ವರ್ಷಗಳಲ್ಲಿ [illegible] ರೂ. ಗಳಿಗೇರಿಸಲು ಈ ಬ್ಯಾಂಕಿ ಅವನಿಗೆ ಸಹಾಯ ಮಾಡುತ್ತದೆ. [illegible] ಬ್ಯಾಂಕಿನ ಸಂಪರ್ಕವೇ ಇಲ್ಲದಿರುವ ಸಂಬಂಧ ಇರುವ [illegible] ಈ ಯೋಜನೆಯ [illegible] ಬ್ಯಾಂಕಿನ ಸಂಬಂಧ [illegible] ಜನರು ಈ ಯೋಜನೆ [illegible] ಸಂಗತಿಯ [illegible] ಉಳಿತಾಯದ ಮಾರ್ಗ

ನೆಯಲ್ಲಿ ಇದು ಎಂಥ ಮಹತ್ಕಾರ್ಯವನ್ನು ಸಾಧಿಸಿದೆ ಎಂಬುದನ್ನು ನಿದರ್ಶಿಸುತ್ತದೆ. ಆದಾಯವು ಹೆಚ್ಚಾಗಿ ಏರಿ ಹೋದಾಗ ಉಳಿತಾಯವು ಅದು ಸ್ವರೂಪಕ್ಕಿಳಿವಾಗ ಅದನ್ನು ಶೇಖರಿಸುವದಕ್ಕಾಗಿ ಸತತ ಪರಿಶ್ರಮ ಮಾಡಬೇಕಾದ್ದು ಅಗತ್ಯವಾಗಿದೆ.

ರಾಷ್ಟ್ರಾಭಿವೃದ್ಧಿಯ ಕಾರ್ಯಕ್ಕೆ ಚಿಕ್ಕ ಉಳಿತಾಯಗಳ ಮಹತ್ವವೆಷ್ಟಿದೆಂಬುದನ್ನು ಕೇಂದ್ರ ಹಾಗೂ ರಾಜ್ಯ ಸರಕಾರಗಳೂ ಅರಿತುಕೊಂಡಿವೆ. ಮದ್ರಾಸ ಸರಕಾರದ ಇತ್ತೀಚಿನ ಸಾಲಕ್ಕೆ ೫೦೦ ರೂ. ಗಿಂತ ಕಡಿಮೆ ಮೊತ್ತದಲ್ಲಿ ಸಾಲ ಸಲ್ಲಿಸಿದವರ ಸಂಖ್ಯೆಯೇ ಹೆಚ್ಚಾಗಿದೆ. ಸರಕಾರದ ಸಾಲಪತ್ರಗಳಲ್ಲಿ ಹಣ ತೊಡಗಿಸುವ ಚಟವಿಲ್ಲದಿರುವ ಈ ವರ್ಗದವರಿಗೆ ಬಿನ್ನಹಮಾಡಿಕೊಳ್ಳುವವರಿಂದ ಸಾಲಪತ್ರಗಳಿಗಾಗಿ ಸಾರ್ವಜನಿಕ ಪೇಟೆಯನ್ನು ಖಚಿತವಾಗಿ ವಿಸ್ತರಿಸಿದಂತಾಗುವದಲ್ಲದೆ ಅವರ ಭದ್ರತೆಯನ್ನು ಹೆಚ್ಚಿಸಿದಂತಾಗುವದು. ಹಣ ತೊಡಗಿಸುವವರಿಗೆ ಕೈಗಡಕೊಟ್ಟು ಹಪ್ತೆಯಿಂದ ವಸೂಲುಮಾಡಿಕೊಂಡು ಮುಂತಾದ ಸೌಕರ್ಯಗಳನ್ನು ಒದಗಿಸಿ ಸರಕಾರಿ ಸಾಲಪತ್ರವನ್ನು ಆಕರ್ಷಕವಾಗಿಸಿ ಜನಪ್ರಿಯಮಾಡುವದಕ್ಕಾಗಿ ಸರಕಾರದ ಏಜಂಟರಾಗಿ ಕೆಲಸ ಮಾಡಲು ಬ್ಯಾಂಕುಗಳಿಗೆ ಅವಕಾಶಕೊಡಬೇಕು. ಇದರಿಂದಾಗಿ ಸ್ಥಳೀಕ ಕಾರ್ಯಗಳಿಗೆ ಹಣವೆತ್ತುವ ಸರಕಾರೀ ಸಂಸ್ಥೆಗಳು ಸಮಾಜದ ಉಳಿತಾಯದ ಹಣವನ್ನು ಪಡೆಯುತ್ತಿರುವ ಬ್ಯಾಂಕಿಂಗ ಪದ್ಧತಿಯೊಡನೆ ಸ್ಪರ್ಧಿಸುವದು ತಪ್ಪುವದು.

ದೇಶದ ಎದುರಿಗಿರುವ ಮಹಾ ಸಮಸ್ಯೆಗಳಲ್ಲಿ ನಿರುದ್ಯೋಗ ಸಮಸ್ಯೆಯು ಒಂದಾಗಿದೆ. ನಿರುದ್ಯೋಗಿಗಳಿಗೆಲ್ಲ ಕೆಲಸವನ್ನು ಒದಗಿಸುವದಕ್ಕೆ ಔದ್ಯೋಗೀಕರಣವನ್ನು ಭರದಿಂದ ಸಾಧಿಸುವದೇ ಉಪಾಯವೆಂದು ಹೇಳಲಾಗುತ್ತಿದೆ. ಆದರೆ ಈಗಿರುವ ಉದ್ದಿಮೆಗಳಿಂದ ಸಿದ್ಧವಾಗುವ ಸರಕುಗಳಿಗೆ ಪೇಟೆಯು ಇಲ್ಲದಂತಾಗಿ ಉದ್ದಿಮೆಗಳು ಇಳಿ ಮುಖವಾಗಿವೆ. ಸ್ವದೇಶಿಯದಲ್ಲಿ ಸಂಪೂರ್ಣ ಶ್ರದ್ಧೆ ಹುಟ್ಟುವ ವರೆಗೆ ಔದ್ಯೋಗೀಕರಣದ ಮಾತನ್ನು ನಾವು ಬಿಟ್ಟು ಬಿಡುವದೊಳಿತು. ರಾಜ್ಯ ಸರಕಾರಗಳು, ತಮ್ಮ ಶಾಖೆಗಳ ಮುಖಾಂತರ, ಕಚ್ಚಾ ಮಾಲಿನ ಉತ್ಪಾದನೆಯ ತಂತ್ರ ಪದ್ಧತಿಗಳ ವಿವರಗಳ ವಿಷಯದಲ್ಲಿ, ಇದಕ್ಕೂ ಹೆಚ್ಚಾಗಿ ತಯಾರಾಗುವ ಸರಕುಗಳಿಗೆ ಪೇಟೆಗಳನ್ನು ಒದಗಿಸುವ ವಿಚಾರದಲ್ಲಿ ಸುಸಂಘಟಿತವಾದ ನಿರೀಕ್ಷಣೆಗಳನ್ನು ನಡೆಸಬೇಕು. ಸರಕಾರಗಳು ತಾವೇ ಉದ್ದಿಮೆಗಳನ್ನು ನಡೆಸುವದು ಇತರರಿಗೆ ಆದರ್ಶಪ್ರಾಯವಾಗುವದು. ಇದಕ್ಕಿಂತ ಸರಕಾರವು ಮೇಲೆ ಸೂಚಿಸಿದ ರೀತಿಯಲ್ಲಿ ನಿರೀಕ್ಷಣೆ ನಡೆಸಬೇಕು. ಔದ್ಯೋಗೀಕರಣವನ್ನು ಭರದಿಂದ ಸಾಧಿಸುವ ದೃಷ್ಟಿಯಿಂದ ಸರಕಾರದವರು ಆರೋಗ್ಯದ ನಗರ ಸಭೆಯ ಕಾಯದೆಗಳನ್ನೂ ಕೂಲಿಕಾರ ಹಾಗೂ ಕಾರಖಾನೆಯ ಕಾಯ್ದೆಗಳನ್ನೂ ಅಭ್ಯಸಿಸಿ ಅವು ಅಡಚಣೆಕಾರಕವಾಗಿ ಕಂಡಲ್ಲಿ ಅವುಗಳಲ್ಲಿ ಮಾರ್ಪಾಡುಗಳನ್ನು ಮಾಡಬೇಕು. ಇವನ್ನು ಕಾರ್ಯಾಚರಣೆಯಲ್ಲಿ ತರಲು ಸಾಕಷ್ಟು ಕಳಕಳಿಯನ್ನು ತೋರಿಸದಿದ್ದರೆ ಯಾವ ಸಾಹಸಿ ಉದ್ದಿಮೆದಾರನೂ ಬೆಟ್ಟ ಬೀಳಲು ಅಷ್ಟೇ ಸಾಕು.

ಉದ್ಯೋಗದ ವಿಷಯದಲ್ಲಿ ತನ್ನ ಪಾತ್ರವೂ ಇಂಥ ಮಹತ್ವದ್ದೆಂಬುದನ್ನು ಕೂಲಿಕಾರರು ಅರಿತು ಕೊಳ್ಳಬೇಕು. ಒಡೆಯರು ಆತ್ಮಸಂರಕ್ಷಣೆಗಾಗಿ ಅನೇಕ ಸಂಸ್ಥೆಗಳನ್ನು ಸ್ಥಾಪಿಸಿಕೊಳ್ಳಲು ಅನೇಕಾವರ್ತಿ ಕೂಲಿಕಾರರ ವಿಶಿಷ್ಟ ವರ್ತನೆಯೆ ಕಾರಣವಾಗಿರುತ್ತದೆ. ಹೆಚ್ಚಿನ ನೌಕರರನ್ನು ಕಿತ್ತಿ ಹಾಕುವ ವಿಷಯದಲ್ಲಿ ಸರಕಾರವು ತಳೆದಿರುವ ಧೋರಣ, ಸರಕಾರದ ಅನಾವಶ್ಯಕ ಹಸ್ತಕ್ಷೇಪ ಇವುಗಳಿಂದಾಗಿ ಅನೇಕ ಉದ್ದಿಮೆದಾರರು ನಿರುದ್ಯೋಗ ನಿವಾರಣೆಗಾಗಿ ಹೆಚ್ಚಿನ ಪ್ರಯತ್ನ ಮಾಡದಂತಾಗಿದೆ. ಹೆಚ್ಚು ಜನರಿಗೆ ಉದ್ಯೋಗ ಒದಗಿಸಬೇಕಾದಲ್ಲಿ ಸರಕಾರವು ಈ ದೃಷ್ಟಿಯಿಂದ ತನ್ನ ಧೋರಣವನ್ನು ಪುನರ್ವಿಮರ್ಶಿಸಬೇಕಾಗುವದು, ದುಡಿಮೆ ಹೆಚ್ಚಿನ ದುಡಿಮೆಯೆ ಇಂದಿನ ಮಂತ್ರವಾಗಿದೆ. ಸ್ಪರ್ಧೆಯು ಹೆಚ್ಚುತ್ತಿರುವಾಗ ದಕ್ಷತೆಯೊಂದೇ ನಮ್ಮನ್ನು ಉಳಿಸಬಲ್ಲದು. ಕೂಲಿಕಾರರು ಇದನ್ನು ಅರಿಯ ಕೊಳ್ಳದಿದ್ದರೆ ತಮ್ಮ ನಾಶಕ್ಕೆ ತಾವೇ ಕಾರಣರಾಗುವರು.

ಇಂಥ ಕಠಿಣ ಪರಿಸ್ಥಿತಿಯಲ್ಲಿಯೂ ನಿಮ್ಮ ಬ್ಯಾಂಕು, ಸಾಮಾನ್ಯ ವರ್ಷದಲ್ಲಿಯಂತೆ, ಹೊಸದಾಗಿ ಜನರನ್ನು ಸೇರಿಸಿಕೊಂಡಿದೆ. ಇದೀ ಸಿಬ್ಬಂದಿಯವರಿಗೆಲ್ಲ ಸಕಾಲದಲ್ಲಿ ತರಬೇತಿಯು ದೊರೆಯಬೇಕೆಂದು ಬ್ಯಾಂಕು ತನ್ನ ವೆಚ್ಚದಿಂದ ತರಬೇತಿ ವರ್ಗವನ್ನು ಪ್ರಾರಂಭಿಸಿದೆ. ನಮ್ಮ ಗ್ರಾಹಕರಿಗೆ ವೈವಿಧ್ಯ ಪೂರ್ಣ ಸೇವೆ ಸಲ್ಲಿಸಬೇಕಾದರೆ ನಮ್ಮ ಸಿಬ್ಬಂದಿಯು ದಕ್ಷವಾಗಿದ್ದರಬೇಕೆಂಬುದನ್ನು ನಾವು ಮನಗಂಡಿದ್ದೇವೆ.

ಕೊನೆಯದಾಗಿ ಬ್ಯಾಂಕಿನ ಬೆಳವಣಿಗೆ ಹಾಗೂ ಅದರ ಭದ್ರತೆಗೆ ಬ್ಯಾಂಕಿನ ಹಿತ ಸಂಬಂಧಗಳೊಡನೆ ಸಮರಸವಾಗಿ ಉತ್ತಮ ಸೇವೆ ಸಲ್ಲಿಸಿದ ಶ್ರೀ ಟಿ ಎ. ಪೈಯವರನ್ನೂ ಬ್ಯಾಂಕಿನ ನೌಕರರ ವರ್ಗವನ್ನೂ ನನ್ನು ಜೀವ ನಾಡಿಯಾಗಿರುವ ಬೇರೆ ಬೇರೆ ಶಾಖೆಗಳಲ್ಲಿಯ ಠೇವುದಾರರನ್ನೂ ನಾನು ಅಭಿನಂದಿಸದಿರಲಾರೆ.

ಜಯಹಿಂದ!

SEASON DEPOSITS.

Are now accepted for periods from 3 to 6 months 3½% interest per annum for amounts of Rs. 500/- and multiples thereof. No deposit is allowed to run beyond 15—10—1954.

Attractive rates of interest are offered for Fixed Deposits for periods ranging from 1 to 24 months.

Banking transactions of all kinds are undertaken.

Branches throughout South Kanara, and one each in Mercara and Fort, Bombay.

THE VIJAYA BANK LIMITED,

Head Office: **MANGALORE.**

ಖಾತ್ರಿ ಚಿನ್ನದ ನೆಕ್‌ಲೇಸ್ ತರಹವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,

ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ

ಫೋನು ನಂಬ್ರ 66

ಲಕ್ಷಾಂತರ ಜನರು ಗುಣಹೊಂದಿದ್ದಾರೆ:

ಸರ್ ಜೀವನ್ ಶಿಲಾಜಿತ್‌ಲೇಹ

ಶಿಲಾಜಿತ್ ಹಿಮಾಲಯದ್ದು ಔಷಧಿಗಳ ರಾಜ; ಮೂಲಿಕೆಗಳೊಡನೆ ಸೇರಿಸಿದ ಲೇಹ್ಯ, ದೇಹಶಕ್ತಿ, ಹೊಟ್ಟೆನೋವು, ಅನ್ನ ಸೇರದಿರುವಿಕೆ, ಕೆಮ್ಮು, ದಮ್ಮು, ಬಹುಮೂತ್ರ ಮತ್ತು ವಾಯುವಿನಿಂದಾಗುವ ಎಲ್ಲಾ ರೋಗನಿವಾರಕ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, ಹೆಂಗಸರ ಮತ್ತು ಮಕ್ಕಳ ಸರ್ವರೋಗ ನಿವಾರಕ ಅಮೂಲ್ಯ ರತ್ನ ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು.

೪೮ ದಿನದ ಲೇಹ್ಯ ರೂ. ೫-೪-೦, ೨೨ ದಿನದ ಲೇಹ್ಯ ರೂ. ೩-೪-೦ (ಪೋಸ್ಟೇಜು ಮಾಫಿ)

ನೀಲಗಿರಿ ಡಿಪೋ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ.

ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋವಿನಲ್ಲಿ ಕೇಳಿರಿ.

ಭರ್ತ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ ೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟ ಖರ್ಚು ರೂ. ೦-೧೪-೦

—:ವಿಳಾಸ—

ಹಾಲಪ್ಪಾ, ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ

ರಥಬೀದಿ ಉಡುಪಿ.

-ಹೊಸಕೆರೆ ಚಿದಂಬರಯ್ಯನವರ-

ಗೀತೆಯ ಕೈಗನ್ನಡಿ

ಭಗವದ್ಗೀತೆಯ ಸಮೂಲ

ಭಾಷಾಂತರ.

ಬೆಲೆ. 0-12-0

V. P. P. ಮೂಲಕ 1—4—0

ನವಯುಗ ಪ್ರೆಸ್, ಉಡುಪಿ.

ಡಿ। ಕಿಲ್ಲೆಯವರನ್ನು ನೆನೆದು.

೧

ತುಳುನಾಡು ಕೆತ್ತಬೆಟ್ಟಿ ಕನ್ನಾಡು ಸಾಕಬೆಟ್ಟಿ
ಇಬ್ಬರ ಸೇವೆಯು ಸಲಿಸಿದೆಯೊ
ಒಬ್ಬಳು ಹೆತ್ತು ಮತ್ತೊಬ್ಬಳು ಹೊತ್ತು
ಬಾಳಿದ ಬದುಕನು ಬೆಳಗಿದೆಯೊ

೨

ಮಾಡಿದ ಒಳ್ಳೆದ ಚಾಣೆಯು ಬಾಸಿಂಗ
ಕನ್ನಾಡ ದೇವಿಗೆ ನೀ ಕಟ್ಟಿದೆ
ಮುರಲಿಯ ನಾದವೂ ಯಕ್ಷರ ಗಾನವೂ
ಕರ್ಣ ರಸಾಯನ ವಾಗಿಸಿದೆ

೩

ತುಳುನಾಡ ರಾಣಿಗೆ ಕವನದ ಕಾಣಿಕೆ
ಎದೆಯ ತಟ್ಟೆಯೊಳೊಪ್ಪಿಸಿದ ಮುಡಿಪೊ
ಬಡವಿಯು ಎಳೆಯಾಗೆ ಹೊಸಭಾವ ಎಸಳಾಗೆ
ಇಕ್ಕಿದ ಹೂಮಾಲೆ ಹೊರೆದ ಕಂಪೊ

೪

ರಾಜಕೀಯವೊ ಯಕ್ಷಗಾನವೊ ದಳಿತರೊ
ನೀನುತ್ತ ಹೊಲವೇನೊಂದರದೊ
ಗಂಧದ ಪರಿಮಳ ಗನುಗನು ಹರಡಿತು
ಕೊರಡಿಂತು ಸವೆವುದ ನೆನೆದರಾರೊ

೫

ಜಿಲ್ಲೆಯ ಕಾಂಗ್ರೆಸು ಸಂಸ್ಥೆಗೆ ನೀ 'ಕಿಲ್ಲೆ'
ಗುಂಡು ನಾಟಿತೆ ನೀ ನಿದುವಸಕ
ಮುಂದೆ ಭವಿಷ್ಯವೊ ಸಂದೇಹವೆನಿಸದೊ
ನಿನ್ನಂಥ ಜನವಿನ್ನೊಗೆವನಕ

೬

ಎದೆಯೊಳಗೊಂದಾಗಿ ನುಡಿವಾಗ ಜತ್ತಾಗಿ
ಕೇಳುವ ಕಿವಿಗೆ ನೂರಾದ ನುಡಿಯೊ
ಅಖ್ಯಾನ ವ್ಯಾಖ್ಯಾನ ಜಾಣ್ನುಡಿ ನಾಣ್ನುಡಿ
ಹೊಸೆದು ಹೊಮ್ಮುವ ಭಾವ ವೈಖರಿಯೊ

೭

ರಸನೆಯ ತುದಿಯಿಂದ ರಸಗಂಗೆ ಹರಿವಾಗ
ನೈಲ್ಯವಿಲ್ಲ ಕಿವಿಯಾಗೀಂಟಿದರೊ
ಆರೆಯಾಗಿ ಜರೆದಗ್ಗಿ ಕಲಿಯಾಗಿ ನರೆತಿರುಗಿ
ಬಗೆಯಲ್ಲಿ ಕೆಯ್ಯಾಗಿ ತೆನೆಬಿಟ್ಟುದೊ

೮

ತುಳುನಾಡ ಬಾನಗಲ ಹಾರಿ ಕಣ್ಮರೆಯಾದ
ಹಾಡಿನ ಹಕ್ಕಿಯು ಇಂಚರವೊ
ಎಲ್ಲಿಂದ ಹಾರಿ ಬಂದೆಲ್ಲಿಗೆ ಹೋದುದೊ
ಕಾಣಲು ಕಣ್ಣೀರ ಹಂಬಲವೊ

೯

ಸಾವಿನ ಸೋಂಕದು ನಿನಗುಂಟೆ ಹೇಳಣ್ಣ
ಮುದ್ದಣ್ಣ ಹೋದನೇ ನೊಡಲ ಹಿಂದೆ
ಬದುಕಿ ಸತ್ತವರೆಷ್ಟೊ ಸತ್ತು ಬಾಳಿದರೆಷ್ಟೊ
ದಳಸದ ಹೆಸರ ನೀ ನುಳಿಸಿ ಹೋದೆ

ಎಂ. ಆರ್. ಶಾಸ್ತ್ರಿ.

ಪ್ರೆಸಿಡೆನ್ಸಿ ಕಾಲೇಜ್, ಮದ್ರಾಸು 17.3.54

(೧ನೇ ಪುಟದಿಂದ)

ದ್ದ ಪ್ರಜಾಸಮಾಜವಾದಿಗಳು ಈಗ ಕಾಂಗ್ರೆಸಿನ ಅನುಗ್ರಹ ದೃಷ್ಟಿಯನ್ನೆ ಅಪೇಕ್ಷಿಸುತ್ತ ನಿಂತಿರುವದರಿಂದ ಈ ಟೀಕೆಯನ್ನು ಕೇಳಬೇಕಾಯಿತು. —ಟೀಕೆಗಳೇನೇ ಇರಲಿ, ಮುಂದಿನ ಸಾರ್ವತ್ರಿಕ ಚುನಾವಣೆಯ ವರೆಗೆ ಕಾಂಗ್ರೆಸ ಪ್ರಸಾ ಸಹಕಾರದಲ್ಲಿ ವ್ಯತ್ಯಯ ಒದಗದಿರಲೆಂದೂ ಪ್ರಸಮಾ ಮಂತ್ರಿ ಮಂಡಳ ಉರುಳಿಬೀಳದ ಹೆಳೆದು ಬಾಳಲೆಂದೂ ಆಶಿಸೋಣ ಮತ್ತು ಹೊಸ ಪರಂಪರೆಗೆ ಯಶಸ್ಸನ್ನು ಹಾರೈಸೋಣ!



Edited, Printed & Published By K. H. Shetty at the Navayuga Press, Udipi, S. India

Regd. No M. 3618 [ವಿರಚಾಣೆ] Licence No 31
Licensed to Post without Prepayment

ನವಯುಗ

Vol.33 No. 30 1-4-1954 ವರ್ಷ ೩೩ ವಾರ ೩೦

ರಾಜಾಜಿಯ ಮನದಾಶಯ

ಮದ್ರಾಸು ರಾಜ್ಯದ ಮುಖ್ಯ ಮಂತ್ರಿಗಳೂ ಶಾಸನ ಸಭೆಯ ಕಾಂಗ್ರೆಸು ಪಕ್ಷದ ಧುರೀಣರೂ ಆದ ಶ್ರೀ ಚಕ್ರವರ್ತಿ ರಾಜಗೋಪಾಲಾಚಾರಿಯವರು ತಮ್ಮ ಹುದ್ದೆಯಿಂದ ನಿವೃತ್ತಿಹೊಂದುವ ಆಶಯವನ್ನು ಪ್ರಕಟಪಡಿಸಿರುವರು. ಆರೋಗ್ಯವು ಸರಿಯಾಗಿಲ್ಲವೆಂಬ ಕಾರಣವನ್ನು ಅವರು ಹೇಳಿದ್ದು ಇದೇ ೩೦ನೇ ದಿನಾಂಕ ಕಾಂಗ್ರೆಸು ಪಕ್ಷದ ಸಭೆಯು ರಾಜಾಜಿಯ ರಾಜೀನಾಮೆ ಹಾಗು ಮುಂದಿನ ವಿಚಾರಗಳ ಕುರಿತು ಪರ್ಯಾಲೋಚಿಸಲು ಸೇರುತ್ತದೆ. ಕಳೆದ ದಿನಾಂಕ ೨೫ರಂದು ಕೂಡಿದ ಕಾಂಗ್ರೆಸು ಪಕ್ಷದ ಸಭೆಯಲ್ಲಿ ನೂರು ನಿಮಿಷಗಳ ವರೆಗೆ ವಿಚಾರ ವಿನಿಮಯ ನಡೆಯಿತೆಂದೂ ತನಗೆ ಇನ್ನು ಮುಂದೆ ಹೊಣೆಗಾರಿಕೆಯನ್ನು ನಿರ್ವಹಿಸುವುದು ಸಾಧ್ಯವಿಲ್ಲವಾದುದರಿಂದ ತನ್ನನ್ನು ನಿವೃತ್ತಿಹೊಂದಲು ಬಿಡಬೇಕಾಗಿ ರಾಜಾಜಿ ಕೇಳಿಕೊಂಡರೆಂದೂ ತಿಳಿಯುತ್ತದೆ ಮದ್ರಾಸು ನಗರದಲ್ಲಿ ರಾಜಕೀಯ ಚಟುವಟಿಕೆಗಳು ವಿಶೇಷವಾಗಿ ಕಂಡುಬರುತ್ತವೆ ಈ ಸಂಚಿಕೆ ಹೊರಬೀಳುವಷ್ಟರಲ್ಲಿ ರಾಜಾಜಿಯ ರಾಜೀನಾಮೆಯ ಪ್ರಶ್ನೆ ಕೊನೆಯದಾಗಿ ಇತ್ಯರ್ಥ ಹೊಂದುವ ನಿರೀಕ್ಷೆ ಇದೆ.

ರಾಜಾಜಿಯ ನಾಯಕತ್ವವನ್ನು ಉಳಿಸಿ ಬಿಡಬೇಕೆಂದು ಕೆಲವು ತಿಂಗಳುಗಳ ಪೂರ್ವದಲ್ಲಿ ನಡೆದ ಪ್ರಯತ್ನಗಳ ನೆನಪು ಇನ್ನೂ ಮರೆತು ಹೋಗಿಲ್ಲ. ಮುಖ್ಯವಾಗಿ ತಮಿಳುನಾಡು ಕಾಂಗ್ರೆಸಿನ ಕೆಲವು ಹಿತಸಂಬಂಧವುಳ್ಳ ವ್ಯಕ್ತಿಗಳು ರಾಜಾಜಿಯ ಮೇಲೆ ಸರ್ವಾಧಿಕಾರದ ಆರೋಪವನ್ನು ಹೊರಿಸಿ ಪ್ರಜಾಪ್ರಭುತ್ವಕ್ಕೆ ವಿರುದ್ಧವಾದ ಧೋರಣೆಯನ್ನು ಅವರು ಅನುಸರಿಸುತ್ತಿದ್ದಾರೆಂದು ದೂರಿಕೊಂಡಿದ್ದರು. ಆದರೆ ರಾಜಾಜಿ ಚತುರ ಆಡಳಿತಗಾರ—ಅವರ ಅಧಿಕಾರದ ಅವಧಿಯಲ್ಲಿ ಸರಕಾರೀ ಯಂತ್ರವು ಅಧಿಕ ಕಾರ್ಯಕ್ಷಮತೆಯನ್ನು ತೋರಿಸಿದೆ ಅನಾವಶ್ಯಕವಾಗಿ ಸರಕಾರದೊಂದಿಗೆ ಹಸ್ತಕ್ಷೇಪ ಮಾಡುವ ಹವ್ಯಾಸಕ್ಕೆ ಅವಕಾಶ ದೊರೆಯದಂತಾಗಿರುತ್ತದೆ. ರಾಜಾಜಿಯವರು ಜನತೆಯನ್ನು ಸವಿನಯದಿಂದ ತಮ್ಮ ಕಡೆಗೆ ಸೆಳೆದುಕೊಂಡು ಪ್ರೀತಿ ವಿಶ್ವಾಸವನ್ನು ಗಳಿಸಿರುವರು ಕೆಲವು ಧೈರ್ಯದ ಹೆಜ್ಜೆಗಳನ್ನು ಮುಂದಿಟ್ಟು ಹೊಸ ಪರಂಪರೆಯನ್ನೂ ಹಾಕಿಕೊಟ್ಟಿದ್ದಾರೆ. ಪ್ರಬಲ ವಿರೋಧವನ್ನು ಲೆಕ್ಕಿಸದೆ ಪ್ರಜಾಪ್ರಭುತ್ವ ಪದ್ಧತಿಯ ಶಾಸನವನ್ನು ನಡೆಸಿಕೊಂಡು ಬಂದಿದ್ದಾರೆ. ಮಹಾ ಮೇಧಾವಿಯೂ ಕುಶಲ ರಾಜಕಾರಣಿಯೂ ಸೇವಾಪರಾಯಣನೂ ಆದ ರಾಜಾಜಿಯನ್ನು ಪ್ರಧಾನಿ ನೆಹರೂ ಆದರಿಸಿದ ಪ್ರೇರಾಜ್ಯದ ಜನರೂ ಗೌರವಿಸುತಿದ್ದರು. ಕಾರಣ, ಅವರನ್ನು ಅಧಿಕಾರ ತ್ಯಜಿಸುವಂತೆ ಒತ್ತಾಯಿಸುವ ತಕರಾರು ಅರ್ಜಿಗಳು ಪ್ರಯೋಜನಕ್ಕೆ ಬರಲಿಲ್ಲ

ಆದರೆ ಈ ಸಲ ಸ್ವತಃ ರಾಜಾಜಿಯವರೇ ಅಧಿಕಾರಸ್ಥಾನದಿಂದ ನಿವೃತ್ತಿಹೊಂದುವ ಇಚ್ಛೆಯನ್ನು ವ್ಯಕ್ತಪಡಿಸಿರುವರು-

ಅವರು ಆರೋಗ್ಯದ ಕಾರಣದಿಂದ ನಿವೃತ್ತಿಹೊಂದುವರೆಂದೂ ಶ್ರೀ ಜವಾಹರಲಾಲ ನೆಹರೂರವರಿಂದ ಇದಕ್ಕೆ ಸಮ್ಮತಿ ದೊರೆತಿದೆಯೆಂದೂ ಕೆಲವು ವರದಿಗಳು ೨೪ನೇ ತಾರೀಕಿನ ದಿನ ಪ್ರಕಟಗೊಂಡವು ರಾಜಾಜಿಯವರು ಈಗ ಕೆಲವು ದಿವಸಗಳಿಂದ ಅಸ್ವಸ್ಥರಿದ್ದರು—ದೇಹಾಲಸ್ಯದ ಕಾರಣದಿಂದ ಅವರು ೧೬ನೇ ತಾರೀಕಿನಿಂದ ಶಾಸನ ಸಭಾ ಕಾರ್ಯಗಳಲ್ಲಿ ಭಾಗವಹಿಸುತ್ತಿರಲಿಲ್ಲ. ಮುಂಗಡ ಪತ್ರದ ಚರ್ಚೆ ಮುಗಿದು ಬೇರೆ ಬೇರೆ ಇಲಾಖೆಗಳ ಬೇಡಿಕೆಗಳು ಮಂಡಿಸಲ್ಪಡುವಾಗ ಸಚಿವರುಗಳ ಆಸನದಲ್ಲಿ ರಾಜಾಜಿ ಉಪಸ್ಥಿತರಿಲ್ಲದಿರುವುದನ್ನು ಕಂಡ ಸದಸ್ಯರು ರಾಜಾಜಿಯ ಆರೋಗ್ಯವನ್ನು ವಿಚಾರಿಸಿ, ಅವರು ಶೀಘ್ರ ಗುಣ ಹೊಂದಲೆಂದ, ಹಾರೈಸಿದ್ದರು. ಆದರೆ ರಾಜಾಜಿಯವರು ವಿರಾಮ ಹೊಂದ ಬಯಸುವರೆಂದು ಯಾರಿಗೂ ಅನಿಸಿರಲಿಲ್ಲ ಕಾರಣ —ಅವರ ನಿವೃತ್ತಿಯ ಸುದ್ದಿ ತೀರ ಅನಿರೀಕ್ಷಿತವಾಗಿ ಪ್ರಕಟಗೊಂಡು ದಿಗ್ಭ್ರಮೆಯನ್ನೇ ಹುಟ್ಟಿಸಿತು ತಮ್ಮ ಅಸ್ವಾಸ್ಥ್ಯದ ದಿನಗಳಲ್ಲಿ ರಾಜಾಜಿಯವರು ವಿರಾಮ ಹೊಂದುವ ವಿಚಾರಮಾಡ ತೊಡಗಿದರೆಂದೂ ಮಲಯಾಕ್ಕೆ ಹೋಗಿದ್ದ ತಮಿಳುನಾಡು ಪ್ರದೇಶ ಕಾಂಗ್ರೆಸಿನ ಅಧ್ಯಕ್ಷ ಶ್ರೀ ಕಾಮರಾಜನಾಡರರು ೨೩ನೇ ತಾರೀಕಿನಂದು ಮದ್ರಾಸಿಗೆ ಮರಳಿದೊಡನೆಯೇ ರಾಜಾಜಿಯವರು ಅವರನ್ನು ಕರೆಸಿಕೊಂಡರೆಂದೂ ಗವರ್ನರ ಶ್ರೀ ಪ್ರಕಾಶರೂ ರಾಜಾಜಿಯ ಭೇಟಿ ತೆಗೆದುಕೊಂಡಿದ್ದು, ಮಹತ್ವದ ರಾಜಕೀಯ ಚಟುವಟಿಕೆಗಳು ನಡೆಯುತ್ತಿವೆಯೆಂದೂ ಮೊದಲು ಬಂದ ಸುದ್ದಿ ಹೇಳಿತು.

ಇದರಿಂದ ಉಂಟಾದ ಕಳವಳದ ವಾತಾವರಣವನ್ನು ನಿವಾರಿಸಿ, ಸತ್ಯಸಂಗತಿಗಳನ್ನು ಸ್ಪಷ್ಟೀಕರಿಸುವ ಉದ್ದೇಶದಿಂದ ಸ್ವತಃ ರಾಜಾಜಿಯವರೇ ಶಾಸನ ಸಭೆಗೆ ದಿನಾಂಕ ೨೫ರಂದು ಬಂದರು. ಅವರ ಆರೋಗ್ಯ ತುಸು ಸುಧಾರಿಸಿದ್ದರೂ ನಿತ್ಯದ ಕೆಲಸಗಳನ್ನು ನೋಡಿಕೊಳ್ಳುವುದಕ್ಕೆ ಸಾಧ್ಯವಿರಲಿಲ್ಲ ಆದರೂ ಸುಳ್ಳು ವಾರ್ತೆಗಳಿಗೆ ಆಸ್ಪದ ಕೊಡಬಾರದೆಂಬ ಉದ್ದೇಶದಿಂದ ಅವರು ಶಾಸನ ಸಭಾಸದಸ್ಯರಿಗೆ ತಮ್ಮ ಮನೋಗತವನ್ನು ತಿಳಿಸುವ ಮತ್ತು ಸತ್ಯಸಂಗತಿಗಳನ್ನು ನಿರೂಪಿಸುವ ಚಿಕ್ಕ ಭಾಷಣವನ್ನು ಮಾಡಿದರು —'ಇಂದು ಮುಂಜಾನೆ ನಾನು ನನ್ನ ಪಕ್ಷದವರಲ್ಲಿ ಕ್ಷಮೆ ಕೇಳಿಕೊಳ್ಳಬೇಕೆಂದು ಬಯಸಿರಲಿಲ್ಲ ಪತ್ರಿಕೆಗಳಲ್ಲಿ ಬಂದ ವರದಿಗಳು ನೋಡಿದ ಬಳಿಕ ತಪ್ಪು ಸಂಗತಿಗಳ ಬಗೆ ಸ್ಪಷ್ಟೀಕರಣ ಮಾಡುವುದು ನನ್ನ ಕರ್ತವ್ಯವೆಂದು ತಿಳಿದು, ಇಲ್ಲಿಗೆ ಬಂದಿದ್ದೇನೆ ಜಾಸನೆಂಬ ರೋಗಿಯು ಡಾಕ್ಟರರ ಬಳಿಗೆ ಹೋದನೆಂಬ ಮಾತ್ರಕ್ಕೆ ಅವನ ಮರಣಗೊಂಡನೆಂದು ಹೇಳಿದಂತೆ ಪತ್ರಿಕೆಗಳಲ್ಲಿ ನನ್ನ ನಿವೃತ್ತಿಯ ವಿಷಯ ಪ್ರಕಟಗೊಂಡಿದೆ ಜಾಸನು ಮಹಾವ್ಯಾಧಿಯ ಹೊತ್ತಿಗೆ ಸತ್ತರೂ ಸಾಯಬಹುದು ಆಸ್ಪತ್ರೆಗೆ ತಪ್ಪಿದ ಸುದ್ದಿಗಳ ನಿರಾಕರಣೆ ಮಾಡುವುದೂ ಕಷ್ಟವಾಗುತ್ತದೆ ನನ್ನ ಈಗಿನ ಪರಿಸ್ಥಿತಿ ಹೀಗೆ ಹೇಳುತ್ತದೆ" ಎಂದವರು ಪ್ರಾಸ್ತಾವಿಕವಾಗಿ ಹೇಳಿದರು

ಮುಂದುವರಿದು ಹೀಗೆಂದರು—"ನಾನು ನಿವೃತ್ತನಾಗಬೇಕೆಂದು ನನಗೆ ಕಾಯಿಲೆ ಬಂದುದರಿಂದ ಆಲೋಚಿಸುತ್ತಿದ್ದೇನೆ. ಆದರೆ ನಾನು ವಿರಾಮ ಹೊಂದುವದು ಬೇರೆ ದೊರೆಗಳ ಪಕ್ಷವನ್ನು ಅಥವಾ ಹೈಕಮಾಂಡಿನ ಮೋಲವನ್ನು ಹೊರ ತೆಗೆದು ಮಾಡುವುದಲ್ಲ ನಾನು ನಿವೃತ್ತನಾಗಲಿಚ್ಛಿಸುತ್ತೇನೆಂದು ಶ್ರೀ.ನೆಹರೂರವರಿಗೆ ಅವರು ಕಾಂಗ್ರೆಸಾಧ್ಯಕ್ಷರೆಂದಾಗಲೀ ಪ್ರಧಾನ ಮಂತ್ರಿಗಳೆಂದಾಗಲೀ ಇದು ವರೆಗೆ ಪತ್ರ ಬರೆದಿಲ್ಲವೆಂದು ಸ್ಪಷ್ಟವಾಗಿ ಸಾರಬಯಸುತ್ತೇನೆ ಅವರಿಗೆ ಬರೆಯಲು ಅವಶ್ಯವೆನಿಸಿದ ಭೂಮಿಕೆಯನ್ನೆ ನಾನಿನ್ನೂ ಸಿದ್ಧಗೊಳಿಸಲಿಲ್ಲ ನಾನು ಧುರೀಣನಾಗಿರುವ ಕಾಂಗ್ರೆಸುಪಕ್ಷದ ಸದಸ್ಯರನ್ನು ಇನ್ನೂ ಕೇಳಿಕೊಂಡಿಲ್ಲ. ಅವರನ್ನು ಬಿಟ್ಟು ನಾನು ಬೇರೆ ಯಾರಿಗೆ ಮೊದಲು ತಿಳಿಸಬೇಕು? ನಾನು ನನ್ನ ಪಕ್ಷದವರನ್ನು ಕಂಡು ಇಷ್ಟರಲ್ಲಿಯೇ ಈ ವಿಷಯವನ್ನು ಚರ್ಚಿಸಲಿದ್ದೇನೆ ನಾನು ಹೇಗೆ ನಿವೃತ್ತನಾಗಬೇಕೆಂದು ಇನ್ನೂ ನಿರ್ಧರಿಸಿಲ್ಲ—ಆದರೆ ಒಂದು ಸಂಗತಿ ಮಾತ್ರ ನಿಜ ಪ್ರಕೃತಿ ಸ್ವಸ್ಥವು ಸರಿಯಿಲ್ಲದ ಕಾರಣ ನಾನು ವಿರಾಮ ಹೊಂದಲು ಬಯಸುತ್ತೇನೆ. ನನ್ನ ವಯಸ್ಸಿನ ಮನುಷ್ಯನಿಗೆ ಕಾಯಿಲೆ ಬಂದರೆ ಅದರಿಂದ ಬೇಗನೆ ಗುಣಹೊಂದುವುದು ಸಾಧ್ಯವಿಲ್ಲ ಆದರೆ ನಿವೃತ್ತಿಗ ಪೂರ್ವದಲ್ಲಿ ನಾನು ಉತ್ತರಾಧಿಕಾರಿಯ ಯೋಗ್ಯ ವ್ಯವಸ್ಥೆಯನ್ನು ಮಾಡಲೇ ಬೇಕು. ಅದು ಪೂರ್ಣವಾಗುವವರೆಗೆ ಈಗ ಪ್ರಸಿದ್ಧವಾಗಿರುವ ವಿಷಯಗಳನ್ನು ಯಾರೂ ನಂಬಬಾರದು ಅವು ನನ್ನ ಇಚ್ಛೆಯನ್ನು ವ್ಯಕ್ತಪಡಿಸುವುದರಿಂದ ಎಂದರೆ ನಿಜವಾಗಿದ್ದರೂ ಪತ್ರವನ್ನು ಇದ್ದುದಿದ್ದಂತೆ ಹೇಳಿಲ್ಲವಾಗಿ, ಸಚಿವರಾಗನ ಏನೇನೂ ಬರೆದುಕೊಂಡಿವೆ ನಮ್ಮ ಕಾಂಗ್ರೆಸ ಮುಖಂಡನ ಹಾಗೂ ಭಾರತದ ಪ್ರಧಾನ ಮಂತ್ರಿ

(ಮುಂದೆ ೫ನೇ ಪುಟ ನೋಡಿರಿ)

ಸಮರ್ಥ ಸಾಲಗಳು

ಒಬ್ಬನ ಯೋಗ್ಯತೆ ಮತ್ತು ಸಮರ್ಥತೆ ಅನೇಕ ಸಾರೆ ಅವನ ಚಿಕ್ಕದೆ ಸಾಲಗಳ ದೆಸೆಯಿಂದಾಗಿ ಬಹುವಾಗಿ ಕುಂಟುತ್ತವೆ ಆದರೆ ಈ ಎಲ್ಲಾ ಚಿಕ್ಕದೆ ಸಾಲಗಳನ್ನು ಏಕೀಕರಿಸಿ ಸುಲಭಸಾಧ್ಯವಾದ ಕಂತುಗಳಿಂದ ಸಂದಾಯ ಮಾಡುವಂತಾದರೆ ಅವನ ಕಷ್ಟಗಳೆಲ್ಲವೂ ಪರಿಹಾರಗೊಂಡು ಅವನ ಯೋಗ್ಯತೆ ಹಾಗೂ ಸಮರ್ಥತೆ ಮರಳಿ ಬರುವುದು ತಿಂಗಳಿಗೆ ರೂ. 250 ಕ್ಕಿಂತ ಜಾಸ್ತಿ ಸಂಬಳವಿರುವ ಆಫೀಸರರುಗಳಿಗೆ ಅವರ ಸಂಬಳದ ಆರು ಪಾಲಷ್ಟು ಸಾಲಗಳನ್ನು ಕೊಟ್ಟು ಅವನ್ನು ೩೬ ತಿಂಗಳು ಕಂತುಗಳಿಂದ ಮರುಪಾವತಿ ನಡೆಯುವ ಹೊಸ ಯೋಜನೆಯೊಂದನು ನಾವು ಕಂಡುಹಿಡಿದಿದ್ದೇವೆ ಈ ಸಾಲವನ್ನು ಪಡೆಯಲು ಇನ್ಶೂರೆನ್ಸ ಪೋಲಿಸಿ ಮತ್ತು ಒಬ್ಬ ಸಹ ಜಾಮೀನುದಾರರು ಅತ್ಯಗತ್ಯ

ಹೆಚ್ಚಿನ ವಿವರಗಳಿಗೆ ಸಮೀಪದ ನಮ್ಮ ಆಫೀಸನ್ನು ವಿಚಾರಿಸಿ

THE CANARA INDUSTRIAL & BANKING SYNDICATE LTD
Estd: 1925 H O UDIPI, S India
ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್.,
ಸ್ಥಾಪನೆ ೧೯೨೫ [ಪ್ರಧಾನ ಕಚೇರಿ ಉಡುಪಿ. ದ ಭಾರತ

ನೇಪಾ ನಗರದ ಕಾಗದ ತಯಾರಿಸುವ ಕಾರಖಾನೆ

ಮಧ್ಯಪ್ರದೇಶದ ಅರಣ್ಯ ಸಂಪತ್ತಿನ ಸದ್ವಿನಿಯೋಗ

ಪಂಚವಾರ್ಷಿಕ ಯೋಜನೆಯ ಯಶಸ್ಸು ಜನತಾ ಸಹಕಾರವನ್ನೂ ಹೊಂದಿಕೊಂಡಿದೆಯಷ್ಟೆ! ಜನರಿಗೆ ಯೋಜನೆಯ ಕುರಿತಾದ ಮಾಹಿತಿಗಳು ಇಲ್ಲದಿದ್ದ ಪಕ್ಷದಲ್ಲಿ ಅವರು ಸರಕಾರದ ಕಾರ್ಯಗಳೊಂದಿಗೆ ಸಹಕರಿಸುವುದೆಂತು? ಆದುದರಿಂದ ಜನತೆಗೆ ಯೋಜನೆಯ ಜ್ಞಾನವನ್ನು ಮಾಡಿಕೊಡುವುದಕ್ಕೋಸ್ಕರ ವೃತ್ತಪತ್ರಗಳೂ ನಿಯತಕಾಲಿಕಗಳೂ ಬರೆಹಗಾರರೂ ಪ್ರಕಾಶಕರೂ ಪ್ರಯತ್ನಿಸಬೇಕೆಂದು ಯೋಜನಾ ಆಯೋಗ ಅಪೇಕ್ಷಿಸುತ್ತದೆ ಅಂದರೆ, ಪುಸ್ತಕ ಮತ್ತು ಲೇಖನಗಳ ಪ್ರಕಾಶನಾಕಾರ್ಯವನ್ನು ಮಾಡುವುದರ ಮೂಲಕ ಜನತೆಗೆ ಯೋಜನೆಯ ಪರಿಚಯವನ್ನೊದಗಿಸಿ ಕೊಡಬೇಕೆಂದಾಯಿತು. ಇದು ಸಾಧ್ಯವಾಗಬೇಕಾದರೆ, ನಮ್ಮ ಕಾಗದದ ಉದ್ದಿಮೆಯು ಬೆಳೆದು ಬರಬೇಕಾದುದು ಅನಿವಾರ್ಯವಾಗಿರುತ್ತದೆ. ಅದರಲ್ಲೂ ವೃತ್ತಪತ್ರಗಳು ಬಳಸುವ ಕಾಗದದ ತಯಾರಿಕೆಯು ಬಹಳ ಹೆಚ್ಚು ಪ್ರಮಾಣದಲ್ಲಿ ಉತ್ಪಾದನೆಗೊಳ್ಳಬೇಕು. ಯೋಜನಾ ಆಯೋಗವು ಇದನ್ನು ಗಮನಿಸಿ ಯೋಗ್ಯ ಸೂಚನೆಗಳನ್ನು ಮಾಡಿರುತ್ತದೆ.

ಯುನೆಸ್ಕೋದ ಅಭಿಪ್ರಾಯ

ಭಾರತದಲ್ಲಿ ಪಂಚವಾರ್ಷಿಕ ಯೋಜನೆಯು ಕಾರ್ಯಗತಗೊಳ್ಳುತ್ತಿರುವುದರಿಂದ ಮಾತ್ರ ಕಾಗದದ ಬೇಡಿಕೆ ಹೆಚ್ಚಿಕೊಳ್ಳುವುದೆಂದಲ್ಲ— ಕಲ್ಯಾಣರಾಷ್ಟ್ರವನ್ನು ಕಟ್ಟುವ ಪ್ರಯತ್ನಗಳು ಭರದಿಂದ ಪ್ರಗತಿ ಹೊಂದುತ್ತಿರುವುದರಿಂದ ಕಾಗದದ ಉತ್ಪಾದನೆ ಹೆಚ್ಚಿಕೊಳ್ಳಲೇಬೇಕಾಗಿ ಬಂದಿರುತ್ತದೆ. ವ್ಯಾಪಕವಾದ ಶಿಕ್ಷಣ ಪ್ರಸಾರ ಮತ್ತು ರಾಜಕೀಯ ತಿಳುವಳಿಕೆಗಳು ವೃತ್ತಪತ್ರಗಳ ಮತ್ತು ಪುಸ್ತಕಗಳ ಪ್ರಕಟಣೆಗೆ ಅಧಿಕ ಪ್ರೋತ್ಸಾಹವನ್ನು ನೀಡುತ್ತವೆ. ಆದುದರಿಂದ ಕಾಗದ ತಯಾರಿಸುವ ಉದ್ಯಮಕ್ಕೆ ಈಗಿನ ವಾತಾವರಣವು ತುಂಬ ಅನುಕೂಲವಾಗಿರುತ್ತದೆಂದು ಹೇಳಬಹುದು.

ಹಿಂದುಳಿದ ದೇಶಗಳಲ್ಲಿ ಒಂದಾದ ಭಾರತದಲ್ಲಿ ಸಹ ಕಾಗದ ತಯಾರಿಸುವ ಕೈಗಾರಿಕೆ ಬರಬೇಕಾದಷ್ಟು ಮುಂದೆ ಬಂದಿಲ್ಲ. ಸಂಯುಕ್ತ ರಾಷ್ಟ್ರಸಂಘದ ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ವಿಭಾಗದವರು "ಕಾಗದ ಮತ್ತು ಮುದ್ರಣ —ಇಂದು ಹಾಗೂ ನಾಳೆ" ಎಂಬ ತಮ್ಮದೊಂದು ಪ್ರಕಟಣೆಯಲ್ಲಿ ಹಿಂದುಳಿದ ರಾಷ್ಟ್ರಗಳಲ್ಲಿ ವಿಶೇಷವಾಗಿ ಅನುಭವಕ್ಕೆ ಬರುವ ವೃತ್ತಪತ್ರ ಕಾಗದದ ಕೊರತೆಯು ಆಯಾ ಪ್ರದೇಶಗಳಲ್ಲಿ ಅವಶ್ಯವಾದ ವಲ್ಪ ಮತ್ತು ಕಾಗದದ ಕಾರ್ಖಾನೆಗಳು ಸ್ಥಾಪಿಸಲ್ಪಟ್ಟರೆ ಮಾತ್ರ ನೀಗಬಲ್ಲುದೆಂದು ಹೇಳಿರುವರು. ಯುರೋಪು ಅಥವಾ ಅಮೇರಿಕಾಗಳಲ್ಲಿ ಕಾಗದದ ಉತ್ಪಾದನೆಯನ್ನು ಬೆಳೆಸಿದರೆ ಇತರ ರಾಷ್ಟ್ರಗಳಿಗೆ ಅದರಿಂದ ಪ್ರಯೋಜನವಾಗಲಾರದು. ಏಕೆಂದರೆ ಆಯಾ ದೇಶಗಳಲ್ಲಿ ಹೆಚ್ಚಿಕೊಂಡ ಉತ್ಪಾದನೆಯು ಅಲ್ಲಲ್ಲಿಯೇ ಬಳಸಲ್ಪಡುವುದೆಂದು ಈ ಅಭ್ಯಾಸಪೂರ್ಣ ಪ್ರಕಟಣೆ ತಿಳಿಸುತ್ತದೆ.

ಕಾಗದ ತಯಾರಿಸುವ ವಲ್ಪಿನ ಜಾಗತಿಕ ಬೇಡಿಕೆಯು ೧೯೫೦ರಲ್ಲಿ ೩೨೦ ಲಕ್ಷ ಟನ್ನುಗಳಷ್ಟಿದ್ದರೆ ೧೯೬೦ರಲ್ಲಿ ಇದು ೫೦೦ ಲಕ್ಷ ಟನ್ನುಗಳಿಗೇರಬಹುದೆಂದು ಅಂದಾಜು. ಹಿಂದುಳಿದ ದೇಶಗಳಲ್ಲಿ ಕಾಗದ ತಯಾರಿಸಲು ತಕ್ಕುದಾದ ಸಸ್ಯ ಸಂಪತ್ತು ಇಲ್ಲವೆಂಬ ದೂರು ಕೇಳಿಬರುತ್ತಿದ್ದರೂ ಇಲ್ಲಿರುವ ಮರ ಮತ್ತು ಹುಲ್ಲುಗಳಲ್ಲಿ ಕೆಲವು ವಿಶಿಷ್ಟ ಜಾತಿಯವುಗಳನ್ನು ಉಪಯೋಗಿಸಿಕೊಂಡರೆ ಕೊರತೆಯನ್ನು ಪರಿಹರಿಸಲು ಸಾಧ್ಯ ಎಂದೂ ಈ ಪುಸ್ತಕ ಸೂಚಿಸುತ್ತದೆ ವೃತ್ತಪತ್ರಿಕೆಗಳು ಬಳಸುವ ಕಾಗದದ ಉತ್ಪಾದನೆಯು ಕುರಿತು ಈಗ ಸಿದ್ಧಗೊಂಡ ಯೋಜನೆಗಳೆಲ್ಲ ಪೂರ್ಣವಾದರೂ ಸನ ೧೯೬೦ ರಿಂದ ೨೭ ಲಕ್ಷ ಟನ್ನುಗಳ ಕೊರತೆ ಉಳಿಯುತ್ತದೆ.

ಬೆಳೆಯುವ ಬೇಡಿಕೆ

ಅಲ್ಲಲ್ಲಿ ರೂಪುಗೊಳ್ಳುತ್ತಿರುವ ಕಾಗದ ತಯಾರಿಸುವ ಕಾರ್ಖಾನೆಗಳ ಯೋಜನೆಯನ್ನು ಪ್ರಸ್ತಾಪಿಸುತ್ತಾ, ಭಾರತದಲ್ಲಿ ಬಿದಿರು ಮತ್ತು ಇತರ ಮಿದು ಜಾತಿಯ ಮರಗಳಿಂದ ವರ್ಷಕ್ಕೆ ೩೦೦೦೦ ಟನ್ನುಗಳಷ್ಟು ವೃತ್ತ ಪತ್ರಗಳು ಬಳಸುವ ಕಾಗದವನ್ನು ಉತ್ಪಾದಿಸಬಲ್ಲ ನೇಪಾ ನಗರದ ಕಾರಖಾನೆಯನ್ನು ಪುಸ್ತಕ ಉಲ್ಲೇಖಿಸುತ್ತದೆ. ಈ ಯೋಜನೆಯು ಸರಕಾರೀ ಸಹಕಾರದಿಂದ ಇಷ್ಟರಲ್ಲೇ ಪೂರ್ಣವಾಗಲಿದ್ದು, ಈ ವರ್ಷಾಂತ್ಯದಲ್ಲಿ ಉತ್ಪಾದನೆಯನ್ನು ತೊಡಗುತ್ತದೆ

ಮಧ್ಯಪ್ರದೇಶದಲ್ಲಿರುವ "ನೇಶನಲ್ ನ್ಯೂಸ್ ಪ್ರಿಂಟ್ ಎಂಡ್ ಪೇಪರ್ ಮಿಲ್ಸ್, ಲಿಮಿಟೆಡ್" ಎಂಬ ಸಂಸ್ಥೆಯು ವೃತ್ತಪತ್ರಕಾಗದವನ್ನು ಉತ್ಪಾದಿಸುವ ಈ ಸಾಹಸವನ್ನು ಕೈಗೊಂಡಿದೆ. ಮಧ್ಯರೈಲ್ವೆಯಲ್ಲಿ ಮುಂಬಯಿ-ಕಲ್ಕತ್ತಾ ಮಾರ್ಗದಲ್ಲಿ ಖಾಂಡ್ವಾದಿಂದ ೨೭ ಮೈಲು ಹಾಗು ಭೂಸಾವಳದಿಂದ ೫೧ ಮೈಲುಗಳ ಅಂತರದಲ್ಲಿ ಕಾಡಿನ ನಡುವೆ ಈ ಕಾರ್ಖಾನೆ ನೆಲೆಗೊಂಡಿದೆ.

ಇಲ್ಲಿ ಉತ್ಪಾದಿಸಲ್ಪಡುವ ೩೦೦೦೦ ಟನ್ನುಗಳಷ್ಟು ವೃತ್ತಪತ್ರ ಕಾಗದವು ದೇಶದ ಬೇಡಿಕೆಯಲ್ಲಿ ಒಂದು ಮೂರಾಂಶ ಪ್ರಮಾಣವನ್ನು ಪೂರೈಸುತ್ತದೆ. ಇದರಿಂದ ವರ್ಷಕ್ಕೆ ಎರಡು ಕೋಟಿ ರೂಪಾಯಿಗಳು ಹೊರಗೆ ಹೋಗುವುದು ನಿಂತು ದೇಶ ಅಷ್ಟು ಮಟ್ಟಿಗೆ ಸಮೃದ್ಧವಾಗುತ್ತದೆ

ದ್ವಿತೀಯ ಮಹಾ ಯುದ್ಧಕ್ಕೆ ಮುಂಚಿನ ದಶಕದಲ್ಲಿ ಭಾರತವು ಆಮದು ಮಾಡಿಕೊಳ್ಳುತ್ತಿದ್ದ ವೃತ್ತಪತ್ರ ಕಾಗದದ ಪ್ರಮಾಣವು ವರ್ಷಕ್ಕೆ ೨೦೦೦೦ ಟನ್ನುಗಳಿಂದ ೩೨೦೦೦ ಟನ್ನುಗಳಿಗೆ ಏರಿತು. ೧೯೩೯ನೇ ಇಸವಿಯಲ್ಲಿ ಇದು ೩೭೫೦೦ ಟನ್ನುಗಳಾಯಿತು. ಅಲ್ಲಿಂದ ಮುಂದೆ ಭಾರತದಲ್ಲಿ ವೃತ್ತಪತ್ರ ಕಾಗದದ ಬೇಡಿಕೆಯು ಪ್ರತಿದಿನ ಹೆಚ್ಚುತ್ತಾ ಹೋಯಿತು. ಭಾರತ ಸರಕಾರದ ಕಂಟ್ರೋಲರ ಆಫ್ ನ್ಯೂಜ್ ಪ್ರಿಂಟರ ಹೇಳಿಕೆಯಂತೆ, ಈಗಿನ ಬೇಡಿಕೆಯು ವರ್ಷಕ್ಕೆ ೮೦,೦೦೦ ಟನ್ನುಗಳಷ್ಟು ಇರುತ್ತದೆ. ಮಾತ್ರವಲ್ಲ ವರ್ಷವರ್ಷವೂ ಈ ಬೇಡಿಕೆ ಶೇಕಡಾ ಇಪ್ಪತ್ತೈದರಷ್ಟು ಅಧಿಕಗೊಳ್ಳುತ್ತಾ ಹೋಗುತ್ತದೆ.

ಸರಕಾರದ ಸಹಕಾರ

ನೇಪಾ ನಗರದ ಈ ಕಾರ್ಖಾನೆಯು ಇತಿಹಾಸವು ೧೯೪೭ನೇ ಇಸವಿಯಷ್ಟು ಹಿಂದೆ ಹೋಗುತ್ತದೆ. ಆಗ ರಾಜ್ಯ ಸರಕಾರವು ಶ್ರೀ. ಪಿ. ಎಸ್. ರಾಯರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಕಮಾಡಿ ರಾಜ್ಯದಲ್ಲಿ ಔದ್ಯೋಗಿಕ ಅಭಿವೃದ್ಧಿಗೆ ಇರುವ ಅವಕಾಶಗಳನ್ನು ನಿರ್ಧರಿಸಲು ಪ್ರಯತ್ನಿಸಿತು. ಈ ಸಮಿತಿಯು ಮರುವರ್ಷ ಒಪ್ಪಿಸಿದ ವರದಿಯ ಪರಿಣಾಮವಾಗಿ ನೇಪಾ ನಗರದ ಕಾಗದ ತಯಾರಿಸುವ ಕಾರ್ಖಾನೆಯ ನಿರ್ಮಾಣ ಕಾರ್ಯದಲ್ಲಿ ಸರಕಾರ ಆಸಕ್ತಿ ವಹಿಸಿತು.

ಈ ಯೋಜನೆಯು ಪೂರ್ಣಗೊಂಡಾಗ ಸುಮಾರು ೬ ಕೋಟಿ ರೂಪಾಯಿಗಳ ವೆಚ್ಚ ಬರಬಹುದೆಂದು ಅಂದಾಜು ಅದಷ್ಟು ಮಟ್ಟಿಗೆ ವೆಚ್ಚವನ್ನು ಕಡಿಮೆ ಮಾಡಬೇಕೆಂದು ಪ್ರಯತ್ನಗಳು ನಡೆಯುತ್ತಿದ್ದು, ಇದರ ಪರಿಣಾಮವಾಗಿ ಯೋಜನೆ ಐದೂವರೆ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಮುಗಿದರೂ ಮುಗಿದೀತು. ೧೯೪೮ನೇ ಇಸವಿಯ ದಶಂಬರ ಮಾಸದಲ್ಲಿ ಮಧ್ಯ ಪ್ರದೇಶದ ಮುಖ್ಯ ಮಂತ್ರಿ ಪಂಡಿತ ರವಿಶಂಕರ ಶುಕ್ಲರು ನೇಪಾ ಕಾರಖಾನೆಯ ಶಂಕುಸ್ಥಾಪನಾ ಕಾರ್ಯವನ್ನು ನೆರವೇರಿಸುತ್ತಾ ಸರಕಾರದವರು ಮಾರಲ್ಪಡದೆ ಉಳಿದ ಎಲ್ಲ ಪಾಲುಗಳನ್ನೂ ಕೊಂಡುಕೊಳ್ಳುವುದಾಗಿ ಹೇಳಿದರು. ಇದರಿಂದ ರಾಜ್ಯ ಸರಕಾರವು ೪೭೦ ಲಕ್ಷ ರೂಪಾಯಿಗಳ ಬಂಡವಾಳವನ್ನು ಒದಗಿಸಿದಂತಾಯಿತು. ಈ ವರ್ಷದ ಮುಂಗಡ ಪತ್ರದಲ್ಲಿ ೬೮೭೦೦೦೦ ರೂಪಾಯಿಗಳನ್ನೂ ಮುಂದಿನ ವರ್ಷ ೮೭೭೦೦೦೦ ರೂಪಾಯಿಗಳನ್ನೂ ಸಾಲವಾಗಿ ಕೊಡಲಿದೆಯೆಂದೂ ತಿಳಿಯುತ್ತದೆ. ಕಳೆದವರ್ಷದವರೆಗೆ ಸರಕಾರವು ಈ ಕಾರ್ಖಾನೆಗೆ ೩೦೧೩೦೦೦೦ ರೂಪಾಯಿಗಳನ್ನು ಒದಗಿಸಿದೆ.

ನೇಪಾ ಕಾರಖಾನೆಗೋಸ್ಕರ ತಾಪಿ ನದಿಯ ಮೇಲೆ ೧೫ ಅಡಿ ಎತ್ತರದ ಅಣೆಕಟ್ಟನ್ನು ನಿರ್ಮಿಸಿರುವರು. ಇದು ೮೦ ಕೋಟಿ ಗೆಲನುಗಳಷ್ಟು ನೀರನ್ನು ಸಂಗ್ರಹಿಸುತ್ತದೆ. ಕಾರಖಾನೆಗೋಸ್ಕರ ೧೭೦೦೦ ಕಿಲೋವಾಟುಗಳಷ್ಟು ವಿದ್ಯುಚ್ಛಕ್ತಿಯನ್ನು ಪೂರೈಸುವ ವಿದ್ಯುದುತ್ಪಾದನಾ ಕೇಂದ್ರವನ್ನು ಸರಕಾರದವರು ನಿರ್ಮಿಸಿರುವರು ನೇಪಾ ನಗರದಿಂದ ಎರಡು ಮೈಲುಗಳ ಅಂತರದಲ್ಲಿ ಇನ್ನೂರು ಎಕ್ರೆ ಸ್ಥಳದಲ್ಲಿ ಕಾಗದ ತಯಾರಿಗೆ ಯೋಗ್ಯವಾದ ಸಸ್ಯಗಳನ್ನು ಬೆಳೆಸುವ ವ್ಯವಸ್ಥೆಯನ್ನು ಕೈಗೊಂಡಿದ್ದು, ಇಲ್ಲಿ ಪೋಷಿಸಲಾದ ಸಸಿಗಳು ಕಾಲಾಂತರದಲ್ಲಿ ಐವತ್ತು ವರ್ಷಗಳ ವರೆಗೆ ಕಾರಖಾನೆಗೆ ಕಚ್ಚಾ ಸಾಮಗ್ರಿಯನ್ನು ಒದಗಿಸುತ್ತವೆ.

ಕಚ್ಚಾ ಸಾಮಗ್ರಿಯ ಪೂರೈಕೆ

ಕಾಗದವು ಮಿದು ಮರ ಮತ್ತು ಬಿದಿರುಗಳಿಂದ ತಯಾರಿಸಲ್ಪಡುತ್ತದೆ. ಇವುಗಳನ್ನು ಗುದ್ದಿ ಪುಡಿಮಾಡಿ ಕೊಳೆಯಿಸಬೇಕಾಗುತ್ತದೆ ಐದು ಟನ್ನು ಮರ-ಬಿದಿರುಗಳಿಂದ ಮೂರು ಟನ್ನು ಸಾಮಾನ್ಯ ವಲ್ಪನ್ನು ಸಿದ್ಧಗೊಳಿಸಬಹುದು. ಇದರೊಂದಿಗೆ ರಾಸಾಯನಿಕ ಪರಿಣಾಮವನ್ನು ಹೊಂದಿದ ವಲ್ಪನ್ನು ಬೆರೆಸಬೇಕಾಗುವುದು. ಮಿದು ಮರ-ಬಿದಿರುಗಳಿಗೆ ಕಾಸ್ಟಿಕ್ ಸೋಡಾ ಮುಂತಾದ ಕ್ಷಾರಗಳನ್ನು ಬೆರಸಿ ಬೇಯಿಸುವುದರಿಂದ ಐದು ಟನ್ನು ಕಚ್ಚಾ ಸಾಮಗ್ರಿಯಿಂದ ಎರಡು ಟನ್ನುಗಳಷ್ಟು ರಾಸಾಯನಿಕ ವಲ್ಪು ದೊರೆಯುತ್ತದೆ. ಇವೆರಡನ್ನು ಬೇರೆ ಬೇರೆ ಪ್ರಮಾಣದಲ್ಲಿ ಮಿಶ್ರಮಾಡಿ ಭಿನ್ನ ಭಿನ್ನ ಯೋಗ್ಯತೆಯ ಕಾಗದವನ್ನು ಸಿದ್ಧಗೊಳಿಸುವರು.

ಮಧ್ಯ ಪ್ರದೇಶದಲ್ಲಿ ಹರಿಯುವ ತಾಪೀ ನದಿಯ ದಂಡೆಯ ಮೇಲೆ ಮಿದು ಜಾತಿ ಮರಗಳು ಧಾರಳವಾಗಿ ಸಿಗುತ್ತವೆ. ಅಲ್ಲದೆ

(೭ನೇ ಪುಟ ನೋಡಿರಿ)

IN THE HIGH COURT OF JUDICATURE AT MADRAS.

Ordinary Original Civil Jurisdiction

O. P. No. 95 of 1952.

In the matter of the Indian Companies Act and in the matter of Homes & Estates Ltd.

Homes and Estates Limited. . Petitioner.

Notice is hereby given that a petition was filed in the High Court of Judicature at Madras on the 1st day of February 1952 for confirming a resolution reducing the capital of the above Company from Rs. 100,000/- to Rs. 50,000/- and is directed to be heard before the Honourable Mr. Justice K. Ramaswami Gounder in Chambers on the 5th day of April 1954.

(Sd.) **Chetty & Shetty,**
Advocates for the Company.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ: ೧೯೩೫.] [ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ಭಾರತದ ಸುಭದ್ರ ವಿಮಾ ಕಂಪೆನಿಗಳಲ್ಲಿ "ಕೆನರಾ ಮ್ಯೂಚುವಲ್" ಎಣೆ ಇಲ್ಲದ ವಿಶಿಷ್ಟ ಸ್ಥಾನವನ್ನು ಗಳಿಸಿದೆ. ಇದು ಮ್ಯೂಚುವಲ್ ಕಂಪೆನಿಯಾಗಿ ಘಟಿತವಾಗಿದ್ದು, ಪಾಲುದಾರ ಭಂಡವಳಿಗರಿಲ್ಲದಿರುವುದರಿಂದ, ಕಂಪೆನಿಯ ಸರ್ವ ಲಾಭವನ್ನೂ ವಿಮೆ ಹೊಂದಿದ ಪಾಲಿಸಿದಾರರೇ ತಮ್ಮಲ್ಲಿ ಪಂಚಿಕೊಳ್ಳುವರು. ಪ್ರಾರಂಭಿಕ ಬಿಗುಮಾನದ ಕಳವಳಿಯ ಮೇಲೆ ನಡೆಸಿದ ತನ್ನೆಲ್ಲಾ ವಿಮಾ ಗಣನೆಗಳಲ್ಲಿ ಉಳಿತಾಯವನ್ನು ತೋರಿಸಿದುದು ಮಾತ್ರವಲ್ಲದೆ, ಸ್ಥಾಪಿತವಾದಂದಿನಿಂದಲೂ ಬಿಡದೆ ಬೋನಸು ಹಂಚಿದೆ. ಪಾಲಿಸಿದಾರರ ಹಿತವೃದ್ಧಿಯೇ ಧ್ಯೇಯವಾಗುಳ್ಳ ಈ ಪ್ರಗತಿಶೀಲ ಮ್ಯೂಚುವಲ್ ಕಂಪೆನಿಯಲ್ಲಿ ಇಂದೇ ವಿಮೆ ಇಳಿಸಿ, ನಿಮ್ಮ ಕುಟುಂಬದ ಭದ್ರತೆಯನ್ನು ಕಾಯ್ದುಕೊಳ್ಳಿರಿ.

THE CANARA MUTUAL ASSURANCE COMPANY, LTD.

Estd: 1935] [Head Office: U D I P I, S. INDIA.

ವಿಜ್ಞಾನಿಗಳನ್ನು ಅಚ್ಚರಿಗೊಳಿಸಿದ ಸ್ಫೋಟ

ಪರಮಾಣು ಬೂದಿಯಿಂದ ಸಾವು ನೋವಿನ ಗಂಡಾಂತರ

ತನ್ನ ಹೆಸರಿನಿಂದ ಅದೃಷ್ಟ ಶಾಲಿಯೆಂದು ಸೂಚಿಸುವ "ಫುಕುರ್ಯು ಮಾರು" ಎಂಬ ಜಪಾನೀ ಬೆಸ್ತರ ದೋಣಿಯು ಈಗ ಪ್ರಪಂಚದಲ್ಲಿಯೇ ಅನದೃಷ್ಟವೆಂದು ಪರಿಗಣಿಸಲ್ಪಟ್ಟಿದೆ. ಅದು ಇದೇ ಮಾರ್ಚಿ ತಿಂಗಳ ಮೊದಲನೇ ದಿನ ಜಪಾನಿನಿಂದ ಐನೂರಕ್ಕೂ ಹೆಚ್ಚು ಮೈಲುಗಳ ದೂರದಲ್ಲಿ ಬಿಕಿನಿ ದ್ವೀಪದಿಂದ ೭೫ ಮೈಲುಗಳ ಅಂತರದಲ್ಲಿ ಮೀನು ಹಿಡಿಯಲೆಂದು ನಿಂತಿದ್ದಾಗ "ಮೃತ್ಯು ಭಸ್ಮ"ದಿಂದ ಆವೃತವಾಯಿತು. ಎರಡು ವಾರಗಳ ಬಳಿಕ ಈ ದೋಣಿ ಜಪಾನಿನ ತೀರ ಸೇರಿದಾಗ ಅದರಲ್ಲಿದ್ದ ಬೆಸ್ತರು ಜಗತ್ತಿನ ವಿಜ್ಞಾನಿಗಳ ಮುಂದೆ ತೀರಾ ಹೊಸತಾದ, ಅದ್ಭುತವಾದ, ಆಶ್ಚರ್ಯಜನಕವಾದ ಸಮಸ್ಯೆಯೊಂದನ್ನು ಮಂಡಿಸಿದರು. ಇದರಿಂದ ಜಾಗತಿಕ ಶಾಂತಿಗಾಗಿ ಕಾತರಿಸುವ ಜನ ಸಮುದಾಯವು ಪರಮಾಣು ಧೂಳಿನಿಂದ ಉಂಟಾಗುವ ಅಪಾಯದ ಗಂಡಾಂತರವನ್ನು ಕಂಡು ದಿಗ್ಭ್ರಮೆ ಹೊಂದಿ, ವಿಜ್ಞಾನವನ್ನು ಶಪಿಸುವಂತಾಯಿತು.

ಅನಿರೀಕ್ಷಿತ ಪ್ರತಿಕ್ರಿಯೆ

ಶಾಂತ ಸಾಗರದ ಮಾರ್ಶಲ್ ದ್ವೀಪ ಸಮುದಾಯಗಳನ್ನು ಅಮೇರಿಕದವರು ಅಣುಶಕ್ತಿಯ ಅಸ್ತ್ರಶಸ್ತ್ರಗಳ ಪ್ರಯೋಗ ಭೂಮಿಯನ್ನಾಗಿ ಉಪಯೋಗಿಸುತ್ತಿದ್ದಾರೆ. ಈ ವಲಯದಲ್ಲಿ ಹಡಗುಗಳಾಗಲೀ ದೋಣಿಗಳಾಗಲೀ ಚಲಿಸದಂತೆ ಅವರು ಎಚ್ಚರಿಕೆಯನ್ನು ಕೊಟ್ಟು, ಪರಮಾಣುಶಕ್ತಿಯ ದುಷ್ಪರಿಣಾಮಕ್ಕೆ ಜನರು ಗುರಿಯಾಗಬಾರದೆಂದು ಮುಂಜಾಗ್ರತೆ ವಹಿಸಿದ್ದಾರೆ. ೧೯೫೨ನೇ ಇಸವಿಯ ನವೆಂಬರ ೧ನೇ ದಿನಾಂಕ ಇಲ್ಲಿ ಸರ್ವಪ್ರಥಮವಾಗಿ ಅಮೇರಿಕದವರು ಜಲಜನಕ ಬಾಂಬನ್ನು ಸ್ಫೋಟಗೊಳಿಸಿ, ಪ್ರಾಯೋಗಿಕ ಪರೀಕ್ಷೆಯನ್ನು ನಡೆಸಿದರು. ಮೊನ್ನೆ ಮಾರ್ಚಿ ಒಂದನೇ ದಿನಾಂಕ ಮೊದಲಿನದರ ಹಲವು ಪಾಲು ಶಕ್ತಿಯುಳ್ಳ ಜಲಜನಕ ಬಾಂಬನ್ನು ಸ್ಫೋ[illegible] ಈ ಬಾಂಬಿನ ಶಕ್ತಿಯು ವಿಜ್ಞಾನಿಗಳ ಊಹೆಯನ್ನೂ ಧಿಕ್ಕರಿಸಿ, ಮಿಗಿಲಾಯಿತು. ಆದಕಾರಣ ಮುಂಜಾಗ್ರತೆಯ ಕ್ರಮಗಳನ್ನೂ ಮೀರಿ, ಬಾಂಬಿನ ಸ್ಫೋಟವು ಅನಾಹುತವನ್ನು ಉಂಟುಮಾಡಿತು. ಶಾಂತ ಸಾಗರದ ಮಧ್ಯದಲ್ಲಿರುವ ಮಾರ್ಶಲ್ ದ್ವೀಪ ಸಮುದಾಯದ ಅಕ್ಕಪಕ್ಕಗಳಲ್ಲಿದ್ದ ೨೮ ಮಂದಿ ಅಮೇರಿಕನ್ನರೂ ೨೩೬ ಮಂದಿ ಇತರ ನಿವಾಸಿಕರೂ ಪರಮಾಣುಶಕ್ತಿಯ ಪ್ರಭಾವದಿಂದ ಅನಿರೀಕ್ಷಿತವಾಗಿಯೇ ಪೀಡಿತರಾದರು. "ಫುಕುರ್ಯುಮಾರು" ಎಂಬ ಜಪಾನೀ ಬೆಸ್ತರ ದೋಣಿಯು ಪರಮಾಣು ಧೂಳಿನಿಂದ ಆವರಿಸಲ್ಪಟ್ಟದ್ದಲ್ಲದೆ, ಇದರಲ್ಲಿದ್ದ ೨೩ ಮಂದಿ ಬೆಸ್ತರ ಸ್ಥಿತಿ ತೀರ ಶೋಚನೀಯವಾಗಿ ಪರಿಣಮಿಸಿದೆ. ಬೇರೆ ಎಂಟು ಜಪಾನೀ ದೋಣಿಗಳು ಕೂಡ ಪರಮಾಣು ಶಕ್ತಿಯ ಪ್ರಭಾವಕ್ಕೆ ಗುರಿಯಾದವೆಂದು ವರದಿಗಳು ಹೇಳುತ್ತವೆ. ಜಲಜನಕ ಬಾಂಬಿನ ಈ ಸ್ಫೋಟದಿಂದ ಅಮೇರಿಕದ ಎಣ್ಣೆಯ ಹಡಗವೊಂದರ ಮೇಲೂ ಪರಮಾಣು ಬೂದಿಯು ಬಿದ್ದಿದ್ದು ಈ ಹಡಗವನ್ನು ಪರ್ಲ ಹಾರ್ಬರದಲ್ಲಿ ತಡೆಹಿಡಿದು, ಅದರಲ್ಲಿದ್ದ ೯೨ ಮಂದಿ ನಾವಿಕರ ವೈದ್ಯಕೀಯ ಪರೀಕ್ಷೆ ನಡೆಸಲಾಯಿತು. ಅಧ್ಯಕ್ಷ ಐಸೆನ ಹಾವರರ ಮಾತಿನಲ್ಲಿಯೇ ಹೇಳುವುದಾದರೆ "ಈ ಸಲ ಶಾಂತ ಸಾಗರದಲ್ಲಿ ಜಲಜನಕ ಬಾಂಬಿನ ಪ್ರಯೋಗ ಮಾಡಿದಾಗ ವಿಜ್ಞಾನಿಗಳು ನಿರೀಕ್ಷಿಸದ ಹಾಗೂ ಅವರು ಆಶ್ಚರ್ಯ ಪಡುವ ಘಟನೆ ನಡೆದಿರಬೇಕು."

ಭೀಕರ ಪರಿಣಾಮ

ಅಮೇರಿಕದ ವಿಜ್ಞಾನಿಗಳು ಎಷ್ಟು ಮುಂಜಾಗ್ರತೆಯನ್ನು ವಹಿಸದೆ ಇನ್ನು ಮುಂದೆ ಜಲಜನಕ ಬಾಂಬಿನ ಪ್ರಯೋಗವನ್ನು ಮಾಡಬಾರದಾಗಿ ಈಗ ನಿರ್ಧರಿಸಿದ್ದರೂ, ಆದ ಅನಾಹುತಕ್ಕೋಸ್ಕರ ಲೋಕದಾದ್ಯಂತ ವ್ಯಕ್ತಗೊಂಡ ಕಳವಳ ಮತ್ತು ವಿಮರ್ಶೆಯು ಅಣು ಶಸ್ತ್ರಾಸ್ತ್ರಗಳ ನಿರ್ಬಂಧದ ಆವಶ್ಯಕತೆಯನ್ನು ಒತ್ತಿಯೊತ್ತಿ ಹೇಳುತ್ತವೆ. ಪರಮಾಣು ಧೂಳಿಯನ್ನು ಜಪಾನೀ ಜನರು "ಮೃತ್ಯು ಭಸ್ಮ" ಎಂಬ ಅನ್ವರ್ಥನಾಮದಿಂದ ಕರೆದಿದ್ದು, "ಫುಕುರ್ಯು ಮಾರು" ದೋಣಿಯಲ್ಲಿದ್ದ ಅದೃಷ್ಟ ಹೀನ ಬೆಸ್ತರ ಅನುಭವವು ಹೃದಯ ವಿದ್ರಾವಕವಾಗಿರುತ್ತದೆ. ಸುಪ್ರಸಿದ್ಧ "ಲೈಫ್" ಪತ್ರಿಕೆಯವರು ಈ ಅನುಭವವನ್ನು ಪ್ರಕಟಪಡಿಸಿದ್ದು ಮಸೂದಾ ಎಂಬ ಬೆಸ್ತನು ಸ್ಫೋಟದ ವಿವರವನ್ನು ಹೀಗೆ ಕೊಟ್ಟಿದ್ದಾನೆ—"ಬಿಕಿನಿ ದ್ವೀಪದಲ್ಲಿ ಮಾರ್ಚಿ ತಿಂಗಳ ಒಂದನೇ ದಿನದಂದು ಸ್ಫೋಟಗೊಂಡ ಜಲಜನಕ ಬಾಂಬು ಸೂರ್ಯನಂತೆ ಪ್ರಕಾಶಮಾನವಾಗಿ ಉರಿಯಿತು. ಆ ಜ್ಯೋತಿಯು ಕೆಲವು ನಿಮಿಷಗಳ ಕಾಲ ತೋರಿಬಂತು. ಆ ಮೇಲೆ ಅದರ ಬೆಳಕು ಕಡಿಮೆಯಾಗುತ್ತಾ ಹೋಗಿ ಉರಿಯುವ ಕಬ್ಬಿಣದ ಕೆಂಪು ತುಂಡಿನಂತೆ ಅದು ಕಾಣಿಸಿತು. ಎರಡು ತಾಸುಗಳ ಮೇಲೆ ನಮ್ಮ ದೋಣಿಯ ಸುತ್ತುಮುತ್ತಲೂ ಬಿಳಿ ಬೂದಿಯು ಸುರಿಯ ತೊಡಗಿತು. ನಾನು ಮೀಯಲೆಂದು ದೋಣಿಯ ಇಂಜಿನ ಕೋಣೆಗೆ ಹೋದೆನು. ಆಗ ಎಂದಿಗಿಂತಲೂ ಅಧಿಕ ಸೆಕೆಯಾದಂತೆ ಭಾಸವಾಯಿತು. ನನ್ನ ಮೈಗೆ ಬೆಂಕಿತಾಗಿದ ಹಾಗೆ ಅನಿಸಿತು. ನನ್ನ ಉಳಿದ ಸಂಗಾತಿಗಳೂ ಇದನ್ನೇ ಹೇಳಿದರು. ನಮ್ಮ ಮೋರೆ ಕೂಡ ಉರಿಯತೊಡಗಿತು. ಕೆಲವು ನಿಮಿಷಗಳಲ್ಲೇ ಅದು ಸೀಸದ ಬಣ್ಣ ತಾಳಿದುದನ್ನು ಕಂಡು ಏನೋ ಅನಾಹುತ ಸಂಭವಿಸಿತೆಂದು ಭಾವಿಸಿದೆವು. ಸ್ವಲ್ಪ ಹೊತ್ತಿನ ಮೇಲೆ ಮುಖವೂ ಕೈಗಳೂ ಊದಿಕೊಂಡವು. ತುರಿಕೆಯೂ ಆರಂಭವಾಯಿತು. ನಮ್ಮ ಮೈಮೇಲೆ ಬಿದ್ದ ಬೂದಿಯನ್ನು ನಾವು ತೊಳೆದುಕೊಳ್ಳಲು ಪ್ರಯತ್ನಿಸಿದೆವು. ಆದರೆ ಮೀನು ಬಲೆಯನ್ನು ತೊಳೆಯಬೇಕೆಂದು ತೋರಲಿಲ್ಲ. ಇದರಿಂದ ಕೊನೆ ಕೊನೆಗೆ ತುರಿಕೆ ಅಸಹನೀಯವಾಗಿ ಪರಿಣಮಿಸಿತು. ಗುಳ್ಳೆಗಳೇ ಎದ್ದು ಒಡೆಯತೊಡಗಿದವು. ಈ ನೋವನ್ನು ಸಹಿಸುವುದು ಯಾರು?' ಎಂದವನು ಉದ್ಗರಿಸಿದನು. ಜಪಾನೀ ವಿಜ್ಞಾನಿಗಳು ಈ ಬೆಸ್ತರನ್ನು ಕೂಡಲೇ ವೈಜ್ಞಾನಿಕ ಹಾಗು ವೈದ್ಯಕೀಯ ಪರೀಕ್ಷೆಗೂ ಉಪಚಾರಕ್ಕೂ ಗುರಿಮಾಡಿದರು. ಸುಟ್ಟ ಗಾಯಗಳನ್ನು ಶೀಘ್ರದಲ್ಲಿಯೇ ಗುಣಪಡಿಸಬಲ್ಲ ಸಾಮರ್ಥ್ಯವೊಂದಿದೆಯೆಂದು ಹೇಳಲಾದ "ಮೆರಕಾಲ್ ಎಂಬ ಅಮೇರಿಕದ ಔಷಧವು ಸಾನ್ ಫ್ರಾನ್ಸಿಸ್ಕೋದಿಂದ ಒದಗಿಸಲ್ಪಟ್ಟಿತು. ಆದರೆ ಈ ಉಪಚಾರಗಳಿಂದ ಪ್ರಯೋಜನ ಕಾಣಿಸುವುದಿಲ್ಲ. ರಕ್ತವನ್ನು ಉತ್ಪಾದಿಸುವ ಕೆಲಸ ಕೆಟ್ಟು ಹೋಗಿದೆಯೆಂದೂ ರಕ್ತದಲ್ಲಿರುವ ಬಿಳಿ ಕಣಗಳು ಸಾಯು ಹತ್ತಿವೆಯೆಂದೂ ವೈದ್ಯರ ಅಭಿಪ್ರಾಯ.

"ಮೃತ್ಯು ಭಸ್ಮ"ದ ಸಾಮರ್ಥ್ಯ

ಜಲಜನಕ ಬಾಂಬಿನ ಸ್ಫೋಟದ ಪರಿಣಾಮ ಇಷ್ಟು ಭೀಕರವಾದೀತೆಂದು ಯಾರೂ ಊಹಿಸಿರಲಿಲ್ಲ. ನಿಜ ಜಪಾನೀಯರು ಈಗ ಪ್ರಾಣಹಾನಿ ಮಾಡುವ ಈ ಭೀಷಣ ವಿನಾಶಿಕೆಯಿಂದ ತತ್ತರಿಸಿ ಹೋಗಿದ್ದಾರೆ. ಪರಮಾಣು ಬೂದಿಯ ಪ್ರಭಾವದಿಂದ ಶಾಂತ ಸಾಗರದಲ್ಲಿ ಮೀನು ಹಿಡಿಯುವುದೂ ಕಷ್ಟ ಸಾಧ್ಯವಾಗಿ ಪರಿಣಮಿಸಿದೆ. "ಫುಕುರ್ಯು ಮಾರು" ದೋಣಿಯಲ್ಲಿ ಬಂದ ಮೀನನ್ನು ಪೇಟೆಯಲ್ಲಿ ಮಾರದಂತೆ ನಿರ್ಬಂಧ ಹೇರಲಾಯಿತು. ಈ ಮೀನುಗಳ ಸಮೀಪ ಒಂದು ತಾಸಿನವರೆಗೆ ಯಾರಾದರೂ ನಿಂತರೆ ಸಾಕು, ಅವರು ಸತ್ತೇ ಹೋಗುವರು. ಇದರಿಂದ ಜಪಾನೀಯರು ಮುಖ್ಯ ಆಹಾರವೆನಿಸಿದ ಮೀನನ್ನು ಕೊಳ್ಳಲು ಹಿಂಜರಿಯ ತೊಡಗಿರುವರು. ಅಮೇರಿಕದ ವಿಜ್ಞಾನಿಗಳು ಮಾರ್ಶಲ್ ದ್ವೀಪ ಸಮುದಾಯಕ್ಕೆ ತಾಗಿರುವ ಸಮುದ್ರ ಪ್ರದೇಶದಲ್ಲಿ ಮೀನು ಹಿಡಿಯುವುದು ಅಪಾಯಕರವೆಂದು ಹೇಳಿದ್ದಾರೆ. ಕಾರಣ ಪರಮಾಣು ಧೂಳಿಯ ಪ್ರಭಾವವು ಸಮುದ್ರ ಪ್ರವಾಹದೊಂದಿಗೆ ಸೇರಿ ವ್ಯಾಪಿಸಬಹುದೆಂದು ಜಪಾನೀಯರ ಹೆದರಿಕೆ. ಹಾಗೆ ಭಯಪಡುವುದು ಅನಗತ್ಯವೆಂದೂ ಪರಮಾಣು ಶಕ್ತಿಯು ನೀರಿನಲ್ಲಿ ಸೇರಿದರೂ ಕೆಲವೇ ಮೈಲುಗಳ ಅಂತರದಲ್ಲಿ ನಷ್ಟ ಹೊಂದುತ್ತದೆಂದೂ ಐನೂರು ಮೈಲು ದೂರ ಸರಿಯುವುದರೊಳಗೆ ಅದರ ಪ್ರಭಾವ ಏನೇನೂ ಉಳಿಯಲಾರದೆಂದೂ ಅಮೇರಿಕದ ವಿಜ್ಞಾನಿಗಳ ಅಭಿಪ್ರಾಯ. ಇದೇನಿದ್ದರೂ—ದಿಗಿಲು ಹಿಡಿದ ಜನರಿಗೆ ಇಷ್ಟರಿಂದ ಸಮಾಧಾನವಾಗಲಾರದು. ಈ ಬಾರಿಯ ಸ್ಫೋಟವು ೧೯೪೫ನೇ ಇಸವಿಯಲ್ಲಿ ಹಿರೋಶಿಮಾ ಮತ್ತು ನಾಗಸಾಕಿ ನಗರಗಳ ಮೇಲೆ ಪ್ರಯೋಗಿಸಿ, ೬೦ ಸಾವಿರ ಮಂದಿಯ ಭೀಕರ ಮರಣಕ್ಕೆ ಮತ್ತು ಲಕ್ಷಾಂತರ ಜನರ ನೋವು ಬೇನೆಗೆ ಕಾರಣವಾದ ಅಣು ಬಾಂಬಿಗಿಂತ ೬೦೦—೭೦೦ ಪಾಲು ಅಧಿಕ ಶಕ್ತಿಯುಳ್ಳದಾಗಿತ್ತೆಂದು ಕಂಡುಬರುತ್ತದೆ. ೧೨೫ ಮೈಲುಗಳ ವರೆಗೆ ಭೀಕರ ತರಂಗವನ್ನು ಈ ಸ್ಫೋಟ ಹುಟ್ಟಿಸಿದೆ. ಎಲ್ಲಕ್ಕಿಂತ ಹೆಚ್ಚಾಗಿ "ಮೃತ್ಯು ಭಸ್ಮ"ದ ಅದ್ಭುತ ಆವಿಷ್ಕಾರವನ್ನು ಈ ಸ್ಫೋಟ ಮಾಡಿರುತ್ತದೆ ಜಪಾನೀ ವಜ್ಞರ ಅಭಿ

(೯ನೇ ಪುಟ ನೋಡಿರಿ)

ಅಖಿಲ ಭಾರತ

ಮಲೆನಾಡು ಸಮ್ಮೇಲನ ಮತ್ತು ವಸ್ತು ಪ್ರದರ್ಶನ

ಶಿವಪ್ಪನಾಯ್ಕ ನಗರ, ನೆಹರು ರಸ್ತೆ, ಶಿವಮೊಗ್ಗ. ● ಮಹಾತ್ಮ ಗಾಂಧಿ ಪಾರ್ಕ್, ಶಿವಮೊಗ್ಗ.

*** ***

ಏಪ್ರಿಲ್ **6, 7, 8** ತಾರೀಖುಗಳಲ್ಲಿ ಸಮ್ಮೇಳನ ನಡೆಯುತ್ತದೆ

ಏಪ್ರಿಲ್ 5ರ ಬೆಳಿಗ್ಗೆ: ವಿಷಯ ನಿಯಾಮಕ ಸಮಿತಿಯ ಸಭೆಯನ್ನೇರ್ಪಡಿಸಿದೆ.
,, ಸಂಜೆ: ಸಮ್ಮೇಳನದ ಅಧ್ಯಕ್ಷರ ಮೆರವಣಿಗೆಯನ್ನೇರ್ಪಡಿಸಿದೆ.

ವಸ್ತು ಪ್ರದರ್ಶನ ಮೂರು ವಾರ ಕಾಲ ನಡೆಯುತ್ತದೆ

6ನೇ ತಾರೀಖು ಬೆಳಿಗ್ಗೆ: ವಸ್ತು ಪ್ರದರ್ಶನ ಆರಂಭೋತ್ಸವ.
,, ಸಂಜೆ: ಸಮ್ಮೇಳನದ ಆರಂಭೋತ್ಸವ

ಪ್ರತಿನಿಧಿಗಳೂ ಮತ್ತು ಸ್ವಾಗತ ಸಮಿತಿ ಸದಸ್ಯರೂ ಆಹ್ವಾನಿತರೂ ಸಹ ಇದನ್ನೇ ಆಹ್ವಾನವೆಂದು ಭಾವಿಸಿ ಸರ್ವರೂ ದಯಮಾಡಿಸಬೇಕಾಗಿ ಪ್ರಾರ್ಥನೆ.

ಎ. ಆರ್. ಬದರೀ ನಾರಾಯಣ್,
ಅಧ್ಯಕ್ಷ: ಅಖಿಲ ಮಲೆನಾಡ ಸ್ವಾಗತ ಸಮಿತಿ.

ಉಡುಪಿ ಡಿಸ್ಟ್ರಿಕ್ಟ ಮುನ್ಸಿಫ ಕೋರ್ಟಿನಲ್ಲಿ
ಸ್ಮಾಲ ನಂಬ್ರ 22/1951.

ದಿ. ಕಾಂಗ್ರೆಸ ನಾಯಕ್ ಬ್ಯಾಂಕ್ ಲಿಮಿಟೆಡ್-ಉಡುಪಿ ಬ್ರಾಂಚ್-ಇದರ ಏಜೆಂಟ ಕೆ. ಗೋಪಾಲಕೃಷ್ಣ ಭಟ್ಟ —ವಾದಿ

ಮತ್ತು

ಕೆ. ವಿಟ್ಠಲ ಶೆಟ್ಟಿ-ದೇಜಪ್ಪ ಶೆಟ್ಟರ ಮಗ— C/o ನ್ಯೂ ಕರ್ನಾಟಕ ಡೈನಿಕ ಆಕ್ಶನ್ ಚಿಟ್ಟಿ ಫಂಡ್; ಬಿಗ್ ಬಜಾರ, ಶಿವಮೊಗ್ಗ, ಮೈಸೂರು —ಪ್ರತಿವಾದಿ

ಸದ್ರಿ ಪ್ರತಿವಾದಿಗೆ:—

ನೀವು ವಾದಿ ಬ್ಯಾಂಕಿಗೆ ತಾ 22-2-51ರಲ್ಲಿ ಬರಕೊಟ್ಟ ಪಿ. ನೋ. ನೋಟಿನ ಬಾಬ್ತು, ಸದ್ರಿ ನೋಟಿನಲ್ಲಿ ಕಾಣ್ಸಿದ ಸಿಖ್ತಗಳನ್ನು ನಿಮಗೆ ನೋಟೀಸು ಕೊಟ್ಟು ತಾ. 3—7—53ರಲ್ಲಿ ಬಹಿರಂಗವಾಗಿ ಹರಾಜು ಮಾಡಿ ಹುಟ್ಟಬಂದ ಹಣವನ್ನು ವಜಾ ಮಾಡಿ, ಮಿಕ್ಕ ಹಣವನ್ನು ವಸೂಲು ಮಾಡಿಕೊಳ್ಳುವರೆ ನಿಮ್ಮ ಮೇಲೆ ದಾವೆ ಮಾಡಿದ ಮೊಕದ್ದಮೆ ತಾ 26-5-54ಕ್ಕೆ ಅಪ್ಪೆರು ತನ್ನಿಗೆ ಇಟ್ಟದ್ದರಿಂದಲೂ, ಆ ದಿನ ಹಗಲು ಘಂಟೆ 10—11ಕ್ಕೆ ಹಾಜರಾಗಿ ನಿಮ್ಮ ಆಕ್ಷೇಪಗಳಿದ್ದರೆ ಅವುಗಳನ್ನು ಹಾಜರು ಮಾಡಬಹುದಾಗಿಯೂ, ತಪ್ಪಿದ್ರೆ ನಿಮ್ಮನ್ನು ಸದ್ರಿ ದಿನ ಏಕ್ತರ್ಫಾ ಮಾಡಿ ಸದ್ರಿ ದಾವೆಯನ್ನು ತೀರ್ಮಾನ ಮಾಡಲಾದೀತೆಂತಲೂ ಈ ಮೂಲಕ ತಿಳಿಸಲಾಗುತ್ತದೆ.

(By order of court)

K. Vittal Nayak.
Pleader for Plff.

Udipi, 26—3—54.

ನಮ್ಮ ಸಂರಕ್ಷಣ ವ್ಯವಸ್ಥೆಯ ಅಚ್ಚುಕಟ್ಟು

ಮಹತ್ವದ ವಿಷಯಗಳನ್ನು ಕುರಿತು ಪ್ರಧಾನಮಂತ್ರಿಗಳಿಂದ ಸ್ಪಷ್ಟೀಕರಣ

ಕಳೆದ ವಾರ ಭಾರತ ಪಾರ್ಲಿಮೆಂಟಿನಲ್ಲಿ ಪ್ರಧಾನಿ ನೆಹರೂರವರು ನಮ್ಮ ಸಂರಕ್ಷಣಾ ವ್ಯವಸ್ಥೆ, ಸರಕಾರದ ವಿದೇಶ ಧೋರಣೆ ಮತ್ತು ವಸಾಹತುಗಳ ವಿಲೀನೀಕರಣದ ಕುರಿತು ಮಹತ್ವದ ಹೇಳಿಕೆಗಳನ್ನು ಕೊಟ್ಟರು. ಸುಮಾರು ೨೦೫ ಕೋಟಿ ರೂಪಾಯಿಗಳ ಸಂರಕ್ಷಣಾ ಕಾರ್ಯದ ಬೇಡಿಕೆಯ ಚರ್ಚೆಯು ನಡೆಯುತಿದ್ದಾಗ ಪ್ರಧಾನ ಮಂತ್ರಿಗಳೂ ಸಂರಕ್ಷಣಾ ಮಂತ್ರಿಗಳೂ ಆದ ಶ್ರೀ ನೆಹರೂರವರು "ನಮ್ಮ ದೇಶದ ಸೈನಿಕ ದಲಗಳನ್ನು ರಾಷ್ಟ್ರದ ಸಂರಕ್ಷಣೆಗಾಗಿ ಸಂಘಟಿಸಲಾಗುತ್ತಿದೆಯಲ್ಲದೆ ಆಕ್ರಮಣ ಅಥವಾ ಯುದ್ಧದ ಉದ್ದೇಶದಿಂದಲ್ಲ" ಎಂದು ಸಾರಿದರು.

ಸೈನಿಕರ ಕಾರ್ಯಕ್ಷಮತೆ

ನೆಹರೂರವರು ನಮ್ಮ ಸೈನಿಕರ ಕಾರ್ಯಕ್ಷಮತೆಯನ್ನೂ ದಕ್ಷತೆಯನ್ನೂ ಮುಕ್ತ ಕಂಠದಿಂದ ಪ್ರಶಂಸಿಸಿದರು. 'ಮೇಲಿನಿಂದ ಕೆಳಗಿನ ತನಕ ಉತ್ತಮ ಯೋಗ್ಯತೆಯ ಸೈನಿಕರಿದ್ದಾರೆಂದು ನನ್ನ ಅನುಭವದಿಂದ ಹೇಳಬಲ್ಲೆ. ಇವರ ಕಾರ್ಯನಿರ್ವಹಣಾ ಸಾಮರ್ಥ್ಯವು ಹೆಚ್ಚಿಕೊಂಡಿದೆಯಲ್ಲದೆ ಜನತೆಗೂ ಇವರಿಗೂ ನಡುವಿದ್ದ ಅಂತರ ಬಹಳಷ್ಟು ಕಡಿಮೆಯಾಗಿರುತ್ತದೆ." ಎಂದವರು ಹೇಳಿದರು. ಸಂರಕ್ಷಣಾ ಉದ್ದಿಮೆಗಳಲ್ಲಿ ಪ್ರಗತಿಯು ನಿಧಾನವಾಗಿ ಸಾಧಿಸಲ್ಪಡುತ್ತಿರುವುದಕ್ಕೆ ಅವರು ತೃಪ್ತಿಯನ್ನು ವ್ಯಕ್ತಗೊಳಿಸಿದರು. ಶಸ್ತ್ರಾಸ್ತ್ರಗಳ ತಯಾರಿಕೆಯು ಕಾರ್ಯ ಹೆಚ್ಚಿಕೊಂಡಿರುವುದರಿಂದಲೇ ನಮ್ಮ ಸೈನಿಕ ವೆಚ್ಚ ಅಧಿಕವಾಗಿ ಕಾಣುತ್ತಿದೆಯಲ್ಲದೆ, ಸೈನ್ಯ ವಿಸ್ತಾರದ ಕಾರ್ಯಕ್ರಮವನ್ನು ಸರಕಾರ ಇಟ್ಟುಕೊಂಡಿಲ್ಲವೆಂದು ನೆಹರೂ ತಿಳಿಸಿದರು.

ಅಣುಶಕ್ತಿಯ ಉಪಯೋಗ

ಅಣುಶಕ್ತಿಯನ್ನು ರಚನಾತ್ಮಕ ಕೆಲಸಗಳಿಗೋಸ್ಕರ ಬಳಸುವ ವಿಧಾನದಲ್ಲಿ ಅಮೂಲ್ಯ ಪ್ರಯೋಗಗಳನ್ನು ಭಾರತ ನಡೆಸತೊಡಗಿದೆಯೆಂದು ನೆಹರೂ ಪ್ರಕಟಪಡಿಸಿದರು. "ನಮ್ಮ ದೃಷ್ಟಿಯಲ್ಲಿ ಅಣುಬಾಂಬಿನ ತಯಾರಿಕೆಗೆ ಏನೇನೂ ಮಹತ್ವವಿಲ್ಲ" ಎಂದು ನೆಹರೂ ಸ್ಪಷ್ಟಪಡಿಸಿದರು. ಸ್ವಾವಲಂಬನೆಯ ಮಹತ್ವವನ್ನು ಸರಕಾರ ಮನಗಂಡಿದ್ದರೂ ಕೆಲವು ವ್ಯಾವಹಾರಿಕ ತೊಂದರೆಗಳು ಇವೆಯೆಂದು ನೆಹರೂ ಅಭಿಪ್ರಾಯಗೊಂಡರು. ಬ್ರಿಟಿಷ ಪರಂಪರೆಯಲ್ಲಿ ಕಟ್ಟಿದ ಭಾರತೀಯ ಸೈನ್ಯದ ಸಂಘಟನೆಯನ್ನು ಇನ್ನು ಮುಂದೆಯೂ ಅದೇ ರೀತಿಯಲ್ಲಿ ಯೋಜಿಸುವುದು ಅಪೇಕ್ಷಣೀಯವೆಂದೂ ಕೆಲವು ಸಮಯದವರೆಗಾದರೂ ಬ್ರಿಟಿಷ ಅಧಿಕಾರಿಗಳ ನೆರವನ್ನು ಪಡೆಯುತ್ತಿರುವುದು ಇಷ್ಟವೆಂದೂ ನೆಹರೂ ನುಡಿದರು.

ರೈಫಲ್ಲು ಪ್ರಯೋಗ

ಪ್ರಾದೇಶಿಕ ಸೈನ್ಯ ಮತ್ತಿತರ ದ್ವಿತೀಯ ವ್ಯೂಹಗಳ ರಚನೆಯ ಕುರಿತು ಸರಕಾರ ಸಾಕಷ್ಟು ಆಸಕ್ತಿಯಿಂದ ಕೆಲಸ ಮಾಡುತ್ತಿದೆಯಾಗಿ ಪ್ರಧಾನ ಮಂತ್ರಿಗಳು ಭರವಸೆನೀಡಿದರು. ಅಗತ್ಯಬಿದ್ದ ಸಂದರ್ಭದಲ್ಲಿ ತರಬೇತಿ ಹೊಂದಿದ ನಾಗರಿಕರು ಸೈನ್ಯದ ಹಿಂಗಡೆಯಲ್ಲಿ ನಿಂತು ಮಾಡಬೇಕಾದ ಕೆಲಸಗಳನ್ನು ನೆರವೇರಿಸುತ್ತಾ ಸಂಗ್ರಾಮಿಗಳಾದ ಸೈನಿಕರನ್ನು ಯುದ್ಧರಂಗದಲ್ಲಿ ಹೋರಾಟಕ್ಕೋಸ್ಕರ ಕಳುಹಿಸಲು ಇದರಿಂದ ಅನುಕೂಲವಾಗುತ್ತದೆ ಎಂಬ ಅಭಿಪ್ರಾಯವನ್ನು ಅವರು ಪುರಸ್ಕರಿಸಿದರು. ಮಂತ್ರಿ ಮಹಾವೀರ ತ್ಯಾಗಿಯವರು ಸಾರ್ವಜನಿಕರಿಗೆ ರೈಫಲುಗಳನ್ನು ಪ್ರಯೋಗಿಸಿ ಗುರಿ ಹೊಡೆಯುವುದು ಕಲಿಸಲು ಸಾಧ್ಯವಾದೀತೆಂದು ಹೇಳಿದರು "ಈ ದೇಶದಲ್ಲಿ ಗುರಿ ಮೈದಾನುಗಳಿದ್ದ ಪೋಲೀಸ ಲೈನುಗಳಿಗೆ ಹೋಗಿ ಸಾರ್ವಜನಿಕರು ಗುರಿ ಹೊಡೆಯುವ ಶಿಕ್ಷಣವನ್ನು ಹೊಂದಬಹುದು. ಆದರೆ ತೋಟೆಗೆ ಒಂಬಾಣೆಯಂತೆ ಕರ್ಚು ಮಾಡಬೇಕಾಗುವುದು" ಎಂದವರು ತಿಳಿಸಿದರು. ಸರಕಾರಿ ನೌಕರರನ್ನು ಕಡ್ಡಾಯವಾಗಿ ಪ್ರಾದೇಶಿಕ ಸೈನ್ಯದಲ್ಲಿ ಭರತಿಮಾಡಿಕೊಳ್ಳುವ ವಿಚಾರವನ್ನು ಅವರು ಮರಳಿ ವ್ಯಕ್ತಪಡಿಸಿದರು.

ಭಯದ ವಾತಾವರಣ

ವಿದೇಶಾಂಗ ಧೋರಣೆಯ ಕುರಿತಾಗಿ ಮಾತನಾಡುವಾಗ ನೆಹರೂರವರು ಪಾರ್ಲಿಮೆಂಟಿನಲ್ಲಿಯೇ ಪ್ರಥಮ ಬಾರಿ ಹಿಂದೀಯಲ್ಲಿ ಭಾಷಣಮಾಡಿದರು. ಭಾರತದ ನಿಲುವೆಯನ್ನು ಅವರು ತಮ್ಮ ದೀರ್ಘ ಭಾಷಣದಲ್ಲಿ ಸ್ಪಷ್ಟವಾಗಿ ವಿಶದೀಕರಿಸಿದರು. "ನಮ್ಮ ವಿದೇಶಧೋರಣೆಯು ತೀರ ಸರಳವಾಗಿದೆ, ಅದು ಶಾಂತಿಯ ಉದ್ದೇಶಕ್ಕೆ ಪೋಷಕವಾಗಿದೆ; ಬೇರೆ ದೇಶಗಳ ಮೇಲೆ ದುಷ್ಪರಿಣಾಮಮಾಡುವ ಗುಟ್ಟಿನ ಸಂಗತಿಗಳು ಅದರಲ್ಲಿ ಇಲ್ಲವೇ ಇಲ್ಲ" ಎಂದು ನೆಹರೂ ನುಡಿದರು. ಪ್ರಬಲ ರಾಷ್ಟ್ರಗಳು ತಮ್ಮ ಕೈಯಲ್ಲಿ ಭೀಕರ ಪರಿಣಾಮವನ್ನು ಉಂಟುಮಾಡಬಲ್ಲ ಅಣುಶಸ್ತ್ರಾಸ್ತ್ರಗಳನ್ನು ಇಟ್ಟುಕೊಂಡು ಜಾಗತಿಕ ಗಂಡಾಂತರದ ಭಯ ತುಂಬಿದ ವಾತಾವರಣವನ್ನುಂಟುಮಾಡುತ್ತಿರುವುದಕ್ಕೆ ನೆಹರೂ ವಿಷಾದ ವ್ಯಕ್ತಪಡಿಸಿದರು. "ನಮಗೀಗ ಇರುವುದು ಒಂದೇ ಮಾರ್ಗ- ಶಾಂತಿ ಅಥವಾ ಸರ್ವನಾಶ' ಎಂದವರು ಹೇಳಿದರು.

"ಕರಾರಿಗೆ ಒಡಂಬಡೆವು"

ಭಾರತವು ಕಮ್ಯುನಿಷ್ಟರ ಧೋರಣೆಯನ್ನು ಅನುಸರಿಸುತ್ತಿದೆಯಾಗಿ ಫ್ರಾಂಕ ಅಂಥೋನಿಯವರು ಟೀಕಿಸಿದುದನ್ನು ಖಂಡಿಸುತ್ತಾ ನೆಹರೂರವರು ಹೀಗೆಂದರು—"ಭಾರತವು ಪ್ರಜಾಪ್ರಭುತ್ವ ಪದ್ಧತಿಯನ್ನು ಪುರಸ್ಕರಿಸುವ ರಾಷ್ಟ್ರಗಳ ಧೋರಣೆಯನ್ನು ಮಾತ್ರ ಟೀಕಿಸುತ್ತಿಲ್ಲ. ಜಾಗತಿಕ ಪರಿಣಾಮವನ್ನುಂಟುಮಾಡುವ ಸಂಗತಿಗಳ ಮೇಲೆ ನಾವು ನಮ್ಮ ಅಭಿಪ್ರಾಯಗಳನ್ನು ಸ್ಪಷ್ಟವಾಗಿ ನಿರೂಪಿಸುತ್ತೇವೆ. ನಮಗೆ ನೇರಾಗಿ ಸಂಬಂಧಿಸಿದ ವಿಷಯಗಳ ಮೇಲೂ ನಿಜವಾದ ಪ್ರತಿಕ್ರಿಯೆಯನ್ನು ವ್ಯಕ್ತಗೊಳಿಸುತ್ತೇವೆ. ಕಮ್ಯುನಿಜಮ್ಮಿನ ಕಡೆಗೆ ಭಾರತವು ಒಲಿಯುತ್ತಿದೆಯೆಂದು ಹೇಳುವುದು ಸರಿಯಲ್ಲ." ಶಸ್ತ್ರಾಸ್ತ್ರಗಳನ್ನು ಕೊಂಡುಕೊಳ್ಳುವಾಗ ನಮ್ಮ ರಾಷ್ಟ್ರದ ವಿದೇಶ ನೀತಿಯ ಮೇಲೆ ತಿಲಾಂಶವಾದರೂ ಪರಿಣಾಮಮಾಡುವ ಕರಾರು ಮುಂಡಿಸಲ್ಪಟ್ಟರೆ, ಅಂಥ ಶಸ್ತ್ರಗಳನ್ನು ಯಾವ ದೇಶದಿಂದಲೂ ಕೊಂಡುಕೊಳ್ಳುವುದಿಲ್ಲವೆಂದು ನೆಹರೂರವರು ತಮ್ಮ ಹಿಂದಿನ ನಿಲುವೆಯನ್ನು ಪುನರುಚ್ಚರಿಸಿದರು.

ವಸಾಹತು ವಾದ

ಪಾಕಿಸ್ತಾನ ಮತ್ತು ಅಮೇರಿಕೆಗಳ ನಡುವೆ ಸೈನಿಕ ಒಪ್ಪಂದವಾಗುವುದರಿಂದ ಭಾರತದ ಹಾಗೂ ಏಶಿಯಾದ ಮೇಲಾಗುವ ಗಂಡಾಂತರವನ್ನು ನೆಹರೂ ಮರಳಿ ಒತ್ತಿ ಹೇಳಿದರು. ಗೋವೆಯೇ ಮುಂತಾದ ಭಾರತದಲ್ಲಿರುವ ವಿದೇಶೀ ವಸಾಹತುಗಳ ಕುರಿತು ಮಾತನಾಡುತ್ತಾ ಹೀಗೆಂದರು—"ಗೋವೆಗೆ ಉತ್ತರ ಅಟ್ಲಾಂಟಿಕ ಒಡಂಬಡಿಕೆಯಾಗಲೀ ಆಂಗ್ಲೋ—ಪೋರ್ಚುಗೀಜ ಒಪ್ಪಂದವಾಗಲೀ ಅನ್ವಯಿಸುವುದಿಲ್ಲ. ಇದನ್ನು ಈ ಒಪ್ಪಂದದಲ್ಲಿ ಸದಸ್ಯತ್ವ ಹೊಂದಿದ ರಾಷ್ಟ್ರಗಳು ಹಲವೊಮ್ಮೆ ಸ್ಪಷ್ಟೀಕರಿಸಿವೆ. ನಾವು ಇಂಥ ಯಾವ ಒಪ್ಪಂದವೂ ಗೋವೆಯ ವಿಷಯದಲ್ಲಿ ಕೈಹಾಕದಂತೆ ನೋಡಿಕೊಳ್ಳುತ್ತೇವೆ" ವಸಾಹತುಗಳ ಪ್ರಶ್ನೆಯನ್ನು ಶಾಂತರೀತಿಯಿಂದಲೇ ತೀರ್ಮಾನಿಸುವ ಅಭಿಲಾಷೆಯನ್ನು ಪ್ರಧಾನ ಮಂತ್ರಿಗಳು ಪುನಃ ಪ್ರಕಟಪಡಿಸಿದರು. "ಪರದೇಶಗಳು ನಮ್ಮ ವಿದೇಶಾಂಗ ಧೋರಣೆಯನ್ನು ಹೊಗಳಿದರೂ ಅಷ್ಟೇ, ತೆಗಳಿದರೂ ಅಷ್ಟೇ-ನಾವು ಶಾಂತಿಯ ಉದ್ದೇಶಕ್ಕೋಸ್ಕರ ಪ್ರಯತ್ನಗಳನ್ನು ಮಾಡುತ್ತಾ ಹೋಗುತ್ತೇವೆ" ಎಂದು ನುಡಿದು, ಭಾರತದ ಸ್ವತಂತ್ರ ನೀತಿಯ ಗೌರವ ಶಿಖರಕ್ಕೆ ಕಳಸವಿಟ್ಟರು.

ಪ್ರತ್ಯಕ್ಷ ಯುದ್ಧ ಪ್ರಯೋಗ

ಭಾರತೀಯ ವಿಮಾನದಳಕ್ಕೆ ೨೧ ವರ್ಷ ತುಂಬಿ ಪ್ರಬುದ್ಧಾವಸ್ಥೆಯನ್ನು ಮುಟ್ಟಿದ ಸಂಸ್ಮರಣಾರ್ಥವಾಗಿ ಹೊಸ ದೆಹಲಿಯಿಂದ ಹದಿನಾಲ್ಕು ಮೈಲುಗಳ ಅಂತರದಲ್ಲಿರುವ ತಿಲಪತ್ ಮೈದಾನದಲ್ಲಿ ನಿಜವಾದ ಮದ್ದುಗುಂಡುಗಳ ಪ್ರಯೋಗವನ್ನು ವಿಮಾನ ದಳಗಳು ನಡೆಸಿ, ಲಕ್ಷಾಂತರ ಪ್ರೇಕ್ಷಕರನ್ನು ಬೆರಗುಗೊಳಿಸಿದವು. ನಮ್ಮ ಸೈನ್ಯದ ವಿಮಾನಗಳು ಆಕಾಶದಲ್ಲಿ ಹಾರಾಡುತ್ತಾ ಕೆಳಗಡೆ ರಚಿಸಿದ ಕೃತಕ ಕಾರಖಾನೆಗಳನ್ನು ಬಾಂಬು ಹಾಕಿ ಧ್ವಂಸಗೊಳಿಸಿದವು. ಮೆಶಿನ್ ಗನ್, ರಾಕೆಟ್ ಮುಂತಾದವುಗಳನ್ನು ಗುರಿಗಳ ಮೇಲೆ ಪ್ರಯೋಗಿಸಿ ನಾಶಸಗೊಳಿಸಲಾಯಿತು. ಇನ್ನು ಇಂತಹ ಅನೇಕ ವಿಸ್ಮಯ ಪ್ರಯೋಗಗಳು ನಡೆದವು. ಪ್ರಧಾನ ಮಂತ್ರಿಗಳು ಹೆಲಿಕಾಪ್ಟರ ವಿಮಾನದಲ್ಲಿ ಹೊಸ ದೆಹಲಿಯಿಂದ ಹೊರಟು ಈ ಮೈದಾನಕ್ಕೆ ಬಂದರು, ಮತ್ತು ಸಮಾರಂಭವನ್ನು ಉದ್ಘಾಟಿಸಿದರು. ಇದನ್ನು ನೋಡಲು ವಿಶೇಷವಾದ ಜನಸಂದಣಿ ಸೇರಿದ್ದಿತು. ಈ ಗದ್ದಲದಲ್ಲಿ ಕೇಂದ್ರ ಮಂತ್ರಿಗಳು, ವಿದೇಶೀ ರಾಯಭಾರಿಗಳು, ಇತರ ಅಧಿಕಾರಿಗಳು ಮುಂತಾದವರೂ ಸಾಮಾನ್ಯರಂತೆಯೇ ಕಷ್ಟಪಡಬೇಕಾಯಿತು. ಜನಸಂದಣಿಯಲ್ಲಿ ಸಿಕ್ಕು ಪ್ರದರ್ಶನಕ್ಕೆ ಹೋಗಲಾರದವರಲ್ಲಿ ಸಂರಕ್ಷಣ ಖಾತೆಯ ಉಪಮಂತ್ರಿ ಸರದಾರ ಸುರಜಿತ ಸಿಂಗ ಮಜೀಥಿಯರೂ ಸೇರಿದ್ದರು

ಹಿಂದೀ ಭಾಷೆಯ ವಿಕಸನ

ಗದಗದಲ್ಲಿ ಕಳೆದವಾರ ಸೇರಿದ ಅಂತರ್ ಪ್ರಾಂತೀಯ ಸಾಹಿತ್ಯ ಸಮ್ಮೇಲನದ ಅಧ್ಯಕ್ಷ ಸ್ಥಾನದಿಂದ ಮಾತನಾಡುತ್ತಾ ಶ್ರೀ ವಿ. ಸೀತಾರಾಮಯ್ಯನವರು ನಮಗೊಂದು ರಾಷ್ಟ್ರ ಭಾಷೆಬೇಕೆಂಬುದನ್ನು ಒಪ್ಪಬೇಕಾದರೂ ಹಿಂದಿಯು ಯಾವುದೇ ಭಾರತೀಯ ಭಾಷೆಯಷ್ಟೇ ಅಪರಿಪಕ್ವವಿದೆಯಾದುದರಿಂದ ಅದನ್ನು ಸಂಪೂರ್ಣ ಪ್ರಬುದ್ಧಾವಸ್ಥೆಗೆ ತಂದ ಬಳಿಕವೇ ಇಂಗ್ಲೀಷಿನ ಸ್ಥಾನದಲ್ಲಿ ಉಪಯೋಗಿಸಬಹುದು ಎಂದರು ಸದ್ಯದ ಪರಿಸ್ಥಿತಿಯಲ್ಲಿ ಅದನ್ನು ಒತ್ತಾಯದಿಂದ ಇಂಗ್ಲೀಷಿನ ಸ್ಥಾನಮಾನಕ್ಕೆ ಏರಿಸಿದರೆ ನಮ್ಮ ದೇಶದ ಬೌದ್ಧಿಕ ಮಟ್ಟವು ಕೆಳಗಿಳಿಯುತ್ತದೆ ಎಂದವರು ಅಭಿಪ್ರಾಯಪಟ್ಟರು. ಮುಂದುವರಿದು, ಪ್ರತಿಯೊಬ್ಬನಿಗೂ ಪ್ರಾದೇಶಿಕ ಭಾಷೆಯಲ್ಲಿಯೇ ಶಿಕ್ಷಣ ಕೊಡಲ್ಪಡಬೇಕೆಂದು ಅವರು ಆಗ್ರಹದಿಂದ ನುಡಿದರಲ್ಲದೆ ಸರಕಾರವು ಪ್ರತಿಯೊಂದೂ ದೇಶ ಭಾಷೆಯ ಅಭಿವೃದ್ಧಿ ಕಾರ್ಯಕ್ಕೋಸ್ಕರ ೧೦ ೧೫ ಲಕ್ಷ ರೂಪಾಯಿಗಳ ನೆರವು ಕೊಡಬೇಕೆಂದು ವಿನಂತಿಸಿದರು. ಈ ಸಮ್ಮೇಲನಕ್ಕೆ ತೆಲುಗು ಹಾಗು ಮರಾಠೀ ಸಾಹಿತಿಗಳು ಬಂದಿದ್ದರು. ಗುಜರಾಥದ ಪ್ರತಿನಿಧಿಗಳಿಗೆ ಅನಾರೋಗ್ಯದ ಕಾರಣದಿಂದ ಬರಲಾಗಲಿಲ್ಲ



ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ. ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಶಿವಮೊಗ್ಗದಲ್ಲಿ ಮಲೆನಾಡ ಪರಿಷತ್ತು

ರಾಷ್ಟ್ರಭಾಷೆಯಾದ ಹಿಂದೀಗೆ ನ್ಯಾಯವಾದ ಸ್ಥಾನಮಾನ

ರಾಷ್ಟ್ರಭಾಷೆಯ ಸ್ಥಾನಮಾನ

ವಿದ್ಯಾ ಇಲಾಖೆಯ ಬೇಡಿಕೆಯ ಮೇಲೆ ಪಾರ್ಲಿಮೆಂಟಿನಲ್ಲಿ ಚರ್ಚೆ ನಡೆದಾಗ ಶ್ರೀ ಪುರುಷೋತ್ತಮದಾಸ ಟಂಡನ್ನರೇ ಮೊದಲಾದ ಪ್ರಭೃತಿಗಳು ಸರಕಾರವು ಹಿಂದೀ ಭಾಷೆಯ ಕುರಿತು ತಳೆದಿರುವ ಧೋರಣೆಯನ್ನು ಬಲವಾಗಿ ಟೀಕಿಸಿದರು. ಶಿಕ್ಷಣ ಸಚಿವ ಮೌಲಾನಾ ಆಜಾದರು ಇದಕ್ಕೆ ಉತ್ತರ ಕೊಡುತ್ತಿರುವಾಗ ಕೂಡ ಸದಸ್ಯರು ನಡುನಡುವೆ ಅವರನ್ನು ತಡೆದು ಆಕ್ಷೇಪಿಸಿದರು. ಆಜಾದರು ತಮ್ಮ ಭಾಷಣದಲ್ಲಿ ಹಿಂದೀ ಭಾಷೆಯು ಸಂಪೂರ್ಣ ಅಭಿವೃದ್ಧಿ ಹೊಂದಿ ರಾಜ್ಯಾಂಗ ಘಟನೆಯಲ್ಲಿ ನಿರ್ದೇಶಿಸಿದಂತೆ ನ್ಯಾಯವಾದ ಸ್ಥಾನವನ್ನು ಪಡೆಯುವಂತೆ ನೋಡುವುದು ಕರ್ತವ್ಯವಾಗಿರುತ್ತದೆಂದು ತಾನು ಭಾವಿಸಿರುವುದಾಗಿಯೂ ಇದರಲ್ಲಿ ಅನುಚಿತವಾದ ಯಾವುದೇ ವಿಳಂಬವನ್ನು ಮಾಡುವುದಿಲ್ಲವೆಂದೂ ತಿಳಿಸಿದರು. ಮೊದಲನೇ ಐದು ವರ್ಷಗಳಲ್ಲಿ ಮಾಧ್ಯಮಿಕ ಶಾಲೆಗಳಲ್ಲಿ ಹಿಂದೀಯನ್ನು ಕಡ್ಡಾಯವಾಗಿ ಕಲಿಸಲು ತಿರುಕೊಚ್ಚಿ, ಅಸಾಮು, ಮೈಸೂರು, ಒರಿಸಾ ಮುಂತಾದ ರಾಜ್ಯಗಳು ನಿರ್ಧರಿಸಿವೆಯೆಂದೂ ಉತ್ತರ ಪ್ರದೇಶ ಮುಂತಾದ ರಾಜ್ಯ ಸರಕಾರಗಳು ಹಿಂದೀಯನ್ನು ಸರಕಾರದ ಭಾಷೆಯಾಗಿ ಉಪಯೋಗಿಸುತ್ತಿವೆಯೆಂದೂ ಆಜಾದರು ಹೇಳಿದರು. ಪಾರಿಭಾಷಿಕ ಹಾಗೂ ವೈಜ್ಞಾನಿಕ ಶಬ್ದಗಳ ಸಂಪತ್ತನ್ನು ಹೆಚ್ಚಿಸುವ ಪ್ರಯತ್ನ ಮುನ್ನಡೆಯುತಿದ್ದು, ಇದುವರೆಗೆ ೧೮ ಸಾವಿರ ಶಬ್ದಗಳುಳ್ಳ ಒಂದು ಕೋಶ ರಚನೆಗೊಂಡಿದೆಯೆಂದೂ ಅವರು ತಿಳಿಸಿದರು.

ಪ್ರಾಥಮಿಕ ವಿದ್ಯಾಭ್ಯಾಸ

ಮದ್ರಾಸಿನಲ್ಲಿ ಶಿಕ್ಷಣ ಮಂತ್ರಿ ಶ್ರೀ ಸುಬ್ರಹ್ಮಣ್ಯಂ ಅವರು ವಿದ್ಯಾಇಲಾಖೆಯ ಬೇಡಿಕೆಯನ್ನು ಮುಂದಿಡುತ್ತಾ ಇದೇ ಏಪ್ರಿಲು ಒಂದನೇ ತಾರೀಕಿನಿಂದ ಎಯ್ಡೆಡ್ ಶಾಲೆಗಳ ಉಪಾಧ್ಯಾಯರ ಸಂಬಳವನ್ನು ೨೭ ರೂಪಾಯಿಗಳಿಂದ ೩೦ ರೂಪಾಯಿಗಳಿಗೆ ಏರಿಸುವುದಾಗಿಯೂ ಇದಕ್ಕೋಸ್ಕರ ಸರಕಾರಕ್ಕೆ ೧೯ ಲಕ್ಷ ರೂಪಾಯಿಗಳ ಅಧಿಕ ಖರ್ಚು ಬರುವುದೆಂದೂ ತಿಳಿಸಿದರು. ಬಹಳ ಟೀಕೆಗೆ ಗುರಿಯಾದ ಪ್ರಾಥಮಿಕ ವಿದ್ಯಾಭ್ಯಾಸದ ಸುಧಾರಿತ ಪದ್ಧತಿಯನ್ನು ಸಮರ್ಥಿಸುತ್ತಾ ಆದಷ್ಟು ಹೆಚ್ಚು ಮಕ್ಕಳು ಶಾಲೆಗೆ ಬಂದು ಶಿಕ್ಷಣ ಹೊಂದಬೇಕೆಂಬುದೇ ಸರಕಾರದ ಆಶಯವೆಂದೂ ಉಪಾಧ್ಯಾಯರ —ಮತ್ತು ಮಕ್ಕಳ ದಾಮಾಶಯದ ಕಾರಣದಿಂದ, ಈಗ ಶಾಲೆಗಳಲ್ಲಿ ಕೆಲಸ ಮಾಡುವ ಯಾವುದೇ ಉಪಾಧ್ಯಾಯರನ್ನು ಮನೆಗೆ ಕಳಿಸುವುದಿಲ್ಲೆಂದೂ ಭರವಸೆ ನೀಡಿದರು.

ಬೇಗನೇ ಭೂಸುಧಾರಣೆ

ಜಿಲ್ಲಾ ಬೋರ್ಡುಗಳ ವಿಶೇಷಾಧಿಕಾರಿಗಳ ಅಧಿಕಾರದ ಅವಧಿಯನ್ನು ಇದೇ ಅಕ್ಟೋಬರ ೩೧ನೇ ತಾರೀಕಿನವರೆಗೆ ಮುಂದುವರಿಸುವ ಮಸೂದೆಯು ಮದ್ರಾಸು ಶಾಸನಸಭೆಯಲ್ಲಿ ಸ್ವೀಕಾರಗೊಂಡಿದೆ. ದಕ್ಷಿಣಕನ್ನಡ ಜಿಲ್ಲೆಯಲ್ಲಿ ಸಪ್ಟಂಬರ ಅಥವಾ ಅಕ್ಟೋಬರ ತಿಂಗಳಲ್ಲಿ ಜಿಲ್ಲಾ ಬೋರ್ಡು ಚುನಾವಣೆ ನಡೆಯುವುದೆಂದು ತಿಳಿಯುತ್ತದೆ. ತಮಿಳುನಾಡಿನಲ್ಲಿ ಪ್ರಚಲಿತವಿರುವ ಒಂದು ಬಗೆಯ ಪಿವಾರದಾರೀ ತಿಗೆ ಮನ್ನಣೆಕೊಡುವ ಮಸೂದೆಯೊಂದು ಪಾರ್ಲಿಮೆಂಟಿನಲ್ಲಿ ಮಂಡಿಸಲ್ಪಟ್ಟಾಗ, ಅನೇಕ ಸದಸ್ಯರು ಪ್ರತಿಯೊಂದು ಮದುವೆಯನ್ನೂ ರಿಜಿಸ್ಟ್ರು ಮಾಡಿಕೊಳ್ಳುವ ಅಗತ್ಯವನ್ನು ಬಲವಾಗಿ ಪ್ರತಿಪಾದಿಸಿದರು. ಭೂ ಸುಧಾರಣೆಯ ಕುರಿತು ಶ್ರೀ ಟಿ. ಅನಂತ ಪೈಗಳು ಕೇಳಿದ ಪ್ರಶ್ನೆಗೆ ಉತ್ತರ ಕೊಡುತ್ತಾ ಯೋಜನಾ ಆಯೋಗದವರು ಮಾಡಿದ ಶಿಫಾರಸುಗಳಿಗನುಗುಣವಾಗಿ ಭೂ ಸುಧಾರಣೆಗಳನ್ನು ಕೈಗೊಳ್ಳಬೇಕೆಂದು ಕೇಂದ್ರ ಸರಕಾರ ಸೂಚಿಸಿದೆಯೆಂದೂ ಮುಂಗಡ ಪತ್ರದ ಈ ಅಧಿವೇಶನ ಮುಗಿದ ಬಳಿಕ ಈ ವಿಷಯದಲ್ಲಿ ಅಂತಿಮ ನಿರ್ಣಯ ಕೈಗೊಳ್ಳಲ್ಪಡುವುದೆಂದೂ ಕಂದಾಯ ಮಂತ್ರಿಗಳು ತಿಳಿಸಿದರು.

ಮಲೆನಾಡಿನ ಸಂಪತ್ತು

ಇದೇ ಏಪ್ರಿಲು ತಿಂಗಳ ೬, ೭ ಮತ್ತು ೮ನೇ ದಿನಾಂಕಗಳಲ್ಲಿ ಶಿವಮೊಗ್ಗದಲ್ಲಿ ಕೂಡಲಿರುವ ಅಖಿಲಭಾರತ ಮಲೆನಾಡ ಪರಿಷತ್ತನ್ನು ಭಾರತ ಸರಕಾರದ ಆಹಾರ ಸಚಿವರಾದ ಶ್ರೀ ರಫಿ ಅಹಮ್ಮದ ಕಿದವಾಯಿಯವರು ಉದ್ಘಾಟಿಸುವರು. ಭಾರತ ಸರಕಾರದ ಕೃಷಿ ಮಂತ್ರಿಗಳಾದ ಡಾ. ಪಂಜಾಬರಾವ ದೇಶಮುಖರು ಪರಿಷತ್ತಿನ ಕೃಷಿ ವಿಭಾಗವನ್ನು ತೆರೆಯುವರು. ಮಲೆನಾಡ ವಸ್ತು ಪ್ರದರ್ಶನದ ಉದ್ಘಾಟನೆಯನ್ನು ಮೈಸೂರಿನ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ನೆರವೇರಿಸುವರು. ಉತ್ತರ ಕನ್ನಡ, ಧಾರವಾಡ, ಬೆಳಗಾಂವಿ, ಕೊಡಗು, ದಕ್ಷಿಣ ಕನ್ನಡ, ವೈನಾಡು ಮುಂತಾದ ಮಲೆನಾಡು ಪ್ರದೇಶಗಳಿಂದ ಪ್ರತಿನಿಧಿಗಳು ಬರಲಿರುವ ಈ ಪರಿಷತ್ತಿನ ಅಧ್ಯಕ್ಷತೆಯನ್ನು ಶ್ರೀ ನಿಜಲಿಂಗಪ್ಪನವರು ವಹಿಸುವರು. ಮಲೆನಾಡಿನ ಅತ್ಯಮೂಲ್ಯ ಸಂಪತ್ತನ್ನು ಉಪಯೋಗಿಸುವ ವಿಚಾರದಲ್ಲಿ ಈ ಪರಿಷತ್ತು ಸಲಹೆ ಸೂಚನೆಗಳನ್ನು ಮುಂದಿಡುತ್ತದೆ

ಗಡಿ ಸಂಬಂಧದ ವಿವಾದ

ಭಾರತ ಸರಕಾರದವರು ಆಂಧ್ರ, ಮೈಸೂರು ಮತ್ತು ಮದ್ರಾಸು ಸರಕಾರಗಳ ಪ್ರತಿನಿಧಿಗಳನ್ನು ಬರಮಾಡಿಕೊಂಡು ಮೇ ತಿಂಗಳ ಕೊನೆಯ ಸುಮಾರಿಗೆ ಈ ಮೂರು ರಾಜ್ಯಗಳ ಗಡಿ ಸಂಬಂಧದ ವಿವಾದಗಳನ್ನು ಶಾಂತ ರೀತಿಯಲ್ಲಿ ಬಗೆಹರಿಸಲು ನಿರ್ಧರಿಸಿರುವರಾಗಿ ತಿಳಿಯುತ್ತದೆ. ಕೆಲವು ದಿನಗಳ ಪೂರ್ವದಲ್ಲಿ ಕೇಂದ್ರ ಸರಕಾರದವರು ಚಿತ್ತೂರು ಜಿಲ್ಲೆ ಹಾಗು ತಿರುತ್ತಣಿಗೆ ಸಂಬಂಧಿಸಿದ ಗಡಿಯ ಕುರಿತಾದ ತಂಟೆಯನ್ನು ಆಂಧ್ರ ಸರಕಾರದೊಡನೆ ನೇರಾದ ಚರ್ಚೆಯಿಂದ ಪರಿಶೀಲಿಸಿಕೊಳ್ಳಲು ಸೂಚಿಸಿದ್ದರು. ಆದರೆ ಮಾತುಕತೆಗಳಲ್ಲಿ ತೃಪ್ತಿಕರ ಪ್ರಗತಿಕಂಡು ಬರಲಿಲ್ಲ.

ಭತ್ತದ ಗದ್ದೆಯಲ್ಲಿ ಮೀನು

ಭತ್ತದ ಗದ್ದೆಗಳಲ್ಲಿ ಭತ್ತದ ಬೆಳೆಗೆ ಪೋಷಕವಾಗುವಂತೆ ಮೀನುಗಳನ್ನು ಸಾಕುವ ಪ್ರಯೋಗವೊಂದನ್ನು ಬರುವ ಮಳೆಗಾಲದಲ್ಲಿ ಮದ್ರಾಸು ಸರಕಾರ ಕೈಗೊಳ್ಳುತ್ತದೆ ನೇಜಿಯನ್ನು ನಟ್ಟ ಬಳಿಕ ಗದ್ದೆಗಳಲ್ಲಿ ಮೀನುಗಳನ್ನು ಸಾಕಲಾಗುವುದು. ಇವುಗಳ ಗೊಬ್ಬರದಿಂದ ಸೂರಕ್ಕೆ ಏಳರಷ್ಟು ಫಸಲು ಹೆಚ್ಚಿಕೊಳ್ಳುವುದಲ್ಲದೆ ಕ್ರಿಮಿಕೀಟಗಳ ಮತ್ತು ರೋಗದ ಹಾವಳಿಯು ಬಹಳಷ್ಟು ಕಡಿಮೆಯಾಗುತ್ತದೆ. ಒಂದು ಎಕ್ರೆ ಹೊಲಕ್ಕೆ ೪೦೦ ರಾತಲು ಮೀನುಗಳು ಬೇಕಾಗಬಹುದೆಂದು ಅಂದಾಜು. ಈ ಮೀನುಗಳನ್ನು ಆಹಾರವಾಗಿಯೂ ಬಳಸಬಹುದು. ಹೇರಳ ನೀರು ತುಂಬಿರುವ ತಂಜಾವೂರಿನ ಮೂರು ಅನುಕೂಲ ಸ್ಥಳಗಳಲ್ಲಿ ಈ ಪ್ರಯೋಗ ನಡೆಯುತ್ತದೆ. ಇಟಲಿ, ಜಪಾನು, ಚೀನಗಳಲ್ಲಿ ಜನಪ್ರಿಯವಾದ ಈ ವ್ಯವಸಾಯವು ಭಾರತದಲ್ಲೂ ಯಶಸ್ವಿಯಾಗಬಲ್ಲುದೆಂದು ಪೂರ್ವ ಗೋದಾವರಿ ಜಿಲ್ಲೆಯಲ್ಲಿ ನಡೆಸಿದ ಪ್ರಯೋಗಗಳು ಈಗಾಗಲೇ ತೋರಿಸಿ ಕೊಟ್ಟಿವೆ

ಭಾಷಾ ರಾಜ್ಯಗಳಿಗೆ ವಿರೋಧ

ರಾಷ್ಟ್ರೀಯ ಐಕ್ಯರಂಗದ ಆಶ್ರಯದಲ್ಲಿ ಅನೇಕ ಪಾರ್ಲಿಮೆಂಟ ಸದಸ್ಯರು ಸಭೆಸೇರಿ, ಸದ್ಯದ ಪರಿಸ್ಥಿತಿಯಲ್ಲಿ ಸಾಧ್ಯವಿದ್ದಷ್ಟು ಹೆಚ್ಚು ಯಥಾಸ್ಥಿತಿಯನ್ನು ಕಾಯ್ದುಕೊಂಡು ಹೋಗುವುದೇ ಇಷ್ಟವಾದುದೆಂದು ರಾಜ್ಯಗಳ ಪುನರ್ವಿಂಗಡಣೆಯ ಪ್ರಶ್ನೆಯನ್ನು ವಿಚಾರಿಸುತ್ತಿರುವ ಆಯೋಗಕ್ಕೆ ಮನವಿಯೊಪ್ಪಿಸಲು ನಿರ್ಣಯಿಸಿದ್ದಾರೆ. ದೇಶವನ್ನು ಕೇವಲ ಭಾಷಾನುಗುಣವಾಗಿ ವಿಭಜಿಸಬಾರದೆಂದೂ ಅ ಮತ್ತು ಬ ವಿಭಾಗದ ರಾಜ್ಯಗಳಲ್ಲಿಯ ಅಂತರವನ್ನು ತೆಗೆದು ಹಾಕಬೇಕೆಂದೂ ಕ ವಿಭಾಗದ ಪ್ರದೇಶಗಳನ್ನು ಆಡಳಿತದ ಸೌಕರ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡು ನೆರೆಹೊರೆಯ ರಾಜ್ಯಗಳಲ್ಲಿ ವಿಲೀನಗೊಳಿಸತಕ್ಕದ್ದೆಂದೂ ಮನವಿಯಲ್ಲಿ ಹೇಳಲ್ಪಟ್ಟಿದೆ

ಸ್ವದೇಶದ ಬುದ್ಧಿ ಸಂಪತ್ತು

ಉತ್ಪಾದಕರ ಪರಿಷತ್ತು ಕಲ್ಕತ್ತದಲ್ಲಿ ಮೊನ್ನೆ ಸೇರಿದಾಗ ಸುಪ್ರಸಿದ್ಧ ಔದ್ಯಮಿಕ ತಜ್ಞರಾದ ಸರ್ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು ಭಾರತವು ಆದಷ್ಟು ಹೆಚ್ಚು ಪ್ರಮಾಣದಲ್ಲಿ ದೇಶೀಯರ ಬುದ್ಧಿವಂತಿಕೆಯನ್ನು ಉಪಯೋಗಿಸಲು ಆಣಿಯಾಗಬೇಕೆಂದು ಪ್ರತಿಪಾದಿಸಿದರು. ವಿದೇಶೀ ಖರೀದಿಗಳನ್ನು ಹೆಚ್ಚು ಪ್ರಮಾಣದಲ್ಲಿ ಅವಲಂಬಿಸಕೂಡದು, ವಿದೇಶೀ ಸಲಹೆಯನ್ನು ಸಹ ರಾಷ್ಟ್ರದ ಹಿತದೃಷ್ಟಿಯಿಂದ ಆದಷ್ಟು ಕಡಿಮೆ ಮಾಡಬೇಕು ಎಂದವರು ಅಭಿಪ್ರಾಯಪಟ್ಟರು. ಸರಕಾರವು ದೇಶದೊಳಗಿನ ಒಂದೆರಡು ನೂರು ಸಮೃದ್ಧ ಉದ್ದಿಮೆದಾರರ ಪಟ್ಟಿ ತಾಂತ್ರಿಕ ಪಟ್ಟಿಯನ್ನು ಸಿದ್ಧಗೊಳಿಸಿ ಸರಕಾರದ ಆಶ್ರಯದಲ್ಲಿ ಅವರು ಕೆಲಸ ಮಾಡುವಂತೆ ಪ್ರೋತ್ಸಾಹಿಸಬೇಕು ಎಂದು ಈ ತಜ್ಞರು ಅಪೇಕ್ಷಿಸಿದರು.

ಖಾಸಗಿ ಬಂಡವಾಳ

ಅಹಮದಾಬಾದಿನ ಪತ್ರಿಕಾ ಪರಿಷತ್ತೊಂದರಲ್ಲಿ ಮಾತನಾಡುತ್ತಾ ಯೋಜನಾ ಸಚಿವ ಶ್ರೀ ಗುಲ್‌ಜಾರಿಲಾಲನಂದಾರು ದೇಶವು ಈಗ ಅನುಸರಿಸುವ ಸಮ್ಮಿಶ್ರ ಆರ್ಥಿಕ ರಚನೆಯಲ್ಲಿ ಖಾಸಗಿ ಬಂಡವಾಳಕ್ಕೆ ಮಹತ್ವ ಕೊಡಲ್ಪಟ್ಟಿದೆಯೆಂದೂ ಉದ್ದಿಮೆದಾರರು ತಮ್ಮ ಪಾತ್ರವನ್ನು

(ಆನೇ ಪುಟ ನೋಡಿರಿ)

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ).

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಅಧಿಕೃತ ಭಂಡವಾಳ	ರೂ.	25,00,000
ಚಂದಾ ಆರ್ಜಿಸಿ, ತೆತ್ತು ಬಂದ ಭಂಡವಾಳ	ರೂ.	20,00,000
ಕ್ಷೇಮ ನಿಧಿ	ರೂ.	10,50,000
ಠೇವಣಾತಿಗಳು	ರೂ.	2,98,19,000
ಒಟ್ಟು ಚಲಾವಣೆ ಭಂಡವಾಳ	ಸುಮಾರು ರೂಪಾಯಿ 4 ಕೋಟಿ	
ಒಟ್ಟು ಶಾಖೆಗಳು	38	

(31—12—1953ರಲ್ಲು)

THE CANARA BANKING CORPORATION LIMITED

Estd:- 1906] [H. O. UDIPI (S. India).

PLACE YOUR LIFE ASSURANCE WITH A COMPANY OF YOUR OWN - - -

Established in 1929, the POPULAR is progressing on sound lines It has built up for itself a record of efficient service sound investment and a personal touch with its Policy holders and Representatives At whatever stage We welcome yours association with the POPULAR

THE
POPULAR INSURANCE CO. LTD.
"POPULAR BUILDINGS" MANGALORE-1

ಮುಂಬಯಿಯ ಗಣೇಶಪುರಿಯಲ್ಲಿರುವ ಶ್ರೀ ನಿತ್ಯಾನಂದ ಸ್ವಾಮಿಜಿಯವರ ಆಶೀರ್ವಾದದ ಮೇರೆಗೆ, ಅವರ ಭಕ್ತರ ಸಲುವಾಗಿ ಈಗ ತಾನೇ ಪ್ರಕಟಿಸಿದ ಅಪೂರ್ವ ಮತ್ತು ಸುಂದರವಾದ ಬಣ್ಣಗಳಿಂದ ತುಂಬಿದ ಸ್ವಾಮಿಜಿಯವರ ಒಂದು ಭಾವಚಿತ್ರ (10" × 15").

ಒಂದಕ್ಕೆ ಬೆಲೆ ರೂಪಾಯಿ 1/-

ರಸಿಕರುಗಳು ಈ ಕೆಳಗಿನ ವಿಳಾಸಕ್ಕೆ ಬಿಜಿನೆಸ್ ಮತ್ತು ಆದರ ದರ್ಶನಗಳಿಗೂ ಬರೆಯಬಹುದು:-

"ನೌಕಾಸ್ ಆರ್ಟ್ಸ್"
203, ಪ್ರಿನ್ಸೆಸ್ ಸ್ಟ್ರೀಟ್, ಕೋಟೆ, ಬೊಂಬಾಯಿ 1.

ನ ವ ಯು ಗ

ಉಡುಪಿ; ಗುರುವಾರ ೧-೪-'೫೪

ವಿಜ್ಞಾನಿಗಳಿಗೊಂದು ಆಹ್ವಾನ

ಚಿಕ್ಕದೊಂದು ಸೀಸೆಯೊಳಗಿಂದ ರಾಕ್ಷಸನೊಬ್ಬನು ಅವತರಿಸುವ ಅದ್ಭುತವನ್ನು ಅಜ್ಜಿಯ ಕತೆಗಳಲ್ಲಿ ಕೇಳಿದ ನೆನಪು ನಮ್ಮಲ್ಲಿ ಹಲವರಿಗೆ ಇರಬಹುದು—ಪ್ರಧಾನ ಮಂತ್ರಿ ನೆಹರೂರವರು ಮನುಷ್ಯನು ಇಂದು ಅಣುಶಕ್ತಿಯನ್ನು ವಿಧ್ವಂಸಕ ಕೃತ್ಯಗಳಿಗೋಸ್ಕರ ಉಪಯೋಗಿಸುತ್ತಿರುವುದಕ್ಕೆ ಪರಿತಾಪವನ್ನು ವ್ಯಕ್ತಪಡಿಸುವಾಗ ಈ ಮಾತನ್ನು ನೆನಪಿಗೆ ತಂದುಕೊಟ್ಟರು. ಮನುಷ್ಯನು ವೈಜ್ಞಾನಿಕ ಆವಿಷ್ಕಾರಗಳದೆಸೆಯಿಂದ ತನಗೆ ಪರಿಚಯವಿಲ್ಲದ, ಸಹಜವಾಗಿ ತನ್ನಿಂದ ಎಣಿಸಲು ಬಾರದ ಮತ್ತು ತನ್ನ ನಿಯಂತ್ರಣಸಾಮರ್ಥ್ಯವನ್ನೂ ಮೀರಿನಿಂತ ವಿಚಾರಗಳ ಕಡೆಗೆ ಆಕರ್ಷಿಸಲ್ಪಟ್ಟಿರುವನು. ವೈಜ್ಞಾನಿಕ ಪ್ರಗತಿಯು ಅವನನ್ನು ಉತ್ಕರ್ಷಕ್ಕೆ ಮುಟ್ಟಿಸುವುದೋ ಅಥವಾ ಅಧಃಪತನದ ಪಾತಾಳಕ್ಕೆ ತಳ್ಳುವುದೋ ಎಂಬುದರ ಕುರಿತು ಮಹತ್ವದ ಭಿನ್ನಾಭಿಪ್ರಾಯಗಳು ವ್ಯಕ್ತಗೊಳ್ಳುತ್ತಿದ್ದರೂ ಹೆಚ್ಚಿನವರು ನಾಗರಿಕತೆಯು ಶಿಖರಕ್ಕೇರುತ್ತಿರುವದೆಂದೇ ನಂಬಿಕೊಂಡಂತಿವೆ. ಆದರೆ ಈ ನಂಬಿಕೆಯ ನಡುವೆಯೂ ಮೂರನೆಯ ಮಹಾಯುದ್ಧದ ಮಾತು ಬಂದರೆ ಅವರಲ್ಲಿ ಅವ್ಯಕ್ತ ವೇದನೆಯ ಪ್ರವಾಹವೊಂದು ಹರಿದಂತೆನಿಸುತ್ತದೆ. ಆಗ ವೈಜ್ಞಾನಿಕ ಆವಿಷ್ಕಾರಗಳು ಮನುಷ್ಯನ ಸುಖ ಸೌಕರ್ಯಗಳನ್ನು ಹೆಚ್ಚಿಸುವ ಬದಲು ನಾಗರಿಕತೆಯ ವಿನಾಶ ಮಾಡಬಹುದೆಂಬ ವೇದನೆಯನ್ನು ಅದುಮಿ ಹಿಡಿದುಕೊಳ್ಳುವುದಕ್ಕೆ ಆಗದೆ ಹೋಗುತ್ತದೆ. ಮುಂದಿನ ಯುದ್ಧದಲ್ಲಿ ಅತ್ಯಧಿಕ ಪ್ರಮಾಣದಲ್ಲಿ ವಿಧ್ವಂಸಕ ಕೃತ್ಯಗಳನ್ನು ನೆರವೇರಿಸಬಲ್ಲ ಅಣುಶಸ್ತ್ರಾಸ್ತ್ರಗಳು ಪ್ರಯೋಗಿಸಲ್ಪಟ್ಟೇ ತೀರುತ್ತವೆಂದು ಎಲ್ಲರೂ ಭಯವಿಹ್ವಲರಾಗಿರುವರು! ಈ ಭೀಕರ ಶಸ್ತ್ರಗಳು ಕಗ್ಗೊಲೆಗೆ ಕಾರಣವಾಗುತ್ತವೆಂದು ಹಿರೋಶಿಮಾ—ನಾಗಸಾಕಿಗಳ ದುರಂತ ಕತೆ ಸಾಕ್ಷಿ ಹೇಳುತ್ತದೆ. ಕಳೆದ ರಡು ಮೂರು ವಾರಗಳಿಂದಂತೂ ಯುದ್ಧದಲ್ಲಿ ಪ್ರಯೋಗಿಸುವುದರಿಂದಷ್ಟೇ ಅಲ್ಲ, ಪ್ರಾಯೋಗಿಕ ಪರೀಕ್ಷೆಗಳನ್ನು ನಡೆಸುವ ಉದ್ದೇಶದಿಂದ ಅಣು ಶಸ್ತ್ರಗಳನ್ನು ಸ್ಫೋಟಗೊಳಿಸಿದರೂ ಸಾಕು—ಅಪಾರ ಹಾನಿಯೂ ಗಂಡಾಂತರವೂ ಸಂಭವಿಸುತ್ತದೆಂದು ಹೇಳಲಾಗುತ್ತದೆ. ಶಾಂತ ಸಾಗರದ ಬಿಕಿನಿದ್ವೀಪದಲ್ಲಿ ಅಮೇರಿಕದ ಸರಕಾರ ನಡೆಸಿದ ಜಲಜನಕ ಬಾಂಬಿನ ಸ್ಫೋಟನ ಪ್ರಯೋಗವು ಜಾಗತಿಕ ಮಾರಣ ಹೋಮದ ಕಲ್ಪನೆಯನ್ನು ಕೆಲವು ಮಟ್ಟಿಗೆ ಮಾಡಿ ಕೊಟ್ಟಿತು. ಈ ಪ್ರಯೋಗದ ಅನಿಷ್ಟ ಪರಿಣಾಮಗಳಿಂದ ಪೀಡಿತರಾದವರ ದಯನೀಯಕತೆಯನ್ನು ಕೇಳಿದ ಬಳಿಕವಂತೂ—ಮಾನವವಾದಿಗಳ ಹೃದಯ ಕರಗಿ ನೀರಾಗಿ ಹರಿಯತೊಡಗಿದೆ. ಪರೀಕ್ಷೆಯ ಉದ್ದೇಶದಿಂದ ಆ ಸ್ಫೋಟನ ನಡೆಸಿದ ಅಮೇರಿಕಾ ಸರಕಾರವು ಜಗತ್ತಿನಾದ್ಯಂತ ವಿವೇಕಶೀಲರ ನಿಂದೆ ಹಾಗೂ ಟೀಕೆಗೆ ಗುರಿಯಾಗಬೇಕಾಯಿತು. ಹೆಚ್ಚು ಕಡಿಮೆ ಎಪ್ಪತ್ತು ಮೈಲು ಸುತ್ತಳತೆಯ ಪ್ರದೇಶದಲ್ಲಿಯಷ್ಟೇ ಬಾಂಬು ಸ್ಫೋಟನದ ಪ್ರಭಾವ ವ್ಯಾಪಿಸಬಹುದೆಂದು ಅಮೇರಿಕದ ತಜ್ಞರು ಹಾಕಿದ ಲೆಕ್ಕ ಪೂರಾ ತಪ್ಪೆಂದು "ಫುಕುರ್ಯು ಮಾರು" ಮತ್ತಿತರ ನೌಕೆಗಳು ಸಿದ್ಧಗೊಳಿಸಿದವು. ಸ್ಫೋಟದಿಂದ ಹುಟ್ಟಿಕೊಂಡ ಪರಮಾಣು ಬೂದಿಗಳ ವಿಕೀರ್ಣ ಪರಿಣಾಮದಿಂದ ಪಾರಾಗುವುದು ತೀರಾ ಅಸಾಧ್ಯವೆಂಬುದಾಗಿ ತಜ್ಞರ ಅಭಿಪ್ರಾಯ. ಸ್ಫೋಟ ನಡೆದ ಪ್ರದೇಶದಲ್ಲಿರುವ ಮೀನು ಮುಂತಾದ ಜಲಚರಗಳು ಸಹ ಮನುಷ್ಯನನ್ನು ಕೊಲ್ಲುವಷ್ಟು ಶಕ್ತಿ ಪಡೆದಿವೆಯೆಂದು ತಿಳಿದು ಬಂದ ಬಳಿಕವಂತೂ—ಚಿತ್ರಹಿಂಸೆ ಮತ್ತು ಪ್ರಾಣಹಾನಿಯ ಜೊತೆಗೆ ಅನ್ನನೀರುಗಳನ್ನು ಮುಟ್ಟದಂತೆ ನಿರ್ಬಂಧಿಸುವ ಪರಿಸ್ಥಿತಿಯನ್ನೂ ಬಾಂಬು ಸ್ಫೋಟ ಉಂಟುಮಾಡುವುದೆಂಬ ಅಭಿಪ್ರಾಯ ದೃಢಗೊಂಡಿದೆ. ಜಪಾನೀ ತಜ್ಞರ ಹೇಳಿಕೆಯಂತೆ ಈ ಬಾಂಬುಗಳು ೧೨೦೦ರಿಂದ ೨೫ ಮೈಲುಗಳ ಅಂತರದಲ್ಲಿ ತಪ್ಪಿ ಪ್ರಯೋಗಿಸಲ್ಪಟ್ಟರೂ ಅವು ಪರಿಣಾಮದಲ್ಲಿ ಗಣನೀಯ ವ್ಯತ್ಯಾಸವಾಗುವುದಿಲ್ಲ. ಅಲ್ಲದೆ, ಪರಮಾಣು ಬೂದಿಯು ವಾಯುಮಂಡಲದಲ್ಲಿ ಸೇರಿಕೊಂಡು ಭೂಪ್ರದಕ್ಷಿಣೆ ಮಾಡುತ್ತದೆಂದೂ ಇವರು ಹೇಳುತಿದ್ದು ಇಂಥ ಬೂದಿಯನ್ನು ಸಂಗ್ರಹಿಸಿ ಇಡಲು ಸಾಧ್ಯವೇ ಏನೆಂಬ ಬಗ್ಗೆ ಆಸ್ಥೆ ಮಾಡಿರುತ್ತದೆ. ಜಲಚರಪ್ರಾಣಿಗಳ ಸಂಚಾರ ಭಯದೊಂದಿಗೆ ಗಾಳಿಯಲ್ಲಿ ಬೂದಿ ತೇಲಿಕೊಂಡು ಹೋಗುವ ಅಪಾಯವೂ ಸೇರಿಕೊಂಡು ನಿರಪರಾಧಿಗಳಾದ ನಾಗರಿಕರು ಅಮೇರಿಕದ ಆಟದ ಪರಿಣಾಮದಲ್ಲಿ ಕಾಟಕ್ಕೆ ಗುರಿಯಾಗುವ ದುರ್ದೈವ ಬಂದೊದಗಿದೆ. ಇಂತಹ ಹುಚ್ಚಾಟವನ್ನು ತಕ್ಷಣ ನಿಲ್ಲಿಸಿಬಿಡಬೇಕೆಂಬ ಕುರಿತು ಬ್ರಿಟನು, ಆಸ್ಟ್ರೇಲಿಯಾ, ಫ್ರಾನ್ಸು, ಜಪಾನು ಮುಂತಾದ ದೇಶಗಳಲ್ಲಿ ಒತ್ತಾಯ ಪೂರ್ವಕ ಕೇಳಲಾಗುತ್ತದೆ. ಸಾರ್ವಜನಿಕ ಅಭಿಪ್ರಾಯದ ಮುಖಗಳೆಂದು ಹೆಸರಾದ ಪತ್ರಿಕೆಗಳು ಅಣು ಶಸ್ತ್ರಾಸ್ತ್ರಗಳ ಪ್ರತಿಬಂಧ ವಿಷಯಕ್ಕೆ ಅತ್ಯಧಿಕ ಮಹತ್ವವನ್ನು ಕೊಟ್ಟಿರುತ್ತವೆ. ಬ್ರಿಟಿಷ ಪಾರ್ಲಿಮೆಂಟಿನಲ್ಲಿ ಹೆಚ್ಚುಕಡಿಮೆ ಎಲ್ಲ ಸದಸ್ಯರೂ ತೀವ್ರ ಪ್ರತಿಕ್ರಿಯೆಯನ್ನು ವ್ಯಕ್ತಗೊಳಿಸಿ, ಮಹಾ ರಾಷ್ಟ್ರಗಳ ಧುರೀಣರು ವಿನಾಶ ಕಾರ್ಯದಿಂದ ಪರಾವೃತ್ತರಾಗುವುದಕ್ಕೆ ನೋಡಬೇಕಾಗಿ ಕೇಳಿಕೊಂಡರು. ಪ್ರಧಾನಿ ಚರ್ಚಿಲ್ಲರು ತಮ್ಮ ಪ್ರಜೆಗಳನ್ನೂ ಪ್ರಜೆಗಳ ಪ್ರತಿನಿಧಿಗಳನ್ನೂ ಸಮಾಧಾನಪಡಿಸುವುದಕ್ಕೋಸ್ಕರ ಹೇಳಿಕೆಯೊಂದನ್ನು ಕೊಡಲು ಮುಂದಾದರು. ಹೀಗೆ ವರದಿಕ್ಷಗಳಲ್ಲೂ ಕಳವಳ, ಗೊಂದಲ, ಉದ್ವೇಗ ಹಾಗೂ ವಿಮಂಚನೆಯ ಪರಿಸ್ಥಿತಿ ತೋರಿ ಬರುತಿದ್ದಾಗ—ಅಮೇರಿಕಾ ಸರಕಾರ ಸ್ಥಿತಪ್ರಜ್ಞನಂತೆ ಮೂಗು ಹಿಡಿದು ಕುಳಿತಿದೆ. ತನಗೆ ಇದಾವುದರ ಗೋಚರವೂ ಇಲ್ಲವೆಂಬಂತೆ—ಕಳೆದ ಶುಕ್ರವಾರ (ತಾ ೨೬) ದಿನ ಇನ್ನೊಂದು ಜಲ ಜನಕ ಬಾಂಬನ್ನು ಸ್ಫೋಟಗೊಳಿಸಿದೆ! ಇಂತಹ ಪ್ರಯೋಗಗಳ ಅನಿಷ್ಟ ಪರಿಣಾಮದ ಸ್ಪಷ್ಟ ಚಿತ್ರವನ್ನು ಮುಂದಾಗಿ ಗ್ರಹಿಸುವ ಮತ್ತು ಅಣುಶಕ್ತಿಯ ಪ್ರಭಾವದ ಮೇಲೆ ಯಶಸ್ವಿ ನಿಯಂತ್ರಣವನ್ನು ಇಟ್ಟುಕೊಳ್ಳುವ ಸಾಮರ್ಥ್ಯದ ಅಭಾವ ವಿದ್ದಾಗಲೂ ಈ ಬಗೆಯ ಪ್ರಯೋಗ—ಪರೀಕ್ಷೆಗಳನ್ನು ನಡೆಸತೊಡಗುವುದೆಂದರೆ—ಮಾನವತೆಯ ಕೊರಳಿಗೆ ನೇಣು ಹಾಕಿ ಸಂತೋಷಿಸುವ ಆಟವೆನಿಸುತ್ತದೆ. ಭಾರತದ ಪ್ರಧಾನಮಂತ್ರಿಗಳು ಇಂತಹ ಹವ್ಯಾಸವನ್ನು ಖಂಡಿಸಿ, ಜಾಗತಿಕ ಅಭಿಪ್ರಾಯಕ್ಕೆ ಸಹಾನುಭೂತಿಯನ್ನು ಸೂಚಿಸಿದರು. ಅಮೇರಿಕವಾಗಲೀ, ರಶಿಯಾ ಮುಂತಾದ ಇತರ ಯಾವುದೇ ರಾಷ್ಟ್ರವಾಗಲೀ—ಊಹನಾತೀತ ರೀತಿಯಲ್ಲಿ ದುಷ್ಪರಿಣಾಮಗಳನ್ನು ಉಂಟುಮಾಡುವ ಇಂತಹ ಬಾಂಬುಗಳ ಪ್ರಯೋಗವನ್ನು ಮುಂದಕ್ಕೆ ನಡೆಸಲೇ ಬಾರದು. ಯುದ್ಧ ನಡೆಯದಿರುವಾಗಲೂ ಲೋಕವನ್ನು ವಿಪತ್ಪರಂಪರೆಗೆ ಸಿಲುಕಿಸುವ ಈ ಮಾದರಿಯ ಪ್ರಯೋಗ ವಿಜ್ಞಾನದ ಧವಳಕೀರ್ತಿಗೆ ಎಷ್ಟು ಮಾತ್ರಕ್ಕೂ ಶೋಭೆ ತರುವುದಿಲ್ಲ. ಈ ಮಾತನ್ನು ಎಲ್ಲರೂ ಸ್ಪಷ್ಟವಾಗಿ ಗ್ರಹಿಸಿ, ಅನಿಷ್ಟ ಪ್ರವೃತ್ತಿಯನ್ನು ಬಿಟ್ಟುಗೊಟ್ಟು, ಅಣುಶಕ್ತಿಯನ್ನು ಮಾನವತೆಯ ಕಲ್ಯಾಣಕ್ಕೋಸ್ಕರ ವಿಧಾಯಕ ಕಾರ್ಯಗಳಲ್ಲಿ ಮಾತ್ರ ಬಳಸಲು ಪ್ರಯತ್ನಿಸಬೇಕು; ಮಾನವತೆಯ ಹಾಗೂ ನಾಗರಿಕತೆಯ ನಾಶಕಾರ್ಯವನ್ನು ಬಿಟ್ಟುಗೊಟ್ಟು ರಚನೆಯ ಕೆಲಸದಲ್ಲಿ ಧುಮುಕಬೇಕು. ರಾಜಕಾರಣಿಗಳೂ ವಿಜ್ಞಾನಿಗಳೂ ಇದನ್ನೊಂದು ಆಹ್ವಾನವಾಗಿ ತಿಳಿದು ಸಂಯಮದಿಂದ, ಕಲ್ಯಾಣ ಬುದ್ಧಿಯಿಂದ ವರ್ತಿಸ ತಕ್ಕದ್ದು ಕರ್ತವ್ಯ.

ಮದ್ರಾಸು ಶಾಸನ ಸಭಾ ಕಾಂಗ್ರೆಸು ಪಕ್ಷ

ಕಾಮರಾಜ ನಾಡರರು ಮುಂದಿನ ಧುರೀಣ

ಮದ್ರಾಸು ರಾಜ್ಯದ ಮುಖ್ಯ ಮಂತ್ರಿಗಳಾದ ಶ್ರೀ ರಾಜಗೋಪಾಲಾಚಾರಿಯವರು ಅನಾರೋಗ್ಯದ ಕಾರಣದಿಂದ ರಾಜೀನಾಮೆ ಕೊಡಬೇಕೆಂಬ ತಮ್ಮ ಇಚ್ಛೆಯನ್ನು ಮದ್ರಾಸಿನ ಮೇಲ್ಮನೆಯಲ್ಲೂ ದಿನಾಂಕ ೩೦ರಂದು ತಿಳಿಸಿದರು. ಪ್ರತಿಪಕ್ಷದ ನಾಯಕರಾದ ಡಾ. ಎ. ಲಕ್ಷ್ಮಣಸ್ವಾಮಿ ಮುದಲಿಯಾರರು ರಾಜಾಜಿಯವರು ರಾಜ್ಯಕ್ಕೂ ರಾಷ್ಟ್ರಕ್ಕೂ ಸಲ್ಲಿಸಿದ ಬಹುಮುಖವಾದ ಸೇವೆಯನ್ನು ಪ್ರಶಂಸಿಸಿ ಭಾಷಣ ಮಾಡಿದರು.

ಅಂದು ಮದ್ರಾಸಿನ ಶಾಸನ ಸಭಾ ಕಾಂಗ್ರೆಸ ಪಕ್ಷದ ಸಭೆಯೂ ಸೇರಿ, ಮುಂದಿನ ಧುರೀಣನನ್ನು ಆರಿಸುವ ಕಾರ್ಯಕ್ರಮ ಜರಗಿತು. ಈಗ ಕಾಂಗ್ರೆಸ ಪಕ್ಷದ ಉಪಧುರೀಣರಾಗಿರುವ ಶ್ರೀ ಸುಬ್ರಹ್ಮಣ್ಯಮರೂ ತಮಿಳುನಾಡು ಪ್ರದೇಶ ಕಾಂಗ್ರೆಸಿನ ಅಧ್ಯಕ್ಷರಾದ ಶ್ರೀ ಕಾಮರಾಜ ನಾಡರರೂ ಧುರೀಣತ್ವಕ್ಕೋಸ್ಕರ ಸ್ಪರ್ಧಿಸಿದರು. ಇದರಲ್ಲಿ ಕಾಮರಾಜ ನಾಡರರು ೯೩ ಮತಗಳನ್ನು ಗಳಿಸಿ, ೪೧ ಮತಗಳನ್ನು ಮಾತ್ರ ಸಂಪಾದಿಸಿದ ಸುಬ್ರಹ್ಮಣ್ಯಮರನ್ನು ಸೋಲಿಸಿದರು. ಹತ್ತು ಮಂದಿ ಸದಸ್ಯರು ಸಭೆಗೆ ಬಂದಿರಲಿಲ್ಲ.

ಮುಂದಿನ ಏರ್ಪಾಡು

ಈ ಚುನಾವಣೆಯ ಬಳಿಕ ಪತ್ರಿಕಾ ಪ್ರತಿನಿಧಿಗಳನ್ನು ಉದ್ದೇಶಿಸಿ ರಾಜಾಜಿಯವರು ಹೀಗೆ ತಿಳಿಸಿದರು—

"ಸಭೆಯಲ್ಲಿ ನಡೆದ ಚುನಾವಣೆಯ ಫಲಿತಾಂಶವನ್ನು ಕಾಂಗ್ರೆಸಾಧ್ಯಕ್ಷ ನೆಹರೂರವರಿಗೂ ಪಾರ್ಲಿಮೆಂಟರಿ ಬೋರ್ಡಿಗೂ ಕಳಿಸಲಾಗುವುದು. ಅಲ್ಲಿಂದ ಏನು ಉತ್ತರ ಬರುವುದೆಂಬುದನ್ನು ಕಂಡು ಮುಂದಿನ ಕ್ರಮ ಕೈಗೊಳ್ಳಲ್ಪಡುತ್ತದೆ. ಅಲ್ಲಿಯ ಪ್ರತಿಕ್ರಿಯೆ ತಿಳಿಯದೆ, ಕಾಂಗ್ರೆಸಾಧ್ಯಕ್ಷ ನೆಹರೂರವರ ಅಭಿಪ್ರಾಯವನ್ನು ಗ್ರಹಿಸದೆ, ನಾನು ರಾಜೀನಾಮೆಕೊಡುವುದು ಸಾಧ್ಯವಿಲ್ಲ. ಈಗಿನ ಸಂಭವಗಳಿಂದ ಶಾಸನಸಭೆಯ ಕಾರ್ಯಕ್ರಮದಲ್ಲಿ ಬದಲಾವಣೆಯಾಗುವುದಿಲ್ಲ".

ಇನ್ನು ಕೆಲವೇ ದಿನಗಳಲ್ಲಿ ರಾಜಾಜಿ ನಿಜವಾಗಿಯೂ ರಾಜೀನಾಮೆ ಕೊಡುವರೋ ಏನೆಂಬ ಕುರಿತು ತಿಳಿದುಬರಬಹುದು.

ಪ್ರಕಟಣೆ

ಕಾರ್ಕಳ ತಾಲೂಕು ಇರ್ವತ್ತೂರು ಮಾಗಣೆ ಕುಕ್ಕುಜೆ ಗ್ರಾಮದ ಕುಡುತ್ತಾಕ್ಯಾರಿನಲ್ಲಿ ದಿನ ಕೊರಗ ಹೆಗ್ಗಡೇರ ಸೊಸೆ ರತಿ ಹೆಗ್ಗಡ್ತಿಯಾದ ನಾನು ಈ ಮೂಲಕ ಎಲ್ಲಾ ಜನರಿಗೆ ತಿಳಿಯ ಪಡಿಸುವುದೇನಂದರೆ:—

ನಾವು ಅಳಿಯ ಸಂತಾನ ಕಟ್ಟು ಆಚರಿಸುವ ಬಂಟರಾಯಾನೆ ನಾಡವರ ಜಾತಿಯವರಾಗಿದ್ದು, ನಮ್ಮ ಕುಟುಂಬಕ್ಕೆ ನಮ್ಮ ಹಕ್ಕಿನ ಸ್ವಪ್ರಾರ್ಜಿತವಾದ ಕೆಲವು ಮೂಲೀ ವ—ಮೂಲಗೇಣಿ ಹಕ್ಕಿನ ಆಸ್ತಿಗಳಿದ್ದು, ಅದನ್ನು ನಾವು ನಿಕಟಾಕದಲ್ಲಿ ಅನುಭವಿಸಿಕೊಂಡು ಬರುವಾಗ, ವಿಶಾಲವಾದ ನಮ್ಮ ಕುಟುಂಬದಲ್ಲಿ ಕಲಹಗಳು ತಲೆದೋರುವ ಸೂಚನೆ ಕಂಡುಬಂದದ್ದರಿಂದ, ನಾವು ಇದೇ ಕಳೆದ 1952ನೇ ಇಸವಿಯಲ್ಲಿ, ಸದ್ರಿ ಆಸ್ತಿ ವ ಕುಟುಂಬದ ಚರಸೊತ್ತುಗಳನ್ನು ಗ್ರಹಸ್ಥರಿದ್ದು, ಬ್ಯಾದರೆಯಾಗಿ ಪಂಗಡಿಸಿಕೊಂಡು ಪ್ರತ್ಯ ಪ್ರತ್ಯೇಕ ವಾಸ್ತವಿಸಿ ಜೀವಿಸಿಕೊಂಡು ಬರುತ್ತೇವೆ. ಹೀಗಿರುತ್ತಾ ಕುಟುಂಬಾತೆರದ ಆಸ್ತಿಯು ಕುಕ್ಕುಜೆ ಗ್ರಾಮದ ನಂಬ್ರ 30ನೇ ಪಟ್ಟೆಯು, ಕುಟುಂಬದ ಹಿರಿಯರೂ, ಯಜಮಾನರೂ, ಆದ ನನ್ನ ಸೋದರ ಮಾವ ಕೊರಗ ಹೆಗ್ಗಡೇರ ಹೆಸರಲ್ಲಿಯೇ ನಡೆದು ಬರುತ್ತದೆ. ನಾವು ಹಾಗೆ ಪಂಗಡಿಸಿ ಕೊಳ್ಳುವಾಗ ನಮ್ಮ ಕುಟುಂಬಕ್ಕೆ ನಮ್ಮಿಂದಾದ ಯಾವುದೊಂದು ಸಾಲ ವಗೈರೆ ಇದ್ದದ್ದಿಲ್ಲ. ಸಾಲ ಮಾಡುವ ಅಗತ್ಯವೂ ಇದ್ದಿಲ್ಲ—

ಇತ್ತೀಚೆಗೆ ವಯೋವೃದ್ಧರಾದ ನನ್ನ ಮಾವ ಕೊರಗ ಹೆಗ್ಗಡೇರು, ನಮ್ಮ ಕುಟುಂಬದ ಕೆಲವು ಮಂದಿಯ ಕೂಡುವಿಕೆಯಿಂದ ಕುಟುಂಬದ ಸ್ಥಿರ ಚರಸೊತ್ತುಗಳನ್ನು ಹೊಣೆ ದಿಸುವಂತಹ ಸಾಲ ವಗೈರೆ ಮಾಡಲಿಕ್ಕೆ ಉದ್ಯುಕ್ತರಾಗಿದ್ದಾರೆಂತ ತಿಳಿದು ಬಂದಿದೆ. ನಮ್ಮ ಕುಟುಂಬಾರ್ತಕ್ಕೆ ಈಗಲೂ ಸಾಲ ಮಾಡುವ ತಗಾದೆ ವ ಅಗತ್ಯ ಇರುವುದಿಲ್ಲ. ಹೀಗಿರುತ್ತಾ ನಮ್ಮ ಕುಟುಂಬದ ಯಾವನೊಬ್ಬ ವ್ಯಕ್ತಿ ಅಥವಾ ನಮ್ಮ ಕುಟುಂಬದ ಕೆಲವರ ಕೂಡುವಿಕೆಯಿಂದ, ವ ಪಟ್ಟಾದಾರನ ಸೇರ್ಪಡೆಯಿಂದ ಯಾರಾದರೂ ಸಾಲ ವಗೈರೆ ಕೊಟ್ಟಲ್ಲಿ, ಅಂತಹ ಸಾಲಗಳಿಗೆ ಕುಟುಂಬದ ಎಷ್ಟನ್ನಾದರೂ ಸ್ಥಿರ ಚರಸೊತ್ತುಗಳು ಜವಾಬ್ದಾರಿಯಲ್ಲ. ಅಂಥಾ ಸಾಲ ಕೊಟ್ಟರೆ, ಮಾಡಿರುತ್ತಾರೋ, ಅಂತವರ ಸ್ವಂತ ಜೋಕೆ ವ, ಅವರ ಸ್ವಾರ್ಜಿತದ ಮೇಲೆ ಜವಾಬ್ದಾರಿಯಾಗಬೇಕು. ಈ ಸಂಕ್ಷಿಪ್ತ ತಿಳಿವಳಿಕೆ.

● ಈ ಮಿಹಾಲ್ ಸೆಪ್ಪೆಟ್ಟು ಗುರ್ತ ರತಿ ಹೆಗ್ಗಡ್ತಿ ರುಜು—

ಕುಕ್ಕುಜೆ 30-3-1954.

ಭಾರತದೊಂದಿಗೆ ವಿಲಯನಹೊಂದುವ ಚಳವಳ

ಫ್ರೆಂಚ ಭಾರತದಲ್ಲಿ ವ್ಯಕ್ತಗೊಂಡ ಸ್ವಾತಂತ್ರ್ಯಾಪೇಕ್ಷೆ

ರಾಜಕೀಯ ಘಟನೆಗಳು ಹೇಗೆ ತಿರುಗಿಕೊಳ್ಳುತ್ತವೆಂದು ಯಾರೂ ಭವಿಷ್ಯ ಹೇಳುವಂತಿಲ್ಲ. ಇದಕ್ಕೆ ಕಳೆದವಾರ ಫ್ರೆಂಚ ಭಾರತ ಪ್ರದೇಶದಲ್ಲಿ ಒಮ್ಮಿಂದೊಮ್ಮೆ ದಳ್ಳುರಿಯಂತೆ ವ್ಯಾಪಿಸಹತ್ತಿದ "ಚಳೇಜಾವ್" ಚಳುವಳಿಯನ್ನು ಇನ್ನೊಂದು ನಿದರ್ಶನವಾಗಿ ಕೊಡಬಹುದು. ಭಾರತದ ನೆಲಕ್ಕೆ ಹೊಂದಿಕೊಂಡಿರುವ ಈ ವಸಾಹತು ಪ್ರದೇಶಗಳು ಭಾರತದೊಂದಿಗೆಯೇ ವಿಲೀನಗೊಳ್ಳಬೇಕಾದದ್ದು ಅಪೇಕ್ಷಣೀಯವೆಂದು ಆರೇಳು ವರ್ಷಗಳಿಂದ ಬಲವತ್ತರವಾಗಿ ಪ್ರತಿಪಾದಿಸಲ್ಪಡುತಿದ್ದರೂ ವಿಲೀನವಾದಿಗಳ ಚಳುವಳಿ ಕಳೆದೆರಡು ವಾರಗಳಲ್ಲಿ ಧರಿಸಿದ ಸ್ವರೂಪವನ್ನು ಯಾರೂ ನಿರೀಕ್ಷಿಸಿದ್ದಿಲ್ಲ. ಅದರಲ್ಲೂ ಈ ವಿಲಯನದ ಧುರೀಣತ್ವವನ್ನು ಫ್ರೆಂಚ ಭಾರತದ ಸಮಾಜವಾದೀ ಪಕ್ಷವು ವಹಿಸಿದ್ದು ಎಲ್ಲರನ್ನೂ ಆಶ್ಚರ್ಯದಲ್ಲಿ ಕೆಡವಿತು. ಭಾರತದೊಂದಿಗೆ ಸೇರ್ಪಡೆ ಹೊಂದಬೇಕೆಂದು ಕೇಳುತಿದ್ದವರನ್ನು ಪ್ರಬಲವಾಗಿ ವಿರೋಧಿಸುತಿದ್ದ ಮತ್ತು ಫ್ರೆಂಚವಸಾಹತುವಾದಿಗಳ ಏಕಮಾತ್ರ ಆಶ್ರಯವೆನಿಸಿದ್ದ ಸಮಾಜವಾದಿ ಪಕ್ಷ ಯಾವುದೇ ಪೂರ್ವಸೂಚನೆ ಇಲ್ಲದೆ ಸ್ವಾತಂತ್ರ್ಯಾಂದೋಲನದಲ್ಲಿ ಧುಮುಕುವುದಕ್ಕೆ ಕಾರಣವೇನೆಂಬುದು ತಿಳಿದಿಲ್ಲ. ಪ್ರಾಯಶಃ ಫ್ರೆಂಚ ಭಾರತದ ಗವರ್ನರರಾದ ಮೇನಾರ್ಡರಿಗೂ ಸಮಾಜವಾದೀ ಧುರೀಣ ಗಾಬರ್ಟರಿಗೂ ಮನಸ್ತಾಪ ಹುಟ್ಟಿಕೊಂಡಿರಬೇಕು.

ನಿಗ್ರಹದ ಕ್ರಮ

ಹೀಗೆ ಎಣಿಸದ ರೀತಿಯಲ್ಲಿ ವಿಲಯನ ಚಳುವಳಿಯು ಪ್ರಬಲಿಸ ತೊಡಗಿತು — ಸಮಾಜವಾದಿ ಧುರೀಣರೊಂದಿಗೆ ಮೇನಾರ್ಡರು ಸಂಧಾನ ಮಾಡಿಕೊಂಡರೆ ಬಹುಶಃ ಈ ಚಳವಳ ಶಾಂತವಾದರೂ ಆದೀತು. ಹಾಗೆಂದು, ಗಾಬರ್ಟರು ಸುಲಭದಲ್ಲಿ ಫ್ರೆಂಚರ ನವಿವಾಕುಗಳಿಂದ ಆಕರ್ಷಿತರಾಗಲಿಕ್ಕಿಲ್ಲ. ತಾವು ಕೊನೆಯ ವರೆಗೂ ಹೋರಾಟವನ್ನು ಮುಂದುವರಿಸುವುದಾಗಿ ಅವರು ಸಾ[illegible] ಭಾರತದ ಶಾಸನ ಸಭೆಯ ಮೂವತ್ತೊಂಭತ್ತು ಮಂದಿ ಸದಸ್ಯರಲ್ಲಿ ೩೭ ಸಮಾಜವಾದಿಗಳು — ಇಷ್ಟು ಮಂದಿಯೂ ವಿಲಯನಕ್ಕೆ ಬೆಂಬಲ ಸೂಚಿಸಿರುವರಲ್ಲದೆ ೨೨ ನಗರ ಸಭೆಗಳಲ್ಲಿ ೧೪ ಮತಗಣನೆ ಇಲ್ಲದೆಯೇ ಭಾರತದೊಂದಿಗೆ ಸೇರ್ಪಡೆ ಹೊಂದಬೇಕೆಂಬ ನಿರ್ಣಯವನ್ನು ಸ್ವೀಕರಿಸಿವೆ. ಮೊನ್ನೆ ದಿನಾಂಕ ೨೭ರಂದು ಫ್ರೆಂಚ ಭಾರತದ ಶಾಸನ ಸಭೆಯು ಅಧಿವೇಶನದಲ್ಲಿ ಸೇರಲಿತ್ತು. ಅಲ್ಲಿ ವಿಲಯನದ ಗೊತ್ತುವಳಿಯನ್ನು ಮಂಡಿಸಿ, ಅಂಗೀಕರಿಸುವ ನಿರ್ಧಾರವನ್ನು ಗಾಬರ್ಟರು ಮಾಡಿದ್ದರು. ಆದರೆ ಇದರಿಂದ ಹೆದರಿಕೊಂಡ ಫ್ರೆಂಚ ಸರಕಾರವು ಶಾಸನ ಸಭಾಧಿವೇಶನವನ್ನು ಅನಿಯಮಿತ ಅವಧಿಯ ವರೆಗೆ ಮುಂದೂಡಿದೆ. ಮಾತ್ರವಲ್ಲ, ವಿಲಯನವರ ಆಂದೋಲನವನ್ನು ಹತ್ತಿಕ್ಕುವುದಕ್ಕೋಸ್ಕರ ದಬ್ಬಾಳಿಕೆಯ ಕ್ರಮವನ್ನು ಕೈಗೊಂಡಿದೆ. ಪೋಲೀಸರಿಗೆ ನೂರು ರೂಪಾಯಿಗಳ ಮಕ್ಕಳ ಭತ್ತೆಯನ್ನು ಸ್ವಾತಂತ್ರ್ಯಾಂದೋಲನವನ್ನು ನಿಗ್ರಹಿಸುವ ಉದ್ದೇಶದಿಂದಲೇ ಹೊಸತಾಗಿ ಕೊಡಮಾಡಿದೆ. ಈ ಆಮಿಷವನ್ನು ನೀಡುವುದರ ಜೊತೆಗೆ ಆಯ್ದು ಪೋಲೀಸರಿಗೆ ಶಸ್ತ್ರಾಸ್ತ್ರಗಳನ್ನು ಒದಗಿಸಿಯೂ ಗೂಂಡಾ ಜನರನ್ನು ಪ್ರೋತ್ಸಾಹಿಸಿಯೂ ಭಯ ತುಂಬಿದ ವಾತಾವರಣವನ್ನು ಉಂಟುಮಾಡಲು ಫ್ರೆಂಚ ಸರಕಾರ ಹವಣಿಸಿದೆ.

ಬೆಂಬಲಿಗರ ಬಂಧನ

ವಿಲೀನೀಕರಣದ ಬೆಂಬಲಿಗರನ್ನು ಬಂಧಿಸುವುದಕ್ಕೂ ಬೆದರಿಸುವುದಕ್ಕೂ ಪ್ರಯತ್ನ ನಡೆಯುತ್ತದೆ. ಒಮ್ಮೆಯಂತೂ ಫ್ರೆಂಚ ಭಾರತದ ಪೋಲೀಸರು ಭಾರತದ ನೆಲವನ್ನು ಅಕ್ರಮವಾಗಿ ಪ್ರವೇಶಿಸಿ ಕಟ್ಟಿಪಾಳ್ಯಂದಲ್ಲಿ ಆಶ್ರಯಹೊಂದಿದ್ದ ಮೊದಲಿಯಾರ ಪೇಟೆಯ ನಗರಾಧಿಪತಿ ನಂದಗೋಪಾಲರನ್ನೂ ಇನ್ನಿಬ್ಬರು ಭಾರತೀಯರನ್ನೂ ಸೆರೆಹಿಡಿದರು. ಇದು ಗೊತ್ತಾಗುತ್ತಲೇ ಭಾರತದ ಪಾರ್ಲಿಮೆಂಟಿನಲ್ಲಿ ನೆಹರೂರವರು ಮಾತನಾಡುತ್ತಾ, ಸೆರೆಹಿಡಿದ ಭಾರತೀಯರನ್ನು ಶ್ರೀ ನಂದಗೋಪಾಲರನ್ನೂ ಕೂಡಲೇ ವಾಪಸು ಒಪ್ಪಿಸಬೇಕೆಂದೂ ಅಕ್ರಮವಾಗಿ ಭಾರತದ ನೆಲವನ್ನು ತುಳಿದ ಪೋಲೀಸರ ವಿಚಾರಣೆ ನಡೆಸಿ, ಶಿಕ್ಷಿಸಬೇಕೆಂದೂ ಹೇಳಿದರು. ಫ್ರೆಂಚ ಸರಕಾರಕ್ಕೆ ಪ್ರತಿಭಟನೆಯ ಪತ್ರ ಹೋದುದರ ಪರಿಣಾಮವಾಗಿ ಇಬ್ಬರೂ ಭಾರತೀಯರ ಬಿಡುಗಡೆಯಾಗಿದೆ — ಆದರೆ ನಂದಗೋಪಾಲರನ್ನು ಕ್ರಿಮಿನಲ್ ಕಾರಣಗಳಿಗೋಸ್ಕರ ಬಂಧಿಸಲಾಗಿದೆಯೆಂದೂ ಈ ಬಂಧನ ಫ್ರೆಂಚ ಭಾರತದೊಳಗಯೇ ನಡೆಯಿತೆಂದೂ ಪಾಂಡಿಚೆರಿಯ ಸರಕಾರ ಹೇಳುತ್ತದೆ. ಅನು ಇಬ್ಬರಿಗಿಂತ ಹೆಚ್ಚು ಜನ ಸೇರಬಾರದೆಂಬ ಪ್ರತಿಬಂಧಕಾಜ್ಞೆ ಜ್ಯಾರಿ ಮಾಡಿವೆಯಲ್ಲದೆ, ಭಾರತ ಆಕಾಶವಾಣಿಯ ಪ್ರಸಾರ ಕೇಳುವುದಕ್ಕೆ ತಡೆಯನ್ನೂ ಒಡ್ಡಿದೆ. ಇದರ ಮೇಲೆ, ಗವರ್ನರರಾದ ಮೇನಾರ್ಡರು ಪತ್ರಿಕಾ ಪ್ರತಿನಿಧಿಗಳ ಪರಿಷತ್ತೊಂದನ್ನು ಕರೆದು ವಿಲಯನವರ ಆಂದೋಲನದ ಕುರಿತು ಭಾರತೀಯ ಪತ್ರಿಕೆಗಳು ಸುಳ್ಳು ಸುಳ್ಳೇ ವರದಿಗಳನ್ನು ಪ್ರಕಟಿಸುತ್ತಿವೆಯೆಂದು ಆಕ್ಷೇಪಿಸಿದರು. ಅವರು ಮೇಜನ್ನು ಗುದ್ದುತ್ತಾ ಗುಡುಗುವಾಗ, ಒಮ್ಮೆಯಂತೂ ಕೈಯಲ್ಲಿ ಹಿಡಕೊಂಡಿದ್ದ ಕನ್ನಡಕ ಮೇಲಕ್ಕೆ ನೆಗೆದು ಹಾರಿತು. ಆದರೆ, ತಾವು ಪ್ರತ್ಯಕ್ಷ ಕಂಡುದರ ವರದಿ ಮಾಡಿದ್ದೇವೆಂದು ಹೇಳಿ ಪತ್ರಿಕಾ ಕರ್ತರು ಅವರ ಬಾಯಿ ಮುಚ್ಚಿಸಿದರು.

ಸತ್ಯಾಗ್ರಹ ಪ್ರಾರಂಭ

ಫ್ರೆಂಚ ಸರಕಾರವು ತನ್ನ ಅಧಿಕಾರ ವಶದಲ್ಲಿರುವ ಈ ವಸಾಹತುಗಳನ್ನು ಭಾರತಕ್ಕೆ ಒಪ್ಪಿಸಿಕೊಡಲು ಆಕ್ಷೇಪವನ್ನೇನೂ ಹೇಳುವುದಿಲ್ಲ — ಜನಮತ ಗಣನೆಯನ್ನು ನಡೆಸಿ, ಅದರ ಪರಿಣಾಮ ಅನುಕೂಲವಾಗಿದ್ದರೆ ಹಾಗೆ ಮಾಡುವುದೆಂಬ ಮಾತನ್ನು ಅದು ಮೊದಲಿಂದಲೂ ಹೇಳುತ್ತಿದೆ. ಆದರೆ, ದಬ್ಬಾಳಿಕೆ ಮತ್ತು ಪುಂಡಾಟಿಕೆಗಳನ್ನು ಮತ್ತು ನಿರ್ಲಜ್ಜ ಕೃತ್ಯಗಳನ್ನು ಅಧಿಕಾರ ಹೊಂದಿದವರು ನಡೆಸುತ್ತಿರುವಷ್ಟು ಕಾಲ ಸಾರ್ವತ್ರಿಕ ಮತಗಣನೆಯು ಜನತೆಯ ನ್ಯಾಯವಾದ ಆಶೋತ್ತರಗಳನ್ನು ವ್ಯಕ್ತಗೊಳಿಸುವುದು ಸಂಶಯಾಸ್ಪದವೆಂದು ಭಾರತ ಹೇಳುತ್ತದೆ. ಈಗಲಂತೂ ಫ್ರೆಂಚ ಭಾರತದ ಚುನಾಯಿತ ಪ್ರತಿನಿಧಿಗಳೇ ಸರ್ವಾನುಮತದಿಂದ ವಿಲೀನೀಕರಣದ ಬೇಡಿಕೆಯನ್ನು ಮುಂದೊತ್ತಿರುವುದರಿಂದ, ಪುನಃ ಮತಗಣನೆ ನಡೆಸುವ ಪ್ರಶ್ನೆಯೇ ಬರುವುದಿಲ್ಲ. ಭಾರತದ ಈ ನಿಲುಮೆಯನ್ನು ಫ್ರೆಂಚ ಸರಕಾರ ಒಪ್ಪದೆ, ಸಾರ್ವತ್ರಿಕ ಜನಮತಗಣನೆಯೇ ನಡೆಯಬೇಕೆಂದೂ ಇದಕ್ಕೆ ಮುಂಚೆ ಭಾರತವು ಹೇರಿದ ಆರ್ಥಿಕ ದಿಗ್ಬಂಧನವನ್ನು ರದ್ದುಗೊಳಿಸಬೇಕೆಂದೂ ಉತ್ತರಕೊಟ್ಟಿದೆ. ಆದುದರಿಂದ ಫ್ರೆಂಚ ಭಾರತ ನಿವಾಸಿಗಳು ಸತ್ಯಾಗ್ರಹದ ಸಿದ್ಧತೆಯಲ್ಲಿ ಅನಿವಾರ್ಯವಾಗಿ ತೊಡಗಿದರು. ಭಾರತದ ನೆಲದಿಂದಾಗಿ ಪಾಂಡಿಚೇರಿ ಪ್ರದೇಶದಿಂದ ಪ್ರತ್ಯೇಕಿಸಲ್ಪಟ್ಟ ನಾಲ್ಕು ನಗರ ಸಭಾ ಪ್ರದೇಶಗಳಲ್ಲಿಯೂ ಕರೈಕಲಿನಲ್ಲಿಯೂ ಸಾಮೂಹಿಕ ಸತ್ಯಾಗ್ರಹ ಪ್ರಾರಂಭವಾಗಿದ್ದು, ಅದು ಬೇಗನೇ ಇತರೆಡೆಗೂ ವ್ಯಾಪಿಸಬಹುದು. ಪ್ರತಿಯೊಂದೂ ಮನೆಯ ಮೇಲೆ ಭಾರತದ ರಾಷ್ಟ್ರಧ್ವಜ ಹಾರಾಡತೊಡಗಿತಲ್ಲದೆ, ಗಾಬರ್ಟರೇ ಮುಂತಾದ ಸಮಾಜವಾದೀ ಧುರೀಣರು ಹಳ್ಳಿಯ ರಸ್ತೆಗಳ ಮೇಲೆ ತಮ್ಮ ಮೋಟಾರು ಕಾರನ್ನು ಓಡಿಸಿ, ಜನರನ್ನು ಸಂದರ್ಶಿಸಿ, ಸಭೆಗಳಲ್ಲಿ ಭಾಷಣ ಮಾಡಿ, ಫ್ರೆಂಚ ಸರಕಾರದ ವಿರುದ್ಧ ಹಾಗು ವಿಲಯನದ ಪರವಾಗಿ ಜನರಿಂದ ಘೋಷಣೆಗಳನ್ನು ಹೊರಡಿಸಿದರು. ಕಲ್ಲಾಪೇಟೆ ಎಂಬಲ್ಲಂತೂ "ನಾವು ಭಾರತದೊಂದಿಗ ಸೇರಿ ಸ್ವತಂತ್ರ ಪ್ರಜೆಗಳಾಗಿದ್ದೇವೆ" ಎನ್ನುತ್ತಾ ಜನರು ತಮ್ಮನ್ನು ಬಂಧಿಸಲು ಬಂದ ಪೋಲೀಸರನ್ನು ಮೆರವಣಿಗೆಯಲ್ಲಿ ಸೇರಲು ಕೇಳಿಕೊಂಡಾಗ, ಈ ಸಿಪಾಯಿಗಳಲ್ಲೂ ದೇಶಪ್ರೇಮ ಉಕ್ಕಿಬಂದು, "ಜೈ ಹಿಂದ್" ಎಂದವರು ಕೂಗಿ ಜನರನ್ನು ಕೂಡಿಕೊಂಡರು!

ಶಾಂತ ಹೋರಾಟ

ಫ್ರೆಂಚ ಭಾರತದ ಪರಿಸ್ಥಿತಿಯನ್ನು ಪ್ರತ್ಯಕ್ಷ ಪರಿಶೀಲಿಸಿ ಅಭ್ಯಸಿಸುವುದಕ್ಕೋಸ್ಕರ ಸಾಗರೋತ್ತರ ಶಾಖೆಯ ಇನಸ್ಪೆಕ್ಟರ ಜನರಲ್ಲರು ಪಾಂಡಿಚೇರಿಗೆ ಆಗಮಿಸಿದ್ದಾರೆ. ಎರಡು ವಾರಗಳ ತಮ್ಮ ವಾಸ್ತವ್ಯಕಾಲದಲ್ಲಿ ಅವರು ಫ್ರೆಂಚ ಭಾರತದಲ್ಲಿ ವಿಲಯನ ಚಳವಳ ಎಷ್ಟು ತೀವ್ರವಾಗಿದೆಯೆಂಬುವನ್ನು ಕಂಡು ಹಿಡಿಯಬಹುದು. ತಾವು ತೆರೆದ ಮನಸ್ಸಿನಿಂದ ಪಾಂಡಿಚೇರಿಗೆ ಬಂದಿರುವುದಾಗಿ ಅವರು ಹೇಳುತಿದ್ದರೂ ಅದಷ್ಟು ಮಟ್ಟಿಗೆ ಫ್ರೆಂಚ ಸಾಮ್ರಾಜ್ಯ ಶಾಹಿತ್ವದ ಭದ್ರತೆಯ ವ್ಯವಸ್ಥೆಯನ್ನು ಕೈಗೊಳ್ಳಲು ಅವರು ಆತುರದಿಂದಿರುವರೆಂದು ಹೊಸತಾಗಿ ಹೇಳುವುದು ಬೇಡ. ಪಾಂಡಿಚೆರಿ ಮತ್ತು ಕಾರೈಕಲಗಳಲ್ಲಿಯಷ್ಟೇ ಈ ಚಳವಳ ತೊಡಗಿದೆಯಲ್ಲದೆ ಪಡುಕರಾವಳಿಯ ಮಾಹೆ ಹಾಗು ಯಾನಂಗಳಲ್ಲಿ ವಿಲಯನದ ಚಳವಳ ಮೂರ್ತಿಸ್ವರೂಪಕ್ಕೆ ಬಂದಿಲ್ಲ. ಇಲ್ಲಿ ಕೂಡ ಜನತೆ ವಸಾಹತುವಾದವನ್ನು ಖಂಡಿಸಿ, ಭಾರತದೊಂದಿಗೆ ಸೇರ್ಪಡೆಗೊಂಡುವ ಛಲವನ್ನು ಪ್ರಕಟಪಡಿಸಿತೆಂದರೆ ಫ್ರೆಂಚರು ಗಂಟುಮೂಟೆಕಟ್ಟಲೇ ಬೇಕಾಗುತ್ತದೆ. ಈಗಾಗಲೇ ಭಿತ್ತಿ ಚಿತ್ರ ಹಾಗೂ ಪ್ರಕಟಣೆಗಳ ಮೂಲಕ ಮಾಹೆಯಲ್ಲಿ ವಿಲಯನವಾದಿ ನಾಗರಿಕರು ತಮ್ಮ ಸಾಹಸಮಯ ಚಟುವಟಿಕೆಗಳನ್ನು ಪ್ರಾರಂಭಿಸಿದ್ದಾರೆ. ಪೋಲೀಸರಿಗೆ ಈ ನೋಟೀಸುಗಳನ್ನೂ ಪ್ರಕಟಣೆಗಳನ್ನೂ ಕಿತ್ತೊಗೆಯುವ ಕೆಲಸ ಬಂದಿದೆ. ಜನತೆಯಂತೂ ಲಾಠಿ ಚಾರ್ಜು ಮತ್ತು ಗೋಳೀಬಾರುಗಳಂಥ ದುರ್ಧರ ಪ್ರಸಂಗಕ್ಕೆ ಎದೆಗೊಡಬೇಕೆಂಬುದು ಸ್ವತಃಸಿದ್ಧ. ಈ ಶಾಂತ ಹೋರಾಟದ ಪರಿಣಾಮವಾಗಿ, ಭಾರತದೊಂದಿಗೆ ಸೇರ್ಪಡೆ ಹೊಂದಿ ವಸಾಹತುವಾದದ ನೊಗದಿಂದ ಬಿಡುಗಡೆಪಡೆಯುವ ಸುದಿನ ಬೇಗನೇ ಬರಲಿ—ಎಂಬುದಾಗಿ ಭಾರತದ ಸಹಾನುಭೂತಿಪರವಾಣಿ ಹಾರೈಸಿ, ಹರಸುತ್ತದೆ

ಉಡುಪಿ

ಭಜನಾ ಮಂದಿರದ ಉದ್ಘಾಟನೆ

ಪೋಲೀಸ್ ಲ್ಯಾನಿನಲ್ಲಿ ಹೊಸತಾಗಿ ಕಟ್ಟಿಸಲಾದ ಶ್ರೀ ಮೂಕಾಂಬಿಕಾ ಭಜನಾ ಮಂದಿರದ ಉದ್ಘಾಟನಾ ಸಮಾರಂಭವನ್ನು ಕಳೆದ ತಾ ೨೪ರಲ್ಲು ಡಾ| ಟಿ. ಎಮ್. ಎ. ಪೈಗಳು ನೆರವೇರಿಸಿದರು. ಶ್ರೀ [illegible]ಯವರು ಮಂದಿರ ನಿರ್ಮಾಣ ವರದಿಯನ್ನೋದಿದರು. ಪಂಡಿತ ದೇವದಾಸ, ಶ್ರೀಗಳಾದ ಎ. ಜಿ. ಆಳ್ವ ಮತ್ತು ಡಬ್ಲ್ಯು. ಎ. [illegible]ನವರು ಸಂದರ್ಭೋಚಿತ ಮಾತುಗಳನ್ನಾಡಿದರು. ಸಬ್ ಇನ್ಸ್‌ಪೆಕ್ಟರ್ ಶ್ರೀ ಸಿ. ಕೆ. [illegible] ಅವರು ಧನ್ಯವಾದಗಳನ್ನರ್ಪಿಸಿದರು.

ನಗರ ಸಭೆಯು— ಕಳೆದ ತಾ ೨೭ರಲ್ಲು ಸಂಜೆ ಉಪಾಧ್ಯಕ್ಷ ಡಾ| ಪಿ. ವಿ. [illegible] ಅಧ್ಯಕ್ಷತೆಯಲ್ಲಿ ಜರಗಿತು. ಕೆಲವು ಬಿ. ಒ. ಗಳ ವಿಚಾರ [illegible]. ತಾ 11—2—1953ರಲ್ಲು ಸೇರಿದ ಈ ನಗರ ಸಭೆಯಲ್ಲಿ ಆದ ನಂಬ್ರ 16ನೇ ನಿರ್ಣಯವನ್ನು [illegible] ನಗರ ಸಭೆಯು [illegible] ಅಭಿಪ್ರಾಯವನ್ನು [illegible] ಸರಕಾರ [illegible] ಮತ್ತು [illegible] ನೋಟೀಸನ್ನು [illegible]. ಈ ಕುರಿತು [illegible] ಚರ್ಚೆ ನಡೆಯಿತು. [illegible] ತನ್ನ ಅಧಿಕಾರದ [illegible] ಶ್ರೀ ಕೆ. ಕೆ. ಪೈಗಳು ಅಭಿಪ್ರಾಯಪಿತ್ತು [illegible] ಸೂಚಕ [illegible] ದು. ಶ್ರೀ ಸಿ. ವಿ. ಆಚಾರ್ಯರು [illegible]. ಶ್ರೀ ಎ. [illegible] ವಿರೋಧಿಸಿದರು. ಕೊನೆಗೆ ಓಟು ತೆಗೆಯಲಾಗಿ ಶ್ರೀ ಕೆ. ಕೆ. ಪೈಗಳ [illegible]. [illegible] ಬಗ್ಗೆ ದೀರ್ಘ ಚರ್ಚೆ ನಡೆಯಿತು. ಅಲ್ಲದೆ ಶ್ರೀ ಬಿ. ಎಸ್. ಆಚಾರ್ಯರು ಆ ಕುರಿತು ತನ್ನ ಅತೃಪ್ತಿಯನ್ನು ಸೂಚಿಸಿ ಸಭಾತ್ಯಾಗ ಮಾಡಿದರು. ರಾತ್ರಿ [illegible] ಗಂಟೆಯಾದುದರಿಂದ ಸಭೆಯನ್ನು ಮುಂದರಿಸಬೇಕೆಂದು ಶ್ರೀ ಎಸ್. [illegible] ತಂದರು. ಶ್ರೀ ಕೆ. ಕೆ. ಪೈ [illegible] ವಿರೋಧಿಸಿದರು. ಕೊನೆಗೆ ಓಟು ತೆಗೆಯಲಾಗಿ ಶ್ರೀ [illegible] ನಿರ್ಣಯ [illegible].

ಗುರು ಕಂಬಳ— ಇದೇ ತಾ 16ರಲ್ಲಿ ಅಸ್ರಾರುದ್ದೀನ್ ವಲೀಯವರ ವಾರ್ಷಿಕ ಉರೂಸ್ ಮತ್ತು ಸಂದಲ್ ಕಾರ್ಯಕ್ರಮ ನಡೆಯಲಿರುವುದಾಗಿ ಸಂಬಂಧ ಪಟ್ಟವರು ತಿಳಿಸುತ್ತಾರೆ.

ಪಳ್ಳಿ— ಕಳೆದ ತಾ 27ರಲ್ಲಿ ಪಳ್ಳಿ ನಂಜೂರು ಗ್ರಾಮಸ್ಥರ ಸಭೆಯು ಪಳ್ಳಿ ಬೋರ್ಡು ಶಾಲೆಯಲ್ಲಿ ಡಾ| ಕೆ. ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಜಿಲ್ಲಾ ಬೋರ್ಡಿನ ಮುಕ್ಕಂ ಮೇರೆಗೆ ಪಳ್ಳಿಯಲ್ಲಿ ಹಾ| ಎ| ಶಾಲೆಯನ್ನು ತೆರೆಯುವರೆ ಒಂದು ಕಮಿಟಿ ರಚಿಸಲಾಯಿತು. ಶ್ರೀಗಳಾದ ಎನ್. ರಾಜು ಸೆಟ್ಟಿ, ಪಟೇಲ್ ಸಂಕಪ್ಪ ಹೆಗ್ಡೆ, ವಾಸುದೇವಪ್ಪ, ಬಾಲಕೃಷ್ಣ ಹೆಗ್ಡೆಯರು ಅನುಕ್ರಮವಾಗಿ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಜತೆ ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟರು. ಸಭೆಯಲ್ಲಿ ಒಂದು ನೂರು ರೂಪಾಯಿಗಳಷ್ಟು ನಗದು ವಂತಿಗೆ ವಸೂಲಾಯಿತು. ಶ್ರೀ ಬೈಲೂರು ಕೇಶವ ಕಿಣಿಯರ ಭಾಷಣ, ಶ್ರೀ ಎನ್. ವಿಠಲ ಸೆಟ್ರ ಧನ್ಯವಾದಾರ್ಪಣೆ ಕಾರ್ಯ ಕ್ರಮಗಳಾಗಿ ಸಭಾಂತ್ಯವಾಯಿತು.

ತಣ್ಣೀರುಪಂತ— ಸ್ಥಳೀಯ ಬೋರ್ಡು ಎಲಿಮೆಂಟರಿ ಶಾಲೆಯ ವಾರ್ಷಿಕೋತ್ಸವವು ಕಳೆದ ತಾ 28ರಲ್ಲಿ ಕೆ. ಜಿ. ಬಂಗೇರರ ಅಧ್ಯಕ್ಷತೆಯಲ್ಲಿ ಜರಗಿತು. ಶಿಕ್ಷಕರ ಭಾಷಣ, ಮಕ್ಕಳ ವಿನೋದಾವಳಿ ಮೊದಲಾದ ಕಾರ್ಯಕ್ರಮಗಳಾದ ನಂತರ ಶ್ರೀ ಕೆ. ಧರ್ಣಪ್ಪನವರು ವಂದನೆಗಳನ್ನರ್ಪಿಸಿದರು.

ಮುನಿಯಾಲು— ಸ್ಥಳೀಯ ಬೋರ್ಡು ಎಲಿಮೆಂಟರಿ ಶಾಲೆಯನ್ನು ಹಾ| ಎ| ಶಾಲೆಯಾಗಿ ಮಾರ್ಪಡಿಸುವರೆ ಊರವರ ಮಹಾ ಸಭೆಯೊಂದು ಕಳೆದ ತಾ 24ರಲ್ಲಿ ಶ್ರೀ ನಾಗರಾಜ ಅತಿಕಾರಿಗಳ ಅಧ್ಯಕ್ಷತೆಯಲ್ಲಿ ಜರಗಿತು. ಹಾ| ಎ| ಶಾಲೆಯ ಕಾರ್ಯಗಳನ್ನು ಜರಗಿಸುವರೆ ಹಾ| ಎ| ಶಾಲಾ ಕಮಿಟಿಯೊಂದು ರಚನೆಯಾಗಿ ಶ್ರೀಗಳಾದ ನಾಗರಾಜ ಅತಿಕಾರಿಗಳು ಅಧ್ಯಕ್ಷ ಮತ್ತು ಖಜಾಂಚಿಯರಾಗಿಯೂ ಹಾ| ಯು. ಕೃಷ್ಣನವರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು. ಶಾಲಾ ಕಟ್ಟಡ ವಿಸ್ತರಣಕ್ಕಾಗಿ ಒಂದು ಎಕ್ರೆ ಮೂವತ್ತು ಸೆಂಟ್ಸ್ ಸ್ಥಳವನ್ನು ಡಿ| ಬೋರ್ಡಿಗೆ ಧರ್ಮಾರ್ಥವಾಗಿ ಕೊಡುವರೆ ಒಪ್ಪಿಗೆಯನ್ನಿತ್ತ ಶ್ರೀ ಕುಚ್ಚೂರ ಮಂಜುನಾಥ ಹೆಬ್ಬಾರರನ್ನು ಅಭಿನಂದಿಸಲಾಯಿತು. ಶ್ರೀ ಪದ್ಮನಾಭ ರೈಗಳು ಧನ್ಯವಾದಗಳನ್ನಿತ್ತ ಬಳಿಕ ಸಭಾಂತ್ಯವಾಯಿತು.

ಕೊಕ್ಕರ್ಣೆ ನರಸಿಂಹರ ನಿಧನ—

ತಾ 29-3-54ರಂದು ಜಿಲ್ಲೆಯ ಹೆಸರಾಂತ ಯಕ್ಷಗಾನ ನಟ ಶ್ರೀ ಕೊಕ್ಕರ್ಣೆ ನರಸಿಂಹರು ದೈವಾಧೀನರಾದರು. ಶ್ರೀಯುತರು ಕೆಲವೇ ಸುಚಿತ ಯಕ್ಷಗಾನ ಕಲಾವಂತರಲ್ಲಿ ವಿಶೇಷ ಸ್ಥಾನ ಪಡೆದವರು. ಹೆಚ್ಚಾಗಿ ಸ್ತ್ರೀ ಪಾತ್ರಧಾರಿಗಳಾಗಿಯೇ ಜನಮನವನ್ನಾಕರ್ಷಿಸಿದ ಇವರ ಕಲಾ ಪ್ರೌಢಿಮೆಯು ಜಿಲ್ಲೆಯ ಉತ್ತರ ಭಾಗದ ಮನೆ ಮಾತಾಗಿದೆ. ಈ ಕಲೆಯ ಹಿರಿಯ ಮಾಲಿಕೆಯ ದಿವಂಗತ ಗಣಪತಿ ಪ್ರಭು, ಉಪ್ಪೂರಿ ಶೇಷ ಇವರ ಸ್ಥಾನದಲ್ಲಿ ಬರುವ ಉತ್ತರಭಾಗದ ಯಕ್ಷಗಾನ ಪದ್ಧತಿಯ ನರಸಿಂಹರ ನಿಧನ ಅತ್ಯಂತ ಶೋಚನೀಯ.

ಪೊಳಲಿ— ಶ್ರೀ ರಾಜರಾಜೇಶ್ವರಿ ಅಮ್ಮನವರ ದೇವಸ್ಥಾನದಲ್ಲಿ ಇದೇ ತಾ 5ರಲ್ಲಿ ಚೆಂಡಿನ ಉತ್ಸವವು ಪ್ರಾರಂಭವಾಗುವುದು. ತಾ 10ರಲ್ಲಿ ಮಹಾರಥೋತ್ಸವ ತಾ 11ರಲ್ಲಿ ತುಲಾಭಾರ ಸೇವೆಯೂ ರಾತ್ರಿ ಅವಭೃತ ಮಂಗಲ ಸ್ನಾನವೂ ಪದ್ಧತಿಯಂತೆ ನಡೆಯುವುದು

ಕೊಂಡಾಡಿ— ಶ್ರೀ ಬಡಗ ಬೆಟ್ಟು ಬಾಬ ಹೆಗ್ಡೆಯರು ತಮ್ಮ ಕೊಂಡಾಡಿ ಮನೆಯಲ್ಲಿ ತಮ್ಮ 76ನೆ ವಯಸ್ಸಿನಲ್ಲಿ ಕಳೆದ ತಾ 21ರಲ್ಲಿ ನಿಧನ ಹೊಂದಿರುವುದು ವಿಷಾದಕರ. ದಿವಂಗತರು ಸತ್ಯ ಪ್ರಿಯರೂ, ಸರಳ ನಡತೆಯವರೂ, ಸೂಕ್ಷ್ಮ ದರ್ಶಿಗಳೂ ಆಗಿದ್ದು ಜನಾದರಣೆ ಗಳಿಸಿದ್ದರು.

ಮುನಿಯಾಲು – ವರಂಗದ ಶ್ರೀ ಪದ್ಮಾವತಿ ನಾಟಕ ಕಲಾ ಮಂಡಳಿಯವರು ಕಳೆದ ತಾ 21ರಲ್ಲಿ ಮುನಿಯಾಲಿನಲ್ಲಿ 'ರಾಷ್ಟ್ರ ಪ್ರೇಮ' ಎಂಬ ಸಾಮಾಜಿಕ ನಾಟಕವನ್ನು ಯಶಸ್ವಿಯಾಗಿ ಅಭಿನಯಿಸಿದರು. ಶ್ರೀ ಎಮ್. ಡಿ. ಅತಿಕಾರಿಗಳು ಸಮಾರಂಭದ ಅಧ್ಯಕ್ಷತೆ ವಹಿಸಿದ್ದು ಮಂಡಳಿಯ ಶ್ರೇಯಸ್ಸನ್ನು ಕೋರಿದರು.

ಬೈಂದೂರು—26—3—54ರಲ್ಲಿ ಇಲ್ಲಿಯ ಪಂಚಾಯತ ಬೋರ್ಡು ಅಧ್ಯಕ್ಷ ಶ್ರೀ ದತ್ತಾತ್ರೇಯ ರಾಯರ ನೇತೃತ್ವದಲ್ಲಿ ಸಾರ್ವಜನಿಕ ಸಭೆ ಜರಗಿಸಲ್ಪಟ್ಟಿತು ಶ್ರೀ ಎಮ್. ಎಸ್. ವೆಂಕಟರಮಣಯ್ಯನವರು ಪ್ರಾಸ್ತಾವಿಕ ಭಾಷಣ ಮಾಡಿದ ನಂತರ ಶ್ರೀ ವಿ. ನಾಗಯ್ಯನವರು ಭೂದಾನ ಯಜ್ಞದ ಮಹತ್ವಿಕೆ, ಹಾಗೂ ವಿನೋಬಾಜೀಯವರ ವೈಶಿಷ್ಟ್ಯಗಳನ್ನು ವಿವರಿಸಿದರು. ಸಭಾಧ್ಯಕ್ಷರಾದ ಶ್ರೀ ಶ್ರೀನಿವಾಸ ಹೊಳ್ಳರು ಸಮಾರೋಪ ಭಾಷಣ ಮಾಡಿದ ನಂತರ ಸಭೆಯು ಮುಕ್ತಾಯಗೊಂಡಿತು.

ಶಿರ್ವ— ಸ್ಥಳೀಯ ಪಂಚಾಯತ ಬೋರ್ಡಿನ ಸಾಮಾನ್ಯ ಸಭೆಯು ಇದೇ ತಾ 24ರಲ್ಲಿ ಶ್ರೀ ಎಸ್. ಎ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಕಾಪು ಫಿರ್ಕಾವನ್ನು ಒಳಗೊಂಡು ಶಿರ್ವ ಸೆಂಟರಿನಲ್ಲಿ ರೂರಲ್ ಹೆಲ್ತ್ ಸೆಂಟರೊಂದನ್ನು ತೆರೆಯುವಂತೆ ಸರಕಾರವನ್ನು ಕೇಳಿಕೊಳ್ಳುವ, ಶಿರ್ವ ಬಂಟಕಲ್ಲು ಬಾವಿ ರಿಪೇರಿ ಬಗ್ಗೆ ಹಣ ಮಂಜೂರು ಮಾಡುವ, ಶಿರ್ವ ಮಂಚಕಲ್ಲು ಸಂತೆಮಾರ್ಕೆಟಿನ ಒಳಗೆ ಹೊಸ ಮಾದರಿಯ ಪಾಯಿಖಾನೆಯೊಂದನ್ನು ಕಟ್ಟುವರೆ ರೂಪಾಯಿ 520/- ಸೆಂಕ್ಷನ್ ಮಾಡುವ ಇತ್ಯಾದಿ ನಿರ್ಣಯಗಳಾದುವು.

ಕಾಸರಗೋಡು— ತಾಲೂಕು ಬೋರ್ಡ್ ಪ್ರಾಥಮಿಕ ಶಾಲಾಧ್ಯಾಪಕರ ಯೂನಿಯನ್ ಕಾರ್ಯಕಾರಿ ಸಮಿತಿ ಸಭೆಯು ಇದೇ ತಾ 20ರಲ್ಲಿ ಜನಾಬ್, ಎಮ್. ಅಹಮ್ಮದರ ಅಧ್ಯಕ್ಷತೆಯಲ್ಲಿ ಜರಗಿತು. ಹೊಸ ಪ್ರಾಥಮಿಕ ವಿದ್ಯಾ ಯೋಜನೆಯ ಕುರಿತು ವಿಚಾರ ವಿನಿಮಯ ನಡೆಯಿತು. ಕಾರ್ಯನಿರತ ಅಧ್ಯಾಪಕರು ನಿರುದ್ಯೋಗಿಗಳಾಗದಂತೆ ನೋಡಿಕೊಳ್ಳುವ ಅವಶ್ಯಕತೆಯನ್ನು ಸರಕಾರದ ಗಮನಕ್ಕೆ ತರಲಾಯಿತು

(೫ನೇ ಪುಟದಿಂದ)

ಸಮಂಜಸವಾದ ರೀತಿಯಲ್ಲಿ ನಿರ್ವಹಿಸಿ ಅಭಿವೃದ್ಧಿಗೆ ಕಾರಣರಾಗಬೇಕೆಂದೂ ಹೇಳಿದರು. ದೇಶದ ಆಂತರಿಕ ಹಾಗೂ ಹೊರಗಿನ ಪರಿಸ್ಥಿತಿಯ ಮೂಲಕ ಉದ್ದಿಮೆದಾರರ ಚಟುವಟಿಕೆಗಳ ಮೇಲೆ ಕೆಲವು ಮಟ್ಟಿನ ನಿಯಂತ್ರಣವನ್ನು ಸರಕಾರ ಹೇರಿದೆ. ಕೂಲಿಕಾರರ ಕಲ್ಯಾಣ ದೃಷ್ಟಿಯನ್ನಿಟ್ಟುಕೊಂಡು ಸರಕಾರವು ಕೆಲವು ಕಾಯಿದೆಗಳನ್ನು ಮಾಡಿದೆ. ಇವುಗಳ ಉದ್ದೇಶವನ್ನು ಖಾಸಗಿ ಉದ್ದಿಮೆದಾರರು ಮನವರಿಕೆ ಮಾಡಿಕೊಂಡು ಸಂಪೂರ್ಣ ಸಹಕಾರ ನೀಡಬೇಕು-ಎಂದವರು ವಿನಂತಿಸಿದರು

ನೀರಾ ಅಂಗಡಿಗಳು

ಆಂಧ್ರ ರಾಜ್ಯದ ವಿಧಾಯಕ ಕಾರ್ಯಕರ್ತರ ವಿನಂತಿಯನ್ನು ಮನ್ನಿಸಿ, ಅಲ್ಲಿಯ ಸರಕಾರದವರು ರಾಜ್ಯದಾದ್ಯಂತ ನೀರಾವನ್ನು ತಯಾರಿಸಿ ಮಾರುವುದಕ್ಕೂ ಕುಡಿಯುವುದಕ್ಕೂ ಅನುಮತಿ ಕೊಡಲು ನಿರ್ಧರಿಸಿದರು. ಇದು ವರೆಗೆ ಕೆಲವು ಆಯ್ದ ಪ್ರದೇಶಗಳಲ್ಲಿಯಷ್ಟೇ ನೀರಾ ತಯಾರಿಸಲ್ಪಡುತಿದ್ದು ಅಬಕಾರಿ ಇಲಾಖೆಯ ನಿಯಂತ್ರಣದಲ್ಲಿ ಇದು ನಡೆಯುತಿದ್ದಿತು. ಇನ್ನುಮುಂದೆ ಆಯಾ ಪಂಚಾಯತುಗಳು ನೀರಾ ತಯಾರಿಯ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತವೆ. ಈ ನಿರ್ಣಯಕ್ಕೆ ಶಾಸನ ಸಭೆಯ ಕಾಂಗ್ರೆಸ ಪಕ್ಷವು ವಿರೋಧವನ್ನು ಸೂಚಿಸಿದೆ. ಆದರೆ ಸರಕಾರದ ಈ ನಿರ್ಣಯದಿಂದ ಸ್ವಾಮಿ ಸೀತಾರಾಮರು ತೃಪ್ತರಾಗಿ ತಮ್ಮ ಉಪವಾಸ ವ್ರತವನ್ನು ಮುರಿದರು. ಕಳೆದ ೨೪ನೇ ತಾರೀಕಿನಂದು ಪ್ರಮುಖರ ವಿನಂತಿಯನ್ನು ಮನ್ನಿಸಿ ೬೫ ವರ್ಷ ಪ್ರಾಯದ ಈ ಮುದುಕ ಜೇನುತುಪ್ಪದೊಂದಿಗೆ ಕಿತ್ತಳೆ ಹಣ್ಣಿನ ರಸವನ್ನು ಬೆರೆಸಿ ಸೇವಿಸಿ, ಪಾರಣೆ ಮಾಡಿದರು.

ಬ್ರಹ್ಮಾವರ— ಸ್ಥಳದ ಎಸ್. ಎಂ. ಎಸ್. ಹೈಸ್ಕೂಲಿನ ನೂತನ ಕಟ್ಟಡದ ಶಂಕುಸ್ಥಾಪನಾ ಕಾರ್ಯವನ್ನು ಡಾ| ಟಿ. ಮಾಧವ ಪೈಗಳು ತಾ 29-3 54ನೆ ಬೆಳಿಗ್ಗೆ ನೆರವೇರಿಸಿದರು. ಶ್ರೀ ಬಿ. ಜನಜೀವನದಾಸ ಸೆಟ್ಟರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಶಾಲಾಕರೆಸ್ಪಾಂಡೆಂಟರಾದ ರೆ| ಫಾ| ಕುರಿಯಾಕೋಸ್ ಅವರು ಸ್ವಾಗತ ಭಾಷಣ ಮಾಡಿದರು. ಸಭಿಕರ ಪರವಾಗಿ ಶ್ರೀ ರಾಮಣ್ಣ ಸೆಟ್ಟಿ, ಶ್ರೀ ಬೈಕಾಡಿ ವೆಂಕಟಕೃಷ್ಣ ರಾಯರು, ಡಾ|| ನಾರಾಯಣ ಪೈಗಳ್, ಉಡುಪಿ ರೇಂಜ್ ಶಾಲಾ ಇನ್ಸ್ಪೆಕ್ಟರರಾದ ಹಾರಾಡಿ ಸಂಜೀವ ರಾಯರು ಮುಂತಾದವರು ಸಂಸ್ಥೆಗೆ ಪ್ರೋತ್ಸಾಹ ಕೋರಿ ಮಾತನಾಡಿದರು.

ಮುಖ್ಯೋಪಾಧ್ಯಾಯ ಕೆ. ಪಿ. ಭಟ್ಟರು ವಂದನಾರ್ಪಣೆ ಮಾಡಿದರು.

ಮುಲ್ಕಿ— ಗ| ಫಿಶ್ಮರೀಸ್ ಹೈಸ್ಕೂಲಿನ ಸ್ಕಾಟುದಳದ ಶಿಬಿರಾಗ್ನಿಯು ಕಳೆದ ತಾ 26ರಲ್ಲಿ ಶ್ರೀ ಟಿ. ರಮೇಶ ಪೈ, ಅಧ್ಯಕ್ಷ, ತಾಲೂಕು ಸ್ಕಾಟು ಎಸೋಸಿಯೇಶನ್, ಇವರ ಅಧ್ಯಕ್ಷತೆಯಲ್ಲಿ ನೆರವೇರಿತು. ಮುಖ್ಯ ಅಧ್ಯಾಪಿಕೆ ಶ್ರೀಮತಿ ಸಾರಾ ಅಮ್ಮಾನರು ಸ್ವಾಗತ ಭಾಷಣವಿತ್ತ ಬಳಿಕ ಶ್ರೀ ಎ. ಜೆ. ಆಳ್ವೆಯವರು ಶಿಬಿರಾಗ್ನಿಯನ್ನು ಉದ್ಘಾಟಿಸಿದರು. ಆ ಮೇಲೆ ವಿನೋದಗಳು, ಸಭಿಕರ ಮತ್ತು ಅಧ್ಯಕ್ಷರ ಭಾಷಣಗಳಾದುವು. ಅಧ್ಯಾಪಕ ಶ್ರೀ. ಎ. ಸುಬ್ರಾಯ ಆಳ್ವೆಯವರಿಂದ ಧನ್ಯವಾದವಾಗಿ ಸಭಾಂತ್ಯವಾಯಿತು.

ದಿ ವಿಜಯ ಬೇಂಕ್ ಲಿಮಿಟೆಡ್, ಕಾಪು.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಆಸಾಮಿಗಳು ಈ ಬೇಂಕಿನಿಂದ ಚಿನ್ನಾಭರಣಗಳ ಆಧಾರದ ಮೇಲೆ ಪಡಕೊಂಡ ಈ ಕೆಳಗೆ ನಮೂದಿಸಿದ ಸಾಲಗಳ ಅಸಲು ಬಡ್ಡಿ ಇತ್ಯಾದಿಗಳನ್ನು ಬೇಂಕಿನ ಕ್ರಮಪ್ರಕಾರ ನೋಟಿಸು ವ ರಿಜಿಸ್ತ್ರಿ ನೋಟಿಸು ಕೊಟ್ಟಾಗ್ಯೂ ಕೂಡಾ ಬಾಕಿಮಾಡಿಕೊಂಡಿರುವುದರಿಂದಲೂ ಕೆಲವರಿಗೆ ಕೊಟ್ಟ ನೋಟಿಸು ವ ರಿಜಿಸ್ತ್ರಿ ನೋಟಿಸು ಕಾರಣಾಂತರದಿಂದ ವಾಪಾಸು ಬಂದಿರುವುದರಿಂದಲೂ ಸದ್ರಿ ಸಾಲಗಳ ಸಂಬಂಧ ಬೇಂಕಿಗೆ ಸಲ್ಲತಕ್ಕ ಸಂಪೂರ್ಣ ಆ್ಯವೇಜುಗಳನ್ನು ಇದೇ ಬರುವ ತಾರೀಕು 5-4-54ನೇ ಸೋಮವಾರದ ಒಳಗೆ ಸಲ್ಲಿಸದೆ ಇದ್ದಲ್ಲಿ ಸದ್ರಿ ಸಾಲಗಳಲ್ಲಿ ಆಧಾರವಿಟ್ಟ ಆಭರಣಗಳನ್ನು ಇದೇ ತಾರೀಕು 10—4—54ನೇ ಶನಿವಾರ ಪೂರ್ವಾಹ್ನ ಘಂಟೆ 11ಕ್ಕೆ ಯಾ, ಬೇಂಕಿಗೆ ಯುಕ್ತ ತೋರುವ ಇನ್ನಿತರ ದಿನಗಳಲ್ಲಿ ಪುನಃ ನೋಟಿಸು ಕೊಡದನೇ ಈ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲ್ಪಡುವುದು. ಏಲಂನಲ್ಲಿ ಹುಟ್ಟಿಬಂದ ಆ್ಯವೇಜು ಸಾಲದ ಮೊಬಲಗಿಗೆ ಕಡಿಮೆಯಾದಲ್ಲಿ ಸಂಬಂಧಪಟ್ಟವರ ಮೇಲೆ ಜವಾಬ್ದಾರಿಯಿಂದ ಬಾಕಿ ಐವೇಜನ್ನು ವಸೂಲು ಮಾಡಲಾದಿತು. ತಿಳಿದಿರುವುದು.

ಸಾಲದ ನಂಬ್ರ	ಸಾಲ ಪಡೆದವರ ಹೆಸರುಗಳು	ರೂ. ಆ.
229/51	ಕೆ. ಪದ್ಮನಾಭ ರಾಮಭೋಗ, ರಾಮರಾಯರ ಮಗ, ಮಜೂರು ಕರಂದಾಡಿ ಗ್ರಾಮ, ಪೋಸ್ಟು ಇನ್ನಂಜೆ.	37—0
45/53	,, ,,	52—9
1121/51	ನರ್ಸು ಮರಕಲ, ಪದ್ದು ಗುರಿಕಾರರ ಅಳಿಯ, ಕೈಪುಂಜಾಲು ಮಟ್ಟು ಗ್ರಾಮ, ಪೋಸ್ಟು ಕಟಪಾಡಿ.	151—8
1269/51	ಸಂಕಪ್ಪ ಮಡಿವಾಳ, ಕರಿಯ ಮಡಿವಾಳರ ಮಗ, ಮಲ್ಲಾರು ಗ್ರಾಮ, ಪೋಸ್ಟು ಮಲ್ಲಾರು.	67—5
556/51	ರಾಮರಾಯ ಆಚಾರಿ, ಕೊರಗ ಆಚಾರಿಯರ ಮಗ, ಎರ್ಮಾಲು ಬಡಗ್ರಾಮ, ಪೋಸ್ಟು ಎರ್ಮಾಲು.	42-14
465/52	ವ್ಯಾ. ಶಿವಣ್ಣ ಶೆಟ್ಟಿ, ಮಣ್ಣ ಸೆಟ್ರ ಅಳಿಯ, ಎಲ್ಲೂರು ಗುತ್ತು, ಪೋಸ್ಟು ಎಲ್ಲೂರು.	92-11

Office: The Vijaya Bank Ltd., KAUP
Date: 29—3—1954.

K. Sitarama Shetty,
Agent.

ಪಿ. ಸಿ. ಬರುವಾ ಅಮರರಾದರು— ಸೈಗಲ್ ಸ್ವರ್ಗವಾಸಿಗಳಾದರು

ಅವರಿಬ್ಬರು ಗಳಿಸಿದ ಚಿರಂತನ ಕೀರ್ತಿ 'ದೇವದಾಸ್' ಚಿತ್ರದಿಂದಾಗಿ—

ಅಂತಹದೇ ಕೀರ್ತಿ ದಕ್ಷಿಣದ ನಾಗೇಶ್ವರ ರಾವ್—ಸಾವಿತ್ರಿ—ಲಲಿತರಿಗೆ

★ **ದೇವದಾಸು** (ತಮಿಳು)

ಮೂಲಕ ದೊರಕಿದೆ.............

ಶ್ರೀ ರಾಮಕೃಷ್ಣ ಥಿಯೇಟರ್‌ನಲ್ಲಿ ಉಡುಪಿ.

ತಾ. 31—3—54ರಿಂದ.

ಬರುವ ಚಿತ್ರ:— ಆರ್. ಕೆ. ಫಿಲ್ಮ್ಸರವರ

ಆವಾರ್ (ತಮಿಳು) ರಾಜಕಪೂರ್, ನರ್ಗಿಸ್, ಮತ್ತು ಪ್ರಖ್ಯಾತ ಗಾಯಕ ಮುಖೇಶ್.

ಶಿವರಾಮ ಕಾರಂತರ

ಕೆಲವು ಪುಸ್ತಕಗಳು

ಅಪೂರ್ವ ಪಶ್ಚಿಮ	4	4	0
ಬತ್ತದ ತೊರೆ	0	3	0
ಜಾರುವ ದಾರಿಯಲ್ಲಿ	4	0	0
ಔದಾರ್ಯದ ಉರುಳಲ್ಲಿ	6	0	0
ಮರಳಿ ಮಣ್ಣಿಗೆ	5	0	0
ತರುಳರ ಕರೆ	3	0	0
ಸನ್ಯಾಸಿಯ ಬದುಕು	2	8	0
ಸರಸಮ್ಮನ ಸಮಾಧಿ	1	9	0
ಕನ್ಯಾ ಬಲಿ	1	0	0
ದೇವದೂತರು	2	0	0
ಸಿರಿಗನ್ನಡ ಅರ್ಥಕೋಶ	4	0	0

ನವಭಾರತ ಪುಸ್ತಕ ಭಂಡಾರ, ಉಡುಪಿ.

ಹೈಸ್ಕೂಲ್, ಪಂಚಾಯತ ಬೋರ್ಡು ಮೊದಲಾದುವುಗಳ ಲೈಬ್ರರಿಗಳಿಗೆ ಬೇಕಾಗುವ ಪುಸ್ತಕಗಳು ವಿಶೇಷತರದ ಕಮಿಶನಿನಲ್ಲಿ ದೊರೆಯುತ್ತವೆ.

ವಿಚಾರಿಸಿರಿ:-

ನವಭಾರತ ಪುಸ್ತಕ ಭಂಡಾರ,

ಉಡುಪಿ, ದ. ಕ.

ಚಂದಾದಾರರು ಬಾಕಿ ಇದ್ದವರು ದಯಮಾಡಿ ಕಳುಹಿಸಿಕೊಡಿರಿ.

(೩ನೇ ಪುಟ ದಿಂದ)

ಪ್ರಾಯದಂತೆ, ಮೃತ್ಯು ಭಸ್ಮದ ಮಳೆಯನ್ನು ಪರೀಕ್ಷಿಸುವುದಕ್ಕಾಗಿಯೇ ಅಮೇರಿಕಾ ಈ ಪ್ರಯೋಗವನ್ನು ನಡೆಸಿತು. ಪರಮಾಣು ಬೂದಿಯನ್ನು ಪ್ರಯೋಗಿಸುವುದರಿಂದ ನಗರಗಳಲ್ಲಿ ಸಾವು ನೋವುಗಳನ್ನಂತೂ ಸರಿಯೇ, ಮೇಲಾಗಿ ಎರಡು ಮೂರು ವರ್ಷಗಳತನಕವಾದರೂ ಅವನ್ನು ನಿರ್ಜನವಾಗಿ ಮಾಡಬಹುದೆಂದು ಭಾವಿಸಲ್ಪಟ್ಟಿದೆ.

ನಿಷೇಧ ಸೂಚನೆ

ಇಷ್ಟು ಉಗ್ರವಾದ ಭಯಂಕರ ಅನಾಹುತವನ್ನು ಮಾಡುವ ಅಣು ಶಸ್ತ್ರಾಸ್ತ್ರಗಳನ್ನು ನಿರ್ಬಂಧಿಸಲೇ ಬೇಕೆಂಬ ಬೇಡಿಕೆ ಬಲವತ್ತರವಾಗಿ ಮಂಡಿಸಲ್ಪಟ್ಟಿದೆ ಕೆಂಟರ್‌ಬರಿಯ ಆರ್ಚಬಿಷಪರು ಜಪಾನಿ ಬೆಸ್ತರು ಪರಮಾಣು ಧೂಳಿನಿಂದ ಕೈಮೈ ಸುಟ್ಟುಕೊಂಡು ಚಿತ್ರಹಿಂಸೆಯನ್ನನುಭವಿಸುತ್ತಿರುವ ಕತೆಕೇಳಿ ಬೆಚ್ಚಿ ಬೆರಗಾಗಿ ದ್ವೇಷ ಎಂದು ಉದ್ಗರಿಸಿದ್ದಲ್ಲದೆ ಕ್ರಿಶ್ಚಿಯನ್ ಜನತೆಯು ಅಣು ಶಸ್ತ್ರಪ್ರಯೋಗ ಮಾಡಬಾರದೆಂದು ಒತ್ತಾಯಿಸುವಂತೆ ವಿನಂತಿ ಮಾಡಿಕೊಂಡರು. "ಡೈಲಿ ವರ್ಲ್ಡ್" ಎಂಬ ಬ್ರಿಟಿಷ್ ಪತ್ರಿಕೆ "ಶಾಂತ ಸಾಗರವು ಅಮೇರಿಕೆಯ ಆಟದ ಕೊಳವಲ್ಲ" ಎಂದುಹೇಳಿ, ಅಣು ಶಸ್ತ್ರಾಸ್ತ್ರ ಪ್ರಯೋಗಕ್ಕೆ ನಿಷೇಧವನ್ನು ವ್ಯಕ್ತಪಡಿಸಿದೆ. ಹಿಂದೆ ವಿಷವಾಯು ಪ್ರಯೋಗವನ್ನು ಲೀಗ್ ಆಫ್ ನೇಶನ್ಸದವರು ನಿರ್ಬಂಧಿಸಿದಂತೆ, ಅಣು ಶಸ್ತ್ರಾಸ್ತ್ರಗಳ ಪ್ರಯೋಗಕ್ಕೂ ತಡೆ ಹಾಕಬೇಕೆಂದು ಜನರ ಸಾರ್ವಜನಿಕ ಅಭಿಪ್ರಾಯ. ಪರಮಾಣು ಬೂದಿಯು ಮಾಡಬಹುದಾದ ಅನರ್ಥವು ಊಹನಾತೀತವಾಗಿರುತ್ತದೆ. ರಶಿಯಾವು ಸೈಬೀರಿಯದಲ್ಲಿ ಇಂತಹ ಪ್ರಯೋಗಗಳನ್ನು ನಡೆಸುತಿತ್ತೆಂದೂ ಪಶ್ಚಿಮ ಗಾಳಿಗೆ ಎದುರಾಗಿ ನಿಂತ ಜಪಾನಿನ ನೆಲದ ಮೇಲೂ ಅಲಾಸ್ಕಾದ ಮೇಲೂ ಸೈಬೀರಿಯಾದಲ್ಲಿ ಆದ ಸ್ಫೋಟದ ಪರಿಣಾಮವಾಗಿ ಪರಮಾಣು ಬೂದಿ ಬಂದು ಬೀಳ ಹತ್ತಿತೆಂದೂ ಇದನ್ನು ಕಂಡೇ ರಶಿಯಾದೊಡನೆ ಜಲಜನಕ ಬಾಂಬು ಇರುವುದೆಂದು ಅಮೇರಿಕಾ ಸಾರಿತೆಂದೂ ಈಗ ಹೇಳಲ್ಪಟ್ಟಿದೆ. ಎಂಬನ್ನು ನೇರಾಗಿ ಪ್ರಯೋಗಿಸುವುದಕ್ಕಿಂತಲೂ ಪರಮಾಣು ಬೂದಿಯಿಂದ ಹಾವಳಿ ನಡೆಸುವ ವಿಚಾರದತ್ತ ಈಗ ಅಧಿಕ ಗಮನ ಪೂರೈಸಲಾಗುತ್ತಿದೆಯೆಂದು ಜಪಾನೀ ತಜ್ಞರ ಅಭಿಪ್ರಾಯ. ಅಮೇರಿಕಾ ಮತ್ತು ಬ್ರಿಟನುಗಳು ಅಣುಶಕ್ತಿಯ ಅಭಿವೃದ್ಧಿಗೆ ಮಹತ್ವ ಕೊಟ್ಟು ಅತ್ಯಧಿಕ ಹಣವನ್ನು ವೆಚ್ಚಮಾಡಲು ನಿರ್ಧರಿಸಿವೆ. ಫ್ರಾನ್ಸು ಸಹ ಮುಂದಿನ ವರ್ಷದಲ್ಲಿ ಅಣು ಶಕ್ತಿಯ ಸಂಶೋಧನೆಯತ್ತ ಗಮನ ಕೊಡುವುದೆಂದು ತಿಳಿದಿದೆ. ಇಂತಹ ಪರಿಸ್ಥಿತಿಯಲ್ಲಿ ಶಾಂತಿ ಪ್ರಿಯರು ಸಂಘಟಿತವಾದ ಹೋರಾಟ ಹೂಡಿ, ಅಣುಶಸ್ತ್ರಗಳ ಪ್ರಯೋಗದ ವಿರುದ್ಧ ಸ್ವರವೆತ್ತಬೇಕು. ವಿಜ್ಞಾನದ ಸಂಘರ್ಷಮಯ ಬಾಳ್ವೆಗಿಂತ ಆನಂದಮಯ ಜ್ಞಾನವು ನೀಡುವ [illegible] ಜೀವನವೇ ಮಹತ್ವದ್ದೆಂದು ಸಾರಬೇಕು.

ಮಂಗಳೂರು

ಜಯಂತಿಯುತ್ಸವ— ಮಂಗಳೂರಿನ ತರುಣ ಕಲಾವೃಂದದವರು ತಾ. ೨೦ರಲ್ಲಿ ಸಂಜೆ ಶ್ರೀ ಗೋವಿಂದ ಪೈಗಳ ಜಯಂತಿಯನ್ನು ಬೆಸೆಂಟ್ ಮಂದಿರದಲ್ಲಿ ಆಚರಿಸಿದರು. ಶ್ರೀ ಕೆ. ಶಿವರಾಮ ಕಾರಂತರು ಸಭಾಧ್ಯಕ್ಷತೆ ವಹಿಸಿದ್ದರು. ವೃಂದದ ಕಾರ್ಯದರ್ಶಿ ಶ್ರೀ ಮುನಿಪಾಲ ರಾಜು ರವರು ಸ್ವಾಗತ ಮಾತುಗಳನ್ನಾಡಿದರು. ಶ್ರೀ ಕಯ್ಯಾರ ಕಿಞ್ಞಣ್ಣ ರೈಗಳು ರಾಷ್ಟ್ರಕವಿಗಳ ಕುರಿತು ಮಾತನಾಡುತ್ತಾ ಅವರ ಜಯಂತಿಯಾಚರಿಸುವಾಗ ಅವರ ಕಾವ್ಯಗಳ ಅಭ್ಯಾಸ ಅಗತ್ಯವೆಂದು ಹೇಳಿದರಲ್ಲದೆ ಗೋವಿಂದ ಪೈಗಳೆಂದರೆ ತನ್ನ ಹುಟ್ಟನ್ನು ಬಿಡದೆ ತನ್ನ ಆತ್ಮಾನಂದಕ್ಕಾಗಿ ಬರೆವ ಕವಿಗಳೆಂದು ತಿಳಿಸಿದರಲ್ಲದೆ ಅವರ ಕಾವ್ಯಗಳ ಪರಿಚಯ ಮಾಡಿಕೊಟ್ಟರು. ಬಳಿಕ ಶ್ರೀಗಳಾದ ಬಿ. ಎಮ್. ಇದಿನಬ್ಬ, ಅರವಿಂದ ಅವರು ಒಂದೊಂದು ಕವನವಾಚನ ಮಾಡಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಪೈಗಳ ನೆನಪಿನ ಶಕ್ತಿ, ಆಳವಾದ ಅಭ್ಯಾಸಗಳನ್ನು ತಿಳಿಸಿದರಲ್ಲದೆ ಅವರ ಸಿರಿವಂತ ಹೃದಯ, ಸಾವಿರಾರು ಆಶೆ ಅಭಿರುಚಿಗಳ ಜೀವನ— ಇತ್ಯಾದಿಗಳಿಂದ ಅವರು ಪ್ರಿಯವಾದ ವ್ಯಕ್ತಿಗಳೆಂದರು. ವೃಂದದ ಅಧ್ಯಕ್ಷ ಶ್ರೀ ಪ್ರಭಾಕರ ರಾಯರು ಧನ್ಯವಾದಗಳನ್ನರ್ಪಿಸಿದರು.

ವಾರ್ಷಿಕೋತ್ಸವ— ದ. ಕ. ಜಿಲ್ಲಾ ದೇವಾಡಿಗ ಸಮಾಜ ಸುಧಾರಕ ಸಂಘದ ವಾರ್ಷಿಕೋತ್ಸವವು ತಾ. 20 ರಂದು ಸಂಜೆ ಶ್ರೀ. ಬಿ. ಗಂಗಾಧರ ದಾಸರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ಸಂಕಪ್ಪ ದೇವಾಡಿಗರು ಸ್ವಾಗತ ಭಾಷಣಮಾಡಿದರು. ಶ್ರೀ ಎಮ್. ಬಿ. ನರಸಪ್ಪನವರು ಗತವರುಷದ ವರದಿಯನ್ನೋದಿದರು. ಬಳಿಕ ವೈದ್ಯಗುರು ಡಾ' ಎಮ್. ಆರ್. ಭಟ್, ಶ್ರೀಗಳಾದ ಪಿ. ಕೆ. ನಾರಾಯಣ, ಬಿ. ಅಪ್ಪಯ್ಯ, ಡಾ. ಕೆ. ನಾಗಪ್ಪ ಆಳ್ವ, ಬ್ರಹ್ಮಾನಂದ ಸಮ್ಮಕಾಲಿ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿ ಸಂಘಕ್ಕೆ ಶುಭವನ್ನು ಕೋರಿದರು. ಹೊಸವರುಷಕ್ಕೆ ಶ್ರೀಗಳಾದ ಕೆ. ಸಂಕಪ್ಪ ದೇವಾಡಿಗ, ಅಧ್ಯಕ್ಷ; ಕೆ. ಕೋಚಪ್ಪ ದೇವಾಡಿಗ, ಉಪಾಧ್ಯಕ್ಷ; ಎಮ್. ಬಿ. ನರಸಪ್ಪ, ಗೌರವ ಕಾರ್ಯದರ್ಶಿ, ಎಮ್. ಗೋವಿಂದ, ಜತೆ ಕಾರ್ಯದರ್ಶಿಗಳಾಗಿರುವ ಹನ್ನೊಂದು ಮಂದಿಯ ಕಾರ್ಯಕಾರಿ ಸಮಿತಿ ರಚನೆಯಾಯಿತು.

ಜಿಲ್ಲಾ ಬೋರ್ಡಿನ ಸಭೆಯು— ಸ್ಪೆಶಲ್ ಆಫೀಸರ್ ಶ್ರೀ ಎ ಮಹಾಲಿಂಗಂ ಚೆಟ್ಟಿಯಾರರ ಅಧ್ಯಕ್ಷತೆಯಲ್ಲಿ ಜರಗಿ ಬೆಳ್ಳಾರೆ ಮತ್ತು ಬಾಯಾರುಗಳಲ್ಲಿ ಒಂದೊಂದು ಗ್ರಾಮ ಚಿಕಿತ್ಸಾಲಯಗಳನ್ನು ತೆರೆಯುವ ನಿರ್ಧಾರವಾಯಿತು. ಬೆಳ್ಳಾರೆಯಲ್ಲಿ ತೆರೆಯುವ ಗ್ರಾಮ ಚಿಕಿತ್ಸಾಲಯಕ್ಕೆ ಸ್ಥಳೀಯರು ಒಂದು ಬಾಡಿಗೆ ರಹಿತ ಕಟ್ಟೋಣವನ್ನು ಕೊಡಲೂ, ರಾಷ್ಟ್ರೀಯ ಬಹಾಪನಾ ಯೋಜನೆಯನ್ವಯ ಸರಕಾರೀ ಸಹಾಯ ಧನದಿಂದ ಸಲಕರಣೆಗಳನ್ನು ಒದಗಿಸಲೂ ಒಪ್ಪಿದ್ದು, ಆ ಚಿಕಿತ್ಸಾಲಯವನ್ನು ಸರಕಾರೀ ಸಹಾಯಧನದಿಂದ ತೆರೆಯಲು ಸ್ಪೆಶಲ್ ಆಫೀಸರರು ನಿರ್ಧರಿಸಿರುತ್ತಾರೆ.

ಬಾಯಾರಿನಲ್ಲಿ ತೆರೆಯುವ ಗ್ರಾಮ ಚಿಕಿತ್ಸಾಲಯಕ್ಕೆ ಬೇಕಾದ ಕಟ್ಟೋಣ ಒದಗಿಸಲು ಸ್ಥಳೀಯ ಪಂಚಾಯತ ಬೋರ್ಡಿನವರೂ, ಗ್ರಾಮಸ್ಥರೂ ಒಪ್ಪಿದ್ದು, ಚಿಕಿತ್ಸಾಲಯವನ್ನು ನಡೆಸುವ ಬಗ್ಗೆ ವರ್ಷಕ್ಕೆ ರೂ 750/-ನ್ನು ಜಿಲ್ಲಾ ಬೋರ್ಡಿಗೆ ಕೊಡಲು ಪಂಚಾಯತ ಬೋರ್ಡಿನವರು ಕೊಡುವುದೆಂದೂ ನಿರ್ಧರಿಸಲಾಗಿದೆ. ಜಿಲ್ಲಾ ಬೋರ್ಡಿನ ಆಡಳಿತೆಯಲ್ಲಿರುವ ರಸ್ತೆಗಳ ಮೇಲ್ವಿಚಾರಣೆ ಬಗ್ಗೆ 1954—55ಕ್ಕೆ ರೂಪಾಯಿ 2,97,550ನ್ನು ಮಂಜೂರು ಮಾಡಿದ್ದು ಖರ್ಚನ್ನು ನೇಕಡಾ 70ಕ್ಕೆ ನಿಯಂತ್ರಿಸಬೇಕೆಂದು ಹ್ಯಾವೇ ಡಿವಿಜನಲ್ ಎಂಜಿನೀಯರರಿಗೆ ಸೂಚಿಸಲಾಯಿತು.

ವಸ್ತ್ರಗಿರಿ— ಕಳೆದ ಜನವರಿ ತಿಂಗಳಲ್ಲಿ ನಡೆದ ಪಂಚಿನ ಮಜೂರರ ಮುಷ್ಕರ ಕಾಲದಲ್ಲಿ ಕೊಲೆಯ ದುರಂತಕ್ಕೊಳಗಾದ ಶ್ರೀ ಲೋಕನಾಥ ಸಟ್ಟರ ಮರಣದ ಕುರಿತು ಈ ನೊಡಲು ಮೂರು ಮಂದಿಯ ಬಂಧನವಾಗಿತ್ತು. ಈಗಷ್ಟೆ ಮಂಗಳೂರು ನಗರ ಸಭೆಯ ಸದಸ್ಯ ಶ್ರೀ ಪಂಡಿತ ವಾಮನ ಕೊಡಿಯಾಲಬೈಲ್, ಅವರ ದಸ್ತಗಿರಿಯಾಗಿದೆಯೆಂದು ವರದಿಯಾಗಿದೆ.

ಜಿಲ್ಲಾ ಎಗ್ರಿಕಲ್ಚರಲ್ ಆಫೀಸರ್ ತಲಚೇರಿಯಲ್ಲಿ ಜಿಲ್ಲಾ ಎಗ್ರಿಕಲ್ಚರಲ್ ಆಫೀಸರರಾಗಿದ್ದ ಶ್ರೀ ಕೆ. ಸದಾಶಿವ ಶೆಟ್ಟರು ದ. ಕ. ಜಿಲ್ಲೆಯ ಎಗ್ರಿಕಲ್ಚರಲ್ ಆಫೀಸರರಾಗಿ ವರ್ಗಾಯಿಸಲ್ಪಟ್ಟು ಅವರು ಕಳೆದ ವಾರದಲ್ಲಿ ಚಾರ್ಜು ವಹಿಸಿರುವರು.

ದಿಲ್ಲಿಯಲ್ಲಿ ಕನ್ನಡ ಸಾಹಿತ್ಯ ಮತ್ತು ಕಲಾಮಹೋತ್ಸವವು— ಇದೇ ಎಪ್ರಿಲ್ ತಿಂಗಳ ತಾ 16, 17 ಮತ್ತು 18 ರಲ್ಲಿ ಜರಗಲಿದ್ದು, ಅದರ ಉದ್ಘಾಟನಾ ಸಮಾರಂಭವನ್ನು ರಾಷ್ಟ್ರಾಧ್ಯಕ್ಷ ಡಾ| ರಾಜೇಂದ್ರ ಪ್ರಸಾದರು ನೆರವೇರಿಸಲಿರುವರು. ಈ ಮಹೋತ್ಸವದ ಅಂಗವಾಗಿ ನಡೆಯಲಿರುವ ವಸ್ತು ಪ್ರದರ್ಶನದಲ್ಲಿ ಪ್ರದರ್ಶಿಸಲು ಯೋಗ್ಯವಾದ ಶಿಲ್ಪಕಲಾ ಸಂಬಂಧವಾದ ಮತ್ತು ಚಾರಿತ್ರಿಕ ಸ್ಮಾರಕಗಳ, ಕೈಗಾರಿಕೆ ವಸ್ತುಗಳನ್ನು ಜಿಲ್ಲಾ ಕಾಂಗ್ರೆಸ್ ಕಚೇರಿ, ಮಂಗಳೂರು 1 ಅಲ್ಲಿಗೆ ಕಳುಹಿಸಿ ಕೊಟ್ಟಲ್ಲಿ ಅವನ್ನು ದಿಲ್ಲಿಗೆ ಮುಟ್ಟಿಸುವ ವ್ಯವಸ್ಥೆ ಮಾಡಲಾಗುವುದೆಂದು ಜಿಲ್ಲಾ ಕಾಂಗ್ರೆಸ್ ಕಮಿಟಿ ಪ್ರಧಾನ ಕಾರ್ಯದರ್ಶಿ ಶ್ರೀ ಬಿ. ಆರ್. ಕರ್ಕೇರರು ತಿಳಿಸುತ್ತಾರೆ.

ಸಹಕಾರೀ ಚಳವಳದ ಸುವರ್ಣೋತ್ಸವ ಸಪ್ತಾಹ— ಅಖಿಲ ಭಾರತ ಸಹಕಾರೀ ಯೂನಿಯನವರು ಈ ಸಪ್ತಾಹವನ್ನು ಎಪ್ರಿಲ್ 15ರಿಂದ 21ರ ವರೆಗೆ ಆಚರಿಸತಕ್ಕದಾಗಿ ಹೇಳಿರುತ್ತಾರೆ. ಆ ಪ್ರಕಾರ ನಮ್ಮ ಜಿಲ್ಲೆಯಲ್ಲಿಯೂ ಅದೇ ದಿನಾಂಕಗಳಲ್ಲಿ ಆಚರಿಸಲು ಜಿಲ್ಲಾ ಸಹಕಾರಿ ಅಭಿವೃದ್ಧಿ ಸಂಘವು ನಿಶ್ಚಯಿಸಿರುತ್ತದೆ. ಎಂದು ಕಾರ್ಯದರ್ಶಿ ಶ್ರೀ ಎಮ್. ಎಸ್. ನಿರಂಜನ ರಾಯರು ತಿಳಿಸುತ್ತಾರೆ.

ಮುಖ್ಯ ಪ್ರಕಟಣೆ

"ಆನಂದ ಸುಧ" ನಮ್ಮ ಆನಂದ ಸುಧ ಸಮಸ್ತ ಜನಗಳಿಗೆ ಬಲವನ್ನು ಮಂಡ ಪುಷ್ಟಿಯನ್ನು ಕಲಗಿಸುವುದು. ಅನೇಕ ವ್ಯಾಧಿಗಳನ್ನು ನಾಶಮಾಡುತ್ತೆ. ೧೫ ದಿವಸಗಳಿಗೆ ಸರಿ ಹೋಗುವ ೮ ಔ. ಸೀಸೆ ೧ಕ್ಕೆ ರೂ. 3—0—0.
"ಸ್ತ್ರೀ ಸುಧ" ನಮ್ಮ ಸ್ತ್ರೀ ಸುಧ ಸ್ತ್ರೀಯರಿಗೆ ಸಂಭವಿಸುವ ಸಮಸ್ತ ಗರ್ಭಾಶಯ ವ್ಯಾಧಿಗಳನ್ನು ಋತು ದೋಷಗಳನ್ನು, ಋತು ನೋವು, ಸರಿಯಾಗಿ ಬಹಿಷ್ಠೆ ಆಗದಿರುವುದು. ಮೊದಲಾದ ಸಮಸ್ತ ವ್ಯಾಧಿಗಳನ್ನು ನಾಶಮಾಡುವುದು. ಸಂತಾನವನ್ನು ಕಲಗಿಸುವುದು. ಒಂದು ತಿಂಗಳಿಗೆ ಸರಿಹೋಗುವ ೧ ತೊಲದ ಔಷಧಿ ರೂ. 4—0—0.
"ಬಾಲ ಸುಧ" ಇದು ಸಣ್ಣ ಬಾಲಕರಿಗೆ ಅಜೀರ್ಣ, ಜ್ವರ, ಕೆಮ್ಮು, ಶೀತ. ಮಲಬದ್ಧತೆ, ಹೆಚ್ಚಾಗಿ ಭೇದಿ ಆಗುವಿಕೆ, ಮಕ್ಕಳು ಕ್ಷೀಣವಾಗಿ ಕೈಕಾಲು ಸಣ್ಣದಾಗುವಿಕೆ, ಲಿವರ್ ಬೆಳೆಯುವುದು, ಈ ಎಲ್ಲಾ ವ್ಯಾಧಿಗಳಿಗೆ ಪಚ್ಯಾಯುಧವಾಗಿದೆ. ಹೀಗಿರುವ ಔಷಧಿ ಇನ್ನೊಂದು ಇಲ್ಲವೆಂದು ಹೇಳಬಹುದು. ಈ ಔಷಧಕ್ಕೆ ಮಿತಿ ಇಲ್ಲದ ಯೋಗ್ಯತಾ ಪತ್ರಗಳನ್ನು ಪಡೆದಿರುವದಲ್ಲದೆ ದೇಶದಲ್ಲಿ ಅನೇಕ ವಿಧದಲ್ಲಿ ಅಭಿವೃದ್ಧಿಯಾಗಿರುತ್ತದೆ. ಸುಮಾರು ೧ ತಿಂಗಳಿಗೆ ಸರಿ ಹೋಗುವ ೫೦ ಮಾತ್ರೆಗಳ ಸೀಸೆ ೧ಕ್ಕೆ ರೂ. 1—0—0.

ತಯಾರಕರು:
ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್, ರಾಜಮಂಡ್ರಿ.
ಬೆಂಗಳೂರು ಏಜನ್ಸಿ:
ಸುದರ್ಶನ ಆಯುರುವೇದ ವೈದ್ಯಶಾಲ, ನಗರ್ತರ ಪೇಟೆ, ಬೆಂಗಳೂರು-2.

ಅಚ್ಚುಕಟ್ಟಾದ ಮುದ್ರಣ!
ಆದರೂ ದರ ಕಡಿಮೆ!!

ಲಗ್ನಪತ್ರಿಕೆ ಮೊದಲಾದ ಎಲ್ಲಾ ತರದ ಆಮಂತ್ರಣ ಪತ್ರಿಕೆ, ಕರಪತ್ರ, ರಶೀದಿ ಪುಸ್ತಕ, ಫಾರ್ಮ್, ಬುಕ್ ವರ್ಕ್, ತರತರದ ಜೋಬ್ ವರ್ಕ್ ಮಾದರಿಗಳನ್ನು ನೂತನ ಶೈಲಿಯಿಂದ ನಾಜೂಕಾಗಿ ಸಕಾಲದಲ್ಲಿ ಮಾಡಿಕೊಡಲಾಗುವುದು.

ಬುಕ್ ಬೈಂಡಿಂಗ್, ರೂಲಿಂಗ್, ಕಟ್ಟಿಂಗ್ ಕಾರ್ಯಗಳನ್ನೂ ಕೈಗೊಳ್ಳಲಾಗುವುದು.

ನವಯುಗ ಪ್ರೆಸ್,
ಸಂತೆಕಟ್ಟೆ - - - ಉಡುಪಿ.

ಮದ್ರಾಸು

ಸರಕಾರಿ ಇಂಡಿಯನ್ ಮೆಡಿಸಿನ್ ಕಾಲೇಜ್ ಯೂನಿಯನ್ ದಿನಾಚರಣೆಯು ಕಳೆದ ತಾ14 ರಂದು ಮದ್ರಾಸ್ ಗವರ್ನರ್ ಶ್ರೀ ಶ್ರೀ ಪ್ರಕಾಶರ ಅಧ್ಯಕ್ಷತೆಯಲ್ಲಿ ಜರಗಿತು. ಕಾಲೇಜಿನ ಡಾ' ಎ. ಶ್ರೀನಿವಾಸಲು ನಾಯುಡುರವರು ಸ್ವಾಗತ ಮಾತುಗಳನ್ನಾಡಿದರು. ಕಾಲೇಜು ಯೂನಿಯನ್ನಿನ ಪ್ರೆಸಿಡೆಂಟ್ ಶ್ರೀ ವಿ. ಬಾಲಕೃಷ್ಣ ಹೆಗ್ಡೆಯವರು ಗವರ್ನರರಿಗೆ ಸ್ವಾಗತ ಮಾನಪತ್ರವನ್ನೋದಿ ಅರ್ಪಿಸಿದರು. ಯೂನಿಯನ್ ಕಾರ್ಯದರ್ಶಿ ಶ್ರೀ ಎ. ಸುಬ್ರಹ್ಮಣ್ಯ ಕುಮಾರನ್ ನಂಬಿಯಾರರು ವರದಿಯನ್ನು ಓದಿದರು.

ಆರೋಗ್ಯ ಮಂತ್ರಿ ಶ್ರೀ ಎ. ಬಿ. ಶೆಟ್ಟರು ಮಾತನಾಡುತ್ತಾ ಸರಕಾರವು ಈ ಕಾಲೇಜಿನ ಲೆಬೊರೆಟರಿಗಾಗಿ ರೂಪಾಯಿ 10,000 ವೆಚ್ಚ ಮಾಡುವುದಲ್ಲದೆ ಇತರ ಕಟ್ಟಡ ಸಾಹಿತ್ಯಾದಿಗಳನ್ನು ಕೂಡಾ ಒದಗಿಸುವುದಾಗಿ ಸೂಚಿಸಿದರು. ಡಾ ಎ. ಲಕ್ಷ್ಮೀಪತಿಯವರು ಕಾಲೋಚಿತ ಮಾತುಗಳನ್ನಾಡಿದರು. ಸಭಾಧ್ಯಕ್ಷ ಗವರ್ನರರು ದೇಶೀ ಔಷಧಿ ತಯಾರಿಕೆಯ ಕುರಿತು ಕೆಲವು ಹಿತ ಸೂಚನೆಗಳನ್ನಿತ್ತರು. ಕುಮಾರಿ ಪಿ. ಕೆ. ರತಿ ದೇವಿಯವರು ಧನ್ಯವಾದಗಳನ್ನರ್ಪಿಸಿದರು.

NAVAYUGA
Popular Kannada Weekly.
Founder:—
Sri A. B. SHETTY.
Minister for Public Health,
Govt. of Madras.

ನವಯುಗ
ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ.
ಸ್ಥಾಪಕರು. ಶ್ರೀ. ಎ. ಬಿ. ಶೆಟ್ಟಿ,
ಮದ್ರಾಸಿನ ಆರೋಗ್ಯಮಂತ್ರಿ.
ವಾ. ಚಂದಾ: ರೂ. 5-12-0
ಬಿಡಿಪ್ರತಿ: 0-2-0

ಸ್ವೀಕಾರ—ವಿಮರ್ಶೆ

ಹಬ್ಬಿದ ಬಳ್ಳಿ—

ಬರೆದವರು: ಕೃಷ್ಣಮೂರ್ತಿ ಪುರಾಣಿಕ. ಪ್ರಕಾಶಕರು: ಪ್ರತಿಭಾ ಗ್ರಂಥಮಾಲೆ, ಧಾರವಾಡ. ಬೆಲೆ: ಮೂರು ರೂಪಾಯಿ.

ಗಂಗನ ಹಳ್ಳಿಯಲ್ಲಿ ವಿಶ್ವೇಶ್ವರ ಭಟ್ಟರೆಂಬ ಪುಣ್ಯ ಜೀವಿಗಳು ನೆಲೆನಿಂತು ಅದರ ಸಾರ್ವಜನಿಕ ಪ್ರಗತಿಗೆ ಕಾರಣರಾದರು. ಅವರ ಮಗಳ ಹಾಗೂ ಸ್ವತಃ ವಿಶ್ವೇಶ್ವರ ಭಟ್ಟರ ಆತ್ಮ ಯಜ್ಞವು ಗಂಗನ ಹಳ್ಳಿಯನ್ನು ವಿಪತ್ಪರಂಪರೆಯಿಂದ ರಕ್ಷಿಸಿತು. ಆದರೆ ಅವರ ಮಕ್ಕಳ ಕಾಲದಲ್ಲಿ ಪರಿಸ್ಥಿತಿಯು ಬದಲಿತ್ತೆಂದು ಸಾತ್ವಿಕರಾದ ಈ ಬ್ರಾಹ್ಮಣರು ಊರವರ ಉಪೇಕ್ಷೆಯಿಂದ ಕಂಗೆಟ್ಟರು. ಇದರಿಂದ ಮನೆತನದ ಘನತೆ. ಗೌರವಗಳನ್ನು ರಕ್ಷಿಸಿಕೊಂಡು ಬರುವುದೇ ದೊಡ್ಡ ಹೋರಾಟವಾಗಿ ಪರಿಣಮಿಸಿತು. ತಮ್ಮ ಹಿರಿಯರು ಗಳಿಸಿದ ಹೆಸರನ್ನು ಉಳಿಸಿಕೊಂಡು, ವಿಶ್ವೇಶ್ವರ ಭಟ್ಟರ ಮನೆತನದವರೆಂಬ ಗೌರವವನ್ನು ಕಾಯ್ದುಕೊಂಡು ಮುಂದಿನ ಪೀಳಿಗೆ ಬೆಳೆಯುತ್ತದೆ. ಮೊಮ್ಮಕ್ಕಳ ಮಕ್ಕಳ ಕಾಲದಲ್ಲಿ ಭಾರತದಲ್ಲಿ ಕಾರಣ ಪುರುಷನ ಆದೇಶಾನುಸಾರ ಸ್ವಾತಂತ್ರ್ಯಾಂದೋಲನ ನಡೆದಾಗ; ವಿಶ್ವೇಶ್ವರ ಭಟ್ಟರ ಭವ್ಯ ಪರಂಪರೆಯಂತೆ ಅವರ ವಂಶಜರೂ ಅದರಲ್ಲಿ ಭಾಗವಹಿಸುವರು. ಒಟ್ಟಿನಲ್ಲಿ ಈ ಕಾದಂಬರಿಯು ಮನೆತನದ ಗೌರವ ಮತ್ತು ಹಿರಿಯರ ಜೀವನಾದರ್ಶಗಳಿಂದ ಕಿರಿಯರು ಸ್ಫೂರ್ತಿ ಚೈತನ್ಯಗಳನ್ನು ಹೊಂದಿ ಮುನ್ನಡೆಯುವ ಪರಿಯನ್ನು ನಿರ್ದೇಶಿಸುತ್ತದೆ. ಆದರೆ ಕಥೆಯು ಓಟ ಅನೇಕ ವೇಳೆ ಕುಂಟುತ್ತದೆ. ನಿರೂಪಣೆಯಲ್ಲಿ ಪುನರುಕ್ತಿಗಳು ತುಂಬಿಕೊಂಡಿದ್ದು ಬೇಸರ ಬರಿಸುತ್ತವೆ. ಕಥಾಸಂವಿಧಾನದಲ್ಲಿ ಬಿಗಿತವೂ ಹಿಡಿತವೂ ತಪ್ಪಿ ಹೋದಂತೆ ಅಲ್ಲಲ್ಲಿ ಭಾಸವಾಗುತ್ತದೆ. ಪುರಾಣಿಕರ ಹಿಂದಿನ ಕೃತಿಗಳಲ್ಲಿ ವ್ಯಕ್ತಗೊಂಡ ಒಮ್ಮುಖ ದೃಷ್ಟಿ ಇಲ್ಲಿ ಚದರಿ ಹೋದಂತೆನಿಸುತ್ತದೆ. ಇವುಗಳ ಪರಿಣಾಮವಾಗಿ ಸಾಮಾನ್ಯ ಓದುಗನು ಪುಸ್ತಕವನ್ನು ಅರ್ಧದಲ್ಲಿಯೇ ಕೈಬಿಟ್ಟರೆ ಆಶ್ಚರ್ಯವಿಲ್ಲ. ಹಾಗೆಂದು ಕಥಾವಸ್ತುವಿನ ಬಗ್ಗೆ ಶ್ರದ್ಧೆಯುಳ್ಳವರಿಗೆ ತೃಪ್ತಿತರುವಂತೆ ಕಾದಂಬರಿ ಕೊನೆಗೊಳ್ಳುತ್ತದೆ.

ಪ್ರಪಂಚ—

ಸಂಪಾದಕರು: ಪಾಟೀಲ ಪುಟ್ಟಪ್ಪ. ಪ್ರಕಾಶಕರು: ಜನಸೇವಾ ಪ್ರಕಾಶನ ಸಮಿತಿ, ದುರ್ಗದ ಬೈಲು, ಹುಬ್ಬಳ್ಳಿ.

ಪ್ರಸಿದ್ಧ ಪತ್ರಿಕೋದ್ಯಮಿಗಳಾದ ಶ್ರೀ ಪಾಟೀಲ ಪುಟ್ಟಪ್ಪನವರು ವಿವಿಧ ಅಭಿರುಚಿಯ ಜನರನ್ನು ತೃಪ್ತಿ ಪಡಿಸುವಂತೆ "ಪ್ರಪಂಚ" ಎಂಬೀ ಸಾಪ್ತಾಹಿಕವನ್ನು ಪ್ರಕಟಿಸ ತೊಡಗಿರುವರು. ಕನ್ನಡದಲ್ಲಿ ಇಷ್ಟು ಹೆಚ್ಚು ವಿಷಯ ವೈವಿಧ್ಯಗಳಿರುವ ಬೇರೊಂದು ಪತ್ರಿಕೆ ಇದ್ದಂತಿಲ್ಲ. ಈ ಮಟ್ಟವನ್ನು ಕೊನೆಯವರೆಗೂ ಕಾಯ್ದುಕೊಂಡು ಹೋಗುವರೆಂದು ಹಾರೈಸಿ, ಪತ್ರಿಕೆಗೆ ಶುಭವನ್ನೂ ಸ್ವಾಗತವನ್ನೂ ಕೋರುತ್ತೇವೆ.

THE BOMBAY CIVIC JOURNAL—

Accredited Organ of the Bombay Municipal Corporation. Editor:- U. G. Rao.

ಪೌರನೀತಿಯು ಭಾರತೀಯ ಪರಂಪರೆಗೆ ತೀರ ಹಳೆಯದೆನಿಸಿದ ವಿಷಯ ಹೌದಾದರೂ ಈಚೆಗೆ ನಾಗರಿಕರು ಈ ಕಡೆ ಸಾಕಷ್ಟು ಗಮನವನ್ನು ಕೊಟ್ಟಂತಿಲ್ಲ. ಕಾರಣ ಜನರಲ್ಲಿ ಜಾಗೃತಿಯನ್ನು ಹುಟ್ಟಿಸಿ, ನಗರದ ಸಾರ್ವಜನಿಕ ಅಭಿವೃದ್ಧಿ ಮತ್ತು ಪ್ರಗತಿಯ ಅಭಿಲಾಷೆಯನ್ನು ಕೆರಳಿಸುವ ಪ್ರಯತ್ನ ನಡೆಯ ಬೇಕಾದುದು ಅಪೇಕ್ಷಣೀಯ. ಮುಂಬಯಿ ಕೋರ್ಪೊರೇಶನದವರು ತಮ್ಮ ಮುಖಪತ್ರವಾಗಿ ಈ ಮಾಸಿಕವನ್ನು ಹೊರಡಿಸಿ, ಮುಂಬಯಿ ನಗರ ಹಾಗೂ ಪಾಶ್ಚಾತ್ಯ ದೇಶಗಳ ಪೌರ ಸಭೆಗಳು ನಿರ್ವಹಿಸುವ ಕೆಲಸಗಳ ಪರಿಚಯವನ್ನು ಮಾಡಿಕೊಡಲಾರಂಭಿಸಿರುವರು. ಇದರ ಫಲವಾಗಿ ನಾಗರಿಕರಲ್ಲಿ ಹೊಣೆಗಾರಿಕೆಯ ಭಾವನೆ ಪೋಷಿಸಲ್ಪಡುವುದೆಂದು ಆಶಿಸುತ್ತೇವೆ.

ಪಾನನಿರೋಧದ ಕಥೆಗಳು—

ಲೇಖಕರು ಹಾಗು ಪ್ರಕಾಶಕರು: ಶ್ರೀ ಭವಾನಿ ಶಂಕರ ಶಿವರಾವ ಮಾವಿನ ಕುರ್ವೆ, ಎಡ್ವೋಕೇಟ ಮತ್ತು ಪಬ್ಲಿಕ್ ಪ್ರೊಸಿಕ್ಯೂಟರ, ಕಾರವಾರ ಬೆಲೆ: ರೂ. ೧—೪—೦.

ಹೆಸರೇ ಸೂಚಿಸುವಂತೆ ಇದು ಪಾನನಿರೋಧಕ್ಕೆ ಸಂಬಂಧಿಸಿದಂತೆ ಬರೆದ ಕಥಾಸಂಕಲನವಾಗಿರುತ್ತದೆ. ಇದರಲ್ಲಿ ಹನ್ನೆರಡು ಸಣ್ಣ ಕಥೆಗಳು ಇದ್ದು, ಪಾನನಿರೋಧದ ಕಾಯಿದೆಯನ್ನು ಮುರಿದು ಅಕ್ರಮ ರೀತಿಯಲ್ಲಿ ವರ್ತಿಸಿ ಶಿಕ್ಷೆಗೊಳಗಾಗುವ, ಪಶ್ಚಾತ್ತಾಪ ಹೊಂದುವ ಮತ್ತು ಪಾನನಿರೋಧ ಧೋರಣೆಯ ಮಹತ್ವವನ್ನು ಮನಗಾಣುವ ಮುಂತಾದ ವಿಷಯಗಳು ಸಹಜವೆನಿಸುವ ಘಟನೆಗಳನ್ನು ಪೋಣಿಸಿ ವಿವರಿಸಲ್ಪಟ್ಟಿವೆ. ಲೇಖಕರು ತಮ್ಮ ವಿಸ್ತೃತವಾದ ಪ್ರಸ್ತಾವನೆಯಲ್ಲಿ ಪಾನನಿರೋಧ ಧೋರಣೆಯಿಂದ ಜನತೆಗೆ ಆಗುವ ಉಪಕಾರವನ್ನು ವರ್ಣಿಸಿದ್ದಾರೆ. ಕಥೆಗಳಲ್ಲಿ ತಮ್ಮ ಅನುಭವಕ್ಕೆ ಬಂದ ಸಂಗತಿಗಳ ಚಿತ್ರವನ್ನು ಕೊಟ್ಟಿರುವರು. ವಿಷಯದ ದೃಷ್ಟಿಯಿಂದ ಈ ಕಥೆಗಳು ಮಹತ್ವವನ್ನು ಹೊಂದಿದ್ದರೂ ಕಥನ ಕಲೆಯ ಒರೆಗಲ್ಲಿಗೆ ಹಚ್ಚಿದರೆ ಇಲ್ಲಿಯ ಕಥೆಗಳು ಅಪೇಕ್ಷಿತ ಮಟ್ಟವನ್ನು ಮುಟ್ಟುವಂತಿಲ್ಲ. ಇವುಗಳಲ್ಲಿ "ಅಮಾವಾಸ್ಯೆಯ ರಾತ್ರಿ" ಎಂಬ ಮೊದಲನೇ ಕಥೆ ಚೆನ್ನಾಗಿದೆ. "ದನವಿನ ಕೊಟ್ಟಿಗೆ" "ಗುಂಡುವಿಗೆ ಚಾಕರಿಗೆ ಇಟ್ಟುಕೊಂಡು..." ಮುಂತಾದ ವ್ಯಾಕರಣ ದೋಷಗಳು ಅಲ್ಲಲ್ಲಿ ಕಂಡು ಬರುತ್ತವೆ. ಹೀಗಿದ್ದರೂ ಜನತೆಯಲ್ಲಿ ಜಾಗೃತಿಯನ್ನು ಹುಟ್ಟಿಸಿ, ಪಾನಪ್ರತಿಬಂಧನವನ್ನು ಯಶಸ್ವಿಗೊಳಿಸುವ ಅನೇಕ ಮುಖವಾದ ಕಾರ್ಯಕ್ರಮಗಳಲ್ಲಿ ಈ ಪುಸ್ತಕದ ಪ್ರಕಟಣೆಯು ಉತ್ತಮ ರೀತಿಯ ಸೇವೆಯಾಗಿರುತ್ತದೆಂದು ಧಾರಾಳವಾಗಿ ಹೇಳಬಹುದು.

ಸ್ವೀಕಾರ—

ಅಭಿನಯ ಗೀತಮಂಜರಿ—

ಬರೆದವರು ಶ್ರೀ. ಜಿ. ಎಸ್. ಲಕ್ಷ್ಮಣ ಪೈ, ಪ್ರಕಾಶಕರು ಬಾಲಸಾಹಿತ್ಯ ಮಂಡಲ ಲಿಮಿಟೆಡ್, ಮಂಗಳೂರು. 1/8 ಕ್ರೌನ್ 24 ಪುಟಗಳು, ಬೆಲೆ 0—4—0.

ಇದು ಮಕ್ಕಳಿಗಾಗಿ ಬರೆಯಲ್ಪಟ್ಟ ಸಚಿತ್ರ ಗೀತಮಾಲೆ, ಶ್ರೀ ಪೈಗಳು ಈಗಾಗಲೇ ಮಕ್ಕಳಿಗಾಗಿ 3—4 ಪದ್ಯ ಪುಸ್ತಕಗಳನ್ನು ಬರೆದು ಅನುಭವವುಳ್ಳವರಾದುದರಿಂದ ಇದೂ ಕನ್ನಡ ಕಂದರಿಂದ ಸ್ವಾಗತಿಸಲ್ಪಡುವುದರಲ್ಲಿ ಅನುಮಾನವಿಲ್ಲ.

ಚಿಣ್ಣರ ಹಾಡುಗಳು—

ಲೇಖಕ ಹಾಗೂ ಪ್ರಕಾಶಕರು ಶ್ರೀ ಪಳಕಳ ಸೀತಾರಾಮಭಟ್ಟ, ಮಿತ್ತಬೈಲ್, 1/8 ಕ್ರೌನ್ 30 ಪುಟಗಳು, ಬೆಲೆ 0-5-0

ಪ್ರಾಥಮಿಕ ಶಾಲೆಗಳ ಉಪಯೋಗಕ್ಕಾಗಿ ಬರೆಯಲ್ಪಟ್ಟ 30 ಪದ್ಯಗಳ ಸಂಗ್ರಹ, ಶ್ರೀ ಎಂ. ಗೋವಿಂದ ಪೈಗಳು ಆಶೀರ್ವಾದರೂಪದ ಮುನ್ನುಡಿ ಬರೆದಿದ್ದಾರೆ. ಕೆಲವು ಹಾಡುಗಳು ಮಕ್ಕಳ ಮನಸ್ಸನ್ನು ಆಕರ್ಷಿಸುವಂತಿವೆ.

ಬಸ್ರೂರು ಹಿಂದೂ ಎಯ್ಡೆಡ್ ಹಾ| ಎ| ಶಾಲಾ ವರದಿ—ಹಿಂದಿನಿಂದಲೂ ಪ್ರಖ್ಯಾತವಾದ ಈ ಶಾಲೆಯ 1952—53ರ ವರದಿಯಲ್ಲಿ ಶಾಲೆಗೆ ಸಂಬಂಧಿಸಿದ ಎಲ್ಲಾ ವಿವರಗಳಿವೆ.

ದ ಕ, ಗೌಡ ವಿದ್ಯಾಸಂಘದ ವರದಿ—ಇದರಲ್ಲಿ ಸಂಘಕ್ಕೆ ಸಂಬಂಧಿಸಿದ ವಿವರಗಳು, 1-6-12ರಿಂದ 1953ರ ವರೆಗಿನ ಜಮಾ ಖರ್ಚುಗಳ ತಪಸೀಲು ಇರುತ್ತವೆ. ಸಂಘವು ಪುತ್ತೂರು ತಾಲೂಕಿನಲ್ಲಿ 7 ವಿದ್ಯಾರ್ಥಿಗಳನ್ನು ನಡೆಸಿಕೊಂಡು ಬರುತ್ತಿರುವುದು ಅಭಿನಂದನೀಯ.

ಶ್ರೀಪತಿ ಪಂಚಾಂಗ— ಬೇಳೂರು ಶ್ರೀ. ಶ್ರೀಪತಿ ನರಸಿಂಹ ಅಡಿಗರಿಂದ ನವೀನ ದೃಕ್‌ಸಿದ್ಧಾಂತರೀತ್ಯಾ ಗುಣಿಸಿ ಪರಿಶೋಧಿಸಲ್ಪಟ್ಟ ಜಯನಾಮ ಸಂವತ್ಸರದ ಪಂಚಾಂಗ ಬೆಲೆ: 0—8—0

Documentary Credits (by D. Freeman) Foreign Trade Digest and Canara Bank News—ಇವು ಮೂರೂ ಕೆನರಾ ಬೇಂಕಿನ ಕಡೆಯಿಂದ ಪ್ರಕಟಿಸಲ್ಪಟ್ಟ ಬೇಂಕಿಂಗ್ ಮಾಹಿತಿ ಇತ್ಯಾದಿ ವಿಷಯಗಳನ್ನೊಳಗೊಂಡ ಉಪಯುಕ್ತ ಪ್ರಕಟಣೆಗಳು.

(೧ನೇ ಪುಟ ದಿಂದ)

ಯ ಸಲಹೆಯನ್ನೂ ನಾನು ಕೇಳಬೇಕಾಗುತ್ತದೆ."

ತಮ್ಮ ನಿವೃತ್ತಿಗೆ ಪೂರ್ವದಲ್ಲಿ ರಾಜಾಜಿಯವರು ಯಾವ ಏರ್ಪಾಡನ್ನು ಮಾಡಲಿರುವರೋ ಸಕಾಲದಲ್ಲಿ ತಿಳಿದು ಬಂದೀತು. ಆದರೆ ಅವರು ಅನಾರೋಗ್ಯದ ಕಾರಣವನ್ನು ಹೇಳಿ ರಾಜಕೀಯ ಮುಂದಾಳು ತನವನ್ನು ತ್ಯಜಿಸುವುದು ಮತ್ತು ಮದ್ರಾಸು ರಾಜ್ಯದ ಅಧಿಕಾರ ಸ್ಥಾನವನ್ನು ಬಿಟ್ಟುಗೊಡುವುದು ತುಂಬ ವ್ಯಸನವನ್ನುಂಟು ಮಾಡುವ ವಿಷಯ. ರಾಜಾಜೀಯವರು ತಂದ ಪ್ರಾಥಮಿಕ ಶಿಕ್ಷಣ ಪದ್ಧತಿಯ ಹೊಸ ಯೋಜನೆ ಮುಂತಾದವುಗಳು ಕೆಲವು ಜನರನ್ನು ಬೇಸರ ಗೊಳಿಸಿದ್ದರೂ ಸಹ ಅವರ ವ್ಯಕ್ತಿತ್ವದ ಪ್ರತಿಭೆ ಶ್ರದ್ಧೆ, ದಕ್ಷತೆ, ಪ್ರಾಮಾಣಿಕತೆ, ಕಾರ್ಯದಕ್ಷತೆಗಳನ್ನು ಮೆಚ್ಚಿ ಕೊಂಡಾಡದವರಿಲ್ಲ. ಹೀಗಿರುವುದರಿಂದ ರಾಜಾಜಿ ತಮ್ಮ ಮೇಲೆ ಬಿದ್ದ ಆಡಳಿತದ ಹೊಣೆಯನ್ನು ತ್ಯಜಿಸಿ ಮುಕ್ತಿ ಹೊಂದಲು ಬಯಸಿದ್ದು ರಾಜ್ಯದ ದುರ್ದೈವ. ರಾಜಕೀಯ ಕಾರಣಗಳಿಗಲ್ಲ—ಅನಾರೋಗ್ಯದ ದೆಸೆಯಿಂದ ಅವರು ವಿರಾಮ ಹೊಂದಲು ಬಯಸುವುದರಿಂದ ಅವರ ಮೇಲೆ ಒತ್ತಾಯ ಮಾಡುವುದಕ್ಕೆ ಅವಕಾಶವಿಲ್ಲದಂತಾಗಿರುತ್ತದೆ. ಆದರೂ ರಾಜಾಜಿಯವರು ತಮಗೆ ಸಾಧ್ಯವಿದ್ದಷ್ಟು ಹೆಚ್ಚುಕಾಲ ರಾಜ್ಯದ ಧುರೀಣತ್ವದಲ್ಲಿ ಉಳಿದುಕೊಂಡು, ಸರಕಾರವನ್ನು ನಡೆಸಿಕೊಂಡು ಬರುತ್ತಿರಬೇಕೆಂದು ಕೇಳಿಕೊಳ್ಳುವ ಮನಸ್ಸಾಗುತ್ತದೆ. ರಾಜ್ಯಕ್ಕೆ ಅವರ ನಾಯಕತ್ವದ ಆವಶ್ಯಕತೆ ಇನ್ನೂ ಇದೆಯಾದುದರಿಂದ ರಾಜಾಜಿಯವರು ತಮ್ಮ ಆರೋಗ್ಯಕ್ಕೆ ಕೊಡುವಷ್ಟೇ ಮಹತ್ವವನ್ನು ರಾಜ್ಯದ ಹಿತದೃಷ್ಟಿಗೂ ನೀಡಬೇಕೆಂದು ಜನತೆ ಅಪೇಕ್ಷಿಸುತ್ತದೆ. ಶಾಸನ ಸಭಾಸದಸ್ಯರೂ ಜನತೆಯೂ ಕೂಡಿಯೇ ಪ್ರಯತ್ನಿಸಿ ರಾಜಾಜಿಯ ಮನಸ್ಸೊಲಿಸಿಕೊಳ್ಳಲು ಸಮರ್ಥರಾದರೆ ಅದರಿಂದ ಶುಭವುಂಟು. ಈ ಪರಿಸ್ಥಿತಿಯಲ್ಲಿ ರಾಜಾಜಿ ಕೊನೆಯದಾಗಿ ಯಾವ ತೀರ್ಮಾನಕ್ಕೆ ಬರುವರೋ ಎಂಬ ಕುತೂಹಲ ರಾಜ್ಯದಾದ್ಯಂತ ತೋರಿಬರುತ್ತಿದೆ.

ಚ್ಯವನಪ್ರಾಶ

ಹಿಮಾಲಯದ ಉತ್ಕೃಷ್ಟ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಚ್ಯವನಪ್ರಾಶವು ಕ್ಷಯ, ದುರ್ಬಲತೆ ಇತ್ಯಾದಿ ಕಾಹಿಲೆಗಳಿಗೆ ದಿವ್ಯಾಷಧಿ. ವಯೋವೃದ್ಧರಿಗೆ ವಿಶೇಷ ಪರಿಣಾಮಕಾರಿಯಾದುದು. ಎಳೆ ಮಕ್ಕಳನ್ನೂ ಗಟ್ಟಿಮುಟ್ಟಾಗಿಯೂ ಆರೋಗ್ಯವಂತರಾಗಿಯೂ ಇರಗೊಡಿಸುವುದು. ಚ್ಯವನಪ್ರಾಶವನ್ನು ಸತತ ಉಪಯೋಗಿಸುವುದರಿಂದ ಆಯುಸ್ಸು ವೃದ್ಧಿಯಾಗುವುದು. ಪರೀಕ್ಷಾರ್ಥವಾಗಿ ಕೆಳಗಿನ ವಿಳಾಸಕ್ಕೆ ಬರೆದು ಒಮ್ಮೆ ತರಿಸಿ ನೋಡಿರಿ. ಸೇರಿಗೆ ರೂಪಾಯಿ 10/- ಬೆಲೆ.

ಕಾಲಿಕಮಾಲಿ ಆಯುರ್ವೇದ ಫಾರ್ಮಸಿ, ಋಷಿಕೇಶ (ಡೆಹರಾಡನ್)
Kali Kamali Ayurved Pharmacy, RISHIKESH (Dehradun.)

ದಿ ನ್ಯೂ ಕರ್ನಾಟಕ ಪ್ರೊವಿಡೆಂಟ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಪ್ರಧಾನ ಕಚೇರಿ,] [ಉಡುಪಿ, ದ. ಕನ್ನಡ.

ನಿಮ್ಮ ಸಂಪಾದನೆಗೆ ಸಾಧ್ಯವಿರುವ ಮೊತ್ತಕ್ಕೆ ವಿಮೆ ಮಾಡಲು ಅನುಕೂಲವಿರುವ ಜಿಲ್ಲೆಯ ಏಕಮಾತ್ರ ಜನತಾ ಪ್ರೊವಿಡೆಂಟ್ ವಿಮಾ ಸಂಸ್ಥೆ.

ಏಜಂಟರು, ಸ್ಪೆಶಲ್ ಏಜಂಟರು ಆರ್ಗನೈಜರರು ಮತ್ತು ಇನ್ಸ್‌ಪೆಕ್ಟರರು ಬೇಕಾಗಿದ್ದಾರೆ.

ವಿವರಕ್ಕೆ ಬರೆಯಿರಿ:

THE NEW KARNATAKA PROVIDENT Insurance Co. Ltd., UDIPI.

ಡಿ| ಕಿಟ್ಟೆಲ್‌ರವರ ಮೂರು ಗ್ರಂಥಗಳು

ಪ್ರಾಚೀನ ತುಳುನಾಡು	(ಎಂ. ಗೋವಿಂದ ಪೈಗಳ ಮುನ್ನುಡಿ)	೨	೦	೦
ಭಾರತದ ಕರ್ಣ (ಗದ್ಯ)	(ಎಂ. ಆರ್. ಶಾಸ್ತ್ರಿಗಳ ,,)	೦	೬	೦
ಮುರಲಿ (ಪದ್ಯ)	(ಕಯ್ಯಾರ ಕಿಞ್ಞಣ್ಣ ರೈಗಳ ,,)	೦	೧೨	೦

ಟಪ್ಪಾಲು ಖರ್ಚು ಪ್ರತ್ಯೇಕ. ಪುಸ್ತಕ ವ್ಯಾಪಾರಿಗಳಿಗೆ ಕಮಿಶನ್ ಕೊಡಲಾಗುವುದು.

ನವಯುಗ ಪ್ರೆಸ್, ಪೋಸ್ಟ್ ಬಾಕ್ಸ್ ನಂಬ್ರ 22, ಉಡುಪಿ.

ಕೆನರಾ ನ್ಯೂಸ್ ಏಜನ್ಸಿ, ನೆಹರೂ ಲಂಚ್‌ಹೋಮ್ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು.

ಹಳ್ಳಿಗರ ಸಂಸ್ಕೃತಿಯಲ್ಲಿ ರೂಢಿಗಳು

(೧)

ಯು. ನಾ. ಉಡುಪ, ವಿದ್ವಾನ್, ಐರೋಡಿ.

ಹಳ್ಳಿಗರ ಸಂಸ್ಕೃತಿಯಲ್ಲಿ ರೂಢಿಗಳಿಗೆ ಒಂದು ಉನ್ನತ ಸ್ಥಾನವಿದೆ. ಅವೇ ಅವರ ಭೃಗು ಸಂಹಿತೆ—ಮನುಧರ್ಮಶಾಸ್ತ್ರ. ಈ ರೂಢಿಗಳು ನೂರಾರು ತಲೆಮಾರಿನಿಂದ ತಂದೆಯಿಂದ ಮಗನಿಗೂ, ಮಗನಿಂದ ಮೊಮ್ಮಗನಿಗೂ—ಹೀಗೆ ಕ್ರಮವಾಗಿ ಉಪದೇಶಿಸಲ್ಪಡುತ್ತಾ ಬಂದುವು. ಈ ಉಪದೇಶಕ್ಕೆ ಒಂದು ಮುಹೂರ್ತ—ಪುರೋಹಿತರ ನೆರವು ಬೇಕೆಂದಿರಲಿಲ್ಲ. ಸಂದರ್ಭ ಬಂದಾಗಲೆಲ್ಲಾ ಮಿತ್ರ ಸಮ್ಮಿತ, ಕಾಂತಾ ಸಮ್ಮಿತಗಳಾಗಿ ಹಿರಿಯರು ಕಿರಿಯರಿಗೆ—"ಹೀಗೆ ಮಾಡಬಾರದು, ಹಾಗೆ ಮಾಡಬೇಕು' ಎಂದು ಹೇಳುತ್ತಾ ಬರುವ ಪದ್ಧತಿಯೇ ಇವರ ಉಪದೇಶದ ಕ್ರಮ. ಆಗ ಕಿರಿಯರು—"ಯಾಕೆ ಹಾಗೆ ಮಾಡಬಾರದು? ಅದರ ಅರ್ಥವೇನು?" ಎಂದು ಕೇಳುವ ಸಂಪ್ರದಾಯವೇ ಇರಲಿಲ್ಲ. ಇದಕ್ಕೆ ಅವರಲ್ಲಿದ್ದ ಧರ್ಮಭೋಳೆಯ ಸ್ವಭಾವ, ಅಥವಾ ಗುರುಹಿರಿಯರಲ್ಲಿದ್ದ ಭಕ್ತಿಯೇ ಮುಖ್ಯ ಕಾರಣವಾಗಿದ್ದಿರಬಹುದು. ಈ ರೂಢಿಗಳು ಹುಟ್ಟಿದ ಗಳಿಗೆಯಲ್ಲಿ ಅವುಗಳ ಅರ್ಥವನ್ನು ಹೇಳಬಹುದಾದಷ್ಟು ಸುಲಭದಲ್ಲಿ ಈಗ ಹೇಳಲಾರೆವು. ಇವುಗಳಲ್ಲಿ ಹಲವು ಮಕ್ಕಳಿಗೆ "ಗುಮ್ಮ ಬರುತ್ತಾನೆ. ಬೇಗನೆ ಉಣ್ಣು" ಎಂದು ಹೇಳಿದಷ್ಟೇ ಸತ್ಯವಾಗಿ ತೋರುತ್ತದೆ. ಚಿಕ್ಕ ಮಗುವಿಗೆ ಗುಮ್ಮನೆಂದರೆ ಎಂಥಾ ವ್ಯಕ್ತಿಯೆಂದು ತಿಳಿಯದು. ಆ ಪದವು ಅದಕ್ಕೆ ಭಯವನ್ನು ಹುಟ್ಟಿಸಲು ಸಮರ್ಥವಾದುದು. ಅದೊಂದು ಮಕ್ಕಳನ್ನು ಹೆದರಿಸುವ ಕಲ್ಪಿತ ವಿಕಾರ ವ್ಯಕ್ತಿಯೆಂದು, ಪಾಪ, ಅದಕ್ಕೇನು ಗೊತ್ತು? ವೈ। ವಾ' ರಾಮಾನುಜಯ್ಯಂಗಾರ್ಯರು ಮುದ್ದಣನ ಕಾವ್ಯಕ್ಕೆ ಅರ್ಥ ಬರೆಯುವಾಗ ಹೇಳಿದಂತೆ ಗುಮ್ಮನೆಂದರೆ ಗೂಬೆಯಲ್ಲ. ಗೂಬೆಗೂ ಗುಮ್ಮ ಹಕ್ಕಿ ಎನ್ನುವ ಹೆಸರಿದೆ. ಆದರೆ ಮಕ್ಕಳ ಪ್ರಪಂಚದ ಆ ವಿಕಾರ ಭೂತವು ಕೇವಲ ಕಲ್ಪಿತವಾದುದು ಮಾತ್ರ. ಆದರೆ ಇಂಥಾ ರೂಢಿಗಳೂ ಹಲವು ಶತಮಾನಗಳಿಂದ ಬದುಕಿ ಬಾಳಿಕೊಂಡು ಹಳ್ಳಿಗರ ಜೀವನವನ್ನು ಹಾಸುಹೊಕ್ಕಾಗಿ ವ್ಯಾಪಿಸಿರುವುದು ತುಂಬಾ ಆಶ್ಚರ್ಯ.

ಈಗೀಗ ಹಳ್ಳಿಗಳಲ್ಲಿ ಸ್ವಲ್ಪ ಸ್ವಲ್ಪ ಇಂಗ್ಲಿ ವಿದ್ಯೆಯೂ ನುಸುಳಿ, ಅವೆಲ್ಲಾ "ನೋನ್ಸೆನ್ಸ್" ಎಂದು ನಾಮಕರಣ ಹೊಂದಿವೆ. ಆದರೆ ವಿಚಾರ ಶೀಲರು ಹೊಟ್ಟಿನಲ್ಲಿಯೂ ಅಕ್ಕಿಯನ್ನು ಅರಿಸಲು ಸಾಧ್ಯವಿದೆಯೆಂದು ಅವುಗಳಿಗೆ "ಹಳ್ಳಿಗರ ಶಿಷ್ಟ ಸಂಪ್ರದಾಯಗಳು" ಎಂದು ವ್ಯಾಖ್ಯಾನ ಮಾಡುವದರಲ್ಲಿ ತೃಪ್ತಿ ತೋರಿಸುತ್ತಾರೆ. ಹಲವು ಶಿಷ್ಟ ಸಂಪ್ರದಾಯಗಳನ್ನೂ, ಹಾಗೇಕೆ ಮಾಡಬೇಕು? ಹೀಗೇಕೆ ಮಾಡಬಾರದು?—ಎಂದರೆ ಅವಕ್ಕೆ ಸಮರ್ಪಕವಾದ ಕಾರಣವನ್ನು ಕೊಡಲು ಸಾಧ್ಯವುಂಟೆ? ಜಗತ್ತಿನ ಎಲ್ಲಾ ಭಾಗಗಳಲ್ಲೂ ಒಂದೇ ವಿಧದ ಶಿಷ್ಟ ಸಂಪ್ರದಾಯಗಳಿವೆಯೆ? ಅಷ್ಟೇಕೆ, ಕನ್ನಡ ನಾಡಿನ ದೂರ ದೂರದ ಹಳ್ಳಿಗಳಲ್ಲೇ ಸಂಸ್ಕೃತಿಯ, ರೂಢಿಗಳು ಒಂದೊಂದು ವಿಧವಾಗಿವೆ. ಅಂದ ಮೇಲೆ ರೂಢಿಗಳ ಪಾಡು?

ಹಳ್ಳಿಗರ ಸಂಸ್ಕೃತಿ ಅಥವಾ ರೂಢಿಗಳನ್ನು ೧ ಅನುಭವೈಕವೇದ್ಯ ಅಥವಾ ಶಕುನಾತ್ಮಕ ೨ ಕಥಾತ್ಮಕ ೩ ಆರೋಗ್ಯ ಸೂಚಕ ೪ ಧಾರ್ಮಿಕ ೫ ಕೃಷಿಕ ೬ ಅಮಂಗಲ ಸೂಚಕವೆಂದು ಆರು ವಿಧದವುಗಳಾಗಿ ವಿಭಾಗಿಸಬಹುದು.

೧ ಅನುಭವೈಕ ವೇದ್ಯ ಅಥವಾ ಶಕುನಾತ್ಮಕ—ಮಾನವನು ತನ್ನ ಜೀವನದಲ್ಲಿ ಹಲವು ಸಾರಿ ಬಂದುಹೋಗುವ ಘಟನೆಗಳನ್ನು ನೆನಪಿನಲ್ಲಿಟ್ಟುಕೊಂಡು ಅವುಗಳ ಫಲವನ್ನು ಮುಂದಿನ ಪೀಳಿಗೆಗಾಗಿ ಸೂಚಿಸುತ್ತಾ ಬರುವುದು ನಮ್ಮ ಹಿರಿಯರ ಒಂದು ಪದ್ಧತಿ. ಶಕುನ ಶಾಸ್ತ್ರವು ಕೇವಲ ಹಲವರ ಅನುಭವಕ್ಕೆ ಬಂದ ವಿಚಾರಗಳಲ್ಲದೆ ಅದಕ್ಕೆ ಸ್ಥಿರವಾದೊಂದು ತಳಹದಿ ಇಲ್ಲ. ಅವುಗಳಲ್ಲಿ ಕೆಲವು ಸುಳ್ಳಾಗಲೂ ಬಹುದು; ಅಥವಾ ಅವರು ಹೇಳಿದ ಫಲಕ್ಕೆ ಸಮಾನವಾದ ಫಲಗಳ ಅನುಭವಕ್ಕೆ ಬರಲೂ ಬಹುದು. ಶುಭಕಾರ್ಯಕ್ಕೆ ಹೊರಟಾಗ ಸರ್ಪ ಬೆಕ್ಕುಗಳು ಅಡ್ಡ ಬರಬಾರದು. ಇನ್ನೊಂದು ಶಕುನದ ವಿಚಾರ. ಹಾವು ವಿಷಜಂತುವು; ಬೆಕ್ಕು ಮಾಂಸಾಹಾರಿ. ಅಹಿಂಸೆಯನ್ನು ಮೆಚ್ಚಿನ ಸತ್ವ ಜೀವಿಗಳಿಂದ ನಮ್ಮ ಹಿರಿಯರಿಗೆ ಇವುಗಳ ಪ್ರಥಮ ಸಂದರ್ಶನವು ಹಿತಕರವಾಗಿ ಕಂಡಿರದು. ವಿಶಾಖದತ್ತನಿಂದ ರಚಿತವಾದ ಮುದ್ರಾ ರಾಕ್ಷಸ ನಾಟಕದಲ್ಲೂ ರಾಕ್ಷಸನು ಶಕುನದಲ್ಲಿ ನಂಬಿಕೆಯುಳ್ಳವನೆಂದು ತೋರುವುದು. ಕುಮಾರ ವ್ಯಾಸ ಭಾರತದಲ್ಲೂ ತುಂಬಾ ಶಕುನಗಳ ವಿಚಾರವಿದೆ. ಬೆಳಿಗ್ಗೆ ಎದ್ದೊಡನೆ ಮನುಷ್ಯನು ಗೋಮಾತೆಯ ಅಥವಾ ಕಲ್ಪವೃಕ್ಷದ (ತೆಂಗಿನ ಮರ) ದರ್ಶನವನ್ನು ತೆಗೆದು ಕೊಳ್ಳುವುದು ಹಿತಕರವೆನ್ನುತ್ತಾರೆ. ಇವುಗಳ ಪವಿತ್ರತೆಯ ಕುರಿತಾದ ಕಥೆ ಮತ್ತು ಅತ್ಯಗತ್ಯತೆಯೇ ಮೇಲಿನ ಭಾವನೆಗೆ ಕಾರಣವಿರಬಹುದು. "ಜಗತೋಸ ಗೋ ರೂಪ ಧರಾ ಮಿಪ್ರೋವಿನೀಂ" ಎಂದು ಕಾಳಿದಾಸನೂ, ಭೂದೇವಿಯು ಗೋರೂಪವನ್ನು ಧರಿಸಿಯೇ ಪರಮಾತ್ಮನ ಸಾನ್ನಿಧ್ಯಕ್ಕೆ ಹೋಗುತ್ತಾಳೆಂದಿದ್ದಾನೆ. ನಾಯಿಯನ್ನು ತಂದು ಸಾಕಬೇಕು; ಬೆಕ್ಕು ಬಂದು ಸೇರಬೇಕು. ನಾಯಿಗಳಲ್ಲಿ ತಿರುಕುಳಿಗಳು ಮನೆಯನ್ನು ಒಂದು ಸೇರುವುದರಿಂದ, ಯಜಮಾನನಿಗೆ ಅವುಗಳಿಂದ ಸಾಕಷ್ಟು ಪ್ರಯೋಜನ ದೊರೆಯಲಾರದು. ಬೇಟೆಯಾಡುವ ಜನಾಂಗಕ್ಕಂತೂ ಇಂಥಾ ಸಾಕಿಬಂದ ನಾಯಿಗಳು ನಿಷ್ಪ್ರಯೋಜನ. ಬೆಕ್ಕು ತಂದು ಸಾಕಿದರೂ ತಾನಾಗಿ ಬಂದರೂ ಇಲಿ ಹಿಡಿಯುವ ಕೆಲಸದಲ್ಲಿ ಹೆಚ್ಚು ಕಡಿಮೆಯಾಗಲಾರದು.

ಕಾಗೆಯು ನೀರಿನಲ್ಲಿ ಮೀಯುತ್ತಿರುವುದನ್ನು ಕಂಡರೆ ಸಾವಿನ ಸುದ್ದಿ ಕೇಳುವೆವು. ಕಾಗೆಯೂ ಪಕ್ಷಿಗಳಲ್ಲಿ ನೀಚವಂತೆ! ರಾವಣನು ದಿಗ್ವಿಜಯಕ್ಕೆ ಹೊರಟಾಗ ಯಮನು ಕಾಗೆಯ ರೂಪದಲ್ಲಿ ಮರೆಯಾದನೆಂದು ಉತ್ತರ ರಾಮಾಯಣದಲ್ಲಿ ಒಂದು ಕಥೆ ಇದೆ. ಕಾಕಬಲಿಯಿಂದ ಪಿತೃಗಳಿಗೆ ತೃಪ್ತಿಯಾಗುವುದೆಂಬ ವಿಶ್ವಾಸ ನಮ್ಮಲ್ಲಿದೆ. ಈ ನಂಬಿಕೆಯ ತಳಹದಿಯ ಮೇಲೆ ಕಾಕ ಸ್ನಾನದ ಫಲವು ಹೇಳಲ್ಪಟ್ಟಿರ ಬಹುದು. ಕಾಗೆಯು ಕೂಳು ಹಾಗಿದರೆ (ಒಂದು ತರದ ಕೂಗು) ನೆಂಟರು ಬರುವರು. ಇದೂ ಒಂದು ಅನುಭವ!

ಶುಭಕಾರ್ಯಗಳಿಗೆ ಉಪ್ಪು ತ್ಯಾಜ್ಯ (ಕೆಂಪು ಪಂಗಡಗಳಲ್ಲಿ ಅಗತ್ಯ); ಪಿತೃಕಾರ್ಯಗಳಿಗೆ ಉಪ್ಪು ಅಗತ್ಯ. ಉಪ್ಪು ಮಾಂಸದ ಪ್ರತಿನಿಧಿ; ಪಾಶ್ವಿಕ ವಸ್ತು. ದಕ್ಷಿಣ ದೇಶದ ಬ್ರಾಹ್ಮಣರಲ್ಲಿ ಮಾಂಸಾಹಾರವು ತ್ಯಾಜ್ಯ. ಆದರೆ ಶ್ರಾದ್ಧ ಮೊದಲಾದ ಕಾರ್ಯಗಳನ್ನು ಆರ್ಯರಿಂದ ಎರವಾಗಿ ಪಡೆದುದರಿಂದ ಮಾಂಸದ ಸ್ಥಾನಕ್ಕೆ ಉಪ್ಪು ಇಳಿಯಬೇಕಾಯಿತು. ಶುಭಕಾರ್ಯಗಳಿಗೆ ಸೂತಕ ಬಂದರೆ ಅವನ್ನು ನಿಲ್ಲಿಸುವುದು ಪ್ರಶಸ್ತ. ಇದು ಸಂಪೂರ್ಣ ಅನುಭವೈಕ ವಿಚಾರ. ಈಗಲೂ ಅಲ್ಲಲ್ಲಿ ವಿವಾಹಾದಿ ಕಾರ್ಯಗಳಲ್ಲಿ ಸೂತಕ ಬಂದಾಗಲೂ ಮುಂದರಿಸಿಟ್ಟು ಅವುಗಳಲ್ಲಿ ಕೆಟ್ಟ ಫಲವೇ ಪ್ರಾಪ್ತವಾದುದನ್ನು ನಾವು ಕಾಣಬಹುದು. ಉಡ ಮನೆಯೊಕ್ಕರೆ ಆ ಮನೆ ಬಿಡಬೇಕು ಎನ್ನುವ ಕೋಳಿಗಳೂ ಹಾಗೆಯೇ. ಮನೆಯ ಮೇಲೆ ಕೋಳಿ ಗೂಬೆಗಳು ಸಂಭಾಷಿಸಬಾರದು. ಉಡು ಕಾಡು ಪ್ರಾಣಿ; ಕೋಣವು [illegible] ವಾಹನ; ಗೂಬೆಯೂ ಶಕುನವನ್ನು ಹೇಳುವ ಪಕ್ಷಿ. ಇವುಗಳಿಂದಾದ ಅರಿಷ್ಟವು ಶಾಂತಿ ಹೋಮಗಳಿಂದ ಪರಿಹಾರವಾಗಬಹುದೆಂಬ ಭರವಸೆಯೂ ನಮ್ಮ ಜನರಲ್ಲಿದೆ. ಮನೆಗಳಲ್ಲಿ ಆರತಿಗಳಿರೆ ಅರಿಷ್ಟವು ತಪ್ಪದೆ ಸಂಭವಿಸುವುದು. [illegible] ಮನೆಯೊಳಗೇ [illegible] ಶಾಂತಿ ಮಾಡಬೇಕು. [illegible] ದಿರೆ. ಆದರೆ [illegible] ಅವರ ಫಲವತ್ತತೆಯು [illegible] [illegible] ೧೧—ಈ ಶ್ಲೋಕಕ್ಕೆ ವ್ಯಾಖ್ಯಾನ ಬರೆದ ಮಲ್ಲಿನಾಥನು ಹೇಳುತ್ತಾನೆ.

ಮನೆಯಲ್ಲಿ ಹೆಣ್ಣು ಹುಟ್ಟಬಾರದು; ಹಟ್ಟಿಯಲ್ಲಿ ಗಂಡು (ಗಂಡುಕರು) ಹುಟ್ಟಬಾರದು. ಬ್ರಾಹ್ಮಣನ ದಾನ ಹಿಂದಕ್ಕೆ. ಹಟ್ಟಿಯ ದಾನ ಮುಂದಕ್ಕೆ. [illegible] ಹೆಣ್ಣಿಗೂ ಕೊಟ್ಟ ಕರುವಿಗೂ ಎಷ್ಟು ಕೊಟ್ಟರೂ ಸಾಲದು. ಇವೆಲ್ಲಾ [illegible] ರೂಢಿಗಳು. [illegible] ಕೆಲಸ ಸಂಪೂರ್ಣವಾಗದು. ಈ ವಾಕ್ಯಕ್ಕೆ ಸೂರ್ಯನ ಛಿನ್ನವಾದ [illegible] ಬುದ್ಧಿಯ ಕೊಡವೆಂದು ಅರ್ಥ ಮಾಡಬೇಕಾಗುತ್ತದೆ.

೨ ಕಥಾತ್ಮಕ ರೂಢಿಗಳು.—ಇವುಗಳಿಗೆಲ್ಲಾ ಕಥೆಯ ಒಂದು ಹಿನ್ನೆಲೆಯಿದೆ. [illegible] ಯಾಗಿ ಅನ್ನ ಹಾಕಿದರೆ ಅದು [illegible] ಮರಣಾನಂತರ [illegible] ಆ ಪದಕ್ಕೆ [illegible] ನ ಸಂಕಟವನ್ನು [illegible] ಸತ್ಯಾ ಕೃತಜ್ಞತಾ ಬುದ್ಧಿ [illegible] ಕೃತಜ್ಞತೆಯೂ ಸ್ಪಷ್ಟವಾಗುವುದು.

[illegible] ಮನುಧರ್ಮ [illegible] ಸ್ವರ್ಗದ [illegible] ಕಣ್ಣುಗಳನ್ನೆಲ್ಲಾ [illegible] ಕೃತಜ್ಞತೆಗೆ [illegible] ಹಳ್ಳಿಗರು [illegible] ಮನೋಹರವಾದ ಕಥೆ ಕಟ್ಟಿದ್ದಾನೆ. [illegible] ಒಂದು ಕಾಲದಲ್ಲಿ ದೇವರು ಎಲ್ಲಾ ಪ್ರಾಣಿಗಳನ್ನು ಹುಟ್ಟಿಸಿದ ಮೇಲೆ, ಅವುಗಳನ್ನೆಲ್ಲಾ ಕರೆದು ಹಾಕಿ ಅವುಗಳಿಗೆ ಒಂದೊಂದು ಹೆಸರನ್ನು ಕೊಟ್ಟನಂತೆ! ಆ ಕಾಲದಲ್ಲಿ ನಾಯಿಗೆ [illegible] ಅಲ್ಲಿಗೆ ಬಂದಿರಲಿಲ್ಲ. ಅದು ಕೊನೆಗೆ ಭಗವಂತನ ಸಾನ್ನಿಧ್ಯಕ್ಕೆ ಬಂದಾಗ ಅವನು ಯೋಚಿಸಿ ತನ್ನ [illegible] ಹೆಸರುಗಳ [illegible] [illegible] ಎಂದೆನು. ಆ

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಜಿಳ್ಳಿ, ತಾಮ್ರ, ಹಿತ್ತಾಳೆ, ಕಂಚು [illegible] ಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ

ರಥಬೀದಿ ಉಡುಪಿ.

ಋತುಸ್ರಾವ ನಿಂತಿತು

"ಕುಮಾರಿ" ಬಿಲ್ಲೆಗಳನ್ನು ಉಪಯೋಗಿಸಿದರೆ ಪದತಪ್ಪಿ ಋತುಸ್ರಾವವಾಗುವದು, ಹತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು. ಯಾವ ಬಾಧಕವೂ ಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ: ರೂ. 3/-; ಸ್ಪೆಶ್ಯಲ್ ರೂ. 5-. ಅಧಿಕಾಧಿಕ ಸ್ಪೆಶ್ಯಲ್ ರೂ. 8-[ವಿ. ಪಿ. ಖರ್ಚು ಪ್ರತ್ಯೇಕ]

Mrs. P. DEVEE, F.DS.(N.J.)
CALCUTTA. 40

ಸ್ಟಾಕಿಸ್ಟರು: ಪಹಾ ಕಂಪೆನಿ, ಮಂಗಳೂರು.

SEASON DEPOSITS.

Are now accepted for periods from 3 to 6 months 3½ interest per annum for amounts of Rs. 500/- and multiples thereof. No deposit is allowed to run beyond 15—10—1954.

Attractive rates of interest are offered for Fixed Deposits for periods ranging from 1 to 24 months.

Banking transactions of all kinds are undertaken.

Branches throughout South Kanara, and one each in Mercara and Fort, Bombay

THE VIJAYA BANK LIMITED,

Head Office: **MANGALORE.**

ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 25 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಜಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

THE MOOLKY BANK LTD.
Moolky, S. K.

ಖಾತ್ರಿ ಚಿನ್ನದ ನೆಕ್‌ಲೇಸ್ ತರದವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,

ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ

ಫೋನು ನಂ. 66



ಕ್ಷರಗಳನ್ನು ಜೋಡಿಸಿ ನಾಯಿಯೆಂಬ ಹೆಸರಿಟ್ಟನಂತೆ! ನಾಯಿಯು ತನ್ನ ಉತ್ತಮ ಗುಣಗಳಿಂದ ಹಳ್ಳಿಗರ ಹೃದಯವನ್ನೆಷ್ಟು ಸೆಳೆದಿದೆಯೆಂಬುದು ಈ ಕತೆಯಿಂದ ಗೊತ್ತಾಗುವುದು

ಮೂರು ಗಂಡು ಹುಟ್ಟಿ, ಒಂದು ಹೆಣ್ಣು ಹುಟ್ಟಬಾರದು ಇದು ರಾಮಾಯಣ ಕಥೆಯನ್ನು ಹಳ್ಳಿಗರು ಓದಿದುದರ ಫಲ ರಾವಣ ಕುಂಭಕರ್ಣ ವಿಭೀಷಣ ಮತ್ತು ಶೂರ್ಪನಖಿಯರನ್ನೂ, ಆ ರಕ್ಕಸಿಯ ಜಗಳಗಂಟಿತನದ ಫಲಿತಾಂಶವನ್ನೂ ಹಳ್ಳಿಗರೆಂದೂ ಮರೆಯಲಾರರು

೩ ಆರೋಗ್ಯ ಸೂಚಕ ರೂಢಿಗಳು—ಇವುಗಳ ಅಭಿಪ್ರಾಯವನ್ನು ಸುಲಭದಲ್ಲೇ ಹೇಳಬಹುದು ಕಾಲಿಗೆ ಹಾಕಿದ ಮೆಟ್ಟು ತಲೆಗೆ ತಂಪನ್ನೀಯುವುದು ಅಂಗಾಲಿಗೆ ಎಣ್ಣೆ ಹಾಕಿಕೊಂಡರೆ ಅರ್ಧಾಯುಸ್ಸು. ಈ ರೂಢಿಯು ವಿಲಾಸ ಜೀವನವನ್ನು ನಿಷೇಧಿಸಿದಂತೆ ತೋರುತ್ತದೆ ತೈಲೋಪಯೋಗದಲ್ಲಿ ಹೆಚ್ಚು ಆಸಕ್ತಿಯುಳ್ಳವನು ವಿಲಾಸ ಪ್ರಿಯನೆನ್ನಬೇಕು, ವಿಲಾಸವು ಆಯುಷ್ಯವನ್ನು ಹಾಳು ಮಾಡುವುದು ಎಣ್ಣೆಯ ಅಂಕರಿಸ್ಸವನಿಗೆ (ಅತ್ಯಾಶೆ) ಅರ್ಧಾಯುಷ್ಯವೆನ್ನುವ ಹಳ್ಳಿಗರ ಗಾದೆಯು ಮೇಲಿನ ಮಾತುಗಳನ್ನು ಸಮರ್ಥಿಸುತ್ತದೆ ಊಟ ಮಾಡುವಾಗ ಸೀನಿದರೆ ಮೇಲೆ ನೋಡುವುದರಿಂದ ಪರಿಹಾರ ಸುಣ್ಣದ ಪಾತ್ರೆ ಒಣಗಿದರೆ ಲಕ್ಷ್ಮಿಯು ಮನೆಬಿಟ್ಟು ತೊಲಗುತ್ತಾಳೆ ಇದರಲ್ಲಿ ಗೃಹಸ್ಥಾಶ್ರಮಿಗೆ ತಾಂಬೂಲದ ಅವಶ್ಯಕತೆಯು ಸೂಚಿತವಾಗುವುದು ಗೃಹಸ್ಥಾಶ್ರಮಿಯು ಹೊತ್ತು ಮುಳುಗಿದ ಮೇಲೆ ಸ್ನಾನ ಮಾಡಬಾರದು. ಉತ್ತರಕ್ರಿಯೆ ಮಾಡತಕ್ಕವರು, ಬಾಣಂತಿ ಮತ್ತು ಮುಟ್ಟಾದ ಸ್ತ್ರೀಯರು ಕಬ್ಬಿಣದ ತುಂಡೊಂದನ್ನು ಹಿಡಿದುಕೊಂಡೇ ತಿರುಗಬೇಕು ಇದೊಂದು ವೈಜ್ಞಾನಿಕ ಹಿತವಚನ, ಹಾಲನ್ನು ಕಂಚು ತಾಮ್ರದ ಪಾತ್ರೆಗಳಲ್ಲಿಡಬಾರದು ಸೂರ್ಯೋದಯದ ಮೊದಲು ಕ್ಷೌರ ಮಾಡಿಸಿಕೊಳ್ಳಬಾರದು ಕ್ಷೌರಾನಂತರ ಗೋಮಯ ಮತ್ತು ಮೃತ್ತಿಕೆಗಳನ್ನು ಸ್ನಾನಕ್ಕೆ ಉಪಯೋಗಿಸಲೇ ಬೇಕು ಗ್ರಹಣ ಕಾಲದಲ್ಲಿ ಆಹಾರ ಸೇವಿಸುವುದರಿಂದ ವ್ಯಾಧಿಗಳುಂಟಾಗುವ ಸಂಭವವಿದೆ.

೪ ಧಾರ್ಮಿಕ ವಿಚಾರ—ಗಂಡನ ಕಾಲು ತಿಕ್ಕದ ಹೆಂಡತಿಯು ಮುಂದಿನ ಜನ್ಮದಲ್ಲಿ ಬಾವಲಿಯಾಗುತ್ತಾಳೆ ಸ್ತ್ರೀಯರಲ್ಲಿ ವಿನಯ ಮತ್ತು ಪತಿ ಪ್ರೇಮವನ್ನು ಹೆಚ್ಚಿಸಲು ಇದೊಂದು ಸಾಧನವೆಂದು ತೋರುತ್ತದೆ ಸೋದರಳಿಯನಿಗೆ ಹೆಣ್ಣು ಕೊಡುವಾಗ ಜಾತಕ ನೋಡುವುದೇ ಬೇಡ ಇದು ಕನ್ಯಾಪಿತೃವು ತನ್ನ ಮಗಳು ಪತಿಗೃಹದಲ್ಲಿ ತಾಪನೆಪೊಂದುವುದನ್ನು ಸಹಿಸಲಾರದೆ ಚಿರಪರಿಚಿತಳಾದ ತಂಗಿ ಅಥವಾ ಅಕ್ಕನ ಮಗನಿಗೆ ಕೊಟ್ಟು ಮಗಳ ಸುಖವನ್ನು ನೋಡುವ ಆತುರವನ್ನು ಇಲ್ಲಿ ಸ್ಪಷ್ಟಪಡಿಸಿದಂತಿದೆ ಈ ಆತುರವು ಗೃಹಸ್ಥಾಶ್ರಮಿಗಿರಬೇಕಾದುದೂ ಸಹಜವೇ ಊಟ ಮಾಡುವಾಗ ಇಡೀ ಹಸ್ತವನ್ನುಪಯೋಗಿಸುವವನು ದರಿದ್ರನಾಗುತ್ತಾನೆ ಉಣ್ಣುವ ಅತ್ಯಾಶೆಯು ಹಿತಕರವಾದುದಲ್ಲ ಪ್ರದೋಷಕಾಲಗಳಲ್ಲಿ ದೇವರ ಧ್ಯಾನವನ್ನು ಬಿಟ್ಟು ಇನ್ನಾವ ಕೆಲಸಗಳನ್ನೂ ಮಾಡಬಾರದು ಮುಸ್ಸಂಜೆ ಹೊತ್ತಿನಲ್ಲಿ ಮಲಗಿದವನು ಮೂರು ವರ್ಷ ಮಲಗುತ್ತಾನೆ ಇದು ಸುಲಭದಲ್ಲಿ ಏಕಾಗ್ರತೆಯನ್ನು ಪಡೆಯಬಹುದಾದ ಸಮಯ

ಕೊಂದ ಪಾಪ ತಿಂದು ಪರಿಹಾರ ಮನುಷ್ಯನು ಪ್ರಾಣಿಗಳನ್ನು ಕೊಂದರೆ, ಅವನ್ನು ತಿಂದ ಮಾತ್ರಕ್ಕೆ ಪಾಪವು ಪರಿಹಾರವಾಗುವುದೆಂದು ಕೆಲವರು ಹೇಳುವುದುಂಟು. ಇದರರ್ಥ ಹಾಗಲ್ಲ ಪ್ರಾಣಿಗಳನ್ನು ಕೊಂದು ಪಡೆದ ಪಾಪವನ್ನು ಅನುಭವಿಸಿಯೇ ತೀರಬೇಕಾಗುತ್ತದೆ ಪತ್ನಿ ಗರ್ಭಿಣಿಯಾದಾಗ ಕ್ಷೌರ ಮಾಡಿಸಿಕೊಳ್ಳಬಾರದು ಈ ಮಾತು ಸಂಯಮ ಜೀವನಕ್ಕೆ ಆಹ್ವಾನ ಕೊಡುವುದು ಪತಿಯು ಮೃತ್ಯುಶಯ್ಯೆಯಲ್ಲಿ ಮಲಗಿರುವಾಗ ಪತ್ನಿ ಮುಟ್ಟಾಗಬಾರದು. ಇದರಿಂದ ಕಾಹಿಲೆ ಮನುಷ್ಯನ ಮನಶ್ಶಕ್ತಿಯು ಮತ್ತೂ ಜಳ್ಳಾಗುವುದೆಂದು ಭಾವಿಸಬೇಕಾಗುತ್ತದೆ

೫ ಕೃಷಿಕ ವಿಚಾರಾತ್ಮಕ ರೂಢಿಗಳು—ಭರಣಿ ಕೃತ್ತಿಕೆಯಲ್ಲಿ ಬಿಸಿಲು ಕಾದರೆ ಬೇಸಾಯವು ಉತ್ತಮವಾಗುವುದು ಕುಂಭ (ಕುಂಭ ಮಾಸ) ತಿಂಗಳು ಮಳೆ ಬಂದರೆ ಕುಪ್ಪೆಗುಳಿಯಲ್ಲಾ ಅನ್ನ. ಸ್ವಾತಿ ಮಳೆಯಿಂದ ಮುತ್ತು ಬೆಳೆಯುವುದು ವಿಶಾಖೆ ಮಳೆಯಿಂದ ವಿಷಜಂತುಗಳು ಹೆಚ್ಚುವವು. ಗೊಬ್ಬರದ ರಾಶಿಗೆ ಬೆಂಕಿ ಹಿಡಿದರೆ ಮನೆಗೆ ಕೇಡು ಬದನೆಕಾಯನ್ನು ಸುಡಲು ಉಪಯೋಗಿಸಿದರೆ ದಾರಿದ್ರ್ಯ ಹೆಚ್ಚುವುದು. ಬದನೆಕಾಯಿಂದ ಕೃಷಿಕನು ತನ್ನ ಫಲವೃಕ್ಷಗಳಿಗೆ ಆದ ಕೆಡುಕುಗಳನ್ನು ಕಂಡು ಅವುಗಳ ನೆರಳನ್ನು ನೋಕಲು ರೈತನು ಅಂಜುವನು.

ಕೃಷಿಕನಿಗೆ ಗೋಧನವು ಅಮೂಲ್ಯವಾದುದು ಅವುಗಳ ಶಕ್ತಿ ಆರೋಗ್ಯವೇ ಅವನ ಸಂಪತ್ತಿಗೆ ಕಾರಣ ಅದಕ್ಕಾಗಿಯೇ ಕನ್ನಡದಲ್ಲಿ ಗೋಧನವನ್ನು ಗಂಟಿ (ಗಂಟು=ಧನ) ಎನ್ನುತ್ತಾರೆ ದನಗಳ ಕಣ್ಣೀರೂ, ಅವು ಸೀನುವುದು ಯಜಮಾನನಿಗೆ ಅಹಿತ. ಇವು ಪಶುಗಳ ಆರೋಗ್ಯವು ಕೃಷಿಕನಿಗೆ ಎಷ್ಟು ಪ್ರಾಮುಖ್ಯವಾದುದೆಂಬುದನ್ನು ಹೇಳುತ್ತಿದೆ

೬ ಅಮಂಗಲ ಸೂಚಕ ರೂಢಿಗಳು—ಏಣಿಯನ್ನು ಮಲಗಿಸಿಡಬಾರದು ಕಾಯಿ ಕಡಿಗಳನ್ನು ಮೇಲು ಮೊಗವಾಗಿ ಮಡಗಬಾರದು. ಇವೆರಡೂ ಮರಣಾನಂತರದ ಚಿತ್ರಗಳು ಹಳ್ಳಿಗರಿಗೆ ಇಂತಹ ಭಯಾನಕ ದೃಶ್ಯಗಳನ್ನು ಕಾಣುವುದರಲ್ಲಿ ತಾಳ್ಮೆ ಇಲ್ಲ

ಹಳ್ಳಿಗರ ಸಂಸ್ಕೃತಿಯಲ್ಲಿ ಮಿಲನವಾದ ಇಂಥಾ ರೂಢಿಗಳನ್ನು ಆಯಾ ಪ್ರಾಂತದವರು ಪ್ರಕಟಪಡಿಸಿದಲ್ಲಿ ಮನೋರಂಜನೆಯೊಂದಿಗೆ ಜನ್ಮಗಳನ್ನು ಗಾಳಿಯಲ್ಲಿ ತೂರಲು ಸಹಾಯವಾದೀತು, ಸಂಸ್ಕೃತಿಯನ್ನು ಸಂಸ್ಕರಿಸಲು ಸಾಧ್ಯವಾದೀತು

— —

(೨ನೇ ಪುಟದಿಂದ)

ಬಿದಿರು ಮೆಳೆಗಳೂ ಪುಷ್ಕಳವಾಗಿ ಬೆಳೆಯುತ್ತವೆ. ಸರಕಾರವು ನೇಪಾ ಕಾರಖಾನೆಗೆ ಕಚ್ಚಾಸಾಮಾಗ್ರಿಗಳ ಅವ್ಯಾಹತ ಪೂರೈಕೆಯ ಭರವಸೆಯನ್ನು ಕೊಟ್ಟಿದೆ. ಕಾರಖಾನೆಯು ತಾಪಿ ನದಿಯ ದಂಡೆಯ ಮೇಲೆ ಬರಹಾಂಪುರದಿಂದ ಕೆಲವು ಮೈಲುಗಳ ದೂರದಲ್ಲಿ ಕಾಡಿನ ನಡುವೆ ಇರುವುದರಿಂದ ಕಾಗದ ತಯಾರಿಯ ಉದ್ದಿಮೆಯಲ್ಲಿ ಅವಶ್ಯಕವಾದ ನೀರು ಮತ್ತು ಮರ-ಬಿದಿರುಗಳ ಪೂರೈಕೆ ಸುಲಭದಲ್ಲಿ ಸಾಧ್ಯವೆನಿಸಿದೆ

ಉತ್ತರ ಅಮೇರಿಕ ಮತ್ತು ಯುರೋಪುಗಳಲ್ಲಿ ಬೆಳೆಯುವ ಮಿದು ಜಾತಿಯ ಮರಗಳು ಉಷ್ಣವಲಯದ ಭಾರತದಲ್ಲಿ ದೊರಕುವುದಿಲ್ಲ. ಹಿಮಾಲಯ ಪ್ರದೇಶದಲ್ಲಿ ಇವುಗಳನ್ನು ಕಾಣಬಹುದಾದರೂ ಅಲ್ಲಿ ಕಾರಖಾನೆಯನ್ನು ಕಟ್ಟಿ ಬೆಳಸುವಂತಿಲ್ಲ. ಆದುದರಿಂದ ವೃತ್ತಪತ್ರಗಳ ಕಾಗದ ತಯಾರಿಕೋದ್ಯಮ ಸಾಕಷ್ಟು ಮುಂದೆ ಬರಲಿಲ್ಲ. ಆದರೆ ಈಚೆಗೆ ಕೆನಡಾದ ಮೊಂಟ್ರೀಲದಲ್ಲಿರುವ ಮೆಸರ್ಸ್ ರಾಬರ್ಟ್ ಎ ರಾಂಕೀನ ಮತ್ತು ಕಂಪೆನಿಯವರು ನಡೆಸಿದ ಸಂಶೋಧನೆಗಳು ನಮ್ಮಲ್ಲಿ ದೊರಕುವ ಅಗಲೆಲೆಯ ಮತ್ತು ಮಿದು ಕಾಂಡದ ಕೆಲವು ಜಾತಿಯ ಮರಗಳನ್ನು ಕಾಗದ ತಯಾರಿಸುವುದಕ್ಕೆ ಉಪಯೋಗಿಸಬಹುದೆಂದು ತಿಳಿಸಿದವು ಈ ಮರಗಳೊಂದಿಗೆ ಬಿದಿರು ಮತ್ತು ಸಲಾಯಿ ಎಂಬೊಂದುಜಾತಿಯ ಕಾಡುಹುಲ್ಲಿನ ಸಪ್ಪನ್ನೂ ಮಿಶ್ರಮಾಡಿ ಅಗ್ಗದರದಲ್ಲಿ ಉತ್ತಮ ಜಾತಿಯ ಕಾಗದವನ್ನು ತಯಾರಿಸಬಹುದೆಂದು ಕಂಡುಹಿಡಿದರು

ಇದು ವೃತ್ತಪತ್ರ ಕಾಗದಗಳ ಉತ್ಪಾದನೆಯನ್ನು ಭಾರತದಲ್ಲಿ ಪ್ರಾರಂಭಿಸಲು ಪ್ರೋತ್ಸಾಹವನ್ನೀಡಿತು. ನೇಪಾ ನಗರದ ಕಾರಖಾನೆ ಆದಷ್ಟು ಹೆಚ್ಚು ಅಗ್ಗದರದಲ್ಲಿ ವೃತ್ತಪತ್ರ ಕಾಗದವನ್ನು ತಯಾರಿಸುತ್ತಿದೆ. ಅದನ್ನು ಸಂದರ್ಶಿಸಿದ ಪತ್ರಿಕಾಕರ್ತರು ಇಲ್ಲಿ ತಯಾರಾದ ಕಾಗದದ ಮಾದರಿ ಹಾಳೆಯ ಯೋಗ್ಯತೆಯು ನಾವು ಸಾಮಾನ್ಯವಾಗಿ ಉಪಯೋಗಿಸುವ ಕಾಗದಕ್ಕಿಂತ ಹೆಚ್ಚು ಗುಣಾಂಶಗಳಿಂದ ಕೂಡಿದಯಾಗಿ ಹೇಳಿದ್ದಾರೆ

ಗಮನಿಸಿರಿ!



ನಮ್ಮ ಟ್ರೇಡ್‌ಮಾರ್ಕಿನ ಅನುಕರಣೆಯನ್ನು ಮಾಡುವ ಇತರ ನಕಲಿ ಬೀಡಿಗಳಿಗೆ ಮೋಸಹೋಗದಿರಿ.

ಮೇಲಿನ ಎಸ್. ಆರ್. ಟ್ರೇಡ್‌ಮಾರ್ಕ್ ಇರುವ ಬೀಡಿಗಳು ಮಾತ್ರ ನಿಮಗೆ ಖಾತ್ರಿದಾಯಕವಾದುದು.

S.R.BEEDI WORKS, UDIPI, S.K.

ಲಕ್ಷಾಂತರ ಜನರು ಗುಣಹೊಂದಿದ್ದಾರೆ

ಸರ್ ಜೇಸನ್ ಶಿಲಾಜಿತ್‌ಲೇಹ

ಶಿಲಾಜಿತ್ ಹಿಮಾಲಯದ್ದು ಔಷಧಿಗಳ ರಾಜ, ಮೂಲಿಕೆಗಳೊಡನೆ ಸೇರಿಸಿದ ಲೇಹ್ಯ, ದೇಹಶಕ್ತಿ, ಹೊಟ್ಟೆನೋವು, ಅನ್ನ ಸೇರದಿರುವಿಕೆ, ಕೆಮ್ಮು, ದಮ್ಮು, ಬಹುಮೂತ್ರ ಮತ್ತು ವಾಯುವಿನಿಂದಾಗುವ ಎಲ್ಲಾ ರೋಗನಿವಾರಕ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, ಹೆಂಗಸರ ಮತ್ತು ಮಕ್ಕಳ ಸರ್ವರೋಗ ನಿವಾರಕ ಅಮೂಲ್ಯ ರತ್ನ ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು

೪೪ ದಿನದ ಲೇಹ್ಯ ರೂ ೫-೪-೦, ೨೨ ದಿನದ ಲೇಹ್ಯ ರೂ. ೩-೪-೦ (ಪೋಸ್ಟೇಜು ಮಾಫಿ)

ನೀಲಗಿರಿ ಡಿಪ್ಪೊ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ.

ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪ್ಪೋವಿನಲ್ಲಿ ಕೇಳಿರಿ.

ಭರ್ತ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ ಗರ್ಭ ಇದ್ದವರು ಸೇವಿಸ ಬಾರದು, ಸೇವಿಸಿದರೆ ಗರ್ಭಪಾತವಾಗುವದು

ಬೆಲೆ-೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟು ಖರ್ಚು ರೂ. ೦-೧೪-೦

—:ವಿಳಾಸ.—

ಹಾಲಪ್ಪಾ ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ಡಾ| ಕಾರಂತ್ ...

ಮನೆ ಮದ್ದು

ಬೆಲೆ ರೂ 2 ...

—ಹೊಸಕೆರೆ ಚಿದಂಬರಯ್ಯನವರ—

ಗೀತೆಯ ವೈಗನ್ನಡಿ

ಭಗವದ್ಗೀತೆಯ ಸಮಾಲ

ಭಾಷಾಂತರ.

ಬೆಲೆ 0-12-0

V P ಮೂಲಕ 1—4—0

ನವಯುಗ ಪ್ರೆಸ್, ಉಡುಪಿ

Edited, Printed & Published By K. H. Shetty at the Navayuga Press, Udipi, S. India

Regd. No. M. 3618 [ಬೆಲೆ] Licence No. 3 Licensed to Post without Prepayment

ನವಯುಗ

Vol. 33 No. 11 — 8-4-1954

ಎರಡು ವರ್ಷಗಳ ಬಳಿಕ-

ಮದ್ರಾಸು ರಾಜ್ಯದ ಶಾಸನ ಸಭಾ ಕಾಂಗ್ರೆಸು ಪಕ್ಷದ ಧುರೀಣನಾಗಿ ಆಯ್ಕೆ ಹೊಂದಿ, ಮುಖ್ಯ ಮಂತ್ರಿಸ್ಥಾನದ ಹೊಣೆಯನ್ನು ಸ್ವೀಕರಿಸಿದ ಎರಡು ವರ್ಷಗಳ ಬಳಿಕ ಶ್ರೀ ಚಕ್ರವರ್ತಿ ರಾಜ ಗೋಪಾಲಾಚಾರಿಯವರು ಇದೀಗ ತಮ್ಮ ಅಧಿಕಾರವನ್ನು ತ್ಯಜಿಸಿ, ನಿವೃತ್ತಿಹೊಂದಲು ನಿರ್ಧರಿಸಿದರು. ಅವರು ಅನಾರೋಗ್ಯದ ಕಾರಣವನ್ನು ಮುಂದೆ ಮಾಡಿ ಮದ್ರಾಸಿನ ಕಾಂಗ್ರೆಸು ರಾಜಕೀಯ ರಂಗದಿಂದ ಕಾಲ್ತೆಗೆದು, ತೆರೆಯ ಹಿಂದೆ ಮರೆಯಾಗಲು ಇಚ್ಛೆಪಟ್ಟರು. ಎಪ್ಪತ್ತೈದರ ಈ ಮುದುಕ ರಾಜಕಾರಣಿಗೆ ಪ್ರಾಯವೇ ರೋಗವಾಗಿ ಪರಿಣಮಿಸಿತು. ಸ್ವತಃ ರಾಜಾಜಿಯೇ ಹೇಳಿದಂತೆ,ಬುದ್ಧಿ ಕೌಶಲವು ಎಷ್ಟೇ ತೀಕ್ಷ್ಣವಾಗಿದ್ದರೂ ಸಹ, ದೇಹದ ಈ ಕೊರಡು ವಿಶ್ರಾಂತಿಯನ್ನು ಬಯಸುವಂತೆ ಈ ಪ್ರಾಯ ಒತ್ತಾಯಿಸುತ್ತದೆ! ಆ ..ದರಿಂದ ಸೇವೆ ಮಾಡುವ ಉತ್ಕಟೇಚ್ಛೆ ಇದ್ದರೂ ಅದರಿಂದುಂಟಾಗುವ ದೈಹಿಕ ತ್ರಾಸವನ್ನು ಸಹಿಸಿಕೊಳ್ಳಲಾಗದೆ ಕೈಬಿಡುವ ಪ್ರಸಂಗ ಬಂದಿದೆ. ಮದ್ರಾಸು ರಾಜ್ಯದ ಪ್ರಜೆಗಳಿಗೆ ಈ ಮಾತು ತುಂಬ ನೋವನ್ನುಂಟು ಮಾಡದಿರದು. ಮದ್ರಾಸಿಗೆಂದೇ ಏಕೆ-ಭಾರತದ ನಾಗರಿಕರೆಲ್ಲರೂ ರಾಜಾಜಿಯ ವಿರಾಮದ ವಾರ್ತೆಯನ್ನು ಖೇದ ಹಾಗೂ ವಿವಂಚನೆಯಿಂದಲೇ ಕೇಳಿದರು.

ಸಾಮಾನ್ಯ ಪ್ರಜೆಗಳು ರಾಜಾಜಿಯ ನಿರ್ಗಮನವನ್ನು ಎಷ್ಟು ದುಃಖದಿಂದ ಕಾಣುತ್ತಿರುವರೆಂದು ಹೇಳಲು ಬಾರದು —ಕಳೆದ ಎರಡು ವರ್ಷಗಳ ಅಲ್ಪಾವಧಿಯಲ್ಲಿ ರಾಜ್ಯದ .... ತ..ವನ್ನು ಸುಧಾರಿಸಿ ಈಗಿನ ಉನ್ನತ ಮಟ್ಟಕ್ಕೆ ಮುಟ್ಟಿಸಿದ ರಾಜಾಜಿಯ ಕುರಿತು ಎಲ್ಲರಲ್ಲೂ ಆದರ ಭಾವನೆ ತುಂಬಿ ತುಳುಕುತ್ತದೆ. ರಾಜಕೀಯ ಮತಭೇದದ ಕಾರಣದಿಂದ ರಾಜಾಜಿಯನ್ನು ವಿರೋಧಿಸುವವರೂ ಸಹ ಅವರ ಆಡಳಿತ ಕೌಶಲವನ್ನು ಕಂಡು ಅಭಿಮಾನಗೊಳ್ಳದಿಲ್ಲ: ಮುಕ್ತಕಂಠದ ಪ್ರಶಂಸೆಯನ್ನೂ ಮಾಡದಿಲ್ಲ. ಜನರು ರಾಜಾಜಿಯ ಯೋಗ್ಯತೆಯ ವಿಷಯದಲ್ಲಿ ಎಷ್ಟರ ಮಟ್ಟಿನ ಸದಭಿಪ್ರಾಯವನ್ನು ಹೊಂದಿದ್ದರೆನ್ನುವದಕ್ಕೆ ಮೇಲ್ಮನೆಯಲ್ಲಿ ಒಬ್ಬರಾದ ಮೇಲೆ ಒಬ್ಬರಂತೆ ಸದಸ್ಯರು ಎದ್ದು ನಿಂತು ರಾಜಾಜಿಯ ಗುಣಗಾನ ಮಾಡುವ ಭಾಷಣಗಳನ್ನು ಬಿಗಿದದ್ದೇ ನಿದರ್ಶನ. ಪಾರ್ಲಿಮೆಂಟರಿ ಪರಂಪರೆಯಲ್ಲಿ ರಾಜಾಜಿಯವರಷ್ಟು ಅನುಭವ ಹೊಂದಿದ ಮತ್ತು ಆ ..ವನ್ನು ಚಾತುರ್ಯದಿಂದ ಕಾಯ್ದುಕೊಂಡು ಹೋದ ವ್ಯಕ್ತಿ ಇನ್ನೊಬ್ಬನಿಲ್ಲವೆಂದು ಮದ್ರಾಸು ವಿಶ್ವವಿದ್ಯಾಲಯದ ಉಪಕುಲಪತಿ ಹಾಗು ಪ್ರತಿಪಕ್ಷದ ಧುರೀಣ ಡಾ। ಲಕ್ಷ್ಮಣ ಸ್ವಾಮಿ ಮುದಲಿಯಾರರು ಅಭಿಪ್ರಾಯಪಟ್ಟರು. ರಾಜಾಜಿಯೊಂದಿಗೆ ಕೆಲವು ವಿಷಯಗಳಲ್ಲಿ ಭಿನ್ನಾಭಿಪ್ರಾಯಗಳನ್ನು ಹೊಂದಿದವರೂ ಸಹ ಅವರ ಪ್ರಾಮಾಣಿಕತೆಯನ್ನಾಗಲೀ ಶ್ರದ್ಧೆ ಮತ್ತು ಆಸಕ್ತಿಯನ್ನಾಗಲೀ ಪ್ರಶ್ನಿಸುವಂತಿರಲಿಲ್ಲವೆಂದು ಮುದಲಿಯಾರರು ರಾಜಾಜಿಯನ್ನು ಕೊಂಡಾಡಿದರು.

ರಾಷ್ಟ್ರಕ್ಕೂ ರಾಜ್ಯಕ್ಕೂ ರಾಜಾಜಿಯವರು ಅರ್ಪಿಸಿದ ಸೇವೆ ಪವಿತ್ರವಾದದ್ದು; ಚಿರಸ್ಮರಣೀಯವಾದದ್ದು. ಭಾರತ ವಿಭಜನೆಯ ಆ ದುರ್ದಿನಗಳಲ್ಲಿ ಬಂಗಾಳದಲ್ಲಿ ಶಾಂತಿ ಹಾಗು ಸುವ್ಯವಸ್ಥೆಗಳನ್ನು ದಕ್ಷತೆಯಿಂದ ಪರಿಪಾಲಿಸಿದವರು ರಾಜಾಜಿ: ಲಾರ್ಡ ಮೌಂಟಬೇಟನ್ನರ ನಿವೃತ್ತಿಯಿಂದ ತೆರವಾದ ಗವರ್ನರ ಜನರಲರ ಸ್ಥಾನವನ್ನು ಅಲಂಕರಿಸಿ, ಭಾರತದ ಗೌರವ ಪರಂಪರೆಯನ್ನು ಉನ್ನತ ಮಟ್ಟಕ್ಕೊಯ್ದವರು ರಾಜಾಜಿ. ಈ ಪದವಿಯಿಂದ ಬಿಡುಗಡೆ ದೊರಕಿದ ಬಳಿಕ ಸರ್ದಾರ ಪಟೇಲರ ಮರಣದಿಂದ ದುರ್ಬಲಹೊಂದಿದ ಕೇಂದ್ರ ಮಂತ್ರಿಮಂಡಳದಲ್ಲಿ ಸೇರಿಕೊಂಡು, ಅದರ ಶಕ್ತಿ ಸಾಮರ್ಥ್ಯಗಳನ್ನು ಹೆಚ್ಚಿಸಿದವರು ರಾಜಾಜಿ. ಅವರಲ್ಲಿ ಮದ ಹಂಕಾರವಿಲ್ಲ; ರಾಷ್ಟ್ರ ಸೇವೆಯ ಯಾವ ಅವಕಾಶವನ್ನೂ ಬಿಟ್ಟುಗೊಡುವವರು ಅವರಲ್ಲ. ಕರೆ ಬಂದೊಡನೆಯೇ ಅದಕ್ಕೆ ಓಗೊಟ್ಟು, ಸಿದ್ಧಗೊಳ್ಳುವ ಅವರ ಆದರ್ಶ ಅನುಕರಣೀಯವಾದದ್ದು; ನಮ್ಮ ಜನತಾ ಧುರೀಣರೂ ಮುಂದಿನ ಜನಾಂಗವೂ ಬೆಳೆಸಿಕೊಳ್ಳಲು ಯೋಗ್ಯವಾದದ್ದು. ರಾಷ್ಟ್ರದ ಸೇವೆಗಾಗಿ ಸರ್ವಾರ್ಪಣವನ್ನು ಮಾಡಿದ ಮಹಾ ಜೀವಗಳ ಸಾಲಿನಲ್ಲಿ ರಾಜಾಜಿಯವರು ಸದಾಕಾಲ ಮಿನುಗುವುದು ನಿಶ್ಚಯ. ಅವರು ತಮ್ಮ ವ್ಯಕ್ತಿಗತ ಸುಖ ಹಾಗು ಲಾಲಸೆಗಳ ಕಾರಣದಿಂದ ಅಧಿಕಾರ ಬಯಸಿದ್ದಿಲ್ಲ- ಅಧಿಕಾರದ ಮೋಹ ಅವರಿಗೆ ಇದ್ದದ್ದೇ ಇಲ್ಲ ತನ್ನ ಕೈಯಿಂದ ರಾಷ್ಟ್ರದಸೇವೆಯನ್ನು ಸ್ವಲ್ಪವಾದರೂ ಮಾಡಲು ಸಾಧ್ಯವಾಗುವುದಾದರೆ, ಅದಕ್ಕೆ ಸದಾಕಾಲ ಸಿದ್ಧಗೊಂಡು ನಿಂತ ಹಿರಿಯರು ರಾಜಾಜಿ.ಇಷ್ಟು ಉನ್ನತವಾದ ವ್ಯಕ್ತಿತ್ವವನ್ನು ಹೊಂದಿದ ರಾಜಾಜಿಯವರನ್ನು ಇನ್ನು ಮುಂದೆ ಸಚಿವಾಸನಗಳ ಅಗ್ರಸ್ಥಾನದಲ್ಲಿ ನೋಡಲಾಗದ ಪರಿಸ್ಥಿತಿ ಬಂದುದಕ್ಕೆ ಶಾಸನ ಸಭಾ ಸದಸ್ಯರು ವ್ಯಕ್ತಗೊಳಿಸಿದ ವ್ಯಸನವನ್ನು ಸಹೃದಯರು ಸುಲಭದಲ್ಲಿಯೇ ಅರ್ಥಮಾಡಿಕೊಳ್ಳಬಹುದು.

ಇನ್ನು ಮುಂದೆ ರಾಜಾಜಿಯವರು ಮೇಲ್ಮನೆಯ ಸದಸ್ಯರಾಗಿ ಉಳಿದು, ತಮ್ಮ ದೀರ್ಘ ಜೀವನದ ಪಕ್ವ ಅನುಭವಗಳ ಹಾಗು ಜ್ಞಾನ ಭಂಡಾರದ ಪ್ರಯೋಜನವನ್ನು ಅನೇಕ ವರ್ಷಗಳ ವರೆಗೆ ದೊರಕಿಸಿ ಕೊಡುವರೆಂದು ಹಾರೈಸಿ, ಸದಸ್ಯರು ಉಚಿತವಾದುದನ್ನೇ ಮಾಡಿದರು. ರಾಜಾಜಿಯ ನಿರ್ಗಮನದಿಂದ ನೊಂದು ಕೊಂಡವರ ಈ ಮಾತು ಸಾಮಾನ್ಯ ಪ್ರಜೆಗಳ ಆಶಯವನ್ನು ಚೆನ್ನಾಗಿಬಿಂಬಿಸಿತು.ಜನತೆ ಹೃದಯವನ್ನು ಮುಟ್ಟಿ,ಅಂತಃಕರಣದ ಕದವನ್ನು ತಟ್ಟಿ ಅದರಲ್ಲಿ ಪ್ರವೇಶಪಡೆದ ಧುರೀಣರುಗಳಲ್ಲಿ ರಾಜಾಜಿಯಂಥವರು ತೀರ ವಿರಳ. ೧೯೪೭ನೇ ಇಸವಿಯಿಂದ ಈ ವರೆಗೆ ಮದ್ರಾಸನ್ನು ಆಳಿದ ಮಂತ್ರಿಮಂಡಳಗಳ ಪೈಕಿ, ರಾಜಾಜಿಯ ಆಡಳಿತ ಕಾಲದಷ್ಟು ಸುಖಪ್ರದವಾದದ್ದು ಬೇರೆ ಇರಲಿಲ್ಲ. ರೆಡ್ಡಿ ಮತ್ತು ರಾಜಾ ಇವರ ಅಧಿಕಾರಾವಧಿಯಲ್ಲಿ ಲಂಚಗುಳಿತನ,ಸ್ವಜನಾನುಗ್ರಹ, ಆಡಳಿತದಲ್ಲಿ ಹೊರಗಿನವರ ಅನಾವಶ್ಯಕ ಹಸ್ತಕ್ಷೇಪ, ಮುಂತಾದವುಗಳಿಂದ ಕಾಂಗ್ರೆಸ್ಸಿನ ಪ್ರತಿಷ್ಠೆಗೆ ಹಚ್ಚಲ್ಪಟ್ಟ ಮಸಿಯನ್ನು ಒರಸಿ, ಬೆಳಗುವ ಕೆಲಸವನ್ನು ರಾಜಾಜಿಯವರು ಸಮರ್ಥ ರೀತಿಯಿಂದ ನೆರವೇರಿಸಿದರು. ಇನ್ನು ಮುಂದೆ ಬರುವ ಕಾಮರಾಜನಾಡರರ ಅನುಯಾಯಿಗಳು ಈ ಪರಂಪರೆಯನ್ನು ಎಷ್ಟರ ಮಟ್ಟಿಗೆ ಉಳಿಸಿಕೊಳ್ಳುವರೋ ಅನುಭವವೇ ತಿಳಿಸಬೇಕು. ಆದರೆ ಮದ್ರಾಸಿನ ಮಟ್ಟಿಗೆ ರಾಜಾಜಿಯವರು ಎರಡು ವರ್ಷಗಳ ಪೂರ್ವದಲ್ಲಿ ಮಾಂತ್ರಿಕನಾಗಿ ಬಂದು, ರಾಜ್ಯದ ಆಡಳಿತ ಯಂತ್ರವನ್ನು ಬಹಳ ಮಟ್ಟಿಗೆ ಸುಧಾರಿಸಿದರೆಂದು ಕೃತಜ್ಞತೆಯಿಂದ ನೆನೆಯುವುದು ಧರ್ಮ.

ಮದ್ರಾಸು ರಾಜ್ಯದ ಸಮಸ್ಯೆಗಳನ್ನು ಯಶಸ್ವಿಯಾಗಿ ಬಿಡಿಸಿ, ಜನತೆಯಲ್ಲಿ ಭದ್ರತೆ ಮತ್ತು ಸುವ್ಯವಸ್ಥೆಯ ಭರವಸೆಯನ್ನು ತುಂಬಿಸಿದ ರಾಜಾಜಿಯ ಎರಡು ವರ್ಷಗಳ ಆಡಳಿತ ಇನ್ನು ನಮಗೆ ಲಭ್ಯವಾಗದುದಕ್ಕೆ ಅಪಾರ ವ್ಯಸನವೆನಿಸುತ್ತದೆ. ಕಾಂಗ್ರೆಸಿಗರಲ್ಲೇ ಕೆಲವರು ರಾಜಾಜಿಯನ್ನು ಸರ್ವಾಧಿಕಾರಿ ಎಂದು ಜರೆದಿದ್ದರು —ಆದರೆ ಪ್ರಜಾಪ್ರಭುತ್ವ ಪದ್ಧತಿಯ ಮಂತ್ರಿಮಂಡಳ ಜನತೆಯ ತೊಂದರೆ ತಾಪತ್ರಯಗಳನ್ನೇ ಅಧಿಕಗೊಳಿಸಿ, ಲಂಚಗುಳಿತನವೇ ಮುಂತಾದ ಆರೋಪಗಳಿಗೊಳಗಾಗಿ, ಆಡಳಿತ ಯಂತ್ರದ ಮೇಲೆ ನಿಯಂತ್ರಣವಿಲ್ಲದೆ ಒದ್ದಾಡುತ್ತಿರುವುದಕ್ಕಿಂತ, ಸರ್ವಾಧಿಕಾರಿ ರಾಜಾಜಿಯ ಆಡಳಿತ ಸಾವಿರಪಾಲು ಲೇಸು. ಆಡಳಿತದ ಪರಿಸ್ಥಿತಿ ರಾಮನಾಗಿದ್ದರೆ ಪ್ರಜಾಪ್ರಭುತ್ವವಾದೀ ರಾವಣನಿಗಿಂತ ರಾಮನನ್ನೇ ನಾವು ಆಶ್ರಯಿಸಬಹುದು; ಮೆಚ್ಚಿ ಆರಾಧಿಸಬಹುದು. ರಾಜಾಜಿಯಂಥ ವರಾತಿನಲ್ಲಿ ಹೇಳುವುದಾದರೆ ಜನತೆಗೆ ಬೇಕಾ

(೨ನೇ ಪುಟ ನೋಡಿರಿ)

ಸಮರ್ಥ ಸಾಲಗಳು

ಒಬ್ಬನ ಯೋಗ್ಯತೆ ಮತ್ತು ಸಮರ್ಥತೆ ಅನೇಕ ಸಲ ಆತನ ಚಿಲ್ಲರೆ ಸಾಲಗಳ ದೆಸೆಯಿಂದಾಗಿ ಬಹಳವಾಗಿ ಕುಂಟುತ್ತವೆ. ಆದರೆ ಈ ಎಲ್ಲಾ ಚಿಲ್ಲರೆ ಸಾಲಗಳನ್ನು ಏಕೀಕರಿಸಿ ಸುಲಭಸಾಧ್ಯವಾದ ಕಂತುಗಳಿಂದ ಸಂದಾಯ ಮಾಡುವಂತಾದರೆ ಆತನ ಕಷ್ಟಗಳೆಲ್ಲವು ಪರಿಹಾರಹೊಂದಿ ಆತನ ಯೋಗ್ಯತೆ ಹಾಗೂ ಸಮರ್ಥತೆ ಮರಳಿ ಬರುವವು. ತಿಂಗಳಿಗೆ ರೂಪಾಯಿ 250 ಯಾ ಅದಕ್ಕಿಂತ ಜಾಸ್ತಿ ಸಂಬಳವಿರುವ ಆಫೀಸರರುಗಳಿಗೆ ಅವರ ಸಂಬಳದ ಆರು ಪಾಲಷ್ಟು ಸಾಲಗಳನ್ನು ಕೊಟ್ಟು ಅದನ್ನು ೩೬ ತಿಂಗಳು ಕಂತುಗಳಿಂದ ಮರುಪಾವತಿ ಪಡೆಯುವ ಹೊಸ ಯೋಜನೆಯೊಂದನ್ನು ನಾವು ಕೆಲವುದಿವಸಗಳಲ್ಲಿ ಈ ಸಾಲವನ್ನು ಪಡೆಯಲು ಇನ್ಶೂರೆನ್ಸ್ ಪೋಲಿಸಿ ಮತ್ತು ಒಬ್ಬ ಸಹ ಜಾಮೀನುದಾರನೂ ಆವಶ್ಯಕ.

ಹೆಚ್ಚಿನ ವಿವರಗಳಿಗೆ ಸಮೀಪದ ನಮ್ಮ ಆಫೀಸಿನಲ್ಲಿ ವಿಚಾರಿಸಿರಿ:

THE CANARA INDUSTRIAL & BANKING SYNDICATE LTD.

Estd: 1925 H. O. UDIPI, S. India

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್.,

ಸ್ಥಾಪನೆ: ೧೯೨೫] [ಪ್ರಧಾನ ಕಚೇರಿ: ಉಡುಪಿ ದ. ಭಾರತ.

ಜ್ಞಾನ ತೃಷೆಯನ್ನು ತಣಿಸಿ ತೃಪ್ತಿಗೊಳಿಸುವ ಕೇಂದ್ರ

ಕಲ್ಕತ್ತೆಯಲ್ಲಿರುವ ರಾಷ್ಟ್ರೀಯ ಪುಸ್ತಕಾಲಯ

ವಾಲ್ಟೇರನು ಸಾಯುವ ಕಾಲದಲ್ಲಿ ತನ್ನ ಸ್ನೇಹಿತರಿಗೆ ಒಂದು ಸಂದೇಶವನ್ನು ಕಳುಹಿಸಿದ್ದ—"....ನನ್ನ ಕಾಲದಲ್ಲಿ ಈ ಮಾತು ಮನಸ್ಸಿನಲ್ಲಿಯೇ ಉಳಿದು ಹೋಯಿತು. ಆದರೆ ನೀವು ನಿಮ್ಮ ಜೀವಮಾನದಲ್ಲಿ ಇದನ್ನು ನಡೆಸಿ ಕೊಡಲು ಮರೆಯಬಾರದು. ಸರಕಾರದ ಮೂಲಕ ಏನಾದರೂ ಪ್ರಯತ್ನವನ್ನು ಕೈಗೊಂಡು, ಪೇರಿಸಿನಲ್ಲಿರುವ ಪುಸ್ತಕಾಲಯಕ್ಕೆ ಒಳಗಿನ ಅಥವಾ ಹೊರಗಿನ ಶತ್ರುಗಳಾರೂ ಹಾನಿ ಮಾಡದಂತೆ ವ್ಯವಸ್ಥೆ ಮಾಡಿರಿ. ಪುಸ್ತಕಾಲಯವೆಂದರೆ ರಾಷ್ಟ್ರದ ತಪಶ್ರೀಯಲ್ಲವೆ?"

ನಾಗರಿಕ ಸರಕಾರಗಳು ಪುಸ್ತಕಾಲಯಕ್ಕೆ ಅತ್ಯಧಿಕ ಮಹತ್ವವನ್ನು ಕೊಡುತ್ತವೆ. ನಗರಗಳಲ್ಲಿ ಮಾತ್ರವಲ್ಲ—ಹಳ್ಳಿಯ ಮೂಲೆಯಲ್ಲೂ ಪುಸ್ತಕ ಭಂಡಾರಗಳನ್ನು ತೆರೆಯುವ ಚಳವಳಕ್ಕೆ ಈಗ ಬೆಂಬಲ ದೊರಕಹತ್ತಿದೆ. ಮನುಷ್ಯನ ಜ್ಞಾನಪಿಪಾಸೆಯನ್ನು ತಣಿಸಿ, ತೃಪ್ತಿಯನ್ನೊದಗಿಸುವ ಕೇಂದ್ರ ಸ್ಥಾನವಾಗಿ ಪುಸ್ತಕಾಲಯ ಇರುತ್ತದೆ. ಅವನನ್ನು ಸುಸಂಸ್ಕೃತನನ್ನಾಗಿ ವಿದ್ಯಾವಿನಯ ಸಂಪನ್ನನಾಗಿ ಪುಸ್ತಕಾಲಯ ರೂಪಿಸುತ್ತದೆ. ಇಂತಹ ಪುಸ್ತಕಾಲಯಗಳ ರಕ್ಷಣೆಯಾಗಬೇಕಾದದ್ದು ಮತ್ತು ಪುಸ್ತಕ ಭಂಡಾರದ ಚಳವಳ ವ್ಯಾಪಕವಾಗಿ ನಡೆಯಬೇಕಾದದ್ದು ರಾಷ್ಟ್ರದ ಶ್ರೇಯಸ್ಸಿನ ದೃಷ್ಟಿಯಿಂದ ಮಹತ್ವದ ವಿಷಯವೇ ನಿಜ.

ಸ್ವರ್ಣ ಮಹೋತ್ಸವ

ಭಾರತದ ಕಲ್ಕತ್ತೆಯಲ್ಲಿ ರಾಷ್ಟ್ರೀಯ ಪುಸ್ತಕಾಲಯವೊಂದಿದೆ—೧೭೦೦ನೇ ಇಸವಿಯಲ್ಲಿ ಮುಗಲಬಾದಶಾಹ ಔರಂಗಜೇಬನ ಮೊಮ್ಮಗನಾದ ಸಮ್ರಾಟ್ ಅಜೀಮುಶಾನನು ಕಲ್ಕತ್ತೆಗೆ ಸಮೀಪದ ಅಲೀಪುರದಲ್ಲಿ ಒಂದು ಭವ್ಯವಾದ ಕಟ್ಟಡವನ್ನು ನಿರ್ಮಿಸಿದ. ಈ ರಾಜಪ್ರಾಸಾದದಲ್ಲಿ ಮುಗಲರಾಜನು ಗ್ರೀಷ್ಮಕಾಲವನ್ನು ಕಳೆಯುತಿದ್ದ. ಭಾರತದಲ್ಲಿ ಮೊಗಲರ ಆಳಿಕೆಯು ಕ್ಷೀಣಿಸಿಕೊಂಡು ಕಂಪೆನಿ ಸರಕಾರದ ಪ್ರಾದುರ್ಭಾವವಾದಾಗ, ಈ ನಿವಾಸವನ್ನು ಬಂಗಾಳದ ಗವರ್ನರರಿಗೆ ಅವನು ಬಿಟ್ಟುಕೊಟ್ಟ.

ಆದರೆ ಮುಂದೆ ೧೯೧೧ರಲ್ಲಿ ಭಾರತದ ರಾಜಧಾನಿಯು ಕಲ್ಕತ್ತೆಯಿಂದ ಹೊಸದೆಹಲಿಗೆ ವರ್ಗಾಯಿಸಲ್ಪಡಲು ಈ ನಿವಾಸದ ರಾಜಶೋಭೆ ಒಮ್ಮಿಂದೊಮ್ಮೆ ಕಳೆಗುಂದಿತು. ಆದರೆ ಪ್ರಾಯಶಃ ಈ ಭವನ ಭಾಗ್ಯರೇಖೆಯನ್ನೊಳಗೊಂಡೇ ಅಸ್ತಿತ್ವಕ್ಕೆ ಬಂದಿರಬೇಕು—ಅಂತೆಯೇ, ೩೭ ವರ್ಷಗಳ ದುರ್ದಿನಗಳನ್ನು ಮುಗಿಸಿದ ಬಳಿಕ, ಮರಳಿ ಈ ಭವನ ಗೌರವ ಕಿರೀಟವನ್ನು ಧರಿಸಿತು. ೧೯೪೮ರಲ್ಲಿ ಭಾರತ ಸರಕಾರದ ಶಿಕ್ಷಣ ಶಾಖೆಯು ರಾಷ್ಟ್ರೀಯ ಪುಸ್ತಕಾಲಯವನ್ನು ನೆಲೆಗೊಳಿಸುವುದಕ್ಕೋಸ್ಕರ ಈ ಭವನವನ್ನು ಆರಿಸಿತು.

"ರಾಷ್ಟ್ರೀಯ ಪುಸ್ತಕಾಲಯ" ಎಂಬ ಹೆಸರು ಸ್ವಾತಂತ್ರ್ಯೋತ್ತರದಲ್ಲಿ ಪ್ರಾಪ್ತವಾದದ್ದು—ಇದಕ್ಕೆ ಮುಂಚೆ ಭಾರತವನ್ನಾಳುತಿದ್ದ ಆಂಗ್ಲ ಅರಸರ ವರ್ಚಸ್ಸನ್ನು ಪ್ರತಿಬಿಂಬಿಸುವಂತೆ "ಇಂಪೀರಿಯಲ್" ಎಂಬ ಪದ ಪುಸ್ತಕಾಲಯವನ್ನು ವಿಶೇಷಿಸುತಿತ್ತು. ೧೮೯೯ನೇ ಇಸವಿಯಲ್ಲಿ ಆಗ ಭಾರತದ ವೈಸರಾಯಿಯಾಗಿದ್ದ ಲಾರ್ಡ ಕರ್ಜನರು ಭವ್ಯ ಪುಸ್ತಕಾಲಯವೊಂದನ್ನು ಸ್ಥಾಪಿಸಲು ಮನಸ್ಸು ಮಾಡಿದರು ಸುಮಾರು ಹನ್ನೆರಡು ವರ್ಷಗಳ ಕಾಲ ಈ ಪುಸ್ತಕಾಲಯವು ದೊಡ್ಡ ದೊಡ್ಡ ಸರಕಾರೀ ಅಧಿಕಾರಿಗಳ ವ್ಯಕ್ತಿಗತ ಸಂಪತ್ತಿನಂತೆಯೇ ಇದ್ದಿತು. ಆಮೇಲೆ ೧೯೦೩ನೇ ಇಸವಿಯಂದು ಈ ಪುಸ್ತಕಾಲಯವನ್ನು ಸಾಮಾನ್ಯ ಪ್ರಜೆಗಳ ಉಪಯೋಗಕ್ಕೂ ಬಿಟ್ಟುಕೊಟ್ಟರು. ಕಳೆದ ವರ್ಷ ನಮ್ಮ ರಾಷ್ಟ್ರೀಯಪುಸ್ತಕಾಲಯವು ನಾಗರಿಕರಿಗೆ ಐವತ್ತು ವರ್ಷಗಳ ಶ್ಲಾಘನೀಯ ಸೇವೆಯನ್ನು ಸಲ್ಲಿಸಿದ ಶುಭ ಸಂದರ್ಭವನ್ನು ನೆನೆದು ಸ್ವರ್ಣಮಹೋತ್ಸವವನ್ನು ವಿಜೃಂಭಣೆಯಿಂದ ಆಚರಿಸಿತು.

ಲಾರ್ಡ ಕರ್ಜನರ ಕಾರ್ಯ

ಆಂಗ್ಲ ಪ್ರಭುತ್ವ ಕಾಲದಲ್ಲಿ ಮಹತ್ವಪೂರ್ಣ ಸರಕಾರೀ ಕಾಗದ ಪತ್ರಗಳನ್ನು ಮತ್ತು ಬೇರೆ ಬೇರೆ ಪ್ರಾಂತಗಳ ಸರಕಾರಿ ಪುಸ್ತಕಾಲಯದಿಂದ ಲಭಿಸಿದ ಪುಸ್ತಕಗಳನ್ನು ಸಂಗ್ರಹಿಸುವ ಕೇಂದ್ರವಾಗಿ ಈ ಪುಸ್ತಕಾಲಯ ವಿದ್ದಿತು. ಆದರೆ ಕೆಲ ಸಮಯದ ಬಳಿಕ ಲಾರ್ಡ ಕರ್ಜನರ ಆದೇಶಾನುಸಾರ ಕಲ್ಕತ್ತೆಯ ನಗರ ಸಭೆಯ ವಶದಲ್ಲಿದ್ದ ಸಾರ್ವಜನಿಕ ಪುಸ್ತಕ ಭಂಡಾರವನ್ನೂ ಇದಕ್ಕೆ ಸೇರಿಸಿದರು. ಈ ಪ್ರಕಾರವಾಗಿ ಈ ಸಂಗ್ರಹದಲ್ಲಿ ಸರಕಾರೀ ಕಾಗದ ಪತ್ರಗಳಲ್ಲದೆ ಸಾವಿರಾರು ಸಾಹಿತ್ಯಿಕ ಗ್ರಂಥಗಳೂ ಉಪಲಬ್ಧವಾದುವು. ಕಾಲಾಂತರದಲ್ಲಿ ಕಲ್ಕತ್ತೆಯಲ್ಲಿದ್ದ ಬೇರೆ ಬೇರೆ ವಿಷಯಗಳಲ್ಲಿ ಪ್ರಾಧಾನ್ಯ ಹೊಂದಿದ್ದ ಪುಸ್ತಕ ಭಂಡಾರಗಳೂ ಈ ಕೇಂದ್ರದೊಂದಿಗೆ ಸೇರಿ ಹೋದವು.

ಜನಸಾಧಾರಣರಿಗೆ ೧೯೦೩ರಲ್ಲಿ ಈ ಕೇಂದ್ರ ಪುಸ್ತಕಾಲಯವನ್ನು ತೆರೆದಾಗ, ಇಲ್ಲಿ ಸುಮಾರು ಒಂದು ಲಕ್ಷ ಪುಸ್ತಕಗಳು ಸಂಗ್ರಹಿಸಲ್ಪಟ್ಟಿದ್ದವು. ಅಲ್ಲದೆ ಒಂದು ನೂರರಷ್ಟು ಭಿನ್ನ ಭಿನ್ನ ಮಾಸಿಕಗಳು, ವಾರ್ಷಿಕಗಳು, ಹಾಗು ಸಾಪ್ತಾಹಿಕ ಪತ್ರಿಕೆಗಳು ಓದಲಿಕ್ಕೆ ಸಿಗುತಿದ್ದವು. ಸ್ಥಾಪನೆಯಾದ ಒಂದೇ ವರ್ಷದಲ್ಲಿ ಪುಸ್ತಕಾಲಯಕ್ಕೆ ಹೊರಗಿನಿಂದ ೧೫೦೦೦ ಓದುಗರು ಬಂದರು; ಅಲ್ಲದೆ ಪುಸ್ತಕಾಲಯದ ಸದಸ್ಯರು ಮನೆಯಲ್ಲಿ ಓದಲಿಕ್ಕೆಂದು ಕೊಂಡು ಹೋಗಿ ಸುಮಾರು ೫೦೦೦ ಪುಸ್ತಕಗಳ ಪ್ರಯೋಜನವನ್ನು ಪಡೆದರು.

ದಿ ಕೆನರಾ ಮ್ಯೂಚುವಲ್ ಎಶ್ಶೂರೆನ್ಸ್ ಕಂಪೆನಿ, ಲಿಮಿಟೆಡ್

ಸ್ಥಾಪನೆ: ೧೯೩೫] [ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ಭಾರತದ ಸುಭದ್ರ ವಿಮಾ ಕಂಪೆನಿಗಳಲ್ಲಿ "ಕೆನರಾ ಮ್ಯೂಚುವಲ್" ಎಣೆ ಇಲ್ಲದ ವಿಶಿಷ್ಟ ಸ್ಥಾನವನ್ನು ಗಳಿಸಿದೆ. ಇದು ಮ್ಯೂಚುವಲ್ ಕಂಪೆನಿಯಾಗಿ ಘಟಿತವಾಗಿದ್ದು, ಪಾಲುದಾರ ಧಂದವಳಿಗರಿಲ್ಲದಿರುವುದರಿಂದ, ಕಂಪೆನಿಯ ಸರ್ವ ಲಾಭವನ್ನೂ ಹಕ್ಕು ಹೊಂದಿದ ಪಾಲಿಸಿದಾರರೇ ತಮ್ಮಲ್ಲಿ ಹಂಚಿಕೊಳ್ಳುವರು. ಪ್ರಾಗತಿಕ ಬಿಗುಮಾನದ ತಳಹದಿಯ ಮೇಲೆ ನಡೆಸಿದ ತನ್ನೆಲ್ಲಾ ವಿಮಾ ಗಣನೆಗಳಲ್ಲಿ ಉಳಿತಾಯವನ್ನು ತೋರಿಸಿರುವುದು ಮಾತ್ರವಲ್ಲದೆ, ಸ್ಥಾಪಿತವಾದಂದಿನಿಂದಲೂ ಇದು ಬೋನಸು ಹಂಚಿದೆ. ಪಾಲಿಸಿದಾರರ ಹಿತಪ್ರಸ್ತಿಯೇ ಧ್ಯೇಯವಾಗುಳ್ಳ ಈ ಪ್ರಗತಿಶೀಲ ಮ್ಯೂಚುವಲ್ ಕಂಪೆನಿಯಲ್ಲಿ ಇಂದೇ ವಿಮೆ ಇಳಿಸಿ, ನಿಮ್ಮ ಕುಟುಂಬದ ಭದ್ರತೆಯನ್ನು ಕಾಯ್ದುಕೊಳ್ಳಿರಿ.

THE CANARA MUTUAL ASSURANCE COMPANY, LTD.,

Estd: 1935] [Head Office: UDIPI, S. INDIA.

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0-0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಮುಗಲ ಬಾದಶಾಹರ ರಾಜಭವನಕ್ಕೆ ಸ್ಥಳಾಂತರ ಹೊಂದುವುದಕ್ಕೆ ಪೂರ್ವದಲ್ಲಿ ಸುಮಾರು ೩೦ ವರ್ಷಗಳ ವರೆಗೆ ಕಲ್ಕತ್ತೆಯ ಪ್ರಧಾನ ಸೈನಿಕ ಕಾರ್ಯಾಲಯದಲ್ಲಿ ಈ ಪುಸ್ತಕಾಲಯವನ್ನು ನೆಲೆಗೊಳಿಸಿದ್ದರು. ದ್ವಿತೀಯ ಯುದ್ಧಕಾಲದಲ್ಲಿ ಜಪಾನೀಯರ ಬಾಂಬು ಧಾಳಿ ತೊಡಗಿ, ಸೈನಿಕ ಕಾರ್ಯಾಲಯದ ರಕ್ಷಣೆ ಕಷ್ಟಸಾಧ್ಯವೆಂದು ತೋರಿದಾಗ, ಅಲ್ಲಿಂದ ಈ ವಿಶಾಲವಾದ, ಅಕ್ಕಮೂಲ್ಯವಾದ ಪುಸ್ತಕ ಸಂಗ್ರಹವನ್ನು ಚಿತ್ತರಂಜನ ಅವೆನ್ಯೂದಲ್ಲಿ "ಜಾವಾ ಕುಸುಮ ಭವನ"ಕ್ಕೆ ತೆಗೆದುಕೊಂಡು ಹೋದರು. ಯುದ್ಧ ಸಮಾಪ್ತಿಯ ಕೆಲವೇ ವರ್ಷಗಳಲ್ಲಿ, ಅಂದರೆ ೧೯೪೮ರಲ್ಲಿ, ಅದನ್ನು ಪುನಃ ಪೂರ್ವಸ್ಥಾನಕ್ಕೆ ಒಯ್ದರು

ಕಲ್ಕತ್ತೆಯ ಮಧ್ಯ ಭಾಗದಲ್ಲಿ ಸೈನಿಕ ಕಾರ್ಯಾಲಯವಿದ್ದುದರಿಂದ ಪುಸ್ತಕ ಪ್ರೇಮಿಗಳಿಗೂ ಓದುಗರಿಗೂ ಇದರಿಂದ ತುಂಬ ಅನುಕೂಲವೆನಿಸುತಿತ್ತು. ಆದರೆ ಪುಸ್ತಕಗಳ ಸಂಗ್ರಹಕಾರ್ಯವು ಹೆಚ್ಚಿಕೊಂಡಂತೆಲ್ಲ ಇಲ್ಲಿ ಸ್ಥಾನಾಭಾವವು ಅನುಭವಕ್ಕೆ ಬಂತು. ಸ್ವಾಧ್ಯಾಯಕ್ಕೆಂದು ಬರುತಿದ್ದ ದೂರದೂರದ ವಿದ್ವಾಂಸರಿಗೂ ಜ್ಞಾನ ಪಿಪಾಸುಗಳಿಗೂ ಇದರಿಂದ ಅಡಚಣೆಯಾಗತೊಡಗಿತು. ಈ ತೊಂದರೆಯನ್ನು ದೂರೀಕರಿಸುವುದಕ್ಕೋಸ್ಕರ ಅದನ್ನು ಮುಗಲ ಬಾದಶಾಹರ ಪ್ರಾಸಾದಕ್ಕೆ ಸ್ಥಾನಾಂತರಿಸಲು ಭಾರತ ಸರಕಾರ ತೀರ್ಮಾನಿಸಿತು.

ಐವತ್ತು ವರ್ಷಗಳಲ್ಲಿ

ಕಳೆದ ಐವತ್ತು ವರ್ಷಗಳಲ್ಲಿ ಪುಸ್ತಕಾಲಯದ ಗ್ರಂಥ ಸಂಗ್ರಹ ಕಾರ್ಯದಲ್ಲಿ ಪ್ರಶಂಸಾರ್ಹ ವೃದ್ಧಿಯು ಕೈಗೂಡಿದೆ. ಸರ್ವಥಾ ಅಲಭ್ಯವೆನಿಸಿದ ಮತ್ತು ಪ್ರಾಚೀನ ಕಾಲದಲ್ಲಿ ಪ್ರಕಟಗೊಂಡ ಎಷ್ಟೋ ಪುಸ್ತಕಗಳಿದ್ದೆ, ಹಸ್ತಲಿಪಿ ಹಾಗು ತಾಳೆಯೋಲೆಗಳಲ್ಲಿ ಬರೆದ ಅನೇಕ ಅತ್ಯಮೂಲ್ಯ ಗ್ರಂಥಗಳನ್ನೂ ಇಲ್ಲಿ ಸಂಗ್ರಹಿಸಿರುವರು. ಇವುಗಳ ಬೆಲೆ ಲಕ್ಷಾಂತರ ರೂಪಾಯಿಗಳಾಗುತ್ತವೆ. ಹಲವು ಶತಮಾನಗಳ ಹಿಂದೆ ಮಾಡಿದ್ದ ಶ್ರೀಮದ್ಭಗವದ್ಗೀತೆಯ ಅರಬೀ ಅನುವಾದವೊಂದನ್ನು ಭಾರತ ಸರಕಾರವು ಕಳೆದ ವರ್ಷ ಒಂದೂಕಾಲು ಲಕ್ಷ ರೂಪಾಯಿಗಳನ್ನು ಬೆಲೆಯಾಗಿ ತೆತ್ತು ಕೊಂಡುಕೊಂಡುದನ್ನು ಇದಕ್ಕೆ ಉದಾಹರಿಸಬಹುದು. ಇದೇ ರೀತಿ ಇನ್ನೂ ಎಷ್ಟೋ ಅಮೂಲ್ಯವಾದ, ಸರ್ವಥಾ ದುರ್ಲಭವಾದ, ಅತಿ ಪ್ರಾಚೀನವಾದ ಗ್ರಂಥಗಳ ಪ್ರತಿಗಳಿಗೆ ಪ್ರತಿಯೊಂದಕ್ಕೂ ಲಕ್ಷ ಲಕ್ಷ ರೂಪಾಯಿಗಳನ್ನು ಸುರಿದು ಕೊಂಡು ಕೊಂಡದ್ದುಂಟು.

ಈ ಸಂಗ್ರಹದ ಅಭಿವೃದ್ಧಿ ಕಾರ್ಯದಲ್ಲಿ ಉದಾರ ಮನಸ್ಸಿನ ನಾಗರಿಕರಿಂದಲೂ ತುಂಬಾ ಪ್ರೋತ್ಸಾಹದೊರೆತಿದೆ. ಅನೇಕ ಮಂದಿ ಪ್ರತಿಫಲಾಪೇಕ್ಷೆ ಇಲ್ಲದೆ ತಮ್ಮ ಕೈಯಲ್ಲಿದ್ದ ಅಮೂಲ್ಯ ಪುಸ್ತಕಗಳ ಸಂಗ್ರಹವನ್ನು ದಾನವಾಗಿ ಕೊಟ್ಟು ಉಪಕರಿಸಿರುವರು. ಬೂಹರ್ ಸಂಗ್ರಹದಲ್ಲಿ ಬೂಹರಿನ ಜಮೀನುದಾರರು ನೀಡಿದ ಅರಬಿ, ಫಾರಸಿ ಹಾಗು ಉರ್ದು ಭಾಷೆಯ ನೂರಾರು ಅಮೂಲ್ಯ ಸಾಹಿತ್ಯ ಕೃತಿಗಳು

(೨೩ನೇ ಪುಟ ನೋಡಿರಿ)

ಲೆಕ್ಕಪತ್ರ ಪರಿಶೀಲನೆಯ ಉದ್ಯೋಗ

ರಾಷ್ಟ್ರದ ಔದ್ಯೋಗಿಕ ಮತ್ತು ಆರ್ಥಿಕ ಕ್ಷೇತ್ರದಲ್ಲಿ ಅದಕ್ಕಿರುವ ಮಹತ್ವ

ನಮ್ಮ ಪಾರ್ಲಿಮೆಂಟಿನಲ್ಲಿ ಕೆಲವು ವಾರಗಳ ಪೂರ್ವದಲ್ಲಿ ಸೈನ್ಯದ ಉಗ್ರಾಣದಲ್ಲಿ ಸುಮಾರು ಮೂರು ಕೋಟಿ ರೂಪಾಯಿಗಳ ವಂಚನೆ ನಡೆದಿದೆಯೆಂದು ಬಂದ ವರದಿಯಮೇಲೆ ಬಿರುಸಾದ ಚರ್ಚೆ ನಡೆಯಿತು. ಅಧಿಕಾರಹೊಂದಿದ ಪರಿಶೋಧಕರು ಲೆಕ್ಕಪತ್ರಗಳನ್ನು ಪರಿಶೀಲಿಸಿದಲ್ಲಿ ಈ ವಂಚನೆ ನಡೆದದ್ದು ಬಹಿರಂಗಗೊಂಡಿತು. ಇಂತಹ ಮೋಸಗಳು ಮತ್ತು ಲೆಕ್ಕಪತ್ರದ ದೋಷಗಳು ಹಣದ ವ್ಯವಹಾರ ಹಾಗು ತತ್ಸಂಬಂಧಿ ಕೆಲಸಗಳನ್ನು ಮಾಡುವ ಯಾವುದೇ ಔದ್ಯೋಗಿಕ ಅಥವಾ ಆರ್ಥಿಕ ಸಂಸ್ಥೆಯಲ್ಲಿ ಕಂಡುಬರಬಹುದು. ಇದರಿಂದಾಗಿ ಸಾರ್ವಜನಿಕರು ಇಟ್ಟುಕೊಂಡಿದ್ದ ಭದ್ರತೆಯ ಭರವಸೆಗಳು ಹುರುಳಿಲ್ಲದವುಗಳೆಂದು ಸಿದ್ಧವಾಗಬಹುದು. ವಂಚನೆ ಹಾಗೂ ಮೋಸದ ಪ್ರಕರಣಗಳು ಬೆಳಕಿಗೆ ಬಾರದೆಹೋದ ಪಕ್ಷದಲ್ಲಿ ಆಧುನಿಕ ಸಮಾಜದ ನಿತ್ಯವ್ಯವಹಾರ ಸುಗಮವಾಗಿ ನಡೆಯಲಾರದು. ಹಣಕಾಸು, ವ್ಯಾಪಾರ ಮುಂತಾದ ವಿಷಯಗಳಮೇಲೆ ಯೋಗ್ಯ ನಿಯಂತ್ರಣವನ್ನೂ ಹಿಡಿತವನ್ನೂ ಇಟ್ಟುಕೊಂಡರೆ ಮಾತ್ರ ಸಾರ್ವಜನಿಕರು ನಿಶ್ಚಿಂತೆಯಿಂದ ನಿದ್ರಿಸಬಹುದು; ಹಣವನ್ನು ಭಂಡವಾಳವಾಗಿ ನೀಡುವ ಮುಂತಾದ ಅಭಿವೃದ್ಧಿಯ ಉಪಕ್ರಮಗಳಲ್ಲಿ ಸಹಕರಿಸಬಹುದು.

ಕಂಪೆನಿ ಕಾಯಿದೆ

ಲೆಕ್ಕಪತ್ರ ಪರಿಶೋಧನೆಯ ಉದ್ಯೋಗಕ್ಕೆ ಮಹತ್ವ ಬಂದದ್ದು ಭದ್ರತೆಯ ಕಾರಣದಿಂದಾಗಿಯೇ ಎಂದು ಹೇಳಬೇಕಾಗಿಲ್ಲವಷ್ಟೆ. ಭಾರತೀಯ ಕಂಪೆನಿಗಳ ಕಾಯಿದೆ ೧೮೫೭ರಲ್ಲಿ ಸರ್ವಪ್ರಥಮವಾಗಿ ರೂಪುಗೊಂಡಾಗಲಾಗಲೀ ಆ ಮೇಲೆ ೧೮೮೨ನೇ ಇಸವಿಯಲ್ಲಿ ಪುನರ್ವಿಮರ್ಶಿಸಲ್ಪಟ್ಟಾಗಲಾಗಲೀ ಲೆಕ್ಕಪತ್ರಗಳನ್ನು ಅಧಿಕಾರ ಹೊಂದಿದವರ ಪರಿಶೀಲನೆಗೆ ಒಪ್ಪಿಸಲೇ ಬೇಕೆಂಬ ನಿರ್ಬಂಧ ವೇ ಇರಲಿಲ್ಲ. ಆದರೆ ಮುಂದೆ ೧೯೧೩ನೇ ಇಸವಿಯಲ್ಲಿ ಲೆಕ್ಕಪತ್ರಗಳ ಪರಿಶೀಲನೆಯಾಗಲೇಬೇಕೆಂದು ಕಾಯಿದೆಬದ್ಧವಾಗಿ ವಿಧಿಸಲಾಯಿತು. ಸರಕಾರದಿಂದ ಸನದು ಪಡೆದ ಲೆಕ್ಕಪರಿಶೋಧಕರಿಂದಲೇ ಈ ಕೆಲಸ ನೆರವೇರಬೇಕೆಂದು ನಿರ್ಬಂಧವು ಆಗ ಹೇರಲ್ಪಟ್ಟಿತು. ಲೆಕ್ಕಪರಿಶೋಧಕರಾಗಿ ಕೆಲಸ ಮಾಡಲಿಚ್ಛಿಸುವವರು ಸರಕಾರವು ನಿರ್ಧರಿಸಿದ ಪರೀಕ್ಷೆಯನ್ನು ತೇರ್ಗಡೆಹೊಂದುವುದು ಅಗತ್ಯವಾಯಿತು. ೧೯೩೨ನೇ ಇಸವಿಯ ವರೆಗೆ ಪ್ರಾಂತ ಸರಕಾರಗಳ ಅಧಿಕಾರದಲ್ಲೂ ಆ ಮೇಲೆ ೧೯೪೯ನೇ ವರ್ಷದ ತನಕ ಕೇಂದ್ರ ಸರಕಾರದ ನಿಯಂತ್ರಣದಲ್ಲೂ ಲೆಕ್ಕಪತ್ರ ಪರಿಶೋಧಕರ ಉದ್ಯೋಗ ಇದ್ದಿತು. ಸರಕಾರಕ್ಕೆ ಈ ವಿಷಯದಲ್ಲಿ ಎಲ್ಲ ಪ್ರಕಾರದ ಸಲಹೆ ಸೂಚನೆಗಳನ್ನು ಕೊಡುವುದಕ್ಕೋಸ್ಕರ ಒಂದು ಮಂಡಳವು ರಚಿಸಲ್ಪಟ್ಟಿತು. ಇದರಲ್ಲಿ ಲೆಕ್ಕಪತ್ರ ಪರಿಶೀಲನೋದ್ಯೋಗದಲ್ಲಿದ್ದವರ ಪ್ರತಿನಿಧಿಗಳು ಕೆಲವೇ ಇದ್ದರು. ಆದಕಾರಣ ಮಂಡಳಿಯ ಮೇಲೆ ಸಾಕಷ್ಟು ವಿಶ್ವಾಸ ಹುಟ್ಟಲಿಲ್ಲ; ಬದಲು ಅತೃಪ್ತಿಯು ತಲೆದೋರಿತು.

ಸ್ವಾಯತ್ತಾಧಿಕಾರ

ಲೆಕ್ಕಪತ್ರ ಪರಿಶೀಲನೆಯ ಉದ್ಯೋಗಕ್ಕೆ ಸ್ವಾಯತ್ತಾಧಿಕಾರವಿರಬೇಕೆಂದೂ ತನ್ನ ಒಳ್ಳಿತನ್ನು ಉದ್ಯೋಗವು ತಾನಾಗಿಯೇ ಸಾಧಿಸಬೇಕೆಂದೂ ಚಳವಳ ತೊಡಗಿತು ೧೯೩೬ನೇ ಇಸವಿಯಲ್ಲಿ ಕೇಂದ್ರ ಶಾಸನ ಸಭೆಯ ಮುಂದೆ ಈ ಬೇಡಿಕೆಯು ಮಂಡಿಸಲ್ಪಟ್ಟಿತು. ಸರಕಾರದ ಕಡೆಯಿಂದ ಭರವಸೆಯ ಮಾತುಗಳು ದೊರೆತರೂ ಅವುಗಳು ಕಾರ್ಯರೂಪದಲ್ಲಿ ಬಾರದೆ ಹೋದವು. ದ್ವಿತೀಯ ಮಹಾ ಯುದ್ಧದ ಬೇಗೆ ತಣಿದ ಬಳಿಕ ಈ ಪ್ರಶ್ನೆಯನ್ನು ವಿಮರ್ಶಿಸಬೇಕೆಂದು ಸ್ವತಃ ಲೆಕ್ಕಪತ್ರ ಪರಿಶೋಧಕರ ಮಂಡಳವೇ ೧೯೪೭ರಲ್ಲಿ ಒತ್ತಾಯಿಸಿತು. ಅಷ್ಟರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ದೊರೆಯಲು, ಆಗ ವಾಣಿಜ್ಯ ಸಚಿವರಾಗಿದ್ದ ಶ್ರೀ. ಎನ್. ವಿ. ಗಾಡಗೀಳರು ತಜ್ಞರ ಸಮಿತಿಯೊಂದಕ್ಕೆ ಈ ವಿಷಯವನ್ನು ಒಪ್ಪಿಸಿದರು. ೧೯೪೮ನೇ ಜೂಲೈ ತಿಂಗಳಲ್ಲಿ ಸಮಿತಿಯು ಒಪ್ಪಿಸಿದ ವರದಿಯನ್ನೂ ತಯಾರುಮಾಡಿದ ಕರಡು ಮಸೂದೆಯನ್ನೂ ಸರಕಾರವು ಪರಿಶೀಲಿಸಿ, ಉಚಿತವಾದ ಬದಲಾವಣೆಗಳೊಂದಿಗೆ, ಅಧಿಕಾರಯೊಂದಿದ ಲೆಕ್ಕಪತ್ರ ಪರಿಶೋಧಕರ ಕಾಯಿದೆಯನ್ನು ಪಾರ್ಲಿಮೆಂಟಿನ ಮುಂದೆ ಮಂಡಿಸಿತು. ೧೯೪೯ನೇ ಮೇ ತಿಂಗಳಲ್ಲಿ ಇದಕ್ಕೆ ಗವರ್ನರ ಜನರಲರ ಒಪ್ಪಿಗೆ ದೊರೆತು ಮಸೂದೆ ಕಾನೂನಾಗಿ ಪರಿಣಮಿಸಿತು. ಈ ಕಾಯಿದೆ, ಈ ಉದ್ಯೋಗದ ಎಲ್ಲ ಕರ್ತವ್ಯಗಳನ್ನೂ ಹೊಣೆಗಾರಿಕೆಗಳನ್ನೂ ಉದ್ಯೋಗದಲ್ಲಿ ನಿರತರಾದವರಿಗೇ ಒಪ್ಪಿಸಿಕೊಟ್ಟಿತು. ಇದಕ್ಕೆ ಮುಂಚೆ ಸರಕಾರವು ಇಟ್ಟುಕೊಂಡಿದ್ದ ಪಟ್ಟಿಯಲ್ಲಿ ಹೆಸರು ಸೇರ್ಪಡಿಸಿಕೊಂಡವರನ್ನು ಹಾಗು ತನ್ನ ಮುಂದೆ ಹೆಸರು ನೋಂದಾಯಿಸಿಕೊಳ್ಳುವವರನ್ನೂ ಸದಸ್ಯರಾಗಿ ಪಡೆಯುವ ಕೇಂದ್ರ ಪರಿಷತ್ತು ಎಲ್ಲ ಅಧಿಕಾರವನ್ನೂ ತನ್ನ ವಶದಲ್ಲಿ ಇಟ್ಟುಕೊಂಡಿತು. ಲೆಕ್ಕಪತ್ರ ಪರಿಶೋಧಕರಲ್ಲಿ "ಫೆಲೋ" ಸ್ಥಾನವನ್ನು ಗಳಿಸಿದವರಲ್ಲಿ ಚುನಾಯಿತರಾದ ಸದಸ್ಯರಲ್ಲದೆ ಕೇಂದ್ರ ಸರಕಾರವು ಅಖಿಲಭಾರತ ಸ್ವರೂಪದ ಎರಡು ವಾಣಿಜ್ಯ ಸಂಸ್ಥೆಗಳ ಸಲಹೆಯಂತೆ ನೇಮಕಗೊಂಡ ಇಬ್ಬರು, ಕಂದಾಯ ಮಂಡಳ, ಕಂಟ್ರೋಲರ ಹಾಗು ಆಡಿಟರ ಜನರಲ, ಮತ್ತು ಹಣಕಾಸಿನ ಮಂತ್ರಿಮಂಡಳ—ಇವುಗಳಲ್ಲಿ ಪ್ರತಿಯೊಂದೂ ನೇಮಿಸಿದ ಒಬ್ಬೊಬ್ಬರು ಪರಿಷತ್ತಿನಲ್ಲಿ ಸ್ಥಾನಪಡೆದಿರುವರು.

ಪರಿಷತ್ತಿನ ಕರ್ತವ್ಯ

ಪರಿಷತ್ತು ಲೆಕ್ಕಪತ್ರ ಪರಿಶೋಧಕರನ್ನು ದಾಖಲುಮಾಡಿಕೊಳ್ಳುತ್ತದೆ; ತಕ್ಕ ತರಬೇತಿಯನ್ನೊದಗಿಸಿ, ಪರೀಕ್ಷೆಗಳನ್ನು ನಡೆಸುತ್ತದೆ; ಇನ್ನೂ ಇತರ ಅನೇಕ ಕರ್ತವ್ಯಗಳನ್ನು ನಿರ್ವಹಿಸುತ್ತದೆ. ಈ ಪರಿಷತ್ತಿನ ಅಧ್ಯಕ್ಷಸ್ಥಾನವು ಚುನಾಯಿತ ಅಧ್ಯಕ್ಷನಿಗೆ ಸಲ್ಲುತ್ತದೆ. ಪರಿಷತ್ತಿಗೊಬ್ಬ ಚುನಾಯಿತ ಉಪಾಧ್ಯಕ್ಷನೂ ಇರುವನು. ಅಲ್ಲದೆ ಕಾರ್ಯಾಂಗ, ಪರೀಕ್ಷಾವಿಭಾಗ, ಹಾಗು ಶಿಸ್ತಿನ ಪ್ರಶ್ನೆಗಳನ್ನು ಗಮನಿಸುವುದಕ್ಕೆ, ಪ್ರಶ್ನೋತ್ತರ ಸಮಿತಿಗಳು ನಿರ್ಮಿಸಲ್ಪಟ್ಟಿವೆ. ಇವುಗಳಲ್ಲಿ ಶಿಸ್ತಿನ ಪ್ರಶ್ನೆ ಅತ್ಯಂತ ಪ್ರಾಮುಖ್ಯವಾಗಿದ್ದು ಬಹಳ ಮಹತ್ವದಿಂದ ಕೂಡಿದೆ. ಯಾವುದೇ ಲೆಕ್ಕ ಪರಿಶೋಧಕನ ವಿಷಯದಲ್ಲಿ ಯಾವುದೇ ಸ್ವರೂಪದ ದೂರುಗಳು ಬಂದುದಾದರೆ, ಪರಿಷತ್ತು ಕೂಡಲೇ ಅದನ್ನು ವಿಚಾರಿಸುತ್ತದೆ. ತಪ್ಪಿತಸ್ಥನೆನಿಸಿದವರ ಹೇಳಿಕೆಯನ್ನು ಕೇಳಿಕೊಂಡು ತನ್ನ ನಿರ್ಣಯವನ್ನು ಹೈಕೋರ್ಟಿಗೆ ಸಲ್ಲಿಸುತ್ತದೆ. ಹೈಕೋರ್ಟಿನ ತೀರ್ಮಾನ ಮನ್ನಿಸಲ್ಪಡುತ್ತದೆ. ಇಷ್ಟರ ವರೆಗೆ ಇಂತಹ ಒಟ್ಟು ೧೯ ಪ್ರಕರಣಗಳು ನಡೆದಿವೆ. ಒಂದೆರಡು ಸಂಗತಿಗಳಲ್ಲಿ ಮಾತ್ರ ಹೈಕೋರ್ಟು ಪರಿಷತ್ತಿನ ವಿರುದ್ಧ ನಿರ್ಣಯವನ್ನು ಕೊಟ್ಟಿತು. ಶಿಕ್ಷೆ ಅನಗತ್ಯವೆಂದು ಹೇಳಿದೆ. ಪರಿಷತ್ತಿನಲ್ಲಿ ಈಗ ೨೪೦೦ ಮಂದಿ ಸದಸ್ಯರೂ ಸುಮಾರು ೩೦೦೦ ಇತರ ವರ್ಗದ ಸಹೋದ್ಯೋಗಿಗಳೂ ಇರುವರು. ಈ ಉದ್ಯೋಗಸ್ಥರ ಮೇಲಿನ ಹೊಣೆಯು ಈಗ ಹೆಚ್ಚುತ್ತಾ ಹೋಗುತ್ತಿದೆ ಇವರಿಗೆ ಮತ್ತೆ ಅಭ್ಯಾಸದ ಸೌಕರ್ಯಗಳನ್ನು ಕಲ್ಪಿಸಿ ಕೊಡುವುದು ದೊಡ್ಡ ಸಮಸ್ಯೆಯಾಗಿ ಪರಿಣಮಿಸಿರುತ್ತದೆ. ಪರಿಷತ್ತಿನವರು ಅಂಚೆಯ ಮೂಲಕ ಶಿಕ್ಷಣ ನೀಡುವ ವ್ಯವಸ್ಥೆಯೊಂದನ್ನು ಯೋಜಿಸಿದ್ದು ಅದು ಇಷ್ಟರಲ್ಲಿಯೇ ಕಾರ್ಯಗ್ರಸ್ತವಾಗುತ್ತದೆ. ಪ್ರತ್ಯಕ್ಷ ಅನುಭವದ ಕ್ಷೇತ್ರಗಳ ಕೊರತೆ ಮಾತ್ರ ಉಳಿದಿಲ್ಲ. ಏಕೆಂದರೆ ಪ್ರತಿಯೊಂದೂ ಹಣಕಾಸಿನ ವಿಷಯಗಳಲ್ಲಿ, ಔದ್ಯೋಗಿಕ ಪ್ರವೃತ್ತಿಗಳಲ್ಲಿ ಹಾಗು ವ್ಯಾಪಾರ ವ್ಯವಹಾರದಲ್ಲಿ ಲೆಕ್ಕ ಪರಿಶೋಧಕರನ್ನು ಕರೆದು ಅವರ ಸಲಹೆ ಸೂಚನೆಗಳನ್ನು ಮನ್ನಿಸುವ ಸಂಪ್ರದಾಯ ಉಂಟಾಗಿರುತ್ತದೆ.

ಸ್ವಂತ ಕಟ್ಟಡ

ರಾಷ್ಟ್ರವು ಜನಪದದ ಕಲ್ಯಾಣವನ್ನೇ ಧ್ಯೇಯವಾಗಿಟ್ಟು ಕೊಂಡಿರುವುದರಿಂದ ಸ್ವಾರ್ಥಪರಾಯಣರು, ಸ್ವಜನಾನುಗ್ರಹ ಪ್ರವೃತ್ತಿಯವರು, ಮರೆ ಮೋಸ ವಂಚನೆಗಳಿಂದ ರಕ್ತಹೀರುವವರು ತಮ್ಮ ಆಟವನ್ನು ನಡೆಸುವುದಕ್ಕೆ ಅವಕಾಶವಿರಕೂಡದು. ಲೆಕ್ಕಪತ್ರ ಪರಿಶೋಧಕರು ಈ ಕೆಲಸವನ್ನು ಬಹಳ ದಕ್ಷತೆಯಿಂದಲೂ ಕಾರ್ಯಕ್ಷಮತೆಯಿಂದಲೂ ನಿರ್ವಹಿಸಿ, ಸಾರ್ವಜನಿಕರ ವಿಶ್ವಾಸಕ್ಕೆ ಪಾತ್ರರಾಗಿ, ಅಮೂಲ್ಯ ಸೇವೆಯನ್ನು ಸಲ್ಲಿಸುವರು. ಲೆಕ್ಕಪತ್ರ ಪರಿಶೋಧಕರ ಮೇಲೆ ನಿಯಂತ್ರಣವನ್ನಿಟ್ಟುಕೊಂಡಿರುವ ಕೇಂದ್ರ ಪರಿಷತ್ತು ಈ ವಿಷಯದಲ್ಲಿ ಉಚಿತ ರೀತಿಯಲ್ಲಿ ಮಾರ್ಗದರ್ಶನ ಮಾಡುತ್ತದೆ. ಈಚೆಗೆ ಅದು ದೆಹಲಿ—ಮಥುರಾ ರಾಜಮಾರ್ಗದ ಪಕ್ಕದಲ್ಲಿ ಭವ್ಯ ಕಟ್ಟಡವನ್ನು ಹೊಸತಾಗಿ ನಿರ್ಮಿಸಿದೆ. ರಾಷ್ಟ್ರಪತಿ ರಾಜೇಂದ್ರಪ್ರಸಾದರು ೩ನೇ ಏಪ್ರಿಲ್ ದಿನಾಂಕ ಭವನವನ್ನೂ ಈ ಸಂದರ್ಭದಲ್ಲಿ ಸೇರಿದ ಲೆಕ್ಕಪತ್ರ ಪರಿಶೋಧಕರ ಸಮ್ಮೇಳನವನ್ನೂ ಉದ್ಘಾಟಿಸಿದರು. ಕೇಂದ್ರಸರಕಾರದ ನಾಮ ಮಾತ್ರ ಬೆಲೆ ಪಡೆದುಕೊಂಡು ಭೂಮಿಯನ್ನು ಕಟ್ಟಡದ ಸ್ಥಳಕ್ಕೋಸ್ಕರ ನೀಡಿದುದಲ್ಲದೆ, ಎರಡು ಲಕ್ಷ ರೂಪಾಯಿಗಳ ಸಹಾಯಧನವನ್ನೂ ಕೊಟ್ಟಿದೆ. ಇದರಲ್ಲಿ ನಿತ್ಯವ್ಯವಹಾರವನ್ನು ಚೊಕ್ಕರೀತಿಯಿಂದ ನೆರವೇರಿಸುವುದಕ್ಕೆ ಅನುಕೂಲವಾದ ಕೊಠಡಿಗಳಲ್ಲದೆ, ಪರೀಕ್ಷೆ, ವಾರ್ಷಿಕಮಹಾಸಭೆ ಮತ್ತಿನ್ನಿತರ ವಿಶೇಷ ಸಮಾರಂಭಗಳನ್ನು ಜರಗಿಸುವುದಕ್ಕೋಸ್ಕರ ವಿಶಾಲ ಭವನಗಳೂ ಇರುತ್ತವೆ. ಸಮಶೀತೋಷ್ಣ ವ್ಯವಸ್ಥೆಯನ್ನೂ ಏರ್ಪಡಿಸಿರುವರು. ಕಾಸ್ಪರದ ಶ್ರೀ. ಎಸ್. ವೈಶರು ಈಗ ಪರಿಷತ್ತಿನ ಅಧ್ಯಕ್ಷರು; ಶ್ರೀ. ಎಸ್. ವೆಂಕಟರಾಮನರು ಕಾರ್ಯದರ್ಶಿ. ರಾಷ್ಟ್ರದ ತಾಂತ್ರಿಕ, ಔದ್ಯೋಗಿಕ ಹಾಗು ಆರ್ಥಿಕ ಕ್ಷೇತ್ರದ ವಿಕಾಸ ಮತ್ತು ಪ್ರಗತಿಯಲ್ಲಿ ಲೆಕ್ಕಪರಿಶೋಧಕರ ಕೇಂದ್ರ ಪರಿಷತ್ತು ಹಾಗೂ ಅದು ನಿರ್ಮಿಸಿದ ಭವನ ಒಂದು ಮೈಲುಗಲ್ಲು.

THE JUPITER GENERAL INSURANCE CO., LTD.

ದಿ ಜುಪಿಟರ್ ಜನರಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

1919ರಲ್ಲಿ ಸ್ಥಾಪಿತ] [ಪ್ರಧಾನ ಕಾರ್ಯಾಲಯ, ಚರ್ಚ್‌ಗೇಟ್ ಸ್ಟ್ರೀಟ್, ಬೊಂಬಾಯಿ 1.

ಸಮರ್ಥ ಸೇವೆ ಮತ್ತು ಸುಭದ್ರತೆಯನ್ನು ಕೊಡುತ್ತದೆ.

ತೆತ್ತ ಪಾಲು ಬಂಡವಲ		ರೂ. 23,71,300
ಒಟ್ಟು ನಿಧಿಗಳು	(ಮಿಕ್ಕಿದೆ)	ರೂ. 1,33,00,000
ಇದುವರೆಗೆ ಸಲ್ಲಿಸಿದ ಕ್ಲೇಮುಗಳು	,,	ರೂ. 7 50,00,000
1951ರಲ್ಲಿ ಪ್ರೀಮಿಯಂ ಉತ್ಪನ್ನ	,,	ರೂ. 1,00,00,000

ಬೆಂಕಿ, ಜೀವ, ಜಲಮಾರ್ಗ, ಮೋಟಾರ್, ವಾಯುಯಾನ, ವ್ಯಕ್ತಿಗತ ಹಾನಿ, ಆಕಸ್ಮಿಕ ಘಟನೆ, [illegible], ಕೆಲಸಗಾರರ ಪರಿಹಾರ [illegible] ಕಂಪೆನಿ, [illegible] ಇತ್ಯಾದಿ ಸಂದರ್ಭಗಳಲ್ಲಿ ವಿಮೆ ಸ್ವೀಕರಿಸಲ್ಪಡುತ್ತದೆ.

[illegible] ಬ್ರಿಟಿಷ್ ಪೂರ್ವ ಆಫ್ರಿಕ ಮತ್ತು [illegible]

ಹೆಚ್ಚಿನ ಮಾಹಿತಿಗಾಗಿ ಬರೆಯಿರಿ —

ಶ್ರೀ ಎಸ್. ಎ. ಹೆಗ್ಡೆ, ಸುಪರಿಂಟೆಂಡೆಂಟ್ ಆಫ್ ಏಜನ್ಸೀಸ್,

ದಿ ಜುಪಿಟರ್ ಜನರಲ್ ಇನ್ಶೂರೆನ್ಸ್ ಕಂ. ಲಿಮಿಟೆಡ್, ಶಿರ್ವ (ದಕ್ಷಿಣ ಕನ್ನಡ),

ಹೈಸ್ಕೂಲ್, ಪಂಚಾಯತ ಬೋರ್ಡು ಮೊದಲಾದುವುಗಳ ಲೈಬ್ರರಿಗಳಿಗೆ ಬೇಕಾಗುವ ಪುಸ್ತಕಗಳು ವಿಶೇಷತರದ ಕಮಿಶನಿನಲ್ಲಿ ದೊರೆಯುತ್ತವೆ.

ಬರೆಯಿರಿ:

ನವಭಾರತ ಪುಸ್ತಕ ಭಂಡಾರ,

ಉಡುಪಿ, ದ. ಕ.

ಗ್ರಾಮ ಸೇವಕರು

ಹಳ್ಳಿಗಳ ಅಭಿವೃದ್ಧಿ ಪ್ರಯತ್ನಗಳನ್ನು ಸಾಧಿಸುವುದಕ್ಕೋಸ್ಕರ ಗ್ರಾಮ ಸೇವಕರಿಗೆ ಯೋಗ್ಯ ತರಬೇತಿಯನ್ನು ಒದಗಿಸಿ ಅವರನ್ನು ರಚನಾತ್ಮಕ ಕೆಲಸಗಳಿಗೆ ಹಚ್ಚಲು ಪಂಚ ವಾರ್ಷಿಕ ಯೋಜನೆ ಉದ್ದೇಶಿಸಿದೆ. ಯೋಜನೆಯ ಅವಧಿಯಲ್ಲಿ ರಾಷ್ಟ್ರೀಯ ವಿಸ್ತರಣಾ ಕಾರ್ಯಕ್ರಮದ ಸ್ವಯಬೇಕಾಗುವ ೧೨೦೦೦ ಗ್ರಾಮ ಸೇವಕರಲ್ಲಿ ೩೧೭೦ ಮಂದಿಯನ್ನು ಈ ವರ್ಷದ ಜನೇವರಿ ಮಾಸಾಂತ್ಯದೊಳಗೆ ತರಬೇತುಗೊಳಿಸಲಾಗಿದೆಯೆಂದು. ಈಗ ತಾನೆ ಪ್ರಕಟಗೊಂಡ ವರದಿಯೊಂದು ತಿಳಿಸುತ್ತದೆ. ಈ ಕಾರ್ಯಕರ್ತರು ೪೪೦ ಲಕ್ಷ ಜನ ವಸತಿಯುಳ್ಳ ೩೩೦೦೦ ಹಳ್ಳಿಗಳಲ್ಲಿ ತಮ್ಮ ಚಟುವಟಿಕೆಗಳನ್ನು ತೊಡಗಿರುವರು. ಮಹಿಳಾ ಕಾರ್ಯಕರ್ತರ ಕೊರತೆಯು ಕಂಡು ಬರುತ್ತಿದೆಯೆಂದೂ ಸೂಲಗಿತ್ತಿಯರೂ ಮಹಿಳಾ ಆರೋಗ್ಯ ಸಂದರ್ಶಕರೂ ಆಗಿ ಕೆಲಸ ಮಾಡಲು ಜನರೇ ಸಿಗುತ್ತಿಲ್ಲೆಂದೂ ವರದಿ ತಿಳಿಸುತ್ತದೆ. ಮಹಿಳೆಯರು ರಾಷ್ಟ್ರದ ಸೇವೆಮಾಡಲು ದೊರೆತ ಈ ಅವಕಾಶವನ್ನು ಸುಮ್ಮನೆ ಹೋಗಗೊಡಬಾರದೆಂದು ವರದಿ ಅಪೇಕ್ಷಿಸುತ್ತದೆ.

ಗ್ರಾಮ ಕಲ್ಯಾಣ ಕೇಂದ್ರ

ಕೇಂದ್ರ ಸಾಮಾಜಿಕ ಕಲ್ಯಾಣ ಮಂಡಳವು ತನ್ನ ಚಟುವಟಿಕೆಗಳನ್ನು ವಿಸ್ತರಿಸುವುದಕ್ಕೆ ನಿರ್ಧರಿಸಿದೆ. ಹಳ್ಳಿಗಳಲ್ಲಿ ಸ್ವಯಂಪ್ರೇರಿತ ಸಂಘ ಸಂಸ್ಥೆಗಳಿಗೆ ಪ್ರೋತ್ಸಾಹವನ್ನು ಕೊಡುವುದರ ಮೂಲಕ ಸಾಮಾಜಿಕ ಹಿತಸಾಧಿಸುವ ಹೊಸ ಯೋಜನೆಯೊಂದು ಸಿದ್ಧಗೊಂಡಿದೆ. ಸುಮಾರು ೬೦ ಲಕ್ಷ ಜನವಸತಿಯುಳ್ಳ ೫೪೦೦ ಹಳ್ಳಿಗಳಲ್ಲಿ ಸುಮಾರು ೩೦೦ ಕಲ್ಯಾಣ ಕೇಂದ್ರಗಳನ್ನು ಮುಂದಿನೆರಡು ವರ್ಷಗಳಲ್ಲಿ ತೆರೆಯಬೇಕೆಂದು ಮಂಡಳವು ಗೊತ್ತುಪಡಿಸಿದೆ. ಮುಖ್ಯವಾಗಿ ಮಹಿಳೆಯರ ಹಿತಸಂವರ್ಧನೆಯನ್ನೂ ಮಕ್ಕಳ ಯೋಗಕ್ಷೇಮವನ್ನೂ ಮಂಡಳವು ತನ್ನ ಧ್ಯೇಯವಾಗಿ ಪರಿಗ್ರಹಿಸಿದೆ. ಕೇಂದ್ರಗಳು ಈ ಉದ್ದೇಶಸಾಧನೆಗಾಗಿ ಬೇರೆ ಬೇರೆ ಪ್ರಕಾರದ ಯೋಜನೆಯನ್ನು ಅನುಸರಿಸಬಹುದು. ಆದರೆ ಇದರ ವೆಚ್ಚವು ೫೦೦೦೦ ರೂಪಾಯಿಗಳ ಪರಮಾವಧಿ ಮಿತಿಯನ್ನು ಮೀರಲಾಗದೆಂದು ಮಂಡಳ ಅಭಿಪ್ರಾಯಪಟ್ಟಿದೆ. ಮಂಡಳದ ದೇಣಿಗೆಯಷ್ಟೇ ಸ್ವಯಂ ಪ್ರೇರಿತ ಸಹಾಯವೂ ದೊರಕಿದ ಪಕ್ಷದಲ್ಲಿ ಈ ಯೋಜನೆಗಳು ತಮ್ಮ ಉದ್ದೇಶದಲ್ಲಿ ಸಫಲಗೊಳ್ಳುತ್ತವೆ.

ಆಡಳಿತ ಸುಧಾರಣೆ

ಭಾರತೀಯ ಆಡಳಿತ ಸಂಸ್ಥೆಯೊಂದನ್ನು ಈಗ ಘಟಿಸಲಾಗಿದ್ದು, ಈಚೆಗೆ ಪ್ರಧಾನಮಂತ್ರಿ ನೆಹರೂರವರು ಇದರ ಪ್ರಾರಂಭೋತ್ಸವವನ್ನು ಹೊಸ ದೆಹಲಿಯಲ್ಲಿ ನೆರವೇರಿಸಿದರು. ಆಡಳಿತವು ಮಾನವ ನಿತ್ಯ ವ್ಯವಹಾರದಲ್ಲಿ ತನ್ನ ವರ್ಚಸ್ಸನ್ನೂ ಪ್ರಭಾವವನ್ನೂ ಬೀರುತ್ತದೆ. ಆದುದರಿಂದ ಮಾನವನಿಗೂ ಆಡಳಿತಕ್ಕೂ ಇರುವ ಸಂಬಂಧ ಸೌಹಾರ್ದಯುತವಾಗಿರುವುದು ಇಷ್ಟವೆಂದು ಪ್ರತ್ಯೇಕ ಹೇಳಬೇಕಾಗಿಲ್ಲ. ಸರಕಾರದ ಚಟುವಟಿಕೆಗಳು ವ್ಯಾಪಕಗೊಂಡು ವಿಶಾಲ ಜನತೆಯಮೇಲೆ ಪರಿಣಾಮ ಮಾಡುವ ಈ ಕಾಲದಲ್ಲಿ ಆಡಳಿತ ಯಂತ್ರ

ಮದ್ಯಪಾನ ಪ್ರತಿಬಂಧದ ರದ್ದತಿ ಉಚಿತವಲ್ಲ

ಭಾರತೀಯ ವಿಮಾನಪಡೆಯ ಬಹುಮುಖ ಚಟುವಟಿಕೆಗಳು

ವು ಹೊಸ ಹೊಣೆಗಾರಿಕೆಗೆ ಹೆಗಲು ಕೊಡಬೇಕಾಗಿ ಬಂದಿರುತ್ತದೆ. ಮೊದಲಿನ ನೌಕರ ಶಾಹಿ ಆಡಳಿತಕ್ಕೆ ಇಂದು ಸ್ಥಾನವಿಲ್ಲ ಹಾಗೆಯೇ ಅಧಿಕಾರವನ್ನು ದಕ್ಷತೆಯಿಂದಲೂ ಬಿಗಿಯಾಗಿಯೂ ಚಲಾಯಿಸುವುದಕ್ಕೋಸ್ಕರ ಕೇಂದ್ರೀಕರಿಸುವುದೂ ಇಂದಿನ ವಾತಾವರಣಕ್ಕೆ ಹೇಳಿಸಿದುದಲ್ಲ. ಆಡಳಿತವು ಜಟಿಲವಾದಂತೆ ಆಡಳಿತ ಪದ್ಧತಿಯೂ ಈಗ ಕ್ಲಿಷ್ಟವಾಗುತ್ತಾ ಹೋಗುತ್ತದೆ. ಇದನ್ನು ತಪ್ಪಿಸಿ ಹೊಣೆಗಾರಿಕೆಯನ್ನು ಯೋಗ್ಯ ರೀತಿಯಲ್ಲಿ ಹಂಚಿಹಾಕಬೇಕು; ಆದರೆ ಕಾರ್ಯಕ್ಷಮತೆಯು ಇಷ್ಟಾದರೂ ಕೆಡಬಾರದು ಎಂಬ ಸಾಮಾನ್ಯ ಅಭಿಪ್ರಾಯವನ್ನು ನೆಹರೂ ಬೆಂಬಲಿಸಿದರು.

ಹೊಣೆಯ ನಿರ್ವಹಣೆ

ಸರಕಾರದ ಹೊಣೆಯನ್ನು ಬಹಳವಾಗಿ ಹೆಚ್ಚಿಸಿದ ಮತ್ತು ಚಟುವಟಿಕೆಯನ್ನು ಅಧಿಕಗೊಳಿಸಿದವುಗಳೆಂದರೆ ರಾಷ್ಟ್ರ ಕಲ್ಯಾಣದ ಉದ್ದೇಶದಿಂದ ಕೈಗೊಳ್ಳಲಾದ ಅಭಿವೃದ್ಧಿ ಯೋಜನೆಗಳು—ಇವುಗಳಿಗೋಸ್ಕರ ಹಣವನ್ನು ಮಂಜೂರು ಮಾಡುವಾಗ ಈಚೆಗೆ ಬಹಳ ವಿಳಂಬವಾಗುವುದು ಕಂಡುಬರುತ್ತದೆ. ನೆಹರೂರವರು ಈ ವಿಷಯವನ್ನು ಪರಿಶೀಲಿಸಲು ಕೇಂದ್ರ ಉತ್ಪಾದನಾ ಶಾಖೆಯ ಕಾರ್ಯದರ್ಶಿ ಶ್ರೀ ಚಂದಾರವರನ್ನು ಕೇಳಿಕೊಂಡ ಪರಿಣಾಮವಾಗಿ, ಒಂದು ವರದಿಯನ್ನು ಅವರು ಒಪ್ಪಿಸಿರುವರು. ಪ್ರತಿಯೊಂದು ಶಾಖೆಯಲ್ಲಿ ಕೆಲಸ ಮಾಡುವ ಆರ್ಥಿಕ ಸಲಹೆಗಾರರು ಕೇಂದ್ರ ಅರ್ಥ ಮಂತ್ರಾಲಯಕ್ಕೆ ಹೊಣೆಯಾಗಿರದೆ, ಆಯಾ ಶಾಖೆಗೆಯೇ ಜವಾಬ್ದಾರರಾಗಿರಬೇಕೆಂದು ಚಂದಾರವರು ಸೂಚಿಸಿರುವರೆಂದೂ ಇದು ಮಂತ್ರಿಮಂಡಳದ ಸದಸ್ಯರಲ್ಲಿ ಭಿನ್ನಾಭಿಪ್ರಾಯಕ್ಕೆ ಅವಕಾಶ ಮಾಡಿಕೊಟ್ಟಿದೆಯಾಗಿಯೂ ತಿಳಿಯುತ್ತದೆ. ಶ್ರೀ ಚಂದಾರ ವಿಚಾರಕ್ಕೆ ನೆಹರೂರವರು ಅನುಕೂಲಾಭಿಪ್ರಾಯ ಹೊಂದಿರುವರೆಂದೂ ಆದರೆ ಅರ್ಥಸಚಿವ ಶ್ರೀ ಚಿಂತಾಮಣಿ ದೇಶಮುಖರು ವಿರುದ್ಧ ಅಭಿಪ್ರಾಯ ವ್ಯಕ್ತಪಡಿಸಿರುವರೆಂದೂ ವರದಿಗಳು ಹೇಳುತ್ತವೆ. ಕೇಂದ್ರ ಅರ್ಥಮಂತ್ರಾಲಯಕ್ಕೆ ವಿವಿಧ ಅಭಿವೃದ್ಧಿಯೋಜನೆಗಳ ವೆಚ್ಚದಮೇಲೆ ನಿಯಂತ್ರಣ ಬಿಟ್ಟುಕೊಳ್ಳುವುದಕ್ಕೆ ಚಂದಾರ ಸೂಚನೆ ಅನುಕೂಲವಿಲ್ಲವೆಂದು ದೇಶಮುಖರ ವಾದ. ಈ ಮತಭೇದದಿಂದಾಗಿ ದೇಶಮುಖರು ತಮ್ಮ ಮಂತ್ರಿಪದವಿಗೆ ರಾಜೀನಾಮೆ ಕೊಡುವಷ್ಟು ಮುಂದರಿದಿರುವರೆಂದೂ ಈಗ ಭಿನ್ನಾಭಿಪ್ರಾಯವನ್ನು ಹೋಗಲಾಡಿಸಿ, ಒಮ್ಮತದ ವ್ಯವಸ್ಥೆಯನ್ನೇರ್ಪಡಿಸುವ ಪ್ರಯತ್ನ ನಡೆದಿದೆಯೆಂದೂ ಕೇಳುತ್ತೇವೆ.

ಮುಂದಿನ ಯೋಜನೆಗಳು

ದ್ವಿತೀಯ ಪಂಚ ವಾರ್ಷಿಕ ಯೋಜನೆಯಲ್ಲಿ ಸೇರಿಸಬೇಕೆಂದಿರುವ ನೀರಾವರಿ ಮತ್ತು ವಿದ್ಯುಚ್ಛಕ್ತಿ ಯೋಜನೆಗಳ ಸಾಮಾನ್ಯ ರೂಪರೇಖೆಗಳನ್ನು ನೀಡಬೇಕೆಂದು ಯೋಜನಾ ಆಯೋಗವು ಈಚೆಗೆ ನೇಮಿಸಿರುವ ಪ್ರಾಂತಿಕ ಸಮಿತಿಯು ರಾಜ್ಯ ಸರಕಾರಗಳಿಗೆ ಆದೇಶ ಕೊಟ್ಟಿದೆ. ಯೋಜನೆಗಳ ಪರಿಶೀಲನೆಯ ಕಾರ್ಯ ಎಲ್ಲಿಯವರೆಗೆ ಮುಂದರಿದಿದೆಯೆಂದೂ ಅವುಗಳಿಂದ ದೊರಕುವ ಲಾಭ ಹಾಗು ತಗಲುವ ವೆಚ್ಚದ ಪ್ರಮಾಣ ಎಷ್ಟೆಂದೂ ರಾಜ್ಯ ಸರಕಾರಗಳು ಸೂಚಿಸಬೇಕಾಗುವುದು. ಈಗ ಕೈಗೊಂಡು ಅರ್ಧದಾರಿ ನಡೆದಿರುವ ಯೋಜನೆಗಳನ್ನು ಮುಂದಿನ ಯೋಜನಾವಧಿಯಲ್ಲಿ ಮುಗಿಸುವುದಕ್ಕೆ ಬೇಕಾದ ವಿವರಗಳನ್ನೂ ತಾಂತ್ರಿಕ ಸಮಿತಿ ಕೇಳಿರುತ್ತದೆ. ರಾಜ್ಯ ಸರಕಾರಗಳು ಒಪ್ಪಿಸುವ ವಿವರಗಳನ್ನು ಚೆನ್ನಾಗಿ ಪರಿಶೀಲಿಸಿದ ಬಳಿಕ ಪ್ರಾಶಸ್ತ್ಯಾನುಕ್ರಮವು ನಿರ್ಣಯಿಸಲ್ಪಡುತ್ತದೆ.

ಪ್ರಬುದ್ಧ ಸೈನ್ಯ

ಭಾರತೀಯ ವಿಮಾನದಳವು ಇದೇ ಏಪ್ರೀಲ ಒಂದನೇ ದಿನಾಂಕದಂದು ತನ್ನ ಉಪಯುಕ್ತ ಅಸ್ತಿತ್ವದ ೨೨ ವರ್ಷಗಳನ್ನು ಯಶಸ್ವಿಯಾಗಿ ಮುಗಿಸಿ ಪ್ರಬುದ್ಧಾವಸ್ಥೆಯನ್ನು ಮುಟ್ಟಿತು. ಒಂದು ಸ್ವಾತಂತ್ರ್ಯನು ಬಲದಿಂದ ಪ್ರಾರಂಭವಾದ ಈ ಚಿಕ್ಕ ಸೇನಾ ವಿಭಾಗವು ಇಂದು ವಿಸ್ತಾರ ಹೊಂದಿ, ದೇಶದ ಸಂರಕ್ಷಣಾ ಸಾಮರ್ಥ್ಯವನ್ನು ಹೆಚ್ಚಿಸಿದೆಯಲ್ಲದೆ, ನಾಗರಿಕರ ಸೇವೆಯನ್ನೂ ಸಾಕಷ್ಟು ಅಧಿಕ ಪ್ರಮಾಣದಲ್ಲಿ ಮಾಡಿರುತ್ತದೆ. ದ್ವಿತೀಯ ಮಹಾ ಯುದ್ಧದ ಕಾಲದಲ್ಲಿ ನಮ್ಮ ವಿಮಾನ ದಳವು ತನ್ನ ಅದ್ಭುತ ಕಾರ್ಯಕ್ಷಮತೆಯನ್ನು ಪ್ರಕಟಿಸಿತು. ಕಾಶ್ಮೀರ ರಂಗದಲ್ಲೂ ಹೈದರಾಬಾದಿನ ಸೈನಿಕ ಕಾರ್ಯಕ್ರಮದಲ್ಲೂ ವಿಮಾನ ಪಡೆಗಳು ವಿಶೇಷ ದಕ್ಷತೆಯಿಂದ ಕೆಲಸ ಮಾಡಿದವು. ಬರಗಾಲ, ಬಿರುಗಾಳಿ ಹಾಗು ನೆರೆ ಹಾವಳಿಗಳಿಂದ ಜನರು ಪೀಡಿತರಾದ ಗಳಿಗೆಯಲ್ಲಿ ವಿಮಾನ ಪಡೆಯು ನಾಗರಿಕರ ಕಷ್ಟ ಪರಿಹಾರಕ್ಕೋಸ್ಕರ ಆಸಕ್ತಿಯಿಂದ ದುಡಿಯಿತು.

ಭಾರತೀಕರಣ

ಹೀಗೆ ಭಾರತೀಯರ ಆದರಾಭಿಮಾನಗಳಿಗೆ ಪಾತ್ರವಾದ ವಿಮಾನ ಪಡೆಯು ಈ ವರ್ಷ ಭಾರತೀಕರಣದ ಉಚ್ಚಮಟ್ಟವನ್ನು ಹೊಂದಿದೆ—ಏರ್ ಮಾರ್ಶಲ್ ಎಸ್. ಮುಖರ್ಜಿಯವರು ಈಗ ಈ ಸೇನಾ ವಿಭಾಗದ ಮಹಾ ದಳಪತಿಯೆಂದು ನೇಮಕಗೊಂಡಿರುವುದು ಭಾರತದವಿಮಾನ ಪಡೆಯ ಇತಿಹಾಸದಲ್ಲಿ ಚಿರಸ್ಮರಣೀಯವಾದ ವಿಷಯ. ಈ ಸಂದರ್ಭದಲ್ಲಿ ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ಧ್ವಜವೊಂದನ್ನು ಅರ್ಪಿಸಿ, ವಿಮಾನ ಪಡೆಯ ಗೌರವವನ್ನು ಬಹಳ ಹೆಚ್ಚಿಸಿರುವರು "ಜನತೆಯ ಸೇವೆಗಾಗಿಯೇ ನಮ್ಮವಿಮಾನಪಡೆ ಕೆಲಸಮಾಡಲಿ. ಸದ್ಧರ್ಮ ಪರಿಪಾಲನೋದ್ದೇಶದ ಪ್ರಸಂಗದಲ್ಲಿಯೇ ಈ ಧ್ವಜ ಹಾರಿಸಲ್ಪಡಲಿ!" ಎಂದು ರಾಷ್ಟ್ರಪತಿಗಳು ಹಾರೈಸಿದರು. ಮುಖರ್ಜಿಯವರು ತಮ್ಮದೊಂದು ಆಕಾಶವಾಣಿ ಭಾಷಣದಲ್ಲಿ ವಿಮಾನ ಪಡೆಯು ಸ್ವಾವಲಂಬಿಯಾಗುವ ಪ್ರಯತ್ನವನ್ನು ಕೈಗೊಳ್ಳುತ್ತದೆಂದೂ ವಿಮಾನ ತಯಾರಿಕೆಯ ಉದ್ದಿಮೆ ಸಮರ್ಥವಾಗಿರುವಂತೆ ಮಾಡಲು ತಾವು ಪ್ರಯತ್ನಿಸುವುದಾಗಿಯೂ ಹೇಳಿದರು. ತರಬೇತಿಯ ವಿಷಯದಲ್ಲಿ ನಾವು ಈಗಾಗಲೇ ಸಂಪೂರ್ಣ ಸ್ವಾವಲಂಬಿಗಳಾಗಿದ್ದೇವೆ— ಮಾತ್ರವಲ್ಲ ವಿದೇಶಗಳ ಉಮೇದುವಾರರಿಗೆ ತರಬೇತಿ ಕೊಡುವಷ್ಟು ನೈಪುಣ್ಯವನ್ನು ಪಡೆದಿದ್ದೇವೆ ಎಂದವರು ಅಭಿಮಾನದಿಂದ ತಿಳಿಸಿದರು.

ಪಾನ ಪ್ರತಿಬಂಧವು ಉಚಿತ

ಆಂಧ್ರ ರಾಜ್ಯದಲ್ಲಿ ಪಾನ ಪ್ರತಿಬಂಧವನ್ನು ಕಿತ್ತುಹಾಕಬೇಕೆಂದೇ ಅಪ್ರತ್ಯಕ್ಷವಾಗಿ ಸೂಚಿಸುವ ರಾಮ ಮೂರ್ತಿ ಸಮಿತಿಯ ವರದಿಯು ಈ ವಾರ ಹೊಸದೆಹಲಿಯಲ್ಲಿ ನಡೆದ ಕಾಂಗ್ರೆಸು ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಚರ್ಚೆಗೆ ಬಂತು. ಸಮಿತಿಯ ಸದಸ್ಯರಲ್ಲಿ ಹೆಚ್ಚಿನವರು ರಾಮ ಮೂರ್ತಿ ಸಮಿತಿಯ ಸೂಚನೆಗಳನ್ನು

ದಿ ಬೊಂಬೆಲೈಫ್ ಎಶ್ಯೂರೆನ್ಸ್ ಕಂಪೆನಿ ಲಿ., ಬೊಂಬಾಯಿ

1953ನೆ ವರ್ಷದ ವೆಲ್ಯುಯೇಶನ್ ಪ್ರಕಾರ ಉದಾರ ಬೋನಸ್

ಎಂಡೋಮೆಂಟ್ ಪೊಲಿಸಿಗಳ ಮೇಲೆ ರೂ. 10- } ವರ್ಷ ಒಂದರ
ಜೀವಾವಧಿ ಪೊಲಿಸಿಗಳ ಮೇಲೆ ರೂ. 12-8 } ರೂ. 1000ಕ್ಕೆ

(ಪ್ರಚಲಿತ ಪ್ರೀಮಿಯಮ್ ಸ್ಕೇಲಿನಂತೆ)

ಜೀವ ವಿಮೆಗಾಗಲೀ, ಪ್ರಾತಿನಿಧ್ಯಹೊಂದಲಿಕ್ಕಾಗಲೀ
ನಮ್ಮೊಡನೆ ವಿಚಾರಿಸಿದರೆ ಅಪೇಕ್ಷಿತ ಫಲವನ್ನೀಯುವುದು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಚೀಫ್ ಏಜಂಟ್ಸ್, ದಿ ಬೊಂಬೆ ಲೈಫ್ ಎಶ್ಯೂರೆನ್ ಕೊ. ಲಿಮಿಟೆಡ್.
ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ, ದ. ಕ.

ಅಧವಾ ಶಾಖಾ ಕಛೇರಿಗಳಲ್ಲಿ: ಮಧುರೆ, ಬೆಂಗಳೂರು, ತ್ರಿವೆಂಡ್ರಮ್, ಕಲ್ಲಿಕೋಟೆ
ಬೊಂಬಾಯಿ, ಮಂಗಳೂರು ಮತ್ತು ಕೊಯಮುತ್ತೂರು

The Bombay Life Assurance Co., Ltd., Bombay.

ಮದ್ರಾಸು ರಾಜ್ಯದ ಭವಿಷ್ಯ ನಾಡರರ ಕೈಯಲ್ಲಿ

ರಾಜ್ಯ ಪರಿಷತ್ತನ್ನು ಕಿತ್ತುಹಾಕಬೇಕೆಂದು ಲೋಕಸಭೆಯಲ್ಲಿ ಗೊತ್ತುವಳಿ

ಪ್ರಬಲವಾಗಿ ವಿರೋಧಿಸಿ ಮಾತನಾಡಿದರು. ಈಗಾಗಲೇ ಜಾರಿಯಲ್ಲಿರುವ ಪಾನಪ್ರತಿಬಂಧವನ್ನು ರದ್ದುಗೊಳಿಸುವ ಪ್ರಶ್ನೆಯೇ ಇಲ್ಲವೆಂಬ ಸ್ಪಷ್ಟ ಅಭಿಪ್ರಾಯವನ್ನು ಸದಸ್ಯರು ವ್ಯಕ್ತಗೊಳಿಸಿದರು. ಪಾನಪ್ರತಿಬಂಧವನ್ನು ಸಡಲಿಸಬೇಕು ಅಥವಾ ರದ್ದುಗೊಳಿಸಬೇಕು ಎಂಬುದಕ್ಕೆ ಹಾಗು ಪಾನಪ್ರತಿಬಂಧವು ಅಯಶಸ್ವಿಯಾಗಿದೆಯೆಂದು ತೋರಿಸಿ ಕೊಡುವುದಕ್ಕೆ ರಾಮಮೂರ್ತಿ ಸಮಿತಿಕೊಟ್ಟಿರುವ ಸಂಗತಿಗಳು ಬಲವಾದ ಕಾರಣಗಳಾಗಲಾರವೆಂದು ಸಮಿತಿಯು ಸಾಮಾನ್ಯ ಅಭಿಪ್ರಾಯವನ್ನು ಪ್ರಕಟಿಸಿತು.

ಸಂವಿಧಾನದ ಆದೇಶ

ಮದ್ಯಪಾನವನ್ನು ನಿಷೇಧಿಸುವುದು ಕಾಂಗ್ರೆಸ್ಸಿನ ಧ್ಯೇಯಗಳಲ್ಲಿ ಒಂದೆಂಬುದನ್ನು ಕಾರ್ಯಕಾರೀ ಸಮಿತಿಯು ನೆನಪಿಟ್ಟುಕೊಂಡಿತಲ್ಲದೆ, ಭಾರತದ ಸಂವಿಧಾನದಲ್ಲಿ ಸರಕಾರವು ಪಾನಪ್ರತಿಬಂಧವನ್ನು ಜಾರಿಗೆ ತರಬೇಕೆಂದು ಆದೇಶಿಸಿರುವುದನ್ನೂ ಗಮನಿಸಿದೆ. ಅಂತೆಯೇ ಪಾನಪ್ರತಿಬಂಧದ ವಿಷಯದಲ್ಲಿ ಗೊತ್ತುವಳಿಯೊಂದನ್ನು ಸ್ವೀಕರಿಸಿ ಸಾಮಾಜಿಕ ಹಿತಕ್ಕೆ ಇದರಲ್ಲೂ ನಗರ ಮತ್ತು ಹಳ್ಳಿಗಳ ಬಡಜನರ ಮೇಲ್ಮೆಗೆ ಸಂಬಂಧಿಸಿದ ಸುಧಾರಣೆಗಳನ್ನು ಕಾರ್ಯಗತಗೊಳಿಸುವಾಗ ಆರ್ಥಿಕ ತಾಪತ್ರಯವು ಅಡ್ಡಿಯನ್ನುಂಟುಮಾಡುವ ಕಾರಣವಾಗಕೂಡದೆಂದು ಅಭಿಪ್ರಾಯ ವ್ಯಕ್ತಗೊಳಿಸಿದೆ. ಆಂಧ್ರ ಸರಕಾರಕ್ಕೆ ರಾಮಮೂರ್ತಿ ಸಮಿತಿಯು ಒಪ್ಪಿಸಿದ ವರದಿಯನ್ನು ಗೊತ್ತುವಳಿಯಲ್ಲಿ ಉಲ್ಲೇಖಿಸಿಲ್ಲವೆಂಬುದೇನೊ, ನಿಜ. ಆದರೆ ಕಾರ್ಯಕಾರೀ ಸಮಿತಿಯು ಈ ಕುರಿತು ಸುದೀರ್ಘ ಚರ್ಚೆ ನಡೆಸಿ ತನ್ನ ತೀರ್ಮಾನವನ್ನು ನಿಸ್ಸಂದಿಗ್ಧ ಮಾತುಗ[illegible] ಇದು ಆಂಧ್ರ ಶಾಸನಸಭೆಯ ಕಾಂಗ್ರೆಸು ಪಕ್ಷಕ್ಕೂ ಬಂಧನಕಾರಿಯಾಗುತ್ತದೆ.

ರಾಜ್ಯಗಳ ಪುನರ್ವಿಂಗಡಣೆ

ಕಾಂಗ್ರೆಸ ಕಾರ್ಯಸಮಿತಿಯು ರಾಜ್ಯಗಳ ಪುನರ್ವಿಂಗಡಣೆಯ ಪ್ರಶ್ನೆಯನ್ನು ವಿಚಾರಿಸಲು ನೇಮಕಗೊಂಡ ಆಯೋಗದ ಮುಂದೆ ತಮ್ಮ ಅಭಿಪ್ರಾಯವನ್ನು ಮಂಡಿಸಲು ಕಾಂಗ್ರೆಸ ಸದಸ್ಯರಿಗೆ ಸಂಪೂರ್ಣ ಸ್ವಾತಂತ್ರ್ಯವಿರಬೇಕೆಂದು ಒಪ್ಪಿಕೊಂಡಿತು. ಆದರೆ ಇತರ ಪಕ್ಷಗಳೊಡನೆ ಸಹಕರಿಸಿ, ಆಯೋಗಕ್ಕೆ ಸಂಯುಕ್ತ ರೂಪದಲ್ಲಿ ಮನವಿಯೊಪ್ಪಿಸಬಾರದೆಂದೂ ರಾಜ್ಯಗಳ ಪುನರ್ಘಟನೆಯ ಸಂಬಂಧದಲ್ಲಿ ಶಾಸನ ಸಭೆಗಳ ಮುಂದೆ ಕಾಂಗ್ರೆಸ ಸದಸ್ಯರು ಗೊತ್ತುವಳಿಗಳನ್ನು ಮಂಡಿಸಬಾರದೆಂದೂ ಹೇಳಿತು. ಆಯೋಗದ ಮುಂದೆ ಕರ್ನಾಟಕ ಪ್ರದೇಶ ಕಾಂಗ್ರೆಸ ಸಮಿತಿಯು ಇಷ್ಟರಲ್ಲೇ ವರದಿಯನ್ನು ಒಪ್ಪಿಸಲಿತ್ತು—ಆದರೆ ಮನವಿಯ ಕರಡನ್ನು ಸಿದ್ಧಪಡಿಸಲು ನೇಮಿಸಿದ ಉಪಸಮಿತಿಯ ಕೆಲಸವು ಕ್ಲಪ್ತ ಸಮಯದಲ್ಲಿ ಮುಗಿಯದ್ದರಿಂದ ಅವಧಿ ಬೆಳೆಸುವುದು ಅನಿವಾರ್ಯವೆನಿಸಿತು. ಮುಂಬಯಿ ಕರ್ನಾಟಕ, ಹೈದರಾಬಾದ ಕರ್ನಾಟಕ ಮತ್ತು ಕೊಡಗಿನ ಆರ್ಥಿಕ ವಿಷಯಗಳನ್ನು ಕುರಿತಾದ ಅಂಕೆಸಂಖ್ಯೆಗಳು ಮನವಿಯ ಕರಡು ತಯಾರಿಸಲು ನೇಮಕಗೊಂಡ ಉಪಸಮಿತಿಗೆ ಇನ್ನೂ ಸಿಕ್ಕಿಲ್ಲ. ಮದ್ರಾಸು ಕರ್ನಾಟಕದ ವಿವರಗಳನ್ನು ಮಾನ್ಯ ಮಂತ್ರಿ ಶ್ರೀ. ಎ. ಬಿ. ಶೆಟ್ಟರು ಸಮಯಕ್ಕೆ ಸರಿಯಾಗಿ ಒಪ್ಪಿಸಿ ಕೊಟ್ಟಿದ್ದರೂ ಉಳಿದ ಕಡೆಯಿಂದ ಇಷ್ಟು ಶೀಘ್ರದಲ್ಲಿ ಸಹಕಾರ ದೊರಕಲಿಲ್ಲ.

ರಾಜ್ಯ ಪರಿಷತ್ತು ಅಗತ್ಯವೇ?

ನಮ್ಮ ಲೋಕ ಸಭೆಯಲ್ಲಿ ಮೈಸೂರಿನ ಶ್ರೀ ಗುರುಪಾದ ಸ್ವಾಮಿಯವರು ಒಂದು ಖಾಸಗಿ ಗೊತ್ತುವಳಿಯನ್ನು ಮಂಡಿಸಿ, ರಾಜ್ಯ ಪರಿಷತ್ತನ್ನು ಕಿತ್ತುಹಾಕಬೇಕೆಂದು ಹೇಳಿದರು. ರಾಜ್ಯ ಪರಿಷತ್ತಿನಿಂದ ಯಾವ ತೆರದ ಪ್ರಯೋಜನವೂ ದೊರಕುತ್ತಿಲ್ಲವೆಂದು ಇವರು ವಾದಿಸಿದರು. ಚರ್ಚೆಯು ನಡೆದಾಗ ಈ ವಿಷಯದಲ್ಲಿ ಕಾಂಗ್ರೆಸ ಸದಸ್ಯರಲ್ಲಿ ನಾನಾ ಭಿನ್ನಾಭಿಪ್ರಾಯವಿರುವುದು ಕಂಡುಬಂತು. ಲೋಕಸಭೆಯು ಅವಸರದಲ್ಲಿ ಕೈಗೊಳ್ಳಬಹುದಾದ ನಿರ್ಣಯಗಳನ್ನು ವಿಮರ್ಶಿಸಿ, ಒಂದು ಬಗೆಯ ನಿಯಂತ್ರಣವನ್ನು ಹೇರುವ ಹೊಣೆಗಾರಿಕೆಯನ್ನು ರಾಜ್ಯ ಪರಿಷತ್ತು ಯಶಸ್ವಿಯಾಗಿ ನಿರ್ವಹಿಸುತ್ತದೆ ಎಂದು ಶ್ರೀ ಅಳಗೇಶರ ಮುಂತಾದವರು ಹೇಳಿ, ಗೊತ್ತುವಳಿಯನ್ನು ವಿರೋಧಿಸಿದರು. ಆದರೆ ಶ್ರೀ ರಾಮ ಸುಭಗಸಿಂಗರು ರಾಜ್ಯ ಪರಿಷತ್ತು ಹಾಗು ರಾಜ್ಯಗಳಲ್ಲಿರುವ ಮೇಲ್ಮನೆಗಳು ಪ್ರತಿಗಾಮಿ ಶಕ್ತಿಗಳ ಭದ್ರ ಸ್ಥಾನಗಳಾಗಿರುತ್ತವೆಂದು ಟೀಕಿಸಿದರು. ಗೃಹಮಂತ್ರಿ ಡಾ. ಕಟಜೂರವರು ಗೊತ್ತುವಳಿಯನ್ನು ವಿರೋಧಿಸಿ ಮಾತನಾಡಿದರು. ಪಾರ್ಲಿಮೆಂಟರಿ ಪದ್ಧತಿಯ ಆಡಳಿತ ದೃಷ್ಟಿಯಿಂದ ರಾಜ್ಯ ಪರಿಷತ್ತಿನ ಆವಶ್ಯಕತೆ ಎಷ್ಟರ ಮಟ್ಟಿಗಿದೆಯೆಂಬುದನ್ನೇನೂ ಅವರು ಹೇಳಲಿಲ್ಲ. ಆದರೆ, ರಾಜ್ಯಾಂಗ ಘಟನೆಯನ್ನು ನಿರ್ಮಿಸುವಾಗ ಬಹಳ ವಿಚಾರ ಮಾಡಿ ಪಾರ್ಲಿಮೆಂಟಿನಲ್ಲಿ ಪರಸ್ಪರ ಪೂರಕವಾದ ಎರಡು ಅಂಗಗಳಿರಬೇಕೆಂಬುದು ತೀರ್ಮಾನಿಸಲಾಗಿದೆಯೆಂದೂ ರಾಜ್ಯ ಪರಿಷತ್ತನ್ನು ಕಿತ್ತು ಹಾಕುವ ನಿರ್ಣಯಕ್ಕೆ ಉಭಯ ಸಭೆಗಳಲ್ಲೂ ಆವಶ್ಯಕ ಬಹುಮತ ದೊರೆಯಬೇಕಾಗುವುದೆಂದೂ ರಾಜ್ಯ ಪರಿಷತ್ತು ಆತ್ಮಹತ್ಯೆಯನ್ನು ಮಾಡಿಕೊಳ್ಳಲು ಬಯಸಲಾರದೆಂದೂ ನುಡಿದರು. ಪ್ರತಿಪಕ್ಷದವರು ಮುಂದಿನ ಚುನಾವಣಾ ಕಾಲದಲ್ಲಿ ಈ ವಿಷಯವನ್ನು ತಮ್ಮ ಘೋಷಣೆಗಳಲ್ಲಿ ಒಂದಾಗಿ ಸೇರಿಸಿಕೊಳ್ಳಬಹುದೆಂದು ಅವರು ಹೇಳಿದರು. ನಿರ್ಣಯವು ಬಿದ್ದು ಹೋಯಿತು.

ರಾಜಾಜಿಯ ಗುಣಗಾನ

ಮದ್ರಾಸಿನ ಮುಖ್ಯ ಮಂತ್ರಿಸ್ಥಾನವನ್ನು ತ್ಯಜಿಸಲು ಶ್ರೀ ರಾಜಗೋಪಾಲಾಚಾರಿಯವರು ನಿರ್ಣಯಿಸಿದ ವಿಷಯದಲ್ಲಿ ದೇಶದಾದ್ಯಂತ ವಿಷಾದಪೂರ್ಣ ಪ್ರತಿಕ್ರಿಯೆಗಳು ವ್ಯಕ್ತಗೊಂಡವು. ಅನಾರೋಗ್ಯ ಹಾಗು ಇಳಿವಯಸ್ಸಿನ ಕಾರಣಗಳಿಂದಾಗಿ ರಾಜಾಜಿ ನಿವೃತ್ತಿಯನ್ನು ಅಪೇಕ್ಷಿಸುತ್ತಿರುವುದರಿಂದ ಅವರು ದೀರ್ಘಕಾಲ ಬಾಳಬೇಕೆಂದು ಮನಃಪೂರ್ವಕ ಹಾರಯಿಸುವ ಹಿತಚಿಂತಕರು ಅವರನ್ನು ಒತ್ತಾಯಿಸಲಾರದಂತಾಗಿರುತ್ತದೆ. ರಾಜಾಜಿಯ ಕುಶಲ ಆಡಳಿತದ ವಿಷಯದಲ್ಲಿ ಪ್ರಶಂಸೆ ಮಾಡದ ಧುರೀಣನಿಲ್ಲ—ಈಚೆಗೆ ಜಸ್ಟೀಸುಪಕ್ಷದ ಧುರೀಣ ಶ್ರೀ. ಪಿ. ಟಿ. ರಾಜನ್ನರು ಮಧುರೆಯ ಸಮಾರಂಭವೊಂದರಲ್ಲಿ ಮಾತನಾಡುತ್ತಾ ಹೊಗಳಿಕೆಯ ಸುರಿಮಳೆಗರೆದರು. ಭಾರತದಲ್ಲಿಯೇ ಮದ್ರಾಸು ರಾಜ್ಯದ ಆಳ್ವಿಕೆಯು ಶ್ರೇಷ್ಠವಾದುದೆಂದು ದೊರೆತ ಪ್ರಶಸ್ತಿಯನ್ನು ಅವರು ಭಾಷಣದಲ್ಲಿ ಉಲ್ಲೇಖಿಸಿದರು. ರಾಜಾಜಿಯಲ್ಲಿ ಕೊರತೆ ಏನಾದರೂ ಇದ್ದರೆ, ಸಾಮಾನ್ಯ ಮನುಷ್ಯನ ತಪ್ಪನ್ನೂ ದೌರ್ಬಲ್ಯವನ್ನೂ ಸಹಿಸದ ಅವರ ಮನೋಭಾವ ಮಾತ್ರ ಎಂದು ರಾಜನರು ತಿಳಿಸಿದರು. ಇದರಿಂದಾಗಿಯೇ ಸಾಮಾನ್ಯ ಮನುಷ್ಯನ ಒಲವನ್ನು ವಶೀಕರಿಸಲು ಅವರಿಗೆ ಸಾಧ್ಯವಾಗಲಿಲ್ಲ; ಕೇವಲ ಭಯಭಕ್ತಿ ಹಾಗು ಗೌರವಾದರಗಳನ್ನಷ್ಟೇ ರಾಜಾಜಿ ಪಡೆದುಕೊಂಡರು ಎಂದು ರಾಜನ್ನರು ಅಭಿಪ್ರಾಯಪಟ್ಟರು.

ನಾಡರರ ನಾಯಕತನ

ಕಾಮರಾಜ ನಾಡರರ ಕುರಿತಾಗಿ ಅವರು ಹೇಳುತ್ತಾ, ಈ ರಾಜಕಾರ್ಯಪಟು ತಮಿಳು ನಾಡಿನ ಸಾಮಾನ್ಯ ಪ್ರಜೆಯ ಪ್ರತೀಕವೆಂದು ಸಾರಿದರು. ಇಷ್ಟರಲ್ಲೇ ರಚಿಸಲ್ಪಡುವ ಮಂತ್ರಿ ಮಂಡಳದಲ್ಲಿ ನಾಡರರು ಸದಸ್ಯರಾಗಿ ಸೇರಬಾರದೆಂದೂ ಕಾಂಗ್ರೆಸ ಶಾಸನ ಸಭಾ ಪಕ್ಷದಲ್ಲಿ ಐಕ್ಯವನ್ನು ಒಗ್ಗಟ್ಟನ್ನೂ ಪ್ರಸ್ಥಾಪಿಸಲು ಮಂತ್ರಿ ಮಂಡಳದ ಹೊರಗಿದ್ದುಕೊಂಡೇ ದುಡಿಯಬೇಕೆಂದೂ ರಾಜನ್ನರು ಅಪೇಕ್ಷೆಪಟ್ಟರು. ರಾಜಾಜಿಯ ಮಂತ್ರಿಮಂಡಳದ ಸದಸ್ಯರು ಪ್ರತಿಭಾ ವಿಶೇಷಗಳಿಂದ ಕೂಡಿದವರಾಗಿ ಕಂಡು ಬರದಿದ್ದರೂ ಒಳ್ಳೆಯ ಮನುಷ್ಯರೆಂದೂ ಇವರಿಗೆ ಮುಂದಿನ ಮಂತ್ರಿಮಂಡಳದಲ್ಲಿ ಸ್ಥಾನ ದೊರಕುವುದು ಇಷ್ಟವೆಂದೂ ಅವರು ಹೇಳಿದರು. ಮುಂಗಡ ಪತ್ರವನ್ನು ಚರ್ಚಿಸಲು ಸೇರಿದ್ದ ಮದ್ರಾಸಿನ ಶಾಸನ ಸಭೆಯು ಈಗ ಅನಿಯಮಿತ ಅವಧಿಯ ವರೆಗೆ ಮುಂದುವರಿದಿದೆ. ಸಭಾ ಧುರೀಣರಾದ ಶ್ರೀ ಸುಬ್ರಹ್ಮಣ್ಯಮರು ಸಭೆ ಮುಂದುವರಿಸಬೇಕೆಂದು ಕೇಳಿಕೊಳ್ಳುತ್ತ, ರಾಜಾಜಿಯವರು ನಿವೃತ್ತಿಹೊಂದುವ ಅಪೇಕ್ಷೆ ತೋರಿಸಿದುದರಿಂದ ಮತ್ತು ಕಾಂಗ್ರೆಸ ಸದಸ್ಯರು ನಾಡರರನ್ನು ಹೊಸ ಧುರೀಣನಾಗಿ ಆರಿಸಿರುವುದರಿಂದ ಸರಕಾರದ ಹೊಣೆಯನ್ನು ಇನ್ನು ಮುಂದೆ ತಮ್ಮಿಂದ ಹೊರಲು ಬಾರದೆಂದೂ ಹೊರಲು ಮುಂದಾಗುವುದು ಅನುಚಿತವೆಂದೂ ತಿಳಿಸಿದರು.

ಕಾಂಗ್ರೆಸ ವರಿಷ್ಠರ ಅಭಿಪ್ರಾಯ

ರಾಜಾಜಿಯವರು ತಮ್ಮ ಮಂತ್ರಿಮಂಡಳದ ಸದಸ್ಯರನ್ನೂ ತಮಗೆ ಕಳೆದೆರಡು ವರ್ಷಗಳಲ್ಲಿ ಸಂಪೂರ್ಣ ಸಹಕಾರ ನೀಡಿದ ಬೇರೆ ಬೇರೆ ಖಾತೆಗಳ ಕಾರ್ಯದರ್ಶಿಗಳನ್ನೂ ಕಂಡು ಅವರಿಂದ ನಿರೋಪ ತೆಗೆದುಕೊಂಡಿರುವರು. ಪತ್ರಿಕಾ ಪ್ರತಿನಿಧಿಗಳು ಅವರನ್ನು ಸುದ್ದಿಗಾಗಿ ವಿಚಾರಿಸಿದಾಗ, "ನಿಮ್ಮಿಂದಲೂ ನಾನು ನಿರೋಪ ತೆಗೆದುಕೊಳ್ಳಲೆ?" ಎಂದು ವಿನೋದದಲ್ಲಿ ನುಡಿದರು. ಕಾಂಗ್ರೆಸು ಪಾರ್ಲಿಮೆಂಟರಿ ಬೋರ್ಡ ಮೊನ್ನೆ ಸೇರಿದಾಗ ಮದ್ರಾಸು ರಾಜ್ಯದ ಸದ್ಯದ ಪರಿಸ್ಥಿತಿಯನ್ನು ವಿಚಾರಿಸಿತೆಂದೂ, ಕಾಮರಾಜ ನಾಡರರು ಸಂಬಂಧಿಸಿದ ಎಲ್ಲ ಸಂಗತಿಗಳನ್ನೂ ನಿವೇದಿಸಿದರೆಂದೂ ತಿಳಿದುಬರುತ್ತದೆ. ರಾಜಾಜಿಯ ಧುರೀಣತ್ವವಿಲ್ಲದೆ ಹೋಗುವುದಕ್ಕೆ ಕಾಂಗ್ರೆಸು ವರಿಷ್ಠರು ಚಿಂತೆ ವ್ಯಕ್ತಪಡಿಸಿದರು. ಅವರ ಬದಲು ಕಾಮರಾಜ ನಾಡರರು ಧುರೀಣರಾಗಿ ಆಯ್ಕೆಹೊಂದಿರುವುದು ಅವರಿಗೆ ಸಂತೋಷವನ್ನುಂಟುಮಾಡಿದಂತಿಲ್ಲ. ನಾಡರರು ತಮಿಳುನಾಡು ಪ್ರದೇಶ ಕಾಂಗ್ರೆಸಿನ ಅಧ್ಯಕ್ಷಸ್ಥಾನವನ್ನು ಶಾಸನಸಭಾ ಕಾಂಗ್ರೆಸು ಪಕ್ಷದ ಧುರೀಣತ್ವವನ್ನು ಏಕಕಾಲದಲ್ಲಿ ನಿರ್ವಹಿಸಿಕೊಂಡು ಹೋಗುವುದು ಯೋಗ್ಯವಾಗಲಾರದೆಂದು ಬೋರ್ಡಿನ ಅಭಿಪ್ರಾಯ. ಆದುದರಿಂದ ನಾಡರರು ಎರಡು ಸ್ಥಾನಗಳಲ್ಲಿ ಒಂದನ್ನು ಸ್ವೀಕರಿಸಬೇಕೆಂದು ಬೋರ್ಡು ಅವರನ್ನು ಕೇಳಿಕೊಂಡಿದೆ. ಪ್ರದೇಶ ಕಾಂಗ್ರೆಸಿನ ಅಧ್ಯಕ್ಷರಾಗಿಯೇ ಉಳಿಯಲು ಅವರು ಬಯಸಿದರೆ— ಕಾಂಗ್ರೆಸು ಶಾಸನ ಸಭಾ ಪಕ್ಷದ ಧುರೀಣತ್ವಕ್ಕೂ ಮುಖ್ಯಮಂತ್ರಿಸ್ಥಾನಕ್ಕೂ ಇನ್ನೊರ್ವರ ಸಮರ್ಥನನ್ನು ಸೂಚಿಸಬೇಕೆಂದು ಬೋರ್ಡು ಕೇಳಿಕೊಂಡಿದೆ. ನಾಡರರು ಇರುವ ಎರಡು ಸ್ಥಾನಗಳಲ್ಲಿ ತನಗೆ ಯಾವುದಾದೀತೆಂಬುದನ್ನು ಯೋಚಿಸಿ, ಇಷ್ಟರಲ್ಲಿಯೇ ತಮ್ಮ ನಿರ್ಣಯ ಪ್ರಕಟಿಸಬಹುದು.

Visit
K. R. K. SHET DIAMOND MART
Opposite Government College, MANGALORE.
For all your requirements in Diamonds and Jewellery Lucky Birth Stones are also available.
Prop: K. K. R. SHET.

NAVAYUGA
Popular Kannada Weekly.
Founder:—
Sri **A. B. SHETTY,**
Minister for Public Health,
Govt. of Madras.

ನವ ಯುಗ
ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ.
ಸ್ಥಾಪಕರು:- ಶ್ರೀ. ಎ. ಬಿ. ಶೆಟ್ಟಿ,
ಮದ್ರಾಸಿನ ಆರೋಗ್ಯ ಮಂತ್ರಿ.
ವಾ. ಚಂದಾ: ರೂ. 5-12-0
ಬಿಡಿಪ್ರತಿ: 0- 2-0

ನ ವ ಯು ಗ

ಉಡುಪಿ, ಗುರುವಾರ ೮-೪-'೫೧

ಸುಲಭ ಆಡಳಿತ

ಹೊಸ ದೆಹಲಿಯಲ್ಲಿ ಕಳೆದವಾರ ಸಾರ್ವಜನಿಕ ಆಡಳಿತ ಸಂಸ್ಥೆಯೊಂದನ್ನು ಸ್ಥಾಪಿಸುವ ಕಾರ್ಯಕ್ರಮವು ನೆರವೇರಿತು. ನಮ್ಮ ಆಡಳಿತ ಪದ್ಧತಿಯ ಕಾರ್ಯಕ್ಷಮತೆಯನ್ನು ಹೆಚ್ಚಿಸುವ ಹಾಗು ಅದರ ಆವಶ್ಯಕ ಸುಧಾರಣೆಗಳನ್ನು ಮಾಡುವ ಉದ್ದೇಶವನ್ನು ಈ ಸಂಸ್ಥೆಯು ಸಾಮಾನ್ಯ ಧ್ಯೇಯವಾಗಿ ಇಟ್ಟುಕೊಂಡಿದೆ. ಸಾಮಾನ್ಯ ಆಡಳಿತದಲ್ಲಿ ಕಂಡ.ಬರುವ ಟೆಲ ಪ್ರಶ್ನೆಗಳನ್ನು ಕುರಿತು ಚರ್ಚಾ ಕೂಟಗಳನ್ನು ನಡೆಸುವುದು, ಆಡಳಿತ ವಿಷಯದಲ್ಲಿ ಉಚಿತವಾದ ಶಿಕ್ಷಣವನ್ನು ನೀಡುವುದು, ಸಂಶೋಧನೆಗಳನ್ನು ನಡೆಸಿ ಅವುಗಳ ಫಲಿತಾಂಶವನ್ನು ಕಾರ್ಯಾಚರಣೆಯಲ್ಲಿ ಉಪಯುಕ್ತ ರೀತಿಯಲ್ಲಿ ತರುವುದು ಮುಂತಾದ ಕಾರ್ಯಕ್ರಮಗಳನ್ನು ಸಂಸ್ಥೆ ಸಾಧಿಸುವುದಕ್ಕೆ ಪ್ರಯತ್ನಿಸುತ್ತದೆ. ತನ್ನದೇ ಆದೊಂದು ಪತ್ರಿಕೆಯನ್ನು ಪ್ರಕಟಿಸುವುದರ ಮೂಲಕ ಆಡಳಿತ ವಿಷಯದ ಜ್ಞಾನಾಭಿವೃದ್ಧಿ ಕಾರ್ಯದಲ್ಲಿ ಸಾರ್ವಜನಿಕ ಆಸಕ್ತಿಯನ್ನು ಕೆರಳಿಸಿ ಆಕರ್ಷಿಸಲು ಸಂಸ್ಥೆ ಉದ್ದೇಶಿಸಿದೆ. ಸಂಶೋಧನೆಗಳನ್ನು ನಡೆಸುವಾಗ ಸಾರ್ವಜನಿಕರೊಡನೆ ಅತಿ ನಿಕಟ ಸಂಪರ್ಕವನ್ನು ಹೊಂದುತ್ತಿರುವ ಸರಕಾರೀ ಆಡಳಿತ ಘಟಕದ ಪರಿಸ್ಥಿತಿಯನ್ನು ಸುಧಾರಿಸುವುದಕ್ಕೆ ಪ್ರಾಶಸ್ತ್ಯವನ್ನು ಕೊಡಲು ಸಂಸ್ಥೆ ನಿರ್ಧರಿಸಿದೆ-ಅಂಚೆ ಹಾಗು ತಂತೀ ಇಲಾಖೆ, ಪೋಲೀಸು ಖಾತೆ, ಮಾರಾಟ ಕರ, ಆದಾಯ ಕರ ಮುಂತಾದವುಗಳನ್ನು ನಿರ್ವಹಿಸುವ ಕಾರ್ಯರಂಗ ಇತ್ಯಾದಿಗಳಲ್ಲಿ ಕಾರ್ಯಕ್ಷಮತೆಯನ್ನೂ ದಕ್ಷತೆಯನ್ನೂ ಏಕಕಾಲದಲ್ಲಿ ಹೆಚ್ಚಿಸುವುದಕ್ಕೆ ಸಂಶೋಧನೆಗಳನ್ನು ಪ್ರಥಮದಲ್ಲಿ ನಡೆಸಲಾಗುವುದು. ಈ ಪ್ರಕಾರವಾಗಿ ಆಡಳಿತಾಂಗದ ಪುನರ್ಘಟನೆಯ ಕಡೆಗೆ ಸರಕಾರದ ಗಮನ ವಿಶೇಷವಾಗಿ ಹರಿಯತೊಡಗಿರುವುದಕ್ಕೆ ಹೆಚ್ಚಿಕೊಂಡ ಹೊಣೆಗಾರಿಕೆಗಳೇ ಕಾರಣವೆಂದು ಹೇಳಬಹುದು. ಹಿಂದೆ ಶಾಂತಿ ಸುವ್ಯವಸ್ಥೆಗಳನ್ನು ಮಾತ್ರ ನೋಡಿಕೊಂಡರೆ ಸರಕಾರದ ಕೆಲಸವಾಯಿತೆಂದು ಭಾವಿಸುತಿದ್ದರು. ಆದರೆ ಈಗ ಪರಿಸ್ಥಿತಿಯು ವಿಶೇಷವಾಗಿ ಬದಲಾವಣೆಯನ್ನು ಹೊಂದಿರುತ್ತದೆ. ಕಲ್ಯಾಣ ರಾಷ್ಟ್ರವನ್ನು ನಿರ್ಮಿಸುವುದೇ ಭಾರತ ಸರಕಾರದ ಧ್ಯೇಯವಾಗಿ ಪರಿಣಮಿಸಿದೆ. ಸರಕಾರದ ಮುಂದಿನ ಆದರ್ಶಗಳೂ ಕಾರ್ಯಕ್ರಮಗಳೂ ಮೊದಲಿಗಿಂತ ಎಷ್ಟೋ ಹೆಚ್ಚು ವ್ಯಾಪಕವಾದ ಸ್ವರೂಪವನ್ನೂ ಅಧಿಕ ಮಹತ್ವವನ್ನೂ ಹೊಂದಿರುತ್ತವೆ. ಪ್ರಜಾಪ್ರಭುತ್ವ ಪದ್ಧತಿಯ ಕಾರ್ಯಾಚರಣೆಗೆ ಅನುಕೂಲವಾಗುವಂತೆ ಸಾರ್ವಜನಿಕ ಆಡಳಿತ ವಿಧಾನವನ್ನು ಅಳವಡಿಸಿಕೊಳ್ಳುವುದು ಅಗತ್ಯವೆಂದು ಕಂಡು ಬರುತ್ತದೆ. ಬ್ರಿಟಿಷ ಕಾಲದಲ್ಲಿ ಅಧಿಕಾರ ಚಲಾಯಿಸುವುದನ್ನು ಮಾತ್ರ ತಮ್ಮ ಕೆಲಸವೆಂದು ತಿಳಿದುಕೊಂಡಿದ್ದ ಅಧಿಕಾರಿಗಳು ಸ್ವಾತಂತ್ರ್ಯೋತ್ತರದಲ್ಲಿ ತಮ್ಮ ಕರ್ತವ್ಯ ಧರ್ಮಗಳ ಸ್ವರೂಪ ಬದಲಾಗಿದೆಯೆಂದೂ ಈಗ ಜನರೊಲವನ್ನು ತಿಳಿದುಕೊಂಡು ರಚನಾತ್ಮಕ ಕಾರ್ಯಗಳಿಗೋಸ್ಕರ ಅದರ ಪ್ರಯೋಜನಮಾಡಿಕೊಳ್ಳುವಂತೆ ಸಂಘಟಿಸುವ ಹಾಗು ಜನಸಾಮಾನ್ಯರ ಆರ್ಥಿಕ ಹಾಗು ಸಾಮಾಜಿಕ ಹಿತಗಳು ಕೈಗೂಡುವಂತೆ ಪ್ರಯತ್ನಿಸುವ ವಿಶೇಷವಾದ ಹೊಣೆಗಾರಿಕೆಯು ತಮ್ಮ ಮೇಲೆ ಬಿದ್ದಿದೆಯೆಂದೂ ತಿಳಿಯತೊಡಗಿರುವರು. ಸರಕಾರವು ಪಂಚವಾರ್ಷಿಕ ಯೋಜನೆಯಂತಹ ಸಾಹಸದ ಕಾರ್ಯಕ್ರಮವನ್ನು ಇಟ್ಟುಕೊಂಡು ಕೋಟ್ಯಂತರ ರೂಪಾಯಿಗಳನ್ನು ದೇಶದ ಏಳಿಗೆಯ ಅಭಿವೃದ್ಧಿ ಪ್ರಯತ್ನಗಳಲ್ಲಿ ವ್ಯಯಿಸ ಹತ್ತಿರುವುದರಿಂದ, ಕೇವಲ ತಲ್ಲಿಂದಲೇ ಅಧಿಕಾರವನ್ನು ದರ್ಪದ ಮೂಲಕ ಚಲಾಯಿಸುವ ಹಿಂದಿನ ಸಂಪ್ರದಾಯ ಇಂದು ಪ್ರಯೋಜನಕ್ಕೆ ಬಾರದು. ಜನತಾ ಸಹಕಾರದ ಪ್ರಮಾಣವೇ ಸರಕಾರದ ಪ್ರಯತ್ನಗಳ ಯಶಸ್ಸನ್ನು ನಿರ್ಣಯಿಸುವ ಮಾನದಂಡವಾಗಿ ಪರಿಣಮಿಸಿರುವ ಈ ಕಾಲದಲ್ಲಿ ಜನತೆಯೊಡನೆ ಸ್ನೇಹದಿಂದ ಬೆರೆತು ಸಹಾನುಭೂತಿಯಿಂದ ಜನರ ಯೋಗಕ್ಷೇಮವನ್ನೂ ಸುಖಕಷ್ಟವನ್ನೂ ವಿಚಾರಿಸಿ ತಿಳಿದುಕೊಂಡು ಉಚಿತವಾದ ಪರಿಹಾರ ಮಾರ್ಗಗಳನ್ನು ಕೈಗೊಳ್ಳುವುದು ಅಧಿಕಾರಿಗಳ ಕೆಲಸವೆಂದು ಪರಿಭಾವಿಸಲ್ಪಟ್ಟಿದೆ. ಜನತೆಯು ಚುನಾಯಿಸಿದ ಶಾಸನಾಂಗ ಹಾಗು ಮಂತ್ರಿಮಂಡಳದ ಧೋರಣೆಗಳನ್ನು ಚಾಚೂ ತಪ್ಪದಂತೆ ಕಾರ್ಯರೂಪದಲ್ಲಿ ಇಳಿಸಲು ನಮ್ಮ ಆಡಳಿತ ಯಂತ್ರವು ಸಮರ್ಥವಾಗಬೇಕು. ಮೂವತ್ತಾರುಕೋಟಿ ಜನರ ಹಿತ ಸಂವರ್ಧನಾ ಕಾರ್ಯದಲ್ಲಿ ಆಡಳಿತದ ಘಟಕವು ಸಂಪೂರ್ಣ ಸಹಕಾರವನ್ನು ನೀಡಬೇಕು. ೧೯೫೧ನೇ ಇಸವಿಯ ಜನಗಣನೆಯಂತೆ, ಸಾರ್ವಜನಿಕ ಆಡಳಿತ ಯಂತ್ರದ ಅಂಗಗಳಾಗಿ ದುಡಿಯುವ ಜನರು ೩೦ ಲಕ್ಷದಷ್ಟು ಇರುವರು-ಹಳ್ಳಿಯ ಉಗ್ರಾಣಿ, ಪಟೇಲರಿಂದ ಹಿಡಿದು ಆಡಳಿತ ವರಿಷ್ಠ ಸ್ಥಾನದಲ್ಲಿರುವ ಮುಖ್ಯಮಂತ್ರಿ, ಗವರ್ನರ ರಾಷ್ಟ್ರಪತಿ ಮುಂತಾದವರು ಈ ಯಂತ್ರದ ಬೇರೆ ಬೇರೆ ಅಂಗಗಳಾಗಿರುವರು. ಇದು ಹೊರತಾಗಿ ಸರಕಾರದವರು ಈಚೆಗೆ ತಾವೇ ಸ್ವತಃ ತೊಡಗಿದ ಕಾರ್ಖಾನೆ ಮುಂತಾದವುಗಳಲ್ಲಿ ಹಾಗು ರೈಲ್ವೆ ಮುಂತಾದ ಸಾರ್ವಜನಿಕ ಉಪಯೋಗದ ಸಂಸ್ಥೆಗಳಲ್ಲಿ ಸಾವಿರಾರು ಮಂದಿ ಕೆಲಸಗಾರರು ಸರಕಾರದ ಆದೇಶಾನುಸಾರ ತಮಗೊಪ್ಪಿಸಿದ ಕೆಲಸಗಳಲ್ಲಿ ಮಗ್ನರಾಗಿರುವರು. ಇವರೆಲ್ಲರೂ ರಾಷ್ಟ್ರದ ಶ್ರೇಯಸ್ಸನ್ನೂ ಜನತೆಯ ಹಿತವನ್ನೂ ತಮ್ಮ ಧ್ಯೇಯವಾಗಿಟ್ಟುಕೊಂಡು ಶ್ರಮಿಸಬೇಕೆಂದು ಪ್ರತ್ಯೇಕ ಹೇಳಬೇಕಾಗಿಲ್ಲ- ಆದರೆ ನಿಜವಾಗಿಯೂ ಸಾರ್ವಜನಿಕರ ಸೇವೆಯ ದೀಕ್ಷೆಯನ್ನು ಸರಕಾರದ ಅಧಿಕಾರಿಗಳು ವಹಿಸಿಕೊಂಡಿರುವರೇ ಎಂಬ ಬಗ್ಗೆ ಸಂಶಯವಿದೆ. ಲಂಚಗುಳಿತನವೂ ವಿಳಂಬ ಧೋರಣೆಯೂ ಉದಾಸೀನ ಭಾವನೆಯೂ ಆಡಳಿತ ಯಂತ್ರದ ವಿಷಯದಲ್ಲಿ ಸಾರ್ವಜನಿಕರ ತಿರಸ್ಕಾರಕ್ಕೂ ಜಿಗುಪ್ಸೆಗೂ ಕಟುವಾದ ಟೀಕೆಗೂ ಒಳಗಾಗಿರುತ್ತವೆ. ಕಲ್ಯಾಣ ರಾಷ್ಟ್ರವನ್ನು ಕಟ್ಟುವ ನಮ್ಮ ಪ್ರಾಮಾಣಿಕವಾದ ಆಸೆಯ ಕಾರ್ಯಾಚರಣೆಯಲ್ಲಿ ಈ ದೋಷಗಳು ಆತಂಕವನ್ನೊಡ್ಡುತ್ತವೆ. ಇದನ್ನು ಸುಧಾರಿಸುವುದು ಅಪೇಕ್ಷಣೀಯವಾದ ಹಾಗು ತೀರ ಅಗತ್ಯವಾದ ಕೆಲಸ. ಸಾಮಾನ್ಯಪ್ರಜೆಯೊಬ್ಬನು ಒಂದು ಅರ್ಜಿ ಹಿಡಿದುಕೊಂಡು ಸರಕಾರದ ಅಧಿಕಾರಿಯ ಕಡೆಗೆ ಹೋದಾಗ ಆವನ ತಕರಾರನ್ನು ಸಹಾನುಭೂತಿಯಿಂದ ವಿಚಾರಿಸುವ ಮನೋಭಾವ ಇನ್ನೂ ಮೂಡಿದಂತಿಲ್ಲ. ಈ ಉದಾಸೀನತೆ ಎಷ್ಟು ಬೇಗನೇ ತೊಲಗಿತೋ ಅಷ್ಟು ಮಟ್ಟಿಗೆ ಸಾರ್ವಜನಿಕ ಆಡಳಿತ ಯಂತ್ರ ಸುಧಾರಿಸುತ್ತದೆ. ಸಾಮಾನ್ಯರ ಅನುಭವಕ್ಕೆ ಬರುವ ಇನ್ನೊಂದು ಸಂಗತಿಯೆಂದರೆ—ವಿಳಂಬಧೋರಣೆ. ಮನೆಮಾರುಗಳನ್ನು ಕಳೆದು ಕೊಂಡಾತನು ತನಗೆ ಅಗತ್ಯದ ನೆರವು ಕೊಡಬೇಕೆಂದು ಸಲ್ಲಿಸಿದ ಪ್ರಾರ್ಥನೆಯ ವಿಚಾರಣೆಗೆ ಎರಡು ವರ್ಷಗಳ ಅವಧಿ ತಗಲಿದರೆ, ಇಂತಹ ಆಡಳಿತವನ್ನು ಯಾರೂ ಮೆಚ್ಚಲಾರರು. ಆದೇ ಪ್ರಕಾರವಾಗಿ ಕೆಟ್ಟು ಹೋದ ಲಾರಿಯ ಚಿಕ್ಕದೊಂದು ರಿಪೇರಿಯ ಕೆಲಸಕ್ಕೆ ಮೇಲಧಿಕಾರಿಗಳ ಪೂರ್ವ ಸಮ್ಮತಿಯನ್ನು ನಿರೀಕ್ಷಿಸುತ್ತಾ ಎರಡು ತಿಂಗಳ ಕಾಲವನ್ನು ತಳ್ಳುವುದೂ ಅಷ್ಟು ಸಮಯ ಏನೂ ಕೆಲಸವಿಲ್ಲದೆ ಕುಳಿತ ಡ್ರೈವರನಿಗೆ ಸರಕಾರದ ಖಜಾನೆಯಿಂದ ಸಂಬಳ ಕೊಡುವುದೂ ಸರಕಾರದ ಕಾರ್ಯಕ್ಷಮತೆಗೆ ಶೋಭಿಸುವಂತದಲ್ಲ. ನಮ್ಮ ಆಡಳಿತ ಪದ್ಧತಿಯು ಎಷ್ಟು ದೀರ್ಘವಾಗಿದೆಯೆಂದರೆ, ಆಡಳಿತದ ಶಿರೋಭಾಗದಲ್ಲಿದ್ದವನಿಗೆ ಬಾಲದ ಗೊಂಡೆ ಗೋಚರಿಸುವುದೇ ಇಲ್ಲ! ಸಮಸ್ಯೆಗಳ ಶೀಘ್ರಪರಿಹಾರದ ಕ್ರಮವೂ ಪಂಚಿತವಾದಂತಿಲ್ಲ. ಕ್ಷಿಪ್ರತೆಯೊಂದಿಗೆ ಕಾರ್ಯಕ್ಷಮತೆಯೂ, ಚಾತುರ್ಯದೊಂದಿಗೆ ಮಾನವೀಯ ಭಾವವೂ ಸನುರಸ ಹೊಂದಿ, ಸಾಮಾನ್ಯ ಪ್ರಜೆಯ ಕಲ್ಯಾಣದಲ್ಲಿ ಪ್ರತಿಫಲಿಸಬೇಕಾದುದನ್ನು ಈ ಯುಗ ಅಪೇಕ್ಷಿಸುತ್ತದೆ. ಜನತೆಗೆ ಬೇಕಾದುದು ಸುಲಭ ಆಡಳಿತವೇ ಹೊರತು ಪಕ್ಷ ಪಂಗಡಗಳ ಭರವಸೆಯ ಮಾತುಗಳಲ್ಲ— ಆಡಳಿತ ಘಟಕದಲ್ಲಿ ಇಂದು ಸರಳ ಹಾಗು ಸುಲಭ ಪದ್ಧತಿಯೇ ರೂಢವಾಗಿಲ್ಲ. ಎಲ್ಲವೂ ಜಟಿಲ, ಕ್ಲಿಷ್ಟ ಹಾಗು ಕಷ್ಟ ಸಾಧ್ಯ ಕ್ರಮದಂತೆ ಕಂಡು ಬರುತ್ತದೆ. ಇದನ್ನು ಆದಷ್ಟು ತ್ವರಿತದಲ್ಲಿ ಸುಧಾರಿಸಬೇಕು. ಆಡಳಿತದ ವಿಕೇಂದ್ರೀಕರಣವನ್ನು ಸಾಧಿಸುವುದಕ್ಕೆ ಹೆಚ್ಚು ಗಮನವನ್ನು ಪೂರೈಸತಕ್ಕದ್ದು. ಇದರಿಂದ ಕಾರ್ಯಕ್ಷಮತೆ ಕುಂಠಿತವಾಗಬೇಕೆಂದಿಲ್ಲ—ಬದಲು ದಕ್ಷತೆಯು ಹೆಚ್ಚಿಕೊಳ್ಳಬೇಕು; ಸಮಯಕ್ಕೆ ಸರಿಯಾಗಿ ಕೆಲಸಮಾಡಿ ಮುಗಿಸುವ ವಾತಾವರಣವುಂಟಾಗಬೇಕು. ಭಾರತ ಸರಕಾರದವರು ಇಂತಹ ವಿಷಯಗಳಲ್ಲಿ ಸುಧಾರಣೆ ಯಾವಪ್ರಕಾರದ್ದಿರಬೇಕೆಂಬುದನ್ನು ವಿಚಾರಿಸಲು ನೇಮಿಸಿದ ಅಪ್ಲೆಬೀ ಎಂಬ ತಜ್ಞರು ಕಳೆದ ವರ್ಷ ತಮ್ಮ ವರದಿಯನ್ನು ಸರಕಾರಕ್ಕೆ ಒಪ್ಪಿಸಿರುವರು. ಅವರು ಮಾಡಿದ ಸೂಚನೆಗಳ ಆಧಾರದ ಮೇಲೆಯೇ ಈಗ ಸ್ಥಾಪಿತವಾದ ಸಾರ್ವಜನಿಕ ಆಡಳಿತ ಸಂಸ್ಥೆಯು ಅಸ್ತಿತ್ವಕ್ಕೆ ಬಂತು. ಅಪ್ಲೆಬೀಯವರು ತಮ್ಮ ವರದಿಯಲ್ಲಿ ಇನ್ನೂ ಒಂದು ಮುಖ್ಯ ಅಂಶವನ್ನು ಒತ್ತಿಹೇಳಿರುವರು. ಕಾರ್ಯಾಂಗದ ಕುರಿತು ನಾವು ದೂರಿಕೊಳ್ಳುತ್ತಿರುವಾಗ, ಶಾಸನಾಂಗದ ಕರ್ತವ್ಯ ಈ ವಿಷಯದಲ್ಲಿ ಏನೇನೂ ಇಲ್ಲವೆಂದು ಭಾವಿಸಬಾರದೆಂದು ಅವರ ಅಭಿಪ್ರಾಯ. ಹೊಸ ಸುಧಾರಣೆಗಳನ್ನು ಜ್ಯಾರಿಗೆತರುವಾಗ, ಅವುಗಳು ಹೇರುವ ಆಡಳಿತ ವಿಷಯಕ ಹೊಣೆಗಾರಿಕೆಗಳ ಸ್ಪಷ್ಟ ಕಲ್ಪನೆಯನ್ನು ಮುಂದಾಗಿ ಮಾಡಿಕೊಳ್ಳತಕ್ಕದ್ದು ಅಗತ್ಯವೆಂದು ಅವರಸೂಚನೆ ಇರುತ್ತದೆ. ಸಮರ್ಪಕವಾದ ಆಡಳಿತ ಪದ್ಧತಿಯನ್ನು ನಿರ್ಮಾಣ ಮಾಡುವುದಕ್ಕೆ ಮುಂಚೆಯೇ-ಸುಧಾರಣೆಯ ಸೋಗಿನಲ್ಲಿ ನೂತನ ಶಾಸನಗಳನ್ನು ಜ್ಯಾರಿಗೆ ತರುವುದರಿಂದ ಆಡಳಿತವು ತಲೆಭಾರವನ್ನನುಭವಿಸಬೇಕಾಗಿ ಬಂದೀತು. ಈ ತಪ್ಪಿಗೆ ಎಡೆ ಇರದಂತೆಯೂ ಸರಕಾರ ನೋಡಿಕೊಳ್ಳಬೇಕು.

ಸವಿನಯ ವಿನಂತಿ

ನಮ್ಮ ಚಂದಾದಾರರಿಗೆಲ್ಲಾ ಅವರವರ ಬಾಕಿಯನ್ನು ಸೂಚಿಸಿ ಈ ಮೊದಲೇ ಆಗಾಗ್ಗೆ ಬರೆದು ತಿಳಿಸಿರುತ್ತೇವೆ. ಕೆಲವರು ಕ್ರಮವಾಗಿ ಚಂದಾಹಣ ಕಳುಹಿಸಿದ್ದಾರೆ. ಇನ್ನು ಕೆಲವರು ನಾವು ಕಳುಹಿಸಿದ ವಿ. ಪಿ. ಪಿ. ಯನ್ನು ಸ್ವೀಕರಿಸಿದ್ದಾರೆ. ಅವರೆಲ್ಲರಿಗೂ ನಾವು ಆಭಾರಿಗಳಾಗಿದ್ದೇವೆ. ಇನ್ನೂ ಚಂದಾಹಣವನ್ನು ಬಾಕಿ ಮಾಡಿಕೊಂಡಿರುವ, ವಿ. ಪಿ. ಪಿ. ಯನ್ನು ಕೂಡ ಸ್ವೀಕರಿಸದಿರುವ ಚಂದಾದಾರರೆಲ್ಲರೂ ಒಂದುವೇಳೆ ನಮ್ಮ ನೆನಪೋಲೆ ಮುಟ್ಟದಿದ್ದವರು ಕೂಡ ಪ್ರೀತ್ಯಾಭಿಮಾನವಿಟ್ಟು ತಮ್ಮ ಚಂದಾಹಣವನ್ನು ಈಗಲಾದರೂ ಕಳುಹಿಸಿಕೊಟ್ಟು ನಮಗೆ ನೆರವಾಗಬೇಕಾಗಿ ಕೇಳಿಕೊಳ್ಳುತ್ತೇವೆ. ಸಕಾಲದಲ್ಲಿ ಚಂದಾಹಣ ಅಥವಾ ಉತ್ತರ ಬಾರದಿದ್ದರೆ ಮುಂದಿನ ಸಂಚಿಕೆಯನ್ನು ವಿ. ಪಿ. ಪಿ. ಮಾಡುವೆವು.

—ಮೆನೇಜರ್.

ಬಂಟರ ಯಾನೆ ನಾಡವರ ಸಂಘ

(ರಿಜಿಸ್ಟರ್ಡ್) ಮುಂಬಯಿ.

ಮಹಾಶಯರೇ,

ನಮ್ಮ ಸಂಘದ 26ನೇ ವಾರ್ಷಿಕ ಮಹಾಸಭೆಯು ತಾ. 11—4—'51ನೇ ಆದಿತ್ಯವಾರ ಅಪರಾಹ್ನ ಘಂಟೆ ೪ಕ್ಕೆ ಸರಿಯಾಗಿ ಡಾಕ್ಟರ್ ಪಡುಬಿದ್ರಿ ಜಗನ್ನಾಥ ಶೆಟ್ರುವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಫ್ರೀ ಸ್ಕೂಲಿನ ಪಟಾಂಗಣದಲ್ಲಿ (17, ಕುಮ್ಟಾ ಸ್ಟ್ರೀಟ್), ಜರಗಲಿರುವುದರಿಂದ ತಾವು ದಯಮಾಡಿ ಚಿತ್ತೈಸಬೇಕಾಗಿ ವಿನಂತಿ.

ಕಾಪು ಸುಬ್ಬಯ ಕೆ. ಶೆಟ್ಟಿ,
ಗೌರವ ಕಾರ್ಯದರ್ಶಿ.

ಅಟ್ಲಾಂಟಿಕ ಒಪ್ಪಂದದಲ್ಲಿ ಸೇರಲು ರಶಿಯಾದ ಇಚ್ಛೆ

ರ್ಲಿನ ಪರಿಷತ್ತಿನಲ್ಲಿ ನಿರ್ಧರಿಸಿದಂ ತಿಂಗಳ ಕೊನೆಯ ವಾರದಲ್ಲಿ ಜಿನೀ ಸಮ್ಮೇಳನವು ಕೂಡುವುದು ನಿಶ್ಚಯ ಗಿರುವಾಗ ಮತ್ತು ಎಲ್ಲರೂ ಅಲ್ಲಿ ನ ಬಹುದಾದ ಕಾರ್ಯಕಲಾಪಗಳ ಕುತೂಹಲದಿಂದ ನಿರೀಕ್ಷಿಸುತ್ತಿರು , ಸೋವಿಯಟ ರಶಿಯಾ ಅನಿರೀಕ್ಷಿ ದ ಸೂಚನೆಯೊಂದನ್ನು ಮಾಡಿ ಪ ಮ ರಾಷ್ಟ್ರಗಳನ್ನು ಬೆರಗುಗೊಳಿಸಿದೆ. ಇಗನೇ ತಾರೀಕಿನಂದು ರಶಿಯಾದ ಶಾಂಗ ಸಚಿವರು ಒಂದು ಮಹತ್ವದ ಗದವನ್ನು ಪಶ್ಚಿಮದ ರಾಯಭಾರಿಗಳ ಕೊಟ್ಟು—ಯುರೋಪದ ಭದ್ರತೆಯ ಯದಲ್ಲಿ ತಮ್ಮ ಸರಕಾರದ ಧೋರಣೆ ತುಸು ಪರಿವರ್ತನೆಯಾಗಿರುವುದ ಸೂಚಿಸಿದರು.

ಅಮೇರಿಕಕ್ಕೆ ಸ್ಥಾನ

ತ್ತು ಪುಟಗಳಷ್ಟು ದೀರ್ಘ ಗಿರುವ ಈ ಪತ್ರದಲ್ಲಿ ಮೊಲೊ ವರು ಯುರೋಪದ ಸಂರಕ್ಷ ಯೋಜನೆಯನ್ನು ಮಾಡಿಕೊಳ್ಳುವ ತು ಬರ್ಲಿನ ಪರಿಷತ್ತಿನ ಕಾಲದಲ್ಲಿ ಟ್ಟ ಸೂಚನೆಯನ್ನು ಸ್ಪಷ್ಟೀಕರಿಸಿ ರು. ಈ ಮುಂಚೆ ಅಮೇರಿಕಕ್ಕೆ ಯೋ ಯಲ್ಲಿ ಸ್ಥಾನ ಕೊಡಲು ನಿರಾಕರಿಸಿ ಮೊಲೊಟೋವರು ಈಗ ಅದಕ್ಕೆ ಪ್ರಾ ಕೊಡುವ ವಿಷಯದಲ್ಲಿ ತಮ್ಮ ಆ ವನ್ನು ಹಿಂದೆಗೆದುಕೊಂಡಿರುವರು. ರಿಕವು ದ್ವಿತೀಯ ಮಹಾ ಯುದ್ಧ ಲದಲ್ಲೂ ಆ ಬಳಿಕವೂ ಯುರೋಪದ ಕಾರಣದಲ್ಲಿ ಮಹತ್ವದ ಪಾತ್ರವ ನಿರ್ವಹಿಸಿರುವುದರಿಂದ ಅಮೇರಿಕ ಯುರೋಪದ ಸಂರಕ್ಷಣಾ ಯೋಜ ಯಲ್ಲಿ ಸ್ಥಾನ ಕೊಡಲು ರಶಿಯಾ ಸಮ್ಮ ಯನ್ನು ವ್ಯಕ್ತಪಡಿಸಿದೆ.

ಯಾರ ವಿರುದ್ಧ ಸಂಘಟನೆ?

ಯಾವು ಅಟ್ಲಾಂಟಿಕ ಒಡಂಬಡಿಕೆ ಲ್ಲೂ ಸೇರಲು ಇಚ್ಛೆಯನ್ನು ಪ್ರಕಟಿಸಿ ದೆ. ಈ ಒಡಂಬಡಿಕೆಯು ರಶಿಯಾ ವಿರುದ್ಧವಾಗಿಯೇ ಸಂಘಟಿ[illegible] ರು ರಶಿಯಾ ವಾದಿಸುತ್ತಿದ್ದರೂ ಪಶ್ಚಿ ರಾಷ್ಟ್ರಗಳು ಹಾಗೆ ಭಾವಿಸಲು ಕಾರ ವೆಂದು ಹೇಳಿದ್ದವು. ಅಟ್ಲಾಂಟಿಕ ಒಡಂಬಡಿಕೆಯು ಸದಸ್ಯ ರಾಷ್ಟ್ರಗಳ ಮೇ ಗುವ ಹೊರಗಿನ ಆಕ್ರಮಣಗಳ ವಿರು ವಾಗಿ ಇರುತ್ತದೆಂದು ಪಶ್ಚಿಮ ರಾಷ್ಟ್ರ ಪದೇ ಪದೇ ತಮ್ಮ ನಿಲುವೆಯನ್ನು ಗೊಳಿಸಿದ್ದವು. ರಶಿಯಾಕ್ಕೆ ಆಕ್ರಮ ಮಾಡುವ ಮನೋಭಾವ ಇಲ್ಲದ ಪ ಅಟ್ಲಾಂಟಿಕ ಒಡಂಬಡಿಕೆಯಿಂದ ವಿವಂಚನೆಗೊಳಗಾಗುವುದು ಬೇಡ ಪಶ್ಚಿಮ ರಾಷ್ಟ್ರಗಳ ಅಭಿಪ್ರಾ ಹಿನ್ನೆಲೆಯಲ್ಲಿ ನೋಡಿದರೆ—ರ ವು ತನಗೂ ಒಡಂಬಡಿಕೆಯಲ್ಲಿ ಕೊಡಬೇಕೆಂದು ಅಪೇಕ್ಷಿಸಿರುವು ಪಾಶ್ಚಾತ್ಯ ರಾಷ್ಟ್ರಗಳು ಸಹಾನು ಯಿಂದ ವಿಚಾರಿಸಬೇಕಾದುದು ಪ್ರಾಪ್ತ.

ಪಾಶ್ಚಾತ್ಯರಿಗೆ ಒಪ್ಪಿಗೆ ಇಲ್ಲ

ಆದರೆ ಪಶ್ಚಿಮ ರಾಷ್ಟ್ರಗಳು ಹಾಗೆ ಮಾಡಿಲ್ಲ—ಅಟ್ಲಾಂಟಿಕ ಒಡಂಬಡಿಕೆಯ ಲ್ಲಿ ರಶಿಯಾವು ಸೇರ್ಪಡೆ ಹೊಂದುವುದು ಬ್ರಿಟನು, ಅಮೇರಿಕೆಗಳಿಗೆ ಎಷ್ಟು ಮಾ ತ್ರಕ್ಕೂ ಇಷ್ಟವಿಲ್ಲ. ಒಮ್ಮೆ ಪ್ರವೇಶ ಪಡೆ ದರೆ ಸಾಕು—ಈ ಕಮ್ಯೂನಿಸ್ಟ ಕರಡಿ ಯು ಗಂಡಾಂತರ ಪ್ರಸಂಗವನ್ನೇ ತರು ವುದೆಂದು ಇವರು ಅಂಜಿಕೊಂಡಿರುವರು. ರಶಿಯದ ಉದ್ದೇಶಗಳಪ್ರಾಮಾಣಿಕತೆಯ ಬಗ್ಗೆ ಪಶ್ಚಿಮ ರಾಷ್ಟ್ರಗಳು ಶಂಕೆಯನ್ನು ವ್ಯಕ್ತಪಡಿಸಿ, ರಶಿಯದ ಸೂಚನೆಗೆ ನೇರಾ ದ ನಿರಾಕರಣೆಯನ್ನೇ ಉತ್ತರ ರೂಪದಲ್ಲಿ ಕಳುಹಿಸಲು ನೋಡಿವೆ. ಇದು ತನ್ನ ವಿ ರುದ್ಧವಾಗಿಯೇ ಅಟ್ಲಾಂಟಿಕ ಒಡಂಬಡಿ ಕೆ ಇದೆಯೆಂಬ ರಶಿಯದ ಅಭಿಪ್ರಾಯವ ನ್ನು ಪೋಷಿಸುವ ಕ್ರಮವಾಗಿಯೇ ಪರಿ ಣಾಮದಲ್ಲಿ ಕಂಡು ಬರುತ್ತದೆ. ಆದುದ ರಿಂದ ರಶಿಯಾಕ್ಕೆ ಪಶ್ಚಿಮ ರಾಷ್ಟ್ರಗಳ ವಿಷಯದಲ್ಲಿ ಹೆಚ್ಚು ಹೆಚ್ಚು ಅಪಪ್ರಚಾರ ವನ್ನು ಕೈಗೊಳ್ಳಲು ಇನ್ನೊಂದು ಸಂಧಿ ದೊರೆತ ಹಾಗಾಯಿತು.

ರಶಿಯದ ಭೇದೋಪಾಯ

ತನ್ನ ಇಚ್ಛೆಯನ್ನು ವ್ಯಕ್ತಪಡಿಸುವ ಪತ್ರವನ್ನು ರಶಿಯವು ಫ್ರಾನ್ಸಿನ ಹೆಸರಲ್ಲಿ ಬರೆದು, ಅದರ ಪ್ರತಿಗಳನ್ನು ಬ್ರಿಟನು ಅಮೇರಿಕಗಳಿಗೂ ಕೊಟ್ಟಿತು ರಶಿಯಾ ದೊಡನೆ ಮೈತ್ರಿಯಿಂದ ನಡೆದುಕೊಳ್ಳಬೇ ಕೆಂದು ಫ್ರಾನ್ಸು ಈಚೆಗೆ ಹವಣಿಸುತ್ತಿರು ವುದು ಮೊಲೊಟೋವರ ಗಮನಕ್ಕೆ ಆಕ ರ್ಷಕವಾಗಿ ಕಂಡು ಬಂದಿದೆ. ಆದುದರಿಂದ ಫ್ರಾನ್ಸಿನ ಮನಸ್ಸಿನಲ್ಲಿ ಸಂಧಾನ ಹಾಗು ಸ್ನೇಹದ ಭಾವನೆಗಳು ಕೆರಳಿ ನಿಲ್ಲುವಂತೆ ರಶಿಯಾ ಕುಶಲ ರಾಜನೀತಿಯನ್ನು ಪ್ರದ ರ್ಶಿಸುತ್ತದೆ. ಭೇದೋಪಾಯದಿಂದ ಶತ್ರು ಸಮೂಹದ ಬಲವನ್ನು ನಾಶಮಾಡುವು ದು ರಶಿಯಾಕ್ಕೆ ಹೊಸತಾದ ತಂತ್ರವಲ್ಲ. ತಮ್ಮ ಕಂಕುಳ ಎಡೆಯಿಂದ ಸೆಗೆದು ಹೋಗಲು ಪದೇ ಪದೇ ಫ್ರಾನ್ಸು ಬಯ ಸುತ್ತಿರುವುದು ಬ್ರಿಟನಿಗೆ ಅದಕ್ಕೂ ಹೆ ಚ್ಚಾಗಿ ಅಮೇರಿಕಕ್ಕೆ ಚಿಂತೆಯನ್ನು ಹು ಟ್ಟಿಸುತ್ತದೆ.

ಮೈತ್ರಿಯ ಇಚ್ಛೆ

ಅಮೇರಿಕಕ್ಕೆ ಲೋಕದಲ್ಲಿ ಕಾಣುವ ದು ಒಂದೇ ಒಂದು 'ಗಂಡಾಂತರ – ಅ ದೆಂದರೆ ಕಮ್ಯೂನಿಜಂ, ಇದನ್ನು ಯಶಸ್ವಿ ಯಾಗಿ ಪ್ರತಿಭಟಿಸುವ ಉದ್ದೇಶದಿಂದ ಲೇ ಅದು ಸೈನಿಕ ಹಾಗು ಆರ್ಥಿಕ ಸಹಾ ಯಗಳನ್ನು ನೀಡುತ್ತಾ "ಸ್ವತಂತ್ರ ಜಗ ತ್ತಿನ ಹಿತರಕ್ಷಣೆ" ಮಾಡುವ ಕಾರ್ಯಕ್ರ ಮವನ್ನು ಕೈಗೊಂಡಿದೆ ಇಂಡೋಚೀನ ದಲ್ಲಿ ಫ್ರಾನ್ಸನ್ನು ಎತ್ತಿಕಟ್ಟಿ, ಕಮ್ಯುನಿಸ್ಟ ಕೈಗೊಂಬೆಯೆಂದು ಹೇಳಲಾದ ಹೋಚಿ ಮಿನರು ತೊಡಗಿದ ರಾಷ್ಟ್ರೀಯ ಸ್ವಾತಂತ್ರ್ಯದ ಆಂದೋಲನವನ್ನು ಹದ ಬಡೆಯಲು ಅಮೇರಿಕಾ ಭಗೀರಥ ಪ್ರಯತ್ನ ಮಾಡುತ್ತದೆ. ಆದರ ಈ ಕಾರ್ಯದಲ್ಲಿ ಅದಕ್ಕೆ ಸಾಕಷ್ಟು ಯಶಸ್ಸು ದೊರೆತಿಲ್ಲ ದಿನದಿನಕ್ಕೂ ಹೋ ಚಿಮಿನರ ಕೈಯೇ ಮೇಲಾಗುತ್ತದೆ ಪ

ಫ್ರೆಂಚ ಭಾರತದಲ್ಲಿ ಹುಟ್ಟಿಕೊಂಡ "ಸ್ವತಂತ್ರ" ಹಳ್ಳಿಗಳು

ಸಿದ್ಧ ದೀನ್ ಬೀನ್‌ಫೂ ಕೋಟೆಯನ್ನು ಸಂರಕ್ಷಿಸಿಕೊಳ್ಳುವುದು ಫ್ರೆಂಚರಿಗೆ ಈಗ ಕಷ್ಟಸಾಧ್ಯವೆಂದೇ ತೋರುತ್ತದ.

ಕೋಟೆಯೊಳಗೆ ಕದನ

ಹೋಚಿಮಿನರ ೪೦ ಸಾವಿರ ಸೇನೆಯು ಮುಂದೆ ಈ ದುರ್ಗದಲ್ಲಿಆಶ್ರಯಹೊಂದಿದ ೧೨ ಸಾವಿರ ಫ್ರೆಂಚ ಸೈನಿಕರು ನಿಕಟದ ಕಾಳಗ ಕೊಡುತ್ತಿದ್ದರೂ, ಮೇಲೆ ಏರಿಬ ರುತ್ತಿರುವ ಶತ್ರು ಸೈನ್ಯವನ್ನು ಹಿಂದೂಡ ಲು ಅಸಾಧ್ಯವಾಯಿತು. ಆಹಾರ ಪೂರೈ ಕೆಯೂ ನಿಂತು ಹೋಗುವ ಉತ್ಕಟ ಪ ರಿಸ್ಥಿತಿ ಬಂದೊದಗಿತು. ಅಮೇರಿಕದ ವಿ ಮಾನಗಳನ್ನು ಒಂದೇ ಸಮನೆ ವೀತಮಿನ ರ ಮೇಲೆ ದಾಳಿ ನಡೆಸಲು ಉಪಯೋಗಿ ಸಿದರೂ ಪರಿಣಾಮ ಅನುಕೂಲವಾಗಲಿ ಲ್ಲ. ಅಮೇರಿಕದ ದೃಷ್ಟಿಯಲ್ಲಿ ಕೊರಿಯ ಕ್ಕಿಂತಲೂ ಇಂಡೋಚೀನವೇ ಮಹತ್ವದ ಕ್ಷೇತ್ರವೆಂದು ಡಲ್ಲೇಸರು ಸಾರಿರುವರಲ್ಲ ದೆ, ಆಗ್ನೇಯ ಏಶ್ಯಾಕ್ಕೊಂದು ಮನ್ರೋ ಸಿದ್ಧಾಂತವನ್ನು ಅನ್ವಯಿಸುವ ಹವ್ಯಾಸ ಕ್ಕೂ ಅವರು ಇಳಿದಿರುವರು. ಚೀನದ ವಿರುದ್ಧ ದ್ವಿತೀಯ ರಂಗವನ್ನು ತೆರೆಯಲು ಈ ಹವಣಿಕೆ ನಡೆದಿದೆ ಎನ್ನಬಹುದು

ಹೆಚ್ಚಿಕೊಂಡ ದಬ್ಬಾಳಿಕೆ

ಇತ್ತ ಭಾರತದಲ್ಲಿರುವ ಫ್ರೆಂಚ ಸ್ವಾಸ್ಥ್ಯಗಳಲ್ಲಿ ವಿಲಯನಪರ ಚಳವಳವು ದಿನದಿನಕ್ಕೂ ಗಂಭೀರಾವಸ್ಥೆಯನ್ನು ಮುಟ್ಟುತ್ತಾ ಸಾಗುತ್ತದೆ. ಫ್ರೆಂಚ ಭಾರತದಲ್ಲಿರುವ ಕಮಿಶನರು ತಮ್ಮ ಮಂತ್ರಿ ಮಂಡಲದಲ್ಲಿದ್ದ ಗಾಬರ್ಟ ಹಾಗು ಕುಮಾರಪ್ಪ ರೆಡ್ಡಿಯವರನ್ನೂ ಪಾಂಡಿಚೆರಿಯ ಮೇಯರರನ್ನೂ ಪದಚ್ಯುತ ಮಾಡಿ. ಸೇಡು ತೀರಿಸಿಕೊಂಡಿರುವರು. ಜನಮತಗಣನೆ ಇಲ್ಲದೇನೆ ಭಾರತದಲ್ಲಿರುವ ಫ್ರೆಂಚ ವಸಾಹತು ಪ್ರದೇಶಗಳು ವಿಲೀನಹೊಂದಬೇಕೆಂದು ಈ ಧುರೀಣರು ಕೇಳಿದುದೇ ಫ್ರೆಂಚ ಸರಕಾರ ಕೈಗೊಂಡ ಈ ಕ್ರಮದ ಹೇತು. ಅದಲ್ಲದೆ ಹಿಂಸಾಚಾರವನ್ನೂ ದಬ್ಬಾಳಿಕೆಯನ್ನೂ ಪ್ರಾರಂಭಿಸಿ, ಫ್ರೆಂಚ ಸರಕಾರವು ವಿಲಯನಪರ ಶಕ್ತಿಗಳ ದಮನಕಾರ್ಯವನ್ನು ಇನ್ನಷ್ಟು ಕ್ರೂರ ರೀತಿಯಲ್ಲಿ ನಡೆಸುತ್ತದೆ. ಭಾರತದ ಕಾನ್ಸಲರ ಕಾರ್ಯಾಲಯದ ಮೇಲೆ ಹಲ್ಲೆ ಮಾಡುವುದು, ವಿಲಯನ ವಿರೋಧೀ ಮೆರವಣಿಗೆಗಳನ್ನು ಸಂಘಟಿಸುವುದು ಜನರನ್ನು ಬೆದರಿಸಿ ಹಿಂಸೆಕೊಡುವುದು ಮುಂತಾದ ಅನಾಗರಿಕ ವರ್ತನೆಗಳನ್ನು ಫ್ರೆಂಚ ಸರಕಾರ ಕೈಗೊಂಡಿದೆ.

"ಸ್ವತಂತ್ರ" ಹಳ್ಳಿಗಳು

ವಿಲಯನಪರ ಧುರೀಣರು ಬೇರೆಯೇ ಆದ ಸಾಹಸ ಕಾರ್ಯವನ್ನು ನಡೆಸಿರುವ ರು—ಪಾಂಡಿಚೇರಿಯಿಂದ ಸಿಡಿದು, ಸುತ್ತಲೂ ಭಾರತ ಪ್ರದೇಶದಿಂದ ಆಕ್ರಮಿಸಲ್ಪಟ್ಟಿರುವ ಫ್ರೆಂಚ ಹಳ್ಳಿಗಳು ಒಂದೊಂದೇ ಯಾಗಿ ಸ್ವಾತಂತ್ರ್ಯವನ್ನು ಸಾರುವಂತೆ ಈ ಧುರೀಣರು ಪ್ರಯತ್ನಿಸಿ, ಯಶಸ್ಸನ್ನು ಗಳಿಸಿರುವರು ಪೋಲೀಸ ಠಾಣೆಗಳನ್ನು [illegible] ನ್ನೂ ಜನರು ವಶಪಡಿಸಿಕೊಂಡು ಅಲ್ಲಿ ಭಾರತದ ಧ್ವಜವನ್ನು ಹಾರಿಸಿ, ತಾವು ಸ್ವತಂತ್ರ ನಾಗರಿಕರೆಂದು ಸಾರಿರುವರು. ಭಾರತ ಸರಕಾರವು ತಮ್ಮನ್ನು ಪ್ರಜೆಗಳಾಗಿ ಅಂಗೀಕರಿಸಬೇಕೆಂದು ಇವರು ಕೇಳಿಕೊಂಡರು ಆದರೆ ನೆಹರೂರವರು ಭಾರತ ಪಾರ್ಲಿಮೆಂಟಿನಲ್ಲಿ ಹೇಳಿಕೆ ಕೊಡುತ್ತಾ ಫ್ರೆಂಚ ಸರಕಾರದ ಒಪ್ಪಿಗೆ ಇಲ್ಲದೆ ಏಕಪಕ್ಷೀಯ ತೀರ್ಮಾನದಿಂದ ಈ "ಸ್ವತಂತ್ರ" ಗ್ರಾಮಗಳನ್ನು ಭಾರತದಲ್ಲಿ ಸೇರಿಸಿಕೊಳ್ಳುವುದು ಭಾರತದ ಬಯಕೆಯಲ್ಲ ಎಂದು ಹೇಳಿರುವರು.

ಸಂಧಾನದ ಆತುರ

ಆದರೆ ಇಲ್ಲಿ ದಬ್ಬಾಳಿಕೆಯನ್ನು ನಡೆಸಲು ಅನುಕೂಲವಾಗುವಂತೆ ಪೋಲೀಸರನ್ನು ಕಳುಹಿಸಲು ಭಾರತವು ಬಿಡಲಾರದು. ಫ್ರೆಂಚ ಸಶಸ್ತ್ರ ಪೋಲೀಸರು ಭಾರತದ ನೆಲವನ್ನು ದಾಟಿಹೋಗದಂತೆ ಯೋಗ್ಯ ವ್ಯವಸ್ಥೆ ಏರ್ಪಟ್ಟಿದೆ. ಅಲ್ಲದೆ ಗುರುತಿನ ಚೀಟಿಯನ್ನು ಪಡೆಯದವರ ಸಂಚಾರ ಸಲ್ಲದೆಂಬ ನಿರ್ಬಂಧವನ್ನೂ ಭಾರತ ಸರಕಾರ ಹೇರಲು ನಿರ್ಧರಿಸಿದೆ ಫ್ರೆಂಚ ಸರಕಾರವು ಈಗ ವಿಲಯನಪರ ಧುರೀಣರೊಡನೆ ಸಂಧಾನ ನಡೆಸುವ ಆತುರ ತೋರಿಸುತ್ತಿದೆಯೆಂದೂ ಇಬ್ಬರು ಪ್ರತಿಷ್ಠಿತರು ಫ್ರೆಂಚ ಸರಕಾರದ ಕಡೆಯಿಂದ ಈ ಕುರಿತು ಮಾತುಕತೆ ತೊಡಗಿರುವರೆಂದೂ ತಿಳಿದುಬರುತ್ತದೆ. ಫ್ರೆಂಚ ಸರಕಾರದ ಸಾಗರೋತ್ತರ ವಸಾಹತು ಖಾತೆಯ ಇನಸ್ಪೆಕ್ಟರ ಜನರಲ್ಲರು ಪಾಂಡಿಚೇರಿಯಲ್ಲಿ ತಮ್ಮ ಸತ್ಯ ಶೋಧನೆಯ ಕಾರ್ಯಕ್ರಮವನ್ನು ಬಿಟ್ಟುಗೊಟ್ಟು ಅನಿರೀಕ್ಷಿತವೆಂಬಂತೆ ಹೊಸ ದಿಹಲಿಗೆ ಹಾರಿ, ವಿದೇಶ ರಾಯಭಾರಿ ಯೊಡನೆ ಮಾತುಕತೆ ನಡೆಸಿದರು. ಇದರ ಫಲಿತಾಂಶ ಏನಾಗುತ್ತದೋ—ಕಾದು ನೋಡಬೇಕು.

—ಹೊಸಕೆರೆ ಚಿದಂಬರಯ್ಯನವರ—

ಗೀತೆಯ ಕೈಗನ್ನಡಿ

ಭಗವದ್ಗೀತೆಯ ಸಮೂಲ

ಭಾಷಾಂತರ.

ಕ್ರಿಮತೆ 0-12-0

V. P. P. ಮೂಲಕ 1—4—0

ನವಯುಗ ಪ್ರೆಸ್, ಉಡುಪಿ.

ಹಿರಿಯಡ್ಕ—ಇಲ್ಲಿಯ ಬೋರ್ಡು ಹಾಯರ್ ಎಲಿಮೆಂಟರಿ ಶಾಲಾ ಮುಖ್ಯೋಪಾಧ್ಯಾಯರಾಗಿದ್ದ ಶ್ರೀ ಅನಂತಪ್ಪ ಶೆಣೈಯವರು ನಿವೃತ್ತರಾಗಿ ಶಾಲಾ ಚಾರ್ಜನ್ನು ಶ್ರೀಮತಿ ಯು. ರುಕ್ಮಿಣಿಯವರಿಗೆ ಕೊಡಲಾಯಿತು. ಕಳೆದ ತಾ 26ರಲ್ಲಿ ಶಾಲಾ ಅಧ್ಯಾಪಕರೂ ಮಕ್ಕಳೂ ಉಡುಪಿ ರೇಂಜಿನ ಡೆಪ್ಯುಟಿ ಇನ್‌ಸ್ಪೆಕ್ಟರ್ ಶ್ರೀ ಸಂಜೀವ ರಾಯರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ನಿವೃತ್ತಿ ಹೊಂದಿದ ಮುಖ್ಯೋಪಾಧ್ಯಾಯರನ್ನು ಬೀಳ್ಕೊಳ್ಳುವ ಸಮಾರಂಭವನ್ನು ಬಹು ಗೌರವದಿಂದ ನೆರವೇರಿಸಿದರು. ಶ್ರೀಮತಿ ಯು. ರುಕ್ಮಿಣಿ. ಶ್ರೀ ಕೃಷ್ಣನಾವಡ, ಶ್ರೀ ಕೃಷ್ಣ ಅಕ್ಕಸಾಲಿ, ಶ್ರೀ. ಬಿ. ಮಹಾಬಲ ಸೆಟ್ಟಿ, ಶ್ರೀ ಮುಕುಂದ ಭಟ್ಟರು, ಶ್ರೀ ವಿಟ್ಠಪ್ಪ ಶೆಣೈಯವರುಗಳೆಲ್ಲಾ ಮುಖ್ಯೋಪಾಧ್ಯಾಯರ ನಿಸ್ವಾರ್ಥ ಸೇವೆಯನ್ನು ಹೊಗಳಿ ಮಾತನಾಡಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಮುಖ್ಯೋಪಾಧ್ಯಾಯರನ್ನು ಕೊಂಡಾಡಿದರು. ಶ್ರೀಮತಿ ಯು. ರುಕ್ಮಿಣಿಯವರು ಧನ್ಯವಾದಗಳನ್ನರ್ಪಿಸಿದರು. ಲಘು ಫಲಹಾರ, ಗ್ರೂಪ್ ಫೋಟೋ ತೆಗೆದ ನಂತರ ಸಭೆಯು ಮುಕ್ತಾಯವಾಯಿತು.

ಕುಂದಾಪುರ—ಬೋರ್ಡ್ ಹೈಸ್ಕೂಲಿನ ಹಳೆ ವಿದ್ಯಾರ್ಥಿ ಸಂಘದವರು ಇದೇ ಎಪ್ರಿಲ್ ತಾ. 16-4-54ರಿಂದ ತಾ. 18-4-54ರ ವರೇಗೆ ಸಂಘದ ದಿನಾಚರಣೆಯನ್ನು ಆಚರಿಸಲಿರುವರು. ಈ ಸಂದರ್ಭದಲ್ಲಿ ಕಲಾ—ವೃತ್ತಿ-ಕೈಗಾರಿಕೆ ಪ್ರದರ್ಶನವೂ ತಾ. 16-4-54ನೇ ದಿನ ರಾತ್ರೆ ಹಳೆ ವಿದ್ಯಾರ್ಥಿನಿಯರಿಂದ "ಸತ್ವ ಪರೀಕ್ಷೆ" ಎಂಬ ಸಾಮಾಜಿಕ ನಾಟಕವೂ, 17—4—54ನೇ ದಿನ ವಕೀಲರೂ, ಎಂ. ಎಲ್. ಎ. ಗಳೂ, ಉಪಾಧ್ಯಾಯರೂ, ಅಲ್ಲದೆ ಇನ್ನಿತರ ಕಲಾಭಿಮಾನಿಗಳ ಕೂಡುವಿಕೆಯಿಂದ ಲವಕುಶ ಕಾಳಗ, ಮತ್ತು ಕರ್ಣಾರ್ಜುನ ಕಾಳಗವೆಂಬ ಜೋಡಾಟವೂ ತಾ. 18—4—54ನೇ ದಿವಸ ಸಂಘದ ದಿನಾಚರಣೆ, ಇನ್ನಿತರ ಕಾರ್ಯಕಲಾಪಗಳೊಂದಿಗೆ ಜರಗುವುದು. ಅಲ್ಲದೆ ತಾ. 16—4—54ನೇ ದಿನ ಸಂಜೆ ಏಕೀಕರಣವೆಂಬ ಪ್ರಹಸನವನ್ನೂ ತಾ. 17—4—54ನೇ ದಿನ ಸಂಜೆ ಇಂಗ್ಲಿಷ್ ಭೂತವೆಂಬ ಏಕಾಂಕ ನಾಟಕವನ್ನೂ ಪ್ರದರ್ಶಿಸಲಾಗುವುದು. ಇವಲ್ಲದೆ "ಕುಮಾರಿ ಶಾಂತಿ" ಇವರ ಅತ್ಯುತ್ತಮ ನೃತ್ಯಕಲಾ ಪ್ರದರ್ಶನವು ಇದೆ. ತಾ. 18—4—54ರ ರಾತ್ರೆ "ಭಸ್ಮಾಸುರ" ಎಂಬ ನಾಟಕವನ್ನು ಪ್ರದರ್ಶಿಸಲಾಗುವುದು. ಎಲ್ಲರಿಗೂ ಸುಸ್ವಾಗತವೆಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಹೆಗ್ಗುಂಜೆ—ಹಾ! ಎ! ಶಾಲೆಯಲ್ಲಿ ಕಳೆದ ತಾ 27ರಲ್ಲಿ VIII ಇಯತ್ತೆಯ ವಿದ್ಯಾರ್ಥಿಗಳನ್ನು ಬೀಳ್ಕೊಡುವ ಸಮಾರಂಭವು ನೆರವೇರಿತು.

ಪಂಜಿನಡ್ಕ—ಕಳೆದ ತಾ 30ರಲ್ಲಿ ಕೊಲೆಕಾಡಿ ವಿದ್ಯಾ ಪ್ರಚಾರಿಣೀ ಹಾರ ಶಾಲೆಯಲ್ಲಿ ಎಂಟನೆ ದರ್ಜೆಯ ವಿದ್ಯಾರ್ಥಿಗಳನ್ನು ಬೀಳ್ಕೊಡುವ ಸಭೆಯು ಜರಗಿ ಹಲವರ ಭಾಷಣಗಳಾದುವು.

ಉಳ್ತೂರು—ಕಳೆದ ತಾ 26ರಲ್ಲಿ ಶ್ರೀ ಮಹಾಲಿಂಗೇಶ್ವರ ಶಾಲೆಯ ವರ್ಧಂತಿಯು ಶ್ರೀ ಟಿ. ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ಜಯಶೀಲವಾಗಿ ಜರಗಿತು. ನಾಟಕ, ಯಕ್ಷಗಾನಗಳು ಜನಮನವನ್ನಾಕರ್ಷಿಸಿತ್ತು.

ಪುತ್ತೂರು—ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಕಾಲಾವಧಿ ಉತ್ಸವವು ಇದೇ ತಾ 10ರಿಂದ 18ರ ವರೆಗೆ ಜರಗಲಿದೆ.

ಸೂಡ—ಕಾರ್ಕಳ ತಾಲ್ಲೂಕು ಸೂಡ ಕುಂಜ್ಜೆ ಗ್ರಾಮದ ಜೈಮಣ್ಣ ಶೆಟ್ಟಿ ಮನೆ ರಾಜಾಪುರ ಸಾರಸ್ವತ ಜಾತಿಯ ಗೌರಿ ಎಂಬವರು (ಮುಂಬೈಯಲ್ಲಿರುವ ಶ್ರೀ. ಆರ್. ವಿ. ಪ್ರಭುಗಳ ತಾಯಿ) ಇತ್ತೀಚೆಗೆ ಸ್ವರ್ಗಸ್ಥರಾದುದು ವಿಷಾದಕರವಿದೆ.

ಹದಿನಾಲ್ಕು ಪಟ್ಣ ಮೊಗವೀರ ಮಹಾಜನರ ಸಭಾ, ಉಚ್ಚಿಲ

ಉದ್ಯಾವರ—ಈ ಸಭೆಯ ವತಿಯಿಂದ ನಡೆಸಲಿಕ್ಕಿರುವ ಹನ್ನೊಂದು ವಯಸ್ಕರ ಶಿಕ್ಷಣ ರಾತ್ರಿ ಶಾಲೆಗಳ ಉದ್ಘಾಟನಾ ಸಮಾರಂಭವು ತಾ 1-4-54ರಲ್ಲಿ ಉದ್ಯಾವರ ಶ್ರೀ ಸದಿಯ ಸಾಹುಕಾರರ ನಿವಾಸದ ವಠಾರದಲ್ಲಿ ಡಾ! ಟಿ. ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಫಿಶ್ಶರೀಸ್ ಇಲಾಖೆಯ ಅ! ಡೈರೆಕ್ಟರ್ ಶ್ರೀ ಎ. ಜೆ. ಜಾರ್ಜರಿಂದ ನೆರವೇರಿಸಲ್ಪಟ್ಟಿತು, ಸುಮಾರು ಎರಡು ಸಾವಿರ ಜನರು ನೆರೆದಿದ್ದರು, ದೇವತಾ ಪ್ರಾರ್ಥನೆಯಾದ ಮೇಲೆ ಪ್ರಧಾನ ಕಾರ್ಯದರ್ಶಿ ಶ್ರೀ ಗಿರಿಯಪ್ಪ ಎ. ಸುವರ್ಣರು ಸ್ವಾಗತ ಭಾಷಣ ಮಾಡಿದರು. ಸಂಘದ ಅಧ್ಯಕ್ಷ ಶ್ರೀ. ಸದಿಯ ಸಾಹುಕಾರರು ಸಮಾರಂಭದ ಅಧ್ಯಕ್ಷ ಹಾಗೂ ಉದ್ಘಾಟಕರಿಗೆ ಹಾರ ತುರಾಯಿಗಳನ್ನರ್ಪಿಸಿದರು. ಶ್ರೀ ಆರ್. ಡಿ. ಮೆಂಡನರು ಸಂದೇಶಗಳನ್ನು ಓದಿದರು. ಉಪ ಕಾರ್ಯದರ್ಶಿ ಶ್ರೀ ಬಿ ರಾಮ ಸಾಲ್ಯಾನರು ವರದಿಯನ್ನೋದಿದರು. ಬಳಿಕ ಶ್ರೀ ಜಾರ್ಜರು 11 ಶಾಲೆಗಳನ್ನು ಉದ್ಘಾಟಿಸುತ್ತಾ, 'ಈ ಸಾಹಸ ಕಾರ್ಯವನ್ನು ಶ್ರೀ ಸದಿಯ ಸಾಹುಕಾರರ ಮುಂದಾಳುತನದಿಂದ ನಿಮ್ಮ ಸಭೆಯು ಕೈಗೊಂಡುದು ಅಭಿನಂದನೀಯ, ಅನುಕರಣೀಯ. ಮಿಾನುಗಾರರ ಹಿತದೃಷ್ಟಿಯಿಂದ ನಮ್ಮ ಜಿಲ್ಲೆಯಲ್ಲಿ 30 ಫಿಶರೀಸ್ ಶಾಲೆಗಳನ್ನು ಫಿಶರೀಸ್ ಇಲಾಖೆಯವರು ನಡೆಸುತ್ತಿದ್ದುವರು. ಇದು ಮಕ್ಕಳಿಗೆ ಪ್ರಯೋಜನಕಾರಿಯಾದರೆ ಇಂತಹ ವಯಸ್ಕರ ಕಡ್ಡಾಯ ರಾತ್ರಿಶಾಲೆಗಳಿಂದ ವಿದ್ಯೆ ಇಲ್ಲದ ವಯಸ್ಕರಿಗೆ ಲಾಭವಿದೆ" ಎಂದಿತ್ಯಾದಿಯಾಗಿ ಹೇಳಿದರು. ಸಭೆಯ ಖರ್ಚಿನಿಂದ ಸುಮಾರು 700 ಮಂದಿಗೆ ಧರ್ಮಾರ್ಥ ಸ್ಲೇಟು ಪುಸ್ತಕಗಳನ್ನು ಆಯಾಯ ಶಾಲಾ ಕಮಿಟಿ ಮೂಲಕ ಹಂಚಲಾಯಿತು. ಉದ್ಘಾಟನದ ಇಂಗ್ಲಿಷ್ ಭಾಷಣವನ್ನು ಶ್ರೀ ಆರ್. ಡಿ. ಮೆಂಡನ್‌ರು ತುಳುವಿಗೆ ಭಾಷಾಂತರಿಸಿದರು. ಸಬಕರಸ್ಪೆಕ್ಟರ್ ಶ್ರೀಗಳಾದ ಯು. ಭಾಸ್ಕರ ಶೆಟ್ಟಿ, ಟಿ. ರಮೇಶ ಪೈ, ಎ. ಜೆ. ಆಲ್ವ, ಎಚ್. ಸುಬ್ಬಣ್ಣ, ಬಿ. ಯಸ್. ರಾವ್, ಆರ್. ಡಿ. ಮೆಂಡನ್ ಮೊದಲಾದವರು ಈ ಮಹಾ ಯೋಜನೆಯನ್ನು ಶ್ಲಾಘಿಸಿ ಭಾಷಣವಿತ್ತರು.

ತರುವಾಯ ಅಧ್ಯಕ್ಷ ಡಾ! ಪೈಗಳು 25 ವರ್ಷಗಳಿಂದ ಜಿಲ್ಲೆಯಲ್ಲಾಗುತ್ತಿರುವ ವಿದ್ಯಾ ಪ್ರಗತಿಯನ್ನೂ ವಯಸ್ಕರ ಶಿಕ್ಷಣದ ಆವಶ್ಯಕತೆಯನ್ನೂ ಶ್ರೀ. ಸದಿಯ ಸಾಹುಕಾರರ ಮುಂದಾಳುತನದಲ್ಲಿ ಆಗುತ್ತಿರುವ ಸಮಾಜ ಕಲ್ಯಾಣವನ್ನು ವಿವರಿಸಿ ಎಲ್ಲರೂ ಈ ಯೋಜನೆಯ ಪ್ರಯೋಜನ ಪಡೆದು ಉನ್ನತಿಯನ್ನೈದ ಬೇಕೆಂದರು. ಶ್ರೀ. ಕೆ. ಆರ್. ಬಂಗೇರರು ಧನ್ಯವಾದಗಳನ್ನರ್ಪಿಸಿದರು. ಆರಂಭದಲ್ಲಿ ಭಾವಚಿತ್ರ ತೆಗೆಯಲಾಗಿತ್ತು.

ಉಡುಪಿ

ಕಸ್ತೂರ್ಬಾ ಮೆಡಿಕಲ್ ಕಾಲೇಜ್

ಕರ್ನಾಟಕ ವಿಶ್ವವಿದ್ಯಾಲಯದ ನಿಯೋಗ

ಇದೇ ತಾ 2ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ನಿಯೋಗವೊಂದು ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಮುಂದಿನ ಕಾರ್ಯಕ್ರಮದ ಪರಿಶೀಲನೆಗಾಗಿ ಕಾಲೇಜನ್ನು ಸಂದರ್ಶಿಸಿತು. ನಿಯೋಗದಲ್ಲಿ ಮುಂಬಯಿಯ ಜಿ. ಎಸ್. ಮೆಡಿಕಲ್ ಕಾಲೇಜಿನ ಪ್ರಿನ್ಸಿಪಾಲ್ ಡಾ. ದಯಾಗುಡೆ, ಮತ್ತು ಬೆಳಗಾಂವ ಸರ್ಜನ್ ಡಾ. ಬೇಲಿಗೆ ಇವರಿದ್ದರಲ್ಲದೆ ಡಾ! ಮೇಟ್‌ಗುಡ್ ಅವರು ಅತಿಥಿಗಳಾಗಿ ಬಂದಿದ್ದರು. ಆರಂಭದಲ್ಲಿ ವಿಚಾರ ವಿನಿಮಯ ನಡೆಯಿತು. ವಿದ್ಯಾರ್ಥಿಗಳ ಸಭೆಯಲ್ಲಿ ಡಾ! ದಯಾಗುಡೆಯವರು ಭಾಷಣವಿತ್ತರು, ಬಳಿಕ ಕಾಲೇಜನ್ನು ಪರಿಶೀಲಿಸಿದರು ಹಾಸ್ಟೆಲ್ ವ್ಯವಸ್ಥೆ ನೋಡಿ ತೃಪ್ತಿಪಟ್ಟರು. ತರುವಾಯ, ಎಂ. ಜಿ. ಎಂ. ಕಾಲೇಜಿನಲ್ಲಿ ನಿಯೋಗದವರಿಗೆ ಉಪಹಾರ ಸತ್ಕಾರ ನಡೆಯಿತು. ಡಾ! ಮಾಧವ ಪೈಗಳು ಅತಿಥಿಗಳ ಪರಿಚಯ ಮಾಡಿ, ಎಕೆಡೆಮಿಯ ಕಾರ್ಯಕಲಾಪಗಳನ್ನು ಚುಟುಕಾಗಿ ವಿವರಿಸಿದರು.

ಮಾರನೆದಿನ ನಿಯೋಗವು ಮಂಗಳೂರಿಗೆ ಸಂದರ್ಶನವಿತ್ತು ಮುಂದಿನ ಜನವರಿ ತಿಂಗಳಿಂದ ಕ್ಲಿನಿಕಲ್ ಕೋರ್ಸನ್ನು ಮಂಗಳೂರಲ್ಲಿ ತೆರೆಯುವ ಬಗ್ಗೆ ವ್ಯವಸ್ಥೆಗಳನ್ನು ಪರಿಶೀಲಿಸಿ, ಆಸ್ಪತ್ರೆಗಳಿಗೆ ಭೇಟಿಯಿತ್ತರು. ಶ್ರೀ. ಬಿ. ವೈಕುಂಠ ಬಾಳಿಗರು ಫೊಸ್ಕಲರ್ ಬಿಲ್ಡಿಂಗಿನಲ್ಲಿ ಸತ್ಕಾರಕೂಟವೊಂದನ್ನು ಏರ್ಪಡಿಸಿದ್ದರು. ಡಾ! ಟಿ. ಎಂ. ಎ. ಪೈಗಳು ನಿಯೋಗದವರ ಪರಿಚಯ ಭಾಷಣ ಮಾಡಿ ಎಲ್ಲರ ಸಹಕಾರ ಕೋರಿದರು, ಡಾ! ದಯಾಗುಡೆಯವರು ಕಸ್ತೂರಿಬಾ ಮೆಡಿಕಲ್ ಕಾಲೇಜಿನ ಸಾಹಸ ಅದ್ವಿತೀಯವೆಂದೂ ಸರಕಾರಿ ಸಂಸ್ಥೆಗಳಿಗಿಂತ ಖಾಸಗಿ ಸಂಸ್ಥೆಗಳು ಚೆನ್ನಾಗಿ ನಡೆಯುತ್ತಿವೆ ಎಂದು ಹೇಳಿದರು. ಶ್ರೀ ಬಿ. ಬಾಳಿಗರು ಪೂರ್ತನಾಡಿ ಕರ್ನಾಟಕ ವಿಶ್ವವಿದ್ಯಾಲಯದವರೂ ಮದ್ರಾಸ್ ಸರಕಾರದವರೂ, ಮೆಡಿಕಲ್ ಕಾಲೇಜಿಗೆ ಮಾಡಿದ ಸಹಾಯ ಸಹಕಾರಗಳನ್ನೂ ವಿವರಿಸಿದರು. ಡಾ! ಟಿ. ಎಂ. ಎ. ಪೈಗಳು ಧನ್ಯವಾದಿಸಿದರು.

ನಿಯೋಗದ ಸದಸ್ಯರು ಮಧ್ಯಾಹ್ನ ಹಿಂತೆರಳಿದರು.

ಹರತಾಳ—ತಾ 30-3-54ರಂದು ಉಡುಪಿ ಚಿನ್ನ ಬೆಳ್ಳಿ ವ್ಯಾಪಾರ ಸಂಘದವರು ತಮ್ಮ ಸಭೆಯಲ್ಲಿ ತಾ 1—4—54ರಿಂದ 3 ದಿನಗಳ ತನಕ ಮದ್ರಾಸು ಸರಕಾರದ ಹೊಸ ಸೇಲ್ಸ್ ಟೇಕ್ಸ್ ಜ್ಯಾರಿಗೆ ಬರುವ ನಿಷೇಧಾರ್ಥವಾಗಿ ಹರತಾಳವನ್ನಾಚರಿಸಬೇಕೆಂದು ನಿರ್ಣಯ ಮಾಡಿದಂತೆ 3 ದಿನವೂ ಹರತಾಳ ಆಚರಿಸಲ್ಪಟ್ಟಿತು. ತಾ 4ರಲ್ಲಿ ಶ್ರೀ. ವಕೀಲ್ ವಿಟ್ಠಲ ನಾಯಕರ ಅಧ್ಯಕ್ಷತೆಯಲ್ಲಿ ಸಭೆ ಜರಗಿ ನಿಷೇಧ ಠರಾವು ಮಾಡಲಾಯಿತು. ಶ್ರೀ. ಎ. ಜೆ. ಆಳ್ವಯವರು ಕೆಲವು ಸೂಚನೆಗಳನ್ನಿತ್ತರು.

ಅಕ್ಕಿಯ ಬೆಲೆ ಕಮ್ಮಿಯಾಗಬೇಕು

ಅಕ್ಕಿಯ ಬೆಲೆಯು ಸೇರಿಗೆ 7 ಅಣೆಗೆ ಏರಿಕ್ಕೆ ಬಾರದು. 12ಔನ್ಸ್ ರೇಶನ್ ಸಿಗಬೇಕು. ಗ್ರಾಮಾಂತರಗಳಲ್ಲಿ ರಿಲೀಫ್ ಸ್ಟೋರುಗಳನ್ನು ತೆರೆಯಬೇಕೆಂದು ಮದ್ರಾಸು ಸರಕಾರದ ಮುಖ್ಯ ಮಂತ್ರಿಗಳನ್ನು ಕೇಳಿ ಕೊಳ್ಳುವ ಮನವಿಯೊಂದನ್ನು 2659 ಸಹಿಗಳೊಂದಿಗೆ ಉಡುಪಿ ತಹಸಿಲ್ದಾರರ ಮುಖಾಂತರ ಕಳುಹಿಸಿ ಕೊಡಲಾಗಿಯದೆ ಎಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

O. S. 519/53.

S. ಕೃಷ್ಣಪ್ಪ .. ವಾದಿ.

ವಾಸ್ತೇನ ಹೆಬ್ಬಾರ ಕೂಡ . ಪ್ರತಿವಾದಿಗಳು.

3ನೇ ಪ್ರತಿವಾದಿ, S. ನರಸಿಂಹ ಮೂರ್ತಿ, ಈಶ್ವರ ಹೆಬ್ಬಾರರ ಮಗ, Modern Cafe, ದಾಸ ಪ್ರಕಾಶ ಮೈಸೂರು.

4ನೇ ಪ್ರತಿವಾದಿ ಈಶ್ವರ ಹೆಬ್ಬಾರ, ಮೈನರ ಗಾರ್ಡಿಯನ್ 3ನೇ ಪ್ರತಿವಾದಿ.

ಇವರಿಗೆ ತಿಳಿಸುವುದೇನೆಂದರೆ.

ವಾದಿಯು ಅವರ್ಯರು ವಿಮೋಚನೆ ಬಗ್ಗೆ ಮಾಡಿದ ಈ ದಾವೆಯು ತಾ. 10-4-54ಕ್ಕೆ ಇಟ್ಟಿರುವುದರಿಂದ ನಿಮಗೇನಾದರೂ ಆಕ್ಷೇಪಣೆ ಇದ್ದಲ್ಲಿ ಸದ್ರಿ ದಿವಸ ಕೋರ್ಟು ಮುಂದೆ ಹಾಜರಾಗಿ ಉದಪರಿಸಿಕೊಳ್ಳತಕ್ಕದ್ದು. ತಪ್ಪಿದರೆ ಏಕಪಕ್ಷವಾಗಿ ತೀರ್ಮಾನಿಸಲಾದೀತು.

B. Chidananda Rao,
Pleader for Plaintiff.

ಪುತ್ತೂರು, ತಾ. 1-4-54.



ನಡಿಯುವ ಚಿತ್ರ: ಪ್ರಕಾಶದವರ

ರಾಮರಾಜ್ಯಂ (ತಮಿಳು)

ಶೋಭನಾ ಸಮರ್ಥ, ಪ್ರೇಮ ಅದೀಬ್, ರಂಜನಾ.

ಮುಂದಿನ ಚಿತ್ರ:

ಚಲಚಿತ್ರರಂಗದ ಮಧುರ ಜೋಡಿಯಾದ ರಾಜಕಪೂರ್—ನರ್ಗಿಸ್ ನಟಿಸಿದ ನಲ್ಮೆಯ ಚಿತ್ರ

ಆವನ್ [ತಮಿಳು]

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಬರುವ ಚಿತ್ರ: ಸಾಮ್ರಾಜ್

ಭರ್ತ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿನ್ನ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ- ೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟು ಖರ್ಚು ರೂ. ೦-೧೪-೦

—:ವಿಳಾಸ:—

ಹಾಲಪ್ಪಾ ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

NOTICE

In the Court of Subordinate Judge, South Kanara.

R. E. P. 51/1954
O. S. 213/1951

Between:-

The Bunts Co-operative Consumers Society Ltd., Bombay, by its Chairman Vasu A. Shetty... Petitioner.

and

Varkadi Ramayya Naik, S/o Shankar Nayak, residing in Varkady village, Kasaragod Taluk ... Respondent.

Please take notice that the petitioner has filed the above execution for sale of the immoveable properties belonged to the respondent attached before judgement and the same is posted for notice to 15—6—1954. Hence you are requested to appear before the Court on the said date at 11 A. M. and file objections if any, in default the said Execution will be proceeded in your absence.

(By Order of Court)

Sd. K. S. Hegde,
Advocate for Petitioner.

Mangalore 4-4-1954.

ಮಂಗಳೂರು

ಹರತಾಳ— ಚಿನ್ನ ಬೆಳ್ಳಿ ಆಭರಣಗಳ ಮೇಲೆ ಜಾರಿಗೆ ಬಂದಿರುವ ಹೊಸ ಸೇಲ್ಸ್‌ಟ್ಯಾಕ್ಸಿನ ವಿರುದ್ಧವಾಗಿ ಚಿನ್ನ ಬೆಳ್ಳಿ ವ್ಯಾಪಾರಸ್ಥರು ತಾ 1ರಿಂದ 3 ದಿನಗಳ ತನಕ ಹರತಾಳ ಆಚರಿಸಿದರು.

ಕೊಲೆಯ ಸಂಬಂಧ ಬಂಧನ— ಶ್ರೀ ಲೋಕನಾಥ ಶೆಟ್ಟರ ಕೊಲೆಯ ಸಂಬಂಧದಲ್ಲಿ ಕಮ್ಯುನಿಸ್ಟ್ ಮುಂದಾಳು ಶ್ರೀ. ಎ. ಕೃಷ್ಣ ಶೆಟ್ಟರನ್ನು ಕಳೆದ ತಾ 29ರಲ್ಲಿ ಮಡಿಕೇರಿಯಲ್ಲಿ ಸೆರೆಹಿಡಿದು ಮಂಗಳೂರಿಗೆ ತಂದಿರುವರಾಗಿ ವರದಿಯಾಗಿದೆ. ಇದೀಗ ಈ ಕೊಲೆಯ ಸಂಬಂಧದಲ್ಲಿ 5ನೇ ಬಂಧನ ವಾಗಿರುವುದು.

ಮೆರವಣಿಗೆಗಳ ಮೇಲಿನ ನಿಶೇಧಾಜ್ಞೆ— ಮಂಗಳೂರು ನಗರ ಸಭೆ ಮತ್ತು ಉಳ್ಳಾಲ ಪಂಚಾಯತ ಸರಹದ್ದುಗಳಲ್ಲಿ ಜಾರಿಯಲ್ಲಿರುವ ಮೇಲಿನ ನಿಶೇಧಾಜ್ಞೆಯು ಮೇ 21ರ ವರೆಗೆ ಮುಂದುವರಿಸಲ್ಪಟ್ಟಿರುವುದು. ಇದರಿಂದ ಈ ಸರಹದ್ದಿನೊಳಗೆ ಮೂರು ದಿನ ಮುಂದಾಗಿ ಅರ್ಜಿ ಮುಖಾಂತರ ಅನುಮತಿ ತೆಕ್ಕೊಳ್ಳದೆ ಸಭೆ ಮೆರವಣಿಗೆ ನಡೆಸ ಕೂಡದಾಗಿದೆ.

ಮುನ್ಸಿಪಲ್ ಕೌನ್ಸಿಲು ಸಭೆಯು ಕಳೆದ ತಾ 29ರಲ್ಲಿಯೂ 31ರಲ್ಲಿಯೂ ಸೇರಿ ಕಾರ್ಯಕ್ರಮಗಳೆಲ್ಲ ನೆರವೇರಿದವು. ನಗರ ಸಭಾ ಸರಹದ್ದಿನೊಳಗೆ ಗೋವಧೆಯನ್ನೂ ಗೋಮಾಂಸ ವಿಕ್ರಯವನ್ನೂ ನಿಷೇಧಿಸಲು ಸರಕಾರವನ್ನು ಕೇಳಿಕೊಳ್ಳಬೇಕೆಂಬ ಶ್ರೀ. ಎಂ. ರಮಾನಾಥ ರಾಯರ ನಿರ್ಣಯವು 9 ಅನುಕೂಲ 7 ವಿರೋಧ ವೋಟುಗಳಿಂದ ಪಾಸಾಯಿತು. ಅದೇ ರೀತಿಯ ಹಂದಿಯನ್ನು ಕೊಲ್ಲುವ ಹಾಗು ಮಾಂಸ ಮಾರಾಟ ನಿಷೇಧ ನಿರ್ಣಯವು 4 ಅನುಕೂಲ 7 ವಿರುದ್ಧ ಮತಗಳಿಂದ ನಾಪಾಸಾಯಿತು. ಟೆಲಿಫೋನ್ ಎಕ್ಸ್‌ಚೇಂಜಿನ ಮುಂಭಾಗದಲ್ಲಿ ನಿರ್ಮಿಸುತ್ತಿರುವ ಪೋಲಿಸು ಲೈನನ್ನು ಅಗ್ನಿಶಾಮಕ ಆಫೀಸಿನ ಸಮೀಪದ ಸ್ಥಳವೊಂದಕ್ಕೊಯ್ಯಬೇಕೆಂದು ಸರಕಾರವನ್ನು ಕೇಳಿಕೊಳ್ಳುವ ನಂದಿಗುಡ್ಡೆ, ಬೊಕ್ಕಪಟ್ಣ, ಪಾಂಡೇಶ್ವರಗಳಲ್ಲಿ ಒಂದೊಂದು ಧರ್ಮಾರ್ಥ ವಾಚನ ಮಂದಿರವನ್ನು ಸ್ಥಾಪಿಸಬೇಕೆನ್ನುವ, ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಮಂಗಳೂರು ಶಾಖೆಯು ಕೇಳಿಕೊಂಡಿರುವಜಾಗಕ್ಕೆ ಕಲೆಕ್ಟರರು ಒಡ್ಡಿರುವ ತಕರಾರುಗಳನ್ನು ಅವರು ಪುನರಾಲೋಚಿಸಿ, ಅದನ್ನು ಆ ಪ್ರಚಾರ ಸಭೆಗೆ ಸಿಗುವಂತೆ ಮಾಡಬೇಕೆಂದು ಕೇಳಿಕೊಳ್ಳುವ ಠರಾವುಗಳಾದುವು. ನೀರು ಸರಬರಾಯಿ ಸ್ಕೀಮಿಗಾಗಿ ನಾಲ್ಕೂವರೆ ಸಲೆ ಬಡ್ಡಿಯಲ್ಲಿ ಸರಕಾರ ಕೊಡಲೊಪ್ಪಿದ ಹನ್ನೆರಡು ಲಕ್ಷ ರೂಪಾಯಿಯ, ಹಾಗು ಅದನ್ನು ನಗರ ಸಭೆಯು ಸಾರ್ವಜನಿಕ ಸಾಲಗಿಂದ ತಿರುಗಿ ಕೊಡುವ ವಿಚಾರದಲ್ಲಿಯೂ ನಿರ್ಣಯ [illegible] ಬಸ್ಸು ಆಫೀಸಿನ ಮಾಳಿಗೆಯ ಬಾಡಿಗೆ ಕೋಣೆಗಳ ಬಗ್ಗೆ ತಕ್ಕ ವ್ಯವಸ್ಥೆಯನ್ನು ನಗರ ಸಭೆಯೇ ನೋಡಿಕೊಳ್ಳಬೇಕೆಂದಾಯಿತು. ಕೆಲವು ರಸ್ತೆಗಳಿಗೆ ಡಾಮಾರು ಹಾಕಿಸಬೇಕೆಂದೂ ನಿರ್ಣಯಿಸಲಾಯಿತು.

ಜಿಲ್ಲಾ ಬೋರ್ಡ್ ಚುನಾವಣೆ— ನಮ್ಮ ಜಿಲ್ಲಾ ಬೋರ್ಡಿನ ಚುನಾವಣೆಯು ಬರುವ ಸಪ್ಟಂಬರ—ಅಕ್ಟೋಬರ ತಿಂಗಳುಗಳಲ್ಲಿ ಜರಗುವುದೆಂದು ವರದಿಯಾಗಿದೆ.

ಜಿಲ್ಲಾ ಅಧ್ಯಾಪಕ ಸಂಘದ ಕಾರ್ಯಕಾರಿ ಮಂಡಳಿಯ ಸಭೆಯು ಕಳೆದ ತಾ 28ರಲ್ಲಿ ಕೆನರಾ ಹೈಸ್ಕೂಲಿನ ಉಪ್ಪರ ಶಾಖೆಯಲ್ಲಿ ರಿ! ಡಾ! ಟಿ. ಕೊಯ್ಲೊರವರ ಅಧ್ಯಕ್ಷತೆಯಲ್ಲಿ ಜರಗಿ, 1953ನೇ ವರ್ಷದ ಗ್ರಾಂಟನ್ನು ಲೆಕ್ಕಿಸುವಾಗ ಕೆಲವು ಪ್ರಾ! ಉಪಾಧ್ಯಾಯರಿಗೆ ಸಂಬಳದಲ್ಲಿ ಕಡಿತ ಮಾಡಿದುಕ್ಕೆ ವಿಷಾದ ಸೂಚಿಸುವ ಹಾಗು ಇಂತಹ ಕಡಿತವನ್ನು ಜಿಲ್ಲಾ ವಿದ್ಯಾಧಿಕಾರಿಗಳು ವಿಧಿಸಬಾರದೆಂದು ಕೇಳಿಕೊಳ್ಳುವ, ಹೊಸ ವಿದ್ಯಾ ಯೋಜನೆಯಂತೆ ಅಧ್ಯಾಪಕ—ವಿದ್ಯಾರ್ಥಿಗಳ ದಾಮಾಶಯದ ಬಗ್ಗಾಗಿ ವಿದ್ಯಾಂಗದ ಡೈರೆಕ್ಟರರು ಹೊರಡಿಸಿದ ಆಜ್ಞೆಯನ್ನು ಹಿಂತೆಗೆದುಕೊಳ್ಳಬೇಕೆನ್ನುವ, ಆಡಳಿತೆಯವರು ಅಧ್ಯಾಪಕರಿಗೆ ಕೊಟ್ಟ ನೋಟೀಸನ್ನು ಅವರು ಹಿಂತೆಗೆದು ಕೊಳ್ಳಬೇಕೆನ್ನುವ, ಪರುಳೇಕರ್ ಸಮಿತಿಯ ಕುರಿತು ನಿಶ್ಚಿತ ನಿರ್ಧಾರಕ್ಕೆ ಬರುವ ಮುನ್ನ ಸರಕಾರದವರು ಯಾವ ಆಜ್ಞೆಯನ್ನೂ ಹೊರಡಿಸಬಾರದೆಂದು ಸರಕಾರವನ್ನು ಕೇಳಿಕೊಳ್ಳುವ ನಿರ್ಣಯಗಳಾದುವು.

ಹಿಂದುಳಿದ ವರ್ಗಗಳ ಕಮಿಟಿಯ ಆಗಮನ— ಕೇಂದ್ರ ಸರಕಾರದವರು ನೇಮಿಸಿರುವ ಹಿಂದುಳಿದ ವರ್ಗಗಳ ಕಮಿಟಿಯು ತಾ 2ರಲ್ಲಿ ಇಲ್ಲಿಗೆ ಆಗಮಿಸಿತು. ಕಮಿಟಿಯ ಅಧ್ಯಕ್ಷ ಶ್ರೀ. ಕಾಕಾ ಸಾಹೇಬ್ ಕಾಲೇಲ್ಕರರು ಬಂದಿರಲಿಲ್ಲ. ಸಮಿತಿಯ ಸದಸ್ಯರಾದ ಶ್ರೀಗಳಾದ ರಾಜೇಶ್ವರ ಪಾಟೀಲ್, ಎಂ. ಪಿ; ಭೀಮಾ ಬಾಯಿ, ಎಂ. ಪಿ, ಶಿವದಯಾಲ ಸಿಂಗ್ ಚೌರಾಸಿ, ಲಾಲಾ ಜಗನ್ನಾಥ್, ಡಾ! ಅನೂಪ್ ಸಿಂಗ್, ಅರುಣಾಂಶುದೇ (ಸಕ್ರೆಟರಿ) ಇವರಲ್ಲದೆ, ಮದ್ರಾಸು ಹರಿಜನ ಅಭಿವೃದ್ಧಿ ಖಾತೆಯ ಡೈರೆಕ್ಟರರು ಶ್ರೀ ಆರ್. ಎಸ್. ಮಲಯಪ್ಪನರೇ ಮೊದಲಾದವರು ಬಂದಿದ್ದರು. ಸಮಿತಿಯವರು ಕದ್ರಿ ಸರಕಾರಿ ಬಂಗ್ಲೆಯಲ್ಲಿ ತಂಗಿದ್ದು ಅಲ್ಲಿಯೇ ಹಿಂದುಳಿದ ವರ್ಗ, ಸಂಘ, ಸಂಸ್ಥೆಗಳಿಂದ ಮನವಿಗಳನ್ನು ಸ್ವೀಕರಿಸಿದರಲ್ಲದೆ ವಿಚಾರ ವಿನಿಮಯವನ್ನೂ ಮಾಡಿದರು. ಶ್ರೀಗಳಾದ ಯು. ಕುಮಾರಯ್ಯ, ಎಸ್. ಎಸ್. ಸುವರ್ಣ, ಬಿ. ಪಿ. ಆಚಾರ್, ಬಿ. ಗಣೇಶ, ಕೆ. ರಾಮು, ಪಿ. ಕೆ. ನಾರಾಯಣ, ಎಸ್. ಗೋಪಾಲ ಸಾಲೆನ್ಸ ಮೊದಲಾದವರು ಬೇರೆ ಬೇರೆ ಹಿಂದುಳಿದ ಜಾತಿಗಳ ಬಿನ್ನವತ್ತಳೆಗಳನ್ನರ್ಪಿಸಿದರು. ಸಂಜೆ ಪತ್ರಿಕಾ ಪ್ರತಿನಿಧಿಗಳು ಸಮಿತಿಯವರನ್ನು ಸಂದರ್ಶಿಸಿದರು. "ಹಿಂದು ದೇಶದಲ್ಲಿ 862 ಹಿಂದುಳಿದ ಜಾತಿಗಳಿದ್ದು ಅವುಗಳ ಅಭಿವೃದ್ಧಿಯ ಮಹಾ ಕಾರ್ಯವನ್ನು ಸಾಧಿಸಬೇಕಾಗಿದೆ. ಜಾತ್ಯಾತೀತ ಭಾರತ ರಾಷ್ಟ್ರ ನಿರ್ಮಾಣದ ಧ್ಯೇಯ ಸಾಧನೆಗಾಗಿ ನಿರ್ಮಿಸಲ್ಪಟ್ಟ ಈ ಸಮಿತಿಗೆ ಎಲ್ಲರೂ ಸಹಕರಿಸಬೇಕು" ಎಂದು ಶ್ರೀ ರಾಜೇಶ್ವರ ಪಾಟೀಲರು ಹೇಳಿ ಪತ್ರಿಕೆಗಳ ಸಹಕಾರಕ್ಕಾಗಿ ಆಭಾರ ಸೂಚಿಸಿದರು.

ಕರ್ನಾಟಕ ಪ್ರಾಂತ್ಯ ರಚನಾ ಪರಿಷತ್ತು— ಇದೇ ತಾ 3ರಲ್ಲಿ ಸೆಂಟ್ರಲ್ ಕೋಅಪರೇಟಿವ್ ಬ್ಯಾಂಕಿನ ಮಹಡಿಯಲ್ಲಿ ಶ್ರೀ. ಕೆ. ಆರ್, ಕಾರಂತರ ಅಧ್ಯಕ್ಷತೆಯಲ್ಲಿ ಕೆ. ಪಿ. ಸಿ. ಸಿ. ಯ ಅಧ್ಯಕ್ಷ ಶ್ರೀ. ಎಸ್. ನಿಜಲಿಂಗಪ್ಪನವರಿಂದ ಉದ್ಘಾಟಿಸಲ್ಪಟ್ಟಿತು. "ಭಾಷಾವಾರು ಪ್ರಾಂತ್ಯ ರಚನಾಕಾಲದಲ್ಲಿ ಪಕ್ಷ ಸಂಗಡಗಳೊಳಗೆ ಯಾವ ಭೇಧವೂ ಇರಕೂಡದು, ಈಗ ಸಂಸ್ಕೃತಿ, ಆರ್ಥಿಕಾದಿ ನೆಪಗಳನ್ನು ಮುಂದೆ ಮಾಡಿ ಸಣ್ಣ ಪ್ರಾಂತ್ಯಗಳನ್ನು ಊರ್ಜಿತದಲ್ಲಿಡುವ ಯತ್ನ ನಡೆದಿದೆ. ಇದು ಯೋಗ್ಯವಲ್ಲ, ದ. ಕನ್ನಡದಲ್ಲಿ ಬೇರೆ ಬೇರೆ ಭಾಷೆಗಳಿದ್ದರೂ ಕನ್ನಡವೇ ವ್ಯಾವಹಾರಿಕ ಭಾಷೆ, ಈ ಜಿಲ್ಲೆ ಕರ್ನಾಟಕ ಭಾಗವೆಂಬುದು ನಿಸ್ಸಂದೇಹ. ಪ್ರಾಂತ್ಯ ರಚನೆಗೆ ಹೆಚ್ಚಿನ ಅಡ್ಡಿ ಆತಂಕಗಳೇನೂ ಇಲ್ಲ. ಉಚ್ಚ ಮಟ್ಟದ ಸಮಿತಿಗೆ ಒಪ್ಪಿಸಲಿರುವ ಮನವಿ ತಯಾರಿಸುವ ಕಾರ್ಯಕ್ಕೆ ಸರ್ವ ಪಕ್ಷ ಸಂಗಡಗಳೂ ಸಹಕಾರವನ್ನೀಯಬೇಕೆ"ಂದಿತ್ಯಾದಿಯಾಗಿ ಉದ್ಘಾಟಕರು ಹೇಳಿದರು. ಅಧ್ಯಕ್ಷ ಶ್ರೀ. ಕಾರಂತರು "ಕರ್ನಾಟಕ ಪ್ರಾಂತ ಚಳುವಳಿಯ ಚರಿತ್ರೆಯನ್ನು ವಿವರಿಸಿ, ಕ. ಪ್ರಾಂತ್ಯ ರಚನೆಯ ಸಾಧ್ಯತೆಯನ್ನು ಹೇಳಿದರು. ಸಭಾರಂಭದಲ್ಲಿ ಶ್ರೀ. ಕೆ. ಬಿ. ಜಿನರಾಜ ಹೆಗ್ಡೇರು ಶ್ರೀ ಕಾರಂತರನ್ನು ಅಧ್ಯಕ್ಷತೆ ವಹಿಸಲು ಕೇಳಿಕೊಂಡರು. ಸ್ವಾಗತಾಧ್ಯಕ್ಷ ಶ್ರೀ. ಬಿ. ಮಂಜಯ್ಯ ಹೆಗ್ಡೇರು ಪಶ್ಚಿಮ ಕರಾವಳಿ ಪ್ರಾಂತದ ಕೇಳಿಕೆಯನ್ನು ಖಂಡಿಸಿ, ಪರಿಷತ್ತಿನ ಉದ್ದೇಶವನ್ನು ತಿಳಿಸಿದರು. ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಡೇರು, ಕೊಲ್ಲೂರಿಂದ ಕನ್ಯಾಕುಮಾರಿವರೆಗಿನ ಪಡು ಕರಾವಳಿ ಪ್ರಾಂತವಾಗಬೇಕೆಂಬ ಚಳವಳವನ್ನು ಈ ಸಭೆ ಖಂಡಿಸುತ್ತದೆ, ಅಲ್ಲದೆ ಮುಖ್ಯವಾಗಿ ಭಾಷಾ ತಳಹದಿಯ ಮೇಲೆಯೇ ಪ್ರಾಂತ್ಯರಚನೆಯಾಗಬೇಕೆಂದೂ, ಕೂಡಲೇ ಕ. ಪ್ರಾಂತವನ್ನು ಘೋಷಣೆಮಾಡುವ ಬಗ್ಗೆ ಉಚ್ಚ ಮಟ್ಟದ ಸಮಿತಿಯು ತಡಮಾಡದೆ ಶಿಫಾರಸನ್ನು ಕೊಡಬೇಕೆಂದೂ, ದ. ಕ. ಜಿಲ್ಲೆಯು ಕರ್ನಾಟಕದಲ್ಲಿಯೇ ಸೇರಬೇಕೆಂದೂ ಅಗ್ರಹಪೂರ್ವಕ ಈ ಸಭೆ ಕೇಳಿಕೊಳ್ಳುತ್ತದೆ" ಎಂಬ ಠರಾವನ್ನು ಸಭೆಯ ಮುಂದಿಟ್ಟು ಭಾಷಣ ಮಾಡಿದರು. ಶ್ರೀ ಕೆ. ಆರ್. ಆಚಾರ್ಯರು, ಠರಾವನ್ನು ಅನುಮೋದಿಸಿ ಭಾಷಣವಿತ್ತರು. ಶ್ರೀಗಳಾದ ಎಸ್. ನಾಗರಾಜಯ್ಯ, ಕೆ. ಸೂರ್ಯನಾರಾಯಣ ಅಡಿಗ, ಎಂ. ಸಿ. ಅಪ್ಪಾಜಿ. ಕೆ. ಕೆ. ಶೆಟ್ಟಿ, ಸಿ. ಎಲ್. ಲೋಬೊ, ಬಿ. ವಿ. ಕಕ್ಕಿಲ್ಲಾಯ, ಕೆ. ಬಾಲಕೃಷ್ಣ ರಾವ್, ಎಸ್. ಜಿ. ಸಾಲೆನ್ಸ, ಎಂ. ಎಸ್. ರಸೆನಾ ಮೊದಲಾದವರು ಈ ಠರಾವಿಗೆ ಬೆಂಬಲವಿತ್ತು ಮಾತನಾಡಿದರು. ಉಚ್ಚ ಮಟ್ಟದ ಸಮಿತಿಗೆ ಕೊಡುವ ಮನವಿ ತಯಾರಿಕೆಗಾಗಿ ಸಮಿತಿಯೊಂದನ್ನು ರಚಿಸಲಾಯಿತು. ಶ್ರೀ ಕೆ. ಬಿ. ಜಿನರಾಜ ಹೆಗ್ಡೇರು ಧನ್ಯವಾದಗಳನ್ನರ್ಪಿಸಿದರು.

ನಾಗರಿಕರ ಸಭೆ— ನಗರ ಸಭೆಯವರು ಇತ್ತೀಚೆಗೆ ಹೆಚ್ಚಿಸಿದ ತೆರಿಗೆಗಳಿಗೆ ವಿರೋಧ ಸೂಚಿಸುವ ನಾಗರಿಕರ ಸಭೆಯೊಂದು ತಾ 5ರಂದು ಗಣಪತಿ ಹೈಸ್ಕೂಲಿನಲ್ಲಿ ಶ್ರೀ. ಜಿ. ಸೋಮಶೇಖರ ರಾಯರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ. ಎ. ಕೆ. ಸೇನರವು ಸಭೆಯ ಉದ್ದೇಶವನ್ನು ವಿವರಿಸಿದರು. ಅಧ್ಯಕ್ಷರು ಪ್ರಸ್ತಾವನಾ ಭಾಷಣ ಮಾಡಿ ಏರಿಸಿದ ತೆರಿಗೆಗಳ ಕುರಿತು ಅಸಮಾಧಾನ ಸೂಚಿಸುವ ಠರಾವನ್ನು ಮಂಡಿಸಲಾಗಿ ಅದು ಪಾಸಾಯಿತು. ಶ್ರೀಗಳಾದ ಸಿ. ಎಲ್, ಲೋಬೊ, ಪೌಲು ಡಿಸೋಜ, ಡಿ. ಮೋಹನ್ ರಾವ್ ಮೊದಲಾದವರೂ ಪ್ರತಿಭಟಿಸಿ ಬೇರೆ ಬೇರೆ ಸೂಚನೆಗಳನ್ನಿತ್ತರು. ನಗರ ಸಭಾಧ್ಯಕ್ಷರೂ ಉಪಾಧ್ಯಕ್ಷರೂ ಸ್ಪೆಶಲ್ ಆಫೀಸರರು ಮಾಡಿರಬಹುದಾದ ತಪ್ಪಿಗೆ ನಗರ ಸಭೆ ಹೊಣೆ ಅಲ್ಲವೆಂದರು. ಅಧ್ಯಕ್ಷರ ಭಾಷಣಾನಾಗಿ, ಕಮಿಟಿಯೊಂದರ ರಚನೆಯಾಗಿ ಧನ್ಯವಾದಗಳೊಂದಿಗೆ ಸಭಾಂತ್ಯವಾಯಿತು.

ಸಮಾಜ ವಿಕಾಸ ಯೋಜನೆಯ ಕಾರ್ಯಕಾರಿ ಸಮಿತಿಯ ವಿಶೇಷ ಸಭೆಯೊಂದು ಇದೇ ತಾ 4ರಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ಮಹಾಲಿಂಗಂ ಚೆಟ್ಟಿಯಾರರ ಅಧ್ಯಕ್ಷತೆಯಲ್ಲಿ ಜರಗಿ ಹಿಂದಿನ ಕಾರ್ಯಕ್ರಮಗಳನ್ನು ಪುನರ್ವಿಮರ್ಶಿಸಿ ಕೆಲವೊಂದು ಕೆಲಸಗಳಿಗೆ ಹೆಚ್ಚಿಗೆ ಹಣ ಮಂಜೂರು ಮಾಡಲಾಯಿತು.

ಪ್ರಕಟಣೆ

ಉಡುಪಿ ತಾಲೂಕು ಪೆರಣಂಕಿಲ ಗ್ರಾಮದ ಪಡುಬೆಟ್ಟು ಕೆಳಮನೆ ಬಾಗು ಸೆಡ್ತಿಯ ಮಗಳು, ಕೊರಪಳು ಸೆಡ್ತಿಯ ಮಗ, ಹಿರಿಯಣ್ಣ ಸೆಟ್ಟಿಯು ಈ ಮೂಲಕ ತಿಳಿಯಪಡಿಸುವುದೇನಂದ್ರೆ—

ನಮ್ಮ ಕುಟುಂಬಾರ್ಥದ ಆಸ್ತಿಗೆ ನನ್ನ ಅಜ್ಜಿ ಗೌರಿ ಸೆಡ್ತಿ ಮಗಳು, ಬಾಗು ಸೆಡ್ತಿ, ಪಟ್ಟೇದಾರಳಾಗಿರುತ್ತಾರೆ. ಅವರು ಸುಮಾರು 90 ವರುಷ ಪ್ರಾಯದವರಾಗಿರುವರು. ದೃಷ್ಟಿ ಮಂದವಾಗಿ ಕಿವಿ ಸರಿಯಾಗಿ ಕೇಳದ ಪರಿಸ್ಥಿತಿಯಲ್ಲಿದ್ದಾರೆ. ನಮ್ಮ ಮೂರು ಕವರಿನ ಪೈಕಿ ಒಂದು ಕವರಿನವರೊಬ್ಬರು ಈ ಪಟ್ಟೇದಾರಳಿಂದ ಕೈವೊಪ್ಪು ಪಡಕೊಂಡು ದುರುಪಯೋಗ ಪಡಿಸುವ ಇರಾದೆಯಲ್ಲಿರುವರಾಗಿ ತಿಳಿದು ಬರುತ್ತದೆ. ಮೂರು ಕವರಿನ ಒಪ್ಪಿಗೆ ಇಲ್ಲದೆ ವಯೋವೃದ್ಧರಾದ ಬಾಗು ಸೆಡ್ತಿಯಿಂದ ದುರ್ಬೋಧನೆಯಿಂದ ಪಡೆದ ಕೈವೊಪ್ಪಿನಿಂದ ಮಾಡಿದ ಯಾವುದೇ ರಿಕಾರ್ಡು [illegible] ಗತಕ್ಕದ್ದಲ್ಲ—

ಹಿರಿಯಣ್ಣ ಸೆಟ್ಟಿ.

ತಾ. 1-4-54

ಅಚ್ಚುಕಟ್ಟಾದ ಮುದ್ರಣ!
ಆದರೂ ದರ ಕಡಿಮೆ!!

ಲಗ್ನಪತ್ರಿಕೆ ಮೊದಲಾದ ಎಲ್ಲಾ ತರದ ಆಮಂತ್ರಣ ಪತ್ರಿಕೆ, ಕರಪತ್ರ, ರಶೀದಿ ಪುಸ್ತಕ, ಫಾರ್ಮು, ಬುಕ್ ವರ್ಕ್, ತರತರದ ಜೋಬ್ ವರ್ಕ್ ಮುಂತಾದುವನ್ನು ಮುತುವರ್ಜಿಯಿಂದ ನಾಜೂಕಾಗಿ ಸಕಾಲದಲ್ಲಿ ಮಾಡಿಕೊಡಲಾಗುವುದು.

ಬುಕ್ ಬೈಂಡಿಂಗ್, ರೂಲಿಂಗ್, ಕಟ್ಟಿಂಗ್ ಕಾರ್ಯಗಳನ್ನೂ ಕೈಗೊಳ್ಳಲಾಗುವುದು.

ನವಯುಗ ಪ್ರೆಸ್,
ಸಂತೆಕಟ್ಟೆ - - - ಉಡುಪಿ.

ದಿ ನ್ಯೂ ಕರ್ನಾಟಕ ಪ್ರೊವಿಡೆಂಟ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಪ್ರಧಾನ ಕಚೇರಿ] [ಉಡುಪಿ, ದ. ಕನ್ನಡ.

ನಿಮ್ಮ ಸಂಪಾದನೆಗೆ ಸಾಧ್ಯವಿರುವ ಮೊತ್ತಕ್ಕೆ ವಿಮೆ ಮಾಡಲು ಅನುಕೂಲವಿರುವ ಜಿಲ್ಲೆಯ ಏಕಮಾತ್ರ ಜನತಾ ಪ್ರೊವಿಡೆಂಟ್ ವಿಮಾ ಸಂಸ್ಥೆ.

ಏಜಂಟರು, ಸ್ಪೆಶಲ್ ಏಜಂಟರು ಆರ್ಗನೈಜರರು ಮತ್ತು ಇನ್ಸ್‌ಪೆಕ್ಟರರು ಬೇಕಾಗಿದ್ದಾರೆ.

ವಿವರಕ್ಕೆ ಬರೆಯಿರಿ.

THE NEW KARNATAKA PROVIDENT
Insurance Co. Ltd., UDIPI.

ನಿಮಗೆ ಸುಲಭದಲ್ಲಿ ಇಂಗ್ಲಿಷ್ ಕಲಿಯಬೇಕೆ? ಹಾಗಿದ್ದರೆ

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿ ಪುಸ್ತಕ ಅತ್ಯುಪಯುಕ್ತವಾದುದು.

ಈ ಪುಸ್ತಕದಿಂದ ಸಾವಿರಾರು ಜನರು ಸುಲಭವಾಗಿ ಸಾಕಷ್ಟು ಇಂಗ್ಲಿಷ್ ಕಲಿತುಕೊಂಡಿದ್ದಾರೆ. ನೀವೂ ಪ್ರಯತ್ನಿಸಬಾರದೇಕೆ?

ಬೆಲೆ: ಸಾದಾಪ್ರತಿ 1—8—0

ನವಭಾರತ ಪುಸ್ತಕ ಭಂಡಾರ, ಉಡುಪಿ.

ಸ್ವೀಕಾರ—ವಿಮರ್ಶೆ

ಭಾರತದ ಕರ್ಣ—

ಬರೆದವರು: ಎನ್. ಎಸ್. ಕಿಲ್ಲೆ. ಪ್ರಕಾಶಿಕೆ: ಶ್ರೀಮತಿ ಇಂದಿರಾ ಕಿಲ್ಲೆ, ವಲೆನ್ಸಿಯ, ಮಂಗಳೂರು ೨. ಬೆಲೆ: ರೂ. ೦—೬—೦.

"ನೆನೆಯದಿರಣ್ಣ ಭಾರತದೊಳಿಂ ಪೆರರಾರುಮಂ ಒಂದೆಚಿತ್ತದಿಂ ನೆನೆವೊಡೆ ಕರ್ಣನಂ ನೆನೆಯ......"—ಪಂಪಭಾರತದ ಈ ಅಮರವಾಣಿ ಕರ್ಣನಲ್ಲಿ ನಿನದಿಸದ ಕನ್ನಡ ಕಾವ್ಯಾಭ್ಯಾಸಿಯಿಲ್ಲ. ಕರ್ಣನ ಚರಿತ್ರ ಚಿತ್ರಣವನ್ನು ಪಂಪನೊಬ್ಬನೇ ಅದ್ಭುತ ರಮ್ಯವಾಗಿ ಕನ್ನಡಿಗರ ಮುಂದಿಟ್ಟುದಲ್ಲ. "ಅನೃತಂ, ಲೋಭಂ, ಭಯಮುಂ ಬಿನಿತುಂ ನೀನಿರ್ದ ನಾಡೊಳಿರ್ಕುಮೆ, ಇನನಂದನ, ಸನ್ನಿಭಾಗ ಪುಣ್ಯಂ ಬಿನಿತರ್ಕಂ ನೀನೆ ಮೊತ್ತಮೊದಲಿಗನಾದಯ್" ಎಂದು ಹೊಗಳಿರುವನು. ಕನ್ನಡ ಭಾರತದ ನಾರಣಪ್ಪನು ಕರ್ಣನ ಕುರಿತು ಕೊಟ್ಟ ಅಭಿಪ್ರಾಯವೂ ಚಿರಸ್ಮರಣೀಯವಾದದ್ದು.

"ಕೊಟ್ಟ ಭಾಷೆಯ ಮೀರಿ ಬಾಣವ
ತೊಟ್ಟನೇ? ತಾನೊಡೆಯನೆಂದರೆ
ಯಟ್ಟಿದನೆ ಪಾಂಡವರೊಳನುಸಂಧಾನ
ವನು ಬಿಸುಟು?
ನೆಟ್ಟ ಕಣೆಗಳುಕಿದನೆ? ಕೌರವ
ಕೆಟ್ಟನಕಟಕಟೆಂದು ಕಾಯುವ
ಬಿಟ್ಟ ಕರ್ಣಂಗಾರುಸರಿ? . ."

—ಹೀಗೆ ಭಾರತದ ಕರ್ಣನು ಸತ್ಯ, ಸ್ವಾಮಿನಿಷ್ಠೆ ಶೌರ್ಯ ಹಾಗು ತ್ಯಾಗಗಳ ಮೂರ್ತಿಯಾಗಿ ಬಾಳಿದನು. ಅವನು ಜನ್ಮತಃ ದುರ್ದೈವಿ: ಹೆತ್ತಬ್ಬೆಯೇ ಅವನನ್ನು ತಿರಸ್ಕರಿಸಿದಳು. ಆದರೆ ಪುರುಷ ಪ್ರಯತ್ನದಿಂದ, ಸದ್ಗುಣಗಳ ಪ್ರಕಾಶದಿಂದ ಅವನ ಕೀರ್ತಿ ನಾಲ್ದೆಸೆಯಲ್ಲಿ ಬೆಳಗಿತು. ಕರ್ಣನ ಕರುಣ ಕತೆಯಿಂದಾಗಿಯೇ ಭಾರತವು "ಕರ್ಣ ರಸಾಯನ"ವಾಯಿತೆಂದರೆ ಅತಿಶಯೋಕ್ತಿಯಾಗದು. ಇಷ್ಟು ಮಹೋನ್ನತ ವ್ಯಕ್ತಿತ್ವವನ್ನು ಪಡೆದ ಕರ್ಣನ ಪರಿಚಯವನ್ನು ದಿವಂಗತ ಕಿಲ್ಲೆಯವರು ಈ ಕಿರುಹೊತ್ತಿಗೆಯಲ್ಲಿ ರಸವತ್ತಾಗಿ, ತರ್ಕಶುದ್ಧವಾಗಿ, ಬೋಧಪ್ರದವಾಗಿ, ಮನಮುಟ್ಟುವಂತೆ ಮಾಡಿಕೊಟ್ಟಿರುವರು. ನಮ್ಮ ಜಿಲ್ಲೆಯ ಜನಕ್ಕೆ ಕಿಲ್ಲೆಯವರೆಂದರೇನೆ ಕರ್ಣ- ಯಕ್ಷಗಾನ ಅರ್ಥಧಾರಿಗಳಾಗಿ ಕಿಲ್ಲೆಯವರು ಭಾರತದ ಕರ್ಣನ ಹೆಸರು ಜನಜನದ ಕರ್ಣದಲ್ಲಿ ಹಬ್ಬುವಂತೆ ಮಾಡಿದ್ದರು. ಕಿಲ್ಲೆಯವರು ಕರ್ಣನ ಪಾತ್ರದಲ್ಲಿ ಸಂಪೂರ್ಣ ತನ್ಮಯರಾಗುತಿದ್ದರೆಂದೇ— ಈ ಅದ್ಭುತ ಪರಿಣಾಮ ಕೈಗೂಡಿತು. ಸ್ವಯಂ ಪ್ರತಿಭೆಯುಳ್ಳ ಪ್ರತಿಭೆ, ನಿರರ್ಗಳವಾದ ಮಾತು ಹಾಗು ರಸವತ್ತಾದ ಶೈಲಿಯ ರುಚಿಪಾಕದಿಂದ ಕೂಡಿದ ಈ ಪ್ರಬಂಧ ಉತ್ತಮಮಟ್ಟದ ವಿಮರ್ಶಾತ್ಮಕ ಸಾಹಿತ್ಯ. ಪ್ರೊ| ಎಂ. ಆರ್. ಶಾಸ್ತ್ರಿಗಳ ಸುದೀರ್ಘವಾದ ಮುನ್ನುಡಿಯು ಅಲಂಕಾರದೊಂದಿಗೆ ಹೊರಬಂದಿರುವ ಭಾರತದ ಕರ್ಣ ಕನ್ನಡಿಗರ ಮೆಚ್ಚುಗೆಗೆ ಪಾತ್ರನಾಗುವುದರಲ್ಲಿ ಸಂದೇಹವಿಲ್ಲ.

ಉಷಾ ಪರಿಣಯ—

ಬರೆದವರು: ಬೇಲೆಗದ್ದೆ ಅಪ್ಪಯ್ಯ, ವಿದ್ವಾನ್. ಪ್ರಕಾಶಕರು: ಎ. ಮಂಜುನಾಥ ಶಾಲಿವಾಹನ್, ಶ್ರೀ ಶಿವಕಲಾ ನಾಟಕ ಸಭಾ, ಅತ್ತಾವರ, ಮಂಗಳೂರು ಬೆಲೆ: ರೂ. ೦—೫—೦.

ಶಿವಕಲಾ ನಾಟಕಸಭೆಯವರು ರಂಗಭೂಮಿಯಲ್ಲಿ ಪ್ರಯೋಗಿಸಿದ ಈ ಪೌರಾಣಿಕ ನಾಟಕವನ್ನು ಕನ್ನಡಿಗರ ವಾಚನಾನಂದಕ್ಕೋಸ್ಕರ ಪುಸ್ತಕ ರೂಪದಲ್ಲಿ ಪ್ರಕಟಪಡಿಸಿರುವರು. ಹರನ ಭಕ್ತನಾಗಿದ್ದರೂ ಹರಿದ್ವೇಷಿಯಾದ ದಾನವ ಬಾಣಾಸುರನ ಮಗಳು ಉಷೆಯನ್ನು ಶ್ರೀಕೃಷ್ಣಪರಮಾತ್ಮನ ಮೊಮ್ಮಗ ಅನಿರುದ್ಧನು ಪರಿಗ್ರಹಿಸುವುದು ಇಲ್ಲಿಯ ಕಥಾವಸ್ತು. ಹರಿಹರರಲ್ಲಿ ಭೇದಭಾವವಿಲ್ಲ ಎಂಬ ಸತ್ಯವನ್ನು ಲೋಕಕ್ಕೆ ಸಾರುವ ನಾರದರ ಮನೋರಥವು ಭವಾನಿಯ ವರ ಪ್ರಸಾದ, ಮಹಾದೇವನ ಆಶೀರ್ವಾದ ಶ್ರೀಕೃಷ್ಣಪರಮಾತ್ಮನ ಅನುಗ್ರಹ ಹಾಗೂ ಉಷಾದೇವಿಯ ಪ್ರಯತ್ನಗಳಿಂದ ಕೈಗೂಡಿದ ಬಗೆಯನ್ನು ಇಲ್ಲಿ ಸ್ವಾರಸ್ಯವಾಗಿ, ಸುಲಭ ಶೈಲಿಯಲ್ಲಿ ಪ್ರೇಕ್ಷಕರ ಮನಸ್ಸು ಸಂತೋಷಗೊಳ್ಳುವಂತೆ ಚಿತ್ರಿಸಿರುವರು.

ಲಘು ಪರಿಚಯ

❖ "ಮುಂಬಯಿಯ ಸಾಗುವಳಿ ಕಾಯಿದೆಯ ಮಹತ್ವದ ಅಂಶಗಳು" ಎಂಬ ಹೆಸರಿನ ಮುಂಬಯಿ ಸರಕಾರದ ಪ್ರಸಿದ್ಧಿ ಶಾಖೆಯವರು ಚಿಕ್ಕದೊಂದು ಪುಸ್ತಕವನ್ನು ಪ್ರಕಟಿಸಿರುವರು. ಪ್ರತ್ಯಕ್ಷ ಸಾಗುವಳಿಯನ್ನು ಕೈಗೊಂಡವರ ಹಿತ ಸಂಬಂಧಗಳನ್ನು ರಕ್ಷಿಸುವ ಉದ್ದೇಶದಿಂದ ಮುಂಬಯಿ ಸರಕಾರದವರು ೧೯೪೮ನೇ ಇಸವಿಯಷ್ಟು ಹಿಂದೆ ಸಾಗುವಳಿ ಕಾಯಿದೆಯೊಂದನ್ನು ಮಾಡಿದರು. ಇದನ್ನು ೧೯೫೩ರಲ್ಲಿ ಮರಳಿ ವಿಮರ್ಶಿಸಿ, ಮೊದಲಿನ ಕಾಯಿದೆಯಲ್ಲಿ ಇಲ್ಲವಾದ ಎಲ್ಲ ಅಂಶಗಳನ್ನೊಳಗೊಂಡ ಹಾಗು ಸರಕಾರಕ್ಕೂ ಪ್ರತ್ಯಕ್ಷ ಸಾಗುವಳಿದಾರರಿಗೂ ಮಧ್ಯದಲ್ಲಿರುವವರನ್ನು ತಳ್ಳಲು ಅವಕಾಶವಿರುವ ಹೊಸ ಕಾಯಿದೆ ರಚಿಸಿದರು. ರೈತರಿಗೂ ಭೂಮಿಯ ಒಡೆಯರಿಗೂ ಅನ್ವಯಿಸುವ ಈ ಕಾಯಿದೆಯ ಉದ್ದೇಶ, ಸ್ವರೂಪ, ವ್ಯಾಪ್ತಿ ಮುಂತಾದವುಗಳ ವಿವರವನ್ನು ಸರಕಾರದ ಈ ಪ್ರಕಟಣೆ ಒಳಗೊಂಡಿದೆ. ಜನಹಿತದ ಮಹತ್ವದ ಕಾಯಿದೆಗಳ ಪರಿಚಯವನ್ನು ಇಂತಹ ಪುಸ್ತಿಕೆಗಳ ಮೂಲಕ ಮಾಡಿಕೊಡುವುದರಿಂದ ನಾಗರಿಕರ ಸಾಮಾನ್ಯ ತಿಳುವಳಿಕೆಯನ್ನು ಹೆಚ್ಚಿಸಿದ್ದೊಂದು ಪ್ರಯೋಜನ; ಮಾತ್ರವಲ್ಲದೆ, ಸರಕಾರದ ಕುರಿತಾಗಿ ಜನರಲ್ಲಿ ಆಸಕ್ತಿಯೂ ಶ್ರದ್ಧೆ ಮತ್ತು ಭರವಸೆಯೂ ಜಾಗೃತವಾಗಬಲ್ಲುದು.

❖ "ಮುಂಬಯಿ ರಾಜ್ಯದಲ್ಲಿ ಸಮಾಜ ವಿಕಾಸ ಯೋಜನೆ ಮತ್ತು ರಾಷ್ಟ್ರೀಯ ವಿಸ್ತರಣಾ ಕಾರ್ಯಕ್ರಮ" ಎಂಬುದು ಮುಂಬಯಿ ಸರಕಾರದವರು ಒಂದಾಣೆ ಬೆಲೆ ಇಟ್ಟು ಪ್ರಕಟಿಸಿದ ಇನ್ನೊಂದು ಚಿಕ್ಕ ಪುಸ್ತಕ. ಗ್ರಾಮೀಣ ಭಾರತದ ಸಾಧನ ಸಾಮಗ್ರಿ ಹಾಗು ಮನುಷ್ಯ ಸಂಪತ್ತನ್ನು ಸಂಪೂರ್ಣವಾಗಿ ಉಪಯೋಗಿಸಿ, ವಿಕಸಿತಗೊಳಿಸಲು ಕೈಕೊಂಡ ಕಾರ್ಯಕ್ರಮವೇ ಸಮಾಜವಿಕಾಸಯೋಜನೆ. ಮುಂಬಯಿ ರಾಜ್ಯದಲ್ಲಿ ಪ್ರಥಮವರ್ಷ ಕೊಲ್ಹಾಪುರ, ಮೆಹಸಾಣಾ ಸಾಬರಕಾಂಠಾ, ಬೆಳಗಾಂವಿ, ಠಾಣೆ-ಕುಲಾಬಾ ಎಂಬ ಐದು ಕೇಂದ್ರಗಳನ್ನು ಇದಕ್ಕೆ ಆರಿಸಲಾಯಿತು. ಅಲ್ಲಿ ಕೃಷಿ, ನೀರಾವರಿ, ಶಿಕ್ಷಣ, ಸಂಪರ್ಕ, ಆರೋಗ್ಯ ಹಾಗೂ ನೈರ್ಮಲ್ಯ, ಗೃಹನಿರ್ಮಾಣ ಸಹಕಾರ, ಮುಂತಾದ ಪ್ರತಿಯೊಂದೂ ಕ್ಷೇತ್ರದಲ್ಲಿ ಗಣನೀಯ ಪ್ರಗತಿ ಸಾಧಿಸಿದ್ದು ಕಂಡುಬರುತ್ತದೆ. ಈ ವರ್ಷ ಮರಳಿ ಆರು ಕೇಂದ್ರಗಳಲ್ಲಿ ಈ ಯೋಜನೆ ಜ್ಯಾರಿಗೆ ಬರುತ್ತದೆ. ಹಣ, ಸಾಮಗ್ರಿ ಹಾಗು ಶ್ರಮದಾನದ ರೂಪದಲ್ಲಿ ಜನರು ಸಂತಿಗೆ ನೀಡಿದ ಮೊತ್ತ ಸರಕಾರವು ವಹಿಸಿದ ವೆಚ್ಚವನ್ನು ಮೀರಿರುವುದನ್ನು ಕಂಡರೆ, ಗ್ರಾಮೀಣ ಜನತೆಗೆ ಈ ಯೋಜನೆ ಪ್ರಿಯವಾಗಿದೆಯೆಂದು ಮನವರಿಕೆಯಾಗುತ್ತದೆ. ಇದೇ ಮಾತನ್ನು ರಾಷ್ಟ್ರೀಯ ವಿಸ್ತರಣಾ ಕಾರ್ಯಕ್ರಮಕ್ಕೂ ಅನ್ವಯಿಸಿ ಹೇಳಬಹುದು. ಗ್ರಾಮಮಟ್ಟದ ಕಾರ್ಯಕರ್ತರನ್ನು ತರಬೇತಿಗೊಳಿಸಿ, ಅಭಿವೃದ್ಧಿ ಕಾರ್ಯಗಳಿಗೆ ಉತ್ತೇಜಿಸಿದುದು ಈ ಉಪಕ್ರಮವೂ ಪ್ರೀತ್ಯಾದರಗಳಿಗೆ ಪಾತ್ರವಾಗಿರುತ್ತದೆ. ಹಳ್ಳಿಯ ರೈತನೊಡನೆ ನಿಕಟ ಸಂಪರ್ಕವಿಟ್ಟುಕೊಂಡಿರುವ ಕಂದಾಯದ ಅಧಿಕಾರಿಗಳನ್ನೇ ಯೋಜನಾಧಿಕಾರಿಗಳಾಗಿ ನೇಮಿಸುವ ಮೂಲಕ ಮುಂಬಯಿ ಸರಕಾರವು ಎರಡೂ ಬಗೆಯ ಅಭಿವೃದ್ಧಿ ಪ್ರಯತ್ನಗಳ ಯಶಸ್ಸಿಗೆ ಅತ್ಯುತ್ತಮ ಹಿನ್ನೆಲೆಯನ್ನೊದಗಿಸಿದೆ. ಪುಸ್ತಕ ವಾಚನೀಯವಾಗಿದ್ದು ಪ್ರಗತಿಯ ಸೂಕ್ಷ್ಮ ಚಿತ್ರವನ್ನು ಅಂಕೆಸಂಖ್ಯೆಗಳ ಆಧಾರಸಹಿತ ನೀಡುತ್ತದೆ.

(೧ನೇ ಪುಟದಿಂದ)

ದದ್ದು ಉತ್ತಮ ಆಡಳಿತ: ರಾಜ್ಯದ ವರಿಷ್ಠ ಸ್ಥಾನದಲ್ಲಿ ಯಾರಿದ್ದರೂ ಆದೀತು.

ರಾಜಾಜಿಯ ನಿರ್ಗಮನದೊಂದಿಗೆ ಎರಡು ವರ್ಷಗಳ ತರಬೇತಿಯನ್ನು ಹೊಂದಿದ, ಮತ್ತು ಯಾವ ತರದ ಆರೋಪ-ಅಪವಾದಗಳಿಗೂ ಬಲಿಯಾಗದೆ ದಕ್ಷತೆ ಮತ್ತು ಕಾರ್ಯ ಕ್ಷಮತೆಗಳಿಗೋಸ್ಕರ ಪ್ರಶಂಸೋದ್ಗಾರಗಳನ್ನು ಪಡೆದ ಮಂತ್ರಿಮಂಡಳವೂ ವಿಸರ್ಜಿಸಲ್ಪಡುತ್ತದೆ. ಆ ಮೇಲೆ ಕಾಮರಾಜ ನಾಡಾರ ನಾಯಕತನದಲ್ಲಿ ಹೊಸ ಮಂತ್ರಿಮಂಡಳ ಅಸ್ತಿತ್ವಕ್ಕೆ ಬರುತ್ತದೆ—ಇದರಲ್ಲಿ ಹೊಸಬರೇ ಸ್ಥಾನ ಪಡೆದರೆ, ಅವರಿಗೆ ಮಾರ್ಗದರ್ಶನ ಎಲ್ಲಿಂದ ದೊರೆಯಬೇಕೋ ತಿಳಿಯದು ನಾಡರರು ರಾಜಕೀಯಪಟು ಹೌದಾದರೂ ಮಂತ್ರಿಮಂಡಳದ ವ್ಯವಹಾರದಲ್ಲಿ ಅವರಿಗೆ ಏನೇನೂ ಅನುಭವವಿಲ್ಲ. ಎರಡು ವರ್ಷಗಳ ಆಡಳಿತದ ಸುಖಾನುಭವ ಹೊಂದಿದ ಜನತೆ ಮುಂದೆ ಕಹಿಗುಳಿಗೆ ನುಂಗುವ ಪ್ರಸಂಗ ಬಾರದಿರಲೆಂದು ಬಯಸುತ್ತದೆ.

—ಕಾರ್ತಿಕೇಯ.

ಹೊಸ ಸೇಲ್ಸ್ ಟೇಕ್ಸ್‌ಗೆ ನಿಶೇಧ

ಮದ್ರಾಸು ಸರಕಾರದ ಹೊಸ ಸೇಲ್ಸ್ ಟೇಕ್ಸ್ ಜ್ಯಾರಿಗೆ ಬರುವ ನಿಶೇಧಾರ್ಥವಾಗಿ ನಮ್ಮ ವಿನಂತಿಯಂತೆ ತಾ. 1-4 54ರಿಂದ 3 ದಿನಗಳ ವರೆಗೆ ಹರತಾಳವನ್ನು ಆಚರಿಸಿ, ನೆರವಾದ ಸರ್ವ ಚಿನ್ನ ಬೆಳ್ಳಿ ವ್ಯಾಪಾರಸ್ಥರಿಗೂ ಈ ಮೂಲಕ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇವೆ.

ಉಡುಪಿ ಚಿನ್ನ ಬೆಳ್ಳಿ ವ್ಯಾಪಾರಿ ಸಂಘ

ಈ ಸ್ಥಳ ಜ್ಯುವೆಲರ್ ಶ್ರೀ. ಯು. ರಾಘವೇಂದ್ರ ಕೃಷ್ಣ ಭಟ್ಟರ ದೇಣಿಗೆ.

ಗುಬ್ಬಿ ಕರ್ನಾಟಕ ಫಿಲಂಸ್‌ರವರ
ಬೇಡರ ಕಣ್ಣಪ್ಪ

ಕನ್ನಡ ಚಿತ್ರಪ್ರಪಂಚಕ್ಕೆ ಕೀರ್ತಿ ಗೌರವಗಳನ್ನು ತಂದಂಥ ಹೇಮರೆಡ್ಡಿ ಮಲ್ಲಮ್ಮ, ಗುಣಸಾಗರಿ ಚಿತ್ರಗಳನ್ನು ತಯಾರಿಸಿದ ಗುಬ್ಬಿ ಕರ್ನಾಟಕ ಫಿಲಂಸ್‌ರವರ ಸದ್ಯದ ಚಿತ್ರ "ಬೇಡರ ಕಣ್ಣಪ್ಪ" ಪ್ರದರ್ಶನಕ್ಕೆ ಸಿದ್ಧವಾಗಿದೆ. ಗುಣಸಾಗರಿ ಕಥೆಯನ್ನು ಬರೆದ ಶ್ರೀ ಎಚ್. ಎಲ್. ಎನ್. ಸಿಂಹರು ಇದರ ಕಥೆಯನ್ನು ಬರೆದಿದ್ದಾರೆ. ಹಿಂದಿನ ಎರಡೂ ಚಿತ್ರಗಳೂ ಮತ್ತು ಈ ಚಿತ್ರವೂ ಕರ್ನಾಟಕ ಫಿಲಂಸ್‌ನ ಮ್ಯಾನೇಜಿಂಗ್ ಏಜೆಂಟ್ಸ್ ಪಾರ್ಟ್‌ನರ್ ಶ್ರೀ ಸಿ. ಆರ್. ಬಸವರಾಜುರವರ ಮೇಲ್ವಿಚಾರಣೆಯಲ್ಲಿ ತಯಾರಾಗಿವೆ.

ಸಾಮಾನ್ಯವಾಗಿ ಜನಪರಿಚಯದಲ್ಲಿರುವ ಕಥೆಯನ್ನು ಪರಿಣಾಮಕಾರಿಯಾಗಿ ಚಿತ್ರಕ್ಕೆ ಅಳವಡಿಸಿರುವುದು ಶ್ರೀ ಸಿಂಹರ ಜಾಣ್ಮೆಯನ್ನು ಪ್ರದರ್ಶಿಸುತ್ತದೆ. ಕಣ್ಣಪ್ಪ ದಂಪತಿಗಳು ಕುಬೇರನ ಶಾಪಗ್ರಸ್ತರಾದ ಯಕ್ಷದಂಪತಿಗಳು—ತನ್ನ ಪ್ರೇಯಸಿ ಶರ್ಮಿಷ್ಠೆಯೊಂದಿಗೆ ವಾಯು ವಿಹಾರಾರ್ಥ ಹೊರಟಿದ್ದಾನೆ. ಆಗ ಪ್ರಿಯಳಿಗೆ ಕಾಣಿಕೆ ಕೊಡಲು ಹೂಗೊಂಚಲನ್ನು ಕೀಳಲು ಬಾಣಬಿಡುತ್ತಾನೆ. ಅದು ಕುಬೇರನ ನವಿಲಿಗೆ ತಗುಲುತ್ತದೆ. ಕುಬೇರ ಶಾಪಕೊಡುತ್ತಾನೆ. ಪ್ರಾಣಹಿಂಸೆಗೆ ಪ್ರಾಯಶ್ಚಿತ್ತವಾಗಿ ಆ ಯಕ್ಷ ದಂಪತಿಗಳು ಬೇಡರಾಗಬೇಕಾಗುತ್ತದೆ. ಈಶ್ವರಾನುಗ್ರಹದಿಂದ ರುದ್ರಾಕ್ಷಿಗಳಾಗಿ ಧರೆಗಿಳಿದ ಅವರು, ಬೇಟೆಗೆ ಬಂದ ಬೇಡರಿಗೆ ಶಿಶುರೂಪದಲ್ಲಿ ಕಾಣಸುತ್ತಾರೆ. ಬೇಡರು ಅವರನ್ನು ಸಾಕಿ ಸಲಹಿ, ಪ್ರಾಪ್ತವಯಸ್ಕರಾಗುತ್ತಲೂ ಮದುವೆ ಮಾಡುತ್ತಾರೆ. ಜೀವನದಲ್ಲಿ ಕಾಲಿಟ್ಟಾಗ ಜಗತ್ತಿನ ದ್ವೇಷಾಸೂಯೆಗಳನ್ನು ಕಂಡು ರೋಸಿಹೋದ ನಮ್ಮ ಕಥಾನಾಯಕ ತನ್ನ ಗುಂಪು ಬಿಟ್ಟು ಹೊರಟು ಹೋಗುತ್ತಾನೆ.

ಊರಮುಂದಿನ ದೇವಾಲಯದಲ್ಲಿ ಸಂಭಾವನೆಯಿಲ್ಲದೆ, ಮಾರ್ಗಾಯಾಸದಲ್ಲಿದ್ದಾಗ ಪೂಜಾರಿಯ ಮಗನ ಉಪದೇಶದಿಂದ ಶಿವಧ್ಯಾನ ನಿರತನಾಗುತ್ತಾನೆ. ಪೂರ್ವ ಜನ್ಮ ಸಂಸ್ಕಾರದಿಂದ ಜ್ಞಾನ ಪ್ರಾಪ್ತಿಯಾಗುತ್ತದೆ. ಶಿವನ ಅನುಗ್ರಹದಿಂದ ಬೇಟೆ ಸಿಗುತ್ತದೆ. ತೃಪ್ತನಾದ ಬೇಡ ತನ್ನ ಬೇಟೆಯಲ್ಲಿ ಅರ್ಧಭಾಗವನ್ನು ಶಿವನಿಗೊಪ್ಪಿಸಿ ತೃಪ್ತನಾಗುತ್ತಾನೆ.

ಮಾಂಸ ನಿವೇದನದಿಂದ ಗುಡಿಯ ಪೂಜಾರಿಯ ವಿರೋಧ ಕಟ್ಟಿಕೊಳ್ಳಬೇಕಾಗುತ್ತದೆ. ವೈರ ದ್ರೋಹ ತೋರಿಸಲು ಮಾರ್ಗ ಕಾಣದೆ ಪೂಜಾರಿ ಅವನ ಮೇಲೆ ಕಳ್ಳತನ ಹೊರಿಸುತ್ತಾನೆ. ಊರಜನವೂ ನಂಬುತ್ತದೆ. ಬೇಡನಿಗೆ ಶಿಕ್ಷೆಯಾಗುತ್ತದೆ. ಅವನ ಹೆಂಡತಿ ನೀಲಾಳ ಯತ್ನಗಳೊಂದೂ ಫಲಕಾರಿಗಳಾಗುವುದಿಲ್ಲ. ಪೂಜಾರಿಯ ಮಗ-ತಂದೆಯ ಅಪಕೃತ್ಯಗಳನ್ನು ಮೆಚ್ಚದ, ದಿಟ್ಟತನದ ನ್ಯಾಯವಾದಿ, ತಾನೇ ತನ್ನ ತಂದೆಯ ಸೆರೆಗೆ ಕಾರಣನಾಗುತ್ತಾನೆ. ಬೇಡನ ಬಂಧನ ನಿವೃತ್ತಿಯಾಗುತ್ತದೆ.

ದೇವರು ಇದನ್ನೆಲ್ಲ ನೋಡಿದುದು ಹೇಗೆ? ದೇವರಿಗೇ ಕಣ್ಣು ಕೊಟ್ಟು ಕಣ್ಣಪ್ಪನೆಂದವನು ಪ್ರಸಿದ್ಧನಾದುದು ಹೇಗೆ? ನಿಜಕ್ಕೂ ಕುತೂಹಲ ಜನಕವಾದ ಕಥೆ. ಭಕ್ತನ ಚರಿತ್ರೆ ಹೀಗೆ ಹೃದಯಸ್ಪರ್ಶಿಯಾಗಿ, ಪಾತ್ರಗಳೆಲ್ಲ ಸಜೀವವಾಗಿ ಚಿತ್ರಿತವಾಗಿರುವಂತೆ ಚಿತ್ರವು ಪರಿಣಾಮಕಾರಿಯಾಗಿರುವಂತೆ ಶ್ರೀ ಸಿಂಹ ಅವರು ನಿರ್ದೇಶಿಸಿದ್ದಾರೆ. ಮದರಾಸಿನ ಉತ್ತಮ ತರಗತಿಯ ಎ. ವಿ. ಎಂ. ಸ್ಟುಡಿಯೋದಲ್ಲಿ ಮಾರುತಿರಾಯರ ಛಾಯಾಗ್ರಹಣ, ಇ. ವಿ. ಜೀವರ ಶಬ್ದಗ್ರಹಣಗಳಿಂದ ಮತ್ತು ಆರ್. ಶಾಂತಾರಾಮರ ಕಲಾನಿರ್ದೇಶನಗಳಿಂದ ತಯಾರಾಗಿದೆ. ಲಾವಣಿ ವಿದ್ವಾನ್ ಸಂಜಪ್ಪನವರ ಗೀತೆಗಳಿಗೆ ಆರ್. ಸುದರ್ಶನಂರವರು ಉತ್ತಮ ಸಂಗೀತ ಜೋಡಿಸಿದ್ದಾರೆ. ಪಂಡರೀಬಾಯಿ, ಸಂಧ್ಯಾ, ರಾಜಕುಮಾರ್ ಮೊದಲಾದವರು ನಟಿಸಿದ್ದಾರೆ. ಉತ್ತಮ ಕನ್ನಡ ಚಿತ್ರಗಳ ಪರಂಪರೆಯಲ್ಲಿ ಇದೊಂದು ವಿಶಿಷ್ಟರೀತಿಯಲ್ಲಿ ಬೆಳಗುವುದರಲ್ಲಿ ಸಂದೇಹವಿಲ್ಲ.

(Kataka Advtg)

ಜಯತಿ ಜಲದ ನೀಲ: ಕೇಶವ: ಕೇಶಿಘಾತಿ,
ಜಯತಿ ಜನದೃಷ್ಟಿ ಚಂದ್ರಮಾಶ್ಚಂದ್ರಗುಪ್ತ:
ಜಯತಿ ಜಯನಾಶಕಾರ್ಯಂ ಯಾವತ್ಕೃತ್ವಾ
ಚ ಸರ್ವಂ ಪ್ರತಿಹತ ಪರಪಕ್ಷಾ ಆರ್ಯ
ಚಾಣಕ್ಯ ನೀತಿ:
ಷಡ್ಗುಣ ಸಂಯೋಗದೃಢಾ ಉಪಾಯ ಪರಿಪಾಟೀ ಘಟಿತಪಾಶಮುಖೀ!
ಚಾಣಕ್ಯನೀತಿ ರಜ್ಜು: ರಿಪುಸಂಯಮನೋದ್ಯತಾ ಜಯತಿ'.

ಎಂದು ಚಾಣಕ್ಯನೀತಿ ರಜ್ಜು (ಯಾವದರಿಂದ ರಾಕ್ಷಸನು ಅಂತ್ಯದಲ್ಲಿ ಕಟ್ಟಲ್ಪಟ್ಟನೋ) ವನ್ನೇ ವಿಶಾಖದತ್ತನ ಶ್ಲೋಕಗಳಿಂದಲೇ ಸ್ತುತಿಸಿ, ಆತನ ನಾಟಕದಲ್ಲಿ ಪ್ರತಿಬಿಂಬಿತವಾದ ಸಮಾಜ ನೀತಿಯನ್ನು ಪರಿಶೀಲಿಸುವಾ.

ಸಂಸ್ಕೃತ ನಾಟಕಗಳೆಲ್ಲಾ ಶೃಂಗಾರ ಪ್ರಧಾನಗಳೆಂಬ ಅಪವಾದನೆಯನ್ನಲ್ಲಗಳೆಯುವರೆಯೋ ಎಂಬಂತೆ ಮೃಚ್ಛಕಟಿಕ ಮುದ್ರಾರಾಕ್ಷಸಗಳೆರಡು ನಾಟಕಗಳು ರಾಜತಂತ್ರ ಪ್ರಧಾನಗಳೇ ಆಗಿರುವ ನಾಟಕಗಳಾಗಿವೆ. ಅವುಗಳಲ್ಲಿಯೂ ಮೃಚ್ಛಕಟಿಕದಲ್ಲಿಯಾದರೋ, ವಸಂತಸೇನಾ ಚಾರುದತ್ತರ ಪ್ರಣಯ ಕಥೆಯೇ ಬಹುಭಾಗವನ್ನ ವ್ಯಾಪಿಸಿ, ಹೆಚ್ಚಿನ ಆನಂದವನ್ನು ಕೊಡುವ ಭಾಗವಾಗಿದೆ. ಈ ಮುದ್ರಾರಾಕ್ಷಸದಲ್ಲಿಯಾದರೋ, ಶೃಂಗಾರದ ಗಂಧವೇ ಇಲ್ಲ. ಇಬ್ಬರು ಹೆಂಗಸರೇನೋ ಸಾಕ್ಷಾತ್ತಾಗಿ ರಂಗಭೂಮಿಯ ಮೇಲೆ ಬಾರದೆ, ಅವರ ಛಾಯೆ ಮಾತ್ರ ಸ್ವಲ್ಪ ಮಟ್ಟಿಗೆ ನಮ್ಮ ದೃಷ್ಟಿಗೆ ಕಂಡುಬರುವವಷ್ಟೆ. ವಿಶಾಖದತ್ತನೆಂಬ ಪ್ರೌಢ ಅಭಿಜಾತಿಕ ಪ್ರಯೋಗದಿಂದ ಸೃಜಿಸಿದ ಅಪೂರ್ವ ಹೆಂಗಸು ಚಂದನದಾಸನ ಹೆಂಡತಿಯೋ ಎಂದು ತೋರುವ ಗೊಂಬೆಯೋ ಎಂದು ಹೇಳಿದರೂ ತಪ್ಪಾಗದು. ಇವಳು ಸರ್ಪತೀಕ್ಷ್ಣನೊಡನೆ ರಮಿಸಿ, ಅವನನ್ನು ಕೊಂದು. ತಾನೂ ಮಾಯವಾದಳೆಂಬ ಸಮಾಚಾರ ಮಾತ್ರ ನಮ್ಮ ಕಿವಿಗೆ ಬೀಳುತ್ತದೆ. ಇನ್ನೊಬ್ಬಳಾದರೋ ಹೀಗೆ ಮಾಯವಾದವಳಲ್ಲ — ಅವಳು ರಾಕ್ಷಸ ಮಂತ್ರಿಯ ಹೆಂಡತಿ, ಇವಳ ಕೈಯಲ್ಲಿದ್ದ ರಾಕ್ಷಸನ ಮುದ್ರೆಯ ಉಂಗುರವು ಚಾಣಕ್ಯನ ಚಾರನೊಬ್ಬನಿಗೆ ಸಿಕ್ಕಿ, ಆ ರಾಕ್ಷಸನನ್ನೇ ಹೊಂದಕ್ಕೆಳೆದು ಹಾಕುವವರಲ್ಲಿ ತುಂಬ ಉಪಕಾರಕವಾಗುವದು. ಕಟ್ಟಕಡೇಗೂ ಇದೇ ಹೆಂಗಸಿಗೋಸ್ಕರವಾಗಿಯೇ ಚಂದನದಾಸನು ಚಾಣಕ್ಯನ ಸಿಟ್ಟಿಗೆ ತುತ್ತಾಗುವ ಸಂದರ್ಭ ಒದಗಲು, ರಾಕ್ಷಸನೇ ಉಪಾಯವಿಲ್ಲದೆ, ತಾನೇ ಚಾಣಕ್ಯನ ಮಾತಿಗೆ ಕಟ್ಟುಬಿದ್ದು, ಚಂದ್ರಗುಪ್ತನಿಗೆ ಮುಖ್ಯ ಮಂತ್ರಿಯಾಗಲೊಪ್ಪಿರುವದೇ ಈ ನಾಟಕದ ಪರಮ ಗುರಿಯಾಗಿ ನಿತ್ತಿದೆ. ಭಾಸನು ಪ್ರತಿಜ್ಞಾ ಯೌಗಂಧರಾಯಣದಲ್ಲಿ ಕೌಟಿಲ್ಯ ಯಾನೆ — ಚಾಣಕ್ಯನ ಅರ್ಥ ಶಾಸ್ತ್ರದ "ಯೋಗವಾಮನಾ"ನ್ಯಾಯದಲ್ಲಿ ಪ್ರತಿಪಾದಿತವಾದ "ಉಪಜಾಪ" ವೈರಿಗಳನ್ನು ಅವರಿರುವೆಯಲ್ಲಿಯೋ ಇದ್ದು ಹಣ್ಣುಮಾಡಿ, ಅವರನ್ನು ಪಕ್ಕೋಟಿಯೊಳಗೆ ತರುವದೆಂಬದನ್ನು ಯೌಗಂಧರಾಯಣನ ಮೂಲಕ ಚಿತ್ರಿಸಿದರೆ, ಅವನ್ನೇ [illegible] ಕೊಂಡು ಚಾಣಕ್ಯನ ಉಪಜಾಪದಿಂದ ಅತಿ ಶ್ರೇಷ್ಠನಾಗಿ ಅರ್ಥಶಾಸ್ತ್ರ ನಿಪುಣನಾಗಿ, ಮುಕ್ತಾಚಾರ್ಯನನ್ನೇ ಮೀರುವ ಬುದ್ಧಿ ಕೌಶಲವಿದ್ದ ರಾಕ್ಷಸನ ಸೋಲನ್ನು ಚಿತ್ರಿಸಿದುದು ಸಾಹಿತ್ಯದಲ್ಲಿ ಅತ್ಯಪೂರ್ವ ಸೃಷ್ಟಿಯಾಗಿದೆಯೆಂದಲ್ಲದೆ ಒಪ್ಪಲೇಬೇಕಾಗಿದೆ. ಅವರಲ್ಲಿಯೂ ರಾಕ್ಷಸನೇ ಅಪ್ಪಣೆ ಕೊಡಿಸಿದಂತೆ ವೃಷ್ಣಿಂ ಜಿಗೀಷುಧುರ್ಗನ್ನು ಜವಾತ್ಮನೋಕ್ಷ ವಿನೀತ ಮಯೂರಶ್ಚಿನಿ ಪದೇನಿಯತಂ ಪ್ರತಿಷ್ಠಾ ಅಪ್ರತ್ಯವೇಕ್ಷ್ಯ ಘೋರ ಬುದ್ಧಸಯೋಜ್ಯಸಿ ಮಂತ್ರೀ ಜೀರ್ಣಾಪ್ರಯಿ ಪತತಿ ತೀರಜವೃಕ್ಷವೀಕ್ಷ್ಯಾ. ಎಂದು ವ್ಯವಹಾರ ಕೌಶಲ್ಯವನ್ನು ಹೇಗೆಯೋ ಸಂಪಾದಿಸಿಕೊಂಡು ಚಾಣಕ್ಯನೂ, ಅವನನ್ನು ಸೃಜಿಸಿದ ವಿಶಾಖದತ್ತನೂ ಕೀರ್ತಿವಂತನಾಗಿ, [illegible] ಲ್ಯಕ್ಷೋಭಗದ ರಾಕ್ಷಸನನ್ನೂ ಕೀರ್ತಿವಂತನಾಗಿ ಮಾಡಿದುದು ಅತಿಮನೋಹರವಾಗಿದೆ.

ಇದಿಷ್ಟು ಕಥಾ ಭಾಗವನ್ನು ಕುರಿತು ಸಾಮಾನ್ಯವಾಗಿ ನಿರ್ದೇಶಿಸಿದುದಾಯಿತು. ಇನ್ನು ಪಾತ್ರರಚನಾಕೌಶಲವು [illegible] ಅಷ್ಟೇ ಅಪೂರ್ವವಾಗಿದೆ. ಸಂಸ್ಕೃತ ನಾಟಕಗಳಲ್ಲಿ ಪಾತ್ರ ಪರಿಪೋಷಣ ಸಹಜವಾದ ರೀತಿಯಲ್ಲಿ ಬರುವುದಿಲ್ಲವೆಂಬ ಆಂಗ್ಲ ವಿಮರ್ಶಕರ ಆಕ್ಷೇಪಣೆ ಈ ನಾಟಕಕ್ಕೆ ಖಂಡಿತವಾಗಿ ಸಲ್ಲುವದಿಲ್ಲವೆಂದು ಒಪ್ಪಿಕೊಳ್ಳಬಹುದು. ಉಚಿತವಾದ ರೀತಿಯಲ್ಲಿ ಪಾತ್ರಗಳನ್ನು ಸೃಜಿಸುವದು, ಅವುಗಳಿಂದ ಅಭಿಪ್ರಾಯಾ ಘಟನೆಗಳನ್ನು ಬೇಕಾದಂತೆ ಮಾಡಿಸಿ, ಕಥೆಯನ್ನು ಔಚಿತ್ಯದಿಂದ ಬೆಳೆಸಿ ನಡೆಸುವದೆಂಬದೂ, ಪಾತ್ರ ಸಂಸ್ನೇಹ ಸಂದರ್ಭೋಚಿತ್ಯ, ವರ್ಣನೆಯಲ್ಲಿ ಮಿತಿ, ಅಲಂಕಾರ ಸಂನಿವೇಶದಲ್ಲಿಯೂ ಆನಂದವರ್ಧನಾಚಾರ್ಯರು ಧ್ವನ್ಯಾಲೋಕದಲ್ಲಿ ಪ್ರತಿಪಾದಿಸಿದಂತೆ ಸಮೀಕ್ಷ್ಯ ನಿವೇಶಿತತ್ವ, ದಾನವೀರ, ದಯಾವೀರ, ಯುದ್ಧವೀರ, ಧರ್ಮವೀರ ಇತ್ಯಾದಿ ಪ್ರಸಿದ್ಧ ವೀರಗಳಲ್ಲಿ ಸಮಾವೇಶವೊಂದದ, ತನ್ನದೇ ನೂತನ ವೀರಸ್ಥಾಯಿಯನ್ನು ಗಮನಕ್ಕೆ ತಂದಿದೆ. ಅರ್ವಾಚೀನಗಳಾದ ಜಯದೇವನ ಪ್ರಸನ್ನ ರಾಘವ, ಮುರಾರಿಯ ಅನರ್ಘರಾಘವಗಳಂತೆ ಏಟೇ ನಗಳಾದ ನಾಟಕ ರಚನೆ ಇದು ಇಲ್ಲವೇ ಇಲ್ಲ. Macbeth, Othello, Hamlet ಆದಿ ನಾಟಕಗಳನ್ನು ನಾವೆಷ್ಟು ಕೊಂಡಾಡುವೆವೋ ಅಷ್ಟೇ ಅಥವಾ ಅವುಗಳಿಗಿಂತಲೂ ಹೆಚ್ಚಾಗಿ ಎಂದರೂ ತಪ್ಪಾಗಲಾರದು. ಉತ್ತಮವಾದ ನಾಟಕರತ್ನ ಇದೆಂದು ಧಾರಾಳವಾಗಿ ಒತ್ತಿ ಹೇಳುವೆವು. ಇದರ ಕೃತಿಯಲ್ಲಿ ಯಾವ ತರದ artificiality ಅಥವಾ ಕೃತಕತೆಯೂ Conventionalism ನಿಯಮ ಒತ್ತಡವೂ ತೋರಿ ಸಂಪಾದಿಸಲ್ಪಟ್ಟದಂತೆ ಇಲ್ಲವೆಂದೂ. ಅದರಿಂದ ಇದರ ಆನಂದದ ಮೂಲದಿತವಾಗಿ 2 ಯಾ 3 ಶತಮಾನಗಳ ಮುಂಚೆಯೇ ಇದ್ದ, ಆದಿ ಚಂದ್ರಗುಪ್ತ ವಿಕ್ರಮಾದಿತ್ಯನ ಕಾಲದವನೇ (4ನೇ ಶತಮಾನದವನು) ಆಗಿದ್ದಿರಬೇಕೆಂದು ಊಹಿಸಬಹುದಾಗಿದೆ. ಪ್ರಾಯಶಃ ಆ ರಾಜನ ಸಮಾಸ ಒಂದೆರಡು. ಚಾಣಕ್ಯ ರಾಕ್ಷಸರಂತೆ ಆ ರಾಜನಿಗೆ ಮುಖ್ಯ ಮಂತ್ರಿಯಾಗಿದ್ದಿರಬಹುದೆಂದೂ ಊಹಿಸಿದರೆ ತಪ್ಪಾಗಲಾರದು. ಐದನೇ ಅಂಕದ ಪತ್ತನೆಯ ಶ್ಲೋಕದಲ್ಲಿ

ಶಾಸ್ತ್ರೇ ಸಿಸ್ವರ್ಣ. ಅಸ್ಯೋ ಸಕ್ಷಟಿತಂ,
ಶಿಕ್ಷಿತ್ತ್ವ ಸಕ್ಷೇಸ್ಯಿತಿ
ವ್ಯಾಸ್ವಸ್ತ್ವಂಚ ವಿಶಕ್ಷತೋ ಭವತಿಯತ್,
ರಾಘವಃ ಪಿಸ್ತುಯೇ
ಯುತ್ಪ್ಯಂ ಸ್ವಯಮೇವ ತುಲ್ಯಯಶಯೋ:
ಪಕ್ಷ್ಯೋ ವಿರುದ್ಧಂಚ ಯತ್
ತಸ್ಮಾಂಗೀಕರಣ ಸಮಾಪಿನ ಇದನ್ಯಾತ್ವ
ವಿಶೇಷ ನಿಗ್ರಹ:

ಎಂಬಲ್ಲಿ ನ್ಯಾಯ ದರ್ಶನದಲ್ಲಿ ಸಮ್ಮತಗಳಾದ ಸಾಧನ, ಸಾಧ್ಯ, ಪಕ್ಷ, ಸಪಕ್ಷ, ವಿಪಕ್ಷ, ಅನ್ವಯ ಇತ್ಯಾದಿಗಳ ಅರ್ಥವನ್ನು ಮನನ ಮಾಡಿದ್ದನೆಂದು ನಾವು ಮನಗಾಣುತ್ತೇವೆ. ಹೀಗೆ ಗ್ರಹಣ ವಿಚಾರ, ದಶಮಾದಾಕ್ಷ ಇತ್ಯಾದ್ಯನೇಕ ಶಾಸ್ತ್ರಗಳಲ್ಲಿಯೂ ಪಾರಂಗತನಾಗಿ, ಜ್ಯೋತಿಷದಲ್ಲಿ ಅದ್ವಿತೀಯ ಪಾಂಡಿತ್ಯವನ್ನು ಪಡೆದು, ಬುಧಯೋಗ, ಯಾವದಾದರೊಂದು ಕೇಂದ್ರಕ್ಕೆ ಒದಗುವ ಯಾ ಒದಗದ ಶುಭಾಶುಭ ಮುಹೂರ್ತ ವಿಚಾರ, ಸಿದ್ಧಾರ್ಥ ಸರ್ವಕಲ್ಯಾಣವಾದ ತಿಥಿ ವಿಚಾರ, ಉತ್ತರದಿಂದ ದಕ್ಷಿಣ ದಿಕ್ಕಿಗೆ ಹೊರಡುವರೆ ದಕ್ಷಿಣ (ಅನುಕೂಲ)ವಾಗಿರುವ ನಕ್ಷತ್ರ; ಏಕಗುಣವಾದ ತಿಥಿ, ಚತುರ್ಗುಣಕವಾದ ನಕ್ಷತ್ರ; ಚತುಷ್ಷಿಗುಣಕವಾದ ಲಗ್ನ. ಚಂದ್ರ ಬಲದಲ್ಲಿ ಹೊರಟು ದೀರ್ಘ ಲಾಭವನ್ನು ಹೊಂದುವ ಕ್ರಮ — ಇವುಗಳನ್ನೆಲ್ಲಾ ಪರಿಶೀಲಿಸಿದರೆ ಅದ್ವಿತೀಯನಾಗಿ ಶಾಸ್ತ್ರ ಪಾರಂಗತನಾಗಿದ್ದನೆಂದು ನಮಗೆ ಖಚಿತವಾಗುತ್ತದೆ. ರಾಕ್ಷಸನಾದರೂ ಹೆಚ್ಚೆಚ್ಚಿಗೂ ಜ್ಯೋತಿಷ್ಯರನ್ನೇ ಅತಿಯಾಗಿ ನಂಬಿ ಕೆಟ್ಟ, ಕೌಟಿಲ್ಯನು ಅರ್ಥಶಾಸ್ತ್ರದಲ್ಲಿ ಹೇಳಿದಂತೆ

ನಕ್ಷತ್ರ ಮತಿಪೃಚ್ಛಂತಂ ಬಾಲಮರ್ಥೋತಿ
ವರ್ತತೇ:
ಅರ್ಥೋಹ್ಯರ್ಥಸ್ಯ ನಕ್ಷತ್ರಂ ಕಿಂ ಕರಿಷ್ಯಂತಿ
ತಾರಕಾ:

ಎಂದು ಹಿತಿಯಾಗಿಯೋ ಜ್ಯೋತಿಷ ಶಾಸ್ತ್ರದ ಪ್ರಯೋಗಗಳನ್ನು ನಂಬಬೇಕೆಂದೂ ಹೊಸ್ತಿಸುವನೋ? ಎಂಬಂತೆ ಬಾರದ ಕ್ಷಪಣಕಾದಿಗಳ್ಯಾಸಿಗಳು ಸಮಾಜದಲ್ಲಿ ಹೇಗೆ ಸಂಭಾವನೆ ಪಡೆಯುತ್ತಿದ್ದರು, ಕ್ಷಪಣಕ ಎಂದು ಅವನು ಆತ್ಮದನ್ನು ಸಂಬೋಧಿಸುವದು; 'ಪಾಪಿಯಿಟ್ಟ ನರಕಂ' ಎಂದು ಹೆಂಗಳೂರು ಒಬಿಯಲ್ಲಿ ಹೇಳುವಂತೆ ಬಂದುಬಡುಕರಾದರು, ಭವಿಷ್ಯವನ್ನು ಹೇಳಿ, ಹೆಂಗಸರ ಮನಸ್ಸನ್ನಾಕರ್ಷಿಸುವ ರೀತಿ, ಪಾಪಾತ್ಮರ ಆಟ, ಚಂದ್ರಾಟರು. ಕತ್ತಿಗೆ ಕವಿಯುವ ಮಾಂಡಿ ಮಾಡುವ ಕ್ರಮ, ಒಬ್ಬೇ ಹಿರಿದಾದ ವಸ್ತ್ರದ ಪರದೆ ಹೋರಿಸು ಇತ್ಯಾದಿಗಳ ನೋಡಿದ ಅನುಕರಣ ಇದೆಲ್ಲವನ್ನೂ ನೋಡಿದರೆ ಇದರ ಹೀಗೆ ಸಮಾಜದ ಸ್ಥಿತಿಯನ್ನು ಅನುಲೋಚಿಸಿ ಪರಿಶೀಲಿಸಿ, ಮನನ ಮಾಡಿಕೊಂಡಿದ್ದನೆಂಬುದು ನಮಗೆ ಮನವರಿಕೆಯಾಗುವದು. ಈ ನಾಟಕ ಭಾಗದಲ್ಲಿ ಭಾಸನ ಮೋಲ್ಪಂಕ್ತಿಯನ್ನೇ ಅನುಸರಿಸಿ, ಶೂದ್ರಕನೂ ವಿಶಾಖದತ್ತನೂ ಸಮಾಜ ಪ್ರತಿಬಿಂಬವನ್ನೇ ನಾಟಕಗಳಲ್ಲಿ ಚಿತ್ರಿಸಿದ ಪರಮ ಹೃದಯಂಗಮವಾಗಿದೆ. ಬೇರೆ ನಾಟಕಗಳಲ್ಲಿ ಸಮಾಜದ ಆದರ್ಶ (idealism) ವನ್ನೇ ಚಿತ್ರಿಸಿದುದು ವಾಡಿಕೆಯಾಗಿದೆ. ಇವರಿಬ್ಬರಲ್ಲಿಯಾದರೋ ಹಾಗಿಲ್ಲದೆ, ಸಮಾಜದ ವಸ್ತುಸ್ಥಿತಿ(realism)ಯನ್ನೇ ಚಿತ್ರಿಸಿ ಜನರ ಕಣ್ತೆರೆಯನ್ನೇ ಕೊಡುವಂತಿದೆ. ಇಲ್ಲಿ ವಿದೂಷಕನಿಲ್ಲ, ಹಾಸ್ಯರಸವಿಲ್ಲ, ಪ್ರತಿಯೊಂದು ಸನ್ನಿವೇಶವನ್ನೂ ನೋಡಿದರೆ ರಾಕ್ಷಸನನ್ನು ಸೋಲಿಸುವದೇ ಮನೆಯ ಮಾರ್ಗದಂಗಳ ನಡೆಯಬೇಕೋ ಅಷ್ಟನ್ನೇ ಅಪೂರ್ವವಾಗಿ ವರ್ಣಿಸಿದಂತಿದೆ. ಭರತಭೂಮಿಯ ಉತ್ತರ ರಾಜಧಾನಿಯಲ್ಲಿ ಅತಿ ಮಹಾಮಹಿಮರಾದ ಸಂಘಟನೆಗಳನ್ನೇ ತಂದೊಡ್ಡಿ, ನಾಟಕದಲ್ಲಿ ಎಂದು ತಿಳಿ ಕೃತಕತೆಯ ಮಹಾಪ್ರಾಂಚದನ್ನೇ ಬೀರಿ, ಮಹಾಪುರುಷ ನೇ ನವರಸಪಾತ್ರರೆಂದು ಸರ್ವತ್ರ ಭಾಸವಾದರೆ, ಇಲ್ಲಿ ಆ ತರದ ಅತಿಮಾನುಷ, ಅಮಾನುಷಗಳಾದ ಸಂಘಟನೆಗಳೇನೂ ಇಲ್ಲದೆ, ನಾಟಕೀಯ ಮರೆಮೋಸಗಳು ಮಾತ್ರ ನಮ್ಮನ್ನು ಬೆರಗುಬಡಿಸಿ ಸಂದೇಹವೇನೂ ಇಲ್ಲ. ಸಂಭಾಷಣೆಗಳಲ್ಲಿ ಉಪಯುಕ್ತವಾದ ಗದ್ಯವು ತುಸಂಸ್ಕೃತ ಸಾಹಿತ್ಯದಲ್ಲಿ ಉತ್ಕೃಷ್ಟವಾದವು, ಸುರಸ್ತುತಿಸಿದ ಸಂಭಾಷಣೆಗಳು, ಭಾಸನ ನಾಟಕಗಳಂತೆಯೇ ಚಿತ್ರಕರ್ಷಕಗಳಾಗಿವೆ. ವೃತ್ತಾಂತವಾಗಿ ಚಾಣಕ್ಯ ಚಂದನ ದಾಸರ 1ನೆಯ ಅಂಕದ ಸಂಭಾಷಣೆ, 3ನೆಯ ಅಂಕದ ಚಾಣಕ್ಯ ಚಂದ್ರಗುಪ್ತರ ಕೃತಕ ಕಲಹ, 4ನೇ ಅಂಕದಲ್ಲಿ ಮಲಯಕೇತು ಭಾಗುರಾಯಣರ ಸಂವಾದಗಳನ್ನಿಲ್ಲಿ ನಿರ್ದೇಶಿಸಬಹುದು. ವ್ಯತಿರೇಕವಾಗಿ ಇವರ ಸಂವಾದದ ನಾಲ್ಕನೆಯ ಅಂಕದಲ್ಲಿ ಕರ್ಣನ ಸಾಹಸ ಸಮೋಚಾರ ನನ್ನು ಸುಂದರರೆಂಬ ಕರ್ಣನ ಸಾರಥಿಯು ದುರ್ಯೋಧನನಿಗೆ ಉದ್ದುದ್ದವಾಗಿ, ರಸಭಂಗವಾಗುವಂತೆ, ವರ್ಣಿಸುವದನ್ನು ನಾವು ಕಾಣಬಹುದು.

ಇನ್ನದರ ನೀತಿಸಾರ, ಆರಂಭದಲ್ಲಿಯೇ "ದಶರಾತ್ರಂ ಸಮುಚರೇತ್" ಎಂದು ಸಾಲುದಿ ಶ್ಲೋಕದಲ್ಲಿಯೇ ಬರುವ, ಈ ನಾಟಕಕ್ಕನುಗುಣವಾದ ಶಾಸ್ತ್ರ ವರ್ಣನೆಯೂ ರಂಜಕವಾಗಿದೆ. ಸಂದರ್ಭಕ್ಕೆ ಸರಿಯಾಗಿ ಬಂದಿರುವ ಚಾಣಕ್ಯನೀತಿಗೆ ಅನುಗುಣವಾದ ಆ ನಾಂದಿಯನ್ನು ಆಲಿಸುವಾ. ಧನ್ಯಾಕೇಯಂ ಸ್ಥಿತಾ ತೇ ಶಿರಸಿ, ಶಶಿಕಲಾ, ಕಿಂನುನಾಮೈತದಸ್ಯಾ: ನಾಮೈವಾಸ್ಯಾಸ್ತ ದೇತತ್ಪರಿಚಿತ ಮಪಿ ತೇ
ವಿಸ್ಮೃತಂ ಕಸ್ಯ ಹೇತೋ:
ನಾರೀಂ ಪೃಚ್ಛಾಮಿ, ನೇಂದುಂ. ಕಥಯತು
ವಿಜಯಾ ನ ಪ್ರಮಾಣಂ ಯದೀಂದು:
ದೇವ್ಯಾ ನಿಹ್ನೋತುಮಿಚ್ಛೋರಿತಿ ಸುರಸರಿತಂ
ಶಾಠ್ಯಮವ್ಯಾದ್ವಿಭೋರ್ವ:।

ಇಲ್ಲಿ ಎಂದರೆ: ಹೆಂಡತಿಯಾದ ಗಂಗೆಯನ್ನು ತಲೆಯಲ್ಲಿ ಹೊತ್ತರೂ, ರಾಕ್ಷಿಸಿಂದ ತನ್ನ ಆಧಾರವಾದ ಜಟಾರಾಶಿಯೊಳಗೇನೆ ಅವಳನ್ನು ಪಾರ್ವತಿಯ ಕಣ್ಣಿಗೆ ಬೀಳದಂತೆ ಮರೆಸಿದ ಪ್ರಯತ್ನವನ್ನು ಚಿತ್ರಿಸಿದೆ. ಇದಕ್ಕೆ ವ್ಯತಿರಿಕ್ತವಾಗಿ ನೀತಿ ಮಾರ್ಗದಲ್ಲಿ ಯಾವದೋ ಸಹಜವಾಗಿ ಕಾಳಿದಾಸನು ಬೋಧಕವಾದ ಶಂಕರನ ತಲೆಯಮೇಲೇರಿ ಪಾರ್ವತಿಯು ಸಿಟ್ಟಿಗೆದ್ದಾಗ ಎರೆ ಸೂಕ್ತಿಸವಳೆ, ನೀನು ಹೆಚ್ಚು ಮಾತನಾಡಿದರೆ ನಾನು ಈ ಪಾದ ತಟ್ಟನ್ನೇ ಹಿಡಿದು ಅವನನ್ನೇ ಮುಂದು ಮಾಡಿದನು. ಜಾಗ್ರತೆ! "ಗಂಗೆ" ತಕ್ಕ

(ಇನ್ನೂ ಇದೆ)

SEASON DEPOSITS.

Are now accepted for periods from 3 to 6 months 3½ interest per annum for amounts of Rs. 500/- and multiples thereof. No deposit is allowed to run beyond 15-10-1954.

Attractive rates of interest are offered for Fixed Deposits for periods ranging from 1 to 24 months.

Banking transactions of all kinds are undertaken.

Branches throughout South Kanara, and one each in Mercara and Fort, Bombay

THE VIJAYA BANK LIMITED,

Head Office: **MANGALORE.**

ಏಕಸ್ವಾಮ್ಯದ ಜನರು ಉಪಯೋಗಿಸಬೇಕು.

ಸರ್ ಜೀವನ್ ಶಿಲಾಜಿತ್‌ಲೇಹ

ಶಿಲಾಜಿತ್ ಔಷಧಗಳ ರಾಜ; ಮೂಲಿಕೆಗಳೊಡನೆ ಸೇರಿಸಿದ ಲೇಹ್ಯ, ಶಕ್ತಿ, ಮೂತ್ರ ರೋಗ, ಅಶ್ಮರಿ, ಕೆಮ್ಮು, ದಮ್ಮು, ಮಧುಮೇಹ ಮತ್ತು ವಾಯು ವಿಕಾರದಿಂದಾಗುವ ಎಲ್ಲಾ ರೋಗಗಳಿಗೆ [illegible] ಹೆಂಗಸರ ಮತ್ತು ಮಕ್ಕಳ [illegible] ರಕ್ತ ಸಕಲ ರೋಗಗಳಲ್ಲಿಯೂ [illegible]

[illegible]

ನೀಲಗಿರಿ ಡಿಪ್ಪೊ, ಅಕ್ಕಿಪೇಟೆ ಚಾಕ, ಬೆಂಗಳೂರು ಸಿಟಿ.

[illegible]

ವಿವಿಧ ಪಾತ್ರೆಗಳು



ಯಾವತ್ತು ವಿವಿಧ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ಸಿಗುತ್ತವೆ.
ಕಲ್ಯಾಣಿ ವ್ಯಾಪಾರಾಲಯ
ರಥಬೀದಿ ಉಡುಪಿ.

ಭೃತ್ಯಕುಟಿಲಜನಾಂ ಯಾ ವಿನಸ್ಯೇವಷೇಸ್ಯೆ: ರಂಭೋ: ಕೇವಗ್ರಹಣವಂಕರೋದಿಂದು ಲ ಗ್ನೋರ್ಮಿವಸ್ಥಾ" ಎಂಬದನ್ನು ವ್ಯತಿರೇಕದಿಂದ ನಾವು ಮನಗಾಣಲು ಪ್ರಯತ್ನ ಮಾಡಬಹುದು. ಸ್ವಾಮಿನಿಷ್ಠೆಯ ಉತ್ಕರ್ಷವನ್ನೇ ಚಿತ್ರಿಸಲು ಬರೆದುದಂತಿದೆಯೆಂದರೂ ತಪ್ಪಾಗದು. ಈ ರಾಕ್ಷಸನು ತನ್ನ ಉತ್ತಮ ಸ್ವಾಮಿಗಳಾದ ನಂದಾದಿಗಳು ಮಣ್ಣು ಪಾಲಾದರೂ ಅವರಲ್ಲಿಟ್ಟ ಅಪಾರವಾದ ಭಕ್ತಿಯು ಆದರ್ಶಪ್ರಾಯವಾಗಿದೆ. ಕಡೇಗೆ ಪರ್ವತನ ಪುತ್ರನಲ್ಲಿಯೂ ಇದೇ ತರದ ಭಕ್ತಿಯನ್ನೇನೋ ಇಟ್ಟನು. ಆದರೆ ದೈವವೇನೋ ಆ ವನಿಗೆ ಸಹಾಯವನ್ನೀಯದೆ ಚಾಣಕ್ಯನ ನೀತಿಯ ಬಲೆಯೊಳಗೆ ಸಿಲುಕಿದುದನ್ನು ನಾವು ತಿಳಿದಿದ್ದೇವೆ. ಹೀಗೆ ಸ್ವಾಮಿನಿಷ್ಠೆಯ ವೈಶಿಷ್ಟ್ಯವನ್ನು ಚಂದನದಾಸ ರಾಕ್ಷಸಾದಿಗಳು ನಮಗೆ ಕಲಿಸುವವರು. ಸರ್ವ ಕಾಲದಲ್ಲಿಯೂ discipline ಅಥವಾ ಒಂದು ನಿಯಮಕ್ಕೇ ಕಟ್ಟಲ್ಪಟ್ಟು ಅದಕ್ಕನುಗುಣವಾಗಿಯೇ ಜೀವನದಲ್ಲಿ ವರ್ತಿಸುವದು ಇವರ ಚಿತ್ರಣ ಇಷ್ಟು ಸೊಗಸಾಗಿ ಇನ್ನೆಲ್ಲಿಯೂ ದೊರಕದು. 'ಪ್ರಿಯಾವಯಸ್ಯ ಇತ್ಯಂತಸಂ ಸಿಕೃಷ್ಟ: ಸಂಬಂಧ:' ಎಂದು ರಾಕ್ಷಸನು ಹೇಳಿದರೆ ಯಾರುತಾನೆ ತಲೆದೂಗರು?

ಪಿತೃನ್ ಪುತ್ರಾನ್, ಪುತ್ರಾನಪರವದ
ಭಿಹಿಂಸಂತಿ ಹಿತರ:
ಯದರ್ಥಂ ಸೌಹಾರ್ದಂ ಸುಹೃದಿಜ
ವಿಮುಂಚಂತಿ ಸುಹೃದ: ।
ಪ್ರಿಯಂ ಮೋಕ್ತುಂ ತದ್ಯೋ ವ್ಯಸನಮಿವ
ಸದ್ಯೋ ವ್ಯವಸಿತ:
ಕೃತಾರ್ಥೋऽಸ್ತ್ವಯಂ ಯೋऽರ್ಥಸ್ತ್ರ ವಸತಿ
ವಣಿಕ್ತ್ವೇऽಪಿ ವಣಿಜ: ॥

ಎಂದು ರಾಕ್ಷಸನು ಹೇಳಿದುದು ಈಗಲೂ ದಿನಾರಾಣೆ ಸತ್ಯವಲ್ಲವೇ? ಇವನ ಮಾತಿನಲ್ಲಿ ಆಶ್ರಿತನಾದ ಶ್ರೀಮಂತನು ಸಂಪತ್ತನ್ನು ಕಳಕೊಂಡನಂತರ ಆವನ ಸೂಳೆಯು, ಪ್ರೇಮದ ಗಂಧವನ್ನೇ ಅರಿಯದೆ, ಇನ್ನೊಬ್ಬ ಶ್ರೀಮಂತನನ್ನಾಶ್ರಯಿಸುವಂತೆ ಉಚ್ಚಿನ್ನಾಶ್ರಯ ಕಾತರೇವಕುಲತಾ ಗೋತ್ರಾಂತರೇ ಶ್ರೀರ್ಗತಾ. ಸ್ವಾಮಿಭಕ್ತಿ ಪರಾಯಣರಾದ ಸೇವಕರು ರಾಜರಲ್ಲಿ ಅನುರಕ್ತೆಯಾದ ರಾಣಿಯಂತೆ, ಇನ್ನುಳಿದವರಂತೂ ಬರೇ ತಮ್ಮ ತಮ್ಮ ಹಾದಿಗಾಗಿ, ಸ್ವಾರ್ಥಕ್ಕಾಗಿ ಸೇವಿಸುವವರಷ್ಟೆ. ಪ್ರಜ್ಞಾವಿಕ್ರಮ ಭಕ್ತ್ಯ: ಸಮುದಿತಾಯೇಷಾಂ ಗುಣಾಭೂತಂಪೀತೇ ಭೃತ್ಯಾ: ನೃಪತೇ: ಕಲತ್ರಂ, ಇತರೇ ಸಂಪತ್ಸು ಚಾಪತ್ಸುಚ ॥ ಈ ಉಪಮೆಗಳೆಲ್ಲಾ ಎಷ್ಟು ಸಹಜವಾಗಿ ಬರುವವೆಂಬವನ್ನು ನಾವು ಮನಗಾಣಬಹುದು.

ದೈವೋಪಹತನಾದರೆ ಅವನ ಬುದ್ಧಿಯೇ ವಿಪರೀತವಾಗುವುದೆಂದೂ, ಜನರು ಬರೇ ದುಡ್ಡನ್ನೇ ದೈವವೆಂದು ಭಾವಿಸಿ, ಅನುರಾಗರಹಿತರಾಗಿರುವರೆಂದೂ ಅರಂಭಿಸಿದ ಕಾರ್ಯಗಳನ್ನರ್ಧದಲ್ಲಿಯೇ ಹೆಚ್ಚಿನವುಂದಿ ತೊರೆದು ಬಿಡುವರೆಂದೂ, ಶ್ರೀ ಎಂಬ ಸಂಪದ್ದೇವತೆಯಾದರೂ ಸ್ವಲ್ಪ ಎಡೆಯನ್ನೇ ಮಾತ್ರ ಕಲ್ಪಿಸಿಕೊಂಡ ಸೂಳೆಯು ಒಂಟೆಯಂತೆ ಸ್ವಲ್ಪಸ್ವಲ್ಪವಾಗಿ ಕ್ರಮೇಣ ಸಂಪೂರ್ಣವಾಗಿಬಳಿಗೆ ನುಸುಳಿಕೊಂಡು ಅಧಿಕಾರ ಸಾಮ್ರಾಜ್ಯವನ್ನೇ ಚಲಾಯಿಸುವಂತೆ- ಶ್ರೀರ್ಲಬ್ಧ ಪ್ರಸರೇವವೇರ ವನಿತಾ ಮ:ಖೋಪಚರ್ಯಾಭೃಶಂ_ಸೇವಿಸುವವರಿಗೆ ಅವಳು ವಶ್ಯಳಾಗಿಬಿಡುವಳಂತೆ! ಆ ಕಾಲದ ಶ್ರೀಮಂತ ಜನರು ಮದಮತ್ತರಾಗಿ ಅನೇಕ ಹೆಂಡಂದಿರನ್ನೂ ಸೂಳೆಯರನ್ನೂ ಆಶ್ರಯಿಸಿ, ವಿಷಯ ಲಂಪಟರಾಗಿದ್ದಾರೆಂಬುದನ್ನೂ ಸೊಗಸಾಗಿ ಚಿತ್ರಿಸಿದ್ದಾನೆ.

ಭರ್ತುಸ್ತಥಾ ಕಲುಷಿತಾಂ ಬಹುವಲ್ಲಭಸ್ಯ
ಮಾರ್ಗೇಕಥಂ ಚಿದವತಾರ್ಯ
ತನೂಭವಂತೀಂ ।
ಸರ್ವಾತ್ಮ ಸಾರತಿಕಥಾ ಕಲುಷೇವದೂತೀ
ಗಂಗಾಂ ಶರನ್ನಯತಿ ಸಿಂಧು ಪತಿಂ
ಪ್ರಸನ್ನಾಂ ॥

ಅವರು ದೂತಿಗಳಿಂದ ತಮ್ಮ ಕೆಲಸಗಳನ್ನು ಸಾಧಿಸಿಕೊಳ್ಳುತ್ತಿದ್ದರಂತೆ! ಈಶ್ವರನೇ ಗಂಗೆಯನ್ನು ಜಡೆಯಲ್ಲಿ ಮರೆಸಿಕೊಂಡು ತನ್ನ ಪ್ರೇಯಸಿಯಾದ ಪಾರ್ವತಿಯ ಪತ್ತಿರವೇ ಶಾಠ್ಯವನ್ನಾಚರಿಸಿದುದರಿಂದಲೇ ಈ ನಾಟಕವು ಪ್ರಾರಂಭವಾದುದನ್ನು ಆಗಲೇ ಸೂಚಿಸಿದ್ದಾಯಿತು.

ಇದೀಗ ಮುದ್ರಾ ರಾಕ್ಷಸ ನಾಟಕದ ಸಾಮಾಜಿಕ ನೀತಿಪಾಠ. ಕೌಟಿಲ್ಯನು ಏಕಂ ಹನ್ಯಾನ್ನವಾಹನ್ಯಾದಿಷ್ಟು:ಕ್ಷಿಪ್ತೋಧನುಷ್ಮತಾ· ಪ್ರಾಜ್ಞೇನತು ಮತಿ: ಕ್ಷಿಪ್ತಾಹನ್ಯಾದ್ರಾಷ್ಟ್ರಗತಾನಪಿ ॥ ಎಂದು ಹೇಳಿದುದರ ಸರಿಯಾದ ಅರ್ಥವು ಭಾಸನ ಪ್ರತಿಜ್ಞಾಯೌಗಂಧರಾಯಣ ಅಥವಾ ಈ ಮುದ್ರಾ ರಾಕ್ಷಸಗಳನ್ನೋದಿದವರಿಗೆ ಮಾತ್ರ ಸರಿಯಾಗಿ ಮನವರಿಕೆಯಾಗುವದು. ಬುದ್ಧಿಯ ಆಳ ಅಥವಾ ಎಲ್ಲೆಯನ್ನು ಯಾರು ತಾನೇ ಕಾಣಬಲ್ಲರು?

ಉಡುಪಿ ವೆಂಕಟ ಕೃಷ್ಣರಾವ್

(ಮದ್ರಾಸು ಸ್ಟೇಷನ್ ಡೈರೆಕ್ಟರರ ಕೃಪೆಯಿಂದ)

—— ——

[೨ನೇ ಪುಟದಿಂದ]

ಇವೆ. ಫ್ರಾನ್ಸಿನ ಸುಪ್ರಸಿದ್ಧ ಸಂಸ್ಕೃತ ಪಂಡಿತ ಡಾ. ಥಿಬಾಲ್ಟರು ನಮ್ಮ ರಾಷ್ಟ್ರೀಯ ಪುಸ್ತಕಾಲಯಕ್ಕೆ ಅನೇಕ ಸಂಸ್ಕೃತ ಕೃತಿಗಳ ಹಸ್ತಲಿಖಿತ ಪ್ರತಿಗಳನ್ನೂ ತಾಳೆಯೋಲೆಯ ಗ್ರಂಥಗಳನ್ನೂ ನೀಡಿ ಪುಣ್ಯಮಾಡಿದರು.

ಇವೆಲ್ಲ ದಾನಗಳಿಗಿಂತಲೂ ಅಮೂಲ್ಯವೆನಿಸಿದ ಮತ್ತು ಚಿರಸ್ಮರಣೀಯವಾದ ಕಾಣಿಕೆಯು ಸ್ವರ್ಗೀಯ ಶ್ಯಾಮಾ ಪ್ರಸಾದ ಮುಖರ್ಜಿ ಬಂಧುಗಳಿಂದ ಲಭಿಸಿತು. ಇವರು ತಮ್ಮ ತಂದೆ ಸರ್ ಆಶುತೋಷ ಮುಖರ್ಜಿಯವರ ಖಾಸಗಿ ಭಂಡಾರದಲ್ಲಿದ್ದ ೮೦,೦೦೦ ಪುಸ್ತಕಗಳನ್ನು ಉದಾರ ಹೃದಯದಿಂದ ರಾಷ್ಟ್ರೀಯ ಪುಸ್ತಕಾಲಯಕ್ಕೆ ಅರ್ಪಿಸಿ, ಅದರ ಶ್ರೀ ವೃದ್ಧಿಗೆ ಕಾರಣರಾದರು.

ಕೆಲವು ವರ್ಷಕ್ಕೆ ಮೊದಲು ಭಾರತ ಸರಕಾರದವರು ಈ ಪುಸ್ತಕಾಲಯದ ಪ್ರಾಚ್ಯ ವಿದ್ಯಾ ವಿಭಾಗಕ್ಕೋಸ್ಕರ ಚೀನೀ ಭಾಷೆಯ ಕೆಲವು ಗ್ರಂಥರತ್ನಗಳನ್ನು ಕೊಂಡುಕೊಂಡರು. ಬಂಗಾಳದಲ್ಲಿ ಚ್ಯಾರಿಯಲ್ಲಿರುವ ಪ್ರಕಟಣೆಯ ಕಾಯ್ದೆಯಂತೆ, ಪ್ರಕಾಶನಹೊಂದುವ ಪ್ರತಿಯೊಂದೂ ಪುಸ್ತಕ ಹಾಗೂ ಪತ್ರಿಕೆಯ ಒಂದೊಂದು ಪ್ರತಿಯನ್ನು ಧರ್ಮಾರ್ಥವಾಗಿ ರಾಷ್ಟ್ರೀಯ ಪುಸ್ತಕಾಲಯಕ್ಕೆ ಕಳುಹಿಸಿಕೊಡಬೇಕಾಗುವುದು. ಅಮೇರಿಕದ ಸುಪ್ರಸಿದ್ಧ ಪುಸ್ತಕಾಲಯ "ಸ್ಮಿಥ್ ಸೋನಿಯಂ ಭವನ"ದಿಂದ ಪರಸ್ಪರ ವಿನಿಮಯದ ರೂಪದಲ್ಲಿ ನೂರಾರು ಉತ್ತಮೋತ್ತಮವಾದ ಹಾಗೂ ನೂತನವಾಗಿ ಪ್ರಕಾಶಗೊಂಡ ಪುಸ್ತಕಗಳು ರಾಷ್ಟ್ರೀಯ ಪುಸ್ತಕಾಲಯಕ್ಕೆ ಸಿಗುತ್ತವೆ.

ಅಮೂಲ್ಯ ಸಂಗ್ರಹ

ಈಗ ಸಿದ್ಧಗೊಂಡ ಪಟ್ಟಿಗೆ ಅನುಸಾರವಾಗಿ, ರಾಷ್ಟ್ರೀಯ ಪುಸ್ತಕಾಲಯದಲ್ಲಿ ಸುಮಾರು ಏಳೂವರೆ ಲಕ್ಷ ಪುಸ್ತಕಗಳು ಸಂಗ್ರಹಗೊಂಡಿವೆ. ಅನೇಕ ವರ್ಷಗಳ ಪರಿಶ್ರಮದ ಬಳಿಕ ದೊಡ್ಡ ದೊಡ್ಡ ವಿಭಾಗಗಳಲ್ಲಿ ಈ ಪುಸ್ತಕಗಳ ಯಾದಿಯನ್ನು ತಯಾರುಮಾಡಲಾಯಿತು. ಇಷ್ಟು ಪುಸ್ತಕಗಳಲ್ಲದೆ ಏಳುನೂರಕ್ಕೂ ಅಧಿಕ ಪತ್ರಿಕೆಗಳು ಇದಕ್ಕೆ ಸಿಗುತ್ತವೆ. ಕಳೆದ ವರ್ಷ ಪುಸ್ತಕಾಲಯದಲ್ಲಿ ಓದಲಿಕ್ಕೆಂದು ಹೊರಗಿನಿಂದ೬೬,೦೦೦ ಜನರು ಬಂದರು; ಇದರ ಸದಸ್ಯರು ೭೩,೦೦೦ ಪುಸ್ತಕಗಳನ್ನು ಮನೆಗೆಕೊಂಡೊಯ್ದು ಓದಿದರು.

ರಾಷ್ಟ್ರೀಯ ಪುಸ್ತಕಾಲಯದಲ್ಲಿರುವ ಗ್ರಂಥಗಳಲ್ಲಿ ಬಂಗಾಳಿ ಭಾಷೆಯವುಗಳೇ ಅಧಿಕ, ಅಂದರೆ ೨೪,೦೦೦ ಆಗಿರುತ್ತವೆ. ಅನ್ಯ ಪ್ರಮುಖ ಭಾರತೀಯ ಭಾಷೆಗಳ ಪುಸ್ತಕಗಳು ಹೀಗಿವೆ:— ಹಿಂದೀ, ಉರ್ದುಗಳಲ್ಲಿ ಪ್ರತಿಯೊಂದೂ, ೧೯,೦೦೦; ತಮಿಳು ೧೫೨೫೦; ಗುಜರಾಥಿ ಮತ್ತು ತೆಲುಗುಗಳಲ್ಲಿ ಪ್ರತಿಯೊಂದೂ ೯೫೦೦; ಮರಾಠಿ ೯೨೦೦; ಪಂಜಾಬಿ ೪೯೨೫; ಒರಿಯಾ ೨೭೫೦; ಕನ್ನಡ ೩೧೬೦; ಮಲಯಾಳಂ ೧೩೫೦; ಮತ್ತು ಅಸಾಮಿ ೮೦೦. ಕನ್ನಡದ ಪುಸ್ತಕಗಳ ಪ್ರಮಾಣ ಬಹಳ ಕಡಿಮೆ ಇದ್ದು, ಇದನ್ನು ಅಧಿಕಗೊಳಿಸುವುದಕ್ಕೆ ಕನ್ನಡಿಗರು ಯೋಗ್ಯ ಕ್ರಮ ತೆಗೆದುಕೊಳ್ಳುವುದು ಅಪೇಕ್ಷಣೀಯ. ಪತ್ರಿಕೆಗಳವರೂ ಪುಸ್ತಕ ಪ್ರಕಾಶಕರೂ ತಮ್ಮ ಪ್ರಕಟಣೆಯ ಒಂದೊಂದು ಪ್ರತಿಯನ್ನು ಉದಾರಮನಸ್ಸಿನಿಂದ ದಾನರೂಪದಲ್ಲಿ ಈ ಸಂಗ್ರಹಕ್ಕೆ ನೀಡಿ, ನೆರವಾಗಬಹುದು.

ಸಾವಿರಾರುಮಂದಿ ಓದುಗರಿಗೂ ಸ್ವಾಧ್ಯಾಯಿಗಳಾದ ಜ್ಞಾನ ಪಿಪಾಸುಗಳಿಗೂ ಸುಖವಾಗಿ ಓದಿಕೊಳ್ಳಲೂ ಅಭ್ಯಾಸದಲ್ಲಿ ಪ್ರವೃತ್ತರಾಗಲೂ ಅನುಕೂಲವಾಗುವಂತೆ ವಿಶಾಲವಾದ ಕೋಣೆಯೊಂದು ರಾಷ್ಟ್ರೀಯ ಪುಸ್ತಕಾಲಯದಲ್ಲಿದೆ. ಹೊರಗಿನಿಂದ ಬರುವವರಿಗೋಸ್ಕರ ವಿಶ್ರಾಮ ಗೃಹಗಳಲ್ಲಿ ಉಳಕೊಳ್ಳಲು ವ್ಯವಸ್ಥೆಯೂ ಏರ್ಪಟ್ಟಿದೆ. ಅವಲ್ಲದೆ ಇಲ್ಲಿಗೆ ಬರಲಾಗದ ಸ್ವಾಧ್ಯಾಯಿಗಳು ಪುಸ್ತಕಾಲಯಾಧಿಕಾರಿಗೆ ತಮ್ಮ ಕುರಿತು ಸಮಾಧಾನಕರವಾದ ಪ್ರಮಾಣ ಪತ್ರಗಳನ್ನು ಒದಗಿಸಿ, ಪುಸ್ತಕಗಳನ್ನು ಟಪ್ಪಾಲು ಮೂಲಕ ಪಡೆಯಬಹುದಾದ ಸೌಕರ್ಯವೂ ಇರುತ್ತದೆ.

ಪುಸ್ತಕ ಭಂಡಾರಿಗಳಿಗೆ ತರಬೇತಿ ನೀಡುವ ವ್ಯವಸ್ಥೆಯನ್ನೂ ರಾಷ್ಟ್ರೀಯ ಪುಸ್ತಕಾಲಯ ಕೈಗೊಂಡಿದೆ. ವಿಶ್ವವಿದ್ಯಾಲಯದ ಶಿಕ್ಷಣ ಹೊಂದಿದ ಉಮೇದುವಾರರಿಗೆ ಪುಸ್ತಕಗಳ ಸಂಗ್ರಹ, ಜೋಪಾಸನೆ, ಅವುಗಳ ವಿತರಣೆ ಮುಂತಾದ ಉಪಯುಕ್ತ ವಿಷಯಗಳ ಮೇಲೆ ಶಾಸ್ತ್ರೀಯ ಶಿಕ್ಷಣವನ್ನು ಕೊಡುವರು. ಸಫಲ ವಿದ್ಯಾರ್ಥಿಗಳಿಗೆ ಪುಸ್ತಕ ಭಂಡಾರಿ ಎಂಬ ಸರಕಾರದ ಮನ್ನಣೆ ಪಡೆದ ಪದವಿಯು ನೀಡಲ್ಪಡುತ್ತದೆ. ಈ ಪದವೀಧರರು ತಂತಮ್ಮ ಹಳ್ಳಿಗಳಿಗೆ ಹೋಗಿ ಅಲ್ಲಿ ಗ್ರಾಮಸ್ಥರ ಜ್ಞಾನಾಭಿವೃದ್ಧಿಗೆ ನೆರವಾಗುವಂತೆ, ಪುಸ್ತಕಾಲಯಗಳ ಸಂಘಟನಾ ಕಾರ್ಯವನ್ನು ಕೈಕೊಂಡು ರಾಷ್ಟ್ರದ ಏಳಿಗೆಯ ಕಾರ್ಯದಲ್ಲಿ ಸಕ್ರಿಯ ಸಹಕಾರ ನೀಡಬಲ್ಲರು.

—ನವನೀತ.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 25 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪ್ಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

THE MOOLKY BANK LTD.
Moolky, S. K.

ಋತುಸ್ರಾವ ನಿಂತಿತು

"ಕುಮಾರಿ" ಬಿಲ್ಲೆಗಳನ್ನು ಉಪಯೋಗಿಸಿದರೆ ಪದತಪ್ಪಿ ಋತುಸ್ರಾವವಾಗುವುದು, ಪಕೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು. ಯಾವ ಬಾಧಕವೂ ಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ- ಬೆಲೆ: ರೂ. 3/-; ಸ್ಪೆಶ್ಯಲ್ ರೂ. ೬-, ಅಧಿಕಾಧಿಕ ಸ್ಪೆಶ್ಯಲ್ ರೂ. ೩-[ವಿ. ಪಿ. ಹನ್ನೆರಡಾಣೆ ಪ್ರತ್ಯೇಕ]

Mrs. P. DEVEE, F.DS.(N.J.)
CALCUTTA. ೩೦
ಸ್ಟಾಕಿಸ್ಟರು: ಶರಾಕಂಪೆನಿ, ಮಂಗಳೂರು.

ಟ್ರೇಡ್ ಮಾರ್ಕ್

ಪಂ॥ A. R. ಅಯ್ಯರ್ ರವರು, ಸ್ಥಾಪಕರು.

ಮೈಸೂರು ಶ್ರೀಮನ್ ಮಹಾರಾಜರವರ ಖಾಸ್‌ವೈದ್ಯ ದಿ। ಅಂಬಳೆ ನರಸಿಂಹ ಪಂಡಿತರ ಮನೆತನದಲ್ಲಿ 96 ವರ್ಷ ಖ್ಯಾತಿಗಳಿಸಿದ ಎ. ರಾಮಸ್ವಾಮಿ ಅಯ್ಯರ್‌ರವರ

ಸಂತಾನ ಸಿಂಧೂರ | ಮದನ ವಿಲಾಸ
(ಸ್ತ್ರೀಯರಿಗೆ: ಭಸ್ಮ) (ಪುರುಷರಿಗೆ: ಗುಳಿಗೆ)

*ಭಸ್ಮವು ಬಹಿಷ್ಟೆಯ ಹೊಟ್ಟೆನೋವನ್ನು ನಿರ್ಮೂಲಮಾಡಿ, ಮಾಸಿಕದ ಹೆಚ್ಚುಕಡಿಮೆಗಳನ್ನು ಕ್ರಮಪಡಿಸಿ, ಗರ್ಭಪಾತವನ್ನು ತಡೆಗಟ್ಟಿ, ಗರ್ಭಾಶಯ ರೋಗವನ್ನು ನಿವಾರಿಸಿ, ತಾಯ್ತನ (Motherhood) ಪಡೆಯಲರ್ಹಳನ್ನಾಗಿ ಮಾಡುತ್ತದೆ.
*ಈ ಗುಳಿಗೆಗಳು ಪುರುಷನ ಅತ್ಯುಷ್ಣವನ್ನು ಕಮ್ಮಿಮಾಡಿ, ಸ್ವಪ್ನ ಸ್ಖಲನ ಶೀಘ್ರ ಸ್ಖಲನಗಳನ್ನು ನಿವಾರಿಸಿ, ಸಂತಾನದಾಯಕವಾದ ವೀರ್ಯಾಣುSPERMS ಗಳನ್ನು ವೃದ್ಧಿಪಡಿಸಿ ನಪುಂಸಕತ್ವೆಯನ್ನು ಹೋಗಲಾಡಿಸುತ್ತದೆ.
ಮೇಲಿನಂತೆ ಗಾಯಿಲೆಗಳು ಕೂಡ್ಲೆ ಗುಣವಾಗಿ ಜಾಗ್ರತೆ ಸಂತಾನಫಲ ಬೇಕೋ? ಹಾಗಾದರೆ ಇಬ್ಬರೂ ಒಂದೇ ೧ ಸೆಟ್ (8 ಪೊಟ್ಲ 14 ಗುಳಿಗೆ) ಅನುಪಾನ ಪತ್ರಿಕೆಯ ಮೇರೆಗೆ ಸೇವಿಸಿರಿ.
ಶೋಭನವಾಗಿ 16-18 ವರ್ಷ ಮಕ್ಕಳಿಲ್ಲದವರಿಗೂ ಸಂತಾನ ಲಭಿಸಿದೆ.
ಕ್ರಯ: 2 ಔಷಧಿಗಳ 1 ಸೆಟ್ 7 ರೂ M.O. ಮಾಡಿರಿ. ತಲಪಿದ ಒಡನೆ ರಜಿಸ್ಟರ್ ಪಾರ್ಸೆಲ್ ರವಾನೆ. ವಿ.ಪಿ ಇಲ್ಲ. ಕ್ಯಾಟಲಾಗ್ ಉಚಿತ. ಮಾಹಿತಿಗೆ 2 ಆಣೆ ಸ್ಟಾಂಪು ಕಳಿಸಿರಿ. ವಿಳಾಸ:-
ಎ. ರಾಮಸ್ವಾಮಿ ಅಯ್ಯರ್ ಸನ್ಸ್ & ಕಂ., 626 "ಸಂತಾನ ಸಿಂಧೂರ ನಿಲಯ", ಚಾಮರಾಜ ರೋಡ್ ಸೌತ್ ಕ್ರಾಸ್, ಮೈಸೂರು (Mysore-South India).

ದಿ। ಕಿಲ್ಲೆಯವರ ಮೂರು ಗ್ರಂಥಗಳು

ಪ್ರಾಚೀನ ತುಳುನಾಡು	(ಎಂ. ಗೋವಿಂದ ಪೈಗಳ ಮುನ್ನುಡಿ)	೨	೦	೦
ಭಾರತದ ಕರ್ಣ (ಗದ್ಯ)	(ಎಸ್ ಆರ್. ಶಾಸ್ತ್ರಿಗಳ ,,)	೦	೬	೦
ಮುರಲಿ (ಪದ್ಯ)	(ಕಯ್ಯಾರ ಕಿಞ್ಞಣ್ಣ ರೈಗಳ ,,)	೦	೧೨	೦

ಟಪಾಲು ಖರ್ಚು ಪ್ರತ್ಯೇಕ. ಪುಸ್ತಕ ವ್ಯಾಪಾರಿಗಳಿಗೆ ಕಮಿಶನ್ ಕೊಡಲಾಗುವುದು.

ನವಯುಗ ಪ್ರೆಸ್, ಪೋಸ್ಟ್ ಬಾಕ್ಸ್ ನಂಬ್ರ ೩೨, ಉಡುಪಿ.

ಕೆನರಾ ನ್ಯೂಸ್ ಏಜನ್ಸಿ, ನೆಹರೂ ಲಂಚ್‌ಹೋಮ್ ಬಿಲ್ಡಿಂಗ್, ಪಂಪವೆಲ್ಕಟ್ಟೆ, ಮಂಗಳೂರು.

Edited, Printed & Published By K. H. Shetty at the Navayuga Press, Udipi, S. India

Regd. No. M. 3618 [ಎರಡಾಣೆ] Licence No 31
Licensed to Post without Prepayment.

ನವಯುಗ

Vol.33 No.32 15-4-1954 ವರ್ಷ ೩೩ ವಾರ ೩೨

ಕರ್ನಾಟಕದ ಮಲೆನಾಡು

ಮಲೆನಾಡು ಕನ್ನಡದ ಸಂಪತ್ತಿನ ಕೇಂದ್ರವೆಂಬುದನ್ನು ಈ ಹಿಂದೆ ಪ್ರಕಟಗೊಂಡ ಲೇಖನವೊಂದರಲ್ಲಿ (ನವಯುಗ—ದಿನಾಂಕ ೧೧—೩—೧೯೫೪) ನಾವು ಸ್ಪಷ್ಟವಾಗಿ ನಿರೂಪಿಸಿದ್ದೇವೆ. ಅದರಲ್ಲಿ ಪ್ರಸ್ತಾಪಿಸಿದಂತೆ, ಮಲೆನಾಡಿನ ಮಹತ್ವವನ್ನು ಸಂಬಂಧಪಟ್ಟ ರಾಜ್ಯ ಸರಕಾರಗಳಿಗೆ ಮತ್ತು ಕೇಂದ್ರ ಸರಕಾರಕ್ಕೆ ಮನವರಿಕೆ ಮಾಡಿ ಕೊಡುವುದಕ್ಕೂ ಸಾರ್ವಜನಿಕರ ಜಿಜ್ಞಾಸೆಯನ್ನು ಕೆರಳಿಸಿ, ಅವರ ಸಹಾನುಭೂತಿ ಮತ್ತು ಸಹಕಾರಗಳನ್ನು ಪಡೆಯುವುದಕ್ಕೂ ಉದ್ದೇಶಿಸಿದ ಸಮ್ಮೇಳನ ಕಳೆದ ವಾರ, ೩, ೪ ಮತ್ತು ೫ನೇ ದಿನಾಂಕಗಳಂದು ಶಿವಮೊಗ್ಗದಲ್ಲಿ ಸಾಂಗವಾಗಿ ನೆರವೇರಿತು. ಮುನ್ನಾದಿನ ಸಂಜೆ ಮಳೆಬಂದುದರಿಂದ ಮಲೆನಾಡಿನ ಆ ಭಾಗ ತುಂಬ ತಂಪೆನಿಸಿ, ನೆರೆದ ೧೫೦೦ ಮಂದಿ ಪ್ರತಿನಿಧಿಗಳಿಗೂ ನಾಲ್ಕೈದು ಸಾವಿರ ಜನ ಪ್ರೇಕ್ಷಕರಿಗೂ ಉಲ್ಲಾಸವನ್ನು ತಂದಿತು. ಸಮ್ಮೇಳನದ ಅಧ್ಯಕ್ಷರೆಂದು ಗೊತ್ತುಪಡಿಸಿದ್ದ ಕರ್ನಾಟಕ ಪ್ರದೇಶ ಕಾಂಗ್ರೆಸಿನ ಅಧ್ಯಕ್ಷ ಶ್ರೀ ಎಸ್. ನಿಜಲಿಂಗಪ್ಪನವರನ್ನೂ ಸ್ವಾಗತಸಮಿತಿಯ ಅಧ್ಯಕ್ಷ ಶ್ರೀ ಎ ಆರ್. ಬದರಿನಾರಾಯಣರನ್ನೂ ಐದುಜೊತೆ ಎತ್ತುಗಳನ್ನು ಹೂಡಿದ ಶೃಂಗರಿಸಿದ ರಥದಲ್ಲಿ ಕುಳ್ಳಿರಿಸಿ ಪುಷ್ಪರನ್ ಸರ್ಕಲಿನಿಂದ ಮೆರವಣಿಗೆ ಹೊರಡಿಸಿದ್ದರು. ಮೆರವಣಿಗೆಯ ಮುಂಭಾಗದಲ್ಲಿ ಅಲಂಕೃತ ಆನೆಯೊಂದು ರಾಜಠೀವಿಯಿಂದ ಹೊರಟಿತ್ತು—ಆನೆಯ ಮೇಲೆ ಮಹಾತ್ಮಾಗಾಂಧೀಜಿಯವರ ದಂತದ ಪ್ರತಿಮೆಯನ್ನು ಇಟ್ಟಿದ್ದು, ಎಲ್ಲರನ್ನೂ [illegible]ಸಿತು. ಮೆರವಣಿಗೆಯಲ್ಲಿ ನಗರದ ಪ್ರಮುಖರೂ, ಸ್ವಯಂಸೇವಕರೂ, ಬಾಲವೀರರೂ ವೀರವನಿತೆಯರೂ ವಿದ್ಯಾರ್ಥಿಗಳೂ ಭಾಗವಹಿಸಿ, ಅದಕ್ಕೆ ಹೊಸತೊಂದು ಶೋಭೆ ತಂದುಕೊಟ್ಟರು

ಆರನೇ ದಿನಾಂಕ ಕಾರ್ಯಕ್ರಮದಂತೆ ಎಲ್ಲವೂ ನಡೆಯಿತು—ಮಲೆನಾಡು ಪರಿಷತ್ತಿನ ಸ್ವಾಗತಾಧ್ಯಕ್ಷರಾದ ಶ್ರೀ. ಬದರಿನಾರಾಯಣರು ತಮ್ಮ ಸ್ವಾಗತ ಭಾಷಣದಲ್ಲಿ ಹೀಗೆ ಹೇಳಿದರು—"ನಮ್ಮ ಮಲೆನಾಡಿಗೆ ಉಜ್ವಲ ಪರಂಪರೆ ಇದೆ. ಮಲೆನಾಡಿನ ರಾಜಧಾನಿಯಾದ ನಗರದಲ್ಲಿ ಒಂದು ಲಕ್ಷ ಮನೆಗಳಿದ್ದ ಕಾಲವೂ ಇತ್ತು. ಕದಂಬ ಅರಸರ ರಾಜಧಾನಿಯಾದ ಬನವಾಸಿಯು ಸುಂದರ ನಗರವಾಗಿದ್ದು ಕವಿಹೃದಯವನ್ನು ಸೂರೆ[illegible]ದು ತ್ತದೆ. ಮಲೆನಾಡಿನ ಸಂಸ್ಕೃತಿ ಮತ್ತು ಆಧ್ಯಾತ್ಮಿಕ ಪರಂಪರೆಯನ್ನು ನೋಡಿದರೆ ಯಾರಾದರೂ ಆಸೂಯೆಗೊಳ್ಳಬಹುದು. ಮಲೆನಾಡಿನ ಅಭಿವೃದ್ಧಿಯಾದರೆ ನಮ್ಮ ದೇಶವನ್ನು ಬಿಟ್ಟುಹೋಗುತ್ತಿರುವ ಕೋಟಿಗಟ್ಟಳೆ ರೂಪಾಯಿಗಳನ್ನು ತಡೆಯಬಲ್ಲೆವು. ಈ ಪ್ರದೇಶದಲ್ಲಿ ಎರಡುಕೋಟಿ ಪಲ್ಲ ಭತ್ತವನ್ನು ಹೆಚ್ಚು ಬೆಳೆಯಲು ಅವಕಾಶವಿದ್ದು, ಇದನ್ನು ಸಾಧಿಸಿದರೆ, ೬೦ ಕೋಟಿ ರೂಪಾಯಿಗಳಷ್ಟು ದೇಶಕ್ಕೆ ಉಳಿತಾಯವಾಗುವುದು. ಮಲೆನಾಡಿನಲ್ಲಿ ಬೆಳೆಯುವ ಚಹಾ, ಕಾಫಿ, ಏಲಕ್ಕಿ ಮತ್ತಿತರ ವಸ್ತುಗಳು ನಮಗೆ ಬೇಕಾದಷ್ಟು ಡಾಲರು ಹಾಗು ಸ್ಟರ್ಲಿಂಗುಗಳನ್ನು ದೊರಕಿಸಿ ಕೊಡಬಲ್ಲವು. ಅರಣ್ಯ ಸಂಪತ್ತಿನಿಂದ, ಜಲ ವಿದ್ಯುತ್ತಿನ ಯೋಜನೆಗಳಿಂದ, ಚಿಕ್ಕದೊಡ್ಡ ಉದ್ದಿಮೆಗಳ ಸ್ಥಾಪನೆಯಿಂದ ಹಾಗು ಲೋಹದ ಗಣಿಗಳನ್ನು ಅಗೆಯುವುದರಿಂದ ನಮ್ಮ ಸಮುದ್ರ ವ್ಯಾಪಾರವನ್ನು ೪೦ಂಕೋಟಿ ರೂಪಾಯಿಗಳಷ್ಟು ಏರಿಸಬಹುದು. ಮಲೆನಾಡಿನ ಅಭಿವೃದ್ಧಿ ಯೋಜನೆಯು ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಾದರೂ ಸೇರ್ಪಡುವುದೆಂದು ನಾನು ಆಶಿಸುತ್ತೇನೆ."

ಕನ್ನಡದ ಮಲೆನಾಡಿನಲ್ಲಿ ರಾಜಧಾನಿಯನ್ನು ಕಟ್ಟಿಕೊಂಡು ಆಳಿದ್ದ ಕೆಳದಿಯ ಶಿವಪ್ಪ ನಾಯಕನ ಹೆಸರನ್ನು ಭವ್ಯವಾದ ಸಭಾಮಂಟಪಕ್ಕೆ ನೀಡಿದ್ದರು ಶಿವಪ್ಪನಾಯಕನ ಕಾಲದಲ್ಲಿ ರೂಢವಾದ ಭೂಕಂದಾಯ ಪದ್ಧತಿಯು ಇಂದಿಗೂ ಈ ಭಾಗದಲ್ಲಿ ಅನುಸರಿಸಲ್ಪಡುತ್ತದೆ ಎಂಬುದನ್ನು ಇಲ್ಲಿ ಸ್ಮರಿಸಬಹುದು. ಮಲೆನಾಡಿನ ಮಸ್ತಕವನ್ನು ಎತ್ತಿಹಿಡಿದ ವೀರಪುಂಗವನ ಹೆಸರು ಹೊತ್ತ "ಶಿವಪ್ಪನಾಯಕ ನಗರ"ದಲ್ಲಿ ಮೂರು ದಿನ ಕಾಲ ನಡೆದ ಈ ಸಮ್ಮೇಳನಕ್ಕೆ ಶುಭಕೋರಿ ಶೃಂಗೇರಿಮಠದ ಜಗದ್ಗುರು ಶಂಕರಾಚಾರ್ಯ, ಉಪರಾಷ್ಟ್ರಪತಿ ಡಾ. ರಾಧಾಕೃಷ್ಣನ್, ಬಿಹಾರದ ಗವರ್ನರ ಶ್ರೀ ರಂಗನಾಥ ದಿವಾಕರ, ಕೇಂದ್ರ ಆಹಾರಶಾಖೆಯ ಉಪಮಂತ್ರಿ ಶ್ರೀ ಎಂ. ವಿ. ಕೃಷ್ಣಪ್ಪ, ಗೃಹಶಾಖೆಯ ಉಪಮಂತ್ರಿ ಶ್ರೀ ಬಿ. ಎನ್. ದಾತಾರ, ವಾಣಿಜ್ಯ ಸಚಿವ ಶ್ರೀ ದ. ಪ. ಕಮರಕರ ಉತ್ಪಾದನಾ ಶಾಖೆಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿ, ರೈಲ್ವೆಮಂತ್ರಿ ಶ್ರೀ ಲಾಲ ಬಹಾದ್ದೂರ ಶಾಸ್ತ್ರಿ, ಮೈಸೂರಿನ ರಾಜಪ್ರಮುಖರೇ ಮುಂತಾದವರು ಸಂದೇಶಗಳನ್ನು ಕಳಿಸಿದ್ದರು. ಕೇಂದ್ರ ಸರಕಾರದ ಆಹಾರ ಸಚಿವ ಶ್ರೀ ಕಿದ್ವಾಯಿಯವರೂ ಕೃಷಿಮಂತ್ರಿ ಡಾ ಪಂಜಾಬರಾವ ದೇಶಮುಖರೂ ಸಮ್ಮೇಳನದಲ್ಲಿ ಉಪಸ್ಥಿತರಿದ್ದರು. ಇವರಲ್ಲದೆ ಮೈಸೂರಿನ ಮುಖ್ಯಮಂತ್ರಿ ಶ್ರೀ ಹನುಮಂತಯ್ಯ, ಕಂದಾಯ ಮಂತ್ರಿ ಶ್ರೀ ಕಡಿದಾಳ ಮಂಜಪ್ಪ, ಕೃಷಿ ಮಂತ್ರಿ ಡಾ. ನಾಗಪ್ಪ ಗೌಡ, ಕೇಂದ್ರ ರಾಜ್ಯಪರಿಷತ್ತಿನ ಉಪಸಭಾಪತಿ ಶ್ರೀ. ಎಸ್. ವಿ. ಕೃಷ್ಣಮೂರ್ತಿ ರಾವ್, ಕೊಡಗಿನ ಇಬ್ಬರು ಮಂತ್ರಿಗಳಾದ ಶ್ರೀ ಪೂಣಚ್ಚ ಮತ್ತು ಮಲ್ಲಪ್ಪ ಪಾರ್ಲಿಮೆಂಟ ಸದಸ್ಯರು, ಮಲೆನಾಡು ಪ್ರದೇಶವನ್ನು ಪ್ರತಿನಿಧೀಕರಿಸುವ ಶಾಸನ ಸಭಾ ಸದಸ್ಯರು ಸಮ್ಮೇಳನಕ್ಕೆ ಬಂದಿದ್ದರು. ಸಮ್ಮೇಳನದ ಉದ್ಘಾಟನೆಯನ್ನು ಕೇಂದ್ರದ ಆಹಾರ ಸಚಿವರು ಮಾಡಿದರು. ಈ ಪ್ರದೇಶದಲ್ಲಿ ಅಭಿವೃದ್ಧಿ ಪ್ರಯತ್ನಗಳನ್ನು ನಡೆಸಬೇಕೆಂಬುದರ ಕುರಿತು ಜನರಲ್ಲಿ ತೀವ್ರ ಜಾಗೃತಿ ಮೂಡಿರುವುದನ್ನು ಅವರು ಕಂಡುಕೊಂಡು, ಶ್ಲಾಘಿಸಿದರು ಅಭಿವೃದ್ಧಿಯನ್ನು ಹೊಂದುವ ಮನೋಭಾವವೇ ಭಾರತದ ಶ್ರೇಯಸ್ಸನ್ನು ಮಾಡುತ್ತದೆಂದು ಅವರು ವಿವರಿಸಿದರು ಮುಂದುವರಿದು "ಮಲೆನಾಡಿನ ಅಭಿವೃದ್ಧಿಗೋಸ್ಕರ ಮೊದಲನೇ ಪಂಚವಾರ್ಷಿಕ ಯೋಜನೆಯಲ್ಲಿ ಸ್ವಲ್ಪ ಮಟ್ಟಿನ ಪ್ರಯತ್ನಕ್ಕೆ ಅವಕಾಶ ನೀಡಲ್ಪಟ್ಟಿವೆ. ಎರಡನೇ ಪಂಚ ವಾರ್ಷಿಕ ಯೋಜನೆಯಲ್ಲಿ ಈ ಪ್ರದೇಶದ ಅಭಿವೃದ್ಧಿಯ ಸಂಬಂಧದಲ್ಲಿ ವ್ಯಾಪಕವಾದ ಯೋಜನೆಯನ್ನು ಸೇರಿಸಿಕೊಳ್ಳಲಾಗುವುದು" ಎಂದು ಭರವಸೆ ನೀಡಿದರು. ಕೇಂದ್ರ ಹಾಗು ರಾಜ್ಯ ಸರಕಾರಗಳೊಂದಿಗೆ ಸಹಕರಿಸಿ, ಸಹಾಯವನ್ನು ಪಡೆದುಕೊಂಡು ಮಲೆನಾಡಿನ ಅಭಿವೃದ್ಧಿ ಯೋಜನೆಯೊಂದನ್ನು ಸಿದ್ಧಪಡಿಸಲು ಅವರು ಪ್ರತಿನಿಧಿಗಳನ್ನು ಕೇಳಿಕೊಂಡರು. "ಮೈಸೂರು ಮತ್ತು ಕೊಡಗು ಸರಕಾರಗಳ ಸಹಾಯವನ್ನು ಪಡೆದು ನೀವೆಲ್ಲರೂ ಇನ್ನೆರಡು ವರ್ಷಗಳಲ್ಲಿ ನಿಮ್ಮ ಅಭಿವೃದ್ಧಿಯ ಆಕಾಂಕ್ಷೆಯನ್ನು ಈಡೇರಿಸಿಕೊಳ್ಳುವಿರಿ" ಎಂದವರು ಹೇಳಿದರು.

ಅಧ್ಯಕ್ಷಸ್ಥಾನದಿಂದ ಶ್ರೀ ನಿಜಲಿಂಗಪ್ಪನವರು ಪ್ರಭಾವಶಾಲಿಯಾದ ಭಾಷಣವನ್ನು ಮಾಡಿ, ಮಲೆನಾಡಿನ ಪ್ರಾಚೀನ ಇತಿಹಾಸವನ್ನೂ ಅರ್ವಾಚೀನ ಸ್ಥಿತಿಗತಿಯನ್ನೂ ವಿಮರ್ಶಾತ್ಮಕ ದೃಷ್ಟಿಯಿಂದ ಅವಲೋಕಿಸಿದರು. "ಸಮಾನ ಭೌಗೋಲಿಕ ಮತ್ತು ಭೌತಿಕ ಲಕ್ಷಣಗಳು, ಸಮಾನ ಗುಣ, ಸಮಾನ ಮೂಲ ಸಂಪತ್ತು, ಸಮಾನ ಸಂಸ್ಕೃತಿ, ವಾಸ್ತವಿಕವಾಗಿ ಒಂದೇ ಭಾಷೆಯುಳ್ಳ ಈ ಸಮಗ್ರ ಮಲೆನಾಡು ಒಂದೇ ಸಂಸ್ಥಾನ ಸರಕಾರದ ಆಡಳಿತಕ್ಕೆ ಒಳಪಟ್ಟರೆ, ಒಳ್ಳೆಯ ಲಾಭವಡೆದು ಅಭಿವೃದ್ಧಿಹೊಂದುವುದು" ಎಂಬ ತಮ್ಮ ದೃಢನಿರ್ಧಾರವನ್ನು ಅವರು ಪ್ರಕಟಪಡಿಸಿ, ತನ್ಮೂಲಕ ಕರ್ನಾಟಕ ಏಕೀಕರಣವನ್ನು ಶೀಘ್ರದಲ್ಲಿಯೇ ಸಾಧಿಸಬೇಕೆಂಬ ಭಾವನೆಯನ್ನು ಪ್ರತಿನಿಧಿಗಳಲ್ಲಿ ಮೂಡಿಸಿದರು. ಅವರು ಮಲೆನಾಡಿನ ಸಂಕ್ಷಿಪ್ತ ಇತಿಹಾಸವನ್ನು ನೀಡಿ, ಇಲ್ಲಿರುವ ವ್ಯಕ್ತ ಹಾಗು ಅವ್ಯಕ್ತ ಸಂಪತ್ತಿನ ವಿವರವನ್ನು ಕೊಟ್ಟರು. ಹಾಗೆಯೇ ಅಭಿವೃದ್ಧಿ ಪ್ರಯತ್ನಗಳು ನಡೆಯ ಬೇಕಾದ

(೧೦ನೇ ಪುಟ ನೋಡಿರಿ)

ಸಮರ್ಥ ಸಾಲಗಳು

ಒಬ್ಬನ ಯೋಗ್ಯತೆ ಮತ್ತು ಸಮರ್ಥತೆ ಅನೇಕ ಸಲ ಆತನ ಚಿಲ್ಲರೆ ಸಾಲಗಳ ಹೊರೆಯಿಂದಾಗಿ ಬಹುವಾಗಿ ಕುಂಠಿತ್ತನೆ ಆದರೆ ಈ ಎಲ್ಲಾ ಚಿಲ್ಲರೆ ಸಾಲಗಳನ್ನು ಏಕೀಕರಿಸಿ ಸುಲಭಸಾಧ್ಯವಾದ ಕಂತುಗಳಿಂದ ಸಹಾಯ ಮಾಡುವಂತಾದರೆ ಆತನ ಕಷ್ಟಗಳೆಲ್ಲವೂ ಪರಿಹಾರಹೊಂದಿ ಆತನ ಯೋಗ್ಯತೆ ಹಾಗೂ ಸಮರ್ಥತೆ ಮರಳಿ ಬರುವುದು. ತಿಂಗಳಿಗೆ ರೂಪಾಯಿ 250 . ಯಾ ಅದಕ್ಕಿಂತ ಜಾಸ್ತಿ ಸಂಬಳವಿರುವ ಆಫೀಸರರುಗಳಿಗೆ ಅವರ ಸಂಬಳದ ಆರು ಪಾಲಷ್ಟು ಸಾಲಗಳನ್ನು ಕೊಟ್ಟು ಅದನ್ನು 36 ತಿಂಗಳು ಕಂತುಗಳಿಂದ ಮರುಪಾವತಿ ಪಡೆಯುವ ಹೊಸ ಯೋಜನೆಯೊಂದನ್ನು ನಾವು ಕಂಡುಹಿಡಿದಿದ್ದೇವೆ. ಈ ಸಾಲವನ್ನು ಪಡೆಯಲು ಇನ್ಸೂರೆನ್ಸ್ ಪ್ರೋಸಿ ಮತ್ತು ಒಬ್ಬ ಸಹ ಜ್ಯಾಮೀನುದಾರನು ಅತ್ಯಗತ್ಯ

ಹೆಚ್ಚಿನ ವಿವರಗಳಿಗೆ ಸಮೀಪದ ನಮ್ಮ ಆಫೀಸಿನಲ್ಲಿ ವಿಚಾರಿಸಿರಿ:

THE CANARA INDUSTRIAL & BANKING SYNDICATE LTD.
Estd: 1925 H. O UDIPI, S India
ದಿ ಕೆನರಾ ಇಂಡಸ್ಟ್ರಿಯಲ್ ಎಂಡ್
ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್.,
ಸ್ಥಾಪನೆ: ೧೯೨೫] [ಪ್ರಧಾನ ಕಚೇರಿ: ಉಡುಪಿ. ದ. ಭಾರತ.

ನರಳುವ ಮಾನವತೆಯ ಮೇಲೆ ಕರುಣೆ ತೋರಿಸುವ ದೇವತೆ

ದಾದಿಯರ ತರಬೇತಿಗಾಗಿ ಒದಗಿಸಲಾದ ಸೌಕರ್ಯಗಳು

ಸಂಯುಕ್ತರಾಷ್ಟ್ರ ಸಂಘದ ಜಾಗತಿಕ ಆರೋಗ್ಯ ಸಂಸ್ಥೆಯ ನೇತೃತ್ವದಲ್ಲಿ ಎಂಭತ್ತು ರಾಷ್ಟ್ರಗಳು ಕಳೆದ ವಾರ ಆರೋಗ್ಯ ದಿನಾಚರಣೆಯನ್ನು ನಡೆಸಿದವು. ಭಾರತದಲ್ಲಿ ಸಹ ಅನೇಕ ಕಾರ್ಯಕ್ರಮಗಳೊಂದೊಡಗೂಡಿ ಈ ದಿನವನ್ನು ಸಂಭ್ರಮದಿಂದ ಆಚರಿಸಲಾಯಿತು. ಹೊಸ ದೆಹಲಿಯಲ್ಲಿ ಶೈಕ್ಷಣಿಕ ಪ್ರದರ್ಶನವೊಂದನ್ನು ಏರ್ಪಡಿಸಿದ್ದರು— ಕೇಂದ್ರ ಸರಕಾರದ ಆರೋಗ್ಯ ಮಂತ್ರಿ ರಾಜ ಕುಮಾರಿ ಅಮೃತಕೌರರೇ ಮುಂತಾದವರು ಆರೋಗ್ಯ ರಕ್ಷಣೆಯ ಮಹತ್ವವನ್ನೂ ಈ ಬಗ್ಗೆ ಸರಕಾರ ಕೊಡುತ್ತಿರುವ ಶಿಕ್ಷಣವನ್ನೂ ವಿವರಿಸಿ ಮಾತನಾಡಿದರು. ನಮ್ಮ ಆರೋಗ್ಯಾಭಿವೃದ್ಧಿಗೆ ತಡೆಯನ್ನುಂಟುಮಾಡುತ್ತಿರುವ ಕಾರಣಗಳನ್ನು ಹೇಳುತ್ತಾ "ಭಾರತದಲ್ಲಿ ದಾದಿಯರ ಕೊರತೆಯು ಆರೋಗ್ಯ ಮಟ್ಟವನ್ನು ಎತ್ತರಿಸುವುದಕ್ಕೆ ದೊಡ್ಡ ತೊಡಕಾಗಿರುತ್ತದೆ" ಎಂದವರು ಅಭಿಪ್ರಾಯಪಟ್ಟರು. ಆದುದರಿಂದ ದಾದಿಯರ ಉದ್ಯೋಗದ ಕುರಿತು ಸಾಕಷ್ಟು ಮಾಹಿತಿಯನ್ನು ಹೊಂದಿರುವುದು ಯುಕ್ತವಾಗಿರುತ್ತದೆ.

ನಗೆ ತುಂಬಿದ ಹೂ

ದಾದಿಯರನ್ನು ಅಥವಾ ನರ್ಸಮ್ಮಗಳನ್ನು ಕಾಣಬೇಕಾದರೆ ನಾವು ಆಸ್ಪತ್ರೆಯ ಬಾಗಿಲನ್ನು ತೆರೆದು ಒಳ ಹೋಗಬೇಕಾಗುತ್ತದೆ— ಈ ಯಾತನಾ ಲೋಕದ ಅಸಹ್ಯವನ್ನು ಕಡಿಮೆ ಮಾಡಿ ನರಳುವ ರೋಗಿಗಳಿಗೆ ಸಮಾಧಾನವನ್ನುಂಟುಮಾಡುವ ಜೀವಗಳೆಂದರೇನೆ ದಾದಿಯರು. ಆಸ್ಪತ್ರೆಯಲ್ಲಿ ರೋಗಿಗಳ ಶುಶ್ರೂಷೆಗೆಂದು ನಿಯುಕ್ತರಾಗಿರುವ ಈ ದಾದಿಯರ ಮೇಲೆ ಮೋಹಗೊಂಡು ಮದುವೆಯಾಗುವ ಔತ್ಸುಕ್ಯವನ್ನು ತೋರಿಸಿದ ರೋಗಿಗಳ ಮಾನಸಿಕ ಲೋಕ ಅನೇಕ ಸಣ್ಣ ಕತೆಗಳಿಗೆ ವಸ್ತುವನ್ನು ಒದಗಿಸಿದೆ. ಬರೆಹಗಾರರ ಕೈಯಲ್ಲಿ ನರ್ಸಮ್ಮ ನರಳುವ ಮಾನವತೆಯ ಮೇಲೆ ಕರುಣೆ ತೋರಿಸುವ ದೇವತೆಯಾಗಿ ರೂಪುಗೊಂಡಿರುವಳೆಂದು ಹೇಳಿದರೆ ಅತಿಶಯೋಕ್ತಿಯಾಗದು. ಕರ್ಮವೀರ ಪತ್ರಿಕೆಯ ಲಾಂಗೂಲಾಚಾರ್ಯರ ಮಾತಿನಲ್ಲಿ ದಾದಿಯರು "ಮಂಚಗಳ ನಡುವಣ ದಾರಿಯಲ್ಲಿ ತಮ್ಮ ಧೀರ ಗತಿಯಿಂದ ಸಾಗುತ್ತಿರುವಾಗ ಯಮುನಾ ಪ್ರವಾಹದಲ್ಲಿಯ ಹಂಸದಂತೆ ಕಾಣುತ್ತಾರೆ. ಅವರ ಬಿಳಿ ಉಡುಗೆ, ತುರುಬಿಗೆ ತೊಡಿಸಿದ ಬಿಳಿಯ ಸೇವಾ ಧರ್ಮದ ಕುಲಾವಿ ಎಲ್ಲವೂ ಆಸ್ಪತ್ರೆಯ ಆವರಣದಲ್ಲೊಂದು ನಿರ್ಮಲ ಪ್ರೇಮದ ಸೆಳಕಾಗಿ ಭಾಸವಾಗುತ್ತದೆ.... ಆಸ್ಪತ್ರೆಯನ್ನು ಅಮಾನುಷದಿಂದ ಮಾನುಷವಾಗಿ ಮಾಡುವ ಜೀವಾಳವೆಂದರೆ ದಾದಿಯೇ. ಹೊರಟ ರೋಗಿಯೊಂದಿಗೆ ಡಾಕ್ಟರರು ಸ್ಮರಣೆ ತಪ್ಪಬಹುದು. ಅವರ ಮುಖ ಚಿಂತೆಯಿಂದ ಸಿರಿಗಟ್ಟಬಹುದು. ಆದರೆ ನರ್ಸಳು ಮಾತ್ರ ಶಾಂತಧೀರ ನಗೆಯ ಹೂವನ್ನು ತುಟಿಯಲ್ಲಿ ಅರಳಿಸಿಕೊಂಡು ಅಭಯವರದಂತೆ ಸುತ್ತು ತಿರುಗುವಳು. ಅವಳು ಭಾವನಾಪರವಶಳಲ್ಲದೆಯೂ ಕರುಣಾಳು; ಹುಟ್ಟು ಸಾವಿನ ವೈಪರೀತ್ಯಗಳನ್ನರಿತೂ ಉದಾಸೀನಳು. ನಿಮ್ಮಲ್ಲಿ ನರ್ಸ ಜಾತಿಯ ಬಗ್ಗೆ ತಿರಸ್ಕಾರವಿರಬಹುದು-ಅವಳ ಬಳೆ ಇಲ್ಲದ ಕೈಗಳನ್ನು ಅಂಚು ಸೆರಗಿಲ್ಲದ ಬಿಳಿ ಸೀರೆಯನ್ನು ಎಲ್ಲೆ ಕಟ್ಟಿಲ್ಲದ ನೀತಿಯ ಕುರುಹೆಂದು ಟೀಕಿಸಬಹುದು. ಆದರೆ ಇದೆಲ್ಲವೂ ನೀವೂ ಒಮ್ಮೆ ಆಸ್ಪತ್ರೆ ಸೇರುವ ವರೆಗೆ ಮಾತ್ರ..." ಆಸ್ಪತ್ರೆಯಲ್ಲಿ ದಾದಿಯು ಊರ್ಧ್ವ ಶ್ವಾಸಬಿಡುತ್ತಿರುವ ರೋಗಿಯೊಬ್ಬನ ಮುಖದ ಮೇಲ್ಗಡೆ ಬಾಗಿ ಸಕರುಣ ನೇತ್ರದಿಂದ ಅನಿವಾರ್ಯವಾದುದಕ್ಕೆ ದರವಿಷಣ್ಣ ಮುಖ ಮುದ್ರೆ ಧರಿಸಿ 'ಅಯ್ಯೋ ಪಾಪ' ಎಂದು ನಿಟ್ಟುಸಿರು ಬಿಡುವಾಗ, ಲಭಿಸಿದ ಸಾವೇ ಸಾರ್ಥಕವೆಂದು ಭಾವಿಸಿದರೆ ತಪ್ಪಿಲ್ಲ.

ತಿರಸ್ಕೃತ ಉದ್ಯೋಗ

ಆಸ್ಪತ್ರೆಯ ನರಕವನ್ನು ಸ್ವರ್ಗ ಸದೃಶ ಮಾಡುವ ದಾದಿಯರ ಉದ್ಯೋಗದ ಕಡೆಗೆ ಮಾತ್ರ ಜನರು ಆದರ ಭಾವನೆಯಿಂದ ನೋಡುತ್ತಿಲ್ಲ. ಭಾರತದಲ್ಲಿ ಅನೇಕ ಶತಮಾನಗಳಿಂದ ರೂಢನಾಗಿರುವ ಹಳೆಯ ತಿರಸ್ಕಾರ ಬುದ್ಧಿ ಇನ್ನೂ ಸುಧಾರಿಸಿರುವುದಿಲ್ಲ. ದಾದಿತನವು ಸಾಕಷ್ಟು ಜನಪ್ರಿಯತೆಯನ್ನುಗಳಿಸಿಲ್ಲ-ವಿಧವೆಯರ ಮತ್ತು ಅನಾಥ ಸ್ತ್ರೀಯರ ಜೀವನೋಪಾಯದ ಸಾಧನವಾಗಿಯಷ್ಟೇ ದಾದಿತನ ಪರಿಣಮಿಸಿದೆ. ಕುಲೀನ ಸ್ತ್ರೀಯರು ಈ ಉದ್ಯೋಗದಲ್ಲಿ ಸೇರಲು ಹಿಂಜರಿಯುವರು. ನೂರು ವರ್ಷಗಳ ಹಿಂದೆ ಇಂಗ್ಲೆಂಡಿನಲ್ಲೂ ಇಂಥದೇ ಪರಿಸ್ಥಿತಿ ಇತ್ತು. ಆದರೆ ಫ್ಲೋರೆನ್ಸ ನೈಟಿಂಗೇಲಳೆಂಬ ಪ್ರಸಿದ್ಧ ದಾದಿಯು ಮಹತ್ವದ ಕಾರ್ಯಗಳನ್ನು ಸಾಧಿಸಿ, ಜನರ ಕಣ್ಣಿಗೆ ಹಚ್ಚಿದ್ದ ಪರೆಯನ್ನು ಕಳಚಿದಳು. ಪೂರ್ವ ಗ್ರಹದೂಷಿತ ಭಾವನೆಯನ್ನು ಗೌರವಾದರಗಳು ಆಕ್ರಮಿಸುವಂತೆ ಅವಳು ಮಾಡಿದಳು. ಈ ವರ್ಷ ಅವಳ ಶತಸಾಂವತ್ಸರಿಕೋತ್ಸವವನ್ನು ಜಾಗತಿಕ ಆರೋಗ್ಯ ಸಂಸ್ಥೆ ಆಚರಿಸಲು ನಿರ್ಧರಿಸಿ, ದಾದಿಯರ ಗೌರವ ಮುಕುಟವನ್ನು ಲೋಕಕ್ಕೆ ಎತ್ತಿ ತೋರಿಸಿದೆ. ನೋಡಿದರೆ-ನರ್ಸಮ್ಮನ ವೃತ್ತಿ ನಮ್ಮ ಪರಂಪರೆಗೆ ಹೊಸತಾದುದೇನೂ ಅಲ್ಲ. ಕ್ರಿಸ್ತಪೂರ್ವ ೩೦೦ನೇ ಸಾಲಿನಷ್ಟು ಪುರಾತನವಾದ ಭಾರತೀಯ ವೈದ್ಯ ಗ್ರಂಥಗಳಲ್ಲಿ ರೋಗಿಗಳ ಉಪಚಾರ ಮಾಡುವ ದಾದಿತನವು ಶುಶ್ರೂಷೆಯ ಮುಖ್ಯಾಂಗಗಳಲ್ಲಿ ಒಂದೆಂದು ಉಲ್ಲೇಖಿಸಲ್ಪಟ್ಟಿದೆ. ಆದರೆ ಆಧುನಿಕ ರೂಪವನ್ನು ಧರಿಸಿ ದಾದಿತನವು ಭಾರತದಲ್ಲಿ ಕಾಲಿಟ್ಟುದು ಮಾತ್ರ ಇತ್ತೀಚೆಗೆ— ೧೮೮೬ನೇ ಇಸವಿಯ ಸುಮಾರಿಗೆ ಪಾಶ್ಚಾತ್ಯ ದೇಶಗಳಿಂದ ನರ್ಸಮ್ಮಗಳ ಉದ್ಯೋಗವು ಪ್ರೇರಣೆಯನ್ನೂ ಪ್ರೋತ್ಸಾಹವನ್ನೂ ಚೈತನ್ಯವನ್ನೂ ತುಂಬಿಕೊಂಡು ಬಂದು, ಭಾರತದ ನೆಲದಲ್ಲಿ ಬೇರು ಬಿಟ್ಟಿತು. ಭಾರತದಲ್ಲಿ ಸರ್ವಪ್ರಥಮವಾಗಿ ದಾದಿಯರ ಶಾಲೆಯೊಂದು ಮುಂಬಯಿಯ ಕಾಮಾ ಆಸ್ಪತ್ರೆಯಲ್ಲಿ ೧೮೮೬ನೇ ಇಸವಿಯಂದು ತೆರೆಯಲ್ಪಟ್ಟಿತು. ಮುಂಬಯಿ ಪ್ರಾಂತದ ದಾದಿಯರ ಸಂಘವು ೧೯೧೧ರಿಂದ ದಾದಿಯರ ಹೆಸರು ಭರ್ತಿ ಮಾಡಿಕೊಳ್ಳುವುದಕ್ಕೆ ಪ್ರಾರಂಭಿಸಿತು. ಈ ದಿಸೆಯಲ್ಲಿ ಸರಕಾರೀ ಮಟ್ಟದಿಂದ ಕೆಲಸ ತೊಡಗಿದ್ದು ಆ ಬಳಿಕ.

ದಾದಿಯರ ಅಭಾವ

ನಮ್ಮ ದೇಶದಲ್ಲಿ ಯೋಗ್ಯ ತರಬೇತಿಯನ್ನು ಹೊಂದಿದ ದಾದಿಯರ ಕೊರತೆ ಎಷ್ಟರ ಮಟ್ಟಿಗಿದೆಯೆಂಬುದನ್ನು ಮಾತಿಲ್ಲದೆ ಅಂಕೆಸಂಖ್ಯೆಗಳಿಂದಲೇ ನಾಟಕೀಯವಾಗಿ ತೋರಿಸಿಕೊಡಬಹುದು-ಡೆನ್ಮಾರ್ಕ ದೇಶದ ಜನ ಸಂಖ್ಯೆ ೪೦ ಲಕ್ಷಕ್ಕೂ ಕಡಿಮೆ; ಅಲ್ಲಿ ೧೬೦೦೦ ದಾದಿಯರು ಇರುವರು. ಬ್ರಿಟನ್ನಿನ ಜನ ಸಂಖ್ಯೆ ೫ ಕೋಟಿಯಾದರೆ ಅಲ್ಲಿರುವ ದಾದಿಯರು ೧೩೦,೦೦೦. ಭಾರತದ ೩೬ ಕೋಟಿ ಜನತೆಗೆ ಇರುವುದು ೫೦೦೦ ವಿದ್ಯಾರ್ಥಿ ದಾದಿಯರು; ಹಾಗು ೧೨೦೦೦ ಪದವೀಧರ ದಾದಿಯರು. ಇಂಗ್ಲೆಂಡಿನಲ್ಲಿ ೩೦೦ ಜನಕ್ಕೆ ಒಬ್ಬ ನರ್ಸಮ್ಮ ಇದ್ದಾಳೆ ಭಾರತದಲ್ಲಿ ೪೩೦೦೦ ಮಂದಿಗೆ ಒಬ್ಬಳೂ ದೊರಕುವುದಿಲ್ಲ! ನಮ್ಮ ಆರೋಗ್ಯ ಪರಿಸ್ಥಿತಿಯನ್ನು ಸುಧಾರಿಸಬೇಕೆಂಬ ಹಂಬಲವನ್ನಿಟ್ಟುಕೊಂಡವರು ತೀವ್ರ ಪರ್ಯಾಲೋಚಿಸತಕ್ಕ ವಿಷಯ ಇದಾಗಿರುತ್ತದೆ. ನಾವು ಗ್ರಾಮಾಂತರ ಪ್ರದೇಶದ ಸಾರ್ವಾಂಗಿಕ ಅಭಿವೃದ್ಧಿಯನ್ನು ಮಾಡುವ ಕಾರ್ಯಕ್ರಮಗಳನ್ನು ಇಟ್ಟುಕೊಂಡಿದ್ದೇವೆ. ಜನಪದ ಅಭಿವೃದ್ಧಿ ಯೋಜನೆಯಲ್ಲಿ ಪ್ರತಿಯೊಂದೂ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಒಬ್ಬ ಮಹಿಳಾ ಆರೋಗ್ಯ ಸಂದರ್ಶಕಳೂ ನಾಲ್ವರು ಸೂಲಗಿತ್ತಿಯರೂ ಬೇಕೆಂದು ಹೇಳಲ್ಪಟ್ಟಿದೆ ಇದರನ್ವಯ ೬೦೦ ಮಹಿಳಾ ಸಂದರ್ಶಕರೂ ೨೪೦೦ ದಾದಿಯರೂ ಬೇಕಾಗುವರು ಆದರೆ, ಮೊನ್ನೆ ತಾನೆ ಪ್ರಕಟಗೊಂಡ ವರದಿಯ ಪ್ರಕಾರ ದಾದಿಯರ ಹಾಗು ಮಹಿಳಾ ಸಂದರ್ಶಕರ ಕೊರತೆಯು ತೀವ್ರವಾಗಿ ಕಂಡುಬರುತ್ತದೆ ಸಾಂಪ್ರದಾಯಿಕ ಮನೋವೃತ್ತಿಯ ಹಳ್ಳಿಯ ಹೆಂಗಸರು ಈ ಉದ್ಯೋಗವನ್ನು ಆಕರ್ಷಕವೆಂದು ಭಾವಿಸುವುದಿಲ್ಲ. ನಮ್ಮಲ್ಲಿ ತರಬೇತಿ ಸೌಕರ್ಯಗಳನ್ನು ಒದಗಿಸುವ ಒಂಭತ್ತು ಆರೋಗ್ಯ ಶಾಲೆಗಳು ಇದ್ದರೂ ಅವುಗಳಲ್ಲಿ ೭೦ ಮಂದಿ ಮಾತ್ರ ಶಿಕ್ಷಣ ಹೊಂದುತ್ತಿರುವರು. ೧೫೦ ಆರೋಗ್ಯ ಸಂದರ್ಶಕರು ಇಲ್ಲಿ ಸುಲಭದಲ್ಲಿ ತರಬೇತಿ ಹೊಂದಲು ಎಡೆ ಇದೆ ಆದುದರಿಂದ ಎರಡು ನಮೂನೆಯ ಶಿಕ್ಷಣವನ್ನು ನೀಡಲು ಈಗ ನಿರ್ಧರಿಸಿದ್ದಾರೆ — ಆವಶ್ಯಕ ಶಾಲಾ ಶಿಕ್ಷಣ ಹಾಗು ಸೂಲಗಿತ್ತಿಯ ಅನುಭವ ಇದ್ದವರಿಗೆ ೧೨ ತಿಂಗಳ ತರಬೇತಿ ಕೊಡುವುದು ಒಂದು ರೀತಿ; ಇನ್ನೊಂದು ಪದ್ಧತಿಯಂತೆ ಮೆಟ್ರಿಕು ಶಿಕ್ಷಣ ಹೊಂದಿದವರಿಗೆ ಸೂಲಗಿತ್ತಿ ಹಾಗು ಆರೋಗ್ಯ ಸಂದರ್ಶಕರ ಶಿಕ್ಷಣವನ್ನು ಸಂಯುಕ್ತ ರೂಪದಲ್ಲಿ ಎರಡೂವರೆ ವರ್ಷಗಳ ವರೆಗೆ ಕೊಡಲಾ

(೧೧ನೇ ಪುಟ ನೋಡಿರಿ)

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್

ಸ್ಥಾಪನೆ: ೧೯೩೫] [ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ಭಾರತದ ಸುಭದ್ರ ವಿಮಾ ಕಂಪೆನಿಗಳಲ್ಲಿ "ಕೆನರಾ ಮ್ಯೂಚುವಲ್" ಎಣೆ ಇಲ್ಲದ ವಿಶಿಷ್ಟ ಸ್ಥಾನವನ್ನು ಗಳಿಸಿದೆ. ಇದು ಮ್ಯೂಚುವಲ್ ಕಂಪೆನಿಯಾಗಿ ಘಟಿತವಾಗಿದ್ದು, ಪಾಲುದಾರ ಭಂಡವಾಳಿಗರಿಲ್ಲದಿರುವುದರಿಂದ, ಕಂಪೆನಿಯ ಸರ್ವ ಲಾಭವನ್ನೂ ಪಕ್ಕೆ ಹೊಂದಿದ ಪಾಲಿಸಿದಾರರೇ ತಮ್ಮಲ್ಲಿ ಹಂಚಿಕೊಳ್ಳುವರು. ಪ್ರಾಗತಿಕ ಬಿಗುವಾದ ತಳಹದಿಯ ಮೇಲೆ ನಡೆಸಿದ ತನ್ನೆಲ್ಲಾ ವಿಮಾ ಗಣನೆಗಳಲ್ಲಿ ಉಳಿತಾಯವನ್ನು ತೋರಿಸಿದುದು ಮಾತ್ರವಲ್ಲದೆ, ಸ್ಥಾಪಿತವಾದಂದಿನಿಂದಲೂ ಇದು ಬೋನಸು ಹಂಚಿದೆ. ಪಾಲಿಸಿದಾರರ ಹಿತದೃಷ್ಟಿಯೇ ಧ್ಯೇಯವಾಗುಳ್ಳ ಈ ಪ್ರಗತಿಶೀಲ ಮ್ಯೂಚುವಲ್ ಕಂಪೆನಿಯಲ್ಲಿ ಇಂದೇ ವಿಮೆ ಇಳಿಸಿ, ನಿಮ್ಮ ಕುಟುಂಬದ ಭದ್ರತೆಯನ್ನು ಕಾಯ್ದುಕೊಳ್ಳಿರಿ.

THE CANARA MUTUAL ASSURANCE COMPANY, LTD.,

Estd: 1935] [Head Office: UDIPI, S. INDIA.

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಷಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುದ್ಧಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. ೩—೮—೦

ಸಣ್ಣ ಬಾಟ್ಲಿಗೆ ರೂ. 2—0-0

ಶ್ರೀ ರಾಮತೀರ್ಥ ಯೋಗಾಶ್ರಮ,

ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಶಿಕ್ಷಣ ಮಾಧ್ಯಮದ ಬಗ್ಗೆ ಕಾಂಗ್ರೆಸಿನ ಅಭಿಪ್ರಾಯ

ಪ್ರಾದೇಶಿಕ ಹಾಗು ರಾಷ್ಟ್ರಭಾಷೆಗಳಿಗೆ ಪ್ರೋತ್ಸಾಹ ಕೊಡಲ್ಪಟ್ಟರೂ ಇಂಗ್ಲೀಷನ್ನು ಬಿಟ್ಟುಗೊಡುವುದಿಲ್ಲ

ಮೊನ್ನೆ ಐದನೇ ದಿನಾಂಕ ಹೊಸ ದಿಹಲಿಯಲ್ಲಿ ಕಾಂಗ್ರೆಸ ಕಾರ್ಯಕಾರೀ ಸಮಿತಿಯು ಸಭೆಸೇರಿದಾಗ ಶಿಕ್ಷಣ ಮಾಧ್ಯಮದ ವಿಷಯದಲ್ಲಿ ಕಾಂಗ್ರೆಸಿನ ಧೋರಣೆಯೇನೆಂಬುದನ್ನು ಮರಳಿ ಸ್ಪಷ್ಟೀಕರಿಸುವ ಗೊತ್ತುವಳಿಯೊಂದನ್ನು ಸ್ವೀಕರಿಸಿತು. ಅಖಿಲಭಾರತ ಸಾರ್ವಜನಿಕ ಆಡಳಿತರಂಗದಲ್ಲೂ ಶಾಲಾ ಕಾಲೇಜುಗಳಲ್ಲಿಯೂ ಹಿಂದೀಯನ್ನು ಕ್ರಮೇಣ ಈಗ ಇಂಗ್ಲೀಷು ಆಕ್ರಮಿಸಿರುವ ಸ್ಥಾನಕ್ಕೊಯ್ಯುವುದು ಕಾಂಗ್ರೆಸಿನ ನಿಲುವೆಯೆಂದು ಗೊತ್ತುವಳಿ ತಿಳಿಸುತ್ತದೆ. ಭಾರತದ ಸಂವಿಧಾನದಲ್ಲಿ ಉಲ್ಲೇಖಿಸಲ್ಪಟ್ಟಂತೆ, ಇನ್ನು (ಅಂದರೆ ೧೯೫೦ರಿಂದ) ಹದಿನೈದು ವರ್ಷಗಳ ಅವಧಿಯಲ್ಲಿ ಹಿಂದೀ ಭಾಷೆಯು ಸಾರ್ವತ್ರಿಕ ಬೆಳವಣಿಗೆಯನ್ನು ಹೊಂದಿ ಸರಕಾರದ ವ್ಯವಹಾರಗಳನ್ನು ಸಾಗಿಸುವುದಕ್ಕೆ ಸಮರ್ಥವಾಗಬೇಕೆಂಬ ಉದ್ದೇಶದಿಂದ ಕೇಂದ್ರ ಶಿಕ್ಷಣ ಮಂತ್ರಾಲಯವು ಐದೈದು ವರ್ಷಗಳ ಮೂರು ಘಟ್ಟಗಳುಳ್ಳ ಕಾರ್ಯಕ್ರಮವನ್ನು ಸಿದ್ಧಗೊಳಿಸಿದ್ದು–ಕಾಂಗ್ರೆಸು ಇದಕ್ಕೆ ಮನ್ನಣೆಯನ್ನು ನೀಡಿದೆ. ಶಿಕ್ಷಣ ಮಾಧ್ಯಮದ ಪ್ರಶ್ನೆಯು ಬಹಳ ಮಹತ್ವದಿಂದ ಕೂಡಿದ ವಿಷಯವಾಗಿರುವುದರಿಂದ ಗೊತ್ತುವಳಿಯ ಪೂರ್ತಿಪಾಠವನ್ನು ಕೆಳಗೆ ಕೊಟ್ಟಿದ್ದೇವೆ.

ವಾಙ್ಮಯದ ಅಭಿವೃದ್ಧಿ

ಶಾಲೆ ಮತ್ತು ಕಾಲೇಜುಗಳಲ್ಲಿ ಶಿಕ್ಷಣ ಮಾಧ್ಯಮದ ವಿಷಯದಲ್ಲಿ ಅನುಸರಿಸಬೇಕಾದ ಧೋರಣೆಯ ಬಗ್ಗೆ ಕಾಂಗ್ರೆಸು ಮೊದಲಿಂದ ಮೇಲೆ ತನ್ನ ನಿಲುಮೆಯನು ಸ್ಪಷ್ಟೀಕರಿಸುತ್ತಾ ಬಂದಿದೆ. ಈ ಕುರಿತು ೫–೮–೧೯೪೯ ಮತ್ತು ೧೭–೫–೧೯೫೪ನೇ ದಿನಾಂಕಗಳಲ್ಲಿ ಗೊತ್ತುವಳಿಗಳು ಸಹ ಸ್ವೀಕಾರಗೊಂಡಿವೆ. ಭಾರತದ ಸಂವಿಧಾನವು ಹಿಂದೀ [illegible] ಭಾರತ ರಾಷ್ಟ್ರೀಯ ಭಾಷೆಯೆಂದು ಮನ್ನಿಸಿದೆ; ಮತ್ತು ಇನ್ನುಳಿದ ಪ್ರಾದೇಶಿಕ ಭಾಷೆಗಳಿಗೆ ಸಹ ರಾಷ್ಟ್ರೀಯ ಪ್ರಾಮುಖ್ಯತೆಯನ್ನು ಸಂವಿಧಾನ ಕೊಟ್ಟಿದೆ. ಸರಕಾರೀ ಮತ್ತು ಇನ್ನಿತರ ಉದ್ದೇಶಗಳಿಗಾಗಿ ಉಪಯೋಗಿಸಲ್ಪಡುವಂತೆ ಹಿಂದೀಯನ್ನು ಪ್ರಾದೇಶಿಕ ಹಾಗೂ ರಾಷ್ಟ್ರಭಾಷೆ ಎಂಬೆರಡೂ ರೀತಿಯಲ್ಲಿ ಶಿಕ್ಷಣ ಹಾಗು ಇನ್ನಿತರ ಮಾರ್ಗಗಳಿಂದ ಅಭಿವೃದ್ಧಿಗೊಳಿಸುವುದು ಸರಕಾರದ ಧ್ಯೇಯವಾಗತಕ್ಕದ್ದು. ಅದೇ ಕಾಲಕ್ಕೆ ಸಂವಿಧಾನದಲ್ಲಿ ಉಲ್ಲೇಖಿಸಲ್ಪಟ್ಟಂತಹ ಇನ್ನಿತರ ಪ್ರಾದೇಶಿಕ ಭಾಷೆಗಳಿಗೂ ಪೂರ್ಣ ಪ್ರೋತ್ಸಾಹವನ್ನು ನೀಡತಕ್ಕದ್ದು. ಭಾರತದ ಎಲ್ಲ ಭಾಷೆಗಳ ಮುಖಾಂತರ ಭಾರತೀಯ ವಾಙ್ಮಯದ ಅಭಿವೃದ್ಧಿಯೇ ನಮ್ಮ ಮುಖ್ಯ ಉದ್ದೇಶವಾಗಿರಬೇಕಾಗಿದ್ದು, ಈ ಭಾಷೆಗಳೆಲ್ಲ ನಿಕಟ ಸಂಬಂಧವನ್ನು ಅತ್ಯವಶ್ಯವಾಗಿ ನೆಲೆಗೊಳಿಸಬೇಕು. ಅಖಿಲ ಭಾರತ ಸ್ವರೂಪದ ರಾಷ್ಟ್ರಭಾಷೆಯಾದ ಹಿಂದೀಯು ಶಾಲಾ ಕಾಲೇಜುಗಳ ವಿವಿಧ ಮಟ್ಟಗಳಲ್ಲಿ ಕಡ್ಡಾಯದ ವಿಷಯವಾಗಿರಬೇಕು; ಮತ್ತು ಹಿಂದೀ ಮಾತನಾಡುವ ಪ್ರದೇಶದಲ್ಲಿ ಇರುವವರು ಭಾರತದ ಇತರ ಭಾಷೆಗಳಲ್ಲಿ ಯಾವುದಾದರೊಂದನ್ನು ಕಲಿಯಬೇಕು.

ಇಂಗ್ಲಿಷಿನ ಸ್ಥಾನ

ಭಾರತದಲ್ಲಿ ಈಗ ಇಂಗ್ಲಿಷು ಪಡೆದಿರುವ ಸ್ಥಾನಕ್ಕೆ ಹಿಂದೀಯು ಬರುವುದು ಅಪೇಕ್ಷಣೀಯವಾದರೂ ವಿವಿಧ ಕ್ಷೇತ್ರಗಳಲ್ಲಿಯ ಚಟುವಟಿಕೆಗಳೊಡನೆ ನಿಕಟಸಂಪರ್ಕವಿಟ್ಟುಕೊಳ್ಳಲು ಹಾಗೂ ವಿದೇಶೀ ವಾಙ್ಮಯ ಮತ್ತು ಪ್ರಚಲಿತ ವಿಚಾರಪ್ರಣಾಳಿಯನ್ನು ಗ್ರಹಿಸಲು ವಿದೇಶೀ ಭಾಷಾಜ್ಞಾನ ಪರಿಚಯ ಬೇಕಾಗುವುದು. ಇದರಿಂದ ಭಾರತದ ಭಾಷೆ ಮತ್ತು ವಾಙ್ಮಯದ ಅಭಿವೃದ್ಧಿಗೂ ನೆರವು ದೊರಕುವುದು. ಯುರೋಪು ಮತ್ತು ಏಶಿಯಾದಲ್ಲಿರುವ ಎಲ್ಲ ಪ್ರಮುಖ ಭಾಷೆಗಳ ಅಭ್ಯಾಸವನ್ನು ಮಾಡಿಕೊಳ್ಳುವುದು ಇಷ್ಟವಾಗಿರುತ್ತವೆ. ಆದರಲ್ಲೂ ನಮಗೆ ಬಹಳ ವರ್ಷಗಳಿಂದ ನಿಕಟ ಸಂಪರ್ಕವಿರುವ ಮತ್ತು ಜಾಗತಿಕ ವ್ಯವಹಾರದಲ್ಲಿ ಪ್ರಮುಖ ಸ್ಥಾನವನ್ನು ಪಡೆದಿರುವ ಇಂಗ್ಲಿಷದ ಶಿಕ್ಷಣಕ್ಕೆ ಪ್ರೋತ್ಸಾಹವನ್ನು ನೀಡುವುದು ಅಗತ್ಯವೆಂದು ಕಂಡುಬರುತ್ತದೆ.

ಪ್ರಾರಂಭಿಕ ಘಟ್ಟ

ಪ್ರಾಥಮಿಕ ಮಟ್ಟದಲ್ಲಿ ಮಗುವಿನ ಪಾಲಕರ ಇಚ್ಛೆಯಂತೆ ಆದರ ತಾಯ್ನುಡಿಯಲ್ಲಿಯೇ ಶಿಕ್ಷಣ ಕೊಡಲ್ಪಡಬೇಕು. ಸಾಮಾನ್ಯವಾಗಿ ಇದು ಆ ಪ್ರದೇಶದ ಅಥವಾ ರಾಜ್ಯದ ಭಾಷೆಯಾಗಿರುವುದು. ಗುಡ್ಡಗಾಡು ಪ್ರದೇಶಗಳಲ್ಲಿ ಅಲ್ಲಿಯ ಮಕ್ಕಳ ಶಿಕ್ಷಣ ತಾಯ್ನುಡಿಯಲ್ಲಿಯೇ ನಡೆಯಬೇಕು. ದೊಡ್ಡ ದೊಡ್ಡ ನಗರಗಳಲ್ಲಿ ಅಲ್ಲಿಯ ಪ್ರಾದೇಶಿಕಭಾಷೆಯಲ್ಲದೆ ಪರಭಾಷೆಯನ್ನಾಡುವ ಜನರು ಸಾಕಷ್ಟು ಸಂಖ್ಯೆಯಲ್ಲಿದ್ದು, ತಾಯ್ನುಡಿಯಲ್ಲೇ ಮಕ್ಕಳಿಗೆ ಶಿಕ್ಷಣ ಕೊಡಬೇಕೆಂಬ ಬೇಡಿಕೆ ಮುಂದಿಸಲ್ಪಟ್ಟಲ್ಲಿ ಅಲ್ಲಿ ಸರಕಾರ ಅಂತಹ ಪ್ರಾಥಮಿಕ ಶಾಲೆಗಳನ್ನು ನಡೆಸತಕ್ಕದ್ದು. ದ್ವಿಭಾಷಾ ಪ್ರದೇಶಗಳಲ್ಲಿ ಆದರಲ್ಲೂ ವಿಶೇಷವಾಗಿ ಎರಡು ರಾಜ್ಯಗಳ ಸೀಮಾವಲಯದಲ್ಲಿ ಆ ಪ್ರದೇಶದ ಎರಡೂ ಭಾಷೆಗಳಲ್ಲಿ ಪ್ರಾಥಮಿಕ ಶಿಕ್ಷಣ ಕೊಡುವ ಏರ್ಪಾಡು ಇರಬೇಕು. ಮಾಧ್ಯಮಿಕ ಮಟ್ಟದಲ್ಲಿ ಸಾಮಾನ್ಯವಾಗಿ ಶಿಕ್ಷಣವು ಪ್ರಾದೇಶಿಕ ಭಾಷೆಯಲ್ಲಿಯೇ ಕೊಡಲ್ಪಡಬೇಕು. ಸಾಕಷ್ಟು ದೊಡ್ಡ ಪ್ರಮಾಣದಲ್ಲಿ ವಿದ್ಯಾರ್ಥಿಗಳಿದ್ದರೆ, ಬೇರೆ ಭಾಷೆಯಲ್ಲೂ ಶಿಕ್ಷಣ ಕೊಡಬಹುದು. ಮಾಧ್ಯಮಿಕ ಮಟ್ಟದಲ್ಲಿ ಅಖಿಲಭಾರತ ಸ್ವರೂಪದ ರಾಷ್ಟ್ರಭಾಷೆಯಾದ ಹಿಂದೀಯು ಕಡ್ಡಾಯದ ದ್ವಿತೀಯ ಭಾಷೆಯಾಗಿರಬೇಕು.

ವಿಶ್ವವಿದ್ಯಾಲಯದಲ್ಲಿ

ವಿಶ್ವವಿದ್ಯಾಲಯಗಳ ಮಟ್ಟದಲ್ಲಿ ಸಹ ಪ್ರಾದೇಶಿಕ ಭಾಷೆಯಲ್ಲಿಯೇ ಶಿಕ್ಷಣ ಕೊಡಬೇಕು— ಬೇಕೆನಿಸಿದರೆ, ಹಿಂದೀಯನ್ನೂ ಶಿಕ್ಷಣ ಮಾಧ್ಯಮವಾಗಿ ಉಪಯೋಗಿಸಬಹುದು. ಪ್ರಾದೇಶಿಕ ಭಾಷೆಯಲ್ಲಿ ಶಿಕ್ಷಣ ಕೊಡುವುದು ನಡೆದಿದ್ದರೂ ಸಹ ಶಿಕ್ಷಕರಿಗೆ ಹಿಂದೀಯಲ್ಲಿ ಮತ್ತು ಆಗಾಗ ಇಂಗ್ಲೀಷಿನಲ್ಲಿ ಭಾಷಣ ಮಾಡಲು ಬಾಗಿಲು ತೆರೆದಿರಬೇಕು. ಇದರಿಂದ ಅಂತರ್-ಪ್ರಾಂತೀಯ ಸಾಂಸ್ಕೃತಿಕಸಂಪರ್ಕವು ವಿಕಾಸಹೊಂದುವುದು. ವೈಜ್ಞಾನಿಕ ಮತ್ತು ತಾಂತ್ರಿಕ ವಿಷಯವನ್ನು ಕಲಿಸುವಾಗ ಇಂಗ್ಲೀಷಿನಿಂದ ಹಿಂದೀ ಅಥವಾ ಪ್ರಾದೇಶಿಕ ಭಾಷೆಗೆ ಆಗಬೇಕಾದ ಬದಲಾವಣೆಯು ಕ್ರಮೇಣವೂ ಶಿಕ್ಷಣ ಮಟ್ಟಕ್ಕೆ ಭಂಗಬಾರದಂತೆಯೂ ಆಗಬೇಕು. ಕೆಲ ವಿಷಯಗಳ ಮಟ್ಟಿಗೆ ಸಂಕ್ರಮಣ ಅವಧಿಯಲ್ಲಿ ಹಿಂದೀ ಅಥವಾ ಪ್ರಾದೇಶಿಕ ಭಾಷೆ ಮತ್ತು ಇಂಗ್ಲೀಷು ಎರಡನ್ನೂ ಉಪಯೋಗಿಸುವುದು ಉಚಿತವಾದೀತು. ಒಂದು ವಿದೇಶೀ ಭಾಷೆಯ ಜ್ಞಾನ ಬರುವುದು ಅಪೇಕ್ಷಣೀಯವಾದುದರಿಂದ ಇದನ್ನು ಹೈಸ್ಕೂಲು ಮಟ್ಟದಲ್ಲಿ ತೊಡಗಿ, ವಿಶ್ವವಿದ್ಯಾಲಯದಲ್ಲಿ ಮುಂದುವರಿಸಬೇಕು.

ನೌಕರಿ ಪರೀಕ್ಷೆಗಳು

ಅಖಿಲ ಭಾರತ ಸಾರ್ವಜನಿಕ ಆಡಳಿತ ಮಂಡಳದ ಪರೀಕ್ಷೆಗಳಲ್ಲಿ ಮಾಧ್ಯಮದ ಬಗ್ಗೆ ಸ್ವೀಕೃತವಾದ ಗೊತ್ತುವಳಿಯು ಹಿಂದೀ ಭಾಷೆಯಲ್ಲಿ ಪರೀಕ್ಷೆಗಳನ್ನು ನಡೆಸುವಂತೆ ಪ್ರಗತಿಪರ ಕ್ರಮಗಳನ್ನು ಕೈಗೊಳ್ಳಬೇಕೆಂದು ಹೇಳುತ್ತದೆ. ಹಿಂದೀಯೇತರ ಪ್ರಾದೇಶಿಕ ಭಾಷೆಯುಳ್ಳಂತಹ ಭಾರತದ ಯಾವುದೇ ಭಾಗದ ಅಭ್ಯರ್ಥಿಗಳಿಗೆ ತೊಂದರೆಯಾಗದಂತೆ ಈ ಕ್ರಮಗಳನ್ನು ಯೋಜಿಸಬೇಕೆಂದೂ ಗೊತ್ತುವಳಿ ತಿಳಿಸುತ್ತದೆ. ಇಲ್ಲಿ ಕೂಡ

(೯ನೇ ಪುಟ ನೋಡಿರಿ.)

ನಿಮ್ಮ ಭೂಮಿಯನ್ನು ಆಧುನಿಕವಾಗಿ ಮಾಡಲು
ತಾಳಿಕೆಬರುವ ಹಾಗೂ ಬೆಂಕಿಯಿಂದ ಸುರಕ್ಷಿತವಾದ
ಕಾಂಕ್ರೀಟನ್ನು
ಉಪಯೋಗಿಸಿ



ಎ. ಸಿ. ಸಿ. ನೀಲಗಿರಿ ಬ್ರಾಂಡ್ ಸಿಮೆಂಟು

ಎ. ಸಿ. ಸಿ. "ನೀಲಗಿರಿ" ಬ್ರಾಂಡಿನ ಸಿಮೆಂಟನ್ನೇ ನಮೂದಿಸಿ. ಸಂ ೧೨ ಸನ್ ೧೯೪೭ ರ ಬ್ರಿಟಿಶ್ ಹಾಗೂ ಸನ್ ೧೯೫೧ ರ ಭಾರತೀಯ ತಯಾರಿಕೆಯ ವಿಧಾನದ ಮಟ್ಟಕ್ಕೂ ಮಿಗಿಲಾದ, ಎ.ಸಿ.ಸಿ. "ನೀಲಗಿರಿ" ಬ್ರಾಂಡ್ ಸಿಮೆಂಟು ಈಗ ದಕ್ಷಿಣ ಭಾರತದಲ್ಲೆಲ್ಲಾ ದೊರೆಯುತ್ತದೆ.

೯, ಮೌಂಟ್ ರೋಡು, ಮದ್ರಾಸ್, ಅಥವಾ, ರೇಸ್ ಕೋರ್ಸ್ ರೋಡು, ಕೊಯಂಬತ್ತೂರ್, ಷುಗರ್ ಕಂಪೆನಿ ಬಿಲ್ಡಿಂಗ್ಸ್, ಬೆಂಗಳೂರು ಇವರುಗಳಿಗೆ ಕೊಡಿ.

ನಿಮ್ಮ ಆರ್ಡರುಗಳನ್ನು ಸಿ ಎಮ್.ಎ ಸ್ಟಾಕಿಸ್ಟರ ಮುಖಾಂತರವಾಗಲೀ, ಅಥವಾ ಡೀಲರುಗಳ ಮುಖಾಂತರ ವಾಗಲೀ ಅಥವಾ ಪ್ರತ್ಯಕ್ಷವಾಗಿ,

ದಿ ಸಿಮೆಂಟ್ ಮಾರ್ಕೆಟಿಂಗ್ ಕಂಪೆನಿ ಆಫ್ ಇಂಡಿಯಾ ಲಿಮಿಟೆಡ್.

ನಿಮ್ಮ ಕಾಂಕ್ರೀಟ್ ಕಟ್ಟಡ ಕಟ್ಟುವ ಎಲ್ಲಾ ಪ್ರಶ್ನೆಗಳಿಗೂ, ಕಾಂಕ್ರೀಟ್ ಅಸೋಸಿಯೇಶನ್ ಆಫ್ ಇಂಡಿಯಾ ೯, ಮೌಂಟ್ ರೋಡು, ಮದ್ರಾಸ್, ಅಥವಾ ಷುಗರ್ ಕಂಪೆನಿ ಬಿಲ್ಡಿಂಗ್ಸ್, ಬೆಂಗಳೂರು, ಇವರ ಉಚಿತ ಔದ್ಯೋಗಿಕ ಸಹಾಯವು ದೊರೆಯುತ್ತದೆ.

SISTAS CHI 154 Kannada

ಭಾರತದಲ್ಲಿಯ ರಾಷ್ಟ್ರೀಯ ಸಂಶೋಧನಾ ಸಂಸ್ಥೆಗಳು

ವೈಜ್ಞಾನಿಕ ಪ್ರಗತಿಯಲ್ಲಿ ಅವು ನಿರ್ವಹಿಸುವ ಮಹತ್ವದ ಪಾತ್ರದ ಬಗ್ಗೆ ತಜ್ಞರ ಪ್ರಶಂಸೆ

ಕಳೆದ ವಾರ ಭಾರತದಲ್ಲಿ ರಾಜಕೀಯ, ವೈಜ್ಞಾನಿಕ, ಸಾಮಾಜಿಕ ಹಾಗು ಸಾಂಸ್ಕೃತಿಕ ಮಹತ್ವವುಳ್ಳ ಕೆಲವು ಘಟನೆಗಳು ಜರಗಿದವು. ಈ ಚಟುವಟಿಕೆಗಳು ಭಾರತವು ಯಾವ ದಿಸೆಯಲ್ಲಿ ಪ್ರಗತಿಯನ್ನು ಹೊಂದುತ್ತಾ ಸಾಗಿದೆಯೆಂಬುದನ್ನು ಸ್ಪಷ್ಟವಾಗಿ ನಿರ್ದೇಶಿಸುವಂತಿದ್ದು, ಅವುಗಳ ಕುರಿತಾದ ಮಾಹಿತಿಯೂ ನಮ್ಮ ಆತ್ಮವಿಶ್ವಾಸವನ್ನು ದೃಢಗೊಳಿಸಬಲ್ಲುದು; ಮತ್ತು ಇನ್ನೂ ಹೆಚ್ಚಿನ ಶ್ರದ್ಧೆ ಆಸಕ್ತಿಗಳಿಂದ ರಾಷ್ಟ್ರವನ್ನು ಕಟ್ಟುವ ರಚನಾತ್ಮಕ ಕಾರ್ಯಗಳಲ್ಲಿ ಪ್ರವೃತ್ತರಾಗಲು ಉತ್ತೇಜನವನ್ನೂ ಕೊಡಬಲ್ಲುದು.

ಆರೋಗ್ಯ ಸಪ್ತಾಹ

ಸಾಮಾಜಿಕ ಮಹತ್ವದ ವಿಷಯಗಳನ್ನು ಪ್ರಸ್ತಾಪಿಸುವುದಾದಲ್ಲಿ ಜಾಗತಿಕ ಆರೋಗ್ಯ ಸಂಸ್ಥೆಯ ಆರನೇ ವಾರ್ಷಿಕೋತ್ಸವವನ್ನು ಜಗತ್ತಿನಲ್ಲಿಯ ಇತರ ೭೮ ರಾಷ್ಟ್ರಗಳೊಂದಿಗೆ ಭಾರತವು ಅನೇಕ ಬಗೆಯ ಕಾರ್ಯಕ್ರಮಗಳಿಂದ ಆಚರಿಸಿದುದನ್ನು ಉಲ್ಲೇಖಿಸಬಹುದು. ಈ ಉತ್ಸವದ ಅಂಗವಾಗಿ ಮೆರವಣಿಗೆಗಳು, ಸಾರ್ವಜನಿಕ ಸಭೆಗಳು, ಪ್ರದರ್ಶನಗಳು ಚಲಚ್ಚಿತ್ರ ಮುಂತಾದವುಗಳ ಮೂಲಕ ಸಾರ್ವಜನಿಕ ಆರೋಗ್ಯ ವಿಷಯದಲ್ಲಿ ಶಿಕ್ಷಣ ಪ್ರಸಾರ ಕಾರ್ಯಕ್ರಮ ಇತ್ಯಾದಿಗಳು ಜರಗಿದವು. ಈ ವರ್ಷ, ಕ್ರಿಮಿಯಾ ಯುದ್ಧರಂಗದಲ್ಲಿ ಸಾಹಸದಿಂದ ಪ್ರವೇಶಿಸಿ, ಗಾಯಾಳುಗಳ ಸೇವೆಗೈದು ದಾದಿಯರ ವೃತ್ತಿಯನ್ನು ಕುರಿತು ಗೌರವಾದರಗಳು ಹುಟ್ಟುವಂತೆ ಶ್ರಮಿಸಿದ ಕುಮಾರಿ ಫ್ಲೋರೆನ್ಸ್ ನೈಟಿಂಗೇಲಳ ಶತಸಾಂವತ್ಸರಿಕೋತ್ಸವದ ಸಂದರ್ಭವು ಜಾಗತಿಕ ಆರೋಗ್ಯ ದಿನಾಚರಣೆಗೆ ವಿಶೇಷ ಕಳೆಯನ್ನು ಕೊಟ್ಟಿತು.

ಮಂತ್ರಿಗಳೂ ಧುರೀಣರೂ ಜನತೆಯನ್ನುದ್ದೇಶಿಸಿ ಮಾತನಾಡುತ್ತಾ ದಾಯಿಗಳು ಹಳ್ಳಿಗಳಿಗೆ ಹೋಗಿ ಕೆಲಸ ಮಾಡಬೇಕೆಂದು ವಿನಂತಿಸಿದರು. ಮುಂಬಯಿ ರಾಜ್ಯದಲ್ಲಿ ಆಗೋಸ್ತು ತಿಂಗಳಿಂದ ದಾದಿಯರ ತರಬೇತಿಗಾಗಿ ಹೊಸತೊಂದು ಕಾಲೇಜು ಸ್ಥಾಪಿಸಲಾಗುವುದೆಂದು ಶ್ರೀ ಶಾಂತಿಲಾಲ ಶಹಾರು ತಿಳಿಸಿದರು. ಹೈದರಾಬಾದಿನಲ್ಲಿ ರೇಡಿಯೋಲಜಿ ಸಂಸ್ಥೆಯೊಂದರ ಶಂಕುಸ್ಥಾಪನೆಯನ್ನು ಅಲ್ಲಿಯ ಮುಖ್ಯಮಂತ್ರಿಗಳು ನೆರವೇರಿಸುತ್ತಾ ಶಾಲೆಯ ಕೊನೆಯ ವರ್ಷದಲ್ಲಿ ಹೆಣ್ಣುಮಕ್ಕಳಿಗೆ ದಾದಿಯರ ತರಬೇತಿಯನ್ನು ಒತ್ತಾಯ ಪೂರ್ವಕ ಕೊಡಬೇಕೆಂದು ಸೂಚಿಸಿದರು.

ಕೇಂದ್ರ ಸರಕಾರದ ಮುಖ್ಯ ನರ್ಸಿಂಗ ಸುಪರಿಂಟೆಂಡೆಂಟರು ಜಾ ಆ ರಾವ ಹಾಗು ಆರೋಗ್ಯ ಸಂವರ್ಧನ ಕೆಲಸಗಳಲ್ಲಿ ಪರಿಶ್ರಮ ವಹಿಸಿ ದುಡಿಯುವ ಪ್ರವೃತ್ತಿಯುಳ್ಳ ದಾದಿಯರ ಆವಶ್ಯಕತೆ ದೇಶಕ್ಕೆ ಬಹಳ ಹೆಚ್ಚಾಗಿರುವದೆಂದು ಹೇಳಿದರು. ನಮ್ಮ ದೇಶಕ್ಕೆ ಸೂಲಗಿತ್ತಿಯರು, ದಾದಿಯರು ಹಾಗೂ ಆರೋಗ್ಯ ಸಂದರ್ಶಕರೆಂದು ಸುಮಾರು ೮ ಲಕ್ಷ ಜನರು ಬೇಕಾಗುವುದು--ಆದರೆ ಸದ್ಯಕ್ಕೆ ಕೇವಲ ೩೦ ಸಾವಿರ ಜನರೂ ಈ ಉದ್ಯೋಗದಲ್ಲಿಲ್ಲ ಎಂದವರು ನುಡಿದರು.

ರೋಗ ನಿವಾರಣೋಪಾಯಗಳು

ಸಾರ್ವಜನಿಕ ಆರೋಗ್ಯಕ್ಕೆ ಮಾರಕವಾಗಿರುವ ರೋಗಗಳಲ್ಲಿ ಕುಷ್ಠರೋಗವೂ ಕ್ಷಯರೋಗವೂ ಅತ್ಯಂತ ಪ್ರಬಲವಾದವುಗಳೆಂದು ಹೇಳಬಹುದು. ಕಳೆದ ವಾರ ಹೊಸದಿಹಲಿಯಲ್ಲಿ ಸಭೆಗಳು ಜರಗಿ ರೋಗ ಪ್ರತಿಬಂಧಕ ಹಾಗು ನಿವಾರಕ ಉಪಾಯಗಳನ್ನು ಕುರಿತು ವಿಚಾರ ವಿನಿಮಯ ನಡೆಸಿದವು. ರಾಜಕುಮಾರಿ ಅಮೃತಕೌರರು ಮಾತನಾಡುತ್ತಾ ರಾಜ್ಯಸರಕಾರಗಳು ಸಾಮಾಜಿಕ ಸೇವೆಗಾಗಿ ಯೋಗ್ಯ ಯೋಜನೆಗಳನ್ನು ಕೈಗೊಳ್ಳಬೇಕೆಂದು ಅಪೇಕ್ಷಿಸಿದರು. ಆ್ಯಂಟಿ ಬಯೋಟಿಕ ಔಷಧಿಗಳು, ಶಸ್ತ್ರಚಿಕಿತ್ಸೆ, ಬಿ. ಸಿ. ಜಿ ದಾಕುಗಳು ಹಾಗು ರೋಗ ನಿವಾರಕ ಪ್ರಯತ್ನಗಳನ್ನು ಕೈಗೊಳ್ಳುವುದರಿಂದ ಕ್ಷಯರೋಗದ ಪ್ರಸಾರವನ್ನು ತಡೆಗಟ್ಟಲು ಸಾಧ್ಯವೆಂದು ಅವರು ಹೇಳಿದರು. ಈಗಿರುವದಕ್ಕಿಂತ ಹತ್ತುಪಟ್ಟು ಹೆಚ್ಚು ಆಸ್ಪತ್ರೆಗಳು ಬೇಕಾಗಿವೆಯೆಂದೂ ಅವರು ತಿಳಿಸಿದರು. ದೇಶದಲ್ಲಿ ಮಕ್ಕಳಿಗಾಗಿ ಎರಡು ಕ್ಷಯರೋಗದ ಆಸ್ಪತ್ರೆಗಳನ್ನು ಹೊಸತಾಗಿ ತೆರೆಯಲಾಗುವುದೆಂದು ಅವರು ಪ್ರಕಟಿಸಿದ್ದಲ್ಲದೆ ೧೯೫೫-೫೬ನೇ ಸಾಲಿನಲ್ಲಿ ಅಂತಾರಾಷ್ಟ್ರೀಯ ಕ್ಷಯರೋಗದ ಪರಿಷತ್ತು ಭಾರತದಲ್ಲಿ ಸೇರುವ ಸಂಭವವಿದೆಯೆಂದೂ ತಿಳಿಸಿದರು.

ಕುಷ್ಠರೋಗದ ನಿವಾರಣೆಯು ವಿಧಾಯಕ ಕಾರ್ಯಕ್ರಮಗಳಲ್ಲಿ ಒಂದೆಂದು ಅಂಗೀಕರಿಸಲ್ಪಟ್ಟಿದೆ. ಈ ಕೆಲಸದಲ್ಲಿ ಪ್ರವೃತ್ತರಾಗುವ ಜನರು ಹೆಚ್ಚು ಹೆಚ್ಚಾಗಿ ದೊರಕಬೇಕಾದರೆ ಪ್ರಭುತ್ವ ಭಾವನೆಯ ಸ್ಥಾನವನ್ನು ಸೇವೆಯ ಮನೋಭಾವವು ಆಕ್ರಮಿಸಬೇಕು ಎಂದು ರಾಷ್ಟ್ರಪತಿಗಳು ಹಿಂದ ಕುಷ್ಠರೋಗದ ನಿವಾರಣಾ ಸಂಘದ ವಾರ್ಷಿಕ ಸಭೆಯಲ್ಲಿ ಉಪದೇಶಿಸಿದರು. ೧೯೫೩ರಲ್ಲಿ ಎರಡು ಅಂತಾರಾಷ್ಟ್ರೀಯ ಪರಿಷತ್ತುಗಳು ಸೇರಿ ಕುಷ್ಠರೋಗದ ನಿವಾರಣೋಪಾಯಗಳನ್ನು ಪರಿಶೀಲಿಸಿ ಚರ್ಚಿಸಿದ್ದವು. ಸರಕಾರವು ಈ ರೋಗ ನಿವಾರಣೆಗೆ ಪ್ರಯತ್ನಿಸುತ್ತಿದ್ದು, ಒಂದು ಚುಚ್ಚು ಮದ್ದನ್ನು ಪ್ರಯೋಗಿಸಿ ಕುಷ್ಠರೋಗವನ್ನು ಪ್ರತಿಬಂಧಿಸಬಹುದೆಂದು ಕಂಡುಹಿಡಿದಿದೆ. ಇದು ಎಷ್ಟು ಮಟ್ಟಿಗೆ ಪ್ರಯೋಜನಕಾರಿಯೆಂದು ಪರೀಕ್ಷೆಮಾಡಿ ನೋಡಬೇಕು—ಎಂದರು.

ಆರೋಗ್ಯರಕ್ಷಣೆಯ ಕಾರ್ಯಕ್ರಮಗಳಲ್ಲಿ ಆಸಕ್ತಿಯಿಂದ ಭಾಗವಹಿಸುತ್ತಿರುವ ರೆಡ್ ಕ್ರಾಸ್ ಸಂಸ್ಥೆಯ ವಾರ್ಷಿಕೋತ್ಸವವೂ ಕಳೆದ ವಾರ ಜರಗಿತು. ನೆರೆಹಾವಳಿ, ಕ್ಷಾಮ ಮುಂತಾದ ಗಂಭೀರ ಪರಿಸ್ಥಿತಿಗಳಲ್ಲಿಯೂ ಕೊರಿಯದ ರಣರಂಗದಲ್ಲಿಯೂ ಭಾರತದ ರೆಡ್ ಕ್ರಾಸ್ ಸಂಸ್ಥೆಯವರು ಸಲ್ಲಿಸಿದ ಅಮೂಲ್ಯ ಸೇವೆಯನ್ನು ರಾಷ್ಟ್ರಪತಿಗಳು ಪ್ರಶಂಸಿಸಿದರು. ಹೊಗೆಸೊಪ್ಪಿನ ಸೇವನೆಯ ವಿರುದ್ಧ ರಭಸದ ಪ್ರಚಾರ ಕಾರ್ಯವನ್ನು ತೊಡಗಲು ಹವಣಿಸಿದುದಕ್ಕೆ ರಾಷ್ಟ್ರಪತಿಗಳು ಸಂತೋಷ ವ್ಯಕ್ತಪಡಿಸಿದರು. ಕಳೆದ ವರ್ಷ ಪ್ರಥಮ ಚಿಕಿತ್ಸೆ ಹಾಗು ಮನೆಯುಪಚಾರದ ತರಬೇತಿ ಕೇಂದ್ರಗಳಲ್ಲಿ ೮೪ ಸಾವಿರ ಜನರು ಶಿಕ್ಷಣ ಹೊಂದಿದರು. ನಮ್ಮ ರೆಡ್ ಕ್ರಾಸ್ ಸಂಸ್ಥೆ ಜಾಗತಿಕ ಮನ್ನಣೆಯನ್ನೂ ಪ್ರಶಂಸೆಯನ್ನೂ ಪಡೆದಿರುವುದಕ್ಕೆ ವಿದೇಶಗಳಿಂದ ದೊರೆಯುತ್ತಿರುವ ಕಾಣಿಕೆಗಳ ರಾಶಿಯೇ ಸಾಕ್ಷಿ.

ಶಿಕ್ಷಣ ಕ್ಷೇತ್ರದಲ್ಲಿ

ಮುಂದಿನ ಜನಾಂಗವನ್ನು ರೂಪಿಸುವ ಗುರುತರವಾದ ಕಾರ್ಯವು ಶಿಕ್ಷಣದ ಹೊಣೆಯಾಗಿರುವುದರಿಂದ ಈ ವಿಷಯದಲ್ಲಿಯೂ ರಾಷ್ಟ್ರೀಯ ಮುಖಂಡರು ದೂರದೃಷ್ಟಿಯಿಂದ ಆಲೋಚಿಸಿ ಮುನ್ನಡೆಯಬೇಕಾಗಿರುತ್ತದೆ. ಕಾಂಗ್ರೆಸಿನ ಕಾರ್ಯಕಾರಿ ಸಮಿತಿಯು ಕಳೆದ ವಾರ ಒಂದು ಮಹತ್ವದ ಗೊತ್ತುವಳಿಯನ್ನು ಸೂಚಿಸಿ, ವಿಶ್ವವಿದ್ಯಾಲಯಗಳಲ್ಲಿ ಸಹ ಪ್ರಾದೇಶಿಕ ಭಾಷೆಯೇ ಶಿಕ್ಷಣದಮಾಧ್ಯಮವಾಗಿರಬೇಕೆಂದು ಹೇಳಿದೆ. ಶ್ರೀ. ಎಸ್ ವಿ. ಗಾಡಗೀಳರಂಥ ಪ್ರಭೃತಿಗಳು ಇದನ್ನು ಮೆಚ್ಚಿ ಸ್ವಾಗತಿಸಿರುವರು. ವಿಶ್ವವಿದ್ಯಾಲಯಗಳಲ್ಲಿ ಹಿಂದೀಯನ್ನು ಶಿಕ್ಷಣ ಮಾಧ್ಯಮವನ್ನಾಗಿ ಮಾಡಬೇಕೆಂಬ ಮುಂಬಯಿ ಸರಕಾರದವರ ವಿಚಾರಕ್ಕೆ ಈ ಗೊತ್ತುವಳಿಯಿಂದ ತೊಂದರೆಯಾಗುತ್ತಿದ್ದರೆ, ಸರಕಾರದ ಧೋರಣೆಯನ್ನು ಪುನರ್ವಿಮರ್ಶಿಸಲಾಗುವುದೆಂದೂ ಕಾಂಗ್ರೆಸಿನ ಆದೇಶವನ್ನೆ ಪಾಲಿಸಲಾಗುವುದೆಂದೂ ಶ್ರೀ ದಿನಕರರಾವ ದೇಸಾಯಿಯವರು ಹೇಳಿರುವರು. ಕಾಂಗ್ರೆಸು ಕಾರ್ಯಕಾರೀ ಸಮಿತಿಯು ಹಿಂದೀ ಹಾಗು ಪ್ರಾದೇಶಿಕ ಭಾಷೆಗಳನ್ನು ಶಿಕ್ಷಣದ ಮಾಧ್ಯಮವನ್ನಾಗಿ ಮಾಡಬೇಕೆಂದು ತಾನು ಸ್ವೀಕರಿಸಿದ ಗೊತ್ತುವಳಿಯ ಪ್ರತಿಯನ್ನು ಕೇಂದ್ರಸರಕಾರಕ್ಕೂ ರಾಜ್ಯ ಸರಕಾರಗಳಿಗೂ ಪ್ರದೇಶ ಕಾಂಗ್ರೆಸಿನ ಕಾರ್ಯಾಲಯಕ್ಕೂ ತಕ್ಕಕ್ರಮ ಕೈಗೊಳ್ಳುವುದಕ್ಕೋಸ್ಕರ ಕಳಿಸಿಕೊಟ್ಟಿದೆ.

ಶಿಕ್ಷಣ ವಿಷಯದಲ್ಲಿ ಬುದ್ಧಿಜೀವಿಗಳು ದೂರದೃಷ್ಟಿಯಿಂದ ವಿಚಾರಮಾಡಿ ಕೆಲವು ಅಮೂಲ್ಯ ಸಲಹೆಗಳನ್ನು ಕೊಟ್ಟಿರುವರು—ಆಚಾರ್ಯ ವಿನೋಬಾಭಾವೆಯವರು ನಯೀತಾಲೀಂ ಕಾರ್ಯಕರ್ತರನ್ನು ಕುರಿತು ನಾಲ್ಕು ಸೂಚನೆಗಳನ್ನು ಮಂಡಿಸಿರುವರು. ಶಿಕ್ಷಣವು ಸರಕಾರದ ನಿಯಂತ್ರಣದಲ್ಲಿ ಇರಕೂಡದು, ಮೂಲಶಿಕ್ಷಣದಲ್ಲಿ ಸ್ತ್ರೀಯರು ಮಹತ್ವದ ಪಾತ್ರ ವಹಿಸಬೇಕು, ದ್ವೇಷಾಸೂಯೆ ತೊರೆದು ವಾನಪ್ರಸ್ಥಾಶ್ರಮ ಸ್ಥಿತಿಗೆ ಬಂದವರೇ ಶಿಕ್ಷಕರ ಉದ್ಯೋಗವನ್ನು ಕೈಗೊಳ್ಳಬೇಕು, ಶಿಕ್ಷಣವು ವಿದ್ಯಾರ್ಥಿಗಳ ಆತ್ಮೋನ್ನತಿಯ ಕಡೆಗೆ ಅಧಿಕ ಗಮನವನ್ನೀಯಬೇಕು ಎಂದು ಅವರ ಅಭಿಪ್ರಾಯ.

ಜಾತೀಯತೆಯಿಂದ ಅಪಾಯ

ಭಾರತದ ಪ್ರಗತಿಯಲ್ಲಿ ಜಾತಿ ಪದ್ಧತಿಯು ಮಹಾಪಾಪ ಎಂಬುದಾಗಿ ಕೇಂದ್ರದ ಗೃಹಮಂತ್ರಿ ಡಾ. ಕಟಜೂರವರು ಹಿಂದುಳಿದ ವರ್ಗದ ಪರಿಷತ್ತೊಂದನ್ನು ಉದ್ಘಾಟಿಸುತ್ತಾ ಹೇಳಿದರು. ಜಾತಿ ಪದ್ಧತಿಯನ್ನು ಆಧರಿಸಿಕೊಂಡು ಭಾರತೀಯರು ತಮ್ಮ ಹೆಸರಿನ ಮುಂದೆ ಅಥವಾ ಹಿಂದೆ ಜಾತಿಯನ್ನು ನಿರ್ದೇಶಿಸುವ ರೂಢಿಯು ನಾಶವಾಗಬೇಕು ಎಂದವರು ಅಭಿಪ್ರಾಯಪಟ್ಟರು. ಜಾತಿಗಳನ್ನು ಆಧರಿಸಿಕೊಂಡು ವಿದ್ಯಾರ್ಥಿಗಳಿಗೆ ಸ್ಥಾನ ಕಾಯ್ದಿರಿಸುವ ಧೋರಣೆಯನ್ನು ರಾಜ್ಯ ಸರಕಾರಗಳು ಬಿಟ್ಟುಕೊಡಬೇಕೆಂದೂ ಕಟಜೂ ಅಪೇಕ್ಷಿಸಿದರು.

ಹೊಸದಿಹಲಿಯಲ್ಲಿ ರಾಷ್ಟ್ರಪತಿಗಳು ಹರಿಜನ ಕಾಲನಿಯೊಂದನ್ನು ತೆರೆಯುತ್ತಾ ಮಹಾತ್ಮಾ ಗಾಂಧೀಯವರು ಹರಿ

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ).

ದಿ ಕೆನರಾ ಬ್ಯಾಂಕಿಂಗ್ ಕೊಪ್ರೊರೇಶನ್ ಲಿಮಿಟೆಡ್.

ಅಧಿಕೃತ ಭಂಡವಾಳ	...	ರೂ. 25,00,000
ಚಂದಾ ಆರ್ಪಿಸಿ, ತೆತ್ತು ಬಂದ ಭಂಡವಾಳ	...	ರೂ. 20,00,000
ಕ್ಷೇಮ ನಿಧಿ ...	...	ರೂ. 10,50,000
ಠೇವಣಾತಿಗಳು ...	..	ರೂ. 2,98,19,000
ಒಟ್ಟು ಚಲಾವಣೆ ಭಂಡವಾಳ	...	ಸುಮಾರು ರೂಪಾಯಿ 4 ಕೋಟಿ
ಒಟ್ಟು ಶಾಖೆಗಳು ..	...	38

(31—12—1953ರಲ್ಲು)

THE CANARA BANKING CORPORATION LIMITED

Estd:- 1906] [H. O. UDIPI (S. India).

BHUVANENDRA PRODUCTS LTD., KATAPADI, S. K.

ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!

ಇವುಗಳಿಂದಲೇ ಭುವನೇಂದ್ರ ಔಷಧಿಗಳು

ಜನಪ್ರಿಯವಾಗಿರುವವು.

ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು

ನಮ್ಮಲ್ಲಿ ತಯಾರಿಸಲ್ಪಡುತ್ತವೆ.

ವಿವರಗಳಿಗೆ ಬರೆಯಿರಿ:-

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.

ಡಿಪೊ:- (1) ಉಡುಪಿ (2) ಮರಾಠ ಗಲ್ಲಿ, ಹುಬ್ಬಳ್ಳಿ.

ಔದ್ಯಮಿಕ ಅಭಿವೃದ್ಧಿಯಿಂದ ಸಂಪತ್ತಿನಲ್ಲಿ ಹೆಚ್ಚಳ

ಉತ್ಪಾದನೆ, ವಿದ್ಯುಚ್ಛಕ್ತಿ ಮತ್ತು ನೀರಾವರಿ ಕ್ಷೇತ್ರಗಳಲ್ಲಿ ಕೈಗೂಡಿದ ತೃಪ್ತಿಕರ ಪ್ರಗತಿ

ಜನರ ಉದ್ಧಾರಕ್ಕಾಗಿ ಪ್ರಯತ್ನಿಸುತ್ತಿದ್ದ ರೆಂದೂ ಅವರ ಆದರ್ಶವು ಭಾರತೀಯರೆಲ್ಲರಿಗೂ ಅನುಕರಣೀಯವಾಗಿದೆ ಯೆಂದೂ ಹೇಳಿದರು. ರಾಷ್ಟ್ರಪಿತನು ಜನತೆಗಿತ್ತ ಸಂದೇಶವು ಭಾರತದಲ್ಲಿಯಷ್ಟೇ ಅಲ್ಲ–ವಿದೇಶಗಳಲ್ಲೂ ಕ್ರಾಂತಿಕಾರ ವಿಚಾರದ ತೆರೆಗಳನ್ನು ಎಬ್ಬಿಸಿತೆಂದು ಪ್ರಸಾದರು ಹೇಳಿ, ನಾವು ಸಂಕೋಚ ಭಾವನೆಯನ್ನು ಬದಿಗೊತ್ತಿ, ಎಲ್ಲರ ಕಲ್ಯಾಣವನ್ನುಂಟುಮಾಡಬೇಕೆಂದು ವಿನಂತಿಸಿದರು.

ಧುರೀಣರು ಈ ರೀತಿ ಹೇಳುತ್ತಿದ್ದಂತೆಯೇ ಕಾಶಿಯಲ್ಲಿ ಹರಿಜನರು ವಿಶ್ವನಾಥ ಮಂದಿರ ಪ್ರವೇಶಿಸುವುದಕ್ಕೆ ತಾತ್ಕಾಲಿಕ ತಡೆಯಾಜ್ಞೆಯನ್ನು ಹೇರುವ ಘಟನೆಯೊಂದು ನಡೆಯಿತು. ವಿಶ್ವನಾಥ ಮಂದಿರವನ್ನು ಪ್ರವೇಶಿಸಿ ವಿಗ್ರಹವನ್ನು ಮುಟ್ಟಿ ಪೂಜಿಸಬೇಕೆಂದಿದ್ದ ಎಂಟುಮಂದಿ ಹರಿಜನ ಮುಂದಾಳುಗಳ ವಿರುದ್ಧ ಮುನಸೀಫರು ತಡೆಯಾಜ್ಞೆಯನ್ನು ಹೇರಿರುವರು. ರಜನೀನಾಥ ಶರ್ಮ ಮತ್ತು ಇನ್ನೊಬ್ಬರು ತಡೆಯಾಜ್ಞೆ ವಿಧಿಸಬೇಕೆಂದು ಮುನಸೀಫರನ್ನು ಪ್ರಾರ್ಥಿಸುತ್ತಾ ಅಂತ್ಯಜರು ದೇವಾಲಯ ಪ್ರವೇಶ ಮಾಡಿದರೆ ಅದು ಮೈಲಿಗೆಯಾಗುವುದೆಂದು ಹಿಂದುಗಳ ಧಾರ್ಮಿಕ ವಿಶ್ವಾಸವಿರುತ್ತದೆ; ಅಲ್ಲದೆ ಉತ್ತರ ಪ್ರದೇಶದ ಹರಿಜನ ಅಸ್ಪೃಶ್ಯತಾ ನಿವಾರಣಾ ಕಾಯಿದೆಯು ನಮ್ಮ ಸಂವಿಧಾನದನ್ವಯ ರಾಜ್ಯ ಸರಕಾರಕ್ಕೆ ದೊರೆತ ಅಧಿಕಾರದಿಂದ ಹೊರಗೆ ಇದ್ದು, ಅಕ್ರಮವಾಗಿರುತ್ತದೆ; ಈ ಕಾಯಿದೆಯು ಹಿಂದೂ ಶಾಸ್ತ್ರದ ಪ್ರಕಾರ ಪೂಜೆ ಮಾಡುವ ಮೂಲಭೂತ ಹಕ್ಕನ್ನು ಭಂಗಿಸುತ್ತದೆ ಎಂದು ಮುಂತಾಗಿ ವಾದಿಸಿದರು. ಇದರ ವಿರುದ್ಧ ಇದೇ ಮೇ ೨೨ನೇ ತಾರೀಕಿನೊಳಗೆ ಆಕ್ಷೇಪ ಅರ್ಜಿಯನ್ನು ಮಾಡಿಕೊಳ್ಳಬಹುದೆಂದು ಹರಿಜನ ಮುಖಂಡರಿಗೆ ತಿಳಿಸಲ್ಪಟ್ಟಿದೆ.

ಕಲ್ಯಾಣ ದೃಷ್ಟಿಯು ಮಹತ್ವ

ಧಾರ್ಮಿಕ ನಡವಳಿಕೆಗಳು ಅಂಧಶ್ರದ್ಧೆಯನ್ನು ಪೋಷಿಸುವಂತಿದ್ದರೆ ಅವುಗಳನ್ನು ತ್ಯಜಿಸಬೇಕೆಂದು ಪ್ರಧಾನಿ ನೆಹರೂರವರ ಅಭಿಪ್ರಾಯವಿರುತ್ತದೆ. ಪ್ರಾಚೀನ ಪರಂಪರೆಯಲ್ಲಿ ಯೋಗ್ಯವಾದುದನ್ನು ನಾವು ಕಾಯ್ದಿರಿಸಿಕೊಳ್ಳಬೇಕು; ಆದರೆ ಮೂಢ ನಂಬಿಕೆಗಳನ್ನು ಸಂಪೂರ್ಣ ಬಿಟ್ಟುಗೊಡಬೇಕು ಎಂದವರು ಅಹಮ್ಮದಾಬಾದಿನಲ್ಲಿ ಜವುಳಿ ಉದ್ದಿಮೆಯ ಸಂಶೋಧನ ಕಟ್ಟಡದ ಪ್ರಾರಂಭೋತ್ಸವವನ್ನು ನೆರವೇರಿಸುತ್ತಾ ಹೇಳಿದರು. ನೆಹರೂರವರು ಕಟ್ಟಡದ ಉದ್ಘಾಟನಾ ಕಾಲದಲ್ಲಿ ಒಂದರ ಹಿಂದೊಂದರಂತೆ ನಡೆದ ಧಾರ್ಮಿಕ ವಿಧಿಗಳನ್ನು ಕಂಡು ಸಹನೆ ಮೀರಿದರು. ತನ್ನ ಹಣೆಗೆ ಪುರೋಹಿತರು ತಿಲಕವನ್ನಿಟ್ಟರು. ಅದಕ್ಕೆ ಆಕ್ಷೇಪಿಸಲಿಲ್ಲ. ಆದರೆ ಅನೇಕ ವಿಧಿನಿಯಮಗಳ ಬಳಿಕ ಪುರೋಹಿತರು ಕೆಲವು ಶ್ಲೋಕಗಳನ್ನು ಹೇಳಿ, ನೆಹರೂರವರ ಭುಜವುಟ್ಟಿ ವಾಸ್ತು ಸಮಾರಂಭವನ್ನು ಜರಗಿಸಲು ಕಟ್ಟಡದ ಗೋಡೆಗೆ ಹಸ್ತಸ್ಪರ್ಶಮಾಡಿರೆಂದು ಹೇಳಿದಾಗ ನೆಹರೂರವರು ಗುಡುಗಿದರು—"ಈ ತರದ ವ್ಯವಹಾರದವನಿಗೆ ಸರಿಬರುವುದಿಲ್ಲ" ಎಂದವರು ಹೇಳಿ ಪುರೋಹಿತರನ್ನು ಬದಿಗೆ ಸರಿಸಿ, ನೇರಾಗಿ ಕಟ್ಟಡವನ್ನು ಪ್ರವೇಶಿಸಿದರು.

ಈ ಕಟ್ಟಡವನ್ನು ೩.೨ ಲಕ್ಷ ರೂಪಾಯಿಗಳ ವೆಚ್ಚದಿಂದ ನಿರ್ಮಿಸಲಾಗಿದೆ. ಅಹಮ್ಮದಾಬಾದಿನಲ್ಲಿ ಜವುಳಿ ಉದ್ದಿಮೆಯು ತುಂಬ ಅಭಿವೃದ್ಧಿ ಹೊಂದಿದೆ. ಈ ಕೈಗಾರಿಕೆಯ ಸಮಸ್ಯೆಗಳನ್ನು ಪರಿಶೀಲಿಸಿ, ಯೋಗ್ಯ ಪರಿಹಾರ ಮಾರ್ಗಗಳನ್ನು ಕೈಗೊಂಡು ಉದ್ದಿಮೆಯನ್ನು ಅಭಿವೃದ್ಧಿಗೊಳಿಸಲು ಸಂಶೋಧನ ಸಂಸ್ಥೆಯು ನೆರವಾಗುತ್ತದೆ. ನೆಹರೂರವರು ಈ ಸಂದರ್ಭದಲ್ಲಿ ಮಾತನಾಡುತ್ತಾ ದೇಶದ ಜನರ ಕಲ್ಯಾಣದೃಷ್ಟಿಯನ್ನಿಟ್ಟುಕೊಂಡೇ ಯಾಂತ್ರಿಕ ಪ್ರಗತಿಯ ಹಾಗು ಪ್ರಮಾಣೀಕರಣದ ಪ್ರಶ್ನೆಯನ್ನು ವಿಚಾರಿಸಬೇಕಾಗುತ್ತದೆಂದು ತಿಳಿಸಿದರು. ಪ್ರಮಾಣೀಕರಣವೆಂದರೆ ಯಾವುದೇ ಕೆಲಸವನ್ನು ಉತ್ಕೃಷ್ಟ ರೀತಿಯಲ್ಲಿ ನೆರವೇರಿಸುವುದು ಎಂದಾಗುತ್ತದೆ. ಯಾಂತ್ರಿಕ ಪ್ರಗತಿ ಮನುಷ್ಯನ ಉತ್ಕರ್ಷಕ್ಕೆ ನೆರವಾಗುವುದಿಲ್ಲವಾದರೆ ಅದು ತೀರ ನಿಷ್ಪ್ರಯೋಜಕ; ಹಾಗು ಘಾತಕವಿರುತ್ತದೆ. ನಾವೊಂದು ಯಾತ್ರೆಯನ್ನು ಕೈಗೊಂಡಿದ್ದು, ನಮ್ಮ ಸಂಗಡಿಗರಾಗಿ ೩೬ ಕೋಟಿ ಭಾರತೀಯರು ಇರುವರು; ಇವರೆಲ್ಲರನ್ನೂ ಕೂಡಿಕೊಂಡು ನಾವು ಪ್ರಗತಿಯ ಶಿಖರವನ್ನು ಮುಟ್ಟಬೇಕಾಗಿದೆ ಎಂದು ನೆಹರೂ ತಿಳಿಸಿದರು.

ಜನರಿಗೆ ಕೂಡಲೇ ಪರಿಣಾಮಗಳನ್ನು ನೀಡದಿದ್ದರೂ ಸಹ ಮೂಲ ವೈಜ್ಞಾನಿಕ ಸಂಶೋಧನೆಗೆ ಪ್ರೋತ್ಸಾಹ ಕೊಡುವುದು ಅಗತ್ಯ. ವಿಜ್ಞಾನದ ಅಭಿವೃದ್ಧಿಗೂ ನಿಸರ್ಗ ಶಕ್ತಿಯನ್ನು ತಿಳಿಯುವುದಕ್ಕೂ ಮೂಲಭೂತ ಸಂಶೋಧನೆಯಿಂದ ನೆರವು ಸಿಗುತ್ತದೆ. ಯಾಂತ್ರೀಕರಣವೂ ತಾಂತ್ರೀಕರಣವೂ ದಿನದಿಂದ ದಿನಕ್ಕೆ ಅಭಿವೃದ್ಧಿ ಹೊಂದುವುದು ಅಪೇಕ್ಷಣೀಯ—ಆದರೆ, ಮಾನವನು ನಿಯಂತ್ರಿಸಲಾರದ ಸಮಸ್ಯೆಗಳನ್ನು ಇವು ಹುಟ್ಟಿಸುತ್ತಿದ್ದರೆ, ಅದು ಇಷ್ಟವಲ್ಲ. ಮಾನವನ ಉತ್ಕರ್ಷಕ್ಕಾಗಿ ಬುದ್ಧಿವಂತಿಕೆಯನ್ನೂ ಜ್ಞಾನವನ್ನೂ ಉಪಯೋಗಿಸಿಕೊಳ್ಳಬೇಕೆಂಬುದೇ ತಾಂತ್ರಿಕ ಪ್ರಗತಿಯ ಗುರಿಯಾಗಿರಬೇಕಾಗಿದೆ ಎಂದು ನೆಹರೂರವರು ಅಭಿಪ್ರಾಯಪಟ್ಟರು.

ಸಂಶೋಧನಾ ಮಂದಿರಗಳು

ನೆಹರೂರವರು ಭಾವ ನಗರದಲ್ಲಿ ಉಪ್ಪಿನ ಸಂಶೋಧನ ಕೇಂದ್ರವನ್ನು ಕಳೆದ ವಾರ ಉದ್ಘಾಟಿಸಿದರು. ಬೇರೆ ಬೇರೆ ವಸ್ತುಗಳಿಂದ ಉತ್ತಮ ಉಪ್ಪನ್ನು ದೊರಕಿಸುವುದು, ಅದಕ್ಕೆ ಸಂಬಂಧಿಸಿದ ಪೂರಕ ವಸ್ತುಗಳನ್ನು ಸಿದ್ಧಗೊಳಿಸುವುದು, ಇತರ ಕೈಗಾರಿಕೆಗಳಲ್ಲಿ ಉಪ್ಪನ್ನು ಉಪಯುಕ್ತ ರೀತಿಯಲ್ಲಿ ಬಳಸುವ ವಿಧಾನ ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದಂತೆ ಈ ಸಂಸ್ಥೆಯು ಸಂಶೋಧನ ಕಾರ್ಯವನ್ನು ನಡೆಸುತ್ತದೆ. ಶ್ರೀ ಕೆ. ಸಿ. ರೆಡ್ಡಿಯವರು ಹೇಳಿದಂತೆ ಅನೇಕ ರಸಾಯನ ಪದಾರ್ಥಗಳ ಉತ್ಪಾದನೆಯಲ್ಲಿ ಉಪ್ಪು ಅವಶ್ಯವಿರುತ್ತದೆ. ಈ ಕೇಂದ್ರ ಸಂಸ್ಥೆಯು ಅಸ್ತಿತ್ವಕ್ಕೆ ಬಂದುದರಿಂದ ಇನ್ನು ಮುಂದೆ ಅಂತಹ ರಸಾಯನ ವಸ್ತುಗಳನ್ನು ಆಮದು ಮಾಡಿಕೊಳ್ಳುವ ಬದಲು ಇಲ್ಲಿಯೇ ಉತ್ಪಾದಿಸಬಹುದು.

ಸೌರಾಷ್ಟ್ರಕ್ಕೆ ೫೦೦ ಮೈಲುಗಳಷ್ಟು ಉದ್ದದ ಕಡಲ ತೀರ ಇರುತ್ತದೆ, ಮತ್ತು ಈ ಪ್ರದೇಶದಲ್ಲಿ ಉಪ್ಪಿನ ಕೈಗಾರಿಕೆಯು ತುಂಬ ಪ್ರಗತಿ ಹೊಂದಿರುತ್ತದೆ. ಆದುದರಿಂದ ಭಾವ ನಗರದಲ್ಲಿ ಈ ಸಂಶೋಧನ ಕೇಂದ್ರ ತೆರೆದಿರುವುದು ಉಚಿತ ಕ್ರಮವೆಂದು ಶ್ರೀ ದೇಭಾರು ತೃಪ್ತಿ ವ್ಯಕ್ತಗೊಳಿಸಿದರು. ಉಪ್ಪಿನ ಕೈಗಾರಿಕೆಯಲ್ಲಿ ವೈಜ್ಞಾನಿಕ ಪ್ರಗತಿ ಕೈಗೂಡಿಬಂದಲ್ಲಿ ತಾಂತ್ರಿಕ ಹಾಗು ಆರ್ಥಿಕ ಸುಧಾರಣೆ ಸಾಧ್ಯವಾಗುತ್ತದೆ. ಪಂಚವಾರ್ಷಿಕ ಯೋಜನೆಯು ೨೫ ಲಕ್ಷ ಟನ್ನುಗಳಷ್ಟು ಉಪ್ಪನ್ನು ಉತ್ಪಾದಿಸಬೇಕೆಂದು ಹೇಳಿದೆ. ಈ ಮಿತಿಯನ್ನು ಇಷ್ಟರಲ್ಲೇ ಮುಟ್ಟಲಾಗಿದೆ—ಅಲ್ಲದೆ ಈ ವರ್ಷ ೧೬೦ ಲಕ್ಷ ಮಣ ಉಪ್ಪು ರಫ್ತಾಗಿದೆ ಎಂದು ಶ್ರೀ ಭಾಟನಗರರು ತಿಳಿಸಿದರು.

ಉಪ್ಪಿನ ಸಂಶೋಧನಾ ಸಂಸ್ಥೆಯು ಸರಕಾರದಿಂದ ಪ್ರವರ್ತಿಸಲ್ಪಟ್ಟ ರಾಷ್ಟ್ರೀಯ ಸಂಶೋಧನ ಸಂಸ್ಥೆಗಳಲ್ಲಿ ಹನ್ನೆರಡನೆಯದಾಗಿದ್ದು, ನಮ್ಮ ದೇಶದ ವೈಜ್ಞಾನಿಕ ವಾತಾವರಣವನ್ನು ಚೈತನ್ಯಪೂರ್ಣ ಮಾಡುವ ದಿಶೆಯಲ್ಲಿ ಇನ್ನೊಂದು ಮಹತ್ವದ ಹೆಜ್ಜೆಯಾಗಿ ಇದನ್ನು ವರ್ಣಿಸಬಹುದು. ನೆಹರೂರವರದೇ ಮಾತಿನಲ್ಲಿ "ದೇಶವನ್ನು ಬಲಗೊಳಿಸುವ ಕಾರ್ಯದಲ್ಲಿ ಇಂತಹ ಸಂಶೋಧನಾಲಯಗಳು ಸ್ಫೂರ್ತಿಯನ್ನು ಚೈತನ್ಯವನ್ನು ನೀಡುವ ಪವಿತ್ರ ಮಂದಿರಗಳು". ಇಲ್ಲಿ ಕೆಲಸ ಮಾಡುತ್ತಿರುವವರು ಹೊಟ್ಟೆ ಹೊರೆದುಕೊಳ್ಳುವುದಕ್ಕೋಸ್ಕರ ದುಡಿಯುವವರಲ್ಲ. ಇವರು ಸಂಪತ್ತನ್ನು ಗಳಿಸುವ ಹೊಸ ಹೊಸ ವಿಧಾನಗಳನ್ನು ಕಂಡು ಹಿಡಿಯುವ ಮಹತ್ಕಾರ್ಯದಲ್ಲಿ ಪ್ರವೃತ್ತರಾದ ಶ್ರೇಷ್ಠ ದರ್ಜೆಯ ವಿಜ್ಞಾನಿಗಳು; ಮತ್ತು ದೇಶ ಸೇವಕರು ಎಂದು ನೆಹರೂರವರು ಹೊಗಳಿದರು. ದೇಶದ ಜನರು, ಮುಖ್ಯವಾಗಿ ತರುಣರು ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಹೆಚ್ಚು ಉತ್ಸಾಹ ತೋರಿಸಬೇಕೆಂದು ಅವರು ಕರೆ ಕೊಟ್ಟರು.

ಔದ್ಯಮಿಕ ಅಭಿವೃದ್ಧಿ

ಭಾರತದಲ್ಲಿ ರಾಷ್ಟ್ರೀಯ ಪ್ರಯೋಗ ಶಾಲೆಗಳನ್ನು ಸ್ಥಾಪಿಸಬೇಕೆಂದೂ ತನ್ಮೂಲಕ ವೈಜ್ಞಾನಿಕ ಸಂಶೋಧನಕ್ಕೆ ಅವಕಾಶಕೊಡಬೇಕೆಂದೂ ಕೇಂದ್ರ ಸರಕಾರದವರು ತಳೆದ ನಿಲುವು ಯುಕ್ತಿಯುಕ್ತವೂ ಸಮರ್ಥನೀಯವೂ ಆಗಿದೆಯೆಂದು ಕಳೆದ ಐದು ವರ್ಷಗಳಲ್ಲಿ ರಾಷ್ಟ್ರೀಯ ಪ್ರಯೋಗ ಶಾಲೆಗಳ ಕಾರ್ಯಕಲಾಪಗಳನ್ನು ಪರಿಶೀಲಿಸಿದ ಈ ಗರ್ಟನ ಸಮಿತಿ ಅಭಿಪ್ರಾಯಪಟ್ಟಿದೆ. ಈ ಸಮಿತಿಯು ಒಪ್ಪಿಸಿದ ವರದಿಯೊಂದನ್ನು ಲೋಕಸಭೆಯಲ್ಲಿ ಮಂಡಿಸಿದ್ದು ಅದರಲ್ಲಿ ಸಂಶೋಧನಾಲಯಗಳಿಗೆ ಹೆಚ್ಚು ಸ್ವಾಯತ್ತಾಧಿಕಾರ ನೀಡಬೇಕೆಂದೂ ಅವು ಪರಸ್ಪರ ಸಹಕಾರದಿಂದ ಸಂಶೋಧನಾ ಕಾರ್ಯದಲ್ಲಿ ತೊಡಗಬೇಕೆಂದೂ ತನ್ಮೂಲಕ ಇನ್ನೂ ಉತ್ತಮ ಮಟ್ಟದ ಸೇವೆಯನ್ನು ರಾಷ್ಟ್ರಕ್ಕೆ ತೆಗೆದುಕೊಂಡು ಕೃತಾರ್ಥರಾಗಬೇಕೆಂದೂ ಹೇಳಿದ್ದು ಸಮಿತಿಯು ಅನೇಕ ಸೂಚನೆಗಳನ್ನು ಮಾಡಿದೆ. ಸಂಶೋಧನಾ ಕಾರ್ಯವು ತೃಪ್ತಿಕರವಾಗಿ ಮುಂದರಿಯುತ್ತಿರುವುದಕ್ಕೆ ಸಮಿತಿ ತುಂಬ ಸಮಾಧಾನವನ್ನು ವ್ಯಕ್ತಗೊಳಿಸಿದೆ.

(೬೭ನೇ ಪುಟ ನೋಡಿ)

PLACE YOUR LIFE ASSURANCE WITH A COMPANY OF YOUR OWN - - -

Established in 1929, the POPULAR is progressing on sound lines It has built up for itself a record of efficient service sound investment and a personal touch with its Policy holders and Representatives At whatever stage We we'come yours association with the POPULAR.

THE
POPULAR INSURANCE CO. LTD.
"POPULAR BUILDINGS" MANGALORE-1

ಯಂ. ಗಣಪ್ಪಯ್ಯ ಎಂಡ್ ಸನ್ಸ್

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ, ಮಂಗಳೂರು ಇವರ

ಅಶೋಕಾರಿಷ್ಟ ಮತ್ತು ಮಾತ್ರೆ ಹೆಂಗಸರ ಗರ್ಭಾಶಯ ರೋಗಗಳಿಗೆ ಸಂಜೀವನ. ಅಕಾಲ ಋತು, ಋತುಸ್ರಾವ ಕಾಣದಿರುವುದು, ಕಡಿಮೆ ಹೋಗುವುದು, ಬಿಳಿಸೆರಗು, ಸೊಂಟ ನೋವು, ರಕ್ತಹೀನತೆ, ಗರ್ಭಕೋಶ ದೌರ್ಬಲ್ಯ ಮೊದಲಾದ ಸ್ತ್ರೀಯರಿಗೆ ಸಂಬಂಧಪಟ್ಟ ಎಲ್ಲಾ ರೋಗಗಳನ್ನು ಗುಣಪಡಿಸುವುದು. ಬಾಟ್ಲಿ 1ಕ್ಕೆ ರೂ. 3-8-0.

ಗರ್ಭ ರಕ್ಷಕ– ಗರ್ಭಿಣಿಯರಿಗೆ ಅತ್ಯಂತ ಉಪಕಾರಿಯಾದ ಔಷಧ. ಗರ್ಭಪಾತ, ವಾಂತಿ, ಅರುಚಿ, ಅಶಕ್ತತೆ, ಮಲಬದ್ಧತೆ ಮುಂತಾದ ತೊಂದರೆಗಳನ್ನೆಲ್ಲಾ ಹೋಗಲಾಡಿಸುವುದು. ಬಾಟ್ಲಿ 1ಕ್ಕೆ ರೂ. 3-8-0

ನ ವ ಯು ಗ

ಉಡುಪಿ, ಗುರುವಾರ ೧೫-೪-'೫೪

ನೂತನ ಸಚಿವ ಸಂಪುಟ

ಕಳೆದ ಸಾರ್ವತ್ರಿಕ ಚುನಾವಣೆಯ ಬಳಿಕ ಮದ್ರಾಸಿನಲ್ಲಿ ಬಹುಮತವಿಲ್ಲದೆ ಮಂತ್ರಿ ಮಂಡಳ ರಚಿಸುವುದಕ್ಕೆ ಹೆದರಿ ನಡುಗುತ್ತಿದ್ದ ಕಾಂಗ್ರೆಸು ಪಕ್ಷದ ಪಾಲಿಗೆ ಶ್ರೀ. ಸಿ. ರಾಜಗೋಪಾಲಾಚಾರಿಯವರು ಮಾಂತ್ರಿಕನಾಗಿ ಬಂದರು; ಅವರ ಧುರೀಣತ್ವದ ಸುದ್ದಿಯು ಕಮರಿ ಹೋದ ಆಶೆಯ ಬಳ್ಳಿಗೆ ಅಂಕುರವೊಡೆಯುವಂತೆ ಮಾಡಿತು. ಜನತೆಯಲ್ಲಿ ಹೊಸ ಭರವಸೆಯೂ ಆಡಳಿತವು ಸುಧಾರಿಸುವುದೆಂಬ ಸಂತೋಷವೂ ತುಂಬಿ ಕೊಂಡಿತು. ರಾಜಾಜಿಯವರು ಉತ್ತಮ ಆಡಳಿತೆಯ ಆಶ್ವಾಸನವನ್ನೂ ಕೊಟ್ಟಿದ್ದರು. ಆದರೆ ಅದೇ ಕಾಲಕ್ಕೆ ಇನ್ನೊಂದು ಸಂಗತಿಯನ್ನೂ ಪ್ರಕಟ ಪಡಿಸಿದ್ದರು—ತಾತ್ಕಾಲಿಕವಾಗಿ ಮಾತ್ರ ತಾನು ಅಧಿಕಾರ ಸ್ಥಾನವನ್ನು ಪರಿಗ್ರಹಿಸಿರುವೆನೆಂದೂ ಯೋಗ್ಯ ಕಾಲ ಬಂದಾಗ, ಸಮರ್ಥರಿಗೆ ಆಡಳಿತದ ಭಾರವನ್ನು ಒಪ್ಪಿಸಿ ನಿವೃತ್ತಿ ಹೊಂದುವುದಾಗಿಯೂ ಆಗ ಅವರು ಹೇಳಿದ್ದರು. ಸರಿಯಾಗಿ ಎರಡು ವರ್ಷಗಳು ಕಳೆಯುವಷ್ಟರಲ್ಲಿ ರಾಜಾಜಿ ರಾಜಕೀಯ ರಂಗದ ತೆರೆಯ ಹಿಂದೆ ಮರೆಯಾಗಿರಲು ಹಾರೈಸಿದರು. ಅವರ ಉತ್ತರಾಧಿಕಾರಿಯಾಗಿ ಯಾರನ್ನು ತರಬೇತಿಗೊಳಿಸಿರುವರೋ ಎಂದು ಎಲ್ಲರೂ ಕುತೂಹಲದಿಂದ ಕೇಳುತ್ತಿದ್ದ ಪ್ರಶ್ನೆಗೆ ಶ್ರೀ ಸುಬ್ರಹ್ಮಣ್ಯಮರನ್ನು ಬೊಟ್ಟುಮಾಡಿ ತೋರಿಸುವುದು ಅಭ್ಯಾಸವಾಗಿ ಪರಿಣಮಿಸಿತು. ಆದರೆ ಎರಡು ವರ್ಷಗಳ ಹಿಂದೆ ಇದ್ದ ಮದ್ರಾಸು ಕಾಂಗ್ರೆಸಿನ ರಾಜಕೀಯ ಈ ಅವಧಿಯಲ್ಲಿ ಬಹಳಷ್ಟು ಮಾರ್ಪಾಟುಗಳನ್ನು ಹೊಂದಿದ್ದ ಕಾರಣ— ರಾಜಾಜಿಯ ನಿವೃತ್ತಿಯ ಹಿಂದೆ ಕುಹಕ ತಂತ್ರ ನಡೆದಿರಬೇಕೆಂಬ ಸಂಶಯದ ಹುಳಗಳು ಏಳುತ್ತಿದ್ದುವು. ಕಾಮರಾಜ ನಾಡರ ಹಾಗು ಅವರ ಅನುವರ್ತಿಗಳಾದ ತಮಿಳು ನಾಡಿನ ಬಹುಸಂಖ್ಯಾಕ ಕಾಂಗ್ರೆಸು ಸದಸ್ಯರಿಗೆ ರಾಜಾಜಿಯ ಕಟ್ಟುನಿಟ್ಟಾದ ಧೋರಣೆ ಅಷ್ಟು ಮನಸ್ಸಿಗೆ ಹಿಡಿಸುತ್ತಿಲ್ಲ. ಹಿಂದೆ ವಿರೋಧೀ ಗುಂಪುಗಳು ರಾಜಾಜಿಯು ಹಿತ್ತಿಲ ಬಾಗಿಲಿನಿಂದ ಶಾಸನ ಸಭೆಯಲ್ಲಿ ಪ್ರವೇಶಿಸಿ ಮುಖ್ಯ ಮಂತ್ರಿಗಳಾದರೆಂದು ಹೀಯಾಳಿಸಿ, ಹೈಕೋರ್ಟಿನ ಮೆಟ್ಟಲನ್ನು ಏರಿ, ಘಟನಾತ್ಮಕ ವಿವಾದವೊಂದನ್ನು ಮುಂದಿಟ್ಟು, ಮುಖಭಂಗ ಹೊಂದಿದ್ದರು. ಆದರೆ ಆಂಧ್ರ ರಾಜ್ಯ ಪ್ರತ್ಯೇಕಗೊಂಡು ವಿರೋಧಿ ಗುಂಪುಗಳ ಆಟೋಪ ಇಲ್ಲದಾಗಲು, ತಮಿಳುನಾಡಿನ ಕಾಂಗ್ರೆಸು ಸದಸ್ಯರೇ ರಾಜಾಜಿಯನ್ನು ಸರ್ವಾಧಿಕಾರಿಯೆಂದು ಕರೆದು, ಜರೆಯುವುದಕ್ಕೂ ಕಾಂಗ್ರೆಸಾಧ್ಯಕ್ಷ ನೆಹರೂರ ಕಡೆಗೆ ದೂರು ಕೊಂಡೊಯ್ದು, ರಾಜಾಜಿಯ ನಾಯಕ ಪೀಠವನ್ನು ಉರುಳಿಸುವುದಕ್ಕೂ ಮುಂದಾದರು ಆದರೆ ರಾಜಾಜಿ ದೃಢ ನಿರ್ಧಾರದ ಮನುಷ್ಯ— ಇಂತಹ ಅಕೃತ್ಯಗಳಿಗೆ ಅಂಜಿ ಸೋಲನ್ನು ಒಪ್ಪಿಕೊಳ್ಳುವ ಹೇಡಿಯಲ್ಲ. ದಿಟ್ಟತನದಿಂದ ಅವರು ಪರಿಸ್ಥಿತಿಯನ್ನು ಎದುರಿಸಿದರು. ಆ ಬಳಿಕವೂ ಮಂತ್ರಿ ಮಂಡಳದ ಹೊಣೆಗಾರಿಕೆಗೆ ಹೆಗಲು ಕೊಟ್ಟರು. ದುರ್ದೈವದಿಂದ ದೇಹಾಲಸ್ಯದ ಪೀಡೆ ಮಿತಿ ಮೀರದಿರುತ್ತಿದ್ದರೆ—ಮುಂದಿ ಕೆಲ ಸಮಯದ ವರೆಗಾದರೂ ಅವರು ಅಧಿಕಾರದಲ್ಲಿ ಉಳಿಯುತ್ತಿದ್ದರು. ಅನಾರೋಗ್ಯವು ಅವರ ದೇಹವನ್ನು ಜರ್ಜರಿತ ಮಾಡಿದಂತೆ, ಕಾಂಗ್ರೆಸಿನ ಕೃತಘ್ನ ರಾಜಕೀಯ ತಂತ್ರಗಳೂ ಅವರನ್ನು ನೋಯಿಸಿರಬೇಕು. ಅಂತೆಯೇ ಅವರು ನಿವೃತ್ತರಾಗ ಬಯಸಿದರೆಂದು ತರ್ಕಿಸಿದರೆ, ಅದರಲ್ಲಿ ತಪ್ಪು ಇರಲಾರದು. ಅವರ ಸ್ಥಾನಕ್ಕೆ ಇನ್ನೊಬ್ಬ ಧುರೀಣನನ್ನು ಆರಿಸುವ ಪ್ರಯತ್ನ ನಡೆದಾಗ, ರಾಜಾಜಿಯ "ಉತ್ತರಾಧಿಕಾರಿ" ಸುಬ್ರಹ್ಮಣ್ಯಮರಿಗೆ ಸೋಲು ಒದಗಿ ಬಂತು; ಮತ್ತು ಡಾ. ವರದರಾಜುಲು ನಾಯುಡು ಸೂಚಿಸಿದ ಕಾಮರಾಜ ನಾಡರರೇ ಬೆಂಬಲ ದೊರಕಿಸಿಕೊಂಡರು. ನಾಡರರು ರಾಜಕೀಯ ರಂಗಮಂಟಪದಲ್ಲಿ ನುರಿತ ನಟ; ಕಳೆದ ಹನ್ನೆರಡು ವರ್ಷಗಳಿಂದಲೂ ತಮಿಳುನಾಡಿನ ಅನಭಿಷಿಕ್ತ ರಾಜನಂತೆ, ಪ್ರದೇಶ ಕಾಂಗ್ರೆಸಿನ ಅಧ್ಯಕ್ಷ ಗದ್ದುಗೆಯಲ್ಲಿ ರಾರಾಜಿಸಿದ ೫೩ ವರ್ಷ ಪ್ರಾಯದ ಬ್ರಹ್ಮಚಾರಿ. ಇಂಗ್ಲೀಷು ಭಾಷೆಯಲ್ಲಿ ಪ್ರಾವೀಣ್ಯವಿಲ್ಲದಿದ್ದರೂ ಮುಖ್ಯ ಮಂತ್ರಿ ಸ್ಥಾನದಲ್ಲಿ ಕುಳಿತುಕೊಂಡು ಹೊಸವರ್ಷದಂದು ಆಡಳಿತದ ಹೊಣೆ ಸ್ವೀಕರಿಸಲು ಮುಂದಾದ ತಮಿಳು ಧುರೀಣ. ಇವರಿಗೆ ಆಡಳಿತ ತಂತ್ರದ ಅನುಭವವಿಲ್ಲ. ಶಾಸನ ಸಭಾ ಕಾರ್ಯಕಲಾಪದಲ್ಲಿಯೂ ಅಷ್ಟು ಪರಿಚಯವಿದ್ದಿರಲಾರದು. ಪಾರ್ಲಿಮೆಂಟಿನ ಸದಸ್ಯ ಹೌದಾದರೂ, ಮಾತಿನ ಮಲ್ಲರ ಆ ಕ್ರೀಡಾಂಗಣದಲ್ಲಿಯೂ ತುಟಿಯೆರಡು ಮಾಡದ ಸಂಯಮಿ ಕಾಮರಾಜ! ಅಂದ ಬಳಿಕ, ಇವರು ಮದ್ರಾಸಿನ ಹೊಸ ಮಂತ್ರಿ ಮಂಡಳವನ್ನು ಹೇಗೆ ರಚಿಸುವರೋ ಎಂದೆಲ್ಲ ಕಳವಳವೂ ಕುತೂಹಲವೂ ತುಂಬಿಕೊಂಡಿದ್ದುದು ಸಹಜ. ಶ್ರೀ ಪಿ. ಟಿ. ರಾಜನ್ನರಂಥವರು ನಾಡರರು ಮಂತ್ರಿ ಮಂಡಳದ ಹೊರಗುಳಿದು ಕೆಲಸಮಾಡಬೇಕೆಂದು ಸೂಚಿಸಿದ್ದರೆ, ಅನೇಕಮಂದಿ ಹಿಂದೆ ಮಂತ್ರಿಸ್ಥಾನದ ಕರ್ತವ್ಯಗಳನ್ನು ನಿರ್ವಹಿಸಿ ಅನುಭವವನ್ನು ಹೊಂದಿದ ಸದಸ್ಯರನ್ನು ನೂತನ ಸಚಿವ ಸಂಪುಟದಲ್ಲಿ ಸೇರಿಸಿಕೊಂಡು, ಆಡಳಿತ ಯಂತ್ರದ ದಕ್ಷತೆ ಕಾಯ್ದುಕೊಳ್ಳಬೇಕೆಂದು ಹೇಳುತ್ತಿದ್ದರು ಪಕ್ಷದ ಧುರೀಣನಾಗಿ ಆಯ್ಕೆ ಹೊಂದಿದವನನ್ನು ಮುಖ್ಯಮಂತ್ರಿ ಸ್ಥಾನವನ್ನು ಅಲಂಕರಿಸಬೇಡ ಎಂದು ಹೇಳುವುದು ಉಚಿತ ಸಂಪ್ರದಾಯವಾಗಲಿಕ್ಕಿಲ್ಲ. ಆದರೆ ಹಿಂದೆ ಮಂತ್ರಿಸ್ಥಾನದಲ್ಲಿದ್ದುಕೊಂಡು ಕೆಲಸಮಾಡಿದ ಸಮರ್ಥ ಸದಸ್ಯರನ್ನು ಹೊಸ ಮಂತ್ರಿಮಂಡಳದಲ್ಲಿ ಸೇರಿಸಿಕೊಂಡು ಕುಶಲ ಆಡಳಿತೆಯ ಪರಂಪರೆಯನ್ನು ಸಾಗಿಸಿಕೊಂಡು ಹೋಗಬೇಕೆಂಬ ಬೇಡಿಕೆಯಲ್ಲಿ ತಪ್ಪಾದ ಆಶಯವಿರಲಾರದು. ರಾಜಾಜಿಯು ಪಕ್ಷದ ಧುರೀಣನಾಗಿದ್ದುದರಿಂದ ಅವರ ನಿವೃತ್ತಿಯೊಂದಿಗೆ ಸಚಿವ ಸಂಪುಟವೇ ಇಡೀಯಾಗಿ ವಿಸರ್ಜನೆ ಹೊಂದಬೇಕಾಯಿತು. ರಾಜಾಜಿಯ ಮೇಲೆ ಜನತೆಗೆ ಎಷ್ಟು ತೃಪ್ತಿ ಸಮಾಧಾನ ಹಾಗು ಭರವಸೆಗಳು ಇದ್ದವೋ ಅಷ್ಟೇ ಅವರ ಮಂತ್ರಿ ಮಂಡಳದ ಸದಸ್ಯರ ಮೇಲೂ ಇದ್ದಿತು. ಅಂಥವರಲ್ಲಿ ಯೋಗ್ಯ ನಂದ ಕೆಲವರನ್ನು ಆರಿಸಿ ಕೊಂಡು, ಕಾಮರಾಜ ನಾಡರರು ಮಂತ್ರಿ ಮಂಡಳ ರಚಿಸಿರುವುದಕ್ಕೆ ಜನತೆಗೆ ಸಂತೋಷವೆನಿಸುತ್ತದೆ. ಶ್ರೀಗಳಾದ ಎ. ಬಿ. ಶೆಟ್ಟಿ, ಸುಬ್ರಹ್ಮಣ್ಯಂ, ಮಾಣಿಕ್ಕವೇಲು ನಾಯ್ಕರ್, ಭಕ್ತ ವತ್ಸಲಂ ಮತ್ತು ರಾಮನಾಡಿನ ರಾಜರು ರಾಜಾಜಿಯ ಕೈಯಲ್ಲಿ ನುರಿತ ಸಜ್ಜನರು ಹರಿಜನ ಪ್ರತಿನಿಧಿಯಾಗಿ ಸೇರಿಸಿಕೊಳ್ಳಲ್ಪಟ್ಟ ಶ್ರೀ ಪರಮೇಶ್ವರನ್ನರು ಮದ್ರಾಸಿನ ಮೇಯರ—ಮಾತ್ರವಲ್ಲದೆ, ಹಿಂದೆ ಮಂತ್ರಿಯಾಗಿ ಕೆಲಸಮಾಡಿದ ಅನುಭವಿಕ. ಇವರೆಲ್ಲ ಒಟ್ಟುಗೂಡಿ, ರಾಜಾಜಿಯವರು ಬಹಳ ಕಷ್ಟದಿಂದಲೂ ಕೌಶಲ್ಯದಿಂದಲೂ ಬುದ್ಧಿವಂತಿಕೆಯಿಂದಲೂ ಸುಧಾರಿಸಿದ ಆಡಳಿತ ಯಂತ್ರದ ದಕ್ಷತೆಯನ್ನು ಕಾಯ್ದುಕೊಳ್ಳುವರೆಂದೂ ಉನ್ನತ ಮಟ್ಟವನ್ನು ಮುಂದಕ್ಕೂ ಉಳಿಸಿಕೊಂಡು ಸಾಗುವರೆಂದೂ ಆಶಿಸುತ್ತೇವೆ ಈ ಮಂತ್ರಿ ಮಂಡಳವು ಜನಪ್ರೀತವಾಗಿ, ಮುಂದಿನ ಚುನಾವಣೆಯ ವರೆಗೆ ಬಾಳಿ, ಕಾಂಗ್ರೆಸಿಗೆ ನಿಃಸಂದಿಗ್ಧ ಬಹುಮತವನ್ನು ದೊರಕಿಸಿಕೊಡುವ ರೀತಿಯಲ್ಲಿ ಸತ್ಕಾರ್ಯಗಳನ್ನು ತೊಡಗಿ, ಕೀರ್ತಿಭಾಜನವಾಗಲೆಂದು ಹಾರೈಸುತ್ತೇವೆ

ಫ್ರೆಂಚ ಭಾರತದಲ್ಲಿ ವಿಲಯನವಾದಿಗಳ ಮುನ್ನಡೆ

ಕಮ್ಯೂನಿಸ್ಟರಿಗೆ ಎಚ್ಚರಿಕೆ ಕೊಡುವ ಅಮೇರಿಕದ ಔದ್ಧತ್ಯ

ಲೋಕ ಶಾಂತಿಯ ಸದುದ್ದೇಶವನ್ನು ಇಟ್ಟುಕೊಂಡಿರುವ ಜಿನೀವಾ ಪರಿಷತ್ತು ಈ ತಿಂಗಳ ಕೊನೆಯ ವಾರದಲ್ಲಿ ಸೇರುತ್ತದೆ. ಇನ್ನೂ ಎರಡು ಮೂರು ವಾರಗಳು ಇರುವಾಗಲೇ ಅಧ್ಯಕ್ಷ ಐಸೆನಹಾವರರು ಈ ಪರಿಷತ್ತು ಫಲಕಾರಿಯಾಗುವುದಿಲ್ಲ ಎಂದು ಭವಿಷ್ಯ ಹೇಳಿ, ಎಲ್ಲರ ಆಶೆಗೆ ತಣ್ಣೀರನ್ನು ಎರಚಿದರು. ದೂರ ಪ್ರಾಚ್ಯದ ಸಮಸ್ಯೆಗಳ ಪರಿಹಾರದಲ್ಲಿ ಕಮ್ಯುನಿಸ್ಟ ಚೀನದ ಅಭಿಪ್ರಾಯಕ್ಕೆ ವಾಸ್ತವಿಕ ಮಹತ್ವವಿರುವುದರಿಂದ, ಅದಕ್ಕೆ ಸಂಯುಕ್ತ ರಾಷ್ಟ್ರ ಸಂಘದಲ್ಲಿ ಪ್ರಾತಿನಿಧ್ಯವಿರಬೇಕಾದದ್ದು ನ್ಯಾಯ. ಇದಕ್ಕೆ ಅಮೇರಿಕ ಈಗಲೂ ಒಪ್ಪುತ್ತಿಲ್ಲ– ಕಾರಣ ಕೊರಿಯಾದ ಕುರಿತು ಯಾವುದೇ ಆಶೆ ಕಟ್ಟಿಕೊಳ್ಳುವಂತಿಲ್ಲ

ಕಮ್ಯುನಿಸ್ಟರಿಗೆ ಎಚ್ಚರಿಕೆ

ಇನ್ನೊಂದು ಸಮಸ್ಯಾ ಕ್ಷೇತ್ರವಾದ ಇಂಡೋಚೀನದಲ್ಲಿ ಸಹ ಸಮಾಧಾನಕರವಾದ ಪರಿಹಾರ ಮಾರ್ಗವನ್ನು ಕಂಡು ಹಿಡಿಯುವ ಪ್ರಯತ್ನವನ್ನು ಅಮೇರಿಕ ಬಿಟ್ಟುಗೊಟ್ಟು, ಬೆದರಿಕೆಗಳನ್ನು ಹಾಕ ಹತ್ತಿದೆ. ಬ್ರಿಟನ್ನು, ಆಸ್ಟ್ರೇಲಿಯಾ, ನ್ಯೂಜಿಲೆಂಡ, ಮುಂತಾದ ರಾಷ್ಟ್ರಗಳನ್ನೊಳಗೊಂಡ ಸಂಯುಕ್ತರಂಗವನ್ನು ರಚಿಸಿ, ಏಶ್ಯಾದಲ್ಲಿ ಕಮ್ಯುನಿಸ್ಟ ಆಕ್ರಮಣವನ್ನು ತಡೆಗಟ್ಟಬೇಕೆಂದು ಡಲ್ಲೇಸರು ಯೋಚಿಸಿರುವರು. ಕಮ್ಯುನಿಸ್ಟ ಚೀನಕ್ಕೆ ಗಂಭೀರ ಎಚ್ಚರಿಕೆಯನ್ನು ಕೊಡಬೇಕೆಂದು ಅವರು ನಿರ್ಧರಿಸಿರುವರು.

ಈಡನ್ನರ ಬುದ್ಧಿವಾದ

ಭಾರತದ ಪ್ರಧಾನಿ ನೆಹರೂರವರು ಇಂತಹ ಬೆದರಿಕೆ ಹಾಕುವುದು ಪ್ರಯೋಜನವನ್ನೇನೂ ಮಾಡಲಾರದೆಂದು ಹೇಳಿದ್ದಾರೆ. ಅಮೇರಿಕದ ಉದ್ಧಟತನವು ಬ್ರಿಟನ್ನಿನಂಥ ಮಿತ್ರ ರಾಷ್ಟ್ರಕ್ಕೂ ಸರಿಬಂದಿಲ್ಲ. ಡಲ್ಲೇಸರು ಲಂಡನಿಗೆ ಹಾರಿ ಹೋಗ, ಈಡನ್ನರ ಮುಂದೆ ಸಂಯುಕ್ತರಂಗದ ಯೋಜನೆಯನ್ನು ಇಟ್ಟಾಗ ಜಿನೀವಾ ಪರಿಷತ್ತು ನಿಷ್ಫಲವಾಗುವಂತಹ ಯಾವ ಕ್ರಮವನ್ನೂ ಕೈಗೊಂಡು ದುಡುಕಬಾರದಾಗಿ ಅವರು ಬುದ್ಧಿ ಹೇಳಿದರು.

ಫ್ರೆಂಚ ಭಾರತದಲ್ಲಿ

ಫ್ರೆಂಚರು ಇಂಡೋಚೀನದ ಕದನವನ್ನು ನಿಲ್ಲಿಸುವ ಕುರಿತು ತೋರಿಸುವ ಆತುರ ಭಾರತದಲ್ಲಿರುವ ಫ್ರೆಂಚ ನಡುಗಡ್ಡೆಗಳ ಹಸ್ತಾಂತರ ವಿಷಯದಲ್ಲಿ ಕಂಡು ಬರುತ್ತಿಲ್ಲ. ಅಲ್ಲಿ ನಡೆಯುವ ವಿಲಯನಪರ ಆಂದೋಲನವನ್ನು ಸರಕಾರ ಬಗ್ಗು ಬಡೆಯಲು ಪೋಲೀಸರೊಡನೆ ಗುಂಡರನ್ನೂ ದುಡ್ಡುಕೊಟ್ಟು ಕಳಿಸಹತ್ತಿದೆ. ರಾಜಕೀಯ ಕಣ್ಣುಮುಚ್ಚಾಲೆಯಾಡುವ ಉದ್ದೇಶದಿಂದ ಸಾಮ್ರಾಜ್ಯಶಾಹಿ ಫ್ರೆಂಚರಿಗೆ ಅನುಕೂಲವಾದ "ಪ್ರಜಾಪ್ರಭುತ್ವ ಪಕ್ಷ" ವೊಂದನ್ನು ಸಂಘಟಿಸಹತ್ತಿದೆ.

ವಿಲಯನವಾದಿಗಳ ಆಂದೋಲನ

ದಬ್ಬಾಳಿಕೆ ನಡೆದಿದ್ದಂತೆಯೇ ವಿಲಯನವಾದಿಗಳು ಚಳವಳವನ್ನು ಭರದಿಂದ ಮುಂದೊತ್ತುತಿದ್ದಾರೆ. ಸುತ್ತಲೂ ಭಾರತದ ನೆಲದಿಂದ ಆವೃತವಾದ ೬೨ ಹಳ್ಳಿಗಳು ಸ್ವಾತಂತ್ರ್ಯ ಸಾರಿವೆಯಲ್ಲದೆ ಪೊಂಡಿಚೇರಿಯಲ್ಲಿಯೇ ತಮಿಳು ಹೊಸ ವರ್ಷದ ದಿನದಂದು ಆಂದೋಲನ ತೊಡಗಿದೆ, ಕಾರೈಕಲ್, ಮಾಹೆಗಳಲ್ಲೂ ಚಳುವಳಿ ಪ್ರಬಲಿಸಹತ್ತಿದೆ. ಜನ ಮತಗಣನೆ ಇಲ್ಲದೆಯೇ ಭಾರತ ಸರಕಾರಕ್ಕೆ ಈ ಸ್ವಾಸ್ಥ್ಯಗಳ ಅಧಿಕಾರವನ್ನು ಕೂಡಲೇ ಹಸ್ತಾಂತರಿಸಬೇಕೆನ್ನುವ ಬೇಡಿಕೆಗೆ, ಫ್ರೆಂಚ ರಾಷ್ಟ್ರೀಯ ಮಂಡಳದ ಸದಸ್ಯರಾದ ಫಕೀರಿಸ್ವಾಮಿ ಪಿಳ್ಳೆ ಹಾಗೂ ಇತರ್ವಾಯರರ ಬೆಂಬಲ ದೊರಕಿದೆ. ಇವರು ಪೇರಿಸಿಗೆ ತೆರಳಿದ್ದು, ಅಲ್ಲಿ ಈ ಕುರಿತು ಸರಕಾರಕ್ಕೆ ಒತ್ತಾಯ ಮಾಡುವರು.

ಕೊಲೊಂಬೋ ಸಮ್ಮೇಳನ

ಈ ಮಾಸಾಂತ್ಯದಲ್ಲಿ ಜರಗಲಿರುವ ಇನ್ನೊಂದು ಮುಖ್ಯ ಪರಿಷತ್ತು ಸಿಂಹಳ, ಭಾರತ ಪಾಕಿಸ್ಥಾನ, ಬರ್ಮಾ ಹಾಗು ಇಂಡೋನೇಶಿಯದ ಪ್ರಧಾನಿಗಳದೆಂದು ಹೇಳಬಹುದು. ಇಲ್ಲಿ ಅಕ್ರಮಣ ಒಪ್ಪಂದದ ಯೋಚನೆ ಮಂಡಿಸಲ್ಪಡಬಹುದೆಂದೂ ಆರ್ಥಿಕ ಪ್ರಗತಿ ಹಾಗು ತಾಂತ್ರಿಕ ಅಭಿವೃದ್ಧಿಯ ಉದ್ದೇಶದಿಂದ ಪರಸ್ಪರ ಸಹಕಾರ ಹಾಗು ಸಹಾಯದ ಯೋಜನೆಗಳು ಪುರಸ್ಕರಿಸಲ್ಪಡಬಹುದೆಂದೂ ವರದಿಗಳು ತಿಳಿಸುತ್ತವೆ.

ಲೈಬ್ರರಿಗಳಿಗೆ ತರಿಸಿಕೊಳ್ಳಬಹುದು.

ದಕ್ಷಿಣ ಕನ್ನಡದ ಲೋಕಲ್ ಲೈಬ್ರರಿ ಅಥೋರಿಟಿ ಕಮಿಟಿಯವರು ತಾರೀಕು 11-3-54ರ ತಮ್ಮ ಸಭೆಯಲ್ಲಿ ನವಯುಗ ವಾರಪತ್ರಿಕೆಯನ್ನು ಜಿಲ್ಲೆಯ ಲೈಬ್ರರಿಗಳ ಉಪಯೋಗಾರ್ಥವಾಗಿ ಮಂಜೂರು ಮಾಡಿರುತ್ತಾರೆಂದು ತಿಳಿಸಲು ಸಂತೋಷಪಡುತ್ತೇವೆ. ಸೆಕೆಂಡ್ರಿ ಶಾಲೆಗಳ ಉಪಯೋಗಾರ್ಥವಾಗಿ ವಿದ್ಯಾಂಗದ ಡೈರೆಕ್ಟರರು ಈ ಮೊದಲೇ ಮಂಜೂರು ಮಾಡಿರುತ್ತಾರೆ.

ಮದ್ರಾಸಿಗೆ ಹೊಸ ಮಂತ್ರಿಮಂಡಳ

ಹಿಂದಿನ ಮಂತ್ರಿಗಳಲ್ಲಿ ಐವರಿಗೆ ಸ್ಥಾನ

ತಮಿಳು ಹೊಸ ವರ್ಷದ ಶುಭದಿನದಂದು (೧೩.೪) ಮದ್ರಾಸಿನಲ್ಲಿ ಶ್ರೀ. ಕಾಮರಾಜ ನಾಡರರ ಧುರೀಣತ್ವದಲ್ಲಿ ನೂತನ ಸಚಿವ ಸಂಪುಟವು ಅಧಿಕಾರವನ್ನು ವಹಿಸಿಕೊಂಡಿತು. ಅಂದು ಪೂರ್ವಾಹ್ನ ಗವರ್ನರ ಶ್ರೀ. ಪ್ರಕಾಶರ ಮುಂದೆ ಎಂಟು ಮಂದಿ ಮಂತ್ರಿಗಳ ಪ್ರತಿಜ್ಞಾವಿಧಿಯು ಜರಗಿತು. ನಾಡರರ ಹೊಸ ಮಂತ್ರಿ ಮಂಡಳದಲ್ಲಿ ರಾಜಾಜಿಯವರ ಮಂತ್ರಿ ಮಂಡಳದಲ್ಲಿ ಕೆಲಸ ಮಾಡಿದ್ದ ಐವರು ಸಚಿವರು ಸೇರಿರುವರಲ್ಲದೆ, ಅದಕ್ಕೆ ಹಿಂದಿನ ಕುಮಾರಸ್ವಾಮಿ ರಾಜಾರ ಮಂತ್ರಿ ಮಂಡಳದಲ್ಲಿ ಸದಸ್ಯರಾಗಿ ಕೆಲಸ ಮಾಡಿದ್ದ ಶ್ರೀ. ಬಿ. ಪರಮೇಶ್ವರನ್ನರೂ ಇರುವರು. ಅಧಿಕಾರ ವಹಿಸಿದ ಎಂಟು ಮಂದಿ ಯಾರೆಂದರೆ —

(೧) ಶ್ರೀ ಕೆ. ಕಾಮರಾಜ ನಾಡರ
(ಸಾರ್ವಜನಿಕ ಮತ್ತು ಗೃಹಖಾತೆ)

(೨) ಶ್ರೀ. ಎ. ಬಿ ಶೆಟ್ಟಿ
(ಆರೋಗ್ಯ, ಸಹಕಾರ, ವಸತಿ ಹಾಗೂ ನಿವೃತ್ತ ಸೈನಿಕರು)

(೩) ಶ್ರೀ ಎಂ. ಭಕ್ತವತ್ಸಲಂ
(ಕೃಷಿ, ಕೈಗಾರಿಕೆ ಮತ್ತು ಮಜೂರ)

(೪) ಶ್ರೀ ಸಿ. ಸುಬ್ರಹ್ಮಣ್ಯಂ
(ಆರ್ಥಿಕ, ಆಹಾರ, ವಿದ್ಯೆ, ಕಾನೂನು)

(೫) ಶ್ರೀ ಬಿ ಪರಮೇಶ್ವರನ್
(ಸಾರಿಗೆ, ಹರಿಜನಾಭಿವೃದ್ಧಿ, ಹಿಂದೂ ಧಾರ್ಮಿಕಸಂಸ್ಥೆ, ಮದ್ಯನಿರೋಧ)

(೬) ಶ್ರೀ ಮಾಣಿಕ್ಯವೇಲು ನಾಯ್ಕರ್
(ಕಂದಾಯ)

(೭) ಶ್ರೀ ರಾಮನಾಡಿನ ರಾಜ; ಮತ್ತು
(ಸಾರ್ವಜನಿಕ ಕಾಮಗಾರಿ)

(೮) ಶ್ರೀ ರಾಮಸ್ವಾಮಿ ಪಡಯಾಚಿ.
(ಸ್ಥಳೀಯ ಆಡಳಿತ)

ಇಷ್ಟು ಮಂದಿಯಲ್ಲದೆ ಮಲಬಾರು ಪ್ರದೇಶವನ್ನು ಪ್ರತಿನಿಧೀಕರಿಸುವ ಒಂಭತ್ತನೇ ಮಂತ್ರಿಯೊಬ್ಬರು ಸದ್ಯದಲ್ಲೇ ನೇಮಕವಾಗಲಿರುವರೆಂದೂ ಶ್ರೀ|| ನಾಡರರು ತಿಳಿಸಿರುವರು. ಅನಿಯಮಿತ ಅವಧಿಯವರೆಗೆ ಈಗ ಮುಂದೂಡಲ್ಪಟ್ಟಿರುವ ಶಾಸನ ಸಭೆಯ ಅಧಿವೇಶನವನ್ನು ಮೇ ತಿಂಗಳ ಪ್ರಥಮ ವ[illegible]ಯಬಹುದೆಂದೂ ಶ್ರೀ ನಾಡರರು ಸೂಚಿಸಿರುವರು.

ನೆಹರೂರೊಡನೆ ಸಮಾಲೋಚನೆ

ಮಂತ್ರಿಮಂಡಳದ ಕೊನೆಯ ಮೂವರು ಸದಸ್ಯರನ್ನು ಸೂಚಿಸುವುದಕ್ಕೆ ಮುಂಚೆ ನಾಡರರು ಕಾಂಗ್ರೆಸಾಧ್ಯಕ್ಷ ನೆಹರೂರವರನ್ನು ಕಂಡು ಮಾತನಾಡಲು ಹೊಸದಿಹಲಿಗೆ ವಿಮಾನ ಮೂಲಕ ಹಾರಿ ಹೋಗಿದ್ದರು. ಕಾಂಗ್ರೆಸ ಪಕ್ಷವು ರಚಿಸುವ ಈ ಮಂತ್ರಿಮಂಡಳದಲ್ಲಿ ತಮಿಳುನಾಡು ಟಾಯ್ಲರ್ಸ ಪಕ್ಷ ಹಾಗೂ ಕೋಮನ್‌ವೀಲ ಪಕ್ಷಗಳ ಪ್ರತಿನಿಧಿಗಳನ್ನು ಸೇರಿಸಿಕೊಂಡು ತನ್ಮೂಲಕ ಎರಡೂ ಪಕ್ಷಗಳ ಸಂಪೂರ್ಣ ಸಹಕಾರವನ್ನು ಪಡೆಯುವ ಕುರಿತು ನಾಡರರು ನೆಹರೂರವರೊಡನೆ ಪರ್ಯಾಲೋಚನೆ ನಡೆಸಿರಬೇಕೆಂದು ಊಹಿಸಬಹುದು. ಕಾಂಗ್ರೆಸ ಅಧ್ಯಕ್ಷರು ಹಿಂದೆ ಕಾಂಗ್ರೆಸಿನಲ್ಲಿದ್ದು ಚಿಲ್ಲರೆ [illegible]ದಗಳ ಕಾರಣದಿಂದ ಕಾಂಗ್ರೆಸು ಸಂಸ್ಥೆಯನ್ನು ತ್ಯಜಿಸಿ ಹೊರಗೆ ಹೋಗಿ ಹೋದವರು ಯಾವಾಗ ಬೇಕೆಂದಾಗ ಕಾಂಗ್ರೆಸಿಗೆ ಮರಳಿ ಸೇರಬಹುದೆಂದು ಎಷ್ಟೋ ಬಾರಿ ಹೇಳಿದ್ದುಂಟು. ತಮಿಳುನಾಡು ಟಾಯ್ಲರ್ಸ ಪಕ್ಷವಾಗಲೀ ಕೋಮನವೀಲ ಪಕ್ಷವಾಗಲೀ ಕಾಂಗ್ರೆಸಿನ ಮೇಲೆ ಸಿಡುಕುಗೊಂಡು ಸಿಡಿದು ಹುಟ್ಟಿದವುಗಳೇ ಹೊರತು ಅವುಗಳಿಗೆ ಚಾರಿತ್ರಿಕ ಹಿನ್ನಲೆಯೇನೂ ಇಲ್ಲ. ಆದುದರಿಂದ ಈ ಪಕ್ಷಗಳು ಶಾಸನ ಸಭೆಯ ಒಳಗೂ ಹೊರಗೂ ತಮ್ಮ ಅಸ್ತಿತ್ವವನ್ನು ರದ್ದುಗೊಳಿಸಿ ಕಾಂಗ್ರೆಸಿನೊಂದಿಗೇ ಸೇರಿಹೋಗಲು ಹವಣಿಸಿದರೆ, ಅದರಲ್ಲಿ ಕೆಡುಕು ಇರಲಾರದು; ಬದಲು ಅಂತಹ ಕ್ರಮ ಸ್ವಾಗತಾರ್ಹವಾದದ್ದೇ ನಿಜ. ನಾಡರರ ಈ ಸೂಚನೆಗೆ ಶ್ರೀ ನೆಹರೂರವರ ಸಮ್ಮತಿ ದೊರೆಯಿತೆಂದೇ ಕೋಮನ್ ವೀಲ್ ಪಕ್ಷದ ಶ್ರೀ ನಾಯ್ಕರರಿಗೂ ಟಾಯ್ಲರ್ಸ್ ಪಕ್ಷದ ಪಡಯಾಚಿಗಳಿಗೂ ಮಂತ್ರಿಮಂಡಳದಲ್ಲಿ ಸ್ಥಾನ ದೊರೆಯಿತೆಂದು ತಿಳಿಯಲು ಅಡ್ಡಿಯಿಲ್ಲ.

ರಾಜಾಜಿಯ ರಾಜೀನಾಮೆ

ಕಾಮರಾಜ ನಾಡರರು ಶಾಸನ ಸಭಾ ಕಾಂಗ್ರೆಸು ಪಕ್ಷದ ಸಭೆಯಲ್ಲಿ ರಾಜಾಜಿಯ ಸ್ಥಾನದಲ್ಲಿ ಮುಂದಿನ ಧುರೀಣರಾಗಿ ಆಯ್ಕೆ ಹೊಂದಿದ್ದರೂ ಸಹ—ಕಾಂಗ್ರೆಸಿನ ಕೇಂದ್ರ ಪಾರ್ಲಿಮೆಂಟರಿ ಮಂಡಳವು ಅವರನ್ನು ದ್ವಂದ್ವದಲ್ಲಿ ಕೆಡವಿದ್ದಿತು. ನಾಡರರು ತಮಿಳುನಾಡು ಪ್ರದೇಶ ಕಾಂಗ್ರೆಸಿನ ಅಧ್ಯಕ್ಷರಾಗಿರುವುದರಿಂದ ಮುಖ್ಯಮಂತ್ರಿ ಹಾಗು ಅಧ್ಯಕ್ಷನೆಂಬ ಎರಡೂ ಸ್ಥಾನಗಳನ್ನು ಅವರು ನಿರ್ವಹಿಸುವುದು ಅಪೇಕ್ಷಣೀಯವಲ್ಲವೆಂದು ಪಾರ್ಲಿಮೆಂಟರಿ ಮಂಡಳ ಅಭಿಪ್ರಾಯಪಟ್ಟಿತು. ಎರಡರಲ್ಲಿ ಯಾವುದಾದರೊಂದನ್ನು ಆಯ್ದುಕೊಳ್ಳಲು ಹೇಳಿತು. ನಾಡರರು ಮದ್ರಾಸಿಗೆ ಮರಳಿದ ಬಳಿಕ ವಿಚಾರ ವಿನಿಮಯಗಳನ್ನು ನಡೆಸಿ ಮುಖ್ಯ ಮಂತ್ರಿ ಸ್ಥಾನವನ್ನೇ ಸ್ವೀಕರಿಸಲು ನಿರ್ಧಾರ ಮಾಡಿದರು. ಇದು ಪ್ರಕಟಗೊಂಡೊಡನೆಯೇ ರಾಜಾಜಿಯವರು ತಮ್ಮ ಮಂತ್ರಿ ಮಂಡಳದ ರಾಜೀನಾಮೆಯನ್ನು ದಿನಾಂಕ ೮ರಂದು ಮಾನ್ಯ ಗವರ್ನರರಿಗೆ ಒಪ್ಪಿಸಿದರು; ಮತ್ತು ಹೊಸ ಮಂತ್ರಿ ಮಂಡಳವನ್ನು ರಚಿಸಲು ಶ್ರೀ ನಾಡರರನ್ನು ಕೇಳಿಕೊಳ್ಳಬೇಕೆಂದು ಸಲಹೆ ಮಾಡಿದರು. ಗವರ್ನರರು ಹೊಸ ಮಂತ್ರಿಮಂಡಳ ಅಧಿಕಾರ ವಹಿಸುವವರೆಗೂ ರಾಜಾಜಿಯವರನ್ನು ಆಡಳಿತ ನೋಡಿಕೊಳ್ಳುವಂತೆ ವಿನಂತಿಸಿ, ಒಪ್ಪಿಸಿದರು. ಅದರಂತೆ ಮಂಗಳವಾರದಿನ ಬೆಳಿಗ್ಗೆ ರಾಜಾಜಿಯ ಮಂತ್ರಿಮಂಡಳ ವಿಸರ್ಜನೆ ಹೊಂದಿತು. ನಿವೃತ್ತಿಯ ಕಾಲಕ್ಕೆ ನಿಮಗೇನಾದರೂ ಹೇಳಲಿದೆಯೋ ಏನೆಂದು ರಾಜಾಜಿಯನ್ನು ವಿಚಾರಿಸಿದಾಗ "ಸರ್ವೇಜನಾಃ ಸುಖಿನೋ ಭವಂತು" ಎಂದು ಹೇಳಿ ಎಲ್ಲರಿಗೂ ಕಲ್ಯಾಣವನ್ನು ಬಯಸಿ, ಬೀಳ್ಕೊಟ್ಟರು. ಆ ಮೇಲೆ ಕಾಮರಾಜ ನಾಡರರನ್ನು ಗವರ್ನರರು ಭೆಟಿಗೆ ಕರೆದುಕೊಂಡು, ರಾಜ್ಯದ ಸಮಸ್ಯೆಗಳನ್ನು ಚರ್ಚಿಸಿದರು. ಫಲವಾಗಿ ಈಗಿನ ಮಂತ್ರಿ ಮಂಡಳ ಅಧಿಕಾರಕ್ಕೆ ಬಂತು

ಸಹಕಾರವೇ ಏಳಿಗೆಯ ಬೆಂಗೋಲು

(೨ನೇ ಪುಟದಿಂದ)

ಲೋಕ ಸಭೆಯಲ್ಲಿ ನೀರಾವರಿ ವಿದ್ಯುಚ್ಛಕ್ತಿ ಮತ್ತು ಇತರ ಉತ್ಪಾದನಾಕಾರ್ಯಗಳ ಬೇಡಿಕೆಯ ಕುರಿತು ಚರ್ಚೆ ನಡೆದಾಗ ಪಂಚ ವಾರ್ಷಿಕ ಯೋಜನೆಯಲ್ಲಿ ತೃಪ್ತಿಕರ ಪ್ರಗತಿ ಕಂಡು ಬಂದಿರುವುದೆಂದು ಮಂತ್ರಿಗಳು ವಿವರಗಳನ್ನು ಕೊಟ್ಟರು. ಶ್ರೀ. ಕೆ ಸಿ. ರೆಡ್ಡಿಯವರು ಚರ್ಚೆಗೆ ಉತ್ತರ ಕೊಡುತ್ತಾ ದಾಮೋದರ ಕಣಿವೆಯ ವಲಯದಲ್ಲಿ ಅಲ್ಯುಮಿನಿಯಂ ಕಾರಖಾನೆಯೊಂದನ್ನು ತೆರೆಯುವ ವಿಚಾರವನ್ನು ಸರಕಾರ ಮಾಡುತ್ತಿದೆಯೆಂದೂ ಅದನ್ನು ಖಾಸಗಿ ವಿಭಾಗಕ್ಕೆ ಬಿಟ್ಟುಕೊಡಬೇಕೋ ಅಥವಾ ಸರಕಾರವೇ ನಡೆಸಬೇಕೋ ಎಂಬ ಕುರಿತು ನಿರ್ಣಯ ಕೈಗೊಳ್ಳಬೇಕಾಗಿದೆಯೆಂದೂ ಹೇಳಿದರು. ಜಡರಾಸಾಯನಿಕ ಪದಾರ್ಥಗಳ ಉತ್ಪಾದನೆ ಕಡಿಮೆಯಾಗುತ್ತಾ ಹೋಗುತ್ತಿದೆ. ಖಾಸಗಿ ವಿಭಾಗವು ಉತ್ಪಾದನೆಯನ್ನು ಹೆಚ್ಚಿಸುವ ಬಗ್ಗೆ ಯೋಗ್ಯ ಕ್ರಮ ತೆಗೆದುಕೊಳ್ಳುವ ಅಗತ್ಯವಿದೆ ಎಂದವರು ತಿಳಿಸಿದರು. ದೊಡ್ಡ ವಿದ್ಯುದುಪಕರಣಗಳ ಕಾರ್ಖಾನೆಯೊಂದನ್ನು ತೆರೆಯುವ ಕುರಿತು ಮಸುಸಮಯದಲ್ಲಿ ನಿರ್ದಿಷ್ಟ ವರ್ತಮಾನವನ್ನು ಒದಗಿಸಬಹುದೆಂದು ಅವರು ಪ್ರಕಟಿಸಿದರು

ನೀರಾವರಿ ಮತ್ತು ವಿದ್ಯುಚ್ಛಕ್ತಿಯ ಯೋಜನೆಗಳನ್ನು ಇಡೀ ದೇಶದ ಸಂಪತ್ತನ್ನು ಬಳಸುವ ರೀತಿಯಲ್ಲಿ ಕಾರ್ಯಗತಗೊಳಿಸುವುದು ಸರಕಾರದ ಧೋರಣೆಯೆಂದು ಶ್ರೀ ನಂದಾ ತಿಳಿಸಿದರು. ಈವರೆಗೆ ಅವಕಾಶ ದೊರೆಯದ ಭಾಗಗಳಿಗೆ ಇನ್ನು ಮುಂದೆ ಪ್ರಾಶಸ್ತ್ಯವನ್ನು ಕೊಟ್ಟು ಅಭಿವೃದ್ಧಿ ಪ್ರಯತ್ನಗಳನ್ನು ಮುಂದುವರೆಸಲಾಗುವುದಾಗಿಯೂ ಅವರು ನುಡಿದರು.

ಸಹಕಾರ ತತ್ವದ ಮಹತ್ವ

ರಾಜಕೀಯವನ್ನೊಳಗೊಂಡು ಎಲ್ಲ ಕ್ಷೇತ್ರದಲ್ಲೂ ಪ್ರಗತಿ ಕೈಗೂಡುವಂತೆ ನೋಡುವುದಕ್ಕೆ ಸಹಕಾರ ಮನೋಭಾವವು ಅಗತ್ಯವೆಂಬುದು ಎಲ್ಲರೂ ಒಪ್ಪತಕ್ಕ ಮಾತು. ಸಹಕಾರ ಚಳವಳವು ದೇಶದ ಪುನರ್ಘಟನೆಯಲ್ಲೂ ಪುನಾರಚನೆಯಲ್ಲೂ ಅತ್ಯಂತ ಆವಶ್ಯಕವಾದ ಅಂಗವೆಂದು ಪರಿಗಣಿಸಲ್ಪಟ್ಟಿವೆ. ನೆರೆಯ ಮುಂಬಯಿ ರಾಜ್ಯವು ಸಹಕಾರಿ ಚಳವಳದ ಸುವರ್ಣ ಮಹೋತ್ಸವವನ್ನು ಕಳೆದ ವಾರ ಆಚರಿಸಿತು. ಇದರ ಅಂಗವಾಗಿ ಜರಗಿದ ಗ್ರಾಮೋದ್ಯೋಗ ಪ್ರದರ್ಶನದ ಉದ್ಘಾಟನೆಯ ಕಾಲದಲ್ಲಿ ನೆಹರೂರವರು "ಸಹಕಾರದ ಆವಶ್ಯಕತೆಯು ಜಗತ್ತಿನಲ್ಲಿ ಹಿಂದೆಂದೂ ಇಂದಿನಷ್ಟು ಇರಲಿಲ್ಲ" ಎಂದು ಉದ್ಗರಿಸಿದರು. ಕೂಲಿಕಾರ-ಬಂಡವಾಳಗಾರರ ನಡುವೆಯಾಗಲೀ ಜನತೆ ಸರಕಾರದವಲ್ಲಾಗಲೀ ರಾಷ್ಟ್ರ ರಾಷ್ಟ್ರಗಳಲ್ಲಾಗಲೀ ಇಂದು ಸಹಕಾರವಿರುವುದು ಅನಿವಾರ್ಯವಾಗಿ ಪರಿಣಮಿಸಿದೆಯೆಂದು ನೆಹರೂ ನುಡಿದರು. ಸಹಕಾರದ ಸಂದೇಶವು ಏಕೆಪಗತ್ತಿನ ಆದರ್ಶಕ್ಕೆ ನಮ್ಮನ್ನೊಯ್ಯುತ್ತದೆ ಎಂದವರು ವರ್ಣಿಸಿದರು.

ಸಹಕಾರ ಮನೋಭಾವದ ಬಲದಿಂದಲೇ ನೆಹರೂರವರು ಕೇಂದ್ರ ಮಂತ್ರಿ ಮಂಡಳದಲ್ಲಿ ಕಾಣಿಸಿಕೊಂಡ ಭಿನ್ನಾಭಿಪ್ರಾಯವನ್ನು ನಿವಾರಿಸಲು ಶಕ್ಯರಾದರೆಂದು ಹೇಳಲಡ್ಡಿಯಿಲ್ಲ. ಮುಂಗಡ ಪತ್ರಿಕೆಯನ್ನು ತಯಾರಿಸುವ ಕ್ರಮ ಹಾಗು ಹಣಕಾಸಿನ ವಿಷಯದಲ್ಲಿ ಅರ್ಥಸಚಿವರಿಗಿರುವ ನಿಯಂತ್ರಣಾಧಿಕಾರಗಳ ಸಂಬಂಧದಲ್ಲಿ ಈಚೆಗೆ ತುಸು ಮನಸ್ತಾಪ ಸನೆದ್ದಂತೆ ಕಂಡು ಬಂತು. ಆದರೆ ಹಳೆಯ ನಿಯಮಗಳನ್ನು ಕಾಲಮಾನಕ್ಕೆ ಹೊಂದಿಕೊಂಡು ಬದಲಿಸಬೇಕೆಂಬ ನೆಹರೂರ ಸಮಂಜಸ ನಿಲುವನ್ನು ಅರ್ಥಸಚಿವ ದೇಶಮುಖರು ಹೆಚ್ಚು ವಿಳಂಬವಿಲ್ಲದೆ ಮನವರಿಕೆ ಮಾಡಿಕೊಂಡು, ತಮ್ಮ ರಾಜೀನಾಮೆಯನ್ನು ಹಿಂದೆಗೆದುಕೊಂಡರು. ನೆಹರೂರ ಜಾಣತನದ ಫಲವಾಗಿ ಮಂತ್ರಿಮಂಡಳದ ಸಮರ್ಥ ಸದಸ್ಯನೊಬ್ಬನ ಸೇವೆಯಿಂದ ವಂಚಿಸಲ್ಪಡುವ ದೌರ್ಭಾಗ್ಯ ರಾಷ್ಟ್ರದ ಪಾಲಿಗೆ ತಪ್ಪಿ, ಕಲ್ಯಾಣವಾಯಿತು.

ಈ ಸಹಕಾರ ಮನೋಭಾವವನ್ನು ಇನ್ನೊಂದು ಪ್ರಾಮುಖ್ಯ ವಿಷಯದಲ್ಲೂ ಭಾರತ ಸರಕಾರ ವ್ಯಕ್ತಗೊಳಿಸಿದೆ. ಈಚೆಗೆ ಬರ್ಮಾದಿಂದ ೯ ಲಕ್ಷ ಟನ್ನುಗಳಷ್ಟು ಅಕ್ಕಿಯನ್ನು ತರಿಸಿಕೊಳ್ಳುವ ಒಡಂಬಡಿಕೆ ಮಾಡಿಕೊಂಡಾಗ, ಇದಕ್ಕೆ ತೆರಬೇಕಾದ ಬೆಲೆಯಲ್ಲಿ ಒಂದಂಶವನ್ನು ಭಾರತಕ್ಕೆ ಬರ್ಮಾ ಕೊಡಬೇಕಾದ ಸಾಲದಲ್ಲಿ ಮುರಿಮಕೊಳ್ಳುವ ಪ್ರಯತ್ನ ನಡೆಯಿತು. ಬರ್ಮಾವು ಭಾರತ ಸರಕಾರಕ್ಕೆ ಕೊಡಬೇಕಾದ ಸಾಲವು ೪೮ ಕೋಟಿ ರೂಪಾಯಿಗಳಷ್ಟಿದ್ದದ್ದು ೩೪ ಕೋಟಿ ರೂಪಾಯಿ ಬಡ್ಡಿಯನ್ನೊಳಗೊಂಡು ೭೨ ಕೋಟಿಗೆ ಏರಿದ್ದಿತು. ಭಾರತ ಸರಕಾರವು ಬಡ್ಡಿಯ ಅಂಶವನ್ನು ಪೂರಾ ರಿಯಾಯತಿಗೊಳಿಸಿ ತಕ್ಷದೆ, ಪಾಕಿಸ್ತಾನಕ್ಕೆ ಸಲ್ಲಬೇಕಾದ ಅಂಶವನ್ನು ತೆಗೆದು ಉಳಿದ ೪೦ ಕೋಟಿ ರೂಪಾಯಿಗಳ ಅಸಲು ಸಾಲದಲ್ಲಿಯೂ ಅರೆವಾಸಿಯಷ್ಟು ಬಿಟ್ಟುಕೊಟ್ಟಿದೆ. ಇದಕ್ಕೆ ಪ್ರತಿಯಾಗಿ ಬರ್ಮಾ ಸರಕಾರವು ಟನ್ನಿಗೆ ೧೩ ಸ್ಟರ್ಲಿಂಗದಷ್ಟು ದಳ್ಳಾಳಿಯನ್ನು ಕೊಡಲು ಒಪ್ಪಿಕೊಂಡಿದೆ. ಈ ಅಕ್ಕಿಯ ವ್ಯಾಪಾರದಲ್ಲಿ ಭಾರತಕ್ಕೆ ಒಟ್ಟಿಗೆ ೧೫೬೦ ಲಕ್ಷ ರೂಪಾಯಿಗಳು ಬರ್ಮಾದಿಂದ ದೊರೆತಂತಾಯಿತು. ಬಾಕಿ ಬರಬೇಕಾದ ೪೪೦ ಲಕ್ಷ ರೂಪಾಯಿಗಳನ್ನು ಕೊಲೊಂಬೋ ಯೋಜನೆಯನ್ವಯ ಬರ್ಮಾಕ್ಕೆ ಭಾರತ ಕೊಟ್ಟ ಆರ್ಥಿಕ ನೆರವೆಂದು ಪರಿಗಣಿಸಲಾಗುವುದು. ಈ ಸೌಹಾರ್ದಯುತ ವ್ಯವಹಾರವು ಉಭಯ ರಾಷ್ಟ್ರಗಳ ಮೈತ್ರಿಯನ್ನು ದೃಢವಾಗಿಸುವುದು ನಿಶ್ಚಯ.

ವಿವಾಹ ಸಮಾರಂಭ— ಶ್ರೀ ಪಳ್ಳಿ ಪಟೇಲ ಸಂಕಪ್ಪ ಹೆಗ್ಡೇರ ಪುತ್ರ ಶ್ರೀ. ಪಾಂಡುರಂಗ ಹೆಗ್ಡೆಯು ನಂಪಳಿಕೆ ಪಟ್ಟಿಕಲ್ ಶೀನಪ್ಪ ಶೆಟ್ರ ಪುತ್ರಿ ಸೌ ಸುನಂದಳನ್ನು ತಾ. ೯—೪—೫೪ರಲ್ಲಿ ಉಡುಪಿ ರಾಮಕೃಷ್ಣ ನಿಯೋಜಿನಲ್ಲಿ ವಿವಾಹವಾದರು.

ಚಂದಾಹಣ ಬಾಕಿ ಇರುವವರು ದಯಮಾಡಿ ಕಳುಹಿಸಿಕೊಡಿರಿ.

ಹಿರಿಯಡ್ಕ — ಸುಪ್ರಸಿದ್ಧ ಶ್ರೀ ವೀರಭದ್ರ ದೇವಸ್ಥಾನದಲ್ಲಿ ವರ್ಷಂಪ್ರತಿ ಜರಗುವ ರಥೋತ್ಸವದ ಕಾರ್ಯಕ್ರಮಗಳು ತಾ. 18-4-51ರಿಂದ 23-4-51ರ ವರೆಗೆ ಜರಗಲಿರುವವು. ತಾ 21ಕ್ಕೆ ರಥೋತ್ಸವ, ಮಹಾ ಭೂತಬಲಿ ನಡೆಯಲಿದೆ. ಸರ್ವರೂ ಬರಬೇಕೆಂದೂ ಉತ್ಸವದೊಳಗೆ ಹೊಸ ಧ್ವಜಸ್ತಂಭವನ್ನು ಪ್ರತಿಷ್ಠಾಪಿಸುವ ಮಹಾಕಾರ್ಯಕ್ಕೆ ಭಕ್ತಾದಿಗಳು ಉದಾರ ಪ್ರೋತ್ಸಾಹವನ್ನೀಯಬೇಕೆಂದೂ ಮೆನೇಜಿಂಗ್ ಟ್ರಸ್ಟಿ ಶ್ರೀ. ಎ. ಜಗಂಜೀವನ ಆಳ್ವರು ವಿನಂತಿಸುತ್ತಾರೆ.

ಅಜೆಕಾರು — ತಾ 7—4—51ರಲ್ಲಿ ಅಜೆಕಾರು ಪೇಟೆಯಲ್ಲಿ ಡಾ| ಯು. ಶೇಷಗಿರಿ ರಾವ್, G. C. I. M. ರವರ "ಮೆಡಿಕಲ್ ಮತ್ತು ಸರ್ಜಿಕಲ್ ಕ್ಲಿನಿಕ್" ಎಂಬ ಚಿಕಿತ್ಸಾಲಯವು ಡಾ| ಎಸ್. ಶೆಣೈರವರ ಹಸ್ತದಿಂದ ತೆರೆಯಲ್ಪಟ್ಟಿತು. ಈ ಸಂದರ್ಭದಲ್ಲಿ ಶ್ರೀ. ಸುಂದರ ಶೆಟ್ಟಿ, ಡಾ| ಯು. ಕೃಷ್ಣ ಇವರ ಭಾಷಣವಿತ್ತು. ಡಾ| ಎ. ಕೆ. ಎಲ್. ನಾರಾಯಣ ರಾಯರು ಆಭಾರ ಸೂಚಿಸಿದರು.

ಪರ್ಕಳ — ಇಲ್ಲಿಯ ಬಾಸೆಲ್ ಮಿಶನ್ ಹಾಯರ್ ಎಲಿಮೆಂಟರಿ ಶಾಲೆಯ ವಾರ್ಷಿಕೋತ್ಸವವು ತಾ. 8—4—51ರಂದು ಸ್ಥಳೀಯ ಡಾ| ಯು. ಶ್ರೀಧರ ರಾವ್ L. I. M. ಇವರ ಅಧ್ಯಕ್ಷತೆಯಲ್ಲಿ ನೆರವೇರಿತು. ಶಾಲಾ ಮುಖ್ಯೋಪಾಧ್ಯಾಯರಾದ ರಾಜೀವ ಕೋಟ್ಯಾನರಿಂದ ಶಾಲಾ ವರದಿವಾಚನವಾದ ಬಳಿಕ ಶ್ರೀ ಯಸ್. ರಾಘವ ಹೆಗ್ಡೆಯವರಿಂದ ಸ್ವಸ್ತಿವಾಚನವಾಯಿತು. ಶಾಲಾ ಬಾಲಕಿಯರು "ಗುರುಭಕ್ತಿ" ಎಂಬ ಕನ್ನಡ ನಾಟಕವನ್ನೂ, ಬಾಲಕರು "ಮಿಸ್ ಸರೋಜಿನಿ" ಎಂಬ ತುಳುನಾಟಕವನ್ನೂ ಅಭಿನಯಿಸಿದರು. ಅಧ್ಯಕ್ಷರ ವಿನೋದವಾಕ್ಯಗಳೊಂದಿಗೆ ಮತ್ತು ಧನ್ಯವಾದ ಸಮರ್ಪಣೆಯೊಂದಿಗೆ ಸಮಾರಂಭವು ಯಶಸ್ವಿಯಾಗಿ ಕೊನೆಗೊಂಡಿತು.

ಕುಂಬಳೆ — ತಾ ೪ರಂದು ಜನಾಬ್ ಯು. ಅಬ್ದುರ್ರಹಮಾನ್ ಸಾಹೇಬರವರ ಅಧ್ಯಕ್ಷತೆಯಲ್ಲಿ ಸೇರಿದ ಸಭೆಯಲ್ಲಿ ಇಲ್ಲೊಂದು "ನವಜೀವನ" ವಾಚನಾಲಯವೆಂಬ ಸಾರ್ವಜನಿಕ ವಾಚನಾಲಯವನ್ನು ತೆರೆಯಲಾಗಿದೆ.

ಇಲ್ಲಿನ ಉಪಾಧ್ಯಾಯರ ಶೀಘ್ರದ ಸಭೆಯು ತಾ ೧೦ರಂದು ಮಾಜಿ ಶಾಲಾ ಪರೀಕ್ಷಾಧಿಕಾರಿ ಶ್ರೀ. ಪಿ. ಟಿ ಚಂದುರವರ ಅಧ್ಯಕ್ಷತೆಯಲ್ಲಿ ಸೇರಿ, ೫೧-೫೨ರ ಆಯವ್ಯಯ ಪಟ್ಟಿಯನ್ನು ಮಂಜೂರು ಮಾಡಿತು. ಶ್ರೀಗಳಾದ ಯು. ಆನಂದ ರಾವ್, ಬಿ. ಶಾಂತ ಆಳ್ವ, ಶಂಕರ ಭಟ್; ಇವರು ಮಾಡಿದರಿ ಸಾರ ಭಾಷಣ, ಕಾವ್ಯವಾಚನ ಇತ್ಯಾದಿ ಕಾರ್ಯಕ್ರಮಗಳನ್ನು ಮಾಡಿದರು. ತಾ 5,6 ರಲ್ಲಿ ಅಲ್ಪ ಸ್ವಲ್ಪ ಮಳೆಯಾಗಿದೆ.

ಬೈಲೂರು - ತಾ. 5ರಂದು ಎಗ್ರಿಕಲ್ಚರಲ್ ಸೊಸೈಟಿಯ ಸಭೆಯು ಶ್ರೀ. ಕೆ. ಸದಾನಂದ ಹೆಗ್ಡೆ, ಎಂ. ಎ.ಯವರ ಅಧ್ಯಕ್ಷತೆಯಲ್ಲಿ ಜರಗಿ ವಂತಿಗೆ ವಸೂಲು ಮಾಡುವರೆಯೂ ಸಂಘವನ್ನು ರಿಜಿಸ್ಟ್ರು ಮಾಡುವರೆಯೂ ತಕ್ಕ ವ್ಯವಸ್ಥೆ ಮಾಡಲಾಯಿತು. ಹೈಸ್ಕೂಲು ಕಟ್ಟಡದ ಬಗ್ಗೆ ಸೀರೆ ಗ್ರಾಮದ ಸ್ಥಳವೊಂದನ್ನು ಕೇಳಬೇಕೆಂದಾಯಿತು. ಡಾ| ಎ. ಕೆ. ಲಕ್ಷ್ಮೀನಾರಾಯಣರಾಯರನ್ನು ಕಾರ್ಯದರ್ಶಿಗಳಾಗಿ ಆರಿಸಲಾಯಿತು.

ಉಡುಪಿ

ಪ್ರಮಾಣಪತ್ರ ವಿತರಣೋತ್ಸವ- ರಾಷ್ಟ್ರಭಾಷಾ ಶಿಕ್ಷಣ ಶಿಬಿರದ ಚತುರ್ಥ ಪ್ರಮಾಣಪತ್ರ ವಿತರಣೋತ್ಸವವು ಡಾ. ಟಿ. ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ತಾ. 11ರಲ್ಲಿ ಸಿಂಡಿಕೇಟ್ ಹಾಲಿನಲ್ಲಿ ಜರಗಿತು. ಕುಮಾರಿ ಅನುಸೂಯಾರವರು ಶಿಬಿರದ ವರದಿಯನ್ನೋದಿದ ಬಳಿಕ ಶ್ರೀ ಶಂಕರ ಭಟ್ಟರು ಸ್ವಾಗತ ಭಾಷಣ ಮಾಡಿದರು. ಉಡುಪಿಯ ನಾಗರಿಕರು ಮತ್ತು ರಾಷ್ಟ್ರಭಾಷಾ ಪ್ರಚಾರ ಕಾರ್ಯದ ಕುರಿತು ಶ್ರೀ. ಎ. ಜಿ. ಅಳ್ವಿಯವರು ಭಾಷಣ ಮಾಡಿದರು. ಶ್ರೀಮತಿ ಟಿ. ಶಾರದಾ ಬಾಯಿಯವರು ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಪ್ರಮಾಣಪತ್ರಗಳನ್ನು ವಿತರಿಸಿದರು. ಅಧ್ಯಕ್ಷರ ಭಾಷಣದ ಬಳಿಕ ನಾಟಕ, ಸಂಗೀತ ಮುಂತಾದ ಕಾರ್ಯಕ್ರಮಗಳು ನೆರವೇರಿದವು, ಶಿಬಿರದ ಸಂಚಾಲಕ ಶ್ರೀ. ಲಕ್ಷ್ಮೀನಾರಾಯಣ ಶೆಣೈಯವರು ಧನ್ಯವಾದವನ್ನರ್ಪಿಸಿದರು.

ಭಾಷಣ — ತಾ. 10ನೇ ರಾತ್ರಿ ಮುಕುಂದ ನಿವಾಸದಲ್ಲಿ ಯುವಕ ಕಾಂಗ್ರೆಸಿನ ಆಶ್ರಯದಲ್ಲಿ ಬೊಂಬಾಯಿಯ 'ಯುನೈಟೆಡ್ ಏಶ್ಯಾ'ದ ಸಂಪಾದಕ ಶ್ರೀ. ಯು. ಆರ್. ರಾಯರು 'ಭಾರತ ಮತ್ತು ಅದರ ನೆರೆಯವರ ಸಂಬಂಧ'ದ ಕುರಿತು ಭಾಷಣವಿತ್ತರು.

ಶ್ರೀ. ಕೆ. ಶ್ರೀನಿವಾಸ ಕಾಮತರ ನಿಧನ — ಹಲವು ನಾಟಕಗಳ ಕರ್ತರಾಗಿ, ಕವಿಗಳಾಗಿ ಸಾಹಿತ್ಯ ಸೇವೆ ಸಲ್ಲಿಸಿದವರಾಗಿ, ಶಿಕ್ಷಣ ಕ್ಷೇತ್ರದಲ್ಲಿ ಸ್ವಲ್ಪಕಾಲ ದುಡಿದವರಾಗಿ, 'ಐಡಿಯಲ್ ಸ್ಟೋರ್ಸ್' ಎಂಬ ಸುಪ್ರಸಿದ್ಧ ವ್ಯಾಪಾರಿ ಸಂಸ್ಥೆಯ ಮೂಲಕ ವ್ಯಾಪಾರ ಕ್ಷೇತ್ರದಲ್ಲಿ ಹೆಸರಾಂತವರೂ ಆದ ಜನಪ್ರಿಯ ಶ್ರೀ. ಕೆ. ಶ್ರೀನಿವಾಸ ಕಾಮತರು ಇದೇ ತಾ 7ರಲ್ಲಿ ನಿಧನಗೊಂಡರೆಂಬುದು ಅತ್ಯಂತ ವಿಷಾದಕರವಿದೆ.

ಉಡುಪಿ ಕೋ ಓಪರೇಟಿವ್ ಮಿಲ್ಕ್ ಸಪ್ಲೈ ಸೊಸೈಟಿಯ— ಮಹಾ ಸಭೆಯು ಇದೇ ತಾ 11ನೇ ಸಂಜೆ ಸಂಘದ ಆಫೀಸಿನಲ್ಲಿ ಅಧ್ಯಕ್ಷ ಡಾ| ಟಿ. ಎಂ. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿ, ವರದಿ ಸ್ವೀಕಾರ, ಆಯವ್ಯಯದ ಅಂದಾಜು ಮಂಜೂರಾತಿ, ಡೈರೆಕ್ಟರರ ಪುನರ್ನೇಮಣೆ ಮೊದಲಾದ ಕಾರ್ಯಕ್ರಮಗಳು ನೆರವೇರಿದವು. ಗೌ| ಕಾರ್ಯದರ್ಶಿ ಮತ್ತು ಸೊಸೈಟಿಯ ಏಳಿಗಾಗಿ ಶ್ರಮಿಸುತ್ತಿರುವ ಶ್ರೀ ಎಂ. ವಾಮನ ಭಟ್ಟರು ಧನ್ಯವಾದವಿತ್ತರು. ಈ ಸಂಘವು ಜನ್ಮವೆತ್ತಿದ ಎರಡನೇ ವರ್ಷದಲ್ಲಿಯೇ ಮುನಾಫೆ ಸಂಪಾದಿಸಿ ಪ್ರಗತಿ ಹೊಂದುವುದು ಅಭಿನಂದನೀಯ.

ಕಟಪಾಡಿ — ಸ್ಥಳೀಯ "ವಿದ್ಯಾರ್ಥಿಗಳ ಸಾರ್ವಜನಿಕ ಪುಸ್ತಕಾಲಯ"ದ ಪ್ರಾರಂಭೋತ್ಸವವು ಡಾ| ಸಿ. ಆರ್. ನಾಯಕರ ಅಧ್ಯಕ್ಷತೆಯಲ್ಲಿ ತಾ. 11ರಲ್ಲಿ ಜರಗಿತು. ಪುಸ್ತಕಾಲಯ ಸಮಿತಿಯ ಅಧ್ಯಕ್ಷ ಶ್ರೀ ಕೃಷ್ಣಾನಂದ ಹೆಗ್ಡೆಯವರು ಸ್ವಾಗತ ಭಾಷಣ ಮಾಡಿದರು. ಶ್ರೀ ಎಚ್. ವಿ. ಹೆಗ್ಡೆಯವರು ಪುಸ್ತಕಾಲಯವನ್ನು ಉದ್ಘಾಟಿಸಿ, ಹಿತವಚನಗಳನ್ನಾಡಿದರು. ಶ್ರೀಗಳಾದ ಪಿ. ಬಾಲಕೃಷ್ಣ ನಾಯಕ್, ಬಿ. ಸುಬ್ಬರಾಯ, ಕೆ. ರಾಮಚಂದ್ರ ಶೆಣೈ ಮೊದಲಾದವರು ಸಂದರ್ಭೋಚಿತ ಮಾತುಗಳನ್ನಾಡಿದರು. ಶ್ರೀ ಬಿ. ಆರ್. ಕಾಮತರ ಕೊಳಲುವಾದನವಾದ ಬಳಿಕ ಶ್ರೀ ಕೆ. ಸುರೇಂದ್ರ ಕಾಮತರು ಧನ್ಯವಾದಗಳನ್ನರ್ಪಿಸಿದರು.

ಕುಂದಾಪುರ ಎಗ್ರಿಕಲ್ಚರಲ್ ಬ್ಯಾಂಕಿನ ಮೋಸದ ಪ್ರಕರಣ

ಅಪರಾಧಿಗಳಿಗೆ ಶಿಕ್ಷೆ

ಮೋಸ, ವಂಚನೆ, ಸುಳ್ಳು ಲೆಕ್ಕಪತ್ರಗಳ ಮೂಲಕ ಕುಂದಾಪುರದ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿಮಿಟೆಡ್‌ನ ಹಣವನ್ನು ದುರುಪಯೋಗಗೊಳಿಸಿದ ಆರೋಪದ ಮೇಲೆ ಬ್ಯಾಂಕಿನ ಅಧ್ಯಕ್ಷರಾಗಿದ್ದ ೧. ಶ್ರೀ| ಕೆ. ವಾಮನ ಶೆಣೈ, ೨. ೧ನೇಯವರ ಮಗ ಮತ್ತು ಬ್ಯಾಂಕಿನ ಮ್ಯಾನೇಜಿಂಗ್ ಡೈರೆಕ್ಟರರಾಗಿದ್ದ ಶ್ರೀ| ಕೆ ವಿಠಲದಾಸ ಶೆಣೈ, ೩. ೧ನೇಯವರ ತಮ್ಮನ ಮಗ ಮತ್ತು ಬ್ಯಾಂಕಿನ ಕುಂದಾಪುರ ಶಾಖೆಯ ಏಜಂಟರಾಗಿದ್ದ ಶ್ರೀ| ವಿ ಎಸ್. ಶೆಣೈ, ೪. ೧ನೇಯ ಸಹೋದರ ಶ್ರೀ| ಮಂಜುನಾಥ ಶೆಣೈ, ೫. ಶ್ರೀ. ಯು. ರಾಮಚಂದ್ರ ಭಟ್, ೬. ಶ್ರೀ| ಎ. ಮುತ್ತಪ್ಪ ನ್ಯಾಕ್, ೭. ೬ನೇಯವರ ಮಗ. ಶ್ರೀ| ಜಿ. ವಾಸುದೇವ ನ್ಯಾಕ್ ೮. ಬ್ಯಾಂಕಿನ ಸೋಮವಾರಪೇಟೆ ಶಾಖೆಯ ಏಜಂಟ್—ಶ್ರೀ| ಅನಂತ ಕಾಮತ್ ಹೀಗೆ ೮ ಮಂದಿಗೆ ಬೇರೆ ಬೇರೆ ಪ್ರಕರಣಗಳ ಮೇರೆ ಸ್ಪೆಶಲ್ ಫಸ್ಟ್ ಕ್ಲಾಸ್ ಮೆಜಿಸ್ಟ್ರೇಟರಾದ ಶ್ರೀ| ಟಿ. ಶ್ರೀನಿವಾಸನ್‌ರವರು ತಾ. ೭-೪-೫೧ರಂದು ಶಿಕ್ಷೆ ಮತ್ತು ದಂಡವಿಧಿಸಿ ತೀರ್ಪು ಕೊಟ್ಟರು. ವಿವರ ಹೀಗಿದೆ:

೧. ಕೆ. ವಾಮನ ಶೆಣೈ—ಒಂದು ವರ್ಷ ಸಾದಾ ಶಿಕ್ಷೆ ಮತ್ತು ರೂಪಾಯಿ ೩,೫೦೦ ಜುಲ್ಮಾನೆ.

೨. ವಿಠಲದಾಸ ಶೆಣೈ—ಎರಡು ವರ್ಷ ಸಾದಾ ಸಜೆ ಮತ್ತು ರೂ. ೪,೦೦೦ ಜುಲ್ಮಾನೆ.

೩. ವಿ. ಎಸ್. ಶೆಣೈ—ಎರಡು ವರ್ಷ ಸಾದಾ ಸಜೆ ಮತ್ತು ರೂ. ೧೦೦೦ ಜುಲ್ಮಾನೆ.

೪. ಮಂಜುನಾಥ ಶೆಣೈ—ಎರಡು ವರ್ಷ ಸಾದಾ ಸಜೆ ಮತ್ತು ರೂ. ೪೦೦ ಜುಲ್ಮಾನೆ.

೫. ಯು. ರಾಮಚಂದ್ರ ಭಟ್—ಒಂದು ವರ್ಷ ಸಾದಾ ಸಜೆ ಮತ್ತು ರೂಪಾಯಿ ೨೦೦ ಜುಲ್ಮಾನೆ

೬. ಎ. ಮುತ್ತಪ್ಪ ನ್ಯಾಕ್—ಒಂದು ವರ್ಷ ಸಾದಾ ಸಜೆ ಮತ್ತು ರೂ. ೨೦೧ ಜುಲ್ಮಾನೆ.

೭. ಜಿ. ವಿ. ನ್ಯಾಕ್—ಒಂದು ವರ್ಷ ಸಾದಾ ಸಜೆ ಮತ್ತು ೨೦೦ ರೂ. ಜುಲ್ಮಾನೆ

೮. ಅನಂತ ಕಾಮತ್—ಎರಡು ವರ್ಷ ಸಾದಾ ಸಜೆ ಮತ್ತು ೪೦೦ ರೂ. ಜುಲ್ಮಾನೆ.

ಈ ತಕ್ರಾರಿನ ವಿಚಾರಣೆಯು ತಾ. ೯-೧೨-೫೦ರಂದು ಕುಂದಾಪುರ ಸ್ಪೆಶಲ್ ಫಸ್ಟ್ ಕ್ಲಾಸ್ ಮೆಜಿಸ್ಟ್ರೇಟರರ ಕೋರ್ಟಿನಲ್ಲಿ ಆರಂಭವಾಗಿ ತಾ ೩೧—೩—೫೧ರಂದು ಮುಗಿಯಿತು. ಇದರಲ್ಲಿ ೧೦೩ ಸಾಕ್ಷಿಗಳ ವಿಚಾರಣೆ ನಡೆಯಿತು. ಮತ್ತು ೧೦೦೦ಕ್ಕೂ ಮಿಕ್ಕಿದ ಸಾಕ್ಷ್ಯಗಳನ್ನು ಕೋರ್ಟಿನಲ್ಲಿ ಹಾಜರು ಮಾಡಲಾಗಿತ್ತು.

ಆರೋಪಿಗಳ ಪರವಾಗಿ ಕಾರ್ಕಳದ ವಕೀಲ್ ಶ್ರೀ ಕೆ. ಜಿ. ಕಾಮತರೂ ಕುಂದಾಪುರ ವಕೀಲರುಗಳಾದ ಎಂ. ಎ. ಶೆಟ್ಟಿ, ಎಂ. ಆರ್. ಸಂತಯ್ಯ, ಕೆ. ನರಸಿಂಹ ಕಾಮತ್, ಕೆ. ಎಲ್. ಭಂಡಾರಿ, ಕೆ. ಸೂರಪ್ಪ ಶೆಟ್ಟಿ, ಜಿ. ಯಂ. ನಾಯಕ್ ಇವರೂ ವಾದಿಸಿದ್ದರು. ಪ್ರೊಸಿಕ್ಯೂಶನ್ ಪರವಾಗಿ ಸ್ಪೆಶಲ್ ಪಬ್ಲಿಕ್ ಪ್ರೊಸಿಕ್ಯೂಟರ್ ಶ್ರೀ ಕೆ. ನಾರಾಯಣ ರೈಗಳು ವಾದಿಸಿದ್ದರು. ಇವರಿಗೆ ಸಿ. ಐ. ಡಿ. ಇನ್ಸ್‌ಪೆಕ್ಟರ್ ಶ್ರೀ ಎಚ್. ಸಂಜೀವ ಮತ್ತು ಸಬ್ ಇನ್ಸ್‌ಪೆಕ್ಟರುಗಳಾದ ಶ್ರೀ ಪಿ. ಎಮ್. ಡಿ' ಸೋಜ ಶ್ರೀ ಎಂ. ಎಸ್. ಮಾಣಿಕ್ಯಾದಿಯವರು ನೆರವಾಗಿದ್ದರು.

೧ನೇ ಆರೋಪಿ ಶ್ರೀ| ಕೆ. ವಾಮನ ಶೆಣೈಯವರಿಂದ ಸುಮಾರು ೧೯೩೫ರಲ್ಲಿ ಈ ಬ್ಯಾಂಕು ಆರಂಭವಾದಂದಿನಿಂದಲೂ, ಮೋಸದ ಪ್ರಕರಣಗಳು ನಡೆಯುತ್ತಿದ್ದವು. ಈ ವಿಚಾರಣೆಯಲ್ಲಿ ೧೯೪೬ ಮತ್ತು ೪೭ರಲ್ಲಿ ನಡೆದ ಮೋಸಗಳನ್ನು ಸಿದ್ಧಪಡಿಸಲಾಯಿತು. ಇದರಲ್ಲಿ ೧ನೇ ಪ್ರಕರಣದಲ್ಲಿ ಸುಮಾರು ರೂಪಾಯಿ ೧,೨೦,೦೦೦ದಷ್ಟು ೨ನೇ ಪ್ರಕರಣದಲ್ಲಿ ಸುಮಾರು ೬೦,೦೦೦ದಷ್ಟು ಮತ್ತು ೩ನೇ ಪ್ರಕರಣದಲ್ಲಿ ಸುಮಾರು ಒಂದು ಲಕ್ಷಕ್ಕೂ ಮಿಕ್ಕಿಯೂ ಮೋಸಗೊಳಿಸಿದ್ದುದು ಸಿದ್ಧಪಡಿಸಲಾಯಿತು. ಬ್ಯಾಂಕಿನ ಆರಂಭದಿಂದಲೇ ಮೋಸದ ಪ್ರಕರಣಗಳು ಜರಗುತ್ತಿದ್ದಾಗ್ಯೂ ಮೊಕದ್ದಮೆಯಲ್ಲಿ ೧೯೪೬-೪೭ರ ಪ್ರಕರಣಗಳನ್ನು ರುಜುಪಡಿಸಲಾಯಿತು. ಒಟ್ಟಿಗೆ ರೂಪಾಯಿ ಹನ್ನೆರಡು ಲಕ್ಷಕ್ಕೂ ಮಿಕ್ಕಿ ದುರುಪಯೋಗವಾಗಿರಬಹುದೆಂದು ಅಂದಾಜು ಮಾಡಲಾಗಿದೆ.

ಮೇಲಿನ ಶಿಕ್ಷೆಯು, ಇಂಡಿಯನ್ ಪಿನಲ್ ಕೋಡಿನ ೧೨೦, ೪೦೮, ೪೭೭, ೧೦೯, ೩೪ ಮೊದಲಾದ ಕಲಮುಗಳ ಮೇರೆ ಬೇರೆ ಬೇರೆಯಾಗಿ ವಿಧಿಸಲ್ಪಟ್ಟಿದೆ.

೧ನೆಯವರ. ವಯಸ್ಸಿನ ಕಾರಣದಿಂದ ಅವರಿಗೆ ಶಿಕ್ಷೆಯಲ್ಲಿ ರಿಯಾಯತಿ ತೋರಿಸಲಾಗಿದೆ.

ಈ ಮೊಕದ್ದಮೆಯಲ್ಲಿ ಪ್ರಮುಖ ಸಾಕ್ಷಿಗಳಾಗಿ ಒಡಿಟರ್ ಶ್ರೀ. ಬಿ. ಶಾಂತರಾಮರಾಯರು, ಶ್ರೀ. ಎ. ಮಾಧವ ಪೈ ಮತ್ತು ಶ್ರೀ. ಎಂ. ವಿಶ್ವನಾಥ ನ್ಯಾಕರು ಸಾಕ್ಷ್ಯವಿತ್ತಿದ್ದರು.

ಶಿಕ್ಷೆಗೊಳಪಟ್ಟವರನ್ನು ಬಂಧಿಸಿ ಮಂಗಳೂರಿಗೆ ಒಯ್ಯಲಾಗಿದೆಯೆಂದು ವರದಿಯಾಗಿದೆ.

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ
ರಥಬೀದಿ ಉಡುಪಿ.

ನಡೆಯುವ ಚಿತ್ರ -

ಫಿಲ್ಮಿಸ್ತಾನ್ ಚಿತ್ರವೆಂದಾಗಲೇ ವಿನೋದಾಭಿಲಾಷಿಗಳಿಗೆ ಇದೊಂದು ವಿಶೇಷ ಚಿತ್ರವೆಂದು ಒತ್ತಿ ಹೇಳಬೇಕಾಗಿಲ್ಲ.

☆ ಸಾಮ್ರಾಟ್ ☆

ರೆಹನಾ, ರಾಮಸಿಂಗ್, ಅಜಿತ್ ಮೊದಲಾದವರು.

ತಾ ೧೯ [illegible] —೫೧ನೇ ಆದಿತ್ಯವಾರ ಬೆಳಗ್ಗೆ [illegible]ಕ್ಕೆ

ಓ ಹೆನ್ರಿಸ್ ಫುಲ್ ಹೌಸ್

O' HERY'S FULL HOUSE

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

-ಹೊಸಕೆರೆ ಚಿದಂಬರಯ್ಯನವರ-

ಗೀತೆಯ ಕನ್ನಡಿ

ಭಗವದ್ಗೀತೆಯ ಸಮೂಲ ಭಾಷಾಂತರ.

ಬೆಲೆ. 0-12-0

V. P. P. ಮೂಲಕ 1—4—0

ನವಯುಗ ಪ್ರೆಸ್, ಉಡುಪಿ.





(೩ನೇ ಪುಟದಿಂದ)

ಹಿಂದೀ ಮತ್ತು ಪ್ರಾದೇಶಿಕ ಭಾಷೆಗಳಿಗೆ ಅಭಿವೃದ್ಧಿ ಹೊಂದಲು ಹೆಚ್ಚಿನ ಪ್ರೋತ್ಸಾಹ ಕೊಡಲ್ಪಡಬೇಕಾದರೂ ವಿದೇಶೀ ಭಾಷೆಯು, ಅದರಲ್ಲೂ ಇಂಗ್ಲಿಷಿನ ಜ್ಞಾನವಿರುವುದು ಅತ್ಯಗತ್ಯವಾಗಿರುತ್ತದೆಂದು ಗೊತ್ತುವಳಿ ಸೂಚಿಸುತ್ತದೆ. ಅಖಿಲಭಾರತ ಆಡಳಿತ ಮಂಡಳದ ಪರೀಕ್ಷೆಗಳು ಕ್ರಮೇಣ ಹಿಂದೀ ಇಂಗ್ಲೀಷು ಮತು ಪ್ರಮುಖ ಪ್ರಾದೇಶಿಕ ಭಾಷೆಗಳಲ್ಲಿ ನಡೆಯಬೇಕು; ಮತ್ತು ಉಮೇದುವಾರರಿಗೆ ಇದರಲ್ಲಿ ಬೇಕಾದ ಒಂದು ಭಾಷೆಯನ್ನು ಆಯ್ದುಕೊಳ್ಳುವ ಸ್ವಾತಂತ್ರ್ಯವಿರಬೇಕು. ಹಿಂದೀ ಅಥವಾ ಪ್ರಾದೇಶಿಕ ಭಾಷೆಯೊಂದನ್ನು ಆರಿಸಿಕೊಳ್ಳುವ ಉಮೇದುವಾರರು ಪ್ರತ್ಯೇಕವಾಗಿ ಇಂಗ್ಲೀಷು ಭಾಷಾ ಜ್ಞಾನದ ಪರೀಕ್ಷೆಯೊಂದರಲ್ಲಿ ಪಾಸಾಗಬೇಕಾಗುವುದು. ಹಿಂದೀ ಭಾಷಾಜ್ಞಾನದ ಪರೀಕ್ಷೆಗೆ ಇದಕ್ಕೆ ಮುಂಚೆಯೇ ಕುಳಿತು ಪಾಸಾಗದವರು ತ್ವರಿತದಲ್ಲಿಯೇ ಇಂತಹದೊಂದು ಹಿಂದೀ ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕಾಗುವುದು.

ಮುಂದಿನ ನಿಲುವು

ಇದರ ಮುಂದಿನ ಘಟ್ಟಗಳಲ್ಲಿ ಸಹ ಮೇಲೆ ಹೇಳಿದಂತೆ ಹಿಂದೀ, ಇಂಗ್ಲೀಷು ಇಲ್ಲವೆ ಪ್ರಮುಖ ಪ್ರಾದೇಶಿಕ ಭಾಷೆಗಳಲ್ಲಿ ಈ ಪರೀಕ್ಷೆಗಳು ನಡೆಯುತ್ತವೆ; ಆದರೆ, ಹಿಂದೀಯೇತರ ಭಾಷೆಗಳನ್ನು ತೆಗೆದುಕೊಳ್ಳುವವರು ಹಿಂದೀ ಭಾಷಾಜ್ಞಾನದ ಪರೀಕ್ಷೆಗೂ ಹಿಂದೀ ಭಾಷೆಯನ್ನು ಆರಿಸಿಕೊಂಡವರು ಯಾವುದಾದರೊಂದು ಪ್ರಮುಖ ಭಾರತೀಯ ಪ್ರಾದೇಶಿಕ ಭಾಷಾ ಜ್ಞಾನದ ಪರೀಕ್ಷೆಗೂ ಕಡ್ಡಾಯವಾಗಿ ಕುಳಿತುಕೊಳ್ಳಬೇಕು. ಇಂಗ್ಲೀಷು ಭಾಷೆಯಲ್ಲಿ ಪ್ರಾವೀಣ್ಯವು ಎಂದೂ ವರ್ಗದವರಿಗೂ ಕಡ್ಡಾಯದ ವಿಷಯವಾಗಿರುವುದು. ಈ ರೀತಿಯಲ್ಲಿ ಇಂಗ್ಲೀಷು ಭಾಷೆಯ ಸ್ಥಾನದಲ್ಲಿ ಹಿಂದೀ ಮುಖ್ಯವಾಗಿ ಬಳಸಲ್ಪಡಬೇಕು—ಎಂಬುದಾಗಿ ಕಾಂಗ್ರೆಸು ಸಮಿತಿ ಅಭಿಪ್ರಾಯಪಡುತ್ತದೆ. ಇದನ್ನು ವಿಮರ್ಶಿಸಿಗರ ಪ್ರಾಥಮಿಕ ಮಟ್ಟದಲ್ಲಿ ತಾಯ್ನುಡಿಯ ಜ್ಞಾನವೂ ಮಾಧ್ಯಮಿಕ ಮಟ್ಟದಲ್ಲಿ ತಾಯ್ನುಡಿ... ಪ್ರಾದೇಶಿಕ ಭಾಷಾ ಜ್ಞಾನ ಹಾಗು ಹಿಂದೀಯೂ ಹೈಸ್ಕೂಲು ಮಟ್ಟದಲ್ಲಿ ತಾಯ್ನುಡಿ, ಪ್ರಾದೇಶಿಕ ಭಾಷೆ, ಹಿಂದೀ ಮತ್ತು ಇಂಗ್ಲೀಷು ಜ್ಞಾನವೂ ಇರಬೇಕೆಂದು ಸಿದ್ಧಗೊಳ್ಳುತ್ತದೆ. ವಿಶ್ವವಿದ್ಯಾಲಯದಲ್ಲಿ ಪ್ರವೇಶಿಸುವಾತ ಈ ನಾಲ್ಕು ಭಾಷೆಗಳಲ್ಲಿ ಪಾರಂಗತನಾಗಿರುವನೆಂದು ಭಾವಿಸಬಹುದು. ಹೀಗೆ ನಾಲ್ಕು ಭಾಷೆಗಳ ಮೇಲೆ ಪಾಂಡಿತ್ಯ ಸಂಪಾದಿಸಿಕೊಳ್ಳುವ ಕಾಲದಲ್ಲಿ ಇತರ ಪಠ್ಯ ವಿಷಯಗಳ ಕಡೆಗೆ ಸಾಕಷ್ಟು ಗಮನ ಕೊಡಲು ಅವಕಾಶ ದೊರೆಯುತ್ತದೆಯೋ ಇಲ್ಲವೇ ಎಂಬುದೊಂದು ಪ್ರಶ್ನೆ ತಲೆ ಎತ್ತುತ್ತದೆ. ನಮಗೆ ಎಲ್ಲ ಭಾಷೆಗಳೂ ಬೇಕು. ಭಾಷಾ ಜ್ಞಾನಕ್ಕನೇ ಅವಾಸ್ತವ ಮಹತ್ವ ಕೊಡುವುದು ಮತ್ತು ಇತರ ವಿಷಯಗಳ ಅಭ್ಯಾಸಕ್ಕೆ ಸಮಯ ದೊರೆತ ದಂತಹ ಪರಿಸ್ಥಿತಿ... ನಿರ್ಮಾಣವಾಗುವುದು ಸ್ವರಾಜ್ಯಕ್ಕೆ ಹಿತಪ್ರದ— ಶಿಕ್ಷಣ ತಜ್ಞರು ವಿಚಾರಿಸಬೇಕಾದ ವಿಷಯ.

ಮಂಗಳೂರು

ದ. ಕ. ಜಿಲ್ಲಾ ದೇವಾಡಿಗ ಸಮಾಜ ಸುಧಾರಕ ಸಂಘ— ಇದರ ಕಾರ್ಯನಿರ್ವಾಹಕ ಕಮಿಟಿಯ ಸಭೆಯು ಮಾಸ್ಟರ್ ಎಂ. ಎ. ದೇವಾಡಿಗರ ಸಂಗೀತ ಪಾಠಶಾಲಾ ಕಟ್ಟಡದಲ್ಲಿ ಶ್ರೀ ಪಳಿಯಂಗಡಿ ಬಾಬು ದೇವಾಡಿಗರ ಅಧ್ಯಕ್ಷತೆಯಲ್ಲಿ ತಾ ೩ರಲ್ಲಿ ಜರಗಿ ಹೊಸ ವರ್ಷಕ್ಕೆ ಈ ಕೆಳಗಿನವರು ಕಾರ್ಯಸಮಿತಿಗೆ ಆರಿಸಲ್ಪಟ್ಟರು. ಶ್ರೀ. ಕೆ. ಕೋಚಪ್ಪ ದೇವಾಡಿಗ (ಅಧ್ಯಕ್ಷ) ಶ್ರೀ. ಎಂ. ಪಿ. ದೇವಾಡಿಗ (ಉಪಾಧ್ಯಕ್ಷ) ಶ್ರೀ. ಕೆ. ಸಂಕಪ್ಪ ದೇವಾಡಿಗ (ಕೋಶಾಧಿಕಾರಿ) ಶ್ರೀ. ಎಂ. ಬಿ. ಸರ್ವಪ್ಪ (ಗೌ ಕಾರ್ಯದರ್ಶಿ) ಶ್ರೀ. ಎಂ. ಗೋವಿಂದ (ಜತೆ ಕಾರ್ಯದರ್ಶಿ) ಅನಂತರ ಹೊಸ ಅಧ್ಯಕ್ಷ ಶ್ರೀ. ಕೆ. ಕೋಚಪ್ಪ ದೇವಾಡಿಗರ ಅಧ್ಯಕ್ಷತೆಯಲ್ಲಿ ಸಭೆ ತಿರುಗಿ ಕೂಡಿ ಅವಶ್ಯವುಳ್ಳ ಹಣ ಮಂಜೂರಾತಿಯಾಗಿ ವರದಿಯನ್ನು ಮುಂದಿನ ಸಭೆಗೆ ಒಪ್ಪಿಸಬೇಕೆನ್ನುವ ಠರಾವುಗಳಾದುವು ಗೌ ಕಾರ್ಯದರ್ಶಿಗಳು ವಂದನಾರ್ಪಣೆ ಮಾಡಿ ಸಭೆಯನ್ನು ಮುಕ್ತಾಯಗೊಳಿಸಿದರು

ದ. ಕ. ಜಿಲ್ಲಾ ಗ್ರಾಮೋದ್ಯೋಗ ಸಂಘ— ಇದರ ಪ್ರತಿನಿಧಿಗಳಾದ ಶ್ರೀ. ಪಿ. ಎಸ್. ಕುದ್ರೋಳಿಯವರು ಕೈಗಾರಿಕಾ ಡೈರೆಕ್ಟರರು ವಿಚಾರ ವಿನಿಮಯ ಮಾಡಿ ಸರಕಾರದವರು ಈ ಜಿಲ್ಲೆಯ ಗ್ರಾಮ ಕೈಗಾರಿಕೆಗಳ ಅಭಿವೃದ್ಧಿ ಕಾರ್ಯಕ್ಕಾಗಿ ಕೊಟ್ಟಿರುವ ರೂ ೫೩,೭೫೦ನ್ನು ತ್ವರಿತವಾಗಿ ಉಪಯೋಗಿಸಿಕೊಳ್ಳಬೇಕೆಂದು ಸೂಚಿಸಿದರು. ಈ ಮೊತ್ತದಲ್ಲಿ ರೂ ೧೫೦೦/ ಇಷ್ಟರಲ್ಲೇ ಮಂಜೂರಾಗಿರುವುದು ಮತ್ತು ಮೊದಲಾದ ಕಡೆಯಿಂದ ಮುಖ್ಯ ವ್ಯವಸಾಯಕ್ಕೆ ಸಂಬಂಧಿಸಿದ ಮುಸಿನ... ಡೈರೆಕ್ಟರರು ಪರಿಶೀಲಿಸುವೆನೆಂದರು.

ದಿ ಫ್ರೆಂಡ್ಸ್ ಯುನೈಟೆಡ್ ಕ್ಲಬ್ ಅತ್ತಾವರದ ಈ ಕ್ಲಬ್ಬಿನ ವಾರ್ಷಿಕೋತ್ಸವ ಸಮಾರಂಭವು ತಾ ೧೧ರಲ್ಲಿ ಶ್ರೀ ಇಮಾದಿ ಆನಂದ ಶೆಟ್ಟಿ, ಎಕ್ಸಕ್ಯುಟಿವ್ ಇವರ ಅಧ್ಯಕ್ಷತೆಯಲ್ಲಿ ನಡೆಯಿತು

ಕರ್ನಾಟಕ ಪ್ರಾಂತ ರಚನೆಯ ಕುರಿತು ಸಾರ್ವಜನಿಕ ನಿರ್ಣಯ— ತಾ ೧ರಲ್ಲಿ ಕೇಂದ್ರ ಮೈದಾನದಲ್ಲಿ ಸಾರ್ವಜನಿಕ ಸಭೆಯೊಂದು ಜಿಲ್ಲಾ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಶ್ರೀ. ಎಸ್. ಎಲ್. ಡಿ. ಪಿಂಟೋ ರವರ ಅಧ್ಯಕ್ಷತೆಯಲ್ಲಿ ಜರಗಿತು. ಕೆ. ಪಿ. ಸಿ. ಸಿ ಯ ಅಧ್ಯಕ್ಷ ಶ್ರೀ ಎಸ್. ನಿಜಲಿಂಗಪ್ಪನವರು ಭಾಷಣ ಮಾಡುತ್ತಾ ಕರ್ನಾಟಕ ಪ್ರಾಂತ ರಚನೆಯ ಸಮಯವು ಸನ್ನಿಹಿತವಾಗಿರುವುದೆಂದೂ ನಾವು ಸಾರ್ವಭೌಮ ಪ್ರಜೆಗಳಾಗಿ ಜಗದಾದ್ಯಂತ ... ಬೇಕೆಂದೂ ನಾವು ಕರ್ನಾಟಕ ಪ್ರಾಂತದ ಸುಖವನ್ನು ಅನುಭವಿಸುವಾಗ ಬೇರೆಯವರನ್ನು ಮಾತ್ರ ಮರೆಯಕೂಡದೆಂದು ಸೂಚಿಸಿದರು. ಶ್ರೀ. ಎಸ್. ಎನ್. ಹೊಳ್ಳರು ಸಭೆಯ ಮುಂದಿಟ್ಟ ಈ ಕೆಳಗಿನ ನಿರ್ಣಯವು ಸರ್ವಾನುಮತದಿಂದ ಮಂಜೂರಾಯಿತು.

"ಕನ್ಯಾಕುಮಾರಿಯಿಂದ ಕೊಲ್ಹಾಪುರ ತನಕದ ಪ್ರದೇಶಗಳನ್ನು ಕೂಡಿಸಿ ಪಶ್ಚಿಮ ಕರಾವಳಿ ಪ್ರಾಂತ ರಚಿಸಬೇಕೆಂಬ ಶ್ರೀ ಕೇಳಪ್ಪನವರೇ ಮೊದಲಾದವರ ಚಳವಳವನ್ನು ಈ ಸಾರ್ವಜನಿಕ ಸಭೆ ಸಂಪೂರ್ಣ ಪ್ರತಿಭಟಿಸುತ್ತದೆ. ಪ್ರಾಂತ್ಯಗಳ ಪುನರ್ವಿಂಗಡಣೆಯ ಕುರಿತು ಕೇಂದ್ರ ಸರಕಾರವು ಉದ್ದೇಶಿಸಿದ ಸಮಿತಿಯನ್ನು ನೇಮಿಸಿದಬಗ್ಗೆ ಈ ಸಭೆ ಸಂತೋಷದನ್ನು ವ್ಯಕ್ತಪಡಿಸುತ್ತದೆ. ಕರ್ನಾಟಕ ಪ್ರಾಂತ ರಚನೆಯು ನಿರ್ವಿವಾದ ಹಾಗೂ ಸರಳವಾದುದೆಂದು ನೆಹರೂರವರೇ ಒಪ್ಪಿರುವುದರಿಂದ ಆ ಕುರಿತು ಉದ್ದೇಶಿಸಿದ ಸಮಿತಿಯು ತನ್ನ ವರದಿಯನ್ನು ನಂ ನೆಹರೂಗಳು ಬರಮಾಡಿಸಿ ಆದಷ್ಟು ತ್ವರಿತ ಪ್ರಾಂತ ರಚಿಸಿ ಕನ್ನಡ ಜನತೆಯ ಆಶೆ ಆಕಾಂಕ್ಷೆಗಳನ್ನು ಮನ್ನಿಸಿ ಅವರ ಚಿರಕೃತಜ್ಞತೆಗೆ ಪಾತ್ರರಾಗಬೇಕೆಂದು ಈ ಸಭೆಯು ವಿನಂತಿಸುತ್ತದೆ"

ಈ ನಿರ್ಣಯವನ್ನು ಸಂಬಂಧಪಟ್ಟವರಿಗೆಲ್ಲ ಕಳುಹಿಸಿ ಕೊಡಬೇಕೆಂದೂ ಅಭಿಪ್ರಾಯವಾಯಿತು.

ಶ್ರೀ ಗೋಪಾಲಕೃಷ್ಣ ಯಕ್ಷಗಾನ ಮಂಡಲಿ— ಯ ವಾರ್ಷಿಕೋತ್ಸವವು ಅತ್ತೀಚೆಗೆ ಶ್ರೀ. ವೆಂಕಟರಮಣ ದೇವಾಲಯದ ವಠಾರದಲ್ಲಿ ಜಿಲ್ಲಾ ನ್ಯಾಯಾಧೀಶ ಶ್ರೀ. ಕಂದವರ ಸಿಂಗ ಚೆಟ್ಟಿಯಾರರ ಅಧ್ಯಕ್ಷತೆಯಲ್ಲಿ ಜರಗಿತು. ಅತಿಥಿಗಳಿಗೆ ಶ್ರೀ ಬಿ. ಎಸ್. ನಗರ್ಕರರು ಸ್ವಾಗತವಿತ್ತರು. ಶ್ರೀ. ಎಲ್. ಸಿ. ಉಪಾಧ್ಯಾಯರು ಮಂಡಲಿಯ ವರದಿಯನ್ನೋದಿದರು. ಅಧ್ಯಕ್ಷರು ಯಕ್ಷಗಾನ ಕಲೆಯ ಮಹತ್ವವನ್ನು ಕೊಂಡಾಡಿ ಅದಕ್ಕೆ ಪ್ರೋತ್ಸಾಹಿಸುವ ಅವಶ್ಯಕತೆಯನ್ನು ವಿವರಿಸಿದರು. ಬಳಿಕ ಶ್ರೀಗಳಾದ ಕೆ. ಬಾಲಕೃಷ್ಣರಾವ್, ಪೊಳಲಿ ವೆಂಕಟನಾರಾಯಣ ಶಾಸ್ತ್ರಿ, ಶಿಶ್ನಿಲೆ ಗೋಪಾಲಕೃಷ್ಣ ಭಟ್ಟ ಮೊದಲಾದವರ ಕೂಡುವಿಕೆಯಿಂದ "ಮಾಗಧ ವಧೆ" ಎಂಬ ಯಕ್ಷಗಾನ ಕೂಟ ನಡೆಯಿತು.

ಬಂಟ್ವಾಳದಲ್ಲಿ ಕೊಡಗಿನ ಮುಖ್ಯ ಮಂತ್ರಿಗಳು— ಬಂಟವಾಳದ ಯುವಕ ಸೇವಾ ಸಮಾಜದ ವಾರ್ಷಿಕೋತ್ಸವವು ತಾ ೩ರಂದು ಕೊಡಗಿನ ಮುಖ್ಯಮಂತ್ರಿ ಶ್ರೀ ಸಿ. ಎಂ. ಪೂಣಚ್ಚರವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು. ಸಭಾರಂಭದಲ್ಲಿ ಶ್ರೀ ಕೆ. ಸೋಮಪ್ಪ ಶೆಣೈಯವರು ಸ್ವಾಗತವಿತ್ತು ಸಮಾಜದ ವರದಿಯ ಸಹಿತ ಶ್ರೀ ಪೂಣಚ್ಚರಿಗೆ ಮಾನಪತ್ರ ಒಪ್ಪಿಸಿದರು. ಶ್ರೀ ವೆಂಕಟೇಶ ಪಾಲೆಗಾರ ... ತಿಸ ಮಾನಪತ್ರ ಒಪ್ಪಿಸಿದರು. ಶ್ರೀ ಪಾಂಡುರಂಗ ಬಾಳಿಗರು ಸಂದೇಶಗಳನ್ನೂ ಶ್ರೀ. ಬಿ. ಸರ್ವೋತ್ತಮ ಎಸ್ ಬಾಳಿಗರು ವರದಿಯನ್ನೂ ಓದಿದರು. ಸ್ಥಾನಿಕ ವಿದ್ಯಾರ್ಥಿಗಳು ಕೆಲವು ಆಟಗಳನ್ನು ಯಶಸ್ವಿಯಾಗಿ ಪ್ರದರ್ಶಿಸಿದರು ಕೊನೆಗೆ ಅಧ್ಯಕ್ಷರು ಮಾತನಾಡುತ್ತಾ ದ. ಕನ್ನಡ ಮತ್ತು ಕೊಡಗುಗಳೊಳಗೆ ಎಂದಿನಿಂದಲೂ ಬೆಳೆದು ಬಂದ ಸ್ನೇಹ ಸಾಮರಸ್ಯ ಮುಂದೆಯೂ ವರ್ಧಿಸಬೇಕೆಂದೂ ಈ ಪ್ರಾಂತದಲ್ಲಿ ಪ್ರದರ್ಶನ ವು ... ಇಂತಹ ಸಂಸ್ಥೆಗಳು ಅಭಿವೃದ್ಧಿಗೆ ಅತ್ಯಂತ ಸಹಕಾರಿಗಳೆಂದೂ ಹೇಳಿದರು. ಶ್ರೀ ಪೂಣಚ್ಚರು ಈ ಸಭಾ ... ಮುಗಿದೊಡನೆ ಅಂದೇ ರಾತ್ರಿ ಕೊಡಗಿಗೆ ತೆರಳಿದರು.

ಬಿಡುಗಡೆಯಾದ ಕೈದಿಗಳ ಸಹಾಯಕ ಸಂಘ— ಇದರ ವಾರ್ಷಿಕ ಮಹಾಸಭೆಯು ಸಂಘದ ಅಧ್ಯಕ್ಷ ಜಿ ಕಲೆಕ್ಟರ್ ಶ್ರೀ ಎ. ಮಹಾಲಿಂಗ ಚೆಟ್ಟಿಯಾರರ ಕಛೇರಿಯಲ್ಲಿ ತಾ ೨ರಂದು ನೆರವೇರಿ ವರದಿ ಸ್ವೀಕಾರ, ಮುಂದಿನ ವರ್ಷಕ್ಕೆ ಸಮಿತಿಯ ಆರಿಕೆ ನಡೆಯಿತು. ಶ್ರೀ ಎಸ್. ಸಿ. ಪ್ರಾನ್ ಎಂ. ಎಲ್. ಎ. ರವರು ... ಕೇಂದ್ರ ಸಮಿತಿಗೆ ಪ್ರತಿನಿಧಿಗಳಾಗಿ ಆರಿಸಲ್ಪಟ್ಟರು. ಶಿಕ್ಷೆಯಿಂದ ಬಂಧಮುಕ್ತರಾದ ಕೈದಿಗಳ ಭಾವೀ ಜೀವನವನ್ನು ಉತ್ತಮ ಪಡಿಸಲು ನೆರವಾಗುವುದೇ ಈ ಸಂಘದ ಉದ್ದೇಶವಿದೆ.

ವಸಂತೋತ್ಸವ— ವಿನ್ಸೆಂಟ್ ನೇಲರ್ ಟೈಲರ್ ರವರಲ್ಲಿ ವಸಂತೋತ್ಸವವು ತಾ ೧೦ನೇ ಸಂಜೆ ಜರಗಿತು ವಸಂತರಾವ್ ವಿದ್ಯಾರ್ಥಿನಿ ಪಿ. ಸುಮಿತ್ರಾರವರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ನೆರವೇರಿತು.

ಭಾರತ ಸಹಕಾರ ಚಳವಳದ ಸುವರ್ಣಮಹೋತ್ಸವವು— ಸೆಂಟ್ರಲ್ ಕೋಆಪರೇಟಿವ್ ಬೇಂಕಿನ ಕಟ್ಟಡದಲ್ಲಿ ದಾ ... ದಿನ ಜರಗಲಿರುವುದು. ಪ್ರಾರಂಭದ ದಿನ ಬೆಳಿಗ್ಗೆ ... ಗಂಟೆಗೆ ಶ್ರೀ. ಕೆ. ಸೂರ್ಯನಾರಾಯಣ ಅಡಿಗರು ಸ್ವಾಗತದೊಡನೆ ... ಪ್ರದರ್ಶನವನ್ನು ಉದ್ಘಾಟಿಸುವರು. ಮಂಗಳೂರಿನ ಸಬ್ ಕಲೆಕ್ಟರ್ ರವರು ಅಧ್ಯಕ್ಷತೆ ವಹಿಸುವರು. ತಾ ೧೯ನೇ ಸಂಜೆ ೩-೩೦ಕ್ಕೆ ಮೂರನೆ ಸಂಸೇಶನ, ಇದರಲ್ಲಿ ವಿಷಯ ಮಂಡಿಸುವವರು ಶ್ರೀಗಳಾದ ಕೆ. ಬಿ. ಜಿನರಾಜ ಹೆಗ್ಡೆ ಮತ್ತು ಆರ್. ಕೆ ಪ್ರಭು, ತಾ ೨೦ನೇ ಸಂಜೆ ೫ ಗಂಟೆಗೆ ಮುಕ್ತಾಯದ ದಿನ ಪ್ರದರ್ಶನ ೩ ದಿನವೂ ಸಂಜೆ ೪ರಿಂದ ೭ರ ವರೆಗೆ ತೆರೆದಿರಲ್ಪಡುವುದು.

ವಿಜಯ ಬ್ಯಾಂಕ್ ಲಿಮಿಟೆಡ್— ಮಂಗಳೂರಲ್ಲಿ ಇದರ ಪ್ರಧಾನ ಕಛೇರಿಯ ನೂತನ ಕಟ್ಟಡದ ಶಂಕು ಸ್ಥಾಪನೆಯನ್ನು ಜ್ಯೋತಿ ಟಾಕೀಸಿನ ಬಳಿಯಲ್ಲಿ ಮುಲ್ಕಿಯಲ್ ಚೇರ್ ಮ್ಯಾನ್ ಶ್ರೀ. ಕೆ. ಸೂರ್ಯನಾರಾಯಣ ಅಡಿಗರು ಇದೇ ತಾ ೧೫ನೇ ಬೆಳಿಗ್ಗೆ ನೆರವೇರಿಸುವರು. ೯ ಗಂಟೆಗೆ ಹಾಗದಲ್ಲಿ ಕೂಡಿದ ಕಟ್ಟನ್ನು ದಾಟಿದ ಮೇಲೆ ೯ ೧೫ಕ್ಕೆ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದ ಎ. ಪಿ. ಪ್ರಾಂಗಣದಲ್ಲಿ ಸಭೆ ಮತ್ತು ಉಪಹಾರ ಜರಗುವುದು.

ದಿ ನ್ಯೂ ಕರ್ನಾಟಕ ಪ್ರೊವಿಡೆಂಟ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಪ್ರಧಾನ ಕಛೇರಿ] [ಉಡುಪಿ, ದ ಕನ್ನಡ

ನಿಮ್ಮ ಸಂಪಾದನೆಗೆ ಸಾಧ್ಯವಿರುವ ಮೊತ್ತಕ್ಕೆ ವಿಮೆ ಮಾಡಲು ಅನುಕೂಲವಿರುವ ಜಿಲ್ಲೆಯ ಏಕಮಾತ್ರ ಜನತಾ ಪ್ರೊವಿಡೆಂಟ್ ವಿಮಾ ಸಂಸ್ಥೆ.

ಏಜಂಟರು, ... ಅರ್ಗನೈಜರು ಮತ್ತು ಇನ್ಸ್‌ಪೆಕ್ಟರು ಬೇಕಾಗಿದ್ದಾರೆ. ವಿವರಕ್ಕೆ ಬರೆಯಿರಿ.

THE NEW KARNATAKA PROVIDENT
Insurance Co Ltd, UDIPI.

ಛತ್ರ ಕಂಟೋಲಿ

[ಮಕ್ಕಳನ್ನು ಪಡೆಯುವುದು ಸಾಕು]

ಬಿಸಕ್ಕೆ ... ಸ್ತ್ರೀ ಸೇವಿಸಿದರೆ ... ಮಕ್ಕಳಾಗುವ ... ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ ... — ರೂ. ೫-೮-೦ .... ಪೋಸ್ಟು ಖರ್ಚು ರೂ. ೦-೧೪-೦

—ಸಿಗುವ—

ದಾಲಸ್ಪಾ, ಶಾಪಣಗೇರಿ ಆಯುರ್ವೇದ ಔಷಧಾಲಯ, ಗದಗ.

ನವಯುಗ ವಾರಪತ್ರಿಕೆಗೆ ಚಂದಾದಾರರಾಗಿರಿ.

ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ.

೧೯೨೯ರಲ್ಲಿ ಸ್ಥಾಪಿತವಾಗಿ ೨೫ ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟು ಹಣಕ್ಕೆ ನ್ಯಾಯವಾದ ಬಡ್ಡಿ ಕೊಡುವ, ಸಾಲದ ಹಣಕ್ಕೆ ... ಕಮಿ. ದರದ ಬಡ್ಡಿಯಿಂದಲೂ ... ಸೇವೆಯನ್ನು ಮಾಡುತ್ತಿದೆ.

THE MOOLKY BANK LTD.
Moolky, S. K.

(೧ನೇ ಪುಟದಿಂದ)

ವಿಷಯನ್ನು ನಿರ್ದೇಶಿಸಿದರು. ಅವರ ಭಾಷಣದ ಮುಖ್ಯಾಂಶಗಳು ಹೀಗಿರುತ್ತವೆ –

ಮಲೆನಾಡು ಪ್ರದೇಶ ೨೫,೦೦೦ ಚದರ ಮೈಲುಗಳಷ್ಟು ವಿಸ್ತಾರ ವಿರುತ್ತದೆ. ಮಳೆಯು ಆಗುಂಬೆಯಲ್ಲಿ ೩೩೦ ಅಂಗುಲ ಬೀಳುತ್ತಿದ್ದರೆ ಪೂರ್ವದ ಗಡಿ ಪ್ರದೇಶದಲ್ಲಿ ೫೦ ಅಂಗುಲದಷ್ಟು ಇದೆ. ಜನ ಸಂಖ್ಯೆ ೩೦ ಲಕ್ಷ. ಅರಣ್ಯ ಸಂಪತ್ತು ಅನಂತ. ಭಾರತದಲ್ಲಿ ಬೆಳೆವ ಮೆಣಸು, ಏಲಕ್ಕಿ ಮತ್ತು ಕಾಫಿಯಲ್ಲಿ ಹೆಚ್ಚಿನ ಭಾಗ ಈ ಪ್ರದೇಶದಲ್ಲೇ ಉತ್ಪತ್ತಿಯಾಗುತ್ತದೆ. ಭಾರತದ ಅಡಿಕೆ ಬೆಳೆಯಲ್ಲಿ ಅರ್ಧದಷ್ಟು ಮಲೆನಾಡಿನ ಉತ್ಪನ್ನವಾಗಿರುತ್ತದೆ. ಸಾಕಷ್ಟು ಹೆಚ್ಚಿನ ಪ್ರಮಾಣದಲ್ಲಿ ರಬ್ಬರು ಹಾಗು ಚಹಾ ಬೆಳೆಯಾಗುತ್ತದೆ. ತೀರದ ಪ್ರದೇಶದಲ್ಲಿ ಗೇರು ಬೀಜ ಮತ್ತು ತೆಂಗಿನ ಕಾಯಿ ಹೇರಳವಾಗಿರುತ್ತದೆ. ಇಂದಿನ ಪರಿಸ್ಥಿತಿಯಲ್ಲೂ ಮಲೆನಾಡು ಆಹಾರದ ಮಟ್ಟಿಗೆ ಸ್ವಯಂಪೂರ್ಣವಾಗಿರುತ್ತದೆ. ಮಲೆನಾಡಿನ ಒಂದು ಭಾಗವಾಗಿರುವ ಪಶ್ಚಿಮ ತೀರದಲ್ಲಿ ಅನೇಕ ನೈಸರ್ಗಿಕ ಬಂದರುಗಳಿವೆ. ಅವು ಹಿಂದಿನಿಂದಲೂ ರಫ್ತು ವ್ಯಾಪಾರ ಕೈಗೊಂಡ ಬಂದರುಗಳಾಗಿದ್ದವು. ಈ ಬಂದರುಗಳನ್ನೆಲ್ಲ ಅಭಿವೃದ್ಧಿಗೊಳಿಸಿ, ಮೈಸೂರು, ಮುಂಬಯಿ, ಹೈದರಾಬಾದ, ಮದ್ರಾಸು ಮತ್ತು ಕೊಡಗಿನ ವಿಶಾಲವಾದ ಮಲೆನಾಡು ಪ್ರದೇಶಗಳಿಗೂ ಆ ಬಂದರುಗಳಿಗೂ ರಸ್ತೆ ಮತ್ತು ರೈಲ್ವೆ ಸಂಪರ್ಕವನ್ನು ಏರ್ಪಡಿಸಿದ್ದೇ ಆದರೆ ಆ ಬಂದರುಗಳ ಅಭಿವೃದ್ಧಿ ಸಾಧಿಸುವುದರ ಜೊತೆಗೆ, ರಾಷ್ಟ್ರದ ಸಂಪತ್ತು ಬೆಳೆಯುವುದಕ್ಕೂ ಸಹಾಯವಾಗುತ್ತದೆ. ನಾಡಿನ ಕೈಗಾರಿಕಾ ಪ್ರಗತಿಗೂ ಅಧಿಕ ಆಹಾರದ ಉತ್ಪಾದನೆಗೂ ವಾಣಿಜ್ಯದ ಉತ್ಕರ್ಷಕ್ಕೂ ನೆರವಾಗುತ್ತದೆ.

ಇಲ್ಲಿರುವ ಉನ್ನತಗಿರಿಗಳು ವಿದ್ಯುದುತ್ಪಾದನೆಗೆ ನೆರವು ನೀಡುತ್ತವೆ. ಜೋಗದ ಜಲಪಾತ ಒಂದು ಲಕ್ಷ ಕಿಲೋವಾಟುಗಳಷ್ಟು ವಿದ್ಯುತ್ತನ್ನು ಪೂರೈಸುತ್ತದೆ. ಹೆಚ್ಚು ಕಡಿಮೆ ಅದೇ ಪ್ರದೇಶದಲ್ಲಿ ಹೊನ್ನೆಮರಡು ಯೋಜನೆ ಸಿದ್ಧಗೊಂಡಿದೆ – ಇದರಿಂದ ೫ ಲಕ್ಷ ಕಿಲೋವಾಟು ವಿದ್ಯುಚ್ಛಕ್ತಿ ದೊರೆಯುತ್ತದೆ. ಇನ್ನೂ ಅನೇಕ ನದಿಗಳು ಉತ್ತರ ಹಾಗು ದಕ್ಷಿಣ ಕನ್ನಡದಲ್ಲಿ ಉಪಯೋಗಕ್ಕೆ ಬಾರದೆ ಉಳಿದಿವೆ. ಇವುಗಳ ಜಲಶಕ್ತಿಯನ್ನು ವಿದ್ಯುದುತ್ಪಾದನೆಗೆ ಉಪಯೋಗಿಸಿ, ಆ ವಿದ್ಯುತ್ತಿನಿಂದ ಗ್ರಾಮ ಹಾಗು ಗೃಹಕೈಗಾರಿಕೆಗಳಿಗೂ ವ್ಯವಸಾಯಕ್ಕೂ ನೆರವು ಪಡೆಯಬಹುದು. ಮಲೆನಾಡಿನಲ್ಲಿ ಹೇರಳ ಖನಿಜ ಸಂಪತ್ತಿಯೆಂದು ತಿಳಿದಿದ್ದು, ವಿಸ್ತೃತ ಸರ್ವೆಯನ್ನು ಶೀಘ್ರವೇ ನಡೆಸುವುದು ಅಪೇಕ್ಷಣೀಯ. ಸಂಪರ್ಕ ಮತ್ತು ಸಂಸರ್ಗ ವ್ಯವಸ್ಥೆಗಳ ಅಭಾವವೇ ಮಲೆನಾಡನ್ನು ಮೂಲೆಗೊತ್ತಿದೆ. ಮಲೇರಿಯಾದ ಉಪದ್ರವವನ್ನು ಯಶಸ್ವಿಯಾಗಿ ನಿಯಂತ್ರಿಸಬೇಕು. ಅಲ್ಲಿ ಹೊಸ ಜನರು ಬಂದು ನೆಲೆಸುವಂತೆ ಮಾಡತಕ್ಕದ್ದು – ಮಲೆನಾಡಿನಲ್ಲಿರುವ ವ್ಯವಸಾಯ ಯೋಗ್ಯ ಭೂಮಿಯು ಪೈಕಿ ಮೈಸೂರಿನಲ್ಲಿ ನೂರಕ್ಕೆ ೨೦, ಮದ್ರಾಸಿನಲ್ಲಿ ನೂರಕ್ಕೆ ೨೯, ಮುಂಬಯಿಯಲ್ಲಿ ನೂರಕ್ಕೆ ೬, ಕೊಡಗಿನಲ್ಲಿ ನೂರಕ್ಕೆ ೧೭ ಮಾತ್ರ ಸಾಗುವಳಿಯನ್ನು ಹೊಂದುತ್ತದೆ. ಭತ್ತ ಹಾಗು ಕಬ್ಬು ಇಲ್ಲಿಯ ಮುಖ್ಯ ಬೆಳೆ. ವ್ಯವಸಾಯ ಹೆಚ್ಚು ಪ್ರಮಾಣದಲ್ಲಿ ಸಾಗಬೇಕಾದ ಆವಶ್ಯಕತೆ ಇಲ್ಲಿ ಕಂಡುಬರುತಿದ್ದು, ನೀರಿನ ಸಂಗ್ರಹ ಧಾರಾಳವಾಗಿರುವಂತೆ ಸಣ್ಣ ಹಾಗು ದೊಡ್ಡ ಕಾಮಗಾರಿಗಳನ್ನು ಕೈಗೊಳ್ಳಬೇಕು.

ಮಲೆನಾಡನ್ನು ಉತ್ತಮ ವಿಹಾರಸ್ಥಾನವಾಗಿಯೂ ರೂಪುಗೊಳಿಸಬಹುದು. ಹಾಗೆಯೇ ಕೈಗಾರಿಕಾ ಕೇಂದ್ರವಾಗಿಯೂ ಮಾರ್ಪಡಿಸಬಹುದು. ಕಾಗದ, ಹಣ್ಣು ಮತ್ತು ಮೀನಿನ ಕ್ಯಾನಿಂಗ್, ಮರಗಳ ಒಟ್ಟೆ, ಜೇನು ಸಾಕುವಿಕೆ, ಗೇರು ಬೀಜದ ಕೈಗಾರಿಕೆ ಇತ್ಯಾದಿಗಳಿಂದ ಮಲೆನಾಡು ಪ್ರಮುಖ ಕೈಗಾರಿಕಾ ವಲಯವಾಗಬಲ್ಲುದು. ಗಂಧ, ದಂತ, ಕೊಂಬು, ಬೆತ್ತ ಮತ್ತು ಹುಲ್ಲಿನ ಗೃಹೋದ್ಯಮಕ್ಕೆ ವಿಕಾಸ ಹೊಂದಲು ತುಂಬ ಅವಕಾಶವಿರುತ್ತದೆ. ಪಶುಪಾಲನೆಯು ಲಾಭದಾಯಕವಾಗುವಂತೆ ಇಲ್ಲಿಯ ಹವೆಗೆ ಒಗ್ಗುವ ತಳಿಗಳನ್ನು ಸಂಶೋಧನೆಯ ಮೂಲಕ ರೂಪಿಸಬೇಕು; ಸತ್ವಪೂರ್ಣ ಹುಲ್ಲನ್ನು ಶೋಧಿಸಬೇಕು. ಶೈಕ್ಷಣಿಕ ಪ್ರಸಾರದ ಕಾರ್ಯಕ್ರಮ ವ್ಯಾಪಕವಾಗಿ ನೆರವೇರತಕ್ಕದ್ದು. ಹೀಗೆ ವಿವರಿಸಿದ ಶ್ರೀ ನಿಜಲಿಂಗಪ್ಪನವರು ಮಲೆನಾಡಿನ ಸಮಸ್ಯೆಯನ್ನು ಇನ್ನೂ ನಿರ್ಲಕ್ಷಿಸಿದರೆ ಅದು "ರಾಷ್ಟ್ರ ಘಾತಕ"ವಾದೀತೆಂದು ಎಚ್ಚರಿಕೆ ಕೊಟ್ಟರು. ಮಲೆನಾಡಿನ ಜನತೆ ಒಟ್ಟಾಗಿ ತಮ್ಮ ಸಮಸ್ಯೆಗಳನ್ನು ಸರಕಾರಗಳ ಮುಂದಿಟ್ಟು ಶೀಘ್ರ ಪರಿಹಾರಕ್ಕಾಗಿ ಸಂಯುಕ್ತವಾಗಿ ಒತ್ತಾಯಿಸಬೇಕೆಂದು ಅವರು ಆಗ್ರಹದಿಂದ ಕೇಳಿ ಕೊಂಡರು. ಭಾರತ ಸರಕಾರವು ಪ್ರಾತಿನಿಧ್ಯಪೂರ್ಣವಾದ ಕೇಂದ್ರ ಮಲೆನಾಡು ಸಮಿತಿಯು ಪುನರುದ್ಧಾರಮಾಡಬೇಕೆಂದು ಅಥವಾ ಹೊಸತಾಗಿ ನೇಮಿಸಬೇಕೆಂದು ತೀವ್ರಾಸಕ್ತಿಯಿಂದ ಒತ್ತಾಯ ಪಡಿಸಿದರು

ಸಮ್ಮೇಳನದ ಅಂಗವಾಗಿ ಏರ್ಪಡಿಸಲಾದ ಮಲೆನಾಡು ವಸ್ತು ಪ್ರದರ್ಶನದ ಉದ್ಘಾಟನೆಯನ್ನು ಮೈಸೂರಿನ ಮುಖ್ಯಮಂತ್ರಿಗಳು ನೆರವೇರಿಸುತ್ತಾ, ಯೋಜನಾ ಆಯೋಗದೊಡನೆ ಪರ್ಯಾಲೋಚಿಸಿ ರಾಜ್ಯ ಸರಕಾರವು ಮಲೆನಾಡಿನ ಪುರೋಗತಿಗಾಗಿ ಸುಮಾರು ಒಂದು ಕೋಟಿ ರೂಪಾಯಿಗಳ ವಿವಿಧ ಅಭಿವೃದ್ಧಿ ಪ್ರಯತ್ನಗಳನ್ನು ಕೈಕೊಂಡಿದೆಯೆಂದು ವಿವರಿಸಿದರು. ಬಂದರಗಳ ಅಭಿವೃದ್ಧಿ, ಹೊಸ ರೈಲ್ವೆಗಳ ನಿರ್ಮಾಣ, ಹಾಗೂ ರಾಷ್ಟ್ರೀಯ ಮಾರ್ಗದ ವಿಸ್ತರಣೆಯ ಆವಶ್ಯಕತೆಯನ್ನು ಅವರು ಪ್ರತಿಪಾದಿಸಿದರು. ಇದೇ ಸಂದರ್ಭದಲ್ಲಿ ಕೇಂದ್ರದ ಕೃಷಿ ಮಂತ್ರಿ ಡಾ. ದೇಶಮುಖರು ಸಮ್ಮೇಳನದ ಕೃಷಿ ವಿಭಾಗವನ್ನು ತೆರೆಯುತ್ತಾ ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಮಲೆನಾಡಿನ ಅಭಿವೃದ್ಧಿಯು ಆಶೆ ಕೈಗೂಡುವ ಲಕ್ಷಣವಿದೆಯೆಂದು ತಿಳಿಸಿದರು. ಮದ್ರಾಸು ಮತ್ತು ಮುಂಬಯಿ ಸರಕಾರಗಳಿಂದ ಸಾಕಷ್ಟು ಪ್ರೋತ್ಸಾಹ ದೊರೆಕುತ್ತಿಲ್ಲವಾದರೂ ಮೈಸೂರು ಹಾಗು ಕೊಡಗುಗಳ ಸಹಕಾರದಿಂದ ಮಲೆನಾಡಿನ ಸಂಪತ್ತು ಸದ್ವಿನಿಯೋಗ ಹೊಂದುವಂತೆ ಮಾಡಲು ತಾವು ಪ್ರಯತ್ನಿಸುವುದಾಗಿ ಅವರು ಹೇಳಿದರು. ಮಲೆನಾಡಿನಲ್ಲಿ ವ್ಯವಸಾಯದ ಅಭಿವೃದ್ಧಿಗೋಸ್ಕರ ಸರಕಾರ ತಕ್ಕ ಕ್ರಮಗಳನ್ನು ಕೈಗೊಳ್ಳುವುದೆಂದೂ ಹೇರಳ ಕಬ್ಬು ಬೆಳೆದರೆ, ಸಕ್ಕರೆ ಕಾರ್ಖಾನೆಗಳನ್ನು ಹೊಸತಾಗಿ ತೆರೆಯಲು ಅನುಮತಿ ನೀಡಬಹುದೆಂದೂ ಅವರು ನುಡಿದರು. ಅರಣ್ಯ ಸಂಪತ್ತನ್ನೂ ಮೀನಿನ ವ್ಯವಸಾಯವನ್ನೂ ಅಭಿವೃದ್ಧಿಪಡಿಸಿ, ಮಲೆನಾಡಿನ ಹಾಗು ಅದಕ್ಕೆ ಹೊಂದಿಕೊಂಡ ತೀರ ಪ್ರದೇಶದ ಉತ್ಕರ್ಷ ಸಾಧಿಸಬಹುದೆಂಬ ತಮ್ಮ ನಂಬಿಕೆಯನ್ನು ಮಂತ್ರಿಗಳು ಹೊರಗೆಡಹಿದರು.

ರಾಜ್ಯ ಪರಿಷತ್ತಿನ ಉಪಸಭಾಪತಿಗಳಾದ ಶ್ರೀ ಕೃಷ್ಣಮೂರ್ತಿ ರಾಯರು ಸಮ್ಮೇಳನದ ಅಂಗವಾಗಿ ಜರಗಿದ ಪಂದ್ಯಾಟಗಳಲ್ಲಿ ಜಯಶೀಲರಾದವರಿಗೆ ಪಾರಿತೋಷಕಗಳನ್ನು ವಿತರಿಸಿದರು. ಅನೇಕ ಮಂದಿ ಪ್ರತಿನಿಧಿಗಳು ಮಲೆನಾಡಿನ ಸಮಸ್ಯೆಗಳನ್ನು ವಿವರಿಸಿ ಆವಶ್ಯಕತೆಗಳನ್ನು ಒತ್ತಿ ಹೇಳಿ ಕೇಂದ್ರ ಹಾಗು ರಾಜ್ಯ ಸರಕಾರಗಳ ಮತ್ತು ಜನತೆಯ ಸಹಾಯ ಸಹಕಾರಗಳನ್ನು ಕೋರಿದರು. ಸಮ್ಮೇಳನವು ಎಂಟನೇ ದಿನಾಂಕ ಕೆಲವು ಮಹತ್ವದ ಗೊತ್ತುವಳಿಗಳನ್ನು ಸ್ವೀಕರಿಸಿ ಮುಕ್ತಾಯಗೊಂಡಿತು. ಈ ಗೊತ್ತುವಳಿಗಳು ಭತ್ತ, ಅಡಿಕೆ ಮತ್ತಿತರ ಮಲೆನಾಡು ಪ್ರದೇಶದ ಉತ್ಪಾದನೆಯನ್ನು ಹೆಚ್ಚಿಸುವಂತೆ ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಕ್ರಮಗಳು ಕೈಗೊಳ್ಳಲ್ಪಡಬೇಕೆಂದು ಒತ್ತಾಯಪೂರ್ವಕ ಕೇಳಿಕೊಳ್ಳುತ್ತವೆ. ಅಡಿಕೆಗೆ ಕೊಡಲಾದ ಸಂರಕ್ಷಣೆಯನ್ನು ಕನಿಷ್ಟ ೧೫ ವರ್ಷಗಳ ವರೆಗಾದರೂ ಮುಂದರಿಸಬೇಕೆಂದೂ ಒಂದು ಗೊತ್ತುವಳಿ ವಿನಂತಿಸುತ್ತದೆ. ಕರ್ನಾಟಕದ ಪಶ್ಚಿಮ ತೀರದ ಬಂದರು ಹಾಗು ಪ್ರಮುಖ ನಗರಗಳನ್ನು ಮಲೆನಾಡು ಪ್ರದೇಶದ ಹಿನ್ನೆಲೆಗೆ ಜೋಡಿಸಿ ವ್ಯಾಪಾರಾಭಿವೃದ್ಧಿಗೆ ನೆರವಾಗುವಂತೆ ರೈಲ್ವೆಗಳ ಹಾಗು ರಾಷ್ಟ್ರೀಯ ಮಾರ್ಗಗಳ ವಿಸ್ತರಣಾಕಾರ್ಯ ತ್ವರಿತದಲ್ಲಿಯೇ ನಡೆಯಬೇಕೆಂದೂ ಗೊತ್ತುವಳಿಗಳು ಸೂಚಿಸುತ್ತವೆ.

ಒಟ್ಟಿನಲ್ಲಿ ಕರ್ನಾಟಕದ ಅತಿ ವಾಸಿಗೂ ವಿಸ್ತೃತ ಪ್ರದೇಶವನ್ನೊಳಗೊಂಡ ಮಲೆನಾಡಿನ ಸರ್ವಾಂಗಿಕ ಬೆಳವಣಿಗೆಯಾಗಬೇಕೆಂದು ಸಮ್ಮೇಳನ ಕೇಳಿಕೊಂಡಿದೆ ಇಪ್ಪತ್ತೊಂದು ಜನರ ಸ್ಥಾಯಿ ಸಮಿತಿಯೊಂದನ್ನು ನೇಮಿಸಿ, ಮಲೆನಾಡಿನ ಕುರಿತು ಯೋಜನೆಗಳನ್ನು ತಯಾರಿಸುವ ಹೊಣೆಯನ್ನು ಅದಕ್ಕೆ ಒಪ್ಪಿಸಿ ಕೊಟ್ಟಿದೆ. ಈ ಸಮಿತಿಯ ಪ್ರಯತ್ನಗಳ ಫಲವಾಗಿ ಮುಂದಿನ ಪಂಚವಾರ್ಷಿಕ ಯೋಜನೆಯಲ್ಲಿ ಮಲೆನಾಡಿನ ಸರ್ವಾಂಗಿಕ ಏಳಿಗೆಯ ಕೆಲಸಗಳು ಅವಕಾಶ ಪಡೆದು ಕೈಗೂಡುತ್ತವೆಂದು ಆಶಿಸಬಹುದು. ಕನಿಷ್ಟ ಪಕ್ಷಕ್ಕೆ ಹತ್ತು ಕೋಟಿ ರೂಪಾಯಿಗಳ ವೆಚ್ಚ ಬರುವ ಯೋಜನೆಗಳನ್ನು ಕನಿಷ್ಟ ಹತ್ತು ವರ್ಷ ಕಾಲ ಮುಂದೊತ್ತಿಕೊಂಡು ಹೋದರೆ, ಮಲೆನಾಡು ಮುಂದಕ್ಕೆ ಬರಬಲ್ಲುದು. ಜನರ ಒತ್ತಾಯವನ್ನನುಲಕ್ಷಿಸಿ, ಸರಕಾರ ಇತ್ತ ಗಮನ ಕೊಟ್ಟು, ಆಸಕ್ತಿಯಿಂದ ದುಡಿಯಬೇಕೆಂದು ಹಾರೈಸುತ್ತೇವೆ.

ಋತುಸ್ರಾವ ನಿಂತಿತು

"ಕುಮಾರಿ" ಬಿಲ್ಲೆಗಳನ್ನು ಉಪಯೋಗಿಸಿದರೆ ಪದೆತಪ್ಪಿ ಋತುಸ್ರಾವವಾಗುವುದು, ಹತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು. ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ– ಬೆಲೆ: ರೂ. 3/-; ಸ್ಪೆಶಲ್ ರೂ. ೫/-, ಅಧಿಕಾಧಿಕ ಸ್ಪೆಶಲ್ ರೂ. ೭/– [ವಿ. ಪಿ. ಖರ್ಚು ಪ್ರತ್ಯೇಕ]

Mrs. P. DEVEE, C.I.S. (N.J.)
CALCUTTA. 40

ಸ್ಟಾಕಿಸ್ಟರು: ಬಪಾಳ ಕಂಪೆನಿ, ಮಂಗಳೂರು.

ಮುಖ್ಯ ಪ್ರಕಟಣೆ

"ಆನಂದ ಸುಧ" ನಮ್ಮ ಆನಂದ ಸುಧ ಸಮಸ್ತ ಜನಗಳಿಗೆ ಬಲವನ್ನು ಬುದ್ಧಿ ಪುಷ್ಟಿಯನ್ನು ಕಲಗಿಸುವುದು. ಅನೇಕ ವ್ಯಾಧಿಗಳನ್ನು ನಾಶಮಾಡುತ್ತೆ. ೧೫ ದಿನಗಳಿಗೆ ಸರಿ ಹೋಗುವ ೪ ಔ. ಸೀಸೆ ೧ಕ್ಕೆ ರೂ. ೩—೦—೦.

"ಸ್ತ್ರೀ ಸುಧ" ನಮ್ಮ ಸ್ತ್ರೀ ಸುಧ ಸ್ತ್ರೀಯರಿಗೆ ಸಂಭವಿಸುವ ಸಮಸ್ತ ಗರ್ಭಾಶಯ ವ್ಯಾಧಿಗಳನ್ನು ಋತು ದೋಷಗಳನ್ನು, ಋತು ಶೂಲ, ಸಂಯೋಗ ಬಹಿಷ್ಟೆ ಆಗದಿರುವುದು ಮೊದಲಾದ ಸಮಸ್ತ ವ್ಯಾಧಿಗಳನ್ನು ನಾಶನಮಾಡುವುದು. ಸಂತಾನವನ್ನು ಕಲಗಿಸುವುದು. ಒಂದು ೨-೫ಗಳಿಗೆ ಸರಿಹೋಗುವ ೧ ತೊಲದ ಔಷಧಿ ರೂ. ೪—೦—೦.

"ಬಾಲ ಸುಧ" ಇದು ಸಣ್ಣ ಬಾಲಕರಿಗೆ ಅಜೀರ್ಣ, ಜ್ವರ, ಕೆಮ್ಮು, ಶೀತ, ಮಲಬದ್ಧತೆ, ಹೆಚ್ಚಾಗಿ ಭೇದಿ ಆಗುವಿಕೆ, ಮಕ್ಕಳು ಕ್ಷೀಣವಾಗಿ ಕೈಕಾಲು ಸಣ್ಣದಾಗುವಿಕೆ, ಲಿವರ್ ಬೆಳೆಯುವುದು, ಈ ಎಲ್ಲಾ ವ್ಯಾಧಿಗಳಿಗೆ ವಜ್ರಾಯುಧವಾಗಿದೆ. ಹೀಗಿರುವ ಔಷಧಿ ಇನ್ನೊಂದು ಇಲ್ಲವೆಂದು ಹೇಳಬಹುದು ಈ ಔಷಧಕ್ಕೆ ಮಿತಿ ಇಲ್ಲದ ಯೋಗ್ಯತಾ ಪತ್ರಗಳನ್ನು ಪಡೆದಿರುವದಲ್ಲದೆ ದೇಶದಲ್ಲಿ ಅನೇಕ ವಿಧದಲ್ಲಿ ಅಭಿವೃದ್ಧಿಯಾಗಿರುತ್ತದೆ. ಸುಮಾರು ೧ ತಿಂಗಳಿಗೆ ಸರಿ ಹೋಗುವ ೫೦ ಮಾತ್ರೆಗಳ ಸೀಸೆ ೧ಕ್ಕೆ ರೂ. 1—0—0.

ಹೆಡ್ಡಾಫೀಸ್:

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್, ರಾಜಮುಂಡ್ರಿ.

ಬೆಂಗಳೂರು ಏಜನ್ಸಿ:

ಸುದರ್ಶನ ಆಯುರುವೇದ ವೈದ್ಯಶಾಲ, ನಗರ್ತರ ಪೇಟೆ, ಬೆಂಗಳೂರು-2.

ಖಾತ್ರಿ ಚಿನ್ನದ ನೆಕ್‌ಲೇಸ್ ತರಹವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,

ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.

ಫೋನು ನಂಬ್ರ 66

(೨ನೇ ಪುಟದಿಂದ)

ಗುಸ್ತದು. ಕಟ್ಟಡಗಳ ವಿಸ್ತರಣೆ, ತರಬೇತಿ ಕೇಂದ್ರದ ಸಿಬಂಧಿ ವೇತನ ಮುಂತಾದವುಗಳಿಗೋಸ್ಕರ ಕೇಂದ್ರ ಸರಕಾರವು ೧೯೮೮೦೦೦ ಹಾಗು ರಾಜ್ಯ ಸರಕಾರಗಳು ೭೭೪೦೦೦ ರೂಪಾಯಿಗಳನ್ನು ಸಹಾಯವಾಗಿ ಕೊಡುತ್ತವೆ.

ತರಬೇತಿ ಸೌಕರ್ಯ

ದ್ವಿತೀಯ ಮಹಾ ಯುದ್ಧವು ದಾದಿಯರ ಉದ್ಯೋಗದ ಮಹತ್ವ ಎಷ್ಟರ ಮಟ್ಟಿಗಿದೆ ಎಂಬುದನ್ನು ತೋರಿಸಿಕೊಟ್ಟಿತು. ಯುದ್ಧದಲ್ಲಿ ಗಾಯಗೊಂಡವರ, ರೋಗಪೀಡಿತರ ಉಪಚಾರ ಮಾಡುವುದಕ್ಕೆ ಸಾವಿರಾರು ದಾದಿಯರು ಬೇಕಾದರು—ಆದುದರಿಂದ ದಾದಿಯರ ತರಬೇತಿಗಾಗಿ ಮೂರು ಕೇಂದ್ರಗಳು ಸ್ಥಾಪಿಸಲ್ಪಟ್ಟವು ಇದಕ್ಕೂ ಹೆಚ್ಚು ಮಹತ್ವದ ಹೆಜ್ಜೆಯು ೧೯೪೬ನೇ ಇಸವಿಯಂದು ಇಡಲ್ಪಟ್ಟಿತು— ಆ ವರ್ಷ ದಾದಿಯರಿಗೆ ಬಿ ಎಸ್. ಸಿ ಪದವಿಯನ್ನು ನೀಡುವ ನಾಲ್ಕು ವರ್ಷಗಳ ಶಿಕ್ಷಣ ಪದ್ಧತಿ ಪ್ರಾರಂಭವಾಯಿತು. ದಿಲ್ಲಿಯ ದಾದಿಯರ ಕಾಲೇಜು ಹಾಗು ವೆಲ್ಲೂರಿನ ಕ್ರಿಶ್ಚಿಯನ್ ಮೆಡಿಕಲ್ ಕಾಲೇಜಿಗೆ ಹೊಂದಿಕೊಂಡ ದಾದಿಯರ ಶಾಲೆಗಳು ಪ್ರಕೃತ ಈ ಪದವಿ ಶಿಕ್ಷಣವನ್ನು ನೀಡುತ್ತವೆ. ದಾದಿಯರ ಶಿಕ್ಷಣ ಪದ್ಧತಿಯು ಬಹಳ ವ್ಯಾಪಕ ವಿಷಯಗಳನ್ನು ಒಳಗೊಂಡಿದೆ—ದಾದಿಯರು ವೈಜ್ಞಾನಿಕ ದೃಷ್ಟಿಯನ್ನು ಅಳವಡಿಸಿಕೊಂಡಷ್ಟೇ ಕಲಾತ್ಮಕ ರೀತಿಯಲ್ಲಿ ತಮ್ಮ ಕರ್ತವ್ಯವನ್ನು ನಿರ್ವಹಿಸಬೇಕಾಗುತ್ತದೆ. ಸೂಕ್ಷ್ಮ ಮನೋವೃತ್ತಿ, ಕ್ಷಿಪ್ರ ಗ್ರಹಣ ಶಕ್ತಿ, ಪರೇಂಗಿತಜ್ಞತೆ, ಕರುಣೆ ಸಹಾನುಭೂತಿಗಳು ನರ್ಸಮ್ಮನ ಅಲಂಕಾರ. ನಾಲ್ಕು ವರ್ಷಗಳ ಪದವೀ ಶಿಕ್ಷಣದಲ್ಲಿ ದೇಹ ಶಾಸ್ತ್ರದ ಸಾಮಾನ್ಯ ಪರಿಚಯ, ರಸಾಯನ ಶಾಸ್ತ್ರ ಹಾಗು ಭೌತ ಶಾಸ್ತ್ರದ ತಿಳುವಳಿಕೆಗಳಲ್ಲದೆ, ರೋಗ ನಿರೋಧಕ ಔಷದ, ಕೀಟಾಣು ಲೋಕ ರೋಗಿಗಳ ಉಪಚಾರ, ಮಕ್ಕಳ ಹಾಗು ಬಾಣಂತಿಯರ ಶುಶ್ರೂಷೆಗಳ ಮಾಹಿತಿ ದೊರಕುತ್ತದೆ ಸಾಮಾನ್ಯ ಮನಃಶಾಸ್ತ್ರ, ಮಕ್ಕಳ [illegible] ಸಾಮಾಜಿಕ ಧರ್ಮ ಹಾಗು ಅರ್ಥಿಕ ವಿಷಯಗಳೂ ದಾದಿಯರ ಶಿಕ್ಷಣದಲ್ಲಿ ಸೇರಿರುತ್ತವೆ. ಬೇರೆ ಬೇರೆ ಮನೋಭಾವದ ಹಾಗು ಸಾಮಾಜಿಕ ಅಚ್ಚಿನಲ್ಲಿ ಎರಕ ಹೊಯು ಜನರ ನಡುವೆ ದಾದಿಯರ ಕೆಲಸ ಮಾಡಬೇಕಾಗಿರುವುದರಿಂದ—ಅವರ ಸಾಮಾಜಿಕ ತಿಳುವಳಿಕೆ ಎಷ್ಟು ಸಂವೇದನೆಯಿಂದ ಕೂಡಿದ್ದರೂ ಸಾಲದು ಹಳ್ಳಿಯ ಮುಗ್ಧೆಯರ ಮನವೊಲಿಸಿ, ಅವರಿಗೆ ಆಧುನಿಕ ವೈದ್ಯಕೀಯ ಜ್ಞಾನದ ಲಾಭವನ್ನೊದಗಿಸುವುದು ತ್ರಾಸದಾಯಕವಾಗಿದ್ದರೂ ನರ್ಸಮ್ಮಗಳು ದಕ್ಷತೆಯಿಂದಲೇ ಈ ಕರ್ತವ್ಯವನ್ನು ನಿರ್ವಹಿಸುವರು.

ಪ್ರಾದೇಶಿಕ ಭಾಷೆಯಲ್ಲಿ ಶಿಕ್ಷಣ

ಈ ಉದ್ಯೋಗದಲ್ಲಿ ಕುಲೀನರು ಸೇರುವಂತೆ ಸಾಮಾಜಿಕ [illegible] ದೊರ ಕಿಸಿಕೊಡುವುದು ಎಷ್ಟು ಅಗತ್ಯವೋ—ದಾದಿಯರ ಉದ್ಯೋಗಕ್ಕೆ ಅಧಿಕಾಧಿಕ ಪ್ರೋತ್ಸಾಹ ಕೊಡುವುದೂ ಇಷ್ಟವಾಗಿರುತ್ತದೆ. ಅವರಿಗೆ ಆಕರ್ಷಕ [illegible] ಸೌಕರ್ಯಗಳನ್ನೂ ನೀಡಬೇಕೆಂದು ಡಾ. ಸಿ. ಪಿ ರಾಮಸ್ವಾಮಿ ಅಯ್ಯರರಂತಹ ಮೇಧಾವಿಗಳ ಅಭಿಪ್ರಾಯ ಇತ್ತೀಚೆಗೆ ಕೇಂದ್ರ ಆರೋಗ್ಯ ಪರಿಷತ್ತು ಹೊಸ ದಿಹಲಿಯಲ್ಲಿ ನೇರಿದ್ದಾಗ—ಈ ವಿಷಯಗಳನ್ನು ಗಮನಿಸಿ, ಉಚಿತ ಕ್ರಮ ಕೈಗೊಳ್ಳಲು ಸಮಿತಿಯೊಂದು ಮದ್ರಾಸಿನ ಆರೋಗ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ನೇಮಕಗೊಂಡಿತು ದಾದಿಯ ಉದ್ಯೋಗಕ್ಕೆ ಹೆಚ್ಚು ಸ್ತ್ರೀಯರು ಸೇರುವಂತೆ ಮಾಡಲು ಶಿಕ್ಷಣವನ್ನು ಪ್ರಾದೇಶಿಕ ಭಾಷೆಯಲ್ಲಿ ನೀಡಬೇಕೆಂದೂ ಇಂಗ್ಲೀಷು ಭಾಷೆಯ ಮಾಹಿತಿಗೆ ಅನಾವಶ್ಯಕ ಮಹತ್ವ ಕೊಡಬಾರದೆಂದೂ ಕೆಲವು ರಾಜ್ಯ ಸರಕಾರಗಳ ಮಂತ್ರಿಗಳು ವಾದಿಸಿದರು ದಿಲ್ಲಿಯ ರಾಜ್ಯ ಸರಕಾರ ಇಂಥದೊಂದು ಯೋಜನೆಯನ್ನು ಸಿದ್ಧಗೊಳಿಸಿದೆಯಾಗಿ ತಿಳಿದು ಬರುತ್ತದೆ. ನಮ್ಮ ದೇಶದಲ್ಲಿ ಸುಶಿಕ್ಷಿತ ಸ್ತ್ರೀಯರು ಇರುವುದೇ ಕಡಿಮೆ—ಇಂಗ್ಲೀಷು ಕಲಿತವರಂತೂ ಅತ್ಯಲ್ಪ. ಆದಕಾರಣ, ಪ್ರಾದೇಶಿಕ ಭಾಷೆಯಲ್ಲಿಯೇ ದಾದಿಯರ ಶಿಕ್ಷಣವನ್ನು ಕೊಟ್ಟು, ತರಬೇತಿಯನ್ನೊದಗಿಸಿದರೆ [illegible] ದಾದಿಯರ ಕೆಲಸಕ್ಕೆ ಜನರು ಸೇರಿಕೊಳ್ಳಬಹುದು: ವಸ್ತುತಃ ಈಗ ದೇಶವು ಅನುಭವಿಸುತ್ತಿರುವ ಅಭಾವವೊಂದು ಕೆಲಮಟ್ಟಿಗೆ ಪರಿಹಾರ ಹೊಂದುವುದೂ ಸಾಧ್ಯ. ಸರಕಾರ ಈ ವಿಷಯವನ್ನು ತೀವ್ರ ಪರ್ಯಾಲೋಚಿಸಿ, ಉಚಿತ ಕ್ರಮವನ್ನು ಕೈಗೊಳ್ಳುವುದಾಗಿ ಆಶಿಸುತ್ತೇವೆ

ಸ್ವೀಕಾರ—ವಿಮರ್ಶೆ

ನೆನಹು—

(ಮುದ್ದಣ ಸ್ಮಾರಕ ಗ್ರಂಥ) ಸಂಪಾದಕರು: ಮುನಿಪಾಲ ರಾಜು. ಪ್ರಕಾಶಕರು: ತರುಣ ಕಲಾವೃಂದ, ಸೂರ್ಕೆಟ ರಸ್ತೆ, ಮಂಗಳೂರು ೧. ಬೆಲೆ: ರೂ. ೧—೮—೦.

ತುಳುನಾಡಿನ ತಗ್ಗು ನೆಲದಲ್ಲಿ ಹುಟ್ಟಿ ಕನ್ನಡ ಕಾವ್ಯ ಸರಸ್ವತಿಯ ಕೀರ್ತಿಯನ್ನು ನಾಲ್ಕೆಡೆಗಳಿಗೆ ಹಬ್ಬಿಸಿದವರಲ್ಲಿ ಭರತೇಶ ವೈಭವದ ಕವಿ ರತ್ನಾಕರ ವರ್ಣಿಯನ್ನೂ ರಾಮಾಶ್ವಮೇಧದ ಕರ್ತೃ ಮುದ್ದಣನನ್ನೂ ಸಾಹಿತ್ಯ ವಿಮರ್ಶಕರೂ ಕಾವ್ಯಾಭ್ಯಾಸಿಗಳೂ ಅಗ್ರಗಣ್ಯರೆಂದು ಹೊಗಳಿರುವರು. ಕನ್ನಡ ಭಾಷೆಗೆ ಮಹಾಸಿಧಿಯಾಗಿರುವ ಶಬ್ದಾನುಶಾಸನವೆಂಬ ವ್ಯಾಕರಣವನ್ನು ಬರೆದು ಅನುಗ್ರಹಿಸಿದ ಭಟ್ಟಾಕಳಂಕನು ಹೇಗೆ ಕನ್ನಡ ಸಾಮ್ರಾಜ್ಯದಲ್ಲಿ [illegible] ಗದ್ಯ ಕಾವ್ಯಗಳನ್ನು ಬರೆದು ಕನ್ನಡ [illegible] ಕಾಣಿಕೆಯನ್ನರ್ಪಿಸಿದ ಮುದ್ದಣ [illegible] [illegible] ಮುದ್ದಣನು ಬದುಕಿದ್ದರೆ [illegible] ವರ್ಷ [illegible] ನಾಗುತ್ತಿತ್ತು [illegible] ಅವನ ಹೆಸರೂ ಕೊರತೆ ಬರುತ್ತಿರಲಿಲ್ಲ! ಆದರೆ ಈಗ ಕೇವಲ [illegible] ನೌಕರನಾಗಿ ದುಡಿಯುತ್ತಿರುವ [illegible] ತನ್ನ ಅಜ್ಞತೆ [illegible] ಹೇಗೆ ನೆನಪು [illegible] ಆಗಿರುತ್ತಾನೊ ಕನ್ನಡಿಗರಿಗೂ ಈ ಕವಿಗಳ [illegible] ರಕ ಗ್ರಂಥಗಳ ವಸ್ತುವಾಗಿಯಷ್ಟೇ ಉಳಿದಿದೆ. “ಮುದ್ದಣನ ಜೀವನವು ಕಗ್ಗತ್ತಲಿನ ಕಣದಲ್ಲಿ ಕಾಣುವ ಕಾಮನಬಿಲ್ಲು” ಎಂದು ಶ್ರೀ ಧಾರವಾಡಕರರು ಹೇಳಿದುದರಲ್ಲಿ ಅತಿಶಯೋಕ್ತಿ ಏನೂ ಇಲ್ಲ. ಹತ್ತು ರೂಪಾಯಿ ಮಾಸಿಕ ವೇತನ ಪಡೆಯುತ್ತಿದ್ದ ಈ ಕುಸ್ತಿ ಮಾಸ್ತರ ಸರಕಾರೀ ಕಾಲೇಜಿನ ಕನ್ನಡ ಅಧ್ಯಾಪಕರ ಸ್ಥಾನಕ್ಕೆ ಅರ್ಜಿ ಹಾಕಿಕೊಂಡಾಗ, ಆಂಗ್ಲ ಭಾಷೆಯಲ್ಲಿ ಪ್ರಾವೀಣ್ಯವಿಲ್ಲವೆಂಬ ಆಕ್ಷೇಪ ಬಂತು. ಮುದ್ದಣನ ಕನ್ನಡ ಸಂಪತ್ತಿನ ಪ್ರತಿಭೆಯು ಯಾವ ಶೇಕ್ಸ್‌ಪಿಯರನ ಆಂಗ್ಲ ಭಾಷಾ ಪ್ರಭುತ್ವಕ್ಕೂ ಕಡಿಮೆಯದಲ್ಲ ಎಂಬುದನ್ನಾಗ ಯಾರೂ ನೆನೆಯಲಿಲ್ಲ. ಹೀಗೆ ಬಡತನದ ಕುಲುಮೆಯಲ್ಲಿ ಬೇಯುತ್ತಿದ್ದಾಗಲೇ ಭಾಷೆಯ ಮಟ್ಟಿ ಪಾಕ ಪುತ್ಥಳಿಯ ಬಂಗಾರವಾಗಿ ಬಂತು. ಮಳಲಿ ಸುಬ್ಬರಾಯರಂ ಬನ್ನಂಜೆ [illegible] ಕಟ್ಟಿದ ಗುರುಗಳಾಗಿ ಒದಗಿಬಂದರು. ಶಬ್ದಮಣಿದರ್ಪಣ ಹಾಗೂ [illegible] ಕವನ [illegible] ಗಳು ಪ್ರಾಕ್ಕ ಗ್ರಂಥಗಳಾದುವು. ಮುಂದೆ ರತ್ನಾವತೀ ಕಲ್ಯಾಣ, ಕುಮಾರ ವಿಜಯ ಎಂಬೆರಡು ಯಕ್ಷಗಾನ ಪ್ರಬಂಧಗಳೂ ಶ್ರೀ ರಾಮ ಪಟ್ಟಾಭಿಷೇಕವೆಂಬ ಕಾವ್ಯ ಗ್ರಂಥವೂ ಅದ್ಭುತ ರಾಮಾಯಣ ಹಾಗು ರಾಮಾಶ್ವಮೇಧ ಎಂಬೆರಡು ಗದ್ಯಕೃತಿಗಳೂ ನಿರ್ಮಾಣಗೊಂಡವು “ಗೋ ಜೋ” ಎಂಬ ಸಂಶೋಧನಾತ್ಮಕ ಬರೆಹವೂ ಪ್ರಕಟಗೊಂಡಿತು. ಆದರೆ ನಾರಣಪ್ಪನವರು ಬಹಿರಂಗವಾಗಿ ಈ ಕೃತಿರತ್ನಗಳನ್ನು ರಚಿಸಿದೆನೆಂದು ಒಪ್ಪಿಕೊಳ್ಳಲು ಹಿಂಜರಿದರು. “ನಾನು ಬರೆದ ಪುಸ್ತಕವೆಂದು ನನ್ನ ಹೆಸರನ್ನು ಹೇಳಿದ್ದರೆ ನನ್ನ ಪುಸ್ತಕಗಳು ಈ ಹೊತ್ತಿನ ವರೆಗೂ ಹೊರಗೆ ಬರುವಂತಿರಲಿಲ್ಲ” ಎಂಬ ಅವರ ಮಾತು ಮರ್ಮಭೇದಕವಾಗಿರುತ್ತದೆ ಭವತಿ ಭಿಕ್ಷಾಂ ದೇಹಿ ಎಂಬ ಅವರ ಸಪ್ತಾಕ್ಷರೀ ಮಂತ್ರ ಕನ್ನಡ ಕವಿಗಳಿಗೆ ಸತ್ತಿದ ಬಡತನಕ್ಕೆ ಕನ್ನಡಿ ಹಿಡಿಯುತ್ತದೆ. ಇದರಿಂದಾಗಿಯೇ ಅವರು ವ್ಯಕ್ತಿಗತ ಪ್ರಶಂಸೆ ಹಾಗೂ ಕೀರ್ತಿಯ ಆಸೆಯನ್ನು ತೊರೆದು ಗ್ರಂಥಗಳು ಹೇಗಾದರೂ ಪ್ರಚಾರಕ್ಕೆ ಬರಲೆಂಬ ಉದ್ದೇಶದಿಂದ ಅಂಕಿತನಾಮ ಇಟ್ಟುಕೊಂಡು ಬರೆದ ತನ್ನ ಕೃತಿಗಳನ್ನು ಬೇರೆಯವರದೆಂದು ಸಾರುವಂತಾಯಿತು ಅವರ ಯಕ್ಷಗಾನ ಪ್ರಬಂಧಗಳು ನಾಗರ ಹಾಗು ದೇಸೀ ವಿಧಾನಗಳೆರಡನ್ನೂ ಮೈಗೂಡಿಸಿಕೊಂಡಿವೆ. ಹಳೆಯ ಹಾಡುಗಳಿಗಿಂತ ಭಿನ್ನವಾದ ಜಾಡು ಹಿಡಿದರೂ ಸಂಗೀತ ಶಾಸ್ತ್ರದ ಚೌಕಟ್ಟಿಗೊಪ್ಪುವ ರಾಗ, ತಾಳ, ಲಯಗಳಿಂದಲೂ ಕಾವ್ಯ ಸಹಜವಾದ ಪ್ರಾಸ, ಶೈಲಿ, ಗಮಕ, ಅಲಂಕಾರಗಳಿಂದಲೂ ಈ ಯಕ್ಷಗಾನ ಪ್ರಬಂಧಗಳು ರಂಜಿಸುತ್ತವೆ. ಮತ್ತು “ಬಗೆ ಪೊಸತು” ಎಂಬ ಅಭಿಪ್ರಾಯವನ್ನು ಇಲ್ಲಿಯ ಪದ್ಯಗಳು ಚೆನ್ನಾಗಿ ಸಮರ್ಥಿಸುತ್ತವೆ. ಇದೇ ಹೊಸತನವನ್ನು ಲಕ್ಷ್ಮೀನಾರಣಪ್ಪನವರ ಉಳಿದ ಮೂರು ಕಾವ್ಯಗಳಲ್ಲೂ ಗುರುತಿಸಬಲ್ಲೆವು. ಶ್ರೀ ಡಿ. ವಿ. ಗುಂಡಪ್ಪನವರೆಂದಂತೆ ಅತನು ಹೇಳಿರುವುದೇನೊ ಹಳೆಯ ರಾಮಾಯಣದ ಕಥೆಯನ್ನೇ ಆದರೂ ಹೇಳಿಕೆಯ ಪರಿ ಹೊಸದು. ಈ ನಾವೀನ್ಯ ಕಾವ್ಯವಸ್ತುವಿಗೆ ಸಂಬಂಧಿಸಿದಲ್ಲ-ಶೈಲಿ ಮತ್ತು ರೀತಿಯಲ್ಲಿ ಅದು ವ್ಯಕ್ತಗೊಂಡಿದೆ. ಈ ಕವಿಯ ಬರೆಹದ ರುಚಿಯನ್ನು ವರ್ಣಿಸುವುದೆಂದರೆ ಮಲ್ಲಿಗೆಯ ಕಂಪನ್ನು ಆಘ್ರಾಣಿಸುವ ಬದಲು, ಮಾತಿನ ಮೋಡಿಯಿಂದ ವಿವರಿಸಲು ಹೋದಂತಾಗುತ್ತದೆ. ರಾಮಾಶ್ವಮೇಧದ ಮುದ್ದಣನ ಪ್ರಬುದ್ಧ ಚೇತನದ ಮುಂದೆ ಮುದ್ದಿ ಮನೋರಮೆಯ ಮುಗ್ಧ ಚೇತನವೂ ರಸಪೂರ್ಣವಾಗಿ ಮಾಗಿ ಹೋಗುತ್ತಿರುವುದನ್ನು ವರ್ಣಿಸಿಯೇ ಮುಗಿಯದು. ಕರ್ಮಣಿ ಸರದೊಳ್ ಕೆಂಬ ಪಳಮುಂ ಕೋದಂತೆ ನಡು ನಡುವೆ ಸಕ್ಕದದ ನಲ್ನುಡಿ ಸೇರಿಸಿ ದಲ್ ಪೊಸತೆ, ಲಕ್ಷಣಂ ಮಿಕ್ಕಿರೆ, ತಿರುಳ್ಗನ್ನಡದೊಳ್ ಕತೆಯನುಸಿರ್ದ ಮುದ್ದಣನ ಜಾಣ್ಮೆಯು ಅನ್ಯಾದೃಶವಾದದ್ದು. ಕನ್ನಡಿಗರು ಚಂಪೂ ಕಾವ್ಯಗಳಿಂದಲೂ ಷಟ್ಪದಿ ಗ್ರಂಥಗಳಿಂದಲೂ ಬೇಸತ್ತು ನಿಂತಿದ್ದಾಗ ಗದ್ಯಂ ಹೃದ್ಯಂ ಎನ್ನುತ್ತಾ ಧೈರ್ಯದ ಹೆಜ್ಜೆಯಿಟ್ಟು ಗದ್ಯಂ ಕವೀನಾಂ ನಿಕಷಂ ವದಂತಿ [illegible] ಸೊಂಟಕಟ್ಟಿದ ಕವಿಯು ಒಪ್ಪುವನಕ್ಕೆ ಕನ್ನಡಿಗರು ಕೃತಜ್ಞತೆಯ

ಬೇಂಕಿನ ಬೆಳವಣಿಗೆ

	1933	1943	1953
ಅಧಿಕೃತ ಭಂಡವಾಳ	5,00,000	5,00,000	20,00,000
ಕೆತ್ತ ಭಂಡವಾಳ	12,000	1,90,000	9,00,000
ಕ್ಷೇಮನಿಧಿ	—	12,000	2,00,000
ಒಟ್ಟು ವಹಿವಾಟು	77,000	15,60,000	60,30,000

ಕಾಲಾವಧಿ ಠೇವಣಾತಿ— 3 ತಿಂಗಳಿಗೆ 3½% ಬಡ್ಡಿ.
ಖಾಯಂ ಠೇವಣಾತಿ— 1 ತಿಂಗಳಿಂದ 24 ತಿಂಗಳ ವಾಯಿದೆ ವರೆಗೆ ಸ್ವೀಕರಿಸಲ್ಪಡುವುದು. 24 ತಿಂಗಳಿಗೆ 3¾% ಬಡ್ಡಿ.
ರೂಪಾಯಿ ಹತ್ತು ಸಾವಿರ ನ, ಮೇಲಿನ ಠೇವಣಾತಿಗೆ 4% ಬಡ್ಡಿ ಕೊಡಲಾಗುವುದು.
ರೂಪಾಯಿ ಐವತ್ತು ಸಾವಿರ ನ, ಮೇಲಿನ ಠೇವಣಾತಿಗೆ 4¼% ಬಡ್ಡಿ ಕೊಡಲಾಗುವುದು.
ವಿಜಯ ಕೇಶ್ ಸರ್ಟಿಫಿಕೇಟು— ಮೂರು ವರುಷದ ಅವಧಿ = 4¾% ಬಡ್ಡಿ.
ಸಾಲ ಸವಲತ್ತುಗಳಿಗೆ ಬೇಕಾದ ಅನುಕೂಲತೆಗಳನ್ನು ವಿಳಂಬವಿಲ್ಲದೆ ಒದಗಿಸಲಾಗುವುದು.
ಹೆಚ್ಚಿನ ಮಾಹಿತಿಗೆ ನಿಮ್ಮ ಸಮೀಪದ ನಮ್ಮ ಏಜಂಟರೊಡನೆ ವಿಚಾರಿಸಿರಿ ಜಿಲ್ಲೆಯ 10 ಕೇಂದ್ರಗಳಲ್ಲಿಯೂ, ಮಡಿಕೇರಿ ಮತ್ತು ಮುಂಬಾಯಿಯಲ್ಲಿಯೂ ನಮ್ಮ ಶಾಖೆಗಳಿರುತ್ತವೆ.
ಸ್ಥಾಪನೆ: 1931 ದಿ ವಿಜಯ ಬ್ಯಾಂಕ್ ಲಿಮಿಟೆಡ್ ಪ್ರಧಾನ ಕಛೇರಿ: ಮಂಗಳೂರು 3.



ನಡು ಗುಂಪಿನವರ ಕುರಿತು

(೧ನೇ ಪುಟದಿಂದ)

ನಡೆಯುತ್ತದೆ; ಹೊರತು, ಬುದ್ಧಿಜೀವಿಗಳದಲ್ಲ.

ಜನರು ಅತ್ಯಾವಶ್ಯಕ ವಿಷಯಗಳಿಗಾಗಿ ಅನ್ಯರನ್ನು ಹೊಂದಿಕೊಂಡಿದ್ದರೆ, ಮತ್ತು ಆ ಶ್ರಮಿಕರೂ ರೈತರೂ ತಮ್ಮ ಇಚ್ಛೆಯನ್ನು ಸಾಧಿಸಿಕೊಳ್ಳುವ ರೀತಿಯನ್ನು ಕಲೀತದ್ದರೆ, ಪ್ರಜಾಪ್ರಭುತ್ವವು ಮಧ್ಯಮ ವರ್ಗದವರ ಇಚ್ಛೆಯಂತೆ ಕೆಲಸ ಮಾಡುವುದಿಲ್ಲ—ರೈತರ ಮತ್ತು ಶ್ರಮಜೀವಿಗಳ ಇಚ್ಛೆಯೇ ಪ್ರಜಾಪ್ರಭುತ್ವದ ಸ್ವರೂಪವನ್ನು ರೂಪಿಸುತ್ತದೆ. ರೈತರು ಸುಶಿಕ್ಷಿತರ ಜನರು [illegible] ಇದ್ದಾಗಿರುವುದರಿಂದ [illegible] ಮಧ್ಯಮ ವರ್ಗದವರು ಪರೋಪಜೀವಿಗಳಾಗಿ ಪರಿಣಮಿಸಿದರೆ, ಮತ್ತು ಆ ಪರಿಸ್ಥಿತಿಯುಳ್ಳ ಸ್ವಭಾವಜನ್ಯವಾದ ಉತ್ಸಾಹದಿಂದ ಪರೋಪದೇಶ ಪಾಂಡಿತ್ಯವನ್ನು ಪ್ರದರ್ಶಿಸಿ, ಶ್ರಮಜೀವಿಗಳ ಮೇಲೆ ವರ್ಚಸ್ಸನ್ನು ಬೀರಲು ನೋಡಿದರೆ, ಅವರು ನಗೆಗೀಡಾಗಬೇಕಾದೀತು. ತನ್ನ ಸ್ಥಿತಿಗತಿಯನ್ನು ಸುಧಾರಿಸಿಕೊಳ್ಳಲಾರದವನು ಇತರರ ಶ್ರೇಯಸ್ಸಿನ ಉಪಾಯಗಳನ್ನು ತಿಳಿಸಿ ಹೇಳುವ ಅಧಿಕಾರವನ್ನು ಹೊಂದಿರುವುದಿಲ್ಲ. ನಾವು ಕೀಳರೆಂದು ಪರಿಗಣಿಸುವ ಶ್ರಮಿಕರಾಗಲೀ ರೈತರಾಗಲೀ ಅವರ ಮಕ್ಕಳಾಗಲೀ ತಮಗೆ ಉಚಿತ ಅವಕಾಶ ದೊರೆಯದಿದ್ದರೂ ಸಹ, ದೊರೆತ ಅವಕಾಶವನ್ನೇ ಸದುಪಯೋಗಪಡಿಸಲು ನೋಡುತ್ತಾರೆ. ಅವರು ಇತರರ ಕೈಕೆಳಗೆ ಕೂಡ ಸ್ವಾಭಿಮಾನದಿಂದ ದುಡಿಯಲು ನಾಚುವುದಿಲ್ಲ. ಹಾಗೆ [illegible]. ಅವರ ಮೇಲಕ್ಕೆ [illegible] ಪೂರ್ಣವಾಗಿ [illegible]. ಆದರೆ ಪರಂಪರಾಗತ [illegible] ವರ್ಗದ ಮಡುಗ [illegible] ಕೆಲಸ [illegible] ನಾಲಪಾಡಿ [illegible] ದುಃಖದ [illegible] ಬಿದ್ದಾ [illegible] ಅನಾವಶ್ಯಕ ಕ್ಲೇಶಗ [illegible] ಪಾದಾರು. [illegible] ಕಲಿಸಲಾಗಿ ಮಾ [illegible] ಇಚ್ಛೆಯವು [illegible] ನಷ್ಟವನ್ನು ಅಂ [illegible] ವುದಿಲ್ಲ.

ಈ ಪರಿಸ್ಥಿತಿಯು ಹೆಚ್ಚುಕಾಲ ಬಾಳಲಾರದು—ಮಧ್ಯಮ ವರ್ಗವು ಎಚ್ಚರಗೊಳ್ಳುವುದರಲ್ಲಿ ಈಗಾಗಲೇ ಸಾಕಷ್ಟು ತಡಮಾಡಿದಂತಾಗಿದೆ. ಇನ್ನೂ ಜಾಗೃತಗೊಳ್ಳದಿದ್ದರೆ, ಅದರ ಅವಸಾನ ಹೊಂದುವುದೇ ನಿಶ್ಚಯ. ನಾವೆಲ್ಲರೂ ದೈಹಿಕ ಶ್ರಮಕ್ಕೆ ಅನುವಾಗದೆ ಹೋದರೆ ಪ್ರಜಾಪ್ರಭುತ್ವಕ್ಕೆ ಸ್ಥೈರ್ಯ ಬಾರದು. ಕೆಲಸದಲ್ಲಿ ತಾರತಮ್ಯವಿರಕೂಡದು; ಎಲ್ಲ ಕೆಲಸಗಳಿಗೂ ಸಮ ಗೌರವ ಸಲ್ಲತಕ್ಕದ್ದು ಧರ್ಮ. ಇಲ್ಲವಾದರೆ, ನಾವು ದುಡಿಯುವವರ ಆಳಿಕೆಗೆ ತಲೆಬಾಗಿಸಬೇಕಾಗುವುದು; ಅರ್ಥಾತ್ ನಮ್ಮ ಜೀವನವೇ ಪರವಶವಾಗುವುದು. ಈ ದುರಂತ ತಪ್ಪಬೇಕಾದರೆ ಅಷ್ಟು ಮಾತ್ರಕ್ಕೂ ಅಪೇಕ್ಷಣೀಯವಲ್ಲ—ಜೀವನವನ್ನು ಸರಳಗೊಳಿಸಿ ಸ್ತ್ರೀ ಪುರುಷರಿಬ್ಬರೂ ಮನೆವಾರ್ತೆಯಲ್ಲಿ ಬದಲಾವ ಪರಿಸ್ಥಿತಿಗ

ಜವಾಯಿ ನದಿಯ ಜಲಾಶಯ
ರಾಜಸ್ಥಾನದ ರೈತನ ಭಾಗ್ಯಲಕ್ಷ್ಮಿ

ಎರಡು ವರ್ಷಗಳ ಹಿಂದೆ, ಜೋಧಪುರ ವಿಭಾಗದ ಪಾಲಿ ಎಂಬ ಹಳ್ಳಿಯ ರೈತ ವರ್ಗಕ್ಕೆ ಸೇರಿದ ೬೦ ವರ್ಷದ ಪುನಿ ಎಂಬ ಮುದುಕಿಗೆ ಆಕೆಯ ಜಮೀನಿಗೆ ಜವಾಯಿ ನದಿಯ ಪ್ರವಾಹದ ಹಾವಳಿಯಿಂದ ಹಾನಿ ಸಂಭವಿಸದ ದಿನವೊಂದು ಬರುವುದೆಂದು ಯಾರೊ ಹೇಳಿದಾಗ ಆಕೆ ಆ ಮಾತನ್ನು ನಂಬಲಿಲ್ಲ. ಈಗ ಜವಾಯಿ ನದಿಯ ನೀರು ಗಂಭೀರವಾಗಿ, ಶಿಸ್ತಿನಿಂದ ಆಕೆಯ ಜಮೀನಿನ ಬಳಿ ಹರಿಯುತ್ತಿರುವುದನ್ನು ನೋಡಿ ಆಕೆಯು ಇದೊಂದು ಅದ್ಭುತ ಘಟನೆಯೆಂದು ವ್ಯಕ್ತಪಡಿಸಿದಳು.

ಈಗ ಆಕೆಯು ಗೋಧಿ ಮತ್ತು ಕಬ್ಬಿನ ಬೆಳೆಯ ಕಟಾವು ಮಾಡುತ್ತಿದ್ದಾಳೆ. ಮುಂದಿನ ವರ್ಷ ಈ ಬೆಳೆಗಳ ಜೊತೆಗೆ ಹತ್ತಿಯನ್ನು ಬೆಳೆಸ ಬೇಕೆಂದೂ ಯೋಜನೆ ಮಾಡಿಕೊಂಡಿದ್ದಾಳೆ. ತನಗಿರುವ ೧೧ ಎಕರೆ ಜಮೀನಿನಲ್ಲಿ ಕೊಂಚ ಭಾಗವನ್ನು ಮುಂದಿನ ವರ್ಷ ಹಣ್ಣಿನ ತೋಟವನ್ನಾಗಿ ಮಾರ್ಪಡಿಸುವ ಯೋಜನೆಯೂ ಆವಳಿಗಿದೆ.

ಜವಾಯಿ ಯೋಜನೆ

ಮುನಿಯಂತೆ, ಜೋಧಪುರ ವಿಭಾಗದ ಪಾಲಿ, ಜಾಲೋರ್, ಸಿರೋಹಿ ಜಿಲ್ಲೆಗಳಲ್ಲಿ ನೂರಾರು ರೈತರು ಇಂದು ಜವಾಯಿ ನದಿಯಿಂದ ಉಪಯೋಗ ಪಡೆಯುತ್ತಿದ್ದಾರೆ. ಇದುವರೆಗೂ ೧೫,೦೦೦ ಎಕರೆ 'ಭರಣಿ'(ಮಳೆನೀರಿನಿಂದ ಬೆಳೆಯಾಗುವ) ಜಮೀನು ಸಾಗುವಳಿಗೊಳಗಾಗಿದೆ. ೧೯೫೬ರ ಕೊನೆಯ ಹೊತ್ತಿಗೆ ಸುಮಾರು ಇನ್ನೂ ೪೭,೦೦೦ ಎಕರೆಗಳಷ್ಟು ಜಮೀನು ಸಾಗುವಳಿಗೊಳಗಾಗುವುದು.

ಜನರು ನೀರಾವರಿ ಆಶ್ರಯವಿಲ್ಲದೆ ಇರುವ ಜಮೀನನ್ನು ಸಾಗುವಳಿ ಮಾಡುವ ಹೊತ್ತಿಗೆ ಅರಾವಳಿ ಪರ್ವತದ ಪಶ್ಚಿಮ ಭಾಗದಲ್ಲಿ ಸುಮಾರು ೩೦೪ ಚದರ ಮೈಲಿಗಳಷ್ಟು ವಿಸ್ತಾರವಾದ ಕ್ಷೇತ್ರದಲ್ಲಿ ಬಿದ್ದ ಮಳೆಯ ನೀರನ್ನೆಲ್ಲಾ ಸಂಗ್ರಹಿಸಿ ಉಪಯೋಗಿಸುವ ವ್ಯವಸ್ಥೆ ಮಾಡಲಾಗುವುದು. ಈ ಮಳೆಯ ನೀರಿನಲ್ಲಿ ಕೊಂಚ ಭಾಗವನ್ನು ೧೯೫೦-೫೧ರಲ್ಲಿ ಸಂಗ್ರಹಿಸುವುದಕ್ಕಾರಂಭಿಸಲಾಯಿತು. ಅಲ್ಲಿಂದೀಚೆಗೆ ಈ ಸಂಗ್ರಹಣ ಕಾರ್ಯ ವೃದ್ಧಿಗೊಳ್ಳುತ್ತಿದೆ.

ಈ ಯೋಜನೆಯು ಆರಂಭವಾದದ್ದು ಅರ್ಧ ಶತಮಾನದ ಹಿಂದೆ. ಆಗಲೇ ಮೊದಲನೆಯ 'ಸರ್ವೆ' ಯನ್ನು ಮಾಡಲಾಗಿತ್ತು. ಆದರೆ ಸಿರೋಹಿ ದರ್ಬಾರ್‌ನಿಂದ ತೀಕ್ಷ್ಣವಾದ ಪ್ರತಿಭಟನೆ ಬಂದಿದ್ದರಿಂದ ಈ ಯೋಜನೆಯನ್ನು ಕಾರ್ಯ ರೂಪಕ್ಕೆ ತರಲಾಗಲಿಲ್ಲ. ೧೯೪೭ರಲ್ಲಿ, ಆಹಾರ ಧಾನ್ಯಗಳ ಅಭಾವ ತಲೆದೋರಿ ಜರೂರು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾಗಿ ಬಂದಾಗ ಈ ಯೋಜನೆಯನ್ನು ಪುನಃ ಆರಂಭಿಸಲಾಯಿತು. ಆಗಲೂ ಸಹ ಇಲ್ಲಿ ಬಿದ್ದ ಮಳೆಯ ನೀರನ್ನೆಲ್ಲಾ ನಿಧಾನ ಮಾಡದೆ ನೀರಾವರಿ ಬೇಸಾಯಕ್ಕೆ ಉಪಯೋಗಿಸುವ ಉದ್ದೇಶದಿಂದ ಸುಮಾರು ೪,೦೦೦ ಕಿಲೋವಾಟುಗಳಷ್ಟು ವಿದ್ಯುಚ್ಛಕ್ತಿಯನ್ನು ಉತ್ಪಾದನೆಗೊಳಿಸುವ ವಿದ್ಯುತ್ ಶಕ್ತಿ ಕೇಂದ್ರದ ಯೋಜನೆಯನ್ನು ಕೈಬಿಡಲಾಯಿತು.

ಜಲಾಶಯ

ಜವಾಯಿ ನದಿಯ ಜಲಾಶಯಕ್ಕೆ ಸುಮಾರು ಮೂರು ಕೋಟಿ ರೂಪಾಯಿಗಳ ವೆಚ್ಚವಾಗುವುದು. ಈ ಯೋಜನೆಯಲ್ಲಿ ಒಂದು ಜಲಾಶಯ, ಕಾಂಕ್ರೀಟಿನ ಅಣೆ ಕಟ್ಟು, ಎರಡು ಮಣ್ಣಿನ ಅಣೆಕಟ್ಟು, ಎರಡು ಪಾರ್ಶ್ವ ಗೋಡೆಗಳು ಮತ್ತು ನೀರಾವರಿ ಕಾಲುವೆಗಳ ನಿರ್ಮಾಣ ಕಾರ್ಯಗಳನ್ನು ಅಳವಡಿಸಲಾಗಿದೆ.

ಜೋಧಪುರಕ್ಕೆ ದಕ್ಷಿಣದಲ್ಲಿ ಸುಮಾರು ೧೦೦ ಮೈಲಿಗಳ ದೂರದಲ್ಲಿರುವ ಇರ್‌ರಿನ್ ಪುರದ ಬೆಟ್ಟಗಳ ನಡುವೆ ನದಿಯ ನೀರನ್ನು ೧೦ ಚದರ ಮೈಲಿಗಳಷ್ಟು ವಿಸ್ತಾರವಾದ ಜಲಾಶಯದಲ್ಲಿ ಸಂಗ್ರಹಿಸಲಾಗುವುದು. ಅಲ್ಲಿಂದ ಕಾಂಕ್ರೀಟಿನಿಂದ ಕಟ್ಟಲಾಗಿರುವ ಕಾಲುವೆಗಳಲ್ಲಿ ನೀರನ್ನು ಹಾಯಿಸಲಾಗುವುದು.

ಮುಖ್ಯವಾದ ಅಣೆಕಟ್ಟು

ಮುಖ್ಯವಾದ ಅಣೆಕಟ್ಟಿನ ಕೆಲಸ ಮುಗಿಯುತ್ತ ಬಂದಿದೆ ಇದು ಪ್ರವಾಹದ ವಿರುದ್ಧ ಕಟ್ಟಲಾದ ಅಣೆಕಟ್ಟು. ೬೫,೮೦೦ ಲಕ್ಷ ಘನ ಅಡಿ ನೀರಿನ ಒತ್ತಡವನ್ನು ಅದು ತಡೆಯಬಲ್ಲುದು. ಮಳೆ ಬೀಳದ ತಿಂಗಳುಗಳಲ್ಲಿ ಸುಮಾರು ೧೨೦ ಮೈಲಿಗಳಷ್ಟು ಉದ್ದದ ಕಾಲುವೆಗಳಿಗೆ ನೀರನ್ನು ಒದಗಿಸುವುದು. ಈ ಅಣೆಕಟ್ಟು ೧೧೪ ಅಡಿ ಎತ್ತರವೂ ೩,೦೩೦ ಅಡಿ ಅಗಲವೂ ಇದೆ. ೧೧೪ ಲಕ್ಷ ಘನ ಅಡಿಗಳಷ್ಟು ಒಟ್ಟು ಕಲ್ಲು ಕೆಲಸ ಅದಕ್ಕೆ ತಗಲುವುದು. ನದಿಯ ವಿಭಾಗದಲ್ಲಿ ೭೪೬ ಅಡಿ ಉದ್ದದ ತೂಬಿನ ವಿಭಾಗವಿದೆ. ಅದರಲ್ಲಿ ೧೩ ತೂಬುಗಳಿವೆ. ತೂಬುಗಳಲ್ಲಿ ೧೫೦,೦೦೦ ಕ್ಯೂಸೆಕ್ಸ್ ಪ್ರಮಾಣದಲ್ಲಿ ನೀರು ಹಾದು ಹೋಗಬಲ್ಲದು. ಈ ಅಣೆಕಟ್ಟಿನ ಕೆಳಗಡೆ ಇನ್ಸ್‌ಪೆಕ್ಷನ್ ಡ್ರೈನೇಜ್ ಗ್ಯಾಲರಿ ಇದೆ. ಇದರಿಂದ ಆಗಾಗ್ಗೆ ಸೋರುವಿಕೆ ಇತ್ಯಾದಿ ಪರೀಕ್ಷೆ ಮಾಡುವುದಕ್ಕೆ ಅನುಕೂಲವಾಗುವುದು.

ಮಣ್ಣಿನ ಏರಿಗಳು

ಮುಖ್ಯ ಅಣೆ ಕಟ್ಟಿನ ಉತ್ತರ ಮತ್ತು ದಕ್ಷಿಣ ಭಾಗಗಳ ಕಡೆಗೆ ಎರಡು 'ಸ್ಯಾಕಲ್' ಅಣೆ ಕಟ್ಟುಗಳಿವೆ. ಅದಕ್ಕೆ ಮುಂದೆ ಕಲ್ಲುಕೆಲಸವನ್ನು ಮಾಡಿದ್ದು ಹಿಂದೆ ಮಣ್ಣಿನ ಆಧಾರ ಮಾಡಿಕೊಡಲಾಗಿದೆ. ಈ ಏರಿಗಳು ಜಲಾಶಯದಿಂದ ನೀರು ಹೊರಬೀಳದಂತೆ ತಡೆದುನಿಲ್ಲಿಸುತ್ತವೆ. ಇವರಂತೆ ಎರಡು ಪಾರ್ಶ್ವ ಗೋಡೆಗಳು ೩,೫೦೦ರಿಂದ ೪,೦೦೦ ಅಡಿಗಳಷ್ಟು ಉದ್ದವಾಗಿದ್ದು ನೀರು ಅನಾಯಕವಾಗಿ ಪ್ರವಾಹಿಸದಂತೆ ತಡೆಯುತ್ತವೆ.

ಕಾಲುವೆಗಳು

ಸುಣ್ಣ ಮತ್ತು ಕಾಂಕ್ರೀಟ್ ಹಾಕಿರುವ ಮುಖ್ಯ ಕಾಲುವೆಯು ೧೪ ಮೈಲಿ ಉದ್ದವಿದೆ. ಅದರಲ್ಲಿ ೪೦೦ ಕ್ಯೂಸೆಕ್ಸ್‌ಗಳಷ್ಟು ಪ್ರಮಾಣ ನೀರು ಹಾಯುವುದು. ಈಶಾನ್ಯದಲ್ಲಿ ಶೇಕಡ ೯೦ರಷ್ಟು ಕೆಲಸ ಮುಗಿದು ಹೋಗಿದೆ.

ಇದಲ್ಲದೆ, ೪ ನೀರಾವರಿ ಕಾಲುವೆಗಳೂ ಅವುಗಳ ಕವಲುಗಳೂ ಇವೆ. ಅವುಗಳ ಒಟ್ಟು ಉದ್ದ ೧೨೦ ಮೈಲುಗಳು. ಸುಮಾರು ೧,೧೦,೦೦೦ ಎಕರೆಗಳಷ್ಟು ವಿಸ್ತಾರದ ಜಮೀನಿನಲ್ಲಿ ವರ್ಷಂಪ್ರತಿ-೪೬,೦೦೦ ಎಕರೆಗಳಷ್ಟು ವಿಸ್ತಾರದ ಜಮೀನಿನ ಸಾಗುವಳಿಗೆ ಅನುಕೂಲವಾಗುವುದು. ದೂರದ ಜಮೀನುಗಳಿಗೆ ನೀರು ಹಾಯಿಸುವುದಕ್ಕಾಗಿ ಸಿರೋಹಿ ಜಿಲ್ಲೆಯಲ್ಲಿ ಇನ್ನೊಂದು ನೀರು ಹಂಚುವ ಕಾಲುವೆಯನ್ನು ತೋಡುವ ವಿಷಯ ಪರಿಶೀಲನೆಯಲ್ಲಿದೆ.

ಹೆಚ್ಚು ಜನಶಕ್ತಿ

ಇದೀ ಕೆಲಸಕ್ಕಾಗಿ ೨,೦೦೦ ಕೆಲಸಗಾರರನ್ನೂ ಕೆಲವೇ ಯಂತ್ರಗಳನ್ನೂ ಉಪಯೋಗಿಸುತ್ತಿರಲಾಗಿದೆ. ಇಲ್ಲಿ ಉಪಯೋಗಿಸುತ್ತಿರುವ 'ಕ್ರೇನ್'ಗಳನ್ನು ಸಹ ಆ ಸ್ಥಳದಲ್ಲಿಯೇ ಪೈಪುಗಳ ಮತ್ತು ಎಂಜಿನ್‌ಗಳ ಜೋಡಣೆಯಿಂದ ತಯಾರಿಸಿಕೊಳ್ಳಲಾಗಿದೆ. ಸ್ಥಳದ ಜನರಿಗೆ ಹೆಚ್ಚು ಉದ್ಯೋಗವನ್ನೊದಗಿಸುವುದೇ ಇದರ ಉದ್ದೇಶ. ಈ ಅಣೆಕಟ್ಟಿಗೆ ಬಹುತೇಕವಾಗಿ ಸ್ಥಳದ ಸಾಮಾನು ಸರಂಜಾಮುಗಳನ್ನೇ ಉಪಯೋಗಿಸಲಾಗುತ್ತದೆ. ಅನತಿದೂರದ ಕೆಲವು ಹಳ್ಳಿಗಳಿಂದ ಸುಣ್ಣವನ್ನು ತರಿಸಲಾಗುತ್ತದೆ. ಜಲಾಶಯದ ದಡದಿಂದಲೇ ಮಣ್ಣನ್ನು ತೆಗೆದುಕೊಳ್ಳಲಾಗುತ್ತದೆ.

ಈ ಯೋಜನೆಗೆ ಇಂದು ಸ್ಥಳದ ಕೆಲಸಗಾರರನ್ನೇ ತೆಗೆದುಕೊಳ್ಳಲಾಗಿದೆ. ಸ್ಥಳದ ಸಾಮಾನನ್ನೇ ಬಳಸಲಾಗುತ್ತದೆ. ನಾಳೆ ಅದು ರಾಜಸ್ಥಾನದ ರೈತನ ಅನುಕೂಲಕ್ಕಾಗಿ ಹೆಚ್ಚು ನೀರನ್ನು ಸಂಗ್ರಹಿಸಲಾರಂಭಿಸುವುದು.

ಸುಗುಣವೆನಿಸಿದ ಅಭಿರುಚಿಯನ್ನು ಬೆಳೆಸಿಕೊಳ್ಳುವುದೇ ಲೇಸು. ನಿಸರ್ಗದಲ್ಲಿ ದ್ವಂದ್ವಮಯ ಪರಿಸ್ಥಿತಿಯು ಬಹುಕಾಲ ಬಾಳುವುದಿಲ್ಲ—ಒಂದೋ ಇದು, ಅಥವಾ ಇದು ಎಂಬ ರೀತಿಯೇ ತಲೆಎತ್ತಿ ನಿಲ್ಲುತ್ತದೆ. ಮಧ್ಯಮ ವರ್ಗ ನೊಂದು ಕುಳಿತಿರುವುದರಲ್ಲೇ ತೃಪ್ತಿಗೊಂಡರೆ, ಅದಕ್ಕೆ ಆ ಕಾಲ ದೂರವಿಲ್ಲ. ಮಧ್ಯಮ ವರ್ಗದ ಬುದ್ಧಿವಂತರು ಇದನ್ನು ಚೆನ್ನಾಗಿ ಮನಗಾಣಬೇಕು ಜನ್ಮ ಮೂಲಕವಲ್ಲ, ಕರ್ಮಮೂಲಕವೇ ಭಾವೀ ಮಧ್ಯಮ ವರ್ಗ ಹುಟ್ಟಿಕೊಳ್ಳುವುದೆಂಬ ದರ್ಶನವನ್ನು ಮನಗಾಣಬೇಕು. ರಾಜಾಜಿ ಹೇಳಿದಂತೆ, "ದೇಹಶ್ರಮ ಮಾಡುವುದರಲ್ಲಿಯೇ ನೈಪುಣ್ಯದಿಂದ ಸ್ಥಾನ ಗೌರವವನ್ನು ಹೊಂದಿದವರು, ಜ್ಞಾನ ಸಂಪಾದನೆ ಮಾಡಿದವರು, ಯೋಚಿಸಿ, ದಾರಿತೋರಿಸಿ, ಕಲಿಸಬಲ್ಲವರು, ಮುಂದಿನ ಮಧ್ಯಮ ವರ್ಗ." ಜಂಭ ಮತ್ತು ದುರಹಂಕಾರಗಳು ದೂರ ತೊಲಗಿ ಹೋಗಿ, ಮಧ್ಯಮ ವರ್ಗ ದುಡಿಯಲು ಸಿದ್ಧಗೊಂಡರೆ ಮಾತ್ರ ಬದುಕಿ ಉಳಿಯಬಲ್ಲುದೆಂದೇ ಈ ಮಾತಿನ ಮರ್ಮ.

—ಕಾರ್ತಿಕೇಯ

ಯಂ. ಗಣಪ್ಪಯ್ಯ ಎಂಡ್ ಸನ್ಸ್

ಆಯುರ್ವೇದಿಕ್ ಫಿಜಿಸಿಯನ್ಸ್, **ರಥಬೀದಿ, ಮಂಗಳೂರು** ಇವರ.

ಅಶೋಕಾರಿಷ್ಟ ಮತ್ತು ಮಾತ್ರೆ-ಹೆಂಗಸರ ಗರ್ಭಾಶಯ ರೋಗಗಳಿಗೆ ಸಂಜೀವನ. ಅಕಾಲ ಬಹಿಷ್ಠೆ. ಋತುಸ್ರಾವವು ಜಾಸ್ತಿಯಾಗಿಯೂ, ಕಡಿಮೆಯಾಗಿಯೂ ಹೋಗುವುದು, ಬಿಳಿಸೆರಗು, ಸಂತಾನ ಹೀನತೆ, ರಕ್ತಹೀನತೆ, ಋತುಶೂಲೆ ಮೊದಲಾದ ಸ್ತ್ರೀಯರಿಗೆ ಸಂಬಂಧಪಟ್ಟ ಎಲ್ಲಾ ಕಾಯಿಲೆಗಳನ್ನು ಗುಣಪಡಿಸುವುದು. ಬಾಟ್ಲಿ 1ರ ರೂ. 3-8-0.

ಗರ್ಭ ರಕ್ಷಕ- ಗರ್ಭಿಣಿಯರಿಗೆ ಅತ್ಯಂತ ಫಲಕಾರಿಯಾದ ಔಷಧಿ. ಚನಿದೋಷ, ಗರ್ಭಪಾತವಾಗುವಿಕೆ, ವಾಂತಿ, ಅರುಚಿ, ಅಶಕ್ತತೆ, ಮಲಬದ್ಧತೆ, ವಾಯು ಉಪದ್ರ, ಕೈಕಾಲು ಬಚ್ಚುವುದು ಇವುಗಳನ್ನೆಲ್ಲಾ ಹೋಗಲಾಡಿಸುವುದು. ಬಾಟ್ಲಿ 1ರ ರೂ. 3-8-0.

ಇವಲ್ಲದೆ ಇನ್ನೂ ಅನೇಕ ತರದ ಔಷಧಿಗಳು ನಮ್ಮಲ್ಲಿ ದೊರಕುತ್ತವೆ. ಕೆಟಲಾಗಿಗೆ ಬರೆಯಿರಿ. ಕಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ, ರೋಗಕ್ಕೆ ತಕ್ಕ ಔಷಧಿಯನ್ನು ರವಾನಿಸಬಹುದು.

ಭರ್ತ ಕಂಟ್ರೋಲ

[ಮಕ್ಕಳನ್ನು ಪಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವಸ ಸೇವಿಸಿದರೆ ಮುಂದೆ **ಖಂಡಿತಾ** ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ **ಗರ್ಭಪಾತವಾಗುವದು.**

ಬೆಲೆ-೧ ಬಾಟ್ಲಿಗೆ — **ರೂ. ೫-೮-೦** .... ಪೋಸ್ಟು ಖರ್ಚು **ರೂ. ೦-೧೪-೦**

—:ವಿಳಾಸ:—

ಹಾಲಪ್ಪಾ ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ.



(೨ನೇ ಪುಟದಿಂದ)

ಕಾಲದಿಂದ ತಿಬೇಟು ಸ್ವಾತಂತ್ರ್ಯವೊಂದಿದಂತಾಗಲಿಲ್ಲ—ತಿಬೇಟಿನ ಮೇಲೆ ಚೀನಕ್ಕೆ ಇರುವ ಅಧಿಕಾರದ ಸ್ವರೂಪವು ಕಮ್ಯುನಿಸ್ಟ ಪ್ರಭುತ್ವವು ಸ್ಥಾಪಿಸಲ್ಪಡುವವರೆಗೆ ನಿರ್ಣಯವಾಗದೇ ಉಳಿತ್ತು. ೧೯೧೪ರಲ್ಲಿ ಆದ ಆಂಗ್ಲ—ಟಿಬ್ಬೆ ಒಪ್ಪಂದದಲ್ಲಿ ತಿಬೇಟಿನಮೇಲೆ ಚೀನದ ಅಧಿನಾಯಕತ್ವಕ್ಕೆ ಮನ್ನಣೆ ನೀಡಿದ್ದರು. ಮೊದಲನೇ ಮಹಾ ಯುದ್ಧಕ್ಕೆ ಮುಂಚೆ ತಿಬೇಟಿನ ಪ್ರಶ್ನೆಯನ್ನು ಬಗೆಹರಿಸಲು ಸಿಮ್ಲಾದಲ್ಲಿ ಒಂದು ಪರಿಷತ್ತು ಸೇರಿತು. ಇಲ್ಲಿ ತಿಬೇಟಿಗೆ ಸ್ವಾಯತ್ತಾಧಿಕಾರವನ್ನು ಕೊಡಲು ಚೀನ ಒಪ್ಪಿಕೊಂಡಿತಲ್ಲದೆ, ಭಾರತಕ್ಕೆ ಹೊಂದಿರುವ ದಕ್ಷಿಣ ಪ್ರದೇಶಕ್ಕೆ ಸೈನ್ಯ ಅಥವಾ ಆಡಳಿತಗಾರರನ್ನು ಕಳಿಸುವುದಿಲ್ಲೆಂದೂ ಹೇಳಿತು. ಆದರೆ ಚೀನ ಹಾಗು ಕಾಶ್ಮೀರದ ಗಡಿಯ ಬಗ್ಗೆ ತಿಕ್ಕಾಟ ಮತ್ತೂ ಉಳಿದಿದ್ದರಿಂದ ವಿದ್ಯುಕ್ತವಾಗಿ ಈ ಒಡಂಬಡಿಕೆಯನ್ನು ಚೀನ ಮನ್ನಿಸಲಿಲ್ಲ. ಭಾರತದ ಮಟ್ಟಿಗೆ ಮಾತ್ರ ಈ ಒಡಂಬಡಿಕೆಯೇ ಈಗಲೂ ಉಳಿದಿದೆ—ಮತ್ತು ಈ ಪರಿಷತ್ತಿನಲ್ಲಿ ಸೂಚಿಸಿದಂತೆ, ಮ್ಯಾಕ್ ಮೋಹನ ರೇಖೆಯೇ ಅಸಾಂ ಹಾಗು ತಿಬೇಟುಗಳ ಗಡಿಯೆಂದು ಭಾರತ ಮನ್ನಿಸುತ್ತದೆ. ಹಾಗೆಂದು ಚೀನದ ಕೆಲವು ನಕಾಶೆಗಳಲ್ಲಿ ಇದನ್ನು ಲಕ್ಷಿಸಿದಂತೆ ಕಾಣುವುದಿಲ್ಲ. ಅಸಾಮಿನ ಕೆಲವು ಪ್ರದೇಶಗಳು ಚೀನದ ಅಂಗವೆಂದು ತೋರಿಸುವಂತೆ ಬ್ರಹ್ಮಪುತ್ರಾ ನದಿಗೆ ಸಮೀಪದಲ್ಲಿ ಭಾರತ—ಚೀನ ಗಡಿ ನಿರ್ದೇಶಿಸಲ್ಪಟ್ಟಿದೆ ಕಮ್ಯುನಿಸ್ಟರು ಇವನ್ನು "ಹಳೇ ನಕಾಶೆ"ಗಳೆಂದು ಹೇಳುತ್ತಿದ್ದರೂ ಹಳೆಯದನ್ನು ಸುಧಾರಿಸಲು ಇನ್ನೂ ವರೆಗೆ ಪ್ರಯತ್ನ ಮಾಡಿಲ್ಲ.

ಕಮ್ಯುನಿಸ್ಟರ ಅತೃಪ್ತಿ

ಎರಡು ಮಹಾ ಯುದ್ಧಗಳ ನಡುವಣ ಅವಧಿಯಲ್ಲಿ ತಿಬೇಟವು ಯಾವುದೇ ತರದ ಆತಂಕಗಳಿಲ್ಲದೆ ಸ್ವಾಯತ್ತಾಧಿಕಾರವನ್ನು ಅನುಭವಿಸಿತು—ಚೀನದಲ್ಲಿ ಅಂತಃಕಲಹಗಳು ಕಾಣಿಸಿ ಕೊಂಡುದರಿಂದ ತಿಬೇಟಿನ ಕುರಿತು ಆಲೋಚಿಸಲು ಅಲ್ಲಿಯ ಸರಕಾರಕ್ಕೆ ಸಾಧ್ಯವಾಗಲಿಲ್ಲ ದ್ವಿತೀಯ ಮಹಾ ಯುದ್ಧದ ಬಳಿಕ ಚಿಯಾಂಗರ ಸರಕಾರವು ಪತನ ಹೊಂದಿ. ಚೀನದಲ್ಲಿ ಕಮ್ಯುನಿಸ್ಟರು ಅಧಿಕಾರಕ್ಕೆ ಏರಿದಾಗ ದಲಾಯಿಲಾಮ ಹೆದರಿಕೊಂಡನು, ಕಮ್ಯುನಿಸ್ಟರ ವರ್ಚಸ್ಸು ತಿಬೇಟದ ಮೇಲೆ ಬೀಳಲಾಗದೆಂದು ಭಾವಿಸಿ, ಅವನು ಚೀನದ ಪ್ರತಿನಿಧಿಗಳನ್ನು ತಿಬೇಟಿನಿಂದ ಓಡಿಸಿದನು ಇದು ಕಮ್ಯುನಿಸ್ಟ ಹುಲಿಯನ್ನು ಕೆಣಕಿತು. ತಿಬೇಟವೊಂದೇ ಇಂತಹ ಸಾಹಸ ಮಾಡಬಾರದೆಂದು ಕಮ್ಯುನಿಸ್ಟರು ಭಾವಿಸಿ, ಆಗ ತಾನೇ ಸ್ವತಂತ್ರಗೊಂಡಿದ್ದ ಭಾರತ ಸರಕಾರದ ಅಂಗ ಇದಲ್ಲದೆಯೆಂದು ಆರೋಪಿಸಿದರು. ಅಲ್ಲದೆ ತಿಬೇಟನ್ನು "ವಿಮೋಚನೆ"ಗೊಳಿಸುವ ಪ್ರಚಾರವನ್ನು ಬಿರದಿಂದ ಮಾಡಹತ್ತಿದರು ಇದನ್ನು ಕಂಡ ಭಾರತವು ತನ್ನ ಗಡಿಪ್ರದೇಶವನ್ನು ಭದ್ರವಾಗಿಡಲು ಕ್ರಮಗಳನ್ನು ತೆಗೆದುಕೊಂಡಿತು ೧೯೪೯ನೇ ಆಗೋಸ್ತು ತಿಂಗಳಲ್ಲಿ ಭೂತಾನದೊಡನೆ ಒಡಂಬಡಿಕೆ ಮಾಡಿಕೊಂಡು, ವಿದೇಶ ಸಂಬಂಧವನ್ನು ತನ್ನ ಕೈಗೆ ಸೇರಿಸಿಕೊಂಡಿತು ಸಿಕ್ಕಿಮದ ಅಶಾಂತ ಪರಿಸ್ಥಿತಿಯನ್ನು ನಿವಾರಿಸಿ, ಅದರ ವಿದೇಶ ಸಂಬಂಧ, ಸಂರಕ್ಷಣಾ ವ್ಯವಸ್ಥೆ ಮತ್ತು ಸಂಪರ್ಕ ಸಾಧನಗಳನ್ನು ವಹಿಸಿಕೊಂಡಿತು. ನೇಪಾಳದಲ್ಲಿ ತ್ರಿಭುವನ ಅರಸರ ಪಲಾಯನದಿಂದ ಉದ್ಭವಿಸಿದ ಪರಿಸ್ಥಿತಿಯನ್ನು ಹತೋಟಿಗೆ ತರಲು ನೆರವಾಯಿತಲ್ಲದೆ, ಅದರೊಡನೆ ಮೈತ್ರಿಯನ್ನು ದೃಢಗೊಳಿಸಿತು ಕಮ್ಯುನಿಸ್ಟ ಚೀನಕ್ಕೆ ಭಾರತ ಸರಕಾರವು ಮನ್ನಣೆಯನ್ನು ಕೊಟ್ಟದ್ದಲ್ಲದೆ, ತಿಬೇಟದ ಪ್ರಶ್ನೆಯನ್ನು ಶಾಂತವಾಗಿ ಬಗೆಹರಿಸಲು ಸಂಧಾನನಡೆಸುವುದಕ್ಕೆ ಬೆಂಬಲ ನೀಡಿತ ನೆಹರೂರವರು ರಾಷ್ಟ್ರಕೂಟ ಪ್ರಧಾನ ಮಂತ್ರಿಗಳ ಪರಿಷತ್ತಿಗೆಂದು ಲಂಡನ್ನಿಗೆ ಹೋಗಿದ್ದಾಗ ೧೯೪೯ನೇ ನವಂಬರದಲ್ಲಿ ತಿಬೇಟದ ಕುರಿತೊಂದು ಹೇಳಿಕೆಕೊಟ್ಟು ತಿಬೇಟದ ಸ್ವಾಯತ್ತಾಧಿಕಾರವನ್ನೂ ಅದರ ಮೇಲೆ ಚೀನದ ಅಧಿನಾಯಕತ್ವವನ್ನೂ ಭಾರತ ಮನ್ನಿಸುವುದಾಗಿ ಸಾರಿದರು ಆದರೆ ಇವಾವುದೂ ಕಮ್ಯುನಿಸ್ಟರನ್ನು ತೃಪ್ತಿಗೊಳಿಸಲಿಲ್ಲ.

ಜಾಗರೂಕ ಭಾರತ

೧೯೫೦ನೇ ಅಕ್ಟೋಬರದಲ್ಲಿ ಚೀನದೊಡನೆ ಮಾತುಕತೆಗಳನ್ನು ನಡೆಸಲು ಭಾರತದ ಮಾರ್ಗವಾಗಿ ತಿಬೇಟನ ಶಿಷ್ಟಮಂಡಳ ಹೊರಟಿತು ಆದರೆ ಅದೇ ಸಮಯಕ್ಕೆ ಚೀನೀ ಸೈನ್ಯವು ತಿಬೇಟದ ಮೇಲೆ ನುಗ್ಗಿತು ಇದು ಸರಿಯಲ್ಲವೆಂದು ಹೇಳಿದ ಭಾರತಕ್ಕೆ ಪೇಕಿಂಗಿನಿಂದ ಕಿಡಿಯುಗುಳುವ ಮಾರೋತ್ತರ ಬಂತು. ತಮ್ಮ ಆಂತರಿಕ ಪ್ರಶ್ನೆಯಲ್ಲಿ ಹಸ್ತಕ್ಷೇಪ ಮಾಡಬಾರದೆಂದು ಕಮ್ಯುನಿಸ್ಟರು ಭಾರತವನ್ನು ಎಚ್ಚರಿಸಿದರು! ಆದರೆ ನೆಹರೂರವರು ಪಾರ್ಲಿಮೆಂಟಿನಲ್ಲಿ ಹೇಳಿಕೆ ಕೊಡುತ್ತಾ ಯಾರಿಂದ ತಿಬೇಟನ್ನು "ವಿಮೋಚನೆ"ಗೊಳಿಸಲಾಗುವುದೋ ಎಂದು ಉದ್ಗರಿಸಿದರು. ಇದು ನಿಜವಾದ ಸಂಗತಿ—ತಿಬೇಟು ಯಾರದು ಎಂಬ ಕೂಟ ಪ್ರಶ್ನೆಗೆ ಯಾರೂ ಉತ್ತರಿಸಲಿಲ್ಲ. ಸಂಯುಕ್ತರಾಷ್ಟ್ರ ಸಂಘದಲ್ಲಿಯಾದರೂ ಇದರ ತೀರ್ಮಾನವಾಗಲೆಂದು ಬಯಸಿ ದಲಾಯಿಲಾಮಾ ದೂರುಕೊಂಡೊಯ್ದಾಗ, ಯಾರೂ, ಭಾರತವೂ, ಅವರಿಗೆ ಬೆಂಬಲಕೊಡಲಿಲ್ಲ. ಕೊರಿಯಾದ ಯುದ್ಧದಲ್ಲಿ ಆಗತಾನೇ ಚೀನೀ ಕಮ್ಯುನಿಸ್ಟರು ಪ್ರವೇಶಿಸಿದ್ದರಿಂದ ಭಾರತವು ತಿಬೇಟಿಗೆ ಬೆಂಬಲಕೊಡುವುದು ಅಪಾಯಕರವೆಂದು ನೆಹರೂ ಭಾವಿಸಿದರು ಇದರಿಂದ ಯುದ್ಧಕ್ಷೇತ್ರದ ವ್ಯಾಪ್ತಿ ಹೆಚ್ಚಾಗಬಹುದೆಂದವರು ತಿಳಿದು, ತಿಬೇಟನ್ನು ಅದರಷ್ಟಕ್ಕೆ ಬಿಟ್ಟರು. ೧೯೫೧ನೇ ಮೇಯಲ್ಲಿ ಚೀನ ಹಾಗು ತಿಬೇಟ ಸರಕಾರಗಳು ಮಾತುಕತೆ ನಡೆಸಿ ಕಮ್ಯುನಿಸ್ಟ ಸೈನಿಕ ಕೇಂದ್ರವನ್ನೂ ತಳಿತ ಸಮಿತಿಗಳನ್ನೂ ತಿಬೇಟದಲ್ಲಿ ನೆಲೆಗೊಳಿಸಲಾಯಿತು ವಿದೇಶ ವ್ಯವಹಾರ, ಸಂರಕ್ಷಣ ವ್ಯವಸ್ಥೆ ಮತ್ತು ಸಂಪರ್ಕ ಸಾಧನಗಳು ಚೀನದ ಕೈಗೆ ಸೇರಿದವು. ಹೀಗೆ ಮಂಚೂ ಅರಸರು ಶತಮಾನಗಳಿಂದ ಸಾಧಿಸಲಾಗದ ಸಾರ್ವಭೌಮಾಧಿಕಾರವನ್ನು ಕಮ್ಯುನಿಸ್ಟರು ಅಲ್ಪಾವಧಿಯಲ್ಲಿಯೇ ತಿಬೇಟನ ಮೇಲೆ ಸ್ಥಾಪಿಸಿದರು ತಿಬೇಟದಮೇಲೆ ಚೀನದ ಆಕ್ರಮಣ ನಡೆದರೂ ಅದರಿಂದ ಭಾರತದಮೇಲೆ ದುಷ್ಪರಿಣಾಮವಾಗಲಿಲ್ಲವೆಂಬುದೇ ನಮಗೆ ಸಂತೋಷ ತರುವ ವಿಚಾರ— ಭಾರತವನ್ನು ನೋಡಲು ಬೆದರಿಸುತ್ತಿದ್ದ ಕಮ್ಯುನಿಸ್ಟರು ಈಗ ಸೌಮ್ಯ ವರ್ತನೆಯನ್ನು ಇಟ್ಟುಕೊಂಡಂತೆ ಕಾಣುತ್ತದೆ. ಕೊರಿಯಾದಲ್ಲಿ ಅವರಿಗೊದಗಿದ ಮಾನಭಂಗವೂ ವಿದೇಶ ವ್ಯವಹಾರದಲ್ಲಿ ಭಾರತ ಪ್ರದರ್ಶಿಸಿದ ಮುನ್ನೋಟವೂ ಕಮ್ಯುನಿಸ್ಟರ ಕಣ್ಣನ್ನು ತೆರೆಯಿಸಿತು ಆದರೆ ಇಷ್ಟರಿಂದಲೇ ನಾವು ನಿಶ್ಚಿಂತೆಯ ಸುಖ ನಿದ್ರೆ ಮಾಡಲಾರೆವು—ತಿಬೇಟಿನಲ್ಲಿ ಆಶ್ರಯ ಹೊಂದಿದ ಕಮ್ಯುನಿಸ್ಟರ ಪ್ರಭಾವವು ಗಡಿವಲಯಗಳಲ್ಲಿ, ಹಾಗು ನೇಪಾಲ, ಭೂತಾನ, ಮತ್ತು ಸಿಕ್ಕಿಮ ಪ್ರದೇಶಗಳಲ್ಲಿ ಬೀಳದಂತೆ ಯೋಗ್ಯ ಕ್ರಮಗಳನ್ನು ಕೈಗೊಳ್ಳುವುದು ಅಗತ್ಯ. ಕಾರಣ ಭಾರತ ಸರಕಾರವು ಪ್ರಜಾಪ್ರಭುತ್ವವು ಕಮ್ಯುನಿಸ್ಟ ಆಡಳಿತೆಗಿಂತ ಸುಖಕರವೆಂಬುದನ್ನು ನಿತ್ಯ ವ್ಯವಹಾರದಲ್ಲಿ ಸ್ಪಷ್ಟಗೊಳಿಸುವ ಕ್ರಮಗಳನ್ನು ಈ ಪ್ರದೇಶದಲ್ಲಿ ವಿಳಂಬವಿಲ್ಲದ ಕಾರ್ಯರೂಪಕ್ಕೆ ಇಳಿಸಿತು, ಮತ್ತು ಪ್ರಜಾಪ್ರಭುತ್ವದ ಅತಿ ಸುಂದರ ಮುಖವನ್ನು ಬೆಳಗುವುದರಲ್ಲಿ ಸಾಕಷ್ಟು ಯಶಸ್ಸನ್ನೂ ಸಂಪಾದಿಸಿತು.

(ಆಧಾರದಿಂದ.)

ಸ್ವೀಕಾರ—ವಿಮರ್ಶೆ

ಪ್ರೇಮಚಂದರ ಕೆಲವು ಕತೆಗಳು—

ಅನುವಾದಕರು: ಕೆ ಆರ್ ಉಡುಪ ಪ್ರಕಾಶಕರು ಇಂಡಿಯನ್ ಇಂಡಸ್ಟ್ರೀಯಲ್ಸ್ ಎಂಡ್ ಏಜನ್ಸೀಸ್, ಕಾರ್ನಾಡ್ ಸದಾಶಿವ ರಾವ್ ರಸ್ತೆ, ಮಂಗಳೂರು—೧ ಬೆಲೆ ರೂ ೧—೪—೦

ಸಾಹಿತ್ಯ ಸಾಮ್ರಾಟರೆಂದು ಹಿಂದೀ ಸಾಹಿತ್ಯಾರಾಧಕರು ಪ್ರಶಂಸಿಸುವ ಪ್ರೇಮಚಂದರು ಸಣ್ಣ ಕತೆಗಳಲ್ಲಿ ತಮ್ಮ ಅಸಾಧಾರಣ ನೈಪುಣ್ಯವನ್ನು ಪ್ರಕಟಿಸಿರುವರು—ಅವರು ಮುನ್ನೂರಕ್ಕೂ ಹೆಚ್ಚು ಸಣ್ಣ ಕತೆಗಳನ್ನು ಬರೆದಿರುವರು ಅವುಗಳಲ್ಲಿ ಆರು ಸಣ್ಣ ಕತೆಗಳನ್ನು ಆಯ್ದು ಶ್ರೀ ಉಡುಪರು ಕನ್ನಡದ ಓದುಗರ ಮುಂದೆ ಇಟ್ಟಿದ್ದಾರೆ ಭಾರತೀಯ ಸಾಹಿತ್ಯ ರೂಪುಗೊಳ್ಳಬೇಕಾದರೆ, ಹಿಂದೀ ಹಾಗೂ ಇತರ ನೆರೆಯ ಭಾಷೆಗಳಲ್ಲಿ ನಿರ್ಮಾಣಗೊಂಡ ಸಾಹಿತ್ಯ ಕೃತಿಗಳ ಜ್ಞಾನ ನಮಗಿರಬೇಕಾದುದು ಅಗತ್ಯವಿದ್ದಷ್ಟೇ ಅನಿವಾರ್ಯವೂ ಹೌದು. ಈ ದೃಷ್ಟಿಯಿಂದ ಪ್ರೇಮಚಂದರ ಕೃತಿಗಳ ರಸಾಸ್ವಾದನೆಯನ್ನು ಕನ್ನಡಿಗರು ಮಾಡಿಕೊಳ್ಳುವುದು ಅಪೇಕ್ಷಣೀಯ ಈ ಸಂಗ್ರಹದಲ್ಲಿ ಅನುವಾದಿಸಲಾದ ಆರು ಕತೆಗಳು ಭಿನ್ನ ಭಿನ್ನ ಅಭಿರುಚಿಯ ಜನರಿಗೂ ಒಪ್ಪುವಂತಿವೆ. ಸುಧಾರಣಾ ಮನೋಭಾವನನ್ನು ವಾಸ್ತವಿಕತೆಯ ದೃಷ್ಟಿಯನ್ನೂ ಈ ಕೃತಿಗಳು ಸ್ಪಷ್ಟವಾಗಿ ಪ್ರಕಟಗೊಳಿಸುತ್ತವೆ ವ್ಯಕ್ತಿ ಮತ್ತು ಸಮಾಜದ ಹುಳುಕನ್ನು ದೌರ್ಬಲ್ಯವನ್ನೂ ತೋರಿಸಿಕೊಟ್ಟು, ಏಳಿಗೆಯ ಮಾರ್ಗವನ್ನು ಉದಾತ್ತ ರೀತಿಯಿಂದ ಈ ಕತೆಗಳು ನಿರ್ದೇಶಿಸುತ್ತವೆ ಎಲ್ಲರ ಅನುಭವಕ್ಕೆ ಬರುವ ಸಾಮಾನ್ಯ ವಸ್ತುಗಳನ್ನು ಆಯ್ದುಕೊಂಡೂ ಹೃದಯ ಸ್ಪರ್ಶಿಯಾಗುವಂತೆ ಹಾಗು ಕಲಾನುಭವವಾಗುವಂತೆ ಬರೆಯುವ [illegible] ಚಂದರ ಚಮತ್ಕಾರವನ್ನು ಈ ಕತೆ[illegible] [illegible] ಈ ಸಂಗ್ರಹದಲ್ಲಿರು [illegible] ವ ಕತೆಗಳು—

[illegible]



ಋತುಸ್ರಾವ ನಿಂತಿತು

"ಕುಮಾರಿ" ಬಿಲ್ಲೆಗಳನ್ನು ಉಪಯೋಗಿಸಿದರೆ [illegible] ಋತುಸ್ರಾ[illegible]ದು, ಹತೋಟಿಗೆ [illegible] ಈ [illegible] ಸೇವನೆಯಿಂದ [illegible] ದು. [illegible] ರಾರು ಮುಂದೆ ಮಾತ್ರೆ ಗುಣವಾಗಿದೆ— ಬೆಲೆ ರೂ 3/, ಸ್ಪೆಶಲ್ ರೂ 5- ಅಧಿಕಾಧಿಕ ಸ್ಪೆಶಲ್ ರೂ. ೭-[ವಿ ಪಿ ಖರ್ಚು ಪ್ರತ್ಯೇಕ]

Mrs. P. DEVEE, L.DS (V.I)
CALCUTTA 40
ಸ್ಟಾಕಿಸ್ಟರು ಶಬಾ ಕಂಪೆನಿ, ಮಂಗಳೂರು

ಸ್ವೀಕಾರ—ವಿಮರ್ಶೆ

(ಹಿಂದಿನ ಪುಟದಿಂದ)

ಮನ್ಮಥ ವಿಜಯಂ—

ಸಂಪಾದಕರು: ಎಚ್. ಶೇಷ ಅಯ್ಯಂಗಾರ್. ಪ್ರಕಾಶಕರು: ಸರಕಾರದ ಪುರಾತನ ಹಸ್ತಪ್ರತಿಕೆಗಳ ಭಂಡಾರ, ಮದ್ರಾಸು ಬೆಲೆ: ರೂ. ೨—೧೨—೦.

ಮದ್ರಾಸು ಸರಕಾರದವರು ಪುರಾತನ ಹಸ್ತಪ್ರತಿಗಳನ್ನು ಸಂಶೋಧಿಸಿ ಪ್ರಕಟಿಸುವ ಸ್ತುತ್ಯ ಹಾಗು ಆದರಣೀಯವಾದ ಉಪಕ್ರಮವನ್ನು ಕೈಗೊಂಡಿರುವುದು ಎಲ್ಲರಿಗೂ ತಿಳಿದಿದೆ—"ಮನ್ಮಥ ವಿಜಯಂ" ಎಂಬ ಈ ಕನ್ನಡ ಗ್ರಂಥವು ಹೀಗೆ ಪ್ರಕಟವಾದ ಪುಸ್ತಕಗಳಲ್ಲಿ ಈಚಿನದು. ಸರಕಾರದ ವಶದಲ್ಲಿ ಒಂದೇ ಒಂದು ಮೂಲ ಮಾತೃಕೆ ಇದ್ದು, ಅದರಲ್ಲಿ ಸುಸಿ ಹುಳಗಳ ಬಾಯಿಗೆ ಬಿದ್ದು ಕೆಲವು ಪುಟಗಳು ಹಾಳಾಗಿ ಹೋಗಿವೆ. ಇಷ್ಟಾದರೂ ಗ್ರಂಥವು ಸಮಗ್ರ ರೂಪದಲ್ಲಿಯೇ ದೊರೆತಿರುವುದು ಸಂತೋಷದ ವಿಚಾರ. ತುಲನೆ ಮಾಡಿ ನೋಡಲು ಗ್ರಂಥದ ಇನ್ನೊಂದು ಪ್ರತಿಯು ಸಿಗುತ್ತಿಲ್ಲವಾದ ಕಾರಣ ಅನಿವಾರ್ಯವಾಗಿ ಗ್ರಂಥ ಪಾತಗಳೂ ಅಸ್ಪಷ್ಟ ಪಾಠಗಳೂ ಉಳಿದಿರುತ್ತವೆ. ಈ ಪುಸ್ತಕವು ಚಂಪೂ ಜಾತಿಯಲ್ಲಿ ಬರೆಯಲಾಗಿದ್ದರೂ ಗದ್ಯಗಳು ಅಷ್ಟು ಹೆಚ್ಚಿಗಿರುವುದಿಲ್ಲ. ಕಂದ ವೃತ್ತಗಳೇ ಹೆಚ್ಚಾಗಿದ್ದು ಅವುಗಳು ಸಾಧಾರಣ ಸರಳವಾಗಿಯೇ ಇವೆ. ಇದನ್ನು ಬರೆದ ಕವಿಯು ಮಲ್ಲನೆಂದೂ ಲಕ್ಷಣನೆಂದೂ ಬೇರೆ ಬೇರೆ ಹೆಸರುಗಳಿಂದ ತನ್ನನ್ನು ಕರೆದು ಕೊಂಡಿರುವನು. ಸಂಪಾದಕರು ಮಲ್ಲನೆಂಬುದೇ ಕವಿಯ ಹೆಸರೆಂದೂ ಲಕ್ಷ್ಮಣನೆಂಬುದು ಅವನು ತನಗಿಟ್ಟುಕೊಂಡ ಬಿರುದಾಗಿರಬೇಕೆಂದೂ ತರ್ಕಿಸಿರುವರು. ಕಾವ್ಯಾರಂಭದಲ್ಲಿ ಈತನು ೧೨೬೦ನೇ ಇಸವಿಯ ಸುಮಾರಿನಲ್ಲಿದ್ದ "ಶಬ್ದಮಣಿದರ್ಪಣ"ದ ಕರ್ತೃ ಕೇಶಿರಾಜನನ್ನು ನುತಿಸಿರುವುದರಿಂದ ಇವನು ಅದಕ್ಕೂ ಈಚಿನ ಕವಿಯೆಂದೂ ವಿದಿತವಾದರೂ ಈ ಗ್ರಂಥದಲ್ಲಿ ಕೆಲವು ಹೊಸಗನ್ನಡ ಪದಗಳ ಪ್ರಯೋಗ ಕಂಡುಬರುವುದರಿಂದ ಹೊಸಗನ್ನಡವು ವಿಶೇಷವಾಗಿ ಬಳಕೆಗೆ ಬಂದ ಪದಿನಾಲ್ಕನೇ ಶತಮಾನದ ಕಾಲದಲ್ಲಿಯೇ ಇವನು ಬದುಕಿರಬೇಕೆಂದೂ ಸಂಪಾದಕರ ಅಭಿಪ್ರಾಯ. ಕಾಮಶಾಸ್ತ್ರದ ಕುರಿತು ಅಧಿಕಾರ ಪೂರ್ಣ ಬರೆಯಲಾದ ಈ ಗ್ರಂಥದಲ್ಲಿ ಸಂಸ್ಕೃತದಲ್ಲಿರುವ ಕೊಕ್ಕೋಕನ "ರತಿರಹಸ್ಯ"ವನ್ನು ಸಾಮಾನ್ಯವಾಗಿ ಅನುಸರಿಸಿದಂತೆ ಕಾಣುತ್ತದೆ—ಆದರೂ ಕೊಕ್ಕೋಕನ ಗ್ರಂಥದಲ್ಲಿಲ್ಲದ ಕೆಲವು ವಿಷಯಗಳು ಇದರಲ್ಲಿ ತೋರಿಬರುತ್ತವೆ. ಹದಿನೆಂಟು ಆಶ್ವಾಸಗಳಲ್ಲಿ ಕಾಮಕಲೆಯ ತಿರುಳನ್ನು ಹೊರಗೆಡಹುವ ಪ್ರಯತ್ನವನ್ನು ಕವಿ ಮಾಡಿರುವನು. ಶಾಸ್ತ್ರೀಯ ವಿವೇಚನಾ ದೃಷ್ಟಿಯಿಂದ ವ್ಯಾಪಕವೂ ಉಪಯುಕ್ತವೂ ಆದ ಈ ಗ್ರಂಥವನ್ನು ಪ್ರಕಟಿಸಿ, ಸರಕಾರವು ಕನ್ನಡಿಗರಿಗೆ ತುಂಬ ಉಪಕಾರವನ್ನು ಮಾಡಿರುತ್ತದೆ.

ಇಗ್ಗಪ್ಪ ಹೆಗಡೆಯ ವಿವಾಹ ಪ್ರಹಸನ—

ಬರೆದವರು: ಹವ್ಯಕ ಓರ್ವ ವಿದ್ವಾಂಸರೊಬ್ಬರು. ಪ್ರಕಾಶಕರು: ಲಿಂಗೇಶ ಶರ್ಮಾ, ನೆಲ್ಲೀಕೇರಿ, ಕುಮಟಾ. ಬೆಲೆ: ಎಂಟಾಣೆ.

ಕನ್ನಡದಲ್ಲಿ ಪ್ರಹಸನಗಳು ಕಳೆದ ಎರಡು ಮೂರು ದಶಕಗಳಿಂದ ಈಚೆಗೆ ಕಾಣಿಸಿಕೊಂಡವು. ದಿವಂಗತ ಕೈಲಾಸಂ ಮುಂತಾದವರು ಈ ಕ್ಷೇತ್ರದಲ್ಲಿ ಹೆಚ್ಚಿನ ಪರಿಶ್ರಮದಿಂದ ದುಡಿದರು. ಆದರೆ ಉತ್ತರಕನ್ನಡ ಜಿಲ್ಲೆಯ ಹವಿಗರು ಹಾಗು ಆದವರು ಕೊಳ್ಳಗಳಿರುವ ಪ್ರದೇಶಗಳಲ್ಲೆಲ್ಲ ಜೀವಿಸುತ್ತಿರುವ ಹವ್ಯಕ ಬ್ರಾಹ್ಮಣರ ಮನೆ ಮಾತಿನಲ್ಲಿಯೇ ಆ ಕಾಲದಲ್ಲಿ ಸಮಾಜದಲ್ಲಿ ರೂಢವಾಗಿದ್ದ ಕನ್ಯಾವಿಕ್ರಯ ಪದ್ಧತಿಯನ್ನು ಟೀಕಿಸಿ, ಅದರ ಅನರ್ಥ ಪರಿಣಾಮಗಳನ್ನು ಎತ್ತಿ ತೋರಿಸುವ ಪ್ರಹಸನವೊಂದನ್ನು ಬರೆದು, ೧೮೮೭ರಷ್ಟು ಹಿಂದೆ ಪ್ರಕಟಿಸಿದ್ದರೆಂದರೆ, ನಾವು ಬೆಪ್ಪು ಬೆರಗಾಗುತ್ತೇವೆ! ಅಂದು ಮುಂಬಯಿಯಲ್ಲಿ ಭಾರತೀ ಛಾಪಖಾನೆಯನ್ನು ನಡೆಸುತಿದ್ದ ಕರ್ಕಿಯ ಸೂರಿ ವೆಂಕಟರಮಣ ಶಾಸ್ತ್ರಿಗಳು ಈ ಪ್ರಹಸನವನ್ನು (ಬರೆದು) ಪ್ರಕಟಿಸಿದರೆನ್ನುವುದು ದೊಡ್ಡ ಸಾಹಸ. ಸಾಹಿತ್ಯ ದೃಷ್ಟಿಯಿಂದ ನೋಡಿದರೆ ಇದೊಂದು ಉತ್ತಮ ಪ್ರಹಸನ. ಕನ್ನಡದ ಮುನ್ನಡೆಗೆ ಸಾಕ್ಷ್ಯಕೊಡುವ ಗ್ರಂಥ. ಇಲ್ಲಿ ವ್ಯಕ್ತಗೊಂಡ ಸಾಮಾಜಿಕ ಪ್ರಜ್ಞೆ ಬಹಳ ಹಿರಿತವಿದ್ದಂತೆಯೇ ವಿಸ್ಮರಣವೂ ಇರುತ್ತದೆ. ಹವ್ಯಕ ಸಮಾಜದಲ್ಲಿ ಇಂದು ಕನ್ಯಾವಿಕ್ರಯ ಮುಂತಾದ ದುಷ್ಟ ಪದ್ಧತಿಗಳು ಇಲ್ಲವಾದರೂ—ಇದ್ದ ಆ ಕಾಲದಲ್ಲಿ ಅವುಗಳ ವಿರುದ್ಧ ಪ್ರಚಾರ ಮಾಡಲು ಈ ಪ್ರಹಸನ ಉಚಿತ ಸಾಧನವಾಗಿದ್ದೀತು. ಸರ್ವಥಾ ಅಲಭ್ಯವಾಗಿದ್ದ ಈ ಉತ್ತಮ ಗ್ರಂಥವನ್ನು ಪುನರ್ಮುದ್ರಿಸಿ, ಪ್ರಕಟಿಸಿ, ಇಂದಿನ ತಲೆಮಾರಿನವರಿಗೆ ಒದಗಿಸಿಕೊಟ್ಟ ಲಿಂಗೇಶ ಶರ್ಮರಿಗೆ ಧನ್ಯವಾದಗಳು.

ಲಘು ಪರಿಚಯ

❀ ವಡಭಾಂಡೇಶ್ವರ ಶ್ರೀ ಗೀತಾ ಸೇವಾ ಸಮಿತಿಯ ಪರವಾಗಿ ಶ್ರೀ ವಿ. ಎಸ್. ವಾಸುದೇವ ಶಾಸ್ತ್ರಿ (೧೯, ಲಿಂಕುರೋಡು, ಮಲ್ಲೇಶ್ವರಂ, ಬೆಂಗಳೂರು) ಇವರು "ಶ್ರೀ ಭಗವದ್ಗೀತಾ ಸಂಗ್ರಹ" ಎಂಬ ನಾಲ್ಕಾಣೆ ಬೆಲೆಯ ಚಿಕ್ಕ ಪುಸ್ತಕವನ್ನು ಪ್ರಕಟಿಸಿದ್ದಾರೆ. ಇದರಲ್ಲಿ ಗೀತೆಯಿಂದ ಆಯ್ದ ೩೨ ಶ್ಲೋಕಗಳ ಸಮೂಲ ಅನುವಾದವನ್ನು ಕಾಣಬಹುದು.

ಬೇಂಕಿನ ಬೆಳವಣಿಗೆ

	1933	1943	1953
ಅಧಿಕೃತ ಭಂಡವಾಳ	5,00,000	5,00,000	20,00,000
ತೆತ್ತ ಭಂಡವಾಳ	12,000	1,90,000	9,00,000
ಕ್ಷೇಮನಿಧಿ	—	12,000	2,00,000
ಒಟ್ಟು ವಹಿವಾಟು	77,000	15,60,000	60,30,000

ಕಾಲಾವಧಿ ಠೇವಣಾತಿ— 3 ತಿಂಗಳಿಗೆ $3\frac{1}{2}\%$ ಬಡ್ಡಿ.

ಕಾಯಂ ಠೇವಣಾತಿ— 1 ತಿಂಗಳಿಂದ 24 ತಿಂಗಳ ವಾಯಿದೆ ವರೆಗೆ ಸ್ವೀಕರಿಸಲ್ಪಡುವುದು. 24 ತಿಂಗಳಿಗೆ—$3\frac{3}{4}\%$ ಬಡ್ಡಿ.

ರೂಪಾಯಿ ಹತ್ತು ಸಾವಿರ ವ, ಮೇಲಿನ ಠೇವಣಾತಿಗೆ 4% ಬಡ್ಡಿ ಕೊಡಲಾಗುವುದು.

ರೂಪಾಯಿ ಐವತ್ತು ಸಾವಿರ ವ, ಮೇಲಿನ ಠೇವಣಾತಿಗೆ $4\frac{1}{4}\%$ ಬಡ್ಡಿ ಕೊಡಲಾಗುವುದು.

ವಿಜಯ ಕೇಶ್ ಸರ್ಟಿಫಿಕೇಟು— ಮೂರು ವರುಷದ ಅವಧಿ = $4\frac{1}{2}\%$ ಬಡ್ಡಿ.

ಸಾಲ ಸವಲತ್ತುಗಳಿಗೆ ಬೇಕಾದ ಅನುಕೂಲತೆಗಳನ್ನು ವಿಳಂಬವಿಲ್ಲದೆ ಒದಗಿಸಲಾಗುವುದು.

ಹೆಚ್ಚಿನ ಮಾಹಿತಿಗೆ ನಿಮ್ಮ ಸಮೀಪದ ನಮ್ಮ ಏಜಂಟರೊಡನೆ ವಿಚಾರಿಸಿರಿ. ಜಿಲ್ಲೆಯ 10 ಕೇಂದ್ರಗಳಲ್ಲಿಯೂ, ಮಡಿಕೇರಿ ಮತ್ತು ಮುಂಬಾಯಿಯಲ್ಲಿಯೂ ನಮ್ಮ ಶಾಖೆಗಳಿರುತ್ತವೆ.

ಸ್ಥಾಪನೆ: 1931 **ದಿ ವಿಜಯ ಬ್ಯಾಂಕ್ ಲಿಮಿಟೆಡ್** ಪ್ರಧಾನ ಕಛೇರಿ: ಮಂಗಳೂರು 3.

❀ "ಜ್ಯೋತಿ"ಯ ಮೂರನೇ ಜನ್ಮದಿನೋತ್ಸವದ ಸ್ಮಾರಕಾರ್ಥವಾಗಿ ಸಂಪಾದಕ ಶ್ರೀ ಬಿ. ಎಸ್. ಭಾಸ್ಕರ ರೈಗಳು (ಡೈಮಂಡ್ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು ೧) ವಿಶೇಷ ಸಂಚಿಕೆಯೊಂದನ್ನು ಹೊರಡಿಸಿರುವರು ಇದರಲ್ಲಿ ಲಲಿತ ಬರೆಹಗಳೂ ಸಾಹಿತ್ಯ ವಿಮರ್ಶೆಮಾಡುವ ಲೇಖನಗಳೂ ಕಂಗೊಳಿಸುತ್ತವೆ. ಶ್ರೀಗಳಾದ ಡಿ. ಪುಟ್ಟಸ್ವಾಮಿ, ಓ. ರಾಮರಾಯ ಮಲ್ಯ, ಸುಭಾಷ್ಚಂದ್ರ ಶೆಣೈ ಮುಂತಾದವರ ಲೇಖನಗಳು ವಿಚಾರ ಪ್ರಚೋದನೆಯನ್ನುಂಟು ಮಾಡುತ್ತವೆ.

❀ ಮೊಗವೀರ ವ್ಯವಸ್ಥಾಪಕ ಮಂಡಳಿ (ಫೋರ್ಟ್, ಮುಂಬಯಿ) ಯವರು ಈ ವರ್ಷ ಸುವರ್ಣಮಹೋತ್ಸವವನ್ನು ವಿಜೃಂಭಣೆಯಿಂದ ನೆರವೇರಿಸಿದರು. ಮಂಡಳಿಯ ಮುಖಪತ್ರವಾದ "ಮೊಗವೀರ"ವು ಈ ಸಂದರ್ಭದಲ್ಲಿ ಹೊರಡಿಸಿದ ವಿಶೇಷ ಸಂಚಿಕೆಯೊಂದು ಐವತ್ತು ವರ್ಷಗಳಿಂದ ಮಂಡಳಿಯು ನಡೆಸಿಕೊಂಡು ಬಂದ ಚಟುವಟಿಕೆಯ ಸಮಗ್ರ ಚಿತ್ರವನ್ನು ಕನ್ನಡಿಗರ ಮುಂದಿಡುತ್ತದೆ. ಇದರ ಜೊತೆಗೆ ಬಹುಮಾನ ಪಡೆದ ಎರಡು ಕತೆಗಳನ್ನೂ ಇತರ ನಾಲ್ಕಾರು ಬರೆಹಗಳನ್ನೂ ಸಂಚಿಕೆಯಲ್ಲಿ ಕಾಣುತ್ತೇವೆ. ಮುಂಬಯಿಯಲ್ಲಿ ತನ್ನ ಬಹುಮುಖ ಕಾರ್ಯಕಲಾಪಗಳಿಂದಾಗಿ ಉಪರಾಷ್ಟ್ರಪತಿ ಡಾ. ರಾಧಾಕೃಷ್ಣನ್ನರಂತವರಿಂದ ಪ್ರಸಂಸೆ ಪಡೆದ ಮಂಡಳಿಯು ಇತೋಪ್ಯತಿಶಯವಾಗಿ ಅಭಿವೃದ್ಧಿ ಹೊಂದಲಿ!

❀ ಮುಂಬಯಿಯ ಫೋರ್ಟನಲ್ಲಿರುವ ಆರ್ಯ ಸಮಾಜವೆಂಬ ಇನ್ನೊಂದು ಸಂಸ್ಥೆಯೂ ಈ ವರ್ಷ ರಜತ ಜಯಂತಿಯನ್ನು ಆಚರಿಸಿತು. ಸಮಾಜದ ಮುಖಪತ್ರವಾದ "ಆರ್ಯಶಕ್ತಿ"ಯು ಈ ಸಂದರ್ಭದಲ್ಲಿ ಒಂದು ವಿಶೇಷಸಂಚಿಕೆಯನ್ನು ಪ್ರಕಟಿಸಿತು. ಮುಂಬಯಿ ನಾಗರಿಕರಿಗೆ ಆರ್ಯಸಮಾಜವು ಸಲ್ಲಿಸುತ್ತಿರುವ ಸೇವೆಯ ವಿವಿಧ ರೂಪಗಳ ಪರಿಚಯವನ್ನು ಮಾಡಿಕೊಡುವ ಬರೆಹಗಳೂ ಚಿತ್ರಗಳೂ ಈ ಸಂಚಿಕೆಯಲ್ಲಿ ತುಂಬಿಕೊಂಡಿವೆ. ಸಮಾಜವು ಜನತಾ ಜನಾರ್ದನನ ಸೇವೆಯನ್ನು ದೀರ್ಘಕಾಲದ ವರೆಗೆ ಮಾಡುತ್ತಿರಲೆಂದು ಹಾರೈಕೆ.

❀ ಉಡುಪಿಯ ಬೋರ್ಡು ಹೈಸ್ಕೂಲಿನ ಸಂಸ್ಕೃತ ವಿದ್ಯಾರ್ಥಿಗಳು "ಕೌಮುದಿ" ಎಂಬ ಹಸ್ತಲಿಖಿತ ಪತ್ರಿಕೆಯನ್ನು ಶ್ರೀ ಕೆ. ಎ. ವೇದದಾಸರ ಸಂಪಾದಕತ್ವದಲ್ಲಿ ಪ್ರಕಟಿಸುತ್ತಿರುವುದು ಸಂತೋಷದ ವಿಚಾರ. ಗೀರ್ವಾಣ ಭಾಷೆಯ ಕುರಿತು ನಮ್ಮ ವಿದ್ಯಾರ್ಥಿಗಳಲ್ಲಿರುವ ಪ್ರೀತಿಯು ಸ್ತುತ್ಯ. ಇನ್ನೂ ಹೆಚ್ಚಿನ ಪರಿಶ್ರಮದಿಂದ ಉತ್ತಮ ವಿಚಾರಗಳನ್ನು ಸಂಸ್ಕೃತ ಭಾಷೆಯಲ್ಲಿ ಹೊರಹೊಮ್ಮುವ ಸಾಮರ್ಥ್ಯವನ್ನು ವಿದ್ಯಾರ್ಥಿಗಳು ತೋರಿಸುವರೆಂದು ಆಶಿಸುತ್ತೇವೆ.

ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 25 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

THE MOOLKY BANK LTD.
Moolky, S. K.



ಚಾತ್ರಿ ಚಿನ್ನದ ನೆಕ್‌ಲೇಸ್, ತರಹವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,

ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.

ಫೋನು ನಂಬ್ರ 66

ಟ್ರೇಡ್ ಮಾರ್ಕ್

ಪಂ॥ A. R. ಅಯ್ಯರ್‌ರವರು, ಸ್ಥಾಪಕರು.

ಮೈಸೂರು ಶ್ರೀಮನ್ ಮಹಾರಾಜರವರ ಖಾಸ್‌ವೈದ್ಯ ದಿ। ಅಂಬಳೆ ನರಸಿಂಹ ಪಂಡಿತರ ಮನೆತನದಲ್ಲಿ 96 ವರ್ಷ ಖ್ಯಾತಿಗಳಿಸಿದ ಎ. ರಾಮಸ್ವಾಮಿ ಅಯ್ಯರ್‌ರವರ

ಸಂತಾನ ಸಿಂಧೂರ (ಸ್ತ್ರೀಯರಿಗೆ: ಭಸ್ಮ) ‖ **ಮದನ ವಿಲಾಸ** (ಪುರುಷರಿಗೆ: ಗುಳಿಗೆ)

*ಭಸ್ಮವು ಬಹಿಷ್ಠೆಯ ಹೊಟ್ಟೆನೋವನ್ನು ನಿರ್ಮೂಲಮಾಡಿ, ಮಾಸಿಕದ ಹೆಚ್ಚುಕಡಿಮೆಗಳನ್ನು ಕ್ರಮಪಡಿಸಿ, ಗರ್ಭಪಾತವನ್ನು ತಡೆಗಟ್ಟಿ, ಗರ್ಭಾಶಯ ರೋಗವನ್ನು ನಿವಾರಿಸಿ, ತಾಯ್ತನ (Motherhood) ಪಡೆಯಲರ್ಹಳನ್ನಾಗಿ ಮಾಡುತ್ತದೆ.

*ಈ ಗುಳಿಗೆಗಳು ಪುರುಷನ ಅತ್ಯುಷ್ಣವನ್ನು ಕಮ್ಮಿಮಾಡಿ, ಸ್ವಪ್ನಸ್ಖಲನ ಶೀಘ್ರ ಸ್ಖಲನಗಳನ್ನು ನಿವಾರಿಸಿ, ಸಂತಾನದಾಯಕವಾದ SPERMS ಗಳನ್ನು ವೃದ್ಧಿಪಡಿಸಿ ನಪುಂಸಕತ್ವೆಯನ್ನು ಹೋಗಲಾಡಿಸುತ್ತದೆ.

...—ಇಲ್ಲಿ ಇದೆ

ನಿಮಗೆ ಸುಲಭದಲ್ಲಿ ಇಂಗ್ಲಿಷ್ ಕಲಿಯಬೇಕೆ? ಹಾಗಿದ್ದರೆ

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿ ಪುಸ್ತಕ ಅತ್ಯುಪಯುಕ್ತವಾದುದು.

ಈ ಪುಸ್ತಕದಿಂದ ಸಾವಿರಾರು ಜನರು ಸುಲಭ ... ಕಲಿತುಕೊಂಡಿ

Regd. No. M. 3618 [ಎರಡಾಣೆ] Licence No 31
Licensed to Post without Prepayment.

ನವಯುಗ

Vol.33. No 37 20-5-1954 ವರ್ಷ ೩೩ ವಾರ ೩೭

ಪರಮಾಣು ಪುರಾಣ

ನಮ್ಮ ಲೋಕಸಭೆಯಲ್ಲಿ ಕಳೆದವಾರ ಅಣುಶಕ್ತಿಯನ್ನು ಶಾಂತಿಕಾಲದ ಉಪಯೋಗಕ್ಕೋಸ್ಕರ ಬಳಸಿಕೊಳ್ಳುವ ವಿಷಯದ ಮೇಲೆ ಮಹತ್ವಪೂರ್ಣವಾದ ಚರ್ಚೆಯು ನಡೆಯಿತು. ಭಾರತದ ಸುಪ್ರಸಿದ್ಧ ವಿಜ್ಞಾನಿಗಳಲ್ಲೊಬ್ಬರಾದ ಡಾ. ಮೇಘನಾದ ಶಹಾರವರು ಈ ಚರ್ಚೆಯನ್ನು ಪ್ರಾರಂಭಿಸಿದರು. ಅಮೇರಿಕದ ಅಧ್ಯಕ್ಷ ಐಸೆನ ಹೋವರರು ಕಳೆದ ಡಿಶಂಬರ ೮ನೇ ದಿನಾಂಕದಂದು ಸಂಯುಕ್ತ ರಾಷ್ಟ್ರ ಸಂಘದ ಸಾಮಾನ್ಯ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ ಪ್ರಸ್ತಾಪಿಸಿದ ಕೆಲವು ಸೂಚನೆಗಳನ್ನು ಸ್ವಾಗತಿಸಿ, ಹಿಂದುಳಿದ ರಾಷ್ಟ್ರಗಳಿಗೆ ಅಣುಶಕ್ತಿಯನ್ನು ಶಾಂತಿ ಕಾಲದ ಉಪಯೋಗಕ್ಕೆ ಬಳಸಲಾಗುವಂತೆ ಮಾಡುವ ಇಂತಹ ಸಲಹೆಗೆ ಬೆಂಬಲವನ್ನು ನೀಡಬೇಕೆಂದು ಶಹಾರವರು ಹೇಳಿದರು.

ಪ್ರಧಾನಮಂತ್ರಿ ನೆಹರೂರವರು ಐಸೆನಹೋವರರ ಸೂಚನೆಗಳನ್ನು ಸಾಮಾನ್ಯವಾಗಿ ಸ್ವಾಗತಿಸಿ ಅವುಗಳು ಗಮನಾರ್ಹವಾಗಿವೆಯೆಂದು ಹೇಳಿದರೂ ಶಾಂತಿಕಾಲದ ಉಪಯೋಗಕ್ಕೋಸ್ಕರ ಅಣುಶಕ್ತಿಯ ಸಂಚಯ ಕಾರ್ಯ ಮಾಡುವ ಘಟಕದ ಸ್ವರೂಪ ಇನ್ನೂ ಅಸ್ಪಷ್ಟವಾಗಿರುತ್ತದೆಂದು ಅಭಿಪ್ರಾಯಪಟ್ಟರು. ಸಂಯುಕ್ತ ರಾಷ್ಟ್ರ ಸಂಘದ ಹೊರಗೆ ಅಥವಾ ಅದರ ನಿಯಂತ್ರಣಕ್ಕೆ ಒಳಗಾಗದೆ ಇಂತಹ ಪ್ರಯತ್ನ ನಡೆಯುವುದು ಹಿಂದುಳಿದ ರಾಷ್ಟ್ರಗಳ ಹಿತದೃಷ್ಟಿಯಿಂದ ಸರ್ವಥಾ ಅಪೇಕ್ಷಣೀಯವಲ್ಲವೆಂದು ಅವರು ನುಡಿದರು. ರಾಷ್ಟ್ರಸಂಘವೇ ಒಂದುವೇಳೆ ಇಂತಹ ಘಟಕದ ನಿರ್ಮಾಣ ಮಾಡಿದರೂ ಸಹ, ಚೀನದಂತಹ ಪರಮಾಣು ಖನಿಜಗಳ ಅಪಾರ ಸಂಗ್ರಹವನ್ನು ಪಡೆದ ರಾಷ್ಟ್ರಕ್ಕೆ ಅದರಲ್ಲಿ ಪ್ರವೇಶ ದೊರಕದ ಹೊರತು, ಇಂತಹ ಪ್ರಯತ್ನವು ಯಶಸ್ವಿಯಾಗಲಾರದೆಂದು ನೆಹರೂ ಸಾರಿದರು

ಪರಮಾಣುವಿನ ಕುರಿತು ಲೋಕದಲ್ಲಿ ಕೆರಳಿ ನಿಂತಿರುವ ಜಿಜ್ಞಾಸೆಗೆ ರಾಜಕೀಯ ಮಟ್ಟದಲ್ಲಿ ನಡೆಯುವ ಚಟುವಟಿಕೆಗಳೇ ಕಾರಣವೆಂದು ಹೇಳಿದರೆ ತಪ್ಪಾಗಲಾರದು—ಅಣು ಶಕ್ತಿಯು ವೈಜ್ಞಾನಿಕ ಪ್ರಪಂಚದ ಅತ್ಯದ್ಭುತ ಆವಿಷ್ಕಾರವಾಗಿದ್ದರೂ ಇಂದು ರಾಜಕೀಯ ಮಹತ್ವವು ಅದಕ್ಕೆ ಪ್ರಾಪ್ತವಾಗಿರುತ್ತದೆ. ೧೯೩೯ರಲ್ಲಿ ಸರ್ವಪ್ರಥಮವಾಗಿ ಜರ್ಮನನು ಪರಮಾಣು ರಾಜಕೀಯ ಧುರೀಣರ ರಾಕ್ಷಸೀ ಕಾಂಕ್ಷೆಯ ದಾಸರಾಗಿ, ತಮ್ಮ ಕೈಗೆದೊರೆತ ಅತ್ಯಮೂಲ್ಯ ಶಕ್ತಿಯನ್ನು ಮಾರಕ ಅಸ್ತ್ರಗಳ ಸಿದ್ಧತೆಗಾಗಿ ಬಳಸಿ ಅಕ್ಷಮ್ಯ ಅಪರಾಧವನ್ನು ಮಾಡಿದರು.

ಮೇಘನಾದ ಶಹರು ಹೇಳಿದಂತೆ,ಆರು ಸಾವಿರ ವರ್ಷಗಳ ಪೂರ್ವದಲ್ಲಿ ಮನುಷ್ಯನು ಬೆಂಕಿಯ ಉಪಯೋಗವನ್ನು ಕಂಡುಕೊಂಡಾಗ ನಾಗರಿಕತೆಯು ಎಂತಹ ಅದ್ಭುತ ಪರಿವರ್ತನೆಯನ್ನು ಸ್ವೀಕರಿಸಿತೋ ಅಷ್ಟೇ ಚಮತ್ಕಾರವಾದ ಬದಲಾವಣೆಯನ್ನು ಪರಮಾಣು ಸಂಶೋಧನೆಯು ಇಂದಿನ ಮನುಷ್ಯನ ವಿಷಯದಲ್ಲಿ ಮಾಡುತ್ತದೆ. ದುರ್ದೈವದಿಂದ ನಮಗೆ ಈಗ ಅಣುಶಕ್ತಿಯು ಮಾಡಬಹುದಾದ ವಿಧ್ವಂಸಕ ಕೃತ್ಯಗಳ ಮಾಹಿತಿ ಇದ್ದಷ್ಟು, ಶಾಂತಿಕಾಲದಲ್ಲಿ ಅದು ನೀಡುವ ಸೌಭಾಗ್ಯದ ಕಲ್ಪನೆ ಇಲ್ಲ. ೧೯೪೫ರಲ್ಲಿ ಹಿರೋಶಿಮಾ-ನಾಗಸಾಕಿಗಳ ಮೇಲೆ ಅಣುಬಾಂಬನ್ನು ಹಾಕಿದ ಬಳಿಕ ಈ ಒಂಭತ್ತು ವರ್ಷಗಳಲ್ಲಿ ಇಂತಹ ದುಷ್ಕೃತ್ಯಗಳಿಗೆ ದೊಡ್ಡ ರಾಷ್ಟ್ರಗಳ ರಾಜಕಾರಣಿಗಳು ಹೆಚ್ಚು ಸಹಜ್ಞದ ಪ್ರೋತ್ಸಾಹವನ್ನೆ ಕೊಟ್ಟರು; ಹೊರತು, ಮಾನವತೆಯನ್ನು ಮಾರಣ ಹೋಮದಿಂದ ರಕ್ಷಿಸಿ ನಾಗರಿಕತೆಯ ಮರ್ಯಾದೆ ಕಾಯ್ದುಕೊಳ್ಳುವ ಕೆಲಸದತ್ತ ಸಾಕಷ್ಟು ಗಮನವನ್ನು ಪೂರೈಸಲಿಲ್ಲ.

ಪರಿಣಾಮವಾಗಿ ಇಂದು ಅಮೇರಿಕಾ ದೇಶದೊಡನೆ ಆರು ಸಾವಿರ ಅಣುಬಾಂಬುಗಳ ಸಂಗ್ರಹವಿದೆಯೆಂದೂ ಸೋವಿಯೆಟ ರಶಿಯಾದ ಹತ್ತಿರ ಕನಿಷ್ಠ ಮುನ್ನೂರು ಅಣುಬಾಂಬುಗಳಾದರೂ ಇವೆಯೆಂದೂ ಕೇಳುವ ಪ್ರಸಂಗ ಬಂದಿರುತ್ತದೆ. ಜಲಜನಕ ಬಾಂಬುಗಳನ್ನು ತಯಾರಿಸುವುದರಲ್ಲೂ ಈ ಮಹಾ ರಾಷ್ಟ್ರಗಳು ಸಮರ್ಥವಾಗಿರುತ್ತವೆ. ಅಮೇರಿಕಾ ದೇಶವು ಅಣುಶಕ್ತಿಯ ಕ್ಷೇತ್ರದಲ್ಲಿ ಇನ್ನೂ ಮಹತ್ವದ ಸಂಶೋಧನೆಗಳನ್ನು ನಡೆಸುವುದಕ್ಕೋಸ್ಕರ ವರ್ಷಂಪ್ರತಿ ೨೦೦ ಕೋಟಿ ಡಾಲರುಗಳನ್ನು ವ್ಯಯಿಸುತ್ತದೆ; ಇಂಗ್ಲೆಂಡು ಇದರ ಹತ್ತರಲ್ಲಿ ಒಂದಂಶದಷ್ಟನ್ನು ಹಾಗು ಫ್ರಾನ್ಸು ಇಂಗ್ಲೆಂಡಿನದರ ಹತ್ತರಲ್ಲಿ ಒಂದಂಶದಷ್ಟನ್ನು ವೆಚ್ಚ ಮಾಡುತ್ತವೆ. ಭಾರತ ದೇಶವು ವರ್ಷಕ್ಕೆ ಮೂರು ಕೋಟಿ ರೂಪಾಯಿಗಳನ್ನು ವೈಜ್ಞಾನಿಕ ಸಂಶೋಧನೆಗೆ ಮೀಸಲಿಟ್ಟಿದ್ದು, ಇದರಲ್ಲಿ ಪರಮಾಣು ಲೋಕದ ಸಂಶೋಧನೆಗೆ ಒಂದು ಕೋಟಿ ರೂಪಾಯಿಗಳು ಮಾತ್ರ ಖರ್ಚಾಗುತ್ತವೆ.

ಭಾರತದಲ್ಲಿ ಸಂಶೋಧನ ಕಾರ್ಯವು ಹಿಂದುಳಿಯಲಿಕ್ಕೆ ಬಂಡವಾಳದ ಕೊರತೆಯೊಂದೇ ಕಾರಣವಲ್ಲ—ನಮ್ಮ ಈ ವಿಶಾಲವಾದ ಭೂಭಾಗದಲ್ಲಿ ಪರಮಾಣು ವಿಜ್ಞಾನಕ್ಕೆಸಂಬಂಧಿಸಿದ ಕೆಲವು ಅಮೂಲ್ಯ ದ್ರವ್ಯಗಳ ಕೊರತೆಯೂ ಕಂಡುಬರುತ್ತದೆ. ಅಮೇರಿಕದಲ್ಲಿ ಈ ದ್ರವ್ಯಗಳು ಹೇರಳವಾಗಿವೆ - ಬ್ರಿಟನು ತನ್ನ ಸಾಮ್ರಾಜ್ಯದಾದ್ಯಂತ ಸಂಶೋಧನೆಗಳನ್ನು ನಡೆಸಿ, ಸಾಕಷ್ಟು ಪರಮಾಣು ಖನಿಜಗಳ ನಿಕ್ಷೇಪವಿದೆಯೆಂದು ಕಂಡುಹಿಡಿಯಿತು. ಫ್ರಾನ್ಸು ದೇಶವು ಮೊದಲು ಖನಿಜ ದ್ರವ್ಯಗಳ ಅಭಾವವನ್ನು ತೋರ್ಪಡಿಸಿದರೂ ಕಳೆದ ಆರೇಳು ವರ್ಷಗಳ ಸತತಪ್ರಯತ್ನದ ಫಲವಾಗಿ ಮೂರು ನಾಲ್ಕು ಅಣು ಸಂಶೋಧನಾ ಘಟಕಗಳನ್ನು ನಿರ್ಮಿಸಿಕೊಂಡಿತು. ಹೊಲ್ಲೆಂಡ ಮತ್ತು ನೋರ್ವೆ ದೇಶಗಳು ಒಟ್ಟಿಗೆ ಒಂದು ಸಂಶೋಧನಾ ಘಟಕವನ್ನು ರಚಿಸಿರುತ್ತವೆ. ಐದು ವರ್ಷಗಳ ಪೂರ್ವದಲ್ಲಿ ನಾವು ಅಣುಶಕ್ತಿಯ ಆಯೋಗವೊಂದನ್ನು ರಚಿಸಿದಾಗ, ಇಷ್ಟು ಹೊತ್ತಿನೊಳಗಾಗಿ ಪರಮಾಣು ಘಟಕವೊಂದನ್ನು ನಿರ್ಮಿಸಬೇಕೆಂಬ ಧ್ಯೇಯವನ್ನು ಇಟ್ಟುಕೊಂಡಿದ್ದೆವು. ದುರ್ದೈವದಿಂದ ನಮ್ಮ ಪ್ರಯತ್ನಗಳು ಇನ್ನೂ ಅಪೂರ್ಣವಾಗಿರುತ್ತವೆ—ನಮ್ಮಲ್ಲಿ ಥೋರಿಯಂ ಖನಿಜವು ಹೇರಳವಾಗಿದ್ದರೂ ೩೦ ಟನ್ನು ಯುರೇನಿಯಂ ಹಾಗು ೧೦೦ಟನ್ನು ಶುದ್ಧ ಗ್ರಾಫೈಟನ್ನು ಸಂಗ್ರಹಿಸುವುದು ಸಾಧ್ಯವಾಗಲಿಲ್ಲ.

ಇದರಂತೆ ನಮ್ಮನ್ನು ಬಾಧಿಸುತ್ತಿರುವ ಇನ್ನೊಂದು ತೊಂದರೆಯೆಂದರೆ, ವಿಜ್ಞಾನಿಗಳ ಸಂಖ್ಯೆ ಸಾಕಷ್ಟು ಇಲ್ಲದಿರುವುದು ಎಂದೆನ್ನಬಹುದು. ಪರಮಾಣು ಕ್ಷೇತ್ರದ ಸಂಶೋಧನೆಯಲ್ಲಿ ರಸಾಯನ ಶಾಸ್ತ್ರಿಗಳೂ ಭೌತ ಶಾಸ್ತ್ರಿಗಳೂ ಭೂಗರ್ಭ ವಿಜ್ಞಾನಿಗಳೂ ಮತ್ತಿತರರೂ ಮಹತ್ವದ ಪಾತ್ರವನ್ನು ನಿರ್ವಹಿಸುವರು.ಈಗ ನಮ್ಮ ಸರಕಾರವು ಸುಮಾರು ೫೦ಮಂದಿ ಭೂಗರ್ಭವಿಜ್ಞಾನಿಗಳ ಸಹಯೋಗವನ್ನು ಪಡೆಯುತ್ತದೆ—ಪಾಶ್ಚಾತ್ಯ ರಾಷ್ಟ್ರಗಳಲ್ಲಿ ವಿಜ್ಞಾನಿಗಳ ಕೊರತೆ ಇಷ್ಟು ಅಗಾಧ ಪ್ರಮಾಣದಲ್ಲಿ ಕಂಡು ಬರುವುದಿಲ್ಲ. ಪಶ್ಚಿಮದಲ್ಲಿ ಹಿಂದುಳಿದ ರಾಷ್ಟ್ರವಾದ ಫ್ರಾನ್ಸಿನಲ್ಲಿ ಸಹ—೨೦೦ ಮಂದಿ ನುರಿತ ಭೂಗರ್ಭ ಶಾಸ್ತ್ರಜ್ಞರು ಇರುವರಲ್ಲದೆ,ಅವರು ...ಸಾವಿರ ಮಂದಿಗೆ ಯೋಗ್ಯ ತರಬೇತಿಯನ್ನು ಕೊಟ್ಟು, ಅಣುಶಕ್ತಿ ಕ್ಷೇತ್ರದಲ್ಲಿ ಅಧಿಕ ಸಂಶೋಧನೆ ನಡೆಸಲು ಅವಕಾಶ ಕಲ್ಪಿಸುವರು. ಆದರೆ ನಮ್ಮ ದೇಶದಲ್ಲಿ ನೈಸರ್ಗಿಕ ಖಾತೆಯ ಉಪಮಂತ್ರಿ ಮಾಲವೀಯರು ಹೇಳಿದಂತೆ ವಿಜ್ಞಾನಿಗಳಾದವರು ಸಹ ರಾಜಕೀಯಧುರೀಣರಾಗಲು ನೋಡುತ್ತಿರುವರು!

ಹೀಗಿದ್ದರೂ ನಾವು ತೀರಾ ಹಿಂದುಳಿದಿದ್ದೇವೆಂದು ಯೋಚಿಸುವುದು ಅಗತ್ಯವಿಲ್ಲ—ಏಕೆಂದರೆ ನಮ್ಮ ಸರಕಾರವು ಈ ವಿಷಯಕ್ಕೆ ಸಾಕಷ್ಟು ಮಹತ್ವವನ್ನು ಕೊಟ್ಟಿರುತ್ತದಲ್ಲದೆ, ಈಗಾಗಲೇ ಕೆಲವು ಅತ್ಯಮೂಲ್ಯ ಸಂಶೋಧನೆಗಳನ್ನು ನಮ್ಮ ವಿಜ್ಞಾನಿಗಳು ಶ್ರೀ ಸಿ. ಎಚ್ ಭಾಭಾರವರ ... ನೇತೃತ್ವದಲ್ಲಿ

ಸಮರ್ಥ ಸಾಲಗಳು

ಒಬ್ಬನ ಯೋಗ್ಯತೆ ಮತ್ತು ಸಮರ್ಥತೆ ಅನೇಕ ವೇಳೆ ಆತನ ಚಿಲ್ಲರೆ ಸಾಲಗಳ ದೆಸೆಯಿಂದಾಗಿ ಬಹುವಾಗಿ ಕುಂಟುತ್ತವೆ. ಆದರೆ ಈ ಎಲ್ಲಾ ಚಿಲ್ಲರೆ ಸಾಲಗಳನ್ನು ಏಕೀಕರಿಸಿ ಸುಲಭಸಾಧ್ಯವಾದ ಕಂತುಗಳಿಂದ ಸಂದಾಯ ಮಾಡುವಂತಾದರೆ ಆತನ ಕಷ್ಟಗಳೆಲ್ಲವೂ ಪರಿಹಾರಹೊಂದಿ ಆತನ ಯೋಗ್ಯತೆ ಹಾಗೂ ಸಮರ್ಥತೆ ಮರಳಿ ಬರುವುವು. ತಿಂಗಳಿಗೆ ರೂಪಾಯಿ 250 - ಯಾ ಅದಕ್ಕಿಂತ ಜಾಸ್ತಿ ಸಂಬಳವಿರುವ ಆಫೀಸರರುಗಳಿಗೆ ಅವರ ಸಂಬಳದ ಆರು ಪಾಲಷ್ಟು ಸಾಲಗಳನ್ನು ಕೊಟ್ಟು ಅದನ್ನು 36 ತಿಂಗಳು ಕಂತುಗಳಿಂದ ಮರುಪಾವತಿ ಪಡೆಯುವ ಹೊಸ ಯೋಜನೆಯೊಂದನ್ನು ನಾವು ಕಂಡುಹಿಡಿದಿದ್ದೇವೆ. ಈ ಸಾಲವನ್ನು ಪಡೆಯಲು ಇನ್ಶ್ಯೂರೆನ್ಸ್ ಪೋಲಿಸಿ ಮತ್ತು ಒಬ್ಬ ಸಹ ಜ್ಯಾಮೀನುದಾರನು ಅತ್ಯಗತ್ಯ.

ಹೆಚ್ಚಿನ ವಿವರಗಳಿಗೆ ಸಮೀಪದ ನಮ್ಮ ಆಫೀಸಿನಲ್ಲಿ ವಿಚಾರಿಸಿರಿ:

THE CANARA INDUSTRIAL & BANKING SYNDICATE LTD.
Estd: 1925 H. O. UDIPI S. India

ಎರಡನೆಯ ಪಂಚವಾರ್ಷಿಕ ಯೋಜನೆ

ಗ್ರಾಮ ಮತ್ತು ಜಿಲ್ಲೆಯ ಮಟ್ಟದಲ್ಲಿ ಅಭಿವೃದ್ಧಿಯ ಕಾರ್ಯಕ್ರಮ

ಯೋಜನೆಯು ಮೂಲ ಘಟಕವಾಗಿ ಹಳ್ಳಿಯನ್ನು ಇಟ್ಟುಕೊಳ್ಳಬೇಕೆಂದು ಕೆಲವು ದಿನಗಳ ಪೂರ್ವದಲ್ಲಿ ಪೋನಾಪುರದಲ್ಲಿ ಸೇರಿದ್ದ ಭಾರತ ಸೇವಕ ಸಮಾಜದ ಪರಿಷತ್ತಿನಲ್ಲಿ ನಿರ್ಣಯಿಸಿದ್ದರಷ್ಟೆ! ಎರಡನೆಯ ಪಂಚವಾರ್ಷಿಕ ಯೋಜನೆಯ ರೂಪರೇಷೆಗಳನ್ನು ಪ್ರಾಸ್ತಾವಿಕವಾಗಿ ವಿಚಾರಿಸುತ್ತಿರುವ ಯೋಜನಾ ಆಯೋಗವಾದರೂ ಈ ತತ್ವಕ್ಕೆ ಮನ್ನಣೆಯನ್ನು ಕೊಟ್ಟು, ಇದೀಗ ರಾಜ್ಯ ಸರಕಾರಗಳಿಗೆಲ್ಲ ಒಂದು ಮಹತ್ವದ ಪರಿಪತ್ರವನ್ನು ಕಳಿಸಿರುತ್ತದೆ. ತತ್ಪರಿಣಾಮವಾಗಿ ಮುಂದಿನ ಯೋಜನೆಯಲ್ಲಿ ಜಿಲ್ಲಾ ಕ್ಷೇತ್ರಗಳಿಗೆ ಹೆಚ್ಚಿನ ಪ್ರಾಧಾನ್ಯ ಸಲ್ಲುವ ಲಕ್ಷಣಗಳು ಕಂಡುಬರುತ್ತವೆ. ಪ್ರತಿಯೊಂದು ಜಿಲ್ಲೆಯಲ್ಲೂ ಅಲ್ಲಿಯ ಹಳ್ಳಿಯು ತನ್ನದೇ ಆದೊಂದು ಯೋಜನೆಯನ್ನು ಪಡೆದಿರಬೇಕೆಂದೂ ರಾಷ್ಟ್ರೀಯ ವಿಸ್ತರಣಾ ಯೋಜನೆ ಮುಂತಾದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹೇಗೆ ಸಂಘಟಿಸಿಕೊಳ್ಳಬಹುದೆಂಬ ಬಗ್ಗೆ ಸೂಚನೆಗಳನ್ನು ಪರ್ಯಾಲೋಚಿಸಬೇಕೆಂದೂ ಯೋಜನಾ ಆಯೋಗದ ಪರಿಪತ್ರವು ರಾಜ್ಯ ಸರಕಾರಗಳಿಗೆ ತಿಳಿಸುತ್ತದೆ. ಗೊತ್ತುಪಡಿಸಿ ಸ್ವೀಕರಿಸಲಾದ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸುವಲ್ಲಿ ಸ್ಥಳೀಯರ ನೇತೃತ್ವ ಮತ್ತು ಕ್ರಿಯಾತ್ಮಕ ಶಕ್ತಿಯನ್ನು ಆದಷ್ಟು ಹೆಚ್ಚಿನ ಪ್ರಮಾಣದಲ್ಲಿ ಉಪಯೋಗಿಸಲು ಅನುವು ಮಾಡಿಕೊಳ್ಳಬೇಕೆಂದೂ ಪರಿಪತ್ರವು ಸ್ಪಷ್ಟಪಡಿಸುತ್ತದೆ.

❖

ಮೊದಲನೆಯ ಪಂಚವಾರ್ಷಿಕ ಯೋಜನೆಯ ವರದಿಯನ್ನು ವಿಮರ್ಶಿಸಿದರೆ, ಅಭಿವೃದ್ಧಿ ಕಾರ್ಯಕ್ರಮಗಳ ಕುರಿತು ಭಾರತೀಯರಲ್ಲಿ ಹೆಚ್ಚಿನ ಆಸಕ್ತಿಯನ್ನೂ ಉತ್ಸಾಹವನ್ನೂ ಹುಟ್ಟಿಸುವ ಪ್ರಯತ್ನವನ್ನು ಅದರಲ್ಲಿ ಮಾಡಿರುವರೆಂದು ವ್ಯಕ್ತಗೊಳ್ಳುತ್ತದೆ. ಸುದೀರ್ಘವಾದ ಈ ವರದಿಯು ಆರ್ಥಿಕ ಕ್ಷೇತ್ರದ ಬೆಳವಣಿಗೆ ಹಾಗು ಸಾಮಾಜಿಕ ಪುನಾರಚನೆಯಂತಹ ಮಹತ್ವದ ವಿಷಯವನ್ನು ಭಾರತದಲ್ಲಿ ವಿದ್ಯಮಾನವಿರುವ ಹಿನ್ನೆಲೆಯಲ್ಲಿ ಎಳೆಎಳೆಯಾಗಿ ವಿವೇಚಿಸುತ್ತದೆ—ನಮ್ಮ ಅಭಿವೃದ್ಧಿ ಪ್ರಯತ್ನಗಳು ಯಾವ ಬಗೆಯಾಗಿ ರೂಪಿಸಲ್ಪಡಬೇಕೆಂಬುದಕ್ಕೆ ದೃಢವಾದ ಹಿನ್ನೆಲೆಯನ್ನು ಈ ವರದಿಯು ಒದಗಿಸಿ ಕೊಡುತ್ತದೆ. ಹೀಗಿದ್ದಾಗೂ ಅಭಿವೃದ್ಧಿ ಕಾರ್ಯಕ್ರಮಗಳ ಪ್ರತ್ಯಕ್ಷ ರಂಗದಲ್ಲಿ ಪ್ರವೇಶಿಸಿದಾಗ, ಯೋಜನಾ ಆಯೋಗವು ಕೇಂದ್ರ ಹಾಗು ರಾಜ್ಯ ಸರಕಾರಗಳು ಅಗತ್ಯವೆಂದು ಭಾವಿಸಿದ ವಿವಿಧೋದ್ದೇಶದ ಯೋಜನೆಗಳಿಗೆ ಹಾಗು ಇನ್ನಿತರ ಗ್ರಾಮಾಭಿವೃದ್ಧಿ ಪ್ರಯತ್ನಗಳಿಗೇನೆ ಮಹತ್ವವನ್ನು ನೀಡಿತು. ಜನತೆಯ ಸಹಕಾರವನ್ನು ಹಾರ್ದಿಕವಾಗಿ ಹಾರೈಸಿದರೂ ಜನತೆಯ ವಿಚಾರಗಳನ್ನು ಸಂಗ್ರಹಿಸಿ ವಿಮರ್ಶಿಸುವ ಮತ್ತು ತದನುಗುಣವಾದ ಯೋಜನೆಗಳನ್ನು ಕೈಗೊಳ್ಳುವ ಪದ್ಧತಿಯನ್ನು ಆಯೋಗ ಸ್ವೀಕರಿಸಲಿಲ್ಲ. ರೂಪಿಸಿದ ಯೋಜನೆಗಳಾದರೂ ಒಂದರೊಡನೊಂದು ನಿಕಟ ಸಂಬಂಧವನ್ನು ಇಟ್ಟುಕೊಂಡಂತಿರಲಿಲ್ಲ—ಅದರಲ್ಲೂ ಖಾಸಗಿ ಕ್ಷೇತ್ರಕ್ಕೆ ಬಿಟ್ಟುಕೊಡಲಾದ ಕಾರ್ಯಕ್ರಮವು ಅನಾಯಕವಾಗಿಯೇ ಇದ್ದಿತು. ಉತ್ಪಾದನೆಯನ್ನು ಇಷ್ಟು ಪ್ರಮಾಣಕ್ಕೆ ಹೆಚ್ಚಿಸಬೇಕೆಂದಷ್ಟೇ ಯೋಜನಾ ಆಯೋಗ ಹೇಳಿತು; ಹೊರತು, ಅದನ್ನು ಹೇಗೆ ಕೈಗೂಡಿಸಬೇಕೆಂಬ ವಿಷಯದಲ್ಲಿ ಖಾಸಗಿ ಕ್ಷೇತ್ರಕ್ಕೆ ಸರಿಯಾದ ಮಾರ್ಗದರ್ಶನವನ್ನು ಕೊಡಲಿಲ್ಲ. ಆ ರಂಗದ ಮೇಲೆ ಆಯೋಗಕ್ಕೆ ನಿಯಂತ್ರಣವಿರಲಿಲ್ಲವೆಂದರೂ ತಪ್ಪಾಗದು. ಯೋಜನಾ ಆಯೋಗ ಕಡೆಗಣಿಸಿದ ಇನ್ನೊಂದು ಸಂಗತಿಯೆಂದರೆ ಉತ್ಪಾದನೆ ಹೆಚ್ಚಿಸುವ ಪ್ರಯತ್ನಗಳು ಉದ್ಯೋಗದ ಅವಕಾಶಗಳನ್ನು ಅಧಿಕಗೊಳಿಸಬೇಕು ಎಂಬ ತತ್ವ: ಈ ವಿಷಯದಲ್ಲಿ ಸಂಭವಿಸಿದ ತಪ್ಪನ್ನು ಎರಡು ವರ್ಷಗಳ ಬಳಿಕ ಕೆಲಮಟ್ಟಿಗೆ ಸುಧಾರಿಸಿಕೊಂಡಿತು. ಸುಮಾರು ೧೭೫ ಕೋಟಿ ರೂಪಾಯಿಗಳ ಹೊಸ ಯೋಜನೆಗಳನ್ನು ಸೇರಿಸಿ, ನಿರುದ್ಯೋಗದ ಸಮಸ್ಯೆಯ ಪರಿಹಾರಕ್ಕೆ ಪ್ರಯತ್ನಿಸಲು ಹವಣಿಸಿತು. ಹೀಗಿದ್ದರೂ ಮೊದಲನೆಯ ಯೋಜನೆಯಲ್ಲಿ ಕುಂದುಕೊರತೆಗಳು ಉಳಿದೇ ಉಳಿದವು.

❖

ಈಗ ಪ್ರವರ್ತಿಸಲಾಗಿರುವ ಯೋಜನೆಯ ಅವಧಿಯು ಇನ್ನು ೨೩ ತಿಂಗಳುಗಳಲ್ಲಿ ಅಂತ್ಯಗೊಳ್ಳುತ್ತದೆ— ಆ ಮೇಲೆ ನಾವು ಯೋಜನೆಯ ಎರಡನೇ ಮೆಟ್ಟಲನ್ನು ಮುಟ್ಟುತ್ತೇವೆ ಆಗ ಕಾರ್ಯಾನ್ವಿತಗೊಳ್ಳುವ ಯೋಜನೆಯು ಪ್ರಾತಿನಿಧಿಕವಾಗಿ ಪ್ರಜೆಗಳದಾಗಿರಬೇಕೆಂಬುದನ್ನು ಮನಗಂಡು ಯೋಜನಾ ಆಯೋಗ ಈಗಿನಿಂದಲೇ ಪ್ರಾಸ್ತಾವಿಕ ವಿಷಯಗಳ ಪರ್ಯಾಲೋಚನೆಯತ್ತ ಮನಸ್ಸು ಕೊಟ್ಟಿದೆ. ದೇಶದಲ್ಲಿ ಲಭ್ಯವಿರುವ ಸಾಧನ ಸಂಪತ್ತುಗಳನ್ನು ಉಚಿತ ರೀತಿಯಲ್ಲಿ ಬಳಸಿಕೊಂಡು ಸುಖ ಜೀವನದ ಆವಶ್ಯಕತೆಗಳನ್ನು ಪ್ರಾಶಸ್ತ್ಯಾನುಕ್ರಮದಲ್ಲಿ ಸಾಧಿಸಿಕೊಳ್ಳುವುದೇ ಪ್ರತಿಯೊಂದೂ ಯೋಜನೆಯ ಉದ್ದೇಶ – ಅಂದರೆ ನಿರುದ್ಯೋಗಿಗಳಿಗೂ ಅರೆ-ಉದ್ಯೋಗಿಗಳಿಗೂ ಪೂರ್ಣೋದ್ಯೋಗವನ್ನು ಕೊಟ್ಟು ದೃಢಕಾಯರೆಲ್ಲರೂ ತಮ್ಮ ರೊಟ್ಟಿಯನ್ನು ಸ್ವತಃ ಸಂಪಾದಿಸುವಂತೆ ಮಾಡುವುದೇ ಯೋಜನೆಯ ಧ್ಯೇಯವಾಗುತ್ತದೆ. ಎಲ್ಲರಿಗೂ ಉದ್ಯೋಗ ಎಂಬ ಪಲ್ಲವಿಯನ್ನು ಹಾಡುವಾಗ, ಆರ್ಥಿಕ ಅಡಚಣೆಯು ಧುತ್ತೆಂದು ನಮ್ಮ ಮುಂದೆ ನಿಲ್ಲದಿಲ್ಲ—ಆದರೆ ಇಷ್ಟರಿಂದಲೇ ಕಂಗೆಡುವುದು ಯೋಗ್ಯವಲ್ಲ. ಜನಪ್ರೀತ ಧುರೀಣರಿಂದೊಡಗೂಡಿದ ಸರಕಾರವೂ ಸರಕಾರೀ ಪಕ್ಷದ ಸಮರ್ಥ ಕಾರ್ಯಕರ್ತರೂ ಜನತೆಯಲ್ಲಿ ಪರಿಶ್ರಮ ಪೂರ್ವಕ ಕೆಲಸ ಮಾಡುವುದೊಂದೇ ನಮ್ಮ ಸಮಸ್ಯೆಗಳನ್ನು ಪರಿಹರಿಸಿ ಗೆಲ್ಲುವ ಮುಕ್ತಿಮಾರ್ಗವೆಂದು ಬೋಧಿಸಬೇಕು; ಮತ್ತು ಜನತೆಯ ಮನವೊಲಿಸುವುದರಲ್ಲಿ ಜಯಗಳಿಸಬೇಕು. ವಾಸ್ತವಿಕವಾದ ಈ ದೃಷ್ಟಿಕೋನವನ್ನು ನಮ್ಮ ಜನರೂ ಅಳವಡಿಸಿಕೊಳ್ಳುವುದು ಅಪೇಕ್ಷಣೀಯ. ಇಂದಿನ ತ್ಯಾಗದಿಂದ ನಾಳೆ ಸೌಭಾಗ್ಯ ದೊರಕುವುದೆಂಬ ನಿಶ್ಚಲ ನಂಬಿಕೆಯನ್ನು ಇಟ್ಟುಕೊಂಡರೆ, ಯೋಜನಾ ಚಟುವಟಿಕೆಗಳಲ್ಲಿ ದುಡಿಯುವುದು ಆಟವಾಗಿಯೇ ಪರಿಣಮಿಸಬಲ್ಲುದು.

❖

ಯೋಜನೆಯಿಂದ ನಿಶ್ಚಯವಾಗಿಯೂ ಲಾಭ ದೊರಕುತ್ತದೆಂದು ಜನರು ಮನವರಿಕೆ ಮಾಡಿಕೊಳ್ಳುವುದಗತ್ಯ— ಮೊದಲನೆಯ ಪಂಚವಾರ್ಷಿಕ ಯೋಜನೆಯಿಂದಾಗಿ, ನಮ್ಮ ಕಠಿಣ ಆಹಾರ ಸಮಸ್ಯೆಯು ಬಹಳ ಮಟ್ಟಿಗೆ ಸುಧಾರಿಸಿರುವುದು. ನಿಯಂತ್ರಣಗಳ ಪರಿಸ್ಥಿತಿಯು ಹೋಗಿ ಮುಕ್ತ ಪೇಟೆಯಲ್ಲಿ ಧಾರಾಳವಾಗಿ ಆಹಾರ ಧಾನ್ಯಗಳು ಸಿಗತೊಡಗಿರುತ್ತವೆ. ಅನ್ನದ ಬಳಿಕ ಬರುವುದೇ ಬಟ್ಟೆಯ ಪ್ರಶ್ನೆ—ಈ ದಿಸೆಯಲ್ಲೂ ೧೯೫೬ನೆ ಇಸವಿಗೆ ಮುಟ್ಟಬೇಕೆಂದಿದ್ದ ಗುರಿಯನ್ನು ೧೯೫೩ನೇ ವರ್ಷದಲ್ಲೇ ನಾವು ಸೇರಿದ್ದೇವೆ. ಯೋಜನಾಬದ್ಧವಾದ ಕಾರ್ಯಕ್ರಮಗಳನ್ನು ಕೈಗೊಂಡು ಯಶಸ್ವಿಯಾಗಿ ನಿರ್ವಹಿಸಿದ ದೆಸೆಯಿಂದಲೇ ನಮ್ಮ ಪರಿಸ್ಥಿತಿಯು ಊರ್ಜಿತಗೊಂಡಿತೆಂಬ ಸತ್ಯವನ್ನು ಮನವರಿಕೆ ಮಾಡಿಕೊಂಡರೆ, ದೇಶದ ಏಳಿಗೆಯ ಕೆಲಸಗಳಲ್ಲಿ ನಾಗರಿಕರೂ ಸೇರಿ ದುಡಿಯುವುದರಿಂದುಂಟಾಗುವ ಲಾಭ ಮತ್ತು ಪ್ರಯೋಜನದ ಸ್ಪಷ್ಟಕಲ್ಪನೆಯಾಗಬಲ್ಲುದು. ಆದರೆ ಉತ್ಪಾದನೆ ಹೆಚ್ಚಿಕೊಂಡರೆ ಸಾಲದು——ಉತ್ಪಾದಿತ ವಸ್ತುಗಳು—— ಸಾಮಾನ್ಯ ಗ್ರಾಹಕರ ಕೈಯಳವಿನಲ್ಲಿ ಬರಬೇಕು. ದುರ್ದೈವದಿಂದ ಅನ್ನಬಟ್ಟೆಗಳ ಸಮೃದ್ಧಿ ಕೈಗೂಡಿದರೂ ದರಗಳು ಇನ್ನೂ ಏರಿಕೆಯಲ್ಲೇ ಇವೆ. ಸರಕಾರದವರು ದರ ಇಳಿಯುವದಕ್ಕೆ ಅನುಕೂಲವಾದ ಕ್ರಮಗಳನ್ನು ಕೈಗೊಂಡರೆ, ಯೋಜನೆಯ ಪ್ರತ್ಯಕ್ಷ ಲಾಭವನ್ನು ಸಾಮಾನ್ಯ ನಾಗರಿಕರಿಗೆ ಮಾಡಿಕೊಟ್ಟಂತಾಗುವುದು; ಮತ್ತು ಇದು ನಾಗರಿಕರಿಗೆ ಹೊಸ ಭರವಸೆಯನ್ನು ಕೊಡಬಲ್ಲುದು. ಸರಕಾರದ ಯೋಜನಾ ಕಾರ್ಯಕ್ರಮಗಳು ಬಹುಮುಖವಾಗಿರುವುದರಿಂದ ಅವು ಸಾಮಾಜಿಕ ವಾತಾವರಣವನ್ನು ಸುಧಾರಿಸಲೂ ನೋಡುತ್ತವೆ—ಈ ದಿಸೆಯಲ್ಲಿ ಕೈಗೂಡಿಸಿದ ಪ್ರಗತಿಯ ಅಂದಾಜು ಮಾಡಿಕೊಳ್ಳಬಯಸುವವರು ಮೂರು ನಾಲ್ಕು ವರ್ಷಗಳ ಹಿಂದಿನ ಚಿತ್ರವನ್ನೂ ಇಂದಿನ ಸ್ಥಿತಿಗತಿಯನ್ನೂ ತುಲನಾತ್ಮಕವಾಗಿ ನೋಡಬೇಕು. ಮದ್ರಾಸು ಶಾಸನ ಸಭೆಯಲ್ಲಿ ಮಾನ್ಯ ಮಂತ್ರಿ ಶ್ರೀ ಭಕ್ತವತ್ಸಲಮರು ಪ್ರಶ್ನೆಯೊಂದನ್ನು ಉತ್ತರಿಸುತ್ತಾ ತಿಳಿಸಿದ ನಮ್ಮ ಜಿಲ್ಲೆಯ ಜನಪದ ಅಭಿವೃದ್ಧಿಯೋಜನಾ ಕ್ಷೇತ್ರದಲ್ಲಿ ಸಾಧಿಸಿದ, ಅಂಶಗಳನ್ನು ಇದಕ್ಕೆ ಸಮರ್ಪಕವಾದ ಉದಾಹರಣೆಯಾಗಿ ಕೊಡಬಹುದು-ಒಂದು ಲಕ್ಷ ರೂಪಾಯಿಗಳನ್ನು ಉತ್ತಮ ಬೀಜ ಮತ್ತು ಫಲವರ್ಧಕಗಳಿಗೋಸ್ಕರ ರೈತರಿಗೆ ಸಾಲವಾಗಿ ನೀಡಲಾಯಿತು. ೬೨೨ ಎಕ್ರೆ ಜಮೀನಿನಲ್ಲಿ ಸಸ್ಯತೋಟಗಳ ಕೃಷಿಯಾಯಿತು; ೧,೩೫,೧೦೦ ಹಣ್ಣಿನ ಮರಗಳನ್ನು ನೆಡಲಾಯಿತು; ಜಪಾನೀ ಪದ್ಧತಿಯಲ್ಲಿ ಭತ್ತ ಬೆಳೆಯುವುದನ್ನು ಪ್ರದರ್ಶಿಸುವ ೧೨೭ ಹೊಲಗಳು ಏರ್ಪಟ್ಟವು; ೩೧೫೦ ಮಣ ಬೀಜಗಳ ವಿತರಣೆಯಾಯಿತು; ರಾಸಾಯನಿಕ ಗೊಬ್ಬರ, ಕಂಪೋಸ್ಟು ಗೊಬ್ಬರ ಹಾಗು ಹಸುರೆಲೆ ಗೊಬ್ಬರಗಳನ್ನೊಳಗೊಂಡು ೧೯೫೦ ಮಣ ಫಲವರ್ಧಕಗಳು ರೈತರಿಗೆ ಹಂಚಲಾದವು; ೬೩೫೦ ಕಂಪೋಸ್ಟು ಗೊಬ್ಬರದ ಹೊಂಡಗಳನ್ನು ಅಗೆಯಲಾಯಿತು; ೧೪೦ ಎಕ್ರೆ ಜಮೀನು ಹೊಸತಾಗಿ ಸಾಗುವಳಿಗೊಳಗಾಯಿತು; ೧೩೦ ಎಕ್ರೆ ಭೂಮಿಗೆ ನೀರಾವರಿಯ ಸೌಲಭ್ಯ ದೊರಕಿತು; ೯೩೦೦ ರೂಪಾಯಿಗಳನ್ನು ಪಂಪುಸೆಟ್ಟುಗಳ ಖರೀದಿಗಾಗಿ ಸರಕಾರ ಸಾಲ ನೀಡಿತು; ಪಶು ಸಂಗೋಪನಾ ಕ್ಷೇತ್ರದಲ್ಲಿ ೩ ಪಶು ಚಿಕಿತ್ಸಾಲಯಗಳೂ ೭ ಪಶು ಪ್ರಥಮ ಚಿಕಿತ್ಸಾಗೃಹಗಳೂ ೨ ಪ್ರಾಥಮಿಕ ಆರೋಗ್ಯ ಕೇಂದ್ರಗಳೂ ೧೨ ಪ್ರಸೂತಿ ಗೃಹಗಳೂ ೩೧ ವಯಸ್ಕರ ಶಿಕ್ಷಣ

(೧೧ನೇ ಪುಟ ನೋಡಿರಿ)



ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶ್ಯಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಭಾರತದಲ್ಲಿ ಕುರುಡರ ವಿದ್ಯಾಭ್ಯಾಸ

ದೃಷ್ಟಿಹೀನರನ್ನು ಜ್ಞಾನ ಸಂಪನ್ನರಾಗಿ ಮಾಡುವ ಪ್ರಯತ್ನ

ಭಾರತೀಯರು ಕೆ. ಸಿ. ಡೇಯ ಸಂಗೀತವನ್ನು ಮರೆಯಲಾರರು–ಆದರೆ ಅವನು ಕುರುಡನೆಂದೆಂಬುವ ದುಃಖವನ್ನೂ ಅವರು ಮರೆಮಾಜಲಾರರು. ಕುರುಡರು ಯಾವ ಕೆಲಸಕ್ಕೂ ಬಾರದ ಜನರೆಂದು ಕೆಲವರ ಭಾವನೆ ಇದ್ದರೆ, ಅದು ತಪ್ಪೆನ್ನಬೇಕಾಗುತ್ತದೆ ಅಂಥರು ಸಮಾಜದ ಮೇಲಿನ ಹೊರೆಯಾಗಿಯೇ ಬಾಳಬೇಕೆಂದಿಲ್ಲ–ಅವರು ಸ್ವಾವಲಂಬಿಗಳಾಗಬಲ್ಲರು; ಮತ್ತು ಜೀವನದ ಪ್ರಗತಿಯಲ್ಲಿ ವಿಶಿಷ್ಟ ಪಾತ್ರವನ್ನು ನಿರ್ವಹಿಸಿ ರಾಷ್ಟ್ರದಲ್ಲಿ ಉನ್ನತವಾದ ಸ್ಥಾನಮಾನವನ್ನು ಪಡೆಯಬಲ್ಲರು. ಸರಿಯಾದ ವಾತಾವರಣ ಮತ್ತು ತರಬೇತಿ ದೊರೆತರೆ ಅವರು ಉತ್ತಮ ರೀತಿಯ ಕೆಲಸದ ಮಲ್ಲರಾಗ ಬಲ್ಲರೆಂಬುದು ಅನುಭವಸಿದ್ಧವಾದ ವಿಷಯ. ಕೆಲವು ವೇಳೆಯಂತೂ ಕುರುಡತನದ ಪರಿಣಾಮವಾಗಿ ಸ್ಪರ್ಶೇಂದ್ರಿಯ ಅಥವಾ ಶ್ರವಣೇಂದ್ರಿಯಗಳು ಅದ್ಭುತವಾದ ರೀತಿಯಲ್ಲಿ ಕೆಲಸಮಾಡಿ, ಕುರುಡುತನವು ದೈವದತ್ತ ವರವೋ ಎಂಬ ಭಾವನೆಯನ್ನುಂಟುಮಾಡುತ್ತವೆ. ಕುರುಡರಾಗಿಯೂ ಮಹಾ ಕಾರ್ಯಗಳನ್ನು ಸಾಧಿಸಿದ ಮಹನೀಯರ ನೆನಪು ಬಂದಾಗಲೆಲ್ಲ ನಮ್ಮ ದೃಷ್ಟಿ ಪರಿಮಾರ್ಜನಗೊಳ್ಳುತ್ತದೆ–– ಕೇಂಬ್ರಿಜ್ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ಹೆಂಡರ್ಸನರು ಸೂರ್ಯ ಬಿಂಬದ ಮುಂದಿನಿಂದ ಸಣ್ಣ ಮೋಡಗಳು ಹಾದುಹೋಗುವುದನ್ನು ಹೇಳಬಲ್ಲಷ್ಟು ಸೂಕ್ಷ್ಮವಾದ ಹವಾಮಾನ ಬದಲಾವಣೆಯ ಅನುಭವ ಪಡೆದಿದ್ದರು. ಪ್ರಪಂಚದ ವಿಖ್ಯಾತ ಇಂಜೀನಿಯರರು, ಆಡಳಿತಗಾರರು, ವಿಜ್ಞಾನಿಗಳು, ಸಾಹಿತಿಗಳು ಹಾಗು ಕಲಾವಿದರಲ್ಲಿ ಕುರುಡರ ಗಣನೆಯೂ ಬರುತ್ತದೆ. ರಸ್ತೆಗಳ ನಿರ್ಮಾಣ ವಿಷಯದಲ್ಲಿ ಅಭೂತಪೂರ್ವ ಪರಿವರ್ತನೆಯನ್ನು ಕೈಗೂಡಿಸಿ, ಮೈಲುಗಲ್ಲಾಗಿ ನಿಂತಿರುವ ಜಾಕ್‌ಮೆಟ್ಕಾಫನು ಹುಟ್ಟು ಕುರುಡ. ಮಿಲ್ಟನ್ ಮಹಾ ಕವಿಯು ಅಂಧನಿದ್ದರೂ "ದಿ ಪೆರಡೈಸ್ ಲಾಸ್ಟ್" ಎಂಬ ಅಮರ ಕಾವ್ಯ ಗ್ರಂಥವನ್ನು ಜಗತ್ತಿಗೆ ನೀಡಿದ. ಗೆಲಿಲಿಯೋನೆಂಬ ವಿಜ್ಞಾನಿ ಹುಟ್ಟಿದಂದಿನಿಂದ ದೃಷ್ಟಿ ಚೈತನ್ಯ ಉಳ್ಳವರನ್ನು ಜ್ಞಾನದೀಪದ ಬೆಳಕಿನಲ್ಲಿ ಕರೆದೊಯ್ದು ನಮಗೆ ಪೂಜ್ಯನಾದ.

ಹೊಸ ಭರವಸೆ

ಇದೆಲ್ಲ ಅದ್ಭುತ ಶಕ್ತಿಯನ್ನು ಹೊಂದಿದ ಕುರುಡರ ವಿಷಯವಾಯಿತು–ನಮಗೆ ಬೇಕಾದದ್ದು ಸಾಮಾನ್ಯ ಕುರುಡರ ಹಿತಚಿಂತನೆಯ ಸಮಾಲೋಚನೆ. ಕುರುಡರೂ ಸತ್ಪ್ರಜೆಗಳಾಗಿ ಬಾಳುವಂತೆ ನಾವು ಹೇಗೆ ಪ್ರಯತ್ನಿಸಬೇಕೆನ್ನುವುದೇ ಇಂದಿನ ಆವಶ್ಯಕತೆಯಾಗಿರುತ್ತದೆ. ಚಿಕ್ಕ ಮಕ್ಕಳ ಮುಖವನ್ನು ನೋಡಿದರೆ, ಅಲ್ಲಿ ಸರ್ವೋತ್ಸಾಹ ತುಂಬಿ ತುಳುಕುತ್ತಿರುವುದೂ ಅವರ ಕಣ್ಣುಗಳಲ್ಲಿ ಆತ್ಮ ವಿಶ್ವಾಸದ, ಮಹತ್ವಾಕಾಂಕ್ಷೆಯ ತೇಜಸ್ಸು ಪ್ರಕಾಶಿಸುತ್ತಿರುವುದೂ ದೃಷ್ಟಿಗೋಚರವಾಗುತ್ತದೆ. ಹಾಗೆಂದು ಕುರುಡು ಮಕ್ಕಳಲ್ಲಿ ಇವುಗಳ ಕೊರತೆ ಇರುತ್ತದೆ. ಬಹಳ ಮುಖ್ಯವಾದ ದರ್ಶನೇಂದ್ರಿಯವು ಕುರುಡರ ಪಾಲಿಗೆ ಶೂನ್ಯವಾಗಿರುತ್ತದೆ. ನಮ್ಮ ಜ್ಞಾನಾರ್ಜನೆಯಲ್ಲಿ ದೃಷ್ಟಿ ಚೈತನ್ಯ ಮತ್ತು ಅದಕ್ಕೆ ಆಧಾರವಾಗಿರುವ ಕಣ್ಣು ಮೊತ್ತಮೊದಲನೆಯ ಮತ್ತು ಅತ್ಯಂತ ಮುಖ್ಯವಾದ ಅಂಗವಾಗಿದ್ದರೂ ಇವಕ್ಕೆ ಎರವಾಗಿರುವ ಕುರುಡರು ಇಷ್ಟರಿಂದಲೇ ಹತಾಶರಾಗಬಾರದೆಂದು ವಿಜ್ಞಾನ ನಮ್ಮ ನೆರವಿಗೆ ಬರುತ್ತದೆ–ದರ್ಶನೇಂದ್ರಿಯದ ಸ್ಥಾನದಲ್ಲಿ ಸ್ಪರ್ಶೇಂದ್ರಿಯವು ಚುರುಕಾಗಿ ಕೆಲಸ ಮಾಡುವಂತೆ ವಿಜ್ಞಾನವು ಸಹಾಯವನ್ನು ಕೊಟ್ಟಿದೆ. ಕುರುಡರ ವಿದ್ಯಾಭ್ಯಾಸದ ತಳಹದಿಯೇ ಇದೆಂದರೂ ತಪ್ಪಾಗಲಾರದು. ಆದರೆ ಒಂದು ಶತಮಾನದ ಪೂರ್ವದಲ್ಲಿ ಭಾರತದ ಕುರುಡರು ಜ್ಞಾನಾರ್ಜನೆ ಮಾಡುವ ಉತ್ಕಟೇಚ್ಛೆ ಇದ್ದಾಗ್ಯೂ ಜ್ಞಾನಾಂಧರಾಗಿಯೇ ಉಳಿಯಬೇಕಿದ್ದಿತು. ಸದ್ಧರ್ಮ ನಿರತರಾದ ಭಾರತೀಯರು ತಮ್ಮ ಉದಾತ್ತ ಪರಂಪರೆಯಂತೆ ಅಂಗ ವಿಹೀನರ, ದೀನ ದಲಿತರ ಹಿತ ಚಿಂತನೆಯತ್ತ ಗಮನವನ್ನು ಅವಶ್ಯವಾಗಿ ಕೊಡುತಿದ್ದರು. ಆದರೆ, ಅಂಧರ ಭಾವುಕ ಹಾಗು ಮಾನಸಿಕ ಜೀವನದ ಆವಶ್ಯಕತೆಗಳನ್ನು ಅವರಿಂದ ಪೂರೈಸಲಾಗಲಿಲ್ಲ—ಇತ್ತೀಚೆಗೆ ವೈಜ್ಞಾನಿಕ ಸಂಶೋಧನೆಗಳ ಸ್ವಾಗತಾರ್ಹವಾದ ಫಲವು ದೊರೆತದ್ದರಿಂದ, ಕುರುಡರ ಜೀವನದಲ್ಲಿ ಹೊಸ ಭರವಸೆಯ ಆಶಾಕಿರಣ, ಮೂಡಿಬಂದಿದೆ; ಚೈತನ್ಯದ ನವೋದಯ ಕಾಣಿಸಿಕೊಂಡಿದೆ.

ಶಿಕ್ಷಣ ಕೇಂದ್ರಗಳು

ಕುರುಡರು ಕಣ್ಣಿನಿಂದ ನೋಡಿ ತಿಳಿಯಬಹುದಾದ ಎಲ್ಲವನ್ನೂ ಕಳೆದುಕೊಂಡ ಭಾಗ್ಯ ಹೀನರು—ಅವರಿಗೆ ವಿದ್ಯಾಭ್ಯಾಸ ನೀಡುವ ನಮ್ಮ ಯೋಜನೆಯು ಕುರುಡರ ಬೌದ್ಧಿಕ ಜೀವನದಲ್ಲಿ ಹೊಸ ಕಣ್ಣನ್ನು ಸೃಷ್ಟಿಸಬೇಕಾಗುತ್ತದೆ. ಇದು ಕಠಿಣವಾದ ಕೆಲಸ-ದೀರ್ಘಕಾಲದ ವರೆಗೆ ಸಹನೆ ಹಾಗು ಪರಿಶ್ರಮದಿಂದ ನೆರವೇರಿಸಬೇಕಾದ ಪುಣ್ಯ ಕಾರ್ಯ. ನಮ್ಮ ದೇಶದಲ್ಲಿ ಸುಮಾರು ಇಪ್ಪತ್ತು ಲಕ್ಷ ಕುರುಡರಿದ್ದಾರೆಂದು ಅಂದಾಜು— ಇವರಲ್ಲಿ ೧,೮೦,೦೦೦ ಮಂದಿ ಶಾಲೆಗೆ ಹೋಗಿ ಕಲಿಯಬಹುದಾದ ವಯಸ್ಸಿನ ಅಂಧ ಬಾಲಕರು. ಕುರುಡುತನಕ್ಕೆ ಮುಖ್ಯವಾದ ಕಾರಣಗಳು, ದೃಷ್ಟಿಮಾಂದ್ಯ, ಮಿತಿಮೀರಿದ ಕಾಮುಕ ಜೀವನ, ಸಿಡುಬಿನಿಂದಾಗುವ ದೃಷ್ಟಿ ಲೋಪ ಮತ್ತು ಆರೋಗ್ಯ ವಿಷಯಗಳ ಕುರಿತಾದ ಅಜ್ಞಾನವೆಂದೆನ್ನಬಹುದು. ಎಷ್ಟೋ ಮಕ್ಕಳು ಹುಟ್ಟು ಕುರುಡರಾಗಿರುವುದುಂಟು. ಇಂತಹ ಕುರುಡರ ಕುಂದಿದ ಮೋರೆಯ ಮೇಲೆ ಹೊಸ ಬೆಳಕು ಕುಣಿಯುವಂತೆ, ಆತ್ಮವಿಶ್ವಾಸ ಹಾಗು ಸ್ವಾವಲಂಬನೆಯ ಶಕ್ತಿ ಮೈದೋರುವಂತೆ ಭಾರತದಲ್ಲಿಯೂ ಪ್ರಯತ್ನ ನಡೆಯುತ್ತದೆ. ೧೮೮೭ರಲ್ಲಿ ಅಮೃತಸರ ನಗರದಲ್ಲಿ ಕುರುಡರ ಶಾಲೆಯೊಂದು ಸರ್ವಪ್ರಥಮವಾಗಿ ಸ್ಥಾಪಿಸಲ್ಪಟ್ಟು, ಈ ದಿಸೆಯಲ್ಲಿ ಮೊದಲನೇ ಹೆಜ್ಜೆಯನ್ನು ಇಟ್ಟಿತು. ಮುಂದೆ ಈ ಶಾಲೆಯು ಡೆಹ್ರಾಡೂನಿಗೆ ಸ್ಥಾನಾಂತರ ಹೊಂದಿತು— ಮತ್ತು ಈಗ ಷಾರ್ಪ್ ಮೆಮೋರಿಯಲ್ ಸ್ಕೂಲ್ ಎಂಬ ಹೆಸರಿನಿಂದ ಇದು ಪ್ರಖ್ಯಾತವಾಗಿದೆ. ಅಲ್ಲಿಂದೀಚೆಗೆ ಭಾರತದಲ್ಲಿ ೫೦ ಕುರುಡರ ಶಾಲೆಗಳು ಹೆಚ್ಚಿಕೊಂಡವು; ಇವುಗಳಲ್ಲಿ ಸುಮಾರು ೧೫೦೦ ದೃಷ್ಟಿಹೀನ ವಿದ್ಯಾರ್ಥಿಗಳು ನವ ಭವಿಷ್ಯವನ್ನು ರೂಪಿಸಿಕೊಳ್ಳುವ ಅಭ್ಯಾಸದಲ್ಲಿ ತೊಡಗಿರುವರು. ವಯಸ್ಕರಾದವರಿಗೆ ತರಬೇತು ಕೊಡುವ ಕೇಂದ್ರವೊಂದನ್ನು ಭಾರತ ಸರಕಾರ ಡೆಹ್ರಾಡೂನಿನಲ್ಲಿ ಸ್ಥಾಪಿಸಿದ್ದು, ಇಲ್ಲಿ ದೇಶದ ಎಲ್ಲ ಭಾಗಗಳಿಂದ ಬಂದ ೧೦೦ ಮಂದಿ ಕುರುಡರು ವೃತ್ತಿ ಶಿಕ್ಷಣವನ್ನು ಪಡೆಯುತ್ತಿರುವರು. ಇವರಿಗೆ ಉಚಿತವಾಗಿ ಊಟ ವಸತಿ ಹಾಗು ವಸ್ತ್ರಗಳು ಕೊಡಲಾಗುತ್ತವೆ. ಯಾವುದೇ ಶುಲ್ಕವನ್ನು ತೆರಬೇಕಾಗಿಲ್ಲ ಕುರುಡರಿಗಾಗಿ ವಿಶೇಷ ರೀತಿಯ ಟೈಪರೈಟಿಂಗ್ [illegible]ವನ್ನು ಕೊಡುವ ಯೋಜನೆಯೂ ಈ ಕೇಂದ್ರಕ್ಕೆ ಇದೆ.

"ಬ್ರೈಲ್" ಲಿಪಿಯ ಸಂಸ್ಕರಣ

ಕುರುಡರಿಗೆ ಕಲಿಸುವುದು ಶ್ರಮದಾಯಕವಾದ. ನಮ್ಮ ತಾಳ್ಮೆಯನ್ನು ಪರೀಕ್ಷಿಸುವ ಕೆಲಸ – ಅವರಿಗೆ ಅಕ್ಷರಾಭ್ಯಾಸ ಮಾಡಿಸುವುದಕ್ಕೋಸ್ಕರ "ಬ್ರೈಲ್" ಎಂಬ ವಿಶೇಷ ಮಾದರಿಯ ಲಿಪಿಯನ್ನು ಬಳಸುವರು ಈ ಅಕ್ಷರಗಳ ಮೇಲೆ ಬೆರಳ ತುದಿಯನ್ನಿಟ್ಟು ಆಗಿನ ಸ್ಪರ್ಶ ಚೇತನದಿಂದ ಅಕ್ಷರವನ್ನು ಓದುವುದು ಈ ವಿದ್ಯಾಭ್ಯಾಸದ ಕ್ರಮ. ಅಂಧರ ಸರ್ವಸ್ವವೂ ಅವರ ಸ್ಪರ್ಶಜ್ಞಾನವಾಗಿರುತ್ತದೆಂಬ ತತ್ವವನ್ನು ಇಲ್ಲಿ ಉದ್ಧಾರದ ಉಪಾಯವಾಗಿ ಸ್ವೀಕರಿಸಿ, ವೈಜ್ಞಾನಿಕ ಸಹಕಾರವನ್ನು ಪಡೆಯಲಾಗುವುದು. ಕುರುಡರ ಶಾಲೆಗಳಿಗೆ ಬ್ರೈಲ್ ಪದ್ಧತಿಯ ಲಿಪಿಯನ್ನೊಳಗೊಂಡ ಪ್ರತ್ಯೇಕ ಪಠ್ಯಪುಸ್ತಕಗಳು ಇವೆ. ಅಂಧರಿಗಾಗಿಯೇ ಚಕ್ರಬಂಧ ಸ್ಪರ್ಧೆಗಳೂ ಚಿತ್ರಗಳೂ ಇರುತ್ತವೆ. ಭೂಪಟ, ನಕಾಶೆ ಇತ್ಯಾದಿಗಳನ್ನು ಸಹ ವಿಶೇಷ ಶ್ರಮಪೂರ್ವಕ ಸಿದ್ಧಗೊಳಿಸಲಾಗಿದೆ. "ಟೇಲರ್ಸ್ ಫ್ರೇಂ" ಎಂಬ ಸಾಧನ ವಿಶೇಷದ ನೆರವುಪಡೆದು ಗಣಿತಶಾಸ್ತ್ರದ ಅಭ್ಯಾಸವನ್ನು ಮಾಡಲಾಗುತ್ತದೆ. ಆದರೆ ಸಾಮಾನ್ಯ ವಿದ್ಯಾರ್ಥಿಗಳ ಪ್ರಾಥಮಿಕ ಶಾಲೆಗಳಿಗೂ ಅಂಧರ ಪ್ರಾಥಮಿಕ ಶಾಲೆಗಳಿಗೂ ಒಂದು ಮುಖ್ಯ ವ್ಯತ್ಯಾಸವಿದೆ- ಸಾಮಾನ್ಯ ವಿದ್ಯಾರ್ಥಿಗಳನ್ನು ಶಿಕ್ಷಣದ ಮುಂದಿನ ಹಂತಕ್ಕೊಯ್ಯುವ ಉದ್ದೇಶದಿಂದ ತರಬೇತಿಗೆ ಒಳಗಾಗಿಸುವುದು ಸಂಪ್ರದಾಯ; ಆದರೆ ಕುರುಡರಿಗೆ ಸ್ವಾವಲಂಬನೆಯ ಶಿಕ್ಷಣ ಕೊಡುವುದೇ ಮುಖ್ಯೋದ್ದೇಶ. ಎಲ್ಲೋ ಕೆಲವು ಮಾಧ್ಯಮಿಕ ಶಾಲೆಗಳೂ ಒಂದೆರಡು ಕಾಲೇಜುಗಳೂ ಇವೆ— ಅವರಿ ಹೆಚ್ಚಾಗಿ ವೃತ್ತಿ ಶಿಕ್ಷಣಕ್ಕೆಯೇ ಪ್ರಾಶಸ್ತ್ಯ ಕೊಡಲ್ಪಡುತ್ತದೆ ಓದು ಬರೆಹದ ಜೊತೆಗೆ ಆಟಪಾಟಗಳಲ್ಲಿಯೂ ಕುರುಡರ ಆಸಕ್ತಿಯನ್ನು ಕೆರಳಿಸಲಾಗುತ್ತದೆ ವಿಶೇಷ ರೀತಿಯಲ್ಲಿ ಸಿದ್ಧಗೊಂಡ ಇಸ್ಪೀಟು ಎಲೆಗಳನ್ನು ಕುರುಡರು ಬಳಸುವರು—ಶಬ್ದಬಂದ ದಿಕ್ಕನ್ನು ಗುರುತಿಸುವ ಸ್ಪರ್ಧೆಯಲ್ಲಿ ಅವರು ಭಾಗವಹಿಸುವರು. ಈ ರೀತಿಯಲ್ಲಿ ಕುರುಡರ ವಿದ್ಯಾಭ್ಯಾಸ ಯಶಸ್ಸು ಹೊಂದುತ್ತಿದ್ದರೂ— ಇಲ್ಲಿ ಕಾಡುವ ಮುಖ್ಯ ಸಮಸ್ಯೆಯೊಂದಿದೆ. ಭಾರತದಲ್ಲಿ ಭಿನ್ನ ಭಿನ್ನ ಪ್ರಾದೇಶಿಕ ಭಾಷೆಗಳು ಇರುವುದರಿಂದ ಇವೆಲ್ಲಕ್ಕೂ ಸಾಮಾನ್ಯವಾದ ಕುರುಡರ ಲಿಪಿ ("ಬ್ರೈಲ್")ಯನ್ನು ಅಳವಡಿಸಿಕೊಳ್ಳುವುದು ಜಟಿಲವೆನಿಸಿದೆ. ಭಾರತ ಸರಕಾರದವರು ೧೯೪೭ರಲ್ಲಿ ಇತ್ತ ಗಮನಕೊಟ್ಟು ತಜ್ಞರ ಸಮಿತಿಯೊಂದನ್ನು ಲಿಪಿ ಸಂಸ್ಕರಣದ ಉದ್ದೇಶದಿಂದ ನೇಮಿಸಿದರು. ಸ್ವಾತಂತ್ರ್ಯೋತ್ತರದಲ್ಲಿ (೧೯೪೯) ಸರಕಾರದವರು ಸಂಯುಕ್ತ ರಾಷ್ಟ್ರ ಸಂಘದ ಶೈಕ್ಷಣಿಕ, ವೈಜ್ಞಾನಿಕ ಹಾಗು ಸಾಂಸ್ಕೃತಿಕ ಸಂಸ್ಥೆಯ ಸಹಕಾರವನ್ನು ಪಡೆದು, "ಭಾರತಿ ಬ್ರೈಲ್" ಎಂಬ ವಿಶೇಷ ಲಿಪಿಯನ್ನು ರೂಪಿಸಿಕೊಂಡರು. ಮಾತ್ರವಲ್ಲದೆ, ಕುರುಡರ ಪುಸ್ತಕಗಳನ್ನು ಅಚ್ಚುಮಾಡುವ, ವಿಶ್ವಖಂಡದಲ್ಲಿಯೇ ಮೊದಲನೆಯದಾದ, ಮುದ್ರಣಾಲಯವನ್ನು ಸ್ಥಾಪಿಸಿ, ಹಿಂದೀ ಭಾಷೆಯಲ್ಲಿ ಎರಡು ಪುಸ್ತಕಗಳನ್ನು ಪ್ರಕಟಿಸಿದರು. ಇಲ್ಲಿ ಒಬ್ಬ ಕುರುಡನೇ ಅಚ್ಚಿನದೋಷಗಳನ್ನು ತಿದ್ದುವ ಕೆಲಸದಲ್ಲಿರುವನೆಂದರೆ, ಆಶ್ಚರ್ಯದ ವಿಷಯವೇ ಸರಿ!

THE CANARA MUTUAL ASSURANCE COMPANY, LTD.,
Managing Director: T. R. A. PAI
Head Office: UDIPI, S. INDIA.] [Estd: 1935
ಅತ್ಯುತ್ತಮ ಲಾಭಾಂಶ
ಬಾಧ್ಯಸ್ಥ ಪಾಲಿಸಿಗಳಿಗೆ ಸಾಲಿಯಾನ ಸಾವಿರಕ್ಕೆ,
ರೂ. 18/— ಆಜೀವ ವಿಮೆಗೆ ○ ರೂ. 15/— ಉಂಬಳಿ ವಿಮೆಗೆ
31-12-1953ನೇ ತಾರೀಕಿಗಾದ 1951ರಿಂದ 1953ರ ವರೆಗಿನ ಅವಧಿಯ ವಿಮಾಗಣನೆಯ ಫಲಿತಾಂಶ.
ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್
ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.] [ಸ್ಥಾಪನೆ: ೧೯೩೫.
ಸ್ಥಾಪನೆಯಾದಂದಿನಿಂದಲೂ ಪ್ರತಿಯೊಂದು ವರ್ಷಕ್ಕೂ ಲಾಭಾಂಶ ಹಂಚಿದ ಕಂಪೆನಿ.
[illegible]1-1-1951ರಿಂದ ಹೊಸ ವಿಮಾಕಾರ್ಯಕ್ಕೆ ಪ್ರೀಮಿಯಂ ದರವನ್ನು ಇಳಿಸಲಾ[illegible].
CHIEF AGENTS:
THE COMMERCIAL CORPORATION OF INDIA, LTD.,
UDIPI, S. India.

ವಿದೇಶ ಧೋರಣೆಗೆ ಲೋಕಸಭೆಯ ಬೆಂಬಲ

ನೆಹರೂರವರಿಂದ ಜಾಗತಿಕ ವಾತಾವರಣದ ಸಿಂಹಾವಲೋಕನ

ಭಾರತದ ಲೋಕಸಭೆಯಲ್ಲಿ ಪ್ರಧಾನ ಮಂತ್ರಿ ನೆಹರೂರವರು ವಿದೇಶಾಂಗ ಧೋರಣೆಯ ಕುರಿತು ಚರ್ಚೆಯನ್ನಾರಂಭಿಸುತ್ತಾ, ಪ್ರಚಲಿತ ಸಮಸ್ಯೆಗಳ ಸಿಂಹಾವಲೋಕನ ಗೈದರು; ಮತ್ತು ಭಾರತದ ನಿಲುವು ಏನೆಂಬುದನ್ನು ಸ್ಪಷ್ಟವಾದ ಮಾತುಗಳಲ್ಲಿ ವಿವರಿಸಿದರು. ಪ್ಯಾರಿಸಿನಲ್ಲಿ ಫ್ರೆಂಚ ಹಾಗು ಭಾರತ ಸರಕಾರಗಳ ನಡುವೆ ಈಗ ನಡೆಯುತ್ತಿರುವ ಮಾತುಕತೆಗಳ ಪರಿಣಾಮವಾಗಿ ಫ್ರೆಂಚ ಭಾರತ ಪ್ರದೇಶಗಳನ್ನು ಶಾಂತಿಯಿಂದ ಭಾರತ ಸರಕಾರಕ್ಕೆ ಒಪ್ಪಿಸಿಕೊಡುವ ವಿಷಯದಲ್ಲಿ ತೃಪ್ತಿಕರ ಒಪ್ಪಂದಕ್ಕೆ ಬರಲು ಸಾಧ್ಯವಾಗುವುದೆಂದು ಅವರು ಆಶಿಸಿದರು. ಪ್ಯಾರಿಸಿನ ಮಾತುಕತೆಗಳಿಗೆ ಉತ್ತಮ ಹಿನ್ನೆಲೆಯನ್ನು ಒದಗಿಸುವ ಉದ್ದೇಶದಿಂದ ಭಾರತ ಸರಕಾರದವರು ಫ್ರೆಂಚ ಭಾರತ ಪ್ರದೇಶಕ್ಕೆ ಕೊಂಡೊಯ್ಯುವ ಕೆಲವೊಂದು ಸರಕುಗಳ ಮೇಲೆ ಹಾಕಿದ, ಮತ್ತಿತರ ರೀತಿಯ ಕೆಲವು ನಿರ್ಬಂಧಗಳನ್ನು ಸಡಲಿಸುವುದಾಗಿ ನೆಹರೂ ತಿಳಿಸಿದರು. ಪ್ರಶ್ನೆಯನ್ನು ಶಾಂತಿ ಹಾಗು ಸೌಹಾರ್ದಯುತ ನೀತಿಯಿಂದ ಬಿಡಿಸಬೇಕೆನ್ನುವ ಭಾರತದ ಮನೀಷೆಯನ್ನು ಅವರು ಪುನರುಚ್ಚರಿಸಿದರಲ್ಲದೆ, ಫ್ರೆಂಚ ಸರಕಾರವು ಈ ದಿಸೆಯಲ್ಲಿ ಯೋಗ್ಯ ಸಹಕಾರ ನೀಡುವುದೆಂದು ಹಾರೈಸಿದರು.

ಏಶಿಯದ ಶಾಂತಿ

ಪ್ರಧಾನ ಮಂತ್ರಿಗಳು ಈಚೆಗೆ ಭಾರತವು ಟಿಬೇಟಿನೊಡನೆ ವ್ಯಾಪಾರ ವ್ಯವಹಾರದ ವಿಷಯದಲ್ಲಿ ಮಾಡಿಕೊಂಡ ಒಡಂಬಡಿಕೆಯನ್ನು ಸಮರ್ಥಿಸಿದರು. ಈ ಒಡಂಬಡಿಕೆಯಲ್ಲಿ ಉಕ್ತವಾದ ಅನಾಕ್ರಮಣ, ಪರಸ್ಪರರ ಸರಹದ್ದಿರುವ ಪ್ರದೇಶದ ಮನ್ನಣೆ, ಆಂತರಿಕ ಧೋರಣೆಯಲ್ಲಿ ಕೈ ಹಾಕದಿರುವಿಕೆ ಮುಂತಾದ ಉದಾತ್ತ ತತ್ವಗಳ ದೃಷ್ಟಿಯಿಂದ ಒಪ್ಪಂದವು ಬಹಳ ಮಹತ್ವವನ್ನು ಪಡೆಯುತ್ತದೆಂದು ನೆಹರೂ ಅಭಿಪ್ರಾಯಪಟ್ಟರು. ಚೀನದ ಪ್ರಧಾನ ಮಂತ್ರಿಗಳು ಒಡಂಬಡಿಕೆಗೆ ಸಹಿಯಾದ ಕುರಿತು ಕಳಿಸಿದ ಸಂದೇಶವನ್ನು ಪ್ರಸ್ತಾಪಿಸುತ್ತಾ ನೆಹರೂರವರು ಈ ಪತ್ರದಲ್ಲಿ ಉಭಯ ರಾಷ್ಟ್ರಗಳಲ್ಲಿ ಸ್ನೇಹ ಸದ್ಭಾವಗಳಿರುವ ಬಗ್ಗೆ ಹೆಚ್ಚಿನ ಆಸ್ಥೆಯು ವ್ಯಕ್ತಗೊಂಡಿದೆ ಎಂದು ಹೇಳಿದರು. ಈ ಒಡಂಬಡಿಕೆಯು ಏಶಿಯದ ಕೆಲವು ಪ್ರದೇಶಗಳಲ್ಲಿ ಶಾಂತಿಯನ್ನು ನೆಲೆಗೊಳಿಸಿದೆಯೆಂದು ನೆಹರೂ ನಾರಿದರಲ್ಲದೆ, ಸಾಮೂಹಿಕ ಭದ್ರತೆಯ ಹೆಸರಿನಲ್ಲಿ ರಾಜಕೀಯ ಹುಡುಗಾಟವನ್ನು ನಡೆಸುವ ಪ್ರವೃತ್ತಿಯನ್ನು ಖಂಡಿಸಿದರು. "ಸಾಮೂಹಿಕ ಭದ್ರತೆ" ಎಂಬ ಉದ್ದೇಶವು ಶ್ರೇಷ್ಠವಾಗಿದ್ದರೂ ಅನುಸರಿಸುವ ಉಪಾಯವು ಯುದ್ಧ ಸಿದ್ಧತೆಯ ಸ್ವರೂಪವನ್ನು ಹೊಂದುತ್ತಿರುವುದು ಶೋಚನೀಯ. ಕಾರಣ, ಇಂತಹ ಯೋಚನೆಯನ್ನು ಬಿಟ್ಟುಕೊಟ್ಟು ಅದರ ಸ್ಥಾನದಲ್ಲಿ ಸಾಮೂಹಿಕ ಶಾಂತಿ ಎಂಬ ಉನ್ನತ ಗುರಿಯನ್ನು ಸಾಧಿಸಿ, ಅದರ ಸಾಧನೆಗಾಗಿ ಕಲಸ ಮಾಡುವುದು ಉಚಿತ, ಎಂದು ನೆಹರೂ ಸಲಹೆಮಾಡಿದರು.

ಜಿನೇವಾದ ಪರಿಷತ್ತು

ಇದೀಗ ಸ್ವಾತಂತ್ರ್ಯದ ಹೊಸ್ತಿಲನ್ನು ಮೆಟ್ಟಿ, ತಮ್ಮ ಭವಿಷ್ಯವನ್ನು ತಾವೇ ರೂಪಿಸಿಕೊಳ್ಳತೊಡಗಿರುವ ಏಶಿಯದ ರಾಷ್ಟ್ರಗಳಿಗೆ ಶಾಂತಿಯು ಕೇವಲ ಆಸೆಯ ಮಾತಾಗಿಯುಷ್ಟೇ ಉಳಿದಿಲ್ಲ–ಅದು ಸರ್ವಥಾ ಅನಿವಾರ್ಯವೆನಿಸಿದ ಆವಶ್ಯಕತೆಯಾಗಿರುವುದು ಎಂದು ನೆಹರೂ ಪ್ರಕಟಪಡಿಸಿದರು. ಕೊರಿಯಾ ಹಾಗೂ ಇಂಡೋಚೀನದ ಪ್ರಶ್ನೆಗಳು ಏಶಿಯದ ದೃಷ್ಟಿಯಲ್ಲಿ ಗಂಭೀರವಾಗಿರುತ್ತವೆಂದೂ ಇಲ್ಲಿ ಒಬ್ಬರಿನ್ನೊಬ್ಬರಮೇಲೆ "ವಿಜಯಿ"ಗಳೆಂಬ ಗರ್ವಹೊಂದುವುದು ಅನರ್ಥಕಾರಿಯೆಂದೂ ಸಮಸ್ಯೆಯಲ್ಲಿ ಸೇರಿದ ಉಭಯ ಪಕ್ಷಗಳೂ ಪರಸ್ಪರ ತಿಳಿವಳಿಕೆಯಿಂದ ಒಂದು ಸ್ಥಿರ ಒಪ್ಪಂದಕ್ಕೆ ಬರುವುದು ಆಗತ್ಯವೆಂದೂ ನೆಹರೂ ತಿಳಿಸಿದರು. ಜಿನೇವಾದಲ್ಲಿ ಸೇರಿರುವ ಪರಿಷತ್ತಿನ ರಾಷ್ಟ್ರಗಳು ಎಷ್ಟೇ ಭಿನ್ನಾಭಿಪ್ರಾಯವನ್ನು ವ್ಯಕ್ತಗೊಳಿಸಿದರೂ ಅವುಗಳಿಗೆ ಶಾಂತಿಯನ್ನು ಸ್ಥಾಪಿಸುವ ಬಲವಾದ ಇಚ್ಛೆ ಇದೆಯೆಂಬುದು ಕಂಡುಬರುತ್ತದೆ— ಈ ಇಚ್ಛೆಯ ಪ್ರಾಬಲ್ಯದಿಂದಾಗಿ ಭಿನ್ನಾಭಿಪ್ರಾಯಗಳು ದೂರಗೊಂಡು, ಜಾಗತಿಕ ಮುತ್ಸದ್ದಿಗಳ ಪ್ರಯತ್ನ ಯಶಸ್ಸನ್ನು ಸಂಪಾದಿಸಲಿ ಎಂದು ನೆಹರೂ ಬಯಸಿದರು. ಭಾರತವು ಜಿನೇವಾದ ಘಟನೆಗಳನ್ನು ಕುತೂಹಲದಿಂದ ನಿರೀಕ್ಷಿಸುತ್ತಿರುವುದಾಗಿಯೂ ಅಲ್ಲಿ ಒಪ್ಪಂದಕ್ಕೆ ಬರಲು ಭಾರತದ ನೆರವು ಬೇಕೆನಿಸಿದರೆ ಅದನ್ನು ನೀಡಲು ಸಿದ್ಧವಿರುವುದಾಗಿಯೂ ನೆಹರೂ ತಿಳಿಸಿದರು.

ವಸಾಹತು ವಾದದ ಖಂಡನೆ

ಕೊಲೊಂಬೋ ಪರಿಷತ್ತಿನ ವಿಷಯವನ್ನೂ ಪ್ರಧಾನ ಮಂತ್ರಿಗಳು ಪ್ರಸ್ತಾಪಿಸಿದರು—ಏಶಿಯದ ರಾಷ್ಟ್ರಗಳು ಸಾಮಾನ್ಯ ಮತಭೇದವನ್ನು ಇಟ್ಟುಕೊಂಡರೂ ಗಂಭೀರ ವಿಷಯಗಳಲ್ಲಿ ಏಕಾಭಿಪ್ರಾಯವನ್ನು ಹೊಂದಿರುವ ಸಂಗತಿ ಈ ಪರಿಷತ್ತಿನಲ್ಲಿ ವ್ಯಕ್ತಗೊಂಡಿತೆಂದು ನೆಹರೂ ನುಡಿದರು. ನಮ್ಮ ದೇಶಗಳಲ್ಲಿ ವಿದೇಶೀಯರ, ಕಮ್ಯೂನಿಸ್ಟರ ಅಥವಾ ಇತರ ಜನರ ಹಸ್ತಕ್ಷೇಪಕ್ಕೆ ಅವಕಾಶ, ಸಿಗಲಾರದೆನ್ನುವ ನೀತಿ ಇಲ್ಲಿ ಸ್ಪಷ್ಟವಾಯಿತೆಂದು ಅವರು ಹೇಳಿದರು. ವಸಾಹತುವಾದದತ್ತ ಹೊರಳುತ್ತಾ ಅನೇಕ ವರ್ಷಗಳಿಂದ ಏಶಿಯವು ದಾಸ್ಯದ ನೊಗಕ್ಕೆ ಹೆಗಲು ಕೊಡಬೇಕಾಗಿ ಬಂದುದು ದುರ್ದೈವವೆಂದು ವಿಷಾದಿಸಿದರು. ಏಶಿಯವು ಎರಡನೆಯವರ ಯುದ್ಧರಂಗವೂ ಆಯಿತು—ಆದರೆ ಏಶಿಯದ ಜನರಿಗಾಗಿ ಹೊರಗಿನವರು ಇಲ್ಲಿ ನಡೆಸುವ ಯುದ್ಧ ಮೊದಲು ಅಂತ್ಯವಾಗಬೇಕು; ಅಂತಹ ಯುದ್ಧ ನಿಲ್ಲಿಸಬೇಕೆಂಬ ನಮ್ಮ ಇಚ್ಛೆ ಎಂದಿಗೂ ದುಷ್ಟವೆನಿಸಲಾರದು ಎಂದು ನೆಹರೂ ಸಾರಿದರು. ಪೋರ್ಚುಗೀಸರು ಭಾರತದಲ್ಲಿ ಕಟ್ಟಿಕೊಂಡಿರುವ ವಸಾಹತುಗಳಿಗೆ ಉತ್ತರ ಅಟ್ಲಾಂಟಿಕ ಒಪ್ಪಂದವು ಎಷ್ಟು ಮಾತ್ರಕ್ಕೂ ಅನ್ವಯಿಸಲಾರದೆಂದು ಪ್ರಧಾನ ಮಂತ್ರಿಗಳು ಇನ್ನೊಮ್ಮೆ ಖಚಿತ ಪಡಿಸಿದರು. ತಾನು ಭಾಗವಹಿಸಿಂದ ಯಾವುದೇ ಒಪ್ಪಂದಕ್ಕೆ ಭಾರತವು ಬದ್ಧವಾಗಲಾರದೆಂದೂ ಇವರು ಖಂಡತುಂಡವಾಗಿ ಹೇಳಿದರು. ಡಾ॰ ಸಾಲಾಜಾರರ ಹೇಳಿಕೆಯು ನಿಜ ಸಂಗತಿಯನ್ನು ವ್ಯಕ್ತಪಡಿಸುತ್ತಿಲ್ಲವೆಂದು ಅವರು ಆಕ್ಷೇಪಿಸಿದರು.

ಭಾರತಕ್ಕೆ ಅನ್ಯಾಯ

ಭಾರತಕ್ಕೆ ಸಂಬಂಧಿಸಿದ ಎರಡು ವಿವಾದ ಪೂರ್ಣ ವಿಷಯಗಳನ್ನೂ ನೆಹರೂ ತಿಳಿಸಿದರು— ದ್ವಿತೀಯ ಮಹಾ ಯುದ್ಧದಲ್ಲಿ ಭಾಗವಹಿಸಿದ ಜಪಾನೀ ಯುದ್ಧ ಕೈದಿಗಳಿಗೆ ಕ್ಷಮೆಯನ್ನು ಕೊಡುವ ವ್ಯವಸ್ಥೆಯಲ್ಲಿ ಭಾರತಕ್ಕೆ ನ್ಯಾಯವಾಗಿ ಸಲ್ಲಬೇಕಾಗಿದ್ದ ಸ್ಥಾನವನ್ನು ನಿರಾಕರಿಸಿದುವುದು ಶೋಚನೀಯವೆಂದವರು ಹೇಳಿ, ಈ ಧೋರಣೆಯನ್ನು ಖಂಡಿಸಿದರು. ಯುದ್ಧ ಕೈದಿಗಳ ವಿಚಾರಣೆ ನಡೆಸಿದ ಮಂಡಳದ ಪರವಾಗಿ ೧೯೪೮ರಲ್ಲಿ ತೀರ್ಪು ಹೇಳಿದವರು ಭಾರತದ ಪ್ರತಿನಿಧಿಗಳೆಂಬುದು ಸ್ಪಷ್ಟವಿರುತ್ತದೆ. ಎಂದ ಮೇಲೆ ಯುದ್ಧ ಕೈದಿಗಳನ್ನು ಕ್ಷಮಿಸುವ ವಿಚಾರದಲ್ಲೂ ಭಾರತದ ಅಭಿಮತವನ್ನು ಕೇಳುವುದು ಆಗತ್ಯ. ಆದರೆ ಅಮೇರಿಕ, ಬ್ರಿಟನು ಮತ್ತಿತರ ಪಾಶ್ಚಾತ್ಯ ರಾಷ್ಟ್ರಗಳು, ಭಾರತವು ಸಾನ್ ಫ್ರಾನ್ಸಿಸ್ಕೋ ಒಡಂಬಡಿಕೆಗೆ ಬೆಂಬಲ ಕೊಟ್ಟಿಲ್ಲವೆಂಬ ಕಾರಣವನ್ನು ಮುಂದೆ ಮಾಡಿ, ಅದಕ್ಕೆ ಸಹಿ ಹಾಕಿದೆಯೆಂಬ ಕಾರಣದಿಂದ ಪಾಕಿಸ್ತಾನಕ್ಕೆ "ಭಾರತದ ವಾರೀಸುದಾರ" ಎಂಬ ಗೌರವವನ್ನು ಕೊಟ್ಟವು. ಅಂತಾರಾಷ್ಟ್ರೀಯ ಕಾಯಿದೆ ದೃಷ್ಟಿಯಿಂದ ತಪ್ಪಾಗಿರುತ್ತದೆ. ೧೯೪೭ರಲ್ಲಿ ಸ್ವಾತಂತ್ರ್ಯ ಪ್ರಾಪ್ತವಾದಾಗ ಬ್ರಿಟನಿನೊಡನೆ ಮಾಡಿಕೊಂಡ ಒಡಂಬಡಿಕೆಯಂತೆ ಅಂತಾರಾಷ್ಟ್ರೀಯ ಸಂಸ್ಥೆಗಳ ಪ್ರಾತಿನಿಧಿಕ ಹಕುಬಾಧ್ಯತೆಗಳು ಭಾರತ ಸರಕಾರಕ್ಕೆ ಸೇರುತ್ತವೆ— ಅಲ್ಲದೆ, ಪಾಕಿಸ್ತಾನವು ಭಾರತದ ವಾರೀಸುದಾರನ ಪಾತ್ರವನ್ನು ಯಾವ ಅರ್ಥದಲ್ಲೂ ನಿರ್ವಹಿಸಲಾರರು. ಇದನ್ನು ಬ್ರಿಟನು ಮತ್ತಿತರ ರಾಷ್ಟ್ರಕೂಟದ ಸದಸ್ಯ ದೇಶಗಳು ತಿಳಿದಿದ್ದರೂ ಭಾರತಕ್ಕೆ ಏಕಾಗಿ ಅನ್ಯಾಯವೆಸಗಿದವೋ, ಎಂದು ನೆಹರೂ ಆಶ್ಚರ್ಯಪಟ್ಟರು. ಸಿಲೋನಿನಲ್ಲಿ "ಅರಾಷ್ಟ್ರಿಕ"ರ ಸಮಸ್ಯೆಯಿಂದ ಉದ್ಭೂತವಾದ ಗಂಭೀರ ಪರಿಸ್ಥಿತಿಯ ಕುರಿತಾಗಿಯೂ ಪ್ರಧಾನ ಮಂತ್ರಿಗಳು ವಿಷಾದಿಸಿದರು.

ಲೋಕ ಸಭೆಯ ಬೆಂಬಲ

ನೆಹರೂರ ಹೇಳಿಕೆಯ ಕುರಿತು ಚರ್ಚೆ ನಡೆದಾಗ ಕಮ್ಯೂನಿಸ್ಟ ಪಕ್ಷದ ಉಪಧುರೀಣರಾದ ಪ್ರೊ. ಹಿರೇನ ಮುಖರ್ಜಿಯವರು ಜಿನೇವಾ ಪರಿಷತ್ತಿನಲ್ಲಿ ಭಾರತಕ್ಕೆ ಪ್ರಾತಿನಿಧ್ಯವನ್ನು ಕೊಡಬೇಕಾಗಿತ್ತೆಂದು ಹೇಳಿದರು. "ಭಾರತದ ವಾಣಿ ಇಂದು ಸ್ವಾತಂತ್ರ್ಯ ಹಾಗು ಶಾಂತಿಗೆ ಅನುಕೂಲವಾಗಿರುವುದರಿಂದ ಅದು ಅಂತಾರಾಷ್ಟ್ರೀಯ ಪರಿಷತ್ತುಗಳಲ್ಲಿ ಕೇಳಿಸಲಾಗದೆಂದು ಆಂಗ್ಲೋ ಅಮೇರಿಕನ್ನರು ಪ್ರತಿಬಂಧಕವನ್ನೊಡ್ಡುತ್ತಿರುವರು ಎಂದು ಮುಖರ್ಜಿ ಆರೋಪಿಸಿದರು. ಸೇಠ ಗೋವಿಂದದಾಸರು ಮಾತಾಡುತ್ತಾ, ಭಾರತದ ವಿದೇಶ ಧೋರಣೆಯನ್ನು ಪಕ್ಷೀಯ ದೃಷ್ಟಿಯಲ್ಲಿ ನೋಡಬಾರದು; ಸಕಲರೂ ಏಕಕಂಠದಿಂದ ಇದಕ್ಕೆ ಬೆಂಬಲ ಸೂಚಿಸಬೇಕು, ಎಂದರು. ಆಚಾರ್ಯ ಕೃಪಲಾನಿ

ರುಚಿಕರವಾದ ಊಟ— ಹವೇಶೀರ್ (Airy) ವಸತಿ,
ಎರಡು ಊಟ ಕೋಟ್ (Cot) ಇತ್ಯಾದಿ ಸೌಕರ್ಯ.
ತಿಂಗಳೊಂದರ ರೂ. 52/- ಮಾತ್ರ.
ವಿಶೇಷ ಮಾಹಿತಿಗೆ ಪ್ರತ್ಯಕ್ಷ ವಿಚಾರಿಸಿರಿ.
ಸದ್ಗುರು ಬೋರ್ಡಿಂಗ್ ಎಂಡ್ ಲೋಜಿಂಗ್
ಹಿಂದ್‌ಮಾತಾ ಸಿನೇಮದ ಸಮೀಪ, ದಾದರ್, ಮುಂಬಯಿ ೧೪.
ವ್ಯವಸ್ಥಾಪಕ: ವಿ. ಯೆಸ್. ಪ್ರಭು.

ಮುಖ್ಯ ಪ್ರಕಟಣೆ
"ಆನಂದ ಸುಧ" ನಮ್ಮ ಆನಂದ ಸುಧ ಸಮಸ್ತ ಜನಗಳಿಗೆ ಬಲವನ್ನು ಖಂಡ ಪುಷ್ಟಿಯನ್ನು ಕಲಗಿಸುವುದು. ಅನೇಕ ವ್ಯಾಧಿಗಳನ್ನು ನಾಶಮಾಡುತ್ತೆ. ೧೫ ದಿನಗಳಿಗೆ ಸರಿ ಹೋಗುವ ೮ ಔ. ಸೀಸೆ ೧ಕ್ಕೆ ರೂ. 3—0—0.
"ಸ್ತ್ರೀ ಸುಧ" ನಮ್ಮ ಸ್ತ್ರೀ ಸುಧ ಸ್ತ್ರೀಯರಿಗೆ ಸಂಭವಿಸುವ ಸಮಸ್ತ ಗರ್ಭಾಶಯ ವ್ಯಾಧಿಗಳನ್ನು ಮುಟ್ಟು ದೋಷಗಳನ್ನು, ಮುಟ್ಟು ಶೂಲೆ, ಸರಿಯಾಗಿ ಬಹಿಷ್ಠೆ ಆಗದಿರುವುದು ಮೊದಲಾದ ಸಮಸ್ತ ವ್ಯಾಧಿಗಳನ್ನು ನಾಶಮಾಡುವುದು. ಸಂತಾನವನ್ನು ಕಲಗಿಸುವುದು. ಒಂದು ತಿಂಗಳಿಗೆ ಸರಿಹೋಗುವ ೧ ತೊಲದ ಔಷಧಿ ರೂ. 4—0—0.
"ಬಾಲ ಸುಧ" ಇದು ಸಣ್ಣ ಬಾಲಕರಿಗೆ ಅಜೀರ್ಣ, ಜ್ವರ, ಕೆಮ್ಮು, ಶೀತ, ಮಲಬದ್ಧತೆ, ಹೆಚ್ಚಾಗಿ ಭೇದಿ ಆಗುವಿಕೆ, ಮಕ್ಕಳು ಕ್ಷೀಣವಾಗಿ ಕೈಕಾಲು ಸಣ್ಣದಾಗುವಿಕೆ, ಲಿವರ್ ಬೆಳೆಯುವುದು, ಈ ಎಲ್ಲಾ ವ್ಯಾಧಿಗಳಿಗೆ ವಜ್ರಾಯುಧವಾಗಿದೆ. ಹೀಗಿರುವ ಔಷಧಿ ಇನ್ನೊಂದು ಇಲ್ಲವೆಂದು ಹೇಳಬಹುದು. ಈ ಔಷಧಕ್ಕೆ ಮಿತಿ ಇಲ್ಲದ ಯೋಗ್ಯತಾ ಪತ್ರಗಳನ್ನು ಪಡೆದಿರುವದಲ್ಲದೆ ದೇಶದಲ್ಲಿ ಅನೇಕ ವಿಧದಲ್ಲಿ ಅಭಿವೃದ್ಧಿಯಾಗಿರುತ್ತದೆ. ಸುಮಾರು ೧ ತಿಂಗಳಿಗೆ ಸರಿ ಹೋಗುವ ೫೦ ಮಾತ್ರೆಗಳ ಸೀಸೆ ೧ಕ್ಕೆ ರೂ. 1—0—0.
ಹೆಡ್ಡಾಫೀಸ್:
ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್, ರಾಜಮಂಡ್ರಿ.
ಬೆಂಗಳೂರು ಏಜನ್ಸಿ:
ಸುದರ್ಶನ ಆಯುರುವೇದ ವೈದ್ಯಶಾಲ, ನಗರ್ತರ ಪೇಟೆ, ಬೆಂಗಳೂರು-೨

ಯವರು ನಾಡಿನ ವಿದೇಶ ಧೋರಣವು ರಾಷ್ಟ್ರೀಯ ನೀತಿಯಾಗಬೇಕೆಂದು ಅಭಿಪ್ರಾಯಪಟ್ಟು, ಇದಕ್ಕೋಸ್ಕರ ವಿರೋಧೀ ಪಕ್ಷಗಳ ಮುಖಂಡರನ್ನು ಸರಕಾರವು ವಿಶ್ವಾಸದಲ್ಲಿ ತೆಗೆದುಕೊಳ್ಳುವುದು ಇಷ್ಟವೆಂದು ಹೇಳಿದರು ಚೀನದೊಡನೆ ಮಾಡಿಕೊಂಡ ಒಡಂಬಡಿಕೆಯತ್ತ ಹೊರಳಿ, ತಿಬೇಟಿನಲ್ಲಿ ಚೀನಾದ ಪ್ರವೇಶವು ಪಾಶ್ಚಾತ್ಯ ರಾಷ್ಟ್ರಗಳ ಪಸಾಹತುವಾದದ ಷ್ಟೇ ಗಂಡಾಂತರದ್ದೆಂದು ಉಚ್ಚರಿಸಿದರು. ಜೋಕಿಮ ಆಳ್ವರು ಕೃಪಲಾನಿಯವರ ಈ ಮಾತುಗಳನ್ನು ಅಲ್ಲಗಳೆದರು ಕಾಶ್ಮೀರದ ಸಂಬಂಧದಲ್ಲಿ ರಾಷ್ಟ್ರಪತಿಗಳು ಹೊರಡಿಸಲಾದ ಇತ್ತೀಚಿನ ಆಜ್ಞೆಯನ್ನು ಹೆಚ್ಚಿನ ಸದಸ್ಯರು ಸ್ವಾಗತಿಸಿದರು. ನಮ್ಮ ಪ್ರಧಾನ ಮಂತ್ರಿಗಳು ಅನುಸರಿಸುತ್ತಿರುವ ಉದಾತ್ತ ವಿದೇಶ ನೀತಿಯಿಂದಾಗಿ ಜಗತ್ತಿನಲ್ಲಿ ಭಾರತದ ಘನತೆ ಹೆಚ್ಚಿಕೊಂಡಿದೆಯೆಂದು ಸದಸ್ಯರು ಪ್ರಶಂಸೆ ಮಾಡಿದರು

ಹಿಂದು ವಿವಾಹ ಮಸೂದೆ

ಕಳೆದ ವಾರ ಲೋಕ ಸಭೆಯು ಚರ್ಚೆಗೆ ತೆಗೆದುಕೊಂಡ ಮಸೂದೆಗಳಲ್ಲಿ ಹಿಂದು ವಿವಾಹ ಮತ್ತು ದಾಂಪತ್ಯ ವಿಚ್ಛೇದನ ವಿಧೇಯಕವು ಉಲ್ಲೇಖನೀಯವಿರುತ್ತದೆ–ಹಿಂದು ಧರ್ಮಶಾಸ್ತ್ರ ಕ್ರೋಢೀಕರಣದ ಪ್ರಥಮ ಭಾಗವಾದ ಈ ವಿಧೇಯಕವನ್ನಿಕ್ಕಿ ಉಭಯ ಸಭೆಗಳ ಚುನಾಯಿತ ಪರಿಶೀಲಕ ಸಮಿತಿಗೊಪ್ಪಿಸಬೇಕೆನ್ನುತ್ತಾ ಕಾಯಿದೆ ಮಂತ್ರಿ ವಿಶ್ವಾಸರು ಮಸೂದೆಯ ಆಶಯವನ್ನು ವಿವರಿಸಿದರು. ವಿವಾಹಕ್ಕೆ ಜಾತಿ ನಿರ್ಬಂಧವನ್ನು ತೆಗೆದು ಹಾಕುವುದು. ಏಕಪತ್ನೀವ್ರತ ಹಾಗು ಕೆಲವು ವಿಶಿಷ್ಟ ಕಾರಣಗಳಿಗೋಸ್ಕರ ದಾಂಪತ್ಯ ವಿಚ್ಛೇದನಕ್ಕೆ ಅವಕಾಶ ಕಲ್ಪಿಸುವುದು ಈ ವಿಧೇಯಕದ ಉದ್ದೇಶ. ವಿಧೇಯಕಕ್ಕೆ ಸಾಮಾನ್ಯವಾಗಿ ಎಲ್ಲ ಸದಸ್ಯರೂ ತಮ್ಮ ಬೆಂಬಲವನ್ನು ಸೂಚಿಸಿದರು. ಮಹಿಳಾ ಸದಸ್ಯರು ಒಳ್ಳೆಯ ಉತ್ಸಾಹದಿಂದ ಮಸೂದೆಯನ್ನು ಸ್ವಾಗತಿಸಿ ಮಾತನಾಡಿದರು. ಕಾಂಗ್ರೆಸಿನ ಶೇಕಡಾಂದರೂ ಉಪಸಭಾಧ್ಯಕ್ಷ ಅನಂತ ಶಯನಂ ಅಯ್ಯಂಗಾರರೂ ಕುಸು ಮತಭೇದವನ್ನು ವ್ಯಕ್ತಪಡಿಸಿದರು. ಮೊದಲಿನವರು ಈ ಕಾಯಿದೆಯ ಪರಿಣಾಮವಾಗಿ ಪರಿತ್ಯಕ್ತ ಸ್ತ್ರೀಯರ ಮತ್ತು ಮಕ್ಕಳ ಸಮಸ್ಯೆ ಉಲ್ಬಣವಾದೀತೆಂದು ಎಚ್ಚರಿಸಿದರೆ, ಅಯ್ಯಂಗಾರರು ಏಕಪತ್ನಿತ್ವಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಡುವುದು ಇಷ್ಟವೆಂದೂ ವಿಚ್ಛೇದನದ ಸೌಲಭ್ಯವನ್ನು ಐದು ವರ್ಷಗಳವ್ಯಾವರೂ ಕಾಲ ಮುಂದೆ ಹಾಕಬೇಕೆಂದೂ ಸೂಚಿಸಿದರು. ಆಂತೂ ಕಾಯಿದೆ ಮಂತ್ರಿಗಳ ಸೂಚನೆಯು ಸ್ವೀಕಾರಗೊಂಡಿತು. ರಾಜ್ಯ ಪರಿಷತ್ತು ಈ ಮೊದಲೇ ಇಂತಹ ಸಲಹೆಗೆ ಒಪ್ಪಿಗೆ ಕೊಟ್ಟಿರುತ್ತದೆ.

ಲೈಬ್ರರಿಗಳಿಗೆ ತರಿಸಿಕೊಳ್ಳಬಹುದು.

ದಕ್ಷಿಣ ಕನ್ನಡದ ಲೋಕಲ್ ಲೈಬ್ರರಿ ಆಥೋರಿಟಿ ಕಮಿಟಿಯವರು ತಾರೀಕು 11–3–51ರ ತಮ್ಮ ಸಭೆಯಲ್ಲಿ ನವಯುಗ ವಾರಪತ್ರಿಕೆಯನ್ನು ಜಿಲ್ಲೆಯ ಲೈಬ್ರರಿಗಳ ಉಪಯೋಗಾರ್ಥವಾಗಿ ಮಂಜೂರು ಮಾಡಿರುತ್ತಾರೆಂದು ತಿಳಿಸಲು ಸಂತೋಷ ಪಡುತ್ತೇವೆ. ಸೆಕೆಂಡ್ರಿ ಶಾಲೆಗಳ ಉಪಯೋಗಾರ್ಥವಾಗಿ ವಿದ್ಯಾಂಗದ ಡೈರೆಕ್ಟರರು ಈ ಮೊದಲೇ ಮಂಜೂರು ಮಾಡಿರುತ್ತಾರೆ.

ಕಾಶ್ಮೀರದ ವಿಲಯನದಲ್ಲಿ ಇನ್ನೊಂದು ಹೆಜ್ಜೆ

ದೇಶದಲ್ಲಿ ಉದ್ಯೋಗ ವಿನಿಮಯ ಸಂಸ್ಥೆಗಳ ಪಾತ್ರ

ಕಾಶ್ಮೀರದ ಘಟನಾಸಮಿತಿಯು ಸ್ವೀಕರಿಸಿರುವ ಗೊತ್ತುವಳಿಗಳನ್ನು ಕಾರ್ಯಗತ ಮಾಡುವ ಉದ್ದೇಶದಿಂದ ಭಾರತದ ರಾಷ್ಟ್ರಪತಿಗಳು ನಮ್ಮ ಸಂವಿಧಾನದ ೩೭೦ನೇ ಕಲಮಿನನ್ವಯ ಒಂದು ಆಜ್ಞೆಯನ್ನು ಹೊರಡಿಸಿರುವರು. ಈ ಆಜ್ಞೆಯ ಪರಿಣಾಮವಾಗಿ ಭಾರತದೊಡನೆ ಕಾಶ್ಮೀರವು ವಿಲಯನ ಹೊಂದುವ ದಿಸೆಯಲ್ಲಿ ಇನ್ನೊಂದು ಪ್ರಗತಿಪರ ಹೆಜ್ಜೆಯನ್ನು ಇಟ್ಟಂತಾಗಿರುವುದು — ಲೋಕಸಭೆಯಲ್ಲಿ ವಿದೇಶಾಂಗ ಧೋರಣೆಯ ಚರ್ಚೆಯನ್ನು ನಡೆಸುವ ಕಾಲಕ್ಕೆ ಈ ಆಜ್ಞೆಯು ಕಾಶ್ಮೀರದ ಭವಿತವ್ಯದ ಬಗ್ಗೆ ಉದ್ಭೂತವಾದ ತರ್ಕವಿತರ್ಕ ಶರ್ತಗಳಿಗೆಲ್ಲ ವಿರಾಮ ಕೊಟ್ಟಂತಾಗಿರುವುದೆಂದು ಸದಸ್ಯರು ಅಭಿಪ್ರಾಯಪಟ್ಟರು. ಪ್ರಧಾನ ಮಂತ್ರಿ ನೆಹರೂರವರು ಹೊಸ ದೆಹಲಿಯಲ್ಲಿ ಜರಗಿದ ರಾಜಕೀಯ ಸಮ್ಮೇಳನವೊಂದರಲ್ಲಿ ಮಾತನಾಡುತ್ತಾ ಈ ಆಜ್ಞೆಯನ್ನು ಜ್ಯಾರಿ ಮಾಡಿದುದಕ್ಕೆ ಸಂತೋಷವನ್ನು ವ್ಯಕ್ತಗೊಳಿಸಿದರು; ಮಾತ್ರವಲ್ಲ, ಕಾಶ್ಮೀರದ ಕುರಿತು ಸಂಯುಕ್ತ ರಾಷ್ಟ್ರಸಂಘಕ್ಕೂ ಜಗತ್ತಿಗೂ ಕೊಡಲಾದ ಆಶ್ವಾಸನೆಗಳನ್ನು ಭಾರತ ಪೂರೈಸುವುದು ಎಂದು ಸಾರಿದರು. ಪಾಕಿಸ್ತಾನವನ್ನಾಗಲೀ ಇತರರನ್ನಾಗಲೀ ಈ ವಿಷಯದಲ್ಲಿ ಮೋಸಗೊಳಿಸುವುದು ಭಾರತದ ಇಚ್ಛೆಯಲ್ಲ ಎಂದವರು ಹೇಳಿದರು. ಕಾಶ್ಮೀರದ ಧುರೀಣರೆಲ್ಲರೂ ಈ ಆಜ್ಞೆಯನ್ನು ಸಂತೋಷದಿಂದ ಸ್ವಾಗತಿಸಿರುವರು.

ಆಜ್ಞೆಯ ವಿವರ

ಈ ಆಜ್ಞೆಯ ಪರಿಣಾಮವಾಗಿ ಭಾರತೀಯ ಸಂವಿಧಾನದ ಮೂಲಭೂತ ಹಕ್ಕುಗಳು, ನಾಗರಿಕತ್ವ, ಕೇಂದ್ರದ ಶಾಸನಿಕ, ಕಾರ್ಯನಿರ್ವಾಹಕ ಹಾಗು ನ್ಯಾಯಾಂಗಾದಿ ಭಾಗಗಳು, ಕೇಂದ್ರ ಹಾಗು ರಾಜ್ಯಸರಕಾರಗಳ ಹಣಕಾಸು, ವಾಣಿಜ್ಯ ವ್ಯವಹಾರ, ಚುನಾವಣೆಗಳು ಮೊದಲಾದುವುಗಳು ಕೆಲವು ರಿಯಾಯತಿಯೊಂದಿಗೆ ಕಾಶ್ಮೀರಕ್ಕೆ ಅನ್ವಯಿಸುತ್ತವೆ ಇನ್ನು ಮುಂದೆ ಭಾರತದ ವರಿಷ್ಠ ನ್ಯಾಯಾಲಯಕ್ಕೆ ಕಾಶ್ಮೀರದ ಮೇಲೂ ಅಧಿಕಾರವು ದೊರಕುತ್ತದೆ. ಕಾಶ್ಮೀರಿಗಳ ಮೂಲಭೂತ ಹಕ್ಕುಗಳನ್ನು ಇದು ರಕ್ಷಿಸುವುದಲ್ಲದೆ ಸಂವಿಧಾನದ ಅರ್ಥ ವಿವರಣೆ ಹಾಗು ಅಪೀಲಿನ ವಿಷಯದಲ್ಲಿ ಇದೇ ಕೊನೆಯ ನ್ಯಾಯಾಲಯವಾಗಿ ಕೆಲಸ ಮಾಡುವುದು. ಹಣಕಾಸಿನ ಸಂಬಂಧವು ಇತರ ರಾಜ್ಯಗಳೊಡನೆ ಇದ್ದಂತೆಯೇ ಸುಗಮವಾಗುವುದು. ಅಂತರ್‌ರಾಜ್ಯ ವಾಣಿಜ್ಯ ಸ್ವಾತಂತ್ರ್ಯವನ್ನು ಜ್ಯಾರಿಗೆ ತರಲಾಗುವುದು. ಗಡಿ ಸುಂಕವು ಒಡನೆಯೇ ರದ್ದುಗೊಳ್ಳುವುದು. ಕಾಶ್ಮೀರದ ವಿಶಿಷ್ಟ ಸ್ಥಾನಮಾನವನ್ನು ದೃಷ್ಟಿಯಲ್ಲಿಟ್ಟುಕೊಂಡು ಶಾಸನಿಕ ವಿಷಯದಲ್ಲಿ ಅದಕ್ಕೆ ಹೆಚ್ಚಿನ ಸ್ವಾಯತ್ತಾಧಿಕಾರವನ್ನು ಕೊಡಲಾಗಿದೆ ಹಾಗೆಯೇ ಕಾಶ್ಮೀರದ ಸ್ಥಿರ ನಾಗರಿಕರಿಗೆ ಧಕ್ಕೆಯುಂಟಾಗಬಾರದೆಂದು ಅಂತಹ ನಾಗರಿಕರ ಸ್ಥಿರಾಸ್ತಿಯ ಹಸ್ತಾಂತರ ನೌಕರಿ ವಿಷಯಗಳಲ್ಲಿ ಅವರ ಹಕ್ಕುಗಳು ಮುಂತಾದುವಕ್ಕೆ ರಕ್ಷಣೆ ಕೊಡಲು ರಾಜ್ಯ ಸರಕಾರ ಕಾಯಿದೆ ಮಾಡಬಹುದೆಂದು ಹೇಳಿದೆ ರಾಜ್ಯದ ಸಂರಕ್ಷಣೆಯ ದೃಷ್ಟಿಯಿಂದ ವಾಕ್ ಸ್ವಾತಂತ್ರ್ಯ, ಸಂಘ ಸ್ವಾತಂತ್ರ್ಯ, ಅಭಿಪ್ರಾಯ ಸ್ವಾತಂತ್ರ್ಯ ಮತ್ತು ಸಂಚಾರ ಸ್ವಾತಂತ್ರ್ಯಗಳನ್ನು ಕೆಲಮಟ್ಟಿಗೆ ಪರಿಮಿತಗೊಳಿಸಬಹುದೆಂದೂ ಆಜ್ಞೆ ಹೇಳುತ್ತದೆ. ಹಾಗೆಯೇ ರಾಜ್ಯ ಸರಕಾರವು ಈ ಮೊದಲೇ ಪರಿಹಾರವಿಲ್ಲದೆ ಭೂಮಿಗಳನ್ನು ವಶಪಡಿಸಿಕೊಳ್ಳಲು ಕೈಗೊಂಡ ಸುಧಾರಣೆಗೆ ರಾಷ್ಟ್ರಪತಿಗಳ ಆಜ್ಞೆ ರಕ್ಷಣೆಯನ್ನು ನೀಡುತ್ತದೆ.

ಉದ್ಯೋಗ ವಿನಿಮಯ ಸಂಸ್ಥೆಗಳು

ಉದ್ಯೋಗ ವಿನಿಮಯ ಸಂಸ್ಥೆಗಳ ಸುಧಾರಣೆಯ ಕುರಿತು ಶ್ರೀ ಶಿವರಾವ ಸಮಿತಿಯು ಸಿದ್ಧಾಂತಗಳು ಕಳೆದ ವಾರ ಪಾರ್ಲಿಮೆಂಟಿನ ಉಭಯ ಸಭೆಗಳಲ್ಲಿ ಮಂಡಿಸಲಾದುವು. ಈ ಸಂಸ್ಥೆಗಳನ್ನು ಶಾಶ್ವತ ಕ್ರಮದ ಮೇಲೆ ನಿಲ್ಲಿಸಬೇಕೆಂದೂ ರಾಜ್ಯಗಳಿಗೆ ಇವುಗಳ ಅಧಿಕಾರವನ್ನು ಬಿಟ್ಟುಕೊಡಬೇಕೆಂದೂ ಸಮಿತಿ ಸೂಚಿಸುತ್ತದೆ ಉದ್ಯೋಗ ವಿನಿಮಯ ಸಂಸ್ಥೆಗಳ ಮಹತ್ವ ಅವುಗಳು ಈ ವರೆಗೆ ನಿರ್ವಹಿಸಿದ ಕೆಲಸ ಮುಂತಾದ ವಿಷಯವನ್ನೂ ವರದಿ ಕೂಲಂಕಷವಾಗಿ ವಿವೇಚಿಸುತ್ತದೆ. ಕೇಂದ್ರಸರಕಾರವು ಈ ಸಂಸ್ಥೆಗಳ ಧೋರಣವನ್ನು ರೂಪಿಸಬೇಕೆಂದೂ ರಾಜ್ಯ ಸರಕಾರಗಳಿಗೆ ನೂರಕ್ಕೆ ಅರುವತ್ತರಷ್ಟು ಧನಸಹಾಯವನ್ನಿತ್ತು ಇವನ್ನು ನಡೆಸಿಕೊಂಡು ಬರಬೇಕೆಂದೂ ವರದಿ ಹೇಳುತ್ತದೆ. ಸಾಧ್ಯವಾದಷ್ಟು ಮಟ್ಟಿಗೆ ಅಲ್ಲಲ್ಲಿಯ ಜನರಿಗೆ ಅಲ್ಲಲ್ಲಿಯೇ ಉದ್ಯೋಗ ದೊರಕಿಸಿಕೊಡಬೇಕೆಂಬ ದೃಷ್ಟಿಯಿಂದ ಯೋಜನಾ ಅಧಿಕಾರಿಗಳೂ ವ್ಯಾಪಾರ ವಾಣಿಜ್ಯಗಳಲ್ಲಿ ನಿರತರಾದ ಇತರರೂ ಸಹಕರಿಸಬೇಕೆಂದೂ ವರದಿ ಸೂಚಿಸುತ್ತದೆ. ಉದ್ಯೋಗವನ್ನು ಹುಡುಕಿ ಬರುವವರಿಗೆ ಯೋಗ್ಯ ಮಾರ್ಗದರ್ಶನವು ಈ ಸಂಸ್ಥೆಗಳಲ್ಲಿ ಸಿಗಬೇಕು; ಅವರಿಗೆ ಉತ್ತಮ ತರಬೇತಿಯ ಸೌಲಭ್ಯ ದೊರೆಯಬೇಕು; ಅಂಕೆ ಸಂಖ್ಯೆಗಳನ್ನು ಕಲೆಹಾಕಿ ಕೆಲಸದ ಅವಕಾಶಗಳ ಅಂದಾಜನ್ನೂ ಅವುಗಳಿಗೊಪ್ಪುವ ನೌಕರರ ಪ್ರಮಾಣವನ್ನು ಹೊಂದಿಸಿಕೊಳ್ಳಬೇಕು. ಎಂದು ಮುಂತಾಗಿ ಶಿವರಾವ ಸಮಿತಿಯು ಆಲೋಚಿಸಿ, ಉತ್ತಮ ಸಿದ್ಧಾಂತಗಳನ್ನು ಮಾಡಿರುತ್ತದೆ.

ಪಂಚವಾರ್ಷಿಕ ಯೋಜನೆ

ಯೋಜನಾ ಮಂತ್ರಿಗಳಾದ ಶ್ರೀ ಗುಲಜಾರಿಲಾಲ ನಂದಾರವರು ಪತ್ರಿಕೋದ್ಯಮಿಗಳೊಂದಿಗೆ ನಡೆಸಿದ ಒಂದು ಸಂದರ್ಶನದಲ್ಲಿ ಪಂಚವಾರ್ಷಿಕ ಯೋಜನೆಯ ಯಶಸ್ಸಿಗೆ ಹಣಕಾಸಿನ ಕೊರತೆಯು ಆತಂಕವಾಗಲಾರದು, ಎಂದು ಹೇಳಿದರು ಕಳೆದ್ದು ಕಡಿಮೆ, ಎಲ್ಲ ರಾಜ್ಯಗಳೂ ನಿರ್ದಿಷ್ಟಪಡಿಸಲಾದ ಗುರಿಯನ್ನು ಮುಟ್ಟುವುದಕ್ಕೆ ಸಮರ್ಥವಾಗಿರುತ್ತವೆ; ಕೆಲವು ಗುರಿಯನ್ನು ಹಿಂದೆ ಹಾಕುವಷ್ಟು ಪ್ರಗತಿಯನ್ನು ತೋರಿಸುತ್ತವೆ ಎಂದವರು ತಿಳಿಸಿದರು. ನಮಗೆ ವಿದೇಶಗಳಿಂದ ದೊರೆಯುವ ಸಹಾಯವು ಯೋಜನೆಗೆ ಬೇಕಾದ ಬಾಬವಾಳದಲ್ಲಿ ನೂರಕ್ಕೆ ಹತ್ತರಷ್ಟು ಮಾತ್ರ ಇದೆ; ಆದರೂ ನಾವು ಅಂಜಬೇಕಾಗಿಲ್ಲ. ಮೊದಲಿನ ಮೂರು ವರ್ಷಗಳಲ್ಲಿ ನಡೆದ ಕೆಲಸ ತೃಪ್ತಿಕರವಿದೆ; ಈಗ ತೊಡಗಿದ ನಾಲ್ಕನೇ ವರ್ಷದಲ್ಲಿ ನಾವು ಹೆಜ್ಜೆಯನ್ನು ದ್ರುತಗತಿಯಿಂದ ಮುಂದಿಡುತ್ತಿದ್ದೇವೆ. ಐದನೇ ವರ್ಷ ಮುಗಿಯುವುದರೊಳಗಾಗಿ ನಾವು ಈಗ ಬಾಕಿಯುಳಿದಿರುವ ಎಲ್ಲ ಕೆಲಸವನ್ನೂ ಮುಗಿಸಬೇಕಾಗುತ್ತದೆ, ಎಂದು ನಂದಾ ತಿಳಿಸಿದರು. ಯೋಜನೆಗೆ ನಮ್ಮ

(ಆನೇ ಪುಟ ನೋಡಿರಿ)

PLACE YOUR LIFE ASSURANCE WITH A COMPANY OF YOUR OWN - - -

Established in 1929, the POPULAR is progressing on sound lines. It has built up for itself a record of efficient service sound investment and a personal touch with its Policy holders and Representatives At whatever stage We welcome yours association with the POPULAR.

THE POPULAR INSURANCE CO. LTD.
"POPULAR BUILDINGS" MANGALORE-1

Visit
K. R. K. SHET DAIMOND MART
Opposite Government College, MANGALORE.
For all your requirements in Diamonds and Jewellery Lucky Birth Stones are also available.
Prop: K. K. R. SHET.

ನ ವ ಯು ಗ
ಉಡುಪಿ, ಗುರುವಾರ ೨೦-೫-'೫೪

ಮೊದಲನೆಯ ಸೋಲು

ಮದ್ರಾಸು ಶಾಸನ ಸಭೆಯಲ್ಲಿ ದಿನಾಂಕ ೧೮ರಂದು ವಿದ್ಯಾ ಮಂತ್ರಿಗಳಾದ ಮಾನ್ಯ ಶ್ರೀ ಸಿ. ಸುಬ್ರಹ್ಮಣ್ಯಮರು ಮಹತ್ವದ ನಿರ್ಣಯವೊಂದನ್ನು ಪ್ರಕಟಪಡಿಸಿದರು—ಶ್ರೀ ರಾಜಗೋಪಾಲಾಚಾರಿಯವರು ಮುಖ್ಯ ಮಂತ್ರಿಗಳಾಗಿದ್ದಾಗ, ಒಂದು ವರ್ಷದ ಹಿಂದೆ, ಜ್ಯಾರಿಗೆ ತಂದ ಪರಿಷ್ಕೃತ ಪ್ರಾಥಮಿಕ ಶಿಕ್ಷಣ ಪದ್ಧತಿಯ ಯೋಜನೆಯನ್ನು ಇದೇ ಜೂನು ತಿಂಗಳಿಂದ ಬಿಟ್ಟುಗೊಡಲು ಸರಕಾರವು ನಿರ್ಧರಿಸಿದೆ ಎಂದು ಅವರು ಸಾರಿದರು. ಮಂತ್ರಿಗಳ ಘೋಷಣೆಯನ್ನು ಶಾಸನ ಸಭಾ ಸದಸ್ಯರು "ಮೇಜುಗಳನ್ನು ಬಡೆಯುತ್ತಾ" ಸ್ವಾಗತಿಸಿ, ತಮ್ಮ ಸಮ್ಮತಿಯನ್ನು ವ್ಯಕ್ತಪಡಿಸಿದರೆಂದು ತಿಳಿಯುತ್ತದೆ. ಇದರ ಮೇಲಿಂದ ಶಾಸನ ಸಭಾ ಸದಸ್ಯರಲ್ಲಿ ಬಹು ಸಂಖ್ಯಾಕರು ರಾಜಾಜಿಯ ಯೋಜನೆಯು ಮೂಲೆಗುಂಪಾಗುವುದನ್ನೆ ಬಯಸಿದ್ದರೆನ್ನುವುದು ಸ್ಪಷ್ಟವಾಗುತ್ತದೆ. ಪರಿಷ್ಕೃತ ಶಿಕ್ಷಣ ಪದ್ಧತಿಯ ವಿಷಯದಲ್ಲಿ ಅಧ್ಯಾಪಕ ವರ್ಗವು ತುಂಬ ಅತೃಪ್ತಿಯನ್ನು ಹೊಂದಿದ್ದಿತು. ಯೋಜನೆಯನ್ನು ಕಾರ್ಯಗತಗೊಳಿಸುವ ಹೊಣೆಯನ್ನು ನಿರ್ವಹಿಸಬೇಕಿದ್ದ ಅಧ್ಯಾಪಕರೇ ಸರಕಾರದ ಧೋರಣೆಯನ್ನು ಟೀಕಿಸಿ ಬಹಿರಂಗವಾಗಿ ಪ್ರತಿಭಟನೆಯನ್ನೂ ಕೊಡುತ್ತಿದ್ದರು. ಶಾಸನ ಸಭಾ ಸದಸ್ಯರೂ "ಜನಮತ"ದ ನೆರಳನ್ನು ಅನುಸರಿಸುತ್ತಾ ಹೋಗಿ, ತಿದ್ದಿದ ವಿದ್ಯಾಯೋಜನೆಯು ಕಾಲಾಂತರದಲ್ಲಿ ಉಂಟುಮಾಡುವ ಅತ್ಯುತ್ತಮ ಪರಿಣಾಮವನ್ನು ದುರ್ಲಕ್ಷಿಸಿ, ಸರಕಾರವು ಯೋಜನೆಗೆ ತಿಲಾಂಜಲಿ ಕೊಡಬೇಕೆಂದು ಒತ್ತಾಯಿಸಿದರು. ಸರಕಾರದವರು ನೇಮಿಸಿದ ಪರುಳೇಕರ ಸಮಿತಿಯು ಯೋಜನೆಯನ್ನು ಕೊಂಡಾಡಿದ್ದಾಗ್ಯೂ, ಶಾಸನ ಸಭಾ ಸದಸ್ಯರಲ್ಲಾಗಲೀ ಅಧ್ಯಾಪಕ ವರ್ಗದಲ್ಲಾಗಲೀ ಸಮಾಧಾನ ಮೂಡಿದಂತೆ ಕಾಣಲಿಲ್ಲ-ಕೇಂದ್ರ ಸರಕಾರಕ್ಕೆ ಶೈಕ್ಷಣಿಕ ವಿಷಯಗಳಲ್ಲಿ ಸಲಹೆಗಳನ್ನು ಕೊಡುವ ಮಂಡಲವು ರಾಜಾಜಿಯ ಪರಿಷ್ಕೃತ ಪ್ರಾಥಮಿಕ ಶಿಕ್ಷಣಪದ್ಧತಿಯ ಯೋಜನೆಯನ್ನೂ ಈ ಕುರಿತು ಪರುಳೇಕರ ಸಮಿತಿಯು ಒಪ್ಪಿಸಿದ ವರದಿಯನ್ನೂ ವಿವರವಾಗಿ ಪರಿಶೀಲಿಸಿ, ರಾಜ್ಯಾಂಗಘಟನೆಯ ಆಶಯವನ್ನು ಪರಿಪಾಲಿಸಲು ಇದಕ್ಕಿಂತ ಉತ್ತಮವಾದ ವ್ಯವಹಾರ್ಯ ಮಾರ್ಗ ತೆರೆದಿಲ್ಲವೆಂದು ನಿರ್ಣಯಿಸಿತಲ್ಲದೆ, ಉಳಿದ ರಾಜ್ಯ ಸರಕಾರಗಳೂ ಈ ಕ್ರಾಂತಿಕರ ಪ್ರಯೋಗವನ್ನು ಕೈಗೊಳ್ಳಬೇಕೆಂದು ಸಲಹೆಮಾಡಿತು. ಇದನ್ನು ಕೇಳಿದ ಬಳಿಕವೂ ನಮ್ಮ ರಾಜ್ಯದಲ್ಲಿ ಯೋಜನೆಯನ್ನು ವಿರೋಧಿಸುತ್ತಿದ್ದವರು, ಅದರ ಪ್ರಯೋಜನವನ್ನು ಮನಗಾಣಲಿಲ್ಲ. ಬದಲು ರಾಜಾಜಿಯನ್ನು ನಾಯಕ ಪೀಠದಿಂದ ಉರುಳಿಸುವ ಹಂಚಿಕೆಗೆ ಈ ಯೋಜನೆಯನ್ನೂ ಒಂದು ತಂತ್ರವಾಗಿ ಕೆಲವು ಶಾಸನ ಸಭಾ ಸದಸ್ಯರು ಬಳಸಿದರೆಂಬುದು ಎಲ್ಲರಿಗೂ ಗೊತ್ತಿದ್ದ ವಿಷಯ. ಸರಕಾರಕ್ಕೆ ಬೆಂಬಲವನ್ನು ಕೊಡಬೇಕಿದ್ದ ಶಾಸನ ಸಭಾ ಸದಸ್ಯರೂ ಪ್ರಾಥಮಿಕ ಶಾಲೆಗಳ ಅಧ್ಯಾಪಕರೂ ಯೋಜನೆಯ ಅವಹೇಳನೆಯಲ್ಲಿಯೇ ತೃಪ್ತಿಯನ್ನು ಕಾಣಬಯಸಿದುದರಿಂದ ಇಂದು ದೇಶಕ್ಕೆಯೇ ಮಾದರಿಯಾಗಬಹುದಿದ್ದ, ನಮ್ಮ ರಾಷ್ಟ್ರದ ಭವಿಷ್ಯವನ್ನು ಬೆಳಗಿಸಬಹುದಿದ್ದ, ಯೋಜನೆ ತಿರಸ್ಕೃತಗೊಂಡಿತು. ಕಾಮರಾಜ ನಾಡರರು ರಾಜಾಜಿಯ ಸ್ಥಾನದಲ್ಲಿ ಮುಖ್ಯಮಂತ್ರಿಗಳಾದಾಗ ಇಂತಹ ನಿರ್ಣಯವನ್ನು ಸರಕಾರ ಕೈಗೊಳ್ಳುವುದೆಂಬ ಸೂಚನೆ ಕಂಡುಬಂದಿದ್ದರೂ, ಸುಬ್ರಹ್ಮಣ್ಯಮರೇ ವಿದ್ಯಾಮಂತ್ರಿಯಾಗಿ ಉಳಿದುದನ್ನು ಕಂಡು, ತುಸು ಸಮಾಧಾನ ದೊರೆತಿದ್ದಿತು ಈಗ ಸುಬ್ರಹ್ಮಣ್ಯಮರ ಸ್ಥಿತಿಯು ತೀರ ವಿಷಾದಕರವೆನಿಸಿದೆ- ಸರಕಾರದ ಬದಲಾಯಿಸಿದ ಧೋರಣೆಯು ತನ್ನನ್ನು ಕಠಿಣವಾದ ದ್ವಂದ್ವದಲ್ಲಿ ಸಿಲುಕಿಸಿದೆಯೆಂದು ಅವರೇ ಒಪ್ಪಿಕೊಂಡಿರುವರು. ಇದರ ಪರಿಣಾಮವಾಗಿ, ಅವರು ರಾಜೀನಾಮೆ ಕೊಡುವ ಪ್ರಸಂಗ ಬಂದರೂ ಆಶ್ಚರ್ಯವಿಲ್ಲ— ಆದರೆ ತನ್ನ ಯಾವುದೇ ನಿರ್ಧಾರವು ವೈಯಕ್ತಿಕ ಸ್ವರೂಪದ್ದಿರುವುದೆಂದೂ ರಾಜ್ಯದ ಪ್ರಗತಿಗೆ ಅದರಿಂದ ಹಾನಿ ತಟ್ಟಲಾರದೆಂದೂ ಅವರು ಆಶ್ವಾಸನೆ ನೀಡಿದ್ದಾರೆ ಸುಬ್ರಹ್ಮಣ್ಯಮರ ಆತ್ಮ ತುಂಬ ನೊಂದುಕೊಂಡಿದೆ-ಈ ಯೋಜನೆಯ ಯೋಗ್ಯತೆಯ ವಿಷಯದಲ್ಲಿ ತನಗೆ ಅತ್ಯಂತ ವಿಶ್ವಾಸವಿದೆಯೆಂದು ಅವರು ಶಾಸನ ಸಭೆಯ ಮುಂದೆ ಪ್ರಾಂಜಲವಾಗಿ ಒಪ್ಪಿಕೊಂಡಿರುವರು. ಆದಾಗ್ಯೂ ಕಾಂಗ್ರೆಸು ಪಕ್ಷದ ಆದೇಶವನ್ನು ಮೀರಲಾರದೆ ಅದಕ್ಕೆ ತಲೆತಗ್ಗಿಸುತ್ತಿದ್ದೇನೆ ಎಂದವರು ಹೇಳಿದರು. ಶಾಸನ ಸಭಾ ಕಾಂಗ್ರೆಸು ಪಕ್ಷವು ದಿನಾಂಕ ೧೩ರಂದು ಸೇರಿದಾಗ, ರಾಜಾಜಿಯ ಯೋಜನೆಯನ್ನು ಬಿಟ್ಟುಗೊಡಬೇಕೆಂದು ಸರಕಾರಕ್ಕೆ ಶಿಫಾರಸು ಮಾಡಲಾಯಿತು ಈ ಸಭೆಯಲ್ಲಿ ರಾಜಾಜಿಯವರು ಉಪಸ್ಥಿತರಿರಲಿಲ್ಲ—ಆದರೆ ಸುಬ್ರಹ್ಮಣ್ಯಮರು ಯೋಜನೆಯಲ್ಲಿ ಅಡಕವಾದ ಅಂಶಗಳನ್ನು ಎಷ್ಟು ಹೆಚ್ಚು ಪ್ರಮಾಣದಲ್ಲಿ ಉಳಿಸಲು ಸಾಧ್ಯವೋ ಅಷ್ಟು ಪ್ರಯತ್ನಿಸಿದರೆಂದು ತಿಳಿಯುತ್ತದೆ. ಅವರ ಹೇಳಿಕೆಗೆ ಕಿವಿಗೊಡದೆ ಪಕ್ಷದ ಬಹುಸಂಖ್ಯಾಕ ಸದಸ್ಯರು, ರದ್ದತಿಯ ಬೇಡಿಕೆಯನ್ನು ಜೋರುಕೊಟ್ಟು ಪ್ರತಿಪಾದಿಸಿದರು—ಪಕ್ಷದ ಸಭೆ ಮುಗಿಸಿ ಹೊರಬಂದ ಕಾಮರಾಜರಿಗೆ ರದ್ದತಿಯ ನಿರ್ಣಯದಿಂದ ಸಂತೋಷಗೊಂಡ ಸದಸ್ಯರೊಬ್ಬರು ಹೂಮಾಲೆಯನ್ನರ್ಪಿಸಿದಾಗ ಅವರು ಅದನ್ನು ಬಿಸಾಡಿದರೆಂದೂ ವರದಿಯೊಂದು ಹೇಳುತ್ತದೆ. ಇದನ್ನು ನೋಡಿದರೆ, ಮುಖ್ಯಮಂತ್ರಿ ಕಾಮರಾಜ ನಾಡರರಿಗೂ ಪಕ್ಷದ ಆದೇಶ ಸಮಾಧಾನ ತರಲಿಲ್ಲನೆಂದು ಸ್ಪಷ್ಟವಾಗುತ್ತದೆ. ಆದರೂ ಯೋಜನೆಯನ್ನು ಬಿಟ್ಟುಗೊಡಲು ಸರಕಾರ ತೀರ್ಮಾನಿಸಿದ್ದರೆ, ಅದಕ್ಕೆ ಜನತೆಯ ಮನ್ನಣೆ ದೊರೆಯಲಿಲ್ಲವೆಂಬುದೇ ಕಾರಣ. ಈ ಯೋಜನೆಯು ಜಯಹೊಂದಲು ಅನಿವಾರ್ಯ ಆವಶ್ಯಕತೆಯೆನಿಸಿದ ನಾಗರಿಕರ ಅಂಗೀಕಾರ ಅನುಮತಿ ಹಾಗು ಸಹಕಾರಗಳು ಸರಕಾರಕ್ಕೆ ದೊರೆಯಲಿಲ್ಲವೆಂದು ವಿದ್ಯಾಮಂತ್ರಿಗಳು ವಿಷಾದಪೂರ್ವಕ ತಿಳಿಸಿದರು. ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಜನಮತವನ್ನು ಹೊಂದಿಕೊಂಡು ನಡೆಯಬೇಕೆಂಬುದು ನಿಜ— ಆದರೆ ಉತ್ತಮೋತ್ತಮ ತತ್ವಗಳನ್ನು ಅರ್ಥಮಾಡಿಕೊಳ್ಳುವಷ್ಟು ವಿವೇಕವೂ ಜನಸಾಮಾನ್ಯರಲ್ಲಿ ಇಲ್ಲದೆ ಹೋಗುತ್ತದೆ! ಪ್ರಜಾಪ್ರಭುತ್ವಕ್ಕೆ ತಗಲಿದ ಗ್ರಹಚಾರ ದೋಷವೆಂದರೇನೆ ಇದು— ಒತ್ತಾಯದಿಂದ ಜನರ ಮನ್ನಣೆ ದೊರಕಿಸುವಂತೆ ಪ್ರಯತ್ನ ನಡೆಸುವುದೂ ಪ್ರಜಾಪ್ರಭುತ್ವದ ತತ್ವಕ್ಕೆ ವಿರೋಧವಾಗಿ ಪರಿಣಮಿಸೀತು. ಈ ಪ್ರಕಾರವಾಗಿ ರಾಜಾಜಿಯ ಯೋಜನೆ ಮುಖಭಂಗ ಹೊಂದಿ ಹಿನ್ನೆಲೆಗೆ ಸರಿಯುತ್ತದೆ—ಇನ್ನು ಮುಂದೆ ಒಂದು ವರ್ಷಕ್ಕೆ ಹಿಂದೆ ರೂಢಿಯಲ್ಲಿದ್ದ ಕ್ರಮವನ್ನು ಬಳಸಲಾಗುತ್ತದೆ. ಹಾಗೆಂದು ಈ ಕ್ರಮವೂ ಚೆನ್ನಾಗಿಲ್ಲವೆಂಬ ಆಕ್ಷೇಪ ಕೇಳಿ ಬರುತ್ತಿದೆ—ಕಾರಣ, ಸರಕಾರದವರು ಪ್ರಾಥಮಿಕ ವಿದ್ಯಾಭ್ಯಾಸದಲ್ಲಿ ಸುಧಾರಣೆಯನ್ನು ಕೈಗೊಳ್ಳಲು ಹೊಸತೊಂದು ಸಮಿತಿಯನ್ನು ನೇಮಿಸುವರು— ಪ್ರೌಢ ವಿದ್ಯಾಭ್ಯಾಸಕ್ಕೆ ತಳಹದಿಯಾಗುಳ್ಳ ಪ್ರಾಥಮಿಕ ಶಿಕ್ಷಣ ಪದ್ಧತಿಯನ್ನು ಪರಿಷ್ಕರಿಸುವುದು ಈ ಸಮಿತಿಯ ಹೊಣೆಯಾಗುತ್ತದೆ. ಅದರೊಂದಿಗೆ ಘಟನೆಯ ಆಶಯವನ್ನು ಪರಿಪಾಲಿಸುವುದಕ್ಕೆ ಈ ಸಮಿತಿ ವ್ಯವಹಾರ್ಯವಾದ ಮಾರ್ಗವೊಂದನ್ನು ಹುಡುಕುವುದು ಅಗತ್ಯ. ಮದ್ರಾಸು ರಾಜ್ಯವಷ್ಟೇ ಅಲ್ಲ—ಭಾರತದ ಯಾವ ಸರಕಾರವೂ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ಕೊಡುವ ದೃಷ್ಟಿಯಿಂದ ಈಗ ಮಾಡಲಾಗುವ ವೆಚ್ಚವನ್ನು ಗಣನೀಯವಾಗಿ ಹೆಚ್ಚಿಸುವ ಪರಿಸ್ಥಿತಿಯಲ್ಲಿಲ್ಲ. ಈಗಿನ ವೆಚ್ಚದಲ್ಲಿ ನೂರಕ್ಕೆ ಐವತ್ತರಷ್ಟು ಮಾತ್ರ ಮಕ್ಕಳು ಪ್ರಾಥಮಿಕ ಶಿಕ್ಷಣವನ್ನು—ಅದೂ ಸಮಗ್ರವಾಗಿಯಲ್ಲ—ಪಡೆಯುವರು; ಉಳಿದವರಿಗೆಂತು ಶಿಕ್ಷಣನೀಡ ಬೇಕೋ ತಿಳಿಯದು. ಇದಲ್ಲದೆ, ಮೂಲಶಿಕ್ಷಣವನ್ನು ಕೊಡಬೇಕೆಂಬ ಆದೇಶವೂ ಘಟನೆಯಲ್ಲಿರುತ್ತದೆ. ಮದ್ರಾಸಿನಲ್ಲಿದ್ದ ೨೬೧೯೮ ಪ್ರಾಥಮಿಕ ಶಾಲೆಗಳಲ್ಲಿ ಕೇವಲ ೭೦೦ ಶಾಲೆಗಳನ್ನು ಮಾತ್ರ ಮೂಲಶಿಕ್ಷಣದ ಕೇಂದ್ರಗಳಾಗಿ ಪರಿವರ್ತಿಸಲಾಗಿರುವುದು: ಎಂದ ಮೇಲೆ, ಈ ಆದೇಶಗಳ ಪರಿಪಾಲನೆಗೆ ಸಮಯ ಹಾಗು ಕರ್ಚು ಎಷ್ಟು ಬರುವುದೋ ತಿಳಿಯದು. ಇಂತಹ ಸಂದಿಗ್ಧ ಹಾಗು ವಿಷಮ ಕಾಲದಲ್ಲಿ ರಾಜಾಜಿಯವರು ದೂರದೃಷ್ಟಿಯಿಂದ, ರಾಷ್ಟ್ರಕ್ಕೆ ಬೇಕಾದ ನಿಜವಾದ ಶಿಕ್ಷಣವನ್ನು ನೀಡುವ ಸದುದ್ದೇಶದಿಂದ, ಮೂಲ ಶಿಕ್ಷಣಕ್ಕೂ ಹಿಂದಿದ್ದ ಕ್ರಮಕ್ಕೂ ಸೇತುವೆ ನಿರ್ಮಿಸುವ ಹಾಗು ಅಧಿಕ ಮಕ್ಕಳಿಗೆ ವಿದ್ಯಾಭ್ಯಾಸ ನೀಡುವ ಇರಾದೆಯಿಂದ, ಯೋಜನೆಯನ್ನು ತಯಾರಿಸಿ, ಜ್ಯಾರಿ ಮಾಡಿದರು. ಇಂದು ಅದನ್ನು ಬಿಟ್ಟುಗೊಟ್ಟು ಸರಕಾರವು ತನ್ನ ಮೊದಲನೇ ಸೋಲನ್ನು ಒಪ್ಪಿಕೊಂಡಂತಾಗಿರುವುದು: ಜನತೆ ತನಗೆ ತಾನೆ ಅಪಕಾರ ಮಾಡಿಕೊಂಡಿರುವುದು.

ಇಂಡೋಚೀನದಲ್ಲಿ ಯುದ್ಧ ವಿರಾಮದ ಪ್ರಯತ್ನ

ಮೊಲೊಟೋವರ ಸೂಚನೆ ನಿರ್ಮಿಸಿದ ಆಶಾದಾಯಕ ವಾತಾವರಣ

ಡೀನ ಬೀನ ಫು ಕೋಟೆಯನ್ನು ಬಿಟ್ಟುಗೊಡಬೇಕಾಗಿ ಬಂದ ಫ್ರೆಂಚರಿಗೆ ಇಂಡೋಚೀನದಲ್ಲಿ ಉಳಿಗಾಲವಿಲ್ಲವೆಂದೇ ತೋರುತ್ತದೆ. ಹೋಚಿಮಿನರ ಪಡೆಗಳು ಅತ್ಯುತ್ಸಾಹದಿಂದ ತಮ್ಮ ದಾಳಿಯನ್ನು ಮುನ್ನಡೆಸಿಕೊಂಡು ಹೋಗುತ್ತಾ, ಉತ್ತರ ವೀಟನಾಮದಲ್ಲಿ ಫ್ರೆಂಚರ ವರ್ಚಸ್ಸಿಗೆ ಧಕ್ಕೆಯನ್ನು ತಂದೊಡ್ಡುತ್ತನೆ. ಇಲ್ಲಿ ಹರಿಯುತ್ತಿರುವ ಕೆಂಪು ನದಿಯ ಅರುವತ್ತು ಚದರ ಮೈಲು ವಿಸ್ತೀರ್ಣದ ಮುಖಭೂಮಿಯಲ್ಲಿ ವೀಟಮಿನ ಪಡೆಗಳು ಪದಾರ್ಪಣವನ್ನು ಮಾಡಿದ್ದು, ಫ್ರೆಂಚರು ತಮ್ಮಿಂದ ಮಾತ್ರವೇ ದಾಳಿಯನ್ನು ಪ್ರತಿಭಟಿಸಲು ಸಾಧ್ಯವಾಗದೆಂಬ-ನಿರ್ಣಯಕ್ಕೆ ಬಂದಿರುವರು. ಆಗ್ನೇಯ ಏಶ್ಯಾದಲ್ಲಿ "ಸ್ವತಂತ್ರ ಜಗತ್ತು" ಕಮ್ಯೂನಿಸ್ಟ ಆಕ್ರಮಣದ ಗಂಡಾಂತರದಿಂದ ದೂರಗೊಳ್ಳಬೇಕೆಂದು ಸಾರುತ್ತಿರುವ ಅಮೇರಿಕದ ನೆರವು ತಮಗೆ ವಿಪುಲ ಪ್ರಮಾಣದಲ್ಲಿ ದೊರೆತೀತೆಂದು ಫ್ರೆಂಚ ಸರಕಾರದವರು ಭಾವಿಸಿದ್ದರು: ಅವರೆ ಏಕೋ ಏನೋ, ಡೀನ ಬೀನ ಫು ಕೋಟೆಯ ಪತನದ ಬೆನ್ನಿಗೆ ಡಲ್ಲೇಸರು ಆಗ್ನೇಯ ಏಶ್ಯಾದ ರಕ್ಷಣಾ ಯೋಜನೆಯನ್ನು ಮುಂದೊತ್ತುವ ದೃಷ್ಟಿಯಿಂದ ಇಂಡೋಚೀನವು ಅಗತ್ಯವಿಲ್ಲ ಎಂದು ಹೇಳಿ, ಇಂಡೋಚೀನದ ವಿಷಯದಲ್ಲಿ ನಿರಾಸೆಯನ್ನೆ ಪರ್ಯಾಯವಾಗಿ ಸೂಚಿಸಿದರು.

ಅಮೇರಿಕಕ್ಕೆ ಮೊರೆ

ಸ್ವಾಭಾವಿಕವಾಗಿಯೇ ಫ್ರೆಂಚ ಸರಕಾರವನ್ನು ಈ ಹೇಳಿಕೆ ಗಾಬರಿಗೊಳಿಸಿತು— ಮಂತ್ರಿಮಂಡಳದ ವಿಶೇಷ ಸಭೆಯೊಂದು ಪೇರಿಸಿನಲ್ಲಿ ಜರಗಿತು. ಆದರೆ ಅಧ್ಯಕ್ಷ ಐಸನ ಹೋವರರು ಪತ್ರಿಕಾ ಪರಿಷತ್ತಿನಲ್ಲಿ ಡಲ್ಲೇಸರ ಹೇಳಿಕೆಗೆ ಸ್ಪಷ್ಟೀಕರಣವನ್ನು ನೀಡಿದರು. ಇಂಡೋಚೀನವನ್ನು ಸ್ವತಂತ್ರ ಜಗತ್ತು ಕೈಬಿಡಬಾರದು ಎಂದು ಹೇಳುತ್ತಾ ಐಸನ ಹೋವರರು "ಆದರೆ ವೀಟನಾಮ, ಲಾವೋಸ ಮತ್ತು ಕಂಬೋಡಿಯಾಗಳಿಂದ ನಮಗೆ ಆಮಂತ್ರಣವು ಮೊದಲು ಬರಬೇಕು" ಎಂದು ನುಡಿದರು. ಯಾವುದೇ ರಾಷ್ಟ್ರಕ್ಕೆ ತನ್ನನ್ನು ಉಳಿಸಿಕೊಳ್ಳುವ ಇಚ್ಛೆ ಇಲ್ಲದಿದ್ದರೆ, ಸ್ವತಂತ್ರ ಜಗತ್ತು ಅದನ್ನು ಉಳಿಸಿಕೊಳ್ಳಲಾರದು ಎಂದವರು ಸಾರಿದರು. ಇದರಿಂದ ಸಮಾಧಾನಗೊಂಡ ಫ್ರೆಂಚರು ಅಮೇರಿಕಕ್ಕೆ ವಿನಂತಿಯನ್ನು ಸಲ್ಲಿಸಿ, ತಮಗೆ ನೆರವು ನೀಡಬೇಕೆಂದು ಕೇಳಿರುವರು. ಫ್ರಾನ್ಸು ಶಸ್ತ್ರಾಸ್ತ್ರಗಳ ಸಹಾಯವನ್ನು ಕೇಳಿದೆಯೋ ಅಥವಾ ಪ್ರತ್ಯಕ್ಷ ಯುದ್ಧದಲ್ಲಿ ಭಾಗವಹಿಸುವಂತೆ ಅಮೇರಿಕವನ್ನು ಒತ್ತಾಯಿಸಿರುವುದೇ ಎಂಬ ವಿಷಯ ಸ್ಪಷ್ಟವಾಗಿಲ್ಲ. ಆದರೆ ವಾಶಿಂಗಟನ್ನಿನಲ್ಲಿ ಉಭಯ ರಾಷ್ಟ್ರಗಳ ಪ್ರತಿನಿಧಿಗಳೊಳಗೆ ಉಚ್ಚಮಟ್ಟದ ಮಾತುಕತೆಗಳು ನಡೆಯುತ್ತಿರುವುದಂತೂ ಸತ್ಯ.

ಬ್ರಿಟನ್ನಿನ ಅಸಹನೆ

ಅಮೇರಿಕವು ಫ್ರಾನ್ಸಿನೊಂದಿಗೆ ರಹಸ್ಯವಾಗಿ ಈ ಕುರಿತು ಸಮಾಲೋಚನೆಗಳಲ್ಲಿ ತೊಡಗಿರುವುದು ಬ್ರಿಟನರ ಆತ್ಮಾಭಿಮಾನವನ್ನು ಕೆಣಕಿದೆ- ತನ್ನನ್ನು ವಿಚಾರಿಸದೆ ಅಮೇರಿಕವು ಇದೆಂತಹ ಮಾತುಕತೆಯಲ್ಲಿ ಮುಳುಗಿದೆ ಎಂದು ಬ್ರಿಟನು ಪ್ರಶ್ನಿಸುತ್ತದೆ. ಆಗ್ನೇಯ ಏಶ್ಯದ ಸಂರಕ್ಷಣೆಯಲ್ಲಿ ಮುಖ್ಯ ಪಾತ್ರ ವಹಿಸುವ ಹುಮ್ಮಸ್ಸುಳ್ಳ ಬ್ರಿಟನ್ನಿನ ವರ್ಚಸ್ಸಿಗೆ ಅಮೇರಿಕದ ರಹಸ್ಯ ಸಂಧಾನ ಕುಂದುತರುತ್ತದೆಂದು ಅನೇಕ ಪ್ರಸಿದ್ಧ ಪತ್ರಿಕೆಗಳು ಟೀಕಿಸಿರುತ್ತವೆ. ಆಗ್ನೇಯ ಏಶ್ಯ ಸಂರಕ್ಷಣೆಯ ಬಗ್ಗೆ ಕೊನೆಯ ನಿರ್ಣಯವನ್ನು ಜಿನೇವಾ ಪರಿಷತ್ತಿನ ಫಲಶ್ರುತಿಯು ತಿಳಿದು ಬರುವ ಮೊದಲು ಕೈಕೊಳ್ಳುವುದು ಅಸಾಧ್ಯವೆಂದು ಚರ್ಚಿಲ್ಲರು ಹೇಳಿದ್ದರೂ— ಅಮೇರಿಕವು ಫ್ರೆಂಚರೊಡನೆ ನಡೆಸುವ ಸಂಧಾನದ ವಿಷಯದಲ್ಲಿ ಬ್ರಿಟಿಷರು ಅಸಹನೆ ತೋರುತಿದ್ದಾರೆ. ಐಸೆನ ಹೋವರರು ಇದನ್ನು ಗುರುತಿಸಿ, ಫ್ರೆಂಚರೊಡನೆ ನಡೆಸಿದ ಮಾತುಕತೆಯ ವಿವರಗಳನ್ನು ಬ್ರಿಟನ್ನಿಗೆ ತಿಳಿಸುವುದಾಗಿ ಸಾಂತ್ವನದ ಮಾತನ್ನಾಡಿರುವರು.

ಗಾಯಾಳುಗಳ ಸಾಗಾಟ

ಈ ನಡುವೆ ಗಾಯಾಳುಗಳಾದ ಫ್ರೆಂಚ ಸೈನಿಕರನ್ನು ವಾಪಾಸು ಪಡೆಯುವ ಉದ್ದೇಶದಿಂದ ಮಾತುಕತೆಗಳನ್ನು ನಡೆಸಬಹುದೆಂದು ವೀಟಮಿನರು ಸೂಚಿಸಿದರು. ಫ್ರೆಂಚರು ಒಡನೆಯೇ ಇದನ್ನು ಒಪ್ಪಿಕೊಂಡು, ಈ ಕುರಿತು ವೀಟಮಿನರೊಡನೆ ಒಂದು ಒಡಂಬಡಿಕೆಯನ್ನು ಮಾಡಿಕೊಂಡರು. ಡೀನ ಬೀನ ಫೂ ಕೋಟೆಯಿಂದ ಗಾಯಾಳುಗಳನ್ನು ಸಾಗಿಸಿಕೊಂಡು ಹೋಗಲು ಮಾರ್ಗವನ್ನು ಗೊತ್ತುಪಡಿಸಿ, ಅದರ ಮೇಲೆ ಬಾಂಬದಾಳಿ ನಡೆಯಲಾಗದೆಂದು ತೀರ್ಮಾನಿಸಿದರು. ಆದರೆ ಗಾಯಾಳುಗಳನ್ನು ಸಾಗಿಸಲು ಒಂದು ತಿಂಗಳಿಗಿಂತಲೂ ಅಧಿಕ ಸಮಯ ತಗಲಬಹುದೆಂದು ಆ ಬಳಿಕ ತೋರಿಬಂತು. ಅಲ್ಲದೆ ಈ ದಾರಿಯ ಮೂಲಕ ವೀಟಮಿನರು ತಮ್ಮ ಸೈನ್ಯಕ್ಕೆ ಬೇಕಾದ ಸರಕುಗಳ ಪೂರೈಕೆಯನ್ನು ಹೆಚ್ಚಿಸಿಕೊಂಡಾರೆಂಬ ಭಯವೂ ಅಂಕುರಿಸಿತು. ಪರಿಣಾಮವಾಗಿ ಈ ಒಪ್ಪಂದವನ್ನು ಫ್ರೆಂಚ ಸೈನ್ಯಾಧಿಪತ್ಯ ರದ್ದುಗೊಳಿಸಿ ಭೀಕರ ಬಾಂಬು ದಾಳಿಯನ್ನು ತೊಡಗಿದೆ. ಅಲ್ಲದೆ, ಹೊಸತೊಂದು ನಿಯೋಗವನ್ನು ವೀಟಮೀನರೊಡನೆ ಬೇರೆಯೇ ಒಡಂಬಡಿಕೆ ಮಾಡಿಕೊಳ್ಳುವ ಉದ್ದೇಶದಿಂದ ಕಳಿಸಿಕೊಟ್ಟಿದೆ.

ಆಶಾದಾಯಕ ವಾತಾವರಣ

ಜಿನೇವಾದ ಪರಿಷತ್ತಿನಲ್ಲಿ "ಆಶಾದಾಯಕ" ವಾತಾವರಣವು ಕಂಡು ಬರುವುದಾಗಿ ವರದಿಗಳು ತಿಳಿಸುತ್ತವೆ— ವೀಟಮಿನರು ಮಾಡಿದ ಎರಡು ಅಂಶಗಳ ಸೂಚನೆಯನ್ನು ವೀಟನಾಮದ ಪ್ರತಿನಿಧಿಗಳು ಅವ್ಯವಹಾರ್ಯವೆಂದು ತಿರಸ್ಕರಿಸಿ, ಬೇರೆಯೇ ಹೊಸ ಸೂಚನೆಗಳನ್ನು ಮುಂದಿಟ್ಟರು. ಇಂಡೋಚೀನದಲ್ಲಿ ಅಂತಾರಾಷ್ಟ್ರೀಯ ನಿಯಂತ್ರಣದಲ್ಲಿ ಕದನವಿರಾಮವು ನಡೆಯಬೇಕೆಂದು ಅವರು ಹೇಳಿದರು. ಚೀನಾದ ಚಾವೆನ್‌ಲಾಯಿಯವರು ಮಾತನಾಡುತ್ತಾ ತಮ್ಮ ನಿಲುವೆಯ ಸಮರ್ಥನೆಗಾಗಿ ಪ್ರಧಾನ ಮಂತ್ರಿ ನೆಹರೂರವರು ಭಾರತದ ಪಾರ್ಲಿಮೆಂಟಿನಲ್ಲಿ ಇಂಡೋಚೀನದ ತಂಟೆಯು ವಸಾಹತುವಾದದ ವಿರುದ್ಧ ನಡೆದ ಪ್ರತಿಭಟನಾ ಚಳುವಳಿಯೆಂದೂ ಇದನ್ನು ದಬ್ಬಾಳಿಕೆ ಅಥವಾ ಹೋಳು ಮಾಡಿ ಆಳು ಎಂಬ ನೀತಿಯಿಂದ ಬಿಡಿಸಲು ಅಸಾಧ್ಯವೆಂದೂ ಹೇಳಿದುದನ್ನು ಉಲ್ಲೇಖಿಸಿದರು. ಮುಂದೆ ಮಾತನಾಡಿದ ರಶಿಯಾದ ಮೊಲೊಟೋವರು ವೀಟಮಿನರ ಸೂಚನೆಗಳನ್ನೇ ಕೆಲಮಟ್ಟಿಗೆ ಪರಿಷ್ಕರಿಸಿ, ಹೊಸ ಸಲಹೆಗಳನ್ನು ಮುಂದಿಟ್ಟರು. ಇಂಡೋಚೀನದಲ್ಲಿ ತಟಸ್ಥ ರಾಷ್ಟ್ರಮಂಡಳಗಳ ಮೇಲ್ವಿಚಾರಣೆಯಲ್ಲಿ ಕದನ ವಿರಾಮವು ನೆರವೇರಬೇಕೆಂಬುದೇ ಮೊಲೊಟೋವರ ಸೂಚನೆಯ ತಿರುಳು. ಇದನ್ನು ಪಶ್ಚಿಮದ ಪ್ರಭೃತಿಗಳು ಮನ್ನಿಸುವ ಸಂಭವ ಹೆಚ್ಚಾಗಿದೆಯೆಂದು ನಿರೀಕ್ಷಕರ ಅಭಿಪ್ರಾಯ. ಈ ತಟಸ್ಥ ರಾಷ್ಟ್ರಮಂಡಳದಲ್ಲಿ ಭಾರತ, ಥ್ಯಾಲೇಂಡ, ಫಿಲಿಪ್ಪೈನ್ಸ್, ಪೋಲಂಡ, ಝೆಕೊಸ್ಲೊವಾಕಿಯಾಗಳಿರಬೇಕೆಂದು ಸೂಚನೆ ಬಂದಿರುವುದಾಗಿಯೂ ಕೇಳುತ್ತೇವೆ. ಭಾರತವು ಇಂತಹ ಹೊಣೆಯನ್ನು ಹೊರಲು ಒಪ್ಪುವುದಾಗಿ ಪ್ರಧಾನ ಮಂತ್ರಿಗಳು ಮೊದಲೇ ಹೇಳಿರುವರು.

ಕೊರಿಯದ ಚುನಾವಣೆ

ಆದರೆ ಈ ವಿಷಯದಲ್ಲಿ ಯಾವುದೇ ನಿರ್ಣಯ ಸ್ವೀಕರಿಸಲ್ಪಟ್ಟಿಲ್ಲ—ಸೋಮವಾರ ದಿನ ಗುಪ್ತಸಭೆಯೊಂದು ಜರಗಿತು; ಇಲ್ಲಿ ಶಾಂತಿ ಪ್ರಸ್ಥಾಪನಾ ಕಾರ್ಯಕ್ಕೆ ಉಪಯುಕ್ತವಾದ ಕ್ರಮಗಳನ್ನು ಕುರಿತು ಚರ್ಚೆ ನಡೆಯಿತೆಂದು ಮತ್ತು ತುಸು ಪ್ರಗತಿಯನ್ನು ಸಾಧಿಸಲಾಯಿತೆಂದೂ ಮಾತ್ರ ತಿಳಿದುಬರುತ್ತದೆ. ಮೊಲೋಟೋವರ ಸೂಚನೆಯ ವಿವರಗಳನ್ನು ಗೊತ್ತುಪಡಿಸುವಾಗ ಏಕಾಭಿಪ್ರಾಯವು ವ್ಯಕ್ತಗೊಂಡರೆ ಮಾತ್ರ ಕದನವಿರಾಮದ ಆಶೆ ಫಲಿಸಬಲ್ಲುದು. ಅಂತೂ ಪರಿಷತ್ತು ಇಂಡೋಚೀನದ ಕುರಿತು ಹೆಚ್ಚಿನ ಆಸ್ಥೆಯನ್ನೇನೋ ತೋರಿಸುತ್ತಿದೆ—ಈ ಪ್ರಶ್ನೆಯ ಗೊಂದಲದಲ್ಲಿ ಕೊರಿಯಾದ ಸಮಸ್ಯೆ ಇತ್ಯರ್ಥವಾಗದೆಯೇ ಉಳಿದುಕೊಂಡಿದೆ. ಉತ್ತರ ದಕ್ಷಿಣ ಕೊರಿಯಾಗಳೆಲ್ಲ ಹೊಸತಾಗಿ ಚುನಾವಣೆ ನಡೆಸಬೇಕೆಂಬ ಕಮ್ಯುನಿಷ್ಟರ ಸೂಚನೆಯನ್ನು ಸಿಂಗಮನರೀಯವರೂ ಪಾಶ್ಚಾತ್ಯ ರಾಷ್ಟ್ರಗಳೂ ನಿರಾಕರಿಸಿದರು. ದಕ್ಷಿಣ ಕೊರಿಯದಲ್ಲಿ ಚುನಾವಣೆ ನಡೆಸಬೇಕೆಂಬ ತತ್ವವೇ ರ್‍ಹೀಯವರಿಗೆ ಒಗ್ಗುವುದಿಲ್ಲ—ಈಡನ್ನರು ಉಭಯ ಪಕ್ಷಗಳ ಭಿನ್ನಾಭಿಪ್ರಾಯವನ್ನು ಕಡಿಮೆ ಮಾಡ ಬಯಸಿ, ಹೊಸತೊಂದು ಸೂಚನೆ ಮಾಡಿರುವರು. ಅದರಂತೆ, ಚುನಾವಣೆಗಳ ಮೇಲ್ವಿಚಾರಣೆ ನಡೆಸುವ ಸಮಿತಿಯಲ್ಲಿ ಕೊರಿಯಾ ಯುದ್ಧದಲ್ಲಿ ಭಾಗವಹಿಸಿದ ರಾಷ್ಟ್ರಗಳಿಗೂ ಸ್ಥಾನ ಕೊಡಲಾಗುವುದು. ಕೇವಲ ಕೊರಿಯನ್ನರೇ ತುಂಬಿರುವ ಕಮ್ಯುನಿಷ್ಟ ಸಮಿತಿಗಿಂತ ಅಥವಾ ರಾಷ್ಟ್ರಸಂಘವೇ ಜೀವಾಳವಾಗಿರುವ ಪಾಶ್ಚಾತ್ಯ ಸಮಿತಿಗಿಂತ ಈ ತಟಸ್ಥರ ಸಮಿತಿ ನ್ಯಾಯ ದೃಷ್ಟಿಯಿಂದ ಉಚಿತವೆನಿಸುತ್ತದೆ.

ಪೇರಿಸಿನ ಮಾತುಕತೆ

ಫ್ರೆಂಚ ಭಾರತದ ಪ್ರದೇಶಗಳ 'ಭವಿಷ್ಯ'ವನ್ನು ಕುರಿತು ಪೇರಿಸಿನಲ್ಲಿ ಮಾತುಕತೆಗಳು ಜರಗುತ್ತಿವೆ. ಭಾರತದ ಪ್ರತಿನಿಧಿ ಮಂಡಳದ ಧುರೀಣತ್ವವನ್ನು ವಿದೇಶ ಶಾಖೆಯ ಕಾರ್ಯದರ್ಶಿ ಶ್ರೀ ಆರ್. ಕೆ. ನೆಹರೂ ವಹಿಸಿಕೊಂಡಿರುವರು. ಈ ಮಾತುಕತೆಗಳಿಗೆ ಸೌಹಾರ್ದಯುತ ವಾತಾವರಣದ ಹಿನ್ನೆಲೆ ದೊರಕುವಂತೆ, ಭಾರತ ಸರಕಾರವು ಫ್ರೆಂಚ ಸ್ವಾಸ್ಥ್ಯಗಳ ವಿಷಯದಲ್ಲಿ ಹೇರಿದ್ದ ಕೆಲವು ನಿರ್ಬಂಧಗಳನ್ನು ಸಡಿಲಿಸಿದೆ. ಫ್ರಾನ್ಸಿನಲ್ಲಿಯೂ ಸಾರ್ವಜನಿಕಾಭಿಪ್ರಾಯವು ಮಾತುಕತೆಗಳಿಗೆ ಪ್ರೋತ್ಸಾಹದಾಯಕವಿರುತ್ತದೆ—ಅಲ್ಲಿಯ ಪತ್ರಿಕೆಗಳು ತಮ್ಮ ನಿಲುವೆಯನ್ನು ಬದಲಿಸಿ, ಮಾತುಗಳನ್ನು ಸ್ವಾಗತಿಸುತ್ತಾ ಸಾಮ್ಯ ಸಲಹೆಗಳನ್ನು ನೀಡಿರುತ್ತವೆ. ಈ ಸಂಧಾನದಿಂದ ಫಲ ದೊರಕಬಹುದೆಂಬ ಗಾಬರಿಯಿಂದಲೋ ಏನೋ, ಫ್ರೆಂಚ ಭಾರತದ ವಣಿಕ ಸಂಘವು ಒಂದು ಸೂಚನೆಯನ್ನು ಮುಂದೆ ಮಾಡಿ ಸಂಧಿಯು ನಡೆದದ್ದೇ ಆದರೆ ವ್ಯಾಪಾರಿಗಳಿಗೆ ಕೆಲವು ಸವಲತ್ತುಗಳನ್ನು ನೀಡಬೇಕೆಂದೂ ಪಾನಪ್ರತಿಬಂಧದಂತಹ ಕ್ರಮ ಕೈಗೊಳ್ಳಕೂಡದೆಂದೂ ಕೇಳಿದೆ. ಫ್ರೆಂಚ ಸ್ವಾಸ್ಥ್ಯಗಳು ಕಳ್ಳ ಸಾಗಾಟದ ಕೇಂದ್ರಗಳಾಗಿರುತ್ತವೆಂಬುದಕ್ಕೆ ಈ ಮಾತೇ ಪ್ರತ್ಯಕ್ಷ ನಿದರ್ಶನ! ಪೇರಿಸಿನಲ್ಲಿ ಸಂಧಾನದ ಮಾತುಕತೆ ನಡೆಯುತ್ತಿರುವುದರಿಂದ, ಪಾಂಡಿಚೇರಿಯ ಕೇಂದ್ರ ಭೂಭಾಗದಲ್ಲಿ ವಿಮೋಚನಾ ಚಳವಳವು ಮೆಲುನಡೆಯನ್ನು ಹೊಂದಿದೆ. ಆದಾಗ್ಯೂ ಈಗಾಗಲೇ ವಿಮೋಚನೆ ಹೊಂದಿದ ೬೦ ಹಳ್ಳಿಗಳ ಆಡಳಿತ ಹೊಣೆಯನ್ನು ೧೯ ಜನರ ಮಂಡಳಿಗೆ ಒಪ್ಪಿಸಿಕೊಡಲಾಗಿದೆ. ಮುಂದಿನ ನಿರ್ಣಯಗಳನ್ನು ಕಾರ್ಯಗತಗೊಳಿಸಲು ಮಾನ್ಸ್ಯುರ್ ಗೋಬರ್ಟರು ಧುರೀಣರಾಗಿರುವ ಮೂರು ಮಂದಿಯ ಸಮಿತಿಯನ್ನು ಜನತಾ ಪ್ರತಿನಿಧಿಗಳು ನೇಮಿಸಿರುವರು

ಪಾಕಿಸ್ತಾನದಲ್ಲಿ

ಪಾಕಿಸ್ತಾನದಲ್ಲಿ ತುಂಬ ಉದ್ವೇಗಕರವಾದ ವಾತಾವರಣವು ಕಂಡುಬರುತ್ತದೆ- ಪೂರ್ವ ಬಂಗಾಳದಲ್ಲಿ ಭ.ಸಾ ಪ್ರಶ್ನೆಯಿಂದಾಗಿ ಪ್ರಚಂಡ ಪರಾಭವವನ್ನು ಹೊಂದಿದ ಮುಸ್ಲಿಂ ಲೀಗು, ಬಂಗಾಲಿ ಮತ್ತು ಉರ್ದು ಎರಡೂ ಭಾಷೆಗಳನ್ನೂ ಸರಕಾರದ ಭಾಷೆಯಾಗಿ ಸ್ವೀಕರಿಸಲು ನಿರ್ಣಯಿಸಿತು. ಘಟನಾಸಮಿತಿ ಇದನ್ನು ಅನುಮೋದಿಸಿತು – ಇದು ಪಶ್ಚಿಮ ಪಾಕಿಸ್ತಾನವನ್ನು ಕೆರಳಿಸಿರುವುದು. ಪತ್ರಿಕೆಗಳೂ ಸಾರ್ವಜನಿಕ ಧುರೀಣರೂ ಇದರ ವಿರುದ್ಧ ಆಕ್ಷೇಪವೆತ್ತಿರುವರು. ಪತ್ರಿಕೆಗಳು ಇದೇ ೨೦ನೇ ದಿನಾಂಕ ಹರತಾಳವನ್ನು ಆಚರಿಸುತ್ತವೆ. ಧುರೀಣರ ಬೆಂಬಲವೂ ಸರಕಾರಕ್ಕೆ ತಪ್ಪಿಹೋಗುತ್ತಿದೆ. ಮಂತ್ರಿಮಂಡಲದಲ್ಲಿ ತೀವ್ರ ಬಿಕ್ಕಟ್ಟು ಸಂಭವಿಸಿದೆಯೆಂದೂ ಜಾಫರುಲ್ಲಾಖಾನರೂ ಇನ್ನೊಬ್ಬರೂ ರಾಜೀನಾಮೆ ಕೊಟ್ಟು ನಿವೃತ್ತರಾಗಿರುವರೆಂದೂ ಹೇಳಲಾಗುತ್ತದೆ. ಸಿಂಧದಲ್ಲಿ ಮೂರು ಮಂತ್ರಿಗಳನ್ನು ಪದಚ್ಯುತ ಮಾಡಲಾಯಿತು; ಇದಕ್ಕೆ ಪ್ರತೀಕಾರವೋ ಎಂಬಂತೆ ಪಾಕ ಪಂಜಾಬದ ಮುಖ್ಯಮಂತ್ರಿ ಫಿರೋಜಖಾನನೂನರನ್ನು ಉಚ್ಚಾಟನೆಗೊಳಿಸ ಪ್ರಬಳ ಸಂಚೂ ನಡೆಯುತ್ತದೆ. ಪೂರ್ವ ಪಾಕಿಸ್ತಾನದಲ್ಲಿ ಕೂಲಿಕಾರರ ದಂಗೆಗಳು ಉಂಟಾಗುತ್ತವೆ. ಮೊನ್ನೆ ತಾನೆ ಆದಂಜೀ ಗಿರಣಿ ವಲಯದಲ್ಲಿ ಕೂಲಿಕಾರರು ಕ್ಷುಲ್ಲಕ ಕಾರಣಕ್ಕಾಗಿ ಹೊಡೆದಾಡಿಕೊಂಡರು—ಫಲತಃ ೨೦೦ ಮಂದಿ ಮರಣಗೊಂಡದ್ದಲ್ಲದೆ, ಢಾಕ್ಕಾದ ಆಸ್ಪತ್ರೆಗಳಲ್ಲೆಲ್ಲಾ ಗಾಯಾಳುಗಳು ಮಲಗಿರುವರು. ಇದರ ಹಿನ್ನೆಲೆಯಲ್ಲಿ ಕಮ್ಯೂನಿಷ್ಟರ ಮತ್ತು ದೇಶದ್ರೋಹಿಗಳ ಕೈವಾಡವಿದೆಯೆಂದು ಸರಕಾರ ಆರೋಪಿಸುತ್ತದೆ ಇಷ್ಟು ಗೊಂದಲದ ನಡುವೆಯೂ, ಕಾಶ್ಮೀರದ ಕುರಿತು ಭಾರತದ ರಾಷ್ಟ್ರಪತಿಗಳು ಹೊರಡಿಸಿದ ಎರಡು ವರ್ಷಗಳ ಹಿಂದಿನ ಕರಾರನ್ನು ಕಾರ್ಯಗತಗೊಳಿಸುವ ಆಜ್ಞೆಗೆ ಪ್ರಚಂಡ ಪ್ರತಿಭಟನೆಯನ್ನು ನೀಡಲು ಪಾಕ ಸರಕಾರ ಆತುರಗೊಂಡಿದೆ.

ಉಡುಪಿ

ವಿವಾಹ ಸಮಾರಂಭಗಳು—ಶ್ರೀ ಬಡಗಬೆಟ್ಟು ಮಹಾಬಲ ಹೆಗ್ಡೆಯವರ ಪುತ್ರಿ ಮನೋರಮ ಇವರನ್ನು ಶ್ರೀ ಮಟ್ಟಾಡಿ ಕೃಷ್ಣಯ್ಯ ಶೆಟ್ಟರ ಪುತ್ರ ಶ್ರೀ ಚಂದ್ರಶೇಖರ ಹೆಗ್ಡೆಯು ದಿನಾಂಕ ೧೬ನೇ ಮಧ್ಯಾಹ್ನ ಸ್ಥಳೀಯ ರಾಮಕೃಷ್ಣ ಥಿಯೇಟರಿನಲ್ಲಿ ಸಂಭ್ರಮದಿಂದ ವಿವಾಹವಾದರು

❖ ಕಾರ್ಕಳ ಬೋರ್ಡ್ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾದ ಶ್ರೀ ಬಿ. ವಾಸುದೇವ ಶೆಟ್ಟರ ಪುತ್ರ ಶ್ರೀ ಬಿ. ತಿಮ್ಮಪ್ಪ ಶೆಟ್ಟಿ ಬಿ. ಎ. ಬಿ. ಟಿ., ಯವರು ನಿವೃತ್ತ ಸಬ್ ರಿಜಿಸ್ಟ್ರಾರರಾದ ಶ್ರೀ ಕುಡೂರು ಸುಬ್ಬಣ್ಣ ಶೆಟ್ಟರ ಪುತ್ರಿ ಶ್ರೀಮತಿ ಕಲಾವತಿಯನ್ನು ಇದೇ ತಾ. ೧೮ನೇ ಸಂಜೆ ಮಂಗಳೂರಲ್ಲಿ ಶ್ರೀ ರಾ. ಕೃ. ವಿದ್ಯಾರ್ಥಿ ಭವನದಲ್ಲಿ ವಿಜೃಂಭಣೆಯಿಂದ ವಿವಾಹವಾದರು.

❖ ಕೊಚ್ಚಿಕಾರ್ ಪಾಂಡುರಂಗ ಪೈಗಳ ಪುತ್ರಿ ವತ್ಸಲಾ ದೇವಿಯವರನ್ನು, ಮಾಬುಕಳ ದಿವಂಗತ ಲಕ್ಷ್ಮಣ ಶೆಣೈಯವರ ದ್ವಿತೀಯ ಪುತ್ರ ಹನುಮಂತ ಶೆಣೈಯವರು ದಿನಾಂಕ ೧೬ರಂದು ಬ್ರಹ್ಮಗಿರಿಯಲ್ಲಿರುವ ಕೊಚ್ಚಿಕಾರ್ ನಿವಾಸದಲ್ಲಿ ವಿವಾಹವಾದರು.

ನಿಧನ

❖ ಪ್ರಸಿದ್ಧ ಪಾತ್ರೆ ವ್ಯಾಪಾರಿಗಳಾದ ಶ್ರೀ ಕಲ್ಮಂಜೆ ವ್ಯಾಸಾಚಾರ್ಯರು ತಾ. 19ರಲ್ಲಿ ಮೃತರಾದುದು ವಿಷಾದಕರವಾಗಿದೆ. ಆತ್ಮಹತ್ಯೆಯಿಂದ. ತಿಳಿದು ಬರುತ್ತದೆ.

ನಡೆಯುವ ಚಿತ್ರ:—

ಮನೆಮಂದಿಯೆಲ್ಲ ತಪ್ಪದೇ ನೋಡಬೇಕಾದ ಅಪೂರ್ವ ಚಿತ್ರ—

ಇದೀಗ ಬಂದಿದೆ –

ಪರಾಶಕ್ತಿ (ತಮಿಳು)

ಶಿವಾಜಿ ಗಣೇಶನ್, ಶ್ರೀರಂಜನಿ (ಜೂನಿಯರ್) ಪಂಢರಿಬಾಯಿ, ಸಹಸ್ರನಾಮಂ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ಮುಂದಿನ ಚಿತ್ರ: **ಹರಿದರ್ಶನ** [ಹಿಂದಿ] ನಿರುಪಾ, ಲೀಲಾ ಚಿಟ್ನಿಸ್, ಅನಂತ ಮರಾಠೆ

ಬರಲಿರುವ ಚಿತ್ರಗಳು: **ಧರ್ಮ ದೇವತಾ, ನನ್ಹೆ ಮುನ್ಹೆ, ಸೌಭಾಗ್ಯಲಕ್ಷ್ಮಿ** [ಕನ್ನಡ]

(೩ನೇ ಪುಟದಿಂದ)

ಬಂದವರೊಳಗನ್ನೆ ಇದನ್ನು ಬೆಳ್ಳಿ ಪ್ರ ದೇಶದಲ್ಲಿ ಒಳಗಿನ ಪ್ರಂಬಿಕೆಯನ್ನು ಅ ವರು ವ್ಯಕ್ತಗೊಳಿಸಿದರು.

"ಕ" ವರ್ಗದ ರಾಜ್ಯಗಳು

ಭಾರತ ಒಕ್ಕೂಟದಲ್ಲಿರುವ "ಕ" ವರ್ಗದ ರಾಜ್ಯಗಳ ಮುಖ್ಯ ಮಂತ್ರಿಗಳ ಪರಿಷತ್ತೊಂದು ಡಿಲ್ಲಿಯಲ್ಲಿ ಸೇರಿದಾಗ, ಅತ್ಯಂತ ಅಗತ್ಯವೆಂದು ಸಿದ್ಧವಾಗದ ಹೊರತು ಭಾರತದ ಈಗಿನ ಆಡಳಿತ ವ್ಯವಸ್ಥೆಯನ್ನು ಪುನರ್ಘಟಿಸುವುದು ಬೇಡ ಎಂಬ ನಿರ್ಣಯ ಸ್ವೀಕಾರಗೊಂಡಿತು. ರಾಜ್ಯಗಳ ಪುನರ್ಘಟನೆಯ ಪ್ರಶ್ನೆಯನ್ನು ವಿಚಾರಿಸಲು ಆಯೋಗವೊಂದು ಕೆಲಸ ನಡೆಸುತ್ತಿರುವುದು ಎಲ್ಲರಿಗೂ ಗೊತ್ತಿದೆ—ಈ ಆಯೋಗದ ಶಿಫಾರಸುಗಳ ಪರಿಣಾಮವಾಗಿ "ಕ"ವರ್ಗದ ರಾಜ್ಯಗಳು ನೆರೆಯ ರಾಜ್ಯಗಳೊಂದಿಗೆ ಲೀನವಾಗುವ ಸಂಭವವಿರುತ್ತದೆ. ಇದನ್ನು ಪ್ರತಿಭಟಿಸುವುದೇ ಮುಖ್ಯ ಮಂತ್ರಿಗಳು ಸ್ವೀಕರಿಸಿರುವ ನಿರ್ಣಯದ ಉದ್ದೇಶ. ಗೊತ್ತುವಳಿಯು ಸಂಬಂಧಿಸಿದ ಜನತೆಯ ಒಮ್ಮತವಿಲ್ಲದೆ ರಾಜ್ಯಗಳ ಪುನಾರಚನೆಯ ಪ್ರಯತ್ನ ಕೈಗೊಂಡಲ್ಲಿ ಅಭಿವೃದ್ಧಿ ಯೋಜನೆಗಳಿಗೆ ಆತಂಕವಾದೀತೆಂದೂ ಎಚ್ಚರಿಸುತ್ತದೆ.

ಕನ್ನಡಿಗರ ಬಿನ್ನಹ

ಆಂಧ್ರ ರಾಜ್ಯದ ನಿರ್ಮಾಣ ಕಾಲದಲ್ಲಿ ತೆಲುಗು ಪ್ರದೇಶಗಳೆಂದು ತೀರ್ಮಾನಿಸಲಾದ ಆದವಾನಿ, ಆಲೂರ ಹಾಗು ರಾಯದುರ್ಗ ತಾಲೂಕುಗಳ ಕನ್ನಡಿಗರು ರಾಜ್ಯಗಳ ಪುನರ್ಘಟನೆಯ ಆಯೋಗಕ್ಕೆ ಸುದೀರ್ಘವಾದ ಮನವಿಯೊಂದನ್ನು ಒಪ್ಪಿಸಿ, ಸಂಯುಕ್ತ ಕರ್ನಾಟಕ ರಾಜ್ಯದಲ್ಲಿ ಈ ಪ್ರದೇಶಗಳ ಸೇರ್ಪಡೆಯಾಗಬೇಕೆಂದು ಒತ್ತಾಯಿಸಿರುವರು. ಐತಿಹಾಸಿಕ, ಭೌಗೋಲಿಕ, ಆರ್ಥಿಕ, ಸಾಂಸ್ಕೃತಿಕ ದೃಷ್ಟಿಕೋಣದಿಂದಲೂ, ಭಾಷೆ, ಆಡಳಿತ ಸೌಕರ್ಯ ವ್ಯಾಪಾರ ವ್ಯವಹಾರಗಳ ತಳಹದಿಯ ಮೇಲಿಂದಲೂ ಈ ತಾಲೂಕುಗಳು ಕನ್ನಡ ಪ್ರದೇಶವೆಂದು ಅವರ ಮನವಿ ತಿಳಿಸಿ ಹೇಳುತ್ತದೆ

ಸಿದ್ಧಯ್ಯನವರ ಮರಣ

ಮೈಸೂರು ಕಾಂಗ್ರೆಸಿನಲ್ಲಿ ವರ್ಚಸ್ವಿ ಧುರೀಣರೆನಿಸಿದ ಶ್ರೀ ಎಚ್. ಸಿದ್ಧಯ್ಯನವರು ದಿನಾಂಕ ೧೪ರಂದು ಪ್ರಾತಃಕಾಲ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮರಣಗೊಂಡರು. ಅವರು ಮಲೇರಿಯಾ ಜ್ವರದಿಂದ ಪೀಡಿತರಾಗಿ, ಶುಶ್ರೂಷೆಗೆಂದು ಆಸ್ಪತ್ರೆಯನ್ನು ಸೇರಿದ್ದರು. ಸಿದ್ಧಯ್ಯನವರು ಶಿವಮೊಗ್ಗ ಜಿಲ್ಲೆಯವರು. ಆ ಜಿಲ್ಲೆಯ ಸಾರ್ವಜನಿಕ ಜೀವನದಲ್ಲಿ ಮಹತ್ವದ ಪಾತ್ರವನ್ನು ವಹಿಸಿ, ಮುಂದೆ ಮೈಸೂರು ಕಾಂಗ್ರೆಸಿನಲ್ಲಿ ಕೆಲಸಮಾಡಿದರು. ಕೆ. ಸಿ. ರೆಡ್ಡಿಯವರ ಮಂತ್ರಿಮಂಡಳದಲ್ಲಿ ಕಂದಾಯ ಮಂತ್ರಿಗಳಾಗಿದ್ದರು. ಕಳೆದ ಮಹಾ ಚುನಾವಣೆಯಲ್ಲಿ ಅವರು ಸೊರಬ-ಶಿಕಾರಿಪುರ ಮತದಾರ ಕ್ಷೇತ್ರದಿಂದ ಶಾಸನ ಸಭೆಗೆ ಆಯ್ಕೆಗೊಂಡು; ಅದರ ಅಧ್ಯಕ್ಷರೆಂದು ಚುನಾಯಿತರಾದರು. ಮೈಸೂರಿನ ಈ ಧುರೀಣನ ಕಣ್ಮರೆಯಿಂದ ನೊಂದ ನಾಯಕರು ಇವರ ಅಂತ್ಯ ದರ್ಶನಕ್ಕೆ ಧಾವಿಸಿದರು; ಮುಕ್ತಕಂಠದಿಂದ ಗುಣಗಾನವನ್ನೂ ಮಾಡಿದರು

ಮದ್ರಾಸು ಶಾಸನ ಸಭೆಯಲ್ಲಿ

ಮದ್ರಾಸಿನ ಶಾಸನ ಸಭೆಯಲ್ಲಿ ಗಿರಣಿಗಳಲ್ಲಿ ತಯಾರಿಸಲಾದ ಕೆಲವು ನಮೂನೆಯ ಬಟ್ಟೆಯ ಪ್ರಥಮ ಮಾರಾಟದ ಮೇಲೆ ಹೆಚ್ಚಿನ ತೆರಿಗೆಯನ್ನು ಹೊರಿಸುವ ಮಸೂದೆಯು ಸ್ವೀಕಾರವಾಯಿತು. ಚಿನ್ನ ಬೆಳ್ಳಿಯ ಆಭರಣಗಳು ಮತ್ತಿತರ ಅಮೂಲ್ಯ ಹರಳುಗಳ ವ್ಯಾಪಾರದ ಮೇಲೆ ಅಧಿಕ ತೆರಿಗೆ ಹೊರಿಸಲು ತಂದ ಇನ್ನೊಂದು ಮಸೂದೆಗೆ ಶಾಸನ ಸಭೆಯಲ್ಲಿ ಸಾಕಷ್ಟು ಬೆಂಬಲ ಕಂಡುಬಾರದುದರಿಂದ ಅದನ್ನು ಬಿಟ್ಟುಕೊಡಲು ಸರಕಾರವು ತೀರ್ಮಾನಿಸಿತು. ಪ್ರಶ್ನೋತ್ತರ ವೇಳೆಯಲ್ಲಿ ಶ್ರೀ. ಟಿ. ಅನಂತ ಪೈಗಳಿಗೆ ಉತ್ತರಿಸುತ್ತಾ ಮಲ್ಪೆಯು ಅತಿ ದೊಡ್ಡ ಮೀನಿನ ವ್ಯವಸಾಯ ಕೇಂದ್ರವೆಂದು ಕೃಷಿ ಮಂತ್ರಿಗಳು ಒಪ್ಪಿಕೊಂಡರು; ಮತ್ತು ಈ ಕೇಂದ್ರದ ಅಭಿವೃದ್ಧಿಗೆ ಕೈಗೊಳ್ಳಲಾದ ಕ್ರಮಗಳನ್ನು ವಿವರಿಸಿದರು. ಖಾದಿಯನ್ನು ಜನಪ್ರಿಯವಾಗಿ ಮಾಡುವ ಉದ್ದೇಶದಿಂದ ಸರಕಾರವು ಉಡಿಗೆತೊಡಿಗೆಗಳ ಸುಧಾರಣಾ ವಿಷಯವನ್ನು ಪರ್ಯಾಲೋಚಿಸುತ್ತಿದೆಯೇ ಅಥವಾ ಶಾಲಾ ಮಕ್ಕಳಿಗೆ ಖಾದಿಯ ಅಂಗಿ ವಸ್ತ್ರಗಳನ್ನು ಹಂಚುತ್ತಿದೆಯೇ ಎಂಬ ಪೈಗಳ ಇನ್ನೊಂದು ಪ್ರಶ್ನೆಗೆ ಸುಬ್ರಹ್ಮಣ್ಯರು ನಕಾರಾತ್ಮಕವಾದ ಉತ್ತರವಿತ್ತರು.

ಬಾಳೆಕುದುರು—ಶ್ರೀ ಮಠದಲ್ಲಿ ದಿನಾಂಕ ೬, ೭ರಂದು ಶ್ರೀ ಶಂಕರ ಜಯಂತಿಯ ಸಭೆಯು ಶ್ರೀ ರಾಮಾನಂದ ಸರಸ್ವತಿ ಸ್ವಾಮಿಯವರ ಅಧ್ಯಕ್ಷತೆಯಲ್ಲಿ ಜರಗಿತು. ದಿನಾಂಕ ೬ರಂದು ಬೆಳಿಗ್ಗೆ ವೇದ ಗ್ರಂಥಗಳ ಪಾರಾಯಣಗಳೂ, ಪೂಜೆಗಳೂ ಜರಗಿದುವು, ಮಧ್ಯಾಹ್ನ ವಿದ್ವಾಂಸರಿಂದ ಧಾರ್ಮಿಕ ಉಪನ್ಯಾಸಗಳೂ ಜರಗಿದ ಬಳಿಕ ಅಧ್ಯಕ್ಷರ ಭಾಷಣವಾಯಿತು.

ದಿನಾಂಕ ೭ರಂದು ಬೆಳಿಗ್ಗೆ ಶಂಕರಾಚಾರ್ಯರ ತೈಲಚಿತ್ರವನ್ನು ಸಭೆಗೆ ಬಿಜಯಗೊಳಿಸಿದನಂತರ ಪ್ರಾರ್ಥನೆ, ವಿದ್ವಾಂಸರ ಭಾಷಣಗಳೂ, ಮಹಾಪೂಜಾನಂತರ ಸಹಸ್ರ ಜನರಿಗೆ ಸಂತರ್ಪಣೆಗಳೂ ಜರಗಿದುವು. ಮಧ್ಯಾಹ್ನ ಸಾಧಾರಣ ೩.೩೦ ಘಂಟೆಗೆ ಅಧಿವೇಶನಾಧ್ಯಕ್ಷ ಶ್ರೀ ಹರಿಹರಪುರ ಮಠಾಧೀಶರು ಸಭಾ ಮಂದಿರಕ್ಕೆ ಪ್ರವೇಶಿಸಿದರು. ಸ್ವಾಗತ ಭಾಷಣ, ವರದಿವಾಚನ, ಸಂದೇಶಗಳು ಓದಲ್ಪಟ್ಟುವು. ಬಳಿಕ ಶ್ರೀಗಳಾದ ಕೆ. ರಾಮಚಂದ್ರ ಸೋಮಯಾಜಿ, ಕೆ. ವೆಂಕಟ್ರಮಣ ಶಾಸ್ತ್ರಿ, ಮೊದಲಾದವರು ಭಾಷಣವಿತ್ತರು. ಕೀರ್ತನೆಯನಂತರ ಅಧಿವೇಶನಾಧ್ಯಕ್ಷರು ಶ್ರೀ ಶಂಕರಾಚಾರ್ಯರ ಅದ್ವೈತ ಮತದ ಕುರಿತು ಭಾಷಣವಿತ್ತರು. ಅಧ್ಯಕ್ಷರು ಸಭೆಯ ಉದ್ದೇಶ, ಕಾರ್ಯಕ್ರಮಗಳನ್ನು ಪ್ರಶಂಸಿಸಿ, ಆಶೀರ್ವಚಿಸಿದರು. ಅಧ್ಯಕ್ಷರ ಹಸ್ತದಿಂದ ಬಹುಮಾನವಿತರಣೆಯನಂತರ ಸಭೆಯು ಮುಕ್ತಾಯವಾಯಿತು.

ನೀಲಾವರ—ಸ್ಥಳೀಯ ಹಳೇ ವಿದ್ಯಾರ್ಥಿ ಸಂಘದ ಉದ್ಘಾಟನಾ ಸಮಾರಂಭವು ಶ್ರೀ ಕೆ. ಸಂಜೀವ ಭಟ್, ಎಂ. ಎ. ಎಲ್. ಟಿ., ಯವರ ಅಧ್ಯಕ್ಷತೆಯಲ್ಲಿ ಜರಗಿತು. ಉದ್ಘಾಟನಾ ಭಾಷಣವು ಶ್ರೀ ಪಿ. ಎಸ್. ಭೋಜರಾವ್, ಎಂ. ಎ. ಎಲ್. ಟಿ, ಇವರಿಂದ ಜರಗಿತು. "ಕೃಷ್ಣರಾಯಭಾರ"ವೆಂಬ ಯಕ್ಷಗಾನ ಕೂಟವೂ, ವಿವಿಧ ವಿನೋದಾವಳಿಗಳೂ ಜರಗಿದುವು.

ಮೂಲ್ಕಿ—ಸ್ಥಳೀಯ ಪಂಚಾಯತ್ ಬೋರ್ಡಿನ ವಯಸ್ಕರ ಶಾಲೆಯ ವರ್ಧಂತ್ಯುತ್ಸವವು ದಿನಾಂಕ ೯ರಂದು ಡಾ| ಎಂ. ರಾಯಪ್ಪ ಕಾಮತರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನೆ, ವರದಿವಾಚನಗಳ ಬಳಿಕ ವಯಸ್ಕರಲ್ಲಿ ಆಟ ಮತ್ತು ಹಾಜರಿಯಲ್ಲಿ ಮುಂದುವರಿದವರಿಗೆ ಬಹುಮಾನವಿತರಣೆಯಾಯಿತು. ಸಭಿಕರಲ್ಲಿ ಕೆಲವರು ಭಾಷಣವಿತ್ತರು. ಶ್ರೀ ಎಚ್. ರಾಮಚಂದ್ರ ಶೆಟ್ಟರ ನೃತ್ಯ, ವಯಸ್ಕರ ವಿವಿಧ ವಿನೋದಾವಳಿಗಳೂ, "ಹೇಮಲತ" ಎಂಬ ನಾಟಕವೂ ಅಭಿನಯಿಸಲ್ಪಟ್ಟಿತು. ಶ್ರೀ ಬಿ. ಭೋಜರಾಯರು ಧನ್ಯವಾದಗಳನ್ನಿತ್ತರು.

ಬಾರಕೂರು—ಸ್ಥಳೀಯ ನ್ಯಾಶನಲ್ ಹೈಸ್ಕೂಲಿನ ವಠಾರದಲ್ಲಿ, ಹಂಗಾರಕಟ್ಟೆ ಕರ್ನಾಟಕ ಸಂಘದ ವತಿಯಿಂದ ಶ್ರೀ ಬಿ. ಭೋಜರಾಯರ ಅಧ್ಯಕ್ಷತೆಯಲ್ಲಿ ದಿನಾಂಕ ೫ರಂದು ಒಂದು ಸಾರ್ವಜನಿಕ ಸಭೆಯು ವಿವಿಧ ಕಾರ್ಯಕ್ರಮಗಳನ್ನೊಳಗೊಂಡು ಜರಗಿತು. ಶ್ರೀ ಐ. ಯಜ್ಞನಾರಾಯಣ ಉಡುಪರು ಸಂಘದ ಪರಿಚಯ ಮಾಡಿಕೊಟ್ಟರು. ಶ್ರೀ ಐ. ಸದಾನಂದ ಹೆಬ್ಬಾರರು ಕವಿತಾ ವಾಚನಮಾಡಿದರು. ಶ್ರೀಗಳಾದ ಬೈಕಾಡಿ ವೆಂಕಟಕೃಷ್ಣರಾಯ, ಕೆ. ಆರ್. ಹಂದೆ ಇವರು ಕರ್ನಾಟಕದ ಏಕೀಕರಣ, ಜ್ಞಾಪಕಶಕ್ತಿ ಇವುಗಳ ಕುರಿತು ಭಾಷಣಮಾಡಿದರು. ಶ್ರೀ ಎಚ್. ಬಿ. ನಾರಾಯಣ ಶೆಟ್ಟರು ಸಂಘಕ್ಕೆ ಯಶಕೋರಿ ಭಾಷಣವಿತ್ತರು. ಅಧ್ಯಕ್ಷರ ಭಾಷಣದ ತರುವಾಯ ಶ್ರೀ ಅಣ್ಣಪ್ಪ ಚಡಗರು ಧನ್ಯವಾದವಿತ್ತರು.

ಕಟಪಾಡಿ—ಇಲ್ಲಿನ ಪಂಚಾಯತ್ ಬೋರ್ಡಿನ ಆಫೀಸು ಕಟ್ಟಡ ಕಟ್ಟುವರೆ ರೂ. ೬,೫೦೦ ಸ್ಯಾಂಕ್ಷನ್ ಆಗಿದೆಯೆಂದೂ, ಕಟ್ಟಡವನ್ನು ಸಂತೆ ಮಾರ್ಕೆಟಿನ ಸಮೀಪವಾಗಿ ಕಟ್ಟುವರೆಂದೂ ತಿಳಿದು ಬರುತ್ತದೆ.

ಮಂಜೂರು ಕರಂಬಾಡಿ—ಸ್ಥಳೀಯ ಶ್ರೀ ರಾಮ ಹಾ. ಎ. ಶಾಲೆಯ ತಿಂಗಳ ಹಬ್ಬವು ದಿನಾಂಕ ೧೧ರಂದು ಶ್ರೀ. ಕೆ. ವಾಸು ಶೆಟ್ಟರವರ ಅಧ್ಯಕ್ಷತೆಯಲ್ಲಿ ಜರಗಿತು. ಮುಖ್ಯೋಪಾಧ್ಯಾಯ, ಉಪಾಧ್ಯಾಯರುಗಳ ಭಾಷಣಗಳ ತರುವಾಯ ವಿವಿಧ ವಿನೋದಾವಳಿಗಳು ಜರಗಿದುವು. ಶ್ರೀ ಸಿ. ಕೆ. ಐತಾಳರು ಧನ್ಯವಾದಗಳನ್ನರ್ಪಿಸಿದರು.

ಕುಂಬಳೆ—ಮಂಜೇಶ್ವರ ರಿಕ್ರಿಯೇಶನ್ ಟೂರ್ನಮೆಂಟ್ ವಾಲಿಬೋಲ್ ಪಂದ್ಯಾಟವು ಸ್ಥಳೀಯ ನೇಶನಲ್ ಕ್ಲಬ್ಬಿನವರೊಂದಿಗೆ ಜರಗಿ, ಇಲ್ಲಿಯವರು ಗೆದ್ದಿರುವರು.

ಸ್ಥಳೀಯ ನಗರದ ಭಗವತೀ ಕ್ಷೇತ್ರದ ವಾರ್ಷಿಕ ಮಹಾಸಭೆಯು ತಾ. ೧೪ರಂದು ಶ್ರೀ ಕೆ. ಎ. ದೇವದಾಸರ ಅಧ್ಯಕ್ಷತೆಯಲ್ಲಿ ಜರಗಿ ಕಾರ್ಯಕಾರಿ ಸಮಿತಿ ರಚಿಸಲ್ಪಟ್ಟಿತು.

ಪುತ್ತೂರು— ಪುತ್ತೂರು ತಾಲೂಕು ಲೋಕಲ್ ಡೆವಲಪ್‌ಮೆಂಟ್ ಕಮಿಟಿಯ ಸಭೆಯು ರೆವಿನ್ಯೂ ಡಿವಿಜನಲ್ ಆಫೀಸರರ ಅಧ್ಯಕ್ಷತೆಯಲ್ಲಿ ಇತ್ತೀಚಿಗೆ ಜರಗಿತು. ಸುಮಾರು ೬೦ ಮಂದಿ ಸದಸ್ಯರು ಹಾಜರಿದ್ದರು. ಸುಮಾರು ೨೭ ಕೆಲಸಗಳು ಮಂಜೂರಾತಿ ಪಡೆದುವು. ಅವುಗಳಿಗೆ ತಗಲುವ ಸಾಧಾರಣ ಖರ್ಚು ೧,೦೫,೫೦೦ ಎಂದು ನಿಶ್ಚಯವಾಯಿತು. ೧೯೫೩ನೇ ವರ್ಷದಲ್ಲಿ ಅಧಿಕ ಗೊಬ್ಬರ ತಯಾರಿಸಿದ ಬಲ್ನಾಡು ಪಟೇಲ್ ಶ್ರೀ ಕಟ್ಟಣ್ಣ ರೈಗಳಿಗೆ ಜಿಲ್ಲಾ ಕಲೆಕ್ಟರರು ಶಿಫಾರಸು ಪತ್ರವನ್ನಿತ್ತರು.

ಕೊರಂಗ್ರಪಾಡಿ—ಸ್ಥಳೀಯ ಪಂಚಾಯತ ಬೋರ್ಡಿನ ಚುನಾವಣೆಯ ಇದೇ ದಿನಾಂಕ ೧೮ರಂದು ಜರಗಿ, ಶ್ರೀಗಳಾದ ಕೆ. ಬಾಲಕೃಷ್ಣ ಶೆಟ್ಟರು ಅಧ್ಯಕ್ಷರಾಗಿಯೂ, ಕೆ. ಗುರುವ, ಕೆ. ಅಂತಯ್ಯ ಪೂಜಾರಿ, ಕೆ. ಪಿ ಸಿಮೋನ್ ಕರ್ಕಡ, ಎಂ. ನರಸಿಂಹಯ್ಯ, ಕೆ. ಕಾಳಪ್ಪ ಶೆಟ್ಟಿ ಮತ್ತು ಕೆ. ಮಹಾಬಲ ಶೆಟ್ಟರವರು ಅವಿರೋಧವಾಗಿ ಆರಿಸಿ ಬಂದಿರುತ್ತಾರೆ.

NAVAYUGA WEEKLY

* * * * *

ADVERTISEMENT RATES

Display Advertisements:— Rs. 2/- per column inch for contracts of 50" or more and Rs. 3/- per column inch for casual advertisements.

Classified Advertisements:— As. 8/- per line (minimum 8 lines).

For rates for advertising in colours and special positions, please write to:

ADVERTISEMENT MANAGER,

'NAVAYUGA'

Post Box No. 22, UDIPI, S. K.

ಕವಿಭೂಷಣ ಕೆ. ಪಿ. ವೆಂಕಪ್ಪ ಶೆಟ್ರ

ಭಾರತದ ಗುರುಕುಲ

(ಯಕ್ಷಗಾನ)

ಬೆಲೆ: 0 8 0

ಮದರಾಸು ಸರಕಾರದಿಂದ ಸಂಭಾವನೆ ಪಡೆದ ಗ್ರಂಥ.

ಸಾಹಸ ಭೀಮ ವಿಜಯ	0—8—0
ಲತ್ತಪಗಡೆ	0—6—0
ಭರತೇಶ ದಿಗ್ವಿಜಯ	0—8—0
ವಾಲಿ ಸುಗ್ರೀವ	0—8—0

ನವಭಾರತ ಪುಸ್ತಕ ಭಂಡಾರ, ಉಡುಪಿ.

ಚಂದಾದಾರರಿಗೆ ಸೂಚನೆ

ಚಂದಾದಾರರು ನಮ್ಮೊಡನೆ ಪತ್ರವ್ಯವಹಾರ ಮಾಡುವಾಗ ತಮ್ಮ ಚಂದಾ ನಂಬ್ರವನ್ನು ತಿಳಿಸಿದರೆ ತಕ್ಷಣ ಲಕ್ಷ್ಯಕೊಡಲು ಅನುಕೂಲವಾಗುವುದು. ಕನಿಷ್ಠಪಕ್ಷ ತಮ್ಮ ಸಂಪೂರ್ಣ ವಿಳಾಸವನ್ನಾದರೂ ಕೊಡುವುದು ಅನುಕೂಲ. ಬರೇ ವಸ್ತು ಹಾಕಿ ಯಾ ಹೆಸರು ಮಾತ್ರ ಬರೆದು ಕಾಗದ ಬರೆದರೆ ನಾವು ಅವರ ಪತ್ರದ ಬಗ್ಗೆ ಏನುಮಾಡಲೂ ಸಾಧ್ಯವಾಗಲಾರದು.

ಯಾರಿಗಾದರೂ ಪತ್ರಿಕೆ ಬೇಡವಾದರೆ ನಮಗೆ ಸಕಾಲದಲ್ಲಿ ತಿಳಿಸಬಹುದು. ಹಾಗೆ ತಿಳಿಸುವಾಗ ಚಂದಾ ಬಾಕಿ ಇದ್ದರೆ ಅದನ್ನು ಮಾತ್ರ ಅಗತ್ಯ ಕಳಿಸಿ ಕೊಡುವಂತೆ ಕೇಳಿಕೊಳ್ಳುತ್ತೇವೆ.

ಮೆನೇಜರ್.

ಪ್ರಕಟಣೆ

ಈ ಪಂಚಾಯತಕ್ಕೆ ಒಳಪಟ್ಟ ಸಂತೆಕಟ್ಟೆ ವಠಾರದಲ್ಲಿರುವ ಅಂಗಡಿ ಕಟ್ಟೋಣವನ್ನು ಇದೇ ತಿಂಗಳ ತಾರೀಕು 26ನೇ ಬುಧವಾರ ಅಪರಾಹ್ನ ಗಂಟೆ 4ಕ್ಕೆ ಸರಿಯಾಗಿ ಪಂಚಾಯತ ಬೋರ್ಡು ಆಫೀಸಿನಲ್ಲಿ, ಪಂಚಾಯತ ಬೋರ್ಡಿನವರು ಹೊರಿಸುವ ಶರ್ತಗಳಿಗೆ ಒಳಪಟ್ಟು ಮೂರು ವರ್ಷಗಳ ತನಕ ಅನುಭವಿಸುವ ಬಗ್ಗೆ ಪ್ರೆಸಿಡೆಂಟರು ಬಹಿರಂಗವಾಗಿ ಏಲಂ ನಿಂದ ಬಾಡಿಗೆಗೆ ಕೊಡುವರು ಎಂಬುದಾಗಿ ಈ ಮೂಲಕ ತಿಳಿಸಲಾಗುತ್ತದೆ.

ಪಿ. ವೆಂಕಟ್ರಾಯ ನಾಯಕ್ B.Sc.
ಪ್ರೆಸಿಡೆಂಟ್.

ಪಂಚಾಯತ ಬೋರ್ಡು ಆಫೀಸು,
ಕಟಪಾಡಿ, ತಾ. 17-5-'51.

ಮಂಗಳೂರು

ಭಿಕ್ಷುಕರ ಸಮಸ್ಯೆ— ಶ್ರೀ ಮಣೇಲು ಶ್ರೀನಿವಾಸ ನಾಯ್ಕರು ಸಿ. ಸಿ. ಸಿ. ಸಭಾ ಭವನದಲ್ಲಿ ದಿನಾಂಕ ೧೪ರಂದು ಜರಗಿದ ಮಂಗಳೂರಿನ ರೋಟರಿ ಕ್ಲಬ್ಬಿನ ಸಭೆಯಲ್ಲಿ "ನಗರದಲ್ಲಿ ಭಿಕ್ಷುಕರ ಸಮಸ್ಯೆ" ಎಂಬುದರ ವಿಷಯವಾಗಿ ಭಾಷಣವಿತ್ತರು. ವಿ. ಯಸ್. ಕುಡ್ವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ನಾಯ್ಕರು ತಮ್ಮ ಭಾಷಣದಲ್ಲಿ ಭಿಕ್ಷುಕರ ಸಮಸ್ಯೆ ನೀಗುವಂತೆ ಯೋಗ್ಯ ಕಾರ್ಯಕ್ರಮ ಕೈಗೊಳ್ಳಬೇಕೆಂದೂ, ನಗರ ಸಭೆಯವರು ತೆರೆಯಲಿರುವ ಭಿಕ್ಷುಕರ ಗೃಹಕ್ಕೆ ಸಹಕಾರ, ಸಹಾಯ ನೀಡಬೇಕೆಂದೂ ಹೇಳಿದರು. ಜತೆಕಾರ್ಯದರ್ಶಿ ಶ್ರೀ ಎಚ್. ರತ್ನಾಕರ ಕಾಮತರು ಗತ ಸಭೆಯ ವರದಿಯನ್ನೋದಿದರು. "ಭಿಕ್ಷುಕರ ಸಮಸ್ಯೆಯ" ಚರ್ಚೆಯಲ್ಲಿ ಹಲವರು ಭಾಗವಹಿಸಿದರು. ರೋಟರಿ ಸದಸ್ಯ ಡಾ| ಕೆ. ಬಾಳಪ್ಪ ಶೆಟ್ಟರ ತಂದೆ ಶ್ರೀ ಸುಬ್ಬಣ್ಣ ಶೆಟ್ಟರ ನಿಧನಕ್ಕೆ ಸಂತಾಪ ಸೂಚಿಸಲಾಯಿತು. ಶ್ರೀ ಕೆ. ವಿಶ್ವನಾಥ ಕಾಮತರು ಧನ್ಯವಾದವಿತ್ತರು.

ಪೋಪರ ರಾಯಭಾರಿ—ಗೌರವಾನ್ವಿತರಾದ ರೆ| ಮಾರ್ಟಿನ್ ಲುಕಾಸ್ ಎಸ್. ವಿ. ಡಿ., ಯವರು ದಿನಾಂಕ ೧೪ರಂದು ಎರ್ನಾಕುಳಂನಿಂದ ಮಂಗಳೂರಿಗೆ ರೈಲ್ವೇ ಮೂಲಕ ಆಗಮಿಸಿರುವರು. ಇವರನ್ನು ರೈಲ್ವೇಸ್ಟೇಷನಿನಿಂದ ಯೂಕರಿಸ್ಟ್ ಇಗರ್ಜಿಗೆ ಮೆರವಣಿಗೆಯ ಮೂಲಕ ತರಲಾಯಿತು. ಕೆಥೋಲಿಕ್ ಸಮಾಜದವರು ರೆ| ಲೂಕಸರಿಗೆ ಸ್ವಾಗತವಿತ್ತು ಒಂದು ಮಾನಪತ್ರವನ್ನು ಸಮರ್ಪಿಸಿದರು. ನಗರ ಬಿಶೋಪರಿಬ್ಬರೂ ಹಾರಗಳನ್ನರ್ಪಿಸಿದರು. ರಾಯಭಾರಿಗಳು ಮಾನಪತ್ರಕ್ಕೆ ಉತ್ತರವೀಯುತ್ತಾ ಮಂಗಳೂರಿನ ಕೆಥೋಲಿಕರು ತನ್ನ ಮೂಲಕ ಪೋಪರಿಗಿತ್ತ ಗೌರವಕ್ಕೆ ಕೃತಜ್ಞತೆ ಹಾಗು ಸಂತೋಷ ಸೂಚಿಸಿ, ಪೋಪರ ಮೇಲೆ ತೋರಿಸಿದ ಭಕ್ತಿಗೆ ಪ್ರಶಂಸಿದರು. ಸಮಸ್ತ ಕೆಥೋಲಿಕರು ಸ್ತ್ರೀ, ಪುರುಷರೆನ್ನದೆ "ಕೆಥೋಲಿಕ್ ಕಾರ್ಯಸಾಧನೆ" ಯಲ್ಲಿ ತುಂಬಾ ಆಸಕ್ತಿ ವಹಿಸಬೇಕೆಂದು ಸೂಚಿಸಿದರು. ಅನಂತರ ಪೋಪರ ಆಶೀರ್ವಚನಗಳನ್ನು ಮಂಗಳೂರಿನ ಡಯೋಸೀಜಿನವರಿಗೆ ಅರ್ಪಿಸಿದರು. ರಾಯಭಾರಿಗಳು ಆದಿತ್ಯವಾರ ವಾಯು ಮಾರ್ಗವಾಗಿ ಢಿಲ್ಲಿಗೆ ತೆರಳಿದರು.

ವಾರ್ಷಿಕ ಮಹಾಸಭೆ—ಹೋಟೇಲು ಮಜೂರ ಸಭೆಯ ವಾರ್ಷಿಕ ಮಹಾಸಭೆಯು ಫಿಲಿಕ್ಸ್ ಪೈಬಜಾರಿನ ಶಾಲೆಗೆಯಲ್ಲಿ ದಿನಾಂಕ ೧೭ರಂದು ಶ್ರೀ ಎಂ. ಎಸ್. ದಯಾಕರರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಮುನಿಪಾಲರಾಜು, ಬಿ. ನಾರಾಯಣ ಮಲ್ಯ, ಡಾ| ಸಂಜೀವನಾಥ ಮೊದಲಾದವರು ಇಂದಿನ ಮಜೂರ ಸಂಕಷ್ಟಗಳ ಕುರಿತು ಭಾಷಣವಿತ್ತರು.

ಮಜೂರರ ಯೂನಿಯನು—ದಕ್ಷಿಣ ಕನ್ನಡ ಜಿಲ್ಲಾ ಬೀಡಿ ಮತ್ತು ಹೊಗೆಸೊಪ್ಪು ಮಜೂರರ ಯೂನಿಯನಿನ ವಾರ್ಷಿಕ ಸಭೆಯು ಡಾ| ಸಿ. ಸುಬ್ಬರಾಯರ ಅಧ್ಯಕ್ಷತೆಯಲ್ಲಿ ದಿನಾಂಕ ೧೨ರಂದು ಜರಗಿತು. ಸಭೆಯಲ್ಲಿ ಅಕಾಲ ಮೃತ್ಯುವಿಗೆ ತುತ್ತಾದ ಬೀಡಿ ಮಜೂರರ ಸದಸ್ಯರಿಗೆ ಶ್ರದ್ಧಾಂಜಲಿಯನ್ನರ್ಪಿಸಲಾಯಿತು. ಲೆಕ್ಕಪತ್ರ ಪರಿಶೀಲನೆ, ಠರಾವು ಮಂಜೂರಾತಿ ಮೊದಲಾದುವು ಜರಗಿದವು. ಅಧ್ಯಕ್ಷರ ಭಾಷಣ, ವಂದನಾರ್ಪಣೆಗಳೊಂದಿಗೆ ಸಭೆಯು ಮುಕ್ತಾಯವಾಯಿತು.

ಗಟ್ಟಿಯವರ ವಿದ್ಯಾವರ್ಧಕಸಂಘ— ದ ವಾರ್ಷಿಕೋತ್ಸವವು ಶ್ರೀ ಗಣಪತಿ ಹೈಸ್ಕೂಲಿನ ಶಾರದಾ ಸದನದಲ್ಲಿ ಶ್ರೀ ಕೆ. ಮೋಹನ್ ರವರ ಅಧ್ಯಕ್ಷತೆಯಲ್ಲಿ ದಿನಾಂಕ ೧೬ರಂದು ಜರಗಿತು. ಶ್ರೀ ಪಿ. ಕುಂಞಪ್ಪ ಮಾಸ್ತರರು ಸಭೆಯನ್ನು ಉದ್ಘಾಟಿಸಿದರು. ವರದಿ, ಭಾಷಣಗಳಾದ ನಂತರ ಮುಂದಿನ ವರ್ಷದ ಕಾರ್ಯಕಾರಿ ಸಮಿತಿಯ ಸದಸ್ಯರನ್ನು ಆರಿಸಲಾಯಿತು. ಸಭೆಯ ಬಳಿಕ ಯಕ್ಷಗಾನ ಕೂಟವು ಜರಗಿತು.

ಕೆಲಸಗಾರರ ಯೂನಿಯನು— ದ. ಕ. ಜಿಲ್ಲಾ ಒಟೋಮೊಬೈಲ್ ಕೆಲಸಗಾರರ ಯೂನಿಯನಿನ ಮಹಾಸಭೆಯು ಶ್ರೀ ಎ. ಶಾಂತಾರಾಮ ಪೈಗಳ ಅಧ್ಯಕ್ಷತೆಯಲ್ಲಿ ತಾ. ೧೬ರಂದು ಜರಗಿತು. ವರದಿ, ಲೆಕ್ಕಪತ್ರಗಳನ್ನೊಪ್ಪಿಸಿದ ನಂತರ ಮಜೂರರ ಕೇಳಿಕೆಗಳ ಠರಾವುಗಳು ಮಂಜೂರಾದುವು. ಸುಮಾರು ೨೦ ಮಂದಿಗಳನ್ನೊಳಗೊಂಡ ಒಂದು ಕಾರ್ಯಕಾರಿ ಸಮಿತಿಯನ್ನೂ ರಚಿಸಲಾಯಿತು.

ನಗರ ಸಭೆ—ಯ ಸಾಮಾನ್ಯ ಅಧಿವೇಶನವು ದಿನಾಂಕ ೧೬ರಂದು ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಸಭೆಯಲ್ಲಿ ಕ್ರಿಶ್ಚಿಯನ್ ಕರಿಯಪ್ಪರು ಕೇಳಿದ ಪ್ರಶ್ನೆಗಳಿಗೆ ಉತ್ತರವೀಯಲಾಯಿತು. ಅಲ್ಲದೆ ಹಂಪನಕಟ್ಟೆ ಮುಖ್ಯ ರಸ್ತೆಯ ಕಾಲುದಾರಿ ಅಗಲ ಮಾಡಲು ವೆನ್‌ಲಾಕ್ ಆಸ್ಪತ್ರೆಯ ಹಿತ್ತಲಿನ ಸ್ವಲ್ಪ ಭಾಗವನ್ನು ಬಿಟ್ಟುಕೊಡಬೇಕೆಂದೂ, ಹಾಗೆಯೇ ಜ್ಯೋತಿ ಟಾಕೀಸಿನ ಬಳಿ ರಸ್ತೆಯಗಲ ಮಾಡಲು ಸರಕಾರೀ ಮಹಿಳೆಯರ ತರಬೇತಿ ಶಾಲೆ ಹಿತ್ತಲಿನ ಸ್ವಲ್ಪ ಭಾಗ ಕೊಡಲು ಕಲ್ಲಿಕೋಟೆಯ ಇನ್ಸ್ಪೆಕ್ಟರ್ ಆಫ್ ಗರ್ಲ್ಸ್ ಸ್ಕೂಲಿನವರು ವಿರೋಧಿಸಿದ್ದರಿಂದ ಕಲೆಕ್ಟರರನ್ನು ಕೇಳಿಕೊಳ್ಳಬೇಕೆಂದಾಯಿತು. ಸ್ಥಳೀಯ ಜಿಕ್ಕ ದಾನಂದ ಮಹಿಳಾ ಸೇವಾಶ್ರಮಕ್ಕೆ ಸಹಾಯ ಧನವಾಗಿ ರೂ. ೪೦೦ ಕೊಡಲು ನಿರ್ಣಯಿಸಿತು. ಕೇಂದ್ರ ಸರಕಾರದ ನಾಲ್ಕು ಯೋಜನೆಗಳಲ್ಲಿ ಒಂದಾದ ಮಂಗಳೂರು ಬಂದರು ಕಟ್ಟಲು ರೂ. ೧,೧೫,೦೦೦ ನ್ನು ಒದಗಿಸಲಾಗಿದೆಯೆಂದೂ ಬಂದರ, ಕಟ್ಟಲು ಬೇಗನೆ ಆರಂಭಿಸಬೇಕೆಂದೂ ಸರಕಾರವನ್ನು ಕೇಳಿಕೊಳ್ಳಲಾಯಿತು. ಮಹಾನಗರಪಾಲಿಕೆ ಆಳಮಾಡುವ ಬಗ್ಗೆ, ರೈಲ್ವೇಸ್ಟೇಷನ್ ರಸ್ತೆಯ ವಿಸ್ತರಣದ ಬಗ್ಗೆ, ಪಳ್ನೀರು ರಸ್ತೆಯು ಸ್ಟರಕ್ ರಸ್ತೆಗೆ ಸೇರುವಲ್ಲಿರುವ ಮೋರಿ ಕಟ್ಟಿಸಲು ಎಸ್ಟಿಮೇಟುಗಳು ಮಂಜೂರಾದುವು.

ಚುನಾವಣೆ—ದಿನಾಂಕ ೧೪ರಂದು ಕೆನರಾ ಹೈಸ್ಕೂಲಿನ ಆಡಳಿತೆ ಸಮಿತಿಗೆ ಚುನಾವಣೆಯು ಜರಗಿ ಶ್ರೀಗಳಾದ ಬಿ. ವೈಕುಂಠ ಬಾಳಿಗ, ಎಂ. ರಾಮಚಂದ್ರ ಪೈ, ಎಂ. ಅಪ್ಪುರಾವ್, ಪಿ. ಪಾಂಡುರಂಗ ಭಂಡಾರಿ, ಎಂ. ಮಾಧವರಾವ್ ಮತ್ತು ಕೆ. ದೇವದಾಸ ನಾಯಕ್ ರವರು ಆರಿಸಿ ಬಂದಿರುತ್ತಾರೆ.

ದ. ಕ. ಜಿಲ್ಲೆಗೆ ಹೊಸ ಸೇತುವೆಗಳು— ಸುಮಾರು ನೂರು ಲಕ್ಷದ ಇಪ್ಪತ್ತು ಸಾವಿರ ರೂಪಾಯಿ ವೆಚ್ಚದಿಂದ ಅರಿವೂರು ನದಿ ಹಾಗೂ ಸಂಕಲಕರಿಯ ಎಂಬಲ್ಲಿಯ ಸೇತುವೆಗಳನ್ನು ಕೇಂದ್ರ ಸರಕಾರದ ರಸ್ತೆಯ ನಿಧಿಯ ಯೋಜನೆಯಲ್ಲಿ ಸೇರಿಸಬೇಕೆಂದು ಮದರಾಸು ಸರಕಾರವು ಶಿಫಾರಸು ಮಾಡಿರುತ್ತದೆ. ಇವು ಮಾತ್ರವಲ್ಲದೆ ಶಾಂಭವೀ, ಉದ್ಯಾವರ ಹಾಗೂ ಮೂಲ್ಕಿ ಹೊಳೆಗಳಿಗೆ ಇನ್ನೆರಡು ವರುಷಗಳಲ್ಲಿ ಸೇತುವೆ ರಚಿಸಲು ಮದರಾಸು ಸರಕಾರವು ಆಜ್ಞೆ ಇತ್ತಿರುವುದೆಂದೂ, ಕೇಂದ್ರ ಸರಕಾರದ ಮಂಜೂರಾತಿ ಬಂದೊಡನೆಯೇ ಕೆಲಸ ಪ್ರಾರಂಭಿಸಲಾಗುವುದೆಂದೂ ಎಂ. ಎಲ್. ಎ. ಗಳಾದ ಶ್ರೀ ಟಿ. ಎ. ಪೈಗಳು ತಿಳಿಸುತ್ತಾರೆ.

ಮಂತ್ರಿಗಳ ಕಾರ್ಯಕ್ರಮ— ಮದರಾಸು ಸರಕಾರದ ಕೃಷಿ ಇಲಾಖಾ ಮಂತ್ರಿಗಳಾದ ಶ್ರೀ ಎಮ್. ಭಕ್ತವತ್ಸಲಂ ರವರು ದಿನಾಂಕ ೨೧ರಂದು ಕಾಸರಗೋಡಿಗೆ ಬಂದು ಪ್ರವಾಸಿಕರ ಬಂಗ್ಲೆಯಲ್ಲಿ ರಾತ್ರಿ ... ಕಾಸರಗೋಡು ... ರಾತ್ರಿ ಮಂಗಳೂರಿಗೆ ಆಗಮಿಸುವರು. ದಿನಾಂಕ ೨೨ ರಂದು ಕೃಷಿ ಕ್ಷೇತ್ರಗಳ ... ಪ್ರದರ್ಶನವನ್ನು, ... ಪ್ರಾಜೆಕ್ಟಿನ ಕುರಿತು ಮಾತುಕತೆಗಳನ್ನು ನಡೆಸಲಿರುವರು. ಗಂಟೆ ೧೦-೪೦ಕ್ಕೆ ಉಡುಪಿಗೆ ಹೊರಟು, ದಾರಿಯಲ್ಲಿ ಪ್ರೋಜೆಕ್ಟ್ ಕಾರ್ಯಗಳನ್ನು ಪರಿಶೀಲಿಸಿ ೧ ಗಂಟೆಗೆ ಉಡುಪಿಗೆ ತಲುಪುವರು. ಮೀನು ವ್ಯವಸಾಯಗಾರರ ಸಮ್ಮೇಳನ, ಸಾತಂಕತೆ ಹಾಗೂ ಇತರ ಪರಿಶೀಲನೆಗಳನ್ನು ಮುಗಿಸಿ ರಾತ್ರಿ ಉಡುಪಿಯಲ್ಲೇ ಉಳಕೊಳ್ಳುವರು. ದಿನಾಂಕ ೨೩ರಂದು ಬೆಳಗ್ಗೆ ಮಂಗಳೂರಿಗೆ ಆಗಮಿಸಿ ಪ್ಲೇನಿನ ಮೂಲಕ ಮದ್ರಾಸಿಗೆ ತೆರಳುವರು.

ಜನಸಂಘದ ಮಹಿಳಾ ಶಾಖೆ — ಯ ಉದ್ಘಾಟನೆಯು ದಿನಾಂಕ ೯ರಂದು ಮಂಗಳೂರಲ್ಲಿ ಜರಗಿಸಲಾಯಿತು. ಶ್ರೀಮತಿಗಳಾದ ಶಕುಂತಲಾ, ಸುಭದ್ರಾ ಬಾಯಿ, ... ಬಾಯಿಯವರನ್ನೊಳಗೊಂಡ ತಾತ್ಕಾಲಿಕ ಸಮಿತಿಯೊಂದರ ನೇಮಕವಾಯಿತು. ತಾ. ೧೬ರಂದು ಮಂಗಳೂರಲ್ಲಿ ಜರಗುವ ಜನಸಂಘದ ಜಿಲ್ಲಾ ಪರಿಷತ್ತಿಗೆ ಸದಸ್ಯರನ್ನು ಕಳುಹಿಸಲು ನಿರ್ಧರಿಸಿದರು.

ಸಭೆ—ತಾಲೂಕು ಸೈನಿಕ, ನಾವಿಕ, ವೈಮಾನಿಕ ಸಮಿತಿಯ ಸಭೆಯೊಂದು ಮಂಗಳೂರಲ್ಲಿ ಶ್ರೀ ಬಿ. ರಾಮರಾಯರ ಅಧ್ಯಕ್ಷತೆಯಲ್ಲಿ ದಿನಾಂಕ ೯ರಂದು ಜರಗಿತು. ತಿದ್ದಿದ ಸ್ವಾರ್ಥಿಕ ಶಿಕ್ಷಣದಿಂದಾಗಿ ಕೆಲಸದಿಂದ ನಿವೃತ್ತಿ ಪಡೆದ ಉಪಾಧ್ಯಾಯರನ್ನು ಪುನಃ ಕೆಲಸಕ್ಕೆ ಸೇರಿಸಬೇಕು, ಮಾಜಿ ಸೈನಿಕರಿಗೆ ಯುದ್ಧಾನಂತರ ನಿರ್ಮಾಣ ನಿಧಿಯಿಂದ ಕೃಷಿ ಮಾಡಲು ಸಹಾಯ ನೀಡಬೇಕು, ಪಾಕ್—ಅಮೇರಿಕ ಒಪ್ಪಂದದ ವಿಚಾರದಲ್ಲಿ ನೆಹರೂಗಳ ಹೋರಣೆಗೆ ಬೆಂಬಲ ನೀಡು ಹಾಗೂ ರಾಷ್ಟ್ರ ರಕ್ಷಣೆಗೆ ಮಾಜೀ ಸೈನಿಕರು ಸಿದ್ಧರೆಂಬ ಠರಾವುಗಳು ಮಂಜೂರಾದುವು.

ಸಮಾಜ ಸೇವಾ ಶಿಕ್ಷಣ ಕೇಂದ್ರ— ಉಳ್ಳಾಲ ಅನಂತಾಶ್ರಮದ ಹೈಸ್ಕೂಲಿನ ಸಮಾಜ ಸೇವಾ ಶಿಕ್ಷಣ ಕೇಂದ್ರವು ದಿನಾಂಕ ೬ರಂದು ಶ್ರೀಮತಿ ಸೀತಾಲಕ್ಷ್ಮಿಯಮ್ಮನವರಿಂದ ಉದ್ಘಾಟಿಸಲ್ಪಟ್ಟಿತು. ಕಾರ್ಯಕರ್ತರಾದ ೨೮ ಮಂದಿ ವಿದ್ಯಾರ್ಥಿನಿಗೆ ಶ್ರೀಗಳಾದ ಎಂ. ಎಸ್. ಪೀತಾಂಬರ ರಾಯರು, ಕೆ. ರಾಮರಾಯರೂ ಕಲಿಸುತ್ತಿದ್ದಾರೆ. ಕೇಂದ್ರವು ೯೦ ದಿನಗಳ ತನಕ ನಡೆಯಲಿರುವುದು.

ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 25 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

THE MOOLKY BANK LTD.
Moolky, S. K.

BHUVANENDRA PRODUCTS LTD., KATAPADI, S. K.
ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!
ಇವುಗಳಿಂದಲೇ ಭುವನೇಂದ್ರ ಔಷಧಿಗಳು ಜನಪ್ರಿಯವಾಗಿರುವವು.
ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು ನಮ್ಮಲ್ಲಿ ತಯಾರಿಸಲ್ಪಡುತ್ತವೆ.
ವಿವರಗಳಿಗೆ ವಿಚಾರಿಸಿರಿ:-
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.
ಡಿಪೋ:- (1) ಉಡುಪಿ (2) ಮರಾಠ ಗಲ್ಲಿ, ಹುಬ್ಬಳ್ಳಿ.

ಡಾ| ಕೋಟಿಪೂಜರ
ಮನೆ ಮದ್ದು
ವೈದ್ಯರ ಸಹಾಯವಿಲ್ಲದೆ ... ನಾನಾರೋಗಗಳಿಗೆ ಔಷಧ ... ಕೊಳ್ಳುವ ವಿಧಾನವನ್ನು ... ವೈದ್ಯ, ... ಇದೆ.
ಬೆಲೆ: ರೂ. 2—8—0





ಸ್ವೀಕಾರ—ವಿಮರ್ಶೆ

ಬಿಜ್ಜಳರಾಯನ ಚರಿತೆ—

ಸಂಪಾದಕರು: ಸ್ವಾಮಿ ವೆಂಕಟೇಶ ಅಯ್ಯಂಗಾರ. ಪ್ರಕಾಶಕರು: ಸರಕಾರದ ಪ್ರಾಚ್ಯ ಹಸ್ತಪ್ರತಿಗಳ ಭಂಡಾರ, ಮದ್ರಾಸು. ಬೆಲೆ: ರೂ. ೪-೧೦-೦.

ಸುಮಾರು ಕ್ರಿ. ಶ. ೧೬೫೦ನೇ ಇಸವಿಯ ಸುಮಾರಿಗೆ ಇದ್ದ ಧರಣಿ ಪಂಡಿತನೆಂಬ ಜೈನ ಬ್ರಾಹ್ಮಣ ಕವಿಯು "ವರಾಂಗ ನೃಪ ಚರಿತೆ" ಮತ್ತು "ಬಿಜ್ಜಳರಾಯ ಚರಿತೆ" ಎಂಬೆರಡು ಕೃತಿಗಳನ್ನು ರಚಿಸಿದನು. ಮೊದಲಿನದು ಭಾಮಿನಿ ಷಟ್ಪದಿಯಲ್ಲಿರುವ ಸಾಹಿತ್ಯ ಪೂರ್ಣವಾದ ಪ್ರೌಢ ಕಾವ್ಯ. "ಬಿಜ್ಜಳರಾಯ ಚರಿತೆ"ಯು ಶುದ್ಧ ಕನ್ನಡ ಛಂದಸ್ಸುಗಳಲ್ಲೆಲ್ಲಾ ಜನಪ್ರೀತವಾದ ಸಾಂಗತ್ಯದಲ್ಲಿದೆ; ಹೆಣ್ಣು ಮಕ್ಕಳಿಗೆ ಹಾಡಲು ಸುಲಭವೆನಿಸಿದಷ್ಟೇ ಸಾಮಾನ್ಯ ತರಗತಿಗೆ ಸೇರಿದೆ. ಬಿಜ್ಜಳನನ್ನು ಕುರಿತು ಆ ಮೊದಲೆ ರಚಿತವಾಗಿದ್ದ ಕಾವ್ಯವೊಂದನ್ನು ಕೇಳಿ ಅದರ ಆಧಾರದ ಮೇಲೆ ಧರಣಿ ಪಂಡಿತನು ತನ್ನ ಈ ಕೃತಿಯನ್ನು ರಚಿಸಿದನು. ಇದರಲ್ಲಿ ಕಲ್ಯಾಣದಲ್ಲಿ ಆಳುತಿದ್ದ ಬಿಜ್ಜಳನ ಕೊನೆಯ ದಿನಗಳ ಚಿತ್ರ ಮೂಡಿಬಂದಿದ್ದರೂ ಇತಿಹಾಸದ ದೃಷ್ಟಿಯಿಂದ ಮಹತ್ವವೆನಿಸಿದ ಯಾವ ಸಂಗತಿಯನ್ನೂ ಕೃತಿಯು ತಿಳಿಸುವುದಿಲ್ಲ. ಮಾತ್ರವಲ್ಲ ಇತಿಹಾಸದ ಮೂಲಕ ನಮಗೆ ಪ್ರಾಪ್ತವಾದ ಕೆಲವು ವಿವರಗಳಿಗೆ ವ್ಯತಿರಿಕ್ತವೆನಿಸುವ ವಿಷಯ ಇಲ್ಲಿದೆ. ಮುಖ್ಯವಾಗಿ ಶಿವಾಚಾರದ ಪ್ರವರ್ತಕರಾದ ಬಸವಣ್ಣನವರ ಪಾತ್ರ ರಚನೆಯಲ್ಲಿ ಕವಿಯು ಸತ್ಯಕ್ಕೆ ಲೋಪತಂದಂತೆ ಭಾಸವಾಗುತ್ತದೆ. "ಸಾಹಿತ್ಯದಲ್ಲಿ ನಮಗೆ ದೊರೆಯುವ ವಚನಗಳ ಬಸವಣ್ಣ ತುಂಬ ಧೈರ್ಯದ, ತುಂಬ ತಿಳಿವಿನ, ತುಂಬ ಆರ್ದ್ರ ಹೃದಯದ ಶ್ರೇಷ್ಠ ವ್ಯಕ್ತಿ; ಈ ಕಾವ್ಯದಲ್ಲಿ ರೂಪುಗೊಂಡ ಬಸವಣ್ಣ ದುರಭಿಮಾನಿಯಾದ ಒಬ್ಬ ತರುಣ." ಅವನ ಅರಿವು ಬಹಳವಲ್ಲ; ಮಹತ್ವಾಕಾಂಕ್ಷೆಗೆ ಮೇರೆಯಿಲ್ಲ; ಯೋಗ್ಯತೆ ಏನೇನೂ ಇಲ್ಲ! ಈ ದೃಷ್ಟಿ ಅವಾಸ್ತವವೆಂದೇ ಹೇಳಬೇಕಾಗುತ್ತದೆ. ಕವಿಯು ಸಂಪ್ರದಾಯದಿಂದ ತನಗೆ ಮುಟ್ಟಿದ ಕಥನವೊಂದನ್ನು ಆಧರಿಸಿ, ಬಿಜ್ಜಳ ಮತ್ತು ಬಸವಣ್ಣ ಇವರ ನಡುವೆ ಘಟಿಸಿದ ಘರ್ಷಣೆಯನ್ನು ಜೈನ ಹಾಗು ವೀರಶೈವ ಮತಗಳ ಮಧ್ಯದ ವಿವಾದವೆಂದು ತಿಳಿಸುವಂತೆ ಭಾಸವಾಗುತ್ತದೆ. ಇದರೊಂದಿಗೆ ಆ ಕಾಲದಲ್ಲಿ ಜನತೆಯ ಆಧ್ಯಾತ್ಮಿಕ ಸ್ಥಿತಿ ಹೇಗಿದ್ದಿತೆಂಬುದನ್ನೂ ಇಲ್ಲಿ ಸೂಚಿಸಿರುವನು. ಈ ಗ್ರಂಥದ ಪ್ರತಿಗಳು ಹಲವು ಇವೆ—ಮೂಲದ ಒಂದು ಪ್ರತಿಯ ಆಧಾರದ ಮೇಲೆ ಮದ್ರಾಸಿನ ಪ್ರಾಚ್ಯ ಹಸ್ತಪ್ರತಿಗಳ ಭಂಡಾರದ ಪಂಡಿತರು ಸಿದ್ಧಪಡಿಸಿದ ಪ್ರತಿಯೊಂದನ್ನು ಅನುಸರಿಸಿ, ಈ ಮುದ್ರಣವು ನಡೆದಿದೆ. ಕವಿಯು ಪ್ರಜ್ಞಾವಂತನಾದ ಜೈನನಿದ್ದುದರಿಂದ ಮತಕ್ಕೆ ಸಂಬಂಧಿಸಿದ ಪರಿಭಾಷೆಯ ಮಾಹಿತಿ ಅವನಿಗೆ ಸಾಕಷ್ಟು ವಿಪುಲವಾಗಿಯೇ ಇದೆ. ಕಾವ್ಯದಲ್ಲಿ ಕೆಲವೆಡೆ ಉರ್ದು ಭಾಷೆಯ ಪದಗಳೂ ಪ್ರಯೋಗಗೊಂಡಿವೆ; ಇವು ಆ ಕಾಲದಲ್ಲಿ ದಿನ ಬಳಕೆಯ ಶಬ್ದಗಳಾಗಿದ್ದಿರಬಹುದು. ಸಾಂಗತ್ಯ ರೂಪದಲ್ಲಿರುವ ಕಾವ್ಯ ಕೃತಿಯಾದುದರಿಂದ ಅನೇಕ ತಪ್ಪುಗಳು ಹಸ್ತಪ್ರತಿಯಲ್ಲಿವೆ; ಪ್ರತಿ ತೆಗೆಯುವಾಗಲೂ ಕೆಲವು ತಪ್ಪುಗಳು ಘಟಿಸಿದಂತೆ ತೋರುತ್ತದೆ. ಭಂಡಾರದ ಪಂಡಿತರು ಅನೇಕ ಅಕ್ಷರಗಳನ್ನು ತಿದ್ದಿ ಅಯ್ಯಂಗಾರರಿಗೆ ಹೆಚ್ಚಿನ ಪರಿಷ್ಕರಣ ಕಾರ್ಯಕ್ಕೆ ವಹಿಸಿಕೊಟ್ಟರು: ಅವರು ತೀರ ಸ್ಪಷ್ಟವೆಂದು ಕಂಡ ಮತ್ತೆ ಕೆಲವು ತಿದ್ದುಪಡಿಗಳನ್ನು ಮಾಡುವುದಕ್ಕೂ ಅರ್ಥವನ್ನು ಸ್ಪಷ್ಟಪಡಿಸುವುದಕ್ಕೂ ಸಹಾಯವಾಗಬಹುದಾದ ಪಾಠಾಂತರಗಳನ್ನು ಅಡಿಯ ಟಿಪ್ಪಣಿಗಳಲ್ಲಿ ಕೊಟ್ಟಿರುವರು. ಅಲ್ಲದೆ, ಮೈಸೂರಿನ ಪ್ರಾಚ್ಯ ಅನ್ವೇಷಣ ಸಂಸ್ಥೆಯ ಪುಸ್ತಕ ಭಂಡಾರದಲ್ಲಿರುವ ಪ್ರತಿಯೊಂದರಿಂದ ಕಾವ್ಯಾರ್ಥವನ್ನು ತಿಳಿಯುವುದಕ್ಕೆ ಪ್ರಯೋಜನಕಾರಿ ಎನಿಸುವ ಕೆಲವು ಸಂದರ್ಭಗಳ ಪಾಠಾಂತರವನ್ನೂ ಅನುಬಂಧದಲ್ಲಿ ಸೇರಿಸಿಕೊಟ್ಟಿರುವರು. ಹಿಂದಿನವರ ಆಧ್ಯಾತ್ಮಿಕ ಮನೋಭಾವವನ್ನು ಗ್ರಹಿಸಲು ನೆರವಾಗುವ ಈ ಗ್ರಂಥ ಕನ್ನಡದ ಜಿಜ್ಞಾಸುಗಳಿಗೆ ಉಪಯುಕ್ತವಾದೀತು.

ಬಡವನ ಭಾಗ್ಯ ಅಥವಾ ಪ್ರೊಹಿಬಿಷನ್—

ಬರೆದವರು: ಪೆರೋಡಿ ಪುಟ್ಟಪ್ಪಯ್ಯ ಕಾರಂತ. ಪ್ರಕಾಶಕರು: ಅಜಂತ ಮುದ್ರಣ ಮತ್ತು ಪ್ರಕಾಶನ, ಕುಂದಾಪುರ. ಬೆಲೆ: ಮೂರಾಣೆ.

ಜಿಲ್ಲೆಯ ಸಮಾಜವಾದಿ ಕಾರ್ಯಕರ್ತರಲ್ಲಿ ಒಬ್ಬರಾದ ಶ್ರೀ ವಿ. ಶ್ರೀನಿವಾಸ ಸೆಟ್ಟರು "ಪ್ರೊಹಿಬಿಷನ್ ಅಥವಾ ರಾಜಾಜಿಯ ಭ್ರಾಂತಿ" ಎಂಬೊಂದು ಪುಸ್ತಕವನ್ನು ಬರೆದಿರುವರು. ಈ ಪುಸ್ತಕದಲ್ಲಿ ಪಾನನಿಷೇಧ ಧೋರಣೆಯನ್ನು ಟೀಕಿಸಲಾಗಿದ್ದು, "ಮದ್ಯಕ್ಕಿಂತಲೂ ಹೆಚ್ಚು ಮಾದಕವಾದ" ಬರೆಹ ಇದೆಂದು ಅನಿಸುತ್ತದೆ. ಜನತೆಗೆ ಹಿತವನ್ನು ಮಾಡುವ ಪಾನನಿರೋಧ ಕಾಯಿದೆಯು ಅಪಹಾಸ್ಯವಾಗಬಾರದು; ಅದರ ಅಪಪ್ರಚಾರ ನಡೆಯಬಾರದು ಎಂಬ ಉದ್ದೇಶದಿಂದ ಶ್ರೀ ಕಾರಂತರು ಶ್ರೀ ಸೆಟ್ಟರ ಪುಸ್ತಕಕ್ಕೆ ಉತ್ತರರೂಪದಲ್ಲಿ ಈ ಕಿರುಹೊತ್ತಿಗೆಯನ್ನು ಪ್ರಕಟಿಸಿರುವರು. ಶ್ರೀ ಸೆಟ್ಟರು ತಮ್ಮ ಪುಸ್ತಕದಲ್ಲಿ ಉತ್ಪ್ರೇಕ್ಷೆಗೂ "ಮನೋರಂಜನೆ"ಗೂ ಮಹತ್ವವನ್ನು ಕೊಟ್ಟು ದುರುದ್ದೇಶದಿಂದ ಕಾನೂನಿನ ವಿರೋಧ ಗೈದಂತೆ ಭಾಸವಾಗುತ್ತದೆ—ಈ ದೃಷ್ಟಿಕೋಣವನ್ನು ಕಾರಂತರು ಖಂಡಿಸಿರುವರು. ಪಾನನಿರೋಧವನ್ನು ರಾಜಾಜಿಯವರು ಜ್ಯಾರಿಗೆ ತಂದವರೆನ್ನುವುದೇ ಸರಿಯಲ್ಲ.-ಅದು ಸಂವಿಧಾನವು ಅಂಗೀಕರಿಸಿದ ತತ್ವ ಎಂಬ ವಾದವನ್ನು ಕಾರಂತರ ಈ ಪುಸ್ತಕದಲ್ಲಿ ಕಾಣುತ್ತೇವೆ. ಶ್ರೀ ಸೆಟ್ಟರ ಬರವಣಿಗೆ ತೀರ ಹುಡುಗಾಟಿಕೆಯದು: "ತಾನು ಹಿಡಿದ ಕೋಳಿಗೆ (ಅಥವಾ ತನ್ನ ಕುದುರೆಗೆ) ಮೂರೇ ಕಾಲು ಎನ್ನುವ, ಕಪ್ಪು ಕನ್ನಡಕದ, ಕಣ್ಣಿಗೆ ಪರೆ ಬಂದ' ರಾಜಾಜಿ ಎಂಬ ಸೆಟ್ಟರ ಮಾತು ಹೊಣೆಯರಿತ ಲೇಖಕನ ನೀತಿಗೆ ಹೇಳಿಸಿದುದಲ್ಲ. ಇಂತಹ ವಿಷಪೂರಿತ,ಪಾಪಕರ ಬರಹಗಳನ್ನು ಪ್ರಕಟಿಸುವ ಹವ್ಯಾಸ ಹಿತಕಾರಿಯಾದುದಲ್ಲ. ಈ ಮಾತನ್ನು ಕಾರಂತರು ತಮ್ಮ ಪುಸ್ತಕದಲ್ಲಿ ಸ್ಪಷ್ಟಗೊಳಿಸಿದ್ದಾರೆ—ಆದರೆ ಶ್ರೀ. ಸೆಟ್ಟರ ಪುಸ್ತಕದಿಂದದೊರಕುವ "ಪ್ರಯೋಜನ"ವನ್ನು ವಿವರಿಸುತ್ತಾ ಮದ್ಯನಿಷೇದ ಕಾಯಿದೆ ಪುರಸ್ಕರ್ತರಿಗೆ ಇದು ಎಚ್ಚರಿಕೆ ಕೊಡುತ್ತದೆಂದು ಹೇಳಿರುವುದು ಸರಿತೋರುವುದಿಲ್ಲ. "ನಮ್ಮ ರಕ್ತಾಣುಗಳಿಗೆ ಮೈಲಿಗೆಯ ರೋಗಾಣುಗಳ ಇದಿರು ಹೋರಾಡಲು ಮುಂಜಾಗ್ರತೆ ಕೊಡುವ ಟಾಕಿನಂತೆ" ಶ್ರೀ ಸೆಟ್ಟರ ಬರೆಹವಿದೆಯೆಂದರೆ ನಾವು ಒಪ್ಪುವುದು ಅಸಾಧ್ಯ. ಸೆಟ್ಟರ ಪುಸ್ತಕದಲ್ಲಿ ಇರುವುದೆಲ್ಲ ವಿಷ-ಹೊರತು ಟಾಕಿನಂತಹ ಉತ್ತಮ ಗುಣದ ವಸ್ತು ಅದರಲ್ಲಿ ಸಿಗಲಾರದು.

ವಿಷವನಿತೆ—

ಬರೆದವರು: "ಶ್ರೀವತ್ಸ". ಪ್ರಕಾಶಕರು: ಸುವರ್ಣ ಪ್ರಕಾಶನ, ೫೪೫, ನೆಹರೂ ನಗರ, ಬೆಂಗಳೂರು—೩. ಬೆಲೆ: ಹತ್ತು ಆಣೆ.

"ಯುಗಾದಿಯಿಂದು ವಿರಸವಿಲ್ಲದ ಸರಸವನ್ನೇ ಬಯಸುವ ಸಾಹಿತ್ಯಾಭಿಮಾನಿಗಳಿಗೆ" ಉಡುಗರೆಯಾಗಿ ಅರ್ಪಿಸಲಾದ ಈ ಪುಸ್ತಕವನ್ನು ಪ್ರಕಟಿಸದಿದ್ದರೇನೆ ಒಳಿತಾಗುತಿತ್ತೆಂದು ನಮಗನಿಸುತ್ತದೆ. ಇದು ಪತ್ತೇದಾರಿ ಕಾದಂಬರಿ—ಆದರಲ್ಲೂ ವಾಸ್ತವಕತೆಯಿಂದ ಹರದಾರಿ ದೂರವಿರುವಂತೆ ಹೆಣೆಯಲಾದ ಕಥಾನಕ. ಯಾವ ಕಾಲದ್ದೋ, ಎಲ್ಲಿಯದೋ ಪಾತ್ರಗಳು. ಪ್ಯಾರಿ ಸಂಸ್ಥಾನ, ನೀಲಗ್ರೀವ ದ್ವೀಪದಂತಹ ಪ್ರದೇಶ; ವಲೀ ಮುಖಿ ಮುಂತಾದ ಹೆಸರುಗಳು! ಶೈಲಿಯೋ-ಚೆನ್ನುಡಿಯೆನಿಸದ, ಕತ್ತುರಿಯ ಕಂಪನ್ನೀವ ಕನ್ನಡಕ್ಕೆ ದ್ರೋಹ ಬಗೆಯುವಂತಿದೆ. ಯಾವುದೋ ಇಂಗ್ಲೀಷು ಪುಸ್ತಕದ ನೆರಳನ್ನು ಅನುಸರಿಸಿ ಬರೆಯಲಾದಂತೆ ತೋರುವ ಈ ಪುಸ್ತಕ ಕನ್ನಡ ಸಾಹಿತ್ಯಾಭಿಮಾನಿಯ ರಸಿಕತೆಯನ್ನು ಗೇಲಿಮಾಡುವಂತೆ ತೋರುತ್ತದೆ-ಏಕೆಂದರೆ ಈ ಪುಸ್ತಕ ಓದಿದುದರಿಂದ ಎರಡೂವರೆ ತಾಸು ಸಮಯ ದಂಡವಾಯಿತೇ ಹೊರತು, ಸಾತ್ವಿಕ ಮನೋರಂಜನೆಯ ಪ್ರಾಥಮಿಕ ಆವಶ್ಯಕತೆಯೂ ಪೂರೈಸಲ್ಪಡಲಿಲ್ಲ. ಬಂಗಾರದಂತಹ ಹೆಸರಿಟ್ಟುಕೊಂಡ ಪ್ರಕಾಶಕರು, ಈ ರೀತಿ ಹೆಸರು ಕೆಡಿಸಿಕೊಳ್ಳುವುದು ಅಪೇಕ್ಷಣೀಯವಲ್ಲ.

ಲಘು ಪರಿಚಯ

❖ ಪ್ರೇಮಚಂದರ ಕುರಿತಾದ ಪರಿಚಯಾತ್ಮಕ ಗ್ರಂಥಗಳನ್ನು ಪ್ರಕಟಿಸಿರುವ ಧಾರವಾಡದ ಮಿಂಚಿನ ಬಳ್ಳಿ ಕಾರ್ಯಾಲಯದವರು ಅವುಗಳಲ್ಲಿನ "ಪ್ರೇಮಚಂದರ ಜೀವನ ಹಾಗು ಹಿಂದೀ ಸಾಹಿತ್ಯ ದರ್ಶನ" (ಬೆಲೆ: ಆರಾಣೆ) ಎಂಬ ಅಧ್ಯಾಯಗಳನ್ನೂ "ನಾಯಿಯ ಕಥೆ" (ಬೆಲೆ: ಐದಾಣೆ) ಎಂಬ ಬಾಲ ಸಾಹಿತ್ಯವನ್ನೂ ಪ್ರತ್ಯೇಕ ಪುಸ್ತಕ ರೂಪದಲ್ಲಿ ಒದಗಿಸಿರುವರು. ಮೊದಲಿನದು ವಿಮರ್ಶಾತ್ಮಕವಾದ ಬರೆಹ, ಹಿಂದಿ ಸಾಹಿತ್ಯಾಭ್ಯಾಸಿಗಳಿಗೆ ಉಪಯುಕ್ತವಾಗಿದೆ. ಎರಡನೆಯದು ಮಕ್ಕಳ ಮನಸ್ಸು ಮೆಚ್ಚಬಹುದಾದ ಬೋಧಕಥೆ.

❖ ಶ್ರೀ ಕಡೆಂಗೋಡ್ಲು ಶಂಕರ ಭಟ್ಟರ ಸಮರ್ಥ ಸಂಪಾದಕತ್ವದಲ್ಲಿ ಹೊರಡುತ್ತಿರುವ "ರಾಷ್ಟ್ರಮತ" ವಾರಪತ್ರಿಕೆಯ (ಬಲ್ಮಠ,ಮಂಗಳೂರು ೨) ಪ್ರಥಮ ವರ್ಷದ ಕಾಣಿಕೆ (ಬೆಲೆ: ಐದಾಣೆ) ಯಲ್ಲಿ ಹೊಸತೊಂದು ವೈಶಿಷ್ಟ್ಯವನ್ನು ಕಾಣುತ್ತೇವೆ. ಇದರಲ್ಲಿರುವ ಲೇಖನವೆಲ್ಲವನ್ನೂ ಪತ್ರಿಕೆಯ ಚಂದಾದಾರರೇ ಬರೆದಿರುವರು. ಮಾತ್ರವಲ್ಲ ಚಂದಾದಾರರಲ್ಲೇ ಒಬ್ಬರಾದ ಶ್ರೀ ಕು. ಶಿ. ಹರಿದಾಸ ಭಟ್ಟರು ಈ ಸಂಚಿಕೆಯ ಸಂಪಾದನ ಕಾರ್ಯವನ್ನು ಮಾಡಿರುವರು. ವಿಷಯ ವೈವಿಧ್ಯ, ಗಾಂಭೀರ್ಯ ಹಾಗು ಮನೋರಂಜನೆಯ ಮೂರೂ ದೃಷ್ಟಿಕೋಣದಿಂದ ಈ ಸಂಚಿಕೆ ಮೆಚ್ಚಿಕೆಯಾಗುತ್ತದೆ.

❖ ಕಿರ್ಲೋಸ್ಕರ ವಾಡಿಯಿಂದ ಹೊರಡುವ "ಕಿರ್ಲೋಸ್ಕರ" ಎಂಬ ಮರಾಠೀ ಮಾಸಿಕದ ಮೇ, ೧೯೫೪ನೇ ಸಂಚಿಕೆಯು (ಬೆಲೆ: ಒಂದು ರೂಪಾಯಿ) ವಿದ್ಯಾರ್ಥಿ ಹಾಗು ರಕ್ಷಕರ ದೃಷ್ಟಿಯಿಂದ ಅತ್ಯಂತ ಉಪಯುಕ್ತವೆಂದು ಸಿದ್ಧಗೊಳ್ಳುವ ಶಿಕ್ಷಣ ಹಾಗು ವ್ಯವಸಾಯ ಕ್ಷೇತ್ರದಲ್ಲಿ ಮಾರ್ಗದರ್ಶನ ಮಾಡುವ ಲೇಖನಗಳಿಂದ ಕೂಡಿದ ಪುರವಣಿಯನ್ನೊಳಗೊಂಡು ಪ್ರಕಟವಾಗಿದೆ. ಶಿಕ್ಷಣ ನಡೆಯುತಿದ್ದಂತೆಯೇ ದ್ರವ್ಯಾರ್ಜನೆ ಮಾಡುವ ವಿಧಾನ, ನಮ್ಮ ನೌಕರಿಯಲ್ಲಿ ಉನ್ನತಿಹೊಂದುವ ಬಗೆ, ಉಚ್ಚ ಶಿಕ್ಷಣಕ್ಕೋಸ್ಕರ ವಿದೇಶಕ್ಕೆ ಹೋಗ ಬಯಸುವವರಿಗೆ ಸೂಚನೆ ಮುಂತಾದ ಬರೆಹಗಳು ವಾಚನೀಯವಿರುತ್ತವೆ.

❖ ಬೆಳ್ಳಾರೆಯ ಬೋರ್ಡು ಹೈಸ್ಕೂಲಿನ ಉತ್ಸಾಹೀ ವಿದ್ಯಾರ್ಥಿಗಳಾದ ಶ್ರೀ ಕೆ. ಗಂಗಾಧರ ಶೇಕ ಹಾಗು ಶ್ರೀ ಕೆ. ಸದಾನಂದ ಶೇಕ ಇವರು "ರವಿ" ಎಂಬ ಕೈಬರೆಹದ ತ್ರೈಮಾಸಿಕವನ್ನು ಪ್ರಕಟಿಸುತ್ತಿರುವುದು ಸಂತೋಷದ ವಿಷಯ. ಶ್ರೀಗಳಾದ ಗೋವಿಂದ ಪೈ, ಕಯ್ಯಾರ ಕಿಞ್ಞಣ್ಣ ರೈ, ಕೆ.ಪಿ. ವೆಂಕಪ್ಪ ಶೆಟ್ಟಿರಂತಹ ಸಾಹಿತಿಕರೂ ಈ ಪತ್ರಿಕೆಗೆ ಬರೆಯುತ್ತಿರುವರು: ಶ್ರೀ ಕೆ. ಹನುಮಂತಯ್ಯ ಹಾಗು ಶ್ರೀ ಎ. ಬಿ. ಶೆಟ್ಟಿಯವರು ಪತ್ರಿಕೆಗೆ ಶುಭಸಂದೇಶ ಕಳಿಸಿರುವರು—ಈಗಾಗಲೇ ನಾಲ್ಕು ವರ್ಷ ಕಾಲ ಬಾಳಿರುವ ಈ ಪತ್ರಿಕೆಗೆ ತುಂಬು ಜೀವನವನ್ನು ಕೋರುತ್ತೇವೆ.

ಉಡ್ಪಿ ಡಿ. ಮು. ಕೋರ್ಟಿನಲ್ಲಿ

O P. 29/1954

ಅಕ್ಕು ಮರಕಾಲ್ತಿ, ಯಜ. ಗುರುವ ಮರಕಾಲನ ವಿಧವೆ. ಉಡ್ಪಿ ತಾಲ್ಲೂ ಪಡುತೋನ್ಸೆ ಗ್ರಾಮ —ಅರ್ಜಿದಾರಳು.

ಅರ್ಜಿದಾರಳ ಗಂಡ ತಾ. 27-2-1954 ರಲ್ಲಿ ಹಂಗಾರಕಟ್ಟೆಯಲ್ಲಿ ಮೃತಪಟ್ಟ ಯಜ. ಗುರುವ ಮರಕಾಲನ ಹೆಸರಿನ, ಪೊಪ್ಯುಲರ್ ಇನ್ಸೂರೆನ್ಸ್ ಕೊ. ಲಿಮಿಟೆಡ್, ಮಂಗಳೂರು ಇದರ ನಂಬ್ರ 10696ನೆ ಪೊಲಿಸಿ ಪ್ರಕಾರ ಬರತಕ್ಕ ರೂ. 1000 ವ್ಸಲುಮಾಡುವ ಹಾಗೆ ತನ್ನ ಹೆಸರಿಗೆ ವಾರಿಸ ಸರ್ಟಿಫಿಕೇಟು ಕೊಡಬೇಕಾಗಿ ವಗೈರೆ ಅರ್ಜಿದಾರಳು ದಾಖಲು ಮಾಡಿದ ಮೇಲ್ಕಂಡ ಅರ್ಜಿಯು ತಾರೀಕು 27—5—1954ಕ್ಕೆ ತನಿಖೆಗೆ ಇಟ್ಟಿದೆ. ಆಕ್ಷೇಪವುಳ್ಳವರು ಸದರಿ ತಾರೀಕಿನ ಬೆಳಿಗ್ಯೆ 10 ಗಂಟೆಗೆ ಸದರಿ ಕೋರ್ಟಿನಮುಂದೆ ಕಂಡಾಗ್ಯೆ ಹಾಜರಾಗಿ ಜ್ಯಾಹೀರುಮಾಡಿಕೊಳ್ಳತಕ್ಕದ್ದೆಂಬ ಸಂಗ್ತಿ ಈ ಮೂಲಕ ತಿಳಿಸೋಣಾಗಿಯದೆ

K. Laxminarayana Aithal
Vakil for Petitioner.

ಉಡ್ಪಿ, 13-5-1954.

ಖಾತ್ರಿ ಚಿನ್ನದ ನೆಕ್‌ಲೇಸ್ ತರಹವಾರು ಚೈನುಗಳು, ಬೆಂಡೋಲೆ,
ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು
ಯಾವಾಗಲೂ ಸಿದ್ಧವಿವೆ.
ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.
ಯು. ರಾಘವೇಂದ್ರ ಕೃಷ್ಣ ಭಟ್,
ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.
ಫೋನು ನಂಬ್ರ 66

ಯಂ. ಗಣಪ್ಪಯ್ಯ ಎಂಡ್ ಸನ್ಸ್
ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ, ಮಂಗಳೂರು ಇವರ
ಅಶೋಕಾರಿಷ್ಟ ಮತ್ತು ಮಾತ್ರೆ ಹೆಂಗಸರ ಗರ್ಭಾಶಯ ರೋಗಗಳಿಗೆ ಸಂಜೀವನ. ಅಕಾಲ ಬಹಿಷ್ಟೆ. ಋತುಸ್ರಾವವು ಜಾಸ್ತಿಯಾಗಿಯೂ, ಕಡಿಮೆಯಾಗಿಯೂ ಹೋಗುವುದು, ಬಿಳಿಸೆಗು, ಸಂತಾನ ಹೀನತೆ, ರಕ್ತಹೀನತೆ, ಋತುಶೂಲೆ ಮೊದಲಾದ ಸ್ತ್ರೀಯರಿಗೆ ಸಂಬಂಧಪಟ್ಟ ಎಲ್ಲಾ ಕಾಯಿಲೆಗಳನ್ನು ಗುಣಪಡಿಸುವುದು. ಬಾಟ್ಲಿ 1ರ ರೂ. 3-8-0.
ಗರ್ಭ ರಕ್ಷಕ- ಗರ್ಭಿಣಿಯರಿಗೆ ಅತ್ಯಂತ ಫಲಕಾರಿಯಾದ ಔಷಧಿ. ಚಳಿದೋಷ, ಗರ್ಭಪತನವಾಗುವಿಕೆ, ವಾಂತಿ, ಅರುಚಿ, ಅಶಕ್ತತೆ, ಮಲಬದ್ಧತೆ, ವಾಯು ಉಪದ್ರ, ಕೈಕಾಲು ಬಚ್ಚುವುದು ಇವುಗಳನ್ನೆಲ್ಲಾ ಹೋಗಲಾಡಿಸುವುದು. ಬಾಟ್ಲಿ 1ರ ರೂ. 3-8-0.
ಇದಲ್ಲದೆ ಇನ್ನೂ ಅನೇಕ ತರದ ಔಷಧಿಗಳು ನಮ್ಮಲ್ಲಿ ದೊರಕುತ್ತವೆ. ಕೆಟಲಾಗಿಗೆ ಬರೆಯಿರಿ. ಕಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ, ರೋಗಕ್ಕೆ ತಕ್ಕ ಔಷಧಿಯನ್ನು ರವಾನಿಸಬಹುದು.

ಭರ್ತ ಕಂಟ್ರೋಲ
[ಮಕ್ಕಳನ್ನು ಹಡೆಯುವುದು ಸಾಕು]
ದಿನಕ್ಕೆ ಮೂರು ಸಾರಿ ಏಳು ದಿವಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.
ಬೆಲೆ- ೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟು ಖರ್ಚು ರೂ. ೦-೧೪-೦
—:ವಿಳಾಸ:—
ಹಾಲಪ್ಪಾ ಡಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ಚಂದಾಹಣ ಬಾಕಿ ಇರುವವರು ದಯಮಾಡಿ ಕಳುಹಿಸಿಕೊಡಿರಿ.

(೨ನೇ ಪುಟದಿಂದ)

ಕೇಂದ್ರಗಳೂ ತೆರೆಯಲಾದವು; ಹನ್ನೊಂದು ಹೊಸ ಶಾಖೆಗಳನ್ನು ತೆರೆದದ್ದಲ್ಲದೆ ಆರು ಶಾಲೆಗಳನ್ನು ಮೂಲಶಿಕ್ಷಣದ ಕೇಂದ್ರವಾಗಿ ಪರಿವರ್ತಿಸಲಾಯಿತು. ೧೩೨ ಮೈಲುಗಳಷ್ಟು ಕಚ್ಚಾ ರಸ್ತೆಯನ್ನು ಉತ್ತಮ ಮಾರ್ಗವಾಗಿ ಪರಿಷ್ಕರಿಸಿದ್ದಲ್ಲದೆ, ಎರಡು ಕಿರುಸೇತುವೆಗಳನ್ನೂ ಏಳು 'ಪಾಪು'ಗಳನ್ನೂ ನಿರ್ಮಿಸಲಾಯಿತು.

❖

ಇಷ್ಟರ ಮೇಲಿಂದ-ಜನಹಿತದ ಯೋಜನೆಗಳು ನಮಗೆ ಎಷ್ಟು ಉಪಕಾರ ಮಾಡುತ್ತವೆಂದು ನಾವು ಚೆನ್ನಾಗಿ ಮನಗಾಣಬಲ್ಲೆವು. ಆದ ಕಾರಣ, ಯೋಜನಾ ಆಯೋಗವು ಈಗ ಗ್ರಾಮ ಮತ್ತು ಜಿಲ್ಲೆಗಳ ಮಟ್ಟದಲ್ಲಿ ಅಭಿವೃದ್ಧಿಯ ಕಾರ್ಯಕ್ರಮಗಳನ್ನು ರೂಪಿಸಬೇಕೆಂದು ನೀಡಿದ ಆದೇಶ ಅತ್ಯಂತ ಸಮರ್ಪಕವಾದುದೆಂದು ತಾನಾಗಿಯೇ ಸಿದ್ಧಗೊಳ್ಳುತ್ತದೆ. ಪರಿಪತ್ರದ ವಿವರಗಳು ಈ ಪ್ರಕಾರವಾಗಿ ಇವೆ—ಜಿಲ್ಲೆಗಳ ಮತ್ತು ಗ್ರಾಮಗಳ ಯೋಜನೆಗಳು ರಾಜ್ಯದ ಅವಶ್ಯಕತೆಯ ಹಾಗು ರಾಜ್ಯದ ಯೋಜನೆಗಳನ್ನು ರಾಷ್ಟ್ರದ ಅಗತ್ಯದ ಚೌಕಟ್ಟಿನಲ್ಲಿ ಇರಿಸಬೇಕು. ಉದಾಹರಣೆಗಾಗಿ, ವಿವಿಧೋದ್ದೇಶದ ಯೋಜನೆಗಳು, ರಾಷ್ಟ್ರೀಯ ಹೆದ್ದಾರಿಗಳು, ಪ್ರಬುದ್ಧ ಕೈಗಾರಿಕೆಗಳು ಇತ್ಯಾದಿ ರಾಷ್ಟ್ರ ಕಕ್ಷೆಯಲ್ಲಿ ಬರುತ್ತವೆ. ಮಧ್ಯಮ ತರಗತಿಯ ನೀರಾವರಿ ಹಾಗು ವಿದ್ಯುಚ್ಛಕ್ತಿಯ ಯೋಜನೆಗಳೂ ಇತರ ಸಣ್ಣ ಪುಟ್ಟ ಕಾರ್ಯಕ್ರಮಗಳೂ ರಾಜ್ಯದ ಅಥವಾ ಪ್ರಾದೇಶಿಕ ಕಕ್ಷೆಗೆ ಒಳಗಾಗುತ್ತವೆ. ರಾಜ್ಯದ ಯೋಜನಾ ಕರ್ತರು ಜಿಲ್ಲೆ ಮತ್ತು ಹಳ್ಳಿಗಳಲ್ಲಿ ಯಾವ ಪ್ರಕಾರದ ಅಭಿವೃದ್ಧಿ ಕೆಲಸಗಳನ್ನು ಕೈಗೂಡಿಸಬಹುದೆಂದು ನಿರ್ದೇಶಿಸಬೇಕು; ಇದರಿಂದ ಪ್ರತಿಯೊಂದು ಜಿಲ್ಲೆಗೂ ರಾಜ್ಯ ಸರಕಾರವು ಪ್ರವರ್ತಿಸಲು ಬಯಸುವ ನೀರಾವರಿ, ವಿದ್ಯುಚ್ಛಕ್ತಿ, ಹೆದ್ದಾರಿ, ಕೈಗಾರಿಕೆ, ಭೂ ಸಾಗುವಳಿ, ಆರೋಗ್ಯ, ಶಿಕ್ಷಣ ಮುಂತಾದುವಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳ ಮಾಹಿತಿ ದೊರಕುತ್ತದೆ. ಜಿಲ್ಲೆಯೊಳಗೆ ಪ್ರತಿಯೊಂದು ಹಳ್ಳಿ ಅಥವಾ ಕೆಲವು ಹಳ್ಳಿಗಳ ಗುಂಪಿನ ಅವಶ್ಯಕತೆಗಳ ಪರಿಶೀಲನೆ ನಡೆಸಿ ಎಲ್ಲ ಹಳ್ಳಿಗಳೂ ತಮ್ಮದೇ ಆದ ಯೋಜನೆಯನ್ನು ಪಡೆದಿರುವಂತೆ ಯೋಗ್ಯ ಮಾರ್ಗದರ್ಶನ ಲಭಿಸಬೇಕು. ಅನುಭವವನ್ನು ಸಂಪಾದಿಸುವುದಕ್ಕೋಸ್ಕರ ಪ್ರಥಮದಲ್ಲಿ ಮೂರು ನಾಲ್ಕು ಆಯ್ದ ಜಿಲ್ಲೆಗಳಲ್ಲಿ ಪ್ರತಿಯೊಂದರಲ್ಲೂ ಕೆಲವು ನಿಶ್ಚಿತ ಪ್ರದೇಶಗಳನ್ನು ಯೋಜನೆಗಾಗಿ ಅಳವಡಿಸಬಹುದು. ಇಲ್ಲಿ ದೊರೆತ ಅನುಭವವನ್ನು ಕಾರ್ಯ ವಿಧಾನದ ಪರಿಷ್ಕರಣೆಗೆ ಉಪಯೋಗಿಸಿ, ಸ್ಥಳೀಯರ ನೇತೃತ್ವ, ಉತ್ಸಾಹ, ಹಣ ಹಾಗು ಶ್ರಮ ರೂಪದ ಪ್ರದಾನಗಳನ್ನು ಅಭಿವೃದ್ಧಿ ಕಾರ್ಯಕ್ರಮಗಳು ಪಡೆಯುವಂತೆ ನೋಡಬೇಕು.

❖

ಎರಡನೆಯ ಪಂಚವಾರ್ಷಿಕ ಯೋಜನೆಯು ಮುಗಿಯುವಷ್ಟರಲ್ಲಿ, ದೇಶಾದ್ಯಂತ ರಾಷ್ಟ್ರೀಯ ವಿಸ್ತರಣಾ ಯೋಜನಾ ಕಾರ್ಯವು ಸಂಪನ್ನವಾಗುತ್ತದೆ. ಈಗಾಗಲೇ ಇದು ಅನೇಕ ಸಾವಿರ ಹಳ್ಳಿಗಳಲ್ಲಿ ಕಾರ್ಯಾನ್ವಿತಗೊಳ್ಳುತಿದ್ದು ವರ್ಷಂಪ್ರತಿ ಯೋಜನೆಯು ವ್ಯಾಪಕವೊಂದುತ್ತಾ ಹೋಗುತ್ತದೆ. ಆದುದರಿಂದ ಈಗ ವಿಸ್ತರಣಾ ಯೋಜನೆಯ ವಲಯದಿಂದ ಹೊರಗುಳಿದ ಹಳ್ಳಿಗಳು ಸಹ ಈಗಿಂದೀಗಲೇ ಈ ಯೋಜನೆಯು ತಮ್ಮ ಕ್ಷೇತ್ರಕ್ಕೆ ಅನ್ವಯಿಸಲ್ಪಟ್ಟಾಗ ಯಶಸ್ವಿಯಾಗಿ ಅದನ್ನು ಪೂರೈಸುವಂತೆ ಯೋಗ್ಯ ಹಿನ್ನೆಲೆಯನ್ನು ರಚಿಸಿಕೊಳ್ಳಬಹುದು. ಪ್ರತಿಯೊಂದು ಕುಟುಂಬವೂ ಯೋಜನೆಯ ಅವಧಿಯಲ್ಲಿ ಕೈಗೂಡಿಸಬೇಕಾದ ಪ್ರಗತಿಯ ಸ್ಪಷ್ಟ ಚಿತ್ರವೊಂದನ್ನು ಮಾಡಿಕೊಳ್ಳುವುದು ಅಪೇಕ್ಷಣೀಯ; ಕುಟುಂಬದ ಉತ್ಪಾದನೆಯನ್ನು ಹೆಚ್ಚಿಸಿಕೊಳ್ಳುವುದಕ್ಕೂ ಪೂರ್ಣ ಉದ್ಯೋಗವನ್ನು ದೊರಕಿಸಿಕೊಳ್ಳುವುದಕ್ಕೂ ಬೇಕಾದ ಕ್ರಮಗಳನ್ನು ಪ್ರತಿಯೊಂದು ಕುಟುಂಬವೂ ರೂಪಿಸಿಕೊಂಡಿರಬೇಕು; ಕನಿಷ್ಠ ಒಂದು ಸಹಕಾರಿ ಸಂಘದ ಸದಸ್ಯತ್ವವನ್ನಾದರೂ ಹೊಂದಿ, ಅದರ ಪ್ರಯೋಜನ ಪಡೆಯಬೇಕು; ಮೇಲಾಗಿ, ಪ್ರತಿಯೊಂದು ಕುಟುಂಬವೂ ಸಮಾಜದ ಸಾರ್ವಂಗಿಕ ಹಿತಸಂವರ್ಧನಾ ದೃಷ್ಟಿಯಿಂದ ಸ್ವಲ್ಪವಾದರೂ ಸಮಯವನ್ನು ಸೇವೆಗಾಗಿ ಮೀಸಲಿಡತಕ್ಕದ್ದು. ಜನರ ಮನದೊಲವನ್ನು ಈ ಉದಾತ್ತ ತತ್ವಗಳ ಕಡೆಗೆ ತಿರುಗಿಸಿಕೊಳ್ಳಲು ಈಗಾಗಲೇ ಅನೇಕ ಹಳ್ಳಿಗಳಲ್ಲಿ ಸ್ವಯಂಪ್ರೇರಿತ ಸಂಘ ಸಂಸ್ಥೆಗಳೂ ಪಂಚಾಯತುಗಳಂತಹ ಅಧಿಕೃತ ಘಟಕಗಳೂ ಇರುತ್ತವೆ. ಇವೆಲ್ಲವೂ ಗ್ರಾಮಾಭಿವೃದ್ಧಿಯ ಧ್ಯೇಯದಿಂದ ಕಾರ್ಯ ಪ್ರವೃತ್ತವಾಗಬೇಕು— ಮುಖ್ಯವಾಗಿ ಕೃಷಿಯ ಉತ್ಪಾದನೆಯನ್ನು ನಾನಾ ನಮೂನೆಯಿಂದ ಅಧಿಕಗೊಳಿಸುವುದಲ್ಲದೆ, ಗೃಹೋದ್ಯಮಗಳ ವಿಕಾಸಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟು ಬಿಡುಸಮಯದ ಸದುಪಯೋಗಕ್ಕೆ ನೆರವಾಗಬೇಕು. ಯೋಜನೆಯಂತೆ ನಡೆಯಬೇಕಾದ ಕೆಲಸಗಳಿಗೆ ಹಳ್ಳಿಗರು ಯಾವ ಪ್ರಕಾರ ಎಷ್ಟು ಹೆಚ್ಚು ಹಣ ಹಾಗು ಶ್ರಮವನ್ನು ದಾನವಾಗಿ ಕೊಡಬಲ್ಲರೆಂಬುದನ್ನೂ ಸರಕಾರದಿಂದ ದೊರಕ ಬೇಕಾದ ತಾಂತ್ರಿಕ ಮತ್ತಿತರ ಸಲಹೆ ಸಹಾಯಗಳ ಅಂದಾಜನ್ನೂ ಹಳ್ಳಿಯ ಸಂಸ್ಥೆಗಳು ಮಾಡಿಕೊಳ್ಳಬೇಕು.

❖

ಕೃಷಿಯ ಉತ್ಪಾದನೆಯನ್ನು ಹೆಚ್ಚಿಸಿಕೊಳ್ಳುವ ಕಡೆಗೆ ವಿಶೇಷವಾದ ಗಮನ ಕೊಟ್ಟ ಮಾತ್ರದಿಂದ ಇತರ ಸಾಮಾಜಿಕ ಚಟುವಟಿಕೆಗಳು ಕ್ಷೀಣಿಸಲಾಗದು—ಅಥವಾ ಅವುಗಳನ್ನು ಕಡೆಗಣಿಸಲೂ ಬಾರದು. ಶಿಕ್ಷಣ, ಆರೋಗ್ಯ, ನಾಗರಿಕ ಸೌಕರ್ಯಗಳ ಕ್ಷೇತ್ರದಲ್ಲಿ ಭಾರತದಲ್ಲಿ ತುಂಬಾ ಹೆಚ್ಚಿನ ಕೆಲಸಗಳು ನಡೆಯಬೇಕಾಗಿರುತ್ತವೆ. ಪ್ರತಿಯೊಂದು ಊರಿನಲ್ಲೂ ಸ್ವಚ್ಛವಾದ ಕುಡಿಯುವ ನೀರಿನ ಭಾವಿಗಳು, ಪ್ರಾಥಮಿಕ ಶಿಕ್ಷಣ ಕೇಂದ್ರ, ಸಾಮಾನು ಸರಂಜಾಮುಗಳನ್ನು ಪೇಟೆಗೆ ಒಯ್ದು ಮಾರಲು ಅನುಕೂಲವಾಗುವಂತೆ ಗಾಡಿ ಮತ್ತಿತರ ವಾಹನಗಳು ಚಲಿಸುವ ಮಾರ್ಗಗಳ ರಚನೆ, ಹಳ್ಳಿಯ ತೋಡುಗಳನ್ನು ದಾಟಲು ಅನುಕೂಲವಾಗುವಂತೆ ಚಿಕ್ಕ ಸೇತುವೆಗಳು, ಆಟ ಹಾಗು ವಿನೋದ ಗೋಷ್ಠಿಯ ಬಯಲುಗಳು—ಇತ್ಯಾದಿಗಳ ನಿರ್ಮಾಣ ಕಾರ್ಯ ಅತ್ಯಗತ್ಯವಾಗಿ ನೆರವೇರಬೇಕು. ಜಿಲ್ಲೆಗಳಲ್ಲಿಯೇ ಕೆಲವು ಆಯ್ದ ಪ್ರದೇಶಗಳಲ್ಲಿ ಜರೂರಾಗಿ ಇಂತಹ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾದೀತು—ಉದಾಹರಣೆಗೆ ಹಿಂದುಳಿದ ಜನರಿರುವ ಗುಡ್ಡಗಾಡು ಪ್ರದೇಶ, ನೆರೆ ಹಾವಳಿಯಿಂದ ವರ್ಷಂಪ್ರತಿ ಕಷ್ಟವನ್ನನುಭವಿಸಬೇಕಾದ ಕ್ಷೇತ್ರ, ಕೈಗಾರಿಕೆಗಳ ದೆಸೆಯಿಂದ ಬೆಳೆಯುತ್ತಿರುವ ನಗರ; ಅರಣ್ಯದ ತಪ್ಪಲಲ್ಲಿರುವ ಸಮೃದ್ಧಿ ಭೂಮಿ—ಇತ್ಯಾದಿಗಳ ಅಭಿವೃದ್ಧಿಗೋಸ್ಕರ ವಿಶೇಷವಾದ ಗಮನವನ್ನು ಪ್ರೊತ್ಸೈಸುವುದು ಅಗತ್ಯ. ಜಿಲ್ಲಾ ಮಟ್ಟದ ಯೋಜನಾ ಕರ್ತರು ಇಂತಹ ವಿಶಿಷ್ಟ ಅಭಿವೃದ್ಧಿ ಕ್ಷೇತ್ರಗಳ ವಿವರಗಳನ್ನು ಗೊತ್ತುಪಡಿಸಿ, ಸ್ಥಳೀಯರ ಬೆಂಬಲವನ್ನು ದೊರಕಿಸಿ ಕೊಳ್ಳಲು ತಕ್ಕ ಕ್ರಮಗಳನ್ನು ತೆಗೆದುಕೊಳ್ಳಬೇಕು. ಮುಖ್ಯವಾಗಿ ಅಧಿಕಾರೇತರ ವಲಯಗಳಿಂದ ಯೋಜನೆಗೆ ಪ್ರೋತ್ಸಾಹ ದೊರಕುತ್ತಿರುವಂತೆ ಯೋಗ್ಯ ವಾತಾವರಣವನ್ನು ಉಂಟುಮಾಡಬೇಕು. ಪ್ರತಿಯೊಂದು ನಗರಕೂ ಬೆಳವಣಿಗೆ ಹೊಂದಿ ಮುಂದಕ್ಕೆ ಬರುವ ಮಹತ್ವಾಕಾಂಕ್ಷೆ ಇರಬೇಕಲ್ಲವೆ, ಅದಕ್ಕಾಗಿ ಕಷ್ಟ, ತ್ಯಾಗ ಮತ್ತು ಪರಿಶ್ರಮಕ್ಕೆ ನಾಗರಿಕರನ್ನು ಅಣಿಗೊಳಿಸಬೇಕು. ನಮ್ಮ ಉದ್ಧಾರಕ್ಕೆ ನಮ್ಮಲ್ಲಿರುವ ಸಾಧನ ಸಂಪತ್ತಿನ ಪ್ರತಿಯೊಂದೂ ಸ್ರೋತವನ್ನು ವಿಪುಲವಾಗಿ ಬಳಸಿಕೊಂಡು ಮುನ್ನಡೆಯುವಂತೆ ಹುರಿದುಂಬಿಸಬೇಕು. ಸರಕಾರದ ಮುಖವನ್ನೇ ನೋಡುತ್ತಾ ಕೂಡುವ ಪರಿಸ್ಥಿತಿ ಇರಬಾರದು. ಯೋಜನೆಗೆ ಈ ತೆರನಾದ ಬೆಂಬಲ ಈಗಾಗಲೇ ನಾಕಷ್ಟು ದೊರೆತಿದೆ; ಕಾರಣ ಮುಂದಿನ ಯೋಜನೆ ನಿಜವಾಗಿಯೂ "ಜನತೆಯ ಯೋಜನೆ"ಯಾಗುವುದೆಂದು ಹಾರೈಸೋಣ!

	1933	1943	1953
ಅಧಿಕೃತ ಭಂಡವಾಳ	5,00,000	5,00,000	20,00,000
ತೆತ್ತ ಭಂಡವಾಳ	12,000	1,90,000	9,00,000
ಕ್ಷೇಮನಿಧಿ	—	12,000	2,00,000
ಒಟ್ಟು ವಹಿವಾಟು	77,000	15,60,000	66,30.000

ಬೇಂಕಿನ ಬೆಳವಣಿಗೆ

ಕಾಲಾವಧಿ ಠೇವಣಾತಿ— 3 ತಿಂಗಳಿಗೆ $3\frac{1}{2}$% ಬಡ್ಡಿ.
ಕಾಯಂ ಠೇವಣಾತಿ— 1 ತಿಂಗಳಿಂದ 24 ತಿಂಗಳ ಮುದತಿ ವರೆಗೆ ಸ್ವೀಕರಿಸಲ್ಪಡುವುವು. 24 ತಿಂಗಳಿಗೆ=$3\frac{3}{4}$% ಬಡ್ಡಿ.
ರೂಪಾಯಿ ಹತ್ತು ಸಾವಿರ ವ, ಮೇಲಿನ ಠೇವಣಾತಿಗೆ 4% ಬಡ್ಡಿ ಕೊಡಲಾಗುವುದು.
ರೂಪಾಯಿ ಐವತ್ತು ಸಾವಿರ ವ, ಮೇಲಿನ ಠೇವಣಾತಿಗೆ $4\frac{1}{4}$% ಬಡ್ಡಿ ಕೊಡಲಾಗುವುದು.
ವಿಜಯ ಕೇಶ್ ಸರ್ಟಿಫಿಕೇಟು— ಮೂರು ವರುಷದ ಅವಧಿ = $4\frac{1}{4}$% ಬಡ್ಡಿ.
ಸಾಲ ಸವಲತ್ತುಗಳಿಗೆ ಬೇಕಾದ ಅನುಕೂಲತೆಗಳನ್ನು ವಿಳಂಬವಿಲ್ಲದೆ ಒದಗಿಸಲಾಗುವುದು.
ಹೆಚ್ಚಿನ ಮಾಹಿತಿಗೆ ನಿಮ್ಮ ಸಮೀಪದ ನಮ್ಮ ಏಜಂಟರೊಡನೆ ವಿಚಾರಿಸಿರಿ. ಜಿಲ್ಲೆಯ 10 ಕೇಂದ್ರಗಳಲ್ಲಿಯೂ, ಮಡಿಕೇರಿ ಮತ್ತು ಮುಂಬಾಯಿಯಲ್ಲಿಯೂ ನಮ್ಮ ಶಾಖೆಗಳಿರುತ್ತವೆ.
ಸ್ಥಾಪನೆ: 1931 ದಿ ವಿಜಯ ಬ್ಯಾಂಕ್ ಲಿಮಿಟೆಡ್ ಪ್ರಧಾನ ಕಛೇರಿ: ಮಂಗಳೂರು 3.

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.
ಕಲ್ಮಂಜೆ ವ್ಯಾಸಾಚಾರ್ಯ
ರಥಬೀದಿ ಉಡುಪಿ.

ಋತುಸ್ರಾವ ನಿಂತಿತು

"ಕುಮಾರಿ" ಬಿಲ್ಲೆಗಳನ್ನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು, ಹತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು. ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ- ಬೆಲೆ: ರೂ. 3/-; ಸ್ಪೆಶ್ಯಲ್ ರೂ. 5-, ಅಧಿಕಾಧಿಕ ಸ್ಪೆಶ್ಯಲ್ ರೂ. ೭-[ವಿ. ಪಿ. ಹನ್ನೆರಡಾಣೆ ಪ್ರತ್ಯೇಕ]
Mrs. P. DEVEE, F.DS.(N.J.)
CALCUTTA. 40
ಸ್ಟಾಕಿಸ್ಟರು: ಶಹಾ ಕಂಪೆನಿ, ಮಂಗಳೂರು.

ದಿ ಬೊಂಬೆಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿ., ಬೊಂಬಾಯಿ
1951ನೆ ವರ್ಷದ ವೆಲ್ಯುಯೇಶನ್ ಪ್ರಕಾರ ಉದಾರ ಬೋನಸ್
ಎಂಡೋಮೆಂಟ್ ಪೊಲಿಸಿಗಳ ಮೇಲೆ ರೂ. 10- } ವರ್ಷ ಒಂದರ
ಜೀವಾವಧಿ ಪೊಲಿಸಿಗಳ ಮೇಲೆ ರೂ. 12-8 } ರೂ. 1000ಕ್ಕೆ
(ಪ್ರಚಲಿತ ಪ್ರೀಮಿಯಮ್ ಸ್ಕೇಲಿನಂತೆ)
ಜೀವ ವಿಮೆಗಾಗಲೀ, ಪ್ರಾತಿನಿಧ್ಯವೊಂದಲಿಕ್ಕಾಗಲೀ
ನಮ್ಮೊಡನೆ ವಿಚಾರಿಸಿದರೆ ಅಪೇಕ್ಷಿತ ಫಲವನ್ನೀಯುವುದು
ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್
ಚೀಫ್ ಏಜಂಟ್ಸ್, ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್.
ಬೊಂಬೆ ಲ್ಯಾಫ್ ಬಿಲ್ಡಿಂಗ್, ಉಡುಪಿ, ದ. ಕ.
ಇದರ ಶಾಖಾ ಕಛೇರಿಗಳಲ್ಲಿ: ಮಧುರೆ, ಬೆಂಗಳೂರು, ತ್ರಿವೆಂಡ್ರಮ್, ಕಲ್ಲಿಕೋಟೆ ಬೊಂಬಾಯಿ, ಮಂಗಳೂರು ಮತ್ತು ಕೊಯಮುತ್ತೂರು
The Bombay Life Assurance Co., Ltd., Bombay.

—ಹೊಸಕೆರೆ ಚಿದಂಬರಯ್ಯನವರ—
ಗೀತೆಯ ಕೈಗನ್ನಡಿ
ಭಗವದ್ಗೀತೆಯ ಸಮೂಲ
ಭಾಷಾಂತರ.
ಬೆಲೆ 0-12-0
V. P. P. ಮೂಲಕ 1—4—0
ನವಯುಗ ಪ್ರೆಸ್, ಉಡುಪಿ

ಹೃದಯಶುದ್ಧಿಯೇ ಭೂದಾನಯಜ್ಞದ ಮುಖ್ಯ ಉದ್ದೇಶ

ಆಚಾರ್ಯ ವಿನೋಬಾ ಭಾವೆ.

[6.4.54 ಗಯೆಯ ಪ್ರಾರ್ಥನಾಸಭೆಯಿಂದ]

ಸ್ವರಾಜ್ಯದ ಪೂರ್ವದಂತೆಯೇ ನಮ್ಮ ಸ್ಥಿತಿಯು ಹಾಗೆಯೇ ಉಳಿದಿದೆ. ಅದರೆ ಸ್ವರಾಜ್ಯದಿಂದ ಆಗಬೇಕಾದ ಬದಲಾವಣೆಯು ಇಂದಿಗೂ ಜನತೆಯಲ್ಲಿ ಆಗಿಲ್ಲ. ನಮ್ಮಲ್ಲಿಯ ದುರಭಿಮಾನವನ್ನು ನಾವು ಬಿಡಲಿಲ್ಲ. ಇನ್ನೂ ಮದ-ಮೋಹ ನಮ್ಮನ್ನು ಆವರಿಸಿಕೊಂಡೇ ಇವೆ. ನಾವು ಲೋಭವನ್ನು ಬಿಡದಿರುವವರೆಗೂ ಧನವನ್ನೇ ಹಿಂಬಾಲಿಸಿಕೊಂಡು ಓಡುತ್ತಿರುವೆವು. ಇನ್ನು ಜನತೆಯ ಶೋಷಣೆಯು ನಡೆಯುತ್ತಲೇ ಇರುವುದು. ಇವುಗಳನ್ನು ಬಿಡದಿರುವವರೆಗೂ ಧನವನ್ನೇ ಹಿಂಬಾಲಿಸಿಕೊಂಡು ಓಡುತ್ತಿರುವೆವು. ಹೀಗೆ ಧನೋಪಾಸಕರಾಗಿ ಐಶ್ವರ್ಯದ ಬೆಂಬತ್ತಿದ ನಾವು ಜನತಾರೂಪಿ ಜನಾರ್ದನನ್ನು ಅನಾದರ ಮಾಡುತ್ತಿದ್ದೇವೆ.

ದುರಭಿಮಾನದಿಂದ ತನ್ನನ್ನು ಹೆಚ್ಚಿನವನೆಂದೂ ಅಲ್ಲದೆ ಇತರರನ್ನು ಕೀಳರೆಂದೂ ಎಣಿಸಿ ವರ್ತಿಸಿ ಪರಮಾತ್ಮನಿಗೆ ದ್ರೋಹ ಬಗೆಯುವ ಕಾರ್ಯವು ಅವ್ಯಾಹತವಾಗಿ ನಡೆಯುತ್ತಲೇ ಇದೆ. ನಾವು ಭೋಗವಂತರಾಗಿ ವಸ್ತು ಪದವಿಗಳನ್ನೂ ಅಲ್ಲದೆ ಭೂಮಿ ಸಂಪತ್ತುಗಳನ್ನೂ ತನ್ನದೇ ಎನ್ನುವ ಭಾವನೆಯನ್ನು ಅಳವಡಿಸಿಕೊಂಡಿರುವೆವು. ನಾವು ನಮ್ಮ ಅಧಿಕಾರದ ಹಕ್ಕನ್ನು ಪ್ರತಿಪಾದಿಸುವಾಗ ಇತರರನ್ನು ನಮ್ಮಿಂದ ದೂರೀಕರಿಸುವೆವು. ಇನ್ನೊಬ್ಬರನ್ನು ಸ್ವಾಗತಿಸುವುದೂ ಇಲ್ಲ. ಅಲ್ಲದೆ ಅವರ ಅಧಿಕಾರವನ್ನು ಒಪ್ಪುವುದೇ ಇಲ್ಲ, ಅಂದರೆ ಇದರಿಂದಾಗಿ ನಾವು ಈಶ್ವರನನ್ನೇ ಅಪಮಾನಗೊಳಿಸುತ್ತಿರುವೆವು.

ಇಂದು ಭೂದಾನ ಯಜ್ಞವು ಆರಂಭವಾಗಿದೆ. "ನೀವು ಕಾಯಿದೆಯಿಂದಲೇ ಈ ಕಾರ್ಯವನ್ನು ಏಕೆ ಮಾಡಿಸುವುದಿಲ್ಲ? ಪಾದಚಾರಿಗಳಾಗಿ ಏಕೆ ಊರೂರು ಮನೆ ಮನೆಗಳಿಗೆ ಅಲೆದಾಡುತ್ತಿರುವಿರಿ? ನೀವು ಸ್ವತಃ ಈ ಕಷ್ಟವನ್ನನುಭವಿಸುತ್ತಿರಲ್ಲದೆ ನಮಗೂ ಸಹ ಯಾಕೆ ತೊಂದರೆ ಕೊಡುತ್ತಿರುವಿರಿ? ಸರಕಾರದ ಮೇಲೆ ಒತ್ತಾಯ ತನ್ನಿರಿ, ಕಾಯಿದೆ ಮಾಡಲು ತಿಳಿಸಿರಿ, ಆದರಿಂದ ಎಲ್ಲ ಕೆಲಸಗಳೂ ಸುಲಭವಾಗಿಯೇ ಕೊನೆಗೊಳ್ಳುವುದು" ಎಂದು ಕೆಲವರು ನನಗೆ ಪ್ರಶ್ನಿಸುತ್ತಾರೆ. ಆದರೆ ಈ ಕಾರ್ಯವು ಇಷ್ಟು ಸುಲಭದಲ್ಲಿ ಕೊನೆಗೊಳ್ಳುವ ಕಾರ್ಯವಲ್ಲ. ಕಾಯಿದೆಯಿಂದ ಅಧಿಕ ಭೂಮಿ ಇರುವ ಭೂಮಾಲಿಕರಿಂದ ಕೆಲವೊಂದು ಮಟ್ಟಿಗೆ ಭೂಮಿ ಹೋಗಬಹುದು. ಆದರೆ ಕಾಯಿದೆಯಿಂದ ನಾವು ಲೋಭ ಮಮತೆ ಮತ್ತು ದುರಭಿಮಾನ ಮೊದಲಾದ ಕೆಟ್ಟಗುಣಗಳಿಂದ ಬಿಡುಗಡೆ ಹೊಂದಬಹುದೇ? ಯಾರೊಬ್ಬರೂ ದುರಭಿಮಾನವನ್ನಿಟ್ಟುಕೊಳ್ಳಬಾರದು. ಅಲ್ಲದೆ ತನ್ನನ್ನು ಇತರರಿಗಿಂತ ಹೆಚ್ಚಿನವನೆಂದು ತಿಳಿದುಕೊಳ್ಳಬಾರದೆಂದು ಕಾಯಿದೆ ಮಾಡಬಹುದೆ? ತ್ಯಾಗ ಮಾಡಬೇಕು ಮಮತೆಯನ್ನಿಟ್ಟುಕೊಳ್ಳಬಾರದು. ತನ್ನ ಹಾಗೂ ಇನ್ನೊಬ್ಬರಲ್ಲಿಯ ಭೇದ ಭಾವನೆಗಳು ಅಳಿಯಬೇಕೆನ್ನುವುದು ಕಾನೂನಿನಿಂದ ಆಗಬಹುದೆ? ಇವುಗಳೆಲ್ಲಾ ಆತ್ಮಸಾಕ್ಷಿಯಾಗಿಟ್ಟುಕೊಂಡು ಮಾಡುವ ಕೆಲಸಗಳು. ನಾನು ಇದಕ್ಕಾಗಿಯೇ ಪಾದಚಾರಿಯಾಗಿ ನಿಮ್ಮೆಡೆಗೆ ಬರುತ್ತಿರುವೆನು. ಅಲ್ಲದೆ ನಿಮ್ಮೆಲ್ಲರ ಹೃದಯದಲ್ಲಿ ಪ್ರವೇಶಿಸಲು ಯತ್ನಿಸುತ್ತಿದ್ದೇನೆ. ನಮ್ಮೆಲ್ಲರ ಹೃದಯ ಶುದ್ಧಿಯಾಗಲೆಂದೇ ನಾನು ಬಯಸುತ್ತೇನೆ. ಇಲ್ಲಿಯ ವರೆಗೆ ಹೃದಯ ಶುದ್ಧಿಯಾಗದಿದ್ದುದನ್ನು ನಾನು ನಿರೀಕ್ಷಿಸುತ್ತಿದ್ದೇನೆ.

ಈಗ ಭೂದಾನಯಜ್ಞಕ್ಕೆ ಕೆಲವರು ಭೂಮಿಕೊಡುತ್ತಿದ್ದಾರೆ, ಭೂಮಿ ಕೊಡುವವರ ಸಂಖ್ಯೆಯು ದಿನ ದಿನವೂ ಬೆಳೆಯುತ್ತಲೇ ಇದೆ. ನನ್ನ ವಿಚಾರಗಳನ್ನು ಜನರು ಗ್ರಹಣ ಮಾಡಿಕೊಳ್ಳುತ್ತಿರುವುದು ಬಹಳ ಸಂತೋಷದ ಸಂಗತಿಯಾಗಿದೆ. ಆದರೆ ಕೇವಲ ಭೂಮಿ ಪಡೆಯುವುದರಲ್ಲಿಯೇ ನಾನು ಸಂತೋಷಗೊಳ್ಳುವುದಿಲ್ಲ. ಜನತೆಯಲ್ಲಡಗಿದ ರಾಗದ್ವೇಷಗಳನ್ನೂ, ಲೋಭ ಮೋಹಗಳನ್ನೂ ದೂರೀಕರಿಸುವುದರಲ್ಲಿಯೇ ಭೂದಾನಯಜ್ಞದ ಶಕ್ತಿ ಪರೀಕ್ಷೆಯಾಗುವುದು. ಜನತೆಯಲ್ಲಿಯ ಈ ತಮೋಗುಣಗಳು ಕಮ್ಮಿಯಾದರೆ ನನ್ನ ಕೆಲಸವು ಯಶಸ್ವಿಯಾಗುತ್ತಿದೆ ಎಂದು ತಿಳಿಯತಕ್ಕದ್ದು. ಇದಕ್ಕಾಗಿ ಸಮಾಜದಲ್ಲಿಯ ಈ ಕೆಡಕುಗಳ ಮೇಲೆಯೇ ನಾನು ದಾಳಿಮಾಡುತ್ತಿರುವೆನು.

ಭಗವಂತನ ಕೃಪೆ ಇಲ್ಲದೆ ಯಾವದೊಂದೂ ಕೆಲಸವು ನಡೆಯಲಾರದು. ಆದರೆ ಮನುಷ್ಯನಲ್ಲಿಯ ದೋಷಗಳು ಅಳಿಯದೆ ಭಗವಂತನ ಕೃಪೆಯಾಗಲಾರದು. ಎಷ್ಟು ಜನರು ಭೂಮಿ ಕೊಟ್ಟರೆನ್ನುವುದರ ಮೇಲೆ ಭೂದಾನ ಯಜ್ಞದ ಸಫಲತೆಯು ನಿರ್ಣಯವಾಗದು, ಅಂದರೆ ಎಷ್ಟು ಜನರು ತಮ್ಮಲ್ಲಡಗಿದ ದುರಭಿಮಾನವನ್ನು ತೊರೆದರು ಅಲ್ಲದೆ ಸಂತೋಷದಿಂದ ಒಡೆತನ ಬಿಟ್ಟರು ಮತ್ತು ಮಮತೆಯನ್ನು ಬಿಟ್ಟುಕೊಟ್ಟರೆನ್ನುವುದೇ ಭೂದಾನಯಜ್ಞದ ನಿಜವಾದ ಶಕ್ತಿ ಪರೀಕ್ಷೆಯಾಗಿದೆ. ನಾವು ಲೋಭ, ಮದ, ದುರಭಿಮಾನ ಮೊದಲಾದ ಗುಣಗಳನ್ನು ಬಿಟ್ಟರೆ ನಮಗೆ ಭಗವಂತನಲ್ಲಿ ಭಕ್ತಿ ಉಂಟಾಗುವುದು, ಮತ್ತು ಆಗಲೇ ಭಗವಂತನ ಕೃಪೆಯಾಗುವುದು. ನನ್ನ ಕಾರ್ಯವು ಯಾಕೆ ಕಾಯಿದೆಯಿಂದ ಆಗಲಾರದೆನ್ನುವುದನ್ನು ನೀವು ಈಗ ತಿಳಿದಿರಬಹುದು. ಅಂದರೆ ಈ ಕಾರ್ಯವು ಕಾನೂನಿಗೆ ಸಿಲುಕದ ಕೆಲಸವಾಗಿದೆ. ಹೃದಯ ಶುದ್ಧಿಹೊಂದಿ ಹೃದಯ ಪರಿವರ್ತನೆಯಿಂದಲೇ ಈ ಕಾರ್ಯವು ಆಗತಕ್ಕದ್ದು. ಹೃದಯ ಶುದ್ಧಿಯು ಸತ್‌ಸಂಗದಿಂದ ಮತ್ತು ಸಜ್ಜನರ ಉಪದೇಶದಿಂದಲೇ ಆಗತಕ್ಕದ್ದು. ಇದಕ್ಕಾಗಿಯೇ ನಾನು ಊರೂರು ತಿರುಗುತ್ತಾ ಜನರಿಗೆ ಸದ್ವಿಚಾರಗಳನ್ನು ತಿಳಿಸುತ್ತಿರುವೆನು. ಚಿಕ್ಕ ಚಿಕ್ಕ ಹಳ್ಳಿಗಳಲ್ಲಿಯೂ ಸಹ ನಾನು ಒಂದು ದಿನವಿದ್ದು ಇರುತ್ತೇನೆ. ಈ ಜನತೆಯಲ್ಲಿಯೇ ನಾನು ಹರಿದರ್ಶನ ಮಾಡುತ್ತಿದ್ದೇನೆ. ಈ ಹರಿದರ್ಶನದ ಆನಂದವು ಕಾಯಿದೆಯಿಂದ ಆಗಲಾರದು.

ಕೇವಲ ಭೂಮಿಗಾಗಿಯೇ ಕಾಯಿದೆ ಮಾಡಿದರೆ ಅದರಿಂದ ಏನಾಗಬಹುದು? ಕಾಯಿದೆಯಿಂದ ಊರೂರುಗಳಲ್ಲಿ ಜಗಳವು ಉಂಟಾಗುವುದು. ನಂತರ ಅವು ಕೋರ್ಟು ಕಛೇರಿಗಳಿಗೆ ಸೇರುವವು. ಅಲ್ಲಿ ಲಂಚ ವಂಚನೆಗಳು ನಡೆಯುವವು; ಅಲ್ಲಿ ವಕೀಲರ ಉದ್ಯೋಗವು ನಡೆಯುವುದು. ಆದರೆ ನಿಮ್ಮ ಹೃದಯದಲ್ಲಿ ಪರಿವರ್ತನೆ ಹೊಂದಿದರೆ, ಸಂತೋಷದಿಂದ ಲೋಭವನ್ನು ತೊರೆದು ಪ್ರೇಮದಿಂದ ನಿಮ್ಮ ಬಡ ಬಂಧುಗಳಿಗೆ ಭೂಮಿ ಕೊಡಲು ಆರಂಭಿಸಿದರೆ, ಅಂದರೆ ತಂದೆಯು ತನ್ನ ಪ್ರೀತಿಯ ಮಕ್ಕಳಿಗೆ ಕೊಡುವಂತೆ ಭೂಮಿಹೀನರಿಗೆ ಭೂಮಿಕೊಟ್ಟು ಅವರ ಸೇವೆ ಮಾಡಿ ಬಡವರ ಸುಖ ದುಃಖಗಳಲ್ಲಿ ಬಲ್ಲವರು ಭಾಗವಹಿಸಿದಾಗ ನಾಲ್ಕೂ ಕಡೆಗಳಲ್ಲಿ ಪ್ರೇಮದ ಮತ್ತು ಶಾಂತಿಯ ರಾಜ್ಯವು ವಿಸ್ತಾರ ಹೊಂದುವುದು.

(ಅನುವಾದಕ—ವಿ. ನಾಗಯ್ಯ)

[೧ನೇ ಪುಟದಿಂದ]

ನಿರ್ಮಿಸುವ ಉದ್ದೇಶದಿಂದ ಈಗಾಗಲೇ ನಮ್ಮ ವಿಜ್ಞಾನಿಗಳ ಗುಂಪೊಂದು ಪಾಶ್ಚಾತ್ಯ ದೇಶಗಳಿಗೆ ತೆರಳಿದ್ದು ಪ್ರಾಸ್ತಾವಿಕ ಅಧ್ಯಯನಗಳನ್ನು ನಡೆಸುತ್ತಿದೆ. ರೇಡಿಯೋ ಏಕ್ಟಿವ್ ಐಸೋಟೋಪುಗಳ ಉಪಯೋಗದಲ್ಲಿ ಸಾಕಷ್ಟು ಅಧಿಕ ಅನುಭವವನ್ನು ನಮ್ಮ ಸಂಶೋಧನಾಕೇಂದ್ರ ಪಡೆಯುತ್ತಿದ್ದು, ವೈದ್ಯಕೀಯ ಚಿಕಿತ್ಸಾ ಕ್ಷೇತ್ರದಲ್ಲಿ ಇದು ಕ್ರಾಂತಿಯನ್ನುಂಟು ಮಾಡುವ ಭರವಸೆ ಇದೆ. ಅಲ್ಲದೆ, ವೈದ್ಯಕೀಯ ಹಾಗು ಆರೋಗ್ಯ ವಿಷಯಗಳನ್ನೂ ಶರೀರದ ಮೇಲೆ ಆಗುವ ಪ್ರತಿಕ್ರಿಯೆಯನ್ನೂ ಖನಿಜ ದ್ರವ್ಯಗಳ ನಿಕ್ಷೇಪ ಗೊತ್ತುಹಚ್ಚುವುದನ್ನೂ ಅಭ್ಯಸಿಸುವ ಬೇರೆ ಬೇರೆ ವಿಭಾಗಗಳು ತೃಪ್ತಿಕರವಾಗಿ ಕೆಲಸ ಮಾಡುತ್ತವೆ.

ಮಹಾರಾಷ್ಟ್ರಗಳ ದೃಷ್ಟಿಯಲ್ಲಿ ಭಾರತವು ಅಣುಸಂಶೋಧನದಲ್ಲಿ ಹಿಂದುಳಿದಂತೆ ಕಂಡುಬಂದರೂ—'ದೊಡ್ಡ' ದೇಶವೆಂದು ಹೇಳಿಸಿಕೊಳ್ಳುವ ನಮಗಿಂತ ಹೆಚ್ಚು ಸಾಧನ ಸಂಪತ್ತನ್ನು ಪಡೆದುಕೊಂಡ ಹಾಗು ನಮಗಿಂತ ಮೊದಲು ಸಂಶೋಧನಾ ಕಾರ್ಯವನ್ನು ತೊಡಗಿದ ಬೇರೆ ಆರೇಳು ರಾಷ್ಟ್ರಗಳ ಪ್ರಗತಿಯೊಂದಿಗೆ ತೂಗಿ ನೋಡಿದರೆ, ನಮ್ಮ ಅಣು ವಿಜ್ಞಾನಿಗಳು ಪ್ರಶಂಸಾರ್ಹ ಪ್ರಗತಿಯನ್ನು ಸಾಧಿಸಿರುವುದು ವ್ಯಕ್ತವಾಗುತ್ತದೆ. ಇತರ ದೇಶಗಳಿಂದ ಬಂದ, ನಮ್ಮ ನೆಂಟರೆಂದು ಹೇಳಲು ಬಾರದ, ವಿಜ್ಞಾನಿಗಳು ಸಹ ಈ ವಿಷಯವನ್ನು ಕೊಂಡಾಡಿದ್ದುಂಟು. ಹಿಂದುಳಿದ ರಾಷ್ಟ್ರಗಳ ದೃಷ್ಟಿಯಲ್ಲಿ ಔದ್ಯಮಿಕ ಅಭಿವೃದ್ಧಿಯನ್ನು ಕೈಗೂಡಿಸುವುದಕ್ಕೂ ಜೀವನ ಮಟ್ಟವನ್ನು ಎತ್ತರಿಸುವುದಕ್ಕೂ ಅಣುಶಕ್ತಿಯನ್ನು ಬಳಸುವವುದು ಬಹಳ ಗಂಭೀರವಾದ ವಿಷಯ. ಅಮೇರಿಕದಂತಹ ದೇಶದಲ್ಲಿ ಬೇಕಾದಷ್ಟು ಸಂಪತ್ತು ತುಂಬಿ ತುಳುಕುತ್ತಿದೆ; ಆದುದರಿಂದ ಅವರು ಮಾರಕಾಸ್ತ್ರಗಳ ತಯಾರಿಗೇನೆ ಮಹತ್ವ ಕೊಡುವರು! ನಾವು ಸಾಯಲಿಕ್ಕೋಸ್ಕರ ಬದುಕುವವರಲ್ಲ— ಇತರರನ್ನು ಸಾಯಿಸುವ ಮನೋಭಾವವೂ ನಮ್ಮದಲ್ಲ. ನಮಗೆ ಬದುಕಬೇಕು- ಇತರರನ್ನೂ ಬದುಕಗೊಡಬೇಕು ಎಂಬ ಆಶೆ ಇದೆ.

ಆದುದರಿಂದ ಅಣುಶಕ್ತಿಯ ಉತ್ಪಾದನಾ ಕಾರ್ಯದಲ್ಲಿ ನೆರವಾಗುವ ಖನಿಜ ವಸ್ತುಗಳ ನಿಯಂತ್ರಣದಿಂದ, ಹಿಂದುಳಿದ ದೇಶಗಳು ನಷ್ಟಹೊಂದುತ್ತವಾದರೆ, ಅಂತಹ ನಿಯಂತ್ರಣ ನಿಷ್ಪ್ರಯೋಜಕ— ಮಾತ್ರವಲ್ಲ, ಗಂಡಾಂತರಕಾರಿಯೂ ಹೌದು. ಸಂಯುಕ್ತ ರಾಷ್ಟ್ರಸಂಘದ ಹೊರಗೆ ಇಂತಹ ನಿಯಂತ್ರಣ ಸಂಸ್ಥೆಯನ್ನು ಸ್ಥಾಪಿಸುವುದರಿಂದಂತೂ ಹಿಂದುಳಿದ ರಾಷ್ಟ್ರಗಳ ನ್ಯಾಯವಾದ ಬೇಡಿಕೆಗೆ ಮನ್ನಣೆ ದೊರಕಲಿಕ್ಕೇ ಇಲ್ಲ! ಈಚೆಗೆ ಅಣುಶಕ್ತಿಯ ಮೇಲೆ ಅಂತಾರಾಷ್ಟ್ರೀಯ ನಿಯಂತ್ರಣ ಹೇಗಿರಬೇಕೆಂಬುದನ್ನು ಪ್ರಸ್ತಾಪಿಸುತ್ತಾ ಮಾಡಲಾದ ಅಮೇರಿಕದ ಕೆಲವು ಸಲಹೆಗಳು ಹಿಂದುಳಿದ ರಾಷ್ಟ್ರಗಳು ತಮ್ಮ ಉದ್ಧಾರದ ಅಪೇಕ್ಷೆಯಿಂದ ನಡೆಸುತ್ತಿರುವ ಶಾಂತಿ ಕಾಲದ ಸಂಶೋಧನೆಗಳಿಗೆ ಆತಂಕವೊಡ್ಡುವಂತೆ ಕಂಡು ಬರುತ್ತವೆ. ಮಹಾರಾಷ್ಟ್ರಗಳ ದಾಸ್ಯವನ್ನು ಚಿಕ್ಕ ರಾಷ್ಟ್ರಗಳು ಸ್ವೀಕರಿಸುವಂತೆ ಒತ್ತಾಯಿಸುವ ಪ್ರಸಂಗ ನಿಯಂತ್ರಣ ಪ್ರಶ್ನೆಯಿಂದ ಎಷ್ಟು ಮಾತ್ರಕ್ಕೂ ಉದ್ಭೂತವಾಗಬಾರದು.

ನಿಯಂತ್ರಣ ವ್ಯವಸ್ಥೆಯು ರಾಷ್ಟ್ರಗಳ ಸಾರ್ವಭೌಮಾಧಿಕಾರದ ಮೇಲೆ ಕೆಲಮಟ್ಟಿಗೆ ಪರಿಣಾಮವನ್ನುಂಟು ಮಾಡುತ್ತದೆ—ಜಗತ್ತಿನ ಎಲ್ಲ ರಾಷ್ಟ್ರಗಳೂ ನಿಯಂತ್ರಣ ವ್ಯವಸ್ಥೆಯ ಕುರಿತು ಸಮ್ಮತಿಯನ್ನು ಸೂಚಿಸಿ, ತಂತಮ್ಮ ಸಾರ್ವಭೌಮಾಧಿಕಾರಕ್ಕೆ ತುಸುಮಿತಿಯನ್ನು ಹಾಕಿದರೆ ಆಗ 'ಹತ್ತು ಮಂದಿಯ ಸಾವು ಮದುವೆಗೆ ಸಮಾನ" ಎಂಬ ಮಾತಿನಂತೆ ನಾವು ನಡೆಯಬಹುದು. ಆದರೆ ಯಾವುದೇ ರಾಷ್ಟ್ರವಾದರೂ—ಅದರಲ್ಲೂ ಅಣುಶಕ್ತಿಯ ಉತ್ಪಾದನೆಗೆ ಅಗತ್ಯವೆನಿಸಿದ ಖನಿಜ ದ್ರವ್ಯಗಳನ್ನೊಳಗೊಂಡ ರಾಷ್ಟ್ರ— ಈ ನಿಯಂತ್ರಣ ವ್ಯವಸ್ಥೆಯಲ್ಲಿ ಸ್ಥಾನವನ್ನು ಪಡೆಯದೆ, ಈ ಸಂಸ್ಥೆಯೊಂದಿಗೆ ಸಹಕರಿಸದಿದ್ದರೆ, ಎಲ್ಲ ಪ್ರಯತ್ನ ನಿಷ್ಫಲವಾಗುತ್ತದೆ. ಹೊರಗುಳಿದ ಈ ರಾಷ್ಟ್ರ ತನ್ನಷ್ಟಕ್ಕೆ ಕಿರುಕುಳವನ್ನೆಬ್ಬಿಸಿ, ಲೋಕ ಕಂಟಕ ನೀತಿಯನ್ನು ಅನುಸರಿಸಬಹುದು.

ಇದೇನೇ ಇರಲಿ—ನಾವು ಮೊನೊಜ್ಞಾಟ ಮುಂತಾದ ಖನಿಜ ದ್ರವ್ಯಗಳನ್ನು ಪರದೇಶಕ್ಕೆ ಕಳಿಸಿಕೊಟ್ಟಾದರೂ, ಅಣು ಸಂಶೋಧನೆಯಲ್ಲಿ ಪ್ರಗತಿ ಹೊಂದಲು ಅಗತ್ಯವಿರುವ ದ್ರವ್ಯಗಳನ್ನು ವಿನಿಮಯ ರೂಪದ ಮೇಲೆ ಪಡೆದು, ಮುಂದರಿಯಬೇಕು ಅಣು ಸಂಶೋಧನದ ವಿಷಯದಲ್ಲಿ ಯಾವುದೇ ತರದ ಗೋಪ್ಯವು ಅಪೇಕ್ಷಣೀಯವಲ್ಲ—ಎಲ್ಲರಿಗೂ ತಿಳಿದ ವಿಷಯವಾಗಿ ಈ ಸಂಶೋಧನೆಗಳು ಪರಿಣಮಿಸಿದರೆ, ಅವುಗಳು ವಿನಾಶ ಪರಿಣಾಮಗಳನ್ನು ಉಂಟುಮಾಡಲಾರವು ಕಳೆದ ಮಹಾ ಯುದ್ಧದಲ್ಲಿ ಮಾರಕ ವಾಯುಗಳು ಹೇಗೆ ನಿಷ್ಪ್ರಯೋಜಕವೆಂದು ಸಿದ್ಧವಾದವೋ ಅಣುಶಕ್ತಿಯ ವಿಧ್ವಂಸಕ ಚಟುವಟಿಕೆಗಳೂ ನಿರುಪಯುಕ್ತವೆನಿಸುತ್ತವೆ. ದುರ್ದೈವದಿಂದ, ಜಗತ್ತಿನಲ್ಲಿ ಎಲ್ಲರೂ ಈ ವಿಚಾರವನ್ನು ಪುರಸ್ಕರಿಸುತ್ತಿಲ್ಲ. ಭಾರತದ ಈ ಅಭಿಪ್ರಾಯಕ್ಕೆ ನೈತಿಕ ಬೆಂಬಲವಿದ್ದರೂ ಮಾನವತೆಯ ಆಶೀರ್ವಾದವಿದ್ದರೂ ಪರಿಸ್ಥಿತಿ ಅನುಕೂಲವಾಗಿಲ್ಲ. ಈ ವಿಷಮ ವೇಳೆಯಲ್ಲೂ ನಮ್ಮ ವಿಜ್ಞಾನಿಗಳು ತಮ್ಮ ಮೇಲೆ ಬಿದ್ದಿರುವ ಅತಿ ಮಹತ್ವದ ಹೊಣೆಗಾರಿಕೆಯನ್ನು ಯಶಸ್ವಿಯಾಗಿ ನಿರ್ವಹಿಸಿ, ಶಾಂತಿ ಕಾಲದ ಉಪಯೋಗಕ್ಕೋಸ್ಕರ ಅಣುಶಕ್ತಿಯನ್ನು ಬಳಸಲು ಸಮರ್ಥರಾಗುವರೆಂದು ಮೇಘನಾದ ಶಹಾರು ತಮ್ಮ ಒಂದು ಪೀಳಿಗೆಯ ವೈಜ್ಞಾನಿಕ ಜೀವನದ ಅನುಭವದಿಂದ ಹೇಳಿರುವರು. ಇದು ನಮಗೆ ಭರವಸೆಯನ್ನೂ ಆಶೆಯನ್ನೂ ನೀಡುತ್ತದೆ.

—ಕಾರ್ತಿಕೇಯ.

ಟ್ರೇಡ್ ಮಾರ್ಕ್

ಮೈಸೂರು ಶ್ರೀಮನ್ ಮಹಾರಾಜರವರ ಆಸ್ಥಾನವೈದ್ಯ ದಿ॥ ಅಂಬಳೆ ನರಸಿಂಹ ಪಂಡಿತರ ಮನೆತನದಲ್ಲಿ 96 ವರ್ಷ ಖ್ಯಾತಿಗಳಿಸಿದ ಎ. ರಾಮಸ್ವಾಮಿ ಅಯ್ಯರ್‌ರವರ

ಪಂ॥ A. R. ಅಯ್ಯರ್‌ರವರು, ಸ್ಥಾಪಕರು.

ಸಂತಾನ ಸಿಂಧೂರ (ಸ್ತ್ರೀಯರಿಗೆ: ಭಸ್ಮ) ‖ **ಮದನ ವಿಲಾಸ** (ಪುರುಷರಿಗೆ: ಗುಳಿಗೆ)

*ಭಸ್ಮವು ಬಹಿಷ್ಠೆಯ ಹೊಟ್ಟೆನೋವನ್ನು ನಿರ್ಮೂಲಮಾಡಿ, ಮಾಸಿಕದ ಹೆಚ್ಚುಕಡಿಮೆಗಳನ್ನು ಕ್ರಮಪಡಿಸಿ, ಗರ್ಭಪಾತವನ್ನು ತಡೆಗಟ್ಟಿ, ಗರ್ಭಾಶಯ ರೋಗವನ್ನು ನಿವಾರಿಸಿ, ತಾಯ್ತನ (Motherhood) ಪಡೆಯಲರ್ಹಳನ್ನಾಗಿ ಮಾಡುತ್ತದೆ.

*ಈ ಗುಳಿಗೆಗಳು ಪುರುಷರ ಅತ್ಯುಷ್ಣವನ್ನು ಕಮ್ಮಿಮಾಡಿ, ಸ್ವಪ್ನಸ್ಖಲನ ಶೀಘ್ರ ಸ್ಖಲನಗಳನ್ನು ನಿವಾರಿಸಿ, ಸಂತಾನದಾಯಕವಾದ ವೀರ್ಯಾಣು SPERMS ಗಳನ್ನು ವೃದ್ಧಿಪಡಿಸಿ ನಪುಂಸಕತೆಯನ್ನು ಹೋಗಲಾಡಿಸುತ್ತದೆ.

ಮೇಲ್ಕಂಡ ಬಾಧೆಗಳು ಕೂಡ್ಲೆ ಗುಣವಾಗಿ ಜಾಗ್ರತೆ ಸಂತಾನಫಲ ಬೇಕೋ? ಹಾಗಾದರೆ ಇಬ್ಬರೂ ಇಂದೇ ೧ ಸೆಟ್ (8 ಪೊಟ್ಲೆ+1 ಗುಳಿಗೆ) ಅನುಪಾನ ಪತ್ರಿಕೆಯ ಮೇರೆಗೆ ಸೇವಿಸಿರಿ.

ಶೋಭನವಾಗಿ 16-18 ವರ್ಷ ಮಕ್ಕಳಿಲ್ಲದವರಿಗೂ ಸಂತಾನ ಲಭಿಸಿದೆ.

ಕ್ರಯ: 2 ಔಷಧಿಗಳ 1 ಸೆಟ್ 7 ರೂ. M.O. ಮಾಡಿರಿ. ತಲಪಿದ ಒಡನೆ ರಿಜಿಸ್ಟರ್ ಪಾರ್ಸೆಲ್ ರವಾನೆ. ವಿ.ಪಿ. ಇಲ್ಲ. ಕ್ಯಾಟಲಾಗ್ ಉಚಿತ. ಮಾಹಿತಿಗೆ 2 ಆಣೆ ಸ್ಟಾಂಪು ಕಳಿಸಿರಿ. ವಿಳಾಸ:-

ಎ. ರಾಮಸ್ವಾಮಿ ಅಯ್ಯರ್ ಸನ್ & ಕಂ., 628 "ಸಂತಾನ ಸಿಂಧೂರ ನಿಲಯ", ಚಾಮರಾಜ ರೋಡ್ ಸೌತ್ ಕ್ರಾಸ್, ಮೈಸೂರು (Mysore-South India).

Edited, Printed & Published By K. H. Shetty at the Navayuga Press, Udipi, S. India

Regd. No. M. 3618 [ಎರಡಾಣೆ] Licence No 31
Licensed to Post without Prepayment

ನವಯುಗ

Vol.33, No 38 27-5-1954 ವರ್ಷ ೩೩ ವಾರ ೩೮

ದಲಿತ ವರ್ಗದ ಬಂಧುಗಳು

ಪ್ರಜಾಪ್ರಭುತ್ವದ ಕೈವಾರಿ ಎನಿಸಿದ ಅಮೇರಿಕಾ ದೇಶದಲ್ಲಿಯೂ ಅಸ್ಪೃಶ್ಯತೆಯ ಕಳಂಕವಿದೆಯೆಂಬುದನ್ನು ಕೇಳಿದರೆ, ಆಶ್ಚರ್ಯವೇ ಆದೀತು—ಅಲ್ಲಿಯ ನೀಗ್ರೋಗಳು ನಮ್ಮಲ್ಲಿಯ ಹರಿಜನರಿಗಿಂತ ಹೆಚ್ಚು ಮನ್ನಣೆಯನ್ನು ಪಡೆದಿಲ್ಲ. ಅಮೇರಿಕದ ರಾಜ್ಯಾಂಗ ಘಟನೆ ವರ್ಣ ಭೇದವನ್ನು ತೊಡೆದು ಹಾಕಿದ್ದರೂ ದಕ್ಷಿಣದ ೧೭ ರಾಜ್ಯಗಳಲ್ಲಿ ಸರಕಾರವೇ ನೀಗ್ರೋ ಮತ್ತು ಬಿಳಿಯರೆಂಬ ಭೇದವನ್ನು ಎತ್ತಿ ಹಿಡಿಯುತ್ತದೆ; ಮತ್ತು ಶೈಕ್ಷಣಿಕ ಸಂಸ್ಥೆಗಳಲ್ಲಿ ಈ ನೀತಿಯನ್ನು ಅನುಸರಿಸುತ್ತದೆ. ಇದರ ವಿರುದ್ಧ ನೀಗ್ರೋಗಳು ಕಳೆದ ಒಂದು ಶತಮಾನದಿಂದ ಹೋರಾಡಿ, ಇದೀಗ ಯಶಸ್ಸನ್ನು ಸಂಪಾದಿಸಿರುವರು. ಕಳೆದ ವಾರ ಅಮೇರಿಕದ ವರಿಷ್ಠ ನ್ಯಾಯಾಲಯವು ಈ ರೀತಿ ಭೇದಭಾವ ಮಾಡುವುದು ಘಟನೆಗೆ ವಿರೋಧವೆಂದು ಚಾರಿತ್ರಿಕವಾದ, ಸರ್ವಾನುಮತದ ತೀರ್ಪನ್ನು ಕೊಟ್ಟಿತು. ಇದು ನೀಗ್ರೋಗಳಿಗೆ ಅತ್ಯಂತ ಸಂತೋಷವನ್ನುಂಟುಮಾಡಿದೆ; ತಮ್ಮ ಹಕ್ಕುಬಾಧ್ಯತೆಗಳನ್ನು ನ್ಯಾಯಾಲಯವು ಎತ್ತಿಹಿಡಿದುದಕ್ಕೆ ಮತ್ತು ಶತಮಾನದಿಂದ ತಾವು ಅನುಭವಿಸುತಿದ್ದ ತೊಂದರೆಯೊಂದು ದೂರಾದುದಕ್ಕೆ ಅವರಿಗೆ ತೃಪ್ತಿಯೆನಿಸಿದೆ. ಆದರೆ ದಕ್ಷಿಣದ ರಾಜ್ಯ ಸರಕಾರಗಳು ವರಿಷ್ಠ ನ್ಯಾಯಾಲಯದ ತೀರ್ಮಾನವನ್ನು ಟೀಕಿಸಿ, ಪ್ರತಿಭಟನೆಯನ್ನೊಡ್ಡುತ್ತಿವೆ; ಸರಕಾರ ನಡೆಸುವ ಸಾರ್ವಜನಿಕ ಶಾಲೆಗಳನ್ನು ಮುಚ್ಚಿದರೂ ಚಿಂತಿಲ್ಲ, ನೀಗ್ರೋಗಳನ್ನು ಬಿಳಿಯರೊಂದಿಗೆ ಬೆರೆಯಗೊಡಲಾರೆವು ಎಂದು ದಕ್ಷಿಣ ಕೆರೋಲೀನಾ ರಾಜ್ಯದ ಗವರ್ನರರಂತಹ ಹೊಣೆಗಾರ ವ್ಯಕ್ತಿಗಳು ರೋಷಾವೇಶಭರಿತರಾಗಿ ಸಾರುತ್ತಾರೆ.

ಸುದೈವದಿಂದ, ನಮ್ಮ ದೇಶದಲ್ಲಿ ಪರಿಸ್ಥಿತಿಯು ಇಷ್ಟು ಕೆಟ್ಟಿರುವುದಿಲ್ಲ—ಬದಲು ಭಾರತದ ವಾತಾವರಣವು 'ದಲಿತ ವರ್ಗದ ಬಂಧುಗಳ ಏಳಿಗೆಗೆ ಸಹಕಾರಿಯಾಗುವಂತೆ ದಿನೇದಿನೇ ಊರ್ಜಿತ ಹೊಂದುತ್ತ ನಡೆದಿರುವುದು ಸಾರ್ವಜನಿಕ ಜೀವನದಲ್ಲಿಯೂ ನಿತ್ಯವ್ಯವಹಾರದಲ್ಲಿಯೂ ದಲಿತ ವರ್ಗದ ಬಂಧುಗಳು ಸಾಕಷ್ಟು ಸಹಾನುಭೂತಿಯಿಂದ ಕಾಣಲ್ಪಡುವರು. ಅವರಿಗೆ ಸಮಾಜವು ಶತಮಾನಗಳಿಂದ ಬಗೆದ ಅನ್ಯಾಯವು ಈಗ ತಿದ್ದಿಕೊಳ್ಳಲಾಗುತ್ತಿದೆ—ಮತ್ತು ಸರಕಾರವೂ ಸಮಾಜವನ್ನು ವಿವೇಕದ ದಾರಿ ತುಳಿಯುವಂತೆ ಒತ್ತಾಯಿಸುತ್ತದೆ. ಅಮೇರಿಕದ ದಕ್ಷಿಣ ರಾಜ್ಯಗಳಂತೆ, ನಮ್ಮ ದೇಶದಲ್ಲಿ ಯಾವುದೇ ಸರಕಾರ ಹರಿಜನರ, ಅಸ್ಪೃಶ್ಯರ, ಗುಡ್ಡಗಾಡು ಜನರೇ ಮುಂತಾದ ಇತರ ದಲಿತ ಬಾಂಧವರ ಹಕ್ಕು ಬಾಧ್ಯತೆಗಳನ್ನು ಕಡೆಗಣಿಸಿಲ್ಲ—ರಾಜ್ಯಾಂಗ ಘಟನೆಯಲ್ಲಿ ಮನ್ನಿಸಲಾದ ತತ್ವವನ್ನು ಆಚರಣೆಯಲ್ಲಿ ಇಳಿಸುವುದಕ್ಕೆಯೇ ನಮ್ಮ ರಾಜ್ಯ ಸರಕಾರಗಳೂ ಕೇಂದ್ರ ಸರಕಾರವೂ ಪ್ರಯತ್ನ ಮಾಡುತ್ತವೆ. ಈ ಪ್ರಯತ್ನದ ಫಲವಾಗಿ, ಅನೇಕ ರಾಜ್ಯ ಸರಕಾರಗಳು, ದಲಿತ ಬಂಧುಗಳಿಗೆ ಆರ್ಥಿಕ, ಸಾಮಾಜಿಕ ಹಾಗು ಸಾಂಸ್ಕೃತಿಕ ಪ್ರಯೋಜನವನ್ನುಂಟುಮಾಡುವ ಕಾಯಿದೆ ಕ್ರಮಗಳನ್ನು ರೂಪಿಸಿರುತ್ತವೆ. ಆದರೆ ಈ ಶಾಸನಗಳಲ್ಲಿ ಕೆಲವು ಲೋಪದೋಷಗಳು ಕಂಡುಬಂದುದರಿಂದ ಭಾರತ ಸರಕಾರದವರೇ ಇಡೀ ದೇಶಕ್ಕೆ ಅನ್ವಯಿಸುವ ಕಾಯಿದೆಯನ್ನು ಮಾಡಲು ಮುಂದರಿದಿರುವರು—ಇದು ಇಷ್ಟರಲ್ಲೇ ನಮ್ಮ ಶಾಸನಗಳಲ್ಲಿ ಒಂದಾಗಿ ಸೇರುತ್ತದೆ.

ಭಾರತದಲ್ಲಿ ದಲಿತ ವರ್ಗದ ಬಂಧುಗಳ ಏಳಿಗೆಯ ದೃಷ್ಟಿಯಿಂದ ಸರಕಾರೀ ಮಟ್ಟದಲ್ಲಿ ಕೈಗೊಂಡ ಸುಧಾರಣಾ ಕ್ರಮಗಳ ಸ್ಥೂಲ ವಿಮರ್ಶೆಯನ್ನು ಶ್ರೀ ಎಲ್. ಎಂ. ಶ್ರೀಕಾಂತರು ಕೇಂದ್ರ ಸರಕಾರಕ್ಕೆ ಒಪ್ಪಿಸಿದ ವರದಿಯಲ್ಲಿ ಕಾಣಬಹುದು. ಇದನ್ನು ದಿನಾಂಕ ೧೮ರಂದು ಪಾರ್ಲಿಮೆಂಟಿನ ಉಭಯ ಸಭೆಗಳ ಮುಂದೆ ಮಂಡಿಸಲಾಯಿತು. ದಲಿತ ವರ್ಗಗಳ ಮತ್ತು ಗುಡ್ಡಗಾಡು ಜನರ ಯೋಗಕ್ಷೇಮ ವಿಷಯಕ ಕಮಿಶನರಾದ ಶ್ರೀ ಕಾಂತರು ತಮ್ಮ ಈ ಮೂರನೇ ವರದಿಯಲ್ಲಿ "ಹಿಂದುಳಿದವರು ಮುಂಬರಲಿ" ಎಂಬ ಸಿದ್ಧಾಂತವನ್ನು ಸಮರ್ಥ ರೀತಿಯಲ್ಲಿ ಪ್ರತಿಪಾದಿಸಿರುವರು. ಸರಕಾರವೂ ವಿಧಾಯಕ ಕಾರ್ಯಕರ್ತರೂ ದಲಿತರ ಉದ್ಧಾರ ಕಾರ್ಯದಲ್ಲಿ ಆಸಕ್ತಿಯನ್ನು ತೋರಿಸಿ ಶಕ್ಯವಿದ್ದ ರೀತಿಯಲ್ಲೆಲ್ಲ ನೆರವಾಗುತ್ತಿರುವುದನ್ನು ಅವರು ಮೆಚ್ಚಿಕೊಂಡಂತೆಯೇ ಹಿಂದುಳಿದ ವರ್ಗದವರು ತಮ್ಮ ಮೇಲೆ ಬಿದ್ದಿರುವ ಹೊಣೆಗಾರಿಕೆಯನ್ನು ನಿರ್ವಹಿಸುವಲ್ಲಿ ಇನ್ನೂ ಹೆಚ್ಚಿನ ಶ್ರದ್ಧೆಯನ್ನು ತೋರಿಸಬೇಕೆಂದೂ ಅವರು ಒತ್ತಾಯಿಸಿರುವರು. ಘಟನೆಯಂತೆ ನೀಡಲಾದ ಹಕ್ಕು ಬಾಧ್ಯತೆಗಳನ್ನು, ವ್ಯಕ್ತಿಗತ ಅಪಾಯಕ್ಕೆ ಒಳಗಾಗಿಯಾದರೂ, ಮುಂಬಂದು ಪಡೆಯಬೇಕೆಂದು ಅವರು ಕರೆ ಕೊಟ್ಟಿರುವರು.

ಇದು ಪ್ರಾಮಾಣಿಕವಾದ, ಸದುದ್ದೇಶದಿಂದ ಕೂಡಿದ ಆಹ್ವಾನ—ಹಿಂದುಳಿದ ವರ್ಗಗಳ ಶ್ರೇಯೋಭಿವೃದ್ಧಿಗೋಸ್ಕರ ಇದುವರೆಗೆ ನಡೆಸಿದ ಪ್ರಯತ್ನವು ಬೃಹದಾಕಾರವನ್ನು ತಳೆದು ನಿಂತಿರುವ ಈ ಸಮಸ್ಯೆಯ ಮುಂದೆ ಅತ್ಯಲ್ಪವೆನಿಸುತ್ತದೆ. ಭಾರತದ ಮೂವತ್ತೈದು ಕೋಟಿ ಪ್ರಜೆಗಳಲ್ಲಿ ದಲಿತ ವರ್ಗಕ್ಕೆ ಸೇರಿದ ನಾಗರಿಕರೇ ಎಂಟು ಕೋಟಿಯಷ್ಟಿರುವರೆಂದರೆ ನಂಬಲು ಕಷ್ಟವಾದೀತು! ಆದರೆ ಹಿಂದೂ ಸಮಾಜವು ಧಾರ್ಮಿಕ ಹಾಗು ಮತೀಯ ತಳಹದಿಯ ಮೇಲೆ ರೂಪಿಸಿಕೊಂಡ ಸಾಮಾಜಿಕ ನೀತಿ ನಿಯಮಾನುಸಾರ, ಸಾವಿರಾರು ವರ್ಷಗಳ ಸಂಪ್ರದಾಯಾನುಸಾರ, ಭಾರತದ ಒಂದು ಪಾಲ್ವಾಸಿ ... ಯು ಹಿಂದೆ ಬಿದ್ದು, ನಿಷ್ಕ್ರಿಯವೆನಿಸಿ, ನಿರಾಸೆಯನ್ನುಂಟುಮಾಡುತ್ತದೆ. ಈ ಪತನದ ನರಕದಿಂದ ಮೇಲೆದ್ದು ಸ್ವರ್ಗ ಸೋಪಾನವನ್ನೇರುವಲ್ಲಿ, ಸರಕಾರದ ಶಾಸನಗಳು ಸಾಕಷ್ಟು ನೆರವು ನೀಡಬಲ್ಲವು, ನಿಜ—ಆದರೆ, ದಲಿತ ಬಂಧುಗಳೇ ಜಾಗೃತಗೊಂಡು, ಹೊಸ ಹುರುಪಿನಿಂದ ಸಾಮಾಜಿಕ ನಿಯಮಗಳ ಬಂಧನವನ್ನು ಸಡಿಲುಗೊಳಿಸುವ ಹೋರಾಟದಲ್ಲಿ ಮಗ್ನರಾಗುವ ಆವಶ್ಯಕತೆಯನ್ನು ಅಲ್ಲಗಳೆಯಲಾಗದು. ಈಗ ಸಮಾಜದ ಸುಶಿಕ್ಷಿತ ವರ್ಗಗಳು ಅಸ್ಪೃಶ್ಯತೆಯನ್ನು ಮನ್ನಿಸುವುದಿಲ್ಲ; ದಲಿತ ವರ್ಗದ ಬಂಧುಗಳನ್ನು ತಿರಸ್ಕರಿಸುವುದೂ ಇಲ್ಲ. ಇದು ಶುಭ ಚಿಹ್ನೆ—ಹಾಗೆಂದು, ಪೇಟೆಯ ವಾತಾವರಣವನ್ನು ಬಿಟ್ಟು ಹಳ್ಳಿಗಳಲ್ಲಿ ಪ್ರವೇಶಿಸಿದರೆ, ಸುಧಾರಣೆಯಾದುದು ಕಂಡು ಬರುವುದಿಲ್ಲ. ಪೇಟೆಯಲ್ಲಿ ದಲಿತರು ಮುಂಬಂದರೆ ಅದನ್ನು ಯಾರೂ ಆಕ್ಷೇಪಿಸುವುದಿಲ್ಲ—ಹೆಚ್ಚಿನವರು ಈ ವಿಷಯದಲ್ಲಿ ತಟಸ್ಥರಾಗಿ ಉಳಿದರೂ ಕೆಲವರಾದರೂ ದಲಿತ ಬಂಧುಗಳಿಗೆ ಪ್ರೋತ್ಸಾಹ ನೀಡುವರು. ಹಳ್ಳಿಯಲ್ಲಾದರೋ—ದಲಿತೋದ್ಧಾರದ ಪ್ರಯತ್ನಗಳಿಗೆ ತೀವ್ರ ಪ್ರತಿಭಟನೆಯೇ ವ್ಯಕ್ತಗೊಳ್ಳುತ್ತದೆ.

ಪರಿಣಾಮವಾಗಿ, ಹರಿಜನನೊಬ್ಬನು ಮಿಠಾಯಿಯ ಅಂಗಡಿ ತೆರೆದ ಪಕ್ಷದಲ್ಲಿ, ಯಾರೊಬ್ಬನೂ ಅವನೊಡನೆ ವ್ಯಾಪಾರವನ್ನು ಮಾಡುವುದಿಲ್ಲ; ಮತ್ತು ಅಂಗಡಿ ತೆರೆದ ಹರಿಜನ ಬಂಧುವು ದಿವಾಳಿಯನ್ನೇ ತೆಗೆಯಬೇಕಾದೀತು! ಸರಕಾರವು ಶಾಸನಿಕವಾಗಿ ಜಾತಿ, ಮತ, ವರ್ಣ ಹಾಗು ಲಿಂಗ ಭೇದವಿಲ್ಲದೆ ಎಲ್ಲರಿಗೂ ಸಮಾನಾಧಿಕಾರವನ್ನೂ ಸಮಾನಾವಕಾಶವನ್ನೂ ಕೊಟ್ಟಿದ್ದರೂ—ಅದಕ್ಕೆ ಸಾಮಾಜಿಕ ಮನ್ನಣೆಯು ದೊರೆತಂತೆ ತೋರುವುದಿಲ್ಲ. ದಲಿತವರ್ಗದ ನಾಗರಿಕನು ಸನಾತನ ಹಿಂದುಗಳು ಪವಿತ್ರವೆಂದು ಭಾವಿಸುವ ಮಂದಿರವನ್ನು ಪ್ರವೇಶಿಸ ಹೊರಟರೆ, ಅವನನ್ನೂ ಅವನ ಪ್ರೋತ್ಸಾಹಕರನ್ನೂ ತಡೆದು ನಿಲ್ಲಿಸುವುದಕ್ಕೆ ಸವರ್ಣೀಯರು ಸೊಂಟ ಕಟ್ಟುವರು. ಇದನ್ನು ಸುಶಿಕ್ಷಿತರು ದುಷ್ಪ್ರವೃತ್ತಿಯೆಂದು ಹೇಳುತ್ತಿರುವರೇನೋ ನಿಜ—ಆದರೆ, ಹಳ್ಳಿಯ ಸಮಾಜದ ಬಹುಸಂಖ್ಯಾಕರು ಈ ಮನೋಭಾವನೆಯನ್ನು ಬಿಟ್ಟುಗೊಟ್ಟಿಲ್ಲ. ಎಂತಲೇ ದೇವಘರದಲ್ಲಿ ಆಚಾರ್ಯ ವಿನೋಬಾ ಭಾವೆಯವರು ಪೆಟ್ಟು ತಿನ್ನಬೇಕಾಯಿತು; ಕಾಶೀ ವಿಶ್ವನಾಥ ಮಂದಿರವನ್ನು ಪ್ರವೇಶಿಸಬಯಸಿದ ಹರಿಜನ ಶಾಸನಸಭಾ ಸದಸ್ಯ ಶ್ರೀ ಜೇಚನರಾಮರು ಸ್ವಾಮಿ ಕರಪಾತ್ರಜೀಯವರ ಆತಂಕವನ್ನು ಎದುರಿಸಬೇಕಾಯಿತು.

ದಲಿತವರ್ಗದ ಉದ್ಧಾರದ ಪ್ರಶ್ನೆಯು
(೧೨ನೇ ಪುಟ ನೋಡಿರಿ)

ಸಮರ್ಥ ಸಾಲಗಳು

ಒಬ್ಬನ ಯೋಗ್ಯತೆ ಮತ್ತು ಸಮರ್ಥತೆ ಅನೇಕ ವೇಳೆ ಆತನ ಚಿಲ್ಲರೆ ಸಾಲಗಳ ಬೆಸೆಯಿಂದಾಗಿ ಬಹುವಾಗಿ ಕುಂಟುತ್ತವೆ. ಆದರೆ ಈ ಎಲ್ಲಾ ಚಿಲ್ಲರೆ ಸಾಲಗಳನ್ನು ಏಕೀಕರಿಸಿ ಸುಲಭಸಾಧ್ಯವಾದ ಕಂತುಗಳಿಂದ ಸಂದಾಯ ಮಾಡುವಂತಾದರೆ ಆತನ ಕಷ್ಟಗಳೆಲ್ಲವೂ ಪರಿಹಾರಹೊಂದಿ ಆತನ ಯೋಗ್ಯತೆ ಹಾಗೂ ಸಮರ್ಥತೆ ಮರಳಿ ಬರುವುದು. ತಿಂಗಳಿಗೆ ರೂಪಾಯಿ 250/- ಯಾ ಅದಕ್ಕಿಂತ ಜಾಸ್ತಿ ಸಂಬಳವಿರುವ ಆಫೀಸರರುಗಳಿಗೆ ಅವರ ಸಂಬಳದ ಆರು ಪಾಲಷ್ಟು ಸಾಲಗಳನ್ನು ಕೊಟ್ಟು ಅದನ್ನು 36 ತಿಂಗಳು ಕಂತುಗಳಿಂದ ಮರುಪಾವತಿ ಪಡೆಯುವ ಹೊಸ ಯೋಜನೆಯೊಂದನ್ನು ನಾವು ಕಂಡುಹಿಡಿದಿದ್ದೇವೆ. ಈ ಸಾಲವನ್ನು ಪಡೆಯಲು ಇನ್ಶೂರೆನ್ಸ್ ಪೋಲಿಸಿ ಮತ್ತು ಒಬ್ಬ ಸಹ ಜಾಮೀನುದಾರನು ಅತ್ಯಗತ್ಯ.

ಹೆಚ್ಚಿನ ವಿವರಗಳಿಗೆ ಸಮೀಪದ ನಮ್ಮ ಆಫೀಸಿನಲ್ಲಿ ವಿಚಾರಿಸಿರಿ:

THE CANARA INDUSTRIAL & BANKING SYNDICATE LTD.
Estd: 1925 H. O: UDIPI, S. India

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್
ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್.,
ಸ್ಥಾಪಿತ: ೧೯೨೫] [ಪ್ರಧಾನ ಕಚೇರಿ: ಉಡುಪಿ. ದ. ಭಾರತ.

ಮದ್ರಾಸು ರಾಜ್ಯದಲ್ಲಿ ವಿದ್ಯುಚ್ಛಕ್ತಿಯ ಪೂರೈಕೆ

ಸ್ವಾತಂತ್ರ್ಯೋತ್ತರದಲ್ಲಿ ಮುಮ್ಮಡಿ ಪ್ರಗತಿ

ಈ ಕಾಲದಲ್ಲಿ ಕೃಷಿ-ಕೈಗಾರಿಕೆಗಳ ಕ್ಷೇತ್ರದಲ್ಲಿ ಅಭಿವೃದ್ಧಿ ಕೈಗೂಡುವುದಕ್ಕೆ ವಿದ್ಯುಚ್ಛಕ್ತಿಯಿಂದ ಒದಗುವ ನೆರವನ್ನು ಬಣ್ಣಿಸಿ ತೀರದು—ಕಲಿಯುಗದ ಬಲಭೀಮನಾಗಿ ಮಾನವನ ಕೈಗೆ ಅಪಾರ ಶಕ್ತಿಯನ್ನು ನೀಡಿ, ಅದನ್ನು ಅವನು ತನ್ನ ಜೀವನ ಮಟ್ಟವನ್ನು ಎತ್ತರಿಸಿ, ಸುಖಜೀವನ ಸಾಗಿಸುವಂತೆ ಮಾಡುವ ವಿದ್ಯುಚ್ಛಕ್ತಿಯನ್ನು ನೈಸರ್ಗಿಕ ಶಕ್ತಿಗಳಲ್ಲೆಲ್ಲ ಹೆಚ್ಚು ಉಪಯುಕ್ತವಾದುದೆಂದು ಹೇಳಿದರೆ ತಪ್ಪಾಗಲಾರದು. ಮಾನವನ ಸಂಶೋಧನಾ ಬುದ್ಧಿಯ ತೀಕ್ಷ್ಣತೆಗೆ ಸಿಲುಕಿದ ಸುಪ್ತ ಶಕ್ತಿ ಸ್ರೋತಗಳಲ್ಲಿ ವಿದ್ಯುಚ್ಛಕ್ತಿಯೇ ಅತ್ಯದ್ಭುತ ಚೈತನ್ಯವೆನಿಸಿಕೊಂಡಿದೆ—ಇದಕ್ಕೆ ಮುಂಚೆ ಉಗಿಯೇ ಮುಂತಾದ ಶಕ್ತಿಗಳ ಮೂಲ ಬೆಳಕಿಗೆ ಬಂದಿದ್ದರೂ, ಮನುಷ್ಯನಿಗೆ ಸಲ್ಲಿಸಿದ ಸೇವೆಯ ದೃಷ್ಟಿಯಿಂದ ವಿದ್ಯುಚ್ಛಕ್ತಿಯೇ ಅತ್ಯಧಿಕ ಮಹತ್ವವನ್ನು ಪಡೆಯುತ್ತದೆ. ನಮ್ಮ ಇಂದಿನ ಅನುಭವದ ತಳಹದಿಯ ಮೇಲಿಂದ ಭವಿಷ್ಯದತ್ತ ನೋಡಿದರೆ, ಬಹುಶಃ ಪರಮಾಣು ಚೈತನ್ಯವೊಂದೇ ವಿದ್ಯುಚ್ಛಕ್ತಿಯನ್ನು ವೈಜ್ಞಾನಿಕ ಮುನ್ನಡೆಯ ಮಾನವನ ಸೇವೆಯ, ಸ್ಪರ್ಧೆಯಲ್ಲಿ ಹಿಂದೆ ಹಾಕಬಲ್ಲುದು. ದುರ್ದೈವದಿಂದ ಅಣು ಶಕ್ತಿಯನ್ನು ಶಾಂತಿಕಾಲದ ಉಪಯೋಗಕ್ಕೆ ಬಳಸುವ ವಿಚಾರ ಇನ್ನೂ ಪ್ರಾಸ್ತಾವಿಕ ಪಟ್ಟವನ್ನು ಮೀರಿ ನಿಂತಿಲ್ಲ—ನಿತ್ಯಜೀವನದಲ್ಲಿ ಅಣುಶಕ್ತಿಯನ್ನು ಬಳಸಿಕೊಳ್ಳುವ ಕಾಲ ಬರುವ ವರೆಗೆ ನಮಗೆ ವಿದ್ಯುಚ್ಛಕ್ತಿಯೇ ಪ್ರಗತಿಯ ಕೈವಾರಿಯಾಗುತ್ತದೆ.

ವಿದ್ಯುಚ್ಛಕ್ತಿಯ ವಿಸ್ತರಣೆ

ನಾಗರಿಕತೆಗ ಪಶ್ಚಿಮದ ಪ್ರತಿಭೆಯ ಕಾಣಿಕೆಯಾಗಿ ವಿದ್ಯುಚ್ಛಕ್ತಿಯು ಬಳಕೆಯಲ್ಲಿ ಬಂದಿತು—ಭಾರತದಲ್ಲಿ ಸಹ ವಿದ್ಯುಚ್ಛಕ್ತಿಯನ್ನು ಬಳಸಿಕೊಳ್ಳುವ ಕ್ಷೇತ್ರ ದಿನದಿನಕ್ಕೂ ಹೆಚ್ಚುತ್ತಾ ಹೋಯಿತು. ರಾಷ್ಟ್ರದ ಸಾರ್ವಾಂಗಿಕ ಪುನಾರಚನೆಯ ಕಾರ್ಯಕ್ರಮಗಳು ತ್ವರಿತಗತಿಯಿಂದ ಕಾರ್ಯಗತಗೊಂಡಂತೆಲ್ಲ ವಿದ್ಯುಚ್ಛಕ್ತಿಯ ವಿಸ್ತರಣೆಗೆ ಅಧಿಕ ಪ್ರಾಶಸ್ತ್ಯವು ಸಲ್ಲಿಸಲ್ಪಟ್ಟಿತು. ಇಂದು ಆರ್ಥಿಕ ಏಳಿಗೆಯ ಜಿಂಗೋಲಾಗಿ ವಿದ್ಯುಚ್ಛಕ್ತಿಯ ಪೂರೈಕೆಯನ್ನು ಪರಿಗಣಿಸುತ್ತೇವೆ. ಮೂವತ್ತೈದುಕೋಟಿ ಭಾರತೀಯರ ಜೀವನವನ್ನು ಸಮೃದ್ಧವಾಗಿ ರೂಪಿಸುವ ಪ್ರಯತ್ನಗಳಲ್ಲಿ ವಿದ್ಯುಚ್ಛಕ್ತಿಯು ಮಹತ್ವದ ಪಾತ್ರವನ್ನು ನಿರ್ವಹಿಸುತ್ತದೆ. ನಮ್ಮ ಹೆಚ್ಚಿನ ವಿವಿಧೋದ್ದೇಶದ ಯೋಜನೆಗಳು ವಿದ್ಯುಚ್ಛಕ್ತಿಯ ಪೂರೈಕೆಯ ಪ್ರಮಾಣವನ್ನು ಅಧಿಕಗೊಳಿಸುವ ಸ್ತುತ್ಯ ಉದ್ದೇಶವನ್ನು ಇಟ್ಟುಕೊಂಡಿವೆ. ಕೃಷಿ ಪ್ರಧಾನವಾದ ಭಾರತದಲ್ಲಿ ನೀರಾವರಿಯ ಅನುಕೂಲತೆಗಳನ್ನು ಕಲ್ಪಿಸುವುದರ ಕಡೆಗೆ ಕೊಟ್ಟಷ್ಟೇ ಹೆಚ್ಚಿನ ಗಮನವನ್ನು ಕೃಷಿ-ಕೈಗಾರಿಕೆಗಳೆರಡಕ್ಕೂ ನೆರವಾಗುವ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವ ವಿಷಯದತ್ತಲೂ ಲಕ್ಷ್ಯ ಪೂರೈಸಲಾಗುತ್ತದೆ. ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ವಿದ್ಯುಚ್ಛಕ್ತಿಯ ವಿಸ್ತರಣಕ್ಕೋಸ್ಕರ ೪೦೦ ಕೋಟಿ ರೂಪಾಯಿಗಳಿಗೂ ಹೆಚ್ಚು ಹಣವನ್ನು ವಿನಿಯೋಗಿಸಲಾಗುವುದು.

ರಾಜ್ಯದ ಹಳ್ಳಿಗಳಲ್ಲಿ

ವಿದ್ಯುಚ್ಛಕ್ತಿಯ ವಿಸ್ತರಣೆಯ ದೃಷ್ಟಿಯಿಂದ, ಮದ್ರಾಸು ರಾಜ್ಯವೇ ಭಾರತದಲ್ಲಿ ಹೆಚ್ಚಿನ ಚಟುವಟಿಕೆಯನ್ನು ತೋರಿಸಿದೆ ಎಂದು ಕಂಡುಬರುವುದು—ಇಲ್ಲಿ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವ ಕೆಲಸ ಕ್ಷಿಪ್ರಕಾಲದಲ್ಲಿಯೇ ಅದ್ಭುತವಾಗಿ ಬೆಳೆದು ಬಂದಿದೆ; ಮತ್ತು ರಾಜ್ಯದ ಆದಷ್ಟು ಹೆಚ್ಚು ಪ್ರದೇಶಕ್ಕೆ ವಿದ್ಯುಚ್ಛಕ್ತಿಯನ್ನು ಪೂರೈಸುವ ಕಾರ್ಯವೂ ಮದ್ರಾಸಿನಲ್ಲಿ ಅತ್ಯಲ್ಪ ಕಾಲದಲ್ಲೇ ಯಶಸ್ವಿಯಾಗಿ ಕೈಗೂಡಿದೆ. ಸ್ವಾತಂತ್ರ್ಯೋತ್ತರದಲ್ಲಿ ನಡೆದ ಪ್ರಯತ್ನಗಳ ಪರಿಣಾಮವಾಗಿ ವ್ಯಕ್ತಗೊಂಡ ಪ್ರಗತಿಯ ಚಿತ್ರವು ಸ್ಫೂರ್ತಿದಾಯಕವಾಗಿರುತ್ತದೆ—ಆರೇಳು ವರ್ಷಗಳ ಅಲ್ಪಾವಧಿಯಲ್ಲಿಯೇ ನಾವು ವಿದ್ಯುಚ್ಛಕ್ತಿಯ ಉತ್ಪಾದನೆ ಮತ್ತು ವಿಸ್ತರಣೆಗಳಲ್ಲಿ ಮುಮ್ಮಡಿ ಪ್ರಗತಿಯನ್ನು ಸಾಧಿಸಿರುವುದು ಯಾರಿಗೆ ಅಭಿಮಾನವನ್ನುಂಟುಮಾಡಲಿಕ್ಕಿಲ್ಲ? ಕೃಷಿ ನಿರತ ರೈತರ ಮನೆ ಬಾಗಿಲಿನವರೆಗೆ ವಿದ್ಯುಚ್ಛಕ್ತಿಯನ್ನು ಕೊಂಡೊಯ್ಯುವ ಸರಿಗೆಯನ್ನೆಳೆದು, ಅವರು ಈ ಶಕ್ತಿಯನ್ನು ಬಳಸಿ, ತಮ್ಮ ಉತ್ಪಾದನೆಯನ್ನು ಹೆಚ್ಚಿಸಿಕೊಳ್ಳುವಂತೆ ಮಾಡುವ ಮದ್ರಾಸು ಸರಕಾರದ ಯೋಜನೆ ತುಂಬ ಜನಪ್ರಿಯತೆಯನ್ನು ಗಳಿಸಿದೆ; ಮಾತ್ರವಲ್ಲ, ಭಾರತಕ್ಕೆಲ್ಲ ಮದ್ರಾಸು ಹೊಸ ಮಾದರಿಯನ್ನು ಹಾಕಿಕೊಟ್ಟಿದೆ. ಈ ದಿಸೆಯಲ್ಲಿ ಬೇರೆ ಯಾವ ರಾಜ್ಯವೂ ಇಷ್ಟುಮಟ್ಟಿನ ಕೆಲಸವನ್ನು ಮಾಡಿರುವುದಿಲ್ಲ—ಮದ್ರಾಸು ಸರಕಾರವು ಪ್ರತಿ ವರ್ಷ ಕನಿಷ್ಠ ೨೫೦ ಹಳ್ಳಿಗಳಿಗಾದರೂ ವಿದ್ಯುಚ್ಛಕ್ತಿಯನ್ನು ವಿಸ್ತರಿಸುವ ನಿರ್ಧಾರವನ್ನು ಮಾಡಿರುತ್ತದೆ, ಕಡಿಮೆಯೆಂದರೂ ೭೦೦೦ ನೀರಿನ ಪಂಪುಗಳನ್ನು ರೈತರಿಗೆ ಒದಗಿಸಬೇಕೆಂದೂ ಅದು ಯೋಚಿಸಿದೆ.

ಪ್ರಗತಿಯ ಚಿತ್ರ

ಇದರನ್ವಯ ಈಗ ಮದ್ರಾಸು ರಾಜ್ಯದ ೨೦೦೦ ಹಳ್ಳಿಗಳು ವಿದ್ಯುಚ್ಛಕ್ತಿಯ ಸೌಕರ್ಯವನ್ನು ಪಡೆದು ಬಹುಮುಖ ಚಟುವಟಿಕೆಗಳನ್ನು ಪ್ರದರ್ಶಿಸುತ್ತವೆ. ನಮಗೆ ೧೯೪೭ರಲ್ಲಿ ಸ್ವಾತಂತ್ರ್ಯ ದೊರೆತಾಗ, ರಾಜ್ಯದಲ್ಲಿ ೪೪೦ ಹಳ್ಳಿಗಳು ಮಾತ್ರವೇ ವಿದ್ಯುಚ್ಛಕ್ತಿಯ ಪ್ರಯೋಜನವನ್ನು ಹೊಂದುತಿದ್ದವು. ಆಗ ರಾಜ್ಯದ ರೈತರು ೫೦೦೦ ನೀರಿನ ಪಂಪುಗಳನ್ನು ಉಪಯೋಗಿಸುತಿದ್ದರು, ಇಂದು ರಾಜ್ಯದಾದ್ಯಂತ ೧೭,೦೦೦ ನೀರಿನಪಂಪುಗಳು ಒಣಕಲು ಭೂಮಿಗೆ ಜಲಸೇಚನಮಾಡಿ, ಬಂಗಾರದ ಬೆಳೆಯನ್ನು ತಂದುಕೊಡುತ್ತವೆ. ಸ್ವಾತಂತ್ರ್ಯೋತ್ತರದಲ್ಲಿ, ನಮ್ಮ ಸರಕಾರಗಳು ಜನಹಿತದ ಯಾವುದೇ ಕೆಲಸಮಾಡಲಿಲ್ಲ ಎಂದು ಆಕ್ಷೇಪಿಸುವ ಟೀಕಾಕಾರರು ಹಿಂದು ಮುಂದಿನ ವಿಮರ್ಶೆಮಾಡದೆಮಾತಾಡುತ್ತಾರೆಂದು ಹೇಳಬೇಕಾಗುವುದು ಏಕೆಂದರೆ ಕಳೆದ ಆರೇಳು ವರ್ಷಗಳ ಪ್ರಗತಿಯ ಚಿತ್ರವನ್ನು ಕಣ್ಣ ಮುಂದಿಟ್ಟುಕೊಂಡರೆ, ಟೀಕಾಕಾರರ ಮಾತುಗಳಿಗೆ ಏನೇನೂ ಬೆಲೆಬರುವುದಿಲ್ಲ; ವಾಣಿಜ್ಯ ಕ್ಷೇತ್ರದಲ್ಲಿ ಅತ್ಯಧಿಕ ಅನುಭವವನ್ನು ಪಡೆದ "ಕಾಮರ್ಸ್" ಪತ್ರಿಕೆಯಲ್ಲಿ ಪ್ರಕಟಗೊಂಡಂತೆ, ಮದ್ರಾಸು ರಾಜ್ಯದಲ್ಲಿರುವ ವಿದ್ಯುಚ್ಛಕ್ತಿಯ ಕೇಂದ್ರಗಳೆಲ್ಲಾ ವರ್ಷಕ್ಕೆ ೨,೨೦,೦೦೦ ಕಿಲೋವಾಟುಗಳಷ್ಟು ವಿದ್ಯುಚ್ಛಕ್ತಿಯನ್ನು ಉತ್ಪಾದಿಸ ಬಲ್ಲವು. ಆದರೆ ಈಗ ೭೦,೨೦,೦೦,೦೦೦ ಯುನಿಟುಗಳಷ್ಟುಮಾತ್ರ ವಿದ್ಯುಚ್ಛಕ್ತಿ ಪೂರೈಸಲ್ಪಡುತ್ತದೆ. ಸ್ವಾತಂತ್ರ್ಯ ಪ್ರಾಪ್ತಿಯ ಕಾಲದಲ್ಲಿ ನಮ್ಮ ಉತ್ಪಾದನಾ ಸಾಮರ್ಥ್ಯ ೧,೦೪,೦೦೦ ಕಿಲೋವಾಟುಗಳಷ್ಟು ಮಾತ್ರ ಇದ್ದಿತು, ಪೂರೈಕೆ ೨೯,೪೦,೦೦,೦೦೦ ಯುನಿಟು ಇದ್ದಿತು. ಔದ್ಯಮಿಕ ಕ್ಷೇತ್ರದಲ್ಲಿ ವಿದ್ಯುತ್ತಿನ ಬಳಕೆ ೧,೨೨,೫೦೦ ಕಿಲೋವಾಟುಗಳಿಂದ ೨,೩೩,೦೦೦ ಕಿಲೋವಾಟುಗಳಿಗೆ ಏರಿರುತ್ತದೆ. ನೀರಾವರಿ ಕ್ಷೇತ್ರದಲ್ಲಿ ವಿದ್ಯುಚ್ಛಕ್ತಿಯ ಬಳಕೆ ೪೦,೭೦೦ ರಿಂದ ೯೩,೧೦೦ ಕಿಲೋವಾಟುಗಳಿಗೆ ಹೆಚ್ಚಿಕೊಂಡಿದೆ. ವಿದ್ಯುತ್ತಿನ ಸರಿಗೆಗಳ ಉದ್ದ ೪೮೦೭ ಮೈಲು ಇದ್ದದ್ದು ಈಗ ೯೯೪೯ ಮೈಲುಗಳಷ್ಟು ಅಧಿಕಗೊಂಡಿದೆ. ವಿದ್ಯುಚ್ಛಕ್ತಿಯ ಬಳಕೆಗಾರರ ಪ್ರಮಾಣ ೧,೭೫,೦೦೦ ದಿಂದ ೩,೪೦,೦೦೦ ಆಗಿದೆ. ಸುಮಾರು ೩೦೦೦ ಮಧ್ಯಮವರ್ಗದ ಕೈಗಾರಿಕೆಗಳೂ ೩೦ ಹೊಸತಾದ ಬಟ್ಟೆಯ ಗಿರಣಿಗಳೂ ಅನೇಕ ದೊಡ್ಡ ಔದ್ಯಮಿಕ ಕೇಂದ್ರಗಳೂ ವಿದ್ಯುಚ್ಛಕ್ತಿಯನ್ನು ವಿಪುಲವಾಗಿ ಬಳಸುತ್ತವೆ.

ಆದರೂ ಕೊರತೆ

ಇಷ್ಟು ಹೆಚ್ಚಿನ ಪ್ರಗತಿಯನ್ನು ಕೇವಲ ೩೦ ಕೋಟಿ ರೂಪಾಯಿಗಳವೆಚ್ಚದಲ್ಲಿ ಸಾಧಿಸಲಾಯಿತು. ಅಂದರೆ ವರ್ಷಕ್ಕೆ ನಾಲ್ಕಾರು ಕೋಟಿ ರೂಪಾಯಿಗಳ ವೆಚ್ಚ ಮಾತ್ರ ಬಂತು. ವಿದ್ಯುಚ್ಛಕ್ತಿಯ ವಿಸ್ತರಣೆಗೋಸ್ಕರ ರಾಜ್ಯ ಸರಕಾರವು ಇನ್ನೂ ಹೆಚ್ಚು ಹಣವನ್ನು ವ್ಯಯಿಸಲು ನಿಶ್ಚಯಿಸಿರುತ್ತದೆ. ಈಗ ಕೈಗೊಳ್ಳಲಾಗಿರುವ ಯೋಜನೆಗಳ ಜೊತೆಯಲ್ಲಿ ಎರಡನೆಯ ಪಂಚವಾರ್ಷಿಕ ಯೋಜನೆಯ ಅವಧಿಗೆ ಮುಗಿಯುವ ಹೊಸ ಯೋಜನೆಗಳನ್ನು ತೊಡಗಲೂ ಸರಕಾರ ಹವಣಿಸುತ್ತದೆ. ಮೋಯಾರ ಮತ್ತು ಪಾಪನಾಶಂ ಜಲವಿದ್ಯುತ್ತಿನ ಕೇಂದ್ರಗಳೂ ಮಧುರೆ ಮತ್ತು ಮದ್ರಾಸಿನ ಕೇಂದ್ರಗಳೂ ಯೋಜನೆಯಂತೆ ಪ್ರಗತಿಯನ್ನು ಸಾಧಿಸಿ ಮದ್ರಾಸಿಗೆ ೭೩,೦೦೦ ಕಿಲೋವಾಟುಗಳಷ್ಟು ಅಧಿಕ ವಿದ್ಯುಚ್ಛಕ್ತಿಯನ್ನು ಪೂರೈಸುತ್ತವೆ. ಭಾರತ ಸರಕಾರದ ಮೂಲಕ ಅಮೇರಿಕಾ ಮತ್ತಿತರ ದೇಶಗಳ ತಜ್ಞರ ನೆರವ

(೧೧ನೇ ಪುಟ ನೋಡಿರಿ)

THE CANARA MUTUAL ASSURANCE COMPANY, LTD.,
Managing Director T R A PAI
Head Office: UDIPI, S INDIA.] [Estd 1935
ಅತ್ಯುತ್ತಮ ಲಾಭಾಂಶ
ಬಾಧ್ಯಸ್ಥ ಪಾಲಿಸಿಗಳಿಗೆ ಸಾಲಿಯಾನ ಸಾವಿರಕ್ಕೆ
ರೂ. 18/— ಆಜೀವ ವಿಮೆಗೆ ○ ರೂ. 15/— ಉಂಬಳಿ ವಿಮೆಗೆ
31-12-1953ನೇ ತಾರೀಕಿಗಾದ 1951ರಿಂದ 1953ರ ವರೆಗಿನ ಅವಧಿಯ ವಿಮಾಗಣನೆಯ ಫಲಿತಾಂಶ.
ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್
ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ] [ಸ್ಥಾಪನೆ: ೧೯೩೫.
ಸ್ಥಾಪನೆಯಾದಂದಿನಿಂದಲೂ ಪ್ರತಿಯೊಂದು ವರ್ಷಕ್ಕೂ ಲಾಭಾಂಶ ಹಂಚಿದ ಕಂಪೆನಿ.
ತಾ 1-4-1954ರಿಂದ ಹೊಸ ವಿಮಾಕಾರ್ಯಕ್ಕೆ ಪ್ರೀಮಿಯಂ ದರವನ್ನು ಇಳಿಸಲಾಗಿದೆ.
CHIEF AGENTS
THE COMMERCIAL CORPORATION OF INDIA, LTD.,
UDIPI, S India.

ರಾಮತೀರ್ಥ ಬ್ರಾಹ್ಮೀ ತೈಲ
ಸ್ಪೆಶ್ಯಲ್ ನಂ ೧] [ಮೆಡಿಕೇಟೆಡ್
ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕ ನಾಶಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.
ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0
ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಮಿಶನರಿಗಳು ನಡೆಸಿರುವ ಚಟುವಟಿಕೆ

ಧಾರ್ಮಿಕ ಕೆಲಸದ ನಡುವೆ ರಾಜಕೀಯ ಕುಹಕ

ಪ್ರಧಾನ ಮಂತ್ರಿ ನೆಹರೂರವರು ಕಳೆದ ಆಗೋಸ್ತು ತಿಂಗಳಲ್ಲಿ ಕ್ರೈಸ್ತ ಮಿಶನರಿಗಳು ಭಾರತದಲ್ಲಿ ನಡೆಸುತ್ತಿರುವ ಚಟುವಟಿಕೆಗಳ ಕುರಿತು ಸರಕಾರದ ನಿಲುಮೆಯೇನೆಂಬುದನ್ನು ಸ್ಪಷ್ಟಗೊಳಿಸುವ ಪತ್ರವೊಂದನ್ನು ಸ್ವೀಡನ್ನಿನ ಮುಖ್ಯ ಧರ್ಮಾಧಿಕಾರಿಗಳಿಗೆ ಬರೆದಿದ್ದರು. ಮೊನ್ನೆ (ದಿನಾಂಕ ೧೯ರಂದು) ಪಾರ್ಲಿಮೆಂಟಿನ ಕೆಲವು ಕ್ರೈಸ್ತ ಸದಸ್ಯರು ನೆಹರೂರವರೊಡನೆ ಮಿಶನರಿಗಳ ಚಟುವಟಿಕೆಯ ಕುರಿತು ವಿಚಾರ ವಿನಿಮಯ ನಡೆಸಿದ್ದಲ್ಲದೆ, ಹಿಂದೆ ಬರೆಯಲಾದ ಆ ಪತ್ರವನ್ನು ಪ್ರಕಟಿಸಲೂ ಅನುಮತಿಯನ್ನು ಕೇಳಿದರು. ಪ್ರಧಾನ ಮಂತ್ರಿಗಳ ಸಮ್ಮತಿ ದೊರೆತ ಪ್ರಕಾರ ಪತ್ರವು ಈಗ ಪ್ರಕಟಗೊಂಡಿದೆ- ಇದರಲ್ಲಿ ಸಂಪೂರ್ಣ ಧಾರ್ಮಿಕ ಸಹಿಷ್ಣುತೆಯೇ ಭಾರತ ಸರಕಾರದ ಧೋರಣೆ ಎಂಬುದನ್ನು ಸ್ಪಷ್ಟಗೊಳಿಸಲಾಗಿದೆ; ಆದರೆ ಮಿಶನರಿಗಳ ಚಟುವಟಿಕೆಯು ರಾಜಕೀಯ ವಲಯಕ್ಕೆ ವ್ಯಾಪಕಗೊಂಡಾಗ ಮಾತ್ರ ಸರಕಾರವು ಸಾಕಷ್ಟು ಮುಂಜಾಗ್ರತೆಯ ಕ್ರಮಗಳನ್ನು ಕೈಗೊಳ್ಳುವುದೆಂದೂ ಹೇಳಲಾಗಿದೆ. ಮಿಶನರಿಗಳು ಲೋಕೋಪಕಾರದ ಹಾಗು ಜ್ಞಾನಾಭಿವೃದ್ಧಿಗೊಳಿಸುವ ಕೆಲಸವನ್ನು ಕೈಗೊಂಡರೆ, ಅದನ್ನು ಯಾರೂ ದೂರಲಾರರು. ಬದಲಿಗೆ, ಮತಾಂತರವೇ ಮುಂತಾದ ಅಪ್ರಿಯ ಕ್ರಮಗಳನ್ನು ಹಾಗು ರಾಷ್ಟ್ರದ ಭದ್ರತೆಗೆ ಅಪಾಯವನ್ನುಂಟು ಮಾಡುವ ಕಾರ್ಯಗಳನ್ನು ಕೈಗೊಂಡರೆ, ಅದನ್ನು ಸರಕಾರವು ಮೆಚ್ಚಲಾರದು. ಭಾರತದ ಸಂಸ್ಕೃತಿಯನ್ನು ದೂರುತ್ತಾ, ವಿದ್ರೋಹಕ್ಕೆ ಉತ್ತೇಜನ ಕೊಡುವ ವಿಘಾತಕ ಪ್ರವೃತ್ತಿಯಲ್ಲಿ ಮಗ್ನರಾದವರ ಮೇಲೆ ಸರಕಾರ ಅಗತ್ಯವಾಗಿ ಕಣ್ಣಿಡಬೇಕಾಗುವುದು.

೦೦

ಭಾರತದಲ್ಲಿ ವಿದೇಶಿ ಕ್ರೈಸ್ತ ಮಿಶನರಿಗಳ ಚಟುವಟಿಕೆಯ ಕುರಿತು ಪಾರ್ಲಿಮೆಂಟಿನಲ್ಲಿ ಹಾಗು ಮಧ್ಯ ಪ್ರದೇಶವೇ ಮುಂತಾದ ರಾಜ್ಯಗಳ ಶಾಸನ ಸಭೆಯಲ್ಲಿ ಪ್ರಶ್ನೆಗಳು ಕೇಳಲಾಗುತ್ತವೆ; ಮತ್ತು ಚರ್ಚೆಗಳೂ ನಡೆಯುತ್ತವೆ. ಧಾರ್ಮಿಕರೆಂಬ ಸೋಗು ಹಾಕಿಕೊಂಡು ಮಿಶನರಿಗಳು ಅನಿಷ್ಟಕರವಾದ ರಾಷ್ಟ್ರದ್ರೋಹ ಕಾರ್ಯಗಳಲ್ಲಿ ಆಸಕ್ತಿವಹಿಸುವರೆಂದು ಆರೋಪಿಸಲಾಗುತ್ತದೆ. ಭಾರತದ ಈಶಾನ್ಯ ಗಡಿಪ್ರದೇಶದಲ್ಲಿ ಮಿಶನರಿಗಳ ಚಟುವಟಿಕೆಗಳು ಹೊರಗಿನ ರಾಜಕಾರಣದಷ್ಟೇ ತೀವ್ರವಾಗಿ ಬೆಳೆದು, ಭಾರತ ಸರಕಾರಕ್ಕೆ ತಲೆನೋವನ್ನುಂಟುಮಾಡಿರುತ್ತವೆ. ಸ್ವತಂತ್ರ ನಾಗಾಸ್ಥಾನದ ಬೇಡಿಕೆಯು ಇಂತಹ ಕೇಟಲೆಯ ಒಂದು ಮಾದರಿ—ಬ್ರಿಟಿಷರ ಕಾಲ ಸಂದುಹೋಗಿದ್ದರೂ, ಅವಶೇಷರೂಪದಲ್ಲಿ ಮಿಶನರಿಗಳ ರಾಜಕೀಯ ಚಟುವಟಿಕೆಗಳು ಇನ್ನೂ ಕಂಡುಬರುತ್ತವೆ. ಇದು ಎಷ್ಟೋ ಸಂದರ್ಭಗಳಲ್ಲಿ ಧಾರ್ಮಿಕ ಭಾವನೆಯ ಭಾರತೀಯ ನಾಗರಿಕರನ್ನು ರೊಚ್ಚಿಗೆಬ್ಬಿಸುವುದುಂಟು-ನಮ್ಮ ಸಂಸ್ಕೃತಿಯನ್ನು ಹೀನೈಸಿ ಮಾತನಾಡುವ ಮಿಶನರಿಗಳ ಮೇಲೆ ಉರಿಕಾರುವ ಪ್ರಸಂಗವೂ ಬರುತ್ತದೆ. ಬ್ರಿಟಿಷರ ಕಾಲದಲ್ಲಿ ಪ್ರತಿಯೊಂದು ಸಂತೆಯ ಮುಂದೆ "ಕುರಿಜನಕುಳೇ...." ಎಂದು ಸಂಭಾವಿತರಾದ ಭಾರತೀಯರನ್ನು ಸಂಬೋಧಿಸುವ, "ಕೃಷ್ಣನು ಕಳ್ಳ, ವ್ಯಭಿಚಾರಿ..." ಎಂದು ಮುಂತಾಗಿ ದುರುದ್ದೇಶ ಪೂರ್ವಕ ದೂಷಿಸುವ ಪ್ರಚಾರಕರನ್ನು ಕಾಣುತಿದ್ದೆವು. ಇಂದು ನಮ್ಮ ಸೀಮೆಯಲ್ಲಿ ತೀರ ಹೇಯವಾದ ಈ ಪ್ರಚಾರ ಕಾರ್ಯ ಕುಗ್ಗಿಕೊಂಡಿದ್ದರೂ—ಗುಡ್ಡಗಾಡು ಪ್ರದೇಶಗಳಲ್ಲಿ ಇದು ಅವ್ಯಾಹತವಾಗಿ ನಡೆದಿರುತ್ತದೆ. ಮಧ್ಯ ಪ್ರದೇಶದಲ್ಲಿ ಮಿಶನರಿಗಳ ಹಾವಳಿ ಎಷ್ಟರ ಮಟ್ಟಿಗೆ ನಾಗರಿಕರನ್ನು ಅಸಂತುಷ್ಟಗೊಳಿಸಿದೆಯೆಂದರೆ, ಅಲ್ಲಿಯ ರಾಜ್ಯ ಸರಕಾರವು ಗುಡ್ಡಗಾಡು ಜನರಲ್ಲಿ ಕ್ರೈಸ್ತ ಮಿಶನರಿಗಳ ಚಟುವಟಿಕೆಯ ನಿಜಾಂಶಗಳನ್ನು ಗೊತ್ತುಹಚ್ಚಲು ಒಂದು ವಿಚಾರಣಾ ಸಮಿತಿಯನ್ನು ನೇಮಿಸಿದೆ. ಕ್ರೈಸ್ತ ಮಿಶನರಿಗಳು ಹೊರದೇಶಗಳಿಂದ ಹೇರಳ ಧನಸಹಾಯವನ್ನು ಪಡೆದು, ರಾಜಕೀಯ ದುರುದ್ದೇಶಗಳನ್ನು ಪ್ರಕಟಿಸುತ್ತಿರುವುದೇ ಇಂದಿನ ಸಮಸ್ಯೆಯಾಗಿರುತ್ತದೆ. ನಮ್ಮ ಇಗರ್ಜಿಗಳು ಬಹುಕಾಲ ಬಾಳಿದ್ದೂ ಈ ರೀತಿ ಪರಾವಲಂಬಿತವಾಗಿರುವುದು ಇಷ್ಟವಲ್ಲ; ಅವು ಸ್ವಾವಲಂಬಿಯಾಗಬಲ್ಲುವು, ಮತ್ತು ಸ್ವತಂತ್ರವಾಗಬೇಕು ಎಂಬ ಸಂಗತಿಯನ್ನು ಸರಕಾರ ತಿಳಿಸಿರುತ್ತದೆ. ಮಿಶನರಿಗಳು ಮಾನವತೆಯ ಸೇವೆ ಎಂಬ ಉನ್ನತ ಆದರ್ಶವನ್ನಿಟ್ಟುಕೊಂಡು ಉತ್ತಮ ಕೆಲಸ ಮಾಡಿರುವುದಕ್ಕೆ ನಾವು ಕೃತಜ್ಞರು. ದಕ್ಷಿಣ ಕನ್ನಡವನ್ನೇ ತೆಗೆದುಕೊಂಡರೆ, ಇಲ್ಲಿಯ ವೈದ್ಯಕೀಯ ಚಿಕಿತ್ಸೆ ಶಿಕ್ಷಣ ಕೈಗಾರಿಕೆಗಳ ಕ್ಷೇತ್ರದಲ್ಲಿ ಮಿಶನರಿಗಳು ವಹಿಸಿದ ಪಾತ್ರ ಪ್ರಶಂಸಾರ್ಹ ಮತ್ತು ಅನ್ಯಾದೃಶ. ಮುದ್ರಣ ಹಾಗು ಹಂಚಿನ ಕೈಗಾರಿಕೆಗಳು ಈ ಜಿಲ್ಲೆಯಲ್ಲಿ ಬಲಗೊಂಡದ್ದೇ ಮಿಶನರಿಗಳ ಮುತುವರ್ಜಿಯ ಫಲವಾಗಿ— ಕಿಟ್ಟೆಲ್ಲರ ಕನ್ನಡ ನಿಘಂಟು ಹಾಗು ಅನೇಕ ಶಾಲಾ ಕಾಲೇಜುಗಳು ಮಿಶನರಿಗಳ ಸಾಹಸದ ದ್ಯೋತಕ. ಆದರೆ ಇವುಗಳೊಂದಿಗೆ ಮಿಶನರಿಗಳು ನಡೆಸಿದ ಗರ್ಹಣೀಯ ಚಟುವಟಿಕೆಯೂ ಒಂದಿದೆ—ಅದೆಂದರೆ ಸಾವಿರಾರು ಮಂದಿಯ ಮತಾಂತರದ ಕಾರ್ಯ. ಇದು ಎಷ್ಟು ನಿಂದಾಸ್ಪದ ರೀತಿಯಲ್ಲಿ ಭಾರತದೊಳಗೆಲ್ಲ ನಡೆದು ಬಂತೆಂದು "ಮೋಡರ್ನ್ ರಿವ್ಯೂ" ಪತ್ರಿಕೆಯಲ್ಲಿ ಡಾ. ಅವಿನಾಶಚಂದ್ರ ಬೋಸರು ಬರೆದ ಲೇಖನ ಚೆನ್ನಾಗಿ ವಿವರಿಸಿ ಹೇಳುತ್ತದೆ.

೦೦

ಬೋಸರ ಅಭಿಪ್ರಾಯದಂತೆ ಭಾರತದಲ್ಲಿ ಸಂತ ತೋಮಸನು ಕ್ರಿಸ್ತಶಕ ಮೊದಲನೇ ಶತಮಾನದಲ್ಲಿ ಕೇರಳವನ್ನು ಪ್ರವೇಶಿಸಿದಾಗಲೇ ಈ ಮತಾಂತರದಕಾರ್ಯ ಪ್ರಾರಂಭವಾಯಿತು. ಆದರೆ ಇದು ನಿಧಾನವಾಗಿಯೇ ಮುಂದುವರಿಯಿತು. ಹದಿನೇಳನೇ ಶತಮಾನದಲ್ಲಿ ಗೋವೆಯೊಳಗೆ ಪೋರ್ಚುಗೀಸರು ಬಲಾತ್ಕಾರವನ್ನು ಉಪಯೋಗಿಸಿ ಮತಾಂತರಗೊಳಿಸುವ ಸಾಹಸಕ್ಕೆ ಕೈ ಹಾಕಿದರು. ಬ್ರಿಟಿಷರು ಭಾರತದ ಮೇಲೆ ಪ್ರಭುತ್ವ ನಡೆಸ ಹತ್ತಿದ ಮೇಲೆ, ಸರಕಾರದ ಪ್ರೋತ್ಸಾಹವೂ ಬೆಂಬಲವೂ ಈ ದುಷ್ಟ ಕಾರ್ಯಕ್ರಮಕ್ಕೆ ಯಥೇಷ್ಟವಾಗಿ ದೊರೆಯಿತು. ಮೂರನೆಯದಾದ ಈ ಹಂತದಲ್ಲಿ ಧರ್ಮಾಂತರದ ಕಾರ್ಯಕ್ಕೋಸ್ಕರ ಮಿಶನರಿಗಳು ಬಹುಮುಖವಾದ ಉಪಾಯಗಳನ್ನೂ ಸಾಧನಗಳನ್ನೂ ಯೋಜಿಸಿದರು. ಪುಸ್ತಕಗಳು ಪತ್ರಿಕೆಗಳು, ಸಾರ್ವಜನಿಕ ಭಾಷಣ ಮುಂತಾದವುಗಳ ಮೂಲಕ ಹಿಂದೂ ಧರ್ಮಕ್ಕಿಂತ ಕ್ರೈಸ್ತ ಮತವೇ ಶ್ರೇಷ್ಠವೆಂದು ಅವರು ಪ್ರತಿಪಾದಿಸುತಿದ್ದರು; ಪಾಶ್ಚಾತ್ಯ ಮಾದರಿಯ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ, ಅಲ್ಲಿಗೆ ಬರುವ ವಿದ್ಯಾರ್ಥಿಗಳಿಗೆ ಒತ್ತಾಯದ ಕ್ರೈಸ್ತ ಧರ್ಮ ಬೋಧನೆ ಮಾಡುತಿದ್ದರು; ಆಸ್ಪತ್ರೆಗಳಲ್ಲೂ ಆರೋಗ್ಯಧಾಮಗಳಲ್ಲೂ ವೈದ್ಯಕೀಯ ನೆರವಿನೊಡನೆ ಧರ್ಮೋಪದೇಶವನ್ನೂ ನೀಡುತ್ತಿದ್ದರು; ಅನಾಥ ಬಾಲಕ ಬಾಲಕಿಯರಿಗೆ, ಹಾಗು ಹಿಂದೂ ಮತದ ದಲಿತ ವರ್ಗಗಳಿಗೆ ಹಣಕಾಸಿನ ನೌಕರಿ ಚಾಕರಿಯ, ಹಾಗು ಮೇಲ್ಪಟ್ಟದ ಜೀವನದ ಆಸೆ ಎನ್ನು ತೋರಿಸಿ ಅವರನ್ನು ಮತಾಂತರಿಸುತಿದ್ದರು. ಬ್ರಿಟಿಷ ಸರಕಾರವು ಪ್ರತಿಯೊಂದೂ ಧರ್ಮಕ್ಕೂ ಭಾರತದಲ್ಲಿ ಸ್ಥಾನ ಕೊಡುವ ನೀತಿಯನ್ನು ಮುಂದಿಟ್ಟುಕೊಂಡಂತೆಯೇ ಉಂಬಳಿಯನ್ನೂ ಹಣಕಾಸನ್ನೂ ನೀಡಿ, ಈ ಚಟುವಟಿಕೆಗಳನ್ನು ಪ್ರೋತ್ಸಾಹಿಸಿತು. ಇದನ್ನು ರಾಷ್ಟ್ರೀಯ ಮನೋವೃತ್ತಿಯ ಭಾರತೀಯರು ಎಷ್ಟು ಮಾತ್ರಕ್ಕೂ ಮೆಚ್ಚುತಿದ್ದಿಲ್ಲ. ಮಹಾತ್ಮಾ ಗಾಂಧೀಯವರು ಮತಾಂತರವನ್ನು ಅತ್ಯಂತ ಹೇಯವಾದ ದುಷ್ಕೃತ್ಯವೆಂದು ಹೇಳಿದ್ದುಂಟು — ನಮ್ಮವರು ಮೊದಲಿಂದಲೂ ಇಂತಹ ಧರ್ಮಾಂತರ ಕಾರ್ಯಕ್ಕೆ ಹೇಸುತಿದ್ದರು. ಪರಿಣಾಮವಾಗಿ ೨೦೦ರಿಂದ ೨೦೦೦ ವರ್ಷಗಳವರೆಗಿನ ಈ ದೀರ್ಘಾವಧಿಯಲ್ಲಿ ನಡೆದ ಮತಾಂತರದ ಪ್ರಯತ್ನಗಳು ಯಶಸ್ಸನ್ನು ಹೊಂದದೆ ಹೋದವು: ಭಾರತೀಯರಲ್ಲಿ ಕ್ರೈಸ್ತ ಧರ್ಮಾವಲಂಬಿಗಳು ನೂರಕ್ಕೆ ಎರಡರಷ್ಟೂ ಇಲ್ಲವೆಂಬುದನ್ನು ನೆನೆದರೆ ಈ ಮಾತು ಸ್ಪಷ್ಟವಾಗುತ್ತವೆ. ಕ್ರೈಸ್ತ ಧರ್ಮವನ್ನು ಸ್ವೀಕರಿಸಿದವರಲ್ಲಿಯೂ ಗುಡ್ಡಗಾಡು ಪ್ರದೇಶದ ಅನಾಗರಿಕ ಜನರೇ ಅತ್ಯಧಿಕ. ಅವರನ್ನು ಬಿಟ್ಟುಗೊಟ್ಟರೆ, ಉಳಿದ ಕ್ರೈಸ್ತರ ಪ್ರಮಾಣ ಸಾವಿರಕ್ಕೆ ಒಂದೂ ಆಗುವುದಿಲ್ಲ. ಸುತ್ತುಮುತ್ತಲೂ ಕ್ರೈಸ್ತ ಕುಟುಂಬಗಳನ್ನು ಕಾಣುವ ದಕ್ಷಿಣ ಕನ್ನಡಿಗರಿಗೆ ಇದರಿಂದ ಆಶ್ಚರ್ಯವಾದೀತು!

೦೦

ಮೊದ ಮೊದಲು ಮಿಶನರಿಗಳು ಬ್ರಾಹ್ಮಣರೇ ಮೊದಲಾದ ಶ್ರೇಷ್ಠ ವರ್ಣದವರನ್ನು ಮತಾಂತರಿಸಲು ಪ್ರಯತ್ನಪಟ್ಟರು. ಆದರೆ ಈ ಉದ್ಯಮವು ಸಾಕಷ್ಟು ಫಲಕಾರಿಯಲ್ಲವೆಂದು ಅವರಿಗೆ ಕೆಲವೇ ಸಮಯದಲ್ಲಿ ಸ್ಪಷ್ಟವಾಯಿತು. ಈಗ ಹಿಂದೂ ಮತದಲ್ಲಿ ಅಸ್ಪೃಶ್ಯರೆನಿಸಿಕೊಂಡವರನ್ನು ನಾನಾ ಪ್ರಕಾರದ ಆಮಿಷಗಳ ಬಲೆ

(೧೦ನೇ ಪುಟ ನೋಡಿರಿ)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ).

ಅಧಿಕೃತ ಭಂಡವಾಳ ...	...	ರೂ. 25,00,000
ಚಂದಾ ಆಪಿಸಿ, ತೆತ್ತು ಬಂದ ಭಂಡವಾಳ	...	ರೂ. 20,00,000
ಕ್ಷೇಮ ನಿಧಿ ...	...	ರೂ. 10,50,000
ಠೇವಣಾತಿಗಳು ...	...	ರೂ. 2,98,19,000
ಒಟ್ಟು ಚಲಾವಣೆ ಭಂಡವಾಳ	...	ಸುಮಾರು ರೂಪಾಯಿ ೪ ಕೋಟಿ
ಒಟ್ಟು ಶಾಖೆಗಳು ...	...	38

(31—12—1953ರಲ್ಲು)

THE CANARA BANKING CORPORATION LIMITED

Estd:- 1906] [H. O. UDIPI (S. India).

BHUVANENDRA PRODUCTS LTD., KATAPADI, S. K.

ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!

ಇವುಗಳಿಂದಲೇ ಭುವನೇಂದ್ರ ಔಷಧಿಗಳು

ಜನಪ್ರಿಯವಾಗಿರುವವು

ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು

ನಮ್ಮಲ್ಲಿ ತಯಾರಿಸಲ್ಪಡುತ್ತವೆ.

ವಿವರಗಳಿಗೆ ವಿಚಾರಿಸಿರಿ:-

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.

ಡಿಪೋ:- (1) ಉಡುಪಿ (2) ಮರಾಠ ಗಲ್ಲಿ, ಹುಬ್ಬಳ್ಳಿ.

ನಿಮಗೆ ಸುಲಭದಲ್ಲಿ ಇಂಗ್ಲಿಷ್ ಕಲಿಯಬೇಕೆ? ಹಾಗಿದ್ದರೆ

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿ ಪುಸ್ತಕ ಅತ್ಯುಪಯುಕ್ತವಾದುದು.

ಈ ಪುಸ್ತಕದಿಂದ ಸಾವಿರಾರು ಜನರು ಸುಲಭವಾಗಿ ಸಾಕಷ್ಟು ಇಂಗ್ಲಿಷ್ ಕಲಿತುಕೊಂಡಿದ್ದಾರೆ. ನೀವೂ ಪ್ರಯತ್ನಿಸಬಾರದೇಕೆ?

ಬೆಲೆ: ಸಾಮಾನ್ಯಪ್ರತಿ 1—8—0

ನವಭಾರತ ಪುಸ್ತಕ ಭಂಡಾರ, ಉಡುಪಿ

ಆಡಳಿತ ಘಟಕಗಳ ಪುನರ್ಘಟನೆಯ ವಿಚಾರ

ಉಚ್ಚಾಧಿಕಾರ ಸಂಪನ್ನ ಆಯೋಗಕ್ಕೆ ಬಿಡುವಿಲ್ಲದ ಕಾರ್ಯಕ್ರಮ

ಭಾರತ ಸರಕಾರದವರಿಂದ ನೇಮಕಗೊಂಡ ಉಚ್ಚಾಧಿಕಾರ ಸಂಪನ್ನ ಆಯೋಗವು ಸದ್ಯಕ್ಕೆ ದಕ್ಷಿಣ ಭಾರತವನ್ನೇ ತನ್ನ ಮುಖ್ಯ ಕಾರ್ಯಕ್ಷೇತ್ರವಾಗಿ ಮಾಡಿಕೊಂಡು, ಈ ಪ್ರದೇಶದಲ್ಲಿ ಸಂಚರಿಸುತ್ತಿದೆ. ಆಯೋಗದ ಮೂವರು ಸದಸ್ಯರಲ್ಲಿ ಇಬ್ಬರು ಕೆಲವು ದಿನಗಳ ಮೊದಲೇ ಮದ್ರಾಸಿಗೆ ಆಗಮಿಸಿದ್ದರು; ಈಗ ಮೂರನೆಯ ಸದಸ್ಯರಾದ ಪಂಡಿತ ಹೃದಯನಾಥ ಕುಂಜ್ರುರವರೂ ಹೊಸ ದಿಲ್ಲಿಯಿಂದ ಹೊರಟು ಬಂದು, ಉಳಿದಿಬ್ಬರನ್ನು ಕೂಡಿರುವರು. ಮದ್ರಾಸಿನಲ್ಲಿ ಪತ್ರಿಕಾ ಪ್ರತಿನಿಧಿಗಳಿಗೆ ಅವರು ನೀಡಿದ ಸಂದರ್ಶನದಲ್ಲಿ "ಭಾರತದ ರಾಜ್ಯಗಳನ್ನು ಪುನರ್ಘಟಿಸುವ ಇಡಿಯ ಪ್ರಶ್ನೆಯು ಆಯೋಗದ ಮುಂದಿದೆ; ವಿಚಾರಣೆಯ ಅಧಿಕಾರವೂ ವ್ಯಾಪಕವಿದೆ. ಗಡಿ ವಿಷಯಗಳನ್ನು ಚರ್ಚಿಸಬಾರದೆಂಬ ನಿರ್ಬಂಧವನ್ನೇನು ಆಯೋಗದ ಮೇಲೆ ಹೇರಲಾಗಿಲ್ಲ. ಆಯೋಗವು ೧೯೫೫ನೇ ಜೂನು ತಿಂಗಳೊಳಗೆ ವರದಿ ಒಪ್ಪಿಸಲು ಪ್ರಯತ್ನಿಸುವುದು" ಎಂದರು. ಆದರೆ ಕನ್ನಡಿಗರು ಬಹಳವಾಗಿ ಆತುರ ತೋರಿಸಿದ್ದ "ನಡುಗಾಲದ ವರದಿ"ಯನ್ನು ಒಪ್ಪಿಸುವ ವಿಚಾರ ಆಯೋಗಕ್ಕಿಲ್ಲವೆಂದು ವಿಸ್ಪಷ್ಟವಾಗಿ ತಿಳಿದು ಬರುತ್ತದೆ. "ನಡುಗಾಲದ ವರದಿ ಇಲ್ಲ" ಎಂಬುದೇ "ನಡುಗಾಲದ ವರದಿ" ಆದೀತು! ಹೀಗಿದ್ದರೂ ಆಯೋಗವು ಒಪ್ಪಿಸುವ ವರದಿಯಲ್ಲಿ ರಾಜ್ಯಗಳ ಪುನರ್ವಿಂಗಡಣೆಯ ಬಗ್ಗೆ ಪ್ರಾಶಸ್ತ್ಯಾನುಕ್ರಮವನ್ನು ಸೂಚಿಸುವರೆಂದು ಅಭಿಪ್ರಾಯಪಡಲಾಗುತ್ತದೆ.

ಆಂಧ್ರದ ಹದ್ದುಗಣ್ಣು

ತಮಿಳು ನಾಡಿನ ಪ್ರದೇಶ ಕಾಂಗ್ರೆಸ್ಸು ಈ ಮೊದಲೇ ಆಯೋಗಕ್ಕೆ ಮನವಿಯನ್ನೊಪ್ಪಿಸಿದೆ; ಮದ್ರಾಸು ಸರಕಾರದವರೂ ಮನವಿಯನ್ನು ಅರ್ಪಿಸುವರೆಂದು ತಿಳಿದು ಬರುತ್ತದೆ. ಆಂಧ್ರ ಸರಕಾರವೂ ವಿಶಾಲಾಂಧ್ರ ರಾಜ್ಯದ ಬೇಡಿಕೆಯನ್ನು ಮುನ್ನೀಡಿ, ಮನವಿಯನ್ನು ನೀಡಲು ಎಲ್ಲ ಸಿದ್ಧತೆಗಳನ್ನು ಕೈಗೊಂಡಿದೆ. ಇದರಲ್ಲಿ ಕನ್ನಡಿಗರು ತಮ್ಮ ಹಕ್ಕು ಬಾಧ್ಯತೆಗಳನ್ನು ಸ್ಥಾಪಿಸಬೇಕೆನ್ನುವ ಹಲವು ಪ್ರದೇಶಗಳು ಆಂಧ್ರರಾಜ್ಯಕ್ಕೆ ಸೇರಬೇಕೆಂದು ಒತ್ತಾಯಿಸಲಾಗಿದೆ—ಸೇಲಂ ಜಿಲ್ಲೆಯ ಹೊಸೂರು ತಾಲೂಕು, ಮೈಸೂರು ರಾಜ್ಯದ ಕೋಲಾರ, ಚಿತ್ರದುರ್ಗ, ತುಮಕೂರು ಮತ್ತು ಬೆಂಗಳೂರಿನ ಕೆಲವು ಪ್ರದೇಶಗಳು, ತುಂಗಭದ್ರಾ ಅಣೆಕಟ್ಟಿನ ಪ್ರದೇಶ, ಬಳ್ಳಾರಿ ತಾಲೂಕು ಮತ್ತು ಹೊಸಪೇಟೆಯ ಕೆಲವು ಭಾಗಗಳ ಮೇಲೆ ಆಂಧ್ರರ ಕಣ್ಣು ಬಿದ್ದಿದೆ. ಹೈದರಾಬಾದು ರಾಜ್ಯದ ರಾಯಚೂರು ಮುಂತಾದ ಪ್ರದೇಶದ ಮೇಲೂ ಆಂಧ್ರರಿಗೆ ಆಸೆ ಇದೆ. ಹೈದರಾಬಾದಿನ ಪ್ರದೇಶ ಕಾಂಗ್ರೆಸು ರಾಜ್ಯವನ್ನು ಭಾಷಾನುಗುಣವಾಗಿ ಒಡೆಯುವುದಕ್ಕೆ ಅನುಕೂಲವಾಗಿದ್ದರೂ ಕೆಲವು ಹಿತಾಸಕ್ತಿಯುಳ್ಳ ಪ್ರಮುಖರು ವಿಭಜನೆಗೆ ವಿರೋಧವನ್ನು ಪ್ರಕಟಿಸಿರುವರು. ಹನ್ನೊಂದು ಜನ ಪ್ರಮುಖ ನಾಗರಿಕರು ಆಯೋಗಕ್ಕೆ ಮನವಿಯೊಂದನ್ನು ಒಪ್ಪಿಸಿ, ರಾಜ್ಯಗಳ ಪುನರ್ಘಟನೆಯ ತತ್ವವನ್ನೇ ವಿರೋಧಿಸಿದ್ದಾರೆ. ಈ ವಿಚಾರವು ತೀರ ಸಂಕುಚಿತವಾದುದೆಂದೂ ಆದಕಾರಣ ಈ ದಿಶೆಯಲ್ಲಿದ್ದ ಯಾವುದೇ ಹೆಜ್ಜೆಯು ಪ್ರತಿಗಾಮಿ ಸ್ವರೂಪದ್ದಾಗುವುದೆಂದೂ ಈ ಮಹಾನುಭಾವರ ಅಭಿಪ್ರಾಯ.

ಪಾಟೀಲರ ವಿರೋಧ

ರಾಜ್ಯಗಳ ಪುನರ್ವಿಂಗಡಣೆಯ ಪ್ರಶ್ನೆಯನ್ನು ಪುರಸ್ಕರಿಸುವವರಷ್ಟೇ ಪ್ರಬಲರಾಗಿ ಅದನ್ನು ಖಂಡಿಸುವವರೂ ಇರುವರೆಂಬುದಕ್ಕೆ ಶ್ರೀ ಎಸ್. ಕೆ. ಪಾಟೀಲರ ರಾಷ್ಟ್ರೀಯ ಐಕ್ಯರಂಗವನ್ನು ಇನ್ನೊಂದು ಉದಾಹರಣೆಯಾಗಿ ಕೊಡಬಹುದು ಕೆಲವು ದಿನಗಳ ಹಿಂದೆ ಅವರು ಭಾಷಾನುಗುಣ ಪ್ರಾಂತರಚನೆಯ ವಿಚಾರವನ್ನು "ಮುಂದಿನ ಪೀಳಿಗೆ"ಯವರ ತೀರ್ಮಾನಕ್ಕೆ ಬಿಡೋಣ ಎಂದು ಹೇಳಿದರು. ಇವರು ಮುಂಬಯಿ ಪ್ರದೇಶ ಕಾಂಗ್ರೆಸಿನ ಅಧ್ಯಕ್ಷರು ಹೌದಾದರೂ— ಕಾಂಗ್ರೆಸು ಮನ್ನಿಸಿದ್ದ ತತ್ವವನ್ನು ಈಗಲೇ ಕಾರ್ಯಾಚರಣೆಗಿಳಿಸಲು ಸಮ್ಮತಿಸದ ವ್ಯಕ್ತಿ: ಇವರ ನೇತೃತ್ವದಲ್ಲಿ ಐಕ್ಯರಂಗವು ಆಯೋಗಕ್ಕೆ ಒಂದು ಮನವಿಯನ್ನು ಅರ್ಪಿಸಿದ್ದು, ಅದರಲ್ಲಿ ಪ್ರಕೃತ ರಾಷ್ಟ್ರೀಯ ಕಾರ್ಯಗಳಲ್ಲಿಯೇ ನಾವು ತನ್ಮಯರಾಗತಕ್ಕದ್ದು ಎಂದು ಒತ್ತಾಯಿಸಲಾಗಿದೆ. ದೇಶದಲ್ಲೆಲ್ಲ ಪ್ರಶಾಂತ ವಾತಾವರಣವು ಸ್ಥಾಪಿಸಲ್ಪಡುವವರೆಗೆ, ಅಂದರೆ, ಕನಿಷ್ಠ ೨೫ ವರ್ಷಗಳ ಕಾಲವಾದರೂ ರಾಜ್ಯಗಳ ಪುನರ್ವಿಂಗಡಣೆಯ ಪ್ರಶ್ನೆಯನ್ನು ಮುಂದೆ ಹಾಕಬೇಕು. ಈಗಿನ ಕಾಲವು ರಾಜ್ಯಾಡಳಿತೆಯ ವ್ಯವಸ್ಥೆಯನ್ನು ಸರಿಪಡಿಸುವುದಕ್ಕೆ ಅನುಕೂಲವಿಲ್ಲ. ಪ್ರಾಂತೀಯ ಭಾವನೆಯನ್ನು ಬೆಳೆಸುವ, ಭಾಷಾವ್ಯಾಮೋಹದ ದೆಸೆಯಿಂದ ಭಿನ್ನಾಭಿಪ್ರಾಯವನ್ನು ಬೆಳೆಸುವ ದುಷ್ಕೃತ್ಯಕ್ಕೆ ಕೈ ಹಾಕಬಾರದು ಎಂಬ ಎಚ್ಚರಿಕೆಯನ್ನು ಪಾಟೀಲರ ಮನ ನೀಡುತ್ತದೆ.

ಗೊತ್ತುವಳಿಯ ಪರಿಷ್ಕರಣ

ಈ ವಿರೋಧವನ್ನು ಯಾರೂ ಲೆಕ್ಕಕ್ಕೆ ತೆಗೆದುಕೊಂಡಂತೆ ಕಾಣುವುದಿಲ್ಲ— ರಾಜ್ಯಗಳ ಪುನರ್ಘಟನೆಯ ಪ್ರಶ್ನೆಯು ಭಾರತೀಯರ ಜೀವಾಳವೆನಿಸಿದೆಯೆಂದೇ ಹೇಳಬೇಕಾಗುವುದು ಇಲ್ಲದಿದ್ದರೆ, ಕಾಂಗ್ರೆಸಿಗರು ಇತರ ಯಾವದೇ ಪಕ್ಷಗಳೊಡನೆ ಭಾಷಾನುಗುಣ ರಾಜ್ಯ ಚಳವಳಿಯಲ್ಲಿ ಸಹಕರಿಸಕೂಡದೆಂದು ಕಾಂಗ್ರೆಸು ಸಮಿತಿಯು ಈಚೆಗೆ ಹೇರಿದ್ದ ನಿರ್ಬಂಧವನ್ನು ಈಗ ಸಡಲಿಸುವ ಪ್ರಸಂಗ ಬರುತ್ತಿರಲಿಲ್ಲ. ಕಾಂಗ್ರೆಸು ಸಮಿತಿಯ ನಿರ್ಣಯವು ಸದುದ್ದೇಶದಿಂದ ಕೂಡಿದ್ದರೂ ರಾಷ್ಟ್ರೀಯ ಮಹತ್ವದ ಪ್ರಶ್ನೆಯೊಂದನ್ನು ಬಿಡಿಸುವುದರಲ್ಲಿ ಅದು ಕೆಲವು ತೊಡಕುಗಳನ್ನುಂಟು ಮಾಡಿತು. ಮುಖ್ಯವಾಗಿ ಕರ್ನಾಟಕ ಮತ್ತು ಮಹಾರಾಷ್ಟ್ರ ಪ್ರದೇಶದ ಕಾಂಗ್ರೆಸಿಗರನ್ನು ಅದು ಪೇಚಿನಲ್ಲಿ ಸಿಲುಕಿಸಿತು. ಇವೆರಡು ಪ್ರದೇಶಗಳಲ್ಲಿ ಆಯೋಗಕ್ಕೆ ಮನವಿಯನ್ನೊಪ್ಪಿಸುವ ವಿಷಯದಲ್ಲಿ ಇತರ ಪಕ್ಷಗಳೊಡನೆ ಏಕಾಗಿ ಸಹಕರಿಸಬೇಕಾಗುವುದೆಂಬುದನ್ನು ಕಾರ್ಯಸಮಿತಿಯ ಮುಂದೆ ದಿನಾಂಕ ೨೨ರಂದು ಶ್ರೀ ಗಳಾದ ನಿಜಲಿಂಗಪ್ಪ ಹಾಗು ಹಿರೆಯವರು ವಿವರಿಸಿದರು. ಆಯೋಗಕ್ಕೆ ಸಂಯುಕ್ತ ನ್ಯಾಯಪರ ಮನವಿಯನ್ನೊಪ್ಪಿಸುವುದು ತಮ್ಮ ಇಚ್ಛೆಯೇ ಹೊರತು ಇತರರೊಂದಿಗೆ ಸೇರಿ ಕಾಂಗ್ರೇಸಿಗರು ಭಾಷಾವಾರು ರಾಜ್ಯಘಟನೆಗಾಗಿ ಆಂದೋಲನ ನಡೆಸುವುದಿಲ್ಲವೆಂದು ಅವರು ಆಶ್ವಾಸನವಿತ್ತರು. ಈ ಮೊದಲೇ ಕೊಡಲಾದ ಆ ವಾಗ್ದಾನವನ್ನು ಹಿಂದೆಗೆದು ಕೊಳ್ಳುವುದು ಕಾಂಗ್ರೆಸಿನ ಪ್ರತಿಷ್ಠೆಗೆ ಭೂಷಣವಲ್ಲವೆಂದೂ ಅವರು ವಾದಿಸಿದರು. ಪರಿಣಾಮವಾಗಿ ಕರ್ನಾಟಕ ಹಾಗು ಮಹಾರಾಷ್ಟ್ರ ಪ್ರದೇಶ ಕಾಂಗ್ರೆಸು ಸಮಿತಿಗಳು ಆಯೋಗಕ್ಕೆ ಮನವಿಯನ್ನೊಪ್ಪಿಸುವ ಮತ್ತು ಅದರ ಮುಂದೆ ಸಾಕ್ಷಿ ಹೇಳುವ ಕಾಲಕ್ಕೆ ಇತರ ಪಕ್ಷಗಳೊಂದಿಗೆ ಸಹಕರಿಸಬಹುದೆಂದು ಅನುಮತಿಯನ್ನು ನೀಡಲಾಯಿತು

ಕರ್ನಾಟಕದ ಮನವಿ

ಪರಿಷ್ಕರಿಂದ ಹೀಗೆ ಒಪ್ಪಿಗೆ ದೊರೆತುದರಿಂದ ಕರ್ನಾಟಕ ಪ್ರದೇಶ ಕಾಂಗ್ರೆಸ ಸಮಿತಿಯವರು ಸೇರಿಸಬೇಕೆಂದಿದ್ದ ದಾವಣಗೆರೆಯ ಸರ್ವ ಪಕ್ಷೀಯ ಪರಿಷತ್ತು ಇದೇ ೨೮ ಮತ್ತು ೨೯ನೇ ದಿನಾಂಕ ಕೂಡುವುದು; ಮತ್ತು ೩೧ನೇ ತಾರೀಕಿನೊಳಗೆ ಆಯೋಗಕ್ಕೆ ಮನವಿ ಅರ್ಪಿಸುವುದು. ದಾವಣಗೆರೆಯ ಈ ಸಭೆ ಗಣಪತಿಯ ಮದುವೆಯ ದಿನದಂತೆ ಮುಂದೂಡಲ್ಪಡುತ್ತಾ ಹೋದುದನ್ನು ಕಂಡು ಅಖಿಲ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತು ಬೇಸರ ಹೊಂದಿ, ಆಯೋಗಕ್ಕೆ ಪ್ರತ್ಯೇಕ ಮನವಿಯನ್ನು ನೀಡಲು ನಿರ್ಧರಿಸಿತು. ಪ್ರದೇಶ ಕಾಂಗ್ರೆಸಿನ ನಿಶ್ಚಿತ ಧೋರಣೆ ಪ್ರಕಟವಾಗುವುದನ್ನು ಕಾಯುತ್ತಾ ಕುಳಿತಿರಲು ಸಾಧ್ಯವಿಲ್ಲ ಎಂದು ಈ ನಿರ್ಣಯದಲ್ಲಿ ಹೇಳಿದ್ದರು— ಕಾರಣ, ಇವರು ದಾವಣಗೆರೆಯ ಪರಿಷತ್ತಿನಲ್ಲಿ ಭಾಗವಹಿಸುವುದು ಸಂಶಯ. ಪ್ರದೇಶ ಕಾಂಗ್ರೆಸ ಸಮಿತಿ ಮಾತ್ರ ನಿಜವಾದ ಅರ್ಥದಲ್ಲಿ ಪರಿಷತ್ತು ಸರ್ವ ಪಕ್ಷೀಯವಾಗಬೇಕೆಂದು ಬಯಸಿ, ಯಾವುದೇ ಭೇದಭಾವನೆ ಇಲ್ಲದೆ ಮಹತ್ವದ ಸಂಘ ಸಂಸ್ಥೆಗಳಿಗೂ ಪ್ರಮುಖ ಧುರೀಣರಿಗೂ ರಾಜಕೀಯ ಮುಖಂಡರಿಗೂ ಗಣ್ಯ ನಾಗರಿಕರಿಗೂ ಆಮಂತ್ರಣವನ್ನು ನೀಡಿದೆ. ದಿನಾಂಕ ೨೩ರಂದು ಹುಬ್ಬಳ್ಳಿಯಲ್ಲಿ ಕರ್ನಾಟಕದ ಮನವಿಯ ಕರಡನ್ನು ತಯಾರಿಸಿದ ಸಮಿತಿಯು "ತಾಯಿನಾಡು" ಪತ್ರಿಕೆಯ ಸಂಪಾದಕರ ಅಧ್ಯಕ್ಷತೆಯಲ್ಲಿ ಸೇರಿ ಅನೇಕ ಸೂಚನೆಗಳನ್ನು ವಿಚಾರಿಸಿತು. ಮೈಸೂರಿಗರು ಕರ್ನಾಟಕ ರಾಜ್ಯದ ರಚನೆಗೆ ಅನುಕೂಲವಿದ್ದಾರೆಂದು ಇಲ್ಲಿ ಅಭಿಪ್ರಾಯ ವ್ಯಕ್ತಗೊಂಡಿತು ಕೇಂದ್ರದ ವಾಣಿಜ್ಯ ಮಂತ್ರಿ ಕರಮರಕರರು ಈ ಸಭೆಯಲ್ಲಿ ಭಾಗವಹಿಸುತ್ತಾ ಕೊಡಗನ್ನು ಕರ್ನಾಟಕಕ್ಕೆ ಸೇರಿಸುವುದು ನೆಟ್ಟಗೆಂದು ಆಯೋಗದ ಅಭಿಪ್ರಾಯವಿರುವುದಾಗಿ ತಿಳಿಸಿದರು. ಆದರೆ, ಕೊಡಗಿನ ಮುಖ್ಯ ಮಂತ್ರಿಗಳು ಇದನ್ನು ಒಪ್ಪುವರೇ! "ಕ" ವರ್ಗದ ಈ ರಾಜ್ಯವನ್ನು ಪ್ರತ್ಯೇಕ ಘಟಕವನ್ನಾಗಿ ಉಳಿಸಿಕೊಳ್ಳಲು ಅವರು ತೀರ ಆತುರರಿದ್ದು, ಇದೇ ೨೬ನೇ ದಿನಾಂಕ ಅವರು ಶಾಸನ ಸಭೆಯ ಎಲ್ಲ ಸದಸ್ಯರ ಸಮ್ಮೇಳನವನ್ನು ಕರೆದಿರುವರು.

ಬಂಟರ ಯಾನೆ ನಾಡವರ ಸಂಘ ಮುಂಬಯಿ.

ಇದರ 20ನೇ ವಾರ್ಷಿಕ ಮಹಾಸಭೆಯು ಡಾ| ಪಡುಬಿದ್ರಿ ಜಗನ್ನಾಥ ಶೆಟ್ಟರವರ ಅಧ್ಯಕ್ಷತೆಯಲ್ಲಿ ತಾ. 11-4-54ರಲ್ಲು ಕರ್ನಾಟಕ ಫ್ರೀ ಸ್ಕೂಲ್ ಹೈಸ್ಕೂಲಿನಲ್ಲಿ ಬಹು ವಿಜೃಂಭಣೆಯಿಂದ ಜರಗಿತು. ಗತವರ್ಷದ ವರದಿಯನ್ನು ಓದಿ, ಸರ್ವಾನುಮತದಿಂದ ಮಂಜೂರಾದುದಲ್ಲದೆ, ಹೊಸ ಕಾರ್ಯಕಾರೀ ಸಮಿತಿಗೆ, ಈ ಕೆಳಗೆ ಕಾಣಿಸಿದವರನ್ನು ಒಮ್ಮತದಿಂದ ಆರಿಸಲಾಯಿತು. ಡಾ| ಪಡುಬಿದ್ರಿ ಜಗನ್ನಾಥ ಶೆಟ್ಟಿ (ಅಧ್ಯಕ್ಷ) ಶ್ರೀ ಅತ್ತೂರು ಬೋಜ ಶೆಟ್ಟಿ (ಉಪಾಧ್ಯಕ್ಷ) ಶ್ರೀ ಕಟಪಾಡಿ ಮುದ್ದಣ್ಣ ಶೆಟ್ಟಿ (ಗೌರವ ಕಾರ್ಯದರ್ಶಿ) ಶ್ರೀ ಕೊಜಕುಳಿ ಗೋಪಾಲ ಶೆಟ್ಟಿ (ಗೌರವ ಜೊತೆ ಕಾರ್ಯದರ್ಶಿ) ಶ್ರೀ ಎರ್ಮಾಳು ರಾಮ ಶೆಟ್ಟಿ (ಗೌರವ ಕೋಶಾಧಿಕಾರಿ) ಶ್ರೀ ಕುತ್ಯಾಡಿ ರಾಮಕೃಷ್ಣ ಶೆಟ್ಟಿ (ಗೌರವ ಉಪಕೋಶಾಧಿಕಾರಿ) ಮತ್ತು ೩೨ ಮಂದಿ ಆಡಳಿತ ಮಂಡಳಿಯ ಸದಸ್ಯರು. ಅಧ್ಯಕ್ಷರೂ, ಸಭಿಕರೂ, ಸಂಘದ ಏಳಿಗೆಯನ್ನು ಬಯಸಿದ ನಂತರ ಲಘು ಉಪಹಾರದಿಂದ ಸಭೆಯು ಮುಕ್ತಾಯವಾಯಿತು.

(ಉತ್ತಮ ಸಾರಸ್ವತ ಬ್ರಾಹ್ಮಣರ ಅಡಿಗೆ, ಶುಚಿ ರುಚಿಯಾದ ರೈಸ್‌ಪ್ಲೇಟ್)
ರುಚಿಕರವಾದ ಊಟ— ಹವೇಶೀರ್ (Airy) ವಸತಿ,
ಎರಡು ಊಟ ಕೋಟ್ (Cot) ಇತ್ಯಾದಿ ಸೌಕರ್ಯ.
ತಿಂಗಳೊಂದರ ರೂ. 52/- ಮಾತ್ರ.
ವಿಶೇಷ ಮಾಹಿತಿಗೆ ಪ್ರತ್ಯಕ್ಷ ವಿಚಾರಿಸಿರಿ.
ಸದ್ಗುರು ಬೋರ್ಡಿಂಗ್ ಎಂಡ್ ಲೋಜಿಂಗ್
ಹಿಂದ್‌ಮಾತಾ ಸಿನೇಮದ ಸಮೀಪ, ದಾದರ್, ಮುಂಬಯಿ ೧೪.
ವ್ಯವಸ್ಥಾಪಕ: ವಿ. ಯಸ್. ಪ್ರಭು.

NAVAYUGA
Popular Kannada Weekly.
Founder:—
Sri A. B. SHETTY,
Minister for Public Health,
Govt. of Madras.
ನವಯುಗ
ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ.
ಸ್ಥಾಪಕರು:- ಶ್ರೀ. ಎ. ಬಿ. ಶೆಟ್ಟಿ,
ಮದ್ರಾಸಿನ ಆರೋಗ್ಯಮಂತ್ರಿ.
ವಾ. ಚಂದಾ: ರೂ. 5-12-0
ಬಿಡಿಪ್ರತಿ: 0- 2-0

ಚಲಚ್ಚಿತ್ರ ಅಭಿವೃದ್ಧಿ ಮಂಡಳದ ಸ್ಥಾಪನೆ

ಗ್ರಾಮ ಪಂಚಾಯತುಗಳ ಆಡಳಿತ ಪದ್ಧತಿಯನ್ನು ಪರಿಶೀಲಿಸುವ ಸಂಕಲ್ಪ

ಚಲಚ್ಚಿತ್ರ ವಿಚಾರಣಾ ಸಮಿತಿಯ ವರದಿಯ ಬಗ್ಗೆ ಕೈಗೊಂಡ ಕ್ರಮಗಳನ್ನೂ ನಿರ್ಣಯಗಳನ್ನೂ ಒಳಗೊಂಡ ಒಂದು ಹೇಳಿಕೆಯು ದಿನಾಂಕ ೧೯ರಂದು ಪಾರ್ಲಿಮೆಂಟಿನ ಉಭಯ ಸಭೆಗಳ ಮುಂದೆ ಮಂಡಿಸಲಾಯಿತು. ವಿಚಾರಣಾ ಸಮಿತಿಯ ಕೆಲವು ಸೂಚನೆಗಳನ್ನು ಈಗಾಗಲೇ ಜಾರಿಗೆ ತರಲಾಗಿದೆಯೆಂದೂ ಇನ್ನು ಕೆಲವನ್ನು ತಿದ್ದುಪಡಿಗಳೊಂದಿಗೆ ಅಂಗೀಕರಿಸಲಾಗಿದೆಯೆಂದೂ ಈ ಹೇಳಿಕೆ ತಿಳಿಸುತ್ತದೆ.

ಅಭಿವೃದ್ಧಿ ಮಂಡಳ

ಚಲಚ್ಚಿತ್ರವನ್ನೂ ರಾಷ್ಟ್ರೀಯ ಸಂಸ್ಕೃತಿ, ಶಿಕ್ಷಣ ಹಾಗು ಉಲ್ಲಾಸಕರವಾದ ಮನೋರಂಜನೆಯ ಸಾಧನವಾಗಿ ಮಾಡಲು, ರಾಷ್ಟ್ರೀಯ ಚಲಚ್ಚಿತ್ರ ಮಂಡಳವೊಂದನ್ನು ರಚಿಸಲಾಗುವುದು. ಭಾರತ ಸರಕಾರವು ಪ್ರತ್ಯೇಕವಾಗಿ ಸ್ಥಾಪಿಸಲಿರುವ ಚಲಚ್ಚಿತ್ರ ಉತ್ಪಾದಕ ಸಂಸ್ಥೆ ಮತ್ತು ಚಲಚ್ಚಿತ್ರ ಸಂಸ್ಥೆ — ಇವೆರಡರ ಮೇಲ್ವಿಚಾರಣಾ ಕಾರ್ಯವನ್ನು ಮಂಡಳವು ನಿರ್ವಹಿಸುವುದು; ಮೂರು ಪ್ರಾದೇಶಿಕ ಚಲಚ್ಚಿತ್ರ ಪರಿಶೀಲಕ ಸಮಿತಿಗಳಿಗೆ ಮಾರ್ಗದರ್ಶನವನ್ನು ಮಾಡುವುದಲ್ಲದೆ, ಮಂಡಳವು ಕೇಂದ್ರ ಚಲಚ್ಚಿತ್ರ ಪರಿಶೀಲಕ ಮಂಡಳವಾಗಿಯೂ ಕೆಲಸ ಮಾಡುವುದು.

ಮಾರ್ಗದರ್ಶನ

ಚಲಚ್ಚಿತ್ರ ಉತ್ಪಾದಕ ಸಂಸ್ಥೆಯು ಕಥೆಗಳ ಬಗ್ಗೆ ಸಲಹೆಗಳನ್ನು ಕೊಡುವುದು; ಚಲಚ್ಚಿತ್ರ ನಿರ್ಮಾಪಕರಿಗೆ ವಿವಿಧ ವಿಷಯಗಳ ಕುರಿತು ಮಾರ್ಗದರ್ಶನ ನೀಡುವುದು, ಪುಸ್ತಕ ಭಂಡಾರವನ್ನು ಏರ್ಪಡಿಸುವ ಮತ್ತು ಸಂಶೋಧನೆ ನಡೆಸುವ ಕಾರ್ಯವನ್ನೂ ಅದು ಕೈಗೊಳ್ಳುವುದು. ಚಲಚ್ಚಿತ್ರ ಸಂಸ್ಥೆಯು ದಿಗ್ದರ್ಶನ ಛಾಯಾಗ್ರಹಣ, ಧ್ವನಿ ಗ್ರಹಣ, ಸಂಪಾದನೆ, ಮತ್ತಿತರ ವಿಷಯಗಳ ಅಂಗಗಳ ಬಗ್ಗೆ ತರಬೇತಿಯನ್ನು ಕೊಡುವುದು. ಸಾಕ್ಷಿ ಚಿತ್ರದ ವಿಭಾಗದಲ್ಲಿ ದಿಗ್ದರ್ಶನ, ಛಾಯಾ ಗ್ರಹಣ. ಮತ್ತು ಧ್ವನಿ ಗ್ರಹಣ ಕಾರ್ಯದಲ್ಲಿ ಇಬ್ಬಿಬ್ಬರು ತರಬೇತಿ ಹೊಂದುತ್ತಿರುವರು.

ಮಕ್ಕಳ ಚಿತ್ರ

ಭಾರತ ಸರಕಾರವು ಶೈಕ್ಷಣಿಕ ಮತ್ತು ಮಕ್ಕಳ ಚಲಚ್ಚಿತ್ರಗಳಿಗೂ ಯೋಗ್ಯ ಸಹಾಯ ಧನ ಕೊಡುವುದನ್ನು ತಾತ್ವಿಕವಾಗಿ ಸ್ವೀಕರಿಸಿದೆ. ಮೊನ್ನೆತಾನೆ ಹೊಸ ದೆಹಲಿಯಲ್ಲಿ ಸಾಂಸ್ಕೃತಿಕ ಚಿತ್ರ ಸಂಘದವರು ಮಕ್ಕಳಿಗಾಗಿ ಪ್ರದರ್ಶಿಸಿದ ಒಂದು ಝೆಕ್ ಚಿತ್ರವನ್ನು ಕಂಡ ನೆಹರೂರವರು ಮಕ್ಕಳ ಚಿತ್ರಗಳಿಗೆ ಹೆಚ್ಚಿನ ಬೆಂಬಲ ಕೊಡಬೇಕೆಂದು ಹೇಳಿದರು. "ನಾನು ವರ್ಷದಲ್ಲಿ ಎರಡು ಚಿತ್ರಗಳನ್ನೂ ನೋಡುವುದಿಲ್ಲ ಆದರೂ ಇಂದು ಪೇಟೆಯಲ್ಲಿರುವ ಚಿತ್ರಗಳು ಮಕ್ಕಳಿಗೆ ಯೋಗ್ಯವಲ್ಲವೆಂದು ನನ್ನ ನಿಶ್ಚಿತ ಅಭಿಪ್ರಾಯ. ಪರದೇಶಗಳಲ್ಲಿ ಮಕ್ಕಳಿಗಾಗಿ ಪ್ರತ್ಯೇಕ ಚಿತ್ರಗಳನ್ನು ಉತ್ಪಾದಿಸುವಂತೆ ಈ ದೇಶದಲ್ಲೂ ಮಾಡಬೇಕು" ಎಂದವರು ಅಪೇಕ್ಷಿಸಿದರು.

ಸರಕಾರದ ಬಹುಮಾನ

ಅಖಿಲಭಾರತ ಹಾಗು ವಿವಿಧ ಭಾಷಾ ತಳಹದಿಗಳಲ್ಲಿ ಉತ್ತಮ ಚಲಚಿತ್ರಗಳಿಗೆ ಬಹುಮಾನಗಳನ್ನು ಕೊಡಲು ಇದೀಗ ಸುದ್ದಿ ಮತ್ತು ಬಾನುಲಿ ಶಾಖೆ ನಿರ್ಧರಿಸಿದೆ. ಭಾರತದಲ್ಲೆಲ್ಲ ಶ್ರೇಷ್ಠವಾದ ಕಥನ ಹಾಗೂ ಸಾಕ್ಷಿ ಚಿತ್ರಗಳಲ್ಲಿ ಪ್ರತಿಯೊಂದಕ್ಕೆ ರಾಷ್ಟ್ರಪತಿಗಳ ಸುವರ್ಣ ಪದಕವೂ ವಿವಿಧ ಭಾಷೆಗಳಲ್ಲಿ ಉತ್ತಮವೆನಿಸಿದ ಪ್ರತಿಯೊಂದೂ ಚಲಚ್ಚಿತ್ರಕ್ಕೆ ರಾಷ್ಟ್ರಪತಿಗಳ ರಜತಪದಕವೂ ಕೊಡಲಾಗುವುದು. ಅಖಿಲ ಭಾರತದಲ್ಲಿ ಚೆನ್ನಾದುದೆಂದು ತೀರ್ಮಾನಿಸಲಾದ ಮಕ್ಕಳ ಚಲಚ್ಚಿತ್ರಕ್ಕೆ ಪ್ರಧಾನ ಮಂತ್ರಿಗಳ ಸುವರ್ಣ ಪದಕವನ್ನು ನೀಡಲಾಗುವುದು. ೧೯೫೩ರಲ್ಲಿ ತಯಾರಿಸಲಾದ ಚಿತ್ರಗಳನ್ನು ಈಗ ವಿಮರ್ಶಿಸಲಾಗುತ್ತದೆ; ಆದರೆ ಈ ಸಲ ಪ್ರಾದೇಶಿಕ ಬಹುಮಾನಗಳು ಕೊಡಲ್ಪಡುವುದಿಲ್ಲ.

ಗ್ರಾಮ ಪಂಚಾಯತ ಪದ್ಧತಿ

ಕಾಂಗ್ರೆಸ ಕಾರ್ಯಸಮಿತಿಯು ಹೊಸ ದೆಹಲಿಯಲ್ಲಿ ಕಳೆದವಾರ ಸಭೆ ಸೇರಿದಾಗ ದೇಶದಲ್ಲೆಲ್ಲ ಗ್ರಾಮ ಪಂಚಾಯತುಗಳ ರಾಜ್ಯಾಡಳಿತ ಪದ್ಧತಿಯನ್ನು ಜಾರಿಗೆ ತರಬೇಕೋ ಏನೆಂಬುದನ್ನು ವಿಚಾರಿಸಲು ಆರು ಜನರ ಉಪ ಸಮಿತಿಯನ್ನು ನೇಮಿಸಿತು. ಮುಂದಿನ ಸಭೆಯು ಅಜಮೀರದಲ್ಲಿ ಜುಲೈ ೨೫-೨೭ನೇ ತಾರೀಕಿಗೆ ಕೂಡಬೇಕೆಂದೂ ಅದಕ್ಕೆ ಮುಂಚೆ ಉಪಸಮಿತಿ ವರದಿಯೊಪ್ಪಿಸಬೇಕೆಂದೂ ನಿರ್ಣಯವಾಯಿತು. ಕಾಂಗ್ರೆಸ ಸಮಿತಿಯು ರಾಜ್ಯಾಂಗ ಘಟನೆಯ ಕೆಲವು ಕಲಮುಗಳಿಗೆ ತಿದ್ದುಪಡಿ ಮಾಡುವ ವಿಚಾರವನ್ನೂ ಪರಿಶೀಲಿಸಿತು; ಉಪಚುನಾವಣೆಗಳ ಪರಿಣಾಮವನ್ನೂ ವಿಮರ್ಶಿಸಿತು.

ಪ್ರಾದೇಶಿಕ ಸೈನ್ಯ

ಲೋಕಸಭೆಯು ಕಳೆದ ಶುಕ್ರವಾರ ದಿನ ಅನಿಯಮಿತ ಅವಧಿಯ ವರೆಗೆ ಮುಂದುವರಿಯುವುದಕ್ಕೆ ಪೂರ್ವದಲ್ಲಿ, ಸಂರಕ್ಷಣಾ ಮಂತ್ರಿ ಮಹಾವೀರತ್ಯಾಗಿಯವರು ಪ್ರಾದೇಶಿಕ ಸೈನ್ಯ ವಿಸ್ತರಣೆಗೆ ನೆರವಾಗುವ ಎರಡು ವಿಧೇಯಕಗಳನ್ನು ಮಂಡಿಸಿದರು. ಭಾರತದಲ್ಲಿರುವ ೧೮-೪೦ ವರ್ಷ ಪ್ರಾಯದ ಎಲ್ಲ ಪುರುಷರು ಐದು ವರ್ಷಗಳ ವರೆಗೆ ತರಬೇತಿ ಹೊಂದಲು ಅನುಕೂಲವಾಗುವಂತೆ, ಹಳ್ಳಿ ಮತ್ತು ಪಟ್ಟಣಗಳಲ್ಲಿ ಉಚಿತವೆನಿಸಿದೆಡೆ ಕೇಂದ್ರಗಳನ್ನು ತೆರೆಯಲು ಒಂದು ವಿಧೇಯಕ ಉದ್ದೇಶಿಸಿದೆ. ಇನ್ನೊಂದು ವಿಧೇಯಕವು ಅಗತ್ಯ ಬಿದ್ದಾಗಲೆಲ್ಲ ಸರಕಾರೀ ಹಾಗು ಸಾರ್ವಜನಿಕ ಉಪಯೋಗಿ ಸಂಸ್ಥೆಗಳಲ್ಲಿ ಕೆಲಸ ಮಾಡುವ ೨೦-೪೦ ವರ್ಷ ಪ್ರಾಯದ ಎಲ್ಲ ಪುರುಷರು ಪ್ರಾದೇಶೀ ಸೈನ್ಯ ಪಡೆಯಲ್ಲಿ ಸೇರಿ ತರಬೇತಿ ಹೊಂದಬೇಕೆಂದು ಹೇಳುತ್ತದೆ.

ಮಾನನೀಯ ಸಂಬಂಧ

ರಾಜ್ಯ ಪರಿಷತ್ತಿನಲ್ಲಿ ಈಗಾಗಲೇ ಸ್ವೀಕಾರಗೊಂಡ ವಿಶೇಷ ವಿವಾಹ ವಿಧೇಯಕದ ಚರ್ಚೆಯು ಲೋಕಸಭೆಯಲ್ಲಿ ನಡೆಯಿತು. ಒಂದು ವರ್ಷ ಕಾಲ ಪತಿ ಪತ್ನಿಯರು ಒಬ್ಬರಿಂದೊಬ್ಬರು ಅಲಿಪ್ತರಿದ್ದರೆ ಅಥವಾ ಪರಸ್ಪರ ಸಮ್ಮತಿ ದೊರಕಿಸಿಕೊಂಡರೆ ವಿವಾಹ ವಿಚ್ಛೇದನಕ್ಕೆ ಅವಕಾಶ ಕೊಡಬಹುದೆಂಬ ಕಲಮಿನ ಕುರಿತು ಅನೇಕ ಸದಸ್ಯರು ವಿರೋಧವನ್ನು ವ್ಯಕ್ತಪಡಿಸಿದರು. ದಾಂಪತ್ಯ ವಿಚ್ಛೇದನಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಡುವುದು ಅಪೇಕ್ಷಣೀಯವಲ್ಲವೆಂದು ಅವರು ವಾದಿಸಿದರು. ಪ್ರಧಾನ ಮಂತ್ರಿ ನೆಹರೂರವರು ಚರ್ಚೆಯಲ್ಲಿ ಭಾಗವಹಿಸುತ್ತ, ಕಾಲಮಾನಕ್ಕೆ ಹೊಂದಿಕೊಂಡು ಸಮಾಜದ ರೂಢಿ ನಿಯಮಗಳು ಬದಲಾಗಬೇಕೆಂದೂ ಪ್ರಪಂಚದ ಪ್ರತಿಯೊಂದು ವಸ್ತುವೂ ಪರಿವರ್ತನೆಹೊಂದುತ್ತಿರುವಾಗ ಮಾನವೀಯ ಸಂಬಂಧಗಳು ಶಿಲಾಶಾಶ್ವತವೆಂದು ಹೇಳಲಾಗದೆಂದೂ ನುಡಿದರು. ನಾವು ಜೀವನದ ಆರ್ಥಿಕ, ರಾಜಕೀಯ ಅಂಶಗಳೊಂದಿಗೆ ಸಾಮಾಜಿಕ ಮುಖವನ್ನೂ ಪರಿಶೀಲಿಸ ಬೇಕಾಗುವುದೆಂದು ಅವರು ಉಪದೇಶಿಸಿದರು. ಆಗೋಸ್ತು ಮೂರನೇ ವಾರದಲ್ಲಿ ಪ್ರಾರಂಭವಾಗಬಹುದಾದ ಮುಂದಿನ ಅಧಿವೇಶನದ ಈ ಮಸೂದೆಯ ಮೇಲೆ ಚರ್ಚೆ ಮುಂದುವರಿಯುವುದು.

ಸೇನೆಯ ಸಾಗಾಟ

ಮದ್ದು ಗುಂಡು, ಶಸ್ತ್ರಾಸ್ತ್ರ ಅಥವಾ ಸಶಸ್ತ್ರ ಸೈನಿಕರನ್ನು ವಿಮಾನ ಮೂಲಕ ಸಾಗಿಸಲು ಭಾರತವು ರಹದಾರಿ ಕೊಡಲಾರದೆಂದು ಲೋಕ ಸಭೆಯಲ್ಲಿ ಶ್ರೀ ಸಾಧನ ಗುಪ್ತರು ಕೇಳಿದ ಪ್ರಶ್ನೆಯೊಂದನ್ನು ಉತ್ತರಿಸುತ್ತ ನೆಹರೂ ತಿಳಿಸಿದರು. ಆದರೆ ಮೇ ೧೨ನೇ ತಾರೀಕಿನಂದು ಫ್ರೆಂಚ್ ವಿಮಾನ ದಳವೆಯ ಸ್ಕೈ ಮಾಸ್ಟರ್ ವಿಮಾನಗಳು ಸೈಗಾನಿನಿಂದ ಕಲ್ಕತ್ತೆಯ ಡಂಡಂ ವಿಮಾನ ನಿಲ್ದಾಣದಲ್ಲಿ ಬಂದಿಳಿದವೆಂದೂ ಅವುಗಳಲ್ಲಿ ಗಾಯಾಳು ಸೈನಿಕರು ಮತ್ತು ಸ್ತ್ರೀಯರೂ ಮಕ್ಕಳೂ ಇದ್ದರೆಂದೂ ಎಂತಲೇ ಭಾರತ ಸರಕಾರ ಅನುಮತಿ ನೀಡಿತೆಂದೂ ತಿಳಿಸಿದರು. ಆದರೆ ಈಗ ಪುನಃ ಕಮ್ಯೂನಿಸ್ಟ ಸದಸ್ಯರು ಕಲ್ಕತ್ತೆಯಿಂದ ನೆಹರೂರಿಗೊಂದು ತಂತಿ ಕಳಿಸಿ, ಡಂಡಂ ವಿಮಾನ ನಿಲ್ದಾಣದಲ್ಲಿ ಶನಿವಾರ ಹಾಗು ಆದಿತ್ಯವಾರ ದಿನಗಳಲ್ಲಿ ಫ್ರೆಂಚ, ಅಮೇರಿಕನ ಹಾಗು ಬ್ರಿಟಿಷ ವಿಮಾನಗಳು ಸೈನ್ಯ ಹಾಗು ಯುದ್ಧ ಸಾಮಗ್ರಿಯ ಸಾಗಾಟ ಕಾರ್ಯದ ನಡುವೆ ಇಳಿದಿದ್ದವೆಂದೂ ಸದ್ಯ ವಿಚಾರಣೆ ನಡೆಸಬೇಕೆಂದೂ ಕೇಳಿರುವರು.

ರಾಜಾಜಿಯ ಯೋಜನೆ

ಮದ್ರಾಸಿನ ಶಾಸನ ಸಭೆಯು ಕಳೆದ ಬುಧವಾರ ದಿನ ವಿದ್ಯಾಮಂತ್ರಿಗಳ ಹೇಳಿಕೆಯ ಮೇಲೆ ಚರ್ಚೆ ನಡೆಸಿ, ರಾಜಾಜಿ ಯೋಜನೆಯನ್ನು ಹಿಂದೆಗೆದುಕೊಂಡುದಕ್ಕೆ ಒಪ್ಪಿಗೆಯನ್ನು ಸೂಚಿಸಿ, ಅನಿಶ್ಚಿತ ಅವಧಿಯವರೆಗೆ ಮುಂದರಿಯಿತು ಚರ್ಚೆಯಲ್ಲಿ ಕಾಂಗ್ರೆಸ ಸದಸ್ಯರು ಯಾರೂ ಮಾತನಾಡ ಬಯಸಲಿಲ್ಲ-ಮಾತನಾಡಿದ ಸದಸ್ಯರು ಪ್ರಜಾಪ್ರಭುತ್ವ ಪದ್ಧತಿಗೆ ಮನ್ನಣೆ ನೀಡಿದುದಕ್ಕೆ ಸರಕಾರವನ್ನು ಅಭಿನಂದಿಸಿದರೂ ವಿದ್ಯಾಮಂತ್ರಿಗಳು ಇದಕ್ಕೆ ತಾನು ಅರ್ಹನೇ ಎಂದು ಪ್ರಶ್ನಿಸಿಕೊಂಡರು. ಮುಸ್ಲಿಂ ಲೀಗಿನ ಸಿಂಧ ಸಾಹೇಬರು ರಾಜಾಜಿಯ ಯೋಜನೆಯ ಯೋಗ್ಯತೆಯನ್ನು ಅಳೆಯುವುದಕ್ಕೆ ಸಾಕಷ್ಟು ಹೆಚ್ಚು ಕಾಲಾವಕಾಶವನ್ನು ನೀಡದೆ ಅವಸರದಿಂದ ಅದನ್ನು ಬಿಟ್ಟುಗೊಟ್ಟುದಕ್ಕೆ ವ್ಯಥೆ ಸೂಚಿಸಿದರು. ಹಿಂದೆ ಮದ್ರಾಸಿನಲ್ಲಿ ಕಾಂಗ್ರೆಸ ಸರಕಾರವು ಜ್ಯಾರಿಗೆ ತಂದಿದ್ದ ಪಾನ ಪ್ರತಿಬಂಧ ಯೋಜನೆಯನ್ನು ಬಿಟ್ಟುಗೊಡುವಾಗ ಕೂಡ ಬ್ರಿಟಿಷರು ಇಷ್ಟು ತಿರಸ್ಕಾರಯುಕ್ತವಾದ ಕ್ರಮವನ್ನು ಅನುಸರಿಸಲಿಲ್ಲವೆಂದು ಹೇಳಲಾಗುತ್ತದೆ. ಕಾಂಗ್ರೆಸು ಮಂತ್ರಿಮಂಡಳವು ತಂದಿದ್ದ ಯೋಜನೆಯೊಂದರ ಉತ್ತರ ಪೂಜೆಯನ್ನು ಇಷ್ಟು ಹೇಯವಾದ ರೀತಿಯಲ್ಲಿ ಕಾಂಗ್ರೆಸು ಮಂತ್ರಿಮಂಡಳವೇ ಮಾಡಿತೆನ್ನುವುದು ಗರ್ಹಣೀಯ ಮತ್ತು ದುಷ್ಟ ಸಂಪ್ರದಾಯ.

ಪುಕ್ಕಟೆ ಶಿಕ್ಷಣ

ತಿರುವಾಂಕೂರು ಕೊಚ್ಚಿ ರಾಜ್ಯದಲ್ಲಿ ಪ್ರಾಥಮಿಕ ಶಿಕ್ಷಣವು ಈಗಾಗಲೇ ನಿಃಶುಲ್ಕವಾಗಿ ಕೊಡಲಾಗುತ್ತದೆ. ಮಾರ್ಚ ತಿಂಗಳಲ್ಲಿ ಶಾಸನ ಸಭೆಯನ್ನು ಉದ್ಘಾಟಿಸುತ್ತಾ ರಾಜಪ್ರಮುಖರು ಹೇಳಿದ ಪ್ರಕಾರ, ಮತ್ತು ಘಟನೆಯ ಆದೇಶದ ಪರಿಪಾಲನೋದ್ದೇಶದಿಂದ ಇದೀಗ ಮಾಧ್ಯಮಿಕ ಶಾಲೆಗಳಲ್ಲಿ ಮೊದಲನೇ ಮತ್ತು ಎರಡನೇ ಫಾರ್ಮುಗಳಿಗೆ ಶುಲ್ಕವನ್ನು ಕೇಳಲಾಗದೆಂದು ಸರಕಾರವು ತೀರ್ಮಾನಿಸಿರುವುದು. ಅತ್ಯರಿಣಾಮವಾಗಿ ಸರಕಾರಕ್ಕೆ ಸುಮಾರು ೨೭ ಲಕ್ಷ ರೂಪಾಯಿ ನಷ್ಟವನ್ನು ಸಹಿಸಬೇಕಾಗುವುದು.

ಓಡಿಯುವ ಚಿತ್ರ:

ಹರಿದರ್ಶನ್ [ಪೌರಾಣಿಕ]

ಪಾತ್ರವರ್ಗದವರು: ರಾಜ್‌ಕುಮಾರ್, ಲೀಲಾ ಚಿಟ್ನಿಸ್, ಸಪ್ರು—

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ಮುಂದಿನ ಚಿತ್ರಗಳು: ಸ್ವಪ್ನ ಸುಂದರಿ—ಸೌಭಾಗ್ಯಲಕ್ಷ್ಮಿ—

ನಸ್ಟಿಮುನ್ನೆ—ಓನ್ ದಿ ಸರ್ಕಸ್ ಏರಿನಾ.

ನ ವ ಯು ಗ
ಹುಬ್ಬಳ್ಳಿ, ಗುರುವಾರ ೨೭-೫-'೫೪

ಸಮಾಜ ವಿಕಾಸ ಕಾರ್ಯ

ಜನಪದ ಅಭಿವೃದ್ಧಿ ಯೋಜನೆಗಳ ಪ್ರಯೋಜನವನ್ನು ಅಳೆಯಲು ಯೋಜನಾ ಆಯೋಗ ನೇಮಿಸಿದ ಸಮಿತಿಯ ವರದಿಯು ದಿನಾಂಕ ೧೯ರಂದು ಪಾರ್ಲಿಮೆಂಟಿನ ಮುಂದೆ ಮಂಡಿಸಲಾಯಿತು. ಇದು ಸಮಾಜ ವಿಕಾಸ ಕಾರ್ಯಗಳ ಕುರಿತು ಅನೇಕ ಸ್ವಾರಸ್ಯಪೂರ್ಣ ವಿಷಯಗಳನ್ನು ಒಳಗೊಂಡಿದೆ. ವರದಿಯನ್ನು ೧೮ ಚುನಾಯಿತ ಕ್ಷೇತ್ರದ ಕೆಲಸವನ್ನು ಆಧರಿಸಿ ತಯಾರಿಸಲಾಗಿದ್ದರೂ ಇಷ್ಟು ವ್ಯಕ್ತಗೊಂಡ ಪರಿಣಾಮವೇ ಒಟ್ಟಾರೆ ಕಾಣಸಿಗುತ್ತದೆಂದರೆ ತಪ್ಪಾಗಲಾರದು. ಏಕೆಂದರೆ ಸಮಾಜ ವಿಕಾಸ ಚಟುವಟಿಕೆಗಳಲ್ಲಿ ತನ್ಮಯರಾಗಿದ್ದ ಅಧಿಕಾರೀ ವರ್ಗದ ಅಭಿಪ್ರಾಯಗಳನ್ನೂ ವರದಿ ತಯಾರಿಸುವ ಮುಂಚೆ ಕ್ರೋಢೀಕರಿಸುವ ಪ್ರಯತ್ನ ನಡೆದಿರುತ್ತದೆ. ಪ್ರಯೋಜನ ನಿರ್ಣಾಯಕ ಸಮಿತಿಯ ವರದಿಯು ಸಮಾಜವಿಕಾಸ ಕಾರ್ಯದ ಎಂಟು ಮುಖ್ಯಾಂಶಗಳನ್ನು ವಿಮರ್ಶಿಸುತ್ತಾ ಅತ್ಯಮೂಲ್ಯವಾದ ಸಲಹೆಗಳನ್ನು ಮಾಡಿರುತ್ತದೆ—ಈ ಯೋಜನೆಗಳು ಮೂರು ವರ್ಷಗಳ ಅವಧಿಯಲ್ಲಿ ಪೂರ್ತಿಗೊಳ್ಳಬೇಕೆಂದು ಈಗ ಹೇಳಲಾಗುತ್ತದೆ; ಇದು ಸಮಸ್ಯೆಯ ಅಗತ್ಯದ ಮುಖವನ್ನು ಬಿಂಬಿಸುತ್ತದೆಂದು ಸಮಿತಿ ಒಪ್ಪಿಕೊಳ್ಳುತ್ತದೆ; ಮತ್ತು ಗುರಿಯನ್ನು ಮುಟ್ಟುವುದರಲ್ಲಿ ಸಾಕಷ್ಟು ಯಶಸ್ಸು ದೊರೆಯಬಲ್ಲುದೆಂದೂ ಅದು ಆಶಿಸುತ್ತದೆ. ಆದರೆ ಈ ಅತ್ಯವಸರದ ಕಾಲವು ಮುಗಿದ ಬಳಿಕ, ವಿಕಾಸ ಕಾರ್ಯಕ್ಕೆ ಬಲವೇ ದೊರೆಯದೆ ಹೋಗಬಹುದು; ಏಕೆಂದರೆ ಮೂರು ವರ್ಷಗಳ ಅವಧಿಯು ಒಂದು ಚಳವಳವು ಬೇರಿಳಿದು ನೆಲೆಗೊಳ್ಳುವುದಕ್ಕೆ ಕಡಿಮೆಯಾಯಿತು. ಪ್ರಯೋಜನ ನಿರ್ಣಾಯಕ ಸಮಿತಿಯು ಹೀಗೆ ಅಭಿಪ್ರಾಯವನ್ನು ಹೊಂದಿ, ಕನಿಷ್ಟ ೫-೬ ವರ್ಷಗಳಾದರೂ ಚುನಾಯಿತ ಪ್ರದೇಶದಲ್ಲಿ ಸಮಾಜ ವಿಕಾಸ ಕಾರ್ಯವು ನಡೆಯಬೇಕೆಂದು ಸೂಚಿಸುತ್ತದೆ. ಈ ಸಲಹೆಯನ್ನು ಸರಕಾರವು ಗಂಭೀರವಾಗಿ ಪರ್ಯಾಲೋಚಿಸುವುದು ಅಗತ್ಯ—ಏಕೆಂದರೆ, ನಮ್ಮ ವಾತಾವರಣವನ್ನು ಅತ್ಯಾಧುನಿಕವಾದ ವಿಚಾರ ಸರಣಿಗೆ ಹದಗೊಳಿಸುವುದಕ್ಕೆಯೇ ಒಂದೆರಡು ವರ್ಷಗಳ ಸಮಯವು ಸಾಕಾಗದೆ ಹೋಗುತ್ತದೆಂಬ ತಥ್ಯವನ್ನು ಯಾವ ವ್ಯವಹಾರಿಕನೂ ಮರೆಯುವಂತಿಲ್ಲ— ಅಂದ ಬಳಿಕ, ಸಮಾಜದ ಸರ್ವಾಂಗಿಕ ಪುನಾರಚನೆಯ ಧ್ಯೇಯ ಕೈಗೂಡುವುದಕ್ಕೆ ಮತ್ತೆ ಮೂರು ನಾಲ್ಕು ವರ್ಷಗಳ ಕಾಲಾವಧಿಯನ್ನಾದರೂ ಕೊಡಬೇಕಾದದ್ದು ಅಪೇಕ್ಷಣೀಯ. ಸರಕಾರವೇ ಪ್ರವರ್ತಿಸುವ ಯೋಜನೆಗಳಿಗೂ ಸಮಾಜ ವಿಕಾಸ ಚಟುವಟಿಕೆಗಳಿಗೂ ತುಸು ಅಂತರವಿದೆ—ಸಾಮಾಜಿಕ ಪುನಾರಚನೆಯಲ್ಲಿ ಸರಕಾರೀ ಅಧಿಕಾರಿಗಳ ಪಾತ್ರಕ್ಕಿಂತಲೂ ಜನತೆ ನಿರ್ವಹಿಸುವ ಹೊಣೆಗಾರಿಕೆಗೆ ಮಹತ್ವ ಹೆಚ್ಚು. ಸಮಿತಿಯು ಇದನ್ನು ಮನಗಂಡಿದೆ, ಮತ್ತು ಉದ್ದೇಶದ ಸ್ಪಷ್ಟವಾದ ಕಲ್ಪನೆಯುಂಟಾಗಿ, ನಿಃಸ್ವಾರ್ಥ ನಾಯಕತ್ವವು ದೊರೆತಲ್ಲೆಲ್ಲ ಸ್ವಯಂ ಪ್ರೇರಿತ ತ್ಯಾಗಕ್ಕೆ ಹಳ್ಳಿಗರು ಸಿದ್ಧರಾಗಿರುವರೆಂದು ಮೆಚ್ಚಿಕೆಯನ್ನು ವ್ಯಕ್ತಪಡಿಸಿದೆ. ಈ ಉತ್ಸಾಹದ ಪರಿಣಾಮವಾಗಿ ಹಳ್ಳಿಯ ಸ್ವರೂಪವೇ ಬದಲ್ಗೊಂಡಿದೆಯೆಂದೂ ಹೊಸ ರಸ್ತೆಗಳು, ಆಸ್ಪತ್ರೆಗಳು, ಶಾಲೆಗಳು, ನೀರಾವರಿಯ ಕಾಲುವೆಗಳು ನಿರ್ಮಾಣಗೊಂಡಿವೆಯೆಂದೂ ಸಮಿತಿ ಹೇಳುತ್ತದೆ. ಸಮಾಜ ವಿಕಾಸ ಕಾರ್ಯ ಇಂತಹ ಅದ್ಭುತವನ್ನು ನಿಜವಾಗಿಯೂ ಸಾಧಿಸಿರುವುದೇ ಎಂದು ನಮಗೆ ಆಶ್ಚರ್ಯವೇ ಉಂಟಾದೀತು! ಹಾಗೆಂದು ಯೋಜನೆ ಕಾರ್ಯಗತಗೊಳ್ಳುತ್ತಿರುವ ಪ್ರದೇಶದ ಹಿಂದಿನ ಮತ್ತು ಇಂದಿನ ಪರಿಸ್ಥಿತಿಯಲ್ಲಿ ವ್ಯತ್ಯಾಸವು ಸ್ಪಷ್ಟವಾಗಿ ಗೋಚರಿಸುತ್ತದೆ. ಸಮಿತಿಯ ಅಭಿಪ್ರಾಯದಂತೆ ಸಮಾಜ ವಿಕಾಸ ಕಾರ್ಯದಿಂದಾಗಿ ಹಳ್ಳಿಯ ಜನತೆಯು ಪ್ರಗತಿಶೀಲ ಮನೋಭಾವವನ್ನು ರೂಢಿಸಿಕೊಳ್ಳುವಂತಾಗಿದೆ; ಸಹಕಾರಿ ತತ್ವದ ಮೇಲೆ ಕೆಲಸ ಮಾಡುವ ಉತ್ಸಾಹ ತಲೆದೋರಿದೆ, ಉತ್ಪಾದನೆ ಹೆಚ್ಚಿಕೊಂಡಿದೆ, ಮತ್ತು ಉದ್ಯೋಗದ ಅವಕಾಶಗಳೂ ಅಧಿಕಗೊಂಡಿವೆ. ಪ್ರಗತಿಶೀಲ ಮನೋಭಾವವು ಎಷ್ಟು ತ್ವರಿತವಾಗಿ ವಿಸ್ತರಿಸುವುದೆಂದರೆ, ಸರಕಾರದ ಯೋಜನೆಗಳನ್ನು ಸಾಧನ ಸಂಪತ್ತನ್ನೂ ಜನರು ಹಿಂದೆ ಹಾಕುವುದು ನಿಶ್ಚಯ—ಎಂದು ಉತ್ಪ್ರೇಕ್ಷಿಸುವುದಕ್ಕೂ ಸಮಿತಿ ಹಿಂದುಳಿದಿಲ್ಲ! ಅಂತೂ ಜನತೆಯ ಸಹಕಾರದ ಮೇಲೆ ಸಮಿತಿಗೆ ಸಂಪೂರ್ಣ ಭರವಸೆ ಇದ್ದದ್ದು ಕಂಡುಬರುತ್ತದೆ. ಆದರಂತೆ, ಸಾಮಾಜಿಕ ಪುನಾರಚನೆಯ ಚಟುವಟಿಕೆಗಳ ಉತ್ತಮ ಪರಿಣಾಮದ ವಿಷಯದಲ್ಲೂ ಅದಕ್ಕೆ ಅಚಲ ವಿಶ್ವಾಸವುಂಟು — ಕೃಷಿ ಕ್ಷೇತ್ರದಲ್ಲಿ ನಿಶ್ಚಯವಾಗಿಯೂ ಉತ್ಪಾದನೆ ಅಧಿಕಗೊಂಡಿದೆಯೆಂದೂ ಇದರಿಂದ ಉದ್ಯೋಗ ಹೆಚ್ಚಿಕೊಂಡಿದೆಯೆಂದೂ ಸಮಿತಿ ನಂಬುತ್ತದೆ. ಆಡಳಿತ ಮತ್ತು ಮಾರ್ಗದರ್ಶನ ವಿಭಾಗವನ್ನು ಕುರಿತು ಮಾತ್ರ ಸಮಿತಿಗೆ ದೂರಬೇಕೆಂದು ಕಂಡಿದೆ—ಜಿಲ್ಲಾ ಕ್ಷೇತ್ರದಲ್ಲಿ ಕಲೆಕ್ಟರರೇ ಯೋಜನೆಯನ್ನು ಜಾಚೂ ತಪ್ಪದಂತೆ, ವಿಳಂಬ ಸಂಭವಿಸದಂತೆ ಕಾರ್ಯಗತಗೊಳಿಸುವ ಹೊಣೆ ಹೊರಬೇಕೆಂದು ಅದು ಒತ್ತಾಯಿಸುತ್ತದೆ. ಸಾಕಷ್ಟು ತರಬೇತಿಹೊಂದಿದ ಮಾರ್ಗದರ್ಶಕರು ಸಿಗುತ್ತಿರದೆ ಕೆಲಸ ಕುಂಠಿತವಾಗುತ್ತದಲ್ಲ ಎಂದು ಸಮಿತಿ ವಿಷಾದಿಸುತ್ತದೆ. ಅರ್ಧಪೂರ್ಣ ತರಬೇತಿ ಹೊಂದಿದ ಮಾರ್ಗದರ್ಶಕರು ಯಾವ ಪ್ರಯೋಜನಕ್ಕೂ ಬರುವಂತಿಲ್ಲ – ಕೇವಲ ಕೆಲಸ ಮುಂದುವರಿದರೆ ಸಾಲದು ಪ್ರತಿಯೊಂದು ಕೆಲಸವೂ ಗಡಿಮುಟ್ಟಬೇಕು ಎಂದು ಸಮಿತಿಯ ಅಭಿಪ್ರಾಯ. ಗ್ರಾಮ ಸೇವಕರನ್ನು ತರಬೇತಿಗೊಳಿಸುವಾಗ ಕೃಷಿಯಲ್ಲಿ ಆಸಕ್ತಿ ಉಳ್ಳವರಿಗೆ, ಹಳ್ಳಿಯ ಸಮಸ್ಯೆಗಳ ಪರಿಜ್ಞಾನವಿರುವವರಿಗೆ, ಪ್ರಾಶಸ್ತ್ಯ ಕೊಡಬೇಕೆಂದು ಅದರ ಸಲಹೆ. ಸಮಿತಿಗೆ ಬೇಸರಬರಿಸಿದ ಇನ್ನೊಂದು ಸಂಗತಿಯೆಂದರೆ ಸಲಹಾ ಸಮಿತಿಗಳ ಕಾರ್ಯ: ಇವುಗಳು ಮಾಡಿದ ಕೆಲಸವೇ ಶೂನ್ಯ ಎಂದು ಸಮಿತಿ ಸಂಕೋಚವಿಲ್ಲದೆ ಹೇಳುತ್ತದೆ. ಸ್ಥಳೀಯರ ಉತ್ಸಾಹವನ್ನು ವ್ಯವಸ್ಥಿತ ರೀತಿಯಲ್ಲಿ ಸಂಘಟಿಸಿ, ಉಪಯೋಗಿಸಿಕೊಳ್ಳಲು, ಮತ್ತು ಹಳ್ಳಿಯ ಆವಶ್ಯಕತೆಗಳ ಸ್ಪಷ್ಟ ಕಲ್ಪನೆಯನ್ನು ಮಾಡಿಕೊಳ್ಳಲು ಇಂತಹ ಸಲಹಾ ಸಮಿತಿಗಳ ರಚನೆ ಸಹಾಯಕವೆಂದು ಒಪ್ಪಬೇಕು ನಿಜ. ಆದರೆ ಶಾಸನಸಭಾ ಸದಸ್ಯರೂ, ಅಧಿಕಾರೀ ವರ್ಗದವರೂ ಊರಿನ ಗಣ್ಯ ವ್ಯಕ್ತಿಗಳೂ ಸೇರಿರುವ ಈ ಸಮಿತಿಯ ಮೊದಲನೇ ಸಭೆಯೇ ಕೊನೆಯದೂ ಆಗುವುದೆಂದರೆ ತೀರಾ ನಾಚಿಕೆಗೇಡಾದ ವಿಷಯ. ಇದು ಹಿಂದಿನ ಸಂಪ್ರದಾಯದ ದೋಷ ಎಂದು ದೂರಿದರೆ ಸಾಲದು—ಎಲ್ಲ ಸಂಪ್ರದಾಯಗಳನ್ನೂ ಆಧುನಿಕ ವಿಚಾರದ ಪ್ರಣಾಳಿಗೆ ಒಗ್ಗಿಸಿಕೊಂಡಂತೆ ಇವನ್ನೂ ಸುಧಾರಿಸಬೇಕಾಗುವುದು. ಆಡಳಿತ ವರ್ಗ ಹಾಗು ಸಲಹಾ ಸಮಿತಿಗಳ ಸಹಕಾರ ಮತ್ತು ಮಾರ್ಗದರ್ಶನಗಳು ನಿರಾತಂಕವಾಗಿಯೂ ಸುಸೂತ್ರವಾಗಿಯೂ ಲಭ್ಯವಾದಲ್ಲಿ ಸಾರ್ವಜನಿಕರಿಂದ ದೊರಕುವ ಪ್ರೋತ್ಸಾಹವು ಇನ್ನಷ್ಟು ಉತ್ತೇಜನಕಾರಿಯಾಗಬಲ್ಲುದು.

ಪಾಕ-ಅಮೇರಿಕಾ ಒಡಂಬಡಿಕೆಗೆ ಸಹಿ

ಪರಸ್ಪರ ಸಂರಕ್ಷಣಾ ಸಹಾಯಕ ಒಪ್ಪಂದದ ದುಷ್ಪರಿಣಾಮ

ಕಳೆದ ಫೆಬ್ರುವರಿ ತಿಂಗಳಲ್ಲಿ ಅಮೇರಿಕದ ಅಧ್ಯಕ್ಷ ಐಸೆನ ಹೋವರರು ಪಾಕಿಸ್ತಾನಕ್ಕೆ ಕೊಡ ಮಾಡಿದ ಸೈನಿಕ ಸಹಾಯವು ಕಳೆದ ಬುಧವಾರ (ದಿನಾಂಕ ೧೯) ದಿನ ಪಾಕಿಸ್ತಾನದ—ಹಾಗು ಏಶ್ಯದ—ಇತಿಹಾಸದಲ್ಲಿಯೇ ಹೊಸ ಪುಟವೊಂದನ್ನು ತೆರೆಯಿತು, "ಪರಸ್ಪರ ಸಂರಕ್ಷಣಾ ಸಹಾಯಕ ಒಪ್ಪಂದ"ವೆಂದು ಕರೆಯಲ್ಪಡುವ ಈ ವ್ಯವಸ್ಥೆಗೆ ಕರಾಚಿಯಲ್ಲಿ ಪಾಕಿಸ್ತಾನೀ ಸರಕಾರದ ಪರವಾಗಿ ವಿದೇಶಾಂಗ ಸಚಿವ ಜಾಫರುಲ್ಲಾ ಖಾನರೂ ಅಮೇರಿಕ ಸರಕಾರದ ವತಿಯಿಂದ ಜಾನ್ ಎ ಮರ್ಸನ್ನರೂ ಸಹಿ ಹಾಕಿ ಕೈ ಕುಲುಕಿಕೊಂಡರು ಈ ಒಪ್ಪಂದವು ಅಮೇರಿಕಕ್ಕೆ ಪಾಕಿಸ್ತಾನದಲ್ಲಿ ಯಾವುದೇ ಸೈನಿಕ ಠಾಣ್ಯವನ್ನು ಕೊಡುವುದಿಲ್ಲವೆಂಬುದಾಗಿ ಜಾಫರುಲ್ಲಾ ಖಾನರು ತುಂಬಿದ ದರ್ಪದಿಂದಲೇ ಪತ್ರಿಕಾಕರ್ತರಿಗೆ ತಿಳಿಸಿದರು. ಭಾರತದ ಪ್ರಧಾನಿ ನೆಹರೂರವರು ಫೆಬ್ರುವರಿ ತಿಂಗಳವರೆಗೂ ಈ ಮಾತನ್ನು ಹೇಳುತ್ತಿದ್ದರು; ಈಗ ಸುಮ್ಮನೆ ಕುಳಿತಿರುವರು; ಬಹುಶ: ನಮ್ಮ ನಿಲುಮೆ ಪ್ರಾಮಾಣಿಕವಾದುದೆಂದು ಅವರಿಗೆ ಮನವರಿಕೆಯಾಗಿದ್ದೀತುಎಂದು ಜಾಫರುಲ್ಲಾ ಖಾನರು ಹೇಳಿದರು. ಇದೇ ಕಾಲಕ್ಕೆ ಈ ಒಪ್ಪಂದವು ಸೈನಿಕ ಸ್ನೇಹವಲ್ಲವೆಂದೂ ಅವರು ಸ್ಪಷ್ಟಪಡಿಸಿದರು.

ಪಾಕಿಸ್ತಾನಕ್ಕೆ ಪೆಟ್ಟು

ಜಾಫರುಲ್ಲಾ ಖಾನರು ಏನೇ ಹೇಳಲಿ, ಎಷ್ಟೇ ಸಂತೋಷಪಟ್ಟುಕೊಳ್ಳಲಿ—ಪಾಕಿಸ್ತಾನವು ಈ ಸಂರಕ್ಷಣಾ ಒಪ್ಪಂದದ ನೆಪದಲ್ಲಿ ಅಮೇರಿಕದ ಬಲೆಯೊಳಗೆ ಬಿದ್ದಿತೆನ್ನುವುದಂತೂ ಸ್ಪಷ್ಟ. ಒಪ್ಪಂದದ ಶರ್ತಗಳನ್ನು ಅಭ್ಯಸಿಸಿದರೆ ಈ ಮಾತು ಸ್ವಯಂ ವೇದ್ಯವಾಗುತ್ತದೆ. ಪಾಕಿಸ್ತಾನಕ್ಕೆ ಕೊಡಲಾಗುವ ಈ ಸಹಾಯವು ಅಮೇರಿಕದ ಸೈನಿಕ ಭದ್ರತಾ ಶಾಸನವೊಂದನ್ನು ಹೊಂದಿಕೊಂಡಿದೆ — ಮತ್ತು ಇದರಂತೆ ಸಹಾಯವನ್ನು ಸ್ವೀಕರಿಸಿದ ರಾಷ್ಟ್ರಗಳ ಸಾರ್ವಭೌಮಾಧಿಕಾರವೇ ನಷ್ಟವಾಗಿ, ವಿದೇಶಾಂಗ ಧೋರಣೆಯ ಮೇಲೂ ಸೈನಿಕ ವ್ಯವಸ್ಥೆಯ ಮೇಲೂ ಅಮೇರಿಕದ ವರ್ಚಸ್ಸೇ ಉಳಿಯುತ್ತದೆ. ಪಾಕಿಸ್ತಾನವು ತನ್ನ ಸ್ವಂತ ಸೈನಿಕ ಸಾಮರ್ಥ್ಯವನ್ನು ಸ್ವಸಂರಕ್ಷಣಾ ದೃಷ್ಟಿಯಿಂದ ಹೆಚ್ಚಿಸಲು ಈ ಒಪ್ಪಂದ ನೆರವಾಗುತ್ತದೆಂದು ಹೇಳುತಿದ್ದರೂ ನಿಜವಾಗಿ ಒಪ್ಪಂದದ ಉದ್ದೇಶ ಇಷ್ಟಕ್ಕೆ ಸೀಮಿತವಾಗಿಲ್ಲ—ಮಧ್ಯಪೂರ್ವ ಸಂರಕ್ಷಣಾ ಯೋಜನೆ ಹಾಗು ಆಗ್ನೇಯ ಏಶಿಯಾ ಸಂರಕ್ಷಣಾ ಯೋಜನೆಯ ಗೀಳು ಹಿಡಿದಿರುವ ಅಮೇರಿಕದ ರಾಜಕಾರಣಿಗಳು ಪಾಕಿಸ್ತಾನಕ್ಕೆ ಕೊಡುವ ಸಹಾಯವು ಸಾಮೂಹಿಕ ಭದ್ರತೆಯ ಕ್ರಮವೆಂದೇ ಪರಿಗಣಿಸಿರುವರು; ಮತ್ತದನ್ನು ಬಹಿರಂಗವಾಗಿ ಹೇಳಿರುವರು. ಈಗ ನಡೆದ ಒಪ್ಪಂದದ ಶರ್ತದಲ್ಲೂ ಈ ಪ್ರದೇಶಗಳ ರಕ್ಷಣೆಯ ಉಲ್ಲೇಖವನ್ನು ಕಾಣಬಹುದು. ಸೈನಿಕ ಸಹಾಯದ ಸ್ವರೂಪ ಮತ್ತು ಪ್ರಮಾಣದಲ್ಲಿ ಪಾಕಿಸ್ತಾನಕ್ಕೆ ಯಾವದೇ ಮಾತನ್ನು ಆಡಲೂ ಅವಕಾಶವಿಲ್ಲ—ಎಲ್ಲವನ್ನೂ ಅಮೇರಿಕದ ತಜ್ಞರ ವಶಕ್ಕೆ ಬಿಟ್ಟುಕೊಡಲಾಗಿದೆ. ತರಬೇತಿಯ ವಿಷಯದಲ್ಲೂ ಹೀಗೆಯೇ: ಎಂದ ಮೇಲೆ, ಪಾಕಿಸ್ತಾನದ ಸಾರ್ವಭೌಮಾಧಿಕಾರ ಎಲ್ಲಿ ಉಳಿಯಿತು?

ಅಮೇರಿಕದ ನೊಗ

ಸೈನ್ಯವನ್ನು ಎಲ್ಲಿ, ಯಾವಾಗ ಉಪಯೋಗಿಸಬೇಕೆಂಬುದೂ ಅಮೇರಿಕದ ಧೋರಣೆಯನ್ನು ಹೊಂದಿಕೊಂಡಿದೆ. "ಸ್ವತಂತ್ರ ಜಗತ್ತು" ವಿಪತ್ತನ್ನು ಎದುರಿಸಬೇಕಾದಾಗ ಅದರ ರಕ್ಷಣೆಗೆ ಅಮೇರಿಕದ ಮಹಾನುಭಾವರು ಧಾವಿಸುವರಷ್ಟೆ! ಆಗ ಪಾಕಿಸ್ತಾನವೂ ಈ ಸೈನ್ಯವನ್ನು ಹಿಡಿದುಕೊಂಡು ಹೋರಾಡಬೇಕಾಗುವುದು. ಅಮೇರಿಕದ ಸ್ವತಂತ್ರ ಜಗತ್ತಿನಲ್ಲಿ ಚೀನಾ, ರಶಿಯಾ ಮತ್ತು ಆ ಗುಂಪಿನ ರಾಷ್ಟ್ರಗಳು ಬರುವುದಿಲ್ಲ! ಬದಲು ಅವುಗಳು ಶಾಂತಿಗೆ ಗಂಡಾಂತರವನ್ನುಂಟುಮಾಡುವರಾಷ್ಟ್ರಗಳೆಂದೇ ಅಮೇರಿಕವು ತಿಳಿಯುತ್ತದೆ ಒಪ್ಪಂದದಲ್ಲಿ ಶಾಂತಿಗೆ ಭಂಗ ತರುವ ರಾಷ್ಟ್ರಗಳೊಡನೆ, ಪಾಕಿಸ್ತಾನವು ವ್ಯಾಪಾರ ಸಂಬಂಧ ಇಟ್ಟುಕೊಳ್ಳಬಾರದೆಂದು ಹೇಳಲಾಗಿದೆ. ಚೀನದೊಡನೆ ಹತ್ತಿಯ ವ್ಯಾಪಾರ ಕೈಗೊಂಡಿರುವ ಪಾಕಿಸ್ತಾನಕ್ಕೆ ಇದು ದೊಡ್ಡ ಪೆಟ್ಟು! ಪುಣ್ಯದಿಂದ ಈಗಲೇ ಇಂತಹ ಕ್ರಮತೆಗೆದುಕೊಳ್ಳುವ ಅಗತ್ಯವಿಲ್ಲೆಂದು ಅಮೇರಿಕ ಪಾಕಿಸ್ತಾನಕ್ಕೆ—ಅಲ್ಲಿಯ ವ್ಯಾಪಾರೀ ವರ್ಗಕ್ಕೆ—ಭರವಸೆ ಕೊಟ್ಟಿದೆ ಎನಿದ್ದರೂ— ಈ ಒಪ್ಪಂದವಂತೂ ಅಮೇರಿಕದ ದಾಸ್ಯದದ್ಯೋತಕ: ಅಲ್ಲಿಯ ಸೈನಿಕ ತಜ್ಞರು ಇಷ್ಟರಲ್ಲೇ ಪಾಕಿಸ್ತಾನಕ್ಕೆ ಬರುವರು; ಬಂದ ಬಳಿಕ, ಶಸ್ತ್ರಾಸ್ತ್ರಗಳೂ ಮದ್ದು ಗುಂಡುಗಳೂ ಅಮೇರಿಕದಿಂದ ಪೂರೈಕೆಯಾಗುತ್ತವೆ; ಮತ್ತು ಸೈನ್ಯದಲ್ಲಿ ಪಾಕಿಸ್ತಾನೀ ಯುವಕರ ಸೇರ್ಪಡೆಯಾಗುತ್ತದೆ.

ಪೂರ್ವ ಬಂಗಾಲ

ಭಾರತವು ಸ್ವೀಕರಿಸುತ್ತಿರುವ ಆರ್ಥಿಕ

ಸಹಾಯಕ್ಕೆ ಪಾಕಿಸ್ತಾನವು ಪಡೆಯುವ ಸೈನಿಕ ನೆರವಿಗೂ ಯಾವುದೇ ಸ್ವತಂತ್ರ ಸಂಬಂಧವಿಲ್ಲವೆಂದೂ ಜಾಫರುಲ್ಲಾ ಖಾನರು ಹೇಳಿ, ತಮ್ಮ ಅಜ್ಞ ಜನತೆಯನ್ನು ತೃಪ್ತಿಗೊಳಿಸಲೆತ್ನಿಸುವರು. ಇದು ಪೂರ್ಣಗೊಂಡ ನಮೇ ಸ್ಥೈ. ಪಾಕಿಸ್ತಾನದ ಸರಕಾರವು ಅಮೇರಿಕದ ಮನವೊಲಿಸಲು ಇನ್ನೊಂದು ಬಗೆಯ ಮಾರ್ಗವನ್ನು ತೋರಿಸಿದೆ — ಕಮ್ಯೂನಿಸ್ಟರೆಂದರೆ ಆಪಾದಮಸ್ತಕ ಚಟ್ಟವ ಅಮೇರಿಕನ್ನರಿಗೆ, ಪಾಕಿಸ್ತಾನದಲ್ಲಿ ಕಮ್ಯುನಿಸ್ಟರ ಕೈವಾಡವಿದೆಯೆಂದೂ ಆದುದರಿಂದ ಹೆಚ್ಚು ಹೆಚ್ಚು ನೆರವನ್ನು ಶೀಘ್ರವಾಗಿ ದಯಪಾಲಿಸಬೇಕೆಂದೂ ಒತ್ತಾಯಿಸುವುದಕ್ಕೋ ಎಂಬಂತೆ — ಆದಂಜೀ ಗಿರಣಿಯ ಗಲಭೆಗೆ ಕಮ್ಯುನಿಸ್ಟರೇ ಪ್ರಚೋದಕರೆಂದು ಮುಹಮ್ಮದಾಲಿಯವರು ಸಾರಿದರು. ಪೂರ್ವ ಹಾಗು ಪಶ್ಚಿಮ ಪಾಕಿಸ್ತಾನದಲ್ಲಿ ಕಮ್ಯುನಿಸ್ಟ ಮುಖಂಡರ ಬೇಟೆಯಾಡಲಾಯಿತು. ಆದರೆ, ಆಶ್ಚರ್ಯ! ಪೂರ್ವ ಪಾಕಿಸ್ತಾನದ ಮುಖ್ಯ ಮಂತ್ರಿ ಫಜಲುಲಹಕ್ಕರು ಕಮ್ಯುನಿಸ್ಟರ ಮೇಲೆ ಹೊರಿಸಲಾದ ಆಪಾದನೆಯನ್ನು ಖಂಡಿಸಿದರು; ಭಾಷಾವಿವಾದವೇ ಈ ಗಲಭೆಯ ಮೂಲವೆಂದು ಧ್ವನಿಸಿದರು. ಇದಕ್ಕೇನು ಕಾರಣ? ಪಶ್ಚಿಮ ಪಾಕಿಸ್ತಾನದ ಕೆಲವರು ಕಮ್ಯುನಿಸ್ಟರ ಉಪಟಳವನ್ನು ಮುಂದೆ ಮಾಡಿ, ಪೂರ್ವ ಪಾಕಿಸ್ತಾನದಲ್ಲಿ ಗವರ್ನರರ ಆಡಳಿತ ತಂದು ಫಜಲುಲ ಹಕ್ಕರ ಮುಖಭಂಗಗೊಳಿಸಬೇಕೆಂದೂ ಮುಸ್ಲಿಂ ಲೀಗಿಗಾದ ಅಪಮಾನದ ಸೇಡನ್ನು ಈ ಪ್ರಕಾರ ತೀರಿಸಬೇಕೆಂದೂ ಎಣಿಸಿದ್ದರು. ಇದನ್ನು ಫಜಲುಲ ಹಕ್ಕರು ಒಪ್ಪುವುದು ಅಸಾಧ್ಯ. ಅವರು ಪತ್ರಿಕೆಗಳು ಪೂರ್ವಪಾಕಿಸ್ತಾನದ ಕುರಿತು ಅಸಭ್ಯ ವರದಿಗಳನ್ನು ಪ್ರಕಟಿಸುವ ಬಗ್ಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿ ಎಚ್ಚರಿಕೆ ಕೊಟ್ಟರು.

ಸಿಂಹಳದ ಭಾರತೀಯರು

ನೆರೆಯ ಸಿಂಹಳ ದ್ವೀಪದಲ್ಲಿ ನೆಲೆನಿಂತ ಎಂಟು ಲಕ್ಷ ಭಾರತೀಯ ವಲಸೆಗಾರರು ತೀರ ಅನಿಶ್ಚಿತವಾದ ಭವಿಷ್ಯವನ್ನು ಎದುರಿಸುತ್ತಿರುವರಲ್ಲದೆ ಇದೀಗ ಹೊಟ್ಟೆಗೆ ಅನ್ನವಿಲ್ಲದೆ ಸಾಯುವ ಪರಿಸ್ಥಿತಿಯನ್ನೂ ಅಪ್ಪಿಕೊಳ್ಳಬೇಕಾಗಿ ಅವರಿಗೆ ಬಂದಿರುವುದು. ಸಿಂಹಳ ಭಾರತ ಒಡಂಬಡಿಕೆಯು ಕೆಲವೊಂದು ಭಾರತೀಯ ವಲಸೆಗಾರರು ಭಾರತದ ನಾಗರಿಕತ್ವವನ್ನು ಸ್ವೀಕರಿಸುವಂತೆ ಸಿಂಹಳ ಸರಕಾರವು ಒತ್ತಾಯಿಸುವುದೆಂದು ಹೇಳುತ್ತದೆ — ಇದರ ಲಾಭವನ್ನು ತೆಗೆದುಕೊಂಡು, ಸಿಂಹಳ ಸರಕಾರವು ಒಂದು ನಿಯಮವನ್ನು ರಚಿಸಿ ಸಿಂಹಳದ ನಾಗರಿಕರಲ್ಲದ ಭಾರತೀಯ ವಲಸೆಗಾರರಿಗೆ ಲೈಸೆನ್ಸ್ ಕೊಡಕೂಡದೆಂದು ಮುಂಚಿತವಾಗಿ ತೀರ್ಮಾನಿಸಿತು. ತೀರ ಅಮಾನುಷವಾದ ಈ ನಿರ್ಣಯವು ಭಾರತೀಯ ವಲಸೆಗಾರರನ್ನು ದಿಗ್ಭ್ರಮೆಗೊಳಿಸಿತು. ನಾಗರಿಕರೆಂದು ನೋಂದಾಯಿಸಲು ಹಾಕಿಕೊಂಡ ಅರ್ಜಿಗಳ ವಿಚಾರಣೆಯನ್ನು ಮಾಡದೆಯೇ ಈ ರೀತಿ ಹಿಂಸಿಸುವ ಸಿಂಹಳದ ಧೋರಣೆ, ಭಾರತ ಸರಕಾರವನ್ನೂ ನೋಯಿಸಿತು. ಅದು ಈಗ ಸಿಂಹಳ ಸರಕಾರಕ್ಕೆ ರಾಯಸವನ್ನು ಕಳುಹಿಸಿ, ಇಂತಹ ಕ್ರಮವು ಒಪ್ಪಂದದಲ್ಲಿ ಸೂಚಿಸಿದ ಒತ್ತಾಯದ ಹೆಜ್ಜೆಯಾಗಲಾರದೆಂದು ಹೇಳಿದೆ. ಇದನ್ನು ಸಿಂಹಳ ಸರಕಾರ ಕಿವಿಗೆ ಹಾಕಿಕೊಂಡರೆ ಪರಿಸ್ಥಿತಿ ಸುಧಾರಿಸಬಹುದು.

ಮೆನನರ ಮಾತುಕತೆ

ಜಿನೇವಾ ಪರಿಷತ್ತಿನಲ್ಲಿ ಹಗ್ಗ ಜಗ್ಗುವ ಆಟ ನಡೆದಿದೆ. ಕಮ್ಯೂನಿಸ್ಟರಿಂದ ರಿಯಾಯತಿಗಳನ್ನು ಪಡೆಯುವ ಬುದ್ಧಿವಂತರು ನಾವು ಎಂದು ಪಾಶ್ಚಾತ್ಯರ ಅಭಿಪ್ರಾಯ. ಪಾಶ್ಚಾತ್ಯರ ಮೂಗಿಗೆ ತುಪ್ಪ ಹಚ್ಚೋಣ ಎಂದು ಕಮ್ಯೂನಿಸ್ಟರ ಆತುರ. ಇದೇ ಗೊಂದಲದಲ್ಲಿ ಒಂದು ತಿಂಗಳ ಅವಧಿ ಕಳೆದು ಹೋಯಿತು. ಇಂಡೋಚೀನದ ಬಗ್ಗೆ ದಿನಾಂಕ ೨೯ರಂದು ಸೇರಿಸಿ ಗುಪ್ತ ಸಭೆಯು ನಾಲ್ಕೈದು ತಾಸು ವಿಚಾರ ವಿನಿಮಯ ನಡೆಸಿ ಮೊಲೊಟೋವರು ಮಂಡಿಸಿದ ಐದಂಶಗಳ ಸೂಚನೆಯನ್ನು ಅಂಗೀಕರಿಸಿತು. ಇದರನ್ವಯ (೧) ಯುದ್ಧವಿರಾಮ (೨) ಉಭಯಪಕ್ಷಗಳ ಸೈನ್ಯಗಳನ್ನು ಗುಂಪೀಕರಿಸುವ ಪ್ರದೇಶ ನಿರ್ಣಯ (೩) ಯುದ್ಧವಿರಾಮದ [illegible] ಸೈನಿಕರನ್ನು ಸೇರಿಸಿಕೊಳ್ಳ[illegible]ಂತೆ ತಡೆಗಟ್ಟುವ ಕ್ರಮ (೪) ಶಸ್ತ್ರ[illegible]ದ್ಧಿ ನಿಯಂತ್ರಣ ಮತ್ತು (೫) [illegible] ನಡೆಯದಂತೆ ಆಶ್ವಾಸನೆ [illegible] ಗಳು ಪರಿಶೀಲಿಸಬೇಕ[illegible] ವಿರಾಮದ ಪ್ರಶ್ನೆಯು [illegible] ವಾರ ನೇರದ ಸಭೆ[illegible] ಆಯಿತಾದರೂ, [illegible]ವಾಗ[illegible]. ಲಾವೋಸ್ ಮತ್ತು ಕಂಬೋಡಿಯಾಗಳ ಮೇಲೆ ಇದ್ದ ವಿ[illegible]ದವೂ ಬಗೆಹರಿದಿಲ್ಲ. ಇಂತಿರುವಾಗಲೇ ಭಾರತದ ಶ್ರೀ ವಿ. ಕೆ. ಕೃಷ್ಣ ಮೆನೊನ್ನರು ಜಿನೇವಾಕ್ಕೆ ತೆರಳಿ, ಅಲ್ಲಿ ನೆರೆದಿರುವ ಬೇರೆ ಬೇರೆ ರಾಷ್ಟ್ರಗಳ ಧುರೀಣರನ್ನು ಕಂಡು ಇಂಡೋಚೀನದ ಕುರಿತು ಮಾತುಕತೆ ನಡೆಸುವುದು ಎಲ್ಲರಲ್ಲೂ ಕುತೂಹಲವನ್ನು ಹುಟ್ಟಿಸಿದೆ. ಭಾರತದೊಡನೆ ನಿರ್ದಿಷ್ಟ ಸೂಚನೆ ಇಲ್ಲವಾದರೂ, ಎಲ್ಲ ಪ್ರತಿನಿಧಿಗಳ ಅಭಿಪ್ರಾಯದ ಮೇಲಿಂದ, ಕದನ ವಿರಾಮಕ್ಕೆ ಯೋಗ್ಯ ವಾತಾವರಣವನ್ನು ಏರ್ಪಡಿಸಲು ಮೆನೊನ್ನರು ಸಮರ್ಥರಾದಾರು.

ಅಮೇರಿಕದೊಡನೆ ಮತಭೇದ

ಕೊರಿಯದ ಕುರಿತು ಚೀನಿಯರೂ ದಕ್ಷಿಣ ಕೊರಿಯನ್ನರೂ ಹೊಸ ಸೂಚನೆಗಳನ್ನು ಮಂಡಿಸಿರುವರು. ದಕ್ಷಿಣ ಕೊರಿಯಾದಲ್ಲಿ ಚುನಾವಣೆ ನಡೆಸುವ ತತ್ವವೇ ಸಲ್ಲದೆನ್ನುತ್ತಿದ್ದ ದಕ್ಷಿಣ ಕೊರಿಯಾದ ಪ್ರತಿನಿಧಿ ಈಗ ತನ್ನ ನಿಲುಮೆಯನ್ನು ಬದಲಾಯಿಸಿದರೂ ಚುನಾವಣೆಗಳು ಸಂಯುಕ್ತ ರಾಷ್ಟ್ರಸಂಘದ ಮೇಲ್ವಿಚಾರಣೆಯಲ್ಲಿ ನಡೆಯಬೇಕೆಂಬ ಹಟವನ್ನು ಬಿಟ್ಟುಕೊಟ್ಟಿಲ್ಲ. ಕಮ್ಯುನಿಸ್ಟರ ದೃಷ್ಟಿಯಲ್ಲಿ ರಾಷ್ಟ್ರಸಂಘವು ಯುದ್ಧಾಸಕ್ತ ಪಕ್ಷಗಳಲ್ಲಿ ಒಂದಾದುದರಿಂದ ಅದು ಮೇಲ್ವಿಚಾರಣೆಯನ್ನು ನಡೆಸುವ ಅರ್ಹತೆ ಪಡೆದಿಲ್ಲ. ತಟಸ್ಥ ರಾಷ್ಟ್ರಗಳ ಮಂಡಳಿಕ್ಕೆಯೇ ಆ ಹೊಣೆಗಾರಿಕೆಯನ್ನು ಒಪ್ಪಿಸಿಕೊಡಬೇಕೆಂದು ಚೀನಾದ ಅಭಿಪ್ರಾಯ. ಹೀಗಾಗಿ ಸಮಸ್ಯೆ ಇದ್ದಲ್ಲಿಯೇ ಉಳಿದಿದೆ. ಈ ನಡುವೆ, ಅಮೇರಿಕಾ ಮತ್ತು ಬ್ರಿಟನುಗಳ ಭಿನ್ನಾಭಿಪ್ರಾಯವು ವಿಸ್ತರಿಸುತ್ತಾ ಹೋಗುತ್ತಿದೆ ಎಂಬ ವರದಿಗಳು ಬರುತ್ತವೆ. ಡೀನ ಬೇನಪ್ಪೂ ಕೋಟೆಯ ಪತನಕ್ಕೆ ಮುಂಚೆ "ನಾವೂ ನೀವೂ ಕೂಡಿಯೇ ಸಂಯುಕ್ತವಾಗಿ ಹೋರಾಡೋಣ" ಎಂಬ ಅಮೇರಿಕದ ಆಮಂತ್ರಣವನ್ನು ಬ್ರಿಟನು ತಿರಸ್ಕರಿಸಿದ ಗಳಿಗೆಯಿಂದ ಈ ಭಿನ್ನಾಭಿಪ್ರಾಯ ವ್ಯಾಪಕಗೊ[illegible]ತ್ತಿದೆ. ಬ್ರಿಟನು ಸೇರದಿದ್ದರೂ ಆ[illegible]ಯ ಏಶಿಯದ ಭದ್ರತಾ ಯೋಜನೆ [illegible]ಸಾಧ್ಯವಾದೀತೆಂದು ಏಸೆನ ಹೋವರ[illegible] ಕಳೆದ ವಾರ ಪತ್ರಿಕಾಕರ್ತರ ಮುಂದೆ [illegible]ರಿದುದರಿಂದಂತೂ ಬಿಕ್ಕಟ್ಟು ಉಲ್ಬಣ[illegible]ತು. ಪರಿಣಾಮವಾಗಿ "ಜಿನೇವಾ [illegible]ನ ಮುಗಿಯುವವರೆಗೆ" ಎಂದಿ[illegible] ಧೋರಣೆಯನ್ನು ಬ್ರಿಟನು ಬಿಟ್ಟುಕೊಡಬೇಕಾಗಿ ಬಂದಿದ್ದರೂ ಏನೋ-ಏಕೆಂದರೆ, ಇದೇ ಜೂನು ತಿಂಗಳಲ್ಲಿ ಅಧಿಕಾರಿಗಳ ಮಟ್ಟದಲ್ಲಿ ಆಗ್ನೇಯ ಏಶ್ಯಾದ ಭದ್ರತೆಯ ಕುರಿತು ವಾಷಿಂಗಟನ್ನಿನಲ್ಲಿ ಬ್ರಿಟನನ್ನೊಳಗೊಂಡ ಐದು ರಾಷ್ಟ್ರಗಳ ಸಮ್ಮೇಳನ ಜರುಗುವುದೆಂದು ಇತ್ತೀಚಿನ ವರದಿ ತಿಳಿಸುತ್ತದೆ.

ಉಡುಪಿ

ಲೇಖಕರ ಸಭೆ — ಬೊಂಬಾಯಿ ಕ್ರಾನಿಕಲ್ ಪತ್ರಿಕೆಯ ಉಪಸಂಪಾದಕರಾಗಿದ್ದ ಶ್ರೀ ಆರ್. ಕೆ. ಪ್ರಭುಗಳು ಎಂ. ಜಿ. ಎಂ. ಕಾಲೇಜಿನಲ್ಲಿ ತಾ. 22ರಂದು ನೆರೆದ ಲೇಖಕರ ಸಭೆಯಲ್ಲಿ ಸಹಕಾರ ತತ್ವದ ತಳಹದಿಯ ಮೇಲೆ ಪುಸ್ತಕ ಪ್ರಕಾಶನ ಕಾರ್ಯವನ್ನು ಕೈಗೊಳ್ಳುವ ಯೋಜನೆಯೊಂದನ್ನು ವಿವರಿಸಿದರು. ಪ್ರಿನ್ಸಿಪಾಲ್ ಸುಂದರರಾವ್, ಶ್ರೀ ಕು. ಶಿ. ಹರಿದಾಸ ಭಟ್ಟರೇ ಮೊದಲಾದವರು ಕೆಲವು ಉಪಯುಕ್ತ ಸೂಚನೆಗಳನ್ನು ನೀಡಿದರು.

ಕೆನರಾ ಮ್ಯೂಚುವಲ್ — ಇನ್ಶೂರೆನ್ಸ್ ಕಂಪೆನಿಯವರು, ತಾ. 23ರಲ್ಲಿ ವಿವಾಹವಾದ ನೂತನ ದಂಪತಿಗಳಾದ ಶ್ರೀ ವಿಶ್ವನಾಥ ಬಾಳಿಗ, ಬಿ. ಕೋಮ್, ಎಲ್. ಎಲ್. ಬಿ. ಮತ್ತು ಶ್ರೀಮತಿ ಸುನಂದಾ ಇವರಿಗೆ ಅಂದೇ ಸಂಜೆ ಸತ್ಕಾರಕೂಟವೊಂದನ್ನೇರ್ಪಡಿಸಿದ್ದರು. ಉಪಾಹಾರವಾದ ಮೇಲೆ ಡಾ| ಪಿ. ಆರ್. ನಾಯಕ್, ಶ್ರೀ ಪಿ. ಪದ್ಮನಾಭರಾವ್, ಡಾ| ಟಿ. ಎಂ. ಎ. ಪೈ, ಶ್ರೀ ಟಿ. ಎ. ಪೈ, ಎಂ. ಎಲ್. ಎ. ಇವರೂ ಸಭಾಧ್ಯಕ್ಷತೆ ವಹಿಸಿದ್ದ ಹಾಗೂ ಕೆನರಾ ಮ್ಯೂಚುವಲಿನ ಅಧ್ಯಕ್ಷ ಶ್ರೀ ಬಿ ವೈಕುಂಠ ಬಾಳಿಗ, ಎಂ. ಎಲ್. ಎ. ಅವರೂ ವಧೂವರರನ್ನು ಆಶೀರ್ವದಿಸಿ ಭಾಷಣ ಮಾಡಿದರು.

ನಿಧನ — ಕಟಪಾಡಿಯ ಭುವನೇಂದ್ರ ಪ್ರೊಡಕ್ಷನ ಮ್ಯಾ| ಡೈರೆಕ್ಟರ್ ಶ್ರೀ ಪಿ. ಜನಾರ್ದನ ನಾಯ್ಕರ ಪಿತೃ, ಪ್ರಸಿದ್ಧ ಪಾಂಗಾಳ ನಾಯಕ್ ಮನೆತನದ ಶ್ರೀ ರಂಗಪ್ಪ ನಾಯ್ಕರು ತಾ. 18ರಂದು ತನ್ನ 65ನೇ ವಯಸ್ಸಿನಲ್ಲಿ ಹೃದ್ರೋಗದಿಂದ ನಿಧನಗೊಂಡುದು ವಿಷಾದಕರವಿದೆ.

ವಿವಾಹ ಸಮಾರಂಭಗಳು

ಗುಂಡಿಬೈಲು ಶ್ರೀನಿವಾಸ ಶೇಟರ ಪುತ್ರ ಸದಾನಂದ ಶೇಟರು ಮಂಬದ ಕೋಣೆ ಸಂಜೀವ ಶೇಟರಪುತ್ರಿ ಸಗುಣಾ ಬಾಯಿಯನ್ನೂ, ಕಬ್ಯಾಡಿ ಕೃಷ್ಣಯ್ಯ ಹೆಗ್ಡೇರ ಪುತ್ರ ಕುಮಾರದಾಸಹೆಗ್ಡೆಯವರು ಕುಚ್ಚೂರು ಮುಜಾರು ಸಂಕಪ್ಪ ಕಂಬಳಿಯವರ ಪುತ್ರಿ ಸರಸ್ವತಿಯನ್ನೂ, ಆನಂದ ಸೋಮಯಾಜಿಗಳ ಪುತ್ರ ರಾಮಕೃಷ್ಣ ಸೋಮಯಾಜಿಗಳು ಕಲ್ಯಾಣಿ ಸುಬ್ರಾಯರ ಪುತ್ರಿ ಜಯಲಕ್ಷ್ಮಿಯನ್ನು ತಾ. 20ರಲ್ಲೂ, ಕಲ್ತಟ್ಟೆ ಬಾಬು ಶೆಟ್ರ ಪುತ್ರ ಶಿವರಾಮ ಶೆಟ್ಟರು ಪಡುಬೆಟ್ಟು ವೆಂಕಪ್ಪ ಶೆಟ್ರ ಪುತ್ರಿ ನಳಿನಿಯನ್ನು ತಾ. 21ರಲ್ಲೂ, ಬಿ. ವೈಕುಂಠ ಬಾಳಿಗ, ಎಂ. ಎಲ್. ಎ. ರವರ ಪುತ್ರ ವಿಶ್ವನಾಥ ಬಾಳಿಗರು ಎನ್. ವಿ. ಶ್ಯಾನುಭಾಗರ ಪುತ್ರಿ ಸುನಂದಾಳನ್ನೂ, ಪೆರಂಪಳ್ಳಿ ಅಂತಯ್ಯ ಶೆಟ್ರ ಪುತ್ರ ಸಂಜೀವ ಶೆಟ್ಟರು ಕೆ. ಸಂಕ್ರಪ್ಪ ಶೆಟ್ರ ಪುತ್ರಿ ರತಿಯನ್ನೂ, ಎ. ರಾಮಯ್ಯ ಆಳ್ವರ ಪುತ್ರ ಜಗನ್ನಿವಾಸ ಆಳ್ವರು ಸೂಂತಾಡಿ ರಾಮಣ್ಣ ರೈಗಳ ಪುತ್ರಿ ವಸಂತಿಯನ್ನೂ, ಕಣಂಜಾರು ಪಟೇಲ್ ಚಂದಯ್ಯ ಹೆಗ್ಡೇರ ಪುತ್ರ ಭಾಸ್ಕರ ಹೆಗ್ಡೇರು ಕೊರ್ಗಿ ನರಸಿಂಹ ಶೆಟ್ಟರ ಪುತ್ರಿ ಸೌಗಂಧಿಯನ್ನು ತಾ. 23ರಲ್ಲೂ ವಿಜೃಂಭಣೆಯಿಂದ ವಿವಾಹವಾದರು. ನೂತನ ವಧೂವರರಿಗೆ ಶುಭಾಶಯಗಳು.

ಅಮೃತಾಂಜನ
ಎಲ್ಲಾ ನೋವುಗಳಿಗೆ ಸಿದ್ಧೌಷಧ



ಎಲ್ಲಾ ತರದ ಸಿಡಿತ ಮತ್ತು ನೋವುಗಳಿಗೆ
60 ವರ್ಷ ಪ್ರಾಯದ
ಪಾಕೆಟ್ ಡಾಕ್ಟರ್
ಅಮೃತಾಂಜನ ಲಿ ಬೊಂಬಾಯಿ, ಮದರಾಸು, ಕಲ್ಕತ್ತಾ

ಜುಪಿಟರ್ ಜನರಲ್
ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಸ್ಥಾಪನೆ: 1919] ಪ್ರಧಾನ ಕಛೇರಿ: ಬೊಂಬಾಯಿ.

ಪ್ರಾಮುಖ್ಯ ಪ್ರಕಟಣೆ

ಇದೇ ತಾ. 27—4—1954ರಿಂದ ಜೀವವಿಮಾ ಪ್ರೀಮಿಯಂ ದರಗಳನ್ನು ಸಮೃದ್ಧಿಯಾಗಿ ಇಳಿಸಲಾಗಿದೆ ಎಂದು ಸಾರ್ವಜನಿಕರಿಗೆ ತಿಳಿಸಲು ನಾವು ತುಂಬಾ ಸಂತೋಷಪಡುತ್ತೇವೆ.

ವಿವರಕ್ಕೆ ನಮಗಾಗಲೀ ಪ್ರಧಾನ ಕಛೇರಿಗಾಗಲೀ ಬರೆಯಿರಿ.

ಎಸ್. ಎ. ಹೆಗ್ಡೆ,
ಸುಪರಿಂಟೆಂಡೆಂಟ್ ಓಫ್ ಏಜನ್ಸೀಸ್,
ಜುಪಿಟರ್ ಜನರಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಶಿರ್ವ, ದ. ಕ.

ಎಲ್ಲಾ ತರದ ಮಾಹಿತಿಯನ್ನೊಳಗೊಂಡ ಉತ್ತಮ ತರದ
ಮಗ್ಗಿ ಪುಸ್ತಕಗಳು
ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ
1000 ಯಾ 500ಕ್ಕೆ ಅತೀ ರಿಯಾಯತಿ ಇದೆ.
ಉತ್ತಮ ಕಾಗದದ, ದಪ್ಪನಾದ ಹೊರಕವಚದ, ಎಲ್ಲಾ ತರದ
ಎಕ್ಸ್‌ರ‍್ಸೈಜ್
ಪುಸ್ತಕಗಳು ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ. ದ. ಕ.

ಮಂತ್ರಿ ಭಕ್ತವತ್ಸಲಂರವರ ಜಿಲ್ಲಾ ಸಂಚಾರ

ಕಾಸರಗೋಡು, ಮಂಗಳೂರು, ಉಡುಪಿಗಳಲ್ಲಿ ಅಪೂರ್ವ ಸ್ವಾಗತ.

ಉದಿಯಾವರದಲ್ಲಿ ಮೊಗವೀರರ ಪ್ರಚಂಡ ಸಭೆ.

ಮದರಾಸು ಸರಕಾರದ ಕೃಷಿ, ಸಮಾಜ ವಿಕಾಸ ಹಾಗೂ ರಾಷ್ಟ್ರೀಯ ವಿಸ್ತರಣಾ ಯೋಜನಾ ಮಂತ್ರಿಗಳಾದ ಶ್ರೀ ಎಂ. ಭಕ್ತವತ್ಸಲಂರವರು ದಿನಾಂಕ ೨೧ರಂದು ಕಾಸರಗೋಡಿಗೆ ಆಗಮಿಸಿ ರಾಷ್ಟ್ರೀಯ ಒಡಾವಣೆಯ ಕುರಿತು ಪರಿಶೀಲನೆ ನಡೆಸಿದರು ರಾತ್ರಿ ಮಂಗಳೂರಿಗೆ ಬಂದು ಮರುದಿನ ಮಂಗಳೂರಲ್ಲಿ ಸಮಾಜ ವಿಕಾಸ ಯೋಜನೆಗಳ ಕೆಲಸಗಳಲ್ಲಿ ದ. ಕ. ಜಿಲ್ಲೆಯ ಪ್ರಗತಿಯ ಕುರಿತು ಚರ್ಚಿಸಿ, ಮಧ್ಯಾಹ್ನ ಸಾಧಾರಣ 1 ಗಂಟೆಗೆ ಉಡುಪಿಯ ಮಣಿಪಾಲವನ್ನು ಸಂದರ್ಶಿಸಿ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಕ್ಯಾಂಟೀನ್‌ನಲ್ಲಿ ಭೋಜನ ಸತ್ಕಾರವನ್ನು ಪಡೆದರು. ಅನಂತರ ಮಣಿಪಾಲದ ಬೇರೆ ಬೇರೆ ಕೈಗಾರಿಕಾ ಕಾರ್ಖಾನೆಗಳನ್ನೂ, ಮೆಡಿಕಲ್ ಕಾಲೇಜನ್ನೂ ಸಂದರ್ಶಿಸಿದರು ಮಣಿಪಾಲದ ಕೈಗಾರಿಕಾ ಅಭಿವೃದ್ಧಿಯನ್ನು ನೋಡಿ ಸಂತೋಷಿಸಿ, ಕಸ್ತೂರ್ಬಾ ಮೆಡಿಕಲ್ ಕಾಲೇಜು ಅಸಾಧ್ಯ ಸಾಧನೆ ಎಂಬುದನ್ನು ವ್ಯಕ್ತಪಡಿಸಿದರು.

ಬಳಿಕ ಮಂತ್ರಿಗಳು ಮಲ್ಪೆಗೆ ತೆರಳಿದಾಗ ಶ್ರೀ ಎಂ. ಕೆ. ಮುಂಜಪ್ಪ ಮೊದಲಾದವರಿಂದ ಸ್ವಾಗತಿಸಲ್ಪಟ್ಟರು. ಶ್ರೀ ಟಿ. ಎ. ಪೈ, ಎಂ. ಎಲ್. ಎ., ಅವರು ಮಂತ್ರಿಗಳಿಗೆ ಮಲ್ಪೆಯ ಪ್ರಾಮುಖ್ಯತೆಯನ್ನು ವಿವರಿಸಿ, ಇಲ್ಲಿ ಆಲ್ ಇಂಡಿಯ ಇನ್‌ಸ್ಟಿಟ್ಯೂಟ್ ಆಫ್ ಫಿಶ್ಶರೀಸ್ ಟೆಕ್ನೋಲಜಿ ಅಂಡ್ ಓಶನೋಗ್ರಫಿ ಸಂಸ್ಥೆಯನ್ನು ಸ್ಥಾಪಿಸುವ ಯೋಗ್ಯತೆಯನ್ನು ವಿವರಿಸಿದರು

ಉಡುಪಿಯಲ್ಲಿ ಸ್ಥಳೀಯ ಮಹಿಳಾ ಸಭೆಯ ಕಡೆಯಿಂದ ಶ್ರೀಮತಿ ಪ್ರೇಮಾ. ಎ. ಪೈಯವರು ಮನವಿಯೊಂದನ್ನು ಮಂತ್ರಿಗಳಿಗೆ ಅರ್ಪಿಸಿದರು. ಹಳ್ಳಿಯ ಹೆಂಗಸರಿಗೆ ಸೂಲಗಿತ್ತಿಯ [illegible] ಶಿಕ್ಷಣವನ್ನಿತ್ತು ಅವರು ಹಳ್ಳಿಯಲ್ಲಿ ಸೇವೆಸಲ್ಲಿಸುವಂತಾಗಬೇಕೆಂದು ಮನವಿಯಲ್ಲಿ ಕೇಳಿಕೊಳ್ಳಲಾಗಿತ್ತು. ಮಂತ್ರಿಗಳು ನವಭಾರತ ನಿರ್ಮಾಣ ಕಾರ್ಯದಲ್ಲಿ ಹೆಂಗಸರು ಹೆಚ್ಚಿನ ಭಾಗವಹಿಸಬೇಕೆಂದರು. ಶ್ರೀಮತಿ ಕಣ್ಣನ್ ರವರು ಧನ್ಯವಾದಗಳನ್ನಿತ್ತರು.

ಮಂತ್ರಿಗಳು ಉದ್ಯಾವರಕ್ಕೆ ಆಗಮಿಸಿದಾಗ, ಅಲ್ಲಿಯ ಮೊಗವೀರ ಮುಂದಾಳುಗಳಾದ ಶ್ರೀ ಸದಿಯ ಸಾಹುಕಾ[illegible]ರು ಸ್ವಾಗತಿಸಿದರು. ಬಳಿಕ ಅವರ ನಿ[illegible]ಸದ ವಠಾರದಲ್ಲಿ ಶ್ರೀ ಟಿ [illegible]. ಪೈ, ಎಂ. ಎಲ್. ಎ., ರವರ ಅಧ್ಯ[illegible]ಯಲ್ಲಿ ಮೊಗ[illegible]ರ ಸಮ್ಮೇಳನವು ಜರ[illegible] ಶ್ರೀ [illegible] ಕೊಂಡಸರು ಪ ಲಿವಾರ[illegible]ಡಿಕೆಗಳನ್ನೊಳಗೊಂಡ ಒಂದು ದೀ[illegible]ಮಾನಪತ್ರವನ್ನು ಮಂತ್ರಿಗಳಿಗೆ ಸಮ[illegible] ಅದರಲ್ಲಿ ಮತ್ಸ್ಯ ಬಂದರಿನ ಅಭಿ[illegible]ಬೇಕು:— ಸಮುದ್ರ ತೀರ

ಆಯಕಟ್ಟಿನಿಂದ ದುರಂತಕ್ಕೆ ತುತ್ತಾದವರಿಗೆ ಪರಿಹಾರ ನೀಡಬೇಕು—ಹದಿನಾಲ್ಕು ಪಟ್ಟಣ ಮೊಗವೀರ ಮಹಾಸಭೆಯ ವತಿಯಿಂದ ನಡೆಸುವ ಬರುತ್ತಿರುವ ವಯಸ್ಕರ ಶಿಕ್ಷಣ ಯೋಜನೆಗೆ ನೆರವು ನೀಡಬೇಕು—ಆಲ್ ಇಂಡಿಯಾ ಇನ್‌ಸ್ಟಿಟ್ಯೂಟ್ ಓಫ್ ಫಿಶ್ಶರೀಸ್ ಟೆಕ್ನೋಲಜಿ ಎಂಡ್ ಓಶನೋಗ್ರಫಿ ಸಂಸ್ಥೆಯನ್ನು ಮಲ್ಪೆಯಲ್ಲೇ ಸ್ಥಾಪಿಸಬೇಕು ವೃತ್ತಿಗೆ ಸಂಕಟ ಪೂರ್ತಿಯಾದುದರಿಂದ ಮೀನನ್ನು ಮೈಸೂರಿಗೆ ಒಯ್ಯಲು ಅನುಕೂಲವಾಗಿದೆ— ಆದುದರಿಂದ ಆಗುಂಬೆ ರಸ್ತೆಯನ್ನು ವಿಸ್ತರಿಸಬೇಕು—ಸಮುದ್ರದಲ್ಲಿ ವಿಶೇಷ ತರಬೇತಿ ಹೊಂದಿದ ಮೊಗವೀರರಿಗೆ ನೌಕಾಪಡೆಯಲ್ಲಿ ಉದ್ಯೋಗ ದೊರಕಿಸಬೇಕು—ಮಲ್ಪೆಯಲ್ಲಿ ಐಸ್ ಫ್ಯಾಕ್ಟರಿಯನ್ನೂ ಫಿಶ್ ಮಿಲ್ ಪ್ಲಾಂಟನ್ನೂ ಸ್ಥಾಪಿಸಬೇಕು—ಇವೇ ಮೊದಲಾದ ಪಲವಾರು ಬೇಡಿಕೆಗಳಿದ್ದುವು ತದನಂತರ ಪಂಚಾಯತ ಬೋರ್ಡಿನ ಪರವಾಗಿ ಶ್ರೀ. ಯು. ಭಾಸ್ಕರ ಶೆಟ್ಟರು ಒಂದು ಮಾನಪತ್ರವನ್ನು ಸಮರ್ಪಿಸಿದರು. ಅದರಲ್ಲೂ ಕೆಲವು ಬೇಡಿಕೆಗಳಿದ್ದುವು.

ಮಂತ್ರಿಗಳು ತಮ್ಮ ಉತ್ತರದಲ್ಲಿ ಮಲ್ಪೆಯೇ ಆಲ್ ಇಂಡಿಯಾ ಇನ್ಸ್ಟಿಟ್ಯೂಟ್ ಓಫ್ ಫಿಶ್ಶರೀಸ್ ಟೆಕ್ನೋಲಜಿ ಅಂಡ್ ಓಶನೋಗ್ರಫಿ ಸಂಸ್ಥೆಯನ್ನು ಸ್ಥಾಪಿಸಲು ಉತ್ತಮ ಜಾಗವೆಂದೂ ಈ ಕುರಿತು ನಾನು ಕೇಂದ್ರ ಸರಕಾರದೊಡನೆ ಪತ್ರ ವ್ಯವಹಾರ ನಡೆಸುತ್ತೇನೆ ಎಂದರು ಅಲ್ಲದೆ ಮೊಗವೀರ ಬಂಧುಗಳು ಎಲ್ಲಾ ಸಮಸ್ಯೆಗಳಲ್ಲಿಯೂ ಆಸಕ್ತಿ ವಹಿಸಿ ಪರಿಹಾರ [illegible]ಮಾರ್ಗವನ್ನು ಸೂಚಿಸಿದ್ದು ಸಂತೋಷದ ಸ[illegible]ತಿಯೇ ಸರಿ ಎಂದರು.

ಅ[illegible] ಟಿ. ಎ. ಪೈಗಳು ತಮ್ಮ ಭಾಷಣದಲ್ಲಿ [illegible]ಜದಲ್ಲೇ ನವೀನ ಪದ್ಧತಿಯಿಂದರೆ ರಂ[illegible]ಬರೆಯ ಮೀನು ಹಿಡಿವುದಾಗಿದೆ. ಇದನ್ನ[illegible]ರಕಾರವು ಊರ್ಜಿತಗೊಳಿಸಬೇಕು. ಯಮ[illegible] ಕಾನೂನನ್ನು ಪಾಲಿಸುವುದು ಇಲಾ[illegible] ಅಧಿಕಾರಿಗಳ ಆದ್ಯ ಕರ್ತವ್ಯವೆಂದು ಸೂ[illegible]ದರು. ಶ್ರೀ ಭಾಸ್ಕರ ಶೆಟ್ಟರ ಧನ್ಯವಾದ[illegible]ದನೆ ಸಭೆಯು ಮುಕ್ತಾಯವಾಯಿತು. ಮಂತ್ರಿಗಳು ಶ್ರೀ ಟಿ. ಎ. ಪೈಗಳಿಂದ ಸಂಗ್ರಹಿಸಲಾಗಿದ್ದ ಮೀನು ಹಿಡಿಯುವ ಚಲಚ್ಚಿತ್ರವನ್ನು ನೋಡಿ ಉ[illegible]ಪಿಗೆ ಹಿಂತಿರುಗಿದರು.

ರಾತ್ರಿ ಮಂತ್ರಿಗಳ[illegible] ಕಾಂಗ್ರೆಸ[illegible]:— ಸಭೆಯನ್ನು[illegible]ದ್ದೇ[illegible]ಲವು ಹಿತೈಷಿ[illegible]ಗಳನ್ನು [illegible] ಕಾರ್ಯಕ್ರಮ [illegible] ಆಸಕ್ತಿ ತೋರಿಸ[illegible] ಶ್ರೀ ಟಿ. ಎ. [illegible] ಯಾದವ[illegible]ಗಳ [illegible] ಮಂತ್ರಿಗಳಿಗ[illegible] ಶ್ರೀ [illegible] ಆಚಾರ್ಯ[illegible]

ಮಂಗ[illegible]ರಲ್ಲಿ [illegible] ಗಳು ಜಿಲ್ಲಾ [illegible]ಲೆಕ್ಟರ್, [illegible]ಜನಾ ಸಲಹಾ ಸಮಿತಿಯ ಸದಸ್ಯರನ್ನು ಕೂಡಿ ಸಮಾಜ ವಿಕಾಸ ಯೋಜನೆಗಳ ಕಾರ್ಯಗಳ ಪರಿಶೀಲನೆ ನಡೆಸಿದರು.

ಅಧಿಕಾರಿಗಳು ಅವರ ಕಾರ್ಯಕ್ಷೇತ್ರಗಳಲ್ಲಿ ಕೆಲಸಗಳ ಮಂಜೂರಾತಿ ಇತ್ಯಾದಿಗಳ ಬಗ್ಗೆ ಹೆಚ್ಚಿನ ಅಂಶ ಕೈಗೊಳ್ಳಲಿಲ್ಲ, ಆದುದರಿಂದ ಸ್ಥಳೀಯ ಅಧಿಕಾರಿಗಳಿಗೆ ಕೆಲವು ವಿಚಾರಗಳಲ್ಲಿ ಹೆಚ್ಚಿನ ಅಧಿಕಾರ ಕೊಡಬೇಕು. ಗ್ರಾಮ ರಸ್ತೆಗಳ ಕೆಲಸಗಳಿಗೆ ಪ್ರೋಜೆಕ್ಟು ಹೆಚ್ಚು ಗಮನವೀಯಬೇಕು, ಆಸ್ಪತ್ರೆಯಲ್ಲಿ ಡಾಕ್ಟರರ ಕೊರತೆಯನ್ನು ನಿವಾರಿಸುವ ಬಗ್ಗೆ ಆಯುರ್ವೇದ ಕಾಲೇಜಿನ ಪದವೀಧರರನ್ನು (G. C. I. M.) ನೇಮಿಸಬೇಕು, ಕೋಳಿ ಸಾಕಣೆಗಿಂತಲೂ ಹೆಚ್ಚಿನ ಕೇಂದ್ರಗಳನ್ನು ಸ್ಥಾಪಿಸಬೇಕು, ಶಾಲಾ ಕಟ್ಟಡದ ಬಗ್ಗೆ ಅರ್ಧ ಖರ್ಚು ಪ್ರೋಜೆಕ್ಟಿನಿಂದ ಸಿಗಬೇಕು, ಕೃಷಿಯೋಗ್ಯವಾಗುವಂತೆ ಬುಲ್ ಡೋಜರುಗಳನ್ನೊದಗಿಸಬೇಕು, ಸಹಕಾರಿ ಪಕ್ಷಿ ತಿಯಿಂದ [illegible]ಕೃಷಿ ಮಾಡುವಂತೆ ವ್ಯವಸ್ಥೆ ಮಾಡಬೇಕು, ಸುಲಭ ಶರ್ತಗಳ ಮೇಲೆ ಹಣ ಕೊಟ್ಟು ಒದಗಿಸಬೇಕು, ಮತ್ಸ್ಯ ವ್ಯವಸಾಯಕ್ಕೆ ಹೆಚ್ಚಿನ ಗಮನ ಕೊಡಬೇಕು ಎಂದು ಕೆ. ಸಿ. ಮುಕುಂದ ಪ್ರಭುಗಳೂ; ಪ್ರೋಜೆಕ್ಟ್ ಕ್ಷೇತ್ರದ ಎಂ ಎಲ್. ಎ.ಗಳನ್ನು ಪಠಾ ಪ್ರೋಜೆಕ್ಟ್ ಸಲಹಾ ಸಮಿತಿಯ ಸದಸ್ಯರನ್ನಾಗಿ ಸೇರಿಸಬೇಕೆಂದು ಶ್ರೀ. ಎನ್. ಎಸ್. ಕಾರ್ಣಿಕರೂ; ಉತ್ತಮ ಬೀಜಗಳು ಒದಗಿಸಲ್ಪಡಬೇಕೆಂದು ಶ್ರೀ. ಎಸ್. ಸರ್ವಪ್ಪಯ್ಯನವರೂ ತಿಳಿಸಿದರು. ಮಂತ್ರಿಗಳು ಸಲಹೆಗಳ ವಿಚಾರದಲ್ಲಿ ಯೋಗ್ಯ ಕಾರ್ಯಕ್ರಮ ಕೈಗೊಳ್ಳಲಾಗುವುದೆಂದು ಆಶ್ವಾಸನೆಯಿತ್ತರು. ತದನಂತರ ಮಂತ್ರಿಗಳು ಕಾಂಗ್ರೆಸ್ ಕಚೇರಿಯನ್ನು ಸಂದರ್ಶಿಸಿ ಮದ್ಯ ನಿಷೇಧ ಕಾರ್ಯಕ್ಕೆ ಜನರ ಸಹಾಯ ಹೆಚ್ಚಾಗಿಸಬೇಕೆಂದು ಸೂಚಿಸಿದರು. ಇಷ್ಟು ಮಾತ್ರವಲ್ಲದೆ ಮಂತ್ರಿಗಳು ಕಂಕನಾಡಿ ಭತ್ತ ಪರಿಶೋಧನಾ ಕೇಂದ್ರ, ಮೀನುಗಳನ್ನಿಡುವ ಕೋಲ್ಡ್ ಸ್ಟೋರೇಜ್‌ಗಳನ್ನು ಸಂದರ್ಶಿಸಿ, ಮಧ್ಯಾಹ್ನ ಕಾರ್ಕಳ ಮಾರ್ಗವಾಗಿ ಉಡುಪಿಗೆ ಬಂದರು.

ಕಾಸರಗೋಡು:—ದಿನಾಂಕ ೧೫ರಂದು ಶ್ರೀ ಉಮೇಶರಾಯರ ಅಧ್ಯಕ್ಷತೆಯಲ್ಲಿ ಕಲಾವೃಂದದ ಆಶ್ರಯದಲ್ಲಿ ಶ್ರೀ ಕವಿ ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯರ ದಿನಾಚರಣೆಯು ಬಿ ಇ. ಯಂ. ಹೈಸ್ಕೂಲಿನ ವಠಾರದಲ್ಲಿ ಜರಗಿತು. ಶ್ರೀಗಳಾದ ಕೆ. ಯಸ್. ಕಾರಂತ, ಕೆ. ಮಹಾಬಲ ಭಂಡಾರಿ ಹಾಗೂ ಅಧ್ಯಕ್ಷರು ಶ್ರೀ ಪುಣಿಂಚತ್ತಾಯರ ಕೃತಿ, ಸಾಹಿತ್ಯಸೇವೆ ಇವುಗಳನ್ನು ಪ್ರಶಂಸಿಸಿ ಭಾಷಣವಿತ್ತರು. ಶ್ರೀ ಐ. ಕೆ ಶಿವರಾಮ ಶೆಟ್ಟರು ಕಲಾವೃಂದದ ಧ್ಯೇಯಗಳನ್ನು ವಿವರಿಸಿ, ಧನ್ಯವಾದವಿತ್ತರು.

ಕುಕ್ಕುಂದೂರು—ದಿನಾಂಕ ೧೨ರಂದು ಸಾಧಾರಣ ಸಂಜೆ ಹೊತ್ತಿಗೆ ಹೆರುಮುಂಡೆ ಗ್ರಾಮದ ಮುಂಡೇರು ಎಂಬಲ್ಲಿ ನಾಲ್ಕು ಜನರಿರುವ ಒಂದು ಮನೆಗೆ ಮಿಂಚು ಬಡಿದುದರ ಪರಿಣಾಮವಾಗಿ ಹೆಂಗಸೊಬ್ಬಳು ಕೂಡಲೇ ಮೃತಳಾದಳು. ಉಳಿದ ಮೂವರು ಬದುಕಿರುತ್ತಾರೆ, ಸಾಧಾರಣ ೧೫ ಮುಡಿ ಅಕ್ಕಿ ಸುಟ್ಟು ಹೋಗಿದೆಯೆಂದು ಊಹಿಸಲಾಗಿದೆ.

ಕರಂಬಾರು.—ದಿನಾಂಕ ೧೪ರಂದು ಸ್ಥಳೀಯ ಬೊ ಎ ಶಾಲೆಯ ಹೊಸ ಕಟ್ಟಡದ ಉದ್ಘಾಟನೆಯು ದ. ಕ. ಜಿಲ್ಲಾ ಕಮ್ಯುನಿಟಿ ಪ್ರೊಜೆಕ್ಟ್ ಆಫೀಸರರಾದ ಶ್ರೀ ಎಚ್. ನರಸಿಂಹನವರಿಂದ ಜರಗಿತು. ಸ್ವಾಗತ ಭಾಷಣ, ವರದಿವಾಚನ, ಅಧ್ಯಕ್ಷರಿಗೆ [illegible]ಮಾನಪತ್ರ ಸಮರ್ಪಣೆ ಮೊದಲಾದುವು ಜ[illegible]ದುವು ಕ[illegible] [illegible]ಸ್ಕೋಲ[illegible] ಜಿಲ್ಲಾ [illegible] ಒಪ್ಪಿಸ [illegible]ಾಯಿ[illegible]

[illegible]ಜೆ—ಇಲ್ಲಿ[illegible]ತ್ರಮ ಪಂಚಾ[illegible] 17—5—54 [illegible] ಕೃಷ್ಣಪ್ಪ ಸೇ[illegible]ದ ಅಧ್ಯಕ್ಷರಾಗಿ, [illegible]ರಸಿಂಹ ಶೆಟ್ಟಿ, [illegible]ಮ 'ಶೆಟ್ಟಿ, ಬಿಾ[illegible]ರು ಅವಿರೋಧ[illegible]ಹೆಗ್ಡೆ ಮತ್ತು [illegible]ಶೆ[illegible]ರು ಬಹುಮತಗಳಿಂದ [illegible]ಗಿ [illegible]ನಾಯಿಸಲ್ಪಟ್ಟರು.

ಬೈ[illegible]ರು—ಇಲ್ಲಿಯ ಬಪ್ರಿ ಬೋರ್ಡ್ ಎಲಿಮೆಂಟರಿ ಶಾಲಾ ಹೊಸಕಟ್ಟಡದ ಉದ್ಘಾಟನಾ ಸಮಾರಂಭವು ತಾ. 18.5.54 ನೇ ಬೆಳಿಗ್ಗೆ ದ. ಕ. ಜಿಲ್ಲಾ ಕಲೆಕ್ಟರರಾದ ಶ್ರೀ ಎ. ಮಹಾಲಿಂಗಂ ಚೆಟ್ಟಿಯಾರ್ ಐ. ಎ. ಎಸ್. ಇವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ಜರಗಿತು. ರಾಷ್ಟ್ರಧ್ವಜಾರೋಹಣ, ಪ್ರಾರ್ಥನೆಗಳಾದ ಬಳಿಕ ಶಾಲಾ ಸಮಿತಿಯ ಅಧ್ಯಕ್ಷ, ಜೆ. ಭೋಜರಾಜ ಹೆಗ್ಡೆಯವರು ಸಮಿತಿಯ ವರದಿಯನ್ನೂ, ಶಾಲಾ ಮುಖ್ಯೋಪಾಧ್ಯಾಯರು ಶಾಲಾ ವರದಿಯನ್ನೂ ಓದಿದರು ಶಾಲಾ ಸಮಿತಿಯ ಕಾರ್ಯದರ್ಶಿ ಶ್ರೀ ವಾಸು ಹೆಗ್ಡೆಯವರು ಸಭಿಕರ ಪರವಾಗಿ ಅಧ್ಯಕ್ಷರಿಗೆ ಮಾನಪತ್ರವನ್ನರ್ಪಿಸಿದರು. ಶ್ರೀ ಮುದ್ರಾಡಿ ಕೃಷ್ಣಯ್ಯ ಶೆಟ್ಟರು ಸಮಾಜವಿಕಾಸ ಯೋಜನಾಧಿಕಾರಿ ರಮ್ಲಾನರೂ ಭಾಷಣ ಮಾಡಿದರು ಬಳಿಕ ಅಧ್ಯಕ್ಷರಿಂದ ಗಾಂಧಿ ನೆಹರುಗಳ ಭಾವಚಿತ್ರಅನಾವರಣವೂ, ಶಾಲಾ ಕೆಲಸ ಮಾಡಿದವರಿಗೆ ಬಹುಮಾನವಿತರಣೆಯೂ ನಡೆದು, ಅಧ್ಯಕ್ಷರು ಶಾಲೆಗೆ ಶುಭಕೋರಿ ಭಾಷಣಮಾಡಿದರು. ಶಾಲಾ ಸಮಿತಿಯ ಅಧ್ಯಕ್ಷರಿಂದ ಧನ್ಯವಾದ ಸಮರ್ಪಣೆ, ರಾಷ್ಟ್ರಗೀತೆ, ಲಘು ಉಪಹಾರಗಳೊಂದಿಗೆ ಸಮಾರಂಭವು ಕೊನೆಗೊಂಡಿತು.

ಈ ಶಾಲಾ ಕಟ್ಟೋಣದ ಬಗ್ಗೆ ಮುಕ್ಕಾಲು ಎಕ್ರೆ ಸ್ಥಳವನ್ನು ಶ್ರೀಮತಿ ಪದ್ದು ಕಡಂಬೇಡಿಯವರು ಉಚಿತಾರ್ಥವಾಗಿ ಕೊಟ್ಟಿರುವರು. ಅಲ್ಲದೆ ಬೋರ್ಡಿನಿಂದ ರೂ. 2000 ಸಾವಿರವೂ, ಸಮಾಜ ವಿಕಾಸ ಯೋಜನೆಯಿಂದ ರೂ. 1600 ಮತ್ತು ಗ್ರಾಮಸ್ಥರಿಂದ ರೂ. 2000 ಸಾವಿರವೂ ಸಹಾಯ ಸಿಕ್ಕಿರುತ್ತದೆ.

ವಿಟ್ಲ:—ತಾ 14—5—51ರಂದು ಪುತ್ತೂರು ತಾಲೂಕು ರೈತ ಸೇವಾಸಂಘದ ವಾರ್ಷಿಕ ಮಹಾಸಭೆ ಜರಗಿ, ಹೊಸ ಅಧಿಕಾರಿ ವರ್ಗದ ಚುನಾವಣೆಯಲ್ಲಿ, ಶ್ರೀಗಳಾದ ವಿಠಲದಾಸ ಶೆಟ್ಟಿಯವರನ್ನು ಅಧ್ಯಕ್ಷರನ್ನಾಗಿಯೂ, ಯು. ಬಾಬು ಪೂಜಾರಿ ಮತ್ತು ಬೆಳಿಯಪ್ಪ ಗೌಡರನ್ನು ಉಪಾಧ್ಯಕ್ಷರನ್ನಾಗಿಯೂ. ಕೆ. ಸಂಜೀವ ರೈಗಳಯ್ಯ ಕಾರ್ಯದರ್ಶಿಗಳನ್ನಾಗಿಯೂ, ಕೆ ಕಾಂತಪ್ಪ ಆಳ್ವ ಮತ್ತು ಎ. ಜನಾರ್ಧನ ನಾಯಕರನ್ನು ಜೊತೆಕಾರ್ಯದರ್ಶಿಗಳನ್ನಾಗಿಯೂ, ಅಲ್ಲದೆ ಹನ್ನೊಂದು ಜನರನ್ನೊಳಗೊಂಡ ಕಾರ್ಯಕಾರಿ ಸಮಿತಿಯನ್ನು ಕೂಡಾ ಸರ್ವಾನುಮತದಿಂದ ಆರಿಸಲಾಯಿತು.

ಸ್ವೀಕಾರ

ಧನ್ವಂತರಿ ಸಂಹಿತಾ—(ಸೂತ್ರ ಹಾಗೂ ಚಿಕಿತ್ಸಾಸ್ಥಾನ ಸಂಪೂರ್ಣ). ಕನ್ನಡ ಅನುವಾದಕರು ಮತ್ತು ಪ್ರಕಾಶಕರು-ವೈದ್ಯಗುರ ಎಂ. ಆರ್. ಭಟ್, ಸಿ. ಎಚ್. ಡಿ. ಆಯುರ್ವೇದಮಹೋಪಾಧ್ಯಾಯರುಮತ್ತು ದೀರ್ಘಾಯು ಪತ್ರಿಕೆಯ ಸಂಪಾದಕರುಮತ್ತು 'ಸಹಸ್ರಯೋಗ' ಗ್ರಂಥದ ಭಾಷಾಂತರಕಾರರು ಮುನ್ನುಡಿ ಬರೆದವರು ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರು. 1 ಡೆಮ್ಮಿ ಸೈಸಿನ 32+1[illegible]4 ಪುಟಗಳು. ಬೆಲೆ 5 ರೂಪಾಯಿ.

ಇದು ಅಪೂರ್ವವಾದ ಆಯುರ್ವೇದ ಗ್ರಂಥ. ಧನ್ವಂತರಿ ಸಂಹಿತೆ ಎಂಬ ಸಂಸ್ಕೃತ ಗ್ರಂಥದ ಅನುವಾದ ಇದರಲ್ಲಿ ನಾನಾ ವ್ಯಾಧಿಗಳ ಲಕ್ಷಣ, ಕಾರಣ, ಚಿಕಿತ್ಸೆ, ಅದಕ್ಕೆ ಬೇಕಾಗುವ ಔಷಧಿ ಸಂಗ್ರಹ ಹಾಗೂ ಸಿದ್ಧತೆ ಮಾಡಲು ಉಪಯೋಗಿಸುವಂತಹ ವಸ್ತುಮೂಲಿಕೆಗಳ ಲಕ್ಷಣ, ಪ್ರಮಾಣ, ತೂಕ, ಸಾಕ ಎಲ್ಲವನ್ನೂ ವಿವರಿಸಿ ಬರೆಯಲಾಗಿದೆ.

[illegible] ಎಂ. ಆರ್. ಭಟ್ಟರು [illegible]ರ್ವೇದ [illegible]ಂಬಾ ವ್ಯವಸಾಯ[illegible] ಈ ಅಪೂರ್ವ ಗ್ರಂಥವ[illegible] [illegible]ಮಹದುಪಕಾರ ಮಾಡಿ[illegible] [illegible]ಸ್ತ್ರ[illegible] ಅಂ[illegible] [illegible]ಉಚಿತ [illegible]

[illegible]ವೇಶದಾಯಿನಿ.

ಪ್ರ[illegible] ಶ್ರೀ ಬಿ ವೆಂಕಟ ಕೃ[illegible], H. N Rao ಬ್ರದರ್ಸ್, ಬೆಂ[illegible]3. 1 ಕ್ರೌನ್ ಸೈಸಿ 320 ಪುಟ[illegible] ರೂ. 1—0—0.

[illegible]ಲ್ಲಿ ಮೊದಲಾಗಿ ಪ್ರಕಟವಾದ ಈ ಪುಸ್ತಕದ ತಿದ್ದಿ ಬೆಳೆಸಿದ ಹೊಸ ಮುದ್ರಣವು ಈಗ 1951ರಲ್ಲಿ ಪ್ರಕಟವಾಗಿದೆ. ಇದರಲ್ಲಿ ಸಂಗೀತ ಶಾಸ್ತ್ರಾಭ್ಯಾಸಿಗಳಿಗೆ ಅತಿ ಸಹಕಾರಿಯಾದ ವಿಷಯಗಳಿವೆ. ಈ ವರೆಗೆ ಹೊರಟ ಹಾರ್ಮೋನಿಯಂ ಗೈಡ್‌ಗಳಲ್ಲಿ ಇದು ಅನೇಕ ವಿಷಯಗಳಲ್ಲಿ ಉತ್ತಮವಾಗಿದೆಯೆಂದು ಹೇಳಬಹುದು.

ಡಾ| ಕೆ. ರೇವಣ್ಣಪ್ಪರ

ಮನೆ ಮದ್ದು

ವೈದ್ಯರ ಸಹಾಯವಿಲ್ಲದ ಮನೆಯಲ್ಲೇ ನೂರಾರು ಕಾಯಿಲೆಗಳಿಗೆ ಔಷಧಮಾಡಿಕೊಳ್ಳುವ ವಿಧಾನವನ್ನು ವಿವರಿಸುವ ಗೃಹವೈದ್ಯ, ಬಾಣಂತಿ ಸಾಕಣೆಯ ಕುರಿತು ವಿವರವಾದ ಮಾಹಿತಿ ಇದೆ.

ಬೆಲೆ: ರೂ. 2—8—0

ಕವಿಭೂಷಣ ಕೆ. ಸಿ. ವೆಂಕಪ್ಪ ಶೆಟ್ಟಿ

ಭಾರತದ ಗುರುಕುಲ

(ಯಕ್ಷಗಾನ)

ಬೆಲೆ: 0 8 0

ಮದರಾಸು ಸರಕಾರದಿಂದ ಸಂಭಾವನೆ ಪಡೆದ ಗ್ರಂಥ.

ಸಾಹಸ ಭೀಮ ವಿಜಯ	0—8—0
ಲತ್ತಮಗಡೆ	0—6—0
ಭರತೇಶ ದಿಗ್ವಿಜಯ	0—8—0
ವಾಲಿ ಸುಗ್ರೀವ	0—8—0

ನವಭಾರತ ಪುಸ್ತಕ ಭಂಡಾರ, ಉಡುಪಿ.

ಮಂಗಳೂರು

ಮಂತ್ರಿ, ಎ. ಬಿ. ಶೆಟ್ಟರ ಜಿಲ್ಲಾ ಸಂಚಾರ ಕಾರ್ಯಕ್ರಮ— ಮದರಾಸು ಪ್ರಾಂತ್ಯ ಆರೋಗ್ಯ ಮಂತ್ರಿಗಳಾದ ಶ್ರೀ ಎ. ಬಿ. ಶೆಟ್ಟರು ಇದೇ ದಿನಾಂಕ ೨೮ನೇ ಸಂಜೆ ಮೈಲಿನಲ್ಲಿ ಮಂಗಳೂರಿಗೆ ಆಗಮಿಸಿ, ತಾ. ೨೯ರಂದು ಮಂಗಳೂರಲ್ಲೇ ಇದ್ದು ದಿನಾಂಕ ೩೦, ೩೧ರಂದು ಜಿಲ್ಲಾ ಸಂಚಾರ ಕೈಗೊಳ್ಳುವರೆಂದು ತಿಳಿದು ಬರುತ್ತದೆ. ತಾ. ೧ರಂದು ಕುಂದಾಪುರದಲ್ಲಿರುವರು. ದಿನಾಂಕ ೨ರಂದು ಉಡುಪಿ ತಾಲೂಕಿನ ವೃತ್ತಿಗೆ ಸಂಕವನ್ನುದ್ಘಾಟಿಸಿ, ತಾ. ೩ರಂದು ಹಿಂತೆರಳುವರು.

ಗುಡಿಕೈಗಾರಿಕೆ ಸಂಘದ ಯೋಜನೆ:— ದ. ಕ. ಜಿಲ್ಲೆಯಲ್ಲಿ ಪಣ್ಣಿನ ಮುರಬ್ಬ, ಹಾಲಿನ ಉತ್ಪತ್ತಿ, ದಬ್ಬಿದೂನು ಮೊದಲಾದುಗಳನ್ನು ತಯಾರಿಸಲು "ದ. ಕ. ಸಹಕಾರಿ ಗುಡಿಕೈಗಾರಿಕೆ ಸಂಘ" ಎಂಬ ಒಂದು ಸಂಸ್ಥೆಯನ್ನು ಸ್ಥಾಪಿಸುವ ಯೋಜನೆಯನ್ನು ಶ್ರೀ ಬಿ. ಆರ್. ಕರ್ಕೇರರ ಅಧ್ಯಕ್ಷತೆಯಲ್ಲಿ ದಿನಾಂಕ ೧೮ರಂದು ಜರಗಿದ ಸಭೆಯೊಂದರಲ್ಲಿ ನಿರ್ಣಯಿಸಲಾಯಿತು. ಇದಕ್ಕೆ ಮದರಾಸು ಸರಕಾರದ ಮತ್ತು ದಿಲ್ಲಿಯ ಇಂಡಸ್ಟ್ರಿಯಲ್ ಟ್ರಿಬ್ಯೂನಲ್ಲಿನ ಚೇರ್‌ಮೇನ್‌ರೊಂದಿಗೆ ಸಂಪರ್ಕ ಬೆಳೆಸಿ ಆರ್ಥಿಕ ಸಹಾಯ ಹಾಗೂ ರಫ್ತು ಮತ್ತು ವಿದೇಶ ವ್ಯಾಪಾರ ಮಾಡಲು ಸವಲತ್ತುಗಳನ್ನೊದಗಿಸುವರೆ ಪತ್ರವ್ಯವಹಾರ ಮಾಡಲು ಶ್ರೀ ಕರ್ಕೇರರಿಗೆ ಅಧಿಕಾರವೀಯಲಾಯಿತು.

ನೇಮಕಗಳು:— ಪೋಲಿಸ್ ಸುಪರಿಂಟೆಂಡೆಂಟ್ ಶ್ರೀ ಎ. ಕೃಷ್ಣಸ್ವಾಮಿಯವರ ಸ್ಥಾನಕ್ಕೆ ಶ್ರೀ ಒ. ಎ. ಮುತ್ತುಸ್ವಾಮಿ ಅಯ್ಯರರೂ, ತಹಸಿಲ್‌ದಾರ ಶ್ರೀ ಸಿ. ಯಸ್. ತಿಮ್ಮಪ್ಪ ಶೆಟ್ಟರು ಕೊಯಮತ್ತೂರು ಪಂಗಾಮಿ ಸ್ಪೆಶಲ್ ಡೆ| ಕಲೆಕ್ಟರರಾಗಿಯೂ ನೇಮಕವಾಗಿರುತ್ತಾರೆ.

ಸಭೆ:— ದಿನಾಂಕ ೨೦ರಂದು ಶ್ರೀ ವಿ. ಎಸ್. ಕುಡ್ವರ ಅಧ್ಯಕ್ಷತೆಯಲ್ಲಿ, ಸಿ. ಸಿ. ಸಿ. ಸಭಾ ಭವನದಲ್ಲಿ ರೋಟರಿ ಕ್ಲಬ್ಬಿನ ಸಭೆಯೊಂದು ಜರಗಿತು.

ಪ್ರಾರ್ಥನೆ, ವರದಿವಾಚನಗಳಾದ ಬಳಿಕ, ಭಾರತ ಮಲೇರಿಯಾ ಸಂಸ್ಥೆಯ ಅಸಿಸ್ಟಾಂಟ್ ಡೈರೆಕ್ಟರರಾದ ಡಾ| ಎ. ಕೃಷ್ಣಸ್ವಾಮಿಗಳವರು "ಕ್ರಿಮಿಗಳು ಮತ್ತು ರೋಗಗಳು" ಎಂಬ ವಿಷಯದಲ್ಲಿ ಭಾಷಣವಿತ್ತರು. ಅವರು ತಮ್ಮ ಭಾಷಣದಲ್ಲಿ—"ನಗರದಲ್ಲಿರುವ ಅನೇಕಾಲು ರೋಗವು ಜಿರಲೆ, ... ಕ್ರಿಮಿಗಳಿಂದ ಸಹ ಪ್ರಸಾರವಾ... ಭಾರತ ಸರಕಾರದವರು ಅನೇಕಾಲು... ರೋಧನವನ್ನು ಕೈಗೊಂಡಿದೆ. ಅವ... ದಾದೀತು. ನಲ್ಲಿನೀರು ಸರ... ಭೂಗತ ಚರಂಡಿ ... ರೊತೆಯಲ್ಲೇ ಅತ್ಯಗತ್ಯ... ಅಲ... ಡಾ|...

... ಗಳ ... ರ್ಗದ ... ಲಾಜ ... ಸಿದ ... ಮಹ ... ಬಳಿಕ ... ಪ್ರಾಣಾದಿಯಿಂದ ... ಸಭೆಯು ಮು...

ಸತ್ಕಾರ:— ದಿ... ಕ ... ಶ್ರೀ ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ನಗರದಲ್ಲಿ ಆನೇಕಾಲು ರೋಗ ನಿರೋಧ ಕಾರ್ಯಕ್ರಮ ಕೈಗೊಂಡ ಡಾ| ಎ. ಕೃಷ್ಣಸ್ವಾಮಿಯವರನ್ನು ಬೀಳ್ಕೊಡುವ ಸಭೆಯೊಂದು ಜರಗಿತು. ಡಾ| ಕೆ. ನಾಗಪ್ಪ ಆಳ್ವರೂ, ಅಧ್ಯಕ್ಷರೂ ಕೃಷ್ಣಸ್ವಾಮಿಯವರನ್ನು ಅಭಿನಂದಿಸಿದರು.

ಸಮ್ಮೇಲನ:— ದಿನಾಂಕ ೧೬ರಂದು ಶ್ರೀ ಡಿ. ಬಿ. ತೇಂಗಡಿಯವರು ಜನಸಂಘದ ಜಿಲ್ಲಾ ಸಮ್ಮೇಲನವನ್ನು ಉದ್ಘಾಟಿಸಿದರು. ಶ್ರೀ ಎಸ್. ನಾಗರಾಜರು ಅಧ್ಯಕ್ಷರಾಗಿದ್ದರು. ಶ್ರೀ ತೇಂಗಡಿಯವರು ತಮ್ಮ ಉದ್ಘಾಟನಾ ಭಾಷಣದಲ್ಲಿ ಅಖಿಲ ಭಾರತೀಯ ಮುಂಬಯಿಯ ಅಧಿವೇಶನದ ನಿರ್ಣಯಗಳನ್ನು ವಿವರಿಸಿದರು. ಉದ್ಘಾಟನಾ ಭಾಷಣದ ನಂತರ ಡಾ| ಶ್ಯಾಮಪ್ರಸಾದ ಮುಖರ್ಜಿಯವರ ನಿಧನದ ಬಗ್ಗೆ ಸಂತಾಪ ಸೂಚಿಸಲಾಯಿತು. ಕಾರ್ಯದರ್ಶಿ ಶ್ರೀ ಎಚ್. ಭಾಸ್ಕರ ರಾಯರು ಸಂಘದ ಚಟುವಟಿಕೆಗಳ ವರದಿಯನ್ನೋದಿದರು. ಆನಂತರ ಶ್ರೀಗಳಾದ ಜಗನ್ನಾಥ ರಾವ್, ಸುಬ್ರಹ್ಮಣ್ಯ ಸ್ವಾಮಿಯವರು ಭಾಷಣಗಳನ್ನಿತ್ತರು. ಭಾರತದಲ್ಲಿ ವಿದೇಶಿ ಮತಾಂತರ ವಿಲಯನ ಹೊಂದಬೇಕೆಂಬ; ಕರ್ನಾಟಕ ಪ್ರಾಂತಕ್ಕೆ ದ. ಕ. ಜಿಲ್ಲೆಯನ್ನು ಸೇರಿಸಬೇಕೆಂಬ; ನಗರದಲ್ಲಿ ತಿದ್ದಿದ ತೆರಿಗೆಯನ್ನು ರದ್ದುಗೊಳಿಸಬೇಕೆಂಬ; ಗೋಹತ್ಯೆಯನ್ನು ಕಾನೂನು ಮೂಲಕ ನಿಲ್ಲಿಸಬೇಕೆಂಬ; ಮದ್ರಾಸು ಸರಕಾರವು ಮಾಡಿದ ರೈತಹಿತ ಕಾನೂನನ್ನು ಅಭಿನಂದಿಸುತ್ತದೆ ಎಂಬ; ವಿದೇಶಿ ಮಿಶನರಿಗಳ ದೇಶಘಾತುಕತನವನ್ನು ಖಂಡಿಸುತ್ತದೆ ಎಂಬ ಠರಾವುಗಳು ಮಂಜೂರಾದುವು. ಸ್ವೀಕೃತ ಠರಾವುಗಳನ್ನು ಸಂಜೆ ಶ್ರೀ ಎಸ್. ನಾಗರಾಜರ ಅಧ್ಯಕ್ಷತೆಯಲ್ಲಿ ಸೇರಿದ ಬಹಿರಂಗ ಸಭೆಯಲ್ಲಿ ವಿವರಿಸಲಾಯಿತು.

ನರ್ತನ ಕಚೇರಿ:— ದಿನಾಂಕ ೨೨ರಂದು ಗಣಪತಿ ಹೈಸ್ಕೂಲಿನ ಶಾರದಾ ಸದನದಲ್ಲಿ, ಸ್ಥಳೀಯ ಕಲಾ ಪ್ರಸಾರ ಸಂಘದ ಆಶ್ರಯದಲ್ಲಿ ಕುಮಾರಿ ಶೋಭಾಧಾರೇಶ್ವರ್ ಇವರಿಂದ ನೃತ್ಯ ಪ್ರದರ್ಶನಗಳು ಜರಗಿದುವು. ಮುಂಬಯಿಯ ಶ್ರೀ ಅನಂತ್, ಎಸ್. ಧಾರೇಶ್ವರರ ಪತ್ರಪುತ್ರಿಯಾದ ಈಕೆ, ಅಲ್ಲಿನ ರೂಪಕಲಾಕೇಂದ್ರದ ಶ್ರೀ ಜಿ. ಎ. ರಮಣಿ ಹಾಗೂ ಶ್ರೀ ಕರುಣಾಕರ ಪಣಿಕ್ಕರರ ಶಿಷ್ಯಳಾಗಿದ್ದಾಳೆ. ಲಲಿತ ಕಲಾ ಕೇಂದ್ರದ ನಾಟ್ಯಾಚಾರ್ಯರಾದ ಶ್ರೀ ರಾಜನ್ ಅಯ್ಯರು ಸಹಕಾರ, ಪ್ರೋತ್ಸಾಹವಿತ್ತು ತಮ್ಮ ಕೇಂದ್ರದ ಉತ್ತಮ ನೋಟ ವಾದ್ಯವನ್ನು ಒದಗಿಸಿದ್ದರು. ಆಕೆ ಶಂಕರಾಭರಣ, ಅಲರಿಪ್ಪು, ಕಥಕ್ಕಳಿ, ಮಧುರಾ ನಗರಿಲೋ—ಇವೇ ಮೊದಲಾದ ಒಂಭತ್ತು ನೃತ್ಯಗಳನ್ನು ಯಶಸ್ವಿಯಾಗಿ ಅಭಿನಯಿಸಿದಳು.

ದಿನಾಚರಣೆ:— ದಿನಾಂಕ ೨೨ರಂದು ಸ್ಥಳೀಯ ಎಸ್. ಕೆ. ಸಿ. ಕೊ-ಓಪರೇಟಿವ್ ಬ್ಯಾಂಕಿನ ಮಾಳಿಗೆಯಲ್ಲಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಸ್ಥಳೀಯ ಗವರ್ನಮೆಂಟ್ ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ದಿವಂಗತ ಶ್ರೀ ಎಂ. ಐ. ಹಾಶಿಮಿಯವರ ನಿಧನದ ದಿನಾಚರಣೆಯು ಆಚರಿಸಲ್ಪಟ್ಟಿತು. ಪ್ರಾರ್ಥನೆ, ಸಂದೇಶ, ಭಾಷಣಗಳು ಜರಗಿದುವು. ಹಾಶಿಮಿ ದಿನಾಚರಣೆ ಸಮಿತಿಯ ಕಾರ್ಯದರ್ಶಿ ಶ್ರೀ ಎಸ್. ಎಂ. ಖಾದಿಯವರು ಧನ್ಯವಾದವಿತ್ತರು.

ಕುರುಕಾಲು:— ಕುಂಜಾರು ಗಿರಿಜಾ ಹಾಯರ್ ಎಲಿಮೆಂಟರಿ, ಕುರುಕಾಲು ಗಣಪತಿ ಲೋವರ್ ಎಲಿಮೆಂಟರಿ—ಈ ಎರಡು ಶಾಲೆಗಳ ಸಂಯುಕ್ತ ವಾರ್ಷಿಕೋತ್ಸವವು ತಾ. 10—6—54ನೇ ರಾತ್ರಿ ಘಂಟೆ 8-30 ಕ್ಕೆ ಶ್ರೀ ಟಿ. ಎ. ಪೈ, ಎಂ. ಏಲ್. ಎ. ಇವರ ಅಧ್ಯಕ್ಷತೆಯಲ್ಲಿ ಜರಗಿತು. ಮಂತ್ರಿ ಮಾನ್ಯ ಎ. ಬಿ. ಶೆಟ್ಟಿ, ಶ್ರೀ ಎಸ್. ಎಸ್. ಕೊಳ್ಕೆಬೈಲ್ ಎಂ. ಎಲ್. ಎ., ಕೋಓಪರೇಟಿವ್ ಡಿಸ್ಟ್ರಿಕ್ಟ್ ಸ್ಟಾರ್ ಶ್ರೀ ಎಮ್. ಕೃಷ್ಣ ಶೆಟ್ಟಿ, ಶ್ರೀ ಟಿ. ರಮೇಶ ಪೈ ಮೊದಲಾದವರಿಂದ ಬಂದ ಸಂದೇಶ ಪತ್ರಗಳನ್ನು ಸಭೆಯಲ್ಲಿ ಓದಲಾಯ್ತು. ಮೆನೇಜರ್ ಶ್ರೀ ಕುರುಕಾಲು ಗಣಪಯ್ಯ ಶೆಟ್ಟರು ಸ್ವಾಗತ ಭಾಷಣವನ್ನೂ, ಮುಖ್ಯೋಪಾಧ್ಯಾಯರುಗಳಾದ ಶ್ರೀ ಕೆ. ವಾಸು ಶೆಟ್ರು ಮತ್ತು ಶ್ರೀ ಕೆ. ಕಿಟ್ಟು ಶೆಟ್ರು ಉಭಯ ಶಾಲೆಗಳ ವರದಿವಾಚನವನ್ನು ಮಾಡಿದರು. ಶಾಲಾ ಹಳೆವಿದ್ಯಾರ್ಥಿ ಶ್ರೀ ಕೆ. ನಾರಾಯಣ ಭಟ್ ಬಿ. ಎ. ಯವರಿಂದ ಸ್ವಸ್ತಿವಾಚನವೂ, ಶ್ರೀಮತಿ ಪ್ರೇಮಾ, ಎ. ಪೈಯವರಿಂದ ಬಹುಮಾನವಿತರಣೆಯೂ ಜರಗಿತು. ಸಭಿಕರ ಪರವಾಗಿ ಶ್ರೀ ಎ. ಜೆ. ಆಳ್ವರೆಯವರು ತಮ್ಮ ಭಾಷಣದಲ್ಲಿ ಹೆತ್ತವರ ಕರ್ತವ್ಯವನ್ನು ನಿರೂಪಿಸಿ ಮಾತನಾಡಿದರು. ಅಧ್ಯಕ್ಷರು ತಿದ್ದಿದ ಪ್ರಾಥಮಿಕ ವಿದ್ಯಾಯೋಜನೆಯನ್ನು ಮದ್ರಾಸು ಸರಕಾರವು ರದ್ದುಗೊಳಿಸಿ ಬರುವ ಶಾಲಾ ವರ್ಷದಿಂದ ಹಳೇಕ್ರಮವನ್ನೇ ಜ್ಯಾರಿಗೆ ತರಲಿರುವ ಯುಕ್ತಾಯುಕ್ತತೆಗಳನ್ನು ವಿಮರ್ಶಿಸಿ ಸುರಸವಾದ ಭಾಷಣವಿತ್ತರು. ನಂತರ ಬಾಲಕಿಯರಿಂದ "ಗುರುದಕ್ಷಿಣೆ" ಎಂಬ ಕನ್ನಡ ನಾಟಕವೂ, ಬಾಲಕರಿಂದ "ವನಿತ ಬರವು" ಎಂಬ ತುಳು, "ಪನ್ನಾದಾಸಿ" ಎಂಬ ಕನ್ನಡ ನಾಟಕಗಳೂ ಉತ್ತಮ ರೀತಿಯಲ್ಲಿ ಅಭಿನಯಿಸಲ್ಪಟ್ಟವು. ಈ ಸಮಾರಂಭಕ್ಕೆ ಸುಮಾರು ಎರಡು ಸಾವಿರಕ್ಕೆ ಮಿಕ್ಕಿದ ಜನಸಮೂಹವು ನೆರೆದಿದ್ದು ಉತ್ತಮವಾಗಿ ಪ್ರದರ್ಶಿಸಲ್ಪಟ್ಟ ನಾಟಕಗಳನ್ನು ಕಣ್ತುಂಬನೋಡಿ ಆನಂದಭರಿತರಾದ ಸಭಿಕರು ನಟವರ್ಗಕ್ಕೆ ವಿವಿಧ ಪಾರಿತೋಷಕಗಳನ್ನು ಕೊಡಿಸಿದ ಬಳಿಕ ಧನ್ಯವಾದಾರ್ಪಣೆ, ರಾಷ್ಟ್ರಗೀತೆಯೊಂದಿಗೆ ರಾತ್ರಿ ಘಂಟೆ 3 ಕ್ಕೆ ಸಮಾರಂಭವು ಮುಕ್ತಾಯವಾಯ್ತು.

ಅಂದು ಬೆಳಿಗ್ಗೆ ಕುಂಜಾರು ಶಾಲಾ ಬಳಿಯಲ್ಲಿ ಶ್ರೀ ಕೆ. ರಾಮಕೃಷ್ಣ ಭಟ್ಟರಿಂದ ಧ್ವಜಾರೋಹಣ, ಶ್ರೀ ಬಿ. ವಾಸುದೇವ ಭಟ್ಟರಿಂದ ತಿಂಡಿ ಪಂಚೋಣವೂ, ಕುರುಕಾಲು ಶಾಲಾ ಬಳಿಯಲ್ಲಿ ಶ್ರೀ ಕೆ. ಅನಂತಪ್ರಭು ಭಟ್ಟರಿಂದ ಧ್ವಜಾರೋಹಣ, ಬಗ್ಗದಿಕಲ್ಲು ಶ್ರೀ ಕೆ. ಪುಂಡಲೀಕ ಕಾಮತರಿಂದ ತಿಂಡಿ ಪಂಚೋಣವೂ ಸುಸೂತ್ರವಾಗಿ ಜರಗಿತ್ತು.

ಕಾವ್ರಾಡಿ:— ದಿನಾಂಕ ೧೮ರಂದು ಕಾವ್ರಾಡಿ ರಾಮಣ್ಣ ಶೆಟ್ಟರು ತಮ್ಮ ೬೭ನೇ ವಯಸ್ಸಿನಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಕಟಪಾಡಿ:— ಸ್ಥಳೀಯ 'ವಿದ್ಯಾರ್ಥಿಗಳ ಕಲಾ ಸಂಘ'ದ ಮೊದಲನೇ ಕೂಟವು ದಿನಾಂಕ ೧೧ ಮತ್ತು ೧೨ರಂದು ಜರಗಿತು. ಸಂಘದ ಆಶ್ರಯದಲ್ಲಿ ನಡೆಸಿಕೊಂಡು ಬರುವ ಪುಸ್ತಕಾಲಯವನ್ನು ಜನತೆಗೆ ಅನುಕೂಲವಾಗುವಂತೆ ಬೆಳೆಸಬೇಕೆಂದೂ ನಿರ್ಧರಿಸಲಾಯಿತು. ಸಂಘದ ಅಧ್ಯಕ್ಷರಾಗಿ ಶ್ರೀ ಕೆ. ಸುರೇಂದ್ರ ಕಾಮತರೂ, ಶ್ರೀ ಕೃಷ್ಣಾನಂದ ಹೆಗ್ಡೇರು ಉ. ಅಧ್ಯಕ್ಷರಾಗಿಯೂ ಯಶವಂತ ಕಾಮತರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು.

ಕಿದಿಯೂರು:— ಸ್ಥಳೀಯ ಶಾಲಾ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ದಿನಾಂಕ ೨೩ರಂದು ಶ್ರೀ ಎ. ಸುಬ್ರಾಯ ಆಚಾರ್ಯ, ವಿದ್ವಾನ್., ಇವರ ಅಧ್ಯಕ್ಷತೆಯಲ್ಲಿ ಜರಗಿತು. ಸ್ವಾಗತ ಭಾಷಣ, ವರದಿವಾಚನ, ಸಭಿಕರ ಮತ್ತು ಅಧ್ಯಕ್ಷರ ಭಾಷಣಗಳಾದ ತರುವಾಯ ವಿವಿಧ ವಿನೋದಾವಳಿಗಳು ಜರಗಿದುವು. ಡಾ| ಕೆ. ಆರ್. ಭಾಗವತರು ಧನ್ಯವಾದಗಳನ್ನಿತ್ತರು.

ಈಧಂಕೊಲ್ಲಂಜಿ— ಮೂಡುಬಿದಿರೆ ಸ್ಥಳೀಯ ಜೈನ್ ಹೈಸ್ಕೂಲಿನ ಮಹಾವೀರ ಸಮಾಜ ಸೇವಾದಳದ ೧೫ ದಿನಗಳ ಶಿಬಿರದ ಮುಕ್ತಾಯವೂ, ಶ್ರೀ ಮಂಜಯ್ಯ ಎಲಿಮೆಂಟರಿ ಶಾಲೆಯ ವರ್ಧಂತ್ಯುತ್ಸವವೂ ಶ್ರೀ ವಿ. ರಮಣ್ಣನ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಅಧ್ಯಕ್ಷರು ದಳವು ಮುಗಿಸಾದಿನಲ್ಲಿ ಕೈಗೊಂಡ ಕಾರ್ಯಕ್ರಮಗಳನ್ನು ಹೊಗಳಿದರು. ದಳದ ಪರವಾಗಿ ಶ್ರೀ ಕೆ. ಕೆ. ಪೈಗಳೂ, ಶಾಲೆಯ ಪರವಾಗಿ ಶ್ರೀ ಧರ್ಮಪಾಲ್ ಜೈನಿಯವರೂ ಧನ್ಯವಾದಗಳನ್ನರ್ಪಿಸಿದರು.

ಸುರತ್ಕಲ್:— ಸ್ಥಳೀಯ ಮುಕ್ಕ ಮಿತ್ರ ಪಟ್ಟಣ ಗಂಗಯ್ಯ ಸ್ಮಾರಕ ಫಂಡಿನ ವಾರ್ಷಿಕೋತ್ಸವವು ದಿನಾಂಕ ೧೬ರಲ್ಲು ಶ್ರೀ ಯಜ್. ಗಣೇಶ ಶೆಣೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಇದರ ಅಂಗವಾಗಿ ನಾಲ್ಕು ದಿನಗಳ ತನಕ ಕೀರ್ತನೆ, ಗೀತಾನೃತ್ಯ, ಹರಿಕಥೆಗಳು ಜರಗಿದುವು.

ಹಿರಿಯಡಕ:— ಸ್ಥಳೀಯ ಬೋ| ಎ. ಶಾಲೆಯ ವರ್ಧಂತಿಯು ದಿನಾಂಕ ೧೫ರಂದು ಶ್ರೀ ಎಚ್. ಸಂಜೀವ ರಾವ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಕನ್ನಡ ಸಂಗೀತ ನಾಟಕ, ಯಕ್ಷಗಾನ ನಾಟಕಗಳೂ, ವಿವಿಧ ವಿನೋದಾವಳಿಗಳೂ ಜರಗಿದುವು.

ಶ್ರೀ ರಜಕ ಸಂಘ, ಮುಂಬಯಿ.
183, ಬಜಾರ್ ಗೇಟ್ ಸ್ಟ್ರೀಟ್,
ಕೋಟೆ, ಮುಂಬಯಿ.

ಈ ಮೇಲಿನ ಸಂಘದ ವಿದ್ಯಾ ಪ್ರಚಾರ ಸಮಿತಿಯು ದಕ್ಷಿಣ ಕನ್ನಡ ಜಿಲ್ಲೆಯ ಬಡರಜಕ (ಅಗಸ) ಜಾತಿಯ ವಿದ್ಯಾರ್ಥಿಗಳಿಗೆ ಪ್ರತಿ ವರ್ಷದಂತೆ ಈ ವರ್ಷವೂ ತರಗತಿ ಐದರಿಂದ ಮೆಟ್ರಿಕ್ಯುಲೇಶನ್ ವರೆಗೆ ವಿದ್ಯಾರ್ಥಿವೇತನ ಕೊಡುವುದಾಗಿ ನಿಶ್ಚಯಿಸಿರುವುದು. ಅದ್ದರಿಂದ ವಿದ್ಯಾರ್ಥಿವೇತನವನ್ನು ಪಡೆಯಲು ಅರ್ಜಿ ನಮೂನೆಗಳು ಸಂಘಕ್ಕೆ ಬರೆದು ಅವರ ಅರ್ಜಿ ಪತ್ರವನ್ನು ಪಡೆದು ಇದೇ ಬರುವ ಜುಲಾಯಿ ತಾರೀಕು 15ರ ಒಳಗೆ ಅದನ್ನು ಮುಂಬಯಿಗೆ ಕಳುಹಿಸಬೇಕಾಗಿ ವಿನಂತಿ. ವಿಲಂಬವಾಗಿ ಬಂದ ಅರ್ಜಿಪತ್ರಗಳತ್ತ ಗಮನವನ್ನೀಯಲಾಗುವುದಿಲ್ಲ.

ಬಿ. ಯಲ್. ಬಂಗೇರ,
ಗೌ. ಕಾರ್ಯದರ್ಶಿ.

ಮುಚ್ಚಿದರೆ ಮುಗುಳು! ಬಿಚ್ಚಿದರೆ ಅರಳು!

ಚಿಕ್ಕ ಮಕ್ಕಳ ಅಕ್ಕರೆಯ ಕವಿತಾ ಕುಸುಮವೇ—

ಶ್ರೀ. ಕೆ. ಹೊನ್ನಯ್ಯ ಶೆಟ್ಟರ—

ಮುಗುಳು

ದಿ| ಶ್ರೀ. ಕಡೆಕಾರು ರಾಜಗೋಪಾಲ ಕೃಷ್ಣರಾಯರ ಮುನ್ನುಡಿ.

ಶಾಲೆಗಳ ಉಪಯೋಗಾರ್ಥವಾಗಿ ಮದ್ರಾಸು ಮಂಜೂರಾತಿ ಪಡೆದ ಚೊಕ್ಕ ಪುಸ್ತಕ.

ವಿದ್ಯಾರ್ಥಿಗಳು ನಲಿ ನಲಿದು ಓದುವುದು, ಓದಿ ಓದಿ ನಲಿವುದರಿಂದ

ಈಗ ೨ನೇ ಮುದ್ರಣವನ್ನು ಕಂಡಿದೆ—

ಅಭಿನಯಕ್ಕೆ, ಕೋಲಾಟಕ್ಕೆ, ನರ್ತನಕ್ಕೆ ಅನುಕೂಲವಾದ ಪದ್ಯಗಳು,

ತ್ರಿವರ್ಣ ಮುಖಪತ್ರ, ಇಷ್ಟಾದರೂ ಬೆಲೆ: ೦—೬—೦ (ಟ. ಖರ್ಚು ಬೇರೆ.)

ಪ್ರತಿಗಳು ಎಲ್ಲ ಪುಸ್ತಕ ವ್ಯಾಪಾರಿಗಳಲ್ಲೂ ದೊರೆಯುತ್ತವೆ.

ವಿಕ್ರಯಾಧಿಕಾರಿಗಳು:— ನವಭಾರತ ಪುಸ್ತಕ ಭಂಡಾರ, ಉಡುಪಿ. ದ. ಕ.

"ನಮ್ಮ ಉಡುಪಿಯ ಪ್ರಸಿದ್ಧ ಪಾತ್ರೆ ವ್ಯಾಪಾರಿಗಳಾದ **ಶ್ರೀಯುತ ಕಲ್ಮಂಜೆ ವ್ಯಾಸಾಚಾರ್ಯರವರ** ಆಕಸ್ಮಿಕ ನಿಧನದ ಸಂಗತಿ ತಿಳಿದ ಅನೇಕ ಅವರ ಇಷ್ಟಮಿತ್ರ ಬಂಧು ವರ್ಗದವರೂ, ಸಂಘದವರೂ, ಕುಟುಂಬಿಗಳ ದುಃಖದಲ್ಲಿ ಸಹಭಾಗಿಗಳಾಗಿ ದುಃಖಸೂಚಕ ಸಂದೇಶಗಳನ್ನು ಕಳುಹಿಸಿರುವರು. ಈ ವಿಚಾರದಲ್ಲಿ ನಮ್ಮ ದುಃಖ ಪಿತಾಭಾಗಿಗಳಾದ ಎಲ್ಲರಿಗೂ ನಾವು ಚಿರ ಋಣಿಗಳಾಗಿರುವೆವು.

ಕೆ. ಲಕ್ಷ್ಮಿ ನರಸಿಂಹ ಉಪಾಧ್ಯಾಯ.

(೩ನೇ ಪುಟದಿಂದ)

ಬೀಸಿ ಮತಾಂತರಗೊಳಿಸಲು ಆವರು ನೋಡಿದರು. ಇದಕ್ಕೆ ಉತ್ತಮ ಫಲವ್ರಾಪ್ತಿಯಾಯಿತು. ಮದ್ರಾಸಿನಲ್ಲಿ ಈ ಪ್ರಯೋಗ ಬಹಳ ಯಶಸ್ಸನ್ನು ಹೊಂದಿತು; ಹಾಗೆಂದು ಕಾಲಾಂತರದಲ್ಲಿ ಇಲ್ಲಿಯೂ ತೊಂದರೆಗಳು ಕಾಣಿಸಿಕೊಂಡವು—ಆಗ, ಮಿಶನರಿಗಳು ಅನಾಥ ಮಕ್ಕಳನ್ನು ಪೋಷಿಸಿ, ಅವರಿಗೆ ಕ್ರೈಸ್ತಧರ್ಮದ ದೀಕ್ಷೆಯನ್ನು ಕೊಡಹತ್ತಿದರು. ಇಂತಹ ನಿರ್ಗತಿಕ ಮಕ್ಕಳ ಸಂಖ್ಯೆಯು ನಮ್ಮ ದೇಶದಲ್ಲಿ ಸಾಕಷ್ಟು ಹೆಚ್ಚು ಪ್ರಮಾಣದಲ್ಲಿ ಇರುವುದಿಲ್ಲ. ಕಾರಣ, ಮಿಶನರಿಗಳು ಮತಾಂತರ ಕಾರ್ಯಕ್ಕೆ ಇನ್ನೂ ವಿಸ್ತಾರವಾದ ಪ್ರತ್ಯೇಕ ಕ್ಷೇತ್ರವೊಂದನು ಆರಿಸ್ಸಿಕೊಳ್ಳುವ ಅಗತ್ಯವುಂಟಾಯಿತು. ಗುಡ್ಡಗಾಡು ಪ್ರದೇಶದಲ್ಲಿ ನೆಲಸುವ ಮನುಷ್ಯರತ್ತ ಮಿಶನರಿಗಳ ಗಮನ ಹರಿದದ್ದು ಹೀಗೆ— ಈ ಕಾಡುಮನುಷ್ಯರ ಬುದ್ಧಿಯು ನಮ್ಮವರಂತೆ ಬೆಳೆದಿರುವುದಿಲ್ಲ. ಮನುಷ್ಯ ಶಾಸ್ತ್ರಜ್ಞರ ಅಭಿಪ್ರಾಯದಂತೆ, ಅವರ ಮನಸ್ಸು ಮಕ್ಕಳ ಮನಸ್ಸಿನಷ್ಟೇ ಅಪ್ರಬುದ್ಧವಿರುತ್ತದೆ. ಹೀಗಾದುದರಿಂದ, ಗುಡ್ಡಗಾಡು ಪ್ರದೇಶಗಳಲ್ಲಿ ಮಿಶನರಿಗಳ ಕುಹಕ ಕಾರ್ಯ ನಿರಾತಂಕವಾಗಿ, ನಿರಂತರವಾಗಿ ನಡೆಯಿತು. ಇಂದು ಮಿಶನರಿಗಳ ಬಲ ಉಳಿದಿದ್ದರೆ, ಅದು ಗುಡ್ಡಗಾಡು ಪ್ರದೇಶದಲ್ಲಿ ಮಾತ್ರ. ಮಿಶನರಿಗಳು ಅನಾಗರಿಕರಿಗೆ ಆಧುನಿಕ ಜ್ಞಾನವನ್ನೂ ವೈಜ್ಞಾನಿಕ ಚಮತ್ಕಾರಗಳ ಪರಿಚಯವನ್ನೂ ಒದಗಿಸಿಕೊಟ್ಟರು; ಶಾಲೆಗಳನ್ನೂ ಆಸ್ಪತ್ರೆಗಳನ್ನೂ ತೆರೆದರು. ಪರಿಣಾಮವಾಗಿ, ಗುಡ್ಡಗಾಡು ಜನರಲ್ಲಿಯೇ ಕೆಲವು ಧುರೀಣರು ಕಾಣುವಂತಾಯಿತು. ಈ ಕೆಲಸದ ನಡುವೆ ಮಿಶನರಿಗಳು ತುಸು ರಾಜಕೀಯ ಚದುರಂಗದಾಟವನ್ನೂ ನಡೆಸಿದರು—ಬ್ರಿಟಿಷರ ಕಾಲು ಸರಿದ ಬಳಿಕ ಗುಡ್ಡಗಾಡು ಜನರಲ್ಲಿ ರಾಷ್ಟ್ರದ್ರೋಹದ ಭಾವನೆಯನ್ನು ಅವರು ಬಿತ್ತಿದರು. ಭಾರತವು ಸ್ವತಂತ್ರಗೊಂಡಂತೆ ಗುಡ್ಡಗಾಡು ಪ್ರದೇಶಗಳೂ ಸ್ವತಂತ್ರಗೊಳ್ಳಬೇಕೆಂದು ಅವರು ಉಪದೇಶಿಸತೊಡಗಿದರು. ಭಾರತ ಸರಕಾರವು ಇದನ್ನು ಅಪ್ರಿಯ ಬೆಳವಣಿಗೆಯಾಗಿ ಭಾವಿಸಿದ್ದು ಸಹಜ. ರಾಜಕೀಯದಲ್ಲಿ ಮಿಶನರಿಗಳು ಪ್ರವೇಶಿಸುವುದು ಇಷ್ಟವಿರಲಿಲ್ಲ—ಅವರ ಧಾರ್ಮಿಕ ಉದ್ದೇಶಗಳಿಗೆ ರಾಜಕೀಯವು ಪೂರಕ ಸಾಧನವಾಗಿರಲೂ ಇಲ್ಲ. ಏಕೆಂದರೆ ನೆಹರೂರವರು ಸ್ಪಷ್ಟಪಡಿಸಿದಂತೆ, ಧಾರ್ಮಿಕ ಸ್ವಾತಂತ್ರ್ಯವು ಭಾರತದಲ್ಲಿ ಎಲ್ಲರಿಗೂ ಸಮನಾಗಿ ದೊರಕಲಾಗಿದ್ದು, ಯಾವುದೇ ಪ್ರಕಾರದಲ್ಲಿ ವ್ಯತ್ಯಯ ತರಲು ರಾಜಕಾರಣಿಗಳು ಪ್ರಯತ್ನಿಸಿಲ್ಲ. ಹೀಗಿದ್ದರೂ ರಾಜಕೀಯದಲ್ಲಿ ಮಿಶನರಿಗಳು ಆಸಕ್ತಿತೋರಿಸಿದ್ದರೆ, ಅದಕ್ಕೆ ಕಾರಣವು ಬಲವಾಗಿಯೇ ಇದೆ—ಮಿಶನರಿಗಳು ತಮ್ಮ ಧರ್ಮದ ಕಡೆಗೆ ಶುದ್ಧ ಧಾರ್ಮಿಕ ಪ್ರಚಾರದಿಂದ ಜನರನ್ನು ಆಕರ್ಷಿಸಲು ಅಶಕ್ತರಾದರು; ಪಾಶ್ಚಾತ್ಯ ಶಿಕ್ಷಣ ಮತ್ತು ವಿಜ್ಞಾನದ ಪ್ರಯೋಜನವನ್ನು ಕೊಡಮಾಡುವ ಮೂಲಕವೂ ರಾಜಕೀಯ ಆಮಿಷವನ್ನು ತೋರಿಸಿಯೂ ಅವರು ಮತಾಂತರದ ಕಾರ್ಯ ನಡೆಸಿದರು. ಐಹಿಕ ಸುಖವನ್ನೆ ಆಧ್ಯಾತ್ಮಿಕ ಉದ್ಧಾರಕ್ಕಿಂತ ಮೇಲೆತ್ತುವ ಈ ಪ್ರಯತ್ನ ಯೇಸುವಿನ ಉಪದೇಶಕ್ಕೆ ವ್ಯತಿರಿಕ್ತವಿರುತ್ತದೆ. ಧಾರ್ಮಿಕ ಜೀವನದ ಮೇಲೆ ಪರಿಣಾಮ ಬೀರದೆ ಐಹಿಕ ತಳಹದಿಯ ಮೇಲಷ್ಟೇ ಕೆಲಸ ಮಾಡುವ ಮಿಶನರಿಗಳು ಧರ್ಮ ಬೋಧಕರು ಹೌದೇ ಎಂಬಲ್ಲಿಯವರೆಗೆ ಈಗ ಅವರ ಚಟುವಟಿಕೆಗಳು ಜುಗುಪ್ಸೆಯನ್ನು ತಂದಿರುತ್ತವೆ. ಈ ದೌರ್ಬಲ್ಯವನ್ನು ಕೆಲವು ಪಾರದರ್ಶಿಯುರೋಪಿಯನರೂ ಮನವರಿಕೆ ಮಾಡಿಕೊಂಡಿರುವರು. ಕ್ರೈಸ್ತ ಧರ್ಮವು ಭಾರತೀಯರಿಗೆ ಪ್ರಿಯವಾಗದಿರುವುದಕ್ಕೆ ಇಲ್ಲಿ ಹರಿಯುತ್ತಿರುವ— ಪಾಶ್ಚಾತ್ಯದ ವೈಶಿಷ್ಟ್ಯಕ್ಕೆ ಅಗೋಚರವೆನಿಸಿದ-ಪ್ರಾಚೀನ ಆಧ್ಯಾತ್ಮಿಕ ಪ್ರವಾಹವೇ ಕಾರಣವೆಂದು ಪಾದರಿ ಸ್ಪಷ್ಟ ಅಭಿಪ್ರಾಯ. ಈ ವಿಚಾರಸರಣಿಯು ಎಷ್ಟು ಉಚ್ಚ ಮಟ್ಟದ್ದೆಂದರೆ, ಕ್ರೈಸ್ತ ಧರ್ಮವು ಅನಾಗರಿಕರೆನಿಸಿದ ಗುಡ್ಡಗಾಡು ಜನರನ್ನು ಮಾತ್ರ ಮೆಚ್ಚಿಸಲು ಸಮರ್ಥವಾಯಿತು; ಶ್ರೇಷ್ಠ ಹಿಂದೂಗಳು ಯೇಸುವಿನ ಬೋಧನೆಗಿಂತಲೂ ಮಿಗಿಲಾದ ಆಧ್ಯಾತ್ಮಿಕ ಜಾಗೃತಿಯನ್ನು ಹೊಂದಿದ್ದರು. ಇಂತಹ ಹಿಂದುಗಳ ವಿರುದ್ಧ ಮಿಶನರಿಗಳು ಎಷ್ಟೇ ಪ್ರಚಾರ ಕಾರ್ಯವನ್ನು ಕೈಗೊಂಡರೂ, ಅದು ಇಚ್ಛಿತ ಫಲವನ್ನುಂಟು ಮಾಡಲಿಲ್ಲ. ತಾಮಸ ಹೃದಯದ ದುರ್ಜನರೆಂದು ಮಿಶನರಿಗಳಿಂದ ಕರೆಯಲ್ಪಡುತಿದ್ದ ಹಿಂದುಗಳು ತಮಗೆ ಬಗೆಯಲಾದ ಅನ್ಯಾಯವನ್ನು ಉಪೇಕ್ಷೆಯಿಂದ ನೋಡಿ, ಮಿಶನರಿಗಳ ಅಪಪ್ರಚಾರವನ್ನು ದೊಡ್ಡ ಮನಸ್ಸಿನಿಂದ ಕ್ಷಮಿಸಿ ಬಿಡುತಿದ್ದರು.

೦೦

ನಮ್ಮ ಕ್ರೈಸ್ತರ ಸಾಮಾಜಿಕ ಜೀವನವು ಅಷ್ಟು ಸುಖಕರವೆಂದು ಹೇಳುವಂತಿಲ್ಲ—ಧರ್ಮಾಂತರದಿಂದ ಯಾವ ಸ್ವರ್ಗವೂ ದೊರೆತದ್ದಿಲ್ಲ. ಬದಲು ಮತಾಂತರಗೊಳಿಸಲಾದವರು ಅನೇಕ ದ್ವಂದ್ವಗಳನ್ನು ಇದಿರಿಸಬೇಕಾಯಿತು. ಬಿಳಿಯರು—ಕರಿಯರು ಎಂಬ ವರ್ಣಭೇದ ಕಡೆಯವರೆಗೂ ಉಳಿಯಿತು. ಹಿಂದುಗಳಲ್ಲಿ ಉಚ್ಚ ವರ್ಣರಾದವರು ಕೂಡ, ಮತಾಂತರ ಹೊಂದಿದ ಬಳಿಕ, ತಮ್ಮ ಉಚ್ಚ ಮಟ್ಟವನ್ನು ಕಾಯ್ದುಕೊಳ್ಳಲು ನೋಡಿದರು. ಕೇರಳದಲ್ಲಿ ಇದಕ್ಕೆ ನಿದರ್ಶನವುಂಟು—ಜಾತಿಭೇದವನ್ನು ಯೇಸುವಿನ ಉಪದೇಶದ ಮೋಹ ಹೊಡೆದುಹಾಕಲಿಲ್ಲ. ಮಾನವನ ಸಮಾನತ್ವದ ಮೌಲ್ಯವನ್ನು ಸಾರುವ ಕ್ರೈಸ್ತಧರ್ಮ ಭಾರತದಲ್ಲಿ ಪೆಟ್ಟುತಿಂದಿತು. ವರ್ಣಭೇದವು ಅಳಿಯಲಿಲ್ಲವಾದುದರಿಂದ ಎಲ್ಲ ಕ್ರೈಸ್ತರೊಡನೆ ವೈವಾಹಿಕ ಸಂಬಂಧ ಕೂಡಿಬರಲಿಲ್ಲ. ಅಲ್ಲಿಯೂ ಜಾತಿಯ ಪರಿಮಿತಿ ಮೂಡಿಬಂತು—ಮೇಲಾಗಿ ಬ್ರಿಟಿಷ ಕಾಲದಲ್ಲಿ ಬಿಳಿಯರು ದೇಶೀಯ ಕ್ರೈಸ್ತರೊಡನೆ ವಿವಾಹಬಾಹಿರ ಸಂಬಂಧವನ್ನು ಬೆಳೆಸಿಕೊಂಡು ಮಿಶ್ರ ಸಂತತಿಯೊಂದಕ್ಕೆ ಜನ್ಮವಿತ್ತರು. ಇಂದು ನಾವು ಆಂಗ್ಲೋ—ಇಂಡಿಯನರೆಂದು ಕರೆಯುವವರ ಮೇಲೆ ತಮ್ಮ ತಂದೆಯ ಧರ್ಮವಿದ್ದರೂ, ಬಿದ್ದಿದ್ದರೂ, ಅವರ ಇಗರ್ಜಿಗಳಲ್ಲಿ ಮಕ್ಕಳು ಪ್ರವೇಶಿಸಲಾರರು. ಇತರ ಕ್ರೈಸ್ತರೂ ಈ ಜನರೊಡನೆ ಕೂಡಿ ನಡೆಯುವುದಿಲ್ಲ; ಬದಲು ಮಿಶ್ರ ಸಂತತಿಯ ಕುರಿತು ಹೇಯವಾದ ಭಾವನೆಯೇ ಕ್ರೈಸ್ತರಲ್ಲಿ ಕಂಡು ಬರುತ್ತದೆ. ಸಾಮಾಜಿಕ ಜೀವನದಲ್ಲಿ ಮೇಲೆ ಬರುವಂತೆ ಸರಕಾರದವರಾದರೂ ಕ್ರೈಸ್ತರಿಗೆ ವಿಶೇಷ ಸೌಕರ್ಯಗಳನ್ನು ಕೊಡಲಿಲ್ಲ-ಹಿಂದೆ ಮುಸ್ಲಿಮರು ರಾಜನ ದರ್ಬಾರುಗಳಲ್ಲಿ ವಿಶೇಷವಾದ ಪದವಿಗಳನ್ನು ಕೊಟ್ಟು, ಮತಾಂತರಗೊಳಿಸಿದವರನ್ನು ಪಟ್ಟಕ್ಕೇರಿಸುತಿದ್ದರು. ಬ್ರಿಟಿಷರು ಆ ಸಂಪ್ರದಾಯವನ್ನು ಅನುಸರಿಸಲಿಲ್ಲ. ಕ್ರೈಸ್ತರ ಹಿನ್ನಡೆಗೆ ಇದೂ ಒಂದು ಕಾರಣ. ಭಾರತದಲ್ಲಿ ಸದಾ ಜಾಗೃತವಿದ್ದ ಧಾರ್ಮಿಕ ಭಾವನೆಯು ಮಿಶನರಿಗಳ ಭೂತದಯಾಪರ ಕಾರ್ಯವನ್ನು ಸಹಾನುಭೂತಿಯಿಂದ ಕಾಣುತಿದ್ದರೂ "ಕ್ರೈಸ್ತರಾದವರಿಗೆ ಮಾತ್ರ ಸ್ವರ್ಗ; ಉಳಿದವರಿಗೆಲ್ಲ ಅನಂತ ನರಕ" ಎಂಬ ಹುಚ್ಚು ತತ್ವವನ್ನು ಸ್ವೀಕರಿಸಲು ಒಪ್ಪಲಿಲ್ಲ. "ಶ್ರೇಯಾನ್ ಸ್ವಧರ್ಮೋ ವಿಗುಣಃ ಪರಧರ್ಮಾತ್ ಸ್ವನುಷ್ಠಿತಾತ್। ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ" ಎಂಬ ಗೀತೋಕ್ತಿ ಭಾರತೀಯರನ್ನು ಧರ್ಮ ಮಾರ್ಗದಿಂದ ಪರಾವೃತ್ತರಾಗಲು ಬಿಡಲಿಲ್ಲ. ಮಹಾತ್ಮಾ ಗಾಂಧೀಜಿಯವರು ಮಿಶನರಿಗಳ ಮತಾಂತರ ಚಟುವಟಿಕೆಯನ್ನು ಇದೇ ಕಾರಣಕ್ಕೋಸ್ಕರ ಖಂಡಿಸಿದ್ದರು, ಮತ್ತು ಮತಾಂತರ ಕಾರ್ಯ ಮಾಡುವುದಿಲ್ಲೆಂಬ ಭರವಸೆಯನ್ನೂ ಮಿಶನರಿಗಳಿಂದ ಪಡೆದಿದ್ದರು. ಆದರೆ ಗಾಂಧೀಜಿಯವರ ಜೀವನಕಾಲದಲ್ಲಿಯೇ ತಮ್ಮ ಪ್ರತಿಜ್ಞೆಯನ್ನು ಮುರಿಯುತಿದ್ದ ಮಿಶನರಿಗಳು, ಮಹಾತ್ಮರ ಮರಣದ ನಂತರ ಸ್ವಚ್ಛಂದವಾಗಿ ವರ್ತಿಸಲು ನೋಡಿದ್ದು ಆಶ್ಚರ್ಯವಲ್ಲ. ಭಾರತ ಸರಕಾರವು ಮಿಶನರಿಗಳ ರಾಜಕೀಯ ಚಟುವಟಿಕೆಯ ಮೇಲೆ ಕಣ್ಣಿಡುತ್ತಿರುವುದು ಸ್ತುತ್ಯ; ಹಾಗೆಯೇ ಮಿಶನರಿಗಳ ಮತಾಂತರ ಹಾಗು ಹೇಯ ಪ್ರಚಾರದ ಕಾರ್ಯಕ್ರಮಗಳನ್ನು ನಿಲ್ಲಿಸುವುದೂ ಅಪೇಕ್ಷಣೀಯ.

(ಆಧಾರದಿಂದ)

ಓದಲೇಬೇಕಾದ ದಿ| ಕಿಲ್ಲೆಯವರ ಮೂರು ಪುಸ್ತಕಗಳು

ಪ್ರಾಚೀನ ತುಳುನಾಡು

(ಎಸ್. ಎಸ್. ಕಿಲ್ಲೆ ಮತ್ತು ಎಸ್. ಎ. ಶೀನಪ್ಪ ಹೆಗ್ಡೆ)

ಹಿಂದಿನ ತುಳುನಾಡಿನ ಚರಿತ್ರೆಯನ್ನು ವಿವರಿಸುವ ಪುಸ್ತಕ. (ಶ್ರೀ. ಮಂಜೇಶ್ವರ ಗೋವಿಂದ ಪೈಗಳ ಮುನ್ನುಡಿ)

160 ಪುಟಗಳು ಬಿಳಿ ಕಾಗದ, ಆಕರ್ಷಕ ರಕ್ಷಾಪತ್ರ. ಬೆಲೆ 2-0-0.

ಭಾರತದ ಕರ್ಣ

"ಭಾರತದ ಕರ್ಣನು ದಿ| ಕಿಲ್ಲೆಯವರಿಗೆ ಒಲಿದಿದ್ದ. ಇದು ಅವರ ಕರ್ಣನ ಪಾತ್ರವನ್ನು ನೋಡಿದವರಿಗೇ ಗೊತ್ತು. ಆ ದುರಂತ ಕರ್ಣನ ಚಿತ್ರ ಎಂದೆಂದೂ ಜನಮನದಿಂದ ಮಾಸಿ ಹೋಗದು. (ಪ್ರೊ| ಎಂ. ಆರ್. ಶಾಸ್ತ್ರಿಗಳ ಮುನ್ನುಡಿಯಿಂದ) ಭಾರತದ ಕರ್ಣನ ಪಾತ್ರವನ್ನು ವರ್ಣಿಸುವ ಪುಸ್ತಕ. ಬೆಲೆ 0-6-0.

ಮುರಲಿ

ಮೇಲ್ದರಗತಿಯ ಕವಿತೆಗಳ ಸಂಗ್ರಹ. ಬೆಲೆ 0-12-0.

(ಮುನ್ನುಡಿಕಾರರು: ಶ್ರೀ. ಕಯ್ಯಾರ ಕಿಞ್ಞಣ್ಣ ರೈ)

ಮೂರೂ ಪುಸ್ತಕಗಳನ್ನೂ ದಿ| ಕಿಲ್ಲೆಯವರ ಧರ್ಮಪತ್ನಿ ಶ್ರೀಮತಿ ಇಂದಿರಾ ಕಿಲ್ಲೆ, ಮಂಗಳೂರು—ಅವರು ಪ್ರಕಟಿಸಿದ್ದಾರೆ.

ನಿಮಗೆ ಬೇಕಾದ ಪ್ರತಿಗಳಿಗೆ ಬರೆಯಿರಿ: ನವಭಾರತ ಪುಸ್ತಕ ಭಂಡಾರ, ಉಡುಪಿ

(ಮಂಗಳೂರು ಕೆನರಾ ನ್ಯೂಸ್ ಏಜನ್ಸಿಯಲ್ಲಿಯೂ ಪ್ರತಿಗಳು ದೊರೆಯುತ್ತವೆ.)

ದಿ ನ್ಯೂ ಕರ್ನಾಟಕ ಪ್ರೊವಿಡೆಂಟ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಪ್ರಧಾನ ಕಚೇರಿ,] [ಉಡುಪಿ, ದ. ಕನ್ನಡ.

ನಿಮ್ಮ ಸಂಪಾದನೆಗೆ ಸಾಧ್ಯವಿರುವ ಮೊತ್ತಕ್ಕೆ ವಿಮೆ ಮಾಡಲು ಅನುಕೂಲವಿರುವ ಜಿಲ್ಲೆಯ ಏಕಮಾತ್ರ ಜನತಾ ಪ್ರೊವಿಡೆಂಟ್ ವಿಮಾ ಸಂಸ್ಥೆ.

ಏಜಂಟರು, ಸ್ಪೆಶ್ಯಲ್ ಏಜಂಟರು ಆರ್ಗನೈಜರರು ಮತ್ತು ಇನ್ಸ್‌ಪೆಕ್ಟರರು ಬೇಕಾಗಿದ್ದಾರೆ.

ವಿವರಕ್ಕೆ ಬರೆಯಿರಿ:

THE NEW KARNATAKA PROVIDENT Insurance Co. Ltd., UDIPI.

ಗರ್ಭ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ-೧ ಬಾಟ್ಲಿಗೆ — **ರೂ. ೫-೮-೦** .... ಪೋಸ್ಟು ಖರ್ಚು **ರೂ. ೦-೧೪-೦**

—:ವಿಳಾಸ:—

ಹಾಲಪ್ಪಾ ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ಚಂದಾಹಣ ಬಾಕಿ ಇರುವವರು ದಯಮಾಡಿ ಕಳುಹಿಸಿಕೊಡಿರಿ.



ಮರುಭೂಮಿಯೊಂದಿಗೆ ಮಾನವನ ಹೋರಾಟ

ವಿಸ್ತರಣವನ್ನು ತಡೆಗಟ್ಟಲು ಅರಣ್ಯ ಬೆಳೆಸುವ ಪ್ರಯತ್ನ

ರಾಜಾಸ್ಥಾನದ ಜೈಸಲ್‌ಮೇರ್—ಭವಾಲ್‌ಪುರಗಳ ಅಂಚಿನಲ್ಲಿ ೪೦ ಮೈಲು ಉದ್ದ ೫ ಮೈಲು ಅಗಲವಿರುವ ಇಕ್ಕಟ್ಟಾದ ಬೆಂಗಾಡು ಪ್ರದೇಶದಲ್ಲಿ ಈಗ ಹಸುರು ಕಂಗೊಳಿಸುತ್ತದೆ. ಅಲ್ಲಿ ಈಗ ಮರಗಿಡಗಳು ಬೆಳೆಯ ತೊಡಗಿವೆ. ಭಾರತ-ಪಾಕಿಸ್ಥಾನಗಳ ಪಶ್ಚಿಮ ಗಡಿಯನ್ನು ಹೋಗಿ ಸೇರುವ ೪೦೦ ಮೈಲು ಉದ್ದವೂ ೫ ಮೈಲು ಅಗಲವೂ ಇರುವ "ಥಾರ್ ಮರುಭೂಮಿ" ಎಂದು ಹೆಸರಾದ ಬೆಂಗಾಡು ಪ್ರದೇಶದಲ್ಲಿ ಇದು ಒಂದು ಭಾಗವಾಗಿರುತ್ತದೆ.

ಸಿಂಧ್‌ನಿಂದ ಭಾರತಕ್ಕೆ ಮರಳು ತೂರಿ ಬಂದು ಮರಳುಗಾಡು ಬೆಳೆಯುತ್ತ ಹೋಗುವುದನ್ನು ತಡೆಯುವುದೇ ಈ ಬೆಂಗಾಡು ಪ್ರದೇಶದಲ್ಲಿ ಹಸುರಾದ ಮರಗಿಡಗಳ ಗೋಡೆಯನ್ನು ಎಬ್ಬಿಸುವುದರ ಉದ್ದೇಶ.

ಸಂಶೋಧನಾ ಕೇಂದ್ರ

ಮರಳುಗಾಡನ್ನು ಅರಣ್ಯವನ್ನು ಗೊಳಿಸುವುದಕ್ಕಾಗಿ ಜೋಧಪುರದಲ್ಲಿರುವ ಕೇಂದ್ರದ ಸಂಶೋಧನ ಕಾರ್ಯಾಲಯವು ಈ ಬೆಂಗಾಡು ಪ್ರದೇಶದಲ್ಲಿ ಮರಗಿಡಗಳನ್ನು ಬೆಳೆಯುವ ಕಾರ್ಯಕ್ಕೆ ತೊಡಗಿದೆ. ಈ ಸಂಶೋಧನ ಕೇಂದ್ರದಲ್ಲಿ, ವಿವಿಧ ಮಣ್ಣು ಮತ್ತು ಪೈರುಗಳೊಂದಿಗೆ ಪ್ರಯೋಗಗಳನ್ನು ನಡೆಸಲಾಗುತ್ತಿದೆ. ಮರಳುಗಾಡನ್ನು ಗೆಲ್ಲುವ ಕಾರ್ಯದಲ್ಲಿ ಇಲ್ಲಿಯ ತಜ್ಞರು ಅವಿರತನಾಗಿ ಸಂಶೋಧನೆ ನಡೆಸುತ್ತಿರುವರು. ಇತ್ತೀಚೆಗೆ, ರಾಜಾಸ್ಥಾನದ ಸರದಾರ್‌ಶಹರಿನಲ್ಲಿರುವ ಗಾಂಧಿ ವಿದ್ಯಾಮಂದಿರದಲ್ಲಿ ತೂರಿಕೊಂಡು ಬರುವ ಮರಳನ್ನು ತಡೆಗಟ್ಟುವುದಕ್ಕೆ ಅನೇಕ ವಿಧಾನಗಳನ್ನು ಪ್ರಯೋಗಿಸಿ ನೋಡಲಾಯಿತು.

ಸಸಿ ಸಂಗೋಪನೆ

ಈ ಸಂಶೋಧನ ಕೇಂದ್ರವು ನಾಲ್ಕು ಕಡೆ ಅಂದರೆ, ಜೋಧಪುರ, ಜುಂಜನೂನು, ಸರದಾರ್‌ಪುರ ಮತ್ತು ಪಲಿಗಳಲ್ಲಿ ಸಸಿಗಳನ್ನು ತಯಾರಿಸುವ ಸಂಗೋಪನಾ ಕ್ಷೇತ್ರಗಳನ್ನು ನಡೆಸುತ್ತದೆ. ಕ್ಷೇತ್ರಗಳಲ್ಲಿ ಮರಳುಗಾಡಿನಲ್ಲಿ ಬೆಳೆಯುವ ಗಿಡಮರಗಳನ್ನು ಪೋಷಿಸಿ ಅವುಗಳ ಪರಿಣಾಮವನ್ನು ಪರಿಶೀಲಿಸಲಾಗುವುದು. ಮರಳುಗಾಡಿನ ಗಿಡಗಳಾದ "ಅಣಾ ಯಾ ಗ್ರಿಗ್ಗಿ" ಎಂಬ ಸಸಿಗಳನ್ನು ಅಮೇರಿಕದಿಂದಲೂ "ರಶಿಯನ್ ಆಲೀವ್" ಎಂಬ ಸಸಿಗಳನ್ನು ಅಫ್ಘಾನಿಸ್ಥಾನದಿಂದಲೂ ತರಿಸಿಕೊಂಡು ರಾಜಪುತಾನದ ಮರಳುಗಾಡಿನಲ್ಲಿ ಅವುಗಳ ಉಪಯುಕ್ತತೆಯ ಬಗ್ಗೆ ಪ್ರಯೋಗಗಳನ್ನು ನಡೆಸಲಾಯಿತು. ಅದರಂತೆ ಪ್ರೊಸೋಪಿಸ್, ಜೂಲಿಫ್ಲೋರಾ ಮತ್ತು ಆಗ್ವಾಸಪ್ ಎಂಬ ಸಸಿಗಳನ್ನು ಭಾರತದ ಇತರ ಭಾಗಗಳಿಂದ ಪ್ರಯೋಗಾರ್ಥವಾಗಿ ತರಿಸಿಕೊಂಡಿರುವರು. ಈಗಾಗಲೇ, ಸೇವಾನ್, ಮಂಡೂಸಿ, ಪಾಗ್‌ಕ್ವೆಬ್ ಮತ್ತು ಬೂರ್—ಈ ಜಾತಿಯ ಹುಲ್ಲನ್ನು ಇಲ್ಲಿ ಬೆಳಸಿ ಅದು ಮರಳುಗಾಡಿನ ಬೆಳವಣಿಗೆಯನ್ನು ತಡೆಯುವ ಕಾರ್ಯದಲ್ಲಿ ಸಹಾಯ ನೀಡುವಂತೆ ಮಾಡಲಾಗಿದೆ.

ಉಚಿತ ಸಸಿಗಳು

ಸಂಗೋಪನಾ ಕ್ಷೇತ್ರಗಳು ಸುಮಾರು ೯೦,೦೦೦ ಸಸಿಗಳನ್ನು ಉಚಿತವಾಗಿ ಪ್ರತಿ ವರ್ಷವೂ ಹಂಚುತ್ತಿವೆ. ಜನರು ಈ ಸಸಿಗಳನ್ನು ತಮ್ಮ ತಮ್ಮ ಮರಳು ಭೂಮಿಗಳಿಗೆ ತೆಗೆದುಕೊಂಡು ಹೋಗಿ, ಸಂಶೋಧನಾಧಿಕಾರಿಗಳ ಸಲಹೆಯ ಮೇರೆಗೆ, ಅವುಗಳನ್ನು ನೆಡುವರು. ಅದರಂತೆ ಅನೇಕ ಜನರು ಬೀಜ ಮತ್ತು ಸಸಿಗಳನ್ನು ಶಾಲೆಗಳು, ತಹಸೀಲ್‌ಗಳು ಮತ್ತು ಗ್ರಾಮಪಂಚಾಯತಿಗಳ ಮೂಲಕ ಪಡೆಯುವರು.

ಅರಣ್ಯಾಭಿವೃದ್ಧಿ

ಆರು ಕೇಂದ್ರಗಳ ಪೈಕಿ ನಾಲ್ಕು ಕೇಂದ್ರಗಳಲ್ಲಿ ಅರಣ್ಯಾಭಿವೃದ್ಧಿ ಕಾರ್ಯ ನಡೆಯುತ್ತಿದೆ. ಪ್ರತಿಯೊಂದು ಕೇಂದ್ರವೂ ೧,೦೦೦ ಎಕರೆಗಳಷ್ಟು ವಿಸ್ತಾರವಾಗಿರುವುದು. ಪ್ರತಿಯೊಂದೂ ಒಂದೊಂದು ರೀತಿಯ ಮಣ್ಣನ್ನು ಹೊಂದಿರುವುದು. ಜೋಧಪುರದಲ್ಲಿ ಕಿಲ್ ಖಾನಾದ ಹತ್ತಿರದ ಪರ್ವತದ ಅಂಚಿದೆ; ಪಲಿಯ ಹತ್ತಿರ ಹುಲ್ಲುಗಾವಲಿನ ನೆಲವಿದೆ; ಶೇಕವರಿಯಲ್ಲಿ ಆರೆ ಬೆಂಗಾಡು ಪ್ರದೇಶವಿದೆ; ಸರದಾರ್‌ಶಹರಿನ ಗ್ರಾಮಾಂತರ ವಿಶ್ವವಿದ್ಯಾನಿಲಯ ಪ್ರದೇಶದಲ್ಲಿ ಮರಳು ಕೂಡುವ ಪ್ರದೇಶಗಳಿವೆ. ಈ ಕ್ಷೇತ್ರಗಳಲ್ಲಿ ಆರು ಅಡಿ ಉದ್ದ ಮತ್ತು ಒಂದೂವರೆ ಅಡಿ ಆಳವಾದ ಕಂದಕಗಳನ್ನು ತೋಡಿ ಅದರಲ್ಲಿ ಮೂರು ಸಾಲುಗಳಲ್ಲಿ ಸಸಿಗಳನ್ನು ನೆಡಲಾಗುವುದು.

ಸಾಲುಮರಗಳು

ಕೆಲವು ತಿಂಗಳ ಹಿಂದೆ, ಜೋಧಪುರ—ಪಾಲಿ ಮಾರ್ಗದ ಎರಡು ಮೈಲು ಉದ್ದ ಎರಡೂ ಕಡೆಗಳಲ್ಲಿ ಮೂರು ಸಾಲುಗಳಲ್ಲಿಯೂ ಗಿಡಗಳನ್ನು ನೆಡುವ ಕೆಲಸವನ್ನು ಆರಂಭಿಸಲಾಯಿತು. ಜೋಧಪುರ—ಬಿಕನೀರ್ ರೈಲು ಮಾರ್ಗದಲ್ಲಿ ಪಾಲನಾ ಮತ್ತು ದೇಶನೋಕ್‌ಗಳ ನಡುವೆ ತೂರಿಕೊಂಡು ಬರುವ ಮಣ್ಣನ್ನು ತಡೆಯುವುದಕ್ಕಾಗಿ ಕೆಲಸವನ್ನು ಈ ವರ್ಷ ಆರಂಭಿಸಲಾಗಿದೆ. ಇದೇ ರೀತಿಯ ಕೆಲಸಕ್ಕಾಗಿ ಇನ್ನು ಕೆಲವು ಕ್ಷೇತ್ರಗಳನ್ನೂ ಆರಿಸಿಕೊಳ್ಳಲಾಗಿದೆ.

ಮರಳುಗಾಡನ್ನು ಗೆಲ್ಲುವುದಕ್ಕಾಗಿ ಪ್ರಯತ್ನಿಸುತ್ತಿರುವ ಸಂಶೋಧನಾ ಕೇಂದ್ರದವರು ಅದಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ ಜನರಿಗೆ ಉಚಿತ ಶಿಕ್ಷಣವನ್ನೂ ಕೊಡುತ್ತಿರುವರು.

ನೀರು ಸರಬರಾಜು

ಸಂಶೋಧನಾ ಕೇಂದ್ರದವರು, ಸಸಿಗಳು ಬೆಳೆಯುವ ಪ್ರದೇಶಗಳ ಹತ್ತಿರದಲ್ಲೂ ಮತ್ತು ಇತರ ಆರಿಸಿದ ಕ್ಷೇತ್ರಗಳಲ್ಲೂ ನೀರು ಸರಬರಾಜನ್ನು ಉತ್ತಮ ಪಡಿಸುವುದಕ್ಕಾಗಿ ಯೋಜನೆಗಳನ್ನೂ ಕೈಗೊಂಡಿದ್ದಾರೆ. ಹೆಚ್ಚು ಹೆಚ್ಚು ಭಾವಿಗಳನ್ನು ತೋಡಲು, ಕೊಳಗಳನ್ನು ನಿರ್ಮಿಸಲು, ಈಗ ಇರುವ ಭಾವಿಗಳನ್ನು ಶುದ್ಧ ಮಾಡಿ ಆಳವಾಗಿ ಅಗೆಯಲು, ಆಳವಾದ ಭಾವಿಗಳಿಂದ ನೀರನ್ನೆತ್ತಲು ಗಾಳಿಯ ಗಿರಣಿಗಳನ್ನು ಸ್ಥಾಪಿಸಲು ಅವಶ್ಯಕತೆಯುಳ್ಳ ಪ್ರದೇಶಗಳಿಗೆ ನೀರನ್ನು ಕಾಲುವೆ ಮತ್ತು ಕೊಳಾಯಿಗಳ ಮೂಲಕ ಸರಬರಾಜು ಮಾಡುವುದು ಇತ್ಯಾದಿ ಯೋಜನೆಗಳೂ ಸಂಶೋಧನಾ ಕೇಂದ್ರದ ಕಾರ್ಯಕ್ರಮದಲ್ಲಿ ಸೇರಿವೆ.

ದೊಡ್ಡ ನದಿಗಳ ಜಲಾಶಯಗಳ ನಿರ್ಮಾಣ ಕಾರ್ಯವೂ ನಡೆಯುತ್ತಿದೆ. ಛಂಬಲ್ ಜಲಾಶಯ, ಭಕ್ರಾ-ನಂಗಲ್ ಜಲಾಶಯ, ಹರಿಕೆ-ಪತಾನ್ ಜಲಾಶಯ ಪಾರ್ವತಿ ಬಂದ್ ಜಲಾಶಯ ಮತ್ತು ಮೇಜಾ ಬಂದ್ ಜಲಾಶಯಗಳ ನಿರ್ಮಾಣ ಕಾರ್ಯಪೂರ್ಣಗೊಂಡ ಮೇಲೆ ನೀರು ಬೇಕಾದಷ್ಟು ದೊರೆಯುವುದರಿಂದ ಮರಳುಗಾಡಿನ ಸಮಸ್ಯೆಯನ್ನು ಇನ್ನೂ ಚೆನ್ನಾಗಿ ಬಗೆಹರಿಸಬಹುದು. ಮರಳುಗಾಡನ್ನು ಫಲವತ್ತಾಗಿ ಮಾಡಲು ದುಡಿಯುತ್ತಿರುವ ಜನರು "ಮರಳುಗಾಡೂ ಒಂದು ರೋಗವಿದ್ದಂತೆ; ಅದನ್ನು ಗೆಲ್ಲಬಹುದು ಆದರೆ, ಮಾನವನು ಆ ಶತ್ರುವಿನ ವಿರುದ್ಧ ಸಂತತವಾಗಿ ಹೋರಾಡಬೇಕು, ಅಷ್ಟೆ"—ಎನ್ನುವುದನ್ನು ಕೃತಿಯಲ್ಲಿ ತೋರಿಸಿಕೊಡಬಹುದು.

[೨ನೇ ಪುಟದಿಂದ]

ನ್ನೂ ಮದ್ರಾಸು ಪಡೆಯುತ್ತಾನೆ. ಹೀಗೆ ವಿದ್ಯುಚ್ಛಕ್ತಿಯ ಉತ್ಪಾದನೆ ಹೆಚ್ಚಿಕೊಳ್ಳುತಿದ್ದರೂ ನಮಗೆ ಕೊರತೆಯ ಭಾಧೆ ತಪ್ಪಿರುವುದಿಲ್ಲ. ಈಗ ಪ್ರವರ್ತಿಸಲಾಗಿರುವ ಪಂಚವಾರ್ಷಿಕ ಯೋಜನೆಯ ಕಾಲದಲ್ಲಿ ವಿದ್ಯುಚ್ಛಕ್ತಿಯ ಉತ್ಪಾದನೆಯೊಂದೇ ಹೆಚ್ಚಿ ಸಂಬಂಧಿಸಿದ ಉಳಿದ ಸಂಗತಿಗಳು ಇದ್ದಂತೆಯೇ ಇರುತ್ತವೆಂದುಕೊಂಡರೂ ನಮಗೆ ಸುಮಾರು ೬೫,೦೦೦ ಕಿಲೋವಾಟುಗಳ ಕೊರತೆ ಬೀಳುತ್ತದೆ—ಕೈಗಾರಿಕೆಗಳ ವಿಸ್ತರಣೆಯನ್ನು ನಾವು ತಡೆದು ಹಿಡಿಯಲಾರೆವೆಂಬುದರಿಂದ, ಈ ಕೊರತೆ ಕನಿಷ್ಠ ಮುಮ್ಮಡಿಯಾದರೂ ಆದೀತೆಂದು ಹೇಳಬಹುದು.

ಹೊಸ ಯೋಜನೆಗಳು

ಆದುದರಿಂದ, ರಾಜ್ಯ ಸರಕಾರವು ಹೊಸ ಯೋಜನೆಗಳನ್ನು ಕೈಗೊಳ್ಳಲು ಆತುರವನ್ನು ತೋರಿಸುತ್ತದೆ. ಅಭಿವೃದ್ಧಿ ಯೋಜನೆಗಳ ಸೃಷ್ಟಿಯಿಂದ ಯೋಜನಾ ಆಯೋಗವು ದಕ್ಷಿಣ ಭಾರತವನ್ನು ಕಡೆಗಣಿಸಿದೆಯೆಂಬ ಆಕ್ಷೇಪವನ್ನು ಮೊದಲಿಂದಲೂ ಕೇಳುತಿದ್ದೇವೆ—ನಮ್ಮ ಮಲೆನಾಡಿನ ಸಮಸ್ಯೆಯನ್ನಾಗಲಿ, ಇಲ್ಲಿಯ ರೈಲ್ವೇ ಅವಶ್ಯಕತೆಯನ್ನಾಗಲೀ ವಿದ್ಯುಚ್ಛಕ್ತಿಯ ಕೊರತೆಯನ್ನಾಗಲೀ ಯೋಜನಾ ಆಯೋಗ ಸಾಕಷ್ಟು ಮಹತ್ವವನ್ನು ಕೊಟ್ಟು ಗಮನಿಸಲಿಲ್ಲ. ಈ ತಪ್ಪನ್ನು ಮುಂದಿನ ಯೋಜನೆಯಲ್ಲಾದರೂ ಸರಿಪಡಿಸುವರೆಂದು ಆಶಿಸೋಣ! ಆದಾಗ್ಯೂ ಸಾಕಷ್ಟು ಸಾಧನ ಸಂಪತ್ತು ಇದ್ದ ಪಕ್ಷದಲ್ಲಿ ಈಗಿಂದಲೇ ಹೊಸ ಯೋಜನೆಗಳನ್ನು ಅನಿವಾರ್ಯ ಅವಶ್ಯಕತೆಯೆಂದು ಸ್ವೀಕರಿಸಿ, ತೊಡಗಲು ಅಡ್ಡಿ ಇರಲಾರದು—ಮದ್ರಾಸು ಸರಕಾರದವರು ಪಶ್ಚಿಮ ಕರಾವಳಿಯಲ್ಲಿ, ಮುಖ್ಯವಾಗಿ ಮಲಬಾರು ಕ್ಷೇತ್ರದಲ್ಲಿ ವಿದ್ಯುಚ್ಛಕ್ತಿಯ ಪೂರೈಕೆಗೋಸ್ಕರ ಹೊಸಯೋಜನೆಯನ್ನು ಕೈಗೊಳ್ಳಲು ಯೋಜನಾ ಆಯೋಗಕ್ಕೆ ಶಿಫಾರಸು ಮಾಡಿರುವರು. ಮದ್ರಾಸು ರಾಜ್ಯದಲ್ಲಿ ಇದುವರೆಗೆ ಹೆಚ್ಚಿನ ಚಟುವಟಿಕೆಗಳು ತಮಿಳು ನಾಡಿನಲ್ಲಿಯೇ ಕಂಡುಬರುತಿದ್ದವು—ಈಗ ಮಲಬಾರಿನ ಹಿತದತ್ತ ಸರಕಾರದ ಲಕ್ಷ್ಯ ಹೊರಳಿರುತ್ತದೆ. ಆದರೂ ದಕ್ಷಿಣಕನ್ನಡ ಜಿಲ್ಲೆಯ ಭವಿಷ್ಯ ಕತ್ತಲಲ್ಲಿಯೇ ಇದೆ— ನಮಗೆ ಜೋಗದ ಜಲಪಾತದಿಂದ ವಿದ್ಯುಚ್ಛಕ್ತಿ ಬರುವುದೆಂಬ ಭರವಸೆ ಕೊಡಲಾಗಿದ್ದರೂ, ಈ ಕೆಲಸವು ಬಹಳ ನಿಧಾನವಾಗಿರುತ್ತದೆ ಸರಕಾರದವರು ತುಸು ಹೆಚ್ಚಿನ ಆಸ್ಥೆಯನ್ನೂ ಚಟುವಟಿಕೆಯನ್ನೂ ಈ ವಿಷಯದಲ್ಲಿ ಪ್ರದರ್ಶಿಸುವ ಅಗತ್ಯವನ್ನು ಇಲ್ಲಿ ಒತ್ತಿ ಹೇಳದಿರಲಾರೆವು—ಹೀಗಿದ್ದರೂ ಸರಕಾರ ನಮ್ಮ ಜಿಲ್ಲೆಯನ್ನು ತೀರಾ ಕಡೆಗಣಿಸಿಲ್ಲ: ಎರಡು ವರ್ಷಗಳ ಹಿಂದೆ ಉಡುಪಿಯ ವಿದ್ಯುದುತ್ಪಾದನಾ ಕೇಂದ್ರವನ್ನು ಖಾಸಗಿ ಕಂಪೆನಿಯಿಂದ ತನ್ನವಶಕ್ಕೆ ತೆಗೆದು ಕೊಂಡದಲ್ಲದೆ, ಎರಡು ಡೀಸೆಲ್ ಎಂಜಿನುಗಳನ್ನು ಸ್ಥಾಪಿಸಿ, ವಿದ್ಯುತ್ತಿನ ಉತ್ಪಾದನಾ ಪ್ರಮಾಣವನ್ನು [illegible] ಸಿತು; ಮತ್ತು ವಿಸ್ತರಣ ಕಾ[illegible] ಗಮನ ನೀಡಿತು. ಇಂ[illegible]ಗಳು ರಾಜ್ಯದಾದ್ಯಂತ ಕಂಡು[illegible]ತ್ತವೆ.

ಬೇಂಕಿನ ಬೆಳವಣಿಗೆ

	1933	1943	1953
ಅಧಿಕೃತ ಭಂಡವಾಳ	5,00,000	5,00,000	20,00,000
ತೆತ್ತ ಭಂಡವಾಳ	12,000	1,90,000	9,00,000
ಕ್ಷೇಮನಿಧಿ	—	12,000	2,00,000
ಒಟ್ಟು ವಹಿವಾಟು	77,000	15,60,000	60,30,000

ಕಾಲಾವಧಿ ಠೇವಣಾತಿ— 3 ತಿಂಗಳಿಗೆ 3½% ಬಡ್ಡಿ.
ಕಾಯಂ ಠೇವಣಾತಿ— 1 ತಿಂಗಳಿಂದ 24 ತಿಂಗಳ ವಾಯಿದೆ ವರೆಗೆ ಸ್ವೀಕರಿಸಲ್ಪಡುವುದು. 24 ತಿಂಗಳಿಗೆ—3¾% ಬಡ್ಡಿ.
ರೂಪಾಯಿ ಹತ್ತು ಸಾವಿರ ನ, ಮೇಲಿನ ಠೇವಣಾತಿಗೆ 4% ಬಡ್ಡಿ ಕೊಡಲಾಗುವುದು.
ರೂಪಾಯಿ ಐವತ್ತು ಸಾವಿರ ನ, ಮೇಲಿನ ಠೇವಣಾತಿಗೆ 4¼% ಬಡ್ಡಿ ಕೊಡಲಾಗುವುದು.
ವಿಜಯ ಕೇಶ್ ಸರ್ಟಿಫಿಕೇಟು— ಮೂರು ವರುಷದ ಅವಧಿ = 4¼% ಬಡ್ಡಿ.
ಸಾಲ ಸವಲತ್ತುಗಳಿಗೆ ಬೇಕಾದ ಅನುಕೂಲತೆಗಳನ್ನು ವಿಳಂಬವಿಲ್ಲದೆ ಒದಗಿಸಲಾಗುವುದು.
ಹೆಚ್ಚಿನ ಮಾಹಿತಿಗೆ ನಿಮ್ಮ ಸಮೀಪದ ನಮ್ಮ ಏಜಂಟರೊಡನೆ ವಿಚಾರಿಸಿರಿ. ಜಿಲ್ಲೆಯ 10 ಕೇಂದ್ರಗಳಲ್ಲಿಯೂ, ಮಡಿಕೇರಿ ಮತ್ತು ಮುಂಬಾಯಿಯಲ್ಲಿಯೂ ನಮ್ಮ ಶಾಖೆಗಳಿರುತ್ತವೆ.
ಸ್ಥಾಪನೆ: 1931 ದಿ ವಿಜಯ ಬ್ಯಾಂಕ್ ಲಿಮಿಟೆಡ್ ಪ್ರಧಾನ ಕಛೇರಿ ಮಂಗಳೂರು 3.

ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 25 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

THE MOOLKY BANK LTD.
Moolky, S. K.

ಋತುಸ್ರಾವ ನಿಂತಿತು

"ಕುಮಾರಿ" ಬಿಲ್ಲೆಗಳನ್ನು ಉಪಯೋಗಿಸಿದರೆ ತಪ್ಪದೆ ಋತುಸ್ರಾವವಾಗುವುದು, ಪತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು. ಯಾವ ಬಾಧಕವೂ ಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ—ಬೆಲೆ: ರೂ. 3/-; ಸ್ಪೆಶ್ಯಲ್ ರೂ. 5-, ಅಧಿಕಾಧಿಕ ಸ್ಪೆಶ್ಯಲ್ ರೂ. 8-[ವಿ. ಪಿ. ಹನ್ನೆರಡಾಣೆ ಪ್ರತ್ಯೇಕ]

Mrs. P. DEVEE, F.D.S.(N.J.)
CALCUTTA. 40
ಸ್ಟಾಕಿಸ್ಟರು: ಶಹಾ ಕಂಪೆನಿ, ಮಂಗಳೂರು.

ಯು. ಗಣಪ್ಪಯ್ಯ ಎಂಡ್ ಸನ್ಸ್

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ, ಮಂಗಳೂರು ಇವರ

ಅಶೋಕಾರಿಷ್ಟ ಮತ್ತು ಮಾತ್ರೆ—ಹೆಂಗಸರ ಗರ್ಭಾಶಯ ರೋಗಗಳಿಗೆ ಸಂಜೀವನ. ಅಕಾಲ ಬಹಿಷ್ಠೆ, ಋತುಸ್ರಾವವು ಜಾಸ್ತಿಯಾಗಿಯೂ, ಕಡಿಮೆಯಾಗಿಯೂ ಹೋಗುವುದು, ಬಿಳಿಸೆರಗು, ಸಂತಾನ ಹೀನತೆ, ರಕ್ತಹೀನತೆ, ಋತುಶೂಲೆ ಮೊದಲಾದ ಸ್ತ್ರೀಯರಿಗೆ ಸಂಬಂಧಪಟ್ಟ ಎಲ್ಲಾ ಕಾಯಿಲೆಗಳನ್ನು ಗುಣಪಡಿಸುವುದು. ಬಾಟ್ಲಿ 1ಕ್ಕೆ ರೂ. 3-8-0.

ಗರ್ಭ ರಕ್ಷಕ— ಗರ್ಭಿಣಿಯರಿಗೆ ಅತ್ಯಂತ ಫಲಕಾರಿಯಾದ ಔಷಧಿ. ಜನಿದೋಷ, ಗರ್ಭಪತನವಾಗುವಿಕೆ, ವಾಂತಿ, ಅರುಚಿ, ಅಶಕ್ತತೆ, ಮಲಬದ್ಧತೆ, ವಾಯು ಉಪದ್ರ, ಕೈಕಾಲು ಬಚ್ಚುವುದು ಇವುಗಳನ್ನೆಲ್ಲಾ ಹೋಗಲಾಡಿಸುವುದು. ಬಾಟ್ಲಿ 1ಕ್ಕೆ ರೂ. 3-8-0.

ಇವಲ್ಲದೆ ಇನ್ನೂ ಅನೇಕ ತರದ ಔಷಧಿಗಳು ನಮ್ಮಲ್ಲಿ ದೊರಕುತ್ತವೆ. ಕಾಗದ ಬರೆಯಿರಿ. ಕಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ, ರೋಗಕ್ಕೆ ತಕ್ಕ ಔಷಧಿಯನ್ನು ರವಾನಿಸಬಹುದು.

(೧ನೇ ಪುಟದಿಂದ)

ನ್ನು ವಿಚಾರಿಸುವಾಗ ಮಂದಿರ ಪ್ರವೇಶ ವೊಂದೇ ಧ್ಯೇಯವೆಂದು ಹೇಳಲಾಗದು- ಮಹಾತ್ಮಾ ಗಾಂಧೀಜಿಯವರು ಅದ ನ್ನೊಂದು ಪವಿತ್ರ ಸಂಕೇತವೆಂದು ಮಾ ತ್ರ ಭಾವಿಸುತಿದ್ದರು. ದಲಿತವರ್ಗದಲ್ಲಿರ ಬಹುದಾದ ನೈಚ್ಯಾನು ಸಂಧಾನ ಪ್ರವೃ ತ್ತಿಯನ್ನು ಸಮೂಲ ನಾಶಮಾಡಲು, ಸ ಮಾಜದ ನಡುವೆ ದಲಿತರೂ ಸೇರಿ ಸರಿ ಸಮಾನತೆಯಿಂದ ಬದುಕಲು ಗಾಂಧೀಜಿ ಯವರು ದಲಿತ ಬಾಂಧವರಲ್ಲಿ ಈ ರೀತಿ ಪ್ರೋತ್ಸಾಹವನ್ನು ತುಂಬುತಿದ್ದರು. ದಲಿ ತವರ್ಗದ ನಿಜವಾದ ಉದ್ಧಾರವು ಆರ್ಥಿಕ ಸಾಮಾಜಿಕ ಕ್ಷೇತ್ರಗಳಲ್ಲಿ ಕೈಗೂಡಬೇಕಾ ಗಿದ್ದು, ಇದಕ್ಕೆ ಪೂರ್ವ ಭಾವಿಯಾಗಿ ಅವರಲ್ಲಿ ಶಿಕ್ಷಣದ ಮೂಲಕ ಜಾಗ್ರತಿಯ ನ್ನುಂಟು ಮಾಡುವುದು ಆಗತ್ಯ. ಸರಕಾ ರದವರು ದಲಿತ ವರ್ಗಗಳಿಗೆ ನಿಃಶುಲ್ಕ ಶಿ ಕ್ಷಣವನ್ನು ಮತ್ತು ಕಾಲೇಜು ಮಟ್ಟದಲ್ಲಿ ವಿದ್ಯಾರ್ಥಿ ವೇತನಗಳನ್ನು ಕೊಟ್ಟು ವಿದ್ಯಾ ಭ್ಯಾಸಕ್ಕೆ ಉತ್ತೇಜನವನ್ನೀಯುತ್ತಿರುವ ರು. ಊಟ ವಸತಿಯ ಉಚಿತ ಏ ರ್ಪಾಡುಗಳತ್ತವೂ ಸರಕಾರ ಸಾಕಷ್ಟು ಹೆಚ್ಚು ಗಮನವನ್ನು ಪೂರೈಸುತ್ತದೆ. ಕೆ ಲಸಗಳು ಕ್ಷಿಪ್ರಗತಿಯಿಂದ ನೆರವೇರುತ್ತಿ ಲ್ಲವೆಂಬುದೊಂದೇ ಇಲ್ಲಿ ಕಂಡು ಬರುವ ದೋಷ. ದಲಿತ ವರ್ಗದ ವಿದ್ಯಾರ್ಥಿಗೆ ಕೊಡುವ ಪುಸ್ತಕವನ್ನು ಪಾಠಗಳು ತೊ ಡಗಿ ಆರು ತಿಂಗಳಾದರೂ ನೀಡದಿದ್ದರೆ, ಆಗ ವಿದ್ಯಾರ್ಥಿಯ ಪಾಡು ಕಷ್ಟಕರವೆನಿ ಸುತ್ತದೆ ಸರಕಾರದ "ದೀರ್ಘ ಸೂತ್ರ"ದ ಧೋರಣೆ ಇಲ್ಲಿ ತುಂಬ ತೊಡಕನ್ನುಂಟು ಮಾಡುತ್ತದೆ.

ಹೀಗಿದ್ದರೂ ಸ್ವತಂತ್ರದೇವರು ಮಾಡು ತ್ತಿರುವ ಕೆಲಸವು ಪ್ರಶಂಸನೀಯವಾಗಿದೆ— ಇದುವರೆಗೆ ಇಡಿಯ ಭಾರತದ "ಅ" ಹಾಗು "ಬ" ವರ್ಗದ ರಾಜ್ಯಗ ಳು ದಲಿತೋದ್ಧಾರಕ್ಕೋಸ್ಕರ ಮಾ ಡಿದ ವೆಚ್ಚವು ವರ್ಷೇ ವರ್ಷೇ ಹೆಚ್ಚುತಿ ಕೊಂಡಿದ್ದು, ಕಳೆದ ಆರ್ಥಿಕ ವರ್ಷದಲ್ಲಿ ಅದು ೨೪೮ ಲಕ್ಷ ರೂಪಾಯಿಗಳಾಯಿತು. "ಕ"ವರ್ಗದ ರಾಜ್ಯಗಳು ೧೯೫೨ರಿಂದ ಇಂತಹ ಕಾರ್ಯಕ್ರಮಗಳನ್ನು ತೊಡಗಿ ವೆ ಮತ್ತು ಕಳೆದವರ್ಷ ೩೦ ಲಕ್ಷ ರೂ ಪಾಯಿಗಳನ್ನು ವ್ಯಯಿಸಿವೆ. ಇದಲ್ಲದೆ ರಾ ಷ್ಟ್ರಪತಿಗಳ ನಿಧಿಯಿಂದ ಒಂದು ಕೋಟಿ ರೂಪಾಯಿಗಳನ್ನು ಬೇರೆ ಬೇರೆ ರಾಜ್ಯ ಸರಕಾರಗಳಿಗೂ ಖಾಸಗಿ ಸಂಸ್ಥೆಗಳಿಗೂ ಹಂಚಿಕೊಡಲಾಯಿತು. ಗುಡ್ಡಗಾಡು ಪ್ರ ದೇಶಗಳ ಆಡಳಿತವನ್ನು ಸುಧಾರಿಸಿ, ಅವ ರಿಗೆ ನಾಗರಿಕ ಜೀವನದ ಪ್ರಥಮ ಪಾಠ ಗಳನ್ನು ಕಲಿಸಲಾಯಿತು. ಕುಡಿಯುವ ನೀರಿನ ಬಾವಿ, ವೈದ್ಯಕೀಯ ಸೌಲಭ್ಯ, ಹಾಗು ಸಾರಿಗೆ ಸಂಪರ್ಕಗಳ ಅನುಕೂಲ ತೆಯನ್ನು ನೀಡಿ, ಕಾಡುಮನುಷ್ಯರನ್ನು ನಾಡಿನ ಪ್ರಜೆಗಳಾಗಿ ಪರಿವರ್ತಿಸಲಾಗು ತ್ತದೆ. ಉದಾಹರಣೆಗಾಗಿ, ನೀಲಗಿರಿಯಲ್ಲಿ ಗುಹ್ಯ ರೋಗಗಳ ದೆಸೆಯಿಂದ ದಿನೇ ದಿನೇ ಕ್ಷೀಣಿಸುತಿದ್ದ ತೊದವರಿಗೆ ಮದ್ರಾ ಸು ಸರಕಾರವು ಚಲಿಸುವ ಗಾಡಿಗಳಲ್ಲಿ ವೈ ದ್ಯಕೀಯ ಚಿಕಿತ್ಸೆಯನ್ನು ಒದಗಿಸಿತು: ತತ್ಫಲವಾಗಿ ಕಳೆದ ಒಂದೂವರೆ ವರ್ಷ ದಲ್ಲಿ ತೊದವರು ಆರೋಗ್ಯ ಲಾಭವನ್ನು ಪಡೆದು, ೩೦ ಶಿಶುಗಳಿಗೆ ಜನನವಿತ್ತರು. ಅಳಿದು ಹೋಗುತಿದ್ದ ಪ್ರಾಚೀನ ಕುಲ ವೊಂದು ಈ ಪ್ರಕಾರ ರಕ್ಷಣೆಯನ್ನು ಪಡೆಯಿತು.

ದಲಿತ ವರ್ಗದವರ ನಡೆನುಡಿಗಳೂ ಆಚಾರ ವಿಚಾರಗಳೂ ಭಿನ್ನವಾಗಿರುತ್ತ ವೆ—ಹೀಗಾಗಿ ಉಳಿದ ಸಾಮಾಜಿಕರೊಡ ನೆ ಅವರು ಬೆರೆತು ಹೋಗುವಂತೆ ಮಾ ಡುವ ಪ್ರಯತ್ನದಲ್ಲಿ ತುಂಬ ಸಹನೆಯ ನ್ನು ತೋರಿಸಬೇಕಾಗುವುದು. ಉಡುಪಿ ಶ್ರೀಕೃಷ್ಣ ಮಂದಿರವನ್ನು ಅಜ್ಞ ಹರಿಜನ ನು ಪ್ರವೇಶಿಸುವುದಕ್ಕೆ ಯಾರು ಎಷ್ಟು ಒತ್ತಾಯಿಸಿದರೂ ಒಡಂಬಡಲಾರ— ಅವನಿಗೆ ಆಂಜನೇಯ ಮೂರ್ತಿಯ ಹೆದರಿ ಕೆಯಾಗುತ್ತದೋ ಏನೋ! ಇಂತಹ ಮೂ ಢನಂಬಿಕೆಗಳು ಸವರ್ಣೀಯರಲ್ಲಿದ್ದಷ್ಟೇ ದಲಿತ ವರ್ಗದಲ್ಲೂ ಕಂಡುಬರುತ್ತವೆ. ಅಂ ಧಶ್ರದ್ಧೆಗಳಲ್ಲಿ ವಿಶ್ವಾಸ ಹಾರಿ ಹೋಗುವು ದಕ್ಕೆ ಮತ್ತು ನಿಜವಾದ ತಿಳುವಳಿಕೆ ಮೂಡಿ ಬರುವುದಕ್ಕೆ ಈ ಗಾಗಲೇ ಸುಶಿಕ್ಷಿತರಾದ ದಲಿತ ಬಂಧುಗಳು ಪ್ರಯತ್ನಿಸುವುದು ಅ ಪೇಕ್ಷಣೀಯ: ಅವರು ವಿಧಾಯಕ ಕಾ ರ್ಯಕರ್ತರನೆರವನ್ನು ಪಡೆದು ಅದ್ಭುತ ಕೆಲಸವನ್ನು ಸಾಧಿಸಬಲ್ಲರು ಹೋಟೇಲು, ಸಿನೆಮಾಗಳಲ್ಲಿಯಷ್ಟೇ ಅಲ್ಲ, ಸಭೆ, ಭಜ ನೆಯಲ್ಲೂ ಮದುವೆ ಮುಂಜಿಗಳಲ್ಲೂ ಅವರು ತಕ್ಕ ಮರ್ಯಾದೆಯನ್ನು ಹೊಂ ದಬಲ್ಲರು. ಯಾವದೇ ಆಕ್ಷೇಪ, ತಿರಸ್ಕಾರ ಗಳಿಲ್ಲದೆ ದಲಿತ ವರ್ಗದವರು ಇತರರೊಂ ದಿಗೆ ವಿವಾಹ ಸಂಬಂಧವನ್ನು ಬೆಳೆಸಿ ಎಲ್ಲ ಪ್ರಜೆಗಳೂ ಒಂದೇ ದೇವರ ಮಕ್ಕಳೆಂಬ ಭಾವನೆಯನ್ನುಂಟುಮಾಡಿ, ಸಮಾಜದ ವಾತಾವರಣವನ್ನು ಬದಲಿಸುವ ದಿನವೇ ಸುದಿನವೆಂದು ಮಾನ್ಯ ಮಂತ್ರಿ ಜಗ ಜೀವನರಾಮರು ಹೇಳಿದ್ದುಂಟು. ಆ ದಿನದ ಬರವನ್ನು ಹಾರೈಸೋಣ!

—ಕಾರ್ತಿಕೇಯ.

ನೋಟೀಸು

ಉಡ್ಪಿ ತಾಲೂಕು ಏರ್ಮಾಳು ಬಡ ಗ್ರಾ ಮದಲ್ಲಿರುವ ಅಣ್ಣು ಪೂಜಾರಿ ಮನೆ ಮುದ್ದು ಪೂಜಾರ್ತಿಗೆ—ಸದ್ರಿ ತಾಲೂಕು ಏರ್ಮಾಳು ತೆಂಕ ಗ್ರಾಮದಲ್ಲಿರುವ ಹಳೆಮನೆ ಉಮಯ್ಯ ಪೂಜಾರಿಯು ಕೊಡುವ ನೋಟೀಸು ಏ ನಂದರೆ—

ನೀನು ನನ್ನ ಲಗ್ನದ ಹೆಂಡತಿಯಾಗಿದ್ದು, ನನ್ನಿಂದ ನಿನ್ನಲ್ಲಿ ಮೂರು ಹೆಣ್ಣು ಮತ್ತು ಎರ ಡು ಗಂಡು ಒಟ್ಟಿಗೆ ಐದು ಮಂದಿ ಮಕ್ಕಳ ಸಂತತಿ ಹುಟ್ಟಿದ್ದು, ಸುಮಾರು ಮೂವತ್ತು ವರ್ಷ ಕಾಲದಿಂದ ನನ್ನೊಡನೆ ಬಾಳ್ವೆ ಮಾ ಡುತ್ತಾ ಇರುತ್ತಾ, ಕಳೆದ ಒಂದೂವರೆ ತಿಂಗ ಳಿಂದ ನೀನು ನನ್ನೊಡನೆ ಜಗಳಾಡಿ, ನನ್ನ ಸ್ವಂತ ದಕ್ಕಿನ ಚರಸೊತ್ತುಗಳಲ್ಲಿ ನರಿ ಜಾಲು, ದನ, ಕರು ಇತ್ಯಾದಿಗಳೊಂದಿಗೆ ನಿನ್ನ ತವರು ಮನೆಗೆ ಹೋಗಿರುತ್ತಿ. ಈ ಮಧ್ಯೆ ಒಂದೆರಡು ಬಾರಿ, ಗ್ರಾಮಸ್ಥರ ಮೂಲಕ ರಾಜಿ ಪ್ರಸ್ತಾಪ ಮಾಡಿದ್ದಾಗ್ಯೂ ನೀನು ಒಪ್ಪದೆ, ನನಗೆ ಏಕಾಂಗಿ ಜೀವನ ನಡೆಸಲು ಸಾಧ್ಯವಾಗದ್ದರಿಂದ ಈ ನೋಟೀಸು ಕೊಡುವ ಭಾಗ ಬಿತ್ತು. ಆದ್ದರಿಂ ದ ಈ ಮೂಲಕ ತಿಳಿಸುವುದೇನೆಂದರೆ— ಈ ನೋಟೀಸು ತಲ್ಪಿದ 15 ದಿವಸಗಳಲ್ಲಿ ನೀನು ನನ್ನಿಂದ ತಕ್ಕೊಂಡು ಹೋದ ಯಾವತ್ತೂ ಸೊತ್ತುಗಳ ಸಹಿತ ಬಂದು, ಸುರಕ್ಷಿತ ಬಾ ಳುವೆ ಮಾಡಬೇಕು. ಇಲ್ಲವೇ ಇದೇ ನಿನಗೆ ಬಿಡುಗಡೆ ಪತ್ರವೆಂದು ತಿಳಿ. ಮುಂದೆ ನಿನಗೆ ಯಾ, ನಿನ್ನ ಮಕ್ಕಳಿಗೆ ನನ್ನ ವ, ನನ್ನ ಸ್ಥಿರ ಚರಸೊತ್ತುಗಳಲ್ಲಿ ಯಾವುದೇ ತರದ ಹಕ್ಕಿರು ವುದಿಲ್ಲ ಎಂತ ಕೊಟ್ಟ ನೋಟೀಸು.

ಉಮಯ ಪೂಜಾರಿಯ ರುಜು.

ಏರ್ಮಾಳು-ತೆಂಕ, ತಾ. 12-5-54.

ಖಾತ್ರಿ ಚಿನ್ನದ ನೆಕ್‌ಲೇಸ್, ತರಹವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,

ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.

ಫೋನು ನಂಬ್ರ 66



Stockist: **V. N. SHENOY,**
BOMBAY. 12.

ಶ್ರೀ A. R. ಅಯ್ಯರ್‌ರವರು, ಸ್ಥಾಪಕರು.

ಟ್ರೇಡ್ ಮಾರ್ಕ್ — ಮೈಸೂರು ಶ್ರೀಮನ್ ಮಹಾರಾಜರವರ ಖಾಸ್‌ವೈದ್ಯ ದಿ| ಅಂಬಳೆ ನರಸಿಂಹ ಪಂಡಿತರ ಮನೆತನದಲ್ಲಿ 90 ವರ್ಷ ಖ್ಯಾತಿಗಳಿಸಿದ ಎ. ರಾಮಸ್ವಾಮಿ ಅಯ್ಯರ್‌ರವರ

ಸಂತಾನ ಸಿಂಧೂರ (ಸ್ತ್ರೀಯರಿಗೆ: ಭಸ್ಮ) || **ಮದನ ವಿಲಾಸ** (ಪುರುಷರಿಗೆ: ಗುಳಿಗೆ)

*ಭಸ್ಮವು ಬಹಿಷ್ಠೆಯ ಹೊಟ್ಟೆನೋವನ್ನು ನಿರ್ಮೂಲಮಾಡಿ, ಮಾಸಿಕದ ಹೆಚ್ಚುಕಡಿಮೆಗಳನ್ನು ಕ್ರಮಪಡಿಸಿ, ಗರ್ಭಪಾತವನ್ನು ತಡೆಗಟ್ಟಿ, ಗರ್ಭಾಶಯ ರೋಗವನ್ನು ನಿವಾರಿಸಿ, ತಾಯ್ತನ (Motherhood) ಪಡೆಯಲರ್ಹಳನ್ನಾಗಿ ಮಾಡುತ್ತದೆ.

*ಈ ಗುಳಿಗೆಗಳು ಪುರುಷನ ಅತ್ಯುಷ್ಣವನ್ನು ಕಮ್ಮಿಮಾಡಿ, ಸ್ವಪ್ನ ಸ್ಖಲನ ಶೀಘ್ರ ಸ್ಖಲನಗಳನ್ನು ನಿವಾರಿಸಿ, ಸಂತಾನದಾಯಕವಾದ ವೀರ್ಯಾಣು SPERMS ಗಳನ್ನು ವೃದ್ಧಿಪಡಿಸಿ ನಪುಂಸಕತೆಯನ್ನು ಹೋಗಲಾಡಿಸುತ್ತದೆ. ಮೇಲ್ಕಂಡ ಔಷಧಿಗಳು ಕೂಡ್ಲೆ ಗುಣವಾಗಿ ಜಾಗ್ರತೆ ಸಂತಾನಫಲ ಬೇಕೋ? ಹಾಗಾದರೆ ಇಬ್ಬರೂ ಇಂದೇ ೧ ಸೆಟ್ (8ಪೊಟ್ಟ+4 ಗುಳಿಗೆ) ಅನುಪಾನ ಪತ್ರಿಕೆಯ ಮೇರೆಗೆ ಸೇವಿಸಿರಿ.

ಶೋಭನವಾಗಿ 16-18 ವರ್ಷ ಮಕ್ಕಳಿಲ್ಲದವರಿಗೂ ಸಂತಾನ ಲಭಿಸಿದೆ.

ಕ್ರಯ: 2 ಔಷಧಿಗಳ 1 ಸೆಟ್ 7 ರೂ.M.O.ಮಾಡಿರಿ. ತಲುಪಿದ ಒಡನೆ ರಿಜಿಸ್ಟರ್ ಪಾರ್ಸೆಲ್ ರವಾನೆ. ವಿ.ಪಿ ಇಲ್ಲ. ಕ್ಯಾಟಲಾಗ್ ಉಚಿತ. ಮಾಹಿತಿಗೆ 2 ಆಣೆ ಸ್ಟಾಂಪು ಕಳಿಸಿರಿ. ವಿಳಾಸ:-

ಎ. ರಾಮಸ್ವಾಮಿ ಅಯ್ಯರ್ ಸನ್ & ಕೋ., 628 "ಸಂತಾನ ಸಿಂಧೂರ ನಿಲಯ", ಚಾಮರಾಜ ರೋಡ್ ಸೌತ್ ಕ್ರಾಸ್, ಮೈಸೂರು (Mysore-South India).

WANTED

A Higher grade trained teacher to work in Hirebettu Aided Ele. School.

Apply to.

The Correspondent.

Hirebettu Aided Ele. School, Post Parkal. S. K.

-ಹೊಸಕೆರೆ ಚಿದಂಬರಯ್ಯನವರ-

ಗೀತೆಯ ಕೈಗನ್ನಡಿ

ಭಗವದ್ಗೀತೆಯ ಸಮೂಲ ಭಾಷಾಂತರ.

ಬೆಲೆ. 0-12-0

V. P. P. ಮೂಲಕ 1-4-0

ನವಯುಗ ಪ್ರೆಸ್, ಉಡುಪಿ.

Edited, Printed & Published By K. H. Shetty at the Navayuga Press, Udipi, S. India

Regd. No. M. 3618 [ಎರಡಾಣೆ] Licence No 31
Licensed to Post without Prepayment.

ನವಯುಗ

Vol.33 No. 39 3-6-1954 ವರ್ಷ ೩೩ ವಾರ ೩೯

ಘಟನೆಯ ಮೇಲೆ ಹರಟೆ

ನಮ್ಮ ಸರಕಾರಗಳ ಕಾರ್ಯಕ್ಷಮತೆ, ದೂರದೃಷ್ಟಿ ಹಾಗು ವಿಚಾರ ಶೀಲತೆ ಯಾವ ಪ್ರಕಾರವಾಗಿದೆಯೆಂಬುದನ್ನು ಒಂದು ಘಟನೆಯ ಮೇಲಿಂದ ತಿಳಿದುಕೊಳ್ಳಬಹುದು—ನೈನೀತಾಲದ ಅರಣ್ಯ ಪ್ರದೇಶದಲ್ಲಿ ಕೇಂದ್ರ ಟ್ರ್ಯಾಕ್ಟರು ಸಂಘದವರು ಭೂಮಿಯನ್ನು ಸಾಗುವಳಿಗೆ ಹದಗೊಳಿಸುತ್ತಿದ್ದರು. ಒಂದು ದಿನ ಅಕಸ್ಮಾತ್ತಾಗಿ ಹುಲಿಯೊಂದು ಕಾಣಿಸಿಕೊಂಡು, ಕೆಲಸಗಾರರನ್ನು ಬೆದರಿಸಿತು. ಎಲ್ಲರೂ ಜೀವ ಕೈಯಲ್ಲಿ ಹಿಡಿದುಕೊಂಡು ಓಡಿದರು - ಆ ವೇಳೆ ಮೂರು ದಿನಗಳಾದರೂ ಯಾರಿಗೂ ಕೆಲಸಕ್ಕೆ ಹೋಗುವ ಧೈರ್ಯವಿಲ್ಲ ಹತಾಶರಾದ ಇನಸ್ಪೆಕ್ಟರ ಸಾಹೇಬರು ಉತ್ತರ ಪ್ರದೇಶ ಸರಕಾರಕ್ಕೆ ಇದನ್ನೆಲ್ಲ ವಿವರಿಸಿ ಕಾಗದ ಬರೆದು, ಅವಶ್ಯಕ ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿಸಿದರು. ಮೂರು ನಾಲ್ಕು ದಿನಗಳಲ್ಲಿಯೇ ಉತ್ತರ ಬಂತು—"ನೀವೇನೂ ಚಿಂತಿಸುವುದು ಬೇಡ. ಶ್ರೀಮಾನ್ ಹುಲಿರಾಯರಿಗೆ ನಿಮ್ಮ ಕೆಲಸದಲ್ಲಿ ಆತಂಕವೊಡ್ಡಲಾಗದೆಂದು ವಿನಂತಿಸಿದ್ದೇವೆ ಆದಕಾರಣ, ನೀವು ನಿಮ್ಮ ಕೆಲಸವನ್ನು ಮುನ್ನಡೆಸಿರಿ." ಹುಲಿರಾಯರಿಗೆ ಯಾವಪ್ರಕಾರ ವಿನಂತಿಯನ್ನು ಮುಟ್ಟಿಸಲಾಯಿತೋ ಕಾಗದ ತಯಾರಿಸಿದ ಕಾರಕೂನನಿಗೂ ಅದಕ್ಕೆ ಸಹಿ ಹಾಕಿದ ಕಾರ್ಯದರ್ಶಿಗೂ ಗೊತ್ತು!

ಇದು ಬ್ರಿಟಿಷ್ ಕಾಲದ ಆಡಳಿತ ಯಂತ್ರವನ್ನು ಉಪಯೋಗಿಸುವ ಭಾರತ ಸರಕಾರದ ಕೈಯಿಂದಾಗುವ ಮೂರ್ಖತನವೆಂದು ನಾವು ದೂರಿಕೊಳ್ಳಬಹುದು; ರಶಿಯಾ—ಚೀನಾಗಳಲ್ಲಿ, ಇಂತಹ ತಪ್ಪುಗಳಾಗುವುದೇ ಇಲ್ಲವೆಂದು ನಮ್ಮ ಕಮ್ಯುನಿಷ್ಟ ಕಾಮ್ರೇಡರು ಹೇಳಬಹುದು. ಆದರೆ ಎಲ್ಲರ ಮನೆಯ ದೋಸೆಯೂ ತೂತು ಎಂಬುದನ್ನು ನೆನೆದರೆ ಒಳಿತು. ಏಕೆಂದರೆ, ಚೀನೀ ಪ್ರಜಾ ರಾಜ್ಯದಲ್ಲಿ ನಡೆದ ಸ್ವಾರಸ್ಯವಾದ ಘಟನೆಯೊಂದು ಈಗವರದಿಯಾಗಿದೆ—ಚುಂಗಕಿಂಗನಲ್ಲಿಯ ಓರ್ವ ಚಿಕ್ಕ ಅಧಿಕಾರಿಯು ಸುಮಾರು ಮೂರು ತಿಂಗಳ ಹಿಂದೆ ವಿನೋದ ಲಹರಿಯಲ್ಲಿದ್ದಾಗ ಪೇಕಿಂಗದ ಮಂತ್ರಿಗಳಿಗೊಂದು ಪತ್ರ ಬರೆದು, ತನ್ನ ಜೀವನವನ್ನು ಸುಖಮಯಗೊಳಿಸಲು ಪತ್ನಿಯೋರ್ವಳನ್ನು ದಯಪಾಲಿಸಬೇಕೆಂದು ಕಳಕಳಿಯಿಂದ ಬಿನ್ನವಿಸಿಕೊಂಡನು. ಅದನ್ನು ಒಳ್ಳೆ ಹಾಸ್ಯಪೂರಿತವಾಗಿ ಸರಕಾರಿ ಒಕ್ಕಣಿಕೆಯಲ್ಲೇ ಬರೆದು ಕಳಿಸಿದ್ದನು. ಮರುದಿನದಿಂದ ತನ್ನ ದೈನಂದಿನ ಕೆಲಸದಲ್ಲಿ ಮಗ್ನನಾಗಿ ಆ ವಿಷಯವನ್ನೆ ಮರೆತಿದ್ದನು!

ಆದರೆ ಆ ಪತ್ರವು ಕಸದ ಬುಟ್ಟಿಯನ್ನು ಕಾಣಲಿಲ್ಲ. ಕೇಂದ್ರ ಕಾರ್ಯಾಲಯದ ತರುಣೀಮಣಿಯೊಬ್ಬಳು ಅದನ್ನು ಸಲಕರಣೆಗಳ ಪೂರೈಕೆ ವಿಭಾಗದ ಕಾಗದ ಪತ್ರಗಳೊಂದಿಗೆ ಪರ್ಯಾಲೋಚನೆ ಹಾಗು ಮಂಜೂರಿಗಾಗಿ ತನ್ನ ಮೇಲಧಿಕಾರಿಗಳ ಮುಂದೆ ಇಟ್ಟಳು. ಅದು ಕಾಲಾನುಕ್ರಮದಲ್ಲಿ ಆ ಚಿಕ್ಕ ಅಧಿಕಾರಿಯ ಬಳಿಗೆ ಮರಳಿ ಬಂತು—ತಾನು ಮಾಡಿದ ಕುಚೋದ್ಯಕ್ಕೆ ಯಾವ ರೀತಿಯ ಶಿಕ್ಷೆಯನ್ನು ಹೊತ್ತುತಂದಿದೆಯೋ ಎಂದವನು ಭಯಗೊಂಡೇ ಪತ್ರ ಓದಿದನು. ತನ್ನ ಬೇಡಿಕೆಗೆ ಮಂಜೂರಾತಿ ದೊರೆತಿದ್ದುದನ್ನು ಕಂಡು ಅವನಿಗೆ ಆಶ್ಚರ್ಯ ಸಂತೋಷಗಳೆರಡೂ ಏಕಕಾಲದಲ್ಲಿ ಉಂಟಾದವು ಹಾಗೆಂದು ಅಳನಿಗೆ ನಿಜವಾದ ಹೆಂಡತಿ ದೊರಕುವಂತೆ ಮಾತ್ರ ಕಾಣುವುದಿಲ್ಲ—ಚುಂಗಕಿಂಗದ ಕಮ್ಯುನಿಷ್ಟ ಪತ್ರಿಕೆ ಉಗ್ರವಾದ ಅಗ್ರಲೇಖನವನ್ನು ಬರೆದು ಕಾಗದ ಪತ್ರಗಳಿಗೆ ಕಣ್ಣುಮುಚ್ಚಿ ಸಹಿ ಹಾಕುವ ಅಧಿಕಾರಿಗಳ ಮನೋಭಾವವನ್ನು ಖಂಡಿಸಿದೆ. ಹೇಗಿದ್ದರೂ ಏಕಾಂಗಿಯಾದ ಅಧಿಕಾರಿಗೆ ಪತ್ನಿಯನ್ನು ದಯಪಾಲಿಸುವಷ್ಟು ಔದಾರ್ಯವನ್ನು ತೋರಿಸಿ, ಚೀನೀ ಪ್ರಜಾ ರಾಜ್ಯವು ಹೊಸತೊಂದು ಪರಂಪರೆಯನ್ನು ಹಾಕಿಕೊಟ್ಟಿರುವುದು ಸ್ತುತ್ಯ!

ಸರಕಾರದಲ್ಲಿಯೂ ಇತರೆಡೆಗಳಂತೆ ವಶೀಲಿಯ ವರ್ಚಸ್ಸೇ ಅಧಿಕವೆಂದು ಹೇಳುತ್ತಾರೆ—ಮಂತ್ರಿಗಳು ತಮ್ಮ ಭಾವಮೈದುನರಿಗೆ, ನಂಟರಿಷ್ಟರಿಗೆ ಹುದ್ದೆಗಳನ್ನು ನಿರ್ಮಿಸಿ ದಯಪಾಲಿಸುತ್ತಿರುವರೆಂದೂ ದೂರಲಾಗುತ್ತದೆ. ಎಷ್ಟೋ ಮಂದಿ ಸರಕಾರೀ ಅಧಿಕಾರಿಗಳು ಯಜಮಾನತಿಯ ಆಜ್ಞೆಯನ್ನು ಉಲ್ಲಂಘಿಸಲಾಗದೆ ಲಂಚ ಸ್ವೀಕರಿಸಿ, ಮಹಾಪರಾಧಗಳನ್ನು ಕ್ಷಮಿಸಿ ಬಿಡಬೇಕಾಗುತ್ತದೆ. "ಸಭ್ಯತೆಯ ರಹಸ್ಯ" ಎಂಬ ಪ್ರೇಮಚಂದರ ಕತೆ ಇಂತಹ ಪ್ರಸಂಗವನ್ನು ಸ್ವಾರಸ್ಯಕವಾಗಿ ಚಿತ್ರಿಸುತ್ತದೆ ಪತ್ನಿಯ ಯಾವ ಬೇಡಿಕೆಯನ್ನಾದರೂ ಕಸದ ಬುಟ್ಟಿಗೆ ಹಾಕುವ ಕಠೋರ ವರ್ತನೆಯನ್ನು ಪತಿಯಾದವನು ತೋರಿಸಲಾರ—ಆದರೆ ಈ ಸಿದ್ಧಾಂತಕ್ಕೆ ಭಾರತ ಸರಕಾರದ ಅರ್ಥಸಚಿವ ಶ್ರೀ ಚಿಂತಾಮಣರಾವ ದೇಶಮುಖರೊಂದು ಅಪೂರ್ವ ಅಪವಾದ. ಅರ್ಥಸಚಿವರ ಹೆಂಡತಿಯೂ ಕೇಂದ್ರ ಸಮಾಜ ಕಲ್ಯಾಣ ಮಂಡಳದ ಅಧ್ಯಕ್ಷೆಯೂ ಆಗಿರುವ ಶ್ರೀಮತಿ ದುರ್ಗಾಬಾಯಿಯವರು ರಾಣಿಯಲ್ಲಿ ಸಾರ್ವಜನಿಕರ ಮುಂದೆ ತನ್ನ ಗಂಡನ ವರ್ತನೆಯನ್ನು ಆಕ್ಷೇಪಿಸಿ ದೂರುಕೊಟ್ಟರು - "ನಾನು ಅರ್ಥಸಚಿವರ ಹೆಂಡತಿಯಾದುದರಿಂದ ನನ್ನ ಮಂಡಳಕ್ಕೆ ಸುಲಭವಲ್ಲಿಯೇ ಹಣ ಸಿಕ್ಕಬಹುದೆಂದು ಅನೇಕರು ಭಾವಿಸಿದ್ದಾರು ಆದರೆ ವಾಸ್ತವವಾಗಿ ಹಾಗಿರುವುದಿಲ್ಲ. ನನ್ನ ಮಂಡಳದ ಹಣಕಾಸುಗಳ ಆವಶ್ಯಕತೆಯನ್ನು ಅವರಿಗೆ ಮನಗಾಣಿಸಿಕೊಡಬೇಕಾದರೆ ನಾನು ಇತರರಿಗಿಂತ ಹೆಚ್ಚಿಗೆ ಹೆಣಗಾಡಬೇಕಾಗುತ್ತದೆ. ಅವರಿಂದ ಸಾಕಷ್ಟು ಹಣವನ್ನು ಪಡೆಯುವುದಕ್ಕೋಸ್ಕರ ನಾನು ಅನೇಕಸಲ "ಕ್ಯೂ" ನಿಂತು, ನನ್ನ ಸರತಿ ಯಾವಾಗ ಬರುತ್ತದೋ ಎಂದ ಕಾಯುತ್ತಿರುತ್ತೇನೆ" ತನ್ನ ಪತಿಯು ತನಗೇನೂ ವಿಶೇಷ ಪ್ರಾಶಸ್ತ್ಯವನ್ನು ಕೊಟ್ಟು ನಡೆಸಿಕೊಳ್ಳುತ್ತಿಲ್ಲವಲ್ಲ ಎಂಬುದೇ ಶ್ರೀಮತೀಜಿಯ ಆಕ್ಷೇಪ

ಸ್ವತಂತ್ರ ಭಾರತದ ಗೌರವಕ್ಕೆ ಒಪ್ಪಬಹುದಾದ ಸೂಚನೆಯೊಂದನ್ನು ಸೌರಾಷ್ಟ್ರದ ಮುಖ್ಯ ಮಂತ್ರಿ ಶ್ರೀ ಯು. ಎನ್. ಢೇಬರವರು ಮಾಡಿದ್ದಾರೆ—ಸ್ವಾತಂತ್ರ್ಯ ಆಂದೋಲನ ಕಾಲದಲ್ಲಿ ಸೆರೆಮನೆ ವಾಸಕ್ಕೆ ಕೊಡಲಾಗುತಿದ್ದ ಗೌರವವನ್ನು ಇಂದು ಶ್ರಮ ಯಜ್ಞಕ್ಕೆ ನೀಡಬೇಕೆಂಬುದು ಅವರ ಸಲಹೆ. ಅಹಮ್ಮದಾಬಾದಿನ ಯುವಕ ಕಾಂಗ್ರೆಸಿನವರು ಸಂಘಟಿಸಿದ ಶ್ರಮಯಜ್ಞದಲ್ಲಿ ಭಾಗ ವಹಿಸುತ್ತಾ ಅವರು ಮೇಲಿನ ಅಭಿಪ್ರಾಯವನ್ನು ವ್ಯಕ್ತಗೊಳಿಸಿದರು. ಒಂದು ಈಜು ಕೊಳದ ರಚನೆಗಾಗಿ ೭೦ ಯುವಕ–ಯುವತಿಯರು ಮಣ್ಣು ಅಗೆಯುವ ಕೆಲಸವನ್ನು ಮಾಡುತಿದ್ದರು. ಆಗ ಮುಖ್ಯ ಮಂತ್ರಿಗಳಿಗೆ ಸ್ಫೂರ್ತಿ ಬಂತು. ಈ ತರುಣ ತರುಣಿಯರು ಈಗಾಗಲೇ ೨೦ ಸಾವಿರ ಘನ ಅಡಿ ಮಣ್ಣನ್ನು ಅಗೆದು ತೆಗೆದಿರುವರಂತೆ—ಸಾಬರಮತಿ ನದಿಯ ದಡದ ಮೇಲೆ ನಿರ್ಮಾಣ ಹೊಂದುವ ಈ ಈಜುಗೊಳಕ್ಕೆ ಎರಡು ಲಕ್ಷ ರೂಪಾಯಿ ವೆಚ್ಚ ಬರುತ್ತದೆ; ಇದರಲ್ಲಿ ಒಂದು ಲಕ್ಷ ರೂಪಾಯಿಯನ್ನು ಅಹಮ್ಮದಾಬಾದಿನ ನಾಗರಿಕರು ಕಾಣಿಕೆಯಾಗಿ ಸಲ್ಲಿಸಿರುವರು. ಅಂತೂ ಆರ್ಥಿಕ ಪುನಾರಚನೆಗೋಸ್ಕರ ಉಚಿತವಾತಾವರಣವನ್ನು ನಿರ್ಮಿಸಲು ಇಂತಹ ಶ್ರಮಯಜ್ಞದ ಕಾರ್ಯಕ್ರಮಗಳು ನೆರವಾಗುತ್ತವೆಂಬುದು ನಿಶ್ಚಯ. ಹಿಂದೆ 'ದೇ. ಭ."ರಾಗಿದ್ದ ಶ್ರೀ ಢೇಬರವರು ಶ್ರಮಯಜ್ಞಕ್ಕೆ ನೀಡಿದ ಉಚ್ಚಮಟ್ಟದ ಗೌರವವು ಉಚಿತವೇ ಆಗಿದೆ

ಇಂತಹ ಮನೋಭಾವವನ್ನು ನಮ್ಮ ಬೇರೆ ಕೆಲವರು ಮುಖಂಡರು ಇನ್ನೂ ರೂಢಿಸಿಕೊಂಡಿಲ್ಲವೆಂಬುದೇ ಮುಖ್ಯ ವಿಷಯ. ಸ್ವತಂತ್ರ ಭಾರತದ ರಾಜ್ಯಾಂಗ ಘಟನೆಯಲ್ಲಿ ಹೇಳಿರುವಂತೆ, ನಮ್ಮ ಸರಕಾರಗಳು ಬಿರುದು ಬಾವಲಿಗಳನು ಕೊಡುವ ಪದ್ಧತಿಯನ್ನು ಬಿಟ್ಟುಗೊಟ್ಟಿರುತ್ತವೆ. ಇದು ಮೈಸೂರಿನ ಪ್ರಮುಖರ ಮನಸ್ಸನ್ನು ನೋಯಿಸಿದೆ. ಘಟನೆಯಂತೆ ರಾಜಪ್ರಮುಖ ಎನಿಸಿದವನನ್ನು ಪರಂಪರಾಗತವಾದ ಮರ್ಯಾದೆ ಕೊಟ್ಟು, ಮಹಾರಾಜನೆಂದೇ ಸಂಬೋಧಿಸುವ ಮೈಸೂರಿನವರ ಮನೋಭಾವನೆ ಸ್ವಾತಂತ್ರ್ಯೋತ್ತರದ ಸ್ಥಿತಿಗತಿಗಳೊಂದಿಗೆ ಸಾಕಷ್ಟು ಮೇಳವನ್ನು ಸಾಧಿಸಿರುವುದಿಲ್ಲ. ಎಂತಲೇ ಮೈಸೂರಿನ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ಬಿರುದು ಬಾವಲಿಗಳನ್ನು ಕೊಡುವ ಪದ್ಧತಿಯನ್ನು ಪುನರಾರಂಭಿಸುವುದು ಯೋಗ್ಯವೆಂದು ಬೆಂಗಳೂರಿನಲ್ಲಿ ಅಭಿಪ್ರಾಯ ವ್ಯಕ್ತಗೊಳಿಸಿದರು. ಇಂಗ್ಲೆಂಡಿನಲ್ಲಿರುವ ಇಂತಹ ಪದ್ಧತಿಯನ್ನು ಅವರು ಬಾಯಿ

(೭ನೇ ಪುಟ ನೋಡಿರಿ)

ಸಮರ್ಥ ಸಾಲಗಳು

ಒಬ್ಬನ ಯೋಗ್ಯತೆ ಮತ್ತು ಸಮರ್ಥತೆ ಅನೇಕ ವೇಳೆ ಆತನ ಚಿಲ್ಲರೆ ಸಾಲಗಳ ದೆಸೆಯಿಂದಾಗಿ ಬಹುವಾಗಿ ಕುಂಟುತ್ತವೆ ಆದರೆ ಈ ಎಲ್ಲಾ ಚಿಲ್ಲರೆ ಸಾಲಗಳನ್ನು ಏಕೀಕರಿಸಿ ಸುಲಭಸಾಧ್ಯವಾದ ಕಂತುಗಳಿಂದ ಸಂದಾಯ ಮಾಡುವಂತಾದರೆ ಆತನ ಕಷ್ಟಗಳೆಲ್ಲವೂ ಪರಿಹಾರವೊಂದಿ ಆತನ ಯೋಗ್ಯತೆ ಹಾಗೂ ಸಮರ್ಥತೆ ಮರಳಿ ಬರುವವು. ತಿಂಗಳಿಗೆ ರೂಪಾಯಿ 250 ಯಾ ಅದಕ್ಕಿಂತ ಜಾಸ್ತಿ ಸಂಬಳವಿರುವ ಆಫೀಸರರುಗಳಿಗೆ ಅವರ ಸಂಬಳದ ಆರು ಪಾಲನ್ನು ಸಾಲಗಳನ್ನು ಕೊಟ್ಟು ಅದನ್ನು 36 ತಿಂಗಳು ಕಂತುಗಳಿಂದ ಮರುಪಾವತಿ ಪಡೆಯುವ ಹೊಸ ಯೋಜನೆಯೊಂದನ್ನು ನಾವು ಕಂಡುಹಿಡಿದಿದ್ದೇವೆ. ಈ ಸಾಲವನ್ನು ಪಡೆಯಲು ಇನ್ಶೂರೆನ್ಸ್ ಪಾಲಿಸಿ ಮತ್ತು ಒಬ್ಬ ಸರಿ ಜಾಮೀನುದಾರನು ಆವಶ್ಯಕ.

ಹೆಚ್ಚಿನ ವಿವರಗಳಿಗೆ ಸಮೀಪದ ನಮ್ಮ ಆಫೀಸಿನಲ್ಲಿ ವಿಚಾರಿಸಿರಿ.

THE CANARA INDUSTRIAL & BANKING SYNDICATE LTD.

Estd: 1925 H O. UDIPI, S india

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್.,

ಸ್ಥಾಪನೆ ೧೯೨೫] [ಪ್ರಧಾನ ಕಚೇರಿ: ಉಡುಪಿ ದ. ಭಾರತ

ಸಾಮ್ಯವಾದಿ ಪ್ರಪಂಚದ ಮೂವರು ಪ್ರಭೃತಿಗಳು

ಅವರ ಚೈತನ್ಯಪೂರ್ಣ ವ್ಯಕ್ತಿತ್ವದ ಪರಿಚಯ

ಜಿನೀವಾ ಸಮ್ಮೇಳನಕ್ಕೆ ಹಂಚಾಂಗವನ್ನು ಹಾಕಿಕೊಟ್ಟ ಬರ್ಲಿನ ಪರಿಷತ್ತು ಕಳೆದ ಫೆಬ್ರವರಿಯಲ್ಲಿ ಸೇರಿದಾಗ ಮೋಜಿನ ಘಟನೆಯೊಂದು ನಡೆಯಿತು—ಸೋವಿಯೆಟ್ ರಶಿಯಾದ ವಿದೇಶಾಂಗ ಸಚಿವ ಮೊಲೊಟೋವರು ಇತರ ವಿದೇಶಾಂಗ ಸಚಿವರ ಗೌರವಾರ್ಥ ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದರು. ಇದಕ್ಕೆ ಸುಮಾರು ೩೦೦ ಮಂದಿ ಬಂದಿದ್ದರು-ಅಮೇರಿಕದ ವಿದೇಶಾಂಗ ಸಚಿವ ಡಲ್ಲೇಸರ ಪತ್ನಿಯೂ ಅಲ್ಲಿದ್ದರು.

ಶ್ರೀಮತಿ ಡಲ್ಲೇಸರು ಮೊಲೊಟೋವರನ್ನು ಕುರಿತು "ನೀವು ಸಭೆ ಜರಗಿಸುವ ಭವನವನ್ನು ನೋಡಬೇಕೆಂದು ಇಚ್ಛೆಯಾಗುತ್ತದೆ" ಎಂದರು. ಮೊಲೊಟೋವರು ಇದಕ್ಕೆ ಸಮ್ಮತಿಸಿದರು. ಆ ಸ್ಥಳಕ್ಕೆ ಶ್ರೀಮತಿ ಡಲ್ಲೇಸರನ್ನು ಕರೆದುಕೊಂಡು ಹೋಗಿ "ನೋಡಿ, ಇದು ನಿಮ್ಮ ಗಂಡ ನನಗೆ ಕಿರುಕುಳ ಕೊಡುವ ಜಾಗ" ಎಂದು ಡಲ್ಲೇಸರ ಕುರ್ಚಿಯನ್ನು ತೋರಿಸಿದರು.

"ಆದರೆ ನೀವು ನಿಮ್ಮ ನಿಲುವಿಗೆ ಅಂಟಿಕೊಂಡಿರಬಹುದಲ್ಲ-" ಎಂದರು ಶ್ರೀಮತೀಜಿ. "ಅದು ನಿಜ, ಆದರೆ, ಆವರು ಮೂವರ ವಿರುದ್ಧ ನಾನಿರುವುದು ಒಬ್ಬ!" ಎಂದು ಮೊಲಟೋವ ನಕ್ಕರು!

ಅದೇ ಸಮಯ ಮೊಲಟೋವರ ಕಾರ್ಯದರ್ಶಿ ಗ್ರೊಮಿಕೋರವರೊಡನೆ ಬ್ರಿಟನಿನ ಪ್ರತಿನಿಧಿಯೊಬ್ಬರ ಸತಿ ಸಲ್ಲಾಪದಲ್ಲಿ ತೊಡಗಿದ್ದಳು. ಹರಟೆ ಮುಗಿದ ಬಳಿಕ "ಎಷ್ಟು ಒಳ್ಳೆಯ ಮನುಷ್ಯ! ಇವರೆಲ್ಲ ಹೇಳುವಷ್ಟು ಗ್ರೊಮಿಕೋ ದುಷ್ಟನೆಂದು ನಾನಂತೂ ನಂಬುವುದಿಲ್ಲ" ಎಂದು ಅವಳು ಹೇಳಿದಳು.

ಈ ಸಮಾರಂಭದಲ್ಲಿ ರಶಿಯಾದ ಕಲಾವಿದರಿಂದ ಸೋವಿಯೆಟಿನ ಸಂಗೀತ, ನರ್ತನ ಮುಂತಾದ ಮನೋರಂಜನೆಯ ಕಾರ್ಯಕ್ರಮಗಳನ್ನೂ ಏರ್ಪಡಿಸಿದ್ದರು. ಇದಕ್ಕೋಸ್ಕರ ಪಾಶ್ಚಾತ್ಯ ರಾಷ್ಟ್ರಗಳ ಮೂವರೂ ವಿದೇಶಾಂಗ ಸಚಿವರು ಮೊಲೊಟೋವರನ್ನು ಹೃತ್ಪೂರ್ವಕ ಅಭಿನಂದಿಸುತ್ತಾ ತಮ್ಮ ಸಂತೋಷವನ್ನು ವ್ಯಕ್ತಗೊಳಿಸಿದರು.

"ಇದರಲ್ಲಿ ವಿಶೇಷವೇನೂ ಇಲ್ಲ – ಬೇರೇನನ್ನೂ ನಿಮಗೆ ಕೊಡಲು ನನ್ನಿಂದಾಗಲಿಲ್ಲ. ಒಂದು ಗಳಿಗೆಯ ವಿನೋದವನ್ನಾದರೂ ಒದಗಿಸಿದೆನಲ್ಲ - ಇದೇ ನನಗೆ ತೃಪ್ತಿ ಹಾಗು ಸಮಾಧಾನ" ಎಂದು ಮೊಲಟೋವರು ಮಾರ್ನುಡಿದರು.

ರಾಜಕೀಯ ರಂಗದ ಪ್ರತಿಭಾನ್ವಿತ ನಟರಾಗಿ ದುಡಿಯುವ ಮಹಾಜೀವಗಳ ವೈಯಕ್ತಿಕ ಜೀವನದಲ್ಲಿ ಇಂತಹ ರಸಪೂರ್ಣ ಗಳಿಗೆಗಳು ಎಷ್ಟೋ ಸಂದು ಹೋಗಿವೆ—ಕಮ್ಯುನಿಸ್ಟರೆಂದು ಕರೆಯಲ್ಪಡುವ ಪ್ರಭೃತಿಗಳೂ ನಮ್ಮಂತೆಯೇ ಸಾಮಾನ್ಯ ಮನುಷ್ಯರು. ಅವರ ಪ್ರತಿಭೆ ಸ್ವಂತ ಅಧ್ಯವಸಾಯದ ಫಲ; ಅವಿರತ ಪರಿಶ್ರಮ ಹಾಗು ಪ್ರಯತ್ನದ ವಿಕಸಿತ ರೂಪವೇ ಅವರ ಚೈತನ್ಯ ಪೂರ್ಣ ವ್ಯಕ್ತಿತ್ವ.

ಸಾಮ್ಯವಾದಿ ಪ್ರಪಂಚದ ಮೂವರು ನಕ್ಷತ್ರಗಳ ಜೀವನದ ಇಣುಕು ನೋಟ ನಮ್ಮನ್ನು ರೋಮಾಂಚನಗೊಳಿಸಬಲ್ಲುದು: ಅದೇ ಕಾಲಕ್ಕೆ ನಮ್ಮ ಸಹಾನುಭೂತಿಯನ್ನೂ ಗಳಿಸಬಲ್ಲುದು.

ಹೋ ಚಿ ಮಿನ್

ಅಸ್ತವ್ಯಸ್ತವಾಗಿ ಬೈತಲ್ಲಿನಂತೆ ಓರಣವಿಲ್ಲದೆ ಚದರಿದ ಗಡ್ಡ ಮೀಸೆಗಳಿರುವ, ಬಡಕಲು ಶರೀರದ, ಮುದುಕನಾಗಿ ತೋರುವ ಹೋಚಿಮಿನನ ಚಿತ್ರವನ್ನು ಪತ್ರಿಕೆಯಲ್ಲಿ ಕಂಡವರಿಗೆ ಈ ವ್ಯಕ್ತಿಯಲ್ಲಿ ಯಾವ ಆಕರ್ಷಣೆಯೂ ಕಂಡುಬಾರದು. ಆದರೆ ಚಿತ್ರವನ್ನು ನೋಡುತ್ತಿರುವ ನಮ್ಮ ದೃಷ್ಟಿಯು ಗುಳಿಬಿದ್ದ ಕೆನ್ನೆಗಳ ಎಡೆಯಿಂದ ಮಿನುಗುವ ಆ ಕಣ್ಣುಗಳ ತೀಕ್ಷ್ಣ ಧಾರೆಯನ್ನು ಗುರುತಿಸಿದಾಗ ಮಾತ್ರ, ನಾವು ತಪ್ಪಿಬಿದ್ದೆವೆನ್ನುವುದು ವೇದ್ಯವಾಗುತ್ತದೆ.

ದೂರದ ಇಂಡೋಚೀನಾವನ್ನು ಕುರಿತು ನಮಗೆ ತಿಳಿದಿರುವುದು ಅತ್ಯಲ್ಪ— ಅಲ್ಲಿಯ ಬಿದಿರಿನ ಗುಡಿಸಲುಗಳು, ಧಾನ್ಯದ ಹಸುರು ಹೊಲಗಳು, ಬುದ್ಧ ದೇವನ ಸುಂದರ ಪ್ರತಿಮೆಗಳು ಇವುಗಳ ಪರಿಚಯ ನಮಗೆ ಇದೆಯೆ? ಇಂಡೋಚೀನದಲ್ಲಿ ೧೮೭೦ ರ ಹೊತ್ತಿಗೆ ನೆಲಸತೊಡಗಿದ ಭಾರತೀಯರು —ಮುಖ್ಯವಾಗಿ ತಮಿಳರು —ಇಂದು ೨೫೦೦ ಸಂಖ್ಯೆಯನ್ನು ಮುಟ್ಟಿದ್ದಾರೆಂದೂ ಅವರು ಸುಮಾರು ೧೦೦ ಕೋಟಿ ರೂಪಾಯಿಗಳ ಬಂಡವಾಳವನ್ನು ಅಲ್ಲಿ ವ್ಯಾಪಾರದಲ್ಲಿ ತೊಡಗಿಸಿರುವರೆಂದೂ ನಮ್ಮಲ್ಲಿ ಹೆಚ್ಚಿನವರಿಗೆ ತಿಳಿದಿರಲಾರದು. ಅಂದಬಳಿಕ, ಹೋಚಿಮಿನನಂತಹ ವ್ಯಕ್ತಿಯ ಗುರುತು ನಮಗಿಲ್ಲದಿದ್ದರೆ ಅದು ಅಪರಾಧವೆನಿಸದು.

ಮಹಾ ಕವಿ ಫನ್ ಬೋಇ ಚಾವುನ ಗೀತೆಗಳು ಇಂಡೋ ಚೀನದಲ್ಲಿ ಜಾಗೃತಿಯನ್ನು ಹುಟ್ಟಿಸಿದಾಗ, ಅದಕ್ಕೆ ಕಿವಿಗೊಟ್ಟ ಬಾಲಕ ಹೋ ಚಿ ಮಿ ನ ಇಂದು ಫ್ರೆಂಚ ವಸಾಹತುವಾದಕ್ಕೆ ಅಂತಿಮ ಆಹ್ವಾನ ಕೊಡುವಷ್ಟು ಪ್ರಬಲಿಸಿರುವುದು ಇತಿಹಾಸದ ಅದ್ಭುತ! ಹೋ ಚಿ ಮಿನ ಯುರೋಪು ಯಾತ್ರೆಯನ್ನು ಕೈಗೊಂಡು ಅತ್ಯಮೂಲ್ಯ ಅನುಭವವನ್ನು ಪಡೆಯಲು ಹಾತೊರೆಯುತ್ತಿದ್ದ. ಇದಕ್ಕೋಸ್ಕರ ಹಡಗಿನಲ್ಲಿ ಮುಸುರೆ ತೊಳೆಯುವ, ಎಂಜಲು ಬಿಸುಡುವ, ನೆಲ ಒರಸುವ ಕೆಲಸಗಳನ್ನೂ ಮಾಡಲು ಮುಂಬಂದ.

ಫ್ರಾನ್ಸಿನ ಜನತೆ ಸುಖದ ಸುಪ್ಪತ್ತಿಗೆಯಲ್ಲಿರಬಹುದೆಂದು ತನ್ನ ಮಾತೃ ಭೂಮಿಯ ಬಡತನದೊಡನೆ ಹೋಲಿಸುತ್ತಾ ಭಾವಿಸಿದ್ದ ಹೋಚಿಮಿನನಿಗೆ ಮಾರ್ಸೇಲಿಯ ಬಂದರದಲ್ಲಿ ಹಡಗು ನಿಂತೊಡನೆಯೇ ಗಿರಾಕಿಗಳ ಬೇಟೆಗೆಂದು ಮುತ್ತಿದ, ಕೊಳಕು ಅಂಗಿಯ, ಹಸಿದ ವೇಶ್ಯೆಯರನ್ನು ಕಂಡು ಅಳು ಬಂದಿತು. ಬಡತನ ಮತ್ತು ಕಷ್ಟ ಕಾರ್ಪಣ್ಯಗಳು ಎಲ್ಲ ಕಡೆಯೂ ಮನುಷ್ಯನನ್ನು ಒಂದೇ ತೆರನಾಗಿ ಪೀಡಿಸುತ್ತಿರುವುದು ಸತ್ಯವಾಗಿ ಗೋಚರಿಸಿತು.

ಪ್ರಥಮ ಮಹಾ ಯುದ್ಧಕಾಲದಲ್ಲಿ ಲಂಡನ್ನಿನ "ಕಾರ್ಲ್‌ಟನ್" ಹೋಟಲಿನ ಅಡುಗೆಮನೆ ಸೇರಿದ್ದ ಹೋಚಿಮಿನ ಮುಂದೆ ಫ್ರಾನ್ಸಿನಲ್ಲಿ ಸಾಮ್ಯವಾದಿಗಳ ಪ್ರಭಾವಲಯದಲ್ಲಿ ಬಿದ್ದನು. ಫ್ರೆಂಚ ಪತ್ರಿಕೆಗಳಿಗೆ ಇಂಡೋ ಚೀನದ ದುರವಸ್ಥೆಯನ್ನು ಕುರಿತು ಲೇಖನ ಬರೆಯ ತೊಡಗಿದನು. "ಬಿದಿರಿನ ಹೆಬ್ಬಾವು" ಎಂಬ ಅವನ ನಾಟಕ ವಸಾಹತುವಾದವನ್ನು ಖಂಡಿಸಿತು; ಸರಕಾರ ಅದಕ್ಕೆ ಮುಟ್ಟುಗೋಲು ಹಾಕಿತು. ಮುಂದೆ ಹೋಚಿಮಿನ ಸ್ವತಃ ಪತ್ರಿಕೆಯೊಂದರ ಸಂಪಾದಕನಾಗಿ ಕೇಕೆ ಹಾಕಿದಾಗ, ಫ್ರೆಂಚ ವಸಾಹತು ವಾದಿಗಳು ಇವನನ್ನು ಅಟ್ಟುತ್ತಾ ಹೋದರು.

ಹೀಗೆ ಹೇಳದೆ ಕೇಳದೆ ಪಲಾಯನ ಮಾಡಿದ ಹೋಚಿಮಿನನಿಗೆ ಮೋಸ್ಕೋದಲ್ಲಿ ಸ್ವಾಗತ ದೊರೆಯಿತು. ಅವನು ರಶಿಯಾವನ್ನೂ ಸುತ್ತಿ ಚೀನಾದ ಮೂಲಕ ಸ್ವದೇಶಕ್ಕೆ ಮರಳುವ ಯೋಚನೆಯಾಯಿತು. ಕೇಂಟನಿನಲ್ಲಿ ಅವನಿಗೆ ಸನ್‌ಯಾತ್ ಸೇನರ ಸಂಪರ್ಕ ಒದಗಿತು. ಸೇನರ ಮರಣಾನಂತರ ಗುಪ್ತಚಾರರ ದಾಳಿಯಿಂದ ಉಳಿಸಿಕೊಳ್ಳುವುದೇ ಹೋಚಿಮಿನನ ಕೆಲಸ. ಸಾಹಸಿಯಾದ ಈ ನಾಯಕ ಭಿಕಾರಿಯಂತೆ ಅಲೆದಾಡಿದ. ಜನತೆಯ ಮುಕ್ತಿಗಾಗಿ ಹಾತೊರೆದ; ಸ್ವಾತಂತ್ರ್ಯದ ಕನಸು ಕಂಡ.

ಮುಂದೊಂದು ದಿನ ಕರಾಳವಾಗಿ ಎದುರು ಬಂತು: ಜನನಾಯಕ ಥಾಯಿ ಪುತ್ತಸನ ಸಂಗಡಿಗರನ್ನು ಗಲ್ಲಿಗೇರಿಸಿದರು! ಇನ್ನೂ ಮರೆಯಲ್ಲಿರುವುದು ಹೋಚಿಮಿನನಿಗೆ ಕೆಡಕೆನಿಸಿತು. ತಲ್ಲಣಗೊಂಡ ಅವನು ಕ್ರಾಂತಿರಂಗಕ್ಕೆ ಧುಮುಕಿದನು.

ದ್ವಿತೀಯ ಮಹಾಯುದ್ಧ ಕಾಲದಲ್ಲಿ ಇಂಡೋಚೀನವನ್ನು ಆಕ್ರಮಿಸಿದ ಫ್ರೆಂಚರ ವಿರುದ್ಧ ಹೋಚಿಮಿನ ಹೋರಾಡಿದನು. ಆಗ ಅಮೇರಿಕದ ಸರಕಾರ ಹೋಚಿಮಿನನನ್ನು ತಮ್ಮ ಮಿತ್ರನೆಂದೇ ಭಾವಿಸಿದ್ದಿತು. ಫ್ರೆಂಚರ ವಸಾಹತು ವಾದದ ಮೇಲೆ ಅಮೇರಿಕಕ್ಕೆ ಶ್ರದ್ಧೆ ಇರಲೇ ಇಲ್ಲ. 'ಜಪಾನಿನ ಪತನದ ಬಳಿಕ ಇಂಡೋಚೀನಕ್ಕೆ ಪೂರ್ಣ ಸ್ವಾಯತ್ತಾಧಿಕಾರ ದೊರೆಯತಕ್ಕದ್ದು" ಎಂದು ಆಗ ಹೋಚಿಮಿನ ಹೇಳುತ್ತಿದ್ದ.

ಫ್ರೆಂಚರು ವೀಟಮಿನರೊಡನೆ ಸಹಕರಿಸಲು ಒಪ್ಪಿರಲಿಲ್ಲ – ಪರಿಣಾಮವಾಗಿ ಹೋಚಿಮಿನ ತಾನು ವಿಮೋಚನೆಗೊಳಿಸಿದ್ದ ಟೋಂಕಿನ ಪ್ರದೇಶದ ಆರು ಜಿಲ್ಲೆಗಳಲ್ಲಿ ವಿಮೋಚನಾ ಸಮಿತಿಯನ್ನು ನೇಮಿಸಿ, ತಾನೇ ಈ ಪ್ರಜಾರಾಜ್ಯದ ಅಧ್ಯಕ್ಷನೆಂದು ಸಾರಲ್ಪಟ್ಟನು. ಇದರಿಂದ ಕಂಗೆಟ್ಟ ಫ್ರೆಂಚರು ರಾಜಕೀಯ ಕಪಟವನ್ನು ಆಡಿದರು—ಹೋಚಿಮಿನನ ಸ್ವತಂತ್ರ ಸರಕಾರಕ್ಕೆ ಇಂಡೋ ಚೀನ ಸಂಯುಕ್ತ ರಾಜ್ಯ ಮತ್ತು ಫ್ರೆಂಚ ಒಕ್ಕೂಟದ ಅಂಗವೆಂದು ಅವರು ಮನ್ನಣೆ ಕೊಟ್ಟರು. ಇದಕ್ಕೆ ಬದಲಾಗಿ ಹೋಚಿಮಿನನು ಚೀನೀ ಸೈನ್ಯವನ್ನು ಹಿಂದೆಗೆದು, ಅದರ ಸ್ಥಾನದಲ್ಲಿ ಫ್ರೆಂಚ ಸೇನೆ ಪ್ರವೇಶಿಸುವುದಕ್ಕೆ ಬಿಟ್ಟನು.

ಆದರೆ ಮುಂದೆ ಮಾತ್ರ ಫ್ರೆಂಚರು ಹೋಚಿಮಿನನ ಕೊರಳು ಕೊಯ್ದರು—ಮಾತು ಮುರಿದರೆಂದು ಫ್ರೆಂಚರ ವಿರುದ್ಧ ರೊಚ್ಚಿಗೆದ್ದ ಹೋಚಿಮಿನ ಸ್ವಾತಂತ್ರ್ಯ ಯುದ್ಧವನ್ನು ಸಾರಿದ. ಕೂಟ ಯೋಧರನ್ನು ಕೂಡಿಸಿಕೊಂಡು ಫ್ರೆಂಚ ಸೈನಿಕರನ್ನು ಬಗ್ಗಿಸ ತೊಡಗಿದ. ಈ ನಡುವೆ ರಶಿಯಾ—ಅಮೇರಿಕ ಸಂಬಂಧ ನಾಜೂಕಾಗ ತೊಡಗಿದುದರಿಂದ, ಇಂಡೋಚೀನದ ಸಮರ "ಕಮ್ಯುನಿಸ್ಟ ತಂತ್ರ"ವೆಂದು ಹೆಸರಾಯಿತು; ಮತ್ತು ಆರು ವರ್ಷಗಳ ಹಿಂದೆ ಪರಮ ಮಿತ್ರನೆನಿಸಿದ್ದ ಹೋಚಿಮಿನನ ವಿರುದ್ಧ ಅಮೇರಿಕಾ ಸರಕಾರ ಮದ್ದು ಗುಂಡುಗಳ ನೆರವನ್ನು ಫ್ರಾನ್ಸಿಗೆ ಕೊಡತೊಡಗಿತು.

ಹೋಚಿ ಮಿನನು ಜೀವನದಲ್ಲಿ ಅನುಪಮ ಶಿಕ್ಷಣ ಹೊಂದಿದ್ದಾನೆ; ದುಃಖ, ಸಂಘರ್ಷ, ಕಟುತ್ವ ಮತ್ತು ವಿದ್ರೋಹಗಳ ನಡುವೆ ಸಂದ ದಿನಗಳಲ್ಲಿ ಅವನು ರಾಷ್ಟ್ರೀಯ ಸ್ವಾತಂತ್ರ್ಯದ ಬಗ್ಗೆ ಹೆಚ್ಚಿನ ಶ್ರದ್ಧೆಯನ್ನು ಹೊಂದಿದ್ದಾನೆ; ವಿಶ್ವಪ್ರೇಮವೇ ಮಾನವತ್ವದ ಹೆಗ್ಗುರುತೆಂಬುದನ್ನೂ ಅವನು ಹೇಳುತ್ತಾನೆ! ಅವನ ವಶಕ್ಕೆ ಬಂದಿರುವ ಭೂಮಿಯನ್ನು ಹಿಂದೆ ಫ್ರೆಂಚರು ಬೇಕೆಂದೇ ಹಿಂಡುಳಿಸಿದ್ದರು. ಈಗ ಜನರು ದುಡಿದು, ಜೀವನಮಟ್ಟವನ್ನು

[೧೧ನೇ ಪುಟ ನೋಡಿರಿ]

THE CANARA MUTUAL ASSURANCE COMPNY, LTD.,
Managing Director: T. R. A. PAI
Head Office: UDIPI, S. INDIA.] [Estd: 1935
ಅತ್ಯುತ್ತಮ ಲಾಭಾಂಶ
ದೀರ್ಘಾವಧಿ ಪಾಲಿಸಿಗಳಿಗೆ ಸಾಲಿಯಾನ ಸಾವಿರಕ್ಕೆ
ರೂ. 18/— ಆಜೀವ ವಿಮೆಗೆ ○ ರೂ. 15/— ಉಂಬಳಿ ವಿಮೆಗೆ
31-12-1953ನೇ ತಾರೀಕಿಗಾದ 1951ರಿಂದ 1953ರ ವರೆಗಿನ ಅವಧಿಯ ವಿಮಾಗಣನೆಯ ಫಲಿತಾಂಶ.
ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್
ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.] [ಸ್ಥಾಪನೆ: ೧೯೩೫.
ಸ್ಥಾಪನೆಯಾದಂದಿನಿಂದಲೂ ಪ್ರತಿಯೊಂದು ವರ್ಷಕ್ಕೂ ಲಾಭಾಂಶ ಹಂಚಿದ ಕಂಪೆನಿ.
ತಾ. 1-4-1954ರಿಂದ ಹೊಸ ವಿಮಾ ಕಾರ್ಯಕ್ಕೆ ಪ್ರೀಮಿಯಂ ದರವನ್ನು ಇಳಿಸಲಾಗಿದೆ.
CHIEF AGENTS:
THE COMMERCIAL CORPORATION OF INDIA, LTD.,
UDIPI, S. India.

ಪ್ರಜಾಪ್ರಭುತ್ವ ಪದ್ಧತಿಯ ಅಡಿಗಲ್ಲು

ಗ್ರಾಮ ಪಂಚಾಯತುಗಳು ನಿರ್ವಹಿಸುವ ಪಾತ್ರ

ಕಾಂಗ್ರೆಸ ಕಾರ್ಯಸಮಿತಿಯು ಹೊಸದೆಹಲಿಯಲ್ಲಿ ಮೊನ್ನೆ ಸಭೆಸೇರಿದಾಗ ಗ್ರಾಮ ಪಂಚಾಯತುಗಳ ಆಡಳಿತ ವ್ಯವಸ್ಥೆಯನ್ನು ಭಾರತದಲ್ಲೆಲ್ಲ ಜಾರಿ ಮಾಡುವುದಕ್ಕೆ ಅನುಕೂಲವಾದ ಹಿನ್ನೆಲೆ ಇದೆಯೇ ಎಂದು ಮುಂತಾಗಿ ವಿಚಾರಿಸಿ, ವರದಿ ಮಾಡಲು ಶ್ರೀಮನ್ನಾರಾಯಣ ಅಗ್ರವಾಲರ ನೇತೃತ್ವದಲ್ಲಿ ಆರು ಜನರ ಉಪ ಸಮಿತಿಯೊಂದನ್ನು ನೇಮಿಸಿದೆ: ಈ ವಾರ್ತೆಯನ್ನು ಕೇಳಿದ ನಮಗೆ ಗ್ರಾಮ ಪಂಚಾಯತುಗಳ ವ್ಯವಸ್ಥೆಯಲ್ಲಿ ಆಸ್ಥೆ ಹುಟ್ಟಿಕೊಳ್ಳುತ್ತದೆ. ಇದರ ಪೂರ್ವಾಪರ ಇತಿಹಾಸವನ್ನೂ ರಾಷ್ಟ್ರೀಯ ಅಭ್ಯುದಯದ ತಳಹದಿಯಾಗಿ ಈ ಪದ್ಧತಿ ಬೆಳೆದು ಬಂದ ಬಗೆಯನ್ನೂ ತಿಳಿದುಕೊಳ್ಳಬೇಕೆಂಬ ಲವಲವಿಕೆಯೂ ಉಂಟಾಗುತ್ತದೆ. ಭಾರತದಲ್ಲಿ ಗ್ರಾಮ ಪಂಚಾಯತುಗಳೇ ಪರಕೀಯ ದಂಡಯಾತ್ರೆಗಳನ್ನೂ ಧಾರ್ಮಿಕ ಹಾಗು ಸಾಮಾಜಿಕ ವಿಪ್ಲವಗಳನ್ನೂ ಇದಿರಿಸಿ ಹಳ್ಳಿಯ ಚೈತನ್ಯವನ್ನು ರಕ್ಷಿಸಿದವೆಂದು ಚರಿತ್ರೆಯು ಹೇಳುತ್ತದೆ. ಹಳ್ಳಿಯಲ್ಲಿ ಶಾಂತಿ ಮತ್ತು ಭದ್ರತೆಯನ್ನು ನೆಲೆಗೊಳಿಸಿ, ತಂಟೆತಕರಾರುಗಳನ್ನು ಪರಿಹರಿಸಿ, ಗ್ರಾಮೀಣರಲ್ಲಿ ಒಕ್ಕಟ್ಟನ್ನು ಬಲಗೊಳಿಸಿ, ಅವರಿಂದ ಕಂದಾಯವನ್ನೆತ್ತಿ ಸುಖ ಸೌಕರ್ಯಗಳನ್ನೊದಗಿಸುತಿದ್ದ ಈ ಪ್ರಾಚೀನ ಸಂಪ್ರದಾಯಕ್ಕೆ ಈ ಶತಮಾನದಲ್ಲಿ ಕಾಯಿದೆಯ ಮುದ್ರೆ ಬಿದ್ದಿತು; ಅದುವರೆಗೆ ರೂಢಿಯ ಬಲದ ಮೇಲಿಂದಲೇ ದೇವದತ್ತ ಅಧಿಕಾರವನ್ನು ನಡೆಸುತಿದ್ದ ಪಂಚರನ್ನು ಕಾಯಿದೆಯು ಪ್ರಜಾಪ್ರಭುತ್ವದ ಶಿಲ್ಪಿಗಳೆಂದು ಮನ್ನಿಸಿತು.

ಇತಿಹಾಸದ ಪರಿಶೀಲನ

ಕೌಟಿಲ್ಯನು ಬರೆದ ಅರ್ಥಶಾಸ್ತ್ರವೆಂಬ ಪ್ರಾಚೀನ ಗ್ರಂಥದಲ್ಲಿ ಮೌರ್ಯಚಕ್ರವರ್ತಿಗಳು ಆಳುತಿದ್ದ ಕ್ರಿಸ್ತಪೂರ್ವ ನಾಲ್ಕನೇ ಶತಕದಲ್ಲೂ ಭಾರತದಲ್ಲಿ ಪಂಚಾಯತುಗಳು ಕೆಲಸಮಾಡುತಿದ್ದವೆಂದು ಹೇಳಿದೆ. ಹಳ್ಳಿಯ ಮುಖ್ಯಸ್ಥನು ಗ್ರಾಮಣಿ ಎಂಬ ಹೆಸರಿನಲ್ಲಿ ಪಂಚಾಯತು ವ್ಯವಸ್ಥೆಯನ್ನು ದಕ್ಷತೆಯಿಂದ ಕಾರ್ಯಗತಗೊಳಿಸುತಿದ್ದನು. ಸಂಪೂರ್ಣ ಪ್ರಜಾಸತ್ತಾತ್ಮಕ ಆಡಳಿತ ಪದ್ಧತಿಯ ಚಿನ್ಹೆಯಾಗಿ ಪಂಚಾಯತುಗಳು ಹಳ್ಳಿಯಲ್ಲಿ ಕೆಲಸ ನಡೆಸುತಿದ್ದವು; ರಾಜನ ನಿರಂಕುಶ ಅಧಿಕಾರಕ್ಕೆ ನಿಯಂತ್ರಣವನ್ನು ಹಾಕುತಿದ್ದವು. ಆದರೆ ಮುಸ್ಲಿಮರ ಆಳಿಕೆಯು ನಮ್ಮ ದೇಶದಲ್ಲಿ ಬಲಗೊಂಡಂತೆಲ್ಲ, ನಗರ ಪ್ರಧಾನ ವ್ಯವಸ್ಥೆಯು ಹುಟ್ಟಿಕೊಂಡಿತು; ಗ್ರಾಮ ಪಂಚಾಯತುಗಳಿಗೆ ಸಲ್ಲುತಿದ್ದ ಕಂದಾಯದ ಅಂಶವನ್ನು ಕೇಂದ್ರ ಸರಕಾರವು ಅಪಹರಿಸಿದ್ದಲ್ಲದೆ, ಹಳ್ಳಿಗಳ ಕಲ್ಯಾಣವನ್ನು ಮರೆತುಬಿಟ್ಟಿತು. ಇದರಿಂದ ಗ್ರಾಮ ಪಂಚಾಯತುಗಳ ಕಾರ್ಯದಲ್ಲಿ ವ್ಯತ್ಯಯ ತಲೆದೋರಿ, ಅವು ತಮ್ಮ ಪರಂಪರಾಗತ ಕರ್ತವ್ಯವನ್ನು ನಿರ್ವಹಿಸಲಾರದ ಪರಿಸ್ಥಿತಿ ನಿರ್ಮಾಣವಾಯಿತು; ಅವುಗಳು ಪಟ್ಟಿತಿಂದು ಬಲಗುಂದಿದವು. ಆದರೂ ಹಳ್ಳಿಯಲ್ಲಿ ಒಗ್ಗಟ್ಟನ್ನು ಕಾಯ್ದುಕೊಳ್ಳಲು ಮತ್ತು ಸುಖಜೀವನ ಸಾಧ್ಯವಾಗಲು ಪ್ರಯತ್ನಿಸುತ್ತಲೇ ಇದ್ದವು. ಹೀಗೆ ಹೇಗಾದರೂ ಜೀವಹಿಡಿದುಕೊಂಡಿದ್ದ ಗ್ರಾಮ ಪಂಚಾಯತು ವ್ಯವಸ್ಥೆಯನ್ನು ಬ್ರಿಟಿಷರ ಆಡಳಿತ ಪದ್ಧತಿಯು ಇನ್ನು ಮೇಲೇಳದಂತೆ ಹೊಡೆದು ಕೆಡವಿತು. ಕೇಂದ್ರ ಸರಕಾರವೇ ಶಾಂತಿ ಸುವ್ಯವಸ್ಥೆ ಮತ್ತು ಭದ್ರತೆಯ ಹೊಣೆಯನ್ನು ಹೊತ್ತುಕೊಳ್ಳತೊಡಗಿತು; ಪಾಶ್ಚಾತ್ಯ ನ್ಯಾಯದಾನ ಪದ್ಧತಿಯನ್ನು ಅದು ಸ್ಥಾಪಿಸಿತು; ಕರ ಕಂದಾಯಗಳ ಮೇಲೆ ಕೇಂದ್ರ ನಿಯಂತ್ರಣವು ಹೇರಲಾಯಿತು; ಒಟ್ಟಿರೆ ಪೋಲೀಸು ರಾಜ್ಯ ಪದ್ಧತಿಯನ್ನು ಬ್ರಿಟಿಷರು ಭಾರತದಲ್ಲಿ ಆಚರಣೆಗೆ ತಂದರು; ಮತ್ತು ಗ್ರಾಮ ಜೀವನದಲ್ಲಿ ಅಚ್ಚುಕಟ್ಟನ್ನೂ ಚೈತನ್ಯವನ್ನೂ ತುಂಬುತಿದ್ದ ಪಂಚಾಯತುಗಳ ಮೇಲೆ ಕೈಮಾಡಿದರು.

ಪುನರುಜ್ಜೀವನದ ಪ್ರಯತ್ನ

ಇದರಿಂದ ಅವರಿಗೂ ಸುಖವಾಗಲಿಲ್ಲ- ಆಡಳಿತದ ವೆಚ್ಚವು ಹೆಚ್ಚುತ್ತಾ ಹೋದುದರಿಂದ ಗ್ರಾಮಗಳ ಪರಿಸ್ಥಿತಿಯನ್ನು ಸುಧಾರಿಸುವುದೂ ದೊಡ್ಡ ಸಮಸ್ಯೆಯಾಯಿತು. ವೆಚ್ಚವನ್ನು ಬಾಯಿಗೂಡಿಸಲು ಅವರು ಸ್ಥಾನಿಕ ಕರಗಳನ್ನು ಹೇರಲು ನಿಶ್ಚಯಿಸಿ, ಇದು ಸಾಧ್ಯವಾಗುವಂತೆ ಮಾಡಲು ಗ್ರಾಮ ಪಂಚಾಯತುಗಳ ಪುನರುಜ್ಜೀವನವೇ ಉಪಾಯವೆಂದು ಕಂಡುಕೊಂಡರು. ೧೯೩೦ನೇ ಇಸವಿಯಿಂದೀಚೆಗೆ ಮರಳಿ ತಲೆ ಎತ್ತಿ ಚಟುವಟಿಕೆಗಳನ್ನು ತೋರಿಸಹತ್ತಿದ ಗ್ರಾಮ ಪಂಚಾಯತುಗಳು ಹೀಗೆ ಮಿತವಾದ ಉದ್ದೇಶದಿಂದಲೇ ಅಸ್ತಿತ್ವಕ್ಕೆ ಬಂದವು. ಅವುಗಳು ಎಲುಬಿನ ಹಂದರದಂತೆ ಇದ್ದವೇ ಹೊರತು, ಜೀವಕಳೆಯನ್ನೇನು ತೋರಿಸುತ್ತಿರಲಿಲ್ಲ. ಮಹಾತ್ಮಾಗಾಂಧೀಜಿಯವರು ಈ ಪರಿಸ್ಥಿತಿಯು ಅಪಾಯಕರವೆಂದು ಬಗೆದು, ಇದನ್ನು ಸುಧಾರಿಸಲು ತುಂಬ ಹೆಣಗಾಡಿದರು. ಸ್ವತಂತ್ರ ಭಾರತದ ಯೋಜನೆಯಲ್ಲಿ ಗ್ರಾಮವೇ ಮೂಲಭೂತ ಘಟಕವಾಗುವುದೆಂದೂ ಗ್ರಾಮಪಂಚಾಯತುಗಳು ಆವಶ್ಯಕ ವಸ್ತು ಹಾಗು ವಿಷಯಗಳ ಮಟ್ಟಿಗೆ ಸ್ವಾವಲಂಬಿಯಾಗಿ ಪ್ರಜಾಪ್ರಭುತ್ವ ಪದ್ಧತಿಯನ್ನು ಪೋಷಿಸಬೇಕೆಂದೂ ಅವರು ಬಯಸಿದರು. ಸ್ವಾತಂತ್ರ್ಯಕ್ಷೇತ್ರದಲ್ಲಿ ಅಸ್ತಿತ್ವಕ್ಕೆ ಬಂದ ರಾಷ್ಟ್ರೀಯ ಸರಕಾರ ಗ್ರಾಮಪಂಚಾಯತುಗಳ ಪುನರುಜ್ಜೀವನಕ್ಕೆ ಅಧಿಕ ಮಹತ್ವವನ್ನೂ ಪ್ರಾಶಸ್ತ್ಯವನ್ನೂ ಕೊಟ್ಟಿತು. ನಮ್ಮ ರಾಜ್ಯಾಂಗ ಘಟನೆಯು ಸ್ವಾಯತ್ತಾಧಿಕಾರವುಳ್ಳ ಗ್ರಾಮಪಂಚಾಯತುಗಳ ಆಡಳಿತ ಪದ್ಧತಿಗೆ ಮನ್ನಣೆಯನ್ನು ನೀಡುತ್ತ, ಈ ದಿಸೆಯಲ್ಲಿ ಉಚಿತ ಕ್ರಮಗಳನ್ನು ಕೈಗೊಳ್ಳಬೇಕೆಂದು ಸರಕಾರಕ್ಕೆ ಆದೇಶಿಸಿತು. ಪರಿಣಾಮವಾಗಿ, ಬೇರೆ ಬೇರೆ ರಾಜ್ಯ ಸರಕಾರಗಳು ಯೋಗ್ಯ ಕಾಯಿದೆಯನ್ನು ಮಾಡಿ ಗ್ರಾಮ ಪಂಚಾಯತುಗಳನ್ನು ಹಳ್ಳಿಗಳಲ್ಲಿ ಸ್ಥಾಪಿಸಲು ಪ್ರಯತ್ನಪಟ್ಟವು. ಸುಮಾರು ಮೂರು ಮೈಲು ಸುತ್ತಿನ ಒಂದು ಸಾವಿರ ಜನವಸತಿಯುಳ್ಳ ಪ್ರತಿಯೊಂದೂ ಹಳ್ಳಿಗೆ ಪಂಚಾಯತು ದೊರಕಬೇಕೆಂಬ ಆಶೆಯನ್ನು ಸಾಮಾನ್ಯವಾಗಿ ಭಾರತದಲ್ಲೆಲ್ಲ ಇಟ್ಟುಕೊಳ್ಳಲಾಗಿದೆ. ಮದ್ರಾಸು ರಾಜ್ಯದಲ್ಲಿ ಆರು ಸಾವಿರ ಹಳ್ಳಿಗಳು ಗ್ರಾಮ ಪಂಚಾಯತುಗಳನ್ನು ಹೊಂದಿವೆ; ಆದರೆ ಇನ್ನೂ ಒಂಭತ್ತು ಸಾವಿರ ಗ್ರಾಮಗಳಲ್ಲಿ ಪಂಚಾಯತುಗಳ ಸ್ಥಾಪನೆಯಾಗಿಲ್ಲ. ೨೦೦ ಜನವಸತಿಯುಳ್ಳ ಹಳ್ಳಿಗಳೂ ಗ್ರಾಮ ಪಂಚಾಯತುಗಳನ್ನು ಪಡೆಯಬೇಕೆಂಬ ಆಕಾಂಕ್ಷೆಯನ್ನು ಮದ್ರಾಸು, ಮಧ್ಯ ಭಾರತ ಮುಂತಾದ ಕೆಲವು ಸರಕಾರಗಳು ವ್ಯಕ್ತಗೊಳಿಸುತ್ತವೆ. ಯೋಜನಾ ಆಯೋಗವಾದರೂ ೧೪೦೦೦೦ ಹೊಸ ಗ್ರಾಮ ಪಂಚಾಯತುಗಳನ್ನು ಸ್ಥಾಪಿಸಿ, ಐದು ಲಕ್ಷ ಹಳ್ಳಿಗಳಿರುವ ಭಾರತದಲ್ಲಿ ಪಂಚಾಯತುಗಳ ಸಂಖ್ಯೆಯನ್ನು ೬೯೦೦೦ಕ್ಕೆ ಏರಿಸಬೇಕೆಂದು ಹೇಳುತ್ತದೆ.

ಸ್ಥಳೀಯ ಧುರೀಣತ್ವ

ಪಂಚಾಯತುಗಳಿಗೆ ಗ್ರಾಮಸ್ಥರೇ ಧುರೀಣರನ್ನು ಆರಿಸುವರು -೧೯೪೯ರಲ್ಲಿ ಉತ್ತರ ಪ್ರದೇಶದಲ್ಲಿ ೧,೧೧,೨೦೦ ಹಳ್ಳಿಗಳು ೩೫ ೭೭೫ ಪಂಚಾಯತುಗಳನ್ನು ಆರಿಸಿದವು. ಜನರ, ಮುಖ್ಯವಾಗಿ ಮಹಿಳೆಯರ ಪ್ರತಿಕ್ರಿಯೆಯು ತುಂಬ ಪ್ರೋತ್ಸಾಹಕರವಾಗಿ ಕಂಡುಬಂತು. ಒಂದು ಸಾವಿರಕ್ಕಿಂತಲೂ ಹೆಚ್ಚು ಹೆಂಗಸರು ಪಂಚಾಯತುಗಳಿಗೆ ಆಯ್ಕೆ ಹೊಂದಿದರು. ಅನೇಕ ಸಂದರ್ಭಗಳಲ್ಲಿ ಹರಿಜನ ಹುರಿಯಾಳುಗಳು ಸವರ್ಣೀಯರನ್ನು ಸೋಲಿಸಿ ಚುನಾಯಿತರಾದರು. ಒಂದು ಪಂಚಾಯತು ಎಷ್ಟು ಮಂದಿ ಸದಸ್ಯರನ್ನೊಳಗೊಂಡಿರಬೇಕೆಂಬ ಸಂಗತಿ ಅಲ್ಲಿಯ ಪರಿಸ್ಥಿತಿಯನ್ನು ಹೊಂದಿಕೊಂಡಿದೆ—ಕೆಲವೆಡೆ ೩೩ ಜನರಿಗೆ ಒಬ್ಬನಂತೆ ಸದಸ್ಯನು ಇದ್ದರೆ ಇನ್ನು ಕೆಲವೆಡೆ ೨೦೦ ಮಂದಿಗೊಬ್ಬನಂತೆಯೂ ಇರಬಹುದು. ರಾಜ್ಯ ಸರಕಾರಗಳ ಕಾಯಿದೆಯು ಭಿನ್ನ ಭಿನ್ನವಾಗಿರುವುದೂ ಇದಕ್ಕೊಂದು ಕಾರಣ — ಹೀಗಿದ್ದರೂ ಎಲ್ಲ ಗ್ರಾಮ ಪಂಚಾಯತುಗಳಿಗೂ ಕೆಲವು ವಿಧ್ಯುಕ್ತ ಕರ್ತವ್ಯಗಳನ್ನು ನಿರ್ವಹಿಸಬೇಕಾಗುತ್ತದೆ. ರಸ್ತೆಗಳು, ಚರಂಡಿಗಳು, ಚಿಕ್ಕ ನೀರಾವರಿ ಮತ್ತು ಅಣೆಕಟ್ಟುಗಳು ಇವುಗಳ ರಕ್ಷಣೆ ಮತ್ತು ದುರಸ್ತಿ; ಸಾರ್ವಜನಿಕ ಆರೋಗ್ಯ, ನೈರ್ಮಲ್ಯ ಹಾಗು

[೯ನೇ ಪುಟ ನೋಡಿರಿ]

ಮುಖ್ಯ ಪ್ರಕಟಣೆ

"ಆನಂದ ಸುಧ" ನಮ್ಮ ಆನಂದ ಸುಧ ಸಮಸ್ತ ಜನಗಳಿಗೆ ಬಲವನ್ನು ಬಿಂಡ ಪುಷ್ಟಿಯನ್ನು ಕಲಗಿಸುವುದು. ಅನೇಕ ವ್ಯಾಧಿಗಳನ್ನು ನಾಶಮಾಡುತ್ತೆ. ೧೫ ದಿನಗಳಿಗೆ ಸರಿಹೋಗುವ ೮ ಔ. ಸೀಸೆ೧ಕ್ಕೆ ರೂ. 3—0—0.

"ಸ್ತ್ರೀ ಸುಧ" ನಮ್ಮ ಸ್ತ್ರೀ ಸುಧ ಸ್ತ್ರೀಯರಿಗೆ ಸಂಭವಿಸುವ ಸಮಸ್ತ ಗರ್ಭಾಶಯ ವ್ಯಾಧಿಗಳನ್ನು ಋತು ದೋಷಗಳನ್ನು, ಋತು ಶೂಲೆ, ಸರಿಯಾಗಿ ಬಹಿಷ್ಟೆ ಆಗದಿರುವುದು ಮೊದಲಾದ ಸಮಸ್ತ ವ್ಯಾಧಿಗಳನ್ನು ನಾಶಮಾಡುವುದು. ಸಂತಾನವನ್ನು ಕಲಗಿಸುವುದು. ಒಂದು ತಿಂಗಳಿಗೆ ಸರಿಹೋಗುವ ೧ ತೊಲದ ಔಷಧಿ ರೂ. 4—0—0.

"ಬಾಲ ಸುಧ" ಇದು ಸಣ್ಣ ಬಾಲಕರಿಗೆ ಅಜೀರ್ಣ, ಜ್ವರ, ಕೆಮ್ಮು, ಶೀತ, ಮಲಬದ್ಧತೆ, ಹೆಚ್ಚಾಗಿ ಭೇದಿ ಆಗುವಿಕೆ, ಮಕ್ಕಳು ಕ್ಷೀಣವಾಗಿ ಕೈಕಾಲು ಸಣ್ಣವಾಗುವಿಕೆ, ಲಿವರ್ ಬೆಳೆಯುವುದು, ಈ ಎಲ್ಲಾ ವ್ಯಾಧಿಗಳಿಗೆ ವಜ್ರಾಯುಧವಾಗಿದೆ. ಹೀಗಿರುವ ಔಷಧಿ ಇನ್ನೊಂದು ಇಲ್ಲವೆಂದು ಹೇಳಬಹುದು. ಈ ಔಷಧಕ್ಕೆ ಮಿತಿ ಇಲ್ಲದ ಯೋಗ್ಯತಾ ಪತ್ರಗಳನ್ನು ಪಡೆದಿರುವದಲ್ಲದೆ ದೇಶದಲ್ಲಿ ಅನೇಕ ವಿಧದಲ್ಲಿ ಅಭಿವೃದ್ಧಿಯಾಗಿರುತ್ತದೆ. ಸುಮಾರು ೧ ತಿಂಗಳಿಗೆ ಸರಿ ಹೋಗುವ ೫೦ ಮಾತ್ರೆಗಳ ಸೀಸೆ ೧ಕ್ಕೆ ರೂ. 1—0—0.

ಹೆಡ್ಡಾಫೀಸ್:

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್, ರಾಜಮಂಡ್ರಿ.

ಬೆಂಗಳೂರು ಏಜನ್ಸಿ:

ಸುದರ್ಶನ ಆಯುರ್ವೇದ ವೈದ್ಯಶಾಲ, ನಗರ್ತರ ಪೇಟೆ, ಬೆಂಗಳೂರು-2.

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಷಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತವೆ, ಬೆಳೆಯುತ್ತವೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0 - 0

ಶ್ರೀ ರಾಮತೀರ್ಥ ಯೋಗಾಶ್ರಮ,

ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ದಾವಣಗೆರೆಯಲ್ಲಿ ಸರ್ವಪಕ್ಷೀಯ ಸಮ್ಮೇಳನ-

ಕರ್ನಾಟಕದ ಕರಡು ಮನವಿಗೆ ಸರ್ವಾನುಮತದ ಬೆಂಬಲ

ಗಾಂಧಿಯ ಮನೆಯಂತೆ ನಾಳೆ ನಾಳೆ ಎನ್ನುತ್ತಾ ಮುಂದೂಡಲಾದ ದಾವಣಗೆರೆಯ ಸರ್ವಪಕ್ಷೀಯ ಸಮ್ಮೇಳನ ಕೊನೆಗಂತೂ ದಿನಾಂಕ ೩೦ರಂದು ಜರಗಿತು. ಮೈಸೂರು, ಮುಂಬಯಿ, ಮದ್ರಾಸು, ಹೈದರಾಬಾದು ಹಾಗು ಕೊಡಗು ಪ್ರದೇಶಗಳಿಂದ ಕನ್ನಡದ ಪ್ರತಿನಿಧಿಗಳು ವಿಶೇಷ ಸಂಖ್ಯೆಯಲ್ಲಿ ಆಗಮಿಸಿದ್ದರೆಂದು ಹೇಳಲಾಗಿದ್ದರೂ—ಹೆಚ್ಚಿನ ಪ್ರತಿನಿಧಿಗಳು ಉತ್ತರ ಕರ್ನಾಟಕದಿಂದಲೇ ಬಂದಿದ್ದರು. ನಿರೀಕ್ಷಿಸಿದಷ್ಟು ಸಂಖ್ಯೆಯಲ್ಲಿ ಸಂಸತ್ ಸದಸ್ಯರೂ ಶಾಸನಸಭಾ ಸದಸ್ಯರೂ ಈ ಸಮ್ಮೇಳನಕ್ಕೆ ಬರಲಿಲ್ಲ; ಮೇಲಾಗಿ ಮೈಸೂರಿನ ಪ್ರತಿನಿಧಿಗಳು ನಾಲ್ಕನ್ನು ಎಣ್ಣೆ ಹನಿಸ್ನು ತೋರಲಿಲ್ಲ. ಕರ್ನಾಟಕ ಏಕೀಕರಣಕ್ಕೋಸ್ಕರ ತುಂಬ ಶ್ರಮಪಟ್ಟಿರುವ ಶ್ರೀ ಕೆ. ಆರ್. ಕಾರಂತರಂತಹ ವ್ಯಕ್ತಿಗಳು ವೈಯಕ್ತಿಕ ಕಾರಣಗಳಿಗಾಗಿ ಸಮ್ಮೇಳನದಲ್ಲಿ ಭಾಗವಹಿಸಲಿಲ್ಲ ಹೀಗಿದ್ದರೂ ಸಮ್ಮೇಳನ ಯಶಸ್ವಿಯಾಯಿತು. ದಕ್ಷಿಣ ಕನ್ನಡ ಜಿಲ್ಲೆಯ ಪ್ರತಿನಿಧಿಗಳಾಗಿ ಶ್ರೀಗಳಾದ ಬಿ. ಆರ್. ಕರ್ಕೇರ, ಕೆ. ಆರ್. ಆಚಾರ್ ಹಾಗು ಡಾ. ನಾಗಪ್ಪ ಆಳ್ವರು ದಾವಣಗೆರೆಗೆ ಹೋಗಿದ್ದರು ಕೇಂದ್ರದ ವಾಣಿಜ್ಯ ಮಂತ್ರಿ ಶ್ರೀ ದ. ಪ. ಕರಮರಕರರೂ ರಾಜ್ಯ ಪರಿಷತ್ತಿನ ಉಪ ಸಭಾಪತಿ ಶ್ರೀ ಕೃಷ್ಣಮೂರ್ತಿ ರಾಯರೂ ಸಮ್ಮೇಳನದಲ್ಲಿ ಉಪಸ್ಥಿತರಿದ್ದರು. ಬಿಹಾರದ ಗವರ್ನರರಾದ ದಿವಾಕರ, ಮೈಸೂರಿನ ಮುಖ್ಯಮಂತ್ರಿ ಹನುಮಂತಯ್ಯ, ಕೊಡಗಿನ ಮುಖ್ಯಮಂತ್ರಿ ಪೂಣಚ್ಚ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ವಿ. ಸೀತಾರಾಮಯ್ಯ, ಆರ್. ಎ. ಜಹಾಗೀರದಾರ ಮುಂತಾದ ಮಹನೀಯರು ಈ ಅಧಿವೇಶನಕ್ಕೆ ಶುಭವನ್ನು ಕೋರಿ ಸಂದೇಶವನ್ನು ಕಳಿಸಿದ್ದರು.

ಶೀಘ್ರದಲ್ಲೇ ರಾಜ್ಯ

ಸ್ವಾಗತಾಧ್ಯಕ್ಷರಾದ ಶ್ರೀ ಐನಳ್ಳಿ ಮೊತ್ತ ವೀರಪ್ಪನವರು ಪ್ರತಿನಿಧಿಗಳನ್ನು ಚಿಕ್ಕದಾದರೂ ಸುಂದರವಾದ ಭಾಷಣದಿಂದ ಸ್ವಾಗತಿಸಿದರು. ಅಧಿವೇಶನವು ಮೈಸೂರಿನ ಶಾಸನ ಸಭೆಯ ಅಧ್ಯಕ್ಷರಾಗಿದ್ದ ಶ್ರೀ. ಎಚ್. ಸಿದ್ದಯ್ಯನವರ ನಿಧನದ ಕುರಿತು ಸಂತಾಪವನ್ನು ಸೂಚಿಸಿ, ಒಂದು ನಿಮಿಷ ಎದ್ದು ನಿಂತು ಗೌರವವನ್ನು ಸಲ್ಲಿಸಿತು. ಮುಂದೆ ಕರ್ನಾಟಕ ಪ್ರದೇಶ ಕಾಂಗ್ರೆಸಿನ ಅಧ್ಯಕ್ಷ ಶ್ರೀ. ನಿಜಲಿಂಗಪ್ಪನವರು ಪ್ರಾಸ್ತಾವಿಕ ಭಾಷಣ ಮಾಡಿದರು. ಭಾಷಾನುಗುಣ ಪ್ರಾಂತಗಳ ರಚನೆಯ ಬೇಡಿಕೆಯು ೧೯೦೫ರಲ್ಲಿ ಬಂಗಾಳವನ್ನು ವಿಭಜಿಸಲು ಪ್ರಯತ್ನಿಸಿದಂದಿನಿಂದಲೇ ಸಾಗುತ್ತಾ ಬಂದಿರುವುದೆಂದು ಅವರು ಹೇಳಿ, ಕರ್ನಾಟಕದಷ್ಟು ಹಾನಿಗೀಡಾದ ಪ್ರದೇಶ ಭಾರತದಲ್ಲಿ ಬೇರೊಂದಿಲ್ಲವೆಂದು ಪ್ರತಿಪಾದಿಸಿದರು. ಪ್ರಯತ್ನಪಟ್ಟರೆ ಭಾವೀ ಕರ್ನಾಟಕ ರಾಜ್ಯವು ಒಂದು ಕೋಟಿ ರೂಪಾಯಿಗಳ ಉಳಿತಾಯವನ್ನು ತೋರಿಸಬಲ್ಲುದೆಂದೂ ಅವರು ಹೇಳಿದರು. "ಭಾರತದಲ್ಲಿ ಇನ್ನು ಮುಂದೆ ಎರಡು ಮೂರು ವರ್ಷಗಳಲ್ಲಿ ಭಾಷಾನುಗುಣ ರಾಜ್ಯಗಳು ನಿರ್ಮಾಣ ಹೊಂದುತ್ತವೆ. ಕರ್ನಾಟಕವು ಅವಕ್ಕೆ ಮುಂಚಿತವಾಗಿಯೇ ರಚಿಸಲ್ಪಡುತ್ತದೆ. ಈ ಭಾಗದ ಜನರ ಅಪೂರ್ವ ಐಕ್ಯ ಹಾಗು ಒಮ್ಮತದ ಬೇಡಿಕೆಯೆ ಇದಕ್ಕೆ ಕಾರಣ --ಏಕೀಕರಣದ ಮಾರ್ಗದಲ್ಲಿಯ ವಿಘ್ನಗಳೆಲ್ಲ ಇಂದು ಹಳೆಯ ಮಾತಾದವು" ಎಂದು ನಿಜಲಿಂಗಪ್ಪನವರು ಸಾರಿದರು. ಕೇಂದ್ರದ ಮಂತ್ರಿ ಕರಮರಕರರೂ ದಾವಣಗೆರೆಯಲ್ಲಿ ಜರಗಿದ ಸಾರ್ವಜನಿಕ ಸಭೆಯೊಂದರಲ್ಲಿ ಇದೇ ಅಭಿಪ್ರಾಯವನ್ನು ವ್ಯಕ್ತಗೊಳಿಸಿದರು: "ಏಕೀಕರಣವು ಸನ್ನಿಹಿತವಾಗಿದ್ದು, ಅದನ್ನು ರಾಜಕೀಯ ಗತ್ತುಗಾರಿಕೆಯಿಂದ ಯಾರೊಬ್ಬರೂ ತಡೆದು ನಿಲ್ಲಿಸಲಾರರು. ಪ್ರಧಾನಿ ನೆಹರೂರವರು ಕರ್ನಾಟಕದ ಕುರಿತು ಸಹಾನುಭೂತಿಯುಳ್ಳವರಿರುವರು; ರಾಜ್ಯಗಳ ಪುನರ್ಘಟನೆಯ ಪ್ರಶ್ನೆಯನ್ನು ವಿಚಾರಿಸುತ್ತಿರುವ ಆಯೋಗವಾದರೂ ಇಂತಹದೇ ಭಾವನೆಯನ್ನು ತಳೆಯುವುದರಲ್ಲಿ ಸಂದೇಹವಿಲ್ಲ" ಎಂದು ಅವರು ಹೇಳಿದರು.

ಗಡಿ ಪ್ರದೇಶಗಳ ಸಮಸ್ಯೆ

ಉಚ್ಚಾಧಿಕಾರ ಸಂಪನ್ನವಾದ ಆಯೋಗಕ್ಕೆ ಕರ್ನಾಟಕದ ಪರವಾಗಿ ಒಪ್ಪಿಸಲಾಗುವ ಮನವಿಯನ್ನು ಸಿದ್ಧಗೊಳಿಸಿದ ಕರಡು ಸಮಿತಿಯ ಕಾರ್ಯದರ್ಶಿ ಶ್ರೀ. ಎಸ್. ಆರ್ ಕಂಠಿಯವರು ಮನವಿಯ ಕೆಲವು ಪ್ರಮುಖ ಭಾಗಗಳನ್ನು ಓದಿ ಹೇಳಿದರು. ಇದರ ಮೇಲೆ ಚರ್ಚೆಯು ಶಾಂತವಾದ, ಸೌಹಾರ್ದಯುತವಾದ ವಾತಾವರಣದಲ್ಲಿ ನಡೆಯಿತು. ಸಾಮಾನ್ಯವಾಗಿ ಎಲ್ಲ ಭಾಷಣಗಾರರೂ ಮನವಿಯನ್ನು ಅತ್ಯಂತ ವ್ಯಾಪಕವಾಗಿಯೂ ಸಂಪೂರ್ಣ ರೀತಿಯಲ್ಲಿಯೂ ಸಿದ್ಧಗೊಳಿಸಿದ ಬಗ್ಗೆ ಕರಡು ಸಮಿತಿಯನ್ನು ಅಭಿನಂದಿಸಿ, ಸದಸ್ಯರು ವಹಿಸಿದ ಶ್ರಮಕ್ಕೆ ಶ್ಲಾಘನೆಯನ್ನು ಸಲ್ಲಿಸಿದರು. ಬೆಳಗಾಂವಿಯ ಶ್ರೀ ಅಣ್ಣು ಗುರೂಜಿಯವರು ಮುಂಬೈ ನಗರವನ್ನು ಪ್ರತ್ಯೇಕ ಘಟಕವಾಗಿ ಇಡುವಂತೆ ಕರ್ನಾಟಕದ ಮನವಿಯಲ್ಲಿ ಕೇಳಬೇಕೆಂದು ಹೇಳುತ್ತಾ ಇದರಿಂದ ಬೆಳಗಾಂವಿಯ ಗಡಿ ಪ್ರದೇಶದ ಮೇಲೆ ಮಹಾರಾಷ್ಟ್ರೀಯರು ಇಟ್ಟಿರುವ ಕಣ್ಣನ್ನು ಬೇರೆಡೆಗೆ ಹೊರಳಿಸಲು ಕ್ರಮ ಕೈಗೊಂಡಂತಾಗುವುದು ಎಂದು ವಾದಿಸಿದರು. ಆದರೆ ಸದ್ಯಕ್ಕೆ ಆ ವಿಚಾರವನ್ನು ಬದಿಗಿರಿಸುವುದೇ ಹಿತವೆಂದು ಅವರಿಗೆ ಸಮಾಧಾನ ಹೇಳಲಾಯಿತು. ಗಡಿ ಪ್ರದೇಶಗಳಿಂದ ಆಗಮಿಸಿದ ಪ್ರತಿನಿಧಿಗಳು ಅಲ್ಲಿ ಮೂಡಿಬರಬೇಕಾಗಿರುವ ಜಾಗ್ರತಿಯ ಕುರಿತು ಕಳಕಳಿಯಿಂದ ಮಾತನಾಡುತ್ತಾ ತುದಿಭಾಗಗಳೆಂದು ಇವಾವುವನ್ನೂ ಕರ್ನಾಟಕದಲ್ಲಿ ಸೇರಿಸದೆ ಬಿಡಲಾಗದೆಂಬ ಬಗ್ಗೆ ತಮಗೆ ಆಶ್ವಾಸನೆ ನೀಡಬೇಕೆಂದು ಕೇಳಿಕೊಂಡರು. ನಿಜಲಿಂಗಪ್ಪನವರು ಇದನ್ನು ಉತ್ತರಿಸುತ್ತಾ ಗಡಿ ಪ್ರದೇಶಗಳನ್ನು ಉಳಿಸಿಕೊಳ್ಳುವುದಕ್ಕಾಗಿ ಮಾಡಬೇಕಾದ ಪ್ರಯತ್ನಗಳನ್ನು ಪರಿಪೂರ್ಣವಾಗಿಯೂ ಲಕ್ಷ್ಯಪೂರ್ವಕವಾಗಿಯೂ ನಿಷ್ಠೆಯಿಂದಲೂ ಕೈಗೊಳ್ಳುವುದಾಗಿ ಭರವಸೆ ನೀಡಿದರು. ಇದಕ್ಕೋಸ್ಕರ ಬಹಳ ಸಂಖ್ಯೆಯಲ್ಲಿ ಕಾರ್ಯಕರ್ತರು ಬೇಕೆಂದೂ ಅವರು ಅಭಿಪ್ರಾಯಪಟ್ಟರು.

ಕೆಲವು ವಿಚಾರಗಳು

ಡಾ. ನಾಗಪ್ಪ ಆಳ್ವರು ಪಶ್ಚಿಮ ಕರಾವಳಿ ಪ್ರಾಂತರಚನೆಯ ಕಲ್ಪನೆಯನ್ನು ಖಂಡಿಸಿದರೆ, ಬಳ್ಳಾರಿಯ ಚೆನ್ನಬಸಪ್ಪನವರು ಕನ್ನಡಿಗರ ದುರವಸ್ಥೆಯ ವಿಚಾರದಲ್ಲಿ ಸಮಗೊದಗಿದ ಅಧೋಗತಿಯನ್ನು ಇನ್ನಷ್ಟು ತೀಕ್ಷ್ಣವಾಗಿಯೂ ಪರಿಣಾಮಕಾರಿಯೂ ಆಗಿ ಹೇಳಬೇಕೆಂದು ಒತ್ತಾಯಿಸಿದರು. ಕರ್ನಾಟಕದ ಔದ್ಯಮಿಕ ಅಭಿವೃದ್ಧಿಯ ವಿಭಾಗದಲ್ಲಿ ಮುಂಬಯಿ ಕರ್ನಾಟಕದ ವಿಚಾರವನ್ನಷ್ಟೇ ವಿವರಿಸಲಾಗಿದೆ; ಮೈಸೂರಿಗೆ ಕರ್ನಾಟಕ ಏಕೀಕರಣದಿಂದ ಎಷ್ಟೊಂದು ಲಾಭ ಬರುತ್ತದೆಂಬುದನ್ನೇನು ಹೇಳಿಲ್ಲ ಎಂದವರು ನುಡಿದರು. ಕಮ್ಯುನಿಸ್ಟ ಪಕ್ಷದ ಶ್ರೀ. ಮೋನಯ್ಯನವರು ಭಾಷೆಯನ್ನೆ ಮುಖ್ಯ ಪ್ರಶ್ನೆಯನ್ನಾಗಿ ಹಿಡಿದುಕೊಂಡು ರಾಜ್ಯಗಳ ಪುನರ್ಘಟನೆಯನ್ನು ಮಾಡಬೇಕು. ರಾಜಪ್ರಮುಖರ ಹುದ್ದೆಯನ್ನು ಕಿತ್ತೊಗೆಯಬೇಕು, ಗಡಿನಿರ್ಣಯದ ವಿಚಾರದಲ್ಲಿ ಹಳ್ಳಿಯೇ ಮೂಲಘಟಕವಾಗಬೇಕು ಎಂದು ಮುಂತಾಗಿ ಸೂಚಿಸಿದರು, ಶ್ರೀ. ಕಂಠಿಯವರು ಇದಕ್ಕೆ ಉತ್ತರಿಸುತ್ತ ನಮ್ಮ ಆರ್ಥಿಕ ಅಭಿವೃದ್ಧಿಗೆ ಪ್ರತ್ಯೇಕ ರಾಜ್ಯ ಬೇಕೆಂಬುದನ್ನು ಪ್ರತಿಪಾದಿಸಲು ದರ್ ಸಮಿತಿಯವರು ಕನ್ನಡಿಗರಿಗಾಗಿರುವ ಅನ್ಯಾಯದ ಕುರಿತು ಹೇಳಿದ ಮಾತನ್ನು ಮನವಿಯಲ್ಲಿ ಸೇರಿಸಲಾಗಿದ್ದದು. ಮುಂಬಯಿಯನ್ನು ಬಿಟ್ಟುಳಿದ ಪ್ರದೇಶಗಳಿಂದ ಔದ್ಯಮಿಕ ಅಭಿವೃದ್ಧಿಯ ಕುರಿತು ಅಂಕೆ ಸಂಖ್ಯೆಗಳು ಸಕಾಲದಲ್ಲಿ ನಮಗೆ ತಲುಪಲಿಲ್ಲ—ಆಯಾ ಭಾಗದ ಜನರು ಆಯೋಗಕ್ಕೆ ಒಪ್ಪಿಸುವ ಮನವಿಯಲ್ಲಿ ಬಿಟ್ಟು ಹೋದ ಈ ಅಂಶವನ್ನು ಸೇರಿಸಬಹುದು. ಕರ್ನಾಟಕ ರಾಜ್ಯ ನಿರ್ಮಾಣವಾದ ಮೇಲೆ ನಾವೆಲ್ಲ ಒಟ್ಟಿಗೆ ರಾಜಪ್ರಮುಖರ ಹುದ್ದೆಯ ಕುರಿತು ವಿಚಾರಿಸೋಣ; ಈಗಲೇ ಅದನ್ನು ತೆಗೆದುಕೊಳ್ಳುವುದು ಬೇಡ" ಎಂದರು.

ಮನವಿಯ ಅಂಗೀಕಾರ

ಮನವಿಯಲ್ಲಿ ಹೇಳಿದ ಅಂಕೆ-ಸಂಖ್ಯೆಗಳು ಸರಿಯಾಗಿಲ್ಲವೆಂದು ಧಾರವಾಡದ ಪಾಟೀಲರು ಆಕ್ಷೇಪಿಸಿದರು. ಈ ಅಂಕೆ ಅಂಶಗಳೇ ನಿರ್ಣಾಯಕವಾಗಲಾರವೆಂದೂ ಈ ಹಿಂದೆ ಒರಿಸ್ಸಾ, ಸಿಂಧ ಮುಂತಾದ ರಾಜ್ಯಗಳ ರಚನೆಯ ಕಾಲಕ್ಕೆ ಒಪ್ಪಿಸಲಾದ ಮನವಿಯ ಮಾದರಿಯನ್ನು ಈಗ ತಾವು ಅನುಸರಿಸಿರುವುದಾಗಿಯೂ ಕಂಠಿಯವರು ತಿಳಿಸಿದರು. ಇತರ ಕೆಲವು ಸದಸ್ಯರು ಮಾತನಾಡುತ್ತಾ ದಾವಣಗೆರೆಯ ಈ ಅಧಿವೇಶನವು ಕರ್ನಾಟಕ ರಾಜ್ಯ ನಿರ್ಮಾಣ ಚಳವಳದಲ್ಲಿಯೇ ಕೊನೆಯ ಪ್ರಯತ್ನವಾಗಲೆಂದು ಹಾರೈಸಿದರು. ಮನವಿಗೆ ಸರ್ವಾನುಮತದ ಒಪ್ಪಿಗೆಯನ್ನು ಪ್ರತಿನಿಧಿಗಳು ನೀಡಿದರು.

ಉಡುಪಿ ತಾಲೂಕು ಮಂದಾರ್ತಿ
ಶ್ರೀ ದುರ್ಗಾಪರಮೇಶ್ವರಿ ಅಮ್ಮನವರ ದೇವಸ್ಥಾನದಿಂದ-

ಭಕ್ತ ಮಹಾಶಯರೇ, ಮಂದಾರ್ತಿ, ತಾ. 27-5-'54.

ಇದೇ ತಾ. 10-6-54ನೇ ಗುರುವಾರ ಮೊದಲ್ಗೊಂಡು ತಾ. 14-6-54ನೇ ಸೋಮವಾರದ ವರೆಗೆ ಮೇಲ್ಕಾಣಿಸಿದ ದೇವಸ್ಥಾನದಲ್ಲಿ ಭೂಶುದ್ಧ್ಯಾದಿ ಪ್ರತಿಷ್ಠಾಂಗ ಕರ್ಮಗಳೂ ಉತ್ಸವಾದಿ ಕಾರ್ಯಗಳೂ ಶ್ರೀ ದೇವಿಯ ಅನುಗ್ರಹದಿಂದ ನಡೆಯಲಿವೆ. ಈ ಪ್ರತಿಷ್ಠಾ ಮಹೋತ್ಸವಕ್ಕೆ ಸರ್ವರೂ ಚಿತ್ತೈಸಿ, ಕಾರ್ಯ ಭಾಗಗಳಲ್ಲಿ ತ್ರಿಕರಣಪೂರ್ವಕ ಸಹಕರಿಸಿ, ಶ್ರೀ ದೇವಿಯ ಅನುಗ್ರಹಕ್ಕೆ ಪಾತ್ರರಾಗಿ, ಶಿರಮುಡಿ ಗಂಧ ಪ್ರಸಾದಾದಿಗಳನ್ನು ಸ್ವೀಕರಿಸಬೇಕಾಗಿ ಸಾದರದಿಂದ ಅಪೇಕ್ಷಿಸುವ,

ತಮ್ಮ ಶ್ರೇಯೋಭಿಲಾಷಿಗಳಾದ,

Trustees & Villagers. * * * **N. R. Bolar,** Executive Officer.

ವಿ. ಸೂ: ಸಹಾಯಾರ್ಥವಾಗಿ ಹಣ ಕಳಿಸತಕ್ಕವರು M. O. ಮೂಲಕವಾಗಲಿ ಸ್ವತಃ ಬಂದಾಗಲೀ ತಲಪಿಸಬಹುದು.

Visit

K. R. K. SHET DIAMOND MART

Opposite Government College, MANGALORE.

For all your requirements in Diamonds and Jewellery Lucky Birth Stones are also available.

Prop: **K. K. R. SHET.**

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 25 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

THE MOOLKY BANK LTD.
Moolky, S. K.

ಕರ್ನಾಟಕ ರಾಜ್ಯದ ವಿಸ್ತಾರ ಮತ್ತು ವೈಭವ

ಮೈಸೂರಿನೊಂದಿಗೆ ಸೇರಿ ಮುನ್ನಡೆಯುವ ನಿಶ್ಚಯ

ಅಧಿವೇಶನವು ಶ್ರೀ ಹಳ್ಳಿಕೇರಿಯವರು ಮಂಡಿಸಿದ ಗೊತ್ತುವಳಿಯೊಂದನ್ನು ಅಂಗೀಕರಿಸಿ, ಕೂಡಲೆ ಕರ್ನಾಟಕ ರಾಜ್ಯ ರಚನೆಯನ್ನು ಕೈಗೊಳ್ಳುವಂತೆ ಭಾರತ ಸರಕಾರಕ್ಕೆ ಶಿಫಾರಸು ಮಾಡುವ ಉದ್ದೇಶದಿಂದ ಆಯೋಗವು ನಡುಗಾಲದ ವರದಿಯೊಂದನ್ನು ಅರ್ಪಿಸಬೇಕೆಂದು ಆಗ್ರಹದಿಂದ ವಿನಂತಿಸಿತು. ಶ್ರೀ ನಿಜಲಿಂಗಪ್ಪನವರು ಈ ಮನವಿಯನ್ನು ಆಯೋಗಕ್ಕೆ ಒಪ್ಪಿಸಲು ಅಧಿಕಾರ ಹೊಂದಿದರು. ಮನವಿಯು ಸುಮಾರು ನೂರು ಪುಟಗಳಷ್ಟು ದೊಡ್ಡದಿದೆ; ಕರ್ನಾಟಕದ ಎಲ್ಲ ಸಮಸ್ಯೆಗಳನ್ನೂ ಇದರಲ್ಲಿ ಪರಿಶೀಲಿಸಲಾಗಿದೆ; ಮತ್ತು ರಾಜ್ಯ ರಚನೆಯ ಅವಶ್ಯಕತೆಯನ್ನು ಸಮರ್ಥವಾಗಿ ಮಂಡಿಸಲಾಗಿದೆ ಇದರಲ್ಲಿ ಹೇಳಿದಂತೆ, ಭಾವೀ ಕರ್ನಾಟಕವು ಲಕ್ಷಾರ್ಧ ಚದರಮೈಲು ಪ್ರದೇಶವನ್ನೊಳಗೊಂಡು ೨,೨೧,೭೬೯ ನಾಗರಿಕರನ್ನು ಪಡೆಯುತ್ತದೆ. ೩೬೩೭ ಲಕ್ಷ ರೂಪಾಯಿ ಆದಾಯ ಮತ್ತು ೩೮೯೫ ಕೋಟಿ ರೂಪಾಯಿ ವೆಚ್ಚ ಬರುವ ಕೊರತೆಯ ರಾಜ್ಯವಾಗುತ್ತದೆ.

ಮುಂದಿನ ಕರ್ನಾಟಕ

ಭಾವೀ ಕರ್ನಾಟಕದಲ್ಲಿ (೧) ಈಗಿನ ಹತ್ತು ಜಿಲ್ಲೆಗಳನ್ನೊಳಗೊಂಡ ಮೈಸೂರು ರಾಜ್ಯ; (೨) ಮುಂಬಯಿ ರಾಜ್ಯದ ಧಾರವಾಡ, ಬೆಳಗಾಂವಿ, ಉತ್ತರ ಕನ್ನಡ ಮತ್ತು ಬಿಜಾಪುರ ಜಿಲ್ಲೆಗಳು, ಮತ್ತು ಕೊಲ್ಲಾಪುರ, ದಕ್ಷಿಣ ಸತಾರ, ಸೊಲ್ಲಾಪುರ ಜಿಲ್ಲೆಯ ಕನ್ನಡ ಪ್ರದೇಶಗಳು; (೩) ಹೈದರಾಬಾದು ರಾಜ್ಯದ ಬೀದರ, ಕಲಬುರ್ಗಿ ಮತ್ತು ರಾಯಚೂರು ಜಿಲ್ಲೆಗಳಲ್ಲದೆ ತೆಲಂಗಣ ಮತ್ತು ಮರಾಠವಾಡಾಕ್ಕೆ ಹೊಂದಿಕೊಂಡ ಕನ್ನಡ ಪ್ರದೇಶಗಳು; (೪) ಮದ್ರಾಸು ರಾಜ್ಯದ ದಕ್ಷಿಣ ಕನ್ನಡ ಮತ್ತು ನೀಲಗಿರಿ ಜಿಲ್ಲೆಗಳು, ಕೊಯಮುತ್ತೂರು, ಸೇಲಂ, ಮಲಬಾರು ಜಿಲ್ಲೆಯ ಕನ್ನಡ ಪ್ರದೇಶಗಳು; (೫) ಆಂಧ್ರರಾಜ್ಯದ ಚಿತ್ತೂರು, ಕರ್ನೂಲು ಮತ್ತು ಅನಂತಪುರ ಜಿಲ್ಲೆಗಳಿಗೆ ಹೊಂದಿಕೊಂಡ ಕನ್ನಡ ಪ್ರದೇಶಗಳು; ಮತ್ತು (೬) ಕೊಡಗು ರಾಜ್ಯ—ಇವಿಷ್ಟು ಸೇರುತ್ತವೆ. ಜಯಪುರ ಕಾಂಗ್ರೆಸಿನ ಅಧಿವೇಶನವು "ಅ" ವರ್ಗದ ಪ್ರದೇಶವನ್ನು "ಬ" ವರ್ಗದ ರಾಜ್ಯದೊಂದಿಗೆ ಸೇರ್ಪಡಿಸಬಾರದೆಂದು ಹೇಳಿದ್ದರೂ ಬಳ್ಳಾರಿ ಜಿಲ್ಲೆಯನ್ನು ಮೈಸೂರಿಗೆ ಈಗಾಗಲೆ ಸೇರಿಸಿರುವುದರಿಂದ ಈಗ ಇಂತಹ ಆಕ್ಷೇಪಕ್ಕೆ ಎಡೆ ಇರುವುದಿಲ್ಲ—ಕಾರಣ; ಬೆಂಗಳೂರು ರಾಜಧಾನಿಯಾಗಿರುವ "ಬೃಹನ್ ಮೈಸೂರು" ಕನ್ನಡಿಗರ ರಾಜ್ಯವಾಗುತ್ತದೆ. ಇಲ್ಲಿ ತುಳು ಕೊಂಕಣಿ, ಕೊಡಗಿ ಬಡಗಿ ಮುಂತಾದ ಭಾಷೆಯನ್ನಾಡುವ ಜನರಿದ್ದರೂ ಕನ್ನಡವೇ ವ್ಯವಹಾರದಲ್ಲಿರುವ ಪ್ರಮುಖ ಭಾಷೆಯಾಗುತ್ತದೆ. ಉತ್ತರದಿಂದ ದಕ್ಷಿಣಕ್ಕೆ ೪೮೦ ಮೈಲು ಹಾಗು ಪೂರ್ವದಿಂದ ಪಶ್ಚಿಮಕ್ಕೆ ೩೫೦ ಮೈಲುಗಳಷ್ಟು ಕನ್ನಡದ ರಾಜ್ಯ ವ್ಯಾಪಿಸುತ್ತದೆ. ಸುಮಾರು ೩೦೦ ಮೈಲು ಉದ್ದ ಕರಾವಳಿಯು ಇದಕ್ಕೆ ದೊರೆಯುತ್ತದೆ ಮುಂದಿನ ಕರ್ನಾಟಕವು ಒರಿಸಾ, ಪಂಜಾಬ, ಅಸಾಮು ರಾಜ್ಯಗಳಿಗಿಂತಲೂ ದೊಡ್ಡದಾಗುತ್ತದೆ.

ನಮ್ಮಲ್ಲಿಯ ಕೈಗಾರಿಕೆ

ಕೈಗಾರಿಕೆಗಳ ಪಟ್ಟಿಗೆ ಮೈಸೂರು ಈಗಾಗಲೇ ಮುಂದುವರಿದಿರುವುದು; ಅಲ್ಲಿ ಸರಕಾರವು ೭೦ ಕೋಟಿ ರೂಪಾಯಿಗಳ ಬಂಡವಾಳವನ್ನು ತೊಡಗಿಸಿ, ಔದ್ಯಮಿಕ ಅಭಿವೃದ್ಧಿಗೆ ಭದ್ರವಾದ ತಳಹದಿಯನ್ನು ನಿರ್ಮಿಸಿದೆ. ಇತರೆಡೆಗಳಲ್ಲೂ ಇಂತಹ ಧೋರಣೆಗೆ ವಾತಾವರಣವು ಅನುಕೂಲವಿದೆ—ಹತ್ತಿ, ಎಣ್ಣೆಕಾಳು, ಹೊಗೆಸೊಪ್ಪು, ಕಬ್ಬು, ಅರಣ್ಯ ಸಂಪತ್ತುಗಳು ಹೇರಳವಿವೆ; ಆಹಾರ ಧಾನ್ಯದ ಹುಟ್ಟಿಗೂ ಸಮೃದ್ಧಿಯು ಕೈಗೂಡಬಲ್ಲುದು; ಮೀನುಗಾರಿಕೆಯನ್ನು ವ್ಯಾಪಕವಾಗಿ ಬೆಳೆಸಲೂ ಸಾಧ್ಯವುಂಟು. ಉತ್ತರ ಕರ್ನಾಟಕದಲ್ಲಿ ಹರಿಯುವ ನಾಲ್ಕಾರು ನದಿಗಳಿಗೆ ಅಣೆಕಟ್ಟನ್ನು ಹಾಕಿದರೆ, ಬರಗಾಲದ ಹೆಸರೇ ಇಲ್ಲದಂತಾಗುವುದು ಹಾಗೆಯೇ ಜಲವಿದ್ಯುಚ್ಛಕ್ತಿಯನ್ನು ಬೆಳೆಸುವುದಕ್ಕೂ, ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲೂ ಕೊಡಗಿನಲ್ಲೂ ಹೆಚ್ಚಿನ ಅವಕಾಶವುಂಟು. ಮೆಂಗನೀಸ, ಕಬ್ಬಿಣ, ಸುಣ್ಣ, ಚೀನೀಮಣ್ಣು, ಅವೆಮಣ್ಣು, ಭಂಗಾರ ಮುಂತಾದ ಖನಿಜಗಳು ಇಲ್ಲಿ ದೊರಕುತ್ತವೆ. ಗಂಧ, ಬೆತ್ತ, ತೆಂಗು ಮುಂತಾದ ಸಸ್ಯ ಸಂಪತ್ತಿನಿಂದ ಗುಡಿ ಕೈಗಾರಿಕೆಗಳನ್ನೂ ಅಭಿವೃದ್ಧಿಗೊಳಿಸಬಹುದು. ಆರ್ಥಿಕ ದೃಷ್ಟಿಯಲ್ಲಿ ಮುಂಬಯಿ ಕರ್ನಾಟಕವು ಕೊರತೆಯ ಪ್ರದೇಶವೆಂದು ಕಂಡು ಬಂದರೂ ಒಟ್ಟಿಗೆ ಗೋಚರಿಸುವ ೫೮ ಲಕ್ಷ ರೂಪಾಯಿಗಳ ಕೊರತೆಯು ಇತರ ಪ್ರಾಂತಗಳ ಮಟ್ಟವನ್ನು ಮೀರಿಲ್ಲ; ಅಲ್ಲದೆ, ಈಚೆಗೆ ಸರಕಾರದ ಆದಾಯ ಸ್ರೋತವು ಹೊಸ ತೆರಿಗೆಗಳಿಂದಾಗಿ ವ್ಯಾಪಕಗೊಂಡಿರುವುದರಿಂದ, ಈ ಕೊರತೆಯನ್ನು ಬಾಯಿಗೂಡಿಸುವುದು ಅಸಾಧ್ಯವಲ್ಲ.

ಸಾಂಸ್ಕೃತಿಯ ಪ್ರಶ್ನೆ

ಕರ್ನಾಟಕದ ಪರವಾಗಿ ಒಪ್ಪಿಸಲಾದ ಮನವಿಯು ಮೇಲಿನ ಅಂಶಗಳನ್ನು ತಿಳಿಸುತ್ತದೆ—ಆದರೆ ಕನ್ನಡಿಗರು ಒಪ್ಪಿಸಿದ ಮನವಿ ಇದೊಂದೇಯಲ್ಲ: ಅಖಂಡ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತು ಕಳೆದ ವಾರ ಪ್ರತ್ಯೇಕವಾಗಿಯೇ ಮನವಿಯೊಂದನ್ನು ಆಯೋಗಕ್ಕೆ ಅರ್ಪಿಸಿತು. ಇದು ೩೩ ಪುಟಗಳಷ್ಟು ಇದ್ದು, ರಾಜ್ಯ ನಿರ್ಮಾಣದ ಹಿನ್ನೆಲೆಯನ್ನು ಇದರಲ್ಲಿ ವಿವೇಚಿಸಿರುವರು. ಕರ್ನಾಟಕವು ೭೦ ಲಕ್ಷ ರೂಪಾಯಿಗಳ ಉಳಿಕೆಯನ್ನು ತೋರಿಸುವುದೆಂದು ಇದರಲ್ಲಿ ಲೆಕ್ಕ ಕೊಟ್ಟಿರುವರು. ರಾಷ್ಟ್ರದ ಐಕ್ಯಕ್ಕೆ ಮತ್ತು ಸಂಸ್ಕೃತಿಗೆ ಭಾಷಾನುಗುಣ ರಾಜ್ಯಗಳ ನಿರ್ಮಾಣವು ಆತಂಕವಾಗಲಾರದೆಂದು ಸ್ಪಷ್ಟಗೊಳಿಸಿರುವರು. ರಾಜ್ಯ ಸ್ಥಾಪನೆಗೆ ಸಾರ್ವತ್ರಿಕ ಮತಗಣನೆಯನ್ನು ನಡೆಸುವ ಅಗತ್ಯವಿಲ್ಲೆಂದೂ ಹೈದರಾಬಾದು ರಾಜ್ಯವನ್ನು ವಿಭಜಿಸಬೇಕೆಂದೂ ಹೇಳಿರುವರು. ಹೈದರಾಬಾದಿನ ವಿಭಜನೆಗೆ ಅಲ್ಲಿಯ ಪ್ರದೇಶ ಕಾಂಗ್ರೆಸು ಅನುಕೂಲಾಭಿಪ್ರಾಯವನ್ನು ವ್ಯಕ್ತಗೊಳಿಸಿದೆ. ಅಲ್ಲದೆ ಹೈದರಾಬಾದಿನ ಕನ್ನಡ ಸಾಹಿತ್ಯ ಪರಿಷತ್ತು ಕೂಡ ವಿಭಜನೆಯನ್ನು ಒತ್ತಾಯಿಸಿ, ಕನ್ನಡ ಪ್ರದೇಶಗಳನ್ನು ಏಕೀಕರಿಸಿ ಕನ್ನಡ ರಾಜ್ಯವನ್ನು ರಚಿಸಬೇಕೆಂದು ಆಯೋಗಕ್ಕೆ ಮನವಿಯೊಪ್ಪಿಸಿದೆ. ಮಾತೃಭಾಷೆಯಲ್ಲಿ ಲೋಕ ಶಿಕ್ಷಣವಿಲ್ಲದೆ ಪ್ರಜಾಪ್ರಭುತ್ವ ಪದ್ಧತಿಯು ನಡೆಯಲಾರದು; ಭಾಷಾನುಗುಣವಾಗಿ ರಾಜ್ಯಗಳ ಪುನಾರಚನೆಯಾಗದೆ ಮಾತೃಭಾಷೆಯಲ್ಲಿ ಲೋಕ ಶಿಕ್ಷಣ ಅಸಾಧ್ಯ ಎಂದು ಈ ಪರಿಷತ್ತು ಹೇಳಿದೆ. ಹೈದರಾಬಾದಿನ ಕನ್ನಡ ಪ್ರದೇಶಗಳ ಇತಿಹಾಸ ಮತ್ತು ಇತರ ವಿವರಗಳನ್ನು ಪರಿಷತ್ತಿನ ಮನವಿಯೊಳಗೊಂಡಿದ್ದು, "ಸ್ವಾತಂತ್ರ್ಯಕ್ಕೆ ಪೂರ್ವದಲ್ಲಿ ಕನ್ನಡ ಪ್ರದೇಶವು ೨೨ ರಾಜ್ಯಗಳಲ್ಲಿ ಹರಿದು ಹಂಚಿ ಹೋಗಿದ್ದಿತು; ಸಂಸ್ಥಾನಗಳ ವಿಲಯನವನ್ನು ಸಾಧಿಸಿದ ಬಳಿಕವಾದರೂ ೬ ರಾಜ್ಯಗಳಲ್ಲಿ ಕನ್ನಡ ಪ್ರದೇಶಗಳು ಸಿಡಿದುಕೊಂಡಿವೆ. ಆಯೋಗವು ಈ ಭಾಗಗಳನ್ನೆಲ್ಲ ಒಂದುಗೂಡಿಸಿ ಎರಡುಕೋಟಿ ಕನ್ನಡಿಗರ ಅಭಿಮಾನಗಳಿಗೆ ಪಾತ್ರವಾಗಬೇಕು" ಎಂದು ವಿನಂತಿಸಿರುವುದು.

ಮಹಾರಾಷ್ಟ್ರೀಯರ ಅಭಿಪ್ರಾಯ

ಕನ್ನಡಿಗರು ಎಷ್ಟು ಪ್ರಯತ್ನಪಟ್ಟರೂ ಒಂದೇ ಮನವಿಯ ಮೂಲಕ ತಮ್ಮ ಬೇಡಿಕೆಯನ್ನು ಮುಂದಿಡಲಾರದಾದರು—ಈ ಮಟ್ಟಿಗೆ ಮಹಾರಾಷ್ಟ್ರೀಯರನ್ನು ನಾವು ಅಭಿನಂದಿಸಬೇಕು. ಸಂಯುಕ್ತ ಮಹಾರಾಷ್ಟ್ರದ ಪರಿಷತ್ತು ಒಕ್ಕಟ್ಟಿನಿಂದ ಕೆಲಸ ಮಾಡಿ ಆಯೋಗಕ್ಕೆ ಒಂದೇ ಮನವಿಯನ್ನು ಒಪ್ಪಿಸಲು ಸಮರ್ಥವಾಗಿರುವುದು. ಗಡಿ ನಿರ್ಣಯಕ್ಕೋಸ್ಕರ ಹಳ್ಳಿಯನ್ನೆ ಘಟಕವಾಗಿ ಹಿಡಿಯಬೇಕೆಂದೂ ಮುಂಬಯಿನಗರವನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕೆಂದೂ ಈ ಮನವಿ ಹೇಳುತ್ತದೆ. ಆದರೆ ಶ್ರೀ ಎಸ್. ಕೆ. ಪಾಟೀಲರು ಅಧ್ಯಕ್ಷರಾಗಿರುವ ಮುಂಬಯಿ ಪ್ರದೇಶ ಕಾಂಗ್ರೆಸ್ ಸಮಿತಿಯು ಮುಂಬಯಿ ನಗರವು ಪ್ರತ್ಯೇಕ ರಾಜ್ಯವಾಗಿಯೇ ಉಳಿಯಬೇಕೆಂದು ಆಯೋಗಕ್ಕೆ ಹೇಳಿರುತ್ತದೆ—ಮುಂಬಯಿ ರಾಜ್ಯದಲ್ಲಿ ಕಾಲುಪಾಲಿನಷ್ಟಿರುವ ಗುಜರಾತಿಗರ ಪ್ರತ್ಯೇಕ ರಾಜ್ಯದ ಬಗ್ಗೆ ಆತುರವಿಲ್ಲ. ಕನ್ನಡಿಗರು ತಮ್ಮ ರಾಜ್ಯವನ್ನು ನಿರ್ಮಿಸಿಕೊಂಡ ಬಳಿಕ, ಮುಂಬಯಿಯಲ್ಲಿ ಮಹಾರಾಷ್ಟ್ರೀಯರ ಮಾತೇ ನಡೆಯುತ್ತದೆ. ಆದುದರಿಂದ ಮುಂಬಯಿ ರಾಜ್ಯವನ್ನು ಈಗ ವಿಭಜಿಸುವುದು ಅನಗತ್ಯ. ಇಷ್ಟಾಗಿಯೂ ಮಹಾರಾಷ್ಟ್ರೀಯರು ಪ್ರತ್ಯೇಕ ರಾಜ್ಯವನ್ನು ಬಯಸುವರಾದರೆ, ಮುಂಬಯಿ ನಗರವೊಂದೇ ಘಟಕವಾಗಿ ಉಳಿದು ತನ್ನ ವೈವಿಧ್ಯಪೂರ್ಣ ಸ್ವರೂಪವನ್ನು ಕಾಯ್ದುಕೊಳ್ಳಲು ಅಪೇಕ್ಷಿಸುತ್ತದೆ—ಎಂದು ಪಾಟೀಲರ ಮನವಿ ಸೂಚಿಸುತ್ತದೆ.

PLACE YOUR LIFE ASSURANCE WITH A COMPANY OF YOUR OWN - - -

Established in 1929, the POPULAR is progressing on sound lines. It has built up for itself a record of efficient service sound investment and a personal touch with its Policy holders and Representatives At whatever stage We welcome yours association with the POPULAR.

THE
POPULAR INSURANCE CO. LTD.
"POPULAR BUILDINGS" MANGALORE-1

ಜನತಾ ಸಾಹಿತ್ಯಮಾಲೆಯ ಹೊಸ ಮಾದರಿಯ ಪುಸ್ತಕಗಳು

* * * * *

ಮಣಿ ೧:— ಜೀವನ ಶಿಕ್ಷಣ.

ಜ್ಞಾನ ಮತ್ತು ಶೀಲದೊಂದಿಗೆ ಶಾರೀರಿಕ ಶ್ರಮದ ಗೌರವವನ್ನು ವಿದ್ಯಾರ್ಥಿಗಳಲ್ಲುಂಟುಮಾಡುವ ಶ್ರೀ ಕೆ. ಕೆ. ಶೆಟ್ಟಿ ನವೀನ ನಾಟಕ. ಮದ್ರಾಸ್ ಟೆಕ್ಸ್ಟ್ ಬುಕ್ ಸಮಿತಿಯಿಂದ ಮಂಜೂರಾತಿ ಪಡೆದು ದ. ಕ. ಜಿಲ್ಲೆಯ ಮತ್ತು ಕೊಡಗಿನ ಹಲವು ಹೈಸ್ಕೂಲುಗಳಿಂದ ಪ್ರೋತ್ಸಾಹ ಹೊಂದಿದೆ. ಬೆಲೆ: ರೂ. ೧—೨—೦.

ಮಣಿ ೨:— ಶ್ಯಾಮುವಿನ ಶಾಲಾದಿನಗಳು.

ಅಧ್ಯಾಪಕ ಮತ್ತು ವಿದ್ಯಾರ್ಥಿ ಜೀವನದ ನೈಜ ಹಾಗೂ ರಸವತ್ತಾದ ಚಿತ್ರಣದಿಂದ ವಿದ್ಯಾರ್ಥಿಗಳಿಗಾಗಿಯೇ ಶ್ರೀ. ಕೆ. ಕೆ. ಶೆಟ್ಟರು ಬರೆದಿರುವ ಸಚಿತ್ರ ಕತೆ ಪುಸ್ತಕ. ಹೈಸ್ಕೂಲುಗಳಿಗೆ ಉಪಪಠ್ಯ ಪುಸ್ತಕವಾಗಿ ಮದ್ರಾಸು ಟೆಕ್ಸ್ಟ್ ಬುಕ್ ಕಮಿಟಿಯ ಮಂಜೂರಾತಿ ಪಡೆದಿದೆ. ಬೆಲೆ: ರೂ. ೧—೨—೦.

ಸಾಹಿತ್ಯ ಮಾಲೆಯ ವಾರ್ಷಿಕ ಚಂದಾ ರೂ. ೫—೦—೦ ಮಾತ್ರ.

ಜನತಾ ಸಾಹಿತ್ಯ ಮಾಲೆ,
ಹಂಪನಕಟ್ಟೆ, ಮಂಗಳೂರು ೧.



ನವಯುಗ

ಉಡುಪಿ, ಗುರುವಾರ ೩-೬-'೫೪

ಪೂರ್ವ ಬಂಗಾಲ

ಪ್ರಜಾಪ್ರಭುತ್ವಕ್ಕೊಂದು ಅಘಾತವನ್ನು ಕೊಟ್ಟು, ಅದರ ಅಪಹೇಳನೆ ಮಾಡುವ ಪ್ರಸಂಗವೊಂದು ಪೂರ್ವ ಬಂಗಾಲದಲ್ಲಿ ನಡೆದಿರುವುದು ನಿಜಕ್ಕೂ ಶೋಚನೀಯವಾದ ಮತ್ತು ದುರ್ದೈವದ ವಿಷಯ. ಮೊನ್ನೆ ತಾನೆ ನಡೆದ ಚುನಾವಣೆಗಳಲ್ಲಿ ಫಜಲುಲ ಹಕ್ಕರ ನೇತೃತ್ವದಲ್ಲಿರುವ ಸಂಯುಕ್ತ ರಂಗವು ಅಧಿಕಾರಾರೂಢವಾಗಿದ್ದ ಮುಸ್ಲಿಂ ಲೀಗನ್ನು ಪ್ರಚಂಡ ಬಹುಮತದಿಂದ ಸೋಲಿಸಿತು; ಪ್ರಜಾಪ್ರಭುತ್ವದ ಇತಿಹಾಸದಲ್ಲಿಯೇ ಅಧಿಕಾರದಲ್ಲಿದ್ದ ಪಕ್ಷವು ಈ ಪ್ರಕಾರ ನಿರಾಕರಿಸಲ್ಪಟ್ಟದ್ದು ಹಿಂದಿನ ಯಾವ ದಾಖಲೆಯಲ್ಲೂ ಕಂಡುಬರುವುದಿಲ್ಲ. ಮುಸ್ಲಿಂ ಲೀಗಿನ ಧ್ಯೇಯ ಮತ್ತು ಧೋರಣೆಗಳು ಪೂರ್ವಬಂಗಾಲದ ಜನತೆಯ ಮೆಚ್ಚುಗೆಗೆ ಏನೇನೂ ಪಾತ್ರವಾಗಿಲ್ಲವೆಂಬುದನ್ನು ಚುನಾವಣೆಯ ಫಲಿತಾಂಶ ಸ್ಪಷ್ಟವಾಗಿ ತೋರಿಸಿಕೊಟ್ಟಿತು. ಪಶ್ಚಿಮ ಪಾಕಿಸ್ತಾನದ ಜನತೆಗೂ ಪೂರ್ವ ಪಾಕಿಸ್ತಾನದ ಪ್ರಜೆಗಳಿಗೂ ನಡುವೆ ಭಿನ್ನಾಭಿಪ್ರಾಯದ ಮಹಾ ಕಂದಕವೇ ಇದೆಯೆಂದು ಲೋಕಕ್ಕೆ ಈ ಚುನಾವಣೆ ಮನವರಿಕೆ ಮಾಡಿಸಿಕೊಟ್ಟಿತು, ಮುಸ್ಲಿಂ ಲೀಗನ್ನು ವಿರೋಧಿಸಿದ ಸಂಯುಕ್ತ ರಂಗವು ಪಾಕ—ಅಮೇರಿಕಾ ಮಿಲಿಟರಿ ಒಡಂಬಡಿಕೆಯನ್ನು ಕಟುವಾಗಿ ಟೀಕಿಸಿ, ಖಂಡಿಸಿತ್ತು: ಬಂಗಾಲಿ ಭಾಷೆಗೆ ರಾಷ್ಟ್ರಭಾಷೆಯ ಸ್ಥಾನಮಾನವನ್ನು ಕೊಡಬೇಕೆಂದು ಅದು ಒತ್ತಾಯಿಸಿತ್ತು; ಪ್ರಾಂತ್ಯಗಳಿಗೆ ಸ್ವಾಯತ್ತಾಧಿಕಾರವನ್ನು ಕೊಡಬೇಕೆಂದೂ ಆದಾಯದಲ್ಲಿ ಇನ್ನೂ ಹೆಚ್ಚಿನ ನ್ಯಾಯವಾದ ಪಾಲು ಸಲ್ಲತಕ್ಕದ್ದೆಂದೂ ಅದು ಹೇಳುತಿತ್ತು; ಭಾರತದೊಡನೆ ವ್ಯಾಪಾರ ವ್ಯವಹಾರಗಳಲ್ಲಿ ಹೆಚ್ಚು ಸೌಹಾರ್ದಮಯವಾದ ವಾತಾವರಣವನ್ನು ಕಲ್ಪಿಸಬೇಕೆಂದು ಅದು ಬಯಸುತ್ತಿತ್ತು. ಈ ಬೇಡಿಕೆಗಳಾವುವೂ ಪಶ್ಚಿಮ ಪಾಕಿಸ್ತಾನದ ಮುಸ್ಲಿಂ ಲೀಗಿನ ಪ್ರಭೃತಿಗಳಿಗೆ ಸ್ವಲ್ಪವೂ ರುಚಿಸಿರಲಿಲ್ಲ—ಆದರೆ ಕರಾಚಿಯಿಂದ ೧೪೦೦ ಮೈಲು ದೂರದಲ್ಲಿದ್ದು ತನ್ನದೇ ಆದ ಸಂಸ್ಕೃತಿ ಸಂಪ್ರದಾಯವನ್ನೂ ರೂಢಿ ಪರಂಪರೆಯನ್ನೂ ಪಡೆದುಕೊಂಡಿರುವ ಪೂರ್ವ ಬಂಗಾಲಕ್ಕೆ ಇದು ಜೀವನ ಮರಣದ ಪ್ರಶ್ನೆಯೇ ಆಗಿದ್ದಿತು—ಫಜಲುಲ ಹಕ್ಕರ ಧುರೀಣತ್ವಕ್ಕೆ ಮತ್ತು ಅವರ ಪಕ್ಷವು ವಹಿಸಿದ ಧೋರಣಕ್ಕೆ ಪ್ರಬುದ್ಧ ಮತದಾರರು ಕೊಟ್ಟದ್ದ ಬೆಂಬಲವನ್ನು ನೋಡಿದರೆ, ಹಕ್ಕರೆಂದರೇನೆ ಪೂರ್ವ ಬಂಗಾಲವೆಂದು ಸಿದ್ಧವಾಗುತ್ತದೆ. ಪೆಟ್ಟು ತಿಂದು ಮೂಲೆ ಸೇರಿದ ಮುಸ್ಲಿಂ ಲೀಗಿನ ಸ್ಥಾನದಲ್ಲಿ ವಿಜಯೋತ್ಸಾಹದಿಂದ ಕುಣಿಯುತ್ತಿದ್ದ ಸಂಯುಕ್ತ ರಂಗಕ್ಕೆ ಸರಕಾರವನ್ನು ರಚಿಸಲು ಬಿಡುವರೋ ಇಲ್ಲವೋ ಎಂಬ ಸಂಶಯ ಎಲ್ಲರಿಗೂ ಉಂಟಾಗಿತ್ತು—ಏಕೆಂದರೆ ಪೂರ್ವ ಬಂಗಾಲದಲ್ಲಿ ಸಂಯುಕ್ತರಂಗದ ಆಡಳಿತ ಸ್ಥಾಪಿಸುವುದೆಂದರೆ, ಕೇಂದ್ರದೊಡನೆ ತಿಕ್ಕಾಟ ತಪ್ಪಿದ್ದಲ್ಲ ಎಂಬ ಅಭಿಪ್ರಾಯವನ್ನು ಪಾಕಿಸ್ತಾನದ ಪ್ರಧಾನ ಮಂತ್ರಿ ಮಹಮ್ಮದಾಲಿಯವರು ಚುನಾವಣಾ ಪ್ರಚಾರ ಭಾಷಣದಲ್ಲಿ ವ್ಯಕ್ತಗೊಳಿಸಿದ್ದರು. ಆದರೂ ಚುನಾವಣಾನಂತರ ಫಜಲುಲಹಕ್ಕರಿಗೆ ಮಂತ್ರಿಮಂಡಳವನ್ನು ರಚಿಸಲು ಅವಕಾಶ ನೀಡಲಾಯಿತು; ಮತ್ತು ಕೇಂದ್ರದಿಂದ ಪಶ್ಚಿಮ ಪಾಕಿಸ್ತಾನದ ಪ್ರಾಂತೀಯ ಸರಕಾರಗಳಿಗೆ ದೊರೆತಷ್ಟೆ ಸಹಕಾರವನ್ನು ಪೂರ್ವ ಬಂಗಾಲದ ಹಕ್ಕರ ಮಂತ್ರಿಮಂಡಳಕ್ಕೂ ನೀಡುವ ಭರವಸೆ ಪ್ರಕಟಗೊಂಡಿತು. ಆದರೆ ಇದೀಗ, ದಿನಾಂಕ ೩೦ರಂದು, ಪಾಕಿಸ್ತಾನದ ಗವರ್ನರ ಜನರಲ್ಲರಾದ ಗುಲಾಮ ಮಹಮ್ಮದರು ೯೨ (ಅ) ಕಲಮಿನನ್ವಯ ಪೂರ್ವ ಬಂಗಾಲದಲ್ಲಿ ಫಜಲುಲಹಕ್ಕರ ಮಂತ್ರಿಮಂಡಳವನ್ನು ಕಿತ್ತೊಗೆದು ಅಲ್ಲಿ ಗವರ್ನರರ ರಾಜ್ಯವನ್ನು ಸಾರಿದರು; ಇಂತಹ ದುಡುಕುತನವನ್ನು ಮಾಡಬಾರದೆಂದು ಅಲ್ಲಿಯ ಗವರ್ನರರಾದ ಚೌಧರಿ ಕಲಿಕುಝ್ಜಮಾನರು ಸಲಹೆ ಕೊಟ್ಟರೆಂಬ ಕಾರಣಕ್ಕಾಗಿಯೇ ಇರಬೇಕು-ಅವರನ್ನೂ ಅಧಿಕಾರದಿಂದ ತೆಗೆದು ಪಾಕಿಸ್ತಾನ ಸಂರಕ್ಷಣಾ ಶಾಖೆಯ ಕಾರ್ಯದರ್ಶಿ ಮೇಜರ ಜನರಲ್ಲ ಇಸ್ಕಂದರ ಮಿರ್ಜಾರನ್ನು ಗವರ್ನರರಾಗಿ ನೇಮಿಸಲಾಯಿತು. ಪೂರ್ವ ಬಂಗಾಲದಲ್ಲಿ ದಂಡಿನ ಆಳಿಕೆಯನ್ನು ಸಾರಿಲ್ಲ, ನಿಜ—ಆದರೆ ಈ ಸೈನಿಕ ಗವರ್ನರರಿಂದ ನಾಗರಿಕ ಆಡಳಿತವನ್ನು ಅಪೇಕ್ಷಿಸುವುದು ತಪ್ಪಾದೀತು. ಮಿರ್ಜಾರವರು ಕರಾಚಿಯ ಉಕ್ಕಿನ ಮನುಷ್ಯನೆಂದು ಹೆಸರು ಹೊಂದಿರುವವರು—ಕಳೆದ ವರ್ಷ ಪಶ್ಚಿಮ ಪಂಜಾಬಿನಲ್ಲಿ ಅಹಮ್ಮದೀಯ ಚಳುವಳಿಯು ಉಗ್ರಸ್ವರೂಪ ಧರಿಸಿದಾಗ ಅದನ್ನು ಹತ್ತಿಕ್ಕಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಆದುದರಿಂದ ಇವರು ಸೈನಿಕರಲ್ಲಿ ಸಹಜವಾಗಿರುವ ದರ್ಪವನ್ನು ಉಪಯೋಗಿಸಿ, ಪೂರ್ವ ಬಂಗಾಲದ ಪ್ರಕ್ಷುಬ್ಧ ಪರಿಸ್ಥಿತಿಯನ್ನು ಹತೋಟಿಗೆ ತರಲು ಸಮರ್ಥರಾದಾರು—ಈಗಾಗಲೇ ಅಲ್ಲಿ ಬಂಧನ ಸತ್ರವು ನಡೆದಿದ್ದು ಕೆಲವು ಶಾಸನ ಸಭಾ ಸದಸ್ಯರನ್ನೊಳಗೊಂಡು ಮುನ್ನೂರಕ್ಕೂ ಹೆಚ್ಚು ಮಂದಿಯನ್ನು ಸೆರೆ ಹಿಡಿದಿರುವರು. ಪ್ರಮುಖ ಕೇಂದ್ರಗಳಲ್ಲೆಲ್ಲಾ ಸೈನಿಕರು ಕಾವಲು ನಿಂತಿರುವರು. ಪದಚ್ಯುತರಾದ ಮುಖ್ಯ ಮಂತ್ರಿ ಫಜಲುಲ ಹಕ್ಕರು ತಮ್ಮ ಮನೆಯಿಂದ ಹೊರಗೆ ಹೊರಡಬಾರದೆಂಬ ನಿರ್ಬಂಧದಲ್ಲಿ, ಹಾಗು ಸೈನಿಕ ಪಹರೆಯಲ್ಲಿ, ಇರುವರು. ಗವರ್ನರರ ರಾಜ್ಯವನ್ನು ಸಾರಿದೊಡನೆಯೇ ಮಹಮ್ಮದಾಲಿಯವರು ಅರ್ಧ ತಾಸಿನಷ್ಟು ಹೊತ್ತು ಕರಾಚಿಯಿಂದ ಪ್ರಸಾರ ಭಾಷಣ ಮಾಡುತ್ತಾ ಫಜಲುಲ ಹಕ್ಕರನ್ನು ದೇಶದ್ರೋಹಿಗಳೆಂದು ವರ್ಣಿಸಿದರು. ಪೂರ್ವ ಬಂಗಾಲವನ್ನು ರಕ್ಷಿಸಿ, ಪಾಕಿಸ್ತಾನದ ಅಖಂಡತ್ವವನ್ನು ಹಾಗು ಅಭೇದ್ಯತೆಯನ್ನು ಕಾಪಾಡಲು, ಆಡಳಿತ ನಡೆಸುವುದರಲ್ಲಿ ಸಂಪೂರ್ಣ ವಿಫಲಹೊಂದಿದ ಫಜಲುಲ ಹಕ್ಕರ ಅಸಮರ್ಥ ಮಂತ್ರಿಮಂಡಳವನ್ನು ಕಿತ್ತೊಗೆಯಬೇಕಾಯಿತೆಂದು ಅವರು ಸಮಾಧಾನ ಹೇಳಿದರು. ಆದರೆ ಫಜಲುಲ ಹಕ್ಕರ ದೇಶದ್ರೋಹಕರ ವರ್ತನೆಯಾವುದೆಂದು ಅವರು ಸ್ಪಷ್ಟಪಡಿಸಲಿಲ್ಲ—ಹಕ್ಕರು ಈಚೆಗೆ ಕಲ್ಕತ್ತೆಗೆ ಬಂದಿದ್ದಾಗ ಭಾರತದ ವಿಭಜನೆ ನಡೆದದ್ದು ಸರಿಯಾಗಲಿಲ್ಲವೆಂಬ ಅಭಿಪ್ರಾಯದ ಮಾತುಗಳನ್ನು ಆಡಿದ್ದರು. ಮಹಮ್ಮದಾಲಿಯವರು ಈ ಸಂಗತಿಯನ್ನು ನೆನಪುಮಾಡಿ ಕೊಡುತ್ತಿರೋ ಏನೋ! ಏಕೆಂದರೆ ಫಜಲುಲ ಹಕ್ಕರ ಮಂತ್ರಿಮಂಡಳದ ಬೇಡಿಕೆಗಳನ್ನು—ಪೂರ್ವಬಂಗಾಲದ ವಿಶಿಷ್ಟ ಪರಿಸ್ಥಿತಿಯಲ್ಲಿ—ನ್ಯಾಯವಾದವುಗಳಲ್ಲವೆಂದು ಯಾವಾತನೂ ನೆಟ್ಟನೋರಿಯಿಂದ ನಿರಾಕರಿಸಲಾರ. ಮಹಮ್ಮದಾಲಿಯವರು "ಸಂಯುಕ್ತರಂಗದ ಮಂತ್ರಿಮಂಡಳ" ಎಂಬ ಮಾತಿನ ಪ್ರಭಾವವು ಫಜಲುಲ ಹಕ್ಕರನ್ನು ಕಿತ್ತೊಗೆಯುವುದರಲ್ಲಿ ತಿಲಾಂಶವೂ ಬಿದ್ದಿಲ್ಲವೆಂದು ರಾಷ್ಟ್ರಕ್ಕೆ ಆಶ್ವಾಸನವಿತ್ತರು. ಆದರೆ ಇದನ್ನು ನಂಬುವುದು ಕಷ್ಟ—ಬದಲು ಬಹುಮತ ಪಡೆದ ಸಂಯುಕ್ತರಂಗಕ್ಕೆ ಸರಕಾರ ರಚಿಸಲು ಒಂದು ಅವಕಾಶ ಕೊಟ್ಟು, ಕೇಂದ್ರವು ಪ್ರಜಾಪ್ರಭುತ್ವ ಪದ್ಧತಿಯಲ್ಲಿ ನಿಷ್ಠೆಯುಳ್ಳದ್ದೆಂದು ತೋರಿಸಿಕೊಡಬೇಕೆಂದೂ ಆದರೆ ಹಿಂದಿನಿಂದ ಹಕ್ಕರನ್ನು "ಅಸಮರ್ಥ" ರೆಂದು ಸಾರಿ, ಗವರ್ನರರ ಆಡಳಿತವನ್ನು ಹೇರಿ, ತಮ್ಮ ಬೇಳೆ ಬೇಯಿಸಿಕೊಳ್ಳಬೇಕೆಂದೂ ಮಹಮ್ಮದಾಲಿ ದುರುದ್ದೇಶಪಟ್ಟುಕೊಂಡುದು ನಿಚ್ಚಳವಾಗುತ್ತದೆ. ಪೂರ್ವ ಬಂಗಾಳದಲ್ಲಿ ಕಮ್ಯುನಿಸ್ಟರ ವಿಧ್ವಂಸಕ ಕೃತ್ಯಗಳು ನಡೆಯುತ್ತಿವೆಯೆಂದು ಕೇಂದ್ರ ಸರಕಾರ ಆರೋಪಿಸಿದಾಗ, ಗಲಭೆ ನಡೆಸಿದವರು ಕಮ್ಯುನಿಸ್ಟರಲ್ಲ, ಮುಸ್ಲಿಂ ಲೀಗಿನ ಕುಹಕ ಇದೆಂದು ಫಜಲುಲ ಹಕ್ಕರು ಸಾರ್ವಜನಿಕವಾಗಿ ಸಾರಿದ್ದರು. ತಮ್ಮ ನಿಲುವನ್ನು ಕೇಂದ್ರ ಸರಕಾರಕ್ಕೆ ಮನವರಿಕೆ ಮಾಡಿಸಿಕೊಡಲು ಅವರೆಷ್ಟು ಪ್ರಯತ್ನಿಸಿದರೂ ಹಕ್ಕರ ರಾಷ್ಟ್ರನಿಷ್ಠೆಯಲ್ಲಿ ಮಹಮ್ಮದಾಲಿಯವರಿಗೆ ವಿಶ್ವಾಸ ಕಾಣಲಿಲ್ಲ. ಎಂತಲೇ ಪ್ರಜಾಪ್ರಭುತ್ವದ ಇತಿಹಾಸದಲ್ಲಿಯೇ ಕರಾಳವಾದ, ನತದೃಷ್ಟ ಕ್ರಮವನ್ನು ಅವರು ತೆಗೆದುಕೊಂಡರು. ಬಂಗಾಲಿ ಪತ್ರಿಕೆಗಳು ಸಂಪಾದಕೀಯ ಲೇಖನವನ್ನು ಪ್ರಕಟಿಸದೆ, ತಮ್ಮ ಪ್ರತಿಭಟನೆಯನ್ನು ಸೂಚಿಸಿದರೆ, ಪ್ರಮುಖ ಬ್ರಿಟಿಷ ಪತ್ರಿಕೆಗಳು ಕರಾಚಿಯ ವರ್ತನೆಯನ್ನು ಸಂಪಾದಕೀಯವಾಗಿ ದೂಷಿಸಿದವು. ಬಂಗಾಲಿಗಳು ತೀರ ಉದ್ರಿಕ್ತಗೊಂಡಿದ್ದು ಘಟನಾತ್ಮಕವಾದ ತಮ್ಮ ಹಕ್ಕು ಬಾಧ್ಯತೆಗಳಿಗೋಸ್ಕರ ಹೋರಾಡಲು ಕಟಿಬದ್ಧರಾಗಿರುವರು—ಹಕ್ಕರು ಇದೇ ೬ನೇ ದಿನಾಂಕ ತಮ್ಮ ಪಕ್ಷದ ಸಭೆಯನ್ನು ಕರೆದಿರುವರು—ಪರಿಣಾಮವಾಗಿ ವೀರರೂ ತೇಜಸ್ವಿಗಳೂ ಆದ ಬಂಗಾಲಿಗಳು ಪ್ರಜಾಪ್ರಭುತ್ವಕ್ಕೂ ತಮ್ಮ ಶೀವರ್ಮಾನಕ್ಕೂ ವಿರುದ್ಧವೆನಿಸಿದ ಕೇಂದ್ರ ಸರಕಾರದ ಕ್ರಮವನ್ನು ನಿಷೇಧಿಸಿ, ಹೋರಾಟದ ಕಣಕ್ಕೆ ಧುಮುಕುವುದು ನಿಶ್ಚಯ. ಪೂರ್ವ ಬಂಗಾಲಿಗಳನ್ನು ಸಂತೈಸದೆ, ಛಲಿಸುವ ಪ್ರವೃತ್ತಿಯನ್ನು ಕೇಂದ್ರ ಪ್ರಕಟಿಸುತಿದ್ದರೆ ಅನಿಷ್ಟ ಪ್ರತಿಕ್ರಿಯೆಯಾಗುವುದು ಖಂಡಿತ. ದಂಡೋಪಾಯಗಳು ತಾತ್ಕಾಲಿಕ ಉಪಶಮನವನ್ನು ಮಾಡಬಹುದೇ ಹೊರತು, ಶಾಶ್ವತ ಶಾಂತಿಗೆ ತಳಹದಿ ಹಾಕುವ ಚೈತನ್ಯ ಅವುಗಳಿಗಿಲ್ಲ.

ಇಂಡೋ ಚೀನ

ಯುದ್ಧ ನಿಲ್ಲಿಸುವ ಪ್ರಯತ್ನ

ಇಂಡೋ ಚೀನದ ಸಮರ ನಿಲುಗಡೆಗಾಗಿ ಜಿನೇವಾ ಪರಿಷತ್ತಿನಲ್ಲಿ ಪ್ರಯತ್ನಗಳು ಆಶಾದಾಯಕ ಪರಿಣಾಮವನ್ನು ಪ್ರಕಟಿಸಿರುತ್ತವೆ. ವೀಟಮಿನರು ಯುದ್ಧ ನಿಲ್ಲಿಸುವ ಮಾತುಕತೆಗೆ ಸಹಕಾರಿಯಾದ ಸೂಚನೆಗಳನ್ನು ಕೊಟ್ಟಿರುವಲ್ಲದೆ, ಇಂಡೋ ಚೀನದ "ವಿಮೋಚನಾ ಚಳವಳಿ'ಗೆ ತಾವು ಪ್ರಾಮುಖ್ಯತೆ ಕೊಡುವುದಿಲ್ಲೆಂದೂ ಸ್ವಾಯತ್ತಾಧಿಕಾರವೇ ತಮ್ಮ ನಿಜವಾದ ಬೇಡಿಕೆಯಾಗಿದ್ದು ಈ ಸ್ವತಂತ್ರ ಘಟಕವನ್ನು ಫ್ರೆಂಚ ಸಾಮ್ರಾಜ್ಯದ ಅಂಗವಾಗಿ ಸ್ವೀಕರಿಸಲು ತಮಗೆ ಸಮ್ಮತಿಯೆಂದೂ ಹೇಳಿರುವುದು ಹೋಚಿಮಿನರ ಪ್ರಾಮಾಣಿಕತೆಯನ್ನು ಸ್ಪಷ್ಟಪಡಿಸುತ್ತದೆ. ಯುದ್ಧ ನಿಲ್ಲಿಸುವ ಕುರಿತು ವಿವರಗಳನ್ನು ನಿರ್ಧರಿಸಲು ಉಭಯ ಪಕ್ಷಗಳ ಸೈನ್ಯಾಧಿಕಾರಿಗಳ ಸಭೆ ಜರಗಬೇಕೆಂದು ಈಡನರು ಮಾಡಿದ ಸೂಚನೆಗೆ ಬೆಂಬಲ ದೊರೆತಿದ್ದು, ಅಂತಹ ಮಾತುಕತೆ ನಡೆಯುತ್ತಿದೆ ಭಾರತದ ಶ್ರೀ. ವಿ. ಕೆ ಕೃಷ್ಣ ಮೆನನ್ನರು ಜಿನೇವಾದ ಪ್ರತಿಯೋರ್ವ ಮುತ್ಸದ್ದಿಯನ್ನು ಕಂಡು ಅಭಿಪ್ರಾಯ ಭೇದಗಳನ್ನು ನಿವಾರಿಸಿ, ಸಾಧ್ಯವಾದಷ್ಟು ಪರಸ್ಪರರನ್ನು ಹತ್ತಿರಕ್ಕೆ ತರುವ ಪ್ರಯತ್ನದಲ್ಲಿ ಸಾಮಾನ್ಯ ಯಶಸ್ಸನ್ನು ಗಳಿಸಿದರು. ಮೆನನ್ನರ ಈ ಪ್ರಯತ್ನಕ್ಕೆ ಸ್ವಾಗತವೂ ಮೆಚ್ಚುಗೆಯೂ ದೊರಕಿರುತ್ತದೆ. ರಂಗಭೂಮಿಯಲ್ಲಿ ಇವೆಲ್ಲ ಆಶಾದಾಯಕ ಚಟುವಟಿಕೆಗಳು ಕಂಡುಬಂದರೆ, ನೇಪಥ್ಯದಲ್ಲಿ ಅಮೇರಿಕವು ಆಗ್ನೇಯ ಏಶ್ಯಾ ಭದ್ರತೆಯ ಕುರಿತು ತಕ್ಕ ಕ್ರಮ ತೆಗೆದುಕೊಳ್ಳಲು ಆತುರ ವ್ಯಕ್ತಗೊಳಿಸಿದೆ. ಜಿನೇವಾದಲ್ಲಿ ಮಾತುಕತೆಗಳನ್ನು ದೀರ್ಘವಾಗಿ ಎಳೆಯಬಾರದೆಂಬ ತತ್ವಕ್ಕೆ ಬ್ರಿಟನೂ ಒಪ್ಪುತ್ತದೆ; ಸಂಧಾನ ವಿಫಲವಾದರೆ ಒಡನೆಯೇ ಸಮರವನ್ನು ಮುಂದೊತ್ತಲಾಗುವಂತೆ. ವಾಷಿಂಗಟನ್ನಿನಲ್ಲಿ ಈ ಗುರುವಾರ (ದಿನಾಂಕ ೩) ಸೈನಿಕ ಮಟ್ಟದಲ್ಲಿ ತೊಡಗುವ ಆಗ್ನೇಯ ಏಶ್ಯಾ ಭದ್ರತೆಯ ಮಾತುಕತೆಗಳಲ್ಲಿ ಭಾಗವಹಿಸಲು ಬ್ರಿಟನು ಸಮ್ಮತಿಸಿದೆ.

Mahatma Gandhi Memorial College, Udipi

WANTED immediately a B. O. L. or M. A. with First or Second Class in Kannada and a sound knowledge of Sanskrit as Lecturer in Kannada. Salary Rs. 150-150-10-300 plus D. A. Candidates may be called for interview at their own expense. Apply before June 9, 1954.

H. Sunder Rao, *M. A.*
Principal.

ಭೂಸುಧಾರಣೆಯ ಕುರಿತು ಆದೇಶ

ಮದ್ರಾಸು ಸರಕಾರವು ಬೇಗನೆ ಕ್ರಮ ತೆಗೆದುಕೊಳ್ಳುವುದು

ಕಾಂಗ್ರೆಸ ಕಾರ್ಯಕಾರಿ ಸಮಿತಿಯು ನೇಮಿಸಿರುವ ಸಂವಿಧಾನ ಉಪಸಮಿತಿಯು ತನ್ನ ಪ್ರಾಸ್ತಾವಿಕ ವರದಿಯನ್ನು ಕೇಂದ್ರದ ಮಂತ್ರಿಗಳು, ರಾಜ್ಯಗಳ ಮುಖ್ಯ ಮಂತ್ರಿಗಳು ಹಾಗೂ ಪ್ರದೇಶ-ಕಾಂಗ್ರೆಸ ಸಮಿತಿಯ ಅಧ್ಯಕ್ಷರಿಗೆ ಕಳಿಸಿಕೊಟ್ಟಿದೆಯಾಗಿ ತಿಳಿಯುತ್ತದೆ. ಈ ವರದಿಯಲ್ಲಿ ಆರ್ಥಿಕ ಹಾಗು ಸಾಮಾಜಿಕ ಸುಧಾರಣೆಗಳಿಗೆ ಆತಂಕವನ್ನೊಡ್ಡುತಿದ್ದ ಘಟನೆಯ ಕೆಲವು ಕಲಮುಗಳಿಗೆ ತಿದ್ದುಪಡಿಯನ್ನು ಸೂಚಿಸಲಾಗಿರುವುದು. ಘಟನೆಯೊಡನೆ ಆಟವಾಡುವುದು ಇಷ್ಟವಲ್ಲದಿದ್ದರೂ ಪ್ರಗತಿಯನ್ನು ಮಂದಗಾಮಿಯಾಗಿ ಮಾಡುವ ಕೆಲವು ತೊಡಕುಗಳನ್ನು ನಿವಾರಿಸಲು ಅಪೇಕ್ಷಿಸುವುದು ತಪ್ಪಲ್ಲವೆಂದು ಈ ವರದಿಗೆ ಅಗ್ರವಾಲಾರು ಜೋಡಿಸಿದ ಪತ್ರವು ಹೇಳುತ್ತದೆ. ಆಸ್ತಿಯನ್ನು ಸರಕಾರವು ವಶಪಡಿಸಿಕೊಂಡಾಗ ತೆರಬೇಕಾಗುವ ಪರಿಹಾರ ಧನದ ಪ್ರಮಾಣವನ್ನು ನ್ಯಾಯಾಲಯಗಳಲ್ಲಿ ಆಹ್ವಾನಿಸದಂತೆ ತಡೆಯುವುದು, "ರಿಟ್" ಆಜ್ಞೆಗಳ ವಿಷಯದಲ್ಲಿ ಹೈಕೋರ್ಟುಗಳ ಅಧಿಕಾರವನ್ನು ನಿಯಂತ್ರಿಸುವುದು ಮುಂತಾದ ಸಂಗತಿಗಳನ್ನು ವರದಿ ಒಳಗೊಂಡಿದೆ.

ಕಾಂಗ್ರೆಸಿನ ತತ್ವ

ಅಖಿಲ ಭಾರತ ಕಾಂಗ್ರೆಸಿನ ಪ್ರಧಾನ ಕಾರ್ಯದರ್ಶಿಗಳಾದ ಶ್ರೀಮನ್ನಾರಾಯಣ ಅಗ್ರವಾಲಾರು ಎಲ್ಲ ರಾಜ್ಯಗಳ ಮುಖ್ಯ ಮಂತ್ರಿಗಳಿಗೆ ಪತ್ರ ಬರೆದು, ಆಯಾ ರಾಜ್ಯದಲ್ಲಿ ಜ್ಯಾರಿಗೆ ತರಲಾದ ಭೂ ಸುಧಾರಣೆಯ ಕ್ರಮಗಳು ಪಂಚ ವಾರ್ಷಿಕ ಯೋಜನೆಯಲ್ಲಿ ಈ ಬಗ್ಗೆ ಇಟ್ಟುಕೊಳ್ಳಲಾದ ಗುರಿಯನ್ನು ಎಷ್ಟರ ಮಟ್ಟಿಗೆ ಮುಟ್ಟುತ್ತವೆಂದು ವಿವರಗಳನ್ನು ಕೊಡಬೇಕಾಗಿ ಕೇಳಿರುವರು ಕಾಂಗ್ರೆಸು ಭೂ ಸುಧಾರಣೆಯ ಪ್ರಶ್ನೆಯನ್ನು ಒಳ್ಳೆಯ ಮಹತ್ವವನ್ನಿತ್ತು ವಿಚಾರಿಸುತ್ತಿದ್ದು, ಘಟನಾತ್ಮಕವಾದ ಆತಂಕಗಳನ್ನು ನಿವಾರಿಸುವುದಕ್ಕೂ ಮನಸ್ಸು ಕೊಟ್ಟಿದೆ. ಕಾಂಗ್ರೆಸ ಸಮಿತಿಯ ಮುಂದಿನ ಸಭೆಯಲ್ಲಿ ಈ ಕುರಿತು ನಿರ್ದಿಷ್ಟವಾದ ನಿಲುಮೆಯನ್ನು ತಳೆಯುವ ನಿರೀಕ್ಷೆ ಇದೆ. ಭೂಮಿಯನ್ನು ಪ್ರತ್ಯಕ್ಷವಾಗಿ ಸಾಗುವಳಿ ಮಾಡುವವರು ನಿಜವಾದ ಅರ್ಥದಲ್ಲಿ ಭೂಮಿಯ ಮೇಲೆ ಒಡೆತನವನ್ನು ಪಡೆಯುವಂತೆ ನೋಡಬೇಕೆಂಬ ತತ್ವವನ್ನು ಸಾಮಾನ್ಯವಾಗಿ ಕಾಂಗ್ರೆಸು ಸ್ವೀಕರಿಸಿರುವುದು.

ಮದ್ರಾಸು ರಾಜ್ಯದಲ್ಲಿ

ಪಂಚ ವಾರ್ಷಿಕ ಯೋಜನೆಯು ಮೇರೆಗೆ ಹಿಡುವಳಿಯ ಪರಮಾವಧಿ ಮಿತಿಯನ್ನು ಮೊದಲಾಗಿ ಗೊತ್ತುಪಡಿಸಬೇಕಾಗುವುದು. ಆರ್ಥಿಕ ಹಾಗು ಸಾಮಾಜಿಕ ಸಮತೆಯ ದೃಷ್ಟಿಯಿಂದ ಇದು ಅಗತ್ಯ; ಸ್ವಂತ ಭೂಮಿ ಇಲ್ಲದ ರೈತರಿಗೆ ಭೂಮಿಯನ್ನು ಒದಗಿಸಿಕೊಡುವುದಕ್ಕೂ ಇದು ಉಪಯುಕ್ತವೆನಿಸಿದೆ. ನಮ್ಮ ಮದ್ರಾಸು ಸರಕಾರವು ಈ ವಿಚಾರವನ್ನು ಪರ್ಯಾಲೋಚಿಸುತ್ತಿದೆಯೆಂದೂ ಹಿಡುವಳಿಯ ಮಿತಿಯನ್ನು ೫೦ ಮತ್ತು ೧೦೦ ಎಕ್ರೆಗಳ ನಡುವೆ ನಿರ್ಧರಿಸಬೇಕೆಂದು ಅದು ಎಣಿಸಿರುವುದಾಗಿಯೂ ಸರಕಾರದ ವಕ್ತಾರರೊಬ್ಬರು ಹೇಳಿದ್ದಾರೆ. ಭೂಮಾಲಿಕರಿಗೆ ಕೊಡಬೇಕಾದ ಪರಿಹಾರ ಧನದ ಪ್ರಶ್ನೆಯನ್ನೂ ಸರಕಾರ ಅನುಷಂಗಿಕವಾಗಿ ವಿಚಾರಿಸುತ್ತದೆ. ಮದ್ರಾಸಿನಲ್ಲಿ ಈಗಾಗಲೇ ತಂಜಾವೂರು ಹಾಗು ಮಲಬಾರು ಜಿಲ್ಲೆಗಳಿಗೆ ಭೂಸುಧಾರಣಾ ಕಾಯಿದೆಗಳನ್ನು ಮಾಡಲಾಗಿರುವುದು; ಅಲ್ಲದೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಕ್ಕಲೆಬ್ಬಿಸುವುದನ್ನು ಪ್ರತಿಬಂಧಿಸುವ ಕ್ರಮವೂ ಜ್ಯಾರಿಯಲ್ಲಿರುವುದು. ಹೀಗಿದ್ದರೂ ರಾಜ್ಯದಾದ್ಯಂತ ಭೂಸುಧಾರಣೆಯ ಕ್ರಮಗಳಿಗೋಸ್ಕರ ಜನತೆಯು ಒತ್ತಾಯಿಸುತ್ತದೆ. ಇದನ್ನು ಮನ್ನಿಸಿ ಸರಕಾರವು ಶೀಘ್ರವೇ ಭೂಸುಧಾರಣಾ ಕಾಯಿದೆಯನ್ನು ತರಲಿರುವುದಾಗಿ ತಿಳಿದು ಬರುತ್ತದೆ.

ಹೊಸ ಯೋಜನೆ

ಭಾರತ ಸರಕಾರದವರು ಹೊಸ ರೀತಿಯ ಉಳಿತಾಯದ ಉಪಾಯವೊಂದನ್ನು ಬಳಕೆಗೆ ತರಲು ನಿರ್ಧರಿಸಿದ್ದಾರೆ—ಇದೇ ಜುಲಾಯಿ ೧ನೇ ತಾರೀಕಿನಿಂದ "ಎನ್ಯುಯಿಟಿಸರ್ಟಿಫಿಕೇಟು"ಗಳೆಂದು ಕರೆಯಲ್ಪಡುವ ಭದ್ರತಾ ಪತ್ರಗಳನ್ನು ಸಾರ್ವಜನಿಕರಿಗೆ ಕೊಡಲಾಗುವುದು. ತಮಗೆ ಅಥವಾ ತಮ್ಮ ಆಶ್ರಯದಲ್ಲಿರುವವರಿಗೆ ಪ್ರತಿ ತಿಂಗಳಿಗೆ ಬೇಕಾಗುವ ನಿರ್ದಿಷ್ಟ ಮೊಬಲಗನ್ನು ಸರಕಾರದ ಕಡೆಯಿಂದ ಪಡೆಯುತ್ತಿರಲು ಇದರಿಂದ ಅನುಕೂಲವಾಗುವುದು. ತಿಂಗಳಿಗೆ ೨೫, ೫೦, ೧೦೦ ಹಾಗೂ ೨೦೦ ರೂಪಾಯಿಗಳಂತೆ ಹಣ ಪಡೆಯಬೇಕೆನ್ನುವವರು ಸರಕಾರದೊಡನೆ ಕ್ರಮವಾಗಿ ೩೫೦೦, ೭೦೦೦, ೧೪೦೦೦ ಹಾಗು ೨೮೦೦೦ ರೂಪಾಯಿಗಳನ್ನು ಠೇವಣಾತಿಯಾಗಿಟ್ಟು ಸರ್ಟಿಫಿಕೇಟನ್ನು ಪಡೆಯಬೇಕು; ಈ ಸರ್ಟಿಫಿಕೇಟು ೧೫ ವರ್ಷ ಅವಧಿಯುಳ್ಳದಾಗಿರುವುದು. ಈ ಹೊಸ ಯೋಜನೆಯದೆ, ಈಗಾಗಲೇ ಸಾರಲಾಗಿರುವ ರಾಷ್ಟ್ರೀಯ ಯೋಜನಾ ಸಾಲಕ್ಕೆ ಚಿನ್ನಾಭರಣಗಳನ್ನು ಚಂದಾವಾಗಿ ಕೊಟ್ಟು, ಅವುಗಳ ಮಾರಾಟದಿಂದ ಬಂದ ಹಣಕ್ಕೆ ಸಾಲ ಪತ್ರಗಳನ್ನು ಸಾರ್ವಜನಿಕರು ಪಡೆದುಕೊಳ್ಳಬಹುದೆಂದೂ ಸರಕಾರ ತಿಳಿಸುತ್ತದೆ. ನಿರ್ದಿಷ್ಟಪಡಿಸಿದ ಬೇಂಕುಗಳು ಇಂತಹ ಚಿನ್ನಾಭರಣಗಳನ್ನು ಸ್ವೀಕರಿಸುತ್ತವೆ. ಈಗಾಗಲೇ ಪ್ರಧಾನ ಮಂತ್ರಿ ನೆಹರೂರವರು ೧೯೫೪ರಲ್ಲಿ ತಮಗೆ ವರ್ಧಂತಿಯ ನಿಮಿತ್ತ ಅರ್ಪಿಸಲಾದ ರತ್ನ ಖಚಿತವಾದ ಒಂದು ಲಕ್ಷ ರೂಪಾಯಿ ಬೆಲೆಬಾಳುವ ಚಿನ್ನದ ಅಶೋಕ ಚಕ್ರವನ್ನು ಯೋಜನೆಗೆ ಚಂದಾವಾಗಿ ನೀಡಿ, ಈ ಉಪಕ್ರಮವನ್ನು ಪ್ರೋತ್ಸಾಹಿಸಿರುವರು.

ಚಂದಾಹಣ ಬಾಕಿ ಇರುವವರು ದಯಮಾಡಿ ಕಳುಹಿಸಿಕೊಡಿರಿ.

ಉಡುಪಿ

ಭಾವಚಿತ್ರ ಅನಾವರಣ—ದಿ| ವಕೀಲ್ ಪಾಂಗಾಳ ಪಾಂಡುರಂಗ ನಾಯ್ಕರ ಭಾವಚಿತ್ರ ಅನಾವರಣವು ಬಾರ್ ಎಸೋಸಿಯೇಶನಿನಲ್ಲಿ ಕಳೆದ ತಾ. 29ರಂದು ದಿ| ಮುನ್ಸಿಫ್ ಶ್ರೀ ಗೋನ್ಸಾಲ್ವಿಸರ ಅಧ್ಯಕ್ಷತೆಯಲ್ಲಿ ನೆರವೇರಿತು. ಬಾರ್ ಎಸೋಸಿಯೇಶನಿನ ಅಧ್ಯಕ್ಷ ಶ್ರೀ ಕೆ. ಜೆ. ಬಲ್ಲಾಳರು ದಿವಂಗತರ ಯೋಗ್ಯತೆಯನ್ನು ಪ್ರಶಂಸಿ ಮಾತನಾಡಿದರು. ಶ್ರೀ ಪಿ. ಆರ್. ನಾಯಕ್, ಐ. ಸಿ. ಎಸ್., (ದಿವಂಗತರ ಪುತ್ರ.) ಇವರು ಬಾರ್ ಎಸೋಸಿಯೇಶನಿಗೆ ಆಭಾರ ವ್ಯಕ್ತಪಡಿಸಿದರು. ಕಾರ್ಯದರ್ಶಿ ಶ್ರೀ ಬಿ. ಹಿರಿಯಣ್ಣ ಹೆಗ್ಡೇರು ಧನ್ಯವಾದಗಳನ್ನಿತ್ತರು.

ಒಬ್ಬರ ಪರವಾಗಿ ಇನ್ನೊಬ್ಬರು ಪರೀಕ್ಷೆಗೆ ಕುಳಿತುದಕ್ಕಾಗಿ ಶಿಕ್ಷೆ—ಕುಂದಾಪುರದ ಹುಸೇನ್ ಸಾಹೇಬರು ಬೈಲೂರಿನ ರಜಾಕ್ ಸಾಹೇಬರ ಬದಲಿಗೆ S.S.L.C. ಪರೀಕ್ಷೆಗೆ (8-10-,53) ಕುಳಿತು ಮೋಸಗೊಳಿಸಿದ ತಪ್ಪಿಗಾಗಿ ಕುಂದಾಪುರದ S.D.M. ಶ್ರೀ. ಯು. ಎಸ್. ನಾಯಕರು ಇಬ್ಬರಿಗೂ ಒಂದೊಂದು ವರ್ಷದ ಕಠಿಣ ಸಜೆಯನ್ನು ವಿಧಿಸಿದ್ದಾರೆ. ಎ. ಪಿ. ಪಿ. ಶ್ರೀ. ಸುಬ್ರಹ್ಮಣ್ಯರವರು ಸರಕಾರದ ಪರವಾಗಿ, ಶ್ರೀಗಳಾದ ಬಿ. ಶೀನಪ್ಪ ಹೆಗ್ಡೆ ಮತ್ತು ವೈ. ದೂಮಣ್ಣ ಹೆಗ್ಡೇರು ಆಪಾದಿತರ ಪರವಾಗಿ ವಕಾಲತು ವಹಿಸಿದ್ದರು.

ವಿವಾಹ ಸಮಾರಂಭ—ಮೈಸೂರಲ್ಲಿ ಹೋರ್ಟಿಕಲ್ಚರಲ್ ಗಾರ್ಡನಿನ ಅಸಿಸ್ಟಂಟ್ ಸುಪರಿಂಟೆಂಡೆಂಟರರಾದ ಶ್ರೀ ಕೊಲ್ನಾಡು ದೇಜು ಶೆಟ್ರ ಪುತ್ರಿ ಸೌ| ಸುಜಯಳನ್ನು ಆರೂರು ಕುರ್ಡುಂಜೆ ಸಂಕಯ್ಯ ಶೆಟ್ರ ಪುತ್ರ ಶ್ರೀ ಕೆ. ವಿಟ್ಠಲ ಶೆಟ್ಟರು ತಾ. 27—5—,54ರಲ್ಲಿ ಎಸ್. ಆರ್. ಥಿಯೇಟರಿನಲ್ಲಿ ವಿವಾಹವಾದರು.

ಜಿಲ್ಲಾಬೋರ್ಡು ಚುನಾವಣೆಗೆ ಸಿದ್ಧತೆ—ಮಾಡಿಕೊಳ್ಳುವ ಉದ್ದೇಶದಿಂದ ಜಿಲ್ಲಾ ಕಾಂಗ್ರೆಸಿನ ಅಧ್ಯಕ್ಷ ಶ್ರೀ ಎಫ್. ಎಕ್ಸ್. ಡಿ. ಪಿಂಟೋ, ಕಾರ್ಯದರ್ಶಿ ಶ್ರೀ ಬಿ. ಆರ್ ಕರ್ಕೇರ ಇವರು ಮಾನ್ಯ ಆರೋಗ್ಯ ಮಂತ್ರಿ ಶ್ರೀ ಎ. ಬಿ ಶೆಟ್ಟಿಯವರನ್ನೊಡಗೂಡಿ ಸ್ಥಳೀಯ "ಮುಕುಂದ ನಿವಾಸ"ದಲ್ಲಿ ಸಭೆ ಸೇರಿದ್ದ ಕಾಂಗ್ರೆಸಿಗರೊಡನೆ ವಿಚಾರ ವಿನಿಮಯವನ್ನು ತಾ. 1ರಂದು ನಡೆಸಿದರು. ಕಾಂಗ್ರೆಸು ಚುನಾವಣೆಯಲ್ಲಿ ಸ್ಪರ್ಧಿಸಬೇಕೋ ಬೇಡವೋ ಎಂಬ ಕುರಿತು ನಡೆದ ಚರ್ಚೆಯಲ್ಲಿ ಶ್ರೀಗಳಾದ ಟಿ. ಎ. ಪೈ, ಎಂ. ಎಲ್. ಎ., ಬಿ. ವೈಕುಂಠ ಬಾಳಿಗ, ಎಂ. ಎಲ್. ಎ., ಕೆ. ಆರ್. ಆಚಾರ್, ಮೂಡ್ಲಾಡಿ ಕೃಷ್ಣಯ್ಯ ಶೆಟ್ಟಿ, ಎ. ಜೆ. ಆಳ್ವ, ಡಾ. ಸುಂದರರಾಮ ಪೈ ಮುಂತಾದವರು ಭಾಗವಹಿಸಿ ಕಾಂಗ್ರೆಸು ನಿಕಟ ಜನತಾ ಸಂಪರ್ಕವನ್ನು ಮಾಡಿಕೊಳ್ಳುವ ಹಾಗು ಜನತೆಯ ಬೆಂಬಲವನ್ನು ಪಡೆದು ಜಯಹೊಂದುವ ಧ್ಯೇಯವನ್ನು ಇಟ್ಟುಕೊಂಡು ಸ್ಪರ್ಧಿಸಬೇಕೆಂಬ ಒಮ್ಮತದ ಅಭಿಪ್ರಾಯವನ್ನು ವ್ಯಕ್ತಗೊಳಿಸಿದರು. ಮತದಾರ ಕ್ಷೇತ್ರದಲ್ಲಿಯೇ ಯೋಗ್ಯರಾದವರನ್ನು ಗುರುತಿಸಿ, ಅವರನ್ನು ಉಮೇದುವಾರರನ್ನಾಗಿ ನಿಲ್ಲಿಸುವ ಮುಂತಾದ ಮುಂದಿನ ಕಾರ್ಯಕ್ರಮಗಳನ್ನು ಉಡುಪಿ ಸರ್ಕಲ್ ಕಾಂಗ್ರೆಸ್ ಸಮಿತಿಯು ಈ ತಾಲೂಕಿನ ಮಟ್ಟಿಗೆ ವಹಿಸಿಕೊಳ್ಳಬೇಕೆಂದೂ ಆಯಾ ಮತದಾರ ಕ್ಷೇತ್ರದಲ್ಲಿ ಚುನಾವಣೆಗೋಸ್ಕರ ಸಣ್ಣ ಸಣ್ಣ ಸಮಿತಿಗಳನ್ನು ರಚಿಸಲು ಅದು ಮಾರ್ಗದರ್ಶನ ಮಾಡಬೇಕೆಂದೂ ತೀರ್ಮಾನವಾಯಿತು. ಮಾನ್ಯ ಮಂತ್ರಿಗಳು ಕಾಂಗ್ರೆಸಿಗರು ಚುನಾವಣಾ ಪ್ರಚಾರದಲ್ಲಿ ಜನತೆಯ ಸಂಪೂರ್ಣ ಬೆಂಬಲವನ್ನು ಪಡೆಯುವುದರಲ್ಲಿ ಯಶಸ್ಸುಗಳಿಸುವಂತೆ ಹುಮ್ಮಸ್ಸಿನಿಂದ ಕೆಲಸವಾದ ಬೇಕೆಂದು ಹೇಳುತ್ತಾ ಮತದಾರ ಕ್ಷೇತ್ರದಲ್ಲಿ ಸಮರ್ಥ ಉಮೇದುವಾರರನ್ನು ಆರಿಸುವ ಹೊಣೆಯನ್ನು ಚೊಕ್ಕ ರೀತಿಯಲ್ಲಿ ನಿರ್ವಹಿಸಬೇಕೆಂದು ವಿನಂತಿಸಿದರು. ಮಂಗಳೂರಿನಲ್ಲಿ ಇದೇ 8ನೇ ತಾರೀಕಿನಂದು ಜರಗಲಿರುವ ಜಿಲ್ಲಾ ಕಾಂಗ್ರೆಸಿನ ಸಭೆಯ ಮುಂದೆಯೇ ಉಮೇದುವಾರರ ಪಟ್ಟಿ ಮಂಡಿಸಲಾಗುವಂತೆ ಕೆಲಸವನ್ನು ತ್ವರೆಗೊಳಿಸಬೇಕೆಂದು ಅಭಿಪ್ರಾಯಪಟ್ಟರು.

ಸಭೆ—ಕಮ್ಯುನಿಸ್ಟ್ ಪಾರ್ಟಿಯ ಸಭೆಯು ದಿನಾಂಕ ೨೪ರಂದು ಶ್ರೀ ಪಿ. ಶೀನ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಸಭೆಯಲ್ಲಿ ಶ್ರೀ ಕೆ. ದಾಸ ಸೇರಿಗಾರರು ಗುಂಡಿಬೈಲು ಮತ್ತು ಇತರ ವಾರ್ಡುಗಳ ಜನತೆಗಾಗಿ ಮಾಡಿದ ಕೆಲಸಗಳ ವರದಿಯು ಓದಲ್ಪಟ್ಟಿತು. ಅಧ್ಯಕ್ಷರ ಭಾಷಣಾನಂತರ ಸಭೆಯು ಮುಕ್ತಾಯವಾಯಿತು.

ಪುತ್ತಿಗೆ ಸೇತುವೆಯ ಉದ್ಘಾಟನೆ

ಮಾನ್ಯ ಶ್ರೀ ಎ. ಬಿ. ಶೆಟ್ಟರಿಂದ

ಬುಧವಾರ ದಿನಾಂಕ ೨ರಂದು ಈಗ ಮೂರು ವರುಷಗಳಿಂದ ಕಟ್ಟಲ್ಪಡುತ್ತಿದ್ದ ಪುತ್ತಿಗೆ ಸೇತುವೆಯನ್ನು ಮದ್ರಾಸಿನ ಆರೋಗ್ಯ ಮಂತ್ರಿ ಶ್ರೀ. ಎ ಬಿ. ಶೆಟ್ಟರು ಉದ್ಘಾಟಿಸಿದರು. ಮಲ್ಪೆ ಬಂದರಿನಿಂದ ಮೈಸೂರಿಗೆ ನೇರವಾಗಿ ಹೋಗಲು ಮುಖ್ಯವಾದ ಒಂದು ರಹದಾರಿಯನ್ನು ಸರಕಾರದವರು ಇಂದಿಗೆ ಸಂಪೂರ್ಣಗೊಳಿಸಿದಂತಾಯಿತು. ಇಂದಿನಿಂದಲೇ ಎಲ್ಲ ಮೋಟಾರು ವಾಹನಗಳೂ ಈ ಸೇತುವೆಯ ಉಪಯೋಗವನ್ನು ಪಡೆಯಬಹುದಾಗಿದೆ.

ಉದ್ಘಾಟಕರಾದ ಮಂತ್ರಿಗಳು ತಮ್ಮ ಭಾಷಣದಲ್ಲಿ ಜಿಲ್ಲೆಯಲ್ಲಿ ಕೇವಲ 60 ಮೈಲು ಮಾತ್ರ ರೈಲು ದಾರಿ ಇರುವುದರಿಂದ ಮಾರ್ಗಗಳು ಎಷ್ಟು ಅವಶ್ಯವೆಂಬುದನ್ನು ವಿವರಿಸಿದ್ದಲ್ಲದೆ ಈಚೆಗೆ ಸುಮಾರು 24 ಲಕ್ಷ ರೂಪಾಯಿ ವೆಚ್ಚದ ನಾಲ್ಕಾರು ಸೇತುವೆಗಳನ್ನು ಮದ್ರಾಸು ಸರಕಾರವು ಕಟ್ಟಿ ಮುಗಿಸಿದ್ದಲ್ಲದೆ, ಇನ್ನು ಈಗ ಮತ್ತೆ 24 ಲಕ್ಷದ ಕೆಲಸವು ನಡೆಯುತ್ತಾ ಇದೆ ಎಂದು ಹೇಳಿದರು. ಅಲ್ಲದೆ ನಮ್ಮ ಉತ್ಸಾಹೀ ಪ್ರತಿನಿಧಿಗಳಾದ ಶ್ರೀ ಯು. ಶ್ರೀನಿವಾಸ ಮಲ್ಯ ಎಂ. ಪಿ, ಶ್ರೀ ಬಿ. ಶಿವರಾಯರು ಎಂ. ಪಿ, ಮತ್ತು ಶ್ರೀ ಕೆ. ಸದಾನಂದ ಹೆಗ್ಡೆ ಎಂ. ಪಿ. ಇವರ ಪ್ರಯತ್ನದ ಫಲವಾಗಿ 38 ಲಕ್ಷ ರೂಪಾಯಿ ವೆಚ್ಚದಲ್ಲಿ ಮುಲ್ಕಿ, ಉದ್ಯಾವರ, ಪಾಪನಾಶಿ ಹೊಳೆಗಳಿಗೆ ಈ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲೇ ಸೇತುವೆ ಆಗುವುದೆಂದೂ, ಕೇಂದ್ರದ ಸಾರಿಗೆ ಮಂತ್ರಿ ಶ್ರೀ ಲಾಲಬಹದ್ದೂರ ಶಾಸ್ತ್ರಿಗಳ ಮಿತ್ರರಾದ ಶ್ರೀ ಮುಲ್ಕ—ಹೆಗ್ಡೆಯವರು ಕಲ್ಯಾಣಪುರ, ಮಾಬುಕಳಗಳಿಗು ಸೇತು ಬಂಧನ ಮಾಡುವ ವಿಚಾರದಲ್ಲಿರುವರೆಂದೂ, ಹೇಳಿದರು. ಇನ್ನೆಲ್ಲ [illegible] ರಾಷ್ಟ್ರೀಯ ಹೈವೇಗೂ 90 ಲಕ್ಷ ರೂಪಾಯಿ ನಮ್ಮ ಜಿಲ್ಲೆಯಲ್ಲಿ ವ್ಯಯವಾಗುವುದರಿಂದ ಮದ್ರಾಸಿನ ಇತರ ಜಿಲ್ಲೆಗಳವರು ಮಾತ್ಸರ್ಯಪಡುವಷ್ಟು ಸಾರ್ವಜನಿಕ ಕಾಮಗಾರಿ ಇಲ್ಲಿ ನಡೆಯುತ್ತದೆಂದೂ ವರ್ಣಿಸಿದರು.

ಸಭೆಗೆ ಉಡುಪಿ ಮಂಗಳೂರುಗಳ ಅನೇಕ ಸಭ್ಯರೂ, ಎಂ. ಎಲ್. ಎ. ಗಳೂ ಆಗಮಿಸಿದ್ದಲ್ಲದೆ ಪುತ್ತಿಗೆಯ ನಾಗರಿಕರೂ ಬಹಳ ಸಂಖ್ಯೆಯಲ್ಲಿ ಹಾಜರಾಗಿದ್ದರು. ಚೀಫ್ ಇಂಜಿನಿಯರ್ ಕೆ. ಕೆ. ನಂಬಿಯಾರ ಮತ್ತು ಡಿವಿಜನಲ್ ಇಂಜಿನಿಯರ್ ಶೈತಿಯವರ ಯತ್ನವು ಈ ಸೇತುವೆಯನ್ನು ಸಯೋಗಿಸುವವರೆಲ್ಲರಿಂದ ಸ್ತುತಿಸಲ್ಪಡುವುದರಲ್ಲಿ ಸಂದೇಹವಿಲ್ಲ.

NAVAYUGA
Popular Kannada Weekly.
Founder:—
Sri A. B. SHETTY,
Minister for Public Health,
Govt. of Madras.
ನವಯುಗ
ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ.
ಸ್ಥಾಪಕರು:- ಶ್ರೀ. ಎ. ಬಿ. ಶೆಟ್ಟಿ,
ಮದ್ರಾಸಿನ ಆರೋಗ್ಯಮಂತ್ರಿ.

ಆರೋಗ್ಯ ಮಂತ್ರಿ ಶ್ರೀ. ಎ. ಬಿ. ಶೆಟ್ಟರ ಜಿಲ್ಲಾ ಸಂದರ್ಶನ

ಹಂಡೇಲಿ ಶಾಲಾ ಉದ್ಘಾಟನೆ! ಶಿರ್ಲಾಡಿ ಗ್ರಾಮಾಭಿವೃದ್ಧಿಯ ಪರಿಶೀಲನೆ

ಆರೋಗ್ಯ ಮಂತ್ರಿಗಳಾದ ಶ್ರೀ. ಎ. ಬಿ. ಶೆಟ್ಟರು ದಿನಾಂಕ ೨೭ರಂದು ಮಂಗ ಳೂರಿಗೆ ಆಗಮಿಸಿದರು. ರೈಲ್ವೇ ನಿಲ್ದಾಣದಲ್ಲಿ ನಗರದ ಗಣ್ಯ ವ್ಯಕ್ತಿಗಳು ಮಂತ್ರಿಗಳಿಗೆ ಸ್ವಾಗತ ನೀಡಿದರು. ಸಂಜೆ ಮಂತ್ರಿಗಳನ್ನು ಅತಿಥಿಗಳ ನಿವಾಸದಲ್ಲಿ ಪ್ರತಿಷ್ಠಿತರೂ, ಹಲವು ಸರಕಾರಿ ಅಧಿಕಾರಿಗಳೂ ಮಂತ್ರಿಗಳ ಭೇಟಿ ಪಡೆದರು. ಮಂಗಳೂರು ಕೈಮಗ್ಗ ಸಂಘಗಳ ಪರವಾಗಿ ಕಾರ್ಯದರ್ಶಿ ಶ್ರೀ ಜೆ. ಬಿ. ಡಿ'ಸೋಜರು ಒಂದು ಮನವಿಯನ್ನರ್ಪಿಸಿದರು.

ಹಂಡೇಲಿನಲ್ಲಿ—ಸ್ಥಳೀಯ ಶಾಲೆಯನ್ನು ದಿನಾಂಕ ೨೮ರಂದು ಉದ್ಘಾಟಿಸುತ್ತಾ, ತಮ್ಮ ಉದ್ಘಾಟನಾ ಭಾಷಣದಲ್ಲಿ "ಹಳ್ಳಿಯ ಶಾಲೆಯು ಹಳ್ಳಿಯ ಜನರಿಗೆ ತಮ್ಮ ವಿರಾಮ ಕಾಲವನ್ನು ಕಳೆಯುವ ಒಂದು ಸಮಾಜ ಕೇಂದ್ರವಾಗಿರಬೇಕು. ಬರೇ ಮಕ್ಕಳ ಶಿಕ್ಷಣ ಸಂಸ್ಥೆಯಾಗಿದ್ದರೆ ಮಾತ್ರ ಸಾಲದು. ಸರಕಾರ ಪ್ರಾಥಮಿಕ ಶಿಕ್ಷಣದ ಕಡೆಗೆ ಮಾತ್ರವಲ್ಲ ಪ್ರೌಢ ಶಿಕ್ಷಣದ ಕಡೆಗೂ ಹೆಚ್ಚಿನ ಗಮನವನ್ನು ಕೊಡುತ್ತದೆ. ಸರಕಾರದ ಆರ್ಥಿಕ ತೊಂದರೆಯಿಂದಾಗಿ ಇನ್ನೂ ಹೆಚ್ಚಿನ ಕಾರ್ಯಕ್ರಮಗಳನ್ನು ಶಿಕ್ಷಣ ರಂಗದಲ್ಲಿ ಕೈಗೊಳ್ಳಲಾಗಲಿಲ್ಲ. ಇದಕ್ಕಾಗಿ ತರಬೇತಿ ಹೊಂದಿದ ಉಪಾಧ್ಯಾಯರುಗಳು ಬೇಕಾಗಿದ್ದಾರೆ, ಕನಿಷ್ಠ ಪಕ್ಷ ಪಂದರೆ ಒಬ್ಬನಿಗೆ ೮ನೇ ತರಗತಿಯ ವರೆಗಾದರೂ ಶಿಕ್ಷಣ ದೊರಕಬೇಕು. ಸ್ತ್ರೀ ಶಿಕ್ಷಣದ ಅವಶ್ಯ ಹೆಚ್ಚಾಗಿದೆ. ಸರಕಾರದಿಂದು ಕೃಷಿ, ಕೈಗಾರಿಕೆ, ಸಾರಿಗೆಗಳ ಅಭಿವೃದ್ಧಿ, ಶಿಕ್ಷಣ ಅಭಿವೃದ್ಧಿಗಳ ಕಡೆಗೆ ಹೆಚ್ಚಿನ ಗಮನವೀಯುತ್ತಿದೆ. ಇದಕ್ಕಾಗಿ ಸರಕಾರಕ್ಕೆ ಜನತೆಯು ತನು, ಮನ, ಧನಗಳಿಂದ ಸಹಕಾರ, ಸಹಾಯಗಳನ್ನು ನೀಡಬೇಕು. ಎಲ್ಲರಿಗೂ ಶಿಕ್ಷಣ ದೊರಕಬೇಕೆಂಬುದೇ ನಮ್ಮ ಧ್ಯೇಯ. ಈ ಧ್ಯೇಯಕ್ಕೆ ಮಾರ್ಗವಾಗಿ ಇಂದು ಹಂಡೇಲಿನ ಶಾಲೆ ಉದ್ಘಾಟಿಸಲ್ಪಟ್ಟಿದೆ" ಎಂದರು.

ಆರಂಭದಲ್ಲಿ ಶಾಲೆಯನ್ನು ಕಟ್ಟಿಸಿದ ಶ್ರೀ ಅನಂತರಾಜ ಬಲಿಪರು ಅಧ್ಯಕ್ಷರಿಗೂ, ಮಂತ್ರಿಗಳಿಗೂ ಹಾರಗಳನ್ನರ್ಪಿಸಿದರು. ಶ್ರೀ. ಟಿ. ವಾಸುದೇವ ನಾಯಕರು ಸ್ವಾಗತ ಭಾಷಣವನ್ನಿತ್ತರು. ಪಕ್ಷಿಕೆರೆ ಪಂಚಾಯತಿನ ಪರವಾಗಿಯೂ, ಗ್ರಾಮಸ್ಥರ ಪರವಾಗಿಯೂ ಶ್ರೀ. ಎಂ. ವಾಮನ ರಾವ್ ರವರು ಮಂತ್ರಿಗಳಿಗೂ, ಅಧ್ಯಕ್ಷರಿಗೂ ಮಾನಪತ್ರಗಳನ್ನು ಸಮರ್ಪಿಸಿದರು. ಅಧ್ಯಕ್ಷ ಶ್ರೀ ಕೆ. ಬಿ. ಜಿನರಾಜ ಹೆಗ್ಡೆಯವರ ಭಾಷಣದ ತರುವಾಯ ಸಭಾಂತ್ಯವಾಯಿತು.

ಶಿರ್ಲಾಡಿಯಲ್ಲಿ—ದಿನಾಂಕ ೨೯ನೇ ಮಧ್ಯಾಹ್ನ ಮಂತ್ರಿಗಳು ಇಲ್ಲಿಗೆ ಆಗಮಿಸಿ ಗ್ರಾಮಾಭಿವೃದ್ಧಿ ಕಾರ್ಯಕ್ರಮಗಳನ್ನು ಪರಿಶೀಲಿಸಿದರು. ಶ್ರೀ ಕೆ. ಪಿ. ಮುಕುಂದ ಪ್ರಭುಗಳ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಮಂತ್ರಿಗಳು ಭಾಷಣವೀಯುತ್ತಾ, "ಶಿರ್ಲಾಡಿಯಲ್ಲಿ ಗ್ರಾಮಸ್ಥರು ಕೈಗೊಂಡ ಗ್ರಾಮಾಭಿವೃದ್ಧಿ ಕಾರ್ಯಕ್ರಮಗಳನ್ನು ಪ್ರಶಂಸಿಸುತ್ತಾ" ಬರೇ ನಗರದಲ್ಲಿ ಮಾತ್ರ ಶುಚಿತ್ವವನ್ನು ಕೈಗೊಂಡರೆ ಸಾಲದು. ಗ್ರಾಮಗಳೇ ಹೆಚ್ಚಾಗಿರುವ ನಮ್ಮ ದೇಶದಲ್ಲಿ ಮೊದಲು ಹಳ್ಳಿಗಳ ಉದ್ಧಾರವಾಗಬೇಕು ಅದನ್ನು ಸಾಧಿಸುವುದಕ್ಕೋಸ್ಕರವೇ ರಾಷ್ಟ್ರೀಯವಿಸ್ತರಣಾಯೋಜನೆ ಸಮಾಜವಿಕಾಸ ಯೋಜನೆ ಮೊದಲಾದ ಯೋಜನೆಗಳನ್ನು ಕೈಗೊಳ್ಳಲಾಗಿದೆ. ೨ನೇ ಪಂಚವಾರ್ಷಿಕ ಯೋಜನೆಯಲ್ಲಿ ಪ್ರತಿ ಜಿಲ್ಲೆ, ಪ್ರತಿ ತಾಲೂಕು, ಪ್ರತಿ ಗ್ರಾಮಗಳಲ್ಲೂ ಅಭಿವೃದ್ಧಿ ಕಾರ್ಯಕ್ರಮ ಕೈಗೊಳ್ಳಲಾಗುವುದು" ಎಂದು ಹೇಳಿದರು. ಸ್ಥಳೀಯ ಪಂಚಾಯತ್ ಬೋರ್ಡಿನ ಪರವಾಗಿ ಶ್ರೀ ಎಸ್. ಧರ್ಮಸಾಮ್ರಾಜ್ಯರು ಒಂದು ಮನವಿಯನ್ನು ಮಾನ್ಯ ಮಂತ್ರಿಗಳಿಗೆ ಅರ್ಪಿಸಿದರು. ಮಂತ್ರಿಗಳು ಇಲ್ಲಿನ ಕಾರ್ಯಕ್ರಮಗಳನ್ನು ಮುಗಿಸಿ ಮಂಗಳೂರಿಗೆ ಹಿಂತಿರುಗಿದರು. ಅದೇ ದಿನ ಸಂಜೆ ಮಾನ್ಯ ಮಂತ್ರಿಗಳಿಗೆ ಮಂಗಳೂರಿನ ಕುಷ್ಠರೋಗ ನಿವಾರಣಾ ಸಮಿತಿಯ ವತಿಯಿಂದ ಒಂದು ಮನವಿಯು ಅರ್ಪಿಸಲ್ಪಟ್ಟಿತು. ಮದ್ರಾಸು ಸರಕಾರವು ಒಂದು ಕುಷ್ಠರೋಗ ನಿವಾರಣಾ ಆಸ್ಪತ್ರೆಯನ್ನು ತೆರೆಯಬೇಕು. ಇಲ್ಲವೇ ಕುಷ್ಠರೋಗ ನಿವಾರಣಾ ಸಮಿತಿಗೆ ಧನಸಹಾಯ ನೀಡಬೇಕೆಂದು ಸೂಚಿಸಲ್ಪಟ್ಟಿತು.

ಕಾರ್ಕಳದಲ್ಲಿ— ದಿನಾಂಕ ೩೧ರಂದು ಮಾನ್ಯ ಮಂತ್ರಿಗಳು ಕಾರ್ಕಳಕ್ಕೆ ಆಗಮಿಸಿ, ಸ್ಥಳೀಯ ಕಮ್ಯುನಿಟಿ ಪ್ರಾಜೆಕ್ಟ್ ಕ್ಷೇತ್ರ ಹಾಗೂ ಪಂಚಾಯತ್ ಕ್ಷೇತ್ರದೊಳಗಿರುವ ಶಾಬೆಟ್ಟು ಸಂಕವನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಸ್ಥಳೀಯ ಪಂಚಾಯತ ಬೋರ್ಡಿನ ಪರವಾಗಿ, ಅದರ ಅಧ್ಯಕ್ಷ ಶ್ರೀ. ಹರಿ ಶೆಣೈಯವರು ಮಂತ್ರಿಗಳಿಗೆ ಮನವಿಯೊಂದನ್ನರ್ಪಿಸಿದರು. ಮಾನ್ಯ ಮಂತ್ರಿಗಳು ಅದಕ್ಕುತ್ತರ ವೀಯುತ್ತಾ "ದ. ಕ. ಮತ್ತು ಮಲಬಾರು ಜಿಲ್ಲೆಗಳಲ್ಲಿ ಕ್ಷಯರೋಗ ನಿರೋಧ ಬಗ್ಗೆ ಬಿ. ಸಿ. ಜಿ. ದಾಕಿನ ಪ್ರಯೋಗವನ್ನು ಸರಕಾರವು ಬೇಗನೆ ಕೈಗೊಳ್ಳಲಿದೆ. ಜಿಲ್ಲೆಯಲ್ಲಿ ಪ್ರತಿ ತಾಲೂಕು ಕೇಂದ್ರ ಲೋಕಲ್ ಫಂಡ್ ಆಸ್ಪತ್ರೆಗಳನ್ನು ಸರಕಾರದವರು ತಮ್ಮ ವಶ ತೆಗೆದುಕೊಂಡಿರುತ್ತಾರೆ. ಕಮ್ಯುನಿಟಿ ಪ್ರಾಜೆಕ್ಟಿನ ಆಶ್ರಯದಲ್ಲಿ ಕಾರ್ಕಳದ ಆಸ್ಪತ್ರೆಯನ್ನು ಆರೋಗ್ಯ ಕೇಂದ್ರವಾಗಿ ತೆಗೆದುಕೊಳ್ಳಲಾಗಿದೆ. ನುಸಿ ಬಾಧೆ, ಆನೆ ಕಾಲು ರೋಗ ನಿರೋಧಗಳ ಬಗ್ಗೆ ಪಂಚಾಯತಿಗೆ ಸಹಾಯ ನೀಡಲು ಸಾಧ್ಯವಿಲ್ಲ. ಏಕೆಂದರೆ ಎಲ್ಲಾ ಕೆಲಸಗಳನ್ನೂ ಒಮ್ಮೆಯೇ ಮಾಡುವುದು, ಅಥವಾ ಒಮ್ಮೆಯೇ ಎಲ್ಲಾ ಸಹಾಯಗಳನ್ನು ನೀಡುವುದು ಸಾಧ್ಯವಾಗುವ ಮಾತಲ್ಲ" ಎಂದರು. ಶ್ರೀ. ಶೆಟ್ಟರು ಕಾರ್ಕಳ ಪಂಚಾಯತಿನ ಕಾರ್ಯಗಳನ್ನು ಪ್ರಶಂಸಿಸಿದರು.

ಸಭೆಯ ಅಧ್ಯಕ್ಷಸ್ಥಾನವನ್ನು ಶ್ರೀ ಕೆ. ಪಿ. ಮುಕುಂದ ಪ್ರಭುಗಳು ವಹಿಸಿದ್ದರು. ಸಭಾರಂಭದಲ್ಲಿ ಪ್ರಾರ್ಥನೆ, ಸ್ವಾಗತ ಭಾಷಣಗಳಾದುವು. ಮನವಿಯು ಅರ್ಪಿಸಲ್ಪಟ್ಟಿತು. ನಂತರ ಸಂಕವನ್ನು ಮಂತ್ರಿಗಳು ಉದ್ಘಾಟಿಸಿದರು. ಕಾರ್ಕಳದ ವಕೀಲರಾದ ಶ್ರೀ ಕಾಬೆಟ್ಟು ವೆಂಕಪ್ಪ ಹೆಗ್ಡೆಯರು ಸಂಕವನ್ನು ಇಷ್ಟು ಬೇಗ ಪೂರ್ತಿಗೊಳಿಸಿದ ಕಂಟ್ರಾಕ್ಟುದಾರರನ್ನು ಅಭಿನಂದಿಸಿದರು. ಪಂಚಾಯತ್ ಬೋರ್ಡಿನ ಉಪಾಧ್ಯಕ್ಷರಾದ ಡಾ। ಎನ್. ಮೋಹನ್‌ದಾಸ ಅಡ್ಯಂತಾಯರ ಧನ್ಯವಾದದೊಡನೆ ಸಭಾಂತ್ಯವಾಯಿತು. ಬಳಿಕ ಮಂತ್ರಿಗಳು ಇಲ್ಲಿಂದ ಕುಂದಾಪುರಕ್ಕೆ ತೆರಳಿದರು

ಕಡೇಶ್ವಾಲ್ಯ:—ಸ್ಥಳೀಯ ಪಂಚಾಯತ್ ಬೋರ್ಡು ಶಾಲಾ ವರ್ಧಂತ್ಯುತ್ಸವವು ದಿನಾಂಕ ೨೩ರಂದು ಶ್ರೀ. ಎಚ್. ನರಸಿಂಹ, ಕಮ್ಯೂನಿಟಿ ಪ್ರಾಜೆಕ್ಟ್ ಆಫೀಸರ್., ಇವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ಭುಜಂಗ ಶೆಟ್ಟರು ವರದಿಯನ್ನೊಪ್ಪಿಸಿದರು. ಅಧ್ಯಕ್ಷರ ಭಾಷಣ, ನಾಟಕಾಭಿನಯಗಳಿಂದ ಸಭಾಂತ್ಯವಾಯಿತು.

ಕಾಲ್ತೋಡು—ಸ್ಥಳೀಯ ಪಂಚಾಯತ್ ಬೋರ್ಡಿನ ಚುನಾವಣೆಯು ದಿನಾಂಕ ೧೪ರಂದು ಜರಗಿ ಶ್ರೀ ಕೆ. ಮಹಾಬಲ ಶೆಟ್ಟರು ಅಧ್ಯಕ್ಷರಾಗಿಯೂ, ಶ್ರೀ ಮೂಡೂರುನವರು ಉಪಾಧ್ಯಕ್ಷರಾಗಿಯೂ ಶ್ರೀಗಳಾದ ಅಲ್ವಾಡಿ ಶೇಷ ಶೆಟ್ಟಿ, ಕೃಷ್ಣ ಶೆಟ್ಟಿ, ಬಿ. ಚಂದ್ರಯ್ಯ ಶೆಟ್ಟಿ, ಚಿಕ್ಕ, ಬೋಳಿ, ಯಂ. ಬುದ್ಧಿವಂತರವರು ಮೆಂಬರರಾಗಿಯೂ ಅವಿರೋಧವಾಗಿ ಆರಿಸಿ ಬಂದಿರುತ್ತಾರೆ.

ಚೇರ್ಕಾಡಿ—ಸ್ಥಳೀಯ ಶಾರದಾ ಎಲಿಮೆಂಟರಿ ಶಾಲೆಯಲ್ಲಿ ದಿನಾಂಕ ೨೦ರಂದು ಜರಗಿದ ವಿದ್ಯಾ ಪ್ರಸಾರಕ ಮಂಡಲದ ಮಹಾಸಭೆಯಲ್ಲಿ, ಮುಂದಿನ ಮೂರು ವರುಷಗಳ ವರೇಗೆ ಶ್ರೀ ಎಸ್. ಆರ್. ಪಾಟ್ರರರು ಅಧ್ಯಕ್ಷರಾಗಿ, ಶ್ರೀ ಆರ್. ವಿ. ಶರುಳೇಕರ ಮತ್ತು ಪಿ. ಕೃಷ್ಣಯ ಪಾಟೀಲರು ಉಪಾಧ್ಯಕ್ಷರಾಗಿ, ಎನ್. ಡಿ. ಸಾಮಂತರು ಕೋಶಾಧಿಕಾರಿಯಾಗಿ, ಎಂ. ಸುಬ್ರಾಯ ಶೆಣೈ, ಮತ್ತು ಎಚ್. ಆರ್. ಪಾಟೀಲ್ ಇವರು ಕಾರ್ಯದರ್ಶಿಗಳಾಗಿ, ಶ್ರೀಧರ ಸಾಮಂತರು ಶಾಲಾ ಲೇಖಕರಾಗಿ ಆರಿಸಲ್ಪಟ್ಟರು.

ಹಾವಂಜೆ— ಸ್ಥಳೀಯ ಪಂಚಾಯತ್ ಬೋರ್ಡಿನ ಚುನಾವಣೆಯು ದಿನಾಂಕ ೧೩ರಂದು ಜರಗಿ, ಶ್ರೀಗಳಾದ ಭಾಸ್ಕರ ಹೆಗ್ಡೆ ಅಧ್ಯಕ್ಷರಾಗಿಯೂ, ಎಚ್. ಮಹಾಬಲ ಶೆಟ್ಟಿ, ಶೀನಪ್ಪ ಶೆಟ್ಟಿ, ವೆಂಕಟಕೃಷ್ಣ ಭಟ್, ಸದಾಶಿವ ಶೆಟ್ಟಿ, ವೆಂಕಟೇಶ ರಾವ್, ಮುಂಜ (ರಿಜರ್ವ್) ಇವರು ಮೆಂಬರರಾಗಿಯೂ ಅವಿರೋಧವಾಗಿ ಆರಿಸಿ ಬಂದಿರುತ್ತಾರೆ.

ಉದ್ಯಾವರ— ದಿನಾಂಕ ೨೭ರಂದು ಉದ್ಯಾವರ ಮಂಗಳಪೇಟೆಯಲ್ಲಿ ಪ್ರಜಾ ಸೋಶಲಿಸ್ಟ್ ಪಾರ್ಟಿಯ ಒಂದು ಸಭೆಯು ಶ್ರೀ. ಯು. ನರಸಿಂಹ ಕಾಮತರ ಅಧ್ಯಕ್ಷತೆಯಲ್ಲಿ ಜರಗಿ, ಶ್ರೀಗಳಾದ ವಿ. ಶ್ರೀನಿವಾಸ ಶೆಟ್ಟಿ, ಎಂ. ಜಿ. ಹೆಗ್ಡೆ, ಮು. ರಾಜು ಇವರ ಭಾಷಣಗಳಾದುವು. ಅಧ್ಯಕ್ಷರಭಾಷಣಾನಂತರ ಶ್ರೀ ಬಿ. ಯಸ್. ಲೂವಿಸರು ಧನ್ಯವಾದವಿತ್ತರು.

ಕಾರ್ಕಳ— ದಿ। ಸಕ್ರೆ ಮುದ್ದಣ್ಣ ನಾಯ್ಕರ ಪುತ್ರಿ ಸೌ।ಸುಮಿತ್ರಳನ್ನು ಪಣಿಯೂರು ಅಚ್ಚಣ್ಣ ಶೆಟ್ರ ಪುತ್ರ ಶ್ರೀ. ವೈ. ರಾಘು ಶೆಟ್ಟರು ತಾ. 27—5—54ರಂದು ಜೈಹಿಂದ್ ಟಾಕೀಸಿನಲ್ಲಿ ವಿಜೃಂಭಣೆಯಿಂದ ವಿವಾಹವಾದರು.

ಕಾಸರಗೋಡು—ಮದ್ರಾಸು ಪ್ರಾಂತದ ರಾಷ್ಟ್ರೀಯ ವಿಸ್ತರಣಾ ಯೋಜನೆ, ಕೃಷಿ ಹಾಗೂ ಸಮಾಜ ವಿಕಾಸ ಮಂತ್ರಿಗಳಾದ ಶ್ರೀ ಎಂ. ಭಕ್ತವತ್ಸಲಂರವರು ದಿನಾಂಕ ೨೧ರಂದು ಕಾಸರಗೋಡಿಗೆ ಆಗಮಿಸಿದರು. ಮಂಜೇಶ್ವರ ಹಾಗೂ ಸುಳ್ಯ ಬ್ಲಾಕಿನಲ್ಲಿ ನಡೆದ ಅಭಿವೃದ್ಧಿ ಕಾರ್ಯಗಳ ವರದಿಗಳನ್ನು ಸುಳ್ಯ ಮತ್ತು ಮಂಜೇಶ್ವರ ಬ್ಲಾಕು ಡೆವಲಪ್‌ಮೆಂಟ್ ಆಫಿಸರರುಗಳಾದ ಶ್ರೀ ಕೆ. ಎಂ. ಬಾಬು ಶೆಟ್ಟಿ ಹಾಗೂ ಶ್ರೀ ಬಿ. ಸಂಕಪ್ಪನವರು ಒಪ್ಪಿಸಿದರು.

ರೈತರಿಗೆ ಕೃಷಿ ಯೋಜನೆ ಇತ್ಯಾದಿಗಳ ಬಗ್ಗೆ ಕೊಡುವ ಸಾಲಗಳಬಗ್ಗೆ ಕಳೆದವರುಷ ಮಂಜೂರಾದ ಹಣ ಬರುವಾಗ ತಡವಾದುದರಿಂದ ಕೆಲವು ತೊಡಕುಗಳಾದುವೆಂದು ಜಿಲ್ಲಾ ಕಲೆಕ್ಟರ್ ಶ್ರೀ ಎ. ಮಹಾಲಿಂಗ ಚೆಟ್ಟಿಯಾರರು ತಿಳಿಸಿದರು. ನೀಲೇಶ್ವರಕ್ಕೆ ಪ್ರತ್ಯೇಕ ಕೃಷಿ ಡೆಮೊನ್‌ಸ್ಟ್ರೇಟರ್ ಮತ್ತು ಡಿಪೋ ಬೇಕು, ಮಲೆನಾಡು ಪ್ರದೇಶವಾದ ಸುಳ್ಯದಲ್ಲಿ ಸಾರಿಗೆಗೆ ಹೆಚ್ಚು ಗಮನ ಕೊಡಬೇಕು, ಬೆಳ್ಳಾರೆಗೆ ಓರ್ವ ಡಾಕ್ಟರರು ಬೇಕು, ಸುಬ್ರಹ್ಮಣ್ಯಕ್ಕೆ ಸರ್ವ ಋತುಗಳಲ್ಲೂ ಹೋಗಲು ಅನುಕೂಲವಾಗುವಂತೆ ಮಾರ್ಗ ಬೇಕು, ಯೋಜನಾ ಪ್ರದೇಶಗಳಲ್ಲಿ ಸಂಪು ಸೆಟ್ಟು, ಚಿಕ್ಕ ನೀರಾವರಿ ಅಣೆಕಟ್ಟು, ನೀರು ಸರಬರಾಯಿ ಯೋಜನೆ, ಗೃಹನಿರ್ಮಾಣ ಯೋಜನೆ ಮೊದಲಾದ ಹಲವಾರು ಯೋಜನೆಗಳ ಕುರಿತು ಚರ್ಚೆ ನಡೆಯಿತು. ಮಂತ್ರಿಗಳು ಪ್ರಶ್ನೆಗಳಿಗೆ ಉತ್ತರವಿತ್ತರು.

(ಉತ್ತಮ ಸಾರಸ್ವತ ಬ್ರಾಹ್ಮಣರ ಅಡಿಗೆ, ಶುಚಿ ರುಚಿಯಾದ ರೈಸ್‌ಪ್ಲೇಟ್)
ರುಚಿಕರವಾದ ಊಟ— ಹವೇಶೀರ್ (Airy) ವಸತಿ,
ಎರಡು ಊಟ ಕೋಟ್ (Cot) ಇತ್ಯಾದಿ ಸೌಕರ್ಯ.
ತಿಂಗಳೊಂದರ ರೂ. 52/- ಮಾತ್ರ.
ವಿಶೇಷ ಮಾಹಿತಿಗೆ ಪ್ರತ್ಯಕ್ಷ ವಿಚಾರಿಸಿ.

ಸದ್ಗುರು ಬೋರ್ಡಿಂಗ್ ಎಂಡ್ ಲೋಜಿಂಗ್

ಓಂದ್‌ವಾತಾ ಸಿನೇಮದ ಸಮೀಪ, ದಾದರ್, ಮುಂಬಯಿ ೧೪.
ವ್ಯವಸ್ಥಾಪಕ: ವಿ. ಯಸ್. ಪ್ರಭು.

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಗ್ರಿಗಳೂ ರಖಂಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.
ಕಲ್ಮಂಜೆ ವ್ಯಾಸಾಚಾರ್ಯ
ರಥಬೀದಿ ಉಡುಪಿ.

ಪಾತ್ರಿ ಚಿನ್ನದ ನೆಕ್‌ಲೇಸ್ ತರಹವಾರು ಚೈನುಗಳು, ಬೆಂಡೋಲೆ,
ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು
ಯಾವಾಗಲೂ ಸಿದ್ಧವಿವೆ.
ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,

ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.
ಫೋನು ನಂಬ್ರ 66

ನಡಿಯುವ ಚಿತ್ರ:

ನನ್ನೆ-ಮುನ್ನೆ

ಬೇಬಿ ಶಕುಂತಲಾ, ರಾಜನೇನೆ, ಸುಲೋಚನಾ ಮೊದಲಾದವರು.
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ಸಿರೀಕ್ಷಿಸಿರಿ: ಸೌಭಾಗ್ಯಲಕ್ಷ್ಮಿ (ಕನ್ನಡ), ದೇವಕನ್ನಿಕಾ (ಕನ್ನಡ)
ಧರ್ಮದೇವತ, ಪ್ರಿಯಸಖಿ, ರಾಜಲಕ್ಷ್ಮಿ (ಕನ್ನಡ)

(೩ನೇ ಪುಟದಿಂದ)

ಶಿಕ್ಷಣದ ಕಾರ್ಯಕ್ರಮ; ಕುಡಿಯುವ ನೀರಿನ ವ್ಯವಸ್ಥೆ, ಕೆರೆ ಕಾಲುವೆಗಳ ಉಪಯೋಗ — ಇತ್ಯಾದಿಗಳನ್ನು ಗ್ರಾಮ ಪಂಚಾಯತು ಲಕ್ಷಿಸಬೇಕಾಗುವುದು. ಹಾಗೆಯೇ ಚಿಕ್ಕ ಪುಟ್ಟ ದಿವಾಣಿ ಹಾಗು ಫೌಜದಾರಿ ಖಟ್ಲೆಗಳನ್ನೂ ಪಂಚಾಯತುಗಳು ನಡೆಸುತ್ತವೆ; ಮತ್ತು ತೀರ್ಪು ಹೇಳುತ್ತವೆ. ಇಲ್ಲಿ ಹೆಚ್ಚಾಗಿ ರಾಜಿಯಿಂದಲೇ ನ್ಯಾಯ ತೀರ್ಮಾನವಾಗುತ್ತದೆ; ನಿರರ್ಥಕ ಕಾಯಿದೆ ಪ್ರಶ್ನೆಗಳಿಗೆ ಇಲ್ಲಿ ಅವಕಾಶವಿರುವುದಿಲ್ಲ. ಆದರೂ ಅನ್ಯಾಯವು ಘಟಿಸಿದೆಯೆಂದು ಕಂಡುಬಂದಲ್ಲಿ ಪಂಚಾಯತುಗಳು ತೀರ್ಪು ಹೇಳಿದ ೬೦ ದಿನಗಳಲ್ಲಿ ಮುನಸೀಫರು ಅಥವಾ ಸಬ್ ಡಿವಿಜನಲ್ ಮೆಜಿಸ್ಟ್ರೇಟರು ಅಂತಹ ತಪ್ಪನ್ನು ಸರಿಪಡಿಸಿ ಪಂಚಾಯತು ಕೊಟ್ಟ ತೀರ್ಮಾನವನ್ನು ರದ್ದುಮಾಡಬಹುದು. ಉತ್ತರ ಪ್ರದೇಶದ ೮೨೩೫ ಪಂಚಾಯತುಗಳು ಕಳೆದ ವರ್ಷದ ಪ್ರಥಮಾರ್ಧದಲ್ಲಿ ಹತ್ತು ಲಕ್ಷ ತಂಟೆ ತಕರಾರುಗಳನ್ನು ತೀರ್ಮಾನಿಸಿದವೆಂದರೆ, ಗ್ರಾಮಸ್ಥರಿಗೆ ಪಂಚಾಯತುಗಳು ಸಲ್ಲಿಸುವ ಸೇವೆಯ ಕಲ್ಪನೆಯಾದೀತು. ಸುಗಮವಾಗಿ ಆಡಳಿತವನ್ನು ಕೈಗೊಂಡು ಹೋಗುವುದಕ್ಕೂ ಕಲ್ಯಾಣಪ್ರದ ಯೋಜನೆಗಳನ್ನು ಕಾರ್ಯಾನ್ವಿತಗೊಳಿಸುವುದಕ್ಕೂ ಅನುಕೂಲವಾಗುವಂತೆ, ಗ್ರಾಮ ಪಂಚಾಯತುಗಳಿಗೆ ಆದಾಯದ ಮಾರ್ಗವನ್ನೂ ಸರಕಾರ ಕಲ್ಪಿಸಿರುತ್ತದೆ—ಭೂಕಂದಾಯದಲ್ಲಿ ಒಂದಂಶವನ್ನು ತೆರುವ ಅನುಕರಣೀಯ ಪದ್ಧತಿಯನ್ನು ಮುಂಬಯಿ, ಮದ್ರಾಸು ಮುಂತಾದ ಸರಕಾರಗಳು ಅನುಸರಿಸುತ್ತವೆ. ಮನೆ ತೆರಿಗೆ, ವೃತ್ತಿ ತೆರಿಗೆ, ವಾಹನ ತೆರಿಗೆ, ದಂಡದಿಂದ ಬಂದ ಹಣ ಲೈಸೆನ್ಸ್ ಫೀ ಮುಂತಾದವುಗಳೂ ಸರಕಾರದ ಸಹಾಯವೂ ಗ್ರಾಮ ಪಂಚಾಯತುಗಳಿಗೆ ಆರ್ಥಿಕ ಬಲವನ್ನು ಒದಗಿಸುತ್ತವೆ.

ಶ್ರಮಯಜ್ಞಕ್ಕೆ ಮಹತ್ವ

ಪ್ರತಿಯೊಂದು ಹಳ್ಳಿಯಲ್ಲೂ ಪುನಾರಚನೆಯ ಚಟುವಟಿಕೆಗಳು ನಡೆಯಬೇಕೆಂಬ ಹುಮ್ಮಸ್ಸನ್ನು ಪಂಚವಾರ್ಷಿಕ ಯೋಜನೆ ಹುಟ್ಟಿಸಿರುವುದರಿಂದ, ಈ ಕಾಲದಲ್ಲಿ ಗ್ರಾಮ ಪಂಚಾಯತುಗಳು ನಿರ್ವಹಿಸುವ ಕೆಲಸವು ರಾಷ್ಟ್ರದ ಮುಖವನ್ನೇ ಬದಲಾಯಿಸಿ ಬಿಡಬಲ್ಲುದು; ಭಾರತ ಮಾತೆಯ ಕಳೆಗುಂದಿದ ಮುಖಮಂಡಲದಲ್ಲಿ ಗುಲಾಬಿಯ ರಂಗು ಹೊಳೆಯುವಂತೆ ಮಾಡಬಲ್ಲುದು. ಗ್ರಾಮ ಪಂಚಾಯತುಗಳು ಆರ್ಥಿಕ ಪುನಾರಚನೆಯ ಪ್ರಶ್ನೆಯನ್ನು ಯಶಸ್ವಿಯಾಗಿ ಬಿಡಿಸುವ ಕೇಂದ್ರ ಸ್ಥಾನಗಳಾಗಬೇಕೆಂದು ಸರಕಾರವು ಹಾರೈಸುತ್ತದೆ. ಗ್ರಾಮ ಪಂಚಾಯತುಗಳ ಉತ್ಸಾಹೀ ಸದಸ್ಯರು ಹಳ್ಳಿಯ ಎಲ್ಲ ಪ್ರಾಯ ಪ್ರಬುದ್ಧರ ಸಹಕಾರವನ್ನು ಪಡೆದು ವಿಧಾಯಕ ಚಟುವಟಿಕೆಗಳನ್ನು ಸಂಘಟಿಸಬೇಕೆಂದು ಯೋಜನಾ ಆಯೋಗ ಅಪೇಕ್ಷಿಸುತ್ತದೆ. ಈ ದಿಸೆಯಲ್ಲಿ ಪ್ರಗತಿಗೆ ದ್ರವ್ಯಾಭಾವವು ಆತಂಕವಾಗಬಾರದೆಂಬ ಉದ್ದೇಶದಿಂದ, ಪಂಚಾಯತುಗಳ ಕಾಯಿದೆಯು ತನ್ನ ಅಧಿಕಾರದಲ್ಲಿರುವ ಸಶಕ್ತ ಪ್ರೌಢರೆಲ್ಲರಿಂದ ಶ್ರಮರೂಪದ ಕರವನ್ನು ಬೇಡಲು ಪಂಚಾಯತುಗಳಿಗೆ ಅಧಿಕಾರವನ್ನು ಕೊಡುತ್ತದೆ. ಪಂಜಾಬಿನಲ್ಲಿ ವರ್ಷಕ್ಕೆ ೪೮ ತಾಸಿನ, ಒಡಿಸಾದಲ್ಲಿ ನಾಲ್ಕು ದಿನದ, ಮಧ್ಯಪ್ರದೇಶದಲ್ಲಿ ೧೫ ದಿನಗಳ, ಅಸಾಮದಲ್ಲಿ ೩೬ ದಿನದ ದುಡಿಮೆಯನ್ನು ಗ್ರಾಮ ಪಂಚಾಯತುಗಳು ಹಳ್ಳಿಗರಿಂದ ಕಡ್ಡಾಯವಾಗಿ ಪಡೆಯಬಲ್ಲವು. ಇದರಿಂದ ಗ್ರಾಮ ಪುನರುಜ್ಜೀವನ ಕಾರ್ಯದಲ್ಲಿ ಪ್ರತ್ಯಕ್ಷ ಪ್ರಯೋಜನ ದೊರಕುವುದಲ್ಲದೆ, ಹಳ್ಳಿಯಲ್ಲಿ ಸಾಮೂಹಿಕ ಪ್ರಯತ್ನದ ಮನೋಭಾವವನ್ನೂ ರೂಪಿಸಿದಂತಾಗುತ್ತದೆ. ಉತ್ತರ ಪ್ರದೇಶದಲ್ಲಿ ಇಂತಹ ಶ್ರಮದಾನದಿಂದ ಅಲ್ಪಾವಧಿಯಲ್ಲಿಯೇ ೫೦೦೦ ಮೈಲು ಗ್ರಾಮಾಂತರ ರಸ್ತೆಗಳನ್ನೂ ಗುಂಡಿಕೆರೆಗಳನ್ನೂ ದುರಸ್ತಿ ಮಾಡಲಾಯಿತು; ೪೩೦ ಹೊಸ ಕೆರೆಗಳು ತೋಡಲಾದವು; ೩೫೪ ಪಂಚಾಯತು ಭವನಗಳು ನಿರ್ಮಾಣಗೊಂಡವು ೮೩೦೦ ಗೊಬ್ಬರದ ಹೊಂಡಗಳು ಅಗೆಯಲಾದವು— ಇಷ್ಟು ಕೆಲಸದ ಒಟ್ಟು ಮೌಲ್ಯ ಒಂದು ಕೋಟಿ ರೂಪಾಯಿಯಾಗುತ್ತದೆ. ಹಣವಿಲ್ಲದ ಬಡವರು ಶ್ರಮದಾನದ ಮೂಲಕವೇ ಇಷ್ಟು ಸಂಪತ್ತನ್ನು ಹುಟ್ಟಿಸಿಕೊಂಡರು! ನಮ್ಮ ಸಮಾಜ ವಿಕಾಸ ಯೋಜನೆಗಳೂ ರಾಷ್ಟ್ರೀಯ ವಿಸ್ತರಣಾ ಕಾರ್ಯಕ್ರಮಗಳೂ ಹಳ್ಳಿಗರಲ್ಲಿ ಉತ್ಸಾಹದ ವಾತಾವರಣವನ್ನು ಉಂಟುಮಾಡುತ್ತವೆ. ಗ್ರಾಮ ಪಂಚಾಯತುಗಳು ಈ ಉತ್ಸಾಹಕ್ಕೆ ಒಂದು ಸ್ವರೂಪವನ್ನೊದಗಿಸುವ ಕೇಂದ್ರಗಳಾಗಬೇಕು. ಗ್ರಾಮ ಸೇವಕರನ್ನು ಇಲ್ಲಿ ತರಬೇತುಗೊಳಿಸಿ, ಪ್ರತ್ಯಕ್ಷ ಕಾರ್ಯಕ್ಷೇತ್ರದಲ್ಲಿ ಪ್ರಚಾರ ಮಾಡಗೊಡಬೇಕು. ಈಚೆಗೆ ಭೂ ಸುಧಾರಣೆಯ ಕ್ರಮಗಳಿಂದಾಗಿ ಹಳ್ಳಿಯಲ್ಲಿ ರೈತರ ಮತ್ತು ಕೃಷಿಯ ಮಜೂರರ ಪರಿಸ್ಥಿತಿಯು ಸುಧಾರಿಸ ತೊಡಗಿರುವುದು — ಗ್ರಾಮ ಪಂಚಾಯತುಗಳ ಬೆಳವಣಿಗೆಗೆ ಇದೊಂದು ಉತ್ತೇಜನೆ. ಮುಂದಿನ ಪಂಚವಾರ್ಷಿಕ ಯೋಜನೆಯಲ್ಲಿ ಹಳ್ಳಿಯೇ ಮೂಲ ಘಟಕವಾಗುವ ಲಕ್ಷಣವಿರುವುದನ್ನು ಕಂಡ ಬಳಿಕವಂತೂ ಗ್ರಾಮ ಪಂಚಾಯತುಗಳ ಉಪಯುಕ್ತತೆ ಇನ್ನಷ್ಟು ಸ್ಪಷ್ಟವಾಗುತ್ತದೆ. ಅವುಗಳ ಬೆಳವಣಿಗೆಯ ಆವಶ್ಯಕತೆ ಮನವಟ್ಟಾಗುತ್ತದೆ.

(ಸಂಕಲಿತ)

ಋತುಸ್ರಾವ ನಿಂತಿತು

"ಕುಮಾರಿ" ಬಿಲ್ಲೆಗಳನ್ನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು, ಹತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು. ಯಾವ ಬಾಧಕವೂ ಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ- ಬೆಲೆ: ರೂ. 3/-; ಸ್ಪೆಶ್ಯಲ್ ರೂ. 5-. ಅಧಿಕಾಧಿಕ ಸ್ಪೆಶ್ಯಲ್ ರೂ. 8-[ವಿ. ಪಿ. ಹನ್ನೆರಡಾಣೆ ಪ್ರತ್ಯೇಕ]

Mrs. P. DEVEE, P.DS.(N.J.)
CALCUTTA. 40
ಸ್ಟಾಕಿಸ್ಟರು: ಶಹಾಕಂಪೆನಿ, ಮಂಗಳೂರು.

ಮಂಗಳೂರು

ಸಂಕಗಳು — ಮಂಗಳೂರು - ಉಡುಪಿ ರಸ್ತೆಯಲ್ಲಿರುವ ಪಾವಂಜೆ, ಉದ್ಯಾವರ ಮೂಲ್ಕಿ ಸಂಕಗಳನ್ನು ಕಟ್ಟಲು ತಗಲುವ ಸಂಪೂರ್ಣ ಖರ್ಚು ರೂ. ೩೧.೩ ಲಕ್ಷಕ್ಕೆ ಮಿಕ್ಕದಂತೆ ಕೇಂದ್ರ ಸರಕಾರವು ವಹಿಸಿಕೊಂಡಿದೆ ಎಂದು ತಿಳಿದು ಬರುತ್ತಿದೆ.

ನಿವೃತ್ತಿ — ಜಿಲ್ಲಾ ಕಲೆಕ್ಟರರಾದ ಶ್ರೀ ಎ. ಮಹಾಲಿಂಗಂ ಚೆಟ್ಟಿಯಾರರು ತಮ್ಮ ಹುದ್ದೆಯಿಂದ ನಿವೃತ್ತರಾದುದರಿಂದ ದಿನಾಂಕ ೨೮ರಂದು ಬೆಳಿಗ್ಗೆ ಮೈಲಿಗೆ ತಮ್ಮ ಊರಿಗೆ ತೆರಳಿದರು. ಇವರ ಬದಲಿಗೆ ಹೊಸ ಕಲೆಕ್ಟರರಾಗಿ ಶ್ರೀ ವಿ. ಸೀತಾರಾಮ ಶೇರ್ವೆಯವರು ದಿನಾಂಕ ೨೭ರಂದು ಅಧಿಕಾರ ವಹಿಸಿರುವರು.

ವಾರ್ಷಿಕೋತ್ಸವ — ಸ್ಥಳೀಯ ಫ್ರೆಂಡ್ಸ್ ಆರ್ಟ್ಸ್ ಕ್ಲಬ್ಬಿನ ವಾರ್ಷಿಕೋತ್ಸವವು ದಿನಾಂಕ ೨೩ರಂದು ಶ್ರೀ ಯು. ಪಿ. ಮಲ್ಯರ ಅಧ್ಯಕ್ಷತೆಯಲ್ಲಿ ಜರಗಿತು. ನಾಟಕ, ನೃತ್ಯ ಮೊದಲಾದ ಕಾರ್ಯಕ್ರಮಗಳು ಯಶಸ್ವಿಯಾಗಿ ಜರಗಿದುವು.

ಸ್ಥಳೀಯ ಮಂಜುನಾಥ ಕೃಪಾಪ್ರೋತ್ಸಾಹಿತ ನಾಟಕ ಸಭೆಯ ವಾರ್ಷಿಕೋತ್ಸವವು ಶ್ರೀ ಎನ್. ಎಸ್. ಸುವರ್ಣ, ಎಂ. ಎಲ್. ಎ., ರವರ ಅಧ್ಯಕ್ಷತೆಯಲ್ಲಿ ದಿನಾಂಕ ೨೩ರಂದು ಗಣಪತಿ ಹೈಸ್ಕೂಲಿನ ಶ್ರೀ ಶಾರದಾ ಸದನದಲ್ಲಿ ಜರಗಿತು. ಸ್ವಾಗತ ಭಾಷಣ, ವರದಿ ವಾಚನ, ಸಂದೇಶಗಳು ಓದಲ್ಪಟ್ಟವು.

ವಾರ್ಷಿಕೋತ್ಸವ — ಸ್ಥಳೀಯ ಪೆಂಟ್ಲೆಂಡ್ ಪೇಟಾ ಸ್ಪೋರ್ಟ್ಸ್ ಎಸೋಸಿಯೇಶನ ವಾರ್ಷಿಕೋತ್ಸವವು ಶ್ರೀ ಕೆ. ಉಗ್ಗಪ್ಪ ಶೆಟ್ಟರ ಅಧ್ಯಕ್ಷತೆಯಲ್ಲಿ ದಿನಾಂಕ ೩೦ರಂದು ಜರಗಿತು. ವರದಿವಾಚನ, ಬಹುಮಾನ ವಿತರಣೆ, ಭಾಷಣ, ಅಧ್ಯಕ್ಷರ ಭಾಷಣಗಳು ಜರಗಿದುವು. ಡಾ| ಯು. ಪಿ. ಮಲ್ಯರು ಧನ್ಯವಾದಗಳನ್ನಿತ್ತರು.

ಸಭೆ — ಸ್ಥಳೀಯ ೨, ೩ ಮತ್ತು ೧೫ನೇ ವಾರ್ಡುಗಳ ಪಟ್ಟಣಿಗರ ಸಭೆಯೊಂದು ದಿನಾಂಕ ೨೪ರಂದು ಶ್ರೀ ಕೆ. ಆರ್. ಆಚಾರ್ ರವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಸೇವಕರು ತೆರಿಗೆ ಪುನರ್ವಿಮರ್ಶೆಯಲ್ಲಿ ನಡೆದ ಅಕ್ರಮಗಳ ವಿಚಾರದಲ್ಲೂ, ಡಿ. ಮೋಹನರಾಯರು ವಾರ್ಡುಗಳಲ್ಲಿ ಸಂಘಗಳನ್ನೇರ್ಪಡಿಸುವುದರ ವಿಷಯದಲ್ಲೂ ಭಾಷಣಗಳನ್ನಿತ್ತರು. ಕೆಲವು ನಿರ್ಣಯಗಳಾದ ಬಳಿಕ ಶ್ರೀ ಯಂ. ಪಿ. ಶಾಸ್ತ್ರಿಗಳು ನಿರ್ಣಯಗಳಿಗೆ ತಮ್ಮಿಂದ ಕೂಡಿದ ಸಹಾಯವನ್ನು ನೀಡುವೆನೆಂದು ಆಶ್ವಾಸನೆಯಿತ್ತರು.

ಸಾಮಾನ್ಯ ಸಭೆ — ಮಂಗಳೂರು ನಗರ ಸಭಾ ಸಮಿತಿಯ ಸಾಮಾನ್ಯ ಸಭೆಯೊಂದು ಶ್ರೀ ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ದಿನಾಂಕ ೨೪ರಂದು ಜರಗಿತು. ನಗರದಲ್ಲಿ ತಿದ್ದಿದ ತೆರಿಗೆಯ ಕುರಿತು ಹಿಂದಿನ ಸಭೆಯು ನೇಮಿಸಿದ ಉಪಸಮಿತಿಯ ಸೂಚನೆಗಳು ಸಭೆಯ ಮುಂದಿಡಲ್ಪಟ್ಟಿತು. (೧) ಸ್ವಂತ ಮನೆಗಳಲ್ಲಿರುವವರಿಗೆ ಹೆಚ್ಚಿಸಿದ ತೆರಿಗೆ ಬಿಟ್ಟುಕೊಡಬೇಕು. (೨) ತಿದ್ದಿದ ತೆರಿಗೆಯನ್ನು ಒಂದು ವರ್ಷ ಯಾ ಅರ್ಧವರ್ಷದ ಅನಂತರ ಜಾರಿಗೆ ತರಬೇಕು. (೩) ಪ್ರಥಮ ಶ್ರೇಣಿಯ ಒಬ್ಬ ಅಧಿಕಾರಿಯನ್ನು ನಿಯಮಿಸಿ ತಿದ್ದಿದ ತೆರಿಗೆಯ ವಿರೋಧವಾಗಿ ಬಂದ ಅರ್ಜಿಗಳನ್ನು ಪರಿಶೀಲಿಸಲು ನಿಯಮಿಸಬೇಕು ಎಂಬ ಮೂರು ಸೂಚನೆಗಳು ಅವರಲ್ಲಿದ್ದುವು. ಇವಲ್ಲದೆ ಕೆಲವು ನಿರ್ಣಯಗಳಾದುವು.

ಭರ್ತ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಒಳ್ಳೆ ದಿವ್ಯ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು: ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ- ೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟು ಖರ್ಚು ರೂ. ೦-೧೪-೦

—:ವಿಳಾಸ:—

ಹಾಲಪ್ಪಾ ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

NOTICE is hereby given to all concerned of the following facts and circumstances:-

On 14-11-53, Sri. Madappa Holla of Rayappanmatta, Vadera hobly village of Coondapoor Taluk executed an agreement in my favour underwhich I was to collect certain rents and pronote and decree amounts of which he had already taken a transfer, and I was to pay Rs 5,000/- to him from out of the same in three instalments (commencing from 31st August 1951) stated in the said agreement. In case of my failure to pay any one instalment due under the said agreement, the said agreement was to stand cancelled. On the same day and as a part of the transaction of agency created under the said agreement and by way of security for the due performance of the contract of agency, he took pronote from me of even date for Rs. 5,000/-. No consideration passed under this pronote which refers entirely to the agreement mentioned above. No deed of transfer was executed by the said Sri. V. Madappa Holla to me in respect of the said arrears of rent etc. Moreover the enactment of Madras Ordinance V of 1953 and Act V of 1954 have made it impossible to take any coercive steps against the tenants concernnd for the recovery of the arrears. The performance of the contract has become, thereby, frustrated and impossible. I, therefore, hereby, put an end to the contract of agency contained in the said agreement on the said ground among others. Whatever amounts I could collect was sent by me to the said Sri. V. Madappa Holla by money orders which have been improperly refused by him, and I am not liable to pay any further sums to him The pronote for Rs. 5,000/- executed by me is, therefore, fully unsupported by consideration and I am not liable to pay any amount thereunder to Sri. V Madappa Holla or to his assigns. Notice is hereby given to the public not to take an assignment of the said pronote from Sri. V. Madappa Holla and not to pay any consideration for the same, and if, contrary to this they do so it will be at their own risk and I shall not be liable thereon to them to any extent.

H. Laxminarayanayya.

Coondapoor, 25-5-'54.

ಎಲ್ಲಾ ತರದ ಮಾಹಿತಿಯನ್ನೊಳಗೊಂಡ ಉತ್ತಮ ತರದ

ಮಗ್ಗಿ ಪುಸ್ತಕಗಳು

ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ

1000 ಯಾ 500ಕ್ಕೆ ಅತೀ ರಿಯಾಯತಿ ಇದೆ.

ಉತ್ತಮ ಕಾಗದದ, ದಪ್ಪವಾದ ಹೊರಕವಚದ, ಎಲ್ಲಾ ತರದ

ಎಕ್ಸ್‌ರ್ ಸೈಜ್

ಪುಸ್ತಕಗಳು ದೊರೆಯುತ್ತವೆ.

ನವಯುಗ ಪ್ರೆಸ್, ಉಡುಪಿ. ದ. ಕ.

ಸ್ವೀಕಾರ—ವಿಮರ್ಶೆ

ಆಚಾರ್ಯ ವಿನೋಬಾ ಭಾವೆ—

ಲೇಖಕರು: ಸಾನೆ ಗುರೂಜಿ. ಅನುವಾದಕರು: ನರಸಿಂಹ ದಾಬಡೆ. ಪ್ರಕಾಶಕರು: ಮಿಂಚಿನ ಬಳ್ಳಿ, ಧಾರವಾಡ. ಬೆಲೆ: ೧೦ ಆಣೆ.

ಲೋಕಕ್ಕೆ ಹೊಸ ಭೂದಾನದ ಆಧ್ಯಾತ್ಮಿಕ ಕಲ್ಪನೆಯನ್ನು ಮುಂದಿಟ್ಟ ವಿಭೂತಿ ಪುರುಷ ಆಚಾರ್ಯ ವಿನೋಬಾ: ನಮ್ಮ ಕಾಲದಲ್ಲಿ ಗಾಂಧೀಜಿಯವರ ಬಳಿಕ ಜನತೆಯನ್ನು ಸ್ವಾಭಾವಿಕ ಸತ್ವದ ಆಕರ್ಷಣೆಗೆ ಗುರಿಪಡಿಸಿದ ವ್ಯಕ್ತಿಯೆಂದರೆ ಭಾವೆಯೇ ಸರಿ. ೧೯೫೧ನೇ ಇಸವಿಯನ್ನು ಹಿಂದೆ, ಧೂಳಿಯ ಜೈಲಿನಲ್ಲಿದ್ದಾಗ ಅವರಿಗೆ ಮೊದಲನೆಯ ಸಲ ಭೂದಾನ ಯಜ್ಞದ ವಿಚಾರ ಹೊಳೆಯಿತು. ಸ್ವಾತಂತ್ರ್ಯೋತ್ತರದಲ್ಲಿ ತೆಲಂಗಾಣದಲ್ಲಿ ನಡೆದ ಕಮ್ಯುನಿಸ್ಟ ಚಟುವಟಿಕೆಗಳು ಅವರಿಗೆ ತಮ್ಮ ಕಲ್ಪನೆಯನ್ನು ಕಾರ್ಯರೂಪಕ್ಕೆ ಇಳಿಸಲು ಅಂತಃಸ್ಫೂರ್ತಿಯನ್ನೂ ದೈವೀ ಪ್ರೇರಣೆಯನ್ನೂ ಒದಗಿಸಿದವು. ಇಂದವರು ಭಾರತೀಯ ದಿನಸ್ಸ್ಯ ಅಲ್ಲ—ಜಗತ್ತಿನ ಎಲ್ಲರಿಗೂ ಪ್ರಿಯರಾದವರು. ಜೀವ: ಸತ್ಯ ಅಹಿಂಸೆಗಳ ತಳಹದಿಯಲ್ಲಿ ಹೃದಯ ಪರಿವರ್ತನೆಯನ್ನು ಸಾಧಿಸಿ ಸ್ವಾಮಿ; ಸಂಪದವರೆಡೆಗೆ ಕರೆದೊಯ್ಯುವ ಸೂಕ್ತ ಶ್ರೀ ಕ; ವಿಧಾಯಕ ಕೆಲಸಗಳಲ್ಲಿ ಮುನ್ನಡೆದ ಕರ್ಮಯೋಗಿ. ಅವರ ಹೆಸರು ಪ್ರಥಮವಾಗಿ ಬೆಳಕಿಗೆ ಬಂದದ್ದು ೧೯೪೦ರ ವೈಯುಕ್ತಿಕ ಸತ್ಯಾಗ್ರಹ ಕಾಲದಲ್ಲಿ; ಆಗ ಗಾಂಧೀಜಿಯವರು ವಿನೋಬಾಜಿಗೆ ಪ್ರಥಮ ಸತ್ಯಾಗ್ರಹಿಯ ಗೌರವವನ್ನು ಇತ್ತು, ಭಾರತೀಯರ ಗಮನವನ್ನು ಸೆಳೆದರು. ಈ ಪ್ರಸಂಗ ವಿನೋಬಾರನ್ನು ಕುರಿತು ಭಾರತೀಯ ನಾಗರಿಕರಲ್ಲಿ ಅಸ್ಥೆ ಕುದುರಿಸಿತು. ಅವರ ಕುರಿತು ಹೆಚ್ಚು ಹೆಚ್ಚಾಗಿ ತಿಳಿದುಕೊಳ್ಳಬೇಕೆಂಬ ಲವಲವಿಕೆ ಜನರಲ್ಲಿ ತುಂಬಿಕೊಂಡಾಗ, ದಿವಂಗತ ಸಾನೆ ಗುರೂಜಿಯವರು ಈ ಪುಟ್ಟ ಪುಸ್ತಕವನ್ನು ಬರೆದರು: ಸೇವಾದಲದ ಸೈನಿಕರಿಗೆ ವಿನೋಬಾ ಭಾವೆಯವರ ಜೀವನದ ಇತಿಹಾಸವನ್ನು ಅರುಹಿದರು. ಸಾನೆ ಗುರೂಜಿಯವರ ನಿರೂಪಣೆಯು ಸರಳವಾಗಿದೆ ಆಕರ್ಷಕವಿವೆ; ಮಾತುಗಳು ಲಳಿತವಾಗಿಯೂ ಸುಂದರವಾಗಿಯೂ ಇದ್ದು ರುಚಿಸುತ್ತವೆ; ವಿನೋಬಾಜಿಯ ವ್ಯಕ್ತಿತ್ವಕ್ಕೆ ಕನ್ನಡಿ ಹಿಡಿದಿಟ್ಟಂತಿವೆ, ಅವರ ಬದುಕಿನ ಘಟನೆಗಳ ಚಿತ್ರವು ವರ್ಣಿಸಲ್ಪಟ್ಟಿದೆ. ಓದುಗನ ಕುತೂಹಲವನ್ನು ಕೊನೆಯ ವರೆಗೂ ಕಾಯ್ದು ಹಿಡಿದುಕೊಂಡು ಹೋಗುವ ಈ ಪುಟ್ಟ ಪುಸ್ತಕ ಭಾವೆಯವರ ವಿಚಾರಗಳನ್ನೂ ಸ್ಪಷ್ಟವಾಗಿ ಬಿಂಬಿಸುತ್ತದೆ. ಸಾನೆ ಗುರೂಜಿಯವರು ಈ ಪುಸ್ತಕ ಬರೆದ ಕಾಲದಲ್ಲಿ ಭೂದಾನದ ಆಂದೋಲನವನ್ನು ವಿನೋಬಾಜಿ ಕೈಗೊಂಡಿರಲಿಲ್ಲ. ಕಾರಣ, ಸಂಪಾದಕರಾದ ಬುರ್ಲಿ ಬಿಂದು ಮಾಧವರು ತಾವೇ ಒಂದು ಪ್ರಕರಣವನ್ನು ಜೋಡಿಸಿ, ಪುಸ್ತಕಕ್ಕೆ ಸಮಗ್ರರೂಪವನ್ನು ಕೊಟ್ಟಿರುವರು. ಮೂಲದ ಕನ್ನಡ ಅನುವಾದವನ್ನು ದಾಬಡೆಯವರು ಚೆಲೋದಾಗಿ ಮಾಡಿದ್ದಾರೆ. ಇಷ್ಟು ಚೆನ್ನಾದ ಪುಸ್ತಕ ಶಾಲೆಗಳಲ್ಲಿ ಉಪಪಠ್ಯವಾಗಿ ಇಡಲು ಯೋಗ್ಯವಿದೆ. ಪೇಟೆಯಲ್ಲಂತೂ ಪುಸ್ತಕವು ಜನಪ್ರಿಯವಾಗಿರುವುದಕ್ಕೆ ಕನ್ನಡದಲ್ಲಿ ಇದೀಗ ದ್ವಿತೀಯಾವೃತ್ತಿಯು ಪ್ರಕಟಗೊಂಡಿರುವುದೇ ಪ್ರತ್ಯಕ್ಷ ನಿದರ್ಶನ.

ಭಗವಾನ್ ಬುದ್ಧ—

ಲೇಖಕರು: ಮಂಜೇಶ್ವರ ಗೋವಿಂದ ಪೈ. ಪ್ರಕಾಶಕರು: ತರುಣ ಕಲಾವೃಂದ, ಮಾರ್ಕೆಟ್ ರಸ್ತೆ, ಮಂಗಳೂರು ೧. ಬೆಲೆ: ನಾಲ್ಕಾಣೆ.

ತರುಣ ಕಲಾವೃಂದದ ಬುದ್ಧ ಜಯಂತಿಯ ಸಂದರ್ಭದಲ್ಲಿ ಗೋವಿಂದ ಪೈಗಳು ಮಾಡಿದ ಭಾಷಣ ಈ ಪುಸ್ತಕ ರೂಪದಲ್ಲಿ ಪ್ರಕಟಗೊಂಡಿದೆ—ಹಾಗೆ ಮಾಡುವಾಗ ಕೆಲವು ಲೋಪದೋಷಗಳನ್ನು ತಿದ್ದಿ ಗದ್ಯವನ್ನು ಪರಿಷ್ಕರಿಸ ಬಹುದಾಗಿದ್ದರೂ ಅತ್ತ ಗಮನ ಕೊಡಲಾಗಿಲ್ಲ. ಪರಿಣಾಮದಲ್ಲಿ ಬರೆಹವು ಎಷ್ಟು ಮುದ್ದಾಗಬೇಕಿತ್ತೋ ಆ ಮಟ್ಟಕ್ಕೆ ಬಂದಿಲ್ಲ. ಆದರೂ ಬುದ್ಧನ ಚರಿತ್ರೆ ಮತ್ತು ಅವನು ಬೋಧಿಸಿದ ಧರ್ಮದ ತಿರುಳನ್ನು ಅರಿಯಲು ಈ ಪುಟ್ಟ ಪುಸ್ತಕ ನೆರವಾದೀತು.

ಮಾನಸರೋವರ—

ಲೇಖಕರು: ದಿವಂಗತ ಪ್ರೇಮಚಂದ. ಅನುವಾದಕರು: ಮೇವುಂಡಿ ಮಲ್ಲಾರಿ. ಪ್ರಕಾಶಕರು: ಮಿಂಚಿನ ಬಳ್ಳಿ, ಧಾರವಾಡ. ಬೆಲೆ: ರೂ. ೧—೪—೦.

ಬಂಗಾಲದ ಶರಚ್ಚಂದ್ರರ ತರುವಾಯ ಸಾಹಿತ್ಯ ರಸಿಕರ ಹೃದಯವನ್ನು ತಣಿಸಿದವರು ಪ್ರೇಮಚಂದರೆಂಬ ಮೇವುಂಡಿ ಮಲ್ಲಾರಿಯವರ ಮಾತು ಸತ್ಯ—ಜೀವನವನ್ನು ವಿವಿಧ ದೃಷ್ಟಿಕೋಣದಿಂದ ನೋಡಿ, ಒಳಿತು ಕೆಡುಕುಗಳನ್ನು ವಿಮರ್ಶಿಸಿ, ಆದರ್ಶ ಜೀವನಕ್ಕೆ ಮಿರುಗು ಕೊಡುವ ಧ್ಯೇಯವಾದಿ ಸಾಹಿತ್ಯಿಕರಲ್ಲಿ ಪ್ರೇಮಚಂದರು ಒಬ್ಬರು; ಮತ್ತು ಶ್ರೇಷ್ಠರು. ಇಲ್ಲಿ ಅನುವಾದಗೊಂಡಿರುವ ಏಳು ಕತೆಗಳಲ್ಲೂ ಪ್ರೇಮಚಂದರ ಕಥನ ಕೌಶಲವೂ ಬುದ್ಧಿಯ ಪರಿಪಕ್ವತೆಯೂ ವಿಚಾರಶುದ್ಧತೆಯೂ ಹೃದಯದ ಮಾರ್ದವವೂ ವ್ಯಕ್ತಗೊಂಡು ರಸಾನುಭವವಾಗುತ್ತದೆ. ನ್ಯಾಯವನ್ನು ಎತ್ತಿ ಹಿಡಿಯುವ "ಪಂಚ ಪರಮೇಶ್ವರ" ಎಂಬ ಕತೆಯಂತೂ ಆನಂದ ಭಾಷ್ಪವನ್ನು ಹರಿಸಿ, ಹರಿಸುತ್ತದೆ: ಮುತ್ತೈದೆಗೆ ಕುಂಕುಮದ ಬೊಟ್ಟು ಹಚ್ಚಿದ ಹಾಗೆ ಸಂಗ್ರಹದಲ್ಲಿ ಈ ಕತೆ ಸೇರಿಕೊಂಡಿದೆ. ಕನ್ನಡದ ರಸಿಕರು ಆಸ್ವಾದಿಸಿ ಮೆಚ್ಚಬಹುದಾದ ಸಂಗ್ರಹ ಇದೆಂದು ನಮ್ಮ ಅಭಿಪ್ರಾಯ.

ಮಂದಾರ ಮಾಲೆ—

ಸಂಪಾದಕರು: ಕುಲವರ್ಮ ಬಾಲಕೃಷ್ಣ ಪೆರಡಾಲಕರ್, ಮುಂಡಾಜೆ, ದಕ್ಷಿಣ ಕನ್ನಡ. ಬೆಲೆ: ಒಂದು ರೂಪಾಯಿ.

ಇದು ಹತ್ತು ಸಣ್ಣ ಕತೆಗಳ ಸಂಕಲನ—ಕನ್ನಡ ಸಾಹಿತ್ಯವು ಮುಂದೆ ಬರಬೇಕಾದರೆ "ಸಾಹಿತ್ಯಾಭ್ಯಾಸಿಗಳು ಮೊದಲಿಂದಲೇ ಬೆಳಕಿಗೆ ಬರುವುದು" ಅಗತ್ಯವೆಂಬ ಸಿದ್ಧಾಂತವನ್ನು ಮುಂದಿಟ್ಟುಕೊಂಡು ಈ ಸಂಗ್ರಹ ಪ್ರಕಟಗೊಂಡದ್ದಾಗಿ ಸಂಪಾದಕರ ಮಾತು ಹೇಳುತ್ತದೆ. ಅಂದ ಮೇಲೆ, ಪುಸ್ತಕದ ಯೋಗ್ಯತೆಯನ್ನು ಅಳೆಯುವ ಪ್ರಶ್ನೆಯೇ ಇಲ್ಲಿ ಕಾಣದಾಗುತ್ತದೆ. ಕಥಾವಸ್ತುವಿನ ಆಯ್ಕೆಯಲ್ಲಿ ಇಲ್ಲಿಯ ಕತೆಗಾರರು ಬುದ್ಧಿವಂತಿಕೆಯನ್ನು ತೋರಿಸಿದ್ದರೂ ಅವುಗಳಲ್ಲಿ ವೈವಿಧ್ಯ ಸಾಲದು. ನಮ್ಮ ರೈತರ ಜೀವನದ ಹಿನ್ನೆಲೆಯನ್ನೂ ಧನಿ-ಒಕ್ಕಲುಗಳ ಸಂಬಂಧವನ್ನೂ ಕತೆಗಳಲ್ಲಿ ಬಳಸಿಕೊಂಡಿರುವುದು ಸ್ತುತ್ಯ; ಹಾಗೆಂದು ಯಾವ ಕತೆಯೂ ಸಾಕಷ್ಟು ಪರಿಪುಷ್ಟಿಯನ್ನು ಹೊಂದಿಲ್ಲ. ಪಾತ್ರಚಿತ್ರಣ ಮತ್ತು ನಿರೂಪಣಾ ಕೌಶಲದ ಒರೆಗಲ್ಲಿಗೆ ಹಚ್ಚುವಾಗ ಅವುಗಳು ತೀರ ಅಯಶಸ್ವಿಯಾಗಿವೆಯೆಂದು ಸಿದ್ಧವಾಗುತ್ತದೆ. ವ್ಯಕ್ತಿಚಿತ್ರವನ್ನು ಸ್ಫುಟಗೊಳಿಸುವುದಕ್ಕೂ ಘಟನೆಗಳು ತುಂಬಿ ಬರುವಂತೆ ಮಾಡುವುದಕ್ಕೂ ಅಗತ್ಯವೆನಿಸಿದ ವಿವರಣೆಗಳು ಹಲವು ಸಂದರ್ಭಗಳಲ್ಲಿ ಅಗೋಚರವೆನಿಸಿವೆ; ಅಸ್ಪಷ್ಟವೆಂದು ಕಾಣುತ್ತವೆ. ಶ್ರೀ. ಕಾರಂತರು ಹೇಳಿದಂತೆ, ಇಲ್ಲಿನ ಪ್ರತಿಯೊಂದು ಬರೆಹದಲ್ಲೂ ಹಾದಿತಪ್ಪಿದ್ದು ವ್ಯಕ್ತಗೊಳ್ಳುತ್ತದೆ. ಹೀಗಾಗಿ ಸಾಮಾನ್ಯ ಓದುಗನ ಮನಸ್ಸನ್ನು ಸೆಳೆದು ಹಿಡಿಯುವ ಶಕ್ತಿಯನ್ನು ಕತೆಗಳು ಗಳಿಸಿಲ್ಲ— ಶೈಲಿಯೂ ಕಥನತಂತ್ರವೂ ಬಲಿತು ಪಕ್ವವಾಗುವ ಆವಶ್ಯಕತೆ ಬಹಳಷ್ಟು ಎದ್ದು ಕಾಣುತ್ತದೆ. ಆದುದರಿಂದ ಈ ತರುಣರು, ಮುನ್ನುಡಿಯಲ್ಲಿ ಹಿರಿಯ ಸಾಹಿತಿಗಳಾದ ಕಾರಂತರು ಹೇಳಿರುವ ಅನುಭವದ ಮಾತನ್ನು ಅನುಷ್ಠಾನಕ್ಕೆ ತಂದುಕೊಂಡು ಮುನ್ನಡೆಯಲಿ. ಬರವಣಿಗೆಯಲ್ಲಿ ತೂಕ ಬಾರದೆ ಓದುಗರ ಭಾವನೆ ಕೆರಳದು; ಮನ ಅರಳದು; ಹೃದಯ ಕರಗಿ, ನೀರಾಗಿ, ಹರಿಯದು ಎಂಬುದನ್ನು ಪೆರಡಾಲದ ಈ ಯುವಕರು ಮರೆಯದಿರಲಿ.

ಸರ್ವಜ್ಞ ವಚನಗಳು— ಪ್ರಕಾಶಕರು:- ಉಪಾಧ್ಯಾಯ ಪ್ರಕಟಣಾಲಯ, ಚಿಕ್ಕಪೇಟೆ, ಬೆಂಗಳೂರು ಸಿಟಿ. ⅛ ಕ್ರಾನ್ ಸೈಸಿನ 28 ಪುಟಗಳು. ಬೆಲೆ 6 ಆಣೆ.

ಪುರಂದರದಾಸರ ಕೀರ್ತನೆಗಳು—

ಪ್ರಕಾಶಕರು-ಉಪಾಧ್ಯಾಯ ಪ್ರಕಟಣಾಲಯ, ಚಿಕ್ಕಪೇಟೆ ಬೆಂಗಳೂರು ಸಿಟಿ. ⅛ ಕ್ರಾನ್ ಸೈಸಿನ 30 ಪುಟಗಳು. ಬೆಲೆ 6 ಆಣೆ.

ಮೇಲಿನ ಎರಡೂ ಚಿಕ್ಕ ಪುಸ್ತಕಗಳೂ ಜನಪ್ರಿಯವಾಗಿವೆ ಎಂಬುದಕ್ಕೆ ಅವುಗಳು ಪುನಃ ಮುದ್ರಣ ಗೊಂಡಿರುವುದೇ ಸಾಕ್ಷಿ. ಪ್ರಕಾಶಕರು ಹೊಸ ಆವೃತ್ತಿಯನ್ನು ಆದಷ್ಟು ಚಿತ್ತಾಕರ್ಷಕವಾಗಿ ಹೊರಡಿಸಿರುವುದು ಅಭಿನಂದನೀಯ. ಮುಖಪತ್ರಗಳೂ ಚೆನ್ನಾಗಿವೆ.

ಮುಂಬಯಿಯಲ್ಲಿ ಕನ್ನಡ ವಿದ್ಯಾರ್ಥಿಗಳಿಗೆ ಧರ್ಮಾರ್ಥ ವಿದ್ಯಾಭ್ಯಾಸ

ದಿ ಜವಾಹರಲಾಲ ಧರ್ಮಾರ್ಥ ರಾತ್ರಿ ಶಾಲೆಯು ೧೯೫೦ನೇ ಇಸವಿಯಲ್ಲಿ ಶ್ರೀ ಎಮ್. ಎಸ್. ರಾವರಿಂದ ಸ್ಥಾಪಿಸಲ್ಪಟ್ಟು ಅದೇ ವರ್ಷದಿಂದ ಸರಕಾರದ ಮಾನ್ಯತೆಗೊಂಡು ಕನ್ನಡ ಜನರ ಸೇವೆಯನ್ನು ಮಾಡುತ್ತಿರುವದೆಲ್ಲರಿಗೂ ತಿಳಿದ ವಿಷಯ. ಬರೇ ನಾಲ್ಕು ವರ್ಷ ಪ್ರಾಯದ ಈ ಶಾಲೆಯು ಮುಂಬಯಿ ಸರಕಾರದ ಶಿಕ್ಷಾ ದೇಶದ ಮುಂದಾಳುಗಳಿಂದ ಯೋಗ್ಯ ಶಿಫಾರಸನ್ನೂ ಪಡೆದಿರುವದಲ್ಲದೆ, S. S. C. ಪರೀಕ್ಷೆಯಲ್ಲಿ ಉಚ್ಚ ಪರಿಣಾಮವನ್ನೂ ಗಳಿಸಿರುವದು. ಇಷ್ಟು ವರ್ಷಗಳ ತನಕ ಒಂದು ಸನೇ ತರಗತಿಯಿಂದ S. S. C. ವರೆಗೆ ಧರ್ಮಾರ್ಥ ವಿದ್ಯಾಭ್ಯಾಸ ಸಲ್ಲಿಸುತ್ತಿರುವ ಈ ಶಾಲೆಯು ಈ ವರ್ಷದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸದ ಒಂದನೇ ತರಗತಿಯಿಂದ ನಾಲ್ಕನೇ ತರಗತಿ ವರೆಗೆ ಹೊಸತಾಗಿ ತೆರೆದು ಧರ್ಮಾರ್ಥ ವಿದ್ಯಾಭ್ಯಾಸ ಕೊಡುವರೆ ನಿಶ್ಚಯಿಸಿರುವರು. ಅಲ್ಲದೆ ಈ ಶಾಲೆಯಲ್ಲಿ ಕಲಿತು ಪ್ರಥಮ ಶ್ರೇಣಿಯಲ್ಲಿ ಪಾಸಾದವರಿಗೆ ಕಾಲೇಜು ವಿದ್ಯಾಭ್ಯಾಸದ ಸಲುವಾಗಿ ವರ್ಷಕ್ಕೆ ರೂಪಾಯಿ 250/- ವಿದ್ಯಾರ್ಥಿವೇತನವು ಕೊಡಲಾಗುವದು.

ಪ್ರತಿ ವರ್ಷವೂ ಸಾವಿರಾರು ವಿದ್ಯಾರ್ಥಿಗಳು ಬಂದು ಸ್ಥಳ ದೊರಕದೆ ನಿರಾಶರಾಗಿರುವರು. ಆದಕ್ಕೋಸ್ಕರ ಈ ಸಲ ಹೊಸ ದಿವಿಜನುಗಳ ನಿರ್ಮಾಣಮಾಡಿ ಆದಷ್ಟು ವಿದ್ಯಾರ್ಥಿಗಳಿಗೆ ಸ್ಥಳ ದೊರಕುವ ಏರ್ಪಾಡು ಮಾಡಿರುವರು. ಈ ಶಾಲೆಯಲ್ಲಿ ಸೇರಿ ಧರ್ಮಾರ್ಥ ವಿದ್ಯಾಭ್ಯಾಸ ಪಡೆಯಲಿಚ್ಛಿಸುವವರು ಜೂನು ಏಳು ತಾರೀಕಿನಿಂದ ಪ್ರಿನ್ಸಿಪಾಲರಿಗೆ ಈ ಕೆಳಗಿನ ವಿಳಾಸದಲ್ಲಿ ಸ್ವತಃ ಕಾಣಬೇಕು. ತಡವಾಗಿ ಬಂದು ನಿರಾಶರಾಗಬಾರದು.

M. S. Rao, Hon: Principal,
Javaharlal Free Night HighSchool,
C/o Lord Harris School,
283 Canic Road, Bombay I.

ದಿ ಬೊಂಬೆಲೈಫ್ ಎಶ್ಶೂರೆನ್ಸ್ ಕಂಪೆನಿ ಲಿ., ಬೊಂಬಾಯಿ

1951ನೆ ವರ್ಷದ ವೆಲ್ಯುಯೇಶನ್ ಪ್ರಕಾರ ಉದಾರ ಬೋನಸ್

ಎಂಡೋಮೆಂಟ್ ಪೊಲಿಸಿಗಳ ಮೇಲೆ ರೂ. 10- } ವರ್ಷ ಒಂದರ
ಜೀವಾವಧಿ ಪೊಲಿಸಿಗಳ ಮೇಲೆ ರೂ. 12-8 } ರೂ. 1000ಕ್ಕೆ

(ಪ್ರಚಲಿತ ಪ್ರೀಮಿಯಮ್ ಸ್ಕೇಲಿನಂತೆ)

ಜೀವ ವಿಮೆಗಾಗಲೀ, ಪ್ರಾತಿನಿಧ್ಯಹೊಂದಲಿಕ್ಕಾಗಲೀ
ನಮ್ಮೊಡನೆ ವಿಚಾರಿಸಿದರೆ ಅಪೇಕ್ಷಿತ ಫಲವನ್ನೀಯುವುದು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಚೀಫ್ ಏಜಂಟ್ಸ್, ದಿ ಬೊಂಬೆ ಲೈಫ್ ಎಶ್ಶೂರೆನ್ಸ್ ಕೊ. ಲಿಮಿಟೆಡ್.
ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ, ದ. ಕ.

ಅಥವಾ ಶಾಖಾ ಕಛೇರಿಗಳಲ್ಲಿ: ಮಧುರೆ, ಬೆಂಗಳೂರು, ತ್ರಿವೆಂಡ್ರಮ್, ಕಲ್ಲಿಕೋಟೆ
ಬೊಂಬಾಯಿ, ಮಂಗಳೂರು ಮತ್ತು ಕೊಯಮುತ್ತೂರು

The Bombay Life Assurance Co., Ltd., Bombay.

ನಿಮ್ಮಷ್ಟಕ್ಕೇ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊಂಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಯನ್ನು ಇಂದೇ ತರಿಸಿಕೊಳ್ಳಿರಿ

ಬೆಲೆ:- ಸಾಧಾರಣ ಪ್ರತಿ— ರೂ. ೧—೮—೦. (ಟಪ್ಪಾಲು ಖರ್ಚು ಬೇರೆ)
ಉತ್ತಮ ಪ್ರತಿ — ರೂ. ೨—೦—೦. (ಟಪ್ಪಾಲು ಖರ್ಚು ಬೇರೆ)

ದೊರಕುವ ಸ್ಥಳಗಳು:-- 1) ನವಭಾರತ ಪುಸ್ತಕ ಭಂಡಾರ, ಉಡುಪಿ, ದ ಕ.
2) ನವಯುಗ ಪ್ರೆಸ್, ಉಡುಪಿ, ದ. ಕ.

In the Court of the District Munsif of Udipi.

O. P. No. 77/1954.

Chandayya Shetty and another... Petitioners.

To whomsoever it is concerned.

Please take notice that the petitioners have applied for a succession certificate to be issued in favour of the 1st Petitioner, as ejaman of his family, for realising, transferring or otherwise dealing with the assets of his deceased son Late Raghava Shetty whose life was assured on 19—9—1945 under Policy No. 116413 in The Bombay Life Assurance Co. Ltd. and a sum of Rs. 1,036—10—0 is due on that account and the said petition stands posted for hearing on 16—6—1954.

N. Ramachandra Bhat,
Advocate for Petitioners.
Udipi, 31—5—'54.

-ಹೊಸಕೆರೆ ಚಿದಂಬರಯ್ಯನವರ-

ಗೀತೆಯ ಕೈಗನ್ನಡಿ

ಭಗವದ್ಗೀತೆಯ ಸಮೂಲ ಭಾಷಾಂತರ.

ಬೆಲೆ 0-12-0

V. P. P. ಮೂಲಕ 1—4—0

.. ನವಯುಗ ಪ್ರೆಸ್, ಉಡುಪಿ.

[೨ನೇ ಪುಟದಿಂದ]

ಎತ್ತರಿಸಲು ಸಮರ್ಥರಾಗಿದ್ದಾರೆ. ಇದನ್ನು ಕಂಡ ಇತರರೂ ಹೋಚಿ ಮಿನನ ಸೈನ್ಯಕ್ಕೆ ತೆರೆದ ಕೈಗಳಿಂದ ಸ್ವಾಗತ ಬಯಸುತ್ತಾರೆ!

ಪಾಶ್ಚಾತ್ಯರು ಈ ಹೋರಾಟಕ್ಕೆ ಕಮ್ಯೂನಿಸ್ಟರ ಉಪದ್ರವವೆಂಬ ಪಟ್ಟೆಹಚ್ಚಲು ನೋಡುತ್ತಿದ್ದರೂ ಏಶಿಯದ ಜನತೆಯ ದೃಷ್ಟಿಯಲ್ಲಿ ಇದು ಸ್ವಾತಂತ್ರ್ಯದ ಹೋರಾಟ. “ನೀನು ಕಮ್ಯೂನಿಸ್ಟನೋ” ಎಂದು ಹೋಚಿಮಿನನಿಗೆ ಪ್ರಶ್ನೆ ಕೇಳಿದಾಗ ಅವನು ನಕ್ಕು ನುಡಿದ “ಕಾಂಫ್ಯೂಶಿಯಸನಿಂದ ನಾನು ವ್ಯಕ್ತಿಯ ನೈತಿಕ ಮಟ್ಟವನ್ನು ಕಾಪಾಡಬೇಕೆಂಬ ಮಾತನ್ನು ಕಲಿತೆನು; ಯೇಸುವಿನಿಂದ ಮಾನವತೆಯ ಮಹಾನತೆಯನ್ನರಿತುಕೊಂಡೆನು; ಮಾರ್ಕ್ಸವಾದದಿಂದ ಔದಾರ್ಯದ ತಿರುಳನ್ನು ಗ್ರಹಿಸಿದೆನು; ಸನ್‌ಯಾತ್ ಸೇನನಿಂದ ನೈತಿಕತೆಯ ರಾಷ್ಟ್ರೀಯ ಮುಖದ ಪರಿಚಯವಾಯಿತು.”

ಹೋ ಚಿ ಮಿನ ವೇದಾಂತಿ, ದಾರ್ಶನಿಕ; ಇತಿಹಾಸವನ್ನೂ ಅರ್ಥಶಾಸ್ತ್ರವನ್ನೂ ಆಳವಾಗಿ ಅಭ್ಯಾಸಮಾಡಿದ ಪಂಡಿತ; ಭಾವುಕನಾದ ಸಾಹಿತಿ; ಮತ್ತು ಶುಧ್ಧ ಹೃದಯಿ. ಅವನು ಕೇವಲ ಜನನಾಯಕನಲ್ಲ-ಕ್ರಾಂತಿಯ ಕೊಡಲಿ ಮಸೆಯಲು ಸನ್ನದ್ಧನಾಗಿ ಹೋರಾಡಿದ ಹೋಚಿ ಮಿನನ ಮನಸ್ಸು ಮತ್ತು ತಪಸ್ಸು ಎರಡೂ ದೊಡ್ಡದು.

೧೦

ಚೌ ಎನ್ ಲಾಯ್

ಜಿನೇವಾ ಪರಿಷತ್ತಿನಲ್ಲಿ ಕಾಣಿಸಿಕೊಂಡಿರುವ ಹೊಸ ರಾಜಕಾರಣಿ ಯಾರೆಂದು ಎಲ್ಲರಿಗೂ ಗೊತ್ತು—ಅವನೇ ಚೀನಿ ಪ್ರಜಾರಾಜ್ಯದ ಪ್ರಧಾನ ಮಂತ್ರಿ ಚೌ ಎನ್ ಲಾಯ್. ಅಮೇರಿಕ ಮನ್ನಣೆ ಕೊಡಲಿ, ಬಿಡಲಿ—ಚೀನೀ ಪ್ರಜಾರಾಜ್ಯ ಜಾಗತಿಕ ರಾಜಕೀಯದಲ್ಲಿ ಚಂಚು ಪ್ರವೇಶವನ್ನು ಪ್ರತ್ಯಕ್ಷವಾಗಿಯೇ ಮಾಡಿರುತ್ತದೆ. ಜಗತ್ತಿನ ಆರರಲ್ಲಿ ಒಂದು ಪಾಲು ಪ್ರದೇಶವನ್ನೂ, ಅಲ್ಲಿರುವ ಪ್ರಪಂಚದ ನಾಲ್ಕರಲ್ಲಿ ಒಂದಂಶ ಪ್ರಜೆಗಳನ್ನೂ ಕಡೆಗಣಿಸಿ ಲೋಕ ಶಾಂತಿಯ ಸೋಪಾನ ಕಟ್ಟಲು ಸಾಧ್ಯವಿಲ್ಲೆಂಬ ಸಿದ್ಧಾಂತದ ಗೆಲವೇ ಚೌ ಎನ್ ಲಾಯಿ ಪ್ರವೇಶದ ರಹಸ್ಯ.

ಚೀನದ ಈ ಪ್ರಧಾನ ಮಂತ್ರಿಗೆ ಅಧ್ಯಕ್ಷ ಮಾವೋರಷ್ಟು ಗೌರವಾದರ ಸಲ್ಲುತ್ತಿಲ್ಲವೆಂಬುದು ನಿಜ—ಆದರೆ ದೀರ್ಘಕಾಲದ ಕ್ರಾಂತಿ ಸಂಕಷ್ಟಗಳಿಂದ ಜರ್ಜರಿತರಾದ ಮಾವೋ ಇನ್ನು ಮುಂದೆ ತೆರೆಯ ಹಿಂದಕ್ಕೆ ಸರಿಯುವುದೇ ನಿಶ್ಚಯ. ಆಗ ಇನ್ನೂ ಐವತ್ತೈದರ ಗಡಿಮೀರದ ಸವಿನುಡಿಯ ಸುಂದರ ರಾಜಕಾರಣಿ ಚೌ ಎನ್ ಲಾಯಿಯೇ ಚೀನದ ಪ್ರಥಮ ಮನುಷ್ಯನಾಗುವನು.

ಚೌ ಎನ್ ಲಾಯಿಯನ್ನು ಕಮ್ಯೂನಿಸ್ಟ ರಾಕ್ಷಸನೆಂದು ಕರೆಯಲು ನಮಗೆ ಮನಸ್ಸಾಗುವುದೇ ಇಲ್ಲ! ಅವನು ಶಾಲೆಯಲ್ಲಿದ್ದಾಗ ನಾಟಕಗಳಲ್ಲಿ ಸ್ತ್ರೀ ಪಾತ್ರಗಳನ್ನು ಚೊಕ್ಕವಾಗಿ ನಿರ್ವಹಿಸುತ್ತಿದ್ದನೆಂದು ಹೇಳುತ್ತಾರೆ: ಇದನ್ನು ಒಪ್ಪಿಕೊಳ್ಳಬಹುದು; ಏಕೆಂದರೆ ಅಷ್ಟು ಸೌಮ್ಯವಾದ, ಪ್ರಶಾಂತವಾದ, ನಸುನಗುಸೂಸುವ ದುಂಡು ಮುಖ ಚೌಎನ್ ಲಾಯಿಯದ್ದು. ಅವನನ್ನು ಕಂಡರೆ ವಯಸ್ಸನ್ನು ಗೊತ್ತು ಹಚ್ಚಲಾರೆವು; ಮೂವತ್ತೋ ಮೂವತ್ತೈದೋ ಎನ್ನಬೇಕಾದೀತು!

ಅವನ ಚಲನೆ ಮತ್ತು ನಡವಳಿಕೆಯಲ್ಲಿ ಅಭಿನವ ಮಾಧುರ್ಯ ಕಂಡು ಬರುತ್ತದೆ. ಚಿಯಾಂಗ ಕೈಶೇಕರು ಸಹ ಚೌ ಎನ್‌ಲಾಯಿಯನ್ನು ನ್ಯಾಯಶೀಲ ಕಮ್ಯೂನಿಸ್ಟನೆಂದು ಹೇಳಿದ್ದರು. ಮಾತಿನಲ್ಲಿ ರಸಿಕ; ಮತ್ತು ಚಾಣಾಕ್ಷ ಎಂಬ ಪ್ರಶಂಸೆಯೂ ಚೌ ಎನ್ ಲಾಯಿಯ ಪಾಲಿಗೆ ಬಂದಿದೆ. ಈ ನಯವಿನಯಕ್ಕೆ ಅವನ ಕುಲವೇ ಕಾರಣ – ಚೀನೀ ಸಮ್ರಾಟರ ಕಾಲದಲ್ಲಿ ಅವನ ಅಜ್ಜ ಅಧಿಕಾರ ಸ್ಥಾನದಲ್ಲಿದ್ದ ಒಬ್ಬ ವಿದ್ವಾಂಸರಾಗಿದ್ದರು. ಸುಸಂಸ್ಕೃತ ವರ್ಗದಲ್ಲೇ ಚೌಎನ್‌ಲಾಯಿ ಹುಟ್ಟಿ ಬೆಳೆದನು. ಪಾಶ್ಚಾತ್ಯ ಮಾದರಿಯ ಶಿಕ್ಷಣವನ್ನು ಹೊಂದಿದನು.

ನಾಂ ಕೈ ವಿಶ್ವವಿದ್ಯಾನಿಲಯಕ್ಕೆ ಅಭ್ಯಾಸಕ್ಕೋಸ್ಕರ ಬಂದಾಗ, ಚೌಎನ್ ಲಾಯಿಯ ಜೀವನದ ಗತಿಯೇ ಬದಲಾಯಿತು. ಕ್ರಾಂತಿಯ ಹೋರಾಟದೊಡನೆ ಪ್ರಥಮ ಸಂಪರ್ಕವಾದದ್ದು ಇಲ್ಲಿಯೇ: ಪ್ರಥಮ ಮಹಾ ಯುದ್ಧದ ಬಳಿಕ ನಡೆದ ವರ್ಸಾಯಿ ಒಪ್ಪಂದವನ್ನು ಖಂಡಿಸುತ್ತಾ ಚೌ ಜನ ಜಂಗುಳಿಯ ಧುರೀಣತ್ವ ವಹಿಸಿದಾಗ, ಅವನಿಗೆ ಸೆರೆಮನೆಯ ಶಿಕ್ಷೆ ದೊರೆಯಿತು.

ಸೆರೆಮನೆಯನ್ನು ಮಾವನ ಮನೆಯೆಂದು ನಾವು ವ್ಯಂಗ್ಯಮಾಡುತ್ತೇವೆ—ಚೌ ಎನ್ ಲಾಯಿಯ ಮಟ್ಟಿಗೆ ಸೆರೆಮನೆಯ ವಾಸವು ಒಬ್ಬ ತರುಣಿಯ ಪರಿಚಯವನ್ನು ಮಾಡಿಸಿಕೊಟ್ಟಿತು. ತೆಂಗ ಮಿಂಗ ಚಾವ ಎಂಬ ಈ ಯುವತಿಯು ಮುಂದೆ ಚೌ ಎನ್ ಲಾಯಿಯ ಪತ್ನಿಯಾದಳು. ಈಕೆ ಇಂದು ಚೀನದಲ್ಲಿ ಅತ್ಯುನ್ನತವಾದ ಹೊಣೆಗಾರ ಸ್ಥಾನದಲ್ಲಿ ಕೆಲಸಮಾಡುತಿದ್ದಾಳೆ

ಮಾವೋರವರು ದುಡಿದು ಕಲಿಯುವ ಯೋಜನೆಯೊಂದನ್ನು ಮಾಡಿದ್ದರು—ಚೌ ಎನ್ ಲಾಯಿ ಅವರ ಸಂಪರ್ಕವನ್ನು ಬೆಳೆಸಿ ಈ ಯೋಜನೆಯಂತೆ ಫ್ರಾನ್ಸ್ ಮತ್ತು ರಶಿಯಾ ದೇಶಗಳಿಗೆ ಅಧ್ಯಯನಕ್ಕೋಸ್ಕರ ಹೋದನು. ಅಲ್ಲಿ ಕಮ್ಯೂನಿಸ್ಟ ಪಕ್ಷಕ್ಕೆ ಸೇರಿಕೊಂಡನು. ಸ್ವದೇಶಕ್ಕೆ ಮರಳಿದಾಗ ಚಿಯಾಂಗ ಕೈಶೇಕರು ಈ ಬುದ್ಧಿವಂತ ತರುಣನನ್ನು ತಮ್ಮ ಸೈನ್ಯದ ರಾಜಕೀಯ ಅಧಿಕಾರಿಯಾಗಿ ನೇಮಿಸಿಕೊಂಡರು. ಅವನು ಕಮ್ಯೂನಿಸ್ಟನೆಂಬುದು ಅವರಿಗೆ ಹೊಳೆಯಲೇ ಇಲ್ಲ.

ಕಮ್ಯೂನಿಸ್ಟರನ್ನು ವಿರೋಧಿಸುತಿದ್ದ ಚಿಯಾಂಗರಿಗೆ ಈಗ ಚೌ ಎನ್ ಲಾಯಿ ಎದುರುಬಿದ್ದ. ಒಳಸಂಚು ನಡೆಸಿದ; ಇದು ಬಯಲಾಗಲು, ಚಿಯಾಂಗರು ಮರಣದಂಡನೆಯನ್ನು ವಿಧಿಸಿದರು. ಚೌ ಎನ್ ಲಾಯಿ ಆಗ ತಪ್ಪಿಸಿಕೊಂಡು ಓಡಿ ಹೋಗಬೇಕಾಯಿತು. ೮೦ ಸಾವಿರ ಡಾಲರುಗಳ ದೊಡ್ಡ ಮೊತ್ತದ ಬಹುಮಾನ ಸಾರಲಾದರೂ ಚೌ ಎನ್ ಲಾಯಿಯನ್ನು ಪತ್ತೆ ಹಚ್ಚಲು ಯಾರಿಗೂ [illegible]ವಾಗಲಿಲ್ಲ.

ಚೌ ಎನ್ ಲಾಯಿ ಗೆರಿಲ್ಲಾರ ಮಹಾಯಾನದ ಕಂಟಕ ದಿನಗಳಲ್ಲಿ ಮಾವೋರ ಸಂಗಾತಿಯಾಗಿ ಉಳಿದ—ಚಿಯಾಂಗರನ್ನು ಸದೆಬಡಿಯುವ ಹುಮ್ಮಸ್ಸು ಇನ್ನೂ ಆಳಿದಿರಲಿಲ್ಲ. ಚೌ ಎನ್ ಲಾಯಿಯು ಚಮತ್ಕಾರದಿಂದ ವರ್ತಿಸಿ ಚಿಯಾಂಗರನ್ನು ಕೈಸೆರೆ ಹಿಡಿಯುವಷ್ಟು ಮುಂದೆ ಹೋದ—ಆಗ ಸಿಕ್ಕಿಬಿದ್ದ ಚಿಯಾಂಗರನ್ನು ಕಮ್ಯೂನಿಸ್ಟರು ಮುಗಿಸಿ ಬಿಡಬಹುದಾಗಿದ್ದರೂ ಜಪಾನಿ ಆಕ್ರಮಣದ ಭಯದಿಂದ ಹಾಗೆ ಮಾಡಲಿಲ್ಲ.

ಜಪಾನಿನೊಡನೆ ಯುದ್ಧ ಘಟಿಸಿದಾಗ ಚಿಯಾಂಗರು ಕಮ್ಯೂನಿಸ್ಟರನ್ನು ತಮ್ಮ ನೆರವಿಗೆ ಕರೆದುಕೊಂಡರು. ಚೌ ಎನ್ ಲಾಯಿ ಆಗ ಬಡವರ ಕೇರಿಗಳಲ್ಲಿ ತಿರುಗುತ್ತಾ ತನ್ನ ಪಕ್ಷಕ್ಕೆ ಹೆಚ್ಚಿನ ಸೇವೆಯನ್ನು ಸಲ್ಲಿಸಿದ ಪಾಶ್ಚಾತ್ಯ ರಾಜಕಾರಣಿಗಳೊಡನೆಯೂ ಆಗ ಚೌ ಎನ್ ಲಾಯಿಗೆ ಸಂಪರ್ಕವುಂಟಾಯಿತು: ಇವನ ವಾಕ್ಚಾತುರ್ಯಕ್ಕೆ ಮುಗ್ಧರಾದ ಎಲ್ಲರೂ ಚೀನದ ಕಮ್ಯೂನಿಸ್ಟರ ಗುಣ ಸ್ವಭಾವಗಳೇ ಬೇರೆ ಎನ್ನುವಂತಾಯಿತು.

ಚಿಯಾಂಗರ ಪತನಕ್ಕೆ ಚೀನದ ಕಮ್ಯೂನಿಸ್ಟರು ಕೆಟ್ಟವರಲ್ಲ ಎಂಬ ಭಾವನೆಯೇ ಎಡೆಮಾಡಿಕೊಟ್ಟಿತೆನ್ನಬಹುದು-ಪತನದ ಬಳಿಕ ಚೀನೀ ಪ್ರಜಾ ರಾಜ್ಯದಲ್ಲಿ ಕಂಬಾನ್ವಟ ಆರಳಿತು. ಆಗ ಮಾವೋರ ಬಲಗೈ ಬಂಟನಾಗಿ ಚೌಎನ್‌ಲಾಯಿ ಆಡಳಿತ ಸೂತ್ರವನ್ನು ಕೈಗೆ ತೆಗೆದುಕೊಂಡ. “ನಾನು ಕಮ್ಯೂನಿಸ್ಟನೆಂಬುದನ್ನು ನೀವು ಮರೆಯ ತಕ್ಕದ್ದಲ್ಲ” ಎಂದು ಹೇಳುತ್ತಿದ್ದಂತೆಯೇ ಅಮೇರಿಕದ ರಾಜಕಾರಣಿಗಳನ್ನು ತಿವಿಯುವ ಈ ಬುದ್ಧಿವಂತನೇ ಜಿನೇವಾ ಪರಿಷತ್ತಿನ ಆಕರ್ಷಣಾ ಕೇಂದ್ರ.

ಜಾರ್ಜ ಮಲೆಂಕೋವ್

ಕಮ್ಯೂನಿಸ್ಟರ ಕಾಶೀಧಾಮವೆನಿಸಿದ ಮೊಸ್ಕೋದ ಕ್ರೆಮ್ಲಿನದಲ್ಲಿ ಜಾರ್ಜ ಮಲೆಂಕೋವ ಕಳೆದ ಇಪ್ಪತ್ತೈದು ವರ್ಷಗಳಿಂದಲೂ ತನ್ನ ಪ್ರತಿಷ್ಠೆ ಸ್ಥಾಪಿಸಿದ್ದಾನೆ; ಮತ್ತು ಇಂದು ರಶಿಯಾದ ಸರ್ವಾಧಿಕಾರಿಯಾಗಿ ಮೆರೆಯುತ್ತಾನೆ. ಮಲೆಂಕೋವ ತುಂಬ ಕಠೋರ, ನಿಷ್ಠುರ ಹೃದಯದ ಮನುಷ್ಯನೆಂದೂ ಸಲ್ಲುತ್ತದೆ. ಸ್ಟಾಲಿನ್ನರ ಬಳಿಕ ರಶಿಯಾದಲ್ಲಿ ಅಧಿಕಾರಕ್ಕಾಗಿ ಹೋರಾಟ ನಡೆಯುತ್ತಿದೆ ಎನ್ನುವದುಂಟು—ಬೆರಿಯಾನ ಪತನವನ್ನು ಇದಕ್ಕೆ ಉದಾಹರಿಸಲೂಬಹುದು. ಆದರೆ ಬೆರಿಯಾನನ್ನು ಗಲ್ಲಿಗೇರಿಸಿದ ಮಲೆಂಕೋವನ ಎದೆಗಾರಿಕೆ ಕಂಡು ನಾವು ಮೂಕರಾಗುತ್ತೇವೆ

ಮಲೆಂಕೋವನ ಕ್ರೋಧಕ್ಕೆ ಬಿದ್ದವನು ಮತ್ತೆ ಮುಖವೆತ್ತಿಕೊಳ್ಳಲಾರ—ಹಿಂದೊಮ್ಮೆ ಗುಪ್ತ ಪೋಲೀಸ ಪ್ರಮುಖನೊಬ್ಬ “ಸ್ಟಾಲಿನ್ನರ ವಿರುದ್ಧ ನೀವು ಟ್ರಾಟ್‌ಸ್ಕಿಯನ್ನು ಎತ್ತಿಕಟ್ಟಿದ ಗುಟ್ಟು ನನಗೆ ಗೊತ್ತಿದೆ” ಎಂದು ನಗುತ್ತಲೇ ಹೇಳಿದ ಪರಿಣಾಮವಾಗಿ ಸೈಬೇರಿಯಾದಲ್ಲಿ ಜೀವಾವಧಿ ಜೈಲು ವಾಸವನ್ನು ಅವನು ಅನುಭವಿಸಬೇಕಾಯಿತು; ಬಹುಶಃ ಅವನನ್ನು ಕೊಂದು ಮುಗಿಸಿರಲೂ ಸಾಕು!

ಸ್ಟಾಲಿನ್ನರಲ್ಲಿ ಮಲೆಂಕೋವನಿಗೆ ಅನನ್ಯ ಭಕ್ತಿ; ಮತ್ತು ಶ್ರದ್ಧೆ. ಸ್ಥೂಲಕಾಯದ, ಭಾವ ವಿಹೀನ ಮುಖ ಮಂಡಲದ ತನ್ನ ವಯಸ್ಸಿಗಿಂತಲೂ ಹಿರಿಯನಾಗಿ ಕಾಣಿಸುವ ಈ ವ್ಯಕ್ತಿ ಕಮ್ಯೂನಿಸ್ಟ ತತ್ವಗ್ರಂಥಗಳ ಅಭ್ಯಾಸವನ್ನು ಬಹಳವಾಗಿ ಮಾಡಿದ್ದಾನೆ. ಅವನ ಸೂಕ್ಷ್ಮ ಕಣ್ಣುಗಳು ಗ್ರಂಥರಾಶಿಯ ಪ್ರತಿಯೊಂದೂ ಶಬ್ದವನ್ನು ಓದಿದಂತೆ, ಮೆದುಳು ಅವೆಲ್ಲವನ್ನೂ ಗ್ರಹಿಸಿಕೊಂಡು, ಬೇಕೆನಿಸಿದಾಗ ನೆನಪಿಗೆ ತಂದುಕೊಡುತ್ತದೆ

ದುಡಿದು ಸೋಲುವ ವ್ಯಕ್ತಿ ಮಲೆಂಕೋವನಲ್ಲ— ನಿತ್ಯವೂ ಹದಿನೆಂಟು ತಾಸು ಕಾಲ ಕಮ್ಯೂನಿಸ್ಟ ಪಕ್ಷದ ವ್ಯವಹಾರಗಳನ್ನು, ತಥ್ಯಗಳನ್ನು, ಹೆಸರುಗಳನ್ನು, ಅಂಕೆ—ಸಂಖ್ಯೆಗಳನ್ನು, ಲೆನಿನ್ — ಸ್ಟಾಲಿನ್ನರ ಕೃತಿಗಳನ್ನು ಅಭ್ಯಸಿಸುತ್ತಿದ್ದರೂ ದಣಿವೆಂಬುದವನಿಗೆ ತಿಳಿಯದು. ಅವನ ತಲೆಯಲ್ಲಿ ಎಲ್ಲ ವಿವರವೂ ಉಳಿಯುತ್ತದೆ—ಸ್ಟಾಲಿನ್ನರ ಕೃತಿಗಳಿಂದ ದೀರ್ಘವಾದ ಪರಿಚ್ಛೇದಗಳನ್ನು ಬಾಯ್ದೆರೆಯಾಗಿಯೇ ಉದಾಹರಿಸುವ, ಅವುಗಳ ಪುಟಗಳನ್ನು ಹೇಳುವ ಈ ಜಾದೂಗಾರಿಕೆಯನ್ನು ಯಾರಾದರೂ ಮೆಚ್ಚಬೇಕು.

ಸ್ಟಾಲಿನ್ನರೊಡನೆ ಪ್ರಥಮ ಸಂಪರ್ಕಕ್ಕೆ ಬಂದಾಗ ಮಲೆಂಕೋವ ಅಗ್ನಿಪರೀಕ್ಷೆಯನ್ನೇ ಇದಿರಿಸಬೇಕಾಯಿತು—ಅದರಲ್ಲಿ ಯಶಸ್ವಿಯಾಗಿ ಉತ್ತೀರ್ಣಹೊಂದಿ “ಇವನಂತೂ ಪ್ರಚಂಡ” ಎಂಬ ಪ್ರಶಂಸೆಯನ್ನು ಮಲೆಂಕೋವ ಪಡೆದ. ಏಕಕಾಲದಲ್ಲಿ ಆಗಬ್ಯುರೋದ ನಾನ್ನೂ ಶಾಖೆಯ ಮುಖ್ಯಸ್ಥನ [illegible] ಸಮಿತಿಯ ಮಾಸ್ಕೋ ಶಾಖೆಯ ದಿಗ್ದರ್ಶಕನೂ ಸ್ಟಾಲಿನ್ನರ ಆಪ್ತ ಕಾರ್ಯದರ್ಶಿಯೂ ಆದಾಗ ಭಾಷಣ

(ಹಿಂದಿನ ಪುಟ ನೋಡಿರಿ)

ಬೇಂಕಿನ ಬೆಳವಣಿಗೆ

	1933	1943	1953
ಅಧಿಕೃತ ಭಂಡವಾಳ	5,00,000	5,00,000	20,00,000
ತೆತ್ತ ಭಂಡವಾಳ	12,000	1,90,000	9,00,000
ಕ್ಷೇಮನಿಧಿ	—	12,000	2,00,000
ಒಟ್ಟು ವಹಿವಾಟು	77,000	15,60,000	60,30,000

ಕಾಲಾವಧಿ ಠೇವಣಾತಿ— 3 ತಿಂಗಳಿಗೆ 3½% ಬಡ್ಡಿ.

ಕಾಯಂ ಠೇವಣಾತಿ— 1 ತಿಂಗಳಿಂದ 24 ತಿಂಗಳ ವಾಯಿದೆ ವರೆಗೆ ಸ್ವೀಕರಿಸಲ್ಪಡುವುವು. 24 ತಿಂಗಳಿಗೆ=3¾% ಬಡ್ಡಿ.

ರೂಪಾಯಿ ಹತ್ತು ಸಾವಿರದ, ಮೇಲಿನ ಠೇವಣಾತಿಗೆ 4% ಬಡ್ಡಿ ಕೊಡಲಾಗುವುದು.

ರೂಪಾಯಿ ಐವತ್ತು ಸಾವಿರದ, ಮೇಲಿನ ಠೇವಣಾತಿಗೆ 4½% ಬಡ್ಡಿ ಕೊಡಲಾಗುವುದು.

ವಿಜಯ ಕ್ಯಾಶ್ ಸರ್ಟಿಫಿಕೇಟು— ಮೂರು ವರುಷದ ಅವಧಿ = 4½% ಬಡ್ಡಿ.

ಸಾಲ ಸವಲತ್ತುಗಳಿಗೆ ಬೇಕಾದ ಅನುಕೂಲತೆಗಳನ್ನು ವಿಳಂಬವಿಲ್ಲದೆ ಒದಗಿಸಲಾಗುವುದು.

ಹೆಚ್ಚಿನ ಮಾಹಿತಿಗೆ ನಿಮ್ಮ ಸಮೀಪದ ನಮ್ಮ ಏಜಂಟರೊಡನೆ ವಿಚಾರಿಸಿರಿ. ಜಿಲ್ಲೆಯ 10 ಕೇಂದ್ರಗಳಲ್ಲಿಯೂ, ಮಡಿಕೇರಿ ಮತ್ತು ಮುಂಬಾಯಿಯಲ್ಲಿಯೂ ನಮ್ಮ [illegible]ಗಳಿರುತ್ತವೆ.

ಸ್ಥಾಪನೆ: 1931 **ದಿ ವಿಜಯ ಬ್ಯಾಂಕ್ ಲಿಮಿಟೆಡ್** ಪ್ರಧಾನ ಕಛೇರಿ ಮಂಗಳೂರು 3.

(೧ನೇ ಪುಟದಿಂದ)

ತುಂಬ ಹೊಗಳಿದರು; ಮತ್ತು ನಮ್ಮ ಶಾಸನಗೆ ಮಾಡಬೇಕಾದ ಬದಲಾವಣೆಗಳ ತಿದ್ದುಪಡಿಗಳ ವಿಷಯದಲ್ಲಿ ಸಲಹೆ ಕೇಳಿದ ಭಾರತ ಸರಕಾರದ ಮುಂದೆ ಬಿರುದು ಬಾವಲಿ ಕೊಡುವ ಸಂಪ್ರದಾಯವನ್ನು ಮರಳಿ ತೊಡಗುವ ಸೂಚನೆಯನ್ನಿಡಲು ತಾವು ಬಯಸುವುದಾಗಿ ಹೇಳಿದರು ಇದೆ ಕ್ಕೇಶ್ವರ ಶಾಸನಸಭಾ ಸದಸ್ಯರ ಸಭೆಯೊಂದು ನಮ್ಮವೇ ಜರಗಿಸಲ್ಪಡುವುದಾಗಿಯೂ ಅವರು ತಿಳಿಸಿದರು. ಯಾವ ಉಚ್ಚ ಆದರ್ಶವನ್ನು ಇಟ್ಟುಕೊಂಡು ರಾಜ್ಯ ಘಟನೆಯಲ್ಲಿ ಬಿರುದು ಬಾವಲಿಗಳನ್ನು ನಿಷೇಧಿಸಲಾಯಿತೋ ಅವುಗಳಿಗೆ ತಿಲಾಂಜಲಿ ಕೊಡಲು ನಮ್ಮ ಕನ್ನಡದ ಪ್ರಭೃತಿಗಳು ಆಲೋಚಿಸುತ್ತಿದ್ದಾರೆ — ಇದು ದುರ್ದೈವ.

ರಾಜ ಮಹಾರಾಜರ ಕಾಲ ಸಂದು ಹೋಗಿದೆ; ಮತ್ತು ಜನತೆಯ ಅಧಿಕಾರ ನಡೆಯುತ್ತಿದೆ ಎಂಬುವನ್ನು ಧುರೀಣರಾದವರು ಮನಗಾಣಲೇ ಬೇಕು—ಹಿಂದೆ ಗವರ್ನರ್, ನಿಜಾಮ ಮುಂತಾದವರು ಮಾರ್ಗದಲ್ಲಿ ಹೊರಟರೆ, ಅಲ್ಲಿ ತಾಸುಗಟ್ಟಳೆ ಕಾಲ, ಜನಸಂಚಾರ ನಿಲ್ಲಿಸಲ್ಪಡುತ್ತಿತ್ತು. ಮಾರ್ಗಗಳು ಮುಚ್ಚಲ್ಪಡುತ್ತಿದ್ದವು ಈಗ ಜನತೆಯದೇ ಮೇಲ್ಮೈ. ಮೊನ್ನೆ ಹೈದರಾಬಾದಿನ ನಿಜಾಮರು ಅಧಜಲಗಂಡಕ್ಕೆ ಕಾರಿನಲ್ಲಿ ಹೊರಟು ನಿಂತಿದ್ದಾಗ, ಅವರು ನಡುವೆ ೧೫ ನಿಮಿಷಗಳ ಕಾಲ ಕಾರು ನಿಲ್ಲಿಸಬೇಕಾಯಿತು ಎದುರಿನಿಂದ ಅಂತಾರಾಷ್ಟ್ರೀಯ ಆರ್ಯ ಪರಿಷತ್ತಿನ ಮೆರವಣಿಗೆ ಬರುತ್ತಿದ್ದುದೇ ಇದಕ್ಕೆ ಕಾರಣ. ಜೀಪ್ ಕಾರಿನ ಸ್ಟೀಲ್ ಅಣಿಗೊಳಿಸಿದ ಪೀಠದಲ್ಲಿ ಪರಿಷತ್ತಿನ ಅಧ್ಯಕ್ಷರೇ ಮುಂತಾದವರು ಕುಳಿತು ಸಾಗುತ್ತಿದ್ದರು. ಮೆರವಣಿಗೆ ಹಾದು ಹೋದ ಬಳಿಕವೇ ನಿಜಾಮರ ಕಾರು ಮುಂದೋಡಿತು.

ಈ ವಾರ ಕೆಲವು ವಿಶೇಷ ಮಾದರಿಯ ವಾರ್ತೆಗಳು ಕೇಳಲು ದೊರೆತಿವೆ— ನ್ಯಾಯಸ್ಥಾನದಲ್ಲಿ ಸೊಲೊಮನನನ್ನು ನೆನಪಿಗೆ ತರಿಸುವ ಎಂಬೊಂದು ಮೊಕದ್ದಮೆ. ಒಂದು ಮಗುವಿಗಾಗಿ ಜಗಳಾಡಿದ ಇಬ್ಬರು ಹೆಂಗಸರ ಪ್ರಸಂಗವನ್ನು ಒಳ್ಳೆ ಜಾಣ್ಮೆಯಿಂದ ತೀರ್ಮಾನಿಸಿದ ಕೀರ್ತಿ ಸೊಲೊಮನನಿಗೆ ಸಲ್ಲುವುದು. ನಿಜವಾದ ತಾಯಿ ಮಗುವನ್ನು ಎರಡು ಹೋಳು ಮಾಡುವ ತೀರ್ಪನ್ನು ಕೇಳಿ ಎದೆಯೊಡೆಯಿತು! ಇದೇ ನ್ಯಾಯ ನಿರ್ಣಯಕ್ಕೆ ತಳಹದಿಯಾಯಿತು. ಬ್ರಿಟನ್ ದೇಶದ ಬಾರ್ಟಲೋನ ಎಂಬಲ್ಲಿಯ ಮೆಜಿಸ್ಟ್ರೇಟರ ಮುಂದೆ ನಡೆದ ವ್ಯವಹಾರವೊಂದು ಇದೇ ಪ್ರಕಾರ ಆಶ್ಚರ್ಯಕರ ರೀತಿಯಲ್ಲಿ ತೀರ್ಮಾನವಾಯಿತು. ಕಳೆದು ಹೋದ ಆಡಿನ ಕುರಿತು ಇಬ್ಬರು ಭದ್ರ ಮನುಷ್ಯರು ತನ್ನದು ತನ್ನದೆಂದು ಜಗಳಾಡುತ್ತಿದ್ದರು. ಮೆಜಿಸ್ಟ್ರೇಟರು ಕೋರ್ಟಿನ ಮುಂದೆ ಆಡನ್ನು ಹಾಜರುಪಡಿಸಲು ಹೇಳಿದರು. ಆಗ ಆಡು ನೇರಾಗಿ ತನ್ನ ಪ್ರೀತಿಯ ಯಜಮಾನನ ಬಳಿಗೆ ಓಡಿ ಹೋಗಿ, ಅವನ ಕೈಯನ್ನು ನೆಕ್ಕತೊಡಗಿತು. ಅವನಿಗೇ ಆಡನ್ನು ಬಿಟ್ಟುಗೊಡಲಾಯಿತು.

ಇದೊಂದು ಸಂಗತಿ ನಡೆದ ಪ್ರಸಂಗದಲ್ಲಿ ಪತ್ರಿಕಾ ನೇನೆಸಿಕೊಳ್ಳುತ್ತದೆ— ಆಫ್ರಿಕಾದ ಜಂಗಲ್ ಒಂದರ ಹತ್ತಿರದ ಗುಡ್ಡದ ಮೇಲೆ ಹುಲಿಯೊಂದು ಅರ್ಭಟಿಸುವುದನ್ನು ಕೇಳಿದ. ಆತನು ತನ್ನ ಇಬ್ಬರು ಸ್ನೇಹಿತರನ್ನು ಕರೆಸಲೆಂದು ಹೊಡೆಯ ಮರೆಯಲ್ಲಿ ಅವಿತ. ಹುಲಿ ಯೊಂದು ಅರ್ಭಟಿಸಿದ—ಸ್ನೇಹಿತರು ಹುಲಿಯೇ ಬೊಬ್ಬಿಡುತ್ತದೆಂದು ರಂಗಾಲಾಗಿ, ಕೈಯಲ್ಲಿದ್ದ ಕೋವಿಯಿಂದ ಗುಂಡಿಸೆದರು. ಆಹಮ್ಮದ ಹುಲಿಯಂತೆಯೇ ಪ್ರಾಣ ಬಿಟ್ಟು ಸ್ವರ್ಗವನ್ನು ಸೇರಿದ'

ಭಾರತೀಯರಿಗೆ ಮಹಾತ್ಮಾ ಗಾಂಧೀಜಿಯವರು ಸತ್ಯಾಗ್ರಹದ ಮೂಲಕ ಪ್ರತಿಭಟನೆಯನ್ನು ಪ್ರಕಟಿಸುವ ಅಪೂರ್ವ ಪಾಠವನ್ನು ಕಲಿಸಿಕೊಟ್ಟರು— ಆದರೆ ಪಾಶ್ಚಾತ್ಯ ಸಂಸ್ಕೃತಿಗೊಪ್ಪುವ ಮಾದರಿಯೊಂದು ಈಚೆಗೆ ಬ್ರಿಟಿಷ್ ಕೊಲಂಬಿಯಾದಲ್ಲಿ ಪ್ರದರ್ಶಿಸಲ್ಪಟ್ಟಿತು. ತಮ್ಮ ಮಕ್ಕಳಿಗೆ ಶಾಲೆಗಳಲ್ಲಿ ಸೈನಿಕ ಶಿಕ್ಷಣವನ್ನು ಕೊಡಲಾಗದೆಂದು ಪ್ರತಿವಾದಿಸ.ತಿದ್ದ ಮಹಿಳಾಮಣಿಯರು ಬಹಿರಂಗವಾಗಿ ಬಟ್ಟೆಯನ್ನು ಕಳಚಿಹಾಕಿ ಬತ್ತಲೆಯಾಗಿ ಅಧಿಕಾರಿಗಳ ಮುಂದೆ ಹೋಗಿನಿಂತು ತಮ್ಮ ವಿರೋಧವನ್ನು ತೋರಿಸತೊಡಗಿರುವರು! ಮಕ್ಕಳನ್ನು ಶಾಲೆಗೆ ಕಳಿಸಿಕೊಡಬೇಕೆಂಬ ಆಜ್ಞೆಯನ್ನು ಓದುತ್ತಿದ್ದ ಮೆಕ್ ಇಂಡೋಕರಿಂಬ ಅಧಿಕಾರಿಯು ಮೇಲೆ ಈ ನಗ್ನ ಸ್ತ್ರೀಯರ ತಂಡವು ಪ್ರಚಂಡ ದಾಳಿಯನ್ನು ನಡೆಸಿ, ಅವರ ಬಟ್ಟೆಗಳನ್ನು ಹರಿದು, ಮೈಯನ್ನು ಪರಚಿ, ಕೇಳಿ ಹಾಕಿದರು. ಕೊನೆಗೆ ಇಂಡೋವರು ಸೈನ್ಯದ ವೈಗಾವಲಿನಲ್ಲಿ ಸರಕಾರದ ಆಜ್ಞೆಯನ್ನು ಹೇಗಾದರೂ ಓದಿ ಮುಗಿಸಿದರು. ಓ ದೇವರೇ, ಲೋಕದಲ್ಲಿ ಹೊಸ ಹೊಸ ಉಪಾಯಗಳನ್ನು ಹುಡುಕುವ ಮನುಷ್ಯನ ಸಂಶೋಧಕ ಬುದ್ಧಿಯನ್ನು ನೀನು ಎಷ್ಟು ತೀಕ್ಷ್ಣವಾಗಿಟ್ಟಿದ್ದೀಯಾ! ನಗ್ನ ಸ್ತ್ರೀಯ ಧೈರ್ಯಕ್ಕೆ ಧನ್ಯವಾದಗಳು!

— ಕಾರ್ತಿಕೇಯ.

(೧೧ನೇ ಪುಟದಿಂದ)

ಗಳನ್ನು ಬರೆದು ಕೊಡುವಾತನೂ ಆಗಿ ಮೆಲೆಂಕೋವ ಕೆಲಸ ಮಾಡಿದ.

ಈ ಅವಧಿಯಲ್ಲಿ ಶ್ರಮದ ಪರಿಣಾಮವಾಗಿ ಪ್ರತಿಯೊಂದೂ ವಿಷಯದ ಒಳಗುಟ್ಟು ಮೆಲೆಂಕೋವನಿಗೆ ಪರಿಚಿತವಾಯಿತು; ಬೇರದ ಜೀವನವನ್ನು ರೂಪಿಸುವ ಕೇಂದ್ರ ಸ್ಥಾನದಲ್ಲಿ ಕುಳಿತು ಅವಿಶ್ರಾಂತ ಕಾರ್ಯದಲ್ಲಿ ಮಗ್ನನಾಗಿ, ಎಲ್ಲವನ್ನೂ ಅವನು ತಿಳಿದು ಕೊಂಡ. ಸ್ಟಾಲಿನ್ನ ಸಾಯುವ ವರೆಗೆ ಕಮ್ಯುನಿಸ್ಟ ಪಕ್ಷದ ಕಾರ್ಯದರ್ಶಿ ಪದವಿಯನ್ನು ಜತನದಿಂದ ಸಂಭಾಳಿಸಿ ಕೊಂಡ ಮೆಲೆಂಕೋವ, ಒಡನೆಯೇ ಪ್ರಧಾನ ಮಂತ್ರಿ ಸ್ಥಾನವನ್ನು ಏರಿದ.

ಇನ್ನೂ ವರೆಗೆ ಮೆಲೆಂಕೋವನ ಸ್ಥಾನ ಭದ್ರವಾಗಿಲ್ಲ ಎನ್ನುವವರು ಇದ್ದಾರೆ- ಈಗ ಕಮ್ಯುನಿಸ್ಟ ಪಕ್ಷದ ಕಾರ್ಯದರ್ಶಿಯಾಗಿರುವ ಸಿಕೀಟಾಕ್ರುಶ್ಚೇವನಿಗೂ ಮೆಲೆಂಕೋವನಿಗೂ ಅಭಿಪ್ರಾಯ ಭೇದವಿದೆಯಾಗಿ ಪಾಶ್ಚಾತ್ಯರು ಹೇಳುತ್ತಾರೆ. ಈ ಕ್ರುಶ್ಚೇವ ಬೇರೆ ಯಾರೂ ಅಲ್ಲ---ಮೆಲೆಂಕೋವನ ಭಾವನೇ ಆತ. ಮೆಲೆಂಕೋವನ ಹೆಂಡತಿ ಯೇಲೀನಾಳ ಸಹೋದರನೇ ಕ್ರುಶ್ಚೇವ.

ಮೆಲೆಂಕೋವ ಮೇಲಕ್ಕೆ ಬಂದದ್ದು ಹೆಂಡಂದಿರ ದೆಸೆಯಿಂದಲೇ — ಅವನ ಮೊದಲನೇ ಹೆಂಡತಿ ಲೀರಾ ಮೊಲೊಟೋವ, ಬೆರಿಯಾ ಮುಂತಾದ ಕಮ್ಯುನಿಸ್ಟ ಪ್ರಭೃತಿಗಳೊಂದಿಗೆ ಸಂಪರ್ಕವಿಟ್ಟುಕೊಂಡಿದ್ದಳು. ಮೆಲೆಂಕೋವ ತಾಂತ್ರಿಕ ಶಿಕ್ಷಣವನ್ನು ಹೊಂದುತ್ತಿದ್ದ ಇಪ್ಪತ್ತರ ವಯಸ್ಸಿನಲ್ಲಿ ಇಪ್ಪತ್ತೆಂಟರ ಲೀರಾಳನ್ನು ಮದುವೆಯಾದ—ಟಾಕುವಿನ ಒಂದು ಸಂಸ್ಥೆಯಲ್ಲಿ ಇಂಜಿನಿಯರಿಂಗ ಕೆಲಸಕ್ಕೆ ಸೇರಬೇಕೆಂದಿದ್ದ ಈತನನ್ನು ಹೆಂಡತಿಯೇ ರಾಜಕಾರಣಕ್ಕೆ ಎಳೆದಳು; ಮತ್ತು ಉತ್ಕರ್ಷದ ಒಂದೊಂದೇ ಮೆಟ್ಟಲನ್ನು ಏರಿಸಿದಳು.

ಆದರೂ ತನ್ನ ಗುರು ಸ್ಟಾಲಿನ್ನರ ವ್ಯಕ್ತಿತ್ವದ ಪ್ರಭೆಯ ಮೆಲೆಂಕೋವ ಕಣ್ಣ ದಂತಾಗಿದ್ದ ಅವನು ಶೃಂಗಾರ ಮಾಡಿಕೊಳ್ಳುತ್ತಿರಲಿಲ್ಲ; ಮುಖಗಂಟು ಹಾಕಿಕೊಂಡೇ ಇರುವ ತ; ಮಡದಿರನ್ನೆಯೊಡನೆಯೂ ಸರ್ಕಸ್ಗೆ ಎಡೆ ಕೊಡುವವನಲ್ಲ. ಉಣ್ಣುವುದರಲ್ಲಿ, ಕುಡಿಯುವುದರಲ್ಲ ವಿಶಿ ತಪ್ಪಿದವನಲ್ಲ. ಹೀಗಾಗಿ ಜನ ಮೆಚ್ಚುವಂಥ ವಿಶೇಷ ಅವನಲ್ಲಿ ಏನೂ ಇರಲಿಲ್ಲ ಅವನು ಮುಂದೆ ಬರುವುದಕ್ಕೆ ಜನಪ್ರಿಯಳಾದ ಹೆಂಡತಿಯೊಬ್ಬಳು ಬೇಕಾಯಿತು- ಗ್ರಾರ್ಜಿಯದಲ್ಲಿ ಅವನು ಲೀರಾಳನ್ನು ತ್ಯಜಿಸಿ ನರ್ತಕಿ ಯೆಲೀನಳನ್ನು ಮದುವೆಯಾದ.

ಕಮ್ಯುನಿಸ್ಟ ವರ್ತುಲದಲ್ಲಿ ಯೆಲೀನಾಳ ಪರಿಚಯ ಅಸಾಧಾರಣವಾಗಿಯೇ ಇದೆ —ಸ್ಟಾಲಿನ್ನರು ಅವಳನ್ನು ತನ್ನ ಪ್ರೀತಿಯ ಗಾಯಕಿ ಎಂದು ಕರೆದಿದ್ದರು; ಕಮ್ಯುನಿಸ್ಟ ಪಕ್ಷದ ನಿಷ್ಠಾವಂತ ಸದಸ್ಯಳೆಂದೂ ಹೊಗಳಿದ್ದರು.. ಹೀಗೆ ಇಬ್ಬರು ಹೆಂಡಂದಿರ ನೆರವಿನಿಂದ ಮೆಲೆಂಕೋವ ರಾಜಕಾರಣ ಪಟುವೆನಿಸುವಂತಾಯಿತು.

ಕಮ್ಯುನಿಸ್ಟನಾದವರಿಗೆ ಶ್ರೀಮಂತ ಕುಲದಲ್ಲಿ ಹುಟ್ಟಿದವನೆಂಬ ಅಭಿಮಾನವಿರುವುದು ಅಷ್ಟು ಒಳ್ಳೆಯದಲ್ಲ—ಆದರೆ ಮೆಲೆಂಕೋವನಿಗೆ ಜಾರ ಅರಸರ ಕಾಲದಲ್ಲಿ ಬಿರುದು ಬಾವಲಿಗಳನ್ನು ಪಡೆದ ತನ್ನ ಅಜ್ಜಯನ್ನು ಸ್ಮರಿಸದೆ, ಆ ಕುಲದ ಬಗ್ಗೆ ಅಭಿಮಾನ ಹೊಂದದೆ ಇರಲಾಗುವುದಿಲ್ಲ. ಹೀಗಿದ್ದರೂ ಕಮ್ಯುನಿಸ್ಟನಾದ ಕರ್ಮಕ್ಕೆ ವ್ಯಕ್ತಿಯ ಯೋಗ್ಯತೆಯನ್ನು ಮೆಚ್ಚಬೇಕು, ಹೊರತು ಅಜ್ಜಂದಿರ ಕುಲಗೋತ್ರ ಕೇಳುತ್ತಿರುವುದಲ್ಲ ಎಂದಾತ ಹೇಳಿದಿಲ್ಲ.

O. 21. R. 16 ವ O. 21 R. 22ರ ಮೇರೆಗೆ ನೋಟೀಸು.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. S. 322/1942. R. E. P. 891/1953.

ಅಕರ್ಳ ಅಬ್ಬುಬಕರ್ ಪ್ರೊಡೆಯರ್ ಸಾಹೇಬ — ಅರ್ಜಿದಾರ್ರು.

ಇದಿನಬ್ಬ ಯಾನೆ ಮೈದಿನ್ ಬ್ಯಾರಿ ಸಾಹೇಬ — ಎದ್ರಿರು.

ಅಮುಲ್ಯಾರಿಯು 2ನೇ ಎದ್ರಿ ಮಂಗ್ಳೂರು ತಾಲ್ಲೂಕು ಕಾಪ್ಪ ಮುಡೂರು ಗ್ರಾಮದ ಬಾಂಬಿಲ ಎಂಬಲ್ಲಿರುವ ಅಬ್ದುಲ್ ರಹಿಮಾನ್ ಬ್ಯಾರಿರ ಮಗ ಸ್ಯಾರಿ ಬ್ಯಾರಿಯವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ,

ವೇಣೂರು ಕೃಷ್ಣಯ್ಯನವರು ವಾದಿರಾಗಿ ನೀವು ವಗೈರೆರ ಮೇಲೆ ದಾಖ್ಲು ಮಾಡಿದ ಈ ಕೋರ್ಟಿನ ಕ್ರಮ ನಂಬ್ರ 322/12ನೇ ದಾವೆಯಲ್ಲಾದ ಡಿಕ್ರಿಯ ಸ್ವಲ್ಪ ಹಕ್ಕನ್ನು 1ನೇ ಅರ್ಜಿದಾರ ಅಕರ್ಳ ಅಬ್ಬುಬಕರ್ ಪ್ರೊಡೆಯರರು ವೇಣೂರು ಕೃಷ್ಣಯ್ಯನವರಿಂದ ಟ್ರಾನ್ಸ್ಫರ್ ಪಡೆದು ಬನ್ನಿಕೊಂಡ ಟ್ರಾನ್ಸ್ಫರ್ ಮೇರೆಗೆ ಸದ್ರಿ ಅಕರ್ಳ ಅಬ್ಬುಬಕರ್ ಪ್ರೊಡೆಯರ್ ವ ವೇಣೂರು ಕೃಷ್ಣಯ್ಯ ಕೂಡಾ 2 ಜನರು ದಾಖ್ಲು ಮಾಡಿದ ಸದ್ರಿ ಅಮುಲ್ಯಾರಿಯು ಟ್ರಾನ್ಸ್ಫರನ್ನು ಮಂಜೂರು ಮಾಡುವ ರೀಯೂ ಅಮುಲ್ಯಾರಿ ನೋಟೀಸು ಬಗ್ಗೆ ಕೂಡಾ ಇದೇ ಬರುವ ತಾ. 15—6—54ಕ್ಕೆ ಸದ್ರಿ ಕೋರ್ಟಿನಲ್ಲಿ ಇಡೋಣವಾಗಿಯದೆ. ಸದ್ರಿ ಅಮುಲ್ಯಾರಿಯಲ್ಲಿ ಆಕ್ಷೇಪ ಹೇಳುವುದಿದ್ದರೆ ನೀವು ಸದ್ರಿ ತಾ 15—6—1954ಕ್ಕೆ ಪೂರ್ವಾಹ್ನ ಗಂಟೆ 10ಕ್ಕೆ ಸದ್ರಿ ಕೋರ್ಟಿನಲ್ಲಿ ಹಾಜರಾಗಿ ನಿಮ್ಮ ಆಕ್ಷೇಪಣೆಗಳನ್ನು ಹ್ಯಾಜಿರು ಮಾಡಿಕೊಳ್ಳಬಹುದು. ಇದಕ್ಕೆ ತಪ್ಪಿದಲ್ಲಿ ಕೋರ್ಟಿಗೆ ಯುಕ್ತ ಕಂಡ ರೀತಿ ತೀರ್ಮಾನಿಸಲಾಗುವುದು. ತಿಳಿದಿರಲಿ. ಕೋರ್ಟಿನ ಹುಕುಂ ಮೇರೆಗೆ ಈ ನೋಟೀಸು ಪ್ರಕಟಿಸಿಯದೆ.

D. Venkatesh Bhat.
ಅರ್ಜಿದಾರನ ಕಡೆ ವಕೀಲ್.

ಕಾರ್ಕಳ 28—5—1954.



Edited, Printed & Published By K. H. Shetty at the Navayuga Press, Udipi, S. India

[ಅಂಚೆ] Licence No. 31
Licensed to Post without Prepayment.

ನವಯುಗ

Founder:- SRI A. B. SHETTY, Minister for Public Health, Govt. of Madras.
Vol.33 No 40 10-6-1954 ವರ್ಷ ೩೩ ವಾರ ೪೦

ಜನತಾ ಸಂಪರ್ಕದ ಸಾಧನ

ಈಗ ತೊಡಗಿರುವ ಮಳೆಗಾಲ ಮುಗಿಯುವಷ್ಟರಲ್ಲಿ ನಮ್ಮ ಜಿಲ್ಲೆಯಲ್ಲಿಯೂ ಮದ್ರಾಸು ರಾಜ್ಯದ ಇತರೆಡೆಗಳಲ್ಲೂ ಜಿಲ್ಲಾ ಬೋರ್ಡು ಚುನಾವಣೆಗಳು ನೆರವೇರುತ್ತವೆ. ಈಗ ಜಿಲ್ಲಾ 'ಬೋರ್ಡುಗಳ ಮೇಲ್ವಿಚಾರಣೆಯನ್ನು ವಹಿಸಿಕೊಂಡಿರುವ ವಿಶೇಷಾಧಿಕಾರಿಗಳ ಸ್ಥಾನದಲ್ಲಿ ಜನತೆಯನ್ನು ಪ್ರತಿನಿಧೀಕರಿಸುವ ಸದಸ್ಯರುಳ್ಳ ಮಂಡಳವು ಜಿಲ್ಲೆಯ ಯೋಗಕ್ಷೇಮದ ಹೊಣೆಯನ್ನು ಹೊತ್ತುಕೊಳ್ಳುತ್ತದೆ. ಕಳೆದ ವರ್ಷದಲ್ಲೇ ಜರಗಬೇಕಾಗಿದ್ದ ಚುನಾವಣೆಯು ಅನಿವಾರ್ಯ ಕಾರಣಗಳಿಂದಾಗಿ ಇಷ್ಟು ದೂರ ಮುಂದುವರಿಸಲ್ಪಟ್ಟಿತು. ಈಗಿನ ಜಿಲ್ಲಾ ಬೋರ್ಡುಗಳನ್ನು ರದ್ದುಗೊಳಿಸಿ, ಹಿಂದೊಂದು ಕಾಲದಲ್ಲಿ ಕೆಲಸಮಾಡುತ್ತಿದ್ದ ತಾಲೂಕು ಬೋರ್ಡುಗಳನ್ನು ಮರಳಿ ಸಂಘಟಿಸಬೇಕೆಂದು ರಾಜಾಜಿಯವರ ಮಂತ್ರಿ ಮಂಡಳ ಅಧಿಕಾರದಲ್ಲಿದ್ದಾಗ ಆಲೋಚಿಸುತ್ತಿತ್ತು—ಸದ್ಯಕ್ಕೆ ನಾಡರರ ಮಂತ್ರಿ ಮಂಡಳವು ಅಂತಹ ಕ್ರಮವನ್ನೇನೂ ತೆಗೆದುಕೊಳ್ಳುವ ಲಕ್ಷಣ ತೋರುವುದಿಲ್ಲ ಜಿಲ್ಲಾ ಬೋರ್ಡುಗಳ ಚುನಾವಣೆಯನ್ನು ನಡೆಸಲು ಭರದಿಂದ ಸಿದ್ಧತೆಗಳನ್ನು ಜರಗಿಸುತ್ತಿರುವುದರ ಮೇಲಿಂದ ಈ ಮಾತನ್ನು ಹೇಳಬಹುದು.

ಜಿಲ್ಲಾ ಬೋರ್ಡು ಮುಂತಾದ ಸ್ಥಾನಿಕ ಸಂಸ್ಥೆಗಳು ಜನತೆಯ ಯೋಗಕ್ಷೇಮದ ಹಿತದೃಷ್ಟಿಯಲ್ಲಿ ಅತ್ಯಮೂಲ್ಯವಾದ ಮಹತ್ವದ ಸೇವೆಯನ್ನು ಸಲ್ಲಿಸುತ್ತವೆ. ಇವುಗಳ ಆಡಳಿತದ ವ್ಯಾಪ್ತಿಯು ಚಿಕ್ಕ ಚಿಕ್ಕ ಘಟಕಗಳಿಗೆ ಸೀಮಿತವಿರುವುದರಿಂದ, ಆಯಾ ಪ್ರದೇಶದ ಜನರೇ ಚುನಾಯಿಸಿದ ಸದಸ್ಯರು ಇಂತಹ ಸಂಸ್ಥೆಗಳ ಕಾರ್ಯ ನಿರ್ವಾಹಕರಾಗಿರುವುದರಿಂದ ಸ್ಥಳೀಯ ಸಮಸ್ಯೆಗಳನ್ನು ಗುರುತಿಸಿ, ವಿಶ್ಲೇಷಿಸಿ, ತಕ್ಕ ಪರಿಹಾರ ಮಾರ್ಗವನ್ನು ಕಂಡುಕೊಳ್ಳಲು ಅವರಿಗೆ ಸಾಧ್ಯವಾಗುತ್ತದೆ. ಮದ್ರಾಸಿನಲ್ಲಿ ಕುಳಿತು ದಕ್ಷಿಣ ಕನ್ನಡದ ಸಮಸ್ಯೆಯನ್ನು ವಿವೇಚಿಸುವುದಕ್ಕೂ ಈ ಜಿಲ್ಲೆಯ ಕೇಂದ್ರವಾದ ಮಂಗಳೂರಿನಲ್ಲಿದ್ದುಕೊಂಡು ೧೭ ಲಕ್ಷ ದಕ್ಷಿಣ ಕನ್ನಡ ಪ್ರಜೆಗಳ ಕಷ್ಟ ಸುಖಗಳನ್ನು ವಿಚಾರಿಸುವುದಕ್ಕೂ ಮಹದಂತರವುಂಟು— ಆಡಳಿತದ ವಿಕೇಂದ್ರೀಕರಣದಿಂದಲೇ ನಾವು ಸ್ಥಾನಿಕ ಸಮಸ್ಯೆಗಳನ್ನು ಸಮರ್ಥ ರೀತಿಯಲ್ಲಿ ಬಗೆಹರಿಸಬಲ್ಲೆವು. ಈ ದೃಷ್ಟಿಯಿಂದ ಗ್ರಾಮ ಪಂಚಾಯತುಗಳು, ನಗರ ಸಭೆಗಳು, ಜಿಲ್ಲಾ ಬೋರ್ಡುಗಳು ಮುಂತಾದ ಸಂಸ್ಥೆಗಳ ಮೇಲೆ ನಾವು ಕಟ್ಟುವ ಪ್ರಜಾರಾಜ್ಯವೇ ರಾಮರಾಜ್ಯವಾಗುತ್ತದೆ.

ಆದುದರಿಂದ ಶಾಸನ ಸಭೆಗಳಿಗೆ ಮತ್ತು ಪಾರ್ಲಿಮೆಂಟಿಗೆ ನಡೆಯುವ ಮಹಾ ಚುನಾವಣೆಗಳಷ್ಟೇ ಪ್ರಾಮುಖ್ಯತೆಯನ್ನು ನಾವು ಸ್ಥಳೀಯ ಸ್ವರಾಜ್ಯ ಸಂಸ್ಥೆಗಳ ಚುನಾವಣೆಗೂ ಕೊಡಬೇಕಾದುದು ಅಗತ್ಯ. ರಾಷ್ಟ್ರೀಯ ಹಾಗು ಪ್ರಾಂತೀಯ ಧೋರಣೆಯನ್ನು ಎಷ್ಟು ಸಮರ್ಪಕವಾಗಿ ನಾವು ರೂಪಿಸಿಕೊಳ್ಳುತ್ತೇವೆಯೋ ಅಷ್ಟೇ ಯೋಗ್ಯ ರೀತಿಯಲ್ಲಿ ಸ್ಥಳೀಯ ಪ್ರಗತಿಗೋಸ್ಕರ ಉಚಿತ ನಿಲುಮೆಯನ್ನೂ ಅವಲಂಬಿಸಬೇಕಾಗುತ್ತದೆ ನಮ್ಮ ರಾಜ್ಯಾಂಗ ಘಟನೆಯು ಸ್ಥಳೀಯ ಸಂಸ್ಥೆಗಳ ತಳಗಟ್ಟನ್ನು ಭದ್ರವಾಗಿ ಹಾಕಿ ಕೊಟ್ಟಿರುತ್ತದೆ—ಮತ್ತು ಪ್ರಾಂತೀಯ ಶಾಸನ ಸಭೆಗಳು ಕಾಯಿದೆ ಬದ್ಧವಾಗಿ ಕೆಲವು ಪ್ರಾಮುಖ್ಯ ಹೊಣೆಗಾರಿಕೆಗಳನ್ನು ಸ್ಥಳೀಯ ಸಂಸ್ಥೆಗಳಿಗೆ ಒಪ್ಪಿಸಿ ಕೊಟ್ಟಿರುತ್ತವೆ. ಇವುಗಳ ಪ್ರಯೋಜನವನ್ನು ನಾವು ಪಡೆದು, ನಮ್ಮ ಜಿಲ್ಲೆಗೆಯೇ ವಿಶಿಷ್ಟವಾದ ಸಮಸ್ಯೆಗಳನ್ನು ವ್ಯಾವಹಾರಿಕ ದೃಷ್ಟಿಯಿಂದ ಪರಿಶೀಲಿಸಿ. ಅವುಗಳ ನಿವಾರಣೋಪಾಯಗಳನ್ನು ಕಂಡುಕೊಳ್ಳುವುದೂ ಉತ್ಕರ್ಷದ ಮಾರ್ಗವನ್ನು ನಿಷ್ಕಂಟಕ ಮಾಡಿ ಕೊಳ್ಳುವುದೂ ಸೂಕ್ತವೆಂದು ಎಲ್ಲರೂ ಒಪ್ಪುವುದು ನಿಶ್ಚಯ.

ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆಗಳನ್ನು ಯಾವ ಪ್ರಕಾರ ನಡೆಸಬೇಕೆಂಬುದೂ ಎಲ್ಲರೂ ಒಪ್ಪಿದ ಮಾತಾಗಿರುವುದು—ಗುಪ್ತ ಮತದಾನ ಪದ್ಧತಿಯೇ ಶ್ರೇಷ್ಠವಾದುದೆಂದು ಎಲ್ಲರ ಅಭಿಪ್ರಾಯ. ಈಚೆಗೆ ನಡೆದ ಸಣ್ಣ ಗ್ರಾಮ ಪಂಚಾಯತುಗಳ ಚುನಾವಣೆಯಲ್ಲಿ ಕೈ ಎತ್ತಿ ಮತದಾನ ಮಾಡುತ್ತಿದ್ದರು—ಆದರೆ ಇದನ್ನು ಜನರು ಮೆಚ್ಚಲಿಲ್ಲ. ಮಾತ್ರವಲ್ಲ ಚುನಾವಣೆಗಳ ಫಲಿತಾಂಶ ರೂಪದಲ್ಲಿ ಅಸ್ತಿತ್ವಕ್ಕೆ ಬಂದ ಪಂಚಾಯತುಗಳು ನಿಜವಾದ ಅರ್ಥದಲ್ಲಿ ಹಳ್ಳಿಯ ಪ್ರಜೆಗಳನ್ನು ಪ್ರತಿನಿಧೀಕರಿಸುತ್ತವೆಯೋ ಎಂಬ ಬಗ್ಗೆ ಸಂಶಯ ಹುಟ್ಟಿಕೊಂಡಿತು. ಭಯ, ದಾಕ್ಷಿಣ್ಯ ಮತ್ತು ಬಲಾತ್ಕಾರಗಳು ಕೈ ಎತ್ತಿ ನಡೆಯುವ ಚುನಾವಣೆಯಲ್ಲಿ ಹೆಡೆಯೆತ್ತಿ ನಿಂತು, ಪರಿಣಾಮದ ಮೇಲೆ ದುಷ್ಪ್ರಭಾವವನ್ನು ಬೀರುತ್ತವೆ ಗುಪ್ತ ಮತದಾನ ಪದ್ಧತಿಯಲ್ಲಿ ಇಂತಹ ಆತಂಕವಿರುವುದಿಲ್ಲ. ಆದ ಕಾರಣ ಜಿಲ್ಲಾ ಬೋರ್ಡುಗಳಿಗೆ ನಡೆಯಲಿರುವ ಚುನಾವಣೆಯು ಗುಪ್ತ ಮತದಾನ ಪದ್ಧತಿಯಂತೆ ನಡೆಯುವುದು ಧರ್ಮ ಹಾಗು ಕ್ರಮಪ್ರಾಪ್ತ. ಇಲ್ಲಿ ತಲೆದೋರುವ ಇನ್ನೊಂದು ಪ್ರಶ್ನೆಯೆಂದರೆ, ಪಕ್ಷಪಂಗಡಗಳ ತಳಹದಿಯ ಮೇಲೆ ಚುನಾವಣೆಯನ್ನು ನಡೆಸಿ ಸ್ಪರ್ಧೆಗೆ ಅವಕಾಶ ಕೊಡಬೇಕೇ ಬೇಡವೇ ಎಂಬುದು—ಪ್ರಜಾಪ್ರಭುತ್ವದ ರುಚಿಯನ್ನು ಈಗಷ್ಟೇ ಸವಿಯುತ್ತಿರುವ ನಮ್ಮ ಮತದಾರರು ಈ ಪರಿಸ್ಥಿತಿಯಲ್ಲಿ ಹೆಚ್ಚಿನ ತರಬೇತಿಯನ್ನು ಹೊಂದುವುದು ಅಗತ್ಯವಿರುವುದರಿಂದ ಜಿಲ್ಲಾ ಬೋರ್ಡುಗಳಿಗೆ ತಮಗೊಪ್ಪಿದ ಪಕ್ಷದ ಹುರಿಯಾಳನ್ನು ಚುನಾಯಿಸುವುದೇ ಇಷ್ಟವೆನಿಸುತ್ತದೆ.

ಪಕ್ಷ ಪಂಗಡಗಳ ತಳಹದಿಯ ಮೇಲೆ ನಡೆಸಲಾಗುವ ಚುನಾವಣೆಯು ಕೆಲವೊಂದು ದುಷ್ಪರಿಣಾಮಗಳನ್ನುಂಟು ಮಾಡುತ್ತದೆಂದು ಹೇಳುವುದುಂಟು—ಅದು ವೈಯಕ್ತಿಕ ದ್ವೇಷವನ್ನು ಉತ್ತೇಜಿಸುತ್ತದೆಂದೂ ನಾಗರಿಕರಲ್ಲಿ ಬಣಗಳನ್ನು ಸೃಷ್ಟಿಸುತ್ತದೆಂದೂ ಗ್ರಾಮೀಣ ಜೀವನದ ಶಾಂತಿಯನ್ನು ಕಲಕಿ ಬಿಡುವುದೆಂದೂ ಆಕ್ಷೇಪವನ್ನು ಕೇಳುತ್ತೇವೆ ಅನ್ಯೋನ್ಯವಾಗಿ ಬಾಳುತ್ತಿದ್ದವರು ಚುನಾವಣಾ ಕಾಲದ ಮತಭೇದದಿಂದಾಗಿ ಆಜನ್ಮ ಶತ್ರುಗಳಾಗುವರೆಂದೂ ದೂರು ಬರುತ್ತದೆ ಆದರೆ ಪಕ್ಷ ಪಂಗಡಗಳು ಹುಟ್ಟಿಕೊಳ್ಳುವುದೇ ಧೋರಣೆಯಲ್ಲಿ ನಿಲುಮೆ ಮತ್ತು ಅಭಿಪ್ರಾಯದಲ್ಲಿ, ಮೂಲಭೂತವಾದ ವ್ಯತ್ಯಾಸವಿರುವುದರಿಂದ ಎಂಬುದನ್ನು ನೆನಪಿಟ್ಟುಕೊಂಡರೆ ಸರ್ವಾನುಮತದ ನಿರ್ಣಯ ಯಾವ ಕಾಲಕ್ಕಾದರೂ ಕಷ್ಟವೆಂದು ಮನವರಿಕೆಯಾದೀತು. ಗ್ರಾಮದಂತಹ ಚಿಕ್ಕ ಘಟಕದಲ್ಲಿ ಸರ್ವಾನುಮತದ ನಿರ್ಣಯ ಸಾಧ್ಯವಾದೀತಾದರೂ ಜಿಲ್ಲೆ, ರಾಜ್ಯ ಮತ್ತು ರಾಷ್ಟ್ರಕ್ಕಾಗುವಾಗಲೂ ಒಮ್ಮತದ ಅಭಿಪ್ರಾಯ ಮೂಡಿ ಬರುವುದು ಸಂಶಯ. ಇಲ್ಲಿ ಬಹುಮತದ ಅಭಿಪ್ರಾಯವೇ ಮನ್ನಣೆ ಪಡೆಯಬೇಕಾಗುತ್ತದೆ. ಆದುದರಿಂದ ಪಕ್ಷ ಪಂಗಡಗಳು ಜಿಲ್ಲಾ ಬೋರ್ಡು ಚುನಾವಣೆಯಲ್ಲಿ ಆಸ್ಥೆ ವಹಿಸುವುದರಲ್ಲಿ ತಪ್ಪೇನೂ ತೋರುವುದಿಲ್ಲ. ಪ್ರಜಾಪ್ರಭುತ್ವ ಪದ್ಧತಿಯು ಒಳ್ಳೆಯದನ್ನುಂಟು ಮಾಡುವುದು ಹೌದಾದರೆ, ಪಕ್ಷ ಪಂಗಡಗಳ ತಳಹದಿಯ ಮೇಲೆ ನಡೆಯುವ ಚುನಾವಣೆಗಳ ಪರಿಣಾಮವೂ ಕಲ್ಯಾಣಪ್ರದವಾಗುತ್ತದೆ.

ಪಕ್ಷ ಪಂಗಡಗಳ ತಳಹದಿಯ ಮೇಲೆ ನಡೆಸುವ ಚುನಾವಣೆಯು ರಾಜಕೀಯವಾದಿಗಳಿಗೂ ಸಾಮಾನ್ಯ ನಾಗರಿಕರಿಗೂ ತುಂಬ ಉಪಯುಕ್ತವಾದ [illegible]ರ್ಶನವೆನ್ನಬಹುದು. ಸರಕಾರದೊಡನೆ ನಿಕಟ ಸಂಪರ್ಕವನ್ನು ಪ್ರಜೆಗಳು ಹೊಂದುವುದಕ್ಕೆ ಅವಕಾಶವಿದೆಯೆಂಬುದೇ ಪ್ರಜಾಪ್ರಭುತ್ವದ ವೈಶಿಷ್ಟ್ಯವೆಂದಿಟ್ಟುಕೊಂಡ ಪಕ್ಷದಲ್ಲಿ, ಸರಕಾರದ ಚಟುವಟಿಕೆಗಳಿಂದಾದ ಒಳಿತು ಕೆಡುಕುಗಳನ್ನೂ ಅದರ ಧೋರಣೆಯ ಸಾಧಕಬಾಧಕ ಅಂಶಗಳನ್ನೂ ತಿಳಿದುಕೊಳ್ಳಲು ಸಾಮಾನ್ಯ ಪ್ರಜೆಗಳಿಗೆ ಉತ್ತಮ ಅವಕಾಶವೊಂದು ಚುನಾವಣಾ ಕಾಲದಲ್ಲಿ ದೊರಕುತ್ತದೆ ಹುರಿಯಾಳುಗಳಾಗಿ ನಿಂತವರು ತಮ್ಮ ಪಕ್ಷದ ಪ್ರಚಾರವನ್ನು ಮಾಡುತ್ತಾ ತಿರುಗುತ್ತಿದ್ದಂತೆ ಜನರಿಂದ ಬರುವ ಪ್ರಶ್ನೆಗಳಿಗೆ ಸಮಾಧಾನಕರವಾದ ಉತ್ತರವನ್ನು ಕೊಡಬೇಕಾಗುವುದು; ಅವರ ಸಮಸ್ಯೆಗಳ ಕೂಲಂಕಷ ಅಧ್ಯಯನವನ್ನು ನಡೆಸಿ ಅದಕ್ಕೆ ತಕ್ಕುದಾದ ಪರಿಹಾರಕ್ರಮವನ್ನು ಕೈಗೊಳ್ಳುವ ಭರವಸೆಕೊಡಬೇಕಾಗುವುದು; ಪ್ರಜೆಗಳ

[೭ನೇ ಪುಟ ನೋಡಿರಿ]

ಸಮರ್ಥ ಸಾಲಗಳು

ಒಬ್ಬನ ಯೋಗ್ಯತೆ ಮತ್ತು ಸಮರ್ಥತೆ ಅನೇಕ ವೇಳೆ ಆತನ ಚಿಲ್ಲರೆ ಸಾಲಗಳ ದೆಸೆಯಿಂದಾಗಿ ಬಹುವಾಗಿ ಕುಂಟುತ್ತವೆ. ಆದರೆ ಈ ಎಲ್ಲಾ ಚಿಲ್ಲರೆ ಸಾಲಗಳನ್ನು ಏಕೀಕರಿಸಿ ಸುಲಭಸಾಧ್ಯವಾದ ಕಂತುಗಳಿಂದ ಸಂದಾಯ ಮಾಡುವಂತಾದರೆ ಆತನ ಕಷ್ಟಗಳೆಲ್ಲವೂ ಪರಿಹಾರಹೊಂದಿ ಆತನ ಯೋಗ್ಯತೆ ಹಾಗೂ ಸಮರ್ಥತೆ ಮರಳಿ ಬರುವುದು. ತಿಂಗಳಿಗೆ ರೂಪಾಯಿ 250 - ಯಾ ಅದಕ್ಕಿಂತ ಜಾಸ್ತಿ ಸಂಬಳವಿರುವ ಆಫೀಸರರುಗಳಿಗೆ ಅವರ ಸಂಬಳದ ಆರು ಪಾಲಷ್ಟು ಸಾಲಗಳನ್ನು ಕೊಟ್ಟು ಅವನ್ನು 36 ತಿಂಗಳು ಕಂತುಗಳಿಂದ ಮರುಪಾವತಿ ಪಡೆಯುವ ಹೊಸ ಯೋಜನೆಯೊಂದನ್ನು ನಾವು ಕಂಡುಹಿಡಿದಿದ್ದೇವೆ. ಈ ಸಾಲವನ್ನು ಪಡೆಯಲು ಇನ್ಶೂರೆನ್ಸ್ ಪೋಲಿಸಿ ಮತ್ತು ಒಬ್ಬ ಸಮ ಜ್ಯಾಮೀನುದಾರನು ಅತ್ಯಗತ್ಯ.

ಹೆಚ್ಚಿನ ವಿವರಗಳಿಗೆ ಸಮೀಪದ ನಮ್ಮ ಆಫೀಸಿನಲ್ಲಿ ವಿಚಾರಿಸಿರಿ:

THE CANARA INDUSTRIAL & BANKING SYNDICATE LTD.
Estd: 1925 H. O. UDIPI, S. India
ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್.,
ಸ್ಥಾಪನೆ: ೧೯೨೫] [ಪ್ರಧಾನ ಕಚೇರಿ: ಉಡುಪಿ. ದ. ಭಾರತ.

ಭಾರತದಲ್ಲಿ ಮಲೇರಿಯಾ ರೋಗದ ನಿಯಂತ್ರಣ

ಕೇಂದ್ರ ಸಂಸ್ಥೆಯ ಯಶಸ್ವಿ ಕಾರ್ಯಕ್ರಮ : ಗ್ರಾಮಾಂತರ ಪ್ರದೇಶದಲ್ಲಿ ಅದ್ಭುತ ಪ್ರಯೋಗ

ಭಾರತದಲ್ಲಿ ಪ್ರತಿ ವರ್ಷವೂ ಸುಮಾರು ನಾಲ್ಕೂವರೆ ಕೋಟಿ ಪ್ರಜೆಗಳು ಮಲೇರಿಯಾ ರೋಗದಿಂದ ನರಳುತ್ತಾರೆಂದು ತಿಳಿಯುತ್ತದೆ. ಪ್ರತಿ ವರ್ಷವೂ ಭಾರತದಲ್ಲಿ ಸಾಯುತ್ತಿರುವ ೬೦ ಲಕ್ಷ ಪ್ರಜೆಗಳ ಪೈಕಿ ಅರೆವಾಸಿಯಷ್ಟು ಜ್ವರಪೀಡಿತರು— ಇವರಲ್ಲಿ ಸುಮಾರು ಎಂಟು ಲಕ್ಷ ಜನರು ಮಲೇರಿಯಾ ರೋಗಕ್ಕೆ ತುತ್ತಾದವರು. ಮಲೇರಿಯ ಉಲ್ಬಣವಾದಾಗ ಸಾಯುವವರ ಸಂಖ್ಯೆ ಶೇಕಡ ೫೦ರಿಂದ ೧೦೦ರಷ್ಟು ಹೆಚ್ಚುವುದು.

ಮಲೇರಿಯಾ ರೋಗವು ಮನುಷ್ಯನ ಚಟುವಟಿಕೆಗಳನ್ನು ಕೂಡ ಕಡಮೆ ಮಾಡುವುದು. ಮನಸ್ಸಿನ ಮೇಲೆ ಆಗಾಧವಾದ ಪರಿಣಾಮವನ್ನುಂಟುಮಾಡಿ ಆತನನ್ನು ನಿರುತ್ಸಾಹಿಯನ್ನಾಗಿ ಮಾಡುವುದು ಮಲೇರಿಯಾ ರೋಗ ಪೀಡಿತ ಹಳ್ಳಿಯೊಂದಕ್ಕೆ ಹೋಗಿ ನೋಡಿದರೆ ಇದು ಗೊತ್ತಾಗುವುದು. ಮಲೇರಿಯಾ ರೋಗವು ಇಡೀ ರಾಷ್ಟ್ರಕ್ಕೇ ವಿಪತ್ಕಾರಿಯಾದುದು.

ಹತೋಟಿಯ ಯೋಜನೆ

ಆದ್ದರಿಂದ ದೇಶದ ಮುಂದಿರುವ ಮುಖ್ಯ ಪ್ರಶ್ನೆಯೆಂದರೆ, ಈ ಮಹಾ ವ್ಯಾಧಿಯಿಂದ ಜನರನ್ನು ಪಾರು ಮಾಡುವುದೇ ಆಗಿದೆ. ಈ ರೋಗವನ್ನು ತಡೆಗಟ್ಟುವುದಕ್ಕೆ ತಕ್ಕ ಸಂಶೋಧನೆಗಳನ್ನು ನಡೆಸುವು [illegible] ಭಾರತವು ಇತರ [illegible] ಮಲೇರಿಯಾ ಸಂಶೋಧನೆಯಲ್ಲಿ ಭಾರತವು [illegible] ಗಳಿಸಿದೆ. [illegible]

[illegible] ಮಲೇರಿಯಾ ಹತೋಟಿ ಕಾರ್ಯಕ್ರಮಗಳೆಲ್ಲವೂ ಈ ಭವನದಲ್ಲಿಯೇ ಸಿದ್ಧಗೊಳಿಸಲ್ಪಟ್ಟವೆ. ಮನೆ ಮನೆಗೂ ಹೋಗಿ ಡಿ. ಡಿ. ಟಿ. ಪ್ರಯೋಗ ಮಾಡುವುದೇ ಈ ಕಾರ್ಯಕ್ರಮದಲ್ಲಿ ಮುಖ್ಯವಾದುದು. ಮಲೇರಿಯ ವ್ಯಾಧಿಯ ತೀಕ್ಷ್ಣ ಸ್ವರೂಪವನ್ನರಿತು ಯೋಜನಾ ಆಯೋಗದವರು ೧೯೫೨ರಲ್ಲಿ ಅಖಿಲ ಭಾರತಕ್ಕೆಲ್ಲಾ ಅನ್ವಯವಾಗುವ ಈ ಹತೋಟಿ ಕಾರ್ಯಕ್ರಮಕ್ಕೆ ಪ್ರಥಮ ಸ್ಥಾನವನ್ನು ಕೊಡಬೇಕೆಂದು ಸಲಹೆ ಮಾಡಿದರು. ಈ ಸೂಚನೆಯನ್ನು ಈಗ ಎಲ್ಲ ಕಡೆಗಳಲ್ಲಿಯೂ ಆಚರಿಸಲಾಗುತ್ತದೆ.

ಇತಿಹಾಸದಲ್ಲಿ ಮೈಲುಗಲ್ಲುಗಳು

೧೬೪೦ನೇ ಇಸವಿಯಲ್ಲಿ ದಕ್ಷಿಣ ಅಮೆರಿಕಾದಿಂದ ಯೂರೋಪಿಗೆ ಸಿಂಕೋನಾ ತೊಗಟೆಯನ್ನು ತರಲಾಯಿತು. ೧೮೨೦ರಲ್ಲಿ ಪೆಲ್ಲಿಶಿಯರ್ ಮತ್ತು ಕಾವೆಂಟೊರವರು ಸಿಂಕೋನಾದಿಂದ 'ಕ್ವಿನೈನ್' ಬಟ್ಟಿ ಇಳಿಸಿದರು. ೧೮೪೭ರಲ್ಲಿ ಭಾರತದಲ್ಲಿ ಡೆಂಪ್ಸ್ಟರ್‌ರವರು ಮಲೇರಿಯಾ ರೋಗದ ಪ್ರಬಲತೆಯನ್ನು ಅಳೆಯಲು ಗುಲ್ಮದ ಕ್ರಿಯೆಯ ವೇಗವನ್ನು ಉಪಯೋಗಿಸಿದರು. ೧೮೪೭ರಲ್ಲಿ ಮಿ|| ಹ್ಯಾರಿಯವರು ಭಾರತದಲ್ಲಿ ಕ್ವಿನೈನ್ ಸಲ್ಫೇಟ್ ಚಿಕಿತ್ಸೆಯನ್ನು ಪ್ರಾರಂಭಿಸಿದರು. ಅದೇ ವರ್ಷ ಮಲೇರಿಯಾ ಜ್ವರಪೀಡಿತರ ಮಿದುಳಿನಲ್ಲಿನ ಬಣ್ಣವನ್ನು ಮೆಕೆಲ್‌ರವರು ಪರಿಶೀಲಿಸಿದರು. ೧೮೫೨—೬೦ರಲ್ಲಿ ಭಾರತ, ಸಿಲೋನ್ ಮತ್ತು ಜಾವಾಗಳಲ್ಲಿ ಸಿಂಕೋನಾ ಮರಗಳನ್ನು ಬೆಳೆಸಲು ಆರಂಭವಾಯಿತು. ೧೮೭೪ರಲ್ಲಿ ಜೆಲ್ಡರ್ ಎಂಬವರು ಡಿ. ಡಿ. ಟಿ. ಯನ್ನು ಒಂದು ರಾಸಾಯನಿಕ ವಸ್ತುವನ್ನಾಗಿ ಸಂಶ್ಲೇಷಿಸಿದರು. ೧೮೮೦ರಲ್ಲಿ ಲವೆರಾನ್‌ರವರು ಮನುಷ್ಯರ ರಕ್ತದಲ್ಲಿನ ಮಲೇರಿಯಾ ಪರತಂತ್ರ ಜೀವಿಯನ್ನು ಕುರಿತು ವಿವರಣೆಯಿತ್ತರು. ೧೮೮೩ರಲ್ಲಿ ಕಿಂಗ್‌ರವರು ಸೊಳ್ಳೆ ಮತ್ತು ಮಲೇರಿಯಾ ಸಿದ್ಧಾಂತವನ್ನು ಪ್ರಕಟಿಸಿದರು. ೧೮೯೧ರಲ್ಲಿ ರೊಮನೊವ್‌ಸ್ಕಿಯವರು ಮಲೇರಿಯಾ ಪರತಂತ್ರ ಜೀವಿಗಳಿಗಾಗಿ ರಂಗನ್ನು ಕಂಡುಹಿಡಿದರು. ೧೮೯೭ರಲ್ಲಿ ರಾಸ್ ಎಂಬವರು ಸೊಳ್ಳೆಗಳಲ್ಲಿ ಮಾನವ ಮಲೇರಿಯಾ ಪರತಂತ್ರ ಜೀವಿಗಳಿರುವುದನ್ನು ಪರಿಶೀಲಿಸಿದರು. ೧೮೯೮ರಲ್ಲಿ ರಾಸ್ ಎಂಬವರು ಪಕ್ಷಿಗಳ ಮಲೇರಿಯಾ ಪರತಂತ್ರಜೀವಿಗಳ ವೃತ್ತವನ್ನು ವಿವರಿಸಿದರು. ಅದೇ ವರ್ಷ ಗ್ರಾಸ್ಸಿ, ಬಿಗ್‌ನಮಿ, ಮತ್ತು ಬಸ್ತಿಯನೆಲ್ಲಿಯವರು ಮಾನವ ಮಲೇರಿಯಾ ಪರತಂತ್ರ ಜೀವಿಗಳ ಪೂರ್ಣ ವೃತ್ತವನ್ನು ಪರೀಕ್ಷಿಸಿದರು, ಮತ್ತು ಸೊಳ್ಳೆಗಳ ಮೂಲಕ ಮಾನವ ಮಲೇರಿಯಾ ಪರತಂತ್ರಜೀವಿಗಳನ್ನು ಪ್ರಯೋಗಾತ್ಮಕವಾಗಿ ಪ್ರಸರಿಸಿದರು. ೧೯೦೦ರಲ್ಲಿ ಇಟಲಿಯಲ್ಲಿ ಲೊ, ಸ್ಯಾಂಬನ್ ಮತ್ತು ಟೆರ್ಜಿ ಇವರೂ ಲಂಡನ್ನಿನಲ್ಲಿ ಮ್ಯಾನ್‌ಸನ್‌ರವರೂ ಸೊಳ್ಳೆಗಳ ಮೂಲಕ ಮಲೇರಿಯಾ ಹರಡುವುದನ್ನು ಸಿದ್ಧಾಂತಗೊಳಿಸಿದರು. ೧೯೨೬ರಲ್ಲಿ ಪ್ರಥಮತಃ ಮಲೇರಿಯಾ ವಿರುದ್ಧ "ಪ್ಲಾಸ್ಮಾಕ್ವಿನೊ" ಎಂಬ ಔಷಧಿಯನ್ನು ಸಂಶ್ಲೇಷಿಸಲಾಯಿತು. ೧೯೩೬ರಲ್ಲಿ ಮಲೇರಿಯಾ ರೋಗದ ಹತೋಟಿಗಾಗಿ 'ಪೈರೆಥ್ರಂ' ಎಂಬ ಔಷಧಿಯನ್ನು ದಕ್ಷಿಣ ಆಫ್ರಿಕಾದಲ್ಲಿ ಕೋವೆಲ್‌ರವರೂ ಭಾರತದಲ್ಲಿ ರಸ್ಸೆಲ್‌ರವರೂ ಉಪಯೋಗಿಸಿದರು. ೧೯೪೦ರಲ್ಲಿ ಬ್ರೆಜಿಲ್‌ನಲ್ಲಿ ಮಲೇರಿಯಾ ರೋಗ ನಿವಾರಣೆಗಾಗಿ ಮೊದಲನೆಯ ಬಾರಿ ಕಾರ್ಯಕ್ರಮ ಕೈಗೊಳ್ಳಲಾಯಿತು. ೧೯೪೪ರಲ್ಲಿ ಇಟಾಲಿಯನ್ ಥಳಿಯಲ್ಲಿ ಮಿತ್ರರಾಷ್ಟ್ರದವರು ಮಲೇರಿಯಾ ಹತೋಟಿಯಲ್ಲಿ ಡಿ.ಡಿ.ಟಿ.ಯನ್ನು ದೊಡ್ಡ ಪ್ರಮಾಣದಲ್ಲಿ ಉಪಯೋಗಿಸಿದರು. ೧೯೫೩ರಲ್ಲಿ ಮಲೇರಿಯಾ ರೋಗದ ವಿರುದ್ಧ ವಿಶ್ವದ ದೊಡ್ಡ ನಿರೋಧ ಕಾರ್ಯವಾದ ರಾಷ್ಟ್ರೀಯ ಮಲೇರಿಯಾ ಹತೋಟಿ ಕಾರ್ಯವನ್ನು ಭಾರತ ಪ್ರಾರಂಭಿಸಿತು. ಇದೀಗ ಭಾರತದಲ್ಲೆಲ್ಲ ರಾಷ್ಟ್ರೀಯ ಮಲೇರಿಯಾ ನಿಯಂತ್ರಣ ಪ್ರಚಾರ ಸಪ್ತಾಹ ಆಚರಿಸಲ್ಪಡುತ್ತದೆ.

ಈ ಕಾರ್ಯಕ್ರಮಕ್ಕೆ ವೆಚ್ಚವಾಗುವ ೧೫,೮೫,೩೧,೦೦೦ ರೂಪಾಯಿಗಳಲ್ಲಿ ಭಾರತ ಸರ್ಕಾರವು ಉದಾರವಾಗಿ ಸಹಾಯ ಕೊಡುತ್ತಿರುವುದಲ್ಲದೆ, ಅಮೇರಿಕ ಸರ್ಕಾರವೂ ಭಾರತದ ನಾನಾ ಪ್ರಾಂತಗಳ ಸರ್ಕಾರಗಳೂ ಸಾಕಷ್ಟು ನೆರವನ್ನು ನೀಡುತ್ತವೆ. ವಿಶ್ವಸಂಸ್ಥೆಯ ಆಹಾರ ಮತ್ತು ವ್ಯವಸಾಯ ಶಾಖೆಯ ಅಂಗವಾದ ತಾಂತ್ರಿಕ ಸಹಕಾರ ಸಂಸ್ಥೆಯು ಡಿ. ಡಿ. ಟಿ. ಮೊದಲಾದ ಔಷಧಿಗಳನ್ನು ಚಿಮುಕಿಸುವ ಯಂತ್ರಗಳನ್ನೂ ಜೀಪ್, ಟ್ರಕ್, ಸ್ಟೇಷನ್ ವ್ಯಾಗನ್ ಮೊದಲಾದ ವಾಹನ ಸೌಕರ್ಯಗಳನ್ನೂ ಒದಗಿಸುತ್ತದೆ. ಮಲೇರಿಯಾ ಹತೋಟಿ ಕಾರ್ಯಕ್ರಮಗಳನ್ನು ಕಾರ್ಯರೂಪಕ್ಕೆ ತರುವ ಜವಾಬ್ದಾರಿಯು ಕೇಂದ್ರ ಮತ್ತು ರಾಜ್ಯಗಳ ಸರ್ಕಾರಗಳಿಗೆ ಸೇರಿದೆ.

ಇಬ್ಬಗೆಯ ಕಾರ್ಯಕ್ರಮ

ಕಾರ್ಯಕ್ರಮವು ಎರಡು ಬಗೆಯದು— ಮೂರು ವರ್ಷಗಳ ಕಾರ್ಯಕ್ರಮ ಕೈಗೊಳ್ಳುವುದು ಮೊದಲನೆ ಹಂತವಾದರೆ, ಅನಂತರವೂ ಹನ್ನೆರಡೂವರೆ ಕೋಟಿ ಪ್ರಜೆಗಳಿಗೆ ಮಲೇರಿಯಾ ವ್ಯಾಧಿಯಿಂದ ರಕ್ಷಣೆ ಕೊಡುತ್ತಿರುವುದು ಎರಡನೆಯ ಘಟ್ಟ.

ಪ್ರತಿಯೊಂದು ರಾಜ್ಯವೂ ಒಂದೊಂದು ಆಡಳಿತ ಕೇಂದ್ರವಾಗಿ ನಿರ್ಧರಿಸಲ್ಪಟ್ಟಿದೆ. ಪ್ರತಿಯೊಂದು ವಿಭಾಗಕ್ಕೂ ಒಬ್ಬ ಅಧಿಕಾರಿ ಇರುವನು. ಸರಾಸರಿ ೧ ಕೋಟಿ ಜನರು ಈ ಕೇಂದ್ರದ ವ್ಯಾಪ್ತಿಗೊಳಪಡುವರು. ೧೯೫೪–೫೫ರಲ್ಲಿ ೧೦ ಕೇಂದ್ರಗಳನ್ನು ತೆರೆಯಬೇಕೆಂದು ನಿರ್ಧರಿಸಲಾಗಿತ್ತು. ಇದುವರೆಗೆ ಬಂದಿರುವ ವರದಿಗಳ ಪ್ರಕಾರ ಮಲೇರಿಯಾ ಪ್ರದೇಶಗಳಲ್ಲಿ ವಾಸಮಾಡುತ್ತಿರುವ ಸುಮಾರು ಎಂಟು ಕೋಟಿ ಪ್ರಜೆಗಳು ಮೊದಲನೆಯ ವರ್ಷದಲ್ಲಿಯೇ ಈ ಕಾರ್ಯಕ್ರಮದಿಂದ ಪ್ರಯೋಜನ ಪಡೆದಿದ್ದಾರೆ

ಮಲೇರಿಯಾ ನಿರೋಧ ಸಂಘದಲ್ಲಿ ಸಂಶೋಧನೆಗಳನ್ನು ನಡೆಸುವುದಲ್ಲದೆ ಅನೇಕರಿಗೆ ತರಬೇತಿಯನ್ನೂ ಕೊಡಲಾಗುತ್ತದೆ. ಈಗಾಗಲೇ ನೂರಾರುಮಂದಿ ವೈದ್ಯಾಧಿಕಾರಿಗಳು, ಮಲೇರಿಯಾ ಪರೀಕ್ಷಕರು ಮತ್ತು ತಾಂತ್ರಿಕ ವಿಜ್ಞಾನಿಗಳು ಶಿಕ್ಷಣ ಪಡೆದಿದ್ದಾರೆ ಮುಂದಿನ ಎರಡು ವರ್ಷಗಳಲ್ಲಿ ಇನ್ನು ನೂರಾರುಮಂದಿಗೆ ಶಿಕ್ಷಣ ಕೊಡಲಾಗುವುದು. ಸಂಶೋಧನಾ ಕಾರ್ಯವು ತೃಪ್ತಿಕರವಾಗಿ ಮುನ್ನಡೆಯುತ್ತಿದೆ.

ಗ್ರಾಮಾಂತರದ ಸಮಸ್ಯೆ

ಉಷ್ಣವಲಯ ಪ್ರದೇಶಕ್ಕೆ ವಿಶಿಷ್ಟವಾದ ಮಲೇರಿಯಾ ರೋಗವು ಮುಖ್ಯವಾಗಿ ಗ್ರಾಮಗಳಿಗೆ ಸಂಬಂಧಿಸಿದ ಸಮಸ್ಯೆ— "ಮಲೇರಿಯಾವು ಬಡತನಕ್ಕೆ ದಾರಿ; ಬಡತನವು ಮಲೇರಿಯಕ್ಕೆ ದಾರಿ" ಎಂಬುದಾಗಿಯೂ "ಮಲೇರಿಯಾದಿಂದ ಅಜ್ಞಾನ; ಅಜ್ಞಾನದಿಂದ ಮಲೇರಿಯಾ'' ಎಂದೂ ನಾಣ್ಣುಡಿ ಇದೆ. ಗ್ರಾಮಾಭಿವೃದ್ಧಿಯ ಯಶಸ್ಸಿಗೂ ಮಲೇರಿಯಾ ರೋಗದ ಹತೋಟಿಗೂ ಇದು ನಿಕಟ ಸಂಬಂಧವನ್ನು ತೋರಿಸುತ್ತದೆ.

ಗ್ರಾಮಾಂತರ ಪ್ರದೇಶಗಳಲ್ಲಿ ಮಲೇರಿಯಾ ರೋಗದ ಹತೋಟಿಯನ್ನು ಸಾಧಿಸಬೇಕೆನ್ನುವ ಯಾವುದೇ ಯೋಜನೆಗಾದರೂ ಸಂಚಾರ ವ್ಯವಸ್ಥೆಯ ಅಂಶವೊಂದು ದೊಡ್ಡ ಅಡಚಣೆಯಾಗಿ ನಿಲ್ಲುತ್ತದೆ. ಮಿತವಾದ ವೆಚ್ಚದಲ್ಲಿ ಮಲೇರಿಯಾ ಹತೋಟಿ ಕಾರ್ಯ ನಡೆಯುತ್ತಿರಬೇಕಾದರೆ ಕ್ರಿಮಿ ನಾಶಕಗಳನ್ನು ಚಿಮುಕಿಸುವ ಜನರ ಸಂಚಾರ ವ್ಯವಸ್ಥೆ, ಸುಲಭವಾಗಿ ಸ್ಥಳದಿಂದ ಸ್ಥಳಕ್ಕೆ ಸಾಗಿಸುವಂತಹ ಚಿಮುಕಿಸುವ ಯಂತ್ರೋಪಕರಣಗಳು, ಸ್ಥಳದಲ್ಲೇ ಸಂಮಿಶ್ರಣಗೊಳಿಸಿಕೊಳ್ಳಬಹುದಾದಂತಹ ಡಿ. ಡಿ. ಟಿ. ಸರಬರಾಜು, ಅನುಭವವಿರುವ ಕೆಲಸಗಾರರು ಇವು ಮುಖ್ಯವಾದ ವಿಷಯಗಳು.

ಇದಕ್ಕಾಗಿಯೇ ಭಾರತ—ಅಮೆರಿಕ ತಾಂತ್ರಿಕ ಸಹಕಾರ ಕಾರ್ಯಕ್ರಮದ ಪ್ರ

(೧೧ನೆ. ಪುಟ ನೋಡಿರಿ)

THE CANARA MUTUAL ASSURANCE COMPANY, LTD.,
Managing Director. T. R. A PAI
Head Office. UDIPI, S. INDIA.] [Estd: 1935
ಅತ್ಯುತ್ತಮ ಲಾಭಾಂಶ
ಬಾಧ್ಯಸ್ಥ ಪಾಲಿಸಿಗಳಿಗೆ ಸಾಲಿಯಾನ ಸಾವಿರಕ್ಕೆ
ರೂ. 18/— ಆಜೀವ ವಿಮೆಗೆ ○ ರೂ. 15/— ಉಂಬಳಿ ವಿಮೆಗೆ
31-12 1953ನೇ ತಾರೀಕಿಗಾದ 1951ರಿಂದ 1953ರ ವರೆಗಿನ ಅವಧಿಯ ವಿಮಾಗಣನೆಯ ಫಲಿತಾಂಶ.
ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್
ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.] [ಸ್ಥಾಪನೆ: ೧೯೩೫.
ಸ್ಥಾಪನೆಯಾದಂದಿನಿಂದಲೂ ಪ್ರತಿಯೊಂದು ವರ್ಷಕ್ಕೂ ಲಾಭಾಂಶ ಹಂಚಿದ ಕಂಪೆನಿ.
ತಾ. 1-4-1951ರಿಂದ ಹೊಸ ವಿಮಾಕಾರ್ಯಕ್ಕೆ ಪ್ರೀಮಿಯಂ ದರವನ್ನು ಇಳಿಸಲಾಗಿದೆ.
CHIEF AGENTS:
THE COMMERCIAL CORPORATION OF INDIA, LTD.,
UDIPI, S. India.

ಎಲ್ಲಾ ತರದ ಮಾಹಿತಿಯನ್ನೊಳಗೊಂಡ ಉತ್ತಮ ತರದ
ಮಗ್ಗಿ ಪುಸ್ತಕಗಳು
ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ
1000 ಯಾ 500ಕ್ಕೆ ಅತೀ ರಿಯಾಯತಿ ಇದೆ. -
ಉತ್ತಮ ಕಾಗದದ, ದಪ್ಪವಾದ ಹೊರಕವಚದ, ಎಲ್ಲಾ ತರದ
ಎಕ್ಸರ್ ಸೈಜ್
ಪುಸ್ತಕಗಳು ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ. ದ. ಕ.

ನೆಹರೂರವರ ವಿದೇಶ ಧೋರಣೆಯ ವಿಮರ್ಶೆ

ಅಮೇರಿಕದೊಡನೆ ನಮಗಿರುವ ಮತ ಭೇದದ ಹೇತು

ಈಚೆಗೆ ಬಂದಿರುವ ಪತ್ರಿಕಾ ವರದಿಗಳು ಅಮೇರಿಕ ಹಾಗು ಭಾರತಗಳ ನಡುವಣ ಸಂಬಂಧವು ಸೌಹಾರ್ದಯುತವಾಗಿ ಮುಂದುವರಿಯುವಂತೆ ಅಮೇರಿಕದ ರಾಜಕೀಯ ಧುರೀಣರು ಕೈಗೊಳ್ಳುತ್ತಿರುವ ಪ್ರಯತ್ನಗಳನ್ನು ವಿವರಿಸುತ್ತವೆ—ಕೆಲವು ದಿನಗಳ ಪೂರ್ವದಲ್ಲಿ ಭಾರತದಲ್ಲಿ ಅಮೇರಿಕದ ರಾಯಭಾರಿಯಾಗಿರುವ ಜಾರ್ಜ ಅಲೆನ್ನರು ಅಮೇರಿಕದ ಕಾಂಗ್ರೆಸಿನ ಮುಂದೆ ಸಾಕ್ಷ್ಯವನ್ನಿತ್ತು, ಭಾರತವು ಏಶ್ಯಾದಲ್ಲಿಯೇ ಪ್ರಜಾಪ್ರಭುತ್ವದ ಮಹಾ ಪ್ರಯೋಗವೆಂದು ಸಾರುತ್ತ, ಆರ್ಥಿಕ ಸಹಾಯವನ್ನು ನೀಡುತ್ತಿರುವ ಅವಶ್ಯಕತೆಯನ್ನು ಒತ್ತಿ ಹೇಳಿದರು. ಮೊನ್ನೆ ತಾನೆ ಅಮೇರಿಕದ ರಾಜ್ಯ ಮಂತ್ರಿ ಡಲ್ಲೇಸರು ಸಹ ಇದೇ ಅಭಿಪ್ರಾಯವನ್ನು ಪ್ರಕಟಪಡಿಸಿದರು. ಉಭಯ ರಾಷ್ಟ್ರಗಳ ವಿದೇಶ ಧೋರಣೆಯಲ್ಲಿ ಭಿನ್ನಾಭಿಪ್ರಾಯ ಕಂಡು ಬಂದರೂ ಭಾರತಕ್ಕೆ ಆರ್ಥಿಕ ಸಹಾಯವನ್ನು ಅಮೇರಿಕ ಮುಂದುವರಿಸಬೇಕೆಂದು ಡಲ್ಲೇಸರು ಆಗ್ರಹಪಟ್ಟರು. ಉಭಯತರನ್ನು ಬಂಧಿಸುವ ಸೂತ್ರವೆಂದರೆ ಪ್ರಜಾಪ್ರಭುತ್ವದಲ್ಲಿರುವ ನಿಷ್ಠೆಯೇ ಆಗಿದೆ. ಡಲ್ಲೇಸರ ಮಾತಿನಲ್ಲಿ "ಭಾರತದ ಜನರು ಮತ್ತು ಧುರೀಣರು ಪ್ರಜಾಪ್ರಭುತ್ವ ಪದ್ಧತಿಯ ಸರಕಾರಕ್ಕೆ ಬದ್ಧರಾಗಿದ್ದಾರೆ. ಪ್ರಜಾಸತ್ತಾತ್ಮಕ ಸಂಸ್ಥೆಗಳ ಬೆಳವಣಿಗೆಗೆ ಅವಶ್ಯವಿರುವ ಆರ್ಥಿಕ ಪ್ರಗತಿಯನ್ನು ಸಾಧಿಸಲು ಭಾರತ ವಿಶೇಷವಾಗಿ ಪ್ರಯತ್ನಿಸುತ್ತಿದೆ" ಹೀಗಿದ್ದರೂ ಅಮೇರಿಕೆಯ ಜನರಲ್ಲಿ ಭಾರತದ ಕುರಿತಾಗಿಯೂ ಅಮೇರಿಕೆಯ ಕುರಿತಾಗಿ ಭಾರತದಲ್ಲಿಯೂ ತಪ್ಪು ತಿಳುವಳಿಕೆ ಮಾಯವಾಗಿಲ್ಲ. ಅಮೇರಿಕದ ವಿದೇಶ ಖಾತೆಯು ಈಚೆಗೆ ಭಾರತದ ಪಂಚಯ ಮಾಡಿಕೊಡುವ ಪುಸ್ತಕವೊಂದನ್ನು ಆ ರಾಜ್ಯದ ಪ್ರಜೆಗಳ ಪ್ರಯೋಜನಕ್ಕೋಸ್ಕರ ಪ್ರಕಟಿಸಿದೆ. ಪತ್ರಿಕೆಗಳಲ್ಲಿ ಸಹ ಉಭಯ ರಾಷ್ಟ್ರಗಳ ಕುರಿತು ಹೆಚ್ಚಿನ ತಿಳುವಳಿಕೆಯನ್ನು ಮಾಡಿಸುವ ಲೇಖನಗಳು ಪ್ರಕಟವಾಗುತ್ತವೆ. "ದಿ ವರ್ಲ್ಡ" "ಫಾರೈನ್ ಎಫೇರ್ಸ" ಮುಂತಾದ ಪತ್ರಿಕೆಗಳಲ್ಲಿ ನೆಹರೂರ ವಿದೇಶ ಧೋರಣೆಯ ವಿಮರ್ಶೆ ಹಾಗು ಭಾರತ—ಅಮೇರಿಕೆಗಳ ಮತಭೇದವನ್ನು ಕುರಿತು ಪ್ರಸಿದ್ಧಿಸಲ್ಪಟ್ಟ ಬರೆಹಗಳು ವಿಷಯದ ಒಳ ಹೊರಗನ್ನು ಬಿಚ್ಚಿ ತೋರಿಸುತ್ತವೆ.

ಸ್ವಹಿತ ದೃಷ್ಟಿ

ಭಾರತದಲ್ಲಿ ಸ್ವಾತಂತ್ರ್ಯ ಸಮರವು ನಡೆಯುತಿದ್ದಾಗ ಇಲ್ಲಿಯ ಧುರೀಣರು ಅಮೇರಿಕವನ್ನು ಸ್ನೇಹದೃಷ್ಟಿಯಿಂದ ಕಂಡು ಸಹಾನುಭೂತಿಯನ್ನೂ ಸಹಾಯವನ್ನೂ ಅಪೇಕ್ಷಿಸುತಿದ್ದರು. ಪಂಜಾಬ ಕೇಸರಿ ಲಾಲಾ ಲಜಪತ ರಾಯರಂತವರು ಪ್ರಥಮ ಮಹಾ ಯುದ್ಧಕಾಲದಷ್ಟು ಹಿಂದೆಯೇ ಅಮೇರಿಕೆಯೊಡನೆ ಸೌಹಾರ್ದ ಸಂಬಂಧವನ್ನು ಸ್ಥಾಪಿಸುವ ಪ್ರಯತ್ನ ಕೈಗೊಂಡಿದ್ದರು. ಸ್ವಾತಂತ್ರ್ಯೋತ್ತರದಲ್ಲಿ ಭಾರತವು ಸ್ನೇಹ ಹಸ್ತವನ್ನು ನೀಡಿದಾಗ ಅಮೇರಿಕವು ಅದನ್ನು ಸ್ವಾಗತಿಸಿತು; ಮತ್ತು ಆರ್ಥಿಕ ಸಹಾಯವನ್ನಿತ್ತು ಭಾರತದ ಪುನಾರಚನೆಗೆ ನೆರವಾಯಿತು. ದುರ್ದೈವದಿಂದ ಈಚೆಗೆ ಎರಡು ಮೂರು ವರ್ಷಗಳಿಂದ ಹಿಂದಿನಷ್ಟು ಪ್ರಗಾಢವಾದ ಮೈತ್ರಿಯು ಕಂಡುಬರುವುದಿಲ್ಲ. ಅಮೇರಿಕದಲ್ಲಿ ಭಾರತವು ಕಮ್ಯುನಿಸ್ಟರ ಪರವಾಗಿ ಆಟವಾಡುತ್ತದೆ ಎಂಬ ಸಂಶಯ ತಲೆದೋರಿದೆ; ಭಾರತದಲ್ಲಿ ಅಮೇರಿಕವು ಏಶಿಯದಲ್ಲಿ ರಾಜಕೀಯ ಚದುರಂಗವನ್ನು ಆಡುತ್ತಾ ಅದನ್ನು ಮರಳಿ ದಾಸ್ಯಕೂಪಕ್ಕೆ ತಳ್ಳುತ್ತದೆಂಬ ಭಾವನೆ ಉಂಟಾಗಿದೆ. ನಿಷ್ಪಕ್ಷಪಾತ ನಿರೀಕ್ಷಕರು ಇಂತಹ ದ್ವಂದ್ವಕ್ಕೇನು ಕಾರಣ ಎಂದು ದೀರ್ಘವಾಗಿ ವಿಚಾರಿಸಿ, ಒಂದು ಸಮಂಜಸವಾದ ನಿರ್ಣಯಕ್ಕೆ ಬಂದಿರುವರು. ಅವರ ಹೇಳಿಕೆಯಂತೆ ದ್ವಿತೀಯ ಮಹಾಯುದ್ಧದ ಬಳಿಕ ಅಮೇರಿಕೆಯು ಜಾಗತಿಕ ರಾಜಕಾರಣದಲ್ಲಿ ಹೆಚ್ಚಿನ ಹೊಣೆಗಾರಿಕೆಯನ್ನು ಹೊತ್ತುಕೊಳ್ಳಬೇಕಾಗಿ ಬಂತು; ಪರಿಣಾಮವಾಗಿ ಅದರ ವಿದೇಶಧೋರಣೆಯು ಕೆಲವು ಕಟ್ಟುನಿಟ್ಟಾದ ಸೂತ್ರಗಳನ್ನು ಅವಲಂಬಿಸಬೇಕಾಯಿತು. ಇತ್ತ ಭಾರತವೂ ೧೯೪೭ರಲ್ಲಿ ಸ್ವತಂತ್ರಗೊಂಡುದರಿಂದ, ನೆಹರೂ ಸರಕಾರದ ಹೊಣೆಗಾರಿಕೆಗಳು ಸ್ವಯಮೇವ ಹೆಚ್ಚಿಕೊಂಡವು. ವಿದೇಶಧೋರಣೆಯು ರಾಷ್ಟ್ರದ ಪ್ರತಿಷ್ಠೆಯನ್ನು ಉಳಿಸಿಕೊಳ್ಳುವುದನ್ನೇ ಪ್ರಥಮ ಧ್ಯೇಯವಾಗಿಟ್ಟುಕೊಳ್ಳಬೇಕಾಯಿತು; ಬೇರೆ ಎಲ್ಲ ನೈತಿಕ ಹಾಗು ಭೌತಿಕ ವಿಚಾರಗಳು ಹಿನ್ನೆಲೆಗೆ ಸರಿದವು. ಹೀಗೆ ಉಭಯರಾಷ್ಟ್ರಗಳೂ "ಸ್ವಹಿತ"ವನ್ನು ಜಾಗರೂಕತೆಯಿಂದ ಕಾಯ್ದುಕೊಳ್ಳಬೇಕಾದ ಅಗತ್ಯ ಬಿದ್ದುದರಿಂದ, ಜಾಗತಿಕ ಸಮಸ್ಯೆಗಳನ್ನು ತಮ್ಮದೇ ದೃಷ್ಟಿಕೋಣದಿಂದ ವಿಚಾರಿಸಿ, ಅವು ಒಂದು ನಿರ್ಣಯಕ್ಕೆ ಬರುವುದು ಅನಿವಾರ್ಯವೆನಿಸಿತು. ಭಾರತ—ಅಮೇರಿಕಾಗಳ ಮತಭೇದವು ವಿದೇಶ ಧೋರಣೆಗಷ್ಟೇ ಸೀಮಿತವಿರುತ್ತದೆ; ಇಲ್ಲಿ ಮಾತ್ರ ಸ್ಪರ್ಧೆ ಹಾಗು ವಿರೋಧ ಭಾವನೆ ಕಂಡು ಬರುತ್ತದೆ. ಉಭಯ ರಾಷ್ಟ್ರಗಳಿಗೆ ನೇರಾಗಿ ಸಂಬಂಧಿಸಿದ ವಿಷಯಗಳನ್ನು ತೆಗೆದುಕೊಂಡರೆ, ಪರಸ್ಪರರಲ್ಲಿ ಸ್ನೇಹದ ಸಸಿ ಬಲವಾಗಿ ಬೇರೂರಿರುವುದನ್ನೇ ಕಾಣುತ್ತೇವೆ.

ಏಶಿಯದ ಹಿತಚಿಂತನೆ

ಸ್ವಹಿತ ರಕ್ಷಣೆಗೋಸ್ಕರ ಭಾರತವು ಅನುಸರಿಸುತ್ತಿರುವ "ಸ್ವತಂತ್ರ" ವಿದೇಶ ಧೋರಣೆಯ ಮರ್ಮವನ್ನು ಅಮೇರಿಕದ ಜನರಿಗೆ ತಿಳಿಯಲು ತುಂಬ ಕಷ್ಟವಾಗುತ್ತದೆ. ಲೋಕದಲ್ಲಿ ಕಮ್ಯುನಿಸ್ಟ ಮತ್ತು ಕಮ್ಯುನಿಸ್ಟೇತರ ಎಂಬ ಎರಡೇ ಪಕ್ಷಗಳನ್ನು ಕಾಣುವ ಅಮೇರಿಕದ ನಾಗರಿಕರು ತಮ್ಮ ನಿಲುವಿಗೆ ಕೆಲವೊಮ್ಮೆ ವಿರೋಧವಾಗಿ ವರ್ತಿಸುವ ಭಾರತದ ಧುರೀಣರನ್ನು ಕಮ್ಯುನಿಸ್ಟರ ಪಕ್ಷಪಾತಿಗಳೆಂದೇ ಅನ್ಯಾಯವಾಗಿ ತೀರ್ಮಾನಿಸಿ, ಟೀಕಿಸುತ್ತಾರೆ. ಭಾರತವು ತನ್ನ ನಿಲುಮೆಯನ್ನು "ತಟಸ್ಥ"ವೆಂದು ಕರೆದು ಕೊಳ್ಳುತಿದ್ದರೆ ಅಮೇರಿಕದಲ್ಲಿ ಅದರ ವಿರುದ್ಧ ಭಾವನೆಯು ಈಗಿನಷ್ಟು ಪ್ರಚೋದಿಸಲ್ಪಡುತ್ತಿರಲಿಲ್ಲವೇನೋ! ತಟಸ್ಥ ಶಬ್ದ ಪ್ರಯೋಗದಿಂದ ಭಾರತವು ಜಾಗತಿಕ ಘಟನೆಗಳ ಕುರಿತು ಸಂವೇದನಾ ರಹಿತವಾಗಿದೆಯೆಂದೂ ನಿಷ್ಕ್ರಿಯವಿರುತ್ತದೆಂದೂ, ಅರ್ಥವಾಗುತ್ತದೆ, ನೆಹರೂ ಇಂತಹ ನಿಲುಮೆಯನ್ನು ಸ್ವೀಕರಿಸುತ್ತಿಲ್ಲ. ಭಾರತವು ಪ್ರತಿಯೊಂದೂ ಸಂದರ್ಭದ ಯೋಗ್ಯತೆಯನ್ನು ತನ್ನದೇ ದೃಷ್ಟಿಯಿಂದ ವಿವೇಚಿಸಿ, ತೂಗಿ ನೋಡಿ, ತನ್ನ ಪ್ರತಿಕ್ರಿಯೆಯನ್ನು ತಿಳಿಸುತ್ತದೆ. ಈ ಸ್ವತಂತ್ರ ಧೋರಣೆಯಲ್ಲಿ ಭಾರತದ ಜೀವಾಳವಾಗಿರುವ ನೈತಿಕ ದೃಷ್ಟಿಕೋಣವು ಸ್ಪಷ್ಟವಾಗಿ ಪ್ರತಿಫಲಿಸುತ್ತದೆ. ಸಂಧಿ ಸಾಧಕ ನೀತಿಯ ಪೂಜಾರಿಗಳಾಗಿರುವ ಅಮೇರಿಕದ ನಾಗರಿಕರಿಗೆ ಶಸ್ತ್ರಾಸ್ತ್ರಗಳ ಸಂಗ್ರಹದ ವಿರುದ್ಧ ನೈತಿಕ ಶಕ್ತಿಯನ್ನು ಎತ್ತಿಹಿಡಿಯುವ ಭಾರತೀಯರ ಮನಸ್ಸು ಅರ್ಥವಾಗುತ್ತದಿಲ್ಲ. ಅಮೇರಿಕದ ಮನಸ್ಸನ್ನು ಹೊಕ್ಕಿರದ ಇನ್ನೊಂದು ಸಂಗತಿಯೆಂದರೆ ಭಾರತವು ಏಶಿಯಾದ ಪರವಾಗಿ ನಡೆಸುವ ವಕಾಲತು. ಹಿಂದುಳಿದ ಏಶಿಯಾದ ರಾಷ್ಟ್ರಗಳು ಆರ್ಥಿಕ ಪ್ರಗತಿಯನ್ನು ಸಾಧಿಸಿಕೊಳ್ಳುವುದಕ್ಕೋಸ್ಕರ ಶಾಂತಿಪಕ್ಷಕ್ಕೆ ಒಂದು ತಲೆಮಾರಿನವರೆಗಾದರೂ ದುಡಿಯುವುದು ಅತ್ಯಗತ್ಯವೆಂದು ನೆಹರೂರ ಅಭಿಪ್ರಾಯ. ದ್ವಿತೀಯ ಮಹಾ ಯುದ್ಧದ ಬಳಿಕವೇ ಬರ್ಮಾ, ಇಂಡೋನೇಶಿಯಾ ಮುಂತಾದ ದಕ್ಷಿಣ ಏಶಿಯಾದ ರಾಷ್ಟ್ರಗಳು ಸ್ವತಂತ್ರಗೊಂಡವು. ಅವು ತಮ್ಮ ಸ್ವಂತ ಕಾಲ ಮೇಲೆ ನಿಂತು ಪ್ರಜೆಗಳು ಸಮೃದ್ಧ ಜೀವನವನ್ನು ಪಡೆಯುವಂತಾಗಬೇಕಾದರೆ, ಇಲ್ಲಿ ಶಾಂತಿ ಹಾಗು ಸೌಹಾರ್ದಮಯವಾದ ವಾತಾವರಣ ಮೊದಲು ನೆಲೆಸಬೇಕು; ಮತ್ತು ಎಲ್ಲ ಶಕ್ತಿ ಸಾಮರ್ಥ್ಯವನ್ನೂ ಆರ್ಥಿಕ ಹಾಗು ಸಾಮಾಜಿಕ ಪುನಾರಚನೆಗಾಗಿ ಉಪಯೋಗಿಸಿಕೊಳ್ಳಬೇಕು. ಅಮೇರಿಕದ ಶಸ್ತ್ರ ಸಂಗ್ರಹ ನೀತಿಯೂ ಸೈನಿಕ ದೊಡ್ಡಸ್ತಿಕೆಯೂ ಈ ವಲಯದ ಶಾಂತಿಯನ್ನು ಕೆಡಿಸಿ ಬಿಡುತ್ತದೆಂದೂ ಈ ದೃಷ್ಟಿಯಿಂದ ಏಶಿಯಾದ ಏಳಿಗೆಗೆ ಅಮೇರಿಕಾದ ವರ್ತನೆ ಪ್ರತಿಕೂಲವಿರುವುದೆಂದೂ ಭಾರತ ಶಂಕಿಸುತ್ತದೆ. ರಶಿಯಾವಾಗಲೀ ಅಮೇರಿಕೆಯಾಗಲೀ ಇದುವರೆಗೆ ಅನುಸರಿಸುತ್ತಾ ಬಂದ ನೀತಿಯು ಏಶಿಯದ ಜನತೆಗೆ ಯಾವುದೇ ಒಳಿತನ್ನುಂಟುಮಾಡಿಲ್ಲ; ಭಾರತವನ್ನೊಳಗೊಂಡು ಏಶಿಯದ ರಾಷ್ಟ್ರಗಳು ಇವೆರಡು ರಾಷ್ಟ್ರಗಳಲ್ಲಿ ಯಾವುದಾದರೊಂದನ್ನು ಆಶ್ರಯಿಸುವ ಅಥವಾ ಅನುಸರಿಸುವ ಭಾವನೆಯನ್ನುಂಟುಮಾಡುವಷ್ಟು, ಆ ದೇಶಗಳ ವಿದೇಶನೀತಿ ದೋಷವಿದೂರವೂ ಸಫಲವೂ ಆಗಿಲ್ಲ. ಅಂದಬಳಿಕ, "ಸ್ವತಂತ್ರ" ವಿದೇಶ ಧೋರಣೆಯನ್ನು ಭಾರತ ಬಿಟ್ಟುಗೊಡುವುದು ಮೂರ್ಖತನವಾಗುತ್ತದೆ.

ಅಪ್ರಿಯ ಕಮ್ಯೂನಿಸಂ

ಅಮೇರಿಕದ ಯುದ್ಧಪ್ರಚೋದಕ ನೀತಿಯನ್ನು ಶಾಂತಿ ಪ್ರಿಯ ರಾಷ್ಟ್ರವಾದ ಭಾರತವು ಮೆಚ್ಚಿಕೊಳ್ಳುವುದು ಸಾಧ್ಯವೇ ಇಲ್ಲ—ಕಮ್ಯುನಿಸ್ಟರ ವಿರುದ್ಧ ಸಂಯುಕ್ತರಂಗವನ್ನು ರಚಿಸುವ ಹುಮ್ಮಸ್ಸನ್ನು ಅಮೇರಿಕಾದ ಪ್ರಭೃತಿಗಳು ತೋರಿಸುತ್ತಾರೆ. ಕಮ್ಯುನಿಸಂ ಭಾರತಕ್ಕೂ ಸರಿಬೀಳುವುದಿಲ್ಲ. ದ್ವಿತೀಯ ಮಹಾಯುದ್ಧ ಕಾಲದಲ್ಲಿ [illegible] ಅಮೇರಿಕೆಗಳು ರಶಿಯಾದೊಡನೆ ಮೈತ್ರಿಮಾಡಿಕೊಂಡಾಗ, ಭಾರತದಲ್ಲಿ ಕಮ್ಯುನಿಸ್ಟರು ಪ್ರಚಾರವನ್ನು ಪ್ರಾರಂಭಿಸಿದರು. ಆಗ ಬಿತ್ತಿದ ಬೀಜವು ೧೯೪೮ರಲ್ಲಿ ಹೈದರಾಬಾದು ಮತ್ತಿತರ ಪ್ರದೇಶಗಳಲ್ಲಿ ಮೊಳಕೆಯೊಡೆದು ಹಿಂಸೆಯನ್ನು ತೊಡಗಲು, ನೆಹರೂ ಸರಕಾರ ಪೋಲೀಸು ಕ್ರಮವನ್ನು ತೆಗೆದುಕೊಂಡು, ಅದರ ನಾಶಮಾಡಿತು. ನೆಹರೂರವರು ಜಾತಿ ಭೂತವನ್ನೆಷ್ಟೋ ಅಷ್ಟೇ ಕಮ್ಯುನಿಸಮ್ಮನ್ನೂ ತೆಗಳುತ್ತಾರೆ, ಮತ್ತು ಭಾರತೀಯರಿಗೆ ಅವುಗಳ ವಿರುದ್ಧ ಎಚ್ಚರಿಕೆಯನ್ನು ಕೊಡುತ್ತಾರೆ. ಅತೃಪ್ತಿ, ಅಶಾಂತಿ ಹಾಗು ಅಭಾವಗಳ ಬುನಾದಿಯಲ್ಲೇ ಕಮ್ಯುನಿಸಂ ಬೇರೂರಬಲ್ಲುದೆಂಬುದನ್ನು ತಿಳಿದ ನೆಹರೂ ಸರಕಾರ ಪಂಚವಾರ್ಷಿಕ ಯೋಜನೆಯೇ ಮುಂತಾದ ಕ್ರಮಗಳನ್ನು ಕೈಗೊಂಡು ಪ್ರಜಾಪ್ರಭುತ್ವ ಪದ್ಧತಿಯನ್ನು ಆಕರ್ಷಣೀಯವಾಗಿ ಮಾಡಲು ಹಾಗು

MAHATMA GANDHI MEMORIAL COLLEGE, UDIPI.

(Affiliated to Madras University)

The College reopens for admissions to Junior classes and regular work for Senior classes on June 12, 1954, and for regular work in the Junior classes on June 21, 1954. Applications in prescribed form for admission should reach the undersigned as soon as possible after the publication of the S. S. L. C. and Intermediate examinations and in any case before June 23, 1954. Limited number of seats available in the Hostel. Forms of application and copies of prospectus may be obtained from the College Office.

The following courses are offered under Parts II and III:—

INTERMEDIATE:
Part II: Kannada; Hindi & Sanskrit.
Part III: (1) Mathematics; Physics & Chemistry;
(2) Natural Science; Physics & Chemistry;
(3) Mathematics; Commerce & Logic;
(4) Modern History; Indian History & Logic or Psychology; or
(5) Indian History; Commerce, and Logic.

B. A. Degree Course:
Part II: Kannada and Hindi;
Part III: Group IV b: Economics Main and History subsidiary.

H. Sunder Rao, M. A.,
Principal.

ಕಮ್ಯೂನಿಸಮ್ಮಿನ ಕಡೆಗಿರಬಹುದಾದ ಸೆಳೆತವನ್ನು ಕಡಿಮೆಗೊಳಿಸಲು ನೋಡುತ್ತಾರೆ. ಶಸ್ತ್ರ ಸಂಗ್ರಹವಲ್ಲ, ಆರ್ಥಿಕ ಪುನಾರಚನೆಯೇ ಕಮ್ಯೂನಿಸಮ್ಮಿನ ವಿರುದ್ಧ ಹೋರಾಡುವ ಯುದ್ಧದ ಸಿದ್ಧತೆಯೆಂದು ನೆಹರೂ ಹೇಳುತ್ತಾರೆ. ಮೂಲಭೂತವಾದ ಈ ತತ್ವವನ್ನು ಅಮೇರಿಕದವರು ತಿಳಿದುಕೊಂಡಿಲ್ಲ. ಬದಲು ಅವರು ರಷಿಯಾ ಹಾಗು "ಕೆಂಪು" ಚೀನಗಳೊಡನೆ ಮೈತ್ರಿಯಿಂದಿರುವ ಭಾರತದ ಪ್ರಾಮಾಣಿಕತೆಯನ್ನು ಸಂದೇಹ ದೃಷ್ಟಿಯಿಂದ ನೋಡುತ್ತಾರೆ. ಭಾರತದ ವ್ಯಾವಹಾರಿಕ ದೃಷ್ಟಿಯು ಅವರಿಗೆ ಪಥ್ಯವಾಗುವುದಿಲ್ಲ. ತನ್ನ ಉತ್ತರ ಗಡಿಯಲ್ಲಿ ಒಂದು ಸಾವಿರ ಮೈಲುಗಳಿಗೂ ಹೆಚ್ಚು ಉದ್ದಕ್ಕೆ ಕೆಂಪು ಚೀನ ವ್ಯಾಪಿಸಿದೆಯೆಂದೂ ನೆರೆಯವನ ಕೋಪವನ್ನು ಕಟ್ಟಿಕೊಂಡು ಅಮೇರಿಕದ ನೆರವಿನ ಮೇಲೆ ಭರವಸೆ ಇಟ್ಟುಕೊಂಡ ಪಕ್ಷದಲ್ಲಿ ಸಾವಿರಾರು ಮೈಲು ದೂರದಿಂದ ಆ ಸಹಾಯ ಬರುವಷ್ಟರಲ್ಲಿಯೇ ತಾನು ಅಪಾಯಕರ ಪರಿಸ್ಥಿತಿಯನ್ನು ಇದಿರಿಸಬೇಕಾದೀತೆಂದೂ ಭಾರತ ಸ್ಪಷ್ಟವಾಗಿ ತಿಳಿದುಕೊಂಡಿದೆ. ಈ ಮರ್ಮವನ್ನು ಅಮೇರಿಕದ ಪ್ರಜೆಗಳು ಗ್ರಹಿಸಿಲ್ಲ—ಅನ್ಯಥಾ ಪಾಕಿಸ್ತಾನಕ್ಕೆ ಅಮೇರಿಕೆಯು ಕೊಡಮಾಡಿದ ಸೈನಿಕ ಸಹಾಯವನ್ನು ನೆಹರೂ ವಿರೋಧಿಸಿದುದಕ್ಕೆ ಅವರು ಸಿಟ್ಟಿಗೇಳುತ್ತಿರಲಿಲ್ಲ. ಪಾಕಿಸ್ತಾನಕ್ಕೆ ಕೊಟ್ಟ ಸೈನಿಕ ಸಹಾಯವು ಕಮ್ಯೂನಿಸ್ಟ ಮಾರಿಯನ್ನು ನಮ್ಮ ಮನೆ ಬಾಗಿಲಿಗೆ ತಂದು ನಿಲ್ಲಿಸುತ್ತದೆಂದು ಕಂಡುಕೊಂಡ ನೆಹರೂರ ಬುದ್ಧಿವಂತಿಕೆಯನ್ನು ಮೆಚ್ಚದೆ, ಅಮೇರಿಕ ದೊಡ್ಡ ತಪ್ಪು ಮಾಡುತ್ತದೆ.

ವಸಾಹತು ವಾದ

ಕಮ್ಯೂನಿಸಮ್ಮಿನಷ್ಟೇ ಜುಗುಪ್ಸೆಯನ್ನು ಭಾರತ ವಸಾಹತು ಸಾಮ್ರಾಜ್ಯವಾದದ ಮಟ್ಟಿಗೂ ತೋರಿಸುತ್ತದೆ—ಸ್ವತಂತ್ರ ಜಗತ್ತನ್ನು ರಕ್ಷಿಸುತ್ತೇನೆಂದು ಜಂಭ ಕೊಚ್ಚಿಕೊಳ್ಳುವ ಅಮೇರಿಕೆಯು ಫ್ರೆಂಚ ಹಾಗು ಬ್ರಿಟಿಷ ವಸಾಹತು ಧೋರಣೆಯ ವಿಷಯದಲ್ಲಿ ಸಹಾನುಭೂತಿ ಪೂರ್ವಕವಾಗಿ ನಡೆದುಕೊಳ್ಳುತ್ತಿರುವುದು ಭಾರತೀಯರಿಗೆ [illegible] ಇಂಡೋಚೀನದ [illegible] ದಕ್ಷಿಣ ಆಫ್ರಿಕದ [illegible] ಮೊರೊಕ್ಕೊ ಟ್ಯುನೀಸಿಯಾಗಳ ಪ್ರಶ್ನೆಯಾಗಲೀ ಸ್ವಾತಂತ್ರ್ಯದ [illegible] ಭಾರತಕ್ಕೆ ಅಮೇರಿಕದ ವರ್ತನೆಯಲ್ಲಿ [illegible] ಗೋಚರಿಸುತ್ತದೆ. ಅಮೇರಿಕದ ಧನ ಸಹಾಯ ಮುಂತಾದವುಗಳಿಲ್ಲದಿರುತ್ತಿದ್ದರೆ, ಈ ವಿದೇಶೀಯರಿಗೆ ತಮ್ಮ ವಸಾಹತುಗಳನ್ನು ಕಾಯ್ದುಕೊಳ್ಳಲಾಗುತ್ತಿರಲಿಲ್ಲವೆಂದೂ ವಸಾಹತುವಾದಕ್ಕೆ ಮೂಕ ಸಮ್ಮತಿಯನ್ನು ನೀಡುವ ಅಮೇರಿಕದ ಸ್ವತಂತ್ರ ಜಗತ್ತಿನ ಕಲ್ಪನೆಯು ಕೇವಲ ಟೊಳ್ಳೆಂದೂ ಭಾರತ ತಿಳಿಯುತ್ತದೆ. ಶತಮಾನಗಳ ಕಾಲ ವಸಾಹತು ದಾಸ್ಯದಲ್ಲಿ ಕೊಳೆಯುತ್ತಿದ್ದ ಭಾರತೀಯರಿಗೆ ಅಮೇರಿಕದ ಸೈನಿಕರು ಕಮ್ಯೂನಿಸ್ಟರಿಂದ ರಕ್ಷಿಸಲು ಏಶಿಯಾದಲ್ಲಿ ಪ್ರವೇಶಿಸಿರುವರೆಂದು ನಂಬಲಾಗುವುದಿಲ್ಲ; ಏಶಿಯದ ಮೇಲೆ ಪ್ರಭುತ್ವ ಸ್ಥಾಪಿಸುವದೇ ಅಮೇರಿಕದ ಉದ್ದೇಶವೆಂದು ತೋರುತ್ತದೆ. ಹಾಗೆಯೇ ಅಮೇರಿಕವು ಏಶಿಯದ ರಾಷ್ಟ್ರಗಳಿಗೆ ಒದಗಿಸುವ ಬಂಡವಾಳವು ಶೋಷಣೆಗೆ ತಳಹದಿಯಾಗುವುದೆಂಬ ಭಯವನ್ನೂ ಭಾರತ ಹೊಂದಿದೆ. ಪಾಕ—ಅಮೇರಿಕಾ ಸೈನಿಕ ಒಪ್ಪಂದವನ್ನು ಖಂಡಿಸುವಾಗ ನೆಹರೂರವರು ಶತಮಾನಗಳ ಹಿಂದೆ ಸಮ್ಮತಿಯ ತುಂಡರಸರ ರಕ್ಷಣೆಗೋಸ್ಕರ ಇಂಗ್ಲಿಷರು ತಮ್ಮ ಸೈನ್ಯ ಸಾಮಗ್ರಿಗಳನ್ನು ಸಹಾಯವಾಗಿ ನೀಡುತ್ತಿದ್ದದ್ದೂ ಆ ಬಳಿಕ ಇಡೀ ಭಾರತವನ್ನೆ ತಮ್ಮ ಭದ್ರಮುಷ್ಟಿಯೊಳಗೆ ತಂದು ಗುಲಾಮಗಿರಿಗೆ ನೂಕಿದ್ದೂ ಚರಿತ್ರೆಯ ಸತ್ಯವೆಂದೂ ಇತಿಹಾಸದ ಈ ಘಟನೆಯ ಪುನರಾವರ್ತನೆ ಆಗುತ್ತಿದೆಯೋ ಏನೋ ಎಂದೂ ಹೇಳಿದುದನ್ನು ಇಲ್ಲಿ ಸ್ಮರಿಸಬಹುದು. ಏಶಿಯಾದಲ್ಲಿ ಇಂದು ರಾಷ್ಟ್ರೀಯ ಭಾವನೆ ಜಾಗೃತವಾಗಿದೆಯೆಂದೂ ಅದರ ಭವಿಷ್ಯತ್ತಿನ ನಿರ್ಣಯದಲ್ಲಿ ಪರಕೀಯರು ಕಾಲ್ತೊಡಕಿಸಿಕೊಳ್ಳುವುದು ಅನಗತ್ಯವೆಂದೂ ಭಾರತ ಭಾವಿಸುತ್ತದೆ. ಪ್ರತಿಯೊಂದು ರಾಷ್ಟ್ರವೂ ಸ್ವತಂತ್ರವಾಗಿ ವಿಚಾರಿಸುವ ಧೋರಣೆ ಇಟ್ಟುಕೊಳ್ಳಬೇಕೆಂದು ಅದು ಹೇಳುತ್ತದೆ ಏಶಿಯದ ಹಾಗು ಜಗತ್ತಿನ ಶಾಂತಿಯೇ ಭಾರತದ ಧ್ಯೇಯ: ಇದನ್ನು ಸಾಧಿಸಲು ಅದು ಎಲ್ಲರ ಸ್ನೇಹವನ್ನೂ ಸಹಕಾರವನ್ನೂ ಬಯಸುತ್ತದೆ; ಆದಾಗ್ಯೂ ತನ್ನ ಸ್ವತಂತ್ರ ಅಸ್ತಿತ್ವವನ್ನು ಕಳೆದುಕೊಳ್ಳುವುದಕ್ಕೆ ಅದು ಸಿದ್ಧವಿಲ್ಲ. ಶಾಂತಿಸ್ಥಾಪನೆಗೋಸ್ಕರ ಶೀತಲ ಯುದ್ಧದಲ್ಲಿ ತೊಡಗಬೇಕೆಂಬ ಅಮೇರಿಕದ ವಾದವನ್ನೂ ಅದು ಮನ್ನಿಸುವುದಿಲ್ಲ; ಕಮ್ಯೂನಿಸಮ್ಮಿನ ಪ್ರಸಾರವನ್ನು ತಡೆಗಟ್ಟುವುದಕ್ಕೆ ಶೀತಲ ಯುದ್ಧ ಸಹಕಾರಿ ಎಂಬ ಸಿದ್ಧಾಂತವನ್ನೂ ಭಾರತ ಒಪ್ಪುವುದಿಲ್ಲ. ಪಾಶ್ಚಾತ್ಯರ ದೃಷ್ಟಿಯಲ್ಲಿ ಭಾರತದ ನಿರ್ಣಯಗಳು ಮೂರ್ಖತನವೆಂದು ಕಾಣಬಹುದು— ಆದರೆ ಭಾರತ ತನ್ನ ನಿರ್ಣಯ ಸ್ವಾತಂತ್ರ್ಯವನ್ನು ಮಾರಲು ಬಯಸುವುದಿಲ್ಲ. ಪ್ರಜಾಪ್ರಭುತ್ವದಲ್ಲಿ ಅದಕ್ಕೆ ತುಂಬ ನಿಷ್ಠೆ ಇದೆ; ಮತ್ತು ಶ್ರದ್ಧೆ ಹಾಗು ಆಸ್ಥೆಯಿಂದ ದುಡಿದು ಜನತೆಗೆ ಹಿತವುಂಟುಮಾಡಬೇಕೆಂದು ಅದು ಸಾಹಸಪಡುತ್ತದೆ, ಅಮೇರಿಕ ಇದನ್ನು ಕಂಡುಕೊಂಡಿದೆ: ಆದುದರಿಂದ ವಿದೇಶ ಧೋರಣೆಯಲ್ಲಿ ಮತಭೇದವಿದ್ದರೂ—ಅದಕ್ಕಾಗಿ ಖೇದವೆನಿಸಿದರೂ ಆರ್ಥಿಕ ಪುನಾರಚನೆಯ ವಿಷಯದಲ್ಲಿ ಕೈಲಾದಷ್ಟು ನೆರವನ್ನು ಭಾರತಕ್ಕೆ ಯಾವದೇ ಕರಾರುಗಳ ಬಂಧನವಿಲ್ಲದೆ ಕೊಡುತ್ತದೆ.

ಕನ್ನಡ ರಾಜ್ಯ ನಿರ್ಮಾಣದ ಪ್ರಶ್ನೆ

ಹೆಚ್ಚಿನ ವಿವರಗಳು ಬೇಕೆಂದು ಮೈಸೂರಿನ ಅಭಿಪ್ರಾಯ

ರಾಜ್ಯಗಳ ಪುನರ್ಘಟನೆಯ ಪ್ರಶ್ನೆಯನ್ನು ವಿಚಾರಿಸಲು ನೇಮಕ ಹೊಂದಿರುವ ಮೂವರು ಸದಸ್ಯರ ಆಯೋಗವು ದಕ್ಷಿಣ ಭಾರತದಲ್ಲಿ ತನ್ನ ಸಂಚಾರವನ್ನು ಈಗ ತಾನೆ ಮುಗಿಸಿರುವುದು—ಕಳೆದ ವಾರ ಅದು ಕರ್ನಾಟಕದ ಪರವಾಗಿ ಅನೇಕ ಮನವಿಗಳನ್ನು ಸ್ವೀಕರಿಸಿತು. ಮಂಗಳೂರಿನ ವರೆಗೂ ಬಂದು ಜನಾಭಿಪ್ರಾಯವನ್ನು ತಿಳಿದುಕೊಳ್ಳಲು ಅದು ಪ್ರಯತ್ನಿಸಿತು. ನಮ್ಮ ಜಿಲ್ಲೆಯಲ್ಲಿ ಏಕೀಕರಣಕ್ಕೆ ಎಲ್ಲರದೂ ಬೆಂಬಲವಿರುತ್ತದೆಂದು ಪುನಃ ಹೇಳಬೇಕಾಗಿಲ್ಲ. ಕೇರಳದ ಕೆಲವು ಪ್ರಭೃತಿಗಳು ಪಶ್ಚಿಮ ಕರಾವಳಿಯ ಪ್ರಾಂತ್ಯ ಎಂಬುದಾಗಿ ಹೇಳುತ್ತಾ ಸೂಚನೆಗಳನ್ನು ಕೊಡುತ್ತಿರುವರು ಇದನ್ನು ನಮ್ಮ ಜಿಲ್ಲೆ ಸ್ಪಷ್ಟ ಮಾತುಗಳಲ್ಲಿ ಖಂಡಿಸುತ್ತದೆ. ಪಶ್ಚಿಮ ಕರಾವಳಿ ಪ್ರಾಂತ್ಯದ ಕಲ್ಪನೆಯೇ ಟೊಳ್ಳೆಂದು—ನಮಗನಿಸುತ್ತದೆ. ಇಂತಹ ರಾಜ್ಯದ ನಿರ್ಮಾಣವು ಆಯೋಗವನ್ನು ನೇಮಿಸಿದ ಉದ್ದೇಶಕ್ಕೆಯೇ ವ್ಯತಿರಿಕ್ತವೆಂದು ಹೇಳಿದರೂ ತಪ್ಪಾಗದು. ಕೇರಳದ ಕೇಶವ ಮೆನೊನರಿಗೆ ಭಾಷೆಯ ಪ್ರಶ್ನೆಯು ಮಹತ್ವದ್ದಲ್ಲವೆಂದು ತೋರಿದರೂ-ನಮ್ಮ ದೃಷ್ಟಿಯಲ್ಲಿ ಆಡಳಿತ ಹಣಕಾಸು ಮುಂತಾದ ವಿಷಯಗಳಷ್ಟೇ ಪ್ರಾಧಾನ್ಯವು ಭಾಷೆಯ ಸಂಬಂಧಕ್ಕೂ ಸಲ್ಲುತ್ತದೆ. ಆದುದರಿಂದ ದಕ್ಷಿಣ ಕನ್ನಡ, ಕೊಡಗು, ನೀಲಗಿರಿಗಳನ್ನು ಮಲಬಾರು-ತಿರುಕೊಚ್ಚಿಗಳೊಂದಿಗೆ ಸೇರಿಸಬೇಕೆನ್ನುವ ಕೇಶವ ಮೆನೊನರ ಅಭಿಪ್ರಾಯ ನ್ಯಾಯವಲ್ಲವೆಂದು ನಾವು ವಾದಿಸುತ್ತೇವೆ

ಒಂದೇ ಕರ್ನಾಟಕ

ಕೆಲವು ತಿಂಗಳ ಹಿಂದೆ ಮೈಸೂರು ಕಾಂಗ್ರೆಸಿನ ಅಧ್ಯಕ್ಷ ವೀರಣ್ಣ ಗೌಡರು ಎರಡು ಕರ್ನಾಟಕ ರಾಜ್ಯಗಳ ಅದ್ಭುತ ಕಲ್ಪನೆಯನ್ನು ಪ್ರಕಟಿಸಿ, ಎಲ್ಲರ ವಿಸ್ಮಯವನ್ನು ಕೆರಳಿಸಿದರು. ಕರ್ನಾಟಕ ಏಕೀಕರಣದಲ್ಲಿ ಶ್ರದ್ಧೆಯುಳ್ಳ ಎಲ್ಲರೂ ಗೌಡರ ಮಾತನ್ನು ಖಂಡಿಸಿದರು. ಈಚೆಗೆ ಬೇರೆ ಭಾಷಾ ಪ್ರದೇಶಗಳ ಕೆಲವು ಧುರೀಣರೂ ಎರಡು ರಾಜ್ಯಗಳ ವಿಚಾರದತ್ತ ಒಲಿದಾಡುವುದು ಗೋಚರಿಸುತ್ತದೆ. ಹಿಂದೀ ಭಾಷೆಯ ಅನೇಕ ರಾಜ್ಯಗಳಿರುವಂತೆ ಇತರ ಭಾಷೆಗಳವೂ ಎರಡೆರಡು ರಾಜ್ಯಗಳಿದ್ದರೆ ತಪ್ಪೇನು ಎಂದವರು ಕೇಳುತ್ತಾರೆ. ಆದರೆ ಸ್ವಾಮಿ ರಮಾನಂದ ತೀರ್ಥರು ಹೇಳುವಂತೆ ಒಂದೇ ಭಾಷೆಯನ್ನಾಡುವ ದೇಶಗಳಲ್ಲಿ ಒಂದಕ್ಕಿಂತ ಹೆಚ್ಚು ರಾಜ್ಯಗಳನ್ನು ರಚಿಸುತ್ತಾ ಹೋದರೆ ಭಾರತದಲ್ಲಿ ೩೦ ರಾಜ್ಯಗಳು ತಲೆ ಎತ್ತುತ್ತವೆ; ಅಲ್ಲದೆ 'ಒಂದೇ ಭಾಷೆಯ, ಒಂದೇ ಸಂಸ್ಕೃತಿಯ ಜನರನ್ನು ಒಂದೇ ಆಡಳಿತದಲ್ಲಿ ತರಬೇಕೆನ್ನುವ ಗುರಿ" ಸಾಧ್ಯವಾಗಲಾರದು. ಆದುದರಿಂದ ಎರಡು ಕರ್ನಾಟಕ ರಾಜ್ಯಗಳನ್ನು ರಚಿಸುವ ವಿಚಾರ ಪಥ್ಯಕರವಲ್ಲ. ಬೆಂಗಳೂರಿನಲ್ಲಿ ಆಯೋಗಕ್ಕೆ ಮನವಿಯೊಪ್ಪಿಸಿದ ಕಮ್ಯೂನಿಸ್ಟ ಪಕ್ಷವೂ ಈ ತತ್ವವನ್ನು ಒಪ್ಪಿಕೊಳ್ಳುತ್ತದೆ. ಗಡಿಯನ್ನು ನಿರ್ಣಯಿಸುವಾಗ ಹಳ್ಳಿಯನ್ನೆ ಘಟಕವಾಗಿ ಹಿಡಿಯಬೇಕೆಂದೂ ಏಕೀಕೃತ ಕರ್ನಾಟಕದಲ್ಲಿ ಭಾಷಾ ಅಲ್ಪಸಂಖ್ಯಾಕರಿಗೆ ಅವರವರ ಮಾತೃಭಾಷೆಯಲ್ಲಿಯೇ ಪ್ರಾಥಮಿಕ ಹಾಗು ಮಾಧ್ಯಮಿಕ ಶಿಕ್ಷಣಕೊಡುವ ಆಶ್ವಾಸನ ದೊರೆಯಬೇಕೆಂದೂ ಅದು ಎಲ್ಲರಿಗೊಪ್ಪುವ ಮಾತನ್ನು ಹೇಳುತ್ತದೆ. ರಾಜಪ್ರಮುಖರನ್ನು ಕಿತ್ತುಹಾಕಬೇಕು; ಮೇಲ್ಮನೆ ಇರಬಾರದು ಎಂದು ಅದು ಹೇಳಿರುವುದಕ್ಕೆ ಮಾತ್ರ ಎಲ್ಲರ ಒಪ್ಪಿಗೆ ದೊರೆಯಲಿಕ್ಕಿಲ್ಲ.

ಮೈಸೂರಿನ ಅಭಿಪ್ರಾಯ

ಬೆಂಗಳೂರಿನಲ್ಲಿದ್ದಾಗ ಆಯೋಗವು ಕನ್ನಡ ಸಾಹಿತ್ಯ ಪರಿಷತ್ತಿನ ಹಿಂದಿನ ಅಧ್ಯಕ್ಷರಾದ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್, ಗೋಖಲೆ ಸಾರ್ವಜನಿಕ ಹಿತ ಸಂಸ್ಥೆಯ ಶ್ರೀ ಡಿ. ವಿ. ಗುಂಡಪ್ಪ ಮುಂತಾದ ಕನ್ನಡದ ಮುಂದಾಳುಗಳ ಅಭಿಪ್ರಾಯವನ್ನು ಕೇಳಿಕೊಂಡಿತು. ಮೈಸೂರು ಸರಕಾರದ ಅಭಿಪ್ರಾಯ ಮಾತ್ರ ಅದಕ್ಕೆ ದೊರೆಯಲಿಲ್ಲ—ಮೈಸೂರಿನ ಸರಕಾರವು ತನ್ನ ಅಭಿಪ್ರಾಯಗಳನ್ನು ತಿಳಿಸುವುದಕ್ಕೆ ಮೂರು ತಿಂಗಳ ಕಾಲಾವಕಾಶವನ್ನು ಕೇಳಿರುತ್ತದೆ. ಶಾಸನಸಭೆಯ ಕಾಂಗ್ರೆಸ ಪಕ್ಷದ ಸಭೆಯೊಂದು ಕಳೆದ ವಾರ ಮುಖ್ಯ ಮಂತ್ರಿ ಹನುಮಂತಯ್ಯನವರ ಸಭೆಯಲ್ಲಿ ಜರಗಿದಾಗ ಆಯೋಗಕ್ಕೆ ಸರಕಾರವು ಮಂಡಿಸುವ ಮನವಿಯ ಚರ್ಚೆಯನ್ನು ನಡೆಸಲಾಯಿತು. ಈ ಕುರಿತು ಒಮ್ಮತದಿಂದ ಸ್ವೀಕರಿಸಲಾದ ಗೊತ್ತುವಳಿಯಲ್ಲಿ ಕನ್ನಡ ಪ್ರದೇಶಗಳನ್ನೆಲ್ಲ ಒಂದೇ ಆಡಳಿತದಲ್ಲಿ ಸಮಾವೇಶಗೊಳಿಸುವ ಪ್ರಶ್ನೆಯ ಬಗ್ಗೆ ನಿರ್ಣಯ ಕೈಗೊಳ್ಳಲು ಸಾಕಷ್ಟು ವಿವರಗಳು ಲಭ್ಯವಿಲ್ಲವೆಂದು ಅಭಿಪ್ರಾಯಪಡಲಾಗಿದೆ; ಏಕೀಕರಣದ ನಿರ್ಣಯದಿಂದ ಬೇರೆ ಭಾಷೆಗಳನ್ನಾಡುವ ಜನರನ್ನೊಳಗೊಂಡಿರುವ ಮೈಸೂರಿನ ಸಂಯುಕ್ತ ಸ್ವರೂಪಕ್ಕೆ ಭಾಧೆಯಾಗಬಾರದೆಂದೂ ಹೇಳಲಾಗಿದೆ; ಅಂ

THE JUPITER GENERAL INSURANCE CO., LTD.
ದಿ ಜುಪಿಟರ ಜನರಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.
1919ರಲ್ಲಿ ಸ್ಥಾಪಿತ] [ಪ್ರಧಾನ ಕಾರ್ಯಾಲಯ: ಬ್ಯಾಂಕ್ ಸ್ಟ್ರೀಟ್, ಬೊಂಬಾಯಿ 1.
ಸಮರ್ಥ ಸೇವೆ ಮತ್ತು ಸುಭದ್ರತೆಯನ್ನು ಕೊಡುತ್ತದೆ.

ತೆತ್ತ ಪಾಲು ಬಂಡವಳ ...	...	ರೂ. 23,74,800
ಒಟ್ಟು ನಿಧಿಗಳು ...	... (ಮಿಕ್ಕಿದೆ)	ರೂ. 3,35,00,000
ಊರ್ಜಿತವಲ್ಲಿರುವ ವಿಮಾವ್ಯವಹಾರ ...	,,	ರೂ. 7,50,00,000
1953ರಲ್ಲಿ ಪೂರ್ಣವಾದ ವಿಮಾವ್ಯವಹಾರ...	,,	ರೂ. 1,06,00,000

ಜೀವ, ಬೆಂಕಿ, ಜಲಯಾನ, ಮೋಟಾರ್, ವಾಯುಯಾನ, ವ್ಯಕ್ತಿಗತ ಕಾಯಿಲೆ, ಆಕಸ್ಮಿಕ ಘಟನೆ, ವಿಶ್ವಾಸಾರ್ಹ ಗ್ಯಾರಂಟಿ ಭದ್ರತೆ, ಕೆಲಸಗಾರರ ಪರಿಹಾರ ಪ್ರವ್ಯಾನುಕೂಲತೆ, ಕಳ್ಳಕಾಕರ ಪಾಲಾಗುವಿಕೆ, ಪ್ರಾಣಿಜಂತುಗಳು ಇತ್ಯಾದಿ ಸಂಪರ್ಕಗಳಲ್ಲಿ ವಿಮೆ ಇಳಿಸಲಾಗುವುದು.

ಹಿಂದೂಸ್ಥಾನ, ಪಾಕಿಸ್ಥಾನ, ಬರ್ಮಾ, ಸಿಲೋನ್, ಬ್ರಿಟಿಷ್ ಪೂರ್ವ ಆಫ್ರಿಕ ಮತ್ತು ಏಡನ್‌ಗಳಲ್ಲಿ ಶಾಖೆಗಳೂ ಏಜನ್ಸಿಗಳೂ ಇವೆ.

ಹೆಚ್ಚಿನ ಮಾಹಿತಿಗೂ ಪ್ರಾತಿನಿಧ್ಯಕ್ಕೂ ಬರೆಯಿರಿ:—
ಶ್ರೀ ಎಸ್. ಎ. ಹೆಗ್ಡೆ, ಸುಪರಿಂಟೆಂಡೆಂಟ್ ಆಫ್ ಏಜನ್ಸೀಸ್,
ದಿ ಜುಪಿಟರ್ ಜನರಲ್ ಇನ್ಶೂರೆನ್ಸ್ ಕೊ. ಲಿಮಿಟೆಡ್, ಶಿರ್ವ (ದಕ್ಷಿಣ ಕನ್ನಡ).

ಪ್ರಜಾಪ್ರಭುತ್ವದಲ್ಲಿ ಕಾಂಗ್ರೆಸು ಸಂಸ್ಥೆಯ ಕರ್ತವ್ಯ

ಜನಾಭಿಪ್ರಾಯ ಮನ್ನಿಸಿರೆಂದು ಕಾಂಗ್ರೆಸಾಧ್ಯಕ್ಷರ ಪರಿಪತ್ರ

ಪ್ರಜಾಪ್ರಭುತ್ವ ಪದ್ಧತಿಯನ್ನು ಅಂಗೀಕರಿಸಿರುವ ಭಾರತದಲ್ಲಿ ಕಾಂಗ್ರೆಸು ಸಂಸ್ಥೆಯು ನಿರ್ವಹಿಸಬೇಕಾಗಿರುವ ಕರ್ತವ್ಯದ ಸ್ವರೂಪವನ್ನು ಕಾಂಗ್ರೆಸಾಧ್ಯಕ್ಷರು ಪದೇ ಪದೇ ನಿರೂಪಿಸುತ್ತಾ ಪ್ರದೇಶ ಕಾಂಗ್ರೆಸುಗಳಿಗೂ ಇತರರಿಗೂ ಯೋಗ್ಯ ಮಾರ್ಗದರ್ಶನವನ್ನು ಮಾಡಬೇಕೆಂದು ಕಾರ್ಯಕಾರಿ ಮಂಡಳವು ಕಳೆದ ಅಧಿವೇಶನದಲ್ಲಿ ಸೂಚಿಸಿದ್ದಿತು. ಇದನ್ನು ಮನ್ನಿಸಿ, ಕಾಂಗ್ರೆಸಾಧ್ಯಕ್ಷ ಶ್ರೀ ಜವಾಹರಲಾಲ ನೆಹರೂರವರು ಕಳಿಸಿರುವ ಪ್ರಥಮ ಪರಿಪತ್ರದ ವಿಷಯಗಳು ಈಗಷ್ಟೇ ಪ್ರಕಟಗೊಂಡಿವೆ. ಈ ಪರಿಪತ್ರದಲ್ಲಿ "ಸಾರ್ವಜನಿಕ ಅಭಿಪ್ರಾಯವನ್ನು ಮನ್ನಿಸಿ, ಅದರಿಂದ ನಿರ್ದೇಶವನ್ನು ಪಡೆಯುವುದೂ ಜನತೆಯ ಅಭಿಪ್ರಾಯವನ್ನು ಒಂದು ಶಿಸ್ತಿಗೆ ಒಳಪಡಿಸಿ, ಸರಿಯಾದ ಮಾರ್ಗದಲ್ಲಿ ಅದನ್ನು ರೂಪಿಸುವುದೂ ಕಾಂಗ್ರೆಸು ಸಂಸ್ಥೆಯ ಕರ್ತವ್ಯ" ಎಂದು ನೆಹರೂ ಹೇಳಿದ್ದಾರೆ. "ಇದೇ ದೇಶದ ಮತ್ತು ಸರಕಾರದ ಶಕ್ತಿಯ ರಹಸ್ಯ— ಕಾಂಗ್ರೆಸು ಸಂಸ್ಥೆಯೂ ಅದರ ಸದಸ್ಯರೂ ಜನಾಭಿಪ್ರಾಯಕ್ಕೆ ಹೊರತೆನ್ನುವುದು ಸರಿಯಲ್ಲ - ಕಾಂಗ್ರೆಸಿಗರು ತಾವು ಸಾರ್ವಜನಿಕರ ಒಮ್ಮತದ ನಿರ್ಣಯಕ್ಕೆ ಬಾಧ್ಯರಲ್ಲವೆಂದೂ ಅತೀತರೆಂದೂ ತಿಳಿದುಕೊಂಡರೆ ಅದು ದೊಡ್ಡ ತಪ್ಪಾಗುತ್ತದೆ" ಎಂದೂ ನೆಹರು ಎಚ್ಚರಿಸಿದ್ದಾರೆ.

ಒಳಜಗಳ ಬೇಡ

ಕಾಂಗ್ರೆಸು ಪಕ್ಷವು ದೇಶದ ಸಂಘಟನೆಯನ್ನು ಸಾಧಿಸಲು ದುಡಿಯಬೇಕು; ಶಾಂತಿಯುತವಾದ ಸಹಕಾರ ಪದ್ಧತಿಯ ಉಪಾಯಗಳನ್ನು ಯೋಜಿಸಿ, ಜನತೆಯನ್ನು ಪ್ರಗತಿ ಪಥದಲ್ಲಿ ಮುಂದೊಯ್ಯಬೇಕು. ಗಾಂಧೀಜಿಯವರು ಹಾಕಿಕೊಟ್ಟ ಸಂಪ್ರದಾಯವನ್ನು ಒಳ್ಳೆಯ ಜಾಗರೂಕತೆಯಿಂದ ಕಾಯ್ದುಕೊಂಡು ಹೋಗಬೇಕು; ಕ್ಷುಲ್ಲಕ ವಿಚಾರಗಳಲ್ಲಿ ಮಗ್ನರಾಗಿ ಶಿಸ್ತನ್ನು ಕೆಡಿಸಿ, ಒಳಜಗಳಗಳಿಗೆ ಬಲಿಬಿದ್ದು, ಜಾತೀಯ ಅಥವಾ ಗುಂಪಿನ ಮನೋಭಾವವನ್ನು ಪ್ರದರ್ಶಿಸುವ ಹವ್ಯಾಸವು ಸಲ್ಲದು; ಕಾಂಗ್ರೆಸು ಸಂಕುಚಿತ ದೃಷ್ಟಿಯನ್ನು ಬಿಟ್ಟುಗೊಡಬೇಕು; ಭಾಷೆಗೆ ಅನಾವಶ್ಯ ಮಹತ್ವ ಕೊಟ್ಟು ಪರಸ್ಪರ ಮಾತ್ಸರ್ಯವನ್ನು ತೋರಿಸಬಾರದು; ಹಿಂದಿಯು ಹೆಚ್ಚು ಜನರಿಗೆ ತಿಳಿಯುವ ಭಾಷೆ ಎಂಬ ಕಾರಣಕ್ಕಾಗಿಯಷ್ಟೇ ಅದನ್ನು ರಾಷ್ಟ್ರಭಾಷೆಯಾಗಿ ಅಂಗೀಕರಿಸಲಾಯಿತು ಹೊರತು, ಅನ್ಯಥಾ ಅದೂ ಒಂದು ಪ್ರಾದೇಶಿಕ ಭಾಷೆ, ಕಾರಣ, ಈ ವಿಷಯವನ್ನು ಮುಂದೆ ಮಾಡಿ ಜಗಳಾಡಕೂಡದು; ರಾಷ್ಟ್ರದ ಒಗ್ಗಟ್ಟನ್ನು ಬಲಪಡಿಸಿ ಭೂಸುಧಾರಣೆ ಮುಂತಾದ ಕ್ರಮಗಳನ್ನು ಕೈಗೊಂಡು ಕಲ್ಯಾಣ ರಾಷ್ಟ್ರವನ್ನು ನಿರ್ಮಿಸಬೇಕು— ಎಂದು ಮುಂತಾಗಿ ನೆಹರೂ ಕಾಂಗ್ರೆಸ್ಸಿಗರಿಗೆ ಹಿತ ನುಡಿದಿರುವರು.

ರಾಷ್ಟ್ರೀಯ ಉತ್ಪನ್ನ

ಕಳೆದ ವಾರ ಅರ್ಥಸಚಿವರಾದ ದೇಶಮುಖರೂ ಅವರ ಪತ್ನಿ ದುರ್ಗಾ ಬಾಯಿಯವರೂ ದಕ್ಷಿಣ ಭಾರತದಲ್ಲಿ ಸಂಚಾರ ಕಾರ್ಯಕ್ರಮವನ್ನಿಟ್ಟು ಕೊಂಡಿದ್ದರು. ಪಂಚವಾರ್ಷಿಕಯೋಜನೆ ಮತ್ತು ಇತರ ಅಭಿವೃಪ್ರಯತ್ನದ್ಧಿಗಳಕುರಿತು ಅವರು ಅನೇಕ ವಿಷಯಗಳನ್ನು ಹೊರಗೆಡವಿದರು. ನಿರುದ್ಯೋಗದ ಪ್ರಶ್ನೆಯನ್ನು ಸಮರ್ಪಕವಾಗಿ ಬಗೆಹರಿಸುವುದು ಮುಂದಿನ ಯೋಜನೆಯ ಗುರಿಯಾಗುವುದೆಂದೂ ಈ ದಿಸೆಯಲ್ಲಿ ಈಗಾಗಲೇ ತಕ್ಕ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆಯೆಂದೂ ಅವರು ತಿಳಿಸಿದರು. "ಜನರ ಜೀವನ ಮಟ್ಟವನ್ನು ಎತ್ತರಿಸುವ ಧ್ಯೇಯ ಕೈಗೂಡಿಸುವುದಕ್ಕೆ ಮುಂದರಿದ ರಾಷ್ಟ್ರಗಳು ಉತ್ಪನ್ನದ ಕಾಲು ಭಾಗವನ್ನು ರಾಷ್ಟ್ರಾಭಿವೃದ್ಧಿಗೋಸ್ಕರ ಉಪಯೋಗಿಸುತ್ತವೆ. ಸರ್ವಾಧಿಕಾರಿ ರಾಷ್ಟ್ರಗಳಲ್ಲಿ ಇದಕ್ಕೂ ಹೆಚ್ಚು ಹಣ ವಿನಿಯೋಗವಾಗುತ್ತದೆ. ಆದರೆ ಭಾರತದಲ್ಲಿ ನಾವು ರಾಷ್ಟ್ರೀಯ ಉತ್ಪನ್ನದ ಇಪ್ಪತ್ತರಲ್ಲಿ ಅಥವಾ ಹತ್ತರಲ್ಲಿ ಒಂದಂಶ ಮಾತ್ರ ಉಪಯೋಗಿಸಬಹುದು. ನಮ್ಮ ತಲಾ ಉತ್ಪನ್ನದ ಪ್ರಮಾಣ ಕಡಿಮೆ ಇರುವುದೇ ಇದಕ್ಕೆ ಕಾರಣ—ಯೋಜನೆಯ ಮೇಲೆ ಯೋಜನೆಯನ್ನು ಜಾಣತನದಿಂದ ರೂಪಿಸುತ್ತಾ ಹೋದರೆ ನಾವು ೧೯೭೦ನೇ ಇಸವಿಯ ಸುಮಾರಿಗೆ ರಾಷ್ಟ್ರೀಯ ಉತ್ಪನ್ನವನ್ನು ಇಮ್ಮಡಿಮಾಡಬಹುದು. ಆಗ ಐದರಲ್ಲಿ ಒಂದಂಶವನ್ನು ನಾವು ಅಭಿವೃದ್ಧಿ ಕಾರ್ಯಕ್ಕೆ ವಿನಿಯೋಗಿಸಬಲ್ಲೆವು" ಎಂದು ಶ್ರೀ ದೇಶಮುಖರು ಹೇಳಿದರು.

ಮತದಾರ ಸಂಘಗಳು

ಪರಿಸೀಮನ ಸಮಿತಿಯು ಮತದಾರ ಸಂಘಗಳ ಗಡಿಯಲ್ಲಿ ಸೂಚಿಸಿದ ಬದಲಾವಣೆಯು ತುಂಬ ಟೀಕೆಗೀಡಾಗಿದ್ದು— ಆಯೋಗದ ಅಧ್ಯಕ್ಷರಾದ ಶ್ರೀ ಚಂದ್ರಶೇಖರ ಅಯ್ಯರರು ಮೊನ್ನೆ ಒಂದು ಪ್ರಕಟಣೆಯಲ್ಲಿ ಆಯೋಗದ ಕೆಲಸವನ್ನು ಸಮರ್ಥಿಸಿ ಕೊಂಡಿದ್ದಾರೆ. ಈಗಿರುವ ಮತದಾರ ಸಂಘಗಳು ರಚಿತವಾಗಲು ಆಧಾರವಾಗಿದ್ದ ಜನಸಂಖ್ಯೆಯ ಪ್ರಮಾಣಕ್ಕಿಂತ ೧೯೫೧ರ. ಜನಸಂಖ್ಯೆಯು ಅಧಿಕಗೊಂಡಿದೆ. ಜಿಲ್ಲೆ ಜಿಲ್ಲೆಗೂ ಜನಸಂಖ್ಯೆ ಹೆಚ್ಚಿರುತ್ತದೆ. ಈ ಹಾಗು ಇತರ ಅನೇಕ ಕಾರಣಗಳಿಂದಾಗಿ ಮತದಾರ ಸಂಘದ ಗಡಿಗಳಲ್ಲಿ ಬದಲಾವಣೆಯನ್ನು ಮಾಡಬೇಕಾಯಿತು. ಆಡಳಿತ ಘಟಕ, ಭೌಗೋಲಿಕ ಸಾಮೀಪ್ಯ, ಸಾರಿಗೆ ಸಂಪರ್ಕ ಮುಂತಾದ ವಿಷಯಗಳನ್ನೂ ಪರಿಶೀಲಿಸಬೇಕಾಯಿತು. ಈ ಬದಲಾವಣೆಯು ಆಯೋಗದ ಮಾರ್ಗದರ್ಶನಕ್ಕೋಸ್ಕರ ಮಾಡಲಾದ ತತ್ವಗಳಿಗೆ ಅನುಗುಣವಾಗಿರುತ್ತದೆಂದು ಮುಂತಾಗಿ ಅಯ್ಯರರ ಹೇಳಿಕೆ ತಿಳಿಸುತ್ತದೆ.

ಬಂಡವಾಳದ ಹಂಚಿಕೆ

ಖಾಸಗಿ ಉದ್ದಿಮೆಗಳಿಗೆ ಬಂಡವಾಳವನ್ನು ಪೂರೈಸುವ ವಿಚಾರವನ್ನು ಮಾಡಿ ವರದಿಯೊಪ್ಪಿಸಲು ಭಾರತದ ರಿಜರ್ವ ಬೇಂಕು ಕಳೆದ ಆಕ್ಟೋಬರ ತಿಂಗಳಲ್ಲಿ ಶ್ರೀ. ಎ. ಡಿ. ಶ್ರಾಫರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ನೇಮಿಸಿದ್ದಿತು ಈ ಸಮಿತಿಯು ಇದೀಗ ಸಲ್ಲಿಸಿದ ವರದಿಯು ಭಾರತದ ಪ್ರಮುಖ ಬೇಂಕು ಹಾಗು ವಿಮಾ ಕಂಪನಿಗಳ ಸಹಕಾರವನ್ನು ಪಡೆದುಕೊಂಡು ಬಂಡವಾಳ ಪೂರೈಕೆಯ ಸಿಂಡಿಕೇಟಿನ ರಚನೆ ಮಾಡಬೇಕಾಗಿ ಹೇಳುತ್ತದೆ. ಹಣಕಾಸಿನ ಕ್ಷೇತ್ರದಲ್ಲಿ ಕೆಲವು ಸರಿಪಡಿಸುವ ಕೆಲಸಗಳು ನೆರವೇರಬೇಕಾಗಿವೆಯೆಂದೂ ರಿಜರ್ವ ಬೇಂಕು ಈ ದಿಸೆಯಲ್ಲಿ ಪ್ರಯತ್ನಿಸಬೇಕೆಂದೂ ವರದಿ ತಿಳಿಸುತ್ತದೆ. ಉದ್ದಿಮೆಗಳಿಗೆ ಹಣವನ್ನು ಪೂರೈಸುವಾಗ ತಮಗೆ ರಿಜರ್ವ ಬೇಂಕಿನ ಬೆಂಬಲವಿದೆಯೆಂಬ ಭರವಸೆಯ ವಾತಾವರಣವನ್ನು ವ್ಯಾಪಾರ ವ್ಯವಹಾರದ ಬೇಂಕುಗಳು ಗುರುತಿಸುವಂತಾಗಬೇಕು ಎಂದು ಶ್ರಾಫ ಸಮಿತಿ ಸೂಚಿಸಿದೆ. ಸಂಚಾರಿ ಬೇಂಕುಗಳು ಜನತೆಯಲ್ಲಿ ಬೇಂಕಿನೊಡನೆ ವ್ಯವಹರಿಸುವ ಮನೋಭಾವವನ್ನು ಕುದುರಿಸಿ, ಪೋಷಿಸುತ್ತವೆ. ಅವುಗಳಿಗೆ ಅಧಿಕ ಪ್ರೋತ್ಸಾಹ ಸಲ್ಲಬೇಕಾದದ್ದು ನ್ಯಾಯ ಎಂದು ಸಮಿತಿ ಸಲಹೆ ಮಾಡಿದೆ.

ಸುಶಿಕ್ಷಿತರಿಗೆ ಉದ್ಯೋಗ

ನಮ್ಮ ದೇಶದಲ್ಲಿ ಜನಸಂಖ್ಯೆಯ ಹೆಚ್ಚಳದಿಂದಾಗಿ ಪ್ರತಿ ವರ್ಷ ನಿರುದ್ಯೋಗಿಗಳ ಪ್ರಮಾಣವು ಹನ್ನೆರಡು ಲಕ್ಷದಷ್ಟು ಅಧಿಕಗೊಳ್ಳುತ್ತದೆ—ಸುಶಿಕ್ಷಿತರ ನಿರುದ್ಯೋಗದ ಸಮಸ್ಯೆಯಂತೂ ಬಹಳ ಘೋರವಾಗಿದೆ. ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ನಿರುದ್ಯೋಗ ನಿವಾರಣೆಗೆಂದೇ ಕೆಲವು ವಿಶಿಷ್ಟಕ್ರಮಗಳನ್ನು ಕೈಗೊಳ್ಳಲಾಯಿತು. ಸುಶಿಕ್ಷಿತರನ್ನು ಶೈಕ್ಷಣಿಕ ಪ್ರಸಾರ ಕಾರ್ಯದಲ್ಲಿ ನೇಮಿಸಿಕೊಳ್ಳುವುದು ಇಂತಹದೊಂದು ಉಪಾಯ. ಕೇಂದ್ರ ಸರಕಾರದ ಈ ಯೋಜನೆಯಂತೆ, ಮದ್ರಾಸು ರಾಜ್ಯದಲ್ಲಿ ಇದೇ ಶಾಲಾ ವರ್ಷದಲ್ಲಿ ೧೨೦೦ ಒಬ್ಬನೇ ಅಧ್ಯಾಪಕನುಳ್ಳ ಹೊಸ ಪ್ರಾಥಮಿಕ ಶಾಲೆಗಳು ತಲೆ ಎತ್ತುತ್ತವೆ. ಐನೂರರಿಂದ ಸಾವಿರದ ವರೆಗೆ ಜನವಸತಿಯುಳ್ಳ, ಆದರೆ ಶಾಲೆಗಳೇ ಇಲ್ಲದ, ಪ್ರದೇಶಗಳಲ್ಲಿ ಹೊಸ ಶಾಲೆಗಳು ಜಿಲ್ಲಾ ಬೋರ್ಡುಗಳ ವತಿಯಿಂದ ತೆರೆಯಲ್ಪಡುತ್ತವೆ. ಈ ಶಾಲೆಗಳು ಹೈಸ್ಕೂಲು ಹಾಗು ಕಾಲೇಜು ಮಟ್ಟದಲ್ಲಿ ಶಿಕ್ಷಣ ಹೊಂದಿದ ನಿರುದ್ಯೋಗಿಗಳಿಗೆ ಕೆಲಸದ ಅವಕಾಶವನ್ನು ಒದಗಿಸುತ್ತವೆ. ತಿಂಗಳಿಗೆ ೪೫ ರೂಪಾಯಿ ಸಂಬಳವೂ ತುಟ್ಟಿಭತ್ತೆಯೂ ಇವರಿಗೆ ಕೊಡಲಾಗುತ್ತದೆ.

ತಿಮ ನಿರ್ಣಯ ಕೈಗೊಳ್ಳುವುದಕ್ಕೋಸ್ಕರ ಸಾಕಷ್ಟು ವಿವರಗಳನ್ನು ಸಂಗ್ರಹಿಸಲು ಸರಕಾರ ಒಂದು ಸಮಿತಿಯನ್ನು ನೇಮಿಸಬೇಕೆಂದೂ ಶಿಫಾರಸು ಮಾಡಲಾಗಿದೆ. ಹೀಗೆ ಮಾಡಿದರೆ, ಪಕ್ಷವು ಒಮ್ಮತದ ಹಾಗು ಕಾರ್ಯಗತಗೊಳಿಸಬಹುದಾದ ನಿರ್ಣಯಕ್ಕೆ ಬರಬಹುದೆಂಬ ವಿಶ್ವಾಸವನ್ನು ವ್ಯಕ್ತಗೊಳಿಸುತ್ತದೆ.

ಸಮಿತಿಯ ನೇಮಕ

ಪಕ್ಷದ ಆದೇಶಾನುಸಾರ ಮೈಸೂರಿನ ಸರಕಾರವು ಹೈದರಾಬಾದು ಮತ್ತು ಮೈಸೂರು ರಾಜ್ಯಗಳಲ್ಲಿ ಹಿಂದೆ ಮಂತ್ರಿಗಳಾಗಿದ್ದ ಶ್ರೀ ಎಂ. ಶೇಷಾದ್ರಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಿಸಿದೆ. ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿ ಶ್ರೀ. ವಿ.ಎಲ್. ಡಿ'ಸೋಜಾ, ನಿವೃತ್ತ ಹೈಕೋರ್ಟು ನ್ಯಾಯಾಧೀಶ ಶ್ರೀ ಟಿ. ಸಿಂಗಾರವೇಲು ಮುದಲಿಯಾರ, ಸಾರ್ವಜನಿಕ ಕ್ಷೇತ್ರದಲ್ಲಿ ದುಡಿದಿರುವ ಶ್ರೀ. ಓ. ವೀರ ಬಸಪ್ಪ, ಬೆಂಗಳೂರು ಜಿಲ್ಲಾ ಬೋರ್ಡಿನ ಹಿಂದಿನ ಅಧ್ಯಕ್ಷ ಶ್ರೀ. ಎಚ್. ಆರ್. ಗುರುವಾ ರೆಡ್ಡಿ—ಇವರು ಸಮಿತಿಯ ಇತರ ಸದಸ್ಯರು. ಮೈಸೂರು ಹೈದರಾಬಾದು, ಕೊಡಗು, ಮದ್ರಾಸು ಮತ್ತು ಮುಂಬಯಿ ರಾಜ್ಯಗಳಲ್ಲಿ ಕನ್ನಡ ಮಾತನಾಡುವವರ ಜನಸಂಖ್ಯೆ ಹಾಗು ಕನ್ನಡ ಪ್ರದೇಶದ ವಿಸ್ತಾರ; ಆ ಪ್ರದೇಶಗಳ ಶೈಕ್ಷಣಿಕ, ವೈದ್ಯಕೀಯ, ಸಾರ್ವಜನಿಕ ಆರೋಗ್ಯ, ಗ್ರಾಮಾಭಿವೃದ್ಧಿ, ಉದ್ದಿಮೆ ವ್ಯವಹಾರ, ನೀರಾವರಿ, ವಿದ್ಯುಚ್ಛಕ್ತಿ ಮುಂತಾದ ಲೋಕೋಪಯೋಗಿ ಕೆಲಸಗಳ ಮಟ್ಟ; ನೈಸರ್ಗಿಕ ಸಂಪತ್ತಿನ ಅಂದಾಜು ಮತ್ತು ಆದಾಯ, ವೆಚ್ಚ, ಸಾಲ, ಸೊತ್ತುಗಳಿಗೆ ಸಂಬಂಧಿಸಿದ ಅಂಕೆ ಸಂಖ್ಯೆಗಳು; ಪಂಚ ವಾರ್ಷಿಕ ಯೋಜನೆಯನ್ವಯ ಕೈಗೂಡಿಸಿದ ಪ್ರಗತಿ, ಕನ್ನಡ ಮಾತನಾಡುವ ಪ್ರದೇಶಗಳ ಆರ್ಥಿಕ ಹಾಗು ಆಡಳಿತ ಸಮಸ್ಯೆಗಳ ವಿಶ್ಲೇಷಣೆ— ಮುಂತಾದ ಕರ್ತವ್ಯಗಳನ್ನುಐದು ಮಂದಿಯ ಈ ಸಮಿತಿ ನಿರ್ವಹಿಸುತ್ತದೆ—ಹೀಗೆ ಮೈಸೂರಿನ ಅಭಿಪ್ರಾಯ ಮೂರು ತಿಂಗಳುಗಳ ವರೆಗೆ ಬಹಿರಂಗವಾಗಲಾರದಾದುದರಿಂದ, ಆಯೋಗವು ಕನ್ನಡ ರಾಜ್ಯ ನಿರ್ಮಾಣಕ್ಕೆ ಪ್ರಾಶಸ್ತ್ಯವನ್ನು ಸಲ್ಲಿಸಿ ನಡುಗಾಲದ ವರದಿಒಪ್ಪಿಸುವ ಸಂಭವವಿದ್ದರೆ, ಅದು ಸಾಕಷ್ಟು ಹಿಂದೆ ಹೋದಂತಾಯಿತು.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ).

ಅಧಿಕೃತ ಭಂಡವಾಳ ...	..	ರೂ. 25,00,000
ಚಂದಾ ಆಪಿಸಿ, ತೆತ್ತ ಬಂದ ಭಂಡವಾಳ	...	ರೂ. 20,00,000
ಕ್ಷೇಮ ನಿಧಿ ..	...	ರೂ. 10,50,000
ಠೇವಣಾತಿಗಳು ...	..	ರೂ. 2,98,19,000
ಒಟ್ಟು ಚಲಾವಣೆ ಭಂಡವಾಳ	...	ಸುಮಾರು ರೂಪಾ 4 ಕೋಟಿ
ಒಟ್ಟು ಶಾಖೆಗಳು ...	..	38

(31—12—1958ರಲ್ಲು)

THE CANARA BANKING CORPORATION LIMITED

Estd:- 1906] [H. O. UDIPI (S. India).

ನ ವ ಯು ಗ

ಉಡುಪಿ, ಗುರುವಾರ ೧೦-೬-'೫೪

ಪೇರಿಸಿನ ಮಾತುಕತೆ

ಫ್ರೆಂಚರು ಭಾರತದಲ್ಲಿ ತಮ್ಮ ಕೈಯಲ್ಲಿಟ್ಟುಕೊಂಡಿರುವ ಕರಾವಳಿಯ ಕೆಲವು ಸ್ವಾಸ್ಥ್ಯಗಳನ್ನು ಹಸ್ತಾಂತರಿಸುವ ಬಗ್ಗೆ ಮೂರು ವಾರಗಳ ಹಿಂದೆ ಪೇರಿಸಿನಲ್ಲಿ ತೊಡಗಿದ ಮಾತುಕತೆಗಳು ಮುರಿದವೆಂದು ಈಗ ತಿಳಿದು ಬರುತ್ತದೆ. ಭಾರತ ಹಾಗು ಫ್ರಾನ್ಸಿನ ಸರಕಾರಗಳು ತಮ್ಮವೇ ಸೂಚನೆಗಳನ್ನು ಮುಂದಿಟ್ಟು ಕೊನೆಯವರೆಗೆ ಅವಕ್ಕೆ ಅಂಟಿಕೊಂಡವೆಂದೂ ಉಭಯತರ ಅಭಿಪ್ರಾಯಗಳಲ್ಲಿ ಒಮ್ಮತವಾಗುವುದು ಅಶಕ್ಯವೆನಿಸಿದ್ದರಿಂದ ಮಾತುಕತೆಗಳು ಮುರಿದವೆಂದು ಸಾರಲಾಯಿತಾಗಿಯೂ ಪ್ರಕಟಣೆಯೊಂದು ಹೇಳುತ್ತದೆ. ಈ ಮಾತುಕತೆಗಳು ಸೌಹಾರ್ದಯುತವಾದ ವಾತಾವರಣದಲ್ಲಿಯೇ ನಡೆದವು—ಪರಸ್ಪರ ಒಪ್ಪಂದಕ್ಕೆ ಬರುವ ದೃಷ್ಟಿಯಿಂದ ಹಲವಾರು ಸೂಚನೆಗಳನ್ನೂ ವಿಚಾರಿಸಲಾಯಿತು. ಆದರೆ ಇವಾವುದೂ ಇಚ್ಛಿತ ಫಲವನ್ನು ನೀಡಲಿಲ್ಲ. ಫ್ರೆಂಚರು ಹೊರಡಿಸಿದ ಪ್ರಕಟಣೆಗನುಸಾರವಾಗಿ, ಭಾರತದ ಮುಂದೆ ಈ ಎರಡು ಸೂಚನೆಗಳನ್ನು ಅವರು ಮಂಡಿಸಿದರು-(೧) ಸಂಯುಕ್ತ ರಾಷ್ಟ್ರ ಸಂಘದ ನಿಯಂತ್ರಣದಲ್ಲಿ ಕೂಡಲೇ ಸಾರ್ವತ್ರಿಕ ಮತಗಣನೆಯನ್ನು ನಡೆಸಬೇಕು; ಮತ್ತು (೨) ಆಡಳಿತದಲ್ಲಿ ಭಾರತೀಯರನ್ನು ಸೇರಿಸಿಕೊಂಡು ನಡುಗಾಲದ ಸರಕಾರವನ್ನು ಸ್ಥಾಪಿಸಬೇಕು; ಮುಂದೆ ವಸಾಹತುಗಳ ಹಸ್ತಾಂತರವನ್ನು ಕುರಿತು ಸಂಧಾನಗಳು ನಡೆದು, ಜನತೆಯ ಅಭಿಮತಕ್ಕನುಸಾರ ಅವಕ್ಕೆ ಒಪ್ಪಿಗೆಯನ್ನೀಯಬೇಕು. ಭಾರತವು ಮೊದಲನೆಯ ಸೂಚನೆಯನ್ನು ನೇರವಾಗಿ ನಿರಾಕರಿಸಿತು. ಮತಗಣನೆಯನ್ನು ನಡೆಸಲು ಅನುಕೂಲವಾದ ವಾತಾವರಣವು ಫ್ರೆಂಚ ಭಾರತದ ಸ್ವಾಸ್ಥ್ಯಗಳಲ್ಲಿ ಇಲ್ಲ. ಭಾರತವು ಈಗ ಚೆನ್ನಾಗಿ ಮನಗಂಡಿರುವುದು—ಅಲ್ಲಿ ಗುಂಡಾ ಆಡಳಿತೆಯು ನಡೆಯುತ್ತಿರುವಾಗ, ಸಾರ್ವತ್ರಿಕ ಮತಗಣನೆಯು ಪ್ರಾಮಾಣಿಕ ರೀತಿಯಲ್ಲಿ ನಡೆಯಲಾರದೆಂಬುದು ಸ್ವತಃ ಸಿದ್ಧ. ಎರಡನೆಯ ಸೂಚನೆಯ ಬಗ್ಗೆ ಹೇಳುವುದಾದರೆ, ಸ್ವಾತಂತ್ರ್ಯಾಧಿಕಾರದ ನಡುಗಾಲ ಸರಕಾರವು ಯಾವ ಕಾಲಕ್ಕೂ [illegible]. ಇದನ್ನು, ಅನಿಷ್ಟ ಪ್ರದಾನದ ಸಂಗತಿಯೇ ಹೇರಿಕೊಂಡಿರಲಾರದು. ನಡುಗಾಲದ ಸರಕಾರದಲ್ಲಿ ಚಿಕ್ಕಪುಟ್ಟ ಅಧಿಕಾರಸ್ಥಾನಗಳಿಗೆ ಭಾರತೀಯರನ್ನು ನೇಮಿಸಿ, ಹೊರ ಜಗತ್ತಿಗೆ ಫ್ರೆಂಚ ಸ್ವಾಸ್ಥ್ಯಗಳ ಆಡಳಿತದಲ್ಲಿ ಭಾರತದ ಕೈವಾರವೂ ಇದೆಯೆಂದು ತೋರಿಸಿಕೊಡುವುದೇ ಫ್ರಾನ್ಸಿನ ಸೂಚನೆಯಲ್ಲಿರುವ ಗತ್ತುಗಾರಿಕೆ—ಆದರೆ ಇಂತಹ ಕಪಟ ನಾಟಕಕ್ಕೆ ಭಾರತ ಅವಕಾಶಕೊಡಲಾರದು. ಕಾಯಿದೆಬದ್ಧವಾದ ಅಧಿಕಾರವನ್ನು ಫ್ರೆಂಚರು ತಮ್ಮ ಕೈಯಲ್ಲಿಯೇ ಇಟ್ಟುಕೊಂಡು, ಗುಂಡಾ ಆಡಳಿತವನ್ನು ನಡೆಸುತ್ತಾ ಹೋಗುವಾಗ, ಕೆಲವು ಅಮುಖ್ಯ ಹುದ್ದೆಗಳನ್ನು ಅಲಂಕರಿಸಿ, ಫ್ರೆಂಚ ಸ್ವಾಸ್ಥ್ಯಗಳ ಜೋರಾಡಳಿತೆಗೆ ಮೂಕಸಮ್ಮತಿಯನ್ನು ನೀಡುವ ಕೆಟ್ಟ ಕೆಲಸಕ್ಕೆ ಭಾರತವು ಎಷ್ಟು ಮಾತ್ರಕ್ಕೂ ಮುಂದರಿಯದು. ಜನತೆಯಿಂದ ತಿರಸ್ಕೃತರಾದ ವಸಾಹತುವಾದಿಗಳ ಕೈಕೆಳಗೆ ದುಡಿಯುವಷ್ಟು ಭಾರತೀಯರು ದೈನ್ಯವನ್ನು ತೋರಿಸುವುದೂ ಗೌರವಾಸ್ಪದವಲ್ಲ. ಆದುದರಿಂದ ಭಾರತದ ಪ್ರತಿನಿಧಿಗಳಾದ ಶ್ರೀ. ಆರ್. ಕೆ. ನೆಹರೂರವರು ಫ್ರೆಂಚರು ಮೊತ್ತಮೊದಲು ಹಣಕಾಸು, ಪೋಲೀಸು ಮತ್ತು ನ್ಯಾಯಾಂಗಗಳನ್ನು ಭಾರತಕ್ಕೆ ವರ್ಗಾಯಿಸಬೇಕೆಂದು ಪ್ರತಿ ಸೂಚನೆಯನ್ನು ಮುಂದಿಟ್ಟರು, ಆದರೆ ಈ ಖಾತೆಗಳ ಹಸ್ತಾಂತರವೆಂದರೆ ಸಾರ್ವಭೌಮಾಧಿಕಾರವನ್ನೇ ಭಾರತಕ್ಕೆ ಬಿಟ್ಟುಗೊಟ್ಟಂತೆ ಎಂಬುದಾಗಿ ಫ್ರೆಂಚರು ಹೇಳಿ, ಸೂಚನೆಯನ್ನು ನಿರಾಕರಿಸಿದರು. ಇತರ ಖಾತೆಗಳ ವಿಷಯದಲ್ಲಿ ಭಾರತವು ತುಸುವಾದರೂ ರಿಯಾಯತಿಯನ್ನು ತೋರಿಸಬಹುದಿತ್ತು ಆದರೆ ಪೋಲೀಸು ಖಾತೆಯ ಮೇಲೆ ತನಗೆ ಸಂಪೂರ್ಣ ನಿಯಂತ್ರಣವಿರಬೇಕೆಂಬ ತತ್ವವನ್ನು ಅದು ಬಿಟ್ಟುಗೊಡುವಂತಿರಲಿಲ್ಲ. ಫ್ರೆಂಚಸ್ವಾಸ್ಥ್ಯಗಳಲ್ಲಿ ಪೋಲೀಸರು ಮತ್ತು ಅಧಿಕಾರಿಗಳು ಗುಂಡರ ಕೈಗೊಂಬೆಗಳಾಗಿರುವರು; ಇದನ್ನು ದೂರಮಾಡಿ, ಶಾಂತಿ ಭದ್ರತೆ ಮತ್ತು ಸುವ್ಯವಸ್ಥೆಗಳು ನೆಲಸುವಂತೆ ಮಾಡಲು ಪೋಲೀಸು ಖಾತೆಯ ಮೇಲೆ ಪರಿಣಾಮಕಾರಿ ನಿಯಂತ್ರಣವನ್ನು ಭಾರತವು ಹೊಂದಬೇಕಾದದ್ದು ಅನಿವಾರ್ಯ. ಫ್ರೆಂಚ ಸ್ವಾಸ್ಥ್ಯಗಳ ಸಮಸ್ಯೆಯನ್ನು ವ್ಯಾವಹಾರಿಕ ದೃಷ್ಟಿಯಿಂದ ನೋಡದೆ, ಕಾಯಿದೆಯ ಅಂಶಕ್ಕೆಯೇ ಫ್ರಾನ್ಸು ಅವಾಸ್ತವ ಮಹತ್ವವನ್ನು ಕೊಟ್ಟಿತು. ತಮ್ಮ ರಾಜ್ಯಾಂಗ ಘಟನೆಯಲ್ಲಿ ಸ್ವಾಸ್ಥ್ಯಗಳಲ್ಲಿರುವ ಪ್ರಜೆಗಳ ಅಭಿಪ್ರಾಯವನ್ನು ತಿಳಿದುಕೊಳ್ಳದೆ ಹಸ್ತಾಂತರ ವ್ಯವಸ್ಥೆಯನ್ನು ಮಾಡಲು ಬರುವುದಿಲ್ಲವೆಂಬ ಅದೇ ಹಿಂದಿನ ನೆಪವನ್ನು ಫ್ರಾನ್ಸು ಮುಂದೆಮಾಡಿತು. ಆದರೆ, ಈ ನೆಪದಲ್ಲಿ ಹುರುಳು ಏನೇನೂ ಇಲ್ಲ—ಏಕೆಂದರೆ, ಫ್ರೆಂಚ ಸ್ವಾಸ್ಥ್ಯದಲ್ಲಿರುವ ಜನರು ತಮ್ಮ ಚುನಾಯಿತ ಪ್ರತಿನಿಧಿಗಳಲ್ಲಿ ನೂರಕ್ಕೆ ತೊಂಭತ್ತರಷ್ಟು ಮಂದಿಯ ಬಾಯಿಯಿಂದ ತಮಗೆ ಭಾರತದೊಡನೆ ವಿಲಯನಹೊಂದುವ ಬಯಕೆ ಇದೆಯೆಂದು ಸ್ಪಷ್ಟವಾಗಿಯೂ ನಿಃಸಂದಿಗ್ಧವಾಗಿಯೂ ಸಾರಿದ್ದಾರೆ; ಅಲ್ಲದೆ ಫ್ರೆಂಚರ ವಸಾಹತುವಾದದ ನೊಗದಿಂದ ಬಿಡಿಸಿಕೊಂಡು ಕಾಲಂಶ ಪ್ರದೇಶಗಳು ಇಷ್ಟರಲ್ಲಿ ಸ್ವಾತಂತ್ರ್ಯವನ್ನು ಘೋಷಿಸಿರುತ್ತವೆ. ಪೇರಿಸಿನಲ್ಲಿ ಸೌಹಾರ್ದಮಯವಾದ ವಾತಾವರಣದಲ್ಲಿ ಮಾತುಕತೆಗಳು ನಡೆಯುವವೆಂದೂ ಅವುಗಳ ಮೇಲೆ ವಿಪರೀತ ಪರಿಣಾಮ ಮಾಡುವ ವರ್ತನೆಯನ್ನು ಕೈಗೊಳ್ಳುವುದು ಇಷ್ಟವಲ್ಲವೆಂದೂ ಹೇಳಲಾದುದರಿಂದ ಈ ವಿಮೋಚನಾ ಚಳವಳವು ಈಚೆಗೆ ಎರಡು—ಮೂರು ವಾರಗಳಿಂದ ಸ್ಥಗಿತಗೊಂಡಿತು; ಭಾರತ ಸರಕಾರವೂ ಹಿಂದೆ ಹೇರಿದ್ದ ಕೆಲವು ನಿರ್ಬಂಧಗಳನ್ನು ಸಡಲಿಸಿತು. ಫ್ರೆಂಚರು ವಸ್ತುಸ್ಥಿತಿಯನ್ನು ಸಂಪೂರ್ಣ ಮನಗಂಡು, ಭಾರತದೊಡನೆ ಸ್ನೇಹ ವಿಶ್ವಾಸವನ್ನು ಸ್ಥಿರವಾಗಿ ಸ್ಥಾಪಿಸಿಕೊಳ್ಳುವ ಉದ್ದೇಶದಿಂದ, ಪೇರಿಸಿನ ಮಾತುಕತೆಯನ್ನು ತೊಡ

ಜಿನೇವದ ಮಾತುಕತೆ ವಿಫಲವಾಗುವ ಸಂಭವ

ಪೂರ್ವ ಪಾಕಿಸ್ತಾನದಲ್ಲಿ ಪ್ರಜಾಸತ್ತೆಯ ಉತ್ತರ ಪೂಜೆ

ಜಿನೇವಾದಲ್ಲಿ ದೂರ ಪ್ರಾಚ್ಯದ ಕುರಿತಾಗಿ ನಡೆಯುತ್ತಿರುವ ಮಾತುಕತೆಗಳು ಯಾವುದೇ ಪ್ರಗತಿಯನ್ನು ತೋರಿಸದೆ, ನಿಷ್ಫಲಹೊಂದುವ ಭಯವನ್ನೆ ಉಂಟುಮಾಡುತ್ತವೆ ಕಮ್ಯುನಿಸ್ಟರ ಹಾಗು ಪಾಶ್ಚಾತ್ಯರ ಗುಂಪಿನಲ್ಲಿ ತೀವ್ರ ಮತಭೇದಗಳು ಎದ್ದು ಕಾಣಿಸುತ್ತವೆ—ಭಾರತದ ಕೃಷ್ಣ ಮೆನೊನ್ನರು ಉಭಯತರ ಭಿನ್ನಾಭಿಪ್ರಾಯವನ್ನು ಆದಷ್ಟು ಕಡಿಮೆ ಮಾಡಿ ಪರಸ್ಪರ ಸಮ್ಮತವಾದ ಸೂತ್ರವೊಂದನ್ನು ಕಂಡುಹಿಡಿಯಲು ಖಾಸಗಿಯಾಗಿ ಬುದ್ಧಿವಂತಿಕೆಯನ್ನೆಲ್ಲ ವೆಚ್ಚಮಾಡುತಿದ್ದರೂ ಹೆಚ್ಚಿನ ಪ್ರಯೋಜನವು ಕಾಣುವುದಿಲ್ಲ. ಜಿನೇವಾ ಪರಿಷತ್ತಿನ ಭವಿಶವ್ಯದ ಪ್ರಶ್ನೆಯು ಮೊಲೊಟೋವರು ಇದೇ ಮಂಗಳವಾರ(ದಿನಾಂಕ ೮)ದಿನ ಕರೆದ ಬಹಿರಂಗ ಅಧಿವೇಶನದಲ್ಲಿ ಗೊತ್ತಾದೀತು-ಅಂದರೆ ಈ ಸಾಲುಗಳನ್ನು ಬರೆಯುತಿದ್ದಂತೆಯೇ "ಮಾತುಕತೆಗಳು ವಿಫಲವಾದವು"ಎಂಬ ಘೋಷಣೆ ಹೊರಬರಬಹುದು. ದಕ್ಷಿಣ ಕೊರಿಯಾವು ಜಿನೇವಾ ಪರಿಷ

ಗಿಡರೆಂದೂ ಇದು ಸಮಾಧಾನಕರವಾದ ಫಲಿತಾಂಶವನ್ನುಂಟುಮಾಡುವುದೆಂದೂ ಎಲ್ಲರೂ ಆಶಿಸಿದ್ದರು ಈ ಹಾರೈಕೆಯು ಸುಳ್ಳೆನಿಸಿತು—ಉಗ್ರ ಸ್ವರೂಪವನ್ನು ಧರಿಸಿದ ವಿಮೋಚನಾ ಚಳವಳಿಯ ಮೇಲೆ ತಣ್ಣೀರನ್ನೆರಚುವುದೇ ಫ್ರೆಂಚರ ಗತ್ತುಗಾರಿಕೆ ಹಾಗು ಕುಹಕವೆಂದು ಈಗ ಬಯಲಾಯಿತು. ಅನ್ಯಥಾ, ಫ್ರೆಂಚರು ಮಾತುಕತೆಗಳು ಮುರಿದು ಬೀಳುವಂತೆ ವರ್ತಿಸುತ್ತಿರಲಿಲ್ಲ. ಫ್ರೆಂಚ ಸ್ವಾಸ್ಥ್ಯಗಳ ಜನನಾಯಕರು ಭಾರತದ ಸ್ಟೇ ನಿರಾಶೆಯನ್ನು ಹೊಂದಿದ್ದು ಇಮ್ಮಡಿ ಉತ್ಸಾಹದಿಂದ ತಮ್ಮ ಚಳವಳವನ್ನು ಮುನ್ನಡೆಸಲು ನಿರ್ಧರಿಸಿರುವರು. ಮಾತುಕತೆಗಳು ನಡೆಯುತಿದ್ದಂತೆಯೇ ಯಾನಂ ಮತ್ತಿತರ ಪ್ರದೇಶಗಳಲ್ಲಿ ಫ್ರೆಂಚ ಪೋಲೀಸರು ಭಾರತದ ಹಾಗು ಭಾರತೀಯರ ಮೇಲೆ ಅತಿಕ್ರಮಣವನ್ನೂ ಆಕ್ರಮಣವನ್ನೂ ಮಾಡಿ ಗೊಂದಲವೆಬ್ಬಿಸಿದ್ದು. ಫ್ರೆಂಚ ಸರಕಾರದ ಕಿಡಿಗೇಡಿತನಕ್ಕೆ ಮತ್ತೊಂದು ನಿದರ್ಶನವಾಯಿತು ಒಟ್ಟಾರೆ ನೋಡಿದರೆ ಫ್ರೆಂಚ ಸರಕಾರಕ್ಕೆ ತಾವು ಮೊದಲೇ ಒಪ್ಪಿಕೊಂಡಿರುವ ತತ್ವವನ್ನು ಅನುಷ್ಠಾನಕ್ಕೆ ಇಳಿಸುವುದು ಇಷ್ಟವಿಲ್ಲವೆಂದೇ ತೋರುತ್ತದೆ— ಇಂಡೋಚೀನದಂತಹ ವಸಾಹತು ಕೈಬಿಟ್ಟು ಹೋಗುತ್ತಿರುವುದನ್ನು ಕಂಡೂ ಅವರಿಗೆ ಬುದ್ಧಿ ಬಂದಿಲ್ಲ. ಲೇನಿಯೆಲರ ಸರಕಾರಕ್ಕೆ ತಿಳಿವಳಿಕೆ ಮೂಡಿ ಬರುವುದನ್ನೆ ಕಾಯುತ್ತಾ ಕುಳಿತಿರಲು ಭಾರತವು ಇನ್ನೂ ಒಪ್ಪಬಹುದು—ಆದರೆ ಫ್ರೆಂಚ ಸ್ವಾಸ್ಥ್ಯಗಳಲ್ಲಿರುವ ಪ್ರಜೆಗಳು ಎಷ್ಟು ಮಾತ್ರಕ್ಕೂ ಸಮಾಧಾನ ಹೊಂದಲಾರರು. ಅವರು ತೊಡಗಿರುವ ಆಂದೋಲನ ವ್ಯಾಪಕವಾಗಿ ವಿಸ್ತರಿಸುವುದು ನಿಶ್ಚಯ; ತಜ್ಜನಿತ ಅನಿಷ್ಟ ಪರಿಣಾಮಗಳಿಗೆ ಫ್ರೆಂಚ ಸರಕಾರವೇ ಹೊಣೆಯಾಗುತ್ತದೆ.

ತ್ತಿನಿಂದ ಹೊರನಡೆಯುವ ಉದ್ಧಟತನವನ್ನು ಇಷ್ಟರಲ್ಲೇ ಬಹಿರಂಗವಾಗಿ ಹೇಳಿ ತೋರಿಸಿದೆ. ಅಮೇರಿಕವೂ ಈ ಅಭಿಪ್ರಾಯವನ್ನು ಅಂತರಂಗದಲ್ಲಿ ಬೆಂಬಲಿಸುತಿದ್ದು, ಬ್ರಿಟನಿನ ಅನುಕೂಲಾಭಿಪ್ರಾಯವನ್ನು ಹೊಂದಲು ಪ್ರಯತ್ನಿಸುತ್ತಿದೆ. ಆದರೆ ಕಮ್ಯುನಿಸ್ಟರ ಬದ್ಧ ಶತ್ರುಗಳೆಂದು ಹೇಳಿಸಿಕೊಳ್ಳುವ ರಾಷ್ಟ್ರಗಳ ಹೊರತು, ಇತರರೆಲ್ಲರೂ ಮಾತುಕತೆಗಳು ಮುರಿಯದೆ ಮುಂದುವರಿಯಬೇಕೆಂದೇ ಬಯಸುತ್ತವೆ

ಯುದ್ಧ ವಿರಾಮದ ಮೇಲ್ವಿಚಾರಣೆ

ಕದನ ನಿಲುಗಡೆಯನ್ನು ಸಾಧಿಸಬೇಕೆಂದು ಮುಂತಾದ ಸಿದ್ಧಾಂತವನ್ನು ಇಂಡೋಚೀನದಲ್ಲಿ ಯಾವ ಪ್ರಕಾರ ಅನುಷ್ಠಾನಕ್ಕೆ ತರಬೇಕೆಂಬುದೇ ಈಗಿನ ಸಮಸ್ಯೆ—ಯುದ್ಧ ವಿರಾಮದ ಮೇಲ್ವಿಚಾರಣೆಯನ್ನು ನಡೆಸುವ ಘಟಕದ ಸ್ವರೂಪವನ್ನು ಕುರಿತು ಕಮ್ಯುನಿಸ್ಟರು ನೀಡುವ ಸಲಹೆ ಪಾಶ್ಚಾತ್ಯರಿಗೆ ಪಥ್ಯವಾಗುತ್ತಿಲ್ಲ. ಕೊರಿಯಾದಲ್ಲಿ ಇಂತಹದೇ ಹೊಣೆಯನ್ನು ನಿರ್ವಹಿಸುತ್ತಿರುವ ಪೋಲೆಂಡ, ಝುಕೊಸ್ಲೊವಾಕಿಯಾ, ಸ್ವೀಡನ ಮತ್ತು ಸ್ವಿಜರಲೇಂಡುಗಳನ್ನು ಇಂಡೋಚೀನದ ಸಮರ ನಿಲುಗಡೆಗಾಗಿಯೂ ವಿನಂತಿಸಬೇಕೆಂದು ಚೀನಾ ಸೂಚಿಸುತ್ತದೆ. ರಶಿಯಾವು ಇವೇ ಸದಸ್ಯರಲ್ಲವಾದರೂ ಇದೇ ಪ್ರಕಾರದ ಸಮಿತಿಯೊಂದಕ್ಕೆ ಹೊಣೆ ಒಪ್ಪಿಸಬೇಕೆಂದು ತುಸು ಔದಾರ್ಯದಿಂದಲೇ ಹೇಳುತ್ತದೆ. ಉಭಯ ಪಕ್ಷಗಳ ಪರವಾಗಿ ಇಬ್ಬರಿಬ್ಬರು ಪ್ರತಿನಿಧಿಗಳುಳ್ಳ ಮೇಲ್ವಿಚಾರಣಾ ಸಮಿತಿಯು ಕೊರಿಯಾದಲ್ಲಿ "ಫಾರ್ಸು" ನಡೆಸುತ್ತಿದೆಯೇ ಹೊರತು, ಅದು ಪ್ರಯೋಜನಕಾರಿಯೂ ಪರಿಣಾಮಕಾರಿಯೂ ಆಗಿಲ್ಲವೆಂದು ಹೇಳಿ, ಪಾಶ್ಚಾತ್ಯರು ಇದನ್ನು ನಿರಾಕರಿಸುತ್ತಾರೆ. ಈ ನಡುವೆ ಕೊಲೊಂಬೋ ಪರಿಷತ್ತಿನಲ್ಲಿ ಸೇರಿದ ರಾಷ್ಟ್ರಗಳಲ್ಲಿ ಮಹತ್ವದ ಪಾತ್ರ ವಹಿಸಿದ ಭಾರತದೊಡನೆ ವಿಶೇಷ ಸಂಪರ್ಕವನ್ನಿಟ್ಟುಕೊಂಡಿರುವ ಬ್ರಿಟನು ಹೊಸ ಸೂಚನೆಯನ್ನು

ಶಿರ್ವ ಪಂಚಾಯತ್ ಕೋರ್ಟಿನಲ್ಲಿ

ಸಿವಿಲ್ ವ್ಯಾಜ್ಯ ನಂಬ್ರ 10/54

ಸಾಲ್ವೊದೊರ ನಜರತ್ — ವಾದಿ.

ಪೈದಿನ ಬ್ಯಾರಿ — ಪ್ರತಿವಾದಿ.

ಉಡ್ಪಿ ತಾಲೂಕು ಶಿರ್ವ ಗ್ರಾಮದ ಇಗರ್ಜಿ ಬಳಿಯಲ್ಲಿರುವ ಸೊಯಾರು ಬಂಜಾ ಯಾನೆ ಹಮ್ಮಬ್ಬ ಬ್ಯಾರಿಗಳ ಮಗ ಪೈದಿನ ಬ್ಯಾರಿ —ಇವರಿಗೆ ಈ ಮೂಲಕ ತಿಳಿಸುವುದೇನಂದರೆ:—ವಾದಿಗೆ ನಿಮ್ಮಿಂದ ಬರಬೇಕಾದ ಬಾಡಿಗೆ ಬಾಕಿ ವಗ್ಯೆರೆ ಬಗ್ಗೆ ರೂ. 65-13-8ಕ್ಕೆ ನಿಮ್ಮ ಮೇಲೆ ಈ ಕೋರ್ಟಿನಲ್ಲಿ ವಾದಿಯು ದಾವೆ ತಂದಿದ್ದಾನೆ. ಆ ಬಗ್ಗೆ ನಿಮ್ಮದೇನು ಉದಾಹರಣೆ ಇರುವುದಾದರೆ, ತಾರೀಕು 28—6—54ನೇ ಸೋಮವಾರ ಸಾಯಂಕಾಲ ಗಂಟೆ 3ಕ್ಕೆ ಈ ಕೋರ್ಟು ಮುಂದೆ ಹಾಜರಾಗಿ ಉದಾಹರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮ ಮೇಲೆ ಎಕ್ಸಪಾರ್ಟ ಡಿಕ್ರಿ ಕೊಡೋಣಾಗುವುದು.

Sd. S. A. Hegde.

Shirva S. K.

Shirva Panchayat Board

Dated 7—6—54.

ಮುಂದಿಟ್ಟಿತು. ಭಾರತ, ಬರ್ಮಾ, ಇಂಡೋನೇಶಿಯಾ, ಸಿಂಹಳ ಮತ್ತು ಪಾಕಿಸ್ತಾನಗಳನ್ನು ಮೇಲ್ವಿಚಾರಣಾ ಸಮಿತಿಯಾಗಿ ಅಂಗೀಕರಿಸಬೇಕೆಂದು ಅವರು ಹೇಳಿದರು. ಫ್ರಾನ್ಸಿನ ಬಿಡಾಲರು ಇದಕ್ಕೆ ಮೊದಲು ಒಪ್ಪದಿದ್ದರೂ—ಹಿಂದಿನಿಂದ ಈ ಸಮಿತಿಯು ಬಹುಮತದಿಂದ ಕೈಗೊಳ್ಳುವ ನಿರ್ಣಯವು ಬಂಧನಕಾರಿಯಾಗಬೇಕೆಂಬ ಶರ್ತವನ್ನು ಮುಂದೆ ಮಾಡಿ, ತಮ್ಮ ಅಂಗೀಕಾರವನ್ನು ನೀಡಿದರು. ಸಿಂಹಳ ಮತ್ತು ಪಾಕಿಸ್ತಾನಗಳು ಇಂತಹ ಸಮಿತಿಯಲ್ಲಿ ಸೇರಲು ಈಗಾಗಲೇ ಸಮ್ಮತಿಯನ್ನು ಪ್ರಕಟಿಸಿದ್ದು, ಭಾರತವೂ ಹೊಣೆ ಹೊರಲು ಮುಂಬಂದೀತು. ಆದರೆ, ರಶಿಯಾ ಮಂಗಳವಾರ ದಿನದ ಬಹಿರಂಗ ಅಧಿವೇಶನದಲ್ಲಿ ಏನು ಹೇಳುತ್ತದೆಯೋ— ಹಿಂದೆ ಹೇಳಿದಂತೆ, ಮುಂದಿನದೆಲ್ಲ ಮೊಲೊಟೋವರ ಹೇಳಿಕೆಯನ್ನು ಹೊಂದಿಕೊಂಡಿದೆ.

ಹಿಲ್ಡ್ರೆತರ ಕೈವಾಡ

ಪ್ರಜಾಪ್ರಭುತ್ವದಲ್ಲಿಯೂ ಸ್ವತಂತ್ರ ಜಗತ್ತಿನಲ್ಲಿಯೂ ಅತ್ಯಂತ ನಿಷ್ಠೆ ಇರುವ ರಾಷ್ಟ್ರವೆಂದರೆ ಅಮೇರಿಕ ಮಾತ್ರವೆಂದು ಅದು ತಾನಾಗಿಯೇ ಸಾರುತ್ತದೆ— ಅಮೇರಿಕದೊಡನೆ ಸೈನಿಕ ಒಪ್ಪಂದವನ್ನು ಮಾಡಿಕೊಂಡು ಪರಮ ಮೈತ್ರಿಯನ್ನು ಸಾಧಿಸಿರುವ ಪಾಕಿಸ್ತಾನವು ಪೂರ್ವ ಬಂಗಾಳದಲ್ಲಿ ಪ್ರಜಾಪ್ರಭುತ್ವ ಪದ್ಧತಿಯಂತೆ ಅಧಿಕಾರ ಸ್ಥಾನವನ್ನು ವಹಿಸಿದ ಫಜಲುಲ ಹಕ್ಕರನ್ನು ಘಟನೆಯ ಕಲವೊಂದನ್ನು ಮುಂದೆ ಮಾಡಿ ಪದಚ್ಯುತಗೊಳಿಸಿದುದಕ್ಕೆ ಪ್ರಜಾಪ್ರಭುತ್ವದಲ್ಲಿ ಶ್ರದ್ಧೆ ಇರುವ ಅಮೇರಿಕದ ರಾಜಕಾರಣಿಗಳೇ ಕಾರಣರೆಂದು ಕೆಲವು ವರದಿಗಳು ತಿಳಿಸುತ್ತವೆ. ತೆರೆಯ ಹಿಂದಿನ ಘಟನೆಗಳು ಬೆಳಕಿಗೆ ಬಂದಿಲ್ಲ; ಮತ್ತು ಬರಲಿಕ್ಕೂ ಇಲ್ಲ—ಆದರೆ ಗುಸು ಗುಸು ಮಾತಿನಿಂದ ಏನಾದರೂ ಹೇಳಬಹುದಾದರೆ, ಪಾಕಿಸ್ತಾನದಲ್ಲಿ ಅಮೇರಿಕೆಯ ರಾಯಭಾರಿಯಾಗಿರುವ ಮಿಸ್ಟರ್ ಹಿಲ್ಡ್ರೆತರ ಕೈವಾಡವೇ ಫಜಲುಲ ಹಕ್ಕರ ಪದಚ್ಯುತಿಗೂ ಪೂರ್ವ ಬಂಗಾಲದಲ್ಲಿ ಪ್ರಜಾಪ್ರಭುತ್ವದ ಉತ್ತರ ಪೂಜೆಗೂ ಹೇತುವಾಯಿತೆಂದು ಸ್ಪಷ್ಟವಾಗುತ್ತದೆ. ಲೋಕದ ಯಾವ ವಿವೇಕಿಯೂ ಒಪ್ಪಲಾರದ ಈ "ಉಗ್ರ ಕ್ರಮ"ವನ್ನು ಕೈಗೊಳ್ಳುವುದಕ್ಕೆ ಮಹಮ್ಮದಾಲಿಯವರು ಹೆದರುತಿದ್ದರು— ಅವರಿಗೆ ಧೈರ್ಯಕೊಟ್ಟು ಹಿಲ್ಡ್ರೆತರು ಸ್ವರಾಷ್ಟ್ರವಾದ ಅಮೇರಿಕಕ್ಕೆ ದೊಡ್ಡ ಉಪಕಾರ ಮಾಡಿದರು. ಅಮೇರಿಕಾದ ದೃಷ್ಟಿಯಲ್ಲಿ ಆಯಕಟ್ಟಿನ ಪ್ರದೇಶವೆನಿಸಿ ಪೂರ್ವ ಬಂಗಾಲದಲ್ಲಿ ಸೈನಿಕ ಕೇಂದ್ರಗಳನ್ನು ಸ್ಥಾಪಿಸಲು ಆತಂಕವೊಡ್ಡುತಿದ್ದ ಫಜಲುಲಹಕ್ಕರನ್ನು ಮನೆಯಲ್ಲಿಯೇ ಕೈದಿಯಂತೆ ಇಡಲು ಸಲಹೆ ಮಾಡಿದರಲ್ಲದೆ ಪಾಕ – ಅಮೇರಿಕ ಹಾಗು ಪಾಕ— ತುರ್ಕ ಸೈನಿಕ ಒಡಂಬಡಿಕೆಗಳನ್ನು ಸಾಧಿಸಿದ ಇಸ್ಕಂದರ ಮಿರ್ಜಾರನ್ನು ಹೊಸ ಗವರ್ನರರಾಗಿ ನೇಮಕಗೊಳಿಸಿದರು. ಈ ಗವರ್ನರರು ಕಮ್ಯುನಿಸ್ಟರನ್ನೂ ಸಾರ್ವಜನಿಕ ಭದ್ರತೆಗೆ ಆತಂಕ ಪ್ರಾಯರಾ[redacted]ವನ್ನು ಪ್ರಾರಂಭಿಸಿ, ಐನೂರಕ್ಕೂ ಹೆಚ್ಚು ಮಂದಿಯನ್ನು ಬಂಧಿಸಿದ್ದಾರೆ. ಬಂಧಿತರಲ್ಲಿ ಅಲ್ಪ ಸಂಖ್ಯಾಕರಾದ ಹಿಂದೂ ಎಂ. ಎಲ್. ಎ.ಗಳೂ ಇರುವುದನ್ನು ನೋಡಿದರೆ, ಭಾರತದೊಡನೆ ಇವರು ಒಳಸಂಚು ನಡೆಸುತಿದ್ದರೆಂದು ಆರೋಪಿಸಲು ಹಾಗು ಮುಸ್ಲಿಮರ ಜಾತೀಯ ಭಾವನೆಯನ್ನು ಕೆರಳಿಸಲು ನೆಪ ಹುಡುಕಿದಂತೆ ತೋರುತ್ತದೆ. ಫಜಲುಲ ಹಕ್ಕರ ಬೆಂಬಲಿಗರಾದ ಶಾಸನ ಸಭಾ ಸದಸ್ಯರು ದಿನಾಂಕ ೭ರಂದು ಸಭೆ ಸೇರಲೆಂದು ಸಿದ್ಧತೆಗಳನ್ನು ನಡೆಸುತಿದ್ದಂತೆಯೇ ಅವರಿಗೆ ಪ್ರತಿಬಂಧವನ್ನು ಸರಕಾರದ ಕಡೆಯಿಂದ ಹೇರಲಾಯಿತು. ಜನರೇನಾದರೂ ಗಲಭೆ ಮಾಡಿದರೆ ದಂಡಿನ ಆಳಿಕೆ ಹೇರುವುದಾಗಿಯೂ ಹೊಸ ಗವರ್ನರರು ಬೆದರಿಸಿದರು; ಪೂರ್ವ ಬಂಗಾಲದಲ್ಲಿ ಅವಶ್ಯಕತೆಗಿಂತ ಎಷ್ಟೋ ಹೆಚ್ಚು ಸೈನ್ಯವನ್ನು ಇಡಲಾಗಿದೆಯೆಂದೂ ಅವರು ದರ್ಪದಿಂದ ಸಾರಿದರು.

ಆದರೆ ಮಹಮ್ಮದಾಲಿಯವರ ಸರಕಾರ ತಪ್ಪು ಮಾಡಿದೆಯೆಂದು ಲೋಕಕ್ಕೆ ಲೋಕವೇ ಹೇಳುತ್ತದೆ. ಆಗ್ನೇಯ ಏಶಿಯಾದ ಹಾಗು ಪಾಶ್ಚಾತ್ಯ ಪತ್ರಿಕೆಗಳು ಮಹಮ್ಮದಾಲಿಯವರ ಕ್ರಮವನ್ನು ಟೀಕಿಸಿರುತ್ತವೆ. ಕಮ್ಯುನಿಸ್ಟರ ಬದ್ಧ ವಿರೋಧಿಯಾದ ಅಮೇರಿಕದ ಟೈಮ ಪತ್ರಿಕೆಯು ಸಹಾ ಪೂರ್ವ ಬಂಗಾಲದಲ್ಲಿ ಕಮ್ಯುನಿಸ್ಟರು ಗಲಭೆ ಪ್ರಚೋದಿಸಿದರೆಂದು ಒಪ್ಪುವುದಿಲ್ಲ— ಪಶ್ಚಿಮ ಪಾಕಿಸ್ತಾನದಿಂದ ಬಂದ ಮುಸ್ಲಿಂ ಕೆಲಸಗಾರರು ಪೂರ್ವ ಬಂಗಾಲದ ಬಂಧುಗಳಿಗಿಂತ ಹೆಚ್ಚು ವೇತನ ಪಡೆದು, ಬಂಗಾಲಿಗಳನ್ನು ಹಂಗಿಸುತ್ತಿದ್ದುದ್ದೇ ಕೂಲಿಕಾರ ಗಲಭೆಗಳಿಗೆ ಮೂಲವೆಂದು ಅದು ಹೇಳುತ್ತದೆ. ಇವಾವುದೂ ಮಹಮ್ಮದಾಲಿಯವರಿಗೆ ಸರಿ ಕಾಣವುದಿಲ್ಲ—ತಾವು ಕೈಕೊಂಡ ಕ್ರಮದಿಂದ ಅವರಿಗೆ ಸಂತೋಷವೂ ಸಮಾಧಾನವೂ ಆಗಿದೆ; ಎಂತಲೇ ತುರ್ಕಸ್ತಾನಕ್ಕೆ ಅವರು ಸವಾರಿ ಭೇಟ ಕೊಡಲು ಹೊರಟಿದೆ.

ಕಾಶ್ಮೀರ ಪ್ರಶ್ನೆ

ಮಹಮ್ಮದಾಲಿಯವರು ತಿಂಗಳ ಮೊದಲನೇ ದಿನ ತಮ್ಮ ರಾಷ್ಟ್ರದ ಪ್ರಜೆಗಳನ್ನು ಉದ್ದೇಶಿಸಿ ಮಾತನಾಡುತ್ತಾರೆ— ಈ ತಿಂಗಳು ಹಕ್ಕರ ಪದಚ್ಯುತಿಯ ಹಿನ್ನೆಲೆಯನ್ನು ಅವರು ಸರಕಾರೀ ದೃಷ್ಟಿಕೋಣದಲ್ಲಿ ವಿವರಿಸಿದರು. ಅದೇ ಸಮಯ ಕಾಶ್ಮೀರದ ಪ್ರಶ್ನೆಯನ್ನೂ ಅವರು ಪ್ರಸ್ತಾಪಿಸಿದರು, ಭದ್ರತಾ ಮಂಡಳವು ಭಾರತ- ಪಾಕಿಸ್ತಾನಗಳೇ ಪರಸ್ಪರ ತೀರ್ಮಾನಿಸಲೆಂದು ಬಿಟ್ಟುಗೊಟ್ಟಿದ್ದ ಈ ಪ್ರಶ್ನೆಯನ್ನು ಮರಳಿ ಭದ್ರತಾ ಮಂಡಳಕ್ಕೆ ಒಯ್ಯುವ ಸೂಚನೆಯನ್ನು ಅವರು ಕೊಟ್ಟರು. ಕಾಶ್ಮೀರ ಘಟನಾ ಸಮಿತಿಯು ಕೈಗೊಂಡ ನಿರ್ಣಯವನ್ನು ಮನ್ನಿಸಿ, ಭಾರತದ ರಾಷ್ಟ್ರಾಧ್ಯಕ್ಷರು ಘಟನಾತ್ಮಕವಾಗಿ ಭಾರತದ ಅಧಿಕಾರವನ್ನು ಕಾಶ್ಮೀರ ಪ್ರದೇಶದ ಮೇಲೆ ವಿಸ್ತರಿಸಿದ್ದು ಮಹಾಪರಾಧವೆಂದು ಅವರು ಸಾರಿದರು. "ಇನ್ನೂ ನಮ್ಮಲ್ಲಿ ಮಾತುಕತೆ ಸಾಗುವಾಗ ಇಂತಹ ಕ್ರಮ ಕೈಗೊಳ್ಳುವುದು ಪರಮ ಅನ್ಯಾಯ" ಎಂಬುದಾಗಿ ಅವರು ಅಭಿಪ್ರಾಯಪಟ್ಟರು ಭದ್ರತಾ ಮಂಡಳವು ಪಶ್ಚಿಮ ರಾಷ್ಟ್ರಗಳ ಪ್ರೀತಿ ಸಂಪಾದಿಸಿರುವ ಪಾಕಿಸ್ತಾನಕ್ಕೆ ಮೊದಲಿಂದಲೂ ಪ್ರಚಾರದ ರಂಗಸ್ಥಳವಾಗಿರುತ್ತದೆ—ಹಿಂದೆ ಭಾರತದ ಫೆಡರಲ್ ಕೋರ್ಟಿನ ನ್ಯಾಯಾಧೀಶರಾಗಿದ್ದ ಪಾಕಿಸ್ತಾನೀ ವಿದೇಶ ಮಂತ್ರಿ ಜಾಫರುಲ್ಲಾ ಖಾನರಿಗೆ ಭಾರತದ ವಿರುದ್ಧ ಸುಳ್ಳುಸುಳ್ಳೇ ಅಪಪ್ರಚಾರ ಮಾಡಲು ಭದ್ರತಾ ಮಂಡಳದಲ್ಲಿ ದೊರಕಿದಷ್ಟು ಅವಕಾಶ ಇನ್ನಿತರೆಡೆ ಸಿಗಲಿಲ್ಲ; ಸಿಗುವುದೂ ಇಲ್ಲ. ನ್ಯಾಯ ನಿಷ್ಠುರವಾದ ಭಾರತವು ಸಂಯುಕ್ತರಾಷ್ಟ್ರ ಸಂಘಕ್ಕೆ ನೀಡಿದ ವಾಗ್ದಾನಗಳನ್ನು ಪೂರೈಸುವುದೆಂದು ನೆಹರು ಹೇಳಿದ್ದರೂ ಮಹಮ್ಮದಾಲಿಯವರಿಗೆ ಇದು ಸಮಾಧಾನ ಮಾಡಿಲ್ಲ. ಮಾತುಕತೆಗಳು ನಡೆಯುತಿದ್ದಂತೆಯೇ ಭಾರತವು ಕ್ರಮ ತೆಗೆದುಕೊಂಡುದರಿಂದ ಕಾಶ್ಮೀರ ಸಮಸ್ಯೆಯ ಸ್ವರೂಪದಲ್ಲಿ ಪರಿವರ್ತನೆಯಾಯಿತೆಂದು ಅವರ ಆರೋಪ — ಆದರೆ ಪಾಕಿಸ್ತಾನವು ಅಮೇರಿಕೆಯೊಡನೆ ಸೈನಿಕ ಒಪ್ಪಂದ ಮಾಡಿಕೊಂಡುದರಿಂದ ಪರಿಸ್ಥಿತಿಯಲ್ಲಿ ಏನೂ ವ್ಯತ್ಯಾಸವಾಗಲಿಲ್ಲವೆ, ಹೇಗೆ? ವ್ಯತ್ಯಾಸವಾಗಿದೆಯೆಂದು ಅಮೇರಿಕವೇ ಒಪ್ಪಿರುತ್ತದೆ; ಮತ್ತು ತತ್ಪರಿಣಾಮವಾಗಿ ಕಾಶ್ಮೀರದಲ್ಲಿ ತಟಸ್ಥ ನಿರೀಕ್ಷಕರಾಗಿ ಕೆಲಸ ಮಾಡಲು ಅಮೇರಿಕದ ಪ್ರತಿನಿಧಿಗಳನ್ನು ಪುನಃ ನೇಮಿಸುವುದಿಲ್ಲೆಂದು ಅದು ನಿರ್ಧರಿಸಿದೆ. ಅಲ್ಲದೆ ಆಜಾದ ಕಾಶ್ಮೀರದಲ್ಲಿ ಪಾಕಿಸ್ತಾನದ ಕೈಗೊಂಬೆ ಸರಕಾರ ಅಧಿಕಾರದಲ್ಲಿರುತ್ತದೆ; ಭಾರತದ ವಶವಿರುವ ಪ್ರದೇಶದಲ್ಲಿ ಭಾರತದ ಅಧಿಕಾರ ನಡೆಯಬಾರದೆಂದರೆ ಅರ್ಥವಿದೆಯೆ? ಮಹಮ್ಮದಾಲಿಯವರು ಏಕೆ ಇಂತಹ ತಪ್ಪುಗಳನ್ನು ಮಾಡುತಿದ್ದಾರೋ ತಿಳಿಯುವುದಿಲ್ಲ.

ಸೆಕೆಂಡರಿ ಶಾಲೆಗಳೂ ಜಿಲ್ಲಾ ಲೈಬ್ರೆರಿಗಳೂ

'ನವಯುಗ'ವನ್ನು ತರಿಸಿಕೊಳ್ಳುವಂತೆ ಮಂಜೂರಾಗಿದೆ.

ಸೆಕೆಂಡರಿ ಶಾಲೆಗಳ ಉಪಯೋಗಾರ್ಥವಾಗಿ ಮದ್ರಾಸಿನ ವಿದ್ಯಾಂಗದ ಡೈರೆಕ್ಟರರೂ, ಜಿಲ್ಲೆಯ ಲೈಬ್ರೆರಿಗಳ ಉಪಯೋಗಾರ್ಥವಾಗಿ ದ. ಕ. ಜಿಲ್ಲಾ ಲೋಕಲ್ ಲೈಬ್ರೆರಿ ಅಥೋರಿಟಿ ಕಮಿಟಿಯವರೂ **'ನವಯುಗ'** ವಾರಪತ್ರಿಕೆಯನ್ನು ಮಂಜೂರು ಮಾಡಿರುತ್ತಾರೆ.

1921ರಲ್ಲಿ ಆರೋಗ್ಯಮಂತ್ರಿ, ಶ್ರೀ ಎ. ಬಿ. ಶೆಟ್ಟರಿಂದ ಸ್ಥಾಪಿಸಲ್ಪಟ್ಟು ಅವಿರತವಾಗಿ ಜನಸೇವೆ ಮಾಡುತ್ತಿರುವ ರಾಷ್ಟ್ರೀಯ ವಾರಪತ್ರಿಕೆ **'ನವಯುಗ'**ಕ್ಕೆ ಎಲ್ಲಾ ಸೆಕೆಂಡರಿ ಶಾಲೆಗಳೂ, ಜಿಲ್ಲೆಯ ಎಲ್ಲಾ ಲೈಬ್ರೆರಿಗಳೂ, ಚಂದಾದಾರರಾಗಿ ಪ್ರೋತ್ಸಾಹಿಸಬೇಕಾಗಿ ವಿನಂತಿ.

ವಾರ್ಷಿಕ ಚಂದಾ ರೂ. 5-12-0 ಮಾತ್ರ.

ಯಂ. ಗಣಪ್ಪಯ್ಯ ಎಂಡ್ ಸನ್ಸ್

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ, ಮಂಗಳೂರು ಇವರ

ಅಶೋಕಾರಿಷ್ಟ ಮತ್ತು ಮಾತ್ರೆ–ಹೆಂಗಸರ ಗರ್ಭಾಶಯ ರೋಗಗಳಿಗೆ ಸಂಜೀವನ. ಅಕಾಲ ಬಹಿಷ್ಠೆ. ಋತುಸ್ರಾವವು ಜಾಸ್ತಿಯಾಗಿಯೂ, ಕಡಿಮೆಯಾಗಿಯೂ ಹೋಗುವುದು, ಬಿಳಿಸೆರಗು, ಸಂತಾನ ಹೀನತೆ, ರಕ್ತಹೀನತೆ, ಋತುಶೂಲೆ ಮೊದಲಾದ ಸ್ತ್ರೀಯರಿಗೆ ಸಂಬಂಧಪಟ್ಟ ಎಲ್ಲಾ ಕಾಯಿಲೆಗಳನ್ನು ಗುಣಪಡಿಸುವುದು. ಬಾಟ್ಲಿ 1ರ ರೂ. 3-8-0.

ಗರ್ಭ ರಕ್ಷಕ– ಗರ್ಭಿಣಿಯರಿಗೆ ಅತ್ಯಂತ ಫಲಕಾರಿಯಾದ ಔಷಧಿ. ಜನಿದೋಷ, ಗರ್ಭಪತನವಾಗುವಿಕೆ, ವಾಂತಿ, ಅರುಚಿ, ಆಲಸ್ಯ, ಶುಲಬದ್ಧತೆ. ವಾಯು ಉಪದ್ರ, ಕೈ ಕಾಲು ಬಚ್ಚುವುದು ಇವುಗಳನ್ನೆಲ್ಲಾ ಹೋಗಲಾಡಿಸುವುದು. ಬಾಟ್ಲಿ 1ರ ರೂ. 3-8-0. [redacted] ದೊರಕುತ್ತವೆ. ಕಾಗದ ಬರೆಯಿರಿ. ಕಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ, ರೋಗಕ್ಕೆ ತಕ್ಕ ಔಷಧಿಯನ್ನು ರವಾನಿಸಬಹುದು.

ಉಡುಪಿ

ಬಾರ್ ಎಸೋಸಿಯೇಶನಿನವರು. ತಾ. ೨ನೇ ಬೆಳಿಗ್ಗೆ ಮಂತ್ರಿ ಶ್ರೀ ಎ. ಬಿ. ಶೆಟ್ಟರಿಗೆ ಉಪಹಾರವಿತ್ತು ಗೌರವಿಸಿದರು. ಎಸೋಸಿಯೇಶನಿನ ಅಧ್ಯಕ್ಷ ಶ್ರೀ ಕೆ. ಜಿ. ಬಲ್ಲಾಳರು ಮಂತ್ರಿ ಶೆಟ್ಟರ ಪ್ರೌಢಿಮೆ, ಹಿರಿಮೆಗಳನ್ನು ವಿವರಿಸಿ ಸ್ವಾಗತ ಭಾಷಣವಿತ್ತರು. ಶ್ರೀ ಬಿ. ವೈಕುಂಠ ಬಾಳಿಗರು ಮಾತನಾಡಿದ ಮೇಲೆ ಮಂತ್ರಿಗಳು ಕಾಂಗ್ರೆಸು ಸರಕಾರವು ಮಾಡಿದ ಜನಹಿತ ಕಾರ್ಯಗಳನ್ನು ವಿವರಿಸಿ, ಭಾಷಣವಿತ್ತರು. ಕಾರ್ಯದರ್ಶಿ ಶ್ರೀ ಬಿ. ಓರಿಯಣ್ಣ ಹೆಗ್ಡೇರು ಧನ್ಯವಾದಗಳನ್ನಿತ್ತರು.

ಮೋಡರ್ನ್ ಹಾ! ಎ! ಶಾಲೆ– ಯಸ್. ಎಸ್. ಎಲ್. ಸಿ. ಪರೀಕ್ಷಾ ಫಲಿತಾಂಶವು ಸೇಕಡಾ 100 ಬಂದುದರಿಂದ ತಾ. ೬ರಂದು ಡಾ! ಕೆ. ಎಲ್. ಐತಾಳರ ಅಧ್ಯಕ್ಷತೆಯಲ್ಲಿ ಉಪಹಾರ ಕೂಟವೊಂದು ಜರಗಿತು. ಶಾಲಾ ಮೆನೇಜರ್ ಶ್ರೀ ಕೆ. ಜಗನ್ನಾಥ ನಾಯ್ಕರ ಸ್ವಾಗತ ಭಾಷಣ, ಜಿಲ್ಲಾ ವಿದ್ಯಾಧಿಕಾರಿಗಳಾಗಿ ಹೋಗಲಿರುವ ಶ್ರೀ ಎಚ್. ಸಂಜೀವ ರಾವ್ ಮತ್ತು ಅಧ್ಯಕ್ಷರ ಭಾಷಣ, ಧನ್ಯವಾದಗಳೊಂದಿಗೆ ಸಭಾಂತ್ಯವಾಯಿತು. ಉತ್ತಮ ಫಲಿತಾಂಶಕ್ಕಾಗಿ ಸಿಬಂದಿಯವರು ಅಭಿನಂದನೀಯರು.

ಪರಿಯಾಳ ಸಮಾಜ ಸುಧಾರಕ ಸಂಘದ— ಕಾರ್ಯಕಾರೀ ಮಂಡಲಿಯ ಸಭೆಯು ತಾ 1-6-1954ರಂದು, ಶ್ರೀ ಯು. ಪಿ. ಸುವರ್ಣರ ಅಧ್ಯಕ್ಷತೆಯಲ್ಲಿ ಜರಗಿ, ಸಂಘದ ಮೂಲಧನದ ಬಡ್ಡಿಯಿಂದ ಹ್ಯಾಸ್ಕೂಲುಗಳಲ್ಲಿ ಕಲಿಯುತ್ತಿರುವ ಸಮಾಜದ ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನೂ, ಸಂಘವನ್ನು ಸಂಸ್ಥೆಯಲ್ಲೇ ರಿಜಿಸ್ಟ್ರು ಮಾಡಬೇಕೆಂದೂ –ಮೊದಲಾದ ಠರಾವುಗಳಾದುವು ಶ್ರೀಗಳಾದ ಎಸ್. ಎ. ಭಂಡಾರಿ ಮತ್ತು ಗೋವಿಂದ ಭಂಡಾರಿಯವರು ಸಂಘದ ಏಳಿಗೆ ಸಾಧನೆಯ ಕುರಿತಾಗಿ ಮಾತನಾಡಿದರು. ಕಾರ್ಯದರ್ಶಿ ಶ್ರೀ ಟಿ. ಟಿ. ಸಾಲಿಯಾನರು ಧನ್ಯವಾದಗಳನ್ನರ್ಪಿಸಿದರು.

ಯೂನಿಯನ್ ನೈಟ್‌ಸ್ಕೂಲ್— ಮೋರ್ಡನ್ ಹಾ. ಎ. ಶಾಲಾ ಕಟ್ಟಡದಲ್ಲಿ ನಡೆಯುತ್ತಿರುವ ಈ ನೈಟ್‌ಸ್ಕೂಲಿನಲ್ಲಿ ಎಂದಿನಂತೆ ಒಂದನೆ ತರಗತಿಯಿಂದ ಎಂಟನೆ ತರಗತಿವರೆಗಿನ ತರಗತಿಗಳನ್ನು ಕ್ರಮವಾಗಿ ತೆರೆದಿರುತ್ತವೆ. ಮತ್ತು 1955ನೆ ಇ.ಎಸ್.ಎಲ್.ಸಿ. ಪರೀಕ್ಷೆಗೆ ತರಬೇತಿ ಕೊಡಲಾಗುವುದು. ಶಾಲೆಯಲ್ಲಿ ವಯಸ್ಕರಿಗೂ ಪ್ರವೇಶವಿದೆ.

ಸಾಕಷ್ಟು ವಿದ್ಯಾರ್ಥಿಗಳು ದೊರಕಿದರೆ ಮದ್ರಾಸ್ ಯುನಿವರ್ಸಿಟಿಯ ಮೆಟ್ರಿಕ್ಯುಲೇಶನ್ ಪರೀಕ್ಷಾ ತರಗತಿಗಳನ್ನೂ ತೆರೆಯುವ ವಿಚಾರವನ್ನು ಶಾಲಾ ಸಮಿತಿಯು ಪರಾಮರ್ಶಿಸುತ್ತದೆ.

ವಿವಾಹ ಸಮಾರಂಭ

ಶ್ರೀ ಬಡಗಬೆಟ್ಟು ಸುಬ್ಬಯ್ಯ ಹೆಗ್ಡೇರ ಪುತ್ರ ಶ್ರೀ ದಿವಾಕರ ಹೆಗ್ಡೆಯವರು ಶ್ರೀ ಕೊಡ್ವಾನ್‌ಗುತ್ತು ರಾಮಣ್ಣ ಶೆಟ್ರ ಪುತ್ರಿ ಸೌ! ಪದ್ಮಾವತಿಯನ್ನೂ ಕೊಡ್ವಾನ್‌ಗುತ್ತು ರಾಮಣ್ಣ ಶೆಟ್ರ ಪುತ್ರ ಶ್ರೀ ಸೀನಪ್ಪ ಶೆಟ್ಟರು ಡಾ! ಕೆ. ಶ್ಯಾಮ ಶೆಟ್ರ ಪುತ್ರಿ ಹೇಮಲತಾಳನ್ನೂ ಮಂಗಳೂರು ಜ್ಯೋತಿ ಟಾಕೀಸಿನಲ್ಲಿ ತಾ. ೯ರಲ್ಲಿ, ವಿವಾಹವಾದರು.

ಮಂಗಳೂರು

ಶ್ರೀ ಹೊಳೆಹಳ್ಳಿ ಶಿವರಾಮಪುರದ ಜಿಲ್ಲಾ ಸಂಚಾರ— ಸುಮಾರು ಎರಡು ವಾರಗಳಿಂದ ಮಂಗಳೂರು, ಪುತ್ತೂರು, ವಿಟ್ಲ ಮೊದಲಾದ ಕಡೆಗಳಿಗೆ ಹೋಗಿ ಅಲ್ಲಲ್ಲಿಯ ಸೇವಾ ಸಂಸ್ಥೆಗಳನ್ನು ಸಂದರ್ಶಿಸಿ, ಪ್ರಚಾರ ನಿಧಿಯನ್ನು ನಡೆಸುತ್ತಿದ್ದ ಶ್ರೀ ಹೊಳೆಹಳ್ಳಿಯವರು ಇದೇ ತಾ. 1ರಲ್ಲಿ ಕೊಯಮುತ್ತೂರಿಗೆ ತೆರಳಿರುತ್ತಾರೆ.

ವನಮಹೋತ್ಸವ— ಕೆಲ ವರ್ಷಗಳಿಂದ ಭಾರತದಲ್ಲೆಲ್ಲ ನಡೆಸಲ್ಪಡುತ್ತಿರುವ ವನಮಹೋತ್ಸವವು ಈ ವರ್ಷ ಜುಲಾಯಿ 1ರಿಂದ 8ರ ವರೆಗೆ ಆಚರಿಸಲ್ಪಡಲಿದೆ. ನಮ್ಮ ಜಿಲ್ಲೆಯು ಅಧಿಕ ಸಂಖ್ಯೆಯಿಂದ ಸಸಿ ನೆಟ್ಟು, ಸಂರಕ್ಷಿಸಿ, ಅಖಿಲಭಾರತ ಬಹುಮಾನ ಪಾರಿತೋಷ ಪಡೆದು ಕೀರ್ತಿಗಳಿಸಿದೆ. ಜನರು ವನಮಹೋತ್ಸವದಲ್ಲಿ ಇನ್ನಷ್ಟು ಉತ್ಸಾಹದಿಂದ ಭಾಗವಹಿಸುವಂತೆ ಹೊಸ ಬಹುಮಾನಗಳನ್ನು ಕೊಡುವ ಹೊಸ ಯೋಜನೆಯು ಪ್ರಕಟಿಸಲ್ಪಟ್ಟಿದೆ. (೧) ಭಾರತದಲ್ಲಿ ಅತ್ಯಧಿಕ ಗಿಡಗಳನ್ನು ನೆಟ್ಟು ಸಂರಕ್ಷಿಸಿದ ಜಿಲ್ಲೆಗೆ ಅಖಿಲಭಾರತ ರಾಜೇಂದ್ರ ಬಹುಮಾನ: (೨) ಭಾರತದಲ್ಲಿ ಅತ್ಯಧಿಕ ಗಿಡ ನೆಟ್ಟು ಬೆಳೆಸಿದ ಗ್ರಾಮಕ್ಕೆ ಅಖಿಲ ಭಾರತ ಜವಾಹರಲಾಲ ಬಹುಮಾನ, (೩) ಭಾರತದಲ್ಲಿ ಅತ್ಯಧಿಕ ಗಿಡ ನೆಟ್ಟು ರಕ್ಷಿಸಿದ ಸಂಸ್ಥೆಗೆ ಅಖಿಲಭಾರತ ಸರ್ದಾರ ಪಟೇಲ್ ಬಹುಮಾನ, (೪) ಭಾರತದಲ್ಲಿ ಅತ್ಯಧಿಕ ಗಿಡ ನೆಟ್ಟು ಬೆಳೆಸಿದ ಮುನ್ಸಿಪಾಲಿಟಿಗೆ ಅಖಿಲಭಾರತ ಮುನ್ಸಿ ಬಹುಮಾನ, (೫) ಪ್ರಾಂತದಲ್ಲಿ ಅತ್ಯಧಿಕ ಗಿಡ ನೆಟ್ಟು ರಕ್ಷಿಸಿದ ಜಿಲ್ಲೆಗೆ ಪ್ರಾಂತ ಬೆಳ್ಳಿ ಬಹುಮಾನ. ಇಷ್ಟೇ ಅಲ್ಲದೆ ಇತರ ಹಲವು ಪಾರಿತೋಷಕಗಳೂ ಇವೆ. ಆದ್ದರಿಂದ ಸರ್ವರೂ ಮುಂಬರುವ ವನಮಹೋತ್ಸವ ಕಾರ್ಯದಲ್ಲಿ ಸಹಕರಿಸಿ ಅದು ಜಯಶೀಲವಾಗುವಂತೆ ಮಾಡಬೇಕೆಂದು ಜಿಲ್ಲಾ ಕಲೆಕ್ಟರರು ಅಪೇಕ್ಷಿಸುತ್ತಾರೆ.

ವಿಶೇಷ ಮಳೆ— ಇತ್ತೀಚೆಗೆ ವಿಶೇಷ ಜಡಿ ಮಳೆ ಬೀಳುತ್ತಿದ್ದು, ತಾ. 6ರಲ್ಲಿ ಪ್ರತಿಕೂಲ ಹವಾಮಾನದಿಂದಾಗಿ ಮುಂಬಯಿ ಮಂಗಳೂರು ಕೊಚ್ಚಿ ಹಾರಾಟದ ವಿಮಾನವು ಬಜ್ಪೆಯಲ್ಲಿ ಇಳಿಯದೆ ನೇರವಾಗಿ ಕೊಚ್ಚಿಗೆ ಹೋಗಿರುತ್ತದೆ. ಇಷ್ಟರಲ್ಲೇ ಪಶ್ಚಿಮ ಇಂಚಿಗೂ ಮಿಕ್ಕಿ ಮಳೆ ಬಿದ್ದಿರುವುದೆಂದು ತಿಳಿದು ಬರುತ್ತದೆ.

ಈಗ ಶಾಸ್ತ್ರರುದ್ಧವಲ್ಲದ ಸೂರ್ಯಸಿದ್ಧಾಂತಾದಿ ಪಂಚಾಂಗಗಳಿಂದಾಗುವ ಅನರ್ಥ— ಸಜ್ಜನ ಮಹನೀಯರು ಇತ್ತ ಗಮನಿಸಬೇಕು ಇದೇ ಜಯ ಸಂವತ್ಸರದ ತಾ 10—6—1954ನೆ ಕ್ರಿಸ್ತ ಶಕದ ಗುರುವಾರ ಸ್ಟೇಂಡಾರ್ಡ್ ಘಂಟೆ 6.57ಕ್ಕೆ ಒದಗುವ ಮಿಥುನ ಲಗ್ನದಲ್ಲಿ ಗೃಹಪ್ರವೇಶದ ಆಹ್ವಾನ ಪತ್ರವನ್ನು ನೋಡಿ— ಶಾಸ್ತ್ರೀಯ ಮಾರ್ಗದಂತೆ ಕುಸುಮಪ್ರಭಾವದಿ ಈ ದಿನ ಮಿಥುನ ಲಗ್ನವು ನಿಷ್ಪೂರ್ವವಾಗಿದೆ. (ಇದು ಪ್ರತ್ಯಕ್ಷ ದೃಕ್ ಪ್ರತ್ಯಕ್ಷ ಸಿದ್ಧಾಂತಕ್ಕೆ ಬದ್ಧ) ಅದರಿಂದ ಈ ದಿನ ಮಿಥುನ ಲಗ್ನದಲ್ಲಿ ಗೃಹಪ್ರವೇಶ ಮೊದಲಾದ ಶುಭ ಮುಹೂರ್ತಗಳನ್ನು ಮಾಡಬಾರದು. ಸೂರ್ಯ ಸಿದ್ಧಾಂತಾದಿ ಪಂಚಾಂಗಗಳನ್ನನುಸರಿಸುವವರು ಈ ಮುಹೂರ್ತವನ್ನು ಇಟ್ಟಿರಬಹುದು. ಆದರೆ ಸೂರ್ಯ ಸಿದ್ಧಾಂತಾದಿ ಪಂಚಾಂಗ ಕರ್ತರು ಕೇವಲ ಪ್ರತ್ಯಕ್ಷ ಕಾಲನಿರ್ಣಯಕ್ಕಾಗಿ ತಿಥಿಯನ್ನು ಮಾತ್ರ ಬಿಟ್ಟು ಬಾಕಿ ಮುಹೂರ್ತ ಮೊದಲಾದ ಎಲ್ಲಾ ಫಲಾದೇಶಗಳಿಗೂ ತಿಥಿ ನಕ್ಷತ್ರಾದಿಗಳನ್ನು ನೂತನ ದೃಕ್ ಸಿದ್ಧಾಂತ ರೀತಿಯಿಂದಲೇ ಸ್ವೀಕರಿಸತಕ್ಕದ್ದೆಂದು ಒಪ್ಪಿದ್ದಾರೆ. ಹೀಗಿರುವಾಗ ಸೂರ್ಯ ಸಿದ್ಧಾಂತಾದಿ ಪಂಚಾಂಗ ಕರ್ತರು ಆತ್ಮವಂಚಕರಾಗಿ ತಾವು ಕೆಟ್ಟು ತಮ್ಮ ಅನುಯಾಯಿಗಳ ದರಿಯಿಂದ ಅನ್ಯರಿಗೆ ಅನರ್ಥವನ್ನುಂಟು ಮಾಡುತ್ತಾರೆ. ಮಠಾಧೀಶರು ಶಾಸ್ತ್ರಜ್ಞರು ಈ ವಿಷಯವನ್ನು ಗಮನಿಸದಿರುವುದು ಶೋಚನೀಯ. ಸಭ್ಯ ಮಹನೀಯರಾದರೂ ಈ ವಿಚಾರವನ್ನು ಚೆನ್ನಾಗಿ ಮಾಡಿಕೊಳ್ಳಲೆಂದು ಸೂಚಿಸಿದ್ದೇನೆ

ಇತಿ ಸಜ್ಜನವಿಧೇಯ,

ಶ್ರೀಪತಿ ಪಂಚಾಂಗ ಸಂಪಾದಕ

ಶ್ರೀಪತಿ ನರಸಿಂಹ ಅಡಿಗ.

ಆನೇಕೆರೆಹಾಕ್ಷೆ ಶೆಟ್ಟಿ ಕೊಲೆ ಮೊಕದ್ದಮೆ— ಯ ವಿಚಾರಣೆಯು ಇದೇ ತಾ 4ರಿಂದ ಮಂಗಳೂರಿನ ಸಬ್ ಮೆಜಿಸ್ಟ್ರೇಟ್ ಶ್ರೀ ಎಂ. ಪಿ. ಕೃಷ್ಣನ್ ನಾಯರರಿಂದ ಆರಂಭವಾಗಿದ್ದು ಕೆಲವು ಸಾಕ್ಷಿ ವಿಚಾರಣೆ ನಡೆದಿರುತ್ತದೆ. ಇದರಲ್ಲಿ 7 ಮಂದಿ ಆರೋಪಿಗಳಿದ್ದು 5 ಜನರು ಬಂಧಿಸಲ್ಪಟ್ಟಿರುವರು ಇಬ್ಬರು ಸ್ವತಃ ಹಾಜರಾಗಿರುವರು. ಒಂದನೆ ಆರೋಪಿಯನ್ನು ತಲೆಮರೆಸಿಕೊಂಡಿರುವನು ವಿಚಾರಣೆ ಸಾಗುತ್ತಿದೆ

ಪ್ರಾಂತ ಪುನರ್ರಚನಾ ಆಯೋಗವ— ಅಧ್ಯಕ್ಷ ಶ್ರೀ ಫಜಲ್ ಅಲಿ, ಸದಸ್ಯ ಸರ್ದಾರ ಕೆ. ಎಂ. ಪಣಿಕ್ಕರ್ ಇವರು ತಾ. 7ನೇ ಸಂಜೆ ಇಲ್ಲಿಗೆ ಆಗಮಿಸಿದಾಗ ಶ್ರೀಗಳಾದ ಕೆ. ಸದಾನಂದ ಹೆಗ್ಡೆ, ಎಂ. ಪಿ. ಕೆ. ಆರ್. ಶಾಂತ, ಎಸ್. ನರಸಪ್ಪಯ್ಯ, ಎಂ ಎಲ್. ಸಿ, ಕೆ ಎಸ್ ಎನ್. ಅಡಿಗ. ವಿ ಆರ್. ಕಕ್ಕಿಲ್ಲಾಯ ಬಿ. ಮಂಜಯ್ಯ ಹೆಗ್ಡೆ. ಡಾ! ಕೆ. ನಾಗಪ್ಪ ಆಳ್ವ, ಕೆ. ಬಿ. ಜಿನರಾಜ ಹೆಗ್ಡೆ, ಮೊದಲಾದವರು ಸ್ವಾಗತಿಸಿದರು ತಾ. 8ರಲ್ಲಿ ಸಮಿತಿಯವರು ಜಿಲ್ಲೆಯ ಪಕ್ಷಗಳ ಪ್ರಮುಖರ ಹಾಗೂ ಸಂಸ್ಥೆಗಳ ಅಭಿಪ್ರಾಯ ಪಡೆದು ತಾ. 9 ರಂದು ಬೆಂಗಳೂರಿಗೆ ತೆರಳಿದರು

ವಿಟ್ಲದಲ್ಲಿ ಕಲ್ಲುಕಟ್ಟೆ ಸಂಕದ ಉದ್ಘಾಟನೆಯು— ತಾ. 3ರಲ್ಲಿ ಶ್ರೀ ಕೆ. ವೆಂಕಟ್ರಮಣ ಗೌಡ, ಎಂ ಎಲ್. ಎ ಅವರ ಅಧ್ಯಕ್ಷತೆಯಲ್ಲಿ ಕೊಯಂಬುತ್ತೂರಿನ ಹೈವೇಸ್ ಸುಪರಿಂಟೆಂಡಿಂಗ್ ಇಂಜನಿಯರಾದ ಶ್ರೀ ಎಸ್. ಸಿ. ನಾಯ್ಡುರಿಂದ ಜರಗಿಸಲ್ಪಟ್ಟಿತು. ಆರಂಭದಲ್ಲಿ ಹೈವೇಸ್ ಡಿಪಾರ್ಟ್ಮೆಂಟಿನ ಡಿವಿಜನಲ್ ಇಂಜಿನಿಯರರಾದ ಶ್ರೀ ಎಂ. ಎಸ್. ಶ್ರೋತ್ರಿಯವರು 1939ರಲ್ಲಿ ನೆರೆಯಿಂದ ಜರಿದು ಹೋದ ಕಲ್ಲಕಟ್ಟೆ ಸಂಕದ ಮಾಹಿತಿಯನ್ನು ವಿವರಿಸಿದರು. ಶ್ರೀ ಎಸ್. ಸಿ. ನಾಯಕರು ನಮ್ಮ ದಾಸ್ಯದಿಂದ ಜನಹಿತ ರಾಜ್ಯದತ್ತ ಮುಂದರಿಯುತ್ತಿರುವಾಗ ನಾವು ನಮ್ಮ ರಚನಾ ಕಾರ್ಯಗಳನ್ನು ಆದಷ್ಟು ಕಡಿಮೆ ವೆಚ್ಚದಿಂದ ಮಾಡಬೇಕೆಂದೂ ಹೊರಗಿನ ಕಂಟ್ರಾಕ್ಟುದಾರರಿಗೆ ಯಾವ ಕಾರಣದಿಂದ ಇಲ್ಲಿಯ ಕಂಟ್ರಾಕ್ಟುಗಳನ್ನು ಕೊಡಬೇಕಾಯಿತೆಂಬುದನ್ನು ವಿವರಿಸಿದರು. ಅಧ್ಯಕ್ಷರು ನಮ್ಮ ಜಿಲ್ಲೆಯು ಮುಖ್ಯವಾಗಿ ಮಲೆನಾಡು ಸಾರಿಗೆ ಸೌಕರ್ಯದಲ್ಲಿ ಬಹಳ ಹಿಂದುಳಿದಿರುವುದೆಂದೂ ರಸ್ತೆಗಳಿದ್ದರೂ ಸಂಕಗಳಿಲ್ಲದಿರುವುದು ದೊಡ್ಡ ಕೊರತೆಯೆಂದೂ ಇತ್ತೀಚೆಗೆ ಸಾರಿಗೆ ಸೌಕರ್ಯ ಹೆಚ್ಚುತ್ತಿರುವುದೆಂದೂ ಈ ಒಗ್ಗೆ ಜಿಲ್ಲೆಯ ಶಾಸನಸಭಾ ಸದಸ್ಯರು ಐಕ್ಯಮತ್ಯದಿಂದ ಶ್ರಮಿಸುತ್ತಿದ್ದಾರೆಂದೂ ಭಾಷಣ ಮಾಡಿದರು. ಶ್ರೀ ಎಂ. ಎಸ್. ಶ್ರೋತ್ರಿಯವರು ಆಭಾರ ಮನ್ನಿಸಿದರು. ಪುತ್ತೂರು, ಮಂಗಳೂರು ಮೊದಲಾದ ಕಡೆಗಳಿಂದ ಈ ಸಮಾರಂಭಕ್ಕೆ ಅಧಿಕ ಮಹನೀಯರನೇಕರು ಬಂದಿದ್ದರು.

ಬೆಳುವಾಯಿ— ಶಾಲೆಯ ಹೊಸ ಕಟ್ಟಡದ ಉದ್ಘಾಟನೆಯು ತಾ. 3ರಲ್ಲಿ ಶ್ರೀ ಎಸ್. ನರಸಪ್ಪಯ್ಯ ಎಂ. ಎಲ್. ಸಿ. ಅವರ ಅಧ್ಯಕ್ಷತೆಯಲ್ಲಿ ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಡೆಯವರ ಹಸ್ತದಿಂದ ಜರಗಿತು. ಊರವರ ಸಹಕಾರದಿಂದ ಗ್ರಾಮಾಭಿವೃದ್ಧಿ ಹೇಗೆ ಸಾಧ್ಯವೆಂಬುದನ್ನು ವಿವರಿಸಿ ಈ ಶಾಲಾ ಕಟ್ಟಡಕ್ಕೆ ಕಾರಣರಾದ ಮಹನೀಯರ ಮುದಿಮೆಗಾಗಿ ಸಂತೋಷ ಸೂಚಿಸಿ, ಶ್ರೀ ಹೆಗ್ಡೆಯವರು ಮಾತನಾಡಿದರು. ಶ್ರೀಗಳಾದ ಕೆ. ಬಿ. ಜಿನರಾಜ ಹೆಗ್ಡೆ, ಕೆ. ಕಾಂತ ರೈ, ವರ್ಧಮಾನ ಹೆಗ್ಡೆ ಮೊದಲಾದವರು ಸಂದರ್ಭೋಚಿತ ಭಾಷಣಮಿತ್ತರು. ಅಧ್ಯಕ್ಷರು ಈ ಊರವರ ಗೂಡಿರಿಯ ಅನುಕರಣೀಯವೆಂದು ಕಟ್ಟಡ ಸಮಿತಿಯ ಪರಿಶ್ರಮವನ್ನು ಕೊಂಡಾಡಿದರು. ಸಮಾಜವಿಕಾಸ ಯೋಜನೆಯವರು ಈ ಕಟ್ಟಡಕ್ಕೆ ರೂ. 1500ರ ಸಹಾಯ ಸಲ್ಲಿಸಿದ್ದರು. ಶ್ರೀ ಧರ್ಮಸ್ಥಳ ಹೆಗ್ಡೆಯವರಿಗೆ ಈ ಸಂದರ್ಭದಲ್ಲಿ ಮಾನಪತ್ರವನ್ನು ಕೊಡಲಾಯಿತು. ಶ್ರೀ ಪದ್ಮಯ್ಯ ಹೆಗ್ಡೆಯವರು ಧನ್ಯವಾದಗಳನ್ನಿತ್ತರು.

ಮಂತ್ರಿ ಶ್ರೀ ಎ. ಬಿ. ಶೆಟ್ಟರು ಪುತ್ತಿಗೆ ಸಂಕವನ್ನು ಉದ್ಘಾಟಿಸಿ ಮಂಗಳೂರಿಗೆ ಹೋಗುವಾಗ ಇಲ್ಲಿ ಸ್ವಾಗತಿಸಲ್ಪಟ್ಟರು. ಹೊಸ ಕಟ್ಟಡವನ್ನು ಸಂದರ್ಶಿಸಿ, ಸಂತೋಷ ವ್ಯಕ್ತಪಡಿಸಿದರು.

ಮೂಲ್ಕಿ— ಬಿಲ್ಲವ ಸಮಾಜ ಸೇವಾಸಂಘದ ವಾರ್ಷಿಕ ಮಹಾಸಭೆಯು ಕಳೆದ ತಾ. 30ರಲ್ಲಿ ಡಾ! ಸಿ. ಸಿ. ಸುವರ್ಣರ ಅಧ್ಯಕ್ಷತೆಯಲ್ಲಿ ಜರಗಿ, ವರದಿ ಸ್ವೀಕಾರ, ಶ್ರೀಗಳಾದ ಕೆ. ಉಗ್ಗಪ್ಪ, ಎಂ. ಕೆ. ಎಲ್ಲಪ್ಪ ಮತ್ತು ಅಧ್ಯಕ್ಷರ ಭಾಷಣಗಳಾಗಿ, ಕಾರ್ಯಕಾರಿ ಸಂಘದ ಚುನಾವಣೆ ನಡೆಯಿತು.

ಬೆಳ್ಮೆ— 31—5—54ರಲ್ಲಿ ಬೋರ್ಡು ಹಾ! ಎ! ಶಾಲೆಯನ್ನು ಮಂತ್ರಿ ಶ್ರೀ ಎ. ಬಿ. ಶೆಟ್ಟರು ಸಂದರ್ಶಿಸಿ, ಸಂತೋಷವನ್ನು ವ್ಯಕ್ತಪಡಿಸಿ, ಶಾಲೆಗೆ ಸಾಧ್ಯವಾದಷ್ಟು ಸಹಾಯ ನೀಡುವುದಾಗಿ ಭರವಸೆಯಿತ್ತರು.

ಮರ್ಣೆ— ಕಳೆದ 31ರಲ್ಲಿ ಸ್ಥಳೀಯ ಶಾಲಾ ಹೆತ್ತವರ ಸಭೆಯು ಶ್ರೀ ಎಚ್. ರಾಮಚಂದ್ರ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ತಿಂಡಿ ವಿತರಣೆ, ನಾಟಕಾಭಿನಯಾದಿ ಕಾರ್ಯಕ್ರಮಗಳಿಂದ ನೆರವೇರಿತು. ಅಧ್ಯಕ್ಷರು ಶಾಲೆಯ ಪ್ರಗತಿಗೆ ಊರವರ ಸಹಕಾರ ಅಗತ್ಯವೆಂದರು.

ಭೈರಂಜೆ— ಶಾರದಾ ಎಯ್ಡೆಡ್ ಎಲಿಮೆಂಟ್ರಿ ಶಾಲೆಯ ಮಕ್ಕಳ ಹೆತ್ತವರ ಕೂಟದ ಮಹಾ ಸಭೆಯು ತಾ 22ರಲ್ಲಿ ಜೂನಿಯರ್ ಡಿ! ಇನ್ಸ್ಪೆಕ್ಟರ್ ಶ್ರೀ ಎಚ್. ಸಂಜೀವ ರಾಯರ ಅಧ್ಯಕ್ಷತೆಯಲ್ಲಿ ಭಾಷಣ, ವಿನೋದಾವಳಿ ಕಾರ್ಯಕ್ರಮಗಳಿಂದ ಜರಗಿತು.

ಕುಂಬಳೆ— ಜಿಲ್ಲೆಯ ಹರಿಜನ ಸಮುದಾಯದಲ್ಲಿ ಮೊದಲಿಗರಾಗಿ ಶ್ರೀ ಕೆ. ಅನಂತ ಎಂಬವರು ಕಳೆದ ಎಂಜನಿಯರಿಂಗ್ ಪರೀಕ್ಷೆಯಲ್ಲಿ (ಬಿ. ಇ.) ತೇರ್ಗಡೆ ಹೊಂದಿರುವರು.

ಪೆರ್ಕಳ— ಜಿಲ್ಲಾ ಮರಾಠ ಸಮಾಜ ಸೇವಾಸಂಘದ ವಾರ್ಷಿಕ ಸಭೆಯು ಕಳೆದ ತಾ. 30ರಲ್ಲಿ ಬಿ. ಇ. ಎಂ. ಶಾಲೆಯಲ್ಲಿ ಶ್ರೀ. ರಾಜೀವ ಕೋಟಿಯಾನರ ಅಧ್ಯಕ್ಷತೆಯಲ್ಲಿ ಜರಗಿ, ವರದಿ ಸ್ವೀಕಾರ, ಕಾರ್ಯಕಾರಿ ಕಮಿಟಿಯ ರಚನೆ ಮೊದಲಾದ ಕಾರ್ಯಕ್ರಮಗಳು ನೆರವೇರಿದವು.

ಕೆಂಜೂರು— ಈ ವರೆಗೆ ಎಲಿಮೆಂಟ್ರಿ ಶಾಲೆಯಾಗಿದ್ದ ವೀರೇಶ್ವರ ಎ! ಶಾಲೆಯಲ್ಲಿ ತಾ. 2ರಲ್ಲಿ ಶ್ರೀ ಬಿ ತೇಜಪ್ಪ ಶೆಟ್ರು ಅಧ್ಯಕ್ಷತೆಯಲ್ಲಿ 6ನೇ ಕ್ಲಾಸು ತೆರೆಯುವ ಸಮಾರಂಭ ಜರಗಿ ಈಗ ಹಾಯರ್ ಎಲಿಮೆಂಟರಿ ಶಾಲೆಯಾಗಿದೆ. ಇದು ಆಸುಪಾಸಿನ ಮಕ್ಕಳಿಗೆ ತುಂಬ ಅನುಕೂಲವನ್ನೀಯುವುದು.

ಮುಚ್ಚಿದರೆ ಮುಗುಳು! ಬಿಚ್ಚಿದರೆ ಅರಳು!!

ಚಿಕ್ಕ ಮಕ್ಕಳ ಅಕ್ಕರೆಯ ಕವಿತಾ ಕುಸುಮವೇ—

ಶ್ರೀ. ಕೆ. ಹೊನ್ನಯ್ಯ ಶೆಟ್ಟರ—

ಮುಗುಳು

ದಿ! ಶ್ರೀ. ಕಡೆಕಾರು ರಾಜಗೋಪಾಲ ಕೃಷ್ಣರಾಯರ ಮುನ್ನುಡಿ.

ಶಾಲೆಗಳ ಉಪಯೋಗಾರ್ಥವಾಗಿ ಮಂಜೂರಾತಿ ಪಡೆದ ಚೊಕ್ಕ ಪುಸ್ತಕ.

ವಿದ್ಯಾರ್ಥಿಗಳು ನಲಿ ನಲಿದು ಓದುವುದು, ಓದಿ ಓದಿ ನಲಿವುದರಿಂದ

ಈಗ ೨ನೇ ಮುದ್ರಣವನ್ನು ಕಂಡಿದೆ—

ಅಭಿನಯಕ್ಕೆ, ಕೋಲಾಟಕ್ಕೆ, ನರ್ತನಕ್ಕೆ ಅನುಕೂಲವಾದ ಪದ್ಯಗಳು,

ತ್ರಿವರ್ಣ ಮುಖಪತ್ರ, ಇಷ್ಟಾದರೂ ಬೆಲೆ ೦—೬—೦ (ಟಿ ಖರ್ಚು ಬೇರೆ.)

ಪ್ರತಿಗಳು ಎಲ್ಲ ಪುಸ್ತಕ ವ್ಯಾಪಾರಿಗಳಲ್ಲೂ ದೊರೆಯುತ್ತವೆ.

ವಿಕ್ರಯಾಧಿಕಾರಿಗಳು:— ನವಭಾರತ ಪುಸ್ತಕ ಭಂಡಾರ, ಉಡುಪಿ. ದ. ಕ.

BHUVANENDRA PRODUCTS LTD., KATAPADI, S. K.

ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!

ಇವುಗಳಿಂದಲೇ ಭುವನೇಂದ್ರ ಔಷಧಿಗಳು

ಜನಪ್ರಿಯವಾಗಿರುವವು

ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು

ನಮ್ಮಲ್ಲಿ ತಯಾರಿಸಲ್ಪಡುತ್ತವೆ.

ವಿವರಗಳಿಗೆ ವಿಚಾರಿಸಿರಿ –

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.

ಡಿಪೋ - (1) ಉಡುಪಿ (2) ಮರಾಠ ಗಲ್ಲಿ, ಹುಬ್ಬಳ್ಳಿ.

ನಡೆಯುವ ಚಿತ್ರ:—

● ನಂಬಿಯಾರ್, ● ರಾಮಸ್ವಾಮಿ, ● ಪಿ ಎಸ್. ಸರೋಜ, ● ಕುಮಾರಿ

ಮೊದಲಾದವರು ನಟಿಸಿದ

‘ಪ್ರಿಯಸಖಿ’ [ತಮಿಳು]

ಬರುವ ಚಿತ್ರ:— ತಮ್ಮಲ್ಲರ ಮನೆಮಾತಾದ ಮುದ್ದು ಕನ್ನಡ ಭಾಷೆಯ

ಕನ್ನಡ ಕಲಾಕೃತಿ

ಸೌಭಾಗ್ಯ ಲಕ್ಷ್ಮಿ, ಹರಿಣಿ, ಇಂದುಶೇಖರ್, ಪ್ರತಿಮಾ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.



ಮೋಟಾರು ಲಾರಿ ಇತ್ಯಾದಿ ಸಾರಿಗೆಯ ವ್ಯವಸ್ಥೆಗಳನ್ನು ವಿಸ್ತರಿಸುವುದು ಅಗತ್ಯವೆಂಬುದನ್ನು ಭಾರತದ ರಾಷ್ಟ್ರೀಯ ಯೋಜನೆಯು ಮನ್ನಿಸಿದೆ. ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ನೀರಾವರಿ ಮತ್ತು ಜಲವಿದ್ಯುತ್ತಿಗೆ ಪ್ರಾಧಾನ್ಯವನ್ನು ಕೊಟ್ಟಂತೆ ದ್ವಿತೀಯ ಯೋಜನೆಯಲ್ಲಿ ಸಾರಿಗೆಗೆ ಹೆಚ್ಚು ಮಹತ್ವ ದೊರೆಯುವುದೆಂದು ನಾವು ಆಶಿಸಬಹುದು. ಮಾರ್ಗಗಳನ್ನು ಎಲ್ಲ ಋತುಗಳಲ್ಲಿಯೂ ಉಪಯೋಗಿಸಬೇಕಾದರೆ ಸೇತುವೆಗಳೂ, ಸಂಕಗಳೂ, ಕಲ್ವರ್ಟ್‌ಗಳೂ ನಿರ್ಮಿಸಲ್ಪಡಬೇಕಾದ್ದು ಅವಶ್ಯ. ೧೯೪೬—೪೭ರಿಂದ ನಮ್ಮ ರಾಜ್ಯದಲ್ಲಿ ಹೈವೇ ಇಲಾಖೆಯು ಮಾರ್ಗಗಳ ಮೇಲ್ವಿಚಾರವನ್ನು ನಡೆಸುತ್ತದೆ. ಹಳೆಯ ಮಾರ್ಗಗಳನ್ನು ಉತ್ತಮಗೊಳಿಸುವುದು, ಹೊಸ ಮಾರ್ಗಗಳನ್ನು ರಚಿಸುವುದು, ರಸ್ತೆಗಳಿಗೆ ಡಾಮರು ಹಾಕುವುದು, ಹೊಸ ಸೇತುವೆಗಳನ್ನು ಕಟ್ಟುವುದು—ಈ ಇಲಾಖೆಯ ಕರ್ತವ್ಯವಾಗಿರುತ್ತದೆ. ವೇಗವಾಗಿ ಓಡುವ ಮತ್ತು ವಿಶೇಷವಾಗಿ ಭಾರವನ್ನು ಹೊರುವ ವಾಹನಗಳ ಓಡಾಟದ ದೆಸೆಯಿಂದ ಮಾರ್ಗರಚನೆಯ ಶಿಲ್ಪದಲ್ಲಿ ವಿಶೇಷ ಪರಿವರ್ತನೆಯಾಗಿದೆ. ಹೊಸ ರೀತಿಯ ರಚನೆಗಳಿಗೆ ಉಪಯುಕ್ತವಾದ ನವೀನ ಸಾಮಗ್ರಿಗಳ ಶೋಧನೆಗೂ, ನವೀನ ರಚನಾ ವಿಧಾನಗಳಿಗೂ ಬೇಕಾಗುವ ಪ್ರಯೋಗಗಳನ್ನು ನಮ್ಮ ರಾಜ್ಯದ ಸಂಶೋಧನ ಶಾಲೆಗಳು ನಡೆಸುತ್ತಿವೆ. ಕಾಂಕ್ರೀಟ್ ರಸ್ತೆಗಳು ಉತ್ತಮವಾದ ಡಾಮರು ರಸ್ತೆಗಳೂ ಹೆಚ್ಚು ಖರ್ಚಿನ ವಾಳದಿಂದಲೇ ಸಾಧ್ಯವಾದುದರಿಂದ ನಮ್ಮ ಬಡ ದೇಶವು ಇತರ ವಿಧಾನಗಳ ಆಶ್ರಯವನ್ನು ಪಡೆಯಬೇಕಾಗಿದೆ. ಕಡಿಮೆ ವೆಚ್ಚದಲ್ಲಿ ರಸ್ತೆಗಳನ್ನು ಊರ್ಜಿತಗೊಳಿಸುವುದಕ್ಕೂ, ಅವುಗಳನ್ನು ಅಗಲಿಸಿ ಭಾರದ ವಾಹನಗಳ ಓಡಾಟಕ್ಕೆ ಯೋಗ್ಯವಾಗಿರಿಸುವುದಕ್ಕೂ ನಾವು ಯತ್ನಿಸಬೇಕು.

ನಮ್ಮ ಮಹಾಪ್ರಧಾನ ಜವಾಹರಲಾಲರು ನಮ್ಮ ದೇಶದ ಒಳನಾಡನ್ನು ವ್ಯಾಪಾರ, ಸಂಪರ್ಕಗಳಿಗೆ ತೆರೆಯಲು ರಸ್ತೆಗಳು ಬಹಳ ಮುಖ್ಯವೆಂದು ಹೇಳಿದ್ದಾರೆ. ಆದ್ದರಿಂದ ಹಳ್ಳಿಯ ಮಾರ್ಗಗಳ ಕಡೆಗೆ ನಾವು ಗಮನವಿಡಬೇಕು. ಸಮಾಜಾಭಿವೃದ್ಧಿ ಮತ್ತು ರಾಷ್ಟ್ರೀಯ ವಿಸ್ತರಣಾ ಯೋಜನೆಗಳಲ್ಲಿ ಮಾರ್ಗಗಳ ರಚನೆಗೆ ಮೇಲಿನ ಸ್ಥಾನವುಂಟಾಗಿರುವುದು ಈ ದೆಸೆಯಿಂದಲೇ. ಈ ನಮ್ಮ ಜಿಲ್ಲೆಯ ಪ್ರೊಜೆಕ್ಟ್ ಪ್ರದೇಶದಲ್ಲಿಯೂ ರಸ್ತೆ, ಸೇತುವೆ, ಸಂಕ, ಸಾಪುಗಳ ಸಂಖ್ಯೆ ಹೆಚ್ಚಾಗುತ್ತಿರುವುದು ಸಂತೋಷದ ವಿಷಯ. ಈ ವರೆಗೆ ಅಲ್ಲಿ 4 ಸೇತುವೆಗಳೂ, 18 ಸಂಕಗಳೂ, 292 ಮೈಲು

ಉಡುಪಿ ಡಿ ಮು ಕೋರ್ಟಿನಲ್ಲಿ

O S. 376/1951.
R E. P 99/ 951.

ದಿ. ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಉದ್ಯಾವರ ಕಡೆಯಿಂದ ರಿಕವರಿ ಆಫೀಸರ್ ಎಂ. ಎಸ್. ಭಂಡಾರಿ —ಅರ್ಜಿದಾರ.

ಮತ್ತು

ಅಜೀಜ ಅಹಮ್ಮದ್ ಕೂಡಾ —ಎದುರು ಯವರೊಳಗೆ—

1ನೇ ಎದುರು—ಅಜೀಜ ಅಹಮ್ಮದ್—ಹಾಜಿ ಅಬ್ದುಲ್‌ರಜಾಕ ಅಲ್ಲೀ ಸಾಹೇಬರ ಮಗ—ಉಡುಪಿ ಕಸಬಾ, ಇವರಿಗೆ—

1951ನೇ ಇಸ್ವಿಯ O. S. 376/51ನೇ ವ್ಯಾಜ್ಯದ ಡಿಕ್ರಿಯು ತನಗೆ ಎಸ್ಸಾನಮೆಂಟು ಮೂಲಕ ವರ್ಗವಾಗಿರುತ್ತದೆಂಬ ಸಬಬಿನ ಮೇಲೆ ಸದರಿ ಡಿಕ್ರಿಯು ಅಮಲ್ ಜಾರಿಯ ಬಗ್ಗೆ ಅರ್ಜಿದಾರನು ಈ ಕೋರ್ಟಿಗೆ ಅರ್ಜಿ ಮಾಡಿಕೊಂಡಿದ್ದಾನೆ. ಆದುದರಿಂದ ಅಮಲ್ ಜಾರಿ ಯಾಕೆ ನಡಿಸಕೂಡದು ಎಂಬದಕ್ಕೆ ಸಬಬು ತೋರಿಸಲಿಕ್ಕೆ 1951ನೇ ಇಸ್ವಿಯ ಜೂನ್ ತಿಂಗಳ ತಾರೀಕು 21ರಲ್ಲು ಈ ಕೋರ್ಟಿನ ಮುಂದೆ ನೀವು ಹಾಜರಾಗಬೇಕೆಂತ್ತ ಇದರಿಂದ ನಿಮಗೆ ನೋಟೀಸು ಕೊಡಲಾಗುತ್ತದೆ.

By order of the Court
M. Damoder Kamath,
Advocate for Petitioner

ಉಡುಪಿ. ತಾ. 9—6—1951

ನಮ್ಮ ಜಿಲ್ಲೆಯ ಮಾರ್ಗಗಳೂ, ಸೇತುವೆಗಳೂ

ಸರಕಾರದ ಯಶಸ್ವೀ ಕಾರ್ಯಕ್ರಮ

ಮಾನ್ಯ ಶ್ರೀ ಎ. ಬಿ. ಶೆಟ್ಟರ ಭಾಷಣ.

ಜಿಲ್ಲೆಯ ರಸ್ತೆಗಳೂ ಏರ್ಪಟ್ಟಿವೆ. ಇಲ್ಲಿಂದ ಹೊರಟ ಇನ್ನೊಂದು ಹೊಸ ಕಾರ್ಯಕ್ರಮದಲ್ಲಿ ತೋರಿಸಿದ 505 ಮೈಲು ರಸ್ತೆ, 79 ಸಂಕಗಳು, 600 ಕಲ್ವರ್ಟ್‌ಗಳು, 130 ಸಾಪುಗಳು ಇವುಗಳ ವೆಚ್ಚವು 11.45 ಲಕ್ಷ ರೂಪಾಯಿಗಳೆಂದು ಅಂದಾಜು ಮಾಡಲಾಗಿದೆ.

4015 ಚದರ ಮೈಲು ವಿಸ್ತಾರವುಳ್ಳ ನಮ್ಮ ಜಿಲ್ಲೆಯಲ್ಲಿ ಗ್ರಾಮದ ರಸ್ತೆಯು ಕೇವಲ 60 ಮೈಲು ಉದ್ದಕ್ಕೆ ಮಾತ್ರ ಇದೆ. ಆದರಿಂದ ಸಾರಿಗೆಯು ಭಾರತದಲ್ಲಿ ನಮ್ಮ ಮಾರ್ಗಗಳ ಮೇಲೆ [illegible] ಬೀಳುತ್ತದೆ ಎಂದಾಯಿತು. ಈ ಮಾರ್ಗಗಳ ರಕ್ಷಣೆಯು ಸುಲಭವಲ್ಲ. ನಮ್ಮ ಹೊಳೆಗಳ ವೇಗ ಅತಿಯಾಗಿ ನಮ್ಮ ನೆಲವು ಹೊಡೆತ ಭಯಂಕರ, ಭೂಮಿಯಲ್ಲಿ ಹಳ್ಳ ತಿಟ್ಟು ವಿಪರೀತ—ಹೀಗಿರುವುದರಿಂದ ಯಾವ ಯೋಜನೆಗೂ ಇಲ್ಲಿ ವೆಚ್ಚವು ಹೆಚ್ಚೇ ಆಗಿರುವುದು ನಿಯಮ. ಆದರೂ ಸರಕಾರವು ಸೇತುವೆ ಮತ್ತು ರಸ್ತೆಗಳ ಯೋಜನೆಯನ್ನು ಕ್ರಮವಾಗಿ ಅಂಗೀಕರಿಸಿ ನಡೆಸುತ್ತಿದೆ. ಹೈವೇ ಇಲಾಖೆಯ ಸ್ಥಾಪನೆಯ ಬಳಿಕ ನಮ್ಮಲ್ಲಿ ನ 111 ಮೈಲುದ್ದ ರಸ್ತೆಗಳಿಗೆ ಜಲ್ಲಿ ಹಾಕಿದ್ದೇವೆ, [illegible] ಮೈಲಿಗೆ ಡಾಮರು ಹಾಕಿದ್ದೇವೆ, 60 ಮೈಲು ಹೊಸ ರಸ್ತೆ ನಿರ್ಮಿಸಿದ್ದೇವೆ. ಈಗ ನಮ್ಮಲ್ಲಿನ ರಸ್ತೆಗಳ ಒಟ್ಟು ಉದ್ದ 1467 ಮೈಲು. 1946—47ರಲ್ಲಿ ನಮ್ಮ ಸಾರಿಗೆ ವೆಚ್ಚವು 11 ಲಕ್ಷ, 1953—54ರಲ್ಲಿ 33 ಲಕ್ಷ.

ಇತ್ತೀಚೆಗೆ 8 ಸೇತುವೆಗಳು ನಿರ್ಮಾಣವಾಗಿವೆ. ಕೂಳೂರು ಹೆಕ್ಕಿಲದ ದೊಡ್ಡ ಸೇತುವೆಗಳನ್ನು ಈ ಎಂಟರೊಳಗೆ ಸೇರಿಸಿಕೊಂಡರೆ ಒಟ್ಟು ವೆಚ್ಚ 24 ಲಕ್ಷವಾಗಿದೆ. ಪುಚ್ಚಮೊಗರು, ಸೀತೇಶ್ವರ, ಕರಿಯಂಗೋಡು, ಕಲ್ಲಾಡಿ, ಬಿಸಲಪಾಟ್ಯದ 5 ಸೇತುವೆಗಳು—ಹೀಗೆ ಒಟ್ಟು ಒಂಬತ್ತು ಸೇತುವೆಗಳಿಗೆ 24 ಲಕ್ಷದ ಅಂದಾಜು ವೆಚ್ಚ ನಡೆಯುತ್ತಿದೆ. ಇವಲ್ಲದೆ ಕೇಂದ್ರ ಸರಕಾರವು 38 ಲಕ್ಷ ವೆಚ್ಚದಿಂದ ಉದ್ಯಾವರ, ಪಾಣಂಜೆ, ಮುಲ್ಕಿ ಹೊಳೆಗಳಿಗೆ ಸೇತುವೆ ಕಟ್ಟಲು ನಿರ್ಧರಿಸಿದೆ. ಅವ [illegible] ಶೀಘ್ರದಲ್ಲೇ ಕೆಲಸ ಆರಂಭಿಸುತ್ತೇವೆ. ಈ ವಿಷಯದಲ್ಲಿ ವಿಶೇಷ ಆಸಕ್ತಿ ತೋರಿದ ನಮ್ಮ ಕೇಂದ್ರ ಪಾರ್ಲಿಮೆಂಟಿನ ಪ್ರತಿನಿಧಿಗಳಾದ ಶ್ರೀ ಯು. ಶ್ರೀನಿವಾಸ ಮಲ್ಯ, ಶ್ರೀ ಬಿ. ಶಿವರಾವ್ ಮತ್ತು ಶ್ರೀ ಕೆ. ಸದಾನಂದ ಹೆಗ್ಡೆಯವರಿಗೆ ನಾವು ಕೃತಜ್ಞತೆಯನ್ನು ಸೂಚಿಸಬೇಕಾಗಿದೆ. ಇವರು ಈಗ ಕಲ್ಯಾಣಪುರ—ಮಾಬುಕಳಗಳಿಗೂ ಸೇತು ಬಂಧನವೆಸಗುವ ಪ್ರಯತ್ನದಲ್ಲಿದ್ದಾರಂತೆ. ಇದರಲ್ಲಿವರು ಯಶಸ್ಸನ್ನು ಪಡೆದರೆ ಮಂಗಳೂರಿಂದ ಕುಂದಾಪುರಕ್ಕೆ ನೇರವಾದ ದಾರಿಯನ್ನು ಕಲ್ಪಿಸಿದಂತಾಗುವುದು. ಹಾಸನ—ಮಂಗಳೂರು ರೈಲ್ವೇ ಸಂಪರ್ಕದಲ್ಲಿ ನಮ್ಮ ಈ ತ್ರಿಮೂರ್ತಿಗಳು ವಿಶೇಷ ಆಸಕ್ತಿಯಿಂದ ದುಡಿಯುತ್ತಿದ್ದಾರೆ.

ಉಡುಪಿ ನಮ್ಮ ಜಿಲ್ಲೆಯ ಎರಡನೆಯ ಪಟ್ಟಣವೂ, ಪ್ರಖ್ಯಾತ ಕ್ಷೇತ್ರವೂ ಆಗಿದೆ. ಫಸ್ಟ್‌ಗ್ರೇಡ್ ಆರ್ಟ್ಸ್ ಕಾಲೇಜು ಮತ್ತು ಮೆಡಿಕಲ್ ಕಾಲೇಜುಗಳಿಂದ ಇದು ಈಗ ಜಿಲ್ಲೆಯ ಒಂದು ಮುಖ್ಯ ಶೈಕ್ಷಣಿಕ ಕೇಂದ್ರವೂ ಆಗಿದೆ.

TENDER NOTICE

Sealed tenders are invited by the undersigned up to 4 P M on on 25—6—1954 for the work shown below (to be executed at the temple)

The tender should be sent in sealed cover, accompanied by a chalan in token of having remitted the prescribed Earnest money deposit into the temple treasury. Intending tenderers can peruse the estimate in the office of the undersigned during the office hours on any working day. Tenderers, or their authorized agents may be present in the office of the undersigned at 11 A. M on 26—6—1954 when the tenders will be opened. The undersigned reserves to himself the right of rejecting any tender without assigning reasons therefor.

Name of work	Amount of Estimate.	Earnest money deposit.
Urgent improvements to the Temple Elementary School Perdoor, S K	Rs 3000/-	Rs 75/-

N. B. The Earnest money deposit will be refunded only after satisfactory completion of the work.

K. B. Shetty,
Executive Officer,
Sri Ananthapadmanabha Temple, Perdoor, S K,

Dated: 4—6—54

ಮನದಲ್ಲಿ ನಗುವಿದೆ! ನಗುವಿದ್ದಲ್ಲಿ ಸ್ವರ್ಗವಿದೆ!
ದಣಿದ ಮನವನ್ನು ತಣಿಸಿ ನಗಿಸಲು —

ನಗೆ ನೋಟಗಳು

(೧೧ ವಿನೋದ ಚಿತ್ರಗಳ ಅಪೂರ್ವ ಸಂಗ್ರಹ)

ಲೇಖಕರು ಕೆ. ವಿಟ್ಠಲ ಶೆಟ್ಟಿ, ಬಿ. ಎ., ಎಲ್. ಟಿ.

(ಮುನ್ನುಡಿ ತಿಮ್ಮಪ್ಪಯ್ಯನವರ ಮುನ್ನುಡಿಯೊಡನೆ)

ನೀವೂ ನಕ್ಕು ಇತರರನ್ನೂ ನಗಿಸಬೇಕಾದರೆ ಈ ಪುಸ್ತಕದ ಪ್ರತಿಯೊಂದು ನಿಮ್ಮ ಬಳಿಯಲ್ಲಿರಲಿ

ಬೆಲೆ — [illegible] (ಟ [illegible] ವೆಚ್ಚ ಬೇರೆ)

ಸಿಗುವ ಸ್ಥಳಗಳು.— ಕಿರಿಯರ ಪ್ರಪಂಚ, ಉಡುಪಿ.
ನವಭಾರತ ಪುಸ್ತಕ ಭಂಡಾರ, ಉಡುಪಿ.

ಮಾನ್ಯ ಶ್ರೀ ಎ. ಬಿ. ಶೆಟ್ಟರು.

ಜಿಲ್ಲೆಯ ಉತ್ತರ ಭಾಗಕ್ಕೂ ಒಳನಾಡಾದ ಮೈಸೂರಿಗೂ ಉಪಯುಕ್ತವಾದ ಮಲ್ಪೆ ಬಂದರವು ಇಲ್ಲೇ ಇದೆ. ಹೆಂಚುಗಾರಿಕೆಗೆ ಪ್ರಸಿದ್ಧವಾದ ಮಲ್ಪೆಯೂ ಈ ಪುತ್ತಿಗೆ ಸೇತುವೆಯಿಂದಾಗಿ ಘಟ್ಟದ ಮೇಲಿನ ಶಿವಮೊಗ್ಗ ಹರಿಹರಗಳೊಡನೆ ಜೋಡಿಸಲ್ಪಡುತ್ತದೆ. ಇದರಿಂದ ನಮ್ಮ ಜಿಲ್ಲೆ ಮತ್ತು ಮೈಸೂರಿನ ಆರ್ಥಿಕ ಮತ್ತು ಸಾಂಸ್ಕೃತಿಕ ಸಂಪರ್ಕವು ನಿಕಟವಾಗಿ ಈ ಪ್ರದೇಶದ ಅಭಿವೃದ್ಧಿಗೆ ನೆರವಾಗುವುದರಲ್ಲಿ ಸಂದೇಹವಿಲ್ಲ.

ಕನ್ಯಾಕುಮಾರಿಯನ್ನು ಮುಂಬಯಿಯೊಡನೆ ಜೋಡಿಸುವ ಪಡುಕರಾವಳಿಯ ರಾಷ್ಟ್ರೀಯ ಮಾರ್ಗಕ್ಕೆ ಮಲಬಾರು ಮತ್ತು ದಕ್ಷಿಣ ಕನ್ನಡ ಜಿಲ್ಲೆಯೊಳಗೆ 150 ಲಕ್ಷ ರುಪಾಯಿಗಳ ವೆಚ್ಚ ತಗಲಬಹುದು. ಇದರಲ್ಲಿ ಅರ್ಧವಾಸಿ ಕೇಂದ್ರ ಸರಕಾರದಿಂದಲೂ, ಉಳಿದರ್ಧ ಮದರಾಸು ಸರಕಾರದಿಂದಲೂ ಬರಬೇಕು. ಇದಕ್ಕೋಸ್ಕರ ರಚಿತವಾದ ಒಂದು ವಿಶೇಷ ವಿಭಾಗದವರು ಈಗ ಮದ್ರಾಸಿನಲ್ಲಿ ನಕ್ಷೆಗಳನ್ನೂ, ಅಂದಾಜುಗಳನ್ನೂ, ತಯಾರಿಸುತ್ತಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಈ ಪೈಕಿ 90 ಲಕ್ಷ ವೆಚ್ಚವಾಗುತ್ತದೆ, ಇದರಲ್ಲಿಯೂ 30 ಲಕ್ಷದಷ್ಟು ಕೆಲಸವು ಈಗಾಗಲೇ ನಡೆಯುತ್ತಿದೆ. ಮದ್ರಾಸು ಸರಕಾರವು ಪಡುಕರಾವಳಿ ಮಾರ್ಗದ ಈ ಯೋಜನೆಗೆ ಸರ್ವಪ್ರಥಮ ಪ್ರಾಧಾನ್ಯವನ್ನು ಕೊಟ್ಟಿರುವುದನ್ನು ನಾವು ಗಮನಿಸಬೇಕು.

ನೀರಾವರಿ, ವಿದ್ಯುತ್ತು, ಮಾರ್ಗ, ಸೇತುವೆ ಎಲ್ಲ ವಿಭಾಗಗಳಲ್ಲಿಯೂ ನಮ್ಮ ರಾಜ್ಯದ ಇಂಜಿನಿಯರರು [illegible] ರಾಜ್ಯದ ಒಳಗಿಂದಲೂ, ಹೊರಗಿನಿಂದಲೂ ಅವರಿಗೆ ಸನ್ಮಾನ ದೊರೆತಿದೆ. ಇದು ಸಂತೋಷದ ವಿಷಯ.

(ತಾ. 2-6-54ರಂದು ಪುತ್ತಿಗೆ ಸಂಕವನ್ನು ಉದ್ಘಾಟಿಸುವಾಗ ಮಾಡಿದ ಭಾಷಣ)

—ಹೊಸಕೆರೆ ಚಿದಂಬರಯ್ಯನವರ—

ಗೀತೆಯ ಕೈಗನ್ನಡಿ

ಭಗವದ್ಗೀತೆಯ ಸಮೂಲ ಭಾಷಾಂತರ.

ಬೆಲೆ 0-12-0
V. P. P. ಮೂಲಕ 1—4—0

ಡಾ| ಕೊರಡ್ಕಲ್ಲರ

ಮನೆ ಮದ್ದು

ವೈದ್ಯರ ಸಹಾಯವಿಲ್ಲದೆ ಮನೆಯಲ್ಲೇ ನಮ್ಮಾರು ಕಾಯಿಲೆಗಳಿಗೆ ಔಷಧಮಾಡಿಕೊಳ್ಳುವ ವಿಧಾನವನ್ನು ವಿವರಿಸುವ ಗೃಹವೈದ್ಯ [illegible] ವಾದ ಪುಸ್ತಕ ಇದೆ.

ಬೆಲೆ ರೂ 2—8—0
ನವಯುಗ ಪ್ರೆಸ್, ಉಡುಪಿ.

ಮಲೇರಿಯಾ ನಿರೋಧ ಕಾರ್ಯ

ಮಲೇರಿಯಾ ಜ್ವರಕ್ಕೆ ತುತ್ತಾಗಿ ನಮ್ಮ ದೇಶದಲ್ಲಿ ಲಕ್ಷಗಟ್ಟಲೆ ಜನರು ಸಾಯುತ್ತಾರೆ. ಈ ಭಯಂಕರ ಪರಿಸ್ಥಿತಿಗೆ ಸೊಳ್ಳೆಗಳೇ ಕಾರಣವೆಂದು ಕಂಡು ಹಿಡಿದವರು ಗಣಿತ ಶಾಸ್ತ್ರಜ್ಞ, ಕವಿ ಹಾಗೂ ವಿಜ್ಞಾನಿಗಳಾದ ಸರ್ ರೊನಾಲ್ಡ್ ರಾಸ್ ಎಂಬವರು. ಇವರು ೧೮೯೭ನೇ ಆಗಸ್ಟ್ ೨೦ರಂದು ಮಲೇರಿಯಾ ಸೊಳ್ಳೆಯ ಪ್ರಭಾವವನ್ನು ಕುರಿತು ಒಂದು ಕವನವನ್ನೇ ಕಟ್ಟಿದ್ದಾರೆ. "ಲಕ್ಷಗಟ್ಟಲೆ ಜನರ ವಿನಾಶಕ್ಕೆ ಕಾರಣವಾದ ಈ ವಿಚಿತ್ರವಾದ ಅಲ್ಪ ಜೀವಿ (ಸೊಳ್ಳೆ)ಯನ್ನು ಸೃಷ್ಟಿಸಿದವನ್ನ ಕೈಯಲ್ಲಿರಿಸಿದಾನೆ ನಿರ್ದಯನಾದ ಪರಮಾತ್ಮ" ಇತ್ಯಾದಿಯಾಗಿ ಈ ವಿದ್ವಾಂಸರು ಹಾಡಿ ಈಗ ಸುಮಾರು ೫೦ ವರ್ಷಗಳಾದುವು. ಇಂದೀಗ ಈ ಮಹನೀಯರು ಕಂಡು ಹಿಡಿದ ವೈಜ್ಞಾನಿಕ ವಿಷಯವನ್ನು ನಾವು ಮಾನವಕೋಟಿಯ ಹಿತಕ್ಕಾಗಿ ಹೇಗೆ ಉಪಯೋಗಿಸುತ್ತಿದ್ದೇವೆ ಇತ್ಯಾದಿಗಳನ್ನು ಕುರಿತು ಪರಿಶೀಲಿಸುವುದು ಆವಶ್ಯವಾಗಿದೆ

ಪ್ರಥಮ ಪ್ರಯೋಗ

ಈ ಶತಮಾನದ ಆರಂಭದಲ್ಲೇ ಭಾರತದಲ್ಲಿ ಸೊಳ್ಳೆಗಳು ಹುಟ್ಟಿದಂತೆ ಮಾಡಿ ಮಲೇರಿಯಾ ಜ್ವರವನ್ನು ನಿರ್ನಾಮಗೊಳಿಸಲು ಪ್ರಯತ್ನಿಸಲಾಯಿತು. ಈ ವಿಷಯದಲ್ಲಿ ಮೊಟ್ಟಮೊದಲ ಪ್ರಯೋಗವು ಮಿಯಾನ್ ಮೀರ್ ಎಂಬಲ್ಲಿ ನಡೆದಿತ್ತು. ಆದರೆ ಈ ಪ್ರಯೋಗವು ನಿಷ್ಫಲವೆಂದು ರಾಯಲ್ ಕಮಿಷನ್‌ನವರು ಸಾರಿದ್ದರು. ತಜ್ಞರೆಲ್ಲಾ ಇದು "ಕಷ್ಟ" "ಪರಿಣಾಮ ಹೀನ" "ನಿಷ್ಪ್ರಯೋಜಕ" "ವ್ಯರ್ಥ" ಇತ್ಯಾದಿ ಅಭಿಪ್ರಾಯ ಪಟ್ಟರು. ಸರ್ ರೋನಾಲ್ಡ್ ರಾಸ್‌ರವರು ಇದನ್ನು ಕುರಿತು ಬರೆಯುತ್ತ "ಭಾರತದಲ್ಲಿ ಮಲೇರಿಯಾ ನಿರೋಧ ಕಾರ್ಯವು ಒಂದು ತಲೆಮಾರಿನಷ್ಟು ಹಿಂದೋಡಿತು" ಎಂದಿದ್ದಾರೆ. ಅವರು ಬರೆದಂತೆ ಈ ಕಾರ್ಯವು ಒಂದಲ್ಲ ಎರಡು ಮೂರು ತಲೆಮಾರುಗಳ ಕಾಲದಷ್ಟು ಹಿಂದೆ ಬಿತ್ತೆಂದರೆ ಅತಿಶಯವಲ್ಲ.

ಅನುಕ್ರಮ ಪ್ರಗತಿ

ಆದರೂ ನಮ್ಮ ದೇಶದಲ್ಲಿ ಮಲೇರಿಯಾ ನಿರೋಧ ಪದ್ಧತಿಯು ಅನುಕ್ರಮವಾಗಿ ಪ್ರಗತಿ ಹೊಂದುತ್ತಾ ಬಂದಿದೆ. ಮೊಟ್ಟಮೊದಲು ರೋಗಾಣುಗಳಿಗೆ ಕಾರಣವಾದ ಸೊಳ್ಳೆಗಳ ಮೊಟ್ಟೆಯೊಡೆದ ಮರಿಗಳನ್ನೇ ನಾಶ ಮಾಡಲು ಎಣ್ಣೆಯನ್ನು ಉಪಯೋಗಿಸಲಾಯಿತು. ಆ ಮೇಲೆ ಇದಕ್ಕಿಂತ ಅಗ್ಗದ ಬೆಲೆಯ 'ಪ್ಯಾರೀಸ್ ಗ್ರೀನ್' ಎಂಬ ರಾಸಾಯನಿಕ ವಸ್ತುವನ್ನು ಉಪಯೋಗಿಸಿ ನೋಡಲಾಯಿತು. ಆ ಬಳಿಕ ಕ್ವಿನೈನ್ ಮಾತ್ರೆಯ ಪ್ರಯೋಗದಲ್ಲಿ ದೊರೆತ ಅನುಭವವು ಹಾಗೂ ನಮ್ಮ ದೇಶದ ಆರ್ಥಿಕ ಪರಿಸ್ಥಿತಿ ಇವುಗಳಿಂದಾಗಿ ಮಲೇರಿಯಾ ನಿರೋಧ ಕಾರ್ಯವು ಕೆಲವು ಟೀ ತೋಟ, ಅಣೆಕಟ್ಟಿನ ಪ್ರದೇಶಗಳಲ್ಲಲ್ಲದೆ ಸಾರ್ವತ್ರಿಕವಾಗಿ ಮುಂದುವರಿಯಲಿಲ್ಲ.

ಸೊಳ್ಳೆಗಳ ಆವಾಸಸ್ಥಾನ

ಈ ಅವಧಿಯಲ್ಲಿ ಒಂದೊಂದು ಜಾತಿಯ ಸೊಳ್ಳೆಗಳನ್ನು ನಾಶಪಡಿಸುವುದರ ಮೂಲಕ ನಿರೋಧ ಕಾರ್ಯವನ್ನು ನಡೆಸಲಾಗುತ್ತಿತ್ತು. ಸರ್ ಮಾಲ್‌ಕೋಲ್ಮ್ ವಾಟ್ಸನ್ ಎಂಬುವರು ಮಲಯಾದಲ್ಲಿ ಹೀಗೆ ನಿರೋಧ ಕಾರ್ಯವನ್ನು ಮೊಟ್ಟಮೊದಲು ಕೈಗೊಂಡರು. ಇವರು ಅರಣ್ಯಗಳೇ ಇಂತಹ ಸೊಳ್ಳೆಗಳ ತವರು ಮನೆಗಳೆಂದು ತಿಳಿಸಿದರು. ಅರಣ್ಯ ನಿರ್ಮೂಲನದಿಂದ ಸೊಳ್ಳೆಗಳ ಸಾಂದ್ರತೆಯನ್ನು ತಡೆಯಬಹುದೆಂಬುದು ಅವರ ಸಿದ್ಧಾಂತ. ಅಂದಿನ ವಾಸಿನ ಕಡಲತೀರದ ಅರಣ್ಯಗಳನ್ನು ನಾಶಗೊಳಿಸುವುದರಿಂದ ಅಪಾಯಕಾರಿಗಳಲ್ಲದ ಸೊಳ್ಳೆಗಳಿಗೆ ಬದಲಾಗಿ ಉಪ್ಪುನೀರಿನಲ್ಲಿ ಮೊಟ್ಟೆ ಇಡುವ ಅಪಾಯಕಾರಿ ಸೊಳ್ಳೆಗಳ ಉತ್ಪತ್ತಿಗೆ ಕಾರಣವಾಯಿತು.

ಕೇಂದ್ರ ಸಂಸ್ಥೆ

ಆ ಮೇಲೆ ರೋಗಾಣುಗಳಿಗೆ ಮೂಲಗಳಾದ ಸೊಳ್ಳೆಗಳ ಮತ್ತು ಅವುಗಳ ಮೊಟ್ಟೆಯೊಡೆದ ಮರಿಗಳ ಕುರಿತು ಕ್ರಮವಾಗಿ ಅಭ್ಯಾಸ ಮಾಡುವ ಆವಶ್ಯಕತೆ ಬಂದಿತು. ಈ ಕಾರ್ಯವನ್ನು ಭಾರತದ ಮಲೇರಿಯಾ ಸರ್ವೆಯ ಸ್ಥಾನದಲ್ಲಿ ಸ್ಥಾಪಿತವಾದ ಕೇಂದ್ರ ಮಲೇರಿಯಾ ಸಂಸ್ಥೆಯು ಕೈಗೊಂಡಿತು. ಈಗ ಈ ಸಂಸ್ಥೆಯನ್ನು "ಭಾರತದ ಮಲೇರಿಯಾ ಸಂಸ್ಥೆ"ಯೆಂದು ಕರೆಯಲಾಗುತ್ತಿದೆ. ಭಾರತ ಸಂಶೋಧನಾ ನಿಧಿ ಸಂಘವು (ಈಗಿನ ಭಾರತೀಯ ವೈದ್ಯಕೀಯ ಸಂಶೋಧನಾ ಸಮಿತಿ) ಈ ಸಂಸ್ಥೆಯ ಸ್ಥಾಪನೆಗೆ ಬಹಳ ಧನಸಹಾಯ ಮಾಡಿತು.

ಈ ಅವಧಿಯಲ್ಲಿ ನಮ್ಮ ದೇಶದಲ್ಲಿ ಮಲೇರಿಯಾ ನಿರೋಧಕ್ಕೆ ಔಷಧಿ ಚಿಕಿತ್ಸೆಯೇ ಆವಶ್ಯಕವೆಂಬ ಅಭಿಪ್ರಾಯ ಇನ್ನೂ ಬಲವತ್ತರವಾಗಿತ್ತು. ಜನ ಮತ್ತು ಕಹಿ ಪದಾರ್ಥಗಳ ಸೇವನೆಯಿಂದ ಮಲೇರಿಯಾ ಜ್ವರದ ಪರಿಣಾಮವಾಗಿ ಉಂಟಾಗುವ ಬೆಳಗಿನ ತಲೆಸಿಡಿತವು ಗುಣವಾಗುವುದೆಂಬ ನಂಬಿಕೆಯಿತ್ತು.

ನಮ್ಮ ದೇಶದಲ್ಲಿ

ಪನಾಮ, ಇಟಲಿ, ಮಲಯಾ ಇವೇ ಮೊದಲಾದ ದೇಶಗಳು ಸರ್ ರಾಸರ ಸಂಶೋಧನೆಯ ಫಲಿತಾಂಶವನ್ನು ಕೃತಿಯಲ್ಲಿ ತರುತ್ತಿದ್ದಾಗ ನಮ್ಮ ದೇಶದಲ್ಲೂ ಮಲೇರಿಯಾ ಜ್ವರಕ್ಕೆ ಸಂಬಂಧಿಸಿದ ಅನೇಕ ವಿಷಯಗಳನ್ನು ಶಾಸ್ತ್ರೀಯವಾಗಿ ತಿಳಿದುಕೊಳ್ಳಲು ಹೆಚ್ಚಿನ ಪ್ರಯತ್ನ ನಡೆಯುತ್ತಿತ್ತು. ಈ ಪ್ರಯತ್ನಗಳ ಹಾಗೂ ಭಾರತದ ಮಲೇರಿಯಾ ಸಂಸ್ಥೆಯಿಂದ ಮಲೇರಿಯಾ ರೋಗ ಸಂಬಂಧದಲ್ಲಿ ದೊರೆಯುತ್ತಿದ್ದ ತರಬೇತಿಯಿಂದ ಕೆಲವು ಪ್ರದೇಶಗಳಲ್ಲಿ ಮಲೇರಿಯಾ ನಿರೋಧ ಕಾರ್ಯವು ಯಶಸ್ವಿಯಾಗಲು ಸಾಧ್ಯವಾಯಿತು.

ಮೈಸೂರು ರಾಜ್ಯದಲ್ಲಿ

ಮೈಸೂರಿನಲ್ಲಿ ಇರ್‌ವಿನ್ ಕಾಲುವೆಯ ಕೆಲಸಕ್ಕೆ ಪ್ರಾರಂಭಿಸಿದೊಡನೆಯೇ ಇಲ್ಲಿಯ ಎಂಜಿನಿಯರೂ, ನೀರಾವರಿಗೆ ಸಂಬಂಧಿಸಿದ ಅಧಿಕಾರಿಗಳೂ, ಆರೋಗ್ಯ ಇಲಾಖೆಯವರೂ ಮಲೇರಿಯಾದೊಡನೆ ಹೋರಾಡಬೇಕಾಯಿತು. ಇವರ ಅವಿಶ್ರಾಂತ ಶ್ರಮದಿಂದ ಈ ಪ್ರದೇಶದಲ್ಲಿ ಮಲೇರಿಯಾ ಹಾವಳಿಯು ಹೆಚ್ಚಿನ ಮಟ್ಟಿಗೆ ಕಡಿಮೆಯಾಯಿತು.

ದೆಹಲಿಯ ಸುತ್ತುಮುತ್ತಲಿನಲ್ಲಿ ಮಲೇರಿಯಾ ನಿರೋಧಕ್ಕಾಗಿ ಕೈಗೊಂಡ ಕಾರ್ಯಕ್ರಮವು ಇನ್ನೊಂದು ಪ್ರತ್ಯಕ್ಷ ನಿದರ್ಶನವೆನ್ನಬಹುದು. ಹೀಗೆಯೇ ಬಂಗಾಳ—ನಾಗಪುರ ರೈಲ್ವೇ ಹಾಗೂ ಕೆಲವು ಟೀ ಮತ್ತು ಕಾಫಿ ತೋಟಗಳು ಪ್ರತ್ಯೇಕವಾದ ಮಲೇರಿಯಾ ನಿರೋಧ ಕಾರ್ಯವನ್ನು ಕೈಗೊಂಡಿದ್ದವು. ಹಾಗೆಯೇ ದೇಶದ ನಾನಾ ಸರ್ಕಾರಗಳೂ ಈ ಕಾರ್ಯಕ್ರಮದಲ್ಲಿ, ಆಸಕ್ತಿ ವಹಿಸಿದ್ದವು. ಆದರೆ ನಮ್ಮ ದೇಶದ ವಿಸ್ತಾರವಾದ ಗ್ರಾಮಾಂತರಗಳಲ್ಲಿ ಈ ರೋಗವು ಯಾವ ಹತೋಟಿಯೂ ಇಲ್ಲದೆ ಇನ್ನೂ ನೆಲೆಮಾಡಿಕೊಂಡಿದೆ.

ಔಷಧಿಗಳ ನಿರ್ಮಾಣ

ಮೊದಲನೆಯ ಮಹಾಯುದ್ಧದ ಬಳಿಕ ಮಲೇರಿಯಾ ಜ್ವರಕ್ಕೆ "ಅಟಾಬ್ರಿನ್" ಮತ್ತು "ಪ್ಲಾಸ್ಮೋಕ್ವಿನ್" ಎಂಬ ಔಷಧಿಗಳನ್ನು ಕಂಡುಹಿಡಿಯಲಾಯಿತು. ಇವುಗಳಲ್ಲಿ ಎರಡನೆಯದು ಸೊಳ್ಳೆಗಳಲ್ಲಿ ಅಭಿವೃದ್ಧಿಯಾಗುವ ರೋಗಾಣುಗಳನ್ನು ನಾಶಮಾಡಲು ಅತ್ಯುತ್ತಮ ಸಾಧನವಾಗಿತ್ತು. ಆದರೆ ಇದು ಅತ್ಯಂತ ಉದ್ರೇಕಕಾರಿಯಾದ ಕಾರಣ ಸಾರ್ವತ್ರಿಕವಾಗಿ ಉಪಯೋಗಿಸಲು ಸಾಧ್ಯವಾಗಲಿಲ್ಲ. ಬರಬರುತ್ತಾ ಔಷಧಿಗಳ ಮೂಲಕ ಮಲೇರಿಯಾವನ್ನು ತಡೆಯುವುದು ಸುಲಭರೀತಿಯೆಂದು ಕಂಡುಬರಲಿಲ್ಲ.

ಆ ಮೇಲೆ, ದಕ್ಷಿಣ ಭಾರತದಲ್ಲಿ ರಸ್ಸೆಲ್ಸ್ ಮೊದಲಾದವರೂ ದೆಹಲಿಯಲ್ಲಿ ಕೊವೆಲ್ ಮೊದಲಾದವರೂ, ಅಸ್ಸಾಮಿನಲ್ಲಿ ವಿಶ್ವನಾಥನ್ ಇವರೂ ವಾಸದ ಮನೆ, ಹಟ್ಟಿಕೊಟ್ಟಿಗೆಗಳಿಗೆ ಸೊಳ್ಳೆಗಳನ್ನು ನಾಶಮಾಡುವ ವಸ್ತುಗಳನ್ನು ಉಪಯೋಗಿಸಿ ಹಳ್ಳಿಗಳಲ್ಲೂ ಮಲೇರಿಯಾವನ್ನು ನಿರೋಧಿಸಬಹುದೆಂಬುದನ್ನು ತೋರಿಸಿಕೊಟ್ಟರು. ಮೊದಲನೆಯ ಯುದ್ಧಾನಂತರ 'ಲೀಗ್ ಆಫ್ ನೇಷನ್ಸ್' ನ ಮಲೇರಿಯಾ ಕಮಿಷನ್ನಿನವರು ಜಗತ್ತಿನ ಅನೇಕ ದೇಶಗಳಲ್ಲಿ ಆಗ ರೂಢಿಯಲ್ಲಿದ್ದ ಪದ್ಧತಿಯಿಂದ ಮಲೇರಿಯಾ ನಿರೋಧ ಕಾರ್ಯವನ್ನು ಕೈಗೊಳ್ಳುವಂತೆ ಪ್ರೋತ್ಸಾಹಿಸಿದರು. ಆದರೂ ಅಧಿಕ ಪ್ರಮಾಣದಲ್ಲಿ ಮಲೇರಿಯಾವನ್ನು ಹತೋಟಿಗೆ ತರಲು ದ್ವಿತೀಯ ಮಹಾಯುದ್ಧ ಕಾಲದಲ್ಲಿ ಕಂಡು ಹಿಡಿಯಲ್ಪಟ್ಟ ಡಿ. ಡಿ. ಟಿ. ಯ ಮೂಲಕವೇ ಸಾಧ್ಯವೆಂದು ತೋರಿತು. ಪ್ರಪಂಚ ಆರೋಗ್ಯ ಸಂಸ್ಥೆಗಳಂಥ ಸಂಸ್ಥೆಗಳು ಈ ವಿಷಯದಲ್ಲಿ ತಮ್ಮ ಸದಸ್ಯ ರಾಷ್ಟ್ರಗಳ ಆಸಕ್ತಿಯನ್ನು ಹೆಚ್ಚಿಸುವುದರಲ್ಲಿ ಪ್ರಾಮುಖ್ಯ ಪಾತ್ರ ವಹಿಸಿದುದಲ್ಲದೆ ಅನೇಕ ದೇಶಗಳಲ್ಲಿ ಮಲೇರಿಯಾ ನಿರೋಧಕ್ರಮವನ್ನು ಪ್ರತ್ಯಕ್ಷವಾಗಿ ತೋರಿಸಲು ಪ್ರಾಯೋಗಿಕರ ದಳಗಳನ್ನು ಕಳುಹಿಸಲಾಗಿದೆ.

ಕರ್ನಾಟಕದ ಕಾರ್ಯ

ನಮ್ಮ ದೇಶದಲ್ಲಿ ಇವರ ಪ್ರಯತ್ನಗಳ ಮೊದಲೇ ಮುಂಬೈ ರಾಜ್ಯದ ಉತ್ತರ ಕನ್ನಡ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಅಧಿಕ ಪ್ರಮಾಣದಲ್ಲಿ ಮಲೇರಿಯಾ ನಿರೋಧ ಕಾರ್ಯವನ್ನು ಕೈಗೊಳ್ಳಲಾಗಿತ್ತು. ಈ ಕಾರ್ಯಕ್ಕೆ ದ್ವಿತೀಯ ಮಹಾಯುದ್ಧದ ಕಾಲದಲ್ಲಿ ಡಿ. ಡಿ. ಟಿಯ ಉಪಯೋಗದಿಂದ ದೊರೆತ ಪ್ರಯೋಜನವೇ ಕಾರಣವಾಗಿತ್ತು.

ಜಗತ್ತಿನಲ್ಲಿ ಅತ್ಯಂತ ಕಡಮೆ ಅಂದರೆ ತಲಾ ಒಂದು ವರ್ಷಕ್ಕೆ ಕೇವಲ ಆರುಆಣೆ ಉತ್ಪನ್ನವುಳ್ಳ ಹತ್ತುಸಾವಿರ ಜನಾಂಗವೇ ಈ ಯೋಜನೆಯನ್ನು ಕೈಗೊಳ್ಳಲಾಗಿತ್ತು. ಮೊದಲನೆಯ ವರ್ಷದ ಅಂತ್ಯದಲ್ಲಿಯೇ ಶೇಕಡಾ ೭೫ರಷ್ಟು ಮಲೇರಿಯಾದ ಹಾವಳಿಯು ಕಡಿಮೆಯಾಯಿತೆಂದು ತಿಳಿದುಬಂದಿತು. ದೆಹಲಿಯಲ್ಲಿಯೂ ಡಿ. ಡಿ. ಟಿಯನ್ನು ಚಿಮುಕಿಸುವುದರ ಮೂಲಕ ಮಲೇರಿಯಾವನ್ನು ತಡೆಯಲು ಯತ್ನಿಸಲಾಯಿತು. ಆಗಲೇ ಈ ಕಾರ್ಯಕ್ರಮವನ್ನು ವಿಸ್ತರಿಸಬಹುದೆಂದು ತೋರಿತು.

ಈಗ ಇತರ ಅನೇಕ ರಾಜ್ಯಗಳು ಈ ಕಾರ್ಯಕ್ರಮವನ್ನು ಕೈಗೊಂಡಿವೆ. ಇವುಗಳಲ್ಲಿ ಮೈಸೂರು, ಮದರಾಸು, ಬಂಗಾಳ, ಹೈದರಾಬಾದ್ ಮಧ್ಯಪ್ರದೇಶ, ಉತ್ತರ ಪ್ರದೇಶ, ಪಂಜಾಬ್ ಇವೇ ಮುಖ್ಯವಾದುವು.

ವೆಚ್ಚದ ಪ್ರಮಾಣ

ಭಾರತ ರಾಷ್ಟ್ರೀಯ ಯೋಜನಾ ಸಮಿತಿಯು ಮಲೇರಿಯಾ ನಿರೋಧ ಕಾರ್ಯವನ್ನು ಮಾನವ ದಯಾ ದೃಷ್ಟಿಯಿಂದ ಮಾತ್ರವೇ ಕೈಗೊಂಡಿಲ್ಲ. ಭೂಸುಧಾರಣೆ, ಕೈಗಾರಿಕೆಗಳ ಅಭಿವೃದ್ಧಿ, ಅಧಿಕ ಆಹಾರೋತ್ಪತ್ತಿ ಹಾಗೂ ದೇಶದ ಉತ್ಪನ್ನವನ್ನು ಹೆಚ್ಚಿಸುವ ದೃಷ್ಟಿಯಿಂದ ಈ ಕಾರ್ಯವನ್ನು ಕೈಗೊಂಡಿದೆ. ಇದಕ್ಕೆ ಅನುಗುಣವಾಗಿ ಅಮೇರಿಕಾ ಸರಕಾರವೂ ತನ್ನ ಔದಾರ್ಯವನ್ನು ತೋರಿಸಿತು. ಇದರ ಫಲವಾಗಿ ರಾಷ್ಟ್ರೀಯ ಮಲೇರಿಯಾ ನಿರೋಧ ಕಾರ್ಯಕ್ರಮವು ೧೯೫೩ನೇ ಎಪ್ರಿಲ್ ತಿಂಗಳಲ್ಲಿ ಪ್ರಾರಂಭವಾಯಿತಲ್ಲದೆ ಇದೇ ವರ್ಷ ೮೦ ಕೇಂದ್ರಗಳನ್ನೂ ಸ್ಥಾಪಿಸಲಾಯಿತು. ೧೯೫೪ರಲ್ಲಿ ಇಂತಹ ೪೬ ಹೆಚ್ಚಿಗೆ ಕೇಂದ್ರಗಳನ್ನು ಸ್ಥಾಪಿಸುವ ಅಭಿಪ್ರಾಯವಿದೆ. ಪ್ರತಿಯೊಂದು ಕೇಂದ್ರವೂ ಹತ್ತುಸಾವಿರ ಜನರಿಗೆ ಸೇವೆಸಲ್ಲಿಸುತ್ತದೆ. ಮಲೇರಿಯಾ ಬಾಧೆಗೆ ತುತ್ತಾದ ಪ್ರತಿಯೊಂದು ಹಳ್ಳಿಯಲ್ಲೂ ಪ್ರತಿ ಮನೆಗಳನ್ನೂ ಈ ಯೋಜನೆಯಂತೆ ಮಲೇರಿಯಾ ಪ್ರಸಾರವಾಗುವ ಕಾಲದಲ್ಲಿ ಕನಿಷ್ಠ ಪಕ್ಷ ಎರಡು ಸಾರಿಯಾದರೂ ಡಿ. ಡಿ. ಟಿ. ಯನ್ನು ಚಿಮುಕಿಸಲಾಗುವುದು. ಈ ಯೋಜನೆಗೆ ಅಮೇರಿಕದ ತಾಂತ್ರಿಕ ಸಹಕಾರ ಆಡಳಿತದವರಿಂದ ದೊರೆಯುವ ಧನಸಹಾಯ ೧೯೫೩—೫೪ರ ವರೆಗಿನ ಮೂರು ವರ್ಷಗಳಲ್ಲಿ ಹನ್ನೊಂದು ಕೋಟಿ ರೂಪಾಯಿಗಳಷ್ಟಾಗಬಹುದು. ಇದರಲ್ಲಿ ಬಹುಭಾಗವು ಡಿ. ಡಿ. ಟಿ. ಮತ್ತು ಅದನ್ನು ಚಿಮುಕಿಸುವ ಸಾಧನಗಳ ಪೂರೈಕೆ, ಡಿ. ಡಿ. ಟಿ.

[೧೨ನೇ ಪುಟ ನೋಡಿರಿ]

ಜನತಾ ಸಾಹಿತ್ಯಮಾಲೆಯ ಹೊಸ ಮಾದರಿಯ ಪುಸ್ತಕಗಳು

* * * * *

ಮಣಿ ೧:— ಜೀವನ ಶಿಕ್ಷಣ.

ಜ್ಞಾನ ಮತ್ತು ಶೀಲದೊಂದಿಗೆ ಶಾರೀರಿಕ ಶ್ರಮದ ಗೌರವವನ್ನು ವಿದ್ಯಾರ್ಥಿಗಳಲ್ಲುಂಟು ಮಾಡುವ ಶ್ರೀ. ಕೆ. ಕೆ. ಶೆಟ್ರಿ ನವೀನ ನಾಟಕ. ಮದ್ರಾಸ್ ಟೆಕ್ಸ್ಟ್ ಬುಕ್ ಸಮಿತಿಯಿಂದ ಮಂಜೂರಾತಿ ಪಡೆದು ದ. ಕ. ಜಿಲ್ಲೆಯ ಮತ್ತು ಕೊಡಗಿನ ಹಲವು ಹೈಸ್ಕೂಲುಗಳಿಂದ ಪ್ರೋತ್ಸಾಹ ಹೊಂದಿದೆ ಬೆಲೆ: ರೂ. ೧—೨—೦.

ಮಣಿ ೨:— ಶ್ಯಾಮುವಿನ ಶಾಲಾದಿನಗಳು.

ಅಧ್ಯಾಪಕ ಮತ್ತು ವಿದ್ಯಾರ್ಥಿ ಜೀವನದ ನೈಜ ಹಾಗೂ ರಸವತ್ತಾದ ಚಿತ್ರಣದಿಂದ ವಿದ್ಯಾರ್ಥಿಗಳಿಗಾಗಿಯೇ ಶ್ರೀ. ಕೆ. ಕೆ. ಶೆಟ್ಟರು ಬರೆದಿರುವ ಸಚಿತ್ರ ಕತೆ ಪುಸ್ತಕ. ಹೈಸ್ಕೂಲುಗಳಿಗೆ ಉಪಪಠ್ಯ ಪುಸ್ತಕವಾಗಿ ಮದ್ರಾಸು ಟೆಕ್ಸ್ಟ್ ಬುಕ್ ಕಮಿಟಿಯ ಮಂಜೂರಾತಿ ಪಡೆದಿದೆ. ಬೆಲೆ: ರೂ. ೧—೨—೦.

ಸಾಹಿತ್ಯ ಮಾಲೆಯ ವಾರ್ಷಿಕ ಚಂದಾ ರೂ. ೫—೦—೦ ಮಾತ್ರ.

ಜನತಾ ಸಾಹಿತ್ಯ ಮಾಲೆ,
ಹಂಪನಕಟ್ಟೆ, ಮಂಗಳೂರು ೧.

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶ್ಯಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. ೩—೪—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಹೈಸ್ಕೂಲ್, ಪಂಚಾಯತ ಬೋರ್ಡು ಮೊದಲಾದುವುಗಳ ಲೈಬ್ರರಿಗಳಿಗೆ ಬೇಕಾಗುವ ಪುಸ್ತಕಗಳು ಕಮಿಶನಿನಲ್ಲಿ ದೊರೆಯುತ್ತವೆ.

ನವಭಾರತ ಪುಸ್ತಕ ಭಂಡಾರ, ಉಡುಪಿ.

(೩ನೇ ಪುಟದಿಂದ ಮುಂದುವರಿದುದು)

ಕಾರ, ಮಲೇರಿಯಾ ಹತೋಟಿಯಲ್ಲಿ ಸಹಾಯಕ್ಕಾಗಿ ಅಮೇರಿಕವು ಭಾರತಕ್ಕೆ ಸಂಚಾರ ವ್ಯವಸ್ಥೆಗಾಗಿ ಜೀಪುಗಳು, ಚಿಮುಕಿಸುವ ಯಂತ್ರೋಪಕರಣಗಳು ಮತ್ತು ಡಿ. ಡಿ. ಟಿಯನ್ನು ಕೊಟ್ಟಿರುತ್ತದೆ. ವಿಶ್ವದಲ್ಲಿ ಅನುಭವ ಪಡೆದ ಮಲೇರಿಯಾ ತಜ್ಞರು ಮಲೇರಿಯಾ ರೋಗದ ಬಗ್ಗೆ ವಿಶೇಷ ಜ್ಞಾನ ಪಡೆದವರು ಮತ್ತು ಮಲೇರಿಯಾ ಹತೋಟಿ ಕಾರ್ಯದಲ್ಲಿ ಕುಶಲರಾದರು ಇರುವ ರಾಷ್ಟ್ರಗಳಲ್ಲಿ ಭಾರತ ಅಗ್ರಸ್ಥಾನಪಡೆದಿದೆ. ಅಮೇರಿಕದಿಂದ ಇದು ವರೆಗೆ ೫,೮೪,೪,೦೦೦ ಡಾಲರುಗಳ ಬೆಲೆ ಬಾಳುವ ಉಪಕರಣಗಳು ಭಾರತಕ್ಕೆ ದೊರೆತಿವೆ. ಇವುಗಳನ್ನು ಉಪಯೋಗಿಸಿ ಕೆಲಸ ಮಾಡುವುದಕ್ಕೆ ತಗಲುವ ವೆಚ್ಚವನ್ನು ಭಾರತ ವಹಿಸುವುದು.

ಗ್ರಾಮಾಭ್ಯುದಯದ ಗುರಿಯುಳ್ಳ ಸಾಮುದಾಯಿಕ ಅಭಿವೃದ್ಧಿ ಯೋಜನೆಗಳ ಕಾರ್ಯ ಕ್ರಮಕ್ಕೆ ಈ ಸಮಸ್ಯೆಯು ನೇರವಾಗಿ ಸಂಬಂಧ ಪಡುತ್ತದೆ. ಆದುದರಿಂದ ಸಾಧಾರಣ ಯೋಜನೆಗಳಲ್ಲಿ ತಾಂತ್ರಿಕ ಸಿಬಂದಿಯನ್ನು ಒದಗಿಸಲು ಸಾಧ್ಯವಾಗುವುದಿಲ್ಲ; ಈ ಸಮಸ್ಯೆಯ ನಿರ್ಮೂಲನಕ್ಕೆ ಅಗತ್ಯವಾದ ಸಹಕಾರ ರೀತಿಯ ಹತೋಟಿಯೂ ಸಾಧ್ಯವಾಗುವುದಿಲ್ಲ. ಆದರೂ ಸಾಮುದಾಯಿಕ ಯೋಜನೆಗಳು, ತಮ್ಮ ಸ್ವಂತ ವ್ಯವಸ್ಥೆಯಿಂದಲೇ ತಮ್ಮ ಅನುದಿನದ ಕ್ರಮಗಳನ್ನು ಉಪಯೋಗಿಸಿಯೇ ಮಲೇರಿಯಾ ಹತೋಟಿ ಕಾರ್ಯದಲ್ಲಿ ಪ್ರಮುಖ ಪಾತ್ರವಹಿಸಬೇಕಾಗುವುದು.

ಶಿಕ್ಷಣದ ಅಗತ್ಯ

ಮಲೇರಿಯಾ ರೋಗಕ್ಕೆ ಸಂಬಂಧಪಟ್ಟ ಮೂಲ ವಿಷಯಗಳು ಮತ್ತು ಅದರ ಹತೋಟಿ ಕಾರ್ಯಕ್ರಮಗಳ ಸಂಬಂಧದಲ್ಲಿ ಗ್ರಾಮ ನಿವಾಸಿಗಳಿಗೆ ಶಿಕ್ಷಣವೀಯಬೇಕಾದುದು ಅತಿ ಮುಖ್ಯವಾದ ವಿಷಯ. ಉದಾಹರಣೆಗೆ: ಒಂದು ಹಳ್ಳಿಯಲ್ಲಿ ಮಲೇರಿಯಾ ರೋಗವು ಸಾಮಾನ್ಯವಾಗಿದ್ದರೂ, ಅಲ್ಲಿನ ಗ್ರಾಮ ನಿವಾಸಿಗಳಿಗೆ ಸೊಳ್ಳೆಯಿಂದ ಮಲೇರಿಯಾ ರೋಗವು ಹರಡುವುದೆಂಬ ವಿಷಯ ಗೊತ್ತಿರುವುದೇ ಇಲ್ಲ.

ಗ್ರಾಮ ನಿವಾಸಿಗಳ ಸಹಕಾರವನ್ನು ಪಡೆಯುವುದು ಮತ್ತೊಂದು ಕ್ಷೇತ್ರ. ಇದರಲ್ಲಿ ಗ್ರಾಮ ಸೇವಕರು ಮತ್ತು ಯೋಜನಾಧಿಕಾರಿಗಳು ಮಲೇರಿಯಾ ಹತೋಟಿ ಕಾರ್ಯಕ್ರಮಕ್ಕೆ ಬಹು ಮಟ್ಟಿನ ಸಹಾಯವನ್ನು ಮಾಡಬಹುದು. ಕ್ರಿಮಿನಾಶಕಗಳನ್ನು ಚಿಮುಕಿಸುವ ಕಾರ್ಯಕ್ರಮಗಳನ್ನು ಪ್ರತಿಯೊಂದು ಹಳ್ಳಿಯಲ್ಲಿಯೂ ಪರಿಣಾಮಕಾರಿಯಾದ ರೀತಿಯಲ್ಲಿ ವಿಚಾರ ಮಾಡಬೇಕು. ಏಕೆಂದರೆ, ಚಿಮುಕಿಸುವ ಕೆಲಸಕ್ಕೆ ಬಂದ ಸಿಬ್ಬಂದಿಗೆ ಹಳ್ಳಿಯವರಿಂದ ಸಹಕಾರ ದೊರೆತರೆ ಅವರು ತಮ್ಮ ಕೆಲಸವನ್ನು ಬೇಗ ಮುಗಿಸಿ ಮುಂದಿನ ಗ್ರಾಮಕ್ಕೆ ಹೋಗಬಹುದು.

ಇದಕ್ಕೆ ಹೆಚ್ಚಿನ ಶಿಕ್ಷಣ ಕೊಡಬೇಕಾಗುತ್ತದೆ. ಕ್ರಿಮಿನಾಶಕಗಳನ್ನು ಚಿಮುಕಿಸುವ ಕೆಲಸ ನಡೆಯುತ್ತಿದ್ದಾಗ ಮನೆ ಮಕ್ಕಳನ್ನು ಹೇಗೆ ದೂರವಿಟ್ಟಿರಬೇಕು—ಇತ್ಯಾದಿ ವಿಷಯಗಳನ್ನು ಅವರಿಗೆ ಮನದಟ್ಟಾಗುವಂತೆ ತಿಳಿಸಬೇಕು. ಕ್ರಿಮಿನಾಶಕಗಳನ್ನು ಚಿಮುಕಿಸಿದ ಮೇಲೂ ಡಿ. ಡಿ. ಟಿ. ಯು ಹಾಳಾಗದಂತೆ ಗೋಡೆಗಳನ್ನು ಹೇಗೆ ಸ್ವಚ್ಛವಾಗಿ ಇಟ್ಟಿರಬೇಕೆಂಬ ಬಗ್ಗೆ ವಿವರಣೆ ಕೊಡಬೇಕಾದುದೂ ಅವಶ್ಯಕ.

ಮಲೇರಿಯಾ ರೋಗ ನಿವಾರಣೆಯು ಭಾರತದ ಗ್ರಾಮಾಂತರ ಪ್ರದೇಶಗಳ ಸಮಸ್ಯೆಯಷ್ಟೇ ಅಲ್ಲ; ಇಡೀ ವಿಶ್ವದ ಗ್ರಾಮಾಂತರ ಪ್ರದೇಶಗಳ ಸಮಸ್ಯೆ. ಕ್ರಿಮಿನಾಶಕಗಳನ್ನು ಚಿಮುಕಿಸುವುದಕ್ಕಾಗಿ ತಮ್ಮ ಮನೆಗಳನ್ನೂ ದನಕರುಗಳ ಕೊಟ್ಟಿಗೆಗಳನ್ನೂ ಇತರ ಗೃಹಗಳನ್ನೂ ತೆರೆಯುವಂತೆ ಅವರೆಲ್ಲರಿಗೂ ಸೂಚನೆಕೊಡಲೇಬೇಕು.

ಡಿ. ಡಿ. ಟಿ. ಯ ಉಪಯೋಗ

ಮಲೇರಿಯಾ ಹತೋಟಿಯನ್ನು ಪೂರ್ಣವಾಗಿ ಸಾಧಿಸಬೇಕಾದರೆ, ಮತ್ತೆ ಮತ್ತೆ ಚಿಮುಕಿಸಬೇಕಾದುದು ಅಗತ್ಯ. ಗ್ರಾಮ ನಿವಾಸಿಗಳು ಈ ಕಾರ್ಯಕ್ರಮದ ಫಲಿತಾಂಶದಲ್ಲಿ ಅನುಮಾನ ಪಡಬಹುದು. ಅನಾಫಲಿಸ್ ಸೊಳ್ಳೆಗಳು ಡಿ. ಡಿ. ಟಿ. ಯ ಪರಿಣಾಮವಾಗಿ ಬೆಳಕಿನ ಕಡೆಗೆ ಹಾರಿ ಹೋಗಿ ಮನೆಯ ಹೊರಗೆ ಸಾಯ ಬಹುದು. ಇದನ್ನು ಕಂಡ ಗ್ರಾಮ ನಿವಾಸಿಗಳಿಗೆ ಡಿ. ಡಿ. ಟಿ. ಪ್ರಯೋಗಿಸುವುದು ನಿಷ್ಪ್ರಯೋಜಕವೆನ್ನಿಸಬಹುದು. ಆದಕ್ಕೆ ವಿರೋಧವಾಗಿಯೂ ಆಗ ಬಹುದು. ಇತರ ಕ್ರಿಮಿನಾಶಕಗಳ ಉಪಯುಕ್ತತೆಯನ್ನು ಕಣ್ಣಾರೆ ಕಂಡ ಗ್ರಾಮ ನಿವಾಸಿಗಳು ಅತಿ ಉತ್ಸಾಹವನ್ನೂ ತಾಳಬಹುದು

ಕೆಲವು ಕ್ಷೇತ್ರಗಳಲ್ಲಿ ಸೊಳ್ಳೆಗಳ ಬೆಳವಣಿಗೆಗೆ ಅಪ್ರಯುಕ್ತವಾದ ಕುಂಟೆಗಳಿಗೆ ಡಿ. ಡಿ. ಟಿ. ಔಷಧಿಯನ್ನು ಹಾಕಿದ್ದನ್ನು ನೋಡಿದ ಗ್ರಾಮ ನಿವಾಸಿಗಳು, ಮನೆಗಳಲ್ಲಿ ಡಿ. ಡಿ. ಟಿ. ಯನ್ನು ಚಿಮುಕಿಸುವುದರಿಂದ ಪ್ರಯೋಜನವಿಲ್ಲವೆಂದೂ ಸೊಳ್ಳೆಯು ಬೆಳೆಯುವ ಹಳ್ಳದ ಜೌಗುಪ್ರದೇಶದಲ್ಲಿ ಮಾತ್ರ ಆಗುವುದೆಂದೂ ಭಾವಿಸಬಹುದು. ಸೊಳ್ಳೆಗಳು ಎಲ್ಲಿ ಬಂದು [illegible] ಮಾಡುವುವೋ ಅಲ್ಲಿ ಡಿ. ಡಿ. ಟಿ. ಔಷಧಿಯನ್ನು ಹಾಕಬೇಕೆಂಬ ಅಂಶವನ್ನು ಅವರಿಗೆ ಮನದಟ್ಟು ಮಾಡಿಸಬೇಕು.

ಮಲೇರಿಯಾ ಸಂಶೋಧನೆಯಲ್ಲಿ ಭಾರತ ಯಾವತ್ತೂ ಮುಂದಿದೆ. ವಿಶ್ವದ ಮತ್ತಾವ ರಾಷ್ಟ್ರದಲ್ಲೂ ಇರದಷ್ಟು ಪ್ರಮಾಣದಲ್ಲಿ ಮಲೇರಿಯಾ ಹತೋಟಿಗೆ ಬೇಕಾದ ಸಾಧನ ಸಾಮಗ್ರಿಗಳನ್ನೂ ಅಂಕಿ ಅಂಶಗಳನ್ನೂ ಭಾರತ ಪಡೆದಿರುವುದು.

ರಾಷ್ಟ್ರೀಯ ಮಲೇರಿಯಾ ಹತೋಟಿ ಕಾರ್ಯಕ್ರಮಕ್ಕೆ ಸಾಮುದಾಯಿಕ ಅಭಿವೃದ್ಧಿ ಕಾರ್ಯಕ್ರಮದ ಆಡಳಿತ ಯಂತ್ರದ ಮತ್ತು ಗ್ರಾಮ ಸೇವಕರ ಸಹಾಯ ದೊರೆತು, ಅದರ ಪ್ರಸಾರ ಕಾರ್ಯ ಯಶಸ್ವಿಯಾಗುವುದರಲ್ಲಿ [illegible] ಪಡೆದ ದೇಶ



NAVAYUGA ENTERPRISE LTD., UDIPI.

The register of members and share transfer books of the Company will remain closed from the 10th June, 1954 to 25th June, 1954 (both days inclusive).

(By order of the Board)

Office of the Company, PALUKOTE, UDIPI, Date 22—5—54.

K. Honnayya Shetty,
Managing Director.

ಬೇಂಕಿನ ಬೆಳವಣಿಗೆ

	1933	1943	1953
ಅಧಿಕೃತ ಭಂಡವಾಳ	5,00,000	5,00,000	20,00,000
ತೆತ್ತ ಭಂಡವಾಳ	12,000	1,90,000	9,00,000
ಕ್ಷೇಮನಿಧಿ	—	12,000	2,00,000
ಒಟ್ಟು ವಹಿವಾಟು	77,000	15,60,000	60,30,000

ಕಾಲಾವಧಿ ಠೇವಣಾತಿ— 3 ತಿಂಗಳಿಗೆ 3½% ಬಡ್ಡಿ.
ಕಾಯಂ ಠೇವಣಾತಿ— 1 ತಿಂಗಳಿಂದ 24 ತಿಂಗಳ ವಾಯಿದೆ ವರೆಗೆ ಸ್ವೀಕರಿಸಲ್ಪಡುವುದು. 24 ತಿಂಗಳಿಗೆ 3¾% ಬಡ್ಡಿ.
ರೂಪಾಯಿ ಹತ್ತು ಸಾವಿರ ವ, ಮೇಲಿನ ಠೇವಣಾತಿಗೆ ¼% ಬಡ್ಡಿ ಕೊಡಲಾಗುವುದು.
ರೂಪಾಯಿ ಐವತ್ತು ಸಾವಿರ ವ, ಮೇಲಿನ ಠೇವಣಾತಿಗೆ 4¼% ಬಡ್ಡಿ ಕೊಡಲಾಗುವುದು.
ವಿಜಯ ಕ್ಯಾಶ್ ಸರ್ಟಿಫಿಕೇಟು— ಮೂರು ವರುಷದ ಅವಧಿ = 4¼% ಬಡ್ಡಿ.
ಸಾಲ ಸವಲತ್ತುಗಳಿಗೆ ಬೇಕಾದ ಅನುಕೂಲತೆಗಳನ್ನು [illegible]
ಹೆಚ್ಚಿನ ಮಾಹಿತಿಗೆ ನಿಮ್ಮ ಸಮೀಪದ ನಮ್ಮ [illegible]. [illegible]
10 ಕೇಂದ್ರಗಳಲ್ಲಿಯೂ, ಮಡಿಕೇರಿ ಮತ್ತು ಮುಂಬಯಿಯಲ್ಲಿಯೂ ನಮ್ಮ ಶಾಖೆಗಳಿರುತ್ತವೆ.

ಸ್ಥಾಪನೆ: 1931 — **ದಿ ವಿಜಯ ಬ್ಯಾಂಕ್ ಲಿಮಿಟೆಡ್** — ಪ್ರಧಾನ ಕಛೇರಿ ಮಂಗಳೂರು 3.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 25 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

THE MOOLKY BANK LTD.
Moolky, S. K.

ಋತುಸ್ರಾವ ನಿಂತಿತು

"ಕುಮಾರಿ" ಬಿಲ್ಲೆಗಳನ್ನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು, ಹತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು. ಯಾವ ಬಾಧಕವೂ ಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ— ಬೆಲೆ: ರೂ. 3/-; ಸ್ಪೆಶ್ಯಲ್ ರೂ. 5-, ಅಧಿಕಾಧಿಕ ಸ್ಪೆಶ್ಯಲ್ ರೂ. 8-[ವಿ. ಪಿ. ಪಾರ್ಸೆಲ್ ರವಾನೆ ಪ್ರತ್ಯೇಕ]

MRS. P. DEVEE, F.DS.(N.J.)
CALCUTTA. 40
ಸ್ಟಾಕಿಸ್ಟರು: ಶಹಾ ಕಂಪೆನಿ, ಮಂಗಳೂರು.

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬಗೆ, ಶಾಸ್ತ್ರೋಕ್ತ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಮತ್ತು ಚಿಲ್ಲರೆಯಾಗಿಯೂ ಸಿಗುತ್ತವೆ.

ಕಲ್ಯಾಂಜೆ ವ್ಯಾಪಾರಾರ್ಯ
ರಥಬೀದಿ ಉಡುಪಿ.

ಚಂದಾಹಣ ಬಾಕಿ ಇರುವವರು ದಯಮಾಡಿ ಕಳುಹಿಸಿಕೊಡಿರಿ.

[೧ನೇ ಪುಟದಿಂದ]

ವಿಶ್ವಾಸವನ್ನು ಗೌರವಾಕಾಂಕ್ಷೆಗಳನ್ನು ಪಡೆಯಬೇಕಾಗುವುದು. ಸರಕಾರೀ ಪಕ್ಷದ ವತಿಯಿಂದ ಕೆಲಸ ನಡೆಸುವವರಿಗೆ ತಮ್ಮ ಸರಕಾರ ಸಾಧಿಸಿದ ಕಾರ್ಯಗಳನ್ನು ಸಾಮಾನ್ಯ ಜನರಿಗೆ ಮುಂದಿಟ್ಟು ತೋರಿಸುವುದಕ್ಕೂ ಇನ್ನೂ ಹೆಚ್ಚಿನ ಸೌಕರ್ಯಗಳನ್ನು ಹೇಗೆ ಕಲ್ಪಿಸಿಕೊಡಬಹುದೆಂದು ವಿಚಾರಿಸುವುದಕ್ಕೂ ಚುನಾವಣಾ ಪ್ರಚಾರವೊಂದು ಸಾಧನವಾಗುತ್ತದೆ. ಉಳಿದ ಪಕ್ಷಗಳಿಗೆ ಸಹ ತಮ್ಮ ಜನಪ್ರಿಯತೆಯ ಮಟ್ಟವನ್ನು ಅಳೆಯಲು ಚುನಾವಣೆ ನೆರವಾಗುತ್ತದೆ. ಒಟ್ಟಿನಲ್ಲಿ ಜನತೆಯೊಡನೆ ಅತಿ ನಿಕಟವಾದ ಸಂಪರ್ಕವನ್ನೂ ಸಂಬಂಧವನ್ನೂ ಸ್ಥಾಪಿಸುವುದಕ್ಕೆ ಚುನಾವಣೆಗಳಷ್ಟು ಪ್ರಯೋಜನಕಾರಿಯಾದ ಸಂದರ್ಭವು ಬೇರೆ ಇರಲಾರದು ಈ ಮಾತನ್ನು ತಿಳಿದಾದರೂ ಪ್ರಮುಖ ರಾಜಕೀಯ ಪಕ್ಷಗಳು ಚುನಾವಣೆಯಲ್ಲಿ ಸ್ಪರ್ಧೆಗೆ ಇಳಿಯುವುದು ಒಳಿತು—ಚುನಾವಣೆಗಳು ಪನು ಕೆಟ್ಟ ಪರಿಣಾಮವನ್ನುಂಟುಮಾಡಿದರೂ ಪ್ರಜಾಪ್ರಭುತ್ವದ ಪದ್ಧತಿಯನ್ನು ಮೆಚ್ಚಿರುವ ನಾಗರಿಕರಲ್ಲಿ ರಾಜಕೀಯ ಜಾಗೃತಿಯನ್ನು ಹುಟ್ಟಿಸುವ ಮಹತ್ಕಾರ್ಯವನ್ನು ಅವು ಸಾಧಿಸುವುದರಿಂದ ಎಲ್ಲ ದೋಷಗಳೂ ಈ ಉತ್ತಮಾಂಶದಲ್ಲಿ ಮರೆಯಾಗುತ್ತವೆ.

—ಕಾರ್ತಿಕೇಯ.

ಪ್ರತಿ ನೋಟೀಸು.

ಎರ್ಮಾಳು ತೆಂಕಗ್ರಾಮದಲ್ಲಿರುವ ಹಳೇ ಮನೆ ಹೂವಯ್ಯ ಪೂಜಾರಿಯು ತಾ. 27—5—1954 ನೇ ನವಯುಗ ವಾರಪತ್ರಿಕೆಯಲ್ಲಿ ತನ್ನ ಹೆಂಡತಿ ಮುದ್ದು ಪೂಜಾರ್ತಿಗೆ ಕೊಟ್ಟಿದ್ದಾಗಿ ತೋರುವ ನೋಟಿಸಿಗೆ ಸದ್ರಿ ಮುದ್ದು ಪೂಜಾರ್ತಿಯು ಈ ಮೂಲಕ ತಿಳಿಯ ಪಡಿಸುವುದೇನಂದ್ರೆ:—

ನಾನು ಹೂವಯ್ಯ ಪೂಜಾರಿಯನ್ನು ಸುಮಾರು 30 ವರುಷದ ಹಿಂದೆ ಮದುವೆಯಾಗಿ ಆವರಿಂದ ನನಗೆ ಮೂರು ಹೆಣ್ಣು ಮತ್ತು ಎರಡು ಗಂಡು ಮಕ್ಕಳು ಹುಟ್ಟಿ ಮದುವೆಯಾದಂದಿನಿಂದ ಈವತ್ತಿನ ವರೇಗೂ ನಾನು ನನ್ನ ಗಂಡನ ಒಟ್ಟಿಗೆ ಇದ್ದು ಜೀವಿಸಿಕೊಂಡು ಬರುತ್ತೇನೆ. ನನ್ನ ಗಂಡನು ವೃದ್ಧಾಪ್ಯದವರಾಗಿದ್ದು ಬೇರೆಯವರ ದುರ್ಬೋಧನೆಯಿಂದ ಸುಮಾರು ಕೆಲವು ಸಮಯದ ಲಾಗ್ಯಾತು ನನಗೆ ಅನೇಕ ತರದಲ್ಲಿ ಹಿಂಸಿಸಿ ಮತ್ತು ಉಪದ್ರ ಕೊಟ್ಟು ನನ್ನ ತಾಯಿ ಮನೆಯಲ್ಲಿ ನನಗೆ ಹಾಕಿದ ನನ್ನ ಸ್ವಂತ ಹಕ್ಕಿನ ಸುಮಾರು 500/- ರೂಪಾಯಿ ಬೆಲೆಬಾಳುವ ಚಿನ್ನಾಭರಣಗಳನ್ನು ಬಲಾತ್ಕಾರವಾಗಿ ನನ್ನಿಂದ ತೆಗೆದುಕೊಂಡು ಅಕ್ರಮವಾಗಿ ಇಟ್ಟುಕೊಂಡಿದ್ದಾರೆ. ಇದೂ ಅಲ್ಲದೆ ಎರ್ಮಾಳು ರಾಮಪ್ಪ ಪೂಜಾರಿಯು ವ್ಯಾಜ್ಯ ತೀರ್ಪು ಪಡಿಸುವ ಕಾಲದಲ್ಲಿ ನನ್ನಿಂದ ಹಿಂದೆ ಕೊಡುವ ತರದ ನೋಟು ರೂಪಾಯಿ 300/-ನ್ನು ಪಡಕೊಂಡು ಇನ್ನೂ ವಾಪಾಸು ಕೊಡಲಿಲ್ಲ. ನನ್ನ ಗಂಡನು ಮೇಲೆ ಹೇಳಿದಂತೆ ಅನೇಕ ತರದ ಉಪದ್ರವ ಹಿಂಸೆ ನನಗೆ ಕೊಟ್ಟಾಗ್ಯೂ ಕೈಹಿಡಿದ ಗಂಡನೆಂಬ ಭಾವನೆಯಿಂದ ನಾನು ಇಷ್ಟರ ವರೇಗೂ ಮ ಇನ್ನು ಮುಂದೆಯೂ ಆವರೊಡನೆ ಇದ್ದು ಆವರ ಶುಶ್ರೂಷೆ ಇತ್ಯಾದಿಗಳನ್ನು ಮಾಡಿ ಜೀವಿಸಿಕೊಂಡು ಬರುತ್ತೇನೆ. ಮೇಲೆ ಹೇಳಿದ ನವಯುಗದ ನೋಟಿಸಿನಲ್ಲಿ ನನ್ನ ಗಂಡನು ಕೊಟ್ಟಿದ್ದಾಗಿ ತೋರುವ ಹೇಳಿಕೆಗಳು ತೀರಾ ಸುಳ್ಳು. ನಾನು ನನ್ನ ಗಂಡನೊಡನೆ ಜಗಳ ಮಾಡಿ ದಸಕತು ಇತ್ಯಾದಿಗಳೊಂದಿಗೆ ನನ್ನ ತವರು ಮನೆಗೆ ಹೋದದ್ದಿಲ್ಲ, ಮ ಪ್ರಸಸ್ತರ ಮೂಲಕ ರಾಜಿ ಪ್ರಸ್ತಾಪವು ಆದದ್ದೂ ಇಲ್ಲ ಮ ಆಗುವರೆ ಕಾರಣವೂ ಇಲ್ಲ. ವಿದ್ಯಮಾನಗಳು ಹೀಗಿರುವಲ್ಲಿ ಕಾನೂನು ಮ ನೀತಿ ಪ್ರಕಾರ ನನ್ನ ಗಂಡನಿಗೆ ನನ್ನನ್ನು ತ್ಯಜಿಸಲು ಕಾರಣವಿಲ್ಲ.

● ಈ ಎಡಕೈ ಹೆಬ್ಬೆಟ್ಟು ಗುರ್ತು ಕೂಡಾ ಮುದ್ದು ಪೂಜಾರ್ತಿ ರುಜು.

ಅಡಿಕೆ "ಕೊಳೆರೋಗ" ಅಥವಾ "ಮಹಾಳಿ"

ಜನ್ಮ ಜುಲೈಯಲ್ಲಿ ಮಳೆ ಪ್ರಾರಂಭವಾದೊಡನೆ ಅಡಕೆ ಬೆಳೆಯು "ಕೊಳೆರೋಗ"ಕ್ಕೆ ತುತ್ತಾಗಿ, ಎಳೆ ಅಡಕೆಯು ಕೊಳೆತು ಬೀಳುವುದರಿಂದ ರೈತರಿಗೆ ಅಪಾರ ನಷ್ಟವಾಗುತ್ತಿರುವುದು. ಈಗ ಸಾಧಾರಣ 18 ವರ್ಷಗಳಿಂದ ಅನುಭವಿಸಿ ಬಂದ ವಿಷಯವಾಗಿದೆ. ಈ ರೋಗವನ್ನು ಕೃಷಿ ಇಲಾಖೆಯವರ ಸಲಹೆಯ ಮೇರೆಗೆ "ಬೋರ್ಡೊ ಮಿಶ್ರಣ" ಚಿಮುಕಿಸುವುದರಿಂದ ಸಂಪೂರ್ಣವಾಗಿ ತಡೆಗಟ್ಟಿ ತಮ್ಮ ಪೈರನ್ನು ಕಾಪಾಡಿಕೊಳ್ಳಬಹುದೆಂದು ಹೆಚ್ಚಿನ ರೈತರಿಗೆ ಅನುಭವವಿದ್ದು ಈಗಾಗಲೇ ಎಲ್ಲಾ ಅಡಕೆ ತೋಟಗಳವರೂ ಈ "ಬೋರ್ಡೊ ಮಿಶ್ರಣ" ಪ್ರಯೋಗವನ್ನು ಕೈಕೊಂಡು ವರ್ಷಂಪ್ರತಿಯೂ ಮಾಡುತ್ತಿರುವರು. ಈ ಮದ್ದು ಪ್ರಯೋಗದ ಕೆಲವು ವಿಷಯಗಳನ್ನು ರೈತರು ಜಾಗ್ರತೆಯಿಂದ ಅನುಸರಿಸುವುದು ಅವಶ್ಯವಾಗಿದೆ.

1. ಮುಂಗಾರು ಮಳೆ ಪ್ರಾರಂಭವಾಗುವ ಸ್ವಲ್ಪ ಮುಂಚಿತವಾಗಿ ಅಂದರೆ ಸಾಧಾರಣ ಮೇ ತಿಂಗಳ ಆಖೈರಿಗೆ ಮೊದಲನೇ ಬಾರಿ ಔಷಧಿ ಪ್ರಯೋಗ ಮಾಡಬೇಕು.

2. ಸೇಕಡಾ ಒಂದು ಸಲೆ (೧%) ದ್ರಾವಕವನ್ನು ಮಾತ್ರ ಉಪಯೋಗಿಸಿದರೆ ಸಾಕು (ಅಂದರೆ ೫ ರಾತ್ಲ ಮೈಲುತುತ್ತು, ೫ ರಾತ್ಲ ಸುಣ್ಣ, ೫೦ ಗೆಲನ್ ನೀರು) ಇದಕ್ಕಿಂತ ಹೆಚ್ಚಿನ ಪ್ರಮಾಣದ ಔಷಧಿಯಿಂದ ಯಾವ ಹೆಚ್ಚಿನ ಪ್ರಯೋಜನವೂ ಇಲ್ಲ ಮಾತ್ರವಲ್ಲದೆ ಮರಕ್ಕೆ ಹಾನಿಯಾಗಬಹುದು.

3. ಒಳ್ಳೆಯ ಹೊಸ ಸುಣ್ಣವನ್ನು ಉಪಯೋಗಿಸಬೇಕು. ಹಳೇ ಸುಣ್ಣವಾದರೆ ೫ ರಾತ್ಲ ಮೈಲುತುತ್ತಿಗೆ ೧೦ ರಾತ್ಲ ಸುಣ್ಣ ಬೇಕಾಗುವುದು. ಹೀಗೆ ಹೆಚ್ಚು ಸುಣ್ಣ ಉಪಯೋಗಿಸುವುದರಿಂದ ಮಿಶ್ರಣವೂ ಕೆಡುವುದಲ್ಲದೆ ಮರಗಳಿಗೂ ಇದು ಹಾನಿಕರವಾದುದರಿಂದ, ಹೊಸ ಸುಣ್ಣವನ್ನೇ ಮೈಲುತುತ್ತಿನಷ್ಟೇ ಪ್ರಮಾಣದಲ್ಲಿ ಸೇರಿಸಿ, ಮಿಶ್ರಣ ತಯಾರಿಸಿ, ಪರೀಕ್ಷಿಸಿ, ಉಪಯೋಗಿಸಬೇಕು.

4. ಯಾವ ತರದ ಎಣ್ಣೆ ಅಥವಾ ಅಂಟು ಪದಾರ್ಥಗಳನ್ನೂ ಈ ಮಿಶ್ರಣಕ್ಕೆ ಸೇರಿಸುವ ಅಗತ್ಯವಿಲ್ಲ.

ಸೇಕಡಾ ಒಂದರ ಖಾವಿ "ಬೋರ್ಡೊ" ಮಿಶ್ರಣವನ್ನು ಉಪಯೋಗಿಸಿದರೆ ಅದು ಕೊಳೆ ರೋಗವನ್ನು ಸಂಪೂರ್ಣ ತಡೆಗಟ್ಟುವುದರಲ್ಲಿ ಯಾವ ಸಂದೇಹವೂ ಇಲ್ಲವೆಂದು ಈಗಿನ ಪರಿಶೋಧನೆಗಳಿಂದ ತಿಳಿದು ಬಂದಿದೆ.

5. ಮದ್ದು ಪ್ರಯೋಗವನ್ನು ಸಣ್ಣ ಹನಿ ರೂಪದಲ್ಲಿಯೇ (Mist spray) ಪ್ರತಿ ಅಡಕೆ ಗೊನೆಗೂ ತಗಲುವಂತೆ ಚಿಮುಕಿಸಬೇಕಲ್ಲದೆ ಇಡೀ ಮರಕ್ಕೆ ನಳಿಗೆ ಪ್ರಯೋಗ ಮಾಡಕೂಡದು.

6. ಮಳೆ ವಿರಾಮ ದೊರಕಿದೊಡನೆಯೇ ಎರಡನೆಯ, ಅವಶ್ಯವಿದ್ದರೆ ಮೂರನೆಯ ಸಲ ಇದೇ ರೀತಿ 40—50 ದಿವಸಗಳಲ್ಲಿ ಸೇಕಡಾ ಒಂದು ಸಲೆ ಔಷಧಿ ಪ್ರಯೋಗ ಮಾಡಿದಲ್ಲಿ ಇಡೀ ಬೆಳೆಯನ್ನು ರೋಗದಿಂದ ಕಾಪಾಡಬಹುದು.

ಒಂದು ಸಲೆ ಖಾವಿ "ಬೋರ್ಡೊ" ಮಿಶ್ರಣವನ್ನು ಹನಿರೂಪದಲ್ಲಿ (Mist Spray) ಜಾಗ್ರತೆಯಿಂದ ಉಪಯೋಗಿಸಿದರೆ ಇದರಿಂದ ಅಡಕೆ ಮರಕ್ಕೆ ಯಾವ ತೊಡಕೂ ಬರಲಾರದು. ಹೆಚ್ಚಿನ ಅನುಭವದ ಬಗ್ಗೆ ಜಿಲ್ಲಾ ವ್ಯವಸಾಯ ಆಫೀಸರರಿಗಾಗಲೀ, ದಕ್ಷಿಣ ಕನ್ನಡಾ ಮಾರ್ಕೆಟು ಕಮಿಟಿ ಸೆಕ್ರೆಟರಿಗಾಗಲೀ ಬರೆಯಿರಿ.

ನಿಮ್ಮಷ್ಟಕ್ಕೇ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಯನ್ನು ಇಂದೇ ತರಿಸಿಕೊಳ್ಳಿರಿ.

ಬೆಲೆ:— ಸಾಧಾರಣ ಪ್ರತಿ— ರೂ. ೧—೮—೦. (ಟಪ್ಪಾಲು ಖರ್ಚು ಬೇರೆ)
ಉತ್ತಮ ಪ್ರತಿ— ರೂ. ೨—೦—೦. (ಟಪ್ಪಾಲು ಖರ್ಚು ಬೇರೆ)

ದೊರಕುವ ಸ್ಥಳಗಳು:— 1) ನವಭಾರತ ಪುಸ್ತಕ ಭಂಡಾರ, ಉಡುಪಿ, ದ.ಕ.
2) ನವಯುಗ ಪ್ರೆಸ್, ಉಡುಪಿ, ದ. ಕ.

(ಉತ್ತಮ ಸಾರಸ್ವತ ಬ್ರಾಹ್ಮಣರ ಅಡಿಗೆ, ಶುಚಿ ರುಚಿಯಾದ ರೈಸ್‌ಪ್ಲೇಟ್)
ರುಚಿಕರವಾದ ಊಟ— ಹವೇಶೀರ್ (Airy) ವಸತಿ,
ಎರಡು ಊಟ ಕೋಟ್ (Cot) ಇತ್ಯಾದಿ ಸೌಕರ್ಯ.
ತಿಂಗಳೊಂದರ ರೂ. 52/- ಮಾತ್ರ.
ವಿಶೇಷ ಮಾಹಿತಿಗೆ ಪ್ರತ್ಯಕ್ಷ ವಿಚಾರಿಸಿರಿ.

ಸದ್ಗುರು ಬೋರ್ಡಿಂಗ್ ಎಂಡ್ ಲೋಜಿಂಗ್

ಹಿಂದ್‌ಮಾತಾ ಸಿನೇಮದ ಸಮೀಪ, ದಾದರ್, ಮುಂಬಯಿ ೧೪.
ವ್ಯವಸ್ಥಾಪಕ: ವಿ. ಯಸ್. ಪ್ರಭು.

ಖಾತ್ರಿ ಚಿನ್ನದ ನೆಕ್‌ಲೇಸ್, ತರಹವಾರು ಚೈನುಗಳು, ಬೆಂಡೋಲೆ,
ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು
ಯಾವಾಗಲೂ ಸಿದ್ಧವಿವೆ.
ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,

ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.

ಫೋನು ನಂಬ್ರ 66

ಭರ್ತ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.
ಬೆಲೆ- ೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟು ಖರ್ಚು ರೂ. ೦-೧೪-೦
—:ವಿಳಾಸ:—
ಕಾಲಪ್ಪಾ ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

[೧೦ನೇ ಪುಟದಿಂದ]

ತಯಾರಿಸುವ ಯಂತ್ರವನ್ನು ಸಾಗಿಸುವ ಹಾಗೂ ಸ್ಥಾಪಿಸುವುದಕ್ಕೆ ಬೇಕಾದ ವೆಚ್ಚ, ಇವೇ ಆಗಿವೆ. ಇನ್ನೊಂದು ಯಂತ್ರವನ್ನು ಒದಗಿಸಲು ಪ್ರಪಂಚ ಆರೋಗ್ಯ ಸಂಸ್ಥೆ ಮತ್ತು ಯೂನಿಸೆಫ್ (unicef) ಕ್ರಮವಾಗಿ ನಾಲ್ಕೂ ಮುಕ್ಕಾಲು ಲಕ್ಷ ಮತ್ತು ೧೧,೮೪,೦೦೦ ರೂಪಾಯಿಗಳನ್ನು ಕೊಡಲೊಪ್ಪಿವೆ. ಈ ಮೂರು ವರ್ಷಗಳ ಅವಧಿಯಲ್ಲಿ ಭಾರತ ಸರ್ಕಾರವೂ ರಾಜ್ಯಗಳ ಸರ್ಕಾರಗಳೂ ಏಳೂವರೆ ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲು ಒಪ್ಪಿರುತ್ತವೆ.

ವಿಶ್ವರಾಷ್ಟ್ರ ಸಂಸ್ಥೆಯ ಮಕ್ಕಳ ಶಿಕ್ಷಣ ನಿಧಿಯಿಂದ ೧೪ ಲಕ್ಷ ಬೆಲೆ ಬಾಳುವಷ್ಟು ಡಿ. ಡಿ. ಟಿ. ದೊರೆಯುವುದು. ಈ ಯೋಜನೆಗೆ ಒಟ್ಟು ಹದಿನೈದೂವರೆ ಕೋಟಿ ರೂಪಾಯಿಗಳು ಬೇಕಾಗಬಹುದೆಂದು ಅಂದಾಜು ಮಾಡಲಾಗಿದೆ.

ಅನೇಕ ಉಪಕಾರಗಳು

ಒಮ್ಮೆ ಮಲೇರಿಯಾ ಜ್ವರ ಬಂದರೆ ಸುಮಾರು ಆರುದಿನಗಳವರೆಗೆ ಕೆಲಸ ಮಾಡಲು ಸಾಧ್ಯವಿಲ್ಲ. ಮನುಷ್ಯನ ಕಾಲುಭಾಗ ಶಕ್ತಿಯೇ ಇದರಿಂದ ಕುಂದಿಹೋಗುವುದು.

ಈ ನಿರೋಧ ಕಾರ್ಯಕ್ರಮದಿಂದ ಇನ್ನೂ ಅನೇಕ ಪ್ರಯೋಜನಗಳಿವೆ 'ಪ್ಲೇಗ್' ರೋಗದ ಹಾವಳಿಯನ್ನೇ ನಿರ್ಮೂಲ ಮಾಡಿದಂತಾಗುವುದು. ಜಾನುವಾರುಗಳಿಗೆ ಅಂಟಿಕೊಂಡು ಪೀಡಿಸುವ ಅನೇಕ ಕ್ರಿಮಿಕೀಟಗಳೂ ನಾಶವಾಗುವುವು. ನೊಣಗಳ ಮೂಲಕ ಹಬ್ಬುವ ಅತಿಸಾರ, ಉಷ್ಣ ಹೊರಕಡೆ ಇತ್ಯಾದಿ ರೋಗಗಳು ಕಡಮೆಯಾಗುವುವು

ಮಲೇರಿಯಾ ಪ್ರದೇಶಗಳಲ್ಲಿ ಕೆಲಸಕ್ಕೆ ಜನರಿಲ್ಲದೆ ಬಂಜರುಬಿದ್ದ ಸಾವಿರಾರು ಎಕರೆ ಜಮೀನುಗಳನ್ನು ವ್ಯವಸಾಯ ಮಾಡಬಹುದು. ಹೆಚ್ಚು ಕಡಿಮೆ ಬೇಸಾಯಕಾಲದಲ್ಲೇ ಮಲೇರಿಯಾದ ಹಾವಳಿಯೂ ತಲೆದೋರುವ ಕಾರಣ ಮಲೇರಿಯಾ ನಿರೋಧವು ರೈತರಿಗೆ ಒಂದು ವರಪ್ರಸಾದದಂತೆಯೇ ಸರಿ. ದೇಶದಲ್ಲಿ ಲಕ್ಷಗಟ್ಟಲೆ ಜನರು ಈ ಮಹಾ ರೋಗವನ್ನು ತಡೆಯುವುದರಲ್ಲಿ ಸಂತೋಷಪಡದೆ ಇರಲಾರರು. ಎಲ್ಲಕ್ಕಿಂತಲೂ ಜನಾಂಗದ ಆರೋಗ್ಯವೇ ರಾಷ್ಟ್ರದ ಸೌಭಾಗ್ಯವೆನ್ನಬಹುದು. ಇದರಿಂದ ದೊರೆಯುವ ಲಾಭಾಂಶವನ್ನು ಎಷ್ಟು ಹೇಳಿದರೂ ಅತಿಶಯವಾಗದು.

ರಾಷ್ಟ್ರೀಯ ಮಲೇರಿಯಾ ಕಾರ್ಯಕ್ರಮವು ಮಲೇರಿಯಾ ಹಬ್ಬುತ್ತಿರುವ ಪ್ರದೇಶಗಳ ಮೂರರಲ್ಲಿ ಎರಡು ಅಂಶವನ್ನು ವ್ಯಾಪಿಸುತ್ತದೆ. ಮುಂಬೈ, ಮೈಸೂರು ಕೊಡಗು ಇತ್ಯಾದಿಗಳಲ್ಲಿ ಕೈಗೊಂಡ ಕಾರ್ಯಗಳಿಂದ ಮುಂದಿನ ಎರಡನೆಯ ವರ್ಷದಲ್ಲಿ ಮೊದಲಿನ ಎರಡು ಕೋಟಿ ಜನರಿಗೆ ಮಲೇರಿಯಾದಿಂದ ರಕ್ಷಣೆ ಕೊಡಬಹುದೆಂಬ ಭರವಸೆ ಉಂಟಾಗಿರುತ್ತದೆ.

Edited, Printed & Published By K. H. Shetty at the Navayuga Press, Udipi, S. India

Regd. No M. 3618 [ಎಂಡಾಕ] Licence No 31
Licensed to Post without Prepayment

ನವಯುಗ

Founder - SRI A. B SHETTY, Minister for Public Health, Govt of Madras.
Vol 33 No 41 17-6-1954 ವರ್ಷ ೩೩ ಸಂಚಿಕೆ ೪೧

ಕಳೆದ ವಾರದ ವಿಶೇಷ

ನಮ್ಮದು ಕೈಗಾರಿಕಾ ಪ್ರಧಾನವಾದ ದೇಶವಲ್ಲ—ಕೃಷಿಯೇ ನಮ್ಮ ಮುಖ್ಯ ಉದ್ಯೋಗ ನಮ್ಮ ನಾಡಿನಲ್ಲಿ ಕೈಗಾರೀಕರಣವನ್ನು ಸಾಧಿಸಬೇಕೆನ್ನುವ ಪ್ರಯತ್ನಗಳೇನೋ ನಡೆಯುತ್ತಿವೆ. ಆದರೆ ಕೈಗಾರಿಕೆಗಳ ಬೆಳವಣಿಗೆಗೋಸ್ಕರ ಯಾಂತ್ರೀಕರಣವನ್ನು ಸಾಧಿಸುವುದರಿಂದ ನಮ್ಮ ಕಷ್ಟಗಳು ಇನ್ನಷ್ಟು ಹೆಚ್ಚಿಕೊಳ್ಳಬಹುದು ಎಂಬ ಅಂಜಿಕೆ ತಲೆದೋರುತ್ತದೆ ಉದಾಹರಣೆಗಾಗಿ, ಯಾಂತ್ರೀಕರಣವು ನಮ್ಮಲ್ಲಿ ಈಗಾಗಲೇ ತಾಂಡವವಾಡುವ ನಿರುದ್ಯೋಗದ ಸಮಸ್ಯೆಯನ್ನು ಇನ್ನಷ್ಟು ಉಲ್ಬಣಗೊಳಿಸಬಹುದು. ಮಹಾತ್ಮಾ ಗಾಂಧೀಜಿಯವರು ಚರಖದಿಂದ ನೂಲು ತೆಗೆಯುವುದು, ಗಾಣದಿಂದ ಎಣ್ಣೆ ಇಳಿಸುವುದು, ಕೈಯಿಂದ ಕಾಗದ ತಯಾರಿಸುವುದು ಮುಂತಾದವುಗಳಲ್ಲಿ ಕೆಲವು ಯಂತ್ರಗಳನ್ನು ಉಪಯೋಗಿಸುತ್ತಿದ್ದರೂ ಮನುಷ್ಯನ ಮೇಲೆ ಯಂತ್ರವು ಅಧಿಕಾರ ನಡೆಸಕೂಡದೆಂಬ ತತ್ವಕ್ಕೆ ಅಂಟಿಕೊಂಡಿದ್ದರು ವಿಕೇಂದ್ರೀಕರಣದ ತತ್ವಕ್ಕೆ ಹೊಂದಿಕೊಂಡೇ ಭಾರತದಲ್ಲಿ ಔದ್ಯಮಿಕ ಅಭಿವೃದ್ಧಿಯು ನೆರವೇರಬೇಕೆಂದು ಅವರು ಅಭಿಪ್ರಾಯ ಪಡುತ್ತಿದ್ದರು ಕಾರಣ, "ಯಂತ್ರದ ಭ್ರಾಂತಿ"ಯನ್ನು ನಾವು ಹೊಂದಬಾರದೆಂದು ಅವರು ಹೇಳುತ್ತಿದ್ದರು.

ಆದರೆ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಬೆಳೆದು ಬಂದ ಕೈಗಾರೀಕರಣವು ನಮ್ಮ ದೇಶದ ಮೇಲೆ ಪ್ರಭಾವವನ್ನು ಮಾಡಿಯೇ ತೀರಿತು—ದೊಡ್ಡ ಉದ್ದಿಮೆಗಳು ಚಿಕ್ಕ ಕೈಗಾರಿಕೆಗಳ ಕ್ಷೇತ್ರದಲ್ಲಿ ಪ್ರವೇಶಿಸಿ, ತಮ್ಮ ವರ್ಚಸ್ಸನ್ನು ಸ್ಥಾಪಿಸಿದವು. ಮಾತ್ರವಲ್ಲ ನೇರಾದ ಸ್ಪರ್ಧೆಗೂ ಇಳಿದವು ಚಿಕ್ಕ ಕೈಗಾರಿಕೆಗಳು ಈ ಸ್ಪರ್ಧೆಯನ್ನು ಯಶಸ್ವಿಯಾಗಿ ಇದಿರಿಸಲಾರದೆ ಬಳಲುವ ಪರಿಸ್ಥಿತಿಯು ಬಂದೊದಗಿತು ಆದುದರಿಂದ ಲಕ್ಷೋಪಲಕ್ಷ ಜನಕ್ಕೆ ಉದ್ಯೋಗವನ್ನೂ ಅನ್ನವನ್ನೂ ಒದಗಿಸುವ ಈ ಕೈಗಾರಿಕೆಗಳಿಗೆ ಯೋಗ್ಯ ರಕ್ಷಣೆಯನ್ನು ಸರಕಾರ ಕೊಡುವುದು ಆವಶ್ಯವಾಯಿತು. ಸರಕಾರವು ಗೃಹೋದ್ಯಮಗಳ ಮಂಡಳವೊಂದನ್ನು ನೇಮಿಸಿತು, ನೇಕಾರರ ಸಹಕಾರ ಸಂಘಗಳಿಗೆ ಉತ್ತೇಜನವನ್ನು ನೀಡಿತು ಮಾತ್ರವಲ್ಲ ಹೊರದೇಶಗಳ ತಜ್ಞರನ್ನು ಕರೆಸಿ, ಅವರ ಸಲಹೆ ಸೂಚನೆಗಳನ್ನು ಸ್ವಾಗತಿಸಿತು ಕಳೆದವಾರ ಅಮೇರಿಕದ ಫೋರ್ಡ್ ಫೌಂಡೇಶನದ ಅಭ್ಯಾಸ ಮಂಡಳವೊಂದು ಭಾರತದಲ್ಲಿರುವ ಚಿಕ್ಕ ಉದ್ದಿಮೆಗಳನ್ನು ಅಭಿವೃದ್ಧಿಗೊಳಿಸುವ ಕುರಿತು ತನ್ನ ಅಭಿಪ್ರಾಯಗಳನ್ನು ಸುದೀರ್ಘವಾದ ವರದಿಯ ಮೂಲಕ ವ್ಯಕ್ತಗೊಳಿಸಿದೆ.

ಅಭ್ಯಾಸ ಮಂಡಳದ ಅಭಿಪ್ರಾಯದಂತೆ, ಭಾರತದಲ್ಲಿ ನವೀಕರಣದ ಕುರಿತು ಕಂಡುಬರುವ ವಿರೋಧವು ಇಷ್ಟವಾದುದಲ್ಲ. ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸುವುದಕ್ಕೋಸ್ಕರ ಯಾಂತ್ರೀಕರಣ ಅಥವಾ ನವೀಕರಣವನ್ನು ವಿರೋಧಿಸುವುದು ಯೋಗ್ಯ ಪರಿಹಾರ ಕ್ರಮವಲ್ಲ ನಮ್ಮ ಸಂಪತ್ತು ಹೆಚ್ಚಬೇಕಾದರೆ ಉತ್ಪಾದನೆ ಹೆಚ್ಚಬೇಕು, ಉತ್ಪಾದನಾ ಮಟ್ಟವು ಉನ್ನತಗೊಳ್ಳಬೇಕು ಓಬೀರಾಯನ ಕಾಲದ ಯಂತ್ರತಂತ್ರಗಳಿಂದ ನಾವು ವ್ಯಾಪಾರೀ ಕ್ಷೇತ್ರದಲ್ಲಿರುವ ಸ್ಪರ್ಧೆಯನ್ನು ಇದಿರಿಸಿ ಬಾಳುವುದು ಅಸಾಧ್ಯ ಆದುದರಿಂದ ಯಾಂತ್ರೀಕರಣವೂ ನವೀಕರಣವೂ ಅನಿವಾರ್ಯವೆಂಬ ನಿರ್ಣಯಕ್ಕೆ ಅಭ್ಯಾಸ ಮಂಡಳವು ಬಂದಿದೆ ಜಪಾನಿನಲ್ಲಿ ಪ್ರತಿಯೊಂದು ಮನೆ ವಸತಿಯೂ ಕೈಗಾರಿಕಾ ಕೇಂದ್ರ ಅಲ್ಲಿ ಯಂತ್ರ ಚಾಲಕ ಶಕ್ತಿಯಾಗಿ ವಿದ್ಯುತ್ತು ಬಳಸಲ್ಪಡುತ್ತದೆ ನಾವಾದರೂ ಇಂತಹ ಕ್ರಮವನ್ನು ಅನುಸರಿಸಬೇಕೆಂದು ಮಂಡಳದ ಅಭಿಮತ ಮಂಡಳವು ಮುಂದೆ ಮಾಡಿದ ಕೆಲವು ಸಲಹೆಗಳಲ್ಲಿ, ಚಿಕ್ಕ ಉದ್ದಿಮೆಗಳಲ್ಲಿ ನಿರತರಾದ ಕೆಲಸಗಾರರಿಗೆ ಆಧುನಿಕ—ಯಾಂತ್ರಿಕ ವಿಜ್ಞಾನದ ತಿಳುವಳಿಕೆಯನ್ನು ಮಾಡಿಕೊಡುವಂತ ಪ್ರಾದೇಶಿಕ ಸಮಿತಿಗಳನ್ನು ನೇಮಿಸಬೇಕೆಂಬುದು ಉಲ್ಲೇಖನೀಯ ಇದನ್ನು ಸರಕಾರ ಒಪ್ಪಿಕೊಂಡಿದೆ ಸರಕಾರ ಅಂಗೀಕರಿಸಿದ ಇತರ ಸೂಚನೆಗಳಲ್ಲಿ ಭಾರತ ಹಾಗು ವಿದೇಶಗಳಲ್ಲಿ ನಮ್ಮ ಸರಕುಗಳನ್ನು ಗ್ರಾಹಕರಿಗೆ ಒದಗಿಸುವ ಮಂಡಳವನ್ನು ಸಂಘಟಿಸಬೇಕೆನ್ನುವುದೂ ಒಂದು

ನಕಾಶೆಗಳನ್ನು ತಯಾರಿಸುವ ಮಂಡಳದ ರಚನೆ ಇತ್ಯಾದಿ ಸಲಹೆಗಳು ಇನ್ನೂ ಸರಕಾರದ ಪರ್ಯಾಲೋಚನೆಯಲ್ಲಿವೆ ಸರಕಾರದವರು ನಮಗೆ ಮಹತ್ವಪೂರ್ಣನಿಸಿದ ಈ ವಿಷಯದಲ್ಲಿ ಉಚಿತ ಕ್ರಮವನ್ನು ಬೇಗನೆ ಕೈಗೊಳ್ಳಬಹುದು

ಚಿಕ್ಕ ಉದ್ದಿಮೆಗಳ ಅಭಿವೃದ್ಧಿಯೊಂದಿಗೆ ನಾವು ವಿಚಾರಿಸಬೇಕಾದ ಇನ್ನೊಂದು ಸಂಗತಿಯೆಂದರೆ, ಖಾಸಗಿ ಬಂಡವಾಳ ಇದೀಗ ಕಾರ್ಯಗತಗೊಳ್ಳುತ್ತಿರುವ ಪಂಚ ವಾರ್ಷಿಕ ಯೋಜನೆಯಲ್ಲಿ ಸರಕಾರದ ವತಿಯಿಂದ ನೆರವೇರುವ ಕೆಲಸಗಳಿದ್ದಂತೆಯೇ ಖಾಸಗಿ ಕ್ಷೇತ್ರದ ಹೊಣೆಗಾರಿಕೆಯೂ ಸೇರಿ ಕೊಂಡಿದೆ ಯೋಜನಾ ಆಯೋಗದವರು ಸುಮಾರು ನಲುವತ್ತು ಉದ್ದಿಮೆಗಳನ್ನು ಹೆಸರಿಸಿ, ಇವುಗಳು ತಮ್ಮ ಉತ್ಪಾದನಾ ಮಟ್ಟವನ್ನು ಇಂತಿಷ್ಟು ಹೆಚ್ಚಿಸಬೇಕೆಂದು ನಿರ್ಣಯ ಮಾಡಿರುವರು. ಆದರೆ ಸರಕಾರವು ಖಾಸಗಿ ಕ್ಷೇತ್ರದ ಮೇಲೆ ಪಂಚ ಮಕಾರಿಯಾದ ನಿಯಂತ್ರಣವನ್ನೇನು ಹೊತ್ತಿಲ್ಲ ಹೀಗಾಗಿ ಯೋಜನೆಯ ಆಶಯಕ್ಕೂ ಖಾಸಗಿ ಕ್ಷೇತ್ರದ ವ್ಯವಹಾರಕ್ಕೂ ಅಪೇಕ್ಷಿತ ಪ್ರಮಾಣದಲ್ಲಿ ತಾಳಮೇಳ ಕೂಡಿ ಬಂದಿಲ್ಲ ಉದ್ದಿಮೆಗಳು ವಿಸ್ತರಿಸಿ ಅಭಿವೃದ್ಧಿ ಹೊಂದಿ, ಉತ್ಪಾದನೆ ಹೆಚ್ಚಿಸುವುದಕ್ಕೋಸ್ಕರ ಅಪಾರ ಬಂಡವಾಳವು ಅಗತ್ಯ. ಈ ಬಂಡವಾಳವನ್ನು ಎಲ್ಲಿಂದ ಒದಗಿಸಿಕೊಳ್ಳಬೇಕೆಂಬ ವಿಷಯದ ಯೋಜನಾ ಆಯೋಗ ಸಾಕಷ್ಟು ಗಮನ ಕೊಡಲಿಲ್ಲ ಎಂತಲೇ ಖಾಸಗಿ ರಂಗದಲ್ಲಿ ಕೆಲವು ತೊಡಕುಗಳು ಕಾಣಿಸಿಕೊಂಡವು—ಇದನ್ನು ತಿಳಿದ ರಿಜರ್ವಬೇಂಕು ಶ್ರಾಫ್ ಸಮಿತಿಯನ್ನು ನೇಮಿಸಿ ಸಮಸ್ಯೆಯ ಒಳಹೊರಗನ್ನು ವಿಚಾರಿಸಲು ಕೇಳಿಕೊಂಡಿತು. ಈ ಸಮಿತಿಯ ವರದಿಯೂ ಕಳೆದ ವಾರ ಪ್ರಕಟಗೊಂಡಿದೆ

ಬಂಡವಾಳವು ಜನರ ಉಳಿತಾಯ ಪ್ರವೃತ್ತಿಯನ್ನು ಅವಲಂಬಿಸಿರುವುದೆಂಬ ಮಾತನ್ನು ಎಲ್ಲರೂ ಒಪ್ಪುವರು ಜನರಲ್ಲಿ ಉಳಿತಾಯದ ಮನೋಭಾವವನ್ನು ಪ್ರಚೋದಿಸಲು ಸರಕಾರದ ಕಡೆಯಿಂದ ಲೂ ಬೇಂಕು ಮುಂತಾದ ವಾಣಿಜ್ಯ ಸಂಸ್ಥೆಗಳ ವತಿಯಿಂದಲೂ ಪ್ರಯತ್ನಗಳು ನಡೆಯುತ್ತಿವೆ ದುರ್ದೈವದಿಂದ ಬೇಂಕುಗಳಲ್ಲಿ ಇಡಲಾದ ಠೇವಣಾತಿಯ ಮೊತ್ತವು ವರ್ಷ ವರ್ಷಕ್ಕೆ ಕಡಿಮೆಯಾಗುತ್ತಾ ಹೋಗುತ್ತಿದೆ ವಾಣಿಜ್ಯ ಸಂಸ್ಥೆಗಳಲ್ಲಿ ಹಣವನ್ನು ನಿಕ್ಷೇಪಿಸುವುದು ಸಾಕಷ್ಟು ಆಕರ್ಷಕವಾಗಿಲ್ಲವೆನ್ನುವುದೇ ಈ ಅಧೋಗತಿಯ ಕಾರಣ—ರಾಜಕೀಯ ಧುರೀಣರು "ರಾಷ್ಟ್ರೀಕರಣ"ದ ಕುರಿತು ವಿಶೇಷ ಜೋರು ಕೊಟ್ಟು ಬಾಯಿ ಸಡಿಲು ಬಿಟ್ಟು, ಮಾತಾಡುವುದನ್ನು ಕೇಳಿದ ಯಾರಾದರೂ ತನ್ನ ಹಣವನ್ನು ಉದ್ದಿಮೆಗಳಲ್ಲಿ ತೊಡಗಿಸಲು ಹಿಂಜರಿಯುವುದು ನಿಶ್ಚಯ. ಇಂಥವರು ಸರಕಾರದ ಸಾರ್ವಜನಿಕ ಸಾಲ ಪತ್ರಗಳಲ್ಲಿಯೇ ತಮ್ಮ ಹಣವನ್ನು ನಿಕ್ಷೇಪಿಸಬಹುದು ಸರಕಾರವು ಪ್ರತಿ ವರ್ಷವೂ ಸಾಕಷ್ಟುದೊಡ್ಡ ಮೊತ್ತವನ್ನು ಸಾಲ ಎತ್ತುತ್ತಿರುವುದರಿಂದ ಖಾಸಗಿ ಉದ್ದಿಮೆಗಳಿಗೆ ದೊರಕುವ ಬಂಡವಾಳದ ಪ್ರಮಾಣ ಸ್ವಭಾವಿಕವಾಗಿಯೇ ಕಡಿಮೆಯಾಗುತ್ತಿದೆ ಇಲ್ಲಿ ಕಂಡುಬರುವ ಇನ್ನೊಂದು ದೋಷಕ್ಕೆ ಸ್ವತಃ ಉದ್ದಿಮೆದಾರರೇ ಹೊಣೆ. ಕೆಲವು ಉದ್ದಿಮೆಗಳ ಆಡಳಿತವು ಅವ್ಯವಸ್ಥೆಯಿಂದ ತುಂಬಿಕೊಂಡಿರುವುದೂ ಅನಾವ್ಯಯ ಹೆಚ್ಚಿಕೊಂಡಿರುವುದೂ ಪಾಲುದಾರರಲ್ಲಿ ಅವಿಶ್ವಾಸವನ್ನುಂಟು ಮಾಡುತ್ತದೆ ಈ ತಪ್ಪನ್ನೂ ಸರಿಪಡಿಸುವುದು ಅಪೇಕ್ಷಣೀಯ.

ಶ್ರಾಫ ಸಮಿತಿಯು ಬೇಂಕುಗಳು ಖಾಸಗಿ ರಂಗಕ್ಕೆ ಬಂಡವಾಳವನ್ನು ಒದಗಿಸುವ ಕ್ರಮದಲ್ಲಿ ನಿರ್ಬಂಧಗಳನ್ನು ಸಡಲಿಸುವುದು ಅಗತ್ಯವೆಂದು ಭಾವಿಸುತ್ತದೆ. ವಿಮಾ ಕಂಪೆನಿಗಳು ಸರಕಾರದ ಭದ್ರತಾ ಪತ್ರಗಳಲ್ಲಿ ತೊಡಗಿಸುವ ಹಣವನ್ನು ತುಸು ಕಡಿಮೆಮಾಡಿ, ಖಾಸಗಿ ರಂಗಕ್ಕೆ ಅವುಗಳು ಬಂಡವಾಳ ಒದಗಿಸುವಂತೆ ಕಾನೂನಿನಲ್ಲಿ ತಿದ್ದುಪಡಿ ಮಾಡಿದರೆ ಆದೀತೆಂದು ಸಮಿತಿ ಸೂಚಿಸುತ್ತದೆ. ಖಾಸಗಿ ರಂಗಕ್ಕೆ ಬಂಡವಾಳವನ್ನು ಹೆಚ್ಚುಹೆಚ್ಚಾಗಿ ಆಕರ್ಷಿಸಲು ಅವಶ್ಯಕ ಕ್ರಮಗಳನ್ನು ಕೈಗೊಳ್ಳಬೇಕೆಂದು ಅದು ಸಲಹೆಗಳನ್ನು ಮುಂದಿಟ್ಟಿದೆ— ಉದಾ

[ಎಂಟನೇ ಪುಟ ನೋಡಿರಿ]

ಸಮರ್ಥ ಸಾಲಗಳು

ಒಬ್ಬನ ಯೋಗ್ಯತೆ ಮತ್ತು ಸಮರ್ಥತೆ ಅನೇಕ ವೇಳೆ ಆತನ ಚಿಲ್ಲರೆ ಸಾಲಗಳ ದೆಸೆಯಿಂದಾಗಿ ಬಲುವಾಗಿ ಕುಂದುತ್ತವೆ ಆದರೆ ಈ ಎಲ್ಲಾ ಚಿಲ್ಲರೆ ಸಾಲಗಳನ್ನು ಏಕೀಕರಿಸಿ ಸುಲಭಸಾಧ್ಯವಾದ ಕಂತುಗಳಿಂದ ಸಂದಾಯ ಮಾಡುವಂತಾದರೆ ಆತನ ಕಷ್ಟಗಳೆಲ್ಲವೂ ಪರಿಹಾರಹೊಂದಿ ಆತನ ಯೋಗ್ಯತೆ ಹಾಗೂ ಸಮರ್ಥತೆ ಮರಳಿ ಬರುವುದು ತಿಂಗಳಿಗೆ ರೂಪಾಯಿ 250/- ಯಾ ಅದಕ್ಕಿಂತ ಜಾಸ್ತಿ ಸಂಬಳವಿರುವ ಆಫೀಸರುಗಳಿಗೆ ಅವರ ಸಂಬಳದ ಆರು ಪಾಲಷ್ಟು ಸಾಲಗಳನ್ನು ಕೊಟ್ಟು ಅದನ್ನು 36 ತಿಂಗಳು ಕಂತುಗಳಿಂದ ಮರುಪಾವತಿ ಪಡೆಯುವ ಹೊಸ ಯೋಜನೆಯೊಂದನ್ನು ನಾವು ಕಂಡುಹಿಡಿದಿದ್ದೇವೆ ಈ ಸಾಲವನ್ನು ಪಡೆಯಲು ಇನ್ಶೂರೆನ್ಸ್ ಪೋಲಿಸಿ ಮತ್ತು ಒಬ್ಬ ಸರಿ ಜ್ಯಾಮೀನುದಾರನು ಅತ್ಯಗತ್ಯ

ಹೆಚ್ಚಿನ ವಿವರಗಳಿಗೆ ಸಮೀಪದ ನಮ್ಮ ಆಫೀಸಿನಲ್ಲಿ ವಿಚಾರಿಸಿರಿ

THE CANARA INDUSTRIAL & BANKING SYNDICATE LTD
Estd: 1925 H O UDIPI, S India

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್.,
[ಸ್ಥಾಪನೆ ೧೯೨೫] [ಪ್ರಧಾನ ಕಚೇರಿ ಉಡುಪಿ ದ ಭಾರತ]

ಗ್ರಾಮಾಂತರ ಪ್ರದೇಶದಲ್ಲಿ ಪ್ರಾಥಮಿಕ ಶಿಕ್ಷಣ

ಹಳ್ಳಿಯ ಜೀವನದಲ್ಲಿ ಮಕ್ಕಳ ಸ್ಥಾನ

ಮದ್ರಾಸಿನಲ್ಲಿ ರಾಜಾಜಿಯವರ ಮಂತ್ರಿಮಂಡಳದ ಸ್ಥಾನದಲ್ಲಿ ಅಧಿಕಾರವನ್ನು ವಹಿಸಿಕೊಂಡ ನಾಡರ ಸರಕಾರವು ಪರಿಷ್ಕೃತ ಪ್ರಾಥಮಿಕ ಶಿಕ್ಷಣಪದ್ಧತಿಯನ್ನು ಬಿಟ್ಟುಗೊಡಲು ನಿರ್ಧರಿಸಿತು—ಮತ್ತು ಇದೀಗ ಎಲ್ಲ ಶಾಲೆಗಳೂ ಒಂದು ವರ್ಷಕ್ಕೆ ಮೊದಲಿದ್ದ ಕ್ರಮವನ್ನೇ ಅನುಸರಿಸಿ ಮಕ್ಕಳಿಗೆ ಶಿಕ್ಷಣವನ್ನು ಕೊಡುತ್ತಿವೆ. ನಾಡರ ಮಂತ್ರಿಮಂಡಳವು ಅಧಿಕಾರಕ್ಕೆ ಬಂದ ಮೊದಲ ದಿನಗಳಲ್ಲಿ ಸರಕಾರದ ಘೋಷಣೆಯ ಕುರಿತು ಮಾತನಾಡಿದ ಶ್ರೀ ಸುಬ್ರಹ್ಮಣ್ಯಮರು ಈಗಲೂ ಕಾಂಗ್ರೆಸು ಸಂಸ್ಥೆಯೇ ಅಧಿಕಾರ ಸ್ಥಾನದಲ್ಲಿದೆಯೆಂದು ಹೇಳುತ್ತಾ, ರಾಜಾಜಿಯ ಘೋಷಣೆಗಿಂತ ಭಿನ್ನವಾದ ನಿಲುಮೆಯನ್ನು ಹೊಸ ಮಂತ್ರಿಮಂಡಳವು ಸ್ವೀಕರಿಸಲಿಕ್ಕಿಲ್ಲ ಎಂಬ ಅಭಿಪ್ರಾಯವನ್ನು ಉಂಟುಮಾಡಿದರು. ಆದರೆ ಮುಂದೆ ತಿಂಗಳೊಪ್ಪತ್ತಿನಲ್ಲಿಯೇ, ರಾಜಾಜಿಯ ಘೋಷಣೆಗೂ ನಾಡರರ ನಿಲುಮೆಗೂ ವ್ಯತ್ಯಾಸವಿದೆಯೆಂದು ಪ್ರಕಟಗೊಂಡಿತು. ಈ ಬದಲಾವಣೆಯು ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಜನಾಭಿಪ್ರಾಯವನ್ನು ಮನ್ನಿಸಬೇಕೆಂಬ ತತ್ವಕ್ಕೆ ಅನುಗುಣವಾಗಿರಬಹುದು; ಸಾರ್ವಜನಿಕ ಮತವನ್ನು ಲೆಕ್ಕಕ್ಕೆ ತೆಗೆದುಕೊಳ್ಳದ ಸರಕಾರವು ಪ್ರಜಾಪ್ರಭುತ್ವವಾದಿಯೆಂಬ ಹೆಗ್ಗಳಿಕೆಯನ್ನು ಳಿಸಿಕೊಳ್ಳಲಾರದೆಂಬುದನ್ನೂ ನಾವು ಒಪ್ಪಬಹುದು. ಆದರೆ ತಿದ್ದಿದ ವಿದ್ಯಾಭ್ಯಾಸದ ಕ್ರಮವನ್ನು ಮೂಲೆಗೊತ್ತುವುದಕ್ಕೆ ಮುಂಚೆ, ಈ ನೂತನ ಕ್ರಾಂತಿಕಾರ ಪ್ರಯೋಗಕ್ಕೆ ಸಾಕಷ್ಟು ಪರೀಕ್ಷಾಕಾಲವನ್ನು ಕೊಡಬೇಕಿತ್ತೆಂಬುದು ನಿರ್ವಿವಾದ. ಅಧಿಕಾರ ಸ್ಥಾನದಲ್ಲಿ ಮೊದಲೂ ಆ ಬಳಿಕವೂ ಕಾಂಗ್ರೆಸು ಸಂಸ್ಥೆಯೇ ಇದ್ದ ಹಾಗು ಈ ಹೊಸ ಪ್ರಯೋಗಕ್ಕೆ ಇಂತಹ ಕಾಲಾವಕಾಶವನ್ನು ನೀಡುವ ಅಪೇಕ್ಷೆಯೂ ನ್ಯಾಯವಾಗಿ ಇತ್ತು.

ಅವಸರದ ನಿರ್ಣಯ

ಆದರೆ ಹೊಸ ಮಂತ್ರಿಮಂಡಳವು ಈ ವಿಷಯದಲ್ಲಿ ಅವಸರದಿಂದಲೇ ವರ್ತಿಸಿ ಅನಾವಶ್ಯಕ ನಿರ್ಣಯವನ್ನು ಕೈಗೊಂಡಿದೆ. ಜನಪದ ಕರ್ಣಧಾರರಾಗಿರುವವರ ಸರಕಾರ ನಡೆಸಿದರು. ಕೆಲವರಿಗೆ ತೋರಬಹುದು, ಆದರೆ ಇದು ನಮ್ಮ ಒಂದು ಮಹಾ ಅನ್ಯಾಯ; ರಾಜಾಜಿಯ ಘೋಷಣೆಯನ್ನು ವಿರೋಧಿಸುತ್ತಿದ್ದವರಂತೆಯೇ ಅದನ್ನು ಮೆಚ್ಚಿ ಪುರಸ್ಕರಿಸುವ ಜನರೂ ಇದ್ದರು. ಶೈಕ್ಷಣಿಕ ಕ್ಷೇತ್ರದಲ್ಲಿ ನುರಿತವರೂ ಅನುಭವಿಗಳೂ ಪಂಡಿತರೂ ಆದ ಭಾರತೀಯ ತಜ್ಞರು ಮದ್ರಾಸಿನ ಈ ಪ್ರಯೋಗದ ಫಲವನ್ನು ಕುತೂಹಲದಿಂದ ನಿರೀಕ್ಷಿಸುತ್ತಿದ್ದರು. ದಿನದಲ್ಲಿ ಒಂದು ಹೊತ್ತಿನಷ್ಟು—ಅರ್ಥಾತ್ ಮೂರು ತಾಸುಗಳಷ್ಟು—ಓದು ಬರೆಹದ ಶಿಕ್ಷಣವನ್ನು ಪಡೆಯುವುದರಿಂದ ಶಿಕ್ಷಣದ ಮಟ್ಟದಲ್ಲಿ ಯಾವುದೇ ತರದ ಅವನತಿಯುಂಟಾಗುವುದಿಲ್ಲೆಂದು ಈ ಮಹನೀಯರು ಅಭಿಪ್ರಾಯಪಟ್ಟಿರುವರು. ಪರುಳೇಕರ ಸಮಿತಿ ಸಹ ಪಾರಂಪರಿಕ ಪದ್ಧತಿಯನ್ನೂ ಪ್ರತಿಯೊಂದೂ ವಿಷಯವನ್ನು ಕಲಿಸುವ ಸಮಯವನ್ನೂ ಕೂಲಂಕಷವಾಗಿ ವಿಮರ್ಶಿಸಿ, ಮಕ್ಕಳ ಓದುಬರಹದಲ್ಲಿ ಯಾವುದೇ ತರದ ಕೊರತೆಯನ್ನು ರಾಜಾಜಿಯ ಪರಿಷ್ಕೃತ ಪದ್ಧತಿಯು ಮಾಡುವುದಿಲ್ಲೆಂಬ ನಿರ್ಣಯಕ್ಕೆ ಬಂದಿರುವುದು. ಆದರೆ ಮಕ್ಕಳ ಹಾಜರಿ ಸಂಖ್ಯೆಯು ಕಡಿಮೆಯಾದರೆ ತಾವು ನಿರುದ್ಯೋಗಿಗಳಾಗುವೆವೆಂದು ಬಡವಿಲ್ಲದ ಭಯಕ್ಕೆ ಅಂಟಿಕೊಂಡ ಅಧ್ಯಾಪಕ ವೃಂದವೂ ಪ್ರಾಚೀನ ಕಾಲದ ಜಾತಿ ಭೇದವನ್ನು ಚಿರಕಾಲ ಉಳಿಸುವ ಹಂಚಿಕೆ ಇದೆಂದು ಅನ್ಯಾಯವಾಗಿಯೇ ಸಾರಿದ ಸುಧಾರಕರೂ ಮಕ್ಕಳ ಮನೋವಿಜ್ಞಾನದಲ್ಲಿ ಏನೇನೂ ಮಾಹಿತಿ ಇಲ್ಲದ, ಶಿಕ್ಷಣಕ್ಷೇತ್ರದಲ್ಲಿ ಅನುಭವವಿಲ್ಲದ ರಾಜಕೀಯ ಮುಂದಾಳುಗಳೂ ಒಟ್ಟುಕೂಡಿ ಪರಿಷ್ಕೃತ ಪದ್ಧತಿಯ ಕುರಿತು ಅಪಪ್ರಚಾರವನ್ನು ಮಾಡಿ, ಅದರ ನಿಜವಾದ ಯೋಗ್ಯತೆಯು ತಿಳಿಯದಂತೆ ಕಪ್ಪು ಬಣ್ಣವನ್ನು ಬಳಿದರು. ದುರ್ದೈವದಿಂದ ಇಂತಹ ಚಳುವಳಿಗಾರರೇ ಜನಾಭಿಪ್ರಾಯದ ರಚನೆಯಲ್ಲಿ ಮೇಲ್ಗೈಯನ್ನು ಹೊಂದಿದರು. ತಪ್ಪು ಅಭಿಪ್ರಾಯಗಳನ್ನು ಸರಿಪಡಿಸುವುದಕ್ಕೂ ಯೋಜನೆಯ ಪ್ರಚಾರ ಮಾಡುವುದಕ್ಕೂ ಬೇಕಾಗಿದ್ದ ಅವಧಿಯನ್ನು ಕೊಡದೆಯೇ ಪರಿಷ್ಕೃತ ಪದ್ಧತಿಯನ್ನು ಬಿಟ್ಟುಗೊಟ್ಟು, ಮದ್ರಾಸಿನ ನಾಡರ ಮಂತ್ರಿಮಂಡಳವು ತಪ್ಪನ್ನು ಮಾಡಿತು. ಹೀಗಿದ್ದರೂ ಸರಕಾರವು ನೇಮಿಸಲಿರುವ ಸಮಿತಿಯೂ ರಾಜಾಜಿ ಯೋಜನೆಯ ಕೆಲವು ಅಂಶಗಳನ್ನು ಸ್ವೀಕರಿಸಬಹುದೆಂಬ ಆಶಯವನ್ನು ವಿದ್ಯಾಮಂತ್ರಿಗಳು ಧ್ವನಿಸಿರುವುದರಿಂದಲೂ, ಇದೇ ದಿನಾಂಕ ಎರಡು ರಾಜಾಜಿಯವರೇ ಸ್ವತಃ ಸರಕಾರದ ಘೋಷಣೆಯನ್ನು ಕುರಿತು ವಿಷಾದವನ್ನು ಸೂಚಿಸಿ, ತಾವು ಜ್ಯಾರಿಗೆ ತಂದಿದ್ದ ಪದ್ಧತಿಯ ಯೋಗ್ಯತೆಯನ್ನು ತಿಳಿಸಿ, ಪ್ರಕಟಣೆಯೊಂದನ್ನು ಕೊಟ್ಟಿರುವುದರಿಂದಲೂ—ಬಿಟ್ಟುಗೊಟ್ಟ ಪದ್ಧತಿಯ ಕುರಿತು ಇನ್ನೂ ಕೆಲವು ಸಂಗತಿಗಳನ್ನು ಬರೆದರೆ ಅಪ್ರಸ್ತುತವಾಗಲಾರದು.

ಮಕ್ಕಳ ಮನಸ್ಸು

ರಾಜಾಜಿಯ ಅಭಿಪ್ರಾಯದಂತೆ (ಈಗ ಬಿಟ್ಟುಗೊಡಲಾದ) ಅರ್ಧ ಹೊತ್ತಿನ ಶಾಲೆಯಿಂದಾಗಿ ಹಳ್ಳಿಯ ಮಕ್ಕಳು ಮುಂದಿನ ಐದು ವರ್ಷಗಳಲ್ಲಿ ನಿಜವಾದ, ಮೂಲಭೂತವಾದ ಶಿಕ್ಷಣವನ್ನು ಹೊಂದುತ್ತಿದ್ದರು, ಮತ್ತು ನಮ್ಮ ರಾಜ್ಯಾಂಗ ಘಟನೆಯ ಆಶಯವನ್ನು ನಾವು ಅವಧಿಗೆ ಮೊದಲೇ ಪೂರೈಸುತಿದ್ದೆವು. ಪ್ರಾಥಮಿಕ ವಿದ್ಯಾಭ್ಯಾಸವು ನಾಗರಿಕ ಜೀವನದ ತಳಹದಿಯನ್ನು ಹಾಕಿಕೊಡಬೇಕು; ಅದು ಮಕ್ಕಳ ಬೆಳೆಯುವ ವಾತಾವರಣವನ್ನು ಮೂಲೆಗುಂಪು ಮಾಡಲಾಗದು. ಕುಟುಂಬದಿಂದ ಹಾಗು ಸಮಾಜದಿಂದ ತಾವು ಬೇರೆ ಹಾಗು ಮೇಲಿನ ಅಂತಸ್ತಿನವರೆಂಬ ಭಾವನೆಯನ್ನು ಶಿಕ್ಷಣವು ಉಂಟುಮಾಡಲೇ ಕೂಡದು. ಶಾಲೆಯ ಶಿಕ್ಷಣವು ಸರಕಾರದ ನೌಕರಿ ಗಳಿಸುವ ಸಾಧನವೆಂಬುದಾಗಿ ಬ್ರಿಟಿಷ ಸರಕಾರವು ತಪ್ಪು ಅಭಿಪ್ರಾಯವನ್ನು ಜನರಲ್ಲಿ ಬಿತ್ತಿತು. ಸ್ವಾತಂತ್ರ್ಯ ಸಂಪಾದಿಸಿ, ಇಷ್ಟು ವರ್ಷಗಳಾದ ಬಳಿಕವೂ ನಾವು ಈ ತಪ್ಪನ್ನು ಇರಗೊಳಿಸುವುದು ಸಲ್ಲದು. ವಿದ್ಯೆಯನ್ನು ಹೊಂದಿದ ಎಲ್ಲರೂ ಸರಕಾರದ ನೌಕರರಾಗಿರಲು ಸಾಧ್ಯವಿಲ್ಲ— ಆದರೆ ಬ್ರಿಟಿಷರ ಕಾಲದಲ್ಲಿದ್ದಂತೆಯೇ ಇರುವ ಈಗಿನ ಶಿಕ್ಷಣಕ್ರಮವು ಈ ಭಾವನೆಯನ್ನು ಪೋಷಿಸುತ್ತಲೇ ಇದೆ. ಹೀಗಾಗಕೂಡದೆಂದೂ ಮಕ್ಕಳ ಮನಸ್ಸಿನ ಬೆಳವಣಿಗೆಗೆ ವ್ಯತ್ಯಯವಾಗಬಾರದೆಂದೂ ಉದ್ದೇಶಿಸಿಯೇ ರಾಜಾಜಿ, ತಮ್ಮ ಪರಿಷ್ಕೃತ ಪದ್ಧತಿಯನ್ನು ಜ್ಯಾರಿಮಾಡಿದರು. ಮಕ್ಕಳ ಸಹಜ ಪ್ರವೃತ್ತಿಗೂ ಅವರಲ್ಲಿ ಸುಪ್ತವಿರುವ ಕುಶಲ ಚೈತನ್ಯಕ್ಕೂ ಸರಿಯಾದ ನಿರ್ಗಮನಮಾರ್ಗವನ್ನು ಕಲ್ಪಿಸಬೇಕೆನ್ನುವ ಮೊಂಟೆಸೋರಿ ಶಿಕ್ಷಣ ಕ್ರಮವನ್ನೂ ಉಪಯುಕ್ತ ಕೆಲಸಗಳಲ್ಲಿ ಕೈಕಾಲುಗಳು ಮಗ್ನವಾಗಿದ್ದಂತೆಯೇ ಬೌದ್ಧಿಕ ಶಿಕ್ಷಣವನ್ನೂ ಹೊಂದಬೇಕೆಂಬ ಗಾಂಧೀಜಿಯ ಮೂಲ ಸಿದ್ಧಾಂತವನ್ನೂ ಸಮನ್ವಯಗೊಳಿಸುವುದಷ್ಟೇ ಅಲ್ಲ, ಹಳ್ಳಿಯ ಜೀವನದಲ್ಲಿ ಹೊಂದಾಣಿಕೆ ಸ್ಥಾಪಿಸಿಕೊಳ್ಳಲು ಅನುಕೂಲವಾಗುವಂತೆಯೂ ವಿದ್ಯಾಭ್ಯಾಸದ ಪದ್ಧತಿಯನ್ನು ರೂಪಿಸಬೇಕೆಂದು ರಾಜಾಜಿ ಬಯಸಿದರು. ಶ್ರಮ ಜೀವನದ ಮಹತ್ವವನ್ನು ವಿದ್ಯಾರ್ಥಿಗಳು ಕಡೆಗಣಿಸಕೂಡದೆನ್ನುವ, ತಮ್ಮ ಪ್ರವೃತ್ತಿಗೊಪ್ಪುವ ಸಮಾಜ ವ್ಯವಹಾರದ ವಿಶಿಷ್ಟ ಕ್ಷೇತ್ರದಲ್ಲಿ ನಿಷ್ಣಾತರಾಗಬೇಕೆನ್ನುವ ಉದಾತ್ತ ಧ್ಯೇಯವನ್ನು ರಾಜಾಜಿಯ ಪದ್ಧತಿಯಲ್ಲಿ ಕಾಣುತ್ತೇವೆ. ಮಡಿಕೆ ಮಾಡಲು ಕಲಿಯುವುದಾಗಲೀ ಮರಗೆಲಸವಾಗಲೀ ನೂಲು ತೆಗೆಯುವುದಾಗಲೀ "ಕೆಲಸ" ಮಾತ್ರ ಅಲ್ಲ—ಅದು ಮನಸ್ಸಿಗೆ ಚೈತನ್ಯವನ್ನು ಕೊಡುವುದಲ್ಲದೆ, ಸಾಮಾಜಿಕ ಸಹಕಾರದ ವಾತಾವರಣವನ್ನೂ ಉಂಟುಮಾಡುತ್ತದೆ. ಟೀಕಾಕಾರರು ಹೇಳುವ ಜಾತಿ ಭೇದವನ್ನು ಅದು ಎತ್ತಿಹಿಡಿಯುವುದಿಲ್ಲ—ಬಡಗಿಯ ಮಗ ಮಗನೂ ಬಡಗಿಯಾಗಬೇಕೆಂದು ರಾಜಾಜಿ

[೧೨ನೇ ಪುಟ ನೋಡಿರಿ]

THE CANARA MUTUAL ASSURANCE COMPANY, LTD.,

Managing Director T. R. A PAI

Head Office UDIPI, S INDIA] [Estd 1935

ಅತ್ಯುತ್ತಮ ಲಾಭಾಂಶ

ಬಾಧ್ಯಸ್ಥ ಪಾಲಿಸಿಗಳಿಗೆ ಸಾಲಿಯಾನ ಸಾವಿರಕ್ಕೆ

ರೂ 18/— ಆಜೀವ ವಿಮೆಗೆ ○ ರೂ. 15/— ಉಂಬಳಿ ವಿಮೆಗೆ

31-12-1953ನೇ ತಾರೀಕಿಗಾದ 1951ರಿಂದ 1953ರ ವರೆಗಿನ ಅವಧಿಯ ವಿಮಾಗಣನೆಯ ಫಲಿತಾಂಶ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್

ಪ್ರಧಾನ ಕಾರ್ಯಾಲಯ: ಉಡುಪಿ, ದ ಭಾರತ.] [ಸ್ಥಾಪನೆ: ೧೯೩೫.

ಸ್ಥಾಪನೆಯಾದಂದಿನಿಂದಲೂ ಪ್ರತಿಯೊಂದು ವರ್ಷಕ್ಕೂ ಲಾಭಾಂಶ ಹಂಚಿದ ಕಂಪೆನಿ.

ತಾ. 1-4-1954ರಿಂದ ಹೊಸ ವಿಮಾಕಾರ್ಯಕ್ಕೆ ಪ್ರೀಮಿಯಂ ದರವನ್ನು ಇಳಿಸಲಾಗಿದೆ.

CHIEF AGENTS

THE COMMERCIAL CORPORATION OF INDIA, LTD ,

UDIPI, S. India

ರಾಮತೀರ್ಥ ಬ್ರಾಹ್ಮೀ ತೈಲ

ರಿಜಿಸ್ಟರ್ಡ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುದ್ಧಿ ಚಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0

ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,

ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಳ್ಳಿ, ತಾಮ್ರ ಹಿತ್ತಾಳಿ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ

ರಥಬೀದಿ ಉಡುಪಿ.

ಉಸ್ಮಾನಿಯಾ ವಿಶ್ವವಿದ್ಯಾಲಯ

ಹೈದರಾಬಾದಿನ ಶೈಕ್ಷಣಿಕ ಕೇಂದ್ರ

ಈಚೆಗೆ ಪತ್ರಿಕೆಗಳಲ್ಲಿ ಹೈದರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾಲಯವನ್ನು ಕೇಂದ್ರಕ್ಕೆ ಹಸ್ತಾಂತರಿಸುವ ಬಗ್ಗೆ ಕೆಲವು ಹೇಳಿಕೆಗಳು ಪ್ರಕಟಗೊಂಡಿವೆ—ಇದೇ ದಿನಾಂಕ ೪ರಂದು ಹೈದರಾಬಾದು ಸರಕಾರದ ಮುಖ್ಯಮಂತ್ರಿ ಶ್ರೀ ಬಿ. ರಾಮಕೃಷ್ಣ ರಾಯರು ದಕ್ಷಿಣ ಭಾರತದಲ್ಲಿ ಹಿಂದಿಯು ಬೋಧ ಭಾಷೆಯಾಗುಳ್ಳ ವಿಶ್ವವಿದ್ಯಾಲಯವಾಗಿ ಈ ಶೈಕ್ಷಣಿಕ ಕೇಂದ್ರವನ್ನು ಪರಿವರ್ತಿಸಬೇಕೆಂದಿರುವ ಭಾರತ ಸರಕಾರದ ಅಪೇಕ್ಷೆಯ ಸಂಬಂಧದಲ್ಲಿ ರಾಜ್ಯ ಸರಕಾರವು ತನ್ನ ಅಭಿಪ್ರಾಯವನ್ನು ತಿಳಿಸಿರುವುದಾಗಿ ಹೇಳಿದರು. ಹಿಂದಿಯನ್ನು ಬೋಧ ಭಾಷೆಯಾಗಿ ಮಾಡುವ ವಿಚಾರವನ್ನು ಪರಿಶೀಲಿಸಿ ವರದಿ ಮಾಡಲು ಭಾರತ ಸರಕಾರವು ತಜ್ಞರ ಸಮಿತಿಯೊಂದನ್ನು ನೇಮಿಸಿತ್ತು-ಆದರೆ, ಅದರ ಅಧ್ಯಕ್ಷ ಆಚಾರ್ಯ ನರೇಂದ್ರ ದೇವರ ದೇಹಾಲಸ್ಯದ ದೆಸೆಯಿಂದ, ಸಮಿತಿಯು ಕಾರ್ಯ ಪ್ರವೃತ್ತವಾಗಲಿಲ್ಲ. ಇದೀಗ ಡಾ. ಝಾಕೀರ ಹುಸೇನರನ್ನು ಸಮಿತಿಯ ಅಧ್ಯಕ್ಷರಾಗಿ ನೇಮಕಗೊಳಿಸಿದ್ದು, ಸಮಿತಿಯು ಇನ್ನು ವಿಳಂಬ ಮಾಡಲಿಕ್ಕಿಲ್ಲ.

ಸಾರ್ವಜನಿಕ ಮತ

ಸಮಿತಿಯು ವಿಚಾರಿಸಬೇಕಾದ ಪ್ರಶ್ನೆಗಳಲ್ಲಿ ಉಸ್ಮಾನಿಯಾ ವಿಶ್ವವಿದ್ಯಾಲಯವನ್ನು ಹಿಂದೀಯಲ್ಲಿ ಶಿಕ್ಷಣಕೊಡುವ ಕೇಂದ್ರವಾಗಿ ಮಾರ್ಪಡಿಸುವುದು ಯೋಗ್ಯವೇ ಎಂಬುದು ಉಲ್ಲೇಖನೀಯ. ಏಕೆಂದರೆ, ಸಾರ್ವಜನಿಕ ಅಭಿಪ್ರಾಯವು ಕೇಂದ್ರ ಸರಕಾರದ ಇಚ್ಛೆಗೆ ಅನುಕೂಲವಿರುವುದಿಲ್ಲ. ವಿಶಾಲಾಂಧ್ರ ಮಹಾ ಸಭೆಯ ಅಧ್ಯಕ್ಷರಾದ ಶ್ರೀ ಕಾಳೇಶ್ವರ ರಾಯರು ದಿನಾಂಕ ೬ರಂದು ಹೊರಡಿಸಿದ ಪತ್ರಿಕಾ ಪ್ರಕಟಣೆಯೊಂದರಲ್ಲಿ ದಕ್ಷಿಣ ಭಾರತದಲ್ಲಿ ಭಾಷಾನುಗುಣ ರಾಜ್ಯರಚನೆಯ ಪ್ರಶ್ನೆಯು ಉಚ್ಚಾಧಿಕಾರ ಸಂಪನ್ನ ಆಯೋಗದ ವರದಿಯನ್ವಯ ನಿರ್ಣಯಿಸಲ್ಪಡುವವರೆಗೆ ಉಸ್ಮಾನಿಯಾ ವಿಶ್ವವಿದ್ಯಾಲಯವನ್ನು ತನ್ನ ವಶಕ್ಕೆ ತೆಗೆದುಕೊಳ್ಳುವ ವಿಚಾರವನ್ನು ಭಾರತ ಸರಕಾರವು ಬಿಟ್ಟುಕೊಡಬೇಕೆಂದು ಹೇಳಿದ್ದಾರೆ. ಈ ವಿಶ್ವವಿದ್ಯಾಲಯವು ಹೈದರಾಬಾದು ರಾಜ್ಯದ ಜನತೆಯ ಹಿತಕ್ಕಾಗಿ ಸ್ಥಾಪಿತವಾದ ಏಕಮಾತ್ರ ಸಂಸ್ಥೆ. ಇದನ್ನು ಕೇಂದ್ರ ಸರಕಾರವು ವಶಪಡಿಸಿಕೊಂಡರೆ, ರಾಜ್ಯದ ಶೈಕ್ಷಣಿಕ ಧೋರಣೆಗೆ ದೊಡ್ಡ ಪೆಟ್ಟು ತಗಲುತ್ತದೆ ಎಂದು ಮುಂತಾಗಿ ಅವರ ಪ್ರಕಟಣೆ ತಿಳಿಸುತ್ತದೆ. ದಿನಾಂಕ ೭ರಂದು ಉಸ್ಮಾನಿಯಾ ವಿಶ್ವವಿದ್ಯಾಲಯದ ಸಿನೇಟು ಹಾಗು ಕೌನ್ಸಿಲಿನ ಸದಸ್ಯರ ಸಂಯುಕ್ತ ಸಭೆಯು ಮೂರು ಬಹುಮತಗಳಿಂದ "ರಾಜ್ಯಗಳ ಪುನರ್ಘಟನೆಯ ವಿಷಯದಲ್ಲಿ ಕೊನೆಯ ತೀರ್ಮಾನವನ್ನು ಕೈಕೊಳ್ಳುವ ತನಕ ಉಸ್ಮಾನಿಯಾ ವಿಶ್ವವಿದ್ಯಾಲಯವನ್ನು ಕೇಂದ್ರಕ್ಕೆ ಹಸ್ತಾಂತರ ಮಾಡುವ ಹಾಗು ಅದನ್ನು ಹಿಂದಿಯು ಬೋಧ ಭಾಷೆಯಾಗುಳ್ಳ ವಿಶ್ವವಿದ್ಯಾಲಯವಾಗಿ ಪರಿವರ್ತಿಸುವ ವಿಚಾರವನ್ನು ಬಿಟ್ಟುಗೊಡಬೇಕು" ಎಂದು ಗೊತ್ತುವಳಿಯನ್ನು ಸ್ವೀಕರಿಸಿದೆ. ಅನ್ಯಥಾ ರಾಜ್ಯದಲ್ಲಿರುವ ಆಂಧ್ರ, ಕನ್ನಡ ಹಾಗು ಮಹಾರಾಷ್ಟ್ರ ಭಾಷಾ ನಾಗರಿಕರ ಶಿಕ್ಷಣಕ್ಕೆ ಆತಂಕವುಂಟಾಗುತ್ತದೆಂದು ಗೊತ್ತುವಳಿಯು ಸ್ಪಷ್ಟಪಡಿಸುತ್ತದೆ.

ಕಾಲೇಜುಗಳ ಬಳಗ

ಇಂತಹ ಪರಿಸ್ಥಿತಿಯಲ್ಲಿ ರಾಜ್ಯ ಸರಕಾರವು ತನ್ನ ಕೊನೆಯ ನಿರ್ಣಾಯಕ ಅಭಿಪ್ರಾಯವನ್ನು ಕಾದಿರಿಸಿಕೊಂಡಿರುವುದು. ಕೇಂದ್ರ ಸರಕಾರವು ಉಸ್ಮಾನಿಯಾ ವಿಶ್ವವಿದ್ಯಾಲಯವನ್ನು ತನ್ನ ವಶಕ್ಕೆ ತೆಗೆದುಕೊಳ್ಳಬೇಕೆಂದು ತಜ್ಞ ಸಮಿತಿಯು ಶಿಫಾರಸು ಮಾಡಿದರೆ, ಹೈದರಾಬಾದು ರಾಜ್ಯದ ಶಿಕ್ಷಣಕ್ಕೋಸ್ಕರ ಬೇರೇನು ಉಚಿತ ವ್ಯವಸ್ಥೆ ಕೈಗೊಳ್ಳ ಶಕ್ಯವೆಂದು ಸೂಚಿಸುವ ಹೊಣೆಯು ಇದೇ ಸಮಿತಿಯ ಮೇಲೆ ಬೀಳುತ್ತದೆ. ಭಾರತ ಸರಕಾರವು ಉಸ್ಮಾನಿಯಾ ವಿಶ್ವವಿದ್ಯಾಲಯವನ್ನು ವಹಿಸಿಕೊಳ್ಳುವುದಾದಲ್ಲಿ ವಿಶ್ವವಿದ್ಯಾಲಯದಲ್ಲಿಯೇ ನೆಲಸಿದ ಕಲೆ ಹಾಗು ವಿಜ್ಞಾನ ಶಾಲೆಗಳನ್ನೂ ಭಾಷಾಂತರ ಸಂಸ್ಥೆ ಹಾಗು ಮುದ್ರಣಾಲಯವನ್ನೂ ಇತರ ಅಂಗ ಸಂಸ್ಥೆಗಳನ್ನೂ ತನ್ನ ಅಧಿಕಾರ ಕೈಸೇರಿಸುವುದು.ಆದರೂ ವೃತ್ತಿ ಶಿಕ್ಷಣವನ್ನು ಕೊಡುವ ಹಾಗು ರಾಜ್ಯದ ಇತರ ಕಲೆ ಹಾಗು ವಿಜ್ಞಾನ ಶಾಲೆಗಳು ಪ್ರತ್ಯೇಕವಾಗಿಯೇ ಉಳಿಯುತ್ತವೆಂದು ಹೇಳಲಾಗಿದೆ. ಈಗಿರುವಂತೆ, ವಿಶ್ವವಿದ್ಯಾಲಯದ ಘಟಕವಾಗಿ ಐದು ಮೊದಲನೇ ವರ್ಗದ ಕಾಲೇಜುಗಳೂ ಎಂಟು ಇಂಟರಮೀಡಿಯೇಟ ಕಾಲೇಜುಗಳೂ ಐದು ವೃತ್ತಿ ಶಿಕ್ಷಣವನ್ನು ಕೊಡುವ ಕಾಲೇಜುಗಳೂ ಇವೆ. ವೈದ್ಯಕೀಯ ಕಾಲೇಜೊಂದು ಇತ್ತೀಚಿನವರೆಗೆ ವಿಶ್ವವಿದ್ಯಾಲಯದ ಅಂಗ ಸಂಸ್ಥೆಯಾಗಿದ್ದರೂ, ಈಗ ಅದನ್ನು ರಾಜ್ಯ ಸರಕಾರಕ್ಕೆ ಬಿಟ್ಟುಕೊಡಲಾಗಿದೆ. ಆದರೆ ಈ ಕಾಲೇಜು ಹಾಗು ರಾಜ್ಯದ ಇತರ ಆರು ಕಾಲೇಜುಗಳು (ಇವುಗಳಲ್ಲಿ ಎರಡು ಮೊದಲನೇ ವರ್ಗದವು) ವಿಶ್ವವಿದ್ಯಾಲಯದೊಂದಿಗೆ ಸೇರ್ಪಡೆಹೊಂದಿವೆ. ಇವುಗಳಲ್ಲೆಲ್ಲ ಒಟ್ಟು ೧೩.೦೦೦ ವಿದ್ಯಾರ್ಥಿಗಳು ಕಲಿಯುತ್ತಾರೆ—ಇದರಲ್ಲಿ ಸುಮಾರು ೧೪೦೦ಮಂದಿ ಮಹಿಳೆಯರು.

ಶಿಲ್ಪ ಕೌಶಲ್ಯ

ಹೈದರಾಬಾದು ರಾಜ್ಯವು ಐಶ್ವರ್ಯಕ್ಕೆ ತುಂಬ ಹೆಸರುಗೊಂಡಿದೆ—ಇಲ್ಲಿ ಪ್ರತಿಯೊಂದೂ ವೈಭವ ಹಾಗು ವಿಜೃಂಭಣೆಯಿಂದ ನಡೆಯುತ್ತದೆ. ಉಸ್ಮಾನಿಯಾ ವಿಶ್ವವಿದ್ಯಾಲಯವು ಇದಕ್ಕೆ ಹೊರತಾಗಿಲ್ಲ. ಈ ಶೈಕ್ಷಣಿಕ ಕೇಂದ್ರವು ೧೯೧೭ರಲ್ಲಿ ಸ್ಥಾಪಿಸಲ್ಪಡುವವರೆಗೆ ರಾಜ್ಯದ ವಿದ್ಯಾರ್ಥಿಗಳು ಉಚ್ಚ ಶಿಕ್ಷಣಕ್ಕೋಸ್ಕರ ಮದ್ರಾಸು ವಿಶ್ವವಿದ್ಯಾಲಯವನ್ನು ಆಶ್ರಯಿಸುತ್ತಿದ್ದರು. ಆ ವರ್ಷ ಸುಮಾರು ೧೫೦೦ ಎಕ್ರೆ ಜಾಗದಲ್ಲಿ ತಾತ್ಕಾಲಿಕ ಕಟ್ಟಡಗಳಲ್ಲಿ ವಿಶ್ವವಿದ್ಯಾಲಯವು ಕೆಲಸವನ್ನು ಪ್ರಾರಂಭಿಸಿತು. ಅಂದಿನಿಂದ ಈ ಕೇಂದ್ರವು ಕ್ರಮಪ್ರಕಾರವಾಗಿ ಬೆಳವಣಿಗೆಯನ್ನು ಸಾಧಿಸಿತು – ಇನ್ನೂ ಐನೂರು ಎಕ್ರೆ ಜಾಗಗಳನ್ನು ಇದು ಆಕ್ರಮಿಸಿತು. ಭಾರತದಲ್ಲಿಯೇ ಶಿಲ್ಪ ಕೌಶಲ್ಯದ ದೃಷ್ಟಿಯಿಂದ ಭವ್ಯವೂ ಸುಂದರವೂ ಆದ, ವಿಶಾಲ ಹಾಗು ಮನಮೋಹಕ ಕಟ್ಟಡಗಳು ತಲೆ ಎತ್ತಿದವು. ಇವುಗಳಲ್ಲಿ ಕಲೆ, ಹಾಗು ವಾಣಿಜ್ಯ ವಿಭಾಗ, ಪುಸ್ತಕ ಭಂಡಾರ, ವಿಶ್ವವಿದ್ಯಾಲಯದ ಕಾರ್ಯಾಲಯ ಮುಂತಾದವುಗಳನ್ನು ನೆಲೆಗೊಳಿಸಿದ ಆರ್ಟ್ಸ ಕಾಲೇಜಿನ ಕಟ್ಟಡವು ಶ್ರೇಷ್ಠ ರಚನೆಯೆಂದು ಭಾವಿಸಲಾಗುತ್ತದೆ—ಹಿಂದು ಹಾಗು ಮುಸ್ಲಿಮ ಶಿಲ್ಪ ಕೌಶಲ್ಯವು ಒಂದಕ್ಕೊಂದು ಪೂರಕವಾಗಿ ಹೆಣೆದಿರುವುದನ್ನು ನಾವು ಇಲ್ಲಿ ಕಾಣುತ್ತೇವೆ. ವಿಶ್ವವಿದ್ಯಾಲಯದಲ್ಲೇ ನೆಲೆಗೊಂಡ ಕಾಲೇಜುಗಳಲ್ಲಿ ಮೂರು ಸಾವಿರ ವಿದ್ಯಾರ್ಥಿಗಳು ಶಿಕ್ಷಣವನ್ನು ಹೊಂದುತಿದ್ದಾರೆ. ಇವರಲ್ಲಿ ಸುಮಾರು ೧೦೦೦ ಮಂದಿ ಎಲ್ಲ ಸೌಕರ್ಯಗಳಿಂದ ಕೂಡಿದ ವಿದ್ಯಾರ್ಥಿ ಭವನದಲ್ಲಿ ಉಳಿದುಕೊಳ್ಳುವರು. ವಿಶ್ವವಿದ್ಯಾಲಯವು ವಿದ್ಯಾರ್ಥಿಗಳಿಗೆ ಕೃಷಿ, ಕಲೆ, ವಾಣಿಜ್ಯ ಶಿಕ್ಷಣ, ಯಂತ್ರವಿಜ್ಞಾನ, ಕಾನೂನು, ಚಿಕಿತ್ಸಾವಿಜ್ಞಾನ, ಧರ್ಮ ಹಾಗು ಸಂಸ್ಕೃತಿ, ವಿಜ್ಞಾನ ಹಾಗು ಪಶುವಿಜ್ಞಾನ—ಈ ಹತ್ತು ವಿಷಯಗಳಲ್ಲಿ ವಿದ್ಯಾಭ್ಯಾಸವನ್ನು ನೀಡುತ್ತದೆ. ಚಿಕಿತ್ಸಾ ವಿಜ್ಞಾನದ ಒಂದು ವಿಭಾಗ ಮತ್ತು ಕಾನೂನು ಶಾಖೆಯನ್ನು ಬಿಟ್ಟು ಉಳಿದೆಲ್ಲ ಶಿಕ್ಷಣ ಕೇಂದ್ರಗಳೂ ವಿಶ್ವವಿದ್ಯಾಲಯದಲ್ಲೇ ಇರುತ್ತವೆ.

ಬೋಧ ಭಾಷೆ

ಉಸ್ಮಾನಿಯಾ ವಿಶ್ವವಿದ್ಯಾಲಯದತ್ತ ಭಾರತ ಸರಕಾರದ ಕಣ್ಣು ಹೊರಳುವುದಕ್ಕೆ ಇಲ್ಲಿ ಉಪಯೋಗಿಸುವ ಬೋಧ ಭಾಷೆಯೇ ಕಾರಣ — ಈ ಸಂಸ್ಥೆಯ ಸಂಸ್ಥಾಪಕರು ಭಾರತೀಯ ಭಾಷೆಯೊಂದನ್ನು ಶಿಕ್ಷಣ ಮಾಧ್ಯಮವನ್ನಾಗಿ ಇಲ್ಲಿ ಬಳಸಬೇಕೆಂದು ಸಂಕಲ್ಪಿಸಿದರು; ಮತ್ತು ಆಗ ರಾಜ್ಯದಲ್ಲಿ ವ್ಯವಹಾರ ಭಾಷೆಯಾಗಿದ್ದ ಉರ್ದುವನ್ನೇ ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಬೋಧ ಭಾಷೆಯಾಗಿ ಮಾಡಬೇಕೆಂದು ಅವರಿಗೆ ಅನಿಸಿತು. ಈ ಪ್ರಯೋಗವು ಸಂಪೂರ್ಣ ಯಶಸ್ಸು ಪಡೆದಿರುವುದೆಂದು ಹೇಳಲಾಗದಾದರೂ ಸಾಹಸವನ್ನು ಮಾತ್ರ ಅನುಕರಣೀಯವೆಂದು ಶ್ಲಾಘಿಸಬೇಕು. ಹಿಂದಿಯನ್ನು ರಾಜ್ಯಾಂಗ ಘಟನೆಯ ಆದೇಶದಂತೆ, ನಮ್ಮ ವಿಶ್ವವಿದ್ಯಾಲಯಗಳಲ್ಲಿ ಬೋಧ ಭಾಷೆಯಾಗಿ ಸ್ವೀಕರಿಸುವ ಪ್ರಮೇಯವನ್ನು ನಾವು ಬಿಡಿಸಬೇಕಾಗಿರುವಾಗ, ಉಸ್ಮಾನಿಯಾ ವಿಶ್ವವಿದ್ಯಾಲಯದ ಅನುಭವ, ಹಾಗು ಪ್ರಯತ್ನಗಳಿಂದ ಹೆಚ್ಚಿನ ಪ್ರಯೋಜನವನ್ನು ಪಡೆಯಬಲ್ಲೆವು. ಈಗ ಇಲ್ಲಿ ಎಲ್ಲ ವೃತ್ತಿಪರ ಶಿಕ್ಷಣವನ್ನೂ ಆಂಗ್ಲ ಭಾಷೆಯಲ್ಲಿ ಕೊಡಲಾಗುತ್ತದೆ. ಕಲೆ ಹಾಗು ವಿಜ್ಞಾನ ವಿಷಯಗಳನ್ನು ಆಂಗ್ಲ ಭಾಷೆಯಲ್ಲಿಯೂ ಹಿಂದುಸ್ತಾನಿಯಲ್ಲಿಯೂ ಕಲಿಸಲಾಗುತ್ತದೆ ಹಿಂದುಸ್ತಾನಿ ಭಾಷೆಯನ್ನು ದೇವನಾಗರಿ ಅಥವಾ ಫಾರಸೀ ಲಿಪಿಗಳಲ್ಲಿ ಯಾವುದನ್ನು ಉಪಯೋಗಿಸಿ ಬರೆದರೂ ಆಗುತ್ತದೆ. ಅಂತೂ ಭಾರತೀಯ ಭಾಷೆಗಳಲ್ಲಿ ಶಿಕ್ಷಣವನ್ನೊದಗಿಸುವ ಒಂದು ಮಹಾ ಪ್ರಯತ್ನವನ್ನು ಅನೇಕ [illegible]ಗಳನ್ನು ಸಹಿಸಿ ಇಲ್ಲಿ ಕೆಲಮಟ್ಟಿಗೆ [illegible] ಈ ವಿಶ್ವವಿದ್ಯಾಲಯವನ್ನು ನಡೆಸುವುದಕ್ಕೆ ವರ್ಷಕ್ಕೆ ಸುಮಾರು ೭೩ ಲಕ್ಷ ರೂಪಾಯಿಗಳ ಖರ್ಚು ಬರುತ್ತದೆ ಇದರಲ್ಲಿ ಸುಮಾರು ೧೨ ಲಕ್ಷ ರೂಪಾಯಿಗಳು ಶಿಕ್ಷಣ ಹಾಗು ಪರೀಕ್ಷಾ ಶುಲ್ಕಗಳಿಂದ ದೊರಕುತ್ತವೆ. ಉಳಿದ ಹಣವನ್ನು ರಾಜ್ಯ ಸರಕಾರವೇ ಸಹಾಯ ಧನವಾಗಿ ಕೊಡುತ್ತದೆ. ವಿಶ್ವವಿದ್ಯಾಲಯಕ್ಕೆ ಸರಕಾರದ ಹಣ ದೊರೆತರೂ,ಅದಕ್ಕೆ ಆಡಳಿತ ವಿಷಯದಲ್ಲಿ ಸ್ವಾಯತ್ತಾಧಿಕಾರವುಂಟು. ವಿಶ್ವವಿದ್ಯಾಲಯದ ಕೌನ್ಸಿಲು ಆಡಳಿತ ವಿಷಯದಲ್ಲಿ ಪರಮಾಧಿಕಾರವನ್ನು ಹೊಂದಿದೆ. ರಾಜ್ಯದ ವರಿಷ್ಠನು ಅಧಿಕಾರಬಲದಿಂದ ವಿಶ್ವವಿದ್ಯಾಲಯದ ಕುಲಪತಿಯಾಗುತ್ತಾನೆ; ಮತ್ತು ಉಪಕುಲಪತಿಯನ್ನು ಸರಕಾರವೇ ನೇಮಿಸುತ್ತದೆ. ಇವನು ಸಾಮಾನ್ಯವಾಗಿ ಮೂರು ವರ್ಷಕಾಲ ಅಧಿಕಾರದಲ್ಲಿ ಉಳಿಯುತ್ತಾನೆ. ಈಗ ಡಾ. ಎಸ್. ಭಗವಂತಂ ಉಪಕುಲಪತಿಗಳಾಗಿ ವಿಶ್ವವಿದ್ಯಾಲಯದ ಶ್ರೇಯಸ್ಸನ್ನು ದೃಷ್ಟಿಯಲ್ಲಿಟ್ಟುಕೊಂಡು ಶ್ರಮಿಸುತಿದ್ದಾರೆ.

(ಆಧಾರದಿಂದ)

WANTED agents to secure retail orders only on commission basis for our art silk and cotton carpets. For samples and terms of business please apply in English to,

The Prabhath Industrials,
Carpet Manufacturers,
Post Box No. 15, BHAVANI.
Via. Erode. S. I.

MAHATMA GANDHI MEMORIAL COLLEGE, UDIPI.
(Affiliated to Madras University)

The College reopens for admissions to Junior classes and regular work for Senior classes on June 12, 1954, and for regular work in the Junior classes on June 21, 1954. Applications in prescribed form for admission should reach the undersigned as soon as possible after the publication of the S. S. L. C. and Intermediate examinations and in any case before June 23, 1954. Limited number of seats available in the Hostel. Forms of application and copies of prospectus may be obtained from the College Office.

The following courses are offered under Parts II and III:—

INTERMEDIATE:
Part II: Kannada; Hindi & Sanskrit.
Part III: (1) Mathematics; Physics & Chemistry;
(2) Natural Science; Physics & Chemistry;
(3) Mathematics; Commerce & Logic;
(4) Modern History; Indian History & Logic or Psychology; or
(5) Indian History; Commerce; and Logic.

B. A. Degree Course:
Part II: Kannada and Hindi;
Part III: Group IV b: Economics Main and History subsidiary.

H. Sunder Rao, M. A.,
Principal.

ಹಳ್ಳಿಗಳಿಗೆ ವಿದ್ಯುಚ್ಛಕ್ತಿಯ ಸೌಲಭ್ಯ

ಹೆಚ್ಚು ಹೆಚ್ಚಾಗಿ ಒದಗಿಸಲು ಮದ್ರಾಸು ಸರಕಾರದ ಸಂಕಲ್ಪ

ಮದ್ರಾಸು ರಾಜ್ಯದ ಮಟ್ಟಿಗೆ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಹಿಂದುಳಿದ ಹಾಗು ಅಭಾವಗ್ರಸ್ತ ದೇಶಗಳ ಅಭಿವೃದ್ಧಿಯೇ ಧ್ಯೇಯವಾಗುವುದೆಂದು ರಾಜ್ಯದ ಲೋಕೋಪಯೋಗಿ ಶಾಖೆಯ ಮಂತ್ರಿಗಳಾದ ರಾಮನಾಥನ ರಾಜರು ಪತ್ರಿಕಾ ಸಂಪತ್ತಿನಲ್ಲಿ ಹೇಳಿದ್ದಾರೆ. ಮುಂದಿನ ಯೋಜನೆಯಲ್ಲಿ ಯಾವ ಯಾವ ಕೆಲಸಗಳನ್ನು ಸೇರಿಸಬೇಕೆಂಬುದನ್ನು, ಅಂತಹ ಕೆಲಸಗಳನ್ನು ನಿರ್ವಹಿಸುವುದಕ್ಕೆ ಲಭ್ಯವಿರುವ ಸಾಧನ ಸಂಪತ್ತಿನ ಅಂದಾಜನ್ನು ಮಾಡಿಕೊಂಡ ಬಳಿಕವೇ, ವಿಚಾರಿಸಲಾಗುವದು. ಮಂತ್ರಿಗಳ ಅಭಿಪ್ರಾಯದಂತೆ, ರಾಜ್ಯದಲ್ಲಿ ಈಗ ದೊಡ್ಡ ಮಟ್ಟದ ನೀರಾವರಿ ಯೋಜನೆಗಳಿಗೆ ಅವಕಾಶವುಳಿದಿಲ್ಲ ಮುಂದಿನ ಯೋಜನೆಗಳು ಸಣ್ಣ ಮಟ್ಟದ ನೀರಾವರಿ ಕೆಲಸಗಳನ್ನೂ ಈಗಿನ ನೀರಾವರಿ ಕೆಲಸಗಳ ದುರಸ್ತಿಯನ್ನೂ ಉದ್ದೇಶವಾಗಿಟ್ಟುಕೊಳ್ಳಬೇಕಾಗುವುದು; ಅಲ್ಲದೆ ವಿದ್ಯುಚ್ಛಕ್ತಿಯ ಉತ್ಪಾದನೆಯನ್ನು ಹೆಚ್ಚಿಸುವುದು ಈ ಶಕ್ತಿಯನ್ನು ಹಳ್ಳಿಗಳಿಗೆಲ್ಲ ಒದಗಿಸುವುದು, ನೀರಾವರಿಗೋಸ್ಕರ ನದಿಗಳಿಗೆ ವಿದ್ಯುಚ್ಛಕ್ತಿಯಿಂದ ಕೆಲಸ ಮಾಡುವ ಪಂಪುಗಳನ್ನು ಜೋಡಿಸುವುದು, ಹಾಗು ಕುಡಿಯುವ ನೀರಿನ ವ್ಯವಸ್ಥೆ ಮುಂತಾದವುಗಳಿಗೂ ಯೋಜನೆಯಲ್ಲಿ ಪ್ರಾಶಸ್ತ್ಯವು ಸಲ್ಲುತ್ತದೆ. ವಿದ್ಯುಚ್ಛಕ್ತಿಯ ಸೌಲಭ್ಯದ ವಿಸ್ತರಣೆಗೋಸ್ಕರ ಸರಕಾರವು ಈಗಾಗಲೇ [illegible] ಕ್ರಮಗಳನ್ನು ಕೈಗೊಂಡಿರುವುದು; ಖಾಸಗಿ ರೀತಿಯಲ್ಲಿ ಕೆಲಸ ಮಾಡದ ವಿದ್ಯುದುತ್ಪಾದನಾ ಕೇಂದ್ರಗಳನ್ನು ಸರಕಾರವು ತನ್ನ ವಶಕ್ಕೆ ತೆಗೆದುಕೊಳ್ಳಲು ನೋಡುತ್ತದೆ. ಅಂತಹ ಖಾಸಗಿ ಕಂಪೆನಿಗಳ ಒಡೆತನವು ವಿಸ್ತರಣಾ ಯೋಜನೆಯ ದ[illegible]ಗೊಳ್ಳಬಾರದೆಂದು, ಸರಕಾರವು ತಾನು ಕಂಪೆನಿಯನ್ನು ವಹಿಸಿಕೊಳ್ಳಬಹುದಾದ ಸಮಯವನ್ನು ಸಾಕಷ್ಟು ಮುಂಚಿತವಾಗಿಯೇ ತಿಳಿಸುತ್ತದೆ.

ಆರೋಗ್ಯ ಮಂತ್ರಿಗಳ ಬಿನ್ನಹ

ಭಾರತದ ಆದ್ಯಂತ ಆಚರಿಸಲಾದ ಮಲೇರಿಯಾ ನಿರೋಧ ಸಪ್ತಾಹದ ಸಂದರ್ಭದಲ್ಲಿ ಮದ್ರಾಸಿನ ಆರೋಗ್ಯ ಮಂತ್ರಿ ಶ್ರೀ ಎ. ಬಿ. ಶೆಟ್ಟಿಯವರು ಒಂದು ಹೇಳಿಕೆಯನ್ನು ಹೊರಡಿಸಿ, ಮಲೇರಿಯಾ ಪ್ರಸಾರದ ನಿಯಂತ್ರಣದಲ್ಲಿ ಸಾರ್ವಜನಿಕರು ಸಹಕಾರದ ಹಸ್ತವನ್ನು ಮುನ್ನೀಡಬೇಕೆಂದು ವಿನಂತಿಸಿದ್ದಾರೆ ಮಲೇರಿಯಾ ರೋಗವು ರಾಜ್ಯದ ಪ್ರಮುಖ ಸಮಸ್ಯೆಗಳಲ್ಲಿ ಒಂದೆಂದೂ ಪ್ರಗತಿಯನ್ನು ಕುಂಠಿತಗೊಳಿಸುವುದಕ್ಕೆ ಈ ರೋಗವು ಒಂದು ಪ್ರಮುಖ ಕಾರಣವಾಗುವುದೆಂದೂ ಅವರು ತಿಳಿಸುತ್ತಾರೆ ಮದ್ರಾಸು ರಾಜ್ಯದಲ್ಲಿ ೨೪ವರ್ಷಗಳ ಕೆಳಗೆ ಸಣ್ಣ ಪ್ರಮಾಣದಲ್ಲಿ ಮಲೇರಿಯಾ ನಿರೋಧ ಕಾರ್ಯವನ್ನು ಕೈಗೊಳ್ಳಲಾಯಿತು. ಅಲ್ಲಿಂದ ಈಚೆಗೆ, ೧೯೪೫ರಲ್ಲಿ, ಬೋರ್ ಸಮಿತಿಯ ಶಿಫಾರಸಿನಂತೆ, ವ್ಯಾಪಕವಾದ ನಿಯಂತ್ರಣ ಯೋಜನೆಯನ್ನು ಕಾರ್ಯಗತಗೊಳಿಸಲಾಯಿತು. ೧೯೫೩ರ ವರೆಗೆ ದಕ್ಷಿಣ ಕನ್ನಡ, ಮಲಬಾರು, ಕೊಯಮುತ್ತೂರು, ಸೇಲಂ, ಉತ್ತರ ಆರ್ಕಾಟು, ಚೆಂಗಲ್ಪೇಟೆ ಮತ್ತು ಮಧುರೆಗಳಲ್ಲಿ ಈ ಕಾರ್ಯಕ್ರಮವು ಅನುಸರಿಸಲ್ಪಟ್ಟಿತು. ೧೯೫೩ರಲ್ಲಿ ಕೇಂದ್ರ ಸರಕಾರದ ನೆರವಿನ ಪ್ರಯೋಜನವನ್ನು ಪಡೆದು ಹೊಸ ಯೋಜನೆಗಳನ್ನು ಕೈಗೊಂಡದ್ದಲ್ಲದೆ, ಈ ವರ್ಷ ರಾಜ್ಯದಾದ್ಯಂತ ಮಲೇರಿಯಾ ರೋಗದೊಡನೆ ಯುದ್ಧವನ್ನು ಸಾರಲಾಗಿದೆ ಡಿ.ಡಿ.ಟಿ ಔಷಧವನ್ನು ಚಿಮುಕಿಸುವುದಲ್ಲದೆ ಇತರ ಕೆಲಸಗಳೂ ಕೈಗೊಳ್ಳಲ್ಪಡುತ್ತವೆ. ೨೦ಲಕ್ಷ ಜನರು ಈಗಾಗಲೇ ಇದರಿಂದ ಪ್ರಯೋಜನ ಹೊಂದುತ್ತಿರುವರು, ಇನ್ನೂ ೧೦ಲಕ್ಷ ಜನಕ್ಕೆ ಅನ್ವಯಿಸುವಂತೆ ಯೋಜನೆಯನ್ನು ವಿಸ್ತರಿಸಲಾಗುವುದು. ಈ ಕ್ರಮಗಳಿಂದ ಜನರ ಶಾರೀರಿಕ ಸ್ವಾಸ್ಥ್ಯವು ಸುಧಾರಿಸಿರುವುದಷ್ಟೇ ಅಲ್ಲ, ಸಾಮಾಜಿಕ ಹಾಗು ಆರ್ಥಿಕ ಪ್ರಗತಿಯೂ ನೆರವೇರಿದೆ. ೨೦೦ ಚದರ ಮೈಲುಗಳಷ್ಟು ಜಮೀನು ಸಾಗುವಳಿಗೆ ಒಳಗಾಯಿತು, ಮಲೇರಿಯಾದ ದೆಸೆಯಿಂದ ಕೆಲಸ ಮಾಡಲಾಗದ ಅನೇಕ ಕಡೆಗಳಲ್ಲಿ, ರೋಗದ ಯಶಸ್ವಿ ನಿಯಂತ್ರಣದಿಂದ ಲೋಕೋಪಯೋಗಿ ಕಾಮಗಾರಿಗಳು ನಡೆದವು, ಪೊತ್ರವಲ್ಲಿ ವೈನಾಡು ಮುಂತಾದ ಪ್ರದೇಶಗಳು ಆರೋಗ್ಯ ಕೇಂದ್ರಗಳಾಗಿ ಪರಿವರ್ತನೆ ಹೊಂದಿದವು ಸರಕಾರವು ಲಕ್ಷಗಟ್ಟಲೆ ರೂಪಾಯಿಗಳ ವೆಚ್ಚದಿಂದ ಕೈಗೊಳ್ಳುವ ಇಂತಹ ಕೆಲಸಗಳಲ್ಲಿ ಸಾಮಾನ್ಯ ನಾಗರಿಕರು ಹೃತ್ಪೂರ್ವಕ ಸಹಕಾರ ಕೊಡಬೇಕು—ಡಿ. ಡಿ. ಟಿ ಚಿಮುಕಿಸಿದ ಬಳಿಕ, ಗೋಡೆಗೆ ಸುಣ್ಣ, ಸೆಗಣಿ ಮುಂತಾದುವನ್ನು ಬಳಿಯ ಬಾರದು.

ಆಹಾರ ಪರಿಸ್ಥಿತಿ

ರಾಜ್ಯದ ಆಹಾರ ಮಂತ್ರಿಗಳಾದ ಶ್ರೀ ಸುಬ್ರಹ್ಮಣ್ಯಮರು ಆಹಾರ ಪರಿಸ್ಥಿತಿಯು ತುಂಬ ಸುಧಾರಿಸಿರುವುದರಿಂದ ಆಹಾರ ಧಾನ್ಯಗಳ ಸಾಗಾಟದ ಮೇಲೆ ಹೇರಲಾದ ಎಲ್ಲ ನಿರ್ಬಂಧಗಳನ್ನೂ ಇದೇ ಜೂಲೈ ೧ನೇ ದಿನಾಂಕದಿಂದ ಬಿಟ್ಟುಕೊಡುವ ಸರಕಾರದ ನಿರ್ಧಾರವನ್ನು ಪ್ರಕಟಿಸಿದ್ದಾರೆ. ಈಗ ಜಾರಿಯಲ್ಲಿರುವ ಆಹಾರ ವಲಯಗಳೂ ರದ್ದಾಗುತ್ತವೆ. ಆಹಾರ ಧಾನ್ಯಗಳ ಬೆಲೆಯು ಕ್ರಮವಾಗಿ ಇಳಿಮುಖವಾಗುತ್ತಿದೆಯೆಂದೂ ಎರಡು ವರ್ಷಗಳ ಪೂರ್ವದಲ್ಲಿ ವಿನಿಯಂತ್ರಣವನ್ನು ಸಾರಿದ ಬಳಿಕ, ಇಂದಿನಷ್ಟು ಆಹಾರ ಧಾನ್ಯಗಳ ಬೆಲೆ ಎಂದೂ ತಗ್ಗಿರಲಿಲ್ಲವೆಂದೂ ಅವರು ಹೇಳಿದರು. ಅಕ್ಕಿಯ ಬೆಲೆಯು ಅತ್ಯಂತ ಕಡಿಮೆ ಮಟ್ಟವನ್ನು ಮುಟ್ಟಿದೆ—ಮತ್ತು ಇದರ ಪರಿಣಾಮವಾಗಿ ಉಳಿದ ಆಹಾರ ವಸ್ತುಗಳ ಮತ್ತು ದ್ವಿದಳಧಾನ್ಯಗಳ ಬೆಲೆಯೂ ಇಳಿದಿದೆ ಎಂದವರು ತಿಳಿಸಿದರು ರಾಜ್ಯ ಸರಕಾರವು ಈ ತಿಂಗಳ ೧೩ನೇ ತಾರೀಕಿನಿಂದ ಮಲಬಾರು, ನೀಲಗಿರಿ ಹಾಗು ದಕ್ಷಿಣಕನ್ನಡದ ಹೊಸದುರ್ಗ ಉಪ ತಾಲೂಕುಗಳಲ್ಲಿ ಅಕ್ಕಿಯ ಸೀದಾ ಪ್ರಮಾಣವನ್ನು ಏಳು ಔನ್ಸುಗಳಿಂದ ಹನ್ನೆರಡು ಔನ್ಸುಗಳಿಗೆ ಏರಿಸಿರುತ್ತದೆ. ಸರಕಾರದೊಡನೆ ಸುಮಾರು ೧೧೩೦೦೦ ಟನ್ನುಗಳಷ್ಟು ಅಕ್ಕಿಯ ಸಂಗ್ರಹವಿದೆಯೆಂದೂ ರಾಜ್ಯದ ಭತ್ತದ ಕಣಜವೆನಿಸಿದ ತಂಜಾವೂರಿನಲ್ಲಿ ಅಕ್ಕಿಯ ಬೆಲೆಯು ಎತ್ತುವಳಿ ಬೆಲೆಗಿಂತಲೂ ತಗ್ಗಿಕೊಂಡಿದೆಯೆಂದೂ ತಿಳಿದು ಬರುತ್ತದೆ.

ಎಣ್ಣೆ ಉತ್ಪಾದನೆ

ಮುಂಬಯಿಗೆ ಸಮೀಪದ ಟ್ರಾಂಬೇಯಲ್ಲಿ ಸುಮಾರು ಹದಿನೇಳೂವರೆ ಕೋಟಿ ರೂಪಾಯಿಗಳ ವೆಚ್ಚದಿಂದ ಕಟ್ಟಿಸಲಾದ ಸ್ಟ್ಯಾಂಡರ್ಡ ವೆಕ್ಯೂಮ ಎಣ್ಣೆ ಕಂಪೆನಿಯು ಇದೇ ಜೂಲೈ ತಿಂಗಳ ಉತ್ತರಾರ್ಧದಲ್ಲಿ ತನ್ನ ಕೆಲಸವನ್ನು ಪ್ರಾರಂಭಿಸುತ್ತದೆ. ಇದೇ ಜೂನು ೨೦ರಂದು ಕಂಪೆನಿಯಲ್ಲಿ ಮೊದಲನೆಯ ಬ್ಯಾಲರು ಯಂತ್ರವು ಕೆಲಸವನ್ನು ತೊಡಗುತ್ತದೆ, ಅಗತ್ಯವಿರುವ ಕುರುಡೆಣ್ಣೆಯನ್ನು ಇರಾಣದಿಂದ ತರಿಸುತ್ತಿದ್ದು, ಇದು ಜುಲೈ ತಿಂಗಳ ಪ್ರಥಮ ವಾರದಲ್ಲಿ ಟ್ರಾಂಬೇಯನ್ನು ಮುಟ್ಟುತ್ತದೆ. ವಿದೇಶದ ಖಾಸಗಿ ಬಂಡವಾಳವು ಇಷ್ಟೊಂದು ದೊಡ್ಡ ಮಟ್ಟದ ವೆಚ್ಚವನ್ನು ಭಾರತದಲ್ಲಿ ಕೈಗೊಳ್ಳುವುದು ಇದೇ ಮೊದಲು— ಈ ಉದ್ಯಮದಿಂದಾಗಿ ಭಾರತದಿಂದ ಹೊರ ಹೋಗುತ್ತಿದ್ದ ೧೩೦ ಲಕ್ಷ ರೂಪಾಯಿಗಳು ಉಳಿಯುತ್ತವೆ ಪ್ರತಿವರ್ಷ ೯ ಕೋಟಿ ಗೆಲನು ಗ್ಯಾಸೋಲೀನ್, ೪ ಕೋಟಿ ಗೆಲನು ಚಿಮಿಣಿ ಎಣ್ಣೆ, ೬ ಕೋಟಿ ಗೆಲನು ಡೀಸಲ್ ಎಣ್ಣೆ, ೧೫ ಕೋಟಿ ಗೆಲನು ಗಿರಣಿಯಲ್ಲಿ ಉರುವಲಿಗೆ ಉಪಯೋಗಿಸುವ ಎಣ್ಣೆ, ೫ ಕೋಟಿ ಗೆಲನು ಬಂಕ ಉರುವಲ ಎಣ್ಣೆ ಇಲ್ಲಿ ಉತ್ಪಾದನೆ ಹೊಂದುತ್ತದೆ —ಅಂದರೆ, ಭಾರತಕ್ಕೆ ಬೇಕಾದ ಎಣ್ಣೆಯಲ್ಲಿ ಹತ್ತರಲ್ಲಿ ಮೂರಂಶ ದೊರೆತಂತಾಯಿತು.

ಕೃತಕ ಪೆಟ್ರೋಲು

ಭಾರತ ಸರಕಾರದ ನೈಸರ್ಗಿಕ ಸಂಪತ್ತು ಹಾಗು ವೈಜ್ಞಾನಿಕ ಸಂಶೋಧನಾ ಶಾಖೆಯು ಕೃತಕ ಪೆಟ್ರೋಲು ಎಣ್ಣೆಯನ್ನು ಉತ್ಪಾದಿಸಲು ಶಿಫಾರಸು ಮಾಡಿರುವುದು. ಕಾರ್ಖಾನೆಯ ಸ್ವರೂಪ, ಅದರ ಸ್ಥಳ, ಆಗತ್ಯಬೀಳುವ ತಜ್ಞರು ಇತ್ಯಾದಿ ವಿಷಯಗಳನ್ನು ಶ್ರೀನಗರದಲ್ಲಿ ಮೊನ್ನೆ ತಾನೆ ಸೇರಿದ ಸಮಿತಿಯೊಂದು ವಿಚಾರಿಸಿತು. ಈ ಯೋಜನೆಗೆ ಸುಮಾರು ೫೦ ಕೋಟಿ ರೂಪಾಯಿ ವೆಚ್ಚ ಬರಬಹುದು ಈ ಉದ್ದಿಮೆಯನ್ನು ಕೈಗೊಳ್ಳುವುದರಿಂದ ಭಾರತೀಯ ತಾಂತ್ರಜ್ಞರಿಗೆ ಉದ್ಯೋಗ ದೊರಕುವುದು. ಭಾರತಕ್ಕೆ ೩೦ ಲಕ್ಷ ಟನ್ನುಗಳಷ್ಟು ಪೆಟ್ರೋಲು ಬೇಕಾಗಿದ್ದು ಈಗಿನ ಉತ್ಪಾದನೆಯು ೩ಲಕ್ಷ ಟನ್ನುಗಳಷ್ಟು ಮಾತ್ರ ಇದೆ. ಉಳಿದ ಎಣ್ಣೆಯು ಹೊರದೇಶಗಳಿಂದ ಬರುತ್ತದೆ. ಕೃತಕ ಪೆಟ್ರೋಲನ್ನು ಉತ್ಪಾದಿಸುವ ಕಾರ್ಖಾನೆ ಸ್ಥಾಪಿತಗೊಂಡರೆ, ಈ ಕೊರತೆಯು ಕೆಲಮಟ್ಟಿಗೆ ಪರಿಹಾರಗೊಳ್ಳುವುದಲ್ಲದೆ, ಅನೇಕ ಪೂರಕ ಕೈಗಾರಿಕೆಗಳೂ ಬೆಳೆಯುತ್ತವೆ.

ಉಕ್ಕಿನ ಕಾರ್ಖಾನೆ

ಒಡಿಸಾದ ರೂರಕೇಲಾದಲ್ಲಿ ೭೨ಕೋಟಿ ರೂಪಾಯಿ ಬಂಡವಾಳದ ಮೇಲೆ ಸ್ಥಾಪನೆ ಹೊಂದುವ ಉಕ್ಕಿನ ಕಾರ್ಖಾನೆಯ ರಚನೆಯನ್ನು ಕೈಗೊಳ್ಳಲು ಕಳೆದ ವಾರ ಅನುಮತಿ ನೀಡಲಾಯಿತು. ಕಾರ್ಖಾನೆಯ ಪೂರ್ತಿ ಯೋಜನೆಯನ್ನು ಈ ವರ್ಷಾಂತ್ಯದೊಳಗಾಗಿ ಜರ್ಮನಿಯ ಕ್ರುಪ್ಸ ಮತ್ತು ಡಿಮಾಗ ಕಂಪೆನಿಯು ಒದಗಿಸುತ್ತದೆ ಅನಂತರ ಯಂತ್ರಗಳ ಸ್ಥಾಪನೋದ್ದೇಶದಿಂದ ಜಗತ್ತಿನ ಎಲ್ಲ ಭಾಗಗಳಿಂದಲೂ ಟೆಂಡರುಗಳನ್ನು ಕರೆಯಲಾಗುವುದು

ಮುಖ್ಯ ಪ್ರಕಟಣೆ

"ಆನಂದ ಸುಧ" ನಮ್ಮ ಆನಂದ ಸುಧ ಸಮಸ್ತ ಜನಗಳಿಗೆ ಬಲವನ್ನು ಖಂಡ ಪುಷ್ಟಿಯನ್ನು ಕಲಗಿಸುವುದು. ಅನೇಕ ವ್ಯಾಧಿಗಳನ್ನು ನಾಶಮಾಡುತ್ತೆ. ೧೫ ದಿನಗಳಿಗೆ ಸರಿಹೋಗುವ ೪ ಔ ಸೀಸೆ ೧ಕ್ಕೆ ರೂ. 3—0—0.

"ಸ್ತ್ರೀ ಸುಧ" ನಮ್ಮ ಸ್ತ್ರೀ ಸುಧ ಸ್ತ್ರೀಯರಿಗೆ ಸಂಭವಿಸುವ ಸಮಸ್ತ ಗರ್ಭಾಶಯ ವ್ಯಾಧಿಗಳನ್ನು ಋತು ದೋಷಗಳನ್ನು, ಋತು ಶೂಲೆ, ಸರಿಯಾಗಿ ಬಹಿಷ್ಠೆ ಆಗದಿರುವುದು ಮೊದಲಾದ ಸಮಸ್ತ ವ್ಯಾಧಿಗಳನ್ನು ನಾಶಮಾಡುವುದು. ಸಂತಾನವನ್ನು ಕಲಗಿಸುವುದು. ಒಂದು ತಿಂಗಳಿಗೆ ಸರಿಹೋಗುವ ೧ ತೊಲದ ಔಷದಿ ರೂ. 4—0 —0.

"ಬಾಲ ಸುಧ" ಇದು ಸಣ್ಣ ಬಾಲಕರಿಗೆ ಅಜೀರ್ಣ, ಜ್ವರ, ಕೆಮ್ಮು, ಶೀತ, ಮಲಬದ್ಧತೆ, ಹೆಚ್ಚಾಗಿ ಭೇದಿ ಆಗುವಿಕೆ, ಮಕ್ಕಳು ಕ್ಷೀಣವಾಗಿ ಕೈಕಾಲು ಸಣ್ಣದಾಗುವಿಕೆ, ಲಿವರ್ ಬೆಳೆಯುವುದು, ಈ ಎಲ್ಲಾ ವ್ಯಾಧಿಗಳಿಗೆ ವಜ್ರಾಯುಧವಾಗಿದೆ. ಹೀಗಿರುವ ಔಷಧಿ ಇನ್ನೊಂದು ಇಲ್ಲವೆಂದು ಹೇಳಬಹುದು ಈ ಔಷಧಕ್ಕೆ ಮಿತಿ ಇಲ್ಲದ ಯೋಗ್ಯತಾ ಪತ್ರಗಳನ್ನು ಪಡೆದು ದಿನದಿನಕ್ಕೆ ದೇಶದಲ್ಲಿ ಅನೇಕ ವಿಧದಲ್ಲಿ ಅಭಿವೃದ್ಧಿಯಾಗಿರುತ್ತದೆ. ಸುಮಾರು ೧ ತಿಂಗಳಿಗೆ ಸರಿ ಹೋಗುವ ೩೦ ಮಾತ್ರೆಗಳ ಸೀಸೆ ೧ಕ್ಕೆ ರೂ. 1—0—0.

ಹೆಡ್ಡಾಫೀಸ್:

ಪ್ರಸಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್, ರಾಜಮಂಡ್ರಿ.

ಬೆಂಗಳೂರು ಏಜನ್ಸಿ:

ಸುದರ್ಶನ ಆಯುರುವೇದ ವೈದ್ಯಶಾಲ, ನಗರ್ತರ ಪೇಟೆ, ಬೆಂಗಳೂರು-2.

Visit

K. R. K. SHET DIAMOND MART

Opposite Government College, MANGALORE.

For all your requirements in Diamonds and Jewellery Lucky Birth Stones are also available.

Prop: **K. K. R. SHET.**

ಈ ಕಾರ್ಖಾನೆಗೆಂದು ೭೨ ಚದರ ಮೈಲು ಪ್ರದೇಶವನ್ನು ಆರಿಸಿದ್ದು, ಇಲ್ಲಿ ಪ್ರಥಮತಃ ಕೆಲಸಗಾರರಿಗೆ ಉಳಕೊಳ್ಳಲು ಮನೆ ಮುಂತಾದುವನ್ನು ಕಟ್ಟಲಾಗುವುದು. ೧೮೦ ಭಾರತೀಯ ತಂತ್ರಜ್ಞರು ವಿದೇಶಗಳ ತಜ್ಞರಿಂದ ಯೋಗ್ಯ ತರಬೇತಿಯನ್ನು ಪಡೆಯಲು ಇಷ್ಟರಲ್ಲೇ ಈ ಕಾರ್ಖಾನೆಗೆ ಕಳಿಸಲ್ಪಡುವರು.

"ಝಾಂಸಿಯ ರಾಣಿ"

ನಮ್ಮ ದೇಶದಲ್ಲಿ ವಿಮಾನ ಸಾರಿಗೆಯು ರಾಷ್ಟ್ರೀಕರಣವಾದ ಬಳಿಕ ಇದೀಗ ಸೂಪರ್ ಕಾನ್ಸ್ಟಲೇಶನ್ ವಿಮಾನವು ದೂರ ಪ್ರಯಾಣಕ್ಕೋಸ್ಕರ ಉಪಯೋಗಿಸಲ್ಪಡುತ್ತದೆ. "ಝಾಂಸಿಯ ರಾಣಿ"ಎಂಬ ಹೆಸರಿನ ಮೊದಲನೇ ವಿಮಾನವು ಇದೇ ೧೯ನೇ ತಾರೀಕಿನಂದು ಮುಂಬಯಿಯಿಂದ ಲಂಡನಿಗೆ ತನ್ನ ಮೊದಲನೆಯ ಉಡ್ಡಾಣವನ್ನು ಮಾಡುವುದು. ಇದರಲ್ಲಿ ಪ್ರಯಾಣಿಕರೂ ವಿಮಾನ ಚಾಲಕ ವರ್ಗದವರೂ ಒಟ್ಟು ಸೇರಿ ೭೦ ಮಂದಿ ಸುಖವಾಗಿ ಕುಳಿತುಕೊಳ್ಳಬಹುದು. ಸಾರಿಗೆ ಕಂಪೆನಿಯ ನುರಿತ ವೈಮಾನಿಕ ಕೇಪ್ಟನ್ ವಿಶ್ವನಾಥಮ್ಮರು ಲಂಡನಿನಿಂದ ಈ ವಿಮಾನವನ್ನು ನಡೆಸುತ್ತಾ ಮುಂಬಯಿಯ ಸಾಂತಾಕ್ರೂಜ ವಿಮಾನ ನಿಲ್ದಾಣದಲ್ಲಿ ದಿನಾಂಕ ೧೦ರಂದು ಇಳಿದಾಗ, ಅವರಿಗೆ ಭವ್ಯ ಸ್ವಾಗತವನ್ನು ನೀಡಲಾಯಿತು. ಸಾಂತಾಕ್ರೂಜಿನಲ್ಲಿ ಇಷ್ಟು ದೊಡ್ಡ ವಿಮಾನ ಹಿಂದೆಂದೂ ಇಳಿದಿರಲಿಲ್ಲ. ಇಂಥದೇ ಇನ್ನೂ ಐದು ಹೊಸ ವಿಮಾನಗಳನ್ನು ಕೊಂಡುಕೊಳ್ಳಲು ಕಂಪೆನಿಯು ನಿರ್ಧರಿಸಿದ್ದು ಸಿಂಗಾಪುರ, ಜಪಾನುಗಳಿಗೂ ಇಷ್ಟರಲ್ಲೇ ಸಾರಿಗೆ ಪ್ರಾರಂಭಿಸಲ್ಪಡುವುದು.

ಹಣ್ಣು ಹಂಪಲಿನ ಕೃಷಿ

ಕೇಂದ್ರ ಸರಕಾರದ ಕೃಷಿ ಮಂತ್ರಿಗಳಾದ ಡಾ. ಪಂಜಾಬರಾವ ದೇಶಮುಖರು ಕಡೂರಿನಲ್ಲಿ ಆಂಧ್ರದ ತೋಟಗಾರರ ಪರಿಷತ್ತನ್ನು ಉದ್ಘಾಟಿಸುತ್ತಾ ನಾವು ಅಷ್ಟಾಗಿ ಮಹತ್ವವನ್ನು ಕೊಡದ ಸಂಗತಿಯೊಂದರ ಕುರಿತು ಗಮನವನ್ನು ಸೆಳೆದರು. ಹಣ್ಣು ಹಂಪಲುಗಳನ್ನು ಉತ್ಪಾದನೆಯನ್ನು ಹೆಚ್ಚಿಸುವ ದೃಷ್ಟಿಯಿಂದ ಬೆಳೆಯಲು ನಾವು ತೊಡಗಬೇಕು ಎಂದವರು ಅಪೇಕ್ಷೆಪಟ್ಟರು. ಭಾರತದಲ್ಲಿ ಸುಮಾರು ೩೨ ಲಕ್ಷ ಎಕ್ರೆ ಪ್ರದೇಶದಲ್ಲಿ ಹಣ್ಣುಹಂಪಲು ಬೆಳೆಯುತ್ತದೆಂದೂ ಇದರಲ್ಲಿ ಹತ್ತಕ್ಕೆ ಒಂಭತ್ತರಷ್ಟು ಪ್ರದೇಶವನ್ನು ಮಾವು, ಬಾಳೆ, ಕಿತ್ತಳೆ ಮತ್ತು ಪೇರಳೆ ಹಣ್ಣುಗಳ ತೋಟ ಆವರಿಸುತ್ತದೆಂದೂ ಮಂತ್ರಿಗಳು ಹೇಳಿದರು. ನಮ್ಮಲ್ಲಿ ಪ್ರತಿ ೧೦೪ ಜನಕ್ಕೆ ಒಂದು ಎಕ್ರೆಯಂತೆ ಹಣ್ಣು ಬೆಳೆಯುವ ಸ್ಥಳ ಬರುತ್ತದೆ-ಆದರೆ ಪಾಶ್ಚಾತ್ಯ ದೇಶಗಳ ದೃಷ್ಟಿಯಿಂದ ನೋಡಿದರೆ ಈ ಪ್ರಮಾಣ ಏತಕ್ಕೂ ಸಾಲದು. ಉದಾಹರಣೆಗಾಗಿ ಪ್ಯಾಲಿಸ್ತಾನದಲ್ಲಿ ಪ್ರತಿ ಏಳು ಮಂದಿಗೆ, ಹಾಗು ಕ್ಯಾಲಿಫೋರ್ನಿಯಾದಲ್ಲಿ ಪ್ರತಿ ಮೂವರಿಗೆ ಒಂದು ಎಕ್ರೆಯಷ್ಟು ಹಣ್ಣಿನ ತೋಟ ಇರುತ್ತದೆ. ಭಾರತೀಯರು ತೋಟಗಾರಿಕೆಯ ಕಡೆಗೆ ವಿಶೇಷ ಗಮನವನ್ನು ಪೂರೈಸಬೇಕಾದ ಅಗತ್ಯವನ್ನು ಇದು ಮನಗಾಣಿಸುತ್ತದೆ.

ನ್ಯಾಯಸ್ಥಾನದ ಸ್ವಾತಂತ್ರ್ಯ ಪ್ರಜಾಪ್ರಭುತ್ವಕ್ಕೆ ಅಗತ್ಯ

ರಾಜ್ಯಾಂಗ ಘಟನೆಯ ತಿದ್ದುಪಡಿ ಸೂಚನೆಗೆ ಹೃದಯನಾಥ ಕುಂಜ್ರೂರ ಪ್ರತಿಕ್ರಿಯೆ

ಭಾರತ ಪಾರ್ಲಿಮೆಂಟಿನ ಅತ್ಯಂತ ಪ್ರಭಾವೀ ಸದಸ್ಯರಾದ ಪಂಡಿತ ಹೃದಯನಾಥ ಕುಂಜ್ರೂರವರು ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ನೇಮಿಸಿದ ಉಪಸಮಿತಿಯೊಂದು ಘಟನೆಗೆ ಸೂಚಿಸಿದ ಕೆಲವು ತಿದ್ದುಪಡಿಗಳನ್ನು ದಿನಾಂಕ ೧೨ರಂದು ಪುಣೆಯಲ್ಲಿ ಕಟುವಾಗಿ ಟೀಕಿಸಿದರು. ಸೂಚಿತವಾದ ತಿದ್ದುಪಡಿಗಳನ್ನು ಕಂಡು ತಮಗೆ ನಿಜಕ್ಕೂ ಸಾಕಷ್ಟು ಗಾಬರಿಯಾಗಿದೆಯೆಂದು ಅವರು ತಿಳಿಸಿದರು. ಆಡಳಿತೆಯ ಪ್ರಾಮಾಣಿಕತೆಯನ್ನೂ ವ್ಯಕ್ತಿಯ ಸ್ವಾತಂತ್ರ್ಯವನ್ನೂ ಹತ್ತಿಕ್ಕುವ ಘಟನಾತ್ಮಕ ಬದಲಾವಣೆಯನ್ನು ಪ್ರಜಾಪ್ರಭುತ್ವ ಪದ್ಧತಿಯನ್ನು ಅಂಗೀಕರಿಸಿದ ದೇಶದ ಜನರು ಖಂಡಿಸುವರೆಂದು ಅವರು ಸಾರುತ್ತಾ, ಇಂತಹ ಅವಸರದ ಕ್ರಮಗಳ ವಿರುದ್ಧ ಎಚ್ಚರಿಕೆಯನ್ನು ಕೊಟ್ಟರು. ಹೈಕೋರ್ಟುಗಳ ಅಧಿಕಾರವನ್ನು ಕಡಿಮೆ ಮಾಡುವ ಸಿಫಾರಸನ್ನು ಅವರು ಖಂಡಿಸುತ್ತಾ ಪ್ರಜಾಪ್ರಭುತ್ವದ ರಕ್ಷಣೆಯನ್ನು ಮಾಡುವ ನ್ಯಾಯಾಧೀಶರ ತರ್ಕಶುದ್ಧವಾದ ಟೀಕೆಗಳು ಆಡಳಿತ ನಿರ್ವಹಿಸುವ ಮಂತ್ರಿಗಳಿಗೆ ಅಪ್ರಿಯವೆನಿಸಬಹುದಾದರೂ-ಪ್ರಜಾಸತ್ತೆ ಬಾಳುವುದಕ್ಕೆ ನ್ಯಾಯಸ್ಥಾನದ ಸ್ವಾತಂತ್ರ್ಯವು ಅತ್ಯಗತ್ಯವೆಂದು ಅವರು ಅಭಿಪ್ರಾಯಪಟ್ಟರು. ಭೂಸುಧಾರಣೆಯನ್ನು ತ್ವರೆಗೊಳಿಸುವ ಉದ್ದೇಶದಿಂದ ವಶಪಡಿಸಿಕೊಂಡ ಖಾಸಗಿ ಭೂಮಿಗೆ ಕೊಡಬೇಕಾದ ಪರಿಹಾರದ ಕುರಿತು ಮಾಡಲಾದ ಸಲಹೆಯೂ ಅಯೋಗ್ಯವೆಂದು ಅವರು ಸಾರಿದರು. ಘಟನೆಯ ಕಲಮನ್ನು ತಿದ್ದುಪಡಿ ಮಾಡುವುದಕ್ಕಿಂತ ಅದನ್ನು ರದ್ದುಗೊಳಿಸುವುದೇ ಮೇಲೆಂದು ಅವರು ವ್ಯಂಗ್ಯೋಕ್ತಿಯನ್ನಾಡಿದರು.

ಕಾಂಗ್ರೆಸಿಗರ ಕರ್ತವ್ಯ

ಕಾಂಗ್ರೆಸಿನ ಅಧ್ಯಕ್ಷ ಜವಾಹರಲಾಲ ನೆಹರೂರವರು ಪ್ರದೇಶ ಕಾಂಗ್ರೆಸುಗಳ ಅಧ್ಯಕ್ಷರಿಗೆ ಕಳುಹಿಸಿದ ಈಚೆಗಿನ ಪರಿಪತ್ರವೊಂದರಲ್ಲಿ ಪಾರ್ಲಿಮೆಂಟು ಹಾಗು ಶಾಸನ ಸಭೆಗಳ ಸದಸ್ಯರು ಮತ್ತು ಕಾಂಗ್ರೆಸು ಸಂಸ್ಥೆಯ ಅಭಿಮಾನಿಗಳು ಹಳ್ಳಿಯ ಜನತೆಯೊಡನೆ ನಿಕಟ ಸಂಪರ್ಕವನ್ನು ಸ್ಥಾಪಿಸಿ, ರಾಷ್ಟ್ರೀಯ ಯೋಜನಾ ಸಾಲದ ಬಗ್ಗೆ ಆಸ್ಥೆಯನ್ನು ಕುದುರಿಸುವ ಅಗತ್ಯವಿದೆಯೆಂದು ಹೇಳಿದ್ದಾರೆ. ರಾಷ್ಟ್ರದಲ್ಲಿ ಕೈಗೊಳ್ಳಲಾಗುವ ಅಭಿವೃದ್ಧಿ ಪ್ರಯತ್ನಗಳ ಕುರಿತು ಹೆಚ್ಚಿನ ಮಾಹಿತಿಯನ್ನು ಪಡೆದಿರುವುದೂ ಉತ್ಸಾಹವನ್ನು ತೋರಿಸುವುದೂ ಕಾಂಗ್ರೆಸು ಸಂಸ್ಥೆ ಮತ್ತು ಅದರ ಅಭಿಮಾನಿಗಳ ಕರ್ತವ್ಯವೆಂಬುದನ್ನು ನೆಹರೂರವರು ಪರಿಪತ್ರದಲ್ಲಿ ಸ್ಪಷ್ಟಗೊಳಿಸಿರುವರು. ಭಾರತ ಸರಕಾರವು ಈಗ ಎತ್ತುತ್ತಿರುವ ಯೋಜನಾ ಸಾಲವು ಘನವಾದ ಉದ್ದೇಶವನ್ನು ಹೊಂದಿದೆ—ರಾಷ್ಟ್ರ ನಿರ್ಮಾಣದ ಮಹತ್ಕಾರ್ಯದಲ್ಲಿ ಸಾಧ್ಯವಾದಷ್ಟು ಹೆಚ್ಚು ಮಂದಿಯನ್ನು ಪಾಲುಗಾರರನ್ನಾಗಿ ಮಾಡುವ ಧ್ಯೇಯವನ್ನಿಟ್ಟುಕೊಂಡು ಕಾಂಗ್ರೆಸು ಸದಸ್ಯರೂ ಜನತಾ ಪ್ರತಿನಿಧಿಗಳೂ ಗ್ರಾಮಾಂತರ ಪ್ರದೇಶದ ಜನರೊಡನೆ ಸಂಪರ್ಕವನ್ನು ಸ್ಥಾಪಿಸಬೇಕು ಎಂದು ನೆಹರೂರ ಅಭಿಪ್ರಾಯ. ಭಾರತ ಸರಕಾರದವರು ಈಚೆಗೆ ಹೊಸತೊಂದು ಬಗೆಯ ಉಳಿತಾಯ ಯೋಜನೆಯನ್ನು ಸಿದ್ಧಗೊಳಿಸಿದ್ದು, ಇದರಂತೆ, ಟಪ್ಪಾಲುಕಟ್ಟೆಯಿಂದ ನಾಲ್ಕಾಣೆ, ಎಂಟಾಣೆ ಹಾಗು ಒಂದು ರೂಪಾಯಿ ಬೆಲೆಯ ರಾಷ್ಟ್ರೀಯ ಉಳಿತಾಯ ಸ್ಟಾಂಪುಗಳನ್ನು ಕೊಂಡುಕೊಂಡು, ಅವುಗಳನ್ನು ಟಪ್ಪಾಲುಕಟ್ಟೆಯವರೇ ಕೊಡುವ ರಾಷ್ಟ್ರೀಯ ಉಳಿತಾಯ ಕಾರ್ಡುಗಳ ಮೇಲೆ ಹಚ್ಚುತ್ತ ೫ ಅಥವಾ ೧೦ ರೂಪಾಯಿಗಳಷ್ಟು ಟಿಕೇಟುಗಳು ಕೂಡಿದ ಮೇಲೆ, ಆ ಕಾರ್ಡನ್ನು ವಾಪಾಸು ಕೊಟ್ಟು, ಆ ಬೆಲೆಗೆ ಸಮಾನಾದ ಉಳಿತಾಯ ಸರ್ಟಿಫಿಕೇಟನ್ನು ಪಡೆಯಬಹುದು. ಯೋಜನಾ ಸಾಲವು ಜಾರಿಯಲ್ಲಿರುವಷ್ಟು ಸಮಯ ರಾಷ್ಟ್ರೀಯ ಉಳಿತಾಯ ಕಾರ್ಡುಗಳನ್ನು ಕೊಟ್ಟು ೫ ಅಥವಾ ೫೦ ರೂಪಾಯಿ ಬೆಲೆಯ ಯೋಜನಾ ಸರ್ಟಿಫಿಕೇಟನ್ನೂ ಪಡೆಯಬಹುದು. ಬಡವರಲ್ಲಿ ಬಡವನೂ ಸಹ ಈ ಏರ್ಪಾಡಿನಿಂದ ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ನೆರವಾಗಬಲ್ಲನು

ಮೈಸೂರಿನ ಕಾಂಗ್ರೆಸು

ನೆರೆಯ ಮೈಸೂರು ರಾಜ್ಯದಲ್ಲಿ ಕಾಂಗ್ರೆಸು ಸಂಸ್ಥೆಯಲ್ಲಿ ತೀವ್ರ ಬಿಕ್ಕಟ್ಟು ಉಂಟಾಗಿದೆಯೆಂದು ತಿಳಿದು ಬರುತ್ತದೆ. ಶ್ರೀ ಹನುಮಂತಯ್ಯನವರು ಪ್ರದೇಶ ಕಾಂಗ್ರೆಸಿನ ಅಧ್ಯಕ್ಷರಾಗಿದ್ದಾಗ ಸರಕಾರದೊಡನೆ ಅಸಹಕರಿಸಿ, ಟೀಕಿಸುತ್ತಿದ್ದರು. ಈಗ ಅವರು ಮುಖ್ಯ ಮಂತ್ರಿಗಳ ಗದ್ದುಗೆಯನ್ನೇರಿದ ಬಳಿಕ, ಪ್ರದೇಶ ಕಾಂಗ್ರೆಸಿನ ಅಧ್ಯಕ್ಷರಾದ ಶ್ರೀ ವೀರಣ್ಣ ಗೌಡರು ಸರಕಾರವನ್ನು ದೂರತೊಡಗಿರುವರು. ಹೀಗೆ ಬಿತ್ತಿದ ಬೆಳೆಯನ್ನು ಹನುಮಂತಯ್ಯನವರು ಕೊಯ್ಯಬೇಕಾಗಿ ಬಂದಿರುವುದು ಕಾಂಗ್ರೆಸು ಸಂಸ್ಥೆಯ ಹಿತದೃಷ್ಟಿಯಿಂದ ಶೋಚನೀಯವೇ ಆಗಿದೆ. ಹನುಮಂತಯ್ಯನವರ ಸರಕಾರದಲ್ಲಿ ಅವಿಶ್ವಾಸವನ್ನು ಪ್ರಕಟಿಸುವ ಸಿದ್ಧತೆಗಳನ್ನು ಕೈಗೊಳ್ಳುವಷ್ಟು ಪ್ರದೇಶ ಕಾಂಗ್ರೆಸು ಮುಂಬಂದಿದೆಯೆಂದೂ ಕೇಳುತ್ತೇವೆ. ಕಾಂಗ್ರೆಸಾಧ್ಯಕ್ಷ ನೆಹರೂರವರಿಗೆ ಇದು ತಿಳಿದಿರಬೇಕು—ಎಂತಲೇ ಅವರು ಕಳೆದ ವಾರ ಶ್ರೀ ಮನ್ನಾರಾಯಣ ಅಗ್ರವಾಲರನ್ನು ಬೆಂಗಳೂರಿಗೆ ಕಳಿಸಿಕೊಟ್ಟರು ಇವರು ಮೈಸೂರಿನ ಕಾಂಗ್ರೆಸು ಪ್ರಭೃತಿಗಳನ್ನೆಲ್ಲ ಒಟ್ಟಿಗೆ ಕರೆದು, ಮಾತನಾಡಿಸಿ, ಭಿನ್ನಾಭಿಪ್ರಾಯಗಳನ್ನು ಸರಿಪಡಿಸಲು ಸಲಹೆ ಕೊಟ್ಟರು. ಸರಕಾರ ಹಾಗು ಪ್ರದೇಶ ಕಾಂಗ್ರೆಸುಗಳು ಸಹಕರಿಸಿ ನಡೆಯುವಂತೆ ಒಂದು ಪ್ರಾತಿನಿಧಿಕ ಸಮಿತಿಯನ್ನು ರಚಿಸಬೇಕೆಂಬುದು ಅವರ ಸೂಚನೆಯ ತಿರುಳು. ಆದರೆ ಇಷ್ಟರಿಂದಲೇ ಒಳಜಗಳಗಳು ನಿಲ್ಲಲಾರವೆಂದು ಹೇಳಲಾಗುತ್ತದೆ. ಕಾಂಗ್ರೆಸಾಧ್ಯಕ್ಷರು ತುಸು ನಿಷ್ಠುರ ಕ್ರಮವನ್ನು ಕೈಗೊಳ್ಳಬೇಕೆಂದೂ ಒತ್ತಾಯಿಸಲಾಗುತ್ತದೆ. ಅಗ್ರವಾಲರ ವರದಿಯನ್ನು ನೋಡಿ, ನೆಹರೂರವರು ಮುಂದಿನ ಕ್ರಮವನ್ನು ನಿಶ್ಚಯಿಸಬಹುದು; ಮತ್ತು ಕಾಂಗ್ರೆಸು ಸಂಸ್ಥೆಗೆ ಆದರ್ಶವೊಂದನ್ನು ಹಾಕಿ ಕೊಡಬಹುದು.

ಸೆಕೆಂಡರಿ ಶಾಲೆಗಳೂ ಜಿಲ್ಲಾ ಲೈಬ್ರೆರಿಗಳೂ

'ನವಯುಗ'ವನ್ನು ತರಿಸಿಕೊಳ್ಳುವಂತೆ ಮಂಜೂರಾಗಿದೆ.

ಸೆಕೆಂಡರಿ ಶಾಲೆಗಳ ಉಪಯೋಗಾರ್ಥವಾಗಿ ಮದ್ರಾಸಿನ ವಿದ್ಯಾಂಗದ ಡೈರೆಕ್ಟರರೂ, ಜಿಲ್ಲೆಯ ಲೈಬ್ರೆರಿಗಳ ಉಪಯೋಗಾರ್ಥವಾಗಿ ದ. ಕ. ಜಿಲ್ಲಾ ಲೋಕಲ್ ಲೈಬ್ರೆರಿ ಅಥೋರಿಟಿ ಕಮಿಟಿಯವರೂ **'ನವಯುಗ'** ವಾರಪತ್ರಿಕೆಯನ್ನು ಮಂಜೂರು ಮಾಡಿರುತ್ತಾರೆ.

1921ರಲ್ಲಿ ಆರೋಗ್ಯ ಮಂತ್ರಿ, ಶ್ರೀ ಎ. ಬಿ. ಶೆಟ್ಟರಿಂದ ಸ್ಥಾಪಿಸಲ್ಪಟ್ಟು, ಅವಿರತವಾಗಿ ಜನಸೇವೆ ಮಾಡುತ್ತಿರುವ ರಾಷ್ಟ್ರೀಯ ವಾರಪತ್ರಿಕೆ **'ನವಯುಗ'**ಕ್ಕೆ ಎಲ್ಲಾ ಸೆಕೆಂಡರಿ ಶಾಲೆಗಳೂ, ಜಿಲ್ಲೆಯ ಎಲ್ಲಾ ಲೈಬ್ರೆರಿಗಳೂ, ಚಂದಾದಾರರಾಗಿ ಪ್ರೋತ್ಸಾಹಿಸಬೇಕಾಗಿ ವಿನಂತಿ.

ವಾರ್ಷಿಕ ಚಂದಾ ರೂ. 5-12-0 ಮಾತ್ರ.

PLACE YOUR LIFE ASSURANCE WITH A COMPANY OF YOUR OWN - - -

Established in 1929, the POPULAR is progressing on sound lines. It has built up for itself a record of efficient service sound investment and a personal touch with its Policy holders and Representatives at whatever stage We welcome yours association with the POPULAR.

THE POPULAR INSURANCE CO. LTD.

"POPULAR BUILDINGS" MANGALORE-1

ನ ವ ಯು ಗ
ಉಡುಪಿ, ಗುರುವಾರ ೧೭-೬-೧೯೫೪

ಪ್ರಜಾಪ್ರಭುತ್ವದ ಆರೈಕೆ

ಕಾಶ್ಮೀರದ ಶ್ರೀನಗರದಲ್ಲಿ ಇದೇ ೧೪ನೇ ದಿನಾಂಕ ಭಾರತದಲ್ಲಿಯ ಶಾಸನ ಸಭೆಗಳ ಅಧ್ಯಕ್ಷ ಹಾಗು ಉಪಾಧ್ಯಕ್ಷರ ಪರಿಷತ್ತು ಸೇರಿರುತ್ತದೆ. ಪಾರ್ಲಿಮೆಂಟರಿ ವ್ಯವಹಾರದಲ್ಲಿ ಉದ್ಭೂತವಾಗುವ ಅನೇಕ ಪ್ರಶ್ನೆಗಳನ್ನು ಈ ಪರಿಷತ್ತು ವಿಚಾರಿಸಿ, ಯೋಗ್ಯ ನಿರ್ಣಯವನ್ನು ಕೈಗೊಳ್ಳುತ್ತದೆ. ತತ್ಪರಿಣಾಮವಾಗಿ ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಶಾಸನ ಸಭೆಗಳಲ್ಲೂ ಸಂಸತ್ತಿನಲ್ಲೂ ಪಕ್ಷಗಳು ನಡೆದುಕೊಳ್ಳಬೇಕಾದ ರೀತಿ ಹಾಗು ಅಲ್ಲಿಯ ಕೆಲಸಗಳು ನೆರವೇರತಕ್ಕ ಬಗೆಗಳ ಕುರಿತು ಯೋಗ್ಯ ಮಾರ್ಗದರ್ಶನವು ದೊರಕಬಹುದು. ಭಾರತದ ಲೋಕಸಭೆಯ ಅಧ್ಯಕ್ಷರಾದ ಶ್ರೀ ಮಾವಳಣಕರರು ಈ ಪರಿಷತ್ತಿನ ಅಧ್ಯಕ್ಷತೆಯನ್ನು ವಹಿಸಿ, ಉದ್ಬೋಧಕವಾದ ಭಾಷಣವನ್ನು ಮಾಡಿದರು. ಭಾರತದಲ್ಲಿ ಪ್ರಜಾಪ್ರಭುತ್ವವು ಆಳವಾಗಿ ಬೇರೂರುತ್ತಿರುವುದನ್ನು ಅವರು ಪ್ರಸ್ತಾಪಿಸಿ, ಸಂತೋಷವನ್ನು ಸೂಚಿಸಿದರು. ಆನುಷಂಗಿಕವಾಗಿ ಅವರು ಶಾಸನಸಭೆ ಹಾಗು ಸಂಸತ್ತಿನ ಅಧ್ಯಕ್ಷರುಗಳ ಕರ್ತವ್ಯವನ್ನು ಕುರಿತಾಗಿಯೂ ತಮ್ಮ ಅಭಿಪ್ರಾಯವನ್ನು ವ್ಯಕ್ತಗೊಳಿಸಿದರು. ಅಧ್ಯಕ್ಷನು ಪಕ್ಷಾತೀತ ದೃಷ್ಟಿಯನ್ನಿಟ್ಟುಕೊಳ್ಳಬೇಕಾದ ಆವಶ್ಯಕತೆಯನ್ನು ಒತ್ತಿ ಹೇಳುತ್ತಾ, ಅವನ ಚುನಾವಣೆಯು ಸರ್ವಾನುಮತದಿಂದ ಜರಗುವ ಹೊಸ ಸಂಪ್ರದಾಯವನ್ನು ಹಾಕಿಕೊಡಲು ತಾವು ಬಯಸುವುದಾಗಿ ನುಡಿದರು. ಪ್ರಧಾನಿ ನೆಹರೂರವರಿಗೆ ಈ ವಿಷಯದಲ್ಲಿ ತಾವು ತಕ್ಕ ಸೂಚನೆ ಕೊಟ್ಟಿರುವುದನ್ನು ಅವರು ಪ್ರಕಟಪಡಿಸಿದರು. ಶಾಸನಸಭೆಗಳ ಅಧ್ಯಕ್ಷನ ಸ್ಥಾನವು ಅತ್ಯುಚ್ಚ ಮಟ್ಟದ್ದಾಗಿರುವುದಲ್ಲದೆ—ಅದು ನಿಷ್ಪಕ್ಷಪಾತತನಕ್ಕೆ ಮಾದರಿಯೂ ಆಗಿದೆ. ಅಧ್ಯಕ್ಷರು ಕೊಡುವ ನಿರ್ಣಯಗಳು ತೀರಾ ಸಮಂಜಸವೆಂದು ಒಪ್ಪಿಕೊಳ್ಳಲಾಗುತ್ತವೆ. ಅವರ ತೀರ್ಮಾನದ ವಿರುದ್ಧ ಬಹಿರಂಗವಾಗಿ ಮಾತನಾಡಲು ಯಾರಿಗೂ ಅವಕಾಶವಿರುವುದಿಲ್ಲ. ಕ್ರಮಬದ್ಧವಾದ ಅವಿಶ್ವಾಸದ ಗೊತ್ತುವಳಿಯನ್ನು ತಂದೇ ಅಧ್ಯಕ್ಷರ ಮೇಲೆ ಹೊರಿಸಬಹುದಾದ ಪಕ್ಷಪಾತತನ, ಅಸಮರ್ಥತೆಗಳ ವಿಚಾರಣೆಯನ್ನು ಮಾಡಬೇಕಾಗುತ್ತದೆ. ಈ ಪ್ರಕಾರವಾಗಿ ಶ್ರೇಷ್ಠವಾದ ಸ್ಥಾನವನ್ನು ಅಲಂಕರಿಸಿ, ಪ್ರಜಾಪ್ರಭುತ್ವ ಪದ್ಧತಿಯ ಕಾರ್ಯಾಚರಣೆಯಲ್ಲಿ ದಕ್ಷತೆಯಿಂದ ಮಾರ್ಗದರ್ಶನವನ್ನು ಮಾಡುತ್ತಾ ಶಾಸನ ಸಭಾ ಕಾರ್ಯಕಲಾಪಗಳಲ್ಲಿ ಅಚ್ಚುಕಟ್ಟುತನವನ್ನು ಸಾಧಿಸುವುದು ಅಧ್ಯಕ್ಷರ ಕರ್ತವ್ಯವಾಗಿರುತ್ತದೆ. ಇವರಿಗೆ ಪಾರ್ಲಿಮೆಂಟರಿ ವ್ಯವಹಾರದ ಸೂಕ್ಷ್ಮಜ್ಞಾನವಿರಬೇಕಾಗಿದೆಯಲ್ಲದೆ, ಎಂತಹ ಕಠಿಣ ಪ್ರಸಂಗವನ್ನೂ ಇದಿರಿಸಿ ಕಾರ್ಯಕಲಾಪವನ್ನು ತೂಗಿಸಿಕೊಂಡು ಹೋಗುವ ಚಾತುರ್ಯವೂ ಅಗತ್ಯ. ಪ್ರಜಾಪ್ರಭುತ್ವದ ಆರೈಕೆಯನ್ನು ಮಾಡುವ ಘನತರವಾದ ಹೊಣೆಯನ್ನು ನಿರ್ವಹಿಸುವಾಗ, ಎಷ್ಟು ಜಾಗರೂಕತೆಯಿಂದ ನಡೆದುಕೊಂಡರೂ ಸಾಕಾಗದೆ ಹೋಗಬಹುದು- ಇಂತಹ ಸಂದರ್ಭಗಳಲ್ಲಿ ಯಾವುದೇ ಪ್ರಮಾದಕ್ಕೆ ಅವಕಾಶ ದೊರಕದಂತೆ ಮುಕ್ತಬುದ್ಧಿತನದಿಂದ ಅಧ್ಯಕ್ಷರು ನಡೆದುಕೊಳ್ಳಬೇಕಾಗುತ್ತದೆ. ಆದರೆ ಪ್ರಜಾಪ್ರಭುತ್ವದ ಮೂಲ ಪಾಠಗಳನ್ನು ಇನ್ನೂ ಅಭ್ಯಸಿಸುತ್ತಿರುವ ಭಾರತದಲ್ಲಿ ಕೆಲವೊಮ್ಮೆ ಕಣ್ಣು ಅವಿಗೆ ಮೀರಿ, ತಪ್ಪುಗಳಾಗುತ್ತವೆಂಬುದು ಶೋಚನೀಯ—ಶಾಸನ ಸಭೆಗಳ ಸನ್ಮಾನ್ಯ ಸದಸ್ಯರಲ್ಲಿ ಹಲವರು ಪಾರ್ಲಿಮೆಂಟರಿ ವ್ಯವಹಾರದ ಮಾಹಿತಿಯನ್ನು ಸಾಕಷ್ಟು ಪಡೆದಿರದ ಹೊಸಬರು; ಇವರು ಅನೇಕ ವೇಳೆ ಗೌರವಯುತವಾದ ವರ್ತನೆಯ ಮೇರೆಯನ್ನು ಮೀರಿ, ಪರಂಪರೆಯನ್ನು ಮುರಿಯುವರು. ರಾಜ್ಯದ ವಂಶ್ಯನು ಪ್ರಾರಂಭ ಭಾಷಣ ಮಾಡುವುದಕ್ಕೆ ಮುಂಚೆಯೇ, ತಮ್ಮ ಹೇಳಿಕೆಯನ್ನು ನೀಡಲು ಪ್ರತಿಪಕ್ಷದ ಸದಸ್ಯರು ಆಗ್ರಹ ಪಡುವುದು ಸರಿಯಲ್ಲವೆಂದು ಒಂದಕ್ಕಿಂತ ಹೆಚ್ಚು ಸಲ ತೀರ್ಪು ಕೊಡಲಾಗಿದ್ದರೂ ಇಂತಹ ತಪ್ಪು ಪುನಃ ಪುನಃ ಘಟಿಸುತ್ತದೆ. ಸದಸ್ಯರು ತಪ್ಪಿ ನಡೆದಂತೆ ಒಂದೆರಡು ಪ್ರಸಂಗಗಳಲ್ಲಿ ಶಾಸನ ಸಭೆಯ ಅಧ್ಯಕ್ಷರೂ ತಮಗರಿಯದಂತೆ ಪ್ರಮಾದಕ್ಕೆ ಎಡೆಕೊಟ್ಟ ಉದಾಹರಣೆ ಸಿಗುತ್ತದೆ—ಆಂಧ್ರ ರಾಜ್ಯದ ಶಾಸನ ಸಭೆಯಲ್ಲಿ ಸರಕಾರದ ಅಧಿಕಾರಿಗಳೊಡನೆ ಬೆಳೆಸುವ ಸಂಪರ್ಕದ ವಿಷಯದಲ್ಲಿ ಅಧ್ಯಕ್ಷರು ಕೊಟ್ಟ ತೀರ್ಮಾನವು ಪ್ರತಿಪಕ್ಷದವರಿಗೆ ಅಪ್ರಿಯವಾಗಿ ತೋರಿಬಂತು; ಮತ್ತು ಅವಿಶ್ವಾಸದ ಗೊತ್ತುವಳಿಯ ಮೂಲಕ ಅಧ್ಯಕ್ಷರ ಉಚ್ಚಾಟನೆ ಮಾಡುವ ನಿಷ್ಫಲ ಪ್ರಯತ್ನಕ್ಕೂ ಅವರು ಕೈಹಾಕಿದರು. ಇತ್ತೀಚಿನ ಉದಾಹರಣೆಯಾಗಿ, ರಾಜಸ್ಥಾನದ ಶಾಸನ ಸಭೆಯಲ್ಲಿ ನಡೆದೊಂದು ಪ್ರಸಂಗವನ್ನು ಉಲ್ಲೇಖಿಸಬಹುದು. ಜಹಾಗೀರಿದಾರಿಯ ನಿರ್ಮೂಲನ ಮಸೂದೆಯಲ್ಲಿ ಉಕ್ತವಾದ ಪರಿಹಾರದ ಕಲಮು ಚರ್ಚೆಗೆ ಬಂದಾಗ, ಜಹಾಗೀರದಾರ ವರ್ಗಕ್ಕೆ ಸೇರಿದ ಸದಸ್ಯರು ಮತದಾನದಲ್ಲಿ ತಾಟಸ್ಥ್ಯ ವಹಿಸುವುದು ಅಪೇಕ್ಷಣೀಯವೆಂದು ಅಧ್ಯಕ್ಷರು ಅಭಿಪ್ರಾಯಪಟ್ಟರು. ರಾಜ್ಯಾಂಗ ಘಟನೆಯಲ್ಲಿ ಆಸ್ತಿಗಳನ್ನು ಪಡೆದಿರುವುದೂ ಅನುಭವಿಸುವುದೂ ಮೂಲಭೂತ ಹಕ್ಕಾಗಿರುತ್ತದೆ; ಮತ್ತು ಶಾಸನ ಸಭೆಗಳ ಚುನಾವಣೆಗೆ ನಿಂತು ಆರಿಸಿ ಬರಲು ಇದು ಆತಂಕವೆನಿಸುವುದಿಲ್ಲ. ಎಂದ ಮೇಲೆ ಜಾಗೀರದಾರ ಸದಸ್ಯರನ್ನು ಅವರ ಹಿತಗಳನ್ನು ರಕ್ಷಿಸುವ ಉದ್ದೇಶದಿಂದಲೇ ಜನತೆ ಆರಿಸಿ ಶಾಸನ ಸಭೆಗೆ ಕಳಿಸಿದೆಯೆಂದು ಅರ್ಥ ಮಾಡಿದರೂ ತಪ್ಪಿಲ್ಲ. ಹೀಗಿರುತ್ತಾ ಅವರಿಗೆ ಮತದಾನದ ಅಧಿಕಾರವನ್ನು, ಅಪ್ರತ್ಯಕ್ಷ ರೂಪದಿಂದಲೇ ಆಗಲಿ, ನಿರಾಕರಿಸುವುದು ಸರಿಯಲ್ಲ ಎಂದು ಅಭಿಪ್ರಾಯಪಡಲಾಗುತ್ತದೆ. ಶಾಸನ ಸಭೆಯ ನಿಯಮಾವಳಿಗಳು ರಾಜ್ಯಾಂಗ ಘಟನೆಗೆ ಅಧೀನವಿರುತ್ತವೆಂದು ಸ್ಪಷ್ಟ ಉಲ್ಲೇಖವಿರುವಾಗ—ಪ್ರಜಾಪ್ರಭುತ್ವಕ್ಕೆ ಒಪ್ಪದ ನಿರ್ಣಯಗಳನ್ನು ಅಧ್ಯಕ್ಷನಾದವನು ಹೇರುವುದು ಅನುಚಿತವೆಂದು ಕಂಡುಬರುವುದು. ಇಂತಹ ನ್ಯೂನಾತಿರೇಕಗಳನ್ನು ಮೊದಲು ಸರಿಪಡಿಸಿಕೊಳ್ಳಬೇಕು; ಮತ್ತು ಪ್ರಜಾಸತ್ತಾತ್ಮಕ ಪದ್ಧತಿಯನ್ನು ಎತ್ತಿಹಿಡಿದು, ಪ್ರತಿಯೊಂದೂ ಸಂದರ್ಭದಲ್ಲಿ, ಅದು ಎಷ್ಟೇ ಬಿಕ್ಕಟ್ಟಿನದಾಗಿರಲಿ, ಪ್ರಜಾಪ್ರಭುತ್ವದ ಆರೈಕೆಯನ್ನು ಮಾಡಿ, ಪೋಷಿಸಬೇಕು—ಶ್ರೀನಗರದಲ್ಲಿ ಸೇರಿದ ಪರಿಷತ್ತು ಇಂತಹ ಕೆಲವು ಮಹತ್ವದ ವಿಷಯಗಳ ಮೇಲೆ ವಿಚಾರ ವಿನಿಮಯ ನಡೆಸಿ, ಉಚಿತ ಸಂಪ್ರದಾಯವನ್ನು ಹಾಕಿಕೊಡಲೆಂದು ಬಯಸುತ್ತೇವೆ.

ಲೇನಿಯಲ ಸರಕಾರದ ರಾಜೀನಾಮೆ

ಯೂಸಂ ವಸಾಹತಿನ ವಿಮೋಚನಾ ಕಾರ್ಯ

ಮಂತ್ರಿಮಂಡಳಗಳ ಪತನಕ್ಕೆ ಹೆಸರುವಾಸಿಯಾದ ಫ್ರಾನ್ಸಿನಲ್ಲಿ ಇದೀಗ ಲೇನಿಯಲರ ಸರಕಾರವು ರಾಜೀನಾಮೆಯನ್ನು ಒಪ್ಪಿಸಬೇಕಾಗಿ ಬಂತು. ಕಳೆದ ಹನ್ನೊಂದು ತಿಂಗಳುಗಳಿಂದ ಅಧಿಕಾರ ಸ್ಥಾನದಲ್ಲಿದ್ದ ಈ ಸರಕಾರದ ಇಂಡೋಚೀನ ಧೋರಣೆಯು ಫ್ರಾನ್ಸಿನ ಜನತಾ ಪ್ರತಿನಿಧಿಗಳಲ್ಲಿ ಹೆಚ್ಚಿನವರಿಗೆ ಮೆಚ್ಚುಗೆಯಾಗದುದರಿಂದ, ಸರಕಾರವು ಪತನವನ್ನು ಹೊಂದಬೇಕಾಯಿತು. ದಿನಾಂಕ ೧೦ರಂದು ಇಂಡೋಚೀನ ಚರ್ಚೆಯ ಕುರಿತು ಸರಕಾರವು ನೀಡಿದ ಹೇಳಿಕೆಗೆ ಬೆಂಬಲ ಕೊಡಲು ಫ್ರೆಂಚ ಪಾರ್ಲಿಮೆಂಟು ಬಹುಮತಗಳಿಂದ ನಿರಾಕರಿಸಿತು. ಇಂಡೋಚೀನದಲ್ಲಿ ಯುದ್ಧ ವಿರಾಮವನ್ನು ಸಾಧಿಸಲು ಸರಕಾರವು ಪ್ರಯತ್ನಶೀಲವಿರುತ್ತದೆಂಬ ವಿಶ್ವಾಸವನ್ನು ಪ್ರಕಟಿಸಬೇಕೆಂಬ ಸೂಚನೆಗೆ ಯಾರೂ ಬೆಂಬಲ ಕೊಡಲಿಲ್ಲ—ಮಾತ್ರವಲ್ಲ, ಸಂರಕ್ಷಣಾ ಮಂತ್ರಿಗಳನ್ನು ಕುರಿತು "ನೀವು ಮೊದಲು ಹೊರಗೆ ಬರಬೇಕು. ಅಂದರೆ ವಾತಾವರಣವು ಸುಧಾರಿಸುವುದು" ಎಂದು ಪ್ರತಿಪಕ್ಷದವರು ಹೇಳುವುದಕ್ಕೆ ಹಿಂಜರಿಯಲಿಲ್ಲ. ಇದರಿಂದಾಗಿ ಪ್ರಧಾನಿ ಲೇನಿಯಲರು ಸರಕಾರದ ಮೇಲೆ ವಿಶ್ವಾಸವನ್ನು ಸೂಚಿಸುವ ಒಂದು ಗೊತ್ತುವಳಿಯನ್ನು ದಿನಾಂಕ ೧೨ರಂದು ಮಂಡಿಸಲು ನಿಶ್ಚಯಿಸಿದರು. ಈ ಗೊತ್ತುವಳಿಯೂ ತಿರಸ್ಕೃತವಾಯಿತು. ಲೇನಿಯಲರು ತಮ್ಮ ಸರಕಾರದ ನೀತಿಯನ್ನು ಸಮರ್ಥಿಸಲು ಹಾಗು ಪ್ರತಿಪಕ್ಷದವರ ವಿಶ್ವಾಸವನ್ನು ಗಳಿಸಿಕೊಳ್ಳಲು ತುಂಬ ಪ್ರಯತ್ನಪಟ್ಟರು. ಆದರೆ ಅವರ ಭಾಷಣಕ್ಕೆ ಪ್ರತಿಪಕ್ಷದವರಿಂದ ಸ್ವಾಗತ ದೊರೆಯಲಿಲ್ಲ—ಬದಲು ನಿಂದೆಯ ನುಡಿಗಳೇ ಕೇಳಬಂದವು. "ಅಧಿಕಾರದಲ್ಲಿರುವ ಸರಕಾರವನ್ನು ಉರುಳಿಸುವುದು ಕಷ್ಟವಲ್ಲ—ಆದರೆ ಹೊಸ ಸರಕಾರವನ್ನು ರಚಿಸುವುದೇ ಕಠಿಣ" ಎಂಬ ಲೇನಿಯಲರ ಎಚ್ಚರಿಕೆಯ ಮಾತು ಸಹ ನಿಷ್ಫಲವಾಯಿತು.

ಹೊಸ ಸರಕಾರದ ರಚನೆ

ಪ್ರತಿಪಕ್ಷದವರಿಗೆ ದೊರೆತದ್ದು ೩೦೬ ಮತಗಳು ಮಾತ್ರ—ಅವರಿಗೆ ನಿಚ್ಚಳ ಬಹುಮತಕ್ಕೆ ಅಗತ್ಯವಿರುವ ೩೧೪ ಮತಗಳು ದೊರಕುತಿದ್ದರೆ ಲೇನಿಯಲರ ಸರಕಾರವು ರಾಜೀನಾಮೆಯನ್ನು ಕೊಡುವುದು ಅನಿವಾರ್ಯವೆನಿಸುತಿತ್ತು. ಅಂತಹ ಬಹುಮತ ದೊರಕದುದರಿಂದ ಸರಕಾರವು ರಾಜೀನಾಮೆಯನ್ನು ಕೊಡಲೇಬೇಕಾದ ಅಗತ್ಯವಿದ್ದಿಲ್ಲ. ಆದರೆ, ಪಾರ್ಲಿಮೆಂಟಿನ ವಿಶ್ವಾಸ ಕಳೆದುಕೊಂಡವನು ಅಧಿಕಾರ ಸ್ಥಾನದಲ್ಲಿದ್ದು ಪ್ರಯೋಜನವೇನು? ಆದುದರಿಂದ ಲೇನಿಯಲರು ರಾಜೀನಾಮೆಯನ್ನು ಅಧ್ಯಕ್ಷ ರೇನೆ ಕೋಟಿಯವರಿಗೆ ಒಪ್ಪಿಸಿದರು. ಅಧ್ಯಕ್ಷರು ಒಡನೆಯೇ ಇದನ್ನು ಸ್ವೀಕರಿಸಲಿಲ್ಲ—ಅವರು ೪೮ ತಾಸುಗಳ ಕಾಲಾವಧಿಯನ್ನು ತೆಗೆದುಕೊಂಡು ಮಂತ್ರಿಮಂಡಲವನ್ನು ರಚಿಸಬಲ್ಲ ಹೊಸ ಧುರೀಣನನ್ನು ಹುಡುಕತೊಡಗಿದರು. ರ್‍ಯಾಡಿಕಲ್ ಪಕ್ಷದಲ್ಲಿ ಎಡ ಗುಂಪಿಗೆ ಸೇರಿದ ಪೆರ್ರಿ ಮೆಂಡಿಸ್ ಫ್ರಾನ್ಸ್ ಎಂಬವರು ಹೊಸ ಪ್ರಧಾನರಾಗಲು ಯೋಗ್ಯರೆಂದು ಅಧ್ಯಕ್ಷರಿಗೆ ಕಂಡು ಬಂದು, ಅವರಿಗೆ ಆಹ್ವಾನವನ್ನು ನೀಡಲಾಯಿತು. ಮೆಂಡಿಸ್ ಫ್ರಾನ್ಸರು ತಮಗಿತ್ತ ಆಮಂತ್ರಣವನ್ನು ಸ್ವೀಕರಿಸಿದುದರಿಂದ, ಈಗ ಲೇನಿಯಲರ ರಾಜೀನಾಮೆಯನ್ನು ಅಧ್ಯಕ್ಷರು ಅಂಗೀಕರಿಸಿರುವರು. ಮೆಂಡಿಸ್ ಫ್ರಾನ್ಸರು ಇಂಡೋಚೀನದಲ್ಲಿ ಯುದ್ಧವನ್ನು ನಿಲ್ಲಿಸಬೇಕೆಂದೂ ವೀಟಮಿನರೊಡನೆ ನೇರವಾದ ಮಾತುಕತೆಗಳನ್ನು ತೊಡಗಬೇಕೆಂದೂ ವಾದಿಸುತಿದ್ದರು. ಇಂಡೋಚೀನದ ಪ್ರಶ್ನೆಯನ್ನು ಸೈನಿಕದೃಷ್ಟಿಯಿಂದ ಮಾತ್ರ ವಿಚಾರಿಸುವುದಕ್ಕೆ ಫ್ರೆಂಚ ಜನತೆಯ ವಿರೋಧ ಕಂಡು ಬರುತ್ತದೆ. ವ್ಯಾವಹಾರಿಕ ಬುದ್ಧಿಯಿಂದ ಸಮಸ್ಯೆಯನ್ನು ಬಿಡಿಸಲು ಹೆಣಗುವ ಸರಕಾರವನ್ನು ಫ್ರಾನ್ಸು ಇಂದು ಅಪೇಕ್ಷಿಸುತ್ತದೆ. ಆ ಕಾರಣ ಇತರ ಪಕ್ಷಗಳ ಸಹಕಾರವನ್ನು ಪಡೆದುಕೊಂಡು ಮೆಂಡಿಸ್ ಫ್ರಾನ್ಸರು ಸಮರ್ಥ ಮಂತ್ರಿ ಮಂಡಳವನ್ನು ಇಷ್ಟರಲ್ಲೇ ರಚಿಸುವ ನಿರೀಕ್ಷೆ ಇದೆ.

ಜಿನೇವಾದ ಮಾತುಕತೆ

ಫ್ರೆಂಚ ಸರಕಾರದ ಪತನದಿಂದಾಗಿ, ಜಿನೇವ ಪರಿಷತ್ತಿನ ಮೇಲೆ ವಿಪರೀತ ಪರಿಣಾಮವಾಗುವುದಂತೂ ನಿಶ್ಚಯ—ಸಾಮಾನ್ಯವಾಗಿ ಮಂತ್ರಿ ಮಂಡಳದ ಪತನಕ್ಕೆ ಫ್ರಾನ್ಸಿನಲ್ಲಿ ವಿಶೇಷ ಮಹತ್ವವಿಲ್ಲದಿದ್ದರೂ ಜಿನೇವದಲ್ಲಿ ಪರಿಷತ್ತು ನಡೆದಿರುವ ಆಯಕಟ್ಟಿನ ಸಮಯದಲ್ಲಿ ಈ ಪ್ರಮೇಯ ಘಟಿಸಿರುವುದರಿಂದ ಮುಂದೇನು ಎಂಬ ಸಮಸ್ಯೆ ತಲೆದೋರಿದೆ. ಜಿನೇವದಲ್ಲಿ

In the Court of the District Munsif of Hosdurg.

O. S. No. 753/1953

N. B. Karunakaran & others ... Plaintiffs.

1. Kunhamma, niece of Choi Maistry.
2. Bolan, son of Kunhamma, Pallikara Village. ... ...

Defendants 69 & 70.

Take notice that the application for sale service against the said defendants has been ordered, and the suit stands posted to 30 6 1954 for their appearance.

Sd, C. M. Kunhambu Nair,
Vakil for Plaintiffs.

Hosdurg, 14-6-54.

ಸರಕಾರದ ಪ್ರತಿನಿಧಿಯಾಗಿ ಕೆಲಸ ಮಾಡುವ ಬಿಡಾಲರು ಇನ್ನು ಮುಂದೆ ಯಾವುದೇ ವ್ಯವಹಾರವನ್ನು ಮಾಡಲು ಸಾಧ್ಯವಿಲ್ಲ. ಹೊಸ ಸರಕಾರದಲ್ಲಿ ಅವರಿಗೆ ಸ್ಥಾನ ಸಿಕ್ಕಿದರೆ, ಆ ಮಾತು ಬೇರೆ— ಅಂತಾಗುವ ವರೆಗೆ, ಮಾತುಕತೆಯನ್ನು ಮುಂದುವರಿಸುವುದು ನಿಷ್ಪ್ರಯೋಜಕ. ಬ್ರಿಟಿಷ ವಿದೇಶ ಮಂತ್ರಿ ಈಡನ್ನರು ಇಂಡೋಚೀನದ ಬಗ್ಗೆ ಅಧಿವೇಶನವನ್ನು ಮುಂದರಿಸಬೇಕೆಂದು ಮೊಲೊಟೋವರಿಗೆ ಹೇಳಿದ್ದಾರೆ—ಆದರೂ ಇದೇ ಮಂಗಳವಾರ (ದಿನಾಂಕ ೧೫) ಒಂದು ಅಧಿವೇಶನವು ಸೇರಲಿದ್ದು, ಇಲ್ಲಿ ಮೊಲೊಟೋವರು ಪಾಶ್ಚಾತ್ಯ ರಾಷ್ಟ್ರಗಳ ಮೇಲೆ ಕೆಲವೊಂದು ಆರೋಪಗಳನ್ನು ಹೊರಿಸುವರೆಂದು ಹೇಳಲಾಗುತ್ತದೆ. ಫ್ರೆಂಚ ಸರಕಾರದ ಪತನವಲ್ಲದಿದ್ದರೂ ಜಿನೇವಾ ಪರಿಷತ್ತು ಯಶಸ್ಸು ಹೊಂದುವ ಆಶೆ ಇರಲಿಲ್ಲ- ಈಗ ಫ್ರೆಂಚ ಮಂತ್ರಿಮಂಡಳದ ಪತನದ ನೆಪ ದೊರೆತಿರುವುದರಿಂದ, ದೂರ ಪ್ರಾಚ್ಯ ಸಮ್ಮೇಳನವನ್ನು ಸ್ಥಗಿತಗೊಳಿಸಿ, ಮುಖ ಉಳಿಸಿಕೊಳ್ಳಲು ಅಡ್ಡಿಯಿಲ್ಲ. ಪಾಶ್ಚಾತ್ಯ ಪ್ರತಿನಿಧಿಗಳಿಗೂ ಕಮ್ಯುನಿಷ್ಟ ರಾಷ್ಟ್ರಗಳಿಗೂ ಇದ್ದ ಭಿನ್ನಾಭಿಪ್ರಾಯವು ಒಂದಿಷ್ಟೂ ಬಗೆಹರಿದಿಲ್ಲ—ಈ ಕುರಿತು ಭಾರತದ ಕೃಷ್ಣ ಮೆನೊನ್ನರು ನಡೆಸಿದ ಖಾಸಗಿ ಮಾತುಕತೆಗಳೂ ಪ್ರಯತ್ನಗಳೂ ನಿರೀಕ್ಷಿತ ಪರಿಣಾಮವನ್ನು ಉಂಟುಮಾಡಲಿಲ್ಲ. ಮೆನೊನ್ನರು ಈಗ ನ್ಯೂಯಾರ್ಕಿಗೆ ಹೋಗುವ ದಾರಿಯಲ್ಲಿ ಲಂಡನಿನಲ್ಲಿ ಇಳಿದಿದ್ದು "ಇಂಡೋಚೀನದ ಕುರಿತು ಜಿನೇವದಲ್ಲಿ ನಡೆದ ಮಾತುಕತೆಗಳ ವಿಷಯದಲ್ಲಿ ಅಭಿಪ್ರಾಯ ಸೂಚಿಸುವುದರಿಂದ ಪ್ರಯೋಜನವಿಲ್ಲ" ಎಂದು ಸುದ್ದಿಗಾರರಿಗೆ ಹೇಳಿದರು.

ಭಿನ್ನಾಭಿಪ್ರಾಯ

ಇದು ನಿರಾಶೆಯನ್ನೇ ಧ್ವನಿಸುತ್ತದೆ— ಕಳೆದ ಎರಡು ವಾರಗಳಿಂದ ಅದೆಯನ್ನು ಕಟ್ಟಿಕೊಳ್ಳುವುದು ಕಾಲಹರಣಕ್ಕೆ ಕಾರಣವಾದೀತೆಂಬ ಅಭಿಪ್ರಾಯವನ್ನು ಪಾಶ್ಚಾತ್ಯ ಪ್ರತಿನಿಧಿಗಳು ವ್ಯಕ್ತಗೊಳಿಸುತ್ತಿದ್ದರು. ಮುಖ್ಯವಾದ ಭಿನ್ನಾಭಿಪ್ರಾಯವು ಈ ಪ್ರಕಾರ ಇದೆ—ಕೊರಿಯದಲ್ಲಿ ಸಂಯುಕ್ತ ರಾಷ್ಟ್ರಸಂಘದ ಮೇಲ್ವಿಚಾರಣೆಯಲ್ಲಿ ಚುನಾವಣೆಗಳನ್ನು ನಡೆಸುವುದು ಕಮ್ಯುನಿಸ್ಟರಿಗೆ ಸಮ್ಮತವಿಲ್ಲ; ಇಂಡೋಚೀನದಲ್ಲಿ ಯುದ್ಧ ವಿರಾಮದ ಮೇಲ್ವಿಚಾರಣೆಯು ಹೊಣೆ ಹೊರುವ ತಟಸ್ಥ ಮಂಡಳದಲ್ಲಿ ಕಮ್ಯುನಿಷ್ಟ ರಾಷ್ಟ್ರಗಳಿಗೂ ಪ್ರವೇಶವಿರಬೇಕಲ್ಲದೆ, ಪ್ರತಿಬಂಧಾಧಿಕಾರವನ್ನು ಪ್ರಯೋಗಿಸಲೂ ಅವಕಾಶವಿರಬೇಕು ಎಂದು ರಶಿಯಾ—ಚೀನಗಳ ಅಭಿಪ್ರಾಯ. ಇಂಡೋಚೀನ ಯುದ್ಧದಲ್ಲಿ ಭಾಗವಹಿಸಿರದ ಭಾರತ ಪಾಕಿಸ್ತಾನಗಳು ತಟಸ್ಥ ರಾಷ್ಟ್ರಗಳಾಗಬಹುದಾದರೆ, ಪೋಲೆಂಡ, ಝೆಕೊಸ್ಲೊವಾಕಿಯಾಗಳಿಗೂ ಅಂತಹ ಮನ್ನಣೆ ಸಲ್ಲುವುದರಲ್ಲಿ ನ್ಯಾಯವುಂಟೆಂದು ಕಮ್ಯುನಿಸ್ಟರು ಹೇಳುತ್ತಾರೆ. ಪಾಶ್ಚಾತ್ಯರಿಗೆ ಇದು ಸರಿ ಕಾಣುವುದಿಲ್ಲ. ರಶಿಯಾ ಚೀನಾಗಳು ದುರಾಗ್ರಹವನ್ನು ಬಿಟ್ಟುಗೊಡಬೇಕು; ಅಥವಾ ಭಿನ್ನಾಭಿಪ್ರಾಯಗಳನ್ನು ನಿವಾರಿಸಲು ಸಾಧ್ಯವಾಗಲಿಲ್ಲವೆಂದು ಪ್ರಾಮಾಣಿಕವಾಗಿ ಜಗತ್ತಿನೆದುರು ಒಪ್ಪಿಕೊಂಡು, ಸೋಲನ್ನು ಸ್ವೀಕರಿಸಿ, ಪರಿಷತ್ತನ್ನು ವಿಸರ್ಜಿಸಬೇಕು—ಎಂಬುದಾಗಿ ಈಡನ್ನರು ಸ್ಪಷ್ಟವಾಗಿಯೇ ಹೇಳಿದ್ದಾರೆ. ಆಸ್ಟ್ರೇಲಿಯಾದ ವಿದೇಶ ಮಂತ್ರಿ ರಿಚಾರ್ಡ ಕೇಸಿಯವರೂ ಕಮ್ಯುನಿಷ್ಟರ ಮನೋಭಾವವು ಪರಿವರ್ತನೆಗೊಳ್ಳದಿದ್ದರೆ ಜಿನೇವಾ ಪರಿಷತ್ತಿನ ಉದ್ದೇಶ ಕೈಗೂಡಲಾರದೆಂದು ತಿಳಿಸಿದ್ದಾರೆ.

ವಿಷಮ ವಾತಾವರಣ

ಒಟ್ಟಾರೆ—ಕಾಲಹರಣದ ಬಯಕೆ ಇಲ್ಲದಿದ್ದರೆ, ಜಿನೇವಾದ ಪರಿಷತ್ತು ನಿಲ್ಲಿಸಲ್ಪಡುವುದೇ ಲೇಸೆಂದು ಹೇಳಲಾಗುತ್ತದೆ. ಅಮೇರಿಕವಂತೂ ಇದನ್ನು ಮನಃಪೂರ್ವಕ ಸ್ವಾಗತಿಸುತ್ತದೆ. ಇಂಡೋಚೀನ ಸಮರದಲ್ಲಿ ನೇರಾಗಿ ಧುಮುಕಲು ಅಮೇರಿಕದ ಸರಕಾರ ಅಷ್ಟಾಗಿ ಆತುರ ತೋರಿಸದಿದ್ದರೂ ಕಮ್ಯುನಿಸ್ಟರ ಹುಂಡಾಟವು ಇಂಡೋಚೀನದಲ್ಲಿ ಪ್ರಬಲಿಸಿದರೆ ಸಂಯುಕ್ತರಾಷ್ಟ್ರ ಸಂಘಕ್ಕೆ ದೂರೊಯ್ದು, ಈ ಸಂಸ್ಥೆಯ ಆಶ್ರಯದಲ್ಲಿ ಕಮ್ಯುನಿಸ್ಟರಿಗೆ ಪ್ರತಿಭಟನಾತ್ಮಕ ಯುದ್ಧವನ್ನು ಕೊಡಲು ಅದು ಸಿದ್ಧವಾಗಿಯೇ ಇದೆ. ಇಂಡೋಚೀನದ ಪರಿಸ್ಥಿತಿಯು ಈಗ ತುಂಬ ವಿಷಮಾವಸ್ಥೆಯನ್ನು ಮುಟ್ಟಿದೆ— ಕೆಂಪು ನದಿಯ ಮುಖಜ ಭೂಮಿಯಲ್ಲಿ ಹಳ್ಳಿಗಳೆಲ್ಲ ಒಂದೊಂದಾಗಿ ವಿಯಟಮಿನರ ವಶವಾಗುತ್ತಿವೆಯಲ್ಲದೆ, ಹೆನ್ಯೊ ನಗರದತ್ತ ವಿಯಟಮಿನ ಪಡೆ ಧಾವಿಸಿ ಬರುತ್ತವೆ. ಲಾವೋಸ ಮತ್ತು ಕಂಬೋಡಿಯಾಗಳಿಗೂ ಇದರಿಂದ ಅಪಾಯವಿದೆಯೆಂದು ಮಿಲಿಟರಿ ತಜ್ಞರು ಎಚ್ಚರಿಕೆ ಕೊಡುತ್ತಾರೆ. ಫ್ರಾನ್ಸು ಹೊಸ ಸೇನಾಧಿಪತಿಯನ್ನು ಇಂಡೋಚೀನದಲ್ಲಿ ನೇಮಿಸಿದೆ—ಅವನ ಅಧಿಕಾರವನ್ನು ಬಹಳಷ್ಟು ಹೆಚ್ಚಿಸಿದೆ. ಆದರೆ ಹಿಂದೆಯೇ ಹೇಳಿದಂತೆ, ಸೈನಿಕ ದೃಷ್ಟಿಯೊಂದರಿಂದಲೇ ಸಮಸ್ಯೆ ಪರಿಹಾರವಾಗದು. ಫ್ರೆಂಚರು ಅಮೇರಿಕದ ಪ್ರಭಾವಲಯದಿಂದ ತುಸುವಾದರೂ ಹೊರಗಿರಬೇಕು — ಸ್ವತಂತ್ರ ದೃಷ್ಟಿಯಿಂದ ವಿಚಾರಮಾಡಬೇಕು. ಇದು ಹೊಸ ಸರಕಾರ ರಚಿಸುವ ಮೆಂಡಿಸ್ ಫ್ರಾನ್ಸರಿಗೂ ಒಪ್ಪಿಗೆ ಇಲ್ಲ—ಮಿತ್ರ ರಾಷ್ಟ್ರಗಳ ಸಂಪರ್ಕವನ್ನು ಬಿಟ್ಟುಗೊಡುವುದು ಅಸಾಧ್ಯವೆಂದೇ ಅವರ ಹೇಳಿಕೆ.

ಯಾನಮಿನ ವಿಮೋಚನೆ

ಅತ್ತ ಲೇನಿಯಲರ ಸರಕಾರ ಪತನ ಹೊಂದಿದಾಗ—ಇತ್ತ ಭಾರತದಲ್ಲಿರುವ ಫ್ರೆಂಚ ಸ್ವಾಸ್ಥ್ಯಗಳಲ್ಲಿ ಒಂದಾದ ಯಾನಮಿನಲ್ಲಿ ಸ್ವಯಂ ಸೇವಕರು ಫ್ರೆಂಚ ಆಳಿಕೆಯನ್ನು ಕೊನೆಗಾಣಿಸಿ ಯಾನಮಿನ ವಿಮೋಚನೆಯನ್ನು ಸಾಧಿಸಿದರು. ಆಂಧ್ರ ರಾಜ್ಯದಿಂದ ಸುತ್ತುವರಿಯಲ್ಪಟ್ಟ ಐದು ಚದರ ಮೈಲು ವಿಸ್ತೀರ್ಣವುಳ್ಳ ಹಾಗು ಆರು ಸಾವಿರ ನಾಗರಿಕರನ್ನು ಪಡೆದ ಈ ವಸಾಹತು ಪ್ರದೇಶದಲ್ಲಿ ಕಳೆದ ಕೆಲವು ವಾರಗಳಿಂದ ಫ್ರೆಂಚ ಆಡಳಿತಾಧಿಕಾರಿಗಳು ವ್ಯವಸ್ಥಿತವಾದ ಹಿಂಸಾ ಕೃತ್ಯಗಳನ್ನು ಕೈಗೊಂಡು ಪ್ರಜೆಗಳನ್ನು ಸತಾಯಿಸುತ್ತಿದ್ದರು. ಪ್ಯಾರಿಸಿನಲ್ಲಿ ಭಾರತ ಹಾಗು ಫ್ರೆಂಚ ಸರಕಾರಗಳ ನಡುವೆ ಮಾತುಕತೆ ನಡೆಯುತ್ತಿದ್ದಂತೆಯೇ ಯಾನಮಿನಲ್ಲಿ ಅಧಿಕಾರಿಗಳೂ ಗುಂಡಾಗಳೂ ಸೇರಿ ನಾಗರಿಕರಿಗೆ ಉಪದ್ರವವನ್ನು ಕೊಡತೊಡಗಿದರು. ಇದರಿಂದ ನೊಂದುಕೊಂಡ ಯಾನಮಿನ ನೂರಾರು ನಿವಾಸಿಕರು ಭಾರತದ ಪ್ರದೇಶಕ್ಕೆ ಓಡಿಬಂದು, ಅಲ್ಲಿ ಆಶ್ರಯ ಹೊಂದಿದರು. ಕಳೆದ ವಾರಾಂತ್ಯದಲ್ಲಿ ಸ್ವಯಂ ಸೇವಕರು ಹಾಗು ಯಾನಮಿನ ಮೇಯರ ಮುಂತಾದ ಜನತಾ ಪ್ರತಿನಿಧಿಗಳು ಶಾಂತ ರೀತಿಯಿಂದ ಆಡಳಿತವನ್ನು ಫ್ರೆಂಚರ ಕೈಯಿಂದ ಕಸಿದುಕೊಂಡರು. ನೆಹರೂರವರಿಗೆ ಇವರೊಂದು ತಂತಿ ಕಳುಹಿಸಿ, ಭಾರತದಲ್ಲಿ ಯಾನಮನ್ನು ವಿಲೀನಗೊಳಿಸಬೇಕೆಂದು ಪ್ರಾರ್ಥಿಸಿದ್ದಾರೆ. ಆದರೆ, ಭಾರತವು ಹಾಗೆ ಮಾಡಲು ಬರುವಂತಿಲ್ಲ—ಈ ವಿಷಯದಲ್ಲಿ ಫ್ರೆಂಚ ಸರಕಾರದೊಡನೆಯೇ ಮಾತುಕತೆ ನಡೆಯಬೇಕಾಗಿರುತ್ತದೆ. ಪ್ಯಾರಿಸಿನ ಸಂಧಾನವು ಮುರಿದರೂ, ಫ್ರೆಂಚ ಸರಕಾರವು ಪುನಃ ಮಾತುಕತೆಗಳನ್ನು ತೊಡಗಲು ಆತುರ ತೋರಿಸುತ್ತಿದೆಯೆಂದೂ ಫ್ರೆಂಚ ಘಟನೆಯ ಉದ್ದೇಶಕ್ಕೆ ಭಂಗ ಬಾರದಂತೆ, ಜನಮತಗಣನೆ ಇಲ್ಲದೆಯೇ ಅಧಿಕಾರದ ಹಸ್ತಾಂತರವನ್ನು ಸಾಧಿಸಲು ಅದು ಉಪಾಯ ಯೋಚಿಸುತ್ತಿದೆಯೆಂದೂ ಕಲ್ಲಿಕೋಟೆಯ ಮೇಯರ ಫಕೀರಿ ಸ್ವಾಮಿ ಪಿಳ್ಳೆ ಹೇಳಿದ್ದಾರೆ. ಲೇನಿಯಲರ ಸರಕಾರದ ಪತನದಿಂದ ಈ ನಿರ್ಧಾರದ ಮೇಲೆ ಪರಿಣಾಮವಾಗಲಾರದೆಂದೂ ಅವರ ಅಭಿಪ್ರಾಯ.

ಉಡುಪಿ.

ಮಂಜೆನಾಡು ಸಮ್ಮೇಳನದ ಸ್ಥಾಯಿ ಸಮಿತಿಗೆ—ನಮ್ಮ ಜಿಲ್ಲೆಯಿಂದ ಶ್ರೀಗಳಾದ ಟಿ. ಎ. ಪೈ, ಎಂ. ಎಲ್. ಎ, ಕೆ. ವೆಂಕಟ್ರಮಣ ಗೌಡ, ಎಂ. ಎಲ್. ಎ, ಜಿ. ಕೆ. ಗೋವಿಂದ ಭಟ್ ಇವರನ್ನು ಪ್ರತಿನಿಧಿಗಳಾಗಿ ಅಧ್ಯಕ್ಷ ಶ್ರೀ ಎಸ್. ನಿಜಲಿಂಗಪ್ಪನವರು ನಾಮಕರಣ ಮಾಡಿದ್ದಾರೆಂದು ತಿಳಿದು ಬರುತ್ತದೆ.

ವಂಚನೆಗೆ ಶಿಕ್ಷೆ—ಬಿನ್ನಿ ಬಟ್ಟೆ ಕಂಪೆನಿಯ ಪ್ರತಿನಿಧಿಯೆಂದು ನಟಿಸಿ ಜಿಲ್ಲೆಯ ಹಲವರಿಂದ ಆರ್ಡರ್ ಹಿಡಿದು ಮುಂಗಡ ಹಣ ಪಡೆದು ವಂಚಿಸಿದ ತಪ್ಪಿಗಾಗಿ ಶ್ರೀ ಜಿ. ಎಫ್. ಮಿಲ್ಸನ್ ಎಂಬ ತರುಣನಿಗೆ ತಾ. 10 ರಲ್ಲಿ ಸಬ್ ಡಿವಿಜನ್ ಮೆಜಿಸ್ಟ್ರೇಟ್ ಶ್ರೀ ಎಸ್. ಯು. ಪರಶುರಾಮ ನಾಯ್ಕರು ಒಂದೂವರೆ ವರ್ಷದ ಕಠಿಣ ಶಿಕ್ಷೆಯನ್ನು ವಿಧಿಸಿರುವರು. ಈತನು ಮೊದಲೂ ಇಂತಹದೇ ವಂಚನೆ ನಡೆಸಿ ಕಾರಾಗೃಹ ವಾಸ ಕಂಡಿದ್ದನೆಂದೂ ತಿಳಿದು ಬರುತ್ತದೆ.

ರಾಷ್ಟ್ರ ಭಾಷಾ ಶಿಕ್ಷಣ ಶಿಬಿರ—ದಲ್ಲಿ ಇದೇ ಜುಲೈ 1ರಿಂದ ಅಕ್ಷರಾಭ್ಯಾಸದಿಂದ ತೊಡಗುವ ಹೊಸ ಪ್ರಾಥಮಿಕ ವರ್ಗವನ್ನು ತೆರೆಯಲಾಗುತ್ತದೆ. ಹಿಂದೀ ಕಲಿಯಲು ಅಪೇಕ್ಷಿಸುವವರು ಸಂಚಾಲಕ ಶ್ರೀ ಲಕ್ಷ್ಮೀನಾರಾಯಣ ಶೆಣೈಯವರನ್ನು ಕಂಡು ಮಾತನಾಡಬಹುದು.

ವಿವಾಹ ಸಮಾರಂಭಗಳು

ಶ್ರೀ ವೈ. ಮುದ್ದು ಶೆಟ್ರ ಪುತ್ರಿ ಸೌ। ಶಾಂತಾಳನ್ನು ಹೆಜ್ಮಾಡಿ ಪಟೇಲ್ ನಾರಾಯಣ ಶೆಟ್ರ ಪುತ್ರ ಶ್ರೀ ದೊಡ್ಡಣ್ಣ ಶೆಟ್ಟರು ಹೆಜ್ಮಾಡಿ ದೇವಸ್ಥಾನದಲ್ಲಿ; ದಿ। ಕಡೆಕಾರು ರಾಮಯ್ಯ ಶೆಟ್ರ ಪುತ್ರಿ ಸೌ। ಶಕುಂತಳೆಯನ್ನು ದಿ। ಪುತ್ತೂರು ಬಾವಡ ಚೆಂದು ಶೆಟ್ರ ಪುತ್ರ ಶ್ರೀ ಶಿವರಾಮ ಶೆಟ್ರು ಉದಿಯಾವರ ಗಣಪತಿ ದೇವಸ್ಥಾನದಲ್ಲಿ, ತಾ. 7ರಲ್ಲಿಯೂ, ಶ್ರೀ ಪಡಿಕ ಕೃಷ್ಣಯ್ಯ ಹೆಗ್ಡೆರ ಪುತ್ರ ಶ್ರೀ ವಾದಿರಾಜ ಶೆಟ್ರು ಬೆಳ್ಳಂಪಳ್ಳಿ ಮುದ್ದಣ್ಣ ಶೆಟ್ರ ಪುತ್ರಿ ಸೌ। ವಿಶಾಲಾಕ್ಷಿಯನ್ನು ರಾಮಕೃಷ್ಣ ಥಿಯೇಟರಿನಲ್ಲಿ ತಾ. 9ರಲ್ಲಿಯೂ, ಶ್ರೀ ಮಡೆಲ ಮೋನಪ್ಪ ರೈಗಳ ಪುತ್ರ ಶ್ರೀ ಸಂಕಪ್ಪ ರೈಗಳು ಕೆಂಜೂರಿನ ದಿ। ರಾಮಣ್ಣ ಶೆಟ್ರ ಪುತ್ರಿ ಸೌ। ರಾಧಾಳನ್ನು, ದಿ। ವಕೀಲ್ ರಾಮಣ್ಣ ಶೆಟ್ರ ಪುತ್ರಿ ಸೌ। ವತ್ಸಲಳನ್ನು ಕೆಂಜೂರಿನ ದಿ। ರಾಮಣ್ಣ ಶೆಟ್ರ ಪುತ್ರ ಶ್ರೀ ಭೋಜರಾಜ ಶೆಟ್ರು ಕುಂದಾಪುರ ಗೀತಾ ಟಾಕೀಸಿನಲ್ಲಿ; ಕಾರ ದೊಡ್ಡಮನೆ ತೇಜಪ್ಪ ಶೆಟ್ರ ಪುತ್ರಿ ಸೌ। ವಿಶಾಲಾಕ್ಷಿಯನ್ನು ಮೊಡ್ಲತಾವು ಮೋನಪ್ಪ ಶೆಟ್ರ ಪುತ್ರ ಶ್ರೀ ಸೀತಾರಾಮ ಶೆಟ್ರು, ಕಣಂಜಾರು ಕಡೆಬೆಟ್ಟು ಶೀನಪ್ಪ ಶೆಟ್ರ ಪುತ್ರ ಶ್ರೀ ರಾಮ ಶೆಟ್ರು [illegible] ನಾಗಪ್ಪ ಶೆಟ್ರ ಪುತ್ರಿ ಸೌ। ಪ್ರಭಾವತಿಯನ್ನು ಉಡುಪಿ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ, ಪಟೇಲ್ ಅಣ್ಣಪ್ಪ ಶೆಟ್ರ ಪುತ್ರಿ ಸೌ। ವನಜಾಕ್ಷಿಯನ್ನು ಕಡೇಕಾರು ಭೂಪಯ್ಯ ಶೆಟ್ರ ಪುತ್ರ ಶ್ರೀ ಭೋಜ ಶೆಟ್ರು ಉಡುಪಿ ಮೋಡರ್ನ್ ಶಾಲೆಯಲ್ಲಿ ತಾ. 10ರಲ್ಲಿಯೂ, ಶ್ರೀ ಕುಂದಪ್ಪ ಐತಪ್ಪ ರೈಗಳ ಪುತ್ರ ಶ್ರೀ ಕೊಡ್ಲಮೊಗರು ಪಟೇಲ್ ಗೋಪಾಲಕೃಷ್ಣ ರೈಗಳು ಶ್ರೀ ಗೌರಿಕೋವಿ ಸುಬ್ಬಯ್ಯ ಭಂಡಾರಿಗಳ ಪುತ್ರಿ ಸೌ। ಹೇಮಾವತಿಯನ್ನು ಉಡುಪಿ ಕಡಿಯಾಳಿ ದೇವಸ್ಥಾನದಲ್ಲಿ ತಾ. 12ರಲ್ಲಿಯೂ ವಿವಾಹವಾದರು.

ಉಡುಪಿ ಡಿ. ಮುನ್ಸಿಫ್ ಕೋರ್ಟಿನಲ್ಲಿ

ಸ್ಮಾಲ ನಂಬ್ರ 43/1954

ಬಿ. ಜಗನ್ನಾಥ ಹೆಗ್ಗಡೆ ... ವಾದಿ

ಮತ್ತು

ಶೀನಪ್ಪ ಶೆಟ್ಟಿ ... ಪ್ರತಿವಾದಿ

ಯವರೊಳಗೆ.

ಮೇಲ್ಕಂಡ ವ್ಯಾಜ್ಯವು ಪ್ರತಿವಾದಿಯು ವಾದಿಗೆ ರೂಪಾಯಿ 260-0-0ಕ್ಕೆ ಬರಕೊಟ್ಟ ಡಿಮಾಂಡು ನೋಟಿನ ಬಾಕಿ ಆವಜು ಬಡ್ಡಿ ಕೂಡಾ ರೂಪಾಯಿ 265-8-0ಕ್ಕೆ ಮಾಡಿದ್ದಾಗಿದ್ದು ಸದ್ರಿ ವ್ಯಾಜ್ಯದಲ್ಲಿ ಪ್ರತಿವಾದಿಗೆ ಆಗತಕ್ಕ ವ್ಯಾಜ್ಯದ ನೋಟಿಸು— ತಾರೀಕು 26-6-54ಕ್ಕೆ ಇಟ್ಟಿರುವುದರಿಂದ ಪ್ರತಿವಾದಿಯು ತನ್ನ ಆಕ್ಷೇಪ ಹೇಳುವುದನ್ನು ಆ ದಿನ ಸದ್ರಿ ಕೋರ್ಟಿನ ಮುಂದೆ ಹಾಜೀರು ಮಾಡಿಕೊಳ್ಳತಕ್ಕದ್ದು.

P. Padmanabha Rao,
Vakil for Plaintiff.

Udipi, Dated 16-6-54.

ಕರ್ನಾಟಕ ನೂತನ ಸಂಗೀತ ಸಭಾ, ಮುಂಬಯಿ, ಇವರು

ನುವರ್ ಇಂಡಿಯಾ ಫ್ರೀನೈಟ್ ಹೈಸ್ಕೂಲಿನ ಸಹಾಯಾರ್ಥವಾಗಿ

ಶ್ರೀ. ಬಿ. ಪುಟ್ಟಸ್ವಾಮಯ್ಯರವರ

'ಪ್ರಚಂಡ ಚಾಣಕ್ಯ'

ಎಂಬ ಐತಿಹಾಸಿಕ ನಾಟಕವನ್ನು ತಾ. 27-6-54ನೇ ಆದಿತ್ಯವಾರ ಸಂಜೆ ಗಂಟೆ 4ಕ್ಕೆ ಸರಿಯಾಗಿ ಸೈಂಟ್ ಝೇವಿಯರ್ಸ್ ಕಾಲೇಜಿನ ಹೋಲಿನಲ್ಲಿ ಅಭಿನಯಿಸಲಿರುವರು. ನಾಟ್ಯಕಲಾಪ್ರೇಮಿಗಳಾದ ಕರ್ನಾಟಕ ಬಂಧುಭಗಿನಿಯರು ಯೋಗ್ಯ ಪ್ರೋತ್ಸಾಹವನ್ನಿತ್ತು ತನ್ಮೂಲಕ ವಿದ್ಯಾಪ್ರಸಾರ ಕಾರ್ಯದಲ್ಲಿ ನೆರವಾಗಬೇಕಾಗಿ ಸವಿನಯ ವಿನಂತಿ.

ಕೆ. ಎಸ್. ಭಟ್, ಪ್ರಿನ್ಸಿಪಾಲ್:
ನು. ಇ. ಫ್ರೀ. ನೈ. ಹೈ. ಸ್ಕೂಲ್,
ಧೋಬಿ ತಲಾವ್, ಮುಂಬಯಿ.

ಯಮ್. ಜಿ. ಮಲ್ಯ,
ಅಧ್ಯಕ್ಷರು:
ಕ. ನೂ. ಸ. ಸಭಾ.

NAVAYUGA

Popular Kannada Weekly.

Founder:—

Sri A. B. SHETTY,
Minister for Public Health,
Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ.

ಸ್ಥಾಪಕರು:— ಶ್ರೀ. ಎ. ಬಿ. ಶೆಟ್ಟಿ,

ಮದ್ರಾಸಿನ ಆರೋಗ್ಯಮಂತ್ರಿ.

ವಾರ್ಷಿಕ ಚಂದಾ ರೂ. 5-12-0

ಬಿಡಿ ಪ್ರತಿ ರೂ. 0- 2-0

ಪ್ರಾಂತ ಪುನರ್ರಚನಾ ಆಯೋಗದ ವಿಚಾರಣೆ

ತಾ. 8 ರಂದು ಮಿರಾಜಕರ್ ಬಂಗ್ಲೆಯಲ್ಲಿ ಜಿಲ್ಲೆಯ ಬೇರೆ ಬೇರೆ ಪಕ್ಷ ಪಂಗಡಗಳ ಮನವಿಗಳನ್ನು ಸ್ವೀಕರಿಸಿದರು. ಆರಂಭದಲ್ಲಿ ಜಿಲ್ಲಾ ಕಾಂಗ್ರೆಸ್ ಕಮಿಟಿ ಮತ್ತು ಜಿಲ್ಲೆಯಲ್ಲಿಯ ಕಾಂಗ್ರೆಸ್ ಎಂ. ಎಲ್. ಎ. ಗಳು ಮನವಿಯನ್ನೊಪ್ಪಿಸಿದರು. ಇವರಲ್ಲಿ ಜಿಲ್ಲಾ ಕಾಂ। ಕ। ಅಧ್ಯಕ್ಷ ಶ್ರೀ ಎಸ್. ಎಕ್ಸ್. ಡಿ. ಸಿಲ್ವ, ಕಾರ್ಯದರ್ಶಿ ಶ್ರೀ ಬಿ. ಆರ್. ಕರ್ಕೇರ, ಶ್ರೀ ಕೆ. ಆರ್. ಆಚಾರ್, ಇವರೂ ಶ್ರೀಗಳಾದ ಕೆ. ಸದಾನಂದ ಹೆಗ್ಡೆ, ಎಂ. ಪಿ. ಎಸ್. ನರ್ಸಪ್ಪಯ್ಯ, ಎಂ. ಎಲ್. ಸಿ., ಎಂ. ಎಲ್. ಎ. ಗಳಾದ ಎಂ. ಎಸ್. ಮೊಗ್ರಾಲ್, ಎಸ್. ಎನ್. ಸುವರ್ಣ, ಎಲ್. ಸಿ. ಪಾಯಿಸ್ ಇವರಿದ್ದರು. ಇವರ ಮನವಿಯಲ್ಲಿ ಸಂಯುಕ್ತ ಕರ್ನಾಟಕ ಪ್ರಾಂತವನ್ನು ಆದಷ್ಟು ತ್ವರೆಯಿಂದ ಸ್ಥಾಪಿಸಬೇಕೆನ್ನುವ ಕನ್ನಡಿಗರ ಕೇಳಿಕೆಯನ್ನು ತಾವು ಪೂರ್ತಿ ಸಮರ್ಥಿಸುವವರಾಗಿಯೂ ಇದಕ್ಕೆ ಮೈಸೂರೇ ಕೇಂದ್ರವಾಗಬೇಕೆಂದೂ ಇತ್ತೀಚೆಗೆ ಆರಂಭವಾದ ಪಶ್ಚಿಮ ಕರಾವಳಿ ಪ್ರಾಂತ ಹಾಗೂ ಐಕ್ಯ ಕೇರಳ ಚಳವಳನ್ನು ತಾವು ತೀವ್ರವಾಗಿ ವಿರೋಧಿಸುವವರಾಗಿಯೂ, ತುಳು ಮತ್ತು ಕೊಂಕಣಿ ಮಾತನಾಡುವವರಲ್ಲಿ ಭಿನ್ನಾಭಿಪ್ರಾಯವಿದೆ ಎಂಬ ಪ್ರಚಾರ ಸಟೆಯೆಂಬುದಾಗಿಯೂ, ಮಲೆಯಾಳಿಗಳ ಆಕ್ರಮಣ ಬುದ್ಧಿ ಅಯೋಗ್ಯವೆಂದೂ ಹೇಳಲಾಗಿತ್ತು.

ಜಿಲ್ಲಾ ಸೋಶಲಿಸ್ಟ ಪಕ್ಷದ ಪರವಾಗಿ ಶ್ರೀ. ಕೆ ಆರ್. ಕಾರಂತ, ಡಾ। ನಾಗಪ್ಪ ಆಳ್ವರೂ, ಕರ್ನಾಟಕ ಪ್ರಾಂತರಚನಾ ಪರಿಷತ್ತಿನ ಪರವಾಗಿ ಶ್ರೀಗಳಾದ ಬಿ. ಮಂಜಯ್ಯ ಹೆಗ್ಡೆ, ಕೆ. ಬಿ. ಜಿನರಾಜ ಹೆಗ್ಡೆ, ಬಿ. ಎಸ್. ಭಾಸ್ಕರ ರೈಗಳೂ, ಜನಸಂಘದ ಕಡೆಯಿಂದ ಶ್ರೀ. ಎನ್. ನಾಗರಾಜಯ್ಯನವರೂ ಮನವಿಗಳನ್ನು ಸಲ್ಲಿಸಿ ಕೂಡಲೇ ಕರ್ನಾಟಕ ಪ್ರಾಂತರಚನೆಯಾಗಬೇಕೆಂದರು. ಆಯೋಗದವರು ಮಧ್ಯಕಾಲದ ಒಂದು ವರದಿಯನ್ನು ಸರಕಾರಕ್ಕೆ ಒಪ್ಪಿಸಬೇಕೆಂದೂ ಇವರು ಸೂಚಿಸಿದರು. ಕಮ್ಯೂನಿಸ್ಟ್ ಪಕ್ಷದ ಪರವಾಗಿ ಶ್ರೀಗಳಾದ ಪಿ. ಪಿ. ಕಕ್ಕಿಲ್ಲಾಯ, ಎ. ಶಾಂತರಾಮ ಪೈ, ಎಂ. ಎಚ್. ಕೃಷ್ಣಪ್ಪ ಇವರೂ ಇದೇ ಅಭಿಪ್ರಾಯದ ಮನವಿಯನ್ನು ಅರ್ಪಿಸಿದರು. ದ. ಕನ್ನಡವನ್ನು ಸರ್ವಥಾ ಕೇರಳಕ್ಕೆ ಸೇರಿಸಬಾರದೆಂದರು.

ಕೆನರಾ ಚೇಂಬರ್ ಆಫ್ ಕಾಮರ್ಸಿನ ಕಡೆಯಿಂದ ಅಧ್ಯಕ್ಷ ಶ್ರೀ. ಅಡಿಗೆ ಉಪಾಧ್ಯಾಯರು? ಕಾರ್ಯದರ್ಶಿ ಶ್ರೀ. ಅಡಿಗೆ [illegible] ಭಾಷಾವಾರು [illegible] ಪ್ರಾಂತಗಳ ಪುನರ್ರಚನೆಯಾ [illegible] [illegible] ಕರ್ನಾಟಕ [illegible] ಮೈಸೂರು [illegible] ದ. ಕನ್ನಡವ [illegible] ಪ್ರಾಂತವೆಂದು ದ. ಕನ್ನಡವನ್ನು [illegible] ಸೇರಿಸಬಾರದೆಂದರು.

[illegible] ಸಂಘದ ಪರವಾಗಿ ಅಧ್ಯಕ್ಷ ಶ್ರೀ [illegible] ಮೊದಲಾದವರು [illegible] ಪ್ರಾಂತಗಳ [illegible] ಭಾಷಾವಾರು ಪ್ರಾಂತ ರಚನೆಯ [illegible] ಮದ್ರಾಸು ಪ್ರಾಂತ್ಯದಿಂದ ಮಲಬಾರು ಪ್ರತ್ಯೇಕವಾಗ [illegible] ದಕ್ಷಿಣ ಕನ್ನಡವನ್ನು ಮೈಸೂರು ಪ್ರಾಂತಕ್ಕೆ ಸೇರಿಸಬೇಕೆಂದು ಸೂಚಿಸಿದ್ದರು.

ವಕೀಲ ಸಂಘದ ಪರವಾಗಿ ಅಧ್ಯಕ್ಷ ಶ್ರೀ ಟಿ. ಸೋಮಶೇಖರ ರಾಯರೂ ಕಾರ್ಯದರ್ಶಿ ಶ್ರೀ ಬಿ. ಎ. ಕೃಷ್ಣಯ್ಯನವರೇ ಮೊದಲಾದವರೂ ಮೈಸೂರು ಸಹಿತ ಕರ್ನಾಟಕ ಪ್ರಾಂತರಚನೆಯಾಗಬೇಕೆಂದೂ ಒಂದು ವೇಳೆ ಮೈಸೂರು ಸೇರದಿದ್ದರೂ ಮುಂಬಯಿ, ಹೈದರಾಬಾದ್, ಮದ್ರಾಸ್ ಇವುಗಳ ಕನ್ನಡ ಭಾಗ ಮತ್ತು ಕೊಡಗನ್ನು ಸೇರಿಸಿ ಕನ್ನಡ ಪ್ರಾಂತರಚನೆಯಾಗಲೆಂದು ತಮ್ಮ ಅಭಿಪ್ರಾಯವನ್ನಿತ್ತರು, ಜಿಲ್ಲಾ ಪತ್ರಿಕೋದ್ಯಮಿ ಸಂಘದ ಅಧ್ಯಕ್ಷ ಶ್ರೀ ಡಿ. ಪುಟ್ಟುಸ್ವಾಮಿ ಮೊದಲಾದವರು ಇದೇ ರೀತಿಯ ಅಭಿಮತವನ್ನು ಸೂಚಿಸಿದರು.

ನಗರ ಸಭೆಯ ಪರವಾಗಿ ಅಧ್ಯಕ್ಷ ಶ್ರೀ. ಕೆ. ಸೂರ್ಯನಾರಾಯಣ ಅಡಿಗರು ಕರ್ನಾಟಕ ಪ್ರಾಂತರಚನೆ ಅತ್ಯಾವಶ್ಯಕವೆಂದರು.

ಕಾಸರಗೋಡು ಸಾರ್ವಜನಿಕರ ಕಡೆಯಿಂದ ಶ್ರೀಗಳಾದ ಬಿ. ಎಸ್. ಕಕ್ಕಿಲ್ಲಾಯ, ಶೆಡ್ಡೆ ಲಕ್ಷ್ಮಣ ರಾವ್, ಕೆ. ಗಣೇಶ ರಾವ್, ಶಂಕರ ರಾವ್, ದೇವದಾಸ ಶೆಣೈ ಮೊದಲಾದವರು ಕಾಸರಗೋಡು ತಾಲೂಕಿನ ಪಯಸ್ವಿನೀ ನದಿಯ ಆಚೆ ಭಾಗ ಪೂರ್ತಿಯಾಗಿ ಮಲಬಾರಿಗೆ ಸೇರಬೇಕೆಂಬುದು ಸರಿಯಲ್ಲವೆಂದೂ ಮಲಬಾರು ಒಕ್ಕಲು ಕಾನೂನು ಅನ್ವಯಿಸುವ 33 ಗ್ರಾಮಗಳಲ್ಲದೆ ಉಳಿದ ಹೊಸದುರ್ಗ ಉಪತಾಲೂಕಿನ ಗ್ರಾಮಗಳಿಗೂ ಮಲಬಾರಿಗೂ ನ್ಯಾಯವಾದ ಸಂಬಂಧವೇನೂ ಇಲ್ಲವೆಂದೂ ಕಂರೋಕ್ತ ತಿಳಿಸಲಾಯಿತು.

ಜಿಲ್ಲೆಯ ಮುಸ್ಲಿಮರ ಪರವಾಗಿಯೂ ಕೆಥೊಲಿಕ್ ಸಂಘ ಮೊದಲಾದ ಸಂಘಗಳ ಪರವಾಗಿಯೂ ಮನವಿಗಳನ್ನು ಒಪ್ಪಿಸಲಾಯಿತು. ಶ್ರೀ ವಿ. ಎಸ್. ಕುಡ್ವರು ಭಾಷಾವಾರು ತಳಹದಿಯ ಮೇಲೆ ಪ್ರಾಂತ ರಚನೆ ಯೋಗ್ಯವಲ್ಲವೆಂದು ವಾದಿಸಿದರು, ಶ್ರೀ ಶಿವರಾಮ ಕಾರಂತರು ಭಾಷಾವಾರು ತಳಹದಿಯ ಮೇಲಿಂದಲೇ ಪ್ರಾಂತರಚನೆಯಾಗಬೇಕೆಂದರು, ಮೈಸೂರವರು ಕೂಡ ಕನ್ನಡವಲ್ಲದ ಪ್ರದೇಶಗಳನ್ನು ಆಯಾ ಭಾಷಾ ಪ್ರಾಂತಗಳಿಗೆ ಬಿಟ್ಟುಕೊಡುವುದೂ ಯೋಗ್ಯವೆಂದು ಸೂಚಿಸಿದರು,

---

ಎರ್ಮಾಳು — ಬೋರ್ಡ್ ಹಾ' ಎ। ಶಾಲೆಯಲ್ಲಿ ಹಲವು ವರ್ಷಗಳಿಂದ ಜನಪ್ರಿಯ ಉಪಾಧ್ಯಾಯರಾಗಿದ್ದ ಶ್ರೀ ಎ. ಎನ್. ಹೆಬ್ಬಾರರು ತಾ. 4ರಲ್ಲಿ ಕೆಲಸದಿಂದ ನಿವೃತ್ತರಾಗಿರುತ್ತಾರೆ. ಇವರು 4—5 ವರ್ಷದಿಂದ ಅನಾರೋಗ್ಯದಿಂದಿದ್ದು ವಿದ್ಯಾರ್ಥಿಗಳ ಹಾಗು ಹೆತ್ತವರ ಸೇವೆ ಸಲ್ಲಿಸಲು ಅಸಮರ್ಥರಾಗಿದ್ದರು. ಅದಕ್ಕಾಗಿ ಅವರು ವಿಷಾದ ಸೂಚಿಸುತ್ತಾರಲ್ಲದೆ, ಅವರಿಗೆ ನೆರವಾದ ಸರ್ವರನ್ನು ಈ ಮೂಲಕ ಅಭಿನಂದಿಸುತ್ತಾರೆ.

ಆನಗಳ್ಳಿ—ಇಲ್ಲಿಯ ಪಂಚಾಯತ ಬೋರ್ಡಿನ ಪ್ರಥಮ ಸಭೆಯು ತಾ 4ರಲ್ಲಿ ಜರಗಿ ಶ್ರೀ ಎಚ್. ಸೂರಪ್ಪ ಶೆಟ್ರು ಸರ್ವಾನುಮತದಿಂದ ಉಪಾಧ್ಯಕ್ಷರಾಗಿ ಆರಿಸಲ್ಪಟ್ಟಿರುವರು.

ಕುಂಬಳೆ—ತಾ 7ರಲ್ಲಿ ಮೊಗ್ರಾಲಿನಲ್ಲಿ ಮನೆಯೊಂದು ಸುಟ್ಟು ಹೋಗಿ ಸುಮಾರು ರೂ. ಎರಡು ಸಾವಿರದಷ್ಟು ನಷ್ಟವುಂಟಾಗಿದೆ. ಹರಿಜನರಿಗಾಗಿ ಸೀತಂಗೋಳಿ ಹರಿಜನ ಕೊಲನಿಯಲ್ಲಿ ಸಾರ್ವಜನಿಕ ವಂತಿಗೆಯಿಂದ ಕಟ್ಟಿಸಿದ್ದ ಎರಡು ಹಂಚು ಚಾವಣಿಯ ಮನೆಗಳು ವಿಪರೀತ ಮಳೆಯ ದೆಸೆಯಿಂದ ಬಿದ್ದಿರುತ್ತವೆ.

ಬೆಳ್ವಾರೆ— ಅ। ಭಾ॥ ಮಲೇರಿಯಾ ನಿರೋಧ ಸಪ್ತಾಹ ದಿನಾಚರಣೆಯು ಜಿಲ್ಲಾ ಮಲೇರಿಯಾ ಹೆಲ್ತ್ ಆಫೀಸರ್ ಶ್ರೀ. ಎಚ್. ಎಸ್. ನಾಯಕರ ನೇತೃತ್ವದಲ್ಲಿ ತಾ. 8ರಲ್ಲಿ ನೆರವೇರಿತು. ಅಧ್ಯಕ್ಷ ಶ್ರೀ. ಬಿ. ರಾಮರಾವ್, ಬಿ. ಎ. ಎಲ್. ಟಿ. ಯವರು ಈ ಸಪ್ತಾಹದ ಯೋಜನೆಯನ್ನು ವಿವರಿಸಿ ಜನರ ಸಹಕಾರ ಕೋರಿದರು. ಸಭಿಕರ ಭಾಷಣಗಳಾಗಿ ಸಭಾಂತ್ಯವಾಯಿತು.

ಪುತ್ತೂರು—ತಾಲೂಕು ಸಾರ್ವಜನಿಕರ ಸಭೆಯೊಂದು ತಾ. 10ರಲ್ಲಿ ಶ್ರೀ ಬಿ. ಮಂಗೇಶರಾಯರ ಅಧ್ಯಕ್ಷತೆಯಲ್ಲಿ ಕೋಪರೇಟಿವ್ ಟೌನ್ ಬ್ಯಾಂಕಿನಲ್ಲಿ ಜರಗಿ ಮಂಗಳೂರು ಹಾಸನ ರೈಲ್ವೆ ಮಾರ್ಗವು ನೇತ್ರಾವತಿ ನದಿಯ ದಕ್ಷಿಣದಿಂದ ಪುತ್ತೂರಿಗಾಗಿ ಹಾದು ಹೋಗುವಂತಾಗಬೇಕೆಂದೂ ಇದರಿಂದ ಮಲೆನಾಡಿನ ಅಭಿವೃದ್ಧಿಯು ಆಗಿ ಸರಕಾರಕ್ಕೂ ಉತ್ಪತ್ತಿ ಹೆಚ್ಚುವುದೆಂದೂ ಅಭಿಪ್ರಾಯವಾಗಿ ಆ ಬಗ್ಗೆ ಸಂಬಂಧಪಟ್ಟವರಿಗೆ ಮನವಿಯೊಂದನ್ನರ್ಪಿಸಲು ಸಮಿತಿಯೊಂದರ ನೇಮಕವಾಯಿತು.

ಕುಂದಾಪುರ—(ಗುಡ್ಡೆಯಂಗಡಿ): ಇಲ್ಲಿ ಇತ್ತೀಚೆಗೆ ಜರಗಿದ ಸಾರ್ವಜನಿಕ ಸಭೆಯೊಂದರಲ್ಲಿ ಶ್ರೀ ಯಡ್ತರೆ ಮಂಜಯ್ಯ ಶೆಟ್ಟಿ, ಎಂ. ಎಲ್. ಎ. ರವರು ಮದರಾಸು ಸರಕಾರವು ಜಾರಿಗೆ ತರುವ ಒಕ್ಕಲು ಹಿತ ಮಸೂದೆಯ ರೂಪರೇಖೆಯನ್ನು ವಿವರಿಸಿದರು. ಊರವರು ಗುಡ್ಡೆ ಅಂಗಡಿಯಲ್ಲಿ ಕುಡಿಯಲು ನೀರಿನ ಅಭಾವವಿರುವುದರಿಂದ ಒಂದು ಧರ್ಮದ ಬಾವಿಯನ್ನೂ, ಸಂಚಾರಕ್ಕನುಕೂಲವಾಗುವಂತೆ ರಸ್ತೆಯನ್ನೂ ಸರಕಾರದಿಂದ ಮಾಡಿಸಿಕೊಡಬೇಕೆಂದು ಶ್ರೀ ಶೆಟ್ಟರಿಗೊಂದು ಮನವಿಯನ್ನೊಪ್ಪಿಸಿದರು. ಅದರಂತೆ ಬೈಂದೂರಿನ ರೆವಿನ್ಯೂ ಇನ್ಸ್‌ಪೆಕ್ಟರರು ತಾ. 7ರಲ್ಲಿ ಇಲ್ಲಿಗೆಬಂದು ವಿಚಾರಣೆನಡೆಸಿ ಎಲ್ಲಿ ಬಾವಿ ತೋಡುವುದಗತ್ಯವೆಂದು ರಿಪೋರ್ಟು ಮಾಡಿರುತ್ತಾರೆ. ಶ್ಯಾನಭೋಗರ ಪಟೇಲ್ ಬಾಬಣ್ಣ ಆಚಾರ್ಯರು ಬಾವಿ ತೋಡಲು ಧರ್ಮಾರ್ಥ ಸ್ಥಳ ಕೊಡುವುದಾಗಿ ವಾಗ್ದಾನ ಮಾಡಿರುತ್ತಾರೆ. ನಮ್ಮ ಎಂ. ಎಲ್. ಎ. ಗಳು ತಿಳಿಸಿದಂತೆ ಬಾವಿ ಮತ್ತು ರಸ್ತೆಯ ಕೆಲಸವು ಬೇಗನೆ ಆಗುವಂತಾಗಲೆಂದು ಊರವರು ಹಾರೈಸುತ್ತಾರೆ.

ಹಿರೇಬೆಟ್ಟು ಪಟ್ಲ— ಇದೇ ತಾ 1-6-54ರಲ್ಲು ಪಟ್ಲದಲ್ಲಿ "ಲೋಕಮಾನ್ಯ ತಿಲಕ ಸಂಯುಕ್ತ ಗ್ರಾಮಸೇವಾ ಸಂಘ"ದ ಕಡೆಯಿಂದ ಒಂದು ಹಾ. ಎ. ಶಾಲೆಯನ್ನು ಡಾ. ಬಿ. ಚಂದಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ತೆರೆಯಲಾಯ್ತು. ಬೆಳಿಗ್ಗೆ ಘ. 9-30ಕ್ಕೆ ರಾಷ್ಟ್ರ ಧ್ವಜಾರೋಹಣವು ಶ್ರೀ ಪಾಂಗಾಳ ವೆಂಕಟದಾಸ ನಾಯ್ಕರಿಂದಲೂ, ಹಾ. ಎ. ಶಾಲಾ ಉದ್ಘಾಟನಾ ಸಮಾರಂಭವು ಶ್ರೀ ಎಚ್. ಸಂಜೀವ ರಾವ್, ಬಿ. ಎ. ಎಲ್. ಟಿ. ಇವರಿಂದಲೂ ನೆರವೇರಿಸಲ್ಪಟ್ಟಿತು. ಈ ಸಂದರ್ಭದಲ್ಲಿ ಶಾಲಾ ಇನ್ಸ್‌ಪೆಕ್ಟರವರು ಉಡ್ಪಿ ತಾಲೂಕಿನಲ್ಲಿ ವಿದ್ಯಾ ಪ್ರಚಾರದಲ್ಲಿ ಹಿಂದುಳಿದ ಹಿರೇಬೆಟ್ಟು, ಮರ್ಣೆ, ಕುದಿ, ಪೆರ್ಣಂಕಿಲ ಗ್ರಾಮಗಳಿಗೆ ಕೇಂದ್ರವಾದ ಈ ಸ್ಥಳದಲ್ಲಿ ಹಾ. ಎ. ಶಾಲೆ ಉದ್ಘಾಟಿಸುವರೆ ತಾನು ಸಂತೋಷಪಡುತ್ತೇನೆಂದೂ; "ಲೋಕಮಾನ್ಯ ತಿಲಕ ಹಾ. ಎ. ಶಾಲೆ" ಎಂಬ ಈ ಪವಿತ್ರ ನಾಮವೇ ಶಾಲಾ ಉನ್ನತಿಗೆ ಸ್ಫೂರ್ತಿದಾಯಕವಾಗಲೆಂದೂ ಭಾಷಣವಿತ್ತರು. ಸಭಿಕರಲ್ಲಿ ಶ್ರೀ: ಎಚ್. ರಾಮಚಂದ್ರಹೆಗ್ಡೆ, ವೈ. ನಾಡುರಂಗ ಶಾಸ್ತ್ರಿ, ಕೆ. ಕೇಶವ ನಾಯ್ಕ, ಎ. ರಂಗಪ್ಪ ನಾಯ್ಕ ಮುಂತಾದವರು ಹೊಸ ಶಾಲೆಗೆ ಶುಭವನ್ನು ಕೋರಿಯೂ, ಮುಖ್ಯೋಪಾಧ್ಯಾಯರಾದ ಎಂ. ವಾಸುದೇವ ಭಟ್ರು ಶಾಲೆಗೆ ಊರ ಪರಊರ ಮಹನೀಯರ ಸಹಕಾರವನ್ನು ಹಾರೈಸಿಯೂ ಭಾಷಣವಿತ್ತರು. ಪಳ್ಳಿ ಪಂಚಾಯತ್‌ಬೋರ್ಡು ಪ್ರೆಸಿಡೆಂಟ್ ಶ್ರೀ ಎಚ್. ಸದಾಶಿವ ಹೆಗ್ಡೆಯವರು ಶಾಲೆಗೆ ಬೇಕಾದ ಬೆಂಚು, ಡೆಸ್ಕು, ಕುರ್ಚಿ, ಮೇಜು ವಗೈರೆ ಸಮಾನುಗಳನ್ನು ತನ್ನ ಲೆಕ್ಕದಲ್ಲಿ ಕೂಡ್ಲೆ ಒದಗಿಸಿ ಕೊಡುವುದಾಗಿ ಆಶ್ವಾಸನೆ ಇತ್ತುದು ಸ್ತುತ್ಯಾರ್ಹ. ಅಧ್ಯಕ್ಷರ ಭಾಷಣವಾಗಿ ಸಂಘದ ಕಾರ್ಯದರ್ಶಿ ಮರ್ಣೆ ಗೋವಿಂದ ಸೆಟ್ಟಿರಿಂದ ಧನ್ಯವಾದ ಅರ್ಪಣೆಯಾಗಿ ರಾಷ್ಟ್ರಗೀತೆಯೊಂದಿಗೆ ಸಮಾರಂಭವು ಕೊನೆಗೊಂಡಿತು.

ಮೂಡುಗೆರೆ— ಚಿಕ್ಕಮಗಳೂರು ಜಿಲ್ಲೆಯ ಮೂಡುಗೆರೆ ಪೌರಸಭಾ ಚುನಾವಣೆಯು ಇದೇ ತಾ 7ರಲ್ಲಿ ಜರಗಿ ಡಾ। ಪಿ ಎ. ಅಡ್ಯಂತಾಯರು ಅವಿರೋಧವಾಗಿ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟಿರುವರು.

ದಿ ಬೊಂಬೆಲೈಫ್ ಎಶ್ಯೂರೆನ್ಸ್ ಕಂಪೆನಿ ಲಿ., ಬೊಂಬಾಯಿ

1951ನೆ ವರ್ಷದ ವೆಲ್ಯುಯೇಶನ್ ಪ್ರಕಾರ ಉದಾರ ಬೋನಸ್

ಎಂಡೋಮೆಂಟ್ ಪೊಲಿಸಿಗಳ ಮೇಲೆ ರೂ. **10-** } ವರ್ಷ ಒಂದರ
ಜೀವಾವಧಿ ಪೊಲಿಸಿಗಳ ಮೇಲೆ ರೂ. **12-8** } ರೂ. **1000**ಕ್ಕೆ

(ಪ್ರಚಲಿತ ಪ್ರೀಮಿಯಮ್ ಸ್ಕೇಲಿನಂತೆ)

ಜೀವ ವಿಮೆಗಾಗಲೀ, ಪ್ರಾತಿನಿಧ್ಯಹೊಂದಲಿಕ್ಕಾಗಲೀ ನಮ್ಮೊಡನೆ ವಿಚಾರಿಸಿದರೆ ಅಪೇಕ್ಷಿತ ಫಲವನ್ನೀಯುವುದು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಚೀಫ್ ಏಜಂಟ್ಸ್, ದಿ ಬೊಂಬೆ ಲ್ಯಾಫ್ ಎಶ್ಯೂರೆನ್ ಕೊ. ಲಿಮಿಟೆಡ್.
ಬೊಂಬೆ ಲ್ಯಾಫ್ ಬಿಲ್ಡಿಂಗ್, ಉಡುಪಿ, ದ. ಕ.

ಅಥವಾ ಶಾಖಾ ಕಛೇರಿಗಳಲ್ಲಿ: ಮಧುರೆ, ಬೆಂಗಳೂರು, ತ್ರಿವೆಂಡ್ರಮ್, ಕಲ್ಲಿಕೋಟೆ ಬೊಂಬಾಯಿ, ಮಂಗಳೂರು ಮತ್ತು ಕೊಯಮುತ್ತೂರು

The Bombay Life Assurance Co., Ltd., Bombay.

ನಡಿಯುವ ಚಿತ್ರ:— ನಿಮ್ಮ ಮನೆಮಾತಿನ ಭಾಷೆಯ

ಸೌಭಾಗ್ಯ ಲಕ್ಷ್ಮಿ (ಕನ್ನಡ)

ತಾರಾಗಣದಲ್ಲಿ ಮಂಗಳೂರಿನ ಇಂದುಶೇಖರ್, ಉಡುಪಿಯ **ಹರಿಣಿ,** ಮಹಾಬಲರಾವ್ ಮೊದಲಾದವರು.

—ತಾ. ೨೦—೬—೧೯೫೪ರಂದು —
ಮೋರ್ನಿಂಗ್ ಶೋ ಘ. ೧೦ಕ್ಕೆ ಮತ್ತು ಮ್ಯಾಟಿನಿ ಘ. ೨-೩೦ಕ್ಕೆ

ಬೈಸಿಕಲ್ ತೀಫ್ [ಬರೇ ೨ ದೇಖಾವೆಗಳು ಮಾತ್ರ]

ಬರುವ ಚಿತ್ರಗಳು:— **ದೇವಕಿ, ಸೈಂಯಾ** ಇತ್ಯಾದಿ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಡಿ. ಕೆ. ಭಾರದ್ವಾಜರ

ಇಂಗ್ಲಿಷ್ × ಇಂಗ್ಲಿಷ್ ಕನ್ನಡ ಡಿಕ್ಸ್‌ನೆರಿ

ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತವಾದ ದೊಡ್ಡ ಸೈಜಿನ ನಿಘಂಟು.

ಬೆಲೆ ರೂ. 5-6-0

ಕವಿಭೂಷಣ ಕೆ. ಪಿ. ವೆಂಕಪ್ಪ ಶೆಟ್ರ

ಭಾರತದ ಗುರುಕುಲ

(ಯಕ್ಷಗಾನ)

ಮದರಾಸು ಸರಕಾರದಿಂದ ಸಂಭಾವನೆ ಪಡೆದ ಗ್ರಂಥ.

ಬೆಲೆ: 0 8 0

ಸಾಹಸ ಭೀಮ ವಿಜಯ	0—8—0
ಲತ್ತ ಪಗಡೆ	0—6—0
ಭರತೇಶ ದಿಗ್ವಿಜಯ	0—8—0
ವಾಲಿ ಸುಗ್ರೀವ	0—8—0

ನವಭಾರತ ಬುಕ್ ಡಿಪೊ, ಉಡುಪಿ.
ನವಯುಗ ಪ್ರೆಸ್, ಉಡುಪಿ.

ಮಂಗಳೂರು

ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಚುನಾವಣೆ:—ಇದೀ ಜಿಲ್ಲೆಯಲ್ಲಿ ಒಟ್ಟು 61 ಜಿಲ್ಲಾ ಕಾಂಗ್ರೆಸ್ ಕಮಿಟಿಯ ಸದಸ್ಯರ ಸ್ಥಾನಗಳ ಬಗ್ಗೆ ಚುನಾವಣೆ ನಡೆಯ ಬೇಕಾಗಿದೆ. ಸರ್ಕಲ್‌ವಾರು ಈ ಸ್ಥಾನಗಳು ಈ ಕೆಳಗಿನಂತಿವೆ—

(1) ಕುಂದಾಪುರ ಉತ್ತರ-6; (2) ಕುಂದಾಪುರ ದಕ್ಷಿಣ-3; (3) ಬ್ರಹ್ಮಾವರ-2; (4) ಉಡುಪಿ-6; (5) ಕಟಪಾಡಿ-2; (6) ಕಾರ್ಕಳ-4; (7) ಮೂಡಬಿದ್ರೆ-4; (8) ಮೂಲ್ಕಿ-3; (9) ಮಂಗಳೂರು ಉತ್ತರ-6; (10) ಮಂಗಳೂರು ದಕ್ಷಿಣ-3; (11) ಬಂಟ್ವಾಳ-7; (12) ಪಾಣೆ ಮಂಗಳೂರು-4; (13) ಪುತ್ತೂರು-2; (14) ಉಪ್ಪಿನಂಗಡಿ-2; (15) ಮಂಜೇಶ್ವರ-2; (16) ಕಾಸರಗೋಡು—2; (17) ಹೊಸದುರ್ಗ-3. ಒಟ್ಟು-61.

ನಾಮ ಪತ್ರವನ್ನು, ಚುನಾವಣೆ ಠೇವಣಾತಿ ರೂ. 5 ಸಹಿತ, ಜಿಲ್ಲಾ ಚುನಾವಣಾಧಿಕಾರಿಯವರ ವ, ಅವರಿಂದ ಅಧಿಕಾರ ಹೊಂದಿದವರ ಸಮಕ್ಷಮ ಇದೇ ತಾ. 20-6-54ರ ಸಂಜೆ ಗಂಟೆ 5ರ ಒಳಗೆ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಆಫೀಸಿನಲ್ಲಿ ಹಾಜರುಪಡಿಸತಕ್ಕದ್ದು.

ತಾ. 22-6-54ರಂದು ನಾಮಪತ್ರಗಳನ್ನು ಪರಿಶೀಲಿಸಿ, ಸ್ವೀಕೃತವಾದ ನಾಮಪತ್ರಗಳ ಪಟ್ಟಿಯನ್ನು ಸಂಜೆ ಗಂಟೆ 6ರೊಳಗೆ ಪ್ರಕಟಿಸಲಾಗುವುದು.

ಉಮೇದ್ವಾರಿಕೆಯನ್ನು ತಾ. 25-6-54ರಂದು ಸಾಯಂಕಾಲ ಗಂಟೆ 5ರೊಳಗೆ ಹಿಂತೆಗೆದುಕೊಳ್ಳಬಹುದು.

ಚುನಾವಣೆಗಳನ್ನು ತಾ. 10-7-54ರಂದು ಆಯಾ ಸರ್ಕಲುಗಳಲ್ಲಿ ನಡೆಸಲಾಗುವುದು. ಇದರ ಸಂಪೂರ್ಣ ಮಾಹಿತಿಯನ್ನು ಸಂಬಂಧಪಟ್ಟ ಸರ್ಕಲ್ ಕಾಂಗ್ರೆಸ್ ಕಮಿಟಿಗಳಿಂದ ಯಾ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಆಫೀಸಿನಿಂದ ಪಡೆಯಬಹುದು.

ಮಂಗಳೂರು } ಸಹಿ. ಎ. ಶಂಕರ ಆಳ್ವ
ತಾ 9-6-54 } ಜಿಲ್ಲಾ ಚುನಾವಣಾಧಿಕಾರಿ.

ಹಜೂರು ಟ್ರೆಜರಿ ಮೊಕದ್ದಮೆ—ಯು ಕೆಲ ಸಮಯದಿಂದ ಅದಕ್ಕಾಗಿ ನೇಮಿಸಲ್ಪಟ್ಟ ಸ್ಪೆಶಲ್ ಫಸ್ಟ್‌ಕ್ಲಾಸ್ ಮೆಜಿಸ್ಟ್ರೇಟರಾದ ಕ್ಯಾಪ್ಟನ್ ಟಿ. ಶ್ರೀನಿವಾಸನ್ನರ ಕೋರ್ಟಿನಲ್ಲಿ ಪ್ರಥಮ ವಿಚಾರಣೆಯಾಗುತ್ತಿತ್ತಷ್ಟೆ. ಇದೇ ತಾ. 12ರಲ್ಲಿ ಮೆಜಿಸ್ಟ್ರೇಟರು ಶ್ರೀಗಳಾದ ಬೆನೆಡಿಕ್ಟ್ ಹೆರಿ, ಆರ್. ಡಿ. ಜತನ್ನ, ಇಮ್ಮಾನುವೇಲ್ ಸಾಲಿನ್ಸ್, ಮಹಮ್ಮದ್ ಹಾರೂನ್ ಇವರ ಮೇಲೆ ಸಾಕಷ್ಟು ರುಜುವಾತುಗಳಿಲ್ಲದ್ದರಿಂದ ಇವರನ್ನು ಬಿಡುಗಡೆ ಮಾಡಿರುವರು. ಶ್ರೀ ಡೇವಿಡ್ ರೋಬರ್ಟ್ಸ್, ಶ್ರೀಮತಿ ಹೆನ್ನಿ ಶಾಪಂತಿ ರೋಬರ್ಟ್ಸ್, ಶ್ರೀಗಳಾದ ಎಂ. ಎಸ್. ಹರ್ಮನ್, ಬಿ. ಎಚ್. ಮುತ್ತು, ಎಫ್. ಸುಂದರ ಸೋನ್ಸ್, ವಿಕ್ಟರ್ ಸಾಲ್ಡಾನ್ಹಾ, ಅನ್ವರ್ ಹುಸೈನ್ ಖಾನ್ ಯಾನೆ ಎ. ಎಚ್. ಖಾನ್ ಈ ಏಳು ಮಂದಿಯ ಮೇಲೆ ಸಾಕಷ್ಟು ರುಜುವಾತುಗಳಿರುವುದರಿಂದ ಸೆಶ್ಶನಿನ ವಿಚಾರಣೆಗೆ ಗುರಿಪಡಿಸಿದರು. ಕಾಲ್ಪನಿಕ ವ್ಯಕ್ತಿಗಳ ಹೆಸರಲ್ಲಿ ಪೆನ್ಶನ್ ಎಂದು ಸುಮಾರು ಮೂರು ಲಕ್ಷಕ್ಕೂ ಮಿಕ್ಕಿದ ವಂಚನೆ ಈ ಮೊಕದ್ದಮೆಯಲ್ಲಿ ನಡೆದಿರುತ್ತದೆಂದು ತಿಳಿದುಬರುತ್ತದೆ.

ಬಜ್ಪಾಲಿನಲ್ಲಿ ದುರಂತ—ಮಂಗಳೂರು ಬಳಿಯ ಬಜ್ಪಾಲು ಗ್ರಾಮದ ಪಳೆ ಬೀಡು ಎಂಬ ಮನೆಯಲ್ಲಿ ತಾ 12ನೇ ರಾತ್ರಿ ಸುಮಾರು 30 ವರ್ಷದ ಸೋದರ ಮಾವ ರಾಮಣ್ಣ ಶೆಟ್ಟಿ ಎಂಬವರನ್ನು ಸುಮಾರು 20 ವರ್ಷದ ಸೊಸೆ ರತ್ನ ಎಂಬವಳು ಕೋಳಿ ಬಾಳುಗಳಿಂದ ತಿವಿದು ತಾನೂ ಕುತ್ತಿಗೆ ಕೊಯ್ದುಕೊಂಡು ಮರಣಗೊಂಡಳೆಂದೂ ಮರಣೋತ್ತರ ಶಸ್ತ್ರ ಕ್ರಿಯೆಯಲ್ಲಿ ಅವಳು 7 ತಿಂಗಳ ಗರ್ಭಿಣಿಯಾಗಿದ್ದಳೆಂದೂ ತಿಳಿದುಬರುತ್ತದೆ. ಮಾವ ಸೊಸೆಯರೊಳಗೆ ಅನೀತಿಯ ಗುಪ್ತ ಸ್ನೇಹಾಚಾರ ಸಂಬಂಧ ನಡೆದು ಗರ್ಭಧಾರಣೆಯಾದುದೇ ಈ ದುರಂತದ ಕಾರಣವಿರಬಹುದೆನ್ನಲಾಗಿದೆ. ಆಸ್ಪತ್ರೆಯಲ್ಲಿ ಮಾವನ ಸ್ಥಿತಿ ಚಿಂತಾಜನಕವೆನ್ನಲಾಗಿದೆ.

ಗುಡಿಕೈಗಾರಿಕೆ ಸಂಘ—ಇದರ ಸಭೆಯು ತಾ. 10ರಲ್ಲಿ ಅತ್ತಾವರದಲ್ಲಿ ಕರ್ಕೇರರ ಕುಟೀರದಲ್ಲಿ ಶ್ರೀ ಬಿ. ಆರ್. ಕರ್ಕೇರರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘವನ್ನು ರಿಜಿಸ್ಟ್ರಿ ಮಾಡಬೇಕೆನ್ನುವ ಹಣ್ಣುಗಳ ಮುರಬ್ಬ, ಮೀನು ದಾಸ್ತಾನು, ಹಾಲು ತಯಾರಿಕೆ, ಜೇನು ಮತ್ತು ಕೋಳಿ ಸಾಕಣೆ ಕಾರ್ಯವಾದ ಬೇಕೆನ್ನುವ ಮೊದಲಾದ ನಿರ್ಣಯಗಳಾದುವು.

ಸಂಯುಕ್ತ ವಾರ್ಷಿಕೋತ್ಸವ—ಆರ್ಯ ಸಮಾಜ ಮತ್ತು ಶ್ರದ್ಧಾನಂದ ಸೇವಾಶ್ರಮದ ವಾರ್ಷಿಕೋತ್ಸವವು ತಾ. 6ರಲ್ಲಿ ಸಬ್ ಜಡ್ಜರಾದ ಶ್ರೀ ಯು. ನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಭಾಷಣಾದಿ ವಿವಿಧ ಕಾರ್ಯಕ್ರಮಗಳಿಂದ ನೆರವೇರಿತು. ಆಶ್ರಮದಲ್ಲಿ ಸುಮಾರು 75 ಮಕ್ಕಳಿದ್ದು ಸುಮಾರು 15 ಸಾವಿರ ರೂಪಾಯಿ ವೆಚ್ಚವಾಗುತ್ತಿದೆ ಎಂದು ತಿಳಿದುಬರುತ್ತದೆ. ವರದಿ ವರ್ಷದಲ್ಲಿ ಸರಕಾರದಿಂದ ಸುಮಾರು 6 ಸಾವಿರ, ನಗರಸಭೆಯಿಂದ ರೂ. 250 ಸಹಾಯ ಧನ ಸಿಕ್ಕಿದುವುದು.

ಮಂಗಳೂರು ಸರ್ಕಲ್ ಕಾಂಗ್ರೆಸ್ ಕಮಿಟಿ—ಇದರ ಆಶ್ರಯದಲ್ಲಿ ತಾ. 13ರಲ್ಲಿ ಸಾರ್ವಜನಿಕ ಸಭೆಯೊಂದು ಶ್ರೀ ಅಚ್ಯುತ ಭಟ್ಟ ಅಧ್ಯಕ್ಷತೆಯಲ್ಲಿ ಕೊಂಚಾಡಿ ಶ್ರೀ ರಾಮಾರಮ ಹಾ! ಎ! ಶಾಲೆಯಲ್ಲಿ ಜರಗಿತು. ಜನತೆಯು ಕಾಂಗ್ರೆಸ್ಸಿಗೆ ಬೆಂಬಲವೀಯುವ ಕುರಿತು ಶ್ರೀಗಳಾದ ಎನ್. ಎಸ್. ಸುವರ್ಣ, ಎಂ.ಎಲ್.ಎ., ಎಲ್. ಸಿ. ಪಾಯಿಸ್, ಎಂ.ಎಲ್.ಎ., ಎಂ. ಎಲ್. ಶೆಟ್ಟಿ, ಎಸ್. ಯಸ್. ಹೊಳ್ಳ ಇವರು ಭಾಷಣವಿತ್ತರು. ಶ್ರೀ ಬಿ. ಆರ್. ಕರ್ಕೇರರು ಕಾಂಗ್ರೆಸಿನ ಸಂಘಟನೆಗಾಗಿ ಜನರ ಸಹಕಾರ ಕೋರಿದರು. ಅನಂತರ ಕನ್ನಾಟಕ ಏಕೀಕರಣವನ್ನು ಸಮರ್ಥಿಸುವ ಜಿಲ್ಲೆಯಲ್ಲಿ ದೊಡ್ಡ ಕೈಗಾರಿಕೆಯೊಂದನ್ನು ಸ್ಥಾಪಿಸಲು ಕೇಂದ್ರ ಸರಕಾರವನ್ನು ಕೇಳಿಕೊಳ್ಳುವ, ಸಾರ್ವಜನಿಕ ಉಪಯೋಗ ಸ್ಥಳವನ್ನು ಬಿಟ್ಟು ಉಳಿದ ಯಾವತ್ತೂ ಬಂಜರು ಭೂಮಿಯನ್ನು ಮನೆಯುಳ್ಳದ ಬಡವರಿಗೆ ದಲಾ ಆರ್ಥ ಎಕ್ರೆಯಂತೆಯಾದರೂ ವರ್ಗಾಸ್ತಿಗೆ ಕೊಡಬೇಕೆನ್ನುವ, ಒಕ್ಕಲು ಹಿತ ಕಾನೂನನ್ನು ತರಬೇಕೆನ್ನುವ ಇತ್ಯಾದಿ ಠರಾವುಗಳಾದುವು.

ಫಾದರ್ ಮುಲ್ಲರರ ಆಸ್ಪತ್ರೆಗೆ ಶ್ರೀ ಫಜುಲ್‌ರವರ ಸಂದರ್ಶನ—ಸ್ಟೇಟ್ಸ್ ರಿ ಆರ್ಗನೈಝೇಶನ್ ಕಮಿಶನಿನ ಚೆಯರ್ಮನರಾದ ಶ್ರೀ ಎಸ್ ಫಜಲ್ ಅಲಿ (ಒರಿಸ್ಸಾ ಪ್ರಾಂತದ ಮಾಜಿ ಗವರ್ನರ್ ಹಾಗೂ ಸುಪ್ರೀಮ್ ಕೋರ್ಟಿನ ಮಾಜಿ ಜಡ್ಜರು) ಇತ್ತೀಚೆಗೆ ಆಸ್ಪತ್ರೆಯನ್ನು ಸಂದರ್ಶಿಸಿ, ಈ ಕೆಳಗಿನಂತೆ ಪ್ರಶಂಸೋಕ್ತಿಗಳನ್ನು ಸಲ್ಲಿಸಿದರು. "ಫಾದರ್ ಮುಲ್ಲರರ ಔಷಧಿಗಳಲ್ಲಿ ನಾನು ತುಂಬಾ ವಿಶ್ವಾಸವಿರುವವನು. ಮಂಗಳೂರಿಗೆ ಬಂದಿರುವ ಈ ಸಂದರ್ಭದಲ್ಲಿ ಈ ಮಹಾ ಸಂಸ್ಥೆಯನ್ನು ಸಂದರ್ಶಿಸಿದೆ. ಫಾದರ್ ಮುಲ್ಲರರು ಮಾನವ ಕೋಟಿಯ ಕಲ್ಯಾಣಕ್ಕಾಗಿ ದುಡಿದವರು. ಅವರ ಸ್ಮರಣೆಯನ್ನು ಚಿರಸ್ಥಾಯಿಗೊಳಿಸುವ, ವಿಚಕ್ಷಣತೆಯಿಂದ ಸಾಫಲ್ಯವೆನಿಸುವಂತೆ ನಡೆಸಲ್ಪಡುವ ಔಷಧಾಲಯ, ಆಸ್ಪತ್ರೆ, ಕುಷ್ಠರೋಗಿಗಳ ಗೃಹ, ಮತ್ತು ಇತರ ಸಂಸ್ಥೆಗಳನ್ನು ನೋಡಿ ಆತ್ಮಾನಂದವೆನಿಸಿತು."

ವಿಟ್ಲದಲ್ಲಿ ಅಡಿಕೆ ಸಂಶೋಧನಾ ಕೇಂದ್ರ—ವೊಂದನ್ನು ಸ್ಥಾಪಿಸಲಾಗುವುದೆಂದು ಇದೇ ತಾ. 7ರಲ್ಲಿ ಕೇಂದ್ರ ಸರಕಾರದ ಆಹಾರ ಮತ್ತು ಕೃಷಿ ಇಲಾಖೆಯ ಎಡಿಶನಲ್ ಸೆಕ್ರೆಟರಿ ಶ್ರೀ ಕೆ. ಆರ್. ದಾಮ್ಲೆಯವರು ಕಲ್ಕತ್ತದಲ್ಲಿ ಜರಗಿದ ಭಾರತದ ಕೇಂದ್ರ ಅಡಿಕೆ ಸಮಿತಿಯ ಏಳನೆಯ ಸಾಮಾನ್ಯ ಸಭೆಯ ಅಧ್ಯಕ್ಷ ಭಾಷಣದಲ್ಲಿ ತಿಳಿಸಿದ್ದಾರೆ.

ಕಥೆ, ಕಾದಂಬರಿ, ಕವಿತೆ, ನಾಟಕ ಮೊದಲಾದ ನಾನಾ ಪುಸ್ತಕಗಳು.

1	ಸ್ವತಂತ್ರ ಜೀವನೋಪಾಯ	0	8
2	ಸಂಶಯ ಪಿಶಾಚಿ	0	10
3	ನಾದ ಕತೆಗಳು	0	3
4	ಕುಶಲವ	0	8
5	ಕಾವ್ಯ ಸಾಮ್ರಾಜ್ಯ	1	8
6	ಮಧುವನ	3	0
7	ಮುಂದಿನ ದೇವರು	0	4
8	ವ್ಯಭಿಚಾರಿಣಿ ಯಾರು	1	4
9	ಹೆಂಡ್ತಿ ಗಂಡನಾದರೆ	0	4
10	ಪುರುಷ ವಧು	0	4
11	ಸನ್ಯಾಸಿಯ ಸೋಗಿನಲ್ಲಿ	0	12
12	ನಂದಾ ದೀಪ	0	14
13	ದೇಶಭಕ್ತ	1	4
14	ಪ್ರೇಮ ವಿಜಯ	1	0
15	ರಂಗಭೂಮಿ	0	10
16	ಸೇವಾಪಥ	0	3
17	ನಾರೀ ಹೃದಯ	1	8
18	ಭಾರತೀಯ ಕತೆಗಳು	1	12
19	ಪ್ರಕಾಶ	2	8
20	ಮೂರು ಪ್ರಹಸನಗಳು	1	4
21	ನಗೆ ನೋಟಗಳು	1	4
22	ಅನ್ನದೇವರು ಮತ್ತು ಕತೆಗಳು	1	0
23	ಭಾರತದಲ್ಲಿ ಜಾತಿಭೇದ	1	0
24	ವಿಷ್ಣುವಿನ ಪರಾಪರಾಧ ಅರ್ಥಾತ್ ದಶಾವತಾರ	0	12
25	ಆಕಾಶ ಗಂಗೆ	2	8
26	ಸ್ವಾತಂತ್ರ್ಯವೀರ ಸಾವರಕರರು	1	4
27	ಜೀವನ ಸಂಗ್ರಾಮ	1	6
28	ಕದಂಬ	1	4
29	ಕವಿತಾಕಾಮಿನಿ	2	0
30	ಸ್ವರಾಜ್ಯ ವಿಜಯ	0	8
31	ಸಪ್ತಸಾಗರ	0	12
32	ಜಮೀನ್ದಾರ	1	8
33	ಬಾಳಿನ ಬೆಡಗು	1	4
34	ಲೋಪಾಮುದ್ರೆ	1	0
35	ಜಿಗುಡು	0	10
36	ನನ್ನ ಕಥೆಗಳು	0	10

ನವಭಾರತ ಪುಸ್ತಕ ಭಂಡಾರ, ಉಡುಪಿ.

ನಿಮ್ಮಷ್ಟಕ್ಕೇ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಯನ್ನು ಇಂದೇ ತರಿಸಿಕೊಳ್ಳಿರಿ.

ಬೆಲೆ:- ಸಾಧಾರಣ ಪ್ರತಿ— ರೂ. ೧—೮—೦. (ಟಪ್ಪಾಲು ಖರ್ಚು ಬೇರೆ)
ಉತ್ತಮ ಪ್ರತಿ - ರೂ. ೨—೦—೦. (ಟಪ್ಪಾಲು ಖರ್ಚು ಬೇರೆ)
ದೊರಕುವ ಸ್ಥಳಗಳು:-- 1) ನವಭಾರತ ಪುಸ್ತಕ ಭಂಡಾರ, ಉಡುಪಿ, ದ ಕ.
2) ನವಯುಗ ಪ್ರೆಸ್, ಉಡುಪಿ, ದ. ಕ.

ಯಂ. ಗಣಪ್ಪಯ್ಯ ಎಂಡ್ ಸನ್ಸ್
ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ, ಮಂಗಳೂರು ಇವರ
ಅಶೋಕಾರಿಷ್ಟ ಮತ್ತು ವಟಾತ್ರೈ-ಹೆಂಗಸರ ಗರ್ಭಾಶಯ ರೋಗಗಳಿಗೆ ಸಂಜೀವನ. ಅಕಾಲ ಬಹಿಷ್ಟೆ. ಋತುಸ್ರಾವವು ಜಾಸ್ತಿಯಾಗಿಯೂ, ಕಡಿಮೆಯಾಗಿಯೂ ಹೋಗುವುದು, ಬಿಳಿಸೆರಗು, ಸಂತಾನ ಹೀನತೆ, ರಕ್ತಹೀನತೆ, ಋತುಶೂಲೆ ಮೊದಲಾದ ಸ್ತ್ರೀಯರಿಗೆ ಸಂಬಂಧಪಟ್ಟ ಎಲ್ಲಾ ಕಾಯಿಲೆಗಳನ್ನು ಗುಣಪಡಿಸುವುದು. ಬಾಟ್ಲಿ 1ರ ರೂ. 3-8-0.
ಗರ್ಭ ರಕ್ಷಕ— ಗರ್ಭಿಣಿಯರಿಗೆ ಅತ್ಯಂತ ಫಲಕಾರಿಯಾದ ಔಷಧ. ಚಪಿದೋಷ, ಗರ್ಭಪತನವಾಗುವಿಕೆ, ವಾಂತಿ, ಅರುಚಿ, ಅಶಕ್ತತೆ, ಮಲಬದ್ಧತೆ, ವಾಯು ಉಪದ್ರ, ಕೈಕಾಲು ಬತ್ತುವುದು ಇವುಗಳನ್ನೆಲ್ಲಾ ಹೋಗಲಾಡಿಸುವುದು. ಬಾಟ್ಲಿ 1ರ ರೂ. 3-8-0
ಇದಲ್ಲದೆ ಇನ್ನೂ ಅನೇಕ ತರದ ಔಷಧಿಗಳು ನಮ್ಮಲ್ಲಿ ದೊರಕುತ್ತವೆ. ಕಾಗದ ಬರೆಯುವಾಗ ಕಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ, ರೋಗಕ್ಕೆ ತಕ್ಕ ಔಷಧಿಯನ್ನು ರವಾನಿಸಬಹುದು.

BHUVANENDRA PRODUCTS LTD., KATAPADI, S. K.
ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!
ಇವುಗಳಿಂದಲೇ ಭುವನೇಂದ್ರ ಔಷಧಿಗಳು
ಜನಪ್ರಿಯವಾಗಿರುವವು.
ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು
ನಮ್ಮಲ್ಲಿ ತಯಾರಿಸಲ್ಪಡುತ್ತವೆ.
ವಿವರಗಳಿಗೆ ವಿಚಾರಿಸಿರಿ:-
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.
ಡಿಪೋ:- (1) ಉಡುಪಿ (2) ಮರಾಠ ಗಲ್ಲಿ, ಹುಬ್ಬಳ್ಳಿ.

ಓದಲೇಬೇಕಾದ ದಿ| ಕಿಲ್ಲೆಯವರ
ಮೂರು ಪುಸ್ತಕಗಳು

ಪ್ರಾಚೀನ ತುಳುನಾಡು
(ಎನ್. ಎಸ್. ಕಿಲ್ಲೆ ಮತ್ತು ಎನ್. ಎ. ಶೀನಪ್ಪ ಹೆಗ್ಡೆ)
ಹಿಂದಿನ ತುಳುನಾಡಿನ ಚರಿತ್ರೆಯನ್ನು ವಿವರಿಸುವ ಪುಸ್ತಕ. (ಶ್ರೀ. ಮಂಜೇಶ್ವರ ಗೋವಿಂದ ಪೈಗಳ ಮುನ್ನುಡಿ)
150 ಪುಟಗಳು. ಬಿಳಿ ಕಾಗದ, ಆಕರ್ಷಕ ರಕ್ಷಾಪತ್ರ. ಬೆಲೆ 2-0-0.

ಭಾರತದ ಕರ್ಣ
"ಭಾರತದ ಕರ್ಣನು ದಿ! ಕಿಲ್ಲೆಯವರಿಗೆ ಒಲಿದಿದ್ದ.. ಇದು ಅವರ ಕರ್ಣನ ಪಾತ್ರವನ್ನು ನೋಡಿದವರಿಗೇ ಗೊತ್ತು. ಆ ದುರಂತ ಕರ್ಣನ ಚಿತ್ರ ಎಂದೆಂದೂ ಜನಮನದಿಂದ ಮಾಸಿ ಹೋಗದು" (ಪ್ರೊ! ಎಂ. ಆರ್. ಶಾಸ್ತ್ರಿಗಳ ಮುನ್ನುಡಿಯಿಂದ) ಭಾರತದ ಕರ್ಣನ ಪಾತ್ರವನ್ನು ವರ್ಣಿಸುವ ಪುಸ್ತಕ. ಬೆಲೆ 0-6-0.

ಮುರಲಿ
ಮೇಲ್ತರಗತಿಯ ಕವಿತೆಗಳ ಸಂಗ್ರಹ.
ಬೆಲೆ 0-12-0.
(ಮುನ್ನುಡಿಕಾರರು: ಶ್ರೀ. ಕಯ್ಯಾರ ಕಿಞ್ಞಣ್ಣ ರೈ)
ಮೂರೂ ಪುಸ್ತಕಗಳನ್ನೂ ದಿ! ಕಿಲ್ಲೆಯವರ ಧರ್ಮಪತ್ನಿ ಶ್ರೀಮತಿ ಇಂದಿರಾ ಕಿಲ್ಲೆ, ಮಂಗಳೂರು—ಅವರು ಪ್ರಕಟಿಸಿದ್ದಾರೆ.
ನಿಮಗೆ ಬೇಕಾದ ಪ್ರತಿಗಳಿಗೆ ಬರೆಯಿರಿ:
ನವಭಾರತ ಪುಸ್ತಕ ಭಂಡಾರ, ಉಡುಪಿ
(ಮಂಗಳೂರು ಕೆನರಾ ನ್ಯೂಸ್ ಏಜನ್ಸಿಯಲ್ಲಿಯೂ ಪ್ರತಿಗಳು ದೊರೆಯುತ್ತವೆ.)

-ಹೊಸಕೆರೆ ಚಿದಂಬರಯ್ಯನವರ-
ಗೀತೆಯ ಕೈಗನ್ನಡಿ
ಭಗವದ್ಗೀತೆಯ ಸಮೂಲ
ಭಾಷಾಂತರ.
ಬೆಲೆ **0-12-0**
V. P. P. ಮೂಲಕ 1—4—0
ನವಯುಗ ಪ್ರೆಸ್, ಉಡುಪಿ.

(೧ನೇ ಪುಟದಿಂದ)

ಹರಣೆಗಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಬೇಂಕು ವಹಿವಾಟಿನ ಅನುಕೂಲತೆಯನ್ನು ಒದಗಿಸಬಹುದು. ಖಾಸಗಿರಂಗದ ಕೊರತೆಯನ್ನು ಸರಕಾರ ಮನಗಂಡಿದ್ದು, ಈಗಾಗಲೇ ಅದು ಬುದ್ಧಿಮೆಗಳಿಗೆ ಬಂಡವಾಳವನ್ನೊದಗಿಸುವ ಸಂಸ್ಥೆಯೊಂದನ್ನು ಜಾಗತಿಕ ಬೇಂಕಿನ ನೆರವಿನೊಂದಿಗೆ ಸಂಘಟಿಸಿರುವುದು. ಈ ಸಂಸ್ಥೆಯ ಸಹಕಾರವನ್ನು ಪಡೆದು ಹಾಗು ಶ್ರಾಫ್ ಸಮಿತಿಯ ಸೂಚನೆಗಳನ್ನು ಕಾರ್ಯಗತಗೊಳಿಸಿ, ಖಾಸಗಿ ರಂಗವು ಸಾಕಷ್ಟು ಅಧಿಕ ಪ್ರಯೋಜನವನ್ನು ಹೊಂದಬಹುದು.

ಪಂಚವಾರ್ಷಿಕ ಯೋಜನೆಯು ನಾಲ್ಕನೇ ವರ್ಷಕ್ಕೆ ಪದಾರ್ಪಣ ಮಾಡುತ್ತಿರ್ರುವ ಈ ಸಂದರ್ಭದಲ್ಲಿ ನಾವು ಮೇಲಿನ ಅಂಶಗಳನ್ನೆಲ್ಲ ಚೆನ್ನಾಗಿ ಮನಗಾಣುವುದೊಳಿತು—ಯೋಜನಾ ಆಯೋಗದ ಉಪಾಧ್ಯಕ್ಷರಾದ ಶ್ರೀ ಕೃಷ್ಣಮಾಚಾರಿಯವರು ಆಕಾಶವಾಣಿ ಭಾಷಣವೊಂದನ್ನು ಕಳೆದ ವಾರ ಮಾಡಿ, ಜನತೆಯು ಯೋಜನೆಯಲ್ಲಿ ಅತಿ ಹೆಚ್ಚಿನ ಆಸಕ್ತಿಯನ್ನು ಪಡೆದಿರುವುದರ ಆವಶ್ಯಕತೆಯನ್ನು ತಿಳಿಸಿದರು. ಯೋಜನೆಯು ನೈಸರ್ಗಿಕ ವಿಪತ್ತುಗಳು ಸಂಭವಿಸದಿದ್ದರೆ—ತನ್ನ ಉದ್ದೇಶ ಸಾಧನೆಯಲ್ಲಿ ಯಶಸ್ಸುಗಳಿಸುವುದೆಂಬ ವಿಶ್ವಾಸವನ್ನು ಅವರು ಪ್ರಕಟಪಡಿಸುತ್ತಾ ಜನರು ಅಧಿಕ ಸಹಕಾರವನ್ನು ನೀಡಬೇಕೆಂದು ವಿನಂತಿಸಿದರು. ನಮ್ಮ ಪ್ರಥಮ ರಾಷ್ಟ್ರೀಯ ಪ್ರಯತ್ನದ ಫಲವಾಗಿ, ಸಾಮಾನ್ಯ ನಾಗರಿಕನ ಜೀವನ ಮಟ್ಟವು ನೂರಕ್ಕೆ ಹತ್ತರಷ್ಟು ಉನ್ನತಗೊಳ್ಳುವುದೆಂದು ಅವರು ಹೇಳಿದರು. ಎರಡನೆಯ ಪಂಚವಾರ್ಷಿಕ ಯೋಜನೆಯು ಇನ್ನಷ್ಟು ವ್ಯಾಪಕವಾದ ಗುರಿಯನ್ನಿಟ್ಟುಕೊಳ್ಳುವುದೆಂದು ಅವರು ಪ್ರಕಟಿಸಿದರು. ಭಾರತೀಯರೆಲ್ಲರೂ ರಾಷ್ಟ್ರದ ಸಮಸ್ಯೆಯನ್ನು ಪರಿಹರಿಸುವುದರಲ್ಲಿ ನೆರವಾಗಿ ಕೃತಕೃತ್ಯರಾಗಬೇಕೆಂದು ಹಾರೈಸಿದರು. ಈ ಪ್ರಾರ್ಥನೆಯನ್ನು ನಾವು ಮನ್ನಿಸಿ, ಧನ್ಯರಾಗೋಣ!

ಪ್ರಕಟಣೆ

ಬಂಟರ ಯಾನೆ ನಾಡವರ ಸಂಘ, ಮುಂಬಯಿ.

ಈ ಸಂಘದವರು ಮುಂಬಯಿಯಲ್ಲಿರುವ ಸ್ವಜಾತಿಯ ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ಸಾಲವಾಗಿ ಕೊಡುವಂತೆ ನಿಶ್ಚಯಿಸಿರುವ ಪ್ರಕಾರ, ಅಪೇಕ್ಷಿಸುವವರು ತಮ್ಮ ... ಸ್ಕೂಲ್ ಸರ್ಟಿಫಿಕೇಟ್ ... ಪತ್ರಗಳೊಂದಿಗೆ ಈ ಕೆಳಗಿನ ವಿಳಾಸಕ್ಕೆ ತಾ. ೩೦—೬—೫೪ರ ಒಳಗೆ ... ಅರ್ಜಿ ಕಳುಹಿಸಬೇಕಾಗಿ ಅಪೇಕ್ಷಿಸಲಾಗುತ್ತದೆ.

ಗೌರವ ಕಾರ್ಯದರ್ಶಿ.

ಬಂಟರ ಯಾನೆ ನಾಡವರ ಸಂಘ,
17, ... ಸ್ಟ್ರೀಟ್,
ಮುಂಬಯಿ—1.

ಸ್ವೀಕೃತಿ—ವಿಮರ್ಶೆ

ವಾಣಿಜ್ಯಶಾಸನದ ಮೂಲತತ್ವಗಳು

ಬರೆದವರು: ಕೆ. ಜಯರಾಮ ಶೆಟ್ಟಿ, ಎಂ.ಎ., ಬಿ.ಎಲ್., ಸುಪರಿಂಟೆಂಡೆಂಟ್, ವಿಜಯ ಬ್ಯಾಂಕ್, ಲಿ., ಮಂಗಳೂರು. ಪ್ರಕಾಶಕರು: ಇಂಡಿಯನ್ ಇಂಡಸ್ಟ್ರಿಯಲ್ಸ್ ಎಂಡ್ ಬಿಜಿನೆಸ್, ಕೆ. ಎಸ್. ರಾವ್ ರೋಡ್, ಮಂಗಳೂರು ೧. ಬೆಲೆ: ರೂ. ೨—೮—೦.

ಕನ್ನಡ ವಾಙ್ಮಯದ ಬೆಳವಣಿಗೆಯಲ್ಲಿ ಆಸಕ್ತಿಯುಳ್ಳವರೆಲ್ಲ ನಮ್ಮ ಲೇಖಕರು ನಿತ್ಯ ವ್ಯವಹಾರಕ್ಕೆ ಸಂಬಂಧಿಸಿದ ವಿವಿಧ ವಿಷಯಗಳಮೇಲೆ ಶಾಸ್ತ್ರೀಯ ಗ್ರಂಥವನ್ನು ಬರೆಯಬೇಕೆಂದು ಅಭಿಪ್ರಾಯ ಪಡುತ್ತಾರೆ ದುರ್ದೈವದಿಂದ ಇಂತಹ ಗ್ರಂಥಗಳಿಗೆ ದೊರಕುವ ಪ್ರೋತ್ಸಾಹವು ಅತ್ಯಲ್ಪವಾಗಿರುತ್ತದೆ—ಏಕೆಂದರೆ, ಕಥೆ ಕಾದಂಬರಿಗಳಂತೆ ಶಾಸ್ತ್ರೀಯ ಗ್ರಂಥಗಳು ಮನೋರಂಜನೆಯನ್ನೊದಗಿಸಲಾರವು. ಇಂತಹ ಗ್ರಂಥಗಳ ಲೇಖನ ಹಾಗೂ ಪ್ರಕಾಶನಕ್ಕೆ ಸಾರ್ವಜನಿಕರಿಗಿಂತಲೂ ಸರಕಾರದ ಪ್ರೋತ್ಸಾಹವು ದೊರಕಬೇಕಾದ ಅಗತ್ಯ ಇಂದು ಕಂಡು ಬರುತ್ತದೆ. ಮದ್ರಾಸು ಸರಕಾರದವರೂ ವಿಶ್ವವಿದ್ಯಾನಿಲಯದವರೂ ಈ ದಿಸೆಯಲ್ಲಿ ಸ್ವಲ್ಪ ಮಟ್ಟಿನ ಆಸಕ್ತಿಯನ್ನು ತೋರಿಸಿರುವುದು ಸತ್ಯ—ಇಂತಹ ಪ್ರೋತ್ಸಾಹದ ಭರವಸೆ ದೊರೆತುದರಿಂದಲೇ ಮೇಲಿನ ಪುಸ್ತಕವು ದಿನದ ಬೆಳಕನ್ನು ಕಾಣುವಂತಾಯಿತು. ಮದ್ರಾಸು ವಿಶ್ವವಿದ್ಯಾನಿಲಯವು ೧೯೫೨—೫೩ನೇ ಇಸವಿಯಲ್ಲಿ ಆಧುನಿಕ ವಿಷಯಗಳ ಕುರಿತು ಭಾರತೀಯ ಭಾಷೆಗಳಲ್ಲಿ ಬರೆದ ಗ್ರಂಥಗಳಲ್ಲಿ ಒಂದೆಂದು ಈಗ್ರಂಥವನ್ನು ಮನ್ನಿಸಿ, ಉಚಿತ ಪಾರಿತೋಷಕವನ್ನು ನೀಡಿರುತ್ತದೆ. ಹೆಸರೇ ಸೂಚಿಸುವಂತೆ ವಾಣಿಜ್ಯ ಶಾಸನದ ಮೂಲತತ್ವಗಳನ್ನು ತಿಳಿಸುವ ಪ್ರಯತ್ನವನ್ನು ನಾವಿಲ್ಲಿ ಕಾಣುತ್ತೇವೆ. ಈಗಿನ ಕಾಲದಲ್ಲಿ ವ್ಯಾಪಾರ ವಹಿವಾಟುಗಳ ಕುರಿತು ಜಾರಿಗೆ ಬಂದ ಕಾಯಿದೆಯ ಸಾಮಾನ್ಯ ಪರಿಚಯವು ನಾಗರಿಕರಿಗೆ ಇರುವುದು ಎಷ್ಟು ಆಗತ್ಯವೆಂಬುದನ್ನು ನಾವು ಒತ್ತಿ ಹೇಳಬೇಕಾಗಿಲ್ಲ—ದೇಶದ ಕಾಯಿದೆ ಕಾನೂನುಗಳ ಪರಿಚಯವು ಪ್ರಜೆಗಳಿಗೆ ಇರುವುದು ಪ್ರಜಾಪ್ರಭುತ್ವದ ಈ ದಿನಮಾನಗಳಲ್ಲಿ ಅತ್ಯಂತ ಆಗತ್ಯವೆಂದು ಒಪ್ಪಲಾಗುತ್ತದೆ. ಸಂಬಂಧಿಸಿದ ಶಾಸನಗಳ ಸಾಕಷ್ಟು ಪರಿಚಯವು ಪ್ರಜೆಗಳಿಗೆ ಇಲ್ಲವಾದರೆ, ಕಾಯಿದೆಗಳಿಂದ ಪ್ರಯೋಜನವು ದೊರೆಯಲಿಕ್ಕಿಲ್ಲ; ಅಥವಾ ಕಾಯಿದೆ ಭಂಗವು ನಡೆದು, ಪ್ರಜೆಗಳು ಕಷ್ಟ ನಷ್ಟಗಳನ್ನು ಹೊಂದಬಹುದು. ಈ ದೃಷ್ಟಿಯಿಂದ ಸರಳವಾದ ಮಾತುಗಳಲ್ಲಿಯೂ ಸುಲಭ ಶೈಲಿಯಲ್ಲಿಯೂ ಎಲ್ಲರಿಗೂ ಮನವರಿಕೆಯಾಗುವಂತೆ ಬರೆಯಲಾದ ಈ ಪುಸ್ತಕವು ಸಕಾಲಿಕವಾದ ಪ್ರಕಟಣೆಯೆಂದು ಕಂಡು ಬರುವುದು. ಈ ಪುಸ್ತಕದಲ್ಲಿ ವಿವರಿಸಲಾದ ವಿಷಯಗಳೆಲ್ಲವೂ ನಮಗೆ ನಿಕಟ ಸಂಬಂಧವನ್ನು ಹೊಂದಿವೆ—ಮದ್ರಾಸು ವಿಶ್ವವಿದ್ಯಾನಿಲಯದಲ್ಲಿ ಕಲಿಸುವ ವಾಣಿಜ್ಯ ಶಾಸನದ ಪಾಠ ಪಟ್ಟಿಯಲ್ಲಿ ಹೇಳಲಾದ ವಿಷಯಗಳನ್ನು ಕೂಲಂಕಷವಾಗಿ ಇಲ್ಲಿ ವಿವರಿಸಿದ್ದಾರೆ. ಕರಾರು ಶಾಸನ, ರಕ್ಷಣೆ ಮತ್ತು ಭರವಸೆಯ ಕರಾರು, ವಸ್ತುನ್ಯಾಸದ ಕರಾರು, ಪಾಲುಗಾರಿಕೆಯ ಶಾಸನ, ವಸ್ತು ವಿಕ್ರಯದ ಶಾಸನ, ಕಂಪೆನಿಗಳ ಶಾಸನ, ಅನ್ಯಪರ ಮಾಡಲಾಗುವ ಶಾಸನ, ವಿಮಾ ಶಾಸನ, ದಿವಾಳಿ ಶಾಸನ ಮುಂತಾದ ವಿಷಯಗಳ ವಿವರಣೆಯು ತಿಳಿಯಾದ ಭಾಷೆಯಲ್ಲಿ ಸ್ಪಷ್ಟವಾಗಿಯೇ ಮಾಡಲಾಗಿದೆ. ಕಾಯಿದೆಯಲ್ಲಿ ಅನಿವಾರ್ಯವಾಗಿ ಕಂಡುಬರುವ ಕ್ಲಿಷ್ಟ ಅಂಶಗಳನ್ನು ಮುಂದಟ್ಟು ಮಾಡಿಕೊಳ್ಳಲು ಅನುಕೂಲವಾಗುವಂತೆ ಅನೇಕ ಉದಾಹರಣೆಗಳು ಇವೆ. ಇದರಿಂದ ಓದುಗರಿಗೆ ಹೆಚ್ಚಿನ ಪ್ರಯೋಜನ ದೊರೆಕುತ್ತದೆ. ಪಾರಿಭಾಷಿಕ ಪದಗಳಿಗೆ ಕನ್ನಡದಲ್ಲಿ ಅನುರೂಪ ಶಬ್ದಗಳನ್ನು ಆರಿಸುವಾಗಲೂ ಜಾಗರೂಕತೆಯನ್ನು ತೋರಿಸಿದ್ದಾರೆ—ಆದರೆ ಇಲ್ಲಿ ಕೆಲವು ಪ್ರಯೋಗಗಳು ತೀರಾ ಸಮರ್ಪಕವೆಂದು ಹೇಳುವಂತಿಲ್ಲ. ಉದಾ: Statute Law ಎಂಬುದನ್ನು ಶಾಸನಿಕ ಕಾನೂನು (ಪು. ೩) ಎಂದು ಕರೆಯುವುದಕ್ಕಿಂತ ವೈಧಾನಿಕ ಶಾಸನವೆಂದು ಹೇಳುವುದು ಸರಿಯಾದೀತು. ಹಾಗೆಯೇ Dissolution of the Firm ಎಂಬುದನ್ನು ಸಂಸ್ಥೆಯ ವಿಚ್ಛೇದನೆ ಎನ್ನುವುದಕ್ಕಿಂತ (ಪುಟ ೫೩) ಸಂಸ್ಥೆಯ ವಿಸರ್ಜನೆ ಎನ್ನುವುದು ಚಂದ. ಇಂತಹದೇ ಇನ್ನೂ ಕೆಲವು ಪ್ರಯೋಗಗಳು ಇವೆ. ಆದರೆ ಕನ್ನಡದಲ್ಲಿ ಪಾರಿಭಾಷಿಕ ಶಬ್ದಗಳ ಪ್ರಯೋಗವು ಇನ್ನೂ ಸಮಸ್ಯೆಯ ರೂಪದಲ್ಲಿಯೇ ಇದೆಯೆಂಬುದರಿಂದ ಈ ನ್ಯೂನತೆಗಳು ಪುಸ್ತಕದ ಬೆಲೆಯನ್ನು ತಗ್ಗಿಸುವುದಿಲ್ಲವೆಂದು ಸಮಾಧಾನಪಡಬಹುದು. ಈ ಪುಸ್ತಕವನ್ನು ಒಮ್ಮೆ ಓದಿದ ಮೇಲೆ, ನಮ್ಮ ವಿಷಯಜ್ಞಾನವನ್ನು ಮತ್ತಷ್ಟು ಬೆಳಸಿಕೊಳ್ಳಲು ಅನುಕೂಲವಾಗುವಂತೆ ಕೆಲವು ಪ್ರಮುಖ ಗ್ರಂಥಗಳನ್ನು ಲೇಖಕರು ಕೊನೆಯಲ್ಲಿ ಹೆಸರಿಸಬಹುದಿತ್ತು ಎಂದೆನಿಸುತ್ತದೆ. ಕನ್ನಡದಲ್ಲಿ ಅಂತಹ ಗ್ರಂಥಗಳ ಅಭಾವವಿದ್ದರೂ ಇಂಗ್ಲೀಷು ಗ್ರಂಥಗಳು ಇರದಿರಲಾರವು. ಹಾಗೆಂದು ಇದೂ ಗಣನೀಯವಾದ ಲೋಪವೆನಿಸದು. ಆದುದರಿಂದ, ಶ್ರೀ ಶೆಟ್ಟರು ತಮ್ಮ ಪಾಂಡಿತ್ಯ ಹಾಗು ಅನುಭವಗಳನ್ನು ಅತ್ಯಂತ ಉಪಯುಕ್ತವಾದಪುಸ್ತಕರಚನೆಯಲ್ಲಿ ಉಪಯೋಗಿಸಿ, ಕನ್ನಡ ವಾಙ್ಮಯದ ಐಶ್ವರ್ಯವನ್ನು ಹೆಚ್ಚಿಸಿದುದಕ್ಕೆ ನಾವು ತುಂಬ ಸಂತೋಷದಿಂದ ಧನ್ಯವಾದವನ್ನು ಅರ್ಪಿಸುತ್ತೇವೆ, ಮತ್ತು ಅವರಿಂದ ಇನ್ನೂ ಹೆಚ್ಚಿನ ಸೇವೆ ದೊರಕಲೆಂದು ಹಾರೈಸುತ್ತೇವೆ. ಶೆಟ್ಟರ ಬರವಣಿಗೆಯಲ್ಲಿ ಕಂಡುಬಂದ ಅಚ್ಚುಕಟ್ಟು ತನವು ಮುದ್ರಣ ಕೆಲಸದಲ್ಲೂ ಸುಂದರವಾಗಿ ವ್ಯಕ್ತಗೊಂಡಿರುವುದರಿಂದ, ಕಣ್ಣಿಗೂ ಪುಸ್ತಕ ಒಪ್ಪುತ್ತದೆ.

—ಕುಮಾರಸ್ವಾಮಿ.

ಖಾತ್ರಿ ಚಿನ್ನದ ನೆಕ್‌ಲೇಸ್, ತರಹವಾರು ಚೈನುಗಳು, ಬೆಂಡೋಲೆ,
ಸರಗಳು, ಲೋಲ್ಕುಗಳು, ನಮೂನೆವಾರು ಉಂಗುರಗಳು
ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,
ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.

ಫೋನು ನಂಬ್ರ 66

(ಉತ್ತಮ ಸಾರಸ್ವತ ಬ್ರಾಹ್ಮಣರ ಅಡಿಗೆ, ಶುಚಿ ರುಚಿಯಾದ ರೈಸ್‌ಪ್ಲೇಟ್)
ರುಚಿಕರವಾದ ಊಟ— ಹವೇಶೀರ್ (Airy) ವಸತಿ,
ಎರಡು ಊಟ ಕೋಟ್ (Cot) ಇತ್ಯಾದಿ ಸೌಕರ್ಯ.
ತಿಂಗಳೊಂದರ ರೂ. 52/- ಮಾತ್ರ.
ವಿಶೇಷ ಮಾಹಿತಿಗೆ ಪ್ರತ್ಯಕ್ಷ ವಿಚಾರಿಸಿರಿ.

ಸದ್ಗುರು ಬೋರ್ಡಿಂಗ್ ಎಂಡ್ ಲೋಜಿಂಗ್

ಹಿಂದ್‌ಮಾತಾ ಸಿನೇಮದ ಸಮೀಪ, ದಾದರ್, ಮುಂಬಯಿ ೧೪.
ವ್ಯವಸ್ಥಾಪಕ: ವಿ. ಯಸ್. ಪ್ರಭು.

ಎಲ್ಲಾ ತರದ ಮಾಹಿತಿಯನ್ನೊಳಗೊಂಡ ಉತ್ತಮ ತರದ
ಮಗ್ಗಿ ಪುಸ್ತಕಗಳು
ರಖಂ ಆಗಿಯೂ
ಚಿಲ್ಲರೆಯಾಗಿಯೂ ದೊರೆಯುತ್ತವೆ
1000 ಯಾ 500ಕ್ಕೆ ಅತೀ ರಿಯಾಯತಿ ಇದೆ.
ಉತ್ತಮ ಕಾಗದದ, ದಪ್ಪನಾದ ಹೊರಕವಚದ, ಎಲ್ಲಾ ತರದ
ಎಕ್ಸ್‌ರ್ ಸೈಜ್
ಪುಸ್ತಕಗಳು ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ. ದ. ಕ.

ಪಾನ ಪ್ರತಿಬಂಧ

(ಶ್ರೀ. ಮೋಹನದಾಸ ಎನ್. ಹೆಗ್ಡೆ. ಎಂ. ಎ., ಎಲ್‌ಎಲ್. ಬಿ.

ಭಾರತದಲ್ಲಿ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಇದ್ದಂತೆ ಬಹು ಪ್ರಾಚೀನ ಕಾಲದಿಂದಲೂ ಮದ್ಯಪಾನವು ಬಳಕೆಯಲ್ಲಿತ್ತು. ಆದರೆ ಇತ್ತೀಚೆಗೆ ಮದ್ಯಪಾನದ ಹವ್ಯಾಸವು ಬಹಳ ಭಯಂಕರ ಆಕೃತಿಯನ್ನು ತಾಳಿ ಭಾರತದ ಮುಂದಿನ ಜನಾಂಗವನ್ನು ಹಾಳುಗೈಯ್ಯಲು ಪ್ರಯತ್ನಿಸುತ್ತಿದೆ. ಮನೆವಾರು ಖರ್ಚಿನ ಕೆಲವಂಶ ಪಾನದ ಮೇಲೆ ಖರ್ಚಾಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಪುಣ್ಯವಶಾತ್ ಭಾರತದಲ್ಲಿ ಸ್ತ್ರೀ ಕುಡುಕರ ಸಂಖ್ಯೆಯು ಬರೇ ಸ್ವಲ್ಪವಾಗಿರುವುದರಿಂದ ಹಲವು ಸಂಸಾರಗಳಾದರೂ ಸುಖರೂಪದಲ್ಲಿವೆ. ಭಾರತೀಯರ ದೇಹ ಪರಿಸ್ಥಿತಿ, ಮತ್ತು ಆರ್ಥಿಕ ಪರಿಸ್ಥಿತಿಯ ಮೇಲೆ ಪಾನ ಹವ್ಯಾಸವು ಎಷ್ಟೊಂದು ಹೀನ ಸ್ಥಿತಿಯನ್ನು ತಂದೊಡ್ಡಿದೆಯೆಂಬುದನ್ನು ಪ್ರತ್ಯೇಕ ಹೇಳಬೇಕಾಗಿಲ್ಲ. ಮಹಾತ್ಮಾಜೀಯವರು ಈ ಹೀನ ಅಭ್ಯಾಸದ ಪರಿಣಾಮಗಳನ್ನು ಮನಗಂಡು, ಅದನ್ನು ರಾಷ್ಟ್ರೀಯ ಪ್ರಶ್ನೆಯನ್ನಾಗಿ ಮಾರ್ಪಡಿಸಿದರು.

ಮದ್ಯಪಾನವು ಒಂದು ದುಶ್ಚಟ ಎಂಬುದನ್ನು ಯಾರೂ ಅಲ್ಲಗಳೆಯಲಾರರು. ಇದರಿಂದ ನಾವೇ ನಮ್ಮ ಮುಂದಿನ ಪೀಳಿಗೆಯನ್ನು ಪ್ರತ್ಯೇಕಿಸಬೇಕಾಗಿದೆ. ಆದರೆ ಬುನಾದಿಯನ್ನು ಈಗಾಗಲೇ ಭದ್ರವಾಗಿ ಕಟ್ಟಿದಲ್ಲಿ ನಾವು ನಮ್ಮ ಪ್ರಯತ್ನದಲ್ಲಿ ಜಯಶೀಲರಾಗಬಹುದು. ಭಾರತದ ಇತಿಹಾಸದಲ್ಲಿ, ಹಲವು ಬಾರಿ, ಹಲವು ಸಮ್ರಾಟರು ಮದ್ಯಪಾನದ ದುಷ್ಪರಿಣಾಮಗಳನ್ನು ಕಂಡು ಅದನ್ನು ಕಿತ್ತೊಗೆಯಲು ಪ್ರಯತ್ನಿಸಿರುದು ಕಂಡುಬರುತ್ತದೆ. ಸಮ್ರಾಟ ಅಶೋಕ, ಅಲ್ಲಾವುದ್ದೀನ ಖಿಲ್ಜಿ, ಬಾಬರ ಮುಂತಾದವರು ಈ ಪಂಕ್ತಿಯಲ್ಲಿ ಪ್ರಮುಖರು. ಭಾರತದಲ್ಲಿ ಧಾರ್ಮಿಕ ಸಂಸ್ಥೆಗಳೂ, ಪಾನ ಪ್ರತಿಬಂಧಕ್ಕೆ ಅನುಕೂಲವಾದವುಗಳೇ. ಹೀಗಿರುವಾಗ ಭಾರತದಲ್ಲಿ ಪಾನ ಪ್ರತಿಬಂಧ ಕಾನೂನು ಜಯಶೀಲವಾಗುವುದರಲ್ಲಿ ಸಂಶಯವಿಲ್ಲ. ಶ್ರೀ ಭರತನ್ ಕುಮಾರಪ್ಪನವರು ಮದ್ಯಪಾನದ ದುಷ್ಪರಿಣಾಮದ ಬಗ್ಗೆ ಹೀಗೆ ಹೇಳಿರುತ್ತಾರೆ. "Nay more, besides the money loss and the food loss, great as they are, we must add to the debit side of drink immorality, murders, theft, family squabbles, broken homes, hungry children, and ruined earners, and in short a general lowering of moral sense, judgement and intelligence."

ಭಾರತದಲ್ಲಿ ಪಾನನಿಷೇಧವು ದರಿದ್ರ ಮತ್ತು ಅಜ್ಞಾನಿ ಭಾರತೀಯನ ಉತ್ಥಾನದ ಬಗ್ಗೆ ಮಾಡುವ ಪ್ರಯತ್ನವಾಗಿದೆ. ಅದೊಂದು ಸಾಮಾಜಿಕ ಮತ್ತು ಆರ್ಥಿಕ ಸುಧಾರಣೆಯಾಗಿದೆ. ವಿದ್ಯಾಪ್ರಸಾರ, ಭೂಸುಧಾರಣೆ, ಸಾರ್ವಜನಿಕ ಆರೋಗ್ಯ, ಕೈಗಾರಿಕೆ—ಇವೆಲ್ಲಾ ಎಷ್ಟು ಪ್ರಾಮುಖ್ಯವೋ, ಅಷ್ಟೇ ಪ್ರಾಮುಖ್ಯತೆಯನ್ನು ವಿಶಾಲವಾಗಿ ಅವಲೋಕಿಸಿದಲ್ಲಿ ಪಾನನಿಷೇಧಕ್ಕೆ ಕೊಡಬೇಕಾಗುತ್ತದೆ. ಇವೆಲ್ಲಾ ವಿಚಾರಗಳನ್ನು ಅವಲೋಕಿಸಿಯೇ ಭಾರತದ ಘಟನೆಯಲ್ಲಿ ಪಾನನಿಷೇಧದ ಬಗ್ಗೆ ಸೂಚನೆಯನ್ನು ಮಾಡಿರುತ್ತಾರೆ. ಪಾನನಿಷೇಧವು ಅಕೃತ್ಯಗಳನ್ನು ಕಡಮೆ ಮಾಡುವುದಲ್ಲದೆ ಜನಸಾಮಾನ್ಯರ ಜೀವನ ಮಟ್ಟವನ್ನು ಉತ್ತಮಗೊಳಿಸುವುದರಲ್ಲಿ ಸಂದೇಹವಿಲ್ಲ. ಬಡ ಜನತೆಯು ಕೊಡುತ್ತಿರುವ ಅಬಕಾರಿ ತೆರಿಗೆಯು ತನ್ನಿಂದ ತಾನೆ ಮಾಯವಾಗುತ್ತದೆ. ಶ್ರೀ ರಾಜಗೋಪಾಲಾಚಾರಿಯವರಂದಂತೆ, ಸರಕಾರದ ಖರ್ಚಿನ 25% ಕೊಡುತ್ತಿರುವ ಬಡ ಜನತೆಯ ಆರ್ಥಿಕ ಪರಿಸ್ಥಿತಿಯು ತನ್ನಿಂದ ತಾನೆ ಉತ್ತಮಗೊಳ್ಳುವುದು.

ಆದಾಯಕ್ಕೆ ಹಾನಿ

ಪಾನನಿಷೇಧವು ಸರಕಾರದ ಆದಾಯಕ್ಕೆ ಹಾನಿಯನ್ನು ತಂದೊಡ್ಡಿದೆ. ಅಲ್ಲದೆ ದೇಶದ ಆರ್ಥಿಕ ಪರಿಸ್ಥಿತಿಯು ಅದರಿಂದಾಗಿ ಉತ್ತಮಗೊಳ್ಳಲಿಲ್ಲ—ಎಂಬುದು ಪಾನನಿಷೇಧ ವಿರೋಧಿಗಳ ಹೇಳಿಕೆ. ಪಾನನಿಷೇಧವನ್ನು ದೇಶವ್ಯಾದ್ಯಂತ ವಿಸ್ತರಿಸಿದಲ್ಲಿ ಸಾಧಾರಣ 60 ರಿಂದ 100 ಕೋಟಿ ರೂ. ಗಳ ಹಾನಿ ಬರಬಹುದು. ಅಲ್ಲದೆ ಕೇಂದ್ರ ಸರಕಾರದ ಆದಾಯದಲ್ಲಿಯೂ ಸ್ವಲ್ಪ ಮಟ್ಟಿಗೆ ಹಾನಿ ಬರಬಹುದು. ಕೇಂದ್ರ ಸರಕಾರಕ್ಕೆ 1946ರಲ್ಲಿ ಅಬಕಾರಿ ತೆರಿಗೆಯಿಂದಾಗಿ ರೂ. 42,800,000 ಆದಾಯವಿತ್ತು. ಆದರೆ 1948—49ರಲ್ಲಿ ಆದಾಯವು ರೂ. 10,500,000ಕ್ಕೆ ಇಳಿಯಿತು. ಅದಲ್ಲದೆ ಮೂರ್ತೆದಾರರಿಗೆ ಉದ್ಯೋಗವನ್ನು ಕಲ್ಪಿಸಿಕೊಡುವ ಪ್ರಶ್ನೆಯೂ ಸರಕಾರದ ಮುಂದಿದೆ.

ಈ ಪ್ರಶ್ನೆಯನ್ನು ಮಹಾತ್ಮಾಜೀಯವರು ಕೆಲವು ವರ್ಷಗಳ ಹಿಂದೆಯೇ ಮನಗಂಡಿದ್ದರು. "Believe me, the deprivation to the government of the drink revenue is of the least importance in a compaign (prohibition) the country is simply impatient of the evil itself."

ಪ್ರಗತಿಶೀಲ ರಾಷ್ಟ್ರದಲ್ಲಿ ಹಣವೇ ಮುಖ್ಯವಾಗಿರಲಾರದು. ಜನರ ಪ್ರಗತಿಯನ್ನು ಲಕ್ಷ್ಯದಲ್ಲಿಟ್ಟುಕೊಂಡಲ್ಲಿ, ಸರಕಾರದ ಖಜಾನೆಗೆ ಹಾನಿಯಾಗುತ್ತಿದೆ ಎಂಬ ಮಾತು ಜನತಾ ಮುಂದಾಳುಗಳಿಂದ ಬರುವ ಹಾಗಿಲ್ಲ. ರಾಷ್ಟ್ರದ ಏಳಿಗೆಯು ಜನತೆಯ ಜೀವನ ಮಟ್ಟ ಹಾಗೂ ನಡತೆಯನ್ನು ಹೊಂದಿಕೊಂಡಿದೆ. ನಾವು ಪ್ರಗತಿಯನ್ನು ಸಾಧಿಸಬೇಕಾದಲ್ಲಿ ಹಲವೊಂದು ಬಲಿದಾನಗಳ ಅಗತ್ಯವಿದೆ. ಮದ್ಯವನ್ನು ನಿಷೇಧಿಸುವುದು ಅಂತಹ ಅರ್ಪಣಗಳಲ್ಲಿ ಒಂದು. ಸರಕಾರವು ಹಣವನ್ನು ಗಳಿಸಲಿಕ್ಕಿರುವ ಸಂಸ್ಥೆಯಲ್ಲ ಎಂಬುದನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಸ್ವಲ್ಪ ಆಳವಾಗಿ ಆಲೋಚಿಸಿದಲ್ಲಿ ಸರಕಾರಕ್ಕೆ ಆರ್ಥಿಕ ಹಾನಿಯಿದೆ ಎಂಬ ಬೊಬ್ಬೆಯು ತಿರುಳಿಲ್ಲದ ಬೊಬ್ಬೆ. ಸರಕಾರದ ಖಜಾನೆಗಾಗುತ್ತಿರುವ ಹಾನಿಯು, ಪ್ರಜೆಗೆ ಇನ್ನೊಂದು ರೀತಿಯಲ್ಲಿ ಉಪಕಾರ ಮಾಡುತ್ತಿದೆ. ದಿನಗಳುರುಳಿದಂತೆ ಭಾರತೀಯರ ಆರ್ಥಿಕ ಪರಿಸ್ಥಿತಿಯು ಉತ್ತಮವಾಗಬೇಕು. ಖರ್ಚಾಗುತ್ತಿರುವ ಹಣವು, ಪಾನನಿಷೇಧದಿಂದಾಗಿ ಉಳಿಕೆಯಾದಲ್ಲಿ, ಆ ಹಣವು ವಿದ್ಯೆ, ಆಹಾರ, ವಸ್ತ್ರ ಇತ್ಯಾದಿ ಆವಶ್ಯಕ ವಸ್ತುಗಳ ಮೇಲೆ ವಿನಿಯೋಗವಾಗಬಲ್ಲುದು. ಇದನ್ನು ನಮ್ಮ ರಾಷ್ಟ್ರಕ್ಕೆ ಆಗುವ ದೊಡ್ಡ ಆರ್ಥಿಕ ಲಾಭವೆನ್ನಬೇಕು.

ಕಾಲವು ಪಾನನಿಷೇಧಕ್ಕೆ ಸರಿಯಾಗಿಲ್ಲ ಎಂಬ ಕೂಗು ಕೇಳಿ ಬರುತ್ತಲಿದೆ. ನಮಗೀಗ ಆರ್ಥಿಕ ಮುಗ್ಗಟ್ಟಿದೆ ಎಂಬುದನ್ನು ಯಾರೂ ಅಲ್ಲಗಳೆಯಲಾರರು ಆದರೆ ಇಂದಲ್ಲದಿದ್ದಲ್ಲಿ ಎಂದು? ಸಾಮಾಜಿಕ ಉತ್ಥಾನ ಮತ್ತು ಆರ್ಥಿಕ ಸುಧಾರಣೆ, ಜನತೆಯ ಗುಣನಡತೆ ಇವುಗಳು ಪ್ರಗತಿಯ ದಾರಿಯಲ್ಲಿ ಅತೀ ಪ್ರಾಮುಖ್ಯವಾದ ಹೆಜ್ಜೆಗಳೆಂಬುದನ್ನು ಮರೆಯಲಾಗದು. ಕುಡುಕತನವು ಒಂದು ದುಶ್ಚಟವೆಂಬುದು ನಿಜವಿದ್ದಲ್ಲಿ, ಇಂದೇ ಅದನ್ನು ನಿಲ್ಲಿಸುವ ದಿನ. ಶ್ರೀ ರಾಜಾಜಿಯವರು ಸ್ವಲ್ಪ ಸಮಯದ ಹಿಂದೆ ಪಾನನಿಷೇಧವನ್ನು Priceless possession of the poor man ಎಂದಿದ್ದಾರೆ. ಅಲ್ಲದೆ "I would be a hard robber and wicked man if I remove prohibition" ರಾಜಾಜಿಯವರು ಸ್ವಾರ್ಥದಿಂದಾಗಿ ಪಾನನಿಷೇಧವನ್ನು ತಂದಿಲ್ಲ ಎಂಬುದಾಗಿ ಎಲ್ಲರೂ ಒಪ್ಪುವರೇ?

ಕಳ್ಳಭಟ್ಟಿ

ಪಾನ ಪ್ರತಿಬಂಧದಿಂದಾಗಿ ಜನರಲ್ಲಿ ಕಾನೂನನ್ನು ಮುರಿಯುವ ಹವ್ಯಾಸ ಬಂದಿದೆ ಎಂಬುದಾಗಿ ಹಲವರ ಹೇಳಿಕೆ. ಯಾವುದಾದರೊಂದು ಸಾಮಾಜಿಕ ಸುಧಾರಣೆಯನ್ನು ತಂದಾಗ ಅದನ್ನು ಮುರಿಯುವ ಹವ್ಯಾಸವು ಹಲವರಲ್ಲಿದೆ ಎಂಬುದು ನಿರ್ವಿವಾದ. ಸತೀ ಸಹಗಮನವನ್ನು ನಿಷೇಧಿಸಿ ಸಾಧಾರಣ 120 ವರ್ಷಗಳುರುಳಿದರೂ, ಇನ್ನೂ ಅದು ಸಂಪೂರ್ಣ ನಿಲ್ಲಿಸಲ್ಪಟ್ಟಿಲ್ಲ. ಇಂಡಿಯನ್ ಪೀನಲ್ ಕೋಡು ಜಾರಿಗೆ ಬಂದು ಶತಮಾನವಾದರೂ ರಾತ್ರಿ, ಹಗಲೆನ್ನದೇ ದಕ್ಷಿಣ ಕನ್ನಡ ಜಿಲ್ಲೆಯ ಪ್ರಮುಖ ನಗರಗಳಲ್ಲಿ ಕೊಲೆಗಳಾಗುತ್ತಿವೆ. ಹಾಗೆನ್ನುವಾಗ ಇಂಡಿಯನ್ ಪೀನಲ್ ಕೋಡನ್ನು ಹಿಂತೆಗೆಯಬಹುದೇ? ಬೆಂಕಿಯೊಡನೆ ಹೊಗೆಯು ಯಾವರೀತಿಯಲ್ಲಿದೆಯೋ, ಹಾಗೆಯೇ ಯಾವುದಾದರೂ ಉತ್ತಮ ಕಾರ್ಯವನ್ನು ಮಾಡುವಾಗ ಹಲವೊಂದು ಎಡರು ತೊಡರುಗಳು ಬಂದೊದಗುತ್ತವೆ ಎಂದು ಭಗವದ್ಗೀತೆಯಲ್ಲಿ ಹೇಳಿದೆ. ಆದುದರಿಂದ ಜನತೆಯ ಅಲ್ಪಾಂಶ ಜನತೆಯು ಕಾನೂನನ್ನು ಉಲ್ಲಂಘಿಸುತ್ತವೆ ಎಂಬುದಕ್ಕಾಗಿ ಸುಧಾರಣೆಯನ್ನು ಬದಿಗೊತ್ತುವುದು ಉತ್ತಮದ ಲಕ್ಷಣವಲ್ಲ. ಅಂಥವರನ್ನು ಗೊತ್ತಿಗೆ ಹಚ್ಚಿ, ದಂಡನೆಗೆ ಗುರಿಮಾಡುವುದರಲ್ಲಿದೆ ಕಾರ್ಯದಕ್ಷತೆ. ಮಹಾತ್ಮಾಜಿಯವರು ಕಳ್ಳಭಟ್ಟಿ ಹಾಗೂ ಇತರ ಪಾನನಿಷೇಧ ವಿರೋಧ ಕಾರ್ಯಕ್ರಮಗಳ ಬಗ್ಗೆ ಹೀಗೆಂದಿರುತ್ತಾರೆ. "I should make illicit distillation heavily punishable and think no more about it. Some of it will go on perhaps till doomsday as theiving will. I would not set up a special agency to pry into illicit distillateries. But I would punish anyone found drunk though not disorderly (in the legal sense)in streets or other public places with a substantial fine on alternatively with indeterminate imprisonment to end when the erring one has earned his or her keep."

ಮದ್ಯನಿಷೇಧವು ಮನುಷ್ಯನನ್ನು ಕಾನೂನಿನ ಮುಖಾಂತರ ಉತ್ತಮ (Moral) ನನ್ನಾಗಿ ಮಾಡಲು ಪ್ರಯತ್ನಿಸುತ್ತಿಲ್ಲ. ಮುಖ್ಯವಾಗಿ ಮನುಷ್ಯನನ್ನು ಆಕರ್ಷಿಸುವ ಹಲವಾರು ವಿಷಯಗಳನ್ನು ಸಮಾಜದಿಂದ ಕಿತ್ತೊಗೆಯಲು ಪ್ರಯತ್ನಿಸುತ್ತದೆ. ಅಮೇರಿಕದಲ್ಲಿ ಪಾನನಿಷೇಧವು ಯಶಸ್ವಿಯಾಗಲಿಲ್ಲ ಆದುದರಿಂದ ಭಾರತದಲ್ಲಿ ಅದು ಯಶಸ್ವಿಯಾಗಲಾರದು ಎಂದು ಹಲವರ ಮತ. ಭಾರತದಲ್ಲಿ ಜನಾಭಿಪ್ರಾಯವೂ, ಧಾರ್ಮಿಕ ರೀತಿನೀತಿಗಳೂ ಪಾನಪ್ರತಿಬಂಧಕ್ಕೆ ಅನುಕೂಲವಾಗಿವೆ. ಅಲ್ಲದೆ, ಭಾರತದ ಆರ್ಥಿಕ ಪರಿಸ್ಥಿತಿಯನ್ನು ಪರಿಶೀಲಿಸಿದಲ್ಲಿ ಪಾನದಿಂದ ಆರ್ಥಿಕ ಹಾನಿಯೇ ವಿನಹ ಆದಾಯವಿಲ್ಲ. ಅಲ್ಲದೆ ಭಾರತದಲ್ಲಿ ಕುಡುಕರ ಸಂಖ್ಯೆಯು ಬಹಳ ಕಡಮೆ. ಇವೆಲ್ಲಾ ಕಾರಣಗಳಿಂದಾಗಿ ಕುಡುಕತನವನ್ನು ಕಿತ್ತೊಗೆಯಲು ಕಷ್ಟವಾಗಲಾರದು.

ಮದ್ಯವೊಂದು ಆಹಾರವೇ? ಹಲವು ಸಂಸಾರಗಳನ್ನು ಮಣ್ಣುಗೂಡಿಸುವ, ಹಲವೊಂದು ಮಕ್ಕಳ ಭಾವೀ ಜೀವನವನ್ನು ಹಾಳು ಮಾಡುವ ಹಲವೊಂದು ಭಾರತೀಯ ಸ್ತ್ರೀಯರ ಜೀವನವನ್ನು ಸ್ಮಶಾನವನ್ನಾಗಿಸುವ ಮದ್ಯವನ್ನು ಆಹಾರವೆಂದು ಕರೆಯಬಹುದೇ? ಅದನ್ನು ನಮ್ಮ ರಾಷ್ಟ್ರೀಯ ಸರಕಾರವು ಪ್ರೋತ್ಸಾಹಿಸಬೇಕೇ? ಪಾನನಿಷೇಧವು ಅಚಲವಾಗಿ ನಿಲ್ಲಲು ಬಂದಿದೆ ವಿನಹ ಅಳಿದು ಹೋಗಲಲ್ಲ.

ಪಾನನಿಷೇಧವು ಜಯಶೀಲವಾಗುವುದು ಹೇಗೆ?

1. ಸಾರ್ವಜನಿಕ ಸಭೆ, ಬಾನುಲಿಯ ಮೂಲಕ ಪ್ರಸಾರ, ಚಲಚಿತ್ರ ಪ್ರದರ್ಶನ ಮೊದಲಾದವುಗಳ ಸಹಾಯದಿಂದ ಮದ್ಯಪಾನದ ದುಷ್ಪರಿಣಾಮಗಳನ್ನು ಜನತೆಗೆ ತಿಳಿಸುವುದು.

2. [illegible] ಅತೀ ಅಗತ್ಯವಾದ ಕಾನೂನನ್ನು ಮಾಡುವುದು.

3. ಕೆಲವೊಂದು ಸಮಾಜದಲ್ಲಿ ಮದ್ಯಪಾನವು ಒಂದು ಸಭ್ಯತೆಯೆಂದು ತಿಳಿಯಲ್ಪಡುತ್ತಿದೆ. ಅದನ್ನು ಶೀಘ್ರವಾಗಿ ನಿಷೇಧಿಸುವುದು.

4. ಕ್ಲಬ್, ಹೋಟೇಲುಗಳಲ್ಲಿ ಪಾನವನ್ನು ಮಾರಾಟ ಮಾಡುವುದನ್ನು ನಿಲ್ಲಿಸಬೇಕು. ಪಾನಪ್ರತಿಬಂಧಾಧಿಕಾರಿಗಳು ಈ ಕ್ಲಬ್‌ಗಳ ಮೇಲೆ ವಿಶೇಷ ಗಮನವೀಯತಕ್ಕದ್ದು.

5. ಮೂರ್ತೆದಾರರಿಗೆ, ಮದರಾಸು ಸರಕಾರದವರಿತ್ತ ಸವಲತ್ತುಗಳನ್ನು ಕೊಡುವುದು.

6. ಪಾನಪ್ರತಿಬಂಧ ಇಲಾಖೆಯಲ್ಲಿ ವಿದ್ಯಾ

[೧೩ನೇ ಪುಟ ನೋಡಿರಿ.]

ಬ್ಯಾಂಕಿನ ಬೆಳವಣಿಗೆ

	1933	1943	1953
ಅಧಿಕೃತ ಭಂಡವಾಳ	5,00,000	5,00,000	20,00,000
ತೆತ್ತ ಭಂಡವಾಳ	12,000	1,90,000	9,00,000
ಕ್ಷೇಮನಿಧಿ	—	12,000	2,00,000
ಒಟ್ಟು ವಹಿವಾಟು	77,000	15,60,000	60,30,000

ಕಾಲಾವಧಿ ಠೇವಣಾತಿ— 3 ತಿಂಗಳಿಗೆ $3\frac{1}{4}$% ಬಡ್ಡಿ.

ಕಾಯಂ ಠೇವಣಾತಿ— 1 ತಿಂಗಳಿಂದ 24 ತಿಂಗಳ ವಾಯಿದೆ ವರೆಗೆ ಸ್ವೀಕರಿಸಲ್ಪಡುವುದು. 24 ತಿಂಗಳಿಗೆ=$3\frac{3}{4}$% ಬಡ್ಡಿ.

ರೂಪಾಯಿ ಹತ್ತು ಸಾವಿರ ವ, ಮೇಲಿನ ಠೇವಣಾತಿಗೆ 4% ಬಡ್ಡಿ ಕೊಡಲಾಗುವುದು.

ರೂಪಾಯಿ ಐವತ್ತು ಸಾವಿರ ವ, ಮೇಲಿನ ಠೇವಣಾತಿಗೆ $4\frac{1}{4}$% ಬಡ್ಡಿ ಕೊಡಲಾಗುವುದು.

ವಿಜಯ ಕ್ಯಾಶ್ ಸರ್ಟಿಫಿಕೇಟು— ಮೂರು ವರುಷದ ಅವಧಿ = $4\frac{1}{4}$% ಬಡ್ಡಿ.

ಸಾಲ ಸವಲತ್ತುಗಳಿಗೆ ಬೇಕಾದ ಅನುಕೂಲತೆಗಳನ್ನು ವಿಳಂಬವಿಲ್ಲದೆ ಒದಗಿಸಲಾಗುವುದು.

ಹೆಚ್ಚಿನ ಮಾಹಿತಿಗೆ ನಿಮ್ಮ ಸಮೀಪದ ನಮ್ಮ ಏಜಂಟರೊಡನೆ ವಿಚಾರಿಸಿರಿ. ಜಿಲ್ಲೆಯ 10 ಕೇಂದ್ರಗಳಲ್ಲಿಯೂ, ಮಡಿಕೇರಿ ಮತ್ತು ಮುಂಬಾಯಿಯಲ್ಲಿಯೂ ನಮ್ಮ ಶಾಖೆಗಳಿರುತ್ತವೆ.

ಸ್ಥಾಪನೆ: 1931 **ದಿ ವಿಜಯ ಬ್ಯಾಂಕ್ ಲಿಮಿಟೆಡ್** ಪ್ರಧಾನ ಕಛೇರಿ ಮಂಗಳೂರು 3.

ಜನತಾ ಸಾಹಿತ್ಯಮಾಲೆಯ ಹೊಸ ಮಾದರಿಯ ಪುಸ್ತಕಗಳು

* * * * *

ಮಣಿ ೧:— ಜೀವನ ಶಿಕ್ಷಣ.

ಜ್ಞಾನ ಮತ್ತು ಶೀಲದೊಂದಿಗೆ ಶಾರೀರಿಕ ಶ್ರಮದ ಗೌರವವನ್ನು ವಿದ್ಯಾರ್ಥಿಗಳಲ್ಲುಂಟುಮಾಡುವ ಶ್ರೀ. ಕೆ. ಕೆ. ಶೆಟ್ಟಿ ನವೀನ ನಾಟಕ. ಮದ್ರಾಸ್ ಟೆಕ್ಸ್ಟ್ ಬುಕ್ ಸಮಿತಿಯಿಂದ ಮಂಜೂರಾತಿ ಪಡೆದು ದ. ಕ. ಜಿಲ್ಲೆಯ ಮತ್ತು ಕೊಡಗಿನ ಹಲವು ಹೈಸ್ಕೂಲುಗಳಿಂದ ಪ್ರೋತ್ಸಾಹ ಹೊಂದಿದೆ. ಬೆಲೆ: ರೂ. ೧—೨—೦.

ಮಣಿ ೨:— ಶ್ಯಾಮುವಿನ ಶಾಲಾದಿನಗಳು.

ಅಧ್ಯಾಪಕ ಮತ್ತು ವಿದ್ಯಾರ್ಥಿ ಜೀವನದ ನೈಜ ಹಾಗೂ ರಸವತ್ತಾದ ಚಿತ್ರಣದಿಂದ ವಿದ್ಯಾರ್ಥಿಗಳಿಗಾಗಿಯೇ ಶ್ರೀ. ಕೆ. ಕೆ ಶೆಟ್ಟರು ಬರೆದಿರುವ ಸಚಿತ್ರ ಕತೆ ಪುಸ್ತಕ. ಹೈಸ್ಕೂಲುಗಳಿಗೆ ಉಪಪಠ್ಯ ಪುಸ್ತಕವಾಗಿ ಮದ್ರಾಸು ಟೆಕ್ಸ್ಟ್ ಬುಕ್ ಕಮಿಟಿಯ ಮಂಜೂರಾತಿ ಪಡೆದಿದೆ. ಬೆಲೆ: ರೂ. ೧—೨—೦.

ಸಾಹಿತ್ಯ ಮಾಲೆಯ ವಾರ್ಷಿಕ ಚಂದಾ ರೂ. ೩—೦—೦ ಮಾತ್ರ.

ಜನತಾ ಸಾಹಿತ್ಯ ಮಾಲೆ,
ಹಂಪನಕಟ್ಟೆ, ಮಂಗಳೂರು ೧.

ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 25 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

THE MOOLKY BANK LTD.
Moolky, S. K.

[೩ನೇ ಪುಟದಿಂದ]

ಹೇಳುತ್ತಿದ್ದಿಲ್ಲ. ಬಡಗಿಯ ಮಗನು ಕಮ್ಮಾರನಾಗಬಹುದು; ಕುಂಬಾರನಾಗಬಹುದು; ಕೃಷಿಕನಾಗಬಹುದು. ಅದು ಮಗನ ಅಭಿರುಚಿಯನ್ನು ಹೊಂದಿಕೊಂಡಿದೆ. ಮಗನಿಗೆ ಶ್ರಮಜೀವನದಲ್ಲಿ ಶ್ರದ್ಧೆಯೂ ಗ್ರಾಮವೃದ್ಧ ವ್ಯವಹಾರದಲ್ಲಿ ಆಸ್ಥೆಯೂ ಇರಬೇಕೆಂಬುದೇ ಇಲ್ಲಿಯ ಧ್ಯೇಯ.

ಎಲ್ಲರಿಗೂ ಶಿಕ್ಷಣ

ಇದನ್ನು ಮನವರಿಕೆ ಮಾಡಿಕೊಳ್ಳದೆ ಹೋದುದರಿಂದ ಮತ್ತು ಸಾರ್ವಜನಿಕರಲ್ಲಿ ಅರ್ಧ ಹೊತ್ತಿನ ಶಾಲೆಯೆಂದರೆ, ಮಕ್ಕಳ ಯೋಗ್ಯತೆಯೂ ಅರ್ಧ ಹೊತ್ತಿನಷ್ಟು ತಗ್ಗಿತೆಂದು ಪ್ರತಿಪಾದಿಸಿದ್ದರಿಂದ—ಯೋಜನೆಗೆ ಬಲವಾದ ಆಘಾತ ಸಂಭವಿಸಿತು. ಜನರಲ್ಲಿ ಬಿತ್ತಲಾದ ತಪ್ಪು ಕಲ್ಪನೆಯನ್ನು ಹೋಗಲಾಡಿಸುವ ಪ್ರಯತ್ನವನ್ನು ಕೈಗೊಳ್ಳುವ ಮೊದಲೇ ಯೋಜನೆಗೆ ತಿಲಾಂಜಲಿಯನ್ನು ಅರ್ಪಿಸಲಾಯಿತು. ರಾಜಾಜಿಯೇ ಸ್ವತಃ ಒಪ್ಪಿಕೊಂಡಂತೆ, ಯೋಜನೆಯು ಪ್ರಯೋಗಾತ್ಮಕ ಅವಸ್ಥೆಯನ್ನು ದಾಟಿರಲಿಲ್ಲ. ಕೆಲವು ವಿವರಗಳ ವಿಷಯದಲ್ಲಿ ಅನುಭವಕ್ಕೆ ಬಂದ ಅಡಚಣೆಗಳನ್ನು ದೂರೀಕರಿಸುವ, ಶಾಲೆಯ ಹೊರಗಿನ ಚಟುವಟಿಕೆಗಳ ವಿಷಯದಲ್ಲಿ ಯೋಗ್ಯ ನಿಯಂತ್ರಣವನ್ನು ಇಟ್ಟುಕೊಳ್ಳುವ ಮುಂತಾದ ಆವಶ್ಯಕತೆಯನ್ನು ರಾಜಾಜಿ ಮರೆತಿರಲಿಲ್ಲ: ಇದಕ್ಕೆಲ್ಲ ಹೆಚ್ಚು ಹಣ ಬೇಕೆಂಬ ಸಂಗತಿಯನ್ನೂ ಅವರು ಉಪೇಕ್ಷಿಸಿರಲಿಲ್ಲ. ಈಗಿನದರ ಇಮ್ಮಡಿ ಮಕ್ಕಳಿಗೆ ವಿದ್ಯಾಭ್ಯಾಸ ದೊರಕುವುದಾದರೆ, ಈಗಿನ ಖರ್ಚನ್ನು ಕೆಲವು ಅಂಶದಷ್ಟು ಹೆಚ್ಚಿಸುವುದಕ್ಕೆ ಹಿಂಜರಿಯುವುದೇಕೆ? ನಾಡರರ ಸರಕಾರ ಯೋಜನೆಯನ್ನು ಬಿಟ್ಟುಕೊಡುವುದಕ್ಕೆ ಮೊದಲು ಈ ಸಂಗತಿಗಳನ್ನೆಲ್ಲ ಏಕೆ ವಿಚಾರಿಸಲಿಲ್ಲವೋ ಎಂದೆನಿಸುತ್ತದೆ. ಅರ್ಧ ಹೊತ್ತಿನ ಶಾಲೆಯು ಶೈಕ್ಷಣಿಕ ಕ್ಷೇತ್ರದಲ್ಲಿ "ವರ್ಣ" ಕ್ರಮವನ್ನು ಜಾರಿ ಮಾಡಿದಂತೆ ಎಂದು ದೂಷಿಸಿದವರೂ ಇದ್ದಾರೆ. ಆದರೆ ವಿದ್ಯಾಭ್ಯಾಸವನ್ನು ಎಲ್ಲ ಜನರೂ ಹೊಂದಬೇಕೆಂಬ ಉದಾತ್ತ ಧ್ಯೇಯವನ್ನಿಟ್ಟುಕೊಂಡ ನಾವು, ಶಿಕ್ಷಣವನ್ನು ಎಲ್ಲರ ಕೈಯಳವಿಗೂ ತರಬೇಕಾಗುತ್ತದೆ. ಹಳ್ಳಿಯ ಹೆತ್ತವರು ಮಕ್ಕಳನ್ನು ತಮ್ಮ ಒಟ್ಟಿಗೇ ಇರಗೊಳಿಸಬಯಸುತ್ತಾರೆ; ತಾವು ದುಡಿಯುವಾಗ ಮಕ್ಕಳು ತಮಗೆ ನೆರವಾಗಬೇಕೆಂದೂ ಶ್ರಮಜೀವನದ ಮಹತ್ವವನ್ನು ಅವು ಬಾಲ್ಯದಿಂದಲೂ ತಿಳಿದಿರಬೇಕೆಂದೂ ಅಪೇಕ್ಷಿಸುತ್ತಾರೆ. ಮಕ್ಕಳ ದುಡಿದುಣ್ಣುವ ಬಾಳ್ವೆಯು ಹೆತ್ತವರಿಗೆ ನಾಲ್ಕು ಕಾಸುಗಳನ್ನು ಸಂಪಾದಿಸಿ ಕೊಡುತ್ತದೆ; ಕನಿಷ್ಠಪಕ್ಷ ಹೆತ್ತವರೇ ನಿರ್ವಹಿಸಬೇಕಾದ ಕೆಲವು ಕೆಲಸಗಳಲ್ಲಾದರೂ ಮಕ್ಕಳು ಸಹಾಯ ಮಾಡುತ್ತಾರೆ. ಶಾಲೆಗೆ ಮಕ್ಕಳನ್ನು ಕಳಿಸಿಕೊಟ್ಟರೆ, ಬಡತನದಿಂದ ಜೀವಿಸುವ ಹೆತ್ತವರು, ಮಕ್ಕಳ ನೆರವಿನಿಂದ ವಂಚಿತರಾಗುವರು; ಅವರ ಗಳಿಕೆಯೂ ತಗ್ಗುವುದು; ಮಾತ್ರವಲ್ಲದೆ, ಮಕ್ಕಳ ಸ್ಲೇಟು, ಕಡ್ಡಿ, ಪುಸ್ತಕ, ಅಂಗಿಗಳಿಗಾಗಿ ಹೆತ್ತವರು ಹಣವನ್ನು ವ್ಯಯಿಸಬೇಕಾಗುವುದು. ನಮ್ಮ ದೇಶದ ಗ್ರಾಮಾಂತರ ಪ್ರದೇಶಗಳಲ್ಲಿ ವಾಸಿಸುವ ಹೆತ್ತವರಿಗೆ ಇದು ಹೊರಲಾರದ ಹೊರೆಯಾಗಿರುವುದು. ಇಂಥವರಲ್ಲೂ ಕೆಲವರು ಹೆತ್ತವರಲ್ಲಿ ಮಕ್ಕಳಿಗೆ ಶಿಕ್ಷಣ ಕೊಡಬೇಕೆನ್ನುವ ಕುರಿತು ಆಸ್ಥೆ ಇದ್ದಿದ್ದರೆ, ಅದಕ್ಕೆ ಸರಕಾರದ ನೌಕರಿಯ ಬಾಗಿಲನ್ನು ಶಿಕ್ಷಣ ತೆರೆಯುತ್ತದೆ ಎಂಬ ಆಮಿಷವೇ ಹೇತು. ಆದರೆ, ಈ ಆಸೆಯು ಈಗ ನಿರಾಸೆಯಾಗಿ ಪರಿಣಮಿಸಿರುವುದು; ಮತ್ತು ಸುಶಿಕ್ಷಿತರ ನಿರುದ್ಯೋಗದ ಸಮಸ್ಯೆಯನ್ನು ಕಂಡ ಎಲ್ಲರೂ ಮಕ್ಕಳನ್ನು ಶಾಲೆಗೆ ಕಳಿಸುವುದೇ ವ್ಯರ್ಥವೆಂಬ ತೀರ್ಮಾನಕ್ಕೆ ಬಂದಿರುವರು. ಈ ತೀರ್ಮಾನವೂ ಸರಿಯಾದುದಲ್ಲ—ಪ್ರಜಾಪ್ರಭುತ್ವವು ಬಾಳಬೇಕಾದರೆ, ನಾಗರಿಕನಿಗೆ ತನ್ನ ಹೊಣೆಗಾರಿಕೆಗಳ ತಿಳಿವಳಿಕೆ ಬೇಕಾಗಿದೆ. ಇದಕ್ಕೆ ಶಿಕ್ಷಣವೊಂದೇ ಮಾರ್ಗ—ಎಂತಲೇ ಎಲ್ಲರಿಗೂ ಶಿಕ್ಷಣ ಎಂಬ ತತ್ವವನ್ನು ನಾವು ಅಂಗೀಕರಿಸಿದ್ದೇವೆ. ಇದನ್ನು ಅನುಷ್ಠಾನಕ್ಕೆ ತರಲೋಸುಗ, ವ್ಯಾವಹಾರಿಕ ಕ್ಷೇತ್ರದ ಅಡಚಣೆಗಳನ್ನು ಮೊದಲು ದೂರ ಮಾಡಬೇಕು.

ಬಡವರ ಭಾರತ

ರಾಜಾಜಿಯ ಯೋಜನೆಯು ಹಳ್ಳಿಯ ಹೆತ್ತವರ ಕಷ್ಟಸುಖಗಳನ್ನು ಲೆಕ್ಕಕ್ಕೆ ತೆಗೆದು ಕೊಂಡಿದೆ—ಶಿಕ್ಷಣದ ಕುರಿತು ಇದ್ದ ತಪ್ಪು ಅಭಿಪ್ರಾಯವನ್ನು ಸರಿಪಡಿಸಲು ಅದು ನೋಡಿದೆ. ಶಿಕ್ಷಣವು ನೌಕರಿಗಳಿಸಿ ಕೊಡುವ ಯಂತ್ರವಲ್ಲ ಎಂಬುದನ್ನು ಅದು ಹೇಳುತ್ತದೆ. ಶಿಕ್ಷಣವು ನಾಗರಿಕನ ಗುಣಧರ್ಮಗಳ ಕಲ್ಪನೆ ಮಾಡಿಕೊಡುವ, ವ್ಯಕ್ತಿಯ ಶೀಲಕ್ಕೆ ಒಪ್ಪವಿಡುವ ಸಾಧನವೆಂಬುದನ್ನು ಅದು ಬಿಂಬಿಸುತ್ತದೆ. ನೌಕರಿಯನ್ನೊದಗಿಸಿ ಕೊಡುವುದೆಂದಿದ್ದ ಶಿಕ್ಷಣವು ಮಕ್ಕಳನ್ನು ಹೆತ್ತವರಿಂದ ಬೇರ್ಪಡಿಸುತಿತ್ತು—ಎಸ್ಸೆಸ್ಸೆಲ್ಸಿ ಪಾಸಾದ ಹುಡುಗನು ಕೃಷಿಯನ್ನು ಅವಲಂಬಿಸಿದ ತನ್ನ ತಂದೆಯನ್ನು ಏನೇನೂ ಗೌರವದಿಂದ ನೋಡುವುದಿಲ್ಲ. ಅವನಿಗೇನು ತಿಳಿದಿದೆ—ಎಂದು ಈ ಹುಡುಗನ ಯೋಚನೆ. ಇದು ತಪ್ಪೆಂದು ರಾಜಾಜಿಯ ಯೋಜನೆ ತಿಳಿಸುತ್ತದೆ ಎಸ್ಸೆಸ್ಸೆಲ್ಸಿ ಕಲಿತ ಹುಡುಗನು ಕಾರಕೂನನಾಗಬೇಕೆಂದಿಲ್ಲ—ತಾನುಗಳಿಸಿದ ಜ್ಞಾನದಿಂದ ಕೃಷಿಯನ್ನು ಆಧುನಿಕ ವಿಜ್ಞಾನದ ಸಂಶೋಧನೆಯ ನೆರವು ಪಡೆದು ಸುಧಾರಿಸಬಹುದೆಂದು ಅದು ಸೂಚಿಸುತ್ತದೆ. ಹಾಂ—ರಾಜಾಜಿ ಪ್ರಾಥಮಿಕ ಶಿಕ್ಷಣ ಪದ್ಧತಿಯಲ್ಲಿಷ್ಟೇ ಪರಿವರ್ತನೆಯನ್ನು ತಂದಿದ್ದರು—ಎಸ್ಸೆಸ್ಸೆಲ್ಸಿಯ ಬಗ್ಗೆ ಏನೂ ಹೇಳಿರಲಿಲ್ಲ ಆದರೆ ಪ್ರಾಥಮಿಕ ಶಿಕ್ಷಣ ಯಶಸ್ಸು ಹೊಂದಿದರೆ ಅದನ್ನು ಮುಂದಿನ ತರಗತಿಗಳಿಗೂ ಅನ್ವಯಿಸಲು ಕಷ್ಟವಿಲ್ಲ. ಹೆತ್ತವರಿಗೆ ಮಕ್ಕಳ ಶಿಕ್ಷಣವು ತೀರಾ ತುಟ್ಟಿಯಾಗಿ ಕಾಣಬಾರದೆಂಬುದು ರಾಜಾಜಿಯೋಜನೆಯ ಇನ್ನೊಂದು ವೈಶಿಷ್ಟ್ಯ. ದಿನದಲ್ಲಿ ಅರ್ಧ ಹೊತ್ತಿನಷ್ಟು ಕಾಲ ಮಕ್ಕಳು ಹೆತ್ತವರೊಡನೆಯೇ ಇದ್ದು ಅವರ ಕಸಬುಗಳಲ್ಲಿ ನೆರವಾಗುತ್ತಿರುವುದರಿಂದ, ಅಥವಾ ಬೇರೇನಾದರೂ ಶ್ರಮಜನ್ಯ ಉದ್ಯೋಗವನ್ನು ಆಶ್ರಯಿಸುವುದರಿಂದ, ಹೆತ್ತವರ ಭಾರವು ಅರೆವಾಸಿಯಷ್ಟು ತಗ್ಗುತ್ತದೆ. ಬಡವರ ದೇಶವಾದ ಭಾರತದಲ್ಲಿ ಶಿಕ್ಷಣ ಮುಂತಾದ ಯಾವ ಪ್ರಕಾರದ ಯೋಜನೆಯೇ ಆಗಲಿ, ಸಾಮಾನ್ಯಪ್ರಜೆಯ ದಾರಿದ್ರ್ಯವನ್ನು ದುರ್ಲಕ್ಷಿಸಿದರೆ ತಪ್ಪಾಗುತ್ತದೆ. ನಮ್ಮ ಇಂದಿನ ಶಿಕ್ಷಣ ಪದ್ಧತಿಯು ಎಲ್ಲ ರೀತಿಯಿಂದಲೂ ತಪ್ಪು ದಾರಿಯನ್ನು ತುಳಿಯುತ್ತಿದೆ. ಇದನ್ನು ಸುಲಭದಲ್ಲಿಯೇ ಮನವರಿಕೆ ಮಾಡಿಕೊಡಬಹುದು:—ಒಂದನೇ ತರಗತಿಯನ್ನು ಸೇರಿದ ಮೂವರು ಮಕ್ಕಳಲ್ಲಿ ಮೂರನೇ ತರಗತಿಗಾಗುವಾಗ ಒಬ್ಬನು ಮಾತ್ರ ಉಳಿಯುತ್ತಾನೆ. ಉಳಿದಿಬ್ಬರು ಶಿಕ್ಷಣವನ್ನು ಅರ್ಧದಲ್ಲಿಯೇ ಬಿಟ್ಟುಗೊಟ್ಟು ಮನೆಯವರಿಗೆ ನೆರವಾಗಲು ಹೋಗುತ್ತಾರೆ. ಅವರಿಗೆ ಶಿಕ್ಷಣವು ಮುಖ್ಯವೆಂದು ಕಾಣುವುದಿಲ್ಲ—ಹೆತ್ತವರೊಂದಿಗೆ ದುಡಿದು ಅಥವಾ ಬೇರಾವುದೇ ರೀತಿಯಿಂದ ಅವರಿಗೆ ನೆರವಾಗುವುದೇ ಅಗತ್ಯವೆನಿಸುತ್ತದೆ. ಇದು ಬಡವರ ಭಾರತ. ಮತ್ತು ರಾಜಾಜಿಯವರು ನಮ್ಮ ಭಾರತಕ್ಕೆ ಒಪ್ಪುವ ಹೊಸ ಪದ್ಧತಿಯೊಂದನ್ನು ಕಂಡುಹಿಡಿದರು—ಅದನ್ನು ಪ್ರಯೋಗಿಸಲೂ ಮುಂಬಂದರು. ಹೊಸತೆಂದರೆ ಅಂಜಿಕೊಳ್ಳುವವರಿಗೆ ಧೈರ್ಯ ಹೇಳಿದರು. ಈ ಧೈರ್ಯದೊರೆಯುದ ಮರುಗಳಿಗೆಗೇ ಯೋಜನೆ ಮೂಲೆಗುಂಪಾಯಿತು! ಮುಂಬಯಿಯ ಹೋಟಲಿನಲ್ಲಿ ಕೆಲಸ ಮಾಡುವ ಹುಡುಗನು ರಾತ್ರಿ ಶಾಲೆಯಲ್ಲಿ ಎರಡು-ಮೂರು ತಾಸುಗಳಷ್ಟು ಸಮಯ ಶಿಕ್ಷಣವನ್ನು ಹೊಂದಿ ಬಿ.ಎ. ತರಗತಿಯವರೆಗೂ ಓದುವನು. ಎಂದ ಬಳಿಕ ಅರ್ಧ ಹೊತ್ತಿನ ಶಿಕ್ಷಣ ಪ್ರಯೋಜನವಿಲ್ಲ ಎಂಬ ತತ್ವ ಸರಿ ಕಾಣುವುದಿಲ್ಲ. ಯೋಜನೆಯ ಟೀಕಾಕಾರರು ಶಾಂತ ಮನೋಭಾವದಿಂದಲೂ ನಿರ್ವಿಕಾರ ಚಿತ್ತದಿಂದಲೂ ರಾಜಾಜಿಯ ಪರಿಷ್ಕೃತ ಪ್ರಾಥಮಿಕಶಿಕ್ಷಣ ಪದ್ಧತಿಯನ್ನು ಇನ್ನೊಮ್ಮೆ ಅಮೂಲಾಗ್ರವಾಗಿ ವಿಮರ್ಶಿಸುವುದೊಳಿತು. ಸಮಯ ಇನ್ನೂ ಮೀರಿಲ್ಲ. ಏಕೆಂದರೆ, ಪ್ರಾಥಮಿಕ ಶಿಕ್ಷಣ ಪದ್ಧತಿಯನ್ನು ಅಡಿಯಿಂದ ಮುಡಿಯ ತನಕ ಸಂಶೋಧಿಸಿ ಸಲಹೆ ಸೂಚನೆಗಳನ್ನು ಕೊಡಲು ಸಮಿತಿಯೊಂದು ಇಷ್ಟರಲ್ಲೇ ನೇಮಕಗೊಳ್ಳುತ್ತದೆ. ಈ ಸಮಿತಿಗೆ ರಾಜಾಜಿ ಯೋಜನೆಯ ಮಹತ್ವದ ಅಂಶಗಳನ್ನು ನಾವು ಮನಗಾಣಿಸಿ ಕೊಟ್ಟರೆ, ಅದರಿಂದ ಪ್ರಯೋಜನವಾದೀತು. ಈ ಲೇಖನವನ್ನು ಬರೆದುದಾದರೂ ಇದೇ ಉದ್ದೇಶದಿಂದ—ತಪ್ಪನ್ನು ಇನ್ನಾದರೂ ತಿದ್ದಿ ಸರಿಪಡಿಸಬಹುದೆಂದು ನಾಗರಿಕರು ಭಾವಿಸಿದರೆ ಈ ಉದ್ದೇಶವು ಕೈಗೂಡಿದಂತಾಯಿತು.

— ಕಾರ್ತಿಕೇಯ.

[೧೧ನೇ ಪುಟದಿಂದ]

ವಂತ ಹಾಗೂ ಪಾನಪ್ರತಿಬಂಧದ ಮೇಲೆ ವಿಶ್ವಾಸವಿದ್ದ ತರುಣರನ್ನು ಸೇರಿಸಿಕೊಳ್ಳುವುದು.

7. ಪಾನಪ್ರತಿಬಂಧ ಇಲಾಖೆ ಮತ್ತು ಇನ್ನಿತರ ಸರಕಾರೀ ಹುದ್ದೇದಾರರು ಪಾನಪ್ರತಿಬಂಧ ಕಾನೂನನ್ನು ಉಲ್ಲಂಘಿಸಿದಲ್ಲಿ ಅವರನ್ನು ಕಠಿಣವಾಗಿ ಶಿಕ್ಷಿಸುವುದು.

ರಾಜಾಜಿಗೆ ಮತಿಭ್ರಾಂತಿಯೇ?

ನಮ್ಮ ಜಿಲ್ಲೆಯಲ್ಲಿ ಪಾನನಿಷೇಧವು ಬಂದಂದಿನಿಂದ ಜಿಲ್ಲೆಯ ಮಧ್ಯಮ ತರಗತಿಯವರಲ್ಲಿ ಅದರಲ್ಲೂ ಸುಶಿಕ್ಷಿತ ತರುಣರಲ್ಲಿ ಈ ದುಶ್ಚಟವು ಹೆಚ್ಚಾಗುತ್ತಿರುವುದು ಕಂಡುಬರುತ್ತಿದೆ. ಅಲ್ಲದೆ ಕುಡುಕತನವು ಒಂದು ಸಭ್ಯತನದ ಸೂಚನೆಯೆಂದು ಹಲವರ ಅಭಿಪ್ರಾಯ. ನಮ್ಮ ಜಿಲ್ಲೆಯಲ್ಲಿ ಪಾನಪ್ರತಿಬಂಧ ಇಲಾಖೆಯವರು ಸರಿಯಾಗಿ ತಮ್ಮ ಕರ್ತವ್ಯವನ್ನು ಮಾಡುತ್ತಿಲ್ಲ ಎಂದು ಜನಸಾಮಾನ್ಯರ ಅಭಿಪ್ರಾಯ. ಅದಲ್ಲದೆ ಕೆಲವು ರಾಜಕೀಯ ಪಂಗಡಗಳು ಪಾನನಿಷೇಧವನ್ನು ಕಟುವಾಗಿ ಟೀಕಿಸಿ ಜನರಿಗೆ ಕಾನೂನಿನ ಉಲ್ಲಂಘನೆ ಮಾಡುವಂತೆ ಪರೋಕ್ಷವಾಗಿ ಪ್ರೋತ್ಸಾಹಿಸುತ್ತಿದ್ದಾರೆ. ಪ್ರಜಾಸೋಶಲಿಸ್ಟ್ ಪಕ್ಷದ ಕೇಂದ್ರ ಕಾರ್ಯಕಾರಿ ಮಂಡಳವು ಇತ್ತೀಚೆಗೆ ಇಂದೋರಿನಲ್ಲಿ ಪಾನನಿಷೇಧವನ್ನು ಸಮರ್ಥಿಸಿದುದಲ್ಲದೆ, ದೇಶದಾದ್ಯಂತ ಅದನ್ನು ಜಾರಿಗೆ ತರಲು ಸರಕಾರವನ್ನು ಕೇಳಿಕೊಂಡಿರುತ್ತಾರೆ. ಕುಡುಕರ ಬೆಂಬಲವನ್ನು ಪಡೆಯಲು, ಪಾನನಿಷೇಧವನ್ನು ದೂರತೊಡಗಿದರೆ ಅದು ದೇಶ ವಿಘಾತುಕ ಕಾರ್ಯವಾದೀತು ಎಂಬುದನ್ನು ನಮ್ಮ ಮುಖಂಡರನೇಕರು ತಿಳಿದಂತಿಲ್ಲ. ಪಾನನಿಷೇಧವನ್ನು ರಾಜಾಜಿ "ಮತಿಭ್ರಾಂತಿ"ಯಿಂದಾಗಿ ತಂದಿಲ್ಲವೆಂಬುದನ್ನು ನಾವು ತಿಳಿಯಬೇಕು. ಈ ಆತ್ಮಘಾತುಕ ದಾರಿಯನ್ನು ಬಿಟ್ಟು, ಎಲ್ಲಾ ಪಕ್ಷದವರೂ ಒಂದಾಗಿ ಈ ಕಾರ್ಯದಲ್ಲಿ ಮುಂದಾದಲ್ಲಿ ಪಾನನಿಷೇಧವು ಸಫಲವಾಗುವುದರಲ್ಲಿ ಸಂದೇಹವಿಲ್ಲ. ಪಾನನಿಷೇಧವು ಜನತೆಗಾಗಿ, ಮುಂದಿನ ಜನಾಂಗಕ್ಕಾಗಿ, ರಾಷ್ಟ್ರದ ಏಳಿಗೆಗಾಗಿ, ಇದೆ. ಅದೆಂದೂ ನಶಿಸಿಹೋಗಲು ಸಾಧ್ಯವಿಲ್ಲ.

ಭರ್ತ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ- ೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟು ಖರ್ಚು ರೂ. ೦-೧೪-೦

—:ವಿಳಾಸ:—

ಹಾಲಪ್ಪಾ ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ಋತುಸ್ರಾವ ನಿಂತಿತು

"ಕುಮಾರಿ" ಬಿಲ್ಲೆಗಳನ್ನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು, ಹತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು. ಯಾವ ಬಾಧಕವೂ ಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ- ಬೆಲೆ: ರೂ. 3/-; ಸ್ಪೆಶ್ಯಲ್ ರೂ. 5-, ಅಧಿಕಾಧಿಕ ಸ್ಪೆಶ್ಯಲ್ ರೂ. 8-[ವಿ. ಪಿ. ಹನ್ನೆರಡಾಣೆ ಪ್ರತ್ಯೇಕ]

Mrs. P. DEVEE, F.D.S.(N.J.)
CALCUTTA. 40

ಸ್ಟಾಕಿಸ್ಟರು: ಶಹಾಕಂಪೆನಿ, ಮಂಗಳೂರು.

ಹೈಸ್ಕೂಲ್, ಪಂಚಾಯತ ಬೋರ್ಡ್ ಮೊದಲಾದುವುಗಳ ಲೈಬ್ರೆರಿಗಳಿಗೆ ಬೇಕಾಗುವ ಪುಸ್ತಕಗಳು ಕಮಿಶನಿನಲ್ಲಿ ದೊರೆಯುತ್ತವೆ.

ನವಭಾರತ ಪುಸ್ತಕ ಭಂಡಾರ, ಉಡುಪಿ.

Edited, Printed & Published By K. H. Shetty at the Navayuga Press, Udipi, S. India

Regd. No. M. 3618 [ಎರಡಾಣೆ] Licence No. 31
Licensed to Post without Prepayment.

ನವಯುಗ

Founder:- SRI. A. B. SHETTY, Minister for Public Health, Govt. of Madras.
Vol.33 · No. 42 · 24-6-1954 ವರ್ಷ ೩೩ ವಾರ ೪೨

ಕರ್ನಾಟಕ ಏಕೀಕರಣ

ಸ್ವಾತಂತ್ರ್ಯೋತ್ತರದಲ್ಲಿ ಭಾರತೀಯರ ಪಾಲಿಗೆ ಜೀವಾಳವೆನಿಸಿದ ಮಹತ್ವದ ಪ್ರಶ್ನೆಯೊಂದು ಈಗ ಪರಿಶೀಲಿಸಲಾಗುತ್ತಿದೆ—ಭಾರತದಲ್ಲಿ ರಾಜ್ಯಗಳ ಪುನರ್ಘಟನೆಯ ವಿಚಾರವನ್ನು ಫಜಲ ಆಲಿ ಆಯೋಗವು ಕೈಗೆ ತೆಗೆದುಕೊಂಡಿದೆ. ಆಯೋಗವು ಇದೀಗ ಕರ್ನಾಟಕದ ಸಂಚಾರವನ್ನು ಹೆಚ್ಚು ಕಡಿಮೆ ಮುಗಿಸಿರುವುದು. ರಾಜ್ಯಗಳ ಪುನರ್ಘಟನೆಯ ವಿಷಯದಲ್ಲಿ ಆಯೋಗವು ನಾನಾ ಪ್ರಕಾರದ ಹೇಳಿಕೆಗಳನ್ನು ಕೇಳಿದೆ—ಮನವಿಯು ಎಂತಹ ತತ್ವವನ್ನೇ ಪ್ರತಿಪಾದಿಸಲಿ, ಎಲ್ಲವನ್ನೂ ಶಾಂತವಾಗಿ, ನಿರ್ವಿಕಾರ ಚಿತ್ತದಿಂದ ಕೇಳುವ ಔದಾರ್ಯವನ್ನೂ ಸಹನೆಯನ್ನೂ ಅದು ತೋರಿಸಿದೆ. ಇದರಿಂದ ಜನಾಭಿಪ್ರಾಯವು ಸ್ಪಷ್ಟವಾಗಿ ಪ್ರಕಟಗೊಳ್ಳುವುದಕ್ಕೆ ಹೆಚ್ಚಿನ ಉತ್ತೇಜನ ದೊರೆತಿದೆ. ಅತ್ಯಂತ ಮಹತ್ವದ ಹಾಗು ಪ್ರಾಮುಖ್ಯವಾದ ಪ್ರಶ್ನೆಯೊಂದನ್ನು ಕುರಿತು ಜನಾಭಿಪ್ರಾಯದಲ್ಲಿ ಕಂಡು ಬರುವ ವೈವಿಧ್ಯಕ್ಕೆ ಆಯೋಗದ ಮುಂದೆ ಮಂಡಿಸಲಾದ ಮನವಿಗಳ ಹೊರೆಯು ಪ್ರತ್ಯಕ್ಷ ನಿದರ್ಶನವೆಂದರೂ ತಪ್ಪಾಗದು.

ಆಯೋಗವು ಸಹನೆಯಿಂದ ವರ್ತಿಸುವುದೆಂತಲೇ—ಚಿತ್ರ ವಿಚಿತ್ರವಾದ ಬೇಡಿಕೆಗಳು ಮಂಡಿಸಲಾಗುತ್ತವೆ. ಉತ್ತರ ಕರ್ನಾಟಕದ ಯೋಜನಾ ಸಮಿತಿಯೊಂದು ಭಾರತದಲ್ಲಿ ೧೫೦ ರಾಜ್ಯಗಳನ್ನು ರಚಿಸಬೇಕೆಂದು ಹೇಳುತ್ತದೆ! ಪ್ರತಿಯೊಂದು ರಾಜ್ಯದಲ್ಲಿಯೂ ೩೫ ಲಕ್ಷ ಜನಸಂಖ್ಯೆ ಇರಬಹುದು; ಎರಡು ಜಿಲ್ಲೆಗಳೆಂದರೆ ಒಂದು ರಾಜ್ಯವಾಗಬೇಕು; ಒಂದೊಂದು ರಾಜ್ಯದಲ್ಲಿ ಐದು ಮಂದಿ ಮಂತ್ರಿಗಳಿಂದಲೂ ಗವರ್ನರನಿಂದಲೂ ಕೂಡಿದ ಸರಕಾರವೇರ್ಪಡಬೇಕು ಎಂದು ಈ ಮನವಿ ಸೂಚಿಸುತ್ತದೆ. ಈ ಕಲ್ಪನೆಯು ತೀರ ಅದ್ಭುತವೆನಿಸುತ್ತದೆ—ಇದನ್ನು ಮನ್ನಿಸುವುದಾದಲ್ಲಿ ನಾವು ಎಂಟು ಕರ್ನಾಟಕ ರಾಜ್ಯಗಳನ್ನು ಪಡೆಯುತ್ತೇವೆ. "ನಿಮಗೆ ಕರ್ನಾಟಕ ರಾಜ್ಯ ಬೇಕಲ್ಲವೆ? ತೆಗೆದುಕೊಳ್ಳಿ: ಒಂದಲ್ಲ, ಎರಡಲ್ಲ—ಎಂಟು" ಎಂದು ಭಾರತ ಸರಕಾರ ಕನ್ನಡಿಗರನ್ನು ಮೂದಲಿಸುವುದಕ್ಕೆ ಈ ಮನವಿ ಅವಕಾಶ ಕೊಡುತ್ತದೆ.

ಆಡಳಿತ ಘಟಕಗಳು ಈಗಿದ್ದಂತೆಯೇ ಇರಲೆಂದಷ್ಟೇ ಹಾಸ್ಯಾಸ್ಪದವಾದ, ವ್ಯಾವಹಾರಿಕ ದೃಷ್ಟಿಯನ್ನು ಬಿಟ್ಟುಕೊಟ್ಟೇ ಮಾಡಲಾದ, ಮೇಲಿನ ಸೂಚನೆಯಂತೆ, ಏಕೀಕರಣದ ದಾರಿಯಲ್ಲಿರುವ ಇನ್ನೊಂದು ತೊಂದರೆಯೆಂದರೆ, ಎರಡು ರಾಜ್ಯಗಳ ನಿರ್ಮಾಣದ ಬೇಡಿಕೆ. ಕನ್ನಡದ ಮಟ್ಟಿಗೆ ಮೊದಲು ಈ ಅಪಸ್ವರದ ರಾಗಾಲಾಪನೆ ಮಾಡಿದವರು ಮೈಸೂರು ಕಾಂಗ್ರೆಸಿನ ಅಧ್ಯಕ್ಷ ಶ್ರೀ. ವೀರಣ್ಣ ಗೌಡರು. ಇವರು "ಮೈಸೂರಿನ ವೈಶಿಷ್ಟ್ಯ"ವನ್ನು ಕಾಯ್ದುಕೊಳ್ಳುವ ಘನತರವಾದ ಉದ್ದೇಶದಿಂದ ಮೈಸೂರು ಈಗಿದ್ದಂತೆಯೇ ಪ್ರತ್ಯೇಕ ರಾಜ್ಯವಾಗಿ ಉಳಿಯಬೇಕೆಂದೂ ಇತರ ಕನ್ನಡ ಪ್ರದೇಶಗಳೆಲ್ಲ ಒಂದು ರಾಜ್ಯವಾಗಿ ಘಟಿಸಲ್ಪಡಬೇಕೆಂದೂ ಹೇಳಿದರು. ಕನ್ನಡ ಸಾಹಿತ್ಯದ ಪ್ರಭೃತಿಗಳಲ್ಲಿ ಒಬ್ಬರಾದ ಶ್ರೀ. ಡಿ. ವಿ. ಗುಂಡಪ್ಪನವರೂ ಆಡಳಿತ ದೃಷ್ಟಿಯಲ್ಲಿ ಮೈಸೂರು ಪ್ರತ್ಯೇಕ ಘಟಕವಾಗಿ ಉಳಿಯುವುದೇ ಶ್ರೇಯಸ್ಕರ ಎಂದು ಹೇಳಿ, ಗೌಡರಿಗೆ ಉತ್ತೇಜನೆ ಕೊಟ್ಟರು. ಮೈಸೂರಿನ ಪ್ರಜೆಗಳಲ್ಲಿ ಈ ವಾದವನ್ನು ಖಂಡಿಸುವ ಜನರು ಇದ್ದಾರೆ—ಕರ್ನಾಟಕದ ಏಕೀಕರಣ ಎಂಬ ಮೂಲ ಕಲ್ಪನೆಗೆ ತೀರ ವಿಸಂಗತವಾದ ಎರಡು ಕರ್ನಾಟಕಗಳ ಕಲ್ಪನೆಯು ಖಂಡನಾರ್ಹವೆಂಬುದಕ್ಕೆ ಬಹು ಜನರ ಸಮ್ಮತಿ ಇದೆ. ಆದರೂ ಈ ವಾದ ಈಗ ಪ್ರಬಲಿಸುತ್ತಿದೆ— ಕರ್ನಾಟಕದ ಹೊರಗೆ, ಮಹಾರಾಷ್ಟ್ರ ಹಾಗು ಆಂಧ್ರದಲ್ಲಿಯೂ ಎರಡು ರಾಜ್ಯಗಳೆಂಬ ದ್ವೈತಕಲ್ಪನೆ ದೈತ್ಯಾಕಾರವನ್ನು ಧರಿಸಿ, ಭಾಷಾವಾರು ರಾಜ್ಯಗಳ ಪುರಸ್ಕರ್ತರನ್ನು ಬೆದರಿಸುತ್ತದೆ

ಮೈಸೂರಿನ ವೈಶಿಷ್ಟ್ಯವೆಂದರೇನು? ಕನ್ನಡಿಗರ ಸರ್ವಸ್ವವೆನಿಸಿದ ಏಕೀಕರಣದ ಪ್ರಶ್ನೆಯಲ್ಲಿ ಯಾವುದೇ ನಿರ್ಧಾರವಿಲ್ಲ ಎನ್ನುವುದೇ ಈ ವೈಶಿಷ್ಟ್ಯ! ಆ ರಾಜ್ಯದ ಮುಖ್ಯ ಮಂತ್ರಿ ಹನುಮಂತಯ್ಯನವರು ಹೈದರಾಬಾದು ಕಾಂಗ್ರೆಸಿನ ಅಧಿವೇಶನದಲ್ಲಿ ಭಾಷಾನುಗುಣ ರಾಜ್ಯಗಳ ಪುರಸ್ಕರ್ತರ ಪರವಾಗಿ ವಕಾಲತನ್ನು ವಹಿಸಿಕೊಂಡರು; ನೆಹರೂರನ್ನು ಪ್ರತಿಭಟಿಸಿದರು. ಕಾಂಗ್ರೆಸ ವರಿಷ್ಠರಿಂದ ಛೀಮಾರಿ ಹಾಕಿಸಿಕೊಂಡರೂ ಏಕೀಕರಣ ವಾದಿಗಳಿಂದ ಭಲೆಭಲೆ ಎಂದು ಹೊಗಳಿಸಿಕೊಂಡರು. ಆ ಮೇಲೆ ದಕ್ಷಿಣ ಕನ್ನಡ ಹಾಗು ಉತ್ತರ ಕರ್ನಾಟಕ ಪ್ರದೇಶಗಳಲ್ಲಿ ಹನುಮಂತಯ್ಯನವರು ಪ್ರವಾಸ ಕೈಗೊಂಡಾಗ ಜನರಲ್ಲಿ ತೀವ್ರವಾಗಿದ್ದ ಏಕೀಕರಣದ ಅಭಿಲಾಷೆಗೆ ನೀರೆರೆದು ಪೋಷಿಸುವ ಸವಿಮಾತುಗಳನ್ನು ಆಡಿದರು—ಮೈಸೂರಿನಲ್ಲಿರುವ ಏಕೀಕರಣದ ವಿರೋಧಿಗಳ ಮನನೋಯಿಸಲು ಇಷ್ಟಪಡದೆ ಬೃಹನ್ಮೈಸೂರಿನ ಕಲ್ಪನೆಯೇ ಏಕೀಕರಣ ಎಂದು ಧ್ವನಿಸಿದರು; ಮೈಸೂರಿನ ಹೊರಗಿರುವ ಕನ್ನಡಿಗರ ಪ್ರೀತಿ ಸಂಪಾದಿಸಲು, ನೆರೆಹೊರೆಯುವರೆಲ್ಲ ಮೈಸೂರಿಗೆ ಸೇರುತ್ತೇವೆ ಎನ್ನಿರಿ; ಉಳಿದುದನ್ನು ತನಗೆ ಬಿಡಿ ಎಂದರು. ಈಗ ಹೆಚ್ಚಿನವರು ಮೈಸೂರಿನೊಂದಿಗೆ ಸೇರುತ್ತೇವೆ ಎಂದು ಪ್ರಕಟವಾಗಿ ಹೇಳಿಯಾಯಿತು-ಆದರೆ ಮೈಸೂರು ಸರ್ಕಾರವೇ ಏನನ್ನೂ ಹೇಳುವುದಿಲ್ಲ.ಏಕೀಕರಣದ ಲಾಭ ಹಾನಿಗಳನ್ನು ಅದು ಇನ್ನು ಮುಂದಿನ ಮೂರು ತಿಂಗಳಲ್ಲಿ ಲೆಕ್ಕ ಹಾಕುತ್ತದೆ—ಮತ್ತು ಆ ಬಳಿಕವೇ ತನ್ನ ನಿರ್ಧಾರವನ್ನು ಪ್ರಕಟಗೊಳಿಸುವುದು. ಹಾಗಾದರೆ ಹನುಮಂತಯ್ಯನವರು ಇದುವರೆಗೆ ಹೇಳಿದುದೆಲ್ಲ ಏನು?

ಏಕೀಕರಣವನ್ನು ವಿರೋಧಿಸುವವರಲ್ಲಿ ಕಂಡುಬರುವುದು ಅಧಿಕಾರ ಲಾಲಸೆಯೊಂದೇ ಎಂದರೆ ತಪ್ಪಾಗದು—ಮೈಸೂರು ಬೃಹನ್ಮೈಸೂರಾದರೆ, ಈಗಿನ ಕಿರೀಟಾಧಿಪತಿಗಳ ಪೀಠ ಕುಸಿದು ಬೀಳುವ ಪ್ರಸಂಗ ಬರಬಹುದು ಪ್ರಮುಖ ಕುರ್ಚಿಗಳಲ್ಲಿ ಮೈಸೂರಿನ ಹೊರಗಿನವರಿಗೂ ಪಾಲು ಕೊಡಬೇಕಾಗುವುದು—ತಮ್ಮ ಸ್ವಾರ್ಥಕ್ಕೆ ಇಂಬು ದೊರೆಯದೆಂಬ ಸಂಕುಚಿತ ಮನೋಭಾವವೇ ಏಕೀಕರಣವನ್ನು ವಿರೋಧಿಸುತ್ತದೆ. ಮೈಸೂರು ಮಾತ್ರವೇ ಅಲ್ಲ—ಕೊಡಗಿನ ಧುರೀಣರೂ ಸ್ವಾರ್ಥವನ್ನು ಬಿಟ್ಟುಕೊಟ್ಟಿಲ್ಲ. ಕೊಡಗು ಪ್ರತ್ಯೇಕವಾದ "ಸಿ" ವರ್ಗದ ಘಟಕವಾಗಿಯೇ ಉಳಿಯಬೇಕೆಂದು ಶಾಸನ ಸಭೆಯ ಇಪ್ಪತ್ತನಾಲ್ಕು ಮಂದಿ ಸದಸ್ಯರು ಆಯೋಗಕ್ಕೆ ಮನವಿ ಸಲ್ಲಿಸಿದರು. ಮುಖ್ಯ ಮಂತ್ರಿ ಯಾಗುವ ಮೊದಲು ಗುಟ್ಟು ಹೊರಗೆಡವದಿದ್ದ ಪುಣಚ್ಚ ಈಗ ಏಕೀಕರಣದ ಪ್ರಶ್ನೆಯನ್ನು ಉಪಾಯವಾಗಿ ತಳ್ಳಿಹಾಕಲು ನೋಡುತಿದ್ದಾರೆ. ಏಕೀಕರಣವಾದರೆ ಕೊಡಗಿನ ಮುಖ್ಯಮಂತ್ರಿ ಸ್ಥಾನವು ಉಳಿಯುವುದಿಲ್ಲವಲ್ಲ!

ಮೈಸೂರಿನೊಡನೆ ಸೇರಬೇಕು ಎಂದು ಹೆಚ್ಚಿನ ಉತ್ಸಾಹ ತೋರಿಸುತ್ತಿರುವವರು ಉತ್ತರ ಕರ್ನಾಟಕದವರೇ ಎನ್ನಬಹುದು—ದಕ್ಷಿಣ ಕನ್ನಡದ ಮನೋಭಾವನೆಯೂ ಮೈಸೂರಿನೊಂದಿಗೆ ಸೇರಿದರೆ ಆಗಬಹುದೆಂದು ಹೇಳುತ್ತದೆ. ಕೇರಳದ ಕೇಳಪ್ಪನ್ನರು ದಕ್ಷಿಣ ಕನ್ನಡವನ್ನು ನುಂಗಲು ಹವಣಿಸಿದ ಗಳಿಗೆಯಿಂದ, ಕರ್ನಾಟಕದ ಉಳಿದ ಪ್ರದೇಶಗಳೊಂದಿಗೆ ಸೇರಿಕೊಳ್ಳುವುದೇ ಲೇಸೆಂಬ ಭಾವನೆ ಈ ಜಿಲ್ಲೆಯಲ್ಲಿ ಬಲಿಯತೊಡಗಿತು. ಧಾರ್ ಸಮಿತಿಯ ವರದಿಯು ಮೈಸೂರಿನೊಡನೆ ಸೇರ್ಪಡೆ ಹೊಂದಿದರೆ ಕನ್ನಡ ರಾಜ್ಯ ಸುಲಭವಾಗುವುದೆಂಬ ವಿಚಾರವನ್ನು ಪ್ರತಿಪಾದಿಸಿತು. ಇಂದು ಈ ವಿಚಾರ ಮೈಸೂರಿನ ಹೊರಗಿರುವವರಿಗೆ ಸಮ್ಮತವೆಂದು ತೋರುತ್ತದೆ. ಆದರೆ ನಾವಿಲ್ಲಿ ಪ್ರಾಮಾಣಿಕವಾದ ಪ್ರಶ್ನೆಯೊಂದನ್ನು ವಿಚಾರಿಸಬೇಕಾಗುವುದು—ಏಕೀಕರಣದ ಧ್ಯೇಯ ಸಾಧನೆಯಲ್ಲಿ ವ್ಯಾವಹಾರಿಕ ಮುತ್ಸದ್ದಿತನಕ್ಕೆ ನಾವು ತಕ್ಕ ಸ್ಥಾನವನ್ನು ಕೊಡಬೇಡವೆ? ಕನ್ನಡ ಪ್ರದೇಶಗಳು ಚಾರಿತ್ರಿಕ, ಆರ್ಥಿಕ, ಸಾಮಾಜಿಕ ಹಾಗು ಸಾಂಸ್ಕೃತಿಕ ದೃಷ್ಟಿಯಿಂದ ಒಂದೇ ಆಡಳಿತಕ್ಕೆ ಸೇರುವುದು ಅಪೇಕ್ಷಣೀಯ, ನಿಜ. ಹಾಗೆಂದು ಮೈಸೂರಿನ ಪ್ರಭೃತಿಗಳು ಉಳಿದ ಕನ್ನಡಿಗರಲ್ಲಿ ಮಮತಾಯುಕ್ತ ಪ್ರೇಮವನ್ನು ತೋರಿಸಲಾರದಿದ್ದರೆ ಮುಂದೆ ಹೇಗೆ ನಂಬೋಣ? ಮೈಸೂರಿನ ಮನೋಗತ ಇನ್ನೂ ವ್ಯಕ್ತಗೊಂಡಿಲ್ಲ—

(೧೨ನೇ ಪುಟ ನೋಡಿರಿ)

THE CANARA INDUSTRIAL & BANKING SYNDICATE LTD.
Estd: 1925 H. O: UDIPI, S. India

ಖರ್ಚಿಲ್ಲದೆ ಹಣ ಕಳುಹಿಸಬೇಕೆ?

ಮುಂಬಯಿಯ ನಾಗರಿಕರು ಈ ಕಡೆ ಗಮನಿಸಿರಿ.

ರತ್ನಗಿರಿ, ಉತ್ತರ ಕನ್ನಡ, ದಕ್ಷಿಣ ಕನ್ನಡ ಮತ್ತು ಮಲಬಾರು ಜಿಲ್ಲೆಗಳ ಪ್ರಾಮುಖ್ಯ ನಗರಗಳಲ್ಲಿರುವ ತಮ್ಮ ಬಂಧು ಮಿತ್ರರಿಗೆ ಕಾಲಕಾಲಕ್ಕೆ ಹಣ ಕಳುಹಿಸುವ ಮುಂಬಯಿಯ ನಮ್ಮ "ಸೇವಿಂಗ್ಸ್ ಬೇಂಕ್ ಠೇವಣಾತಿ"ದಾರರ ಅನುಕೂಲತೆಗಾಗಿ ಖರ್ಚಿಲ್ಲದೆ ಹಣ ಕಳುಹಿಸುವ ವ್ಯವಸ್ಥೆ ಮಾಡಲಾಗಿರುವುದೆಂಬುದನ್ನು ಬಲ್ಲಿರಾ? ಹಣ ಕಳುಹಿಸುವ ಕಷ್ಟನಷ್ಟಗಳನ್ನು ನಮ್ಮ ಗಿರಾಕಿಗಳಿಗೆ ತಪ್ಪಿಸಬೇಕೆಂಬುದೇ ಈ ಏರ್ಪಾಡಿನ ಉದ್ದೇಶ. ಕುಟುಂಬದ ಹಾಗೂ ಸ್ವಂತ ಉಪಯೋಗಕ್ಕಾಗಿ ಮಾತ್ರ ಈ ಧರ್ಮಾರ್ಥ ಸವಲತ್ತನ್ನು ಪಡಕೊಳ್ಳಬೇಕಾಗಿ ವಿನಂತಿ. ಹೆಚ್ಚಿನ ಮಾಹಿತಿಯನ್ನು ಸಮೀಪದ ನಮ್ಮ ಯಾವುದೇ ಶಾಖೆಯಿಂದ ಪಡೆದುಕೊಳ್ಳಿರಿ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್
ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್,

ಸ್ಥಾಪನೆ: ೧೯೨೫] [ಪ್ರಧಾನ ಕಚೇರಿ: ಉಡುಪಿ, ದ. ಭಾರತ.

ಭಾರತದ ನಾಗರಿಕ ಆಕಾಶಯಾನ

ರಾಷ್ಟ್ರೀಕರಣದ ಮುಂದಿನ ಆರು ತಿಂಗಳಲ್ಲಿ

ರೈಟ್ ಸಹೋದರರು ಐವತ್ತು ವರ್ಷಗಳ ಹಿಂದೆ ಮಾಡಿ ತೋರಿಸಿದ ಚಮತ್ಕಾರವೊಂದು ಮಾನವನ ಪ್ರಗತಿಯ ಮೈಲುಗಲ್ಲಾಯಿತು— ೧೯೦೩ನೇ ಇಸವಿಯ ಡಿಸೆಂಬರ ಮಾಸದಲ್ಲಿ ಒಂದು ದಿನ ಈ ಸಹೋದರರು ಗಾಳಿಗಿಂತಲೂ ಭಾರವಾದ ಯಂತ್ರವೊಂದನ್ನು ಭೂಮಿ ಬಿಟ್ಟು ಮೇಲೆ ಹಾರುವಂತೆ ನಡೆಸಿದರು. ಈ ಹಾರಾಟವು ಒಂದು ನಿಮಿಷಕ್ಕೂ ಕಡಿಮೆ ಅವಧಿಯದಾಗಿತ್ತು; ಕ್ರಮಿಸಿದ ದೂರವು ಒಂದು ಸಾವಿರ ಅಡಿಯಷ್ಟೂ ಇರಲಿಲ್ಲ. ಆದರೆ, "ಪಕ್ಷಿಯ ತೆರದಲಿ ಪಕ್ಕಗಳಿದ್ದರೆ ಗಕ್ಕನೆ ಗಗನಕೆ ಹಾರುತಲಿದ್ದೆ" ಎಂಬ ಮಕ್ಕಳ ಕಲ್ಪನೆಗೆ ರೈಟ್ ಸಹೋದರರ ಈ ಸಾಹಸವು ಮೂರ್ತ ಸ್ವರೂಪವನ್ನು ಕೊಟ್ಟಿತು— ಶತಮಾನಗಳಿಂದ ಮಾನವನು ಕಾಣುತ್ತಿದ್ದ ಕನಸೊಂದು ನನಸಾಗಿ ಪರಿಣಮಿಸಿತು. ಅಂದಿನಿಂದ ಇಂದಿನ ವರೆಗೆ ಆಕಾಶಯಾನದ ಇತಿಹಾಸದಲ್ಲಿ ಅನೇಕ ಅದ್ಭುತಗಳು ಕೈಗೂಡಿವೆ. ಲಿಂಡಬರ್ಗನು ಅಟ್ಲಾಂಟಿಕ ಮಹಾಸಾಗರವನ್ನು ಹಾರಿ ಬಂದು ಲೋಕವನ್ನು ಚಕಿತಗೊಳಿಸಿದನು. ಇಂದು ಅವನು ಹಾಕಿಕೊಟ್ಟ ಮಾದರಿಯನ್ನನುಸರಿಸಿ, ಪೂರ್ವದ ಟೋಕಿಯೊದಿಂದ ಪಶ್ಚಿಮದ ವಾಷಿಂಗಟನ್, ಸಾನ್ ಫ್ರಾನ್ಸಿಸ್ಕೋಗಳಿಗೆ ನಡುವೆ ಎಲ್ಲಿಯೂ ನಿಲ್ಲದೆ ಪ್ರಯಾಣಿಸುವುದು ಸಾಧ್ಯವಾಗಿದೆ. ಭೂಮಿಯ ಮೇಲೆ ಓಡಾಡುವ ಮೋಟಾರು, ಉಗಿಬಂಡಿ ಮುಂತಾದವುಗಳು ಮಿತವ್ಯಯ ಹಾಗು ಸುರಕ್ಷಿತತೆಯ ದೃಷ್ಟಿಯಿಂದ ಪರಮಾವಧಿ ವೇಗವನ್ನು ಸಾಧಿಸಿವೆಯೆಂದು ಹೇಳಲಾಗುತ್ತದೆ—ಇಂಥದರಲ್ಲಿ ವಿಮಾನವು ಮಾತ್ರ ಇನ್ನೂ ಇನ್ನೂ ಹೆಚ್ಚಿನ ವೇಗವನ್ನು ಕೈಗೂಡಿಸಿಕೊಂಡು ಆಕಾಶದಲ್ಲಿ ಹಾರಾಡುತ್ತದೆ. ಅತ್ಯಾಧುನಿಕ ಮಾದರಿಯ ಜೆಟ್ ವಿಮಾನಗಳು ತಾಸಿಗೆ ನಾಲ್ನೂರು ಮೈಲುಗಳ ವೇಗದಿಂದ ನಲವತ್ತು ಸಾವಿರ ಅಡಿಯಷ್ಟು ಎತ್ತರದಲ್ಲಿ ಹಾರಾಡಬಲ್ಲವು.

ಭಾರತದಲ್ಲಿ ಪ್ರಗತಿ

ಆಕಾಶಯಾನದ ಇತಿಹಾಸದಲ್ಲಿ ಭಾರತವೂ ತನ್ನ ಪಾತ್ರವನ್ನು ಸಮರ್ಥವಾಗಿಯೇ ನಿರ್ವಹಿಸಿದೆ – ನಮ್ಮ ವೈಮಾನಿಕ ಬಲವು ಪಾಶ್ಚಾತ್ಯ ರಾಷ್ಟ್ರಗಳೊಡನೆ ಸ್ಪರ್ಧೆ ಹೂಡಲಾರದು, ನಿಜ. ಆದರೆ ಪೂರ್ವದ ರಾಷ್ಟ್ರಗಳಲ್ಲೆಲ್ಲ ಭಾರತೀಯ ವಿಮಾನ ಪಡೆಯು ಅತ್ಯಂತ ಸುಸಜ್ಜಿತವಿರುತ್ತದೆ. ನಾಗರಿಕ ಆಕಾಶಯಾನವೂ ಈಗ ಸುವ್ಯವಸ್ಥಿತವಾಗಿ ನಡೆಸಲ್ಪಡುತ್ತದೆ. ಈ ದಿಸೆಯಲ್ಲಿ ಕಳೆದ ವರ್ಷ ಗಮನಾರ್ಹವಾದ ಕ್ರಮವೊಂದನ್ನು ಕೈಗೊಳ್ಳಲಾಯಿತು— ಪ್ರಯಾಣಿಕರ ವಿಮಾನವನ್ನು ನಡೆಸುತ್ತಿದ್ದ ಕಂಪನಿಗಳನ್ನು ಸರಕಾರದವರು ರಾಷ್ಟ್ರೀಕರಿಸಿದರು. ತತ್ಪರಿಣಾಮವಾಗಿ ಪ್ರಯಾಣದ ಸೌಕರ್ಯಗಳನ್ನು ಹೆಚ್ಚಿಸಲು ಹಾಗು ಮಿತವ್ಯಯವನ್ನು ಸಾಧಿಸಲು ಅನುಕೂಲವಾಯಿತು. ಕಳೆದ ವರ್ಷದ ಉತ್ತರಾರ್ಧದಲ್ಲಿ ಭಾರತದ ನಾಗರಿಕ ಆಕಾಶಯಾನವು ಯಾವ ಮಟ್ಟದಲ್ಲಿತ್ತೆಂಬುದನ್ನು ಇದೀಗ ಪ್ರಕಟಿಸಲಾದ ಹೇಳಿಕೆಯೊಂದು ಸ್ಪಷ್ಟಪಡಿಸುತ್ತದೆ — ಅದರನ್ವಯ, ನಮ್ಮ ವಿಮಾನ ಮಾರ್ಗವು ೨೭೦೦೦ ಮೈಲುಗಳಿಗಿಂತಲೂ ಹೆಚ್ಚು ವಿಸ್ತರಿಸಿದೆ. ಈ ಹಾದಿಯಲ್ಲಿ ಒಟ್ಟಾರೆ ೧೯೦೩೧೫ ಪ್ರಯಾಣಿಕರನ್ನೂ ೪೦೭ ಲಕ್ಷ ರಾತಲುಗಳಷ್ಟು ಸಾಮಾನನ್ನೂ ೪೫ ಲಕ್ಷ ರಾತಲಿನಷ್ಟು ಟಪ್ಪಾಲನ್ನೂ ಒಯ್ಯಲಾಯಿತು; ಇದಕ್ಕೋಸ್ಕರ ವಿಮಾನಗಳು ೯೭ ಲಕ್ಷ ಮೈಲುಗಳ ಓಡಾಟವನ್ನು ನಡೆಸಿದವು. ವಿಮಾನದಲ್ಲಿ ನಿಜವಾಗಿ ಕೈಗೂಡಿದ ಸಾರಿಗೆಯ ಪ್ರಮಾಣವು ಮೂರಕ್ಕೆ ಎರಡರಷ್ಟು ಇದ್ದಿತು. ಸರಕಾರದ ವತಿಯಿಂದಷ್ಟೇ ಅಲ್ಲ, ಬೇರೆ ಕೆಲವು ಭಾರತೀಯ ಕಂಪನಿಗಳೂ ವಿಮಾನಗಳನ್ನು ಓಡಿಸಿರುತ್ತವೆ. ಇವುಗಳ ಓಡಾಟವು ೨೧ ಲಕ್ಷ ಮೈಲುಗಳಷ್ಟಾಗುತ್ತಿದ್ದು, ೪೧೮೪೨ ಪ್ರಯಾಣಿಕರನ್ನೂ ೪೧೮ ಲಕ್ಷ ರಾತಲು ಸಾಮಾನನ್ನೂ ಒಯ್ದಿರುತ್ತವೆ. ಸರಕಾರವು ರಾತ್ರಿಯಲ್ಲಿ ಟಪ್ಪಾಲನ್ನೊಯ್ಯುವ ವಿಮಾನ ಸಾರಿಗೆಯನ್ನು ಕಳೆದ ವರ್ಷವೂ ಮುಂದುವರಿಸಿತು. ಇದು ತೃಪ್ತಿಕರವಾದ ಪರಿಣಾಮವನ್ನು ನೀಡಿದೆ. ರಾತ್ರಿ ಸಂಚರಿಸುವ ಈ ವಿಮಾನಗಳಲ್ಲಿ ೧೯೬೦ ಮಂದಿ ಪ್ರಯಾಣಿಕರಲ್ಲದೆ ೬೦೩೩೭೯ ರಾತಲು ಸಾಮಾನು ಹಾಗು ೧೭೪೫೩೧೦ ರಾತಲು ಟಪ್ಪಾಲುಗಳು ತಮ್ಮ ಗುರಿಯನ್ನು ಮುಟ್ಟಿದವು.

ನೂತನ ಮಾರ್ಗಗಳು

ಸರಕಾರದವರು ಕಳೆದ ವರ್ಷ ಸಾಧಿಸಿದ ಇತರ ಸಂಗತಿಗಳಲ್ಲಿ ದೆಹಲಿಯಿಂದ ಅಮೃತಸರ, ಲಾಹೋರು, ಕಾಬೂಲುಗಳಿಗಾಗಿ ಕಂದಹಾರಕ್ಕೆ ನೇರವಾದ ಆಕಾಶಯಾನ ಸಂಪರ್ಕವನ್ನು ಏರ್ಪಡಿಸಿದ್ದು ಉಲ್ಲೇಖನೀಯ. ಪಾಕಿಸ್ತಾನ ಸರಕಾರದೊಡನಿದ್ದ ಮನಸ್ತಾಪವನ್ನು ಬಗೆಹರಿಸಿ, ಈ ವ್ಯವಸ್ಥೆಯನ್ನು ಕೈಗೊಳ್ಳಲಾಯಿತು. ತತ್ಪರಿಣಾಮವಾಗಿ ಮುಂಬಯಿಯಿಂದ ಕರಾಚಿಗಾಗಿ ಕಾಬೂಲಿಗೆ ಪ್ರಯಾಣಿಸುವ ವಿಮಾನದ ಹಾರಾಟವನ್ನು ನಿಲ್ಲಿಸಲಾಯಿತು. ಇದರಂತೆ ದೆಹಲಿಯಿಂದ ಕಲ್ಕತ್ತೆಗೆ ಸಂಜೆಗೆ ಹಾರುವ ನೇರವಾದ ಆಕಾಶಯಾನ ಸಂಪರ್ಕವನ್ನೂ ಏರ್ಪಡಿಸಲಾಯಿತು; ಅಲ್ಲದೆ ಮುಂಬಯಿಯಿಂದ ದೆಹಲಿಗೆ ನಡುವೆ ಎಲ್ಲಿಯೂ ನಿಲ್ಲದೆ ಹಾರುತ್ತಿದ್ದ ರಾತ್ರಿ ಹೊತ್ತಿನ ವಿಮಾನ ಸಾರಿಗೆಯನ್ನು ಸಾಯಂಕಾಲ ಪ್ರಯಾಣಿಸುವಂತೆ ಬದಲಾವಣೆಯನ್ನು ಮಾಡಿದರು. ಹೊರದೇಶಗಳಿಗೆ ಹಾರಾಡುವ ವಿಮಾನ ಸಾರಿಗೆಯನ್ನು ಬಲಗೊಳಿಸಲು "ಸೂಪರ್ ಕಾನ್ಸ್ಟಲೇಶನ್" ಮಾದರಿಯ ವಿಮಾನಗಳನ್ನು ಖರೀದಿ ಮಾಡಲಾಯಿತು. ಮೊದಲನೆಯ ಸಾರಿಗೆಯು ಮುಂಬಯಿ—ಲಂಡನುಗಳ ನಡುವೆ ಇದೇ ದಿನಾಂಕ ೧೯ರಂದು ಕೈಗೂಡಿದೆ. ದೂರ ಪ್ರಯಾಣಿಸುವ ನಾಗರಿಕರಿಗೆ ಈ ವಿಮಾನಗಳು ಯಥೇಷ್ಟ ಸೌಕರ್ಯವನ್ನು ಒದಗಿಸುತ್ತವೆ. ಅಚ್ಚುಕಟ್ಟು, ವೈಶಾಲ್ಯ ಮುಂತಾದ ಎಲ್ಲ ದೃಷ್ಟಿಯಲ್ಲಿ ಇದು ಪ್ರಯಾಣಿಕರನ್ನು ತೃಪ್ತಿಗೊಳಿಸುತ್ತದೆ. ಕಳೆದ ವರ್ಷ ವಿಮಾನ ಸಾರಿಗೆಯ ಸುರಕ್ಷಿತತೆಯನ್ನು ಸಾಧಿಸುವ ದೃಷ್ಟಿಯಿಂದಲೂ ವಿಶೇಷವಾದ ಕೆಲಸಗಳನ್ನು ಕೈಗೊಳ್ಳಲಾಯಿತು. ಭಾರತದಲ್ಲಿರುವ ೭೮ ವಿಮಾನ ನಿಲ್ದಾಣಗಳಲ್ಲಿ ಆವಶ್ಯಕ ಸುಧಾರಣೆಗಳು ನಡೆದವು. ವಿಮಾನೋಡ್ಡಾಣ ನಿಯಂತ್ರಣ ಸೌಕರ್ಯಗಳನ್ನು ಹೆಚ್ಚಿಸಿದ್ದಲ್ಲದೆ, ನಿಲ್ದಾಣವನ್ನು ಸೂಚಿಸುವ ದೀಪಗಳನ್ನೂ ಕೆಲವೆಡೆ ಜೋಡಿಸಲಾಯಿತು. ಮುಂಬಯಿ, ಮದ್ರಾಸು, ಕೊಯಮುತ್ತೂರುಗಳಲ್ಲಿ ವಿಮಾನ ಓಡುವ ನೆಲದ ಮೇಲೆ ಕಾಂಕ್ರೀಟನ್ನು ಹಾಕಿ, ಬಲಗೊಳಿಸಿದರು. ಮಂಗಳೂರಿನಲ್ಲಿ ೧೩೮೦೦೦ ರೂಪಾಯಿಗಳ ವೆಚ್ಚದಿಂದ ನಿಲ್ದಾಣದ ಕಟ್ಟಡವನ್ನು ರಚಿಸಿದರು. ಕಳೆದ ತಿಂಗಳಲ್ಲಿ ದಾವಣಗೆರೆಯಲ್ಲಿ ಹೊಸತಾಗಿ ವಿಮಾನ ನಿಲ್ದಾಣವು ಉದ್ಘಾಟಿಸಲ್ಪಟ್ಟಿತು.

ಅಪಘಾತ ಭಯ

ಸರಕಾರದೊಡನೆ ಹೆಸರು ದಾಖಲು ಮಾಡಿಕೊಂಡ ವಿಮಾನಗಳ ಸಂಖ್ಯೆಯು ೬೪೨ ಆಗಿದ್ದಿತು. ಒಳ್ಳೆಯ ತರಬೇತಿ ಹೊಂದಿದ ವೈಮಾನಿಕರೇ ಈ ವಿಮಾನಗಳನ್ನು ನಡೆಸುತ್ತಿದ್ದರು. ಪುಣೆಯಲ್ಲಿಯೂ ಅಲಹಾಬಾದಿನಲ್ಲಿಯೂ ವಿಮಾನೋಡ್ಡಾಣದ ವಿವಿಧ ವಿಷಯಗಳ ಕುರಿತು ಯೋಗ್ಯ ತರಬೇತಿಯನ್ನು ಕೊಡುವ ಸಂಸ್ಥೆಗಳು ಕೆಲಸ ಮಾಡುತ್ತವೆ. ಆದರೆ ಆರ್ಥಿಕ ದೃಷ್ಟಿಯಿಂದ ಪುಣೆಯ ಕೇಂದ್ರವು ತೃಪ್ತಿಯನ್ನು ಕೊಟ್ಟಿಲ್ಲ. ಭಾರತೀಯ ನಾಗರಿಕರಷ್ಟೇ ಅಲ್ಲ, ಕೊಲೊಂಬೋ ಯೋಜನೆಯಂತೆ, ನೇಪಾಳದಿಂದ ಬಂದ ೧೮ ನಾಗರಿಕರು ವಿಮಾನೋಡ್ಡಾಣದ ಮಹತ್ವದ ರಹಸ್ಯಗಳನ್ನು ಈ ಕೇಂದ್ರಗಳಲ್ಲಿ ಕಲಿಯುತ್ತಿದ್ದಾರೆ. ಕಳೆದ ವರ್ಷದ ಉತ್ತರಾರ್ಧದಲ್ಲಿ ಒಟ್ಟಾರೆ ೧೧ ಅಪಘಾತಗಳು ಸಂಭವಿಸಿರುತ್ತವೆ. ಇವುಗಳಲ್ಲಿ ಏಳು ಖಾಸಗಿ ವಿಮಾನಗಳಿಗೆ ಘಟಿಸಿದವು. ಮೂರು ಅಪಘಾತಗಳು ಮಾತ್ರ ಭಯಂಕರ ಸ್ವರೂಪದವಿದ್ದು ಒಟ್ಟು ೧೫ ಮಂದಿಯನ್ನು ಆಹುತಿ ತೆಗೆದುಕೊಂಡವು. ವಿಮಾನೋಡ್ಡಾಣದಲ್ಲಿ ಇಂತಹ ಅಪಾಯಗಳು ಹೆಚ್ಚೆಂಬ ಭಾವನೆ ನಮ್ಮಲ್ಲಿ ಉಂಟಾಗುತ್ತದೆ—ಆದರೆ ಓಡುತ್ತಿರುವ ಮೋಟಾರು ಕಾರು ಇತ್ಯಾದಿಗಳಿಗಿಂತ ವಿಮಾನಗಳಲ್ಲಿ ಗಂಡಾಂತರವು ಕಡಿಮೆಯೆಂದು ಅನುಭವ ಹೇಳುತ್ತದೆ. ವಿಮಾನವು ಆಕಾಶದಲ್ಲಿ ಹಾರುತ್ತಿದ್ದಾಗ ಅದಕ್ಕೆ ಅಪಘಾತವಾಗುವ ಸಂಭವ ಬಹಳ ಕಡಿಮೆ— ನೆಲದಿಂದ ಆಕಾಶಕ್ಕೆ ಏರುವಾಗ ಅಥವಾ ಆಕಾಶದಿಂದ ನೆಲಕ್ಕೆ ಇಳಿಯುವಾಗಲೇ ವಿಮಾನ ಅಪಘಾತದ ಭೀತಿಯನ್ನು ವಿಶೇಷವಾಗಿ ಇದಿರಿಸಬೇಕಾಗುತ್ತದೆ. ವಿಮಾನವು ಹೆಲಿಕಾಪ್ಟರುಗಳಂತೆ ನಿಂತಲ್ಲಿಂದಲೇ ಆಕಾಶದಲ್ಲಿ ಮೇಲಕ್ಕೆ ಏರಲಾರದು. ರೆಕ್ಕೆಗಳು ಇಡೀ ವಿಮಾನವನ್ನು ಎತ್ತಿ ಹಿಡಿದು ಆಕಾಶದಲ್ಲಿ ನಿಲ್ಲಿಸಲು ಸಮರ್ಥವಾಗುವಷ್ಟು ಗಾಳಿ ತುಂಬುವ ವರೆಗೆ

[೧೧ನೇ ಪುಟ ನೋಡಿರಿ]

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶ್ಯಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡಬಾಟ್ಲಿಗೆ ರೂ. ೩—೮—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

THE CANARA MUTUAL ASSURANCE COMPANY, LTD.,
Managing Director: T. R. A. PAI
Head Office. UDIPI, S. INDIA] [Estd: 1935

ಅತ್ಯುತ್ತಮ ಲಾಭಾಂಶ

[illegible] ಪಾಲಿಸಿಗಳಿಗೆ ಸಾಲಿಯಾನ ಸಾವಿರಕ್ಕೆ
ರೂ. 18/ — ಆಜೀವ ವಿಮೆಗೆ O ರೂ. 15/— ಉಂಬಳಿ ವಿಮೆಗೆ
31-12-1953ನೇ ತಾರೀಕಿಗಾದ 1951ರಿಂದ 1953ರ ವರೆಗಿನ ಅವಧಿಯ ವಿಷವಾಗಣನೆಯ ಫಲಿತಾಂಶ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್
ಪ್ರಧಾನ ಕಾರ್ಯಾಲಯ ಉಡುಪಿ, ದ. ಭಾರತ.] [ಸ್ಥಾಪನೆ: ೧೯೩೫.
ಸ್ಥಾಪನೆಯಾದಂದಿನಿಂದಲೂ ಪ್ರತಿಯೊಂದು ವರ್ಷಕ್ಕೂ ಲಾಭಾಂಶ ಹಂಚಿದ ಕಂಪೆನಿ.
ತಾ. 1-1-1954ರಿಂದ ಹೊಸ ವಿಮಾಕಾರ್ಯಕ್ಕೆ ಪ್ರೀಮಿಯಂ ದರವನ್ನು ಇಳಿಸಲಾಗಿದೆ.

CHIEF AGENTS.
THE COMMERCIAL CORPORATION OF INDIA, LTD,
UDIPI, S. India

ಸುಶಿಕ್ಷಿತ ನಿರುದ್ಯೋಗಿಗಳ ಸಮಸ್ಯೆ

ಪುಸ್ತಕೀಯ ಜ್ಞಾನಕ್ಕಿಂತ ವೃತ್ತಿಪರ ಶಿಕ್ಷಣಕ್ಕೆ ಸಲ್ಲಬೇಕಾದ ಪ್ರಾಶಸ್ತ್ಯ

ನಮ್ಮ ಮದ್ರಾಸು ರಾಜ್ಯದಲ್ಲಿ ಸುಶಿಕ್ಷಿತ ನಿರುದ್ಯೋಗಿಗಳಿಗೆ ಕೆಲಸವನ್ನು ಒದಗಿಸಿ ಕೊಡುವ ಉದ್ದೇಶದಿಂದ ಈ ವರ್ಷ ಸುಮಾರು ೧೫೦೦ ಪ್ರಾಥಮಿಕ ಶಾಲೆಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಹೊಸತಾಗಿ ತೆರೆಯಲು ಸರಕಾರದವರು ನಿರ್ಧರಿಸಿದ ಸಂಗತಿಯನ್ನು ನೀವು ಕೇಳಿರಬಹುದು—ದೇಶದಲ್ಲಿ ನಿರುದ್ಯೋಗದ ಸಮಸ್ಯೆಯು ತಾಂಡವವಾಡುತಿದ್ದು, ಇದೀಗ ಸರಕಾರದ ಲಕ್ಷ್ಯವು ಸಮಸ್ಯೆಯ ಪರಿಹಾರದ ಕಡೆಗೆ ಹರಿಯತೊಡಗಿದೆ ಎನ್ನುವುದಕ್ಕೆ ಮೇಲಿನ ವಾರ್ತೆಯೊಂದು ನಿದರ್ಶನ. ಸಾಮಾಜಿಕರನ್ನೆಷ್ಟೋ, ಅಷ್ಟೇ ಅರ್ಥ ಶಾಸ್ತ್ರಿಗಳನ್ನೂ ಉದ್ದಿಮೆದಾರರನ್ನೂ ಸುಧಾರಕರನ್ನೂ ಗೊಂದಲದಲ್ಲಿ ಕೆಡವಿದ ಪ್ರಶ್ನೆಯೆಂದರೆ ನಿರುದ್ಯೋಗವೇ ಸ್ಯೆ. ಈ ಸಮಸ್ಯೆಯ ಪೂರ್ವಾಪರ ವಿಚಾರಗಳನ್ನು ಮಥಿಸಿ ತಿಳಿದುಕೊಂಡು, ನಿವಾರಣೋಪಾಯಗಳನ್ನು ಕಂಡುಹಿಡಿಯಲು ಪ್ರಯತ್ನಿಸಬೇಕಾದದ್ದು ಇಂದಿನ ಆವಶ್ಯಕತೆ ಎಂದರೂ ಸಲ್ಲುವುದು. ಕಾರಣ, ಈ ಲೇಖನದಲ್ಲಿ ಇಂತಹ ಪ್ರಯತ್ನವೊಂದನ್ನು ಮಾಡಲೆಳಸುತ್ತೇವೆ.

ಬ್ರಿಟಿಷರ ಸೃಷ್ಟಿ

ನಿರುದ್ಯೋಗದ ಕೂಗು ಬಲಿಯತೊಡಗಿದುದು ಸ್ವಾತಂತ್ರ್ಯೋತ್ತರದಲ್ಲಿಯೇ ಎಂದು ಹೇಳಬಹುದು. ಯುದ್ಧಕ್ಕೋಸ್ಕರ ಸೈನಿಕರನ್ನು ಭರ್ತಿ ಮಾಡುವ ಕೆಲಸವು ನಿಲ್ಲಿಸಲ್ಪಟ್ಟು, ಸೈನ್ಯದಲ್ಲಿದ್ದವರನ್ನು ಮನೆಗೆ ಕಳಿಸಲು ಸುರು ಮಾಡಿದಾಗ, ಗಟ್ಟಿಮುಟ್ಟಾದ ಈ ನಮ್ಮ ಬಾಂಧವರು ಕೆಲಸಗೇಡಿಗಳಾದರು. ಸರಕಾರೀ ಕಾರ್ಯಾಲಯಗಳಲ್ಲೂ ಇತರೆಡೆಯಲ್ಲೂ ನೌಕರರ ಸಂಖ್ಯಾ ಪ್ರಮಾಣವನ್ನು ಕಡಿಮೆ ಮಾಡುವ ಪ್ರಯತ್ನಗಳು ನಡೆದುದರಿಂದ ಅನೇಕ ಮಂದಿ ಹೊಟ್ಟೆ ಹೊರೆಯುವ ಉದ್ಯೋಗವನ್ನು ಕಳೆದು ಕೊಂಡರು. ಏರುತ್ತಿರುವ ಬೆಲೆಯು ಕೆಲಸಗೇಡಿಗಳ ಬದುಕಿನ ಭದ್ರತೆಯನ್ನು ಪ್ರಶ್ನಿಸಿ ತಾಳ್ಮೆಯನ್ನು ಕೆಡಿಸಿತು.

೧೯೩೦ರ ಸುಮಾರಿನಲ್ಲಿ ಸಾರ್ವತ್ರಿಕವಾಗಿ ಅರ್ಥ ಮಂಡಲವು ಕುಸಿದಾಗಲೂ ನಿರುದ್ಯೋಗದ ಸಮಸ್ಯೆ ಭೀಕರವಾಗಿ ಹೆದರಿಸಿದ್ದುಂಟು—ಆದರೆ ಆಗ ವಸ್ತುಗಳ ಬೆಲೆಯು ಇಂದಿನಷ್ಟು ಏರಿರಲಿಲ್ಲ; ಎಂತಲೇ ಸಮಸ್ಯೆ ಉಗ್ರ ಸ್ವರೂಪವನ್ನು ಧಾರಣಮಾಡಲಿಲ್ಲ. ಹಾಗೆ ನೋಡಿದರೆ ನಮ್ಮ ದೇಶಕ್ಕೆ ನಿರುದ್ಯೋಗದ ಸಮಸ್ಯೆಯು ಹೊಸತಾಗಿ, ಸ್ವಾತಂತ್ರ್ಯೋತ್ತರದಲ್ಲಿ ಸೃಷ್ಟಿಗೊಂಡ ಪ್ರಶ್ನೆಯೇ ಅಲ್ಲ. ಬ್ರಿಟಿಷರು ಇಲ್ಲಿ ತಳವೂರಿದ ಇನ್ನೂರು ವರ್ಷಗಳಷ್ಟು ಪುರಾತನವಾದ ಪರಂಪರೆಯನ್ನು ಈ ನಿರುದ್ಯೋಗದ ಸಮಸ್ಯೆ ಹೊಂದಿದೆ. ಲಾರ್ಡ ಕ್ಲೈವನೂ ಮೆಕಾಲೆಯೂ ಬ್ರಿಟಿಷರ ಸಾಮ್ರಾಜ್ಯಶಾಹಿತ್ವವನ್ನು ಭಾರತದಲ್ಲಿ ಸ್ಥಾಪಿಸಲು ೧೮ನೇ ಶತಮಾನದಲ್ಲಿ ಹೂಡಿದ ತಂತ್ರಗಳು ಅದುವರೆಗೆ ಉದ್ಯೋಗಶೀಲರಾಗಿ ಸುಖದಿಂದ ಇರುತಿದ್ದ ಭಾರತೀಯರನ್ನು ನಿರುದ್ಯೋಗಿಗಳಾಗಿ ಮಾಡಿದವು. ತಮ್ಮ ಕುಲಕಸಬುಗಳನ್ನು ನಿರಾತಂಕವಾಗಿ ನಡೆಸಿಕೊಂಡು ಬರುತಿದ್ದ ಭಾರತೀಯರು ಇಂಗ್ಲಿಷರ ಆಮದು ವ್ಯಾಪಾರದೊಡನೆ ಸ್ಪರ್ಧೆಯನ್ನು ಹೂಡಬೇಕಾಯಿತು; ಯಂತ್ರಕೌಶಲ್ಯದ ಮುಂದೆ ತಲೆ ತಗ್ಗಿಸಬೇಕಾಯಿತು. ಸರಕಾರದ ಶಾಸನಗಳಿಗೆ ಒಲ್ಲದ ಮನಸ್ಸಿನಿಂದ ಮನ್ನಣೆಯನ್ನು ಕೊಟ್ಟು ಇದ್ದ ಉದ್ಯೋಗಕ್ಕೆ ತಿಲಾಂಜಲಿಯನ್ನಿತ್ತು "ಕೆಟ್ಟು ಪಟ್ಟಣ ಸೇರು" ಎಂಬ ಗಾದೆಯಂತೆ ಹಳ್ಳಿಯನ್ನು ತೊರೆಯಬೇಕಾಯಿತು.

ಮೆಕಾಲೆಯ ದೇಣಿಗೆ

ಆಡಳಿತಾಧಿಕಾರಿಗಳ ಈ ತಂತ್ರಕ್ಕೆ ಶಾಶ್ವತ ಅಸ್ತಿಭಾರವನ್ನು ಹಾಕಿಕೊಟ್ಟವನೇ ಲಾರ್ಡ ಮೆಕಾಲೆ— ಈ ಮಹಾನುಭಾವನು ಉದ್ಯೋಗ ಹೀನರಿಗೆ ಸರಕಾರದ ನೌಕರ ಶಾಹಿಯಲ್ಲಿ ಸ್ಥಾನ ದೊರಕಿಸಿಕೊಡುವ ಹಂಚಿಕೆಯನ್ನು ಹೂಡಿದನು. ಶಿಕ್ಷಣ ಹೊಂದಿ, ಅಧಿಕಾರ ಚಲಾಯಿಸಬಲ್ಲವರಿಗೆ ಮೇಜು-ಕುರ್ಚಿಗಳ ಭದ್ರಪೀಠವನ್ನು ಕೊಡುವ ಪರಿಪಾಟವನ್ನು ಈತ ತೊಡಗಿಸಿದನು. ಶ್ರಮ ಮೂಲವಾದ ಭಾರತೀಯರ ಬದುಕಿನ ಕಲ್ಪನೆಯ ಮೇಲೆ ಈ ಹೊಸ ಸುಧಾರಣೆಯು ತೀವ್ರ ಆಘಾತವನ್ನುಂಟುಮಾಡಿತು. "ಕೈ ಕೆಸರಾದರೆ ಬಾಯಿ ಮೊಸರು" ಎಂಬ ನಾಣ್ನುಡಿಯು ನಮ್ಮ ವಿವೇಕವನ್ನು ಎಚ್ಚರಿಸಲಿಲ್ಲ—ಕೊಳಕು ಕೈಗಳೆಂದರೆ ತಿರಸ್ಕಾರ ಬುದ್ಧಿಯನ್ನು ತೋರಬೇಕೆನ್ನುವ ಶಿಕ್ಷಣವನ್ನೇ ಕಳೆದ ಎರಡು ಶತಮಾನಗಳಿಂದ ಭಾರತದ ವಿದ್ಯಾಕೇಂದ್ರಗಳಲ್ಲಿ ಕೊಡಲಾಗುತ್ತದೆ. ದುರ್ದೈವದಿಂದ ಸ್ವಾತಂತ್ರ್ಯೋತ್ತರದಲ್ಲಿಯೂ ಈ ಪದ್ಧತಿ ಮುಂದುವರಿಯುತ್ತದೆ. ಇದನ್ನು ಬದಲಿಸಿ, ಭಾರತೀಯರಿಗೆ ನಿಜವಾದ ಶಿಕ್ಷಣವನ್ನು ಕೊಡಬೇಕೆಂಬ ಅಭಿಲಾಷೆಯಿಂದ ಗಾಂಧೀಜಿಯವರೂ, ಈಚೆಗೆ ರಾಜಾಜಿಯವರೂ, ಕೈಗೊಂಡ ಪ್ರಯತ್ನಗಳು "ಪ್ರಜಾಪ್ರಭುತ್ವ"ದಲ್ಲಿ "ಅಗತ್ಯ, ಅನಿವಾರ್ಯ"ವೆನಿಸುವ "ಜನಪ್ರಿಯತೆ"ಯನ್ನೂ "ಬೆಂಬಲ"ವನ್ನೂ ಗಳಿಸಲಿಲ್ಲ. ಆದರೂ ಈ ಪ್ರಜಾಪ್ರಭುತ್ವವು ಎರಡು ಶತಮಾನಗಳಿಂದ ನಿರುದ್ಯೋಗಿಗಳಲ್ಲಿ ಕುದಿಯುತಿದ್ದ ಭಾವನೆಗಳನ್ನು ಪ್ರಕಟಿಸುವುದಕ್ಕೆ ನಿರ್ಗಮ ಮಾರ್ಗವನ್ನು ಕಲ್ಪಿಸಿಕೊಟ್ಟಿತು. ಬ್ರಿಟಿಷರ ಕಾಲದಲ್ಲಿ ಜನರಿಗೆ ಸ್ವರವೆತ್ತಲು ಅವಕಾಶವಿರಲಿಲ್ಲ. ಹಳ್ಳಿಯಿಂದ ಪೇಟೆಗೆ ಬಂದು ಕೆಲಸಕ್ಕಾಗಿ ಸುತ್ತುತಿದ್ದವರೂ ಶಾಲಾ ಕಾಲೇಜುಗಳಿಂದ "ಉಚ್ಚ ಶಿಕ್ಷಣ" ಹೊಂದಿ, ಪದವಿಗಳನ್ನು ಗಳಿಸಿ ಹೊರಬೀಳುತಿದ್ದವರೂ ಮನಸ್ಸಿನಲ್ಲಿ ಚಡಪಡಿಸುತಿದ್ದರು; ಈಗ ಸ್ವಾತಂತ್ರ್ಯ ದೊರಕಿರುವುದರಿಂದ ಇವರೆಲ್ಲರೂ ಮಂತ್ರಿಗಳ ಮನೆಯ ಮುಂದೆಯೂ ಶಾಸನ ಸಭಾ ಭವನಗಳ ಮುಂದೆಯೂ ಪ್ರದರ್ಶನಗಳನ್ನು ನಡೆಸುವರು; ಕೆಲಸ ಕೊಡಿ ಎಂದು, ಬೊಬ್ಬೆ ಹಾಕುವರು. ಭಾರತೀಯ ಆದರ್ಶವನ್ನು ಬಿಟ್ಟುಕೊಟ್ಟು, ವಿದೇಶದಿಂದ ಆಮದು ಮಾಡಿಕೊಂಡ ನಿರುದ್ಯೋಗದ ಸಮಸ್ಯೆಯು ಈಗ ನಮ್ಮ ಸ್ವತಂತ್ರ ಸರಕಾರವನ್ನು ಕೆಣಕಿ, ಬೆದರಿಸುತ್ತಿದೆ; ರಾಷ್ಟ್ರದ ಭವಿಷ್ಯದ ಬಗ್ಗೆ ಚಿಂತೆ ಹುಟ್ಟಿಸುತ್ತಿದೆ.

ಶ್ರಮವೆಂದರೆ ಜುಗುಪ್ಸೆ

"ನಮಗೆ ಕೆಲಸ ಕೊಡಿ" ಎಂದು ಹೇಳುವವರು ತಪ್ಪು ಮಾಡುತ್ತಾರೆಂದು ಇದರ ಅರ್ಥವಲ್ಲ—ಈ ಬಡವಾಯಿಗಳನ್ನು ಲಾಠೀ ಚಾರ್ಜಿನಿಂದ ಸುಮ್ಮನಾಗಿಸುವುದೂ ಸರಿಯಾದ ಮಾರ್ಗವಲ್ಲ. ಸಮಸ್ಯೆಯ ಪರಿಹಾರಕ್ಕೆ ನಾವು ಪ್ರಭಾವಶಾಲಿಯಾದ, ಶಾಶ್ವತ ಪರಿಣಾಮವನ್ನುಂಟುಮಾಡುವ ಕ್ರಮವನ್ನು ಶೀಘ್ರಾತಿಶೀಘ್ರವಾಗಿ ತೆಗೆದುಕೊಳ್ಳಬೇಕು. ಭಾರತದಲ್ಲಿ ಕೃಷಿಕರು ಅರೆ ಉದ್ಯೋಗದಿಂದ ಇರುವರೆಂದೂ ಭೂಮಿ ಇಲ್ಲದ ಕೂಲಿಕಾರರು ಪೇಟೆಯಲ್ಲಿ ಕೆಲಸವನ್ನು ಹುಡುಕಿಕೊಂಡು ತಿರುಗುವರೆಂದೂ ಕೇಳುತ್ತೇವೆ. ಗುಡಿಕೈಗಾರಿಕೆಗಳ ಪುನರುಜ್ಜೀವನದಿಂದ ರೈತರು ವಿರಾಮ ಕಾಲದ ಸದುಪಯೋಗವನ್ನು ಮಾಡಿಕೊಂಡು ಸ್ವಾವಲಂಬಿಗಳಾಗಬಲ್ಲರು ಎಂದು ಗಾಂಧೀಜಿ ಅಭಿಪ್ರಾಯಪಡುತಿದ್ದರು. ಕೆಲಸವಿಲ್ಲದ ಕೂಲಿಕಾರರನ್ನು ಹೇರಳವಾಗಿ ಭೂಮಿಯಲ್ಲಿ ನೆಲೆಗೊಳಿಸಬೇಕಾಗುವುದು. ಇದಕ್ಕೆ ಅಗತ್ಯವೆನಿಸಿದ ಅಂಕೆ ಸಂಖ್ಯೆಗಳು ನಮ್ಮ ದೇಶದಲ್ಲಿ ಈಗ ಲಭ್ಯವಿರುವುದಿಲ್ಲ. ಇನ್ನು ಸುಶಿಕ್ಷಿತರ ಕುರಿತು ಹೇಳಬೇಕಾದರೆ, ಉದ್ಯೋಗವನ್ನು ಬಯಸಿ ಬರುವವರಲ್ಲಿ ನೂರಕ್ಕೆ ಮೂವತ್ತು ಮಂದಿ ಕಾರಕೂನಿಕೆಗೆಯೇ ಮುಗಿದು ಬೀಳುತ್ತಾರೆ! ಇದು ನಮ್ಮ ಇಂದಿನ ಶಿಕ್ಷಣದ ಫಲ. ತಾಂತ್ರಿಕರು ಬೇಕೆಂದು ಪ್ರಕಟಣೆ ಹೊರಡಿಸಿದಾಗ ಅಗತ್ಯವಿದ್ದವರ ಹತ್ತರಷ್ಟು ಅರ್ಜಿಗಳು ಒಂದರೆ, ಕಾರಕೂನರು ಬೇಕೆಂದಾಗ ಅಗತ್ಯವಿದ್ದವರ ಮೂವತ್ತು ಪಾಲಿನಷ್ಟು ಅರ್ಜಿಗಳು ಬರುತ್ತವೆ. ನಮ್ಮ ದೇಶದ ಹೈಸ್ಕೂಲುಗಳಿಂದ ಪ್ರತಿವರ್ಷ ಹೊರ ಬೀಳುವ ೧೦ ಲಕ್ಷ ಮಂದಿ ವಿದ್ಯಾರ್ಥಿಗಳು ಮತ್ತು ಕಾಲೇಜುಗಳಿಂದ ಹೊರ ಬೀಳುವ ೫ ಲಕ್ಷ

[೧೯ನೇ ಪುಟ ನೋಡಿರಿ]

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S No. 33/1954.

ಕೆ. ಸುಬ್ಬಣ್ಣ ಶೆಟ್ಟಿ— ವಾದಿ.

ಮುಸ್ಲಿಂ ಸಾಹೇಬ ಕೂಡಾ— ಪ್ರತಿವಾದಿರು.

1ನೇ ಪ್ರತಿವಾದಿ ಮುಸ್ಲಿಂ ಸಾಹೇಬ. 2ನೇ ಪ್ರತಿವಾದಿ ರಹಿಮಾನ್ ಸಾಹೇಬ. ಶೇಕ್ ಕಾಸಿಂ ಸಾಹೇಬರ ಮಕ್ಕಳು- ಉಪ್ಪಳ ಗ್ರಾಮದ ಕುರ್ಚಿಪಳ್ಳದಲ್ಲಿರುವವರು. ಈ ಮೂಲಕ ತಿಳಿಸುವುದೇನಂದ್ರೆ—

ಪ್ರತಿವಾದಿರು ವಾದಿಗೆ ಬರೆಕೊಟ್ಟ ಪ್ರೋ. ನೋಟಿನ ಅಸಲು ಬಡ್ಡಿ ಐವೇಜು ರೂಪಾಯಿ 356-12-0ನ್ನು ಬರಮಾಡಿಕೊಳ್ಳುವರೆ ದಾಕ್ಲು ಮಾಡಿದ ಮೇಲ್ಕಂಡ ವ್ಯಾಜ್ಯವು ತಾ. 3-7-54ಕ್ಕೆ ಇಟ್ಟಿರುತ್ತದೆ. ಆ ದಿವಸ ನೀವು ಹಾಜರಾಗಿ ಉತ್ತರಿಸದಿದ್ದರೆ ನಿಮ್ಮನ್ನು ಎಕ್ಸ್‌ಪಾರ್ಟಿ ಮಾಡಿ ತೀರ್ಮಾನಿಸಲಾದೀತು ಎಂಬ ಸಂಗ್ತಿ ಈ ಮೂಲ್ಕ ತಿಳಿಸೋಣಾಗಿದೆ.

K. M. Bhandary,
M.A., LL.B,
Advocate for Plaintiff.

Kasaragod, 14—6—1954.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ).

ಅಧಿಕೃತ ಭಂಡವಾಳ	...	ರೂ. 25,00,000
ಚಂದಾ ಆರ್ಸಿಸಿ, ತೆತ್ತು ಬಂದ ಭಂಡವಾಳ	...	ರೂ. 20,00,000
ಕ್ಷೇಮ ನಿಧಿ	...	ರೂ. 10,50,000
ಠೇವಣಾತಿಗಳು	...	ರೂ. 2,98,19,000
ಒಟ್ಟು ಚಲಾವಣೆ ಭಂಡವಾಳ	...	ಸುಮಾರು ರೂಪಾಯಿ 4 ಕೋಟಿ
ಒಟ್ಟು ಶಾಖೆಗಳು	...	38

(31—12—1953ರಲ್ಲಿ)

THE CANARA BANKING CORPORATION LIMITED

Estd:- 1906] [H. O. UDIPI (S. India).

(ಉತ್ತಮ ಸಾರಸ್ವತ ಬ್ರಾಹ್ಮಣರ ಅಡಿಗೆ, ರುಚಿ ರುಚಿಯಾದ ರೈಸ್‌ಪ್ಲೇಟ್)

ರುಚಿಕರವಾದ ಊಟ— ಹವೇಶೀರ್ (Airy) ವಸತಿ,

ಎರಡು ಊಟ ಕೋಟ್ (Cot) ಇತ್ಯಾದಿ ಸೌಕರ್ಯ.

ತಿಂಗಳೊಂದರ ರೂ. 52/- ಮಾತ್ರ.

ವಿಶೇಷ ಮಾಹಿತಿಗೆ ಪ್ರತ್ಯಕ್ಷ ವಿಚಾರಿಸಿರಿ.

ಸದ್ಗುರು ಬೋರ್ಡಿಂಗ್ ಎಂಡ್ ಲೋಜಿಂಗ್

ಹಿಂದ್‌ಮಾತಾ ಸಿನೇಮದ ಸಮೀಪ, ದಾದರ್, ಮುಂಬಯಿ ೧೪.

ವ್ಯವಸ್ಥಾಪಕ: ವಿ. ಯಸ್. ಪ್ರಭು.

ಶಿರ್ವ ಪಂಚಾಯತ್ ಕೋರ್ಟಿನಲ್ಲಿ

ಸಿವಿಲ್ ವ್ಯಾಜ್ಯ ನಂಬ್ರ 16/54.

ತಿಮ್ಮಪ್ಪ ಆಚಾರಿ— ವಾದಿ.

ಮೋನಪ್ಪ ಯಾನೆ ಚಂದ್ರಯ್ಯ ಆಚಾರಿ— ಪ್ರತಿವಾದಿ.

ಉಡುಪಿ ತಾಲೂಕು ಶಿರ್ವ ಗ್ರಾಮದ ಭೂತಬೆಟ್ಟುವಿನಲ್ಲಿರುವ ರುಕ್ಮಯ್ಯ ಆಚಾರಿಯ ಮಗ ಮೋನಪ್ಪ ಯಾನೆ ಚಂದ್ರಯ್ಯ ಆಚಾರಿ— ಇವರಿಗೆ ಈ ಮೂಲಕ ತಿಳಿಸುವುದೇನಂದರೆ:- ವಾದಿಗೆ ನೀವು ಬರೆಕೊಟ್ಟ ಡಿಮಾಂಡ್ ಪ್ರಾಮಿಸರಿ ನೋಟಿನ ಬಾಬ್ತು ಅಸಲು ಬಡ್ಡಿ ಸೇರಿ ರೂ. 100—0—0ಕ್ಕೆ, ನಿಮ್ಮ ಮೇಲೆ ಈ ಕೋರ್ಟಿನಲ್ಲಿ ವಾದಿಯು ದಾವೆ ತಂದಿದ್ದಾನೆ. ಆ ಬಗ್ಗೆ ನಿಮ್ಮದೇನು ಉತ್ತರವಿದೆ ಇದ್ದುದಾದರೆ, ತಾರೀಕು 28—6—54ನೇ ಸೋಮವಾರ ಸಾಯಂಕಾಲ ಗಂಟೆ 3ಕ್ಕೆ, ಈ ಕೋರ್ಟು ಮುಂದೆ ಹಾಜರಾಗಿ ಉತ್ತರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮ ಮೇಲೆ ಎಕ್ಸ್ ಪಾರ್ಟಿ ಡಿಕ್ರಿ ಕೊಡಲಾಗುವುದು.

(Sd.) ಎ. A. Hegde,
President,
Panchayat Board, Shirva, S. K.

Panchayat Board Office, Shirva,
Dated 18—6—54.

ರಾಜ್ಯಗಳ ಪುನರ್ಘಟನೆಯ ಪ್ರಶ್ನೆ

ಕಾಂಗ್ರೆಸು ಸದಸ್ಯರಿಗೆ ಅಭಿಪ್ರಾಯ ಸ್ವಾತಂತ್ರ್ಯ

ರಾಜ್ಯಗಳ ಪುನರ್ಘಟನೆಯ ಪ್ರಶ್ನೆಯನ್ನು ವಿಚಾರಿಸುತ್ತಿರುವ ಫಜಲ್ ಅಲಿ ಆಯೋಗದ ಮುಂದೆ ಕಾಂಗ್ರೆಸ್ಸಿಗರು ತಂತಮ್ಮ ಅಭಿಪ್ರಾಯಗಳನ್ನು ಧಾರಾಳವಾಗಿ ಮಂಡಿಸಬಲ್ಲರು; ಇಂತಹ ಸ್ವಾತಂತ್ರ್ಯವನ್ನು ನಿಯಂತ್ರಿಸಲು ಕಾಂಗ್ರೆಸು ಕಾರ್ಯಕಾರಿ ಸಮಿತಿಯು ಉದ್ದೇಶಿಸಿಲ್ಲ. ಪ್ರದೇಶ ಕಾಂಗ್ರೆಸು ಸಮಿತಿಯಲ್ಲಿ ಅಲ್ಪಸಂಖ್ಯಾತರು ಭಿನ್ನಾಭಿಪ್ರಾಯವನ್ನು ಹೊಂದಿದ್ದರೆ ಅದನ್ನು ಆಯೋಗಕ್ಕೆ ನಿವೇದಿಸಲಿಕ್ಕೂ ಪತ್ರಿಕೆಗಳಲ್ಲಿ ಈ ಕುರಿತು ಪ್ರಚಾರ ಮಾಡುವುದಕ್ಕೂ ಕಾಂಗ್ರೆಸು ಕೆಲಸಗಾರರ ಖಾಸಗಿ ಸಭೆಗಳಲ್ಲಿ ಶಾಂತ ರೀತಿಯಿಂದ ವಿಷಯವನ್ನು ಚರ್ಚಿಸುವುದಕ್ಕೂ ಅಡ್ಡಿಯಿಲ್ಲ. ಆದರೆ ಜನತೆಯ ಭಾವನೆಗಳನ್ನು ಉದ್ರೇಕಿಸುವ ಮತ್ತು ಪರಸ್ಪರ ದ್ವೇಷವನ್ನು ಪ್ರಚೋದಿಸುವ ಯಾವುದೇ ಸಭೆ, ಮೆರವಣಿಗೆ ಮತ್ತಿತರ ಕಾರ್ಯಗಳಲ್ಲಿ ಕಾಂಗ್ರೆಸ್ಸಿಗರು ಪ್ರವೃತ್ತರಾಗಕೂಡದು—ಎಂದು ಕಾಂಗ್ರೆಸಿನ ಪ್ರಧಾನ ಕಾರ್ಯದರ್ಶಿ ಶ್ರೀ. ಅಗ್ರವಾಲರು ಮುಂಬಯಿಯಲ್ಲಿ ಒಂದು ಸ್ಪಷ್ಟೀಕರಣವನ್ನು ಕೊಟ್ಟಿರುವರು.

ಉಪಚುನಾವಣೆಯಲ್ಲಿ ನಾಡರರು

ತಮಿಳು ನಾಡು ಪ್ರದೇಶ ಕಾಂಗ್ರೆಸಿನ ಕಾರ್ಯಕಾರಿ ಸಮಿತಿಯ ಸಭೆಯು ಕಳೆದ ವಾರ ಸೇರಿದಾಗ ಮದ್ರಾಸಿನ ಮುಖ್ಯ ಮಂತ್ರಿಯಾಗಿರುವ ಶ್ರೀ ಕಾಮರಾಜ ನಾಡರರು ಉತ್ತರ ಆರ್ಕಾಟಿನ ದ್ವಿಸದಸ್ಯ ಕ್ಷೇತ್ರವಾದ ಗುಡಿಯಾತ್ತಮಿನ ಉಪಚುನಾವಣೆಯಲ್ಲಿ ಹುರಿಯಾಳಾಗಿ ನಿಂತು ಸ್ಪರ್ಧಿಸುವ ವಿಷಯವು ಚರ್ಚಿಸಲ್ಪಟ್ಟಿತು. ನಾಡರರು ಈಚೆಗೆ ಈ ಪ್ರದೇಶದಲ್ಲಿ ಪ್ರವಾಸವನ್ನು ಕೈಗೊಂಡಿದ್ದರು. ತಾವು ಆ ಚುನಾವಣೆಗೆ ನಿಲ್ಲಬೇಕೆಂದು ಜನರು ಹಾರೈಸುತ್ತಿರುವುದಾಗಿ ಅವರು ಸಭೆಗೆ ತಿಳಿಸಿದರು. ನಾಡರರು ಇದೇ ಎಂಟರಂದು ನಾಮಪತ್ರವನ್ನು ಸಲ್ಲಿಸುವರು. ಗುಡಿಯಾತ್ತಮಿನ ಉಪಚುನಾವಣೆಯು ಆಗೋಸ್ಟು ತಿಂಗಳ ಪ್ರಾರಂಭದಲ್ಲಿ ಜರಗುವುದು. ಕಮ್ಯೂನಿಸ್ಟ ಪಕ್ಷವು ನಾಡರರ ವಿರುದ್ಧ ಚುನಾವಣೆಗೆ ಇಳಿಯುವುದು, ತನ್ನ ಪಕ್ಷದ ಹುರಿಯಾಳನ್ನು ಪ್ರತಿಸ್ಪರ್ಧಿಯಾಗಿ ನಿಲ್ಲಿಸುವುದಾಗಿ ಹೇಳಿದ್ದು, ಈ ಹುರಿಯಾಳನ್ನು ಇನ್ನೂ ಆರಿಸಬೇಕಾಗಿದೆ.

ಜಪಾನಿ ಪದ್ಧತಿಯ ಕೃಷಿ

ಭತ್ತದ ಕೃಷಿಯಲ್ಲಿ ಜಪಾನೀ ಪದ್ಧತಿಯನ್ನು ಅನುಸರಿಸುವ ಯೋಜನೆಯನ್ನು ಈ ವರ್ಷ ಇನ್ನಷ್ಟು ಪ್ರಚಾರಗೊಳಿಸಲಾಗುವುದು. ಕಳೆದ ವರ್ಷದ ಪ್ರಯೋಗಗಳು ತುಂಬ ಸಮಾಧಾನಕರವಾದ ಪರಿಣಾಮವನ್ನು ಉಂಟುಮಾಡಿದ್ದು ಕೃಷಿ ಉತ್ಪನ್ನವನ್ನು ಅಧಿಕಗೊಳಿಸಿದೆ. ಭಾರತ ಸರಕಾರವು ದೇಶವನ್ನು ಆರು ವಲಯಗಳಾಗಿ ವಿಭಾಗಿಸಿ, ಪ್ರತಿಯೊಂದೂ ವಲಯಕ್ಕೆ ಅನುಭವಸ್ಥರಿಂದ, ಕೃಷಿ ಇಲಾಖೆಯಿಂದ ಆರಿಸಲಾದ, ಪ್ರಚಾರಾಧಿಕಾರಿಯೊಬ್ಬನನ್ನು ನೇಮಿಸಿರುವುದು ಇವರು ರಾಜ್ಯ ಸರಕಾರಗಳಿಗೆ ಪ್ರತಿಯೊಂದೂ ರೀತಿಯಲ್ಲಿ ಮಾರ್ಗದರ್ಶನವನ್ನು ಮಾಡಿ ಭತ್ತದ ಕೃಷಿಯಲ್ಲಿ ಜಪಾನೀ ಪದ್ಧತಿಯನ್ನು ಅನುಸರಿಸುವ ಯೋಜನೆಯ ಕಡೆಗೆ ರೈತರ ಗಮನವನ್ನು ಆಕರ್ಷಿಸುವರು. ಮದ್ರಾಸು ರಾಜ್ಯವು ಮೈಸೂರು, ಕೊಡಗು, ತಿರುವಾಂಕೂರು ಕೊಚ್ಚಿಗಳನ್ನೊಳಗೊಂಡು ಒಂದು ವಲಯವಾಗುವುದು.

ಮಾತೆಯರ ಚಿಂತೆ

ದೆಹಲಿಯ ೧೩,೦೦೦ ಮಾತೆಯರೂ ಗೃಹಿಣಿಯರೂ ಪ್ರಧಾನ ಮಂತ್ರಿ ನೆಹರೂರವರಿಗೆ ಒಂದು ಮನವಿಯನ್ನು ಅರ್ಪಿಸಿ, ಸಿನೆಮಾಗಳ ಹಾವಳಿಯಿಂದ ಮಕ್ಕಳನ್ನು ರಕ್ಷಿಸಲು ತಕ್ಕ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿ ಪ್ರಾರ್ಥಿಸಿರುವರು. ಚಲಚ್ಚಿತ್ರಗಳು ಮಕ್ಕಳ ನೈತಿಕ ಅಧಃಪತನವನ್ನು ಮಾಡುತ್ತವೆ; ಅಕಾಲ ಲೈಂಗಿಕ ಪ್ರವೃತ್ತಿಗೆ ಉತ್ತೇಜನೆ ಕೊಡುತ್ತವೆ. ಇದರಿಂದ ಸಾಮಾಜಿಕ ಸ್ವಾಸ್ಥ್ಯವು ಕೆಡುತ್ತದೆ. ಇಲ್ಲಿ ಪ್ರದರ್ಶಿಸಲಾಗುವ ವಿದೇಶೀ ಚಿತ್ರಗಳು, ಮುಖ್ಯವಾಗಿ ಅಮೇರಿಕದವು, ಕೊಲೆ, ದರೋಡೆ, ಕಳವು ಮುಂತಾದ ಸಾಮಾಜಿಕ ಶಾಂತಿಗೆ ಅಪಾಯಕರವಾದ ಕೃತ್ಯಗಳನ್ನು ಉಕ್ಕೇರಿಸುತ್ತವೆ. ಇವುಗಳನ್ನು ತಡೆಗಟ್ಟಿ ಸಾಮಾಜಿಕ ಹಿತವನ್ನು ಸಾಧಿಸುವುದು ಸರಕಾರದ ಕರ್ತವ್ಯ. ಈ ಮಾರ್ಗದಲ್ಲಿ ಘಟನಾತ್ಮಕ ಅಡಚಣೆಗಳೇನಾದರೂ ಕಂಡುಬಂದರೆ, ಅವುಗಳನ್ನು ನಿವಾರಿಸಿಕೊಂಡು, ಯೋಗ್ಯ ಕ್ರಮ ತೆಗೆದುಕೊಳ್ಳಬೇಕು. ಚಲಚ್ಚಿತ್ರಗಳನ್ನು ನಿರ್ಮಲ ಮನೋರಂಜನೆಗಾಗಿ ಹಾಗು ಜನ ಶಿಕ್ಷಣಕ್ಕಾಗಿ ಬಳಸಬಹುದು; ಈ ಉದ್ದೇಶಗಳಿಗೆ ವಿರುದ್ಧವಿದ್ದಲ್ಲಿ ಚಲಚ್ಚಿತ್ರಗಳ ಅಗತ್ಯವೇ ಇಲ್ಲ—ಎಂದು ಈ ಮಹಿಳೆಯರ ಅಭಿಪ್ರಾಯ.

ಕನ್ನಡಿಗರಿಗೆ ಎಚ್ಚರಿಕೆ

ತಿರುವಾಂಕೂರು-ಕೊಚ್ಚಿ, ಮಲಬಾರು, ಕೊಡಗು, ನೀಲಗಿರಿ, ದಕ್ಷಿಣ ಕನ್ನಡ ಮತ್ತಿತರ ಕೆಲವು ಪ್ರದೇಶಗಳನ್ನೊಳಗೊಂಡ ಕೇರಳ ರಾಜ್ಯವನ್ನು ನಿರ್ಮಿಸಬೇಕೆಂದು ಹೇಳುತಿದ್ದ ಐಕ್ಯ ಕೇರಳ ಸಮಿತಿಯ ಅಭಿಪ್ರಾಯವನ್ನು ತಿರು-ಕೊಚ್ಚಿಯ ಪ್ರದೇಶ ಕಾಂಗ್ರೆಸು ಅನುಮೋದಿಸಿದೆ. ಈ ಕುರಿತು ಮನವಿಯೊಂದನ್ನು ಅರ್ಪಿಸಲು ಅದು ನಿರ್ಣಯಿಸಿದೆ. ಪಶ್ಚಿಮ ಕರಾವಳಿ ರಾಜ್ಯದ ಈ ಕಲ್ಪನೆಯನ್ನು ಕರ್ನಾಟಕ ಏಕೀಕರಣದ ದೃಷ್ಟಿಯಿಂದ ಕನ್ನಡಿಗರು ವಿವೇಚಿಸಬೇಕಾದ ಆವಶ್ಯಕತೆಯನ್ನು ಇದು ಮತ್ತಷ್ಟು ಸ್ಪಷ್ಟಗೊಳಿಸುತ್ತದೆ. ಏಕೀಕರಣದ ವಿಷಯದಲ್ಲಿ ಮೈಸೂರು ಸರಕಾರದ ನಿಲುಮೆಯು ವಿಳಂಬಕರ ಧೋರಣೆಯನ್ನು ಬಿಂಬಿಸುತ್ತದೆ. ಕರ್ನಾಟಕ ಪ್ರದೇಶ ಕಾಂಗ್ರೆಸಿನ ಅಧ್ಯಕ್ಷರು ಮೈಸೂರು ಸರಕಾರದ ಧೋರಣೆಯನ್ನೂ ಶೇಷಾದ್ರಿ ಸಮಿತಿಯ ನೇಮಕವನ್ನೂ ಕಟುವಾಗಿ ಟೀಕಿಸಿದ್ದಾರೆ.



ಫ್ರೆಂಚ ಭಾರತದಲ್ಲಿ ಸೈನ್ಯ ಸಂಗ್ರಹ

ಸೈಗಾನಿಗೆ ಹಾರುತಿದ್ದ ಫ್ರೆಂಚ ವಿಮಾನಗಳಲ್ಲಿ ಶಸ್ತ್ರಾಸ್ತ್ರ

ಭಾರತದಲ್ಲಿರುವ ಫ್ರೆಂಚ ಸ್ವಾಸ್ಥ್ಯಗಳ ಹಸ್ತಾಂತರವನ್ನು ಕುರಿತು ಪೇರಿಸಿನಲ್ಲಿ ನಡೆದ ಮಾತುಕತೆಗಳು ಫಲಪ್ರದವಾಗದಿದ್ದರೂ ಪುನಃ ಈ ವಿಷಯದಲ್ಲಿ ಸಂಧಾನವನ್ನು ತೊಡಗುವ ಆಶೆಯನ್ನು ಫಕೀರಿಸ್ವಾಮಿ ಪಿಳ್ಳೆಯಂಥವರು ವ್ಯಕ್ತಗೊಳಿಸಿದ್ದರು. ಫ್ರೆಂಚ ಮಂತ್ರಿ ಮಂಡಳದಲ್ಲಿ ನಡೆದ ಬದಲಾವಣೆಯು ಈ ವಿಷಯದ ಮೇಲೆ ಪ್ರತಿಕೂಲ ಪರಿಣಾಮವನ್ನು ಉಂಟುಮಾಡಲಾರದೆಂದೂ ಅವರು ಅಭಿಪ್ರಾಯಪಟ್ಟಿದ್ದರು. ಹೊಣೆಗಾರ ವ್ಯಕ್ತಿಗಳು ಈ ರೀತಿ ಆಶಾದಾಯಕ ಮಾತುಗಳನ್ನು ಹೇಳುತಿದ್ದಂತೆಯೇ, ಪಾಂಡಿಚೇರಿಯಲ್ಲಿ ಸೈನ್ಯಸಂಗ್ರಹವಾಗುತ್ತಿರುವ ವಾರ್ತೆಯು ಬಂದಿದೆ. ಕಳೆದ ಬುಧವಾರ ದಿನ "ವೀಟನಾಂ" ಎಂಬ ಹಡಗದ ಮೂಲಕ ಇಂಡೋ ಚೀನದಿಂದ ಹತ್ತು ಮಂದಿ ಅಧಿಕಾರಿಗಳನ್ನೊಳಗೊಂಡು ೫೬ ಮಂದಿ ಬಿಳಿ ಮುಖದ ಸೈನಿಕರು ಪಾಂಡಿಚೇರಿಯನ್ನು ಪ್ರವೇಶಿಸಿರುವರೆಂದೂ ಹಡಗದಲ್ಲಿ ಬಹಳವಾಗಿ ಶಸ್ತ್ರಾಸ್ತ್ರಗಳು ಬಂದಿವೆಯೆಂದೂ ವರದಿಗಳು ತಿಳಿಸುತ್ತವೆ. ಅಧಿಕಾರಿಗಳು ಈ ಸಂಗತಿಯನ್ನು ಗುಪ್ತವಾಗಿರಿಸಿದಾಗ್ಯೂ ಸುದ್ದಿ ಸಂಸ್ಥೆಗಳು ಇದನ್ನು ಜಗತ್ತಿಗೆ ಪ್ರಸಾರ ಮಾಡಿದವು. ಪಾಂಡಿಚೇರಿ ಮತ್ತಿತರ ಫ್ರೆಂಚ ಸ್ವಾಸ್ಥ್ಯಗಳಲ್ಲಿ ಕೆಲವು ವಾರಗಳಿಂದ ಈಚೆಗೆ ಪೋಲೀಸು ಪಡೆಯನ್ನು ಬಲಗೊಳಿಸುತಿದ್ದರು. ಪೇರಿಸಿನಲ್ಲಿ ಸಂಧಾನದ ಮಾತುಕತೆಗಳು ನಡೆಯುತಿದ್ದಂತೆಯೇ, ಫ್ರೆಂಚ ಸ್ವಾಸ್ಥ್ಯಗಳಲ್ಲಿ ಅಧಿಕಾರಿಗಳು ತಮ್ಮ ಬಲವನ್ನು ಹೆಚ್ಚಿಸಿಕೊಳ್ಳುತಿದ್ದರು. ಸುಮಾರು ೧,೬೦,೦೦೦ ಜನಸಂಖ್ಯೆಯುಳ್ಳ ಫ್ರೆಂಚ ಭಾರತದಲ್ಲಿ ಈಗಾಗಲೇ ೧೨೦೦ ಮಂದಿ ಪೋಲೀಸರೂ ೨೮ ಮಂದಿ ಐರೋಪ್ಯ ಅಧಿಕಾರಿಗಳೂ ಇದ್ದಾರೆ— ಭಾರತದ ದೃಷ್ಟಿಯಲ್ಲಿ ಇಷ್ಟು ಹೆಚ್ಚಿನ ಪೋಲೀಸು ಪಡೆಯು ಅನಗತ್ಯ. ಅದರ ಮೇಲೆ ಈಗ ಪೋಲೀಸು ಪಡೆಯನ್ನು ವಿಸ್ತರಿಸುವ ಮತ್ತು ಶಸ್ತ್ರಾಸ್ತ್ರಗಳಿಂದ ಸುಸಜ್ಜಿತಗೊಳಿಸುವ ಹಂಚಿಕೆ ನಡೆಸುವುದೆಂದರೆ, ವಿಶೇಷವೆಂದೇ ಭಾವಿಸಬೇಕಾಗುತ್ತದೆ.

ಒಪ್ಪಂದದ ಉಲ್ಲಂಘನೆ

ಫ್ರಾನ್ಸಿನ ಅಭಿಪ್ರಾಯದಂತೆ ವೀಟನಾಂ ಹಡಗದಿಂದ ಬಂದಿಳಿದವರು ಸೈನಿಕರಲ್ಲ— ಅವರು ಪೋಲೀಸರು! ವಸಾಹತುಗಳಲ್ಲಿ ಶಾಂತಿಯನ್ನೂ ಸುವ್ಯವಸ್ಥೆಯನ್ನೂ ಕಾಪಾಡಲು ಅವರು ಬಂದಿದ್ದಾರೆ. ಆದರೆ ಭಾರತವು ಈ ವಿವರಣೆಯನ್ನು ಒಪ್ಪುವಷ್ಟು ಮೂರ್ಖತನವನ್ನು ತೋರಿಸಲಾರದು. ವಿದೇಶ ಖಾತೆಯ ಕಾರ್ಯದರ್ಶಿ ಶ್ರೀ ಆರ್. ಕೆ. ನೆಹರೂರವರು ಫ್ರೆಂಚ ಪಡೆಗಳು ಪಾಂಡಿಚೇರಿಯಲ್ಲಿ ತಂಗಿದ ವಾರ್ತೆಯನ್ನು ಕೇಳುತ್ತಲೇ ಭಾರತ ಸರಕಾರದ ಗಂಭೀರ ಮನೋಭಾವನೆಯನ್ನು ಫ್ರೆಂಚ ರಾಯಭಾರಿ ಕಚೇರಿಗೆ ತಿಳಿಸಿದರು. ಶಾಂತ ರೀತಿಯಲ್ಲಿ ಹಸ್ತಾಂತರವನ್ನು ಸಾಧಿಸುವುದಕ್ಕೆ ನೆರವಾಗುವಂತೆ, ಈ ಫ್ರೆಂಚ ಸೈನ್ಯವನ್ನು ಒಡನೆಯೇ ಹಿಂದೆಗೆದುಕೊಳ್ಳಬೇಕೆಂದು ಆದರಲ್ಲಿ ಶ್ರೀ ನೆಹರೂ ಸೂಚಿಸಿದ್ದರು. ಫ್ರೆಂಚರು ೧೮೧೫ನೇ ಇಸವಿಯಲ್ಲಿ ಆಗ ಭಾರತವನ್ನು ಆಳುತಿದ್ದ ಬ್ರಿಟಿಷ ಸರಕಾರದೊಂದಿಗೆ ಒಂದು ಒಡಂಬಡಿಕೆಯನ್ನು ಮಾಡಿಕೊಂಡಿದ್ದು ಆದರಲ್ಲಿ ವಸಾಹತು ಪ್ರದೇಶದ ಶಾಂತಿ ಮತ್ತು ಸುವ್ಯವಸ್ಥೆಗಳನ್ನು ಕಾಯ್ದುಕೊಳ್ಳಲು ಪೋಲೀಸು ಪಡೆಯನ್ನಷ್ಟೇ ಇಡಲು ಸಮ್ಮತಿಸಿದ್ದರು. ಈಗ ಸೈನ್ಯ ಸಂಗ್ರಹ ಕಾರ್ಯದಲ್ಲಿ ತೊಡಗುವುದಾಗಲೀ ಪೋಲೀಸರನ್ನೆ ಅವರ ನ್ಯಾಯವಾದ ಕರ್ತವ್ಯಗಳಿಗಲ್ಲದೆ ಇತರ ಉದ್ದೇಶಗಳಿಗೆ ಬಳಸುವುದಾಗಲೀ ಹಿಂದಿನ ಒಡಂಬಡಿಕೆಯ ಉಲ್ಲಂಘನೆಯೆಂದು ತಿಳಿಯಲ್ಪಡುತ್ತದೆ. ಇದನ್ನು ಭಾರತವು ಸಹಿಸಲಾರದು—ಇವತ್ತು ೫೦ ಮಂದಿ ಸೈನಿಕರನ್ನು ಕರೆದು ತಂದು "ಇವರು ಪೋಲೀಸರು" ಎಂದು ಹೇಳಿದಂತೆ, ಭವಿಷ್ಯದಲ್ಲಿ ಇನ್ನೊಂದು ದಿನ ಐನೂರು ಅಥವಾ ೫೦೦೦ ಸೈನಿಕರನ್ನೂ ತರಬಹುದು. ಫ್ರೆಂಚ ಸರಕಾರವು ಇಂತಹ ಠಕ್ಕು ಕೆಲಸಗಳಿಂದ ಭಾರತವನ್ನು ಮೋಸಗೊಳಿಸಲು ಸಾಧ್ಯವಿಲ್ಲ.

ಅಮೇರಿಕ ಏನಂತೆ?

ಫ್ರೆಂಚ ಸ್ವಾಸ್ಥ್ಯಗಳಲ್ಲಿ ವಿಲಯನಪರ ಚಳವಳವು ಪೇರಿಸಿನ ಮಾತುಕತೆಗಳು ತೊಡಗಿದಂದಿನಿಂದ ಮೆಲುಗತಿಯನ್ನು ಹೊಂದಿತ್ತು. ಸಂಧಾನವು ಸಫಲವಾಗುವಂತೆ ಅನುಕೂಲ ವಾತಾವರಣವನ್ನು ಕಲ್ಪಿಸುವುದೇ ಇದರ ಉದ್ದೇಶ. ಆದರೆ ಫ್ರೆಂಚ ಅಧಿಕಾರಿಗಳು ಈ ಸಮಯವನ್ನು ತಮ್ಮ ಸ್ವಾರ್ಥಕ್ಕೋಸ್ಕರ ಬಳಸಿಕೊಂಡರು —ಇಂಡೋಚೀನದಿಂದ ಸೈನಿಕರನ್ನೂ ಶಸ್ತ್ರಾಸ್ತ್ರಗಳನ್ನೂ ತರಿಸಿಕೊಳ್ಳಲು ಅವರು ಬಹಳ ಹಿಂದೆಯೇ ಹಂಚಿಕೆ ಹೂಡಿದ್ದರೆಂದು ಈಗ ಯಾರೂ ಹೇಳಬಹುದು. ಈ ಶಸ್ತ್ರಾಸ್ತ್ರಗಳನ್ನು ಅಮೇರಿಕಾವು ಪೂರೈಸಿದೆ. ಹಡಗುಗಳಿಂದ ಇಳಿಸಿದ ಕೆಲವು ಮೂಟೆಗಳಲ್ಲಿ ಇಂಡೋ ಚೀನದ ಯುದ್ಧಕ್ಕೋಸ್ಕರ ಫ್ರೆಂಚರಿಗೆ ಅಮೇರಿಕವು ಪೂರೈಸಿದ ಶಸ್ತ್ರಾಸ್ತ್ರವೆಂದು ಬರೆದದ್ದು ಕಂಡು ಬಂತು. ಹೀಗೆ ಅಮೇರಿಕವು ಇಂಡೋ ಚೀನದ ಕದನಕ್ಕೋಸ್ಕರ ಫ್ರೆಂಚರಿಗೆ ಕೊಟ್ಟ ಶಸ್ತ್ರಾಸ್ತ್ರಗಳನ್ನು ವಸಾಹತುಗಳ ರಕ್ಷಣೋದ್ದೇಶದಿಂದಲೇ ಆಗಲಿ, ಫ್ರೆಂಚ ಭಾರತಕ್ಕೆ ತರುವುದು ಅನ್ಯಾಯ. ಕೆಲವೇ ತಿಂಗಳ ಹಿಂದೆ ಅಮೇರಿಕದ ಅಧ್ಯಕ್ಷ ಐಸೆನ ಹೋವರರು ನೆಹರೂರವರಿಗೊಂದು ಪತ್ರವನ್ನು ಬರೆದು, ತಾವು ಪಾಕಿಸ್ತಾನಕ್ಕೆ ಕೊಡಮಾಡಿದ ಸೈನಿಕ ಸಹಾಯವನ್ನು ಪಾಕಿಸ್ತಾನದ ರಕ್ಷಣೆಗಲ್ಲದೆ, ಬೇರಾವುದೇ ಕೆಲಸಕ್ಕೆ ಉಪಯೋಗಿಸಿದರೆ ತಮ್ಮ "ಘಟನಾತ್ಮಕ" ಅಧಿಕಾರದಿಂದ "ಸಂಯುಕ್ತ ರಾಷ್ಟ್ರ ಸಂಘದ ಒಳಗೂ ಹೊರಗೂ" ಅಂತಹ ಕೆಲಸವನ್ನು ತಡೆಯುವುದಕ್ಕೆ ಪ್ರಯತ್ನಿಸುವುದಾಗಿ ಭರವಸೆ ಕೊಟ್ಟಿದ್ದರು ಪಾಕಿಸ್ತಾನಕ್ಕೆ ಕೊಟ್ಟ ರೀತಿಯದೇ ಸಹಾಯವು ಇಂಡೋ ಚೀನದಲ್ಲಿ ಫ್ರೆಂಚರಿಗೆ ದೊರಕುತ್ತದೆ. ಎಂದ ಮೇಲೆ ಅಮೇರಿಕದ ಶಸ್ತ್ರಾಸ್ತ್ರಗಳನ್ನು ಫ್ರೆಂಚರು ಇಂಡೋಚೀನದ ಹೊರಗೆ, ಭಾರತದಲ್ಲಿರುವ ತಮ್ಮ ವಸಾಹತುಗಳ ರಕ್ಷಣೆಗೆ, ಕಳಿಸಲಾರರು. ಈ ವಿಷಯದಲ್ಲಿ ಅಮೇರಿಕವು ಏನೆನ್ನುತ್ತದೆಂದು ತಿಳಿದು ಬಂದಿಲ್ಲ. ಭಾರತ ಸರಕಾರವು ಅಮೇರಿಕದೊಡನೆ ಸ್ಪಷ್ಟೀಕರಣವನ್ನು ಕೇಳಿರುತ್ತದೆ. ಅಮೇರಿಕದ ಉದ್ದೇಶಗಳ ಅಗ್ನಿಪರೀಕ್ಷೆಯೂ ಈ ಸಂದರ್ಭದಲ್ಲಿ ನಡೆಯುತ್ತದೆ.

ಪುನಃ ಚಳವಳ

ವಸಾಹತುಗಳಲ್ಲಿ ಚಳವಳವು ತೀವ್ರವಾಗದಂತೆ ನೋಡಿಕೊಳ್ಳುವುದು ಪೋಲೀಸು ಪಡೆಯ ಬಲಗೊಳಿಸುವ ಉದ್ದೇಶವಾದರೆ, ಈಗಾಗಲೇ "ವಿಮೋಚನೆ"ಹೊಂದಿ ಸ್ವಾತಂತ್ರ್ಯವನ್ನು ಘೋಷಿಸಿದ ತುಣುಕುಗಳನ್ನು ಏಕೀಕರಿಸುವುದು ಸೈನ್ಯ ಸಂಗ್ರಹದ ತಾತ್ಕಾಲಿಕ ಉದ್ದೇಶವಿರಬಹುದು. ವಸಾಹತುಗಳನ್ನು ವಿದೇಶೀಯರ ಸೈನಿಕ ಠಾಣ್ಯಗಳಾಗಿ ಪರಿವರ್ತಿಸುವುದೇ ದೀರ್ಘಕಾಲೀನ ಉದ್ದೇಶ. ಭಾರತವು ಇಂತಹ ವರ್ತನೆಗೆ ಮೊದಲಿಂದಲೂ ಪ್ರತಿಭಟನೆಯನ್ನು ತೋರಿಸುತ್ತದೆ. ಪಾಂಡಿಚೇರಿಯ ಗಡಿಗಳಲ್ಲೆಲ್ಲ ಕಂದಕಗಳನ್ನು ಅಗೆಯುವ ಕೆಲಸವು ನಡೆಯುತ್ತಿರುವುದನ್ನು ನೋಡಿದರೆ, ಸೈನಿಕ ಉದ್ದೇಶಗಳು ಇನ್ನಷ್ಟು ಸ್ಪಷ್ಟವಾಗುತ್ತವೆ. ಮದ್ರಾಸಿನ ಮುಖ್ಯ ಮಂತ್ರಿ ನಾಡರರು ಕಂದಕ ತೋಡುವುದನ್ನು ಹುಚ್ಚು ಹವ್ಯಾಸವೆಂದು ಕರೆದರೂ ಪರಿಸ್ಥಿತಿಯ ಗಂಭೀರ ಸ್ವರೂಪವನ್ನು ನಾವು ದುರ್ಲಕ್ಷಿಸುವಂತಿಲ್ಲ. ಕಳೆದ ಐದು ವಾರಗಳ ಕಾಲ ಸುಮ್ಮನಿದ್ದ ಬಳಿಕ, ಮೊನ್ನೆ ಮೊದಲನೆಯ ಸಲ ಫ್ರೆಂಚ ಭಾರತ ಯುವಜನ ಕಾಂಗ್ರೆಸು ಪ್ರದರ್ಶನವನ್ನು ನಡೆಸಿದಾಗ, ಪೋಲೀಸರು ಲಾಠೀ ಪ್ರಹಾರವನ್ನು ಪ್ರಾರಂಭಿಸಿ ೧೫೦ ಮಂದಿಯನ್ನು ಸೆರೆಹಿಡಿದರು. ಮಾಹೆಯಲ್ಲಿ ಪಿಕೆಟಿಂಗು ನಡೆಯುತಿದ್ದು, ಯಾವುದೇ ವಾಹನಗಳು ಅವನ್ನು ಹಾದುಹೋಗುವಂತಿಲ್ಲ. ಇದನ್ನೆಲ್ಲ ಕಂಡ ಫ್ರೆಂಚ ಅಧಿಕಾರಿಗಳು, ಪೋಲೀಸರ ಸಮವಸ್ತ್ರದಲ್ಲಿ ಸೈನಿಕರನ್ನು ತಂದು, ಅಲ್ಲಲ್ಲಿ ನಿಲ್ಲಿಸಿರುವರು. ಪೋಲೀಸರು ಉಪಯೋಗಿಸುತ್ತಿರದ ಶಸ್ತ್ರಾಸ್ತ್ರಗಳನ್ನು ಪೋಲೀಸರ ವೇಷ ಧರಿಸಿದ ಸೈನಿಕರ ಕೈಗೆ ಕೊಡುತ್ತಿರುವರು. ಇಂತಹ ಪರಿಸ್ಥಿತಿಯಲ್ಲಿ ಭಾರತ ಸರಕಾರವು ಮುಂದಿನ ಕ್ರಮವನ್ನು ಪರ್ಯಾಲೋಚಿಸಲು ಪಾರ್ಲಿಮೆಂಟಿನ ಅವಸರದ ಸಭೆಯನ್ನು ಕರೆಯಬೇಕೆಂಬ ಸೂಚನೆಯು ಮಾನ್ಯ ಸದಸ್ಯರೊಬ್ಬರಿಂದ ಬಂದಿರುವುದು

ವಿಮಾನಗಳಲ್ಲಿ ಶಸ್ತ್ರಾಸ್ತ್ರ

ಭಾರತವು ಶಾಂತಿಪ್ರಿಯ ರಾಷ್ಟ್ರವಾಗಿದ್ದು ಸೈನಿಕ ಕಾರ್ಯಾಚರಣೆಗೆ ಯಾವುದೇ ರೀತಿಯ ಪ್ರೋತ್ಸಾಹವನ್ನು ಕೊಡುವುದಿಲ್ಲ—ಸೈನಿಕರನ್ನಾಗಲೀ ಶಸ್ತ್ರಾಸ್ತ್ರಗಳನ್ನಾಗಲೀ ತುಂಬಿಕೊಂಡು ಪರದೇಶದ ಯಾವುದೇ ವಿಮಾನವು ಭಾರತವನ್ನು ಹಾದು ಹೋಗಲಾರದೆಂದು ಪ್ರಧಾನ ಮಂತ್ರಿಗಳು ಸರಕಾರದ ನಿಲುಮೆಯನ್ನು ಈಚೆಗೊಮ್ಮೆ ಪಾರ್ಲಿಮೆಂಟಿನಲ್ಲಿ ಪುನರುಚ್ಚರಿಸಿದ್ದರು. ಇದನ್ನು ತಿಳಿಯೂ ಕಳ್ಳತನದಿಂದ ಶಸ್ತ್ರಾಸ್ತ್ರಗಳನ್ನು ಸಾಗಿಸುವ ಫ್ರೆಂಚ ಸರಕಾರದ ಪ್ರಯತ್ನವೊಂದು ಕಲ್ಕತ್ತೆಯ ಡಂಡಂ ವಿಮಾನ ನಿಲ್ದಾಣದಲ್ಲಿ ಮೊನ್ನೆ ಬೆಳಕಿಗೆ ಬಂತು. ಇಂಡೋ ಚೀನದ ಸೈಗಾನಿಗೆ ಹಾರುತಿದ್ದ ಪ್ರಯಾಣಿಕರ ಕೆಲವು ವಿಮಾನಗಳಲ್ಲಿ ಕಂಡು ಬಂದ ಕೆಲವು ಮೂಟೆಗಳನ್ನು ಸರಕಾರದ ಅಧಿಕಾರಿಗಳು ಸಂಶಯದಿಂದ ಶೋಧಿಸಲು, ಅದರಲ್ಲಿ ಶಸ್ತ್ರಾಸ್ತ್ರಗಳೂ ಸೈನಿಕ ಸಮವಸ್ತ್ರಗಳೂ ದೊರಕಿದವು. ಇದರಿಂದ ನಾಗರಿಕ ಉಡುಪಿನಲ್ಲಿ ಪ್ರಯಾಣಿಸುತಿದ್ದವರು ಸೈನಿಕರೇ ಆಗಿರಬೇಕೆಂಬ ಊಹೆಗೆ ಅವಕಾಶ ದೊರೆಯಿತು. ಫ್ರೆಂಚ ಅಧಿಕಾರಿಗಳು ಇಂಡೋ ಚೀನದಲ್ಲಿ ಸೈನಿಕ ವಲಯದೊಳಗೆ ಕೆಲಸ ಮಾಡುವ ನಾಗರಿಕ ಅಧಿಕಾರಿಗಳ ಸಮವಸ್ತ್ರವು ಸೈನಿಕರಂತೆಯೇ ಇರುವುದೆಂದು ಹೇಳಿದರೂ ಶಸ್ತ್ರಾಸ್ತ್ರಗಳನ್ನು ಕುರಿತು ವಿವರಣೆ ಕೇಳಿದಾಗ "ನನಗೇನೂ ಗೊತ್ತಿಲ್ಲ" ಎಂದರು. ತಡೆದು ಹಿಡಿದ ವಿಮಾನಗಳನ್ನು ಈಗ ಹೋಗಗೊಡಲಾಗಿದ್ದರೂ ಪ್ರಕರಣವು ಇಲ್ಲಿಗೇ ಮುಗಿಯಲಾರದು ಶಸ್ತ್ರಾಸ್ತ್ರಗಳ ಪರಿಶೀಲನೆಯನ್ನು ನಡೆಸಿದ ಬಳಿಕ ಭಾರತ ಸರಕಾರವು ತಕ್ಕ ಕ್ರಮಗಳನ್ನು ತೆಗೆದುಕೊಳ್ಳುವುದು.

BHUVANENDRA PRODUCTS LTD., KATAPADI, S. K.
ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!
ಇವುಗಳಿಂದಲೇ ಭುವನೇಂದ್ರ ಔಷಧಿಗಳು
ಜನಪ್ರಿಯವಾಗಿರುವವು.
ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು
ನಮ್ಮಲ್ಲಿ ತಯಾರಿಸಲ್ಪಡುತ್ತವೆ.
ವಿವರಗಳಿಗೆ ವಿಚಾರಿಸಿರಿ:-
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.
ಡಿಪೊ:- (1) ಉಡುಪಿ (2) ಮರಾಠ ಗಲ್ಲಿ, ಹುಬ್ಬಳ್ಳಿ.

ಡಾ| ಕೊರತ್ಕಲ್ಲರ
ಮನೆ ಮದ್ದು
ವೈದ್ಯರ ಸಹಾಯವಿಲ್ಲದೆ ಮನೆಯಲ್ಲೇ
ನೂರಾರು ಕಾಯಿಲೆಗಳಿಗೆ ಔಷಧ ಮಾಡಿ
ಕೊಳ್ಳುವ ವಿಧಾನವನ್ನು ವಿವರಿಸುವ ಗೃಹ
ವೈದ್ಯ. ಬಣಾಂತಿ ಸಂಗೋಪನೆಯ ಕುರಿತು ವಿವರ
ವಾದ ಮಾಹಿತಿ ಇದೆ.
ಬೆಲೆ: ರೂ. 2—8—0

ನ ವ ಯು ಗ

ಉಡುಪಿ, ಗುರುವಾರ ೨೪-೬-'೫೪

ಸ್ತುತ್ಯ ಉಪಕ್ರಮ

ಕಳೆದ ಅಗೋಸ್ತು ತಿಂಗಳಲ್ಲಿ ಮಾಧ್ಯಮಿಕ ಶಿಕ್ಷಣ ಆಯೋಗವು ಭಾರತ ಸರಕಾರಕ್ಕೆ ತನ್ನ ವರದಿಯನ್ನು ಒಪ್ಪಿಸಿ, ಕೆಲವು ಅತ್ಯಮೂಲ್ಯವಾದ ಸೂಚನೆಗಳನ್ನು ಮಾಡಿತ್ತು—ಶಿಕ್ಷಣದಲ್ಲಿ ತಾಂತ್ರಿಕ ತರಬೇತಿ ಹಾಗು ವೃತ್ತಿ ನೈಪುಣ್ಯಗಳನ್ನು ಪಡೆಯಲು ವಿದ್ಯಾರ್ಥಿಗಳಿಗೆ ವಿಶೇಷ ಅವಕಾಶವನ್ನು ಕಲ್ಪಿಸಿಕೊಡಬೇಕೆಂಬುದು ಅವುಗಳಲ್ಲಿ ಒಂದು. ಸಾಮಾನ್ಯವಾಗಿ ಮಾಧ್ಯಮಿಕ ಶಿಕ್ಷಣದ ಘಟ್ಟವನ್ನು ಮುಟ್ಟಿದಾಗ, ವಿದ್ಯಾರ್ಥಿಗಳು ತಮ್ಮ ಜೀವನದ ಮುಪ್ಪಾಂಶವನ್ನು ಕಳೆದು, ತಾರುಣ್ಯಾವಸ್ಥೆಯನ್ನು ಪಡೆಯುವರು. ಈ ತರುಣ ತರುಣಿಯರು ಮುಂದೆ ಸ್ವತಂತ್ರವಾಗಿ ಜೀವನವನ್ನು ಕೈಗೊಳ್ಳಬೇಕಾಗುವುದು; ಮಾತ್ರವಲ್ಲದೆ, ಗುಣಶೀಲ ಸಂಪನ್ನರಾದ ನಾಗರಿಕರಾಗಿ ಕರ್ತವ್ಯ ಧರ್ಮಗಳನ್ನು ನೆರವೇರಿಸುತ್ತಾ ರಾಷ್ಟ್ರವನ್ನು ಕಟ್ಟುವ ಸಾಮರ್ಥ್ಯ ಇವರಲ್ಲಿ ಇರಬೇಕಾಗುವುದು. ಮಾಧ್ಯಮಿಕ ಶಿಕ್ಷಣ ಆಯೋಗವು ತನ್ನ ಶಿಫಾರಸುಗಳನ್ನು ಮಾಡುವಾಗ ಈ ವಿಷಯವನ್ನು ಲಕ್ಷ್ಯದಲ್ಲಿ ಇಟ್ಟುಕೊಂಡಿದ್ದಿತು. ವಿದ್ಯಾರ್ಥಿಯ ವ್ಯಕ್ತಿತ್ವದ ರಕ್ಷಣೆ ಮತ್ತು ಪೋಷಣೆಗೂ ಸಾರ್ವಾಂಗಿಕ ವಿಕಾಸ ಮತ್ತು ಬೆಳವಣಿಗೆಗೂ ಹೆಚ್ಚಿನ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಆಯೋಗ ಒತ್ತಾಯಿಸುತ್ತಾ, ವಿದ್ಯಾರ್ಥಿಗಳಿಗೆ ವಿವಿಧ ಉದ್ಯೋಗಗಳಲ್ಲಿ ತರಬೇತಿಯನ್ನು ನೀಡುವುದು ಅಗತ್ಯವೆಂದು ಹೇಳುತ್ತದೆ. ವಿದ್ಯಾರ್ಥಿಗಳ ಭಿನ್ನ ಭಿನ್ನ ಅಭಿರುಚಿಗೊಪ್ಪುವಂತೆ ವೈವಿಧ್ಯ ಪೂರ್ಣ ವೃತ್ತಿಶಿಕ್ಷಣವನ್ನು ನೀಡಬೇಕೆಂದೂ ಅದಕ್ಕಾಗಿ ವಿವಿಧೋದ್ದೇಶದ ಶಾಲೆಗಳನ್ನು ತೆರೆಯಬೇಕೆಂದೂ ಅದು ಸೂಚಿಸುತ್ತದೆ. ವಿದ್ಯಾರ್ಥಿಗಳು ಶಿಕ್ಷಣ ಮಂದಿರಗಳಿಂದ ಹೊರಗೆ ಬಂದ ಬಳಿಕ ಕಾರಕೂನಿಕೆಯನ್ನೇ ಅರಸುತ್ತಾ ತಿರುಗಾಡುವಂತಾಗ ಬಾರದೆಂದೂ ಪುಸ್ತಕೀಯ ಜ್ಞಾನದ ಕಡೆಗೆ ಒಲವು ತೋರಿಸದವರ ವ್ಯಕ್ತಿತ್ವವು ನಷ್ಟವಾಗಬಾರದೆಂದೂ ಭಾವಿಸಿ, ಆಯೋಗವು ಮೇಲಿನಂತೆ ಹೇಳಿತೆಂದರೆ ತಪ್ಪಾಗದು. ಶಿಕ್ಷಣದ ಪುನರ್ಘಟನೆಯನ್ನು ಹಣಾಭಾವದ ಕಾರಣ ತೋರಿಸಿ ಹಿಂದೆಹಾಕಬಾರದೆಂದೂ ಕೇಂದ್ರ ಸರಕಾರವೇ ಅತ್ಯುತ್ಸಾಹದಿಂದ ತಕ್ಕ ಕ್ರಮಗಳನ್ನು ಯೋಜಿಸಿ, ರಾಜ್ಯಸರಕಾರಗಳಿಗೆ ಮಾರ್ಗದರ್ಶನ ನೀಡಬೇಕೆಂದೂ ಆಯೋಗ ಅಪೇಕ್ಷಿಸುತ್ತದೆ.

ಇದನ್ನು ಭಾರತ ಸರಕಾರವು ಇಷ್ಟು ಬೇಗ — ಒಂಬತ್ತು ತಿಂಗಳಲ್ಲಿಯೇ — ಗಮನಿಸಿರುವುದು ಉಚಿತ. ಯೋಜನಾ ಆಯೋಗವು ಇದೀಗ ಸಿದ್ಧಪಡಿಸಿದ ವಿವಿಧೋದ್ದೇಶ ಶಾಲೆಗಳ ಸ್ಥಾಪನಾ ಯೋಜನೆಯು ಗುರಿ ಇಲ್ಲದ ಪುಸ್ತಕೀಯ ಶಿಕ್ಷಣದ ಸ್ಥಾನದಲ್ಲಿ ಉಪಯುಕ್ತವಾದ ವೃತ್ತಿಪರ ಶಿಕ್ಷಣವನ್ನು ಪ್ರತಿಷ್ಠಾಪಿಸಲು ನೋಡುತ್ತದೆ. ಹೀಗೆ ಶಿಕ್ಷಣದ ಪುನರ್ಘಟನೆಯ ಕುರಿತು ಕೇಂದ್ರ ಸರಕಾರವು ತೋರಿಸಿರುವ ಆಸಕ್ತಿಯೂ ವಿವಿಧೋದ್ದೇಶಗಳ ಶಾಲೆಗಳನ್ನು ಸ್ಥಾಪಿಸುವ ಯೋಜನೆಯೂ ಸ್ತುತ್ಯ ಉಪಕ್ರಮವೆಂದು ನಮ್ಮ ಅಭಿಪ್ರಾಯ. ಈಗ ತಯಾರಿಸಲಾದ ಯೋಜನೆಯಂತೆ ಮೊದಲನೇ ಪಂಚವಾರ್ಷಿಕ ಯೋಜನೆಯ ಇನ್ನುಳಿದ ಎರಡು ವರ್ಷಗಳ ಅವಧಿಯಲ್ಲಿ ಮೊದಲನೇ ವರ್ಷ ೨೦೦ ಮತ್ತು ಎರಡನೇ ವರ್ಷ ೩೦೦, ಹೀಗೆ ಒಟ್ಟು ಐನೂರು, ವಿವಿಧೋದ್ದೇಶದ ಶಾಲೆಗಳು (ಹೈಸ್ಕೂಲು) ೫ ಕೋಟಿ ರೂಪಾಯಿ ವೆಚ್ಚದಲ್ಲಿ ತೆರೆಯಲ್ಪಡುತ್ತವೆ. ಈಗ ಇರುವ ಹೈಸ್ಕೂಲುಗಳಲ್ಲಿಯೇ ಕೆಲವು ವಿವಿಧೋದ್ದೇಶದ ಹೈಸ್ಕೂಲುಗಳಾಗಿ ಪರಿವರ್ತನೆಯನ್ನು ಹೊಂದಬಹುದು; ಆದರೂ ಈ ಪ್ರಯೋಗವನ್ನು ಪ್ರಥಮದಲ್ಲಿ ಸರಕಾರವೇ ನಡೆಸುವ ಹೈಸ್ಕೂಲುಗಳಲ್ಲಿ ಜ್ಯಾರಿಗೆ ತರಲಾಗುವುದು. ವಿವಿಧೋದ್ದೇಶ ಶಾಲೆಗಳನ್ನು ನಡೆಸುವ ತತ್ವದ ಒಳಿತು ಕೆಡುಕುಗಳನ್ನು ಸೂಕ್ಷ್ಮ ರೀತಿಯಿಂದ ಪರಿಶೀಲಿಸಿದ ಬಳಿಕವೇ, ಉಳಿದ ಹೈಸ್ಕೂಲುಗಳನ್ನೂ ನಿಧಾನವಾಗಿ ಪರಿವರ್ತಿತ ಶಿಕ್ಷಣ ಕ್ರಮಕ್ಕೆ ಹೊಂದಿಸಿಕೊಳ್ಳಲಾಗುವುದು. ಈಗಿನ ಹೈಸ್ಕೂಲುಗಳು ಸಾಮಾನ್ಯ ವಿಜ್ಞಾನವನ್ನು ಕುರಿತಾಗಿ ವಿದ್ಯಾರ್ಥಿಗಳಿಗೆ ಉತ್ತಮ ಮಟ್ಟದ ಶಿಕ್ಷಣವನ್ನು ಕೊಡಬೇಕೆಂಬ ಇರಾದೆಯಿಂದ, ಸರಕಾರವು ಮುಂದಿನೆರಡು ವರ್ಷಗಳಲ್ಲಿ ೧೫೦೦ ಹೈಸ್ಕೂಲುಗಳಿಗೆ ಪ್ರತಿಯೊಂದಕ್ಕೂ ೧೫,೦೦೦ ರೂಪಾಯಿಗಳ ಸಹಾಯಧನವನ್ನು ಕೊಟ್ಟು, ತಂತಮ್ಮ ಪ್ರಯೋಗಶಾಲೆಗಳ ವಿಸ್ತರಣೆ ಮತ್ತು ಸಾಮಾಜಿಕ ಶಿಕ್ಷಣ ಪಾಠಗಳಿಗೆ ಅನುಕೂಲತೆಗಳನ್ನು ಕಲ್ಪಿಸಲು ನೆರವಾಗುತ್ತದೆ. ವಿವಿಧೋದ್ದೇಶ ಶಾಲೆಗಳಲ್ಲೂ ಇತರ ೧೫೦೦ ಹೈಸ್ಕೂಲುಗಳಲ್ಲೂ ಉತ್ತಮ ಪುಸ್ತಕ ಭಂಡಾರಗಳು ಇದ್ದು, ವಿವಿಧ ತಾಂತ್ರಿಕ ಹಾಗು ವೈಜ್ಞಾನಿಕ ವಿಷಯಗಳ ಬಗ್ಗೆ ಅಭಿರುಚಿಯನ್ನು ಪ್ರಚೋದಿಸುವುದಕ್ಕೂ ಅನುಭವವನ್ನುಂಟುಮಾಡುವುದಕ್ಕೂ ನೆರವಾಗಬೇಕೆಂದು ಬಯಸಿ, ಸರಕಾರದವರು ವಿವಿಧೋದ್ದೇಶ ಶಾಲೆಗಳಿಗೆ ಪ್ರತಿಯೊಂದಕ್ಕೆ ೫೦೦೦ ರೂಪಾಯಿಯಂತೆಯೂ ಇತರ ಹೈಸ್ಕೂಲುಗಳಿಗೆ ೨೫೦೦ ರೂಪಾಯಿಯಂತೆಯೂ ಸಹಾಯ ಕೊಡುವರು. ಇಲ್ಲೆಲ್ಲ ವೃತ್ತಿಪರ ಶಿಕ್ಷಣವನ್ನು ವಿದ್ಯಾರ್ಥಿಗಳಿಗೆ ಕೊಡಲು ವ್ಯವಸ್ಥೆಯು ಏರ್ಪಡುವುದು. ಭಾಷಾ ಪಾಠಗಳು, ಸಾಮಾಜಿಕ ಅಧ್ಯಯನ, ಸಾಮಾನ್ಯವಿಜ್ಞಾನ, ಗಣಿತ, ಕಲೆ ಹಾಗು ಸಂಗೀತ ಮತ್ತು ದೈಹಿಕ ವ್ಯಾಯಾಮಗಳೊಂದಿಗೆ ವೃತ್ತಿ ಶಿಕ್ಷಣಕ್ಕೂ ಸಾಕಷ್ಟು ಹೆಚ್ಚು ಪ್ರಾಮುಖ್ಯತೆಯನ್ನು ಇನ್ನು ಮುಂದೆ ಹೈಸ್ಕೂಲುಗಳು ಕೊಡಬೇಕಾಗುತ್ತದೆ. ಭಾರತ ಸರಕಾರದವರು ಕೈಗೊಂಡ ಪ್ರಕೃತದ ಯೋಜನೆಯು ಈ ದಿಸೆಯಲ್ಲಿಟ್ಟ ಪ್ರಥಮ ಹೆಜ್ಜೆಯೆಂದೆನ್ನಬಹುದು. ಪ್ರಸ್ತುತ ಯೋಜನೆಯು ೨೦೦೦ ಹೈಸ್ಕೂಲುಗಳಿಗಷ್ಟೇ ಅನ್ವಯಿಸುತ್ತದೆ— ದೇಶದಲ್ಲಿರುವ ಇತರ ಸಾವಿರಾರು ಹೈಸ್ಕೂಲುಗಳು ಯೋಜನೆಯಿಂದ ಹೊರಗುಳಿಯುತ್ತವೆ. ಆದರೆ ಈ ಪ್ರಥಮ ಪ್ರಯೋಗವು ಯಶಸ್ಸನ್ನು ಹೊಂದಿದರೆ, ಯೋಜನೆಯನ್ನು ವ್ಯಾಪಕಗೊಳಿಸಬಹುದು. ಅಂತೂ ಅಡಚಣೆಗಳನ್ನೆಲ್ಲ ನಿವಾರಿಸಿ, ಮಾಧ್ಯಮಿಕ ಶಿಕ್ಷಣದ ಪುನರ್ಘಟನೆಯನ್ನು ಮಾಡಬೇಕೆಂಬ ಪ್ರಾಮಾಣಿಕ ಆಕಾಂಕ್ಷೆಯನ್ನು ನಾವು ಈ ಯೋಜನೆಯಲ್ಲಿ ಗುರುತಿಸಬಲ್ಲೆವು. ಆದರೆ ಇಷ್ಟರಿಂದಲೇ ಯೋಜನೆಯು ಪರಿಪೂರ್ಣವಾಗಿದೆಯೆಂದಾಗಲೀ ತೀರಾ ಸಮರ್ಪಕವಿದೆಯೆಂದಾಗಲೀ ಹೇಳುವಂತಿಲ್ಲ. ವೃತ್ತಿಪರ ಶಿಕ್ಷಣವನ್ನು ನೀಡುವ ಶಾಲೆಗಳು ಯಾವ್ಯಾವ ವೃತ್ತಿಗಳಿಗೆ ಅವಕಾಶ ಕಲ್ಪಿಸಿಕೊಡಬೇಕೆಂದು ಸ್ಪಷ್ಟಗೊಳಿಸುವುದು ಅಗತ್ಯ. ಪುಸ್ತಕೀಯ ಜ್ಞಾನದೊಂದಿಗೆ ವೃತ್ತಿ ಶಿಕ್ಷಣವನ್ನು ಸಮನ್ವಯಗೊಳಿಸುವ ಪ್ರಶ್ನೆಯು ಬಹಳ ಮಹತ್ವದ ಅಂಶವಾಗಿರುತ್ತದೆ—ಎಲ್ಲ ಶಾಲೆಗಳೂ ಒಂದೇ ರೀತಿಯ ವೃತ್ತಿ ಶಿಕ್ಷಣವನ್ನು ಕೊಡುವಂತೆ ಮಾಡಿದರೆ ಪ್ರಯೋಜನವಿಲ್ಲ. ಪುಸ್ತಕದ ಪಾಠಗಳಿಗೂ ವೃತ್ತಿಪರ ಶಿಕ್ಷಣಕ್ಕೂ ಅಂತರಂಗಿಕ ಸಂಬಂಧವನ್ನು ಸ್ಥಾಪಿಸುವ ಪ್ರಯತ್ನ ನಡೆಯಬೇಕಾದ ಆವಶ್ಯಕತೆಯನ್ನು ಉಪೇಕ್ಷಿಸಲುಬಾರದು; ಹಾಗೆಯೇ ಭಿನ್ನ ಭಿನ್ನ ಒಲವು ಪ್ರವೃತ್ತಿಗಳ ವಿದ್ಯಾರ್ಥಿಗಳಿಗೆ ಅವರವರ ಅಭಿರುಚಿಯನ್ನು ಸಂವರ್ಧಿಸಿಕೊಳ್ಳಲು ಅನುಕೂಲವಾಗುವಂತೆ ಆಯಾ ವಲಯದಲ್ಲಿಯೇ ಉಚಿತ ವೃತ್ತಿಶಿಕ್ಷಣ ನೀಡುವ ಪ್ರತ್ಯ ಪ್ರತ್ಯೇಕ ಹೈಸ್ಕೂಲುಗಳು ಇರಬೇಕೆಂಬುದನ್ನು ಕಡೆಗಣಿಸಲಾಗದು. ಒಟ್ಟಾರೆ ಆಯೋಗವು ಹೇಳಿದಂತೆ, ಮಾಧ್ಯಮಿಕ ಶಿಕ್ಷಣವು ಹೈಸ್ಕೂಲು ವಿದ್ಯಾಭ್ಯಾಸ ಮುಗಿಸಿದ ವಿದ್ಯಾರ್ಥಿಗಳನ್ನು ಸ್ವತಂತ್ರ ಜೀವನ ಕೈಗೊಳ್ಳಬಲ್ಲವರಾಗಿ ಮಾಡುವುದಲ್ಲ ಉಚ್ಚ ಶಿಕ್ಷಣ ಪಡೆಯಲಿಚ್ಛಿಸುವವರಿಗೆ ಯೋಗ್ಯ ಹಿನ್ನಲೆಯನ್ನು ಕಲ್ಪಿಸಿಕೊಡುವಂಥದೂ ಆಗಬೇಕು. ಸರಕಾರದ ಯೋಜನೆಯು ಕಾರ್ಯಗತಗೊಳ್ಳುವಾಗ, ಈ ಉದ್ದೇಶ ಸಾಧನೆಗೆ ಘಾತಕವಾದ ಅನಪೇಕ್ಷಿತ ಅಡಚಣಗಳು ಕಂಡುಬಂದರೆ, ಅವುಗಳನ್ನು ನಿವಾರಿಸುವುದು ಅಗತ್ಯವೆಂದು ಈ ಹೇಳಿ, ನೂತನ ಸಾಹಸಕ್ಕೆ ಶುಭವನ್ನು ಕೋರುತ್ತೇವೆ.

ದೆಹಲಿಗೆ ಚೌ ಎನ್ ಲಾಯರ ಭೇಟಿ

ನೆಹರೂರೊಡನೆ ಜಾಗತಿಕ ವಿಷಯಗಳ ಸಮಾಲೋಚನೆ

ವಿಷಯದ ಮುಖವನ್ನು ಆಕಸ್ಮಿಕವಾಗಿ ಬದಲಾಯಿಸಿ ಬಿಡಬಲ್ಲ ಗತ್ತುಗಾರಿಕೆ ಕಮ್ಯುನಿಸ್ಟರಿಗೆ ಸಿದ್ಧಿಸಿದಷ್ಟು ಪ್ರಜಾಪ್ರಭುತ್ವವಾದಿಗಳಿಗೆ ಕರಗತವಾಗಿಲ್ಲ. ಜಿನೇವಾದಲ್ಲಿ ಎಲ್ಲವೂ ಮುಗಿಯಿತೆಂದು ಕೈ ತೊಳೆಯಲು ಸಿದ್ಧರಾದ ಗಳಿಗೆಯಲ್ಲಿ ಚೀನಾದ ಪ್ರಧಾನಮಂತ್ರಿ ಚೌ ಎನ್ ಲಾಯರು ಒಂದು ವಿಶೇಷ ರಿಯಾಯತಿಯನ್ನೊಳಗೊಂಡ ಮಹತ್ವದ ಸೂಚನೆಯನ್ನು ಮುಂದಿಟ್ಟು ಪಾಶ್ಚಾತ್ಯ ಪ್ರಭೃತಿಗಳನ್ನು ತಬ್ಬಿಬ್ಬಾಗಿ ಮಾಡಿದರು. ಪೆಟ್ಟಿಗೆಕಟ್ಟಿ ಹೊರಟುನಿಂತಿದ್ದ ಎಲ್ಲರೂ ಬಲಾತ್ಕಾರವಾಗಿ ಪ್ರಯಾಣವನ್ನು ನಿಲ್ಲಿಸಿ, ಈ ಸೂಚನೆಯನ್ನು ಪರಾಮರ್ಶಿಸುವ ಸಂದರ್ಭ ಬಂದೊದಗಿತು.

ಚೀನದ ಸೂಚನೆ

ಇಂಡೋಚೀನದ ಆಶ್ರಿತ ರಾಜ್ಯಗಳಲ್ಲಿ ವೀಟನಾಮುವೊಂದೇ ಪ್ರತ್ಯಕ್ಷವಾಗಿ ಕದನ ಕೊಡುತ್ತದೆ. ಇನ್ನುಳಿದ ಲಾವೋಸ ಮತ್ತು ಕಂಬೋಡಿಯಾಗಳು ಯುದ್ಧದಲ್ಲಿ ಭಾಗವಹಿಸುತ್ತಿಲ್ಲ, ಆದರೆ ಇಲ್ಲಿ ವೀಟಮಿನ ಪಡೆಗಳು ತಮ್ಮ ಚಟುವಟಿಕೆಯನ್ನು ತೋರಿಸುತ್ತವೆ. ಈ ಸೈನ್ಯವನ್ನು ಹಿಂದೆಗೆದುಕೊಳ್ಳಬೇಕೆಂದು ಪಾಶ್ಚಾತ್ಯರು ಒತ್ತಾಯಪಡಿಸುತಿದ್ದರು. ಆದರೆ ಕಮ್ಯುನಿಸ್ಟರು ಈ ರಾಜ್ಯಗಳಲ್ಲಿರುವ ಫ್ರೆಂಚ ಸೈನಿಕರನ್ನು ಅಲ್ಲಿಯ ಜನರೇ ಪ್ರತಿಭಟಿಸುತ್ತಿರುವರೆಂದು ಹೇಳಿ, ವೀಟಮೀನರ ಚಟುವಟಿಕೆಗಳೇನೂ ಇಲ್ಲವೆಂದು ಪ್ರತಿಪಾದಿಸುತಿದ್ದರು. ಇದೀಗ ಜಿನೇವಾದ ಇಂಡೋಚೀನ ಮಾತುಕತೆ ಮುರಿಯಿತು ಎನ್ನುವಷ್ಟರಲ್ಲಿ—ಚೌ ಎನ್ ಲಾಯರು ಒಂದು ಹೇಳಿಕೆಯಿತ್ತು— ವೀಟಮೀನ ಸೈನಿಕರು ಯಾರಾದರೂ ಲಾವೋಸ ಮತ್ತು ಕಂಬೋಡಿಯಾಗಳಲ್ಲಿದ್ದರೆ, ಅವರನ್ನು ಹಿಂದೆ ಕರೆಸುವುದಾಗಿ ಸಾರಿದರು. ವೀಟಮೀನ ಪ್ರತಿನಿಧಿಗಳೂ ಈ ಸೂಚನೆಗೆ ಮನ್ನಣೆ ಕೊಟ್ಟರು.

ಕದನ ವಿರಾಮ

ಕಮ್ಯೂನಿಸ್ಟರ ವಿಶೇಷ ರಿಯಾಯತಿಯನ್ನು ಅಮೇರಿಕದ ಪ್ರತಿನಿಧಿ ಬೇಡೆಲ ಸ್ಮಿಥರೂ "ಯೋಗ್ಯ' ಸೂಚನೆಯೆಂದು ಸ್ವಾಗತಿಸಿದರು. ಹಿಂದಿನಿಂದ ಬದಲಿ ಪ್ರತಿನಿಧಿ ರೋಬರ್ಟಸನ್ನರು ಚೀನೀ ಸೂಚನೆಯನ್ನು ಟೀಕಿಸಿದರೂ, ಅದು ಅಮೇರಿಕದ ಮನಸ್ಸು ತಲ್ಲಣಗೊಂಡಿದೆಯೆಂಬುದನ್ನೆ ಸೂಚಿಸಿತು. ಲಾವೋಸ ಮತ್ತು ಕೆಂಬೋಡಿಯಾಗಳಿಂದ "ವಿದೇಶೀ ಸೇನೆ" ಗಳನ್ನು ಹಿಂದೆಗೆಯಬೇಕೆಂಬ ತತ್ವದ ಪ್ರತಿಪಾದನೆಯನ್ನು ಚೌಎನ್ ಲಾಯರ ಸೂಚನೆ ಮಾಡಿದ್ದರಿಂದಲೇ ಅಮೇರಿಕ ಹೀಗೆ ಕಸಿವಿಸಿಗೊಂಡಿತು. ವೀಟಮಿನ ಸೇನೆಗಳು ಹೊರ ನಡೆಯುವಾಗ, ಫ್ರೆಂಚ ಸೈನ್ಯವೂ ಲಾವೋಸ ಕೆಂಬೋಡಿಯಾಗಳಿಂದ ಕಾಲ್ತೆಗೆಯಬೇಕೆಂದು ಕಮ್ಯುನಿಸ್ಟರು ಆಗ್ರಹ ತೊಟ್ಟರೆ—ಎಂದು ಅಮೇರಿಕ ಸಂಶಯಿಸುತ್ತದೆ. ಅಂತೂ ಈಗ ಫ್ರೆಂಚ ಹಾಗು ವೀಟಮಿನ ಸೈನ್ಯಾಧಿಪತ್ಯಗಳು ಜಿನೇವಾದಲ್ಲಾಗಲೀ ಇದಲ್ಲಿಂದಲೇ ಆಗಲೀ ಕದನ ವಿರಾಮದ ಮಾತುಕತೆಗಳನ್ನು ತೊಡಗಬೇಕೆಂದೂ ಈ ಸಂಧಾನದ ಪರಿಣಾಮವನ್ನು ಜಿನೇವಾದ ಪರಿಷತ್ತಿಗೆ ವರದಿ ಮಾಡಬೇಕೆಂದೂ ನಿರ್ಣಯಿಸಲಾಯಿತು

ಫ್ರಾನ್ಸಿನ ಪ್ರಧಾನಿ

ಲೇನಿಯಲರ ಸರಕಾರವು ಪತನ ಹೊಂದಿದ ಬಳಿಕ ಫ್ರಾನ್ಸಿನಲ್ಲಿ ಮೆಂಡೆಸ್ ಫ್ರಾನ್ಸರಿಗೆ ಸರಕಾರ ರಚಿಸಲು ಅವಕಾಶ ಕೊಡಲಾಯಿತಷ್ಟೇ! ಯುದ್ಧ ಕಾಲದಲ್ಲಿ ವೈಮಾನಿಕನಾಗಿ ಕೆಲಸ ಮಾಡಿದ್ದ, ಇನ್ನೂ ಐವತ್ತರ ಗಡಿ ಮೀರದ, ಈ ಧುರೀಣರು ಫ್ರೆಂಚ ಪಾರ್ಲಿಮೆಂಟಿನ ಮುಂದೆ ಮಾಡಿದ ಭಾಷಣವು ಅವರಿಗೆ ಅದ್ಭುತ ಬೆಂಬಲವನ್ನು ಅನಿರೀಕ್ಷಿತವಾಗಿಯೇ ತಂದುಕೊಟ್ಟಿತು. ಅಧಿಕಾರ ವಹಿಸಿದ ಒಂದು ತಿಂಗಳಲ್ಲಿ,ಅಂದರೆ ಜೂಲೈ ೨೦ರೊಳಗೆ, ಇಂಡೋಚೀನದಲ್ಲಿ ಕದನ ವಿ

ರಾಮವನ್ನು ಸಾಧಿಸಿ, ಶಾಂತಿ ನೆಲೆಗೊಳಿಸುವೆನೆಂದೂ ಅನ್ಯಥಾ ಅಧಿಕಾರ ತ್ಯಜಿಸುವೆನೆಂದೂ, ಹೊಸ ಪ್ರಧಾನಿ ಶಪಥ ಮಾಡಿದರು. ಈ ಎದೆಗಾರಿಕೆಯನ್ನು ಮೆಚ್ಚಿಕೊಂಡ ಪಾರ್ಲಿಮೆಂಟ ಸದಸ್ಯರು ಪ್ರಚಂಡ ಬಹುಮತದಿಂದ (೪೧೯ ವಿರುದ್ಧ ೪೭) ಇವರ ಸರಕಾರಕ್ಕೆ ಸಮ್ಮತಿ ನೀಡಿದರು. ನೂತನ ಸರಕಾರದಲ್ಲಿ ಮೆಂಡೆಸ್ ಫ್ರಾನ್ಸರೇ ವಿದೇಶ ಮಂತ್ರಿಗಳಾಗಿದ್ದು, ಅವರು ಇಷ್ಟರಲ್ಲೆ ಜಿನೇವಾ ಯಾತ್ರೆಯನ್ನು ಕೈಗೊಂಡು, ಮುಂದಿನ ಮಾತುಕತೆಗಳಲ್ಲಿ ಭಾಗವಹಿಸಬಹುದು.

ವಿಫಲ ಸಂಧಾನ

ಇಂಡೋಚೀನದ ಮಟ್ಟಿಗೆ ಫಲಪ್ರದವೆನಿಸಿದರೂ ಕೊರಿಯಾದ ಸಮಸ್ಯೆ ಇತ್ಯರ್ಥವಾಗಲಿಲ್ಲ. ಉತ್ತರ ಕೊರಿಯಾದ ಪ್ರತಿನಿಧಿಗಳು ಎಲ್ಲ ಅಯಶಸ್ಸಿಗೂ ಪಾಶ್ಚಾತ್ಯ ರಾಷ್ಟ್ರಗಳೇ ಕಾರಣವೆಂದು ಸಾರಿ ಸ್ವದೇಶಕ್ಕೆ ಹೋದರು. ಮೊಲೊಟೋವರು ತಟಸ್ಥ ರಾಷ್ಟ್ರ ಮಂಡಳದ ರಚನೆಯಲ್ಲಿ ಒಂದಾದರೂ ಕಮ್ಯುನಿಸ್ಟ (ತಟಸ್ಥ) ರಾಷ್ಟ್ರಕ್ಕೆ ಸ್ಥಾನ ಕೊಡಬೇಕೆಂದು ಹೇಳಿದರು. ಆದರೆ ಪಾಶ್ಚಾತ್ಯರು ಸಂಯುಕ್ತರಾಷ್ಟ್ರ ಸಂಘದ ಮೇಲ್ವಿಚಾರಣೆಯಲ್ಲಿಯೇ ಚುನಾವಣೆಗಳು ನಡೆಯಬೇಕೆಂಬ ನಿಲುವೆಯನ್ನು ಬದಲಿಸಲಿಲ್ಲ. ಈ ಮಟ್ಟಿಗೆ ಪಾಶ್ಚಾತ್ಯ ಪ್ರತಿನಿಧಿಗಳದೇ ತಪ್ಪು ಕಾಣುತ್ತದೆ—ಏಕೆಂದರೆ, ಕಮ್ಯುನಿಸ್ಟ ಛೈನಾ-ಕಾಗ್ಲಿ ಉತ್ತರ ಕೊರಿಯಕ್ಕಾಗಲೀ ಸ್ಥಾನವಿಲ್ಲದ, ಮತ್ತು ದಕ್ಷಿಣ ಕೊರಿಯಾದ ಪಕ್ಷ ವಹಿಸಿ ಕಮ್ಯುನಿಸ್ಟರ ಮೇಲೆ ಯುದ್ಧವನ್ನು ಸಾರಿದ, ಸಂಯುಕ್ತರಾಷ್ಟ್ರ ಸಂಘವನ್ನು "ತಟಸ್ಥ" ಮಂಡಳವೆಂದು ಕರೆಯುವುದು ಇಷ್ಟವಿಲ್ಲ. ಇನ್ನು ಕಮ್ಯುನಿಸ್ಟರ ಕೈಯಿಂದ ನಡೆದ ತಪ್ಪೆಂದರೆ, ಉತ್ತರ-ದಕ್ಷಿಣ ಕೊರಿಯಾಗಳೆರಡಕ್ಕೂ ಜನಸಂಖ್ಯೆಯ ಪ್ರಮಾಣವನ್ನನುಸರಿಸಿಯಲ್ಲ—ಸಮ ಪ್ರಮಾಣದಲ್ಲಿಯೇ ಪ್ರಾತಿನಿಧ್ಯ ದೊರೆಯಬೇಕು ಎಂಬ ಆಗ್ರಹ ಆದರೆ, ಮೇಲ್ವಿಚಾರಣೆಯ ಪ್ರಶ್ನೆಯೇ ಇತ್ಯರ್ಥಗೊಳ್ಳದುದರಿಂದ, ಎರಡನೆಯ ವಿಷಯ ಹಿನ್ನೆಲೆಯಲ್ಲೇ ಉಳಿಯುತ್ತದೆ.

ಗ್ವಾಟೆಮಾಲದಲ್ಲಿ

ಪ್ರಕೃತಿಯು ತನ್ನ ಸಮತೋಲವನ್ನು ಯಾವಾಗಲೂ ಕಾಪಾಡಿಕೊಳ್ಳುತ್ತಾಳೆಂದು ವಿಜ್ಞಾನ ಹೇಳುತ್ತದೆ ಯುದ್ಧ-ಶಾಂತಿಗಳು ನೈಸರ್ಗಿಕ ಲಕ್ಷಣಗಳೇ ಇರಬಹುದು. ಇಂಡೋಚೀನದ ಸಮರ ಒಂದು ನಿಲುಗಡೆಗೆ ಬರುವುದೆಂಬ ಆಸೆ ಮೊಳೆತ ಕ್ಷಣದಲ್ಲಿಯೇ, ದೂರದ, ಪನಾಮಾ ಕಾಲುವೆಯಿಂದ ೭೦೦ ಮೈಲು ಉತ್ತರದಲ್ಲಿ, ಮೆಕ್ಸಿಕೋ ರಾಜ್ಯದ ದಕ್ಷಿಣಕ್ಕೆ ವ್ಯಾಪಿಸಿದ, ಗ್ವಾಟೆಮಾಲಾ ರಾಜ್ಯದಲ್ಲಿ ಕದನ ಘಟಿಸಿರುವುದನ್ನು ಕಂಡರೆ ವಿಜ್ಞಾನಿಗಳ ಅಭಿಪ್ರಾಯವೇ ಸರಿಯೆಂದು ತೋರುತ್ತದೆ ಗ್ವಾಟೆಮಾಲಾ ರಾಜ್ಯವು ಕಮ್ಯುನಿಸ್ಟಪರವೆನಿಸಿದೆ. ಸುಮಾರು ೪೫೦೦೦ ಚದರ ಮೈಲು ವಿಸ್ತೀರ್ಣದ ಈ ಪ್ರದೇಶದಲ್ಲಿ ೩೩ ಲಕ್ಷ ಜನ ಇಂಡಿಯಾನರು ಇದ್ದಾರೆ. ಭೂಸುಧಾರಣೆಯ ನೆಪದಲ್ಲಿ ರಾಜ್ಯ ಸರಕಾರವು ಅಮೇರಿಕದ ಸಿನೇಟರ ಮೆಕಾರ್ಥಿಯವರ ಪಾಲೇ ಬಹಳವಾಗಿರುವ ಯುನೈಟೆಡ್ ಫ್ರುಟ್ ಕಂಪೆನಿಯ ಆಸ್ತಿಗಳಲ್ಲಿ ನೂರಕ್ಕೆ ಇಪ್ಪತ್ತೈದು ಅಂಶಕ್ಕೆ ಹಾನಿ ಮಾಡಿತು. ಇದರಿಂದ ಕುಪಿತಗೊಂಡ, ಕಮ್ಯುನಿಸ್ಟರ ಬದ್ಧ ವಿರೋಧಿಗಳಾದ, ಮೆಕಾರ್ಥಿಯವರೇ ಅಮೇರಿಕ ಸರಕಾರದ ನೆರವಿನಿಂದ ಯುದ್ಧ ಪ್ರಚೋದಿಸುತ್ತಾರೆಂದು ಗ್ವಾಟೆಮಾಲ ಸರಕಾರ ಸೂಚ್ಯವಾಗಿ ಹೇಳುತ್ತದ.

ಅಮೆರಿಕವೇ ಹೊಣೆ

ಗ್ವಾಟೆಮಾಲವು ಸಂಯುಕ್ತ ರಾಷ್ಟ್ರ ಸಂಘದಲ್ಲಿ ಪ್ರಾತಿನಿಧ್ಯವನ್ನು ಪಡೆದ ರಾಜ್ಯ—ಎಂತಲೇ ಅದು ಭದ್ರತಾ ಮಂಡಳಕ್ಕೆ ಆಕ್ರಮಣವನ್ನು ತಡೆಗಟ್ಟಲು ನೆರವಾಗಬೇಕೆಂದು ಕೂಡಲೇ ಕೇಳಿಕೊಂಡಿತು ಭದ್ರತಾ ಮಂಡಳದ ಅವಸರದ ಸಭೆಯೊಂದು ಜರಗಿ, ಆಕ್ರಮಣ ನಡೆಸುವ ಸೈನ್ಯಗಳು ಚಟುವಟಿಕೆಯನ್ನು ನಿಲ್ಲಿಸಬೇಕೆಂದು ಪ್ರಾರ್ಥಿಸಲಾಯಿತು. ತನ್ನ ಸೈನ್ಯವು ಪರರಾಷ್ಟ್ರಗಳು ನಡೆಸುತ್ತಿರುವ ಅತಿಕ್ರಮಣವನ್ನು ಪ್ರತಿಭಟಿಸಲು ಸಶಸ್ತ್ರವಾಗಿ ಹೋರಾಡುತ್ತದೆಂದು ಗ್ವಾಟೆಮಾಲಾವು ಭದ್ರತಾಮಂಡಳಕ್ಕೆ ತಿಳಿಸಿತು— ಆದರೆ, ಗ್ವಾಟೆಮಾಲಾದ ವಿನಂತಿಯನ್ನು ಅಂತರ ಅಮೇರಿಕಾ ಶಾಂತಿ ಮಂಡಳಿ ಈರ್ಷ್ಯೆಯಿಂದಲೇ ನೋಡುತ್ತದೆ. ಗ್ವಾಟೆಮಾಲ ರಾಜ್ಯದಲ್ಲಿ ಅಲ್ಲಿಯ ಪ್ರಜೆಗಳೇ ಸರಕಾರದ ವಿರುದ್ಧ ಬಿದ್ದಿರುವರೆಂದು ಅಮೇರಿಕದ ಅಂಬೋಣ—ಗ್ವಾಟೆಮಾಲವು ಈಚೆಗೆ ಕಮ್ಯೂನಿಷ್ಟ ರಾಷ್ಟ್ರ ಪೋಲೆಂಡಿನಿಂದ ಒಂದು ಹಡಗು ತುಂಬ ಶಸ್ತ್ರಾಸ್ತ್ರಗಳನ್ನು ತರಿಸಿದುದನ್ನು ಕಂಡ ಅಮೇರಿಕ ಹೀಗೆನ್ನುವುದು ಸಹಜ. ಆದರೆ ಈ ಸಂಭವಗಳಿಗೆ ಅಮೇರಿಕೆಯೇ ಹೊಣೆಯೆಂದು ಗ್ವಾಟೆಮಾಲ ಧ್ವನಿಸುತ್ತದೆ.

ಮಹತ್ವದ ಯಾತ್ರೆ

ಜಾಗತಿಕ ವಾತಾವರಣವು ಮೇಲಿನಂತೆ ಇರುವಾಗಲೇ ಎರಡು ಮಹತ್ವದ ವಾರ್ತೆಗಳನ್ನು ಕೇಳುತ್ತೇವೆ—ಇದೇ ೨೫ನೇ ದಿನಾಂಕ ವಾಷಿಂಗಟನ್ನಿನಲ್ಲಿ ಅಧ್ಯಕ್ಷ ಐಸೆನ ಹೋವರರಿಗೂ ಬ್ರಿಟಿಷ ಪ್ರಧಾನ ಮಂತ್ರಿ ಸರ್ ವಿನ್‌ಸ್ಟನ್ ಚರ್ಚಿಲ್ಲ ಹಾಗು ವಿದೇಶ ಮಂತ್ರಿ ಅಂಥೋನಿ ಈಡನರಿಗೂ ಭೇಟಿ ನಡೆದು, ಮಾತುಕತೆ ಜರಗುವುದು. ಪೂರ್ವ ನಿಯೋಜಿತವಾದ ಈ ಸಂದರ್ಶನವು ಉಭಯ ರಾಷ್ಟ್ರಗಳ ಧೋರಣೆಯಲ್ಲಿ ಈಚೆಗೆ ಕಂಡುಬಂದ ಭಿನ್ನಾಭಿಪ್ರಾಯವನ್ನು ಕೆಲಮಟ್ಟಿಗೆ ಪರಿಹರಿಸಬಹುದು ಇದೇ ಸಮಯದಲ್ಲಿ, ತೀರ ಆಕಸ್ಮಿಕವಾಗಿಯೇ, ಚೀನಿ ಪ್ರಧಾನ ಮಂತ್ರಿ ಚೌ ಎನ್ ಲಾಯರು ಹೊಸದಿಹಲಿಗೆ ಬಂದು, ನೆಹರೂರೊಡನೆ ಸಮಾಲೋಚನೆ ನಡೆಸುವರು. ಜಿನೇವಾದಿಂದ ಪೀಕಿಂಗಿಗೆ, ಮರಳಲಿದ್ದ ಚೀನೀ ಪ್ರಧಾನ ಮಂತ್ರಿಗಳನ್ನು ಹೊಸ ದೆಹಲಿಗೆ ಬಂದು ಹೋಗಬೇಕೆಂದು ಭಾರತ ಸರಕಾರ ವಿನಂತಿಸಿತೆಂದೂ, ಇದನ್ನು ಮನ್ನಿಸಿ ಇದೇ ಗುರುವಾರ (ದಿನಾಂಕ ೨೪) ಚೌ ಎನ್ ಲಾಯರು ಹೊಸದೆಹಲಿಗೆ ಆಗಮಿಸುವರೆಂದೂ ತಿಳಿದು ಬರುತ್ತದೆ. ಚೀನೀ ಪ್ರಧಾನ ಮಂತ್ರಿಗಳು ಭಾರತ ಸರಕಾರದ ಅತಿಥಿಗಳಾಗಿ ರಾಷ್ಟ್ರಪತಿ ಭವನದಲ್ಲಿ ಮೂರು-ನಾಲ್ಕು ದಿನಗಳ ಕಾಲ ತಂಗುವರು. ಅವರನ್ನು ಕರೆತರಲು ವಿಶೇಷ ವಿಮಾನವೊಂದು ದಿನಾಂಕ ೨೨ರಂದು ಹೊರಟಿದೆ. ಚೀನೀ ಪ್ರಧಾನ [illegible] ದೆಹಲಿ ಸಂದರ್ಶನವು ಉಭಯ ರಾಷ್ಟ್ರಗಳ ಬಾಂಧವ್ಯವನ್ನು ಮಧುರವಾಗಿಸುವುದಲ್ಲದೆ, ಜಗತ್ತಿನ ಇಬ್ಬರು ಶ್ರೇಷ್ಠ ರಾಜಕಾರಣಿಗಳ ನಡುವೆ ನಿಕಟ ಸಂಪರ್ಕವನ್ನು ದೃಢಗೊಳಿಸುವುದು ನಿಶ್ಚಯ. ಜಾಗತಿಕ ಪರಿಸ್ಥಿತಿಯ ಮೇಲೆಯೂ ಇದರ ಪರಿಣಾಮವೂ ಗಾಢವಾಗುತ್ತದೆ.

ಉಡುಪಿ

ಬೋರ್ಡ್ ಹ್ಯಾಸ್ಕೂಲು ಹಳೆ ವಿದ್ಯಾರ್ಥಿ ಸಂಘದ—ಆಡಳಿತೆ ಮಂಡಳಿಯ ಸಭೆಯು ಇದೇ ತಾ 19ರಲ್ಲು ಸದ್ರಿ ಶಾಲಾ ಪೀಪಲ್ಸ್ ಹಾಲಿನಲ್ಲಿ ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಈ ಶಾಲೆಯಿಂದ ಕಳೆದ ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ಕುಳಿತ ವಿದ್ಯಾರ್ಥಿಗಳ ಫಲಿತಾಂಶವು ಗಣನೀಯವಿದ್ದು ದ. ಕ. ಜಿಲ್ಲಾ ಬೋರ್ಡಿನ ಗುರಾಣಿಯನ್ನು ಪ್ರಥಮ ಬಾರಿ ಈ ಶಾಲೆಗೆ ದೊರೆಕುವಂತಾಗಲು ಕಾರಣೀಭೂತರಾದ ಶಾಲಾ ಉಪಾಧ್ಯಾಯರನ್ನು ಅಭಿನಂದಿಸುವ ನಿರ್ಣಯವಾಯಿತು. ಮುಂದಿನ ತಿಂಗಳಲ್ಲಿ ಈ ಶಾಲೆಯ ಹಳೆ ವಿದ್ಯಾರ್ಥಿಗಳ ಭೋಜನ ಕೂಟವೊಂದನ್ನು ಇದೇ ಹಾಲಿನಲ್ಲಿ ಜರಗಿಸಬೇಕೆಂದು ನಿಶ್ಚಯಿಸಲಾಯಿತು.

ಸೂರ್ಯ ಗ್ರಹಣ ಪುಣ್ಯಕಾಲ ಎಂಟು ನಿಮಿಷ ಮಾತ್ರ—ಇದೇ ತಾ 30ನೇ ಬುಧವಾರ ಸಂಭವಿಸತಕ್ಕ ಗ್ರಸ್ತಾಸ್ತ ಸೂರ್ಯ ಗ್ರಹಣವು ಉಡುಪಿಗೆ ಸಾಯಂ ಗಂಟೆ 6 51ಕೆ ಗ್ರಾಸಾರಂಭವಾಗಿ 8-24ಕ್ಕೆ ಮೋಕ್ಷವಾಗುವುದು. ಈ ದಿನ ಸೂರ್ಯಾಸ್ತವು 6-59ಕ್ಕೆ ಆದ ಕಾರಣ ಗ್ರಾಹ್ಯ ಪುಣ್ಯಕಾಲ ಎಂಟು ನಿಮಿಷ ಮಾತ್ರವೆಂದು ಶ್ರೀ ಕೃಷ್ಣ ಪಂಚಾಂಗ ಸಂಪಾದಕ ಶ್ರೀ ಪಿ.ಎಲ್. ಅಡಿಗರು ತಿಳಿಸುತ್ತಾರೆ.

ನ್ಯಾಯಾಂಗ ಮತ್ತು ಕಾರ್ಯಾಂಗ ಯೋಜನೆಯು—ಮುಂದಿನ ಜುಲಾಯಿ ತಿಂಗಳಿಂದ ಆರಂಭವಾಗಲಿರುವುದರಿಂದ ಇದೇ ತಾ 19ರಲ್ಲು ದ.ಕ. ಜಿಲ್ಲಾ ಕಲೆಕ್ಟರ್ ಶ್ರೀ ಸೀತಾರಾಮ ಸೆರ್ವೆ ಮತ್ತು ಜುಡೀಶಿಯಲ್ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟ್ ಶ್ರೀ ಪರ್ಬಟ್ ಸುಂದರಂ ಅವರು ಉಡುಪಿಗೆ ಬಂದು ಸಭೆ

ಜೈಲು ಮೊದಲಾದ ಕಟ್ಟಡಗಳನ್ನು ಪರಿಶೀಲಿಸಿದ್ದಾರೆ.

ವಿದ್ಯಾರ್ಥಿ ಸೇವಾ ಸಂಘ—ಬಡ ವಿದ್ಯಾರ್ಥಿಗಳಿಗೆ ಸಹಾಯ ನೀಡುವ ಸದುದ್ದೇಶದಿಂದ ಇದೇ ತಾ. 15ರಲ್ಲಿ ಮಹಾತ್ಮಾ ಗಾಂಧಿ ಸ್ಮಾರಕ ಕಲಾ ಶಾಲೆಯಲ್ಲಿ ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಸೇರಿದ ಸ್ಥಳೀಯ ಕಾಲೇಜು ಪ್ರಿನ್ಸಿಪಾಲರು ಮತ್ತು ಹ್ಯಾಸ್ಕೂಲು ಹೆಡ್ಮಾಸ್ತರರ ಸಭೆಯಲ್ಲಿ 'ವಿದ್ಯಾರ್ಥಿ ಸೇವಾ ಸಂಘ'ವೊಂದನ್ನು ಸ್ಥಾಪಿಸಲಾಯಿತು. ಈ ಸಂಘವನ್ನು ಬಲಿಷ್ಠಪಡಿಸಬೇಕಾಗಿ ನಿರ್ಧಾರವಾದ ಬಳಿಕ ನಾಯಕ ಮಂಡಳಿಗೆ ಶ್ರೀಗಳಾದ ಟಿ. ಎ. ಪೈ, ಎಮ್. ಎಲ್. ಎ. ಅಧ್ಯಕ್ಷ, ಪ್ರಿನ್ಸಿಪಾಲ್ ಎಚ್. ಸುಂದರ ರಾವ್, ಎಂ. ಎ., ಉಪಾಧ್ಯಕ್ಷ ಹಾಗು ಕೋಶಾಧಿಕಾರಿ, ಎ. ಜಿ. ಅಳ್ವೆ ಮತ್ತು ಕೃಷ್ಣ ಭಟ್ಟರು ಜತೆ ಕಾರ್ಯದರ್ಶಿಗಳು, ಡಾ। ವಿ.ಆರ್. ನಾಯಕ್ ಮತ್ತು ಶ್ರೀ ಬಿ. ಶೀನಪ್ಪ ಹೆಗ್ಡೆಯವರು ಸಂಘದ ಸಲಹೆಗಾರರಾಗಿ ಆರಿಸಲ್ಪಟ್ಟರು.

ಕಸ್ತೂರ್ಬಾ ಮೆಡಿಕಲ್ ಕಾಲೇಜಿನ—ಎರಡನೆ ವರ್ಷಾರಂಭ ಸಮಾರಂಭವು ತಾ. 15ರಲ್ಲಿ ನಡೆಯಿತು. ಕಾಲೇಜು ಸ್ಥಾಪನಾಚಾರ್ಯರಾದ ಡಾ। ಟಿ. ಮಾಧವ ಪೈಗಳು ಹೊಸತಾಗಿ ಸೇರಿದ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡುತ್ತಾ ಕಾಲೇಜಿನ ಪೂರ್ವೇತಿಹಾಸವನ್ನು ವಿವರಿಸಿದರು. ಕರ್ನಾಟಕ ಯೂನಿವರ್ಸಿಟಿಯವರು ನಿಯಮಿತ ಐವತ್ತು ಸೀಟುಗಳಿಗಿಂತ ಈ ವರ್ಷ ಹತ್ತು ಸೀಟುಗಳನ್ನು ಹೆಚ್ಚಿಗೆ ಮಂಜೂರು ಮಾಡಿದ ಶುಭ ಸಮಾಚಾರವನ್ನು ಪ್ರಿನ್ಸಿಪಾಲ್ ಕೆಪ್ಟನ್ ಸುಂಗೀರರಾಯರು ತಿಳಿಸಿದರು. ಕಾಲೇಜು ಟ್ರಸ್ಟಿನ ಕಡೆಯಿಂದ ಡಾ। ಎಸ್. ಆರ್. ಪೈ, ಡಾ। ಕೆ. ಎಲ್. ಐತಾಳರೂ ಕಾಲೇಜು ಶಿಬಂದಿ ಪರವಾಗಿ ಡಾ। ಗೋಖಲೆ, ಡಾ। ದಂಡಾಸ್, ಡಾ। ಆನಂದಸ್ವರೂಪರೂ ಕಾಲೋಚಿತ ಮಾತುಗಳಿಂದ ವಿದ್ಯಾರ್ಥಿಗಳಿಗೆ ಹಿತೋಪದೇಶಗಳನ್ನಿತ್ತರು. ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಅವರು ಕಾಲೇಜಿಗೆ ಮದ್ರಾಸು ಸರಕಾರದಿಂದ ದೊರೆತ ಸಹಾಯ, ಸಹಕಾರದ ಕುರಿತು ಮಾತನಾಡಿದರು. ಆರಂಭದಲ್ಲಿ ಶ್ರೀ ಟಿ. ರಮೇಶ ಪೈಗಳು ಕಾಲೇಜು ಟ್ರಸ್ಟಿನ ಹಾಗೂ ಅಧ್ಯಾಪಕರ ಪರಿಚಯವನ್ನು ಹೊಸ ವಿದ್ಯಾರ್ಥಿಗಳಿಗೆ ಮಾಡಿಕೊಟ್ಟರು.

ವನಮಹೋತ್ಸವವನ್ನು — ಜುಲೈ ಪ್ರಥಮ ವಾರದಲ್ಲಿ ಆಚರಿಸುವ ಬಗ್ಗೆ ತಾ. 18ರಲ್ಲಿ ನಗರ ಸಭಾ ಭವನದಲ್ಲಿ ಜರಗಿದ ಸಭೆಯೊಂದರಲ್ಲಿ ಶ್ರೀ ಯು. ಎಸ್. ನಾಯ್ಕರು ಅಧ್ಯಕ್ಷ, ಕಮಿಶನರು ಕಾರ್ಯದರ್ಶಿಯಾಗುಳ್ಳ ಕಮಿಟಿಯೊಂದು ರಚಿಸಲ್ಪಟ್ಟು ಕಾರ್ಯಕ್ರಮ ನಿರ್ಧರಿಸಲ್ಪಟ್ಟಿರುವುದಾಗಿಯೂ ಸಾರ್ವಜನಿಕರು ಸಹಕರಿಸಬೇಕಾಗಿಯೂ ಕಮಿಶನರು ತಿಳಿಸುತ್ತಾರೆ.

ವರ್ಗಾವರ್ಗಿ—ಪೋಸ್ಟಲ್ ಇನ್ಸ್‌ಪೆಕ್ಟರರಾಗಿದ್ದ ಶ್ರೀ ಎಸ್. ಎಸ್ ರಾಜನರಿಗೆ ಬಳ್ಳಾರಿ ಸಬ್ ಡಿವಿಜನಿಗೆ ವರ್ಗವಾಗಿದ್ದು ಅವರ ಬದಲಿಗೆ ಶ್ರೀ ಕುಟ್ಟಿಕೃಷ್ಣ ಮೇನನ್ ಎಂಬವರು ಬಂದಿರುತ್ತಾರೆ. ಮೊದಲಿನವರನ್ನು ಕಳುಹಿಸಿ ಕೊಡುವ ಸಮಾರಂಭವೊಂದು ಶ್ರೀ ಕೆ. ಎಲ್. ಎನ್. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಹೆಡ್‌ಪೋಸ್ಟ್ ಆಫೀಸಿನಲ್ಲಿ ತಾ. 22ರಲ್ಲಿ ಜರಗಿ ಶ್ರೀಗಳಾದ ಎಂ. ಎಸ್. ರಾವ್, ಕೆ. ಗೋವಿಂದ ರಾವ್, ಸಿ. ಆರ್. ನಾಯ್ಕ, ರಘು ಶೆಟ್ಟಿ, ಬಂದ ಮತ್ತು ಹೋಗುವ ಇನ್ಸ್‌ಪೆಕ್ಟರರುಗಳ, ಹಾಗೂ ಅಧ್ಯಕ್ಷರ ಭಾಷಣಗಳಾದುವು.

NAVAYUGA WEEKLY

ADVERTISEMENT RATES

Display Advertisements:— Rs. 2/- per column inch for contracts of 50" or more and Rs. 3/- per column inch for casual advertisements.

Classified Advertisements:— As. 8/- per line (minimum 8 lines).

For rates for advertising in colours and special positions, please write to:

ADVERTISEMENT MANAGER,
'NAVAYUGA'
Post Box No. 22, UDIPI, S. K.



ನಾ ಕಂಡ ಜೋಡಾಟ

ಯಕ್ಷಗಾನವು ಕರ್ಣಾಟಕದ ಸಾಮಾನ್ಯ ಜನತೆಯ ಮೆಚ್ಚುಗೆಯನ್ನು ಪಡೆದ ಒಂದು ಕಲೆ. ಇದು ಪಾಶ್ಚಿಮಾತ್ಯ ನಾಗರೀಕತೆಯ ಪರಿಣಾಮವಾಗಿ ಕಳೆಗುಂದುತ್ತಾ ಬಂದಿದ್ದರೂ ಇತ್ತೀಚೆಗೆ ಕೆಲವು ವಿದ್ಯಾವಂತ ಮಹನೀಯರು ಪ್ರೋತ್ಸಾಹಿಸುತ್ತಿರುವುದು ತುಂಬಾ ಸಂತೋಷದ ಸಂಗತಿಯಾಗಿದೆ.

ತಾ 17-4-1954ರಂದು ಕುಂದಾಪುರ ಬೋರ್ಡು ಹೈಸ್ಕೂಲಿನ ಹಳೇ ವಿದ್ಯಾರ್ಥಿ ಸಂಘದವರು ಯಕ್ಷಗಾನ ಜೋಡಾಟವನ್ನು ಯಶಸ್ವಿಯಾಗಿ ಜರಗಿಸಿರುವ ಸಂಗತಿಯು ಜಿಲ್ಲೆಯ ಲ್ಲೆಲ್ಲಾ ವ್ಯಾಪಿಸಿರುವುದು. ಹಳೇ ವಿದ್ಯಾರ್ಥಿ ಸಂಘವು ಇಲ್ಲಿ ತೋರಿಸಿದ ಚತುರತೆಯಿಂದ ನಮ್ಮ ಜಿಲ್ಲೆಯ ಇನ್ನಾವ ಕಡೆಗಳಲ್ಲಿಯೂ ತೋರಿಸಲಿಕ್ಕಿಲ್ಲವೆಂದು ಅನೇಕರ ಬಾಯಿಂದ ಬಂದ ಮಾತಾಗಿದೆ.

ಈ ಹಳೇ ವಿದ್ಯಾರ್ಥಿ ಸಂಘದ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಮೇಳಗಳೆರಡು ಅಂದು ರಾತ್ರಿ ಗಂಟೆ 9—30ಕ್ಕೆ ಸರಿಯಾಗಿ ರಂಗ ಮಂಟಪವನ್ನು ಪ್ರವೇಶಿಸಿದುವು. ಇವರ ಗ ದ್ದಾಯಕ್ಕೆ ಅಂದರೆ ಉಡಿಗೆ ತೊಡಿಗೆ, ವೇಷ ಸಿದ್ಧತೆಗಳ ಬಗ್ಗೆ ಶ್ರೀ ನಾರಣ ಶೆಟ್ಟಿ ಮತ್ತು ಶ್ರೀ ಅನಂತೇಶ್ವರ ಮೇಳಗಳೆರಡು ನೆರವಾಗಿ ದ್ದವು. 'ಟಿಕೇಟಿ'ನ ಆಟವಾದರೂ ಕಿಕ್ಕಿರಿದ ಜನಸಂದಣಿ ಇತ್ತು. ಸೂರ್ಯೋದಯದವರೆಗೂ ಸಂತೋಷದಿಂದ ಆಟವಾಡಿ ತೋರಿಸಿದ ಎರಡೂ ಮೇಳಗಳ ಎಲ್ಲಾ ಪಾತ್ರವರ್ಗದವರ ಕಾರ್ಯವನ್ನು ನಿಜವಾಗಿ ಹೊಗಳಬೇಕಾದುದು. ಅಂದಿನ ಕಥಾಭಾಗ ಲವಕುಶರ ಕಾಳಗ ಮತ್ತು ಕರ್ಣಾರ್ಜುನರ ಕಾಳಗವಾಗಿತ್ತು.

ಈ ಜೋಡಾಟದ ಇನ್ನೊಂದು ವೈಶಿಷ್ಟ್ಯ ವೆಂದರೆ ಶಿಸ್ತು ಮತ್ತು ಸಭ್ಯತೆ. ನಮ್ಮೂರಿನಲ್ಲಿ ಆಗುವ ಜೋಡಾಟಗಳಲ್ಲಿ ಆಡುವ ನೋಟದವರೋ, ಆಡಿಸುವ ಮಹನೀಯರೋ ಶಿಸ್ತಿನ ಕಡೆಗೆ ಹೆಚ್ಚಾಗಿ ಗಮನ ಕೊಟ್ಟಂತೆ ಕಂಡು ಬರುವುದಿಲ್ಲ. ಒಂದೆರಡು ಕಡೆಗಳಲ್ಲಿ ಈ ಶಿಸ್ತನ್ನು ಕಾಪಾಡುವ ಸಂದರ್ಭದಲ್ಲಿ ವಿಚಾರವು ವಿಪರೀತಕ್ಕೆ ಏರಿದುದೂ ಉಂಟು. ಆಡಿಸುವವರು ಅಬಲರಾದರೆ ಮೇಳ ನೋಡಿಗರೊಳಗೆ ಕಚ್ಚಾಟ, ಅಷ್ಟೇ 'ಸ್ಥಳನಂದಿಗ'ರೆಂಬ ಪಕ್ಷದವರೊಳಗೆ ಹಾರಾಟ. ಕೆಲವು ಸಾರಿ ಮಾರಾಮಾರಿ. ಹೀಗೆ ಜೋಡಾಟವು ಹೋರಾಟ ವಾದುದೂ ಉಂಟು. ಇಂತಹ ಕಂಡು ಕೇಳಿ ಕಿನಗಳನ್ನು ಜೋಗುಳಾಡಿಸುವ ಸಲುವಾಗಿ ಆಡಿದ ನಾಡದರಿಯ ಜೋಡಾಟ ಎಂದರೂ ತಪ್ಪಾಗಲಾರದು. ಕೆಲವು ವಿಚಾರಗಳಲ್ಲಿ ಈ ಎರಡು ಮೇಳಗಳಲ್ಲಿ ಹೋರಾಟ ಉಂಟಾಗಿದ್ದರೂ ಪ್ರೇಕ್ಷಕರ ಮನಸ್ಸಿಗೆ ಬೇಸರವಾಗದಂತೆ ಕೊನೆಯವರೆಗೂ ತಮ್ಮ ಚಾತುರ್ಯವನ್ನು ಪ್ರದರ್ಶಿಸಿದ್ದುದು ಸ್ತುತ್ಯ ಕಾರ್ಯ.

ಯಕ್ಷಗಾನದ ಹಳೆಯ ಪದ್ಧತಿಗಳನ್ನು ಮೊಗಲಾಡಿಸಿ ಹಳೆಯ ರೀತಿಯ ರೂಪ ರೇಖೆಗಳನ್ನು ತೋರಿಸಿದವರಲ್ಲಿ ಇದು ಕುಂದಾಪುರದ ಈ ಹಳೆ ವಿದ್ಯಾರ್ಥಿ ಸಂಘದವರು. ಯಾವ ಸಾಹಿತ್ಯವೂ ಇದ್ದಂತೆ ಇರುವುದಿಲ್ಲ. ಕಾಲಕ್ಕೆ ತಕ್ಕಂತೆ ಸಾಹಿತ್ಯವೂ ಬದಲಾಗುವುದು. ಯಕ್ಷಗಾನದಲ್ಲಿಯೂ ಈ ರೀತಿಯ ಪರಿವರ್ತನೆ ಅಗತ್ಯ ಎಂಬುದನ್ನು ತೋರಿಸಿಕೊಟ್ಟವರು ಈ ಸಂಘದವರು.

ಪ್ರಥಮ ಪ್ರಸಂಗವಾದ ಲವಕುಶರ ಕಾಳಗವು ಮೊದಲನೆಯಲ್ಲಿ ಸಾಗುತ್ತಿತ್ತು. ಆನಂತರ ಕರ್ಣಾರ್ಜುನರ ಕಾಳಗವು ಆಗುತ್ತ ಜನರನ್ನು ಬೆರಗುಗೊಳಿಸುವ ಸನ್ನಿವೇಶದಿಂದೊಡಗೂಡಿತ್ತು. ಅಧ್ಯಕ್ಷರ ಮೇಳದಿಂದ ಶ್ರೀ ಯತ್ತರೆ ಮಂಜಯ್ಯ ಸೆಟ್ಟಿ ಬಿ. ಎ. ಬಿ. ಎಲ್, ಎಂ. ಎಲ್. ಎ. ಅವರ ಕೌರವನ ಪಾತ್ರವು 'ತೆರೆ' (ಪರದೆ)ಯನ್ನು ದಾಟಿ ಹೊರಕ್ಕೆ ಬರುವಾಗ ಕೋಟೇಶ್ವರ ಬೋರ್ಡು ಹೈಸ್ಕೂಲಿನ ಮುಖ್ಯೋಪಾಧ್ಯಾಯರಾದ ಶ್ರೀ ಸುಬ್ರಾಯ ಉರಾಳ ಬಿ. ಎ ಎಲ್. ಟಿ. ಯವರ ಕೌರವನ ಪಾತ್ರವು ಉಪಾಧ್ಯಕ್ಷರ ಮೇಳದಿಂದ ಇದಿರಾಗಿ ಬಂತು. ಆ ಸಮಯ ಜನರ ಮನಸ್ಸಿನಲ್ಲುಂಟಾದ ಸಂತೋಷವನ್ನು ಹೇಳತೀರದು. ಇಬ್ಬರ ಪಾತ್ರವೂ ಬಾಹುಲ್ಯದಿಂದ ತೋಳಿಸುತ್ತಿತ್ತು. ಶ್ರೀ ಸೆಟ್ಟರ ಅಭಿನಯವೂ ಶ್ರೀಯುತ ಉರಾಳರ ಮಾತುಗಾರಿಕೆಯೂ ಜನಮೆಚ್ಚುಗೆಯನ್ನು ಪಡೆದಿತ್ತು.

ಅಧ್ಯಕ್ಷರ ಮೇಳದ ಶ್ರೀ ಕೆ. ಸಂಜೀವ ರಾಯರ ಮತ್ತು ಉಪಾಧ್ಯಕ್ಷ ಮೇಳದ ಶ್ರೀ ಕೊಳ್ಕೆಬೈಲು ಸೂರಪ್ಪ ಸೆಟ್ಟಿ ಬಿ. ಎ. ಬಿ. ಎಲ್. ಇವರ ಕರ್ಣನ ಪಾತ್ರಗಳು ಹೊಗಳಿಕೆಗೆ ಯೋಗ್ಯವಾದವುಗಳೇ, ಶ್ರೀ ಸಂಜೀವ ರಾಯರು ಯಕ್ಷಗಾನದ ಸರಿಯಾದ ಪರಿಚಯ ಪಡೆದವರು. ಶ್ರೀ ಸೂರಪ್ಪ ಸೆಟ್ರು ಯಕ್ಷಗಾನಕ್ಕೆ ಹೊಸಬರಾಗಿದ್ದು ಈ ಪ್ರಧಾನ ಪಾತ್ರವನ್ನು ಇಷ್ಟು ಉತ್ತಮ ಮಟ್ಟದಲ್ಲಿ ಅಭಿನಯಿಸುವರೆಂಬುದನ್ನು ಯಾರೂ ಎಣಿಸಿರಲಿಲ್ಲ. ಮಾತ್ರವಲ್ಲದೆ ಇವರಿಬ್ಬರೂ ಕರ್ಣನ ಪಾತ್ರದಲ್ಲಿ ಅನೇಕ ನವೀನ ರೀತಿಯನ್ನು ಕಲ್ಪಿಸಿ ಜನತೆಯ ಮುಂದೆ ತೋರಿಸಿರುವರು. ಉಪಾಧ್ಯಕ್ಷರ ಮೇಳದ ಶ್ರೀ ಪರಮೇಶ್ವರಯ್ಯ ಬಿ. ಎ. ಬಿ. ಎಲ್. ಇವರ ಶಲ್ಯನ ಪಾತ್ರವು ಪ್ರಶಂಸನೀಯವಾಗಿತ್ತು.

ಕೊನೆಯದಾಗಿ ಹೇಳಬೇಕಾದುದು ಉಪಾಧ್ಯಕ್ಷರ ಮೇಳದ ಅರ್ಜುನನ ಪಾತ್ರ. ಕುಂದಾಪುರದ ಪ್ರಸಿದ್ಧ ಸಾಹಿತ್ಯಾಭಿಮಾನಿಗಳೂ ಉತ್ಸಾಹೀ ತರುಣ ವಕೀಲರೂ ಆದ ಶ್ರೀ ಎಸ್. ಮುತ್ತಯ್ಯ ಹೆಗ್ಗಡೆಯವರು ಈ ಪಾತ್ರವನ್ನು ವಹಿಸಿದ್ದರು. ನರ್ತನ, ಅಭಿನಯ, ಮಾತುಗಾರಿಕೆ ಎಲ್ಲಾ ವಿಚಾರಗಳಲ್ಲಿ ಮೇಳದವರನ್ನು ಬೆರಗುಗೊಳಿಸಿದ ಪಾತ್ರ ಇವರದು. ಶುದ್ಧವಾದ ಯಕ್ಷಗಾನ ನರ್ತನವು ಶಾಸ್ತ್ರೀಯ ರೀತಿಯಾಗಿರುವಂತೆ ಅಭಿನಯಿಸಿದ ಇವರ ಅಭಿನಯವು ಎಲ್ಲರ ಮನಮೋಹಕವಾಗಿತ್ತು. ಬಯಲಾಟಗಳಲ್ಲಿ ಹೆಸರನ್ನು ಪಡೆದ ವೇಷಧಾರಿಗೂ ಮೂಗಿನ ಮೇಲೆ ಬೆರಳಿಡುವಂತೆ ಮಾಡಿತು. ಶ್ರೀ ಹಿರಿಯಣ್ಣ ಸೆಟ್ರ ಕೃಷ್ಣನ ಪಾತ್ರವು ಇವರಷ್ಟೇ ಸ್ತುತಿಯೋಗ್ಯವಾಗಿತ್ತು.

ಆ ರಾತ್ರೆ; ಅದೊಂದು ಯಾತ್ರೆ: ಕಣ್ಣಿಗೂ ಮನಸ್ಸಿಗೂ ಪುಣ್ಯಯಾತ್ರೆ: ಯಕ್ಷಗಾನ ಕಲಾಭಿಮಾನಿಗಳಿಗೆ ರಸದೂಟ; ವಿದ್ಯಾವಂತ ತರುಣರ ಸಂತೋಷದ ಕೂಟ; ವಿವಿಧ ಪಾತ್ರಗಳ ಸೌಂದರ್ಯದ ನೋಟ; ಅಧ್ಯಕ್ಷ, ಉಪಾಧ್ಯಕ್ಷ ಮೇಳಗಳ ಬಯಲಾಟ ಅದೇ ನಾ ಕಂಡ ಜೋಡಾಟ.

ಕೆ. ಶೇಷಪ್ಪ ಹೆಗ್ಡೆ, ಅಧ್ಯಾಪಕ,
ಬೊ. ಹೈಸ್ಕೂಲ್, ಕುಂದಾಪುರ.

ಶಿಲಿನೂರು—ಸ್ಥಳೀಯ ಬೋರ್ಡು ಹಾ। ಎ। ಶಾಲಾ ಸಹಾಯಕ ಅಧ್ಯಾಪಕರಾಗಿ 19 ವರ್ಷಗಳ ತನಕ ಸೇವೆ ಸಲ್ಲಿಸಿ ಇದೀಗ ಉದ್ಯೋಗದಿಂದ ನಿವೃತ್ತರಾಗಲಿರುವ ಶ್ರೀ. ಪಾನೆಬೆಟ್ಟು ರಾಮರಾಯರಿಗೆ ವಿದಾಯವನ್ನೀಯುವ ಸಮಾರಂಭವು ಕೇಂದ್ರ ಶಾಲಾ ಅಧ್ಯಾಪಕ ಸಂಘದ ಸಭೆಯ ಆಶ್ರಯದಲ್ಲಿ ಜರಗಿತು. ಶಿಲಿನೂರು ಶಾಲಾ ಹೆಡ್ಮಾಸ್ತರ್ ಶ್ರೀ. ಕೆ. ವೆಂಕಟ್ರಾಯ ಪೈಗಳು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳ ಗುಣಗಾನವಾದ ನಂತರ ಅವರಿಗೆ ಬೆಳ್ಳಿಯ ತಟ್ಟೆ ಇತ್ಯಾದಿ ಪಾರಿತೋಷಕವೀಯಲಾಯಿತು.

ಪ್ರೊಹಿಬಿಶನ್ ಎಡ್ವೈಸರಿ ಕಮಿಟಿ ಸಭೆಯು ಇದೇ ತಾ. 19ರಲ್ಲು ಶಿಲಿನೂರು ಕೇಂದ್ರದಲ್ಲಿ ಕುಂದಾಪುರ ರೆವಿನ್ಯೂ ಡಿವಿಜನಲ್ ಆಫೀಸರ್ ಶ್ರೀ. ಯಸ್. ಯು. ಪಿ. ನಾಯಕ್, ಅವರ ಅಧ್ಯಕ್ಷತೆಯಲ್ಲಿ ಜರಗಿತು.

ಅಂಗಡಿಮೊಗರು—ಪುತ್ತೂರು ರೆವಿನ್ಯೂ ಡಿವಿಜನಲ್ ಆಫೀಸರ್ ಶ್ರೀ. ಬಿ. ಎನ್. ಹೆಗ್ಡೆಯವರು ಇದೇ ತಾ. 18ರಂದು ಅಂಗಡಿ ಮೊಗರು ಗ್ರಾಮಕ್ಕೆ ಸ್ಥಳತನಿಕೆ ಕಾರ್ಯಕ್ಕಾಗಿ ಬಂದರು.

ಕಟಪಾಡಿ—ಕಟಪಾಡಿಬೀಡು ಶ್ರೀ. ಸಂಜೀವ ಬಲ್ಲಾಳರ ಪುತ್ರಿ ಶ್ರೀಮತಿ ರಾಜೀವಿಯನ್ನು ಪಿಲಾರ್ ಕಂಕಣಗುತ್ತು ಶ್ರೀ ವಾಸು ಸೆಟ್ಟರ ಪುತ್ರ ಶ್ರೀ. ಬಾಲಕೃಷ್ಣ ಹೆಗ್ಡೆಯವರು ಇದೇ ತಾ. 17ರಲ್ಲು ಸ್ಥಳೀಯ ಶ್ರೀ ವೆಂಕಟ್ರಮಣ ಸ್ವಾಮಿ ಹಾ। ಎ। ಶಾಲಾ ಕಟ್ಟಡದಲ್ಲಿ ಬಹು ವಿಜೃಂಭಣೆಯಿಂದ ವಿವಾಹವಾದರು.

ಬೆಣ್ಣೆ ಕುದುರಿನಲ್ಲಿ ಸತ್ಯಾಗ್ರಹವೇ?

ಉಡುಪಿ ತಾಲೂಕಿನ ಬೆಣ್ಣೆ ಕುದುರು ಎಂಬುದು ಬಾರ್ಕೂರು ಬ್ರಹ್ಮಾವರಗಳಿಗೆ ಸಮೀಪವಿರುವ ಸೀತಾನದಿಯಿಂದ ಸುತ್ತುವರಿಯಲ್ಪಟ್ಟ ಒಂದು ಕುದುರು. ಅಲ್ಲಿಯ ನಿವಾಸಿಕರಿಗೆ ಗೋಚರಾವಿಗೂ ದನದ—ದಫನಕ್ಕೂ ಉಪಯುಕ್ತವಾದ ಸ್ಥಳವೆಂದರೆ ಏಳು ಎಕ್ರೆಯ ಒಂದು ಪೈದಾನು ಮಾತ್ರ. ಇಂಥಾ ಸ್ಥಳವನ್ನು 1920ರಲ್ಲಿ ಆಸುಪಾಸಿನ ಕೆಲ ಧನಿಕರು ದರಖಾಸ್ತಿಗೆ ಕೇಳಿದಾಗ ಆಗಿನ ಜಿಲ್ಲಾ ಕಲೆಕ್ಟರರು ವಿಚಾರಣೆ ನಡೆಸಿ ಅದನ್ನು ದರಖಾಸ್ತಿಗೆ ಕೊಡಕೂಡದೆಂದು ಪ್ರೊಹಿಬಿಟರಿ ರಿಜಿಸ್ಟ್ರಿಯಲ್ಲಿ ದಾಖಲ್ಮಾಡಿಸಿದ್ದರು. 1950ರಲ್ಲಿ ಈ ಸ್ಥಳವನ್ನು ರಾಜಕೀಯಸಂತ್ರಸ್ತನೆಂದು ಶ್ರೀ ಬಿ. ಅಂತಯ್ಯ ಶೆಟ್ಟರು ಶಿಫಾರಸು ಮಾಡಿಸಿಕೊಂಡರು. ಇದನ್ನು ತಿಳಿದ ರೈತರು 1952ರ ಆರಂಭದಲ್ಲಿ ಈ ವಿಚಾರವನ್ನು ಶ್ರೀ ಎಸ್. ಎಸ್. ಕೊಳ್ಕೆಬೈಲ್, ಎಂ. ಎಲ್. ಎ. ಅವರಿಗೆ ನಿವೇದಿಸಿಕೊಂಡರು. ಅವರ ಪ್ರಯತ್ನದ ಫಲವಾಗಿ ಆಗಿನ ಜಿಲ್ಲಾ ಕಲೆಕ್ಟರ್ ಶ್ರೀ. ಪಿ. ಎ. ರಾಮಕೃಷ್ಣನವರಿಂದ ತನಿಖೆ ನಡೆದು, ಆ ಸ್ಥಳವನ್ನು ದರ್ಖಾಸ್ತಿಗೆ ಯಾ ಗೇಣಿಗೆ ಕೊಡಬಾರದೆಂಬ ಶಿಫಾರಸಿನಂತೆ ರೆವಿನ್ಯೂ ಬೋರ್ಡಿನವರು 31—5—53 ರಲ್ಲಿ ಸದ್ರಿ ಶ್ರೀ. ಅಂತಯ್ಯ ಶೆಟ್ರು ಸ್ಥಳವನ್ನು ಸ್ವಾಧೀನ ಪಡಿಸಿಕೊಂಡಿದ್ದರೂ ಅವರನ್ನೆಬ್ಬಿಸಬೇಕೆಂದು ಹುಕುಂ ಕೊಟ್ಟರು. ಶೆಟ್ರು ಆನಂತರ ಮಾಡಿದ ಅರ್ಜಿ ತಿರಸ್ಕೃತವಾದರೂ ಅವರು ಮದ್ರಾಸ್ ಸೆಕ್ರೆಟರಿಯೇಟಿನೆದುರು ಸತ್ಯಾಗ್ರಹ ನಡೆಸಿ ಆ ಸ್ಥಳದ ಮೇಲಿನ 7 ವರ್ಷಗಳ ವರೆಗಿನ ಗೇಣಿ ಹಕ್ಕನ್ನು ಪಡಕೊಳ್ಳಲು ಸಮರ್ಥರಾದರು. ತಾ. 3—6—54ರಲ್ಲಿ ಶ್ರೀ. ಶೆಟ್ರು ಆ ಸ್ಥಳವನ್ನು ಪೋಲೀಸರ ಸಹಾಯದಿಂದ ಸ್ವಾಧೀನಪಡಿಸಿ ಕೊಂಡಿರುವರೆಂದೂ ಈಗ ರೈತರೆಲ್ಲಾ ಇದನ್ನು ಪ್ರತಿಭಟಿಸುತ್ತಿರುವರೆಂದೂ, ಶ್ರೀ ಎಸ್. ಎಸ್. ಕೊಳ್ಕೆಬೈಲರ ಮುಂದಾಳುತ್ವದಲ್ಲಿ ರೈತರು ಸಾಮೂಹಿಕ ಸತ್ಯಾಗ್ರಹ ಹೂಡಿ ನ್ಯಾಯ ದೊರಕಿಸಲು ಸಿದ್ಧರಾಗುತ್ತಿದ್ದಾರೆಂದೂ ರೈತರೊಬ್ಬರು ಬರೆಯುತ್ತಾರೆ.

ಮುಲ್ಕಿ—ಸ್ಥಳೀಯ ಯೂನಿಯನ್ ಕ್ಲಬ್ಬಿನ 39ನೇ ವಾರ್ಷಿಕೋತ್ಸವವೂ ದಿವಂಗತ ಡಾ। ಬೋಳ ಶ್ಯಾಮರಾಯರ ಜನ್ಮ ದಿನಾಚರಣೆಯೂ, ದಿವಂಗತ ದೇಶಭಕ್ತ ಕಾರ್ನಾಡು ಸದಾಶಿವರಾಯರ ತೈಲಚಿತ್ರ ಅನಾವರಣ ಸಮಾರಂಭವೂ ಇದೇ ತಾ 16—6—1954ನೇ ಬುಧವಾರ ಶ್ರೀ ಯಂ. ಶಿದ್ದು ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ಯಂ. ಪಿ. ದೇವರಾವ್, ಬಿ. ಎ., ಎಲ್. ಟಿ. ಇವರು ಡಾ। ಬೋಳ ಶ್ಯಾಮರಾಯರ ಸಂಕ್ಷಿಪ್ತ ಜೀವನ ವೃತ್ತದ ವಾಚನ ಮಾಡಿದರು. ಡಾ| ಯಂ. ಆರ್. ಕಾಮತರು ಕೇಳಿಕೊಂಡ ಪ್ರಕಾರ ಶ್ರೀ ಕೆ. ವಿಠಲ ಶೆಣೈ, ಬಿ. ಎ., ಎಲ್. ಟಿ. ಇವರು ಕಾರ್ನಾಡು ಸದಾಶಿವರಾಯರ ತೈಲ ಚಿತ್ರವನ್ನು ಅನಾವರಣ ಮಾಡಿದರು. ಗತ ವರ್ಷದ ವರದಿವಾಚನ, ಚಾಲ್ತಿ ವರ್ಷದ ಮುಂಗಡ ಪತ್ರದ ಮಂಜೂರಾತಿ, ಕಾರ್ಯಕಾರಿ ಸಮಿತಿಯ ಸದಸ್ಯರ ಮತ್ತು ಗೌರವ ಲೆಕ್ಕ ಪರಿಶೋಧಕರ ಆಯ್ಕೆ, ಅಧ್ಯಕ್ಷರ ಭಾಷಣಗಳಾದಮೇಲೆ ಶ್ರೀ ಜಿ. ಎಸ್. ಮುಲ್ಕಿ ಇವರು ವಂದನಾರ್ಪಣ ಮಾಡಿದರು. ಲಘು ಉಪಹಾರದೊಂದಿಗೆ ಸಮಾರಂಭವು ಕೊನೆಗೊಂಡಿತು.

ಹೊಸ ಕಾರ್ಯಕಾರಿ ಸಮಿತಿಯ ಸಭೆಯು ತಾ 20—6—54ರಲ್ಲು ಜರಗಿ ಶ್ರೀ ಯಂ. ಆರ್. ಯಚ್. ಪೂಂಜ (ಅಧ್ಯಕ್ಷ), ಶ್ರೀ ಎ. ಯಂ. ಯಲ್. ಡಿಸೋಜ (ಉಪಾಧ್ಯಕ್ಷ) ಶ್ರೀ ಯಂ. ಉಮೇಶ ರಾವ್ (ಕೋಶಾಧಿಕಾರಿ), ಶ್ರೀ ಜಿ. ಎಸ್. ಮುಲ್ಕಿ (ಕಾರ್ಯದರ್ಶಿ), ಶ್ರೀ ಯಂ. ಯಚ್. ರಾವು (ಉಪಕಾರ್ಯದರ್ಶಿ) ಹೀಗೆ ಚಾಲ್ತಿ ವರ್ಷಕ್ಕೆ ಸರ್ವಾನುಮತದಿಂದ ಆರಿಸಲ್ಪಟ್ಟರು.

ಹೆಜಮಾಡಿ—ಸ್ಥಳೀಯ ಬೋರ್ಡ್ ಹೈಸ್ಕೂಲಿನ ಕನ್ನಡ ಪಂಡಿತರಾದ ಶ್ರೀ ಕೆ. ಕೆ. ಉಡುಪ, ಇವರು ಇಲ್ಲಿಂದ ವರ್ಗಾಯಿಸಲ್ಪಟ್ಟಿರುವುದರಿಂದ ಅವರನ್ನು ವಿದ್ಯಾರ್ಥಿಗಳು ಅಧ್ಯಾಪಕ ವೃಂದದವರು ತಾ 18—6—1954 ರಲ್ಲು ಒಂದು ವಿದಾಯ ಸತ್ಕಾರ ಕೂಟವನ್ನು ಏರ್ಪಡಿಸಿದ್ದರು.

ಕೆಮ್ಮಣ್ಣು—ಪಡುಮನೆ ತುಂಗಮ್ಮ ಶೆಡ್ತಿ ಯವರು ಸ್ವಲ್ಪ ಸಮಯದಿಂದ ಅನಾರೋಗ್ಯದಿಂದಿದ್ದು ತಾ 21—6—54ರಂದು ತಮ್ಮ 80ನೇ ವಯಸ್ಸಿನಲ್ಲಿ ಸ್ವರ್ಗಸ್ಥರಾಗಿರುವರೆನ್ನಲು ವಿಷಾದವಾಗುತ್ತದೆ. ಮೃತರು ಸರಳ ಸಾಧು ಸ್ವಭಾವದವರೂ, ಕಷ್ಟ ಸಹಿಷ್ಣುಗಳೂ, ಸಾಹಸಿಗರೂ ಬಡವರ ಬಂಧುಗಳೂ ಆಗಿದ್ದರು. ಕೆಮ್ಮಣ್ಣು ಪಡುಮನೆಯ ಕುಟುಂಬಿಕರಲ್ಲಿ ಇವರೇ ಹಿರಿಯರೂ ಪ್ರಾಯಸ್ಥರೂ ಆಗಿದ್ದರು. ಮೃತರ ದುಃಖೀ ಬಂಧು ಬಳಗದವರೊಡನೆ ನಾವೂ ಸಹಾನುತಾಪ ಪಡುವೆವು.

WANTED agents to secure mail orders only on commision basis for our art silk and cotton carpets. For samples and terms of business please apply in English to,

The Prabhath Industrials,
Carpet Manufacturers,
Post Box No. 15, BHAVANI.
Via. Erode. S. I.

ಋತುಸ್ರಾವ ನಿಂತಿತು

"ಕುಮಾರ" ಪಿಲ್ಸುಗಳನ್ನು ಉಪಯೋಗಿಸಿದರೆ ಹದಿನೈದು ಋತುಸ್ರಾವವಾಗುವುದು, ಶಕ್ತಿಯೂ ಬರುವುದು. ಈ ಔಷಧ ಸೇವನೆಯಿಂದ ಶೀಘ್ರ ಗುಣಹೊಂದಬಹುದು. ಯಾವ ಬಾಧಕವೂ ಇಲ್ಲ. ನಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ: ರೂ. 3/-; ಸ್ಪೆಶ್ಯಲ್ ರೂ. 6-, ಅತಿಶಾಧಿಕ ಸ್ಪೆಶ್ಯಲ್ ರೂ. 8-[ವಿ. ಪಿ. ಹನ್ನೆರಡಾಣೆ ಪ್ರತ್ಯೇಕ]

Mrs. P. DEVEE, F.DS.(N.J.)
CALCUTTA. 40
ಸ್ಟಾಕಿಸ್ಟರು: ಶಿವಾಕಂಪೆನಿ, ಮಂಗಳೂರು.

ನಡೆಯುವ ಚಿತ್ರ:—

ಸಂಧ್ಯಾ [ಹಿಂದಿ]

ಮಧುಬಾಲಾ ಮತ್ತು ಅಜಿತ್ ನಟಿಸಿರುವರು.

ಮುಂದಿನ ಚಿತ್ರಗಳು:—

ವೇಲೆಕ್ಕಾರೆನ್, ರಾಣಿ, ಸ್ವಪ್ನಸುಂದರಿ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಎಲ್ಲಾ ತರದ ಮಾಹಿತಿಯನ್ನೊಳಗೊಂಡ ಉತ್ತಮ ತರದ

ಮಗ್ಗಿ ಪುಸ್ತಕಗಳು

ರಖಂ ಆಗಿಯೂ
ಚಿಲ್ಲರೆಯಾಗಿಯೂ ದೊರೆಯುತ್ತವೆ
1000 ಯಾ 500ಕ್ಕೆ ಅತೀ ರಿಯಾಯಿತಿ ಇದೆ.
ಉತ್ತಮ ಕಾಗದದ, ದಪ್ಪನಾದ ಹೊರಕವಚದ, ಎಲ್ಲಾ ತರದ
ಎಕ್ಸರ್ ಸೈಜ್
ಪುಸ್ತಕಗಳು ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ. ದ. ಕ.

ಸ್ವೀಕಾರ—ವಿಮರ್ಶೆ

ಕನ್ನಡ ಕುಲದೀಪ ಬಸವಣ್ಣ—

ಬರೆದವರು: ಸಿಂಪಿ ಲಿಂಗಣ್ಣ. ಪ್ರಕಾಶಕರು: ಮಿಂಚಿನ ಬಳ್ಳಿಯ ಚಾವಡಿ, ಜವಳೀ ಪೇಟೆ, ಧಾರವಾಡ. ಬೆಲೆ: ರೂ. ೧—೦—೦.

ಮಾದಲಾಂಬಿಕೆಯ ಮಗನಾಗಿ ಜನಿಸಿದ ಬಸವಣ್ಣನವರು ಕನ್ನಡಾಂಬಿಕೆಯ ಪಾಲಿಗೆ ಶರಣರಾಗಿ ಕಾಣಿಸುವರು. ಅವರದು ದೇವನೊಲಿದ ಜಾತಿ. ಸಂಗನ ಬಸವ ಎಂದವರನ್ನು ಕರೆದರೂ ತಪ್ಪಾಗದು. ಬಸವಣ್ಣನವರು ಮಾನವನ ವಿಕಾರಗಳಿಂದ ಮುಕ್ತರಾಗಿರಲಿಲ್ಲ—ಆದರೆ ಈ ಬಂಧನದಿಂದ ಬಿಡಿಸಿಕೊಳ್ಳಲಿಕ್ಕೆ ಅವರು ಚಡಪಡಿಸುತಿದ್ದರು. ಅವರು ಅರ್ಥ ಕಾಮಗಳನ್ನು ಕಡೆಗಣಿಸಲಿಲ್ಲ—ಆದರೆ ಧರ್ಮ ಮೋಕ್ಷಗಳ ಸಂಜೀವನವನ್ನೂ ಅವರು ಬಿಟ್ಟುಗೊಡಲಿಲ್ಲ. ಕೂಡಲ ಸಂಗಮ ದೇವನ ಸಂಗದಲ್ಲಿ ಅವರ ಜೀವನವೂ ಮಿಳನಗೊಂಡಿತು. ಕನ್ನಡಿಗರು ಭಕ್ತಿ ಭಂಡಾರಿ ಎಂದು ಕರೆದ ಬಸವಣ್ಣನವರಿಗೆ ಜ್ಞಾನ ಮತ್ತು ಕರ್ಮ ಮಾರ್ಗಗಳು ಒಸ್ಸೇಲಿಯಾಗಿಯೇ ಉಳಿದವು. ಶಿವಪ್ರೇಮವೇ ಅವರಿಗೆ ಸರ್ವಸ್ವವಾಯಿತು. ಹೀಗಿದ್ದರೂ ಈ ಲೋಕವನ್ನೂ ಲೋಕ ಧರ್ಮವನ್ನೂ ಮರೆತವರು ಅವರಲ್ಲ—"ಮರ್ತ್ಯ ಲೋಕವೆಂಬುದು ಕರ್ತಾರನ ಕಮ್ಮಟವಯ್ಯ; ಇಲ್ಲಿ ಸಲ್ಲುವವನು ಅಲ್ಲಿಯೂ ಸಲ್ಲುವನಯ್ಯ" ಎಂದವರು ಹೇಳುತಿದ್ದರು. ಕೌಟುಂಬಿಕ ಜೀವನವೂ ಉದ್ಯೋಗವೂ ನಮಗೆ ಅಗತ್ಯವೆಂದು ಅವರ ಅಭಿಪ್ರಾಯ. ಇಲ್ಲಿರುವಷ್ಟು ದಿನ ನಾವೆಲ್ಲ ಋಜು ಬಾಳ್ವೆಯನ್ನು ನಡೆಸಬೇಕೆಂದು ಅವರ ಕೋರಿಕೆ—"ಸತ್ಯವ ನುಡಿವುದೇ ಸ್ವರ್ಗ, ಮಿಥ್ಯವ ನುಡಿವುದೇ ನರಕ" ಎಂಬ ವಚನವೂ "ಅಯ್ಯಾ ಎಂದಡೆ ಸ್ವರ್ಗ; ಎಲವೋ ಎಂದಡೆ ನರಕ" ಎಂಬ ಮಾತೂ ಬಸವಣ್ಣನವರ ಚರಿತ್ರ ಸಂಪನ್ನತೆಯ ಹೆಗ್ಗುರುತು. ಅವರು ನಂದೀಶ್ವರನ ಪುನರವತಾರ ಹೌದೋ ಅಲ್ಲವೋ—ಆದರೆ ಅವರ ಮನೆಯಲ್ಲಿ ಮಾತ್ರ ನಿತ್ಯ ಶಿವರಾತ್ರಿ ತಪ್ಪಿರಲಿಲ್ಲ. ಕುಲದೈವತವನ್ನು ಅವರು ಕೈಯಾರೆ ಪೂಜಿಸುತ್ತಿದ್ದರು. "ತಾನು ಭೋಗಿಸುವ ರತಿಸುಖವನ್ನೂ ತಾನುಂಬ ಅನ್ನವನ್ನೂ ಅನ್ಯರಿಂದ ಮಾಡಿಸಬಹುದೇ" ಎಂಬ ಅವರ ಚುಚ್ಚು ಮಾತು ಮನುಷ್ಯನ ಕರ್ತವ್ಯ ಪ್ರಜ್ಞತೆಯನ್ನು ಉದ್ದೀಪ್ತಗೊಳಿಸುವುದು ನಿಶ್ಚಯ. ಯೋಗ ಭೋಗಗಳೆರಡನ್ನೂ ಸಮನ್ವಯ ಗೊಳಿಸಿ ಆತ್ಮೋನ್ನತಿಯ ಆದರ್ಶವನ್ನು ಹಾಕಿಕೊಟ್ಟ ಬಸವಣ್ಣನವರು ಕನ್ನಡದ ಕುಲೋದ್ಧಾರಕನೆಂಬುದರಲ್ಲಿ ಸಂದೇಹವಿಲ್ಲ. "ಇವನಾರವ ಇವನಾರವ ಎಂದೆನಿಸದಿರಯ್ಯ; ಇವ ನಮ್ಮವ ಇವ ನಮ್ಮವ ಎಂದೆನಿಸಯ್ಯ" ಎಂದವರು ಹಾರೈಸುತಿದ್ದರು. ಕನ್ನಡಿಗರು ಬಸವಣ್ಣನವರನ್ನು ನಮ್ಮವನೆಂದು ಅಭಿಮಾನದಿಂದ ಎದೆಯುಬ್ಬಿಸಿ ಕರೆಯ ಬಲ್ಲರು. ಬಸವಣ್ಣನವರ ಜೀವನವು ಅದ್ಭುತ ರಮ್ಯವಲ್ಲದೆಯೂ ಚೇತೋಹಾರಿಯಾಗಿದೆ; ಅಧ್ಯಾತ್ಮದ ಗಹನ ಸಮುದ್ರದಲ್ಲಿ ಮುಳುಗಿದ್ದರೂ ಆಕರ್ಷಕವಿದೆ, ಅನುಸರಣೀಯವಿದೆ. ಬಸವಣ್ಣನವರ ತುಂಬು ಬಾಳ್ವೆಯ ವಿಮರ್ಶಾತ್ಮಕ ಚಿತ್ರವನ್ನು ಸ್ಫುಟವಾಗಿ ಮೂಡಿಸುವಲ್ಲಿ ಆಧ್ಯಾತ್ಮಿಕ ದೃಷ್ಟಿಯನ್ನು ಬೆಳೆಸಿಕೊಂಡಿರುವ ಸಿಂಪಿ ಲಿಂಗಣ್ಣನವರು ಸಂಪೂರ್ಣ ಯಶಸ್ಸನ್ನು ಗಳಿಸಿದ್ದಾರೆ. ಬಸವಣ್ಣನವರ ಸಾಧನೆಯನ್ನೂ ಹೃದಯ ವೈಶಾಲ್ಯವನ್ನೂ ಬಣ್ಣಿಸುವಾಗ ಲಿಂಗಣ್ಣನವರ ಅಂತಃಕರಣ ತುಂಬಿ ಬಂದಂತೆ ಭಾಸವಾಗುತ್ತದೆ. ರಸ ಪೂರಿತ ಮಾತುಗಳೂ ಸವಿಯಾದ ಭಾಷೆಯೂ ಕುಶಲ ವಿಮರ್ಶೆಯೂ ಹೃದಯದ ನೈರ್ಮಲ್ಯವೂ ಪುಸ್ತಕದ ಆಂತರಂಗಿಕ ಸೌಂದರ್ಯವನ್ನೂ ಉಪಯುಕ್ತತೆಯನ್ನೂ ಅಧಿಕಗೊಳಿಸಿವೆ. ಕನ್ನಡದ ಅಭಿಮಾನಿಗಳು ಕೊಂಡು ಓದಿ ಪ್ರೋತ್ಸಾಹಿಸಬೇಕಾದ ಪುಸ್ತಕವಿದೆಂದು ನಮ್ಮ ಅಭಿಪ್ರಾಯ.

ಬಸವಣ್ಣನವರ ವಚನಗಳು—

ಸಂಪಾದಕರು: ಶ್ರೀಕಂಠ ಶಾಸ್ತ್ರಿ. ಪ್ರಕಾಶಕರು: ಸಿಟಿ ಬುಕ್ ಸ್ಟಾಲ್, ಹುಬ್ಬಳ್ಳಿ. ಬೆಲೆ: ಎಂಟಾಣೆ.

ವೀರಶೈವ ಸಾಹಿತ್ಯದಲ್ಲಿ ಭಕ್ತಿ ಭಂಡಾರಿ ಬಸವಣ್ಣನವರ ವಚನಗಳು ಶ್ರೇಷ್ಠವಾದ ಸ್ಥಾನವನ್ನು ಪಡೆದಿವೆ. ಇವುಗಳು ಭಾರತೀಯ ಧರ್ಮದ ಸಾರ ಸರ್ವಸ್ವವನ್ನು ಒಳಗೊಂಡಿವೆ. ಪ್ರಾಚೀನವಾದ ಉಪನಿಷತ್ತು, ಗೀತೆ ಮತ್ತಿತರ ಶಾಸ್ತ್ರ ಗ್ರಂಥಗಳಲ್ಲಿ ಪ್ರತಿಪಾದಿಸಿದ ಘನತತ್ವಗಳನ್ನು ಭಟ್ಟಿ ಇಳಿಸಿ, ಕನ್ನಡಿಗರಿಗೆ ರಸಪಾಕವನ್ನು ಉಣಬಡಿಸಿದಂತೆ ಈ ವಚನಗಳು ಇವೆಯೆಂದರೆ ತಪ್ಪಾಗದು. ಈ ಪುಸ್ತಕದಲ್ಲಿ ಸುಮಾರು ೩೨೫ ವಚನಗಳನ್ನು ಸಂಗ್ರಹಿಸಿದುವರಲ್ಲದೆ, ವಚನಗಳ ತಿರುಳನ್ನು ಗ್ರಹಿಸಲು ಅನುಕೂಲವಾಗುವಂತೆ ಸರಳವಾದ ಹೊಸಗನ್ನಡದಲ್ಲಿ ಭಾವಾರ್ಥವನ್ನು ಆಯಾ ವಚನದ ಕೆಳಗೆ ಕೊಟ್ಟಿರುವರು. ವಚನ ಸಾಹಿತ್ಯದ ಅಭ್ಯಾಸಿಗಳಿಗೂ ಕನ್ನಡ ಸಾಹಿತ್ಯಾಭಿಮಾನಿಗಳಿಗೂ ಪುಸ್ತಕ ಉಪಯುಕ್ತವಾದೀತು.

ಲಘು ಪರಿಚಯ

❖ ಹಿಂದೆ ಕಂಕನಾಡಿಯ ಫಾದರ್ ಮುಲ್ಲರ್ ಆಸ್ಪತ್ರೆಯಲ್ಲಿ ಹೋಮಿಯೋಪಥಿ ವೈದ್ಯರಾಗಿ ಕೆಲಸ ಮಾಡುತಿದ್ದ ಡಾ. ಜೋಸೆಫ್ ಜಕಾರಿಯವರು "ಸೈಂಟ್ ಜೋರ್ಜರ ಹೋಮಿಯೋಪಥಿ ಮತ್ತು ಟಿರ್ಕ್ಯಾ ಔಷಧಗಳ ಗೃಹವೈದ್ಯ" ಎಂಬ ಕೈಪಿಡಿಯನ್ನು ಬರೆದು ಸೈಂಟ್ ಜೋರ್ಜರ ಹೋಮಿಯೋಪಥಿಕ್ ಫಾರ್ಮಸಿ (ಜಯಂತ ಬಿಲ್ಡಿಂಗ್, ಸೆಂಟ್ರಲ್ ಕಾಫಿ ಹೌಸಿನ ಎದುರು, ಮೈದಾನ್ ಕ್ರಾಸ್ ರೋಡು, ಮಂಗಳೂರು ೧.) ಇವರ ಮೂಲಕ ಪ್ರಕಟಿಸಿರುವರು. ಜರ್ಮನಿಯ ಪ್ರಸಿದ್ಧ ವೈದ್ಯರಾದ ಸಾಮುಯೆಲ್ ಹೆನ್ ಮೇನರು ೧೫೦ ವರ್ಷಗಳ ಹಿಂದೆ ತೊಡಗಿದ ಈ ಚಿಕಿತ್ಸಾಕ್ರಮವು ಬಡವರ ಬಂಧುವೆಂದು ಹೊಗಳಲ್ಪಡುತ್ತದೆ. ಪ್ರಕೃತ ಕೈಪಿಡಿಯಲ್ಲಿ ಬಳಕೆಯಲ್ಲಿರುವ ಹೋಮಿಯೋಪಥಿ ಔಷಧಗಳ ಗುಣಲಕ್ಷಣ, ಅವುಗಳನ್ನು ಉಪಯೋಗಿಸುವ ವಿಧಾನ ಮುಂತಾದವುಗಳೂ ಬೇರೆ ಬೇರೆ ನಮೂನೆಯ ಕಾಯಿಲೆಗಳಿಗೆ ಬಳಸುವ ಭಿನ್ನ ಭಿನ್ನ ಪ್ರಕಾರದ ಔಷಧಗಳೂ ಇವೆ. ಹೋಮಿಯೋಪಥಿಯಲ್ಲಿ ಆಸಕ್ತಿಯುಳ್ಳವರಿಗೆ ಪುಸ್ತಕ ಉಪಯುಕ್ತವೆನಿಸೀತು.

❖ ಶ್ರೀ ಕೊಡಪಾಡಿ ಶೇಷಗಿರಿರಾಯರ ಸಂಪಾದಕತ್ವದಲ್ಲಿ ಪ್ರಕಟವಾದ "ಮುಂಕುಮಂಡ" (ಸ್ಟೇಶನರೋಡ, ಹಾವೇರಿ) ಎಂಬ ರಾಷ್ಟ್ರೀಯ ಸಚಿತ್ರ ಪಾಕ್ಷಿಕಕ್ಕೆ ಸ್ವಾಗತ. ಇದು ಕನ್ನಡದಲ್ಲಿ ಈಗಾಗಲೇ ಪ್ರಸಿದ್ಧಿ ಪಡೆದ "ಪ್ರಪಂಚ' ಪತ್ರಿಕೆಯ ಮಾದರಿಯನ್ನು ಅನುಸರಿಸಲು ಪ್ರಯತ್ನಿಸಿದಂತೆ ಕಾಣುತ್ತದೆ—ಆದರೆ ಈ ಪ್ರಯತ್ನ ಅಯಶಸ್ವಿಯಾಗಿದೆ; ಮುದ್ರಣವೂ ಚೆನ್ನಾಗಿಲ್ಲ ಕ್ರಮೇಣ ಅಂತಸ್ತು ಸುಧಾರಿಸೀತೆಂದು ನಂಬಿ, ಶುಭವನ್ನು ಕೋರುತ್ತೇವೆ.

ಮಂಗಳೂರು

ಸರಕಾರಿ ಕಾಲೇಜು ಪ್ರವೇಶ ಕಮಿಟಿಗೆ—ಕಾಲೇಜಿನ ಪ್ರಿನ್ಸಿಪಾಲ್, ಶ್ರೀ ಕೆ. ಎಸ್. ಹೆಗ್ಡೆ, ಎಮ್. ಎಲ್. ಸಿ, ಮತ್ತು ಶ್ರೀ ವೈ. ಮಂಜಯ್ಯ ಸೆಟ್ಟಿ. ಎಮ್. ಎಲ್. ಎ. ಅವರು ಆರಿಸಲ್ಪಟ್ಟಿರುವರು.

ದೈವಜ್ಞ ಬ್ರಾಹ್ಮಣ ಸಂಘದ ವಾರ್ಷಿಕೋತ್ಸವವು—ಕಳೆದ ತಾ 13ರಲ್ಲು ಶ್ರೀ ಲಕ್ಷ್ಮೀನಾರಾಯಣ ದೇವಸ್ಥಾನದಲ್ಲಿ ಶ್ರೀ ಎಸ್. ಮಹಾಬಲ ಶೇಟರ ಅಧ್ಯಕ್ಷತೆಯಲ್ಲಿ ಜರಗಿತು. ವರದಿ ವಾಚನ ಮತ್ತು ಲೆಖ್ಖಪತ್ರಗಳ ಪರಿಶೀಲನೆಯಾದ ನಂತರ ಹೊಸ ವರುಷದ ಕಾರ್ಯ ನಿರ್ವಾಹಕ ಮಂಡಳಿಗೆ ಶ್ರೀಗಳಾದ ಎಮ್. ಎನ್. ಶೇಟ್, ಅಧ್ಯಕ್ಷ; ಎಚ್. ಕೆ. ಶೇಟ್, ಉಪಾಧ್ಯಕ್ಷ; ಎಸ್. ಎಲ್. ಶೇಟ್, ಕಾರ್ಯದರ್ಶಿ, ಎನ್. ಸಂಜೀವ ಶೇಟ್, ಜತೆಕಾರ್ಯದರ್ಶಿ; ಕೆ ಕೆ. ಆರ್. ಶೇಟ್, ಕೋಶಾಧಿಕಾರಿ ಮತ್ತು ಆರು ಮಂದಿ ಇತರ ಸದಸ್ಯರು ಆರಿಸಲ್ಪಟ್ಟರು.

ಯಾತ್ರಾರ್ಥಿಗಳಿಗೆ ಮುಂಜಾಗ್ರತೆ—ಇದೇ ತಾ 10ರಲ್ಲು ಆರಂಭವಾಗಿ ಮುಂದಿನ ತಿಂಗಳ ತಾ 12ರ ತನಕ ಪುರಿ ಕ್ಷೇತ್ರದಲ್ಲಿ ಜರಗುವ ರಥೋತ್ಸವಕ್ಕೆ ಹೋಗಲಪೇಕ್ಷಿಸುವ ಯಾತ್ರಾರ್ಥಿಗಳು ಪ್ರಯಾಣಕ್ಕೆ ಸಾಕಷ್ಟು ಮುಂಚಿತವಾಗಿ ಕೊಲೆರಾ ಪ್ರತಿಬಂಧಕ ಇನೋಕ್ಯುಲೇಶನ್ ಮಾಡಿಸಿಕೊಂಡು ಸರ್ಟಿಫಿಕೇಟು ಪಡಕೊಂಡು ಹೋಗಬೇಕಾಗಿದೆ. ಅಂತೆಯೇ ಪಂಜಾಬಿನ ಕರ್ನಾಲ್ ತಾಲೂಕಿನ ಥಾನೇಶ್ವರದಲ್ಲಿ ಇದೇ ತಾ 30ರ ತನಕ ನಡೆಯುವ ಸೂರ್ಯಗ್ರಹಣ ಉತ್ಸವಕ್ಕೆ ಹೋಗ ಬಯಸುವ ಯಾತ್ರಾರ್ಥಿಗಳೂ ಹತ್ತು ದಿವಸಗಳ ಮುಂಚಿತವಾಗಿ ಕೊಲೆರಾ ರೋಗ ಪ್ರತಿಬಂಧಕ ಇನೊಕ್ಯುಲೇಶನ್ ಮಾಡಿಸಿಕೊಂಡು ಸರ್ಟಿಫಿಕೇಟು ಪಡಕೊಂಡೇ ಹೋಗಬೇಕಾಗಿದೆ.

ನಗರಸಭೆಯು— ಇದೇ ತಾ. 12ರಲ್ಲು ಜರಗಿದಾಗ ಶ್ರೀ ಕೆ. ಪ್ರಭಾಕರ ರೈಗಳು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಲಾಯಿತು ಮದ್ರಾಸು ಸರಕಾರವು ಈ ನಗರಸಭೆಗೆ ಹನ್ನೆರಡು ಲಕ್ಷ ರೂಪಾಯಿ ಸಾಲಕೊಡುವುದಾಗಿ ತಿಳಿಸಿದ ಆರ್ಡರನ್ನು ರಿಕಾರ್ಡುಮಾಡಲಾಯಿತು. 1954—55ನೇ ವರ್ಷಕ್ಕೆ ಚಿಮಿಣಿ ಎಣ್ಣೆ ದೀಪಗಳಿಗೆ ರೂ. 6700, ನಗರದ ರಸ್ತೆಗಳ ರಕ್ಷಣೆಗಾಗಿ ರೂ. 1,02,400, ಕಂಕನಾಡಿಯ ಮುಲ್ಲರ್ ಕುಷ್ಠರೋಗಿ ಆಸ್ಪತ್ರೆಗೆ ರೂ. 1500 ಸಹಾಯಧನ ಇತ್ಯಾದಿ ಸೆಂಕ್ಷನ್ ಮಾಡಲಾಯಿತು. ಮಂಗಳೂರಲ್ಲಿ ನೀರನ್ನು ಕೂಡಿಸಲು ಜಿಲ್ಲಾ ಕಲೆಕ್ಟರರ ಬಂಗ್ಲೆ ಸಮೀಪದ ಸ್ಥಳವನ್ನು ನಗರಸಭೆಯ ಸ್ವಾಧೀನಕ್ಕೆ ಕೊಡುವಂತೆ ಕಲೆಕ್ಟರರನ್ನು ಕೇಳಿಕೊಳ್ಳುವ ನಿರ್ಣಯವಾಯಿತು.

ಸಭೆಯು ಮುಗಿದ ನಂತರ ಶ್ರೀಗಳಾದ ಬಿ. ಪಿ. ಶಕ್ತಿಲ್ಲಾಯ, ಡಾ! ಎಮ್. ಎಸ್. ಶಾಸ್ತ್ರಿ, ಎ. ಕೆ. ನಾರಾಯಣ ಮೊದಲಾದವರು 4986 ಸಹಿಗಳಿರುವ ಮನವಿಯೊಂದನ್ನು ಸಭಾಧ್ಯಕ್ಷರಿಗೆ ಒಪ್ಪಿಸಿ ಜಾಸ್ತಿ ಮಾಡಿದ ತೆರಿಗೆಯನ್ನು ಕಡಿಮೆ ಮಾಡಬೇಕೆಂದು ಕೇಳಿಕೊಂಡರು

ಜಿಲ್ಲಾ ಸ್ಕೌಟ್ ಮಾಸ್ತರರ ಮತ್ತು ಗೈಡ್ ಕೆಪ್ಟನರ ಸಮ್ಮೇಳನ ವೊಂದನ್ನು ಬೇಗನೆ ಕರೆಯಬೇಕೆನ್ನುವ ನಿರ್ಣಯವು ಇದೇ ತಾ. 19ರಲ್ಲಿ ವಕೀಲ್ ಶ್ರೀ ಕೆ. ದೇವದಾಸ ನ್ಯಾಕರ ಅಧ್ಯಕ್ಷತೆಯಲ್ಲಿ ಸೇರಿದ ಸ್ಕೌಟ್ ಮತ್ತು ಗೈಡುಗಳ ಸಭೆಯಲ್ಲಿ ಅಂಗೀಕರಿಸಲ್ಪಟ್ಟಿತು ಪೂರ್ವ ಸಿದ್ಧತೆಗಾಗಿ ಒಂದು ಕಮಿಟಿ ರಚಿಸಲ್ಪಟ್ಟಿತು. ಬಡ ಮಕ್ಕಳಿಗೆ ಹಾಲಿನ ಹುಡಿ ವಿತರಣಾ ಕಾರ್ಯದಲ್ಲಿ ಸ್ಕೌಟ್ ಮತ್ತು ಗೈಡರು ಸಹಕರಿಸಬೇಕೆಂದು ನಿಶ್ಚಯಿಸಲಾಯಿತು ಶ್ರೀ ಪಿ. ಡಿ. ಫಿಲಿಪ್ಸರ ವಂದನಾರ್ಪಣೆಯೊಂದಿಗೆ ಸಭಾಂತ್ಯವಾಯಿತು.

ಥಿಯೋಸಾಫಿಕಲ್ ಸೊಸ್ಯಾಟಿಯ ಸಭೆಯು— ಇದೇ ತಾ. 20ರಲ್ಲು ಶ್ರೀ ಎಮ್. ಎಸ್. ನಿಕಾಂಬರೆ ರಾಯರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ಕೆ. ವಿ. ವಿಶ್ವನಾಥ ಕಾಮತರು ಜತೆ ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟರು.

ಸಂಗೀತ ಕಚೇರಿ— ಯೊಂದು ಇದೇ ತಾ. 20ರಲ್ಲಿ ಕೆನರಾ ಹೈಸ್ಕೂಲಿನ ಭುವನೇಂದ್ರ ಹೋಲಿನಲ್ಲಿ ಶ್ರೀ ಭೀಮಸೇನ ಜೋಶಿಯವರಿಂದ ಜರಗಿತು.

ಮಂಗಳೂರು ಪೋರ್ಟ್ ಟ್ರಸ್ಟ್ ಬೋರ್ಡಿನ ಚುನಾವಣೆಗೆ ನಾಮಪತ್ರಗಳು—1953ನೆ ಮಂಗಳೂರು ಪೋರ್ಟ್ ಟ್ರಸ್ಟ್ ಆಕ್ಟಿನನ್ವಯ ಮುಂದಿನ ಜುಲಾಯಿ ತಿಂಗಳಲ್ಲಿ ಸ್ಥಾಪನೆ ಯಾಗಲಿರುವ ಮಂಗಳೂರು ಪೋರ್ಟ್ ಟ್ರಸ್ಟ್ ಬೋರ್ಡಿನಲ್ಲಿ 4 ಸ್ಥಾನಗಳನ್ನು ಮಂಗಳೂರಿನ ಕೆನರಾ ಚೇಂಬರ್ ಒಫ್ ಕೊಮರ್ಸ, ಅವರಿಗೆ ಕೊಡಲಾಗಿದೆ. ಈ ನಾಲ್ಕು ಸ್ಥಾನಗಳಿಗೆ ಶ್ರೀಗಳಾದ ತಲಪಾಡಿ ಅಣ್ಣಪ್ಪ ನಾಯಕ, ಕೆ. ಬಾಬುರಾಯ ಪೈ, ಎಮ್. ಧರ್ಮಪಾಲ್, ವಿ. ಎಸ್. ಕುಡ್ವಾ, ಪಂಚಮಾಲ್ , ರಸಿಂದ ರಾವ್, ಎಮ್. ರಾಘುವೇಂದ್ರ ಪೈ, ಎಮ್. ಶ್ರೀನಿವಾಸ ನಾಯಕ್, ಜೆ. ಎನ್. ಟೈಟ್, ಎ. ಉಮಾನಾಥ ರಾವ್ ಮತ್ತು ಉಪೇಂದ್ರ ಪೈಗಳವರು ನಾಮಪತ್ರಗಳನ್ನು ಸಲ್ಲಿಸಿದ್ದು ಅವೆಲ್ಲವೂ ಸಿಂಧುವಾದವುಗಳೆಂದು ರಿಟರ್ನಿಂಗ್ [illegible] ಎ. ಪಿ. ಮಲ್ಯರು ತೀರ್ಮಾನ ಮಾಡಿರುವರು ಚುನಾವಣೆಯು ಜುಲಾಯಿ ದಿನಾಂಕ ೧ರಂದು ಜರಗಲಿರುವುದು.

ಸೆಕೆಂಡರಿ ಶಾಲೆಗಳೂ ಜಿಲ್ಲಾ ಲೈಬ್ರೆರಿಗಳೂ

'ನವಯುಗ'ವನ್ನು ತರಿಸಿಕೊಳ್ಳುವಂತೆ ಮಂಜೂರಾಗಿದೆ.

ಸೆಕೆಂಡರಿ ಶಾಲೆಗಳ ಉಪಯೋಗಾರ್ಥವಾಗಿ ಮದ್ರಾಸಿನ ವಿದ್ಯಾಂಗದ ಡೈರೆಕ್ಟರರೂ, ಜಿಲ್ಲೆಯ ಲೈಬ್ರೆರಿಗಳ ಉಪಯೋಗಾರ್ಥವಾಗಿ ದ. ಕ. ಜಿಲ್ಲಾ ಲೋಕಲ್ ಲೈಬ್ರೆರಿ ಅಥೋರಿಟಿ ಕಮಿಟಿಯವರೂ 'ನವಯುಗ' ವಾರಪತ್ರಿಕೆಯನ್ನು ಮಂಜೂರು ಮಾಡಿರುತ್ತಾರೆ.

1921ರಲ್ಲಿ ಆರೋಗ್ಯಮಂತ್ರಿ, ಶ್ರೀ ಎ ಬಿ. ಶೆಟ್ಟಿರಿಂದ ಸ್ಥಾಪಿಸಲ್ಪಟ್ಟು ಅವಿರತವಾಗಿ ಜನಸೇವೆ ಮಾಡುತ್ತಿರುವ ರಾಷ್ಟ್ರೀಯ ವಾರಪತ್ರಿಕೆ 'ನವಯುಗ'ಕ್ಕೆ ಎಲ್ಲಾ ಸೆಕೆಂಡರಿ ಶಾಲೆಗಳೂ, ಜಿಲ್ಲೆಯ ಎಲ್ಲಾ ಲೈಬ್ರೆರಿಗಳೂ, ಚಂದಾದಾರರಾಗಿ ಪ್ರೋತ್ಸಾಹಿಸಬೇಕಾಗಿ ವಿನಂತಿ.

ವಾರ್ಷಿಕ ಚಂದಾ ರೂ. 5-I2-0 ಮಾತ್ರ.

ಯಂ. ಗಣಪ್ಪಯ್ಯ ಎಂಡ್ ಸನ್ಸ್

ಆಯುರ್ವೇದಿಕ್ ಫಿಜಿಸಿಯನ್ಸ್ ರಥಬೀದಿ, ಮಂಗಳೂರು ಇವರ

ಅಶೋಕಾರಿಷ್ಟ ಮತ್ತು ಮಾತ್ರೆ-ಹೆಂಗಸರ ಗರ್ಭಾಶಯ ರೋಗಗಳಿಗೆ ಸಂಜೀವನ. ಅಕಾಲ ಬಹಿಷ್ಟೆ. ಋತುಸ್ರಾವವು ಜಾಸ್ತಿಯಾಗಿಯೂ, ಕಡಿಮೆಯಾಗಿಯೂ ಹೋಗುವುದು, ಬಿಳಿಸೆರಗು, ಸಂತಾನ ಹೀನತೆ, ರಕ್ತಹೀನತೆ, ಮುಟ್ಟುಕೂಡೆ ಮೊದಲಾದ ಸ್ತ್ರೀಯರಿಗೆ ಸಂಬಂಧಪಟ್ಟ ಎಲ್ಲಾ ಕಾಯಿಲೆಗಳನ್ನು ಗುಣಪಡಿಸುವುದು. ಬಾಟ್ಲಿ 1ರ ರೂ. 3-8-0.

ಗರ್ಭ ರಕ್ಷಕ- ಗರ್ಭಿಣಿಯರಿಗೆ ಅತ್ಯಂತ ಫಲಕಾರಿಯಾದ ಔಷಧಿ. ಚವಿದೋಷ. ಗರ್ಭಪತನವಾಗುವಿಗೆ, ವಾಂತಿ, ಅರುಚಿ, ಅಶಕ್ತತೆ, ಮಲಬದ್ಧತೆ, ವಾಯು ಉಪದ್ರ, ಕೈಕಾಲು ಬಚ್ಚುವುದು ಇವುಗಳನ್ನೆಲ್ಲಾ ಹೋಗಲಾಡಿಸುವುದು. ಬಾಟ್ಲಿ 1ರ ರೂ. 3-8-0

ಇವಲ್ಲದೆ ಇನ್ನೂ ಅನೇಕ ತರದ ಔಷಧಿಗಳು ನಮ್ಮಲ್ಲಿ ದೊರಕುತ್ತವೆ. ಕಟಲಾಗಿಗೆ ಬರೆಯಿರಿ. ಕಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ, ರೋಗಕ್ಕೆ ತಕ್ಕ ಔಷಧಿಯನ್ನು ರವಾನಿಸಬಹುದು.

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಳ್ಳಿ, ತಾಮ್ರ ಹಿತ್ತಾಳಿ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ
ರಥಬೀದಿ ಉಡುಪಿ.

ಚಂದಾಹಣ ಬಾಕಿ ಇರುವವರು ದಯಮಾಡಿ ಕಳುಹಿಸಿಕೊಡಿರಿ.

[೨ನೇ ಪುಟದಿಂದ]

ಪದವೀಧರರು ಕಾರಕೂನಿಕೆಯನ್ನಲ್ಲದೆ, ಬೇರೆ ಉದ್ಯೋಗವನ್ನು ನಿರ್ವಹಿಸಲಾರ ದಂಥ ಶಿಕ್ಷಣವನ್ನೆ ನಾವು ಕೊಡುತ್ತಿದ್ದೇವೆ. ವಿದ್ಯಾಭ್ಯಾಸ ಪಡೆದವರ ಚಪ್ಪರದಿಂದ ಹೊರಗೆ ಹೋದರೆ ಮುಂದಿರುವ ಪದವಿ ಯೆಂಬ ತಪ್ಪು ಕಲ್ಪನೆ ನಮ್ಮಲ್ಲಿ ರೂಢ ವಾಗುತ್ತಿದೆ. ಇಷ್ಟಾಗಿಯೂ ಬಡ ಭಾರ ತೀಯರು ತಮ್ಮ ಮಕ್ಕಳನ್ನು ಪದವೀಧರ ರಾಗಿ ಮಾಡಲು ಇಚ್ಛಿಸುತ್ತಾರೆಂದು ಹೇ ಳಲು ಬರುವುದಿಲ್ಲ— ಅವರಿಗೆ ಕೆಲಸ ಬೇಕು; ಹೈಸ್ಕೂಲು ಪಾಸಾದವನು ಕೆಲಸವಿ ಲ್ಲದೆ ಮನೆಯಲ್ಲಿ ಕುಳಿತಾಗ, ಕಾಲೇಜು ಸೇರಿ, ಬಿ. ಎ. ಆದ ಮೇಲಾದರೂ ಕೆಲಸ ದೊರಕಬಹುದೆಂಬ ಆಸೆಯಿಂದ ಪೆತ್ತವ ರು ಮುಂದೆ ಓದಿಸುವರು. ವಿದ್ಯಾರ್ಥಿಗೆ ಬೇಕಿರಲಿ, ಬೇಡವಾಗಲಿ—"ಉಚ್ಚ ಶಿಕ್ಷಣ" ಕೊಡಲಾಗುತ್ತದೆ. ಅವನ ಅಭಿರುಚಿ ಮತ್ತು ಅಭಿಪ್ರಾಯಗಳು ಕಡೆಗಣಿಸಲಾ ಗುತ್ತವೆ.

ಪರಿಹಾರ ಮಾರ್ಗ

ಒದು ಬರಿಕವು ನಮ್ಮ ಜ್ಞಾನಾಭಿವೃದ್ಧಿ ಕಾರ್ಯಕ್ಕೆ ನೆರವಾಗಬೇಕೇ ಹೊರ ತು—ಅದು ನೌಕರಿಯನ್ನೊದಗಿಸಿಕೊಡುವ ಮಾಯಾ ಸಾಧನವಾಗಲಾರದು. ಅಂದರೆ, ನಮ್ಮ ಇಂದಿನ ಶಿಕ್ಷಣ ಪದ್ಧತಿಯ ಸ್ಥಾನದಲ್ಲಿ ಶ್ರಮ ಪ್ರಧಾನವಾದ ಬಾಳ್ವೆಯ ಕಲ್ಪನೆಯ ಮೇಲೆ ನಿಂತ ಹೊಸ ರೀತಿಯನ್ನು ವಿಳಂಬ ವಿಲ್ಲದೆ ನೆಲೆಗೊಳಿಸಬೇಕು. ವರ್ಷಕ್ಕೆ ಹನ್ನೆರಡು ಲಕ್ಷದಷ್ಟು ಹೆಚ್ಚಿಕೊಳ್ಳುತ್ತಿರುವ ನಿರುದ್ಯೋಗಿಗಳಿಗೆ ನಮ್ಮ ಪಂಚವಾರ್ಷಿಕ ಯೋಜನೆಯಿಂದಾಗಲೀ ಪ್ರಜಾಜನನ ನಿಯಂತ್ರಣ ತಂತ್ರದಿಂದಾಗಲೀ ಕೆಲಸ ವನ್ನೊದಗಿಸಿ ಕೊಡುವುದು ಸುಲಭವಲ್ಲ. ಈಗ ಪ್ರವರ್ತಿಸಲಾದ ಪಂಚವಾರ್ಷಿಕ ಯೋಜನೆಯಂತೆ ಕೆಲಸದ ಅವಕಾಶಗಳು ಈ ಪ್ರಕಾರ ಒಟ್ಟಿಗೆ ೫೩,೫೪,೦೦೦ ದಷ್ಟು ಹೆಚ್ಚಿಕೊಳ್ಳುತ್ತವೆ.

ಕೈಗಾರಿಕಾಕ್ಷೇತ್ರ	೪,೦೦,೦೦೦
ವಿವಿಧೋದ್ದೇಶದ ಅಣೆಕಟ್ಟು	೨೪,೦೦,೦೦೦
ಖಾಸಗಿ ನಿರ್ಮಾಣ	೧೪,೦೦,೦೦೦
ಕೆರೆಕಾಲುವೆಗಳ ದುರಸ್ತಿ	೧,೫೦,೦೦೦
ಖಾಸಗಿ ಸಾಗಣೆ	೬,೫೦,೦೦೦
ಗಣಿಗಳು	೪,೦೦೦
ಉದ್ಯೋಗಿಕ ಗೃಹನಿರ್ಮಾಣ	೧,೦೦,೦೦೦
ಮಾರ್ಗಗಳ ನಿರ್ಮಾಣ	೨,೦೦,೦೦೦
ಗುಡಿ ಕೈಗಾರಿಕೆ	೨೦,೦೦,೦೦೦

ಇಷ್ಟರಿಂದ ಆದರೆ ಕೋಟ್ಯಾಂತರ ನಿರುದ್ಯೋಗಿಗಳಿರುವ ನಮ್ಮ ದೇಶದಲ್ಲಿ ಯೋಜನೆಯ ಸಮಸ್ಯೆಯು ನೆರಗನ್ನೂ ಮುಟ್ಟಿದಂತಾಗಲಿಲ್ಲ. ಗುಡಿ ಕೈಗಾರಿಕೆಗಳ ಪುನರುಜ್ಜೀವನದ ಪ್ರಯತ್ನವು ಆಶಾದಾಯಕ ಪರಿಣಾಮವನ್ನು ಕೊಟ್ಟಿಲ್ಲ— ಕೃಷಿಯಲ್ಲಿ ಅಧಿಕ ಜನರಿಗೆ ಕೆಲಸ ದೊರಕುವ ಆಸೆಯು ಖಾಸಗಿ ಪ್ರಯತ್ನಗಳನ್ನು, ರೈತನ ಉತ್ಸಾಹವನ್ನು, ಹೊಂದಿಕೊಂಡಿದೆ. ಭೂಸುಧಾರಣೆಯ ಕ್ರಮಗಳು ಇನ್ನೂ "ಪರಿಶೀಲನೆ"ಯಲ್ಲಿರುವಾಗ, ರೈತನಲ್ಲಿ ಹೊಸ ಸ್ಫೂರ್ತಿ ತುಂಬುವುದೆಂದು ತಿಳಿಯಲು ಬಾರದು. ಅಲ್ಲದೆ—ಇವಾವುದೂ ನಮ್ಮ ಸುಶಿಕ್ಷಿತ ನಿರುದ್ಯೋಗಿಗಳಿಗೆ ಪರಿಹಾರವನ್ನು ಒದಗಿಸದು. ಏಕೆಂದರೆ, ದುಡಿದುಣ್ಣುವುದೆಂದರೇನೆಂದೇ ಇವರಿಗೆ ತಿಳಿದಿಲ್ಲ; ತಿಳಿದಿದ್ದರೂ ತಿರಸ್ಕಾರ ಮಾಯವಾಗಿಲ್ಲ. ಶಿಕ್ಷಣ ಪ್ರಚಾರದ ಘನವಾದ ಉದ್ದೇಶದಿಂದ ಹೊಸತಾಗಿ ಹೈಸ್ಕೂಲುಗಳೂ ಕಾಲೇಜುಗಳೂ ಹಿಂದು ಮುಂದಿನ ವಿಚಾರವಿಲ್ಲದೆ ತಲೆ ಎತ್ತುತ್ತವೆ; ಮತ್ತು ಇದನ್ನೆ ನಾವು ಅಭಿವೃದ್ಧಿ ಹಾಗು ಪ್ರಗತಿಯೆಂದು ತಪ್ಪು ತಿಳಿದು ಕೊಂಡಿದ್ದೇವೆ. ಈ ಹೈಸ್ಕೂಲುಗಳಲ್ಲೂ ಕಾಲೇಜುಗಳಲ್ಲೂ ಪುಸ್ತಕೀಯ ಓದಿಗಿಂತ, ತಾಂತ್ರಿಕ ಜ್ಞಾನಕ್ಕೆ ಹೆಚ್ಚು ಆಸ್ಪದವೀಯತಕ್ಕದ್ದು ಅಗತ್ಯ. ವೃತ್ತಿಪರ ಶಿಕ್ಷಣ ಸಂಸ್ಥೆಗಳು ಹೆಚ್ಚಾಗಬೇಕು; ಕೈಗಾರಿಕೆಗಳ ವಿಸ್ತರಣ, ಕೃಷಿಯಲ್ಲಿ ಸುಧಾರಣೆಗಳು ಕೈಗೂಡುವಂತೆ ದಡಿಯಬಲ್ಲ ಹೊಸ ಜನಾಂಗ ಸೃಷ್ಟಿಗೊಳ್ಳಬೇಕು. ಈಗಿನ "ಕಲಾಶಾಲೆ" ಗಳು ಅಭಿರುಚಿ ಹೀನರಿಗೆ ಆಶ್ರಯಕೊಡಬಾರದು. ಇಂಥದೇನಾದರೂ ಕ್ರಮಕ್ಕೈಗೊಂಡರೆ, ಸಮಸ್ಯೆಯನ್ನು ಪರಿಹರಿಸಲು ಸಮರ್ಥರಾಗಬಹುದು ಬದಲು ಹಳ್ಳಿಯಲ್ಲಿ ಹೊಸ ಶಾಲೆಗಳನ್ನು ತೆರೆದು ೮೦,೦೦೦ ಮಂದಿ ಸುಶಿಕ್ಷಿತರಿಗೆ ಉದ್ಯೋಗ ದೊರಕಿಸಿಕೊಡುತ್ತೇವೆಂದು ಹೊರಟಷ್ಟಕ್ಕೆ, ಪ್ರಯೋಜನವಿಲ್ಲ. ಪೇಟೆಯ ಸುಶಿಕ್ಷಿತರು ಹಳ್ಳಿಯತ್ತ ಹೋಗಲು ಇಷ್ಟಪಡುವುದಿಲ್ಲ; ನಮ್ಮ ಶಿಕ್ಷಣ ಹಳ್ಳಿಯ ಕುರಿತು ಪ್ರೇಮವನ್ನುಂಟುಮಾಡಿಲ್ಲ. ಹಳ್ಳಿಯಲ್ಲೆ ಪೇಟೆಯ ಗಾಳಿ ಬಡಿದುಕೊಂಡವರು ಈ ಸ್ಥಾನಗಳನ್ನು ತುಂಬಬಹುದು. ಅಷ್ಟು ಮಟ್ಟಿಗೆ ತೃಪ್ತರಾದೇವು. ಆದರೆ ನಮಗೆ ಶಾಶ್ವತ ತೃಪ್ತಿ ಸಮಾಧಾನಗಳೇ ಬೇಕಲ್ಲವೆ?

...ನಿಮ್ಮಷ್ಟಕ್ಕೇ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ —
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಯನ್ನು ಇಂದೇ ತರಿಸಿಕೊಳ್ಳಿರಿ.

ಬೆಲೆ:- ಸಾಧಾರಣ ಪ್ರತಿ— ರೂ. ೧—೮—೦. (ಟಪ್ಪಾಲು ಖರ್ಚು ಬೇರೆ)
ಉತ್ತಮ ಪ್ರತಿ — ರೂ. ೨—೦—೦. (ಟಪ್ಪಾಲು ಖರ್ಚು ಬೇರೆ)

ದೊರಕುವ ಸ್ಥಳಗಳು:-- 1) ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.
2) ನವಯುಗ ಪ್ರೆಸ್, ಉಡುಪಿ, ದ. ಕ.

ದಿ. ವಿಜಯಾ ಬೇಂಕ್ ಲಿಮಿಟೆಡ್ ಬೈಂದೂರು (ದ. ಕ.)

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಬೇಂಕಿನಿಂದ ಚಿನ್ನಾಭರಣ ನಗಗಳ ಈಡಿನ ಮೇಲೆ ಪಡೆದ ಸಾಲವನ್ನು ಮರುಪಾವತಿ ಮಾಡುವರೆ ರಿಜಿಸ್ಟ್ರಿ ನೋಟೀಸುಗಳ ಮೂಲಕ ಕೇಳಿಕೊಂಡಾಗ್ಯೂ ಅಸ್ಲು-ವ- ಬಡ್ಡಿ, ಯಾವುದನ್ನೂ, ಈತನಕವೂ ಕೊಡದೆ ಬಾಕಿಮಾಡಿಕೊಂಡಿರುವುದರಿಂದಲೂ, ಕೆಲವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸುಗಳು ಕಾರಣಾಂತರಗಳಿಂದ ನಮಗೇನೇ ವಾಪಾಸು ಬಂದಿರುವುದರಿಂದಲೂ, ಸದ್ರಿಯವರು ನಮ್ಮಲ್ಲಿ ಈಡಿಟ್ಟಿರುವ ಚಿನ್ನಾಭರಣ ನಗಗಳನ್ನು ಇದೇ ಜುಲ್ಯಾ ತಿಂಗಳ ತಾರೀಕು 3ನೇ ಶನಿವಾರ ಅಪರಾಹ್ನ ಗಂಟೆ 2-0ಕ್ಕೆ ಯಾ- ಬೇಂಕಿಗೆ ಯುಕ್ತ ಕಂಡ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೇ ಬೇಂಕಿನ ಪಠಾರದಲ್ಲಿ ಬಹಿರಂಗವಾಗಿ ಹರಾಜು ಮಾಡಲಾದೀತು, ತಿಳಿದಿರಲಿ.

ಸಾಲದ ಜಂಜಾ ಸಂಬ್ರ.	ಹೆಸರು ಮತ್ತು ವಿಳಾಸ	ಮೊಬಲಗು ರೂ.	ಆ.
990/51	ಶ್ರೀ. ಗೋಳಿಹೊಳೆ ಮೀರಾ ಸಾಹೇಬ, ಹೈದ್ರುಸ್ ಸಾಹೇಬರ ಮಗ, ಗೋಳಿಹೊಳೆ ಗ್ರಾಮ, ಯೇಳಜಿತು ಪೋಸ್ಟ್	76	5
740/51	— do —	270	2
1182/50	,, ಯು. ಮಂಜಯ್ಯ ಸೆಟ್ಟಿ, ನಾದ್ಯೆ ಸೆಟ್ಟರ ಮನೆ ವೀರಣ್ಣ ಸೆಟ್ಟರ ಅಳಿಯ, ಉಪ್ಪುಂದ	47	10
1262/51	,, ಮದ್ದೋಡಿ ವೆಂಕಟ್ರಮಣ ಸೇರುಗಾರ, ಶೇಷಯ್ಯ ಸೇರುಗಾರರ ಮಗ, ಮಯ್ಯಾಡಿ.	42	1
411/52	,, ಮಾಸ್ತಿ, ಕಾರಂತರ ಹಿತ್ಲು ಸುಬ್ಬನ ಮಗ, ಉಪ್ಪುಂದ	30	1
693/52	,, ದುಗ್ಗಪ್ಪ, ಹಾವಳಿಯ ಮಗ, ಬಿಜೂರು ಗರ್ಡಿಮನೆ, ಬಿಜೂರು	36	5
702/52	,, ವೆಂಕ್ಟ, ಸುಬ್ಬನ ಅಳಿಯ, ಕೊಟ್ಟಿಗೆ ಮನೆ, ಗರ್ಜನ ಹಿತ್ಲು, ಯಡ್ತರೆ ಗ್ರಾಮ, ಬೈಂದೂರು	46	10
795/52	,, ಶುಕ್ಕಿದಾರ ಬಾಷಾ ಸಾಹೇಬ, ಮಹಮ್ಮದ್ ಗೌಸರ ಮಗ, ಮಡಿಕಲ್ಲು, ಉಪ್ಪುಂದ	140	15
89/52	,, ಹೋಬಳಿದಾರ ಮಂಜುನಾಥ ಸೇರುಗಾರ, ನಾರಾಯಣ ಸೇರುಗಾರರ ಮಗ, ವ್ಯಾಪಾರಿ, ಪಡುವರಿ	19	0
639/52	,, ಬುಡ್ಡು ಮಹಮ್ಮದ್, ಜಿಕ್ರಿಯಾನ ಮಗ, ಪಡವಿನ ಕೋಣೆ, ಶಿರೂರು	95	7
107/51	,, H. ಲಕ್ಷ್ಮಣ, ಅಧ್ಯಾಪಕ, ಬೋರ್ಡ್ ಎಲಿಮೆಂಟರಿ ಶಾಲಾ, ಹೇರಂಜಾಲು, ಕಾಲ್ತೋಡು ಪೋಸ್ಟ್	43	5
381/51	— do —	21	10
116/51	,, ಪವಾಲ್ದಾರ ಶೇಷಯ್ಯ ಸೇರುಗಾರ, ದಾಸಪ್ಪ ಸೇರುಗಾರರ ಮಗ, ಕೋಟೆ ಬಾಗಿಲು, ಪಡುವರಿ	33	2
224/51	,, ವಿ. ಜನಾರ್ಧನ ಹಂದೆ, ಲಕ್ಷ್ಮೀನಾರಾಯಣ ಹಂದೆಯವರ ಮಗ, ಗೋಳಿಹೊಳೆ ಗ್ರಾಮದ ಶ್ಯಾನುಭಾಗ, ಯೇಳಜಿತು ಪೋಸ್ಟ್	59	15
623/51	— do —	477	6
624/51	— do —	33	5
345/51	,, ಕಲ್ಸಂಕ ವೆಂಕಟ್ರಮಣ ಆಚಾರಿ, ಪರಮೇಶ್ವರ ಆಚಾರಿಯ ಮಗ, ಬಿಜೂರು	39	2
297/51	,, ಬಿ. ರಾಮಕೃಷ್ಣಯ್ಯ, ನಾಗಮ್ಮನ ಮಗ, ಬಂಕೇಶ್ವರ, ಕ್ಲಬ್ಬಿನ ಪೇಟೆ, ಬೈಂದೂರು	80	0
504/51	,, ಕೆ. ದೇವದಾಸ ಬಳೆಗಾರ, ಪರಮೇಶ್ವರ ಬಳೆಗಾರರ ಮಗ, ವ್ಯಾಪಾರಿ, ಬೈಂದೂರು	44	12
787/51	,, ವೆಂಕಟ್ರಮಣ ಸೇರುಗಾರ, ಮದ್ದೋಡಿ ಶೇಷಯ್ಯ ಸೇರುಗಾರರ ಮಗ, ಮಯ್ಯಾಡಿ	33	7
818/52	,, ಮಯ್ಯಾಡಿ ಮಂಜುನಾಥ ಸೇರುಗಾರ, ಅಳಿವೆಬಾಗಿಲು ತಿಮ್ಮಪ್ಪ ಸೇರುಗಾರರ ಮಗ, ಮಯ್ಯಾಡಿ	78	6
794/51	,, ದೇವನಮನೆ ಮಾಚ ಖಾರ್ವಿ, ಶೇಷನ ಮಗ, ಮಡಿಕಲ್ಲು, ಉಪ್ಪುಂದ	205	14
847/51	,, ದುರ್ಗ ಖಾರ್ವಿ, ಪುರುಷಯ್ಯನ ಮಗ, ಅಮ್ಮನವರ ತೊಪ್ಲು, ಉಪ್ಪುಂದ	9	4
967/51	,, ನಾರಾಯಣ, ಧಾಳು ಗೋವಿಂದನ ಮಗ, ಕೊಡಿಯೇರಿ, ಕಂಬದಕೋಣೆ ಪೋಸ್ಟ್	9	6
989/51	,, ನರಸಿಂಹ ಬಿಲ್ಲವ, ದೊಡ್ಡಮನೆ ದೊಟ್ಟಿಯ ಅಳಿಯ, ಉಪ್ಪುಂದ	29	5
1042/51	,, ಸೋಮು ಮಂಜ, ಸೋಮುವಿನ ಮಗ, ಮಡಿಕಲ್ಲು, ಉಪ್ಪುಂದ	281	0
1203/51	,, ಯು. ಸೂರ್ಯಣ್ಣ ಸೆಟ್ಟಿ, ಜವುಳಿ ವ್ಯಾಪಾರಿ, ಅಂಬಾಗಿಲು, ಉಪ್ಪುಂದ	176	13
1342/51	,, ಮರ್ಲ, ದುರ್ಗ ಬಿಲ್ಲವನ ಅಳಿಯ, ಮಾವಿನಮನೆ, ಉಪ್ಪುಂದ	36	4
[illegible]/53	,, ಯು. ನಾರಾಯಣ ನ್ಯಾಕ್, ಹೆಡ್‌ಮಾಸ್ತರ್, ಬೋರ್ಡ್ ಎಲಿಮೆಂಟರಿ ಶಾಲೆ, ಬಾದ, ಬೈಂದೂರು	141	5
319/53	,, ಸೋಕನ ದುರ್ಗ ಖಾರ್ವಿ, ಅಳಿವೆ ಕೋಡಿವಾರನ ಮಗ, ತಾರಾಪತಿ, ಪಡುವರಿ	21	6
157/53	,, ಯು. ವೇಣ್ಣ ಭಟ್ಟ, ಬಾಬ ಭಟ್ಟರ ಮಗ, ಉಪ್ಪುಂದ	246	6
294/53	— do —	243	1
449/53	,, ಗೋವಿಂದ ದೇವಡಿಗ, ಚಣ್ಣಮ್ಮನ ಮಗ, ಬುಡ್ಡಿವಂತನ ಮನೆ, ಪಡುವರಿ	53	15
748/53	,, ದಾಸನಾಡಿ ಮುತ್ತಯ್ಯ ಸೆಟ್ಟಿ, ಮ್ಹಾಲಿಂಗ ಸೆಟ್ಟರ ಅಳಿಯ, ಶಿರೂರು ಗ್ರಾಮ, ಶಿರೂರು	74	12

ಬೈಂದೂರು;
18-6-1954

ಎಚ್. ರಾಜೀವ ಸೆಟ್ಟಿ.
ಏಜಂಟ್.

[೨ನೇ ಪುಟದಿಂದ]

ವಿಮಾನವು ಇದಕ್ಕೆಂದೇ ಸಿದ್ಧಪಡಿಸಿದ ಮಾರ್ಗದ ಮೇಲೆ ಓಡ ಬೇಕಾಗುವುದು. ಈ ಮಾರ್ಗದ ಹತ್ತಿರದಲ್ಲಾಗಲೀ ಮುಂದೆ ವಿಮಾನವು ಆಕಾಶದಲ್ಲಿ ಏರುತ್ತಾ ಹೋಗುವ ದಾರಿಯಲ್ಲಾಗಲೀ ಮರಗಿಡಗಳು, ತಂತಿಗಳು, ಗುಡ್ಡಬೆಟ್ಟಗಳು ಇರಲಾಗದು. ಇಳಿಯುವಾಗಲೂ ಇದೇ ಮಾತು ಅನ್ವಯಿಸುತ್ತದೆ. ಹೀಗಾಗಿ, ಪರಿಸ್ಥಿತಿಯ ಒತ್ತಡಕ್ಕೆ ಕಟ್ಟುಬಿದ್ದು, ನಿಲ್ದಾಣದ ಹೊರಗೆ ಎಲ್ಲಿಯಾದರೂ ವಿಮಾನವನ್ನು ನಿಲ್ಲಿಸಬೇಕಾಗಿ ಬಂದಾಗ ಅಪಘಾತಗಳು ಸಂಭವಿಸುವುದು ಹೆಚ್ಚು.

ನಿಯಂತ್ರಣ ಕ್ರಮ

ಅಪಘಾತಗಳನ್ನು ಕಡಿಮೆ ಮಾಡುವ ಉದ್ದೇಶದಿಂದ ಅನೇಕ ಬಗೆಯ ಪ್ರಯತ್ನಗಳು ಕೈಗೊಳ್ಳಲಾಗುತ್ತವೆ ಆಪತ್ಕಾಲದಲ್ಲಿ ವಿಮಾನದ ಸುರಕ್ಷಿತತೆಗಾಗಿ ತೆಗೆದುಕೊಳ್ಳಬೇಕಾದ ಪ್ರತಿಯೊಂದೂ ಕ್ರಮದಲ್ಲಿ ವೈಮಾನಿಕ ಕೂಲಂಕಷ ತರಬೇತಿಯನ್ನೊದಗಿಸುವುದರ ಕಡೆಗೆ ಇಂದು ವಿಶೇಷ ಗಮನ ಪೂರೈಸಲ್ಪಡುತ್ತದೆ. ವಿದೇಶಗಳಲ್ಲಿ ಲಬ್ಧವಿರುವ ತಾಂತ್ರಿಕ ಮಟ್ಟದ ಮಾಹಿತಿಯನ್ನು ಪಡೆದು ಕೊಳ್ಳಲು ಭಾರತೀಯ ಅಧಿಕಾರಿಗಳನ್ನು ಕಳುಹಿಸಲಾಗುತ್ತದೆ ಈ ತಿಂಗಳ ೩೦ನೇ ತಾರೀಕಿನಂದು ಅಪಘಾತಗಳ ಮುಖ್ಯ ಪರೀಕ್ಷಕರಾದ ಶ್ರೀ ವೈ. ಆರ್. ಮಾಲಹೋತ್ರರು ಆರು ತಿಂಗಳ ಅಭ್ಯಾಸಕ್ಕೋಸ್ಕರ ಇಂಗ್ಲೆಂಡಿಗೆ ಪ್ರಯಾಣಿಸಲಿರುವರು. ಇದು ವರೆಗಿನ ಅಪಘಾತಗಳ ಕಾರಣವನ್ನು ವಿಮರ್ಶಿಸಿದರೆ, ಯಾಂತ್ರಿಕ ದೋಷಕ್ಕಿಂತಲೂ ಪ್ರತಿಕೂಲ ವಾತಾವರಣವೇ ಆಕಾಶಯಾನದ ಪ್ರಬಲ ಶತ್ರುವೆಂದು ತಿಳಿದುಬರುತ್ತದೆ. ಬಿರುಗಾಳಿ, ಧೂಳು ತುಂಬಿದ ಗಾಳಿ, ಮಳೆ ಹಾಗು ಮಂಜುಗಳು ಕವಿದ ವಾತಾವರಣಗಳಿಂದಾಗಿ ವೈಮಾನಿಕನಿಗೆ ಮುಂದಿನ ವಸ್ತುಗಳು ಸರಿಯಾಗಿ ದೃಷ್ಟಿಗೋಚರವಾಗುವುದಿಲ್ಲ. ಇಂತಹ ಪ್ರಸಂಗಗಳಲ್ಲಿ ವೈಮಾನಿಕನಿಗೆ ಯೋಗ್ಯ ಮಾರ್ಗದರ್ಶನವನ್ನು ನೀಡಲು ಅಲ್ಲಲ್ಲಿ ಹವಾಮಾನ ನಿವೇದನಾ ಕಾರ್ಯಾಲಯಗಳು ಇರುತ್ತವೆ. ಗಾಳಿಯ ಒತ್ತಡ ಮುಂತಾದುವನ್ನು ವೈಮಾನಿಕನಿಗೆ ಇವು ರೇಡಿಯೋ ಟೆಲಿಫೋನದ ಮೂಲಕ ತಿಳಿಸುತ್ತವಲ್ಲದೆ, ಹವಾಮಾನ ಪರಿಸ್ಥಿತಿಯು ಅನುಕೂಲವಾಗಿರುವ ಇನ್ನೊಂದು ನಿಲ್ದಾಣದಲ್ಲಿ ಇಳಿಯಲು ಸೂಚನೆ ಕೊಡುತ್ತವೆ. ಹಾಗೆ ಹೋಗಲಾರದೆ, ಹತ್ತಿರದ ನಿಲ್ದಾಣದಲ್ಲಿಯೇ ಇಳಿಯುವುದು ಅಗತ್ಯ ಕಂಡರೆ, ವಿಮಾನೋಡ್ಡಾಣ ನಿಯಂತ್ರಣಾಧಿಕಾರಿಯು ಗಾಳಿಯ ವೇಗ,ಒತ್ತಡ, ಮತ್ತು ಅದು ಬೀಸುತ್ತಿರುವ ದಿಕ್ಕನ್ನು ವೈಮಾನಿಕನಿಗೆ ತಿಳಿಸಿ, ಯಾವ ಮಾರ್ಗದಲ್ಲಿ ಇಳಿದರೆ ಸುರಕ್ಷಿತತೆ ಇದೆಯೆಂದು ಸ್ಪಷ್ಟಗೊಳಿಸುವನು.

ಅನುಭವಿಕರೇ ಬೇಕು

ವೈಜ್ಞಾನಿಕ ಸಂಶೋಧನೆಗಳು ಆಕಾಶಯಾನಕ್ಕೆ ಹೆಚ್ಚಿನ ನೆರವನ್ನು ಕೊಟ್ಟಿರುತ್ತವೆ. ರಾಡಾರ ಮೂಲಕ ಚಲಿಸುವ ವಿಮಾನಕ್ಕೆ ವಸ್ತುಗಳು ಎಷ್ಟು ದೂರದಲ್ಲಿವೆ ಎಂದು ಮುಂತಾಗಿ ತಿಳಿಯಲು ಸಾಧ್ಯವಾಗುತ್ತದೆ. ಈಚೆಗೆ ಮನುಷ್ಯನ ನಿಯಂತ್ರಣವಿಲ್ಲದೆಯೇ ನಿಶ್ಚಿತ ದಿಕ್ಕಿನಲ್ಲಿ ಕೆಲಸಮಯದ ವರೆಗೆ ಹಾರಬಲ್ಲ ಯಂತ್ರಗಳನ್ನೂ ಕಂಡು ಹಿಡಿದಿರುವರು. ದೂರ ಪ್ರಯಾಣ ಮಾಡುವ ಆಕಾಶಯಾನದಲ್ಲಿ ವೈಮಾನಿಕನು ಕೆಲ ಹೊತ್ತಿನ ವಿಶ್ರಾಂತಿಯನ್ನು ಹೊಂದುವಂತೆ ಈ ಯಂತ್ರ ನೆರವಾಗುತ್ತದೆ. ಆಯ ಕಟ್ಟಿನ ಸಮಯದಲ್ಲಿ ವೈಮಾನಿಕನು ತುಂಬ ಸೂಕ್ಷ್ಮ ಬುದ್ಧಿಯಿಂದ ಒಂದು ನಿರ್ಣಯಕ್ಕೆ ಬರಬೇಕಾಗುತ್ತದೆ—ಸಾಮಾನ್ಯವಾಗಿ ವೈಮಾನಿಕನ ಅಂದಾಜು ತಪ್ಪಿದಾಗಲೇ ಅಪಘಾತಗಳು ಘಟಿಸುತ್ತವೆ. "ಉಳಿದ ಪರೀಕ್ಷೆಗಳಲ್ಲಿ ನೂರಕ್ಕೆ ಮೂವತ್ತೈದು ಅಂಕಗಳನ್ನು ಪಡೆದರೆ, ತೇರ್ಗಡೆ ಹೊಂದಿದನೆಂದು ಭಾವಿಸಲಾಗುತ್ತದೆ; ಆದರೆ ವೈಮಾನಿಕನು ನೂರರಲ್ಲಿ ನೂರು ಅಂಕಗಳನ್ನು ಸಂಪಾದಿಸಿದರೆ ಮಾತ್ರ ಪ್ರಯೋಜನವುಂಟು" ಎಂದೊಬ್ಬ ಪ್ರಸಿದ್ಧ ವೈಮಾನಿಕರು ಹೇಳಿದ್ದಾರೆ–ಇದು ಅಕ್ಷರಶಃ ಸತ್ಯ. ವಿಮಾನ ನಡೆಸಲು ಅರ್ಧಮರ್ಧ ಕಲಿತವರು ಹೋದರೆ ಆಗದು–ಅನುಭವಿಕರೂ ನಿಷ್ಣಾತರೂ ಈ ಹೊಣೆಯನ್ನು ಹೊರಬೇಕಾಗುವುದು. ವೈಮಾನಿಕನ ಕೆಲಸದಲ್ಲಿ ವಿಮಾನೋಡ್ಡಾಣ ನಿಯಂತ್ರಣಾಧಿಕಾರಿಗಳು ಬಹಳ ಹೆಚ್ಚಿನ ಸಹಾಯವನ್ನು ಕೊಡಬಲ್ಲರು. ವಿಮಾನ ನಿಲ್ದಾಣಗಳಲ್ಲಿ ರಾತ್ರಿ ಹೊತ್ತು ಒಳ್ಳೆಯ ಬೆಳಕಿನ ವ್ಯವಸ್ಥೆ ಇರುವುದು ಅಗತ್ಯ. ಯೋಗ್ಯ ಮುಂಜಾಗ್ರತೆಗಳನ್ನು ಕೈಗೊಂಡ ಪಕ್ಷದಲ್ಲಿ ಅಪಘಾತದ ಪ್ರಸಂಗಗಳನ್ನು ಆದಷ್ಟು ಕಡಿಮೆ ಮಾಡಬಹುದು. ಸರಕಾರದವರು ಈ ವಿಷಯದತ್ತ ವಿಶೇಷವಾದ ಗಮನಕೊಡುತ್ತಿರುವರೆಂದು ಮಾನ್ಯ ಮಂತ್ರಿ ಜಗಜೀವನ ರಾಮರು ಇದೇ ದಿನಾಂಕ ೧೩ರಂದು ಕಲ್ಕತ್ತೆಯಲ್ಲಿ ಮರಳಿ ಭರವಸೆ ಕೊಟ್ಟರು.

ಬೇಂಕಿನ ಬೆಳವಣಿಗೆ

	1933	1943	1953
ಅಧಿಕೃತ ಭಂಡವಾಳ	5,00,000	5,00,000	20,00,000
ತೆತ್ತ ಭಂಡವಾಳ	12,000	1,90,000	9,00,000
ಕ್ಷೇಮನಿಧಿ	—	12,000	2,00,000
ಒಟ್ಟು ವಹಿವಾಟು	77,000	15,60,000	60,30,000

ಕಾಲಾವಧಿ ಠೇವಣಾತಿ— 3 ತಿಂಗಳಿಗೆ 3½% ಬಡ್ಡಿ.
ಕಾಯಂ ಠೇವಣಾತಿ— 1 ತಿಂಗಳಿಂದ 24 ತಿಂಗಳ ಮಾಯಿದೆ ವರೆಗೆ ಸ್ವೀಕರಿಸಲ್ಪಡುವುವು. 24 ತಿಂಗಳಿಗೆ=3¾% ಬಡ್ಡಿ.
ರೂಪಾಯಿ ಹತ್ತು ಸಾವಿರ ವ, ಮೇಲಿನ ಠೇವಣಾತಿಗೆ 4% ಬಡ್ಡಿ ಕೊಡಲಾಗುವುದು.
ರೂಪಾಯಿ ಐವತ್ತು ಸಾವಿರ ವ, ಮೇಲಿನ ಠೇವಣಾತಿಗೆ 4¼% ಬಡ್ಡಿ ಕೊಡಲಾಗುವುದು.
ವಿಜಯ ಕೇಶ್ ಸರ್ಟಿಫಿಕೇಟು— ಮೂರು ವರುಷದ ಅವಧಿ = 4¼% ಬಡ್ಡಿ.
ಸಾಲ ಸವಲತ್ತುಗಳಿಗೆ ಬೇಕಾದ ಅನುಕೂಲತೆಗಳನ್ನು ವಿಳಂಬವಿಲ್ಲದೆ ಒದಗಿಸಲಾಗುವುದು.
ಹೆಚ್ಚಿನ ಮಾಹಿತಿಗೆ ನಿಮ್ಮ ಸಮೀಪದ ನಮ್ಮ ಏಜಂಟರೊಡನೆ ವಿಚಾರಿಸಿರಿ. ಜಿಲ್ಲೆಯ 10 ಕೇಂದ್ರಗಳಲ್ಲಿಯೂ, ಮಡಿಕೇರಿ ಮತ್ತು ಮುಂಬಾಯಿಯಲ್ಲಿಯೂ ನಮ್ಮ ಶಾಖೆಗಳಿರುತ್ತವೆ.
ಸ್ಥಾಪನೆ: 1931 **ದಿ ವಿಜಯ ಬ್ಯಾಂಕ್ ಲಿಮಿಟೆಡ್** ಪ್ರಧಾನ ಕಛೇರಿ ಮಂಗಳೂರು 3.

ಜನತಾ ಸಾಹಿತ್ಯಮಾಲೆಯ ಹೊಸ ಮಾದರಿಯ ಪುಸ್ತಕಗಳು

* * * * *

ಮಣಿ ೧:— ಜೀವನ ಶಿಕ್ಷಣ.

ಜ್ಞಾನ ಮತ್ತು ಶೀಲದೊಂದಿಗೆ ಶಾರೀರಿಕ ಶ್ರಮದ ಗೌರವವನ್ನು ವಿದ್ಯಾರ್ಥಿಗಳಲ್ಲುಂಟು ಮಾಡುವ ಶ್ರೀ. ಕೆ. ಕೆ. ಶೆಟ್ಟಿ ನವೀನ ನಾಟಕ. ಮದ್ರಾಸ್ ಟೆಕ್ಸ್ಟ್ ಬುಕ್ ಸಮಿತಿಯಿಂದ ಮಂಜೂರಾತಿ ಪಡೆದು ದ. ಕ. ಜಿಲ್ಲೆಯ ಮತ್ತು ಕೊಡಗಿನ ಹಲವು ಹೈಸ್ಕೂಲುಗಳಿಂದ ಪ್ರೋತ್ಸಾಹ ಹೊಂದಿದೆ. ಬೆಲೆ: ರೂ. ೧—೨—೦.

ಮಣಿ ೨:— ಶ್ಯಾಮುವಿನ ಶಾಲಾದಿನಗಳು.

ಅಧ್ಯಾಪಕ ಮತ್ತು ವಿದ್ಯಾರ್ಥಿ ಜೀವನದ ನೈಜ ಹಾಗೂ ರಸವತ್ತಾದ ಚಿತ್ರಣದಿಂದ ವಿದ್ಯಾರ್ಥಿಗಳಿಗಾಗಿಯೇ ಶ್ರೀ. ಕೆ. ಕೆ. ಶೆಟ್ಟರು ಬರೆದಿರುವ ಸಚಿತ್ರ ಕಥೆ ಪುಸ್ತಕ. ಹೈಸ್ಕೂಲುಗಳಿಗೆ ಉಪಪಠ್ಯ ಪುಸ್ತಕವಾಗಿ ಮದ್ರಾಸು ಟೆಕ್ಸ್ಟ್ ಬುಕ್ ಕಮಿಟಿಯ ಮಂಜೂರಾತಿ ಪಡೆದಿದೆ. ಬೆಲೆ: ರೂ. ೧—೨—೦.

ಸಾಹಿತ್ಯ ಮಾಲೆಯ ವಾರ್ಷಿಕ ಚಂದಾ ರೂ. ೩—೦—೦ ಮಾತ್ರ.

ಜನತಾ ಸಾಹಿತ್ಯ ಮಾಲೆ,
ಹಂಪನಕಟ್ಟೆ, ಮಂಗಳೂರು ೧.

ಗ್ರಾಮಧರ್ಮದ ಪಂಚಸೂತ್ರಗಳು

ಆಚಾರ್ಯ ವಿನೋಬಾ ಭಾವೆ.

(ಪ್ರಾರ್ಥನಾ ಪ್ರವಚನದಿಂದ ೨೪–೯–೫೪ ಕಲಂದಾದ ಬಿಹಾರ)

ಹಳ್ಳಿಯ ಜನರು ತಮ್ಮ ಎಲ್ಲ ಕೆಲಸ ಕಾರ್ಯಗಳಲ್ಲಿಯೂ ಪರಸ್ಪರ ಕೂಡಿ ನಡೆಯುವ ರೀತಿನೀತಿಗಳನ್ನು ಅಳವಡಿಸಿಕೊಳ್ಳಬೇಕು. ಅಂದರೆ ಉತ್ತು ಬಿತ್ತುವುದರಲ್ಲಿಯೂ, ಊಟ ಉಪಚಾರಗಳಲ್ಲಿಯೂ ಎಲ್ಲರೂ ಕೂಡಿಯೇ ನಡೆಯಬೇಕು. ಬೇರೆಯವರ ಸುಖದುಃಖಗಳಲ್ಲಿ ಸಮಭಾಗಿಗಳಾಗುವುದೇ ಸರ್ವೋದಯದ ನೀತಿಶಾಸ್ತ್ರವಾಗಿದೆ. ಕುಲಧರ್ಮ ಜಾತಿಧರ್ಮಗಳಂತೆ ಗ್ರಾಮಧರ್ಮವನ್ನು ಅಂದರೆ ಸರ್ವೋದಯ ನೀತಿ ಶಾಸ್ತ್ರವನ್ನು ಜನರು ಅರಿಯಬೇಕಾಗಿದೆ. ಈ ಸೂತ್ರಗಳನ್ನೇ ನಾನು 'ಜನತೆಗೆ ತಿಳಿಸಿ ಹೇಳುತ್ತಿದ್ದೇನೆ.

೧. ಮೊದಲನೆಯದಾಗಿ ಹಳ್ಳಿಗರಲ್ಲಿ ಉಂಟಾಗುವ ಜಗಳಗಳನ್ನು ಅಲ್ಲಿಯೇ ತೀರ್ಮಾನಿಸಿಕೊಳ್ಳಬೇಕು. ಹಳ್ಳಿಯಲ್ಲಿ ಜಗಳಗಳು ಉಂಟಾಗದಂತೆ ವರ್ತಿಸುವುದೇ ನಮ್ಮ ಆದರ್ಶ; ಆದರೆ ನೂರಾರು ಜನರಿರುವಲ್ಲಿ ಸಣ್ಣಪುಟ್ಟ ಜಗಳಗಳು ಉಂಟಾಗುವುದು ಸ್ವಾಭಾವಿಕ. ಊರಿನಲ್ಲಿಯ ಶೀಲವಂತರಲ್ಲಿಗೆ ಹೋಗಿ ಅವುಗಳನ್ನು ತೀರಿಸಿಕೊಳ್ಳುವುದು ಯುಕ್ತವಾದ ಮಾರ್ಗವಾಗಿದೆ. ಹಳ್ಳಿಗರು ತಮ್ಮ ಜಗಳಗಳನ್ನು ಪಟ್ಟಣಕ್ಕೆ ಕೊಂಡೊಯ್ದು ಅಲ್ಲಿಯ ಕೋರ್ಟು ಕಛೇರಿಗಳಲ್ಲಿ ಹಣ ವ್ಯಯ ಮಾಡುವುದರಿಂದ ಹಳ್ಳಿಗಳು ದಿವಾಳಿಯಾಗುವುವು. ಇದರಿಂದ ಜನರಲ್ಲಿ ವೈಮನಸ್ಯವು ಬೆಳೆಯುವುದಲ್ಲದೆ ಊರಿನ ಉನ್ನತಿಯಾಗಲಾರದು. ಜಗಳಗಳು ಉಂಟಾದಲ್ಲಿ ತೀರಿಸಿಕೊಳ್ಳುವುದೇ ಧರ್ಮವಾಗಿದೆ. ಊರಲ್ಲಿ ಸಜ್ಜನರೇ ಇಲ್ಲವೆಂದು ಕೆಲವರು ಹೇಳುತ್ತಾರೆ. ಆದರೆ ಇದು ವಾಸ್ತವಿಕತೆಯಲ್ಲ. ರಾವಣನ ಲಂಕೆಯಲ್ಲಿಯೂ ಸಹ ವಿಭೀಷಣನಂತಹ ವ್ಯಕ್ತಿಗಳು ವಾಸಿಸುತ್ತಿದ್ದರು. ನಮ್ಮ ಹಳ್ಳಿಗಳಾದರೋ ಲಂಕೆಯಂತೆ ರಾಕ್ಷಸರ ವಸತಿಯಲ್ಲ. ಇಲ್ಲಿ ಸಜ್ಜನರು ಇದ್ದೇ ಇರುವರು.

೨. ಎರಡನೆಯದಾಗಿ ಹಳ್ಳಿಯಲ್ಲಿ ಬೇನೆ ಬಿದ್ದ ಎಲ್ಲರಿಗೂ ಉಪಚಾರ ದೊರೆಯುವ ತಕ್ಕ ವ್ಯವಸ್ಥೆ ಇರಬೇಕು. ಇಂದು ಜನರು ತಮ್ಮ ಕುಟುಂಬದ ಹೊರತಾಗಿ ಬೇರೆಯವರ ಬಗ್ಗೆ ವಿಚಾರ ಮಾಡುವುದೇ ಇಲ್ಲ. ಅಂದರೆ ಧನಿಕರು ಮಾತ್ರ ಪಟ್ಟಣಗಳಿಗೆ ಹೋಗಿ, ಇಲ್ಲಾ ಡಾಕ್ಟರರನ್ನು ಕರೆಸಿ ಉಪಚಾರಹೊಂದುತ್ತಾರೆ. ಆದರೆ ಬಡವನು ಅನಿವಾರ್ಯವಾಗಿ ರೋಗಕ್ಕೆ ಬಲಿಯಾಗುತ್ತಾನೆ. ಇದು ಗ್ರಾಮ ಧರ್ಮವಲ್ಲ. ಹಳ್ಳಿಗಳಲ್ಲಿ ರೋಗ ರುಜಿನಗಳು ಉಂಟಾಗದಂತೆ ನೋಡುವುದೇ ಉತ್ತಮ ಮಾರ್ಗವಾಗಿದೆ. ಇನ್ನು ಕಾಹಿಲೆ ಬಿದ್ದಾಗ ಬಡವರು ಧನಿಕರೆನ್ನದೆ ಎಲ್ಲರಿಗೂ ಔಷಧೋಪಚಾರಗಳ ವ್ಯವಸ್ಥೆಯನ್ನು ಊರಲ್ಲಿಯೇ ಮಾಡಬೇಕು. ಹಳ್ಳಿಗಳಲ್ಲಿ ದೊರೆಯುವ ಗಿಡಮೂಲಿಕೆಗಳಿಂದಲೇ ಔಷಧೋಪಚಾರ ನಡೆಸಬೇಕು. ಅಲ್ಲದೆ ರೋಗಗಳು ಬಾರದಂತೆ ನಿಸರ್ಗೋಪಚಾರಗಳನ್ನು ಕೈಗೊಳ್ಳುವುದು ಉತ್ತಮ ಮಾರ್ಗವಾಗಿದೆ.

೩. ಮೂರನೆಯದಾಗಿ ಊರಿನ ಎಲ್ಲ ಮಕ್ಕಳಿಗೂ ಶಿಕ್ಷಣದ ವ್ಯವಸ್ಥೆ ಮಾಡಬೇಕು. ಇಂದು ಧನಿಕರು ಮಾತ್ರ ತಮ್ಮ ಮಕ್ಕಳನ್ನು ಪಟ್ಟಣಗಳಿಗೆ ಕಳುಹಿಸಿ ಶಿಕ್ಷಣ ಕೊಡಿಸುತ್ತಾರೆ. ಇನ್ನು ಬಡವರ ಮಕ್ಕಳು ಅಶಿಕ್ಷಿತರಾಗಿಯೇ ಉಳಿಯುತ್ತಾರೆ. ಬಡವರು, ಬಲ್ಲಿದರೆನ್ನದೆ ಎಲ್ಲರ ಮಕ್ಕಳಿಗೂ ಯೋಗ್ಯ ಶಿಕ್ಷಣವು ಉಚಿತವಾಗಿ ದೊರೆಯಬೇಕು. ಊರಲ್ಲಿಯ ಯಾವನೊಬ್ಬ ಸುಶಿಕ್ಷಿತನು ಈ ಕಾರ್ಯವನ್ನು ಸ್ವಯಂಪ್ರೇರಣೆಯಿಂದ ವಹಿಸಿಕೊಳ್ಳಬೇಕು. ಮಕ್ಕಳು ಒಂದೆರಡು ಗಂಟೆ ಓದಬೇಕು. ಉಳಿದ ಸಮಯದಲ್ಲಿ ಕೆಲಸಮಾಡಬೇಕು. ಶಿಕ್ಷಕನ ಜೀವನ ನಿರ್ವಹಣೆಗೆ ಊರವರೇ ಧಾನ್ಯ ಕೊಡಬೇಕು. ಅಲ್ಲದೆ ಶಿಕ್ಷಕನೂ ಸಹ ಬಿಡುವಿನ ವೇಳೆಯಲ್ಲಿ ಹೊಲ ಕೆಲಸ ಮಾಡಬೇಕು. ಇನ್ನು ವಿದ್ಯಾರ್ಥಿಗಳ ಅಭಿರುಚಿಗನುಸಾರವಾಗಿ ಎಲ್ಲರಿಗೂ ಅನುಕೂಲವಾಗುವಂತೆ ಉಚ್ಚಶಿಕ್ಷಣದ ವ್ಯವಸ್ಥೆ ಮಾಡಬೇಕು.

೪. ನಾಲ್ಕನೆಯದಾಗಿ ಊರಿನ ಹೊಲವು ಖಾಸಗೀ ಒಡೆತನಕ್ಕೆ ಒಳಪಡಬಾರದು. ಎಲ್ಲರೂ ಭೂಮಿಯ ಸೇವಕರಲ್ಲದೆ ಭೂಮಾಲಿಕರಲ್ಲ. ಅಂದರೆ ಭೂಮಿಯು ಬೇಸಾಯಕ್ಕಾಗಿ ವ್ಯಕ್ತಿಗಳಿಗೆ ಹಂಚಲ್ಪಡಬೇಕು. ಆದರೆ ಅಧಿಕಾರವು ಊರಿನದಾಗಿರಬೇಕು. ವಾಸ್ತವಿಕವಾಗಿ ಭೂಮಿಯ ಒಡೆತನವು ಸೃಷ್ಟಿಕರ್ತನದಾಗಿರುತ್ತದೆ. ಅಂದರೆ ವ್ಯಾವಹಾರಿಕ ಅನುಕೂಲತೆಗಾಗಿ ಊರ ಹೊಲವನ್ನು ಊರಿನ ಹಳ್ಳಿಗರಿಗೆ ಹಂಚಬೇಕು.

ಇಂದು ಊರಿನಲ್ಲಿ ಪೈರು ಬೆಳೆಯುವ ಕಾಲಕ್ಕೆ ... ವಕ್ಕಲಿಗನೂ ಕಳ್ಳಕಾಕರಿಂದ ಅಲ್ಲದೆ ದನಕರುಗಳಿಂದ ತನ್ನ ಹೊಲದ ರಕ್ಷಣೆಗಾಗಿ ಹಗಲಿರುಳೂ ಕಾವಲು ಮಾಡುತ್ತಾನೆ. ಪ್ರತಿಯೊಬ್ಬನೂ ತನ್ನ ಹೊಲದ ರಕ್ಷಣೆಯ ಉಪಾಯವನ್ನು ಹುಡುಕುತ್ತಾನೆ. ಹೀಗೆ ಪ್ರತಿಯೊಬ್ಬನೂ ಮಾಡುವುದು ಅವಶ್ಯವೆ? ಊರಿನ ರಕ್ಷಣೆಯ ಉಪಾಯವನ್ನು ಎಲ್ಲರೂ ಕೂಡಿಯೇ ಮಾಡಬೇಕು. ಅಲ್ಲದೆ ಅಧಿಕ ಉತ್ಪತ್ತಿಯಾಗುವಂತೆ ಸಾಮೂಹಿಕವಾಗಿ ಪ್ರಯತ್ನಿಸಬೇಕು. ಇದೇನೂ ಹೊಸ ಧರ್ಮವನ್ನು ನಾನು ಉಪದೇಶ ಮಾಡುತ್ತಿರುವುದಿಲ್ಲ. ಹಿಂದೂ, ಮುಸ್ಲಿಮ್, ಕ್ರಿಶ್ಚಿಯನ್ ಧರ್ಮಗಳಂತೆ ಇದೇನೂ ಬೇರೆ ಬೇರೆ ಧರ್ಮವಲ್ಲ. ಇದು ಎಲ್ಲ ಧರ್ಮಗಳ ಮೂಲವಾದ ಮಾನವ ಧರ್ಮವಾಗಿದೆ. ದಯೆ, ಪ್ರೇಮ, ವಾತ್ಸಲ್ಯ, ನಿರ್ಭಯತೆ ಮೊದಲಾದ ಮಾನವ ಧರ್ಮದ ಸೂತ್ರಗಳಾಗಿವೆ. ಅಂದರೆ ಈ ಗ್ರಾಮ ಧರ್ಮವೆಂಬ ಪದ್ಧತಿ ಹೊಸತಾಗಿದೆಯಲ್ಲದೆ, ಧರ್ಮವು ಹೊಸದಲ್ಲ.

ಈಗ ಎಲ್ಲರೂ ಕೂಡಿಕೊಂಡು ಸಕಲರ ಹಿತಕ್ಕಾಗಿ ಸಹಕಾರದಿಂದ ಕೆಲಸಮಾಡಿ ನಷ್ಟವಾದ ಗುಡಿಕೈಗಾರಿಕೆಗಳನ್ನು ಪುನರ್ಜೀವಗೊಳಿಸಬೇಕಾಗಿದೆ. ಊರಿನ ಉಪಯೋಗಕ್ಕೆ ಅವಶ್ಯವಿರುವ ಬಟ್ಟೆ, ಎಣ್ಣೆ, ಮೊದಲಾದ ವಸ್ತುಗಳನ್ನು ಹಳ್ಳಿಗಳಲ್ಲಿಯೇ ಉತ್ಪಾದನೆ ಮಾಡಬೇಕು. ಊಟಕ್ಕೆ ಬೇಕಾಗುವ ಅಕ್ಕಿಯನ್ನು ಊ

[೧೨ನೇ ಪುಟ ನೋಡಿರಿ]

[೧೧ನೇ ಪುಟದಿಂದ]

ಇಲ್ಲಿ ಕೈಯಿಂದಲೇ ಕಟ್ಟಿ ತಯಾರಿಸಬೇಕು. ಹಳ್ಳಿಯ ಕೆಲಸಗಾರರಿಂದಲೇ [illegible] ಬೆಲೆಯಾದ ಸಾಮಾನುಗಳನ್ನು ಕೊಳ್ಳಬೇಕು. ಊರಿನಲ್ಲಿ ಉತ್ಪಾದಿಸಲು ಶಕ್ಯವಿದ್ದ ಪದಾರ್ಥ [illegible] ತಯಾರಿಸುವ ವಸ್ತುಗಳನ್ನು ಬಹಿಷ್ಕರಿಸಬೇಕು. [illegible] ನಾವು ಪಟ್ಟಣಗಳನ್ನು ದ್ವೇಷಿಸುವುದಿಲ್ಲ. ನಾವು ಎಲ್ಲರನ್ನೂ ಪ್ರೀತಿಸಬೇಕು. ಆದ್ದರಿಂದ ಸಕಲರ ಹಿತವನ್ನೂ ಬಯಸಬೇಕು. ಆದರೆ ಹಳ್ಳಿಗಳಿಗೆ ಹಾನಿಯಾಗುವ ಯಾವುದೊಂದೂ ಕೆಲಸ ಮಾಡಬಾರದು. ನಾವು ಕಾರಖಾನೆಯ ವಸ್ತುಗಳನ್ನು ಕೊಳ್ಳುವುದರಿಂದ ನಮ್ಮ ನೆರೆಮನೆಯ ಕೆಲಸಗಾರನು ಉದ್ಯೋಗ ಕಳೆದುಕೊಂಡು ನಿರುದ್ಯೋಗಿಯಾಗುವನು. ಕೇವಲ ಸತ್ಯಾಗ್ರಹದಿಂದಲೇ ಹಳ್ಳಿಗಳ ನಿರ್ಮಾಣವಾಗಲಾರದು. ಹೀಗೆ ಹಳ್ಳಿಗಳ ಸಾಂಪತ್ತಿಕ ಸ್ಥಿತಿಯು ನಮ್ಮ ಹೊಂದ [illegible] ನಾವು [illegible] ನ ವಸ್ತುಗಳಿಗೆ ಬಹಿಷ್ಕಾರ ಮಾಡುವುದಲ್ಲದೆ [illegible] ದ್ವೇಷ [illegible].

೫. [illegible] ಇದರಲ್ಲಿ ವೈಯಕ್ತಿಕ [illegible] ಅಂಗಡಿಗಳು ಇರಬಾರದು. ಊರಿನ ಎಲ್ಲರ [illegible] ಸಹಕಾರೀ ಸಂಘಗಳ ಮೂಲಕವಾಗಿಯೇ ಊರಿನ ವ್ಯಾಪಾರವು ನಡೆಸಲ್ಪಡಬೇಕು. ಹಳ್ಳಿಯ ಪ್ರತಿಯೊಬ್ಬನು ತನ್ನ ಶ್ರಮವನ್ನು [illegible] ಅನುಕೂಲವಾಗುವಂತೆ ಸಹಕಾರೀ ಸಂಘಗಳನ್ನು ರಚಿಸಬೇಕು. ಹೀಗೆ ಹಳ್ಳಿಯ [illegible] ಸಹಕಾರೀ ಸಂಘಗಳಿಂದ ಅಂಗಡಿಯು ನಡೆಸಲ್ಪಡಬೇಕು. ಅಲ್ಲದೆ ಈ ಸಹಕಾರೀ ಸಂಘಗಳು ಸಕಲರ ಹಿತಕ್ಕಾಗಿಯೇ ದುಡಿಯಬೇಕು.

ಗ್ರಾಮ ರಾಜ್ಯದ ಈ ಪಂಚಸೂತ್ರಗಳನ್ನು ನಾನು ಸಂಕ್ಷಿಪ್ತವಾಗಿ ನಿಮ್ಮ ಮುಂದಿಟ್ಟಿರುವೆನು. ಇವು ಗ್ರಾಮರಾಜ್ಯದ [illegible] ವಿಚಾರಗಳು. ಹಳ್ಳಿಯ ಜನರಲ್ಲಿ ಪರಸ್ಪರ ಪ್ರೇಮವು ಅಭಿವೃದ್ಧಿಯಾದರೆ ಊರೇ ಸ್ವರ್ಗವಾಗುವುದು. ಎಲ್ಲರೂ ಊರ ಉನ್ನತಿಯ ಬಗ್ಗೆ [illegible] ಇದು ಸುಲಭಸಾಧ್ಯವಾಗುವುದು. ಈಗ ಕಲಿಯುಗವೆಂದು ಜನರು ಅಳುತ್ತಿದ್ದಾರೆ. ಆದರೆ ಭಗವಂತನು ನಮಗೆ ಧರ್ಮಕಾರ್ಯಕ್ಕಾಗಿಯೇ ಈ ಸಂದೇಶವನ್ನು ಕೊಟ್ಟಿರುತ್ತಾನೆ. ಅಲ್ಲದೆ ನಮ್ಮ ಕೃತಿಗಳನ್ನು ಅವನು ನಿರೀಕ್ಷಿಸುತ್ತಿರುವನು. ಈ ಯುಗವನ್ನು ನಿರ್ಮಿಸುವ ಶಕ್ತಿಯನ್ನು ನಮಗೆ ಕೊಟ್ಟಿರುವನು. ನಾವು ಸತ್ಕಾರ್ಯವನ್ನು ಮಾಡಿದರೆ ಅದರ ಸಿಹಿ ಫಲವನ್ನೇ ಹೊಂದುವೆವು. ಪ್ರತಿಯೊಂದು ಕಾಲದಲ್ಲಿಯೂ ಪಾಪ್ಯರೂ ಶಿಷ್ಟರೂ ಇದ್ದೇ ಇರುತ್ತಾರೆ. ನಾವು ಕೆಟ್ಟ ಕೃತಿ ಮಾಡಿದರೆ ಇದು ಕಲಿಯುಗವಾಗುವುದು. ಸತ್ಕಾರ್ಯಗಳನ್ನು ಮಾಡಿದರೆ ಇದು ಸತ್ಯಯುಗವೇ ಆಗುವುದು. ಇಂದು ಸತ್ಕಾರ್ಯಗಳಲ್ಲಿ ಪ್ರವೃತ್ತರಾಗಿ ಸತ್ಯಯುಗದ ಸ್ಥಾಪನೆ ಮಾಡುವರೆಂದು ನಂಬಿ ಗ್ರಾಮ ಧರ್ಮದ ಈ ಪಂಚ ಸೂತ್ರಗಳನ್ನು ಜನತೆಯ ಮುಂದಿಟ್ಟಿರುವೆನು. ಜನತೆಗೆ ಸತ್ಕಾರ್ಯದಲ್ಲಿ ಸಹಕರಿಸುವ ಶಕ್ತಿಯನ್ನು ಭಗವಂತನು ದಯಪಾಲಿಸಲೆಂದೇ ನನ್ನ ನಮ್ರ ನಿವೇದನೆ.

ಅನುವಾದಕ: ಕೆ. ನಾಗಪ್ಪ.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.
1929ರಲ್ಲಿ ಸ್ಥಾಪಿತವಾಗಿ 25 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.
THE MOOLKY BANK LTD.
Moolky, S. K.

ಪಂಚವಾರ್ಷಿಕ ಯೋಜನೆಯಲ್ಲಿ ಗ್ರಾಮ ಪಂಚಾಯತುಗಳ ಸ್ಥಾನ

ಭಾರತ ಸರಕಾರದವರಿಂದ ಏರ್ಪಡಿಸಲ್ಪಟ್ಟ ಭಾಷಾ ಪ್ರದೇಶಗಳ ಸಚಿವರ ಪರಿಷತ್ತಿನಲ್ಲಿ ಮುಂದಿನ ಪಂಚವಾರ್ಷಿಕ ಯೋಜನೆಯಲ್ಲಿ ಗ್ರಾಮಪಂಚಾಯತುಗಳ ಸ್ಥಾನದ ಕುರಿತು ವಿವರವಾಗಿ ಪರಿಶೀಲಿಸಲಾಗುವುದು.

ಈ ಪರಿಷತ್ತು ಜೂನ್ ೨೫ನೇ ತಾರೀಕಿನಂದು ಸಿಮ್ಲಾದಲ್ಲಿ ಆರಂಭವಾಗುವುದು. ಮಣ್ಣಿನ ಸವೆತ, ಕಾಡು ಬೆಳೆಸುವುದು, ಜಲಾಶ್ರಯ ನಿರ್ಮಾಣ, ವಯಸ್ಕರ ಶಿಕ್ಷಣ, ಉತ್ತಮ ಬೀಜಗಳ ಉಪಯೋಗ, ಸುಧಾರಿತ ರೀತಿಯ ಬೇಸಾಯ ಇತ್ಯಾದಿಗಳನ್ನೆಲ್ಲಾ ಪಂಚಾಯತಿಗಳು ಸರಿಯಾಗಿ ಪೂರ್ಣ ಸಿದ್ಧತೆಯಿಂದ ಕೈಗೊಂಡರೆ ಅತ್ಯಂತ ಪರಿಣಾಮಕಾರಿಯಾಗಬಹುದು. ಇದಕ್ಕೆ ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ಗ್ರಾಮಪಂಚಾಯತುಗಳು ತಮ್ಮ ಆರ್ಥಿಕ ಪರಿಸ್ಥಿತಿ ಅನುಕೂಲವಾಗಿರದಿದ್ದರೂ ಯಶಸ್ವಿಯಾಗಿ ಕೆಲಸ ಮಾಡಿರುವುದೇ ಸಾಕ್ಷಿ.

ಪ್ರತಿಯೊಂದು ಕುಟುಂಬಕ್ಕೂ ಕೃಷಿ ಹಾಗೂ ಇತರ ಉಪವೃತ್ತಿಗಳನ್ನ ಕೈಗೊಳ್ಳುವುದಕ್ಕೆ ಒಂದೊಂದು ಯೋಜನೆ ಇರಬೇಕೆಂಬುದೇ ಈ ಯೋಜನಾ ಸಮಿತಿಯ ಉದ್ದೇಶವಾಗಿದೆ. ಪ್ರತಿ ಕುಟುಂಬವೂ ಕನಿಷ್ಠ ಪಕ್ಷ ಒಂದು ಸಹಕಾರಿ ಸಂಘದ ಸದಸ್ಯತನವನ್ನು ಹೊಂದಿ ತನ್ನ ಸಮಯದಲ್ಲಿ ಕಿಂಚಿತ್ತಾದರೂ ಸಮಾಜದ ಹಿತಕ್ಕಾಗಿ ವಿನಿಯೋಗಿಸ ಬಹುದು. ಕೃಷಿಯ ಉತ್ಪನ್ನವನ್ನು ಹೆಚ್ಚಿಸಿ ಗ್ರಾಮೋದ್ಯೋಗಗಳನ್ನು ಅಭಿವೃದ್ಧಿಗೊಳಿಸಬೇಕು.

ಪಂಚಾಯತುಗಳಿಂದ ಏರ್ಪಡಿಸಲ್ಪಟ್ಟ ಗ್ರಾಮಸಭೆಗಳು ಸಾಮಾನ್ಯವಾಗಿ ಹಳ್ಳಿಗರಿಗೆ ಬೇಕಾಗುವ ಅವಶ್ಯಕತೆಗಳ ಕುರಿತು ಚರ್ಚಿಸಿ ಉತ್ಪತ್ತಿಯನ್ನು ನಿರ್ಧರಿಸುವುದಕ್ಕೆ ಸಹಾಯಕವಾಗಬಹುದು. ಹಳ್ಳಿಗಳಲ್ಲಿ ದ್ವಿಪ್ರತಿಯಾದ ಕೆಲಸ ನಡೆಯದಂತೆಯೂ ಒಂದು ಗುಂಪು ಇನ್ನೊಂದು ಗುಂಪಿನೊಂದಿಗೆ ಹೊಡೆದಾಟ ನಡೆಸದಂತೆಯೂ ನೋಡಿಕೊಳ್ಳುವುದಕ್ಕಾಗಿ ಜಿಲ್ಲಾ ಬೋರ್ಡುಗಳು ಈ ಕುರಿತು ಸರಿಯಾದ ವಿಷಯಗಳನ್ನು ಸಂಗ್ರಹಿಸಬಹುದು.

ಆಗ ಜಿಲ್ಲಾ ಯೋಜನೆಗಳನ್ನು ಗ್ರಾಮ ಯೋಜನೆಗಳ ಆಧಾರದ ಮೇಲೆ ರಚಿಸಬಹುದು. ಹೆದ್ದಾರಿ ಇತ್ಯಾದಿಗಳನ್ನು ಜಿಲ್ಲಾ ಯೋಜನೆಯ ಪ್ರಕಾರವೇ ಏರ್ಪಡಿಸಬೇಕಾಗಿದೆ.

ಕೇವಲ ಧನ ಸಹಾಯ ಇಲ್ಲವೇ ಕೆಲಸಗಾರರನ್ನು ಸಿದ್ಧಗೊಳಿಸುವುದರಿಂದ ಅಭಿವೃದ್ಧಿ ಕಾರ್ಯವು ಸಾಗಲಿಕ್ಕಿಲ್ಲ. ಜಿಲ್ಲಾ ಯೋಜನೆಯನ್ನು ಪ್ರತಿಯೊಂದು ಪಂಚಾಯತುಗಳು ಕಳುಹಿಸಿದರೆ ಪಂಚಾಯತುಗಳು ಈ ಯೋಜನೆಯನ್ನು ಸಂಪೂರ್ಣವಾಗಿ ಕೃತಿಯಲ್ಲಿ ತರಲು ಸಹಕರಿಸಲು ಮುಂದಾಗುವುದರಲ್ಲಿ ಸಂದೇಹವಿಲ್ಲ.

ಖಾತ್ರಿ ಚಿನ್ನದ ನೆಕ್‌ಲೇಸ್, ತರಹವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.
ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.
ಯು. ರಾಘವೇಂದ್ರ ಕೃಷ್ಣ ಭಟ್,
ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.
ಫೋನು ನಂಬ್ರ 66

ಭರ್ತ ಕಂಟ್ರೋಲ
[ಮಕ್ಕಳನ್ನ ಹಡೆಯುವುದು ಸಾಕು]
ದಿನಕ್ಕೆ ಮೂರು ಸಾರಿ ಏಳು ದಿವ್ಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.
ಬೆಲೆ- ೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟು ಖರ್ಚು ರೂ. ೦-೧೪-೦
—:ವಿಳಾಸ:—
ಹಾಲಪ್ಪಾ ಡಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

Our Bombay Stockist:- V. N. SHENDY, BOMBAY 12.

(೧ನೇ ಪುಟದಿಂದ)

ಸ್ಪಷ್ಟಗೊಂಡಿಲ್ಲ. ಹೊರಗಿನವರ ಆತುರ ಎಂದಿನಿಂದ ಸ್ಪಷ್ಟವಾಗಿದ್ದರೂ ಮೈಸೂರಿನ ಸ್ವಾಗತದ ಭರವಸೆ ಇನ್ನು ದೊರೆಯಬೇಕಷ್ಟೆ! ನಾವು ಬೇಡದ ಮಗುವಾಗಿ ತಾಯಿಗೆ ಜೋತುಬೀಳಬೇಕೆ ಎಂಬುದು ವಿಚಾರಿಸಲೇ ಬೇಕಾದಪ್ರಶ್ನೆ. ಮೈಸೂರಿನವರು ತಮ್ಮ ಲಾಭ ಹಾನಿಯ ಲೆಕ್ಕವನ್ನು ವಿಚಾರಿಸಲು ನಿರ್ಧರಿಸಿದ ದೃಷ್ಟಿಕೋಣದಿಂದ, ಹೊರಗಿನ ಕನ್ನಡಿಗರು ವಿಷಯದ ವಿಮರ್ಶೆ ಮಾಡಿಲ್ಲವೆಂದು ತೋರುತ್ತದೆ. ಸಮಸ್ಯೆಯ ಮನೋವೈಜ್ಞಾನಿಕ ವಿಶ್ಲೇಷಣಕ್ಕೂ ನಾವು ಮಹತ್ವ ಕೊಟ್ಟಂತಿಲ್ಲ.

—ಕಾರ್ತಿಕೇಯ.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. S. No. 45/1954.

ದಯಾನಂದ (ಪ್ರಭುವರ) ಕೂಡಾ-ವಾದಿರು ಕಾದ್ರಿಬ್ಯಾರಿ ಕೂಡಾ 3 ಜನ್ರು-ಪ್ರತಿವಾದಿರು

1ನೇ ಪ್ರತಿವಾದಿ ಕಾದ್ರಿಬ್ಯಾರಿ, ಮೋನಬ್ಬ ಬ್ಯಾರಿಗಳ ಮಗ, ಕಾರ್ಕಳ ತಾಲೂಕು ಶಿರ್ತಾಡಿ ಗ್ರಾಮದಲ್ಲಿರುವವ.

ಸದ್ರಿ 1ನೇ ಪ್ರತಿವಾದಿಗೆ ಈ ಮೂಲಕ ತಿಳಿಸುವದೇನಂದ್ರೆ, ವಾದಿರು ನಿಂಮ್ಮ ಮೇಲೆ ಕೂಡಾ ಮೂಲಗೇಣ ಗೇಣಿಬಾಕಿ ಬಗ್ಯೆ ದಾಕ್ಲು ಮಾಡಿದ ಮೇಲ್ಕಂಡ ದಾವೆಯು ನಿಂಮ್ಮ ಉದಾಹರಣೆ ಬಗ್ಯೆ ತಾ. 26-6-1954ಕ್ಕೆ ಯಿಟ್ಟಿರುತ್ತದೆ. ಸದ್ರಿ ದಾವೆಯಲ್ಲಿ ನೀವು ಉದಾಹರಣೆ ದಾಕ್ಲು ಮಾಡುವದಿದ್ರೆ ಸದ್ರಿ ತಾ. 26-6-1954ನೇ ದಿವ್ಸ ಹಗಲು ಘಂಟೆ 10ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಸ್ವತಹಾ ಯಾ ವಕೀಲರ ಮುಖಾಂತರ ಹಾಜ್ರು ಆಗಿ ದಾಕ್ಲು ಮಾಡತಕ್ಕದ್ದು. ಯಿಲ್ಲವಾದ್ರೆ ಯೇಕಪಕ್ಷವಾಗಿ ತೀರ್ಮಾನಿಸಲ್ಪಡುವದು ಯೆಂಬ ಸಂಗ್ತಿಯನ್ನು ಕೋರ್ಟ ಹುಕ್ಕುಂ ಪ್ರಕಾರ ಈ ಮೂಲಕ ತಿಳಿಸೋಣಾಗುತ್ತದೆ.

K. V. KAMATH
Advocate for Plaintiffs.
Karkala, 16-6-1954.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

R. E. P. 22/1954

ವಾದಿ— ನಾಗಮ್ಮ.

ಪ್ರತಿವಾದಿ— ವೆಂಕಟ್ರಮಣ ಹಂದೆ, ಶೇಶ ಹಂದೇರ ಮಗ, ಕೋಟ ತಟ್ಟು ಗ್ರಾಮದ ಹಂದಟ್ಟನಲ್ಲಿರುವವ.

ಸದ್ರಿ ಪ್ರತಿವಾದಿಗೆ ತಿಳಿಯಪಡಿಸುವುದೇನೆಂದ್ರೆ—

ಮೇಲಿನ ಡಿಕ್ರಿ ಹಣದ ಬಗ್ಗಾಗಿ ಇಸ್ತಿಹಾರಿನಿಂದ ಕಾಣುವ ಸ್ಥಳಗಳನ್ನು ಯೇಲಂಮ್ಮಿಗೆ ಇಟ್ಟಿರುತ್ತದೆ. ಸದ್ರಿ ಯಿಸ್ತಿಹಾರಿನ ಶರ್ತಗಳನ್ನು ನಿರ್ಣಯಿಸುವರೆ ಅಮಲ್ದಾರಿಯನ್ನು ತಾ. 31-6-1954ಕ್ಕೆ ಇಟ್ಟಿರುತ್ತದೆ. ಆ ಕುರಿತು ನಿಮ್ಮದ್ದೇನಾದರೂ ಆಕ್ಷೇಪಯಿದ್ದರೆ ಆ ದಿನ ಬೆಳಿಗ್ಯೆ 11 ಘಂಟೆಗೆ ಕೋರ್ಟಿನಲ್ಲಿ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ತಿಳಿಸಿರುತ್ತದೆ.

By order of the Court.
Y. Tejappa Shetty,
Advocate for Plff.
Coondapoor, 18-6-54.



Edited, Printed & Published By K. H. Shetty at the Navayuga Press, Udipi, S. India